ಸ್ವದೇಶಾಭಿಮಾನಿ

Swadeshabhimani. Estd 1906

Date 7—4—1939 ತಾರೀಖು ೭—೪—೧೯೩೯

ಇಲ್ಲೇ ಶ್ರೀ ರಾಮಚಂದ್ರನಿಗೆ ಸುಗ್ರೀವನೊಡನೆ ಸಖ್ಯವಾದುದು ಇದೇ ಸುಪ್ರಸಿದ್ಧವಾದ ಪಂಪಸರಸ್ಸು ಈಗಿನ ಆನೆಗೊಂದಿ ಎನಿಸಿದ ಕಿಷ್ಕಿಂಧಾ ನಾಡು

Photo by K. S. Karanth

ಸಚಿತ್ರ ವಾರ ಪತ್ರಿಕೆ

Instinct or Chance

We look through the pages of the history of our medicaments, we are astonished to observe that before becoming an established remedy, a great number of them had already been in current use for a long time by the general run of people, as family remedies; and we are still more surprised when we remember that the curative action of the most important of these medicaments was known by ordinary people, long before science discovered it

From the standpoint of origin this applies to the whole series of vermifuges, they come from the most widely differing plants, yet they have the closest chemical analogies and all have the same action on intestinal parasites, they have, in addition been extracted from thousands of other plants by the natives of the Dark Continents

In like manner coloured people have discovered coffee, cocoa, kola and tea, which contain theobromine and caffeine The 'savages' have thus done a remarkable work, without a laborat[illegible] institute [illegible] congress

But the most extraordinary o[illegible] ll is the curative actio[illegible] of quinine [illegible]ty and imagine this, the virgin forest full of secrets and dangers not only are the[illegible] wild beasts and snakes whose bit[illegible] is immediately fatal, but also small animals whose danger[illegible] as a[illegible] painful attacks are always to be fe[illegible] [illegible] as well as a world of plants [illegible] mies wh[illegible] is watching [illegible] the fruits full of poison [illegible] that have [illegible] fatal attraction [illegible] eries of every [illegible] And it is amongst this w[illegible] pitfalls and dangers th[illegible] native [illegible] overed a tree [illegible] with a bark bitter that [illegible] imagine that [illegible] body [illegible] having once tast[illegible] would wish to do so again [illegible] all this [illegible] native ha[illegible] their taste and thus [illegible] a nent that can be placed [illegible] the [illegible] ing the greatest [illegible] humanity, we [illegible] referring to the cinchona from whose bark quinine is extracted which in daily doses of 15 to 20 grains taken during from 5 to 7 days is sufficient with[illegible] another treat[illegible] to reduce [illegible] bout of fever [illegible] possible [illegible] simply requiring [illegible] repet[illegible] the treatment

Even today [illegible] and prophylaxis working hand in hand have not yet been able to [illegible] successfully their [illegible] work, it is calculated that throughout the world malaria accounts for 800 million patients and kills three and a half millions

What frightful figures might have been reached if the native in the virgin forest had not tasted the bitter [illegible] And at present during the malaria season, the malady can be warded off by taking a daily dose of 6 grains of quinine, as recommended by the Malaria Commission of the League of Nations

"Instinct" or "chance," these are the words that man likes to use when his intelligence is at fault Was it the wise hand of Providence that showed the Cinchona bark to the savage in the virgin forest? At the beginning and end of all human experiment, this question always arises concerning the secrets of which the world is full.

ತಾಯಿ!

ಮಗುವಿಗೆ ನೀನೆ ಮೊಲೆ ಕೊಡು.

ಮೊಲೆ ಹಾಲೇ ಶಿಶುಗಳಿಗೆ ಶ್ರೇಷ್ಠವಾದ ಆಹಾರವೆಂದು ಪ್ರತಿ ತಾಯಿಗೆ ತಿಳಿದಿರುವುದು ಮಕ್ಕಳಿಗೆ ಒಳ್ಳೇ ಪುಷ್ಟಿಯಾದ ದೇಹವನ್ನೂ ಆರೋಗ್ಯವನ್ನೂ ಕೊಡುವುದರಲ್ಲಿ ತಾಯಿಯ ಹಾಲಿಗಿಂತ ಶ್ರೇಷ್ಠವಾದುದು ಇನ್ನೊಂದಿಲ್ಲ

ಮಗುವು ಹೊಟ್ಟೆಯೊಳಗೆ ಇರುವಾಗಲೇ ದೇಹಕ್ಕೆ ಉಚಿತವಾದ ಓವಲ್ಟಿನ್‌ನ್ನು ಸೇವಿಸಿರಿ ಅದರಿಂದ ನಿಮ್ಮ ಮೊಲೆಯೊಳಗೆ ಪುಂಡಿತವಾಗಿ ಹಾಲು ದೊರಕುವಂತಾಗುವುದು ಮಗುವಿಗೆ ಮೊಲೆ ಉಣ್ಣಿಸುತ್ತಿರುವಾಗಲೂ ಓವಲ್ಟಿನ್ನನ್ನು ಕುಡಿಯಿರಿ ಹಾಗೆ ಮಾಡುವುದರಿಂದ ನಿಮ್ಮ ಮೊಲೆಯೊಳಗೆ ಹಾಲು ತಪ್ಪದು

ಪ್ರತಿಯೊಂದೆಡೆ ಡಾಕ್ಟರರು ಮತ್ತು ನರ್ಸುಗಳು ಓವಲ್ಟಿನ ಕುರಿತು ಶಿಫಾರಸು ಮಾಡುತ್ತಿದ್ದಾರೆ ತಾಯಿ ಮತ್ತು ಮಗುವಿನ ಆರೋಗ್ಯ ರಕ್ಷಣೆಗೆ ಓವಲ್ಟಿನ್‌ಗಿಂತ ಶ್ರೇಷ್ಠವಾದುದು ಇನ್ನೊಂದಿಲ್ಲವೆಂದ ಅವರ ತಿಳುವಳಿಕೆಯಾಗಿರುವುದು

ಶ್ರೇಷ್ಠವಾದ ಬಾರ್ಲಿಯಿಂದ ತಯಾರಿಸಿದ ಮಾಲ್ಟು, ಹೊಸದಾದ ಕೆನೆ ಕಟ್ಟಿದ ಹಾಲು ಮತ್ತು ಆರೋಗ್ಯಕ್ಕೆ ಬೇಕಾದ ಇತರ [illegible] ಗುಣಗಳಿಂದ [illegible] ಓವಲ್ಟಿನ್ ಸಂಪೂರ್ಣವಾದ ಮತ್ತು [illegible] [illegible] ಈ ಎಲ್ಲಾ ವಿಷಯಗಳಲ್ಲಿ ಓವಲ್ಟಿನ್ ಶ್ರೇಷ್ಠವಾದುದು

ಓವಲ್‌ಟಿನ್ ಟಾನಿಕ್ ಆಹಾರ ಪಾನೀಯ

OVALTINE

ಬೇಗೆ ಕಾಲದಿಂದಲೆ ಶಿಶುವಿನ ಆಕ್ಕೆ [illegible]
ಎಲ್ಲಾ ದವಾಖಾನೆಗಳಲ್ಲೂ ಸ್ಟೋರುಗಳಲ್ಲೂ ದೊರೆಯುತ್ತದೆ
ಏಜೆಂಟರು - ಜೇಮ್ಸ್ ರೈಟ್, ಲಿಮಿಟೆಡ್, 8ನೇ ಸ್ಟ್ರೀಟ್ ಕಲ್ಕತ್ತಾ
[illegible]

OV[illegible]

ಎತ್ತಿ ಹಾರಿಸಿದಾಗ-ಸತ್ತವ ಬದುಕುವನು

ಲಂಡನ 'ಡಾಕ್ಟರ'ನೊಬ್ಬನ ಅದ್ಭುತ ಚಮತ್ಕಾರ!

ಹಿಂದೂದೇಶದ ಸಿದ್ಧಿ'ಯ ಒಂದು ರಹಸ್ಯ

ಡಾಕ್ಟರ ಅಲಿಗ್ಸಾಂಡರ [illegible] ಹೆಸರನ್ನಿಟ್ಟುಕೊಂಡಿರುವ ಒಬ್ಬ ಆಂಗ್ಲೇಯ ನು ಸತ್ತವರನ್ನು ಬದುಕಿಸುವ ವಿಚಿತ್ರ ವಿದ್ಯೆಯನ್ನು ತಿಳಿದುಕೊಂಡಿರುವನಾಗಿ ಇಂಗ್ಲೆಂಡಿನ [illegible] ಪತ್ರಿಕೆಯು ಪ್ರಕಟಿಸಿದೆ

ಈ ರಹಸ್ಯವನ್ನು ತನಗೆ ಹಿಮಾಲಯ ದಲ್ಲಿ ವಾಸಮಾಡಿಕೊಂಡಿದ್ದ ಒಬ್ಬ ಹಿಂದೂ ಯೋಗಿಯು ಕಲಿಸಿದನಾಗಿ ಅಲಿಗ್ಸಾಂಡರ ಕೆನನನು ಹೇಳುವನು ಸತ್ತವನ ತಲೆಯನ್ನು ಮೊಣಕಾಲ ಮೇಲೆ ಇಟ್ಟು, ಕೆಲವು ಸ್ನಾಯು ಗಳನ್ನು ಒತ್ತುತ್ತ ಹೆಣವನ್ನು ಮೇಲಕ್ಕೆ ಎತ್ತಿ ಹಾರಿಸುವಾಗ ಮೂರು ಬಾರಿ ಓಂ-ಓಂ ಎಂದು ಹೇಳುವುದರಿಂದ ಸತ್ತವನ ಪುನಃ ಬದುಕಿಕೊಳ್ಳುವನಂತೆ ಆದರೆ ಹೀಗೆ ಬದುಕಬೇಕಾದರೆ ಸತ್ತವನ ಶರೀರವು ಕೊಳೆಯದೆ ಇದ್ದಿರಬೇಕು ಎಂಬ ಶರ್ತವಿರುವುದು

ಬೇಕಾದಾಗ ಮಳೆ-ಬೇಕಾದಾಗ ಬಿಸಿಲು

ಅಲಿಗ್ಸಾಂಡರ ಕೆನನನ ಬೇಕಾದಾಗ ಮಳೆಯನ್ನೂ ಬೇಕಾದಾಗ ಬಿಸಿಲನ್ನೂ ಕೊಡುವ ವಿದ್ಯೆಯನ್ನು ತಿಳಿದಿರುವನು ಇದನ್ನು ಅವನು ಟಿಬೇಟ ಸಂಚಾರಮಾಡುತಿದ್ದಾಗ ಅಲ್ಲಿಯ ಜನರಿಂದ ಕಲಿತುಕೊಂಡನಂತೆ ಇದು ಟಿಬೇಟದ ಜನರಿಗೆ ಸರ್ವಸಾಧಾರಣ ತಿಳಿದಿರುವ ಸುಲಭ ಮಾಯವಿದ್ಯೆ ಆಗಿರವುದು ಟಿಬೇಟದ ಯೋಗಿಗಳು ಯೋಗಾಭ್ಯಾಸ ಮಾಡುತ್ತ ಸಮಾಧಿಯನ್ನು ಪಡೆದ ಕೂಡಲೆ ಆಕಾಶಕ್ಕೆ ಏರುವರು ಅಲ್ಲಿ ಬಿಸಿಲು ಬೇಕಾದರೆ ಮುಚ್ಚಿದ್ದ ಮೋಡಗಳನ್ನು ದೂರದೂರಕ್ಕೆ ಚದರಿಸುವರು, ಮಳೆ ಬೇಕಾದರೆ ದೂರ ದೂರ ಚೆದರಿಹೋಗಿದ್ದ ಮೋಡಗಳನ್ನು ಹತ್ತಿರ ಹತ್ತಿರ ತರುವರು,

ಅನೇಕ [illegible] ಟಿಬೇಟದ ಜನರು ಕೆನನನ ಮುಂದೆ ಈ ಅದ್ಭುತ ಚಮತ್ಕಾರವನ್ನು ಮಾಡಿ ತೋರಿಸಿದ್ದಾರೆ ಮೊದಲನೆ ಬಾರಿ ಒಬ್ಬ ದೇಶೀಯ [illegible] ಎರಡನೆ ಬಾರಿಗೆ ಒಬ್ಬ ರಷ್ಯನ ನಿಂದ ಕಲಿತ ಕೆನನನು ಲಂಡನಿನಲ್ಲಿ ವಾಸವಾಗಿದ್ದಾಗ ಇದೇ ಚಮತ್ಕಾರವನ್ನು ಅವನ ಮುಂದೆ ಮಾಡಿ ತೋರಿಸಿದನು ಮೊದಲನೇ ಬಾರಿ ಈ ಚಮತ್ಕಾರವನ್ನು ಮಾಡಿ ತೋರಿಸಲಿಕ್ಕೆ ಮೂರ್ವಾಲು ಗಂಟೆ ಬೇಕಾಯಿತು; ಎರಡನೆ ಬಾರಿ ಅರ್ಧ ಗಂಟೆಯೇ ಸಾಕಾಯಿತು.

ಪ್ರಖ್ಯಾತ ಇಂದ್ರಜಾಲಕ

ಕೆನನನ ಸಿದ್ಧಿಗಳ ವಿಷಯ ಯಾವ ಅಭಿಪ್ರಾಯವನ್ನು ಮಾಡುವದಾಗಿದ್ದರೂ ಅವನು ಪ್ರಖ್ಯಾತ ಮಾಯಾವಿ ಅಥವಾ ಇಂದ್ರಜಾಲಕನಾಗಿರುವನೆಂಬುದರಲ್ಲಿ ಸಂದೇಹವಿಲ್ಲ, ಯಾರು ಮೂರರಿಂದ ನೂರು ಗಿನಿಗಳ ತನಕ ಅವನಿಗೆ ಕಾಣಿಕೆಯನ್ನು ಕೊಡಬಲ್ಲರೊ, ಅವರು ಅವನಲ್ಲಿಗೆ ಹೋಗಿ ಅವರ ಕಾಣಿಕೆಗೆ ತಕ್ಕಂತೆ ಅದ್ಭುತ ಮಾಯಾ ವಿದ್ಯೆಗಳ ಪ್ರದರ್ಶನವನ್ನು ಕಂಡು ಮನೋರಂಜನ ಮಾಡಿಕೊಳ್ಳಬಹುದು, ಕತ್ತಲೆ ಕೋಣೆಯಲ್ಲಿ ಬಣ್ಣಬಣ್ಣದ ವಿದ್ಯುಚ್ಛಕ್ತಿಯ ಬೆಳಕನ್ನು ಬೀರಿ ಅವನು ಪ್ರೇಕ್ಷಕರನ್ನು ತನ್ನ ಮಾಯಾ ವಿದ್ಯೆಗಳಿಂದ ದಂಗುಗೊಳಿಸುವನು

卐

ರಕ್ಷ್ಯಮ್ಮ ಕಾರ್ಯ್ಯ ಸ್ತು ಕುರ್ಯನ ದೇವಾ । ನ ಭೇದತೇ ಧೀಮ ವಿಶೇಣ ಭೀತಿನ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।

卐

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ದೊರೆಯಲಿ ನವ ರತ್ನಗಳು ಸಾ । ಗರವ ಮಥಿಸಲು ಸುರರ ಗದರಿಂ । ಹರುಷವಾಯಿತೆ ನುತೆ ವಿಷವ ನುಡುವ ಬರುತಿರುವ ॥ ಗರಳವ ಕಂಡವರು ಸುಧೆಯನು ಮರೆತು ಕ್ಷಣದಿ ಕೆರದ ಕಂಡರೆ ಕೆಲ ಬಲ್ಲಿದ ಕೊಂಡು ಧೀರರು ನಿಶ್ಚಿತಾರ್ಥವನು ॥

卐

ತಾರೀಖು ೭-೪-೧೯೩೯ | ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ. | ತಾರೀಖು 7-4-1939

ಎಸೆಂಬ್ಲಿಯ ವೋಟಿನ ಬೆಲೆ

(ಮೆಂಚೆಸ್ಟರ್ ಗಾರ್ಡಿಯನ್ ಪತ್ರ)

ಕಾಂಗ್ರೆಸ್ ಪಕ್ಷದ ಪಕ್ಷಪಾತಿಗಳಾಗಿ [illegible]ಯಾಕರಾಗಿರುವ ಹಿಂದೀ ಗರಣಿಗಾರರು ಬ್ರಿಟಿಷರಿಗೆ ಕಿಂಚಿತ್ತೂ ರಿಯಾಯಿತಿ ತೋರಿಸುವುದಕ್ಕೆ ವಿರುದ್ಧರು. ಹಿಂದೀಯರನ್ನು ಅಷ್ಟು ಬ್ರಿಟಿಷರಿಗೆ ಕೇವಲ ಇಷ್ಟು ನಾತ ಕೊಡುವ ಇಂಡೋ ಬ್ರಿಟಿಷ ಕರಾರನ್ನು ಎಸೆಂಬ್ಲಿಯಿಂದ ಅವರೇ ಹೊರ ತಳ್ಳಿಸಿದರು. ಒಪ್ಪಂದಾ ಕರಾರಿಂದ ಹಿಂದೀಯರಿಗೆ ದೊರೆತ ಪ್ರಯೋಜನಗಳನ್ನೆಲ್ಲ ಇಂಗ್ಲೆಂಡ ಈ ಕರಾರನ್ನು ಬ್ರಿಟಿಷರಿಗೆ ಒಪ್ಪಂದಾ ಕರಾರು ಕೊಟ್ಟ ಹೆಚ್ಚಿನ ಪ್ರಯೋಜನಗಳನ್ನು ರದ್ದು ಮಾಡಿದ ಈ ಕರಾರನ್ನು ಬಂಕೀಶರಿಗೆ ಕೊಟ್ಟ ಅಲ್ಪ ರಿಯಾಯಿತಿಗೂ ನಾನಾ ಶರ್ತಗಳನ್ನು ನವ ಬಗೆಯ [illegible] ಕರಾರನ್ನು ಎಸೆಂಬ್ಲಿಯು ರಾಕರಿಸಿತು.

ಅಕ್ಕು ಪ್ರಕಾರ ಎಸೆಂಬ್ಲಿಯ ಅಭಿಪ್ರಾಯವನ್ನು ಬದಿಗಿಟ್ಟು ತನ್ನ ಇಚ್ಛೆಯಂತೆ ನಡೆಯಲು ಅಧಿಕಾರವಿರುವ ಇಂಡಿಯಾ ಸರಕಾರವು ಈಗ ಏನು ಮಾಡುವುದು?

ಎಸೆಂಬ್ಲಿಯ ವೋಟನ್ನು ಮೂಲೆಗೆ ತಳ್ಳಿದರೆ, ರಾಜಕೀಯ ವಿರೋಧವು ಬೆಳೆವುದು. ಹೀಗೆ ಸಾಮ್ರಾಜ್ಯವಾದಕ್ಕೆ ಬಾಧ ಕೊಡುತ್ತಿದೆ. [illegible] ಕರಾರನ್ನು ತ್ಯಜಿಸಿದರೆ—ಬ್ರಿಟಿಷ ಸರಕಾರವು ಹಿಂದೀ ವ್ಯಾಪಾರಕ್ಕೆ ಪ್ರತಿಕೂಲವಾದ ಶರ್ತಗಳನ್ನು ಹಾಕುವ ಸಂಭವವುಂಟಾಗುವುದು. ಬ್ರಿಟಿಷ ಸರಕಾರಕ್ಕೆ ಭಾರತ [illegible]ದಲ್ಲಿ [illegible] ಸ್ವಾತಂತ್ರ್ಯವಿಲ್ಲದಿರುವಾಗ, ಭಾರತ ವರ್ಷದ ಸರಕಿಗೆ ಬ್ರಿಟಿಷ ವ್ಯಾಪಾರಿಗಳು [illegible] ಗಳಾಗುವಂತೆ ಬಿಡಲು ಇಂಗ್ಲೆಂಡ ಒಪ್ಪುವುದೆ? [illegible] ಗಡಿಯಾಚೆಗೆ ದೂಡಲು ಇಂಡಿಯಾಕ್ಕೆ ಅಧಿಕಾರ ಕೊಟ್ಟು, ಭಾರತ ವರ್ಷದ ಸರಕನ್ನು ಬ್ರಿಟಿಷ ವಸಾಹತುಗಳನ್ನು [illegible] ಕಲ್ಪಿಸಿ ಕೊಡುವುದುಂಟೇ? ಇಂಡಿಯಕ್ಕೆ ತಕ್ಕ ಚಿಕಿತ್ಸೆಯಾಗಬೇಕೆಂದು ಬ್ರಿಟಿಷ ಕಾರ್ಖಾನೆಗಳು ಬ್ರಿಟಿಷ ಸರಕಾರಕ್ಕೆ ತಿಳಿಸವೇ? ಇಂಡಿಯಾದ ವಿಸ್ತಾರ ಹಿತವನ್ನು ಎಣಿಸಿ, ಈ ರಗಳೆಗಳ ಕಡೆಗೂ ಗಮನಿಸಿ, ಎಸೆಂಬ್ಲಿಯು ಅವಸರದಲ್ಲಿ ಪಕ್ಷಪಾತ ಬುದ್ಧಿಯಿಂದ ಕೊಟ್ಟ ಅಭಿಪ್ರಾಯವನ್ನು ತಾಳುವುದು ಇಂಡಿಯಾ ಸರಕಾರಕ್ಕೆ ಯೋಗ್ಯ. ಗರಣಿಗಾರರು ಶ್ರೀಮಂತರಾಗಿರಬಹುದು; ಆದರೆ ಅವರು ಇಡಿ ಇಂಡಿಯಾವಲ್ಲ!

ಸ್ಪೈಯಿನ್

ಎಲ್ಲ ಸ್ಪೈಯಿನ ದೇಶವೂ ಫ್ರೆಂಕೋವಿನ ವಶಕ್ಕೆ ಶಾಂತರಲ್ಲಿ ಸೇರಿತು.

ಹಿಟ್ಲರು ಜನರಲ ಅಭಿನಂದನೆಯ ವಾರ್ತೆ ಕಳುಹಿದನು.

ಮುಸ್ಸೊಲಿನಿಯು ಎಲ್ಲ ಧ್ವಜಗಳನ್ನು ಏರಿಸಿ, ಫೆಸಿಸ್ಟ್ ಇಟೆಲಿಯ ವೀರರ ಕಾರ್ಯಭಾರವನ್ನು ಸಾರುವಂತೆ ಮಾಡಿದನು.

ಎಲ್ಲ ಪ್ರಾಮುಖ್ಯ ಸ್ಪೈನಿಸ್ ನಗರಗಳು ಕ್ಷಣಕ್ಷೊಂದರಂತೆ, ಸಲಾಮು ಹಾಕಿದುವು.

ಜವಾಹರಲಾಲರ ಮೇಲೆ ಆತಂಕಕಾರಿಗಳ ಆಕ್ರಮಣವೆ?

ಭವಿಷ್ಯವಾದಿಯ ರೋಮಾಂಚನಕಾರಿ ಭವಿಷ್ಯ

ಸಂಯುಕ್ತ ಪ್ರಾಂತಗಳ ಬಹು ಪ್ರಸಿದ್ಧ ಜೋಯಿಸರಾದ ಪಂಕಜ [illegible]ಬವರು ಈಗ ಅಲಹಾಬಾದಿನಲ್ಲಿ ಉಳಕೊಂಡಿದ್ದಾರೆ. ಅವರು ಪಂಡಿತ ಜವಾಹರಲಾಲ ನೇಹರೂ ಅವರ ಭವಿಷ್ಯದ ಕುರಿತು ಜನರನ್ನು ದಿಗಿಲುಗೊಳಿಸುವ ಕೆಲವು ಮಾತುಗಳನ್ನು ಆಡಿರುವರ. ಸದ್ಯದಲ್ಲಿಯೇ ಕೆಲವು ಜನ ಆತಂಕಕಾರಿಗಳು ಪಂಡಿತ ಜವಾಹರಲಾಲರ ಕೊಲೆ ನಡೆಸಲು ಸಂಚು ನಡೆಸುವರಂತೆ. ಸಂಚು ನಡೆಸ ಬಹುದು ಮಾತ್ರವಲ್ಲ, ಜವಾಹರಲಾಲರ ಪ್ರಾಣಗಳಿಗಾಗಿ ಅವರನ್ನು [illegible] ಗಾರರು [illegible] ವಹಿಸಬೇಕು [illegible] ಬಹುದ.

ಆದರೆ ಭಯವಿಲ್ಲ

[illegible] ಆಗರು ಆಕ್ರಮಣ ಪ್ರಯತ್ನಗಳಿಂದ ಜವಾಹರಲಾಲರ ಪ್ರಾಣಗಳು ಹೋಗುವ ಭಯವಿರುವುದಿಲ್ಲ. ಜವಾಹರಲಾಲರು ಇನ್ನೂ ದೀರ್ಘಕಾಲ ಜನಕ ಬದುಕಿ ಬಾಳುವರು. ಅವರ ವ್ಯಕ್ತಿ ಪ್ರಭಾವವು ಬೆಳೆಯುವುದು. ಅವರ ಮೇಲೆ ಜನರಿಗಿರುವ ಶ್ರದ್ಧೆ ಭಕ್ತಿಗಳು ಹೆಚ್ಚುವವು. ಅವರು ಲೋಕ ಪ್ರಸಿದ್ಧ ಮಹಾಪುರುಷರೆಂದು ಗಣಿಸಲ್ಪಡುವರು. ಜನತೆಯ ಮೇಲೆ ಅವರಿಗಿರುವ ಅಧಿಕಾರ ಬಲವು ನೂರು—ನೂರು ಪಾಲಷ್ಟು ಅಧಿಕವಾಗುವುದು, ಶುಕ್ಲಪಕ್ಷದ ಬಿದಿಗೆಯ ಚಂದ್ರನ

ಲಂಡನಿನಲ್ಲಿ ಬಾಂಬುಗಳ ಸುರಿಮಳೆ

ಪತ್ರಿಕಾ ಕಾರ್ಯಾಲಯದ ಮೇಲೆ ಸಿಡಿತ!

ಲಂಡನ ನಿವಾಸಿಗಳ ದಿಗಿಲು!!

ಐರ್ಲೆಂಡ ಪೂರ್ಣ ಸ್ವತಂತ್ರವಾಗಬೇಕೆಂಬ ದಳೆಯವರು, [illegible] ಕಾರ್ಯ ಧೋರಣೆಯಿಂದ ಅತೃಪ್ತರಾದ [illegible] ಕಳೆದ [illegible] ಬಾಂಬುಗಳನ್ನು ಚೆಲ್ಲಿ, ಭಯೋತ್ಪಾದದಿಂದ ತಮ್ಮ ಕಾರ್ಯವನ್ನು ಸಾಧಿಸುವ ಕಾರ್ಯಕ್ಕೆ ಕೈಹಚ್ಚಿಕೊಂಡಿರುವುದರಿಂದ ಹಿಂದೆ [illegible] ವಾಚಕರು ಓದಿದ್ದು ನೆನಪಿರಬಹುದು. ಕಳೆದ ವಾರ ಇದೇ [illegible] ಆತಂಕಕಾರಿಗಳು [illegible] ಬೇರೆ ಬೇರೆ ಭಾಗಗಳಲ್ಲಿ ಬಾಂಬುಗಳನ್ನು ಚೆಲ್ಲಿ ಜನರು ಭಯಗ್ರಸ್ತರಾಗುವಂತೆ ಮಾಡಿರುವರು. ಹಿಂದಿನಷ್ಟು ಬಾಂಬುಗಳು [illegible] ಮೇಲೆ ಒಡೆಯಲ್ಪಟ್ಟು [illegible] ಕಟ್ಟಡಗಳ ಮೇಲೆ ಸಹಾನುಭೂತಿಯನ್ನು ಪ್ರಕಟಿಸುವುದಕ್ಕಾಗಿಯೇ, ಈ ಜನರು [illegible] ಕೆಲವು ದಿವಸಗಳ ನಂತರ ಲಂಡನಿನಲ್ಲಿ ಈ ಬಾಂಬು ಸ್ಫೋಟನಗಳಾಗಿರುವುವು,

ಹಾಗೆ ಕೀರ್ತನೆಗಳನ್ನು ಮಾಡಿ ಜವಾಹರಲಾಲರು [illegible] ಎಂದು ಶ್ರೀ. ಪಂಕಜರು ಭವಿಷ್ಯವನ್ನು ಕೊಟ್ಟಿದ್ದಾರೆ!

ಆದ್ದರಿಂದ ಸ್ಕಾಟ್‌ಲ್ಯಾಂಡ್ ಯಾರ್ಡಿನ ಗುಪ್ತ ಪೋಲೀಸರು ಬಹಳ ಸಾಹಸಪಟ್ಟರೂ ಆದರೂ ಆತಂಕಕಾರಿಗಳ ಪತ್ತೆ ಹಿಡಿಯಲಿಕ್ಕೆ ಅವರಿಂದ ಇನ್ನೂ ಸಾಧ್ಯವಾಗಲಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಪತ್ರಿಕಾಲಯದ ಮೇಲೆ ಬಾಂಬು

ಒಂದು ಬಾಂಬು ನ್ಯೂಸ್ ಕ್ರಾನಿಕಲ್ ಎಂಬ ಇಂಗ್ಲೆಂಡಿನ ಸುಪ್ರಸಿದ್ಧ ವಾರ್ತಾ ಪತ್ರಿಕೆಯ ಕಾರ್ಯಾಲಯದ [illegible] ಕಿಟಿಕಿ ಕನ್ನಡಿಗಳೆಲ್ಲ ಒಡೆದು ಹೋಗಿ ನಷ್ಟವಾಗಿರುವುದು. [illegible] ಒಂದು [illegible] ಒಂದು [illegible] ಬೆಂಕಿಯ ಸಮೀಪ, ಹೀಗೆ ಒಂದೇ ದಿವಸ ಲಂಡನಿನ ಬೇರೆ ಬೇರೆ ಭಾಗಗಳಲ್ಲಿ ಬಾಂಬು ಸ್ಫೋಟನಗಳಾಗಿರುವವು. ಪೋಲೀಸ ತನಿಖೆಯು ನಡೆಯುತ್ತಾ ಇದೆ.

ಕರಾಚಿಯಲ್ಲಿಂದ ಹೈದರಾಬಾದಿಗೆ ಬರುವ ಆರ್ಯ ಸ್ವಯಂಸೇವಕರನ್ನು ಅಲ್ಲಿನ ಸರಕಾರ [illegible] ಅವರು [illegible] ಬರಬೇಕೆಂದರೆ, ಪೋಲೀಸರು [illegible] ತಡೆದಾಗ, [illegible] ಕೆಳಗೆ ಪಟ್ಟಾಪಟ್ಟಿ ತೆಂದರೆ, ಇದೇ ವರ್ತಮಾನವನ್ನು ಪೋಲೀಸರು [illegible]

ಆ ಭಾರಿ [illegible]
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುತ್ತದೆ
ಪ್ರತಿಫಲಬರುವಂತ ಸಾಧಿಸುವುದು

DIAMONDS! DIAMONDS
BEST BRILLIANCY!

K. R. K. SHET,
MANGALORE

[illegible]

ಬಂಗಾರ!

[illegible] ಬರುವ ಪಡಿಗಳು [illegible] ಪೇಟೆಗಳಿಗೆ [illegible] ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸುವ ಮೇಲಿನದಲ್ಲಿ ನಮ್ಮ ವಜ್ರಗಳ ಶ್ರೇಷ್ಠತೆ ನಿಮಗೆ ತಿಳಿದುಬರುವವು

ನಿಮಗೆ ಬೇಕಾದುದನ್ನು ಏನೊಂದೂ ಸಂಕೋಚವಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಪ್ರಾಂತು ಬಂದು [illegible]

ಕೆ. ಆರ್. ಕೆ. ಶೆಟ್, [illegible],
ಮಂಗಳೂರು.

೮. ಅಕ್ಕಣಿ ಹೆಂಗಸು

'ಅಕ್ಕಣಿ' ಎಂದರೆ ಸಾಲದೇ? ಜತೆಯಲ್ಲಿ 'ಹೆಂಗಸು' ಎನ್ನಬೇಕೇ ಎಂಬ ವಿಷಯ ಆಕ್ಷೇಪಣೆ ಬರಬಹುದು 'ಅಕ್ಕಣಿ' ಎಂಬುದು ಅವಳ ನಾಮಧೇಯ ನಮ್ಮೂರಿನಲ್ಲಿ ಸಾಕಷ್ಟು ಪ್ರಸಿದ್ಧಿಗೆ ಬಂದವಳು ಅವಳು. ಮೂರು ತಲೆಗಳಿಂದ ಅವಳ ಮನೆಯವರ ಪ್ರಸಿದ್ಧಿಯುಂಟು. ಅಕ್ಕಣಿಯು ಯೌವನಕ್ಕೆ ಕಾಲಿರಿಸಿದಾಗ ಹೆಸರಾಗಿದ್ದಳು ತುಂಬಿದ ಯೌವನೆಯಾದಾಗ ಹೇಗೂ ಮೆರೆದವಳು ಈಗ ಮುಪ್ಪು—ಆದರೂ ಅವಳ ಕೀರ್ತಿಗೆ ಮುಪ್ಪು ಬಂದಿಲ್ಲ. ಬರಿಯ ಊರು ಒಂದರಲ್ಲೇ ಅವಳ ಖ್ಯಾತಿಯಲ್ಲ, 'ಕೋರ್ಟು—ಮನೆ' ಎರಡರಲ್ಲೂ ಹೆಸರಾದವಳು. ಕ್ರಿಮಿನಲ್ ಕೋರ್ಟಿನ ಹಲವು ಮೊಕದ್ದಮೆಗಳಲ್ಲಿ ಅವಳ ಹೆಸರು ಬಂದಿದೆ ಆದರೆ ಅವಳು ಮುದ್ದೆಯಾಗಿ, ಇಲ್ಲವೆ ಮುದ್ದೆಯಾಳೆಯಾಗಿ—ಎರಡೂ ವಿಧದಿಂದಲೂ ಮೆಜಿಸ್ಟ್ರೇಟರ ಮುಂದೆ ಬಂದವಳಲ್ಲ ಆದರೆ ಕೋರ್ಟಿನಲ್ಲಿ ದಾಖಲಾದ ಹಲವು ರೆಕಾರ್ಡುಗಳಲ್ಲಿ, ವಾಗ್ಮೂಲಗಳಲ್ಲಿ ಅಕ್ಕಣಿ ಹೆಂಗಸು ಅಂಕಿತಳಾಗಿದ್ದಾಳೆ ಪ್ರಾಯಶಃ ಹೆಂಗಸು ಎಂಬ ವಿಶೇಷಣ ಸೇರಿಸದಿದ್ದರೆ ಮೆಜಿಸ್ಟ್ರೇಟರೂ ಸಹ ಹೆದರುವಂತಿದೆಯೋ ಏನೋ

ಕೋರ್ಟಿನಲ್ಲಿ ಅಕ್ಕಣಿ ಕಾಣಿಸಿಕೊಳ್ಳಲೇಬೇಕಾದ ಹಲವು ಪ್ರಸಂಗಗಳಿದ್ದುವು ವಕೀಲರುಗಳು 'ಅವಳನ್ನು ಕರೆಯಿಸಿರಿ. ಮುಖ್ಯ ಬೇಕಾದ ಸಾಕ್ಷಿ ಅದು ಬಂದರೆ ಉಳಿದ್ದೆಲ್ಲಾ ಸರಿಯಾಗುತ್ತದೆ' ಎಂದುದುಂಟು 'ಅಕ್ಕಣಿಯನ್ನು ಪಂಜರ ಹೊಗಿಸಿಯೇ ಬಿಡುತ್ತೇವೆ' ಎಂದ ಭಟರುಂಟು ಇದೇನು ಸಾಮಾನ್ಯರ ಮಾತುಗಳಲ್ಲ ಮೊನ್ನೆಮೊನ್ನೆ ನಾಗಯ್ಯ ಸೆಟ್ಟರಿಗೂ, ನೀಲಪ್ಪ ಹೆಗ್ಗಡೆಯವರಿಗೂ ಆದ ಕಕ್ಷಿಯಲ್ಲಿ ಹೀಗಾಗಿತ್ತು ಕೇಳು ಬ್ಯಾರಿಗೂ, ಸಿಲಪ್ಪ ಹೆಗ್ಗಡೆಯವರಿಗೂ ಆದ ನ್ಯಾಯಾಧಾನ್ಯಾರಿಯಲ್ಲಿ ಅಕ್ಕಣಿ ಮುಖ್ಯವಾಗಿದ್ದಳು ನರಸ ಉಪಾಧ್ಯಾಯರಿಗೂ ಚನ್ನಪ್ಪಯ್ಯರಿಗೂ ನಡೆದ ಜಾಡಾಜಾಡಿಯಲ್ಲಿ ಅಕ್ಕಣಿ ಅವಶ್ಯವಾಗಿದ್ದಳು ಅವಳನ್ನು ಕರೆಸಿಯೇ ಶುದ್ಧ, ಕರೆಸುತ್ತೇವೆ, ಕರೆಸುವ ಕರೆಯಿಸಿದರಾಯಿತಲ್ಲ ಎಂದು ಕೊನೆಗೂ ದಮ್ಮು ನಿಲ್ಲಿಸಿ ತಣ್ಣಗಾದವರೇ ಎಲ್ಲರು

ಏನು ವಿಷಯ ಎಂದು ಕೇಳುತ್ತೀರೋ ವಾಟ್ಲಾಳಿ ಪರಮಯ್ಯನನ್ನು ಕೇಳಿರಿ. ಅವನು ಹೇಳುವನಲ್ಲ ಸ್ಪಷ್ಟವಾಗಿ "ಅಕ್ಕಣಿಯನ್ನು ಕರೆಯಿಸುತ್ತಾರಂತೇನು ಸಾಕ್ಷಿಗೆ ಒಮ್ಮೆ ಕರೆಯಿಸಲಪ್ಪ ಹಾಗೇನಾದರೂ ಆದರೆ ನಮ್ಮೂರಿನ ಬಂಟರು, ಬ್ರಾಹ್ಮಣರು ಯಾರೂ ಕೋರ್ಟಿನ ಮೇಲು ಏರಲಿಕ್ಕಿಲ್ಲ ಅಷ್ಟು ಜಾತಕ ಸ್ಫುಟವಾದೀತು"

ನೀವು ವಾದಿಸಿರಿ 'ಪರಮಯ್ಯ, ಹೀಗೇನು ಹೇಳುತ್ತೀ, ಅಕ್ಕಣಿಗೆ ಅದರ ಬಾಡವೆಲ್ಲ ತಿಳಿದಿದೆ ಚನ್ನಪ್ಪಯ್ಯರು ನರಸ ಉಪಾಧ್ಯಾಯರ ಒಕ್ಕಲಿನ ಕಾಲು ಕಡಿಸಿದುದು ಏಕೆಂದು ಅವಳಿಗೆ ಗೊತ್ತು ಗೊತ್ತು ಎಂದರೇನು! ಅವಳೇ ಹೇಳಿಸಿ ಆದದ್ದು ಅನ್ನುತ್ತಾರೆ ಅದೆಷ್ಟು ಸುಳ್ಳವ್ರೋ ನನಗೆ ತಿಳಿಯದು ಆದರೆ ಅದಾಗುವಾಗ ಅಕ್ಕಣಿ ಪಿಳಿಪಿಳಿ ನೋಡಿ ನಗುತಿದ್ದಳು ಎಂಬುದು ಖಂಡಿತ—ಹೀಗೆಂದರೆ ಪರಮಯ್ಯ ಛಟ್ಟನೆ ಅಂದೇ ಬಿಡುತ್ತಾನೆ—'ನಿಜ ಎಲ್ಲ ನಿಜ ಅವಳಿಗೆ ಅಷ್ಟು ಅಲ್ಲ ಇನ್ನೂ ನೂರು ಸಂಗತಿ ತಿಳಿದಿದೆ. ಅವಳಿಗೆ ತಿಳಿದ ಸಂಗತಿ ನಮ್ಮ ನಿಮ್ಮ ಯಾರಿಗೂ ತಿಳಿದಿರದು ಅವಳು ಈ ವಯಸ್ಸಿನಲ್ಲಿ ಕೋರ್ಟು ಏರಳು ಮೊದಲೂ ಏರಿದವಳಲ್ಲ ಹಟ ಹಿಡಿದು ಯಾರಾದರೂ ಕೋರ್ಟಿಗೆ ಎಳೆದರೆ—ಎಲ್ಲವರ ಗುಟ್ಟು ಬಯಲಾಗುತ್ತದೆ. ಅಕ್ಕಣಿ ಬಾಯಿ ತೆರೆಯದೊಂದೇ ಬಾಕಿ—ಗಡಿಯಾರಕ್ಕೆ ಕೀಲಿ ಕೊಟ್ಟ ಹಾಗೆ ಮತ್ತು ಮೆಜಿಸ್ಟ್ರೇಟರಲ್ಲ, ಅವರ ತಾತ ಬಂದರೂ ನಿಲ್ಲಿಸಲಿಕ್ಕೆ ಬರಲಿಕ್ಕಿಲ್ಲ ಆ ಸಮಯ ಅವಳು ಏನು ಅಂದಾಳು, ಏನು ಅನ್ನಲಿಕ್ಕಿಲ್ಲ ಎನ್ನುವುದು ಕಷ್ಟ ಅವಳ ಸಾಕ್ಷಿಯಿಂದ ಯಾರಿಗೆ ಗತಿ ಬಂದರೂ ಬಂತೆ!'

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ, ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿರೂಪಗಳು, ಘಟನೆಯ ರೂಪಗಳು ಘಟನೆಯ ರೀತಿಗಳು, 'ಶಾಂತ' ಆವರಣ—ಇವೆಲ್ಲ ವಾಸ್ತವವಾದುವು, ಹಳ್ಳಿಯು ಸಾವಿರಾರು ಕೋಟಿ ಕುಂದಾಪುರದೊಳಗಿನ ಒಂದು ಗ್ರಾಮ ಸಮೂಹ, ವ್ಯಕ್ತಿಗಳು ಮಾತಿನ ರೀತಿಗಳು ಹಲವು ಅಲ್ಲಿನವೆ ಬರಿಯ ಪಾತ್ರಪರಿಚಯಗಳೇ ಈ ಚರಿತ್ರೆಗಳ ಗುಂಪು ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಆನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು ನಾನು ಬರೆದ ಪ್ರಸ್ತಾವನೆಯ ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅವರ ಮುಂದಿರುವ ಪಾತ್ರಗಳು ಇಂಥವು—ಎಂದು ಒದಗಿಸಿಕೊಡುತ್ತೇನೆ ಇತಿ,

ಶಿವರಾಮ ಕಾರಂತ.

ಇಲ್ಲಿ—ವಾಟ್ಲಾಳಿಯ ಮಾತು ಸತ್ಯ. ಪರಮನಿಗೆ ಅಕ್ಕಣಿಯ ಮೇಲೂ ಸಿಟ್ಟಿಲ್ಲ, ಉಳಿದವರ ಮೇಲೆಯೂ ದ್ವೇಷವಿಲ್ಲ ಅಕ್ಕಣಿ ವಿಷಯ ಅವನಿಗೆ ತಿಳಿದಷ್ಟು ಇನ್ನಾರಿಗೂ ತಿಳಿಯದು ಕಾರಣ—ನಮ್ಮ ನರಸ ಐತಾಳರ ಅಜ್ಜ, ಅವರು ಈಗ ಇಲ್ಲ, ಇದ್ದಾಗ ಊರಿನ ಮೊದಲಿನ ಗುರಿಕಾರರು ಎನಿಸಿದ ಭಟ—ಅವರಿರುವಾಗ ಪರಮನಿಗೆ ೨೦ ವಯಸ್ಸು ಅವನು ಅಕ್ಕಣಿಗೆ ಬಲಿಬಿದ್ದಾಗ ಪರಮನೇ ಖುದ್ದಾಗಿ 'ಬೇಡ ಸ್ವಾಮಿ, ತಮ್ಮಂಥವರಿಗೆ ಬೇಡದ ವ್ಯಾಪಾರವಿದು' ಎಂದು ನಾಲ್ಕು ಬುದ್ಧಿ ಹೇಳಿದ ಧೀರ ಅವನು ಆದರೆ ಅವರೇ ಹಟಹಿಡಿದರು. ಬಾರ್ಕೂರಿನ ಅಕ್ಕಣಿಯನ್ನು ನಮ್ಮೂರಿಗೆ ಕರೆಯಿಸಿ ಶೋಭನ ಮಾಡಿಸಿ, ಮನೆ ಕಟ್ಟಿಸಿಕೊಟ್ಟರು 'ಗಂಡ ತಾನು' ಎಂದ ಅವರೇ ಹೇಳುವಂತೆ ಹೆಸರು ಪಡೆದರು. ಆನಂತರ ಪರಮ ನರಸ ಐತಾಳರ ತೈನಾತಿಯಾದ ಅಕ್ಕಣಿ ಮನೆಗೂ ಹೋಗಿ ಬರಲೇಬೇಕಾಯಿತು 'ಅಕ್ಕಣಿ' ಐತಾಳರ 'ಅಸಾಮಿ' ಎಂದ ಮೇಲೆ ಸ್ವಕ್ಷೇತ್ರ ಊರಿನಲ್ಲೇ ಬಂದ ಭೂಕಾಮಿನ ಜನ ಎನಿಸಿದಳು

ನಮ್ಮ ಊರಿನ ಸಾಮಾಜಿಕ ಕ್ರಿಯೆಗಳನ್ನು ಕಂಡರೆ ಬೆನ್ನಾರೆ ಬೈದವರೂ ಎದುರಿನಲ್ಲಿ "ಅಕ್ಕಣಿಯಮ್ಮ" ಎನ್ನುತ್ತಿದ್ದ ಕಾಲವದು. ನರಸ ಐತಾಳರ ಹಿರೀ ಮಗಳ ಲಗ್ನದ ಸಮಯ ಅಕ್ಕಣಿಯೇ ತಪ್ಪದೆ ಯಜಮಾನಿಯಾಗಿದ್ದಳು ಎಂದರೆ ತಪ್ಪಲ್ಲ ಅಕ್ಕಣಿಗೆ ಆಗ ಹತ್ತು ಹದಿನಾರರ ಮಗಳಿದ್ದಳು ಸರಸಿ ಎಂದು ಹೆಸರು ಅವಳ ಅದೇ ದಿವಸ ಗೆಜ್ಜೆಕೊಟ್ಟು ಬಂದ ಬೀಗರಿಗೆ ದೌಲತ್ತಿನ ಮಾಡಿ, ಅವರ ಎದುರಿಗೆ ಹೋದ ಅಕ್ಕಣಿಯಮ್ಮ—ನಮ್ಮ ಮಗಳು ನನ್ನ ಹೆಸರು ಏರಿಸುತ್ತಾಳೆ ಎಂದಿದ್ದರು.

ಆಗಿನ ದಿನ ಕಳೆಯಿತು. ನರಸ ಐತಾಳರು ಕೂಡಲು ನೆರೆಯುವುದರೊಳಗೆ ಕೈಲಾಸ ಕಂಡರು ಅಷ್ಟರೊಳಗೆನೇ ಸರಸಿ ಹದಿನಾರರಲ್ಲಿ ಒಂದು ಹೆಣ್ಣು ಕೂಸು ಹೆತ್ತು ತೀರಿಕೊಂಡಳು ಅಕ್ಕಣಿ—ಈ ಮೊಮ್ಮಗಳು ಒಂದು ರೀತಿಯಿಂದ ಅನಾಥಳಾದರ

ಅಕ್ಕಣಿಗೆ ಏನು ಆಗ ಇನ್ನೂ ಸಮಸಮ ವಯಸ್ಸು ಆದರೂ ಅಗಿನ ದಿವಸದಲ್ಲಿ ಅಂದರೆ ಈಗ್ಗೆ ೧೫ ವರ್ಷದ ಹಿಂದೆ, ಸೀತೈತಾಳರಿಂದ ಹಿಡಿದು ಅಚ್ಚಣ್ಣ ಭಂಡಾರಿಗಳ ತನಕ ಎಲ್ಲರೂ ಅವಳ ನಗುವಿಗಾಗಿ ಹಾತೊರೆದರು ಆದರೆ ಅವಳು ಮಾತ್ರ ಮೂರು ವರ್ಷ ಕಾಲ—ಏನು ವ್ರತವೋ ಎಂಬ ಹಾಗೆ—ಮನೆಯಿಂದ ಹೊರಗೆ ಕಾಲು ಇರಿಸಲಿಲ್ಲ ಇರಿಸುವ ಅವಶ್ಯವೂ ಇರಲಿಲ್ಲ ಅಸ್ತು ಸತ್ತವರ ಶಾಸನದಂತೆ ಅವಳ ಮನೆಗೆ ಖರ್ಚಿನಷ್ಟು ಅಕ್ಕಿ ಬರುತ್ತಲಿತ್ತು ಅವಳ ವಾಸವಾಗಿದ್ದ ಮನೆಯೂ ಅವಳ ಹೆಸರಿಗೇನೆ ಇತ್ತು

ಅನಂತರ ನರಸ ಐತಾಳರ ಮಗ ರಮಣಯ್ಯ ಪ್ರಾಯಕ್ಕೆ ಬಂದದ್ದಾಯಿತು ಆಚೆ ಈಚೆ ನವರ ಮಾತ ಕೇಳಿ, ಧೈರ್ಯ ತಾಳಿ ಅಕ್ಕಣಿಯ ಪನ್ನನ್ ಲಿಸಿಬಿಟ್ಟ ನರಸ ಐತಾಳರ ಮೇಲಿನ ಪ್ರೀತಿಯಿಂದ ರಮಣನನ್ನ ಮಾಫಿ ಮಾಡಿದ್ದೇನೆ ಎಂದ ಮೌನತಾಳಿದಳು. ಅವಳ ಮೊಮ್ಮಗಳು ಪುಟ್ಟಂಗಿಗೆ ಈಗ ೫ ವರ್ಷ ಇನ್ನೊಂದು ೪ ವರ್ಷ ಕಳೆದರೆ ಈ ಸಾಮ ಗಂಟೆದರ ಬೇಕಿಲ್ಲ ಎಂದು ಧೈರ್ಯವಾಗಿದ್ದವಳು ಕೊನೆಸಾಗದೆ ಪರಮಯ್ಯನನ್ನು ಕರೆಯಿಸಿ 'ನಾನು ರಮಣನ ತಂದೆಗೆ ಸಮಾನ ಸತ್ತವರ ಮಾತನ್ನು ನನ್ನ ಪುಟ್ಟರಂಗಿ ಪ್ರಾಯಕ್ಕೆ ಬರುವ ತನಕವಾದರೂ ನಡೆಯಿಸಲಿ' ಎಂದ ಹೇಳಿಕಳುಹಿಸಿದಳು ಪಾಪದ ಪರಮಯ್ಯ ನಿಗೆ ಮಂಗಳಾರತಿಯಾಯಿತೆ ... ಅವಳೂ ಸೇರಿ ಅಪ್ಪಯ್ಯನನ್ನು ಬಗಾಲಿ ಕೆಗೆದುದು ಸಾಕು ಎಂದು ಉತ್ತರ ಬಂದಿತು

ಪರಮನಿಗೆ ಆದ ಅವಮಾನ ತನಗಾದಂತೆ ಎಂದು ಅಕ್ಕಣಿ ತಿಳಿದು ಸುಮ್ಮನಾದಳು. ಈಗ ಹೊಟ್ಟೆ ಪಾಡಿಗಾಗಿ "ಸೀತೈತಾಳರೋ, ಅಚ್ಚಣ್ಣ ಭಂಡಾರಿಗಳೋ" ಎಂದು ಅಳುಕುವ ಕಾಲ ಬಂದಿತು. "ಸೆಟ್ರಿಗಿಂತ ಬ್ರಾಂಟ್ರು ಮೇಲು" ಎಂಬುದು ಒಂದು ಯೋಚನೆ ಬ್ರಾಂಟ್ರಿಗಿಂತ ಕಾಸು ಮೇಲು' ಎಂಬುದು ಇನ್ನೊಂದು ಯೋಚನೆ ಸೀತೈತಾಳರನ್ನು ನಂಬಿದರೆ 'ವೈದಿಕ ಬ್ರಾಹ್ಮಣ—ತನಗೂ ಅರೆಹೊಟ್ಟೆ; ನಂಬಿದವರಿಗೆ ಬರಿಹೊಟ್ಟೆ' ಹೀಗೆಂದು ಯೋಚಿಸಿ ತನ್ನ ಬಲಬಲವು ಎರಡನ್ನೂ ಭಂಡಾರಿಗಳ ಕಡೆಗೆ ಎಸೆದಳು

ಅಚ್ಚಣ್ಣ ಸೆಟ್ಟರು ಅಕ್ಕಣಿಯ ಮನೆಗೆ ಹೋಗುತಿದ್ದಾರೆ ಎಂಬ ಸುದ್ದಿ ಹೊರಟ ಮೊದಲನೆ ದಿವಸ 'ಅಬ್ಬಾ ಅದೃಷ್ಟವೇ-ತಿರುಕನೋರ್ವ ಎಂಬ ಹಾಡಿನ ಹಾಗೆ ಪಟ್ಟದ ಆನೆ ಭಂಡಾರದ ಕೊರಳಿಗೆ ಹಾರ ಹಾಕಿತೇ" ಎಂಬ ಕೋಲಾಹಲ ಹುಟ್ಟಿಸಿತು ಅಂದಿನಿಂದ ಒಳಗೊಳಗೇನೆ ಭಂಡಾರಿಗಳ ಪಂಗಡ ಒಂದು, ಐತಾಳರ ಪಂಗಡ ಒಂದು ಎಂಬುದು ಎದ್ದಿತು

ಅವರವರೇ ಸಮನಾದ ರಣಾಂಗಣಕ್ಕಿಳಿದುದು ಮೊನ್ನೆ ಮೊನ್ನೆಯಾದರೂ 'ಕಿರುಕುಳ, 'ಚಳ್ಳಿ ಅರ್ಜಿ' ಮತ್ತೊಂದು ಮಗದೊಂದು' ಎಂದು ಆ ದಿನವೇ ಹೊರಡಲು ತೊಡಗಿತು ಅಂದರೆ ಒಂದು ನಿಜ! ಸೀತೈತಾಳರೂ ಗಂಡಸು, ಸೇಕಡ ನೂರಕ್ಕೆ ನೂರು ಗಂಡಸು ಹೀಗಿದ್ದು ಭಂಡಾರಿಗಳಿಂದಾದ ಅವಮಾನ ಸಹಿಸಿಯಾರೆ? ಮಾನ ಗಳಿಸುವ ಅಂದರೆ ಕಾಸಿಲ್ಲದೆ ಮಾಡುವಂತಿಲ್ಲ ಅವರ ಹತ್ತಿರ ಅಕ್ಕಣಿಗೆ ಧಾರೆಯೆರೆಯುವಷ್ಟು ಹಣವೂ ಇಲ್ಲ ಎದುರಿನಿಂದಲೇ ಕಾದಾಡಲು ಬೇಕಾಗುವ ಅನುಕೂಲತೆಯೂ ಇಲ್ಲ ಹೀಗಾಗಿ ಅಚ್ಚಣ್ಣ ಭಂಡಾರಿಗಳ ಜುಡಾಪಿ, ಆರೋಪಗಳಿಗೆ 'ಬೆಂಗಡೆಯಿಂದಲೇ ಮದ್ದು ಅರೆದರಾಯಿತಲ್ಲ' ಎಂಬ ಹಟ ಅವರದ್ದು

'ಕಾಲಗತಿ ಚೆನ್ನಾಗಿಲ್ಲ,' ಅಕ್ಕಣಿಯ ಅದೃಷ್ಟವೂ ಹಾಗೆ ಅನ್ನುತ್ತಾನೆ ಪರಮಯ್ಯ ಈಗ ಅಚ್ಚಣ್ಣ ಭಂಡಾರಿಗಳೂ ತೀರಿಕೊಂಡರು ನಾಲ್ಕಾರು ವರ್ಷದ ಅವರ ಗೆಳೆತನದಿಂದ, ಮೂರು ನಾಲ್ಕು ಸಾವಿರ ರೂಪಾಯಿಗಳಾದರು ನಗದ, ನಗನಾಣ್ಯವೆಂದು ಅವಳಿಗೆ ದೊರೆಯಿತು ಮನೆವಾರ್ತೆಯನ್ನು ಅವರೇ ನಡೆಯಿಸಿಕೊಂಡು ಹೋಗುತಿದ್ದರು ಈಗ ಮೊಮ್ಮಗಳಿಗೆ ಚತುರ್ದಶಿ ನಾಳೆ ತುಂಬಿದರೆ ಹುಣ್ಣಿಮೆ

[೧೧ನೇ ಪುಟವನ್ನು ನೋಡಿರಿ]

ಬರುವ ವಾರ

ಚನ್ನ ಮಂತ್ಮರು

卐

೯.

ಅಪ್ಪನ ದುಡ್ಡಿಗೆ ಭಾರೀ ತೂಟು
ನಾಳಿನ ಏಳಿಗೆಗೆ ಇಂದೇ ಜಟ್ಟುರ
ಕ್ರಾಪಿಗೆ ಕ್ರಾಫು,
ಮೀಸೆಗೆ ಮೀಸೆ
ಸ್ವಟ್ಟು ದರಿಗೆಯ ಪ್ರೇಮ
ಇದ್ದ ಕಾಸಿನ ಹೋಮ.

ಶ್ರೀ ಕಾರಂತರ

ಹಳ್ಳಿಯ 10 ಸಮಸ್ತರು

ಯಾವತ್ತು ಗ್ರಾಮ ದೇವ ದೇವತೆಗಳೇ!

ಗತ ವೀರ್ಯವನ್ನು ಪುನಃ ಹೊಂದಿರಿ!

ಡಾ. ಬಿಸನ್‌ರವರ ಸೆಲ್ಫ್ ಪ್ರೊಟೆಕ್ಟರ್ ಸ್ತ್ರೀ ಪುರುಷರಿಬ್ಬರಿಗೂ ಉತ್ತಮೋತ್ತಮವಾದ ನರಶಕ್ತಿ ವರ್ಧಕ ಪಾನಕವೆಂದು ಜಗತ್ಪ್ರಸಿದ್ಧವಾಗಿದೆ ಅದು ಸಾಕ್ಷಾತ್ತಾಗ ಬೆನ್ನುಹುರಿ ಹಾಗೂ ಜನನೇಂದ್ರಿಯಗಳಿಗೆ ಸಂಬಂಧಪಟ್ಟ ನರಗಳನ್ನು ಉಜ್ಜೀವಿಸುವುದು ಆದರಿಂದ ಅಂಥ ವ್ಯಾಧಿಗಳಿಂದ ನರಳುವವರಿಗಿದು ಅಮೂಲ್ಯವಾದದ್ದು ನೀವು ಯೌವನದ ಅಪವ್ಯಯ, ಅತಾಚರಣೆ, ಮುಷ್ಟಿ ಮೈಥುನ, ಅಕಾಲಿಕ ವೃದ್ಧಾಪ್ಯ, ಸ್ವಪ್ನಸ್ಖಲನ, ಅಸ್ವಾಭಾವಿಕ ಸ್ರಾವ, ಅತಿಮೂತ್ರ, ಕ್ಷೀಣಧಾತು, ಧಾರಣಶಕ್ತಿಯಿಲ್ಲದಿರುವಿಕೆ, ಕಾಮತೃಪ್ತಿಯ ವಿಫಲತೆ, ಸ್ಪರ್ಮಟೋರಿಯ, ನಿರುತ್ಸಾಹ ಮತ್ತು ನರದೌರ್ಬಲ್ಯವು ಇವುಗಳಿಂದ ನೀವು ನರಳುತ್ತಿದ್ದರೆ, ಡಾ. ಬಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಉಪಯೋಗಿಸಿರಿ ಅದನ್ನು ಬಳಸಿದ ಮೊದಲನೆ ದಿನದಿಂದ ಗುಣ ತೋರಿಬರುವುದು ಇಂದೇ ಒಂದು ಸೀಸೆ ಕೊಳ್ಳಿರಿ ಬೆಲೆ: ೧ ಸೀಸೆ ರೂ ೪

ಅಮೆರಿಕನ್ ಮೆಡಿಕೊ ಅಂಡ್ ಜಿ. ಸಿ. ಅಸೋಸಿಯೇಷನ್,
(D 22) ಫೋರ್ಟ್, ಬೊಂಬಾಯಿ

SELF-PROTECTOR
FOR
VIGOUR & VITALITY

ಈಸ್ಟರ್ ಹಬ್ಬದ ಸಮಯ

ಹಿಂದೂದೇಶದಲ್ಲಿ ತಯಾರಾದ ವಸ್ತುಗಳ ಸಂಗ್ರಹಾಲಯ ಮತ್ತು ಅಖಿಳ ಭಾರತದಲ್ಲಿ ಒಂದೇ ಒಂದಾದ

ಸ್ವದೇಶಿ ಮಾರ್ಕೆಟ್

ಕಾಲ್ಬಾದೇವಿ ರಸ್ತೆ, ಬೊಂಬಾಯಿ ೨

ಇದನ್ನು ಸಂದರ್ಶಿಸಲು ಮರೆಯದಿರಿ

ಮುಸೋಲಿನಿಗೆ ಫ್ರೆಂಚ ಪ್ರಧಾನರ ಪ್ರತಿ ಭಾಷಣ

ಯೂರೋಪಿನ ಪ್ರತಿ ರಾಷ್ಟ್ರದಲ್ಲೂ ಒಂದೇ ಪ್ರಶ್ನೆ. - ನಮ್ಮ ರಾಜ್ಯವನ್ನು ನುಗ್ಗುವರೋ? ನೆರೆಯವರನ್ನು ನಂಬಬಹುದೋ?

ಈ ಪ್ರಶ್ನೆಗಳಿಗೆ ಉತ್ತರ ಕೊಡುವುದು ಸುಲಭವಲ್ಲದ ಕಾರಣ, ಮುಂಜಾಗ್ರತೆಗಾಗಿ ಪ್ರತಿಯೊಂದು ಸರಕಾರವೂ ಧಾರಾಳವಾದ ಸಿದ್ಧತೆ ಮಾಡುತ್ತಲಿದೆ.

ಕರಾರುಗಳನ್ನು ಈಗ ಸಹಿಮಾಡುವವರು ಅವು ಜಾರಿಗೆ ಬರುವ ಮೊದಲೇ ಅವನ್ನು ಮುರಿಯುತ್ತಾರೆ! ಕೆಲವರಿಗೆ ಕರಾರು ರಕ್ಷಣೋಪಾಯವಾಗಿದೆ; ಕೆಲವರಿಗೆ ಅದೊಂದು ವಿಪತ್ತೆಂದೇ ತೋರುತ್ತದೆ

ಯುದ್ಧಕಾಲದಲ್ಲಿ ದುಡುಕಿದರೆ,—ಇತರರು ರೇಗುವರೇನೋ ಎಂಬ ಭಯ ದುಡುಕದಿದ್ದರೆ—ಭಯೋತ್ಪಾದಕರ ಸಹಕಾರಿಗಳಿಗಾಗಿ ಗಮನಿಸಬೇಕಾಗುತ್ತದೆ

ಶಕ್ತಿಪ್ರದರ್ಶನದಿಂದಲೇ ಜನಾಂಗಗಳೊಳಗೆ ಕರಾರು ಮೊದಲಾದ ವ್ಯವಹಾರಗಳನ್ನು ನಡೆಸಬರುತ್ತದಾಗಿ ನಾವು ನಂಬುವುದಿಲ್ಲ. ನ್ಯಾಯ ಮತ್ತು ಹಕ್ಕು ಇವು ಇಲ್ಲವಾದಲ್ಲಿ ಮಾತ್ರ ಬಲಪ್ರದರ್ಶನವು ಅಗತ್ಯವಾಗುವುದು. ನಾವು ಶಾಂತಿಪ್ರಿಯರು, ಬಲಿಷ್ಠರು, ನಾಳೆಗೆ ನಮಗೆ ಬೆದರಿಕೆಯಿಲ್ಲ, ನಾವು ಸಿದ್ಧರಾಗಿದ್ದೇವೆ. ಜರ್ಮನಿಗೆ ಅಗತ್ಯವಿರುವಷ್ಟು ಸ್ನೇಹಾಚಾರ ತೋರಿಸಿದ್ದೇವೆ. ಹಾಗಿದ್ದರೂ ಜೆಕ್ಕರಾಜ್ಯದ ಅಪಹರಣವನ್ನು ಇನ್ನು ಯಾವ ವಿಶ್ವಾಸ ಸ್ನೇಹಾಚಾರಗಳಿಂದ ಕಾಣಬಹುದು?

ಶಾಂತಿಸ್ಥಾಪನೆಗಾಗಿ ಯಾವ ಪ್ರಯತ್ನಗಳು ನಡೆವುವೋ ಅವುಗಳಲ್ಲಿ ನಾವು ಸೇರಿ ನಡೆವೆವು. ದುಡುಕಿದವರನ್ನು ತಡೆವುದೂ ನಮ್ಮ ಧರ್ಮ

ಮುಸೋಲಿನಿಯ ಮಾತಿಗೆ ನಾವೆಂದೂ ಒಡಂಬಡುವುದಿಲ್ಲ. ೧೯೩೫ರಲ್ಲಾದ ಕರಾರು ಈಗ ಅಬಿಸೀನಿಯ ಗೆದ್ದ ಬಳಿಕ ತಿದ್ದಬೇಕಾಗಿದೆಯಂತೆ. ಪ್ರತಿಯೊಂದು ಹೊಸ ವಿಜಯವಾದ ಕೂಡಲೆ ಎಲ್ಲ ಕರಾರುಗಳನ್ನು ತಿದ್ದಬೇಕಾಗಿ ಬಂದರೆ, ರಾಜಕೀಯ ಒಡಂಬಡಿಕೆಗಳಿಗೆ ಅರ್ಥವೆಲ್ಲಿ?

ಇತರ ಎಲ್ಲ ಕೈಗಾರಿಕೆ ಉದ್ಯಮ ಮೊದಲಾದುವನ್ನು ಮೂಲೆಗೆ ತಳ್ಳಿ ಯುದ್ಧೋಪಕರಣಗಳನ್ನು ಮಾತ್ರ ಸಿದ್ಧಮಾಡುವುದೊಂದೇ ಉದ್ಯಮವು ಮುಖ್ಯ ಎದುರುಬಂದಂತೆ ತೋರುವುದು. ಅವರ ಅಸ್ತ್ರಗಳಿಗೆ ಇವರ ಶಸ್ತ್ರಗಳು ಎಂಬಂತಾಗಿದೆ. ಫ್ರಾನ್ಸಿಗೆ ಬೇಕಾದುದು ಶಾಂತಿ ಸ್ವಾತಂತ್ರ್ಯ. ಅಪತ್ತು ಬಂದಾಗ ಎಲ್ಲ ಪಕ್ಷಗಳೂ ಒಂದಾಗಿ, ನೈತಿಕ ಮನೋಐಕ್ಯವನ್ನು ಫ್ರಾನ್ಸು ಪಡೆವಂತಾಗಿದೆ. ಈಗ ಇರುವಷ್ಟು ಗಾಢವಾಗಿ ಫ್ರೆಂಚರು ಒಂದಾದಿಲ್ಲ. ಇಷ್ಟು ಧೈರ್ಯವೂ ದೃಢತೆಯೂ ಬಲವೂ ಹಿಂದೆ ಎಂದೂ ಇದ್ದಿಲ್ಲ.

ಶಾಂತಿಯು ಭಂಗವಾಗದೆಂದು ನಮ್ಮ ವಿಶ್ವಾಸ, ಭಂಗವಾದಲ್ಲಿ, ವಿನಾಶ ಅಪಮಾನಗಳನ್ನು ನಾವು ಸಹಿಸದೆ, ನಮ್ಮ ಸ್ವಾತಂತ್ರ್ಯವನ್ನು ಖಂಡಿತವಾಗಿ ರಕ್ಷಿಸಿಕೊಳ್ಳುವೆವು. ಸಾಂಪತ್ತಿಕ ಸ್ಥಿತಿಯೂ ಈಗ ಉತ್ತಮವಾಗಿದೆ. ಅವಕ್ಕೇ ನಾಲ್ಕು ಖಂಡಿ ಚಿನ್ನವು ಬಂದು ಕಲಪಿದೆ!

ಇಟಲಿಯೊಡನೆ ೧೯೩೫ರಲ್ಲಾದ ಕರಾರನ್ನು ಕಳೆದ ಸೆಪ್ಟಂಬರವರೆಗೆ ಯಾರೂ ಆಕ್ಷೇಪಿಸಿರಲಿಲ್ಲ. ಆಗ ಮಾತ್ರ ಅದು ಸಿಂಧುವಲ್ಲ ಎಂಬ ಇಟಲಿಯ ಆಕ್ಷೇಪ ಬಂತು. ಆಗಲಾದರೂ ಸುಯೇಜ್, ಟ್ಯೂನಿಸ್, ಜಿಬೂತಿಗಳ ಮಾತಿರಲಿಲ್ಲ

೧೯೩೫ರಲ್ಲಿ ಹೇಳಿದಂತೆ ಇಟಲಿಗೆ ಬೇಕಾದ ಸಹಾಯ ಅನುಕೂಲತೆ ಮಾಡಲು ಫ್ರಾನ್ಸು ಸಿದ್ಧವಾಗಿದೆ. ಆದರೆ, ಪ್ರತಿಯೊಂದು ವೇಳೆ ಈ ಕರಾರು ಸರಿಯಲ್ಲ, ತಿದ್ದಬೇಕು ಎನ್ನುತ್ತಿದ್ದರೆ ಇದಕ್ಕೊಂದು ಅಂತ್ಯವೇ ಇರದು; ಒಪ್ಪುವುದು ಹೇಗೆ?

ಬ್ರಿಟಿಷ ಮಂತ್ರಿಗಳ ಅಭಯವೂ ಮೈತ್ರಿಯೂ ತಿಳಿದುಬಂದ ಬಳಿಕ, ಫ್ರಾನ್ಸಿನ ಬಲ ದ್ವಿಗುಣಿತವಾಗಿದೆ.

ಇಟಲಿಯು ಈಗ, ನಮ್ಮ ಮಾತುಗಳಿಗೆ ಫ್ರಾನ್ಸು ಸರಿಯಾಗಿ ಇನ್ನೂ ಅರ್ಥಮಾಡಲಾರದಿದೆ ನಮಗೂ ಅವಸರವಿಲ್ಲ. ಮುಂದೆ ಸುಧಾಕಾಲದಲ್ಲಿ ತಿಳಿಸಲಾದೀತು ಎಂದು ಕೂತಿದೆ

ಮುಸ್ಲಿಮ್‌ಲೀಗ್ ಪಕ್ಷವು ಎಸೆಂಬ್ಲಿಯಲ್ಲಿ ಒಡೆಯಿತೋ?

ಎಸೆಂಬ್ಲಿಯಲ್ಲಿನ (ಡೆಲ್ಲಿ) ಮುಸ್ಲಿಮ್‌ಲೀಗ್ ಪಕ್ಷವು ಒಂದು ಸಂಕಟಮಯ ಕಾಲವನ್ನು ಅನುಭವಿಸುತ್ತದೆ!

ಬ್ರಿಟಿಷರೊಡನೆ ಆದ ವ್ಯಾಪಾರೀ ಕರಾರನ್ನು ಮುಸ್ಲಿಮಲೀಗಿನ ಪಂಜಾಬದ ಸದಸ್ಯರು ಎಸೆಂಬ್ಲಿಯಲ್ಲಿ ಸಮರ್ಥಿಸಬೇಕಾಗಿ ಸರ್ ಸಿಕಂದರ ಹಯ್ಯಾತ ಖಾನರು ತಂತಿಮೂಲಕ, ಎಸೆಂಬ್ಲಿ ಮೆಂಬರರಿಗೆ ಎಚ್ಚರಿಸಿದ್ದರಂತೆ. ಆದರೂ ಏಳು ಮಂದಿ ಪಂಜಾಬಿನವರು ಇಬ್ಬರು ಸಿಂಧಿನವರ ವೋಟು ಕೊಡಲು ನಿರ್ಧರಿಸಿದರಂತೆ ಜಿನ್ನಾರವರು, ಹೀಗೆಲ್ಲ ಪಾರ್ಟಿಯ ವಿರುದ್ಧವಾಗಿ ವೋಟು ಕೊಡುವುದಾದಲ್ಲಿ ತಾವು ಅಧ್ಯಕ್ಷಪದವಿಯನ್ನು ತ್ಯಜಿಸುವುದಾಗಿ ಬೆದರಿಸಿದ ಬಳಿಕ, ಸರ್ವರೂ ತಟಸ್ಥರಾದರಂತೆ.

ಮುಸ್ಲಿಮಲೀಗನ್ನು ಸರಕಾರಕ್ಕೆ ಒಲಿಯುವ ಹಾಗೆ ಮಾಡಲು ಪ್ರಯತ್ನಿಸ ಬೇಕಾಗಿ ಹಲವು ಮೆಂಬರರು ಲೀಗಿಗೆ ಸೇರಿದ್ದರು, ಪಂಜಾಬಿನವರಂತೆ ಸರ್ ಸಿಕಂದರರ ತಾಬೇದಾರರು. ಈಗ ಒಂದು ದೊಡ್ಡ ಸಮಸ್ಯೆ ಇದರಲ್ಲಿದ್ದಿದೆ ಎಂದು ಇವರು ತಿಳಿದಿರುವರ. ಇವರು ಇನ್ನು ಈ ಪಾರ್ಟಿಯನ್ನೆ ಬಿಡುವ ಆಲೋಚನೆಯಲ್ಲಿದ್ದಾರೆ. ಸದ್ಯಕ್ಕೇನೂ ಮಾಡರು, ಆದರೂ ಸಿಮ್ಲಾದಲ್ಲಿ ಎಸೆಂಬ್ಲಿಯು ಸೇರುವಾಗ ಹಲವರು ರಾಜಿನಾಮೆ ಕೊಡಬಹುದಾಗಿ ಎಣಿಸಲಾಗಿದೆ

ಗ್ರಾಮಗಳಲ್ಲಿ ಕ್ಷೇಮಾಭ್ಯುದಯ ಸಂಘಗಳು

ಮದ್ರಾಸು ಸರಕಾರವು ಗ್ರಾಮಾಂತರಗಳಲ್ಲಿ ಆರೋಗ್ಯ ಪಾಲನೆಗಾಗಿ ಸಹಕಾರ ತತ್ವದಿಂದ ಕ್ಷೇಮಾಭ್ಯುದಯ ಸಂಘಗಳನ್ನು ಏರ್ಪಡಿಸುವ ವ್ಯವಸ್ಥೆ ಮಾಡಿಯದೆ. ಆರೋಗ್ಯ ಸಾಧನೆಯಿಂದ ಗ್ರಾಮಸ್ಥರ ದುಡಿತವು ಹೆಚ್ಚುವುದು, ಕೆಲಸಗಾರರ ಕ್ಷೇಮಪಾಲನೆಯೇ ಸಂಪತ್ತನ್ನು ವೃದ್ಧಿಗೊಳಿಸುವುದು, ಆದುದರಿಂದ ಸಹಕಾರೀ ಸಂಘಗಳೂ ಈ ಭಾಗದಲ್ಲಿ ಶ್ರದ್ಧೆಯಿಂದ ಕಾರ್ಯನಿರ್ವಹಿಸಬೇಕಾಗಿದೆ

ಒಳ್ಳೆಯ ಕಲಿತ ವೈದ್ಯರು ಗ್ರಾಮಗಳಲ್ಲಿ ನೆಲೆನಿಲ್ಲಲೊಪ್ಪುವುದಿಲ್ಲ. ಅವರಿಗೆ ಅದು ಅಷ್ಟು ಲಾಭಕರವಲ್ಲ. ಆದುದರಿಂದ ಬರಿಯ ಅರೆಜಾಣರ ಕೈಗೇ ಗ್ರಾಮಸ್ಥರನ್ನು ಒಪ್ಪಿಸಬೇಕಾಗುತ್ತದೆ. ಹೀಗಾಗಿ ಕ್ಷೇಮಸಾಧನೆಯ ಏರ್ಪಾಡು ಗ್ರಾಮಗಳಲ್ಲಿ ಕೊಟ್ಟಿದೆ. ಸರಕಾರವು ಈ ಕರ್ತವ್ಯವನ್ನು ಪೂರಯಿಸಬೇಕಾಗಿದೆ ನಿಜ, ಆದರೆ, ಗ್ರಾಮಸ್ಥರೇ ತಾವಾಗಿ ಕೈಸೇರದೆ ಈ ಕೆಲಸವು ಸಾಧ್ಯವಾಗಲಾರದು. ಆದುದರಿಂದ ಕ್ಷೇಮಪಾಲನೆಯು ಸಹಕಾರೀ ಸಂಘಗಳಾಗತಕ್ಕುದು

ಗ್ರಾಮಸ್ಥರು ಇತರ ಸಹಕಾರ ಸಂಘಗಳ ಹಾಗೆಯೆ, ಇದರಲ್ಲೂ ಪಾಲುವಹಿಸಿಕೊಂಡು ಆಡಳಿತ ನೋಡಲು ಹಕ್ಕುಳ್ಳವರ. ಅವರು ವಾರ್ಷಿಕ ವಂತಿಗೆ ತೆತ್ತು, ಗ್ರಾಮಗಳನ್ನು ನಿರ್ಮಲಗೊಳಿಸಿ, ಯುವಕ ಮಂಡಲ ಸ್ಥಾಪಿಸಿ, ಇದರ ಖರ್ಚಿಗೆ ಕೊಮುನ್ ಗಡ್ ಫಂಡಿನಿಂದ ಹಣ ಪಡೆದು, ಸೆಂಟ್ರಲ್ ಬ್ಯಾಂಕ್ ಮತ್ತು ಇತರ ಸಹಕಾರ ಸಂಘಗಳ ಸಹಾಯದಿಂದಲೂ ಸರಕಾರದ ಗ್ರಾಂಟಿನಿಂದಲೂ ಇವನ್ನು ನಡಿಸಿಬರಬೇಕ

ಹಲವು ಗ್ರಾಮಗಳ ಕೂಟಕ್ಕೊಂದು ಸಂಘದಂತೆ, ಈ ವರ್ಷ ೮ ಸಂಘಗಳಾಗುವುವು. ೧೨೦೦–೨೦೦೦ ಕುಟುಂಬಗಳಿಗೊಂದು ಸಂಘ. ವಾರ್ಷಿಕ ೧॥ ರೂಪಾಯಿ ಯ ವಂತಿಗೆ ಕೊಡುವ ೫೦೦ ಮೆಂಬರರಾದರೂ ಈ ಸಂಘಗಳಿಗೆ ಸೇರಬೇಕು. ಹಣದ ಬದಲಾಗಿ ಧಾನ್ಯಾದಿಗಳನ್ನು ತೆರಬಹುದು. ಕೆಲಕಾಲ ಕೆಲಸ ನಡಿಸಿದ ಬಳಿಕ, ವಂತಿಗೆ ಹೆಚ್ಚಿಸಬಹುದು

ಔಷಧವನ್ನು ಕ್ರಮಕ್ಕೇ ಕೊಡುವರು. ಮನೆಗೆ ಡಾಕ್ಟರು ಬಂದರೆ, ನಿಶ್ಚಯಿಸಿದ ಫೀಸು ತೆರಬೇಕು. ಈ ಹಣಗಳನ್ನು ಫಂಡಿಗೆ ಕೂಡಿಸುವರು. ಮೂಲತಃ ೧೨೦೦ ರೂಪಾಯಿ, ವಾರ್ಷಿಕ ಖರ್ಚು ೯೦೦ ರೂಪಾಯಿ ಹೀಗೆ ಪ್ರತಿಸಂಘಕ್ಕೆ ಅಂದಾಜು ಹಾಕಲಾಗಿದೆ. ಮೂಲಫಂಡಿನ ೧೦೦೦ ರೂಪಾಯಿ ದೊರೆಯದೆ ಸಂಘ ಸ್ಥಾಪಿಸಬರುವುದಿಲ್ಲ. ಜಿಲ್ಲಾ ಬೋರ್ಡುಗಳಿಗೂ ಸಹಾಯಕ್ಕೆ ನೆರವಾಗುವಂತೆ ಅನುಕೂಲವಿದೆ. ೧॥ ಲಕ್ಷ ರೂಪಾಯಿಗಳು ಗ್ರಾಮಾಭ್ಯುದಯಕ್ಕೆಂದು ಕಲೆಕ್ಟರರ ವಶವಿದೆ. ೨½ ಲಕ್ಷ ರೂಪಾಯಿ ಸರಕಾರವು ವಿನಿಸಲಾಗಿ ಇರಿಸಿಯದೆ. ಈ ಹಣವನ್ನು ಈ ಸಂಘಗಳಿಗಾಗಿ ಸಹಾಯಕ್ಕೆ ವ್ಯಯಿಸಬಹುದು.

ಇವೆಲ್ಲ ಸಂಘಗಳಾದಲ್ಲಿ, ಇವನ್ನು 'ಹೆಲ್ತ್ ಯೂನಿಯನ್' ಆಗಿ ಸೇರಿಸಬಹುದು. ಎಲ್ಲವೂ ಸೇರಿ ಔಷಧಗಳನ್ನು ಕೊಂಡುಕೊಳ್ಳುವ ಹಾಗೆ ಮಾಡಬಹುದು

ಶ್ರೇಷ್ಠ ತರದ ದೃಷ್ಟಿಚಕ್ರಗಳಿಗೆ



ರಬ್ಬರು ಮೊಹರುಗಳಿಗೆ
ನಾಯಕ್ಸ್ ಸ್ಟೋರ್ಸ್
ಮಂಗಳೂರು.

ಜನರು ಸ್ವಸ್ತಿಕಾ "ಕಾಂತಿ" ಟ್ರೊಯಿಲೆಟ್ ಸೋಪನ್ನೇ ಯಾಕೆ ಆರಿಸುತ್ತಾರೆ?

ಯಾರೇ ಕಂಡ ಪ್ರತಿನಿತ್ಯದ ಸ್ನಾನಕ್ಕೆ ಇದು ಬಹಳ ಉತ್ತಮವಾದುದನ್ನು ಮತ್ತು ಬಹಳ ಕಡಿಮೆ ಬೆಲೆಯ ಸಾಬೂನಾಗಿರುತ್ತದೆ

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.

ಹಿಟ್ಲರ ಭಯ

ಜೆಕ್ಕೊರಾಜ್ಯವನ್ನು ಜರ್ಮನಿಯು ನುಂಗಿದ ಬಳಿಕವೇ, ಫ್ರೆಂಚ ಮುಖ್ಯ ಮಂತ್ರಿಗಳಿಗೆ ವಿವೇಕೋದಯವಾಯಿತು. "ಶಾಂತಿಭಂಗವಾಗದಂತೆ, ದುಡುಕುವವರನ್ನು ತಡೆವುದಕ್ಕೆ ನಮ್ಮಂತೆ ಅಭಿಪ್ರಾಯವುಳ್ಳ ಇತರ ರಾಷ್ಟ್ರಗಳವರೊಡನೆ ಸಂಭಾಷಣೆಗಳು ಇನ್ನು ನಡೆಯಬೇಕೆಂದು" ಮಂತ್ರಿ ದಳಧೀರರೆಂದರು. ಆದರೆ, ಸ್ವರಾಜ್ಯದ ರಕ್ಷಣೆಗಾಗಿಯೇ ಬಹಳವಾಗಿ ಪ್ರಯತ್ನಿಸುತ್ತಿರುವ ಫ್ರಾನ್ಸು ಬ್ರಿಟನ್ನುಗಳು ಯಾವರೀತಿಯಲ್ಲಿ ಇತರರನ್ನು ತಡೆಗಟ್ಟಲೂ ಸಂಭಾಷಣೆಗಳನ್ನು ನಡೆಸಿದರೂ ಕೃತಾರ್ಥರಾದರು? ಜೆಕ್ಕೊರಾಜ್ಯವನ್ನು ನುಗ್ಗಿಯಾದ ಬಳಿಕ, ಅದೆಂತೂ ಜರ್ಮನಿಗೆ ಕೊರಬರುತ್ತಿಲ್ಲವಷ್ಟೆ. ಅಲ್ಲಲ್ಲಿ ಕೂತು ನಾನು ನಿಷೇಧ ಸೂಚಕ ಭಾಷಣ ಮಾಡಿದ ಕೂಡಲೆ, ಹಿಟ್ಲರನ ದುಡುಕು ಹಿಂದೆಗೆಯದು, ಪ್ರೋತ್ಸಾಹವೇ ಜರ್ಮನಿಗೆ ದೊರೆವುದು. ಸ್ವದೇಶರಕ್ಷಣೆಯ ಮಾತನ್ನು ಹಿಂದೆ ಬಿಟ್ಟು, ಆಕ್ರಮಣಕಾರಿಗಳನ್ನು ತಡೆಯಲು ಉದ್ಯೋಗಿಸಬೇಕಾದರೆ, ಸಮಯ ಬೇಕು. ಅಷ್ಟರಲ್ಲಿ—ಫ್ರೆಂಚ ಬ್ರಿಟಿಷ ಸರಕಾರಗಳಿಗೆ ನೆಟ್ಟಗೆ ಬಾಧೆ ಕೊಡದ ಕಡೆಗಳಲ್ಲಿ ಹಿಟ್ಲರು ಮುಸೊಲಿನಿಗಳು ತಮ್ಮ ಆಕ್ರಮಣಕಾರ್ಯಗಳನ್ನು ಮುಂದೊತ್ತಬಹುದು. ಹೀಗೆ, ಶಾಂತಿಪಾಲಕರು ಸಿದ್ಧರಾಗುತ್ತ ಬರುವುದರೊಳಗೆ ಹಿಟ್ಲರ ಪಂಗಡವು ಬಲವಾಗುತ್ತ ಬರುವುದು. ಸೈನ್ಯಬಲವು ಕಡಮೆಯಾಗಿರುವ ಹಾಗೂ ವಿಸ್ತಾರವಾಗಿರುವ ರಾಜ್ಯಗಳನ್ನು ಹಿಟ್ಲರ ಪಂಗಡವು ನುಗ್ಗಿಕೊಳಿಸಿದರೆ, ಅಥವಾ ಭಯಪ್ರದರ್ಶನಕ್ಕಾಗಿ ಎಂದೇ ಅವುಗಳ ಮೇಲೆ ಗುಂಡು ಚೆಲ್ಲಲೆಳಸಿದರೆ, ಬ್ರಿಟನ್ನಿಗೆ ಆಪತ್ತು ಸಂಭವಿಸುವುದು. ಅತ್ತ ಫ್ರಾನ್ಸಿನ ಕಡೆಗೆ ಹಿಟ್ಲರ ಕಟಾಕ್ಷವು ಬಿದ್ದರೆ ಹಿಂದುಸ್ಥಾನದಿಂದ ಸೇನೆಗಳು ಬ್ರಿಟನ್ನಿಗೆ ಸೇರಬೇಕಾಗುವುದು ಯುದ್ಧಕಾಲದಲ್ಲಿ. ನಿರಸ್ತ್ರವಾದ ಹಿಂದುಸ್ಥಾನಕ್ಕಿಂತ ಬ್ರಿಟನ್ನಿಗೆ ಮತ್ತೊಂದು ಕಳವಳದ ಕಾರಣವಿರದು. ಹಿಂದುಸ್ಥಾನಕ್ಕೆ ಸ್ವರಾಜ್ಯಕೊಟ್ಟು, ಅದರೊಡನೆ ಯುದ್ಧದ ಕರಾರು ಮಾಡಿಕೊಂಡಲ್ಲಿ, ಬ್ರಿಟನ್ನಿಗೂ ಬಲ, ಹಿಂದುಸ್ಥಾನಕ್ಕೂ ಕ್ಷೇಮ. ಇದನ್ನು ಬ್ರಿಟಿಷ ಸರಕಾರವು ಒಪ್ಪುವುದೆ?

ಜಾತಿದ್ವೇಷ

ಪ್ರತಿಯೊಂದು ಕಾಂಗ್ರೆಸ್ ಪ್ರಾಂತ್ಯದಲ್ಲಿ ಜಾತಿದ್ವೇಷದ ಭೂತವನ್ನು ಅಣಗಿಸುವ ಪ್ರಯತ್ನಗಳಾಗುತ್ತವೆ. ಮಧ್ಯಪ್ರಾಂತ್ಯದ ಸರಕಾರವು ಗೂಂಡಾ ಆಕ್ಟಿನಂತಹ ಒಂದು ಹೊಸ ಕಾನೂನನ್ನು ಮಾಡಲಿದೆ. ಶಾಂತಿ ಭಂಗವಾಗುವ ಹಾಗೆ ಪ್ರಯತ್ನಮಾಡುವ ಕೇಡಿಗಳ ಗುಂಪುಗಳನ್ನು ದೇಶದ ಹೊರಗೆ ಗಡೀಪಾರು ಮಾಡುವ ಯತ್ನಗಳು ಬೊಂಬಾಯಿಯಲ್ಲಿ ನಡೆದ ಹಾಗೆಯೆ ಇಲ್ಲಿಯೂ ನಡೆವುವು. ಆದರೆ, ಆ ಪ್ರಾಂತ್ಯದಿಂದ ಹೊರಗೋಡಿಸಲಾಗುವ ಕೇಡಿಗಳು ಮತ್ತೊಂದ ಪ್ರಾಂತ್ಯದಲ್ಲಿ ತುಫಾನು ಪ್ರಾರಂಭಿಸುವರು. ಮನೆಯ ಮಾರಿಯನ್ನು ಮತ್ತೊಂದು ಮನೆಗೆ ಓಡಿಸಿ ಕ್ಷೇಮ ಸಾಧಿಸುವುದು ಹಿತವಲ್ಲ. ನೆರೆಯವರಿಗೆ ಬಾಧೆಯಾಗುವಂತೆ ನಾವು ಬಾಳುವುದು ಅಹಿತವೇ? ಯುಕ್ತಪ್ರಾಂತ್ಯಗಳಲ್ಲಿ, ದಂಗೆಗಳಾಗುವಲ್ಲೆಲ್ಲ ಹೊಸ ಪೊಲೀಸ್ ತೆರಿಗೆ ವಿಧಿಸುವ ಕ್ರಮಮಾಡುವರಂತೆ. ತೆರಿಗೆ ತೆರುವ ಭಯದಿಂದಲಾದರೂ ಜನರು ಸುಮ್ಮನಿರಬಹುದು. ಜಾತಿದ್ವೇಷ ಅಣಗಿಸುವರೆ ಇಷ್ಟು ಯತ್ನಗಳಾದರೂ ಆಗುವುವೆಂಬುದು ವಿಹಿತ. ಆದರೆ, ಜಾತಿದ್ವೇಷದ ಮೂಲವು ಜಾತಿಗಳಿಗೆ ಅನುಸಾರವಾಗಿ ನೌಕರಿಯ ನೇಮಕ, ಜಾತಿಗಳಿಗೆ ತಕ್ಕಂತೆ ದಾವಾ ಕಾಯದ ನೌಕರಿ, ಇತ್ಯಾದಿ ಮಾತುಗಳು ಮಾಯವಾಗದೆ, ಈ ದ್ವೇಷವು ಕುಂದಲಾರದು. ಕಾಂಗ್ರೆಸ್ ಸರಕಾರಗಳಿಗೆ ಇದ ಇನ್ನೂ ಸಾಧ್ಯವಾಗಿಲ್ಲೆಂಬುದು ಬಹಳ ಚೋದ್ಯ.

ಪೆನ್ಶನುಗಳು

ಇನ್ನು ಮದ್ರಾಸು ಸರಕಾರವು ಪೆನ್ಶನುಗಳನ್ನು ಏಕಗಂಟಿನಿಂದ ಕೊಡುವಂತಿಲ್ಲ. ಪೆನ್ಶನು ದೊರೆತ ಕೂಡಲೆ, ಅದನ್ನು ಏಕಗಂಟಿನ ಮೊತ್ತ ರೂಪವಾಗಿ ಪಡೆದು, ಬರೇ ಕೆಲ ಹಣ ಮಾತ್ರ ತಿಂಗಳು ತಿಂಗಳಿಗೆ ನಂತರ ಪಡೆವ ಒಂದೊಂದು ಕ್ರಮವುಂಟು. ಇದರಿಂದ ಹಲವು ವರ್ಷಗಳ ನೌಕರಿಯಿಂದ ದುಡಿದುದನ್ನು ಒಂದೇ ಮೊಬಲಗಾಗಿ ಪಡೆದು ನಿರ್ದಾಕ್ಷಿಣ್ಯವಾಗಿ ವ್ಯಯಿಸಿ, ಕೊನೆಗೆ ಪೆನ್ಶನುದಾರನು ಉಳಿದರೆ, ಹೀನ ಸ್ಥಿತಿಯಿಂದ ಬದುಕುವಂತಾಗಿ, ಕುಟುಂಬಕ್ಕೆ ಅನ್ಯಾಯವಾಗುವುದು. ನೌಕರರ ಗೌರವದಿಂದ, ಪೂರ್ಣ ಸುಖದಿಂದ ಬದುಕದಂತೆ ಈ ಏಕಗಂಟಿನ ಏರ್ಪಾಡು ಆಗುತ್ತದೆಂದೂ, ವಿದ್ಯೆಗೂ ಅಯೋಗ್ಯರಾದವರನ್ನು ವಿದ್ಯೆಗೆ ಯೋಗ್ಯರೆಂಬಂತೆ ಸರಕಾರವು ತಿಳಿದು ನಡೆವುದು ನ್ಯಾಯವಲ್ಲವೆಂದೂ ಸರಕಾರವು ಎನ್ನುತ್ತದೆ.

ಆದರೆ, ಪೆನ್ಶನು ಎಂಬುದ ಎಷ್ಟು, ಎಷ್ಟು ಕಾಲ ಸಿಗುವುದ? ಎಂಬುದನ್ನು ಸರಕಾರವು ನೋಡಿಕೊಂಡರಾಗದೆ? ಕೆಲವು ನೌಕರರು ಸರ್ವಿಸಿನಷ್ಟೆ ದಿನ ಪೆನ್ಶನನ್ನು ಅನುಭವಿಸುವರು, ಹಲವರು ಪೆನ್ಶನು ದೊರೆತವಷ್ಟರಲ್ಲೇ ಅಥವಾ ದೊರೆತ ಕೆಲ ತಿಂಗಳುಗಳಲ್ಲಿಯೇ ಮಡಿವರು. ಇವರ(ಎರಡನೆಯವರ) ಕುಟುಂಬಗಳಿಗೇನು ಗತಿ? ಇವರಿಗಾಗಿಯಲ್ಲವೆ ಪೆನ್ಶನೆಂದು ಸಂಬಳದಿಂದಲೇ ಕಡಿದ ಹಣ? ಹೀಗಾದರೆ, ಈ ಪೆನ್ಶನ ಕ್ರಮವನ್ನು ತಿದ್ದಬೇಡವೆ?

ನೌಕರರ ಸರ್ವಿಸಿನ ಮೌಲ್ಯ ಕಟ್ಟಿ, ಕನಿಷ್ಠ ರೀತಿಯ ಪೆನ್ಶನು ಇಷ್ಟು ಎಂತಾದರೂ ಅವರಿಗೂ ಅವರ ಕುಟುಂಬಕ್ಕೂ ಸಲ್ಲುವಂತೆ ಮಾಡಿದರೆ ಉತ್ತಮವಾಗುತ್ತಿತ್ತು. ಇಂಗ್ಲಂಡಿನ ಸ್ಕೀಮಿನಲ್ಲಿ ರಿಟೈರಾಗಿ ಒಬ್ಬ ನೌಕರನ ಮಡಿದರೆ ಸರಕಾರವು ಯಾರಿಗೆ ಎಂತಹ ಪೆನ್ಶನನ್ನೂ ಕೊಡಲು ಸಲುವಾಗಿ ತೆರುವುದಿಲ್ಲವಲ್ಲ. ಹೀಗಿರುವಾಗ ವಿಮೆಯಷ್ಟಾದರೂ ಪೆನ್ಶನ ಅವನ ಕುಟುಂಬಕ್ಕೆ ಸಲ್ಲುವಂತೆ ಮಾಡದರ ಆಗದೆ? ಈ ವಿಷಯವನ್ನು ಸರಕಾರವು ವಿಶೇಷವಾಗಿ ಗಮನಿಸಬೇಕು. ಸಂಕ್ಷಿಪ್ತ ಸರ್ವಿಸು ಪೂರ್ಣ ನೌಕರಿ ಮಾಡಿದವನು ಮಡಿದರೆ ಅವನ ಕುಟುಂಬಕ್ಕೆ ಪೆನ್ಶನು ಸಲ್ಲಿಸುವುದು ಸರಕಾರಕ್ಕೆ ಅಸಾಧ್ಯವೆ?

ಹೈದ್ರಾಬಾದಿನಲ್ಲಿ ಸತ್ಯಾಗ್ರಹದ ತೀರ್ಮಾನ.

ಸರ್ಕಾರದ ಮತ್ತು ಹಿಂದೂ ಸಭೆ ನಡುವೆ ಹೈದ್ರಾಬಾದಿನಲ್ಲಿ ಧಾರ್ಮಿಕ ಸತ್ಯಾಗ್ರಹವನ್ನು ನಡೆಸಿದ ಮಾತುಕತೆ ನಡೆಯುತ್ತಿದ್ದು, ಈ ಸತ್ಯಾಗ್ರಹವನ್ನು ಈ ವಾರ ಕಡೆ ನಿರ್ಧಾರ ಆಗುವಂತಿದೆ.

ಧಾರ್ಮಿಕ ಸ್ವಾತಂತ್ರ್ಯಗಳನ್ನು ವಿಚಾರಿಸುವ ಬಗ್ಗೆ ಒಂದ ವಿಮರ್ಶಕ ಸಮಿತಿಯನ್ನು ಸರಕಾರವು ನೇಮಿಸಿ ಅದರಲ್ಲಿ ಸೇರಲು ಪ್ರಮುಖ ಹಿಂದೂ, ಮುಸ್ಲಿಮ, ಕ್ರೈಸ್ತ, ಪಾರ್ಸಿ ಪ್ರತಿನಿಧಿಗಳನ್ನು ಕೇಳಿಕೊಂಡಿದೆ. ಸದಸ್ಯರೊಳಗೆ ಇಬ್ಬರು ಹಿಂದುಗಳ, ಇಬ್ಬರು ಮುಸಲ್ಮಾನರು, ಒಬ್ಬೊಬ್ಬ ಕ್ರೈಸ್ತ, ಪಾರ್ಸಿ ಇರುವರು. ಒಬ್ಬ ಸರಕಾರೀ ನೌಕರರು ಕಾರ್ಯದರ್ಶಿಗಳಾಗಿ ನೇಮಕವಾಗುವರು. ಈ ಸಮಿತಿಯು ಇನ್ನೇ ಕೆಲಸ ನಿರ್ವಹಿಸುತ್ತಿದ್ದು ಆಗಾಗ ಧಾರ್ಮಿಕ ವಿಚಾರಗಳಲ್ಲಿ ಸಲಹೆಗಳನ್ನು ಕೊಡುವುದು. ಇವುಗಳನ್ನು ಅನುಸರಿಸಿ ಸರಕಾರವು ಆಜ್ಞೆಗಳನ್ನು ಪ್ರಕಟಿಸುವುದು.

ಆರ್ಯ ಸಮಾಜದ ಮುಖಂಡರು ಸರಕಾರದ ಉಚ್ಚ ಉದ್ಯೋಗಸ್ಥರನ್ನು ಕಂಡರು. ಅವರಿಗೆ ಸಮಾಧಾನಕರವಾದ ಉತ್ತರ ದೊರೆತ ಕಾರಣ, ಆರ್ಯ ಸಮಾಜವು ಇನ್ನು ಸತ್ಯಾಗ್ರಹಕ್ಕೆ ಕೈಯಿಕ್ಕದು. ಇವರಲ್ಲಿ ಕೆಲವರು ಶೋಲಾಪುರಕ್ಕೆ ತೆರಳಿ, ಅಲ್ಲಿ ಆರ್ಯ ಮುಖಂಡರನ್ನು ಕಂಡು, ಈ ವಿಚಾರವನ್ನು ಹರಡುವರು.

ಅತ್ಯುತ್ತಮ ಹೇರ್ ಆಯಿಲ್
ಎಲ್ಲಾ ಜನರ ಮನಸ್ಸನ್ನು ಸೆಳೆಯುವುದು!

ದಿಲ್‌ಖುಷ್ ಹೇರ್ ಆಯಿಲ್
ಅರ್ವಾಚೀನ ರೀತಿಯ ಶೋಧನೆಯ ಬಾಚುವುದಕ್ಕೆ ಅನುಕೂಲವಾಗಿ ಅಹ್ಲಾದಕರವಾದ ಸುಗಂಧವಿದೆ. ಇದರಿಂದ ಕೂದಲು ದಟ್ಟವಾಗಿ ಬೆಳೆಯುವುದು. ಉದುರುವ ಕೂದಲು ತಡೆಕಟ್ಟುವುದಕ್ಕೆ ಉಪಯುಕ್ತವಾಗಿದೆ
ಕ್ರಯ: 6 ಔನ್ಸ್ ಸೀಸೆಗೆ 0—12—0
,, 12 ,, ,, 1 4—0

ರುಬಿ ಪೇಯಿನ್ ಬಾಮ್
ಇದು ಉಳುಕ ಜಜ್ಜಿದ ಗಾಯ, ನೋವು, ತಲೆ ಸಿಡಿತದ ಮೇಲೆ ಉತ್ತಮ ಬಾಮ್. ಡಬ್ಬಿ 1ಕ್ಕೆ ಆ 4.
ಉಡುಪಿಯಲ್ಲಿ ಏಜೆಂಟರು ಬೇಕು

ಏಜೆಂಟ್ಸ್—
ಷಾ ಕಂಪೆನಿ, ಮಂಗಳೂರು.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿನ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರು ಸಲುವಾಗಿ ಕಾರಖಾನೆಯವರ ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಟ್ಯಾಂಪ್ಸ್‌ಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು. ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತ ಕೊಡುವರು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳ ... ಕೊಡಲಾಗುವದು ೪) ಸ್ಪೇಷನ್ ಡಲಿವರಿ ಕೊಡುವರು. ನಮ್ಮ ಕಂಪೆನಿಯ ಸ್ಪರ್ಧೆಯ ... ಪ್ರದೇಶದಿಂದ ಒಯುವಂತೆ ಉಂಟು. ಏಜಂಟರಿಗೆ ... ಕನ್ನಡ ಮರಾಠಿ ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ನಡೆಸಬಹುದ

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ
ಎಸ್. ಎಮ್. ವಾಘ್ ಸಂತತಿ ಕಂಪೆನಿ,
ವಿಲೆ ಪಾರ್ಲೆ ಮುಂಬಯಿ
ಹೊನ್ನಾವರ ಏಜಂಟ್ — ಪಿ ಎಲ್ ಭಕ್ತಾ   ಗದಗ — ವಿ ಎಸ್ ಸಿಟ್ಟಿ
... ದಕ್ಷಿಣ ಕನ್ನಡ ಏಜಂಟ್ ಡಾ ಕೆ ಭಾಸ್ಕರ ಶೈ
... ಏಜಂಟ — ಪಿ ಶ್ರೀ ಹೊನ್ನಾವರ

ಪಂಡಿತ ಡಿ. ಗೋಪಾಲಾಚಾರ್ಲುರವರ
ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು.



ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು
ತಯಾರಿಸುವವರ
ಆಯುರ್ವೇದಾಶ್ರಮ,
ಮದರಾಸು.
ಸ್ಟಾಕಿಸ್ಟರ
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಕಾಣಿಗೆ
10
ಬ್ಲೇಡುಗಳು
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

ಇದೇ ಬರುವ ಅಗೋಸ್ತು ತಾ. ೧ರಿಂದ ಬೊಂಬಾಯಿ ನಗರದಲ್ಲಿ ಸಂಪೂರ್ಣ ಮದ್ಯ ನಿಷೇಧವು ಆಗುವುದು. ಅದಕ್ಕಾಗಿ ಈಗನಿಂದಲೇ ಸರ್ವ ಸನ್ನಾಹಗಳು ಭರದಿಂದ ನಡೆದಿವೆ. ಬೊಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ ಆದ ಮದ್ಯನಿಷೇಧದ ಕಾನೂನು, ಮತ್ತು ಬೊಂಬಾಯಿ ನಗರದಲ್ಲಿ ಮದ್ಯ ನಿಷೇಧ ಮಾಡಲಿಕ್ಕೆ ಸರಕಾರವು ಮಾಡಿದ ನಿಯಮ ನಿಬಂಧನೆಗಳಿಗನುಸಾರ, ಅಗೋಸ್ತು ೧ರಿಂದ ವಿದೇಶಿಯರು ಮಾತ್ರ ವಿದೇಶಿ ಮದ್ಯಗಳನ್ನು ತಮ್ಮ ಮಟ್ಟಿಗೆ ಮಾತ್ರ ಉಪಯೋಗಿಸಿಕೊಳ್ಳಲು ಅಧಿಕಾರವುಳ್ಳವರಾಗಿದ್ದಾರೆ. ಅಂಥವರು ಅಪೇಕ್ಷಿಸಿದಾಗ ಅವರಿಗೆ ಸರಕಾರವು ಲೈಸನ್ಸು ಕೊಡುವುದು. ಲೈಸನ್ಸು ಇಲ್ಲದ ವಿದೇಶಿಯರು ಮದ್ಯವನ್ನು ಮುಟ್ಟಲಿಕ್ಕೂ ಕೂಡದು. ದೇಶಿಯರು—ಯಾವ ಜಾತಿ ಮತ ಸಂಪ್ರದಾಯಕ್ಕೆ ಸೇರಿದವರೇ ಆಗಿರಲಿ—ಅವರು ದೇಶಿ ವಿದೇಶಿ ಯಾವ ಜಾತಿಯ ಮದ್ಯವನ್ನಾದರೂ ಯಾವ ರೀತಿಯಿಂದಲೂ ಉಪಯೋಗಿಸಬಾರದಾಗಿದೆ.

ಸರ್ವಪಕ್ಷಗಳ ಪ್ರೋತ್ಸಾಹ

ಈ ಸಂಬಂಧ ಮೊನ್ನೆ ಬೊಂಬಾಯಿ ನಗರದಲ್ಲಿ ಸರ್ವ ಪಕ್ಷಗಳ ಒಂದು ಪರಿಷತ್ತು ಕೂಡಿತ್ತು. ಬೊಂಬಾಯಿಯ ಪ್ರಧಾನರಾದ ಶ್ರೀ ಬಿ. ಜಿ. ಖೇರರು ಪರಿಷತ್ತಿನಲ್ಲಿ ಕೂಡಿದ ಎಲ್ಲ ಜಾತಿ ಮತ ಸಂಪ್ರದಾಯ—ಉದ್ಯೋಗ ವೃತ್ತಿಗಳ ಪ್ರತಿನಿಧಿಗಳನ್ನು ಉದ್ದೇಶಿಸಿ—ಸರಕಾರದ ಮದ್ಯನಿಷೇಧದಿಂದ ಸಮಾಜದ ಮೇಲಾಗುವ ಸತ್ಪರಿಣಾಮಗಳ ಕುರಿತು ಒಂದು ಮಹತ್ವದ ಭಾಷಣವನ್ನು ಕೊಟ್ಟರು. ಸರಕಾರದ ಕಾರ್ಯಕ್ರಮದ ಸಫಲತೆಗೆ ಸರ್ವ ಪಕ್ಷಗಳ ಸಹಕಾರವನ್ನು ಶ್ರೀಮಾನ ಖೇರರು ಕೋರಿದರು. ಪರಿಷತ್ತಿನಲ್ಲಿ ಕೂಡಿದ್ದ ಎಲ್ಲಾ ಪ್ರತಿನಿಧಿಗಳು ಒಬ್ಬರಾದ ಮೇಲೆ ಒಬ್ಬರಂತೆ ಭಾಷಣವನ್ನು ಕೊಡುತ್ತ ಸರಕಾರದ ಮದ್ಯನಿಷೇಧ ಕಾರ್ಯಕ್ರಮದಲ್ಲಿ ತಮ್ಮ ಸಂಪೂರ್ಣ ಸಹಾಯ ಸಹಾನುಭೂತಿಗಳು ಸರಕಾರಕ್ಕೆ ಇರುವವೆಂದು ಆಶ್ವಾಸನವನ್ನು ಇತ್ತರು. ಬೊಂಬಾಯಿ ನಗರನಿವಾಸಿಗಳು ಮದ್ಯನಿಷೇಧದ ಸಫಲತೆಗೆ ಕಂಕಣಬದ್ಧರಾಗಿ ಕೆಲಸ ಮಾಡಲಾರಂಭಿಸಿದ್ದಾರೆ. ಸ್ತ್ರೀಯರು ಈ ಕಾರ್ಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿದ್ದಾರೆ. ಆದುದರಿಂದ ಮದ್ರಾಸು ಪ್ರಾಂತದ ಸೇಲಂನಂತೆ ಬೊಂಬಾಯಿಯಲ್ಲಿಯೂ ಮದ್ಯನಿಷೇಧವು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಅಮೇರಿಕದ ಮೇಲೆ ಪ್ರಭಾವ

'ಇಂಡಿಯದಲ್ಲಿ ಮದ್ಯನಿಷೇಧ ಚಳವಳಿವು ಬಹಳ ಪ್ರಗತಿಯನ್ನು ಹೊಂದಿರುವುದು' ಎಂದು ಬೊಂಬಾಯಿ ಸರಕಾರದ ಮದ್ಯನಿಷೇಧ ಕಾರ್ಯಕ್ರಮವನ್ನು ಸಮಾಲೋಚಿಸುತ್ತ ಅಮೇರಿಕದ ಸುಪ್ರಸಿದ್ಧ ಪತ್ರಿಕೆ 'ಟೈಮ್' ಎಂಬುದು ಹೇಳಿದೆ.

'ಬ್ರಿಟಿಷ್ ಇಂಡಿಯದಲ್ಲಿ ಸಂಪೂರ್ಣ ಮದ್ಯನಿಷೇಧ ಮಾಡಲಿಕ್ಕೆ ಕೊಂಗ್ರೆಸು ದೃಢ ಪ್ರತಿಜ್ಞೆಯನ್ನು ತೆಗೆದುಕೊಂಡಿದೆ. ಸ. ಗಾಂಧಿಯ ಪ್ರೇರೇಪಣೆ ಮತ್ತು ಸರದಾರ ಪಟೇಲರ ನಿರ್ದೇಶನದಿಂದ ಕೊಂಗ್ರೆಸು ಸರಕಾರಗಳು ಮದ್ಯದ ತಯಾರಿ ಉಪಯೋಗ ಮತ್ತು ಮಾರಾಟವನ್ನು ನಿಲ್ಲಿಸಲಿಕ್ಕೆ ಅನೇಕ ಕೇಂದ್ರಗಳಲ್ಲಿ ಪರೀಕ್ಷೆಗಳನ್ನು ನಡೆಸಿವೆ.'

'ಸಂಸ್ಥಾನಗಳು ಮದ್ಯನಿಷೇಧವನ್ನು ಮಾಡಿರುವುದಿಲ್ಲ. ಆದರೂ ಕೂಡ ಮುಸ್ಲಿಮರು ಬಹುಸಂಖ್ಯೆಯಲ್ಲಿರುವ ಗಡಿನಾಡಿನಲ್ಲಿ ಮದ್ಯನಿಷೇಧವಾಗಿದೆ. ಮುಸಲ್ಮಾನ ಧರ್ಮವು ಮದ್ಯಪಾನವನ್ನು ಪಾಪವೆನ್ನುತ್ತದೆ.'

'ಯೂರೋಪಿಯನರು ಮದ್ಯಪಾನ ಮಾಡಕೂಡದೆಂದು ಕೊಂಗ್ರೆಸ್ ಸರಕಾರಗಳು ಎಲ್ಲಿಯೂ ನಿರ್ಬಂಧವನ್ನು ಹಾಕಿರುವುದಿಲ್ಲ. ಯುರೋಪಿಯನರು ಮೂಗಿನಿಂದ ಹೊರಬರುವಷ್ಟು ಮದ್ಯಪಾನ ಮಾಡಿ ಗಟಾರುಗಳಲ್ಲಿ ಬಿದ್ದು ಬೇಕಾದರೆ ಸಾಯಲಿ ಎಂದು ಪಟೇಲರು ಆಲೋಚಿಸಿದ್ದಿರಬಹುದು'' ಎಂದು ಟೈಮ್ ಪತ್ರಿಕೆಯು ವ್ಯಂಗ್ಯದಿಂದ ಮಾತನಾಡಿದೆ.

ಬೊಂಬಾಯಿ ನಗರದಲ್ಲಿ ಪಾನ ನಿಷೇಧ

ಇದೇ ಅಗೋಸ್ತು ಒಂದರಿಂದ ಪ್ರಾರಂಭ

ಸರ್ವ ಪಕ್ಷಗಳ ಪ್ರೋತ್ಸಾಹ--ಸಹಾಯ ಸಹಾನುಭೂತಿಗಳ ಭರವಸೆ

ಇಂಡಿಯದಿಂದ ಅಮೇರಿಕವು ಕಲಿಯುವ ಪಾಠ

'ಬರುವ ಅಗೋಸ್ತಿನಿಂದ ಇಂಡಿಯದ ಎರಡನೆ ದೊಡ್ಡ ನಗರ—ಬೊಂಬಾಯಿಯಲ್ಲಿ ಪೂರ್ಣ ಮದ್ಯನಿಷೇಧವಾಗುವುದು. ಇಂಡಿಯದಲ್ಲಿ ಮದ್ಯನಿಷೇಧವು ಯಶಸ್ವಿಯಾದರೆ, ಅಮೇರಿಕದಲ್ಲೂ ಮದ್ಯನಿಷೇಧವಾಗುವ ದಿನಗಳು ಸಮೀಪವಾಗುವುವು ಎಂದು ಗಾಂಧಿ ಬರೆದಿದ್ದಾರೆ. ಅದನ್ನೇ ನಾವು ಕೂಡ ಬಯಸುವೆವು' ಎಂದು ಆ ಪತ್ರಿಕೆ ಬರೆದಿರುವುದು.

ಇಂಡಿಯದ ಮದ್ಯನಿಷೇಧ ಆಂದೋಲನದ ಪ್ರಗತಿಯನ್ನು ಜಗತ್ತಿಗೆ ಜಗತ್ತೇ ಕುತೂಹಲದಿಂದ ನೋಡುತ್ತಾ ಇದೆ.

ಸಂಯುಕ್ತ ಪ್ರಾಂತಗಳು ಇಟ್ಟ ದೊಡ್ಡ ಹೆಜ್ಜೆ

ಮದ್ಯಪಾನದ ನಿಷೇಧವನ್ನು ಮಾಡುವ ಕುರಿತು ಸಂಯುಕ್ತ ಪ್ರಾಂತಗಳ ಕೊಂಗ್ರೆಸ್ ಸರಕಾರವು ಮದ್ರಾಸು ಬೊಂಬಾಯಿಗಳನ್ನು ಹಿಂಬಾಲಿಸಿರುವುದು. ಆ ಪ್ರಾಂತಗಳ ಎಟ್ಟಾ ಮತ್ತು ಮೈನಪುರಿ—ಎರಡು ಜಿಲ್ಲೆಗಳಲ್ಲಿ ೧೯೩೮ರಲ್ಲಿಯೇ ಪಾನನಿಷೇಧವಾಗಿತ್ತು. ಈಗ ಆ ಎರಡು ಜಿಲ್ಲೆಗಳಲ್ಲಿ ನಿಷೇಧ ಆಂದೋಲನದಿಂದ ದೊರೆತ ಸಫಲತೆಯನ್ನು ಮನಗಂಡು ಸರಕಾರವು ಇದೇ ಎಪ್ರಿಲ್ ೧ನೆಯಿಂದಾರಂಭಿಸಿ ಮತ್ತೆ ನಾಲ್ಕು ಜಿಲ್ಹೆಗಳಲ್ಲಿ—ಅಂದರೆ ಬಿಜನೂರು, ಬುಡಾನ್, ಫರುಕಾಬಾದ್ ಮತ್ತು ಶಹಜಾನಪುರ ಜಿಲ್ಲೆಗಳಲ್ಲಿ ಮದ್ಯನಿಷೇಧವನ್ನು ಮಾಡುವುದು. ಶ್ರೀಮಂತರ ಮೊದಲುಗೊಂಡು ಬಡವರ ತನಕ ಎಲ್ಲರ ಪತನ ಮತ್ತು ಕಷ್ಟನಷ್ಟಗಳಿಗೆ ಕಾರಣವಾದ ಮದ್ಯಪಾನದ ಚಟವನ್ನು ಶೀಘ್ರದಲ್ಲಿಯೇ ಸಂಪೂರ್ಣ ಸಂಯುಕ್ತ ಪ್ರಾಂತಗಳಲ್ಲಿ ಸರಕಾರವು ನಾಶಮಾಡುವುದಾಗಿ ಪ್ರಧಾನ ಮಂತ್ರಿಗಳಾದ ಶ್ರೀ ಗೋವಿಂದ ವಲ್ಲಭ ಪಂತರು, ಈ ನಾಲ್ಕು ಜಿಲ್ಹೆಗಳಲ್ಲಿ ಪಾನನಿಷೇಧದ ಆರಂಭೋತ್ಸವ ಕಾಲಕ್ಕೆ ಸಂದೇಶವನ್ನು ಕಳುಹಿಸಿರುವರು.

ಕೈಗಾರಿಕೆ ಕ್ಷೇತ್ರಗಳಲ್ಲಿ ಮತ್ತು ದೊಡ್ಡ ದೊಡ್ಡ ನಗರಗಳಲ್ಲಿ ಪೂರ್ಣ ಪಾನನಿಷೇಧವಾಗಿಲ್ಲದೆ ಇರುವುದಾದರೂ ಕೂಡ, ಅಲ್ಲಿಯೂ ಮಾದಕ ವಸ್ತುಗಳ ವ್ಯಾಪಾರವನ್ನು ಸಂಯುಕ್ತ ಪ್ರಾಂತಗಳ ಸರಕಾರವು ತನ್ನ ಕೈಗೇ ತೆಗೆದುಕೊಳ್ಳುವುದು. ಮತ್ತು ಮಾದಕ ಪದಾರ್ಥಗಳ ಮಾರಾಟವು ಕಡಿಮೆಯಾಗುವಂತೆ ಸರಕಾರವು ನೋಡಿಕೊಳ್ಳುವುದು. ಕೆಲವು ಮಾದಕ ಪದಾರ್ಥಗಳ ಚಿಲ್ಲರೆ ಕ್ರಯವನ್ನು ಸರಕಾರವು ಈಗಾಗಲೇ ಏರಿಸಿದ್ದು ಅವನ್ನು ಬಡ ಮತ್ತು ಮಧ್ಯಮ ತರಗತಿಯ ಜನರು ಕೊಂಡುಕೊಳ್ಳದಂತೆ ಮಾಡಿರುವರು. ಸರಕಾರದ ಈ ಕಾರ್ಯಕ್ರಮದಿಂದ ೧೩೨ ಲಕ್ಷ ರೂಪಾಯಿಗಳ ಆದಾಯವು ಕಡಿಮೆಯಾಗುವುದಲ್ಲದೆ ೧೬ ಲಕ್ಷ ರೂಪಾಯಿಗಳ ಖರ್ಚು ಏರುವುದು.

ಪಾನನಿಷೇಧವು ವ್ಯವಹಾರಿಕವಾಗಿದೆ

ಮದ್ರಾಸು, ಬೊಂಬಾಯಿ, ಸಂಯುಕ್ತ ಪ್ರಾಂತ ಮೊದಲಾದ ಕೊಂಗ್ರೆಸ್ ಪ್ರಾಂತಗಳ ಸರಕಾರಗಳು ಕೆಲವು ಜಿಲ್ಹೆಗಳಲ್ಲಿ ಮಾಡಿದ ಪಾನನಿಷೇಧದಿಂದ ದೊರೆತ ಸಫಲತೆಯನ್ನು ಕಾಣುವಾಗ ಹಿಂದುಸ್ಥಾನದಲ್ಲಿ ಪಾನನಿಷೇಧವು ವ್ಯವಹಾರಿಕವಾಗಿರುವುದು ಗೋಚರವಾಗುತ್ತದೆ, ಜನತೆಯ ಜೀವನದ ಸ್ಥಿತಿಯನ್ನು ಸುಧಾರಿಸಲಿಕ್ಕೆ ಒಂದು ಸಾಧನವಾಗಿಯೂ ಇರುತ್ತದೆಂಬುದನ್ನು ಈ ಚಳವಳದಲ್ಲಿ ತಿಳುವಳಿಕೆ ವಿಶ್ವಾಸವಿಲ್ಲದವರು ಕೂಡ ತಿಳಿಯಬಹುದಾಗಿದೆ.

ಖಾಕೋರ ಸಾಹೇಬರ ವಿರುದ್ಧ—

ಚೀಫ್ ಜಸ್ಟೀಸರ ರಾಜಕೋಟ ತೀರ್ಮಾನ

ಸಮಿತಿಯ ಸದಸ್ಯರ ನಾಮಕರಣದ ಅಧಿಕಾರ ಪಟೇಲರಿಗೆ—ಅವರು ಸೂಚಿಸಿದ ಹೆಸರುಗಳನ್ನು ಸ್ವೀಕರಿಸುವ ಕರ್ತವ್ಯ ಠಾಕೋರರದ್ದು.

ರಾಜಕೋಟ ಸುಧಾರಣಾ ಸಮಿತಿಗೆ ಸದಸ್ಯರ ನಾಮಕರಣ ಮಾಡುವ ಮತ್ತು ಅದರ ಅಧ್ಯಕ್ಷರನ್ನು ನೇಮಿಸುವ ಕುರಿತು ಠಾಕೋರ ಸಾಹೇಬರಿಗೂ ಸರದಾರ ಪಟೇಲರಿಗೂ ಭಿನ್ನಾಭಿಪ್ರಾಯಗಳು ಹುಟ್ಟಿ, ಠಾಕೂರ ಸಾಹೇಬರು ಕೊಟ್ಟ ಮಾತನ್ನು ಮುರಿಯುತ್ತಿರುವರೆಂದು ಮಹಾತ್ಮಾಜಿಯವರು ಮರಣಾಂತ ಉಪವಾಸವನ್ನು ಕೈಕೊಂಡಿದರು. ಠಾಕೋರ ಪಟೇಲ ಒಪ್ಪಂದವನ್ನನುಸರಿಸಿ, ಸದಸ್ಯರ ಹೆಸರುಗಳನ್ನು ಸೂಚಿಸುವ ಅಧಿಕಾರವು ಸರದಾರ ಪಟೇಲರದ್ದೆಂದೂ, ಸಮಿತಿಯ ಅಧ್ಯಕ್ಷರು, ಸಮಿತಿಯ ೧೦ ಮಂದಿ ಸದಸ್ಯರೊಳಗಿಂದ ಒಬ್ಬರಾಗಿರಬೇಕೆಂದೂ ಪಟೇಲರ ಮತ್ತು ಗಾಂಧಿಜಿಯವರ ಅಭಿಪ್ರಾಯವಾಗಿತ್ತು. ಜನತೆಯ ಅಭಿಪ್ರಾಯವೂ ಹಾಗೆಯೇ ಇತ್ತು. ಆದರೆ ಸರದಾರರು ಸೂಚಿಸಿದ ಹೆಸರುಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ವಿಷಯವು ತನ್ನ ಮನಸ್ಸಿಗೆ ಸೇರಿದ್ದೆಂದೂ ಸಮಿತಿಯ ಅಧ್ಯಕ್ಷರು, ೧೦ ಮಂದಿ ಸದಸ್ಯರನ್ನು ಬಿಟ್ಟು ಹೊರಗಿನವರಾಗಿರಬೇಕೆಂದೂ ಠಾಕೋರ ಸಾಹೇಬರು ಹೇಳುತ್ತಿದ್ದರು. ಸಾರ್ವಭೌಮ ಸರಕಾರದ ಪ್ರತಿನಿಧಿಯಾಗಿ ವೈಸರಾಯರು ಈ ಜಗಳದಲ್ಲಿ ಮಧ್ಯಸ್ಥಿಕೆ ಮಾಡಿ ಮಹಾತ್ಮಾಜಿಯವರ ಉಪವಾಸವನ್ನು ನಿಲ್ಲಿಸಬೇಕೆಂದು, ಡಿಸೆಂಬರ ೨೬ನೇ ತಾರೀಖಿನಂದು ಠಾಕೋರ ಸಾಹೇಬರು ಕೊಟ್ಟ ಪ್ರಕಟನೆ ಮತ್ತು ಅವರು ಪಟೇಲರಿಗೆ ಬರೆದ ಪತ್ರಕ್ಕನುಗುಣವಾಗಿ ಸಮಿತಿಯ ರಚನೆಯು ಹೇಗಾಗಬೇಕೆಂಬ ಇತ್ಯರ್ಥವನ್ನು ಫೆಡರಲ್ ಕೋರ್ಟಿನ ಚೀಫ್ ಜಸ್ಟೀಸರು ಮಾಡಬೇಕೆಂದೂ ಹೇಳಿದ ಮೇರೆಗೆ ಮಹಾತ್ಮಾಜಿಯವರು ತಮ್ಮ ಉಪವಾಸವನ್ನು ನಿಲ್ಲಿಸಿದ್ದರು. ಈಗ ಎರಡೂ ಕಡೆಯವರು ಒಪ್ಪಿಸಿದ ಕಾಗದ ಪತ್ರಗಳ ಅವಲೋಕನ ಪರಿಶೀಲನೆ ಮಾಡಿ ಚೀಫ್ ಜಸ್ಟೀಸ್ ಸರ್. ಎಮ್. ಗ್ವಾಯರರು ಸರದಾರ ಪಟೇಲರಿಗೆ ಅನುಕೂಲವಾಗಿ ತಮ್ಮ ಇತ್ಯರ್ಥವನ್ನು ಕೊಟ್ಟಿರುತ್ತಾರೆ. ಅದರ ಪ್ರಕಾರ ರಾಜಕೋಟ ಸಂಸ್ಥಾನದ ಧಾರಣಾಸಮಿತಿಗೆ ಸರದಾರ ಪಟೇಲರು ಸೂಚಿಸಿದ ಸಂಸ್ಥಾನ ಪ್ರಜೆ ಮತ್ತು ಉದ್ಯೋಗಸ್ಥರಲ್ಲಿ ೧೦ ಮಂದಿಯನ್ನೇ ಠಾಕೋರ ಸಾಹೇಬರು ನೇಮಿಸಿ, ಅವರೊಳಗಿಂದ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ ಸಮಿತಿಯನ್ನು ರಚಿಸಬೇಕು. ಇದು ಮಹಾತ್ಮಾಜಿಯವರ ವ್ಯಕ್ತಿತ್ವ ಮತ್ತು ತಪಃಪ್ರಭಾವ—ಎಲ್ಲಕ್ಕೂ ಹೆಚ್ಚಾಗಿ ಸತ್ಯಕ್ಕೆ ದೊರೆತ ದೊಡ್ಡ ವಿಜಯ ಎನ್ನಬಹುದು.

ಮತ್ತೆ ವೇದನಾಮಯ ಪರಿಣಾಮಗಳುಂಟಾಗದಂತೆ

ಮತ್ತೆ ಪರಿಣಾಮಗಳ ಭಯವಿಲ್ಲದೆ ಪ್ರತಿದಿನಾಲೂ ಪ್ರತಿ ಊಟಕ್ಕೆ ನಿಮಗೆ ಬೇಕಾದುದನ್ನು ತಿನ್ನಲು ಅನುಕೂಲವಿದ್ದರೆ, ಅದರಿಂದ ನಿಮ್ಮಲ್ಲಿ ಯಾವ ತರದ ಸುಖಭಾವವು ಉಂಟಾಗುವುದು!

ಹೊಟ್ಟೆ ಅನಾರೋಗ್ಯದಿಂದ [illegible] ಅನೇಕರಿಗೆ ಇದು [illegible] ಅಸಾಧ್ಯವಾದ ವಿಷಯವಾಗಿರುತ್ತದೆ. ಆದರೆ ಸುಲಭವಾಗಿ, [illegible] ಖರ್ಚಿನಲ್ಲಿ [illegible] ಅಪಾಯವಿಲ್ಲದೆ, ಅದ ನಿಜವಾಗುವಂತೆ ಮಾಡಲು ನಿಮಗೆ ಸಾಧ್ಯವಿದೆ ಎಂಬುದ ಕೆಳಗಿನ ಪತ್ರಗಳಿಂದ [illegible]ವಾಗುವುದು.

ಈಗ ನನಗೆ [illegible] ತಿನ್ನಲಿಕ್ಕಾಗುತ್ತದೆ'' ಎಂದ [illegible]—''ನನ್ನ ಹಸಿವೆಯು ಸಹಜ ಸ್ಥಿತಿಗೆ ಬಂದಿರುವದು'' ಒಂದು ಇನ್ನೊಂದರ ಅಭಿಪ್ರಾಯ, ''ಬೇಕಾದುದನ್ನು ತಿನ್ನಲಿಕ್ಕೆ ಸಾಧ್ಯವಿದೆ'' ಎಂದು ಇನ್ನೊಂದರ [illegible] ''ಅನೇಕ ತಿಂಗಳ ನಂತರ ಇದೆ ನನ್ನ ಮೊದಲಿನ [illegible] ಊಟ'' [illegible] ಅನಾರೋಗ್ಯದಿಂದ ನರಳುವ ವಿವಿಧ ಜನರಿಂದ ವಿವಿಧ ಅಭಿಪ್ರಾಯಗಳಿಂದ ಕೂಡಿದ ಪತ್ರಗಳು ಬಂದಿವೆ. [illegible] ಪರಿಣಾಮಗಳ ಭಯವಿಲ್ಲದೆ ಅವರ ತಮ್ಮ ಹಸಿವನ್ನು ಪಡೆದ [illegible] ಕೃತಜ್ಞತೆಯನ್ನು ಸೂಚಿಸಲು, ಈ ಪತ್ರಗಳನ್ನು ಬರೆದ [illegible].

ನಿಮ್ಮ ವಿಚಾರವೇನು? ಊಟದ ಸಮಯ ನೀವು ಊಟಕ್ಕೆ ಸಿದ್ಧರಾಗಿರುವಿರೋ? [illegible] ಭಯವಿಲ್ಲದನೆ ನಿಮ್ಮ [illegible] ತಿನ್ನುವ ಧೈರ್ಯವನ್ನು ನಿಮಗೆ [illegible]. ಹಾಗಾದರೆ [illegible] ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರನ್ನು [illegible] ದಿಂದ ಹಸಿವು [illegible] [illegible] ಹೊಟ್ಟೆಯ [illegible] ಶಕ್ತಿ [illegible] ಇದು.

[illegible] ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರನ್ನು [illegible] [illegible] ಪರಿಣಾಮಗಳನ್ನು ಅನುಭವಿಸ [illegible] ಉದರಪೀಡೆಯ [illegible] [illegible] ಕೊನೆಗೆ ನೀವು [illegible] [illegible].

ಆದುದರಿಂದ ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರನ್ನು ಉಪಯೋಗಿಸಲು [illegible] ಪ್ರಾರಂಭ ಮಾಡಿರಿ.



ಎಂಬ ಸಹಿಯು [illegible] [illegible] [illegible] [illegible] ಎಲ್ಲಾ ದವಾಖಾನೆಗಳಲ್ಲಿ [illegible] ದೊರೆಯುತ್ತದೆ.



S. N. 8

ಮಕ್ಕಳ ಯಕೃತ್ತು ಮತ್ತು ಪ್ಲೀಹದ ಬಾಧೆ!

ತಮ್ಮ ಮಕ್ಕಳ ಬಾಧೆಯ ವಿಷಯ ವ್ಯಾಕುಲಿತರಾದ ತಂದೆತಾಯಿಗಳಿಗೆ ಸುಸಂದರ್ಭ ಯೋಗ!

ಜಮ್ಮಿ ವೆಂಕಟರಮಣಯ್ಯನವರ

ಸಹಾಯಕರ ಸಲಹೆಯನ್ನು ಕೇಳಿರಿ

ಮಂಗಳೂರು ಉಡ್ಪಿ ಶ್ರೀ ಕೃಷ್ಣ ಭವನದಲ್ಲಿ ಇದೇ ತಾರೀಖು 10 ಮತ್ತು 11ರಂದ ಉಳಕೊಂಡು ಮಕ್ಕಳ ಯಕೃತ್ತು ಮತ್ತು ಪ್ಲೀಹ ಬಾಧೆಗಳ ವಿಷಯ ಉತ್ತಮ ಸಲಹೆಯನ್ನೀಯುವರು

★ ಕಷ್ಟ ಜೀವನ! ★

[ಲೇಖಕ: ಎಂ. ಚಂದ್ರೇಶ್ವರ, ಮುಂಬಯಿ.]

ಒಂದು ಸಮಯದಲ್ಲಿ ಆರ್ಯಾವರ್ತವು ಜಗತ್ತಿನ ಎಲ್ಲಾ ದೇಶಗಳಿಗೆ ತವರೂರಾಗಿತ್ತು. ಸಮಸ್ತ ಕಲಾಕೌಶಲ್ಯಾದಿಗಳ ಉಗಮಸ್ಥಾನವೇ ಇದಾಗಿತ್ತು. ಇಲ್ಲಿಯ ತತ್ವಜ್ಞಾನಿಗಳನ್ನು ಸೋಲಿಸುವವರಾರೂ ಇದ್ದಿಲ್ಲ. ಭಾರತಮಾತೆಯ ಗರ್ಭಸುಧಾಂಬುಧಿಯಲ್ಲಿ ಜನ್ಮವೆತ್ತಿದ, ಬ್ರಾಹ್ಮಣರು ಬ್ರಾಹ್ಮತೋಚಿತ ಕಾರ್ಯಗಳನ್ನು ಮಾಡಿ, ಜಗದ್ವಿಖ್ಯಾತರಾಗಿದ್ದರು. ಕ್ಷತ್ರಿಯರು ಕ್ಷಾತ್ರ ತೇಜದಿಂದ ಧರ್ಮಯುಕ್ತ ರಾಜ್ಯವನ್ನು ಪರಿಪಾಲಿಸಿ, ಭಾರತ ಭೂಮಿಯನ್ನು ಸ್ವರ್ಗಸೋಪಾನದಂತೆ ಮಾಡಿಹೋದರು. ವೈಶ್ಯರೂ, ಶೂದ್ರರೂ ತಮ್ಮ ತಮ್ಮ ಕಾರ್ಯಗಳನ್ನು ಧರ್ಮನೀತಿಯ ಮೇರೆಯನ್ನು ಲ್ಲಂಘಿಸದಂತೆ ಬಹು ಜಾಗರೂಕತೆಯಿಂದ ಮಾಡಿ, ಜಗತ್ಪ್ರಸಿದ್ಧರಾಗಿದ್ದರು. ವಿದೇಶದವರಿಲ್ಲಿಗೆ ಬರುವಾಗ ಬರೀ ಲೋಹದಂತಿದ್ದು, ಹೋಗುವಾಗ ಸುವರ್ಣದಂತೆ ಅಂದರೆ, ಕಲಾಕೌಶಲ್ಯಾದಿ ಸದ್ವಿದ್ಯಾವಿಭೂಷಿತರಾಗಿ ಹೋಗುತ್ತಿದ್ದರೆಂದು ಪುರಾಣೇತಿಹಾಸಾದಿಗಳಿಂದ ವ್ಯಕ್ತವಾಗುತ್ತದೆ.

ಸಮುಸ್ತಕಲೆಗಳಿಂದ ತುಂಬಿ, ಉನ್ನತಾವಸ್ಥೆಯಲ್ಲಿ ರಾರಾಜಿಸುತ್ತಿದ್ದ ದೇಶವಿಂದು ಬರಿದಾಗಿ, ಟೊಳ್ಳಾಗಿ, ನರಕಕೂಪದಂತಾಗಲೇನು ಕಾರಣ? ಹಲವು ಮಂದಿಗೆ ತಿನ್ನಲು ಕೂಳಿಲ್ಲದೆ, ಹೊಟ್ಟೆಯ ಕರುಳುಗಳನ್ನು ಕೈಯಿಂದ ಹಿಸುಕುತ್ತ, ತಮ್ಮ ಮುದಿದ ಮಕ್ಕಳನ್ನು ತಮ್ಮ ಹಳೇ ಗುಡಿಸಲುಗಳಲ್ಲಿ ಮಲಗಿಸಿ, ನಾಲ್ಕು ಕಡೆಗಳನ್ನೀಕ್ಷಿಸಿ, ನಿರುಪಾಯರಾಗಿ, "ಹಾ ವಿಧಾತ! ಎಂದಿನ ವರೆಗೆ ನಾವಿಂಥಾ ದಾರುಣ ದುಃಖವನ್ನನುಭವಿಸಲಿ! ದುಃಖಜ್ವಾಲೆಯಾದರೂ ನಮ್ಮ ಸರ್ವಾಂಗಗಳನ್ನು ದಹಿಸುತ್ತಲೇ ಇದೆ! ನಮ್ಮ ಪಾಪಿ ಜೀವನವು ಎಂದಿಗೆ ಕೊನೆಗೊಳ್ಳುವುದು! ನಿರ್ಭಾಗ್ಯರಾದ ನಮ್ಮ ಉದರಗಳಲ್ಲಿ ಈ ಶಿಶುಗಳೇಕೆ ಜನ್ಮವೆತ್ತಿ!" ಕ್ಷುಧಾಪೀಡೆಯನ್ನು ಸಹಿಸಲಾರದೆ ಅಯ್ಯೋ ಸಾಯುತ್ತೇವೆಂದು ಗೋಳಿಡುತ್ತಿರುವುದನ್ನು ನಾವಾದರೂ ಹೇಗೆ ನೋಡಿ ಸಹಿಸಲಿ! ಹಾ!" ಎಂದು ಕಣ್ಣೀರಿನ ಧಾರೆಯನ್ನು ಹೊರ ಸೂಸುತ್ತ ಅವರೊಂದಿಗೆ ತಾವೂ ಒರಗಿಕೊಳ್ಳುವರು.

ಕೆಲವು ಹಳ್ಳಿಗಳಲ್ಲಿ ಜನರು ಯಾವ ವಿಧದ ಜೀವನವನ್ನು ನಡಿಸುತ್ತಿದ್ದಾರೆಂಬುದನ್ನು ಬರೆದು ತೋರಿಸಲು ಈ ನಿರ್ಜೀವಿ ಲೇಖನಿಗೆ ಶಕ್ತಿ ಸಾಲದು! ಅವರು ತಮ್ಮ ಮನೆಗಳಲ್ಲಿ ಸೂರ್ಯಾಸ್ತ ವೇಳೆಯಲ್ಲಿ ದೀಪಗಳನ್ನು ಹಚ್ಚುವುದಕ್ಕೂ ಅಸಮರ್ಥರಾಗಿರುವರು. ಆದುದರಿಂದಲೇ ಅವರು ಕೆಲವೊಮ್ಮೆ ಬೆಳದಿಂಗಳ ಬೆಳಕಿನಲ್ಲಿಯೇ ಅಂಗಳದಲ್ಲಿ ರಾತ್ರಿಯ ಊಟವನ್ನು ತೀರಿಸುತ್ತಾರೆ! ಪಾಪ! ಬೇಸಾಯಗಾರರ ಆರ್ತನಾದವನ್ನು ವರ್ಣಿಸಲಸದಳವು. ಘೋರೆಂದು ಘರ್ಜಿಸಿ, ಧಾರಾಪ್ರವಾಹವಾಗಿ ಸುರಿಯುವ ಮಳೆಗೂ, ಮಟ ಮಟ ಮಧ್ಯಾಹ್ನದ ಬಿಸಿಲಿನ ಬೇಗೆಗೂ, ಗಡಗಡನೆ ನಡುಗಿಸುವ ಚಳಿಗಾಲಿಗೂ ಬೇನೆ ಬೇಸರಗಳನ್ನು ಸಹಿಸುತ್ತ, ಹೊಲಗದ್ದೆಗಳನ್ನುತ್ತು ಬಿತ್ತಿ ಬೆಳೆಯನ್ನು ಬೆಳಸುತ್ತಾರೆ. ಆದರೆ, ಪಾಪ ಅವರಿಗಿಲ್ಲ ಹೊಟ್ಟೆ ತುಂಬ ಅನ್ನವಿಲ್ಲ! ಅಹೋರಾತ್ರಿ ದುಡಿದು, ಸಂಗ್ರಹಿಸಿದ ಧಾನ್ಯಗಳನ್ನು ಧನಿಗಳಿಗೂ ಸರಕಾರಕ್ಕೂ ಒಪ್ಪಿಸಿ, ಹಸ್ತಪ್ರಕ್ಷಾಲನ ಮಾಡಿ ಸುಮ್ಮನಾಗುತ್ತಾರೆ. ಯಾರಿಗೆ ಪರ್ಯಾಪ್ತ ಅನುಕೂಲವಿಲ್ಲವೋ ಅವರು ಹೇಯವಾದ ಕ್ಲೇಶವನ್ನನುಭವಿಸಬೇಕಲ್ಲದೆ, ಸುಖ ಶಾಂತಿಯ ಅನುಭವವೂ ಅವರಿಗುಂಟಾಗುವುದಿಲ್ಲ!

ಯಾವ ದೇಶದ ನಾರಿಯರು ವಸ್ತ್ರಾಭೂಷಣಾದಿಗಳಿಂದ ಅಲಂಕೃತರಾಗಿ, ಗೃಹಗಳಲ್ಲಿ ಸುಶೋಭಿಸುತ್ತಿದ್ದರೋ ಆ ದೇಶದ ಮಹಿಳೆಯರಿಂದ ತಮ್ಮ ಸರ್ವಸ್ವವನ್ನು ಸಮಾಜದ ದರಿದ್ರ ನಾರಾಯಣನಿಗೆ ಬಲಿಯೊಪ್ಪಿಸಿ, ತಾವೆ ನಿರುಪಾಯರಾದುದರಿಂದ ಮ್ಲಾನ ಮುಖದಿಂದ, ತಮ್ಮ ಹೊಲಸಾದ ಜೀವದೊಂದಿಗೆ ತಮ್ಮ ಮಕ್ಕಳುಮರಿಗಳನ್ನು ಕರಕೊಂಡು, ಬೀದಿ ಬೀದಿಗಳಲ್ಲಿ ಶ್ವಾನಗಳಂತೆ ಅಲೆದಾಡುತ್ತಿರುವುದು ಜನಜನಿತವಾದ ಸಂಗತಿಯಷ್ಟೆ! ದೇವತಾಸ್ವರೂಪಿಣಿಯರಾದ ಆರ್ಯರಮಣಿಯರ ಈ ಪರಿಯ ಅಧೋಗತಿಯನ್ನು ನೋಡಿದರೆ, ಪಾಷಾಣ ಹೃದಯವಾದರೂ ಕರಗಿ ನೀರಾಗಬಹುದು! ಕೆಲವು ಮಹಿಳೆಯರು ಪರಾಧೀನದಲ್ಲಿ ಕೆಲಸಮಾಡುತ್ತ, ಕ್ರೂರ ನರಪಿಶಾಚಿಗಳ ಕಾಮಾಕ್ಷಿಗಳಿಗೆ ಬಲಿ ಬಿದ್ದು, ತಮ್ಮ ಪವಿತ್ರವೂ, ಜಗದಾದರ್ಶವೂ ಆಗಿರುವ ಸತೀತ್ವವನ್ನು ನಷ್ಟಮಾಡಿಕೊಳ್ಳುತ್ತಾರೆ. ಕಡೆಗೆ ಜಾತಿಬಹಿಷ್ಕೃತರಾಗಿ, ಕ್ರಿಸ್ತ ಅಥವಾ ಮುಸಲ್ಮಾನ ಧರ್ಮದ ಶರಣುಹೋಗುತ್ತಾರೆ. ಇಲ್ಲವಾದರೆ ವೇಶ್ಯಾವೃತ್ತಿಯನ್ನು ಕೈಕೊಂಡು, ರೋಗಗ್ರಸ್ತರಾಗಿ, ಹೊಲಸಾದ ತಮ್ಮ ಜೀವನಯಾತ್ರೆಯನ್ನು ಕೊನೆಗಾಣಿಸುತ್ತಾರೆ. ಕೆಲವರು ತಮ್ಮ ತಮ್ಮ ಪತಿದೇವನೊಂದಿಗೆ ಕೂಡಿಕೊಂಡು, ತಲೆಗೆ ತೈಲವನ್ನು ಹಾಕುವ ಬದಲಿಗೆ ಸಲಿಲವನ್ನು ಸವರಿಕೊಂಡು, ತಾವು ಅಂತರೀಕ ದುಃಖಜ್ವಾಲೆಯಿಂದ ದಗ್ಧರಾಗುತ್ತಿದ್ದರೂ, ತಮ್ಮ ನೆರೆಕೆರೆಯ ಗೆಳತಿಯರ ಮುಂದೆ, ತಮ್ಮ ಅರ್ಧಾಂಗನ ಮಾನವನ್ನು ಕಾಯ್ದುಕೊಳ್ಳುವದಕ್ಕಾಗಿ ಹೃದಯವನ್ನು ನಿರಂತರ ನಿರ್ದಾಕ್ಷಿಣ್ಯವಾಗಿ ದಹಿಸುತ್ತಿರುವ ದುಃಖಜ್ವಾಲೆಯನ್ನು ಅಡಗಿಸಿ, ಹಸನ್ಮುಖದಿಂದ ನಟಿಸುತ್ತಾರೆ. ಇಂಥಾ ಅಧೋಗತಿಯ, ಭಯಂಕರಾಬ್ಧಿಯ ಅಲೆಗಳಲ್ಲಿ ಅಹರ್ನಿಶಿ ತೇಲಾಡುತ್ತಿದ್ದರೂ ಧರ್ಮಯುಕ್ತ ಕಷ್ಟ ಜೀವನವನ್ನು ನಡಿಸುತ್ತಾರೆ. ಸ್ವಾಮಿ ದಯಾನಂದ ಸರಸ್ವತಿಯವರೊಮ್ಮೆ ತಾನು ಪವಿತ್ರವಾದ ಗಂಗಾತಟದಲ್ಲಿ ಸಂಧ್ಯಾಸ್ನಾನಾದಿಗಳನ್ನು ಮಾಡುತ್ತಿರುವಾಗ ಒಬ್ಬ ಹಿಂದೂ ಸ್ತ್ರೀಯು ತನ್ನ ಮೃತ ಶಿಶುವನ್ನು ಗಂಗಾನದಿಗೆ ಎಸೆಯುವುದಕ್ಕಿಂತ ಮೊದಲು ಅದರ ಮೈಮೇಲಿದ್ದ ಹರಕು ವಸ್ತ್ರವನ್ನು ತೆಗೆದು ಆ ಶಿಶುವನ್ನು ನದಿಗೆಸೆದುದನ್ನು ಕಂಡದ್ದರಿಂದಲೂ, ಗರ್ಭಧಾರಣದ ಮೊದಲ್ಗೊಂಡು ಪ್ರಸವಿಸುವ ತನಕ ಸಹನಾತೀತವಾದ ಕ್ಲೇಶಗಳನ್ನು ಸಹಿಸಿ, ಪಡೆದಾ ಶಿಶುವನ್ನು ಜಲಪಾಲು ಮಾಡಲು ಹಡೆದಾಕೆಯ ಮನಸೊಪ್ಪಿತ್ತು ಆದರೆ, ಆ ತುಚ್ಛವಾದ, ಛಿದ್ರವಾದ ವಸ್ತ್ರವನ್ನು ತೊರೆಯಲಾಕೆಗೆ ಮನಸೊಪ್ಪಲಿಲ್ಲವೆಂದೂ, ಹೃದಯಾರ್ಥ, ಹಾಗೂ ಪ್ರಾಣತುಲ್ಯವಾದ ಶಿಶುವಿಗಿಂತಲೂ ಆ ಛಿದ್ರವಾದ ವಸ್ತ್ರವೇ ಆಕೆಯ ದೃಷ್ಟಿಗೆ ಮಿಗಿಲೆನಿಸಿತೆಂದೂ," ಹೊಗಳಿರುವರು. ಮಾತ್ರವಲ್ಲದೆ, ಎಂದಿನ ವರೆಗೆ ಭಾರತನಿವಾಸಿಗಳು ಉಜ್ವಲ ಜ್ಯೋತಿಯಂತೆ ದೇದೀಪ್ಯಮಾನವಾಗಿ ಪ್ರಕಾಶಿಸುವ ಜೀವನವನ್ನು ಆದರ್ಶವಾಗಿಟ್ಟುಕೊಳ್ಳುವುದಿಲ್ಲವೋ ಎಂದಿನ ವರೆಗೆ ಮನುಷ್ಯರಾಗಿ ಹುಟ್ಟಿದ್ದಕ್ಕೆ ಧೈರ್ಯಸ್ಥೈರ್ಯ ಶೂರಾಗ್ರಗಣ್ಯರಾಗಿ ಬಾಳಿ, ತಮ್ಮ ಜೀವನವು ಭಾವೀ ಸಂತಾನಕ್ಕೆ ಆದರ್ಶವಾಗಿಟ್ಟು ಹೋಗುವ ಉತ್ಕಟೇಚ್ಛೆಯನ್ನಿಟ್ಟುಕೊಳ್ಳುವುದಿಲ್ಲವೋ ಅಂದಿನ ವರೆಗೆ ಮನುಷ್ಯರಾಗಿ ಹುಟ್ಟಿ, ಮೃಗಗಳಾಗಿ ಬಾಳಿ, ಸಾಯುವವರಲ್ಲದೆ, ಅವರಿಂದ ದೇಶಕ್ಕಾಗಲಿ, ಜಾತಿಗಾಗಲಿ, ಸ್ವಾಸಾಹಿತ್ಯಕ್ಕಾಗಲಿ, ಜಾತಿಗಾಗಲಿ, ಯಾವುದೊಂದು ವಿಧದ ಪ್ರಯೋಜನವೂ ಆಗಲಾರದು! ಆರ್ಯ ನವಯುವಕರು ವೀರ ಲವಕುಶರಂತೆ, ಶೂರ ಅಭಿಮನ್ಯುವಿನಂತೆ, ದೃಢ ಸಂಕಲ್ಪ ಬಾಲ ಹಕೀಕತರಾಯನಂತೆ ಎದೆ ತಟ್ಟಿ ಮುಂದೆ ಬಂದು ಜಗತ್ತಿನಲ್ಲಿರುವ ಜಾತಿಭೇದಾದಿಗಳನ್ನು ವಿಭಿನ್ನಗೊಳಿಸಿ, ಪೂರ್ವಜರ ಗೌರವವನ್ನುಳಿಸುವುದಕ್ಕೂ, ದೇಶದಲ್ಲಿ ಹಬ್ಬಿಕೊಂಡಿರುವ ಕುರೀತಿ ಕುಚೇಷ್ಟೆ ಮುಂತಾದವುಗಳನ್ನೂ, ದಾರಿದ್ರ್ಯ ದುಃಖವನ್ನು ನಿವಾರಿಸುವುದಕ್ಕೂ ಯತ್ನಿಸಬೇಕು" ಅಧ್ಯವಾ ಮರಣಮಸ್ತು ಯುಗಾಂತರೇವಾ ನ್ಯಾಯಾತ್ಪಥಃ ಪ್ರವಿಚಲಂತಿ ಪದಂ ನಧೀರಾಃ" ಎಂಬುದನ್ನು ಎಂದೆಂದಿಗೂ ಮರೆಯಬಾರದೆಂದೂ ಹೇಳಿರುವರು.

ಕಷ್ಟಜೀವಿಗಳು ತಮ್ಮ ಸಂತತಿಗಳನ್ನು ವಿದ್ಯಾದಿಗಳಿಂದ ನಿಪುಣರನ್ನಾಗಿ ಮಾಡಲಸಮರ್ಥರಾಗಿರುವರು. ಹಳ್ಳಿಗಳಲ್ಲಿರುವವರು ನೀಕಡಾ ೯೦ರಷ್ಟು ಪಶುಗಳಂತೆಯೇ ಜೀವನವನ್ನು ನಡಿಸುತ್ತಿದ್ದಾರೆ. ಈರ್ಷ್ಯಾದ್ವೇಷಾದಿ ಅಂಧವಿಶ್ವಾಸಗಳಲ್ಲಿಯೇ ಬಿದ್ದಿರುತ್ತಾರೆ. ತಮ್ಮ ಮಕ್ಕಳಿಗೆ ಬೇಕಾದ ಸಲಕರಣೆಗಳನ್ನೊದಗಿಸಿ, ಅವರನ್ನು ವೀರಭಟರನ್ನಾಗಿ ಮಾಡುವ ಬದಲಾಗಿ, ಮೂಖಪ್ರಾಣಿಗಳಂತೆ ಮಾಡುತ್ತಾರೆ. ಅಂಥವರ ಇಡೀ ಜೀವಮಾನವು ನಿರರ್ಥಕವಾಗುವುದಲ್ಲದೆ, ಮುಂದೆ ಪವಿತ್ರವಾದ ಮಾನವ ಜನ್ಮಕ್ಕೆ ಅಯೋಗ್ಯರಾಗುವರು. ಪ್ರಕೃತ ಸಮಯದಲ್ಲಿ ಅನೇಕರು "ಲೀಡರ್"ಗಳಾಗಿದ್ದಾರೆ. ಈ ಲೀಡರ್‌ಗಳ ಪೈಕಿ ಕೆಲವರು ಕೆ.ಎ.ಗಳೆಲ್ಲ ಆವಾಗಲೇ ಅವರ ಭಾಷಣವಾದಾಗಲೇ ಕೇಳಿ ನಲಿಗೊಳ್ಳುತ್ತವೆ. ತಾನೊಬ್ಬ ಭಾರತೀಯರ ಮುಖ್ಯ ಮುಖಂಡನೆಂದು ಎದೆ ತಟ್ಟಿ 'ಫ್ಲೇಟ್ ಫಾರ್ಮ'ನ್ನು ನಡುಗಿಸುವವನು ಹಳ್ಳಿಹಳ್ಳಿಗಳನ್ನೊಮ್ಮೆ ಸಂದರ್ಶಿಸಿ ನೋಡಬೇಕು. ಅಲ್ಲಿಯ ಜನರು ಎಂಥ ಹೃದಯ ದ್ರಾವಕವಾದ, ಅಸಹ್ಯದುಃಖದಿಂದ ನರಳುತ್ತಾರೆಂಬುದು ಆಗ ಅವನಿಗೆ ವ್ಯಕ್ತವಾಗುವುದು! ಒಂದೂರಿನಲ್ಲಿ ಕ್ಷುಧಾಪೀಡಿತರಾಗಿ, ನಿದ್ರಾದೇವಿಯ ಮಡಿಲಲ್ಲಿಯೂ ಹಾ! ವಿಧಾತ ತಿನ್ನಲಿಕ್ಕೆ ಕೂಳಿಲ್ಲದೆ, ಸಾಯುವ ಕಾಲ ಬಂತಲ್ಲಾ ಎಂದು ಗೋಳಿಟ್ಟು ಕಣ್ಣೀರು ಸುರಿಸುವ ದೃಶ್ಯವು ಹೃದ್ಭೇದಕವಾಗುವುದು! ಸಾವಿರಾರು ಮೈಲುಗಳಂತರದಲ್ಲಿರುವ ವಿದೇಶಿಯರಿಗೆ ಸಹಾಯ ಮಾಡುವುದಕ್ಕಿಂತ ಮೊದಲು ಸ್ವದೇಶದ, ಸ್ವಜಾತಿಯ, ಸ್ವಬಂಧುಗಳ ದುಃಸ್ಥಿತಿಯನ್ನು ಹೋಗಲಾಡಿಸುವುದು ತನ್ನ ಆದ್ಯಕರ್ತವ್ಯವೆಂದು ಆಗ ತಾನೆ ಗ್ರಹಿಸುವನು! ಕಷ್ಟ ಜೀವನದ ಅನುಭವವು ನಮ್ಮ ಮುಂದಾಳುಗಳಿಗೂ, ಐಶ್ವರ್ಯವಂತರಿಗೂ ಎಂದಿನ ವರೆಗೆ ಆಗುವುದಿಲ್ಲವೋ ಅಂದಿನ ವರೆಗೆ ಕಷ್ಟ ಜೀವಿಗಳು ದಾರಿದ್ರ್ಯವೆಂಬ ಭಯಂಕರವಾದ ರೋಗದಿಂದ ನಿಷ್ಕೃತರಾಗಲು ಸಾಧ್ಯವೇ ಇಲ್ಲ!

ದೇಹದಲ್ಲಿ ದಪ್ಪವಾಗಿ ಬೆಳೆದು ರಕ್ತದ ಒತ್ತಾಟುವಿಕೆಯು ಹೆಚ್ಚಿದ್ದವರು ಕ್ರುಶನ್ ಲವಣವನ್ನು ಉಪಯೋಗಿಸಬೇಕು.

೨೦ ವಾರಗಳಿಂದ ದೇಹದಲ್ಲಿನ ರಕ್ತದ ಒತ್ತಾಟುವಿಕೆಯನ್ನು ಓರ್ವ ಸ್ತ್ರೀಯು ಹೇಗೆ ಕಡಿಮೆ ಮಾಡಿದಳೆಂದು ಕೇಳಿರಿ.

ಮೈಯಲ್ಲಿ ದಪ್ಪ ಬೆಳೆದವರಲ್ಲಿ ರಕ್ತದ ಮಿತಿಮೀರಿನ ಒತ್ತಾಟುವಿಕೆಯು ಇರುವುದು ರಕ್ತ ಒತ್ತಾಟುವಿಕೆಯು ನಮ್ಮ ದೇಹಪ್ರಗತಿಗೆ ಅಪಾಯಕರವು. ಮೈಯಲ್ಲಿರುವ ಹೆಚ್ಚಾದ ಕೊಬ್ಬನ್ನು ಹೋಗಲಾಡಿಸಿದ್ದಲ್ಲಿ ಈ ಅಪಾಯಕರ ರಕ್ತ ಒತ್ತಾಟುವಿಕೆಯಿಂದ ಪಾರಾಗಬಹುದು.

ಮೇಲೆ ಹೇಳಿದ ಸ್ತ್ರೀಯ ವೃತ್ತಾಂತವನ್ನು ಕೇಳಿರಿ.

"ನಾನು ಮೈಯಲ್ಲಿ ದಪ್ಪ ಬೆಳೆದಿದ್ದುದರಿಂದ ರಕ್ತ ಒತ್ತಾಟುವಿಕೆಯಿಂದಲೂ, ಬೆನ್ನುನೋವಿನಿಂದಲೂ ನರಳುತ್ತಿದ್ದೆನು, ನರಳಿ ಬೆಂಡಾಗುತ್ತಿದ್ದೆನು.

"ನನ್ನ ಮೈಭಾರವು ೨೦ ಪೌಂಡುಗಳಿಗೆ ಅಧಿಕವಾಗಿತ್ತು. ಹೀಗಿದ್ದುದರಿಂದ ಕ್ರುಶನ್ ಲವಣವನ್ನು ಸೇವಿಸಿದೆನು. ಬರೀ ಒಂದು ವಾರದಲ್ಲಿ ನನ್ನ ಮೈಯಲ್ಲಿದ್ದ ಅತ್ಯಧಿಕ ಕೊಬ್ಬು ಅರ್ಧ ಅಂಶದಷ್ಟು ಇಳಿಯಿತು. ಹೀಗೆಯೇ ಕೆಲವೇ ವಾರಗಳಲ್ಲಿ ಮೈಯಲ್ಲಿದ್ದ ಕೊಬ್ಬೆಲ್ಲವೂ ಸಂಪೂರ್ಣವಾಗಿ ಇಳಿಯಿತು. ಬೆನ್ನುನೋವು, ಉದರವೇದನೆ ಮುಂತಾದುವೆಲ್ಲವು ನಿಂತುಹೋಯಿತು. ಈಗ ಚುರುಕಾಗಿ ನಡೆಯಬಲ್ಲೆನು. ನನ್ನ ಆರೋಗ್ಯವು ಅಭಿವೃದ್ಧಿ ಹೊಂದಿದೆ.

ಕ್ರುಶನ್ ಲವಣಕ್ಕೆ ನನ್ನ ಕೃತಜ್ಞತೆಯು ಸಲ್ಲಬೇಕಾದದೇ. ಕ್ರುಶನ್ ಲವಣವನ್ನು ನಾನ ಎಂದೆಂದಿಗೂ ಪ್ರಶಂಸಿಸುವೆನು."

ಮಿಸ್ ಡಿ ಡಬ್ಲ್ಯು.

ದಿವಸಾಗಲು ಬೆಳಿಗ್ಗೆ ಒಂದು ಚಮಚ ಕ್ರುಶನ್ ಲವಣವನ್ನು ಬಿಸಿ ನೀರಲ್ಲಿ ಸೇವಿಸಿದರೆ ಮೈಯಲ್ಲಿರುವ ಅತ್ಯಧಿಕ ಕೊಬ್ಬನ್ನು ಹೋಗಲಾಡಿಸುವುದು. ಸುಲಭವೂ, ಅಲ್ಪ ವ್ಯಯವೂ ಆಗಿರುವುದು.

ದೇಹಪ್ರಗತಿಯು ನೆಟ್ಟಗಾಗಬೇಕಾದಲ್ಲಿ ಪ್ರತಿಯೊಬ್ಬರೂ ಕ್ರುಶನ್ ಲವಣವನ್ನು ಸೇವಿಸಿದರಾಯಿತು. ಭೂಲೋಕದ ಮಿಲಿಯಾವಧಿ ಜನರು ಅಜೀರ್ಣ, ವಾಂತಿಬೇಧಿ, ತಲೆನೋವು, ನೋವುಮಾರಿತನ, ಉದರವೇದನೆ ಮುಂತಾದುವು ಕಳಲಗಲು ಕ್ರುಶನ್ ಲವಣವನ್ನು ಸೇವಿಸುತ್ತಾರೆ. ಕ್ರುಶನ್ ಲವಣವು ನಿಮ್ಮ ದೇಹಪ್ರಗತಿಯ ನಷ್ಟ ದೇಹದೊಳಗಿನ ಅಂಗಾಂಗಗಳ ಸರಿನಡತೆಯನ್ನು ಕ್ರಮದಲ್ಲಿಡುವುದು.

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ ಶಾಪುಗಳಲ್ಲಿಯೂ ಸಿಗುವುದು.

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ

ಸ್ವದೇಶೀ ಬಳೆಗಳು ಸ್ವದೇಶೀ

ಅಗ್ಗ, ಅಂದ, ಮೋಹಕ ಮತ್ತು ಪಕ್ಕಾ ಬಣ್ಣದ ಅದರೆ ಪಾರದರ್ಶಕವಾದ ಜವದಾಣಾಹಾರಾ (ಗೊಲೆದ ಕಾಳಿನಂತೆ ಕೆತ್ತಿದ) ಕಾಂಚ (ಪೈಲು ಇದ್ದ) ಮತ್ತು ಇತರ ಫ್ಯಾನ್ಸೀ ಡಿಝಾಯನುಗಳ ಕಾಚಿನ ಬಳೆಗಳು, ಮೆಸರ್ಸ್ ಗೋರ ಮತ್ತು ಕಂಪೆನಿಯವರು ತಮ್ಮ ಕ್ರಿಸ್ಟಲ್ ಗ್ಲಾಸ್ ವರ್ಕ್ಸ, ಸಂತ ರೋಡದಲ್ಲಿ ತಯಾರಿಸಲ್ಪಡುತ್ತವೆ. ಅವರ ಮಾಲು ಈಗ ಬಜಾರದಲ್ಲಿ ಎಲ್ಲ ವ್ಯಾಪಾರಸ್ಥರ ಕಡೆಗೆ ದೊರೆಯುವುದು ಶೋಕ ಗಿರಾಕಿಗಳ ಮಾಹಿತಿಯ ಬಗ್ಗೆ ದರವನ್ನು ಕೊಡಲಾಗಿದೆ.

ಜವದಾಣಾ ಹಾರಾ—ಪೈಲು ಹಾಕಿದ ಬಳೆಗಳು ೦–೬–೬ ಪ್ರತಿಯೊಂದು ಕಟ್ಟಿಗೆ [ಒಂದು ಕಟ್ಟಿನಲ್ಲಿ ಆರು ಡಜನ್ ಜೋಡುಗಳು ಇರುವುವು]

ಕಾಂಚ—ತ್ರಿಕೋಣ ಪ್ಲೇನ ೦–೬–೬

ಜವದಾಣಾ ಕಾಂಚ—ತ್ರಿಕೋಣ ಪ್ಲೇನ ಮೇಲೆ ಪೈಲು ಹಾಕಿದ್ದು ೦–೧೨–೦

ಎಲ್ಲ ದರಗಳು ಪ್ಯಾಕಿಂಗ್ ಹೊರ್ತುಪಡಿಸಿ ಕಾರಖಾನೆಯು ಡಿಲಿವ್ಹರಿ ಎಂದು ತಿಳಿಯತಕ್ಕದ್ದು. ಪ್ಯಾಕಿಂಗ್ ಒಂದು ಪೆಟ್ಟಿಗೆಗೆ ರೂ ೧–೮–೦ ಬೇರೆ.

ಹೆಚ್ಚಿನ ಮಾಹಿತಿಗಾಗಿ ಬರೆಯಿರಿ

ಮೆಸರ್ಸ್ ಗೋರ ಮತ್ತು ಕಂಪೆನಿ,
ಮೆಹರವಾನ ಬಿಲ್ಡಿಂಗ, ಸರ್ ಫಿರೋಜಶಹಾ ಮೆಹತಾ ರೋಡ್ ಫೋರ್ಟ್, ಮುಂಬಯಿ.

ಮಂಗಳೂರು ಸಮಾಚಾರ

ಶ್ರೀಮತಿ ಕಮಲಾದೇವಿ

ಇವರು ಬೇಗನೇ ಯುರೋಪು ಪ್ರವಾಸವನ್ನು ಕೈಕೊಳ್ಳಲಿರುವರು

ವಿದ್ಯಾಮಂತ್ರಿಗಳ ಆಗಮನ

ನಮ್ಮ ಮದ್ರಾಸು ಸಂಸ್ಥಾನದ ವಿದ್ಯಾಮಂತ್ರಿಗಳಾದ ಮಾನ್ಯ ಸಿ ಜೆ ವಾರ್ಕಿಯವರು ದೇ ತಾ ೧೨ರಂದ ೨ ೪೫ ಗಂಟೆಗೆ ಮಂಗಳೂರಿಗೆ ಆಗಮಿಸಿ, ೩-೩೦ ಗಂಟೆಗೆ ಗವರ್ನಮೆಂಟ್ ಕೋಲೇಜಿನಲ್ಲಾಗುವ ಸಕೆಂಡರಿ [illegible] ಟ್ರೈನಿಂಗ್ ಶಾಲೆಯ ಹೆಡ್ಮಾಸ್ತರರ [illegible] ಅಧ್ಯಕ್ಷತೆ ವಹಿಸುವರು. ಮತ್ತು ಸಂಜೆ ಗಂಟೆಗೆ ಸೈಂಟ್ ಎಗ್ನೆಸ್ ಕೋಲೇಜಿನ [illegible] ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆಯನ್ನು ವಹಿಸುವರು. ಮರುದಿನ ಬೆಳಿಗ್ಗೆ [illegible] ಗಂಟೆಗೆ ಭೇಟಿಕೊಟ್ಟು [illegible] ಪ್ರಯಾಣ ಬೆಳೆಸುವರು

ಕೋರ್ಟಿಗೆ ಬೇಸಿಗೆ ರಜೆ

ಸ್ಥಳೀಯ ಜಿಲ್ಲಾ [illegible] ಕೋರ್ಟುಗಳ ಬೇಸಿಗೆ ರಜೆಯು [illegible] ತಾ ೧೨-೪-೩೯ರಿಂದ ಪ್ರಾರಂಭಿಸಲ್ಪಟ್ಟ [illegible] ಕೋರ್ಟು ತಾ ೧೭-೪ ೩೯ಕ್ಕೆ [illegible] ತಾ ೨೭ಕ್ಕೆ ತೆರೆಯುವುದು.

ದಸ್ತಗಿರಿ

[illegible] ಎಂಬವನನ್ನು ಮಾರೋ ಹೊಡೆದು [illegible] ಗಾಯಗಳಾಗಿದ್ದು ಆಸ್ಪತ್ರೆಯಲ್ಲಿ [illegible] ನಿಮಿತ್ತವಾಗಿ ಗುಮಾಸ್ತೆ [illegible] ಒಬ್ಬನನ್ನು ಪೋಲಿಸರು ದಸ್ತಗಿರಿ ಮಾಡಿರುತ್ತಾರೆ

ಲೇಡಿಸ್ ಕ್ಲಬ್

ಸ್ಥಳೀಯ ಲೇಡಿಸ್ ಕ್ಲಬ್ಬಿನ ಟೆನ್ನಿಸ್ ಪಂದ್ಯಾಟವು ಅಂತ್ಯವಾಗಿ ಸಿಂಗಲ್ಸಿನಲ್ಲಿ ಶ್ರೀಮತಿ [illegible] ಯಸ್ ಪೊನ್ನಪ್ಪನವರೂ ಡಬ್ಬಲ್ಸಿನಲ್ಲಿ ಶ್ರೀಮತಿ ಅನಸೂಯ ಕಾಮತ್ ಮತ್ತು [illegible] ಪಿ. ರೊಡ್ರಿಗಸರವರು ಬಹುಮಾನವನ್ನು ಪಡೆದರು ನಮ್ಮ ಜಿಲ್ಲಾ ಕಲೆಕ್ಟರರ ಪತ್ನಿಯಾದ ಶ್ರೀಮತಿ ಶರೀಫ್ ಅಹಮ್ಮದ್ ಅಲಿ [illegible] ಬಹುಮಾನವಿತರಣಾ ಕಾರ್ಯವನ್ನು ನಿರ್ವಹಿಸಿದರು ಇಲ್ಲಿಂದ ವರ್ಗಾಯಿಸಲ್ಪಟ್ಟ [illegible] ಟೀಕ್ಸ್ ಮತ್ತು ಪೋರೆಸ್ಟ್ ಅಫೀಸರರ [illegible] ಬೀಳ್ಕೊಳ್ಳುವ ಸಂಭ್ರಮವೂ ಯಥ [illegible] ಜರುಗಿತು

ಜಿಲ್ಲಾ ಟೀಚರ್ಸ್ ಗಿಲ್ಡ್

ದಕ್ಷಿಣ ಕನ್ನಡ ಜಿಲ್ಲಾ ಟೀಚರ್ಸ್ ಗಿಲ್ಡಿನ ವಾರ್ಷಿಕ ಸಭೆಯು ಇದರ ಅಧ್ಯಕ್ಷರಾದ ಶ್ರೀ. ಯಂ. ಎಸ್ ವಿಶಾಂಬರ ರಾಯರ ಅಧ್ಯಕ್ಷತೆಯಲ್ಲಿ ಕಳೆದ ಆದಿತ್ಯವಾರ ಡಿ ಸಿ ಯಂ. ಶಾಲೆಯಲ್ಲಿ ಜರುಗಿತು ಕಾರ್ಯದರ್ಶಿಗಳಾದ ಶ್ರೀ. ಎಸ್ ಮುಕುಂದ ರಾಯರು ಗತವರ್ಷದ ವರದಿ ಹಾಗೂ ಲೆಕ್ಕಪತ್ರಗಳನ್ನು ಸಭೆಯ ಮುಂದಿರಿಸಿದ ಬಳಿಕ ಸಂಘದ ನಿಯಮಾವಳಿಗಳಲ್ಲಿ ಕೆಲವು ತಿದ್ದುಪಡಿಗಳು ಮಾಡಲ್ಪಟ್ಟವು. ನಂತರ ಮುಂದಿನ ವರ್ಷದ ಕಾರ್ಯ ನಿರ್ವಾಹಕ ಮಂಡಳಿಯ ಚುನಾವಣೆಯು ನಡೆದು ಶ್ರೀಗಳಾದ ಕೆ. ನರಸಿಂಹ ವೆಂಕಟೇಶ ಶೆಣೈಯವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎಂ. ಎಸ್. ವಿಶಾಂಬರರಾವ್, ಯು. ಗೋವಿಂದರಾವ್ ಉಪಾಧ್ಯಕ್ಷರಾಗಿಯೂ, ಯು. ಶ್ರೀನಿವಾಸ ಕಿಣಿಯವರು ಜನರಲ್ ಸೆಕ್ರೆಟರಿ ಮತ್ತು ಕೋಶಾಧಿಕಾರಿಗಳಾಗಿಯೂ, ಬಿ. ಶ್ಯಾಮರಾಯ ಶೆಟ್ಟಿ ಮತ್ತು ಎನ್. ವೆಂಕಟ್ರಮಣ ಭಟ್ಟ ಇವರುಗಳು ಜತೆ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು ಈ ಗಿಲ್ಡಿನ ಪರವಾಗಿ ಮದ್ರಾಸಿನ ಎಸ್ ಐ ಟಿ ಯು ವಿನ ಕಾರ್ಯಕಾರಿ ಮಂಡಳಿಗೆ ಪ್ರೊ ಎಸ್ ರಾಮಚಂದ್ರ ಅಯ್ಯರವರು ಚುನಾಯಿಸಲ್ಪಟ್ಟರು

ವಸಂತೋತ್ಸವ

ಸ್ಥಳೀಯ ಬಿಸೆಂಟ್ ಹ [illegible] ಶಾಲೆಯಲ್ಲಿ ತಾ [illegible] ಶನಿವಾರ [illegible] ತಾಸಿಗೆ ವಸಂತೋತ್ಸವವು ಪ್ರಾರಂಭಿಸಲ್ಪಡುವುದು ಅದೇ ದಿನ ಸಂಜೆ ೬-೩೦ಕ್ಕೆ ವಿವಿಧ ಪ್ರದರ್ಶನಗಳೂ ವಿನೋದಾವಳಿಗಳೂ (ಟಿಕೇಟು ಮೂಲಕ) ಜರುಗಲಿವೆಯೆಂದು ತಿಳಿದು ಬರುತ್ತದೆ

ವೆಬ್ಸ್ಟರ್ ಮಾರ್ಕೆಟ್ ವಿಚಾರ

ಸ್ಥಳೀಯ ವೆಬ್ಸ್ಟರ್ ಮಾರ್ಕೆಟಿನ [illegible] ವಿಭಾಗವನ್ನು ಫೆಲಿಕ್ಸ್ ಪೈ ಬಜಾರಿಗೆ ಎಪ್ರಿಲ್ ತಾರೀಕು ಒಂದರಿಂದ [illegible] ಮುನಿಸಿಪಾಲಿಟಿಯವರು [illegible] ಅವರ [illegible] ಹಾಕಿರುವುದು [illegible] ಈ ವಿಷಯವಾಗಿ ಮಾರ್ಕೆಟ್ ಸಿಟಿಜನ್ಸ್ ಕಮಿಟಿಯವರು [illegible] ಸರಕಾರಕ್ಕೆ ನಿವೇದಿಸಲು ಅಲ್ಲಿಂದ ಈ ವಿಷಯದಲ್ಲಿ ಕಲೆಕ್ಟರರ ಸಲಹೆಯನ್ನು [illegible] ಕೇಳುವುದೆಂದೂ [illegible] ಇವರಿಗೆ ತಂತಿ [illegible] ಕಳೆದ [illegible] ಕಮಿಟಿಯವರ [illegible] ಈಗ [illegible] ಮೀನು [illegible] ವಿಭಾಗವನ್ನು ವೆಬ್ಸ್ಟರ್ ಮಾರ್ಕೆಟಿನಿಂದ ಬೇರೆ ಕಡೆಗೊಯ್ಯುವ ಅಗತ್ಯವು ಕಂಡುಬರುವುದಿಲ್ಲೆಂದು, ಮತ್ತು ಮಾರ್ಕೆಟ್ ಸಿಟಿಜನ್ಸ್ ಕಮಿಟಿಯವರ ಮನವಿಗೆ ಸರಕಾರದವರು ತಕ್ಕ ಉತ್ತರವನ್ನು ಕೊಡುವ ತನಕ ವೆಬ್ಸ್ಟರ್ ಮಾರ್ಕೆಟಿನಿಂದ ಕಾಯಿಪಲ್ಯದ ವಿಭಾಗವನ್ನು ಬೇರೆಕಡೆಗೊಯ್ಯುವುದು ಬಳಿತಲ್ಲವೆಂದು ಸೂಚಿಸಿರುವರೆಂದು ತಿಳಿದುಬರುತ್ತದೆ ಮತ್ತು ಪೋಲಿಸ ಅಭಿಪ್ರಾಯದ ಒಂದು ಪತ್ರವನ್ನು ಕಮಿಷನರರಿಗೆ ಬರೆದಿರುತ್ತಾರೆ.

ಮುನ್ಸಿಪಲ್ ಕೌನ್ಸಿಲಿನ ವಿಶೇಷ ಸಭೆ

ಮಾನ್ಯ ಜಿಲ್ಲಾ ಕಲೆಕ್ಟರರು ವೆಬ್ಸ್ಟರ್ ಮಾರ್ಕೆಟಿನ ವಿಚಾರದಲ್ಲಿ ಮುನ್ಸಿಪಲ್ ಕಮಿಷನರರಿಗೆ ಬರೆದ ಪತ್ರವನ್ನು ಪರ್ಯಾಲೋಚಿಸಲು ಮುನ್ಸಿಪಲ್ ಕೌನ್ಸಿಲಿನ ಒಂದು ವಿಶೇಷ ಸಭೆಯು ಕಳೆದ ತಾ. ೫ನೇ ಬುಧವಾರ ಸಂಜೆ ೫ ಗಂಟೆಗೆ ಮುನ್ಸಿಪಲ್ ಕಟ್ಟಡದಲ್ಲಿ ಜರುಗಿತು.

ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ ಸಭೆ

ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯೊಂದು ಇದೇ ಎಪ್ರಿಲ್ ತಿಂಗಳ ತಾ. [illegible]ನೇ ಆದಿತ್ಯವಾರ ಸಂಜೆ ೭ ಗಂಟೆಗೆ ಫೆಲಿಕ್ಸ್ ಪೈ ಬಜಾರಿನ ಕಾಂಗ್ರೆಸ್ ಆಫೀಸಿಯಲ್ಲಿ ಜರಗುವುದು

ರಾವ್ ಸಾಹೇಬ್ ಯು ಸುಬ್ರಾಯ ಭಟ್ಟ

ವಿಜಯನಗರ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ರಾವ್ ಸಾಹೇಬ್ ಉಳ್ಳಾಲ ಸುಬ್ರಾಯ ಭಟ್ಟರು ಮೊನ್ನೆ ವಿಶಾಖಪಟ್ಟಣದಲ್ಲಿ ದಿವಂಗತರಾದರೆಂದು ಗೊತ್ತಾಗಿದೆ ಇವರು ಮಂಗಳೂರಿನವರಾಗಿದ್ದರೂ ಆಂಧ್ರದೇಶದಲ್ಲಿ ಕೆಲಸ ಮಾಡುತ್ತ ಆಂಧ್ರ ಭಾಷಾ ಸಂಸ್ಕೃತಿಗಳ ಪುನರುಜ್ಜೀವನಕ್ಕಾಗಿ ಬಹಳ ಕೆಲಸಮಾಡಿದವರು ೩೩ ವರ್ಷ ಮಹಾರಾಜ ಕಾಲೇಜಿನಲ್ಲಿ ಉದ್ಯೋಗದಲ್ಲಿದ್ದರು ರಿಟಾಯರಾಗುವುದಕ್ಕೆ ಕೆಲವೇ ಸಮಯದ ಮೊದಲು ತಮ್ಮ ೫೮ನೆ ವಯಸ್ಸಿನಲ್ಲಿ ಮೃತರಾದರೆಂದು ಗೊತ್ತಾಗಿದೆ.

ತಾಲೂಕು ಸಮಾಚಾರ

ಕಾರ್ಕಳ

ಇಲ್ಲಿಯ ಪ್ರಸಿದ್ಧ ಔಷಧ ಮತ್ತು ಪುಸ್ತಕ ವ್ಯಾಪಾರಿಗಳಾಗಿರುವ ಶ್ರೀ ವಿ. ಸಿ ಶೆಣೈಯವರು ಹೊನರರಿ ಬೆಂಚ ಮೆಜಿಸ್ಟ್ರೇಟರಾಗಿ ಸರಕಾರದಿಂದ ನೇಮಿಸಲ್ಪಟ್ಟಿರುತ್ತಾರೆ ಇವರಿಗೆ ನಮ್ಮ ಅಭಿವಂದನೆಗಳಿವೆ.

ಸ್ಥಳೀಯ ಆರ್ಯಸಮಾಜದ ಕೆಲವು ಉತ್ಸಾಹೀ ಕೆಲಸಗಾರರು [illegible] ಮಿಯಾರು ಮೊದಲಾದ ತಾಲೂಕಿನ ಕೆಲವು ಕೇಂದ್ರಗಳಲ್ಲಿ ಸಂಚರಿಸಿ ಸಭೆ ಭಾಷಣಗಳನ್ನು ಮಾಡಿ ವೈದಿಕ ಧರ್ಮದ ಮತ್ತು ಹೈದರಾಬಾದಿನ ಆರ್ಯ ಸತ್ಯಾಗ್ರಹದ ಪ್ರಚಾರನಡಾಸುತ್ತಿರುವರು

ಕಾರ್ಕಳ ಗ್ರಾಮ ಕಾಂಗೆಸ ಕಮಿಟಿಗೆ ಕಳೆದ ತಾ ೨೯ರ ದಿನ ಚುನಾವಣೆಯಾಗುವದೆಂದು ಕರಪತ್ರಗಳ ಮೂಲಕ ಪ್ರಕಟವಾಗಿದ್ದರೂ, ಅಂದು ಚುನಾವಣೆಯು ಸಮಯ ದಾಟಿ ಅರ್ಧಗಂಟೆ ಕಳೆದರೂ [illegible] ಹೆಚ್ಚಿಗೆ ಮತದಾರರು ಬಾರದೆ ಇದ್ದುದರಿಂದ ಚುನಾವಣೆಯನ್ನು ಮುಂದುವರಿಸಿ ಹಾಕಬೇಕಾಯಿತು

ಅಜೆಕಾರು [illegible] ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು [illegible] ತಾ [illegible] ದಿನ ಇಲ್ಲಿಯ ವಕೀಲ ಶ್ರೀ ಕೆ ಸಿ. [illegible] ಬಿ ಎ, ಬಿ ಎಲ್ [illegible] ಅಧ್ಯಕ್ಷತೆಯಲ್ಲಿ ಜರಗುವುದೆಂದ ತಿಳಿದು ಬರುತ್ತದೆ

[illegible] ಕೇಂದ್ರದ [illegible] ಉಪಾಧ್ಯಾಯರುಗಳ ಸಭೆಯು ಕಳೆದ ತಾ [illegible] ದಿನ [illegible] ಶಾಲೆಯಲ್ಲಿ ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಶ್ರೀ [illegible] ಶೆಣೈ ಮತ್ತು [illegible] ಕಾರ್ಕಳದ [illegible] ಭಾಷಣ [illegible]

[illegible] ಕಾಂಗೆಸ ಕಮಿಟಿ [illegible] ವರ್ಷಕ್ಕೆ ಕಾರ್ಯ [illegible] ಕಾಂಗೆಸ ಆಫೀಸಿಯಲ್ಲಿ [illegible] ಸಭೆಯಾಗ [illegible]

ಫರಂಗಿಪೇಟೆ

ಫರಂಗಿಪೇಟೆಯ [illegible] ಶಾಲೆಯ [illegible]ನೇ ವಾರ್ಷಿಕೋತ್ಸವವು ತಾ ೨೯-೩ ೩೯ರಲ್ಲಿ ಶ್ರೀ [illegible] ರಾವ್ ಬಿ ಎ ಬಿ ಎಲ್ [illegible] ಅಧ್ಯಕ್ಷತೆಯಲ್ಲಿ ಜರಗಿತು ಅಧ್ಯಕ್ಷರ ಆಗಮನದ ತರುವಾಯ ೬ ಘಂಟೆಗೆ ಸರಿಯಾಗಿ ಕೋಟಾರಿ ನಾರಾಯಣ ಶೆಣೈಯವರಿಂದ ಶಾಲಾಭಿವಂದನ ಶಾಲಾ ಹುಡುಗಿಗಳಿಂದ ಬಂದ ಹಲವು ಸಂದೇಶಗಳ ವಾಚನ, ಶಾಲಾರಿಪೋರ್ಟಿನ ಓದುವಿಕೆಗಳು ನಡೆದ ತರುವಾಯ, ಶ್ರೀಮತಿ ಎನ್ ರಾಮರಾಯರಿಂದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಹಂಚಲಪಡುವು ಲಾಖ್ ಕರೋಡ್ ಎಂಬ ಹಿಂದೀ ನಾಟಕದ ಒಂದು ದೃಶ್ಯ, ಹಾಡುಗಿಯರ ಲೇಜಿಂ ಮತ್ತು ಯಕ್ಷಗಾನ ನಡೆದ ಬಳಿಕ ಶಾಲಾ ಹುಡುಗಿಗಳ ಕಡೆಯಿಂದ ಶ್ರೀ ಪಾತೂರು ಕೇಶವ ಭಟ್ಟರು, ದೆಮ್ಮಲೆಯ ರಾಮಣ್ಣ ಶೆಟ್ರು ಮತ್ತು ಕೊಂಚಾಡಿ ಶಾಲೆಯ ಅಧ್ಯಾಪಕ ಶ್ರೀ ಕೆ ರಾಮಚಂದ್ರ ಪೈಗಳೂ ಭಾಷಣಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಶಾಲೆಗಳಲ್ಲಿ ಯೋಗ್ಯತೆ ವರ್ಣಬೇಧ, ಲಿಂಗಬೇಧವನ್ನಿಡದೆ ಸಹ ಶಿಕ್ಷಣವು ನಡೆಯುವುದರಿಂದುಂಟಾಗುವ ಪ್ರಯೋಜನ, ಸ್ತ್ರೀಯರನ್ನು ಗೌರವಿಸಿ ಅವರನ್ನು ಮುಂದಕ್ಕೆ ತರುವ ಪ್ರಯತ್ನವೇ ಜನಾಂಗದ ಅಭಿವೃದ್ಧಿಯ ಸೂಚನೆ, ನಮ್ಮ ಮಾತೃ ಭಾಷೆಯನ್ನೂ ಸ್ವದೇಶ ವಸ್ತುಗಳನ್ನೂ ನಾವು ಲಕ್ಷಿಸ [illegible]

ಶ್ರೀ ಕೆ ಲಕ್ಷ್ಮೀಶಂಕರರಾವ್

ಇವರು ರೋಯಲ್ ಇಂಡಿಯನ್ ನೇವಲ್ ರಿಸರ್ವ್ ಅಧಿಕಾರಿಯಾಗಿ ನೇಮಕಹೊಂದಿದ್ದಾರೆ

ತಕ್ಕ [illegible] ಇತ್ಯಾದಿಗಳ [illegible] ಕುರಿತ ತಮ್ಮ [illegible] ಇಂಗ್ಲಿಷ [illegible] ಭಾಷಣ ಮಾಡಿದರು ಈ ಎಲ್ಲಾ ತರದ ಯೋಗ್ಯತೆಗಳ [illegible] ಈ [illegible] ವಿಶೇಷದೆ [illegible] ಸಂದರ್ಭದಲ್ಲಿ [illegible] ಅವರ [illegible] ಈ ಶಾಲೆಯನ್ನು [illegible] ಹಳ್ಳಿಗಳ [illegible] ಶಾಲೆ [illegible] ಎಂ. [illegible] ಸಿದರು, ಅವರ [illegible] ಎಸ್ [illegible] ಹೆಚ್ಚು [illegible] ಇಂಗ್ಲಿಷ ನಾಟಕ [illegible] ಸಾಮ್ರಾಜ್ಯದ [illegible] ಇದೇ ಶಾಲೆಯ ಅಧ್ಯಾಪಕ [illegible] ಎಂಬ ಕನ್ನಡ ನಾಟಕವನ್ನು [illegible] ಆಡಿತೋರಿಸಿದ[illegible] [illegible] ಗಳನ್ನು [illegible] ಆದಿವ ತರುವಾಯ [illegible] ಆವರ್ಧ [illegible]

ಉಡುಪಿಯ ಕೋರ್ಟು— ಸರಕಾರದ ಭರವಸೆ

ಉಡುಪಿಯ ಮುನ್ಸೀಫ ಕೋರ್ಟನ್ನು ತೆಗೆದು [illegible] ಸರಕಾರದ ಆಲೋಚನೆಯ [illegible] ಉಡುಪಿ ವಕೀಲ ಸಂಘದ ಅಭಿಪ್ರಾಯವನ್ನು ಮದ್ರಾಸು ಹೈಕೋರ್ಟ ನ್ಯಾಯಾಧೀಶರ ಮತ್ತು [illegible] ಮಂತ್ರಿಗಳ ಮುಂದೆ ಇಡಲು ಒಂದು ನಿಯೋಗವನ್ನು ತೆಗೆದುಕೊಂಡು ಮದ್ರಾಸಿಗೆ ತೆರಳಿದ್ದ ಶ್ರೀ. ಅರಸರು ಲಕ್ಷ್ಮೀನಾರಾಯಣ ರಾವ್, ಬಿ ಎ. ಬಿ, ಎಲ್.ರವರು ತಮ್ಮ ಅಲ್ಲಿಯ ಕೆಲಸಗಳನ್ನು ಮುಗಿಸಿ ಹಿಂದಕ್ಕೆ ಬಂದಿದ್ದಾರೆ. ಉಡುಪಿಯ ಮುನ್ಸೀಫ ಕೋರ್ಟನ್ನು ತೆಗೆದು ಹಾಕುವುದಿಲ್ಲವಾಗಿ ಸರಕಾರವು ಶ್ರೀ ರಾಯರಿಗೆ ಭರವಸೆಯನ್ನಿತ್ತಿರುವುದೆಂದು ತಿಳಿದುಬರುತ್ತದೆ.

ಸಂಸ್ಥಾನಗಳಲ್ಲಿ ರಾಜಕೀಯ ಸುಧಾರಣೆ

ವ್ಹಾಯ್ಸರಾಯರ ನಿರ್ದೇಶ — ರೆಸಿಡೆಂಟರ ಕಾರ್ಯಕ್ರಮ

ಕಾಂಗ್ರೆಸ ಬಲೋದ್ಭವದ ಪರಿಣಾಮ?

ಮಧ್ಯ ಭಾರತ ಸಂಸ್ಥಾನಗಳ ಬ್ರಿಟಿಷ ರೆಸಿಡೆಂಟರಾದ ಮಿ. ಕೆ. ಯಸ್. ಫಿಟ್ಜರು ನವಗಾಂಗಿನಲ್ಲಿ ಬುಂದೇಲಖಂಡ, ಭಾಗೇಲಖಂಡ ಸಂಸ್ಥಾನಗಳ ಮತ್ತು ಇಂದೋರಿನಲ್ಲಿ ಮಾಳವ, ಭೋಪಾಲ ಮೊದಲಾದ ಸಂಸ್ಥಾನಗಳ ರಾಜಪ್ರತಿನಿಧಿಗಳನ್ನು ಬೇರೆ ಬೇರೆ ಸಭೆಗಳಲ್ಲಿ ಕರೆಯಿಸಿ, ಈ ಸಂಸ್ಥಾನಗಳಲ್ಲಿ ರಾಜಕೀಯ ಸುಧಾರಣೆಗಳಾಗುವ ಕುರಿತಾಗಿಯೂ ಈ ಸಣ್ಣ ಸಣ್ಣ ಸಂಸ್ಥಾನಗಳ ಪೋಲೀಸ, ನ್ಯಾಯ ಮೊದಲಾದ ಕೆಲವು ಇಲಾಖೆಗಳನ್ನು ಸಂಯೋಜಿಸಿ ಆಡಳಿತವನ್ನು ಉತ್ತಮಗೊಳಿಸುವ ಕುರಿತಾಗಿಯೂ ವಿಚಾರವಿಮರ್ಶೆ ಮಾಡಿದರು. ಕಾಲ ಪರಿಸ್ಥಿತಿಯು ಬದಲಾಗಿರುವದರಿಂದ ಸಂಸ್ಥಾನಾಧೀಶರು ಕಾಲಪರಿಸ್ಥಿತಿಗೆ ಅನುಕೂಲವಾಗಿ ಸಂಸ್ಥಾನಗಳ ಆಡಳಿತವನ್ನು ಸುಧಾರಿಸಬೇಕಾದ ಆವಶ್ಯಕತೆಯನ್ನು ಮನಗಂಡು, ರೆಸಿಡೆಂಟರು ಆ ಸಂಬಂಧ ತಯಾರಿಸಿದ ಯೋಜನೆಯನ್ನು ಸಂಸ್ಥಾನಾಧೀಶರೆಲ್ಲರೂ ಪರ್ಯಾಲೋಚಿಸಬೇಕಾಗಿರುವದೆಂದು ಸಾರ್ವಭೌಮ ಸರಕಾರದ ಪ್ರತಿನಿಧಿಯಾಗಿ ವ್ಹಾಯ್ಸರಾಯರು ಕಳುಹಿಸಿದ ಸಂದೇಶವನ್ನು ರೆಸಿಡೆಂಟರು ಓದಿ ಹೇಳಿದರು. ಅನಂತರ ಸಂಸ್ಥಾನಾಧೀಶರು ತಮ್ಮ ಸ್ವಂತದ ಖರ್ಚನ್ನು ತಗ್ಗಿಸಿ ಉಳಿಕೆಯನ್ನು ಪ್ರಜಾಜನರ ಹಿತಕ್ಕೆ ಉಪಯೋಗಿಸಬೇಕಾದ ಸಮಯವು ಬಂದಿರುವದನ್ನು ರೆಸಿಡೆಂಟರು ಸಂಸ್ಥಾನಾಧೀಶರಿಗೆ ಸೂಚಿಸಿದರು.

ರೆಸಿಡೆಂಟರ ಯೋಜನೆ

ಬೇರೆ ಬೇರೆ ಕ್ಷೇತ್ರಗಳಿಗೆ ಸೇರಿದ ಸಂಸ್ಥಾನಗಳ ಪರವಾಗಿ ನೇಮಕವಾದ ಒಂದು ಸಮಿತಿಯು ಆ ಸಂಸ್ಥಾನಗಳಲ್ಲಿ ನ್ಯಾಯದಾನ ಮಾಡುವುದಕ್ಕೆ ಹ್ಯಾಯ್ ಕೋರ್ಟ ಜಡ್ಜರನ್ನು ಆರಿಸಿ ನೇಮಿಸುವದೆಂದೂ, ಕಾರ್ಯನಿರ್ವಾಹಕ್ರಮದ ಕುರಿತು ಅದೇ ಸಮಿತಿಯು ಹ್ಯಾಯ್ ಕೋರ್ಟ ಜಡ್ಜರಿಗೆ ಸೂಚನೆಗಳನ್ನು ಕೊಡುವದೆಂದೂ, ಹ್ಯಾ. ಕೋರ್ಟ ಜಡ್ಜರನ್ನು ಕೆಲಸದಿಂದ ತಳ್ಳಿಹಾಕುವ ಅಧಿಕಾರವು ಕೂಡ ಆ ಸಮಿತಿಗೆ ಇರುವದೆಂದೂ, ಜಡ್ಜರು ಆ ಸಂಸ್ಥಾನಗಳಿಂದ ಬಂದ ಅಪೀಲುಗಳ ತನಿಖಿ ಮಾಡುವ ಮತ್ತು ನ್ಯಾಯ ಇಲಾಖೆಯ ಕಾರ್ಯನಿರ್ವಾಹದ ಕುರಿತು ಸಂಸ್ಥಾನಾಧೀಶರಿಗೆ ಆಲೋಚನೆ ಹೇಳುವ ಅಧಿಕಾರವುಳ್ಳವರೆಂದೂ ರೆಸಿಡೆಂಟರ ಯೋಜನೆಯಲ್ಲಿದೆ. ಹಾಗೆಯೇ ಪೋಲಿಸ ಖಾತೆಗಾಗಿಯೂ ಒಂದು ಸಮಿತಿಯ ರಚನೆಯಾಗಿ, ಅದು ಒಬ್ಬ ಪೋಲೀಸ ಇನ್ಸಪೆಕ್ಟರ ಜನರಲರವರನ್ನು ನೇಮಿಸುವದೆಂದೂ, ಅವರು ಪೋಲೀಸ ಖಾತೆಗೆ ಜವಾಬುದಾರರೆಂದೂ, ಸಂಸ್ಥಾನಗಳ ಸರಕಾರಿ ನೌಕರರನ್ನು ಕೆಲಸದಿಂದ ತಳ್ಳಿಹಾಕುವ ಅಥವಾ ಶಿಕ್ಷಿಸುವ ಅಧಿಕಾರವುಳ್ಳವರೆಂದೂ ಯೋಜನೆಯಲ್ಲಿದೆ. ಹೀಗೆ ಬೇರೆ ಬೇರೆ ಸಣ್ಣ ಸಣ್ಣ ಸಂಸ್ಥಾನಗಳ ಬಗ್ಗೆ ಬೇರೆ ಬೇರೆ ಹ್ಯಾ ಕೋರ್ಟು, ಪೋಲೀಸ ಖಾತೆ ಇರುವದರ ಬದಲಿಗೆ ಅವೆಲ್ಲವುಗಳ ಬಗ್ಗೆ ಸಾಮಾನ್ಯವಾಗಿ ಒಂದು ಹ್ಯಾ ಕೋರ್ಟು ಮತ್ತು ಒಂದು ಪೋಲೀಸ ಖಾತೆ ಇರುವದರಿಂದ ಆಡಳಿತದ ಖರ್ಚು ಕಡಿಮೆಯಾಗಿ ಕಾರ್ಯನಿರ್ವಾಹವು ಸುಲಭವೂ ತೃಪ್ತಿಕರವೂ ಆಗುವದು.

ಸಮಯ ಬೇಕು

ಸಂಸ್ಥಾನಾಧೀಶರ ಧ್ಯೇಯೋದ್ದೇಶಗಳಲ್ಲಿ ಜನತೆಗೆ ವಿಶ್ವಾಸವುಂಟಾಗುವುದಕ್ಕೋಸ್ಕರ ಸಣ್ಣ ಸಂಸ್ಥಾನಗಳಲ್ಲಿ ಇನ್ನಾದರೂ ಸುಧಾರಣೆಗಳಾಗುವದು ಅಗತ್ಯ. ಆದರೂ ಅವುಗಳನ್ನು ಆಲೋಚಿಸಲಿಕ್ಕೆ ಸಂಸ್ಥಾನಾಧೀಶರು ಸಮಯ ಕೇಳಿದ್ದಾರೆ. ಈ ಸೂಚನೆಗಳನ್ನು ಕೊಡುವದರಲ್ಲಿ ಸಾರ್ವಭೌಮ ಸರಕಾರದ ಉದ್ದೇಶವೇನಿರಬಹುದೆಂಬುದರ ಕುರಿತು ಸಂಸ್ಥಾನಾಧೀಶರಿಗೆ ಸಂದೇಹಬಂದಿರುವದು! ಸಾರ್ವಭೌಮ ಸರಕಾರದ ಮೇಲೆ ಕಾಂಗ್ರೆಸಿನ ಪ್ರಭಾವವು ಬೆಳೆಯುತ್ತಿರುವದರ ಪರಿಣಾಮವಾಗಿಯೇ ಸಾರ್ವಭೌಮ ಸರಕಾರವು ಈಗೀಗ ದೇಶೀ ಸಂಸ್ಥಾನಗಳ ಒಳ ಆಡಳಿತದಲ್ಲಿ ಹೆಚ್ಚೆಚ್ಚು ಕೈಹಾಕುತ್ತಿರುವದೆಂದು ಅವರು ಎಣಿಸಿದ್ದಾರೆ. ಸಾರ್ವಭೌಮ ಸರಕಾರವು ದುರ್ಬಲವಾಗಿರುವದರಿಂದ ಕಾಂಗ್ರೆಸಿನ ಸ್ನೇಹಸಂಪಾದಿಸುವದಕ್ಕಾಗಿಯೇ ಅದು ದೇಶೀ ಸಂಸ್ಥಾನಗಳಲ್ಲಿ ಅತಿಕ್ರಮ ಮಾಡುವದಾಗಿ ಕೂಡ ಒಬ್ಬರು ಹೇಳಿರುವರು!

ಸರಕಾರ ಕಾಂಗ್ರೆಸು ಸರಿಜೋಡು?

ಸಂಸ್ಥಾನಗಳ ನಿರ್ಮೂಲನ ಮಾಡಲಿಕ್ಕೆ ಸಾರ್ವಭೌಮ ಸರಕಾರ ಮತ್ತು ಕಾಂಗ್ರೆಸು ಒಂದಾಗಿರುವವೆಂದೂ ಇನ್ನೊಬ್ಬ ಸಂಸ್ಥಾನಾಧೀಶರು ಅತ್ಯದ್ಭುತವಾದ ಮಾತನ್ನು ಹೇಳಿದ್ದಾರೆ. ಪರಸ್ಪರ ಸಂದೇಹವಿರುವಾಗ, ಸೂಚನೆಯು ಎಷ್ಟು ಹಿತಕರವಾಗಿದ್ದರೂ ಅದು ಹೇಗೆ ಮಾನ್ಯವಾದೀತು? ಇದ್ದರಿಂದ ರೆಸಿಡೆಂಟರ ಯೋಚನೆಯನ್ನು ಆಲೋಚಿಸಲಿಕ್ಕೆ ಕೂಡಿದ ಸಂಸ್ಥಾನಾಧೀಶರು ಎರಡೆರಡು ದಿನಗಳನ್ನು ಕಳೆದರೂ ಯಾವ ನಿರ್ಧಾರಕ್ಕೂ ಬರಲಿಲ್ಲ. ಅವರಿಗೆ ಒಂದು ಕಡೆಯಿಂದ ಸಾರ್ವಭೌಮ ಸರಕಾರದ ಭಯ; ಇನ್ನೊಂದು ಕಡೆಯಿಂದ ಕಾಂಗ್ರೆಸಿನ ಕಾರ್ಯಕ್ರಮದ ಕುರಿತು ಸಂದೇಹ, ಮೂರನೆಯದಾಗಿ ಜಾಗೃತ ಪ್ರಜೆಗಳ ಉಪದ್ರವ—ಇವುಗಳಿಂದಾಗಿ ಅವರು ಕರ್ತವ್ಯಮೂಢರಾಗಿದ್ದಾರೆ!

ಸುಧಾರಣೆ ಅಗತ್ಯವೆನ್ನುವವರೂ ಇದ್ದಾರೆ

ಎಲ್ಲಾ ಸಂಸ್ಥಾನಾಧೀಶರು ಹೀಗೆ ಯೋಚಿಸುತ್ತಿರುವರೆಂದಲ್ಲ. ಅವರಲ್ಲಿ ಕೆಲಕೆಲವರು ತಮ್ಮ ಆಡಳಿತ ಕ್ರಮದಲ್ಲಿರುವ ಕುಂದುಕೊರತೆಗಳನ್ನು ನೋಡಿ, ಅವುಗಳ ನಿವಾರಣೆಯಾಗಬೇಕೆಂದೂ, ತಮ್ಮ ಸಂಸ್ಥಾನಗಳಲ್ಲಿ ರಾಜಕೀಯ ಸುಧಾರಣೆಗಳಾಗಬೇಕೆಂದೂ ಹೇಳುವವರಿದ್ದಾರೆ. ಪ್ರಜೆಗಳ ಹಿತಕ್ಕೆ ವಿರೋಧವಾಗಿ ಅವರು ಅಧಿಕಾರದಲ್ಲಿರುವದು ಅಸಾಧ್ಯವೆಂಬುದು ಅವರಿಗೆ ತಿಳಿದಿದೆ. ಹೀಗೆ ಇಂದು ಸಂಸ್ಥಾನಾಧೀಶರು ಅನುಕೂಲ ಪ್ರತಿಕೂಲ ಪ್ರವಾಹಗಳ ಸುಳಿಯಲ್ಲಿ ಬಿದ್ದು ಗೊಂದಲದಲ್ಲಿ ಸಿಲುಕಿದ್ದಾರೆ. ಅವರ ಸ್ಥಿತಿಯನ್ನು ಕಂಡು ಯಾರಿಗಾದರೂ ಕನಿಕರವಾಗಬೇಕು. ಸದ್ಯದಲ್ಲೇ ಸಾರ್ವಭೌಮ ಸರಕಾರವು ಅನೇಕ ಮಂದಿ ಸಂಸ್ಥಾನಾಧೀಶರನ್ನು ಮಹಾತ್ಮಾಜಿಯವರಿಗೆ ಶರಣು ಹೋಗುವಂತೆ ಮಾಡಬಹುದಾಗಿ ಒಂದು ಸಂಸ್ಥಾನದ ದಿವಾನರು ಉದ್ಗಾರವೆತ್ತಿದರೆಂದು ಹಿಂದುಸ್ತಾನ ಟೈಮ್ಸ ಪತ್ರಿಕೆಯ ಒಬ್ಬ ಸುದ್ದಿಗಾರರು ಹೇಳುತ್ತಾರೆ.

ಬೊಂಬಾಯಿಯ ಗವರ್ನರರು

ಬೊಂಬಾಯಿಯ ಗವರ್ನರರಾದ ಲೋರ್ಡ್ ಲಮ್ಲಿಯವರು ಬಂದ್ರಾದಲ್ಲಿರುವ ಚರ್ಮ ಕೈಗಾರಿಕೆಯ ಶಾಲೆಯಲ್ಲಿ ಅಲ್ಲಿಯ ವಿದ್ಯಾರ್ಥಿಗಳಿಂದ ತಯಾರಿಸಲ್ಪಟ್ಟ ಕೆಲವು ವಸ್ತುಗಳನ್ನು ಪರೀಕ್ಷಿಸುತ್ತಿರುವುದು.

ವಾಫ್ದ್ ಪ್ರತಿನಿಧಿ ಮಂಡಳವು ಈಜಿಪ್ಟಿಗೆ ಮರಳಿತು

'ಜಾತಿಸ್ವಾರ್ಥವನ್ನು ಗಣಿಸದಿರಿ--ದೇಶಸ್ವಾರ್ಥವನ್ನು ಸಾಧಿಸಿರಿ'

ಈಜಿಪ್ತದಿಂದ ತ್ರಿಪುರಿ ಕಾಂಗ್ರೆಸಿಗೆ ಬಂದಿದ್ದ ವಾಫ್ದ ಪ್ರತಿನಿಧಿ ಮಂಡಲವು ಇದೇ ತಾ. ೧-೪-೧೯೩೯ರ ದಿನ ವ್ಹಾಯಿಸ್‌ರಾಯ್ ಆಫ್ ಇಂಡಿಯಾ ಹಡಗನ್ನು ಹತ್ತಿ ಈಜಿಪ್ತಿಗೆ ಮರಳಿತು. ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಅವರ ಸನ್ಮಾನಾರ್ಥ ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದಿತು. ಶ್ರೀ. ಬಿ. ಜಿ. ಖೇರರವರು ಒಂದು ಚಿಕ್ಕದಾದ ಚೊಕ್ಕ ಭಾಷಣವನ್ನು ಮಾಡಿ ಮಂಡಲಕ್ಕೆ ಶುಭವನ್ನು ಕೋರಿದರು. ಅದಕ್ಕೆ ಉತ್ತರವನ್ನು ಕೊಡುತ್ತಾ—'ಸ್ವಾತಂತ್ರ್ಯ ಯುದ್ಧದಲ್ಲಿ ಸಫಲರಾದ ಈಜಿಪ್ತದ ಜನರು ಹೇಗೆ ಜಾತಿ ಮತ ಸಂಪ್ರದಾಯ ಸ್ವಾರ್ಥವನ್ನು ಮರೆತು ತಮ್ಮ ದೇಶದ ಪರವಾದ ಕೆಲಸಗಳನ್ನು ಮಾಡುತ್ತಾರೋ ಹಾಗೆಯೇ ಹಿಂದುಸ್ಥಾನದವರು ಮಾಡುವಂತಾಗಲಿ ಎಂದು ನಾವು ಆಶಿಸುತ್ತೇವೆ' ಎಂದು ಮಂಡಳವು ಹೇಳಿತು.

ಸಫಲತೆಯ ರಹಸ್ಯ

ಅದೇ ದಿನ ಮುಸ್ಲಿಂ ವಿದ್ಯಾರ್ಥಿ ಸಂಘದಲ್ಲಿ ಭಾಷಣ ಕೊಡುತ್ತ ಮಂಡಳವು—'ನಮ್ಮಲ್ಲಿ ಐಕ್ಯವು ಇದ್ದ ಕಾರಣದಿಂದಲೇ ನಾವು ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕೆ ಸಮರ್ಥರಾದೆವು. ಅಲ್ಪಸಂಖ್ಯಾಕರು, ಕ್ರೈಸ್ತರು, ಮುಸಲ್ಮಾನರು ಎಂದು ನಾವು ನಮ್ಮೊಳಗೆ ಹೋರಾಡಲಿಲ್ಲ. ನಾವು ಎಲ್ಲ ಜಾತಿಯವರು ಕೂಡಿ ಬರೇ ಆರು ಮಿಲಿಯ ಜನರಿದ್ದೆವಾದರೂ, ಎಲ್ಲರೂ ಸಂಘಟಿತರಾಗಿ ಒಂದಾಗಿದ್ದುದರಿಂದ ನಮಗೆ ಸಫಲತೆಯು ದೊರೆಯಿತು. ೩೫ ಕೋಟಿ ಜನರಿರುವ ಹಿಂದುಸ್ಥಾನಕ್ಕೆ—ಎಲ್ಲರೂ ಸಂಘಟಿತರಾದಲ್ಲಿ—ಸ್ವಾತಂತ್ರ್ಯ ದೊರೆಯುವುದು ಬಹು ಸುಲಭವಾಗಿದೆ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯಿತೆಂದರೆ ಮುಸ್ಲಿಂ ಮತ್ತು ಅರಬ ಮೊದಲಾದ ಇತರ ಪೌರ್ವಾತ್ಯ ರಾಷ್ಟ್ರಗಳಿಗೆ ಸ್ವಾತಂತ್ರ್ಯ ದೊರೆತ ಹಾಗೆಯೇ ಸರಿ' ಎಂದಿತು.

ಜಾತಿ ಸ್ವಾರ್ಥವು ಬೇಡ

ಪತ್ರಿಕಾ ಪ್ರತಿನಿಧಿಯು ಭೇಟಿಯಾದಾಗ, ಮಂಡಲದ ನಾಯಕರಾದ ಮಹಮದ ಬೆಸ್ಸೀ ಸಿಟೇಯವರು—'ಭಾರತ ಮುಖಂಡರ ಅನುಪಮ ತ್ಯಾಗ ಮತ್ತು ಸಾಹಸವನ್ನು ಕಂಡು ಪರಮಾನಂದವಾಯಿತು. ನಾವು ಹೋದ ಹೋದಲ್ಲೆಲ್ಲ ನಮಗೆ ಸಂಭ್ರಮದ ಸ್ವಾಗತವು ದೊರೆತಿರುವುದಕ್ಕಾಗಿ ಕೃತಜ್ಞರಾಗಿದ್ದೇವೆ. ಮಹಾತ್ಮಾಜಿಯವರ ಸಾನ್ನಿಧ್ಯದಲ್ಲಿ ನಾವು ಕಳೆದ ಅರೆ ತಾಸಿನ ಸಮಯವು ಚಿರಸ್ಮರಣೀಯವಾಗುವುದು. ನಾವು ಈಜಿಪ್ತ ಜನರ ಪ್ರೇಮ ಸಂದೇಶವನ್ನು ತೆಗೆದುಕೊಂಡು ಸ್ವದೇಶಕ್ಕೆ ಮರಳುತ್ತೇವೆ. ಭಾರತದಲ್ಲಿ ಈಗ ನಡೆಯುತ್ತಿರುವ ಘಟನೆಗಳ ಮೇಲಿಂದ ಭಾರತವು ಬಹು ಶೀಘ್ರದಲ್ಲಿ ಪೂರ್ಣ ಸ್ವತಂತ್ರವಾಗುವದೆಂದು ನಮಗೆ ಅನುಭವವಾಗಿದೆ. ಜಗತ್ತಿನ ಮಹಾ ಪುರುಷರಾಗಿರುವ ಮಹಾತ್ಮಾಜಿಯವರ ನೇತೃತ್ವದಲ್ಲಿ ಭಾರತಕ್ಕೆ ಸಫಲತೆಯು ದೊರೆಯಲಿಕ್ಕೆ ಬೇಕು. ಅವರು ತೋರಿಸಿಕೊಟ್ಟ ಅಹಿಂಸಾತ್ಮಕ ಮಾರ್ಗವು ವಿಚಿತ್ರವೂ ಅದ್ಭುತವೂ ಆಗಿ ಕಂಡರೂ ನಮ್ಮ ಕಲ್ಯಾಣವು ಆ ಮಾರ್ಗದಿಂದಲೇ ಆಗಬೇಕು'' ಎಂದ. ಹೇಳಿ ಮುಂದರಿಯುತ್ತಾ—'ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಈಜಿಪ್ತ ಮೊದಲಿನಿಂದಲೂ ವಿಶೇಷ ಆಸಕ್ತಿಯನ್ನು ತೋರಿಸಿದೆ. ನಾವು ನಿಮ್ಮಲ್ಲಿಗೆ ಬಂದಂತೆ ನೀವೂ ನಮ್ಮಲ್ಲಿಗೆ ಬಂದು ಹೋಗುತ್ತ ಇರುವುದರಿಂದ ಪರಸ್ಪರ ಪರಿಚಯವು ಹೆಚ್ಚಿ ಒಂದು ದೇಶ ಮತ್ತು ಅದರ ಜನರನ್ನು ಇನ್ನೊಂದು ದೇಶ ಮತ್ತು ಅದರ ಜನರು ಚೆನ್ನಾಗಿ ತಿಳಿಯುವಂತಾಗುವುದು. ಆದುದರಿಂದ ಭಾರತದ ಒಂದು ಪ್ರತಿನಿಧಿ ಮಂಡಲವು ಅಗತ್ಯವಾಗಿ ನಮ್ಮ ದೇಶಕ್ಕೆ ಬರಬೇಕು' ಎಂದರು.

ಜಿನ್ನಾ ಸಾಹೇಬರಿಗೆ ಬೋಧನೆ

ಮುಸ್ಲಿಮರೇ ಆಗಿರುವ ಮಹಮದ ಬೆಸ್ಸೀ ಸಿಟೇಯವರ ಪ್ರತಿನಿಧಿ ಮಂಡಲವು ಹೇಳಿದ ಈ ಮಾತುಗಳು ನಮ್ಮ ಜಿನ್ನಾ ಸಾಹೇಬರಿಗೆ ಹೇಗೆ ರುಚಿಸುವವೋ ಗೊತ್ತಾಗಲಿಲ್ಲ. ರಾಷ್ಟ್ರೀಯತೆ, ದೇಶಾಭಿಮಾನ, ಸ್ವಾತಂತ್ರ್ಯ, ಅದನ್ನು ಪಡೆಯುವ ಉಪಾಯ ಇವೇ ಮೊದಲಾದ ಸಂಗತಿಗಳನ್ನು ಅವರೂ ಅವರ ಮುಸ್ಲಿಮ್ ಲೀಗ ಸಭೆಯೂ ವಾಫ್ದ ಪ್ರತಿನಿಧಿ ಮಂಡಲದಿಂದ ತಿಳಿದುಕೊಳ್ಳುವದರಿಂದ ಅವರಿಗೂ ದೇಶಕ್ಕೂ ಪ್ರಯೋಜನವಿದೆ. ಅವರ ಮುಸ್ಲಿಂ ಜಾತಿಗೂ ಹಿತವಿದೆ. ಇಲ್ಲವಾದರೆ ಕೆಡು ಜಾತಿಯಭಿಮಾನದ ಅಮಲು ತಲೆಗೇರಿ ಅವರು ಹುಚ್ಚಾಗಬಹುದು!

ಕಾಮಗಾರರಿಗೆ ಸುಭಾಷರ ಹಿತವಾದ.

ಏನಾದರೂ ಮಾಡಿ ಮಾಲಕರನ್ನು ಸೋಲಿಸುವದು ಕಾಮಗಾರರ ಧ್ಯೇಯವಾಗಿರಬಾರದು.

ಜಾಮಶೇದಪುರದ ಟಾಟಾ ಕಂಪೆನಿಯ ಕೆಲಸಗಾರರು ಟಾಟಾ ಶತಮಾನೋತ್ಸವವನ್ನು ಬಹಿಷ್ಕರಿಸಲಿಕ್ಕಿರುವದನ್ನು ಕೇಳಿದ ರಾಷ್ಟ್ರಪತಿ ಸುಭಾಷಚಂದ್ರ ಭೋಸರು, ಬಹಳ ಸಂತಾಪಗೊಂಡು ಕೆಲಸಗಾರರು ಹಾಗೆ ಮಾಡುವುದು ಪರಮ ಅನ್ಯಾಯವೆಂದಿರುವರು. 'ಸಾಧು ಅಥವಾ ಅಸಾಧು ಎಲ್ಲಾ ಉಪಾಯಗಳಿಂದ ಮಾಲಕರನ್ನು ಬಗ್ಗಿಸಲೆಳಸುವದು ಶುದ್ಧ ತಪ್ಪು. ನಮ್ಮ ಕೆಲಸಗಳೂ ಕೆಲಸಮಾಡುವ ರೀತಿಯೂ ಪರಿಶುದ್ಧವಾಗಿರಬೇಕು. ಮಾಲಕರೊಡನೆ ನಾವು ಸಂಘಟಿತರಾಗಿ ಹೋರಾಡಬೇಕಾದರೂ ನಾವು ತಪ್ಪು ದಾರಿಯನ್ನು ಸರ್ವಥಾ ಹಿಡಿಯಬಾರದು.' ಎಂದು ಬೋಧನೆ ಕೊಡುತ್ತ—'ಭಾರತದ ಕೈಗಾರಿಕ ಪುರುಷರಲ್ಲಿ ಅದ್ವಿತೀಯರಾಗಿರುವ ಶ್ರೀ. ಜೆ. ಯನ್. ಟಾಟಾರ ದಿವಂಗತ ಆತ್ಮಕ್ಕೆ ತಮ್ಮ ಶ್ರದ್ಧೆ ಭಕ್ತಿ ವಿಶ್ವಾಸವನ್ನು ತೋರಿಸಬೇಕಾದ್ದು ಪ್ರತಿಯೊಬ್ಬ ಕೆಲಸಗಾರನ ಕರ್ತವ್ಯ ಧರ್ಮವಾಗಿರುವದು' ಎಂದು ಅವರು ಹೇಳಿದ್ದಾರೆ. ಎಲ್ಲ ಕೆಲಸಗಾರರಿಗೂ ಪಥ್ಯವಾಗಬೇಕಾದ ಮಾತುಗಳಿವು.

ಪೋಲೆಂಡಿನ ಮೇಲೆ ಕೈ ಎತ್ತೀರಿ-ಜಾಗ್ರತೆ

ಮಿ. ಚೇಂಬರಲೇನರ ಅರ್ಭಟೆ

ಯುದ್ಧವಾಗವುದಿದ್ದರೆ—ನಾವು ಅದಕ್ಕೆ ಸಿದ್ಧರು; ಸೋವಿಯಟ ರಸ್ಯದೊಡನೆ ಸಂಪೂರ್ಣ ಸಹಕರಿಸುವೆವು.

ಹಿಟ್ಲರನ ಅನ್ಯಾಯದ ಮೇಲೆ ಅನ್ಯಾಯ ಆಕ್ರಮಣಗಳನ್ನು ಮಾಡಿ ಜೆಕೆಸ್ಲೊವೇಕಿಯ, ಮೆಮಲ, ಮೊದಲಾದ ಅನೇಕ ರಾಜ್ಯಗಳನ್ನು ಜರ್ಮನಿಗೆ ಸೇರಿಸಿಕೊಂಡಿದ್ದಾನೆ ಈಗ ಅವನ ಕಣ್ಣು ಪೋಲೆಂಡ ಡಾಂಜಿಂಗಗಳ ಕಡೆಗೆ ಹೋಗಿದೆ. ಹಿಟ್ಲರನ ಈ ಆಕ್ರಮಣ ಶೀಲವನ್ನು ಇನ್ನು ನಾವು ತಾಳಿಕೊಂಡಿರಲಾರೆವು ಪೋಲೆಂಡನ್ನು ಜರ್ಮನಿಯು ಅನ್ಯಾಯವಾಗಿ ಆಕ್ರಮಿಸಿ ಅದರ ಸ್ವಾತಂತ್ರ್ಯವನ್ನು ಅಪಹರಿಸಲು ಹಿಟ್ಲರನು ಪ್ರಯತ್ನಿಸುತ್ತಾನೆಂದಾದರೆ, ನಾವು ಪೋಲೆಂಡಿನ ಸಹಾಯಕ್ಕೆ ಹಿಟ್ಲರನ ವಿರುದ್ಧ ಯುದ್ಧವನ್ನು ಹೂಡಲು ಸಿದ್ಧರಿದ್ದೇವೆ ಯುರೋಪದಲ್ಲಿ ಜರ್ಮನಿ ಒಂದೇ, ಪ್ರಬಲ ರಾಷ್ಟ್ರವಾಗಿರಬೇಕೆಂಬ ಹಿಟ್ಲರನ ಉದ್ದೇಶವನ್ನು ಎಷ್ಟು ಮಾತ್ರಕ್ಕೂ ಸಾಧಿಸಲಿಕ್ಕೆ ಬಿಡಲಾಗುವದಿಲ್ಲ ಎಂದು ಬ್ರಿಟಿಷ ಪ್ರಧಾನ ಮಿ ಚೆಂಬರಲೇನರು ಪಾರ್ಲಿಮೆಂಟಿನಲ್ಲಿ ಹೇಳಿದರು

ಫ್ರಾನ್ಸು, ರಸ್ಯಗಳ ಸಹಾಯವೂ ಇದೆ

ಫ್ರಾನ್ಸವು ನಮ್ಮ ಈ ಹೊಸ ಧೋರಣವನ್ನು ಒಪ್ಪಿಕೊಂಡಿದೆ. ಯುದ್ಧವಾಗುವದಿದ್ದರೆ ಫ್ರೆಂಚರು ನಮ್ಮ ಸಹಾಯಕ್ಕಿರುವರು ರಸ್ಯವೇ ಮೊದಲಾದ ಇತರ ದೇಶಗಳೊಂದಿಗೆ ಸಮಾಲೋಚಿಸಿ ಎಲ್ಲಾ ಮುಂದಿನ ಮೇಲೆ ಅಗತ್ಯ ಕ ಬರಿ ನಮ್ಮ ಕಡೆಗಿರುವ ಎಲ್ಲಾ ರಾಷ್ಟ್ರಗಳ ಒಂದು ಪರಿಷತ್ತನ್ನು ಕರೆದ [illegible] ನಿರ್ಧಾರವನ್ನು ಕೂಡ ಬೇಕು ಎಂದೂ ಮಿ. ಚೆಂಬರಲೇನರೂ ಪಾರ್ಲಿಮೆಂಟಿನಲ್ಲಿ ವ್ಯಕ್ತ ಮಾಡಿದರು.

ಹಿಂದಿನ ಧೋರಣೆಯ ಪರಿವರ್ತನೆ

ಹಿಟ್ಲರ ಮುಸಲೋನಿ [illegible] ವಿರುದ್ಧ [illegible] ದಿಂದ [illegible] ಹಾಕಿಕೆ [illegible] ಬ್ರಿಟಿಷ ಮತ್ತು ಫ್ರೆಂಚ ಸರಕಾರಗಳ [illegible] ಪರಿವರ್ತನವಾಗಿ [illegible] ಚೆಂಬರ್ಲೇನರ ಮಾತುಗಳಿಂದ ಸ್ಪಷ್ಟವಾಗುತ್ತದೆ ಜೆಕೊಸ್ಲೊವೇಕಿಯದ ಮೇಲೆ ಹಿಟ್ಲರನ ಆಕ್ರಮಣವಾಗಿದ್ದಾಗ, ಹಿಟ್ಲರನ ಸಲೋ [illegible] ರ ಸ್ನೇಹ ಸಂಪಾದನೆಗಾಗಿಯೇ ಕೈಬಿಟ್ಟ ರಸ್ಯದ ಕಡೆಗೆ ಈಗ ಮಿ ಚೆಂಬರಲೇನರು ಸಹಕಾರದ ಕೈಯನ್ನು ನೀಡಿರುವದು ಮಹತ್ವದ ಸಂಗತಿಯಾಗಿದೆ ಮಿ ಚೆಂಬರ್ಲೇನರು ಅಂದಂತೆ, ಹಿಟ್ಲರ ವಿರೋಧಿ ರಾಷ್ಟ್ರಗಳ ಒಂದು ಸಭೆಯನ್ನು ಕರೆದು ಅವೆಲ್ಲವೂ ಸಂಘಟಿತವಾಗಿ ಒಂದಾಗಿ ಹಿಟ್ಲರ ಮುಸಲೋನಿಯವರನ್ನು ವಿರೋಧಿಸಬೇಕೆಂಬ ಒಂದು ಕೊನೆಯ ನಿರ್ಧಾರವನ್ನು ಯಾವಾಗ ಆ ರಾಷ್ಟ್ರಗಳು ಮಾಡಿಕೊಳ್ಳುವವೋ ಅಂದಿಗೆ ಹಿಟ್ಲರ ಮುಸಲೋನಿಯರ ಆಕ್ರಮಣಶೀಲವು ಖಂಡಿತವಾಗಿ ಮುಗಿಯುವದು ಈಗಲಾದರೂ ಹಿಟ್ಲರನು ಜೆಕೊಸ್ಲೊವೇಕಿಯ ಮೆಮಲಗಳನ್ನು ನುಂಗಿ ಬಿಟ್ಟ. ಅಷ್ಟರಿಂದಷ್ಟು ಪೋಲೆಂಡ ಡಾಂಜಿಂಗಗಳನ್ನು ನುಂಗುವದು ಸುಲಭವಾಗಿಲ್ಲೆಂದು ಅವನಿಗಾದರೂ ಅನುಭವವಾಗತೊಡಗಿದೆ

ಹಿಟ್ಲರ ಉರಿಕಾರಿದ್ದಾನೆ.

ಆದ್ದರಿಂದ ಮಿ ಚೆಂಬರಲೇನರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವನ್ನು ಕೇಳಿದೊಡನೆಯೇ ಹಿಟ್ಲರನು ಬ್ರಿಟಿಷರ ಮೇಲೆ ಉರಿಕಾರಿರುವನು ಜರ್ಮನಿಯಲ್ಲೆಲ್ಲ ಬ್ರಿಟಿಷರ ವಿರುದ್ಧ ಕಠಿಣ ರೀತಿಯ ಪತ್ರಿಕಾ ಪ್ರಚಾರವು ನಡೆದಿರುವದು ಪೋಲೆಂಡಿನ ಗಡಿಯ ಕಡೆಗೆ ಸೇನಾಸಂಚಾಲನವಾಗುತ್ತಲಿದೆಯಾಗಿಯೂ ವರ್ತಮಾನವಿದೆ, ಕಿಂಕರ್ತವ್ಯ ಮೂಢವಾದ ಜರ್ಮನಿಯು—ಮಿ. ಚೆಂಬರ್ಲೇನರ ಮಾತುಗಳನ್ನು ನಂಬಿ ಪೋಲೆಂಡು ಜರ್ಮನಿಯ ಸ್ನೇಹವನ್ನು ಬಿಟ್ಟುಬಿಟ್ಟದಾದರೆ ಪರಿಣಾಮಗಳು ಭಯಂಕರವಾಗಬಹುವೆಂದು ಪೋಲೆಂಡಿಗೆ ಎಚ್ಚರಿಕೆಯನ್ನು ಕೊಟ್ಟಿದೆ. ಯುದ್ಧ ಸಂಭವ ಭಯದಿಲ್ಲೆಂದು ಇಟಲಿಯು ಹೇಳಿದೆಯಾದರೂ ಅದು ಕೂಡ ಒಳಗಿಂದೊಳಗೆ ಯುದ್ಧಸಿದ್ಧತೆಯನ್ನು ಮಾಡಿರುವದಾಗಿ ತಿಳಿದು ಬಂದಿದೆ ಎಲ್ಲ ಇಟಲಿಯವರೂ ಸಂಘಟಿತರಾಗಬೇಕೆಂದು ಒಂದು ರೇಡಿಯೋ ಭಾಷಣವನ್ನು ಕೊಟ್ಟಿರುತ್ತಾನೆ.

ಅಮೆರಿಕಕ್ಕೆ ಸಂತೋಷ.

ಮಿ ಚೆಂಬರಲೇನರು ಪೋಲೆಂಡಿಗೆ ಅಭಯ ವಚನವನ್ನು ಕೊಟ್ಟಿರುವದಕ್ಕಾಗಿ ಅಮೇರಿಕಕ್ಕೆ ಬಹಳ ಸಂತೋಷವಾಗಿರುವದು ಯುದ್ಧ ಸಂಭವದಲ್ಲಿ ಅದೆ ರಿಕವೂ ಇಂಗ್ಲಂಡ, ಫ್ರಾನ್ಸು, ರಸ್ಯ, ಪೋಲೆಂಡಗಳ ಸಹಾಯಕ್ಕೆ ಬರಬಹುದು ಯಾಕಂದರೆ ಕಳೆದ ವರ್ಷದ ಇದೇ ಸಮಯ. ಹಿಟ್ಲರನ ಆಸೆಗೆ ಒಂದು ಮಿತಿ ಇತ್ತು. ಆದರೆ ಈ ವರ್ಷ ಇದೇ ಸಮಯ ಅವನ ಆಸೆಗೆ ಮಿತಿಯೇ ಇಲ್ಲದಂತವವನ್ನು ಅಮೆರಿಕವು ತಿಳಿದಿದೆ ಹಿಟ್ಲರನ ವಕ್ರದೃಷ್ಟಿ ಜಗತ್ತಿನ ಯಾವ ದೇಶದ ಮೇಲೆ ಇದೆ ಯಾವ ದೇಶದ ಮೇಲೆ ಇಲ್ಲ ಎಂದು ಹೇಳಲಿಕ್ಕೇ ಬಾಗುವದಿಲ್ಲ. ಹಿಟ್ಲರನನ್ನು ಅವನ ಇಚ್ಛೆಯ ಮೇರೆಗೆ ನಡೆಯಲಿಕ್ಕೆ ಬಿಟ್ಟರೆ ಪ್ರಪಂಚದಲ್ಲಿ ಸತ್ಯ, ನ್ಯಾಯ, ಸುಖ, ಶಾಂತಿ ಎಂಬವುಗಳು ಸರ್ವಥಾ ಉಳಿಯಲಾರವು.

ವಿರೋಧಿ ರಾಷ್ಟ್ರಗಳ ಪರಿಷತ್ತಾಗಬೇಕು

ಆದ್ದರಿಂದ ಹಿಟ್ಲರ ಮುಸಲೋನಿಯಂಥವರ ಆಕ್ರಮಣಶೀಲವನ್ನು ಸಮೂಲ ನಾಶಮಾಡಲಿಕ್ಕೆ, ಯುದ್ಧಮಾಡುವದಾಗಿದ್ದರೆ ಅದನ್ನು ಮಾಡಿ, ಅವರನ್ನು ವಿರೋಧಿಸಲಿಕ್ಕೆ ಅವರ ವಿರೋಧಿ ರಾಷ್ಟ್ರಗಳ ಒಂದು ಪರಿಷತ್ತು ಅದಷ್ಟು ಶೀಘ್ರದಲ್ಲಿ ಕೂಡುವದು ಅಗತ್ಯವೆಂದು ಎಲ್ಲರಿಗೂ ಕಂಡುಬಂದಿದೆ ಅಂಥಹದೊಂದು ಪರಿಷತ್ತು ಕೂಡಿ ಯಶಸ್ವಿಯಾದರೆ, ಹಿಟ್ಲರ ಮುಸಲೋನಿಯರ ನಿರಂಕುಶ ಪ್ರವರ್ತನೆಗೆ ದೊಡ್ಡ ಕಡಿಗಟ್ಟು ಹಾಕಿದಂತೆಯೇ ಸರಿ

ಹಿಂದೀಯರಿಗಿಂತ ಯೆಹೂದಿಯರೇ ಸುದೈವಿಗಳು

ಪುರುಷೋತ್ತಮದಾಸ ಠಾಕೂರದಾಸರ ಆವೇಶಪೂರ್ಣ ಭಾಷಣ

ಬ್ರಿಟಿಷ ವಸಾಹತುಗಳಲ್ಲಿಯೂ ಇತರ ದೇಶಗಳಲ್ಲಿಯೂ ವಾಸವಾಗಿರುವ ಹಿಂದೀಯರ ಸ್ಥಿತಿಗತಿ—ಸ್ಥಾನಮಾನಗಳನ್ನು ಯೆಹೂದಿಯರ ಸ್ಥಿತಿಗತಿ ಸ್ಥಾನಮಾನಗಳೊಡನೆ ಹೋಲಿಸಿ ನೋಡಿದರೆ ಹಿಂದೀಯರಿಗಿಂತ ಯೆಹೂದಿಯರು ಸುದೈವಿಗಳಾಗಿದ್ದಾರೆಂದು ಧಾರಾಳವಾಗಿ ಹೇಳಬಹುದು ಹಿಂದೀಯರಿಗಿಂತ ಯೆಹೂದಿಯರು ಬಹಳ ಉತ್ತಮ ಸ್ಥಿತಿಯಲ್ಲಿ ಇದ್ದಾರೆ' ಎಂದು ಆಫ್ರಿಕದ ಕೆನಿಯಾ ಪ್ರಾಂತದಲ್ಲಿ ಸಂಪತ್ಸಮೃದ್ಧವಾದ ಆಸ್ತಿ ಭೂಮಿಗಳನ್ನು ಯಹೂದಿಯರಿಗೆ ಮಾತ್ರ ಮೀಸಲಾಗಿರಿಸುವ ಧೋರಣೆಯನ್ನು ನಿಷೇಧಿಸುತ್ತ ಸರ್ ಪುರುಷೋತ್ತಮದಾಸ ಠಾಕೂರದಾಸರು ತಮ್ಮದೊಂದು ಭಾಷಣದಲ್ಲಿ ಹೇಳಿದರು

ಕೆನಿಯಾದಲ್ಲಿ ಹಿಂದೀಯರು

[illegible] ಕೆನಿಯಾದ ಹಿಂದೀಯರನ್ನು ಯುರೋಪಿಯನರು, ಜರ್ಮನಿಯ ಯಹೂದಿಯರನ್ನು ಹಿಟ್ಲರನು ಪೀಡಿಸುವದಕ್ಕಿಂತಲೂ ಕಠಿನವಾಗಿ ಪೀಡಿಸುತ್ತಿದ್ದಾರೆ [illegible] ದಲ್ಲಿ [illegible] ವರ್ಷ [illegible] ಕಟ್ಟಿಕೊಂಡು ವ್ಯಾಪಾರ [illegible] ಸಂಪಾ [illegible] ವಿಸಿಕೊಂಡಿವ ಹಿಂದೀಯರನ್ನು ಪರಿಹಾರ ಕೊಡದೆಕೊಡದೆ ಹಿಂದಕ್ಕೆ ಹಿಂದೂದೇಶಕ್ಕೆ ಕಳುಹಿಸಿ ಕೊಡುವ [illegible] ಶಾಸನಗಳನ್ನು ಅಲ್ಲಿಯ ಯುರೋಪಿಯನರು ಮಾಡಿದ್ದಾರೆ ವರ್ಣದ್ವೇಷವು ಅಲ್ಲಿ ಪ್ರಬಲವಾಗಿರುವಷ್ಟು ಮತ್ತೆಲ್ಲಿಯೂ ಇಲ್ಲ ಆದ್ದರಿಂದ ಇಂಡಿಯಾ ಸರಕಾರವು ಮಧ್ಯಸ್ಥಿಕೆ ಮಾಡಿ ತಮ್ಮನ್ನು ಕಾಪಾಡಬೇಕೆಂದು ಅಲ್ಲಿಯ ಹಿಂದೀಯರು ಸಭೆ ~~ಕೂಡಿ ಪ್ರಯತ್ನ ಮಾಡಿರುವರು~~ ಮಾಡಿರುವರು, ಈಗ ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ಹಿತಕ್ಕೆ ವಿರುದ್ಧ ಆಗಿರುವ ಕಾಯಿದೆ ಶಾಸನಗಳ ವಿರುದ್ಧ ಪ್ರಚಾರಮಾಡಿ, ಭಾರತೀಯ ಜನತೆಯೂ ಭಾರತೀಯ ಸರಕಾರವೂ ದಕ್ಷಿಣ ಆಫ್ರಿಕದಲ್ಲಿ ಹಿಂದೀಯರಿಗಾಗಿರುವ ಪರಮ ಅನ್ಯಾಯಕ್ಕೆ ತಕ್ಕ ಪ್ರತಿಕಾರ ಮಾಡಲು ಪ್ರೇರೇಪಿಸುವ ಉದ್ದೇಶದಿಂದ ಭಾರತಕ್ಕೆ ಬಂದಿದ್ದಾರೆ. ಅವರು ಸರ್ ಪುರುಷೋತ್ತಮದಾಸ ಠಾಕೂರದಾಸರ ನೇತೃತ್ವದಲ್ಲಿ ಭಾರತ ಸರಕಾರದ ಕಡೆಗೆ ಒಂದು ಭಿನ್ನವತ್ತಳೆಯನ್ನು ಕಳುಹಿಸಿರುವರು. ಭಾರತೀಯ ಸರಕಾರದ ದಕ್ಷಿಣ ಆಫ್ರಿಕದ ಹಿಂದೀಯರ ನ್ಯಾಯವಾದ ಹಕ್ಕು ಅಧಿಕಾರಗಳನ್ನು ಕಿತ್ತುಕೊಳ್ಳುವ ಅನ್ಯಾಯದ ಶಾಸನಗಳನ್ನು ವಿರೋಧಿಸುವದಾಗಿಯೂ, ಅವರಲ್ಲಿ ಅದು ಸಫಲವಾಗದಿದ್ದರೆ ತಕ್ಕ ಪ್ರತಿಕಾರ ಉಪಾಯಗಳನ್ನು ಕೈಕೊಂಡು ದಕ್ಷಿಣ ಆಫ್ರಿಕದ ಹಿಂದೀಯರ ಹಕ್ಕು ಅಧಿಕಾರ ಸ್ಥಾನಮಾನಗಳ ರಕ್ಷಣೆ ಮಾಡುವದಾಗಿಯೂ ಜನತೆಯು ನಂಬಿದೆ.

ಸ್ವಾಮಿ ಭವಾನಿದಯಾಳ ಸನ್ಯಾಸಿ

ಇವರು ಭಾರತೀಯರು—ವಸಾಹತುಗಳಲ್ಲಿ ವಾಸವಾಗಿರುವ ಭಾರತೀಯರಲ್ಲಿ ಸಾಂಸ್ಕೃತಿಕ ಪ್ರಚಾರ ಮಾಡುವದಕ್ಕೋಸ್ಕರ ದಕ್ಷಿಣ ಆಫ್ರಿಕಕ್ಕೆ ಹೋದವರು ಅಲ್ಲಿಯ ಭಾರತೀಯರ ಕಷ್ಟ ನಷ್ಟಗಳನ್ನು ಸ್ವತಹ ನೋಡಿ ಅನುಭವ ಮಾಡಿಕೊಂಡು, ಅವನ್ನು ಮನೋವೇಧಕ ಮಾತುಗಳಿಂದ ಬಣ್ಣಿಸಿದ್ದಾರೆ, ಇವರು ಇದೇ ವರ್ಷ ದಕ್ಷಿಣ ಆಫ್ರಿಕದ ಇಂಡಿಯನ್ ನೇಶನಲ್ ಕಾಂಗ್ರೆಸಿನ ಸಭಾಪತಿಗಳಾಗಿ ಕೆಲಸ

ಬರದಾರಿ ಮಾರಾಮಾರಿ

ಲಕ್ನೋ ಬಳಿ ಬರದಾರಿ ಇಲ್ಲಿ ಕಾಂಗ್ರೆಸ ಮಂತ್ರಿಮಂಡಲದ ಕಾರ್ಯಗಳನ್ನು ಕುರಿತು ಆಲೋಚಿಸುವರೆ ಒಂದು ಬಹಿರಂಗ ಸಭೆ ಸರ್ ತೇಜಬಹಾದೂರ್ ಸಪ್ರೂರವರು ಅಧ್ಯಕ್ಷರೆಂದಿತ್ತು. ಕಾಂಗ್ರೆಸ್ ಮಂಗಡಕ್ಕೆ ಆಮಂತ್ರಣ ವಿದ್ದಿಲ್ಲ ಕೆಲವರು ಅಲ್ಲಿ ಸೇರಿದ್ದರು. ಹಲವರು ಹೊರಗಿದ್ದರು ಒಳಗಿದ್ದ ಕಾಂಗ್ರೆಸಿನವರನ್ನು ಹೊರಗೆ ಹೋಗಲು ಸರ್ ಜೆ ಪಿ ಶ್ರೀವಾಸ್ತವರು ಅಂದರು ಅವರ [illegible] [illegible] ಕಾಂಗ್ರೆಸಿನವರು ಎತ್ತಿ ಒಯ್ದು ಹೊರಗೆ ತಳ್ಳಿದರು [illegible]

[illegible]

ಎಂದು ಅವರ ಪ್ರಶ್ನೆ

[illegible]

ಡಾಟದಲ್ಲಿ [illegible] ಅವರ [illegible] ಭಕ್ತಿಯಿಂದ [illegible] ಕಾರಣ, ಕಾಂಗ್ರೆಸ್ ಇವರ [illegible] ಈ ಸಂಘ—ವಾಗಿರುವ [illegible] ಎಂದು ಪಂ ಜವಾಹರಲಾಲರೆನ್ನುತ್ತಾರೆ.

ಲಂಡನಿನ ಪ್ರಾಣಿಗಳ ಆಲಯ

ಲಂಡನ್ ಜೂವಿನಲ್ಲಿರುವ [illegible] ಎಂಬ 3 ವರ್ಷ ಪ್ರಾಯದ ಆನೆಯು ಫೋಟೋದಲ್ಲಿ ಆಡುತ್ತಿರುವುದು

ಪ್ರಖ್ಯಾತಿ ಪಡೆದ ನ್ಯೂ ಥಿಯೇಟರ್ಸಿನವರ
ಸ್ಟ್ರೀಟ್ ಸಿಂಗರ್
ಕನ್ನನ್‌ದೇವಿ ಮತ್ತು ಸೈಗಲ್
ಇವರು ನಾಯಕ ಪಾತ್ರವನ್ನು ವಹಿಸಿರುವರು.
ಸದ್ಯದಲ್ಲೆ ಚಿತ್ರಾಟಾಕೀಸಿಗೆ ಬರಲಿರುವುದ
ಕಾದು ನೋಡಿರಿ!

ಸ್ವದೇಶಾಭಿಮಾನಿ

ತಾರೀಖು ೬-೪-೧೯೩೯

ವಿಕ್ರಿತದ ಮೇಲೆ ತೆರಿಗೆ

ಮದ್ರಾಸು ಸರಕಾರವು ಹೊಸ ತೆರಿಗೆಗಳನ್ನು ವಿಧಿಸುವುದಕ್ಕೆ ನಿರ್ಧಾರಮಾಡಿದೆ. ಅವುಗಳಲ್ಲಿ ವ್ಯಾಪಾರ ವಹಿವಾಟುಗಳ ಮೇಲೆ ಸ್ಥೂಲವಾಗಿ ನಿರ್ಧಾರಮಾಡಿ ಹೊರಿಸಲಾಗುವ ತೆರಿಗೆ ಒಂದಾಗಿದೆ. ಮದ್ಯಪಾನ ನಿವಾರಣೆಗೆ ಮುಡುಕಿದ ಈ ಸರಕಾರವು ಇಂತಹ ಇತರ ತೆರಿಗೆಗಳಿಂದಲ್ಲದೆ, ಖಜಾನಾ ತುಂಬಿಸಿಕೊಳ್ಳಲಾರದೆಂದು ಹೀಗೆ ಮಾಡುತ್ತದೆಂದು ವಿರೋಧಪಕ್ಷವು ಗುಣುಗುಟ್ಟುತ್ತದೆ. ಅಲ್ಲಲ್ಲಿ, ಈ ತೆರಿಗೆ ಬೇಕೆಂದೂ ವಿಹಿತವಾದುದೆಂದೂ, ಅಥವಾ ತುಂಬಾ ಆಕ್ಷೇಪಕರವೆಂದೂ ಸಭೆಗಳು ಜರುಗತೊಡಗಿವೆ. ಈ ವಿಷಯ ಸ್ವಲ್ಪ ಆಲೋಚಿಸಬೇಕಾಗಿದೆ.

ನಮ್ಮ ಸರಕಾರವು ಇದು ವರೆಗೆ ತೆರಿಗೆ ವಿಧಿಸಿದ ಕ್ರಮದಂತೆ, ಯಾವ್ಯಾವ ತರಗತಿಯ ಜನಗಳ ಮೇಲೆ ಎಷ್ಟೆಷ್ಟು ವಿಧಿಸಿದಂತಾಯಿತೆಂಬುದನ್ನು ಸ್ವಲ್ಪ ಆಲೋಚಿಸಿದರೆ, ಇದುವರೆಗಣ ಕ್ರಮವು ಯಾವುದೊಂದು ತತ್ವವನ್ನು ಅನುಸರಿಸಿದ್ದಲ್ಲವೆಂದೂ, ಕೇವಲ ಬಡ ರೈತರ ಮೇಲೆಯೆ ನಾನಾ ತೆರಿಗೆಗಳ ಭಾರ ಹೇರಿದ ದಾವಾಶಯ ಹೆಚ್ಚೆಂದೂ, ತೆರಬಲ್ಲ ಜಮೀನ್ದಾರರುಗಳು ಮಹಾ ವ್ಯಾಪಾರೀ ಶ್ರೀಮಂತರು ಮೊದಲಾದವರ ಮೇಲೆ ಕಡಮೆ ದಾವಾಶಯ ಹೇರಲಾಗಿದೆಂದೂ ಎಂತಲೆ,-ನಗರಗಳ ಮೇಲೆ ಕಡಮೆ ಗ್ರಾಮಗಳ ಮೇಲೆ ಹೆಚ್ಚಾದ ದಾವಾಶಯದಲ್ಲಿ ತೆರಿಗೆಗಳ ಭಾರಬಿದ್ದಿದೆ ಎಂದೂ ಸ್ಪಷ್ಟವಾಗುವುದು. ಹೀಗೆಯೆ ಹಿಂದೀ ತೆರಿಗೆಗಳನ್ನು ಕುರಿತು ವಿಮರ್ಶಿಸಿದ ಸರ್ ತೋಮಸ್ ಲೇಟನ್‌ರವರ ಕಮಿಟಿಯು ಎಂದೋ ಹೇಳಿಯದೆ. ಅರ್ಥಶಾಸ್ತ್ರಜ್ಞರು ಈ ಅಭಿಪ್ರಾಯವನ್ನೆ ಉಳ್ಳವರಾಗಿದ್ದಾರೆ ಹೀಗೆ ಬಹು ವರ್ಷದಿಂದ ಅಸಮವಾಗಿ ಹಂಚಿ ಬಿದ್ದ ತೆರಿಗೆಗಳ ಭಾರವನ್ನು ಸ್ವಲ್ಪ ಅವಧಿಯಲ್ಲಿ ಸರಿಗೊಳಿಸಲಾಗುವುದಿಲ್ಲ. ಸಮಾನಭಾವದಲ್ಲಿ ಎಲ್ಲರ ಮೇಲೆ ಹಂಚಿ ಬೀಳುವ ಹಾಗೆ ವಿಧಾನಗಳನ್ನು ಹೂಡಬೇಕಾಗಿದೆ. ಜಮೀನ್ದಾರರ ಮೇಲೆ ಇನ್ನು ಸ್ವಲ್ಪ ಹೆಚ್ಚಾಗಿ ತೆರಿಗೆ ಬೀಳುವಂತಾಗುವುದು; ಹಾಗೆಯೆ ವ್ಯಾಪಾರಿಗಳು, ಸಂಬಳದಾರೀ ಜನರುಗಳು ಸ್ವಲ್ಪ ಹೆಚ್ಚಿನ ಭಾರ ಹೊರಬೇಕಾಗುವುದು. ಶ್ರಮಜೀವಿಗಳೂ ರೈತರೂ ಹೊರುವ ಭಾರವನ್ನು ಇಳಿಸಬೇಕಾಗುವುದು. ವರಿಷ್ಠ ಎಸೆಂಬ್ಲಿಯಲ್ಲಿ ಇನ್ಕಂಟೇಕ್ಸನ್ನು ತಿದ್ದುಪಡಿಮಾಡುವಾಗ, ಹೀಗೆ ತೆರಿಗೆಯನ್ನು ಸಮಾನ ಹಂಚಲು ಪ್ರಾರಂಭಮಾಡಲಾಗಿದೆ ಎನ್ನಬೇಕು. ಉತ್ತರಾಧಿಕಾರಿಗಳ ಮೇಲೆ ಹೊರಿಸಬೇಕಾಗಿರುವ ತೆರಿಗೆಯೊಂದಿದೆ, ಅದನ್ನು ಈಗ ತಾನೆ ವಿಧಿಸುವುದಿಲ್ಲವಾಗಿ ಹಲವು ಪ್ರಾಂತಿಕ ಸರಕಾರಗಳು ಸೂಚಿಸಿರುವಂತೆ ವರಿಷ್ಠ ಸರಕಾರವೂ ಹೊರಿಸುವುದಿಲ್ಲೆಂದು ತಿಳಿಸಿಯದೆ. ಇವೆರಡೂ ತೆರಿಗೆಗಳ ಉತ್ಪನ್ನವು ಪ್ರಾಂತಿಕ ಸರಕಾರಗಳಿಗೆ ದೊರೆವುದು. ಕೇಂದ್ರ ಸರಕಾರವು ವಿಧಿಸುವ ~~ಇನ್ಕಂ ಟೇಕ್ಸ್ (ಕೆಲ ವರ್ಗಗಳಲ್ಲಿ)~~ ಅರೆಪಾಲಿಯನ್ನು ಪ್ರಾಂತಿಕ ಸರಕಾರಗಳಿಗೇ ಸಿಗಬೇಕಾಗಿದೆ. ಉತ್ತರಾಧಿಗಳು ತೆರಬೇಕಾಗಿರುವ ತೆರಿಗೆಯನ್ನು ಕೂಡಿಸುವುದು ಮಾತ್ರ ಕೇಂದ್ರ ಸರಕಾರ ಹೊರತು ಅದನ್ನೆಲ್ಲ ಪ್ರಾಂತಿಕ ಸರಕಾರಗಳಿಗೇ ತೆರಬೇಕಾಗಿದೆ. ಆಮದುಗಳ ಮೇಲಣ ಸುಂಕವನ್ನು ಇಳಿಸುವ ಪ್ರಯತ್ನಗಳು ಇನ್ನು ಸಾಗಬೇಕಾಗಿವೆ; ಇದರಿಂದ ಗಿರಾಕಿಗಳಲ್ಲಿ ಬಡವರಿಗೆ ಸ್ವಲ್ಪ ಉಳಿತಾಯವಾಗುವುದು.

ಪ್ರಾಂತಗಳಿಗೆ ಇರುವ ಮುಖ್ಯ ಎರಡು ಆಯಗಳೆಂದರೆ, ಅಬಕಾರೀ ಮತ್ತು ತೀರ್ವೆ. ಸಣ್ಣ ಪಟ್ಟೆದಾರರ ಮೇಲೆ ತೀರ್ವೆಯ ಭಾರ ಬಹಳವಾಗಿದೆ. ಜಮೀನ್ದಾರೀ ಜಮೀನುಗಳಲ್ಲಿಂದ ಸರಕಾರಕ್ಕೆ ಸಾಕಷ್ಟು ದಾವಾಶಯದಲ್ಲಿ ತೀರ್ವೆ ದೊರೆಯುತ್ತಿಲ್ಲ. ಅಬಕಾರೀ ಇಲಾಖೆಯು ಕೂಡಿಸುವ ಸುಂಕವು ಧಾರಾಳವಾಗಿ ಶ್ರಮಜೀವಿಗಳ ತರಗತಿಯವರಿಂದಲೇ ಕೂಡಿಸಲಾಗುತ್ತದೆ. ಯಾವುದೊಂದು ತೆರಿಗೆಯು ಸರ್ವಸಮಾನವಾಗಿ, ಕೊಡಬಲ್ಲವರ ಯೋಗ್ಯತೆಯನ್ನನುಸರಿಸಿಯೇ ಹಂಚಿಬೀಳಬೇಕಾಗಿದೆ. ಸೇಲಂನಲ್ಲಿರುವ ೨೫ ಲಕ್ಷ ಜನರಲ್ಲಿ ಎರಡೇ ಲಕ್ಷ ಜನರು ಮಾತ್ರ ಮದ್ಯ ಸುಂಕವನ್ನು ತೆರುತಿದ್ದರು. ಮದ್ಯಪಾನದಿಂದ ಪ್ರಾಂತಿಕ ಸರಕಾರವು ಕೂಡಿಸುತಿದ್ದ ನಾಲ್ಕು ಕೋಟಿ ರೂಪಾಯಿಗಳಲ್ಲಿ ಇದೇ ರೀತಿ ಒಟ್ಟು ಜನ ಸಂಖ್ಯೆ ೫ ಕೋಟಿಯಲ್ಲಿ ಐದು ಲಕ್ಷ ಜನರೇ ಮಾತ್ರ ತೆತ್ತುಬರುತ್ತಿರುವರೆಂದೂಹಿಸಬಹುದು.

ನೈತಿಕ ವಿಚಾರದಿಂದ ಮಾತ್ರವೇ ನಮ್ಮ ಮಂತ್ರಿಗಳು ಮದ್ಯಪಾನ ನಿವಾರಣೆಯನ್ನು ಮೆಲ್ಲಮೆಲ್ಲನೆ ಮುಂದರಿಸಲು ತೊಡಗಿಲ್ಲ. ತೆರಿಗೆಗಳ ಸಮಾನವಾದ ಹಂಚೋಣಕ್ಕೆ ಅನುಸರಿಸಲು ಇದೊಂದು ಉಪಾಯ ಮಾತ್ರ. ಮದ್ಯಪಾನ ನಿವಾರಣೆಯೊಂದು ಹುಚ್ಚು ಎಂದು ಆಕ್ಷೇಪಿಸಿ ಅಪಹಾಸ್ಯಮಾಡುತ್ತಿರುವವರು ಸಹ ಬಡಕಾರ್ಮಿಕಷ್ಟ ಮಾಡುವ ತರಗತಿಯವರೇ ಬಹಳವಾಗಿ ಇದುವರೆಗೆ ತೆತ್ತು ಬರುತ್ತಿದ್ದ ಈ ಮದ್ಯಪಾನದ ಸುಂಕವನ್ನು ಇನ್ನು ಇತರ ಸಮಾನವಾಗಿ ಹಂಚಲಾಗುವ ವಿಧಾನದಿಂದ ಸರ್ವರೂ ಹೊರಬೇಕಾಗುವ ವ್ಯವಸ್ಥೆಗೆ ಅಸ್ಪದವಿದೆ ಎಂದು ಹೇಳಲಾಗುವದಿಲ್ಲ.

ಇಂತಹ ಹೊಸ ತೆರಿಗೆಗಳಲ್ಲಿ ಸೇಲ್ಸ್ ಟೇಕ್ಸ್—ವಿಕ್ರಿತದ ತೆರಿಗೆ ಎಂಬುದಾಗಿದೆ. ಹೊಗೆ ಸೊಪ್ಪು, ಪೆಟ್ರೋಲ್, ವಿದ್ಯುಚ್ಛಕ್ತಿ ಮೊದಲಾದ ವ್ಯಾಪಾರದ ಮೇಲೆ ತೆರಿಗೆ ಹೊರಿಸಲು ಈಗ ಪ್ರಾಂತಿಕ ಸರಕಾರವು ನಿರ್ಧಾರಮಾಡಿರುವುದು. ಎಷ್ಟೋ ರಾಜ್ಯಗಳಲ್ಲಿ ವಿಕ್ರಿತದ ತೆರಿಗೆ ಒಂದು ಪ್ರಾಮುಖ್ಯ ತೆರಿಗೆಯಾಗಿದೆ. ಇದನ್ನು ಅಲ್ಲಲ್ಲಿನ ವಿಧ್ಯಮಾನಗಳಿಗೆ ಒಪ್ಪುವಂತೆ ಹಲವು ವಿಧಾನಗಳಿಂದ ವಿಧಿಸುವರು.

ಈ ತೆರಿಗೆಯ ಮುಖ್ಯ ಲಕ್ಷಣವೆಂದರೆ,-- ಅದರಿಂದಾಗುವ ಉತ್ಪನ್ನ ಬಡ ತರಗತಿಗಳಿಗೆ ಹೆಚ್ಚಿನ ಭಾರವಾಗದೆಯೂ, ಒಳ್ಳೆಯ ಮೊಬಲಗು ಸರಕಾರಕ್ಕೆ ಸಿಗುವುದು. ಒಂದು ವೇಳೆ ಬಡವರಿಗೂ ಕೊನೆಗೆ ಇದರ ಬಾಧೆ ತಪ್ಪದಿರದು ಎಂದರೂ, ಯಾವ ಮದ್ಯಪಾನದ ಸುಂಕವನ್ನು ಈ ಬಡವರೇ ಕೊಡುತ್ತಿದ್ದರೊ ಅದರ ಹಾವಳಿಗಿಂತ ಇದರ ಬಾಧೆ ಹೆಚ್ಚಾಗದು.

ಇದಲ್ಲದೆ, ಮದ್ಯಪಾನ ನಿವಾರಣೆಯು ಅಷ್ಟನ್ನೂ ಇನ್ನೂ ಬೇರೆ ಬೇರೆ ಜಿಲ್ಲೆಗಳಿಗೆ ಅನ್ವಯಿಸುವಂತೆಮಾಡುತ್ತಾರಾದ ಕಾರಣ, ಖಂಡಿತವಾಗಿಯೂ ಇಳಿಯುವ ಮದ್ಯದ ಸುಂಕದ ಸ್ಥಾನದಲ್ಲಿ ಈ ವಿಕ್ರಿತದ ತೆರಿಗೆಯು ಅಗತ್ಯವಾದ ಹಣವನ್ನು ಒದಗಿಸಿಕೊಡುವುದು.

ಮದ್ಯಕ್ಕಾಗಿ ವ್ಯಯವಾಗುತ್ತಿದ್ದ ಹಣದಲ್ಲಿ ಸೇಲಂನಲ್ಲಿ, ನೂರರಲ್ಲಿ ೫೦ ಆಹಾರಕ್ಕಾಗಿಯೂ, ೧೦ ವಸ್ತ್ರಾಭರಣಗಳಿಗಾಗಿಯೂ ಸಾಲ

ಹಿಂದೂಸ್ಥಾನದಲ್ಲಿ ನಾಜಿ ಪ್ರಚಾರಕ್ಕಾಗಿ ನಾಜಿ ಮುಖಂಡನ ಆಗಮನ

ಜರ್ಮನ ರೀಚ್ ಬೇಂಕಿನ ಅಧ್ಯಕ್ಷರಾಗಿದ್ದ ಡಾಕ್ಟರ ಶಾಟರನ್ನು ಹೆರ್ ಹಿಟ್ಲರನು ಡಿಸ್‌ಮಿಸ್ ಮಾಡಿದ್ದರ ಅಂತರಂಗದ ಉದ್ದೇಶವೇನಾಗಿದ್ದಿತೆಂಬುದರ ಕುರಿತು ಅನೇಕರು ಅನೇಕ ಅಭಿಪ್ರಾಯಗಳನ್ನು ಮಾಡಿಕೊಂಡಿದ್ದಾರೆ. ಅವುಗಳು ಏನಿದ್ದರೂ, ಬರುವ ಚಳಿಗಾಲದಲ್ಲಿ ಡಾಕ್ಟರ ಶಾಟರು ಹಿಂದುಸ್ಥಾನಕ್ಕೆ ಬರುವುದೇಕೆ ಎಂಬ ಕುರಿತು ಒಂದು ಖಂಡಿತ ಅಭಿಪ್ರಾಯವನ್ನು ಕೊಡಬಹುದಾಗಿದೆ.

ಪ್ರಚಾರಕ್ಕಾಗಿ ಬರುವರು

ಮಹಾತ್ಮಾಜಿಯವರು ಹಿಟ್ಲರನ ಧ್ಯೇಯೋದ್ದೇಶ ಮತ್ತು ಕಾರ್ಯ ಧೋರಣೆಗಳನ್ನು ಕಠಿನ ಮಾತುಗಳಿಂದ ಟೀಕಿಸಿ, ಹಿಟ್ಲರನು ಮಹಾಪಾತಕಿ ಎಂಬರ್ಥದಲ್ಲಿ ಅವನನ್ನು ಸಂಬೋಧಿಸಿದ್ದಾರೆ. ಹಿಂದುಸ್ಥಾನದಲ್ಲಿ ಮಹಾತ್ಮಾಜಿಯವರ ಮೇಲೆ ಜನರಿಗೆ ವಿಶೇಷ ಶ್ರದ್ಧೆ ಭಕ್ತಿ ವಿಶ್ವಾಸಗಳು ಇರುವುದರಿಂದ, ಅವರು ಹಿಟ್ಲರ ಮತ್ತು ಅವನ ನಾಝಿ ಪಂಥದ ಕುರಿತು ತಪ್ಪಭಿಪ್ರಾಯ ಮಾಡಿಕೊಳ್ಳುವದು ಸಹಜವಾಗಿದೆ. ಹಿಂದುಸ್ಥಾನದಲ್ಲಿ ಮಾತ್ರವಲ್ಲ, ಇತರ ದೇಶಗಳಲ್ಲಿ ಕೂಡ ಹಿಟ್ಲರನನ್ನೂ ಅವನ ನಾಝಿ ಅನುಯಾಯಿಗಳನ್ನೂ ದ್ವೇಷಿಸುವ ಅನೇಕರು ಇರುತ್ತಾರೆ. ಈ ದೇಶಗಳಲ್ಲಿ ಅವನ ವಿರುದ್ಧ ಪ್ರಚಾರವು ತುಂಬ ನಡೆಯುತ್ತಲಿದೆ. ಇದರಿಂದ ಲೋಕಮತವನ್ನು ತನಗೆ ಅನುಕೂಲ ಮಾಡಿಕೊಳ್ಳುವದಕ್ಕಾಗಿ ಡಾಕ್ಟರ ಶಾಟರನ್ನು ಹಿಟ್ಲರನು ತನ್ನ ಪ್ರಚಾರಕನನ್ನಾಗಿ ನೇಮಿಸುವನು. ಇದಕ್ಕಾಗಿಯೇ ಹಿಟ್ಲರನು ಅವರನ್ನು ಬೇಂಕ್ ಅಧ್ಯಕ್ಷ ಪದವಿಯಿಂದ ಬೇರೆ ಮಾಡಿದ್ದಾಗಿ ಹೇಳುತ್ತಾರೆ.

ಹಿಂದೂದೇಶದಲ್ಲಿ ಸಿದ್ಧತೆ

ಡಾಕ್ಟರ ಶಾಟರು ಹಿಂದೂದೇಶಕ್ಕೆ ಬಂದಾಗ ಅವರಿಗೆ ಎಲ್ಲಾ ಅನುಕೂಲತೆಗಳನ್ನು ಹಿಂದೂದೇಶದಲ್ಲಿ ಕೆಲಸ ಮಾಡುತ್ತಿರುವ ಒಂದು ಪ್ರಸಿದ್ಧ ವಿದೇಶಿ ಇನ್ಶೂರೆನ್ಸ್ ಕಂಪೆನಿಯು ಒದಗಿಸಿ ಕೊಡುವುದಾಗಿಯೂ, ಅದಕ್ಕಾಗಿ ಅದು ನಿವಾರಣೆ ಮತ್ತು ಸಾಮಗ್ರಿಗಳಿಗಾಗಿ ೨೫ರಂತೆಯೂ ವಿನಿಯೋಗವಾಗಿದೆ ಎಂದು ಲೆಕ್ಕ ಹೇಳುತ್ತಾರೆ. ಹೀಗೆ ಹೆಚ್ಚಿಗೆ ಹಣವನ್ನು ವ್ಯಾಪಾರಿಗಳು ಪಡೆದಿರುವದಾದಲ್ಲಿ, ಅವರು ಒಂದು ತೆರಿಗೆ ತೆರಬೇಕೆನ್ನುವುದರಲ್ಲಿ ಅನ್ಯಾಯ ತೋರುತ್ತಿಲ್ಲ.

ಅಂತೂ, ತೆರಿಗೆಯ ಭಾರ ಸರಿಯಾದ ದಾವಾಶಯದಲ್ಲಿ ಸಮಾನವಾಗಿ ಹಂಚಿ ಬರುವಂತಾಗುವುದು; ಇದೊಂದೇ ಕಾರಣದಿಂದಾದರೂ ಈ ವಿಕ್ರಿತದ ತೆರಿಗೆಯನ್ನು ಆಕ್ಷೇಪಿಸಬರುವುದಿಲ್ಲ.

ಈಗಿನಿಂದಲೇ ಎಲ್ಲಾ ವ್ಯವಸ್ಥೆಯನ್ನು ಮಾಡಲಾರಂಭಿಸಿದೆಯಾಗಿಯೂ ಬಲವಾದ ವದಂತಿ ಇದೆ.

ಡಾಕ್ಟರು ಶಾಟರು ಇನ್ನು ಕೆಲವೇ ದಿನಗಳಲ್ಲಿ ಜಿನೋವಾದಲ್ಲಿ ಹಡಗು ಹತ್ತಿ ಬೊಂಬಾಯಿಗೆ ಬಂದಿಳಿಯುವರು. ಅವರನ್ನು ಒಬ್ಬ ಪತ್ರಿಕಾ ಪ್ರತಿನಿಧಿಯು ಹೋಗಿ ಕಂಡಾಗ ಬರೇ ವಿನೋದಕ್ಕಾಗಿ ಹಿಂದೂದೇಶಕ್ಕೆ ಬರುತ್ತಿರುವೆನಾಗಿ ಅವರು ಹೇಳಿದರು. ಅವರು ಹಾಗೆ ಹೇಳಿದ್ದರೂ, ಹಿಟ್ಲರನು ಮತ್ತು ಅವನ ಜರ್ಮನ ಸರಕಾರದ ಅಧಿಕಾರಿಗಳು ಸೂಚಿಸಿದಂತೆ, ಹಿಂದೂಸ್ಥಾನದ ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರಕ್ಷೇತ್ರಗಳಲ್ಲಿ ನಾಝಿಗಳ ಪ್ರಭಾವವು ಬೆಳೆಯುವಂತೆ ಮಾಡುವುದಕ್ಕಾಗಿಯೇ ಹಿಂದೂಸ್ಥಾನದಲ್ಲಿರುವ ಜರ್ಮನ ವ್ಯಾಪಾರಿಗಳು ಡಾಕ್ಟರ ಶಾಟರ ಆಗಮನದ ಉಪಯೋಗ ಮಾಡಿಕೊಳ್ಳುವರೆಂದೂ, ಅದಕ್ಕಾಗಿ ರಹಸದಲ್ಲಿ ಎಲ್ಲ ವ್ಯವಸ್ಥೆ—ಇದಕ್ಕೆ ಮೊದಲೇ ಆಗಿರುವುದೆಂದೂ ಲಂಡನಿನಿಂದ ಒಂದು ವಾರ್ತೆ ಬಂದಿದೆ. ಇದು ನಿಜವಾಗಿರಲೂ ಬಹುದು.

ಹೀಗಾದರೆ....?

ಹೀಗಾದರೆ—ಪರಿಣಾಮವೇನೆಂದು ಕೇಳಬಹುದು. ಸಧ್ಯದಲ್ಲಿಯೇ ಇಲ್ಲಿ ನಾಝಿ ತತ್ವಗಳ ಪ್ರಚಾರವು ವ್ಯವಸ್ಥಿತ ರೂಪದಿಂದ ನಡೆಯಲಾರಂಭವಾಗುವುದು. ಈ ಮೊದಲೇ ನಮ್ಮ ದೇಶದಲಿ ಗಾಂಧೀವಾದ, ಸಮಾಜ ವಾದ, ಕಮ್ಯೂನಿಜಮ್ ಎಂದು ಹಲವು ಬಗೆಯ ವಾದಗಳಿವೆ. ಇವುಗಳ ಜತೆಗೆ ಹಿಟ್ಲರವಾದ, ನಾಝಿವಾದ, ಫೆಸಿಜಮ್ ಮೊದಲಾದ ಇನ್ನೂ ಕೆಲವು ವಾದಗಳು ಸೇರಿಕೊಳ್ಳುವುವು. ಇವುಗಳ ಧ್ಯೇಯಾದರ್ಶಗಳಲ್ಲಿ ಒಂದನ್ನೊಂದು ಹೋಲುವ ಹೊಂದಾಣಿಕೆ ಏನೂ ಇರುವುದಿಲ್ಲ. ಆದುದರಿಂದ ಈ ಹಲವಾರು ವಾದಗಳ ಪ್ರಚಾರವಾದಂತೆ ನಮ್ಮ ದೇಶವು ಪರಸ್ಪರ ಸಂಘರ್ಷ ಮತ್ತು ಹೋರಾಟದ ರಂಗಭೂಮಿಯಾಗುವುದಲ್ಲದೆ ಬೇರೇನಿಲ್ಲ. ಯಾವ ವಾದದ ಒಲವಿನಲ್ಲಿ ಸೇರಬೇಕಾದರೂ ಜನರು ತಮ್ಮ ವಿದೇಶ—ವಿಚಾರದ ಒರೆಗಲ್ಲಿಗೆ ಪ್ರತಿಯೊಂದು ವಾದವನ್ನು ತಿಕ್ಕಿ ಪರೀಕ್ಷಿಸಿ, ಯಾವದು ನಮ್ಮ ದೇಶದ ಕಾಲಪರಿಸ್ಥಿತಿಗೆ ಹಿತಕರವೆಂದು ಕಾಣುತ್ತದೋ ಅದನ್ನೇ ಸ್ವೀಕರಿಸಬೇಕು. ಅಂಧಾನುಕರಣದಿಂದ ಪ್ರಯೋಜನವಿಲ್ಲ. ಸಧ್ಯ, ನಮಗೆ ಗಾಂಧಿವಾದವೇ ಸಾಕೆನ್ನಿಸುತ್ತದೆ.



ಹಿಮಗಿರಿಯ ಮೇಲೆ

'ಫ್ರೆಂಚ್' ಸೈನ್ಯದ ಸಶಸ್ತ್ರದಳದವರು ಬ್ರಿಯಾನ್‌ಕೋನ್ ಬಳಿಯಲ್ಲಿ ಜನರಲ್ ಘಟ್ಟವನ್ನು ಹತ್ತುವ ಸಂದರ್ಭದಲ್ಲಿ ಭಾಗವಹಿಸುತ್ತಿರುವುದು.

ಮೇಮಲಿನಲ್ಲಿ ಪುನಃ ಅದೇ ಅಮಾನುಷಿಕ ಅತ್ಯಾಚಾರ.

ಮೇಮಲ ಪ್ರಾಂತ್ಯವನ್ನು ಹಿಟ್ಲರನು ಜರ್ಮನಿಗೆ ಸೇರಿಸಿಕೊಂಡ ಹತ್ತಾರು ದಿನಗಳಿಂದ ಅಲ್ಲಿ ನಾಜಿಗಳು ನಾಜಿಗಳಲ್ಲದರಿಗೆ ವಿಪರೀತ ಪೀಡೆಯನ್ನು ಕೊಡಲಾರಂಭಿಸಿಯವರು. ಅನೇಕ ಮಂದಿ ಲಿಥುವೇನಿಯಾ ಜನರನ್ನು ನಾಜಿಗಳು ಕೈದುಮಾಡಿದ್ದಾರೆ. ಅವರಿಂದ ಹಣಸುಲಿಗೆಯು ತುಂಬಾ ಪ್ರಯತ್ನಗಳಾಗಿವೆ. ಹೀಗಾಗಿರುವದು ಆ ಎರಡು ದೇಶಗಳಿಗೆ ಆದ ಒಪ್ಪಂದಕ್ಕೆ ವಿರೋಧವಾಗಿರುವದೆಂಬುದನ್ನು ಲಿಥುವೇನಿಯ ಸರಕಾರವು ಜರ್ಮನಿಗೆ ತಿಳಿಸಿದೆ. ಆದರೆ ಪರಿಸ್ಥಿತಿಯು ಸುಧಾರಿಸುವ ಲಕ್ಷಣಗಳು ಕಂಡುಬರುವದಿಲ್ಲ. ಎಲ್ಲೆಲ್ಲಿ ಹಿಟ್ಲರನ ಆಕ್ರಮಣಗಳಾಗುತ್ತ ನಡೆದಿವೆಯೋ, ಅಲ್ಲಲ್ಲಿನ ನಾಜಿಗಳಲ್ಲದವರೆಲ್ಲರೂ ನರಕಯಾತನೆಗಳನ್ನು ಅನುಭವಿಸಬೇಕಾಗಿ ಬಂದಿದೆ. ಅವರ ಪಾಲಿಗೆ ಹಿಟ್ಲರನು ಸಾಕ್ಷಾತ್ ಯಮಸ್ವರೂಪನಾಗಿದ್ದಾನೆ!

ಹಳ್ಳಿಯ ಹತ್ತು ಸಮಸ್ತರು

(೫ನೇ ಪುಟದಿಂದ)

ಇಷ್ಟರಲ್ಲಿ ನೆರೆಯಬೇಕಿತ್ತು. ಇಂದು ನಾಳೆ ನೆರೆದಾಳು ಎಂಬ ಭರವಸೆ ಅವಳಿಗಿದೆ. ಅಕ್ಕಣಿಯು ಹೆಣ್ಣು ಮಕ್ಕಳ ವಿಷಯದಲ್ಲಿ ಅಕ್ಕಿಷ್ಟಲ್ಲ. ಬಾರಕೂರಿಂದ ಮುಂಕಿ, ಮುಂಡಲೀಶ್ವರದ ತನಕ ಹುಡುಕಿದರೂ ನಮ್ಮ ಪುಟ್ಟರಂಗಿಯಂಥ ಹೆಣ್ಣು ತೋರಿಸಲಿ ನೋಡುವ' ಎಂಬ ಶಿಫಾರಸಿನ ಮಾತು ಅವಳ ಬಾಯಿಂದ ಬರುವುದುಂಟು ಸ್ವಾಭಾವಿಕವೇ—ಪುಟ್ಟರಂಗಿಯ ಪ್ರಾಯ, ಚೆಲುವೂ, ಎರಡು ಅವಳ ಪಾಲಿಗೆ ಬ್ಯಾಂಕಿನಲ್ಲಿ ಇರಿಸಿದ ಠೇವಣಿಯಂತೆ.

ಮಕ್ಕಳಿಗೆ ಪ್ರಾಯ ಬಂದರೆ, ಅಜ್ಜಿಯ ಮುಪ್ಪು ತಪ್ಪೀತೇನು? ಅದು ಇದ್ದುದುಂಟು. ಅವಳಿಗೆ ಮುಪ್ಪು ಬಂದರೂ ಅವಳ ಬಾಯಿಗೆ ಮುಪ್ಪು ಎಂದೂ ಬರಲಾರದು ಅವಳಿಗೆ ತಿಳಿಯದ ಸಂಗತಿಯಿಲ್ಲ, ಬೇಡದ ವಿಷಯವಿಲ್ಲ ಸಾಲದಕ್ಕೆ ಕೆಸುವನ್ನು ತಿಂದ ಬಾಯಿ ಬಾಯಿಗೆ ಬೀಗವೂ ಇಲ್ಲ.

ಅಕ್ಕಣಿಯ ಗಜೇಟಿಗೆ ಬೀಳದ ಸುದ್ದಿಯಿಲ್ಲ, ಬೆಳಗ್ಗೆ ಸಿಕ್ಕಿದ ಸುದ್ದಿ ಸಂಜೆಯೊಳಗೆ ಊರಿನ ಕಂಭಗಳಿಗೆಲ್ಲ ತಿಳಿದಿರುವಷ್ಟು ಚೆನ್ನಾಗಿ ಹರಡುವ ಯೋಗ್ಯತೆಯೂ ಇದೆ. 'ಏನು ಸುದ್ದಿ ಕೇಳಿದರೂ ಅವಳ ಬಾಯಿಂದಲೇ ಕೇಳಿದರೆ' ಚಂದ ಎನ್ನುವವರೂ ಇದ್ದಾರೆ ಉಪ್ಪುಕಾರ, ಒಗ್ಗರಣೆ ಸಮೇತವಾಗಿ ಸುದ್ದಿ ಸಾರುವ ಬಾಯಿ ಇರುವಾಗ ಯಾವ ರಸಿಕನು ಕಿವಿಮುಚ್ಚಿಕೊಳ್ಳಲಿಲ್ಲ ಅಲ್ಲದೆ ಈ ಹೊತ್ತು ಅನ್ಯರ ಒಲಿದರೆ ನಾಳೆ ಪುಟ್ಟರಂಗಿ ನಸೀಬಿಗೆ ಅಂಟಬಾರದೇಕೆ ಎಂಬ ಆಸೆಯೊಂದು ಇದ್ದೇ ಇದೆ

ಜನರು ಹಾಗೆ ಬಾಯುತೆರೆದಿರುವಾಗಲೇ—ಮಾಪುದಾದರ್ಥ ಸುದ್ದಿಯ ನಡುವೆ ವರ್ತಮಾನ ಪತ್ರಿಕೆಯವರು 'ಸ್ಥಳೀಯ ವಾರ್ತೆ' ಎಂದು ಹೇಳುವ ಹಾಗೆ 'ನಮ್ಮ ಪುಟ್ಟರಂಗಿಯ ವಿಚಾರ ತಪ್ಪದೆ ಬರುತ್ತದೆ. 'ನಮ್ಮ ಪುಟ್ಟರಂಗಿಗೆ ಮೊನ್ನೆ ಕುದಿಯುವಂಥ ಜ್ವರ, ಮೈಮೇಲೆ ಬಟ್ಟೆ ಎಸೆದರೆ ಅರಳು ಅರಳು' 'ನಮ್ಮ ಪುಟ್ಟರಂಗಿಯನ್ನು ಉಡುಪಿಯಿಂದ ಕೇಳಿ ಬಂದಿದ್ದಾರೆ ಬಳ್ಳಾರ ಮನೆಯ ಹುಡುಗ, ಪ್ರಸ್ತದ ಖರ್ಚಿಗೆ ೩೦೦೦ ಕೊಡುತ್ತಾರಂತೆ ಆದರೆ ತಿಂದು ಬಿಟ್ಟಷ್ಟು ಆಸ್ತಿ ಇದೆ'—ನಿನ್ನೆ ಸಂಗೊಳ್ಳಿ ರಾಮಯ್ಯ ನಾಯ್ಕರು ನನಗೆ ಜನ ಕಳುಹಿಸಿದ್ದರು ನನ್ನ ವಿನಹ ಹೋಗಿ ಕೊಡದು—ಎಂದು '' ನನಗೇನು! ನಾನು ಈ ವರ್ಷ ಅವಸರದಿಂದ ಪ್ರಸ್ತ ಮಾಡುವ ಹಾಗಿಲ್ಲ ನಾವೂ—ಚಿಕ್ಕ ಮಗ ಮುಂದಿನ ವರ್ಷ ನೋಡುವ ಎಂದಿದ್ದಾನೆ. ಅಲ್ಲದೆ ಇನ್ನೂ ನಮ್ಮ ಕಷ್ಟ ನೋವು ಮೊದಲಿನ ಹಾಗೆ 'ಕಾಯಂಕುಳು ವಾರು' ಎಂದು ನಂಬುವ ಹಾಗಿಲ್ಲ, ಎಲ್ಲರೂ ಆಸೆ ತೋರಿಸಬಹುದು ನಾಳೆ 'ಹತ್ತು ಜನರ ಬಾಯ, ಹಾದಿಯ ಮೇಲೆ ಬಿದ್ದ ನಾಯಿ' ಎನ್ನುವ ಹಾಗಾದರೆ . . . ಬಸ್ರೂರು ಸೀರೆಚೆ ನೋಡಿ ಊಟಕ್ಕೆ ಅಕ್ಕಿಲ್ಲ, ಕೇಳಲಿಕ್ಕೆ ಜನವಿಲ್ಲ —ಇದೇ ರೀತಿಯಲ್ಲಿ ಮಾತು ಹೊರಡುತ್ತಲೇ ಇರುವುದು ಅಸೆ ಕೆಲವರಲ್ಲಿ ಧ್ವಂಸವಾದರೂ, ನಾಳೆಗೆ ಮೊಮ್ಮಗಳ ಮನಸ್ಸು ಒಲಿಸೀತು ಎಂದು ನಂಬಿಗೆಯಿಂದ ಇರತಕ್ಕ ಅವಳ ಮನೆಯ ಜಗುಲಿಯ ಮುಂದೆ ಸುತ್ತುತ್ತಿರುವವರೂ ಇದ್ದಾರೆ

ಒಂದು ವರ್ಷ ಕಳೆಯಿತು. ಯುಗಾದಿ ಬಂದಿತು. ಮಗಳು ದೊಡ್ಡವಳಾಗಿದ್ದಾಳೆ ಎಂದು ಗಜೇಟಿನಲ್ಲಿ ಪಾಸೂ ಆಯಿತು ಆದರೆ ಈಚೆಗೆ ನಮ್ಮೂರಿನಲ್ಲಿ ಮೂರು ಬಲವಾದ ಪಾರ್ಟಿಗಳು ಆಗಿದ್ದುವೆ 'ಮೂರಲ್ಲ—ಆರು' ಎಂದ ಪರಮಯ್ಯ ಬೆರಳು ತೋರಿಸಿ ಹೇಳುತ್ತಾನೆ. ಯಾರ್‍ಯಾರು ಆಸ್ತಿದಾನಿ ಅವರಿಗೆ ಸಿದ್ಧರಾಗಿದ್ದಾರೆ ಎಂಬುದು ಅವನಿಗೆ ತಿಳಿದಿದೆ

ಪುಟ್ಟರಂಗಿಯೋ—ಬರಹಗಾರ್ತಿ ನಮ್ಮೂರಿನ ಎಲಿಮೆಂಟರಿ ಶಾಲೆ ಮಗುಚಿ ಬಂದವಳು ಬರುವ ಮೊದಲೇ ಭಾರಿ ಕಕೆಯೊಂದಾಯಿತು ಅವಳಿಗೆ ಬರಹ ಬರುತ್ತೆ ಎಂಬ ದಾಖಲೆಯೂ ಎಂದಳು. . . . ಹದಿಮಾರಿತು, ಅಕ್ಕಣಿಗೆ ಕಳುಬಂದಿತು.

ಇಷ್ಟು ನಿಜ ಈ ಘಟನೆಯಾಗಿ ಒಂದು ವರ್ಷ ಕಳೆದರೂ ಪುಟ್ಟರಂಗಿ ಬಾಯಿ ಬಗಲಿಲ್ಲ ಗಂಗೊಳ್ಳಿಯವರು ನಮ್ಮ ಊರಿಗೆ ಬಂದು 'ಹೈಸು ಮಿಲ್' ಇಡುತ್ತಾರೆಂಬ ಸುದ್ದಿ.

ಅಂತು ಇತ್ತೀಚೆಗೆ ಪಣ್ಣಾಮಯ್ಯರ ಮೇಲೆ ಹಲವರು ಕಣ್ಣಿಟ್ಟಿದ್ದಾರೆ. ಇದಕ್ಕೆ ''ಪುಟ್ಟರಂಗಿಯೂ ಅವಳ ಅಜ್ಜಿಯೂ ಹೇತು'' ಎನ್ನುವವರಿದ್ದಾರೆ

ಬೋರ್ಡ ಮೆಂಬರರ ಶಿಕ್ಷಣಕ್ಕೆ ಶಾಲೆಯೊಂದಾಗಬೇಕು

ತರಬೇತಿ ಶಿಕ್ಷಣ ಪಡೆದವರೇ ಬೋರ್ಡುಗಳ ಸದಸ್ಯರಾಗಬೇಕು

ಪ್ರೊಫೆಸರರೊಬ್ಬರ ಉಪಯುಕ್ತ ಸಲಹೆ

ಪಂಚಾಯತ ಬೋರ್ಡ, ಮುನ್ಸಿಪಾಲಿಟಿ, ಜಿಲ್ಲಾ ಬೋರ್ಡ ಮೊದಲಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಸದಸ್ಯರಾಗಿ ಹೋಗುವ ಜನರು ಸಾಮಾನ್ಯತಃ ನಾಗರಿಕ ಧರ್ಮ ಅಥವಾ ನಾಗರಿಕ ಜವಾಬ್ದಾರಿ ಇಲ್ಲದವರಾಗಿರುತ್ತಾರೆ. ಅವರು ಕೇವಲ ತಮ್ಮ ಪ್ರತಿಷ್ಠೆಯ ರಕ್ಷಣೆಗಾಗಿ ಈ ಸಂಸ್ಥೆಗಳ ಚುನಾವಣೆಗಳನ್ನು ಆಶ್ರಯಿಸುತ್ತಾರೆ ಆದ್ದರಿಂದ ಈ ಸಂಸ್ಥೆಗಳೊಳಗೆ ಪಾರ್ಟಿಪಕ್ಷ ಭೇದಗಳು ಎದ್ದು ಯಾವ ಕಾರ್ಯನಿರ್ವಹಣೆಗಾಗಿ ಸದಸ್ಯರು ಆರಿಸಲ್ಪಟ್ಟಿರುತ್ತಾರೋ ಅಂಥ ಕೆಲಸ ಕಾರ್ಯಗಳು ಆ ಸದಸ್ಯರಿಂದ ಆಗುವುದಿಲ್ಲ.

ಅಯೋಗ್ಯತೆ ಅರಿಕೆಯು ನಷ್ಟ

ಸ್ಥಾನಿಕಸ್ವರಾಜ್ಯ ಸಂಸ್ಥೆಗಳಿಗೆ ಅಯೋಗ್ಯರನ್ನು ಆರಿಸಿ ಕಳುಹಿಸುವುದರಿಂದ ಎರಡು ರೀತಿಯಿಂದ ನಷ್ಟವಾಗುತ್ತದೆ ಮೊದಲನೆಯದಾಗಿ ಅವರನ್ನು ಆರಿಸಿದ ಮತದಾರರಿಂದ ಯಾವ ಹಿತವನ್ನೂ ಅವರು ಸಾಧಿಸಲಾರದವರಾಗುತ್ತಾರೆ ಯೋಗ್ಯರು ಈ ಸಂಸ್ಥೆಗಳನ್ನು ಸೇರಿಕೊಂಡರೆ ಈಗ ಅತ್ಯಗತ್ಯವೆನಿಸುವ ಹಳ್ಳಿಗಳ ಉದ್ಧಾರವು ಬೇಕಾದಷ್ಟು ಬಗೆಹರಿದ ಆದರೆ ಈ ಸದಸ್ಯರಿಂದ ಎಷ್ಟರ ಮಟ್ಟಿಗೆ ಹಳ್ಳಿಗಳ ಉದ್ಧಾರವಾಗಿದೆ? ಇವರಿಗೆ ಒಂದು ಮುಂಬರಿಕೆ ದೊರಕಿತೆಂದರೆ ಇವರು ಜನತೆಯಿಂದ ತಮ್ಮನ್ನು ಬೇರೆ ಮಾಡಿ ಉಳ್ಳವರು ಎಂದೆ ತಿಳಿದುಕೊಳ್ಳುತ್ತಾರೆ ಸ್ವಾರ್ಥಿಗಳಾಗಿ ಜನತೆಯ ಸಂಪರ್ಕದಲ್ಲಿದ್ದು, ಕೇವಲ ಅವರ ಸೇವಾಭಾವದಿಂದ ಪ್ರೇರಿತರಾದ್ದಲ್ಲದೆ ಹಳ್ಳಿಗಳ ಉದ್ಧಾರವು ಸಾಧ್ಯವಲ್ಲ

ನಾಚಿಕೆಗೇಡು

ಈಗ ಸ್ಥಾನಿಕಸ್ವರಾಜ್ಯ ಸಂಸ್ಥೆಗಳ ಒಳಹೊಕ್ಕು ನೋಡಿದರೆ ಒಬ್ಬನು ಒಕ್ಕಟ್ಟಿನಿಂದ ತಲೆ ತಗ್ಗಿಸಬೇಕಾಗುತ್ತದೆ ಅವನ್ನು ನೋಡುವಾಗ ದೇಶೀಯರು ಸ್ವರಾಜ್ಯಕ್ಕೆ ಸರ್ವಥಾ ಅಯೋಗ್ಯರು ಎಂಬಂತೆ ಕಾಣುತ್ತದೆ ದ್ವೇಷ, ಅಸೂಯೆ, ಒಳಜಗಳ, ಸ್ಪರ್ಧೆ, ಸಂಕುಚಿತತನಗಳ ರಂಗಭೂಮಿಯೇ ಈ ಸಂಸ್ಥೆಗಳೇ ಎಂಬ ಹಾಗೆ ಅನ್ನಿಸುತ್ತದೆ ಇದ ಸಂಪೂರ್ಣ ಸ್ವರಾಜ್ಯಕ್ಕಾಗಿ ಪ್ರಯತ್ನಿಸುತ್ತಿರುವುದು ನಮಗೆ ನಾಚಿಕೆಗೇಡಾಗಿರುವುದು

ಧರ್ಮವನ್ನು ಕಲಿಸುವ ಶಾಲೆ

ನಮ್ಮ ದೇಶದಲ್ಲಿ ಈ ಸಂಸ್ಥೆಗಳು ಎಲ್ಲಿಯೂ ಯಶಸ್ವಿಯಾಗಿಲ್ಲ ಅಂದರೆ, ಈ ಸಂಸ್ಥೆಗಳ ನಾಗರಿಕ ತತ್ವದಲ್ಲಿ ಲೋಪದೋಷಗಳಿರುವುದರಿಂದ ಹೀಗಾಗಿದೆ. ಯಾರೂ ತಿಳಿಯಬೇಕು ಒಂದು ಸಂಸ್ಥೆಯ ಧ್ಯೇಯಧೋರಣೆ ಮತ್ತು ಕಾರ್ಯಕ್ರಮಗಳು ಎಷ್ಟು ಉತ್ತಮ ಹಾಗೂ ಉತ್ಕೃಷ್ಟವಾಗಿದ್ದರೂ, ಅದರ ಸದಸ್ಯರು ಅದರ ಧ್ಯೇಯ ಧೋರಣೆ ಕಾರ್ಯಕ್ರಮವನ್ನು ಹೊಂದಿಕೊಂಡಿರುವುದಕ್ಕಿಂತ ಹೆಚ್ಚಾಗಿ ಆ ಸಂಸ್ಥೆಯ ಕೆಲಸಗಳಿಗೆ ತಕ್ಕ ರಂಗವನ್ನು ಕೊಡುತ್ತದೆ. ಆದ್ದರಿಂದ ಸ್ಥಾನಿಕಸ್ವರಾಜ್ಯ ಸಂಸ್ಥೆಗಳಿಗೆ ಯೋಗ್ಯರನ್ನೇ ಆರಿಸಿದರೆ ಅವು ಉತ್ತಮಗೊಳ್ಳುತ್ತವೆ. ಜನತೆಯು ಹಿತಕಾರಿಣಿ ಸಂಸ್ಥೆಗಳೆಂದು ಅನ್ನಿಸುವುದಿಲ್ಲವೆ ಆದಕ್ಕೋಸ್ಕರ, ಆ ಸಂಸ್ಥೆಗಳಿಗೆ ಆರಿಸಿ ಬರುವ ಸದಸ್ಯರು ನಾಗರಿಕ ಧರ್ಮ ಮತ್ತು ನಾಗರಿಕ ಜವಾಬ್ದಾರಿಯನ್ನು ತಿಳಿದವರಾಗಿರಬೇಕು ಅಂಥ ಒಳ್ಳೆಯವರನ್ನು ಕೊಡಲಿಕ್ಕೆ ನಮ್ಮಲ್ಲಿ ತಾಲೀಮುಶಾಲೆ ಬೇಕು ಎಂದು ಪ್ರೊಫೆಸರ ಶ್ರೀನಿವಾಸ ಶರ್ಮ ಎಂಬವರು 'ವಿದ್ಯಾರ್ಥಿ' ಇಂಡಿಯಾ ದಲ್ಲಿ ಬರೆದಿದ್ದಾರೆ

ಶಾಲೆಗಳ ಅವಶ್ಯತೆ

ನಾಗರಿಕ ಧರ್ಮವನ್ನು ಕಲಿಸುವ ಶಾಲೆಗಳ ಈ ಅವಶ್ಯಕತೆ ಸಂಪೂರ್ಣವಾಗಿ ಸರಕಾರದ ಕೈಯಲ್ಲೇ ಇರಬೇಕೆಂದು ಶ್ರೀ ಶರ್ಮರ ಅಭಿಪ್ರಾಯವಾಗಿದೆ ಇಲ್ಲಿ ಕಲಿತವರಿದ್ದು ಚೆನ್ನಾಗಿ ವಿಷಯವನ್ನ ತಿಳಿದುಕೊಂಡ ಜನರೇ ಸ್ಥಾನಿಕಸ್ವರಾಜ್ಯಸಂಸ್ಥೆಗಳಿಗೆ ಆರಿಸಿಬರುವಂತೆ ಮಾಡುವುದರಿಂದ ಈ ಸಂಸ್ಥೆಗಳ ಮೂಲಕ ಜನಸೇವೆ ದೇಶಸೇವೆಗಳು ಸುಲಭವಾಗುವವು

ರಾಜಕೋಟೆದ ವಿದ್ಯಮಾನಗಳ ಇತ್ಯರ್ಥ

ಫೆಡರಲ ಚೀಫ್ ಜಸ್ಟೀಸರಿಗೆ ಈ ವಿದ್ಯಮಾನಗಳನ್ನು ಸರಕಾರ ಒಪ್ಪಿಸಿದ್ದು ದರಬಾರ ವಿರೋಧಪಕ್ಷದ ಹೇಳಿಕೆಗಳ ಮೂಲಕ ವಿವರಿಸಿರುವರು.

ಎರಡು ಪ್ರಶ್ನೆಗಳು ಉಂಟಾಗಿವೆ—

೧ ಠಾಕೂರ ಸಾಹೇಬರು ಕೊಟ್ಟ ಮಾತು ಉಂಟಾಗಿದೆಯೆ?

೨ ಡಿಸೆಂಬರು ೨೬ರಲ್ಲಿ ಪ್ರಕಟಿಸಿದಂತೆ ಸುಧಾರಣಾ ಕಮಿಟಿಗೆ ಇರುವ ೧೦ ಮಂದಿಯಲ್ಲಿ ಏಳು ಮಂದಿಯನ್ನು ನೇಮಿಸುವ ಅಧಿಕಾರವನ್ನು ಪಟೇಲರಿಗೆ ಠಾಕೂರರು ಸಂಪೂರ್ಣ ಒಪ್ಪಿಸಿದರೇ!

ಇದಲ್ಲದೆ, ಕಮಿಟಿಯು ನಿರ್ಧಾರವಾದ ನಿರ್ಣಯವು ಸಂಪೂರ್ಣವಾಗಿ ಠಾಕೂರರಿಂದ ಅಂಗೀಕೃತವಾಗಬೇಕೇ, ನೇಮಿಸುವ ಹತ್ತು ಮೆಂಬರರೊಳಗೆ ಒಬ್ಬನೇ ಮಾತ್ರ, ಇತರ ಹೊರಗಿನವರಲ್ಲದೆ, ಕಮಿಟಿಯ ಅಧ್ಯಕ್ಷನಾಗಬೇಕೇ?—ಎಂಬುದನ್ನೂ ಜಡ್ಜರು ನಿರ್ಧರಿಸಬೇಕಾಗಿದೆ.

ಶ್ರೀ ಜಿನ್ನಾರವರು ದರಬಾರ ಮೀರವಾಲಾರ ಪತ್ರಗಳನ್ನು ನೋಡಿ ಅಭಿಪ್ರಾಯ ಸೂಚಿಸಿದರಂತೆ ಹೊರತು ಮಹಾಲಕು ವಹಿಸುವುದಿಲ್ಲವಂತೆ

ಈ ವಾರದಲ್ಲಿ ಇತ್ಯರ್ಥ ಹೊರಬೀಳಲಿದೆ.

ಉತ್ತಮ ಆರೋಗ್ಯವು

ಹಿತವಾಯ ಟಿನ್ನುಗಳಲ್ಲಿ

ಉತ್ತಮ ಪೂ ರ್ದವೂ ಆವ ಆರೋಗ್ಯಕ್ಕಾಗಿ ಅಂತರೇಂದ್ರಿಯ ಗಳನ್ನು ಶುದ್ಧಿಗೊಳಿಸಿ ಮಾಡಬೇಕಾಗುವದು ಒಂದು. ಗಾಡಿ ಎಂಡ್ರೂಸ್ ಲಿವರ ಸಾಲ್ಟನ್ನು ತಾವು ಕುಡಿದರೆ—ಅದೇ ನ ದಕ್ಷಿತವಾದ ಹಾ.

ಎಂಡ್ರೂಸ್ ಈಗ ಮಿತವ್ಯಯ ಟಿನ್ನುಗಳಲ್ಲಿ ಸಿಗುತ್ತದೆ (ದೊ. ಟಿನ್ನು ಎಲ್ಲಾ 1-4-0 ಸಣ್ಣ ಟಿನ್ನು ಆಣೆ 11) ಈ ಹೊಸ ಟಿನ್ನು ... ಅಂತರೇಂದ್ರಿಯಗಳನ್ನು ಶುದ್ಧಗೊಳಿಸುತ್ತದೆ ... ದಿವಸ ಇಡೀ ಲೋಕದಲ್ಲಿ ಅಧಿಕ ಸಿಗುತ್ತದೆ

ಎಂಡ್ರೂಸ್ ಮಿತವ್ಯಯ ಟಿನ್ನುಗಳಲ್ಲಿ ಉತ್ತಮ, ಆದರೆ ಇಷ್ಟಪಡುವವರಿಗೆ ಬಾಟ್ಲಿಗಳಲ್ಲಿ ದೊರೆಯುತ್ತದೆ.

ಹೈದ್ರಾಬಾದ ಸತ್ಯಾಗ್ರಹ ಸಮಾಚಾರ

ಸಾವಿರ ಸತ್ಯಾಗ್ರಹಿಗಳ ರವಾನೆ-ಬಾಬು ರಾಜೇಂದ್ರ ಪ್ರಸಾದರ ಸಮ್ಮತಿ

ಶ್ರೀ ಗುಪ್ತರ ತ್ಯಾಗಪತ್ರ—ಜೈಲುಗಳಲ್ಲಿ ಅನಶನ ವ್ರತ

ತ್ರಿಪುರಿ ಕಾಂಗ್ರೆಸಿನ ಸ್ವಾಗತ ಸಮಿತಿಯ ಒಬ್ಬ ಕಾರ್ಯದರ್ಶಿಯರೂ ಮಧ್ಯಪ್ರಾಂತದ ಎಸೆಂಬ್ಲಿಯ ಸ್ಪೀಕರರೂ ಆಗಿರುವ ಶ್ರೀ ಘನಶಾಮಸಿಂಹ ಗುಪ್ತರು ಹೈದರಾಬಾದ ಸತ್ಯಾಗ್ರಹದ ಮುಂದಾಳುತನವನ್ನು ತೆಗೆದುಕೊಳ್ಳುವ ದಕ್ಷೋಸ್ಮರ ತಮ್ಮ ಕಾರ್ಯದರ್ಶಿ ಮತ್ತು ಅಧ್ಯಕ್ಷಪದವಿಗಳಿಗೆ ರಾಜಿನಾಮೆಯನ್ನು ಕಳುಹಿಸಿ ಕೊಟ್ಟಿರುವರಾಗಿ ವಿಶ್ವಸನೀಯ ಸೂತ್ರಗಳಿಂದ ತಿಳಿದುಬರುತ್ತದೆ.

ಹೊರ ಪ್ರಾಂತೀಯರ ಆಂಧೋಲನವಲ್ಲ.

ಹೈದರಾಬಾದದಲ್ಲಿ ಆರಂಭವಾಗಿರುವ ಸತ್ಯಾಗ್ರಹ ಆಂಧೋಲನವು ಹೈದರಾಬಾದದ ನಿಷ್ಪಕ್ಷಪಾತ ಆಡಳಿತಕ್ಕೆ ಕಲಂಕವನ್ನು ಹಚ್ಚಬೇಕೆಂಬ ಉದ್ದೇಶದಿಂದ ಸಂಸ್ಥಾನದ ಹೊರಗಿನ ಕೆಲವು ಧ್ವೇಷಿಗರು ಆರಂಭಿಸಿದ್ದೆಂದು ಸತ್ಯಾಗ್ರಹದ ವಿರುದ್ಧ ಅಪಪ್ರಚಾರವು ನಡೆದಿದೆ. ಆದರೆ ಇದು ಸತ್ಯವಾತಾಗಿರುವದಿಲ್ಲ ಈ ಚಳವಳದ ಸಂಬಂಧ ಇಷ್ಟರತನಕ ಎಷ್ಟು ಸತ್ಯಾಗ್ರಹಿಗಳು ಹೈದರಾಬಾದ ಜೈಲುಗಳನ್ನು ತುಂಬಿರುವರೋ ಅವರಲ್ಲಿ ನೇಕಡ ೯೫ರಷ್ಟು ಮಂದಿ ಹೈದರಾಬಾದದ ನಿಜಾಮರ ಪ್ರಜೆಗಳೇ ಆಗಿರುತ್ತಾರೆ!

ಪಠಾನರೊಬ್ಬರ ಪತ್ರ

ಸತ್ಯಾಗ್ರಹದ ತೃತೀಯ ಸರ್ವಾಧಿಕಾರಿ ಶ್ರೀ ಕುಶಾಲಚಂದ ಕುರ್ಸಂದರಿಗೆ ಗಡಿನಾಡಿನ ಅವರ ಒಬ್ಬ ಪಠಾನ ಮಿತ್ರರು ಒಂದು ಪತ್ರವನ್ನು ಬರೆಯುತ್ತಾ—'ತಾವು ನಮ್ಮ ಪ್ರಮುಖರಿರುತ್ತೀರಿ ನಿಮ್ಮ ಸತ್ಯಾಗ್ರಹ ಆಂಧೋಲನದಲ್ಲಿ ಸೇರಬೇಕೆಂಬ ಆಸೆ ನಮಗೂ ಆಗಿರುವದು - ನಿಮ್ಮೊಡನೆ ನಮ್ಮ ಸಂಪೂರ್ಣ ಸಹಾನುಭೂತಿಗಳಿವೆ ನಾವು ಯಾವಾಗ ಬರಬೇಕೋ ತಿಳಿಸಿರಿ; ಕುಟುಂಬ ಸಮೇತ ಬರುವೆವು ಪರಮಾತ್ಮನು ನಿಮ್ಮ ಬೆ ಒಲಿಕ್ಕಿದ್ದಾನೆ' ಎಂದಿರುವರು

ಮುಖಂಡರು ಹೊರಟರು

ಲಾಹೋರಿನ ರಾವೀ ನದಿಯ ದಂಡೆಯಲ್ಲಿ ಆಶ್ರಮ ಕಟ್ಟಿಕೊಂಡ ವೇದಗಳಿಗೆ ಭಾಷ್ಯಗಳನ್ನು ಬರೆಯುತ್ತಿರುವ ಶ್ರೀ ಪಂಡಿತ ಬ್ರಹ್ಮದತ್ತಜೀ ಜಿಜ್ಞಾಸು, ಶ್ರೀ ಪಂಡಿತ ಸಾತವಳೇಕರ ಶ್ರೀ ಪಂಡಿತ ಕಪಿಲದೇವ ಶಾಸ್ತ್ರಿ, ಮೊದಲಾದ ಪ್ರಸಿದ್ಧ ಹಿಂದೂಮುಖಂಡರು ಹೈದರಾಬಾದ ಸತ್ಯಾಗ್ರಹದಲ್ಲಿ ಭಾಗ ತೆಗೆದ ಕೊಳ್ಳಲು ಸಿದ್ಧರಾಗುತ್ತಿದ್ದಾರೆ ಶ್ರೀ ಜಗದ್ಗುರು ಶಂಕರಾಚಾರ್ಯ ಸ್ವಾಮಿ ನಿತ್ಯಾನಂದರವರು ಧಾರ್ಮಿಕ ಸ್ವಾತಂತ್ರ್ಯದ ಕುರಿತು ನಿಜಾಮರೊಡನೆ ಮಾತನಾಡಲು ಸ್ವತಃ ಹೊರಟಿದ್ದಾರೆ ನಿಜಾಮರು ತೃಪ್ತಿಕರವಾದ ವ್ಯವಸ್ಥೆಯನ್ನು ಮಾಡುವದಿಲ್ಲವೆಂದಾದರೆ ಶ್ರೀ ಸ್ವಾಮಿಯವರು ಸ್ವತಹ ಸತ್ಯಾಗ್ರಹ ಮಾಡುವದಲ್ಲದೆ ಅವರ ಶಿಷ್ಯರಾಗಿರುವ ಆರು ಲಕ್ಷ ಸಾಧು ಸನ್ಯಾಸಿಗಳೂ ಅವರ ಅನುಕರಣ ಮಾಡುವರು ಜಾತಿ ಸಂಪ್ರದಾಯ ಸಮ್ಮಂಧವಾದ ಭೇದಭಾವವನ್ನು ಬಿಟ್ಟು ಹಿಂದುಗಳೆಲ್ಲರೂ ಒಂದಾಗಿ ಸಂಘಟಿತರಾಗಬೇಕೆಂದೂ, ಸ್ವೇಚ್ಛೆಯಿಂದ ಹಿಂದೂಧರ್ಮಕ್ಕೆ ಬರಲಿಚ್ಛಿಸುವ ವಿಧರ್ಮಿಗಳನ್ನು ಶುದ್ಧಿಮಾಡಿತಗೆದುಕೊಂಡು ಅವರನ್ನು ಹಿಂದೂಸಮಾಜದಲ್ಲಿ ಸಮಾನ ಹಕ್ಕು ಅಧಿಕಾರ ಸ್ಥಾನಮಾನಗಳನ್ನು ಕೊಟ್ಟು ಗೌರವಿಸಬೇಕೆಂದೂ, ಶ್ರೀ ಸ್ವಾಮಿಯವರು ಧಾಯಸಪತ್ರವನ್ನು ಹೊರಡಿಸಿರುವರು ಶ್ರೀ ಆದಿ ಶಂಕರಾಚಾರ್ಯರಿಂದ ಕಟ್ಟಲ್ಪಟ್ಟ ಬದರಿ ಶಂಕರಾಚಾರ್ಯ ಮಠದ ಈಗಿನ ಅಧಿಕಾರಿಗಳು ಶ್ರೀ ನಿತ್ಯಾನಂದ ಸ್ವಾಮಿಯವರಾಗಿರುವದರಿಂದ, ಅವರು ಈ ಪ್ರಕಾರದ ಧಾಯಸವನ್ನು ಕೊಟ್ಟಿರುವದು ಹಿಂದೂಸಮಾಜದಲ್ಲಿ ನವಚೈತನ್ಯವನ್ನು ತುಂಬಿಸುವದು.

ಸತ್ಯಾಗ್ರಹವು ಯಾಕೆ ನಿಲ್ಲುವದಿಲ್ಲ?

ಪಂಜಾಬ ಸರಕಾರದ ಮಂತ್ರಿಗಳೂ ಪಂಜಾಬಿನ ಹಿಂದೂ ಮುಖಂಡರೂ ಆಗಿರುವ ರಾಜಾ ನರೇಂದ್ರನಾಥರು ಹೈದರಾಬಾದಿನ ಪ್ರಧಾನಮಂತ್ರಿಗಳಾದ ಸರ್ ಅಕ್ಬರ ಹೈದರಿಯವರಿಗೆ ಒಂದು ಪತ್ರವನ್ನು ಬರೆಯುತ್ತಾ ಸತ್ಯಾಗ್ರಹವು ಯಾಕೆ ನಿಂತಿರುವದಿಲ್ಲ ಎಂದು ಕೇಳಿರುವರು.

ಅವರು ಮತ್ತು ಡಾಕ್ಟರ ಗೋಕುಲ ಚಂದನಾರಂಗ, ರಾಯ ಬಹದೂರ ಬದ್ರೀದಾಸ ಮತ್ತು ದುರ್ಗಾದಾಸ ಇವರಿಂದ ಕೂಡಿದ ಒಂದು ಶಿಷ್ಟಮಂಡಳವು ಶ್ರೀ. ಹೈದರಿಯವರನ್ನು ಕಾಣಲ ಪೇಕ್ಷಿಸುತ್ತದೆಂದೂ, ಅವರು ಸಮಯವನ್ನು ನಿಶ್ಚಯಿಸಿ, ಉತ್ತರಕೊಡಬೇಕೆಂದೂ ರಾಜಾ ನರೇಂದ್ರನಾಥರು ಸರ್ ಹೈದರಿಯವರಿಗೆ ತಿಳಿಸಿದ್ದಾರೆ.

ಪ್ರಶಂಸನೀಯದಾನ

ಸತ್ಯಾಗ್ರಹದ ದ್ವಿತೀಯ ಸರ್ವಾಧಿಕಾರಿಗಳಾದ ಶ್ರೀ ಚಾಂದಕರಣಜೀ ಶಾರದಾರವರು ಜೈಲಿಗೆ ಹೋಗುವಂಥ ಕಾಲದಲ್ಲಿ ಒಂದು ಮೀಲುನಾಮೆಯನ್ನು ಬರೆದಿಟ್ಟು ತಮ್ಮ ಸ್ವಾರ್ಜಿತದ ೧೦,೦೦೦ ರೂಪಾಯಿಗಳನ್ನು ಸತ್ಯಾಗ್ರಹ ಆಂಧೋಲನಕ್ಕೆ ಕೊಡಬೇಕೆಂದು ಕುಟುಂಬಕ್ಕೆ ತಿಳಿಸಿದ್ದಾರೆ ಪೂರ್ವ ಆಫ್ರಿಕದ ನೈರೋಬಿಯ ಜನರು ಪ್ರತಿ ತಿಂಗಳು ೩೫೦ ಶಿಲ್ಲಿಂಗ ಕಳುಹಿಸಿ ಕೊಡುವ ಪ್ರತಿಜ್ಞೆ ತೆಗೆದುಕೊಂಡಿದ್ದಾರೆ, ಜಂಜಿಬಾರ, ದಾರುಲ್ ಇಸ್ಲಾಂ, ಕಂಪಾಲಾ, ಮೊಂಬಾಸಾ, ಕಿಂಸು ಮೊದಲಾದ ಕೇಂದ್ರಗಳಲ್ಲಿಯೂ ಹಣಸಂಗ್ರಹವಾಗಿರುವುದು. ಈ ಕಡೆಯಿಂದ ೩೭೦೦ ಶಿಲಿಂಗುಗಳಷ್ಟು ಈಗಾಗಲೇ ಕಳುಹಿಸಿರುವರು.

ಸರಕಾರದ ದಬ್ಬಾಳಿಕೆ.

ಸರಕಾರದ ದಬ್ಬಾಳಿಕೆಯ ಪ್ರಥಮ ಪ್ರಕಾರ ನಡೆದು ಇದೆ ಸತ್ಯಾಗ್ರಹಿಗಳ ಮೇಲೆ ಸರಕಾರದ ವಕ್ರ ದೃಷ್ಟಿ ಇರುವದು ಮಾತ್ರವಲ್ಲದೆ ಅವರ ಸಂಬಂಧಿಕರ ಮೇಲೂ ಸರಕಾರವು ದೃಷ್ಟಿಯನ್ನಿಟ್ಟಿದೆ ಸತ್ಯಾಗ್ರಹಿಗಳೊಡನೆ ಕುಟುಂಬ ಸಂಬಂಧವಿದ್ದ ೧೨೦ ೧೫೦ ಮಂದಿ ಸರಕಾರಿ ನೌಕರಿ ಕೆಲಸದಿಂದ ವಜಾಮಾಡಲ್ಪಟ್ಟಿರುವರು ಅವರನ್ನೆಲ್ಲಾ ನಾನಾ ಪ್ರಕಾರ ಪೀಡಿಸಿ ಭಯೋತ್ಪಾದನ ಮಾಡುತ್ತೆ ಸರಕಾರವು ಸಂಚಿಳ ಕೆಟ್ಟ ಗುಂಡಾಗ, ನೇಮಿಸಿ ಹೈದರಾಬಾದ ರಾಜ್ಯವು ಗುಂಡರ ರಾಜ್ಯವೇ ಆಗಿದೆ ಮುಸಲ್ಮಾನ ಗುಂಡರು ಹಿಂದೂಗಳ ಮೇಲೆ ಬಹಳ ಅತ್ಯಾಚಾರ ಮಾಡುತ್ತಿರುವರು. ನಿಜಾಮ ಕಾಲೇಜದ ಸಂಸ್ಕೃತ ಪ್ರೊಫೆಸರರಾಗಿದ್ದ ಪಂಡಿತ ಧಾರೇಶ್ವರರನ್ನು ಅವರು ಆರ ಮಿಸಿದರ ಶ್ರೀ ಧಾರೇಶ್ವರರ ಆರ್ಯಸಮಾಜದ ಒಬ್ಬ ಸಂತ ವಿದ್ವಾಂಸರಾಗಿರುವರೆಂಬುದೇ ಅವರ ದೋಷವಾಗಿದೆ. ಜೈಲುಗಳಲ್ಲಿ ಸತ್ಯಾಗ್ರಹಿಗಳೊಡನೆ ನಡಕೊಳ್ಳುವ ಕ್ರಮವು ಅಸಹನೀಯವಾಗಿದೆ ಗುಲ್ಬರ್ಗಾ ಜೈಲಿನಲ್ಲಿ ಸಾಕಷ್ಟು ಅನ್ನನೀರು ಕೂಡ ಸಿಕ್ಕಲಿಲ್ಲ, ಅದ್ದರಿಂದ ಅನೇಕರು ಅನಶನ ಮಾಡಿದ್ದಾರೆ ವಾರಂಗ ಜೈಲಿನಲ್ಲಿ ಸಾಕಷ್ಟು ಅನ್ನ ನೀರು ಕೂಡ ಸಿಕ್ಕುವದಿಲ್ಲ ಅದ್ದರಿಂದ ಅನೇಕ ಸತ್ಯಾಗ್ರಹಿಗಳು ರೋಗಗ್ರಸ್ತರಾಗಿದ್ದಾರೆ. ಅನೇಕರು ಅನಶನ ಮಾಡಿದ್ದಾರೆ ವಾರಂಗ ಜೈಲಿನಲ್ಲಿ ಕೈದಿಗಳ ಕೈಕಾಲುಗಳಿಗೆ ಕೋಳ ಸರಪಣಿ ಕಟ್ಟುತ್ತಾರೆ. ಕಲ್ಲು ಒಡೆಯುವ, ದೊಡ್ಡ ದೊಡ್ಡ ಕೊಡಪಾನಗಳಿಂದ ನೀರು ಸೇದುವ, ಜೋಳ ಬೀಸುವ ಮೊದಲಾದ ಕಠಿನ ಕೆಲಸಗಳನ್ನು ಲಾತೂರ, ಕೊಪ್ಪಲ ಮೊದಲಾದ ಜೈಲುಗಳ ಕೈದಿಗಳಿಂದ ತೆಗೆದುಕೊಳ್ಳುತ್ತಾರೆ ಕೊಪ್ಪಲ ಜೈಲಿನ ಆಹಾರವು ಕೂಡ ಉತ್ತಮವಾಗಿರುವದಿಲ್ಲ

ಸತ್ಯಾಗ್ರಹಿಗಳಿಗೆ ಲೋಭ

ದಳಗಳ ಮೇಲೆ ದಳಗಳು ಬಂದು ಹೈದರಾಬಾದದಲ್ಲಿ ಸತ್ಯಾಗ್ರಹವನ್ನು ಹೂಡುತ್ತಿರುವರು ತಾ. ೧೯-೩-೩೯ನೇ ದಿನ ಕರಾಚಿ, ಕಲ್ಕತ್ತಾ, ಹರಿದ್ವಾರ, ಅಹ್ಮದಾಬಾದ, ಮದ್ರಾಸು, ಬೆಂಗಳೂರು ಮೊದಲಾದ ಕಡೆಗಳಿಂದ ೫೦೦ ಮಂದಿ ಸತ್ಯಾಗ್ರಹಿಗಳು ಬಂದು ಶೋಲಾಪುರದಲ್ಲಿ ಸೇರಿದ್ದು ಸತ್ಯಾಗ್ರಹದ ಬಗ್ಗೆ ಸರ್ವಾಧಿಕಾರಿಗಳ ಆಜ್ಞೆಯನ್ನು ನಿರೀಕ್ಷಿಸಿದ್ದಾರೆ ಅಹ್ಮದನಗರ, ಬೆಜವಾಡ, ಬಾರ್ಸಿ, ಪ್ರಸಹಗಡ, ಮತ್ತು ಗುಂಟಿನಲ್ಲಿ ೩೦೦-೨೦೦ರಂತೆ ೧೦೦೦ ಬೇರೆ ಸತ್ಯಾಗ್ರಹಿಗಳು ತಾ ೨೩-೩-೩೯ರ ದಿನ ಬಂದು ಸೇರಿದ್ದಾರೆ ಇವರೆಲ್ಲರೂ ಶ್ರೀ ಖುಶಾಲಚಂದರು ಸತ್ಯಾಗ್ರಹ ಮಾಡಿದ ಒಂದೇ ದಿನ ಬೇರೆ ಬೇರೆ ಕಡೆಗಳಿಂದ ಹೈದರಾಬಾದನ್ನು ನುಗ್ಗಿ ಸತ್ಯಾಗ್ರಹವನ್ನಾಡುವರು ಇವರಲ್ಲಿ ಸ್ತ್ರೀಯರು ವಿದ್ಯಾರ್ಥಿಗಳು ಕೂಡ ಇದ್ದಾರೆ ಇಷ್ಟರತನಕ ೩೨೩೫ ಕೈದಿಗಳ ೧೮೦ ದಳಗಳ. ಸತ್ಯಾಗ್ರಹವಾಡಿ ಜೈಲುಪಾಲಾಗಿವೆ ಅದ್ದರಿಂದ ಸತ್ಯಾಗ್ರಹಿ ಕೈದಿಗಳಿಗೆ ದೀರ್ಘಕಾಲದ ಕಠಿಣ ಶಿಕ್ಷೆಯನ್ನು ಕೊಟ್ಟು ಭಯಪಡಿಸಿ ಮತ್ತು ವಿವಿಧ ಲೋಭಗಳನ್ನು ತೋರಿಸಿ ಅವರನ್ನು ಹಿಂದಕ್ಕೆ ಕಳುಹಿಸುವ ಬಹಳ ಪ್ರಯತ್ನಗಳು ಸರಕಾರದ ಕಡೆಯಿಂದ ನಡೆಯುತ್ತಲಿವೆ ಸೆಕೆಂಡ ಕ್ಲಾಸ ರೈಲ್ವೆ ಚಾರ್ಜು ಕೊಟ್ಟು ಅವರನ್ನು ಎಲ್ಲಿಂದ ಎಲ್ಲಿಗೆ ಬೇಕಾದರೂ ಕಳುಹಿಸಿಕೊಡುವೆವೆಂದು ಮೆಜಿಸ್ಟ್ರೇಟರು ಹೇಳುತ್ತಾರೆ. ಆದರೆ ಸತ್ಯಾಗ್ರಹಿಗಳು ಮಾತ್ರ ಸರಕಾರವು ಒಡ್ಡುವ ಇಂಥ ಬಲೆಗಳಲ್ಲಿ ಸಿಕ್ಕಿಬೀಳುವದಿಲ್ಲ

ಅಪಪ್ರಚಾರದಿಂದ ಜಾಗರೂಕರಾಗಿರಿ.

'ಹಿಂದೂ' ಎಂಬ ಹೆಸರಿನಿಂದ ಯಾವನೊ ಒಬ್ಬ ವಿಶ್ವಾಸಘಾತಕಿಯು ಹೈದರಾಬಾದದ ಆಡಳಿತ ಕ್ರಮವನ್ನು ಪ್ರಶಂಸಿಸುತ್ತ ಆರ್ಯಸಮಾಜಿಗಳು ಮತ್ತು ಸನಾತನಿಗಳು ಪರಸ್ಪರ ಜಗಳಾಡುವಂತೆ ಅವರನ್ನು ಪ್ರೇರೇಪಿಸುವ ಒಂದು ಕರಪತ್ರವನ್ನು ಬರೆದು ಪ್ರಕಟಿಸಿರುವರು. ಈ ಬಗೆಯ ಅಪಪ್ರಚಾರದಿಂದ ಹಿಂದೂಗಳು ಬಹಳ ಜಾಗರೂಕರಾಗಿರಬೇಕು ಹೈದರಾಬಾದ ಸತ್ಯಾಗ್ರಹವು ಸಫಲವಾಗಬೇಕೆಂಬ ಬಗ್ಗೆ ಆರ್ಯಸಮಾಜದ-ತೆಸನಾತನ ಹಿಂದೂ ಧರ್ಮದ ಎಲ್ಲ ಆಚಾರ್ಯ ಪುರುಷರೂ ಒಮ್ಮತರಾಗಿರುವರು

ರಾಜೇಂದ್ರ ಪ್ರಸಾದರ ಸಮ್ಮತಿ

ಹೈದರಾಬಾದದಲ್ಲಿ ಆರ್ಯಸಮಾಜಿಗಳು ಮತ್ತು ಹಿಂದುಗಳಿಗೆ ಇರುವವೆಂಬ ಆ ಕಷ್ಟಗಳು ನಿಜವೆಂದಾದರೆ ಅವುಗಳ ನಿವಾರಣೆ ಆಗಲಿಕ್ಕೇ ಬೇಕು. ಪ್ರತಿಯೊಬ್ಬನಿಗೂ ಇರುವ ಧಾರ್ಮಿಕ ಹಕ್ಕು ಅಧಿಕಾರಗಳನ್ನು ಕಾಂಗ್ರೆಸು ಮನ್ನಿಸುತ್ತದೆ ಯಾವದೇ ಒಂದ ಸಂಪ್ರದಾಯದ ಧಾರ್ಮಿಕ ಆಂಧೋಲನದಲ್ಲಿ ಕಾಂಗ್ರೆಸು ಒಂದ ಸಂಸ್ಥೆಯಾಗಿ ಸೇರಲು ಇಷ್ಟಪಡುವದಿಲ್ಲ. ಆದರೂ ಕಾಂಗ್ರೆಸ ಜನರ ಅಗತ್ಯ ಮತ್ತು ನ್ಯಾಯ ವೆಂದು ಕಂಡು ಬದ ಪಕ್ಷದಲ್ಲಿ ಆರ್ಯಸಮಾಜಕ್ಕೆ ವ್ಯಕ್ತಿಗತ ಸಹಾಯ ಸಹಾನುಭೂತಿಕೊಡಲಿಕ್ಕೆ ಕಾಂಗ್ರೆಸ ಅವರನ್ನು ಆಕ್ಷೇಪಿಸುವದಿಲ್ಲ ಎಂದು ಬಾಬು ರಾಜೇಂದ್ರ ಪ್ರಸಾದ ಒಬ್ಬ ಪತ್ರಿಕಾ ಪ್ರತಿನಿಧಿಯೊಂದಿಗೆ ಹೇಳಿದ್ದಾರೆ

ದಮ್ಮು ಏಂದು ನೆಟ್ಟಗೆ ಆದೀತು?

ಪುರೋಹಿತ ಶ್ವಾಸಹಾರಿಯಲ್ಲಿ ಇಂಥ ದ್ರವ್ಯ...

ಪುರೋಹಿತ ಶ್ವಾಸಹಾರಿ ದಮ್ಮಿಗೆ ಗುಣಕಾರಿ

ನೋಟೀಸು

Canara Bank Ltd., Kumbla.

ಈ ಕೆಳಗೆ ಕಾಣಿಸಿದವರು ಸದರಿ ಬೇಂಕಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಮೇಲಣ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗ ಬಿಟ್ಟ ರಿಜಿಸ್ಟ್ರಿ ನೋಟಿಸುಗಳು ಜ್ಯಾರಿ ಆಗದೆ ಬಂದಿರುವುದರಿಂದಲೂ, ಸದರಿ ಸಾಲಗಾರರ ಬೇಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿ ಏವೇಜುಗಳನ್ನು ಇದೇ ಸಂ 1939ನೇ ಇಸವಿ ಏಪ್ರಿಲ ತಿಂಗಳ ತಾರೀಕು 11ನೇ ಮಂಗಳವಾರ ದಿವಸದೊಳಗೆ ಪಾವತಿಮಾಡಿ, ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ, 1939ನೇ ಇಸವಿ ಎಪ್ರಿಲ್ ತಿಂಗಳ ತಾರೀಕು 15ನೇ ಶನಿವಾರ ದಿವಸ ಅಪರಾಹ್ನ 12–30 ಘಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುವು

ಜಂಜ್ರಾ ನಂಬ್ರ	ಲೋನು ನಂಬ್ರ	ಹೆಸರು ವ ವಿಳಾಸ	ಅಸಲು ರೂ
1	G L 401/37	ಎಚ್. ರಾಮಯ್ಯ ಭಂಡಾರಿ, ಹೇರೂರು ಕುಂಬಳೆ	26
2	G L 283/39	ಮೂಸಬ್ಯಾರಿ, ಇಚ್ಲಂಪಾಡಿ ಕುಂಬಳೆ	30
3	G L 168/38	ಎಂ ಮೊಂಞಾಣ್ಣಶೆಟ್ಟಿ, ಇಚ್ಲಂಪಾಡಿ ಮಧ್ವ ಕುಂಬಳೆ	75
4	G L 167/38	ಅಮ್ಮು ಭಂಡಾರಿ, ಕುಡಾಲ್ ಮೇರ್ಕಳ ಕುಂಬಳೆ	30
5	S. L 263/37	ಬಿ. ರಾಮಣ್ಣ ಭಂಡಾರಿ, ಹೇರೂರು ಕುಂಬಳೆ	21
6	S L 283/37	ಅಬ್ದುಲ್ ಕಾದ್ರಿ ಬ್ಯಾರಿ, ಇಚ್ಲಂಪಾಡಿ ಕುಂಬಳೆ	11
7	S L 366/37	ಮಮ್ಮುಂಞಿ ಬ್ಯಾರಿ, ಶಿರಿಯ ಕುಂಬಳೆ	10
8	S. L 101/38	ಸಿ. ಮಹಾಲಿಂಗ ಶೆಟ್ಟಿ, ಬೌಳಾರು, ಬೇಳ ಕುಂಬಳೆ	10
9	S. L 146/38	ಎಂ ಅಣ್ಣಯ್ಯ ಶೆಟ್ಟಿ, ಎಣ್ಮಕಜೆ ಪೆರ್ಡಾಲ್	7
10	S L 205/38	ಮಹಮ್ಮದ್ ಬ್ಯಾರಿ ವ್ಯಾಪಾರಿ ಕುಂಬಳೆ	12
11	S. L. 222/38	ಸಂಕಪ್ಪ ಶೆಟ್ಟಿ, ಶಿಮೂರು ಕುಂಬಳೆ	11

Office of the Bank
Dated 1-4-1939

S. Shantharam Pai,
Agent.

ರಷ್ಯವನ್ನು ದಂಡೆತ್ತಿ ಹೋದ ಹಿಟ್ಲರನ ಗತಿ ನೆಪೋಲಿಯನನಂತಾಗಲಾರದೆ?

ಹಿಟ್ಲರನಿಗೆ ಚರ್ಚಿಲ್ಲರ ಎಚ್ಚರಿಕೆ!

ಪರ್ವತದ ತುಟ್ಟ ತುದಿಯನ್ನು ಏರಿಹೋದ ವನು ಜಾರಿ, ಆಳವಾದ ಕಂದರದೊಳಗೆ ವೇಗ ದಿಂದ ಬೀಳಲೇ ಬೇಕು. ನೆಪೋಲಿಯನನಂತೆ ಹಿಟ್ಲರನು ಕೂಡ ತನ್ನ ಉನ್ನತಿಯ ಉಚ್ಚಶಿಖರ ವನ್ನು ಏರಿರುವನು, ಈಗ ಅವನ ಪತನವಾಗ ಲಿಕ್ಕೇ ಬೇಕು ಎಂದು ವಿಂಸ್ಟನ್ ಚರ್ಚಿಲ್ಲರು ಲಂಡನಿನ ಇಲಸ್ಟ್ರೇಟೆಡ ಪತ್ರಿಕೆಯಲ್ಲಿ ಬರೆಯುತ್ತಾರೆ.

ಯಾವುದು ನೆಪೋಲಿಯನನ ಪತನ ಕಾರಣವಾಯಿತೋ ಅದುವೇ ಹಿಟ್ಲರನ ಪತನಕಾರಣವಾಗುವಂತೆ ಭಾಸವಾಗುತ್ತದೆ. ಇತಿಹಾಸದ ಪುನರಾವರ್ತನೆಯಾಗುತ್ತಿರುವುದು ಎಂಬುದಕ್ಕೆ ಇಲ್ಲಿ ಉತ್ತಮ ನಿದರ್ಶನವು ದೊರೆಯುತ್ತದೆ. ಹಿಟ್ಲರನು ರಷ್ಯಕ್ಕೆ ದಂಡೆತ್ತಿ ಹೋಗುವದನ್ನು ಯೋಚಿಸಿರುವನಲ್ಲವೆ? ನೆಪೋಲಿಯನನು ಕೂಡ ರಷ್ಯಕ್ಕೆ ದಂಡೆತ್ತಿ ಹೋಗಿದ್ದನು. ಈಗ [illegible]ದಲ್ಲಿ, ನೆಪೋಲಿಯನನಿಗೆ ಪ್ರಾಪ್ತವಾದ ಸ್ಥಿತಿಗಿಂತ ಹಿಟ್ಲರನಿಗೆ ಪ್ರಾಪ್ತವಾಗುವ ಸ್ಥಿತಿಯು ಬೇರೆಯಾದೀತೆ? ಹೇಗೆ ಹೇಳಬಹುದು?

ರಷ್ಯವನ್ನು ಆಕ್ರಮಿಸಿ ಮರಳಿದವನಿಲ್ಲ

ಯೂರೋಪಿನಲ್ಲಿ ರಷ್ಯದ ಸ್ಥಾನಮಾನಗಳು ಅತ್ಯದ್ಭುತವಾಗಿರುವುದು. ರಷ್ಯದ ಪ್ರಬಲ ಶಕ್ತಿಯನ್ನು ಎದುರಿಸಿ ಜಯಿಸುವ ಯೂರೋಪಿನ ಬೇರೆ ಶಕ್ತಿ ಇರುವುದಿಲ್ಲ. ರಷ್ಯವು ಅದೆಷ್ಟು ಬಲವತ್ತರವಾಗಿರುವುದು? ನೆಪೋಲಿಯನನು ರಷ್ಯವನ್ನು ಆಕ್ರಮಿಸಿದಾಗ ನೆಪೋಲಿಯನನು ಯೂರೋಪಿನಲ್ಲಿ ಸರ್ವತಂತ್ರ ಸ್ವತಂತ್ರನಾಗಿದ್ದನು. ಜರ್ಮನಿಯು ಅವನಿಗೆ ಮಣಿದಿದ್ದಿತು. ಪ್ರಶ್ಯವು ಶರಣು ಎಂದಿದ್ದಿತು. ಆಸ್ಟ್ರಿಯವು ಅವನಿಗೆ ಅಧೀನವಾಗಿದ್ದಿತು. ಇಟಲಿಯು ಅವನ ಮಾಂಡಲಿಕ ರಾಜ್ಯವಾಗಿದ್ದಿತು. ಆ ಕಾಲದಲ್ಲಿ ನೆಪೋಲಿಯನನಂಥ ಧೀರನು ಬೇರೆ ಯಾವನು ಯೂರೋಪಿನಲ್ಲಿ ಹುಟ್ಟಿಬರುವುದಿಲ್ಲ ಎಂಬ ಖ್ಯಾತಿಯು ಅವನಿಗೆ ಬಂದಿದ್ದಿತು. ಅಷ್ಟೆಲ್ಲ ದಲಬಲ ಸಮೇತನಾಗಿ ನೆಪೋಲಿಯನನು ರಷ್ಯವನ್ನು ದಂಡೆತ್ತಿ ಹೋದನು. ಮೊದಲು ಮಾಸ್ಕೋದಲ್ಲಿ ಕಾಲಿಟ್ಟನು, ಆದರೆ ಮುಂದಾದುದೇನು? ಅವನ ದಲಬಲವೊಂದೂ ಅವನ ಸಹಾಯಕ್ಕೆ ಬರಲಿಲ್ಲ. ಅವನು ಪ್ರತಿಕೂಲವಾದ ಭಾಗ್ಯಕ್ಕೆ ಬಗ್ಗಲೇ ಬೇಕಾಯಿತು. ಎಲ್ಲವನ್ನು ನಷ್ಟಮಾಡಿಕೊಂಡು, ಅಸಹನೀಯವಾದ ಕಷ್ಟಗಳನ್ನು ಅನುಭವಿಸಿ ನೆಪೋಲಿಯನನು ಸ್ಯಾಂಟ ಹೆಲೀನಾದಲ್ಲಿ ಅಕಾಲಮೃತ್ಯುವಿಗೆ ಬಲಿಯಾಗಬೇಕಾಯಿತು.

ಹಿಟ್ಲರನು ದಂಡೆತ್ತಿಹೋದರೆ?

ಈಗ ಹಿಟ್ಲರನು ಕೂಡ ದಂಡೆತ್ತಿಹೋಗುವ ಆಲೋಚನೆ ಮಾಡಿದ್ದಾನೆ. ನೆಪೋಲಿಯನನ ಅದೇ ಯುಕ್ರೈನ ಮೇಲೆ ಅವನ ಕಣ್ಣು ಇದೆ. ಬರ್ಲಿನ್ ಒಪ್ಪಂದವನ್ನು ಮುರಿದಿಕ್ಕಿರುವದೂ ಆಸ್ಟ್ರಿಯವನ್ನು ಕಿತ್ತಿರುವದೂ, ಜೆಕೋಸ್ಲೋವೇಕಿಯವನ್ನು ಚೂರುಚೂರು ಮಾಡಿ ನುಂಗಿ [illegible] ಕುಳಿತಿರುವುದೂ, ರಗಳೆ ರುಮೇನಿಯಕ್ಕೆ ಸೈನ್ಯವನ್ನು ಕಳುಹಿಸಿ ಕೊಟ್ಟಿರುವದೂ, ಯೂಕ್ರೈನಿಗಿರುವ ತನ್ನ ದಾರಿಯನ್ನು ಪರಿಷ್ಕಾರ ಮಾಡಿಕೊಳ್ಳಲಿಕ್ಕಾಗಿಯೇ ಹಿಟ್ಲರನು ಇಷ್ಟೆಲ್ಲಾ ಮಾಡಿರುವನು. ಆದರೆ ಮಾಸ್ಕೋಕ್ಕೆ ಹೋದ ನೆಪೋಲಿಯನು ಸ್ವತಂತ್ರನಾಗಿ ಮರಳಲಿಲ್ಲ, ಹಿಟ್ಲರನು ಮರಳುವನೆಂದು ಹೇಗೆ ಹೇಳಬಹುದು? ಅಲ್ಲಿಯೇ ರಷ್ಯನರು ಅವನ ಪತನದ ಹೊಂಡವನ್ನು ತೋಡಿಟ್ಟಿರಬಹುದು. ಅದರಲ್ಲಿ ಅವನು ಬಿದ್ದು ಒಬ್ಬರಿಗಾದರೂ ಒಂದು ಸುದ್ದಿ ಹೇಳದೆ ಅವನು ನುಣ್ಣಗಾಗಬಹುದು. ಭವಿತವ್ಯವನ್ನು ಕೇಳಬಲ್ಲವರಾರು? ಮಾಸ್ಕೋಕ್ಕೆ ಹೋಗಬೇಕೆಂದರೆ ಹಿಟ್ಲರನು ಇದನ್ನೆಲ್ಲ ಆಲೋಚಿಸುವುದು ಉತ್ತಮ ಎಂಬರ್ಥದಲ್ಲಿ ಚರ್ಚಿಲ್ಲರು ಅವನಿಗೆ ಎಚ್ಚರವನ್ನು ಕೊಡುತ್ತಿರುವರು.

ಮೀನು ಹಿಡಿಯಲು ಬಿಡದಿದ್ದರೆ ಯುದ್ಧಮಾಡುವೆವು! ಜಾಗ್ರತೆ!!

ಜಪಾನಿನ ಅನ್ಯಾಯ ಪ್ರವರ್ತನೆ--ರಷ್ಯವು ಏನುಮಾಡುವುದೊ?

ರಷ್ಯವು ತನ್ನ ಪೂರ್ವ ಕರಾವಳಿಯ ಸಮುದ್ರಗಳಲ್ಲಿ ಜಪಾನಿಗೆ ಮೀನು ಹಿಡಿಯುವ ಅಧಿಕಾರವನ್ನು ಕೊಟ್ಟಿತು. ಆದರೆ ಆ ಅಧಿಕಾರವನ್ನು ಕೊಡುವಾಗ ರಷ್ಯಕ್ಕೂ ಜಪಾನಿಗೂ ಸ್ನೇಹವಿತ್ತು. ಈಗ ಜಪಾನು ರಷ್ಯದ ವಿರೋಧಿಗಳಾಗಿರುವ ಜರ್ಮನಿ ಇಟಲಿಗಳನ್ನು ಕೂಡಿಕೊಂಡಿದೆ. ಆದ್ದರಿಂದ ಇನ್ನು ಮುಂದಕ್ಕೆ ತನ್ನ ಸಮುದ್ರಗಳಲ್ಲಿ ಜಪಾನಿಗೆ ಮೀನು ಹಿಡಿಯಲು ಬಿಡಲಿಕ್ಕೆ ಸಾಧ್ಯವಿಲ್ಲವೆಂದು ರಷ್ಯವು ಹೇಳಿದೆ.

1936ರ ಸಂಧಿ ಪತ್ರ

೧೯೩೬ರಲ್ಲಿ ರಷ್ಯಕ್ಕೂ ಜಪಾನಿಗೂ ಒಂದು ಒಪ್ಪಂದವಾಗಿ ಅವೆರಡೂ ಒಂದು ಸಂಧಿಪತ್ರಕ್ಕೆ ದಸ್ಕತು ಹಾಕಿದ್ದುವು. ಆ ಒಪ್ಪಂದದ ಪ್ರಕಾರ ರಷ್ಯವು ಜಪಾನಿಗೆ ಒಂದು ವರ್ಷದ ತನಕ ತನ್ನ ಸಮುದ್ರಗಳಲ್ಲಿ ಮೀನು ಹಿಡಿಯುವ ಅಧಿಕಾರ ಕೊಟ್ಟಿತ್ತು. ೧೯೩೯ರಲ್ಲಿ ರಷ್ಯವು ಜಪಾನಿಗೆ ಈ ಅವಧಿಯನ್ನು ಒಂದು ವರ್ಷದ ತನಕ ಹೆಚ್ಚಿಸಿತು. ತನ್ಮಧ್ಯೆ ವ್ಯಾಪಾರಸಂಬಂಧವಾದ ಒಂದು ಒಪ್ಪಂದವಾಗಬೇಕೆಂದು ಎರಡೂ ರಾಷ್ಟ್ರಗಳು ಒಪ್ಪಿದ್ದುವು. ಆದರೆ ಜಪಾನು ಇಟಾಲಿ ಜರ್ಮನಿಗಳನ್ನು ಸೇರಿಕೊಂಡುದರಿಂದ ರಷ್ಯವು ಜಪಾನಿನೊಡನೆ ಒಪ್ಪಂದ ಮಾಡಿಕೊಳ್ಳುವ ಗೋಜಿಗೆ ಹೋಗಲಿಲ್ಲ.

ಈಗ ಹೊಸದೊಂದು ಒಪ್ಪಂದವು ಆಗದೆ ಜಪಾನಿಗೆ ರಷ್ಯದ ಸಮುದ್ರಗಳಲ್ಲಿ ಮೀನು ಹಿಡಿಯುವ ಅಧಿಕಾರವು ಬರುವದಿಲ್ಲ. ಒಪ್ಪಂದ ವಂತೂ ಇಷ್ಟರ ತನಕ ಆಗಿಲ್ಲ. ಪರಂತು ಜಪಾನಿಗೆ ಮೀನು ಹಿಡಿಯುವದು ಜೀವನ ಮರಣ ಸಮಸ್ಯೆಯಾಗಿದೆ. ಅದು ಜಪಾನಿನ ದೊಡ್ಡ ಕೈಗಾರಿಕೆಗಳಲ್ಲಿ ಒಂದಾಗಿರುವದು. ರಷ್ಯದ ಸಮುದ್ರಗಳಿಂದ ಜಪಾನಿನ ಮೊಗೇರರು ಪ್ರತಿವರ್ಷ ೨,೦೦೦,೦೦೦ ಪಿಕಲ್ ಬೆಲೆಬಾಳುವ ಮೀನುಗಳನ್ನು ಹಿಡಿದು ತರುತ್ತಾರೆ. ಇವು ನಾನಾ ವಿದೇಶಗಳಿಗೆ ರಫ್ತಾಗುತ್ತವೆ. ರಷ್ಯವು ತನ್ನ ಸಮುದ್ರಗಳಲ್ಲಿ ಜಪಾನಿಗೆ ಮೀನು ಹಿಡಿಯಲು ಬಿಡದಿದ್ದರೆ ಜಪಾನಿನ ಮಿಲಿಯಾಂತರ ಜನಗಳ ನಷ್ಟವಾಗುವದು. ನಿರುದ್ಯೋಗವು ಅಷ್ಟಕ್ಕೆ ಹೆಚ್ಚುವದು. ಆದ್ದರಿಂದ ಒಪ್ಪಂದವಾಗಲಿ, ಆಗದೆ ಇರಲಿ, ತಾನು ರಷ್ಯದ ಸಮುದ್ರಗಳಲ್ಲಿ ಮೀನು ಹಿಡಿಯುವದು ಖಂಡಿತ ಎಂದು ಜಪಾನ ನಿಶ್ಚಯಿಸಿದೆ.

ಜಪಾನೀ ಸೇನೆಯು ಸಂಚಾಲನ

ರಷ್ಯ-ಜಪಾನಿನ ಈ ಜಗಳವು ಈಗ ಕೆಲವು ತಿಂಗಳುಗಳಿಂದ ಆರಂಭವಾಗಿರುವದು. ಮೀನು ಹಿಡಿಯುವ ಕಾಲವು ಈಗ ಸಮೀಪವಾಗಿದೆ. ಅಷ್ಟರೊಳಗಾಗಿ ಒಂದು ತಾತ್ಕಾಲಿಕ ಒಪ್ಪಂದ ವಾದರೂ ಆಗದಿದ್ದರೆ ರಷ್ಯ-ಜಪಾನ ಯುದ್ಧವೇ ಆಗಬಹುದು.

ರಷ್ಯದ ಸಮುದ್ರಗಳಲ್ಲಿ ಈ ಬಾರಿ ಮೀನು ಹಿಡಿಯಲಿಕ್ಕೆ ಹೋಗುವ ಜಪಾನೀ ಮೊಗೇರರಿಗೆ ರಕ್ಷಣೆಯನ್ನು ಕೊಡುವದಕ್ಕೋಸ್ಕರ ಜಪಾನು ದೊಡ್ಡದೊಂದು ಜಲಸೈನ್ಯವನ್ನು ಅತ್ತ ಕಳುಹಿಸಿಕೊಟ್ಟಿದೆ. 'ಯುದ್ಧ ಮಾಡಿಯಾದರೂ ತಾನು ಮೀನು ಹಿಡಿಯದೆ ಬಿಡೆ!' ಎಂದು ಜಪಾನು ಹೇಳಿದೆ. ದಕ್ಷಿಣ ಚೀನದಿಂದಲೂ ಜಪಾನೀ ಸೇನೆಯು ಮಂಚುಕುವೋದ ಕಡೆಗೆ ತೆರಳಿರುವದು. ಆದ್ದರಿಂದ ರಷ್ಯವನ್ನು ಯುದ್ಧಕ್ಕೆ ಕರೆಯಲು ಜಪಾನು ಸಿದ್ಧತೆಗಳನ್ನು ಮಾಡುತ್ತ ಇದೆ ಎಂದು ಎಣಿಸಬಹುದು. ಜಪಾನಿನ ಈ ಅನ್ಯಾಯ ಪ್ರವರ್ತನೆಗೆ ರಷ್ಯವು ಯಾವ ರೀತಿಯ ಉತ್ತರ ಕೊಡುವದೋ-ನೋಡಬೇಕು.

ಸೆಕೆಕಾಲದ ಚರ್ಮವ್ಯಾಧಿಯನ್ನು ಗುಣಪಡಿಸಿಕೊಳ್ಳಿರಿ!

ಗಾಯಗಳಿಗೆ, ಕಡಿತಗಳಿಗೆ ಮತ್ತು ವ್ರಣಗಳಿಗೆ ಜ್ಯಾಂಬಕನ್ನು ಉಪಯೋಗಿಸಿರಿ.

ಯಾವಾಗಲೂ ರಾತ್ರಿ ಮಲಗುವಾಗ ಜ್ಯಾಂಬಕನ್ನು ಚರ್ಮದ ಮೇಲೆ ಸವರಿದರೆ ಸೆಕೆಕಾಲದ ಚರ್ಮವ್ಯಾಧಿಗಳಿಂದ ನೀವು ವಿಮುಕ್ತರಾಗುವಿರಿ. ಜ್ಯಾಂಬಕು ಕ್ರಿಮಿಕೀಟಗಳ ಕಡಿತ, ಗಾಯ, ಸ್ಫೋಟ ಮೊದಲಾದವುಗಳಿಗೆ ಅಮೂಲ್ಯವಾದ ಔಷಧಿಯಾಗಿರುತ್ತದೆ. ಜ್ಯಾಂಬಕಿನಲ್ಲಿರುವ ಉತ್ತಮವಾದ ಗಿಡಮೂಲಿಕೆಗಳ ಎಣ್ಣೆಯು ಪರಮಾಣುಗಳನ್ನು ಶುದ್ಧೀಕರಿಸುತ್ತದೆ. ಶರೀರ ನೋವು ಗುಣವಾಗಿ ಚರ್ಮವು ಕಡಿಮೆಯಾಗುತ್ತದೆ. ಎಲ್ಲಾ ಡಾಕ್ಟರರೂ ನರ್ಸುಗಳೂ ಪ್ರತಿ ಒಂದು ಚರ್ಮವ್ಯಾಧಿಗೂ ಜ್ಯಾಂಬಕನ್ನೇ ಶಿಫಾರಸು ಮಾಡುತ್ತಾರೆ. ಎಲ್ಲಾ ಔಷಧಿ ವ್ಯಾಪಾರಿಗಳೂ ಇದನ್ನು ರೂ 1 ಮತ್ತು 2-4-0ರಂತೆ ಮಾರುತ್ತಾರೆ.

ಏಜಂಟ್ಸ್:

ಮೆಸರ್ಸ್ ದಾದಾ ಎಂಡ್ ಕಂಪೆನಿ, ಪೋರ್ಟಟ್ರಸ್ಟ ಮದ್ರಾಸು.

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಉಪಯೋಗಿಸಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. [illegible] ನಮ್ಮ ನಸ್ಯವು [illegible] ಉತ್ತೇಜನಗೊಳಿಸುತ್ತದೆ. [illegible] ಎಲ್ಲರಿಗೂ ಅನುಕೂಲವಾದ ದರವು [illegible]

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧. ಸಾರಥಿ ನಸ್ಯ 1 ಪೌಂಡಿಗೆ ರೂ 3-೮-0 ನವಿಲಿನ ಮಾರ್ಕು ಸಾರಥಿ ನಸ್ಯ 1 ಪೌಂಡಿಗೆ ರೂ 3-0-0

ಪಿ. ಓ. ಮತ್ತು ರೈಲ್ವೆ ಚಾರ್ಜು ಇತ್ಯಾದಿ

ಏಜೆಂಟರು ಬೇಕಾಗಿದ್ದಾರೆ

ವಿಳಾಸ :-

ಎ. ಪಿ. ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು

ಭಿಷಗ್ರತ್ನ ಆಯುರ್ವೇದ ವಿದ್ವಾನ್, ಬಿ. ವಿ. ಪಂಡಿತರ

ಜೀವನಿ

ಸ್ತ್ರೀಯರ [illegible] ಗರ್ಭಕೋಶದ ರೋಗಗಳಿಗೂ ಸಂಜೀವನ.

ಬೆಲೆ: ರೂ 1-0-0

ಸುಬಲಾ

ಶರೀರದ ಪಿತ್ತ ಉಷ್ಣವನ್ನು ಕಡಿಮೆಮಾಡಿ ರಕ್ತಶುದ್ಧಿ ಪಡಿಸಿ, ರಕ್ತವನ್ನು ಹೆಚ್ಚುಮಾಡಿ, ಶರೀರಕ್ಕೆ ಶಕ್ತಿಯನ್ನುಂಟುಮಾಡುವಂತೆ ಅಪೂರ್ವ ವನೌಷಧಿಗಳಿಂದ ತಯಾರಿಸಿದ ಟಾನಿಕ್

ಬೆಲೆ: ರೂ 1-0-0

ನಂಜನಗೂಡು ಸದ್ವೈದ್ಯ ಶಾಲಾ,

ಬ್ರಾಂಚ್ ರಥಬೀದಿ ಮಂಗಳೂರು

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತರಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗಳಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಜೀವ ಕೊಟ್ಟು ಜೀವ ಕಾಪಾಡಿದ ಪುಣ್ಯಜೀವಿಗಳು

ದೇಶದ ಹಲವು ಪ್ರಾಂತ್ಯಗಳಲ್ಲಿ ಹಿಂದೂ ಮುಸಲ್ಮಾನ ದಂಗೆಗಳಾಗಿ ವಾತಾವರಣವು ಕಲುಷಿತವಾಗಿರುವಾಗ, ಢಾಕಾ ಇಸ್ಲಾಮಪುರ ಬಜಾರದಲ್ಲಿ ನಡೆದ ದಂಗೆಯ ಕಾಲಕ್ಕೆ ಪುಣ್ಯಜೀವಿಗಳು, ಕೆಲವರು ಹೇಗೆ ಆ ದಂಗೆಯನ್ನು ಅಡಗಿಸಲಿಕ್ಕೆ ಪ್ರಯತ್ನಪಟ್ಟು ತಮ್ಮ ಜೀವಗಳನ್ನೇ ಬಲಿಕೊಟ್ಟಿದ್ದರೆಂಬ ರೋಮಾಂಚನಕಾರಿ ಬೋಧಪ್ರದ ವಾರ್ತೆಯು 'ಹರಿಜನ'ದಲ್ಲಿ ಪ್ರಕಟವಾಗಿರುವುದು. ದಂಗೆಯಾಗುತ್ತಿರುವಾಗ್ಯೆ ಜೀವ ಕೊಟ್ಟು ಜೀವಗಳನ್ನು ಕಾಪಾಡಿದವರಲ್ಲಿ ಹಿಂದುಗಳು ಹೇಗೋ, ಮುಸಲ್ಮಾನರೂ ಹಾಗೆಯೇ ಇದ್ದರೆಂಬುದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವಾಗ ಹಿಂದೂ ಮುಸಲ್ಮಾನ ಐಕ್ಯ ಸಾಧನೆಯು, ನಾವು ಎಣಿಸಿದಷ್ಟು ಕಠಿನವಾಗಿರುವುದಿಲ್ಲವೆಂಬುದು ಗೊತ್ತಾಗುತ್ತದೆ. ಈ ಘಟನೆಯಿಂದಾಗಿ ಭಾರತದ ಭವಿಷ್ಯವು ಉಜ್ವಲವಾಗಿರುವುದೆಂದು ಧಾರಾಳವಾಗಿ ಹೇಳಬಹುದು.

ಶ್ರೀ. ಸತೀಶಚಂದ್ರಜೀ ಘಾಟಿಯಾರವರು ಹರಿಜನದಲ್ಲಿ ಹೀಗೆ ಬರೆದಿದ್ದಾರೆ:—

'ನಿರಾಶಕರವಾದ ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ, ಅನೇಕ ಮಂದಿ ಹಿಂದೂ ಮುಸಲ್ಮಾನ ವಿವೇಕಿಗಳು ಬಹಳ ಮಾಡಿ ಉದ್ರೇಕಿಸಲ್ಪಟ್ಟಿದ್ದರಾದರೂ ಅವರು ತಮ್ಮ ವಿವೇಕವನ್ನು ಕಳೆಕೊಳ್ಳಲಿಲ್ಲವೆಂಬುದು ಭವಿಷ್ಯದ ಕುರಿತು ಹೊಸ ಭರವಸೆಯನ್ನು ಕೊಡುತ್ತದೆ. ಹೊರಗಿನಿಂದ ಬಂದ ಅನೇಕ ಪೋಕರಿ ಸ್ವಭಾವದ ಜನರಿಂದಲೇ ಈ ದಂಗೆಯಾಯಿತೆಂದು ನಿಸ್ಸಂಕೋಚವಾಗಿ ಹೇಳಬಹುದು. ಹೊರಗಿನಿಂದ ಬಂದ ಅವರಿಗೆ ಊರಿನ ಪೋಕರಿಗಳ ಸಹಾಯ ಪ್ರೋತ್ಸಾಹಗಳು ದೊರಕಿ ಊರಿಯು ಬೆಂಕಿಗೆ ತುಪ್ಪವನ್ನು ಹಾಕಿದಂತಾಯಿತು. ಈ ಪೋಕರಿಗಳಲ್ಲಿ ಹಿಂದುಗಳೂ ಇದ್ದರು, ಮುಸಲ್ಮಾನರೂ ಇದ್ದರು.

ನಿಜಾಮ ಖಾನ ಬಾಜಾರದಲ್ಲಿ

'ದಂಗೆಯು ಭಾಕ್ರಿ ಬಾಜಾರಿನಲ್ಲಿ ಉಂಟಾಗಿದ್ದಿತು. ಗಡಿನಾಡು ಎಸೆಂಬ್ಲಿಯ ಅಧ್ಯಕ್ಷರಾದ ಮೌಲ್ವಿ ಖುದಾ ಬಕ್ಷರ ಮನೆಯು ನಿಜಾಮ ಖಾನ ಬಾಜಾರಿನಲ್ಲಿ ಇರುವುದು. ಬಕ್ಷರು ಅಲ್ಲಿಗೆ ಬಕ್ರೀದನ್ನು ಆಚರಿಸಲಿಕ್ಕೆ ಬಂದಿದ್ದರು. ಆ ಪರಿಸರದಲ್ಲಿ ಹಿಂದುಗಳ ಮೇಲೆ ಆಕ್ರಮಣವಾಗಿರಲೂ ಇಲ್ಲ, ಅವರ ಮನೆಮಠಗಳನ್ನು ಲೂಟಿಮಾಡಿರಲೂ ಇಲ್ಲ. ಅಲ್ಲಿಯೂ ಗಲಾಟೆ ಮಾಡಬೇಕೆಂದು ಕೆಲವು ಪೋಕರಿಗಳು ಪ್ರಯತ್ನಪಟ್ಟಿದ್ದರು. ಆದರೆ ಮೌಲ್ವಿ ಸಾಹೇಬರು ತಮ್ಮ ಜೀವದ ಹಂಗು ಬಿಟ್ಟು ಕೆಲಸಮಾಡಿದುದರಿಂದ ಪೋಕರಿಗಳ ಇಚ್ಛೆಯು ಕೈಗೂಡಲಿಲ್ಲ. ಹಾಗೆಯೇ ಬುದ್ಧಾ ಬಾಜಾರಿನಲ್ಲಿ ಕೂಡ ಮುನ್ಸಿಪಲ್ ಕಮಿಶನರಾದ ಸೇಠ ಅಬ್ದುಲ್ ರಹಿಮಾನರು, ಅದ್ಭುತ ಸಾಹಸವನ್ನು ತೋರಿಸಿ ಅನೇಕ ಹಿಂದೂಗಳ ಪ್ರಾಣಗಳನ್ನು ಕಾಪಾಡಿದರು. ಎಲ್ಲೆಲ್ಲಿ ಅನಾಹುತ ನಡೆಯುತ್ತಿದ್ದಿತೋ ಅಲ್ಲಲ್ಲಿ ಹೋಗಿ, ಪೋಕರಿಗಳನ್ನು ಊಟೆಗೆ ಹಿಡಿದೆಳೆದು ನಗರ ನಿವಾಸಿಗಳನ್ನು ರಕ್ಷಿಸಿದರು.

ಜೀವದಾನ

'ಫಾಟಿನ ವಾಲ ಬಾಜಾರಿನಲ್ಲಿ ದಂಗೆಯಾದಾಗ ಸಯ್ಯದ ಅಲಿ ಅಕ್ಬರ ಖಾನ ಮತ್ತು ಖ್ವಾಜಾ ಯ್ಯಾ ಖಾನರು ತಮ್ಮ ಮನೆಯಲ್ಲಿಗೆ ಶಾಲೆಯಿಂದ ಹಿಂದಿರುಗುತ್ತಿದ್ದ ಅನೇಕ ಹಿಂದೂ ಮಕ್ಕಳಿಗೆ ಆಶ್ರಯಕೊಟ್ಟರು. ಹಿಂದೂ ಅಂಗಡಿಗಳು ಲೂಟಿಯಾಗುವುದನ್ನು ತಪ್ಪಿಸಿದರು. ಪೆಟ್ಟು ತಿಂದ ಅನೇಕ ಮುಸಲ್ಮಾನ ಹೆಂಗಸರಿಗೆ ರಾಯ ಬಹದೂರ ಜೆಂಡಾರಾಮರ ಆಸ್ಪತ್ರೆಯಲ್ಲಿ ಚಿಕಿತ್ಸೆ ಆಗಿದ್ದಿತು. ಇದೂ ಹಿಂದೂ ಆಸ್ಪತ್ರೆಯಾಗಿದ್ದಿತ್ತಾದರೂ ಇಲ್ಲಿಗೆ ಬಂದ ಅನೇಕ ಮುಸಲ್ಮಾನರ ಶರೀರದೊಳಗಿನ ಗುಂಡುಗಳನ್ನು ತೆಗೆದು ಆಸ್ಪತ್ರೆಯು ಅವರಿಗೆ ಜೀವದಾನ ಮಾಡಿತು. ಕಳೆದ ಮಹಾಯುದ್ಧದಲ್ಲಿ ಕೆಲಸಮಾಡಿ ಆ ಬಗೆಯ ಶಸ್ತ್ರ ಚಿಕಿತ್ಸೆಯಲ್ಲಿ ವಿಶೇಷ ಅನುಭವವನ್ನು ಪಡೆದ ಡಾಕ್ಟರ ಜಂಡಾರಾಮ ಪೆನ್ಶನದಾರರು ತನ್ನ ವೃದ್ಧಾಪ್ಯದಲ್ಲಿ ಕೂಡ ಆಸ್ಪತ್ರೆಗೆ ಬಂದು ಮಧ್ಯಾಹ್ನ ೨ ಗಂಟೆಯಿಂದ ನಾಲ್ಕು ಗಂಟೆಯಾಗುವ ತನಕ ತಮ್ಮ ಸೇವೆಯನ್ನು ಸಲ್ಲಿಸಿದರು. ಆಗ ಅವರು ಬಾಜಾರಿಗೆ ಅಲ್ಲಿ ಗಾಯವಾಗಿ ಬಿದ್ದುಕೊಂಡಿದ್ದವರ ಸೇವೆಗೆ ತೆರಳಿದರು. ಆದರೆ ಅವರು ಅಲ್ಲಿಗೆ ಬರುತ್ತಲೇ ಮೂರ್ಖರಾದ ಕೆಲವು ಪುಂಡರು ಅವರ ಮೇಲೆ ಬಿದ್ದರು. ವೃದ್ಧ ಜೆಂಡಾರಾಮರು ಈ ಗಾಯಗಳಿಂದ ಆಸ್ಪತ್ರೆಯಲ್ಲಿ ಸೇರಿಕೊಂಡರು, ಹಿಂದುಮುಸಲ್ಮಾನರ ಸೇವೆಯಲ್ಲಿ ಜೀವದಾನಮಾಡಿದರು; ಅಲ್ಲ, ತಮ್ಮ ಜೀವವನ್ನು ಬಲಿಕೊಟ್ಟರು.

ಅದ್ಭುತ ಸಾಹಸ

'ಭಾಕ್ರಿ ಬಾಜಾರದಲ್ಲಿ ಮಹ್ಮದ ಅಬ್ದುಲ್ಲಾ ಖಾನ್, ಎಮ್. ಎಲ್. ಎ ರವರ ಮನೆ ಇದೆ. ಬಂದೂಕಿನಿಂದ ಪೆಟ್ಟು ತಿಂದ ಒಬ್ಬ ಮುಸಲ್ಮಾನ ಹುಡುಗನನ್ನು ಅವರ ಈ ಮನೆಗೆ ಸಾಗಿಸಲಾಗಿದ್ದಿತು. ಆ ಮೇಲೆ ಮುಸಲ್ಮಾನ ಪುಂಡರಿಂದ ಬೆನ್ನಟ್ಟಿಸಲ್ಪಟ್ಟ ಆರು ಜನ ಹಿಂದುಗಳ ಕೂಡ ಈ ಮನೆಗೇ ಬಂದು ಆಶ್ರಯ ಕೇಳಿದರು. ಅಬ್ದುಲ್ಲ ಖಾನರು ಅವರಿಗೂ ಸಂತೋಷದಿಂದ ಆಶ್ರಯಕೊಟ್ಟರು.

'ಗಾಯಪಟ್ಟ ಮುಸಲ್ಮಾನ ಹುಡುಗನು ಆ ಮನೆಯಲ್ಲಿ ಇರುವುದನ್ನು ಕಂಡ ಮುಸಲ್ಮಾನ ತುಂಟರು ಅಲ್ಲಿಯ ಆಶ್ರಯ ಮಾಡಿಕೊಂಡಿದ್ದ ಆ ಆರು ಜನ ಹಿಂದುಗಳನ್ನು ಕೊಂದೇ ಹಾಕಿ ಸೇಡು ತೀರಿಸಬೇಕೆಂದು ಸಂಕಲ್ಪಮಾಡಿದರು. ಆದರೆ ಅಬ್ದುಲ್ಲಾ ಖಾನರು ಧೃತಿಗೆಡಲಿಲ್ಲ. ಅವರು ಅದ್ಭುತ ಸಹಾಸವನ್ನು ತೋರಿಸಿ ಆ ಮುಸಲ್ಮಾನ ತುಂಟರಿಂದ ಆರು ಜನ ಹಿಂದುಗಳನ್ನು ಕಾಪಾಡಿ, ರಾತ್ರಿ ಕತ್ತಲೆಯಾದಾಗ ಪೊಲೀಸ ಕಾವಲು ಕೊಟ್ಟು ಅವರನ್ನು ಅವರವರ ಮನೆಗಳಿಗೆ ಕಳುಹಿಸಿ ಕೊಟ್ಟರು. ಹೀಗೆಯೇ ದಂಗೆಯ ಕಾಲದಲ್ಲಿ ಹಿಂದುಗಳು ಮುಸಲ್ಮಾನರನ್ನು ಕಾಪಾಡಿದ, ಮುಸಲ್ಮಾನರನ್ನು ಹಿಂದುಗಳು ಕಾಪಾಡಿದ ಹಲವು ಘಟನೆಗಳು ಘಟಿಸಿವೆ.

ಐಕ್ಯ ಸಂಭವ

ಜಿನ್ನ-ಮುಂಜೆಯರಂಥ ಜಾತೀಯ ಕಲಹವಾದಿಗಳಿಂದ ಹಿಂದು ಮುಸಲ್ಮಾನ ಐಕ್ಯವುಂಟಾಗುವುದು ಎಂದಿಗೂ ಸಾಧ್ಯವಿಲ್ಲ. ಹಿಂದೂ ಮುಸಲ್ಮಾನ ಐಕ್ಯವು ಆಗುವುದಿದ್ದರೆ ಅದು ಹಿಂದಲ್ಲ ಒಂದು ದಿನ ಆಗಲೇ ಬೇಕು—ಕೇವಲ ಹಿಂದೂ ಮುಸಲ್ಮಾನ ಐಕ್ಯಕ್ಕಾಗಿ ಹೋರಾಡುತ್ತ ಜೀವಕ್ಕಾಗಿ ಜೀವ ಕೊಡುವ ಇಂಥ ಹಿಂದೂ ಮುಸಲ್ಮಾನ ಪುಣ್ಯಜೀವಿಗಳಿಂದಲೇ ಸಾಧ್ಯವಾಗುವುದು. ಇಂಥ ಪುಣ್ಯಜೀವಿಗಳು ಹಿಂದು ಮುಸಲ್ಮಾನ ಸಮಾಜದಲ್ಲಿ ಎಷ್ಟು ಹೆಚ್ಚುವರೋ ಅಷ್ಟಕ್ಕೆ ಹಿಂದೂ ಮುಸಲ್ಮಾನ ಐಕ್ಯವು ಸಂಭವವೂ ಸಮೀಪವೂ ಆಗುವುದು.

ಸಂಸ್ಥಾನಾಧೀಶರಿಗೆ ಔಂಧ ಮಹಾರಾಜರ ಎಚ್ಚರಿಕೆ

ವಜ್ರಮುಷ್ಟಿಯ ಆಳಿಕೆಯಿಂದ ಪ್ರಯೋಜನವಿಲ್ಲ

'ಕಾಲಗತಿಯನ್ನು ನೋಡಿ ಕೆಲಸಮಾಡಿರಿ'

ಸಂಸ್ಥಾನಾಧೀಶರು ಬರುತ್ತಾರೆ ಹೋಗುತ್ತಾರೆ, ಸಾಮ್ರಾಜ್ಯಗಳು ಅಳಿಯುತ್ತವೆ, ಉಂಟಾಗುತ್ತವೆ, ಆದರೆ ಜನರು ಮಾತ್ರ ಯಾವಾಗಲೂ ಇರುವರು. ಎಷ್ಟು ಲಾಠಿ ಪೆಟ್ಟುಗಳು ಬಿದ್ದರೂ, ಎಷ್ಟು ದಬ್ಬಾಳಿಕೆ ಮಾಡಿದರೂ, ಜನರನ್ನು ಸೋಲಿಸುವದು ಸಾಧ್ಯವಲ್ಲ? ಎಂದು ಬೊಂಬಾಯಿಯ ಕ್ರಾನಿಕಲ್ ಪತ್ರಿಕೆಗೆ ಒಂದು ಹೇಳಿಕೆಯನ್ನು ಕೊಡುತ್ತಾ ಔಂಧ ಮಹಾರಾಜರು ಹೇಳಿದರು.

ಕಾಲಗತಿಯನ್ನು ನೋಡಿ, ಆಂದೋಲನವಿಲ್ಲದೆ ತಮ್ಮ ಸಂಸ್ಥಾನದ ಪ್ರಜೆಗಳಿಗೆ ಜವಾಬುದಾರಿ ಸರಕಾರವನ್ನು ಕೊಟ್ಟವರಲ್ಲಿ ಔಂಧ ಮಹಾರಾಜ ಶ್ರೀಮಂತ ಅಪ್ಪಾಸಾಹೇಬರು ಅಗ್ರಗಣ್ಯರಾಗಿದ್ದಾರೆ. ಅವರು ತಮ್ಮ ಜಾತಿಯ ಇತರ ಸಂಸ್ಥಾನಾಧೀಶರಿಗೆ ಒಂದು ಎಚ್ಚರಿಕೆಯನ್ನು ಕೂಡ ಕೊಟ್ಟಿರುವರು.

ಬಂಧುಗಳೇ ಜಾಗೃತರಾಗಿರಿ!

"ಬಂಧುಗಳೇ! ಜಾಗ್ರತರಾಗಿರಿ! ಆಪತ್ಕಾಲದಲ್ಲಿ ನಿಮ್ಮ ಸಹಾಯಕ್ಕೆ ಒದಗೀತೆಂದು ನೀವು ಎಣಿಸಿರುವ ನಿಮ್ಮ ಸಾಹಸಬಲಗಳು ಯಾವ ಪ್ರಯೋಜನಕ್ಕೂ ಬಾರದಾಗಿವೆ. ಎಚ್ಚೆತ್ತ ಜನತೆಯ ಸಾಮೂಹಿಕ ಶಕ್ತಿಯ ಮುಂದೆ ನಿಮ್ಮ ಸಾಹಸಬಲಗಳು ಅಲ್ಪವಾಗಿರುವವು. ನಿಮಗಿರುವ ಬಲವೆಂದರೆ ನಿಮ್ಮ ವಜ್ರಮುಷ್ಟಿಯ ಬಲ ತಾನೇ? ದಬ್ಬಾಳಿಕೆಯಿಂದ ಅದು ಯಾವ ಪುರುಷಾರ್ಥ ಸಂಪಾದನೆಯೂ ಆಗುವದಿಲ್ಲ. ಯಾಕೆಂದರೆ ದಬ್ಬಾಳಿಕೆಯನ್ನು ನಿಲ್ಲಿಸುವದಕ್ಕಾಗಿಯೇ ಜನತೆಯ ಆಂದೋಲನವಿರುವದು.

ಜನತೆಯು ನಿಮ್ಮನ್ನು ಗೌರವಿಸುತ್ತದೆಂದು ನೀವು ತಿಳಿಯುತ್ತೀರಿ. ಆದರೆ ಜನತೆಯು ನಿಮ್ಮನ್ನು ವಾಸ್ತವಿಕವಾಗಿ ಗೌರವಿಸುತ್ತಿರುವದಿಲ್ಲ, ನಿಮಗೆ ಬಹಳವಾಗಿ ಹೆದರುತ್ತದೆ. ನಿಮ್ಮ ಮುಂದೆ ನಿಮ್ಮನ್ನು ಗೌರವಿಸುವ ಜನರು ನಿಮ್ಮ ಹಿಂದಿನಿಂದ ನಿಮ್ಮ ಕುರಿತು ಏನು ಹೇಳುತ್ತಾರೆ ಎಂಬುದನ್ನು ತಿಳಿದಿರುವಿರಾ? ಜವಾಬುದಾರಿ ಮನುಷ್ಯರಂತೆ ಅವರು ನಿಮ್ಮನ್ನು ವಿಶ್ವಾಸಪೂರ್ವಕ ಕಾಣುವ ದಿನಗಳು ನಿಮಗೆ ಗೌರವವನ್ನು ಕೊಡುವ ದಿನಗಳು ಬರುವದಿಲ್ಲ.

ನಿಜವಾದ ಗೌರವವು ಎಂಥಹದೆಂಬುದು ನಿಮ್ಮಲ್ಲಿ ಕೆಲವರಿಗೆ ಮಾತ್ರ ತಿಳಿದಿರುವದು. ಜನತೆಯನ್ನು ಪ್ರೀತಿಸಿರಿ, ಅದರ ಸೇವೆಯನ್ನು ಮಾಡಿರಿ ಅಂದರೆ ನಿಮ್ಮನ್ನು ಯಾರೂ ಪದಚ್ಯುತರನ್ನಾಗಿ ಮಾಡಲಾರರು. ಅಂಥ ಶಕ್ತಿಯು ಯಾರಿಗೂ ಬರುವದಿಲ್ಲ. ಜನತೆಯ ಕೈಯಲ್ಲಿ ನೀವು ಸುರಕ್ಷಿತವಾಗಿ ಇರುವಿರಿ. ಅದ್ದರಿಂದ ಜನತಾರೂಪೀ ಜನಾರ್ಧನನ ಸೇವೆಯೇ ನಿಮ್ಮ ಧರ್ಮವಾಗಿರುವದು.

ನಿಮ್ಮಲ್ಲಿ ಅನೇಕರು ಯಾವ ಹಾದಿಯನ್ನು ತುಳಿಯುತ್ತಿದ್ದಾರೋ, ಆ ಹಾದಿಯಲ್ಲಿ ನೀವು ಹೋಗುವದರಿಂದ ನಿಮಗೆ ಭದ್ರತೆಯಾಗಲಿಕ್ಕೆ ಸುಖವಾಗಲೀ ಇರುವದಿಲ್ಲ. ನಿಮ್ಮ ಸಂಸ್ಥಾನದ ಜನತೆಯ ಕೈಯಲ್ಲಿ, ನಿಮ್ಮ ಸಂಸ್ಥಾನವು ಇರುವ ದೇಶದ ಜನರ ಕೈಯಲ್ಲಿ ನಿಮ್ಮ ಸುಖವೂ ಭದ್ರತೆಯೂ ಅಡಗಿದೆ.

ಶುಭ ಪರಿಣಾಮ.

ಶ್ರೀಮಂತ ಅಪ್ಪಾ ಸಾಹೇಬರು ಒಂದು ಮುಂದುವರಿದ ಸಂಸ್ಥಾನದ ಅಧಿಪತಿಗಳು, ವಯೋವೃದ್ಧರೂ ಜ್ಞಾನವೃದ್ಧರೂ ಆಗಿದ್ದಾರೆ. ರಾಜಕಾರಣದಲ್ಲಿ ತುಂಬಾ ಅನುಭವಿಕರಾಗಿರುವರು. ಅದ್ದರಿಂದ ಅವರು ತಮ್ಮ ಇತರ ಸಂಸ್ಥಾನಾಧೀಶರಿಗೆ ಕೊಟ್ಟ ಈ ಎಚ್ಚರಿಕೆಯಿಂದ ಶುಭ ಪರಿಣಾಮವೇ ಉಂಟಾಗುವದೆಂದು ಎಣಿಸಲಾಗಿದೆ. ಇಂಥ ಮಾತುಗಳು ಎಂದಿಗೂ ವ್ಯರ್ಥವಾಗುವಂಥವುಗಳಲ್ಲ.

S. U. N. & Co.,

Silk Merchants,
Chaukhamba BENARES CITY

ಈಗಿನ ತರಹ (ಕಾಶಿ) ಬೆನಾರಿಸ್ ಸೀರೆ ತರುಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ 2½ ಅಗಲದ ಸಣ್ಣ ಬುಟ್ಟ ಸೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ ಸೀರೆಗಳು ರೂ. 85ರಿಂದ ರೂ 55 ಮಡಲು ಸಾದಾ ಸೀರೆ 18 ಮೊಳ ರೂ 82ರಿಂದ ರೂ 65 ಉದ್ದ ಮೊಳ 16, ಅಗಲ 2¼ ರೂ 20 ರಿಂದ 85ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು.

ಶಿರೋಮಣಿ ನಾರಾಯಣಾಚಾರ್ಯ, ಚೌಕಂಬಾ, ಬೆನರಿಸ್ ಸಿಟಿ

'DILROZ' Regd

Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary Abscess

There is no need of dressing the wounds, nor are baths prohibited

Price Rs. 2 Postage extra

TAHIR DIN,
Anarkali, LAHORE

The Canara Industrial & Banking Syndicate Ltd.

(INCORPORATED IN BRITISH INDIA —LIABILITY OF SHAREHOLDERS LIMITED)

Head Office :UDIPI (S. India)

Season Deposits are accepted at 3½ % per annum.

Further particulars on application to any of our thirty-five offices.

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ಚೈತ್ರ ಬ॥ ೪ ಶನಿವಾರದಿಂದ ಚೈತ್ರ ಬ॥ ೧೦ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ಮಿಥುನ ಸುಗ್ಗಿ)

8	ಶನಿ	೧೭	೫೪।	ಅನುರಾಧಾ	೨೫	೨೫	
9	ರವಿ	೧೮	೬।	ಜ್ಯೇಷ್ಠಾ	೨೮।	೨೬	
10	ಸೋಮ	೧೯	೧೧	ಮೂಲಾ	೩೨॥	೨೭	
11	ಮಂಗಳ	೨೦	೧೩॥	ಪೂ. ಷಾಢಾ	೨೮।	೨೮	
12	ಬುಧ	೨೧	೧೮।	ಉ. ಷಾಢಾ	೪೪।	೨೯	
13	ಗುರು	೨೨	೨೩।	ಶ್ರವಣಾ	೫೦॥	೩೦	
14	ಶುಕ್ರ	೨೩	೨೮।	ಧನಿಷ್ಠಾ	೫೭	೧	ಏ. 14

THE PIE-MONEY BANK LTD.,

Maidan Road, MANGALORE.

Undertakes all kinds of Banking Business Current account at 3½% per annum. Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs. 5000/ run regularly on systematic lines Unique Banking facilities to Businessmen and interested Public

Apply for particulars-**K R. GURU**, *Managing Director*.

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಾಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, (S. M. C.)

ಬರೇ ರೂ. 1-4-0ಕ್ಕೆ 3 ಗಡಿಯಾರಗಳು ಮತ್ತು 1296 ಫೆನ್ಸಿ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 3 ... [illegible]

1 ... [illegible] ... 300 ... 10 ... 0-14-0 ...

The American Commercial Stores, Post Box No 12213 Calcutta (S. A)

THE

Bank of Mangalore Ltd.,

MANGALORE

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest-Payable Quarterly

Savings Bank deposit 3½% on daily balances.

All kinds of banking business transacted.

THE

Canara Banking Corporation Udipi, Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/-, & 5,000/

are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅನೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ಕೋಲೆಗಳ ಡಬ್ಬಿ ರೂ 1-4-0 (ವಿ. ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ.,

ಆಯುರ್ವೇದಿಕ್ ಫಾರ್ಮಸಿ, ಪೆರಿಡೇಪಿ.

P. O. Peridepi (ನೆಲ್ಲೂರು ಜಿ.)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ, ಗೋರ್ಕೆಟ್ಟಾ ಬಜಾರ್, ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ ... [illegible]

ಬಲವನ್ನು ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊದಲಿಗು ರಿಂದ	ಮೊದಲಿಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—11—0	—
„ ದುಯಂ „ „	1—10—0	1—10—0
„ ಅವ್ವಲ್ ಸುಗ್ಗಿ „	1—10—0	—
„ ದುಯಂ „ „	1—9—0	—
ಅಕ್ಕಿ ಅವ್ವಲ್ ಗುಡ್ಡು „	4—2—0	4—2—0
„ ದುಯಂ „ „	3—14—0	3—14—0
„ ಅವ್ವಲ್ ಸುಗ್ಗಿ „	4—4—0	—
„ ದುಯಂ „ „	3—8—0	3—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದದು „	37—8—0	47—8—0
ಕೊಬ್ಬರಿ ಆಫೀಸು ಖಂಡಿಗೆ	45—0—0	—
„ ದಿಲ್‌ಪಸಂದ „	47—8—0	—
ತೆಂಗಿನ ಎಣ್ಣೆ ಮುಡಿಕ್ಕೆ	8—5—0	8—5—0
ಸಿಪ್ಪೆಯುದ್ದ ಅಡಕೆ 1000ಕ್ಕೆ	8—4—0	8—12—0
ಗೇರುಬೀಜ ಮುಡಿಗೆ	3—12—0	3—12—0
ಕಬ್ಬಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	15—8—0	16—8—0

ಜಗತ್ತನ್ನೇ ಆಳುವದು-ಜರ್ಮನಿಯ ಧ್ಯೇಯ

ಇಂಗ್ಲಂಡ ಫ್ರಾನ್ಸುಗಳು ಮೊದಲು ಹುಡಿಯಾಗುವವು

ಮಧ್ಯಯುರೋಪದ ರಾಷ್ಟ್ರಗಳನ್ನು ಒಂದಾದ ಮೇಲೆ ಒಂದರಂತೆ ಅಟಕಾಯಿಸುತ್ತ ಹೋಗುವ ಹಿಟ್ಲರನ ಕೊನೆಯ ಆಸೆ ಯಾವುದಾಗಿರಬಹುದೆಂದು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳುವರು. ಮೊದಲು ರ್‍ಹೈನಲೇಂಡನ್ನು ಪಡೆದ ಮಾತ್ರದಿಂದ ಸಂತುಷ್ಟನಾಗಬಹುದೆಂದು ಜನರು ಊಹಿಸಿದ್ದ ಹಿಟ್ಲರನು ಈಗ ಆಸ್ಟ್ರಿಯ, ಝೆಕೊಸ್ಲೋವೇಕಿಯ, ಮೊದಲಾದ ಹಲವಾರು ರಾಷ್ಟ್ರಗಳನ್ನು ಜರ್ಮನಿಗೆ ಸೇರಿಸಿಯೂ ತೃಪ್ತನಾಗಿರುವಂತೆ ಕಾಣುವುದಿಲ್ಲ. ಈಗ ಹಿಟ್ಲರನ ಕಣ್ಣು ಪೂರ್ವದಲ್ಲಿ ಯೂಕ್ರೈನಿನ ಮೇಲೆ, ದಕ್ಷಿಣದಲ್ಲಿ ಆಫ್ರಿಕದ ವಸಾಹತುಗಳ ಕಡೆಗೆ ಇರುವುದೆಂದು ಕೆಲವು ರಾಜಕಾರಣ ಪುರುಷರು ಹೇಳುವರು. ಆದರೆ ಹಿಟ್ಲರನು ಯೂಕ್ರೈನು ಮತ್ತು ವಸಾಹತುಗಳನ್ನು ಪಡೆದ ಮೇಲಾದರೂ ತೃಪ್ತನೆ? ಅವನ ರಾಕ್ಷಸೀ ಮಹತ್ವಾಕಾಂಕ್ಷೆಯು ಅಲ್ಲಿಗೆ ಮುಗಿಯುವುದೆ? ಎಂದು ಕೇಳಿದರೆ 'ಹೌದು' ಎಂದು ಯಾರೂ ಹೇಳಲಾರರು!

ಜರ್ಮನಿಯ ಪರರಾಷ್ಟ್ರ ನೀತಿಯು ಇಡೀ ಜಗತ್ತನ್ನು ಜರ್ಮನಿಗೆ ಸೇರಿಸಿಕೊಂಡು ಅದನ್ನು ಮುಷ್ಟಿಯಿಂದ ಆಳುವುದಾಗಿದೆ ಎಂದು ಲಂಡನಿನ ಒಂದು ಸಭೆಯಲ್ಲಿ ಡಾಂಜಿಂಗ್‌ದ ಸೆನೇಟದ ಅಧ್ಯಕ್ಷ ಡಾಕ್ಟರ್ ಹರ್ಮನ್ ರೋಶ್ನಿಗ್ ಎಂಬವರು ಒಂದು ಮಹತ್ವಪೂರ್ಣದ ಭಾಷಣವನ್ನು ಕೊಟ್ಟರು. ಮಧ್ಯ ಯುರೋಪದಲ್ಲಿ ತಾನೇತಾನಾಗಿ ಮೆರೆಯುವುದು, ಅಥವಾ ದಕ್ಷಿಣ ಆಫ್ರಿಕದ ಕೆಲವು ವಸಾಹತುಗಳನ್ನು ಹೇಗೂ ಮಾಡಿ ಸಂಪಾದಿಸಿ ಅಲ್ಲಿಯೂ ಜರ್ಮನ ಸಾಮ್ರಾಜ್ಯದ ಧ್ವಜವನ್ನು ಊರುವುದು-ಇದು ತಾನೇ ಜರ್ಮನ ನಾಝಿಗಳ ಉದ್ದೇಶವಾಗಿರುವುದಿಲ್ಲ. ಇಷ್ಟನ್ನು ಅವರು ಸುಲಭವಾಗಿ ಸಂಪಾದಿಸಬಲ್ಲರೆಂದು ಅವರಿಗೆ ತಿಳಿದೇ ಇದೆ.

ಇಂಗ್ಲಂಡ ಫ್ರಾನ್ಸುಗಳ ಮೇಲೆ ಕಣ್ಣು

ಜಗತ್ತನ್ನೇ ಆಳಬೇಕೆಂಬ ಉದ್ದೇಶವು ಜರ್ಮನಿಗೆ ಇದೆ. ಆ ಉದ್ದೇಶವನ್ನು ಸಾಮ ದಾನ ಭೇದದಂಡ —ಚತುರೋಪಾಯಗಳಿಂದಲೂ ಸಾಧಿಸಲಿಕ್ಕೆ ಜರ್ಮನಿಯು ಸಂಕಲ್ಪಿಸಿದೆ. ಜರ್ಮನ ನಾಝೀ ಪ್ರಚಾರವು ಈಗ ಯುರೋಪದಲ್ಲಿ ಮಾತ್ರವಲ್ಲ-ಇಡೀ ಜಗತ್ತಿನಲ್ಲಿ ಆರಂಭವಾಗಿರುವುದು. ಆ ಪ್ರಚಾರವು ನಡೆಯದ ದೇಶವು ಇಲ್ಲವೇ ಇಲ್ಲ. ಈಗ ಇಂಗ್ಲಂಡ ಫ್ರಾನ್ಸುಗಳ ಮೇಲೆ ನಾಝಿಗಳ ಕಣ್ಣು ವಿಶೇಷವಾಗಿರುವುದು. ಅಲ್ಲಿಯೇ ಮೊದಲು ನಾಝಿಗಳ ಸೂತ್ರ ಸಂಚಾಲನವಾಗಿ ಅದನ್ನು ಜರ್ಮನ ಸಾಮ್ರಾಜ್ಯಕ್ಕೆ ಸೇರಿಸಿಬಿಡುವ ಪ್ರಯತ್ನಗಳಾಗುವವು ಎಂದು ಡಾಕ್ಟರ ಹರ್ಮನರು ಹೇಳಿದರು. ಆದುದರಿಂದ ಜರ್ಮನ ನಾಝಿಗಳ ಕಾರ್ಯಕ್ರಮದಂತೆ ಕೆಲಸಗಳು ಜರಗಲಿಕ್ಕೆ ಪರಿಸ್ಥಿತಿಯು ಅನುಕೂಲವಾದರೆ ಮೊದಲು ಫ್ರಾನ್ಸು ಇಂಗ್ಲಂಡಗಳು ಹುಡಿಹುಡಿಯಾಗುವುವು. ಹಿಟ್ಲರನು ಮೊದಲು ಅವನ್ನೇ ನುಂಗುವನು.

ಜರ್ಮನಿಗೆ ವಸಾಹತುಗಳು

ಶೀಘ್ರದಲ್ಲಿಯೇ ಜರ್ಮನಿಗೆ ಅದರ ಹಿಂದಿನ ವಸಾಹತುಗಳು ದೊರೆಯಲಿವೆ ಎಂದು ಜರ್ಮನರು ತಿಳಕೊಂಡಿದ್ದಾರೆ. ಆದುದರಿಂದ ವಸಾಹತುಗಳು ಜರ್ಮನಿಗೆ ಸೇರಿದ ಸಂದರ್ಭದಲ್ಲಿ ನಾಝಿ ಕ್ರಮಗಳಿಗನುಸಾರ ಅವುಗಳ ವ್ಯವಸ್ಥಿತವಾಗಲಿಕ್ಕೆ ಈಗಿನಿಂದಲೇ ಸಿದ್ಧತೆಗಳು ಆಗಿರುವುವು. ಮಾತ್ರವಲ್ಲ, ಜರ್ಮನಿಗೆ ವಸಾಹತುಗಳು ಯಾಕೆ ಬೇಕು ಎಂಬ ಕುರಿತೂ ಜರ್ಮನಿಯಲ್ಲಿ ನಾಝಿಗಳ ಪ್ರಬಲ ಪ್ರಚಾರ ಕಾರ್ಯವು ನಡೆದಿರುವದು. ವಸಾಹತುಗಳು ಬೇಕೆಂಬುದಕ್ಕೆ ನಾಝಿಗಳು ಕೊಡುವ ಕಾರಣಗಳು ತುಂಬ ಮನೋರಂಜಕವಾಗಿವೆ. ಅವುಗಳಲ್ಲಿ ಮುಖ್ಯವಾದುದೆಂದರೆ—ವಸಾಹತುಗಳನ್ನು ಆಳಲಿಕ್ಕೆ ಜರ್ಮನಿಗೆ ಇರುವ ಯೋಗ್ಯತೆ! ಜರ್ಮನಿಯು ಆಳುವ ರಾಜ್ಯಗಳಲ್ಲಿ ಉತ್ಕೃಷ್ಟವಾಗಿರುವುದು. ಅದರಷ್ಟು ಶ್ರೇಷ್ಠವಾದ ಜನಾಂಗವು ಪ್ರಪಂಚದಲ್ಲಿ ಇನ್ನೊಂದಿರುವುದಿಲ್ಲ ಮತ್ತು ಆಫ್ರಿಕವು ಆಳಿಸಿಕೊಳ್ಳುವ ರಾಜ್ಯಗಳಲ್ಲಿ ಅತ್ಯಂತ ನಿಕೃಷ್ಟವಾಗಿರುವದು. ಅದರಷ್ಟು ಹೀನವಾದ ಜನಾಂಗವು ಪ್ರಪಂಚದಲ್ಲಿ ಬೇರೆ ಇಲ್ಲ. ಅದ್ದರಿಂದ ಆಫ್ರಿಕದ ಹಿಂದುಳಿದ ಜಾತಿಗಳನ್ನು ಆಳುವ ಅಧಿಕಾರವು ಕೇವಲ ಜರ್ಮನರಿಗೆ ಮಾತ್ರ ಇರುತ್ತದೆ. ಅದ್ದರಿಂದ ಆಫ್ರಿಕದ ವಸಾಹತುಗಳು ಜರ್ಮನಿಗೆ ಬೇಕೇ ಬೇಕು! ಹೀಗೆಂದು ಜರ್ಮನಿಯಲ್ಲಿ ಪ್ರಚಾರ ನಡೆದಿದೆ!!

ಆಶೆ ಪೂರ್ಣವಾಗುವ ಮೊದಲು ನಾಶ

ಪರಂತು ಜಗತ್ತನ್ನು ಆಳುವ ಜರ್ಮನಿಯ ಆಶೆಯು ಪೂರ್ಣವಾಗುವ ಮೊದಲೇ ಅದರ ಸಂಪೂರ್ಣ ನಾಶವಾಗಬಹುದೆಂದು ಸ್ಟಾಲೀನನು ಒಂದು ಭಾಷಣದಲ್ಲಿ ಭವಿಷ್ಯ ಹೇಳಿದ್ದಾನೆ. ಜರ್ಮನಿ, ಇಟೆಲಿ, ಜಪಾನ ಮೊದಲಾದ ರಾಜ್ಯವಿಸ್ತರಣೆಯ ರಾಕ್ಷಸೀ ಮಹತ್ವಾಕಾಂಕ್ಷೆಯುಳ್ಳ ರಾಷ್ಟ್ರಗಳು ಭಾವೀ ಯುದ್ಧಕ್ಕಾಗಿ ಎಷ್ಟು ಖರ್ಚು ಮಾಡಬಹುದಾಗಿದೆಯೋ ಅಷ್ಟನ್ನು ಈಗಲೇ ಮಾಡಿಬಿಟ್ಟಿರುವುವು. ಈ ರಾಷ್ಟ್ರಗಳ ಹತ್ತಿರ ಈಗ ಕಾದಿಟ್ಟ ನಿಧಿಯು ಏನೂ ಇರುವುದಿಲ್ಲ. ಆದುದರಿಂದ ಇನ್ನೊಂದು ಯುದ್ಧವು ಆರಂಭವಾದ ಕೆಲವೇ ದಿನಗಳಲ್ಲಿ ಊಟಕ್ಕೆ ಅನ್ನ, ಉಡಲಿಕ್ಕೆ ಬಟ್ಟೆ, ಖರ್ಚಿಗೆ ಒಂದು ಕಾಸು ಕೂಡ ಇಲ್ಲದೆ ಈ ರಾಷ್ಟ್ರಗಳು ನೆಲದ ಮೇಲೆ ಮುಗ್ಗರಿಸಿ ಬಿದ್ದು ಮಣ್ಣು ಮುಕ್ಕಬೇಕಾಗುವುದು. ಹಾಗೆ ನೋಡಿದರೆ ಕಾಲು ನೀಡದ ದುರ್ಖಾನ ಸ್ಥಿತಿ ಹೇಗೋ, ಈ ರಾಷ್ಟ್ರಗಳ ಸ್ಥಿತಿಯು ಹಾಗಾಗಿದೆ. ಇವು ಮುಂದಿನ ಉಪಯೋಗಕ್ಕೆ ಎಂಬಂತೆ ಏನನ್ನು ಕಾದಿಡದೆ, ಎಲ್ಲವನ್ನು ಈಗಲೇ ಖರ್ಚು ಮಾಡಿಬಿಡುವ ದುಂದುಗಾರನ ಹಾಗೆ ಇರುವದರಿಂದ ಈ ರಾಷ್ಟ್ರಗಳ ಪತನವು ಖಂಡಿತ. ಇವು ಇನ್ನು ಹೆಚ್ಚು ಕಾಲ ಮೆರೆಯಲಾರವು.

ಯೂಕ್ರೈನಕ್ಕೆ ದಾಳಿ ಇಟ್ಟರೆ

ಸಂಪತ್ಸಮೃದ್ಧವಾದ ಯೂಕ್ರೈನಕ್ಕೆ ಹಿಟ್ಲರನು ದಂಡೆತ್ತಿ ಹೋದರೆ ಏನಾಗಬಹುದೆಂಬುದನ್ನು ಪಾವಲ್ ಎಂಟರ್‌ಟನ್ ಎಂಬವರು ನ್ಯೂಸ್ ಕ್ರಾನಿಕಲಿನಲ್ಲಿ ಸೊಗಸಾಗಿ ವರ್ಣಿಸಿದ್ದಾರೆ: "ಝೆಕೊಸ್ಲೋವೇಕಿಯ, ಬೊಹೆಮಿಯಾ, ಮೆಮೆಲ್ ಮೊದಲಾದ ರಾಷ್ಟ್ರಗಳನ್ನು ಕಬಳಿಸುವುದು ಹಿಟ್ಲರನಿಗೆ ಎಷ್ಟು ಸುಲಭವಾಗಿತ್ತೋ, ಯೂಕ್ರೈನನ್ನು ಕಬಳಿಸುವುದು ಹಿಟ್ಲರನಿಗೆ ಅಷ್ಟು ಸುಲಭವಲ್ಲ. ಆಸ್ಟ್ರಿಯ, ಝೆಕೊಸ್ಲೋವೇಕಿಯ, ಮೆಮೆಲ್ ಮೊದಲಾದ ರಾಷ್ಟ್ರಗಳಲ್ಲಿ ವಾಸವಾಗಿದ್ದ ಜರ್ಮನ ಅಲ್ಪಸಂಖ್ಯಾಕ ತಂಡವು ಹಿಟ್ಲರನಿಗೆ ಸಂಪೂರ್ಣ ಸಹಕಾರ ಸಹಾಯಗಳನ್ನು ಕೊಟ್ಟುದರಿಂದ ಹಿಟ್ಲರನಿಗೆ ಆ ರಾಜ್ಯಗಳಲ್ಲಿ ಸಂಪೂರ್ಣ ಸಫಲತೆಯು ಪ್ರಾಪ್ತವಾಯಿತು. ಆದರೆ ಹಾಗೆ ಅವನಿಗೆ ಸಹಾಯ ಮಾಡಲಿಕ್ಕೆ ಯೂಕ್ರೈನಿನಲ್ಲಿ ಹಿಟ್ಲರನೊಡನೆ ಸಹಾನುಭೂತಿಯನ್ನು ಇಟ್ಟಿರುವ ಜರ್ಮನ ತಂಡವು ಇರುವುದಿಲ್ಲ. ಯೂಕ್ರೈನಿನ ನಿವಾಸಿಗಳು ಸ್ಟಾಲೀನನನ್ನು ಪ್ರೀತಿಸುವರು ಮಾತ್ರವಲ್ಲ, ಹಿಟ್ಲರನನ್ನು ಬಹಳವಾಗಿ ದ್ವೇಷಿಸುವರು. ಸ್ಟಾಲಿನನು ಯೂಕ್ರೈನಿನವರಿಗೆ ಪ್ರಾಂತಿಕ ಸ್ವರಾಜ್ಯಗಳನ್ನು ಕೊಟ್ಟು ಅವರ ಇತ್ಯೋಪಕಿಸಿಯ ಅಭಿವೃದ್ಧಿಗೆ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟಿರುವನು. ಯೂಕ್ರೈನಿನ ಮೇಲೆ ಪರರಾಷ್ಟ್ರಗಳ ಆಕ್ರಮಣದ ಭಯವು ಎಳ್ಳಷ್ಟು ಕೂಡ ಇಲ್ಲದಿರುವುದರಿಂದ ಯೂಕ್ರೈನಿನ ರಾಜಧಾನಿಯನ್ನು ಸ್ಟಾಲೀನನು ಖಾರ್ಕೋವದಿಂದ ಕೀವ್ ಎಂಬ ಗಡಿನಾಡಿನ ಪಟ್ಟಣಕ್ಕೆ ವರ್ಗಾಯಿಸಿದ್ದಾನೆ. ಯೂಕ್ರೈನನ್ನು ಪ್ರವೇಶಿಸಿ ಹಿಟ್ಲರನ ಜಪಜಯಂಗಲಿಕ್ಕೆ ಅವನು ಕೇವ ತನಕ ಸೇನಾ ಸಂಚಲನ ಮಾಡಬೇಕಾಗಿಲ್ಲ. ಅವನು ಯೂಕ್ರೈನಿಗೆ ಕಾಲಿಟ್ಟಾಗಲೇ ಧೀರವೀರರೂ ಸ್ವಾತಂತ್ರ್ಯಪ್ರಿಯರೂ ಆದ ಯೂಕ್ರೈನರು ಅವನನ್ನು ಎದುರಿಸ ನಿಲ್ಲುವರು. ಮೊದಲ ಹೆಜ್ಜೆ ಇಟ್ಟಾಗಲೇ ಹಿಟ್ಲರನ ತೇಜೋಭಂಗವಾಗುವುದು"— ಎಂದು ಎಂಟರ್‌ಟನ್ನರು ಬರೆದಿರುವರು.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ನೋಟಿಸು

ಕಾರ್ಕಳ ಡಿ| ಮುನ್ಸಿಫ್ ಕೋರ್ಟಿನಲ್ಲಿ ಕ್ರಮಸಂಖ್ಯೆ 383/1935 R. I A. No. 90/39

ಕೆ. ಪಿ. ಶೇಷಗಿರಿ ಪ್ರಭು ಸಾಹು	ವಾದಿ
ಕಾರ. ಪುಲ್ಕೇರಿ ಸುಬ್ರಾಯಪ್ರಭುಗಳವರ ಮಗ ಕಾರ್ಕಳ ಕಸಬಾ ಪೇಟೆಯಲ್ಲಿರುವವ -	ಅರ್ಜಿದಾರ
ಮತ್ತು	
1 ಮರ್ಕಾಡಿ ಸೀತಾರಾಮ ನ್ಯಾಕ	ಪ್ರತಿವಾದಿರು ಎದ್ರಿ ಅರ್ಜಿದಾರರು
2 ಮರ್ಕಾಡಿ ಅಣ್ಣಪ್ಪ ನ್ಯಾಕ	
3 ರಂಗನಾಥಪ್ಪ	

ಇವರೊಳಗೆ

1 ನೇ ರಾಮ ನ್ಯಾಕ-ಮರ್ಕಾಡಿ ಕೃಷ್ಣಪ್ಪ ನ್ಯಾಕರ ಮಗ. C/o Miyar Vamana Nayak Esq 64 Krishna Nivas, Hindu Colony Dadar Bombay No 14 ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಅರ್ಜಿ ವ್ಯವಹಾರದಲ್ಲಿ ಕ್ಲೈ.. ಎದ್ರಿ ಅರ್ಜಿದಾರನ ಪಟ್ಟಿಗೆ ಮಾತ್ರ ಫ್ರೀಲಿಮಿನರಿ ಡಿಕ್ರಿಯನ್ನು ಸ್ಕೇಲ್ ಡೌನ್ ಮಾಡಬೇಕಾಗಿಯೂ 1-2ನೇ ಅರ್ಜಿದಾರರ ಪಟ್ಟಿಗ ಸದ್ರಿ ಡಿಕ್ರಿಯನ್ನು ಊರ್ಜಿತವಿಡಬೇಕಾಗಿಯೂ ಸಹ ಸಿವ್ರುತ್ತಿ ಕೇಳಿ ಅರ್ಜಿದಾರನು ಬರಕೊಂಡ ಸದ್ರಿ ಅರ್ಜಿಯು 1ನೇ ಎದ್ರಿ ಅರ್ಜಿದಾರಗೆ ನೋಟೀಸಿನ ಬಗ್ಗೆ ತಾ 24-4-1939ರಲ್ಲು ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಇಡಲ್ಪಟ್ಟಾಗಿಯದ. ಈ ಕರಿತು ನೀವೇನಾದರೂ ಆಕ್ಷೇಪಿಸುವುದಿದ್ದರೆ ಸದ್ರಿ ತಾರೀಕಿನಲ್ಲು ಹಾಜರಾಗಿ ನೀವು ವ್ಯವಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷವಾಗಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾದೀತು ಎಂಬದಾಗಿ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

By Order of the Court,

ಕಾರ್ಕಳ 3-4-1939 | K. L. Kudva, Pleader for Petitioner

ಬೇಕಾಗಿದ್ದಾರೆ. ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ.

ಬೂಟ್ಸು ಬೂಟ್ಸುಗಳಿಗೆ ಬೇಕಾಗಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರೆಯುತ್ತದೆ

Allamgir Leather Store,
28 Meachua Bazar St, CALCUTTA

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.
ಡಾ ಜಸಾನಿಯವರ
ಜಗತ್ಪ್ರಸಿದ್ಧ
ಗೊನೋಕಿಲರ್ (ರಜಿಸ್ಟರ್ಡ್)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಿಮ್ಮ ವ್ಯಾಧಿಯ ವಿಷಯ ತಿಳಿಸಿ ಕೊಂಡು ನಮ್ಮ ಗೊನೋಕಿಲರ್ ಇರುತ್ತದೆ ಎಂಬುದನ್ನು ನೆನೆಯಿರಿ.

ಮೂಲಿಕೆಗಳಿಂದಿನ ಅತ್ಯಂತ ಔಷಧ. ಆಂಗ್ಲೇಯ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೆ ಇನ್‌ಜೆಕ್ಷನ್ ಔಷಧಿಕಾರಿ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸುತ್ತಿರುವ ತೀವ್ರರೋಗವಾಗಿದ್ದರೂ, ಗೋನೋರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುಕೊಳ್ಳುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಸ್ವಪ್ನಾವಸ್ಥೆಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತು ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ
50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು 6 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.
Sole Manufacturer: **Dr. D. N. JASANI,** Vithalbhai Patal Road, BOMBAY
ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.
ಸ್ಟಾಕಿಸ್ಟ್—ಮೆಸರ್ಸ್ ಎ. ಫೆರ್ನಾಂಡಿಸ್ ಮತ್ತು ಕಂಪೆನಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್, ಮಂಗಳೂರು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST PAULS CHURCH,
Bolkonje Post, S K
Dated 4 h Jan. 1939

To
THE JOINT MANAGERS,
The C. P. C. Co Ltd., Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress.

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Public.

Renewing my thanks I remain
Yours Sincerely
(Sd.) P W Farias

Sri Parshwanathaswami,
PANCHAKALYANA POOJA MAHOSTHAM
Venur, 5 [illegible] 1939

To,
THE JOINT MANAGERS
The Combind Booking Agency Mangalore

Dear Sirs,

Please permit us to express our thanks on behalf of the above committee for the [illegible] Service rendered by the Combined Booking Agency Staff at Venoor to the visitors of the Panchakalyana Pooja Mahosthamam celebration held this year.

Our thanks are also due to Mr. [illegible] Booking Clerk Mr. B. Krishnaiya [illegible] his [illegible] mates and Mr. [illegible] Bhandar who had specially come down from Mangalore to see to the [illegible] Public. Thanking you [illegible]

We remain Yours faithfully

Venoor (Sd.) B Chandappa Indra (*Secretary P M Council*) (Sd.) M Jagathpal (Sd.) M Pachappa Shetty
Dated 6-2-39 (Sd.) Anantharaj Shetty (*Members Panchakalyana Mahosthamam Committee*)

JOINT MANAGERS.

The Combined Booking Agency, MANGALORE

The Joint Booking Office, KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTD 1906
CANARA BANK. LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ವಕ್ರವಾತ ಮೊದಲಾದ [illegible] ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಗಜ್ಜಿ, ತುರಿಕೆ, ತುಂಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY MADRAS CALCUTTA

ಸ್ವದೇಶಾಭಿಮಾನಿ

ವಾರ್ಷಿಕ ಚಂದಾ ರೂ 2—0—0

Established 1906 • Regd. No. M 3406

ಸಂಪುಟ ೩೩] ತಾರೀಖು ೭–೪–೧೯೩೯ (7–4–1939) [ಸಂಚಿಕೆ ೧೪

THE

BOMBAY LIFE ASSURANCE COMPANY, LTD.,

(Estd 1908.)

It is not material how much you can earn every month, but it is most important how much you save, so that you and your family can have uniform minimum comforts at a time when your income reduces or comes to nothing.

Best place it invest your such savings on a captalized value is THE BOMBAY LIFE ASSURANCE CO., LTD. which gives you best security and service.

Honest, Energetic and Influential persons will have great opportunity to help the cause of society and also to earn a permanent and decent remuneration

— *Apply to* — **KOCHIKAR BROTHERS, LIMTED,**

Madras Branch Secretaries

The Bombay Life Assurance Co. Ltd.,

The Bombay Life Building Gandhinagar UDIPI

or any of our following offices:

Post Box No 337
Mount Road
Madras

Visweshwarapuram Circle
Bangalore City

Charni Road
Girgaum
BOMBAY 4

Car Street,
Mangalore

Puthiyara,
Calicut

Central Station Road,
Trivandrum

Ottapalam,
S. Malabar

MAKE LIFE WORTH-LIVING!

Indigestion Insomnia Dry Cough
Nervousness Weak Heart &c
these make you wiery of Life!

CONSULT US AND BUY
YOUR LIFE'S HAPPINESS!

Oils — that cool the brain and induce sleep
Lehas — that build up your wasted system
Asavas — that regenerate your jaded nerves

All Genuine Ayurvedic Preparations-

from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N. KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ ಒಣ ಕೆಮ್ಮು
ನರಗಳ ಅಬಲತೆ ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನಿರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ–ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ ಲೇಹಗಳ
ನಿಶ್ಶಕ್ತ ನರಗಳಲ್ಲಿ ಹೊಸ ಚೈತ್ರವನ್ನು ಹರಿಸುವ ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

(ಬ್ರಾಂಚ್, ಕುಮಟಿ, ಉತ್ತರ ಕನ್ನಡ)

Edited, Printed & Published by A S Kamath at the Sharada Press Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 14—4—1939 ತಾರೀಖು ೧೪ ೪—೧೯೩೯

ತಂಜಾವೂರಿನ ಚೋಳ ದೇವಾಲಯವೆನಿಸಿದ ಬೃಹದೀಶ್ವರ ಗುಡಿ

ಇದು 11ನೇ ಶತಮಾನದ ಉತ್ತಮ ರಚನೆಯೊಂದು

Photo by K S Kamath

ಸಚಿತ್ರ ವಾರ ಪತ್ರಿಕೆ

SUCH A LITTLE MOSQUITO!

The Tiger, The Mosquito, The Sparrow and The Owl.

The great forest was more than ordinarily alive that night which was not to be wondered at, as it was a Saturday, the day when all the beasts come together for their weekly meeting. The King of Beasts arrived, then the tiger, the artful fox, the squirrels, the hares; all the birds of the region right down to the smallest inhabitants of the forest.

The meeting was just about to close when the tiger, who was in the chair, stated: "In conclusion, we are the animals most feared by men, for some of us devour as many as 50 a year".

"Buzz, Buzz!" hummed the mosquito: "I don't agree!"......

"Who?......What?......" exclaimed the tiger, whilst the mosquito drew a little nearer and alighted on a branch close to his nose.

"I'm telling the truth, Mr. Tiger,.... We, humble mosquitoes are much more dangerous to humanity!"

"Ha-ha-ha!......Ho-ho-ho!" said the tiger, laughing so heartily that the branches of the trees shook.

"Nevertheless, it is a fact: our male and female Cousins of Eastern countries, the malaria mosquitoes contaminate tens of thousands of people in a single year, who die of fevers. Compared with this, Mr. Tiger, what are your 40 or 50 men that are devoured by you and your friends? You must realise that men are defenseless, as soon as we have bitten them".

Dead silence reigned over the forest. One of the strongest and most feared of animals was there in front of all the other beasts, ashamed and in confusion, humiliated by the feeble insect, who had dared to make such an insulting speech to the powerful tiger.

Everyone felt that at any moment, the relentless tyrant might get into a rage and sow death and destruction all round him.

At this juncture the sparrow saved the situation, the cheeky sparrow used to flirting with death, the sparrow of the town and gardens; he spoke up and said: "I am only a poor little sparrow and I don't feel important enough to take part in a conversation of this kind; but I know something about men, as I have a good view of them when I pick up crumbs in their gardens or on their window-sills. Thus, Mr. Tiger, I can say that the mosquito is mistaken. What he said used to be true, but now man has beaten the mosquito with qui-qui-qui-nine! That's what they call it. When men take some tiny white balls every day (they say 5 grains of quinine in their language), the mosquito can't do any thing to them! Men who are already ill are cured by this remedy when the sun has risen seven times and they have taken to 20 grains of quinine everyday. The mosquito would do better to keep quiet."

The meeting breathed again, but the mosquito was just going to attack the sparrow when the alarm has given by the watchful owl.

The meeting broke up and the animals only just had time to fly from a nocturnal hunter, whose bullets missed their mark, thanks to the vigilance of the brave owl.

Mal. E. No. 51.

ಎಂಡ್ರೂಸ್ ಲಿವರ್ ಸೋಲ್ಟ್

ಎಂಡ್ರೂಸ್ ಬಾಟ್ಲಿಗಳಿಗಿಂತಲೂ ಟಿನ್ನುಗಳಲ್ಲಿ ಉತ್ತಮವಾಗಿ ನಿಲ್ಲುತ್ತದೆ

ದರ್ಜೆಗಳಲ್ಲಿಯ ಸಂಶೋಧನೆಯ ಪರಿಣಾಮವಾಗಿ ಎಂಡ್ರೂಸ್ ಲವಣವು ಬಾಟ್ಲಿಗಳಿಗಿಂತಲೂ ಟಿನ್ನುಗಳಲ್ಲಿ ಉತ್ತಮವಾಗಿರುತ್ತದೆಂದು ಕಂಡುಹಿಡಿಯಲ್ಪಟ್ಟಿದೆ. ಆದುದರಿಂದ ಈ ಉತ್ತಮವಾದ ಎಂಡ್ರೂಸ್ ಲವಣವನ್ನು ಟಿನ್ನುಗಳಲ್ಲಿಯೇ ಕೊಂಡುಕೊಳ್ಳುವಂತೆ ನಮ್ಮ ಸಲಹೆ. ಆದರೆ ಬಾಟ್ಲಿಗಳೇ ಬೇಕೆನ್ನುವವರಿಗೆ ಬಾಟ್ಲಿಗಳಲ್ಲಿ ಕೂಡಾ ದೊರೆಯುತ್ತದೆ.

ಮೊದಲಾಗಿ ಪ್ರಾರಂಭಿಸಿರಿ—ಪ್ರತಿ ಮುಂಜಾನೆ ಒಂದು ಚಮಚೆಯಷ್ಟು ಎಂಡ್ರೂಸ್ ಲವಣವನ್ನು ಒಂದು ವಾರದ ತನಕ ಸೇವಿಸಿರಿ—ಇದು ನಿಮ್ಮ ಆರೋಗ್ಯವನ್ನು ಕಾಪಾಡುವುದು—ಎಂಡ್ರೂಸನ್ನು ಯಾವಾಗಲೂ ಕೊಂಡುಕೊಳ್ಳಿರಿ.

ಎಂಡ್ರೂಸ್ ಲವಣ ಬೇರೆ ಭೇದ ಲವಣಗಳಿಂದ ಉತ್ತಮವಾದ ನಿಧಾನವಾಗಿ ಉಕ್ಕಿ ಬರುವ ಒಂದು ಗುಣವುಳ್ಳದ್ದು. ಈ ಗುಣದ ಸಂಗತಿಯಿಂದ ಅಂಗಾಂಗವು ವಾಯುವಿಗೆ ಹೊಟ್ಟೆಯೊಳಗಿನ ಹರಿಯನು ಆರೋಗ್ಯವಾಗಿಸುವ ಗುಣವಿರುವುದು.

ಎಂಡ್ರೂಸ್ ಲವಣದಿಂದ ಉತ್ತಮ ಗುಣವನ್ನು ಪಡೆಯಬೇಕಾದರೆ ಎರಡು ಚಮಚೆಯಷ್ಟು ಲವಣವನ್ನು ಒಂದು ಗ್ಲಾಸು ನೀರಿನಲ್ಲಿ ಹಾಕಿ ಕದಡಿಸಿರಿ—ಅದು ಉಕ್ಕಿ ಬರುತ್ತಿರುವಾಗಲೇ ಕುಡಿಯಿರಿ.

ಟಿನ್ನುಗಳಲ್ಲಿ ಬಾಟ್ಲಿಗಳಲ್ಲಿದ್ದಷ್ಟೇ ಪರಿಮಾಣದ ಲವಣವಿರುವುದು. ಆದರೆ ಬೆಲೆಯು ಕಡಿಮೆ.

ಎಲ್ಲಾ ಉಕ್ಕಿ ಬರುವ ಗುಣವುಳ್ಳ ಲವಣಗಳಿಗಿಂತಲೂ ಎಂಡ್ರೂಸ್ ಲವಣವು ಜಗತ್ತಿನಲ್ಲಿ ಹೆಚ್ಚಾಗಿ ಮಾರಲ್ಪಡುತ್ತದೆ. ಇದರ ತಯಾರಿಕೆಯು ಸಮಯ ಕೈ ಸೋಂಕುವುದಿಲ್ಲ.

ದೊಡ್ಡ ಟಿನ್ನು (8 ಔನ್ಸು) (ಬಾಟ್ಲಿಗಳಲ್ಲಿದ್ದಷ್ಟೆ ಲವಣವಿರುವುದು) ರೂ. 1-4-0
ಸಣ್ಣ ಟಿನ್ನು (4 ಔನ್ಸು) ರೂ. 0-11-0

ಹಳೆಯ ಬಾಟ್ಲಿಗಳ ಕ್ರಯ

8 ಔನ್ಸು ರೂ. 1-10-0
4 ಔನ್ಸು ರೂ. 1-0-0

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

ನೀವು ಈ ಕೆಳಗಿನವುಗಳಿಂದ ನರಳುವಿರಾದರೆ ಎಂಡ್ರೂಸ್ ಲವಣವು ಅಗತ್ಯ

ಪಿತ್ತ ವಿಕಾರ	ಎದೆಯುರಿ
ಮಲಬದ್ಧತೆ	ಆಯಾಸಕ್ತಿ
ಪಾಚಕದೋಷ	ಅರುಚಿ
ಬವಳಿ	ಬಲು ಹೀನತೆ
ತಲೆನೋವು	ಮುಕ್ಕತ್ತಿನ ದೋಷ

ಅಂತರ್ ಶುದ್ಧಿಗೆ
ಎಂಡ್ರೂಸ್ ಲಿವರ್ ಸೋಲ್ಟ್

735

ANDREWS
LIVER SALT
for Inner Cleanliness

ಚೀನ ಜಪಾನ್ ಭೀಕರ ಸಂಗ್ರಾಮ

ಇಷ್ಟರ ತನಕ ಚೀನದ ಜಪಾನೀ ಆಕ್ರಮಣವನ್ನು ತಡೆಯಲಿಕ್ಕೆ ಮಾತ್ರ ವಿಶೇಷವಾಗಿ ಪ್ರಯತ್ನಿಸುತ್ತಿದ್ದ ಚೀನೀ ಸೇನೆಯು ಈಗ ಜಪಾನೀ ಸೇನೆಯ ಮೈಮೇಲೆ ಬಿದ್ದು ಅದನ್ನು ನಾಶ ಮಾಡಲಿಕ್ಕೆ ತೊಡಗಿದೆ. ಒಂದು ಲಕ್ಷ ಚೀನೀ ಸೈನಿಕರು ೧೯೩೭ನೇ ಇಸವಿಯ ಕೊನೆಯ ಭಾಗದಲ್ಲಿ ಜಪಾನು ಸ್ವಾಧೀನ ಮಾಡಿಕೊಂಡಿದ್ದ ಹೊಂಗಕೋ ಪ್ರಾಂತವನ್ನು ಸುತ್ತ ಬಳಸಿ ನಿಂತಿದೆ, ಒಳಮಂಗೋಲಿಯವನ್ನು ಜಪಾನಿಯರಿಂದ ಪುನಃ ಕಿತ್ತುಕೊಳ್ಳಲಿಕ್ಕೆ ಅಲ್ಲಿ ಎರಡು ಲಕ್ಷ ಸೈನಿಕರು ತಯಾರಾಗಿದ್ದಾರೆ. ದಕ್ಷಿಣಚೀನದಲ್ಲಿ ಜಪಾನಿಯರ ಸ್ವಾಧೀನವಿದ್ದ ಕೊಂಗಮೂನ ಮತ್ತು ಸಾಕ್ಕಿ ಎಂಬ ಎರಡು ಬಂದರಗಳು ಪುನಃ ಚೀನೀಯರ ವಶವಾದುವು. ಕ್ಯಾಂಟನನ್ನು ಮುಕ್ತಿ ಅನನ್ಸೀಗ ಪುನಃ ತಮ್ಮ ಸ್ವಾಧೀನಮಾಡಿಕೊಳ್ಳುವುದು, ಚೀನಿಯರಿಗೆ ತಮಗೆ ದೊರೆತ ಈ ವಿಜಯದಿಂದ ಸುಲಭವಾಗಿದೆ.

ಎಪ್ರಿಲ್ ತಿಂಗಳ ೫ರಿಂದ ಉತ್ತರದಲ್ಲೂ ದಕ್ಷಿಣದಲ್ಲೂ ಭಯಂಕರ ಕಾದಾಟವು ಆರಂಭವಾಗಿರುವುದು. ಎಲ್ಲ ಕಡೆಗಳಲ್ಲಿ ಜಪಾನಿಯರು ಸೋತು, ಪ್ರಾಣ ಉಳಿದರೆ ಸಾಕೆಂದು ಓಡಿಹೋಗುತ್ತಿದ್ದಾರೆ. ಜಪಾನಿಯರ ವಶವಾದ ಕೇಂಟನ್ ನಗರವನ್ನು ಚೀನಿಯರು ಉತ್ತರದಿಂದಲೂ ಪಶ್ಚಿಮದಿಂದಲೂ ಆಕ್ರಮಿಸಿದ್ದಾರೆ. ಅವರೀಗ ನಗರದಿಂದ ೧೨ ಮೈಲುಗಳಷ್ಟೇ ದೂರದಲ್ಲಿದ್ದಾರೆ.

ಶ್ಲೋಕ: ರಕ್ಷ್ಯೈರ್ಮಹಾರ್ಘೈಸ್ತು ಕುರ್ಮಾನ
ದೇವಾ । ನ ಭೇಜಿರೇ ಭೀಮ
ವಿಷೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಲಿಸುವನು ರತ್ನಗಳು
ಸಾ । ಗರನ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ! ಮತ್ತೆ
ವಿಶ್ವವ ಸುಡುವ ಬರುತಿರುವ ॥
ಗರಳಕವರಂಜದರೆ! ಸುಧೆಯನು
ಪಡೆತು ಶ್ರಮವಡದ
ತೆರದಿ ಕೈಕೊಂಡಿರೆ । ಕೆಲಸ ಬಲ್ಲರೆ!
ಕೈಬಿಡರು ಧೀರರು
ನಿಶ್ಚಿತಾರ್ಥವನು ॥

ತಾರೀಕು ೧೪—೪—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 14—4—1939

ಸ್ಪೈಯಿನ ಪ್ರಜಾಸತ್ತೆಯು ಮಣ್ಣುಪಾಲಾಯಿತು

ಪೋಪ ಗುರುಗಳ ಅಭಿನಂದನೆ — ಅಮೇರಿಕ ಸರಕಾರದ ಮನ್ನಣೆ

ಸ್ಪೈಯಿನ ಪ್ರಜಾಸತ್ತೆಯು ರೋಮನ ಕೆಥೊಲಿಕ ಹಿತಗಳಿಗೆ ವಿರೋಧವಾಗಿ, ಅದನ್ನು ಬಂಡಾಯಗಾರನಾದ ಜನರಲ್ ಫ್ರೆಂಕೋ ಮಣ್ಣುಪಾಲು ಮಾಡಿರುವದರಿಂದ ಸಂತುಷ್ಟರಾದ ಪೋಪ ಗುರುಗಳು ಫ್ರಾಂಕೋವಿಗೆ ಅಭಿನಂದನೆಯ ತಂತಿಯನ್ನು ಕಳುಹಿಸಿ ಕೊಟ್ಟಿದ್ದಾರೆ. ಸ್ಪೈಯಿನಲ್ಲಿ ಕೆಥೊಲಿಕರಿಗೆ ಸಮಕ್ಷತೆಯನು ಕೊಟ್ಟಿರುವದಕ್ಕಾಗಿ ಅವರು ಪರಮಾತ್ಮನಿಗೆ ಧನ್ಯವಾದವನ್ನು ಕೊಟ್ಟಿದ್ದಾರೆ. ಆದರೆ ಸ್ಪೈಯಿನ ಪ್ರಜಾಸತ್ತೆಯು ಕೆಥೊಲಿಕರಿಗೆ ಮಾಡಿದ ಅನ್ಯಾಯವೇನೆಂಬುದನ್ನು ಫ್ರಾಂಕೋವು ಕೆಥೊಲಿಕರಿಗೆ ಕೊಟ್ಟ ರಕ್ಷಣೆ ಎಂಥಹದೆಂಬುದನ್ನು ಪೋಪ ಗುರುಗಳು ತಿಳಿಸುವುದಿಲ್ಲ. ಅಬಿಸೀನಿಯವನ್ನು ಮುಸಲೋನಿ ಅನ್ಯಾಯವಾಗಿ ಆಕ್ರಮಿಸಿ ಅದನ್ನು ಇಟಲಿಗೆ ಸೇರಿಸಿದ್ದಾಗಲೂ, ಈಗ ದಿವಂಗತರಾಗಿರುವ ಹಿಂದಿನ ಪೋಪರು ಇದೇ ರೀತಿ ಮುಸಲೋನಿಗೆ ಅಭಿನಂದನೆಯನ್ನು ಕಳುಹಿಸಿಕೊಟ್ಟಿದ್ದರು. ಇವರ ನೀತಿಯನ್ನೇ ಇವರೂ ಅನುಸರಿಸಿದ್ದಾರೆ. ಅದು ಸಹಜವಾಗಿದೆ. ಪರಂತು ಅಬಿಸೀನಿಯವನ್ನು ಮುಸಲೋನಿ ನುಂಗಿದ್ದು, ಸ್ಪೈಯಿನಲ್ಲಿ ಫ್ರೆಂಕೋ ವಿಜಯಿಯಾದದ್ದು ಪರಮ ಅನ್ಯಾಯವೆಂದು ಪ್ರಪಂಚವೇ ಹೇಳುತ್ತಿರುವಾಗ ಪೋಪರುಗಳು ಮುಸಲೋನಿ–ಫ್ರಾಂಕೋ ಮೊದಲಾದವರ ಬೆನ್ನು ತಟ್ಟುವದು ಬಹಳ ಆಶ್ಚರ್ಯವನ್ನು ಜೀದವನ್ನು ಉಂಟುಮಾಡುತ್ತದೆ.

ಅಮೇರಿಕದ ಮನ್ನಣೆ

ಸ್ಪೈಯಿನ ಒಡೆಯನು ಜನರಲ್ ಫ್ರೆಂಕೋ ಅವನೆಪ್ಪನೇ ಆಗಿದ್ದಾನೆಂದು ಅಮೇರಿಕವು ಮನ್ನಿಸಿದೆ. ಇನ್ನು ಇತರ ಸರಕಾರಗಳ ಅಮೇರಿಕವನ್ನು ಅನುಸರಿಸಿದರೆ ಆಶ್ಚರ್ಯವಿಲ್ಲ. ಅಮೇರಿಕದ ಪ್ರಜಾಸತ್ತೆಯ ರಕ್ಷಣೆಗಾಗಿ ಅವರು ಮುಂದೆಂದು ಬಾಯಿ ಬಡಿದು ಕೊಳ್ಳುತ್ತಿದ್ದಾರೆ. ಸ್ಪೈಯಿನಲ್ಲಿ ಪ್ರಜಾಸತ್ತೆಯ ರಕ್ಷಣೆಗೆ ಅದು ತನ್ನ ನೈತಿಕ ಬೆಂಬಲವನ್ನು ಕೂಡ ಕೊಡಲಿಲ್ಲ. ಯುದ್ಧೋಪಕರಣಗಳು ಸ್ಪೈಯಿನಿಗೆ ಹೋಗಲಿಕ್ಕೇ ಕೂಡದೆಂದು ಅದು ನಿರ್ಬಂಧ ಹಾಕಿತು. ಫ್ರಾಂಕೋವಿಗೆ ಬೇಕಾದಷ್ಟು ಯುದ್ಧ ಸಾಮಗ್ರಿಗಳು ಇಟಲಿ–ಜರ್ಮನಿಯಿಂದ ದೊರೆಯುತ್ತಿದ್ದುದರಿಂದ ಅವನಿಗೆ ಅಮೇರಿಕದ ಈ ನಿರ್ಬಂಧದಿಂದ ನಷ್ಟವೇನೂ ಆಗಲಿಲ್ಲ. ಪರಂತು ಬೇರೆಲ್ಲಿಂದಲೂ ಅಂಥಾ ಸಾಮಗ್ರಿಗಳೆನ್ನು ಒದಗಿಸಿಕೊಳ್ಳಲಾರದ ಸ್ಪೈಯಿನ ಪ್ರಜಾಸತ್ತಾತ್ಮಕ ಸರಕಾರದ ಕೈಗಳು ಮಾತ್ರ ಕಟ್ಟಿ ಹೋದುವು! ಈಗ ಅಮೇರಿಕವು ಮೊದಲು ಹಾಕಿದ್ದ ಆ ನಿರ್ಬಂಧವನ್ನು ತೆಗೆದುಹಾಕಿದೆ! ಸ್ಪೈಯಿನ ಪ್ರಕರಣದಲ್ಲಿ ಇಂಗ್ಲಾಂಡು ಫ್ರಾನ್ಸುಗಳ ನೀತಿಯೂ ಅಮೇರಿಕದ ನೀತಿಯಿಂದ ಭಿನ್ನವಾಗಿರಲಿಲ್ಲ. ಅದ್ದರಿಂದ ಸ್ಪೈಯಿನಲ್ಲಿ ಪ್ರಜಾಸತ್ತೆಯ ನಾಶವಾಗಲಿಕ್ಕೆ ಈ ಮೂರು ರಾಷ್ಟ್ರಗಳೇ ಜವಾಬುದಾರಿಯು ಅಲ್ಲವಾಗಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು.

ಹೈದರಾಬಾದ ಸತ್ಯಾಗ್ರಹ — 'ಸಂಧಾನದ ಮಾತುಕಥೆ

ಲಾಹೋರಿನ ಪ್ರತಾಪ ಪತ್ರಿಕೆಯ ಮಾಲಿಕರಾದ ಮಹಾಶಯ ಕೃಷ್ಣರವರು ಅಂತರಾಷ್ಟ್ರೀಯ ಆರ್ಯ ಸಭೆಯ ಕಾರ್ಯದರ್ಶಿ ಮೊದಲಿಯ [illegible] ಬಾರ ಕೋರಿಗೆ ಶೋಲಾಪುರಕ್ಕೆ ಹೊರಟಿದ್ದಾರೆ. [illegible] ಜೈಲಿನಲ್ಲಿ ಕೈದಾಗಿರು[illegible] ನಾರಾಯಣ ಸ್ವಾಮಿ [illegible] ಹೈದರಾಬಾದ ಸರಕಾರವು ಸಂಧಾನದ ಸಸ್ತಾವನೆತ್ತಿ ಹಿಂದುಗಳಿಗೆ ಹೈದರಾಬಾದದಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಡುವ [illegible] ಪ್ರಶಸ್ತವಾದ ಪುದಾಗಿ [illegible] ವಿಷಯವನ್ನು ಅಲೋಚಿಸಲಿಕ್ಕೆ ೬–೪–೩೯ರ ದಿನ ಶೋಲಾಪುರದಲ್ಲಿ ಆರ್ಯ ಸಾರ್ವದೇಶಿಕ ಸಭೆಯ [illegible] ವಿಶೇಷ ಸಭೆಯು ಕೂಡಿದೆ. ಅದರಲ್ಲಿ ಯಾವ ಪ್ರಕಾರ ನಿರ್ಧಾರವಾಗುವದೋ ಹಾಗೆ ಸತ್ಯಾಗ್ರಹವನ್ನು [illegible] ಅಥವಾ [illegible]

ಅಮೃತಸರದಿಂದ ಸತ್ಯಾಗ್ರಹಿಗಳು

ಸ್ವಾಮಿ [illegible] ಅಮೃತಸರದಿಂದ [illegible] ಸತ್ಯಾಗ್ರಹಿಗಳ ಮೂರನೆ ದಳವು ಹೈದರಾಬಾದಿಗೆ ಹೊರಟಿದೆ. [illegible] ಇನ್ನೆರಡು ದಳಗಳ ಹೊರಟಿದೆ ವಷ್ಟು [illegible] ಅಮೃತಸರ–ಲಾಹೋರುಗಳಲ್ಲಿ [illegible] ಮಾದ ವಿದಾಯ ಸತ್ಕಾರದನ್ನೂ [illegible]

ತಿರವಾಂಕೂರು ನೇಶನಲ್ ಮತ್ತು ಕ್ವಿಲೋನು ಬೇಂಕ್ ಡೈರೆಕ್ಟರರ ಅಪೀಲು

ತಿರುವಾಂಕೂರು ಸರಕಾರವು ಅವರನ್ನು ಬೇಂಕ ಮೋಸದ ಅಪಾದನೆಯ ಮೇಲೆ [illegible] ಮಾಡಿದ [illegible] ಅಪೀಲು [illegible] ಶ್ರೀ ಕೆ. [illegible] ಮೊದಲಾದ [illegible] ಹೈಕೋರ್ಟಿನಲ್ಲಿ ಬಹಳ [illegible] ಅನಂತರ [illegible] ಮಾಡಿದ್ದರು. ಅದೂ ಈಗ [illegible] ಹೈಕೋರ್ಟಿನ [illegible] ಆಗಿದೆ. ಅದ್ದರಿಂದ ಆ [illegible] ಪೋಲೀಸರ [illegible] ಪೋಲೀಸರು [illegible] ಜಿಲ್ಲಾ ಮೆಜಿಸ್ಟ್ರೇಟರ [illegible] ತಿರುವಾಂಕೂರ ನೇಶನಲ ಬೇಂಕಿನ ಹಣದ ಅಪಹಾರ [illegible] ಅವರ ಮೇಲೆ [illegible] ಅಪಾದನೆಗಳನ್ನು [illegible] ಇದೇ ತಿಂಗಳ [illegible] ಅವರನ್ನು ಇದ ಕನಕ ಹಿಡಿಯಲಿಕ್ಕಾಗಿಲ್ಲ.

ಚೀನಿಯ ವಿಜಯ— ಜಪಾನಿಯರ ಸೋಲು

ಚೀನೀ ಗೆರಿಲ ಸೇನೆಗಳ ಉಪಟಳದಿಂದ ಜಪಾನಿಯರು ಕಳವಳಗೊಂಡಿದ್ದಾರೆ. ಜಪಾನಿಯರ ವಶವಾಗಿದ್ದ ಕಾಂಗಮೂನ ಮತ್ತು ಪೀಕ್ಯಾಯ ಎಂಬ ಎರಡು ಊರುಗಳನ್ನು ಚೀನಿಯರು ತಮ್ಮ ವಶಮಾಡಿಕೊಂಡಿದ್ದಾರೆ. ಹಾಂಗಚೋದ ಬಳಿ ಚೀನಿಯರ ಒಂದು ಲಕ್ಷದ ದಂಡು ಜಪಾನಿ ಸೇನೆಯ ಮೇಲೆ ಬಿದ್ದು ಆ ಪಟ್ಟಣವನ್ನು ತಮ್ಮ ವಶ ಮಾಡಿಕೊಳ್ಳುವ ದೊಡ್ಡ ಹಂಚಿಕೆಯ [illegible] ಮಾಡಿದೆ. ಅಲ್ಲಿದ್ದ ಚೀನಿಯರ [illegible] ಲಕ್ಷದ ಇನ್ನೊಂದು ದಂಡು ಒಳ ಮಂಗೋಲಿಯದಲ್ಲಿರುವ ಜಪಾನಿಯರನ್ನು ಹಿಂದಕ್ಕೆ ಅಟ್ಟುವ ಉಪಾಯ ಮಾಡಿದೆ. ಚೀನಿಯರು [illegible] ಜಯಿಗಳಾಗುತ್ತಿದ್ದಾರೆ. ಜಪಾನಿಯರ ಪಾಲಿಗೆ ಚೀನೀ ಯುದ್ಧದಿಂದ ಕಷ್ಟನಷ್ಟಗಳಲ್ಲದೆ ಬೇರೇನು ಪ್ರಾಪ್ತವಾಗಿಲ್ಲ. [illegible] ಯುದ್ಧದಿಂದಾಗಿ ಜಪಾನ ಸರಕಾರವು ಕಂಗೆಟ್ಟು ಹೋಗಿದೆ. ಅದಕ್ಕೆ [illegible] ವ್ಯಾಪಾರಿಗಳ ಬೆಂಬಲವು ಕಡಿಮೆಯಾಗುತ್ತಿದೆ. ಯಾಕೆಂದರೆ ಯುದ್ಧದಿಂದ ಪಟ್ಟಣವಾಸಿಗಳಿಗೆ ವ್ಯಾಪಾರ ಪಡೆಗಳಲ್ಲಿಯೂ, ಉದ್ಯೋಗಗಳಲ್ಲಿಯೂ [illegible] ಕಾರಖಾನೆಗಳಲ್ಲಿ ತೊಡಗಿರುವ ಕಾರಿಕರಿಗೆ [illegible] ಲಾಭವಾಗದಿದ್ದರೂ, ಹಳ್ಳಿಗರ [illegible] ಹೊರಲಿಕ್ಕಾಗದ ಕರಭಾರಗಳನ್ನು [illegible] ಅವರ ಜೀವನವು ಮತ್ತು [illegible] ಭಾರವಾಗಿದೆ. ಜೀವನದಲ್ಲಿ [illegible] ಹಳ್ಳಿಗರು ತುಂಬಿಸಬೇಕಾಗಿದೆ. ಅದ್ದರಿಂದ ಚೀನಿ ಜಪಾನ ಯುದ್ಧಕ್ಕೆ ಕಾರಣರಾದ ಜಪಾನದ ಈಗಿನ ಸರಕಾರವನ್ನು ಜಪಾನೀ ಹಳ್ಳಿಗರು [illegible] ಸಂದರ್ಭದಲ್ಲಿ ಜಪಾನ ಸರಕಾರದ [illegible]

ಇದಕ್ಕಾಗಿಯೋ ರಶ್ಯದೊಡನೆ ಸಂಧಾನ? ರಶ್ಯದ ಅಧಿಕಾರದಲ್ಲಿರುವ [illegible] ಮತ್ಸ್ಯಕ್ಷೇತ್ರಗಳಲ್ಲಿ ಮೀನು ಹಿಡಿಯುವ [illegible] ರಶ್ಯವು [illegible] ಸಂಧಿಯಾಗದಿದ್ದರೆ ರಶ್ಯವು ಜಪಾನಿಗೆ [illegible] ಜಪಾನು ಅದಕ್ಕೆ [illegible] ರಶ್ಯದ ಮೇಲೆ ಯುದ್ಧಕ್ಕೆ ಹೋಗುತ್ತೇವೆಂದೂ [illegible] ಚೀನದಲ್ಲಿ ಜಪಾನಿಗೆ ಸೋಲಾಗುವ ಕಾರಣದಿಂದಲೇ ಜಪಾನು ರಶ್ಯದೊಡನೆ ಈ ಸಂಬಂಧ ಸಂಧಿಮಾಡಿಕೊಂಡಿದೆ. ಉತ್ತರ ಚೀನದಲ್ಲಿ ರಶ್ಯದೊಡನೆ ಯುದ್ಧ ಸಂಭವಿಸಿದ್ದಾದರೆ, ಅದು ತನ್ನ ಸೈನ್ಯವನ್ನು ದಕ್ಷಿಣ ಚೀನದಲ್ಲಿಯೇ [illegible]

ಜಾಗ್ರತೆ! ಜಾಗ್ರತೆ

ದೇಶ ವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಾಸ ಕಾಸನೋಯು ವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವದನ್ನು ಕಂಡು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರೆಸ್ಸನ್ನು ನೋಡಿ ತೆಗೆದುಕೊಳ್ಳಿರಿ.

ನಕಲಿ ಮಾಲಿಗೆ ಮೋಸಹೋಗಬೇಡಿರಿ!

DRAKSHAMRUTHA

ದ್ರಾಕ್ಷಾಮೃತ

ಪಂಡಿತ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತುಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ ಸಾವಿರಾರು ಜನರಿಂದ ವರ್ಣಿಸಲ್ಪಟ್ಟು ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ

ಒಂದೇ ನವರ ಕಾಲ್ಪನಿಕ ಅನುಭವದಿಂದ, ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ,

ಶಕ್ತಿಯ ಮೇಲೆ ಮೊದಲನೇ ತರಧ ಟಾನಿಕ್.

ಇದರ ಸೇವನೆಯಿಂದ ರಕ್ತ ವೃದ್ಧಿಯಾಗುವದು, ಶೌಚ ಸಾಫವಾಗಿ ಜಠರಾಗ್ನಿಯು ಬೆಳೆಯುವದು, ಕಾಮ್ಲೆ, ಕಾಯಿ, ಉದಿಯೋಗ ಮೊದಲಾದ ಉಷ್ಣ ಮತ್ತು ಪಿತ್ತವಿಕಾರಗಳು ನಾಶವಾಗುವವು, ಸ್ತ್ರೀಯರಿಗೆ ಮುಟ್ಟು ದೋಷದಿಂದಾದ ಸರ್ವರೋಗ ನಿವಾರಣೆಯಾಗಿ ಸಂತತಿಭಾಗ್ಯವಾಗುವದು. ಅಂತೂ ಇದು ಬಾಲವೃದ್ಧ ಸ್ತ್ರೀಪುರುಷರಿಗೆ ಅತಿ ಉಪಯುಕ್ತವಾಗಿದೆ.

ಕ್ರಯ ೧ ಬಾಟ್ಲಿ ರೂ ೧।

ಮ್ಯಾನೇಜರ್: ದ್ರಾಕ್ಷಾಮೃತ ಡಿಪೋ, ಪೋಸ್ಟ–ನಿಪ್ಪಾಣಿ, ಜಿಲ್ಲಾ ಬೆಳಗಾಂವ.

ಸ್ಟಾಕಿಸ್ಟರು: ಮಂಗಳೂರು–ಕೆನರಾ ಮೆಡಿಕಲ್ ಸಪ್ಲಾಯರ್ಸ್; ಯು. ಆರ್. ಶೆಟ್ಟಿ ಮತ್ತು ಸನ್ಸಲ್ ಬುಕ್ ಕೊ. ಬಂಟವಾಳ–ಎ ಆರ್. ಪ್ರಭು. ಉಡುಪಿ–[illegible] ಆರ್. ಭಟ್ಟ ಉಡುಪಿ; ಪೈ ಫಾರ್ಮಸಿ. ಪುತ್ತೂರು. ಶ್ರೀನಿವಾಸ ಪೈ. ಕಾರ್ಕಳ: ವಿ. ವಿ. ಶೆಟ್ಟಿ. ಕಾಸರಗೋಡು: ಕೆ. ರಾಮನಾಯಕ ಮತ್ತು ಭಕ್ತಾ ಬ್ರದರ್ಸ.

ಆರ್ಯ ಸಮಾಜದೊಡನೆ ಸಂಧಾನವಾಗುವುದಿಲ್ಲ

ನಿಜಾಮ ಸರಕಾರದ ಪ್ರಕಟಣೆ

ಸತ್ಯಾಗ್ರಹವು ದ್ವಿಗುಣಿತ ಉತ್ಸಾಹದಿಂದ ನಡೆಯುವುದು

ಆರ್ಯ ಸಮಾಜ ಮತ್ತು ಹಿಂದೂ ಮಹಾಸಭೆಯು ಧಾರ್ಮಿಕ ಸ್ವಾತಂತ್ರ್ಯದ ಸತ್ಯಾಗ್ರಹ ಆಂದೋಲನದ ಕುರಿತು ನಿಜಾಮ ಸರಕಾರವು ಈ ಕೆಳಗಿನ ಪ್ರಕಟಣೆಯನ್ನು ಕೊಟ್ಟಿದೆ—

"ಅಂತರ್ರಾಷ್ಟ್ರೀಯ ಆರ್ಯ ಮಹಾಸಭೆಯೊಡನೆ ಒಂದು ಇತ್ಯರ್ಥ ಮಾಡಲಿಕ್ಕೆ ಅಥವಾ ಸಂಧಾನವಾಗಲಿಕ್ಕೆ ನಿಜಾಮ ಸರಕಾರವು ಪ್ರಯತ್ನಿಸುತ್ತಾ ಇರುವುದಾಗಿ ಕೆಲವು ಕಡೆಗಳಿಂದ ಸುದ್ದಿಯುಂಟಾಗಿರುವುದು ನಿಜವಾಗಿರುವುದಿಲ್ಲ. ನಿಜಾಮ ಸರಕಾರವು ಅಂಥ ಪ್ರಯತ್ನಗಳಲ್ಲಿ ಸರ್ವಥಾ ಇರುವುದಿಲ್ಲ"

ಸತ್ಯಾಗ್ರಹವನ್ನು ನಿಲ್ಲಿಸುವುದಿಲ್ಲ

ಹೈದರಾಬಾದದ ಆರ್ಯ ಸತ್ಯಾಗ್ರಹವನ್ನು ನಿಲ್ಲಿಸಲಿರುವರಾಗಿ ಕೆಲವು ಕಡೆಗಳಲ್ಲಿ ಹಬ್ಬಿರುವ ವಾರ್ತೆಗೆ ಆಧಾರವಿರುವುದಿಲ್ಲ. ಸತ್ಯಾಗ್ರಹವನ್ನು ನಿಲ್ಲಿಸುವ ಆಲೋಚನೆ ಇಲ್ಲದೆ ಇರುವುದು ಮಾತ್ರವಲ್ಲ ಆರ್ಯಸಮಾಜಕ್ಕೂ ಹಿಂದುಗಳಿಗೂ ಹೈದರಾಬಾದದಲ್ಲಿ ಪೂರ್ಣ ಸ್ವಾತಂತ್ರ್ಯವು ದೊರೆಯುವ ತನಕ ಸತ್ಯಾಗ್ರಹವನ್ನು ದ್ವಿಗುಣಿತ ಉತ್ಸಾಹದಿಂದ ನಡೆಸಲಾಗುವುದು ಎಂದು ಶೋಲಾಪುರ ಆರ್ಯ ಸತ್ಯಾಗ್ರಹ ಸಮಿತಿಯು ತಿಳಿಸಿದೆ

ಫೆರೋಜಪುರದಿಂದ ಸ್ವಯಂಸೇವಕರು

ಪಂಜಾಬಿನ ಆರ್ಯಸಮಾಜಿಗಳು ಸತ್ಯಾಗ್ರಹ ಆಂದೋಲನದಲ್ಲಿ ಬಹು ದೊಡ್ಡ ಪಾಲನ್ನು ತೆಗೆದುಕೊಂಡಿದ್ದಾರೆ ಫೆರೋಜಪುರದ ಒಬ್ಬ ಮಿಲಿಟರಿ ಪೆನ್ಶನರರ ನಾಯಕತ್ವದಲ್ಲಿ ಹನ್ನೊಂದು ಮಂದಿ ಸತ್ಯಾಗ್ರಹಿಗಳ ಒಂದು ದಳವೂ, ಲಾಹೋರಿನಿಂದ ಎಂಟು ಮಂದಿ ಸತ್ಯಾಗ್ರಹಿಗಳ ಮತ್ತೊಂದು ದಳವೂ, ಜಾಖಲಿನಿಂದ ಐದು ಮಂದಿಯ ಮೂರನೆ ದಳವು ಶೋಲಾಪುರಕ್ಕಾಗಿ ಹೊರಟುಬಂದಿವೆ.

ಸತ್ಯಾಗ್ರಹಿಗಳಿಗೆ ಶಿಕ್ಷೆ

ಡೇರಾಡೂನಿನಿಂದ ಪಂಡಿತ ಚಂದ್ರಮಣಿಯವರ ನಾಯಕತ್ವದಲ್ಲಿ ಹೈದರಾಬಾದಿಗೆ ಬಂದ ಸತ್ಯಾಗ್ರಹೀ ದಳವನ್ನು ರೈಲ್ವೆ ನಿಲ್ದಾಣದಲ್ಲಿ ಕಾಲಿಡುತ್ತಲೇ ಹೈದರಾಬಾದ ಪೊಲೀಸರು ಕೈದುಮಾಡಿದರು ಸಿಟಿ ಮೆಜಿಸ್ಟ್ರೇಟರು ಅವರನ್ನು ವಿಚಾರಿಸಿ ಪ್ರತಿಯೊಬ್ಬರಿಗೂ ಒಂದೊಂದು ವರ್ಷದ ಕಠಿನ ಶಿಕ್ಷೆಯನ್ನು ಕೊಟ್ಟರು ಮೆಜಿಸ್ಟ್ರೇಟರು ಪ್ರಶ್ನಿಸಿದಾಗ—ತಾವು ಹೈದರಾಬಾದದಲ್ಲಿ ವೇದ ಪ್ರಚಾರಕ್ಕಾಗಿ ಬಂದದ್ದೆಂದು ಪಂಡಿತ ಚಂದ್ರಮಣಿಯವರು ಹೇಳಿದರು

೭೫ ಮಂದಿ ಗುಲ್ಬರ್ಗಕ್ಕೆ ಹೊರಟರು

ಶ್ರೀ ನಿವೃತ್ತಿ ರೆಡ್ಡಿಯೆಂಬವರು ನಾಯಕರಾಗಿ ೭೫ ಮಂದಿ ಸತ್ಯಾಗ್ರಹಿಗಳ ಒಂದು ದಳವು ೫-೪-೩೯ರ ದಿನ ಗುಲ್ಬರ್ಗಕ್ಕೆ ಹೊರಟು ಹೋಗಿದೆ ಹೈದರಾಬಾದ ಜೈಲಿನಲ್ಲಿ ಅಕಾಲ ಮರಣವನ್ನು ಹೊಂದಿದ ಒಬ್ಬ ಆರ್ಯ ಸತ್ಯಾಗ್ರಹಿಯ ಸ್ಮಾರಕವಾಗಿ ಶೋಲಾಪುರದಲ್ಲಿ ತಾ. ೪-೪-೩೯ರಂದು ಒಂದು ದೊಡ್ಡ ಸಭೆಯು ಕೂಡಿ, ಶೋಕ ಪ್ರದರ್ಶನ ರಠರಾವಾಯಿತ ಹೈದರಾಬಾದು ಜೈಲುಗಳಲ್ಲಿ ಸರಕಾರವು ಸತ್ಯಾಗ್ರಹಿಗಳನ್ನು ನಡೆಸಿಕೊಂಡು ಹೋಗುವ ಕುರಿತು ಸಾರ್ವಜನಿಕ ವಿಚಾರಣೆಯಾಗಬೇಕೆಂದೂ ಸಭೆಯಲ್ಲಿ ನಿರ್ಣಯವಾಗಿದೆ

ಲೋಕ ನಾಯಕ ಅಣೆಯವರ ತಂತಿ

ಅಂತರರಾಷ್ಟ್ರೀಯ ಆರ್ಯ ಮಹಾಸಭೆಯೊಡನೆ ಸತ್ಯಾಗ್ರಹ ಸಂಬಂಧ ಯಾವ ಸಂಧಾನ ಪ್ರಸ್ತಾಪವನ್ನು ಬೆಳೆಸುವುದಿಲ್ಲವಾಗಿ ಹೈದರಾಬಾದ ಸರಕಾರವು ಹೊರಡಿಸಿದ ಪ್ರಕಟಣೆಯನ್ನು ಖಂಡಿಸುತ್ತ ಲೋಕ ನಾಯಕ ಎಂ ಎಸ್ ಅಣೆಯವರು ಒಂದು ಹೇಳಿಕೆಯನ್ನು ಕೊಟ್ಟಿರುವರು ಅದರಲ್ಲಿ ಅವರು—ಸರಕಾರವು ಜನತೆಯ ಹಿತ ಮತ್ತು ರಾಜ್ಯದಲ್ಲಿ ಶಾಂತಿಯನ್ನು ಕಾಪಾಡುವುದಕ್ಕಿಂತ ಹೆಚ್ಚಾಗಿ ತನ್ನ ಪ್ರತಿಷ್ಠೆಯನ್ನು ಕಾಯುವುದರ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಕೊಟ್ಟಿದೆ ಎಂದೂ, ಈಗಲಾದರೂ ಹೈದರಾಬಾದದ ಆರ್ಯ ಸಮಾಜಗಳಿಗೂ ಹಿಂದೂಗಳಿಗೂ ನ್ಯಾಯವನ್ನು ಕೊಡುವುದು ಸಾಧ್ಯವಾಗಿದೆ ಎಂದೂ, ಹೇಳಿ ಸರಕಾರವು ಜನರ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸುವ ತನಕ ಸತ್ಯಾಗ್ರಹವನ್ನು ದ್ವಿಗುಣಿತ ಉತ್ಸಾಹದಿಂದ ನಡೆಸಬೇಕೆಂದು ಸತ್ಯಾಗ್ರಹ ಸಮಿತಿಗೆ ತಿಳಿಸಿದ್ದಾರೆ ಸರಕಾರವು ಸಂಧಾನ ಮಾಡಿಕೊಳ್ಳಲಿಕ್ಕೆ ಸಿದ್ಧವಾಗುವ ತನಕ ತಾನು ಸರಕಾರದೊಡನೆ ಯಾವ ಸಂಧಾನ ಪ್ರಸ್ತಾಪವನ್ನು ಬೆಳೆಸುವುದಿಲ್ಲವೆಂದೂ ಅವರು ತಂತಿಕೊಟ್ಟಿದ್ದಾರೆ

ಲಾಲ ಖುಶಾಲಚಂದರಿಗೆ ೧೮ ತಿಂಗಳು

ಪಂಜಾಬ ಕೇಸರಿ ಲಾಲ ಖುಶಾಲಚಂದ ಖುರ್ಸಂದರ ಮೊಕದ್ದಮೆಯು ತಾ ೨೭-೩-೩೯ರ ದಿನ ನಡೆದು ಅವರಿಗೂ ಅವರೊಂದಿಗೆ ಹೋಗಿ ಸತ್ಯಾಗ್ರಹ ಮಾಡಿದ ಇತರ ಸತ್ಯಾಗ್ರಹಿಗಳಿಗೂ ೧೮—೨೮ ತಿಂಗಳ ಸಜೆಯಾಗಿದೆ ನಾಗಪುರದ ಹಿಂದೂ ಮಹಾಸಭೆಯ ಸತ್ಯಾಗ್ರಹಿಗಳಿಗೂ ಶೀರಪುರದಲ್ಲಿ ಕೈದಾಗಿ ೧೮ ತಿಂಗಳ ಕಠಿನ ಶಿಕ್ಷೆಯಾಗಿದೆ ಮಹಾರಾಷ್ಟ್ರ ಮಧ್ಯ ಪ್ರಾಂತಗಳಿಂದ ನೂರಾರು ಜನರು ಸತ್ಯಾಗ್ರಹಿಗಳಾಗಿ ಭರ್ತಿಯಾಗಿದ್ದಾರೆ

ಒಬ್ಬ ಮುಸಲ್ಮಾನನೂ ಸತ್ಯಾಗ್ರಹಿ ಆಗಿದ್ದಾನೆ

ಪಂಜಾಬಿನ ಅಲಾಕಪುರದಲಿ ಹೈದರಾಬಾದ ದಿನವನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು 'ನೂರಾರು ರೂಪಾಯಿಗಳ ಧನ ಸಹಾಯವು ದೊರೆಯಿತು ಒಬ್ಬ ಮುಸಲ್ಮಾನನು ಕೂಡ ಹೈದರಾಬಾದ ಸರಕಾರದ ಅಧರ್ಮಾಚರಣೆಯಿಂದ ನೊಂದು ಹಣ ಸಹಾಯ ಮಾಡಿದನು ಮತ್ತು ತಾನು ಕೂಡ ಸತ್ಯಾಗ್ರಹಿ ಆಗುವೆನಾಗಿ ಹೆಸರು ಕೊಟ್ಟನು.

ಅಲ್ಲಲ್ಲಿ ಕೈದು

ಶೋಲಾಪುರದಿಂದ ಮಾತ್ರವಲ್ಲದೆ ಬೆಜವಾಡ ಮೊದಲಾದ ಇತರ ಕೇಂದ್ರಗಳಿಂದಲೂ ಸತ್ಯಾಗ್ರಹಿಗಳು ಹೋಗಿ ಹೈದರಾಬಾದ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಹೋಗಿ ಸತ್ಯಾಗ್ರಹವನ್ನಾರಂಭಿಸಿರುವುದರಿಂದ ಪೊಲೀಸರಿಗೆ ತುಂಬಾ ಕೆಲಸವಾಗಿದೆ ಎಲ್ಲ ಕಡೆಗಳಿಂದ ಕೈದುಗಳೂ ಶಿಕ್ಷೆಗಳೂ ಆದ ಸಮಾಚಾರಗಳು ದಿನ ನಿತ್ಯ ಬರುತ್ತಿವೆ.

ಐದನೇ ಸರ್ವಾಧಿಕಾರಿಗಳು

ಬಿಹಾರದ ಶ್ರೀ ಪಂಡಿತ ವೇದವ್ರತಜೀ ವಾನಪ್ರಸ್ಥಿಯವರು ಹೈದರಾಬಾದ ಆರ್ಯ ಸತ್ಯಾಗ್ರಹದ ಐದನೆ ಸರ್ವಾಧಿಕಾರಿಗಳಾಗಿ ನೇಮಿಸಲ್ಪಟ್ಟಿರುತ್ತಾರೆ ಶೋಲಾಪುರ ಸತ್ಯಾಗ್ರಹ ಸಮಿತಿಯು ಒಂದು ಹೊಸ ಯೋಜನೆಯನ್ನು ತಯಾರಿಸಿ, ಒಂದೊಂದ ದಿನ ಒಂದೇ ಸಮಯ ಹೈದರಾಬಾದಿನ ನೂರು ಸ್ಥಾನಗಳಲ್ಲಿ ಸತ್ಯಾಗ್ರಹ ಮಾಡುವ ವ್ಯವಸ್ಥೆ ಮಾಡಿದೆ ಇದಕ್ಕೋಸ್ಕರ ಅಗತ್ಯವೆಂದರೆ ಸಿಖರು ಮೊದಲಾದ ಇತರರ ಸಹಾಯವನ್ನು ಸ್ವೀಕರಿಸಲಾಗುವುದು ಹೈದರಾಬಾದ ಸತ್ಯಾಗ್ರಹಕ್ಕಾಗಿ ಬೇಕಾದರೆ ೪೦ ಲಕ್ಷ ಸಿಖರು ಸತ್ಯಾಗ್ರಹಿಗಳಾಗಿ ಮುಂದೆ ಬರಲಿರುವರೆಂದು ಲಾಹೋರಿನ ಶ್ರೀ ಸರದಾರ ಹರಿಭಜನಸಿಂಹರೆಂಬ ಒಬ್ಬ ಪ್ರಮುಖ ಸಿಖ ಮುಂದಾಳುಗಳ ಆಶ್ವಾಸನವನ್ನು ಕೊಟ್ಟಿದ್ದಾರೆ

ಶರೀರ ಭಾರ ಕುಂದಿದೆ

ಹೈದರಾಬಾದ ಜೈಲಿನಲಿ ಕೊಳೆಯುತ್ತಿರುವ ಮಹಾತ್ಮಾ ನಾರಾಯಣ ಸ್ವಾಮಿಯವರ ದೇಹ ಭಾರವು ತಾ ೨೬-೩-೩೯ರ ತನಕ ೫ ರಾತಲುಗಳಷ್ಟು ಕುಂದಿಹೋಗಿದೆ ಜೈಲುಗಳಲ್ಲಿ ಆಹಾರ ಪಾನೀಯಗಳ ವ್ಯವಸ್ಥೆಯೂ ತೀರ ಅತೃಪ್ತಿಕರವಿರುವುದರಿಂದ ಅನೇಕ ಮಂದಿ ಸತ್ಯಾಗ್ರಹಿಗಳ ದೇಹ ಸ್ವಾಸ್ಥ್ಯವು ಬಹಳ ಕೆಟ್ಟು ಹೋಗಿದೆ ಸರಕಾರದ ದಮನ ನೀತಿಯು ಯಥಾಪ್ರಕಾರ ನಡೆದೇ ಇರುವುದಾದರೂ ಸತ್ಯಾಗ್ರಹಿಗಳು ಧರ್ಮಕ್ಕಾಗಿ ಬಲಿಯಾಗಲಿಕ್ಕೆ ಕೊಂಚವಾದರೂ ಹೆದರುತ್ತಿಲ್ಲವು

೫೭ ಸತ್ಯಾಗ್ರಹಿಗಳಿಗೆ ೬ ತಿಂಗಳು ಶಿಕ್ಷೆ

ಮತ್ತು ೫೭ ಜನ ಸತ್ಯಾಗ್ರಹಿಗಳಿಗೆ ಕಳೆದ ತಿಂಗಳ ಕೊನೆಯ ವಾರದಲ್ಲಿ ಆರಾರು ತಿಂಗಳ ಶಿಕ್ಷೆಯಾಗಿದೆ ಸ್ವಾಮಿ ಮಂಗಲಾನಂದರಿಂದ ಮುಚ್ಚಳಿಕೆಯನ್ನು ಕೇಳಿದ್ದಾರೆ ಜಪ್ತಾದ ಪುಸ್ತಕಗಳನ್ನು ಇಟ್ಟುಕೊಂಡಿದ್ದಾರೆಂದು ಅವರಿಗೆ ೫೦ ರೂಪಾಯಿ ಜುಲ್ಮಾನೆ ಮಾಡಿದ್ದಾರೆ ದಿಲ್ಲಿಯಿಂದ ಶೋಲಾಪುರಕ್ಕೆ ಬಂದ ೪೩ ಮಂದಿ ಸತ್ಯಾಗ್ರಹಿಗಳಲ್ಲಿ ಒಬ್ಬರು ೯೧ ವರ್ಷ ಪ್ರಾಯದ ಮುದುಕರು ಇರುವರು.

ಶೋಲಾಪುರದಲ್ಲಿ ಸಮಿತಿಯ ಸಭೆ

ಅಂತರರಾಷ್ಟ್ರೀಯ ಆರ್ಯ ಮಹಾಸಭೆಯ ಕಾರ್ಯನಿರ್ವಾಹಕ ಸಮಿತಿಯು ಶೋಲಾಪುರದಲ್ಲಿ ಸಭೆ ಕೂಡಿ ಹೈದರಾಬಾದದ ಪರಿಸ್ಥಿತಿಯ ಆಲೋಚನೆ ಮಾಡಿತು ಸಭೆಯು ಗುಪ್ತವಾಗಿ ನಡೆದುದರಿಂದ ಯಾವ್ಯಾವ ವಿಷಯಗಳು ಚರ್ಚಿಸಲ್ಪಟ್ಟುವೆಂದು ಗೊತ್ತಾಗಿಲ್ಲ. ಆದರೂ ಸತ್ಯಾಗ್ರಹವನ್ನು ಇನ್ನೂ ಹುರುಪಿನಿಂದ ನಡೆಸುವ ಕುರಿತು ಆಲೋಚನೆಯಾಗಿದೆ ಎಂದು ತಿಳಿದುಬರುತ್ತದೆ ಸಮಿತಿಯ ಕೆಲವು ಕೆಲವು ಪ್ರಮುಖ ಸದಸ್ಯರು ಜೈಲಿನಲ್ಲಿರುವ ಮಹಾತ್ಮಾ ನಾರಾಯಣಸ್ವಾಮಿಯವರನ್ನು ಕಂಡು ಮಾತನಾಡುವುದಕ್ಕೋಸ್ಕರ ಗುಲ್ಬರ್ಗಕ್ಕೆ ಹೊರಟಿರುತ್ತಾರೆ ಮಧ್ಯಪ್ರಾಂತ್ಯಗಳ ಎಸೆಂಬ್ಲಿಯ ಸ್ಪೀಕರರಾದ ಶ್ರೀ ಗುಪ್ತರು ಶೋಲಾಪುರ(?)ಯೋ ಉಳಕೊಂಡಿದ್ದಾರೆ

ಗಡಿನಾಡಿನ ಸತ್ಯಾಗ್ರಹಿಗಳು

ಗಡಿನಾಡಿನ ಆರ್ಯ ಸತ್ಯಾಗ್ರಹಿಗಳು ಹೈದರಾಬಾದ ಸತ್ಯಾಗ್ರಹಕ್ಕಾಗಿ ಶೋಲಾಪುರಕ್ಕೆ ಹೊರಟಿರುವರು

ಗುಲ್ಬರ್ಗದಲ್ಲಿ ೬೨ ಮಂದಿಗೆ ಶಿಕ್ಷೆ

ಹಿಂದೂ ಮಹಾಸಭೆಯ ೫೮ ಸತ್ಯಾಗ್ರಹಿಗಳಿಗೂ ನಾಲ್ಕು ಮಂದಿ ಇತರರಿಗೆ ಗುಲ್ಬರ್ಗದಲ್ಲಿ ಶಿಕ್ಷೆಯಾಗಿದೆ ಶಿಕ್ಷೆ ಹೊಂದಿದವರಲ್ಲಿ ೪೩ ಸತ್ಯಾಗ್ರಹಿಗಳು ಹೈದರಾಬಾದ ಸಂಸ್ಥಾನದವರೇ ಆಗಿದ್ದಾರೆ ಸಂಸ್ಥಾನ ಸತ್ಯಾಗ್ರಹಿಗಳಿಗೆ ೪ ತಿಂಗಳ ಕಠಿಣ ಶಿಕ್ಷೆ ೦೦ ರೂಪಾಯಿ ಜುಲುಮಾನೆ ಮತ್ತು ಹೊರಗಿನಿಂದ ಬಂದವರಿಗೆ ೯ ತಿಂಗಳ ಕಠಿಣ ಶಿಕ್ಷೆಯಾಗಿದೆ ಅಲ್ಲದೆ ಗುಲ್ಬರ್ಗದ ಮೆಜಿಸ್ಟ್ರೇಟರು ಹಿಂದೆ ಕೈದು ಮಾಡಿದ ಬೇರೆ ೧೯ ಮಂದಿಗೂ ಶಿಕ್ಷೆಯನ್ನು ವಿಧಿಸಿದ್ದಾರೆ.

ಅಭಿನಂದನೆ

ಸತ್ಯಾಗ್ರಹಿಗಳು ಪ್ರಶಂಸನೀಯವಾದ ಶಿಸ್ತು ವ್ಯವಸ್ಥೆಯ ಸ್ಥಿತಿಯಿರುವುದಕ್ಕಾಗಿಯೂ ತ್ರಿಕರಣ ಪೂರ್ವಕ ಅಹಿಂಸೆಯ ವಿರುವುದಕ್ಕಾಗಿಯೂ ಅಂತರರಾಷ್ಟ್ರೀಯ ಆರ್ಯ ಮಹಾಸಭೆಯು ಅವರನ್ನು ಅಭಿನಂದಿಸಿದೆ ಹೈದರಾಬಾದ ಸರಕಾರವು ಆರ್ಯಸಮಾಜದೊಂದಿಗೆ ಯಾವ ಒಡಂಬಡಿಕೆಯನ್ನೂ ಮಾಡುವುದಿಲ್ಲವಾಗಿ ಪ್ರಕಟಿಸಿರುವುದರಿಂದ ಸತ್ಯಾಗ್ರಹವನ್ನು ಪ್ರಯೋಜನವಿಲ್ಲವೆಂದು ಸಮಿತಿಯು ನಿರ್ಣಯಿಸಿದೆ ಶ್ರೀ ಗುಪ್ತರು ಮಹಾತ್ಮಾಜಿಯವರನ್ನು ಈ ವಿಷಯ ಕಂಡು ಮಾತನಾಡುವುದಕ್ಕೆ ರಾಜಕೋಟೆಗೆ ಹೋಗಿದ್ದಾರೆ

ಸಮ್ಥಾರ ಸಂಸ್ಥಾನದಲ್ಲಿ

ಮಹಾತ್ಮಾಜಿಯವರ ಸೂಚನೆಯನ್ನನುಸರಿಸಿ ಈ ಸಂಸ್ಥಾನದಲ್ಲಿ ಆರಂಭವಾದ ಸತ್ಯಾಗ್ರಹವನ್ನು ನಿಲ್ಲಿಸಲಾಗಿದೆ ಕೊಡಬೇಕಾಗಿದ್ದ ಪ್ರಜಾಪರಿಷತ್ತನ್ನು ಮುಂದರಿಸಿದ್ದಾರೆ ಸಂಸ್ಥಾನ ಸರಕಾರವು ಪ್ರಜೆಗಳ ತಾತ್ಕಾಲಿಕ ಕಷ್ಟಗಳನ್ನು ನಿವಾರಿಸಲಿಕ್ಕೆ ತಕ್ಕ ಉಪಾಯಗಳನ್ನು ಕೈಕೊಂಡಿದೆ ಸಂಸ್ಥಾನದಲ್ಲಿ ಜವಾಬುದಾರ ಸರಕಾರವನ್ನು ಸ್ಥಾಪಿಸುವ ಕುರಿತು ಮಹಾರಾಜರು ಒಂದು ಸುಧಾರಣಾ ಸಮಿತಿಯನ್ನು ನೇಮಿಸುವರು ಸತ್ಯಾಗ್ರಹೀ ಕೈದಿಗಳನ್ನು ಬಿಟ್ಟುಬಿಡುವಂತೆ ಮಹಾರಾಜರ ಅಪ್ಪಣೆಯಾಗಿದೆ



ಈಸ್ಟರ್ ಹಬ್ಬದ ಸಮಯ

ಹಿಂದೂದೇಶದಲ್ಲೆ ತಯಾರಾದ ವಸ್ತ್ರಗಳ ಸಂಗ್ರಹಾಲಯ ಮತ್ತು ಅಖಿಳ ಭಾರತದಲ್ಲಿ ಒಂದೇ ಒಂದಾದ

ಸ್ವದೇಶಿ ಮಾರ್ಕೆಟ್

ಕಾಲ್ಬಾದೇವಿ ರಸ್ತೆ, ಬೊಂಬಾಯಿ 2

ಇದನ್ನು ಸಂದರ್ಶಿಸಲು ಮರೆಯದಿರಿ

ಫ್ರಾಂಕೋ ವಿಜಯ

ಹೇಗಾದರೂ ಮಾಡಿ ಫ್ರಾಂಕೋವಿನ ಜಯವನ್ನು ಸಾಧಿಸುವುದು ಇಟಲಿ, ಜರ್ಮನಿಗಳ ಉದ್ದೇಶವಾಗಿತ್ತು. ಅದಂತು ಕೊನೆಗೊಂಡಿತು. ಮೂರು ವರ್ಷಗಳ ಕಾದಾಟದಿಂದ ಸ್ಪೈಯಿನು ಫ್ರಾಂಕೋ ಅಧೀನವಾದುದಾಯಿತು. ಮುಂದೆ-ಅಲ್ಲಿ, ಜರ್ಮನ್, ಇಟಲಿಯ ಸೇನೆಗಳೂ ನಿಲ್ಲಲಾರವೆಂದು ಹೇಳುವಂತಿಲ್ಲ. 'ಇತ್ತೀಚೆಗೆ ಪ್ರಜಾಪ್ರಭುತ್ವಗಳು ಸೇರಿ ಒಮ್ಮತದಿಂದ ನಿರಂಕುಶ ರಾಜ್ಯಗಳಿಗೆ ಇದಿರಾಗಿ ವರ್ತಿಸುವುದನ್ನು ಕಂಡರೆ, ಕಾವು ಬರ್ಲಿನ್-ರೋಮ್ ಕೂಟಕ್ಕೆ ಬೆಂಬಲವಾಗುವುದು ಕರ್ತವ್ಯ'ವೆಂದು ಫ್ರಾಂಕೋ ಸರಕಾರವು ಬಹಿರಂಗಪಡಿಸಿದೆ. ಮುಂದೆ ಯುರೋಪಿನ ಕಲಹವೊಂದು ನಿರ್ಣಯವಾದಂತೆ ಎಂದು ತೋರುವಾಗ ಇಟಲಿ ಜರ್ಮನಿಗಳು ಸ್ಪೈಯಿನದ ಮೇಲಿನ ತಮ್ಮ ಬೆರಳನ್ನು ಕೀಳುವರೇನು?

ಮೆಡಿಟರೇನಿಯನಿನ ಭವಿಷ್ಯ

ಸ್ಪೈಯಿನು ವೈರಿ ವಶವಾದಂತೆಯೇ ಯುದ್ಧಕಾಲದಲ್ಲಿ ಅದರಿಂದ ಫ್ರಾನ್ಸಿಗೆ ವಿಘ್ನವಲ್ಲದೆ ಉಪಕಾರವಾಗಲಾರದು. ಫ್ರಾನ್ಸು ತನ್ನ ಸೇನೆಯನ್ನು ಮೆಡಿಟರೇನಿಯನ್ ಹಾದಿಯಾಗಿ ಆಫ್ರಿಕಕ್ಕೆ ಕಳುಹುವಂತೆಯೇ ಇಲ್ಲ. ಇದರಿಂದ ಜಿಬ್ರಾಲ್ಟರಿನ ಬೆಲೆಯೂ ತಗ್ಗಿತು. ಮೆಜೊರ್ಕಾ ಮತ್ತು ಮೈನೋರ್ಕಾ ದ್ವೀಪಗಳು ಪರಾಧೀನವಾದುದರಿಂದ ಪಶ್ಚಿಮ ಮೆಡಿಟರೇನಿಯನು ಇಟಲಿಯ ಸ್ವಾಧೀನವಾದಂತೆಯೇ ಸರಿ.

ನಿನ್ನೆಯ ವಾರ್ತೆಯಿಂದ ಎಡ್ರಿಯಾಟಿಕ್ ಸಮುದ್ರವೂ ಅವರ ಕರಗತವಾಯಿತು. ಈ ಪ್ರಾಂತಕ್ಕೆ ಹೆಬ್ಬಾಗಿಲಾಗಿ ನಿಂತುದು ಆಲ್ಬೇನಿಯದ ಮೈ. ಆಲ್ಬೇನಿಯವನ್ನು ನುಂಗಿದ ಇಟಲಿಯು ಈಗ ಆ ದ್ವಾರದ ನಾಯಕನಾಯಿತು. ಭಾವೀ ಯುದ್ಧಗಳಲ್ಲಿ ಯುಗೋಸ್ಲಾವಿಯವು ಬ್ರಿಟನು ಫ್ರಾನ್ಸುಗಳಿಗೆ ಬೆಂಬಲವಾಗುವುದು ಅಸಾಧ್ಯ ಮಾತ್ರವಲ್ಲ- ಯುದ್ಧಭಾಗಿಯಾಗದೆ ಬರಿಯ ವ್ಯಾಪಾರವನ್ನು ಸಹ ಮಾಡುವುದು ಕಠಿಣ. ಅವರ ಹಡಗುಗಳ ಚಲಾವಣೆಯು ಇನ್ನು ಕೇವಲ ಇಟಲಿಯ ನಿರ್ಬಂಧದೊಳಗೇ ಸಾಗಬೇಕು.

ಉಳಿದ ಮುಖ್ಯ ಮಾರ್ಗಗಳೆಂದರೆ ಸುಯೇಜ್-ಮತ್ತು ಕಪ್ಪು ಸಮುದ್ರ. ಮುಸಲ್ಮಾನ ರಾಜ್ಯಗಳು ಮುಂದೆ ಹೇಗೆ ಭಾಗವಹಿಸುವವು ಎಂಬುದರ ಮೇಲೆ ಸುಯೇಜಿನ ಭವಿಷ್ಯವಿದೆ. ಇತ್ತ ಕಪ್ಪು ಸಮುದ್ರವು ರಷ್ಯ-ಬ್ರಿಟನ್ನು ಫ್ರಾನ್ಸುಗಳ ಸ್ನೇಹದೃಷ್ಟಿಯಿಂದ ಮುಖ್ಯವಾಗುವುದು. ರುಮೇನಿಯ ಟರ್ಕಿಗಳ ಎಡೆಯಲ್ಲಿನ ಹಡಗು ಹಾದಿಯು ಬ್ರಿಟನಿಗೆ ಪ್ರತಿಕೂಲವಾದರೆ, ರಷ್ಯಕ್ಕೆ ಹೋಗುವ ಹಾದಿ ಕಡಿದಂತೆಯೇ ಸರಿ. ಆದುದರಿಂದಲೇ ರುಮೇನಿಯವನ್ನು ಬೆದರಿಕೆಯಿಂದ ತಡೆಯುವ ಕೆಲಸ ಜರ್ಮನಿಯಿಂದ ಸಾಗಿದೆ. ಜರ್ಮನಿಯು ರುಮೇನಿಯಕ್ಕೆ ಸಾಲವಿತ್ತಂತೆ ಫ್ರಾನ್ಸು ಕೊಟ್ಟಿದೆ. ಮುಂದೆ ಬ್ರಿಟನೂ ತನ್ನ ವರ್ಚಸ್ಸನ್ನು ಅಲ್ಲಿ ಬೇಕೆನ್ನುವಷ್ಟು ಹೂಡದಿದ್ದರೆ ಮಾರ್ಗವಿಲ್ಲ. ಯಾವುದೇ ಕಾರಣದಿಂದ ಕಪ್ಪು ಸಮುದ್ರದ ಯಜಮಾನಿಕೆಯು ಜರ್ಮನಿಗಾಗಲಿ, ಇಟಲಿಗಾಗಲಿ ದೊರೆಯಿತೆಂದರೆ ಇಟಲಿಯ ಸಾಮ್ರಾಜ್ಯಭಾರವನ್ನು ತಡೆಯುವುದು ಕಠಿಣ.

ಆಲ್ಬೇನಿಯದ ಭಕ್ಷಣೆ

ಜೆಕೊಸ್ಲೊವಾಕಿಯವನ್ನು ಜರ್ಮನಿಯು ಜೀರ್ಣಿಸಿಯಾಗುವ ಮೊದಲೇ ಇಟಲಿಯು ಆಲ್ಬೇನಿಯವನ್ನು ಎರಡೇ ದಿನಗಳಲ್ಲಿ ನುಂಗಿತೇಕೆ? ಇದು ಯುರೋಪಿನಲ್ಲಿ ಅನಿವಾರ್ಯವಾಗಿ ಬಂದಿರುವ ಯುದ್ಧವನ್ನು ಸೂಚಿಸುತ್ತದೆ. ಬ್ರಿಟನು ತನ್ನ ಹಳೆಯ ಶಾಂತಿ ಧೋರಣೆಯನ್ನಿಷ್ಟು ಕಾಲ ಇಟಲಿ ಜರ್ಮನಿಗಳಿಗೆ ನಿಧಾನವಾಗಿ, ತಂತ್ರ ಹೂಡಿ ಕಾರ್ಯಸಾಧಿಸುವ ಅವಕಾಶವಿತ್ತು. ಚೆಂಬರ್ಲೇನರ ಧೋರಣೆಯು ಬದಲಿಸಿ, ಫ್ರಾನ್ಸು, ರಷ್ಯ, ಬ್ರಿಟನು ಜಂಟಿಯಾಗಿ ವರ್ತಿಸುವ ನಿರ್ಣಯವಾಗಲು—ಪರಸ್ಪರ ಕಲಹ ನಡೆಯುವ ಮೊದಲೇ, ಆದಷ್ಟು ತೀವ್ರವಾಗಿ ತಂತಮ್ಮ ಠಾಣೆಗಳನ್ನು ಬಲಪಡಿಸುವುದು ಈ ಎರಡು ದೇಶಗಳಿಗೂ ಅವಶ್ಯವಾಗಿದೆ.

ಅಂಗೈನೋಟ

ಪಕ್ಷದ ವಿಶೇಷ ಲೇಖಕರು:
ಶ್ರೀ| ಶಿವರಾಮ ಕಾರಂತರು

ತಮ್ಮ ಬಲ, ತೀವ್ರ ಚಲನೆ, ಬೆದರಿಕೆಗಳಿಂದ ಅವರು ನೆರೆಯ ರಾಜ್ಯಗಳನ್ನು ತಟಸ್ಥ ಮಾಡಿದಲ್ಲದೆ ಅವರಿಗೆ ದಾರಿಯಿಲ್ಲ. ಮೆಮೆಲ್ ಪ್ರಾಂತವನ್ನು ನುಂಗಿ, ಲಿಥುನಿಯವನ್ನು ದಂಗು ಬಡಿಸಿದರು. ಈಗ ಉಳಿದ ದೇಶಗಳು—ಪೋಲೆಂಡ್, ರುಮೇನಿಯ, ಯುಗೋಸ್ಲಾವಿಯ. ಕೊನೆಯ ದೇಶವು ತಟಸ್ಥವಾಗಿ ಉಳಿಯಬಹುದು ಇಲ್ಲವೆ ಇಟಲಿಗೆ ಸಮನಾಗಿ ವರ್ತಿಸಬಹುದು. ಆದರೆ ಪೋಲೆಂಡ್, ರುಮೇನಿಯಗಳ ಸ್ಥಿತಿ ಚಂಚಲವಾಗಿದೆ.

ಪೋಲೆಂಡ್

ಫ್ರಾನ್ಸಿನೊಳಗಿನ ಸ್ನೇಹ ಬಹಳ. ಜರ್ಮನಿಯ ಭೀತಿಯೂ, ಜರ್ಮನರ ಮೇಲಿನ ತಿರಸ್ಕಾರವೂ ಪೋಲೆಂಡಿನ ಜನರಲ್ಲಿ ತುಂಬಿದೆ. ಯುದ್ಧ ಸೇನೆಯ ದೃಷ್ಟಿಯಿಂದ ಪೋಲೆಂಡ್ ಬಲವಾಗಿದೆ. ಆದರೆ ಅದು ಯಾವ ಪಂಗಡ ಸೇರಿದರೂ ಅದಕ್ಕೆ ಭಾವಿಯುದ್ಧದಲ್ಲಿ ಹಾನಿ ತಪ್ಪದು. ರಷ್ಯದ ಮೇಲೆ ದಾಳಿ ಇಡುವಾಗ ಜರ್ಮನಿಯು ಅದನ್ನು ತುಳಿದೇ ತುಳಿಯುವುದು. ಅದು ತಟಸ್ಥವಾಗಿದ್ದರೂ ಈ ಕೆಲಸವಾಗಲೇ ಬೇಕು. ಬದಲು ಜರ್ಮನಿಗೆ ಸಹಾಯವಾದರೆ ರಷ್ಯದ ತುಳಿತಕ್ಕೆ ಅದು ಬಲಿಯು. ಈಗಂತು ಇಂಗ್ಲೆಂಡ ಫ್ರಾನ್ಸುಗಳು ಅದಕ್ಕೆ ಭರವಸೆಯನ್ನು ಕೊಟ್ಟಿವೆ. ಅದರ ಮನಸ್ಸಿನ ಆಳವನ್ನು ತಿಳಿಯುವುದು ಕಠಿಣ. ಜರ್ಮನಿಯ ಬೆದರಿಕೆಯೂ ಅದಕ್ಕಿದೆ. ಆದರೆ ಗಳಿಗೆಗಳಿಗೆಗೂ ಜರ್ಮನಿಯು ಯಾವ ಸ್ನೇಹ, ಮಾತು, ಮರ್ಯಾದೆಗಳಿಗೆ ಗತಿ ಸರಿಯದೆ ನಾಚಿಕೆಗೇಡಿಯಾಗಿ ವರ್ತಿಸುತ್ತಿರುವುದೋ ಅದರಿಂದ ಹಿಟ್ಲರನ ವಚನಗಳಿಗೆ ಮರುಳಾಗಿ ಆ ದೇಶವು ಎಂದೂ ವರ್ತಿಸುವಂತಿಲ್ಲ. ವಿಶಾಲ ಜರ್ಮನಿಗೆ ಸ್ವತಂತ್ರ ಪೋಲೆಂಡ್ ಸಹನವಾಗದು. ಆದುದರಿಂದ ಇತರಂಗದವರಾದರೂ ಬ್ರಿಟನ್, ಫ್ರಾನ್ಸುಗಳಿಗೂ ಪೋಲೆಂಡಿಗೂ ಮೈತ್ರಿಯಾಗಬೇಕು.

ರುಮೇನಿಯ

ರುಮೇನಿಯವು ಬಲ್ಕನ ಕೂಟದ ಒಂದು ಸಭಾಸದ ರಾಜ್ಯ. ಈ ಬಲ್ಕನ ಕೂಟದಲ್ಲಿ ಜೆಕೊಸ್ಲೊವಾಕಿಯ, ಆಲ್ಬೇನಿಯಗಳೂ ಸೇರಿದ್ದುವು. ಅವೆರಡು ಕಣ್ಮರೆಯಾದ ಬಳಿಕ— ಉಳಿದ ಯುಗೊಸ್ಲಾವಿಯ, ಬಲ್ಗೇರಿಯ, ಗ್ರೀಸ್, ರುಮೇನಿಯಗಳ ಅವಸ್ಥೆಯೇನು. ಅವು ಒಂದೊಂದಾಗಿ ವರ್ತಿಸುವ ತ್ರಾಣವಿಲ್ಲ. ಸ್ವತಂತ್ರವಾಗಿರಲು ಸಾಧ್ಯವಿಲ್ಲ. ರುಮೇನಿಯ ಗ್ರೀಸುಗಳೆರಡು ಅಧೀನವಾದರೆ ಮೆಡಿಟರೇನಿಯನ್ ಯಜಮಾನಿಕೆ ಇಟಲಿಗೆ, ಕಪ್ಪು ಸಮುದ್ರದ ಯಜಮಾನಿಕೆ ಜರ್ಮನಿಗೆ. ಇಂದಲ್ಲವಾದರೂ ನಾಳೆ ಈ ದೇಶಗಳು ಇವರಿಗೆ— ಜರ್ಮನ್ ಪಕ್ಷಿಯೊಳಗೆ ಸೇರುವ ತೀರ್ಮಾನವಾಗಿದೆ. ಟರ್ಕಿಯು ರುಮೇನಿಯದ ಗೆಳೆಯ. ಅದರಂತೆ ರಷ್ಯದ ಮಿತ್ರ. ಭಾವೀ ಕಲಹದಲ್ಲಿ ರುಮೇನಿಯದ ಮೇಲೆ ಪೆಟ್ಟು ತಪ್ಪದೆ ಹೋದರೂ ಅದು ಟರ್ಕಿ, ರಷ್ಯಗಳು ಸೇರಿದ ಪಂಗಡವನ್ನೆ ಆಶ್ರಯಿಸುವ ಭರವಸೆಯು ಅಧಿಕವಾಗಿದೆ.

ಎಂದಿಗೆ ಕಲಹ?

ಯುರೋಪಿನ ಭವಿಷ್ಯವು ಇನ್ನೊಂದು ೧೦-೨೦ ವರ್ಷಗಳ ಕಾಲ ನಿರ್ಣಯವಾದಂತೆ. ೧೯೧೮ರಲ್ಲಿ ಮುಗಿದ ಸಮರದಿಂದ ಚೇತರಿಸಲು ಯುರೋಪಿಗೆ ೨೦ ವರ್ಷಗಳು ಹಿಡಿದವು. ಇನ್ನು ಯುದ್ಧ ಆರಂಭವಾಗಲಿದೆ, ಅದು ಮುಗಿದ ಬಳಿಕ ೧೫ಕ್ಕೆ ಕಡಿಮೆಯಾಗದಷ್ಟು ಕಾಲ ಯುರೋಪಿನ ಅಭಿವೃದ್ಧಿಯ ಗಾಲಿಯು ಜಗ್ಗಿದಂತೆಯೇ ಸರಿ.

ಈಗ ಶಾಂತಿ ಯತ್ನವೂ ಇಲ್ಲ, ಮಾಡಿದ ತಪ್ಪುಗಳಿಗೆ ಪಶ್ಚಾತ್ತಾಪವೂ ಇಲ್ಲ. ಕಲಹ, ಕಲಹಕ್ಕೆ ಮೊದಲು ಬಲಸಂಗ್ರಹ—ಇವೇ ಎಲ್ಲ ರಾಜ್ಯಗಳ ಮುಂದಿರುವ ಪ್ರಶ್ನೆ. ಅಂತು ಇದೇ ವರ್ಷದಲ್ಲಿ ಯುದ್ಧವನ್ನು ಆಮಂತ್ರಿಸುತ್ತಾರೆ. ಯುದ್ಧಪಿಶಾಚರಾದ ಹಿಟ್ಲರ್, ಮುಸೋಲಿನಿಯರನ್ನು ಅವರ ದೇಶೀಯರೇ ಅತೃಪ್ತಿಯಿಂದ ತುಳಿದು ನಿರ್ನಾಮಗೊಳಿಸದಿದ್ದರೆ ಅವರು ಯುರೋಪಿನ ಹೋಮವನ್ನು ಮಾಡಿಯೇ ಬಿಡುತ್ತಾರೆ.

ಸಂಯುಕ್ತ ಅಮೇರಿಕವು

ಜೆಕೊಸ್ಲೊವಾಕಿಯ ಪ್ರಕರಣದಿಂದ ಮತ್ತಷ್ಟು ಉದ್ವಿಗ್ನವಾಯಿತು. ಇಟಲಿಯ ನೀಚತನದಿಂದ ಅಲ್ಲಿನ ನ್ಯೂಟ್ರಲಿಟಿ ಕಾಯಿದೆಯು ಸಡಿಲಿಸಲ್ಪಡಬಹುದು. ಅದು—ಪ್ರಜಾಪ್ರಭುತ್ವಗಳಿಗೆ ಪ್ರತ್ಯಕ್ಷ ಶಸ್ತ್ರಬಲವನ್ನು ನೀಡಬಹುದು. ಈಗಾಗಲೇ ಇಟಲಿ ಮೊದಲಾದ ದೇಶಗಳಿಗೆ ಶಸ್ತ್ರ ಬಿಕರಿ ಮಾಡಬಾರದು ಎಂಬ ತಳಹದಿ ಬೆಳೆಸಿದೆ. ಜತೆಗೆ ಜರ್ಮನ್ ಮಾಲುಗಳ ಮೇಲೆ ಸೇಕಡ ೨೫ರಂತೆ ದಂಡದ ಸುಂಕ ಹಾಕಿದ್ದಾರೆ. ಇದು ಜೆಕೊಸ್ಲೊವಾಕಿಯ ನಾಶಗಳ ಸಿದ್ಧಾಂತ ಕಾರಣವೆಂದರೆ— ಜರ್ಮನಿಯು ಈಗ ಇತರ ರಾಜ್ಯಗಳ ವ್ಯಾಪಾರಿಗಳಿಗೆ ಶಕ್ತಿ ಸ್ಪರ್ಧಿ. ಅನ್ಯಾಯದಿಂದ ಸ್ಪರ್ಧೆಯು ನ್ಯಾಯಮಾರ್ಗದ ರೀತಿಯಿಂದ ನಡೆಯುತ್ತಿಲ್ಲ. ಉತ್ಪನ್ನ ವೆಚ್ಚಕ್ಕಿಂತಲೂ ಕಮ್ಮಿ ಮಾಲುಗಳನ್ನು ಜರ್ಮನ್ ವ್ಯಾಪಾರಿಗಳು ಮಾರುತ್ತಾರೆ. ಸರಕಾರವು ಇದಕ್ಕೆ ಕೊಡುತ್ತಿರುವ ಅಪಾರ ರಕ್ಷಣೆ (subsidy)ಯಿಂದ ಮಾತ್ರ ಇದು ಸಾಧ್ಯ. ಈ ರಕ್ಷಣೆಯು ವ್ಯರ್ಥವಾಗುವಂತೆ ಮಾಡಲು ಈ ಹೆಚ್ಚಿನ ದಂಡವು ಸುಂಕ.

ಇಸ್ಲಾಮು ತನ್ನ ಮನಸ್ಸನ್ನು ತಿಳಿಯಲಿ

ಮುಸಲ್ಮಾನ ರಾಜ್ಯಗಳ ಹಲವುಗಳ ಒಲವು ಜರ್ಮನಿಯ ಕಡೆಗೂ, ಇಟಲಿಯ ಕಡೆಗೂ ಇದೆ. ಪೆಲೆಸ್ಟೈನ ವಿಚಾರದಲ್ಲಿ ಜರ್ಮನಿಯು ಅರಬರನ್ನೇ ಎತ್ತಿಹಿಡಿದು, ಅವರಿಗೆ ಶಸ್ತ್ರಗಳನ್ನು ಒಳಗಿಂದ ಮಾರಿ ದಂಗೆಗೆ ಪೋಷಣೆಯಿತ್ತುದರಿಂದ—ಜರ್ಮನಿಯು ತಮ್ಮ ಗೆಳೆಯ ಎಂಬ ತಿಳಿವು ಪೂರ್ವದ ಇಸ್ಲಾಮುರಾಜ್ಯಗಳಿಗೆ ಉಂಟಾಗಿರಬಹುದು. ಆದರೆ ಇಟಲಿಯು ಒಂದೇ ಏಟಿಗೆ ಆಲ್ಬೇನಿಯವನ್ನು ನುಂಗಿ, ಅಲ್ಲಿನ ಮುಸಲ್ಮಾನ ರಾಜ್ಯವನ್ನು ಸ್ವಾಧೀನ ಪಡಿಸಿಕೊಂಡ ಮೇಲೆ ಅವರು ತಿಳಿಯುವರೇ ತಿಳಿಯಲಿ. ಇಸ್ಲಾಮು ಪ್ರಪಂಚವು ಯಾವ ಪರರಾಷ್ಟ್ರದ ಮೇಲೆಯೂ ವಿಶ್ವಾಸವಿಡಬೇಕಿಲ್ಲ. ಆದರೆ ರಾಜನೀತಿಯ ಈ ಯುಗದಲ್ಲಿ ಕೇವಲ ಧರ್ಮಬ್ರಾಂತನ್ನುಳಿಸಿಕೊಳ್ಳುವುದನ್ನು ಬಿಟ್ಟು—ತಂತಮ್ಮ ದೇಶದ ಆರ್ಥಿಕ ಸುಖ, ಸ್ವಾತಂತ್ರ್ಯಗಳು ಯಾರ ಸ್ನೇಹದಿಂದ ಬೆಳೆಯಬಹುದು ಎಂಬುದನ್ನು ಚೆನ್ನಾಗಿ ವಿಚಾರಿಸುವುದು ಅವಶ್ಯ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಸದ್ವೈದ್ಯಶಾಲಾ ಪನ್ನೀರು

ಹೊಸದಾದ ಗುಲಾಬಿ ಹೂಗಳಿಂದ ಶ್ರೇಷ್ಠವಾದ ರೀತಿಯಲ್ಲಿ ಎರಡು ಸಲ ಭಟ್ಟಿಯಿಳಿಸಿ ತಯಾರಿಸಲ್ಪಟ್ಟಿರೆ ವಿಶ್ರಣವು ಖಂಡಿತವಾಗಿಯೂ ಇಲ್ಲ. ವಿಶೇಷವಾದ ತಲೆನೋವು, ಕಣ್ಣುರಿ ಕಣ್ಣುನೋವು ಇತ್ಯಾದಿ ವಿಕಾರಗಳಲ್ಲಿ ಈ ಪನ್ನೀರನ್ನು ಧೈರ್ಯವಾಗಿ ನೆತ್ತಿಗೂ ಕಣ್ಣಿಗೂ ಉಪಯೋಗಿಸಬಹುದು.

ಬೆಲೆ: ನಂ. ೧' 0-4-0 ನಂ' ೨ 0-6-0

ಹಿಮತೈಲ

ಶುದ್ಧವಾದ ತಿಲತೈಲಕ್ಕೆ ಅಮೂಲ್ಯ ಮೂಲಿಕೆಗಳನ್ನು ಸೇರಿಸಿ ಶಾಸ್ತ್ರೀಯವಾಗಿ ತಯಾರಿಸಿರುವ ತೈಲ. ಕೂದಲು ಬೆಳವಣಿಗೆಯನ್ನು ಹೆಚ್ಚಿಸಿ, ಕಣ್ಣುರಿ, ಕೈಕಾಲುರಿ ಬಿಸಿಲು ಹೆಚ್ಚಿದ ಹಾಗೆಲ್ಲಾ ವೃದ್ಧಿಹೊಂದುವ ತಲೆನೋವು ಇತ್ಯಾದಿ ಪಿತ್ತವಿಕಾರಗಳನ್ನು ಶಮನಪಡಿಸುತ್ತದೆ.

ಬೆಲೆ: ರೂ. 1-0-0 ಮುಕ್ಕಾಲು 0-8-0

ನಂಜನಗೂಡು ಸದ್ವೈದ್ಯ ಶಾಲಾ,
ಬ್ರಾಂಚ್: ರಥಬೀದಿ ಮಂಗಳೂರು.

2 ವರ್ಷ ಕಾಲ
ರಾತ್ರಿರೋಗದಿಂದ ನರಳಿದೆನು.



ಎಂತಹ ವೇದನೆಯಾಗಿರಲಿ ಮತ್ತು ಅನೇಕ ಕಾಲದ ಹಳೆ ವೇದನೆಯಾಗಿದ್ದರೂ ಈ ಪುಡಿಯಿಂದ ಗುಣಹೊಂದುತ್ತದೆ. ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನು ಕೊಂಡುಕೊಳ್ಳಿರಿ. ಬಾಟ್ಲಿ ಪೆಟ್ಟಿಗೆಯ ಮೇಲೆ ಮೆಕ್ಲೀನ್ ಎಂಬ ಹಸ್ತಾಕ್ಷರ ಇದ್ದರೆ ಮಾತ್ರ ಪ್ರಾಮಾಣಿಕವಾದುದು. ಪುಡಿಯಾಗಿಯೂ ಇರುತ್ತದೆ. ಟ್ಯಾಬ್ಲೆಟುಗಳಲ್ಲಿಯೂ ಇರುತ್ತದೆ. ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ.

ಪೆಟ್ಟಿಗೆಯ ಮೇಲೆ ಕೆಂಪು ಸೀಲು ಇರುವುದೋ ಎಂದು ದೃಢಮಾಡಿಕೊಳ್ಳಿ.

ದಸ್ಕತನ್ನು ನೋಡಿರಿ—

ಮೆಕ್ಲಿನ್ ಬ್ರೇಂಡ್
ಸ್ಟೋಮಕ್ ಪೌಡರ್

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ. ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿರೂಪಗಳು, ಘಟನೆಯ ರೂಪಗಳು ಘಟನೆಯ ರೀತಿಗಳು, 'ಜಾತಿ' ಆವರಣ—ಇವೆಲ್ಲ ವಾಸ್ತವವಾದುವು. ಹಳ್ಳಿಯ ಸಾಮಾನ್ಯ ಕೋಟಿ ಉಂಡಾಪುರದೊಳಗಿನ ಒಂದು ಗ್ರಾಮ ಸಮೂಹ; ವ್ಯಕ್ತಿಗಳು ಮಾತಿನ ರೀತಿಗಳು ಹಲವು ಅಲ್ಲಿನವೆ. ಬರಿಯ ಪಾತ್ರಪರಿಚಯಗಳೇ. ಈ ಚರಿತ್ರೆಗಳ ಗುರಿ. ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಅನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು. ನಾನು ಬರೆದ ಪ್ರಸ್ತಾವನೆಯ ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅವರ ಮುಂದಿರುವ ಪಾತ್ರಗಳು ಇಂಥವು—ಎಂದು ಒದಗಿಸಿಕೊಡುತ್ತೇನೆ. ಇತಿ,

ಶಿವರಾಮ ಕಾರಂತ.

೯. ಚನ್ನ ಮಯ್ಯರು

ಚೆನ್ನ ಮೈಯ್ಯರ ಪ್ರಾಯ ಸಮನಾಗಿ ನನಗೆ ತಿಳಿಯದು. ಇನ್ನೂ ಪ್ರಾಯಕ್ಕೆ ಬಂದಿಲ್ಲ, ವಯಸ್ಸು ಬರಿಯ ಹದಿನಾರು ಎನ್ನುತ್ತಾರೆ ಒಬ್ಬಿಬ್ಬರು. ಇಲ್ಲ; ೩೦–೩೩ ಆದರೂ ಆಗಿರಬೇಕು; 'ಕಾಣುವುದಕ್ಕೆ ಆಳು ಸಣ್ಣದಾದರೆ ಏನು' ಎನ್ನುತ್ತಾರೆ ಹಲವರು. ಕಾಣುವುದಕ್ಕೆ ಹೇಗೂ ಇರಲಿ, ವರ್ಷ ಎಷ್ಟು ಇರಲಿ—ಪಟ್ಟಕ್ಕೆ ಬಂದ ಒಂದು ವರ್ಷದಲ್ಲಿ ಇಷ್ಟು ಹೆಸರಿಗೆ ಬಂದವರು ಯಾರೂ ಇಲ್ಲ—ಅದು ಮಾತ್ರ ನಿಶ್ಚಯ. ಕಳೆದ ವರ್ಷದ ತನಕ 'ಚನ್ನಮಾಣಿ' ಯಾಗಿದ್ದವನು, ಈಗ ಚನ್ನ ಮೈಯರು ಎನಿಸುವುದು ಸುಲಭದ ಕೆಲಸವಲ್ಲ. ವರಪುನ ಹತ್ತಿರ ಕೇಳಿದರೆ ಅದರ ಗುಟ್ಟು ಹೇಳುತ್ತಾನೆ:—

'ಅಯ್ಯ—ನಮ್ಮ ಊರವರು . . . ಹಣ ಬಿದ್ದಲ್ಲಿ ಹದ್ದುಗಳ ಸಾರಥಿಯಾದ ಹಾಗೆ ಹಣವಿದ್ದಲ್ಲಿ ತಯಾರು. ಚಿಕ್ಕ ಮೈಯ್ಯರು ಇರುವಷ್ಟು ದಿವಸ ಅವರ ಮನೆಯ ಜಗುಲಿಯ ಹತ್ತಿರ ಸುಳಿಯದಿದ್ದ ನಾಯಿಗಳೆಲ್ಲ ಇವತ್ತು ಅದೇ ಜಗುಲಿ ದಾಟಿ ಹೆಬ್ಬಾಗಿಲು ಏರಿ ಮೀಸೆ ತಿರುವುತ್ತಿದ್ದಾರೆ ಏನು ಹೇಳಲಿ?'

'ಹಾಗೆ ನನಗಾದರೂ ಇಷ್ಟು ಬುದ್ಧಿಮಾತು ಚನ್ನನಿಗೆ ಹೇಳುವ ಎಂದು ಅನಿಸುತ್ತದೆ. ನನ್ನ ಕಣ್ಣ ಮುಂದೆ ಕೌಪೀನ ಉಟ್ಟ ಮಕ್ಕಳವು. ಆದರೆ—ಅವನಿಗೆ ಈಗ ಸಾರಥಿಯಾದ ಆ ನಸ್ಯಾಣಿ ಸುಬ್ಬ ಭಟ್ಟ, ಆ ಗಾಣಿಗ ಸಂಕ, ಆ ತಿಮ್ಮ, ಆ . . . ಸುಬ್ಬವ, ಸುಡಗಾಡವೆ—ಇವರೆಲ್ಲರ ದೆಸೆಯಿಂದ. ಏನು ಹೇಳಿದರೂ ಗೋಕರ್ಣಲ್ಲ ಮೇಲೆ ಮಳೆ ಕರೆದಂತೆ—ಸರ್ವಜ್ಞ, ಎಂಬಹಾಗೆ ಆಗಿದೆ.' ಅಪ್ಪ ಮಾಡಿಟ್ಟ ಹಣ ಇದೆ. ಏನು ನಗದಿ ೫೦,೦೦೦ ಕಡಿಮೆಯಿಲ್ಲ ಅನ್ನುತ್ತಾರೆ. ಅಷ್ಟು ಇದ್ದೀತು. ಅಂದರೆ ಚಿಕ್ಕ ಮೈಯರು ಪ್ರಾಮಾಣಿಕನಾಗಿ ಹೊಟ್ಟೆಗೂ ಸಹ ತಿನ್ನದೆ ಅಮರಿಸಿ ಇಟ್ಟ ದುಡ್ಡು ಅದು. ಮೇಲೆ ಆಸ್ತಿ ಏನಾದರೂ ೧೦ ಕೋರ್ಜಿಗೆ ಕಡಿಮೆಯಿಲ್ಲ. ಈಗ ಎಲ್ಲವರು ಸೇರಿಕೊಂಡು ಧೂಳು ಹಾರಿಸುತ್ತಾರೆ.

'ಹಾರಿಸುವುದೇನು—ಅರ್ಧ ತಿಂದಾಯಿತು ಅನ್ನುತ್ತಾರೆ ಕೆಲವರು . . . ಮುಕ್ಕಾಲೇ ಮುಗಿಯಿತು ಅನ್ನುವವರು ಹಲವರು. ೫೦,೦೦೦ ರೂಪಾಯಿಯಲ್ಲಿ ಮುಕ್ಕಾಲು ಎಂದರೆ ಒಂದು ೩೦,೦೦೦ ಆದರೂ ಆದೀತಲ್ಲ. ಅಷ್ಟನ್ನೂ ಒಂದು ವರ್ಷದಲ್ಲಿ ಚಟ್ಟುಎಬ್ಬಿಸಲು ಧೀರನೇ ಸೈಯ್ಯಪ್ಪ ಚನ್ನಪ್ಪ . . . ಯಾರಾರಿಗೆ ತಿನಿಸಿದನೋ ಏನು ಕತೆಯೋ . . .

'ನಸ್ಯಾಣಿ ಸುಬ್ಬಣ್ಣ ಭಟ್ಟನಿಗೆ ೭೦೦೦ ರೂಪಾಯಿ ಸಾಲವಂತೆ . . . ನೋಟಿಲ್ಲ ದಸ್ತಾವೇಜಿಲ್ಲ. ಅದಿದ್ದವರಿಗೇ ಸುಬ್ಬಣ್ಣ ತೆಗೆದುಕೊಂಡದ್ದು ಕೊಟ್ಟುದು ಇಲ್ಲ. 'ಮದುವೆಗೆ' ಹಾಕಿದ ಹಾಗೇ ಸರಿ ಅವನಿಗೆ ಕೊಟ್ಟದ್ದು. ನಾನೆನ್ನುತ್ತೇನೆ—ಆಕ್ಕಣಿ ಮಗಳನ್ನು ಆಕ್ಕಣಿಗೆ ತಿಳಿಯದ ಹಾಗೆ ಚನ್ನಪ್ಪನಿಗೆ ತಗಲಿಸಿ ಹಾಕಿದ್ದು ಇವನೇ ಇರಬೇಕು. ಇವನ ದಲಾಲಿಕೆಯೇ ಅದಕ್ಕೆ ಕಾರಣ.

'ಅದೆಂಥದೋ ಬ್ಯಾಂಕು ಜಾಮೀನು ಅಂದರು—೧೭,೦೦೦ ಸಾವಿರಕ್ಕೆ ತೇಜಪ್ಪನಿಗೆ. ಸಾಹುಕಾರರ ಹತ್ತಿರ ಕೇಳಿದನಂತೆ. ಅದಕ್ಕೆ ನಮ್ಮ ಸಾಹುಕಾರರು, ಜನ್ನ ಪೈಗಳು—ಆಗಲಿ, ಮೈಯ್ಯರೇ ನಮ್ಮ ತೇಜಪ್ಪ ಭಂಡಾರಿಯೆಂದರೆ ವಹಿವಾಟುದಾರ, ಏಕೀನಿಯೆಂದರೆ ಏಕೀನಿ—ಅಂದರೆ ಈ ಸಾಟಿ ಸಮಯದಲ್ಲಿ ಅವನಿಗೆ ಮುಗುಚಾಡಲಿಕ್ಕೆ ಎಷ್ಟು ಇದ್ದರೂ ಸಾಲದು. ಹಾಗಾಗಿ ಕೇಳಿರಬೇಕು. ಮೂರು ತಿಂಗಳೊಳಗೆ ಮುಂಬಯಿಯಿಂದ ಹಣ ಬರುತ್ತದೆ. ತುಂಬಿಸುತ್ತಾನೆ. ನಾನೇ ಹಾಕುತ್ತಿದ್ದೆ ಅವನಿಗೆ ಜಾಮೀನು ಇಷ್ಟು ದಿವಸ. ನನಗೇ ಗರ್ಜು ಬಿದ್ದು ಬ್ಯಾಂಕಿನಿಂದ ೧೧,೦೦೦ ಕಡಕಟ್ಟು ಮಾಡಿದ್ದರಿಂದ, ನನ್ನ ಜಾಮೀನು ಆಗದು—ಅಂದರಂತೆ.'

'ಯಾವ ತೇಜಪ್ಪ ಭಂಡಾರಿ ಇವನು ಎಂದು ನನಗೆ ಗೊತ್ತಾಗುವುದಲ್ಲ. ಯಾರಾದರೂ ಭಂಡಸಾಲೆ ಭೂಪತಿಗಳು ಇರಬೇಕು. ಈಗಿನ ದಿವಸದಲ್ಲಿ ಬ್ಯಾಂಕಿನ ಜವಾಬುದಾರಿ ಹಾಕಿದವನ ಕುಲಕೋಟಿ ಉದ್ಧಾರವಾಯಿತು. ಅಲ್ಲವಾದರೆ ಕೆಳಬೈಲು ನಾರ್ಣಪ್ಪನ ಮುಂಡ ಮುಚ್ಚಿದ್ದು ಹ್ಯಾಗೆ? ತಿಂದದ್ದೂ ಅಲ್ಲ; ಮಾಡಿದ್ದೂ ಅಲ್ಲ—ಜಾಮೀನು. ಜಾಮೀನೋ ಹಂದಮಾನೋ—ಒಟ್ಟು ಮನೆಮಾರು ಎಲ್ಲ ಬ್ಯಾಂಕಿನ ಹಣಕ್ಕೆ ಅಡವಾಯಿತು.' ಈಗ ಈ ಹುಡುಗ ಸಿಕ್ಕಿದ್ದಾನೆ—ಅವನನ್ನು ಲಗಾಡಿ ತೆಗೆಯುತ್ತಾರೆ; ಚೂರು ಚೂರು ಇರಿಸುವುದಿಲ್ಲ . . ಶುದ್ಧ ಹದ್ದುಕಳ್ಳಗಳು.'

'ಅತ್ತ—ತೇಜಪ್ಪ, ನಸ್ಯಾಣಿ ಸುಬ್ಬ, ಗಾಣದ ಸಂಕ ಇವರು ಮುಕ್ಕಿಸಲಿಕ್ಕೆ. ಇತ್ತ ಪುಟ್ಟರಂಗಿ ಬಲೆಗೆ ಬಿದ್ದದ್ದು ನಿಜವಾದರೆ ಅದೊಂದೇ ಸಾಕು—ಎಲ್ಲಾ ಸೇರಿ ಚಿಕ್ಕ ಮೈಯ್ಯರ ಆಯುಸ್ಸಾಲದ ದುಡಿತ ನಿರ್ನಾಮವಾಗುತ್ತದೆ.

ನೀವೇ ಚೆನ್ನ ಮೈಯ್ಯರ ಠೀವಿ ನೋಡಬೇಕು.. ಬೆಳಗ್ಗೆ ಎಂಟು ಘಂಟೆಯಾಯಿತೆಂದು ಸವಾರಿ ಪೇಟೆಗೆ ಹೊರಟಿತು. ಕುಳ್ಳ, ನಸುಗಪ್ಪು ಆಳು. ಮುಂದಲೆ ಕ್ರಾಪು, ಹಿಂದಲೆ ಜುಟ್ಟು. ಬಲಗೈಯ ಐದು ಬೆರಳುಗಳಿಗೆ ಆರು ಉಂಗುರಗಳು. ಮಲ್ಲು ಅಂಗಿ. ಇದಲಿಕ್ಕೆ ರಸ್ತೆ ದೂಳು ಗುಡಿಸುವಂಥ ಜರಿ ಪಂಚೆ. ಅಂಗಿಯ ಮೇಲೆ ಚಿನ್ನದ ಚೈನು. ಕೈಯಿಗೆ ರಿಸ್ಟು ವಾಚು. ಮುಖಾಲಂಕಾರಕ್ಕಾಗಿ ಕನ್ನಡಕ ಬೇರೆ. ಕಾಲಿಗೆ ತುಳಿಯಲು 'ಸಿಲ್ಪರ್' ಕೈಯಲ್ಲಿ ಬೆಳ್ಳಿ ಕಟ್ಟಿದ ಕೋಲು. ಬೀದಿ ಹೊಗೆ ಬಾಯಿಂದ ತಪ್ಪಿದ್ದಿಲ್ಲ.

ಬಂದರೆ ಅವರೊಬ್ಬರೇ ಬರುವ ಹಾಗಿಲ್ಲ. ಜತೆಗೆ—ಅವರು ನಾಳೆ ನಗುವುದಾದರೆ, ಆ ಸಂಕೇತ ತಿಳಿದು ಇಂದೇ ನಗಾಡುವಂಥ ದೂರ್ತ ಭಟರು. ಕೌರವನಿಗೂ ಇಂಥ ಮಂತ್ರಿಗಳು ಸೇರಿರಲಿಕ್ಕಿಲ್ಲ. ಅವರ ಆಚೀಚೆ—ನಸ್ಯಾಣಿ ಸುಬ್ಬಭಟ್ಟ. ಮತ್ತು ಬೇರೆ ಯಾರಾದರೂ ಇರುತ್ತಾರೆ. ಅವರ ಹಿಂದೆ, ಒಂದು ಬೀಸಣಿಗೆ ಹಿಡಿದುಕೊಂಡು, ತಾಂಬೂಲವನ್ನು ಹಾದಿಯ ಎರಡು ಮಗ್ಗುಲಿಗೂ ತುಪ್ಪುತ್ತ ಬರುವ ಗಾಣದ ಸಂಕ.

ಚನ್ನಪ್ಪ ಮೈಯ್ಯರ ಸವಾರಿ ಮೊದಲಿಗೆ ಜನ್ನ ಪೈಗಳ ಚಪ್ಪರಕ್ಕೆ ಬಂದು ಇಲ್ಲಿ ಒಡ್ಡೋಲಗವಾಗಬೇಕು. ಅಲ್ಲಿಗೆ ಕಾಫಿ ಹೊಟೆಲಿಂದ ಕಾಫಿ, ಉಪ್ಪಿಟ್ಟು, ಅವಲಕ್ಕಿ (ಮತ್ತೇನು ಮಣ್ಣು ಆ ಅನಂತ ಪ್ರಭು ಅಂಗಡಿಯಲ್ಲಿ ಸಿಗುತ್ತೆ?) ತರಿಸಿ ಟಿಫಿನ ಮುಗಿಯಬೇಕು. ಆ ಮೇಲೆ ಪೈಗಳೇ ನಮ್ಮ ಹೊಸ ಬಂಗ್ಲೆ ನೋಡಿ ಬರುತ್ತೇವೆ. ಈ ಕಳ್ಳ ಕೆಲಸದವರನ್ನು ನಂಬಿ ಈ ವರ್ಷಕ್ಕೆ ಬಂಗ್ಲೆ ಮುಗಿಯಲಿಕ್ಕಿಲ್ಲ ಎಂದು ಕಾಣುತ್ತದೆ' ಅನ್ನುತ್ತಾರೆ.

ಸರಿ ಹಾವಂದದೂ ಅವರ ಪಟಾಲಮೂ ಬಂಗ್ಲೆ ಕೆಲಸದಲ್ಲಿಗೆ ಹೊರಡುವುದು. ಚನ್ನ ಮೈಯ್ಯರಿಗೆ ತಮ್ಮ ಮನೆಯಲ್ಲಿ ಸಾಬ್ಬು ಗಳಿಗೆ ಕಳೆಯುವುದೆಂದರೆ ಬೇಸರ. ಅದರಿಂದಾಗಿ, ರಸ್ತೆ ಬದಿಯಲ್ಲಿ ಒಂದು ಅಂಬಲವೋ, ಹೆಬ್ಬಾಗಿಲೋ, ಬಂಗಲೆಯೋ—ಏನೋ ಒಂದನ್ನು ಕಟ್ಟಿಸುತ್ತಾರಂತೆ. ಚೋಡುಕಲ್ಲಿನ ಮಹಡಿ ಕಟ್ಟಡ. ಸಾಗುವಾನಿ ದ್ವಾರವಲ್ಲವೆ ಕಾಟು ಮೋಟು ತೋಪು ಹಾಕಕೂಡದೆಂದು ಗಾಣಿಗ ಸಂಕಪ್ಪನ ಅಂಬೋಣ. ನೆಲಕ್ಕೆ ಬಣ್ಣದ ಇಟ್ಟಿಗೆ ಹಾಕಿಸಿಯೇ ಶುದ್ಧ ಎಂದು ನಸ್ಯಾಣಿ ಸುಬ್ಬ ಭಟ್ಟರ ಹೇಳಿಕೆ. ಅಂತು ಭಾರಿ ಬಿರುಸಿನಿಂದ ಕೆಲಸ ತೊಡಗಿದೆ. ಧನಿಯರು ಬರುತ್ತಾರೆ ಎಂದಕೂಡಲೆ ಆ ಕೂಲಿಗಳೂ, ಆಚಾರಿಗಳೂ ಬಂದು ಧಡಬಡ ಮಾಡುವುದನ್ನು ನೋಡಬೇಕು. ಮೈಯ್ಯರು ಬಂದು ನಿಂತರೆ—ಸಂಕಪ್ಪ ನಗರ ಸಂಸ್ಥಾನದ ಶಿವಪ್ಪನಾಯ್ಕನ ಹಾಗೆ 'ಯಾರಲ್ಲಿ ಈ ತುಂಡು ಅಚೆದಿ, ಇವತ್ತು ಕಲ್ಲು ಎಷ್ಟು ಬಂತು? ಸುಣ್ಣ ಬಂದು ಬಿತ್ತೊ ಅಲ್ಲಿ; ಅಡ್ಡಾನ್ನ ತಿಂದು ಹಾಕಿದ್ದೇ ಸರಿಯೋ. ಹೇಳಿಬಿಡು ಆ ಬಿಲ್ಲನಿಗೆ. ನಾಳೆ ಸಂಜೆಯೊಳಗೆ ೪೦ ಮುಡಿ ಸುಣ್ಣ ಹಾಕಿಸದಿದ್ದರೆ ಅವನದ್ದೇ ಸುಣ್ಣದ ಗೂಡಿನಲ್ಲಿ ಧನಿಯರು ಅವನನ್ನು ಸುಡಿಸಿಯಾರು ಎಂದು. ಏನೆಂದು ತಿಳಿದಿದ್ದಾನೆ ಅವ!' ಹೀಗೆ ಅಸೂಕ್ಷ್ಮ ಮಾಡುವಂಥವನಾಗಿ ಧನಿಗಳ ಕಡೆಗೆ ನೋಡಿ 'ಅಯ್ಯಾ, ಆ ಬಿಲ್ಲನಿಗೆ ಏನಾದರೂ ಕಾಯಿಸದೆ ಅವನು ಸಮನಾಗನು; ಕಲ್ಲು ೫,೦೦೦ ಕೆತ್ತಿಯಾಯಿತು. ಇವನ ಸ್ತ್ರೀ, ಬಾರದೆ ಗೋಡೆ ಏರಿಸುವ ಹಾಗಿಲ್ಲ'—ಎಂದನು.

ಮೈಯ್ಯರು ಲೀಗ ಇದೇ ಆಯಿತಲ್ಲ . . . ಸುಣ್ಣ ಇದ್ದರೆ ಹೊಯಿಗೆ ಇಲ್ಲ. ಹೊಯಿಗೆ ಬಂದರೆ ಮೇಸ್ತ್ರಿಯಿಲ್ಲ. ಇವರು ಬಂದರೆ ಮರ ಇಲ್ಲ. ಮರ ಇದ್ದರೆ ಆಚಾರಿಯಿಲ್ಲ . . . ನನಗೆ ಸಿಟ್ಟು ಬಂದರೆ ಬೇರೆಯೇ ಜನ ತರುತ್ತೇನೆ. ಒಂದಕ್ಕೆ ಪಬ್ಬಲು ಕೊಟ್ಟು ಕುಂದಾಪುರದಿಂದ ಜನ ತರಿಸಿ, ಇವರಿಗೆ ಬುದ್ಧಿ ಕಲಿಸಿ.

[೧೫ನೇ ಪುಟವನ್ನು ನೋಡಿರಿ]

ಬರುವ ವಾರ

ಗಾಣಿಗ ಸಂಕಪ್ಪ

卐

೧೦.

ಸಂಕಪ್ಪ—ಹುಟ್ಟಿದ್ದು ಗಾಣಿಗರಲ್ಲಿ. ಈಗ ಮನುಷ್ಯರನ್ನೇ ಗಾಣಕ್ಕೆ ಕೊಡುತ್ತಿದ್ದಾನೆ. ಸಂಕಪ್ಪನ ಗಾಡಿ ಮೂಕಿಗೆ, ಮೋಟಾರಿನ ಪೌರು ಸಂಕಪ್ಪನ ದಲಾಲಿಯಲ್ಲಿ ಗಾಡಿ, ಎತ್ತು, . . . ಮತ್ತೊಂದು ಮಗದೊಂದು ಎಲ್ಲಾ ಸಿಗುವ ಸಂಭವ.

ಶ್ರೀ. ಕಾರಂತರ

ಹಳ್ಳಿಯ 10 ಸಮಸ್ತರು

ಯಾವತ್ತು ಗ್ರಾಮ, ದೇಶ, ಜೀವನಗಳೇ!

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಗೊನೋಕಿಲರ್ (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವಾಗ ಮೊದಲು ಕೋಳಿ ಗುರುತಿನ ಕೆಂಪು ಸೀಲು ಮತ್ತು ಗೊನೊಕಿಲರ್ ಇರುತ್ತದೋ ಎಂಬುದನ್ನು ನೋಡಿರಿ.

ಇಂದಿನ ಅಪ್ರತಿಮ ಔಷಧ. ಅಂಗ್ರೇಯ ಮತ್ತು ಆಯುರ್ವೇದ ಔಷಧಿಗಳಿಂದೂ ಫಲಕಾರಿಯಾಗದೇ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೊಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ದಾಹವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯ ಯಾವುದೇ ಸ್ಥಿತಿಯಲ್ಲಿ ಇರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರಿಯಾಸಂಬಂಧವಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3-0-0 (ಮೂರು) ವಿ. ಪಿ. ಛಾರ್ಜು 8 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4.

Sole Manufacturer: **Dr. D. N. JASANI**, Vithalbhai Patal Road, BOMBAY

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ಸ್ಟಾಕಿಸ್ಟ್—ಮೆಸರ್ಸ್ ಎ. ಫೆರ್ನಾಂಡಿಸ್ ಮತ್ತು ಕಂಪೆನಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್, ಮಂಗಳೂರು.

ಭಾರತದ ಸ್ವಾತಂತ್ರ್ಯದಲ್ಲಿದೆ ನಿಮ್ಮ ಮುಕ್ತಿಮಾರ್ಗ

ಬ್ರಿಟನ್ನಿಗೆ ಪಂಡಿತ ಜವಹರಲಾಲರ ಎಚ್ಚರಿಕೆಯ ಮಾತು

ಯುದ್ಧವಾದರೆ ಹಿಂದುಸ್ಥಾನವು ಏನುಮಾಡುವುದು?

ನಮ್ಮ ಪ್ರಾಂತೀಯ ಸರಕಾರಗಳಿಗೆ ಈಗ ಕೈತುಂಬಾ ಕೆಲಸ. ಪ್ರಾಯಶಃ ಎಲ್ಲಾ ಎಸೆಂಬ್ಲಿ ಕೌನ್ಸಿಲುಗಳಲ್ಲಿ ಆಯವ್ಯಯದ ಅಂದಾಜಿನ ಮೇಲೆ ಚರ್ಚೆ, ಟೀಕೆ, ವಿಮರ್ಶೆಗಳು ನಡೆಯುತ್ತಲಿರುವುವು. ಯಾರು ಏನು ಹೇಳಿದರೂ ಕಾಂಗ್ರೆಸ ಮಂತ್ರಿಮಂಡಲಗಳು ತಮಗೊಪ್ಪಿದ ಕೆಲಸ ಕಾರ್ಯಗಳನ್ನು ಕಾಂಗ್ರೆಸಿನ ಧ್ಯೇಯಾದರ್ಶಗಳಿಗೆ ಲೋಪಬಾರದಂತೆ, ಆತ್ಮಸಾಕ್ಷಿಗೆ ಸರಿಯಾಗಿಯೂ ದಕ್ಷತೆಯಿಂದಲೂ ಮಾಡಿದ್ದಾರೆಂದು ನಾನು ಧೈರ್ಯದಿಂದ ಹೇಳುವೆನು. ನಾವು ಅಪೇಕ್ಷಿಸಿದಷ್ಟು ಜನಹಿತ ಕಾರ್ಯಗಳನ್ನು ಕಾಂಗ್ರೆಸ ಮಂತ್ರಿಮಂಡಲಗಳು ಮಾಡದೆ ಇರುವುದಾದರೆ, ಅದರಲ್ಲಿ ಅವುಗಳ ತಪ್ಪಿಲ್ಲ. ಅವು ಶಕ್ತಿ ಮೀರಿ ದುಡಿದಿವೆ. ಅದಕ್ಕೋಸ್ಕರ ನಮ್ಮ ಮಂತ್ರಿಮಂಡಲಗಳು ಹೆಮ್ಮೆಯಿಂದ ತಲೆ ಎತ್ತಿಕೊಂಡಿರಬಹುದು ಎಂದು ಪಂಡಿತ ಜವಾಹರಲಾಲ ನೆಹರೂರವರು ನೇಶನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಬರೆಯುತ್ತಾರೆ.

ಇಷ್ಟರಿಂದ ತೃಪ್ತಿಯಾಗಕೂಡದು

ಪರಂತು ನಾವು ಇಷ್ಟರಿಂದಲೇ ತೃಪ್ತರಾಗಿರುವುದು ಸರಿಯಲ್ಲ. ಕಾಲಗತಿಯು ವಿಚಿತ್ರವಾಗಿದೆ. ಜಗತ್ತು ಮಿಂಚಿನ ವೇಗದಿಂದ ಚಲಿಸುತ್ತಾ ಇದೆ. ಹೊಸ ಹೊಸ ಸಮಸ್ಯೆಗಳು ನಮ್ಮ ಮುಂದೆ ಬಂದು ಉಪಸ್ಥಿತವಾಗುತ್ತವೆ. ಅವುಗಳನ್ನು ಬಿಡಿಸಲಿಕ್ಕೆ ನಾವು ಸಮರ್ಥರಾಗದಿದ್ದರೆ ನಾವು ನಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡಿರಲಾರೆವು. ಮಂತ್ರಿಮಂಡಲಗಳು ಪ್ರಾಂತೀಯ ಸ್ವಾಯತ್ತ ಶಾಸನದ ಚೌಕಟ್ಟಿನಲ್ಲಿದ್ದುಕೊಂಡು ಎಷ್ಟು ಜನಸೇವೆಯನ್ನು ಮಾಡಿ ಮುಗಿಸಬಹುದಾಗಿದೆಯೋ, ಅಷ್ಟನ್ನು ಅವು ಮಾಡಿ ಮುಗಿಸುತ್ತಿರುವುವು. ಅವುಗಳು ನಮಗೆ ತೃಪ್ತಿಯಾಗುವಂತೆ ಇನ್ನೂ ಹೆಚ್ಚಿಗೆ ಜನಸೇವೆಯನ್ನು ಮಾಡಬೇಕಾದರೆ ನಮ್ಮ ಸ್ವಾತಂತ್ರ್ಯವು ಇನ್ನೂ ಹೆಚ್ಚು ಬೆಳೆಯಬೇಕು. ನಮ್ಮ ಪ್ರಾಂತಿಕ ಸರಕಾರಗಳೂ ಕಾಂಗ್ರೆಸ ಸಂಸ್ಥೆಗಳೂ ಕಾಲ ಪರಿಸ್ಥಿತಿಗೆ ತಕ್ಕಂತೆ ತಮ್ಮನ್ನು ಹೊಂದಿಸಿಕೊಳ್ಳಬೇಕು. ಇಲ್ಲವಾದರೆ ನಮಗೆ ಜನತೆಯ ಬೆಂಬಲವು ತಪ್ಪಿಹೋಗುವುದು ಖಂಡಿತ. ಮುಂದರಿಯುವ ಜಗತ್ತಿನಲ್ಲಿ ನಾವು ಹಿಂದುಳಿದು ಯಾವ ಪುರುಷಾರ್ಥವನ್ನು ಸಾಧಿಸದವರಾಗುವೆವು.

ದಂಗೆ ದರೋಡೆಗಳು

ಅಂತರ್ರಾಷ್ಟ್ರೀಯ ವ್ಯವಹಾರಕ್ಷೇತ್ರದಲ್ಲಿ ನೋಡಿದರೂ ಈಗ ದರೋಡೆಗಾರರ ಪ್ರಾಬಲ್ಯವೇ ಕಂಡುಬರುತ್ತದೆ. ಈ ದರೋಡೆಗಾರರ ಉಪಟಳದಿಂದಾಗಿ ಜಗತ್ತಿನ ಮುಂದೆ ಬಂದಿರುವ ಸಮಸ್ಯೆಗಳು ನಮ್ಮ ಸಮಸ್ಯೆಗಿಂತಲೂ ಕಠಿನತರವಾಗಿರುವುವು. ಯೂರೋಪಿನಲ್ಲೂ ಇತರ ಕಡೆಗಳಲ್ಲಿಯೂ ಸತ್ಯ ನ್ಯಾಯ ಎಂಬವು ಹೆಸರು ಪೂರ್ತಿಗಾದರೂ ಉಳಿದಿರುವುದಿಲ್ಲ. ಎಲ್ಲೆಲ್ಲಿಯೂ ಹಿಂಸಾಭಾವವೇ ಕಂಡುಬರುತ್ತದೆ, ಅನ್ಯಾಯ ಅಧರ್ಮಗಳೇ ತಲೆ ಎತ್ತಿಕೊಂಡಿವೆ. ಅತ್ಯಾಚಾರ ಅನಾಚಾರಗಳು ಮನೆಮಾಡಿಕೊಂಡಿವೆ. ಸಬಲ ರಾಷ್ಟ್ರಗಳು ದುರ್ಬಲ ರಾಷ್ಟ್ರಗಳ ಸ್ವಾತಂತ್ರ್ಯದ ಅಪಹಾರ ಮಾಡುತ್ತಿರುವುದನ್ನು ನೋಡಿ ನಮ್ಮ ಎದೆಯು ಒಡೆದುಹೋಗುವುದು. ಪಾಪದ ಲಕ್ಷಾಂತರ ಜನರು ಹೀನರಾದ ಒರಟು ಅನಾಗರಿಕ ವಾದದ ತುಳಿತಕ್ಕೆ ಬಲಿಯಾಗುವುದನ್ನು ಕಂಡು ಸಂತಾಪವಾಗುತ್ತದೆ. ಹಿಟ್ಲರ ಮುಸಲೋನಿಯರು ತಾವೇ ತಾವಾಗಿ ಮೆರೆದು ಸ್ವಾತಂತ್ರ್ಯ ಸಂಸ್ಕೃತಿಗಳನ್ನು ನಾಶಮಾಡುತ್ತಿದ್ದಾರೆ.

ಜಗತ್ತಿನಲ್ಲಿ ನಡೆಯುತ್ತಿರುವ ಈ ಘಟನೆಗಳ ದುಷ್ಪರಿಣಾಮವು ನಮ್ಮ ದೇಶದ ಮೇಲೂ ತೋರದೆ ಇಲ್ಲ. ಯುರೋಪಿನಲ್ಲಿ ಹಿಟ್ಲರ ಮುಸಲೋನಿ ತಂಡಗಳು ಬೆಳೆದು ಜಗತ್ತಿನಲ್ಲಿ ಅವುಗಳ ಶಕ್ತಿಯೇ ಸರ್ವತ್ರ ಕಾಣಿಸಿಕೊಂಡರೆ ಭಾರತದ ಸ್ವಾತಂತ್ರ್ಯವು ಮಣ್ಣುಪಾಲಾಗುವುದು. ನಮ್ಮ ಸ್ವಾತಂತ್ರ್ಯಕ್ಕೂ ಜಗತ್ತಿನ ಇತರ ಸ್ವಾತಂತ್ರ್ಯ ಪ್ರೇಮಿ ಪ್ರಜಾಪ್ರಭುತ್ವಗಳ ಭವಿಷ್ಯತ್ತಿಗೂ ನಿಕಟ ಸಂಬಂಧವಿದೆ. ಸ್ವಾತಂತ್ರ್ಯ ಪ್ರೇಮಿ ಪ್ರಜಾಪ್ರಭುತ್ವಗಳು ಪರಸ್ಪರ ಸ್ನೇಹ ಸಹಕಾರ ಭಾವನೆಗಳಿಂದ ಪ್ರೇರಿತವಾಗಿ ಒಂದಾಗಿ ನಡೆಯುವುದರಿಂದಲೇ ಹಿಟ್ಲರ ಮುಸಲೋನಿಯರ ರಾಕ್ಷಸೀ ಪೀಡೆಯನ್ನು ಪರಿಹರಿಸಿಕೊಳ್ಳಬಹುದು. ಆದ್ದರಿಂದ ಭಾರತವು ಅಂಥ ಸ್ವಾತಂತ್ರ್ಯ ಪ್ರೇಮಿ ಪ್ರಜಾಪ್ರಭುತ್ವಗಳಿಗೆ ತನ್ನಿಂದಾದ ಸಹಕಾರವನ್ನು ಕೊಡುವುದು ಅಗತ್ಯ.

ಪ್ರಜಾಪ್ರಭುತ್ವಗಳು ಯಾವುವು?

ಇಷ್ಟಾಗಿ ನಾವು ಜಗತ್ತಿನ ಇಂದಿನ ದುಸ್ಥಿತಿಗೆ ಹಿಟ್ಲರ ಮುಸಲೋನಿಯರನ್ನೇ ದೂರಿ ಪ್ರಯೋಜನವಿಲ್ಲ. ಪ್ರಜಾಪ್ರಭುತ್ವಗಳೆಂದು ಹೇಳಿಸಿಕೊಳ್ಳುವ ಇಂಗ್ಲಂಡ ಫ್ರಾನ್ಸುಗಳಂಥ ಕೆಲವು ರಾಷ್ಟ್ರಗಳ ನೀತಿ ಧೋರಣೆಗಳೇ ಹಿಟ್ಲರ ಮುಸಲೋನಿಯರ ಆಕ್ರಮಣ ಶೀಲತೆಗೆ ಪ್ರತ್ಯಕ್ಷ ಪರೋಕ್ಷ ಸಹಾಯವನ್ನು ಕೊಟ್ಟವು. ಪ್ರಜಾಪ್ರಭುತ್ವಗಳಾದ ಇಂಗ್ಲಂಡ ಫ್ರಾನ್ಸಗಳು ನಿಜವಾಗಿ ಜೆಕೊಸ್ಲೋವೇಕಿಯ ಸ್ಪೇನ್ ಅಬಿಸೀನಿಯಗಳ ಬೆಂಬಲಕ್ಕೆ ಹೋಗಿದ್ದುದಾದರೆ, ಅವುಗಳನ್ನು ಕಬಳಿಸಲಿಕ್ಕೆ ಹಿಟ್ಲರ ಮುಸಲೋನಿಯರು ಸರ್ವಥಾ ಸಮರ್ಥರಾಗುತ್ತಿದ್ದಿಲ್ಲ. ಇಂದು ಹಿಟ್ಲರ ಮುಸಲೋನಿಯರ ಆಕ್ರಮಣಶೀಲತ್ವದಿಂದುಂಟಾದ ಗೊಂದಲಕ್ಕೆ ಕಾರಣ ಪುರುಷರು ಯಾರಾದರೂ ಇರುವುದಾದರೆ ಅವರು ಮಿ. ಚೇಂಬರ್ಲೇನರಲ್ಲದೆ ಬೇರೆ ಯಾರೂ ಅಲ್ಲ. ಅವರು ಇದುವರೆಗೆ ಅನುಸರಿಸಿದ ಪರರಾಷ್ಟ್ರ ನೀತಿಯೇ ಜಗತ್ತಿನ ಪ್ರಜಾ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳಿಗೆ ಅಪಾಯವನ್ನು ಉಂಟುಮಾಡಿತು. ಆದಕಾರಣ ಮಿ. ಚೇಂಬರ್ಲೇನರ ಮತ್ತು ಮಿ. ದಲಾದಿಯರರ ಬ್ರಿಟಿಷ ಫ್ರೆಂಚ ಸರಕಾರಗಳನ್ನು ಪ್ರಜಾಪ್ರಭುತ್ವಗಳೆಂದು ಹೇಳಲು ಸಾಧ್ಯವಿಲ್ಲ. ಇಂಥ ಸರಕಾರಗಳಿಂದ ಪ್ರಜಾಪ್ರಭುತ್ವಕ್ಕೆ ರಕ್ಷಣೆ ದೊರೆಯುವುದಿಲ್ಲ. ಈ ಸರಕಾರಗಳು ಇಂದಿನ ತನಕ ನಡೆಸಿರುವ ಮೋಸ, ದ್ರೋಹ, ಅನ್ಯಾಯಗಳನ್ನು ಗಣನೆಗೆ ತಂದರೆ, ಅವುಗಳಿಗೆ ತಮ್ಮನ್ನು ಪ್ರಜಾಪ್ರಭುತ್ವ ಸರಕಾರಗಳೆಂದು ಕರೆಸಿಕೊಳ್ಳುವ ಅಧಿಕಾರವು ಕೂಡ ಉಳಿದಿರುವುದಿಲ್ಲವೆನ್ನಬಹುದು. ಅವು ತಮ್ಮ ತಮ್ಮ ಸ್ವಾರ್ಥ ಮತ್ತು ಕಾರ್ಯ ಸಾಧನೆಗಾಗಿಯೆ ತಮ್ಮನ್ನು ಪ್ರಜಾಪ್ರಭುತ್ವ ಸರಕಾರಗಳೆಂಬ ಹೆಸರಿನಿಂದ ಕರೆಸಿಕೊಳ್ಳುತ್ತವೆ. ಅಂತರಂಗದಲ್ಲಿ ಅವು ಹಿಟ್ಲರ ಮುಸಲೋನಿಯರ ಸಫಲತೆಯನ್ನೇ ಇಚ್ಛಿಸುತ್ತಿರಬಹುದು. ಆದ್ದರಿಂದ ಅವು ನಿಜವಾದ ಪ್ರಜಾಪ್ರಭುತ್ವ ಸರಕಾರಗಳ ಸಹಾಯಕ್ಕೆ ಬರುವುವೆಂದು ನಂಬುವುದು ಕಷ್ಟ. ಈಗಲಾದರೂ ಈ ಎರಡು ಸರಕಾರಗಳು ಹಿಟ್ಲರ ಮುಸಲೋನಿಯರನ್ನು ವಿರೋಧಿಸಲಿಕ್ಕೆ ಒಂದಾಗಿರುವುವಾದರೆ, ಅದರ ಗೂಢವು ಏನಿರಬಹುದೋ ಯಾರಿಗೆ ಗೊತ್ತು? ಯಾವ ರಾಷ್ಟ್ರದ ಮೇಲೆ ಎಂಥ ತಂತ್ರ ಸಂಚು ಹಂಚಿಕೆಗಳು ನಡೆಯುತ್ತಿವೆಯೋ, ಯಾರು ಹೇಳಬಲ್ಲರು?

ಭಾವೀ ಯುದ್ಧ—ಭಾರತದ ಸಂಬಂಧ

ಆದಕಾರಣ ಭಾರತಕ್ಕೆ ಮಿ. ಚೇಂಬರ್ಲೇನರಲ್ಲಿ ವಿಶ್ವಾಸವಿರುವುದಿಲ್ಲ. ಅವರ ನೀತಿಯ ಪರಿಣಾಮವಾಗಿ ಉಂಟಾಗುವ ಭಾವೀ ಯುದ್ಧದಲ್ಲಿ ಭಾರತವು ಪಾಲು ತೆಗೆದುಕೊಳ್ಳಲಾರದು. ಮಿ. ಚೇಂಬರ್ಲೇನರ ನೀತಿಯು ಪ್ರಜಾಸತ್ತೆಯ ರಕ್ಷಣೆಯ ನೀತಿಯಲ್ಲ, ಪರಂತು ಸಾಮ್ರಾಜ್ಯವಾದದ ನೀತಿಯಾಗಿದೆ, ಅದು ಹಿಟ್ಲರ-ಮುಸಲೋನಿ ವಾದವನ್ನು ಪೋಷಿಸುತ್ತದೆ. ಹೀಗೆ ಹೇಳಿದ ಮಾತ್ರದಿಂದ ಫ್ರಾನ್ಸು ಇಂಗ್ಲಂಡು ದೇಶಗಳು ಪ್ರಜಾಪ್ರಭುತ್ವದ ವಿರೋಧಿಗಳೆಂದು ತಿಳಿಯಕೂಡದು. ಆ ದೇಶಗಳಲ್ಲಿ ಪ್ರಜಾಪ್ರಭುತ್ವ ಪ್ರಜಾಸ್ವಾತಂತ್ರ್ಯಗಳ ಭಾವನೆಯಿದೆ. ಪರಂತು ದಲಾದಿಯರ—ಚೇಂಬರ್ಲೇನರು ಈ ಭಾವನೆಯು ಪ್ರಕಟವಾಗಿ ತೋರದಂತೆ ತಡೆಹಾಕಿದ್ದಾರೆ. ಒಮ್ಮೆಗೆ ಈ ಎರಡು ದೇಶಗಳ ಜನರು ಆ ತಡೆಯನ್ನು ಮುರಿದರೆಂದರೆ, ಪುನಃ ಈ ದೇಶಗಳು ಪ್ರಜಾಸ್ವಾತಂತ್ರ್ಯ—ಪ್ರಜಾಪ್ರಭುತ್ವಗಳ ರಕ್ಷಣೆಗೆ ಮುಂದಾಗುವುವು. ಆಗ ಭಾರತವೂ ಆ ದೇಶಗಳೊಡನೆ ಪ್ರಜಾಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳ ರಕ್ಷಣೆಗಾಗಿ ಸಹಕರಿಸಬಹುದು. ಈಗ ನಾವು ಮಾಡಬಹುದಾದ ಕೆಲಸವೆಂದರೆ ಇಷ್ಟೆ—ಪರತಂತ್ರವಾಗಿರುವ ಭಾರತವು ಬೇರೆ ರಾಷ್ಟ್ರಗಳ ಪ್ರಜಾಸ್ವಾತಂತ್ರ್ಯಕ್ಕಾಗಿ ಹೆಚ್ಚು ಕೆಲಸ ಮಾಡಲು ಸಮರ್ಥವಲ್ಲ. ಪರತಂತ್ರ ಭಾರತವು ಸಾಮ್ರಾಜ್ಯವಾದಿಗಳ ನಾಶಕ್ಕಾಗಿ ಮುಖ್ಯವಾಗಿ ಯೋಚಿಸುವುದು. ಬ್ರಿಟನ್ನು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟದ್ದಾದರೆ, ಆಗ ಮಾತ್ರ ಬ್ರಿಟನಿಗೆ ಪ್ರಜಾಪ್ರಭುತ್ವ ಮತ್ತು ಪ್ರಜಾಸ್ವಾತಂತ್ರ್ಯದ ರಕ್ಷಣೆಯಲ್ಲಿ ನಿಜವಾದ ಆಸಕ್ತಿಯಿದೆ ಎಂದು ತಿಳಿದು ಭಾರತವು ಅದರ ಸಹಾಯಕ್ಕೆ ಹೋಗುವುದು. ಆಗ ಮಾತ್ರ ಭಾರತ ಮತ್ತು ಬ್ರಿಟನ—ಎರಡು ದೇಶಗಳು ಪರಸ್ಪರ ಸ್ನೇಹಭಾವದಿಂದ ಪ್ರೇರಿತವಾಗಿ ಹಿಟ್ಲರ ಮುಸಲೋನಿಯರನ್ನು ತಡೆಯಬಹುದು. ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡದೆ ಬ್ರಿಟನ್ನು ಯುದ್ಧಕ್ಕೆ ಪ್ರವೃತ್ತವಾದರೆ ಭಾರತವು ಬ್ರಿಟಿಷ ಸರಕಾರವನ್ನು ಕೂಡುವುದಿಲ್ಲ. ಯಾಕೆಂದರೆ ಅಂಥ ಯುದ್ಧವು ಹಿಟ್ಲರ ಮುಸಲೋನಿಯರ ವಿರುದ್ಧವಾಗಿರಬಹುದಾದರೂ ಕೂಡ, ಅದು ಜಗತ್ತಿನ ಪ್ರಜಾಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳ ರಕ್ಷಣೆಗಾಗಿ ಇದೆ ಎಂದು ಹೇಗೆ ನಂಬಬಹುದು? ಅಂಥ ಉದ್ದೇಶದಿಂದಲೇ ಯುದ್ಧವಾಗುತ್ತದೆ ಎಂದು ಬ್ರಿಟನ್ನು ಹೇಳುವುದಾದರೆ, ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುವುದರಲ್ಲಿಯೇ ಬ್ರಿಟನ್ನಿನ ಆ ಮಾತಿನ ಯಥಾರ್ಥತೆಯ ಪರೀಕ್ಷೆಯಾಗುತ್ತದೆ.

ಚೌಕಸೀ ವ್ಯಾಪಾರವಲ್ಲ

ಇವರೆ ಭಾರತಕ್ಕೆ ಸ್ವಾತಂತ್ರ್ಯ ಕೊಡಲಿಕ್ಕೆ ಸಾಧ್ಯವಿಲ್ಲವೆಂದೂ ಫೆಡರಲ್ ರಾಜ್ಯಾಂಗ ವ್ಯವಸ್ಥೆಯಲ್ಲಿ ಸದ್ಯ ಯಾವ ಬದಲಾವಣೆಯೂ ಆಗುವಂತಿಲ್ಲವೆಂದೂ ಬ್ರಿಟಿಷ ಸರಕಾರವು ಹೇಳುತ್ತದೆ. ನಮ್ಮ ಸ್ವಾತಂತ್ರ್ಯದ ಬೇಡಿಕೆಗೆ ಬ್ರಿಟನ್ನಿನ ಇದುವೇ ಉತ್ತರವೆಂದಾದರೆ, ನಮ್ಮ ಕರ್ತವ್ಯವು ಸ್ಪಷ್ಟವಾಗಿದೆ. ಪರಿಣಾಮಗಳ ಕಡೆಗೆ ಲಕ್ಷ್ಯವನ್ನು ಕೊಡದೆ, ಸಾಧ್ಯವಾದ ಎಲ್ಲಾ ಉಪಾಯಗಳಿಂದ ಬ್ರಿಟಿಷ ಸಾಮ್ರಾಜ್ಯವಾದವನ್ನು ತೀವ್ರವಾಗಿ ವಿರೋಧಿಸುವುದೇ ನಮ್ಮ ಕರ್ತವ್ಯವು. ಯುದ್ಧವುಂಟಾದರೆ ಬ್ರಿಟಿಷ ಸರಕಾರವು ತನ್ನ [illegible] ತಾತ್ಕಾಲಿಕವಾಗಿ ಪ್ರಾಂತಿಕ ಸರಕಾರಗಳಿಗೆ ಈಗ ದೊರೆತಿರುವ ಅಲ್ಪ ಅಧಿಕಾರಗಳನ್ನು ಕಿತ್ತು ಕೇಂದ್ರ ಸರಕಾರಕ್ಕೆ ಕೊಡಬೇಕೆಂದು ಬ್ರಿಟಿಷ ಸರಕಾರವು ಆಲೋಚಿಸಿದೆ. ಅದಕ್ಕಾಗಿ ಆದು ಸಂಘ ಶಾಸನದಲ್ಲಿ ಕೆಲವು ಪರಿವರ್ತನೆ ಮತ್ತು ಪರಿವರ್ಧನೆಗಳ ಸೂಚನೆಯನ್ನು ಪಾರ್ಲಿಮೆಂಟಿನ [illegible] ಸಭೆಯ ಮುಂದೆ ತಂದಿದೆ. ಬ್ರಿಟಿಷ ಸರಕಾರದ ಈ ಕಾರ್ಯಕ್ರಮವನ್ನು ನಾವು ತೀವ್ರವಾಗಿ ವಿರೋಧಿಸಬೇಕು. ಬ್ರಿಟಿಷ ಸರಕಾರವು ಕಷ್ಟದಲ್ಲಿ ಬಿದ್ದಿರುವಾಗ ನಾವು ವ್ಯಾಪಾರ ಕ್ರಮವನ್ನನುಸರಿಸಿ ನಮ್ಮ ಸ್ವಾತಂತ್ರ್ಯದ ಚೌಕಸೀ ಮಾಡುವುದೂ ಬ್ರಿಟಿಷ ಸರಕಾರವನ್ನು ಬೆದರಿಸುವುದೂ ನಮ್ಮ ಆಶಯವೆಂದು ಯಾರೂ ತಿಳಿಯಲಾಗದು. ನಮ್ಮ ಕಾರ್ಯನೀತಿಯು ಯುದ್ಧ ಸಂಭವವನ್ನು ಅವಲಂಬಿಸಿಲ್ಲ. ಯುದ್ಧವಾಗಲಿ, ಆಗದೆ ಇರಲಿ; ನಾವು ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿಯೇ ಹೋರಾಡುವೆವು. ಭಾರತೀಯರ ಸ್ವಾತಂತ್ರ್ಯ, ಗೌರವ ಸ್ವಾಭಿಮಾನಗಳಿಗೆ ಕುಂದು ಕೊರತೆಗಳು ಬಾರದಂತೆ ವರ್ತಿಸುವುದೇ ನಮ್ಮ ಧರ್ಮ.

ಎಚ್ಚರಿಕೆ

ಆದ್ದರಿಂದ ನಮ್ಮ ಪ್ರಾಂತಿಕ ಸರಕಾರಗಳು ಮೇಲೆ ಹೇಳಿದ ಎಲ್ಲ ವಿಷಯಗಳನ್ನು ಗಮನಕ್ಕೆ ತಂದು ತಮ್ಮ ಮುಂದಿನ ಕಾರ್ಯಧೋರಣೆಯನ್ನು ನಿಶ್ಚಯಿಸಿಕೊಳ್ಳಬೇಕು. ಮೇಲಿಂದ ಮೇಲೆ ಕಾಂಗ್ರೆಸ ತತ್ವಗಳಿಗೆ ವಿರೋಧಬಾರದಂತೆ ತೋರಿದರೂ, ವಾಸ್ತವ್ಯವಾಗಿ ಕಾಂಗ್ರೆಸಿನ ಅಸ್ತಿತ್ವವನ್ನೇ ನಾಶಮಾಡುವಂಥ ಕಾರ್ಯಗಳಿಗೆ ಬ್ರಿಟಿಷ ಸರಕಾರವು ಕಾಂಗ್ರೆಸ ಮಂತ್ರಿಗಳನ್ನು ಒತ್ತಾಯಿಸಬಹುದು. ಅಂಥ ಸಂದರ್ಭದಲ್ಲಿ ಬ್ರಿಟಿಷ ಸರಕಾರದ ಅಂತರಂಗದ ಪರೀಕ್ಷೆ ಮಾಡಿ ಮಂತ್ರಿಗಳು ತಮ್ಮ ಕಾರ್ಯಗಳನ್ನು ದಕ್ಷತೆ, ಧೈರ್ಯ, ಮುಂಜಾಗ್ರತೆಯಿಂದ ನಿರ್ವಹಿಸುತ್ತಿರಬೇಕು. ಕರ್ತವ್ಯ ಲೋಪವಾಗದಂತೆ ಅವರು ನೋಡಿಕೊಳ್ಳಬೇಕು, ರಾಷ್ಟ್ರದ ಗೌರವವನ್ನೂ ಕಾಂಗ್ರೆಸಿನ ಧ್ಯೇಯವನ್ನೂ ಕಾಪಾಡಿಕೊಳ್ಳಬೇಕು. ಇಷ್ಟು ಮಾಡುವುದು ಸಾಮಾನ್ಯ ಅಥವಾ ಸುಲಭವಾಗಿರುವುದಿಲ್ಲ. ಇದು ಬಹಳ ಜವಾಬುದಾರಿಯ ಕೆಲಸವಾಗಿದೆ. ಈ ಜವಾಬುದಾರಿಯನ್ನು ಹೊತ್ತುಕೊಳ್ಳಲು ತಾವು ಸಮರ್ಥರಿದ್ದೇವೆಂಬುದನ್ನು ಮಂತ್ರಿಗಳ ಕಾರ್ಯಕುಶಲತೆಯಿಂದ ತೋರಿಸಬೇಕು. ಆದ್ದರಿಂದ ಮಂತ್ರಿಗಳು ಎಚ್ಚರರಾಗಿರಿ, ನಿರ್ದಿಷ್ಟ ಕಾರ್ಯಗಳನ್ನು ಮಾಡಲಿಕ್ಕೆ ತಪ್ಪದಿರಿ.

ಪ್ರಕಟಣೆ.

ಕಾರವಾರ ಡಿಸ್ಟ್ರಿಕ್ಟ್ ಮುಖ್ಯ ಕೋರ್ಟಿನಲ್ಲಿ

R. E. P No 82/1939

Claim No 347/1929—30.

ಸುಗೇರಿ(?) [illegible] ಸಹಕಾರ ಸಂಘದ ಅಧ್ಯಕ್ಷ [illegible] — ಅರ್ಜದಾರ

ಮತ್ತು

1 [illegible] ಹೆಂಗಸು
2 [illegible]
3. ಪೂವಲೆ ಹೆಂಗಸು — ಎದುರುಗಾರರು
4 [illegible] ಹೆಂಗಸು

ಇವರಿಗೆ

[illegible] ಪ್ರಕಾರ 3ನೇ ಎದುರುಗಾರ ಪೂವಲೆ ಹೆಂಗಸು [illegible] ಹೆಂಗಸಿನ ಮಗಳು [illegible] ಗ್ರಾಮದ [illegible] ಇವಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಸದ್ರಿ ಮೇಲಿನ ಅಮಲಜಾರಿಯಲ್ಲಿ 3 1ನೇ ಎದುರುಗಾರರನ್ನು ಮೃತಪಟ್ಟ ನಿಮಿತ್ತ 3ನೇ ಪ್ರತಿವಾದಿ [illegible] ಕಕ್ಷಿಯಲ್ಲಿ ಕೂಡಿಸಿ ಅರ್ಜದಾರರು ಸದ್ರಿ ಅಮಲಜಾರಿ ದಾಖಲು ಮಾಡಿರುವುದರಿಂದ ಸದ್ರಿ ಅಮಲಜಾರಿ ಕುರಿತು 3ನೇ ಎದುರುಗಾರಳು ಪೂವಲೆ [illegible] ಇವಳಿಗೆ ಸಾಕ್ಷಾತ್ ನೋಟೀಸು ಜಾರಿಯಾಗದ್ದರಿಂದ [illegible] ಅಕ್ಷೇಪ ಇದ್ದಲ್ಲಿ ಸದ್ರಿಯವರು ಸದ್ರಿ ಕೋರ್ಟಿನ ಮುಂದೆ ಅಮಲಜಾರಿ ತಸ್ತಿಗೆ ಇಟ್ಟಿರುವ ತಾರೀಖು 21—4—1939ನೇ ದಿನ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ತಿಳಿಸಿಕೊಳ್ಳುವದು ತಪ್ಪಿದ್ದಲ್ಲಿ ಸದ್ರಿಯವಳ ಅಕ್ಷೇಪಗಳು ಇಲ್ಲವೆಂದು ತಿಳಿದು ಅಮಲಜಾರಿ ಮುಂದರಿಸಲಾಗುತ್ತದೆ ಎಂದು ಸದ್ರಿ ಈ ಮೂಲಕ ತಿಳಿಸಲಾಗಿಯದೆ.

ಕಾರವಾರ, } ಎಚ್. ವಿ. ಗೋಪಾಲಕೃಷ್ಣರಾವ
3-4-39. } ಅರ್ಜದಾರರ ವಕೀಲ.

ಸರ್ವಾಧಿಕಾರಿಗಳ ರಾಕ್ಷಸೀ ಮಹಾತ್ವಾಕಾಂಕ್ಷೆಗೆ ಇನ್ನೊಂದು

ಸ್ವತಂತ್ರ ರಾಷ್ಟ್ರದ ಆಹುತಿ

ಅಲ್ಬೇನಿಯಕ್ಕೆ ಇಟಲಿಯ ಮುತ್ತಿಗೆ

ಮದ್ರಾಸು ಅಧಿಪತ್ಯದ ಮುಂದಿನ ಗವರ್ನರರು

ಈಗಿನ ಗವರ್ನರರಾದ ಲೋರ್ಡ್ ಆರ್ಸ್ಕಿನರನಂತರ ಕೆಪ್ಟನ್ ಆರ್ಥರ್ ಹೋಪರು ಮುಂದಿನ ಗವರ್ನರರಾಗಿ ನೇಮಕ ಹೊಂದಿರುವರು

ಇದೇ ತಿಂಗಳ ತಾ ೭ರ ದಿನ ಇಟಲಿಯ ಯುದ್ಧನಾವೆಗಳು ಅಲ್ಬೇನಿಯ ಎಂಬ ಸ್ವತಂತ್ರ ರಾಷ್ಟ್ರಕ್ಕೆ ಸೇರಿದ ಡುರಾಜೋ, ವೆಲೋನಾ, ಡಿಮೇಡುವಾ ಮೊದಲಾದ ರೇವುಗಳ ಮೇಲೆ ಫಿರಂಗಿ ಗುಂಡುಗಳನ್ನು ಹಾರಿಸಿ ಆ ಬಂದರುಗಳನ್ನು ಸ್ವಾಧೀನಪಡಿಸಿಕೊಂಡವು. ಟಿರಾನವೆಂಬ ಅಲ್ಬೇನಿಯದ ರಾಜಧಾನಿಯನ್ನು ಇಟಾಲಿಯನ ಯುದ್ಧವಿಮಾನಗಳು ಬಾಂಬುಗಳ ಸುರಿಮಳೆಯನ್ನು ಸುರಿಸಿ ನಾಶಮಾಡಿದುವು ಇಟಾಲಿಯನ ಸೇನೆಯು ಅಲ್ಬೇನಿಯವನ್ನು ಮುತ್ತಿ ಒಳನುಗ್ಗಿದೆ ಅಲ್ಬೇನಿಯದ ರಾಜರಾದ ಜೋಗರು, ರಾಜಧಾನಿಯನ್ನು ಬಿಟ್ಟು ಗ್ರೀಸಿನಲ್ಲಿ ಎಲ್ಲಿಗೋ ಹೋಗಿಬಿಟ್ಟಿದ್ದಾರೆ ಸರಕಾರವು ಸ್ಥಾನಾಂತರವಾಗಿದೆ ರಾಣಿಯೂ ಇತರ ರಾಜಪರಿವಾರವೂ ಗ್ರೀಸ, ಸಾಲೋನಿಕಗಳಲ್ಲಿ ಆಶ್ರಯ ಪಡೆದಿದೆ ಇಟಾಲಿಯನ ಅತ್ಯಾಚಾರವು ಅಸಹನೀಯವಾಗಿದೆ ಅಲ್ಬೇನಿಯದಲ್ಲಿ ಇಟಲಿಯ ಅಧಿಕಾರವು ಸ್ಥಾಪಿತವಾಗಿದೆ.

ಹಿಟ್ಲರನ ಸಮ್ಮತಿ

ಹಿಟ್ಲರ ಮುಸಲೋನಿಯರು ಇದೀ ಯುರೋಪವನ್ನೇ ಆಕ್ರಮಿಸಿ ವಿಸ್ತಾರವಾದ ಜರ್ಮನ ಮತ್ತು ಇಟಾಲಿಯನ್ ಸಾಮ್ರಾಜ್ಯಗಳನ್ನು ಸ್ಥಾಪಿಸುವ ಯೋಚನೆ ಮಾಡಿದ್ದಾರೆಂಬುದು ಮುಸಲೋನಿಯ ಈ ಅನ್ಯಾಯದ ಆಕ್ರಮಣದಿಂದ ಸ್ಪಷ್ಟವಾಗುತ್ತದೆ ಅವರಿಬ್ಬರು ಪರಸ್ಪರ ಸಮ್ಮತಿಯಿಂದ ತಮ್ಮ ತಮ್ಮ ಕೆಲಸಗಳನ್ನು ಕೊನೆಸಾಗಿಸುತಿದ್ದಾರೆ. ಮುಸಲೋನಿಯು ಅಲ್ಬೇನಿಯವನ್ನು ಆಕ್ರಮಿಸುವುದಕ್ಕೆ ಹಿಟ್ಲರನು ತನ್ನ ಸಮ್ಮತಿಯನ್ನು ಮೊದಲೇ ಕೊಟ್ಟಿದ್ದನಾಗಿ ಈಗ ಪ್ರಕಟವಾಗಿದೆ ಎಡ್ರಿಯಾಟಿಕ ಸಮುದ್ರ ಭಾಗದ ಸರ್ವಾಧಿಕಾರವು ಮುಸಲೋನಿಗೊಪ್ಪಿನಿಗೇ ಇರತಕ್ಕದೆಂದೂ ಫ್ರಾನ್ಸು, ಇಂಗ್ಲಾಂಡು ಅಥವಾ ಇತರ ರಾಷ್ಟ್ರಗಳಿಗೆ ಆ ಭಾಗದಲ್ಲಿ ಯಾವ ಹಿತಾಸಕ್ತಿಯೂ ಇರುವುದಿಲ್ಲವೆಂದು ಹಿಟ್ಲರನು ಒಂದು ರೀತಿಯಿಂದ ಆ ರಾಷ್ಟ್ರಗಳನ್ನು ಎಚ್ಚರಿಸಿದ್ದಾನೆ.

ಬ್ರಿಟಿಷರ ತಾಟಸ್ಥ್ಯ

ಹಿಟ್ಲರ ಮುಸಲೋನಿಯರ ಆಕ್ರಮಣ ಶೀಲತೆಯನ್ನು ತಡೆಯಲಿಕ್ಕೆ ಇಂಗ್ಲಾಂಡು ಫ್ರಾನ್ಸುಗಳು ತಕ್ಕ ಉಪಾಯಗಳನ್ನು ಚಿಂತಿಸುತ್ತಿರುವಾಗಲೇ ಮುಸಲೋನಿಯು ಅಲ್ಬೇನಿಯವನ್ನು ಆಕ್ರಮಿಸಿ ಅದರ ಅಸಹಾಯತೆಯನ್ನು ಪ್ರಪಂಚಕ್ಕೆ ತೋರಿಸಿರುವುದು. ಇಂಗ್ಲೆಂಡು ಫ್ರಾನ್ಸುಗಳ ಸ್ನೇಹವನ್ನು ಕಟ್ಟಿಕೊಳ್ಳದಂತೆ ಮುಸಲೋನಿಯು ಯುರೋಪಿನ ಚಿಕ್ಕ ರಾಷ್ಟ್ರಗಳಿಗೆ ಕೊಟ್ಟ ಎಚ್ಚರಿಕೆ ಎಂದು ಹೇಳಬರುತ್ತದೆ. ಅಲ್ಬೇನಿಯ ವಿಷಯವು ಮುಸಲೋನಿರೂ ಜೋಗರಾಜರಿಗೂ ಸಂಬಂಧಿಸಿದ್ದೆಂದೂ ತಮಗೆ ಅದರಲ್ಲಿ ಹಿತಾಸಕ್ತಿ ಇರುವುದಿಲ್ಲವೆಂದೂ ಬ್ರಿಟಿಷರು ಮತ್ತು ಫ್ರೆಂಚರು ತಾಟಸ್ಥ್ಯವನ್ನು ವಹಿಸಿರುವರಾದರೂ, ಯುರೋಪಿನ ಚಿಕ್ಕ ರಾಷ್ಟ್ರಗಳು ಈ ತಾಟಸ್ಥ್ಯದ ಅರ್ಥವನ್ನು ಬೇರೆಯಾಗಿಯೇ ಮಾಡುವ ಕಾರಣವಿದೆ ಶಾಂತಿಯ ಕಾಲದಲ್ಲಿ ಇಂಗ್ಲಾಂಡು ಫ್ರಾನ್ಸುಗಳು ಯಾರಿಗೆ ಯಾವ ಅಭಯವನ್ನಿತ್ತರೂ, ಯುದ್ಧಸಂಭವಗಳಲ್ಲಿ ಅಥವಾ ಸಣ್ಣ ರಾಷ್ಟ್ರಗಳ ಮೇಲೆ ಆಕ್ರಮಣವಾದಾಗ ಈ ದೊಡ್ಡ ರಾಷ್ಟ್ರಗಳು ಅವುಗಳ ರಕ್ಷಣೆಗೆ ಬರುವಂತಿಲ್ಲವೆಂದು ಅಲ್ಬೇನಿಯ ಆಕ್ರಮಣದಿಂದ ತಿಳಕೊಳ್ಳಬಹುದು ಅದುದರಿಂದ ಯುರೋಪಿನ ಚಿಕ್ಕ ರಾಷ್ಟ್ರಗಳು ತಮ್ಮ ರಕ್ಷಣೆಗೋಸ್ಕರ ಇನ್ನು ಹೆಚ್ಚೆಚ್ಚಾಗಿ ಸರ್ವಾಧಿಕಾರಿಗಳ ಮನೋನುಕೂಲವನ್ನು ನೋಡಿಕೊಳ್ಳುವ ಸಂಭವವೇ ಉಂಟು

ಇದರ ಪರಿಣಾಮ

ಒಂದು ಕಡೆಯಿಂದ ಹಿಟ್ಲರನು ಸಬಲನಾಗುತಿದ್ದಾನೆ ಇನ್ನೊಂದು ಕಡೆಯಿಂದ ಮುಸಲೋನಿ ಪ್ರಬಲನಾಗುತಿದ್ದಾನೆ ಸ್ಪೈನು ಸಂಪೂರ್ಣ ಫ್ರೆಂಕೋವಿನ ವಶನಾಯಿತ ಅವನು ಹಿಟ್ಲರ ಮುಸಲೋನಿಯರ ಗರ್ಭವನ್ನು ಸೇರಿಕೊಂಡಿರುವನು. ಸಮ್ಮದಲ್ಲೇ ಬ್ರಿಟಿಷರ ಜಿಬ್ರಾಲ್ಟರಿನ ಮೇಲೆ ಇವರ ವಕ್ರದೃಷ್ಟಿ ಬೀಳಲಿದೆ ಅತ್ತ ಅಲ್ಬೇನಿಯ ಮೊದಲಾದ ಬಾಲ್ಕನ ರಾಷ್ಟ್ರಗಳ ಒಂದೊಂದಾಗಿ ಮುಸಲೋನಿಯ ಸೂತ್ರಚಾಲನೆಗೆ ಒಳಪಟ್ಟವೆಂದರೆ ಸುಯೇಜಿನ ಮೇಲೂ ಅವರ ವಕ್ರದೃಷ್ಟಿ ಬೀಳುವುದು ಆಗ ಬ್ರಿಟಿಷರ ವ್ಯಾಪಾರ ಮಾರ್ಗಗಳಿಗೆ ತಡೆಗಟ್ಟುವವು ಭೂಮಧ್ಯ ಸಮುದ್ರದ ಮೇಲಿನ ಅಧಿಕಾರವು ಪೂರ್ಣವಾಗಿ ಸರ್ವಾಧಿಕಾರಿಗಳ ಕೈಗೆ ಬರುವುದು. ಆಗ ಬ್ರಿಟಿಷ ಸಾಮ್ರಾಜ್ಯದ ಅಸ್ತಿತ್ವಕ್ಕೇ ಭಂಗ ಬರುವುದು. ಸರ್ವಾಧಿಕಾರಿಗಳ ರಾಕ್ಷಸೀ ಮಹತ್ವಾಕಾಂಕ್ಷೆಗೆ ಮಿತಿ ಇಲ್ಲವಾಗಿದೆ ಇದು ಹಿಟ್ಲರ ಮುಸಲೋನಿಯರ ಹಿಂದಿನ ನಡೆನುಡಿಗಳಿಂದ ಸ್ಪಷ್ಟವಾಗಿದೆ ಅವರಿಗೆ ಕೆಲಕೆಲವು ಸಣ್ಣ ರಾಷ್ಟ್ರಗಳನ್ನು ಬಲಿ ಕೊಟ್ಟರೆ ಅವರು ಸಂತೃಪ್ತರಾಗ ವರೆಂದು ವಿ ಚೇ ೭ರ ಲೇನರು ದಲಾಡಿಯರ ಪ್ರಭೃತಿಗಳು ನಂಬಿರುವಂದರೆ ಅದು ಈ ಪ್ರಭೃತಿಗಳ ಶುದ್ಧ ಮೂರ್ಖತನವಾಗಿದೆ ಮಿ ಚೇಂಬರ್ಲೇನ ದಲಾಡಿಯರರು ಹಿಟ್ಲರ ಮುಸಲೋನಿಯರನ್ನು ತೃಪ್ತಿಗೊಳಿಸುವ ಹುಚ್ಚು ಪ್ರಯತ್ನಗಳನ್ನು ಮಾಡುವವರಲ್ಲಿ ಈಗಲೂ ತೊಡಗಿರುವದನ್ನು ಕಂಡು ನಗು ಬರುತ್ತದೆ, ಇಂಗ್ಲಾಂಡ ಫ್ರಾನ್ಸುಗಳು ಧೈರ್ಯ ತಾಳಿ ಮುಂದೆ ಬಂದು, ಯುದ್ಧ ಮಾಡಿಯಾದರೂ ಸರ್ವಾಧಿಕಾರಿಗಳ ಆಕ್ರಮಣಗಳನ್ನು ತಡೆದು ಅವರಿಗೆ ಒಳ್ಳೆಯ ಬುದ್ಧಿಯನ್ನು ಕಲಿಸದಿದ್ದರೆ ಮತ್ತೆ ಅವರು ಬಹಳ ಮಾಡಿ ಕಷ್ಟನಷ್ಟಗಳನ್ನು ಅನುಭವಿಸಿ ಧ್ವಂಸಗಬೇಕಾಗುವುದು

ಯುಗೊಸ್ಲೊವೆಕಿಯಕ್ಕೆ ಇಟಲಿಯ ಅಭಯ

ಅಲ್ಬೇನಿಯವನ್ನು ಇಟಲಿಯು ಆಕ್ರಮಿಸಿ ಸ್ವಾಧೀನ ಮಾಡಿಕೊಂಡಿರುವುದರಿಂದ ಹತ್ತಿರದ ಯುಗೊಸ್ಲೊವಿಯದ ಸ್ವಾತಂತ್ರ್ಯಕ್ಕೆ ಹಿತಾಸಕ್ತಿಗಳಿಗೂ ಲೋಪ ಬಾರದಂತೆ ನೋಡಿಕೊಳ್ಳುವದಾಗಿ ಇಟಲಿ ಭರವಸೆಯನ್ನು ಕೊಟ್ಟಿದೆ. ಆದರೆ ಸರ್ವಾಧಿಕಾರಿಗಳು ತಮ್ಮ ಕಾರ್ಯಸಾಧನೆಗೆ ಅನುಕೂಲವಾಗಿ ಮಾತ್ರ ಅಂಥ ಭರವಸೆಯನ್ನು ಕೊಡುವರು ಭರವಸೆಗಳು ಕಾರ್ಯಸಾಧನೆ ... ಅವುಗಳಿಗೆ ವಿರೋಧವಾಗಿ ನಡೆ... ಅವರ ಎಷ್ಟು ... ತಕ್ಕ ... ವುದಿಲ್ಲ ಅದುದರಿಂದ ಮುಸಲೋನಿಯ ... ತಿಳಿ... ಅವನ ಮಾತುಗಳ ಪ್ರಮಾಣವಾಗುವುದಿಲ್ಲ ... ಬ್ರಿಟಿಷರು ಭೂಮಧ್ಯ ಸಮುದ್ರದಲಿ ತಮ ಗೇ... ಅಂಥ ... ವುದಿಲ್ಲ... ಎಣಿಸಿರ ... ಆದು ... ಸೋ... ಸ ಗ ... ತ್ತ ದಿಲ್ಲಾಂದು

ಅಮೆರಿಕದ ನಿಷೇಧ

ಅಲ್ಬೇನಿಯದಲ್ಲಿ ಇಟಲಿಯ ಆಕ್ರಮಣವನ್ನು ... ಖಂಡಿಸಿದೆ ಚೆಕೊಸ್ಲೊವೇಕಿಯವನ್ನು ಜರ್ಮನಿ ಸ್ವಾಧೀನ ಮಾಡಿರುವುದನ್ನು ಅತೆ... ಗುರುತಿಸದಿರುವಂತೆ ಇಟಲಿಯು ಅಲ್ಬೇನಿಯವನ್ನು ಸ್ವಾಧೀನ ಮಾಡಿರವುದನ್ನೂ ಗುರುತಿಸುವಂತಿಲ್ಲವೆಂದು ನಿರ್ಣಯಿಸಿದೆ ... ಇಟಲಿಗ ... ಸರಂಜಾಮುಗಳ ರಫ್ತನ್ನು ನಿಷೇಧಿಸಬಹುದು.

ರಷ್ಯದ ಸೂಚನೆ

ಬ್ರಿಟಿಷರು ಪೋಲೆಂಡಿನ ಸಹಾಯಕ್ಕೆ ಹೋಗಿ ಹಿಟ್ಲರನ ಆಕ್ರಮಣವನ್ನು ತಡೆಯುವರೆಂದು ಗೊತ್ತಾದೊಡನೆ ಅದನ್ನು ಬಿಟ್ಟು ಮುಸಲೋನಿ ಅಲ್ಬೇನಿಯವನ್ನು ಆಕ್ರಮಿಸಿದನು. ... ಇವರಿಬ್ಬರು ಸರ್ವಾಧಿಕಾರಿಗಳು ಪರಸ್ಪರ ಸಹಕಾರದಿಂದ ನಡೆಯುತ್ತಿರುವರು. ಒಂದು ಕಡೆಯ ಅವರ ಆಕ್ರಮಣಕ್ಕೆ ತಡೆಯುಂಟಾದರೆ ಇನ್ನೊಂದು ಕಡೆ ಅವರು ಅದನ್ನು ಆರಂಭಿಸುವರು. ಆದುದರಿಂದ ಅವರ ಆಕ್ರಮಣ ಶೀಲತೆಯನ್ನು ಬ್ರಾಂತಿ... ಇತರ ರಾಷ್ಟ್ರಗಳು ಒಂದಾಗಿ ವಿರೋಧಿಸಬೇಕೆಂದು ರಷ್ಯವು ಸೂಚಿಸಿದೆ

ಗ್ರೀಸ ಟರ್ಕಿಗಳ ಭಯ

ಮುಸಲೋನಿ ಅಲ್ಬೇನಿಯವನ್ನು ಮುತ್ತಿದ ಕಾರಣ ನೆರೆಯ ಗ್ರೀಸ ಟರ್ಕಿಗಳಿಗೆ ತುಂಬ ಭಯವಾಗಿದೆ ಅವನು ಕ್ರಮವಾಗಿ ಆ ಎರಡು ರಾಷ್ಟ್ರಗಳ ಸ್ವಾತಂತ್ರ್ಯವನ್ನು ಅಪಹರಿಸಬಹುದೆಂದು ತಿಳಿದ ಅವು ತಮ್ಮ ತಮ್ಮ ರಕ್ಷಣೆಯ ಕಾರ್ಯದಲ್ಲಿ ತೊಡಗಿರುವವು

ದತ್ತಪುತ್ರ

ವಿಪ್ಸನಾಡ್ ಪ್ರಾಣಿ ಆಲಯದಲ್ಲಿನ ಸೆಲ್ಲಿ ಎಂಬ ಕರಡಿಯು ತನಗೆ ಸ್ವಂತ ಮರಿಗಳಿಲ್ಲದ್ದರಿಂದ ಕಂಡ ಮರಿಯ ಒಂದು ಗೊಂಬೆಯನ್ನು ಪತ್ತಕ್ಕೆ ತೆಗೆದುಕೊಂಡು ಅದನ್ನೆ ಚುಂಬಿಸುತ್ತಿರುವುದು.

ನೋಟಿಸು.

ಕಾಸರಗೋಡು ಡಿ। ಮು। ಕೋರ್ಟಿನಲ್ಲಿ

O S No 791/1936

R. E. P No 1311/1938

ಫಾತುಮ್ಮಾಬಿ . ಅರ್ಜಿದಾರಳು ವಾದಿ'

ಮತ್ತೆ

ಅಬ್ದುಲ್ಲ ... { ಡೆಫಾಂಡೆಂಟರು
ಸ್ಯಾಬಾ ಕೂಡಾ } ಪ್ರತಿವಾದಿರು

ಇನ್ನಿತರರು

4ನೇ ಡೆಫಾಂಡೆಂಟಳು ಫಾತುಮ್ಮಾಬಿ ಮೃತಪಟ್ಟ ಬರಾನ್ ಅಲ್ಲಿ ಸ್ಯಾಬರಿಗೆ ಬೀಬೋ... ಹವ್ವಾಬಿಯಲ್ಲಿ ಜನಿಸಿದ ಮಗಳು, ಮ... ಶೀಕಲ್ಲಿ ಸ್ಯಾಬನ ಹೆಂಡತಿ ಕಾಸರಗೋಡು ತಾಲ್ಲೂಕು ತಳಂಗ ಗ್ರಾಮದ ಪಳ್ಳಿಕ್ಕಾಲಲ್ಲಿ ಇರುವವಳ

5ನೇ ಡೆಫಾಂಡೆಂಟಳ ಬಾನೋಬಿ ಮೃತಪಟ್ಟ ಬರಾನ್ ಅಲ್ಲಿ ಸ್ಯಾಬರಿಗೆ ಹವ್ವಾಬಿಯಲ್ಲಿ ಜನಿಸಿದ ಮಗಳು, ಮ ಉಮ್ಮರ್ ಖಾನ್ ಸ್ಯಾಬನ ಹೆಂಡತಿ ಕಾಸರಗೋಡು ತಾಲೂಕು ಕೂಡ್ಲು ಗ್ರಾಮದಲ್ಲಿರುವವಳು.

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರಳ ಹಾಜರುಪಡಿಸಿದ ... ಇಸ್ತಿಹಾರು ಮಂಜೂರುಪಡಿಸ ಪರೆಯೂ, ಮತ್ತು ಎಲಂ ಸಮಯ ವಾರಿಸರಿಯೆಂದರೆ ಅರ್ಜಿದಾರಳಿಗೆ ಅನುಮತಿ ಕೊಡಿಸುವ ಬಗ್ಗೆ ಕೂಡಾ ಸದರಿ ಅಪ್ಲಿಕ್ಕೇಶನು ತಾರೀಕು 29–4–1939ಕ್ಕೆ ತನ್ನಿಗೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ

Kasaragod, 6–4–1939 } **K. MAMMUNHI** ಅರ್ಜಿದಾರಳಕಡೆ ಎಡ್ವಕೇಟ್

ಅತ್ಯುತ್ತಮ ಹೇರ್ ಆಯಿಲ್

ಎಲ್ಲಾ ಜನರ ಮನಸ್ಸನ್ನು ಸೆಳೆಯುವುದು!

ದಿಲ್ ಕುಷ್ ಹೇರ್ ಆಯಿಲ್

ಅರ್ವಾಚೀನ ರೀತಿಯ ಶೋಭೆಯನ್ನು ಬಾಚುವುದಕ್ಕೆ ಅನುಕೂಲವಾಗಿ ಅಹ್ಲಾದಕರವಾದ ಸುಗಂಧವಿದೆ ಇದರಿಂದ ಕೂದಲು ದಪ್ಪನಾಗಿ ಬೆಳೆಯುವುದು, ಉದುರುವ ಕೂದಲು ತಡೆಕಟ್ಟುವುದು ಸಿದ್ಧಗೆ ಉಪಯುಕ್ತವಾಗಿದೆ

ಕ್ರಯ: 6 ಔನ್ಸ್ ಸೀಸೆಗೆ 0—12—0

,, 12 ,, ,, 1-4-0

ರುಬಿ ಪೆಯಿನ್ ಬಾಮ್

ಇದು ಉಳುಕು, ಜಜ್ಜಿದ ಗಾಯ, ನೋವು, ತಲೆಸಿಡತದ ಮೇಲೆ ದಿವ್ಯ ಬಾಮ್ ಡಬ್ಬಿ 1ಕ್ಕೆ ಆ 4.

ಉಡುಪಿಯಲ್ಲಿ ಏಜೆಂಟರು ಬೇಕು

ಏಜೆಂಟ್ಸ್—

ಷಾ ಕಂಪೆನಿ, ಮಂಗಳೂರು.

ಮಂಗಳೂರು ಸಮಾಚಾರ

ಬಿಸೆಂಟ್ ಶಾಲಾ ವಸಂತೋತ್ಸವ

ಕಳೆದ ಶನಿವಾರ ಶ್ರೀಮತಿ ಲಕ್ಷ್ಮೀ ಜಿಯಾಉದ್ದೀನ್‌ರವರು, ಈ ಶಾಲೆಯ ವಸಂತೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅದನ್ನು ಸಾಂಗಗೊಳಿಸಿದರು. ಪ್ರಾರ್ಥನೆ ಅಧ್ಯಕ್ಷರ ಭಾಷಣಗಳ ಅನಂತರ, ಮಕ್ಕಳೇ ತಯಾರಿಸಿದ ವಸ್ತುಗಳ ಪ್ರದರ್ಶನವು ಅಧ್ಯಕ್ಷೆಯರಿಂದ ತೆರೆಯಲ್ಪಟ್ಟಿತು. ಅಧ್ಯಕ್ಷೆಯರು ಬಿಸೆಂಟ್ ಶಾಲಾ ಮಕ್ಕಳ ವಿದ್ಯಾ ಪ್ರಚಾರ ಪ್ರಗತಿ ಶಿಕ್ಷಕರು ಮಕ್ಕಳ ಮೇಲ್ಮೆಗಾಗಿ ವಹಿಸುತ್ತಿರುವ ಆಧಾರವನ್ನು ವಿವರಿಸಿದರು

ಟೌನ್ ಕಾಂಗ್ರೆಸು ಕಮಿಟಿಯ ಸಭೆ

ಮಂಗಳೂರು ಟೌನ್ ಕಾಂಗ್ರೆಸು ಕಮಿಟಿಯ ಸಭೆಯು ಕಳೆದ ತಾ ೯—೪—೩೯ನೇ ಸಂಜೆ ಒಕ್ಕೆ ಶ್ರೀ ಬಿ ವೆಂಕಟ್ರಾವ್ ಬಾಳಿಗ ಬಿ ಎಲ್. ಎ ರವರ ಅಧ್ಯಕ್ಷತೆಯಲ್ಲಿ ಜರುಗಿತು, ಮೊದಲಾಗಿ ಕಾಂಗ್ರೆಸಿನ ಸೇವೆಯನ್ನು ತ್ರಿಕರಣ ಪೂರ್ವಕವಾಗಿ ಮಾಡಿ ಅಸಹಕಾರ ಚಳವಳದ ಸಮಯ ಬಾರಿ ಪ್ರಹಾರ ಜೈಲುವಾಸವನ್ನು ಅನುಭವಿಸಿದ ಶ್ರೀ ಐತಪ್ಪ ಮೆಂಡನರ ಅಕಾಲ ನಿಧನಕ್ಕಾಗಿ ದುಃಖಸೂಚಕ ಠರಾವಿನ ನಿರ್ಣಯವಾಗಿ ಸ್ವೀಕೃತವಾಯಿತು ಎರಡನೆಯದಾಗಿ ಹಿಂದೂದೇಶದಲ್ಲಿರುವ ಕಮ್ಯುನಿಸ್ಟ್ ಪಕ್ಷದವರ ಮೇಲೆ ಹಾಕಿರುವ ನಿರ್ಬಂಧವನ್ನು ಮದ್ರಾಸು ಸರಕಾರವು ಕೂಡಲೇ ತೆಗೆದು ಹಾಕತಕ್ಕದೆಂದು ಆಗ್ರಹ ಪೂರ್ವಕವತ್ತಾಯದಿಂದ ಅಪೇಕ್ಷಿಸುವ ಠರಾವು ಮಂಡೂರಾಯಿತು. ಮೂರನೆಯದಾಗಿ ನಾಮದಾರ ಶ್ರೀ ಸಿ ಜೆ ವಾರ್ಕಿಯವರು ಕಾಂಗ್ರೆಸು ಮಂತ್ರಿಯಾಗಿದ್ದು ಕಾಂಗ್ರೆಸು ಧ್ಯಾಂಕೋವಿನ ವಿರೋಧ ಪಕ್ಷದೊಡನೆ ಸಹಾನುಭೂತಿ ತೋರಿಸುತ್ತಿರುವುದ ವ ನಗೊಂಡ ತನ್ನದೊಂದು ಭಾಷಣದಲ್ಲಿ ಜನರಲ್ ಫ್ರಾಂಕೋವನ್ನು ಪ್ರಸಂಶಿಸಿದುದ ಎಷ್ಟು ಮಾತಕ್ಕೂ ನ್ಯಾಯವಲ್ಲವೆಂದೂ ಅವರ ಈ ವರ್ತನೆಯು ಖಂಡನೀಯವಿದೆಯೆಂದೂ ಅವರು ಆ ತಪ್ಪನ್ನು ಒಪ್ಪಿ ಆ ಬಗ್ಗೆ ಕೂಡಲೇ ಪಶ್ಚಾತ್ತಾಪ ಪ್ರಕಟ ಮಾಡಬೇಕೆಂಬ ಅಭಿಪ್ರಾಯವು ಸ್ವೀಕೃತವಾಯಿತು ನಾಲ್ಕನೆಯದಾಗಿ ಮುನ್ಸಿಪಲ್ ಕಾಂಗ್ರೆಸ್ ಪಾರ್ಟಿಯ ಸದಸ್ಯರು ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಗೆ ಚಂದಾ ಹಣವನ್ನು ತೆರುವಂತೆ ಕೇಳಿಕೊಳ್ಳಬೇಕೆಂಬ ನಿರ್ಣಯವಾಯಿತು, ಮತ್ತು ಕೆಲವು ಉಪ ಸಮಿತಿಗಳ ನೇಮಕವಾಯಿತು

ವಿದ್ಯಾರ್ಥಿ ಪರಿಷತ್ತು

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಮೊದಲನೇ ಪರಿಷತ್ತು ಇಂದು ಮತ್ತು ನಾಳೆ ಸ್ಥಳೀಯ ಗಣಪತಿ ಹೈ ಸ್ಕೂಲಿನಲ್ಲಿ ಮುಂಬೈಯ ರಾಷ್ಟ್ರೀಯ ಕ್ರಿಶ್ಚಿಯನ್ ಧುರೀಣರಾದ ಶ್ರೀ ಜೋಕಿಮ್ ಆಳ್ವರ ಅಧ್ಯಕ್ಷತೆಯಲ್ಲಿ ಜರಗುವುದು. ಶ್ರೀಮತಿ ವೈಲೆಟ್ ಆಳ್ವರು ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರು.

ಹೊಸ ಸಹಕಾರ ಸಂಘ

ಕಳೆದ ಆದಿತ್ಯವಾರ ಡಿಪ್ಯುಟಿ ರಿಜಿಸ್ಟ್ರಾರರ ಆಫೀಸಿನಲ್ಲಿ ಶ್ರೀ ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿದ ವೇಳೆ ದ. ಕ. ಜಿಲ್ಲಾ ಎಡ್ವಾನ್ಸ್‌ಮೆಂಟ್ ಕೋಓಪರೇಟಿವ್ ಸೊಸೈಟಿಯೊಂದು ಸ್ಥಾಪಿಸಲ್ಪಟ್ಟಿತು. ಮುಖ್ಯವಾಗಿ ಸಹಕಾರ ಸಂಘಗಳಿಗೆ ಸಂಬಂಧಿಸಿದವರ ಉಪಕಾರಕ್ಕಾಗಿ ಸುವ್ಯವಸ್ಥಿತ ರೀತಿಯಿಂದ ಕಾರ್ಯಗಳನ್ನು ಸುಸಂಘಟಿತಗೊಳಿಸುವುದೇ ಸಂಸ್ಥಾನದಲ್ಲೇ ಮೊದಲನೆಯದಾದ ಈ ಸಹಕಾರ ಸಂಘದ ಉದ್ದೇಶವಾಗಿದೆ.

ವಿದ್ಯಾ ಸಮಸ್ಯೆ

ಕಳೆದ ಆದಿತ್ಯವಾರ ದಿನ ಸ್ಥಳೀಯ ಥಿಯಾಸಫಿಕಲ್ ಲಾಜಿನಲ್ಲಿ ಶ್ರೀ. ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ 'ವಿದ್ಯಾ ಸಮಸ್ಯೆ' ಎಂಬ ವಿಚಾರವಾಗಿ ಚರ್ಚೆಗಳು ನಡೆದುವು

ಸಭೆ

ಕಳೆದ ಸೋಮವಾರ ಸಂಜೆ ಶ್ರೀ. ಕೆ. ಆರ್ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಎನ್ ಎಸ್ ಕಿಲ್ಲೆಯವರು ತ್ರಿಪುರಿ ಕಾಂಗ್ರೆಸಿನಲ್ಲಿ ನಡೆದ ವಿಚಾರಗಳ ಕುರಿತು ವಿಮರ್ಶಾತ್ಮಕ ದೃಷ್ಟಿಯಿಂದ ಭಾಷಣವಿತ್ತರು.

ಸಾರ್ವಜನಿಕ ಸಭೆ

ನಿನ್ನೆ ಸಂಜೆ ಘಂಟೆ ೬-೩೦ಕ್ಕೆ ಸ್ಥಳೀಯ ಲೈನ್ ಮೈದಾನಿನಲ್ಲಿ ಟೌನ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ರಾಷ್ಟ್ರೀಯ ವಾರದ ಕಡೇ ದಿನದ ಸಾರ್ವಜನಿಕ ಸಭೆಯು ಶ್ರೀಯುತ ಬಿ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು.

ಬಾಲ ಮಾರುತಿ ವ್ಯಾಯಾಮ ಮಂಡಲದ ೧೨ನೇ ವಾರ್ಷಿಕೋತ್ಸವ

ಸ್ಥಳೀಯ ಬಾಲಮಾರುತಿ ವ್ಯಾಯಾಮ ಮಂಡಲದ ೧೨ನೇ ವಾರ್ಷಿಕೋತ್ಸವವು ಮಂಡಲದ ಕಟ್ಟಡದಲ್ಲಿ ಇದೇ ಎಪ್ರಿಲ್ ತಾ. ೧೬ನೇ ಆದಿತ್ಯವಾರ ಸಂಜೆ ೫-೩೦ಕ್ಕೆ ರಾವ್ ಬಹದೂರ್ ಡಾ ಪಿ ಪಿ ಕಾಮತ್ ಎಲ್ ಎಮ್ ಎಂಡ್ ಎಸ್ (ನಿವೃತ್ತ ಸಿವಿಲ್ ಸರ್ಜನ್) ರವರ ಅಧ್ಯಕ್ಷತೆಯಲ್ಲಿ ಜರಗುವುದು.

ಶ್ರೀ ಕೆ ಆರ್ ಕಾರಂತರು

ಮದ್ರಾಸ್ ಸರಕಾರವು ಬೇಗನೇ ಜಾರಿಯಲ್ಲಿ ತರಲೆಳಸಿ ಹೊರಡಿಸಿದ ಮತ್ತು ವ್ಯಾಪಾರಗಳ ಮೇಲಿನ ತೆರಿಗೆ ಬಿಲ್ಲುಗಳ ವಿಚಾರದಲ್ಲಿ ಜನರ ಅಭಿಪ್ರಾಯವನ್ನು ತಿಳಿದುಕೊಂಡು ಆ ವಿಚಾರವನ್ನು ಸರಕಾರಕ್ಕೆ ತಿಳಿಯಪಡಿಸಲಿರುವುದರಿಂದ, ಶ್ರೀಯುತರು, ತಮ್ಮ ಮತದಾರಕ್ಷೇತ್ರಗಳನ್ನು ಸಂದರ್ಶಿಸುವರು ತಾ ೧೮ ಎಪ್ರಿಲ್ ಬೆಳಗ್ಗೆ ಕುಂದಾಪುರ, ಮಧ್ಯಾಹ್ನ ಬಿದ್ಕಲ್ಕಟ್ಟೆ, ತಾ ೧೯ಕ್ಕೆ ಬೆಳಗ್ಗೆ ಬೈಂದೂರು. ತಾ ೨೦ ಶಂಕರನಾರಾಯಣ, ತಾ ೨೧ ಹೊಸಂಗಡಿ, ತಾ ೨೨ ಸಿದ್ಧೇಶ್ವರ, ಮತ್ತು ೨೪ಕ್ಕೆ ವಕ್ವಾಡಿ. ಮೇಲಿನ ಸ್ಥಳಗಳಲ್ಲಿ ಸಾಧ್ಯವಾದಲ್ಲೆಲ್ಲ ಸಭೆ ಜರಗಿಸಿ ವಿಚಾರ ವಿಮರ್ಶೆ ನಡೆಸಲಾಗುವುದೆಂದು ಶ್ರೀಯುತರು ತಿಳಿಸುತ್ತಾರೆ

ಉಪಾಧ್ಯಾಯರ ಪರಿಷತ್ತು

ಮಂಗಳೂರು ತಾಲೂಕು ಬೋರ್ಡು ಶಾಲಾ ಉಪಾಧ್ಯಾಯರುಗಳ ಪರಿಷತ್ತು ನಿನ್ನೆ ದಿನ ಕಿನ್ನಿಗೋಳಿಯಲ್ಲಿ, ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ಕೆ ವಿಠ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು

ದೆರೆಬೈಲ್ ಹೊಸ ಇಗರ್ಜಿಯ ಪ್ರವೇಶೋತ್ಸವ

ಇದೇ ತಾ ೮ನೇ ಶನಿವಾರ ೫-೩೦ ಗಂಟೆಗೆ ದೆರೆಬೈಲಿನ ಹೊಸ ಇಗರ್ಜಿಯ ಪ್ರವೇಶೋತ್ಸವವು ವಿಜೃಂಭಣೆಯಿಂದ ನೆರವೇರಿತು. ಮೊದಲನೆಯದಾಗಿ ಈ ಇಗರ್ಜಿಗೆ ನೇಮಕವಾದ ರೆವ್ ಫಾದರ್ ಎಲ್ ಎಸ್ ಸೋಜರವರನ್ನು ಸಭಿಕರು ಪುಷ್ಪಮಾಲೆಗಳಿಂದ ಸ್ವಾಗತೀಕರಿಸಿ ಎದುರುಗೊಂಡ ನಂತರ ಪಾನದೊಂದಿದ ಮಂಗಳೂರಿನ ಮೋನ್ಸಿಞೊರ್‌ರವರು ಹೊಸ ಇಗರ್ಜಿಯನ್ನು ಆಶೀರ್ವದಿಸಿದರು ಅನಂತರ ಹೊಸ ಗುರುಗಳಿಗೆ ಮಾನಪತ್ರವನ್ನು ಓದಿದ ನಂತರ ವಕೀಲ್ ಮಿ ಸಿ ಎಲ್ ಲೋಬೊರವರ ಭಾಷಣವಾಯಿತು. ಅನಂತರ ನೆರೆದ ಸಭಿಕರ ಛಾಯಾಚಿತ್ರವನ್ನು ತೆಗೆದರು ಮರುದಿನ ಬೆಳಗ್ಗೆ ಹೊಸ ಇಗರ್ಜಿಯಲ್ಲಿ ಪ್ರಥಮ ಮಹಾಪೂಜೆಯೂ, ಸಾಯಂ. ಗಂಟೆ ೬ಕ್ಕೆ ಬಿಜೈ ಡ್ರಮೆಟಿಕ್ ಸೊಸೈಟಿಯವರ "ಕ್ರಿಶ್ಚಿಯನ್ ಚ್ಯಾರಿಟಿ" ಎಂಬ ನಾಟಕವನ್ನು ಮಂಗಳೂರಿನ ಬಿಶೋಪರ ಅಧ್ಯಕ್ಷತೆಯಲ್ಲಿ ಬಹಳ ಚೆಲುವಾಗಿ ಆಡಿ ತೋರಿಸಿದರು.

ತಾಲೂಕು ಸಮಾಚಾರ

ಕಾರ್ಕಳ

ಕಾರ್ಕಳ ತಾಲೂಕು ಕಾಂಗ್ರೆಸ ಕಮಿಟಿಯ ಒಂದು ಸಭೆಯು ಕಳೆದ ತಾ. ೯ರ ದಿನ ಕಮಿಟಿಯ ಕಚೇರಿಯಲ್ಲಿ ಕೂಡಿ ಶ್ರೀ ಗಳಾದ ಕೆ ಎ ಜನಾರ್ಧನ ಪ್ರಭುರವರು ಅಧ್ಯಕ್ಷರಾಗಿಯೂ ಕೆ. ಬಾಬುರಾಯ ಜೆಪ್ಪಸರು ಉಪಾಧ್ಯಕ್ಷರಾಗಿಯೂ, ಪಿ ಮಂಜುನಾಥ ಕಾಮತ ಮತ್ತು ಯಂ ದ ಅಧಿಕಾರಿಯವರು ಕಾರ್ಯದರ್ಶಿಯರಾಗಿಯೂ, ಡಿ ವಿ. ಭಟ್ಟರು ಖಜಾನ್ಚಿಯರಾಗಿಯೂ ಇರುವ ೧೧ ಮಂದಿಯ ಕಾರ್ಯನಿರ್ವಾಹಕ ಸಮಿತಿಯು ಆರಿಸಲ್ಪಟ್ಟಿತು

ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ದಕ್ಷಿಣ ಭಾರತ ಹಿಂದೀ ಪ್ರಚಾರಸಭೆಯ ಪ್ರಾರಂಭಿಕ ಪರೀಕ್ಷೆಗಳನ್ನು ಕಾರ್ಕಳ ಕೇಂದ್ರದಿಂದ ಕೊಟ್ಟವರಲ್ಲಿ ಪ್ರಾಥಮಿಕ ೧೭ರಲ್ಲಿ ೧೬ ಮಂದಿಯೂ ಮಧ್ಯಮದ ೧೫ರಲ್ಲಿ ೧೩ ಮಂದಿಯೂ, ರಾಷ್ಟ್ರಭಾಷೆಯ ೮ರಲ್ಲಿ ೭ ಮಂದಿಯೂ ತೇರ್ಗಡೆ ಹೊಂದಿರುತ್ತಾರೆ ಪ್ರಾಥಮಿಕದಲ್ಲಿ ತೇರ್ಗಡೆ ಹೊಂದಿದವರಲ್ಲಿ ಶ್ರೀಮತಿಯರಾದ ಯಸ್ ರುಕ್ಮೀಬಾಯಿ, ಕೆ ಲಲಿತಾದೇವಿ, ೩ ಡಿ ಸಾಲಿನ್ಸ ಮತ್ತು ಶ್ರೀ ಕೆ ದೇವದಾಸ ಭಟ್ಟರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆಂದು ಸ್ಥಳೀಯ ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ

ಕಳೆದ ತಾ ೧೦ರ ದಿನ ಸಾಯಂಕಾಲ ಜೋರಾಗಿ ಮಿಂಚು ಬಡಿದು ನಡುಮೇಟಿನ ಒಂದು ತೆಂಗಿನಮರದ ತಲೆಯು ಸಂಪೂರ್ಣ ಸುಟ್ಟು ಭಸ್ಮವಾಯಿತು ಈ ಆಶ್ಚರ್ಯವನ್ನು ಕಾಣಲಿಕ್ಕೆ ನೂರಾರು ಮಂದಿ ಕೂಡಿದ್ದರು

ವಿ ಹನ ಮಾನ ಟ್ರಾನ್ಸ್‌ಪೋರ್ಟು ಕಂಪೆನಿಯ ಹಿಂದಿನ ಸ್ವಾತಂತ್ರರಲ್ಲೊಬ್ಬರೂ ಸ್ಥಳೀಯ ಪಮಖರೂ ಆಗಿದ್ದ ಶ್ರೀ ಕಟ್ಟಂಗೆರೆ ರಮಾನಾಥ ನಾಯಕರವರು ಕಳೆದ ತಾ ೮ರ ದಿನ ದಿವಂಗತರಾದರು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸುತ್ತೇವೆ

ಕಾಸರಗೋಡು

ಇಲ್ಲಿಯ ಶ್ರೀರಾಮಪೇಟೆಯ ಶ್ರೀರಾಮ ಭಜನಾ ಮಂದಿರದಲ್ಲಿ ತಾ ೮ನೇ ಶನಿವಾರ ರಾತ್ರೆ ಭಜನಾನಂತರ ಶ್ರೀಯುತ ವಿದ್ವಾನ್ ಸುರತ್ಕಲ್ ಸುಬ್ಬರಾವ್‌ರವರಿಂದ 'ಸತ್ಯನಿಷ್ಠೆ' ಎಂಬ ವಿಷಯದಲ್ಲಿ, ಸರಳವಾದ ಶೈಲಿಯಲ್ಲಿ ಪುಧೋಚಿತ ಸಶಾಸ್ತ್ರೀಯ ಉದಾಹರಣೆಗಳಿಂದ ಸುರಸವಾದ ಭಾಷಣವು ಜರಗಿತು ಸಭೆಯಲಿ ಜನಸಂದಯುಕ್ತವಾಗಿ ಭಾಷಣ ಮಾಡಿದರಲ್ಲದೆ ಮುಂಬರುವ ಪ್ರಕೀರ್ತಿಗಳ ಮಾಸಿಕ ಸಮಾರಂಭದಲ್ಲಿ ಉತ್ತಮವಾಗಿ ನಟಿಸಿದ ಬಾಲಕನಿಗೆ ವಿನಾದರಿಂದ ಇನಾಮನ್ನು ಕೊಡಲಿರುವೆನೆಂದು ಹೇಳಿದರೆಂದು ಕೇಳಲು ತುಂಬಾ ಸಂತೋಷವಾಗುತ್ತದೆ

ನಿಡ್ಪೋಣಿ

ಇಲ್ಲಿಯ ಪಂಚ್ಯಾಕ ಬೋರ್ಡಿನವರು ಒಂದು ವಾಚನಾಲಯವನ್ನು ಪುಸ್ತಕ ಭಂಡಾರವನ್ನು ಕಳೆದ ತಾ. ೧-೪-೩೯ರಿಂದ ತೆರೆದಿರುವರಷ್ಟೆ, ಅದರ ಬಗ್ಗೆ ಪ್ರತ್ಯೇಕ ಒಂದು ಆಫೀಸು ಇಲ್ಲದಿರುವುದರಿಂದ ಸ್ವಲ್ಪ ತೊಂದರೆಯಾಗಿದೆ ಪ್ರೆಸಿಡೆಂಟರು ಈ ಕುರಿತು ತಕ್ಕ ಏರ್ಪಾಡು ಮಾಡುವರೆಂದು ನಂಬಲಾಗಿದೆ

ಈ ಹೊಸ ಇಗರ್ಜಿಯನ್ನು ಮಿ. ಸಿಲ್ವೆಸ್ಟರ್ ರೇಗೊರವರು ತನ್ನ ಉದ್ಧಾರ ಮನಸ್ಸಿನಿಂದ ಬಡಜನರ ಹಿತಕ್ಕಾಗಿ ತನ್ನ ಸ್ವಂತ ಕೈಯಿಂದ ೧೦-೧೨ ಸಾವಿರ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ್ದರು. ಆದುದರಿಂದ ಅವರಿಗೆ ನಮ್ಮ ಅಭಿನಂದನೆಗಳು.

ಮುಂಡ್ಕೂರು

ಇಲ್ಲಿಯ ಪಂಚ್ಯಾಕ ಬೋರ್ಡಿನವರು 'ಕುದ್ರೆಬೆಟ್ಟು' ಎಂಬಲ್ಲಿರುವ ಒಂದು ತೋಡಿಗೆ ಸಂಕ ಕಟ್ಟುವ ಕೆಲಸ ಪ್ರಾರಂಭಿಸಿದ್ದು ಬಹಳ ಸ್ತುತ್ಯಾರ್ಹವಾದ ವಿಷಯವಾಗಿದೆ. ಮುಂಡ್ಕೂರು ಬೆಳ್ಮಣ್ಣು ರಸ್ತೆಯಲ್ಲಿರುವ 'ವಾಣಿಲ್ ಕಾರ್' ಎಂಬ ತೋಡಿಗೆ ಇವರು ಸಂಕ ಕಟ್ಟುವ ಏರ್ಪಾಡು ಮಾಡಿದರೆ ಹೆಚ್ಚಿನವರಿಗೆ ಪ್ರಯೋಜನವಾದೀತು. ಈ ಕುರಿತು ಇವರು ಶೀಘ್ರದಲ್ಲಿಯೇ ಆಲೋಚನೆ ಮಾಡಲಿಕ್ಕೆ ಸಾಕೆಂದು ನಂಬಲಾಗಿದೆ.

ಕಟೀಲು

ಇಲ್ಲಿಯ ಶ್ರೀ ದುರ್ಗಾ ಪರಮೇಶ್ವರೀ ಹಾಯರ್ ಎಲಿಮೆಂಟರಿ ಶಾಲಾ ಮೆನೇಜ್ಮೆಂಟಿನವರು, ಸದ್ಯದಲ್ಲಿ ೧ರಿಂದ ೮ರ ವರೆಗಿನ ಕ್ಲಾಸುಗಳಿಗೆ ಧರ್ಮಾರ್ಥ ವಿದ್ಯಾಭ್ಯಾಸವನ್ನು ಕೊಡುವ ಆಲೋಚನೆ ಮಾಡಿದ್ದಾರಾಗಿ ತಿಳಿದುಬರುತ್ತದೆ

ಕಳೆದ ತಾ. ೬ರಲ್ಲಿ ಇಲ್ಲಿ ಒಂದು ಬಾವಿಯ ಶಿಲೆಕಲ್ಲನ್ನು ತೆಗೆಯುವಾಗ ಕೆಲಸದವರ ಅಜಾಗ್ರತೆಯಿಂದ ಕಲ್ಲು ಸ್ಫೋಟನವಾಗಿ ಇಬ್ಬರಿಗೆ ಜಖಂ ಆಗಿಯದೆ

ಇಲ್ಲಿ ಹೊಸತಾಗಿ ಸ್ಥಾಪನೆಯಾದ ಅಂಚೆ ಆಫೀಸಿಗೆ ಈಗಲೇ ಹೆಚ್ಚಿನ ಪ್ರೋತ್ಸಾಹ ದೊರೆತಿದೆ ಸದ್ಯದಲ್ಲಿ ಇದು ಕಾಯಂ ಆಗಲಿಕ್ಕೆ ಸಾಕೆಂತ ನಂಬಲಾಗಿದೆ.

ಶ್ರೀ ಹನುಮಾನ್ ವ್ಯಾಯಾಮ ಪ್ರಸಾರಕ ಮಂಡಲಿ— ಅಮರಾವತಿ

ಮೇಲಿನ ಸಾಮರ್ಥ್ಯೇಯದಿಂದ ಜನ್ಮತಾಳಿ ಕಳೆದ ಹದಿಮೂರು ವರ್ಷಗಳಿಂದ ಪ್ರಶಂಸನೀಯ ರೀತಿಯಲ್ಲಿ ಭಾವೀ ಜನಾಂಗದ ದೇಹದಾರ್ಢ್ಯತೆಯ ಸಲುವಾಗಿ ಕುಶಲ ಯುವಕರಿಗೆ ತರಬೇತುಗಳನ್ನಿತ್ತುದು ಸರಿಯಷ್ಟೆ ಚಾಲ್ತಿ ವರ್ಷದ ಟ್ರೈನಿಂಗ್ ಕ್ಲಾಸುಗಳ ಮೇ ತಿಂಗಳ ೧ನೇ ತಾರೀಕಿಗೆ ಆರಂಭವಾಗಿ ೩೧ನೇ ತಾರೀಕಿಗೆ ಕೊನೆಗೊಳ್ಳುವುದು ಸೇರಲಪೇಕ್ಷಿಸುವವರು ಸಂಬಳ ಕೊಡಬೇಕಾಗಿಲ್ಲ ಊಟದ ಸಲುವಾಗಿ ರೂಪಾಯಿ ೧೬ ಕೊಡಬೇಕಾಗುವುದು ಪ್ರವೇಶ ಅರ್ಜಿಗಳು ಈ ತಿಂಗಳ ೨೫ರೊಳಗಾಗಿ ಮಂಡಲಿಯ ಆಫೀಸಿಗೆ ತಲಪತಕ್ಕದು. ಹೆಚ್ಚಿನ ಮಾಹಿತಿಯನ್ನು 'ಕಾರ್ಯದರ್ಶಿ, ಶ್ರೀ ಹನುಮಾನ್ ವ್ಯಾಯಾಮ ಪ್ರಸಾರಕ ಮಂಡಲಿ, ಅಮರಾವತಿ' ಇವರಿಂದ ಪಡೆಯಬಹುದು. ಉತ್ಸಾಹೀ ತರುಣರು ಈ ಸುಸಂಧಿಯನ್ನು ಕಳೆಕೊಳ್ಳಲಾರರಷ್ಟೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಸಮಿತಿಯ ಕಾರ್ಯನಿರ್ವಾಹಕ ಮಂಡಲದ ಸಭೆಯು ತಾ. ೧ ಮತ್ತು ೨ರಲ್ಲಿ ಶಿರ್ಸಿಯಲ್ಲಿ ಜರಗಿತು ಗತಸಭೆಯ ವರದಿ ಸ್ವೀಕಾರ, ಇಬ್ಬರು ಸದಸ್ಯರ ರಾಜಿನಾಮೆಯ ಸ್ವೀಕಾರ ಗೋಕಾಕ ನೂಲಿಗಾರರ ವಿಶಮ ಪರಿಸ್ಥಿತಿಗಾಗಿ ಸಹಾಯ ಸೂಚನೆ, ಮತ್ತು ಆ ಕುರಿತು ಸರಕಾರದ ಸಹಕಾರ ಕೇಳಿಕೆ, ಸಿವಿಲ್ ಮತ್ತು ಪಾರ್ಲಿಮೆಂಟರಿ ಬೋರ್ಡು ನಿಯಮಾವಳಿಗಳ ಅಂಗೀಕಾರ, ಮೈಸೂರು ಕಾಂಗ್ರೆಸಿಗೆ ರೂ ೧೦೦೦ದ ದೇಣಿಗೆ ಮಂಜೂರಾತಿ, ಹೋದ ವರ್ಷದ ಸದಸ್ಯತನದ ಪುಸ್ತಕಗಳನ್ನು ಈ ವರೆಗೂ ಕೊಡದ ಜಿಲ್ಲಾ ಸಮಿತಿಗಳ ವಿಚಾರ ಶ್ರೀ. ಕೆ. ಆರ್. ಕಾರಂತರ ಘೋಷಣಾ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟುವು

ಸ್ವಾರ್ಥಾಧಿಕಾರಿಗಳ ರಾಕ್ಷಸೀ ಮಹತ್ವಾಕಾಂಕ್ಷೆಗೆ ಇನ್ನೊಂದು ಸ್ವತಂತ್ರ ರಾಷ್ಟ್ರದ ಆಹುತಿ

ಅಲ್ಬೇನಿಯಕ್ಕೆ ಇಟಲಿಯ ಮುತ್ತಿಗೆ

ಮದ್ರಾಸು ಆಧಿಪತ್ಯದ ಮುಂದಿನ ಗವರ್ನರರು

ಈಗಿನ ಗವರ್ನರರಾದ ಲೋರ್ಡ್ ಅರ್ಸ್ಕಿನರನಂತರ ಕೆಪ್ಟನ್ ಆರ್ಥರ್ ಹೋಪರು ಮುಂದಿನ ಗವರ್ನರರಾಗಿ ನೇಮಕ ಹೊಂದಿರುವರು.

ಇದೇ ತಿಂಗಳ ತಾ. ೭ರ ದಿನ ಇಟಲಿಯ ಯುದ್ಧನಾವೆಗಳು ಅಲ್ಬೇನಿಯ ಎಂಬ ಸ್ವತಂತ್ರ ರಾಷ್ಟ್ರಕ್ಕೆ ಸೇರಿದ ಡ್ಯುರಾಜೋ, ವೆಲೋನಾ, ಡಿವೋಡುವಾ ಮೊದಲಾದ ರೇವುಗಳ ಮೇಲೆ ಫಿರಂಗಿ ಗುಂಡುಗಳನ್ನು ಹಾರಿಸಿ ಆ ಬಂದರುಗಳನ್ನು ಸ್ವಾಧೀನಪಡಿಸಿಕೊಂಡವು. ಟಿರಾನ ವೆಂಬ ಅಲ್ಬೇನಿಯದ ರಾಜಧಾನಿಯನ್ನು ಇಟಾಲಿಯನ ಯುದ್ಧವಿಮಾನಗಳು ಬಾಂಬುಗಳ ಸುರಿಮಳೆಯನ್ನು ಸುರಿಸಿ ನಾಶಮಾಡಿದುವು. ಇಟಾಲಿಯನ ಸೇನೆಯು, ಅಲ್ಬೇನಿಯವನ್ನು ಮುತ್ತಿ ಒಳನುಗ್ಗಿದೆ. ಅಲ್ಬೇನಿಯದ ರಾಜರಾದ ಜೋಗರು, ರಾಜಧಾನಿಯನ್ನು ಬಿಟ್ಟು ಗ್ರೀಸಿನಲ್ಲಿ ಎಲ್ಲಿಗೋ ಹೋಗಿಬಿಟ್ಟಿದ್ದಾರೆ. ಸರಕಾರವು ಸ್ಥಾನಾಂತರವಾಗಿದೆ. ರಾಣಿಯೂ ಇತರ ರಾಜಪರಿವಾರವೂ ಗ್ರೀಸ, ಸಾಲೋನಿಕ ಗಳಲ್ಲಿ ಆಶ್ರಯ ಪಡೆದಿದೆ. ಇಟಾಲಿಯನ ಅತ್ಯಾಚಾರವು ಅಸಹನೀಯವಾಗಿದೆ. ಅಲ್ಬೇನಿಯದಲ್ಲಿ ಇಟಲಿಯ ಅಧಿಕಾರವು ಸ್ಥಾಪಿತವಾಗಿದೆ.

ಹಿಟ್ಲರನ ಸಮ್ಮತಿ

ಹಿಟ್ಲರ ಮುಸಲೋನಿಯರು ಇಡೀ ಯುರೋಪವನ್ನೇ ಆಕ್ರಮಿಸಿ ವಿಸ್ತಾರವಾದ ಜರ್ಮನ ಮತ್ತು ಇಟಾಲಿಯನ್ ಸಾಮ್ರಾಜ್ಯಗಳನ್ನು ಸ್ಥಾಪಿಸುವ ಯೋಚನೆ ಮಾಡಿದ್ದಾರೆಂಬುದು ಮುಸಲೋನಿಯ ಈ ಅನ್ಯಾಯದ ಆಕ್ರಮಣದಿಂದ ಸ್ಪಷ್ಟವಾಗುತ್ತದೆ. ಅವರಿಬ್ಬರು ಪರಸ್ಪರ ಸಮ್ಮತಿಯಿಂದ ತಮ್ಮ ತಮ್ಮ ಕೆಲಸಗಳನ್ನು ಕೊನೆಸಾಗಿಸುತಿದ್ದಾರೆ. ಮುಸಲೋನಿಯು ಅಲ್ಬೇನಿಯವನ್ನು ಆಕ್ರಮಿಸುವುದಕ್ಕೆ ಹಿಟ್ಲರನು ತನ್ನ ಸಮ್ಮತಿಯನ್ನು ಮೊದಲೇ ಕೊಟ್ಟಿದ್ದನಾಗಿ ಈಗ ಪ್ರಕಟವಾಗಿದೆ. ಏಡ್ರಿಯಾಟಿಕ ಸಮುದ್ರ ಭಾಗದ ಸರ್ವಾಧಿಕಾರವು ಮುಸಲೋನಿಗೊಪ್ಪಿಸಿದೇ ಇರತಕ್ಕದೆಂದೂ ಫ್ರಾನ್ಸು, ಇಂಗ್ಲಾಂಡು ಅಥವಾ ಇತರ ರಾಷ್ಟ್ರಗಳಿಗೆ ಆ ಭಾಗದಲ್ಲಿ ಯಾವ ಹಿತಾಸಕ್ತಿಯೂ ಇರುವುದಿಲ್ಲವೆಂದು ಹಿಟ್ಲರನು ಒಂದು ರೀತಿಯಿಂದ ಆ ರಾಷ್ಟ್ರಗಳನ್ನು ಎಚ್ಚರಿಸಿದ್ದಾನೆ.

ಬ್ರಿಟಿಷರ ತಾಟಸ್ಥ್ಯ

ಹಿಟ್ಲರ ಮುಸಲೋನಿಯರ ಆಕ್ರಮಣಶೀಲತೆಯನ್ನು ತಡೆಯಲಿಕ್ಕೆ ಇಂಗ್ಲಾಂಡು ಫ್ರಾನ್ಸುಗಳು ತಕ್ಕ ಉಪಾಯಗಳನ್ನು ಚಿಂತಿಸುತ್ತಿರುವಾಗಲೇ ಮುಸಲೋನಿಯು ಅಲ್ಬೇನಿಯವನ್ನು ಆಕ್ರಮಿಸಿ ಅದರ ಅಸಹಾಯತೆಯನ್ನು ಪ್ರಪಂಚಕ್ಕೆ ತೋರಿಸಿರುವುದು. ಇಂಗ್ಲಾಂಡು ಫ್ರಾನ್ಸುಗಳ ಸ್ನೇಹವನ್ನು ಕಟ್ಟಿಕೊಳ್ಳದಂತೆ ಮುಸಲೋನಿಯು ಯುರೋಪಿನ ಚಿಕ್ಕ ರಾಷ್ಟ್ರಗಳಿಗೆ ಕೊಟ್ಟ ಎಚ್ಚರಿಕೆ ಎಂದು ಹೇಳಬರುತ್ತದೆ. ಅಲ್ಬೇನಿಯ ವಿಷಯವು ಮುಸಲೋನಿಗೂ ಜೋಗರಾಜರಿಗೂ ಸಂಬಂಧಿಸಿದ್ದೆಂದೂ ತಮಗೆ ಅದರಲ್ಲಿ ಹಿತಾಸಕ್ತಿ ಇರುವುದಿಲ್ಲವೆಂದೂ ಬ್ರಿಟಿಷರು ಮತ್ತು ಫ್ರೆಂಚರು ತಾಟಸ್ಥ್ಯವನ್ನು ವಹಿಸಿರುವರಾದರೂ, ಯುರೋಪಿನ ಚಿಕ್ಕ ರಾಷ್ಟ್ರಗಳು ಈ ತಾಟಸ್ಥ್ಯದ ಅರ್ಥವನ್ನು ಬೇರೆಯಾಗಿಯೇ ಮಾಡುವ ಕಾರಣವಿದೆ. ಶಾಂತಿಯ ಕಾಲದಲ್ಲಿ ಇಂಗ್ಲಾಂಡು ಫ್ರಾನ್ಸುಗಳು ಯಾರಿಗೆ ಯಾವ ಅಭಯವನ್ನಿತ್ತರೂ, ಯುದ್ಧಸಂಭವಗಳಲ್ಲಿ ಅಥವಾ ಸಣ್ಣ ರಾಷ್ಟ್ರಗಳ ಮೇಲೆ ಆಕ್ರಮಣವಾದಾಗ ಈ ದೊಡ್ಡ ರಾಷ್ಟ್ರಗಳು ಅವುಗಳ ರಕ್ಷಣೆಗೆ ಬರುವಂತಿಲ್ಲವೆಂದು ಅಲ್ಬೇನಿಯ ಆಕ್ರಮಣದಿಂದ ತಿಳಕೊಳ್ಳಬಹುದು. ಆದುದರಿಂದ ಯುರೋಪಿನ ಚಿಕ್ಕ ರಾಷ್ಟ್ರಗಳು ತಮ್ಮ ರಕ್ಷಣೆಗೋಸ್ಕರ ಇನ್ನು ಹೆಚ್ಚಿಗೆ ಸರ್ವಾಧಿಕಾರಿಗಳ ಮನೋನುಕೂಲವನ್ನು ನೋಡಿಕೊಳ್ಳುವ ಸಂಭವವೇ ಉಂಟು.

ಇದರ ಪರಿಣಾಮ

ಒಂದುಕಡೆಯಿಂದ ಹಿಟ್ಲರನು ಪ್ರಬಲನಾಗುತಿದ್ದಾನೆ. ಇನ್ನೊಂದು ಕಡೆಯಿಂದ ಮುಸಲೋನಿ ಪ್ರಬಲನಾಗುತಿದ್ದಾನೆ. ಸ್ಪೈನು ಸಂಪೂರ್ಣ ಫ್ರೆಂಕೋವಿನ ವಶವಾಯಿತು. ಅವನು ಹಿಟ್ಲರ ಮುಸಲೋನಿಯರ ಗುಂಪನ್ನು ಸೇರಿಕೊಂಡಿರುವನು. ಸದ್ಯದಲ್ಲೇ ಬ್ರಿಟಿಷರ ಜಿಬ್ರಾಲ್ಟರಿನ ಮೇಲೆ ಇವರ ವಕ್ರದೃಷ್ಟಿ ಬೀಳಲಿದೆ. ಅತ್ತ ಅಲ್ಬೇನಿಯ ಪ್ರದೇಶದ ಬಾಲ್ಕನ ರಾಷ್ಟ್ರಗಳು ಒಂದೊಂದಾಗಿ ಮುಸಲೋನಿಯ ಕುತಂತ್ರ ಜಾಲದಲ್ಲಿ ಒಳಪಟ್ಟವೆಂದರೆ ಸುಯೇಜ ಕಾಲುವೆಯ ಮೇಲೂ ಅವರ ವಕ್ರದೃಷ್ಟಿ ಬೀಳುವುದು. ಆಗ ಬ್ರಿಟಿಷರ ವ್ಯಾಪಾರ ಮಾರ್ಗಗಳೇ ಕತ್ತರಿಸಲ್ಪಟ್ಟವು. ಭೂಮಧ್ಯ ಸಮುದ್ರದ ಮೇಲಿನ ಅಧಿಕಾರವು ಪೂರ್ಣವಾಗಿ ಸರ್ವಾಧಿಕಾರಿಗಳ ಕೈಗೆ ಬರುವುದು. ಆಗ ಬ್ರಿಟಿಷ ಸಾಮ್ರಾಜ್ಯದ ಅಸ್ತಿತ್ವಕ್ಕೇ ಭಂಗ ಬರುವುದು. ಸರ್ವಾಧಿಕಾರಿಗಳ ರಾಕ್ಷಸೀ ಮಹತ್ವಾಕಾಂಕ್ಷೆಗೆ ಮಿತಿ ಇಲ್ಲವಾಗಿದೆ. ಇದು ಹಿಟ್ಲರ ಮುಸಲೋನಿಯರ ಹಿಂದಿನ ನಡೆನುಡಿಗಳಿಂದ ಸ್ಪಷ್ಟವಾಗಿದೆ. ಅವರಿಗೆ ಕೇವಲ ಸಣ್ಣ ರಾಷ್ಟ್ರಗಳನ್ನು ಬಲಿ ಕೊಟ್ಟರೆ ಅವರು ಸಂತೃಪ್ತರಾಗುವರೆಂದು ಬ್ರಿಟಿಷ ರಾಜಕೀಯ ಮುತ್ಸದ್ದಿಗಳು ನಂಬಿರುವರಾದರೆ ಅದು ಆ ಪ್ರಭೃತಿಗಳ ಬುದ್ಧಿ ದೌರ್ಬಲ್ಯತನವಾಗಿದೆ. ಮಿ. ಚೇಂಬರ್ಲೇನ್ನ ದಲಾದಿಯವರು ಹಿಟ್ಲರ ಮುಸಲೋನಿಯರನ್ನು ತೃಪ್ತಿಗೊಳಿಸುವ ಹುಚ್ಚು ಪ್ರಯತ್ನಗಳನ್ನು ಮಾಡುವವರಲ್ಲಿ ಈಗಲೂ ತೊಡಗಿರುವದನ್ನು ಕಂಡು ನಗು ಬರುತ್ತದೆ. ಇಂಗ್ಲಾಂಡ ಫ್ರಾನ್ಸುಗಳು ಧೈರ್ಯ ತಾಳಿ ಮುಂದೆ ಬಂದು, ಯುದ್ಧ ಮಾಡಿಯಾದರೂ ಸರ್ವಾಧಿಕಾರಿಗಳ ಆಕ್ರಮಣಗಳನ್ನು ತಡೆದು ಅವರಿಗೆ ಒಳ್ಳೆಯ ಬುದ್ಧಿಯನ್ನು ಕಲಿಸದಿದ್ದರೆ ಮತ್ತೆ ಅವರು ಬಹಳ ಪಾಡಿ ಕಷ್ಟನಷ್ಟಗಳನ್ನು ಅನುಭವಿಸಿ ಭ್ರಷ್ಟರಾಗಬೇಕಾಗುವುದು.

ಯುಗೊಸ್ಲೊವೇಕಿಯಕ್ಕೆ ಇಟಲಿಯ ಅಭಯ

ಅಲ್ಬೇನಿಯವನ್ನು ಇಟಲಿಯು ಆಕ್ರಮಿಸಿ ಸ್ವಾಧೀನ ಮಾಡಿಕೊಂಡಿರುವುದರಿಂದ ಹತ್ತಿರದ ಯುಗೊಸ್ಲೊವಿಯದ ಸ್ವಾತಂತ್ರ್ಯಕ್ಕೂ ಹಿತಾಸಕ್ತಿಗಳಿಗೂ ಲೋಪ ಬಾರದಂತೆ ನೋಡಿಕೊಳ್ಳುವದಾಗಿ ಇಟಲಿ ಭರವಸೆಯನ್ನು ಕೊಟ್ಟಿದೆ. ಆದರೆ ಸರ್ವಾಧಿಕಾರಿಗಳು ತಮ್ಮ ಕಾರ್ಯ ಸಾಧನೆಗೆ ಅನುಕೂಲವಾಗಿ ಮಾತ್ರ ಅಂಥ ಭರವಸೆಯನ್ನು ಕೊಡುವರು. ಭರವಸೆಗಳು ಕಾರ್ಯಸಾಧನೆಗೆ ಪ್ರತಿಕೂಲವಾದಾಗ ಅವುಗಳಿಗೆ ನಿರ್ಲಕ್ಷದಿಂದ ನಡೆಯಲಿಕ್ಕೆ ಅವರ ಎಷ್ಟು ಮಾತ್ರಕ್ಕೂ ಹೇಸುವುದಿಲ್ಲ. ಆದುದರಿಂದ ಮುಸಲೋನಿಯ ಇಂಗಿತವನ್ನು ತಿಳಿಯಲಿಕ್ಕೆ ಅವನ ಮಾತುಗಳು ಪ್ರಮಾಣವಾಗುವುದಿಲ್ಲ. ಅವನನ್ನು ನಂಬಿ ಬ್ರಿಟಿಷರು ಭೂಮಧ್ಯ ಸಮುದ್ರದಲ್ಲಿ ತಮ್ಮ ಗೇನ ... ಒರುವುದಿಲ್ಲವೆಂದು ಎಣಿಸಿರುವರಾದರೆ, ಅದೆಷ್ಟು ಮೋಸಗಾರಿಕೆ ... ಗತಿಗೆ ... ದಿಲ್ಲವಾದ...

ಅಮೇರಿಕದ ನಿಷೇಧ

ಅಲ್ಬೇನಿಯದಲ್ಲಿ ಇಟಲಿಯು ಆಕ್ರಮಣವನ್ನು ಅಮೇರಿಕವು ಖಂಡಿಸಿದೆ. ಜೆಕೊಸ್ಲೊವೇಕಿಯವನ್ನು ಜರ್ಮನಿ ಸ್ವಾಧೀನ ಮಾಡಿರುವುದನ್ನು ಅಮೇರಿಕವು ಗುರುತಿಸದಿರುವಂತೆ ಇಟಲಿಯು ಅಲ್ಬೇನಿಯವನ್ನು ಸ್ವಾಧೀನ ಮಾಡಿರುವುದನ್ನೂ ಗುರುತಿಸುವುದಿಲ್ಲವೆಂದು ನಿರ್ಣಯಿಸಿದೆ. ಇದು ಇಟಲಿಗೆ ಸೈನ್ಯ ಸರಂಜಾಮುಗಳ ರಫ್ತನ್ನು ನಿಷೇಧಿಸಬಹುದು.

ರಷ್ಯದ ಸೂಚನೆ

ಬ್ರಿಟಿಷರು ಪೋಲೆಂಡಿನ ಸಹಾಯಕ್ಕೆ ಹೋಗಿ ಹಿಟ್ಲರನ ಆಕ್ರಮಣವನ್ನು ತಡೆಯುವರೆಂದು ಗೊತ್ತಾದೊಡನೆ ಅದನ್ನು ಬಿಟ್ಟು ಮುಸಲೋನಿ ಅಲ್ಬೇನಿಯವನ್ನು ಆಕ್ರಮಿಸಿದನು. ಹೀಗೆ ಇವರಿಬ್ಬರು ಸರ್ವಾಧಿಕಾರಿಗಳು ಪರಸ್ಪರ ಸಹಕಾರದಿಂದ ನಡೆಯುತ್ತಿರುವರು. ಒಂದು ಕಡೆಯ ಅವರ ಆಕ್ರಮಣಕ್ಕೆ ತಡೆಯುಂಟಾದರೆ ಇನ್ನೊಂದು ಕಡೆ ಅವರು ಅದನ್ನು ಆರಂಭಿಸುವರು. ಆದುದರಿಂದ ಅವರ ಆಕ್ರಮಣಶೀಲತೆಯನ್ನು ಶಾಂತಿಪ್ರಿಯ ಇತರ ರಾಷ್ಟ್ರಗಳು ಒಂದಾಗಿ ವಿರೋಧಿಸಬೇಕೆಂದು ರಷ್ಯವು ಸೂಚಿಸಿದೆ.

ಗ್ರೀಸ ಟರ್ಕಿಗಳ ಭಯ

ಮುಸಲೋನಿ ಅಲ್ಬೇನಿಯವನ್ನು ಮುತ್ತಿದ ಕೂಡಲೇ ... ಗ್ರೀಸ ಟರ್ಕಿಗಳಿಗೆ ತುಂಬ ಭಯವಾಗಿದೆ. ಅವನು ಕ್ರಮವಾಗಿ ಆ ಎರಡು ರಾಷ್ಟ್ರಗಳ ಸ್ವಾತಂತ್ರ್ಯವನ್ನು ಅಪಹರಿಸಬಹುದೆಂದು ತಿಳಿದು ಅವು ತಮ್ಮ ತಮ್ಮ ರಕ್ಷಣೆಯ ಕಾರ್ಯದಲ್ಲಿ ತೊಡಗಿರುವವು.

ದತ್ತಪುತ್ರ

ವಿಪ್ಸನಾಡ್ ಪ್ರಾಣಿ ಆಲಯದಲ್ಲಿನ ಸೆಲ್ಲ ಎಂಬ ಕರಡಿಯು ತನಗೆ ಸ್ವಂತ ಮರಿಗಳಿಲ್ಲದ್ದರಿಂದ ಕರಡಿ ಮರಿಯ ಒಂದು ಗೊಂಬೆಯನ್ನು ದತ್ತಕ್ಕೆ ತೆಗೆದುಕೊಂಡು ಅದನ್ನೆ ಚುಂಬಿಸುತ್ತಿರುವುದು.

ಅತ್ಯುತ್ತಮ ಹೇರ್ ಆಯಿಲ್



ಎಲ್ಲಾ ಜನರ ಮನಸ್ಸನ್ನು ಸೆಳೆಯುವುದು!

ದಿಲ್ ಕುಷ್ ಹೇರ್ ಆಯಿಲ್

ಅರ್ವಾಚೀನ ರೀತಿಯ ಕೋಪನ್ನು ಬಾಚುವುದಕ್ಕೆ ಅನುಕೂಲವಾಗಿ ಆಹ್ಲಾದಕರವಾದ ಸುಗಂಧವಿದೆ. ಇದರಿಂದ ಕೂದಲು ದಪ್ಪವಾಗಿ ಬೆಳೆಯುವುದು, ಉದುರುವ ಕೂದಲು ತಡೆಕಟ್ಟುವುದು, ಸಿದ್ಧಿಗೆ ಉಪಯುಕ್ತವಾಗಿದೆ

ಕ್ರಯ: 6 ಔನ್ಸ್ ಸೀಸೆಗೆ 0—12—0
,, 12 ,, ,, 1-4-0

ರುಬಿ ಪೇಯಿನ್ ಬಾಮ್

ಇದು ಉಳುಕು, ಜಜ್ಜಿದ ಗಾಯ, ನೋವು, ತಲೆಸಿಡಿತದ ಮೇಲೆ ದಿವ್ಯ ಬಾಮ್. ಡಬ್ಬಿ 1ಕ್ಕೆ ಆ 4
ಉಡುಪಿಯಲ್ಲಿ ಏಜೆಂಟರು ಬೇಕು

ಏಜೆಂಟ್ಸ್ —

ಷಾ ಕಂಪೆನಿ, ಮಂಗಳೂರು.

ನೋಟಿಸು.

ಕಾಸರಗೋಡು ಡಿ। ಮುನ್ಸಿ ಕೋರ್ಟಿನಲ್ಲಿ
O S No 791/1936
R E P No 1211/1938

ಫಾತುಮ್ಮಾಬಿ . . ಅರ್ಜಿದಾರಳು ವಾದಿ

ವಗೈರೆ

ಅಬ್ದುಲ್ಲ ಮುಸಿರ್ } ಡಿಫೆಂಡೆಂಟರು
ಸಾಹೇಬ ಕ್ರಿಡಾ } ಪ್ರತಿವಾದಿರು

ಇವರೆಡೆಗೆ

4ನೇ ಡಿಫೆಂಡೆಂಟಳು ಫಾತುಮ್ಮಾಬಿ ವ್ಯಕ್ತಪಟ್ಟ ಬುರಾನ್ ಅಲ್ಲಿಸ್ಸಾಬರಿಗೆ ಬೀಬೋಮಾನೆ ಹವ್ವಾಬಿಯಲ್ಲಿ ಜನಿಸಿದ ಮಗಳು, ಪಕೀರಲ್ಲಿ ಸಾಹೇಬನ ಹೆಂಡತಿ ಕಾಸರಗೋಡು ತಾಲೂಕು ತಳಂಗ ಗ್ರಾಮದ ಪಳ್ಳಿಕ್ಕಾಲಲ್ಲಿ ಇರುವವಳ

5ನೇ ಡಿಫೆಂಡೆಂಟಳು ಬಾನೋಬಿ ವ್ಯಕ್ತಪಟ್ಟ ಬುರಾನ್ ಅಲ್ಲಿಸ್ಸಾಬರಿಗೆ ಹವ್ವಾಬಿಯಲ್ಲಿ ಜನಿಸಿದ ಮಗಳು ಪಉಮ್ಮರ್ ಖುನ್ ಸ್ಸಾಬನ ಹೆಂಡತಿ ಕಾಸರಗೋಡು ತಾಲೂಕು ಕೂಡ್ಲು ಗ್ರಾಮದಲ್ಲಿರುವವಳು

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರಳು ಹಾಜರುಪಡಿಸಿದ ಏಲಂ ಇಸ್ತಿಹಾರು ಮಂಜೂರುಪಡಿಸುವರೆಯೂ, ಮತ್ತು ಏಲಂ ಸಮಯ ವಾರುಕರಿಯುವರೆ ಅರ್ಜಿದಾರಳಿಗೆ ಅನುಮತಿ ಕೊಡಿಸುವ ಬಗ್ಗೆ ಕೊಡಾ ಸದರಿ ಅವ್ಲ ಜ್ಯಾರಿಯು ತಾರೀಕು 29-4-1939ಕ್ಕೆ ತಸ್ತಿಗೆ ಇಟ್ಟಿರುವ ಸಂಗ್ತಿ ಈಮೂಲಕ ತಿಳಿಸಲಾಗಿಯದೆ

Kasargod } 6—4—1939 } **K. MAMMUNHI**
ಅರ್ಜಿದಾರಳಡೆ ಎಡ್ವಕೇಟ್

ಮಂಗಳೂರು ಸಮಾಚಾರ

ಬಿಸೆಂಟ್ ಶಾಲಾ ವಸಂತೋತ್ಸವ

ಕಳೆದ ಶನಿವಾರ ಶ್ರೀಮತಿ ಲಕ್ಷ್ಮೀ ಜಿಯಾಉದ್ದೀನ್‌ರವರು, ಈ ಶಾಲೆಯ ವಸಂತೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅದನ್ನು ಸಾಂಗಗೊಳಿಸಿದರು. ಪ್ರಾರ್ಥನೆ ಅಧ್ಯಕ್ಷರ ಭಾಷಣಗಳ ಅನಂತರ, ಮಕ್ಕಳೇ ತಯಾರಿಸಿದ ವಸ್ತುಗಳ ಪ್ರದರ್ಶನವು ಅಧ್ಯಕ್ಷೆಯಿಂದ ತೆರೆಯಲ್ಪಟ್ಟಿತು. ಅಧ್ಯಕ್ಷೆಯರು ಬಿಸೆಂಟ್ ಶಾಲಾ ಮಕ್ಕಳ ವಿದ್ಯಾ ಪ್ರಚಾರ ಪ್ರಗತಿ ಶಿಕ್ಷಕರು ಮಕ್ಕಳ ಮೇಲ್ಮೆಗಾಗಿ ವಹಿಸುತ್ತಿರುವ ಆಧಾರವನ್ನು ವಿವರಿಸಿದರು.

ಟೌನ್ ಕಾಂಗ್ರೆಸು ಕಮಿಟಿಯ ಸಭೆ

ಮಂಗಳೂರು ಟೌನ್ ಕಾಂಗ್ರೆಸು ಕಮಿಟಿಯ ಸಭೆಯು ಕಳೆದ ತಾ ೯—೪—೩೯ನೇ ಸಂಜೆ ೭ಕ್ಕೆ ಶ್ರೀ ಬಿ ವೆಂಕಟ್ರಾವ್ ಬಾಳಿಗ ಬಿ.ಎ., ಎಲ್ ಎ ರವರ ಅಧ್ಯಕ್ಷತೆಯಲ್ಲಿ ಜರುಗಿತ್ತು. ಮೊದಲಾಗಿ ಕಾಂಗ್ರೆಸಿನ ಸೇವೆಯನ್ನು ತ್ರಿಕರಣ ಪೂರ್ವಕವಾಗಿ ಮಾಡಿ ಅಸಹಕಾರ ಚಳವಳದ ಸಮಯ ಲಾಠಿ ಪ್ರಹಾರ ಜೈಲುವಾಸವನ್ನು ಅನುಭವಿಸಿದ ಶ್ರೀ ಐತಪ್ಪ ಮೆಂಡನರ ಅಕಾಲ ನಿಧನಕ್ಕಾಗಿ ದುಃಖಸೂಚಕ ಠರಾವಿನ ನಿರ್ಣಯವಾಗಿ ಸ್ವೀಕೃತವಾಯಿತು. ಎರಡನೆಯದಾಗಿ ಹಿಂದೂದೇಶದಲ್ಲಿರುವ ಕಮ್ಯೂನಿಸ್ಟ್ ಪಕ್ಷದವರ ಮೇಲೆ ಹಾಕಿರುವ ನಿರ್ಬಂಧವನ್ನು ಮದ್ರಾಸು ಸರಕಾರವು ಕೂಡಲೇ ತೆಗೆದು ಹಾಕತಕ್ಕದೆಂದು ಆಗ್ರಹ ಪೂರ್ವಕ ಒತ್ತಾಯದಿಂದ ಅಪೇಕ್ಷಿಸುವ ಠರಾವು ಮಂಜೂರಾಯಿತು. ಮೂರನೆಯದಾಗಿ ನಾವು ದಾರ ಶ್ರೀ ಸಿ ಜಿ ವಾರ್ಕಿಯವರು ಕಾಂಗ್ರೆಸು ಮಂತ್ರಿಯಾಗಿದ್ದು ಕಾಂಗ್ರೆಸು ಫ್ರಾಂಕೋವಿನ ವಿರೋಧ ಪಕ್ಷದೊಡನೆ ಸಹಾನುಭೂತಿ ತೋರಿಸುತ್ತಿರುವುದು. ಮಂಗಳೂರಿನ ತನ್ನ ದೊಂದು ಭಾಷಣದಲ್ಲಿ ಜನರಲ್ ಫ್ರಾಂಕೋವನ್ನು ಪ್ರಶಂಸಿಸಿದುದು ಎಷ್ಟು ಮಾತ್ರಕ್ಕೂ ನ್ಯಾಯವಲ್ಲವೆಂದೂ ಅವರ ಈ ವರ್ತನೆಯು ಖಂಡನೀಯವಿದೆಯೆಂದೂ ಅವರು ತಮ್ಮ ತಪ್ಪನ್ನು ಒಪ್ಪಿ ಆ ಬಗ್ಗೆ ಕೂಡಲೇ ಪಶ್ಚಾತ್ತಾಪ ಪ್ರಕಟ ಮಾಡಬೇಕೆಂಬ ಅಭಿಪ್ರಾಯವು ಸ್ವೀಕೃತವಾಯಿತು. ನಾಲ್ಕನೇಯದಾಗಿ ಮುನ್ಸಿಪಲ್ ಕಾಂಗ್ರೆಸ್ ಪಾರ್ಟಿಯ ಸದಸ್ಯರು ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಗೆ ಚಂದಾ ಹಣವನ್ನು ತೆರುವಂತೆ ಕೇಳಿಕೊಳ್ಳಬೇಕೆಂಬ ನಿರ್ಣಯವಾಯಿತು, ಮತ್ತು ಕೆಲವು ಉಪ ಸಮಿತಿಗಳ ನೇಮಕವಾಯಿತು.

ವಿದ್ಯಾರ್ಥಿ ಪರಿಷತ್ತು

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಮೊದಲನೇ ಪರಿಷತ್ತು ಇಂದು ಮತ್ತು ನಾಳೆ ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಮ್ಯಾಂಚೆಸ್ಟರಿನ ರಾಷ್ಟ್ರೀಯ ಕ್ರಿಶ್ಚಿಯನ್ ಧುರೀಣರಾದ ಶ್ರೀ ಜೋಕಿಮ್ ಆಳ್ವರ ಅಧ್ಯಕ್ಷತೆಯಲ್ಲಿ ಜರಗುವುದು. ಶ್ರೀಮತಿ ವೈಲೆಟ್ ಆಳ್ವರು ಉದ್ಘಾಟನಾ ಸಮಾರಂಭವನ್ನು ನೆರವೇರಿಸುವರು.

ಹೊಸ ಸಹಕಾರ ಸಂಘ

ಕಳೆದ ಆದಿತ್ಯವಾರ ಡಿಪ್ಯುಟಿ ರಿಜಿಸ್ಟ್ರಾರರ ಆಫೀಸಿನಲ್ಲಿ ಶ್ರೀ ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿದ ವೇಳೆ ದ. ಕ. ಜಿಲ್ಲಾ ಎಡ್ವಾನ್ಸ್‌ಮೆಂಟ್ ಕೋ-ಒಪರೇಟಿವ್ ಸೊಸೈಟಿಯೊಂದು ಸ್ಥಾಪಿಸಲ್ಪಟ್ಟಿತು. ಮುಖ್ಯವಾಗಿ ಸಹಕಾರ ಸಂಘಗಳಿಗೆ ಸಂಬಂಧಿಸಿದವರ ಉಪಕಾರಕ್ಕಾಗಿ ಸುವ್ಯವಸ್ಥಿತ ರೀತಿಯಿಂದ ಕಾರ್ಯಗಳನ್ನು ಸುಸಂಘಟಿತಗೊಳಿಸುವುದೇ ಸಂಸ್ಥಾನದಲ್ಲೇ ಮೊದಲನೆಯದಾದ ಈ ಸಹಕಾರ ಸಂಘದ ಉದ್ದೇಶವಾಗಿದೆ.

ವಿದ್ಯಾ ಸಮಸ್ಯೆ

ಕಳೆದ ಆದಿತ್ಯವಾರ ದಿನ ಸ್ಥಳೀಯ ಥಿಯಾಸಫಿಕಲ್ ಲಾಜಿನಲ್ಲಿ ಶ್ರೀ. ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ 'ವಿದ್ಯಾ ಸಮಸ್ಯೆ' ಎಂಬ ವಿಚಾರವಾಗಿ ಚರ್ಚೆಗಳು ನಡೆದುವು.

ಸಭೆ

ಕಳೆದ ಸೋಮವಾರ ಸಂಜೆ ಶ್ರೀ ಕೆ. ಆರ್ ಆಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಎನ್ ಎಸ್. ಕಿಲ್ಲೆಯವರು ತ್ರಿಪುರಿ ಕಾಂಗ್ರೆಸಿನಲ್ಲಿ ನಡೆದ ವಿಚಾರಗಳ ಕುರಿತ ವಿಮರ್ಶಾತ್ಮಕ ದೃಷ್ಟಿಯಿಂದ ಭಾಷಣವಿತ್ತರು.

ಸಾರ್ವಜನಿಕ ಸಭೆ

ನಿನ್ನೆ ಸಂಜೆ ಘಂಟೆ ೬-೩೦ಕ್ಕೆ ಸ್ಥಳೀಯ ಲೈನ್ ಮೈದಾನಿನಲ್ಲಿ ಟೌನ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ರಾಷ್ಟ್ರೀಯ ವಾರದ ಕಡೇ ದಿನದ ಸಾರ್ವಜನಿಕ ಸಭೆಯು ಶ್ರೀಯುತ ಬಿ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು.

ಬಾಲ ಮಾರುತಿ ವ್ಯಾಯಾಮ ಮಂಡಲದ ೧೨ನೇ ವಾರ್ಷಿಕೋತ್ಸವ

ಸ್ಥಳೀಯ ಬಾಲಮಾರುತಿ ವ್ಯಾಯಾಮ ಮಂಡಲದ ೧೨ನೇ ವಾರ್ಷಿಕೋತ್ಸವವು ಮಂಡಲದ ಕಟ್ಟಡದಲ್ಲಿ ಇದೇ ಎಪ್ರಿಲ್ ತಾ. ೧೬ನೇ ಆದಿತ್ಯವಾರ ಸಂಜೆ ೩ ಘಂಟೆಗೆ ರಾವ್ ಬಹದೂರ್ ಡಾ ಪಿ ಪಿ ಕಾಮತ್ ಎಲ್ ಎಮ್ ಎಂಡ್ ಎಸ್ (ನಿವೃತ್ತ ಸಿವಿಲ್ ಸರ್ಜನ್) ರವರ ಅಧ್ಯಕ್ಷತೆಯಲ್ಲಿ ಜರಗುವುದು.

ಶ್ರೀ ಕೆ ಆರ್ ಕಾರಂತರು

ಮದ್ರಾಸ್ ಸರಕಾರವು ಬೇಗನೇ ಜಾರಿಯಲ್ಲಿ ತರಲೆಳಸಿ ಹೊಸದಾಗಿ ಮತ್ತು ವ್ಯಾಪಾರಗಳ ಮೇಲಿನ ತೆರಿಗೆ ಬಿಲ್ಲುಗಳ ವಿಚಾರದಲ್ಲಿ ಜನರ ಅಭಿಪ್ರಾಯವನ್ನು ತಿಳಿದುಕೊಂಡು ಆ ವಿಚಾರವನ್ನು ಸರಕಾರಕ್ಕೆ ತಿಳಿಯಪಡಿಸಲು ಉದ್ದೇಶಿಸಿದ ಶ್ರೀಯುತರು, ತಮ್ಮ ಮತದಾರ ಕ್ಷೇತ್ರಗಳನ್ನು ಸಂದರ್ಶಿಸುವರು. ತಾ ೧೫ ಎಪ್ರಿಲ್ ಬೆಳಗ್ಗೆ ಕುಂದಾಪುರ ಮಧ್ಯಾಹ್ನ ಉಡುಪಿ, ತಾ ೧೬ಕ್ಕೆ ಬೆಳಗ್ಗೆ ಕಾಸರಗೋಡು, ತಾ ೧೭ ಶನಿವಾರ ಬೇಕಲ, ತಾ. ೧೭ ಹೊಸದುರ್ಗ, ತಾ. ೧೭ ನೀಲೇಶ್ವರ, ಮತ್ತು ಗಿಳಿವಿಂಡು ಮೊದಲಾದ ಮೇಲಿನ ಸ್ಥಳಗಳಲ್ಲಿ ಸಾಧ್ಯವಾದಲ್ಲೆಲ್ಲ ಸಭೆ ಜರಗಿಸಿ ವಿಚಾರ ವಿಮರ್ಶೆ ನಡೆಸಲಾಗುವುದೆಂದು ಶ್ರೀಯುತರು ತಿಳಿಸುತ್ತಾರೆ.

ಉಪಾಧ್ಯಾಯರ ಪರಿಷತ್ತು

ಮಂಗಳೂರು ತಾಲೂಕು ಬೋರ್ಡು ಶಾಲಾ ಉಪಾಧ್ಯಾಯರುಗಳ ಪರಿಷತ್ತು ನಿನ್ನೆ ದಿನ ಕಿನ್ನಿಕಂಬಳದಲ್ಲಿ, ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ಕೆ ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ದೇರೆಬೈಲ್ ಹೊಸ ಇಗರ್ಜಿಯ ಪ್ರವೇಶೋತ್ಸವ

ಇದೇ ತಾ ೮ನೇ ಶನಿವಾರ ೫.೩೦ ಗಂಟೆಗೆ ದೇರೆಬೈಲಿನ ಹೊಸ ಇಗರ್ಜಿಯ ಪ್ರವೇಶೋತ್ಸವವು ವಿಜೃಂಭಣೆಯಿಂದ ನೆರವೇರಿತು. ಮೊದಲನೆಯದಾಗಿ ಈ ಇಗರ್ಜಿಗೆ ನೇಮಕವಾದ ರೆವ್ ಫಾದರ್ ಎಲ್ ಎಸ್ ಸೋಜರವರನ್ನು ಸಭಿಕರು ಪುಷ್ಪಮಾಲೆಗಳಿಂದ ಸ್ವಾಗತಿಸಿ ಎದುರುಗೊಂಡ ನಂತರ ಘನಪೊಂದಿದ ಮಂಗಳೂರಿನ ಬಿಶೋಪರು ಹೊಸ ಇಗರ್ಜಿಯನ್ನು ಆಶೀರ್ವದಿಸಿದರು. ಅನಂತರ ಹೊಸ ಗುರುಗಳಿಗೆ ಮಾನಪತ್ರವನ್ನು ಓದಿದ ನಂತರ ವಕೀಲ್ ಎಂ ಸಿ ಎಲ್ ಲೋಬೊರವರ ಭಾಷಣವಾಯಿತು. ಅನಂತರ ನೆರೆದ ಸಭಿಕರ ಭಾವಚಿತ್ರವನ್ನು ತೆಗೆದರು. ಮಾರಣೆ ದಿನ ಬೆಳಗ್ಗೆ ಹೊಸ ಇಗರ್ಜಿಯಲ್ಲಿ ಪ್ರಥಮ ಮಹಾಪೂಜೆಯೂ, ಸಾಯಂ. ಗಂಟೆ ೬ಕ್ಕೆ ಬಿಜೈ ಡ್ರಮೆಟಿಕ್ ಸೊಸೈಟಿಯವರ "ಕ್ರಿಶ್ಚಿಯನ್ ಚ್ಯಾರಿಟಿ" ಎಂಬ ನಾಟಕವನ್ನು ಮಂಗಳೂರಿನ ಬಿಶೋಪರ ಅಧ್ಯಕ್ಷತೆಯಲ್ಲಿ ಬಹಳ ಚೆಲುವಾಗಿ ಅಭಿನಯಿಸಿದರು.

ತಾಲೂಕು ಸಮಾಚಾರ

ಕಾರ್ಕಳ

ಕಾರ್ಕಳ ತಾಲೂಕು ಕಾಂಗ್ರೆಸ ಕಮಿಟಿಯು ಒಂದು ಸಭೆಯು ಕಳೆದ ತಾ. ೯ರ ದಿನ ಕಮಿಟಿಯ ಕಚೇರಿಯಲ್ಲಿ ಕೂಡಿ ಶ್ರೀ ಗಳಾದ ಕೆ ಎ ಜನಾರ್ಧನ ಪ್ರಭುರವರು ಅಧ್ಯಕ್ಷರಾಗಿಯೂ ಕೆ ಬಾಬುರಾಯ ಜೈನರು ಉಪಾಧ್ಯಕ್ಷರಾಗಿಯೂ, ಪಿ ಮಂಜುನಾಥ ಕಾಮತ ಮತ್ತು ಯಂ. ಡಿ ಅಧಿಕಾರಿಯವರು ಕಾರ್ಯದರ್ಶಿಯರಾಗಿಯೂ, ಡಿ. ವಿ. ಭಟ್ಟರು ಖಜಾಂಚಿಯರಾಗಿಯೂ ಇರುವ ೧೧ ಮಂದಿಯ ಕಾರ್ಯನಿರ್ವಾಹಕ ಸಮಿತಿಯು ಆರಿಸಲ್ಪಟ್ಟಿತು.

ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ದಕ್ಷಿಣ ಭಾರತ ಹಿಂದೀ ಪ್ರಚಾರಸಭೆಯ ಪ್ರಾರಂಭಿಕ ಪರೀಕ್ಷೆಗಳನ್ನು ಕಾರ್ಕಳ ಕೇಂದ್ರದಿಂದ ಕೊಟ್ಟವರಲ್ಲಿ ಪ್ರಾಥಮಿಕ ೧೬ರಲ್ಲಿ ೧೬ ಮಂದಿಯೂ ಮಧ್ಯಮದ ೧೫ರಲ್ಲಿ ೧೩ ಮಂದಿಯೂ, ರಾಷ್ಟ್ರಭಾಷೆಯ ೮ರಲ್ಲಿ ೫ ಮಂದಿಯೂ ತೇರ್ಗಡೆ ಹೊಂದಿರುತ್ತಾರೆ. ಪ್ರಾಥಮಿಕದಲ್ಲಿ ತೇರ್ಗಡೆ ಹೊಂದಿದವರಲ್ಲಿ ಶ್ರೀಮತಿಯರಾದ ಯಸ್ ರತ್ನೀಬಾಯಿ, ಕೆ ಲಲಿತಾದೇವಿ, ಸಿ ಡಿ ಸಾಲಿನ್ಸ ಮತ್ತು ಶ್ರೀ ಕೆ ದೇವದಾಸ ಭಟ್ಟರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆಂದು ಸ್ಥಳೀಯ ಪ್ರಚಾರಕ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ.

ಕಳೆದ ತಾ ೧೦ರ ದಿನ ಸಾಯಂಕಾಲ ಜೋರಾಗಿ ಮಿಂಚು ಬಡಿದು ನಡುಪೇಟೆಯ ಒಂದು ತೆಂಗಿನಮರದ ತಲೆಯು ಸಂಪೂರ್ಣ ಸುಟ್ಟು ಭಸ್ಮವಾಯಿತು. ಈ ಆಶ್ಚರ್ಯವನ್ನು ಕಾಣಲಿಕ್ಕೆ ನೂರಾರು ಮಂದಿ ಕೂಡಿದ್ದರು.

ದಿ ಹನುಮಾನ ಟ್ರಾನ್ಸ್‌ಪೋರ್ಟು ಕಂಪೆನಿಯ ಹಿಂದಿನ ಸ್ವಾಮ್ಯಸ್ಥರಲ್ಲೊಬ್ಬರೂ ಸ್ಥಳೀಯ ಪ್ರಮುಖರೂ ಆಗಿದ್ದ ಶ್ರೀ ಕಟ್ಟಂಗೇರಿ ರಮಾನಾಥ ನಾಯಕರವರು ಕಳೆದ ತಾ ೮ರ ದಿನ ದಿವಂಗತರಾದರು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸುತ್ತೇವೆ.

ಕಾಸರಗೋಡು

ಇಲ್ಲಿಯ ಶ್ರೀರಾಮಪೇಟೆಯ ಶ್ರೀರಾಮ ಭಜನಾ ಮಂದಿರದಲ್ಲಿ ತಾ ೮ನೇ ಶನಿವಾರ ರಾತ್ರೆ ಭಜನಾನಂತರ ಶ್ರೀಯುತ ವಿದ್ವಾನ್ ಸುರತ್ಕಲ್ ಸುಬ್ರಾಯಾಚಾರ್ಯರವರಿಂದ 'ಸತ್ಯನಿಷ್ಠೆ' ಎಂಬ ವಿಷಯದಲ್ಲಿ, ಸರಳವಾದ ಶೈಲಿಯಲ್ಲಿ ಯಥೋಚಿತ, ಸಶಾಸ್ತ್ರೀಯ ಉದಾಹರಣೆಗಳಿಂದ ಸುರಸವಾದ ಭಾಷಣವು ಜರಗಿತು. ಸಭೆಯಲ್ಲಿ ಜನಸಂದಣಿಯುಕ್ತವಾಗಿ ಭಾಷಣ ಮಾಡಿದರಲ್ಲದೆ ಮುಂದಿನ ಪ್ರತಿ ತಿಂಗಳ ಮಾಸಿಕ ಸಮಾರಂಭದಲ್ಲಿ ಉತ್ಸವವಾಗಿ ನಟಿಸಿದ ಬಾಲಕನಿಗೆ ಏನಾದರೊಂದ ಇನಾಮನ್ನು ಕೊಡಲಿರುವೆನೆಂದು ಹೇಳಿದರೆಂದು ಹೇಳಲು ತುಂಬಾ ಸಂತೋಷವಾಗುತ್ತದೆ.

ನಿಡ್ಪೋಡಿ

ಇಲ್ಲಿಯ ಪಂಚಾಯತ ಬೋರ್ಡಿನವರು ಒಂದು ವಾಚನಾಲಯವನ್ನು ಪುಸ್ತಕ ಭಂಡಾರದನ್ನು ಕಳೆದ ತಾ. ೧—೪—೩೯ರಿಂದ ತೆರೆದಿರುವರಾದರೂ, ಅದರ ಬಗ್ಗೆ ಪ್ರತ್ಯೇಕ ಒಂದು ಆಫೀಸು ಇಲ್ಲದಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ಪ್ರೆಸಿಡೆಂಟರು ಈ ಕುರಿತು ತಕ್ಕ ಏರ್ಪಾಡು ಮಾಡುವರೆಂದು ನಂಬಲಾಗಿದೆ.

ಈ ಹೊಸ ಇಗರ್ಜಿಯನ್ನು ಮಿ. ಸಿಲ್ವೆಸ್ಟರ್ ರೇಗೋರವರು ತಮ್ಮ ಉದಾರ ಮನಸ್ಸಿನಿಂದ ಬಡಜನರ ಹಿತಕ್ಕಾಗಿ ತಮ್ಮ ಸ್ವಂತ ಕೈಯಿಂದ ೧೦-೧೨ ಸಾವಿರ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ್ದರು, ಆದುದರಿಂದ ಅವರಿಗೆ ನಮ್ಮ ಅಭಿನಂದನೆಗಳು.

ಮುಂಡ್ಕೂರು

ಇಲ್ಲಿಯ ಪಂಚಾಯತ ಬೋರ್ಡಿನವರು 'ಕುದ್ರಬೆಟ್ಟು' ಎಂಬಲ್ಲಿರುವ ಒಂದು ತೋಡಿಗೆ ಸಂಕ ಕಟ್ಟುವ ಕೆಲಸ ಪ್ರಾರಂಭಿಸಿದ್ದು ತುಂಬಾ ಸ್ತುತ್ಯಾರ್ಹವಾದ ವಿಷಯವಾಗಿದೆ. ಪಂಚಾಯತ್ದಾರರು ಬೆಳ್ಮಣ್ಣು ರಸ್ತೆಯಲ್ಲಿರುವ 'ಪಾನಿಲ ತಾರ' ಎಂಬ ತೋಡಿಗೆ ಇವರು ಸಂಕ ಕಟ್ಟುವ ಏರ್ಪಾಡು ಮಾಡಿದರೆ ಜನಸಮುದಾಯಕ್ಕೆ ಪ್ರಯೋಜನವಾದೀತು. ಈ ಕುರಿತು ಇವರು ಶೀಘ್ರದಲ್ಲಿಯೇ ಆಲೋಚನೆ ಮಾಡಲಿಕ್ಕೆ ಸಾಕೆಂದು ನಂಬಲಾಗಿದೆ.

ಕಟೀಲು

ಇಲ್ಲಿಯ ಶ್ರೀ ದುರ್ಗಾ ಪರಮೇಶ್ವರೀ ಹಾಯರ್ ಎಲಿಮೆಂಟರಿ ಶಾಲಾ ಮೆನೇಜ್‌ಮೆಂಟಿನವರು, ಸದ್ಯದಲ್ಲೇ ೧ರಿಂದ ೮ರ ವರೆಗಿನ ಕ್ಲಾಸುಗಳಿಗೆ ಧರ್ಮಾರ್ಥ ವಿದ್ಯಾಭ್ಯಾಸವನ್ನು ಕೊಡುವ ಆಲೋಚನೆ ಮಾಡಿದ್ದಾರಾಗಿ ತಿಳಿದುಬರುತ್ತದೆ.

ಕಳೆದ ತಾ. ೬ರಲ್ಲಿ ಇಲ್ಲಿ ಒಂದು ಬಾವಿಯ ಶಿಲೆಕಲ್ಲನ್ನು ತೆಗೆಯುವಾಗ ಕೆಲಸದವರ ಅಜಾಗ್ರತೆಯಿಂದ ಕಲ್ಲು ಸ್ಫೋಟನವಾಗಿ ಇಬ್ಬರಿಗೆ ಜಖಂ ಆಗಿಯದೆ.

ಇಲ್ಲಿ ಹೊಸತಾಗಿ ಸ್ಥಾಪನೆಯಾದ ಅಂಚೆ ಆಫೀಸಿಗೆ ಈಗಲೇ ಹೆಚ್ಚಿನ ಪ್ರೋತ್ಸಾಹ ದೊರೆತಿದೆ. ಸದ್ಯದಲ್ಲೇ ಇದು ಕಾಯಂ ಆಗಲಿಕ್ಕೆ ಸಾಕೇತ ನಂಬಲಾಗಿದೆ.

ಶ್ರೀ ಹನುಮಾನ್ ವ್ಯಾಯಾಮ ಪ್ರಸಾರಕ ಮಂಡಲಿ—ಅಮರಾವತಿ

ಮೇಲಿನ ನಾಮಧೇಯದಿಂದ ಜನ್ಮತಾಳಿ ಕಳೆದ ಹದಿಮೂರು ವರ್ಷಗಳಿಂದ ಪ್ರಶಂಸನೀಯ ರೀತಿಯಲ್ಲಿ ಭಾವೀ ಜನಾಂಗದ ದೇಹದಾರ್ಢ್ಯತೆಯ ಸಲುವಾಗಿ ಕುಶಲ ಯುವಕರಿಗೆ ತರಬೇತುಗಳನ್ನಿತ್ತುದು ಸರಿಯಷ್ಟೆ. ಚಾಲ್ತಿ ವರ್ಷದ ಟ್ರೈನಿಂಗ್ ಕ್ಲಾಸುಗಳ ಮೇ ತಿಂಗಳ ೧ನೇ ತಾರೀಕಿಗೆ ಆರಂಭವಾಗಿ ೩೧ನೇ ತಾರೀಕಿಗೆ ಕೊನೆಗೊಳ್ಳುವುದು. ಸೇರಲಪೇಕ್ಷಿಸುವವರು ಸಂಬಳ ಕೊಡಬೇಕಾಗಿಲ್ಲ. ಊಟದ ಸಲುವಾಗಿ ರೂಪಾಯಿ ೧೬ ಕೊಡಬೇಕಾಗುವುದು. ಪ್ರವೇಶ ಅರ್ಜಿಗಳು ಈ ತಿಂಗಳ ೩೦ರೊಳಗಾಗಿ ಮಂಡಲಿಯ ಆಫೀಸಿಗೆ ತಲುಪತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಕಾರ್ಯದರ್ಶಿ, ಶ್ರೀ ಹನುಮಾನ್ ವ್ಯಾಯಾಮ ಪ್ರಸಾರಕ ಮಂಡಲಿ, ಅಮರಾವತಿ ಇವರಿಂದ ಪಡೆಯಬಹುದು. ಉತ್ಸಾಹೀ ತರುಣರು ಈ ಸುಸಂಧಿಯನ್ನು ತಳ ಕೊಳ್ಳಬಾರದಷ್ಟೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಕಮಿಟಿಯ ಕಾರ್ಯನಿರ್ವಾಹಕ ಮಂಡಲದ ಸಭೆಯು ತಾ. ೧ ಮತ್ತು ೨ರಲ್ಲಿ ಶಿರ್ಸಿಯಲ್ಲಿ ಜರಗಿತು. ಗತಸಭೆಯ ವರದಿ ಸ್ವೀಕಾರ, ಆಬ್ಬರು ಸದಸ್ಯರ ರಾಜೀನಾಮೆಯ ಸ್ವೀಕಾರ, ಗಡ್ಡೀಬಾಕ ರೂಢಿಗಾರರ ವಿಷಮ ಪರಿಸ್ಥಿತಿಗಾಗಿ ಸಂತಾಪ ಸೂಚನೆ, ಮತ್ತು ಆ ಕುರಿತು ಸರಕಾರದ ಸಹಕಾರ ಕೇಳಿಕೆ, ಸಿವಿಕ್ ಮತ್ತು ಪಾರ್ಲಿಮೆಂಟರಿ ಬೋರ್ಡು ನಿಯಮಾವಳಿಗಳ ಅಂಗೀಕಾರ, ಮೈಸೂರು ಕಾಂಗ್ರೆಸಿಗೆ ರೂ. ೧೦೦೦ದ ದೇಣಿಗೆ ಮಂಜೂರಾತಿ, ಹೋದ ವರ್ಷದ ಸದಸ್ಯತನದ ಪುಸ್ತಕಗಳನ್ನು ಈ ವರೆಗೂ ಕೊಡದ ಜಿಲ್ಲಾ ಸಮಿತಿಗಳ ವಿಚಾರ ಶ್ರೀ. ಕೆ. ಆರ್. ಕಾರಂತರ ಧೋರಣ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟುವು.

ಕರ್ನಲ್ ಬೆಕ್ಕರ ಲಂಡನ್ ಪ್ರಯಾಣದ ಫಲ!

ಇಂಗ್ಲಂಡ ಪೋಲಾಂಡುಗಳ ಸ್ನೇಹಬಾಂಧವ್ಯವು ರೂಪಿತವಾಯಿತು

ರುಮೇನಿಯಕ್ಕೂ ಸಹಾಯ ಭರವಸೆ ದೊರಕಿದೆ

ಹಿಟ್ಲರ ಮುಸಲೋನಿಯರು ಕೆರಳಿದ್ದಾರೆ

ಪೋಲೆಂಡಿನ ವಿದೇಶಾಂಗ ಮಂತ್ರಿಗಳಾದ ಕರ್ನಲ್ ಬೆಕ್ಕರವರು ಹಿಟ್ಲರ ಮುಸಲೋನಿಯರ ಆಕ್ರಮಣವನ್ನು ತಡೆಯುವ ಶಾಂತಿಪ್ರೇಮಿ ರಾಷ್ಟ್ರಗಳ ಸಂಘಟನೆಗಾಗಿ ಬ್ರಿಟಿಷ ಸರಕಾರವು ಕೈಕೊಂಡ ಪ್ರಯತ್ನದಲ್ಲಿ ಸಹಕರಿಸಲಿಕ್ಕೆ ಲಂಡನಿಗೆ ಹೋಗಿ, ಅವರು ಬ್ರಿಟಿಷ ಸರಕಾರದ ಪ್ರತಿನಿಧಿಗಳನ್ನು ಭೇಟಿಯಾದರು. ಒಬ್ಬರೊಬ್ಬರ ಮೇಲೆ ಅನ್ಯರಾಷ್ಟ್ರಗಳ ಆಕ್ರಮಣವಾದಾಗ ಪರಸ್ಪರವಾಗಿ ಸೈನ್ಯ ಪರಿಕರ ಧನಗಳನ್ನು ಕಳುಹಿಸಿಯೂ ಸಹಾಯ ಸಹಕಾರಗಳನ್ನು ಕೊಡಬೇಕೆಂದು ಇಂಗ್ಲಂಡ ಪೋಲಾಂಡ್‌ಗಳೊಳಗೆ ಸಂಧಿ ಪ್ರಯತ್ನವು ನಡೆದು ಅದಕ್ಕೀಗ ಒಳ್ಳೇ ಫಲವು ದೊರಕಿರುವದು. ಹೀಗೆಯೇ ಇಂಗ್ಲಾಂಡು ರುಮೇನಿಯಕ್ಕೂ ಸಹಾಯ ಸಹಕಾರಗಳ ಭರವಸೆಯನ್ನು ಕೊಟ್ಟಿದೆ. ರಶ್ಯವೂ ಇಂಗ್ಲಾಂಡು ಫ್ರಾನ್ಸುಗಳೂ ಜಗತ್ತಿನ ಶಾಂತಿರಕ್ಷಣೆಗೆ ಮಾಡುವ ಎಲ್ಲಾ ಉಪಾಯಗಳೊಂದಿಗೆ ಸಹಕರಿಸುವದಾಗಿ ಮಾತುಕೊಟ್ಟಿದೆ

ಹಿಟ್ಲರನ ಮಾಯಾಜಾಲ

ಹಿಟ್ಲರನು ಒಡ್ಡಿದ ಮ್ಯೂನಿಚ್ ಒಪ್ಪಂದದ ಮಾಯಾಜಾಲದಿಂದ ಮಿ ಚೆಂಬರಲೇನರು ತಪ್ಪಿಸಿಕೊಂಡು ಈಗ ತನ್ನ ವಿರೋಧವಾಗಿ ವರ್ತಿಸುತ್ತಿರುವರಲ್ಲಾ ಎಂದು ಹಿಟ್ಲರ ಮುಸಲೋನಿಯರು ಬಹಳ ಕೆರಳಿ ಹೋಗಿದ್ದಾರೆ ಹಿಟ್ಲರನು ತನ್ನ ವಿಲ್‌ಹೇಲ ಶೇವನ ಭಾಷಣದಲ್ಲಿ ಬ್ರಿಟನನ್ನು 'ವೃದ್ಧನಾಥಿ ಪತಿವ್ರತಾ' ಎಂದು ತೆಗಳಿ ನಿಂದಿಸಿದ್ದಾನೆ ಬ್ರಿಟನ್ನಿನ ದುರ್ವರ್ತನೆಗೆ ಸಧ್ಯದಲ್ಲಿ ತಕ್ಕ ಶಾಸನವಾಗದೆ ಇರದೆಂದೂ, ಹೇಳಿ, 'ನಮಗೆ ಯುದ್ಧ ಬೇಕಾಗಿಲ್ಲ, ಆದರೆ ಯಾರಾದರೂ ನಮ್ಮನ್ನು ಯುದ್ಧಕ್ಕೆ ಕರೆಯುವರಾದರೆ ನಾವು ಅದಕ್ಕೆ ಸಿದ್ಧರು!' ಎಂದು ಬ್ರಿಟನನ್ನು ಹೆದರಿಸಿಯೂ ಇದ್ದಾನೆ ಮುಸಲೋನಿ ಕೂಡ ಜರ್ಮನ-ಇಟಾಲಿಯನ ಸಖ್ಯವನ್ನು ಮುರಿಯುವದು ಯಾರಿಂದಲೂ ಅಸಾಧ್ಯವೆಂದೂ, ನಾವು ನಮ್ಮ ನಮ್ಮ ಆಸೆ ಮಹತ್ವಾಕಾಂಕ್ಷೆಗಳನ್ನು ತೀರಿಸಿಯೇ ಸಿದ್ಧವೆಂದೂ ಹೇಳಿದ್ದಾನೆ

ಆಲ್ಬೇನಿಯದ ಆಕ್ರಮಣ

ಇಂಗ್ಲಾಂಡ ಫ್ರಾನ್ಸ ಪೋಲಾಂಡ ರುಮೇನಿಯ, ರಶ್ಯ, ಗ್ರೀಸ, ಯುಗೋಸ್ಲೇವಿಯಗಳು ಒಂದಾಗಿ ತನ್ನನ್ನು ವಿರೋಧಿಸುತ್ತಿರುವದನ್ನು ಕಂಡ ಮುಸಲೋನಿ, ಅವರ ಮೇಲಿನ ಸೇಡು ತೀರಿಸಿಕೊಳ್ಳಲಿಕ್ಕೆ ಆಲ್ಬೇನಿಯದಲ್ಲಿ ಕೀಟಲೆಯನ್ನೆಬ್ಬಿಸಿ, ತನಗೆ ಇತರ ರಾಷ್ಟ್ರಗಳ ಸ್ವಾತಂತ್ರ್ಯಾಪಹಾರದ ಇಚ್ಛೆ ತಿಲ ಮಾತ್ರವೂ ಇರುವದಿಲ್ಲವೆಂದು ಹೇಳುತ್ತಾ ಹೇಳುತ್ತಾ ಅಲ್ಲಿಯೂ ತನ್ನ ಅಧಿಕಾರ ಪ್ರತಿಷ್ಠೆಯ ಕಾರ್ಯದಲ್ಲಿ ತೊಡಗಿರುವನು ಆಲ್ಬೇನಿಯವು ತನ್ನ ಪರರಾಷ್ಟ್ರ ನೀತಿಯನ್ನು ಮುಸಲೋನಿಯ ಧೋರಣೆಗೆ ಅನುಕೂಲವಾಗಿ ರೂಪಿಸಬೇಕೆಂದು ಮುಸಲೋನಿ ಕೊಟ್ಟ ಸೂಚನೆಯನ್ನು ಆಲ್ಬೇನಿಯವು ಒಪ್ಪದಿರುವದೇ ಈ ಆಕ್ರಮಣದ ರಹಸ್ಯವು. ಆದರೂ ಆಲ್ಬೇನಿಯವು ಆಕ್ರಮಣವನ್ನು ವಿರೋಧಿಸಿದೆ ಇಟಲಿಯು ಯುದ್ಧ ನಾವೆಗಳನ್ನು ಕಳುಹಿಸಿ ಕೊಟ್ಟಿದೆ ಅದು ಮೊದಲು ಆಲ್ಬೇನಿಯದ ಸಮುದ್ರ ಬಂದರುಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುವದು ಹಾಗಾದರೆ ಆಲ್ಬೇನಿಯದ ಮಾತ್ರವಲ್ಲ, ಅದರ ಸಮೀಪದಲ್ಲಿರುವ ಯುಗೊಸ್ಲೇವಿಯ, ಗ್ರೀಸ ರಾಜ್ಯಗಳ ಸ್ವಾತಂತ್ರ್ಯಕ್ಕೂ ಲೋಪಬರುವದು

ತಲೆಯಾಳುಗಳ ಕರ್ತವ್ಯ

ಹಿಟ್ಲರ ಮುಸಲೋನಿಯರು ಫ್ರಾನ್ಸ-ಇಂಗ್ಲಾಂಡಗಳನ್ನು ಬೆದರಿಸುವದಕ್ಕಾಗಿಯೇ ಈ ಎಲ್ಲ ಕೀಟಲೆಗಳನ್ನು ಎಬ್ಬಿಸಿರುವರು. ಇಂಥ ಬೆದರಿಕೆಗಳಿಗೆ ಫ್ರಾನ್ಸ ಇಂಗ್ಲಾಂಡುಗಳ ತಲೆಯಾಳುಗಳು ಎಷ್ಟು ಮಾತ್ರಕ್ಕೂ ಸೊಪ್ಪು ಹಾಕಲಾರದು ನಾಜೀ ಫ್ಯಾಸಿಸ್ಟ ಆಕ್ರಮಣವನ್ನು ತಡೆಯುವ ಶಾಂತಿಪ್ರಿಯ ರಾಜ್ಯಗಳ ಸಂಘಟನೆಯನ್ನು ಕೂಡಲೇ ಮಾಡಿ ಸಹಾಯವನ್ನು ಅಪೇಕ್ಷಿಸುವ ದುರ್ಬಲ ರಾಷ್ಟ್ರಗಳ ಸಹಾಯಕ್ಕೆ ಹೋಗುವ ತಮ್ಮ ಸರ್ವಸಿದ್ಧತೆಯನ್ನು ಅವರಿಗೆ ಹಿಟ್ಲರ ಮುಸಲೋನಿಯರಿಗೆ ಚೆನ್ನಾಗಿ ತೋರಿಸಿಕೊಡಬೇಕು. ಇಂಗ್ಲಾಂಡ—ಫ್ರಾನ್ಸ-ರಶ್ಯಗಳು ಯಥಾರ್ಥದಲ್ಲಿ ಒಂದಾಗಿವೆ ಎಂದು ಸರ್ವಾಧಿಕಾರಿಗಳಿಗೆ ತಿಳಿದಾಗ, ಅವರ ತಲೆಗೇರಿದ ಪಿತ್ತವೆಲ್ಲ ಇಳಿದುಹೋಗುವದು ಹಿಟ್ಲರ ಮುಸಲೋನಿಯರು ಹೆದರುವ ಯಾವದೊಂದು ಪ್ರಬಲರಾಷ್ಟ್ರವು ಇರುವದಾದರೆ, ಅದು ರಶ್ಯವೊಂದೇ ಆದ್ದರಿಂದ ಇಂಗ್ಲಾಂಡು ಫ್ರಾನ್ಸುಗಳು ರಶ್ಯದನ್ನು ಬಿಟ್ಟು ಯಾವ ಕೆಲಸವನ್ನೂ ಮಾಡತಕ್ಕದ್ದಲ್ಲ ತಾವು ಹಾಗೆ ಮಾಡುವೆವಾಗಿ ಮಿ ಚೆಂಬರಲೇನರು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಆಶ್ವಾಸನೆಯನ್ನಿತ್ತಿರುವದು ಶುಭಲಕ್ಷಣವಾಗಿದೆ ಇಷ್ಟರ ತನಕದ ಅವರ ವರ್ತನವು ಹಿಟ್ಲರ ಮುಸಲೋನಿಯರಿಗೆ ಪ್ರತ್ಯಕ್ಷಪರೋಕ್ಷ ಸಹಾಯವನ್ನು ಕೊಡುವಂಥದ್ದಾಗಿದ್ದರೂ, ಬ್ರಿಟನಿನ ಪ್ರಜಾಸ್ವಾತಂತ್ರ್ಯನುತ್ತು ಪ್ರಜಾಪ್ರಭುತ್ವ ಪ್ರೇಮಿಗಳ ಬೋಧನೆ-ಪಚಾರಗಳ ಫಲವಾಗಿ ಅವರು ಆತ್ಮಘಾತುಕ ಪ್ರವೃತ್ತಿಯನ್ನು ಅನುಸರಿಸುವದಿಲ್ಲವೆಂದೂ, ಸತ್ಯ ನ್ಯಾಯಗಳ ಮೇಲೆ ಜಗತ್ತಿನ ಶಾಂತಿರಕ್ಷಣೆಗೆ ಯಥಾರ್ಥ ಪ್ರಯತ್ನಗಳನ್ನು ಮಾಡುವರೆಂದೂ ನಾವು ಆಶಿಸೋಣ

ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಸಭೆ

ಇದೇ ತಿಂಗಳ ೨೮ರಿಂದ ಆರಂಭ

ರಾಷ್ಟ್ರಪತಿ ಸುಭಾಸ ಬಾಬುಗಳ ರಾಜಿನಾಮೆ?

ಇದೇ ತಿಂಗಳ ೨೭ನೆ ತಾರೀಕಿಗೆ ಸುಭಾಸ ಬಾಬುಗಳು ಕಾಂಗ್ರೆಸ ವರ್ಕಿಂಗ ಕಮಿಟಿಯ ಸಭೆಯನ್ನು ಕರೆದಿದ್ದಾರೆ. ಮರುದಿನದಿಂದ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಸಭೆ ಕೂಡುವುದು ಎರಡೂ ಸಭೆಗಳು ಕಲ್ಕತ್ತದಲ್ಲಿ ಕೂಡುವವು ಮಹಾತ್ಮಾಗಾಂಧಿಯವರ ಅಭಿಮತವನ್ನು ತಿಳಿದಾದೊಡನೆ, ಈ ತಿಂಗಳ ಮೂರನೆ ವಾರದೊಳಗಾಗಿ ಸುಭಾಸಬಾಬುಗಳು ಕಾಂಗ್ರೆಸ ವರ್ಕಿಂಗ ಕಮಿಟಿಯ ಸದಸ್ಯರ ಹೆಸರುಗಳನ್ನು ಪ್ರಕಟಿಸುವರು.

ಸುಭಾಸರ ಆರೋಗ್ಯ

ಸುಭಾಸರು ಮೆಲ್ಲ ಮೆಲ್ಲಗೆ ಗುಣಮುಖರಾಗುತಿದ್ದಾರೆ. ಜ್ವರವು ಇಳಿದಿದೆ. ಕಳಕೊಂಡ ಶಕ್ತಿಯನ್ನು ಪುನಃ ಸಂಪಾದಿಸುತ್ತಿದ್ದಾರೆ. ಅವರು ಈ ತಿಂಗಳ ಎರಡನೆ ವಾರದಲ್ಲಿ ಜಾಲ್ಗೋರಿಯಾದಿಂದ ಕಲ್ಕತ್ತಕ್ಕೆ ಹೋಗಿ ಕಾಂಗ್ರೆಸ ಕಾರ್ಯಕಲಾಪಗಳಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿಕೊಳ್ಳಬಹುದು ಮುಂದಿನ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದಕ್ಕೋಸ್ಕರ ಮಹಾತ್ಮಾರೊಡನೆ ಪತ್ರವ್ಯವಹಾರವನ್ನು ಆರಂಭಿಸಿದ್ದಾರೆ

ಸುಭಾಷ—ಗಾಂಧಿ ಪತ್ರವ್ಯವಹಾರ

ಈ ಪತ್ರವ್ಯವಹಾರದ ವಿಷಯವು ಗುಪ್ತವಾಗಿಡಲ್ಪಟ್ಟಿದೆ ಆದರೆ ಸುಭಾಸಬಾಬುಗಳು ಈಗ ಮೊದಲಿನ ಛಲವನ್ನು ಬಿಟ್ಟು ಮಹಾತ್ಮಾರನ್ನು ಅನುಸರಿಸಲಿಕ್ಕೆ ಸಿದ್ಧರಾಗಿದ್ದಾರೆ ಮೊದಲು ಅವರು ಪಂಡಿತ ಪಂತರ ನಿರ್ಣಯವನ್ನು ಕಮಬಾಹಿರವೆಂದು ಹೇಳಿದ್ದರಾದರೂ, ಈಗ ತಾನು ಕಾನೂನು ಮೇರೆಗೆ ನಡೆಯುವುದಿಲ್ಲವಾಗಿಯೂ ನ್ಯಾಯನೀತಿಗಳನ್ನು ಅನುಸರಿಸುವುದಾಗಿಯೂ ಹೇಳಿದ್ದಾರೆ ಮಾತ್ರವಲ್ಲ ವ್ಯಕ್ತಿಗತ ದೋಷಾರೋಪಣೆಗಳೂ ಪ್ರಾಂತೀಯ ಅಭಿಮಾನವೂ ದೇಶದ ಪ್ರಗತಿಯನ್ನು ತಡೆಯುತ್ತದೆಂದು ಅವರ ತಮ್ಮ ಪಂಗಡಿಗರನ್ನು ಎಚ್ಚರಿಸಿದ್ದಾರೆ ಆದ್ದರಿಂದ ಮಹಾತ್ಮಾಜಿಯವರಿಗೂ ಅವರಿಗೂ ಮತಭೇದವು ಇರುವುದಾಗಿ ಅವರು ತಮ್ಮ ಪದವಿಗೆ ರಾಜಿನಾಮೆ ಕೊಡುವರೆಂಬ ಸಂದೇಹವುಂಟಾಗಿದ್ದಿತಾದರೂ, ಈಚೆಗೆ ಅವರು ಕೊಟ್ಟ ಪತ್ರಿಕೆಗಳಿಂದ ಆ ಸಂದೇಹವು ನಿರಸನವಾಗಿದೆ

ಮಹಾತ್ಮಾಜಿಯವರ ಸಖ್ಯಸಹಕಾರ

ಸುಭಾಸಬಾಬುಗಳಿಗೆ ಇಷ್ಟು ಬದಲಾವಣೆಯಾಗಿ ಅವರ, ವಾಸ್ತವಿಕ ಪರಿಸ್ಥಿತಿಯನ್ನು ತಿಳಿಕೊಂಡಿರುವುದರಿಂದ ಅವರಿಗೆ ಮುಂದಿನ [illegible]ಗಳಲ್ಲಿ ಮಹಾತ್ಮಾಜಿಯವರ ಸಖ್ಯ-ಸಹಕಾರಗಳು ಪ್ರಾಪ್ತವಾಗಿರವುದೆಂದು [illegible] ಅವರು ಮಹಾತ್ಮಾಜಿಯವರ ಸಲಹೆಗಳನ್ನು ಪಡಕೊಂಡು ಅವರ ಸಮ್ಮತಿಯಿಂದಲೇ ಹೊಸ ವರ್ಕಿಂಗ್ ಕಮಿಟಿಯನ್ನು ರಚಿಸುವರು [illegible] ಮಂತರ [illegible] ಇನ್ನು ಅವರ ವಿರೋಧವು [illegible] ಬರುವುದಿಲ್ಲವಾದದರಿಂದ ಇನ್ನು ಕಾಂಗ್ರೆಸ ರಥವು ವಿಘ್ನ ವಿಪತ್ತುಗಳಿಲ್ಲದೆ ಮುನ್ನಡೆಯುವುದೆಂದ [illegible] ಆಶಿಸಿದ್ದಾರೆ

ವಿಜಯಿ ಹಿಟ್ಲರ್

ವಿಜಯಿ ಹಿಟ್ಲರನು ಪ್ರೇಗುವಿನಿಂದ ಹಿಂತಿರುಗಿ ಬಾಗ್ ಬರ್ಚ್‌ಟೆಸ್ಗಾಡನ್ ಕಡೆ ಹೊರಟಾಗ ಹುಡುಗರಿಂದ ಹೂವನ್ನು ಸ್ವೀಕರಿಸುತ್ತಿದ್ದಾನೆ.

ಸಂಸ್ಥಾನದಲ್ಲಿ ಬೌದ್ಧಕಾಲದ ಶಿಲಾಶಾಸನಗಳು

ಬ್ರಹ್ಮಗಿರಿ ಮತ್ತು ಬೆಳಗಾಮಿಯ ಶಾಸನಗಳು

ಸೌಂದರ್ಯದ ನೆಲೆಯಾದ ಮೈಸೂರಿಗೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಜನರು ಬಂದು ಇಲ್ಲಿನ ಸೊಬಗನ್ನು ನೋಡಿ ಆನಂದಿಸುತ್ತಾರೆ ಮೈಸೂರನ್ನು ಬಿಟ್ಟ ತರುವಾಯ ಇಲ್ಲಿನ ಭವ್ಯದೃಶ್ಯಗಳು ಅವರ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿರುತ್ತದೆ [illegible] ಹರವಾದ ಪ್ರದೇಶದಲ್ಲಿರುವ ಶ್ರೀ ಗೋಮಟೇಶ್ವರ ಸ್ವಾಮಿಯ ದಿವ್ಯ ವಿಗ್ರಹವನ್ನು ಉದಾಹರಣೆಗಾಗಿ ಇಲ್ಲಿ ಸೂಚಿಸಬಹುದಾಗಿದೆ ಈ ದಿವ್ಯ ವಿಗ್ರಹವು ಜೈನರಿಗೆ ಮಾತ್ರವೇ ಪವಿತ್ರವಾಗಿರುವುದಿಲ್ಲ ಎಲ್ಲರೂ ಈ ಮನೋಜ್ಞದ ವಿಗ್ರಹವನ್ನು ನೋಡಿ ಆನಂದಿಸುತ್ತಾರೆ.

ಬೌದ್ಧಮತವು ಭರತ ಖಂಡದಲ್ಲಿ ಪ್ರಬಲವಾಗಿದ್ದ ಕಾಲದ ಕೆಲವು ಪುರಾತನ ಶಿಲಾಶಾಸನಗಳೂ ಸಹ ಸಂಸ್ಥಾನದಲ್ಲಿವೆ ಶ್ರೀ ಅಶೋಕನ ಕಾಲದಲ್ಲಿ ಕೆತ್ತಲ್ಪಟ್ಟ ಬ್ರಹ್ಮಗಿರಿಯ ಶಿಲಾಶಾಸನವಿದೆ ೧೮೯೨ನೆಯ ಇಸವಿಯಲ್ಲಿ ಮಿ ಬಿ. ಎಲ್. ರೈಸ್‌ರವರು ಈ ಶಿಲಾಶಾಸನವನ್ನು ಕಂಡು ಹಿಡಿದು ಇದರ ಒಕ್ಕಣೆಯನ್ನು ಪ್ರಕಟಿಸಿದರು. ಇದರಿಂದ ಅಶೋಕ ಮಹಾರಾಜನ ಅಧಿಪತ್ಯವು ಮೈಸೂರಿನವರೆಗೂ ಪಸರಿಸಿತ್ತೆಂಬ ವಿಷಯವು ಗೊತ್ತಾಯಿತು ಇದಲ್ಲದೆ ಇದಕ್ಕೆ ಸ್ವಲ್ಪ ದೂರದಲ್ಲಿ [illegible] ಮತ್ತು ಜಟಿಂಗಾ-ರಾಮೇಶ್ವರದ ಸಮೀಪದಲ್ಲಿ ಇದೇ ಶಾಸನದ ಎರಡು ಪ್ರತಿಗಳಿವೆ ಇವುಗಳ [illegible] ಪಿಡಲಾಗಿದೆ

ಬ್ರಹ್ಮಗಿರಿ ಬೆಟ್ಟದ ವಾಯುವ್ಯ ದಿಕ್ಕಿನಲ್ಲಿರುವ ಬಂಡೆಯೊಂದರ ಮೇಲೆ ಈ ಶಿಲಾಶಾಸನವು ಕೆತ್ತಲ್ಪಟ್ಟಿದೆ ಇಲ್ಲಿಗೆ ಬರಲು ಬಳ್ಳಾರಿಯಿಂದ ಬಳ್ಳಾರಿ—ಚಿತ್ರದುರ್ಗದ ರಸ್ತೆಯಲ್ಲಿ ೨೫ ಮೈಲಿಗಳ ದೂರ ಮೋಟಾರಿನಲ್ಲಿಯೂ ಮತ್ತು ರಸ್ತೆಯ ಬಲ ಪಕ್ಕದಲ್ಲಿ ಮೂರು ಮೈಲಿಗಳ ವರೆಗೆ ಗಾಡಿಯಲ್ಲಿಯೂ ಪ್ರಯಾಣ ಮಾಡಬೇಕು ಬೆಟ್ಟದ ತಪ್ಪಲಿಗೆ ಹೋಗಬೇಕಾದರೆ ಒಂದೆಡೆ ಚಿನ್ನಹಗರಿ ನದಿಯನ್ನು ದಾಟಬೇಕು ಈ ಶಿಲಾಶಾಸನವನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಲಾಗುತ್ತಿದೆ ಇದರ ಸುತ್ತಲೂ ಒಂದು ಮಂಟಪವನ್ನು ಕಟ್ಟಿದೆ ಮಂಟಪದ [illegible]ಗದಕ್ಕೆ ಆ ಗ್ರಾಮದ ಪಟೇಲನ ವಶದಲ್ಲಿರುತ್ತದೆ

ಬೆಳಗಾಮಿಯಲ್ಲಿಯೂ ಸಹ ಒಂದು ಬೌದ್ಧರ ಕಾಲದ ಶಿಲಾಶಾಸನಗಳಿವೆ [illegible] ಪನ್ನೊಂದನೆಯ ಶತಮಾನದಲ್ಲಿ ಒಂದು ಬುದ್ಧಾಲಯಕ್ಕೆ ಕೆಲವು ಮಾನ್ಯಗಳನ್ನು ಕೊಟ್ಟ ವಿಷಯಕ್ಕೆ ಸಂಬಂಧಿಸಿದುವುಗಳಾಗಿವೆ ಇವುಗಳ ಪೈಕಿ ಒಂದು ಕ್ರಿ ಶ ೧೦೬೫ನೆಯ ಇಸವಿಯಲ್ಲಿ ಕೆತ್ತಲ್ಪಟ್ಟ ಶಾಸನ ಇನ್ನೊಂದು ೧೦೬೫ರಲ್ಲಿ ಕೆತ್ತಲ್ಪಟ್ಟ ಶಾಸನ ಒಂದು ಶಾಸನವು ಬೆಳಗಾಮಿನ ಬಳಿ ಜಯಂತಿ ಬುದ್ಧ ವಿಹಾರವೊಂದನ್ನು ಕಟ್ಟಿಸಿದ ವಿಷಯವನ್ನು ಮತ್ತು ತಾರಾಭಗವತಿ, ಕೇಶವ ಲೋಕೇಶ್ವರ ಮತ್ತು ಬುದ್ಧದೇವ ಇವರುಗಳ ಪೂಜೆಗೆ ತಕ್ಕ ಮಾನ್ಯಗಳನ್ನು ಕೊಟ್ಟಿರುವ ವಿಷಯವನ್ನು ತಿಳಿಸುತ್ತದೆ ಮೊದಲನೆಯ ಶಿಲಾಶಾಸನದಿಂದ ಈ ಮಾನ್ಯಗಳನ್ನು ನಾಡಹೆಗ್ಗಡೆಯ ಹೆಂಡತಿಯಾದ ನಾಗಿಯಕ್ಕನು ಕೊಟ್ಟಳೆಂದೂ ಈಕೆಯು ಬಪ್ಪುರಾ ಅಥವಾ ಬಾಪ್ಪುರಾ ಮನೆತನಕ್ಕೆ ಸೇರಿದವಳೆಂದು ತಿಳಿದುಬರುತ್ತದೆ

ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಸುಧಾರಣೆಯಲ್ಲ-ಬದಲಾವಣೆ

ಬರುತ್ತಾ ಬರುತ್ತಾ ರಾಯನ ಕುದುರೆ ಕತ್ತೆಯಾಗುತ್ತಲಿದೆ!

ಪ್ರಾಂತಿಕ ಸ್ವಾಯತ್ತ ಶಾಸನದಲ್ಲಿ ಸಿಕ್ಕಿದ ಸ್ವಾತಂತ್ರ್ಯವು ಅಪೂರ್ಣ; ಸಂಘ ಶಾಸನದಲ್ಲಿ ನಿಜವಾದ ಸ್ವಾತಂತ್ರ್ಯವು ಇಲ್ಲವೇ ಇಲ್ಲ ಎಂಬಿವೇ ಮೊದಲಾದ ಕಾರಣಗಳಿಂದ ಕಾಂಗ್ರೆಸಿನಿಂದಾರಂಭಿಸಿ ದೇಶದ ಪ್ರತಿಯೊಂದು ರಾಜಕೀಯ ಸಂಘ ಸಂಸ್ಥೆ ಹಾಗೂ ಪ್ರತಿಯೊಬ್ಬ ಗಣ್ಯಮಾನ್ಯ ಮುಖಂಡನು ೧೯೩೫ನೇ ಇಸವಿಯ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ (ರಾಜಕೀಯ ಸುಧಾರಣೆ ಮಸೂದೆ)ನ್ನು ವಿರೋಧಿಸಿ, ಅದನ್ನು ಕಸದ ಬುಟ್ಟಿಗೆ ಒಗೆಯುವ ಉಪಾಯಗಳನ್ನು ಚಿಂತಿಸುತ್ತಾ ಇರುವಾಗಲೇ ಬ್ರಿಟಿಷ ಸರಕಾರವು ಭಾರತೀಯರ ಬೇಡಿಕೆಗಳನ್ನು ಮನ್ನಿಸಿ ಆಕ್ಟಿನಲ್ಲಿ ಸುಧಾರಣೆಗಳನ್ನು ಮಾಡುವ ಬದಲಿಗೆ ಅದರಲ್ಲಿ ತನ್ನ ಸ್ವಾರ್ಥದ ಬೇಳೆಯು ಹದವಾಗಿ ಬೇಯುವಂತೆ ಬದಲಾವಣೆಗಳನ್ನು ಮಾಡಲಿರುವುದು ನಿಜವಾಗಿ ಖೇದಾಸ್ಪದವಾಗಿದೆ

ಭಾರತ ಸಚಿವರು ಬ್ರಿಟಿಷ್ ಪಾರ್ಲಿಮೆಂಟಿನ ಶ್ರೀಮಂತರ ಸಭೆಯಲ್ಲಿ ಆಕ್ಟಿನ ಬದಲಾವಣೆಯ ಸೂಚನೆಯನ್ನು ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿಯ ಮಾರಾಟ, ವಾಹನಾದಿಗಳ ಮೇಲೆ ತೆರಿಗೆ ಹಾಕುವ, ಪ್ರಾಂತಿಕ ಸರಕಾರಗಳಿಗೆ ಇರುವ ಹಕ್ಕು ಅಧಿಕಾರಗಳ ಕುರಿತು ಉಂಟಾದ ಕೆಲವು ಸಂದೇಹಗಳನ್ನು, ಯುನಿವರ್ಸಿಟಿಗಳ ಮೇಲೆ ಪ್ರಾಂತಿಕ ಸರಕಾರಗಳಿಗೆ ಇರುವ ಅಧಿಕಾರಗಳನ್ನು ಕುರಿತೂ ಪರಿವರ್ತಿತ ಮಸೂದೆಯು ಸ್ಪಷ್ಟೀಕರಣ ಮಾಡಿ ವಿದ್ಯುಚ್ಛಕ್ತಿಯ ಮಾರಾಟ, ವಾಹನಾದಿಗಳ ಮೇಲೆ ತೆರಿಗೆ ಹಾಕುವ ಅಧಿಕಾರವೂ, ಅವಳಿಡ ಮತ್ತು ಕಾಶಿ ವಿಶ್ವವಿದ್ಯಾಲಯಗಳ ಮೇಲೆ ಇರತಕ್ಕಂಥ ಅಧಿಕಾರವೂ ಪ್ರಾಂತಿಕ ಸರಕಾರಗಳಿಗೆ ಇರುತ್ತದೆಂದು ವಿಧಿಸಿದೆ ಈ ಸ್ಪಷ್ಟೀಕರಣದಿಂದ ಪ್ರಾಂತಿಕ ಸರಕಾರಗಳಿಗೆ ಸಹಜವಾಗಿ ಇರಬೇಕಾದ ಅಧಿಕಾರಗಳನ್ನು ಸ್ಪಷ್ಟವಾಗಿ ಅವುಗಳಿಗೆ ಕೊಟ್ಟಂತಾಯಿತೇ ಹೊರತು ಹೊಸದಾಗಿ ಪ್ರಾಂತಿಕ ಸರಕಾರಗಳಿಗೆ ಹೊಸ ಅಧಿಕಾರಗಳೇನೂ ದೊರೆತಿಲ್ಲ

ಹೊಸ ಖರ್ಚಿನ ಭಾರ

ಅದರ ಬದಲಿಗೆ ಬ್ರಿಟಿಷ ಸರಕಾರವು ಹಿಂದುಸ್ಥಾನದ ಮೇಲೆ ಹೊಸ ಖರ್ಚಿನ ಭಾರವನ್ನು ಹಾಕಲಿಕ್ಕೆ ಹವಣಿಸಿದೆ ಬ್ರಿಟಿಷ ಸರಕಾರದ ಅಧಿಕಾರಗಳಾಗಿದ್ದು ದೀರ್ಘ ಅಥವಾ ಅಲ್ಪ ಕಾಲದ ಅವಧಿಯ ಮೇಲೆ ಹಿಂದುಸ್ಥಾನಕ್ಕೆ ಕಳುಹಿಸಿಕೊಟ್ಟ ಬ್ರಿಟಿಷ ಅಧಿಕಾರಿಗಳ ಪೆನ್ಶನಿನ ಒಂದು ಅಂಶವನ್ನು ಭಾರತ ಸರಕಾರವು ಕೊಡಬೇಕಾಗಿರುವುದೆಂದು ಪರಿವರ್ತಿತ ಮಸೂದೆಯಲ್ಲಿದೆ ಈ ಅಧಿಕಾರಿಗಳನ್ನು ಆರಿಸುವ, ನೇಮಿಸುವ, ಅಥವಾ ಅವರನ್ನು ಹಿಂದಕ್ಕೆ ಕಳುಹಿಸಿ ಕೊಡುವ ವಿಷಯದಲ್ಲಿ ಭಾರತಕ್ಕೆ ಯಾವ ಅಧಿಕಾರವೂ ಪ್ರಾಪ್ತವಾಗಿರುವುದಿಲ್ಲ ಆ ವಿಷಯದಲ್ಲಿ ಬ್ರಿಟಿಷ ಸರಕಾರವೂ ಅದರ ಪ್ರತಿನಿಧಿಗಳೂ ತಮ್ಮ ಸ್ವೇಚ್ಛೆಯಂತೆ ನಡೆಯುವರು. ಹಾಗಿರುತ್ತ ಅಂಥ ಅಧಿಕಾರಿಗಳ ಪೆನ್ಶನ ಇತ್ಯಾದಿಗಳಲ್ಲಿ ಒಂದಂಶವನ್ನು ಭಾರತವು ಕೊಡಬೇಕೆಂದು ವಿಧಿಸುವುದು ಅನ್ಯಾಯಪೂರ್ಣವಾಗಿದೆ.

ಎಲ್ಲಕ್ಕೂ ಆಕ್ಷೇಪಕರ

ಪರಿವರ್ತಿತ ಮಸೂದೆಯಲ್ಲಿ ಎಲ್ಲಕ್ಕೂ ಹೆಚ್ಚಿಗೆ ಆಕ್ಷೇಪಕರವಾಗಿರುವ ವಿಷಯವೆಂದರೆ ಯುದ್ಧಸಂಭವದಂಥ ಜರೂರಾತಿಯ ಸಂದರ್ಭಗಳಲ್ಲಿ ಕೇಂದ್ರ ಸರಕಾರವು ಪ್ರಾಂತೀಯ ಸರಕಾರಗಳ ಮೂಲಕ ತನ್ನಿಚ್ಛೆಯಂತೆ ಶಾಸನ ಕಾರ್ಯಗಳನ್ನು ನಡೆಸುವ ಅಧಿಕಾರದ ಪ್ರಸ್ತಾಪವಿದೆ. ಜರೂರಾತಿಯ ಸಂದರ್ಭಗಳಲ್ಲಿ ಪ್ರಾಂತ್ಯಗಳಿಗೆ ಸಂಬಂಧಪಟ್ಟ ಕಾನೂನು ಕಾಯದೆಗಳನ್ನು ಮಾಡುವ ಅಧಿಕಾರವು ೧೯೩೫ರ ಮಸೂದೆಯಲ್ಲಿ ಕೇಂದ್ರ ಸರಕಾರಕ್ಕೆ ಇದೆ ಆದರೆ ಅಂಥ ಕಾನೂನು ಕಾಯದೆಗಳನ್ನು ಜಾರಿಗೆ ತರುವ ವಿಷಯವು ಪ್ರಾಂತಿಕ ಸರಕಾರಗಳ ಮುನಾಸಬನ್ನು ಹೊಂದಿಕೊಂಡಿತ್ತು ಈಗಿನ ಮಸೂದೆಯಂತೆ ಅಂಥ ಕಾನೂನು ಕಾಯದೆಗಳನ್ನು ಜಾರಿಗೆ ತರುವಂತೆ ಕೇಂದ್ರ ಸರಕಾರವು ಪ್ರಾಂತಿಕ ಸರಕಾರಗಳನ್ನು ಒತ್ತಾಯಿಸಬಹುದು ಇಂಥ ಒಂದು ಪರಿವರ್ತನೆಯನ್ನು ಮಾಡುವ ಆವಶ್ಯಕತೆಯೇ ಇರಲಿಲ್ಲ ಪ್ರಾಂತಿಕ ಸರಕಾರಗಳ ಮೇಲೆ ಯಾವ ಸಂದರ್ಭದಲ್ಲಿ ಯಾದರೂ ಕೇಂದ್ರ ಸರಕಾರವು ಯಜಮಾನಿಕೆಯನ್ನು ಮಾಡುವುದು ಪ್ರಾಂತಿಕ ಸ್ವಾಯತ್ತ ಶಾಸನಕ್ರಮದ ತತ್ವಕ್ಕೆ ಭಂಗ ತರುವುದಾಗಿದೆ. ಕೇಂದ್ರ ಸರಕಾರದ ಕಾಯದೆ ಕಾನೂನುಗಳು ಒಟ್ಟು ಹಿಂದುಸ್ಥಾನದ ಹಿತಕ್ಕಾಗಿರ ಸವಾದರೆ ಅವನ್ನು ಪ್ರಾಂತಿಕ ಸರಕಾರಗಳು ಎಂದೂ ವಿರೋಧಿಸುವುದಿಲ್ಲ ಪ್ರಾಂತಿಕ ಸರಕಾರಗಳಿಗೂ ಕೇಂದ್ರ ಸರಕಾರಕ್ಕೂ ಯಾವದೇ ವಿಷಯದಲ್ಲಿ ಮನಸ್ತಾಪವುಂಟಾಗಿ ಪ್ರಾಂತಿಕ ಸರಕಾರಗಳು ಕೇಂದ್ರ ಸರಕಾರಗಳಿಂದ ತಮ್ಮ ಆ [illegible] ಕಾರ್ಯಗಳನ್ನು ನಡೆಸಲಾರವೆಂದಾದರೆ ಶಾಸನವನ್ನು ರದ್ದುಮಾಡಿ ಎಲ್ಲಾ ಅಧಿಕಾರಗಳನ್ನು ವ್ಹಾಯ್ಸರಾಯರೂ ಗವರ್ನರರೂ ತಮ್ಮ ಕೈಗೆ ತೆಗೆದುಕೊಳ್ಳುವ ಯೋಗ್ಯ ಮಾರ್ಗವಿರುವಾಗ, ಅದನ್ನು ಬಿಟ್ಟು ಒಬ್ಬರಿಬ್ಬರ ಮೇಲೆ ಅಧಿಕಾರ ನಡೆಸುವ ದುಸ್ಸಾಹಸವೇಕೆ? ಇದು ಒಂದು ಕೈಯಿಂದ ಕೊಟ್ಟ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವ ಹಂಚಿಕೆಯಲ್ಲದೆ ಬೇರೇನಿಲ್ಲ ಹೀಗೆ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟೆಂಬ ಆ ರಾಯನ ಕುದುರೆ ಬರುತ್ತಾ ಬರುತ್ತ ಕತ್ತೆಯಾಗುತ್ತ ಬರುತ್ತಿದೆ.

ವಿರೋಧವು ಅಗತ್ಯ

ಆದುದರಿಂದ ಹಿಂದುಸ್ಥಾನದ ಸ್ವಾತಂತ್ರ್ಯ ರಥದ ಕೀಲುಗಳನ್ನು ಒಂದೊಂದಾಗಿ ಕಿತ್ತು ಹಾಕುವ ಬ್ರಿಟಿಷ್ ಸರಕಾರದ ಎಲ್ಲಾ ಪ್ರಯತ್ನಗಳನ್ನು ಯೋಗ್ಯವಾದ ಎಲ್ಲ ಉಪಾಯಗಳಿಂದ ತೀವ್ರವಾಗಿ ವಿರೋಧಿಸಬೇಕೆಂದು ಪಂಡಿತ ಜವಾಹರಲಾಲರು ಕಾಂಗ್ರೆಸ್ ಮಂತ್ರಿ ಮಂಡಲಗಳಿಗೂ ಜನತೆಗೂ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಸಂಯುಕ್ತ ಪ್ರಾಂತಗಳ ಕಾಂಗ್ರೆಸ್ ಕಮಿಟಿಯು ಬ್ರಿಟಿಷ ಸರಕಾರದ ಈ ವರ್ತನೆಯನ್ನು ಖಂಡಿಸಿ ನಿಷೇಧಿಸಿದೆ. ಆ ಕಮಿಟಿಯನ್ನು ಅನುಸರಿಸಿ ಇತರ ಕಾಂಗ್ರೆಸ್ ಕಮಿಟಿಗಳೂ ಕೆಲಸ ಮಾಡುವುದು ಅಗತ್ಯವಾಗಿದೆ ಪ್ರಾಂತಿಕ ಸರಕಾರಗಳ ಅಧಿಕಾರ ಕ್ಷೇತ್ರವನ್ನು ಆಕ್ರಮಿಸುವ ಬ್ರಿಟಿಷ್ ಸರಕಾರವನ್ನು ಕಾಂಗ್ರೆಸ್ ಮಂತ್ರಿಮಂಡಲಗಳೂ ಇತರ ಮಂತ್ರಿಮಂಡಲಗಳೂ ಯಾವ ಪ್ರಕಾರ ತಡೆಗಟ್ಟುವವೋ ನೋಡಬೇಕು. ಇಲ್ಲಿಯೇ ಅವುಗಳ ಸತ್ವಪರೀಕ್ಷೆಯಾಗುವದು,

ವೆಬಸ್ಟರ್ ಮಾರ್ಕೆಟಿನ ವಿಚಾರ

—ಕಮಿಶನರರ ಹೇಳಿಕೆ—

ವೆಬಸ್ಟರ್ ಮಾರ್ಕೆಟಿನ ಸಂಬಂಧವಾಗಿ ವರ್ತಮಾನ ಪತ್ರಿಕೆಗಳಿಗೆ ಒಂದು ಬಾತ್ಮಿಯನ್ನು ಕೊಡಬೇಕಾಗಿ ತಾ. ೫—೪—೧೯೩೯ರಲ್ಲು ಜರಗಿದ ಮ್ಯುನಿಸಿಪಲ್ ಕೌನ್ಸಿಲಿನ ಸಭೆಯಲ್ಲಿ ಆದ ನಿರ್ಣಯದ ಪ್ರಕಾರ ಈ ಬಾತ್ಮಿಯನ್ನು ಬರೆಕೊಂಡದ್ದಾಗಿರುತ್ತದೆ

೧೯೩೯—೪೦ನೇ ವರ್ಷದ ಬಾಬ್ತು ವೆಬಸ್ಟರ್ ಮಾರ್ಕೆಟಿನಲ್ಲಿ ವ್ಯಾಪಾರ ಮಾಡುವವರಿಂದ ವಸೂಲಾಗತಕ್ಕ ಫೀಸು ವಸೂಲು ಮಾಡುವ ಹಕ್ಕನ್ನು ಮಾರಾಟ ಮಾಡುವದರ ಕುರಿತು ವಾರ್ಷಿಕ ಮಾರಾಟದ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ಮ್ಯುನಿಸಿಪಲ್ ಕೌನ್ಸಿಲಿನ ನಂಬ್ರ ೧೦ನೇ ನಿರ್ಣಯದ ಪ್ರಕಾರ ಒಂದು ಕಮಿಟಿಯನ್ನು ನೇಮಿಸಲಾಗಿತ್ತು ಮತ್ತು ಆ ಕಮಿಟಿಗೆ ಕೌನ್ಸಿಲಿನ ಅಧಿಕಾರಗಳನ್ನು ಕೊಡಲ್ಪಟ್ಟಿತ್ತು ಆ ಕಮಿಟಿಯು ಮುಂದೆ ಕಮಿಶನರರು ಇಟ್ಟಂಥಾ ಸಾಮಾನ್ಯವಾದ ಷರಂ ಇಸ್ತಿಹಾರದಲ್ಲಿ ಗುತ್ತೆದಾರನು ಮಾರ್ಕೆಟಿನ ಯಾವ ಅಂಶವನ್ನಾದರೂ ಯಾ ಮಾರ್ಕೆಟಿನ ಒಳಗಣ ಯಾವ ಸ್ಥಳವನ್ನಾದರೂ ಗೋಮಾಂಸ ಯಾ ಹಂದಿ ಮಾಂಸ ವಿಕ್ರಯದ ಬಗ್ಗೆ ಬಾಡಿಗೆಗೆ ಯಾ ಗೇಣಿಗೆ ಕೊಡಕೂಡದಾಗಿ ಶರ್ತ ಸಮೂಹಿತ [illegible] ಮಸೂದೆಯನ್ನು ಅವಶ್ಯವಿದ್ದ ರೀತಿ ತಿದ್ದಿ [illegible] ಮಾಡಿದರು. ಆದರೆ ಈ ನಿರ್ಣಯಕ್ಕೆ ಶ್ರೀ [illegible] ಅನುಮತಿ ಇರಲಿಲ್ಲ ಕಮಿಟಿಯು ನಿರ್ಣಯವನ್ನು ಜಾರಿಗೆ ತರುವದೆ ಅನುಕೂಲವಾಗುವಂತೆ ತರಕಾರಿ [illegible] ಬೇರೆ ಸ್ಥಳವನ್ನು ಒದಗಿಸಿ ಕೊಡತಕ್ಕದ್ದೆಂತಲೂ ಈ ಬಗ್ಗೆ ಭವಂತಿಕೇರಿಯ ಪೂರ್ವಸಾಲಿನಲಿಯ ಮಿ. ಫಿಲಿಪ್ಸ್ ಅಲ್ಬುಕರ್ಕರ ಕಟ್ಟೋಣವನ್ನು ಉಭಯತರೂ ಸಂಮತಿಪಡುವ ಶರ್ತಗಳಿಗೆ ಒಳಪಟ್ಟು ಗೇಣಿಗೆ ವಹಿಸಿಕೊಳ್ಳಬೇಕಾಗುವದೆಂತಲೂ ಮ್ಯುನಿಸಿಪಲ್ ಕೌನ್ಸಿಲಿಗೆ ಶಿಫಾರಸು ಮಾಡಿದರು.

ಮಿ. ಅಲ್ಬುಕರ್ಕರು ಆ ಕಮಿಟಿಯ ಮೆಂಬರರ ಪೈಕಿ ಒಬ್ಬರಲ್ಲ ಮತ್ತು ಅವರು ತಮ್ಮ ಕಟ್ಟೋಣವನ್ನು ಮುನಿಸಿಪಾಲಿಟಿಗೆ ಗೇಣಿಗೆ ಕೊಡುವ ಪ್ರಸ್ತಾಪವನ್ನು ಎತ್ತಿದ್ದು ಇಲ್ಲ. ಸದ್ರಿ ಕಮಿಟಿಯ ಸೂಚನೆಯನ್ನು ಮುನಿಸಿಪಲ್ ಕೌನ್ಸಿಲಿನ ತಾ ೨೩—೧—೧೯೩೯ನೇ ಸಭೆಯ ಮುಂದೆ ಇಡಲಾಗಿ ಅದು ನಂಬ್ರ ೫೭ನೇ ನಿರ್ಣಯದ ಪ್ರಕಾರ ಮಂಜೂರು ಮಾಡಲ್ಪಟ್ಟಿತು, ಈ ನಿರ್ಣಯಕ್ಕೆ ಶ್ರೀಯುತ ಆರ್. ಆರ್. ತಲಚೇರಿಕರರ ಸಂಮತಿ ದೊರಕಲಿಲ್ಲ. ಆ ಬಳಿಕ ಮಿ. ಅಲ್ಬುಕರ್ಕರಿಂದ ಗೇಣಿಗೆ ವಹಿಸಿಕೊಳ್ಳುವ ಸ್ಟೋಲ್ಸ್‌ಗಳ ಮಾರಾಟದ ಕುರಿತು ತಯಾರಿ ಸೋಕಾದ ಇಸ್ತಿಹಾರದ ಮಸೂದೆಯು ಕೌನ್ಸಿಲಿನ ಮುಂದೂರಾತಿ ಬಗ್ಗೆ ಇಟ್ಟಿತ್ತು. ಈ ಮಸೂದೆ ನಂಬ್ರ ೯೯ನೇ ನಿರ್ಣಯದ ಪ್ರಕಾರ ಸರ್ವ ಸಂಮತದಿಂದ ಮಂಜೂರು ಮಾಡಲ್ಪಟ್ಟಿತ್ತು. ಮತ್ತು ಹಸಿತರಕಾರಿ ಹೂವ ಹಣ್ಣು ಹಂಪಲು ಮಿ ಅಲ್ಬುಕರ್ಕರ ಕಟ್ಟೋಣದಲ್ಲಿ ತೆರೆಯಲ್ಪಡುವ ಮಾರ್ಕೆಟಿನಲ್ಲಿ ಮಾರತಕ್ಕದ್ದೆಂತ ನಿರ್ಣಯಿಸಲ್ಪಟ್ಟಿತು ಆದರೆ ತಾ. ೬—೩—೧೯೩೯ರಲ್ಲು ಜರಗಿದ ಮುನಿಸಿಪಲ್ ಕೌನ್ಸಿಲಿನ ಸಭೆಯ ಮುಂದೆ ಎತ್ತಲ್ಪಟ್ಟ ಕೆಲವು ವಿಷಯಗಳ ನಿಮಿತ್ತವಾಗಿಯೂ ಕೆಲವು ಪದಾರ್ಥಗಳೂ ಯಾವ ತರಗತಿಗೆ ಬೀಳುತ್ತವೆ? ತರಕಾರಿಯೋ ಅಲ್ಲವೋ ಎಂಬದರ ಕುರಿತು ಸಂದೇಹ ಬರಬಹುದಾದ್ದರಿಂದಲೂ ಹೊಸತಾಗಿ ಮಿ ಅಲ್ಬುಕರ್ಕರಿಂದ ಗೇಣಿಗೆ ಪಡೆಕೊಳ್ಳುವ ಕಟ್ಟೋಣವನ್ನು ಒಬ್ಬ ಗುತ್ತೇದಾರನೂ ವೆಬಸ್ಟರ್ ಮಾರ್ಕೆಟನ್ನು ಮತ್ತೊಬ್ಬ ಗುತ್ತೇದಾರನೂ ವಹಿಸಿಕೊಂಡಲ್ಲಿ ತೊಂದರೆಗೆ ಆಸ್ಪದವಾಗುವುದರಿಂದ ಕಮಿಶನರು ಮತ್ತು ಫಿಲ್ತ್ ಆಫೀಸರರು ಕಷ್ಟಕ್ಕೆ ಆಸ್ಪದ ಕೊಡುವ ಕೆಲವು ಸಂಗತಿಗಳನ್ನು ಮುನಿಸಿಪಲ್ ಕೌನ್ಸಿಲಿನ ಆಲೋಚನೆಗೆ ಇಟ್ಟರು. ತಾ ೧೬—೩—೧೯೩೯ರಲ್ಲಿ ಜರಗಿದ ಸಭೆಯಲ್ಲಿ ಈ ಎಲ್ಲಾ ಸಂಗತಿಗಳನ್ನು [illegible] ವಹಿಸಿಕೊಂಡ ಸ್ಟೋಲ್ಸ್‌ಗಳನ್ನು ಕೂಡ ವೆಬಸ್ಟರ್ ಮಾರ್ಕೆಟಿನ ಅಂಶವಾಗಿ ಮಾರಾಟ ಮಾಡತಕ್ಕದ್ದು [illegible] ಮುನಿಸಿಪಾಲಿಟಿಯ ಹಕ್ಕಿನ [illegible] ಹಳೆ ವೆಬಸ್ಟರ್ ಮಾರ್ಕೆಟಿನಲ್ಲಿ ಸ್ಪಷ್ಟವಾಗಿ ನಮೂದಿಸಲ್ಪಟ್ಟ ಕೆಲವು ತರದ ತರಕಾರಿ [illegible] ನಿಷೇಧಿಸಲ್ಪಡತಕ್ಕದ್ದು ಮತ್ತು [illegible] ಅಲ್ಬುಕರ್ಕರಿಂದ ಗೇಣಿಗೆ ವಹಿಸಿಕೊಂಡ ಅಂಶದಲ್ಲಿ ಮಾಂಸ [illegible] ನಿಷೇಧಿಸಲ್ಪಡತಕ್ಕದ್ದು. ಈ ರೀತಿ ಮುಂಚಿನ ನಿರ್ಣಯವು ತಿದ್ದಲು ಮಾಡಲ್ಪಟ್ಟಿತು. ವೆಬಸ್ಟರ್ ಮಾರ್ಕೆಟನ್ನು ಮತ್ತು ಫಿಲಿಪ್ಸ್ ಅಲ್ಬುಕರ್ಕರ ಕಟ್ಟೋಣವನ್ನು ೧೯೩೯—೪೦ನೇ ವರ್ಷಕ್ಕೆ ಎಲ್. ಎಸ್. ಕೆನ್ನಡಿ [illegible] ಅವರ ದರಖಾಸ್ತಿಗೆ ವಹಿಸಿಕೊಡ ಮೇರೆಗೆ ಕೌನ್ಸಿಲಿನ ತಾ ೬—೩—೩೯ನೇ ನಂಬ್ರ ೬ನೇ ನಿರ್ಣಯದ ಪ್ರಕಾರ ಸರ್ವಾನುಮತದಿಂದ ಅವರ ದರಖಾಸ್ತು ಸ್ವೀಕಾರ ಮಾಡಲ್ಪಟ್ಟಿತು. ಫಿಲಿಪ್ಸ್ ಅಲ್ಬುಕರ್ಕರು ತಮ್ಮ ಕಟ್ಟೋಣದಲ್ಲಿ ಅಗತ್ಯವುಳ್ಳ ರಿಪೇರಿಯನ್ನು ಮಾಡಿದ ನಂತರವೇ ಸದ್ರಿ ಕಟ್ಟೋಣವನ್ನು ವರ್ಷಕ್ಕೆ ೩೦೦ ರೂಪಾಯಿ ಬಾಡಿಗೆ ನಿರ್ಣಯಿಸಿ ತಾ. [illegible] —೩೯ರಿಂದ ೧ ವರ್ಷಕ್ಕೆ ಮಾತ್ರ ಬಾಡಿಗೆಗೆ ವಹಿಸಿಕೊಂಡಿರುತ್ತದೆ. ಮತ್ತು ಹಳೆ ಮಾರ್ಕೆಟಿಗೂ ಮತ್ತು ಹೊಸ ಸ್ಟೋಲ್ಸ್‌ಗಳ ಮಧ್ಯ ಒಂದು ರಸ್ತೆ ಮಾತ್ರ ಇರುತ್ತದೆ. ಆ ಅಂಶಗಳಲ್ಲಿಯೂ ಅವೆರಡು ಒಂದು ಆಗುವದೆ ಅನುಕೂಲವಾಗುವಂತೆ ನಂಬ್ರ ೭೩ನೇ ತಾ ೨೭—೩—೩೯ನೇ ನಿರ್ಣಯಕ್ಕನುಸರಿಸಿ ಹೊಸ ಗೇಟು ಕೂಡ ತೆರೆಯಲಾಗಿರುತ್ತದೆ. ದರಖಾಸ್ತು ಪಡೆದ ಎಲ್. ಎಸ್. ಕೆನ್ನಡಿ [illegible] ಅವರು ಅವಶ್ಯ [illegible] ಭಾಗವನ್ನು ನೋಡಿರಿ.

-ವಿಜಯೋತ್ಸವ



ಪೃಗೊವಿನ [illegible] ಜರ್ಮನ್ ಸೈನ್ಯ ವಿಜಯಸಂಭ್ರಮದಿಂದ ಪಟ್ಟಣವನ್ನು ಪ್ರವೇಶಿಸುವದು.

ಸ್ವದೇಶಾಭಿಮಾನಿ

ತಾರೀಖು ೧೪—೪—೧೯೩೯

ಖಾದಿ

ಕಾಂಗ್ರೆಸ್ ಧೋರಣೆಯಲ್ಲಿ ಪಾನ ನಿರೋಧಕ್ಕಿದ್ದಷ್ಟು ಮಹತ್ವವು ಖಾದಿಗೂ ಇರುತ್ತದೆ. ಶ್ರೀ. ರಾಜಾಜಿಯವರು ಮಂತ್ರಿ ಪದವಿಯನ್ನು ಸ್ವೀಕರಿಸಿದಾಗ ಪಾನನಿರೋಧವು ತನ್ನ ಸರಕಾರದ ಧೋರಣೆಯ ಒಂದಂಗವೆಂದು ಸ್ಪಷ್ಟೀಕರಿಸಿದ್ದರು. ಆದರೆ ಅದರಷ್ಟೆ ಪ್ರಾಮುಖ್ಯ ಪ್ರಶ್ನೆಯಾಗಿರುವ ಖಾದಿಗೆ ಇವರು ಮಹತ್ವ ಕೊಡದಿರಲು ಕಾರಣವೇನು?

ಒಂದು ಬಾರಿ-ಎಸೆಂಬ್ಲಿಯಲ್ಲಿ ಪೋಲಿಸಿನವರಿಗೆ ಖಾದಿಪೋಷಾಕನ್ನು ಯಾಕೆ ಒದಗಿಸಿ ಕೊಡಬಾರದು ಎಂದು ಪ್ರಶ್ನಿಸಲು ಖಾದಿಯು ಪೋಲಿಸು ಪೋಷಾಕಿಗೆ ಯೋಗ್ಯವಾದ ವಸ್ತ್ರವಲ್ಲವೆಂದಿರುವರು ಮತ್ತು ಕೆಲವು ಸಮಯದ ಹಿಂದೆ ಪುನಹ ಇದೇ ಪ್ರಶ್ನೆಯು ಎಸೆಂಬ್ಲಿಯ ಮುಂದೆ ಬರಲು ಸರಕಾರದ ಬದಲಾವಣೆಯಾದೊಡನೆ ಸರಕಾರೀ ಕೆಲಸಗಾರರ ನೌಕರರ ಪೋಷಾಕಿನಲ್ಲಿಯೂ ಬದಲಾವಣೆಯಾಗಬೇಕಿಲ್ಲವೆಂದು ಉತ್ತರಿಸಿದರು. ಉಚ್ಚ ಕಾಂಗ್ರೆಸು ಧ್ಯೇಯಗಳಿಗೆ ರಾಜಾಜಿಯವರ ಈ ಉತ್ತರವು ಕಿಂಚಿತ್ತೂ ಸಮಾಧಾನವನ್ನೀಯದು. ಈ ಬಾರಿಯ ರಾಷ್ಟ್ರೀಯ ಸಪ್ತಾಹದ ಎರಡು ದಿನಗಳ ಹಿಂದೆ ಶ್ರೀ ರಾಜಾಜಿಯವರು ಈ ಬಾರಿಯ ರಾಷ್ಟ್ರೀಯ ಸಪ್ತಾಹವನ್ನು ಆಚರಿಸುತ್ತಿರುವಾಗ ಇತರ ಎಲ್ಲಾ ಕಾರ್ಯಕ್ರಮಗಳನ್ನು ಮೂಲೆಗೊತ್ತಿ ಖಾದಿ ಮಾರಾಟವನ್ನೇ ಮುಖ್ಯವಾಗಿ ಕೈಕೊಳ್ಳಬೇಕೆಂದು ಜನರನ್ನು ಕೇಳಿಕೊಂಡಿರುವರು. ಇದು ದೇಶದಲ್ಲಿ ಖಾದಿಯು ಹೇರಳವಾಗಿ ದಾಸ್ತಾನು ಆಗಿರುವ ಕಾರಣದಿಂದಾಗಿರುತ್ತದೆ. ತಮಿಳು ನಾಡಿನಲ್ಲಿಯೇ ಸಾಧಾರಣ ಲಕ್ಷಕ್ಕೆ ಮೇಲ್ಪಟ್ಟ ಖಾದಿಯು ದಾಸ್ತಾನು ಇದೆ. ಇವರ ಈ ಆರಿಕೆಯ ಬದಲಾಗಿ ಇದೀ ತನ್ನ ಕೈಕೆಳಗಿರುವ ಸರಕಾರದ ಸಂಸ್ಥೆಗಳಿಗೆಲ್ಲಾ ಖಾದಿಯನ್ನೇ ಒದಗಿಸಿದಲ್ಲಿ ಖಾದಿಗೆ ಉತ್ತಮ ಪ್ರೋತ್ಸಾಹವನ್ನು ಕೊಟ್ಟಂತಾಗುವುದಲ್ಲದೆ ಬಡಜನರಿಗೆ ಅನ್ನವನ್ನು ಒದಗಿಸಿದಂತಾಗುವುದು. ಆಗ ಜನರ ಮೇಲೆ ಬೇರೆ ಯಾವ ತರದ ಕರವನ್ನಾದರೂ ಹಾಕಿದಲ್ಲಿ ಜನರು ಅಂಜುತ್ತಾದರೂ ಕೊಡಲು ಶಕ್ತರಾಗುವರು. ಇದರಿಂದ ಮದ್ಯನಿಷೇಧದಿಂದ ಕಡಿಮೆಯಾದ ಆಯವು ಭರ್ತಿಯಾಗುವ ಸಂಭವವಿರುವುದಲ್ಲದೇ ಮುಂದೆ ಮದ್ಯನಿಷೇಧವನ್ನು ಪ್ರತೀಕಡೆಯಲ್ಲಿ ಹರಡಲೂ ಅನುಕೂಲವಾಗುವುದು. ಆದುದರಿಂದ ಮದ್ಯನಿಷೇಧಕ್ಕಿಂತ ಮಹತ್ವದ ಪ್ರಶ್ನೆಯು ಖಾದಿಯಾಗಿರುತ್ತದೆಂದು ಹೇಳಬಹುದು. ಉತ್ತಮ ಕಾಂಗ್ರೆಸ್ ಧ್ಯೇಯಯು ಖಾದಿ ಧರಿಸಿದ ಮಂತ್ರಿಗಳೊಡನೆ ವಿದೇಶಿ ಪೋಷಾಕನ್ನು ಧರಿಸಿದ ನೌಕರರು ಒರುವುದನ್ನು ಕಂಡ ಬೇಸರ ಪಡಬಹುದು. ಖಾದಿಯೇ ತಮ್ಮ ಜೀವಾಳವೆಂದು ನೆನಸಿರುವ ಕಾಂಗ್ರೆಸ್ ಸರಕಾರವು ಎಲ್ಲಾ ಸರಕಾರಿ ಸಂಸ್ಥೆಗಳಿಗೆ ಖಾದಿಯನ್ನು ಒದಗಿಸುವಂತೆ ಮಾಡಿ ಖಾದಿಯ ಮೇಲೆ ತಮಗಿರುವ ವಿಶ್ವಾಸವನ್ನು ಯಾಕೆ ವ್ಯಕ್ತಗೊಳಿಸಕೂಡದು. ಖಾದಿ ಪೋಷಾಕನ್ನು ಧರಿಸಿದಲ್ಲಿ ಪೋಲೀಸರೇನಾದರೂ ಕೆಲಸದಲ್ಲಿ ಕಡಿಮೆ ಆಸಕ್ತಿಯುಳ್ಳವರಾಗರು. ಆಸ್ಪತ್ರೆಯ ನರ್ಸುಗಳು ತಮ್ಮ ಕೆಲಸದಲ್ಲಿ ಬದಲಾವಣೆಯನ್ನು ತೋರಿಸರು. ಈಗ ಹೆಚ್ಚಾಗಿ ದಾಸ್ತಾನಾಗಿರುವ ಹೆಚ್ಚಿನ ಖಾದಿಯು ಕೆಲವೇ ಸರಕಾರಿ ಸಂಸ್ಥೆಗಳಲ್ಲಿ ಖಾದಿಯನ್ನು ಉಪಯೋಗಿಸಿದಲ್ಲಿ ಸಂಪೂರ್ಣವಾಗಿ ಮುಗಿದುಹೋಗುವುದು. ಆದುದರಿಂದ ಮುಖ್ಯ ಮಂತ್ರಿಗಳು ಇನ್ನಾದರೂ ಖಾದಿಗೆ ತಕ್ಕ ಪ್ರೋತ್ಸಾಹವನ್ನೀಯುವರೆಂದು ನಂಬಲಾಗಿದೆ. ಶ್ರೀ ರಾಜಾಜಿಯವರ ವಿನಂತಿಯ ಮೇರೆಗೆ ಮದ್ರಾಸಿನ ಮಂತ್ರಿವರ್ಯರಾದ ಶ್ರೀ. ಎಸ್. ರಾಮನಾಥನ್‌ರವರು ತಮಿಳು ನಾಡಿನ ಖಾದಿ ವಸ್ತ್ರಾಲಯದ ಶಾಖೆಯಲ್ಲಿ ಒಂದು ಗಂಟೆಯ ತನಕ ನಿಂತು ಖಾದಿಯ ಮಾರಾಟವನ್ನು ಮಾಡಿ ಖಾದಿಯ ಮೇಲೆ ತನಗಿರುವ ನಿಷ್ಠೆಯನ್ನು ಪ್ರಕಟಿಸಿರುವರು. ಆದುದರಿಂದ ನಾವು ಆದಷ್ಟು ಖಾದಿಗೆ ಪ್ರೋತ್ಸಾಹವನ್ನು ಕೊಟ್ಟು ನಮ್ಮ ದೇಶದ ಈ ಕೈಗಾರಿಕೆಯನ್ನು ಉಜ್ಜೀವಿಸಿದಲ್ಲಿ ಎಲ್ಲಾ ವಿಧದಲ್ಲಿಯೂ ನಮಗೆ ಪ್ರಯೋಜನ ವಿರುವುದು. ಕರ್ನಾಟಕದಲ್ಲಿ ಏಕೆ, ಇಡೀ ಹಿಂದೂ ದೇಶದಲ್ಲಿಯೂ ರಾಷ್ಟ್ರೀಯ ಸಪ್ತಾಹ ಮೊದಲಾದ ಸಮಾರಂಭಗಳಲ್ಲಿ ಮಾತ್ರ ಹೆಚ್ಚಾದ ಖಾದಿ ಮಾರಿಹೋಗುತ್ತದೆ. ಏನಹ ಬಾಕಿ ಕಾಲದಲ್ಲಿ ಖಾದಿಗೆ ತಕ್ಕಷ್ಟು ಪ್ರೋತ್ಸಾಹವು ದೊರಕಿಯುವುದಿಲ್ಲ. ಕಾಂಗ್ರೆಸ್ ಸರಕಾರವು ಬರುವ ಮೊದಲಾದರೂ (ಅಸಹಕಾರ ಚಳವಳದ ಸಮಯ) ಅನೇಕ ಮಂದಿಗಳು ಖಾದಿಯನ್ನು ಧರಿಸಲು ಬೆದರುತಿದ್ದರು, ಆದರೆ ಈಗ ಅಂತಹ ಬೆದರಿಕೆಯು ಇಲ್ಲದಿರುವುದರಿಂದ ಇನ್ನಾದರೂ ಜನರು ಖಾದಿಗೆ ಸಾಕಷ್ಟು ಪ್ರೋತ್ಸಾಹವನ್ನೀಯುವರೆಂದು ಹಾರೈಸುತ್ತೇವೆ.

———

...ದಲ್ಲಿ ಮುಂದುವರಿದಿರುತ್ತಾರೆಂದು ಭಾವಿಸುವ ಹಾಗಿಲ್ಲ, ತಮ್ಮ ಅಭಿವೃದ್ಧಿಗಾಗಿ ಮುಸಲ್ಮಾನರೂ ಸಹ ವಿಶೇಷವಾಗಿ ದುಡಿಯುತಿದ್ದಾರೆ. ೧೯೦೭ನೇ ಇಸವಿಯಲ್ಲಿ ಸೆಂಟ್ರಲ್ ಮಹಮದನ್ ಎಸೋಸಿಯೇಷನಿನವರ ಆದಾಯವು ೧,೪೭೮ ರೂಪಾಯಿಗಳಿದ್ದುದು ೧೯೩೭ರಲ್ಲಿ ೧೮,೫೪೬ ರೂಪಾಯಿಗಳಾಗಿದ್ದಿತು. ಈ ಹಣವನ್ನೇ ಸ್ವಲ್ಪವೂ ಪೋಲು ಮಾಡದೆ ಅದರ ಪ್ರಯೋಜನವನ್ನು ಸಂಸ್ಥಾನದ ಮುಸಲ್ಮಾನರಿಗೆ ಸಂಪೂರ್ಣವಾಗಿ ಒದಗಿಸಿ ಕೊಡಲು ನವಾಬ್ ಗುಲಾಮ್ ಮಹಮ್ಮದ್ ಸಾಹೇಬ್ ಕಲಾಮಿಯವರೂ, ಖಾನ್ ಬಹದೂರ್ ಮಹಮ್ಮದ್ ಅಬ್ಬಾಸ್ ಖಾನ್ ಸಾಹೇಬರವರೂ, ಅವಿಶ್ರಾಂತರಾಗಿ ದುಡಿಯುತಿದ್ದಾರೆ.

ಮುಸಲ್ಮಾನರು ಹಿಂದುಳಿದ ವಿಂಗಡದವರೇ? ಹಾಗಿದ್ದರೆ, ತಮ್ಮ ತಮ್ಮ ಆಕಾಂಕ್ಷೆಗಳ ಸಾಧನೆಗಾಗಿ ಶ್ರಮಿಸುವುದರಲ್ಲಿ ಅವರು ಯಾವ ವಿಧದಲ್ಲಿಯೂ ಇತರರಿಗೆ ಹಿಂದೆ ಬಿದ್ದಿಲ್ಲ. ಎಸೋಸಿಯೇಶನಿನವರು ಮೊದಲು ಸಣ್ಣ ಕಟ್ಟಡದಲ್ಲಿ ತಮ್ಮ ಕೆಲಸ ಕಾರ್ಯಗಳನ್ನು ಪ್ರಾರಂಭಿಸಿದ್ದರು. ಈಗ ಅವರ ಸ್ವಂತ ಕಟ್ಟಡದ ಬೆಲೆ ೭೩,೬೭೪ ರೂಪಾಯಿಗಳಾಗುತ್ತದೆ. ಅವರ ಆಡಳಿತಕ್ಕೊಳಪಟ್ಟ ವಿದ್ಯಾರ್ಥಿ ಭವನ ಮತ್ತು ಇತರ ಜಮೀನುಗಳ ಬೆಲೆಯು ೧೦,೦೦೦ ರೂಪಾಯಿಗಳಾಗಬಹುದು.

೧೬೦೭ನೇ ಇಸವಿಯಲ್ಲಿಯೇ ಅಸೋಸಿಯೇಷನಿನವರು ಒಂದು ಧರ್ಮಾರ್ಥ ವಾಚನಾಲಯ...



ಮುಂಬಯಿಯಲ್ಲಿ ಪಾನನಿಷೇಧ

ಪಾನನಿಷೇಧ ಪ್ರಚಾರ ಸಪ್ತಾಹದಲ್ಲಿ ಸ್ವಯಂಸೇವಕರು ಬೀದಿ ಬೀದಿ ಗಸ್ತು ಮಾಡುವುದು

ಮೈಸೂರಿನಲ್ಲಿ ಮುಸಲ್ಮಾನರ ವಿದ್ಯಾಭ್ಯಾಸ

ಮೈಸೂರಿನ ಸೆಂಟ್ರಲ್ ಮಹಮ್ಮಡನ್ ಎಸೋಸಿಯೇಷನಿನವರು ಕಳೆದ ೩೦ ವರ್ಷಗಳಿಂದಲೂ ತಾವು ನೆರವೇರಿಸಿರುವ ಕೆಲಸ ಕಾರ್ಯಗಳನ್ನು ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಿರುತ್ತಾರೆ. ತಮ್ಮ ಏಳಿಗೆಗಾಗಿ ನಿರಂತರವೂ ದುಡಿಯುತ್ತಿರುವ ಒಂದು ಕೋಮಿನವರಿಗೆ ಸರಕಾರದವರ ಸಹಾನುಭೂತಿ ಮತ್ತು ಬೆಂಬಲಗಳೂ ದೊರಕಿದಲ್ಲಿ ಅವರು ಎಷ್ಟರಮಟ್ಟಿಗೆ ಮುಂದುವರಿಯಬಹುದೆಂಬುದನ್ನು ಮೇಲೆ ತಿಳಿಸಿದವರ ಕಾರ್ಯಕಲಾಪಗಳಿಂದ ತಿಳಿದುಕೊಳ್ಳಬಹುದು. ಮುಸಲ್ಮಾನ ಬಾಲಕಬಾಲಿಕೆಯರಿಗಾಗಿಯೇ ಪ್ರತ್ಯೇಕವಾಗಿ ಏರ್ಪಡಿಸಿದ ಶಾಲೆಗಳ ಸಂಖ್ಯೆಯು ಕಳೆದ ವರ್ಷ ೯೫೭ರಿಂದ ೬೦೫ಕ್ಕೆ ಏರಿತು. ಆ ಶಾಲೆಗಳಲ್ಲಿ ಓದುವವರ ಸಂಖ್ಯೆಯು ೩೪,೨೮೭ರಿಂದ ೩೬,೮೮೩ಕ್ಕೇರಿತು. ಇದಲ್ಲದೆ ಸುಮಾರು ೭,೨೪೯ ಮಂದಿ ಮುಸಲ್ಮಾನ ವಿದ್ಯಾರ್ಥಿಗಳು ಸಾರ್ವಜನಿಕ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. ಸಂಸ್ಥಾನದ ಮುಸಲ್ಮಾನರ ಜನಸಂಖ್ಯೆಯ ಸೇಕಡ ೧೩ರಷ್ಟು ಮಂದಿ ಶಾಲೆಗಳಿಗೆ ಹೋಗುವ ವಯಸ್ಸಿನವರಾಗಿರುತ್ತಾರೆ. ಇವರ ಪೈಕಿ ಸೇಕಡ ೬೩.೦೪ರಷ್ಟು ಮಂದಿ ಶಾಲೆಗಳಲ್ಲಿ ವ್ಯಾಸಂಗ ಮಾಡುತಿದ್ದಾರೆ.

ಸರಕಾರದವರ ಸಹಾಯದಿಂದ ಮಾತ್ರವೇ ಮುಸಲ್ಮಾನರು ಇಷ್ಟು ಮಟ್ಟಿಗೆ ವಿದ್ಯಾಭ್ಯಾಸವನ್ನು ಪಡೆದಿರುವರೆಂದು ತಿಳಿಯಬಾರದು. ಮಹಮ್ಮದೀಯ ಪ್ರಶ್ನಾವಳಿಯಿಂದ ಶಿಕ್ಷಣಕ್ಕಾಗಿ ಭಾರೀ ಹಣವನ್ನು ಮತ್ತು ಪುಸ್ತಕ ಭಂಡಾರವನ್ನು ತೆರೆದರು. ಈ ಸಂಸ್ಥೆಯು ಬೆಂಗಳೂರು ನಗರದಲ್ಲಿ ಅತ್ಯಂತ ಉತ್ತಮವಾದುದಾಗಿದೆ. ಇದು ಮಧ್ಯ ಸ್ಥಳದಲ್ಲಿದ್ದು ಎಲ್ಲರೂ ಬಂದು ಓದಲು ಅನುಕೂಲವಾಗಿದೆ. ಕಟ್ಟಡವು ಸಹ ಗಾಳಿ ಬೆಳಕುಗಳಿಂದ ಕೂಡಿ ಬಹಳ ಚೆನ್ನಾಗಿದೆ. ಇಲ್ಲಿಗೆ ದಿನವೂ ದಿನ್ಕೆ ಸರಾಸರಿ ೨೦೦ ಮಂದಿ ಬಂದು ವೃತ್ತಪತ್ರಿಕೆಗಳನ್ನು ಓದುತಿದ್ದಾರೆ. ಈ ಸಂಸ್ಥೆಯ ವೆಚ್ಚಕ್ಕಾಗಿ ತಿಂಗಳಿಗೆ ೧೨೦ ರೂಪಾಯಿಗಳು ಬೇಕಾಗುತ್ತವೆ. ಸರಕಾರದವರು ೨೫ ರೂಪಾಯಿಗಳನ್ನು, ಬೆಂಗಳೂರು ನಗರಸಭೆಯವರು ೨೫ ರೂಪಾಯಿಗಳನ್ನು ಈ ಸಂಸ್ಥೆಗೆ ಪ್ರತಿ ತಿಂಗಳಲ್ಲಿಯೂ ಕೊಡುತಿದ್ದಾರೆ.

ಮುಸಲ್ಮಾನ್ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಲು ೧೫೫೦೦ ರೂಪಾಯಿಗಳನ್ನು ವೆಚ್ಚಮಾಡುತ್ತಾರೆ. ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಶಾಲಾವೇತನಗಳನ್ನು ಕೊಡುವುದಕ್ಕಾಗಿ ಮುಸಲ್ಮಾನ್ ಮಹಾಜನರು ೨೦,೦೦೦ ರೂಪಾಯಿಗಳ ಮೂಲಧನವನ್ನು ಸರ್ಕಾರದಲ್ಲಿಡಬೇಕೆಂದೂ — ಹಣದ ಮೇಲಿನ ಬಡ್ಡಿಯು ಎಷ್ಟಾಗ ಬಹುದೋ ಅಷ್ಟನ್ನು ಸರ್ಕಾರದವರು ಕೊಡಬೇಕೆಂದೂ ಒಪ್ಪಿಕೊಂಡು ಬಂದ ಒಟ್ಟು ಹಣವನ್ನು ವಿದ್ಯಾರ್ಥಿವೇತನಗಳನ್ನು ಕೊಡುವುದಕ್ಕಾಗಿ ಉಪಯೋಗಿಸಬೇಕೆಂದೂ ಸರ್ಕಾರದವರು ಒಂದು ಸ್ಕೀಮನ್ನು ತಯಾರ ಮಾಡಿ ಮಂಜೂರುಮಾಡಿರುತ್ತಾರೆ. ಈ ಹಣವನ್ನು ಹೈಸ್ಕೂಲುಗಳಲ್ಲಿ ಓದುವ ಅರ್ಹರಾದ ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಶಾಲಾ ವೇತನಗಳನ್ನು ಕೊಡಲು ಪೂರ್ತಿಯಾಗಿ ವಿನಿಯೋಗಿಸಬೇಕೆಂದು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರರನ್ನು ಕೋರಲಾಗಿದೆ.

ವೆಬಸ್ಟರ್ ಮಾರ್ಕೆಟಿನ ವಿಚಾರ

(೧೧ನೇ ಪುಟದಿಂದ ಮುಂದುವರಿದುದು)

ವುಳ್ಳ ಎಗ್ರಿಮೆಂಟು ಕೂಡ ಬರಕೊಟ್ಟಿರುತ್ತಾರೆ. ಸದ್ರಿ ಎಗ್ರಿಮೆಂಟು ಮೇರೆಗೆ ಹೊಸ ಸ್ಟಾಲ್ಸುಗಳಲ್ಲಿ ಮಾಂಸ ಮೀನು ಮಾರಾಟ ಮಾಡಕೂಡದಾಗಿಯೂ ಹಳೆ ಮಾರ್ಕೆಟಿನಲ್ಲಿ ನಿಯಮಿಸಿದ ತರಕಾರಿ ಮತ್ತು ಹೂ ಮಾರಾಟ ಮಾಡಕೂಡದಾಗಿಯೂ ಇದಕ್ಕೆ ವಿರೋಧವಾಗಿ ನಡೆದ್ದಲ್ಲಿ ಅವರ ತಕ್ಸೀರಿಗೆ ಒಳಗಾಗಬೇಕೆಂತ ವಗೈರೆ ಶರ್ತಗಳು ಇರುತ್ತವೆ. ಈ ಕರಾರು ತಾ ೧-೪-೩೯ರಿಂದ ಜ್ಯಾರಿಗೆ ಬಂದಿರುತ್ತದೆ. ಈ ವಿಷಯ ಕೌನ್ಸಿಲ್‌ನವರು ತಾ. ೫-೪-೩೯ರಲ್ಲಿ ಆದ ಸಭೆಯಲ್ಲಿ ಸೂಚಿಸಿರುತ್ತಾರೆ.

ನಂಬ್ರ ೧೦ನೇ (ತಾ ೯-೧-೩೯)ನೇ ನಿರ್ಣಯದ ಪ್ರಕಾರ ನೇಮಿಸಲ್ಪಟ್ಟ ಕಮಿಟಿಯವರು ನೂತನವಾಗಿ ಕಟ್ಟಿಸುವರೆ ಆಲೋಚಿಸಿರುವ ವೆಬಸ್ಟರ ಮಾರ್ಕೆಟಿನ ಕೆಲಸದ ಸಂಬಂಧ ಟೆಂಡರ್ ಕರೆಯುವ ಸಂದರ್ಭ ಒಂದೊದಗಬಹುದಾದುದರಿಂದ ಮಾರಾಟದ ಇಸ್ತಿಹಾರಿನಲ್ಲಿ ಯಾವ ಶರ್ತಗಳನ್ನು ಕಾಣಿಸಬಹುದೆಂದು ಆಲೋಚಿಸಬೇಕಾಗಿತ್ತು. ಕಮಿಟಿಯವರು ಮಾರ್ಕೆಟಿನ ಪ್ಲೇನಗಳನ್ನು ಬದಲಾಯಿಸುವ ಅವಶ್ಯಕತೆ ಉಂಟೆಂತ ತಾ ೧೬-೧-೩೯ನೇ ಸಭೆಯಲ್ಲಿ ಅಭಿಪ್ರಾಯಪಟ್ಟರು. ಮಾರ್ಕೆಟು ರಸ್ತೆಯ ಬಳಿ ಇರುವ ಕಟ್ಟೋಣಗಳ ಜೀರ್ಣೋದ್ಧಾರವೂ ಸದ್ರಿ ಪ್ಲೇನು ಯಾ ಎಸ್ಟಿಮೇಟುಗಳಲ್ಲಿ ಇಲ್ಲದಿರುವುದರಿಂದಲೂ ಅವುಗಳನ್ನು ಹೊಸತಾಗಿ ಕಟ್ಟಿಸುವುದು ಅಗತ್ಯವೆಂತ ಕಂಡುಬಂದದ್ದರಿಂದ ಅವುಗಳ ಪ್ರಸ್ತಾಪವಿಲ್ಲದೇನೇ ಮಾಡಿದ ಪ್ಲೇನು ಅಪೂರ್ಣವೆಂತ ಕಮಿಟಿಯವರ ಅಭಿಪ್ರಾಯಪಟ್ಟು ಪುನ ಮಾರ್ಕೆಟಿನ ಡಿಸೈನ ಮತ್ತು ಪ್ಲೇನುಗಳನ್ನು ಪ್ರತಿಷ್ಠೆ ಇರುವ ಇಂಜಿನಿಯರಿಂಗ್ ಫರ್ಮುಗಳಿಂದ ತರಿಸಬೇಕೆಂತ ಶಿಫಾರಸು ಮಾಡಿದರು. ಈ ಶಿಫಾರಸು ಕೌನ್ಸಿಲಿನ ತಾ ೨೩-೧-೩೯ನೇ ನಂಬ್ರ ೫೭ನೇ ನಿರ್ಣಯದ ಪ್ರಕಾರ ಅಂಗೀಕರಿಸಲ್ಪಟ್ಟಿತು. ಇಂಜಿನಿಯರಿಂಗ್ ಫರ್ಮುಗಳು ಪ್ಲೇನಗಳನ್ನು ತಯಾರಿಸಿ ಕೊಡಗೆಬೇಕಾದರೆ ಹೆಚ್ಚಿನ ಖರ್ಚು ಬೀಳುವುದರಿಂದ ಈ ಯೋಚನೆಯನ್ನು ಬಿಟ್ಟು ಡಿಪಾರ್ಟ್‌ಮೆಂಟ್ ಮೂಲಕವೇ ಪ್ಲೇನುಗಳನ್ನು ತಯಾರಿಸುವುದೆಂತ ನಿಶ್ಚಯಿಸಿ ಕೌನ್ಸಿಲು ಆ ಬಗ್ಗೆ ನಂಬ್ರ ೫೨ ತಾ ೩-೩-೩೯ನೇ ನಿರ್ಣಯದ ಮೇರೆಗೆ ಒಂದು ಕಮಿಟಿಯನ್ನು ನೇಮಿಸಿತು. ಸದರಿ ಕಮಿಟಿಯವರು ೨ ದಫೆ ಸಭೆ ಕೂಡಿ ಆಲೋಚಿಸಿ ಅವರು ಕೊಟ್ಟ ಸೂಚನೆಗಳ ಪ್ರಕಾರ ಒಂದು ಪ್ಲೇನು ತಯಾರಿಸಿರುತ್ತದೆ. ಡಿಪ್ಯುಟಿ ಸೆಕ್ರೆಟರಿ ಇಂಜಿನಿಯರು ಮಾರ್ಕೆಟಿನ ತಿಂಗಳ ಆಫೀಸರಿಗೆ ಮಂಗಳೂರಿಗೆ ಚಿತ್ತೈಸಿದ್ದರು. ತಯಾರಿಸಿದ ಈ ಪ್ಲೇನನ್ನು ಅವರಿಗೆ ತೋರಿಸಿದ್ದಲ್ಲಿ ಅವರ ಕೆಲವು ಸೂಚನೆಗಳನ್ನು ಕೊಟ್ಟಿರುತ್ತಾರೆ. ಅವುಗಳನ್ನು ಸದ್ರಿ ಕಮಿಟಿಯವರು ಯೋಚಿಸಲಿಕ್ಕಿರುವರು. ಮಾರ್ಕೆಟ ದರಖಾಸ್ತುದಾರರಾದ ಡಬ್ಲ್ಯು ಎಸ್ ಕ್ರೂಸರು ಮಾಡಿಕೊಟ್ಟ ಕರಾರಿನಲ್ಲಿ ಕೂಡಾ ಮಾರ್ಕೆಟಿನಲ್ಲಿ ಸ್ವಲ್ಪ ಅಂಶದಲ್ಲಿ ಕಟ್ಟೋಣದ ಬಗ್ಗೆ ಬೇಕಾಗುವ ಮರಮುಟ್ಟು ವಗೈರೆ ಸಾಮಾನುಗಳನ್ನು ದಾಸ್ತಾನು ಮಾಡ ವರೆ ಉಪಯೋಗಿಸುವ ಹಕ್ಕನ್ನು ಕೌನ್ಸಿಲಿನವರೇ ನಂಬ್ರ 466-2-39ನೇ ನಿರ್ಣಯದ ಮೇರೆಗೆ ಇಟ್ಟುಕೊಂಡಿರುತ್ತಾರೆ. ಹೊಸ ಪ್ಲೇನು ಮತ್ತು ಎಸ್ಟಿಮೇಟು ಬರುವ ಒಕ್ಟೋಬರ ತಿಂಗಳ ಮುಂಚಿತವಾಗಿಯೇ ತಯಾರಾಗಿ ಮೇಲಾಫಿಸರಿಂದ ಸೆಂಕ್ಷನ್ ಕೂಡಾ ಆದೀತೆಂಬ ಭರವಸೆಯಿಂದ ಸರಕಾರದಿಂದ ಕೊಡಲ್ಪಡಬಹುದಾದ ಸಾಲವು ೧೯೩೯ನೇ ಇಸವಿ ಅಕ್ಟೋಬರ ತಿಂಗಳಲ್ಲಿ ಸಿಕ್ಕುವಂತೆ ಅಗತ್ಯವುಳ್ಳ ಎಲ್ಲಾ ಕಾರ್ಯವನ್ನು ಈಗಲೇ ಮಾಡಬೇಕಾಗಿ ಕೌನ್ಸಿಲಿನ ನಂಬ್ರ 52-13-3-39ನೇ ನಿರ್ಣಯದ ಪ್ರಕಾರ ನಿರ್ಧಾರವಾಗಿರುತ್ತದೆ. ಆದ್ದರಿಂದ ಕೌನ್ಸಿಲಿನವರು ಮಾರ್ಕೆಟ್ಟಿನ ಜೀರ್ಣೋದ್ಧಾರದ ಕೆಲಸವನ್ನು ಆದಷ್ಟು ತ್ವರ್ಯದಿಂದ ಪೂರೈಸಬೇಕೆಂಬ ಯೋಚನೆಯಲ್ಲಿದ್ದಾರೆಂತ ಸ್ಪಷ್ಟವಾಗುವುದು.

★ ರಾಜಕೋಟೆ ಸಂಸ್ಥಾನದ ದೂಷಿತ ವಾತಾವರಣ ★

ದುರ್ಮಂತ್ರಿ ವೀರವಲ್ಲರ ದುಸ್ಸಾಹಸ

ಮಹಾತ್ಮಾಜಿಯವರು ಪುನಃ ರಾಜಕೋಟೆಕ್ಕೆ

ಮಹಾತ್ಮಾಜಿಯವರೂ ಸರದಾರ ಪಟೇಲರೂ, ನ್ಯಾಯವಾದಿಗಳೂ ಸತ್ಯವಾದಿಗಳೂ ಆಗಿದ್ದಾರೆಂದು ಇಂಡಿಯದ ಪ್ರಧಾನ ನ್ಯಾಯಾಧೀಶ ಸರ್ ಮಾರಿಸ್ ಗ್ವಾಯರರು ತೀರ್ಮಾನಿಸಿ ರಾಜಕೋಟೆ ಸುಧಾರಣಾ ಸಮಿತಿಗೆ ಸರದಾರ ಪಟೇಲರು ಸೂಚಿಸಿದ ರಾಜಕೋಟೆದ ಏಳು ಮಂದಿಯನ್ನೇ ಠಾಕೋರ ಸಾಹೇಬರ ನೇಮಿಸಬೇಕೆಂದು ಸ್ಪಷ್ಟವಾಗಿ ಹೇಳಿರುವರು ಇಷ್ಟೆಲ್ಲ ಗೊಂದಲವು ಯಾಕಾಯಿತೆಂದರೆ, ಸರದಾರ ಪಟೇಲರು ಕಳುಹಿಸಿದ ಹೆಸರುಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಕೊನೆಯ ಅಧಿಕಾರವು ತನಗಿರುವದೆಂದೂ, ಸಂಸ್ಥಾನದ ಅಲ್ಪಸಂಖ್ಯಾಕರ ಹಿತರಕ್ಷಣೆಯ ಹೊಣೆಗಾರಿಕೆ ತನ್ನ ಮೇಲಿದೆ ಎಂದೂ ಠಾಕೋರ ಸಾಹೇಬರು ಪೊಳ್ಳುವಾದವನ್ನು ಮುಂದೆ ತಂದದ್ದರು. ಸರದಾರ ಪಟೇಲರು ಅಲ್ಪಸಂಖ್ಯಾಕರ ಹಿತವನ್ನು ಲಕ್ಷ್ಯದಲ್ಲಿಟ್ಟುಕೊಳ್ಳಲಿಲ್ಲವೆಂಬ ಕಾರಣವನ್ನು ಮುಂದಿಟ್ಟುಕೊಂಡೇ ಅವರು ಪಟೇಲರು ಸೂಚಿಸಿದ ಹೆಸರುಗಳನ್ನು ತಿರಸ್ಕರಿಸಿದ್ದರು. ಆದರೆ ಅದರ ಆಲೋಚನೆಯನ್ನು ಮಾಡುವದಾಗಿ ಮಹಾತ್ಮಾಜಿಯವರು ಠಾಕೋರರಿಗೆ ಆಶ್ವಾಸನೆಯನ್ನು ಕೊಟ್ಟಾಗ ಮಾತ್ರ ಠಾಕೋರರು ಅವರ ಮಾತನ್ನು ಒಪ್ಪಲಿಲ್ಲ! ಇದುವೇ ಮಹಾತ್ಮಾಜಿಯವರು ಆಮರಣಾಂತ ಉಪವಾಸವನ್ನು ಕೈಕೊಳ್ಳಲಿಕ್ಕೆ ಕಾರಣವಾಯಿತು. ಈಗಲಾದರೂ ಅಲ್ಪಸಂಖ್ಯಾಕರ ಹಿತವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಸರದಾರ ಪಟೇಲರು ಸುಧಾರಣಾ ಸಮಿತಿಗೆ ಏಳು ಮಂದಿಯ ಹೆಸರುಗಳನ್ನು ಕಳುಹಿಸಿಕೊಡುವರು.

ವೀರವಲ್ಲರ ದುಸ್ಸಾಹಸ

ಇಷ್ಟೆಲ್ಲ ಗೊಂದಲಕ್ಕೆ ದುರ್ಮಂತ್ರಿ ವೀರವಲ್ಲರು ಕಾರಣರಾಗಿರುವರು. ಸರದಾರ ಪಟೇಲರು ಎಲ್ಲರ ಮೆಚ್ಚುಗೆಗೆ ಬರುವ ಹೆಸರುಗಳನ್ನೇ ಸೂಚಿಸಿದರೂ, ರಾಜಕೋಟೆದಲ್ಲಿ ಇನ್ನೇನೆಲ್ಲ ಗೊಂದಲಗಳಾಗುವವೋ ಹೇಳಲಿಕ್ಕೆ ಬರುವದಿಲ್ಲ. 'ವೀರವಲ್ಲರ ಪ್ರಭಾವದಿಂದ ಠಾಕೋರರು ಎಷ್ಟು ಪ್ರಭಾವಿತರಾಗಿರುವರೆಂದರೆ, ಅವರು ತಮ್ಮ ಸ್ವಂತ ವಿವೇಕ ಬುದ್ಧಿಗಳನ್ನೆಲ್ಲ ಕಳಕೊಂಡು ವೀರವಲ್ಲರ ಸೂತ್ರದ ಗೊಂಬೆಗಳಾಗಿ ಪರಿಣಮಿಸಿರುವರು' ಅತ್ತ ವೀರವಲ್ಲರು ತಮ್ಮ ಆಟವನ್ನು ಪೂರ್ಣತೋರಿಸುವ ಹಟದಲ್ಲಿದ್ದಾರೆ ಅವರು ಸುಧಾರಿತ ನಮೂನೆಯ ಮೊದಲನೆ ದರ್ಜೆಯ ದಂಗೆಗಾರರಾಗಿದ್ದಾರೆ, ಅವರ 'ಕೈಯಲ್ಲಿ ಠಾಕೋರರ ಸರ್ವನಾಶವಾಗಲಿದೆ ರಾಜಕೋಟೆದ ಮುಸಲ್ಮಾನರೂ ಭಾಯಾತರೂ ಎಷ್ಟು ಮಾತ್ರಕ್ಕೂ ತಮ್ಮ ಸಾಧನೆಯನ್ನು ಬಿಡಲಾರರೆಂದೂ, ಅದರಿಂದ ರಕ್ತವೇ ಚೆಲ್ಲಿಹೋಗಬಹುದೆಂದೂ ಹೇಳಿ ವೀರವಲ್ಲರು ಆ ಅಲ್ಪ ಸಂಖ್ಯಾಕರಿಗೆ ಮುಂದಿನ ಕಾರ್ಯಸಾಧನೆಯ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಮತ್ತೆ ಸುಧಾರಣಾಸಮಿತಿಯೊಂದಿಗೆ ಸಂಸ್ಥಾನ ಸರಕಾರವು ಸಹಕರಿಸಲಿಕ್ಕಿಲ್ಲವೆಂದೂ, ಸುಧಾರಣಾಸಮಿತಿಯ ಸಿಫಾರಸುಗಳನ್ನು ಸ್ವೀಕರಿಸಲಿಕ್ಕೆ ಅಥವಾ ತಿರಸ್ಕರಿಸಲಿಕ್ಕೆ ಠಾಕೋರರು ಪೂರ್ಣ ಸ್ವತಂತ್ರರಿದ್ದಾರೆಂದೂ ಹೇಳಿದ್ದಾರೆ ಆದ್ದರಿಂದ ವೀರವಲ್ಲರನ್ನು ರಾಜಕೋಟೆದಲ್ಲಿ ಅವರಷ್ಟಕ್ಕೆ ಬಿಟ್ಟುಬಿಟ್ಟರೆ, ರಾಜಕೋಟೆದಲ್ಲಿ ಸುಧಾರಣೆಯ ಮಾರ್ಗವು ಕಲ್ಲುಮುಳ್ಳುಗಳಿಂದ ತುಂಬಿ ಹೋಗುವದು ನಿಶ್ಚಯ. ಅವರು ರಾಜಕೋಟೆದ ಪ್ರತಿಯೊಂದು ಜಾತಿ ಮತ ಸಂಪ್ರದಾಯದ ಜನರ ಹಿತರಕ್ಷಣೆಯ ಹೊಣೆಗಾರಿಕೆಯು ಠಾಕೋರರ ಮೇಲಿದೆ ಎಂದು ಹೇಳಿ ಅವರ ಮೂಲಕ ರಾಜಕೋಟೆದ ಪ್ರಗತಿಗೆ ಎಲ್ಲ ಉಪಾಯಗಳಿಂದ ವಿಘ್ನವಿಡ್ಡೂರಗಳನ್ನು ತಂದು ಹಾಕುವರು ರಾಜಕೋಟೆದ ಶಾಂತತೆ ಮತ್ತು ನೆಮ್ಮದಿ ಭಂಗಕ್ಕೆ ವೀರವಲ್ಲರ ದುಸ್ಸಾಹಸ ಮತ್ತು ದುಸ್ವಾರ್ಥವೇ ಕಾರಣವಾಗುವ ಭಯವಿದೆ. ಆದ್ದರಿಂದ ವಾಯ್ಸರಾಯರು ಅವರನ್ನು ರಾಜಕೋಟೆದಿಂದ ಹೊರಗೆ ಆದಷ್ಟು ದೂರಕ್ಕೆ ಕಳುಹಿಸಿಕೊಟ್ಟರೆ ಸಂಸ್ಥಾನದ ಮತ್ತು ಜನತೆಯ ಹಿತವಾಗುವದು ಅಥವಾ ದುರ್ಮಂತ್ರಿ ವೀರವಲ್ಲರ ಮಂತ್ರಾಲೋಚನೆಯನ್ನು ಕೇಳಿ, ಸರ್ ಮಾರಿಸ್ ಗ್ವಾಯರ ಇತ್ಯರ್ಥಕ್ಕೆ ಭಂಗಬರುವ ಯಾವ ವೇಳೆ ಕೆಲಸವನ್ನು ಮಾಡಿದರೂ ಠಾಕೋರರು ಪದಚ್ಯುತರಾಗಬೇಕಾದೀತೆಂದು ವಾಯ್ಸರಾಯರು ಎಚ್ಚರಿಕೆಯನ್ನು ಕಳುಹಿಸಿದರೂ ಆಗಬಹುದು ಆಗ ವೀರವಲ್ಲರು ಕೈಕಾಲು ಮುರಿದುಕೊಂಡವರಾಗಿ ಮೂಲೆ ಸೇರುವರು'

ಮಹಾತ್ಮಾಜಿಯವರ ಕಾರ್ಯಭಾಗ

ವೀರವಲ್ಲರು ಎಂಥವರೆಂದು ಮಹಾತ್ಮಾಜಿಯವರು ಅವರನ್ನು ಚೆನ್ನಾಗಿ ತಿಳಿದಿದ್ದಾರೆ ಆದ್ದರಿಂದ ಸರ್ ಮಾರಿಸ್ ಗ್ವಾಯರರ ತಮ್ಮ ಇತ್ಯರ್ಥವನ್ನು ಕೊಟ್ಟ ತರುವಾಯ ಅವರು ಎರಡೆರಡು ಬಾರಿ ವಾಯ್ಸರಾಯರನ್ನು ಕಂಡು ಮಾತನಾಡಿದ್ದಾರೆ ರಾಜಕೋಟೆದ ಸುಧಾರಣೆಯ ರಥವು ವಿಘ್ನವಿಡ್ಡೂರಗಳಿಲ್ಲದೆ

ಕಿಸಾನ ಕನ್ಯೆಯರು

ಕಿಸಾನ ಹೆಂಗಸರು ಗುಜರಾತದ ಕಿಸಾನ್ ಕೋನ್ಫರೆನ್ಸದಲ್ಲಿ ಡಾ ಸುಮಂತ್ ... ಭಾಷಣವನ್ನು ಆಲಿಸುತ್ತಿರುವದು.

ಮುನ್ನಡೆಯುವಂತೆ ಅವರು ದಾರಿಯನ್ನು ಸುಗಮಮಾಡದೆ ಬಿಡುವವರಲ್ಲ. ಆ ಸಂಬಂಧ ರಾಜಕೋಟೆಕ್ಕೆ ಅವರು ಹೋಗಿರುವರು ಅಲ್ಲಿ ಅವರು ಸುಮಾರು ಒಂದು ತಿಂಗಳ ತನಕ ಇರುವರು ಕಲಕತ್ತದಲ್ಲಿ ಈ ತಿಂಗಳ ಅಂತ್ಯಕ್ಕೆ ಇಟ್ಟಿರುವ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆಗೆ ಅವರು ಹೋಗುವದು ಅಗತ್ಯವೆಂದಾದ ಸಂಗತಿಯಲ್ಲಿ ಕೂಡ, ಆ ಸಮಯ ೩ ದಿನಗಳು ಮಾತ್ರ ಕಲ್ಕತ್ತದಲ್ಲಿದ್ದು ಪುನಃ ರಾಜಕೋಟೆಗೇ ಮರಳುವರು ಸರದಾರ ಪಟೇಲರು ಕೂಡ ರಾಜಕೋಟೆಗೆ ಹೋಗಿದ್ದಾರೆ ಮಹಾತ್ಮಾಜಿಯವರು ಎಲ್ಲರ ಸಮ್ಮತಿಯಿಂದ ಏಳು ಮಂದಿಯನ್ನು ಆರಿಸಿ ಅವರ ಹೆಸರುಗಳನ್ನು ಸರದಾರ ಪಟೇಲರ ಮೂಲಕ ಠಾಕೋರರಿಗೆ ಕಳುಹಿಸಿದ ಬಳಿಕ ಸುಧಾರಣಾ ಸಮಿತಿಯು ಮೂರು ವಾರಗಳೊಳಗಾಗಿ ತನ್ನ ~~ಕಾರ್ಯವನ್ನು ಮುಗಿಸಿ ವರದಿಯನ್ನು ಒಪ್ಪಿಸು~~ವದು ಸಮಿತಿಯು ಸಿಫಾರಸು ಮಾಡಿದಂಥ ರಾಜಕೀಯ ಸುಧಾರಣೆಗಳನ್ನು ಠಾಕೋರರು ಸ್ವೀಕರಿಸಿ, ಅಲ್ಲಿ ಜವಾಬುದಾರಿ ಸರಕಾರವನ್ನು ಸ್ಥಾಪಿಸಿದ್ದನ್ನು ಕಾಣುವ ತನಕ ಮಹಾತ್ಮಾಜಿಯವರು ರಾಜಕೋಟೆದಲ್ಲೇ ಇದ್ದುಬಿಡುವ ದೃಢ ನಿರ್ಧಾರ ಮಾಡಿದ್ದಾರೆ

ಆಡಳಿತ ಮಟ್ಟವನ್ನು ಉನ್ನತಗೊಳಿಸುವ ಪ್ರಯತ್ನ

ರಾಜಪುತಾನದ ಚಿಕ್ಕ ಸಂಸ್ಥಾನಗಳಲ್ಲಿ ಯಂತ ಕಾಠಿಯಾವಾಡದ ಚಿಕ್ಕ ಸಂಸ್ಥಾನಗಳಲ್ಲಿಯೂ ಆಡಳಿತ ಮಟ್ಟವನ್ನು ಉನ್ನತಗೊಳಿಸಲಿಕ್ಕೆ ರೆಸಿಡೆಂಟರು ಸೂಚನೆಯನ್ನು ಕೊಟ್ಟು ಆ ಎಲ್ಲ ಚಿಕ್ಕ ಸಂಸ್ಥಾನಗಳಿಗೆ ಸಾಮಾನ್ಯವಾದ ಒಂದು ಹೈ ಕೋರ್ಟು ಮತ್ತು ಪೋಲೀಸ ಖಾತೆಯನ್ನು ನಿರ್ಮಿಸುವ ತಮ್ಮ ಯೋಜನೆಯನ್ನು ಮುಂದಿಟ್ಟಿರುವರು ಕಾಠಿಯಾವಾಡದ ಸಂಸ್ಥಾನಾಧೀಶರು ಸಭೆ ಕೂಡಿ ಆ ಯೋಜನೆಯನ್ನು ಚರ್ಚಿಸಿರುವರಾದರೂ, ಅವರೂ ಇತರ ಚಿಕ್ಕ ಸಂಸ್ಥಾನಾಧೀಶರಂತೆ ಯಾವ ನಿರ್ಧಾರಕ್ಕೂ ಬಂದಿರುವದಿಲ್ಲ, ಅವಕಾಶವನ್ನ ಸಮಯ ಕೇಳಿದ್ದಾರೆ

ದೂಷಿತ ವಾತಾವರಣ

ಹೀಗೆ ರಾಜಕೋಟೆದಷ್ಟೇ ಅಲ್ಲ, ಕಾಠಿಯಾವಾಡ ಸಂಸ್ಥಾನಗಳ ರಾಜಕೀಯ ವಾತಾವರಣವೇ ದೂಷಿತವಾಗಿರುವದು. ಎಲ್ಲೆಲ್ಲಿಯೂ ಸಂಘರ್ಷಗಳ ಕೈವಾಡವೇ ಕಂಡುಬರುತ್ತಿದೆ ರಾಜಕೀಯ ಸುಧಾರಣೆಗಳ ಸಂಬಂಧ ಪ್ರಚಾರಕಾರ್ಯವನ್ನು ಮಾಡಲಿಕ್ಕೆ ಜಾಮನಗರಕ್ಕೆ ಹೋದ ರಾಜಕೋಟೆದ ಶ್ರೀ ವ್ರಜಾಪಾಲ ಶಂಕರ ದವೆ ... ಹೆಸರಿನ ಸಾರ್ವಜನಿಕ ಸಭೆಗಳಾಗಲೀ ಮೆರವಣಿಗೆಗಳಾಗಲೀ ಭಾಗ ವಹಿಸಕೂಡದೆಂದು ಜಾಮನಗರ ಸರಕಾರವು ಅವರ ಮೇಲೆ ನಿರ್ಬಂಧವನ್ನು ಹಾಕಿದರೂ ಮಾತ್ರವಲ್ಲದೆ, ಸರಕಾರದ ನೋಟೀಸನ್ನು ಕಳಿಸಿ ಅವರನ್ನು ಎಲ್ಲಿಯೋ ಅಜ್ಞಾತ ಸ್ಥಾನಕ್ಕೆ ಒಯ್ದಿದ್ದಾರೆ ದಬ್ಬಾಳಿಕೆಯು ಕ್ರಮಪ್ರಕಾರ ನಡೆಯುತ್ತಾ ಇದೆ. ವಾಯ್ಸರಾಯರು ರಾಜಕೋಟ ಪ್ರಕರಣದಲ್ಲಿ ಮಧ್ಯಪ್ರವೇಶ ಮಾಡಿದುದರಿಂದ ಕಾಠಿಯಾವಾಡ ಸಂಸ್ಥಾನಾಧೀಶರು ಬಹಳ ನೊಂದಿದ್ದಾರೆ ಆದ್ದರಿಂದ ತಮಗೂ ಸಾರ್ವಭೌಮ ಸರಕಾರಕ್ಕೂ ಇರುವ ಸಂಬಂಧವು ಎಂಥದೆಂಬುದನ್ನು ಸ್ಪಷ್ಟವಾಗಿ ತಿಳಕೊಳ್ಳಲಿಕ್ಕೆ ನವನಗರದ ಜಾಮಸಾಹೇಬರು ಸದ್ಯದಲ್ಲಿಯೇ ~~ಇಂಗ್ಲಂಡಿಗೆ ಹೋಗಲಿರುವರು~~ ವರು ಅಲ್ಲಿ ಅವರ ಭಾರತ ಮಂತ್ರಿಗಳನ್ನು ಕಂಡು ಅವರೊಡನೆ ತಮ್ಮ ಭವಿಷ್ಯದ ಕುರಿತು ಮಾತನಾಡಲಿರುವರು. ಅವರು ಪೆಡರೇಶನ ಕುರಿತು ಭಾರತ ಮಂತ್ರಿಗಳೊಡನೆ ಪ್ರಸ್ತಾಪವನ್ನೆತ್ತಬಹುದು.

ಆದರೆ ... ಕಾಲಗತಿಯು ಬದಲಾಗಿದೆ. ಕಾಠಿಯಾವಾಡ ಸಂಸ್ಥಾನಾಧೀಶರೊಂದಿಗೆ ಭಾರತದ ಇತರ ಸಂಸ್ಥಾನಾಧೀಶರು ಕೂಡ ಜಾಗೃತ ಪ್ರಜಾವರ್ಗದ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸುವ ಕಾಲವು ಸನ್ನಿಹಿತವಾಗಿದೆ. ಕಾಲಗತಿಯನ್ನನುಸರಿಸಿ ಅವರು ತಮ್ಮ ಕಾರ್ಯಕ್ರಮವನ್ನಿಟ್ಟುಕೊಳ್ಳದಿದ್ದರೆ, ಅವರು ತಮ್ಮ ಕಾಲ ಮೇಲೆ ತಾವೇ ಕೊಡಲಿ ಹೊಡಕೊಂಡಂತಾಗುವದು. ಮಹಾತ್ಮಾಜಿಯವರು ಕಳೆದ ವಾರ ನಾಲ್ಕು ಬಾರಿ ವಾಯ್ಸರಾಯರನ್ನು ಕಂಡು ಮಾತನಾಡಿದ್ದಾರೆ ಅವರು ಮಾತನಾಡಿದ ವಿಷಯವನ್ನು ಗುಪ್ತದಲ್ಲಿಟ್ಟಿದ್ದಾರಾದರೂ ಅಖಿಲಭಾರತ ಸಂಸ್ಥಾನಗಳ ರಾಜಕೀಯವನ್ನು ಕುರಿತು ಮಾತನಾಡಿದ್ದಾರೆಂದೇ ಎಲ್ಲರ ನಂಬುಗೆಯಾಗಿದೆ ವಾಯ್ಸರಾಯರೂ ಮಹಾತ್ಮಾಜಿಯವರೂ ಪರಸ್ಪರ ಅಭಿಪ್ರಾಯಗಳಿಂದ ತುಂಬಾ ಪ್ರಭಾವಿತರಾಗಿದ್ದಾರೆ. ಆದ್ದರಿಂದ ಸಂಸ್ಥಾನ ಪ್ರಜೆಗಳು ತಮ್ಮ ಸ್ವಾತಂತ್ರ್ಯದ ದಿನಗಳನ್ನು ಶೀಘ್ರದಲ್ಲಿಯೇ ಕಾಣಬಹುದು

ಕಾಶಿಯಲ್ಲಿ ರಾಜಕೀಯ ಸುಧಾರಣೆ

ಕಾಶಿ ರಾಜ್ಯದಲ್ಲಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರಲಿಕ್ಕೆ ದಿವಂಗತ ಸರ್ ನಾರಾಯಣ ಸಿಂಹ, ಮಹಾರಾಜರು ತುಂಬಾ ಆಸಕ್ತಿಯನ್ನು ತೋರಿಸಿ ಡಾಕ್ಟರ ಎ ಸಚ್ಚಿದಾನಂದ ಸಿಂಹರ ಅಧ್ಯಕ್ಷತೆಯಲ್ಲಿ ಒಂದು ಸುಧಾರಣಾ ಸಮಿತಿಯನ್ನು ರಚಿಸಿದ್ದರು ಆ ಸಮಿತಿಯ ಕಾರ್ಯಗಳು ಪೂರ್ಣವಾಗುವದರೊಳಗಾಗಿಯೇ ಆ ಮಹಾರಾಜರು ದಿವಂಗತರಾದರು. ಆದರೆ ಅವರ ಅಂತ್ಯವಾದುದರಿಂದ ಕಾಶಿ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳು ಜಾರಿಗೆ ಬರುವ ಕಾರ್ಯಕ್ರಮದಲ್ಲಿ ಯಾವ ಬದಲಾವಣೆಗಳೂ ಆಗುವದಿಲ್ಲವೆಂದು ಸರಕಾರವು ಈಗ ಜನರಿಗೆ ಭರವಸೆಯನ್ನು ಕೊಟ್ಟಿದೆ.

The Ammembal Subba Rao Pai Memorial Fund.

CANARA HIGH SCHOOL, MANGALORE

Applications for loan stipends from the above Fund should reach the HONORARY TREASURER of the Fund by the 15th June 1939 Printed Application forms are available at the Office of the Fund between 9 a.m. and 11 a.m. of every day at a cost of one anna each for original application forms and half an anna each for renewal application forms. If forms are to be sent by post postage stamps equivalent to the price of the form or forms required and one half anna stamp for each form to cover the postage for the same should be sent. Only Gowd Saraswath Brahmin students need apply. Applicants will note that first preference will be given to running stipendiaries while awarding stipends, and if funds are available after that new application cases will be considered, with preference for applications for technical courses.

Canara High School, Mangalore. 12-4-1939

M Venkatesh Pai
Hon Secretary.

ಸೈನಿಕನ ಪಾನ

ಅಮೇರಿಕಾದ ಸಂಯುಕ್ತ ಸಂಸ್ಥಾನದ ಸೈನ್ಯನಾಯಕರಾದ ಕಾರಲ್ ರೀಷನ್‌ರವರು ಲ್ಯಾನ್‌ಸೆಟ್ ಎಂಬ ಸಂಚಿಕೆಯಲ್ಲಿ ಕೆಲವು ವರ್ಷಗಳ ಹಿಂದೆ ಈ ರೀತಿಯಲ್ಲಿ ಹೇಳಿದರು. "ಟೀ ಕುಡಿಯುವ ಎರಡು ಜನಾಂಗದವರು ಒಂದು ಯುದ್ಧದಲ್ಲಿ ತೊಡಗಿರುವುದನ್ನು ಮ್ಯಾಂಚೂರಿಯದಲ್ಲಿ ಕಂಡುಬಂದೆನು ಅವರು ಪರಿಶ್ರಮ ಪಡುವುದನ್ನೆಂಬುದನ್ನು ತಾವಾಗಿಯೇ ಕಣ್ಣಾರೆ ನೋಡದವರ ವಿನಾ ಅನ್ಯರಾರೂ ಮೆಚ್ಚುವುದಿಲ್ಲ. ಬೇಸಿಗೆ ದಿನಗಳಲ್ಲಿ ಸೆಕೆಯು ಕ್ಲಿಷ್ಟವಾಗಿರುವುದಲ್ಲದೆ ಉಸಿರುಕಟ್ಟಿಸುವಂತಹದಾಗಿತ್ತು. ಇದರ ಜೊತೆಗೆ ನಿಷ್ಠುರ ಮಳೆ ಇವುಗಳೆಲ್ಲಾ ಸೇರಿ ವಿಪರೀತ ಆಯಾಸವನ್ನುಂಟುಮಾಡುತ್ತಿದ್ದುವು. ದೊಡ್ಡ ಕದನಗಳಲ್ಲಿ ಸೈನಿಕರು ಹಗಲುರಾತ್ರಿಗಳೆನ್ನದೆ ದಿನರಾತ್ರಿಗಟ್ಟಲೆ ಹೋರಾಡುತಿದ್ದರು ಯಾವಾಗಲೂ ತೋಪು ಕುಪಾತ್ತಿಗಳಿಗೆ ಗುರಿಯಾಗುತ್ತಿದ್ದರು ನಿದ್ರೆ ಮತ್ತು ಆಹಾರಗಳು ಸ್ವಲ್ಪ ಮಾತ್ರ, ಅವರು ಅತ್ಯಂತ ಬಳಲಿ ಆಯಾಸವಾಗಿದ್ದರೇ ವಿನಾ ಒಬ್ಬರೂ ಸಾಯಲಿಲ್ಲ ಒಂದು ಕಪ್ ಟೀ ಕಷಾಯ ಮಾಡಿ ಕುಡಿದು ನಡೆಯುತ್ತಲಿದ್ದರು .. ಮುಂದೆ . "

ಟೀಯು ದಾಹವನ್ನಡಗಿಸುವಷ್ಟು ಮತ್ತೆ ಇನ್ನಾವುದೂ ತೃಪ್ತಿಕರದಾಗಿಲ್ಲ. ಗುರುಗುಟ್ಟುವ ಹೊಟ್ಟೆಯನ್ನು ಇನ್ನಾವುದೂ ಅಷ್ಟು ತಗ್ಗಿಸಲಿಲ್ಲ. ದೇಹಕ್ಕೆ ತಣು ವನ್ನು ಇನ್ನಾವುದೂ ಒಂದುಗ್ಲಾಸ್ ಟೀಯಷ್ಟು ಮಾಡಿಲ್ಲ, ೩೬ ಗಂಟೆಗಳಿಗಿಂತ ಜಾಸ್ತಿಯಾಗಿ ಜೀನಿನ ಮೇಲೆ ಕುಳಿತು ಆಯಾಸದಿಂದ ಬಳಲುತ್ತಿರುವಾಗ ಒಂದು ಗ್ಲಾಸ್ ಟೀಯು ದೇಹಕ್ಕೆ ಹದಣಿಕೆಯನ್ನು ಯಾವುದೂ ಕೊಟ್ಟಿದ್ದಿಲ್ಲ, ನನ್ನ ಹೊಟ್ಟೆಯನ್ನು ಟೀಯಿಂದ ಭರ್ತಿಮಾಡುವುದೇ ದಿನದ ಪಾಳಿಯಕ್ಕೆ ಬಂದನಂತರ ಮೊಟ್ಟಮೊದಲನೆಯ ಕೆಲಸ," ಎಂದು ಕ್ಯಾಪ್ಟನ್ ರೀಷ್ಮನ್‌ರವರು ತಿಳಿಸುತ್ತಾರೆ.

ಅಮೇರಿಕಾದ ಯುನೈಟೆಡ್ ಸ್ಟೇಟ್ಸ್ ಸೈನದಲ್ಲಿ ಅಸಿಸ್ಟೆಂಟ್ ಸರ್ಜನ್‌ರವರಾದ ಕರ್ನಲ್ ಡಿ. ಹಾರ್ಟ್ಸ್‌ಫ್ ಇವರ ಅಭಿಪ್ರಾಯವೇನೆಂದರೆ ಟೀಯು ಸೈನ್ಯದ ಸಿಪಾಯಿಗಳಿಗೆ ಮಾದರಿಪಾನವು . "ರೋಮಾನ್ಸ್ ಆಫ್ ಟೀ (ಟೀಯ ಸರಿಕಥೆ" ಎಂಬುದೊಂದ ಚಿಕ್ಕ ಪುಸ್ತಕದಲ್ಲಿ ಕರ್ನಾಲ್ ಹಾರ್ಟ್ಸ್‌ಫ್‌ರವರು ಹೇಳಿದ ಕೆಲವು ವಿಷಯಗಳನ್ನು ಬರೆದಿರುತ್ತದೆ "ಮಂಚೂರಿಯದಲ್ಲಿ ಯುದ್ಧವು ನಡೆಯುತ್ತಿರುವ ಕಾಲದಲ್ಲಿ ನೀರಿನ ಬದಲು ಟೀಯು ಮನೋಹರವಾಗಿಯೂ, ನಿಭಾರ್ಧಕವಾಗಿಯೂ ಶುದ್ಧಿಯಾದ ಪಾನವಾಗಿರುವುದರ ದೆಸೆಯಿಂದ ರಷ್ಯ ಮತ್ತು ಜಪಾನ್ ಸೈನಿಕರು ವಿಷಮಶೀತ ಜ್ವರ ಮತ್ತು ಆಮಸಂಗ್ರಹ ಮತ್ತು ಇವೇ ಇತ್ಯಾದಿ ರೋಗಗಳ ಸೋಂಕಿನಿಂದ ರಕ್ಷಿಸಲ್ಪಟ್ಟರು" ಇದೇ ನನ್ನ ಸಂತೃಪ್ತಿ

ಬ್ರಿಟಿಷ್ ಸೈನ್ಯದ ಸರ್ಜನ್ ಜನರಲ್ ಡಿರೆನ್‌ಜಿಯವರು ಲ್ಯಾನ್‌ಸೆಟ್ ಸಂಚಿಕೆಯಲ್ಲಿ "ಬಹುದೂರದ ಪಯಣಗಳಲ್ಲೂ ಮತ್ತು ಸೈನಿಕರು ವಿಪರೀತ ಕಷ್ಟಗಳನ್ನು ಅನುಭವಿಸುವಾಗಲೂ ಸೈನಿಕರಿಗೆ ತಾಳ್ಮೆಯನ್ನೂ ಪುಷ್ಟಿಯನ್ನೂ ಕೊಡಲಿಕ್ಕೆ ಪಾನಕವಾವುದೆಂದರೆ ಟೀಯೊಂದೇ" ಎಂದು ಬರೆದಿರುತ್ತಾರೆ

ಜನರಲ್ ಸರ್ ಇಯಾನ್ ಹ್ಯಾಮಿಲ್ಟನ್‌ರವರು 'ನ್ಯೂ ಲೀಡರ್' ಎಂಬ ಸಂಚಿಕೆಯಲ್ಲಿ ಬರೆಯುವುದೇನೆಂದರೆ "ಆ ಪರಿಶ್ರಮದಲ್ಲಿ ನನ್ನ ಮುಖ್ಯ ಆಹಾರವಾವುದೆಂದರೆ ಟೀ, ಬಿಸ್ಕತ್ ಮತ್ತು ಪೊರಬ್ರೆ ಇವುಗಳನ್ನೇ ನಾನು ತೆಗೆದುಕೊಳ್ಳುತ್ತಿದ್ದೆ"ನೆಂದು ತಿಳಿಸುತ್ತಾರೆ

ಬೊಂಬಾಯಿ ಪ್ರಾಂತದಲ್ಲೆಲ್ಲ ಮದ್ಯನಿಷೇಧ

--ಇನ್ನೊಂದು ವರ್ಷದೊಳಗಾಗಿ--

ಬೊಂಬಾಯಿ ಸರಕಾರದ ಕಾರ್ಯಕ್ರಮ

ಅಹಮ್ಮದಾಬಾದದಲ್ಲಿ ಪಾನನಿಷೇಧವನ್ನು ಯಶಸ್ವಿಗೊಳಿಸಿದ ಗಿರಣಿ ಕಾಮಗಾರರನ್ನು ಅಭಿನಂದಿಸಿ ಭಾಷಣವನ್ನು ಕೊಡುತ್ತ ಸರಕಾರವು ಇನ್ನೊಂದು ವರ್ಷದೊಳಗಾಗಿ ಇಡೀ ಪ್ರಾಂತದಲ್ಲಿ ಮದ್ಯನಿಷೇಧ ಮಾಡಲಿರುವದಾಗಿ ಬೊಂಬಾಯಿ ಸರಕಾರದ ಗೃಹ ಮಂತ್ರಿಗಳಾದ ಶ್ರೀ ಕೆ ಎಮ್ ಮುನ್ಶಿಯವರು ಹೇಳಿದರು. ಬೊಂಬಾಯಿ ನಗರದಲ್ಲಿ ನಾನಾ ಜಾತಿ ಮತ ಸಂಪ್ರದಾಯ ಮತ್ತು ಅಭ್ಯಾಸಗುಣಗಳ ಜನರು ವಾಸಿಸಿರುವುದರಿಂದ ಅಲ್ಲಿ ಪಾನನಿಷೇಧವನ್ನು ಮಾಡುವುದು ಕಷ್ಟತರವಾಗಿದೆಯಾದರೂ ಸರಕಾರವು ಎಲ್ಲಾ ಕಷ್ಟಗಳನ್ನು ಎದುರಿಸಲಿಕ್ಕೆ ಎದೆಕೊಟ್ಟಿದೆ

ಸರಕಾರದ ನವೀನ ಯೋಜನೆ

ಬರುವ ವರ್ಷ ಪ್ರಾಂತದಲ್ಲೆಲ್ಲ ಮದ್ಯನಿಷೇಧವಾಗಿ ಬಿಟ್ಟರೆ ಅಬ್ಕಾರಿ ಖಾತೆಯ ಅಧಿಕಾರಿಗಳಿಗೆ ಕೆಲಸವಿಲ್ಲವಾಗುವುದು. ಪೋಲೀಸ ಖಾತೆಯ ಕೆಲವು ಹೆಚ್ಚುವುದು ಅದ್ದರಿಂದ ಇವೆರಡೂ ಖಾತೆಗಳನ್ನು ಒಂದು ಕೂಡಿಸಿ ಪಾನನಿಷೇಧದ ಸಫಲತೆಗೆ ಒಂದಾದ ಆ ಎರಡು ಆಲೋಚನೆಯನ್ನ ಬೊಂಬಾಯಿ ಸರಕಾರವು ಮಾಡುತ್ತಾ ಇದೆ ಈ ಸಂಬಂಧ ಗೃಹ ಮಂತ್ರಿ ಶ್ರೀ ಮುನ್ಶಿಯವರು ಎರಡೂ ಖಾತೆಗಳ ಉಚ್ಚಾಧಿಕಾರಿಗಳನ್ನು ಕರೆಸಿ ಅವರ ಅಭಿಪ್ರಾಯಗಳನ್ನು ಕೇಳಿದ್ದಾರೆ

ಮಿ| ಹೋಲ್ಸರ ಅಭಿಮತ

ಪಾರ್ಲಿಮೆಂಟಿನ ಮಾಜಿಮೆಂಬರರಾಗಿದ್ದು ಈಗ ಭಾರತ ಸಂಚಾರವನ್ನು ಕೈಕೊಂಡಿರುವ ಮಿ ಎಚ್ ಕೆ ಹೋಲ್ಸ ಎಂಬವರು ಮದ್ರಾಸು ಬೊಂಬಾಯಿ ಸರಕಾರಗಳ ಪಾನನಿಷೇಧ ಕಾರ್ಯಕ್ರಮವು ಪೂರ್ಣ ಯಶಸ್ವಿಯಾಗ ಬೇಕಾಗಿ ಕಂಚಿಯಲ್ಲಿ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಅವರ ಬೊಂಬಾಯಿ ಮದ್ರಾಸುಗಳಲ್ಲಿ ಅನೇಕ ಬ್ರಿಟಿಷ ಅಧಿಕಾರಿಗಳನ್ನು ವ್ಯಾಪಾರ ಪ್ರಮುಖರನ್ನೂ ಕಂಡು ಮಾತನಾಡಿದ್ದಾರೆ ಮದ್ಯನಿಷೇಧ ಆಂದೋಲನದ ಕುರಿತ ಇದು ತನಕ ಪ್ರಕಟವಾಗಿರುವ ಸಾಹಿತ್ಯ ಅಧ್ಯಯನವನ್ನೂ ಮಾಡಿದ್ದಾರೆ ಇಷ್ಟು ಮಾಡಿಯಾದ ಅನಂತರವೇ ಅವರು ಎಲ್ಲಿ ಅವರ ಏಕವು ಸೋತಿತೋ ಅಲ್ಲಿ ಹಿಂದುಸ್ಥಾನ ಗೆಲ್ಲುವುದೆಂದೇ ನನಗೆ ಖಚಿತವಾಗಿದೆ ಹಿಂದುಸ್ಥಾನದಲ್ಲಿ ಮದ್ಯನಿಷೇಧವು ಖಂಡಿತವಾಗಿ ಯಶಸ್ವಿಯಾಗವು ಆದರೆ ಮದ್ಯನಿಷೇಧ ಕಾನೂನಿಗೆ ವಿರೋಧವಾಗಿ ನಡೆದಿರುವವರನ್ನು ಕಠಿನವಾಗಿ ದಂಡಿಸುವುದು ಅಗತ್ಯ. ಕಾಂಗ್ರೆಸಿನ ಎಲ್ಲಾ ಕಾರ್ಯಕ್ರಮಗಳಿಗಿಂತ ಮದ್ಯನಿಷೇಧ ಕಾರ್ಯಕ್ರಮದಿಂದ ನನಗೆ ಹೆಚ್ಚು ಸಂತೋಷವಾಗಿದೆ. ಯಾಕೆಂದರೆ ಮದ್ಯನಿಷೇಧದಿಂದ ಜನತೆಯ ನಿಜವಾದ ಹಿತವಾಗುತ್ತದೆ' ಎಂದಿರುವರು.

ಪಾನ ನಿಷೇಧ ದಿನಾಚರಣೆ

ರಾಷ್ಟ್ರೀಯ ವಾರದ ಸಂಬಂಧ ಮದ್ರಾಸ ಪ್ರಾಂತ್ಯದ ಅನೇಕ ಸಣ್ಣ ದೊಡ್ಡ ಊರುಗಳಲ್ಲಿ ಪಾನ ನಿಷೇಧ ದಿನವು ಆಚರಿಸಲ್ಪಟ್ಟಿತು. ಮದ್ರಾಸನಗರದಲ್ಲಿ ಬೃಹತ್ಸಭೆಯು ಕೂಡಿ ಮದ್ರಾಸುಸರಕಾರದ ಕಾರ್ಯಕ್ರಮವನ್ನು ಪ್ರೋತ್ಸಾಹಿಸುವ ಕುರಿತು ಅನೇಕ ಮಹನೀಯರ ಭಾಷಣಗಳಾದುವು

ಹೆಚ್ಚಿಗೆ ನೂರು ಶಾಲೆಗಳಲ್ಲಿ ಹಿಂದಿ-ಹಿಂದುಸ್ಥಾನಿ

೧೯೩೮-೧೯೩೯ನೆ ಸಾಲಿಗೆ ಮದ್ರಾಸು ಸರಕಾರವು ಪ್ರಾಂತ್ಯದ ೧೨೫ ಶಾಲೆಗಳ ಮೊದಲಿನ ಮೂರು ಫೋರ್ಮುಗಳಲಿ ಹಿಂದಿ-ಹಿಂದುಸ್ಥಾನಿಯನ್ನು ಕಡ್ಡಾಯವಾಗಿ ಕಲಿಸುವ ಕುರಿತು ವಿರೋಧವಿದ್ದಿತಾದರೂ, ಸಾಮಾನ್ಯ ಎಲ್ಲ ಶಾಲೆಗಳಲ್ಲಿಯೂ ವಿದ್ಯಾರ್ಥಿಗಳು ಹಿಂದಿ-ಹಿಂದುಸ್ಥಾನಿಯನ್ನ ಕಲಿಕೆ ಬಹಳ ಆಸಕ್ತಿಯನ್ನು ತೋರಿಸಿರುವರಾಗಿ ವಿದ್ಯಾಖಾತೆಯ ಅಧಿಕಾರಿಗಳಿಂದ ವರದಿ ಬಂದಿತ್ತು. ಅದ್ದರಿಂದ ಸರಕಾರವು ತನ್ನ ಧೋರಣೆಯನ್ನನುಸರಿಸಿ ೧೯೩೯-೧೯೪೦ನೆ ಸಾಲಿನ ಮೊದಲಿನ ೧೨೫ ಶಾಲೆಗಳಲ್ಲಿ ಅಲ್ಲದೆ ಹೆಚ್ಚಿಗೆಯಾಗಿ ೧೦೦ ಶಾಲೆಗಳಲ್ಲಿ ಹಿಂದಿ-ಹಿಂದುಸ್ಥಾನಿಯನ್ನು ಕಲಿಸ ವ್ಯವಸ್ಥೆ ಮಾಡುವುದೆಂದ ಠರಾವಾಗಿದೆ ಮದ್ರಾಸ ಸಂಸ್ಥಾನದ ಕರ್ನಾಟಕ ಜಿಲ್ಲೆಗಳ ಪೈಕಿ ಬಳ್ಳಾರಿಯಲಿ ೨ ಅನಂತಪುರದಲ್ಲಿ ೧, ಕಡಪಾದಲಿ ೨ ಕರ್ನೂಲಿನಲ್ಲಿ ೩ ಮತ್ತು ಪಶ್ಚಿಮ ಕನ್ನಡ ಜಿಲೆಯಲ್ಲಿ ೩ ಹೆಚ್ಚಿಗೆ ಶಾಲೆಗಳಲಿ ಹಿಂದಿ-ಹಿಂದುಸ್ಥಾನಿಯನ್ನ ಕಲಿಸಲಾಗುವುದ ಕಳೆದ ವರ್ಷ ಪಶ್ಚಿಮ ಜಿಲ್ಲೆಯ ಗವರ್ನಮೆಂಟು ಕಾಲೇಜ ಕೆನರಾ ಹೈಸ್ಕೂಲು, ಹೊಂಗಸರ ಟ್ರೈನಿಂಗ ಶಾಲೆ ಮೂಲ್ಕಿ ಮತ್ತು ಕಾರ್ಕಳ ಬೋರ್ಡ್ ಹೈಸ್ಕೂಲುಗಳಲಿ ಹಿಂದಿಯನ್ನು ಕಲಿಸುವ ಏರ್ಪಾಡಾಗಿದಿತು ಈ ವರ್ಷ ಉಡುಪಿ ಕುಂದಾಪುರಗಳ ಬೋರ್ಡ ಹೈಸ್ಕೂಲುಗಳು ಮತ್ತು ಗಣಪತಿ ಹೈಸ್ಕೂಲಿನಲ್ಲಿ ಹಿಂದಿಯನ್ನ ಕಲಿಸುವ ಏರ್ಪಾಡಾಗುವುದು

ಕಾಶಿರಾಜರು ದಿವಂಗತರಾದರು!

ಮಾನ್ಯ ಮುಖಂಡರ ಶೋಕಪ್ರದರ್ಶನ

ಮಹಾರಾಜ ಕುಮಾರ ವಿಭೂತಿ ನಾರಾಯಣ ಸಿಂಗರು ಹೊಸ ರಾಜರು

ಕಾಶಿಯ ಅರಸರಾದ ಮಾನ್ಯ ಮಹಾರಾಜ ಸರ್ ಆದಿತ್ಯನಾರಾಯಣಸಿಂಗರವರು ತಮ್ಮ ೬೫ನೆ ವರ್ಷ ಪ್ರಾಯದಲ್ಲಿ ವೃದ್ಧಾಪ್ಯದಿಂದ ಕಾಶಿಯಲ್ಲಿ ಸ್ವರ್ಗಸ್ಥರಾದರು ದಿವಂಗತ ಮಹಾರಾಜರು ಪ್ರಜಾವತ್ಸಲರೂ ಉದಾರರೂ, ಧರ್ಮಾಭಿಮಾನಿಗಳೂ ಆಗಿದ್ದರು ಅದ್ದರಿಂದ ಅವರು ಎಲ್ಲಾ ಕಡೆಗಳಲ್ಲಿ ಸನ್ಮಾನಿತರಾಗಿದ್ದರೂ ತಮ್ಮ ರಾಜ್ಯದಲ್ಲಿ ರಾಜಕೀಯ ಸುಧಾರಣೆಗಳ್ನು ಕೊಡುವ ತಮ್ಮ ಅಪೇಕ್ಷೆಯನ್ನು ಬಹಿರಂಗವಾಗಿ ಹೇಳಿ ಕೆಲವೇ ದಿನಗಳಾಗಿದ್ದುವು ಮಾತ್ರ—ಅಷ್ಟರಲ್ಲಿ ಅವರು ಸ್ವರ್ಗಸ್ಥರಾದುದು ಹಿಂದುಸ್ಥಾನದ ಸ್ವರಾಜ್ಯ ಚಳವಳಿಗೆ ದೊಡ್ಡ ಕಡೆ ಉಂಟಾದಂತಾಯಿತು ಸಂಯುಕ್ತ ಪ್ರಾಂತ್ಯಗಳ ಗವರ್ನರರು, ರೆಸಿಡೆಂಟರು, ಗ್ವಾಲಿಯರ ಮಹಾರಾಜರು ಡಾಕ್ಟರ ಸಚ್ಚಿದಾನಂದ ಸಿನ್ಹರು, ಪಂಡಿತ ಮದನ ಮೋಹನ ಮಾಲವೀಯರು ಮೊದಲಾದವರು, ಮಹಾರಾಜರ ದಿವಂಗತರಾದ ವಾರ್ತೆಯನ್ನು ಕೇಳಿದಾಕ್ಷಣ ಸಂತಾಪ ಸೂಚಕ ತಂತಿಪತ್ರಗಳನ್ನು ಕಳುಹಿಸಿ ಕೊಟ್ಟಿರುವರು

ಹೊಸರಾಜರು

ದಿವಂಗತ ಮಹಾರಾಜರ ಜ್ಯೇಷ್ಠ ಪುತ್ರರಾದ ಮಹಾರಾಜ ಕುಮಾರ ವಿಭೂತಿನಾರಾಯಣಸಿಂಘರವರು ಪಟ್ಟಾಧಿಕಾರಿಗಳಾಗುವರೆಂದು ಬ್ರಿಟಿಷ ಸರಕಾರದ ಕಡೆಯಿಂದ ಜಾಹೀರು ನಾಮೆ ಆಗಿದೆ ಆಡಳಿತ ಸಭೆಯ ರಚನೆಯು ಕೆಲವೇ ದಿನಗಳಲ್ಲಿ ಆಗುವುದು

ಯುನಿವರ್ಸಿಟಿಗೆ ರಜೆ

ದಿವಂಗತ ಕಾಶಿ ಮಹಾರಾಜರು ಕಾಶಿ ವಿಶ್ವವಿಲಯಕ್ಕೆ ಧಾರಾಳ ಧನ ಸಹಾಯ ಮಾಡಿದ್ದರು ಅವರು ವಿಶ್ವವಿದ್ಯಾಲಯದ ಉನ್ನತಿಗಾಗಿ ಬಹಳ ಪರಿಶ್ರಮಿಸಿದ್ದರು. ವಿಶ್ವವಿದ್ಯಾಲಯದ ಪ್ರೊ-ಚಾನ್ಸಲರರಲ್ಲಿ ಅವರೂ ಒಬ್ಬರಾಗಿದರು ಅದ್ದರಿಂದ ಅವರು ದಿವಂಗತರಾದುದಕ್ಕಾಗಿ ವಿಶ್ವವಿದ್ಯಾಲಯದ ಆಚಾರ್ಯರ ಮತ್ತು ವಿದ್ಯಾರ್ಥಿಗಳ ಶೋಕ ಪ್ರದರ್ಶನ ಸಭೆಗಳಾದುವಲ್ಲದೆ, ವಿಶ್ವವಿದ್ಯಾಲಯಕ್ಕೆ ಒಂದು ದಿನದ ದುಃಖ ಸೂಚಕದ ರಜೆಯನ್ನೂ ಕೊಟ್ಟರು

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ | ಜಿ ವಿ ವೆಂಕಟಪ್ಪನಾಯ್ಡು
ವಿಶೇಷ ಮಾಹಿತಿಗೆ | ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟು,
ಬರೆಯಿರಿ | ಮೈಲಾಪುರ, ಮದ್ರಾಸು

Notice.

IN THE HIGH COURT OF JUDICATURE AT MADRAS

Ordinary Original Civil Jurisdiction

O P No 100/1939

In the matter of the Indian Companies Act VII of 1913 as amended by Act XXII of 1936

&

In the matter of the Canara Industrial and Banking Syndicate, Ltd Udipi

The Canara Industrial and Banking Syndicate Ltd Udipi } Petitioners

THIS PETITION for confirmation of Special Resolution dated 2 3 1939 of the above Company to amend its Memorandum of Association in the light of the new sections 277I to 277M of the Act will be heard on 4-5-1939

High Court Madras 4 4 1939 } K Narayana pai Advocate for Petitioners

ಹಳ್ಳಿಯ ಹತ್ತು ಸಮಸ್ತರು

[ಜನೆ ಪುಟದಿಂದ ಮುಂದುವರಿದುದು].

ಘೋಸು. ಸಂಕಪ್ಪ—ನೀನು ಬಿಲ್ಲು ಮನೆವರೆಗೆ ಹೋಗಿ ಅವನನ್ನು ದರದರ ಎಳೆಕೊಂಡು ಬಾ'

'ಸಂಜೆ ತಂದರೆ ಸಾಲದೇ? ಈಗ ಅವನು ಮನೆಯಲ್ಲಿ ಇರುತ್ತಾನೆಯೋ? ಬಿಸ್ಸಿಗೆ ಹೋಗಿರಬೇಕು'—ಎಂದನು ಸಂಕ

'ಸಾಯಂಕಾಲವಾದರೆ ಸಾಯಂಕಾಲ, ಅವನ ಬಡ ಬಾಲ ಹಿಡಿದಾದರೂ ತರಬೇಕು'

ಸರಿ, ಕಟ್ಟಣದ ಸುವರ್ಣ ವಿಜನ್ ಆಯಿತು ಎಲ್ಲರೂ ಅಲ್ಲಿಂದ ಹೊರಟರು. ಇವರ ಬೆನ್ನಿಗೆ ಕೊಂಬುಗಾರ ಡೋಲಗಳು ಯಥಾಪ್ರಕಾರ ನಿಕ್ಕದ ಧ್ವನಿಗಳಾದುವು.

ತಿರುಗಿ ಸವಾರಿಗಳು ಬಸ್ಸ ಸ್ಟೈಗಳ ಅಂಗಡಿಗೆ ಬಂದಿತು ನಮ್ಮೂರಲ್ಲಿ ನಾಲ್ಕು ಬೀದಿಯೂ ಸಹ ಇಲ್ಲದೆ ಇವರ ರೀತಿಗೆ ಸಮನಾದ ದರ್ಬಾರು ನಡೆಯುವ ಹಾಗಿಲ್ಲ. ಅಲ್ಲಿಗೆ ತಿರುಗಿ ಕಾಫಿ ತರಿಸಿಕೊಂಡು ಮುಗಿಸುವಾಗ ಹೊತ್ತು ನೆತ್ತಿಗೇರಿಯಾಯಿತು. 'ಇನ್ನು ಮನೆಗೆ ಹೊರಡುವಾ' ಎಂದು ಹುಕುಂ ಆಯಿತು ಡ್ರೈವರು ನೋಟರು 'ಇಲ್ಲದ ಕಾಲುಬಂಡಿಯನ್ನು ತಾವೇ ತಿರುಗಿಸಿಕೊಂಡು ಮನೆಗೆ ಹೊರಟರು. ಮನೆಯಲ್ಲಿ ಸ್ನಾನ, ಊಟ ತೀರಿಸಿಕೊಂಡು ತಿರುಗಿ ಮೂರು ಘಂಟೆಯ ಸುಮಾರಿಗೆ ಪೇಟೆಗೆ ಹೊರಬಿದ್ದಿತು ಈಗ ನೇರಾಗಿ ಅಕ್ಕನ ಮನೆಗೆ—ಅಲ್ಲ, ಅಕ್ಕನ ಮಗಳ ಮನೆಗೆ ಅಂದರೆ ಒಂದಾಗಿದೆ—ಅವರ ಮನೆಯಲ್ಲಿ ಎರಡು ಪಾಲಾಗಿದೆ. ಅಕ್ಕನ ಸಿಟ್ಟುಗೊಂಡು ಮಗಳಿಂದ ಬೇರೆಯಾಗಿದ್ದಾಳೆ ಅಡಿಗೆ ಬೇರೆ ಬೇರೆ ಎಲ್ಲರ ಸವಾರಿ ಅಕ್ಕನ ಮನೆಯ ಜಗುಲಿಯನ್ನು ಅಲಂಕರಿಸುವಂಥಾದ್ದಾಯಿತು ಇವರು ಬಂದರು ಎಂದರೆ ಜ್ವಾಲಾಮುಖಿಯ ಹಾಗೆ ಉರಿಯುತ್ತಿದ್ದ ಅಕ್ಕನ ಇನ್ನೊಂದು ಬಾಗಿಲಿನಿಂದ ಎದ್ದು ನೆರೆಕರೆಗೆ ಹೋಗಿಬಿಡುವಳು ನಸ್ಯಾಣ ಸುಬ್ಬನ—ಪೀಠಿಕೆಗೆ ಪುಟ್ಟಯ್ಯ, ಇವತ್ತು ನಿನ್ನ ತಾಯಿಯ ಕಾರಭಾರವೇನು? ಮಾತನಾಡಲಿಲ್ಲವೇ ನಿನ್ನ ಹತ್ತಿರ?' ಎನ್ನುವನು

'ಅವಳು ಮಾತನಾಡದಿದ್ದರೆ ನನಗೇನು? ಬಡವರ ಸಿಟ್ಟು ಹೊಟ್ಟೆಗೆ ಮಾರಿ ಅದರ ಹಾಗೆ ಮುಖ ಮುರಿದುಕೊಂಡು ಒಂದೇ ಮನೆಯಲ್ಲಿ ಬಿದ್ದಿರುವುದಕ್ಕಿಂತ ಎಲ್ಲಾದರೂ ಕೊಟ್ಟಿಗೆಯಲ್ಲಿ ಬೇಯಿಸಿ ತಿನ್ನುವುದು ವಾಸಿ' ಎಂದು ಗಾಬು ಸಣ್ಣಗೆ ಮಾಡಿದುದನ್ನು ಕಂಡು ಯಜಮಾನರು 'ನನಗೇ ಅಲ್ಲವೇ ಬಂಗಲೆ ಮಾಡಿಸುತ್ತಿರುವುದು ಈಡು ಆಯಿತು ಎಂದರೆ ಇವಳ ಜೊತೆ ಹಾಳು ಬಾವಿ ಅವಳಿಗಿರಲಿ ನೀನು ಎದ್ದು ಬಿಡ. ಬೇರೆ ಅಡಿಗೆ ಜನಮಾಡಿಸುವ —'ಸಂಕಪ್ಪ ಹೋಗಿ ಹೋಟೇಲು ಪ್ರಭುಗೆ ಹೇಳ ಒಂದು ಅರೆ ಕಾಫಿ ಟಿಫಿನು ಬೇಗ ಮುದ್ದುಗನ ಹತ್ತಿರ ಕಳುಹಿಸಲಿಕ್ಕೆ' ಎಂದು. ಅನುಜ್ಞೆಯಾಗುವುದು. ಅದಕ್ಕೆ ನಸ್ಯಾಣ ಸುಬ್ಬಯ್ಯ—'ಅದು ಯಾಕೆ? ನಾನೀಗ ಕುಂದಾಪುರಕ್ಕೆ ಹೊರಟೆ ತಡವಾದಿದರೆ ಬಸ್ಸು ತಪ್ಪುತ್ತದೆ ಏನಾದರೂ ತರಬೇಕಾದರೆ ಹೇಳಿ ಹೀಗೆಂದು ಅವನು ಹೊರಡುತ್ತಾನೆ. ಅಲ್ಲಿಂದ ಧನಿಯರನ್ನು ಕರೆದುಕೊಂಡು ಮಹಡಿ ಏರುತ್ತಾಳೆ ಪುಟ್ಟರಂಗಿ

ಸರಿ—ಇತ್ತ ಗಂಗೊಳ್ಳಿ ರಾಮಯ್ಯ ನಾಯ್ಕರ ವಿಚಾರ ದೇವರೇ ಗತಿಯೆಂದು ಊರೆಲ್ಲಾ ವರ್ತಮಾನ ಅವರು ಮಿಲ್ಲು ಫಾಕ್ಟರಿ ತಯಾರಿ ನಡೆಸಿದ್ದಾರೆ. ಎಂಜಿನು ಬಂದಿದೆ. ಅವರ ಕಡೆ ಯಿಂದ ಪಿನಕ್ಯ ವೆಸ್ಕ್ಯಯಾದರೂ ಆ ಊರಿಗೆ ಬರುತ್ತಾರೆ ಪ್ರತಿ ಬೆಳಗಿನ ಎಂಟು ಘಂಟೆಗೆ ಅಕ್ಕನ ಮನೆಗೆ ಬರುತ್ತಾರೆ. 'ಇವತ್ತೇನಾಯಿತು?' ಎಂದು ವಿಚಾರಿಸುತ್ತಾರೆ

ಅಂದರೆ ಸಕ್ಕದ ಸಂಗತಿಯಂತೆ ರಾಮಯ್ಯ ನಾಯ್ಕರಿಂದ ಅಕ್ಕನ ಹೆಂಗಸು ಮಗಳ ನೆವದಿಂದ ೩೦೦೦ ರೂಪಾಯಿ ಚಿನ್ನ ತರಿಸಿಕೊಂಡಿದ್ದಾಳಂತೆ. ಆದರೆ ಮಗಳು, ಇವರಿಗೆ ತಿಳಿಯದಂತೆ ಚಿನ್ನ ಮೈಯ್ಯರನ್ನು ಹೊಂದಿಯಾಯಿತು. ಈಗ ತಿಳಿದರೆ, ಉಪಯೋಗವಿಲ್ಲ. ಇತ್ತ ಅಕ್ಕನೆಯ ಕೈಗೆ ಬಂದ ಹಣವು ರಾಮಯ್ಯ ನಾಯ್ಕರಿಗೆ ತಿರುಗಿ ಸಿಗುವ ಹಾಗೆ ಇಲ್ಲ.

ಮೈಸೂರಿನಲ್ಲಿ ಸುಧಾರಣೆ

ದಿವಾನಬಹದೂರ ಕೆ. ಆರ್. ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಈ ಸುಧಾರಣಾ ಸಮಿತಿಯ ಕಾರ್ಯಕಲಾಪಗಳು ಮುಂದರಿಯುತ್ತಾ ಇವೆ. ಸಾಕ್ಷಿ ವಿಚಾರಣೆ ಎಲ್ಲಾ ಮುಗಿದು ಈ ಸಮಿತಿಯು ಈಗ ವರದಿ ಬರೆಯುವ ಕಾರ್ಯದಲ್ಲಿ ತೊಡಗಿದೆ. ಪ್ರಾಯಶಃ ಮೇ ತಿಂಗಳ ಮಧ್ಯಭಾಗದಲ್ಲಿ ಇದು ತನ್ನ ವರದಿಯನ್ನು ಮಹಾರಾಜ ಸರಕಾರಕ್ಕೆ ಒಪ್ಪಿಸಬಹುದು ಮಹಾರಾಜರ ರಾಜಾಧಿಕಾರಗಳಿಗೆ ಚ್ಯುತಿ ಬಾರದ ಹಾಗೆ ಮೈಸೂರಿನಲ್ಲಿ ಸಂಪೂರ್ಣ ಜವಾಬುದಾರಿ ಸರಕಾರವನ್ನು ಸ್ಥಾಪಿಸುವುದೇ ಮೈಸೂರು ಸರಕಾರ ಧ್ಯೇಯವಾಗಿರಬೇಕೆಂದು ಸಮಿತಿಯು ಶಿಫಾರಸು ಮಾಡಿದ ಹಾಗೆ ಖಚಿತವಾಗಿ ತಿಳಿದುಬಂದಿದೆ. ಯಾವಾಗ ಹೇಗೆ ಯಾವ ಯಾವ ಸ್ಥಿತಿಯಲ್ಲಿ ಜವಾಬುದಾರ ಸರಕಾರವನ್ನು ಸ್ಥಾಪಿಸಬೇಕೆಂಬುದನ್ನು ಮಹಾರಾಜರು, ಪ್ರಜೆಗಳು ಆ ಭಾಗದಲ್ಲಿ ಪಡೆವ ಯೋಗ್ಯತೆಯನ್ನು ಪರೀಕ್ಷಿಸಿ ತೀರ್ಮಾನಿಸುವರು ನ್ಯಾಯವಿಧಾಯಕ ಸಭೆಯ ಅಧ್ಯಕ್ಷ—ಉಪಾಧ್ಯಕ್ಷರು ಚುನಾಯಿತರಾದವರಿರಬೇಕು. ಈಗ ದಿವಾನರೇ ಅಧ್ಯಕ್ಷರಾಗಿದ್ದಾರೆ ಉಪಾಧ್ಯಕ್ಷ ಪದವಿಯು ಇರುವದಿಲ್ಲ ಕೌನ್ಸಿಲು—ಎಸೆಂಬ್ಲಿಗಳ ಅಧಿಕಾರಗಳನ್ನು ಬಹುಮಟ್ಟಿಗೆ ಹೆಚ್ಚಿಸಲಾಗುವುದು ಸರಕಾರದ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಕನಿಷ್ಠ ಪಕ್ಷ ಇಬ್ಬರಾದರೂ ಚುನಾಯಿತರಾದವರಿರಬೇಕು. ಮಂಡಳಿಯಲ್ಲಿ ೫ ಮಂದಿ ಸದಸ್ಯರಿರುವರು. ಅಗತ್ಯ ಕಂಡರೆ ಮಹಾರಾಜರು ಈ ಸಂಖ್ಯೆಯನ್ನು ಹೆಚ್ಚಿಸಬಹುದು ದ್ವಿದಳ ರಾಜ್ಯಭಾರ ಕ್ರಮಕ್ಕೆ ಪ್ರೋತ್ಸಾಹವಿಲ್ಲ. ಮಂಡಳಿಯ ಸದಸ್ಯರಿಗೆ ಇಲಾಖೆಗಳನ್ನು ಹಂಚಿಹಾಕುವ ಅಧಿಕಾರವು ಮಹಾರಾಜರದು ಮತ್ತು ಸದಸ್ಯರು ತಮ್ಮ ಇಲಾಖೆಗಳ ಆಡಳಿತಕ್ಕೆ ವ್ಯಕ್ತಿಗತವಾಗಿಯೂ ಸಾಮೂಹಿಕವಾಗಿಯೂ ಜವಾಬುದಾರರಾಗಿದ್ದಾರೆ ಎಸೆಂಬ್ಲಿ ಕೌನ್ಸಿಲುಗಳ ಸದಸ್ಯರು ಬಹುಮತದಿಂದ ಚುನಾಯಿತ ಅಥವಾ ನೇಮಕ ಹೊಂದಿದ ಕಾರ್ಯಕಾರಿ ಮಂಡಳಿಯ ಸದಸ್ಯರ ಮೇಲೆ ಅವಿಶ್ವಾಸವನ್ನು ಸೂಚಿಸಿದರೆ ಅವರು ರಾಜೀನಾಮೆ ಕೊಡತಕ್ಕ ವರು ಬಾಧ್ಯರಾಗಿದ್ದಾರೆ ಸದಸ್ಯರ ಎಸೆಂಬ್ಲಿ ಮತ್ತು ಕೌನ್ಸಿಲಿನಲ್ಲಿ ಮೈಸೂರಿಗೆ ಮತ್ತು ಮೀಸಲು ಸ್ಥಾನಗಳ ಪೈಕಿ ಆ ಸ್ಥಾನಗಳಿಗೆ ಸದಸ್ಯರನ್ನು ಚುನಾಯಿಸಿ ಕಳುಹಿಸಬೇಕು. ಉಳಿದ ಸ್ಥಾನಗಳಿಗೆ ಮಹಾರಾಜ ಸರಕಾರವು ನಾಮಕರಣ ಮಾಡಬೇಕು—ಹೀಗೆಂದು ಸಮಿತಿಯು ತನ್ನ ಶಿಫಾರಸುಗಳನ್ನು ಮಾಡುವದಾಗಿ ನಂಬಲಾಗಿದೆ

ಮಗಳನ್ನು ತನ್ನವನಿಗೆ ಒಪ್ಪಿಸಿ, ಮಗೆ ಕೊಡಿಸಿದರಾಯಿತಲ್ಲ' ಎಂದು ಅಕ್ಕನ ಹಣ ಕೊಟ್ಟಿದ್ದಾಳೆ ಇನ್ನು ಯಾರದ ಅದೃಷ್ಟ ಹೇಗೇಗೆಂದು ದೇವರೇ ಹೇಳಬೇಕು. ಅಂಬಿಣ—ಪುಟ್ಟರಂಗಿ ಬಾವಿನಲ್ಲಿ, ನಾಗಯ್ಯ ಅಕ್ಕನೆಯನ್ನು ಮಾತನಾಡಿಸಿದ್ದಾನೆ ಎಂದು. ಒಂದು ವದಂತಿ ಮಿದೆ ಇತ್ತ ಸೀತೈತಾಳರ 'ಅಕ್ಕನ' ತಪ್ಪದಿದ್ದರೆ ಪುಟ್ಟರಂಗಿಯಾದರೂ ತನ್ನ ಪಾಲಿಗೆ ಬಂದೀತೋ ನೋಡಬೇಕೆಂದು ಕೆಲವು ಕೀಲಿ ತಿರುಗಿಸುತ್ತಾರೆಂದು ವರ್ತಮಾನವು ಚಿನ್ನ ಮೈಯ್ಯರಿಗೆ ಸಿಕ್ಕಿದೆಯಂತೆ ಅದೇ ವಿಷಯ ಈಗ ಮೇಲೆ ಪಂಚಾಯಿತಿ ನಡೆಯುತ್ತಿರುವುದು.

ಶಿಕ್ಷಿತ ನಿರುದ್ಯೋಗ ಸಮಸ್ಯೆ

ಅದನ್ನು ನಿವಾರಿಸುವ ಅನಾಮಲೆ ಯುನಿವರ್ಸಿಟಿಯ ಪ್ರಯತ್ನ

ಶಿಕ್ಷಿತ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದಕ್ಕಾಗಿ ಅನಾಮಲೆ ಯುನಿವರ್ಸಿಟಿಯವರು ಮಾಡುತ್ತಿರುವ ಪ್ರಯತ್ನಗಳು ಎಲ್ಲರ ಗಮನಕ್ಕೆ ಬರುವಂಥವಾಗಿವೆ ಅಲ್ಲಿ ಅವರು ಶ್ರೀ ನಟರಾಜ ಎಗ್ರಿಕಲ್ಚರಲ್ ಕೊಲೊನೈಜೇಶನ್ ಕೋಪರೇಟಿವ ಸೊಸೈಟಿ ಎಂಬುದನ್ನು ಸ್ಥಾಪಿಸಿ ಅದರ ಮೂಲಕ ಶಿಕ್ಷಿತ ನಿರುದ್ಯೋಗವನ್ನು ನಿವಾರಿಸಲಿಕ್ಕೆ ಆಲೋಚನೆ ಮಾಡಿದ್ದಾರೆ

ಯುನಿವರ್ಸಿಟಿಯು ಸುಮಾರು ನೂರು ಎಕ್ರೆ ವಿಸ್ತಾರವಾದ ಭೂಮಿಯನ್ನು ಈ ಸಂಘಕ್ಕೆ ಕೊಟ್ಟಿದೆ ಈ ಭೂಮಿಯ ಒಂದಂಶವು ಬಾಗಾಯ್ತು ಮತ್ತು ಇನ್ನೊಂದು ಅಂಶವು ನಂಜ ಆಗಿದೆ ಯುನಿವರ್ಸಿಟಿಯ ಹಿಂದಿನ ವಿದ್ಯಾರ್ಥಿಗಳೂ ಇತರ ಶಿಕ್ಷಿತ ನಿರುದ್ಯೋಗಿಗಳೂ ಈ ಸಂಘದ ಸದಸ್ಯರಾಗಲಿಕ್ಕೆ ಅರ್ಹರಾಗಿರುತ್ತಾರೆ. ಈ ವರ್ಷ ಮೇ ೧ನೆ ತಾರೀಕಿನ ಒಳಗಾಗಿ ಅರ್ಜಿ ಪತ್ರಗಳನ್ನು ಕಳುಹಿಸಿಕೊಟ್ಟವರಿಗೆ ಸಂಘದಲ್ಲಿ ಪ್ರವೇಶವು ದೊರೆಯುವುದು. ಪ್ರವೇಶವನ್ನು ಅಪೇಕ್ಷಿಸುವವರು ದೃಢಕಾಯರೂ, ಯಾವದೇ ಬಗೆಯ ಶರೀರ ಶ್ರಮವನ್ನು ವಹಿಸಲು ಸಮರ್ಥರೂ ಸಿದ್ಧರೂ ಆಗಿರಬೇಕು ಮತ್ತು ಅವರು ಎರಡೆರಡು ತಿಂಗಳ ಅವಧಿಯಿಂದ ೫ ಕಂತುಗಳಾಗಿ ರೂಪಾಯಿ ೧೨೦ ಬೆಲೆ ಬಾಳುವ ಸಂಘದ ಪಾಲುಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ

ಸಂಘದ ಭೂಮಿಯಲ್ಲಿ ಸ್ವೀಕೃತ ಉಮೇದವಾರರಿಗೆ ಕೃಷಿ ಮತ್ತು ಇತರ ಸ್ವತಂತ್ರ ಜೀವನೋಪಾಯಗಳನ್ನು ಕಲಿಸಿಕೊಡುವರು ಸ್ವೀಕೃತ ಉಮೇದುವಾರರು ತಮ್ಮ ಕುಟುಂಬ ಸಮೇತ ಸಂಘದ ಭೂಮಿಯಲ್ಲೇ ವಾಸಿಸಬೇಕು. ಕಳೆದ ವರ್ಷ ಸೇರಿದ ಬಿ ಎ ಮತ್ತು ಬಿ ಎಸ ಸಿ ಕಲಿತ ಇಬ್ಬರು ಪದವೀಧರರು ತಮ್ಮ ಕುಟುಂಬ ಸಮೇತ ಹೀಗೆ ಸ್ವತಂತ್ರ ಜೀವನವನ್ನು ನಡೆಸಿ ಅಲ್ಲೇ ಇದ್ದಾರೆ ಅವರಿಗೆ ತಮ್ಮ ಜೀವನಕ್ಕಾಗಿ ಇಷ್ಟರ ತನಕ ಎನನ್ನಾದರೂ ನೀಡಿರುವ ತೊಂದರೆಯಾಗಿ ಎಂದಿಲ್ಲ ಅವರು. ತಮಗೆ ಬೇಕಾದ ದನ್ನೆಲ್ಲ ತಮಗೆ ಹಂಚಿಕೊಟ್ಟ ಭೂಮಿಯಿಂದಲೇ ಪಡೆಯುವರು ಸಂಘಕ್ಕೆ ಸರಕಾರದ ಕೃಷಿ, ಸಹಕಾರ ಮತ್ತು ಕೆಂದಾಯ ಖಾತೆಗಳ ಪೂರ್ಣ ಸಹಕಾರ ಸಹಾಯಗಳು ದೊರೆಯುವ ಆಶ್ವಾಸನೆಯು ಸರಕಾರದಿಂದ ದೊರಕಿದೆ

ಇಂಥ ಬೇರೆ ಬೇರೆ ಯೋಜನೆಗಳು ಬೇರೆ ಬೇರೆ ಯುನಿವರ್ಸಿಟಿಯವರ ಕಾರ್ಯರೂಪಕ್ಕೆ ತಂದುದಾದರೆ ಶಿಕ್ಷಿತ ನಿರುದ್ಯೋಗಿಗಳಿಗೆ ಉದ್ಯೋಗದ ಹೊಸ ದಾರಿಗಳನ್ನು ತೋರಿಸಿಕೊಟ್ಟಂತಾಗುವುದು.

ಜಾಹೀರಾತುಗಳಿಗೆ

ಸ್ವದೇಶಾಭಿಮಾನಿ

ಅತ್ಯುತ್ತಮ ಸೌಕರ್ಯ ಕೊಡುವುದು;
ಪ್ರತಿಫಲಬರುವಂತೆ ಸಾಧಿಸುವುದು

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ,

ಕೆ ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

S. U. N. & Co.,

Silk Merchants.

Chaukhambi BENARES CITY

ಈಗಿನ ತರಹ (ಕಾಶಿ) ಬನಾರಿಸ್ ಶೀರೆ ನಿಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿ ಈಗ ಕಡಿ ಕುಂಬಾ ಸುಲಭ ಬೆಲೆ ಮಾಲು 18 ಮೊಳದ 2½ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣ ತರದ್ದು 18 ಮೊಳ ಸಣ್ಣ ಬುಟ ಶೀರೆಗಳು ರೂ 35ರಿಂದ ರೂ 65 ವರೆಗು ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಬುದ ಮೊಳ 16, ಅಗಲ 2½ ರೂ 20ರಿಂದ 85ರ ವರೆಗೆ ಬೇರೆ ಮಾಲುಗಳ ಕೆಟಲಾಗ ಉಚಿತವಾಗಿ ಕಳುಹಿಸಲಾಗುತ್ತದೆ —

ತಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬನಾರಿಸ್ ಸಿಟಿ

'DILROZ' Regd.

Dil Roz' is a sure cure for Oriental sores, to al sores all kinds of desperate ulcers, skin eruptions Pimples Eczema Ringworm Sinus Fistula axillary Abscess

There is no need of dressing the wounds nor are baths prohibited

Price Rs. 2 Postage extra

TAHIR DIN,
Anarkali, LAHORE

ಸ್ವದೇಶೀ ಬಳೆಗಳು ಸ್ವದೇಶೀ

ಅಗ್ನಿ, ಅಂದ, ಮೋಹಕ ಮತ್ತು ಪಕ್ಕಾ ಬಣ್ಣದ ಅದರೆ ಪಾರದರ್ಶಕವಾದ ಜನ್ನದಾ ಕಾಶಾಸಾ (ಗೋರೆ ಕಾರಿನಂತೆ ಚಿತ್ರದ) ಕಾಂಪ (ಪೈಲು ಇದ್ದ) ಮತ್ತು ಇತರ ಫ್ಯಾನ್ಸೀ ಡಿಝಾಯನುಗಳ ಕಾಜಿನ ಬಳೆಗಳು, ಮೆಸರ್ಸ ಗೋರೆ ಮತ್ತು ಕಂಪೆನಿಯವರು ತಮ್ಮ ಕ್ರಿಸ್ಟಲ್ ಗ್ಲಾಸ್ ವರ್ಕ್ಸ, ಸಂತ ರೋಹಿದಲ್ಲಿ ತಯಾರಿಸಲ್ಪಡುತ್ತವೆ. ಅವರ ಮಾಲು ಈಗ ಬಜಾರದಲ್ಲಿ ಎಲ್ಲ ವ್ಯಾಪಾರಸ್ಥರ ಕಡೆಗೆ ದೊರೆಯುವುದು ತೋಕ ಗಿರಾಕಿಗಳ ಮಾಹಿತಿಯ ಬಗ್ಗೆ ದರವನ್ನು ಕೊಡಲಾಗಿದೆ.

ಜವಹಾರ ಪಾಸಾ—ಪೈಲು ಹಾಕಿದ ಬಳೆಗಳು ೦-೬-೬ ಪ್ರತಿಯೊಂದು ಕಟ್ಟಿಗೆ [ಒಂದು ಕಟ್ಟಿನಲ್ಲಿ ಆರು ಡಜನ್ ಜೋಡುಗಳು ಇರುವವು]

ಕಾಂಪ—ತ್ರಿಕೋಣ ಪ್ಲೇನ ೦-೬-೬

ಜವಹಾರ ಕಾಂಪ—ತ್ರಿಕೋಣ ಪ್ಲೇನ ಮೇಲೆ ಪೈಲು ಹಾಕಿದ್ದು ೦-೧೧-೦

ಎಲ್ಲ ದರಗಳು ಪ್ಯಾಕಿಂಗ್ ಹೊರ್ತುಪಡಿಸಿ ಕಾರಖಾನೆಯು ಡಿಲಿವ್ಹರಿ ಎಂದು ತಿಳಿಯತಕ್ಕದ್ದು ಪ್ಯಾಕಿಂಗ್ ಒಂದು ಪೆಟ್ಟಿಗೆಗೆ ರೂ. ೧-೮-೦ ಬೇರೆ. ಹೆಚ್ಚಿನ ಮಾಹಿತಿಗಾಗಿ ಬರೆಯಿರಿ.

ಮೆಸರ್ಸ ಗೋರೆ ಮತ್ತು ಕಂಪೆನಿ,

ಮಹಲಾನ ಬಿಲ್ಡಿಂಗ, ಸರ್ ಫಿರೋಜಶಹಾ ಮೆಹತಾ ರೋಡ್ ಫೋರ್ಟ, ಮುಂಬಯಿ

ದೇಶವನ್ನು ಹಂಚಿ ತಿನ್ನುವ ಮುಸ್ಲಿಮ್ ಲೀಗಿನ ಹಂಚಿಕೆ

ಮೀರತಿನಲ್ಲಿ ಮುಸ್ಲಿಮ ಲೀಗ ಸಭೆಯು ಕೂಡಿದ್ದಾಗ ನವಾಬ್ಜಾದಾ ಲಿಯಾಖತ ಅಲಿಖಾನರು ತಮ್ಮದೊಂದು ಭಾಷಣದಲ್ಲಿ–'ಪ್ರಾಂತ್ಯಗಳಲ್ಲಿ ಸ್ವಾಯತ್ತ ಶಾಸನ ಸ್ಥಾಪನೆಯಾದ ಅನಂತರ ಮುಸಲ್ಮಾನರ ಸ್ಥಿತಿಯು ಬಹಳ ಕೆಟ್ಟಿರುವುದು. ಇದೇ ರೀತಿ ಮುಂದೆಯೂ ನಡೆಯುತ್ತಾ ಇದ್ದರೆ ಸಂಘ ಶಾಸನದಲ್ಲಿ ಮುಸಲ್ಮಾನರು ಸಂಪೂರ್ಣ ಪರಾಧೀನರಾಗುವರು. ಹಿಂದೂ ಮುಸಲ್ಮಾನರು ಐಕ್ಯತೆಯಿಂದ ಇರಲಾರರೆಂದಾದರೆ ಮತ್ತು ಅವರು ಒಂದೇ ರಾಷ್ಟ್ರೀಯ ಸರಕಾರದ ಅಧೀನ ಆಗಲಾರರೆಂದಾದರೆ, ಈ ದೇಶವನ್ನು ಅವರು ಧರ್ಮ ಮತ್ತು ಸಂಸ್ಕೃತಿಯನ್ನು ಆಧಾರವಾಗಿಟ್ಟುಕೊಂಡು ಹಂಚಿಕೊಳ್ಳುವುದು ಉತ್ತಮ ಉಪಾಯವಾಗಿದೆ' ಎಂದು ಹೇಳಿದರು. ಅವರ ಈ ಭಾಷಣವನ್ನು ಖಂಡಿಸುತ್ತ 'ಹಿಂದೂ ಮಿತ್ರ'ನು ಹೀಗೆ ಬರೆದಿದ್ದಾನೆ:—

ಸ್ವಲ್ಪ ಮಾತ್ರ ವಿಚಾರ ಮಾಡಿದರೆ ಈ ಭಾಷಣವು ಎಷ್ಟು ಅಸತ್ಯವಾಗಿದೆ ಎಂಬುದರ ರಹಸ್ಯವು ಗೊತ್ತಾಗುವುದು. ಪ್ರತಿಯೊಬ್ಬರಿಗೂ ತಮ್ಮ ತಮ್ಮ ತಾತ್ಕಾಲಿಕ ಪರಿಸ್ಥಿತಿಯ ಕುರಿತು ಅಸಂತುಷ್ಟಿ ಇರುವುದು ಸಹಜವಾಗಿದೆ. ಆದರೆ ಪ್ರಾಂತೀಯ ಸ್ವಾಯತ್ತ ಶಾಸನದ ಸ್ಥಾಪನೆಯಾದ ಅನಂತರವೇ ಮುಸಲ್ಮಾನರ ಸ್ಥಿತಿಗತಿಗಳು ಹಾಳಾಗಿವೆ ಎಂದು ಅಲಿಖಾನರು ಹೇಳುವುದು ಪೂರ್ಣ ಸುಳ್ಳು. ಪ್ರಾಂತೀಯ ಸ್ವಾಯತ್ತ ಶಾಸನದ ಮೊದಲು ಮುಸಲ್ಮಾನರ ಸ್ಥಿತಿ ಚೆನ್ನಾಗಿತ್ತು. ಅದರ ಸ್ಥಾಪನೆಯಾದ ಅನಂತರ ಅವರ ಸ್ಥಿತಿ ಕೆಟ್ಟಿತು—ಅಂದರೆ, ಈಗಿನ ಪ್ರಾಂತೀಯ ಸರಕಾರಗಳು ಮುಸಲ್ಮಾನರಿಗೆ ಅನ್ಯಾಯ ಮಾಡುತ್ತಿವೆ ಎಂದು ಅಲಿಖಾನರ ಮಾತಿನ ಅರ್ಥವಾಗುತ್ತದೆ. ಆದರೆ ಅಲಿಖಾನರು ತಮ್ಮ ಮಾತಿನ ಆಧಾರವಾಗಿ ಅಂಕೆಸಂಖ್ಯೆಗಳ ಪ್ರಮಾಣಗಳನ್ನೇನೂ ಕೊಟ್ಟಿರುವುದಿಲ್ಲ. ಪ್ರಾಯಶಃ ಅವರು ತಮ್ಮನ್ನು ತಾವೇ ಸತ್ಯಮೂರ್ತಿಗಳೆಂದು ತಿಳಿದುಕೊಂಡಿರಬಹುದು. ವಸ್ತುಸ್ಥಿತಿಯ ಕಡೆಗೆ ಕಣ್ಣುಬಿಟ್ಟು ನೋಡಿದರೆ—ಪ್ರಾಂತೀಯ ಸರಕಾರಗಳು ಮುಸಲ್ಮಾನರಿಗೆ ಅನ್ಯಾಯ ಮಾಡುತ್ತಿರುವುದರ ಬದಲಿಗೆ, ಅವು ಮುಸಲ್ಮಾನರ ಪೂರ್ಣ ಪಕ್ಷಪಾತಿಗಳಾಗಿ ಇರುವುದನ್ನು ಕಾಣಬಹುದು. ಸರಕಾರಿ ನೌಕರಿಗಳು ಮುಸಲ್ಮಾನರ ಸಂಖ್ಯೆ ಮತ್ತು ಯೋಗ್ಯತೆಯ ಅನುಪಾತವನ್ನು ಮೀರಿ ಅವರಿಗೆ ದೊರೆಯುತ್ತವೆ. ಶಿಕ್ಷಣ ಮತ್ತು ನೌಕರಿ ಸಂಪಾದನೆಯಲ್ಲಿ ಅವರಿಗೆ ಅನೇಕ ತರದ ವಿಶೇಷ ಅನುಕೂಲತೆಗಳಿವೆ. ಮುಸಲ್ಮಾನರು ಯಾವ ಯಾವ ಬೇಡಿಕೆಗಳನ್ನು ಸರಕಾರದ ಮುಂದಿಡುತ್ತಾರೋ ಅವುಗಳನ್ನೆಲ್ಲ ಸರಕಾರವು ಮನ್ನಿಸುತ್ತ ಬಂದಿದೆ. ಆದರೂ ಮುಸಲ್ಮಾನರ ಬೇಡಿಕೆಗಳು ದಿನ ಪ್ರತಿ ದಿನ ಹೆಚ್ಚುತ್ತಾ ಇವೆ. ರಾಜಕೀಯ ಕ್ಷೇತ್ರದಲ್ಲಿ ಮುಸಲ್ಮಾನರಿಗೆ ಲಾಭವೇ ಲಾಭವಾಗಿದೆ. ಪ್ರಾಂತ್ಯಗಳಲ್ಲಿ ಕಾಂಗ್ರೆಸ ಸರಕಾರಗಳ ಸ್ಥಾಪನೆಯಾಗುವ ಮೊದಲು—ಮುಸಲ್ಮಾನರು ಕಾಂಗ್ರೆಸಿಗೆ ವಿರೋಧವಾಗಿದ್ದಾರೆಂಬ ಕಾರಣದಿಂದ ಆಗಿನ ಸರಕಾರಗಳು ಅವರ ಕಣ್ಣಿಗೆ ಬೆಣ್ಣೆ ಹಚ್ಚುತ್ತಿದ್ದುವು. ಈಗ, ಕಾಂಗ್ರೆಸ ಸರಕಾರಗಳು ಸ್ಥಾಪನೆಯಾದ ಮೇಲೆ, ಮುಸಲ್ಮಾನರು ಕಾಂಗ್ರೆಸಿಗೆ ಸೇರಬೇಕೆಂದು ಈ ಸರಕಾರಗಳು ಅವರ ಕಣ್ಣಿಗೆ ಬೆಣ್ಣೆ ಹಚ್ಚುತ್ತಾ ಇವೆ, ಅದ್ದರಿಂದ ಹಿಂದುಗಳ ಹಕ್ಕು ಅಧಿಕಾರಗಳನ್ನು ಅತ್ತ ಮುಸಲ್ಮಾನರಿಗೆ ಕೊಡುತ್ತಾ ಇವೆ. ಮದ್ಯಪಾಯಿಗೆ ಕುಡಿದಷ್ಟು ಹೇಗೆ ತೃಪ್ತಿ ಆಗುವುದಿಲ್ಲವೋ ಹಾಗೆ ಮುಸಲ್ಮಾನರಿಗೆ ಸಿಕ್ಕಿದಷ್ಟು ಸಾಲದಾಗಿದೆ. ಅವರನ್ನು ತೃಪ್ತಿಪಡಿಸಲಿಕ್ಕೆ ಸರಕಾರಗಳು ಎಷ್ಟೆಷ್ಟು ಹೆಚ್ಚು ಪ್ರಯತ್ನಿಸುತ್ತಿವೆಯೋ ಅವರು ಅಷ್ಟಷ್ಟು ಹೆಚ್ಚಿಗೆ ಅತೃಪ್ತರಾಗುತ್ತಿದ್ದಾರೆ. ಒಂದು ಕಡೆಯಿಂದ ಕಾಂಗ್ರೆಸು ಮುಸಲ್ಮಾನರಿಗೆ ಅನುಕೂಲವಾಗಿ ಪಕ್ಷಪಾತ ಮಾಡುತ್ತಿರುವಾಗ, ಇನ್ನೊಂದು ಕಡೆಯಿಂದ ಮುಸಲ್ಮಾನರು ಕಾಂಗ್ರೆಸಿನ ಬಲೆಯಲ್ಲಿ ಸಿಲುಕಬಾರದೆಂದು ಹೇಳುತ್ತಾ ಇದ್ದಾರೆ. ಅದ್ದರಿಂದ ಕಾಂಗ್ರೆಸು ವಸ್ತುಸ್ಥಿತಿಯ ಕಡೆಗೆ ಕಣ್ಣುಮುಚ್ಚಿಕೊಂಡು ಮೂರ್ಖವಾಗಬಾರದು; ಅದು ಮಿ. ಜಿನ್ನಾ ಸಾಹೇಬರ ಕಾರ್ಯ ಧೋರಣೆಯ ಮರ್ಮವನ್ನರಿತು ಜಾಗೃತವಾಗಬೇಕು. ಮುಸಲ್ಮಾನರ ಅನ್ಯಾಯದ ಬೇಡಿಕೆಗಳನ್ನು ಪೂರೈಸಲಿಕ್ಕೆ ಅದು ಹಿಂದುಗಳ ನ್ಯಾಯವಾದ ಹಕ್ಕು ಅಧಿಕಾರಗಳನ್ನು ಎಷ್ಟು ಮಾತ್ರಕ್ಕೂ ಬಲಿಕೊಡಕೂಡದು.

ಹಿಂದು ಮುಸಲ್ಮಾನರು ಐಕ್ಯತೆಯಿಂದ ಇರಲಾರದವರು ಹಿಂದುಗಳೆ, ಮುಸಲ್ಮಾನರೆ ಎಂದು ಕೊಂಚ ಆಲೋಚಿಸಬೇಕು. ಇತರರ ಸಾಧಾರಣ ಕೃತ್ಯಗಳಲ್ಲಿ ಕೂಡ ಭಾವಿ ಹಾಕುವವರು ಇತರ ಸಂಪ್ರದಾಯದವರು ರಸ್ತೆಗಳ ಮೇಲೆ ವಾದ್ಯ ಬಾರಿಸಬಾರದೆಂದು ಅಡಚಣೆ ಹಾಕುವವರು, ಮೆರವಣಿಗೆ, ದಿಬ್ಬಣ ಹೋಗುವಾಗ ಕಲ್ಲುಗುಂಡು ಬಿಸಾಡಿ ದಂಗೆ ಮಾಡುವವರು—ಇತ್ಯಾದಿ ಅನ್ಯಾಯಗಳನ್ನು ಮಾಡುವವರು ಯಾರೆಂಬುದನ್ನು ಈಗ ಜನರು ಚೆನ್ನಾಗಿ ತಿಳಕೊಂಡಿದ್ದಾರೆ. ಐಕ್ಯದಿಂದಲೂ ಶಾಂತಿಯಿಂದಲೂ ಇರಲಾರದವರು ಮುಸಲ್ಮಾನರೇ, ಹಿಂದುಗಳಲ್ಲವೆಂಬುದು ಎಲ್ಲರಿಗೂ ಗೊತ್ತು. ಹಿಂದುಗಳು ಮೊದಲಿನಿಂದಲೂ ಎಲ್ಲಾ ಜಾತಿ ಮತ ಸಂಪ್ರದಾಯದವರೊಡನೆ ಪ್ರೇಮ, ಸಹಕಾರ, ಐಕ್ಯ, ಶಾಂತಿಯನ್ನು ಇಚ್ಛಿಸುತ್ತ ಬಂದಿದ್ದಾರೆ. ಆದರೂ ಈಗ ಅಲಿಖಾನರು ಧರ್ಮ ಮತ್ತು ಸಂಸ್ಕೃತಿಯ ಆಧಾರದಿಂದ ದೇಶವನ್ನು ಹಂಚಿಕೊಡಬೇಕೆಂದು ಹೇಳುತ್ತಾರೆ. ಹೀಗೆಂದರೆ ಮುಸಲ್ಮಾನರ ಹಿಂದುಸ್ಥಾನ, ಇದು ಹಿಂದುಗಳ ಹಿಂದುಸ್ಥಾನವೆಂದು ಹಂಚಿ ಹಾಕಲಿಕ್ಕೆ ದೇಶವು ಹಿಟ್ಟು ಬೇಳೆ ಅಲ್ಲವಷ್ಟೆ? ಧರ್ಮ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಹಿಂದುಸ್ಥಾನವು ಹಿಂದುಗಳದ್ದಾಗಿದೆ. ಹಿಂದುಗಳ ತೀರ್ಥಸ್ಥಾನಗಳು ಹಿಂದುಸ್ಥಾನದಲ್ಲೇ ಇರುವುವು. ಮುಸಲ್ಮಾನರು ತೀರ್ಥಯಾತ್ರೆಗಾಗಿ ಮಕ್ಕಾಮದೀನಗಳಿರುವ ಅರೇಬಿಯಕ್ಕೆ ಹೋಗಬೇಕು. ಹಿಂದುಗಳ ಆಚಾರವಿಚಾರ ನಡೆನುಡಿಗಳು ದೇಶಕ್ಕೆ ಅನುಕೂಲವಾಗಿರುವುವು. ಆದರೆ ಮುಸಲ್ಮಾನರ ಆಚಾರವಿಚಾರ ನಡೆನುಡಿಗಳು ಅರೇಬಿಯಕ್ಕೆ ಅನುಕೂಲವಾಗಿರುವುವು. ಹಾಗಿದ್ದ ಮೇಲೆ ಮುಸಲ್ಮಾನರು ಹಿಂದುಸ್ಥಾನವನ್ನು ಹಂಚಿಕೊಳ್ಳುವುದು ಹೇಗೆ? ಯಾವ ಅಧಿಕಾರದಿಂದ? ಹಿಂದುಗಳನ್ನು ಯಾವುದೊಂದು ಸಂಸ್ಥಾನ ಅಥವಾ ಪ್ರಾಂತ್ಯದಿಂದ ಸಂಪೂರ್ಣ ಹೊರಗಟ್ಟಬೇಕೆನ್ನುವುದು ಸರ್ವಥಾ ಅಸಂಭವವಾಗಿದೆ. ಮುಸಲ್ಮಾನರು ಯಾವ ಯಾವ ಸಂಸ್ಥಾನ ಅಥವಾ ಪ್ರಾಂತ್ಯಗಳಲ್ಲಿ ವಾಸವಾಗಿದ್ದಾರೋ ಆ ಪ್ರಾಂತ್ಯಗಳಿಂದ ಅವರನ್ನು ಹೊರಗಟ್ಟಬೇಕೆಂದು ನಾವು ಹೇಳುವುದೂ ಇಲ್ಲ. ಮುಸಲ್ಮಾನರು ಹೆಚ್ಚಾಗಿ ಇದೇ ದೇಶದ ಮಕ್ಕಳಾಗಿದ್ದಾರೆ. ಆದರೆ ಕೆಲವು ಜನ ಸ್ವಾರ್ಥಿಗಳ ಮೋಹದ ಮಾತುಗಳಿಗೆ ಹುಚ್ಚಾಗಿ ಅಥವಾ ಭ್ರಮೆಯಲ್ಲಿ ಬಿದ್ದು ಅವರು ತಮ್ಮನ್ನು ಭಾರತೀಯರಲ್ಲವೆಂದೂ ವಿದೇಶಿಗಳೆಂದೂ ತಿಳಿಯುತ್ತಾರೆ. ಮುಸಲ್ಮಾನ ಎಂಬುದು ಒಂದು ಮತದ ಹೆಸರಾಗಿರುವುದಲ್ಲದೆ ಜಾತಿಯ ಹೆಸರಾಗಿರುವುದಿಲ್ಲ. ಅದ್ದರಿಂದ ಜಾತಿಯ ಆಧಾರದಿಂದಾಗಬಹುದಾದ ಕೆಲಸವನ್ನು ಮತದ ಆಧಾರದಿಂದ ಮಾಡಲಿಕ್ಕಾಗುವುದಿಲ್ಲ. ಹಿಂದೂ ಮುಸಲ್ಮಾನರ ಮತಗಳು ಬೇರೆ ಬೇರೆ ಆಗಿದ್ದರೂ ಅವರು ಒಂದೇ ಜಾತಿಗೆ ಸೇರಿದವರು ಎಂದರೆ ಹಿಂದೀಯರು—ಭಾರತೀಯರು ಆಗಿದ್ದಾರೆ. ಅದ್ದರಿಂದ ದೇಶವನ್ನು ಹಂಚಿ ತಿನ್ನುವ ಮುಸ್ಲಿಮ್ ಲೀಗಿನ ಹಂಚಿಕೆಯು ತಿರುಕನ ಕನಸಾಗಬಹುದಲ್ಲದೆ ಬೇರೇನಿಲ್ಲ.

ಮುಸ್ಲಿಮ್ ಲೀಗ್ ಎಂಬುದು ಸ್ವಾರ್ಥಿಗಳ ಕೂಟ

ಮುಸ್ಲಿಮರೊಬ್ಬರ 'ಸರ್ಟಿಫಿಕೇಟು!'

ಮುಸ್ಲಿಂ ಲೀಗಿನ ಕಾರ್ಯಧೋರಣೆಯಿಂದ ಅಸಂತುಷ್ಟರಾದ ಶೇಖ್ ಅಬ್ದುಲ್ ಗನಿಯವರು ಜಲಂಧರದ ತಮ್ಮ ಮುಸ್ಲಿಂ ಲೀಗ ಕಾರ್ಯದರ್ಶಿ ಸ್ಥಾನಕ್ಕೆ ತಿಲಾಂಜಲಿಯನ್ನು ಕೊಟ್ಟಿರುತ್ತಾರೆ. ರಾಜಿನಾಮೆಯನ್ನು ಕೊಡುತ್ತಾ ಅವರು—'ಮುಸ್ಲಿಂ ಲೀಗ ಎಂಬುದು ತಮ್ಮ ತಮ್ಮ ಸ್ವಾರ್ಥವನ್ನು ಸಾಧಿಸಲಿಕ್ಕಾಗಿ ಒಂದು ಕಡೆ ಸೇರಿದ ಕೆಲವು ಜನ ಮುಸ್ಲಿಮರ ಒಂದು ತಂಡವಾಗಿದೆ. ಚುನಾವಣೆಗಳನ್ನು ಸ್ಪರ್ಧಿಸುವುದಷ್ಟೇ ಲೀಗಿನ ಕರ್ತವ್ಯವಾಗಿದೆ! ಲೀಗಿನ ಈ ಧೋರಣೆಯಿಂದಾಗಿ ಮುಸ್ಲಿಂ ಸಮಾಜಕ್ಕೆ ಅಪಾರ ಹಾನಿಯಾಗಿರುವುದು' ಎಂದು ಹೇಳಿದ್ದಾರೆ.

ಮುಸ್ಲಿಂ ಜನತೆಯ ಹಿತಕ್ಕಾಗಿಯೂ ದೇಶದ ಸ್ವಾತಂತ್ರ್ಯ ಸಂಪಾದನೆಗಾಗಿಯೂ ಮುಸ್ಲಿಂ ಲೀಗ ಹೋರಾಡುತ್ತದೆ ಎಂದು ಪ್ರಚಾರ ಕೊಡುತ್ತಿದ್ದ ಮಿ. ಜಿನ್ನರಂಥ ಕೆಲವೇ ಜನ ಮುಸ್ಲಿಂ ಲೀಗ ಕಾರ್ಯಕರ್ತರುಗಳಿಗೆ ಅಬ್ದುಲ್ ಗನಿಯವರು ಒಳ್ಳೆಯ ಸರ್ಟಿಫಿಕೇಟನ್ನು ಕೊಟ್ಟು ಅವರ ಅಂತರಂಗವನ್ನು ಬಯಲಿಗೆ ತಂದಿದ್ದಾರೆ.

ನೋಟಿಸು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 16/1939.

ಗೋವಿಂದಕಿಣಿ(ಮ್ಯಾ)-ಕೋಟೆ ನರಸಿಂಹ ಕಿಣಿಯವರ ಮಗ. ಇವನ ಪ್ರೇಮದ ಕಿಳಕು ತಾಯಿ ಗೌರಿ ಯಾನೆ ಸರೋಜಿನಿ ದೇವಿ-ಉಡ್ಪಿ ತಾಲೂಕು ಮೂಡುತೋನ್ಸೆ ಗ್ರಾಮದಲ್ಲಿರುವವರು . . . . . } ಅರ್ಜಿದಾರ

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ.—

ಅರ್ಜಿದಾರನ ತಂದೆ ಉಡ್ಪಿ ತಾಲೂಕು ಮೂಡು ತೋನ್ಸೆ ಗ್ರಾಮದಲ್ಲಿ ತಾ. 19-5-38 ರಲ್ಲಿ ಮೃತಪಟ್ಟ ತೋನ್ಸೆ ನರಸಿಂಹ ಕಿಣಿಯು "ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ ಕಂಪೆನಿಯಲ್ಲಿ" ನಂಬ್ರ 12184ಕ್ಕೂ "ದಿ ಎಂಪಾಯರ್ ಒಫ್ ಇಂಡಿಯಾ ಲೈಫ್ ಎಶ್ಯೂರೆನ್ಸ ಕಂಪೆನಿಯಲ್ಲಿ" ನಂಬ್ರ 121206ಕ್ಕೂ "ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ ಕಂಪೆನಿ, ಲಿಮಿಟೆಡ್, ಉಡ್ಪಿ" ಈ ಕಂಪೆನಿಯಲ್ಲಿ ನಂಬ್ರ 197 ಕ್ಕೂ ಪಡೆದ ಪೊಲಿಸಿಗಳ ಬಾಬ್ತು ಬಕ್ಕಿ ಸಲ್ಲತಕ್ಕ ರೂಪಾಯಿ 1917–11–0ನ್ನು ವಸೂಲು ಮಾಡುವಂತೆ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರನು ದಾಖಲುಮಾಡಿದ ಸದ್ರಿ ಅರ್ಜಿಯು ತಾ 10-6-39ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಅರ್ಜಿ ತನಿಖೆ ಸಮಯ ಸದ್ರಿ ಕೋರ್ಟಿನ ಮುಂದೆ ಹ್ಯಾಜೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ

Udipi } M Damodar Kamath
6-4-1939 } Advocate for Petitioner

ಶ್ರೇಷ್ಠ ತರದ

ದೃಷ್ಟಿಚಕ್ರಗಳಿಗೆ

ರಬ್ಬರು ಮೊಹರುಗಳಿಗೆ

ನಾಯಕ್ಸ್ ಸ್ಟೋರ್ಸ್

ಮಂಗಳೂರು

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office :UDIPI (S. India)

Seson Deposits are accepted at 3½ % per annum.

Further particulars on application to any of our thirty-fiveoffices

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ಚೈತ್ರ ಬ॥ ೧೧ ಶನಿವಾರದಿಂದ ವೈಶಾಖ ಶು॥ ೩ ಶುಕ್ರವಾರದ ವರೇಗಿನ ಪಂಚಾಂಗ. (೧೯೩೯ನೇಯ ಮೇಷ ಪಗ್ನು)

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
15	ಶನಿ	೨೪	೩೩	ಶತಭಿಷಾ	೬೦	೨	
16	ರವಿ	೨೫	೨೭	ಶತಭಿಷಾ	೩	೩	ಏಪ್ರಿಲ್ 19 ಬುಧವಾರ
17	ಸೋ.	೨೬	೪೦।	ಪೂ ಭಾದ್ರಾ	೮	•	
18	ಕುಜ	೨೭	೪೨	ಉ ಭಾದ್ರಾ	೧೨।	೫	
19	ಬುಧ	೨೮	೪೩	ರೇವತಿ	೧೫।	೬	
20	ಗುರು	೨೯	೪೨।	ಅಶ್ವಿನೀ	೧೬॥।	೭	
21	ಶುಕ್ರ	೩೦	೪೦॥	ಭರಣಿ	೧೭।	೮	

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—K R. GURU, *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತವಾಗುತ್ತದೆ ಬಹಳ ಬಡತನದಲ್ಲಿ ಹೆಚ್ಚು ಮಕ್ಕಳಾಗುವುದರಿಂದ ದರಿದ್ರವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮ ಪಂಕ್ತಿ [illegible] ಶರೀರಕ್ಕೆ ಏನೂ ಅಪಾಯವಾಗದ ಸಂಸಾರಸುಖವು ಪೂರ್ಣವಾಗಿದ್ದು ಆದರೆ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ [illegible] ಔಷಧ ಬೇಡಿರಿ ಮತ್ತು ಸರ್ಟಿಫಿಕೇಟು [illegible] ವೈದ್ಯ ಎಲ್ ಸಿ ಪಿ ಎಸ್ [illegible] ಈ ಚೂರ್ಣದಿಂದ ಯಾವ ತರದ ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ. ೪ ೦ ೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ ಮು. ಪೋ ಮಿರಜ, (S M. C.

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಫೆನ್ಸಿ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ [illegible] ಕಾಲ ಸಂಟನ್ನೂ ಅಥವಾ [illegible] ಹುಡುಗರು ಮತ್ತು ಮಕ್ಕಳು ತರಕೊಳ್ಳುವವರಿಗೆ [illegible] ಗೋಲ್ಡ ಗಿಲ್ಟಿನ ಡಮ್ಮಿ ರಿಸ್ಟವಾಚುಗಳು ಒಂದು ಕಟ್ಟುವ ಪಟ್ಟಿ ಕೂಡಿ

1 ಫೊಟೋ ವಾ ಚು ಒಂದು ಜಿಲ್ಲೆಟ್ ರೇಜರೂ ಒಂದು ಕ್ರೀಮ್ ಬ್ರಶೂ ಒಂದು ಶೇವಿಂಗ್ ಸಾಬೂನು ಒಂದು ಕನ್ನಡಿ ಒಂದು ವಾಚಿನಸರ, 14 ಕೆರೆಟ್ ರೋಲ್ಡ್ ಗೋಲ್ಡ ನಿಬ್ಬಿನ ಪೌಂಟನ್ ಪೆನ್ನೂ ಒಂದು ಸೆಟ್ಟು ರೋಲ್ಡ್ ಗೋಲ್ಡ್ ಗುಂಡಿಗಳು, ಒಂದು ಪೇಟೆಂಟ್ ಪೌಡರು ಒಂದು ಚೂರಿ ಒಂದು ಪೇರ್ ಕನ್ನಡಕ, ಒಂದು ಬಂಗಾರದ ಗಿಲ್ಟಿನ ಉಂಗುರ 300 ಫೀಟ್ ಪೋಕಸ್ ಬೀಳುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ಮೆಶಿನರಿಯಿಂದ ಮಾಡಲ್ಪಟ್ಟ ಒಂದು [illegible] ಟೈಮ್‌ಪೀಸೂ ಇವುಗಳನ್ನು ಉಚಿತವಾಗಿ ಕೊಡುವೆವು ಪೆಕಿಂಗ್ ಮತ್ತು ಟಪ್ಪಾಲು ಖರ್ಚು 0—14—0 ಪ್ರತ್ಯೇಕ)

The American Commercial Stores Post Box No 12213 Calcutta (S A.

THE

Bank of Mangalore Ltd.,

MANGALORE

ESTD 1931

Branches-

Panemangalore Mudabidri & Padubidri

Fixed Deposits will be [illegible] at [illegible] rates of interest

For	3 month	3½%
	6	4%
	12	[illegible]%
	24 & upwards	6¼%

Interest Payable Quarterly

Savings Bank deposit 1½% ***on daily balances.***

All kinds of banking business transacted

THE

Canara Banking Corporation Udipi, Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a
in denominations of

RS. 50/-,100/-,500/-,1,000/-, & 5,000/
are now issued at all our Branches

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು. 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ ಅಂಡ್ ಕೋ,
ಆಯುರ್ವೇದಿಕ್ ಸಮಾಜ ಪೆರಿಡೇಪಿ
P O Peridepi (ನೆಲ್ಲೂರು ಡಿ)

HOUNSR

ಹಂಸಾಸ್ನೋ ಮತ್ತು ಬ್ರಿಲ್ಲೆಂಟೋನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋರಕಟ್ಟಾ ಬಜಾರ್, ಮಂಗಳೂರು

ಡೋಂಗರೆ ಇವರ ಬಾಲಾಮೃತವು

ಮಕ್ಕಳ ಹಳೆಯ ವತ್ತ ಅಸಾಧ್ಯವಾದ ಕೆಮ್ಮು ವಾತ, ಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನು ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗ್ಯರೆಗಳ ಧಾರಣೆ

ಸಾಮಾಗ್ರಿಗಳು				ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ	ಅವ್ವಲ್ ತರದ	ಗುದ್ದು	ಮುಡಿಗೆ	1—11—0	—
	ದುಯಂ	,,	,,	1—10 0	1—10—0
	ಅವ್ವಲ್	ಸುಗ್ಗಿ	,,	1—10—0	—
	ದುಯಂ	,,	,,	1—9—0	—
ಅಕ್ಕಿ	ಅವ್ವಲ್	ಗುದ್ದು	,,	4—2 0	4—2—0
	ದುಯಂ	,,	,,	3—14—0	3—14—0
	ಅವ್ವಲ್	ಸುಗ್ಗಿ	,,	4—4—0	—
	ದುಯಂ	,,	,,	3—8—0	3—8—0
ತೆಂಗಿನ ಕಾಯಿ	ಸುಲಿದದ್ದು		1000ಕ್ಕೆ	35—0—0	45—0—0
	ಸಿಪ್ಪೆ ಇದ್ದದು		,,	37—8—0	47—8—0
ಕೊಬ್ಬರಿ	ಆಫೀಸು		ಖಂಡಿಗೆ	45—0—0	--
,,	ದಿಲ್‌ಪಸಂದ		,,	47—8—0	—
ತೆಂಗಿನ ಎಣ್ಣೆ			ಮುಣ್ಣಕ್ಕೆ	3—5—0	3—5—0
ಸಿಪ್ಪೆಯಿದ್ದ ಅಡಿಕೆ			1000ಕ್ಕೆ	3—4—0	3—12—0
ಗೇರುಬೀಜ			ಮುಡಿಗೆ	3—12—0	3—12—0
ಕಬ್ಬಿನ ಬೆಲ್ಲ			ಖಂಡಿಗೆ	42—8—0	60—0—0
ಒಳ್ಳೇಮೆಣಸು			ಹಂಡ್ರಡ್ವೇಟಿಗೆ	15—8—0	16—8—0

ಸ್ಪೈಯಿನ್ ದಂಗೆಯ ಪರಿಣಾಮ ೧೯೩೯ ಮುಸಲೋನಿಯ ವರ್ಷವೇ?

೭೦೦೦೦೦ ಜನರು ರಣದೇವತೆಗೆ ಬಲಿಯಾದರು

ಸ್ಪೈನ್ ದಂಗೆಕಾರರ ನಾಯಕನಾದ ಜನರಲ್ ಫ್ರಾಂಕೋ ಪೊನ್ನೆ ತಾನೆ ಮದ್ರಿಡನ್ನು ವಶಪಡಿಸಿಕೊಂಡು ಇಡೀ ಸ್ಪೈನ್ ದೇಶದ ನಾಯಕನೆಂದು ಸಾರಲ್ಪಟ್ಟಿರುವನು. ಆದರೆ ಇಷ್ಟು ವಿಜಯವು ದೊರೆಯಬೇಕಾದರೆ ಇದಕ್ಕೆ ತಗಲಿದ ವೆಚ್ಚವೆಷ್ಟು? ಎಷ್ಟು ಜೀವಿಗಳು ರಣದೇವತೆಗೆ ಆಹುತಿಯಾಗಿದ್ದಾರೆ ಎಂಬ ವಿಷಯವು ಕೂಡ ದಂಗೆಗಾರರ ನಾಯಕನಾದ ಜನರಲ್ ಫ್ರಾಂಕೋವಿಗೆ ಕೂಡ ತಿಳಿದಿರುವುದಿಲ್ಲ.

೧೯೩೬ನೇ ಜುಲೈ ತಿಂಗಳಲ್ಲಿ ಫ್ರಾಂಕೊವು ಕೇವಲ ೧೭ ಯಾ ೧೮ ಸಾವಿರ ಜನರನ್ನು ಮೊರೊಕ್ಕೊವಿನಿಂದ ತೆಗೆದುಕೊಂಡು ಬಂದು ಆಗ ರಾಜ್ಯಭಾರ ಮಾಡುತಿದ್ದ ಸರಕಾರವನ್ನು ಹೊಡೆದೋಡಿಸಲು ಸ್ಪೈನನ್ನು ಮುತ್ತಿದನು ಅವನ ಪ್ರಥಮ ಆಲೋಚನೆಯು ಕೇವಲ ತನ್ನ ದೇಶದಲ್ಲಿ ಶಾಂತಿಯನ್ನು ಸ್ಥಾಪಿಸುವುದಾಗಿತ್ತು ಆದರೆ ಬರಬರುತ್ತಾ ಅವನಿಂದ ಕೈ ಸಾಗದರಲು ಇತರ ಮುಖಂಡ ರಾಜ್ಯಗಳ ಸಹಾಯವನ್ನು ಅವನು ಪಡೆಯಬೇಕಾಯಿತು

ಇಟಲಿಯ ಸಾಲ

ಈ ದಂಗೆಯಲ್ಲಿ ಎರಡೂ ಕಡೆಗಳ ಮೃತಪಟ್ಟ ಸೈನಿಕರು ಸಾಧಾರಣ ೭೦೦೦೦೦ ಜನರಾಗಬಹುದು ಇದರಲ್ಲಿ ಹೆಚ್ಚಿನವರು ಸರಕಾರದ ಪಕ್ಷದವರೇ ಆಗಿರುವರು ಮೃತಪಟ್ಟ ಸೈನಿಕರ ಸಂಖ್ಯೆಯು ಇದರಿಂದ ಹೆಚ್ಚಿಗೆ ವಿನಹ ಕಡಿಮೆಯಾಗಲಾರದು ಈ ಸಂಖ್ಯೆಯಲ್ಲಿ ಯುದ್ಧವು ಪ್ರಾರಂಭವಾಗುವ ಕಾಲಕ್ಕೆ ವಧಿಸಲ್ಪಟ್ಟವರ ಸಂಖ್ಯೆಯೂ, ಬಾಂಬಿನ ಸುರಿಮಳೆಯಿಂದ ಮೃತಪಟ್ಟ ನಾಗರಿಕರ ಸಂಖ್ಯೆಯೂ ಸೇರಿರುವುದಿಲ್ಲ

ಫ್ರೆಂಚರ ಶೋಧನೆಯ ಪ್ರಕಾರ ಯುದ್ಧ ಪ್ರಾರಂಭದಲ್ಲಿ ಗುವರ್ನಾನಿಯ ಮೇಲೆ ವಧಿಸಲ್ಪಟ್ಟವರ ಸಂಖ್ಯೆಯು ೧೫೦೦೦ ಬಾಂಬಿನ ಸುರಿಮಳೆಯಿಂದ ಮೃತಪಟ್ಟ ನಾಗರಿಕರ ಸಂಖ್ಯೆ ೧೫೦೦೦ ಯುದ್ಧದ ಪರಿಣಾಮದಿಂದಲೇ ನರಳಿ ಕೊರಗಿ ಸತ್ತವರ ಸಂಖ್ಯೆ ೪೦೦೦೦ ಮತ್ತು ಕಡಿಮೆ ಎಂದರೆ ೫೦೦೦೦ ಮಕ್ಕಳು ಮುದಿಗಳು ಮೃತಪಟ್ಟಿರುತ್ತಾರೆಂದು ಪ್ರಕಟವಾಗಿದೆ

ಇನ್ನು ವೆಚ್ಚದ ವಿಚಾರ— ಪ್ರಾರಂಭದಲ್ಲಿ ಜನರಲ್ ಫ್ರಾಂಕೋವು ಜನರಲ್ಲಿ ವಂತಿಗೆಯನ್ನು ಬೇಡಿದನು ಕ್ರಮೇಣ ಬಲತ್ಕಾರದಿಂದ ವಸೂಲು ಮಾಡಲು ಪ್ರಾರಂಭಿಸಿದನು. ಈ ಹಣವೂ ಕಡಿಮೆಯಾಗಲು ಪರದೇಶಗಳಿಂದ ಹಣವನ್ನು ಸಾಲವಾಗಿ ಪಡೆದನು ಹೆಚ್ಚಾದ ಹಣವೆಲ್ಲವನ್ನೂ ಲಂಡನಿನಿಂದಲೇ ಸಾಲವಾಗಿ ಪಡೆದುದಾಗಿರುತ್ತದೆ ಸ್ಪೈನ್ ಬೇಂಕುಗಳ ಚಿನ್ನವು ಫ್ರಾಂಕೊವಿಗೆ ಬಹಳ ಉಪಯೋಗಕ್ಕೆ ಬಿದ್ದಿತು. ಇಟಲಿಗೆ ಫ್ರಾಂಕೋವು ಅಪಾರವಾದ ಧನವನ್ನು ಕೊಡಬೇಕಾಗಿರುವುದು ಫ್ರಾಂಕೊವು ಪ್ರತಿ ಇಟಲಿಯನ್ ಸೈನಿಕನಿಗೆ ದಿವಸಕ್ಕೆ ೧೦ ಲಯರಿನಂತೆ ಇಟಲಿಯನ ಸರಕಾರಕ್ಕೆ ಕೊಡಬೇಕಾಗಿತ್ತು ಅದು ಈಗ ಒಟ್ಟು ೨,೦೦೦,೦೦೦,೦೦೦ ಲಯರಾಗಿರುವುದು ಇದರಲ್ಲಿ ಅರ್ಧಾಂಶ ಹಣವು ಈಗಾಗಲೇ ಇಟಲಿಗೆ ಕಬ್ಬಿಣ ಮತ್ತು ಇತರ ಖನಿಜಗಳ ರೂಪದಲ್ಲಿ ಸಂದಿರುತ್ತದೆ. ಜರ್ಮನಿಗೆ ಕೂಡ ಸಾಧಾರಣ ಇಷ್ಟೇ ಹಣವನ್ನು ಇದೇ ರೀತಿಯಲ್ಲಿ ಫ್ರೆಂಕೋವು ಪ್ರತಿಫಲವಾಗಿ ಸಲ್ಲಿಸಿರುತ್ತಾನೆ

ಜರ್ಮನಿಯ ಆಸೆ

ಈಗ ಫ್ರೆಂಕೋವು ಜಯಶೀಲನಾಗಿ ಇಡೀ ಸ್ಪೈನ್ ದೇಶವು ಅವನ ಅಧೀನವಾಗಿರುವುದಾದರೂ ಅದು ಕೇವಲ ಸ್ಮಶಾನದಂತೆಯೇ ಸರಿ. ಎಲ್ಲಾ ಮಾರ್ಗಗಳೂ, ರೈಲು ಮಾರ್ಗಗಳೂ ಇತರ ಕಟ್ಟಡಗಳೆಲ್ಲವೂ ಸಂಪೂರ್ಣವಾಗಿ ನಾಶವಾಗಿರುವುದು. ಆದರೆ ಸ್ಪೈನಿನ ಮುಖ್ಯ ಸಂಪತ್ತು ವ್ಯವಸಾಯ ಮತ್ತು ಗನಿಗಳಾಗಿರುತ್ತವೆ. ಇವ್ಯಾವೂ ಈ ಯುದ್ಧದಲ್ಲಿ ಹಾಳಾಗಲಿಲ್ಲ. ಕೇವಲ ಯಂತ್ರಗಳು ಮಾತ್ರ ನಾಶಹೊಂದಿವೆ. ಈ ಯಂತ್ರವನ್ನು ಸರಿಗೊಳಿಸುವ ಉದ್ಯಮವು ತನಗೆ ಸಿಕ್ಕಿದರೆ ಬಹಳ ಹಣವು ದೊರಕುವುದೆಂದು ತನ್ನ ಯಂತ್ರಣ ವಿಜ್ಞಾನವು ಹೆಚ್ಚುವುದಲ್ಲದೆ ಇಷ್ಟರ ತನಗೆ ಸ್ಪೈನ್ ಯುದ್ಧದಲ್ಲಿ ತನಗಾದ ನಷ್ಟದ ಪ್ರತಿಫಲವು ದೊರೆಯುದೆಂದು ಜರ್ಮನಿಯು ಆಶೆಯಾಗಿರುತ್ತದೆ

ಇಟಾಲಿಯಾನ ಸೈನಿಕರು

ಸ್ಪೈನ್ ಯುದ್ಧದ ಪರಿಣಾಮದಿಂದಾಗಿ ಒಟ್ಟು ೬೦೦೦ ಇಟಾಲಿಯನ್ ಸೈನಿಕರು ರಣದೇವತೆಗೆ ಬಲಿಯಾಗಿರುತ್ತಾರೆ ಇಟಲಿ ದೇಶಕ್ಕೆ ಉಂಟಾದ ಸೈನಿಕ ನಷ್ಟವು ಈ ಪ್ರಕಾರವಾಗಿದೆ ೨೬೨ ಆಫೀಸರರೂ, ೨೭೯೨ ಸೈನಿಕರೂ ಮೃತಪಟ್ಟಿರುತ್ತಾರೆ. ೮೯೪ ಆಫೀಸರರೂ, ೬೮೧೯ ಮಂದಿ ಸೈನಿಕರೂ ಗಾಯಪಟ್ಟಿರುತ್ತಾರೆ ಆರು ಆಫೀಸರರೂ ೨೦೮ ಮಂದಿ ಸೈನಿಕರು ಕಾಣೆಯಾಗಿರುತ್ತಾರೆ ೫ ಮಂದಿ ಆಫೀಸರರೂ ೬೭೧ ಮಂದಿ ಸೈನಿಕರೂ ಕೈದಿಗಳಾಗಿ ಬಂಧಿತರಾಗಿರುವರು

ಈ ಸಂಖ್ಯೆಯು ಕಳೆದ ಎಬಿಸಿನಿಯಾ ಯುದ್ಧದಲ್ಲಿ ಮೃತಪಟ್ಟ ಸೈನಿಕರ ಎರಡು ಪಾಲಷ್ಟಾಗಿರುತ್ತದೆ ಎಬಿಸಿನಿಯಾ ಯುದ್ಧದಲ್ಲಿ ಇಟಲಿಯ ಸೈನಿಕರಲ್ಲಿ ಕೇವಲ ೧೫೩೭ ಬಿಳಿ ಜನರು ಮಾತ್ರ ಮೃತಪಟ್ಟಿದ್ದರು

ಬೃಂದಾವನ ಗಾಂಧಿ ಸೇವಾ ಸಂಘದ ಸಭೆ

ಮುಂದರಿಯಿತು

ಈ ತಿಂಗಳ ಕೊನೆಯ ವಾರದಲ್ಲಿ ಕೂಡಬೇಕಾಗಿದ್ದ ಗಾಂಧಿ ಸೇವಾ ಸಂಘದ ಸಭೆಯನ್ನು ಬೃಂದಾವನದ ಸುತ್ತಮುತ್ತ ಅಕಸ್ಮಾತ್ತಾಗಿ ಪ್ಲೇಗ ರೋಗವು ಕಾಣಿಸಿಕೊಂಡಿರುವುದರಿಂದ ಅನಿಶ್ಚಿತವಾಗಿ ಮುಂದುವರಿಸಿದ್ದಾರೆ

ಮಹಾತ್ಮಾಜಿಯವರು ಈ ಸಭೆಯ ಅಧ್ಯಕ್ಷರಾಗಿ ನಿಯೋಜಿತರಾಗಿದ್ದರು ಆದ್ದರಿಂದ ಅವರ ಮುಂದಿನ ಕಾರ್ಯಕ್ರಮವೇನೆಂಬುದು ದೃಢವಾಗಿ ತಿಳಿದುಬಂದಿಲ್ಲ

ಮೆಡಿಟರೇನಿಯನ್ ಮತ್ತು ಉತ್ತರ ಆಫ್ರಿಕಗಳಲ್ಲಿ ತೊಡಕುಂಟಾಗಬಹುದು

೧೯೩೯ನೇ ವರ್ಷವು ಮುಸಲೋನಿಯ ಸಂವತ್ಸರವಾಗಿ ಪರಿಣಮಿಸಲ್ಪಡಬಹುದೆಂದು ಇಟಾಲಿಯಾನರ ನಂಬಿಕೆಯಾಗಿರುತ್ತದೆ. ೧೯೩೮ನೇ ವರ್ಷವು ಹಿಟ್ಲರನ ಸಂವತ್ಸರವೆಂದು ಪರಿಗಣಿಸಲ್ಪಟ್ಟಿದೆ ಅಬಿಸಿನಿಯವನ್ನು ಜಯಿಸಿದೊಡನೆ ತಾನು ಇದರಿಂದ ತೃಪ್ತನಾದೆನು ಮತ್ತು ತಾನು ಇನ್ನು ಶಾಂತಿಸ್ಥಾಪನೆಗಾಗಿಯೇ ಹೋರಾಡುವೆನೆಂದು ಹೇಳಿದ ಮುಸಲೋನಿ ಈಗ ತನಗೆ ತೃಪ್ತಿಯಿಲ್ಲವೆಂದು ಸಾರಿರುವುದು ಮಾತ್ರವಲ್ಲದೆ ತಕ್ಕ ಹಂಚಿಕೆಯನ್ನೂ ಮಾಡುತ್ತಲಿರುವನು ಇವನಿಗೆ ಸಹಾಯಕವಾಗಿ ಜರ್ಮನಿಯು ಬೆಂಗಾವಲಿಗಿರುವುದು

ನಾಜಿಗಳೂ ಪಸಾಹತೂ

೧೯೩೭ ಜಪಾನಿನ ಉತ್ಕರ್ಷದ ವರ್ಷವಾಗಿತ್ತು ೧೯೩೮ ಜರ್ಮನಿಯದ್ದು. ಎಲ್ಲಾ ರಾಜ್ಯಗಳೂ ಸರಿಸಮಾನವಾಗಬೇಕಾದ್ದರಿಂದ ೧೯೩೯ ಮುಸಲೋನಿಯ ಉತ್ಕರ್ಷದ ವರ್ಷವಾಗಿ ಪರಿಣಮಿಸಲ್ಪಡಲೇಬೇಕೆಂದು ಇಟಾಲಿಯಾನರು ನಂಬಿರುವರು

ಇದನ್ನು ಹಿಟ್ಲರನೇ ವ್ಯಕ್ತಗೊಳಿಸಿರುತ್ತಾನೆ ಹಿಟ್ಲರನು ಕಳೆದ ಜನವರಿ ಭಾಷಣದಲ್ಲಿ ಯಾವ ಯುದ್ಧದಲ್ಲಾದರೂ ಜರ್ಮನಿಯು ಇಟಲಿಯೊಡನೆ ಸಹಕರಿಸುವುದೆಂದು ಸಾರಿರುವನು ಮತ್ತು ೧೯೩೯ನೇ ಈ ಮುಸಲೋನಿಯ ಸಂವತ್ಸರದಲ್ಲಿ ಜರ್ಮನಿಯು ಮುಸಲೋನಿಯೊಂದಿಗೆ ಸೇರಿ ಜರ್ಮನಿಯು ವಸಾಹತುಗಳನ್ನು ಹಿಂದೆ ಪಡೆಯಲು ಸಾಹಸ ಮಾಡದೆ ಬಿಡದೆಂದು ಕೂಡ ಸಾರಿರುವನು ಆದರೆ ಇವರ ಈ ಸಾರುವಿಕೆಯನ್ನು ಕಡೆಗಣ್ಣಿಲ ಇತರ ರಾಷ್ಟ್ರಗಳು ಒಂದಾಗುವುವೊ ಇಲ್ಲವೋ ಎಂಬುದು ಸಂದೇಹಾಸ್ಪದವಾಗಿರುತ್ತದೆ ಈ ಮುಸಲೋನಿಯ ಸಂವತ್ಸರದಲ್ಲಿ ಖಂಡಿತವಾಗಿಯೂ ಇಟಲಿಯು ಮೆಡಿಟರೇನಿಯನ್ ಸಮುದ್ರ ಮತ್ತು ಆಫ್ರಿಕಗಳಲ್ಲಿ ತೊಡಕನ್ನುಂಟುಮಾಡದೆ ಇರಲಾರದು ಆದರೆ ಮೆಡಿಟರೇನಿಯನ್ ಮತ್ತು ಉತ್ತರ ಆಫ್ರಿಕಗಳಲ್ಲಿ ಬ್ರಿಟಿಷ್ ಮತ್ತು ಫ್ರೆಂಚರಿಗೆ ಇದ್ದಷ್ಟು ಆಸಕ್ತಿಯು ಬೇರೆ ಯಾವ ರಾಜ್ಯಗಳಿಗೂ ಇರದಿರುವುದರಿಂದ ಫ್ರೆಂಚ ಮತ್ತು ಬ್ರಿಟಿಷರೇ ಮುಂದಿನ ಯುದ್ಧದಲ್ಲಿ ಮುಖ್ಯ ಭಾಗವನ್ನು ತೆಗೆದುಕೊಳ್ಳಬೇಕಾಗಿ ಪರಿಣಮಿಸಬಹುದು. ಇತ್ತ ಜರ್ಮನಿ ಮತ್ತು ಇಟಲಿಯು ಬ್ರಿಟಿಷ್ ಫ್ರೆಂಚರ ಮೇಲೆ ಕೈ ಎತ್ತಲು ಹವಣಿಸುತ್ತಿರುವಾಗ ಅತ್ತ ಪೂರ್ವದಲ್ಲಿ ಜಪಾನನು ಬ್ರಿಟಿಷ್ ಮತ್ತು ಫ್ರೆಂಚರಿಗೆ ಬಂದು ಕೈಯನ್ನು ತೋರಿಸಲೂಬಹುದು

ಇಟಾಲಿಯನ್ ಜನತೆಯ ಅಭಿಪ್ರಾಯ

ಜರ್ಮನಿಯ ಸೇನೆಯೂ ವಾಯುಯಾನವೂ ಇಟಲಿಯಾನರಿಗಿಂತ ಬಲವಾಗಿರುವುದರಿಂದ ಮುಂದೆ ಇಟಲಿಯು ಜರ್ಮನಿಯ ಮಾಂಡಲೀಕನಾಗಿರಬೇಕಾಗುವುದೋ ಎಂದು ಜನತೆಯು ಭೀತಿಗೊಂಡಿದೆ ಆದರೆ ಡಿಕ್ಟೇಟರರ ರಾಜ್ಯಗಳಲ್ಲಿ ಜನತೆಯ ಅಭಿಪ್ರಾಯವನ್ನಾದರೂ ಕೇಳುವವರಾರು? ಜರ್ಮನಿ, ಇಟಲಿ, ಜಪಾನ್ ಈ ತ್ರಿಮೂರ್ತಿಗಳ ಕೂಟದಲ್ಲಿ ಜರ್ಮನಿಯ ಕೈವಾಡವೇ ಮೇಲಾಗಿರುವುದು

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ರಶ್ಯದಿಂದ ಇಂಡಿಯಕ್ಕೆ ರೈಲು ಮಾರ್ಗ

ಅಫಘಾನ ಸರಕಾರದ ಯೋಚನೆಯ ಫಲ

ಅಫಘಾನಿಸ್ಥಾನದ ಅಮೀರ ಜಾಹೀರ್ ಶಾಹರ ಯೋಜನೆಯು ಕಾರ್ಯರೂಪಕ್ಕೆ ಬರುವುದೆಂದಾದ ಪಕ್ಷದಲ್ಲಿ ಸದ್ಯದಲ್ಲೇ ರಶ್ಯದಿಂದ ಇಂಡಿಯಕ್ಕೆ ರೈಲುಮಾರ್ಗದ ಜೋಡಣೆಯಾಗಬಹುದೆಂದು ರೇನೋಲ್ಡ್ಸ್ ನ್ಯೂಸ ಸುದ್ದಿಗಾರನು ಬರೆಯುತ್ತಾನೆ ಅಫಘಾನಿಸ್ಥಾನದ ವ್ಯಾಪಾರ ಉದ್ಯೋಗಗಳ ಉನ್ನತಿಯಾಗಲಿಕ್ಕೂ, ದೇಶವನ್ನು ಸಧಾರಿತ ಇತರ ದೇಶಗಳ ಸಾಲಿಗೆ ತರಲಿಕ್ಕೂ ಅಫಘಾನಿಸ್ಥಾನದ ಎಲ್ಲಾ ರಸ್ತೆ ಶಾಖೆಯಗಳನ್ನು ಜೋಡಿಸುವುದು ಅಗತ್ಯವೆಂದು ಅಮೀರರ ತಿಳಿದಿದ್ದಾರೆ ಆದ್ದರಿಂದಲೇ ಅವರ ಈ ರೈಲುಮಾರ್ಗವನ್ನು ಕಟ್ಟಿಸುವ ಪ್ರಯತ್ನದಲ್ಲಿದ್ದಾರೆ

ರೈಲುಮಾರ್ಗವನ್ನು ಕಟ್ಟಲಿಕ್ಕೆ ಬೇಕಾದಷ್ಟು ಹಣವನ್ನು ಅಫಘಾನ ಸರಕಾರವು ಸಾಲ ವೆತ್ತುವುದು ಆ ಸಾಲದ ಸಮಪಾಲುಗಳನ್ನು ಇಂಗ್ಲಿಷ ಮತ್ತು ರಶ್ಯ ಸರಕಾರಗಳು ತೆಗೆದುಕೊಳ್ಳುವವು ಹೀಗಾದರೆ ಇಂಗ್ಲಂಡಿನಿಂದ ಕೊಲಂಬೊ ತನಕದ ಪ್ರಯಾಣವನ್ನು ೭ ದಿನ ಮೊದಲೇ ಮುಗಿಸಬಹುದಾಗಿ ಹೇಳುತ್ತಾರೆ



ಆಲ್ಬೇನಿಯದ ಮೇಲೆ ಇಟಲಿಯ ಆಕ್ರಮಣ

★ ಆಲ್ಬೇನಿಯಾ ಸೈನಿಕರ ನಿರರ್ಥಕ ಸಾಹಸ
★ ಬ್ರಿಟಿಷರ ಮೌನಧಾರಣೆ
★ ಆಲ್ಬೇನಿಯದ ಅರಸರ ಪಲಾಯನ
★ ಇಟಲಿಗೆ ಜರ್ಮನಿಯ ಪ್ರಶಂಸೆ

ಮಹಾತ್ಮ ಯೇಸು ಕ್ರಿಸ್ತನ ಪುಣ್ಯ ದಿನದಂತೆ ಇಟಲಿಯು ಆಲ್ಬೇನಿಯದಲ್ಲಿ ಹತ್ಯಾಕಾಂಡಕ್ಕೆ ತೊಡಗಿತು. ಇಟಲಿಯ ಹಡಗುಗಳು ಆಲ್ಬೇನಿಯಕ್ಕೆ ಸೇರಿದ ಡುರಾಜೋ, ವೆಲೋನಾ, ಶಿವೆಂಡ ಮೊದಲಾದ ಬಂದರುಗಳ ಮೇಲೆ ಫಿರಂಗಿಗಳನ್ನು ಹೊಡೆದ ಸೈನ್ಯವನ್ನು ಇಳಿಸಿದರು. ಆಲ್ಬೇನಿಯದ ಪ್ರಧಾನ ನಗರದ ಮೇಲೆ ಇಟಲಿಯ ವಿಮಾನಗಳು ಹಾರಿ ಬಂದು ಇಟಲಿಯ ಸೇನೆಗಳು ದಂಡೆತ್ತಿ ಬಂದಿವೆಯೆಂದು ಸೂಚಿಸುವ ಕರಪತ್ರಗಳನ್ನು ಹಾಕಿದುವು. ಆದರೆ ಆಲ್ಬೇನಿಯದವರು ಶರಣ ಬಾರದೆ ಇಟಲಿಯನ್ನು ಎದುರಿಸುವ [illegible]ವನ್ನು ಮಾಡಿದರು. ಯುದ್ಧದ ಫಲವಾಗಿ ಸೊನೊಥನ್ ಡುರಾಜೋ [illegible] ಸ್ಯಾಂಟ್ [illegible] ಮೊದಲಾದ ರೇವುಗಳು ಇಟಲಿಯ ವಶವಾದವು. [illegible] ಬಂದ ವಾರ್ತೆಯು ಪ್ರಕಾರ [illegible] ಸಾವಿರ [illegible] ಲಿಯನ್ ಸೈನಿಕರು ಆಲ್ಬೇನಿಯದ [illegible]ವಳಿಯನ್ನು ಮುತ್ತಿರುವರ [illegible] ವಿಮಾನಗಳು ಹಾರಾಡುತ್ತ ಇಟಲಿಯನ್ ದಾಳಿಯ ವೃತ್ತಾಂತವನ್ನು ಸೂಚಿಸುವ ಕರಪತ್ರಗಳನ್ನು ಎಸೆಯ ತೊಡಗಿರುವುವು. ಆಲ್ಬೇನಿಯದ ಅರಸನು [illegible] ಯುಗಸ್ಲೋವಿಯದ ಸಹಾಯವನ್ನು ಕೋರಿದ್ದ. ಆದರೆ ಯುಗಸ್ಲೋವಿಯಕ್ಕೆ ಇಟಲಿಯು ಅಭಯವನ್ನಿತ್ತುದರ ಫಲವಾಗಿ ಯುಗಸ್ಲೋವಿಯವು ಆಲ್ಬೇನಿಯದ ಬೇಡಿಕೆಯನ್ನು ನಿರಾಕರಿಸಿತು. ಪ್ರತಿಕಡೆಯಲ್ಲಿಯೂ ಇಟಲಿಗೆ ಜಯವಾಗುತ್ತಲೇ ಇದೆ.

ವನ್ನು ಕೈಕೊಂಡಿರುತ್ತದೆ. ಆಲ್ಬೇನಿಯದ ಅರಸನು ಅಲ್ಲಿಯ ದೇಶಸೇವಾಸಕ್ತರಾದ ಪ್ರಜೆಗಳಿಗೆ ಕೊಡುತ್ತಿರುವ ಕಷ್ಟವನ್ನು ಕಂಡು ಈ ಪ್ರಜೆಗಳನ್ನು ಮತ್ತು ಆಲ್ಬೇನಿಯದಲ್ಲಿ ಇಟಲಿಯ ಪ್ರಸಕ್ತಿಯನ್ನು ಕಾಪಾಡಲು ಇಟಲಿಯು ಈ ಧೋರಣೆಯನ್ನು ಕೈಕೊಳ್ಳಬೇಕಾಯಿತು. ಕೆಲವು ದಿವಸಗಳ ಹಿಂದೆ ಆಲ್ಬೇನಿಯದ ಅರಸನಾದ ಜೋಗನ ತನ್ನ ರಾಜ್ಯದಲ್ಲಿ ಬಂದಾಯ [illegible] ಇಟಲಿಯನ್ ಸೈನ್ಯದ ಸಹಾಯ [illegible] ಅಪೇಕ್ಷಿಸಿದನು. ಆದರೆ [illegible] ಸ್ನೇಹಿತನಾಗಿದ್ದ [illegible] ಈ ಸಂಚಿಕೆಯ [illegible] ಇಟಲಿಗೆ [illegible] ಆದ[illegible] ಇದಕ್ಕೆ ಇಟಲಿಯು ಒಪ್ಪದಿರಲು ಅರಸನು [illegible] ಇಟಲಿಯವರನ್ನು ಹಿಂಸಿಸ[illegible]ತೊಡಗಿದನು. ಅರಸನ ಈ ವರ್ತನೆಯನ್ನು ಇಟಲಿಯು [illegible]ಸಿತ. ಅರಸನು ಇದಕ್ಕೆ [illegible] ಪ್ರಜೆಗಳ ರಕ್ಷಣೆಗಾಗಿ ಇಟಲಿಯು ಆಲ್ಬೇನಿಯವನ್ನು ಪ್ರವೇಶಿಸಿರುವುದು [illegible] ಪ್ರಕಟಿಸಿರುವರು.

ಹಿಟ್ಲರನ ಸಮ್ಮತಿ

ಮುಸೊಲಿನಿಯು ಸೈನ್ಯವನ್ನು ಆಲ್ಬೇನಿಯಕ್ಕೆ ಕಳುಹಿಸುವ ಮೊದಲೇ ಹಿಟ್ಲರನೊಡನೆ ಟೆಲಿಫೋನಿನಲ್ಲಿ ಸಂಭಾಷಣೆಯನ್ನು ಮಾಡಿದ್ದನು. ಹಿಟ್ಲರನು ಇದಕ್ಕೆ ತನ್ನ ಸಮ್ಮತಿಯನ್ನು ಕೊಟ್ಟಿದ್ದನು.

ಅರಸನ ಪಲಾಯನ

ಆಲ್ಬೇನಿಯದ ಸರಕಾರವು ಟಿರಾನವನ್ನು ಬಿಟ್ಟು [illegible] ಹೋಗಿ [illegible] ಅರಸನಾದ ಜೋಗನು ಟಿರಾನಿನಿಂದ ಎಲ್ಲಿಗೋ ಪಲಾಯನ [illegible]

ಸಿನೋರ್ ಗಯಾಡರ ಪ್ರಕಟನೆ

ಸಿನೋರ್ ಗಯಾಡರು ಗಿರೊನಲ್ ಡಿ ಇಟಲಿಯ ಎಂಬ ಪತ್ರಿಕೆಯಲ್ಲಿ ಬರೆಯುತ್ತಾ ಇಟಲಿಯು ಯುಕ್ತವಾದ ಒಂದು ಕಾರ್ಯ

ಇರಾಕದ ಗಾಜಿ ದೊರೆಯ ಮರಣದ ಪರಿಣಾಮ

ಬ್ರಿಟಿಷ್ ಮೊಕ್ತಿಯಾರನ ಕೊಲೆ

ಇರಾಕಿನ ಗಾಜಿ ದೊರೆಗಳು ರಾತ್ರಿಯಲ್ಲಿ ತಾವು ಸ್ವತಃ ಮೋಟಾರ ನಡೆಸಿಕೊಂಡು ಹೋಗುತ್ತಿದ್ದಾಗ ಒಂದು ಅನಾಹುತಕ್ಕೆ ಸಿಕ್ಕಿ ಮೃತಪಟ್ಟರು. ಮೋಟಾರ ಒಂದು ವಿದ್ಯುಚ್ಛಕ್ತಿಯ ಕಂಬಕ್ಕೆ ಢಿಕ್ಕಿ ಬಡಿದುದರಿಂದ ಮೆದುಳಿಗೆ ಬಲವಾದ ಗಾಯಗಳಿಂದ ಪರಿಣಾಮವಾಗಿ ರಾತ್ರಿ ೧೧ ಗಂಟೆಗೆ ಮೃತಪಟ್ಟರೆಂದು ವಾರ್ತೆ. ಇವರ ಈ ಮರಣದ ವಾರ್ತೆಯನ್ನು ಕೇಳಿ ಪ್ರಜೆಗಳು ಬಹಳ ಮರುಕಪಟ್ಟಿರುವರು.

ಗಾಜಿದೊರೆಗಳು ೧೯೩೩ರಲ್ಲಿ ಸಿಂಹಾಸನವನ್ನೇರಿದರು. ಆಗ ಅವರಿಗೆ ೨೧ ವಯಸ್ಸು. ಇವರ ತಂದೆಯವರಾದ ಫೈಜಲ್ ದೊರೆಗಳು ಹಠಾತ್ತಾಗಿ ವಿಧಿವಶದಿಂದ ಸ್ವಿಜರ್‌ಲೇಂಡಿನಲ್ಲಿ ಮೃತಪಟ್ಟಿದ್ದರು.

ಮೋಸುಲದಲ್ಲಿ ಕೊಲೆ

ಗಾಜಿದೊರೆಗಳ ಈ ಮರಣದ ವಾರ್ತೆಯನ್ನು ಕೇಳುತ್ತಲೇ ಪ್ರಜೆಗಳು ಇದು ಬ್ರಿಟಿಷರ ಪಿತೂರಿಯಿಂದಲೇ ನಡೆದುದೆಂದು ಉದ್ವೇಗಗೊಂಡರು. ಪರಿಣಾಮವಾಗಿ ಮೋಸುಲದಲ್ಲಿನ ಬ್ರಿಟಿಷ್ ಮೊಕ್ತಿಯಾರನಾದ ಮಿ|| ಗಾಯುಕ್ ಮಾಂಕ ಮೇಸನರನ್ನು ಪ್ರಜೆಗಳು ಹಿಡಿದು ದಹೊಡೆದ ಕೊಲೆಗೈದರು. [illegible] ಕಾನ್ಸುಲೇಟನ್ನು ಸುಟ್ಟುಹಾಕಿದರು. ಮೋಸುಲದಲ್ಲಿ ಮಾರ್ಶಲ್ ಲಾ ಜ್ಯಾರಿಮಾಡಲಾಗಿದೆ. ಈಗ ವಾತಾವರಣವು [illegible] ತಲಾಗಿದೆ. ಈ ಕೊಲೆಗೆ ಮುಖ್ಯ ಕಾರಣರಾದ ನಾಲ್ಕುಮಂದಿಗಳನ್ನು ಸೈದುಮಾಡಿರುವರು. ಇರಾಕಿನ ಮಂತ್ರಿಗಳು ಈ ಕೊಲೆಯ ಸಂಬಂಧವಾಗಿ ಬ್ರಿಟಿಷರೊಡನೆ ಕ್ಷಮಾಪಣೆಯನ್ನು ಕೇಳಿರುವರು.

ಹೊಸ ದೊರೆಗಳು

ಗಾಜಿದೊರೆಯ ಮೂರು ವರ್ಷದ ಮಗುವನ್ನು ಸಿಂಹಾಸನವನ್ನೇರಿಸಲಾಗಿದೆ. ಹೊಸ ದೊರೆಯ ಚಿಕ್ಕಪ್ಪನನ್ನು ರಿಜೆಂಟನನ್ನಾಗಿ ನೇಮಿಸಲಾಗಿದೆ.

ಸದ್ಯದಲ್ಲೇ ನ್ಯೂ ಚಿತ್ರಾ ಟಾಕಿಸಿನಲ್ಲಿ ಪ್ರದರ್ಶಿಸಲ್ಪಡುತ್ತಿರುವ

★ ಬಾಲಾಜಿ ★

ಎಂಬ ಪುಣ್ಯಪ್ರದವಾದ ಚಿತ್ರವನ್ನು ನೋಡಲು ಮರೆಯದಿರಿ!

ಸೆಕೆಕಾಲದಲ್ಲಿ ಕಂಠವು ಒಣಗಿ ಸಡಲಿಸುವುದು?

ಸೆಕೆಕಾಲದಲ್ಲಿ ಗಂಟಲು ಹೆಚ್ಚಿನವರಿಗೆ ಉಪದ್ರವನ್ನು ಉಂಟುಮಾಡುತ್ತದೆ. ಇದು ದೂಳಿನ ಪರಿಣಾಮವಾಗಿರುತ್ತದೆ. ಆದುದರಿಂದ ಈ ಸಮಯದಲ್ಲಿ ಬಹಳ ಜಾಗ್ರತೆಯಿಂದ ಪೆಪ್ಸ ಹಾಗೂ ಶ್ವಾಸನಾಳಿಯ ಗುಳಿಗೆಗಳಾದ ಪೆಪ್ಸನ್ನು ಸೇವಿಸಿ ಗಂಟಲು ಬಾಧೆಯಿಂದ ನಿವೃತ್ತರಾಗಿ. [illegible]

ಮೆಸರ್ಸ್ [illegible] ಮತ್ತು ಕಂಪೆನಿ

ಯಾವಾಗಲೂ ಪೆಪ್ಸನ್ನೇ ಕೊಳ್ಳಿ [illegible]

PEPS

ವಿಷಹಾರಿ ಶ್ವಾಸನಾಳಿಯ ಗುಳಿಗೆಗಳು

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿ [illegible]' ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

[illegible]

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ

ಎಸ್ ಎಮ್ ವಾಘ್ ಮತ್ತು ಕಂಪೆನಿ,

ಪಿಲೆ ಪಾರ್ಲೆ ಮುಂಬಯಿ

[illegible] ಎಚ್ ಭಕ್ತಾ [illegible] ವಿ ಎಸ್ ಶೆಟ್ಟಿ

[illegible] ಬಾಸ್ಕರ ಶೆ[illegible]

[illegible] ಬಿ ಶ್ರಿ ಹೊನ್ನಾವರ

ಗತ ವೀರ್ಯವನ್ನು ಪುನಃ ಹೊಂದಿರಿ!

[illegible]

ಬೆಲೆ ೧ ಸೀಸೆಗೆ ರೂ ೪

ಅಮೇರಿಕನ್ ಮೆಡಿಕೊ ಅಂಡ್ ಜ. ಸಿ. ಅಸೋಸಿಯೇಶನ್,

(1) [illegible] ಫೋರ್ಟ್, ಬೊಂಬಾಯಿ

SELF-PROTECTOR FOR VIGOUR & VITALITY

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಆಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St, CALCUTTA

ರಾಮದುರ್ಗದ ಭಯಂಕರ ಅತ್ಯಾಚಾರ

★ ಎಂಟು ಜನ ಪೋಲೀಸರ ಕೊಲೆ
★ ಜೈಲಿಗೆ ನುಗ್ಗಿ ಕೈದಿಗಳನ್ನು ಬಿಟ್ಟರು
★ ರಿಕಾರ್ಡುಗಳನ್ನು ಜೈಲಿನಲ್ಲಿ ಸುಟ್ಟರು

ರಾಮದುರ್ಗದಲ್ಲಿ ಈ ಮೊದಲು ಹಾಕಿದ ಕಾಂಗ್ರೆಸು ಧ್ವಜವನ್ನೂ ಸ್ತಂಭವನ್ನೂ ಪೊಲೀಸ ಅಧಿಕಾರಿಗಳೂ ಸಂಚಾರಕ್ಕೆ ಪ್ರತಿಬಂಧಕವೆಂಬ ನೆವದ ಮೇಲೆ ಕಳೆದ ತಾರೀಕು ಹರಿದು ಕಿತ್ತುಹಾಕಿದ್ದರು. ಆದರೆ ಜನರು ಧ್ವಜವನ್ನೂ ಸ್ತಂಭವನ್ನೂ ಹೊಸದಾಗಿ ಹಾಕಿ ಸಭೆ ಕೂಡಿದರು. ಇವರನ್ನು ಪೊಲೀಸರು ಲಾಠಿ ಪ್ರಹಾರಗಳಿಂದ ಚದುರಿಸಿ ಅಲ್ಲಿ ಒಂದು ಪೊಲೀಸು ಪಹರೆಯನ್ನಿಟ್ಟರು. ಇದರ ಪರಿಣಾಮವಾಗಿ ಜನರು ಗುಂಪು ಸೇರಿ ಕಲ್ಲನೆಸೆಯಲು ಪ್ರಾರಂಭಿಸಲು ಒಬ್ಬ ಪೊಲೀಸು ಜವಾನನಿಗೆ ಭಯಂಕರ ಗಾಯಗಳಾಗಿ ಮೃತಪಟ್ಟನು.

ಮರುದಿನ ಮುಂಜಾನೆ ರಾಮದುರ್ಗದ ಮಹಾರಾಜರು ಅಲ್ಲಿಯ ಪ್ರಜಾಸಂಘದ ಮೇಲೆ ಪ್ರತಿಬಂಧಕಾಜ್ಞೆಯನ್ನು ಹಾಕಿ ಅದರ ಅಧ್ಯಕ್ಷರಾದ ಶ್ರೀ. ಮುನವಳ್ಳಿಯವರನ್ನೂ ಇತರ ನಾಲ್ಕು ಮಂದಿ ಮುಖಂಡರನ್ನೂ ಮಧ್ಯಾಹ್ನ ಕೈದು ಮಾಡಲಾಯಿತು. ಪೊಲೀಸರು ಪ್ರಜಾಸಂಘದ ಆಫೀಸನ್ನೂ ಇತರ ಸದಸ್ಯರ ಮನೆಯನ್ನೂ ಜಪ್ತಿಮಾಡಿ ಜನರ ಮೇಲೆ ನಿರ್ಬಂಧನೆಗಳನ್ನು ಹಾಕಿದರು. ಮರುದಿನ ತಾರೀಕು ಹಳ್ಳಿಗಳಿಂದ ಪ್ರಜಾಸಂಘದ ಪರವಾಗಿ ಅನೇಕ ಹಳ್ಳಿಗರು ಬರಲಿರುವರೆಂಬ ಸುದ್ದಿ ಹರಡಿತು. ಪೊಲೀಸು ಅಧಿಕಾರಿಗಳು ಬೀದಿಗಳಲ್ಲಿ ಜನರು ಗುಂಪು ಕೂಡಲಿಕ್ಕೆ ಕೂಡದೆಂಬ ನಿರ್ಬಂಧವನ್ನು ಹಾಕಿ ಜನರನ್ನು ಎಚ್ಚರಿಸಿದರು. ಸುಮಾರು ಮಧ್ಯಾಹ್ನದ ಸಮಯಕ್ಕೆ ಎರಡು ಮೂರು ಹಳ್ಳಿಗಳಿಂದ ಇನ್ನೂರು ಮುನ್ನೂರು ಹಳ್ಳಿಗರು ಬಂದು ಸೇರಿದರು. ಇವರೊಂದಿಗೆ ಪಟ್ಟಣಿಗರೂ ಸೇರಿ ಪ್ರದರ್ಶನಗಳನ್ನು ಮಾಡಲು ಜನರ ಗುಂಪು ಒಂದೇ ಸಮನೆ ಹೆಚ್ಚಿ ಸುಮಾರು ೨೦೦೦, ೧೫೦೦ ಜನರು ಕೂಡಿ ಜೈಲಿನ ಕಡೆಗೆ ತೆರಳಿ ಟೆಲಿಗ್ರಾಫ್ ತಂತಿಗಳನ್ನೂ ಕಡಿದು ಕಲ್ಲನ್ನು ಎಸೆಯಲು ಪ್ರಾರಂಭಿಸಿದರು. ಸಾಧಾರಣ ಎರಡು ಗಂಟೆಗೆ ಜೈಲಿನೊಳಗಿಂದ ಪೊಲೀಸರು ಗುಂಡು ಹಾರಿಸಿದರು. ಇದರ ಫಲವಾಗಿ ಅನೇಕರು ಗಾಯಗೊಂಡರು. ಒಂದು ಬಾರಿ ಚದರಿದ ಜನರ ಗುಂಪು ಪುನಃ ಕೂಡಿ ಜೈಲು ಗೇಟನ್ನು ಮುರಿದು ರಿಕಾರ್ಡಿನ ಕಟ್ಟುಗಳನ್ನು ಸುಟ್ಟರು.

ಗುಂಪಿನ ಒಂದು ತಂಡವು ಜೈಲನ್ನು ಹೊಕ್ಕು ಪ್ರಜಾಸಂಘದ ಅಧ್ಯಕ್ಷರಾದ ಶ್ರೀ ಮುನವಳ್ಳಿಯವರನ್ನೂ ಇತರರನ್ನೂ ಹೊರತಂದರು. ಶ್ರೀ ಮುನವಳ್ಳಿಯವರು ಇವರಿಗೆ ಹಿಂಸಾತ್ಮಕವಾಗಿ ವರ್ತಿಸಕೂಡದೆಂದು ಬೋಧಿಸಿದರು. ಆದರೆ ಜನರ ಇನ್ನೊಂದು ತಂಡವು ಜೈಲನ್ನು ಪ್ರವೇಶಿಸಿ ಆರು ಜನ ಪೊಲೀಸರ ಮತ್ತು ವಾರ್ಡರರ ಕೊಲೆಮಾಡಿ ಜೈಲರರ ಮನೆಯನ್ನು ಸುಟ್ಟು ಅವರಿಗೆ ಭಯಂಕರ ಗಾಯವಾಗಿ ಮೃತಪಟ್ಟರು. ಜೈಲರರು ಈಗ ಭಯಂಕರ ಅವಸ್ಥೆಯಲ್ಲಿರುವರು.

ಈ ವಾರ್ತೆಯನ್ನು ಕೇಳಿ ಅಧಿಕಾರಿಗಳು ಅಂಮಿನೆಯ ಸುತ್ತಲು ಭಯಂಕರ ಪಹರೆಯನ್ನಿಟ್ಟು ಮಿಲಿಟರಿಯ ಸಹಾಯಕ್ಕಾಗಿ ರೆಸಿಡೆಂಟರಿಗೆ ತಂತಿಯನ್ನು ಬಿಟ್ಟರು. ರಾಮದುರ್ಗದ ಅರಸರು ಅರಮನೆಯನ್ನು ಅಧಿಕಾರಿಗಳಿಗೆ ಪಹರೆಮಾಡುವಂತೆ ಹೇಳಿ ಕೊಟ್ಟು ಸಮೀಪದ ಬೆಳಗಾವಿಗೆ ತೆರಳಿದರು. ಹೋಗುವಾಗ ತಾನು ಸಹಾಯ ಪಡೆದು ಬೇಗನೇ ಹಿಂತಿರುಗುವೆನೆಂದು ಅಧಿಕಾರಿಗಳಿಗೆ ಆಶ್ವಾಸನೆಯಿತ್ತಿರುವರು.

ಸಾಧಾರಣ ೬ ಗಂಟೆಗೆ ೫೦ ಮೋಟಾರು ಲಾರಿಗಳಲ್ಲಿ ಮಿಲಿಟರಿ ತಂಡವು ಬಂದು ಸೇರಿ ಎರಡು ಗಂಟೆಗಳ ತನಕ ಪಟ್ಟಣದ ಗಸ್ತು ತಿರುಗಿದರು. ಅಷ್ಟರೊಳಗೆ ಎಲ್ಲವೂ ಶಾಂತವಾಗಿತ್ತು.

ಕರ್ನಾಟಕದ ಕಾಂಗ್ರೆಸ್ ಧುರೀಣರು ಸಮಯವನ್ನು ನೋಡಿ ... ಸಂಸ್ಥಾನದಲ್ಲಿ ಪ್ರಜೆಗಳು ವರ್ತಿಸಿದಲ್ಲಿ ... ನರಳಬೇಕಾಗುವ ಸಂಭವವು ಎರುವುದೆಂದು ಜನರಿಗೆ ಬೋಧಿಸಿರುವರು.

ಭಾವೀ ಸಂಗ್ರಾಮದಲ್ಲಿ ಜರ್ಮನಿಯ ಯುದ್ಧಕ್ರಮ

ಭಾವೀ ಸಂಗ್ರಾಮದಲ್ಲಿ ನೆಲ-ಜಲ ಸೈನ್ಯಗಳ ಉಪಯೋಗವಾಗುವುದಕ್ಕಿಂತ ವಿಮಾನಗಳ ಉಪಯೋಗವಾಗುವುದು ಹೆಚ್ಚು. ಇದನ್ನು ಜರ್ಮನಿ ತಿಳಿದೇ ಇದೆ. ಆದ್ದರಿಂದ ಯುದ್ಧಕಾಲದಲ್ಲಿ ಉಪಯೋಗಕ್ಕೆ ಬೀಳುವ ೨೫೦೦೦ ವಿಮಾನಗಳನ್ನು ಜರ್ಮನಿಯು ತಯಾರಿಸಿ ಇಟ್ಟುಕೊಂಡಿದೆ. ಇವುಗಳಲ್ಲಿ ಅರ್ಧದಷ್ಟು ಶತ್ರುಪಕ್ಷಗಳೊಡನೆ ಹೋರಾಡಲಿಕ್ಕೆ ಬರುವಂಥವಾಗಿರುವುವು. ಉಳಿದವುಗಳು ಯುದ್ಧೋಪಕರಣಗಳನ್ನು ಸೈನ್ಯ ಸರಂಜಾಮುಗಳನ್ನೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕೊಂಡುಹೋಗಲಿಕ್ಕಾಗಿ ಇರುವುವು. ಯುದ್ಧವಿಮಾನಗಳ ವೇಗವು ತಾಸಿಗೆ ೩೦೦ರಿಂದ ೪೦೦ ಮೈಲುಗಳ ತನಕ ಇರುತ್ತದೆ. ಅಂದರೆ ಈ ವಿಮಾನಗಳು ಜರ್ಮನಿಯಿಂದ ಹೊರಟು ಒಂದು ತಾಸಿನೊಳಗಾಗಿ ಯೂರೋಪದ ಯಾವ ಭಾಗಕ್ಕಾದರೂ ಹೋಗಿ ಶತ್ರುಸೇನೆಯ ಮೇಲೆ ಬಾಂಬು ಚೆಲ್ಲಿ ಅದನ್ನು ಸೋಲಿಸಿಯೋ ಅದರ ಧೈರ್ಯ ಕೆಡಿಸಿಯೋ ಬರಬಲ್ಲವು.

ವಿಮಾನಗಳಿಂದ ದೊಡ್ಡ ದೊಡ್ಡ ಬಾಂಬುಗಳನ್ನು ಚೆಲ್ಲುವದಕ್ಕಿಂತ ಜರ್ಮನ ಯುದ್ಧ ವೈಮಾನಿಕರು ಶತ್ರು ಸೇನೆಯ ಮೇಲೆ ಸಣ್ಣ ಸಣ್ಣ ಬಾಂಬುಗಳನ್ನು ಚೆಲ್ಲುವದನ್ನು ಹೆಚ್ಚು ಪರಿಣಾಮಕಾರಿ ಎಂದು ತಿಳಿದಿದ್ದಾರೆ. ದೊಡ್ಡ ಬಾಂಬುಗಳನ್ನು ಚೆಲ್ಲುವಾಗ ಎಲ್ಲಿಯಾದರೂ ಗುರಿತಪ್ಪಿದರೆ ನಷ್ಟವಲ್ಲದೆ ಲಾಭವೇನೂ ಇಲ್ಲ. ಆದರೆ ಸಣ್ಣ ಬಾಂಬುಗಳನ್ನು ಚೆಲ್ಲಿದಾಗ ಗುರಿತಪ್ಪಿ ಹೋದರೆ ಆಗುವ ನಷ್ಟವು ಸ್ವಲ್ಪ, ಅಲ್ಲವಾದರೆ ಬಾಂಬುಗಳು ಶತ್ರುಸೇನೆಯ ಮೇಲೆ ಬಿದ್ದು ಅದರ ನಾಶಮಾಡಬಹುದು, ಅಥವಾ ಅದನ್ನು ಭಯಗೊಳಿಸಿ ಹಿಂದಕ್ಕೋಡುವಂತೆ ಮಾಡಲೂ ಮಾಡಬಹುದು. 'ಹೋದರೊಂದು ಕಲ್ಲು-ಬಂದರೊಂದು ಹಣ್ಣು' ಎಂಬುದೇ ಜರ್ಮನ ವೈಮಾನಿಕರ ಈಗಿನ ಯುದ್ಧ ಧೋರಣೆ ಆಗಿದೆ.

ಶತ್ರುಪಕ್ಷದ ವಿಮಾನ ಸೇನೆಯನ್ನು ಮುರಿಯಲಿಕ್ಕೆ ನೆಲದ ಸೈನ್ಯಗಳ ವ್ಯೂಹರಚನೆ ಮಾಡಿ ಅವ್ವಕಟ್ಟುವದರಿಂದ ಪ್ರಯೋಜನವಿಲ್ಲವೆಂದು ಜರ್ಮನ್ ಸೇನಾಧಿಕಾರಿಗಳು ಹೇಳುತ್ತಾರೆ. ವಿಮಾನ ಸೇನೆಯನ್ನು ಬಹಳ ಸಮಯ ದವರೆಗೆ ಅಡ್ಡಕಟ್ಟುವ ಸಾಮರ್ಥ್ಯ ಎಷ್ಟು ಪ್ರಬಲವಾದ ನೆಲ ಅಥವಾ ಜಲಸೈನ್ಯಕ್ಕೆ ಇರುವದಿಲ್ಲ. ಅದಕ್ಕಿಂತ ಆಕಾಶಮಾರ್ಗವಾಗಿ ಹೋಗುವ ವಿಮಾನಗಳನ್ನು ಗುರಿ ಇಟ್ಟು ಹೊಡೆದು ಅವನ್ನು ನೆಲಕ್ಕೆ ಉರುಳಿಸುವ ಎಂಟಿ ಏರ್‌ಕ್ರಾಫ್ಟ ಗನ್ನುಗಳೆಂಬ ಆ ಸಣ್ಣ ಜಾತಿಯ ಫಿರಂಗಿಗಳು ಈ ಕಾರ್ಯದಲ್ಲಿ ಹೆಚ್ಚು ಫಲ ಕೊಡುವವೆಂದು ಅವರು ಹೇಳುತ್ತಾರೆ.

ಹಿಂದಿನ ಮಹಾಯುದ್ಧದಲ್ಲಿ ಜೆಪಲಿನ್ನುಗಳೆಂಬ ದೊಡ್ಡ ಜಾತಿಯ ವಿಮಾನಗಳ ದಾರಿಯನ್ನು ಕಟ್ಟುವದಕ್ಕೋಸ್ಕರ ದಪ್ಪ ಹೊಗೆಯ ಗೋಡೆಗಳನ್ನು ಎತ್ತರಕ್ಕೆ ಕಟ್ಟಿದ್ದರು. ಮುಂದಿನ ಯುದ್ಧದಲ್ಲಿ ಶತ್ರುಪಕ್ಷದವರು ಅಂಥ ಗೋಡೆಗಳನ್ನು ಕಟ್ಟಿದರೆ ಏನೇನು ಮಾಡಬೇಕೆಂದು ಕರ್ನಲ್ ಪಿ ಟಿ ಎಟ್ಟಿನ್ ಎಂಬವರು ಜರ್ಮನ ವಿಮಾನ ಸೇನೆಯ ಡಾಕ್ಟರ ಎನ್ನರನ್ನು ಕೇಳಿದಾಗ ಮುಂದಿನ ಯುದ್ಧದಲ್ಲಿ ಜೆಪಲಿನ್ನುಗಳಂಥ ದೊಡ್ಡ ವಿಮಾನಗಳಿಂದ ಏನೂ ಪ್ರಯೋಜನವಿಲ್ಲವೆಂದರು.

ಮುಂದಿನ ಯುದ್ಧ ಕಾಲಕ್ಕೆ ವಿಮಾನಗಳ ಉಪಯೋಗವು ಬಹಳವಾಗುವದರಿಂದ ಶತ್ರುಪಕ್ಷದವರು ಆಕಾಶದಲ್ಲಿ ಸರಿಗೆಯ ಬಲೆಗಳನು ಕಟ್ಟಿ ಹಾಕಬಹುದೆಂಬ ಭೀತಿಯು ಜರ್ಮನಿಗಿದೆ. ಅದಕ್ಕೋಸ್ಕರ ಅವರು ವಿಮಾನಗಳ ಗರಿಗಳಿಗೆ ಉಕ್ಕಿನ ಸರಿಗೆಗಳನ್ನು ಕತ್ತರಿಸಿಹಾಕಬಲ್ಲ ಬಹಳ ಹರಿತವಾದ ಅಲಗುಗಳನ್ನು ಜೋಡಿಸಿರುವರು. ಅವು ಎಂಥ ಸರಿಗೆಯ ಬಲೆಗಳನ್ನಾದರೂ, ವಿಮಾನವು ಹಾರಾಡುತ್ತಿರುವಾಗಲೇ ಕತ್ತರಿಸಿ ಹಾಕಬಲ್ಲವು. ಆದ್ದರಿಂದ ವಿಮಾನಗಳಿಗೆ ಕಮ್ಮದಾರಿ ಹಿಡಿದು ಹೋಗಲಿಕ್ಕೆ ಯಾವ ತೊಂದರೆಯೂ ಇಲ್ಲ.

ಆದರೆ ಒಂದು ಮಾತು. ಭಾವೀಯುದ್ಧದಲ್ಲಿ ಶತ್ರುಮಿತ್ರ ಪಕ್ಷದವರು ಎಂಥೆಂಥ ಯುದ್ಧೋಪಕರಣಗಳನ್ನು ಉಪಯೋಗಿಸಲಿ, ಪ್ರಾರಂಭದಲ್ಲಿ ಯಾರು ಎಷ್ಟು ಪ್ರಯೋಜನಗಳನ್ನು ಪಡೆಯುವರೋ ಅಷ್ಟೇ ಅವರಿಗೆ ಧಕ್ಕುವದು. ಯುದ್ಧವು ಎಷ್ಟು ದೀರ್ಘಕಾಲ ನಡೆಯುತ್ತ ಹೋಗುವದೋ, ಅಷ್ಟಕ್ಕೆ ಶತ್ರುಮಿತ್ರ ಪಕ್ಷದವರ ಬಲವು ಕುಂದುತ್ತಾ ಬಂದು, ಬಹಳ ಕಾಲದ ತನಕ ಯುದ್ಧವು ನಡೆಯುವದಾಗಿದ್ದರೆ ಎರಡೂ ಪಕ್ಷದವರು ಸೋತು ಸುಣ್ಣ ಮುಕ್ಕಬೇಕಾಗುವದು. ಆದ್ದರಿಂದ ಒಬ್ಬರಿಗೊಬ್ಬರು ಖಂಡಿತ ಸೋಲನ್ನು ಕೊಡಬೇಕೆನ್ನುವವರು ಯುದ್ಧಪ್ರಾರಂಭವಾದ ಕೆಲವೇ ದಿನಗಳಲ್ಲಿ ಅಂಥ ಸೋಲನ್ನು ಕೊಡಬೇಕಾಗುವದು.

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಟಾಗುವ ಬಳಲಿಕೆ, ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಬೇಧವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ
ಮದರಾಸು

ಸ್ಟಾಕಿಸ್ಟರು:
ಪೂಪ್ಯುಲರ ಸ್ಟೋರ್ಸ್, ರಥಬೀದಿ, ಮಂಗಳೂರು



U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಒಂದು ಬಾರಿ ಪರೀಕ್ಷಿಸಿರಿ!

ಮಹಾಶಯರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲಾ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ ೧ ಪೌಂಡಿಗೆ ರೂ ... ನಂ ... ಮಾರ್ಕ ಸಾರಥಿ ನಸ್ಯ ೧ ಪೌಂಡಿಗೆ ರೂ ೧-೦-೦
(ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ಎಸ್ಟಿಸು
ಎ ಪಿ ಸಾರಥಿ
ಮೆನ್ಯುಫೆಕ್ಚರರ್ಸ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR P. W. FARIAS.

ST PAULS CHURCH,
Bolkonje Post, S K
Dated 4 h Jan 1939

To
THE JOINT MANAGERS,
The C P C Co Ltd., Mangalore

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I [illegible] were done voluntarily

May the blessings of the Almighty fall on you all and may you be able to do much good to the Public

Re[illegible] thanks I [illegible]
Yours Sincerely
(Sd) P W Farias

To,
THE JOINT MANAGERS
The Combind Booking Agency Mangalore

Sri Parshwanathaswami,
PANCHAKALYANA POOJA MAHOSTHAM
Venoor S [illegible]

Dear Sirs,

Please permit us to express our thanks on behalf of the above committee for the efficient service rendered by your [illegible] Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodabidri Booking Clerk Mr B Krishnayya and also his other [illegible] Mr Ragh[illegible] who had specially come down from Mangalore to see to the needs of and comforts of the traveling Public [illegible]

We remain Yours Faithfully

Venoor
Dated 6-2-39

(Sd) B Chandappa Indra (*Secretary P M Council*) (Sd) M Jagathpal (Sd) M Pachappa Shetty (Sd) Anantharaj Shetty (*Members, Panchakalyana Maaosthamam Committee*)

JOINT MANAGERS,

The Combined Booking Agency, MANGALORE

The Joint Booking Office, KODIALBAIL

CONSTRUCTIVE BANKING

An understanding of how a modern Bank can operate to make itself useful to the individual to business and to the public, has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER A CRORE.

ESTD 1906
CANARA BANK LIMITED

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಶುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಛಾತಿಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊದಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ... ಕಂಪೆನಿಯಲ್ಲಿ ದೊರೆಯುವುದು

ಸ್ವದೇಶಾಭಿಮಾನಿ

Established 1906 — Regd No M 3[illegible]

ಸಂಪುಟ-೩೩] ತಾರೀಖು ೧೪-೪-೧೯೩೯ (14—4—1939) [ಸಂ.೩೯

THE

BOMBAY LIFE ASSURANCE COMPANY, LTD.,

(ESTD 1908)

It is not material how much you can earn every month, but it is most important how much you save, so that you and your family can have uniform minimum comforts at a time when your income reduces or comes to nothing.

Best place it invest your such savings on a captalized value is THE BOMBAY LIFE ASSURANCE CO , LTD which gives you best security and service

Honest, Energetic and Influential persons will have great opportunity to help the cause [illegible] and also to earn a permanent and decent remuneration

— Apply to — **KOCHIKAR BROTHERS, LIIMTED,**

Chief Branch [illegible]

The Bombay Life Assurance Co , Ltd

The Bombay Life Building Gandhinagar UDIPI

or any of our following offices:

Post Box No 337
Mount Road
Madras

Visweshwarapuram Circle
Bangalore City

Charni Road
Girgaum
BOMBAY 4

Car Street
Mangalore

Puthiyara,
Calicut

Central Station Road
Trivandrum

Ottapalam
S Malabar

MAKE LIFE WORTH-LIVING!

Indigestion Insomnia Dry Cough
Nervousness Weak Heart &c

these make you weary of Life!

CONSULT US AND BUY
YOUR LIFE'S HAPPINESS!

Oils – that cool the [illegible]
Lehas – that build [illegible]
Asavas – that [illegible]

All Genuine Ayurvedic Preparations-

from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ [illegible]
ನರಗಳ ದುರ್ಬಲತೆ [illegible] ಹೃದ್ರೋಗ [illegible]
ಜೀವನದಲ್ಲಿ ನಿರಾಶೆಯನ್ನುಂಟುಮಾಡುವವು!

ನಮ್ಮನ್ನು ವಿಚಾರಿಸಿರಿ [illegible] ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ ಸುಖ ನಿದ್ರೆಕೊಡುವ ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ಚೈತನ್ಯವನ್ನು ಹರಿಸುವ ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

(ಬ್ರಾಂಚ್ ಕುಮಟ, ಉತ್ತರ ಕನ್ನಡ)

ಸ್ವದೇಶಾಭಿಮಾನಿ

Swadeshabhimani. Estd 1906

Date 21—4 1939

ತಾರೀಖು ೨೧ ೪—೧೯೩೯



ನವದೆಹಲಿಯ ಸಕ್ರಿಟರಿಯಟ್ ಕಟ್ಟಡಗಳು

ಸಚಿತ್ರ

ವಾರಪತ್ರಿಕೆ

A New Product

'Hullo! Hullo! Is that the 'Diana' Beauty Parlour? Good morning, madam, Mr. Smith speaking

'I have an important announcement to make to you, I may say, a startling revelation, about a new product that you can put on the market without the slightest hesitation

'Hullo! What did you say? How much is it going to cost you? Nothing madam, which is exactly how much it has cost me, or in other words, not a single penny

I am talking about a new beauty cream for use at night at the present time there are special creams for day, evening and night use, if I'm not mistaken. Well, this new special cream has a quinine basis and is used in the Colonies for protection from mosquito bites and their consequences

'Why do you laugh? I assure you that I'm not joking The proof was made by a French colonist many years before the existence of all your creams and lotions it was in 1901 when rice powder was about the only product that tempted the fair sex Every night this Frenchman smeared his face, neck and arms with ... product that ... remarkable manner ... bites But ... start ... ments ... last he thought ... to pack his ... He ... time! He had ... for the mosquitoes ... night ... his face ... Well ... quite ... lared ... night ... malaria ... cream ... for ...

It is ... Malaria ... grains of ... remarkable ... Malaria Commission ... of Nations ... treating ... 20 grains of quinine are taken daily during ... Malaria Commission ... after treatment is required but in event ... the treatment is repeated as before

Mal Eng No 52

ಜಾಹೀರಾತುಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು
ಪ್ರತಿಫಲಬರುವಂತೆ ಸಾಧಿಸುವುದು

ಹೋನಾನದ ಭಯಂಕರ ಕದನ
ಶಾನ್ಸಿಯಲ್ಲಿ ಚೀನೀಯರಿಗೆ ಗೇಲು
ಕ್ವಿಫೊಂಗದಲ್ಲಿ ಮರ್ಕಟ ಸೇನೆಯ ಅಧಿಕಾರ

ಮಧ್ಯರಾಜ್ಯದಲ್ಲಿ ... ದಂದ ದ ಚೀನದಲ್ಲಿ ... ನಡೆಯುತ್ತಿದೆ ... ದರ ಕಡೆಗೆ ... ಹೋಗ ... ಅದಕೆ ಜಪಾ... ಭವಿಷ್ಯ ಹೇಳಿದ್ದರ ಅವರ ಆ ಭವಿಷ್ಯ ಸುಳ್ಳಾಗುವ ದಿನಗಳು ಈಗ ಬಂದಿವೆ. ಎರಡು ವರ್ಷಗಳ ಮೊದಲಿಗಿಂತಲೂ ಹೆಚ್ಚಾಗಿ ಚೀನಾಸರಕಾರವು ಈಗ ಬಲಿಷ್ಠವಾಗಿರುವುದು ಮತ್ತು ಜಪಾನನ್ನು ಎದುರಿಸಲು ಸಮರ್ಥವಾಗಿರುವುದ

ಚೀನಿಯರ ತಂತ್ರ

ಜಪಾನಿಸೇನೆಯನ್ನು ದಣಿಸಿ ದಣಿಸಿ ಸೋಲಿಸುವ ಚೀನಿಯರ ತಂತ್ರಕ್ಕೆ ಈಗ ತುಂಬಾ ಸಫಲತೆಯು ದೊರೆಕಿರುವುದು ಅದ್ದರಿಂದಲೇ ಚೀನೀಸೇನೆಯು ಈಗ ಒಂದು ವರ್ಷದಿಂದ ಸೋತಂತೆ ನಟಿಸಿಕೊಂಡು ಒಳನಾಡುಗಳಿಗೆ ಹೋಗಿ ಅಲ್ಲಿ ನೆಲೆನಿಂತಿತ್ತು ಅದನ್ನು ಬೆನ್ನಟ್ಟಿ ಹೋಗಲಿಕ್ಕೆ ಜಪಾನಿ ಸೇನೆಯು ಬಹಳ ಶ್ರಮ ಪಟ್ಟಿತು ... ಅದರ ಪರಿಣಾಮವನ್ನೇ ನಾವೀಗ ಕಾಣುತ್ತಿದ್ದೇವೆ

ಭಯಂಕರ ಕದನ

ಚೀನೀ ಮರ್ಕಟ ಸೇನೆಯು ಜಪಾನೀ ಸೈನ್ಯವನ್ನು ... ಓಡಿಸಿ ಓಡಿಸಿ ಅದನ್ನು ಹಣ್ಣು ಮಾಡಿದ ... ಚೀನಿ ಸೈನ್ಯವು ... ಸೈನ್ಯವನ್ನು ಪ್ರತಿಭಟಿಸಿ ... ಹಣ್ಣಾದ ಜಪಾನೀಸೈನ್ಯವನ್ನು ಈಗ ಸೋಲಿಸುವುದು ಸುಲಭವಾಗಿದೆ ಜಪಾನಿಯರು ... ಯುದ್ಧರಂಗಗಳಲ್ಲಿ ಸೋತು ... ಮಾಡುತ್ತಿರುವರ ಶಾನ್ಸಿ ಹೋನಾನಗಳಲ್ಲಿ ಭಯಂಕರ ಕದನಗಳು ಆಗಿವೆ ಕ್ವಿಫೊಂಗ್ಯ ಕೊಟನಗಳು ಚೀನಿಯರ ವಶವಾಗಿವೆ

ಹತಾಶ ಜಪಾನಿಯರು

ಅದ್ದರಿಂದ ಜಪಾನಿಯರು ಹತಾಶರಾಗಿದ್ದಾರೆ ಚೀನೀ ಮರ್ಕಟ ಸೇನೆಯ ಉಪಟಳವನ್ನು ತಾಳುವುದು ಅವರಿಗೆ ಅಸಾಧ್ಯವಾಗಿದೆ. ಮರ್ಕಟ ಸೇನೆಯನ್ನು ಅದಷ್ಟು ದೂರವಿರಿಸ ... ಅಭಿಪ್ರಾಯದಿಂದ ಜಪಾನ ... ಹೊಸ ತಂತ್ರವನ್ನು ಹೊರಡಿಸಿ ತಮ್ಮ ಅಧಿಕಾರದಲ್ಲಿರುವ ... ಗಳ ... ಎದುರಾಗಿ ... ದೊಡ್ಡ ... ಗಡಗಳನ್ನು ... ನಿರ್ಬಂಧಿಸಿದ್ದಾರೆ ಇಂಥ ಬೆಳೆಗಳ ... ವಲ್ಲಿ ಮರ್ಕಟ ಸೇನೆಗೆ ಅಡಗಿಕೊಂಡ ಸಮಯ ಸಾಧಿಸಿ ಸಮೀಪದ ಜಪಾನಿಯರ ಮೇಲೆ ಬಂದ ... ಸುಲಭವಾಗುತ್ತದೆ, ಮರ್ಕಟ ಸೇನೆಯು ಅಡಗಿಕೊಂಡಿದ್ದಾಗ ಅವುಗಳನ್ನು ಗುರುತಿಸುವುದು ಜಪಾನಿಯರಿಗೆ ಕಷ್ಟವಾಗುತ್ತದೆ ಎಂಬದರಿಂದ ಈ ನಿರ್ಬಂಧವು ಆಗಿದೆ ಜಪಾನಿಯರು ಮರ್ಕಟ ಸೇನೆಯನ್ನು ಎಷ್ಟು ಹೆದರುತ್ತಾರೆಂಬುದನ್ನು ಇದರಿಂದ ತಿಳಿಕೊಳ್ಳಬಹುದು.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

卐
ರಕ್ಷ್ಯಂ ನ ರ್ಹಾರ್ಯಂ ನ ಶತ್ರುರ್ನ
ದೇವಾ । ನ ಭೀತಿರೀ ಭೀಮ
ವಿಶೀಣ ಭೀತಿರ್ವ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ।
卐

ಸ್ವದೇಶಾಭಿಮಾನಿ
SWADESHABHIMANI
ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಲನುವನು ರತ್ನಗಳು
ಸಾ । ಗರವ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ! ಮತೆ
ವಿಶ್ವವ ಸುಡುವ ಬರುತಿರುವ ॥
ಗರಲಕವರಂಜಿದರೆ! ಸುಧೆಯನು
ಮರೆತು ಕ್ಷಣವಿರದೆ
ಕೆರಳಿ ಕಾಳಿಕರೆ । ಕೆರಳ ಬಲ್ಲರೆ!
ಕೊರೆದು ಧೀರರು
ನಿಶ್ಚಿತಾರ್ಥವನು ॥
卐

ತಾರೀಕು ೨೧—೪—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 21—4—1939

ಸುಭಾಷ ಬೋಸರ ಮೇಲೆ ತಾಂತ್ರಿಕರ ಮಾರಣ ಕ್ರಿಯೆ

★ ಆಚಾರ್ಯರೊಬ್ಬರ ವಿಚಿತ್ರ ಸೂಚನೆ ★

"ತ್ರಿಪುರಿ ಕಾಂಗ್ರೆಸು ನಡೆಯುತ್ತಿದ್ದ ಕೆಲವು ದಿನಗಳ ಮೊದಲುಗೊಂಡು ಬಾಬು ಸುಭಾಸ ಚಂದ್ರಭೋಸರು ಕಠಿನ ಕಾಯಿಲೆಯಲ್ಲಿದ್ದರು. ಅವರ ಅನಾರೋಗ್ಯದ ಕುರಿತು ದೇಶದಲ್ಲಿ ಅನೇಕಾನೇಕ ಊಹಾಪೋಹೆಗಳೆದ್ದಿದ್ದವು. ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟು ಹಲವರು ಅವರಿಗೆ ಕಾಗದಪತ್ರಗಳನ್ನು ಬರೆದಿದ್ದರು. ಅವುಗಳನ್ನೆಲ್ಲ ವಿಮರ್ಶಿಸುತ್ತ ಶ್ರೀ. ಸುಭಾಷರು ಮೊಡರ್ನ ರಿವ್ಯೂ ಪತ್ರಿಕೆಯಲ್ಲಿ ಸುದೀರ್ಘವಾದ ಒಂದು ಲೇಖನವನ್ನು ಬರೆದಿರುವರು. ಅವುಗಳ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಕೊಟ್ಟಿದ್ದೇವೆ. ಇದರಿಂದ ವಿಚಾರವಾದಿಗಳೆಂದು ಪ್ರಸಿದ್ಧರಾದ ಬಾಬು ಸುಭಾಸಭೋಸರಂಥವರೂ ಒಪ್ಪಿಕೊಳ್ಳುವ ಮಾತು ನಂತ್ರ, ಬಲಿ ಒಲ್ಮೆಗಳ ಅಂಧಾನುಕರಣೆಗೆ ಹೇಗೆ ಬಲಿಯಾಗುತ್ತಾರೆಂಬುದು ಸ್ಪಷ್ಟವಾಗುತದೆ.

ವಿಷಹಾಕಿದ್ದಾರೆ.

ಭೋಸರು ಆಕಸ್ಮಿಕವಾಗಿ ಕಾಯಿಲೆ ಬಿದ್ದಿರುವುದನ್ನು ತಿಳಿದ ಕೆಲವರು, ಯಾರೋ ಅವರಿಗೆ ವಿಷಹಾಕಿದ್ದಿರಬೇಕೆಂದು ಸೂಚಿಸಿದರು. ಇದು ಸ್ವಲ್ಪ ಭೋಸರ ಡಾಕ್ಟರರಿಗೆ ವಿನೋದದ ವಿಷಯ. ಯಾಕೆಂದರೆ ಅವರು ತಮ್ಮ ಪ್ರಾಣ ಹಿತಶಾಸ್ತ್ರದ ಎಲ್ಲ ಬುದ್ಧಿಯನ್ನು ಉಪಯೋಗಿಸಿ ಭೋಸರ ದೇಹವನ್ನು ಪರೀಕ್ಷಿಸಿದರೂ, ಭೋಸರಿಗೆ ವಿಷಹಾಕಿದ ಯಾವ ಲಕ್ಷಣವೂ ಕಾಣಬರಲಿಲ್ಲವಂತೆ. ಅವರು ಆ ಮಾತಿಗೆ ಹೆಚ್ಚಿಗೆ ಪ್ರಾಮುಖ್ಯವನ್ನೂ ಕೊಡಲಿಲ್ಲ.

ಆಚಾರ್ಯರೊಬ್ಬರ ಸೂಚನೆ

ಕಲ್ಕತ್ತ ಯುನಿವರ್ಸಿಟಿಯ ಆಚಾರ್ಯರೊಬ್ಬರು ಭೋಸರನ್ನು ಕಾಣಲಿಕ್ಕೆ ಬಂದು, ಅವರ ಕಾಹಿಲೆಯ ಕುರಿತು ಒಂದು ವಿಚಿತ್ರ ಸೂಚನೆಯನ್ನು ಕೊಟ್ಟರು. ಈ ಆಚಾರ್ಯರು ಸಂಸ್ಕೃತದಲ್ಲಿ ಅದ್ವಿತೀಯ ಪಂಡಿತರು. ಆದರ್ಶಗುಣ ನಡತೆಯುಳ್ಳವರು. ಭೋಸರ ಕುಟುಂಬದವರಿಗೆ ಅವರ ಮೇಲೆ ತುಂಬಾ ಗೌರವ. ಭೋಸರಿಗೆ ಒಂದಕ್ಕೊಂದು ಹೇಳಿ ಅವರು ತನ್ನ ಯಾವ ಸ್ವಾರ್ಥವನ್ನು ಸಾಧಿಸಬೇಕಾದ್ದಿರಲಿಲ್ಲ. ಅಂಥ ಆಚಾರ್ಯರೇ ಭೋಸರಿದ್ದಲ್ಲಿಗೆ ಬಂದು "ಸಾಮಾನ್ಯವಾಗಿ ಇಂಥ ವಿಲಕ್ಷಣ ಮತ್ತು ದೀರ್ಘಕಾಲದ ಕಾಹಿಲೆಯು ಉಂಟಾಗುವಂಥದಿಲ್ಲ. ದೇಶದ ಯಾವದೋ ಒಂದು ಕಡೆಯಲ್ಲಿ ಯಾರೋ ನಿಮ್ಮ ದುಶ್ಮನರು ನಿಮ್ಮ ಮರಣಕ್ಕಾಗಿ ಮಾಟ ಮಾಡಿದ್ದಿರಬೇಕು. ಆದರೆ ನೀವು ಪ್ರತೀಕಾರಕ್ಕೆ ಸಮರ್ಥರೂ ಆದುದರಿಂದ ನಿಮ್ಮ ಆರೋಗ್ಯ ಮಾತ್ರ ಕೆಟ್ಟಿತು. ಪ್ರಾಣಾಪಾಯವಾಗುವುದಿಲ್ಲ" ಎಂದರು. ಮರಣಕ್ರಿಯೆ ಅಥವಾ 'ಮಾಟದ ವಿಷಯವು ತಂತ್ರಶಾಸ್ತ್ರದಲ್ಲಿ ವಿವರವಾಗಿ ಬರೆಯಲ್ಪಟ್ಟಿರುವುದಂತೆ. ಆಚಾರ್ಯರು ಪರಿಹಾರವಾದಿದ ಆ ಮಾಟದ ನಿವಾರಣೆಯ ಉಪಾಯಗಳನ್ನು ತಿಳಿಸಿಹೋದರು.

ಅನುಮಾನವುಂಟಾಯಿತು.

ಸುಭಾಷರು ಸ್ವತಂತ್ರ ವಿಚಾರವಾದಿಗಳಾದರೂ ಆಚಾರ್ಯರ ಮಾತುಕೇಳಿ ಅವರಿಗೂ ಕೊಂಚ ಅನುಮಾನವಾಯಿತು. ಅನುಮಾನವಾಗುವ ಕಾರಣವೂ ಇದ್ದಿತು. ಬೇರೆ ಯಾರಾದರೂ ಬಂದು ಈ ಮಾತುಗಳನ್ನು ಹೇಳುತ್ತಿದ್ದರೆ ತಮ್ಮ ಸ್ವಾರ್ಥಕ್ಕಾಗಿ ಹೀಗೆ ಹೇಳುತ್ತಿರುವರೆಂದು ಎಣಿಸಬಹುದಾಗಿತ್ತು. ಆದರೆ ಆಚಾರ್ಯರಲ್ಲಿ ಸ್ವಾರ್ಥದ ಲವಲೇಶವಿರಲಿಲ್ಲ. ಅವರು ಸತ್ಯಸಂಧರಾಗಿರುವರು. ಗುಣಾಢ್ಯರೂ ಆಗಿದ್ದರು. ಆದ್ದರಿಂದ ಅವರ ಮಾತುಗಳನ್ನು ಒಂದು ತಿರಸ್ಕಾರದ ಕೇಳಿ ಇರಸೊಂದು ಕಿವಿಯಿಂದ ಬಿಡ ಮಾತುಗಳಾಗಿರಲಿಲ್ಲ.

ತಾಯಿತ ಕಟ್ಟಿರಿ

ತ್ರಿಪುರಿ ಕಾಂಗ್ರೆಸಿನ ಮೊದಲಿನ ಕೆಲವು ದಿನಗಳ ಮೊದಲು, ಭೋಸರ ಕೇವಲ ಜನ ಮಿತ್ರರು ಮತ್ತು ಆಪ್ತರು ... ತಾಯಿತವನ್ನು ಕಟ್ಟಿಕೊಳ್ಳಬೇಕೆಂದು ... ಮಾಡಿದರು. ... ಮತ್ತು ಕೆಲವು ತಾಯಿತಗಳನ್ನು ... ಗಳನ್ನು ಧರಿಸಿಕೊಂಡರು. ನನ್ನ ಆಪ್ತಮಿತ್ರರು ಕೊಟ್ಟ ಸಂಚಿಗಳನ್ನೇ ಅವರು ಸ್ವೀಕರಿಸಿದ್ದರು. ಕೊಡಲು ತಯಾರಾಗಿದ್ದವರೆಲ್ಲ ಅವರು ಕೆಗೆದುಕೊಂಡಿದ್ದರೆ ತ್ರಿಪುರಿ ಕಾಂಗ್ರೆಸಿನಲ್ಲಿ ಭೋಸರು ಕಾಂಗ್ರೆಸ ಅಧ್ಯಕ್ಷರಾಗುವ ಬದಲಿಗೆ ತಾಯಿತ ಪ್ರದರ್ಶನದ ಮಂದಿರವಾಗುತ್ತಿದ್ದರೆಂದು ಅವರೇ ವಿನೋದದಿಂದ ಹೇಳಿರುವರು.

ಯಾಕೆ ಈ ಪರಿವರ್ತನೆ?

ಸುಧಾರಿತ ಮನೋವೃತ್ತಿಯವರಾದ ಸುಭಾಷರಲ್ಲಿ ಅಂಧಾನುಕರಣೆಯ ಈ ಪರಿವರ್ತನೆಯು ... ಕೇಳಬಹುದು. ತ್ರಿಪುರಿ ಕಾಂಗ್ರೆಸಿನ ಆ ಕಾಲವು ಎಂಥ ಬಿಕ್ಕಟ್ಟಿನದ್ದಾಗಿದ್ದಿತೆಂದರೆ ತಾಯಿತ ಉಂಗುರಗಳನ್ನು ಧರಿಸಿಕೊಳ್ಳುವರಿಂದ ಅವರು ಕೇವಲ ... ಗುಣವಾಗುತ್ತಿದ್ದರೆ ಅವರಿಗೆ ಸಂತೋಷವೆ. ... "ತ್ರಿಪುರಿ ಕಾಂಗ್ರೆಸಿನ ನಿರ್ಣಯವೇ" ಅವರು ಆ ತಾಯಿತ ಉಂಗುರಗಳನ್ನು ದೂರಕ್ಕೆ ಒಗೆದು ಬಿಟ್ಟರು. ಈಗ ಅಂಧಾನುಕರಣೆಯಿಂದ ... ನಾ ನನ್ನ ಕೇವಲ ನನ್ನ ... ಅನ್ನುವ ... ಆನಂದದಲ್ಲಿ ಇದ್ದಾರೆ.

ರಾಜಕೋಟೆಯ ಸುಧಾರಣೆಯ ಕಮಿಟಿ

ರಚನಾ ಕಾರ್ಯದಲ್ಲಿ ಅನೇಕ ಅಭ್ಯಂತರಗಳು

ಮಹಾತ್ಮಾಜಿಯವರು ದಿಲ್ಲಿಯಲ್ಲಿ ಅನೇಕ ಬಾರಿ ವಾಯ್ಸರಾಯರನ್ನು ಕಂಡು ಮಾತನಾಡಿ ರಾಜಕೋಟೆಗೆ ಬಂದರು. ಸರದಾರ ವಲ್ಲಭ ಬಾಯಿ ಪಟೇಲರೂ ಮಹಾತ್ಮರನ್ನು ರಾಜಕೋಟೆಯಲ್ಲಿ ಬಂದು ಕೂಡಿದರು. ಅನಂತರ ಅವರಿಬ್ಬರೂ ರಾಜಕೀಯ ಸುಧಾರಣಾ ಕಮಿಟಿಯ ರಚನಾಕಾರ್ಯದಲ್ಲಿ ತೊಡಗಿದರು. ಪರಂತು ಸರ್ ಮಾರಿಸ್ ಗ್ವಾಯರರ ತೀರ್ಮಾನದ ಮೇರೆಗೆ ಪ್ರಜಾಪರಿಷತ್ತಿನ ಕಡೆಯಿಂದ ಏಳು ಮಂದಿ ಸದಸ್ಯರನ್ನು ಆರಿಸಿ ಕಳುಹಿಸುವಲ್ಲಿ ಅನೇಕ ಅಭ್ಯಂತರಗಳುಂಟಾಗಿವೆ. ರಾಜಕೋಟೆಯ ಮುಸಲ್ಮಾನರೂ ಭಾಯಾತರೂ ಕಮಿಟಿಯಲ್ಲಿ ತಮಗೂ ಪ್ರಾತಿನಿಧ್ಯ ಬೇಕೆಂದಿದ್ದಾರೆ. ಅವರ ಹಾಗೆ ಮಾಡಹೋದರೆ ಪ್ರಜಾಪರಿಷತ್ತಿನ ಸದಸ್ಯರಿಗೆ ಕಮಿಟಿಯಲ್ಲಿ ಬಹುಮತವು ದೊರೆಯುವುದಿಲ್ಲ. ಕಮಿಟಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬೇಕೆಂದರೆ ಅದಕ್ಕೆ ರಾಜಕೋಟೆ ಸಾಹೇಬರು ಒಪ್ಪರು, ಗ್ವಾಯರ ಸರ್ವಾಧಿಪರ ಮೇರೆಗೆ ಏಳು ಮಂದಿ ಪರಿಷತ್ತಿನ ಸದಸ್ಯರು, ಮತ್ತು ... ಮಂದಿ ಸರಕಾರಿ ಸದಸ್ಯರು ಮಾತ್ರ ಕಮಿಟಿಯಲ್ಲಿ ಇರಬಹುದೆಂದು ಹೇಳಿದ್ದಾರೆ. ಹಿಂದಿ ವಚನವನ್ನು ಮೀರದಂತೆ ಶ್ರೀ ವೀರಾವಾಲ್ಲರು ನೇಮಿಸಿರಲೂಬಹುದು. ಗ್ವಾಯರರ ನಿರ್ಣಯವು ಪಟೇಲರಿಗೆ ಅನುಕೂಲವಾಗಿ ತೋರಿದ್ದಿರುವ ಕಾರಣ, ರಾಜಕೋಟೆಯಲ್ಲಿ ಕಾಂಗ್ರೆಸಿನ ಅಥವಾ ಪಟೇಲರ ಯಾವ ಆಟವೂ ನಡೆಯದ ಹಾಗೆ ಮಾಡಬೇಕೆಂದು ವೀರಾವಾಲ್ಲರು ಪ್ರತಿಜ್ಞೆಗೈದುಕೊಂಡಿದ್ದಾರೆ. ಆದ್ದರಿಂದ ಸುಧಾರಣಾ ಕಮಿಟಿಯ ಕಾರ್ಯ ನಿರ್ವಹಣದಲ್ಲಿ ಹೆಚ್ಚು ಹೆಚ್ಚಿಗೂ ವಿಘ್ನವಿವಾದಗಳು ಎದುರಾಗುವ ಸಂಭವವಿದೆ. ಈ ಸಂಬಂಧ ಮಹಾತ್ಮಾಜಿಯವರೂ ಸರದಾರ ಪಟೇಲರೂ ರಾಜಕೋಟೆಯ ಪ್ರಜಾಪ್ರಮುಖರೊಡನೆ ಆಲೋಚಿಸುತ್ತಿದ್ದಾರೆ.

ಭಾಯಾತರನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ.

ರಾಜಕೋಟೆಯ ರಾಜಕೀಯ ಸುಧಾರಣಾ ಕಮಿಟಿಯಲ್ಲಿ ಭಾಯಾತರಿಗೆ ಪ್ರಾತಿನಿಧ್ಯವನ್ನು ಕೊಡಲಿಕ್ಕೆ ಅಸಾಧ್ಯವೆಂದು ಮಹಾತ್ಮಾಜಿಯವರು ಭಾಯಾತರಿಗೆ ತಿಳಿಸಿದ್ದಾರೆ. ಠಾಕೋರ ಸಾಹೇಬರು ಕಮಿಟಿಯ ಸದಸ್ಯರಸಂಖ್ಯೆಯನ್ನು ಹೆಚ್ಚಿಸಲೊಪ್ಪಲಿಕ್ಕಿಲ್ಲ, ಅವರಿಂದ ನಿಯೋಜಿತರಾಗುವ ಸರಕಾರಿ ಸದಸ್ಯರೆ ಪೋಟಿನ ಅಧಿಕಾರವನ್ನು ಬಿಟ್ಟುಕೊಡಲೊಪ್ಪಲಿಕ್ಕಿಲ್ಲ, ಒಪ್ಪದಿರುವುದರಿಂದ, ಕಮಿಟಿಯಲ್ಲಿ ಪ್ರಜಾಪರಿಷತ್ತಿನ ಬಹುಮತವನ್ನು ಕಾಯ್ದು ಭಾಯಾತರಿಗೆ ಪ್ರಾತಿನಿಧ್ಯವನ್ನು ಕೊಡುವುದು ಅಸಾಧ್ಯವಾಗಿದೆ. ಆದ್ದರಿಂದ ಅವರು ಭಾಯಾತರನ್ನೂ, ಮುಸಲ್ಮಾನರಿಗೆ ಪ್ರಾತಿನಿಧ್ಯವನ್ನು ಕೊಡುವ ಕುರಿತು ಮುಸ್ಲಿಂ ಕೌನ್ಸಿಲಿನ ಪ್ರತಿನಿಧಿಗಳನ್ನು ಕರೆದು ಮಾತನಾಡಿದ್ದಾರೆ.

ಗತ ವೀರ್ಯವನ್ನು ಪುನಃ ಹೊಂದಿರಿ!

ಡಾ। ವಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಸ್ತ್ರೀ ಪುರುಷರಿಬ್ಬರಿಗೂ ಉತ್ತಮೋತ್ತಮವಾದ ನರಶಕ್ತಿವರ್ಧಕ ಪಾನಕವೆಂದು ಜಗತ್ಪ್ರಸಿದ್ಧವಾಗಿದೆ. ಅದು ಸಾಕ್ಷಾತ್ತಾಗಿ ಜೆನ್ನಹುದಿ ಹಾಗೂ ಜನನೇಂದ್ರಿಯಗಳಿಗೆ ಸಂಬಂಧಪಟ್ಟ ನರಗಳನ್ನು ಉತ್ತೇಜಿಸುವುದು. ಆದ್ದರಿಂದ ಅಂಥ ವ್ಯಾಧಿಗಳಿಂದ ನರಳುವವರಿಗದು ಅಮೂಲ್ಯವಾದದ್ದು. ನೀವು ಯೌವನದ ಅಶಕ್ತತೆ, ಅತ್ಯಾಚರಣೆ, ಮುಪ್ಪು, ಮೈಥುನ, ಅಕಾಲಿಕ ವೃದ್ಧಾಪ್ಯ, ಸ್ವಪ್ನೇಂದ್ರಿಯ, ಅಸ್ವಾಭಾವಿಕ ಸ್ರಾವ, ಅತಿಮೂತ್ರ, ಕ್ಷೀಣಧಾತು, ಧಾರಣಶಕ್ತಿಯಿಲ್ಲದಿರುವಿಕೆ, ಕಾಮತೃಪ್ತಿಯ ವಿಫಲತೆ, ಸ್ಮರಣಶಕ್ತಿಯ ನಾಶ, ನಿರುತ್ಸಾಹ ಮತ್ತು ನರದೌರ್ಬಲ್ಯವು ಇವುಗಳಿಂದ ನೀವು ನರಳುತ್ತಿದ್ದರೆ, ಡಾ। ವಿಸನ್‌ರವರ "ಸೆಲ್ಫ್ ಪ್ರೊಟೆಕ್ಟರ್" ಉಪಯೋಗಿಸಿರಿ. ಅದನ್ನು ಬಳಸಿದ ಮೊದಲನೆ ದಿನದಿಂದ ಗುಣ ತೋರಿಬರುವುದು. ಇಂದೇ ಒಂದು ಸೀಸೆ ಕೊಳ್ಳಿರಿ. ಬೆಲೆ: ೧ ಸೀಸೆ ರೂ ೪

ಅಮೆರಿಕನ್ ಮೆಡಿಕೊ ಅಂಡ್
ಜೆ. ಸಿ. ಅಸೋಸಿಯೇಷನ್,
(D 22) ಫೋರ್ಟ್, ಬೊಂಬಾಯಿ.

SELF-PROTECTOR
FOR
VIGOUR & VITALITY

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋರ್ ಇರುತ್ತದೆ.

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store.
28 Meachua Bazar St., CALCUTTA

ಮಹಾತ್ಮಾಜಿಯವರ ಹೆಸರಲ್ಲಿ ರಕ್ತರಂಜಿತ ಪತ್ರ

ಸತ್ಯಾಗ್ರಹಿಗಳ ಮೇಲೆ ಮುಸಲ್ಮಾನರ ಆಕ್ರಮಣ

ಹೈದರಾಬಾದ ಜೈಲುಗಳಲ್ಲಿ ಕಠೋರ ವ್ಯವಹಾರ
ಲಾಲಾ ಕುಶಲಚಂದರಿಗೆ ಕಲ್ಲು ಕುಟ್ಟುವ ಕೆಲಸ
ಸತ್ಯಾಗ್ರಹವು ನಿಲ್ಲುವುದಿಲ್ಲ

ಕಾನಪುರದ ಒಬ್ಬ ಹಿಂದೂ ವಿದ್ಯಾರ್ಥಿಯು ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ತನ್ನ ರಕ್ತರಂಜಿತ ಒಂದು ಪತ್ರವನ್ನು ಬರೆದು—ನಿಜಾಮ ಹೈದರಾಬಾದದ ಪೀಡಿತ ಹಿಂದುಗಳ ಹಕ್ಕು ಬಾಧ್ಯತೆಗಳನ್ನು ಸುರಕ್ಷಿತ ಇಡಲಿಕ್ಕೆ ಆರಂಭವಾಗಿರುವ ಹೈದರಾಬಾದ ಸತ್ಯಾಗ್ರಹದ ನೇತೃತ್ವವನ್ನು ತೆಗೆದುಕೊಳ್ಳಬೇಕೆಂದೂ, ಪತ್ರವನ್ನು ವ್ಯರ್ಥವೆಂದು ತಿಳಿದು ಕಸದ ಬುಟ್ಟಿಗೆ ಒಗೆಯದೆ ಆ ವಿಷಯವನ್ನು ಗಂಭೀರವಾಗಿ ವಿಚಾರಿಸಬೇಕೆಂದೂ, ಮಹಾತ್ಮರನ್ನು ಪ್ರಾರ್ಥಿಸಿರುವನು.

ಯುಕ್ತಪ್ರಾಂತ ಒಂದೇ ಸಾಕು

ಹೈದರಾಬಾದ ಸತ್ಯಾಗ್ರಹದ ಚತುರ್ಥ ಸರ್ವಾಧಿಕಾರಿ ರಾಜಗುರು ಪಂಡಿತ ಧುರೇಂದ್ರ ಶಾಸ್ತ್ರಿಯವರು—'ನನಗೆ ಯುಕ್ತಪ್ರಾಂತದಲ್ಲಿ ಕೇವಲ ೬ ದಿನ ಸಂಚಾರಮಾಡುವಷ್ಟು ಸಮಯವು ಮಾತ್ರ ಪ್ರಾಪ್ತವಾಗಿತ್ತು. ಆದರೂ ಆ ಪ್ರಾಂತದ ಜನರ ಉತ್ಸಾಹ ಮತ್ತು ಬಲಿದಾನದ ಭಾವನೆಯನ್ನು ಕಾಣುವಾಗ, ಸತ್ಯಾಗ್ರಹದ ಸಫಲತೆಗೆ ಅದೊಂದೇ ಪ್ರಾಂತ್ಯವು ಸಾಕೆಂದು ನನಗೆ ಅನ್ನಿಸಿತು. ಕೆಲವೇ ಜಿಲ್ಲೆಗಳಿಂದ ನನಗೆ ೧೧ ಸಾವಿರ ರೂಪಾಯಿಗಳ ಸಹಾಯ ದ್ರವ್ಯವು ದೊರಕಿತು; ಪ್ರತಿಯೊಂದು ಸ್ಥಾನದಿಂದ ಸ್ವಯಂಸೇವಕರು ಭರ್ತಿಯಾಗುತಿದ್ದಾರೆ' ಎಂದು ತಮ್ಮ ಪ್ರವಾಸದ ಅನುಭವವನ್ನು ಪ್ರಕಟಿಸಿದ್ದಾರೆ.

ಆರ್ಯ ಪರಿವಾರದ ಆದರ್ಶ ವ್ರತ

ಆಗರೆಯ ಸುಪ್ರಸಿದ್ಧ ಆರ್ಯ ವೀರರಾದ ಬಾಲಕೃಷ್ಣ ಮೂಲಚಂದ ಎಂಬವರು ಪ್ರತಿ ತಿಂಗಳು ನಾಲ್ಕು ದಿನ ತಮ್ಮ ಪರಿವಾರದ ಸ್ತ್ರೀ ಪುರುಷ ಮಕ್ಕಳು ಮರಿಗಳೊಂದಿಗೆ ಉಪವಾಸ ತೆಗೆದು ಉಳಿಯುವ ಖರ್ಚಿನ ಹಣವನ್ನು ಆರ್ಯ ಸತ್ಯಾಗ್ರಹದ ಸಹಾಯಾರ್ಥ ಕಳುಹಿಸಿ ಕೊಡುವದೆಂಬ ಆದರ್ಶ ವ್ರತವನ್ನು ಕೈಕೊಂಡಿದ್ದಾರೆ. 'ಎಂದಿನ ತನಕ ಹೈದರಾಬಾದ ಸತ್ಯಾಗ್ರಹವು ನಡೆಯುತ್ತ ಇರುವುದೋ ಅಂದಿನ ತನಕ ಈ ವ್ರತವು ಇರುವುದು

ಮುಂಗೇರದಲ್ಲಿ ಸಾವಿರ ರೂ.ಗಳ ದಾನ

ಮುಂಗೇರದಲ್ಲಿ ಪ್ರಾಂತೀಯ ಹಿಂದೂ ಮಹಾಸಭೆಯ ವಾರ್ಷಿಕ ಅಧಿವೇಶನವು ಬ್ಯಾರಿಸ್ಟರ ಸಾವರಕರರ ಅಧ್ಯಕ್ಷತೆಯಲ್ಲಿ ನಡೆದ ಕಾಲದಲ್ಲಿ ಹೈದರಾಬಾದ ಆರ್ಯ ಸತ್ಯಾಗ್ರಹ ಸಹಾಯಕ್ಕೋಸ್ಕರ ಅಲ್ಲಿಂದ ಪ್ರತಿ ತಿಂಗಳು ಒಂದೊಂದು ಸಾವಿರ ರೂಪಾಯಿಗಳನ್ನು ಕಳುಹಿಸಿ ಕೊಡುತ್ತಿರುವುದಾಗಿ ವಾಗ್ದಾನವು ದೊರಕಿದೆ.

ಕೊನೆಗಾಲದ ತನಕ ಹೋರಾಡುವೆವು

ಮಥುರಾದ ಆರ್ಯಸಮಾಜಗಳು ಸಭೆ ಕೂಡಿ ಒಂದು ಮಹತ್ವದ ನಿರ್ಣಯವನ್ನು ಮಂಜೂರುಮಾಡಿದ್ದಾರೆ. ಹೈದರಾಬಾದದಲ್ಲಿ ನಿಜಾಮ ಸರಕಾರವು ಗೌರವಪೂರ್ಣ ಒಡಂಬಡಿಕೆಗೆ ಒಪ್ಪದ ಹೊರತು ಅಲ್ಲಿ ಸತ್ಯಾಗ್ರಹವನ್ನು ಎಷ್ಟುಮಾತ್ರಕ್ಕೂ ನಿಲ್ಲಿಸಬಾರದೆಂದೂ, ತಾವು ಆರ್ಯ ಸತ್ಯಾಗ್ರಹದ ಸಫಲತೆಗಾಗಿ ಕೊನೆಗಾಲದ ತನಕ ಹೋರಾಡಲು ಸಿದ್ಧರೆಂದೂ ಹೇಳಿರುವರು.

ಸತ್ಯಾಗ್ರಹದ ೬ನೆ ಸರ್ವಾಧಿಕಾರಿಗಳು

ಸತ್ಯಾಗ್ರಹದ ೬ನೆ ಸರ್ವಾಧಿಕಾರಿಗಳಾಗಿ ಲಾಹೋರಿನ ಸುಪ್ರಸಿದ್ಧ ಆರ್ಯ ಮುಖಂಡರಾದ ಶ್ರೀ. ಮಹಾಶಯ ಕೃಷ್ಣ ಎಂಬವರು ನಿಯುಕ್ತರಾಗಿದ್ದಾರೆ. ರಾಜಗುರು ಶ್ರೀ. ಧುರೇಂದ್ರ ಶಾಸ್ತ್ರಿಯವರ ಅನಂತರ ಶ್ರೀ. ದೇವವ್ರತಜೀ ವಾನಪ್ರಸ್ಥಿಯವರು ೫ನೇ ಸರ್ವಾಧಿಕಾರಿಗಳಾಗುವರು.

ನೇಪಾಳದ ಹಿಂದುಗಳೂ ಧರ್ಮಯುದ್ಧಕ್ಕೆ ಹೊರಟರು

ಹೈದರಾಬಾದ ಧರ್ಮಯುದ್ಧದ ಶಂಖಧ್ವನಿಯು ಕನ್ಯಾಕುಮಾರಿಯಿಂದ ನೇಪಾಳದ ತನಕ ಪ್ರತಿಧ್ವನಿಸುತ್ತಲಿದೆ. ನೇಪಾಳದ ಪಂಡಿತ ಸತ್ಯವ್ರತ, ಶ್ರೀ. ವೇದತೀರ್ಥ, ಪಂಡಿತ ರಮಾನಂದ ಶಾಸ್ತ್ರಿ ಮೊದಲಾದವರು ಪ್ರಯಾಣ ಹೊರಟು ಪ್ರಚಾರ ಕಾರ್ಯವನ್ನು ಆರಂಭಿಸಿದ್ದಾರೆ. ಅಲ್ಲಿಂದ ಸಾವಿರಗಟ್ಟಲೆ ಹಿಂದೂ ಧರ್ಮವೀರರು ಹೈದರಾಬಾದ ಧರ್ಮಯುದ್ಧದಲ್ಲಿ ಭಾಗ ತೆಗೆದುಕೊಳ್ಳಲು ಸೊಂಟ ಕಟ್ಟಿದ್ದಾರೆ. ಇತ್ತ ತಿರುವಾಂಕೂರಿನಲ್ಲಿ ಕೂಡ ಆರ್ಯಸಮಾಜಗಳೂ ಹಿಂದೂ ಮಹಾಸಭೆಗಳೂ ಹೈದರಾಬಾದ ಸತ್ಯಾಗ್ರಹದೊಡನೆ ಸಹಕರಿಸಿ ಸಹಾಯವನ್ನು ಕೊಡುವ ನಿರ್ಣಯಗಳನ್ನು ಮಂಜೂರು ಮಾಡಿ ಆ ಸಂಬಂಧ ಕಾರ್ಯಗಳಲ್ಲಿ ತೊಡಗಿರುತ್ತಾರೆ

ಸತ್ಯಾಗ್ರಹವು ನಿಲ್ಲುವುದಿಲ್ಲ

ಎಂದಿನ ತನಕ ಗೌರವಪೂರ್ಣ ಒಡಂಬಡಿಕೆಯಾಗುವುದಿಲ್ಲವೋ ಅಂದಿನ ತನಕ ಸತ್ಯಾಗ್ರಹವನ್ನು ನಿಲ್ಲಿಸುವುದಿಲ್ಲವಾಗಿ ಸತ್ಯಾಗ್ರಹ ಸಮಿತಿಯ ಕಡೆಯಿಂದ ಪ್ರಕಟನೆಯಾಗಿದೆ

ಶಿಬಿರ ಸಮಾಚಾರ

ಸತ್ಯಾಗ್ರಹಿಗಳು ಉಳಕೊಳ್ಳುವುದಕ್ಕಾಗಿ ಶೋಲಾಪುರದಲ್ಲಿ ದೊಡ್ಡದಾದೊಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ ಆ ಮನೆಯಲ್ಲಿ ೩೦೦ ಜನರು ಸುಲಭದಿಂದ ಇರಬಹುದಾದಷ್ಟು ವಿಶಾಲವಾಗಿದೆ ಸತ್ಯಾಗ್ರಹಿಗಳು ಪ್ರತಿ ದಿನ ಮೆರವಣಿಗೆ, ಸಭೆ-ಭಾಷಣ ಮೊದಲಾದುವುಗಳ ಮೂಲಕ ಪ್ರಚಾರಕಾರ್ಯವನ್ನು ಮುಗಿಸಿ ಇಲ್ಲಿಗೆ ಬರುವುದರಿಂದ ಇದು ಕಾರ್ಯಕಲಾಪಗಳ ದೊಡ್ಡ ಕೇಂದ್ರವಾಗಿ ಪರಿಣಮಿಸಿದೆ. ಇಲ್ಲಿಗೆ ಬಂದ ಸತ್ಯಾಗ್ರಹಿಗಳನ್ನೇ ಸಂದರ್ಭ ಮತ್ತು ಅನುಕೂಲವನ್ನು ಅನುಸರಿಸಿ ಗುಲ್ಬರ್ಗ ಬಾತೂರ, ಕೋಪ್ಪಳ, ಗಂಜೋಟಿ, ಉಮರ್ಗಾ ಮೊದಲಾದ ಕಡೆಗಳಿಗೆ ಕಳುಹಿಸಿಕೊಡುತ್ತಾರೆ ಪ್ರತಿಯೊಬ್ಬ ಸತ್ಯಾಗ್ರಹಿಗೆ ಪ್ರತಿ ದಿನ ಬೆಳಗ್ಗೆ ೭ ಘಂಟೆಗೆ ಹಾಲು ಮತ್ತು ಮಧ್ಯಾಹ್ನ ಸಾಯಂಕಾಲ ಹೊತ್ತಿನ ಭೋಜನವನ್ನು ಕೊಡುತ್ತಾರೆ

ಓಂ ಬಾವುಟ ಹಿಡಿದುದಕ್ಕೆ ಶಿಕ್ಷೆ

ಓಂ ಬಾವುಟ ಹಿಡಿಯುವುದನ್ನು ಸರಕಾರವು ನಿಷೇಧಿಸುವುದಿಲ್ಲವೆಂದು ಹೇಳಿತ್ತು ಅದರ ಪರೀಕ್ಷೆಗೆ ತಾ. ೫-೪-೧೯೩೯ ದಿನ ಬಾವುಟ ದಿನಾಚರಣೆಯಾಯಿತು ಆ ದಿನ ಎಲ್ಲಾ ಕಡೆಗಳಲ್ಲಿ ಓಂ ಬಾವುಟವನ್ನು ಹಾರಿಸಿದರು ಪರಂತು ಪೋಲೀಸರು ಬಂದು ಅವುಗಳನ್ನು ಇಳಿಸಿದರು. ಅನೇಕ ಕಡೆಗಳಲ್ಲಿ ಬಾವುಟಗಳನ್ನು ಕಸಕೊಂಡು, ಅವುಗಳನ್ನು ಹಿಡಿದವರನ್ನು ಕೈದುಮಾಡಿದರು.

ಕಠೋರ ವ್ಯವಹಾರ

ಆರ್ಯಸಮಾಜದ ಗಣ್ಯ ಮಾನ್ಯ ಮುಖಂಡರೂ ಪ್ರಸಿದ್ಧ ಸನ್ಯಾಸಿಗಳೂ ಸತ್ಯಾಗ್ರಹದ ಪ್ರಥಮ ಸರ್ವಾಧಿಕಾರಿಗಳೂ ಆಗಿರುವ ಶ್ರೀ ಮಹಾತ್ಮಾ ನಾರಾಯಣ ಸ್ವಾಮಿಯವರ ಕೈಕಾಲುಗಳಿಗೆ ಈಗ ಕೋಳ ಹಾಕುವುದನ್ನು ನಿಲ್ಲಿಸಿದೆಯಾದರೂ, ಅವರಿಗೆ ಜೈಲು ಪೋಷಾಕನ್ನೇ ಕೊಡುತಿದ್ದಾರೆ; ವಿನಹ ಕಾವಿ ಶಾಟಿಯನ್ನು ಉಡಲಿಕ್ಕೆ ಬಿಡುವುದಿಲ್ಲ. ದ್ವಿತೀಯ, ತೃತೀಯ ಸರ್ವಾಧಿಕಾರಿಗಳಾದ ಲಾಲಾ ಕುಶಲಚಂದ, ಶ್ರೀ. ಶಾರದಾ ಮತ್ತು ಇನ್ನಿತರರಿಂದ ಕಲ್ಲು ಕುಟ್ಟುವ ಕೆಲಸವನ್ನು ತೆಗೆದುಕೊಳ್ಳುತಿದ್ದಾರೆ. ಜೈಲು ವಾರ್ಡರುಗಳ ವರ್ತನವು ಎಷ್ಟು ಆಕ್ಷೇಪಕರವಾಗಿರುವುದೆಂದರೆ, ಅದನ್ನು ನಿಷೇಧಿಸಿ ಅವರು ಮೇಲಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ಎಪ್ರಿಲ್ ೨೨ರ ತನಕ

ಸತ್ಯಾಗ್ರಹದ ಚತುರ್ಥ ಸರ್ವಾಧಿಕಾರಿಗಳಾದ ಶ್ರೀ. ಧುರೇಂದ್ರ ಶಾಸ್ತ್ರಿಯವರು ಇದೇ ಎಪ್ರಿಲ್ ೨೨ನೆ ತಾರೀಕಿನಂದು ಸತ್ಯಾಗ್ರಹ ಮಾಡುವರು. ಅಷ್ಟರ ತನಕ ಹೈದರಾಬಾದ ಜೈಲುಗಳಿಗೆ ಹೋದ ಸತ್ಯಾಗ್ರಹಿಗಳ ಸಂಖ್ಯೆ ೧೫೦೦೦ಕ್ಕೆ ಮುಟ್ಟುವುದು! ಧುರೇಂದ್ರ ಶಾಸ್ತ್ರಿಯವರು ಸತ್ಯಾಗ್ರಹ ಮಾಡುವಂದು ಅವರೊಂದಿಗೆ ಇತರ ೫೦೦ ಮಂದಿ ಸತ್ಯಾಗ್ರಹಿಗಳು ಹೈದರಾಬಾದದ ಬೇರೆ ಬೇರೆ ಕೇಂದ್ರಗಳಿಗೆ ಹೋಗಿ ಸತ್ಯಾಗ್ರಹ ಮಾಡುವರೆಂದು ಪ್ರಕಟವಾಗಿದೆ.

ಪೋಲೀಸನ ಅನ್ಯಾಯ ಕೆಲಸ

ಹೈದರಾಬಾದದ ಕೊಂಡಜೀಗಡ ಎಂಬಲ್ಲಿಯ ಆರ್ಯಸಮಾಜ ಮಂದಿರವನ್ನು ಮಹ್ಮದ ಮುಸ್ತಾನ ಎಂಬ ಒಬ್ಬ ಪೋಲೀಸನು ಪ್ರವೇಶಿಸಿ ಅಲ್ಲಿ ಆಡುಗಳನ್ನೂ ಕೋಳಿಗಳನ್ನೂ ಕಡಿದನೆಂದೂ ಹವನ ಕುಂಡದ ಮೇಲೆ ಮೆಟ್ಟು ಹಾಕಿ ನಡೆದನೆಂದೂ ಸಮಾಚಾರ ಬಂದಿದೆ. ಪೋಲೀಸನ ಈ ಅನ್ಯಾಯ ವರ್ತನದಿಂದ ಆರ್ಯ ಸಮಾಜಿಗಳೂ ಹಿಂದುಗಳೂ ಬಹಳ ದುಃಖಿತರಾಗಿದ್ದಾರೆ ಇಂಥ ದುರ್ವ್ಯವಹಾರಗಳು ರಾಜ್ಯದಲ್ಲಿ ಇನ್ನೆಷ್ಟೋ ಆಗಿವೆ

ಕೈದು-ಶಿಕ್ಷೆ

ಸೇನಾಪತಿ ಬಾಪಟ ಮತ್ತು ಹಿಂದೂ ಮಹಾಸಭೆಯ ಇತರ ಎಳು ಮಂದಿ ಸತ್ಯಾಗ್ರಹಿಗಳು ತಾ. ೧೧ರ ದಿನ ಗುಲ್ಬರ್ಗದಲ್ಲಿ ಕೈದುಮಾಡಲ್ಪಟ್ಟಿದ್ದಾರೆ ಇದೇ ಆರ್ಯಸಮಾಜದ ಬೇರೆ ೨೮ ಜನ ಸತ್ಯಾಗ್ರಹಿಗಳು ಕೈದುಮಾಡಲ್ಪಟ್ಟರು. ಕಸ್ತೂರಚಂದ ಶಾಪುರದವರು ನಾಯಕರಾಗಿ ಕೈದಾದ ೨೫ ಸತ್ಯಾಗ್ರಹಿಗಳಿಗೆ ೯ ತಿಂಗಳ ಕಠಿನ ಶಿಕ್ಷೆಯಾಗಿದೆ

ಮುಸಲ್ಮಾನರ ಆಕ್ರಮಣ

ಶೋಲಾಪುರದಿಂದ ೩೦ ಮೈಲು ದೂರ ಹಿಂದುಗಳ ಪವಿತ್ರ ತೀರ್ಥಸ್ಥಳ—ತುಳಜಾಪುರ ಎಂಬಲ್ಲಿ ಆರ್ಯಸಮಾಜದ ೨೮ ಮಂದಿ ಸತ್ಯಾಗ್ರಹಿಗಳ ಒಂದು ದಳವು ಸತ್ಯಾಗ್ರಹ ಮಾಡಹೋಗುತ್ತಿದ್ದಾಗ ಮುಸಲ್ಮಾನರು ಬಂದು ಅವರನ್ನು ಆಕ್ರಮಿಸಿದರು. ಮುಸಲ್ಮಾನರು ಆಯುಧ ಪಾಣಿಗಳಾಗಿದ್ದರು ಸತ್ಯಾಗ್ರಹಿಗಳನ್ನು ಪೋಲೀಸರು ಕೈದುಮಾಡಿ ಠಾಣೆಗೆ ಕೊಂಡುಹೋಗುವಾಗ ದಾರಿಯಲ್ಲಿ ಈ ಆಕ್ರಮಣ ಕಾರ್ಯವು ನಡೆಯಿತು ಇದರಿಂದ ೧೩ ಸತ್ಯಾಗ್ರಹಿಗಳಿಗೆ ಗಾಯಗಳಾದುವು. ತುಳಜಾಪುರ ಹಿಂದುಗಳು ಹರತಾಳ ಮಾಡಿದ್ದಾರೆ ವಿಚಾರಣೆಯಾಗಬೇಕೆಂದು ಸರಕಾರವನ್ನು ಕೇಳಿಕೊಂಡಿದ್ದಾರೆ. ಜಿಲ್ಲಾ ಪೋಲೀಸ ಸುಪರಿಂಟೆಂಡೆಂಟರು ಬಂದು ಸ್ಥಳತನಿಖೆ ಮಾಡಿ ಹೋದರು. ಅನಂತರ ನಳದುರ್ಗದ ಮೆಜಿಸ್ಟ್ರೇಟರು ಈ ಸತ್ಯಾಗ್ರಹಿಗಳನ್ನು ೧೮ ತಿಂಗಳ ಕಠಿಣ ಶಿಕ್ಷೆಗೆ ಗುರಿಮಾಡಿದರು. ಸತ್ಯಾಗ್ರಹಿಗಳು ತಮ್ಮ ಮೈ ಮೇಲೆ ಆದ ಗಾಯಗಳನ್ನು ತೋರಿಸಿದಾಗ ಅವರಿಗೆ ವೈದ್ಯಕೀಯ ಸಹಾಯವನ್ನು ಕೊಡಬೇಕೆಂದು ಮೆಜಿಸ್ಟ್ರೇಟರು ಸೂಚಿಸಿದರು. ಆಕ್ರಮಣಕಾರಿಗಳನ್ನು ತಲಾಶಿಮಾಡಿ ವಿಚಾರಣೆಗೆ ಗುರಿಮಾಡುವೆವೆಂದು ಪೋಲೀಸರು ತಿಳಿಸಿದ್ದಾರೆ.

ಗಾಂಧಿಯವರಿಗೆ ಶಿಷ್ಟಮಂಡಲ

'ಅಂತರ್ರಾಷ್ಟ್ರೀಯ ಆರ್ಯ ಪ್ರತಿನಿಧಿ ಸಭೆಯ ಅಧ್ಯಕ್ಷರಾದ ಶ್ರೀ. ಘನಶಾಮ ಸಿಂಘ ಗುಪ್ತ ಮತ್ತು ಶ್ರೀ. ದೇಶಬಂಧು ಗುಪ್ತರು ರಾಜಕೋಟೆಯಲ್ಲಿ ಮಹಾತ್ಮರನ್ನು ಸಂದರ್ಶಿಸಿ ಹೈದರಾಬಾದದ ಪರಿಸ್ಥಿತಿಯ ಕುರಿತು ಮಾತನಾಡಿದರು. ಹೈದರಾಬಾದ ಸರಕಾರವು ಜೈಲಿನಲ್ಲಿರುವ ಮಹಾತ್ಮಾ ನಾರಾಯಣಸ್ವಾಮಿಯವರೊಂದಿಗೆ ಎತ್ತಿದ ಒಡಂಬಡಿಕೆಯ ಪ್ರಸ್ತಾಪವನ್ನು ಅವರು ಗಾಂಧಿಜಿಯವರಿಗೆ ತಿಳಿಸಿದರು. ತಾನು ಆ ವಿಷಯ ಚೆನ್ನಾಗಿ ಆಲೋಚಿಸಿ ಮಾಡಬಹುದಾದುದನ್ನೆಲ್ಲ ಮಾಡುವೆನಾಗಿ ಗಾಂಧಿಜಿಯವರು ಭರವಸೆ ಕೊಟ್ಟಿದ್ದಾರೆ.

೩೧ ವರ್ಷಸಮಯ ಹೊಟ್ಟೆವ್ರಣ

ಹೊಟ್ಟೆಯು ಈಗ ಸಂಪೂರ್ಣ ವಾಸಿಯಾಗಿರುತ್ತದೆ.

31 ವರ್ಷಗಳ ಹೊಟ್ಟೆವ್ರಣದ ಪೀಡೆಯನ್ನು ಅನುಭವಿಸಿ, ನಿರಾಶನಾದುದಕ್ಕೆ, ಸಂಕಟಪಡುತ್ತಿರುವವನನ್ನು ದೂರಬಹುದೆ?

ಆದರೆ ಒಳ್ಳೆ ಖಾತ್ರಿಯಾದ ಔಷಧಿಯನ್ನು ಪಯೋಗಿಸಿದರೆ ಗುಣಲಭಿಸುವುದು ಖಂಡಿತ. ಶ್ರೀಮತಿ ಎಮ್. ಎಚ್. ಮ್ಯಾ. ಈ ಸಂತೋಷಮಯ ಪರಿಣಾಮವನ್ನು ಹೊಂದಿರುವರು. ಅವರು ಹೀಗೆಂದು ಬರೆಯುತ್ತಾರೆ "ನಾನು 31 ವರ್ಷಗಳ ಸಮಯದಿಂದ ಹೊಟ್ಟೆವ್ರಣದ ಸಂಕಟವನ್ನು ಅನುಭವಿಸಿರುವೆನು ಅನೇಕ ಔಷಧಿಗಳ ಪರೀಕ್ಷೆಯನ್ನು ನಾನು ಮಾಡಿರುವೆನು ಎಲ್ಲವೂ ನಿರರ್ಥಕವಾದವು ನಾನು ಅನುಭವಿಸಿದ ನೋವು ಅಷ್ಟಿಷ್ಟಲ್ಲ—ಕೊನೆಗೆ ಒಬ್ಬರು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸುವಂತೆ ಬೋಧಿಸಿದರು. ತೃತೀಯ ಡೋಸಿನ ನಂತರ ನನಗೆ ಸ್ವಲ್ಪ ಗುಣ ಕಂಡಿತು ಈಗ ಹೊಟ್ಟೆವ್ರಣವು ಸಂಪೂರ್ಣ ಗುಣವಾಗಿದೆ ಕ್ಷೇಗ,

ಈ ದಿವ್ಯ ಔಷಧಿಯು ಹೊಟ್ಟೆಪೀಡೆಯನ್ನು ಅನುಭವಿಸುವವರು, ಉಪಯೋಗಿಸಬೇಕೆಂದು ನಾನು ಶಿಫಾರಸು ಮಾಡಿರುತ್ತೇನೆ ಆಸ್ಪತ್ರೆ ಚಿಕಿತ್ಸೆಯಿಂದ ನನ್ನ ಮಗನಿಗೆ ಗುಣಲಾಭ ದೊರಕದಿರಲು ಆತನನ್ನು ಮೆಕ್ಲೀನ್ ಬ್ರ್ಯಾಂಡ್ ಸ್ಟೋಮಕ್ ಪೌಡರಿನಿಂದ ಗುಣ ಪಡಿಸಲಾಯಿತು



ಎಂಬ ಸಹಿಯು-ಬಾಟ್ಲಿಯ, ಮೇಲೂ, ಪೆಟ್ಟಿಗೆ ಮೇಲೂ, ಅದೇ ಸಹಿಯಿಂದ ಕೂಡಿದ ಕೆಂಪು ಮುದ್ರೆಯು ಇರುವ ಮೆಕ್ಲೀನ್ ಬ್ರ್ಯಾಂಡ್ ಸ್ಟೋಮಕ್ ಪೌಡರಿನ ಕುರಿತು, ಈ ಸ್ತ್ರೀಯ ಅನುಭವವು ಹೀಗಿರಲು ಹೊಟ್ಟೆಪೀಡೆಯನ್ನು ಅನುಭವಿಸುವವರು ನಿರಾಶರಾಗಬೇಕಾಗಿಲ್ಲ ಹೊಟ್ಟೆಪೀಡೆಗಳನ್ನು ಅನುಭವಿಸುವ ಸಾವಿರಾರು ಮಂದಿಗಳು ಮೆಕ್ಲೀನ್ ಬ್ರ್ಯಾಂಡ್ ಸ್ಟೋಮಕ್ ಪೌಡರಿನ ಉಪಯೋಗದಿಂದ ವ್ರಣ ಇತ್ಯಾದಿಗಳ ಮೇಲೆ ಶಸ್ತ್ರಚಿಕಿತ್ಸೆಯನ್ನು ತಪ್ಪಿಸಿ ಸಂಪೂರ್ಣ ಗುಣಹೊಂದಿರುವರು

ಚಿಲ್ಲರೆಯಾಗಿ ಮಾರಾಟವಾಗುವುದಿಲ್ಲ. ಹುಡಿ ಯೂ ಮಾತ್ರರೂಪದಲ್ಲಿ, ಎಲ್ಲಾ ಔಷಧ ಖಾನೆಗಳಲ್ಲಿ ಮಾರಾಟವಾಗುತ್ತದೆ

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary-Abscess.

There is no need of dressing the wounds, nor are baths prohibited

Price Rs. 2. Postage extra.

TAHIR DIN,
Anarkali, LAHORE

೧೦. ಗಾಣದ ಸಂಕಪ್ಪ

ಕಬ್ಬಿನ ಗಾಣಕ್ಕೆ ಕೈಕೊಡುವುದು ನಮ್ಮ ಸಂಕಪ್ಪನ ಸ್ನೇಹ ಮಾಡುವುದೂ ಸರಿ—ಹೀಗೆಂದು ನಮ್ಮೂರಲ್ಲಿ ಗಾದೆಯಾಗಿ ಬಿಟ್ಟಿದೆ ಸಂಕಪ್ಪ ಜಾತಿಯಾರಿ ಗಾಣಿಗ ಅವನದು ಕಬ್ಬಿನ ಗಾಣವೂ ಅಲ್ಲ, ಅವನು ಬೆಲ್ಲ ಮಾಡಲು ಕಲಿತವನೂ ಅಲ್ಲ. ಅವನ ಹಿರಿಯರು ಎಣ್ಣೆ ಗಾಣ ಹೂಡಿ ಜೀವನ ಮಾಡುತ್ತಿದ್ದರು ಸಂಕಪ್ಪನ ಅಪ್ಪ ನಾಗಪ್ಪನಾಗಲಿ, ಸೋದರ ಮಾವ ತಿಮ್ಮಪ್ಪನಾಗಲಿ ಅದೇ ಕಸಬಿನಲ್ಲಿ ಇದ್ದವರು ನಾಗಪ್ಪ ತೀರಿಕೊಂಡು ವರ್ಷ ಬಹಳಷ್ಟಾಯಿತು ಆದರೆ ತಿಮ್ಮಪ್ಪ ಈಗಲೂ, ಮುದುಕನಾಗಿ ಮುಂಬಲ್ಲು ಹಲ್ಲು ಮಾತ್ರ ಉಳಿದರೂ 'ಎಣ್ಣೆ ಮೇಸಿಯು' ಯುವನಾಗಿಯೇ ಇದ್ದಾನೆ ಹಿರಿಯರು ಮಾಡಿದ ಕಸಬನ್ನು ಇವತ್ತಿಗೂ ನಡೆಯಿಸಿಕೊಂಡ ಬಂದಿದ್ದಾನೆ ಮಿಲ್ ಎಣ್ಣೆ ಬಂದು ಅವನ ವ್ಯಾಪ್ತಿ ಸ್ವಲ್ಪ ಕಷ್ಟವಾಗಿ ಬಂದರೂ, ಎಂದಿನ ತನಕ ನಮ್ಮ ಊರಿನ ಹೆಂಗಸರಿಗೆ ಕಬ್ಬಿಣದ ಗಾಣದ ಕನರು ರುಚಿಸುವುದಿಲ್ಲವೋ ಅಂದಿನ ತನಕ ಮರದ ಗಾಣದ ಎಣ್ಣೆಗೆ ಗಿರಾಕಿ ಉಂಟೇ ಉಂಟು

ಆದರೆ ಸಂಕಪ್ಪನ ಹಣೆ ಬರಹ ಬೇರೆ ಸಣ್ಣದರ ವಾಗ ಅಪ್ಪನ ಗಾಣವನ್ನು ಅವನು ನಾಲ್ಕು ದಿವಸ ದೂಡಿದವನು ಆ ಮೇಲೆ ಅವನಿಗೆ ಬೇಸರ ಬಂತು ಅಪ್ಪನಿಗೆ ಹೇಳಿ ಹೇಳಿ ಎತ್ತನ್ನು ಗಾಣಕ್ಕೆ ಕಟ್ಟಿಸುವ ಸುಧಾರಣೆ ತಂದ ಇತರಿಂದ ಅವ ಸುಧಾರಣೆಯಿಂದರೆ ಅವನ ಮನೆ ... ಎತ್ತು ತಿರಿದು ದೂಳು ಹೆಚ್ಚಿದ ... ಗಾಣ ... ಇದರಿಂದ ... ಮೊಳಿಗಾ ... ಬೇರ ... ಕ್ಕೆ ಹೊರಟ ಬಂದು ... ಎತ್ತಿನ ... ತೀರ್ಥಕ್ಕೆ ... ನಾಗಪ್ಪ ತನ್ನ ... ಸಂಕಪ್ಪನಿಗೆ ... ಇದರಿಂದ ... ನಗೆಗೆ ಬರಗಾಲವೇ ಎತ್ತು ... ಎರಡು ಗಾಲಿಬಿಗಿ ಎಂದರೆ ಹೀಗಾಗಿ ಸಾಲು ಮಾಡಿ ಬಂದ ಗಾಡಿ ಮಾರಿದ ಗಾಣದ ಸಂಕಪ್ಪ ಗಾಡಿ ಸಂಕಪ್ಪನಾದ

"ಎದೇನು ಗಾಡಿ ನೋಡಿದ ಮಹಾ ಕೈದೋ" ಸಂಕಪ್ಪ ನೋಡಿದ ವರಿ ವೀ ಕಡೇ ತವ ಅವನ ರಂಗೇ ಬೇಲಿಯಾ ಕು" ಊರಿನಲ್ಲಿ ಯಾರ ವಿಭಾಗ ತನಗಿಲ್ಲ ಎಂಬಹಾಗೆ ವರ್ತಿಸತೊಡಗಿದನು ಎಮ್ಮ ಬಾತಿಗೆ ಮಲ್ಲವಾದರೆ ಅವರದ್ದು, ಆಗದಿದ್ದಲ್ಲವಾದರೆ ಮಕ್ಕೊಬ್ಬರದ್ದು' ಎಂದು ಊದಾಪಿ ಜಾತೀ ಹೊರತು ಸರಾಭಾರಣದ ಮಾತಿಲ್ಲ ತಾನು ಯಾರು, ತನ್ನ ತಾವು ಏಕಾಣಿಯಾನ ಎಂಬುದು ಅವನಿಗೆ ತಿಳಿಯುವ ಹಾಗೇ ಇ... ನೋಗೀರ ಅಣ್ಣುನನ್ನು ಕೀಳಿಕೀಕ — ಮೇಡಿಯನ ವಿಚಾರ ಮಾತಾಡಲಿಕ್ಕೆ ... ಮೊಗೀರ ಮಕ್ಕಳನ್ನು ಮಾರಿಬಿಲೆ ಬಿವಸ ಮಾತನಾಡಿಸಬಾರದು ಅನ್ನೇ ಅಲ್ಲ—ಆದರೆ ಈ ಮೇನಿಬಿನ ಮಡಿಯನ್ನು ಇದೀ ವರ್ಷವೂ ಮಾತನಾಡಿಸುವ ಹಾಗಿಲ್ಲ ಅದಂತೇನೆ—ಗಾಡಿ ಮೂಕಿ ಪಾರೀ (Power) ಹಾಗೆ ತನ್ನ ಗಾಡಿಯಲ್ಲಿ ತರುವುದು ಆಡೆಗುದ್ದೆ ಕಲ್ಲನ್ನಾದರೂ ಅವನ ಕಲಿಯೊಳಗೆ ಸರಕಾರದ ಇಸಾಲೀ ತನ್ನ ಗಾಡಿಯಲ್ಲಿ ಹೋಗುತ್ತೆ ಎಂದ ಹಮ್ಮ"

ಈಗೀಗ ಮೇನಿಯರ ಸವಾರಿ ಚನ್ನಪ್ಪಯ್ಯರ ಕೈವಾತಿಯಾಗಿ ಬಿಟ್ಟಿದೆ ವಾತಾಳಿ ಹರದು ಹೇಳುವ ಹಾಗೆ ನಾಗಯ್ಯ ಸೆಟ್ಟಿ

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿರೂಪಗಳು, ಘಟನೆಯ ರೂಪಗಳು ಘಟನೆಯ ರೀತಿಗಳು 'ಕಾಂತ' ಅವರ—ಇವೆಲ್ಲ ವಾಸ್ತವವಾದುವು ಹಳ್ಳಿಯ ಸಾವನ್ನು ಕೋಟಿ ಕುಂದಾಪುರದೊಳಗಿನ ಒಂದು ಗ್ರಾಮ ಸಮೂಹ, ವ್ಯಕ್ತಿಗಳು ಮಾತಿನ ರೀತಿಗಳು ಪ ಪ ಅಲ್ಲಿನವೆ ಬರೆಯ ಪಾತ್ರಪರಿಚಯಗಳೀ ಈ ಚಿತ್ರಗಳ ಗುರಿ ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಅನಂತರದಲ್ಲಿ ಸಾವನ ಜೀವದ ಜೀವನದ ಬರುವ ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು ನಾನು ಬರೆದ ಪ್ರಸ್ತಾವನೆಯು ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅವರ ಮುಂದಿರುವ ಪಾತ್ರಗಳು 'ಇಂಥವು'—ಎಂದು ಒದಗಿಸಿಕೊಡುತ್ತೇನೆ ಇತಿ,

ಶಿವರಾಮ ಕಾರಂತ

ಗೆಂಪ್ಪು ಬಿತ್ತ, ಚನ್ನಪ್ಪ ವೈದ್ಯರಿಗೆ ಅಬ್ಬ ಸಂಕಪ್ಪ—ಸ ... ಕೋಡಿ' ಎಂದು ಗಾಡಿಯನ್ನು ಮೊನ್ನೆ ಮೊನ್ನೆ ಬದಲಾಯಿಸಿ, ಹಾಸನದಿಂದಲೇ ... ಎತ್ತು ತಂದಿದ್ದಾನೆ "... ಗಂಜಿಗೆ ... ಈಗ ... ಏನು ... ತ್ತಾರೆ ಆದರೆ ಮೊನ್ನೆ ಅವರ ... ಎತ್ತನ್ನು ಕೊಟ್ಟು ಮೇಲು ... ಇವನ ಹತ್ತಿರ ... ಇವನ ... ಈ ಸಂಕಪ್ಪ ...

ವಿಟ್ಟಿದ್ದಾನೆ ಅವರು ಜೋಡೆತ್ತಿನ ಗಾಡಿಯನ್ನು ಮಾಡಿದ್ದಾರೆ ಅವರ ಲೆಕ್ಕಕ್ಕೆ ಇವನಿಗೊಂದು ಅಗ್ಗದ ಗಾಡಿ ಊರಲ್ಲಿ ತಿರುಗುವುದಕ್ಕೆ ಅವರಿಗೆ ಯಾವ ಕಮ್ಮಿ ... ಇವ ... ಚನ್ನಪ್ಪಯ್ಯನ ಸಂಗ ... ಪೇಟೆಗೆ ಕಟ್ಟಿದ ... ಎತ್ತು ... ಕಟ್ಟಿದ ... ಗಾಡಿ ಎಲ್ಲೇ ಇರಲಿ ಇವನ ... ಚಾಕರೀ ... ಮೇಲ ... ರಾಜಿದಂಡ ಇಪ್ಪ ...'

ಯಾಕೆ ಈ ಮನೆಯ ... ಚನ್ನಪ್ಪಯ್ಯ ... 'ಸಂಪೂರ್ಣ ವಿವರವೆಲ್ಲಾ' ನಮ್ಮ ಕರೆದ ... ಕೇಳಿದರೆ ... ದನ ... ದಲ್ಲಿನ ... ಇವ ...

ಜ್ಞವೋ. ಚನ್ನಪ್ಪಯ್ಯನ ಆಸ್ತಿ ಕರಗಿ ಸೀರಾಗಲಿಕ್ಕೆ ಇನ್ನೂ ನಾಲ್ಕು ವರ್ಷ ಬೇಕೇ ದೇವರ ದಯೆಯಿದ್ದರೆ—ಜನ್ನು ಪೈ ತೇಜಪ್ಪ ಭಂಡಾರರು ಸೇಂ ಇವನನ್ನು ಆ ಬ್ಯಾಂಕು ಈ ಬ್ಯಾಂಕು ಎಂದು ದಾವಿರಾನು ಹಾಕಿಸಿ ಎರಡು ವರ್ಷದಲ್ಲಿ ತಳ ಕಾಣಿಸುತ್ತಾರೆ ಸೀಉಪ್ಪ ಹೆಗ್ಗಡೆಯರ ಕ್ರಿಮಿನಲ್ಲಿನಲ್ಲೇ ೩೦೦೦ ಆಯಿತು ಚಟ್ಟು

"ಒಂದು ಸಾರಿಗೆ ಅಪ್ಪನ ಹೊಟ್ಟೆ ಕಟ್ಟಿಟ್ಟ ಕಾಸೆಲ್ಲ ಕಳ್ಳಿತೆಂದರೆ ನಾಳೆಗೆ ನಮ್ಮ ಹಾಗೆ ಚನ್ನಪ್ಪ ನನ್ನ ಹಾಗೂ ಅಲ್ಲ, ... ವನಿಗೆ ನಾಲ್ಕು ಮುಡಿ ಅಕ್ಕಿಯಾದರೂ ಉಂಟು ಹೆಂಡತಿ ಹೆಸರಿಗೆ ಇವನಿಗೂ ಅದು ಇಲ್ಲ ಹೆಣ್ಣು ಕೊಡುತ್ತೇನೆ ಎಂದವರು ಇವನ ದರ್ಬಾರಿಗೆ ಹೆದರಿ ಕಂಗಾಲಾದರು ಮೊನ್ನೆ ಆ ಗೆಟ್ಟದ ಸಂಬಂಧ ಆಗುವುದರಲಿತ್ತು ಸಾನೇ ಒಳಗಿನ ಸೂಟೆಲ್ಲ ಅವರಿಗೆ ಹೇಳಿ ಬಂದವರನ್ನು ಊರಿಗೆ ಕಳುಹಿಸಿದೆ ಪಾಪ ಅವರಿಗೇನು ಗೊತ್ತು ಮುಂದಗೆಡ್ಡೆಯೋ ಮಸರಗೆಡ್ಡೆಯೋ ಅಲ್ಲಿಂದ ಓಡಿಬಂದು ಮಗಳನ್ನು ಕೊಡುವ ಎಂದು ಯೋಚನೆ ಮಾಡಿದರು—ನಾನೆಂದೆ, "ಮಗಳನ್ನು ಕೊಡುವುದು ಸರಿಯೆ, ಮೂರೇ ಮೂರು ವರ್ಷ ತಾಳಿ ಆ ವೇಳೆ ಅಳಿಯನ ಕೈಯಲ್ಲಿ ಕರಟದ ಚಿಪ್ಪು ... ತ್ತೆ ಸರಕಾರಿ ಆಸ್ಪತ್ರೆಯೋ ಗತಿ"—ಎಂದೆ ಕೇಡರಿ ... ದವಸವೇ ಊರು ಸೇರಿದರು

> **ಬರುವ ವಾರ**
>
> **ಶಾನುಭಾಗ ಶಂಕರರಾಯರು**
>
> ೧೧.
>
> ... ಶ್ಯಾನುಭಾಗಿ ... ಊರ ... ಅವರಿಗೆ ಗೊತ್ತೆ ... ನಸ್ಸಾಟೆ ಸುಬ್ಬನಿಗೆ ... ಮಕ್ಕಳ ... ಅವ ...
>
> ಶ್ರೀ ಕಾರಂತರ
>
> **ಹಳ್ಳಿಯ 10 ಸಮಸ್ತರು**
>
> ಯಾವಕ್ಕೂ ಗ್ರಾಮ ನಿಮ್ಮ ದೇವತೆಗಳೇ!

"... ಆಗ ... ಈ ಮೇ ... ಇವನ ಗಾಡಿ ಬಾಡಿಗೆಯಾಗ ... ನಾನು, ನಾಗಯ್ಯ ಸೆಟ್ಟರನ್ನು ಹರಿಗಾಮಿ ಬಿಟ್ಟಿದ್ದೇನೆ ನಾಗಯ, ಸೆಟ್ಟರೇ—ನಾತಿಳಿಗರುವ ಅವರ ಈ ಚನ್ನಪ್ಪನ ಕುಲಗೋತ್ರ ಉದ್ಧಾರ ಮಾಡಲಿಕ್ಕೆ ಸಾಕ ಅವರು ಸಮಯ ಕಾಯುತಿದ್ದಾರೆ ಅವರಿಗೆ ಪುಟ್ಟರಂಗಿ ತಮ್ಮಿಂದ ಇವರ ಬಲೆಗೆ ಬಿತ್ತಲ್ಲ ಎಂತ ಒ ದ. ಹೊಟ್ಟೆ ಸಂಕಟ ಇದೆ ಆಗ ಇಂಥಾ ಇರಿಯಲ್ಲ ಏನಾದರೂ ನಿವ ಇಲ್ಲದ ನಿವ ಹ ... ಇವರನ್ನು ಹಿಡಿದು ಕಾಯಿಸಗೇ ಇರುವುದಿಲ್ಲ ಅವರು ಆ ಸಮಯದಲ್ಲಿ ಈ ಗಾಣಿಗನನ್ನು ಎಲುವು ಇಡದ ಹಾಗೆ ದಬಾಯಿಸ—ಎಂದು ಬೆಳ್ಳನ ಬೀಲಿಗಟಿ ಬಿಟ್ಟಿದ್ದೇನೆ!"

ಕರಿಕಣ್ಣೆ ನರಸಿಂಹನಿಗೆ ಈ ಗಾಣಿಗ ಸಂಕಪ್ಪನ ಮೇಲೆ ಯಾಕೆ ಇಷ್ಟು ಸಿಟ್ಟೋ ನನಗೆ ಬೇರೆ ತಿಳಿಯದ ಅಂತು—ಸಂಕನ ಹೆಸರು ಕೇಳಿದರ ಅವನ ಕಣ್ಣು ಕೆಂಪು ಆಗುತ್ತದೆ ಆದ. ಬಿಂಬು ಸಿಟ್ಟು ಇಲ್ಲ ಒಳ್ಳೇ ಸ್ನೇಹವೇ ಅವುಗಳಿರವೇಕು ಮೊದಲಿನ ದಿವಸವಾಗಿದ್ದರೆ ನರಸಿಂಹನೂ ಒಂದು ಕೈ ನೋಡುತ್ತಿದ್ದ ಆದರೆ—ಬಿಂದೆರಡು ಹಾಳು ಸಿವಿಲಿಗೆ ಸಿಕ್ಕಿ ಆಸ್ತಿಯ ಅರ್ಧ ಹೋಯಿತು, ಉಳಿದುದ ಹೆಂಡತಿ ವ ಸೆಯಿದು ಇದು ಹೆಂಡತಿ ಹೆಸರಿಗೇ ಇರುವುದರಿಂದ—ಎವನ ... ಹಾಗಿಲ್ಲ ... ಸ ... ಇನ ಹಾಗೆ— ಳಕೆಳ್ಳಿನ ನಡವಾಟಿಗೆ ಈಗ ಹೋಗ

(ಮುಂದೆ ಘಟಿವನ್ನು ನೋಡಿರಿ)



ಕಡಿಮೆ ದರ, ಉತ್ತಮ ಜಾತಿ
ಖಾತ್ರಿ ಬಾಳಿಕೆ ಇರುವ
ವಾಚನ್ನು ನೀವು ಹುಡುಕುವಾಗ-

ವಿಶ್ವಸನೀಯ ವೆಸ್ಟೆಂಡ್ ಸೆಕುಂಡಸನ್ನೆ ಆರಿಸಬೇಕು
ಈ ಮುಖ್ಯ ಲಕ್ಷಣಗಳು

ಮನಸೆಳೆವ -
ಸಂಪೂರ್ಣ ಕಿಟಿಗಳ ವ ಅವಲನೆ, ಸುಂದರವಾದ ಮತ್ತು ಹೆಚ್ಚು ಬಾಳಿಕೆಯ ಗಟ್ಟಿ ತರದ ಕವಚಗಳು ಚಿತ್ರದಲ್ಲಿ ತೋರುವಂತೆ ರೆಗ್ಯುಲರ್ ಆಕಾರ ಅಥವಾ ಸ್ಪೋರ್ಟ್ಸ್ ಅಂಕಗಳು, ಸಿಲ್ವರ್ ಮುಖ ಪಟ್ಟಿಗಳು

ಸೆಕುಂಡಸ್ ಟೊನ್ನೊ
ಸ್ಟೈಲ್ 'A ಅಥವಾ ಸ್ಟೈಲ್ 'B ಅಗ್ಗದುದು ರೂ 20
ರೋಲ್ಡ್ ಗೋಲ್ಡ್ ರೂ 31
9 ಕ್ಯಾರಟ್ ಗಟ್ಟಿ ಚಿನ್ನ ರೂ 66
ಈ ಕಂಪನಿಯವರಲ್ಲಿ ಬೇರೆ ಬೇರೆ ಬೇರೆ ಆಕಾ, ಆಕಾರದಲ್ಲಿ ವಿವಿಧ ನಮೂನೆಯ ಸಿಗುವುವು ಧರ್ಮಾರ್ಥ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ವೆಸ್ಟ್ ಎಂಡ್ ವಾಚ್ ಕೊ.,
ಮುಂಬಯಿ : ಮತ್ತು : ಕಲ್ಕತ್ತ
WEST END WATCH Co
BOMBAY CALCUTTA

ಉಪವಾಸದ ಅಪಹಾಸ್ಯ : : :

ಟೀಕಾಕಾರರಿಗೆ ಮಹಾತ್ಮರ ಉತ್ತರ

ರಾಜಕೋಟೆಯ ನನ್ನ ಪರಿಶ್ರಮವು ಕೆಡುಕನ್ನು ಮೊಳಕೆಯಲ್ಲಿಯೇ ಕಿತ್ತೊಗೆಯುವುದಾಗಿರುತ್ತದೆ. ವೈಸರಾಯರಲ್ಲಿಗೆ ತೆರಳಿದ್ದು ನನಗೆ ನಾಚಿಕೆಯಲ್ಲ. ವೈಸರಾಯರಲ್ಲಿ ನಾನು ಕೃಪೆಯನ್ನು ಪ್ರಾರ್ಥಿಸುವ ಅರ್ಜಿದಾರನಂತೆ ತೆರಳಿಲ್ಲ, ಉಪವಾಸವೇ ಅಹಿಂಸಾ ಸಮರದಲ್ಲಿ ಉಪಯೋಗಿಸುವ ಒಂದಾಯುಧವಾಗಿರುತ್ತದೆ. ಫೆಡರಲ್ ಕೋರ್ಟಿಗೆ ಈ ಸಮಸ್ಯೆಯನ್ನೊಪ್ಪಿಸಿದುದರಿಂದ ಫೆಡರೇಶನನ್ನು ಒಪ್ಪಿಕೊಂಡಂತಾಗಲಿಲ್ಲ. ಫೆಡರೇಶನು ಭಾರತಕ್ಕೆ ಬರುವುದಾದರೆ ಅದು ಅಹಿಂಸಾತತ್ವ ಪಾಲನೆಯ ಭ್ರಷ್ಟತೆಯಿಂದ ಮತ್ತು ಕೊಂಗ್ರೆಸಿನಲ್ಲಿ ಈಗ ಹರಡಿರುವ ಕೊಳೆಯಿಂದಲ್ಲದೆ ಬೇರಾವುದರಿಂದಲೂ ಅಲ್ಲ.

ಮಹಾತ್ಮಾ ಗಾಂಧಿಜಿಯವರು ಈ ವಾರದ ಹರಿಜನ ಪತ್ರಿಕೆಗಾಗಿ ಬರೆದ ಒಂದು ಲೇಖನವನ್ನು ಮೊದಲಾಗಿಯೇ ಪ್ರಕಟಿಸಿರುವರು. ಅದರ ಸಾರಾಂಶವು ಈ ಪ್ರಕಾರವಾಗಿದೆ –

"ಕೆಲವು ಸ್ನೇಹಿತರು ನಾನು ರಾಜಕೋಟೆಯ ಸಮಸ್ಯೆಯಲ್ಲಿ ಕೈಯಿಕ್ಕಿದ್ದು ತಪ್ಪೆಂದು ಹೇಳುತ್ತಿರುವರು. ಮತ್ತು ಈ ಕೆಳಗಿನ ರೀತಿಯಲ್ಲಿ ನನ್ನನ್ನು ಟೀಕಿಸುತ್ತ ನನಗೆ ಪ್ರಶ್ನೆಗಳನ್ನು ಹಾಕಿರುವರು. ಆದುದರಿಂದ ಅವರಿಗೆ ಉತ್ತರವನ್ನು ಕೊಡುವುದು ನನ್ನ ಕರ್ತವ್ಯವಾಗಿರುತ್ತದೆ. ಒಬ್ಬರು ನನಗೆ ಪ್ರಶ್ನೆ ಹಾಕುತ್ತ ಈ ಕೆಳಗಿನಂತೆ ಕೇಳಿರುತ್ತಾರೆ. 'ರಾಜಕೋಟೆಯ ಸಮಸ್ಯೆಯಲ್ಲಿಯೇ ನೀವು ಸಂಪೂರ್ಣ ಆಸಕ್ತಿಯನ್ನು ತೋರ್ಪಡಿಸಿದ್ದರಿಂದ ಬೇರೆ ವಿಚಾರಗಳನ್ನೆಲ್ಲಾ ನೀವು ನಿರ್ಲಕ್ಷಿಸಿದಿರಿ. ತ್ರಿಪುರಿಯಲ್ಲಿ ನೀವು ಇರಬೇಕಾದ್ದು ನಿಮ್ಮ ಮುಖ್ಯ ಕರ್ತವ್ಯವಾಗಿತ್ತು. ನೀವು ತ್ರಿಪುರಿಯಲ್ಲಿರುತ್ತಿದ್ದರೆ ಅಲ್ಲಿಯ ವಿಚಾರಗಳು ಈಗಿನಂತಿರದೆ ತೀರಾ ಮಾರ್ಪಡುತ್ತಿದ್ದುವು. ಆದರೆ ಅನಿಶ್ಚಿತ ಸಮಯದ ಉಪವಾಸವನ್ನೇ ನೀವು ಕೈಕೊಂಡಿರಿ. ಜನತೆಗೆ ತಿಳುವಳಿಕೆ ಕೊಡದೆ ದೇಶದ ಶಾಂತತೆಯನ್ನು ಭಂಗಮಾಡುವ ಅಧಿಕಾರವು ನಿಮಗೆ ಎಳ್ಳಷ್ಟೂ ಇಲ್ಲ. ಒಬ್ಬ ಸಂಸ್ಥಾನಾಧೀಶನ ಮಾತಿಗೆ ಸರಿಯಾಗಿ ಅವನನ್ನು ವರ್ತಿಸುವಂತೆ ಮಾಡಲು ನೀವು ಯಾಕೆ ಉಪವಾಸ ಮಾಡಬೇಕಿತ್ತು? ರಾಜಕೋಟೆಯ ಪ್ರಜೆಗಳು ಹೂಡಿದ ಆ ಅಸಹಕಾರ ಚಳವಳಿಯನ್ನು ನೀವು ನಿಲ್ಲಿಸದಿರುತ್ತಿದ್ದರೆ ಅವರು ಕ್ರಮೇಣ ಬಲಗೊಳ್ಳುತ್ತಿದ್ದರು. ನಿಮ್ಮ ಈ ವರ್ತನೆಯಿಂದ ಪ್ರಜಾಪ್ರಭುತ್ವ ತತ್ವಕ್ಕೆ ಕುಂದು ಬರಬಹುದು. ಒಂದು ಕಾಲದಲ್ಲಿ ವೈಸರಾಯ್, ಗವರ್ನರರೊಡನೆ ಭೆಟಿ ಮಾಡಕೂಡದೆಂದು ಸಾರುತ್ತಿದ್ದ ನೀವು ಇಂದು ಭಾರತದಲ್ಲಿ ಎದ್ದಿರುವ ಹಲವು ಸಮಸ್ಯೆಗಳಲ್ಲಿ ನಿಮ್ಮ ಸಲಹೆಯು ಅಗತ್ಯವಿರುವಾಗ ವೈಸರಾಯರ ಮುಖ್ಯ ಗವರ್ನರರ ಭೇಟಿಮಾಡಿ ಅವರ ಸಂತೋಷದಲ್ಲಿ ಭಾಗಿಗಳಾಗುತ್ತೀರಿ. ನೀವು ಫೆಡರೇಶನ್ ವಿರೋಧಿಸುವವರಲ್ಲೊಬ್ಬರೆಂದು ನಂಬಲಾಗಿದೆ. ಆದರೆ ನೀವು ರಾಜಕೋಟೆಯ ಸಮಸ್ಯೆಯನ್ನು ಫೆಡರಲ್ ಕೋರ್ಟಿಗೊಪ್ಪಿಸಿದ್ದು ಮತ್ತು ಅದರ ತೀರ್ಪು ಹೊರಬೀಳುವ ವರೆಗೆ ಡಿಲ್ಲಿಯಲ್ಲಿ ಇದ್ದುದು ಸರಿಯಲ್ಲ. ನಿಜವಾಗಿಯೂ ಮಹಾತ್ಮರ ವರ್ತನೆಯು ವಿಚಿತ್ರತರದ್ದು.

'ಭರದಿಂದ ಯೋಚಿಸಿದವರಿಗೆ ನನ್ನ ಮೇಲೆ ಹೊರಿಸಲಾದ ಈ ತಪ್ಪುಗಳು ನ್ಯಾಯವೆಂದು ಭಾಸವಾಗಬಹುದು. ಆದರೆ ಸ್ವಲ್ಪ ಯೋಚಿಸುವವರಿಗೆ ಮತ್ತು ಸತ್ಯಾಗ್ರಹದ ಆಚರಣೆ ಬಲ್ಲವರಿಗೆ ರಾಜಕೋಟೆಯ ವಿಷಯ ನಾನು ಮಾಡಿದ ಮತ್ತು ಮಾಡುತ್ತಿರುವ ಕಾರ್ಯಗಳು ನವೀನವಲ್ಲವೆಂಬುದು ತಿಳಿಯಬಹುದು. ರಾಜಕೋಟೆಯು ವಿಶಾಲ ಭಾರತದಲ್ಲಿ ಒಂದು ಚುಕ್ಕೆ. ಆದರೆ ಅಲ್ಲಿ ನಡೆದ ವಿದ್ಯಮಾನಗಳು ಸಾರ್ವಜನಿಕ ದೃಷ್ಟಿಯಿಂದ ನನ್ನನ್ನು ಅಲ್ಲಿಗೆಳೆಯಿತು. ರಾಜಕೋಟೆಯಲ್ಲಿನ ನನ್ನ ಪ್ರಯತ್ನವು ಮೊಳೆಯಲ್ಲಿಯೇ ಹೊಲಸನ್ನು ಕಿತ್ತು ಬಿಸುಡುವುದಾಗಿರುತ್ತದೆ. ನನ್ನ ಈ ಪ್ರಯತ್ನವು ಇಡೀ ಹಿಂದೂದೇಶಕ್ಕೆ ಪ್ರಯೋಜನವಾಗುವುದೆಂದು ನಂಬುತ್ತೇನೆ. ತನ್ನ ಪಡೆಯಲ್ಲಿಯ ದುರ್ಬಲತೆಯನ್ನು ಕಂಡು ಸಹಿಸದ ಜನರಲನಂತೆ ಇದರಲ್ಲಿ ನಾನು ವರ್ತಿಸಿರುವೆನು. ಖೇಡಾ ಮತ್ತು ಚಂಪಾರಣ್ಯ ಮೊದಲಾದ ಕಡೆಗಳಲ್ಲಿ ನಡೆದ ಸತ್ಯಾಗ್ರಹವು ಇಡೀ ಭಾರತದ ದೃಷ್ಟಿಯನ್ನು ಎಳೆದಿರುವುದು. ಮತ್ತು ಆ ಚಳವಳಿಯ ಸಮಯ ನನ್ನ ಇಡೀ ಸಮಯವನ್ನೇ ಅದರಲ್ಲಿ ಉಪಯೋಗಿಸಬೇಕಾಗಿ ಬಿತ್ತು. ಒಂದು ಯುದ್ಧಕ್ಕೆ ತಯಾರಾಗುವುದಕ್ಕೂ ಅಂತಃಕಲಹಕ್ಕೂ ವ್ಯತ್ಯಾಸವಿದೆ. ತ್ರಿಪುರಿಯು ಯುದ್ಧ ತಯಾರಿಕೆಯ ಸ್ಥಳವಾಗಿತ್ತು. ರಾಜಕೋಟೆಯು ರಂಗಭೂಮಿಯಾಗಿತ್ತು.

ಉಪವಾಸ

ಉಪವಾಸವು ಅಹಿಂಸಾಪೂರ್ಣ ಸತ್ಯಾಗ್ರಹದಲ್ಲಿ ಸಫಲವಾದ ಒಂದು ದೊಡ್ಡ ಆಯುಧವಾಗಿರುತ್ತದೆ. ಇದನ್ನು ಉಪಯೋಗಿಸಲು ಕೆಲವರಿಗೆ ಮಾತ್ರ ತಿಳಿದಿರುವುದು. ಆದರೆ ಇದನ್ನು ಉಪಯೋಗಿಸಲು ಯಾರ ಅಡ್ಡಿಯೂ ಇರುವುದಿಲ್ಲ. ದೈವೀ ಪ್ರೇರಿತವಾದ ಇದನ್ನು ಉಪಯೋಗಿಸದಿರುವುದು ಹುಚ್ಚುತನವೆಂದು ನಾನು ಭಾವಿಸಿರುತ್ತೇನೆ. ನನ್ನ ಹೃದಯದಿಂದ ಉಕ್ಕಿ ಬರುತ್ತಿರುವ ಈ ದೈವೀಪ್ರೇರಿತ ಶಕ್ತಿಯು ಪ್ರಜಾಪ್ರಭುತ್ವಕ್ಕೆ ಎಂದೂ ಹಾನಿಯನ್ನುಂಟು ಮಾಡದು ಎಂದು ನಾನು ನಂಬುತ್ತೇನೆ. ನನ್ನ ಮೊದಲಿನ ಉಪವಾಸದಿಂದ ದೇಶಕ್ಕೆ ಉಪಕಾರವಾದದ್ದಿರುವುದಾದರೆ ಈ ರಾಜಕೋಟೆಯ ನಿರಶನ ವ್ರತವನ್ನು ದೂರುವುದೇಕೆ. ಮೊದಲಿನ ಉಪವಾಸವನ್ನು ದೂಷಿಸಿರುವರೆಂದು ಹೇಳಬಹುದು. ಆದರೆ ಅವುಗಳಿಂದ ದೇಶಕ್ಕೆ ಹಿತವಾಗಿದೆ ಎಂಬುದಕ್ಕೆ ಭಿನ್ನಾಭಿಪ್ರಾಯಗಳಿರುವುದಿಲ್ಲ. ಪ್ರಜಾಪ್ರಭುತ್ವಕ್ಕೆ ಹಾನಿಯುಂಟು ಮಾಡುವುದು ಹಿಂಸಾವಾದವಲ್ಲದೇ ಬೇರಾವುದೂ ಅಲ್ಲ. ನನ್ನ ಉಪವಾಸದಿಂದ ದೇಶಕ್ಕೆ ಉಪಯೋಗವಾಗಿಲ್ಲವೆಂದು ಹೇಳುವುದಾದರೆ ನಾನು ಈ ಉಪವಾಸವು ಖಂಡಿತವಾಗಿಯೂ ಅಹಿಂಸಾತತ್ವವನ್ನು ಶಾಂತಮಾಡುವುದರಲ್ಲಿ ಸಹಕಾರಿಯಾಗಿದೆ ಎಂದು ಭರವಸೆಯಿಂದ ಹೇಳುವೆನು.

ವೈಸರಾಯರ ಭೆಟಿ

ವೈಸರಾಯರಲ್ಲಿ ತೆರಳಿದ್ದು ನನಗೆ ಯಾವ ತೆರನ ನಾಚಿಕೆಯೂ ಅಲ್ಲ. ವೈಸರಾಯರು ಬ್ರಿಟಿಷ್ ಸಾರ್ವಭೌಮರ ಪ್ರತಿನಿಧಿ ಮತ್ತು ಅವರ ಕೈಕೆಳಗಿರುವ ಅರಸರ ವರ್ತನೆಯನ್ನು ಸರಿಪಡಿಸುವುದ ಅವರ ಕರ್ತವ್ಯವೆಂಬ ದೃಷ್ಟಿಯಿಂದ ಅವರನ್ನು ಆಮಂತ್ರಿಸಿದೆನು. ನಾನು ಕೃಪೆಯನ್ನು ಯೋಚಿಸುವ ಅರ್ಜಿದಾರನಂತೆ ಅವರಲ್ಲಿಗೆ ತೆರಳಿಲ್ಲ. ಈ ಸಮಸ್ಯೆಯಲ್ಲಿ ಅವರಿಗೆ ಕೈ ಹಾಕುವಂತೆ ಕೇಳಿಕೊಂಡು ನಾನು ಅವರ ಭೇಟಿಗೆ ತೆರಳದಿರುತ್ತಿದ್ದರೆ ಅದು ನನ್ನ ಅಸಭ್ಯವರ್ತನೆಯಾಗುತ್ತಿತ್ತು. ನನ್ನ ಉಪವಾಸದ ಸಮಯದಲ್ಲಿ ನನ್ನೊಡನೆ ವರ್ತಿಸಿದ ಅವರ ಸಭ್ಯತೆಗೆ ನಾನು ಮೆಚ್ಚಿದ್ದೇನೆ. ಈ ಬಿಕ್ಕಟ್ಟಿನಲ್ಲಿ ಅವರು ಕೈ ಹಾಕುವುದು ಯಾ ಹಾಕದಿರುವುದು ಅವರ ಇಷ್ಟದಂತೆ ಇತ್ತು. ಆದರೆ ಅವರು ಜನಾಂಗದ ಕಡೆಗೆ ಮಾನ್ಯತೆ ಕೊಟ್ಟರು. ಇದನ್ನು ಬೇಗನೇ ಬಗೆಹರಿಸಲು ರಜಪುತಾನದ ತನ್ನ ಸಂಚಾರವನ್ನು ಅರ್ಧದಲ್ಲಿಯೇ ನಿಲ್ಲಿಸಿದರು. ಆದುದರಿಂದ ವೈಸರಾಯರೊಡನೆ ಭೆಟಿಯಾದ ವಿಷಯ ನಾನು ವಿಷಾದಿಸುವ ಅವಶ್ಯಕತೆಯು ಕಾಣದು. ಸಮಯೋಚಿತ ವ್ಯಕ್ತಿಗಳೊಡನೆ ಸಹಕರಿಸಿ ನನ್ನ ಧ್ಯೇಯವನ್ನು ಮರ್ಯಾದಪೂರ್ವಕವಾಗಿ ಸಾಧಿಸುವುದು ಸತ್ಯಾಗ್ರಹದ ಒಂದಂಗವಾಗಿರುವುದು. ನಾನು ಈ ಮೊದಲು ಲಾರ್ಡ್ ಹೆಲಿಫೇಕ್ಸರು ವೈಸರಾಯರಾಗಿದ್ದಾಗ ಮಾಡಿದ ಭೇಟಿಯಂತೆಯೇ ಈ ಭೇಟಿಯಾಗಿದೆ.

ಫೆಡರಲ್ ಕೋರ್ಟು

[illegible] ನಡೆಸಿದ ಈ ವ್ಯವಹಾರವನ್ನು ಇತ್ಯರ್ಥಿಸುವಂತೆ ಫೆಡರಲ್ ಕೋರ್ಟ ನ್ಯಾಯಾಧೀಶರಿಗೆ ಬಿಟ್ಟುಕೊಟ್ಟದ್ದು ನ್ಯಾಯಭಾವಿ ಪರೀಕ್ಷಿಸಿದರೆ ಒಂದು ವಿಧವಾಗಿ ವಾದಿಸಿದರೆ ಠಾಕೂರ ಸಾಹೇಬರು ಇನ್ನೊಂದು ತರನಾಗಿ ವಾದಿಸುತ್ತಾರೆ. ಆಗ ವೈಸರಾಯರು ಇತ್ಯರ್ಥದ ಬಗ್ಗೆ ಚೀಫ್ ಜಸ್ಟಿಸರಿಗೆ ಒಪ್ಪಿಸುವುದೆಂದು ತಿಳಿಸಿದರು. ಈ ಸಂದರ್ಭದಲ್ಲಿ ನಾನು ಮಾಡಬೇಕಾದುದೇನು? ಚೀಫ್ ಜಸ್ಟಿಸರ ಕೋರ್ಟು ಇಂಡಿಯಾ ಆಕ್ಟಿನ ಉಗಮಸ್ಥಾನವೆಂದು ನಾನಿದಕ್ಕೆ ಒಪ್ಪದಿರಬೇಕಿತ್ತೆ? ನನ್ನ ದೈವೀಪ್ರೇರಣೆಯು ಎಂದೂ ಹಾಗೆ ಮಾಡದು. ಸರ್ ಮೋರಿಸ್ ಗ್ವಾಯರರನ್ನು ರಾಜಕೋಟೆ ಸಮಸ್ಯೆಯನ್ನು ಇತ್ಯರ್ಥಿಸಲು ನಿಯೋಜಿಸಿದುದರಿಂದ ಫೆಡರೇಶನು ಹತ್ತಿರ ಬಂದಿಲ್ಲ. ಫೆಡರೇಶನು ಇಂಡಿಯದಲ್ಲಿ ಪಾದಾರ್ಪಣ ಮಾಡುವುದಾದರೆ ಅದು ಅಹಿಂಸಾತತ್ವ ಪಾಲನೆಯ ಭ್ರಷ್ಟತೆ, ನಿರ್ವೀರ್ಯತೆ ಹಾಗೂ ಅಶಕ್ತತೆಯಿಂದ ಮತ್ತು ನಾನು ಒಂದು ವರ್ಷದಿಂದ ವಿಷದಪಡಿಸಿರುವ ಕಾಂಗ್ರೆಸಿನಲ್ಲುಂಟಾಗಿರುವ ಅಂತರ್ಗತ ಕೊಳೆಯಿಂದಾಗಿತ್ತದೆ. ಸರ್ ಮೋರಿಸ್ ಗ್ವಾಯರರು ರಾಜಕೋಟೆ ಸಮಸ್ಯೆಯನ್ನು ಕಾನೂನಿನಂತೆ ಅಧಿಕಾರ ಬಲದಿಂದ ವಿಚಾರಿಸಿದುದಿಲ್ಲ. ಕೇವಲ ನ್ಯಾಯ ವಿಮರ್ಶಕರಾಗಿ ಇತ್ಯರ್ಥಿಸಿದುದಾಗಿರುತ್ತದೆ. ಮತ್ತು ಅವರ ತೀರ್ಪನ್ನು ಓದಿದವರಿಗೆ ಈ ಸಮಸ್ಯೆಯಲ್ಲಿ ಅವರು ತೆಗೆದುಕೊಂಡ ತಾಳ್ಮೆ ಹಾಗೂ ಕಷ್ಟಗಳು ವ್ಯಕ್ತವಾಗುವುವು.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರ ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲಾಯ್ಡುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು. ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮ್ಹಾಲು ಪರದೇಶದಿಂದ ಬರುವಂತೆ ಉಂಟು. ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ನಾಫ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್ —ಪಿ. ಎಚ್. ಭಟ್ಟ

ಗದಗ —ವಿ. ಎಸ್. ಸಿಟ್ಟಿ

ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜೆಂಟ್ —ಡಾ. ಕೆ. ಭಾಸ್ಕರ ಪೈ.

ಸ್ಪೆಶಲ್ ಏಜಂಟ್:— ಬಿ. ವ್ಹಿ. ಹೊನ್ನಾವರ

The Ammembal Subba Rao Pal Memorial Fund,

CANARA HIGH SCHOOL

MANGALORE

Applications for loan stipends from the above Fund should reach the **HONORARY TREASURER** of the Fund by the 15th June 1939. Printed Application forms are available at the Office of the Fund between 9 a m and 11 a m every day at a cost of one anna each for original application forms and half an anna each for renewal application forms. If forms are to be sent by post postage stamps equivalent to the price of the form [illegible] required and one half anna stamp for each form to cover the postage for the same should be sent. Only Gowd Saraswath Brahmin students need apply. Applicants will note that first preference will be given to running stipendiaries while awarding stipends and if funds are available after that new application cases will be considered with preference for applications for technical courses.

Canara High School
Mangalore
13-4 1939

P Venkatesh pal,
Hon Secretary

ಶ್ರೇಷ್ಠ ತರದ

ದೃಷ್ಟಿಚಕ್ರಗಳಿಗೆ

ರಥಬೀದಿ ಮೋಹರುಗಳಿಗೆ

ನಾಯಕ್ ಸ್ಟೋರ್ಸ್

ರಥಬೀದಿ, ಮಂಗಳೂರು.

ರಾಮದುರ್ಗದಲ್ಲಿ ನಿರಪರಾಧಿಗಳ ಕೊಲೆಯಾಯಿತು

ದೇಶಭಕ್ತ ಗಂಗಾಧರರಾಯರ ಅಭಿಪ್ರಾಯ

ಮಹಾತ್ಮಾ ಗಾಂಧಿಯವರು ಕೆಲವು ತಿಂಗಳುಗಳ ಹಿಂದೆ 'ಹರಿಜನ'ದಲ್ಲಿ ಕೊಟ್ಟ ಎಚ್ಚರಿಕೆಯ ಮಾತನ್ನು ಗಣ್ಯಮಾಡದೆ ಇದ್ದುದರಿಂದ ರಾಮದುರ್ಗದಲ್ಲಿ ದಂಗೆಯಾಗಿ ನಿರಪರಾಧಿಗಳ ಕೊಲೆಯಾಯಿತು. ಎಂಟು ಮಂದಿ ಚ್ಕಲು ವಾರ್ಡರು ಉನ್ಮತ್ತ ದಂಗೆಗಾರರಿಂದ ಕೊಲೆ ಮಾಡಲ್ಪಟ್ಟರು. ತಮ್ಮನ್ನು ತಾವು ಸಮಾಜವಾದಿಗಳೆಂದು ಕರೆದು ರಾಜ್ಯದಲ್ಲಿ ಅಶಾಂತಿಯನ್ನೂ ಅತೃಪ್ತಿಯನ್ನೂ ವಿನಾಕಾರಣ ಹರಡಿಸುತ್ತಿದ್ದುದರ ದುಷ್ಪರಿಣಾಮವನ್ನು ಈಗ ಅವರು ನೋಡಿ ಎಷ್ಟು ಪಶ್ಚಾತ್ತಾಪ ಪಟ್ಟರೂ ಸಾಲದಾಗಿದೆ. ಕಾಲ ಪರಿಸ್ಥಿತಿ ಮತ್ತು ಜನರ ಮಾನಸಿಕತೆಯ ಪರಿಪಕ್ವ ಜ್ಞಾನವು ಇಲ್ಲದೆ ಮುಂದಾಳುಗಳೆನಿಸಿಕೊಳ್ಳುವವರು ಅಬೋಧ ಜನರನ್ನು ಹುರಿದುಂಬಿಸುತ್ತಿರುವದರಿಂದ ಏನಾಗುತ್ತದೆಂಬುದನ್ನು ರಾಮದುರ್ಗದ ದಂಗೆಯು ಕಲಿಸಿಕೊಡುತ್ತದೆ.

ರಾಮದುರ್ಗದ ರಾಜರು ಶಾಂತ ಚಿತ್ತರು ಮತ್ತು ಉದಾರರು. ಅವರ ಈ ಗುಣಗಳನ್ನು ಅಲ್ಲಿಯ ಸಮಾಜವಾದಿ ಮುಖಂಡರು ರಾಜರ ದುರ್ಬಲತೆಯ ಲಕ್ಷಣವೆಂದು ತಪ್ಪಭಿಪ್ರಾಯ ಮಾಡಿಕೊಂಡರು. ರಾಜರು ಕೊಟ್ಟ ರಿಯಾಯತಿಗಳಿಂದಾಗಲೀ, ಜವಾಬದಾರಿ ಸರಕಾರ ಸ್ಥಾಪನೆಯ ಕುರಿತು ಕೊಟ್ಟ ಆಶ್ವಾಸನೆಯಿಂದಾಗಲೀ ತೃಪ್ತರಾಗದೆ, ರಾಜರಿಗೂ ಪ್ರಜಾಪಕ್ಷಕ್ಕೂ ಪರಸ್ಪರ ಒಪ್ಪಿಗೆಯಿಂದಾದ ಒಡಂಬಡಿಕೆಯನ್ನು ಆ ಮುಖಂಡರು ಮುರಿದು ಹಾಕಿದರು. ಇಂಥ ಅದೂರ್ದರ್ಶಿತನದಿಂದ ಎಚ್ಚರದಿಂದಿರಬೇಕೆಂದು ಮಹಾತ್ಮಾಜಿಯವರು ಸೂಚಿಸಿದ್ದರು. ಆದರೆ ಸ್ಥಳೀಯ ಮುಖಂಡರು ಆ ಎಚ್ಚರಿಕೆಯನ್ನು [illegible] ದೇಶಭಕ್ತ ಗಂಗಾಧರರಾಯ ದೇಶಪಾಂಡೆಯವರು ಅಭಿಪ್ರಾಯ ಪಟ್ಟಿದ್ದಾರೆ. [illegible] ಜನರು [illegible] ಪೋಲೀಸರನ್ನು ಕೊಲೆ ಮಾಡಿದ್ದಾಗಲೀ ಅದರ ಪರಿಣಾಮದಿಂದ ರಾಮದುರ್ಗದ ಈ ಸಮಾಜವಾದಿಗಳು ಒಂದು ಪಾಠವನ್ನು ಕಲಿಯಬೇಕಾಗಿತ್ತು. ಆದರೆ ಅದರ ಆ ಪ್ರಕರಣವನ್ನು ಇಷ್ಟು ಬೇಗ ಮರೆತುಬಿಟ್ಟರೆಂಬುದರಿಂದ ಅವರು ಮುಖಂಡತನದ ಜವಾಬದಾರಿಯನ್ನು ತೆಗೆದುಕೊಳ್ಳಲಿಕ್ಕೇ ಅಯೋಗ್ಯರೆಂದು ಹೇಳಬಹುದು.

ಸತ್ಯವನ್ನು ಮರೆಮಾಡುವ ಪ್ರಯತ್ನ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಂಸ್ಥಾನ ಉಪಸಮಿತಿಯು ಮಂಜೂರು ಮಾಡಿದ 'ದಂಗೆಯ ವಿಚಾರಣೆ ಬಗ್ಗೆ ಒಂದು ಸಮಿತಿಯ ರಚನೆಯಾಗಬೇಕು, ರಾಮದುರ್ಗದ ಪ್ರಜಾಸಂಘವನ್ನು ಬೇಕಾಯದೇಶೀರವೆಂದು ರಾಮದುರ್ಗ ಸರಕಾರವು ಸಾರಿದ್ದು ತಪ್ಪು, ರಾಮದುರ್ಗದ ಧ್ವಜಸ್ತಂಭವನ್ನು ಕಿತ್ತು ಹಾಕಲೇಬೇಕೆಂದು ಅಲ್ಲಿಯ ಸರಕಾರವು ಹಟಮಾಡಿದ್ದು ತಪ್ಪು, ಪ್ರಜೆಗಳ ಮೇಲೆ ಹಿಂಸಾತ್ಮಕ ಅತ್ಯಾಚಾರವನ್ನು ನಡೆಸಿದ್ದು ಖಂಡನೀಯ' ಎಂಬ ಠರಾವುಗಳನ್ನು ದೇಶಭಕ್ತ ಗಂಗಾಧರರಾಯರ ಸಮ್ಮತಿ ಬಗ್ಗೆ ಡಾಕ್ಟರ ಹರ್ಡೀಕರರು ಕಳುಹಿಸಿಕೊಟ್ಟಿರುವದನ್ನು ತನಗೂ ಸಂಸ್ಥಾನ ಉಪಸಮಿತಿಗೂ ಯಾವ ಸಂಬಂಧವೂ ಇಲ್ಲದಿರುವ ಪ್ರಯುಕ್ತ ತನ್ನ ಸಮ್ಮತಿ ಅನಾವಶ್ಯಕವೆಂದು ಹೇಳಿ ದೇಶಭಕ್ತ ಗಂಗಾಧರರಾಯರು ಅವನ್ನು ಹಿಂತಿರುಗಿಸಿರುವರು. ಠರಾವುಗಳನ್ನು ಓದುವಾಗ ತಪ್ಪೆಲ್ಲವೂ ರಾಮದುರ್ಗದ ಮಹಾರಾಜರದೆಂಬಂತೆ ಏಕಪಕ್ಷೀಯವಾಗಿರುವವೆಂದೂ, ಅವುಗಳಿಂದ ಸತ್ಯ ಸ್ಥಿತಿಯು ಸ್ಪಷ್ಟವಾಗಿರುವದಿಲ್ಲವೆಂದೂ ರಾಮದುರ್ಗದ ಜನರ ಹಿಂಸಾಪ್ರವೃತ್ತಿಯನ್ನು ನಿಸ್ಸಂಕೋಚವಾಗಿ ಖಂಡಿಸಬೇಕಾಗಿತ್ತೆಂದು ಅವರು ತಿಳಿಸಿದ್ದಾರೆ.

ರಾಜರ ಭರವಸೆ

ಆದದ್ದು ಆಗಿಹೋಯಿತು. ವಿಂಚುಕೋವ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ. ಸರಕಾರದ ಅಧಿಕಾರಿಗಳ ಮೇಲೆ ಅನ್ಯಾಯದ ಆಕ್ರಮಣ ಮಾಡುದರಿಂದ ಸರಕಾರವು ಯಾವ ಪ್ರತೀಕಾರವನ್ನು ತೆಗೆದುಕೊಳ್ಳುವದೋ ಎಂದು ಜನರು ಹೆದರಬೇಕಾಗಿಲ್ಲವೆಂದೂ, ಹೆದರಿ ರಾಮದುರ್ಗವನ್ನು ಬಿಟ್ಟು ಬ್ರಿಟಿಷ ಇಂಡಿಯಾದ ಜಿಲ್ಲೆಗಳಿಗೆ ಹೋಗಿರುವ ರಾಮದುರ್ಗದ ಜನರು ಪುನಃ ರಾಮದುರ್ಗಕ್ಕೆ ಮರಳಬಹುದೆಂದೂ, ರಾಜ್ಯದಲ್ಲಿ ಶಾಂತಿಯನ್ನು ಕಾಪಾಡುವದೇ ತಮ್ಮ ಗುರಿಯೆಂದೂ ರಾಜರು ಜನರಿಗೆ ಭರವಸೆಯನ್ನು ಕೊಟ್ಟಿದ್ದಾರೆ. ಇಂಥ ಪ್ರಜಾವತ್ಸಲರಾದ ರಾಜರ ವಿರುದ್ಧವಾಗಿ ಜನರು ದಂಗೆಯನ್ನೆಬ್ಬಿಸಿದ್ದು, ಅವರನ್ನು ದಂಗೆಯೇಳಲಿಕ್ಕೆ ಅಲ್ಲಿಯ ಮುಖಂಡರು ಉದ್ರೇಕಿಸಿದ್ದು ನಿಜವಾಗಿ ಆಶ್ಚರ್ಯದ ವಿಷಯವಾಗಿದೆ.

ವಿಚಾರಣಾ ಸಮಿತಿ

ರಾಮದುರ್ಗದಲ್ಲಾದ ದಂಗೆಯ ವಿಚಾರಣೆ ಮಾಡಿ ವರದಿ ಬರೆಯಲಿಕ್ಕೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಶ್ರೀ ಗಳಾದ ಕಮಲಾದೇವಿ, ಬಿ. [illegible] ಗುಪ್ತ ಮತ್ತು ಅಂದಾನಪ್ಪ ದೊಡ್ಡಮನಿ ಇವರ ಒಂದು ಸಮಿತಿಯನ್ನು ರಚಿಸಿದೆ. ಇದು ಒಡನೆ ತನ್ನ ಕಾರ್ಯಾರಂಭವನ್ನು ಮಾಡುವದು. ಕನ್ನಡ ಡಾಕ್ಟರ ಹರ್ಡೀಕರರೂ ಶ್ರೀ ಶಿವಶಂಕರಪ್ಪನವರೂ ರಾಮದುರ್ಗದ ಜನರಲ್ಲಿ ಧೈರ್ಯ ಹುಟ್ಟಿಸಲಿಕ್ಕೂ ರಾಜ್ಯ ಬಿಟ್ಟು ಹೋದವರನ್ನು ಹಿಂದಕ್ಕೆ ಕರೆಸಲಿಕ್ಕೂ ಹೋಗಿರುವರು. [illegible] ನಷ್ಟವಾಗಿರುವ [illegible] ಅಧಿಕಾರಿಗಳ [illegible] ಜನರಿಗೆ ಸಹಾಯ ಮಾಡುವರು.

ಮಹಾತ್ಮಾಜಿಯವರಿಗೆ ತಂತಿ

ರಾಮದುರ್ಗದ ಪ್ರಜಾಸಂಘದವರು ದಂಗೆಯ [illegible] ಮಹಾತ್ಮಾಜಿಯವರು ಏಕಪಕ್ಷೀಯ ಅಭಿಪ್ರಾಯ ಮಾಡಿಕೊಳ್ಳಕೂಡದೆಂದೂ, ದಂಗೆಯ ವಿಚಾರದಲ್ಲಿ ತಾವೂ ಹೇಳ [illegible]

ಇಂಡಿಯಾ ಬ್ರಿಟನ್ ವಾಣಿಜ್ಯ ಒಪ್ಪಂದ

ಕೇಂದ್ರ ಎಸೆಂಬ್ಲಿಯ ನಿರಾಕರಣೆ

ಈಗ್ಗೆ ಒಂದೆರಡು ತಿಂಗಳುಗಳಿಂದ ಕೇಂದ್ರ ಎಸೆಂಬ್ಲಿಯಲ್ಲಿ ಚರ್ಚಿಸಲ್ಪಟ್ಟು, ಅಲ್ಲಿಂದ ಕೌನ್ಸಿಲ್ ಆಫ್ ಸ್ಟೇಟಿಗೆ ಹೋಗಿ ವಾಯ್ಸರಾಯರಿಂದ ಮಂಜೂರಾತಿಯನ್ನು ಪಡೆದ ಇಂಡಿಯಾ ಬ್ರಿಟನ ವಾಣಿಜ್ಯ ಒಪ್ಪಂದವು, ವಾಯ್ಸರಾಯರ ಸೂಚನೆ ಮೇರೆಗೆ ಪುನಃ ಎಸೆಂಬ್ಲಿಯ ಸಮಾಲೋಚನೆಗೆ ಬಂದು, ಅದು ಪುನಃ ಅಲ್ಲಿ ಎಸೆಂಬ್ಲಿ ಸದಸ್ಯರ ಬಹುಮತದಿಂದ ನಿರಾಕರಿಸಲ್ಪಟ್ಟಿತು. ಎಸೆಂಬ್ಲಿಯ ಅಭಿಪ್ರಾಯಕ್ಕೆ ತಿಲಮಾತ್ರವಾದರೂ ಮನ್ನಣೆಯನ್ನು ಕೊಡದೆ, ವಾಯ್ಸರಾಯರು ತನ್ನ ವಿಶೇಷಾಧಿಕಾರವನ್ನು ಉಪಯೋಗಿಸಿ, ಅದಕ್ಕೆ ದೇಶದ ಪರಿಸ್ವೀಕೃತಿಯನ್ನು ಕೊಟ್ಟದರಿಂದ, ಒಪ್ಪಂದದ ಭವಿಷ್ಯವು ಹೀಗಾದುದು ಸಹಜವಾಗಿದೆ. ಒಪ್ಪಂದವು ಹಿಂದೂಸ್ಥಾನದ ಹಿತಾಸಕ್ತಿಗಳನ್ನು ತುಂಬಾ ಅಲಕ್ಷಿಸಿರುವುದೆಂಬುದನ್ನು ಎಸೆಂಬ್ಲಿಯ ಕಾಂಗ್ರೆಸ ಪಕ್ಷವು ಮಾತ್ರವಲ್ಲ, ಇತರ ಪಾರ್ಟಿಗಳೂ ಸರಕಾರದ ಗಮನಕ್ಕೆ ತಂದಿದ್ದುವು. ಅಸಿಲ್ಲವಾದರೂ ಎಸೆಂಬ್ಲಿಯ ಸದಸ್ಯರು ಹತ್ತಿ ವ್ಯಾಪಾರದ ಉನ್ನತಿಯ ಬಗ್ಗೆ ಕೊಟ್ಟ ಸೂಚನೆಗಳನ್ನು ಸರಕಾರವು ಸ್ವೀಕರಿಸಿ ಅವನ್ನು ಕೊಂಚಮಟ್ಟಿಗೆ ಸಂತೋಷಪಡಿಸಬಹುದಾಗಿತ್ತು. ಆದರೆ ಅದು ಹಾಗೆ ಮಾಡಲಿಲ್ಲ. ಹತ್ತಿ ಮತ್ತು ವಸ್ತ್ರ ವ್ಯಾಪಾರದಲ್ಲಿ ವಿಲಾಯತಿಯ ವ್ಯಾಪಾರಿಗಳಿಗೆ ಒಪ್ಪಂದವು ವಿಶೇಷ ಅನುಕೂಲತೆಗಳನ್ನು ಮಾಡಿಕೊಟ್ಟಿರುವುದರಿಂದ, ತಕ್ಕ ಪ್ರತೀಕಾರ ಉಪಾಯಗಳನ್ನು ಕೈಕೊಳ್ಳದೆ ಹೋದರೆ, ಹತ್ತಿ ಮತ್ತು ವಸ್ತ್ರ ವ್ಯಾಪಾರದಲ್ಲಿ ಹಿಂದೂಸ್ಥಾನವು ತುಂಬಾ ನಷ್ಟಗಳಿಗೆ ಗುರಿಯಾಗಬೇಕಾಗುವುದು. ವಾಯ್ಸರಾಯರು ಒಪ್ಪಂದಕ್ಕೆ ಈಗಲೂ ತಮ್ಮ ವಿಶೇಷಾಧಿಕಾರದ ಸ್ವೀಕೃತಿಯನ್ನು ಒಪ್ಪಂದವನ್ನು ಊರ್ಜಿತದಲ್ಲಿಡುವರೆಂಬುದು ನಿಸ್ಸಂದೇಹ. ಇದರಿಂದ ಸರ್ವಭೌಮ ಸರಕಾರದ ಪ್ರತಿನಿಧಿಗಳಾಗಿ ವಾಯ್ಸರಾಯರಿಗೆ ಹಿಂದೂಸ್ಥಾನದ ಹಿತಕ್ಕಿಂತಲೂ ಇಂಗ್ಲೆಂಡಿನ ಬಹುಮತವನ್ನು ಕೇಳಿದ ನಂತರವೇ ಅವರು ಆ ಸಂಬಂಧ ಒಂದು ನಿರ್ಧಾರಕ್ಕೆ ಬರಬೇಕೆಂದೂ, [illegible] ಪ್ರಜಾಸತ್ತಾ ಪ್ರತಿಕೂಲ [illegible] ಇಲ್ಲವೆಂದು. [illegible] ಅವರ ಭಾಷೆಯಲ್ಲಿ ಅವರ [illegible] ವಸ್ತುಸ್ಥಿತಿ ಎನ್ನಬಹುದು. ಒಕವು ಹೆಚ್ಚು ಮಹತ್ವದ್ದಾಗಿದೆ" ಎಂಬುದೂ ವ್ಯಕ್ತ.

ಜನತೆಯ ಕರ್ತವ್ಯ

ಆದರೆ ಸರಕಾರವು ಮಾಡಿದುದನ್ನೆಲ್ಲ ತಲೆ ತಗ್ಗಿಸಿ ಒಪ್ಪಿಕೊಳ್ಳುವ ದಿನಗಳು ಕಳೆದುಹೋಗಿವೆಯಷ್ಟೆ! ಸರಕಾರದ ಮೂಲಕವಲ್ಲವಾದರೆ, ಒಪ್ಪಂದವು ಸಫಲವಾಗದಂತೆ ಜನತೆಯು ಮಾಡಬಹುದಾದ ಬೇರೆ ಉಪಾಯಗಳಿವೆ. ವಿಲಾಯತಿ ವ್ಯಾಪಾರಿಗಳಿಗೆ ಅನುಕೂಲವಾಗಿ ಒಂದು ಕಾನೂನು ಆಗಿರುವ ಮಾತ್ರಕ್ಕೆ ಅವರ ವ್ಯಾಪಾರವು ಉನ್ನತಿಗೆ ಬರಲಾರದು. ಪಕ್ಕ ಬಲದಿಂದ ವ್ಯಾಪಾರವು ಉನ್ನತಿಗೆ ಬರುವುದಕ್ಕಿಂತ ಅದರ ಭವಿಷ್ಯವು ಕೆಟ್ಟುಹೋಗುವುದೇ ಹೆಚ್ಚು. ಪ್ರೇಮ ಮತ್ತು ಸ್ನೇಹದಿಂದಾಗದ ಕಾರ್ಯವು ಬಲಾತ್ಕಾರದಿಂದ ಆಗುವುದು ಅಸಾಧ್ಯವೆಂಬುದನ್ನು ಹಿಂದೀ ಜನತೆಯು ವಿಲಾಯತಿ ವ್ಯಾಪಾರಿಗಳಿಗೆ ಕಲಿಸಿ ಕೊಡುವ ಸಮಯವು ಈಗ ಬಂದಿದೆ. ಒಪ್ಪಂದವು ಎಸೆಂಬ್ಲಿಯ ಮಂಜೂರಾತಿಗೆ ಬಂದಾಗ, ಅದನ್ನು ನಿರಾಕರಿಸಿ ಶ್ರೀ ಭೂಲಾಭಾಯಿ ದೇಸಾಯಿಯವರು ಅಂದಂತೆ, ಈ ಒಪ್ಪಂದದಿಂದ ವಿಲಾಯತಿಯ ನೂಲು ಬಟ್ಟೆಗಳನ್ನು ಹಿಂದೂಸ್ಥಾನದಲ್ಲಿ ಕೊಡು ಹಾಕುವುದು. ಎಷ್ಟು ಸುಲಭವಾಗಿದೆಯೋ, ಗಿರ್ಹಾಕಿಗಳು ಇಲ್ಲದೆ ಅದನ್ನು ಮತ್ತೆ ಇತರ ದೇಶಗಳಿಗೆ ರಫ್ತುಮಾಡುವುದು. ಅದಕ್ಕಿಂತ ಹೆಚ್ಚಿಗೆ ಕಷ್ಟಸಾಧ್ಯದ ವಿಷಯವಾಗಿದೆ ಎಂಬುದು ವಿಲಾಯತಿ ವ್ಯಾಪಾರಿಗಳಿಗೆ ಮನದಟ್ಟುಮಾಡುವುದು ಹಿಂದೀ ಜನತೆಯ ಕೈಯಲ್ಲಿದೆ. ಹಿಂದೀ ಜನತೆಯು ವಿಲಾಯತಿ ನೂಲುಬಟ್ಟೆಗಳನ್ನು ಬಹಿಷ್ಕರಿಸುವುದರ ಜತೆಗೆ, ದೇಶೀ ನೂಲುಬಟ್ಟೆಗಳನ್ನು, ಅದರಲ್ಲೂ ಖಾದಿ ನೂಲುಬಟ್ಟೆಗಳನ್ನು ಸರ್ವತ್ರ ಪ್ರೋತ್ಸಾಹಿಸುತ್ತದೆಂದರೆ, ಒಪ್ಪಂದವು ತನ್ನ ತಳಸದ ಬುಟ್ಟಿಯನ್ನು ಸೇರುತ್ತದೆ. ಆಗ ವಿಲಾಯತಿ ವ್ಯಾಪಾರಿಗಳು ಬುದ್ಧಿ ಕಲಿತವರಾಗಿ ಹಿಂದೀ ಜನತೆಯ ಮನೋನುಕೂಲವಾಗಿ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳಲು ಸಿದ್ಧರಾಗುವರು. ಇದನ್ನು ಮಾಡಲಿಕ್ಕೆ ಸರಕಾರದ ಸಹಾಯವು ಬೇಕಾಗಿಲ್ಲ. ಹಿಂದು ಜನತೆಯು ಸ್ವದೇಶಿಯನ್ನು ಪ್ರೋತ್ಸಾಹಿಸುವುದರ ಮೂಲಕವೇ ಹಿಂದ ಸ್ವಾವಲಂಬನ ಸಂಪದಭಿವೃದ್ಧಿಯಾಗುವುದು.

ಸರದಾರ ಭವನ **Sirdar Bhavan**

ಫೆಲಿಕ್ಸ್ ಪೈ ಬಜಾರ್-ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು, ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ.

Proprietor — H R Rao, Bangalore Gujt Emporium Madras

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಬಾಡದ ಚುರುಕು ನಸ್ಯವು ಮನಸ್ಸನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕದ್ದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧ ಸಾರಥಿ ನಸ್ಯ 1 ಪೌಂಡಿಕ್ಕೆ ರೂ. 3-8-0 ಸವಿಶೇಷ ಡಾರ್ಕ್ ಸಾರಥಿ ನಸ್ಯ 1 ಪೌಂಡಿಕ್ಕೆ ರೂ. 3-0-0

(ವಿ. ಪಿ. ಮತ್ತು ರೈಲ್ವೆ ಚಾರ್ಜ್ ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ವಿಳಾಸ:—

ಎ. ಪಿ. ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು

DIAMONDS! DIAMONDS!

BEST BRILLIANCY!

K. R. K. SHET,

MANGALORE

[illegible] ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಸ್ ಸ್ಪಷ್ಟತೆಯಿಂದ ಬರುವ ವಜ್ರಗಳು [illegible] ನಮ್ಮಲ್ಲಿ [illegible]

ನಮ್ಮಲ್ಲಿ [illegible] ನಮ್ಮ ವಜ್ರಗಳ ಉತ್ಕೃಷ್ಟ [illegible]

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು [illegible] ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಗ್ರೀಸ ರುಮೇನಿಯಗಳಿಗೆ ಇಂಗ್ಲಂಡಿನ ಸಹಾಯ ಭರವಸೆ

ಯೂರೋಪಿನ ರಾಜಧಾನಿಗಳಲ್ಲಿ ಆನಂದೋತ್ಸವ

ಅನ್ಯರಾಷ್ಟ್ರಗಳು ಪೋಲಾಂಡನ್ನು ಅನ್ಯಾಯವಾಗಿ ಆಕ್ರಮಿಸಿ ಅದರ ಸ್ವಾತಂತ್ರ್ಯವನ್ನು ಅಪಹರಿಸುವ ಅಕೃತ್ಯವನ್ನು ಮಾಡಿದುದಾದರೆ, ಆ ರಾಷ್ಟ್ರಗಳನ್ನು ವಿರೋಧಿಸಲಿಕ್ಕೆ ತಾವು ಪೋಲಾಂಡಿನ ಸಹಾಯಕ್ಕಿರುವೆವೆಂದು ಇಂಗ್ಲಾಂಡು ಫ್ರಾನ್ಸುಗಳು ಪೋಲಾಂಡಿಗೆ ಭರವಸೆಯನ್ನು ಕೊಟ್ಟಂತೆ ಅವು ಗ್ರೀಸ ರುಮೇನಿಯಗಳಿಗೂ ಭರವಸೆಯನ್ನು ಕೊಟ್ಟಿರುವವೆಂದು ಬ್ರಿಟಿಷ ಪ್ರಧಾನರಾದ ಮಿ ಚೆಂಬರಲೇನರೂ, ಫ್ರೆಂಚ ಪ್ರಧಾನರಾದ ಮಿ ದಲಾಡಿಯರರೂ ತಮ್ಮ ತಮ್ಮ ಪಾರ್ಲಿಮೆಂಟುಗಳಲ್ಲಿ ಹೇಳಿದ್ದಾರೆ ಹೀಗೆ ಭರವಸೆಯನ್ನು ಕೊಟ್ಟುದರಿಂದ ಹಿಟ್ಲರ ಮುಸಲೋನಿಯರ ಕೈಕಟ್ಟಿದಂತಾಗಿ ಅವರು ಬ್ರಿಟಿಷ ಮತ್ತು ಫ್ರಾಂಚ ಸರಕಾರಗಳ ಮೇಲೆ ಸಿಟ್ಟಾಗಿರುವರಾದರೂ, ಸ್ವಾತಂತ್ರ್ಯಪ್ರೇಮಿ ಯೂರೋಪಿನ ಇತರ ರಾಷ್ಟ್ರಗಳ ರಾಜಧಾನಿಗಳಲ್ಲಿ ತುಂಬಾ ಆನಂದವುಂಟಾಗಿದೆ

ರಶ್ಯದ ಸಹಕಾರ.

ಹಿಟ್ಲರ ಮುಸಲೋನಿಯರ ಆಕ್ರಮಣ ನೀತಿಯನ್ನು ತಡೆಯಬೇಕಾದರೆ ಇಂಗ್ಲಾಂಡು ಫ್ರಾನ್ಸುಗಳು ಒಂದಾಗಿ ಪೋಲಾಂಡ ಗ್ರೀಸ ಮತ್ತು ರುಮೇನಿಯಗಳಂಥ ದುರ್ಬಲ ರಾಷ್ಟ್ರಗಳಿಗೆ ಸಹಾಯ ಭರವಸೆಯನ್ನು ಕೊಟ್ಟರೆ ಸಾಲದು, ಇಂಗ್ಲಾಂಡು ಫ್ರಾನ್ಸುಗಳಿಗೆ ರಶ್ಯದ ಸಹಕಾರವೂ ಅಗತ್ಯವಾಗಿದೆ ಐತಿಹಾಸಿಕ ಕಾರಣಗಳಿಂದ ಪೋಲಾಂಡು ರಶ್ಯದೊಡನೆ ಸ್ನೇಹದಿಂದಿರಲಿಕ್ಕೆ ಅಷ್ಟು ಮೆಚ್ಚುವುದಿಲ್ಲವಾದರೂ, ಅದಕ್ಕೆ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲಿಕ್ಕೆ ದೂರದ ಇಂಗ್ಲಾಂಡಿಗಿಂತ ಹತ್ತಿರದ ರಶ್ಯದ ಸಹಾಯವು ಹೆಚ್ಚಿಗೆ ಬೇಕು ಆದ್ದರಿಂದ ಹಿಟ್ಲರ ಮುಸಲೋನಿಯರ ವಿರದ್ಧ ರಾಷ್ಟ್ರಗಳ ಗುಂಪಿನಲ್ಲಿ ರಶ್ಯವೂ ಕೂಡಿಕೊಳ್ಳುವಂತೆ ವಿಶೇಷ ಪ್ರಯತ್ನಗಳು ನಡೆದಿವೆ

ಭೂಮಧ್ಯದಲ್ಲಿ ಸೇನಾಸಂಚಾಲನ

ಇತ್ತ ಹಿಟ್ಲರ ಮುಸಲೋನಿಯರ ಮನೋನುಕೂಲವಾದ ಸ್ಪೈನಿನ ಸರಕಾರವು ಭೂಮಧ್ಯ ಸಮುದ್ರದಲ್ಲಿ ಸೇನಾಸಂಚಾರಕ್ಕಾರಂಭಮಾಡಿದೆ ಜರ್ಮನಿಯು ಕೂಡ, ತನ್ನ ಜಲಸೇನೆಯ ಅಭ್ಯಾಸಕ್ರಮಗಳನ್ನು ಭೂಮಧ್ಯಸಮುದ್ರದಲ್ಲಿ ಮಾಡುವುದಾಗಿ ಇಂಗ್ಲಾಂಡ ಫ್ರಾನ್ಸ ದೇಶಗಳಿಗೆ ತಿಳಿಸಿದೆ ಆದ್ದರಿಂದ ಜಿಬ್ರಾಲ್ಟರ ಮತ್ತು ಈಜಿಪ್ತಗಳಲ್ಲಿ ತನ್ನ ಹಿತಾಸಕ್ತಿಯ ರಕ್ಷಣೆಗೋಸ್ಕರ ಬ್ರಿಟಿಷ ಸರಕಾರವು ಅಲ್ಲಿ ಸೈನ್ಯಸರಂಜಾಮುಗಳನ್ನು ಸಿದ್ಧಮಾಡಿಟ್ಟಿರುವುದು ಅದು ಜಿಬ್ರಾಲ್ಟರಿನ ಉತ್ತರ ಪ್ರದೇಶ ಮಾರ್ಗವನ್ನು ತಡೆಗಟ್ಟಿರುತ್ತದೆ

ಅಮೇರಿಕಕ್ಕೆ ಶಾಂತಿಬೇಕು

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಮಿ ರೂಜವೆಲ್ಟರು ಪೆನ್ ಅಮೇರಿಕನ ಯೂನಿಯನ ಎಂಬ ಸಂಘದಲ್ಲಿ ಭಾಷಣವನ್ನು ಮಾಡುತ್ತ ಹಿಟ್ಲರ ಮುಸಲೋನಿಯರ ರಾಜ್ಯಲಿಪ್ಸೆ ಮತ್ತು ಮಹತ್ವಾಕಾಂಕ್ಷೆ ಮತ್ತು ಆಕ್ರಮಣ ನೀತಿಯನ್ನು ಖಂಡಿಸಿ, ಅಮೇರಿಕಕ್ಕೆ ಪ್ರಪಂಚದಲ್ಲಿ ಸುಖ ಶಾಂತಿ ಸಮಾಧಾನಗಳು ಬೇಕಾಗಿವೆಯೆಂದೂ, ಅದು ತನ್ನಂತೆ ಇತರರಾಷ್ಟ್ರಗಳಿಗೂ ಸ್ವಾತಂತ್ರ್ಯವನ್ನು ಇಚ್ಛಿಸುತ್ತದೆಂದೂ ಹೇಳಿ ಪ್ರಪಂಚದಲ್ಲಿ ಯಾವ ಯಾವ ರಾಷ್ಟ್ರಗಳು ಸುಖಶಾಂತಿ ಸಮಾಧಾನಗಳಿಗಾಗಿಯೂ ಸ್ವಾತಂತ್ರ್ಯಕ್ಕಾಗಿಯೂ ಪ್ರಯತ್ನಿಸುತ್ತಿರುವವೋ ಅವುಗಳೊಂದಿಗೆ ಸಹಕರಿಸಿ ಸಹಾಯಮಾಡಲಿಕ್ಕೆ ತನ್ನ ಸರಕಾರವು ಸದಾ ಸಿದ್ಧವಿರುವುದಾಗಿ ಹೇಳಿರುವರು ಅಮೇರಿಕದ ವಿದೇಶಾಂಗ ಮಂತ್ರಿಗಳಾದ ಮಿ. ಕಾರ್ಡೆಲ್‌ಹಲ್ಲರವರು ಸರ್ವಾಧಿಕಾರಿಗಳ ಅಧಿಕಾರತೃಷ್ಣೆಯನ್ನು ಕಟೋಕ್ತಿಗಳಿಂದ ನಿಂದಿಸಿದ್ದಾರೆ.

ಟರ್ಕಿಯೂ ಶಾಂತಿಕೂಟದಲ್ಲಿ ಸೇರುವ ಸಂಭವ

ಪೋಲಾಂಡ, ಗ್ರೀಸ, ರುಮೇನಿಯಗಳಿಗೆ ಭರವಸೆಯನ್ನು ಕೊಟ್ಟಂತೆ ಇನ್ನು ಕೆಲವೇ ದಿನಗಳಲ್ಲಿ ಟರ್ಕಿಗೂ ಸಹಾಯ ಭರವಸೆ ದೊರೆಯಬಹುದು ಆ ಸಂಬಂಧ ಪತ್ರವ್ಯವಹಾರ ಆಲೋಚನೆ ಪರಾಮರ್ಶೆಗಳು ನಡೆದಿವೆ ಹಾಗೆ ಬಲ್ಗೇರಿಯವೂ ಶಾಂತಿಕೂಟದಲ್ಲಿ ಸೇರುವಕುರಿತು ಇರುವ ಅಡಚಣೆಗಳನ್ನು ದೂರ ಮಾಡುವ ಪ್ರಯತ್ನಗಳಾಗಿವೆ ಈಗ ನೋಡುವಾಗ ಯುರೋಪಿನ ಎಲ್ಲ ರಾಷ್ಟ್ರಗಳೂ ಸಂಯುಕ್ತ ಸಂಸ್ಥಾನಗಳೂ ಹಿಟ್ಲರ ಮುಸಲೋನಿಯರಿಗೆ ವಿರೋಧವಾಗಿ ಒಂದಾಗಿರುವಂತೆ ತೋರುತ್ತದೆ

ಮಾರ್ಶಲ ಗೋರಿಂಗರ ಪ್ರಯಾಣ

ಹಿಟ್ಲರನ ಬಲಕೈ–ಮಾರ್ಶಲ ಗೋರಿಂಗರು ತನ್ನ ಹೆಂಡತಿಯನ್ನು ಕೂಡಿ ರೋಮಿಗೆ ಬಂದಿರುವರು ಮುಸಲೋನಿ ಅವರಿಗೆ ಸಂಭ್ರಮದ ಸ್ವಾಗತವನ್ನು ಕೊಟ್ಟಿರುವನು ವಿಶೇಷ ರಾಜಕೀಯ ಕಾರಣಗಳಿಂದ ಅವರು ಬಂದಿರುವರೆಂದು ಊಹಿಸಲಾಗಿದೆ ಎರಡು ದಿನ ರೋಮಿನಲ್ಲಿ ಉಳಕೊಳ್ಳುವರು ಅವರು ಟಿಪೋಲಿಯಿಂದ ಇಟೆಲಿಯ ಒಂದು ಯುದ್ಧನಾವೆಯಲ್ಲಿ ಕೂತು ಅವಸರದಿಂದ ಬಂದಿರುವರೆಂಬುದರಿಂದ ಅವನ ಈ ಆಗಮನಕ್ಕೆ ವಿಶೇಷ ಮಹತ್ವವನ್ನು ಕೊಡುತ್ತಾರೆ

ಪೋಲಾಂಡಿನಲ್ಲಿ ಜರ್ಮನರ ಕೈದು

ಬೇರೆ ಬೇರೆ ಆರೋಪಗಳನ್ನು ಹೊರಿಸಿ ಪಶ್ಚಿಮ ಪೋಲಾಂಡಿನಲ್ಲಿ ಅನೇಕ ಮಂದಿ ಜರ್ಮನರನ್ನು ಪೋಲಾಂಡ ಸರಕಾರವು ಕೈದು ಮಾಡಿದೆ ಆ ಸಂಬಂಧ ಸರಕಾರವು ಪ್ರಕಟನೆಯನ್ನು ಹೊರಡಿಸಿಲ್ಲವಾದರೂ, ಈ ವರ್ತಮಾನವು ಜರ್ಮನ್ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದೆ

ವಿಮಾ ದರಗಳು ಹೆಚ್ಚಿದವು

ಯೂರೋಪಿನ ರಾಜಕೀಯ ಭವಿಷ್ಯವು ಹೇಗಿದೆಯೆಂದು ಯಾರಿಗೂ ಊಹಿಸಲಿಕ್ಕಾಗಿಲ್ಲ ಯುದ್ಧವು ಎಂದಾದರೂ ಆಗಬಹುದು ಆದ್ದರಿಂದ ಭೂಮಧ್ಯ ಸಮುದ್ರಮಾರ್ಗವಾಗಿ ಯುರೋಪಿಗೆ ಹೋಗುವ ಸರಕುಗಳ ಮೇಲಿನ ವಿಮಾದರಗಳು ಹೆಚ್ಚಿಸಲ್ಪಟ್ಟವ ಬೊಂಬಾಯಿಯಲ್ಲಿ ಈ ದರಗಳು ೧೦೦ಕ್ಕೆ ೪೦ರಷ್ಟು ಹೆಚ್ಚಿರುವವು! ಕಳೆದ ಸಪ್ಟೆಂಬರ ತಿಂಗಳ ಬಿಕ್ಕಟ್ಟಿನ ಕಾಲದಲ್ಲಿ ಈ ದರಗಳು ೧೦೦ಕ್ಕೆ ೨೦ರಷ್ಟೇ ಹೆಚ್ಚಿದ್ದುವು

ಜಲಸೇನೆಯಲ್ಲಿ ಆಂಗ್ಲ ಮಹಿಳೆಯರು

ಕಳೆದ ಮಹಾಯುದ್ಧದಲ್ಲಿ ಬ್ರಿಟಿಷ ಜಲಸೇನೆಯಲ್ಲಿ ಅನೇಕ ಆಂಗ್ಲೇಯ ಮಹಿಳೆಯರು ಸೇರಿ ತಮ್ಮಪಾಲಿನ ಕರ್ತವ್ಯಗಳನ್ನು ಅತ್ಯಂತ ತೃಪ್ತಿಕರವಾಗಿ ಮಾಡಿದ್ದರು ಈಗ ಅಂಥ ಮಹಿಳೆಯರನ್ನು ಪುನಃ ಜಲಸೇನೆಗೆ ತರಿಸಿಕೊಳ್ಳುವ ವಿಚಾರವುಂಟಾಗಿ, ಅದಕ್ಕೆ ಸಾರ್ವಭೌಮರು ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾರೆ ಈ ಮಹಿಳೆಯರು ಯುದ್ಧನಾವೆಗಳಲ್ಲಿ ಸಾಧಾರಣ ಪರಿಸ್ಥಿತಿಯಲ್ಲಿ ಜಲಸೈನಿಕರು ಮಾಡುವ ಕೆಲಸಗಳನ್ನು ಯುದ್ಧಕಾಲದಲ್ಲಿ ಮಾಡಿ, ಪುರುಷಸೈನಿಕರಿಗೆ ಸಹಾಯಮಾಡುವರು ಹಾಗೆಯೇ ಯುದ್ಧಕಾಲದಲ್ಲಿ ಗಂಡಸರು ರಣಕ್ಷೇತ್ರಕ್ಕೆ ಹೋದಾಗ, ಅವರ ಮನೆಕೆಲಸ, ಗದ್ದೆ ಬೇಸಾಯ ಮೊದಲಾದವನ್ನು ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಲಿಕ್ಕೆ ಸಿದ್ಧರಿರುವ ಸ್ತ್ರೀಯರ ಇನ್ನೊಂದು ನೆಲಸೈನ್ಯವೂ ಇಂಗ್ಲಾಂಡಿನಲ್ಲಿ ತಯ್ಯಾರಾಗುವುದು ಮಹಾಯುದ್ಧದ ಸಿದ್ಧತೆಗಳೆಲ್ಲ ಇಂಗ್ಲಾಂಡಿನಲ್ಲಿ ಆರಂಭವಾಗಿವೆ

ವಿಮಾನದಾಳಿಯ ಸಂರಕ್ಷಣೋಪಾಯ.

ವಿಮಾನದಾಳಿಯಾದಾಗ ನಾಗರಿಕರು ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬಹುದೆಂಬಕುರಿತು ರೋಮಿನ ಜನಗೆ ಪ್ರತ್ಯಕ್ಷಪಾಠವನ್ನು ಕಲಿಸಿಕೊಡಲಾಗಿದೆ ಇದೇ ಎಪ್ರಿಲ್ ೧೩ರ ದಿನ ಹಗಲು ರೋಮಿನಲ್ಲಿಯೇ ಒಂದು ನಕಲಿ ವಿಮಾನದಾಳಿಯಾಯಿತು ಅಪಾಯ ಸೂಚಕ ಘಂಟೆಯನ್ನು ಬಾರಿಸಿದೊಡನೆಯೇ ರಸ್ತೆಗಳಲ್ಲಿದ್ದ ನಾಗರಿಕರು ಎಲ್ಲೆಲ್ಲಿ ಅನ್ನವ... ಸುರಕ್ಷಿತ ಸ್ಥಳಗಳಿಗೆ ಧಾವಿಸಿ ಅಡಗಿಕೊಂಡರು ಆಕಾಶದಲ್ಲಿ ಯುದ್ಧವಿಮಾನಗಳು, ಅಲ್ಲಲ್ಲಿ ಸುತ್ತಾಡಿ ನಕಲಿ ಬಾಂಬುಗಳನ್ನು ಸುರಿದುವು ... ಗುಂಡುಗಳು ಹಾರಿ ಕೆಲವು ವಿಮಾನಗಳನ್ನು ನೆಲಕ್ಕೆ ಉರುಳಿಸಿದುವು

ನೋರ್ವೆಯ ನಿರ್ಧಾರ

೧೯೩೯–೪೦ನೇ ಸಾಲಿನ ವರ್ಷದ ... ನೋರ್ವೆ ... ... ತನ್ನ ... ಸ್ವರಕ್ಷಣೆಯ ಬಗೆ ಒಂದ ... ... ನಿರ್ಧರಿಸಿದೆ ಈ ಹಣವನ್ನು ಹೆಚ್ಚಿಗೆ ಕರಕಂದಾಯಗಳನ್ನು ಹೊರಿಸಿ ಒದಗಿಸಿಕೊಳ್ಳಲಾಗುತ್ತದೆ ಹೊಲ್ಲೆಂಡ ಇಸ್ತೋನಿಯಾ ಗ್ರೀಸ, ಟರ್ಕಿಗಳಲ್ಲಿ ಕೂಡ ಪ್ರಬಲ ಸೇನಾಸಿದ್ಧತೆ ಮತ್ತು ಸಂರಕ್ಷಣೋಪಾಯಗಳು ಕೈಕೊಳ್ಳಲ್ಪಟ್ಟಿವೆ

ಭಾವಿ ಕರ್ನಾಟಕ ಪ್ರಾಂತ್ಯದಲ್ಲಿ ದಕ್ಷಿಣಕನ್ನಡ ಸ್ಥಾನ.

ಭಾವಿ ಕರ್ನಾಟಕ ಪ್ರಾಂತ್ಯದಲ್ಲಿ ದಕ್ಷಿಣ ಕನ್ನಡದ ಸ್ಥಿತಿಯು ಯಾವ ರೀತಿಯಲ್ಲಿರಬಹುದು ಎಂಬುದನ್ನು ಯೋಚಿಸಲು ಕಳೆದ ತಾ. ೧೧ರಂದು ಸಾಯಂಕಾಲ ಸ್ಥಳೀಯ ಮೈದಾನಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಡಾ. ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು

ಪ್ರಾರಂಭದಲ್ಲಿ ಶ್ರೀ. ಕೆ. ಕೆ. ಶೆಟ್ಟರು ಆಂಧ್ರರು ತಮಗೆ ಪ್ರತ್ಯೇಕವಾದುದೊಂದು ಪ್ರಾಂತ್ಯವಾಗಬೇಕೆಂದು ಹೂಡಿರುವ ಚಳವಳವನ್ನು ವಿವರಿಸಿ ಕರ್ನಾಟಕದಲ್ಲಿ ಯೋಗ್ಯರಾದ ಮುಖಂಡರ ಅಭಾವದಿಂದ ಕರ್ನಾಟಕ ಪ್ರಾಂತ್ಯರಚನೆಯ ಚಳವಳಕ್ಕೆ ತಕ್ಕಷ್ಟು ಪ್ರೋತ್ಸಾಹವು ದೊರೆತಿಲ್ಲವೆಂದೂ ವಿವರಿಸಿದರು ಶ್ರೀ ಕೆ ಕೃಷ್ಣರಾಯರು ಈ ಪ್ರಾಂತ್ಯವು ಹಲವು ಭಾಷೆಗಳ ಸ್ಥಾನವಾಗಿರುವುದರಿಂದ ಮದ್ರಾಸು ಎಸೆಂಬ್ಲಿಯಲ್ಲಿ ಮೆಂಬರರಿಗೆ ಪ್ರಾಂತ್ಯರಚನೆಯ ವಿಷಯ ಉಂಟಾಗಿರುವ ಕಷ್ಟಗಳನ್ನು ವಿವರಿಸಿ ಕೊಂಗ್ರೆಸು ಈ ಪ್ರಶ್ನೆಯನ್ನು ಬಗೆಹರಿಸಲು ಮಾಡುತ್ತಿರುವ ಪ್ರಯತ್ನಗಳನ್ನು ವಿವರಿಸಿದರು

ಶ್ರೀ ನಾರಾಯಣ ಕಿಲ್ಲೆಯರು ಮಾತಾಡುತ್ತ ಭೌಗೋಲಿಕ ದೃಷ್ಟಿಯಿಂದ ನೋಡುವುದಾದರೆ ಮದ್ರಾಸು ಸಂಸ್ಥಾನದ ಒಂದು ಮೂಲೆಯಲಿ ನಮ್ಮ ಜಿಲ್ಲೆಯು ಇರುವುದು. ಭಾವಿ ಕರ್ನಾಟಕ ಪ್ರಾಂತ್ಯ ರಚನೆಯ ಸಮಯ ಕೂಡಾ ಇದರ ಸ್ಥಾನಮಾನವು ಬದಲಾಗದು ಆದದರಿಂದ ದಕ್ಷಿಣ ಕನ್ನಡಿಗರು ತಮಗೆ ಮುಂದೆ ದೊರಕುವ ಪ್ರಯೋಜನವು ಯಾವುದೆಂದು ಮೊದಲು ಯೋಚಿಸಬೇಕು ನಾವೀಗ ಮದ್ರಾಸನ್ನೇ ಹೊಂದಿಕೊಂಡಿರುವುದ ಲೇಸೋ ಯಾ ಮುಂಬಯಿ ಕರ್ನಾಟಕವನ್ನು ಸೇರುವುದ ಉತ್ತಮವೋ ಎಂಬುದನ್ನು ಯೋಚಿಸಬೇಕಾಗಿದೆ ಇಲ್ಲಿಯ ಭೂಮಿಯನ್ನು ತೆಗೆದುಕೊಳ್ಳ ಪದ್ಧತಿ ಬಹು ಪಕ್ಷ ... ಮೂಲವಾಸಿಗಳಾಗಿರುತ್ತಾರೆ ಮುಂಬಯಿ ಕರ್ನಾಟಕದವರ ಪದ್ಧತಿ ನಮ್ಮ ಪದ್ಧತಿಗಳನ್ನು ಹೋಲಿಸಿದಲ್ಲಿ ತೀರ ಭಿನ್ನವಾಗಿ ಕಂಡುಬಾರದಿರದು ಈ ಭಿನ್ನತೆಯಿಂದ ನಾವು ಅವರೊಡನೆ ಸಹಕರಿಸಬಹುದೇ ಎಂಬುದು ವಿಚಾರಿಸತಕ್ಕ ಪ್ರಶ್ನೆಯಾಗಿರುತ್ತದೆ ಇದಲ್ಲದೆ, ಧಾರವಾಡ, ಮತ್ತು ಬಿಜಾಪುರದ ಕಾಂಗ್ರೆಸ್ ಮುಖಂಡರು ಕೂಡಾ ಕಾಂಗ್ರೆಸಿಗೆ ಸಂಬಂಧಿಸಿದ ವಿಷಯಗಳಲ್ಲಿ ತಮ್ಮ ತಮ್ಮ ಜಿಲ್ಲೆಗೆ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ನಮ್ಮ ಜಿಲ್ಲೆಗೆ ಕೊಟ್ಟಿರುವುದಿಲ್ಲ ಆದುದರಿಂದ ಒಂದು ಜಿಲ್ಲೆಯು ಹೊಸ ಪ್ರಾಂತ್ಯದೊಡನೆ ಸೇರುವುದಾದರೆ ಮೊದಲು ಆ ಜಿಲ್ಲೆಯವರ ಸ್ಥಿತಿಗತಿಗಳಿಗೆ ಹೊಸ ಸಂಬಂಧದಿಂದ ಯಾವ ತರದ ಹಾನಿಯೂ ತಟ್ಟದಂತೆ ನೋಡಿಕೊಳ್ಳಬೇಕು.

ನಂತರ ಶ್ರೀಗಳಾದ ಕೆ ಆರ್. ಆಚಾರ್ಯರೂ ರಂಗರಾವ ತಲಚೇರಿಕಾರರೂ ಕರ್ನಾಟಕ ಏಕೀಕರಣದ ವಿಷಯವಾಗಿ ಮಾತನಾಡಿ ಶ್ರೀಯುತ ಕಿಲ್ಲೆಯವರು ಹೇಳಿದ ಬೆದರಿಕೆಗಳೆಲ್ಲವೂ ನಿರಾಧಾರವೆಂದು ಭಾಷಣವಿತ್ತರು ಶ್ರೀ ಸರ್ವೋತ್ತಮ ಶೆಟ್ಟಿಯವರ ವಂದನಾರ್ಪಣೆಯನಂತರ ಸಭೆಯು ಚದರಿತು

—೦೦೦—

ಅಖಿಲ ಭಾರತ ಕಿಸಾನ ಮಹಾಸಭೆ-ಗಯೆ

ಇದು ಆಚಾರ್ಯ ನರೇಂದ್ರ ದೇವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು ಒಂದು ಲಕ್ಷಕ್ಕೂ ಮೀರಿ ಪ್ರತಿನಿಧಿಗಳೂ ಪ್ರೇಕ್ಷಕರೂ ಗಯೆಗೆ ಬಂದು ಕೂಡಿದ್ದರು. ಕಿಸಾನರ ಇತ್ಯೋಪಸ್ಥಿತಿಯ ಅಭಿವೃದ್ಧಿ, ಉನ್ನತಿ, ಕಿಸಾನರಿಗೂ ಕಾಂಗ್ರೆಸಿಗೂ ಇರಬೇಕಾದ ಸ್ನೇಹ ಸಂಬಂಧ ಮೊದಲಾದ ಅನೇಕ ವಿಷಯಗಳ ಕುರಿತು ಉಪಯುಕ್ತ ಠರಾವುಗಳು ಮಂಜೂರಾದುವು ಇದರ ಮುಂದಿನ ಅಧಿವೇಶನವನ್ನು ಆಂಧ್ರದಲ್ಲಿ ಕೂಡಿಸುವುದೆಂದು ನಿರ್ಧಾರವಾಗಿದೆ

ನಿಮಗೆ ಈ ಇಸ್ಪಿಟ್ಟಿ ಪೆಟ್ಟಿಗೆಯು ಧರ್ಮಾರ್ಥ ದೊರಕುವುದು!

ಈ ಕೆಳಗಿನ ನೆಸೆಟ್ ಇಸ್ಪಿಟು ಪೆಟ್ಟಿಗೆಯು ನಿಮಗೆ ಧರ್ಮಾರ್ಥವಾಗಿ ದೊರೆಯಬೇಕಾದರೆ NACET BLADE' ಎಂದು ಬರೆದಂಥ 10 ನೆಸೆಟ್ ಬ್ಲೇಡುಗಳ ಒಂದು ಸೆಟ್ಟನ್ನು ಈ ಕೆಳಗಿನ ಒಂದು ಎಡ್ರೆಸಿಗೆ ಕಳುಹಿಸಿ ಕೊಡಿರಿ.

ಕೂಡಿಸಲು ಇಂದೇ ತೊಡಗಿರಿ—ಎರಡೆರಡಿದ್ದರೆ ನಿಮ್ಮ ಸ್ನೇಹಿತರೊಡನೆ ಬದಲಾಯಿಸಿರಿ—ನೆಸೆಟ್ ಬ್ಲೇಡುಗಳನ್ನು ಉಪಯೋಗಿಸಿ ಸಂತೋಷಪಡಿರಿ

ಇದನ್ನು ಕೂಡಿಸಲು ನಿಮ್ಮ ವ್ಯಾಪಾರಿಗಳು ನಿಮಗೆ 1 ಸ್ಪೆಷಲ್‌ಕಾರ್ಡನ್ನು ಕೊಡುವರು



10 ನೆಸೆಟ್ ಬ್ಲೇಡುಗಳಿಗೆ

(8 ಗೂಟಗಳಿಗೆ ಅಚ್ಚುಕಟ್ಟಾದ್ದು) 7 ಆಣೆ

ಮುಲ್ಲರ್ ಎಂಡ್ ಫಿಪ್ಸ್ (ಇಂಡಿಯಾ) ಲಿಮಿಟೆಡ್
ಕಂಟ್ರಿಕ್ಟರ್ ಬಿಲ್ಡಿಂಗ್, ಬಲ್ಲಾರ್ಡ ಎಸ್ಟೇಟ್ ಬೊಂಬಾಯಿ ★ ಎವೆನ್ಸು ಹೌಸ್ ಚೌರಂಗಿ ಸ್ಕ್ವೇರ್ ಕಲ್ಕತ್ತಾ ★ 15 ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು ★ 726 ನೇಪಿಯರ್ ರೋಡ್ ಕರಾಚಿ ★ ನಿಲಾ ಗುಂಬಾಜ್ ಲಾಹೋರ್ ★ ಸಲಾಮ್ ಬಿಲ್ಡಿಂಗ್, ಚಾಂದನಿ ಚೌಕ್ ಡಿಲ್ಲಿ

NACET BLADES

ಮಂಗಳೂರು ಸಮಾಚಾರ

ಸಾರ್ವಜನಿಕ ಸಭೆ

ಮುಂಬಾಯಿಯಿಂದ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಲು ಬಂದಿದ್ದ ಶ್ರೀ. ಜೊಕಿಮ್ ಆಳ್ವರೂ ಶ್ರೀಮತಿ ಆಳ್ವರೂ ಕಳೆದ ಆದಿತ್ಯವಾರ ಸಂಜೆ, ಸ್ಥಳೀಯ ಮೈದಾನಿನಲ್ಲಿ ಶ್ರೀ ಜೆರೋಮ ಸಾಲ್ಡಾನರ ಅಧ್ಯಕ್ಷತೆಯಲ್ಲಿ ಸುಶ್ರಾವ್ಯ ಭಾಷಣಗಳನ್ನಿತ್ತರು. ಶ್ರೀಮತಿ ಆಳ್ವರು ತನ್ನ ಭಾಷಣದಲ್ಲಿ ಸ್ತ್ರೀಯರು ರಾಷ್ಟ್ರಸೇವೆ ಮಾಡುವ ಬದಲಾಗಿ ನಾಗರಿಕತೆಯ ಹೆಸರಿನಿಂದ ರಾಷ್ಟ್ರಸೇವೆಯಿಂದ ದೂರವಾಗಿ ಎತ್ತಲೋ ತೆರಳುವಂತಿದೆ. ಮುಂದಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರು ನಡೆಸಬೇಕಾದ ಹೋರಾಟವು ಅತ್ಯಧಿಕವಿದೆ. ಕ್ರೈಸ್ತರು ತಮ್ಮ ಜನ್ಮಸ್ಥಾನವು ಭಾರತವೆಂದೂ ನೂರಲು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. ಮತ್ತು ತಮ್ಮ ಮಾತೃಭೂಮಿಯು ಹಾಲೆಂಡ್, ಇಂಗ್ಲಾಂಡ ಇವೆಲ್ಲಗಳಲ್ಲ ಎಂದು ತಿಳಿಯಬೇಕಾದ ಸಮಯವು ಬಂದಿದೆ ಎಂದು ಸೂಚಿಸಿದರು.

ಶ್ರೀಯುತ ಆಳ್ವ [illegible] ಭಾರತದ ಪ್ರಸ್ತುತ ಸ್ಥಿತಿಗತಿ, ಭಾರತದ ಹೋರಾಟದಲ್ಲಿ ಸಮರ್ಕರನ್ನು ಸಮಾಜ ಸೇವೆ ಹಾಗೂ ರಾಷ್ಟ್ರಸೇವೆಗಳೇ ನಮ್ಮ ಮುಖ್ಯ ಕರ್ತವ್ಯವೆಂದು ಬೋಧಿಸಿದರ [illegible] ಅನುಸರಿಸುತ್ತ ಕ್ರೈಸ್ತ ಮನೋಭಾವವನ್ನು [illegible] ಜಿಲ್ಲೆಯ ಕ್ರೈಸ್ತರನ್ನು ಎಚ್ಚರಿಸಿ ಭಾಷಣ ಮುಗಿಸಿದರು. ಅಧ್ಯಕ್ಷರ ಭಾಷಣ [illegible] ಸಭೆ ಸಮಾಪ್ತವಾಯಿತು.

ಶಂಕರ ಜಯಂತಿ

ಇದೇ ತಾ. ೩೪—೪—೧೯೪೯ನೇ ಸೋಮವಾರ ಸಂಜೆ [illegible] ಉಳ್ಳಾಲ ಅದ್ವೈತಾಶ್ರಮದಲ್ಲಿ ಶ್ರೀಮದಂತ ಸ್ಕೂಲ್ ಎಸೋಸಿಯೇಷನ್ ಕಾಲೇಜಿನ ಕನ್ನಡ ಪಂಡಿತರಾದ ವಿದ್ವಾನ್ ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವವು ಜರಗುವುದೆಂದು ಗೌರವಕಾರ್ಯದರ್ಶಿಗಳಾದ ಶ್ರೀ ಎಂ ವಿ ಶಾಸ್ತ್ರಿಯವರ್ಯ ತಿಳಿಸುತ್ತಾರೆ.

ಜಲಿಯಾನ್ ವಾಲಾಭಾಗ್ ದಿನಾಚರಣೆ

ರ್‍ಯಾಡಿಕಲ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಜಲಿಯನ್ ವಾಲಾಭಾಗ್‌ದ ದಿನಾಚರಣೆಯು ಕಳೆದ ತಾ. [illegible]ನೇ ಸಾಯಂಕಾಲ ಮೈದಾನಿನಲ್ಲಿ ಶ್ರೀ ಎಸ್. ಎ. ಸಲ್ಡಾನರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೆ ಕೃಷ್ಣರಾಯರು, ಕೆ ಎಸ್. ಶೆಟ್ಟಿ, ನಾರಾಯಣ ಉಳ್ಳಾಲ, ಕೆ. ಆರ್. ಆಚಾರ್ಯ ಮೊದಲಾದವರು ಭಾಷಣವಿತ್ತರು.

ಅಂದೇ ಟೌನ್ ಕಾಂಗ್ರೆಸ್ ಸಮಿತಿಯವರ ವತಿಯಿಂದ ನಡೆಸಲ್ಪಟ್ಟ ಸಭೆಯು ಶ್ರೀ ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಗಳಾದ ಹೊಳ್ಳರೂ, ಎಂ. ಆರ್. ಭಟ್ ಮತ್ತು ಶ್ರೀನಿವಾಸ ಬೈಟೋರರವರೂ ಭಾಷಣ ಮಾಡಿದರು.

ಶ್ರೀನಿವಾಸರ ನೃತ್ಯ ಪ್ರದರ್ಶನ
ತಾಂಡವ ನೃತ್ಯ

ಬರುವ ತಾ ೨೪ನೇ ಸೋಮವಾರ ಸಂಜೆ ೬ ಕ್ಕೆ ಗುಬ್ಬಿ ಶ್ರೀ ಚೆನ್ನಬಸವೇಶ್ವರ ನಾಟಕ ಮಂಡಳಿಯವರು ಮೈದಾನಿನಲ್ಲಿ ಹೊಸದಾಗಿ ಕಟ್ಟಿಸಿರುವ ಧನಲಕ್ಷ್ಮಿ ಥಿಯೇಟರಿನಲ್ಲಿ ಶ್ರೀ. ಶ್ರೀನಿವಾಸ ಮತ್ತು ರೋಹಿಣಿ ಬೀನಿಯವರು ಒಂದಾನೊಂದು ಕಾಲದಲ್ಲಿ ಭಾರತದಲ್ಲಿ ಹೆಸರುವಾಸಿಯಾಗಿ ಈಗ ಪಾಶ್ಚಾತ್ಯರು ಕೂಡಾ ಕಲಿಯಲಾಗುವ ತಾಂಡವ ನೃತ್ಯವನ್ನು ಆಡಿ ತೋರಿಸುವರು. ಮಹಾಜನರೆಲ್ಲರೂ ಪ್ರೋತ್ಸಾಹಿಸಬೇಕೆಂದು ಅವರು ವಿನಂತಿಸುತ್ತಾರೆ.

ದೇಶಿಯ ವೈದ್ಯ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ವೈದ್ಯ ಸಮ್ಮೇಲನವೂ ಭೈಷಜ್ಯ ಪ್ರದರ್ಶನವೂ ಇದೇ ತಿಂಗಳ ತಾ. ೨೧ ಮತ್ತು ೨೨ನೇ ಶುಕ್ರವಾರ ಶನಿವಾರಗಳಲಿ ಗಣಪತಿ ಹೈ ಸ್ಕೂಲಿನಲ್ಲಿ ಜರಗುವುದು. ಆ ಪ್ರಯುಕ್ತ ವೈದ್ಯರೆಲ್ಲರೂ ತಮ್ಮ ತಮ್ಮ ಮಿತ್ರರಿಂದೊಡಗೂಡಿ ಸಕಾಲಕ್ಕೆ ಬಂದು ಭಾಗವಹಿಸಿ ಸಮ್ಮೇಲನ ಮತ್ತು ಪ್ರದರ್ಶನಗಳು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ಸ್ವಾಗತ ಸಮಿತಿಯ ಅಧ್ಯಕ್ಷರು ಪ್ರಾರ್ಥಿಸುತ್ತಾರೆ.

ಶೋಚನೀಯ ನಿಧನ

ಕರ್ನಾಟಕ ಮಹಿಳಾ ಸಮಾಜದಲ್ಲಿ ಪ್ರಸಿದ್ಧ ಕಥೆಗಾರ್ತಿ ಹಾಗೂ ಸಾಹಿತ್ಯಾಭಿಮಾನಿಗಳೆಂದ ಪ್ರಸಿದ್ಧರಾಗಿದ್ದ [illegible] ಮಿಸೆಸ್ ಬಿ ಟಿ ಟಿ ಕೃಷ್ಣ (ಶ್ರೀಮತಿ ಗೌರಮ್ಮ)ನವರು ಕಳೆದ ತಾರೀಕು [illegible] ಹೊಳೆಯಲ್ಲಿ [illegible] [illegible] ತಾ [illegible] ದರೆಂದು [illegible] ಸಾವು [illegible]

[illegible] ವರ್ಷವಾಗಿತ್ತು [illegible] ಪೊಲೀಸ್ ಎಸ್ [illegible] ಕೃಷ್ಣ [illegible] ನಾವಿನ [illegible] ಕನ್ನಡ [illegible] ಆತ್ಮಕ್ಕೆ ಶಾಂತಿ ದೊರೆಯಲೆಂದು ದೇವರೊಡನೆ ಪ್ರಾರ್ಥಿಸುವೆವು.

ಯಕ್ಷಗಾನ

[illegible] ಶ್ರೀ [illegible] ಯಕ್ಷಗಾನ [illegible] ನಡೆಸಿ [illegible] (೨೨) [illegible] ದೇವಸ್ಥಾನದ [illegible] ಸಂದರ್ಭ

ನಗರ ಸಭೆ

ಮಂಗಳೂರು ಮ್ಯುನಿಸಿಪಲ್ ಮೀಟಿಂಗು ಕಳೆದ ತಾ ೧೯ನೇ [illegible] ಗಂಟೆಗೆ [illegible] ಯಾಗಿ ನಡೆಯಿತು.

ಶ್ರೀ ಭಗವತಿ ಭೋವಿ ಯುವಕ ಸಂಘ ಸೋಮೇಶ್ವರ

ಈ ಮೇಲ್ಕಾಣಿಸಿದ ಹೆಸರಿನ ಸಂಘವು ದ [illegible] ಆಶ್ರಯದಿಂದ ಭೋವಿ ಯುವಕರಿಂದ ಸ್ಥಾಪಿಸಲ್ಪಟ್ಟು ಇಂದಿಗೆ ಹದಿ[illegible] ವರ್ಷವಾದ ಪ್ರಯುಕ್ತ, ಇದೇ ಕಳೆದ ತಾ. [illegible]ನೇ ಶನಿವಾರ ಅಪರಾಹ್ನ ಘಂಟೆ [illegible]ಕ್ಕೆ ಈ ಸಂಘದ ಪ್ರಥಮ ವಾರ್ಷಿಕ ಮಹಾಸಭೆಯು ಸೋಮೇಶ್ವರ ಶ್ರೀ ಭಗವತಿಯಮ್ಮನವರ ಕಳಗಿನ ಗೋಪುರದಲ್ಲಿ, ಮಾನ್ಯ ಶ್ರೀ [illegible] ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಸಂಘದ ವಾರ್ಷಿಕ ವರದಿಯನ್ನು ಓದಿ ಸನ್ಮಾನಾರ್ಥದಿಂದ [illegible] ಬಳಿಕ ಸಭೆಯಲ್ಲಿ ಹಲವರು ಸಂಘದ ಶ್ರೇಯೋಭಿವೃದ್ಧಿಯನ್ನು ಬಯಸಿ ಮಾತನಾಡಿದರು. ಸಂಘದ ಕಾರ್ಯನಿರ್ವಾಹಕ ಮಂಡಳಿಯಲ್ಲಿ 'ಅಪ್ಪ' ಬದಲಾವಣೆಗಳಾದ ನಂತರ, ಅಧ್ಯಕ್ಷರು ತಮ್ಮ ಭಾಷಣದಲ್ಲಿ ಉತ್ಸಾಹಭರಿತರಾದ ಯುವಕರು ಈ ರೀತಿಯಲ್ಲಿ ಸಮಾಜದ ಏಳಿಗೆಗಾಗಿ ಪ್ರಯತ್ನಿಸುವುದು ಶ್ಲಾಘನೀಯವಾದುದೆಂದೂ ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡಿ ವಿದ್ಯಾ ಪ್ರಚಾರವಾಗುವಂತೆ ಪ್ರಯತ್ನಿಸಿ ತನ್ಮೂಲಕ ದೇಶಸೇವಾತತ್ಪರರಾಗುವುದು ಕರ್ತವ್ಯವೆಂದೂ, ತಿಳಿಸಿದರು. ನಂತರ ಫಲಾಹಾರಗಳೊಂದಿಗೆ ಸಭೆಯು ಕೊನೆಗೊಂಡಿತು.

ತಾಲೂಕು ಸಮಾಚಾರ

ಉಡುಪಿ.

ತಾ ೧೬—೪—೧೯೪೯ರಲ್ಲು ಶ್ರೀಯುತ ರಾಮಕೃಷ್ಣಯ್ಯ, ಅಸಿಸ್ಟೆಂಟ್ ಮಾಸ್ಟರ್, ಇವರ ಅಧ್ಯಕ್ಷತೆಯಲ್ಲಿ, ಉಡುಪಿಯ ಕೇರೆ ಬೀದಿಯಲ್ಲಿ, ಸಾರ್ವಜನಿಕ ಸಭೆಯು ಜರಗಿತು. ಈ ಸಭೆಯಲ್ಲಿ ಶ್ರೀ ಧರ್ಮದೇವ ವಿದ್ಯಾ ವಾಚಸ್ಪತಿ ಯವರು ಕನ್ನಡ ಭಾಷೆಯಲ್ಲಿ ಹೈದರಾಬಾದ್ ಪರಿಸ್ಥಿತಿಯ ಕುರಿತು ಭಾಷಣವನ್ನಿತ್ತರು. ನಿಜಾಂ ರಾಜ್ಯದಲ್ಲಿ ಹಿಂದುಗಳಿಗೆ ಪ್ರಾಪ್ತವಾದ ರಾಜಾಶ್ರಯದಿಂದ ವಿವಿಧ ಅಸಹಯತೆಯ ಚಿತ್ರಹಿಂಸೆಗಳನ್ನು ಮಾಡುವ ವಿಚಾರವನ್ನು Nizam's Defence, examined and exposed ಮತ್ತು Case of Arya Samaj in Hyderabad" ಎಂಬ ಪುಸ್ತಕಗಳ ಆಧಾರದಿಂದೆತ್ತಿ ವಿಶದವಾಗಿ ಹೇಳಿದರು. ಹೈದರಾಬಾದನಲ್ಲಿ ಹಿಂದೂ ಮಹಾ ಸಭೆಯವರೂ ಆರ್ಯಸಮಾಜದವರೂ ಇನ್ನಿತರ ಹಿಂದೂಗಳು ಕೈಕೊಂಡ ಸತ್ಯಾಗ್ರಹ ಚಳವಳದಲ್ಲಿ ಹಿಂದೂ ಧರ್ಮಾಭಿಮಾನಿಗಳು ಸಹಾನುಭೂತಿ, ತನು ಮನ ಧನ ಸಹಾಯ [illegible] ಸಭಿಕರ್ [illegible] ಭಾಷಣವ[illegible] ಗಿಸಿದರು.

ನಂತರ [illegible] ಆರ್ಯಸಮಾಜದ ಅಧ್ಯಕ್ಷರಿಂದ ಶ್ರೀ [illegible] ಶೆಣೈ ಯವರು ಸಂಸ್ಕೃತ [illegible] ಗಂಭೀರ ಭಾಷಣವನ್ನು ಮಾಡಿದರು. ಸಾರಾಂಶವೇನೆಂದರೆ — ಗವರ್ನಮೆಂಟಿನಲಿ [illegible] ಸಂಖ್ಯೆಯಲ್ಲಿರ ತಕ್ಕದ್ದೆ ಕೆಲವು ಅಲ್ಪ ಸಂಖ್ಯಾಕರಾದ ಹಿಂದೂಗಳ [illegible] ಯನ್ನು ಹಿಂಸಿಸಿ, ಆ ಬಡ ಹಿಂದುಗಳ ದ್ರವ್ಯಾಪಹಾರ ಮಾಡಿ, ಅಲ್ಲಿನ ಮುಸ್ಲಿಮರ [illegible] ತಕ್ಕದ್ದೆ ಈ ರೀತಿ ವರ್ತಿಸುವುದು ದುರ್ಬಲತನವು [illegible] ತಮ್ಮ [illegible] ದಲ್ಲಿ [illegible] ಮತಾಭಿಮಾನವನ್ನು ಹಿಂದೂ ಜನಾಂಗದವರ ಮೇಲಿನ ದ್ವೇಷವನ್ನು [illegible] ಅತ್ಯಾಚಾರ [illegible] ವ್ಯಕ್ತಗೊಳಿಸು ತ್ತಾರೆ. ಕಾರ್ಕಳ [illegible] ಮಂಜುನಾಥ ಶೆಣೈಯವರು ಹಿಂದೂಗಳ ದುರವಸ್ಥೆಯನ್ನು [illegible] ವಿವರಿಸಿದ [illegible] ಗಳು [illegible] ದೇವಾಲಯಗಳನ್ನು ಕಟ್ಟಿ, ಅದರಲ್ಲಿ [illegible] ಮಾಡಿದರೆ ಸಾಲದು. ಹಿಂದೂಗಳ ಒಕ್ಕಟ್ಟಾಗುವಂತೆಯೇ ಯೋಗ್ಯ ಧಾರ್ಮಿಕ ಶಿಕ್ಷಣಕ್ರಮವನ್ನು ಅನುಸರಿಸಿ, ಸಮಾಜದಲ್ಲಿರುವ ವಿಘಟನೆಗೆ ಕಾರಣಗಳಾದ ವಿಷಯಗಳನ್ನು [illegible] ವದು ಉತ್ತಮವೆಂದೂ, ಹಿಂದೂ ಜನಾಂಗವು ಗಾಢವಾದ್ವೆಗೆ ಒಳಗಾಗಿ ಸಂಘಟನೆಯ ಕಡೆಗೆ ದೃಷ್ಟಿಯಿಡದಿದ್ದರೆ ಹಿಂದೂ ಜನಾಂಗವೇ ಸಮೂಲ ನಾಶವಾಗುವುದೆಂದರು.

ಮಂಜೂರಾದ ಠರಾವುಗಳು

೧. ಸ್ವದೇಶಾಭಿಮಾನಿ [illegible] ಹೈದರಾಬಾದ ಸತ್ಯಾಗ್ರಹದ ಕುರಿತು ವಿಸ್ತಾರ ಪ್ರಕಟಣೆಯನ್ನು ಮಾಡುವುದರಿಂದ, ಆ ಪತ್ರಿಕಾಕಾರರನ್ನು ಹೃತ್ಪೂರ್ವಕ ಅಭಿನಂದಿಸುತ್ತದೆ, ಇತರ ಪತ್ರಿಕೆಗಳ ಉದಾಸೀನಭಾವವನ್ನು [illegible]

೨. ಸತ್ಯಾಗ್ರಹದಲ್ಲಿ ಭಾಗವಹಿಸಿ ಸ್ವಾತಂತ್ರ್ಯ [illegible] ಹಿಂದೂ ಮತ್ತು ಆರ್ಯವೀರರಿಗೆ [illegible] ದೊರಕಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತದೆ. ಸತ್ಯಾಗ್ರಹಿಗಳಿಗೆಲ್ಲಾ ಅಭಿನಂದನೆಯನ್ನು ಮಾಡಿ, ಚಳವಳವು ಯಶಸ್ವಿಯಾಗಲೆಂದು [illegible]

ಸಭೆಯಲ್ಲಿ ಓದಿಹೇಳಿ ಅಧ್ಯಕ್ಷರು ವಕ್ತೃ ಹಾಕಿದ ನಂತರ, ಠರಾವು ಮಂಜೂರಾದ ಬಳಿಕ, ಶ್ರೀಯುತ ಕಡೇಕಾರ್ ಎಸ್ ಶ್ರೀನಿವಾಸ್, ಉಡುಪಿ ಆರ್ಯಸಮಾಜದ ಅಧ್ಯಕ್ಷರು ಸಭಾಧ್ಯಕ್ಷರಿಗೂ ಸಭಿಕರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಕಾರ್ಕಳ.

ವೈದ್ಯಕಲಾನಿಧಿ, ಆಯುರ್ವೇದ ವಿದ್ವಾನ್ ಡಾಕ್ಟರ್ ಕೆ. ವಿ. ಕೆ. ಉಪಾಧ್ಯಾಯರ ಶ್ರೀ ಕೃಷ್ಣ ಫಾರ್ಮಸಿಯ ಪ್ರಾರಂಭೋತ್ಸವವು ತಾ ೧೨—೨—೩೯ರ ದಿನ ಬೆಳಗ್ಗೆ ಜನಾಬ್ ಯಾಕೂಬ್ ಎಸ್. ಹುಸೈನ್, ಎಂ. ಎಲ್. ಎ ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ತಾ. [illegible]—೪—[illegible]ರ ದಿನ ಇಲ್ಲಿಯ ಅಯ್ಯರ್ ಮಿಶ್ನರಿ ಶ್ರೀ. ಆರ್ ಮಂಜುನಾಥ ಶೆಣೈಯವರ ಇಬ್ಬರ ಮಕ್ಕಳ ಉಪನಯನ ಸಂಸ್ಕಾರವು ಶ್ರೀ [illegible] ಧರ್ಮದೇವ ವಿದ್ಯಾ ವಾಚಸ್ಪತಿಯವರ ಪೌರೋಹಿತ್ಯದ ವೈದಿಕ ರೀತಿಯಿಂದ ಸಾಂಗವಾಗಿ ನೆರವೇರಿತು. ಆ ಸಂಬಂಧ ಅಂದು ಮಧ್ಯಾಹ್ನ ಒಂದು ಅಂತರ್ಜಾತೀಯ ಭೋಜನ ವ್ಯವಸ್ಥೆ ಮತ್ತು ಸಾಯಂಕಾಲ ಸಾರ್ವಜನಿಕ ಸಭೆಯೂ ಜರಗಿತು.

ಶ್ರೀ. ಕಡೇಕಾರು ಎಸ್ ಶ್ರೀನಿವಾಸರ ಯವರ ಅಧ್ಯಕ್ಷತೆಯಲ್ಲಿ ಕಳೆದ ತಾ [illegible] ದಿನ ಸಾಯಂಕಾಲ [illegible] ಶ್ರೀ ಧರ್ಮದೇವ ವಿದ್ಯಾ ವಾಚಸ್ಪತಿಯವರು ಹೈದರಾಬಾದ ಹಿಂದುಗಳ ಅವನತಿ ಮತ್ತು ಅಲ್ಲಿ ಆರಂಭವಾಗಿರುವ ಆರ್ಯಸತ್ಯಾಗ್ರಹಕ್ಕೆ ಜನ ಧನ ಸಹಾಯ [illegible] ಕುರಿತು [illegible] ಭಾಷಣವನ್ನು ಮಾಡಿದ್ದರು.

ಇಲ್ಲಿಯ ಕ್ಷೇತ್ರದ ಬಳಿಯ [illegible] ದೇವಾಲಯದಲ್ಲಿ ಇದೇ ತಾ. ೨೨—೪—೩೯ಕ್ಕೆ ಸ್ಥಿರವಾರ ಹೊಸದಾಗಿ ಕಟ್ಟಿಸಿದ ರಥವನ್ನು ಶ್ರೀದೇವರಿಗೆ ಸಮರ್ಪಿಸಿ, [illegible] ರಾತ್ರಿ [illegible] ಗಂಟೆಗೆ ರಥೋತ್ಸವವು ನೆರವೇರಲ್ಪಡುವುದು. ಸದ್ಭಕ್ತರು [illegible] ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಮೊಕ್ತೇಸರರ ವಿನಂತಿ.

ಅಜೆಕಾರು

ಸ್ಥಳೀಯ [illegible] ಶಾಲಾ [illegible]ತ್ಸವವು ಇದೇ ಕಳೆದ ತಾ ೧೬—೪—೩೯ರಲ್ಲು ಶ್ರೀ ಕೆ [illegible]ನಾಥ [illegible] ಎಂ ಎ ಬಿ ಎಲ್ ಎಡ್ವೊಕೇಟ್ ಕಾರ್ಕಳ ಇವರ ನೇತೃತ್ವದಲಿ ಜರಗಿ ಶ್ರೀ ಧರ್ಣಪ್ಪ ಅತಿಕಾರಿಗಳವರು ಸ್ವಾಗತ ವಚನವನ್ನೂ, ಮುಖ್ಯೋಪಾಧ್ಯಾಯರಾದ ಶ್ರೀ ಎ ಪಾಂಡುರಂಗ ಕಿಣಿಯರು ಪ್ರಗತಿಪರ ಶಾಲಾ ವರದಿವಾಚನವನ್ನು ಮಾಡಿದ ಬಳಿಕ ಸಭಾಧ್ಯಕ್ಷರು ಬೋಧಪ್ರದ ಭಾಷಣವಿತ್ತು ಲೇಜೀಮ್, [illegible], ಡಾನ್ಸ್ ಡ್ರಿಲ್, ನಾಟಕ, ಪ್ರಹಸನ ಇತ್ಯಾದಿ ವಿವಿಧ ವಿನೋದಾವಳಿಗಳಿಂದ ಯಶಸ್ವಿಯಾಗಿ ಕೊನೆಗೊಂಡಿರುವುದು.

ಕಾಸರಗೋಡು

ಇಲ್ಲಿಯ ಶ್ರೀ ರಾಮ ಭಜನಾಮಂದಿರದಲ್ಲಿ, ಕಳೆದ ತಾರೀಕು ೧೪ನೇ ಶುಕ್ರವಾರ ರಾತ್ರಿ ಭಜನಾ ಕಾರ್ಯಕ್ರಮವು, ಬಹಳ ಸಂಭ್ರಮದಿಂದ ಜರಗಿತು. ಪೂಜಾನಂತರ, ಶ್ರೀಯುತ ಕೆ ಎಸ್ ಆರ್ [illegible]ಯವರಿಂದ 'ಭಕ್ತಿಮಾರ್ಗ' ಎಂಬ ವಿಷಯದಲ್ಲಿ, ಚಿಕ್ಕ ಭಾಷಣವಾದ ತರುವಾಯ, ಶ್ರೀ ಜೆ ರಘುನಾಥ ಶೆಣೈ [illegible] ಮಾಸ್ತರರವರು, ಅದನ್ನು ಸಮರ್ಥಿಸಿ ಕೆಲವು ಮಾತುಗಳಿಂದ, ಶ್ಲಾಘಿಸಿದರು. ನಂತರ ಶ್ರೀಯುತ ವಿದ್ವಾನ್ ಸುರತ್ಕಲ್ ಸುಬ್ಬರಾಯರು ಭಜನಾ ಸಂಘದವರಿಗೆ ಶ್ರೀ [illegible] ಮಂಡಿಸಿದರು.

[illegible] ಮುಂದಿನ ವಾರದ ಭಜನೆಯು, ತಾರೀಕು ೨೧—೪—೩೯ನೇ ಶನಿವಾರ ರಾತ್ರೆ ಮಹಾಕ್ರಮ'ದಂತೆ ಜರಗುವುದು. ಅಂದು ಶ್ರೀ. ಕಿ. ಕೆ. ಶೆಣೈಯವರಿಂದ 'ಶಿಕ್ಷಣ'ಯೆಂಬ ಕುರಿತು, ಭಾಷಣವಿರುವುದು.

ರಾಜಕೋಟದಲ್ಲಿ ಪುನಃ ಬಿಕ್ಕಟ್ಟು?

ದರಬಾರ ವೀರವಾಲರ ಕೈವಾಡವೇ?

ಸುಧಾರಣಾ ಸಮಿತಿಯ ಸಭಾಸದರ ನೇಮಕದಲ್ಲಿ ಗೊಂದಲ

ರಾಜಕೋಟೆಯ ಸಮಸ್ಯೆಯು ಇನ್ನೂ ಪೂರ್ಣವಾಗಿ ಬಗೆಹರಿಯಲಿಲ್ಲ. ಸುಧಾರಣಾ ಸಮಿತಿಯಲ್ಲಿ ನೇಮಕವಾಗಲಿರುವ ಏಳು ಮಂದಿ ಸಭಾಸದರ ಹೆಸರುಗಳನ್ನು ಸರದಾರರ ಪರವಾಗಿ ಮಹಾತ್ಮಾಜಿಯವರು ಠಾಕೂರ ಸಾಹೇಬರಿಗೆ ಒಪ್ಪಿಸುತ್ತಾರೆ. ಈ ಸಮಿತಿಯಲ್ಲಿ ತಮಗೂ ಒಂದು ಸ್ಥಾನವು ದೊರಕಬೇಕೆಂದು ಭಾಯತರು (ಹಿಂದೂ ಪಂಗಡ) ಮಹಾತ್ಮಾಜಿಯವರನ್ನು ಕೇಳಿರುವರು ಪ್ರಜಾಪರಿಷತ್ತಿನಲ್ಲಿ ಭಾಯತರು ಸೇರಿ ಪ್ರಜಾಪರಿಷತ್ತಿನ ಧೋರಣವನ್ನನುಸರಿಸಿದರೆ ಭಾಯತ ಸಭಾಸದರನ್ನು ಸುಧಾರಣಾ ಸಮಿತಿಯಲ್ಲಿ ನೇಮಿಸಲು ಮಹಾತ್ಮಾಜಿಯವರು ಒಪ್ಪಿರುವರು. ಆದರೆ ಭಾಯತರು ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿರುವುದಿಲ್ಲ. ದರಬಾರ ವೀರವಾಲರು ಭಾಯತರಿಗೆ ದುಷ್ಪ್ರೇರಣೆ ಕೊಡುತಿದ್ದಾರಾಗಿ ಹೇಳುತ್ತಾರೆ.

ಕಳೆದ ತಾರೀಕು ಹದಿನಾರರಲ್ಲಿ ಮಹಾತ್ಮಾಜಿಯವರು ರಾಷ್ಟ್ರೀಯ ಶಾಲೆಯಲ್ಲಿ ದೇವತಾ ಪ್ರಾರ್ಥನೆಯನ್ನು ಮಾಡುತಿದ್ದಾಗ ೫೦೦ ಮುಸಲ್ಮಾನ ಮತ್ತು ಗಿರಸಿಯಾಸ್ ಜನದ ಒಂದು ಪಂಗಡವು ಮಹಾತ್ಮರ ವಿರುದ್ಧ ಪ್ರದರ್ಶನವನ್ನು ಮಾಡುತ್ತಾ ಕರಿ ಬಾವುಟಗಳನ್ನು ಹಿಡಿದು ರಾಷ್ಟ್ರೀಯ ಶಾಲೆಯ ಸಮೀಪ ಸೇರಿ ಪ್ರಾರ್ಥನೆಯ ಸಮಯ ಬೊಬ್ಬೆಯನ್ನು ಹಾಕಿ ತೊಂದರೆಯನ್ನುಂಟುಮಾಡಿದರು ಆದರೂ ಮಹಾತ್ಮಾಜಿಯವರು ತಮ್ಮ ಪ್ರಾರ್ಥನೆಯನ್ನು ಮುಗಿಸಿದರು.

ಸಾಯಂಕಾಲದ ಕೆಲಸ

ಬರ್ಲಿನಿನಲ್ಲಿ ಒಬ್ಬ ಮಹಿಳೆಯು ಮೋಟರ್ ರೋಲರನ್ನು ನಡೆಸುತ್ತಿರುವುದು.

ಮಹಾತ್ಮಾಜಿಯವರು ಪ್ರಾರ್ಥನೆಯನ್ನು ಮುಗಿಸಿ ಜನರು ಸೇರಿದಲ್ಲಿ ನಡೆದುಕೊಂಡೆ ಹೋದರು ಸೇರಿದ ಅನೇಕ ಜನರಲ್ಲಿ ಹಿಂಸಾ ಭಾವವು ಕಂಡುಬರುತಿತ್ತು ಆದರೂ ಗಾಂಧಿಜಿಯವರು ಬೆದರದೆ ಇಲ್ಲಿಂದ ತಮಗಾಗಿ ಕಾದು ನಿಂತ ಕಾರನ್ನು ಏರಿ ತನ್ನ ವಸತಿಯಾದ ಆನಂದ ಕುಂಜಕ್ಕೆ ತೆರಳಿದರು.

ಇವರ ಈ ವಿರುದ್ಧ ಪ್ರದರ್ಶನದ ವಿಷಯವಾಗಿ ಮಹಾತ್ಮಾಜಿಯವರು ಒಂದು ಪ್ರಕಟಣೆಯನ್ನು ಹೊರಡಿಸಿ ಈ ಪ್ರಕಾರವಾಗಿ ನುಡಿದಿರುವರು "ಇಡೀ ದೇಶವು ನನ್ನ ಪ್ರಾರ್ಥನೆಯ ಸಮಯವು ಬಹಳಮುಖ್ಯವೆಂದು ತಿಳಿದಿರುವುದು; ಆದರೆ ನನ್ನ ದೇಶದವರಾದ ನನ್ನ ಈ ಬಂಧುಗಳು ನನ್ನ ಪ್ರಾರ್ಥನೆಯ ಸಮಯ ನನಗೆ ತೊಂದರೆಯನ್ನುಂಟುಮಾಡಿದ್ದು ಬಹಳ ಖೇದಾಸ್ಪದವಾಗಿದೆ. ನನಗೆ ಪ್ರಾರ್ಥನೆಯ ಸಮಯ ತೊಂದರೆ ಕೊಟ್ಟದ್ದರಿಂದ ಇವರಿಗೇನಾದರೂ ಲಾಭವಾಗಲಿಕ್ಕಿಲ್ಲ. ಸುಧಾರಣಾ ಸಮಿತಿಯಲ್ಲಿ ಕೆಲವು ಮಂದಿಗಳ ಹೆಸರನ್ನು ಬಿಟ್ಟಿರುವುದೇ ಇದಕ್ಕೆ ಕಾರಣವೆಂದು ನಂಬುತ್ತೇನೆ. ಆದರೆ ಈಗಿನ ಈ ಪರಿಸ್ಥಿತಿಯಲ್ಲಿ ಅವರ ಆಸೆಯನ್ನು ನೆರವೇರಿಸಲು ಸಾಧ್ಯವಿಲ್ಲ. ಆದ ಕಾರಣ ಅವರು ನ್ಯಾಯವಾದ ಇತರ ಹಾದಿಯಿಂದ ಪ್ರಯತ್ನಿಸುತ್ತಿರಬೇಕು"

ರಾಜಕೋಟೆಯ ಇತ್ತೀಚಿನ ವಾರ್ತೆಯ ಪ್ರಕಾರ ಠಾಕೂರ ಸಾಹೇಬರು ಮಹಾತ್ಮಾಜಿಯರು ಸರದಾರ ಪಟೇಲರ ಪರವಾಗಿ ಒಪ್ಪಿಸಿದ ೭ ಮಂದಿ ಸಭಾಸದರಲ್ಲಿ ಆರು ಮಂದಿಗಳು ರಾಜಕೋಟೆಯ ಪ್ರಜೆಗಳೆಂದು ರುಜುಪಡಿಸಬೇಕೆಂದೂ ಈ ನಿಯಮವು ೧೯೩೮ ದಶಂಬರ ೨೬ರ ಪತ್ರದಲ್ಲಿ ಸೂಚಿತವಾಗಿತ್ತೆಂದೂ ಆದಕಾರಣ ಈ ಏಳು ಮಂದಿಗಳ ಹೆಸರನ್ನು ಒಪ್ಪುವ ಮೊದಲು ಇವರು ರಾಜಕೋಟೆಯ ಪ್ರಜೆಗಳೆಂದು ರುಜುಪಡಿಸುವುದಗತ್ಯವೆಂತ ಮಹಾತ್ಮಾಜಿಯರಿಗೆ ತಿಳಿಸಿರುತ್ತಾರೆ ಆದಕಾರಣ ಈಗಿನ ರಾಜಕೋಟೆಯ ಪರಿಸ್ಥಿತಿಯಲ್ಲಿ ಠಾಕೂರ ಸಾಹೇಬರ ಮನೋವೃತ್ತಿಯನ್ನು ಕಾಣುವಾಗ ಸುಧಾರಣಾ ಸಮಿತಿಯು ಸದ್ಯಕ್ಕೆ ಕೆಲಸ ಮಾಡುವಂತಿಲ್ಲ.

ರಾಜಕೋಟದ ಸುಧಾರಣಾ ಸಮಿತಿಯಲ್ಲಿ ಭಾಯತ್ ಮತ್ತು ಗಿರಸಿಯಾಸ ಪಂಗಡಕ್ಕೆ ಪ್ರಾತಿನಿಧ್ಯವನ್ನು ಕೊಡದಿರುವ ಪರಿಣಾಮವು ಹೊಸ ರೂಪವನ್ನು ತಾಳಿದೆ ಗಾಂಧಿಜಿಯವರಿಗೂ ಕಚ್ಛ-ಕಾಥೆವಾರ-ಗುಜರಾತದ ಗಿರಸಿಯಾ ಎಸೋಸಿಯೇಷನಿನ ಅಧ್ಯಕ್ಷರಾದ ಶ್ರೀ ರಣಜಿ ಸಿಂಹಜಿಯವರಿಗೂ ನಡೆದ ಪತ್ರವ್ಯವಹಾರದ ಪರಿಣಾಮವಾಗಿ ಭಾಯತ್ ಮತ್ತು ಗಿರಸಿಯಾ ಪಂಗಡದವರಿಗೆ ಪ್ರಾತಿನಿಧ್ಯ ಕೊಡುವ ಪಕ್ಷವು ಪುನಃ ಫೆಡರಲ್ ನ್ಯಾಯಾಧೀಶರಾದ ಸರ್ ಮೋರಿಸ್ ಗ್ವಾಯರರಲ್ಲಿಗೆ ತೀರ್ಮಾನಕ್ಕಾಗಿ ಹೋಗಬಹುದು ಮಹಾತ್ಮಾಜಿಯವರು ಗ್ವಾಯರರಿಗೆ ಪುನಃ ತೊಂದರೆಗಳನ್ನು ಕೊಡದೆ ಮುಂಬಾಯಿಯ ಯಾವ ನ್ಯಾಯಾಧೀಶರೊಡನಾದರೂ ಈ ಪ್ರಶ್ನೆಯನ್ನು ಬಗೆಹರಿಸುವಂತೆ ಕೇಳಿಕೊಳ್ಳಬಹುದೆಂದೂ ಸೂಚಿಸಿರುವರು ಮತ್ತು ಈ ಪ್ರಶ್ನೆಯ ವಿಚಾರಣೆಯು ನಡೆಯುತ್ತಿರುವಾಗಲೇ ಈಗ ತಾನು ನೇಮಿಸಿದ ಸುಧಾರಣಾ ಸಮಿತಿಯು ಕಾರ್ಯವನ್ನು ಕೈಕೊಳ್ಳತಕ್ಕದೆಂದು ಮುಂದೆ ಭಾಯತ್ ಪಂಗಡಕ್ಕೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ತೀರ್ಮಾನವಾದಲ್ಲಿ ತಾನು ಈಗಿನ ಸದಸ್ಯರೊಬ್ಬರನ್ನು ತೆಗೆದು ನಿಮ್ಮ ಪ್ರತಿನಿಧಿಯನ್ನು ನೇಮಿಸುವೆನೆಂದೂ ಭಾಯತ್ ಮುಖಂಡರಿಗೆ ಗಾಂಧಿಜಿಯವರು ಪತ್ರಮುಖೇನ ತಿಳಿಸಿರುವರು

ಮಹಾತ್ಮರ ಈ ಪತ್ರವನ್ನು ಕಂಡು ಗಿರಸಿಯಾ ಎಸೋಸಿಯೇಷನಿನ ಅಧ್ಯಕ್ಷರು ಭಾಯತರು ಮಹಾತ್ಮರ ವಿರುದ್ಧವಾಗಿ ನಡೆಸಲಿರುವ ಎಲ್ಲಾ ಪ್ರದರ್ಶನವನ್ನು ನಿಲ್ಲಿಸಬೇಕೆಂದು ಸೂಚಿಸಿರುವರು. ಇದರಲ್ಲಿ ದರಬಾರ ವೀರವಾಲರ ಕೈವಾಡವೇ ಹೆಚ್ಚಾಗಿರಬಹುದೆಂದು ನಂಬಲಾಗಿದೆ. ರಾಜಕೋಟೆಗೆ ಈಗ ಬಂದಿರುವ ಪೂನದ ಹರಿಜನ ಮುಖಂಡರಾದ ಶ್ರೀ ರಾಜಭೋಜರೂ ಸುಧಾರಣಾ ಸಮಿತಿಯಲ್ಲಿ ಹರಿಜನರಿಗೂ ಪ್ರಾತಿನಿಧ್ಯ ಕೊಡಬೇಕೆಂದು ಠಾಕೂರ ಸಾಹೇಬರಿಗೂ ಮಹಾತ್ಮಾಜಿಯವರಿಗೂ ಒಂದು ಪತ್ರವನ್ನು ಬರೆದಿರುವರು ಹರಿಜನ ಮುಖಂಡರಲ್ಲೊಬ್ಬರಾದ ಡಾ. ಅಂಬೇಡ್ಕರರು ವಿಮಾನದಲ್ಲಿ ರಾಜಕೋಟೆಕ್ಕೆ ಬಂದಿರುವರು ರಾಜಕೋಟೆಯ ಪರಿಸ್ಥಿತಿಯು ಯಾವ ರೀತಿಯಲ್ಲಿ ನಿಲ್ಲುವುದೆಂದು ಎಲ್ಲರೂ ಆತುರಗೊಂಡಿರುವರು.

ಇಟಲಿಯ ಅತ್ಯಾಚಾರ ನಿಷೇಧ

ಕಲ್ಕತ್ತಾ ಮಹಿಳೆಯ ಸಾಹಸ.

-೦೦೦-

ಪ್ರಾಯಶಃ ಇಟಲಿಯ ಅತ್ಯಾಚಾರ ಅನಾಚಾರಗಳ ನಿಷೇಧ ಮಾಡುವ ಉದ್ದೇಶದಿಂದ ಕಲ್ಕತ್ತದ ಒಬ್ಬ ಸ್ತ್ರೀಯು ಆ ನಗರದಲ್ಲಿದ್ದ ಇಟಾಲಿಯಾನ ಕೊನ್ಸಲರರ ಕಾರ್ಯಾಲಯಕ್ಕೆ ಬಂದು ಧ್ವಜಸ್ತಂಭದ ಹತ್ತಿರ ಹೋಗಿ, ಧ್ವಜದ ಹಗ್ಗಗಳನ್ನು ಕಡಿದುಹಾಕಿ ಧ್ವಜವನ್ನು ಇಳಿಸಿಬಿಡುವ ಮಹಾ ಪ್ರಯತ್ನವನ್ನು ಮಾಡಿದಳು ಧ್ವಜಸ್ತಂಭವು ಸ್ವಲ್ಪ ಕೆಟ್ಟುಹೋಗಿದೆ. ಕಾರ್ಯಾಲಯದ ಒಬ್ಬ ಉದ್ಯೋಗಸ್ಥರು ಬಂದು ಆ ಸ್ತ್ರೀಯನ್ನು ತಡೆದುದರಿಂದ ಧ್ವಜಕ್ಕೆ ಹೆಚ್ಚು ಹಾನಿಮಾಡಲಿಕ್ಕಾಗಲಿಲ್ಲ. ಅವಳು ಕೂಡಲೇ ತನ್ನ ಕಾರುಹತ್ತಿ ಹೋಗಿಬಿಟ್ಟಳು. ಕೊನ್ಸಲರರು ಈ ಸಂಗತಿಯನ್ನು ಬಂಗಾಳ ಸರಕಾರದ ಗಮನಕ್ಕೆ ತಂದಿದ್ದಾರೆ.

ಅಬಿಸೀನಿಯದಲ್ಲಿ ಹಿಂದೀಯರ ಮೇಲೆ ಇಟಾಲಿಯಾನರ ಅತ್ಯಾಚಾರ

ಶ್ರೀ ಗುಲಾಬಚಂದ ಶೇಟ ಮತ್ತು ಶ್ರೀ ಚುನಿಲಾಲಎಂಬಿಬ್ಬರು ಅಬಿಸೀನಿಯದ ಹಿಂದೀ ವ್ಯಾಪಾರಿಗಳು ಈಗ ಹಿಂದೂಸ್ಥಾನಕ್ಕೆ ಬಂದಿದ್ದಾರೆ ಅವರು ಬೊಂಬಾಯಿಗೆ ಬರುತ್ತಲೇ ಅಬಿಸೀನಿಯದಲ್ಲಿ ಹಿಂದಿಯರಿಗೆ ಇಟಾಲಿಯನರಿಂದಾಗುವ ಅಪಮಾನ, ಅತ್ಯಾಚಾರ, ಅನಾಚಾರಗಳ ಹೃದಯ ವಿದ್ರಾವಕ ಘಟನೆಗಳನ್ನು ಮಾರ್ಮಿಕವಾಗಿ ವರ್ಣಿಸಿರುವರು ಅಲ್ಲಿಯ ಹಿಂದೀ ವ್ಯಾಪಾರಿಗಳಿಗೆ ಇಟಾಲಿಯನ ಸರಕಾರದ ಸಹಾಯ ಸಹಕಾರಗಳು ಇಲ್ಲದಿರುವುದು ಮಾತ್ರವಲ್ಲ, ಭದ್ರತೆ ಕೂಡಾ ದೊರೆಯುವುದಿಲ್ಲ ಅಬಿಸೀನಿಯದಲ್ಲಿ ಇಟಾಲಿಯಾನರ ಅಧಿಕಾರವಾಗುವ ಮೊದಲು ಅಲ್ಲಿ ಹಿಂದೀಯರನ್ನು ಗೌರವದಿಂದ ಕಾಣುತಿದ್ದರು ಇಂಡಿಯಾ ಸರಕಾರವು ಕೂಡಲೇ ತಕ್ಕ ಕಾರ್ಯಗಳನ್ನು ಕೈಕೊಳ್ಳದಿದ್ದರೆ ಅಬಿಸೀನಿಯದ ಹಿಂದೀಯರ ಭವಿತವ್ಯ ಪೂರ್ಣ ಕೆಟ್ಟುಹೋಗುವುದು ಎಂದಿದ್ದಾರೆ

ಪರ್ಷಿಯದ ರಾಜಕುಮಾರರ ವಿವಾಹ ಸಂಭ್ರಮ

ಪರ್ಷಿಯದ ರಾಜಕುಮಾರರು ಈಜಿಪ್ತದ ಫರೂಕ ಅರಸರ ಸಹೋದರಿಯರನ್ನು ವಿವಾಹವಾಗುವುದಾಗಿ ನಿಶ್ಚಯವಾಗಿ, ವಧೂವರರು ತಮ್ಮ ಪರಿವಾರ ಸಮೇತ ಪರ್ಷಿಯದ ರಾಜಧಾನಿ ಟೇಹರಾನಿಗೆ ಬಂದು ಮುಟ್ಟಿದರು ಅವರಿಗೆ ಸಂಭ್ರಮದ ಸ್ವಾಗತವನ್ನು ಕೊಡಲಾಯಿತು. ರಾಜಬೀದಿಗಳು ತಳಿರು ತೋರಣಾದಿಗಳಿಂದ ಅಲಂಕೃತವಾಗಿರುವುವು ಟೇಹರಾ ನಗರವು ಇಂದ್ರ ನಗರಿಯಂತೆ ಶೋಭಾಯಮಾನವಾಗಿದೆ ಪ್ರಪಂಚದ ಬೇರೆ ಬೇರೆ ರಾಜ್ಯ ಪ್ರತಿನಿಧಿಗಳು ತಮ್ಮ ತಮ್ಮ ಸರಕಾರದ ಕಡೆಯಿಂದ ಬಹುಮೂಲ್ಯ ಉಚಿತ ಉಡುಗೊರೆಗಳನ್ನು ತಂದಿದ್ದಾರೆ ವಿವಾಹ ಕಾರ್ಯವು ಇದೇ ತಿಂಗಳ ೨೫ರಿಂದ ಆರಂಭವಾಗುತ್ತದೆ

ಒಗಟು ಸಮಸ್ಯೆಗಳ ಮೇಲೆ ಕರಹಾಕುವ ವಿಚಾರ

ಬೊಂಬಾಯಿ ಸರಕಾರದ ನಿರ್ಧಾರ

ಒಗಟು ಸಮಸ್ಯೆಗಳಿಂದ ಹುಟ್ಟಿಬರುವ ಒಟ್ಟು ಉತ್ಪತ್ತಿಯ ಮೇಲೆ ಸೇಕಡಾ ೧೨॥ ಯಷ್ಟು ತೆರಿಗೆ ಹಾಕುವ ನಿರ್ಧಾರವನ್ನು ಬೊಂಬಾಯಿ ಸರಕಾರವು ಮಾಡಿದೆ ಇದಲ್ಲದೆ ಈ ಒಗಟು ಸಮಸ್ಯೆಗಳ ವ್ಯವಸ್ಥಾಪಕರು ಒಂದಿಷ್ಟು ಹಣ ಕಟ್ಟಿ ವರ್ಷವರ್ಷವೂ ಲೈಸೆನ್ಸು ತೆಗೆದುಕೊಳ್ಳಬೇಕಾಗುತ್ತದೆ ಈ ಬಗ್ಗೆ ಒಂದು ಕಾನೂನು ಮಾಡುವ ವಿಚಾರವನ್ನು ಸರಕಾರವು ಪ್ರಕಟಿಸಿದೆ. ಕಾನೂನಿನ ಪ್ರತಿಯು ಸರಕಾರಿ ಗಝೇಟಿನಲ್ಲಿ ಛಾಪ್ಪಾಗಿದೆ.

ಡಾ. ಶಾಟ್

ಡಾಕ್ಟರ್ ಶಾಟರವರು ಜರ್ಮನಿಯ ಸರಕಾರಿ ಬೇಂಕಿನ (ರೈಸ್ಟಿಗ್ ಬೇಂಕ್) ಮುಖ್ಯಾಧಿಕಾರಿಗಳಾಗಿದ್ದರು. ಹಿಟ್ಲರನಿಗೂ ಇವರಿಗೂ ಸರಿಯಾಗಿ ಕೂಡಿ ಬರದ್ದರಿಂದ ಇವರ ಪದಚ್ಯುತಿಯಾಯಿತೆಂದು ಹೇಳುತ್ತಾರೆ. ಅಂದಿನಿಂದ ಇವರು ದೇಶ ಸಂಚಾರಕ್ಕೆ ಹೊರಟಿದ್ದಾರೆ, ಇವರು ಕಳೆದ ವಾರ ಮುಂಬಾಯಿಗೆ ಬಂದಿರುವರು ತಾನು ಕೇವಲ ಸಂಚಾರಾರ್ಥ ಬಂದಿರುವೆನೆಂದು ಪತ್ರಿಕಾ ಪ್ರತಿನಿಧಿಗಳಿಗೆ ಇವರ ಅಂಬೋಣ. ಇವರಿಗೆ ಬೇಂಕಿನ ಮುಖ್ಯಾಧಿಕಾರದಿಂದ ತೆಗೆದ ಕಾರಣವು ಬೇರೆಯೇ ಎಂದು ಈಗ ಅಲ್ಲಲ್ಲಿ ಕೇಳಬರುತ್ತಿದೆ ಇವರು ಹಿಟ್ಲರನ ವಿರೋಧಿಗಳೆಂದು ಎಲ್ಲಾ ದೇಶಸ್ಥರು ಇವರಿಗೆ ಸಂಭ್ರಮದ ಸ್ವಾಗತವನ್ನಿತ್ತು ತಮ್ಮ ದೇಶದ ಒಳಗುಟ್ಟುಗಳನ್ನು ಇವರಿಗೆ ತಿಳಿಸಿದಲ್ಲಿ ಎಲ್ಲಾ ದೇಶಗಳ ಅಂತರಂಗವನ್ನೂ ಸತ್ಯಸ್ಥಿತಿಯನ್ನೂ ಹಿಟ್ಲರನಿಗೆ ತಿಳಿಸಲನುಕೂಲವಾಗಬೇಕೆಂದು ಈ ಪದಚ್ಯುತಿಯಂತೆ ಜರ್ಮನಿಯ ವ್ಯಾಪಾರ ವಹಿವಾಟುಗಳೆಲ್ಲ ಡಾ ಶಾಟರ ಸಲಹೆಯಂತೆ ನಡೆಯುತ್ತಿದೆ ಜರ್ಮನಿಯ ಪರಿಸ್ಥಿತಿಯ ವಿಷಯ ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಿದುದಕ್ಕೆ ತಾನು ಜರ್ಮನಿಯನ್ನು ಬಿಟ್ಟು ದೀರ್ಘಕಾಲವಾದುದರಿಂದ ಅಲ್ಲಿನ ಈಗಿನ ಪರಿಸ್ಥಿತಿಯು ತನಗೆ ಅಷ್ಟೇನು ಗೊತ್ತಿಲ್ಲವೆಂದು ತಿಳಿಸಿರುವರು ಆದರೆ ಅದೇ ಸಮಯದಲ್ಲಿ ಜರ್ಮನಿಯ ಬಲಾಬಲಗಳ ಪ್ರಸಂಶೆಯನ್ನು ಘಟಿಸಿದ ಸಂಗತಿಗಳ ವರ್ಣನೆಯನ್ನು ಮಾಡುತ್ತಿದ್ದಾರೆ "ಜರ್ಮನಿಯಲ್ಲಿ ಆಹಾರದ ಕೊರತೆಯುಂಟಾಗಿದೆಯಂತೆ, ಇದು ಸತ್ಯವೇ?" ಎಂದು ಒಬ್ಬ ಪತ್ರಿಕಾ ಪ್ರತಿನಿಧಿಯು ಕೇಳಲು ಇವರು ಅದನ್ನು ಅಲ್ಲಗಳೆದು ಎಲ್ಲವೂ ಸಮೃದ್ಧವಾಗಿರುವುದೆಂದು ಹೇಳುವರು ಜೆಕೊಸ್ಲಾವಿಯದ ಕುರಿತು ಮಾತನಾಡುತ್ತ ಅದರ ಅಧ್ಯಕ್ಷರಾದ ಹೋಚರು ತಮ್ಮನ್ನು ರಕ್ಷಿಸ ಬೇಕೆಂದು ಹಿಟ್ಲರನನ್ನು

ಬೇಡಿದುದರಿಂದ ಹಿಟ್ಲರನು ಅವರ ಮೇಲೆ ಕನಿಕರಪಟ್ಟು ಅವರನ್ನು ರಕ್ಷಿಸಬೇಕಾಯಿತೆಂದೂ ಇದು ಜೆಕ್ಕರಿಗೆ ದೊಡ್ಡ ಉಪಕಾರವೆಂದು ಹಿಟ್ಲರನ ಕೃತಿಯನ್ನು ವರ್ಣಿಸುತ್ತಾರೆ ಇವರು ಕಲ್ಕತ್ತಾ ಧಿಲ್ಲಿ ಮದ್ರಾಸು ಮೊದಲಾದ ಪ್ರಮುಖ್ಯವ್ಯಾಪಾರಿ ಕ್ಷೇತ್ರಗಳನ್ನೂ ರಾಜಕೀಯ ಕ್ಷೇತ್ರಗಳನ್ನೂ ಸಂಚರಿಸಲಿರುವರು

ಜಪಾನು ಇಂಡಿಯಾದ ಹತ್ತಿಯನ್ನು ಕೊಂಡುಕೊಳ್ಳುವುದು ಕಡಮೆಮಾಡಿರುವುದು ಮತ್ತು ಬ್ರಿಟಿಷ್ ಡೊಮಿನಿಯನುಗಳೊಡನೆ ಇಂಡಿಯವು ಈ ಮೊದಲು ಮಾಡಿರುವ ಒಟ್ಟೋವಾ ಕರಾರು ಕಳೆದ ಮಾರ್ಚ ೩೧ಕ್ಕೆ ಸಮಾಪ್ತವಾಯಿತು ಆದಕಾರಣ ಜರ್ಮನಿಯು ಇಂಡಿಯದೊಡನೆ ವ್ಯಾಪಾರ ವಹಿವಾಟಿನ ಒಪ್ಪಂದ ಮಾಡುವುದಕ್ಕಾಗಿಯೇ ಡಾ ಶಾಟರ ಪ್ರಕೃತದ ಸಂಚಾರವೆಂದೂ, ಇಂಡಿಯಾ ಚೇಂಬರ್ಸ್ ಓಫ್ ಕೋಮರ್ಸ್ ಫೆಡರೇಷನಿನವರು ಹತ್ತಿಯನ್ನು ಜರ್ಮನಿಗೆ ಕಳುಹಿಸಿ ಅಲ್ಲಿಂದ ಯಂತ್ರಸಾಮಾಗ್ರಿಗಳನ್ನು ತರಿಸುವ ಯೋಜನೆಯನ್ನು ಮಾಡಲಿರುವರೆಂದು ಇಂಗ್ಲಾಂಡಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ಅಂಬೋಣ.

ಪೌರದ ಕೊನೆಯ ವಾರ್ತೆಗಳು

ಸಂಯುಕ್ತ ಪ್ರಾಂತದ ನೌಕರಿ ತೆರಿಗೆ

ನೌಕರಿಯ ಮೇಲೆ ತೆರಿಗೆಹಾಕುವ ವಿಚಾರವನ್ನು ಸಂಯುಕ್ತ ಪ್ರಾಂತದ ಸರಕಾರವು ಮಾಡಿ ಆ ಸಂಬಂಧವಾದ ಒಂದು ಮಸೂದೆಯನ್ನು ಸಂಯುಕ್ತ ಪ್ರಾಂತೀಯ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರು ಮಾಡಿಸಿಕೊಂಡಿರುವುದಷ್ಟೆ. ಈಗ ಈ ತೆರಿಗೆಯು ಅಕ್ರಮ ಮತ್ತು ಬೇಕಾಯದೇಶೀರ ಎಂದು ಸಂಯುಕ್ತಪ್ರಾಂತದ ವಾಣಿಜ್ಯ ಸಂಘಗಳೂ ಯುರೋಪಿಯನರ ಸಂಘಗಳೂ ಅಕ್ಷೇಪವನ್ನೆತ್ತಿ ಆ ಮಸೂದೆಗೆ ಮಂಜೂರಾತಿ ದೊರೆಯಬಾರದೆಂದು ವೈಸರಾಯರನ್ನು ಭಿನ್ನವಿಸಿಕೊಂಡಿರುವವು. ಸರ್ ತೇಜ ಬಹದ್ದೂರ ಸಪ್ರೂರವರು ಈ ಆಕ್ಷೇಪಗಾರರ ಮುಖಂಡತನವನ್ನು ತೆಗೆದುಕೊಂಡಿದ್ದಾರೆ. ಅವರು ಪ್ರಿವಿಕೌನ್ಸಿಲಿನ ತನಕ ಹೋಗಿ ಈ ತೆರಿಗೆ ಹಾಕುವ ಸಂಯುಕ್ತಪ್ರಾಂತ ಸರಕಾರದ ಅಧಿಕಾರವನ್ನು ಬೇಕಾಯದೇಶೀರವೆಂದು ವಾದಿಸುವ ವಿಚಾರ ಕೂಡ ಮಾಡಿದ್ದಾರಾಗಿವುದಂತೆ

ಮಜದಿಯಾ ರೈಲ್ವೆ ಅನಾಹುತ

ಕಲ್ಕತ್ತದಿಂದ ೬೬ ಮೈಲು ದೂರ ಮಜದಿಯಾ ಎಂಬಲ್ಲಿ ರೈಲುಬಂಡಿಗಳು ಡಿಕ್ಕಿ ಹೊಡೆದು ಆದ ಅನಾಹುತದಲ್ಲಿ ಸತ್ತವರ ಸಂಖ್ಯೆ ೩೪ ಗಾಯಗೊಂಡವರು ೬೬ ಎಂದಾಗಿದೆ ಡಾರ್ಜಿಲಿಂಗ್ ಮೈಲಿ ಬಂಡಿಯ ಡ್ರೈವರನನ್ನು ಕೈದು ಮಾಡಿ ಜಾಮೀನಿನ ಮೇಲೆ ಬಿಟ್ಟಿದ್ದಾರೆ ಗವರ್ನರರು ಸಹಾನುಭೂತಿ ಸೂಚಕ ತಂತಿಯನ್ನು ಕಳುಹಿಸಿದ್ದಾರೆ ಮಂತ್ರಿಗಳೂ ಕಲ್ಕತ್ತ ಹೈಕೋರ್ಟು ಜಡ್ಜರೂ ಸ್ಥಳ ಸಂದರ್ಶನಮಾಡಿ ಹಿಂತಿರುಗಿದ್ದಾರೆ

ಲಾಹೋರು ಕಿಸಾನ ಸತ್ಯಾಗ್ರಹ

ಸರ್ ಸಿಕಂದರ ಹಯಾತಖಾನರು ಕಿಸಾನರ ಕಷ್ಟನಷ್ಟಗಳನ್ನು ಸಹಾನುಭೂತಿಯಿಂದ ವಿಚಾರಿಸುವೆನೆಂಗಿ ಹೇಳಿದ ಭರವಸೆಯಿಂದ ಕಿಸಾನರು ತೃಪ್ತರಾಗಿರುವುದಿಲ್ಲ ಸತ್ಯಾಗ್ರಹವು ದ್ವಿಗುಣಿತ ಉತ್ಸಾಹದಿಂದ ಮುಂದರಿದಿದೆ ಪುರುಷರೊಂದಿಗೆ ಸ್ತ್ರೀಯರು ಕೂಡ ಸತ್ಯಾಗ್ರಹದಲ್ಲಿ ಭಾಗವಹಿಸುತಿದ್ದಾರೆ ಕೈದುಗಳೂ ಶಿಕ್ಷೆಗಳೂ ಯಥಾಪ್ರಕಾರ ಆಗುತ್ತಿವೆ

ಸಿ. ಪಿ. ಮುನ್ಸಿಪಾಲಿಟಿ ಮಸೂದೆ

ಮಧ್ಯಪ್ರಾಂತ ಸರಕಾರವು ಮುನ್ಸಿಪಲ್ ಆಡಳಿತವನ್ನು ಸುಧಾರಿಸುವ ಉದ್ದೇಶದಿಂದ ಒಂದು ಮಸೂದೆಯನ್ನು ಪ್ರಾಂತೀಯ ಎಸೆಂಬ್ಲಿಯ ಮುಂದೆ ತಂದಿದೆ. ಮುನ್ಸಿಪಾಲಿಟಿಗಳಲ್ಲಿ ಅಧ್ಯಕ್ಷರಿಗೂ ಇತರ ಸದಸ್ಯರಿಗೂ ಆಗಾಗ ಘರ್ಷಣಗಳಾಗಿ ಆಡಳಿತದಲ್ಲಿ ಲೋಪದೋಷಗಳು ಬರುವುದನ್ನು ತಪ್ಪಿಸಲಿಕ್ಕೆ ಈ ಮಸೂದೆಯಾಗಿದೆ. ಇನ್ನು ಮುಂದೆ ಮುನ್ಸಿಪಾಲಿಟಿ ಅಧ್ಯಕ್ಷರನ್ನು ಆರಿಸಿ ಬಂದ ಸದಸ್ಯರು ಚುನಾಯಿಸುವ ಬದಲಿಗೆ ಮುನ್ಸಿಪಾಲಿಟಿಯ ವೋಟರರೇ ಚುನಾಯಿಸುವರು. ಅಧ್ಯಕ್ಷರು ಉಪಾಧ್ಯಕ್ಷರನ್ನು ನೇಮಿಸುವರು. ಬರೇ ಒಂದರ ಬಹುಮತದಿಂದ ಅಧ್ಯಕ್ಷ–ಉಪಾಧ್ಯಕ್ಷರ ಮೇಲೆ ಅವಿಶ್ವಾಸದ ಠರಾವು ಮಂಜೂರಾದಲ್ಲಿ ಅವರು ತಮ್ಮ ಸ್ಥಾನವನ್ನು ಬಿಟ್ಟು ಬರಬೇಕು. ಆದರೆ ಅಂಥ ಸಂದರ್ಭದಲ್ಲಿ ಇಡೀ ಮುನ್ಸಿಪಾಲಿಟಿಗೆ ಅಧ್ಯಕ್ಷರು ಹೊಸ ಚುನಾವಣೆಯನ್ನು ಮಾಡಬಹುದು. ಅಧ್ಯಕ್ಷರಿಗೆ ಆರಿಸಿ ಬಂದ ಸದಸ್ಯರ ಬಹುಮತದ ಮೇಲೆ ವಿಶ್ವಾಸವಿರುವುದಿಲ್ಲವಾದರೆ ಅವರು ರಾಜಿನಾಮೆ ಕೊಟ್ಟು ಪುನಃ ಚುನಾವಣೆಗೆ ನಿಲ್ಲಬೇಕು ಆಗ ಆರಿಸಿ ಬಂದರೆ, ಅವರು ಮುನ್ಸಿಪಾಲಿಟಿಗೆ ಹೊಸ ಚುನಾವಣೆ ಮಾಡುವರು. ಮುನ್ಸಿಪಾಲಿಟಿಯ ಅಧ್ಯಕ್ಷರೂ ಸದಸ್ಯರೂ ಸಾಮಾನ್ಯವಾಗಿ ೫ ವರ್ಷಗಳ ತನಕ ಅಧಿಕಾರದಲ್ಲಿರುವರು. ಇಂಥ ಬದಲಾವಣೆಗಳು ಮಂಜೂರಾದರೆ ಅಧ್ಯಕ್ಷ–ಸದಸ್ಯರೊಳಗಿನ ತಿಕ್ಕಾಟವು ನಿಂತು ಮುನ್ಸಿಪಲ್ ಆಡಳಿತವು ಸುಗಮವಾಗುವುದು.

ಶಾಂತಿಪಕ್ಷದಲ್ಲಿ ಸೋವಿಯಟ್ಟು

ಹಿಟ್ಲರ ಮುಸಲೋನಿಯರ ಆಕ್ರಮಣ ನೀತಿಯನ್ನು ತಡೆಯುವ ಉದ್ದೇಶದಿಂದಾದ ಶಾಂತಿಪಕ್ಷದಲ್ಲಿ ಟರ್ಕಿಯೂ ರಷ್ಯವೂ ಕೂಡಿಕೊಳ್ಳುವಂತೆ ನಡೆದಿರುವ ಸಂಧಾನ ಪ್ರಸ್ತಾಪಗಳು ತೃಪ್ತಿಕರವಾಗಿ ಮುಂದರಿದಿವೆ. ಅತ್ತ ಹಿಟ್ಲರ ಮುಸಲೋನಿಯರು ವಿ ರೂಜವೆಲ್ಟರ ತಂತಿ ಪತ್ರಕ್ಕೆ ಯಾವ ಉತ್ತರವನ್ನೂ ಕೊಟ್ಟಿರುವುದಿಲ್ಲ ಹಿಟ್ಲರನು ಎಪ್ರಿಲ್ ೨೮ಕ್ಕೆ ಜರ್ಮನ ಪಾರ್ಲಿಮೆಂಟ ಸಭೆಯನ್ನು ಕರೆದು ಅದರಲ್ಲಿ ತನ್ನ ಅಭಿಪ್ರಾಯವನ್ನು ಕೊಡುವ ವಿಚಾರ ಮಾಡಿದ್ದಾನೆ ಅವರು ಆಫ್ರಿಕದ ವಸಾಹತುಗಳು ತಮಗೆ ಬೇಕೆನ್ನಬಹುದು ಉತ್ತರ ಆಫ್ರಿಕದಲ್ಲಿ ಭೂಮಧ್ಯ ತೀರದಲ್ಲಿರುವ ಟ್ಯಾಂಜಿಯರ ಎಂಬ ಪ್ರದೇಶದ ಮೇಲೆ ಹಿಟ್ಲರ ಮುಸಲೋನಿಯರ ಕಣ್ಣು ಇರುವುದಾಗಿ ಬಲವಾದ ವಾರ್ತೆ ಹರಡಿವೆ. ಭೂಮಧ್ಯದಲ್ಲಿ ಬ್ರಿಟಿಷರ ಮತ್ತು ಫ್ರೆಂಚರ ಯುದ್ಧ ಸನ್ನಾಹಗಳಾಗಿವೆ. ಹಿಟ್ಲರ ಮುಸಲೋನಿಯರ ಸೈನ್ಯ ಸರಂಜಾಮುಗಳೂ ಅತ್ತ ಹೊರಟಿರುವವು

ಚೀನೀ ಜಪಾನ ಯುದ್ಧ

ಇದರಲ್ಲಿ ಚೀನಿಯರಿಗೆ ಇನ್ನೂ ಕೆಲವು ವಿಜಯಗಳಾಗಿರುವವು ಚೀನಿಯರು ಕೇಂಟನಿಗೆ ಬಹು ಸಮೀಪರಾಗಿದ್ದಾರೆ ಜಪಾನಿಯರು ಅನೇಕ ಕಡೆಗಳಿಂದ ಪಲಾಯನ ಮಾಡಿದ್ದಾರೆ

ಮದ್ಯ ನಿಷೇಧನಾದರೆ ಸತ್ಯಾಗ್ರಹ ಮಾಡುವೆವು

ಸರಕಾರದ ಮದ್ಯನಿಷೇಧ ನೀತಿಯಲ್ಲಿ ಬದಲಾವಣೆಯಾಗದಿದ್ದರೆ ತಾವು ಬಹಳ ಕಷ್ಟನಷ್ಟಗಳಿಗೆ ಗುರಿಯಾಗುತ್ತಿರುವದರಿಂದ, ಒಂದೇ ಸರಕಾರದ ಧೋರಣೆಯಲ್ಲಿ ಬದಲಾವಣೆಯಾಗಬೇಕು, ಇಲ್ಲವಾದರೆ ಸತ್ಯಾಗ್ರಹ ಮಾಡುವೆವು ಎಂದು ಮದ್ಯ ವ್ಯಾಪಾರಿಗಳು ಮತ್ತು ತಾಳೆಯವರಿಗೂ ಜೋಡಾಗಿ ಸರಕಾರಕ್ಕೆ ತಿಳಿಸಿದ್ದಾರೆ

ಚೀನದಲ್ಲಿ ಚೀನಿಯರ ಇನ್ನೊಂದು ವಿಜಯ

ಮೂರು ದಿನಗಳ ತನಕ ಪ್ರಬಲ ಹೋರಾಟವನ್ನು ನಡೆಸಿ ಚೀನಿಯರು ಶಾನ್ಸಿಯ ಇನ್ನೆರಡು ಪಟ್ಟಣಗಳನ್ನು ಜಪಾನಿಯರಿಂದ ಕಿತ್ತುಕೊಂಡಿದ್ದಾರೆ ಜಪಾನಿಯರು ಹಿಂದೆಗೆದಿದ್ದಾರೆ ಚೀನಿಯರು ಕೇಂಟನಿಗೆ ಸಮೀಪವಾಗಿರುವರು ಅಲ್ಲಿ ಕೈ ಕೈ ಹೋರಾಟ ನಡೆದಿದೆ

ಎರಡು ರೈಲುಗಾಡಿಗಳ ಭಯಂಕರ ಧಕ್ಕಾಮುಕ್ಕಿ

೨೭ ಜನರ ಮರಣ; ೩೧ ಮಂದಿಗೆ ಗಾಯ

ನೋರ್ತ್ ಬೆಂಗಾಲ್ ಎಕ್ಸ್‌ಪ್ರೆಸ್ ಮತ್ತು ಡಾರ್ಜಿಲಿಂಗ್ ಮೈಲ್ — ಇವೆರಡು ಮಜದಿಯಾ ಎಂಬಲ್ಲಿ ೧೬ರ ರಾತ್ರಿ ೩ ೨೩ ಘಂಟೆಗೆ ಒಂದಕ್ಕೊಂದು ಢಿಕ್ಕಿ ಹೊಡೆದು ೨೭ ಮಂದಿ ಕೊಲ್ಲಲ್ಪಟ್ಟರು ೩೧ ಮಂದಿ ಗಾಯವಾದರು ಕೊಲ್ಲಲ್ಪಟ್ಟವರಲ್ಲಿ ಬಂಗಾಳದ ಶ್ರೀ ಮನೋರಂಜನ ಬೆನರ್ಜಿ ಎಂ.ಎ ಕೊಂಗ್ರೆಸ್ ಎಂ. ಎಲ್ ಎ. ರವರೂ ಗಾಯಗೊಂಡವರಲ್ಲಿ ಶ್ರೀ ಬೀರೇಂದ್ರನಾಥ ಮುಜುಮದಾರ ಎಂಬ ಇನ್ನೊಬ್ಬ ಕೊಂಗ್ರೆಸ್ ಎಂ ಎಲ್ ಎ ಯವರೂ ಇರುವರು ಮೈಲ ಬಂಡಿಯ ಡ್ರೈವರನು ಕೊಟ್ಟ ಸೂಚನೆಗಳನ್ನು ಅಲಕ್ಷಿಸಿ ಗಾಡಿಯನ್ನು ಓಡಿಸಿದ್ದರಿಂದ ಈ ಅನಾಹುತವು ನಡೆಯಿತೆಂದು ಹೇಳಲಾಗಿದೆ ವಿಚಾರಣೆ ನಡೆಯುತ್ತಾ ಇದೆ ಕಲ್ಕತ್ತದಿಂದ ೬೬ ಮೈಲು ದೂರದಲ್ಲಿ ಈ ಅನಾಹುತವು ನಡೆಯಿತು. ಗಾಯಗೊಂಡವರಿಗೆ ತತ್ಕಾಲ ಪ್ರಥಮ ಚಿಕಿತ್ಸೆಯಾಯಿತು, ಮತ್ತೆ ಅವರು ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ವಿದೇಶಿ ಬೇಂಕುಗಳಲ್ಲಿ ಹಿಟ್ಲರನ ಠೇವಣಾತಿ

ಹಿಟ್ಲರನು ಅಧಿಕಾರ ಬರುವ ಮೊದಲು ಇಡೀ ಜಗತ್ತಿನಲ್ಲಿ ಬೇಂಕಿನ ವಹಿವಾಟು ಇಲ್ಲದವನು ತಾನೊಬ್ಬನೇ ಎಂದು ಹೊಗಳಿಕೊಂಡಿದ್ದನು. ಆದರೆ ಬಾಕಿ ಸರ್ವಾಧಿಕಾರಿಗಳಂತೆ ಹಿಟ್ಲರನು ಈಗ ಜರ್ಮನಿಯ ಶ್ರೀಮಂತರಲ್ಲೊಬ್ಬನಾಗಿರುವನು. ಅವನು ಯುರೋಪಿನ ಎಲ್ಲಾ ದೇಶದ ಬೇಂಕುಗಳಲ್ಲಿ ಹಣವನ್ನು ಠೇವಣಾತಿಯಾಗಿ ಇಟ್ಟಿರುವನು. ಈ ಎಲ್ಲಾ ಧನವು ಆತನು ಅಧಿಕಾರರೂಢನಾದ ಮೇಲೆ ಶೇಖರಿಸಿದ್ದಾಗಿರುತ್ತದೆ. ಇವನ ಉತ್ಪನ್ನದಲ್ಲಿ ಹೆಚ್ಚಾದ ಹಣವು ಹಿಟ್ಲರನು ಬರೆದ "ಮೈನ್ ಕೆಂಫ್" ಎಂಬ ಪುಸ್ತಕದ ಮಾರಾಟದಿಂದಾಗಿರುತ್ತದೆ. ಹಿಟ್ಲರನ ವರ್ಷಾವಧಿ ಉತ್ಪನ್ನವು ೧೬೦,೦೦೦ ಪವನುಗಳಾಗಿರುತ್ತವೆ.

ಜರ್ಮನಿಯು ಯಾವನೂ ವಿದೇಶಿ ಬೇಂಕುಗಳಲ್ಲಿ ಠೇವಣಾತಿಯನ್ನು ಇಡಬೇಕಾದರೆ, ಜರ್ಮನಿಯ ಸರಕಾರಿ ಬೇಂಕಿನ ಸಮ್ಮತಿಯನ್ನು ಪಡೆದು ಲೆಕ್ಕಪತ್ರಗಳೆಲ್ಲವನ್ನೂ ಸರಕಾರಿ ಬೇಂಕಿಗೆ ಒಪ್ಪಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸಿದವರಿಗೆ ಕಠಿಣವಾದ ಶಿಕ್ಷೆಯು ಕೊಡಲ್ಪಡುವುದು

ಠೇವಣಾತಿಯ ಕಾರಣವೇನು

ವಿದೇಶಿ ಬೇಂಕುಗಳಲ್ಲಿ ಹಿಟ್ಲರನು ಠೇವಣಾತಿಯನ್ನಿಡಲು ಕಾರಣವೇನು? ಜರ್ಮನಿಯ ನಾಜಿಗಳಿಗೆ (ಹಿಟ್ಲರನಿಗೆ ಕೂಡಾ) ತಮ್ಮ ಅಧಿಕಾರವು ಎಷ್ಟು ಕಾಲ ನಡೆಯಬಹುದೆಂಬ ಧೈರ್ಯವು ಇರುವುದಿಲ್ಲ ಆದುದರಿಂದ ತಾನು ಅಧಿಕಾರದಿಂದ ಪದಚ್ಯುತನಾಗಿ ದೇಶ ದೇಶಗಳನ್ನು ಅಲೆದಾಡುವ ಪ್ರಸಂಗವು ಬಂದಲ್ಲಿ ಯಾವ ದೇಶಕ್ಕೆ ಹೋದರೂ ಹಣದ ಅಭಾವವು ಬರಬಾರದೆಂದು ಈ ಠೇವಣಾತಿಯ ಮುಖ್ಯ ಕಾರಣವಾಗಿರುತ್ತದೆ

ಇಟಲಿಯ ಮೇಲೆ ಅವಿಶ್ವಾಸ

ಆದರೆ ಎಲ್ಲಾ ವಿದೇಶಿ ಬೇಂಕುಗಳಲ್ಲಿ ಠೇವಣಾತಿಯನ್ನಿಟ್ಟ ಹಿಟ್ಲರನು ಇಟಲಿಯ ಬೇಂಕುಗಳಲ್ಲಿ ಇಟ್ಟಿರುವುದಿಲ್ಲ ಇದಕ್ಕೆ ಮುಸಲೋನಿಯ ಮೇಲೆ ಹಿಟ್ಲರನಿಗಿದ್ದ ಅವಿಶ್ವಾಸವನ್ನು ಸೂಚಿಸುತ್ತದೆ ಮುಂದೆ ತನಗೂ ಮುಸಲೋನಿಗೂ ಸರಿಬೀಳದಲ್ಲಿ ಮುಸಲೋನಿಯು ತನ್ನ ಹಣಕ್ಕೆ ಮುಟ್ಟುಗೋಲು ಹಾಕಬಹುದೆಂದು ಹಿಟ್ಲರನ ಮನಸ್ಸಿನಲ್ಲಿರಬಹುದು.

ಹಿಟ್ಲರನ ಪತನವು ಖಂಡಿತ

ಈ ವಾರ ಲಂಡನಿನಲ್ಲಿ ಜರುಗಿದ ಜೆಕೋಸ್ಲೋವಾಕ್ ಪರಿಷತ್ತಿನಲ್ಲಿ ಅದರ ಸೆಕ್ರೆಟರಿಯಾದ ವಿ. ಹೊಸ್ಟಿಂಗ್ ಬರ್ನಿಲ್ಲರು ನೆಪೋಲಿಯನನಂತೆ ಹಿಟ್ಲರನ ಪತನವು ಬೇಗನೆ ಆಗಲಿರುವದೆಂದು ಹೇಳಿರುವರು.

ಮಂತ್ರಿಗಳಿಗೆ ಪ್ರಶ್ನೆ

ರಾಜಕೋಟಿನ ಬಿಕ್ಕಟ್ಟಿನ ಸಮಯ ಗಾಂಧಿಯವರು ಉಪವಾಸವನ್ನು ಕೈಕೊಂಡಾಗ ರಾಜಕೋಟ ಪಕ್ಷವನ್ನು ಇಂಡಿಯಾ ಸರಕಾರವು ಬಗೆ ಹರಿಸದಿದ್ದರೆ ತಾವು ಮಂತ್ರಿಪದವಿಗೆ ರಾಜಿನಾಮೆ ಕೊಡುವೆವೆಂದು ಮುಖ್ಯ ಮಂತ್ರಿಗಳು ಇಂಡಿಯಾ ಸರಕಾರಕ್ಕೆ ತಿಳಿಸಿದ್ದರು ಈಗ ಸುಭಾಸ ಬಾಬುಗಳು ನೀವು ಯಾರ ಸಲಹೆ ಮತ್ತು ಅನುಮತಿಯಿಂದ ರಾಜಿ ಕೊಡುವೆವೆಂದು ತಿಳಿಸಿರುವಿರೆಂದು ಮಂತ್ರಿಗಳಿಗೆ ಪ್ರಶ್ನಿಸಿದ್ದಾರೆ ಮತ್ತು ತ್ರಿಪುರಿ ಕಾಂಗ್ರೆಸಿನಲ್ಲಿ ಕೂಡಾ ಕಾಂಗ್ರೆಸಿನಲ್ಲಿ ಒಡಕುಗಳುಂಟಾಗುವಂತೆ ಅನೇಕ ಮಂತ್ರಿಗಳು ಪ್ರಯತ್ನಿಸಿದುವೆಂದು ಆಪಾದಿಸಿರುವರು. ಆದುದರಿಂದ ಕಾರ್ಯಕಾರಿ ಮಂಡಳಿಯೂ ಪಾರ್ಲಿಮೆಂಟರಿ ಸಬ್ ಕಮಿಟಿಯೂ ಲೋಪವಾಗಿರುವ ಈ ಸಮಯದಲ್ಲಿ ಕಾಂಗ್ರೆಸ್ ಅಧ್ಯಕ್ಷರೊಡನೆ ಮಂತ್ರಿಗಳು ತಮ್ಮ ಧೋರಣೆಯನ್ನು ಸ್ಪಷ್ಟೀಕರಿಸಬೇಕೆಂದು ತಿಳಿಸಿರುವರು.

ಹೈದರಾಬಾದಿನಲ್ಲಿ ವಾರ್ತಾ ಪತ್ರಿಕೆಗಳ ಮೇಲೆ ಪ್ರತಿಬಂಧ

ಹೈದರಾಬಾದ ಸರಕಾರವು ಸುಮಾರು ೬೦೦ ಪತ್ರಿಕೆಗಳು ತಮ್ಮ ದೇಶಕ್ಕೆ ಬಾರದಂತೆ ಅವುಗಳ ಮೇಲೆ ಪ್ರತಿಬಂಧಕವನ್ನು ಹಾಕಿದೆ ಯಾರೊಬ್ಬನ ಕೂಡೆಯೂ ಇಂಥಾ ಪತ್ರಿಕೆಗಳು ಸಿಕ್ಕಿಬಂದಲ್ಲಿ ಅವನನ್ನು ಶಿಕ್ಷೆಗೆ ಗುರಿಪಡಿಸಲಾಗುವುದೆಂದು ಸಾರಿರುವರು.

ಮುಂಬಯಿಯಲ್ಲಿ ರಾಷ್ಟ್ರೀಯ ಸಪ್ತಾಹ

ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಅಧ್ಯಕ್ಷರಾದ ಸಾಮದಾರ ಶ್ರೀ ಮಂಗಲದಾಸ ಪಕ್ವಾಸರು ಜಯಲಕ್ಷ್ಮಿ ಎಂಬ ಹಡಗದ ಮೇಲೆ ಧ್ವಜಾರೋಹಣವನ್ನು ಮಾಡಲು ತೆರಳಿದಾಗ ಕೆಂಪಂಗಿ ಸ್ವಯಂಸೇವಕರು ಅವರಿಗೆ ಕೊಟ್ಟ ಗಾರ್ಡ್ ಒಫ್ ಓನರ್

ಪೆಲೆಸ್ತೀನ ಸಮಸ್ಯೆ

ಅಂತರ್ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯು ಬಹಳ ಕೆಟ್ಟುಹೋಗಿರುವುದರಿಂದ ಬ್ರಿಟಿಷರಿಗೆ ತಲೆ ಕೆದರಲಿಕ್ಕೆ ಸಮಯವಿಲ್ಲದಷ್ಟು ಕೆಲಸವಾಗಿದೆ. ಆದ್ದರಿಂದ ಪೆಲೆಸ್ತೀನ ಸಮಸ್ಯೆಯನ್ನು ಬೇಗನೆ ಬಿಡಿಸುವ ವಿಚಾರವನ್ನು ಅವರು ಮಾಡಿದ್ದಾರೆ ಕೈರೋ ಉಳಿಕೊಂಡಿರುವ ಅರಬ ಪ್ರತಿನಿಧಿಗಳೊಂದಿಗೆ ಪುನಃ ಸಂಧಾನಪ್ರಸ್ತಾಪವು ಆರಂಭವಾಗಿದೆ. ಈಜಿಪ್ತ ಸರಕಾರವು ಈ ವಿಷಯದಲ್ಲಿ ತುಂಬ ಆಸಕ್ತಿಯನ್ನಿಟ್ಟಿದೆ.

ಹೈದರಾಬಾದ ಸತ್ಯಾಗ್ರಹ

—ಹೈದರಾಬಾದ ರಾಜಕೀಯ ಕೈದಿಗಳನ್ನು ನಿಜಾಮ ಸರ್ಕಾರವು ಬಿಟ್ಟಿದೆಯಾದರೂ ಅವರ ಮೇಲೆ ಹೊರಿಸಿದ್ದ ಜುಲುಮಾನೆ ಹಣವನ್ನು ವಸೂಲು ಮಾಡುವ ಕಾರ್ಯಕ್ರಮವನ್ನು ಸರಕಾರವು ಕೈಕೊಂಡಿರುವುದು ಆಶ್ಚರ್ಯಕ್ಕೆ ಕಾರಣವಾಗಿದೆ. ಇದರಿಂದ ಸರಕಾರದ ಮನೋಗತವನ್ನು ತಿಳಿಯಲಿಕ್ಕೆ ಕಷ್ಟವಾಗಿದೆ. ಸರಕಾರವು ಇಂಗ್ಲೀಷ ಮತ್ತು ದೇಶಭಾಷೆಯ ೬೦೦ಕ್ಕೆ ಮೀರಿ, ವರ್ತಮಾನ ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿ ಅವು ರಾಜ್ಯವನ್ನು ಪ್ರವೇಶಿಸಬಾರದೆಂದು ನಿಷೇಧಿಸಿದೆ. ಆರ್ಯ—ಸತ್ಯಾಗ್ರಹವು ಯಥಾಪ್ರಕಾರ ನಡೆದಿದೆ ಕೈದುಗಳೂ ಶಿಕ್ಷೆಗಳೂ ಆಗಿವೆ. ಅಜಮೀರದಿಂದ ಮುನ್ನೂರು ಸತ್ಯಾಗ್ರಹಿಗಳ ಒಂದು ದಳವು ಸ್ಪೆಶಲ ಟ್ರೈನಿನಲ್ಲಿ ತಾ. ೨೧ರ ದಿನ ಶೋಲಾಪುರವನ್ನು ಮುಟ್ಟಿ, ಮರುದಿನ ಗುಲ್ಬರ್ಗದಲ್ಲಿ ಸತ್ಯಾಗ್ರಹ ಮಾಡುವರು.

ಸ್ವದೇಶಾಭಿಮಾನಿ

ತಾರೀಖು ೨೧—೪—೧೯೩೯

ಶಿಕ್ಷಣ ಭಾಷೆ

— ೦೦೦ —

ಮೊನ್ನೆ ನಮ್ಮ ವಿದ್ಯಾಮಂತ್ರಿಗಳು ಮಂಗಳೂರಿಗೆ ಬಂದು ಕರೆದ ಸಭೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಮಾಧ್ಯಮಿಕ ಶಿಕ್ಷಣ ಭಾಷೆ ಯಾವುದಾಗುವುದು ಎಂಬ ಪ್ರಶ್ನೆಯ ಪಿಸು ಮಾತುಗಳೇ ಅಲ್ಲಲ್ಲಿ ಕೇಳಬರುತ್ತಿವೆ. ಶಿಕ್ಷಣವನ್ನು ಮಾತೃಭಾಷೆಯಲ್ಲಿಯೇ ಕಲಿಸಬೇಕೆಂದು ಸರಕಾರದವರು ಖಡ್ಡಾಯವಾದ ನಿಯಮವನ್ನು ಮಾಡಿದ್ದಾರೆ. ಈ ವಿಷಯದಲ್ಲಿ ಏನಾದರೂ ತೊಂದರೆಗಳು ಅನಾನುಕೂಲತೆಗಳು ಇವೆಯೋ ಎಂಬುದನ್ನು ತಿಳಿದು ತಕ್ಕ ಸಲಹೆಯನ್ನು ಪಡೆಯುವುದೇ ನಮ್ಮ ವಿದ್ಯಾಮಂತ್ರಿಗಳ ಆಗಮನದ ಮುಖ್ಯ ಕಾರಣವಾಗಿತ್ತೆಂದು ಕೇಳುತ್ತೇವೆ.

ಇಲ್ಲಿಯ ಕ್ರೈಸ್ತ ಮತದವರಲ್ಲಿ ಹಲವರು ನಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಶಿಕ್ಷಣ ಕೊಡಬೇಕೆಂಬ ಈ ಯೋಚನೆಗೆ ಅಸಮ್ಮತಿಯನ್ನು ಸೂಚಿಸುತ್ತಲಿರುವರು. ತಮ್ಮ ಭಾಷೆಯು ಕನ್ನಡವಲ್ಲ, ಆದುದರಿಂದ ನಮಗೆ ಕನ್ನಡ ಕಲಿಯಲು ಬಹಳ ಕಷ್ಟ, ಈಗ ಕನ್ನಡ ಪಾಠಗಳನ್ನು ಕೂಡಾ ಇಂಗ್ಲಿಷಿನಲ್ಲಿ ವಿವರಿಸುವ ಅನೇಕ ಸಂದರ್ಭಗಳು ಬಂದೊದಗುತ್ತವೆಂದು ಕೋಲೇಜಿನ ಒಬ್ಬ ಅಧ್ಯಾಪಕರ ಆಕ್ಷೇಪವಿತ್ತು. ಇನ್ನೊಬ್ಬರದು ಮಲೆಯಾಳೀ ಭಾಷೆಯಾಗಬಹುದೆಂಬ ಸಲಹೆ.

ಆಕ್ಷೇಪಗಳನ್ನು ಎಷ್ಟು ಬೇಕಾದರೂ ತಂದೊಡ್ಡಬಹುದು. ಈ ಆಕ್ಷೇಪಗಳಿಗೆ ಅನುಕೂಲವಾದ ರೀತಿಯಲ್ಲಿ ನಮ್ಮ ಮಂತ್ರಿಗಳು ವರ್ತಿಸುವರೋ ಎಂಬ ಸಂಶಯವುತ್ಪನ್ನವಾಗಿರುವುದು. ಕೊಂಕಣಿ ಮಾತನಾಡುವ ಸಂಸ್ಥೆಗಳಲ್ಲಿ ಸಾರಸ್ವತರಾಗಿ ಗೌಡಸಾರಸ್ವತ ಮೊದಲಾದ ಇತರ ಜಾತಿಗಳೂ ಇರುತ್ತವೆ. ಕನ್ನಡಕ್ಕೆ ಇವರ ಎಳ್ಳಷ್ಟು ಆಕ್ಷೇಪವು ಕಂಡುಬರುವುದಿಲ್ಲ. ಅದಲ್ಲದೆ ಅಧಿಕಸಂಖ್ಯಾಕರಾಗಿ ತುಳು ಮಾತಾಡುವುದರಿಂದಲೂ ಇದಕ್ಕೆ ಆಕ್ಷೇಪಗಳು ಬಂದಿರುದಿಲ್ಲ. ಕೇವಲ ಕನ್ನಡ ಭಾಷೆಯು ಕಲಿಯಲು ತಮಗೆ ಕಷ್ಟವೆಂಬ ಒಂದೇ ದೃಷ್ಟಿಯಿಂದ ಕ್ರೈಸ್ತರು ಇದನ್ನು ವಿರೋಧಿಸುತ್ತಿರುವರು. ಇದು ಸಮಂಜಸವಲ್ಲ. ಇಂಗ್ಲಿಷನ್ನು ಮೊದಲು ನಮಗೆ ಕಲಿಯುವಾಗ ಎಷ್ಟು ಕಷ್ಟವಾಗಿ ಕಂಡುಬರುತ್ತದೋ ಅದೇ ರೀತಿಯಲ್ಲಿ ಕನ್ನಡವು ಮೊದಲು ಕಷ್ಟವಾಗಿ ತೋರಿ ಕ್ರಮೇಣ ಸುಲಭವಾಗಿ ಕಂಡುಬಾರದಿರದು. ಕನ್ನಡಕ್ಕೆ ಆಕ್ಷೇಪವೆತ್ತುವವರು ಪ್ರಾರಂಭದಲ್ಲಿಯೇ ಇಂಗ್ಲಿಷನ್ನು ಯಾ ಇತರ ಭಾಷೆಯನ್ನು ಕಲಿತಿರುವುದಿಲ್ಲ. ಎಲ್ಲಾ ಭಾಷೆಗಳನ್ನೂ ಕ್ರಮೇಣ ಶಾಲೆಗಳಿಗೆ ಹೋಗಿ ಕಲಿಯುವುದಾಗಿರುತ್ತದೆ. ಅದೇ ರೀತಿಯ ಆಸಕ್ತಿಯನ್ನು ಕನ್ನಡಕ್ಕೆ ತೋರಿಸಿದಲ್ಲಿ ಕನ್ನಡವು ಇಂಗ್ಲಿಷಿಗಿಂತ ಸುಲಭವಾಗಿ ಕಂಡುಬಾರದಿರದು.

ಕನ್ನಡ ಭಾಷೆಯು ಕಷ್ಟವಾಗಿ ತೋರುವ ಕೆಲವು ವಿದ್ಯಾಸಂಸ್ಥೆಗಳಿಗೆ ಈಗೆ ತಾತ್ಕಾಲಿಕವಾದ ವಿನಾಯತಿಯನ್ನು ಕೊಟ್ಟು ಮುಂದೆ ಆ ಕಾಲವು ತೀರಿದೊಡನೆ ಕನ್ನಡವನ್ನೇ ಕಡ್ಡಾಯವಾಗಿ ಕಲಿಸುವಂತೆ ಮಾಡಬಹುದು. ದರೆ ಮೊನ್ನೆ ಗಣಪತಿ ಹೈಸ್ಕೂಲಿನಲ್ಲಿ ಜರುಗಿದ ಮುಖ್ಯೋಪಾಧ್ಯಾಯರ ಪರಿಷತ್ತಿನಲ್ಲಿ ವಿದ್ಯಾಧಿಕಾರಿಗಳೇ ಆಕ್ಷೇಪವೆತ್ತುವವರಿಗೆ ಪ್ರೋತ್ಸಾಹವನ್ನು ಕೊಟ್ಟಂತೆ ಕಂಡುಬಂದಿತ್ತು. ಕಾಂಗ್ರೆಸು ಮಾತೃಭಾಷೆಯಲ್ಲಿಯೇ ಶಿಕ್ಷಣವನ್ನು ಕೊಡಬೇಕೆಂಬ ಧೋರಣೆಯನ್ನು ಕೈಕೊಂಡಿರುವಾಗ ಅಂಥಾ ಕಾರ್ಯಕ್ರಮವನ್ನು ಮುಂದೊತ್ತಲು ಸಹಾಯಕರಾದ ಕಾಂಗ್ರೆಸ್ ಅಧಿಕಾರಿಗಳೇ ಈ ಧೋರಣೆಯನ್ನು ವಿರೋಧಿಸುತ್ತಿರುವವರಿಗೆ ಆಶ್ವಾಸನೆ ಕೊಡುತ್ತಿರುವುದು ವಿರೋಧಿಗಳಿಗೆ ಪ್ರೋತ್ಸಾಹವನ್ನು ಕೊಟ್ಟಂತೆಯೇ ಸರಿ. ಇದು ಖೇದಾಸ್ಪದವಾದ ಸಂಗತಿ. ನಮ್ಮ ಸರಕಾರವು ಕಡ್ಡಾಯವಾಗಿ ಹಿಂದುಸ್ಥಾನಿಯನ್ನು ಕಲಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಎಷ್ಟೋ ಮಂದಿ ಹಿಂದೀ ಶಿಕ್ಷಣಕ್ಕೆ ವಿರೋಧಿಗಳಾಗಿದ್ದಾರೆ. ಅದಲ್ಲದೆ ಚಳವಳವನ್ನೂ ಸತ್ಯಾಗ್ರಹವನ್ನೂ ಹೂಡಿ ಸೆರೆಮನೆಯನ್ನು ಸೇರುತ್ತಿರುವರು. ಹಿಂದೀಗಿಂತಲೂ ನಮಗೆ ಕನ್ನಡವು ಹತ್ತಿರವಾಗಿರುತ್ತದೆ ಮತ್ತು ಸುಲಭವಾಗಿರುತ್ತದೆ. ವ್ಯಾಪಾರ ವಹಿವಾಟುಗಳಲ್ಲಿ ಈಗ ಇಲ್ಲಿ ಬಳಕೆಯಲ್ಲಿರುವ ಭಾಷೆಯು ಕನ್ನಡವಾಗಿರುತ್ತದೆ. ಆದುದರಿಂದ ಸರಕಾರವು ಇಲ್ಲಿ ಎಲ್ಲಾ ವಿಧಗಳಲ್ಲಿಯೂ ಬಳಕೆಯಲ್ಲಿರುವ ಕನ್ನಡ ಭಾಷೆಯನ್ನೆ ಮಾಧ್ಯಮಿಕ ಭಾಷೆಯನ್ನಾಗಿ ಮಾಡುವರೆಂದು ಹಾರೈಸುತ್ತೇವೆ.

ಕನ್ನಡದಲ್ಲಿಯೇ ಶಿಕ್ಷಣವು ಕಡ್ಡಾಯವಾಗಿ ಇನ್ನೊಂದು ವರ್ಷದೊಳಗಾಗಿಯೇ ಮಾಡಲಾಗುವುದೆಂದು ಮಾಜಿ ವಿದ್ಯಾಂಗದ ಮಂತ್ರಿಗಳಾಗಿದ್ದ ನಾಮದಾರ ಡಾ. ಸುಬ್ಬರಾಯನರು ಹಿಂದೆ ಮಂಗಳೂರಿಗೆ ಬಂದಿದ್ದಾಗ ಸ್ಪಷ್ಟೀಕರಿಸಿದ್ದರು. ಅಂದು ಅವರ ಸೆಕ್ರೆಟರಿಗಳಾಗಿದ್ದು ಇಂದು ವಿದ್ಯಾಂಗ ಮಂತ್ರಿಗಳಾದ ನಾಮದಾರ ಸಿ. ಜೆ. ವಾರ್ಕಿಗಳಾದರೂ ಎಲ್ಲಾ ಆಕ್ಷೇಪಗಳನ್ನು ಮೂಲೆಗೊತ್ತಿ ಕನ್ನಡದಲ್ಲಿಯೇ ಶಿಕ್ಷಣ ಪ್ರಾರಂಭವಾಗುವಂತೆ ಮಾಡುವರೆಂದು ನಂಬುತ್ತೇವೆ. ಇನ್ನು ಕನ್ನಡಕ್ಕೆ ಅಸಮ್ಮತಿ ಸೂಚಿಸುವವರು ಕೂಡಾ ಸರಕಾರದ ಈ ಮಾತೃಭಾಷೆಯಲಿ ಶಿಕ್ಷಣ ಪ್ರಚಾರದ ಧೋರಣೆಗೆ ಅಡ್ಡಿಯನ್ನುಂಟುಮಾಡದೆ ಚುನಾವಣೆಯ ಕಾಲದಲ್ಲಿ ಉತ್ಸಾಹ ಪ್ರೋತ್ಸಾಹವಿತ್ತ ನಮ್ಮ ಜಿಲ್ಲೆಯು ಈ ಕಾರ್ಯದಲ್ಲಿಯೂ ತಕ್ಕ ಬೆಂಬಲವನ್ನಿತ್ತು ಬಾಕಿ ಜಿಲ್ಲೆಗಳಿಗೆ ಮೇಲ್ಪಂಕ್ತಿಯಾಗಲೆಂದು ಹಾರೈಸುತ್ತೇವೆ.

ಲಾಹೋರು ಕಿಸಾನ ಸತ್ಯಾಗ್ರಹ

ಪಂಜಾಬ ಸರಕಾರದ ಕರಕಾಂದಾಯ ನೀತಿಯನ್ನು ವಿರೋಧಿಸಿ ಪಂಜಾಬದ ಸಾವಿರಾರು ಮಂದಿ ಕಿಸಾನರು ಈಗ್ಗೆ ಕೆಲವು ದಿನಗಳಿಂದ ಸರಕಾರ ಕಛೇರಿಯ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾರೆ. ಈಗೀಗ ಹೆಂಗಸು ಮಕ್ಕಳು ಕೂಡ ಸತ್ಯಾಗ್ರಹದಲ್ಲಿ [illegible] ಸಿದ ಕರಕಾಂದಾಯದಿಂದ ಕಿಸಾನರಿಗೆ ನಿಜವಾಗಿಯೂ ಕಷ್ಟನಷ್ಟಗಳಿವೆಯೆಂದು ಸಿದ್ಧ ಮಾಡಿದರೆ ಕಾನೂನನ್ನು ಸಹಾನುಭೂತಿಯಿಂದ ಆಲೋಚಿಸುವುದಾಗಿ ಪ್ರಧಾನರಾದ ಸರ್ ಸಿಕಂದರ ಹಯ್ಯಾತಖಾನರು ಭರವಸೆ ಕೊಟ್ಟಿದ್ದಾರೆ. ಆದುದರಿಂದ ಸತ್ಯಾಗ್ರಹವನ್ನು ನಿಲ್ಲಿಸುವ ಅಥವಾ ಮುಂದರಿಸುವ ಬಗ್ಗೆ ಆಲೋಚನೆಯಾಗುತ್ತಿದೆ.

ಶ್ರೀ ಸುಭಾಷಚಂದ್ರ ಬೋಸರು

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸುಭಾಷ ಬಾಬುಗಳ ಆರೋಗ್ಯವು ಸುಧಾರಿಸುತ್ತಾ ಬಂದಿರುವುದು. ಇವರು ಇಂದು ಕಲ್ಕತ್ತಕ್ಕೆ ಪ್ರಯಾಣವನ್ನು ಬೆಳೆಸುವರು. ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಈ ಮೊದಲೇ ಪ್ರಕಟಿಸಿದಂತೆ ಎಪ್ರಿಲ್ ೨೮ಕ್ಕೆ ಸೇರದೆ ೨೯ಕ್ಕೆ ಕಲ್ಕತ್ತದಲ್ಲಿ ಸೇರುವದು. ಹೊಸದಾಗಿ ನೇಮಕವಾಗಲಿರುವ ಕಾರ್ಯಕಾರೀ ಮಂಡಲಿಯು ೨೭ಕ್ಕೆ ಸೇರುವುದು. ರಾಜಕೋಟೆಯ ಈಗಣ ಪರಿಸ್ಥಿತಿಯನ್ನು ಕಾಣುವಾಗ ಮಹಾತ್ಮಜಿಯವರು ಕಾಂಗ್ರೆಸ್ ಕಮಿಟಿಯ ಸಭೆಗೆ ಕಲ್ಕತ್ತಕ್ಕೆ ಹೋಗುವ ಸಂಗತಿಯು ಸಂಶಯಾಸ್ಪದವಾಗಿದೆಯೆಂದು ಹೇಳುತ್ತಾರೆ.

The South Kanara District Teachers' Guild,

MANGALORE

Memorandum submitted to the Hon'ble Minister for Education Government of Madras.

Subject: The Medium of Instruction in High Schools in South Kanara District, discussion by the Conference of Headmasters on 12-4-1939

The Conference of Headmasters in the District held on the 12th of this month in Mangalore to discuss the question of the medium of instruction in the Higher Forms, reached conclusions, as summarised by the Hon'ble Sri C. J Varkey who presided over it, which, we submit, are a dangerous departure from the declared policy of the Government A report of the Conference is published in 'The Madras Mail' of 15-4-1939 and in 'The Hindu' of 17-4-1939 on page 17

In opening the Conference, the Hon'ble Minister mentioned, 'Now there is the question of continuing that exemption, or of granting limited or permanent exemption In thus referring to the possibility of granting 'permanent exemption to schools the Hon'ble Minister seemed to give the go-by to the very spirit and purpose of the Government policy It is therefore hardly surprising that the Headmasters of St Aloysius College High School and the Milagres High School of Kallianpur advanced arguments for Catholic schools being granted 'permanent exemption' In essence these arguments were two-fold

The first argument was that Catholic students, whose mother tongue is Konkani could not understand subjects taught in Kannada, and that this difficulty was not of a passing nature but of a permanent nature The second argument was that since most of the Catholic boys go to Bombay and to North India for earning their livelihood their knowledge of Kannada would be of no use to them and that it would be a handicap to them if they were not taught in English The Hon'ble Minister seemed to accept the force of these arguments

As regards the first argument we beg to place before you the following facts In all the Elementary Schools in the district, many of them Catholic schools, Kannada is the medium of instruction, and it hardly stands to reason to say that such pupils cannot understand subjects taught in the higher forms in Kannada But the source of the difficulty, to the extent that it exists, is that in the Colleges and High Schools run by Catholic Missions (and these form a small fraction even of Catholic schools in the district) the medium of instruction is English even in the lower secondary and primary classes But such institutions are confined mostly to the Mangalore Municipal area The anglicised atmosphere, in which some Catholic children are brought up in their homes, is confined only to a few families of Catholics resident in the City of Mangalore and is definitely absent from the rest of the district. We might point out that this difficulty is not felt by other sections of the population whose mother-tongue is Konkani, nor is it felt by the Tulu-speaking people.

As regards the second argument, we desire to point out that the vast majority of the Catholic population draws its sustenance from the soil and does not leave the district. Moreover this argument, though accepted for the moment, is refuted by what the Hon'ble Minister said in another context towards the end of the Conference that English remained as a language subject, and that it was not cut out altogether

An interesting side-issue raised is, in our opinion of utmost importance The question was raised, What would be done if in a Catholic school there is a minority of students who are non-Catholics The conclusion arrived at was that if the number is large enough and then if there is a demand for instruction in Kannada a parallel Kannada section might be opened If this is uneconomical the authorities of the school would not open a separate section We submit that this would sabotage the whole policy of Government in that event a boy whose mother tongue is Kannada can go to a Catholic school and thus defeat the declared policy of the Government of students getting educated through the regional language In an area served by only one High School (as in Kallianpur) students will be forced to accept tuition through English even if they desire to be taught in Kannada

We beg to submit that it was only in last November that the Hon'ble Dr P Subbaroyan, the then Minister for Education, opening the Education Week in Mangalore said that the Government was committed to the policy of Vernacularization, that South Kanara must adjust itself to Kannada that the exemption granted to the District for one year was to afford time for adjustment, and that such exemptions could not be granted year after year. And now is raised the question of permanent exemption to a part of the population which has taken root in the soil and which is not less Indian than any other part

Considering all the difficulties in our District, we submit that the right solution is that in giving exemption for a limited period, wherever necessary, the following conditions be laid down to ensure that the schools will fall in line with the Government policy as quickly as possible

(1) An immediate beginning should be made to start Vernacularization in the primary and lower secondary sections in schools where this has not yet been adopted and (2) The progress in Vernacularization in such schools is reported by the department to be satisfactory

We appeal to you to give your kind consideration to this Memorandum, and to declare again the Government policy in unambiguous terms

ರಾಜಕೋಟೆಯಲ್ಲಿ

ಸಂತ ಗಾಂಧಿಯ ಆನಂದದಾಯಕ ವಿಜಯ

ಟೈಮ್ಸ್ ಪತ್ರಿಕೆಯ ವಿಚಾರ ವಿಮರ್ಶೆ

ರಾಜಕೋಟೆಯ ವಿವಾದದ ಕುರಿತು ಫೆಡರಲ್ ಕೋರ್ಟಿನ ಪ್ರಧಾನ ನ್ಯಾಯಾಧೀಶರು ಕೊಟ್ಟ ತೀರ್ಮಾನವು ಪ್ರಕಟವಾದೊಡನೆ ಮಹಾತ್ಮರು ಕೈಕೊಂಡ ಉಪವಾಸ ವ್ರತವು ಎಷ್ಟು ನ್ಯಾಯಪೂರ್ಣವಾಗಿತ್ತೆಂಬುದು ಸ್ಪಷ್ಟವಾಯಿತು. ಮಹಾತ್ಮರ ಕಡು ದ್ವೇಷಿಗಳಾದವರು ಕೂಡ ಈ ವಿಷಯ ಅವರ ಆಕ್ಷೇಪಕರನ್ನು ನಿಲ್ಲಿಸಿಬಿಟ್ಟು ಮೌನರಾಗಿದ್ದಾರೆ. ದೂರದ ಅಮೇರಿಕನರು ಸಹ ಈ ಕುರಿತು ಮಹಾತ್ಮರನ್ನು ಬಾಯಿ ತುಂಬಾ ಪ್ರಶಂಸಿಸಿದ್ದಾರೆ.

ಆನಂದದಾಯಕ ವಿಜಯ

ರಾಜಕೋಟೆಯ ಇತ್ಯರ್ಥವು ಸಂತ ಗಾಂಧಿಯ ಆನಂದದಾಯಕ ವಿಜಯವೆಂದು ಟೈಮ್ಸ್ ಪತ್ರಿಕೆಯು ಬರೆದಿದೆ. ಅವರ ಉಪವಾಸ ಖಡ್ಗಕ್ಕಿಂತ ಬಲಶಾಲಿಯಾಯಿತು. ಅಮೇರಿಕದ ಮೂಲನಿವಾಸಿಗಳು ಅಸ್ತ್ರಶಸ್ತ್ರಗಳಿಂದ ಸನ್ನದ್ಧರಾಗಿದ್ದರಾದರೂ, ಗಾಂಧಿಯವರ ಉಪವಾಸವು ಸಂಪಾದಿಸಿದ ರಿಯಾಯಿತಿಯ ಒಂದಂಶವನ್ನಾದರೂ ಅವರು ಸಂಪಾದಿಸಲಿಕ್ಕೆ ಸಮರ್ಥರಾಗಲಿಲ್ಲ.

ಗಾಂಧಿಯವರೀಗ ಕಾಂಗ್ರೆಸಿನೊಳಗೆ ಇರುವುದಿಲ್ಲ. ಆದ್ದರಿಂದ ಅವರು ತಮ್ಮ ಶಕ್ತಿಯ ಪರೀಕ್ಷೆಗೆ ಹೊಸ ಹಾದಿಯನ್ನು ಹಿಡಿಯಬೇಕಾಯಿತು. ಈ ಕಾರಣದಿಂದಲೇ ಅವರು ರಾಜಕೋಟೆಯ ಪ್ರಶ್ನೆಯನ್ನು ಎತ್ತಿ ಹಿಡಿದು ಕೇವಲ ೨೮೨ ಚದರ ಮೈಲು ವಿಸ್ತಾರ ಮತ್ತು ೭೫ ಸಾವಿರದ ಜನಸಂಖ್ಯೆಯುಳ್ಳ ರಾಜಕೋಟೆಯ ಠಾಕೋರರನ್ನು ಇದಿರಿಸಿದರು. ಈ ರಾಜ್ಯವು ಸಣ್ಣದಾಗಿದ್ದರೂ ಅದರ ರಾಜರು ಮಾತ್ರ ದೊಡ್ಡ ಸಂಸ್ಥಾನಾಧೀಶರಿಗಿಂತಲೂ ಮಿಗಿಲಾಗಿ ನಡ್ಡ ದೃಷ್ಟಿಯಿಂದ ರಾಜ್ಯವನ್ನಾಳುತ್ತಿದ್ದರು.

ಮುಳ್ಳಿನ ಹಾದಿ

ಆದರೆ ಅವರು ಮಹಾತ್ಮರ ಗುರಿಗೆ ಕಾರಣೀಭೂತರಾಗಲು ಸಿದ್ಧರಿರಲಿಲ್ಲ. ಇದರಿಂದ ಬ್ರಿಟಿಷ ಸರಕಾರಕ್ಕಾದರೂ ಮಹಾತ್ಮರ ಉಪವಾಸವು ಮುಳ್ಳಿನ ಹಾದಿಯಾಯಿತು. ಮಹಾತ್ಮರು ಮೃತರಾದರೆ ಬ್ರಿಟಿಷರು ಅದಕ್ಕೆ ಹೊಣೆಯಾಗುವರೆಂದು ಕಾಂಗ್ರೆಸು ಪ್ರಾಂತಿಕ ಸರಕಾರಗಳು ಮೊದಲೇ ವಾಯ್ಸರಾಯರಿಗೆ ತಿಳಿಸಿಬಿಟ್ಟಿದ್ದುವು. ಹಾಗೆಂದು ಸಾರ್ವಭೌಮ ಸರಕಾರವು ಪ್ರಜೆಗಳ ಸುಧಾರಣೆಗೆ ಠಾಕೋರರನ್ನು ಒತ್ತಾಯಿಸಿದ್ದರೆ, ಹಾಗೂ ಕೆಲಸವು ಕೆಡುತ್ತಿತ್ತು. ರಾಜಕೋಟೆವನ್ನೇ ಉದಾಹರಣೆಯಾಗಿ ತೆಗೆದುಕೊಂಡು ಕಾಂಗ್ರೆಸ ಕೆಲಸಗಾರರು ಇತರ ಸಂಸ್ಥಾನಗಳಲ್ಲಿಯೂ ಚಳವಳಿ ಹೂಡಿ ದೇಶೀ ರಾಜರು ಕಾಂಗ್ರೆಸಿಗೆ ಬಲಿಯಾಗುವಂತೆ ಮಾಡುತ್ತಿದ್ದಾರು. ಜನತೆಯು ಮಹಾತ್ಮರ ಮರಣವೆಂದೊಡನೆ ಎಷ್ಟು ಗಾಬರಿಯಾಗುತ್ತದೆಂಬುದನ್ನು, ಅವರು ಉಪವಾಸ ಹಿಡಿದಾಕ್ಷಣ ಬೊಂಬಾಯಿ ಸ್ಟಾಕ ಎಕ್ಸೆಚೇಂಜು ಬಂದು ಮಾಡಲ್ಪಟ್ಟಿತೆಂಬುದರಿಂದ ತಿಳಿಯಬಹುದು.

ಮಧ್ಯಪ್ರವೇಶದ ಕಾರಣ

ಆದ್ದರಿಂದ ವಾಯ್ಸರಾದ ಲಾರ್ಡ್ ಲಿನ್ಲಿಥ್ಗೋರವರು ಗಾಂಧಿಯವರಿಗೆ ಶಾಂತಿ ಬಿಟ್ಟು ಅವರೊಡನೆ ಸಂಧಾನದ ಪ್ರಸ್ತಾಪವನ್ನೆತ್ತಿದ್ದರು. ವಿಲಾಯತಿಯಲ್ಲಿ ಬ್ರಿಟಿಷ ಮಂತ್ರಿ ಮಂಡಲವು ಕೂಡ ಅವಸರದ ಒಂದು ವಿಶೇಷ ಸಭೆಯನ್ನು ಕರೆದು ಪರಿಸ್ಥಿತಿಯನ್ನು ಪರ್ಯಾಲೋಚಿಸಿತು. ಅದೂ ಗಾಂಧಿಯವರನ್ನು ಒಪ್ಪಿಸಲಿಕ್ಕೆ ಸ್ವಯಃ ಕ್ರಮಮಾಡಿತು. ಇದಾದ ಕೂಡಲೇ ಮಹಾತ್ಮಾಜಿಯವರು ಉಪವಾಸವನ್ನು ಬಿಟ್ಟುಬಿಟ್ಟರೆಂಬ ವಾರ್ತೆಯು ದೇಶದಲ್ಲೆಲ್ಲ ಹರಡಿ, ಜನತೆಯನ್ನು ಆನಂದಸಾಗರದಲ್ಲಿ ತೇಲಿಸಿತು.

ರಾಜಕೋಟೆಯ ಉಪವಾಸವು ಜನಾಂಗದ ಜಯ

ಮಹಾತ್ಮಾಜಿಯವರ ಹೇಳಿಕೆ

ಹಿಂದುಸ್ಥಾನದ ನಕಾಶೆಯಲ್ಲಿ ರಾಜಕೋಟೆಯು ಒಂದು ಬಹು ಸಣ್ಣ ಸಂಸ್ಥಾನವಾಗಿರುವುದಾದರೂ ಅಲ್ಲಿ ನಡೆದ ಕಳವಳವು ಇಡೀ ಭೂಲೋಕಕ್ಕೆ ಸಂಬಂಧಪಟ್ಟದ್ದಾಗಿದೆ. ಆದ್ದರಿಂದ ನಾನು ಅಲ್ಪ ವಿಷಯವನ್ನು ಮಹತ್ವದ್ದಾಗಿ ಮಾಡಿದೆನೆಂದು ಹೇಳುವುದರಲ್ಲಿ ಅರ್ಥವಿಲ್ಲ. ನ್ಯಾಯನೀತಿಗೆ ವಿರುದ್ಧವಾಗಿರುವ ಮತ್ತು ದೇವರು ಕೂಡ ಮೆಚ್ಚದಂಥ ದುಷ್ಕಾರ್ಯಗಳ ದುರ್ಲಕ್ಷಣಗಳನ್ನು ಆರಂಭದಲ್ಲಿ ಚಿವುಟಿ ಹಾಕಬೇಕೆಂದು ನಾನು ಎಣಿಸಿದುದರಿಂದ, ನಾನು ರಾಜಕೋಟೆಗೆ ಅಷ್ಟು ಮಹತ್ವವನ್ನು ಕೊಟ್ಟೆ. ರಾಜಕೋಟೆಯ ವಿಜಯವು ಕೇವಲ ರಾಜಕೋಟೆಯ ಜನರ ವಿಜಯವಲ್ಲ. ಅದು ಇಡೀ ಹಿಂದೀ ಜನಾಂಗದ ವಿಜಯವಾಗಿದೆ. ತ್ರಿಪುರಿ ಕಾಂಗ್ರೆಸು ಯುದ್ಧದ ಸಿದ್ಧತೆಯನ್ನು ಮಾಡಿತಾದರೆ, ರಾಜಕೋಟೆಯಲ್ಲಿ ಯುದ್ಧವೇ ಆರಂಭವಾಯಿತು. ಅಹಿಂಸಾವಾದಿಗಳಿಗೆ ಸತ್ಯಾಗ್ರಹವು ಬಲವಾದ ಆಯುಧ. ಅದಕ್ಕೆ ಉಪವಾಸವೊಂದು ಗಣ್ಯ ಕವಚ. ಆದ್ದರಿಂದ ನಾನು ಉಪವಾಸವನ್ನು ಕೈಕೊಳ್ಳದಿದ್ದಲ್ಲಿ ರಾಜಕೋಟೆಯಲ್ಲಿ ರಕ್ತಪಾತವಾಗುತ್ತಿತ್ತು.

ಅಧಿಕಾರದಾಸನಾಗಲಿಲ್ಲ

ನಾನು ವಾಯ್ಸರಾಯರ ಹತ್ತಿರ ನಿಂತ ನಾಮಹೋದ್ದು ಅಸಹಕಾರ ತತ್ವಕ್ಕೆ ವಿರುದ್ಧವೆಂದು ಕೆಲವರು ಹೇಳುತ್ತಾರೆ. ಆದರೆ ವಾಯ್ಸರಾಯರ ಹತ್ತಿರ ನಾನು ಅಧಿಕಾರದಾಸನಾಗಿ ಹೋಗಲಿಲ್ಲ, ಅವರ ಕೃಪೆಗೆ ಪಾತ್ರನಾಗಲೇಕೆಂದೂ ಅವರ ಬಳಿಗೆ ಹೋಗಲಿಲ್ಲ. ಉಪವಾಸ ವ್ರತವನ್ನು ಕೈಕೊಂಡ ಕಾಲಕ್ಕೆ ಹಿಂದೀ ಜನಾಂಗದ ಮನೋಭಾವನೆಯ ಪರಿಣಾಮವು ಏನಾಗಬಹುದೆಂಬುದನ್ನು ಸೂಕ್ಷ್ಮದಲ್ಲಿ ಅರಿತುಕೊಂಡು ವಾಯ್ಸರಾಯರು ನನ್ನನ್ನು ಕರೆಕಳುಹಿಸಿದರು. ಅನುಕೂಲ ಸಂದರ್ಭವು ದೊರೆತಾಗ್ಗೆ ವಿರೋಧಿಯ ಹೃದಯ ಪರಿವರ್ತನೆಯಾಗುವಂತೆ ರಾಜಿಪಂಚಾಯಿತಿಗೆ ಒಪ್ಪುವುದೂ, ಸತ್ಯಾಗ್ರಹಿಯ ಕರ್ತವ್ಯ ಧರ್ಮಗಳಲ್ಲಿ ಒಂದಾಗಿದೆ. ಆದ್ದರಿಂದಲೇ ಲಾರ್ಡ್ ಇರ್ವಿನರ ಕಾಲದಲ್ಲಿಯೂ ನಾನು ಅವರೊಡನೆ ಒಡಂಬಡಿಕೆ ಮಾಡಿಕೊಂಡಿದ್ದೆ.

ಮುಖ್ಯ ನ್ಯಾಯಾಧೀಶರ ಇತ್ಯರ್ಥಕ್ಕೆ ನಾನು ಒಪ್ಪಿದುದರಿಂದ, ಗವರ್ನಮೆಂಟ್ ಒಫ್ ಇಂಡಿಯಾ ಆಕ್ಟನ್ನು ನಾನು ವಿರೋಧಿಸುವದರ ಬದಲಿಗೆ ಮನ್ನಿಸಿದಂತಾಯಿತೆಂದು ಕೆಲವರು ಟೀಕಿಸುತ್ತಾರೆ. ಸುಧಾರಣಾ ಸಮಿತಿಯ ರಚನೆ ಹೇಗಾಗುವುದೆಂಬುದರ ಕುರಿತು ಠಾಕೋರ ಸಾಹೇಬರು ಸರದಾರ ಪಟೇಲರಿಗೆ ಬರೆದ ಪತ್ರದ ಅರ್ಥವನ್ನು ಠಾಕೋರ ಸಾಹೇಬರು ಒಂದು ರೀತಿಯಾಗಿಯೂ ಸರದಾರ ಪಟೇಲರು ಇನ್ನೊಂದು ರೀತಿಯಾಗಿಯೂ ಮಾಡಿದರು. ವೈಸರಾಯರು ಇದರ ಇತ್ಯರ್ಥವನ್ನು ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶರ ಮೂಲಕ ಮಾಡಬೇಕೆಂದರು. ಅವರು ಪ್ರಸಿದ್ಧ ನ್ಯಾಯನೀತಿ ತಜ್ಞರು. ಅವರ ತೀರ್ಮಾನಕ್ಕೆ ಮಾನ್ಯತೆ ಕೊಟ್ಟ ಮಾತ್ರದಿಂದ, ಕೋರ್ಟು ಅದರ ಅಂಗವಾಗಿದೆಯೆಂದು ಗವರ್ನಮೆಂಟ್ ಒಫ್ ಇಂಡಿಯಾ ಆಕ್ಟನ್ನು ಮನ್ನಿಸಿದಂತಾಗಲಿಲ್ಲ. ಫೆಡರೇಶನನ್ನು ವಿರೋಧಿಸುವ ಕಾರ್ಯದಲ್ಲಿ ದೊರೆಯಬೇಕಾದ ಸಫಲತೆಯು ನಮ್ಮ ನಮ್ಮ ಶಕ್ತಿ ಸಾಮರ್ಥ್ಯವನ್ನು ಹೊಂದಿಕೊಂಡಿದೆಯಲ್ಲದೆ, ಸರ್ ಮಾರಿಸ್ ಗ್ವಾಯರರ ತೀರ್ಮಾನಕ್ಕೆ ಮಾನ್ಯತೆಯನ್ನು ಕೊಡುವುದರಲ್ಲಿ ಅಥವಾ ಕೊಡದಿರುವುದರಲ್ಲಿ ಇರುವುದಿಲ್ಲ.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ
ವಿಶೇಷ ವಾಹಿತಿಗೆ ಬರೆಯಿರಿ.

ಪಂಡಿತ ವೆಂಕಟೇಶ ಶಾಸ್ತ್ರಿ
ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್,
ಮೈಲಾಪುರ, ಮದ್ರಾಸು

ವಜೀರಿಸ್ಥಾನದಲ್ಲಿ ಮಿಲಿಟರಿ ಅಧಿಕಾರದ ಕೊನೆ

ವಾರದ ಆನಂದದಾಯಕ ವಾರ್ತೆ

ವಜೀರಿಸ್ಥಾನದಲ್ಲಿ ಮಿಲಿಟರಿ ಅಧಿಕಾರವನ್ನು ಕೊನೆಗೊಳಿಸಿ, ಅದರ ಶಾಸನ ಸೂತ್ರವನ್ನು ವಾಯ್ಸರಾಯರ ಪ್ರತಿನಿಧಿಯಾಗಿ ಗಡಿನಾಡಿನ ಗವರ್ನರರ ಕೈಗೆ ಒಪ್ಪಿಸುವ ಅಧಿಕಾರವನ್ನು ವಾಯ್ಸರಾಯಿ ಸರಕಾರವು ಮಾಡಿದೆ. ಎಷ್ಟೋ ವರ್ಷಗಳಿಂದ ಇಂಥ ಪರಿವರ್ತನವಾಗಬೇಕೆಂದು ಜನರ ಚಳವಳಿಯನ್ನು ಮಾಡಿ, ಈಗ ಅದಕ್ಕೆ ತಕ್ಕಷ್ಟು ಸಫಲತೆ ದೊರೆತಿರುವುದರಿಂದ, ದೇಶಕ್ಕೆ ದೇಶವೇ ಆನಂದ ಸಾಗರದಲ್ಲಿ ಮುಳುಗಿದೆ.

ವಜೀರಿಸ್ಥಾನವು ಬ್ರಿಟಿಷರ ಸರಕಾರಕ್ಕೆ ಬಂದಂದಿನಿಂದ ಆ ಪ್ರಾಂತ್ಯದಲ್ಲಿ ಸುಖ ಶಾಂತಿ ಸಮಾಧಾನಗಳು ಇರಲಿಲ್ಲ. ಆಗಾಗ ಅಲ್ಲಿ ವಾಸವಾಗಿದ್ದ ಬೇರೆ ಬೇರೆ ಪಂಗಡಗಳಿಗೂ ಬ್ರಿಟಿಷ ಸರಕಾರಕ್ಕೂ ಸಣ್ಣ ದೊಡ್ಡ ಸಂಗ್ರಾಮಗಳಾಗಿ ರಕ್ತ ಕಾಲುವೆಯೇ ಹರಿದುಹೋಗುತ್ತಿತ್ತು. ಸಾವಿರಾರು ಜನರ ರುಂಡಗಳು ಕಡಿದು ಬೀಳುತ್ತಿದ್ದುವು. ಮಾತ್ರವಲ್ಲ ಹಿಂದೂದೇಶಕ್ಕೆ ಸಂಗ್ರಾಮಗಳಿಂದ ಅಪರಿಮಿತ ಹಾನಿಯುಂಟಾಗುತ್ತಿತ್ತು. ಕಾರಣ, ಈ ಸಂಗ್ರಾಮಗಳ ಕೋಟ್ಯಾಂತರ ರೂಪಾಯಿಗಳ ಖರ್ಚನ್ನು ಹಿಂದೂದೇಶದ ಜನರು ತೆರಿಗೆಯ ರೂಪದಿಂದ ಸಹಿಸಬೇಕಾಗಿತ್ತು. ಹೀಗಿದ್ದರೂ ಕೂಡ ಅಲ್ಲಿ ಶಾಂತಿಯನ್ನು ಕಾಪಾಡುವುದು ಸರಕಾರಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಸರಕಾರದ ಆಡಳಿತ ನೀತಿಯಲ್ಲಿ ಬದಲಾವಣೆಯಾಗಿ ಅಲ್ಲಿಯ ಜನರನ್ನು ಶಸ್ತ್ರಬಲದಿಂದ ನಿಗ್ರಹಿಸುವ ಪ್ರಯತ್ನದ ಬದಲಿಗೆ ಪ್ರೇಮದಿಂದ ಒಲಿಸಿಕೊಳ್ಳಬೇಕೆಂದು ಪ್ರಜಾಪ್ರಮುಖರು ಸರಕಾರವನ್ನು ಒತ್ತಾಯಿಸಿದ್ದರು. ಆ ಒತ್ತಾಯದ ಪರಿಣಾಮವಾಗಿ ಈ ಪರಿವರ್ತನವಾಗಿದೆ.

ಈ ಪರಿವರ್ತನದಿಂದ ಇನ್ನು ಮುಂದೆ ಮಿಲಿಟರಿಯವರು ವಜೀರಿಸ್ಥಾನದ ಪಂಗಡಿಗರೊಂದಿಗೆ ಹೋರಾಡುವ ಧೋರಣವನ್ನು ಬಿಡಲಿದೆ ಎಂದು ಊಹಿಸಬಹುದು. ಇದರಿಂದ ಇನ್ನು ಅಲ್ಲಿ ವ್ಯರ್ಥ ರಕ್ತಪಾತವು ಜರಗಲಿಕ್ಕಿಲ್ಲ. ಜನರ ತೆರಿಗೆ ಹಣದ ಅಪವ್ಯಯ ಆಗುವುದೂ ತಪ್ಪಿ ದೇಶಕ್ಕೆ ಲಾಭವಾಗುವುದು. ಗವರ್ನರರು ಸ್ವತಃ ಜವಾಬ್ದಾರಿಯಿಂದ ವಜೀರಿಸ್ಥಾನದ ಆಡಳಿತವನ್ನು ನಡೆಸುವರಾದರೂ ಅವರು ಈ ವಿಷಯದಲ್ಲಿ ತಮ್ಮ ಮಂತ್ರಿಮಂಡಲವನ್ನು ಉಲ್ಲಕ್ಷಿಸಲಿಕ್ಕಿಲ್ಲ. ಅದರ ಅಭಿಪ್ರಾಯವಿದ್ದಂತೆಯೇ ಅವರು ಆಡಳಿತ ಮಾಡಬಹುದೇ. ಗಡಿನಾಡಿನಲ್ಲಿ ಈಗ ಕಾಂಗ್ರೆಸ ಮಂತ್ರಿಮಂಡಲವಿರುವುದರಿಂದ, ಅದರ ಪ್ರಭಾವವು ಪ್ರಾಂತ್ಯದಲ್ಲಿ ಚೆನ್ನಾಗಿ ಕಾಣಿಸಿಕೊಂಡು; ಎಷ್ಟೋ ವರ್ಷಗಳಿಂದ ಹಾಳಾಗಿದ್ದ ಶಾಂತಿಯು ಅಲ್ಲಿ ಈಗ ಪುನಃ ಸ್ಥಾಪಿಸಲ್ಪಡುವುದೆಂಬುದು ನಮ್ಮ ಎಣಿಕೆಯಾಗಿದೆ.

S. U. N. & Co.,

Silk Merchants,

Chaukhamba, BENARES CITY.

ಈಗಿನ ತರಹ (ಕಾಶಿ) ಬನಾರಿಸ್ ಶೀರೆ ಕಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿ. ಈಗ ಕಳೆಯ ತುಂಬಾ ಸ್ವಲ್ಪ ಮಾತ್ರ ನಾಲ. 18 ಮೊಳದ 2½ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ. 45ರಿಂದ 150 ಸಾಧಾರಣತರದ 18 ಮೊಳ ಸಣ್ಣ ಬುಟ ಶೀರೆಗಳು ರೂ. 35ರಿಂದ ರೂ. 55. ವಡಬು ಸಾದಾ ಶೀರೆ 18 ಮೊಳ ರೂ. 32ರಿಂದ ರೂ. 65. ಉದ್ದ ಮೊಳ 16, ಅಗಲ 2¼ ರೂ. 20ರಿಂದ 35ರ ವರೆಗೆ. ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾಗುವುದು.

ವಿಳಾಸ:
ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರೆಸ್ ಸಿಟಿ.

ರಾಜಕೋಟದ ಠಾಕೋರ ಸಾಹೇಬರ ಬಳಿ ಭಾಯಾತರ ಶಿಷ್ಟಮಂಡಳಿ

ದರ್ಬಾರ ಶ್ರೀ. ವೀರವಲ್ಲರಿಗೆ ಡಾಕ್ಟರ ಅಂಬೇಡ್ಕರರ ತಂತಿ

ಮುಸಲ್ಮಾನರು ಸಂಘಟಿತರಾಗಬೇಕೆಂದು ಸರ್ ಅಬ್ದುಲ್ಲಾ ಹಾರೂನರ ಸೂಚನೆ

ರಾಜಕೋಟದ ರಾಜಕೀಯ ಸುಧಾರಣಾ ಸಮಿತಿಯಲ್ಲಿ ಭಾಯಾತರಿಗೆ ಪ್ರಾತಿನಿಧ್ಯವನ್ನು ಕೊಡುವುದು ಅಸಾಧ್ಯವಾಗಿ ಕಂಡುಬಂದಂತೆ ಮುಸಲ್ಮಾನರಿಗೂ ಪ್ರಾತಿನಿಧ್ಯವನ್ನು ಕೊಡುವುದು ಅಸಾಧ್ಯವಾಗಿ ಕಂಡುಬಂದಿದೆ ಎಂದು ಮಹಾತ್ಮಾಜಿಯವರು ತಿಳಿಸಿರುವರು. ೧೦ ಮಂದಿ ಸದಸ್ಯರುಳ್ಳ ಸಮಿತಿ ೩ ಮಂದಿ ಸರಕಾರದಿಂದ ನಾಮಕರಣವಾದ ಸದಸ್ಯರಿರುವರು. ಉಳಿದ ಏಳು ಸ್ಥಾನಗಳಿಗೆ ಸದಸ್ಯರನ್ನು ಜಾತಿವಾರಾಗಿ ಕೊಡುತ್ತ ಹೋದರೆ ಪ್ರಜಾಪರಿಷತ್ತಿನವರಿಗೆ ಬಹುಮತವು ದೊರೆಯುವುದಿಲ್ಲ. ಅಂಥ ಸಂದರ್ಭದಲ್ಲಿ ಸಮಿತಿಯು ರಾಜಕೋಟದಲ್ಲಿ ಜವಾಬುದಾರಿ ಸರಕಾರವನ್ನು ಸ್ಥಾಪಿಸುವಂತೆ ವರದಿ ಬರೆಯುವುದು ಅಸಂಭವ. ಆದ್ದರಿಂದ ಸಮಿತಿಯಲ್ಲಿ ಕೋಮುವಾರು ಪ್ರಾತಿನಿಧ್ಯವನ್ನು ಕೊಡಲಿಕ್ಕಾಗುವುದಿಲ್ಲವೆಂದೂ, ಆದರೂ ಅಲ್ಪಸಂಖ್ಯಾತರ ಹಿತಾಸಂಬಂಧಗಳಿಗೆ ಲೋಪ ಬಾರದಂತೆ ನೋಡಿಕೊಳ್ಳಲಾಗುವುದೆಂದೂ ಮಹಾತ್ಮಾಜಿಯವರು ಹೇಳಿರುವರು.

ಭಾಯಾತರ ನಿರಾಶೆಯ ಪರಿಣಾಮ

ಆದ್ದರಿಂದ ಭಾಯಾತರು ನಿರಾಶರಾಗಿ ಅವರ ಪ್ರಮುಖರು ಠಾಕೋರ ಸಾಹೇಬರ ಬಳಿ ಒಂದು ಶಿಷ್ಟ ಮಂಡಳಿಯನ್ನು ತೆಗೆದುಕೊಂಡು ಹೋಗಿ— ತಮಗೆ ಹೇಗಾದರೂ ಮಾಡಿ ಸುಧಾರಣಾ ಸಮಿತಿಯಲ್ಲಿ ಪ್ರಾತಿನಿಧ್ಯವನ್ನು ಕೊಟ್ಟು ದಲ್ಲವಾದರೆ ತಮ್ಮ ಹಿತ ಸಂಬಂಧಗಳ ಸಂರಕ್ಷಣೆ ಬಗ್ಗೆ ಸತ್ಯಾಗ್ರಹವನ್ನು ಹೂಡುವೆವೆಂದು ತಿಳಿಸಿರುವರು. ಈ ಸಂಗತಿಯನ್ನು ರೆಸಿಡೆಂಟರ ಗಮನಕ್ಕೂ ತಂದಿದ್ದಾರೆ. ಠಾಕೋರರೂ ರೆಸಿಡೆಂಟರೂ ಈ ವಿಷಯವನ್ನು ಪರ್ಯಾಲೋಚಿಸುವುದಾಗಿ ಮಾತು ಕೊಟ್ಟಿದ್ದಾರೆ.

ಹರಿಜನರಿಗೂ ಪ್ರಾತಿನಿಧ್ಯ ಬೇಕು

ಡಾಕ್ಟರ್ ಅಂಬೇಡ್ಕರರು ದರ್ಬಾರ ಶ್ರೀ ವೀರವಲ್ಲರಿಗೆ ಒಂದು ತಂತಿಯನ್ನು ಬಿಟ್ಟು— ಸುಧಾರಣಾ ಸಮಿತಿಯಲ್ಲಿ ರಾಜಕೋಟದ ಹರಿಜನರಿಗೂ ಪ್ರಾತಿನಿಧ್ಯವನ್ನು ಕೊಡುವಂತೆ ಠಾಕೋರರನ್ನು ಕೇಳಿಕೊಳ್ಳಬೇಕಾಗಿ ತಿಳಿಸಿರುವರು. ಅದಕ್ಕೆ ಪ್ರತ್ಯುತ್ತರವಾಗಿ— ಹರಿಜನರಿಗೆ ಪ್ರಾತಿನಿಧ್ಯವನ್ನು ಕೊಡುವ ಅತುರವು ಠಾಕೋರರಿಗೆ ಬಹಳವಾಗಿ ಇರುವುದೆಂದೂ, ಆದರೆ ಸರದಾರ ಪಟೇಲರು ಹರಿಜನ ಪ್ರತಿನಿಧಿಯ ಹೆಸರನ್ನು ಸೂಚಿಸುವ ಹಾಗಿಲ್ಲವೆಂದೂ ಈ ವಿಷಯ ಅಸಕ್ಕೆ ತಂದರೆ ಠಾಕೋರರನ್ನು ಬಂದು ಕಾಣಬಹುದೆಂದೂ ಶ್ರೀ ವೀರವಲ್ಲರು ಹೇಳಿದ್ದಾರೆ.

ಸರ್ ಅಬ್ದುಲ್ಲರ ಸೂಚನೆ

ರಾಜಕೋಟದ ಮುಸ್ಲಿಮರ ಹಕ್ಕು ಬಾಧ್ಯತೆಗಳಿಗೆ ಎಳ್ಳಷ್ಟು ಲೋಪಬಾರದಂತೆ ನೋಡಿಕೊಳ್ಳಿ. ಭಾರತದ ಸಮಸ್ತ ಮುಸಲ್ಮಾನರು ನಿಮ್ಮ ಬೆಂಬಲಕ್ಕಿದ್ದಾರೆ. ರಾಜಕೋಟದ ಮುಸಲ್ಮಾನರ ರಾಜಕೀಯ ಮತ್ತು ಆರ್ಥಿಕ ಹಿತಗಳನ್ನು ಕಾಪಾಡುವುದು ಸುಲಭವಾಗುವಂತೆ ಅವರನ್ನು ಸಂಘಟಿಸಿರಿ ಎಂದು ಮುಸ್ಲಿಂ ಲೀಗಿನ ಕಾರ್ಯ ನಿರ್ವಾಹಕ ಮಂಡಳಿಯ ಒಬ್ಬ ಸದಸ್ಯರಾದ ಸರ್ ಅಬ್ದುಲ್ಲಾ ಹಾರೂನರು ರಾಜಕೋಟದ ಮುಸ್ಲಿಮ ಸಭೆಯ ಅಧ್ಯಕ್ಷರಿಗೆ ಸೂಚಿಸಿದ್ದಾರೆ.

ವಿಪಕ್ಷಗಳ ಕಾರಸ್ಥಾನ

ಮಹಾತ್ಮಾಜಿಯವರು ರಾಜಕೋಟಿಗೆ ಬಂದು ಒಂದು ವಾರವಾಯಿತು. ಆದರೆ ಅವರು ರಾಜಕೋಟೆಯಿಂದ ದಿಲ್ಲಿಗೆ ವೈಸರಾಯರನ್ನು ಕಂಡು ಮಾತನಾಡಲಿಕ್ಕೆ ಹೊರಡುವಾಗಿನ ಪರಿಸ್ಥಿತಿಯಿಂದ ಈಗಿನ ಪರಿಸ್ಥಿತಿಯು ತೀರಾ ಭಿನ್ನವಾಗಿರುವುದು. ಆಗ್ಗೆ ಅವರು ಕೇವಲ ಠಾಕೋರ ಸಾಹೇಬರು ಮತ್ತು ಅವರ ಹಸ್ತಕರಾದ ಶ್ರೀ ವೀರವಲ್ಲರಂಥವರೊಂದಿಗೆ ಹೋರಾಡಿದರೆ ಸಾಕಾಗಿತ್ತು. ಈಗ ಅಲ್ಪಸಂಖ್ಯಾತರೊಂದಿಗೂ ಹೋರಾಡಬೇಕಾಗಿದೆ. ಹೊರಗಿನ ಸ್ವಾರ್ಥಿಗಳ ಮತ್ತು ವಿಪಕ್ಷಗಳ ಕಾರಸ್ಥಾನದ ಪರಿಣಾಮವು ಇದೆಂದು ಊಹಿಸಲಿಕ್ಕೆ ಬಲವಾದ ಆಧಾರಗಳಿವೆ. ಭಾಯಾತರೂ ಮುಸ್ಲಿಮರೂ ಪ್ರಜಾಪರಿಷತ್ತಿನೊಂದಿಗೆ ಸಮ್ಮಿಳಿತರಾಗಿ ಕೆಲಸ ಮಾಡುವುದಾದರೆ ತಾನವರಿಗೆ ಸುಧಾರಣಾ ಸಮಿತಿಯಲ್ಲಿ ಪ್ರಾತಿನಿಧ್ಯ ಕೊಡುವೆನೆಂದು ಮಹಾತ್ಮಾಜಿಯವರು ಹೇಳಿದಾಗ, ಅವರದನ್ನು ನಿರಾಕರಿಸಿ, ತಮ್ಮ ಪ್ರತಿನಿಧಿಗಳು ಸುಧಾರಣಾ ಸಮಿತಿಯಲ್ಲಿ ಹೇಗೆ ಬೇಕಾದರೂ ನಡೆಕೊಳ್ಳಲಿಕ್ಕೆ ಸ್ವತಂತ್ರರಿರಬೇಕೆಂದು ಅವರು ವಾದಿಸುವುದರಿಂದಲೇ, ಅಲ್ಪಸಂಖ್ಯಾತರ ಮೇಲೆ ಹೊರಗಿನ ಒತ್ತಾಯವು ಬಹಳವಾಗಿದೆ ಎನ್ನಬೇಕು. ಆದರೂ ಅವರು—ತಮ್ಮ ಮೇಲೆ ಯಾರ ಒತ್ತಾಯವೂ ಇರುವುದಿಲ್ಲವೆಂದೂ, ತಾವು ಸ್ವತಂತ್ರವಾಗಿ ವ್ಯವಹರಿಸುತ್ತಿರುವುವೆಂದೂ ಅವರು ಹೇಳಿದ್ದಾರೆ.

ಸುಧಾರಣಾ ಸಮಿತಿಗೆ ಸರದಾರರ ಸೂಚಿಸಿದ ಸದಸ್ಯರು

ಮಹಾತ್ಮಾಜಿಯವರ ಪ್ರಕಟಣೆ

ನ್ಯಾಯರ ತೀರ್ಮಾನದ ಮೇರೆಗೆ ರಾಜಕೋಟ ಸುಧಾರಣಾ ಸಮಿತಿಗೆ ಸರದಾರ ಪಟೇಲರು ಸೂಚಿಸಬೇಕಾದ ಏಳು ಮಂದಿ ಸದಸ್ಯರ ಹೆಸರುಗಳನ್ನು ಮಹಾತ್ಮಾ ಗಾಂಧಿಯವರು ಠಾಕೋರ ಸಾಹೇಬರಿಗೆ ಕಳುಹಿಸಿ ಕೊಟ್ಟಿದ್ದಾರೆ. ಆ ಏಳು ಮಂದಿ ಯಾರು ಯಾರು ಅಂದರೆ— ೧ ಶ್ರೀ ಪೋಪಟಲಾಲ ಪುರುಷೋತ್ತಮ ಅನಡಾ ಬಿ ಎ ಎಲ್ ಎಲ್ ಬಿ, ೨ ಶ್ರೀ ಪೋಪಟಲಾಲ ಧಾಸ್ತಭಾಯಿ ಮಾಳವೀಯ ೩ ಶ್ರೀ ಜಮುನಾದಾಸ ಖುಶಾಲಚಂದ ಗಾಂಧಿ ೪ ಶ್ರೀ. ಬಾಘೇರವಾಲಾ ವಾಧಾರ ೫ ಶ್ರೀ. ವಜ್ರಲಾಲ ಮಾಯಾಶಂಕರ ಶುಕ್ಲ ೬ ಶ್ರೀ ಜಾಥಲಾಲ ಹರಿಕೃಷ್ಣ ಜೋಶಿ ೭ ಶ್ರೀ. ಗಜಾನನ ಭವಾನಿಶಂಕರ ಜೋಶಿ ಎಂ. ಎ. ಎಲ್. ಎಲ್ ಬಿ. ಈ ಏಳು ಮಂದಿಯಲ್ಲಿ ಭಾಯಾತರು, ಮುಸಲ್ಮಾನರು ಅಥವಾ ಹರಿಜನರ ಕೋಮುವಾರು ಪ್ರತಿನಿಧಿಗಳು ಇರುವುದಿಲ್ಲ.

ಮಹಾತ್ಮರ ಪ್ರಕಟಣೆ

ಈ ಸಂಬಂಧ ಮಹಾತ್ಮರು ಒಂದು ಪ್ರಕಟಣೆಯನ್ನು ಹೊರಡಿಸಿ ರಾಜಕೋಟ ಸುಧಾರಣಾ ಸಮಿತಿಯಲ್ಲಿ ಕೋಮುವಾರು ಪ್ರಾತಿನಿಧ್ಯವನ್ನು ಕೊಡದಿರುವ ಕಾರಣಗಳನ್ನು ಕೊಟ್ಟಿದ್ದಾರೆ. ಸಮಿತಿಯ ಸದಸ್ಯರು ಒಂದು ಭಾವನೆಯಿಂದ ಪ್ರೇರಿತರಾಗಿ ತಮ್ಮ ಕೆಲಸಗಳನ್ನು ನಿರ್ವಹಿಸಬೇಕೆಂಬುದು ಮೊದಲನೆ ಕಾರಣ. ಪ್ರಜಾಪರಿಷತ್ತಿನವರಿಗೆ ಬಹುಮತವಿರಬೇಕೆಂಬುದು ಎರಡನೆ ಕಾರಣ. ಇವೆರಡು ಕಾರಣಗಳು ನ್ಯಾಯವಾಗಿದ್ದರೂ ಭಾಯಾತರಾಗಲೀ ಮುಸಲ್ಮಾನರಾಗಲೀ ಪ್ರಜಾಪರಿಷತ್ತಿನ ಸದಸ್ಯರೊಂದಿಗೆ ಸಹಕರಿಸಿ ಕೆಲಸ ಮಾಡುವ ಇಚ್ಛೆಯನ್ನು ತೋರಿಸಲಿಲ್ಲ. ಆದುದರಿಂದ ಮಹಾತ್ಮಾಜಿಯವರು ನಿರುಪಾಯರಾಗಿ ಪ್ರಜಾಪರಿಷತ್ತಿನ ೭ ಮಂದಿ ಸದಸ್ಯರ ಹೆಸರುಗಳನ್ನು ಸೂಚಿಸಬೇಕಾಯಿತು. ಇದರಿಂದ ಕಮಿಟಿಯಲ್ಲಿ ಯಾವುದೊಂದು ಜಾತಿ ಅಥವಾ ಪಂಗಡದ ಹಿತರಕ್ಷಣೆಯಾಗ ಪುದಿಲ್ಲವೆಂದು ಯಾರಾದರೂ ಅಂಜಲಿಕ್ಕಿಲ್ಲ. ಈಗ ಆರಿಸಿ ಕಳುಹಿಸಿ ಕೊಟ್ಟಿರುವ ಪ್ರತಿಯೊಬ್ಬ ಸದಸ್ಯರು ಪ್ರತಿಯೊಂದು ಜಾತಿಪಂಗಡದ ನ್ಯಾಯವಾದ ಹಕ್ಕುಬಾಧ್ಯತೆ ಹಿತಾಸಕ್ತಿಗಳ ರಕ್ಷಕರಾಗಿ ಕಮಿಟಿಯಲ್ಲಿ ಕೆಲಸ ಮಾಡುವರು ಎಂದು ಅವರು ಹೇಳಿದ್ದಾರೆ.

ಸತ್ಯಾಗ್ರಹದ ಸಫಲತೆಗೆ ಪೂರ್ವಸಿದ್ಧತೆ ಇರಬೇಕು

ದೇಶೀ ಸಂಸ್ಥಾನಗಳಲ್ಲಿ ಆರಂಭವಾದ ರಾಜಕೀಯ ಸತ್ಯಾಗ್ರಹ ಆಂದೋಲನವನ್ನು ಮಹಾತ್ಮಾಜಿಯವರು ನಿಲ್ಲಿಸುವ ಸೂಚನೆಯನ್ನು ಕೊಟ್ಟುದರಿಂದ ಕೆಲಸಗಾರರು ನಿರುಪಾಯರಾಗಿ ಅದನ್ನು ನಿಲ್ಲಿಸಬೇಕಾಯಿತು. ಆದರೆ ಇದರಿಂದ ಕೆಲಸಗಾರರು ಬಹಳ ಅಸಂತುಷ್ಟರಾದರು. ಅದಕ್ಕೋಸ್ಕರ ಮಹಾತ್ಮಾಜಿಯವರು 'ಹರಿಜನ'ದಲ್ಲಿ ಒಂದು ಲೇಖನವನ್ನು ಬರೆದು, ಸತ್ಯಾಗ್ರಹದ ಸಫಲತೆಗೆ ಪೂರ್ವಸಿದ್ಧತೆ ಮತ್ತು ತರಬೇತಿ ಅಗತ್ಯವೆಂದೂ, ಅದರ ಅಭಾವದಲ್ಲಿ ಜನರು ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತೆಂದೂ ಹೇಳಿ, ಇನ್ನೊಂದು ಸತ್ಯಾಗ್ರಹವು ಆರಂಭವಾಗುವ ಪೂರ್ವದಲ್ಲಿ, ಯಾರು ಎಷ್ಟು ಕೆಣಕಿಸಿದರೂ, ಎಂಥ ಪ್ರತಿಕೂಲ ಪರಿಸ್ಥಿತಿ ಉಂಟಾದರೂ ಜನತೆಯು ಕಾಯಾ ವಾಚಾ ಮನಸಾ ಸತ್ಯ ಮತ್ತು ಅಹಿಂಸಾ ವ್ರತವನ್ನು ಧರಿಸುವಂತೆ ಕೆಲಸಗಾರರು ಬೋಧನೆ ಕೊಟ್ಟು ಅವರನ್ನು ಸಿದ್ಧಮಾಡಬೇಕೆಂದು ಖಚಿತಮಾಡಿದ್ದಾರೆ. ಸತ್ಯ ಮತ್ತು ಅಹಿಂಸೆಯಿಂದಲ್ಲದೆ ಬೇರೆ ಉಪಾಯದಿಂದ ಹಿಂದುಸ್ಥಾನಕ್ಕೆ ರಾಜಕೀಯ ಮುಕ್ತಿ ಇರುವುದಿಲ್ಲವೆಂಬುದನ್ನು ಅವರು ಸ್ಪಷ್ಟಮಾಡಿರುವರು.

ಈಸ್ಟರ್ ಹಬ್ಬದ ಸಮಯ

ಹಿಂದೂದೇಶದಲ್ಲಿ ತಯಾರಾದ ವಸ್ತ್ರಗಳ ಸಂಗ್ರಹಾಲಯ ಮತ್ತು ಅಖಿಳ ಭಾರತದಲ್ಲಿ ಒಂದೇ ಒಂದಾದ

ಸ್ವದೇಶಿ ಮಾರ್ಕೆಟ್

ಕಾಲ್ಬಾದೇವಿ ರಸ್ತೆ ಬೊಂಬಾಯಿ 2

ಇದನ್ನು ಸಂದರ್ಶಿಸಲು ಮರೆಯದಿರಿ.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲ್ಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ.

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ಸದ್ವೈದ್ಯಶಾಲಾ (ರಿಜಿ) ನಂಜನಗೂಡು.

(ಪ್ರೊಪ್ರೈಟರ್: ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರು)

ಇವರ ಅನುಭವ ಸಿದ್ಧೌಷಧಗಳು

ಕುಟುಂಬ ರಕ್ಷಿಣಿ

ಪ್ರತಿ ಸಂಸಾರಿಕರಿಗೂ, ಅತ್ಯಗತ್ಯವಾದ 8 ಬೇರೆ ಬೇರೆ ಅಮೋಘ ಔಷಧಗಳನ್ನು ವಿಸ್ತಾರವಾದ ಅನುಪಾನ ಪುಸ್ತಕದೊಡನೆ ಸೇರಿಸಿಡಲ್ಪಟ್ಟ ಅಂದವಾದ ಪೆಟ್ಟಿಗೆ

ಒಂದೇ ಒಂದು ಪೆಟ್ಟಿಗೆಯು ನಿಮ್ಮಲ್ಲಿದ್ದರೆ, ಪೂರ್ಣ ಅನುಭವಶಾಲಿಯಾದ ಓರ್ವ ವೈದ್ಯನು ನಿಮ್ಮಲ್ಲಿ ಯಾವಾಗಲೂ ಇದ್ದಂತೆಯೇ ಸರಿ. ಜೇಬಿನಲ್ಲಿಡಲು ಬಹಳ ಅನುಕೂಲವಾದ್ದು

ಅಂಚೆವೆಚ್ಚ ಉಚಿತ ಬೆಲೆ: 8-0-0

ನಮ್ಮ ಇತರ ಔಷಧಿಗಳನ್ನೊಳಗೊಂಡ ವಿಸ್ತೃತ ಕೆಟಲಾಗಿಗೆ ಇಂದೇ ಬರೆಯಿರಿ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಹಳ್ಳಿಯ ಹತ್ತುಸಮಸ್ತರು

(೫ನೇ ಪುಟದಿಂದ ಮುಂದುವರಿದುದು)

ಕೂಡದು ಎಂಬ ಬುದ್ಧಿ ಬಂದಿದೆ. ಆದರೆ— ಅವನ ವೈರದ ನೆಲೆಯೇನು ಎಂಬ ವಿಚಾರ ತಿಳಿಯುವ ಆತುರ ಬಹಳವಾಯಿತು.

ಮೊನ್ನೆ ದಿವಸ ಶ್ಯಾನುಭಾಗ ಭವಾನಿ ರಾಯರು ಹರಹರ—ಎಂದು ಬೇಟಿಯಾದರು. ಅವರೀಗ ಮಾಗಣಿ ಶ್ಯಾನುಭಾಗರಲ್ಲವೇ ಬಿಡಾರ ಕುಂದಾಪುರದಲ್ಲಿ—ಗ್ರಾಮ ನಮ್ಮದು. ತಹಶಿಲ್ದಾರರು ಮಣಿಗಾರರು ಗ್ರಾಮಕ್ಕೆ ಬರುವುದು ತಾಲೂಕು ಕಚೇರಿಯಲ್ಲಿ ಸುದ್ದಿ ಹೊಡೆಯುತ್ತದೆ. ಆ ದಿವಸ ಸೈಕಲು ಹತ್ತಿ ಫೇರಿ ಬಿಟ್ಟಿರಾಯಿತು. ಹೆಸರಿಗೆ ಗ್ರಾಮದಲ್ಲಿ ಒಂದು ಬಿಡಾರವಿದೆ. ಬಿಡಾರಕ್ಕೆ ಬಂದರೆ ಕೈ ಅಡಿಗೆಯಾಗಬೇಕು. ಮೊನ್ನೆ ಹೊತ್ತು ಕಂತುವಾಗ ನಮ್ಮ ಗುಡ್ಡೆಮುಳ್ಳು ಮೆಟ್ಟಿ ಅವರ ಸೈಕಲು ಪಂಚರು ಆಯಿತು. ನಾನು ಆ ಹಾದಿಯಾಗಿ ಬರುವವನು ಎದುರಾದೆ. "ಹೌದಯ್ಯ... ವ್ಯಾಪಾರ ಹೈಲಾಯಿತಲ್ಲ. ಸೈಕಲು ಪಂಚರಾಯಿತು. ಕತ್ತಲಾಗುತ್ತ ಬಂದಿತು. ಸೈಕಲು ರಿಪೇರಿ ನನಗೂ ಬರುವುದಿಲ್ಲ—ಪಂಚರು ಸಾಮಾನು ಕುಂದಾಪುರದಲ್ಲಿ ಉಳಿಯಿತು" ಎಂದರು. "ನಮ್ಮ ಕೆರೆಕಟ್ಟೆ ನರಸಿಂಹನನ್ನು ಹಿಡಿಯಬೇಕು. ಸಾಮಾನ್ಯ ಸೈಕಲಲ್ಲ, ಮೋಟರು ರಿಪೇರಿಯ ಮಾಡಿಯಾನು. ಅವನಿಗೆ ಬಾರದ ವಿದ್ಯೆ ಇಲ್ಲ" ಎಂದೆ. ಸರಿ ಶಂಕರ ರಾಯರ ಕುದುರೆಯನ್ನು ಹೊರಡಿಸಿಕೊಂಡು ಕೆರೆಕಟ್ಟೆ ಮನೆಗೆ ಹೊರಟೆವು. ಎರಡು ಮೈಲು ಹಾದಿಯನ್ನು ಕಳೆಬೇಕು—ಮಾತನಾಡುತ್ತ ಬಂದೆವು. ಕೊನೆಗೆ ನರಸಿಂಹಯ್ಯನ ಸುದ್ದಿಯೂ ಬಂದಿತು. ನಾನು ಕೇಳಿದೆ "ಹೌದಾ, ಶ್ಯಾನುಭಾಗರೇ— ಈ ನರಸಿಂಹಯ್ಯನ ಸಿಟ್ಟು ಆ ಗಾಣದ ಸಂಕನ ಮೇಲೆ ಇಷ್ಟು ಯಾಕೆ?" ಎಂದು ಕೇಳಿದೆ. ಅವರೇ ಮಾಗಣೆಶ್ಯಾನಭಾಗರು ಖುದ್ದು ಗ್ರಾಮದಲ್ಲಿ ಇಲ್ಲದಿದ್ದರೂ, ಪ್ರತಿ ಕಾಸರಕನ ಕುತ್ತಿ ಬೇರಿಲ್ಲಾ ಅವರಿಗೆ ಗೊತ್ತು. ಹೇಳಿದರು "ಅದ ಊರ ಹತ್ತಿರ ಹೇಳುವುದು ಮಹಾಪಾಪ. ನಮ್ಮ ಕಾಲದಲ್ಲಿ ಇಂಥದೆಲ್ಲಾ ಇರಲಿಲ್ಲ. ಈ ನೀಲಿಯನ ಒಂದು ಹೆಣ್ಣಿಲ್ಲವೇ ಅವನ ಮನೆಯಲ್ಲಿ ಒಂದಿದೆ. ಕೇಳಿದರೆ ತನ್ನ ಅಕ್ಕನದೋ ತಂಗಿಯದೋ ಮಗಳು—ಎನ್ನುತ್ತಾನೆ. ಈಗ ವ್ಯಾಲಕ್ಕೆ ಒಂದು ರಕೆಯಿಲ್ಲವೇ ಅವಳು, ಬಣ್ಣ ಒಂದು ಬಟ್ಟಲೆ ಅವಳ ಕೀರ್ತಿ ಬಹಳ ಇರಬೇಕು—ಅಂತು ನು ಡು ವೆ ಯಾ ಗು ವ ಬಾಬತ್ತ ಅಲ್ಲ. ಅದು ನಮ್ಮ ನರಸಿಂಹಯ್ಯನ ನಜರಿಗೆ ಬಿತ್ತೋ, ಬಿತ್ತು, ಅಥವಾ ಮೊದಲಿಂದಲೂ ಇವರೊಳಗೆ ಒಳ್ಳೆಯದಿತ್ತೊ ನನಗೆ ತಿಳಿಯದು' ಅಂತ—ಚಿಕ್ಕ ವಯ್ಯರು. ತೀರುವ ತನಕ ಹೀಗೆ ಒಳಗಿಂದೊಳಗೆ ಇವರ ಸ್ನೇಹ ವಿತ್ತು. ಮೇಸ್ತಿಯನಿಗೆ ಸಿಗರೇಟು ಬೀಡಿ ಕಾಸು ನರಸಿಂಹಯ್ಯ ಕೊಡುತ್ತಿದ್ದ.

ಆದರೆ ಚನ್ನಪ್ಪಯ್ಯನ ಪಟ್ಟಿನಾದ್ದೇ ಕೆಡ— ಬಲವಾದ ಗೋಳಿ ಮರದ ನೆರಳು ಸೇರುವ ಎಂದು ಅವರ ಹಿಂದೆ ತಿರುಗಾಡಲು ಸುರು ಮಾಡಿದ. ಗುರುಪದೇಶವೇ ಈ ನೀಲುವಿಂದ ಕೊಡಿಸಿದ. ನೀಲು ನರಸಿಂಹಯ್ಯನಿಂದ ತಪ್ಪಿ ದೊಡ್ಡ ಸರಕಿಗೆ ಸೇರಿತು. ಇನ್ನು ಆ ಚನ್ನಪ್ಪನಿಗೆ ನೀಲು, ಪಟ್ಟರಂಗಿ ಎಂದು ಎಷ್ಟೆಷ್ಟೆಲ್ಲಾ ಕುಂಟೋ—ಎಲ್ಲ ಕೆಡುಗಾಲ. ಅಂತು ಇವನಿಗೆ ಕೈಗೆ ಬಂದ ತುತ್ತು ತಪ್ಪಿಸಿದನಲ್ಲಾ ಈ ಸಂಕಪ್ಪ—ಎಂಬ ಸಿಟ್ಟು."

ಆ ಮೇಲೂ ನೀಲುವನ್ನು ಹಾರಿಸಲಿಕ್ಕೆ ಬಹಳ ಯತ್ನಮಾಡಿದ ನರಸಿಂಹಯ್ಯ. ಆದು ನೀಲು—ಅಲ್ಲವೇ. ಗೆಜ್ಜೆ ಕಟ್ಟುವವರಗಿಂತ ಒಂದು ಬಣ್ಣ ಮೇಲು ಅವಳು. ಇವನ ಬಲೆಗೆ ಬೀಳಲೇ ಇಲ್ಲ. ನರಸಿಂಹಯ್ಯನಿಗೆ ನಿಜಕ್ಕೂ ಅವಳೆಂದರೆ ಪ್ರಾಣವಾಗಿತ್ತು... ಸಾಕು ಸುದ್ದಿ ಬಿಡಿ"—ಕೆರೆಕಟ್ಟೆ ಬಂದಿತು. ನರಸಿಂಹ ಕೇಳಿದರೆ ನಮ್ಮ "ಪಂಚರು ಧಡೆಯಾದೀತು."

ಜಿನ್ನರಿಗೆ ಜಾತಿಸ್ವಾರ್ಥಕ್ಕಿಂತ ದೇಶಸ್ವಾರ್ಥವು ಮಹತ್ವದ್ದಲ್ಲ

ಕೇಂದ್ರ ಎಸೆಂಬ್ಲಿಯಲ್ಲಿ ಅವರ ವಿಚಿತ್ರ ವರ್ತನೆ

ಮಿ. ಜಿನ್ನರು ಕೇಂದ್ರ ಎಸೆಂಬ್ಲಿಯಲ್ಲಿ ಒಬ್ಬ ಪ್ರಮುಖ ಸದಸ್ಯರು. ಅವರು ಅಲ್ಲಿ ಮುಸ್ಲಿಂ ಲೀಗ ಪಾರ್ಟಿಯ ಮುಖಂಡರೂ ಆಗಿದ್ದಾರೆ. ಆದರೆ ಅವರು ಅಲ್ಲಿ ಗಬ್ಬಿಲದಂತೆ ವರ್ತಿಸುವುದನ್ನು ಕಂಡು ಆಶ್ಚರ್ಯವಾಗುತ್ತದೆ. ಅನೇಕ ಪ್ರಾಮುಖ್ಯ ವಿಚಾರಗಳ ನಿರ್ಣಯವಾಗುವಾಗ ಮಿ. ಜಿನ್ನರು ಅತ್ತ ಕಾಂಗ್ರೆಸ ಪಕ್ಷವನ್ನೂ ಸೇರುವುದಿಲ್ಲ, ಇತ್ತ ಸರಕಾರ ಪಕ್ಷವನ್ನೂ ಸೇರುವುದಿಲ್ಲ. ಯಾವ ಪಕ್ಷಕ್ಕೂ ಸೇರದೆ ಅವರು ತಣ್ಣಗೆ ಕೂತುಕೊಂಡು ಬಿಡುತ್ತಾರೆ.

ಮಿ. ಜಿನ್ನರ ಈ ವಿಚಿತ್ರ ವರ್ತನವನ್ನು ಸರ್ಚ್ ಲ್ಯಾಟ ಪತ್ರಿಕೆಯು ಕಟುವಾಗಿ ಟೀಕಿಸಿದೆ. ಕಳೆದ ಬಾರಿ ಇಂಗ್ಲಾಂಡು-ಹಿಂದುಸ್ತಾನದ ವ್ಯಾಪಾರ ಒಪ್ಪಂದವನ್ನು ಕುರಿತು ಎಸೆಂಬ್ಲಿಯಲ್ಲಿ ಚರ್ಚೆ ಆಗುತಿದ್ದಾಗಲೂ, ಆಯವ್ಯಯ ಪಟ್ಟಿಯ ಮೇಲೆ ಚರ್ಚೆಯಾಗುತ್ತಿದ್ದಾಗಲೂ ಮಿ. ಜಿನ್ನರ ಮನೋವೃತ್ತಿಯನ್ನು ಕಂಡು ಬಹಳ ಖೇದವಾಗುತ್ತದೆ. ಮಿ. ಜಿನ್ನರ ಮತ್ತು ಅವರ ಮುಸ್ಲಿಂ ಲೀಗ ಪಾರ್ಟಿಯ ವರ್ತನವು ಪ್ರಾಮುಖ್ಯ ವಿಷಯಗಳಲ್ಲಿ ಗಬ್ಬಿಲದಂತೆ ಇರುವುದಾದರೆ ಅವರು ಮತ್ತು ಅವರ ಪಾರ್ಟಿಯು ಎಸೆಂಬ್ಲಿಯಲ್ಲಿ ಇದ್ದಾದರೂ ದೇಶಕ್ಕೆ ಯಾವ ಲಾಭವಾಗಲಿಕ್ಕಿದೆ? ಏನೂ ಇಲ್ಲ. ಆದ್ದರಿಂದ ಅವರು ಎಸೆಂಬ್ಲಿಯಲ್ಲಿ ಇರುವುದು ಅನಾವಶ್ಯಕವೆಂದೇ ತೋರುತ್ತದೆ.

ಸರಕಾರದ ಮೇಲೆ ಪ್ರಭಾವ ಹಾಕಲಿಕ್ಕೆ ಈ ಉಪಾಯ

ತಮ್ಮ ಹೊರತು ಸರಕಾರಕ್ಕೆ ಬೇರೆ ಗತಿ ಇಲ್ಲ. ತಮ್ಮ ಸಹಕಾರವಿಲ್ಲದಿದ್ದರೆ ಸರಕಾರವು ಪ್ರತಿಯೊಂದು ಸಂಗತಿಯಲ್ಲಿ ವಿರುದ್ಧ ಪಕ್ಷದವರಿಂದ ಸೋಲಬೇಕಾಗ ಬಹುದು ಎಂಬುದನ್ನು ಮನಗಾಣಿಸುವುದಕ್ಕಾಗಿಯೇ ಮಿ. ಜಿನ್ನರು ಈ ವಿಚಿತ್ರ ವರ್ತನವನ್ನು ಇಟ್ಟುಕೊಂಡಿರಬಹುದು. ಇದರಿಂದ ಅವರು ಸರಕಾರದಿಂದ ಕೆಲವು ರಿಯಾಯತಿಗಳನ್ನ, ಪದವಿಯ ಆಶೆಯಲ್ಲಿದ್ದಿರಬಹುದು. ಮುಸ್ಲಿಂ ಲೀಗ ಪಾರ್ಟಿಯು ಹಿಂದೂದೇಶದ ಒಂದು ರಾಜಕೀಯ ಸಂಸ್ಥೆ ಎಂದ ಸರಕಾರದಿಂದ ಮಾನ್ಯತೆಯನ್ನು ಪಡೆಯಲಿಕ್ಕೆ ಅವರು ಹೀಗೆ ಮಾಡಿರಬಹುದು.

ಇಂಗ್ಲಾಂಡ—ಹಿಂದುಸ್ಥಾನ ವ್ಯಾಪಾರ ಒಡಂಬಡಿಕೆಯನ್ನು ಮಿ. ಜಿನ್ನರು ದೇಶದ ಹಿತವನ್ನು ಲಕ್ಷ್ಯದಲ್ಲಿಟ್ಟುಕೊಂಡು ಚರ್ಚಿಸಲಿಲ್ಲ. ಅವರಿಗೆ ಮುಸಲ್ಮಾನರ ಹಿತವೇ ಮುಖ್ಯವಾಗಿತ್ತು. ಅವರು ದೇಶದ ಎಲ್ಲ ಕಡೆಗಳ ಹತ್ತಿ ಬೆಳೆಸುವವರ ಹಿತವನ್ನು ಲಕ್ಷ್ಯದಲ್ಲಿಡಲಿಲ್ಲ. ಪಂಜಾಬ ಮತ್ತು ಸಿಂಧ ಪ್ರಾಂತದಲ್ಲಿ ಅಧಿಕ ಸಂಖ್ಯಾಕರಾಗಿರುವ ಮುಸಲ್ಮಾನ ಹತ್ತಿ ಬೆಳೆಸುವವರ ಹಿತವೇ ಅವರಿಗೆ ಮುಖ್ಯವಾಗಿತ್ತು. ಮುಸಲ್ಮಾನರಿಗೆ ಹತ್ತಿ ಬೆಳೆ ಮತ್ತು ಚರ್ಮ ವ್ಯಾಪಾರದಲ್ಲಿ ಮಾತ್ರ ಹೆಚ್ಚಿನ ಹಿತಾಸಕ್ತಿ ಇದೆ. ಇಂಗ್ಲಂಡ—ಹಿಂದುಸ್ಥಾನ ವ್ಯಾಪಾರ ಒಡಂಬಡಿಕೆಯು ಇವರಿಗೆ ಯಾವ ಹೆಚ್ಚಿನ ಪ್ರಯೋಜನವನ್ನೂ ಕೊಡುವುದಿಲ್ಲ. ಆದ್ದರಿಂದ ಮಿ. ಜಿನ್ನರು ಆ ಒಡಂಬಡಿಕೆಯನ್ನು ವಿರೋಧಿಸಿದರು. ಅಷ್ಟಕ್ಕಾಗಿಯೇ ಅವರು ಎಸೆಂಬ್ಲಿಯಲ್ಲಿ ಇದ್ದರು, ಅಷ್ಟನ್ನೇ ಅವರು ಅಲ್ಲಿ ಮಾಡಿ ಮುಗಿಸಿದರು.

ಜಿನ್ನರು ಕೇವಲ ಮುಸಲ್ಮಾನರು!

ಮಿ. ಜಿನ್ನರು ಈಗ ಕೇವಲ ಮುಸಲ್ಮಾನರಾಗಿದ್ದಾರೆ. ಅವರಲ್ಲಿ ಭಾರತೀಯತ್ವವು ಲವಲೇಶ ಇರುವುದಿಲ್ಲ. ಒಂದು ಕಾಲಕ್ಕೆ ದೊಡ್ಡ ರಾಷ್ಟ್ರವಾದಿಗಳೆಂದು ಪ್ರಸಿದ್ಧರಾದ ಮಿ. ಜಿನ್ನರು ಈಗ ಕೇವಲ ಮುಸಲ್ಮಾನ ಜಾತಿವಾದಿಗಳಾಗಿ ಪರಿವರ್ತನೆಯನ್ನು ಹೊಂದಿದ್ದು ಲೋಕದ ಒಂದು ದೊಡ್ಡ ಅದ್ಭುತವಾಗಿದೆ. ಮನುಷ್ಯನ ಉತ್ಥಾನವು ಹೇಗೆ ಆಗಬಹುದೋ ಹಾಗೆ ಪತನವೂ ಆಗಬಹುದೆಂಬುದನ್ನು ಮಿ. ಜಿನ್ನರ ಜೀವನದಿಂದ ಚೆನ್ನಾಗಿ ಕಲಿತುಕೊಳ್ಳಬಹುದು.

ಹಿಂದೂ ಮುಸಲ್ಮಾನ ಐಕ್ಯ

ಮುಸ್ಲಿಂ ಲೀಗಿನ ಅಧಿನಾಯಕರಾದ ಮಿ. ಜಿನ್ನರು ಈ ರೀತಿ ದಿನ ಹೋದ ಹಾಗೆ ಹೋಗುತ್ತಾ ಕಡು ಜಾತಿವಾದಿಗಳಾಗಿ ಪರಿಣಮಿಸುತ್ತಿದ್ದಾರಾದರೂ ಮುಸ್ಲಿಂ ಲೀಗಿನಲ್ಲಿ ರಾಷ್ಟ್ರವಾದಿಗಳಾದ ಕೆಲವು ಜನ ವಿವೇಕಿಗಳೂ ಇದ್ದಾರೆಂಬುದು ಸಂತೋಷದ ವಿಷಯವಾಗಿದೆ. ಲೀಗಿನ ಒಬ್ಬ ಪ್ರಮುಖರಾದ ಸುಲಿಖ ಬರ್ಕತ್ ಅಲಿ ಎಂಬವರು ಜಲಂಧರದಲ್ಲಿ ಭಾಷಣ ಕೊಡುತ್ತಾ ಕಾಂಗ್ರೆಸು ಮತ್ತು ಲೀಗಿನೊಳಗಿನ ಮನಸ್ತಾಪವು ತಾತ್ಕಾಲಿಕವೆಂದೂ, ಈ ಎರಡೂ ಸಂಸ್ಥೆಗಳು ಗಾಢವಾಗಿ [illegible] ಒಡಂಬಡಿಕೆಯ ಆಧಾರದ ಮೇಲೆ ಹೊಂದಿಕೊಂಡು ಐಕ್ಯದ [illegible] ದಿನಗಳು ಹತ್ತಿರದಲ್ಲಿಯೇ ಇವೆಯೆಂದೂ ಹೇಳಿದರು. ಅವರು—"ದೇಶದಲ್ಲಿ ಶಾಂತಿಯನ್ನು ನೆಮ್ಮದಿಯನ್ನು ಸ್ಥಾಪಿಸಲು ಪ್ರಜಾಸತ್ತಾತ್ಮಕ ಹಿಂದೂ ಮುಸಲ್ಮಾನ ಐಕ್ಯವನ್ನು ಉಂಟುಮಾಡುವುದು ಮುಸ್ಲಿಂ ಲೀಗಿನ ಪರಮ ಧ್ಯೇಯವಾಗಿದೆ" ಎಂದರು. ಧ್ಯೇಯ ಸಾಧನೆಗಾಗಿ ಮುಸ್ಲಿಂ ಲೀಗು ಏನ ಮಾಡಿದರೂ ದೇಶವು ಅದಕ್ಕೆ ಹೃತ್ಪೂರ್ವಕ ಸ್ವಾಗತವನ್ನು ಕೊಡುತ್ತದೆ. ಕಾಂಗ್ರೆಸಂತೂ ಇಂಥ ವಿಷಯಗಳಲ್ಲಿ ಯಾವ ಸಂಸ್ಥೆಯೊಡನಾದರೂ ಸಹಕರಿಸಿ ಸಹಾಯಮಾಡಲಿಕ್ಕೆ ಯಾವಾಗಲೂ ಸಿದ್ಧವಾಗಿರುತ್ತದೆ. ಕಾಂಗ್ರೆಸ ಲೀಗೂ ಕೂಡಿ ಹಿಂದೂ ಮುಸಲ್ಮಾನ ಐಕ್ಯತೆಗೆ ಪ್ರಯತ್ನಮಾಡಿದರೆ ದೇಶದಲ್ಲಿ ಸ್ಥಿರವಾದ ಐಕ್ಯವನ್ನು ಸ್ಥಾಪಿಸಿ ಜನಾಂಗದ ಕಲ್ಯಾಣ ಸಾಧನೆಯನ್ನು ಮಾಡುವುದು ಕಠಿನ ಕಾರ್ಯವು ಆಗುವುದಿಲ್ಲ.

ಸದಸ್ಯರೊಬ್ಬರ ರಾಜೀನಾಮೆ

ಕೇಂದ್ರ ಎಸೆಂಬ್ಲಿಯಲ್ಲಿ ಮುಸ್ಲಿಂ ಲೀಗ ಪಾರ್ಟಿಯ ಪ್ರಮುಖ ಸದಸ್ಯರಲ್ಲೊಬ್ಬರಾದ ಸರ್ ಅಬ್ದುಲ್ ಹಾಲಿಮ ಗಜ್ನಾವಿಯವರು ತಮ್ಮ ಪಾರ್ಟಿಗೆ ರಾಜೀನಾಮೆಯನ್ನು ಕಳುಹಿಸಿ ಕೊಟ್ಟಿರುತ್ತಾರೆ. ಈ ವಿಷಯವನ್ನು ಅವರು ಪಾರ್ಟಿಯ ಕಾರ್ಯದರ್ಶಿಯವರಿಗೂ ಕೇಂದ್ರ ಎಸೆಂಬ್ಲಿಯ ಕಾರ್ಯದರ್ಶಿಯವರಿಗೂ ತಿಳಿಸಿದ್ದಾರೆ. ಪಾರ್ಟಿಯ ಕೆಲಸ ನೀತಿಗಳಿಂದ ಅಸಂತುಷ್ಟರಾಗಿ ಅವರು ರಾಜೀನಾಮೆ ಕೊಟ್ಟಿದ್ದಾರೆಂದು ಊಹಿಸಲಾಗಿದೆ. ಮಿ. ಜಿನ್ನರ ವರ್ತನವು ಅನೇಕ ಮಂದಿಗೆ ತೃಪ್ತಿಯನ್ನು ಕೊಟ್ಟಿರುವುದಿಲ್ಲ.

ಜಿನ್ನರು ರಾಜೀನಾಮೆ ಕೊಡುವರೆ?

ಮೌಲವಿ ನಾಸಿರ ಹುಸ್ಸೇನರು, ಅಖಿಲ ಭಾರತ ಶಿಯಾ ಮುಸಲ್ಮಾನರ ಧರ್ಮಸಂಬಂಧ ಗುರುಗಳು. ಅವರ ಒಂದು ಫತ್ವಾ ಹೊರಡಿಸಿ ಎಲ್ಲಾ ಶಿಯಾ ಮುಸಲ್ಮಾನರು ಮುಸ್ಲಿಂ ಲೀಗಿನೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಬಾರದೆಂದು ತಿಳಿಸಿದ್ದಾರಾಗಿ ವರ್ತಮಾನ. ಮಿ. ಜಿನ್ನರ ಜಾತಿಯಿಂದ ಶಿಯಾ ಮುಸಲ್ಮಾನರು. ಆದರೆ ವ್ಯಕ್ತಿಯಿಂದ ಮುಸ್ಲಿಂ ಲೀಗಿನ ಕಾಯಂ ಅಧ್ಯಕ್ಷರು. ಈಗ ಅವರು ತಮ್ಮ ಮತಗುರುಗಳ ಆಜ್ಞೆಯನ್ನು ಮನ್ನಿಸಿ ಲೀಗಿನ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುವರೆ? ಹಾಗೆ ಮಾಡಿ ತಮ್ಮ ಜಾತಿ ಪ್ರತಮತ್ತು ಧರ್ಮದ [illegible] ವ್ಯಕ್ತಗೊಳಿಸುವರೆ? ಅಥವಾ ಮತಗುರುಗಳ ಆಜ್ಞೆಯನ್ನು ಉಲ್ಲಂಘಿಸಿ ಲೀಗಿನ ಅಧ್ಯಕ್ಷರಾಗಿಯೇ ಇರುವರೆ? ಮತ್ತು ಕೇವಲ ತಮ್ಮ ಸ್ವಾರ್ಥವನ್ನು ಸಾಧಿಸುವರೆ? ಮಿ. ಜಿನ್ನರ ಎಷ್ಟು ಆಳ ನೀರಿನಲ್ಲಿದ್ದಾರೆ ಎಂಬುದರ ಪರೀಕ್ಷೆ ಸದ್ಯದಲ್ಲಿಯೇ ಆಗಲಿದೆ. ಮೌಲ್ವಿ ನಾಸಿರ ಹುಸ್ಸೇನರಿಗಿಂತ ನವಾಬ್ ಸರ್ ವಜೀರ ಹಸನರಂಥ ಪ್ರತಿಷ್ಠಿತ ಅನೇಕ ಮುಸಲ್ಮಾನ ಮುಖಂಡರು ಸಹ ಧಿಃ ಸಿದ್ದಾರೆ.

ಜನರು ಸ್ವಸ್ತಿಕಾ "ಕಾಂತಿ"
ಟೈಲೆಟ್ ಸೋಪನ್ನೇ
ಯಾಕೆ ಆರಿಸುತ್ತಾರೆ?

ಯಾರೆ ಕಂಡ ಪ್ರತಿನಿತ್ಯದ ಸ್ನಾನಕ್ಕೆ ಇದು ಬಹಳ ಉತ್ತಮವಾದದ್ದು ಮತ್ತು ಬಹಳ ಕಡಿಮೆ ಬೆಲೆಯ ಸಾಬೂನಾಗಿರುತ್ತದೆ.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.

ಶಾಲಿವಾಹನ ಶಕೆ ೧೮೬೧ನೆಯ ಪ್ರಮಾಥಿ ಸಂವತ್ಸರದ ವೈಶಾಖ ಶು॥ ೩ ಶನಿವಾರದಿಂದ ವೈಶಾಖ ಶು॥ ೯ ಶುಕ್ರವಾರದ ವರೇಗಿನ ಪಂಚಾಂಗ. (೧೯೩೯ನೇಯ ಮೇ[illegible] ಪಕ್ಷ)

22	ಶನಿ	೧	೩೭॥	ಕೃತ್ತಿಕಾ	೧೮॥	೯	[illegible]
23	ರವಿ	೨	೩೩॥।	ರೋಹಿಣಿ	೧೪॥।	೧೦	
24	ಸೋ.	೩	೨೯।	ಮೃಗಶಿರಾ	೧೨॥	೧೧	
25	ಕುಜ	೪	೨೪	ಆದ್ರ್ರಾ	೯।	೧೨	
26	ಬುಧ	೫	೧೮।	ಪುನರ್ವಸೂ	೫॥	೧೩	
27	ಗುರು	೬	೨೧।	ಪುಷ್ಯಾ	೧।ಆಶ್ಲೇಷ॥।,	೧೪	
28	ಶುಕ್ರ	೭	೬।	ಮಘಾ	೫೩।	೧೫	

THE PIE-MONEY BANK LTD.,

Maidan Road, MANGALORE.

Undertakes all kinds of Banking Business. Current account at 2½% per annum, Savings Bank Deposits at 4½% per annum

FIXED DEPOSITS

For 3 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs. 5000/ run regularly on systematic lines Unique Banking facilities to Businessmen and interested Public

Apply for particulars–**K. R. GURU,** *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತವಾಗುತ್ತದೆ. [illegible] ಮಕ್ಕಳಾಗುವುದರಿಂದ [illegible]. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು [illegible]. ಈ [illegible] ಅದರ ಸೇವನೆಯಿಂದ [illegible] ನೋಡಿದಂತೆ [illegible]. [illegible] ಸಂಸಾರಸುಖವು [illegible] ಗರ್ಭಧಾರಣ [illegible]. [illegible] ಹೊಡಲೇ [illegible] ವೈದ್ಯ ಎಲ್. ಸಿ. ಪಿ. ಎಸ್. [illegible]. ಹಾಗೇ ಈ ಚೂರ್ಣದಿಂದ [illegible] ಆಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪-೦-೦ ವಿ. ಪಿ.

ವಿಳಾಸ: ಸಂಜೀವಿನೀ ಔಷಧಾಲಯ, ಮು. ಪೋ. ವಿರಜ, (S M. C.

ಬರೇ ರೂ. 1-4-0ಕ್ಕೆ 8 ಗಡಿಯಾರಗಳು ಮತ್ತು 1296 ಫ್ರೀ ಬಹುಮಾನಗಳು!

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೀಸೆ [illegible] ಅಥವಾ 8 ಸೀಸೆ [illegible] ಯ ಮದ್ದನ್ನು ಪಡೆಕೊಳ್ಳುವವರಿಗೆ 2 ರೋಲ್ಡ್ ಗೋಲ್ಡಿನ ರಿಸ್ಟ್‌ವಾಚುಗಳು ಒಂದು ಕಟ್ಟುವ ಪಟ್ಟಿ ಕೂಡ

1 ಪೋಕೆಟು ವಾಚು ಒಂದು ಜಿಲೆಟ್ ರೇಜರು, ಒಂದು ಶೇವಿಂಗ್ ಬ್ರಶು, ಒಂದು ಶೇವಿಂಗ್ ಸಾಬೂನು ಒಂದು ಕನ್ನಡ ಒಂದು ಪಾಕೆಟೀಗ, 1½ [illegible] ರೋಲ್ಡ್ ಗೋಲ್ಡ್ ಸಹಿತ [illegible] ಬಟನ್ನು, ಒಂದು ಸೆಟ್ಟು ರೋಲ್ಡ್ ಗೋಲ್ಡ್ ಗುಂಡಿಗಳು, ಒಂದು ಪಕೆಟ್ ಪೌಡರು, ಒಂದು [illegible], ಒಂದು ಪೇರ್ ಕನ್ನಡಕ, ಒಂದು ಬಂಗಾರದ ಗಿಲ್ಟಿನ ಉಂಗುರ, 360 ಫೀಟ್ ಫೋಕಸ್ ಜೀಕುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ [illegible] ಮೆಷಿನಿನಿಂದ ಮಾಡಲ್ಪಟ್ಟ ಒಂದು [illegible] ಇವುಗಳನ್ನು ಉಚಿತವಾಗಿ ಕೊಡುವೆವು. ಪೆಕಿಂಗ್ ಮತ್ತು ಟಪ್ಪಾಲು ಖರ್ಚು 0—14—0 ಪ್ರತ್ಯೇಕ)

The American Commercial Stores, Post Box No 12213 Calcutta (S A

THE

Bank of Mangalore Ltd.,

MANGALORE

ESTD 1931

Branches:

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted.

THE

Canara Banking Corporation Udipi, Ltd.,

(INCORPORATED IN BRITISH INDIA)

THREE-YEARS' CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/-, & 5,000/

are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
[illegible] ಸಮೀಪ, ಪೆರಡಾಲ,
P. O. Peridepi (ಪೆರ್ಡೂರು ಡಿ.)

HOUNSA

ಹಂಸಾಸ್ನೋ ಮತ್ತು ಬ್ರಿಲ್ಲಿಂಟ್ವ್ಯಾನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಳೀಕಟ್ಟಾ ಬಜಾರ್, ಮಂಗಳೂರು.

ಡೋಂಗರೆ ಇವರ ಬಾಲಾಮೃತವು.

ಮಕ್ಕಳ [illegible] ಹಲವು [illegible] ಅಶಕ್ತರಾದ ಕೆನ್ನು [illegible] ಇವುಗಳನ್ನು [illegible] ಪಡಿಸಿ ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುಡ್ಡು ಮುಡಿಗೆ	1—11—0	—
„ ದುಯಂ „ „	1—10—0	1—10—0
„ ಅವ್ವಲ್ ಸುಗ್ಗಿ „	1—10—0	—
„ ದುಯಂ „ „	1—9—0	—
ಅಕ್ಕಿ ಅವ್ವಲ್ ಗುಡ್ಡು „	4—2—0	4—2—0
„ ದುಯಂ „ „	3—14—0	3—14—0
„ ಅವ್ವಲ್ ಸುಗ್ಗಿ „	4—4—0	—
„ ದುಯಂ „ „	3—8—0	3—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದದು „	37—8—0	47—8—0
ಕೊಬ್ಬರಿ ಆಫೀಸು ಖಂಡಿಗೆ	45—0—0	—
„ ದಿಲ್‌ಪಸಂದು „	47—8—0	—
ತೆಂಗಿನ ಎಣ್ಣೆ ಮುಡಿಗೆ	3—5—0	3—5—0
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	3—4—0	3—12—0
ಗೇರುಬೀಜ ಮುಡಿಗೆ	3—12—0	3—12—0
ಕಬ್ಬಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	15—8—0	16—8—0

ಅಲ್ಬೇನಿಯದ ಫಲಹಾರವಾದ ಬಳಿಕ

ಲಂಡನ್ ಮುಸಲ್ಮಾನರ ಸಭೆ

ಯೂರೋಪಿನಲ್ಲಿ ಯುದ್ಧಸಿದ್ಧತೆ

ಅಲ್ಬೇನಿಯವು ಯೂರೋಪಿನ ಮುಸಲ್ಮಾನರ ಒಂದು ಚಿಕ್ಕ ರಾಜ್ಯ. ಅದನ್ನು ಮುಸಲೋನಿ ದಕ್ಕಿಸಿಕೊಂಡಾಯಿತು. ಆದ್ದರಿಂದ ಮುಸಲ್ಮಾನರೆಲ್ಲರೂ ಮುಸಲೋನಿಯ ಮೇಲೆ ರೇಗಿಕೊಂಡು ಅವನ ಮೇಲೆ ವಾಗ್ಬಾಣಗಳ ಸುರಿಮಳೆಯನ್ನು ಕರೆದುಬಿಟ್ಟಿದ್ದಾರೆ! ಲಂಡನಿನ ಮುಸಲ್ಮಾನರು ಒಂದು ಸಭೆಕೂಡಿ—“ಅಲ್ಬೇನಿಯವನ್ನು ಜಯಿಸಿದೊಡನೆ ಮುಸಲೋನಿ ತಾನು ಧರಿಸಿಕೊಂಡ ಇಸ್ಲಾಮಿನ ರಕ್ಷಕ ಎಂಬ ಬಿರುದನ್ನು ಬಿಟ್ಟುಕೊಡಬೇಕೆಂದೂ ಇಟಲಿಯಲ್ಲಿರುವ ಒರಿಯೆಂಟಲ ಎಕೆಡೆಮಿ ಎಂಬ ಸಂಸ್ಥೆಯನ್ನು ಮುಚ್ಚಿಬಿಡಬೇಕೆಂದೂ ಮುಸಲೋನಿಗೆ ತಿಳಿಸುವ ಠರಾವನ್ನು ಮಾಡಿಕೊಂಡಿದ್ದಾರೆ. ಹೀಗೆಯೇ ಅಲ್ಜೀರಿಯ, ಟ್ರಿಪೋಲಿ ಮೊದಲಾದ ಯೂರೋಪಿನ ಸಮೀಪದಲ್ಲಿರುವ ಉತ್ತರಆಫ್ರಿಕದ ಮುಸಲ್ಮಾನ ರಾಜ್ಯಗಳಲ್ಲಿಯೂ ದೊಡ್ಡ ದೊಡ್ಡ ಸಾರ್ವಜನಿಕ ಸಭೆಗಳಾಗಿ ಮುಸಲೋನಿಯ ವರ್ತನವು ಖಂಡಿಸಲ್ಪಟ್ಟಿರುವುದು. ಸಭೆಯಲ್ಲಿ ಕೂಡಿದ ಅನೇಕ ಮಂದಿ ಈ ಅನ್ಯಾಯಕ್ಕೆ ತಕ್ಕ ಪ್ರತಿಕಾರಮಾಡುವ ಪ್ರತಿಜ್ಞೆಯನ್ನು ತೆಗೆದುಕೊಂಡಿದ್ದಾರೆ. ಕೆಲಕೆಲವು ಕಡೆಗಳಲ್ಲಿ ದಂಗೆಗಳೂ ಆಗಿವೆ. ಸರಕಾರವು ಅವುಗಳನ್ನು ವಜ್ರಮುಷ್ಟಿಯಿಂದ ಅಡಗಿಸಿರುವುದು

ಯುದ್ಧಸಿದ್ಧತೆ.

ಫ್ರಾನ್ಸ್, ಪೋಲೆಂಡ, ಹಾಲೆಂಡ ಮೊದಲಾದ ದೇಶಗಳಲ್ಲಿ ಅಪೂರ್ವ ಯುದ್ಧಸಿದ್ಧತೆಗಳಾಗಿರುವವು. ಎಲ್ಲ ದೇಶಗಳು ತಮ್ಮ ತಮ್ಮ ರಕ್ಷಣೆಯ ಉಪಾಯಗಳನ್ನು ಕೈಕೊಂಡಿವೆ. ಇಂಗ್ಲಂಡ, ಫ್ರಾನ್ಸದೇಶಗಳ ಎಲ್ಲ ಪಕ್ಷಪಾರ್ಟಿಗಳಿಗೆ ಸೇರಿದ ವರ್ತಮಾನಪತ್ರಿಕೆಗಳು—ಯಾವ ಸಮಯದಲ್ಲಿಯೂ ಎಂಥ ಕಾರ್ಯಕ್ಕೆ ಮುಕ್ಕಾದರೂ ಸರಕಾರವೂ ಜನತೆಯೂ ಸಿದ್ಧವಾಗಿರಬೇಕು ಎಂದು ಒಮ್ಮತದಿಂದ ಸಾರಿವೆ. ಭೂಮಧ್ಯ ಸಮುದ್ರದಲ್ಲಿ ಬ್ರಿಟಿಷ ಫ್ರೆಂಚ ಯುದ್ಧನಾವೆಗಳ ಸಂಚಲನಕ್ಕೆ ಆರಂಭವಾಗಿದೆ. ಬ್ರಿಟಿಷ ಫ್ರೆಂಚ ತಜ್ಞರು ಒಟ್ಟುಕೂಡಿ ಯುದ್ಧಸಂಭವದಲ್ಲಿ ಏನುಮಾಡಬೇಕೆಂಬುದನ್ನು ಪರ್ಯಾಲೋಚಿಸಿದ್ದಾರೆ

ಬಲ್ಗೇರಿಯದ ಭೀತಿ

ಅಲ್ಬೇನಿಯದಲ್ಲಿ ಇಟಲಿಯ ಅಧಿಕಾರವು ಚೆನ್ನಾಗಿ ಸ್ಥಾಪಿಸಲ್ಪಟ್ಟು ಒಡನೆಯೇ ಸರ್ವಾಧಿಕಾರಿಗಳ ಕಣ್ಣು ಬಲ್ಗೇರಿಯದ ಮೇಲೆ ಬೀಳಬಹುದೆಂದೂ ಸುದ್ದಿ ಉಂಟಾಗಿದೆ. ಯುದ್ಧಕಾಲದಲ್ಲಿ ಶತ್ರುಪಕ್ಷವನ್ನು ನಿಗ್ರಹಿಸಲಿಕ್ಕೆ ಬಹಳ ಅನುಕೂಲವಾಗಿರುವ ಡೊಬ್ರೂಜ ಬಂದರವನ್ನು ಬಿಟ್ಟುಕೊಡಬೇಕೆಂದು ಸರ್ವಾಧಿಕಾರಿಗಳು ರುಮೇನಿಯವನ್ನು ಪೀಡಿಸಲಿಕ್ಕೂ ಸಾಕು. ಹೀಗಾಗಿಬಿಟ್ಟರೆ ಭೂಮಧ್ಯ ಸಮುದ್ರದಲ್ಲಿ ಬ್ರಿಟಿಷರ ಮತ್ತು ಫ್ರೆಂಚರ ಅಧಿಕಾರವು ಬಹಳ ಕುಂದಿಹೋಗುವುದು. ಬಾಲ್ಕನ್ ರಾಷ್ಟ್ರಗಳ ಸ್ವಾತಂತ್ರ್ಯಕ್ಕೂ ಹಾನಿತಟ್ಟುವುದು. ಯುರೋಪದಲ್ಲಿ ತಾವೇ ತಾವಾಗಿ ಮೆರೆಯಬೇಕೆಂಬ ಹಿಟ್ಲರ ಮುಸಲೋನಿಯರ ಮಹತ್ವಾಕಾಂಕ್ಷೆಯು ಸುಲಭದಲ್ಲಿ ಕೈಗೂಡುವುದು. ಬಲ್ಗೇರಿಯವನ್ನು ಜಯಿಸಿದ ಬಳಿಕ ಗ್ರೀಸನ್ನೂ, ಅನಂತರ ಟರ್ಕಿಯನ್ನೂ ಜಯಿಸುವುದಕ್ಕೆ ಕಷ್ಟವಿಲ್ಲ. ಆದ್ದರಿಂದ ಬ್ರಿಟಿಷರೂ ಫ್ರೆಂಚರೂ ಕೂಡಲೆ ಪೋಲೆಂಡಿಗೆ ರಕ್ಷಣೆಯ ಭರವಸೆಯನ್ನು ಕೊಟ್ಟಂತೆ ಗ್ರೀಸ ಟರ್ಕಿಗಳಿಗೂ ಭರವಸೆಕೊಡುವ ವ್ಯವಸ್ಥೆಯಾಗಿದೆ

ಅಲ್ಬೇನಿಯದ ಕಿರೀಟ ಇಮಾನುವೆಲ್ ಅರಸನಿಗೆ.

ಅಲ್ಬೇನಿಯದ ಆಕ್ರಮಣದಲ್ಲಿ ಮುಸಲೋನಿಗೆ ಸಂಪೂರ್ಣ ವಿಜಯವಾಗಿದೆಯಷ್ಟೆ. ಈಗ ಅಲ್ಲಿ ಹೊಸ ಸರಕಾರವು ಸ್ಥಾಪಿಸಲ್ಪಟ್ಟಿದೆ ಅದೀಗ ಮುಸಲೋನಿಯ ಸಂಪೂರ್ಣ ಮನೋನುಕೂಲವಾಗಿ ಆಡಳಿತವನ್ನು ನಡೆಸುವುದು. ಅಲ್ಬೇನಿಯದಿಂದ ಪಲಾಯನಮಾಡಿದ ಜೋಗ ಅರಸನ ಕಿರೀಟವನ್ನು ಇಟಲಿಯ ಇಮಾನುವೆಲ್ ಅರಸನಿಗೆ ಕಾಣಿಕೆಯಾಗಿ ಒಪ್ಪಿಸಲಾಗುವುದು. ಇಟಲಿಗೂ—ಅಲ್ಬೇನಿಯಕ್ಕೂ ಇರಬೇಕಾದ ರಾಜಕೀಯ ಸಂಬಂಧವು ಯಾವ ಪ್ರಕಾರದ್ದೆಂಬುದನ್ನು ಮುಂದೆ ಆಲೋಚಿಸಲಾಗುವುದು. ಬೇರೆ ಉಪಾಯಕಾಣದೆ ಅಲ್ಬೇನಿಯದ ಜನರು ಇಟಲಿಯ ಅಧೀನವಾಗಿರಲಿಕ್ಕೆ ತಾವಾಗಿ ಒಪ್ಪಿರುವರು.

ನಾಝಿಪಾರ್ಟಿಯ ನಿಷೇಧ.

ಬಲ್ಗೇರಿಯದಲ್ಲಿ ಹಿಟ್ಲರನ ನಾಝಿಪಾರ್ಟಿಯ ಪ್ರಭಾವವು ವಿಶೇಷ ರೀತಿಯಿಂದ ಕಾಣಿಸಿಕೊಂಡಿದೆ. ಈ ಪಾರ್ಟಿಯ ಕಾರ್ಯಕ್ರಮವು ದೇಶದ ಶಾಂತಿಯನ್ನು ಕೆಡಿಸುವಂಥಾದ್ದಾಗಿದೆ. ಅದನ್ನು ಹಾಗೆಯೇ ಬಿಟ್ಟುಬಿಟ್ಟರೆ ಸರಕಾರಕ್ಕೆ ತನ್ನ ಕೆಲಸಕಾರ್ಯಗಳನ್ನು ನಿರ್ವಹಿಸುವುದು ಬಹಳ ಕಷ್ಟವಾಗುವುದು. ಆದ್ದರಿಂದ ಸರಕಾರವು ಆ ಪಾರ್ಟಿಯನ್ನು ಕಾನೂನುಬಾಹಿರವೆಂದು ನಿಷೇಧಿಸಿದೆ. ಅದರ ಮುಖಂಡರನ್ನು ಕೈದುಮಾಡಿದೆ. ಸರಕಾರದ ಈ ಕಾರ್ಯದಿಂದ ಜನತೆಯು ಸಂತುಷ್ಟವಾಗಿದೆ

ಪೋಪರ ಆಕಾಶವಾಣಿ

ಜನರಲ್ಲಿ ಧಾರ್ಮಿಕಭಾವನೆಯು ಕ್ಷೀಣವಾಗಿದೆ. ಆದ್ದರಿಂದ ಸ್ವಾರ್ಥವು ಮೆರೆಯುತ್ತಿದೆ. ಪ್ರಪಂಚದಲ್ಲಿ ಅಶಾಂತಿ ಅಸಂತುಷ್ಟಿಗಳು ಹರಡಿವೆ. ಜನರು ಧಾರ್ಮಿಕ ಭಾವನೆಯಿಂದ ಪ್ರೇರಿತರಾಗಿ ಶಾಂತಿಯನ್ನು ಕಾಪಾಡಬೇಕೆಂದು ಪೋಪರು ಆಕಾಶವಾಣಿಯ ಮೂಲಕ ಪ್ರಪಂಚಕ್ಕೆ ಸಾರಿದ್ದಾರೆ. ಅತ್ತ ಹಿಟ್ಲರ-ಮುಸಲೋನಿಯರು ಈ ರೀತಿಯ ಭಾವನೆಯುಳ್ಳ ಕೆಂಟರಬರಿಯ ಆರ್ಚಬಿಷಪರನ್ನು ಬೊಲ್ಶೆವಿಕರೆಂದೂ ನಾಸ್ತಿಕರೆಂದೂ ದೂರಿ ತೆಗಳಿದ್ದಾರೆ. ಹೀಗೆ ಒಬ್ಬನಿಗೊಬ್ಬರು ಅಧರ್ಮಿಗಳೆಂದೂ ನಾಸ್ತಿಕರೆಂದೂ ತೋರಿಕೊಡುತ್ತಿದ್ದಾರೆ

ತಾ ೨೨-೪-೧೯೩೯ರಿಂದ
ಬಾಳಾಜಿ ಬಾಳಾಜಿ
ನ್ಯೂ ಚಿತ್ರಾ ಟಾಕೀಸ್ ಮಂಗಳೂರು

★ ಗೋರಿಂಗರ ಗರ್ಜನೆ ★

ಯೂರೋಪಿನ ಸಣ್ಣ ರಾಷ್ಟ್ರಗಳಿಗೆ ಇಟಲಿ ಜರ್ಮನಿಗಳ ಎಚ್ಚರಿಕೆ

ಬ್ರಿಟನನ್ನೂ ಫ್ರಾನ್ಸನ್ನೂ ವಿರೋಧಿಸಲಿಕ್ಕೆ ಜಪಾನು ಇಟಲಿ ಜರ್ಮನಿಗಳೊಂದಿಗೆ ಸೇರಬೇಕು

ಬ್ರಿಟನು ಎಂದರೆ ಅದೊಂದು ಬೊಗಳುವ ನಾಯಿ ಎಂದು ಹಿಟ್ಲರನ ಬಲಗೈಯಂತಿರುವ ಮಾರ್ಶಲ ಗೋರಿಂಗರು ಒಂದು ಲೇಖನವನ್ನು ಬರೆದು ಬ್ರಿಟನಿಗೆ ಕಚ್ಚಲಿಕ್ಕೆ ತಿಳಿದಿರುವುದಿಲ್ಲವೆಂದು ಪ್ರಪಂಚಕ್ಕೆ ಸಾರಿದ್ದಾರೆ. ಇಟಲಿಯ ಬಲ ಹೆಚ್ಚಿದರೆ ಜರ್ಮನಿಯ ಬಲ ಹೆಚ್ಚಿದಂತಾಯಿತು, ಜರ್ಮನಿಯ ಬಲ ಹೆಚ್ಚಿದರೆ ಇಟಲಿಯ ಬಲ ಹೆಚ್ಚಿದಂತಾಯಿತು. ಇಟಾಲಿಯನ ಜರ್ಮನ ಸ್ನೇಹ ಸಂಬಂಧವನ್ನು ಮುರಿಯುವುದು ಬ್ರಹ್ಮನಿಗೂ ಸಾಧ್ಯವಲ್ಲ ಎಂದು ಅವರು ಹೇಳಿರುವರು

ಇಟಲಿಯ ಮತ್ತು ಜರ್ಮನಿಯ ಪ್ರತಿಕೂಲ ಪ್ರಚಾರವಾದ ಬ್ರಿಟನು ಮತ್ತು ಫ್ರಾನ್ಸು ಯಾವ ಪುರುಷಾರ್ಥವನ್ನು ಸಂಪಾದಿಸಲಿಕ್ಕೆ ಇಲ್ಲ. ಈ ಎರಡು ರಾಷ್ಟ್ರಗಳ ಬೊಗಳಿಕೆಗೆ ನಾವು ತಿಲಮಾತ್ರ ಹೆದರುವುದಿಲ್ಲ. ಯಾಕೆಂದರೆ ಬೊಗಳುವ ನಾಯಿ ಕಚ್ಚುವದಿಲ್ಲವೆಂದು ನಿಮಗೆ ತಿಳಿದಿದೆ.

ಕಣ್ಣುಕಟ್ಟಿನ ವಿದ್ಯೆ.

ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳನ್ನು ನಮ್ಮ ವಿರುದ್ಧ ಎತ್ತಿ ನಿಲ್ಲಿಸುವ ಮಹಾಪ್ರಯತ್ನವನ್ನು ಇಂಗ್ಲಿಷರೂ ಫ್ರೆಂಚರೂ ಮಾಡಿದ್ದಾರೆ. ಆದರೆ ಪ್ರಪಂಚದ ಎಲ್ಲ ಶಕ್ತಿಗಳು ಒಂದಾದರೂ ನಾವು ಹೆದರುವುದಿಲ್ಲ. ಇಂಗ್ಲಿಷರ ಮತ್ತು ಫ್ರೆಂಚರ ಈ ಪ್ರಯತ್ನಗಳು ಅವರ ಕಣ್ಣುಕಟ್ಟಿನ ವಿದ್ಯೆಯಾಗಿದೆ ಎಂಬುದನ್ನು ಇತರ ರಾಷ್ಟ್ರಗಳು ಈಗಲಾದರೂ ತಿಳಿದಿರಬೇಕು. ಇವರ ಮರುಳಾಟಕ್ಕೆ ಯಾರೂ ಮೋಹಿತರಾಗಬಾರದು. ಇಂಗ್ಲಿಷರ ಮತ್ತು ಫ್ರೆಂಚರದ್ದು ಕೇವಲ ಬೊಗಳಿಕೆ ಮಾತ್ರ. ಅವುಗಳಿಗೆ ಕಚ್ಚಲಿಕ್ಕೆ ತಿಳಿದಿರುವುದಿಲ್ಲವೆಂಬುದನ್ನು ಈಚೆಗೆ ಕೆಲವೇ ವರ್ಷಗಳ ಇತಿಹಾಸವು ಅವರಿಗೆ ಹೇಳಿಕೊಟ್ಟಿದೆ

ನ್ಯಾಯನೀತಿಯೇ ನಮ್ಮ ಧ್ಯೇಯ

ಪ್ರಪಂಚದಲ್ಲಿ ಶಾಂತಿ ಮತ್ತು ನ್ಯಾಯದ ಸ್ಥಾಪನೆಯಾಗಬೇಕೆಂಬುದು ಇಟಲಿ ಮತ್ತು ಜರ್ಮನಿಯ ಪರಮಧ್ಯೇಯವಾಗಿರುತ್ತದೆ. ಆ ನಮ್ಮ ಕರ್ತವ್ಯ ಪಥದಿಂದ ನಮ್ಮನ್ನು ಅತ್ತಿತ್ತ ನೂಕಾಡುವ ಸಾಮರ್ಥ್ಯವು ಪ್ರಪಂಚದ ಯಾವ ಶಕ್ತಿಗೂ ಇರುವುದಿಲ್ಲ. ಅಂಥ ಪ್ರಯತ್ನಗಳನ್ನು ಯಾರಾದರೂ ಮಾಡುವರಾದರೆ ಅವರು ಖಂಡಿತ ನಗೆಗೀಡಾಗುವರು. ನಮ್ಮ ಕಾರ್ಯ ಸಾಧನೆಯಾಗುವ ತನಕ ನಾವು ಒಂದಾಗಿ ಇರುವೆವು

ಜಪಾನಿನ ಹಂಚಿಕೆ.

ಬ್ರಿಟಿಷರು ಮತ್ತು ಫ್ರೆಂಚರು ಕೂಡಿ ಚೀನದಲ್ಲಿ ಜಪಾನರ ಯಾವ ಆಟವೂ ನಡೆಯದಂತೆ ಮಾಡಿರುವರು. ಆದ್ದರಿಂದ ಜಪಾನರು ಅವರ ಮೇಲೆ ಉರಿದುಬಿದ್ದಿದ್ದಾರೆ. ಜಪಾನ ಪಾರ್ಲಿಮೆಂಟಿನ ೪೬೬ಮಂದಿ ಸದಸ್ಯರಲ್ಲಿ ೧೬೬ಮಂದಿ ಒಂದು ಅರ್ಜಿಯನ್ನು ಬರೆದು ಬ್ರಿಟನ ಫ್ರಾನ್ಸಿನ ವಿರುದ್ಧ ಜಪಾನು ಇಟಲಿ ಫ್ರಾನ್ಸುಗಳೊಂದಿಗೆ ಸೈನಿಕ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕೆಂದು ತಮ್ಮ ಪ್ರಧಾನರಿಗೆ ತಿಳಿಸಿದ್ದಾರೆ. ಇದೇ ಅರ್ಥದ ಒಂದು ಠರಾವು ಜಪಾನಿನ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬರಲು ಅಸ್ಪದದೊರೆಯಲಿಲ್ಲವಾದ್ದರಿಂದ ಅವರು ಈ ಅರ್ಜಿಯನ್ನು ಬರೆದಿರುವರು. ಇದರ ಪರಿಣಾಮ ಹೇಗೇ ಇದ್ದರೂ, ಜರ್ಮನಿ ಇಟಲಿ ಜಪಾನು ಒಂದು ಧ್ಯೇಯ, ಒಂದು ಆದರ್ಶವನ್ನಿಟ್ಟುಕೊಂಡು ಎಲ್ಲಾ ಉಪಾಯಗಳಿಂದ ತಮ್ಮ ಸಾಮ್ರಾಜ್ಯ ವಿಸ್ತರಣೆಯ ಕಾರ್ಯದಲ್ಲಿ ತೊಡಗಿರುವವೆಂಬುದು ಸ್ಪಷ್ಟವಾಗಿದೆ

ಸ್ಪಷ್ಟೋಕ್ತಿ

ಮಾರ್ಶಲ ಗೋರಿಂಗರು ಸ್ಪಷ್ಟವಾದ ಮಾತುಗಳನ್ನು ಆಡಿದ್ದಾರೆ. ಐರಾವಣ ಮೈರಾವಣ ಇಂದ್ರಜಿತುಗಳಂತೆ ಇಟಲಿ ಜರ್ಮನಿ ಜಪಾನ ರಾಷ್ಟ್ರಗಳು ರಾಕ್ಷಸೀ ಮಹತ್ವಾಕಾಂಕ್ಷೆಯಿಂದ ಪ್ರೇರಿತವಾಗಿ ತಮ್ಮ ಕಾರ್ಯವನ್ನು ಸಾಧಿಸುತ್ತಾ ಇರುವಾಗ ಇಂಗ್ಲಿಷರೂ ಫ್ರೆಂಚರೂ ಇಷ್ಟರ ತನಕ ಬರೇ ಮಾತಿನ ಮಲ್ಲರಾಗಿದ್ದಾರೆಯೇ ಹೊರತು ಆ ರಾಷ್ಟ್ರಗಳನ್ನು ತಡೆಗಟ್ಟಲಿಕ್ಕೆ ಕಾರ್ಯತಃ ಏನೂ ಮಾಡಿರುವುದಿಲ್ಲ. ಆದ್ದರಿಂದಲೇ ಮಾರ್ಶಲ ಗೋರಿಂಗರು ಆ ರಾಷ್ಟ್ರಗಳನ್ನು ಬೊಗಳುವ ನಾಯಿಗಳೆಂದು ಕರೆಯಲಿಕ್ಕೆ ಧೈರ್ಯಪಟ್ಟರೆ. ಪರಂತು ಬೊಗಳುವ ನಾಯಿಗಳಿಗೆ ಕಚ್ಚಲಿಕ್ಕೂ ಬರುತ್ತದೆ ಎಂಬುದನ್ನು ತೋರಿಸಲಿಕ್ಕೆ ಇಂಗ್ಲಿಷರೂ ಫ್ರೆಂಚರೂ ಸಮರ್ಥರಲ್ಲವೆ?

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.
ಡಾ ಜಸಾನಿಯವರ
ಜಗತ್ಪ್ರಸಿದ್ಧ
ಗೊನೋಕಿಲರ್ (ರಜಿಸ್ಟರ್ಡ)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಕೆಂಪು ಸೀಲು ಮತ್ತು "ಗೊನೊಕಿಲರ್" ಇರುವುದೊ ಎಂಬುದನ್ನು ನೋಡಿರಿ

ಇಂದಿನ ಆಧುನಿಕ ಔಷಧ ಇಂಗ್ಲೀಷ ಮತ್ತು ಆಯುರ್ವೇದ ಔಷಧಗಳಿಂದೂ ಫಲಕಾರಿಯಾಗದೇ ಇಂಜೆಕ್ಷನ್ ಮೊದಲಾದ ಇತರ ಚಿಕಿತ್ಸೆಗಳೂ ನಿಷ್ಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾಧೆಗಳಿಗೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯದಾ ಯಾವದೇ ಸ್ಥಿತಿಯಲ್ಲಿರಲಿ), ನೋವು ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಸರಿಯಾಗಿ ಹೋಗದಿರುವಿಕೆ, ಧಾತುಸ್ರಾವ, ಕಲುಷ ಹರಿಯುವುದು ಇವೇ ಮೊದಲಾದ ಯಾವತ್ತು ಗೊನೋರಿಯಾದಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ
50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜ 8 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾ ಪಟೇಲ್ ರೋಡ್, ಮುಂಬಯಿ 4
Sole Manufacturer **Dr D. N JASANI,** Vithalbhai Patel Road, BOMBAY
ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.
ಸ್ಟಾಕಿಸ್ಟ:—ಮೆಸರ್ಸ ಪಿ. ಫೆರ್ನಾಂಡಿಸ್ ಮತ್ತು ಕಂಪನಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್ ಮಂಗಳೂರು.

ಮಂಗಳೂರಲ್ಲಿ ಮಾನ್ಯ ವಿದ್ಯಾ ಮಂತ್ರಿಗಳು

ಮುಖ್ಯೋಪಾಧ್ಯಾಯರ ಸಭೆ

ಕಳೆದ ತಾ. ೧೨ನೇ ಸಂಜೆ ೩॥ ಗಂಟೆಗೆ ಜಿಲ್ಲೆಯ ಟ್ರೈನಿಂಗ್ ಮತ್ತು ಹ್ಯಾಸ್ಕೂಲ್ ಹೆಡ್ಮಾಸ್ತರರ ಸಭೆಯು ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಜರುಗಿತು. ಅಧ್ಯಕ್ಷ ಸ್ಥಾನವನ್ನು ಮಂಗಳೂರಿಗೆ ದಯಮಾಡಿಸಿದ್ದ ಮಾನ್ಯ ಸಿ. ಜೆ. ವಾರ್ಕಿಯರು ವಹಿಸಿದ್ದರು

ವಿದ್ಯಾರ್ಥಿಗಳಿಗೆ ಮಾತೃ ಭಾಷೆಯಲ್ಲಿಯೇ ವಿದ್ಯಾಭ್ಯಾಸವನ್ನು ಕೊಡಬೇಕೋ ಯಾ ಬೇರೆ ಯಾವ ಭಾಷೆಯನ್ನು ಉಪಯೋಗಿಸಬಹುದೆಂದು ಚರ್ಚಿಸಿ ತಕ್ಕ ಸಲಹೆಗಳನ್ನು ಕೇಳುವುದಕ್ಕಾಗಿ ಈ ಸಭೆಯನ್ನು ಕರೆಯಲಾಗಿದೆ ಎಂದು ಮಂತ್ರಿಗಳು ಸೂಚಿಸಿ ಕ್ರಮವಾಗಿ ಹೆಡ್ಮಾಸ್ತರರು ತಮ್ಮ ತಮ್ಮ ಅಭಿಪ್ರಾಯವನ್ನು ಕೊಡುವಂತೆ ತಿಳಿಸಿದರು

ಸೈಂಟ್ ಎಲೋಸಿಯಸ್ ಹ್ಯಾಸ್ಕೂಲಿನ ಹೆಡ್ಮಾಸ್ತರರು ತನ್ನ ಅಭಿಪ್ರಾಯವನ್ನು ಕೊಡುತ್ತಾ "ನಮ್ಮ ಶಾಲೆಗಳಲ್ಲಿ ನೇಕಡಾ ೯೦ ಮಂದಿ ವಿದ್ಯಾರ್ಥಿಗಳ ಮಾತೃ ಭಾಷೆಯು ಕನ್ನಡವೂ ಅಲ್ಲ ತುಳುವೂ ಅಲ್ಲ ಕೊಂಕಣಿಯಾಗಿರುತ್ತದೆ ಅನೇಕ ವೇಳೆ ಈ ವಿದ್ಯಾರ್ಥಿಗಳಿಗೆ ಕನ್ನಡವನ್ನು ಕೂಡಾ ಇಂಗ್ಲಿಷಿನಲ್ಲಿಯೇ ವಿವರಿಸಬೇಕಾದ ಸಂದರ್ಭವು ಒದಗಿ ಬರುತ್ತದೆ ಆದುದರಿಂದ ಈ ಸಮಸ್ಯೆಯು ಬಹಳ ಕಷ್ಟಕರದ್ದಾಗಿರುತ್ತದೆ ಅಲ್ಲದೆ ನಮ್ಮ ಮಠದ ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸದನಂತರ ಇಲ್ಲಿರುವವರು ಅಲ್ಲ ಅವರೆಲ್ಲರೂ ಹಿಂದೂ ದೇಶದ ಬೇರೆ ಬೇರೆ ಪ್ರಾಂತ್ಯಗಳಿಗೆ ಹೋಗುವರು ಆದುದರಿಂದ ಎಲ್ಲಾ ಕಡೆಗಳಲ್ಲಿ ಉಪಯೋಗಕ್ಕೆ ಬೀಳುವ ಯಾವ ಭಾಷೆಯಾದರೂ ನನಗೆ ಸಮ್ಮತವೆಂಬ ಸಲಹೆಯನ್ನಿತ್ತರು.

ಕಲ್ಯಾಣಪುರ ಹ್ಯಾಸ್ಕೂಲು ಹೆಡ್ಮಾಸ್ತರರು ಅವರ ಶಾಲೆಯಲ್ಲಿ ಹಿಂದೂಗಳಿಗಿಂತ ಕ್ರೈಸ್ತ ವಿದ್ಯಾರ್ಥಿಗಳು ಹೆಚ್ಚಿಗಿದ್ದು ಅವರು ಇಂಗ್ಲಿಷನ್ನೇ ಬಯಸುತ್ತಾರೆಂದು ತಿಳಿಸಿದರು

ಕಾಸರಗೋಡು ಹೆಡ್ಮಾಸ್ತರ ಶ್ರೀ ರಾಮ ಸಂಬಿಯಾರರು ತಮ್ಮ ಶಾಲೆಯಲ್ಲಿ ಮಳೆಯಾಳಿಯನ್ನು ಅಪೇಕ್ಷಿಸುತ್ತಾರೆಂದು ಸೂಚಿಸಿದರು

ಶ್ರೀ ಚೆರೋವಿನ್ ಸಾಲ್ಡಾನರು, (ಎಮ್ ಎಲ್ ಎ) ಮಾತನಾಡುತ್ತ ಜಿಲ್ಲೆಯ ಜನ, ಸಂಖ್ಯೆಯಲ್ಲಿ ೬ ಲಕ್ಷಕ್ಕೆ ಮೀರಿ ತುಳು ಮಾತನಾಡುತ್ತಾರೆಂದು ೩॥ ಲಕ್ಷ ಜನರ ಭಾಷೆಯು ಕನ್ನಡವೆ ೧॥ ಲಕ್ಷ ಜನರ ಭಾಷೆಯು ಕೊಂಕಣಿ ಎಂದರು ಆಗ ಶ್ರೀ ಪಿ ವೆಂಕಟ್ರಾಯ ಬಾಳಿಗರು (ಎಮ್ ಎಲ್ ಎ) ಕೊಂಕಣಿ ಮಾತಾಡುವ ಜನರಲ್ಲಿ ಗೌಡಸಾರಸ್ವತ ಸಂಖ್ಯೆಯು ಹೆಚ್ಚು ಅವರು ಕನ್ನಡ ಬೇಡವೆಂದು ಹೇಳುವುದಿಲ್ಲ" ಎಂದ ಎಚ್ಚರಿಸಿದರು

ನಂತರ ಕೆಲವು ಕ್ರೈಸ್ತ ವಿದ್ಯಾವಿಚಾರಿಗಳು ತಮ್ಮ ಸಲಹೆಗಳನ್ನಿತ್ತರು ಶ್ರೀಗಳಾದ ಕೆ ಆರ್ ಕಾರಂತ, ಪಿ ವೆಂಕಟ್ರಾಯ ಬಾಳಿಗ ಮೊದಲಾದವರು ಹಲವಾರು ಸಮಸ್ಯಾತ್ಮಕ ವಿಚಾರಗಳನ್ನು ಬಿಡಿಸಿ ಜಿಲ್ಲೆಯ ಶಾಲೆಗಳಲ್ಲಿ ಕನ್ನಡವೇ ಮಾಧ್ಯಮಿಕ ಭಾಷೆಯಾಗುವಂತೆ ಯತ್ನಿಸುವ ಅಗತ್ಯವನ್ನು ಸೂಚಿಸಿದರು ಡಾ ಕೆ ವಿಟ್ಠಲ ಶೆಟ್ಟರು ಡಿಸ್ಟ್ರಿಕ್ಟ್ ಬೋರ್ಡಿನ ಹಣದಿಂದ ನಡೆಯುವ ಶಾಲೆಗಳಲ್ಲಿ ತಕ್ಕ ಮಾಧ್ಯಮಿಕ ಭಾಷೆಯನ್ನು ಪ್ರಚಾರಕ್ಕೆ ತರುವ ಅಧಿಕಾರವು ಬೋರ್ಡಿಗೆ ಸಿಗಬೇಕು ಎಂದು ಒತ್ತಾಯ ಪೂರ್ವಕವಾಗಿ ಆಡಿದರು.

ಮಂತ್ರಿಗಳ ಭಾಷಣ

ಮಾನ್ಯ ಸಿ. ಜೆ. ವಾರ್ಕಿಯವರು ಇವರ ಸಲಹೆಗಳೆಲ್ಲವನ್ನು ಕೇಳಿ ಮಾತನಾಡುತ್ತ ಮಾಧ್ಯಮ ಭಾಷೆಯು ವಿದ್ಯಾರ್ಥಿಗಳಿಗೆ ಕಲಿಯುವ ವಿಚಾರವು ಸುಲಭವಾಗಿ ತಿಳಿಯುವುದಕ್ಕಾಗಿ ಮಾಡುವುದಕ್ಕೆ ಹೊರತು ಇದರಿಂದ ಇಂಗ್ಲಿಷ್ ಭಾಷೆಯನ್ನು ಕಳಿಸುವುದು ಅಲ್ಲ ಯಾಡು. ಇಂಗ್ಲಿಷ್ ಭಾಷಾಪಾಠವು ಇದ್ದೇ ಇರುವುದು. ನಿಮ್ಮ ವಿಚಾರಗಳೆಲ್ಲವೂ ನನಗೆ ತಿಳಿದುವು. ಜಿಲ್ಲೆಯ ವಿದ್ಯಾಭ್ಯಾಸದ ಮಾಧ್ಯಮವು ಕನ್ನಡವೇ ಇರಬೇಕು. ಆದರೆ ಬೇರೆ ಭಾಷೆ ಅವಶ್ಯವೆಂದು ಕಂಡು ಬಂದ ಶಾಲೆಗಳಿಗೆ ಶಾಶ್ವತ ವಿನಾಯತಿ ಕೊಡಬಹುದು ಪ್ರತ್ಯೇಕ ಭಾಷೆ ಬೇಕೆಂದು ಬರುವಲ್ಲಿ ಅಲ್ಲಿಯ ಸ್ಥಿತಿಗತಿಗನುಸರಿಸಿ ಸರಕಾರದವರು ನಿಶ್ಚೈಸುವ ಒಂದು ಸಂಖ್ಯೆಯಷ್ಟು ಬೇರೆ ಭಾಷೆಬೇಕೆನ್ನುವ ಮಕ್ಕಳು ಇದ್ದೆಡೆಗಳಲ್ಲಿ ಎರಡೆರಡು ಕ್ಲಾಸುಗಳನ್ನು ನಡೆಸಲಾಗುವುದು ಈ ಸಂಖ್ಯೆಗಿಂತ ಕಡಿಮೆ ಇದ್ದರೆ ಅವರು ಬೇರೆ ಅನುಕೂಲತೆಗಳನ್ನು ಮಾಡಿಕೊಳ್ಳಬೇಕಾಗುವುದು ಅಂತೂ ನಿಮಗೆಲ್ಲರಿಗೂ ಸಮಾಧಾನವಾಗುವ ರೀತಿಯ ವ್ಯವಸ್ಥೆ ಮಾಡಲಾಗುವುದು, ಎಂಬದಾಗಿ ಸೂಚಿಸಿದರು

ಡಾ ವಿಟ್ಠಲ ಶೆಟ್ಟರು ವಂದನಾರ್ಪಣೆಯನ್ನರ್ಪಿಸಿದ ಬಳಿಕ ಸಭಾಂತ್ಯವಾಯಿತು

ಸೈಂಟ್ ಆಗ್ನೇಸ್ ಕಾಲೇಜು

ಸೈಂಟ್ ಆಗ್ನೇಸ್ ಕಾನ್ವೆಂಟ್ ಕಾಲೇಜಿನ ಬಹುಮಾನವಿತರಣಾ ಸಮಾರಂಭವು ಅಂದೇ ಸಂಜೆ ೬ ಗಂಟೆಗೆ ಮಾನ್ಯ ವಿದ್ಯಾಮಂತ್ರಿಗಳ ಅಧ್ಯಕ್ಷತೆಯಲ್ಲಿ ನೆರವೇರಿತು ವರದಿವಾಚನವಾದ ಬಳಿಕ ಅಧ್ಯಕ್ಷರು ಬಹುಮಾನವನ್ನು ಹಂಚಿದರು ನೃತ್ಯ ಗಾಯನ, ಹಾಸ್ಯ ನಾಟಕ ಮೊದಲಾದ ವಿನೋದಾವಳಿಗಳು ನಡೆದನಂತರ ಅಧ್ಯಕ್ಷರು ಭಾಷಣವನ್ನು ಮಾಡುತ್ತಾ "ಈ ಸ್ಥಾನವನ್ನು ಸ್ವೀಕರಿಸುವ ಸಂದರ್ಭವನ್ನು ಕೊಟ್ಟುದುದಕ್ಕಾಗಿ ನಾನು ಕಾನ್ವೆಂಟಿನ ಅಧಿಕಾರಿಗಳಿಗೆ ತುಂಬಾ ಆಭಾರಿಯಾಗಿದ್ದೇನೆ ಕಳೆದ ಕಾಲು ಶತಮಾನದಿಂದ ಒಂದು ತೆರನಲ್ಲದಿದ್ದರೆ ಇನ್ನೊಂದು ತರದ ಸಂಬಂಧವು ಈ ಶಾಲೆಯೊಡನೆ ಇದ್ದು ವಿವಿಧ ರೀತಿಯಲ್ಲಿ ನನ್ನ ಹಾಗೂ ಈ ಕಾನ್ವೆಂಟಿನ ಬಾಂಧವ್ಯವು ಬಲವಾಗ ಸಾಗಿದೆ ಈಗಂತು ಸರಕಾರವು ಸ್ತ್ರೀಯ ವಿದ್ಯಾಭ್ಯಾಸದ ಪಂಚವಾರ್ಷಿಕ ಯೋಜನೆಯನ್ನು ಕೈಕೊಂಡಿರುವ ವಿದ್ಯಾಖಾತೆಯ ಅಧಿಕಾರಿಯಾಗಿ ಇದರ ಮೇಲಿನ ನನ್ನ ಹೊಣೆಯು ಒಸಳವಾಗಿ ಸಿಂತಿದೆ ಓದಿದ ವರದಿಯನ್ನು ಅವಲೋಕಿಸಿದಲ್ಲಿ ಕಾಲೇಜು ಉತ್ತಮ ಮಾರ್ಗವನ್ನೇ ಅನುಸರಿಸಿ ಪ್ರತಿವರ್ಷವೂ ಪ್ರಗತಿಪಥದತ್ತ ತಿರುಗುತ್ತಿರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ ಈ ಕಾಲೇಜು ಕಾಲಸ್ಥಿತಿಗನುಗುಣವಾಗಿ ವಿವಿಧ ಕಾರ್ಯಕಲಾಪಗಳಲ್ಲಿ ಕೈಯಿಕ್ಕಿ ಮುನ್ನಡೆಯುತ್ತಿರುವುದು ಸ್ತುತ್ಯವಾಗಿದೆ

ಸ್ತ್ರೀಯರಿಗೆ ಹಿತೋಪದೇಶ

"ಮೊದಲು ವಿದ್ಯಾರ್ಥಿಗಳ ಶಿಕ್ಷಕನಾಗಿದ್ದು ಈಗ ಸಾಮಾನ್ಯ ಸಾರ್ವಜನಿಕ ಕೆಲಸಗಾರನಾಗಿದ್ದ ನಾನ ನನ್ನ ಅನುಭವದ ಆಧಾರದಿಂದ ಕೆಲವು ಉಪದೇಶಗಳನ್ನು ಸ್ತ್ರೀಯರಿಗೆ ಕೊಡುವೆನು. ಇವುಗಳನ್ನು ನೀವು ತಪ್ಪು ಗ್ರಹಿಕೆಯಿಂದ ಪರಿಶೋಧಿಸಲಿಕ್ಕಿಲ್ಲವೆಂದೆ ನಾನು ನಂಬುತ್ತೇನೆ

ಸ್ತ್ರೀಯರ ಪ್ರಕೃತಿ ಯಾರೂ ತನ್ನ ಸೌಂದರ್ಯದ ವಿಷಯ ಅಹಂಭಾವವನ್ನು ತಾಳಿ ಮತ್ತಳಾಗಬಾರದು ತಾನು ಬಹಳ ದೊಡ್ಡ ಮೋಧಾವಿಯೆಂಬ ಆಲೋಚನೆಯು ನಿಮ್ಮಲ್ಲಿ ಯಾರಿಗಾದರೂ ಇದ್ದಲ್ಲಿ ಅದು ತುಂಬಾ ಅಪಾಯಕರವಾದುದು ಅವಳು ಕುಡಿದು ಮತ್ತನಾಗಿರುವ ಪುರುಷರಿಗಿಂತಲೂ ದುರಹಂಕಾರಿಯಾಗಿ ಸ್ವಾರ್ಥಮಗ್ನಳಾಗಿರುವ ಸ್ತ್ರೀಯು ಅಪಾಯಕರಳಾಗಿರುವಳು ಮಾದಕದ್ರವ್ಯವನ್ನು ಕುಡಿದು ಮತ್ತರಾದವರನ್ನು ಸರಿದಾರಿಗೆ ಹಚ್ಚಲು ಕಾಂಗ್ರೆಸು ಪಾನನಿಷೇಧ ಕಾರ್ಯಕ್ರಮದಿಂದ ಪ್ರಯತ್ನಿಸುತ್ತಿದೆ ಆದರೆ ಸೌಂದರ್ಯ, ಹೆಮ್ಮೆ, ಅಹಂಕಾರಗಳಿಂದ ಮತ್ತಳಾಗಿರುವ ಸ್ತ್ರೀಯರನ್ನು ಸರಿದಾರಿಗೆ ತರುವ ಕೆಲಸವು ಅಸಾಧ್ಯವಾದುದು.

ಆದರೆ ಸ್ತ್ರೀಯರ ನಡೆವಳಿಕೆಯಲ್ಲಿಯೂ ಒಂದು ಕ್ರಾಂತಿಯನ್ನು ತರಲು ನಾವು ಯೋಚಿಸಿದ್ದೇವೆ. ಇದಕ್ಕೆ ನಾನ ನಿಮೇದದಂತೆ ಕಾನೂನಿನ ಸಹಾಯ ಕತೆಯು ಬೇಕಾಗಿಲ್ಲ ಸರಳ ಜೀವನಕ್ರಮ ಅಹಂಕಾರ ಹೆಮ್ಮೆಗಳಿಂದುಂಟಾಗುವ ಅಪಾಯ ಮೊದಲಾದವನ್ನು ಬೋಧಿಸಿ ಸ್ತ್ರೀಯರನ್ನು ಸರಿದಾರಿಗೆ ತರಲು ನಾವು ಪ್ರಯತ್ನಿಸುತ್ತೇವೆ. ಹಿಂದೂವಾಗಿರಲೀ ಕ್ರೈಸ್ತರಾಗಿರಲೀ ಪ್ರತಿಯೊಬ್ಬರು ತಮ್ಮ ತಮ್ಮ ನಂಬಿಕೆ, ಹಾಗೂ ಮಾತೃ ಭೂಮಿಯ ಕೈಗಾರಿಕೆಯನ್ನು ಪ್ರೋತ್ಸಾಹಿಸಿ ತನ್ನ ಅಲ್ಪವಾದ ಆಯದಿಂದ ರಾಷ್ಟ್ರಸೇವೆಯನ್ನಾದರೂ ಸಲ್ಲಿಸುವುದು ಕರ್ತವ್ಯವಾಗಿರುತ್ತದೆ ಇದಕ್ಕಾಗಿ ದೇಶದಲ್ಲಿಯೇ ತಯಾರಾದ ಖಾದಿಯನ್ನೇ ಕೊಂಡುಕೊಳ್ಳಿರಿ ಧನವನ್ನು ಸರಿಸಮನಾಗಿ ಎಲ್ಲರಿಗೂ ಹಂಚುವುದನ್ನು ಮಾತ್ರ ಕ್ರೈಸ್ತಧರ್ಮವು ಸಾರುತ್ತಿದೆ ಸ್ವದೇಶೀ ವಸ್ತುಗಳಿಗೆ ಪ್ರೋತ್ಸಾಹಕೊಡುವುದೇ ಇದಕ್ಕೆ ಮಾರ್ಗ ಸ್ವದೇಶೀ ಸಾಮಾನುಗಳಿಗೆ ಬಟ್ಟೆಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಡದಿದ್ದಲ್ಲಿ ಕ್ರೈಸ್ತ ಧರ್ಮಕ್ಕೆ ನಾವು ವಿರೋಧವನ್ನಿಟ್ಟು ವರ್ತಿಸಿದಂತಾಗುವುದು ಆದುದರಿಂದ ಖಾದಿಗೆ ತಕ್ಕಷ್ಟು ಪ್ರೋತ್ಸಾಹವನ್ನು ಕೊಟ್ಟು ಖಾದಿಯನ್ನೇ ಯಾವಾಗಲೂ ಉಪಯೋಗಿಸುವಂತೆ ಕೇಳಿಕೊಂಡರು

ಕಾಲೇಜು ವರದಿಯ ವಿಷಯವಾಗಿ ವಿಮರ್ಶಿಸುತ್ತಾ ವಿದ್ಯಾರ್ಥಿಯರು ಗಣಿತದಲ್ಲಿ ಕೀಳ್ಗಡೆ ಹೊಂದದೆ ಇದ್ದ ವಿಚಾರದಲ್ಲಿ ಕಾಲೇಜು ತರಗತಿಯ ಗಣಿತ ಬೋಧನೆಯನ್ನು ಹೊಗಳಿದರು ನಂತರ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಮ್ಯೂಜಿಯಮಿನಲ್ಲಿ ಕಳವು

ಸಿಂಗಾಪುರದ ಭಾರತೀಯ ವ್ಯಾಪಾರಿಗಳು ಪಂಡಿತ ಜವಾಹರಲಾಲ ನೇಹರೂ ಅವರಿಗೆ ಪ್ರೀತಿಯ ಕಾಣಿಕೆಯಾಗಿ ಕೊಟ್ಟ ಸುಮಾರು ೪೦೦೦ ರೂಪಾಯಿ ಬೆಲೆ ಬಾಳುವ ಒಂದು ಚಿನ್ನದ ಕಾಸ್ಕೆಟ್ಟು ಅಲಹಾಬಾದ ಮ್ಯೂಜಿಯಮಿನಿಂದ ಕಳವಾಗಿದೆ ಈ ಕಾಸ್ಕೆಟನ್ನು ಪಂಡಿತರು ಅಖಿಲ ಭಾರತ ಕಾಂಗ್ರೆಸ ಕಮಿಟಿಗೆ ಕೊಟ್ಟಿದ್ದರು ಕಮಿಟಿಯು ಅದನ್ನು ಪ್ರದರ್ಶನದ ಬಗ್ಗೆ ಮ್ಯೂಜಿಯಮಿನಲ್ಲಿಟ್ಟಿದ್ದರು ಪೋಲೀಸ ತನಿಖೆ ಆಗುತ್ತಾ ಇದೆ.

ಇಂಡಿಯಾ ಆಕ್ಟಿನ ಬದಲಾವಣೆಯನ್ನು ತೀವ್ರವಾಗಿ ವಿರೋಧಿಸಿರಿ!

ಅಲಹಾಬಾದಿನಲ್ಲಿ ಪಂಡಿತ ನೇಹರೂ ಅವರ ಭಾಷಣ

ರಾಷ್ಟ್ರೀಯ ಸಪ್ತಾಹದಾಚರಣೆಯ ಸಂಬಂಧ ಅಲಹಾಬಾದಿನಲ್ಲಿ ಕೂಡಿದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣವನ್ನು ಕೊಡುತ್ತಾ, ಪಂಡಿತ ಜವಾಹರಲಾಲ ನೇಹರೂ ಅವರು—ಯುದ್ಧ ಕಾಲದಲ್ಲಿ ಕೇಂದ್ರಸರಕಾರಕ್ಕೆ ಅಮಿತ ಅಧಿಕಾರವನ್ನು ಕೊಡುವ ಇಂಡಿಯಾ ಆಕ್ಟಿನ ಬದಲಾವಣೆಯನ್ನು ಎಲ್ಲ ಪ್ರಾಂತಿಕ ಸರಕಾರಗಳೂ ಜನತೆಯೂ ತೀವ್ರವಾಗಿ ವಿರೋಧಿಸುವ ಅಗತ್ಯವನ್ನು ವರ್ಣಿಸಿರುವರು ಯಾಕೆಂದರೆ ಈ ಬದಲಾವಣೆಯು ಪ್ರಾಂತಿಕ ಸರಕಾರಗಳಿಗೆ ಪ್ರಾಪ್ತವಾದ ಹಕ್ಕು ಅಧಿಕಾರಗಳನ್ನು ಕಿತ್ತು ಅವನ್ನು ಪ್ರಜೆಗಳಿಗೆ ಜವಾಬುದಾರವಲ್ಲದ ಕೇಂದ್ರ ಸರಕಾರಕ್ಕೆ ಕೊಡತಕ್ಕದ್ದಾಗಿದೆ ಈ ಬದಲಾವಣೆಯಿಂದ ನಾವು ಸ್ವಾತಂತ್ರ್ಯ ಪಥದಲ್ಲಿ ಮುನ್ನಡೆಯುತ್ತಿರುವ ಬದಲಿಗೆ ಹಿನ್ನಡೆಯ ಪಂತವಾಗುತ್ತದೆ ಯುದ್ಧ ಸಂಭವದಲ್ಲಿ ಹಿಂದಿನ ಸ್ಥಾನವೆ ಸಾಮ್ರಾಜ್ಯವಾದಿಗಳ ಬೆಂಬಲಕ್ಕೆ ಇರಲಿ ಎಷ್ಟೊ ಸಾಹಸಕ್ಕೂ ಒಪ್ಪಿಸುವುದಿಲ್ಲ, [illegible] ದ್ವಾರೆ

ತ್ರಿಪುರಕ್ಕೆ ರಾಜಕೀಯ ಸುಧಾರಣೆ

ಮಹಾರಾಜರ ಘೋಷಣೆ

ತ್ರಿಪುರ ಸಂಸ್ಥಾನಕ್ಕೆ ರಾಜಕೀಯ ಸುಧಾರಣೆಗಳನ್ನು ಕೊಡುವುದಾಗಿ ಅಲ್ಲಿಯ ಮಹಾರಾಜರು ಘೋಷಿಸಿದ್ದಾರೆ ಈ ಸಂಸ್ಥಾನದ ಮುಂಬರುವ ಸುಧಾರಣೆಗಳಲ್ಲಿ [illegible] ರಿಗೆ ಅಧಿಕತ ಕಾರ್ಯದಲ್ಲಿ [illegible] ವನ್ನು ಕೊಡುವುದಕ್ಕೆ ಒಂದು ಪ್ರಿವಿ ಕೌನ್ಸಿಲ, ನ್ಯಾಯವಿಧಾಯಕ ಸಭೆ, [illegible] ಜವಾಬುದಾರವಾದ ಮಂತ್ರಿಮಂಡಲ [illegible] ಇರುವುದು ಇನ್ನೈದು ವರ್ಷಗಳಿಗಾಗಿ ಈ ಸುಧಾರಣೆಗಳು ಜಾರಿಗೆ ಬರುವವು

ಜೈಲಿನ ಕೈದಿಗಳಿಗೆ ವರ್ಷಾವಧಿ ರಜೆ

ಮಧ್ಯಪ್ರಾಂತ ಸರಕಾರದ ಸ್ತುತ್ಯ ಕಾರ್ಯಕ್ರಮ

ಮಧ್ಯಪ್ರಾಂತದ ಜೈಲುಗಳಲ್ಲಿ ಕೈದಿಗಳಾಗಿರುವವರಿಗೆ, ಅವರು ಉತ್ತಮ ನಡತೆ ತೋರಿಸಿದ್ದಾದರೆ ವರ್ಷದಲ್ಲಿ ೧೦ ದಿನಗಳ ರಜೆಯನ್ನು ಕೊಡುವ ನಿರ್ಧಾರವನ್ನು ಅಲ್ಲಿಯ ಕಾಂಗ್ರೆಸ್ ಸರಕಾರವು ಮಾಡಿದೆ ಅದಕ್ಕನುಗುಣವಾಗಿ ಒಂದು ಕಾನೂನು ಆಗಿದೆ. ಕೈದಿಗಳು ರಜೆ ಸಿಕ್ಕಿದಾಗ ತನ್ನ ಮನೆಗೆ ಹೋಗಿ ಹೆಂಡತಿ ಮಕ್ಕಳನ್ನು ಕುಟುಂಬದ ಜನರನ್ನು ಕಂಡು ಬರಲಹುದು ಈ ರೀತಿ ಜೈಲುಗಳ ನಿಯಮ ನಿಬಂಧನೆಗಳಲ್ಲಿ ಸುಧಾರಣೆ ಆಗುವದರಿಂದ ಕೈದಿಗಳ ಮಾನಸಿಕ ಪರಿವರ್ತನೆಯೂ ಆಗಿ, ಅವರು ತಮ್ಮ ಶಿಕ್ಷೆಯನ್ನು ಅನುಭವಿಸಿ ಬಿಡುಗಡೆ ಹೊಂದುವ ಕಾಲಕ್ಕೆ ಉತ್ತಮ ನಾಗರಿಕರಾಗಬಹುದೆಂದು ಸರಕಾರವು ನಂಬಿದೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು
ಆಯುರ್ವೇದಾಶ್ರಮ :: .. ಮದರಾಸು

ಸ್ಟಾಕಿಸ್ಟರು
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ವಿದ್ಯಾರ್ಥಿ ಪರಿಷತ್ತು

ಜನಾಂಗದ ಸೇವೆಯೇ ವಿದ್ಯಾರ್ಥಿಗಳ ಧ್ಯೇಯವಾಗಿರಬೇಕು

ವಿದ್ಯಾರ್ಥಿಗಳಿಗೆ ಶ್ರೀ. ಜೊಕಿಮ್ ಆಳ್ವರ ಬೋಧನೆ

ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳ ಮೊದಲನೇ ಪರಿಷತ್ತು ಕಳೆದ ತಾರೀಕು ೧೪ನೇ ಸಾಯಂಕಾಲ ಗಣಪತಿ ಹೈಸ್ಕೂಲಿನಲ್ಲಿ ಬೊಂಬಾಯಿ ರಾಷ್ಟ್ರೀಯ ಮುಖಂಡರೂ ವಕೀಲರೂ ಆದ ಶ್ರೀ. ಜೊಕಿಮ್ ಆಳ್ವರ ಅಧ್ಯಕ್ಷತೆಯಲ್ಲಿ ಜರುಗಿತು.

ಪರಿಷತ್ತಿನ ಅಧ್ಯಕ್ಷರಾದ ಶ್ರೀ ಆಳ್ವರು ಹಿಂದಿನ ದಿನ ಬೆಳಗ್ಗೆ ಸ್ಟೀಮರಿನಲ್ಲಿ ಬಂದು ಬಂದರಿನಲ್ಲಿ ಇಳಿದರು. ವಿದ್ಯಾರ್ಥಿಗಳು ಅವರಿಗೆ ಅಲ್ಲಿ ಸಂಭ್ರಮದ ಸ್ವಾಗತವನ್ನಿತ್ತರು. ತಾ ೧೪ರಂದು ಪ್ರಾತಃಕಾಲ ಫೆಲಿಕ್ಸ್ ಪೈ ಬಜಾರಿನ ಕನ್ನಡ ಯೂನಿಯನ್ ಆಫೀಸಿನಿಂದ ಹೊರಟ ಪ್ರಭಾತ ಫೇರಿಯ ನಂತರ ಶ್ರೀ ಕೆ. ಆರ್. ಕಾರಂತರು ರಾಷ್ಟ್ರೀಯ ಮತ್ತು ವಿದ್ಯಾರ್ಥಿಗಳ ಯೂನಿಯನ್ ಧ್ವಜಾರೋಹಣದ ಕಾರ್ಯವನ್ನು ನೆರವೇರಿಸಿದರು. ಅಪರಾಹ್ನ ಹೈಸ್ಕೂಲ್ ಕ್ಲಾಸುಗಳ ವಿದ್ಯಾರ್ಥಿಗಳಿಗಾಗಿ ನೆರವೇರಿಸಿದ ವಾಕ್‌ಸ್ಪರ್ಧೆಯಲ್ಲಿ ನಡೆದು ಪ್ರಥಮ ಬಹುಮಾನವು ಕೆನರಾ ಹೈಸ್ಕೂಲಿನ ಮಿಸ್ ಕಸ್ತೂರಿಬಾಯಿಗೂ ದ್ವಿತೀಯ ಬಹುಮಾನವು ಕುಂದಾಪುರ ಬೋರ್ಡ್ ಹೈಸ್ಕೂಲಿನ ರಮಾನಂದ ಕುಡುವರಿಗೂ ದೊರೆಯಿತು.

ಸಾಯಂಕಾಲ ಯೂನಿಯನ್ನಿನ ಆಫೀಸಿನಿಂದ ಅಧ್ಯಕ್ಷರ ಮೆರವಣಿಗೆಯು ಮುಖ್ಯ ಮುಖ್ಯ ಬೀದಿಗಳಲ್ಲಿ ನಡೆದ ಪರಿಷತ್ತಿನ ಸಭಾಮಂದಿರವನ್ನು ಸೇರಿತು.

ಸ್ವಾಗತ ಮಂಡಳಿಯ ಅಧ್ಯಕ್ಷರಾದ ಶ್ರೀ ಕೆ. ಕೆ. ಪೂಂಜಯ್ಯನವರು ಪರಿಷತ್ತಿಗೆ ಬಂದ ಪ್ರತಿನಿಧಿಗಳನ್ನು ಸ್ವಾಗತೀಕರಿಸಿ ಯಾವ್ಯಾವ ಸಂದರ್ಭಗಳಲ್ಲಿಯೂ ವಿದ್ಯಾರ್ಥಿಗಳು ಮುಷ್ಕರಗಳನ್ನು ಕೈಕೊಳ್ಳಕೂಡದೆಂದು ವಿದ್ಯಾರ್ಥಿಗಳ ಫೆಡರೇಶನು ನಿರ್ಧರಿಸಿದೆ ಎಂದು ಸೂಚಿಸಿದರು. ಶ್ರೀ ಕೆ. ಆರ್. ಕಾರಂತರು (ಬಿ. ಎಲ್.) ನೆರೆದ ಸಭಿಕರಿಗೆ ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟು ದೇಶಕ್ಕಾಗಿ ಅಧ್ಯಕ್ಷರು ಮಾಡಿದ ತ್ಯಾಗವನ್ನು ವಿವರಿಸಿದರು.

ಶ್ರೀಮತಿ ವೈಲೆಟ್ ಆಳ್ವರು (ಜೊಕಿಮ್ ಆಳ್ವರ ಪತ್ನಿ) ವಿದ್ಯಾರ್ಥಿ ಪರಿಷತ್ತನ್ನು ತೆರೆಯುತ್ತಾ ವಿದ್ಯಾರ್ಥಿಗಳು ಸಂಘಟಿತರಾಗಿ ತಮ್ಮ ಸಂಘವನ್ನು ಬಲಪಡಿಸಬೇಕೆಂದರು, ಮತ್ತು ಭಾವೀ ಸ್ವರಾಜ್ಯ ಸಂಗ್ರಾಮದಲ್ಲಿ ಇಂದಿನ ವಿದ್ಯಾರ್ಥಿಗಳೇ ಹೋರಾಡಬೇಕಾಗ ವುದು, ಆದರೆ ನಾವು ವಿದ್ಯಾರ್ಥಿಗಳ ಶಿಸ್ತನ್ನು ಮಾಡಿ ಜೈಲಿಗೆ ಕಳಿಸಬೇಕೆಂದು ಹೇಳುವುದಲ್ಲ. ವಿದ್ಯಾರ್ಥಿಗಳು ವಿದ್ಯಾಸಕ್ತಿ, ಮದ್ಯವಿರೋಧ, ಸ್ವದೇಶಿ ಪ್ರೋತ್ಸಾಹ ಮೊದಲಾದುವುಗಳನ್ನು ಬೋಧಿಸಿ ಜನಜಾಗ್ರತಿಯನ್ನುಂಟುಮಾಡುತ್ತಿರಬೇಕೆಂದು ಸೂಚಿಸಿದರು.

ಅಧ್ಯಕ್ಷರ ಭಾಷಣ

ಅಧ್ಯಕ್ಷರು ತಮ್ಮ ವಿಚಾರಪೂರ್ಣ ಭಾಷಣವನ್ನು ಮಾಡುತ್ತಾ ಹಿಂದಿನ ಕಾಲದ ವಿದ್ಯಾರ್ಥಿ ಸಂಘಗಳ ಅನುಭವವನ್ನು ವಿವರಿಸಿ ಇಂದಿನ ವಿದ್ಯಾರ್ಥಿ ಸಂಘಗಳ ಮುಖ್ಯ ಧ್ಯೇಯವು ರಾಷ್ಟ್ರೀಯತೆ ಮತ್ತು ಜನಾಂಗ ಸೇವೆಯಾಗಿರಬೇಕು ಪ್ರತಿಯೊಂದು ದೇಶಕ್ಕೂ ಬಲವಾದ ವಿದ್ಯಾರ್ಥಿ ಸಂಘದ ಆವಶ್ಯಕತೆಯು ಇದ್ದೇ ಇಯುತ್ತದೆ ಆದರೆ ವಿದ್ಯಾರ್ಥಿಗಳು ಜಾತೀಯತೆಯ ಹೊಲಸಿನಿಂದ ದೂರವಾಗಿರಬೇಕು. ವಿದ್ಯಾರ್ಥಿಗಳು ಹೆಚ್ಚಾದ ತಮ್ಮ ಸಮಯವನ್ನು ರಾಜಕೀಯ ವಿಚಾರಗಳಲ್ಲಿಯೇ ಕಳೆಯಕೂಡದು. ವಿದ್ಯಾರ್ಥಿಗಳು ಮುಷ್ಕರದಲ್ಲಿ ಎಂದೂ ತೊಡಗಕೂಡದು ಮುಷ್ಕರವು ತಮ್ಮ ಕಡೇಯ ಆಯುಧವಾಗಿರಬೇಕು. ವಿದ್ಯಾರ್ಥಿಗಳು ತಮ್ಮದೇ ಆದ ಕೋಆಪರೇಟಿವ್ ಸೊಸೈಟಿಗಳನ್ನು ನಡೆಸಿ ಬಡ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು ಬಡ್ಡಿಯಿಲ್ಲದೆ ಸಾಲವನ್ನು ಕೊಡಬಹುದು ಮತ್ತು ಬಡ ವಿದ್ಯಾರ್ಥಿ ವೇತನವನ್ನು ಕೊಡಬಹುದೆಂದು ಸೂಚಿಸಿದರು. ನಂತರ ವಿದ್ಯಾ ಪ್ರಸಾರದ ಪವಿತ್ರ ಕಾರ್ಯದಲ್ಲಿ ವಿದ್ಯಾರ್ಥಿಗಳು ಮಾಡಬಹುದಾದ ಸಹಾಯವನ್ನು ವಿವರಿಸಿ ವಿದ್ಯಾರ್ಥಿಗಳು ಸ್ವಯಂ ಸೇವಕ ದಳದ ರಚನೆಯಿಂದ ರಾಷ್ಟ್ರಸೇವೆಯನ್ನು ಮಾಡಬೇಕೆಂದು ಅರುಹಿದರು.

ಸಂದೇಶಗಳು

ಫೆಡರೇಷನಿನ ಜನರಲ್ ಸೆಕ್ರಿಟರಿಗಳಾದ ಶ್ರೀ ಎ ನಾರಾಯಣ ರಾಯರು ಪರಿಷತ್ತಿಗೆ ಶುಭವನ್ನು ಬಯಸಿ ಶ್ರೀಗಳಾದ ಸುಭಾಸ ಚಂದ್ರ ಭೋಸ್, (ಕಾಂಗ್ರೆಸ್ ಅಧ್ಯಕ್ಷರು) ಬಿ ಜಿ ಖೇರ, (ಮುಂಬಯಿ ಪ್ರಾಂತ್ಯದ ಪ್ರಧಾನ ಅಮಾತ್ಯರು) ಎಸ್ ಶ್ರೀನಿವಾಸ ಅಯ್ಯಂಗಾರ್, ಕೆ ಎಸ್ ನರಿಮನ್, ಕೆ ಟಿ ಭಾಷ್ಯಂ, ಸಿ ಜೆ ವಾರ್ಕಿ ಮೊದಲಾದವರು ಕಳುಹಿಸಿದ ಸಂದೇಶಗಳನ್ನು ಓದಲಾಯಿತು. ಸುಭಾಸಚಂದ್ರ ಬೋಸರು ಕಳಿಸಿದ ಸಂದೇಶವನ್ನು ಕಳುಹಿದ್ದರು "ವಿದ್ಯಾರ್ಥಿಗಳು ಭಾವೀ ಭಾರತದ ಯೋಧರು ಮುಂದಿನ ಸಂಗ್ರಾಮದಲ್ಲಿ ಅವರು ಹೋರಾಡಬೇಕಾಗುವುದು" ಅಂದಿನ ಕಾರ್ಯಕ್ರಮಗಳೆಲ್ಲವೂ ಮುಗಿದ ಪರಿಷತ್ತು ಮಾರನೆ ದಿನಕ್ಕೆ ಮುಂದರಿಸಲಾಯಿತು.

"ನವಜೀವನ"

'ಭಾಭಿ' ಚಿತ್ರದಲ್ಲಿ ಆಸಾಧಾರಣ ಪಾತ್ರವನ್ನು ಧರಿಸಿ ನಮ್ಮ ಮೆಚ್ಚುಗೆಗೆ ಪಾತ್ರರಾದ ರಾಮ ಶುಕಲ್ ಮತ್ತು ಹಸ್ನಾ ಬಾನು ಇವರು ಬೊಂಬಾಯಿ ಟಾಕೀಸಿನ 'ನವಜೀವನ' ಎಂಬ ನಾಟಕದಲ್ಲಿ ಉತ್ತಮರಾಗಿ ಅಭಿನಯಿಸಿರುವರು

ಎರಡನೇಯ ದಿನ

ಎರಡನೇ ದಿನದ ಸಮಾರಂಭದಲ್ಲಿ ವಿದ್ಯಾರ್ಥಿಗಳ ಮುಷ್ಕರದ ದುಷ್ಪರಿಣಾಮದ ರಾಷ್ಟ್ರದ ಪ್ರಗತಿಗಾಗಿ ತಡಮಾಡದೆ ಕೈಕೊಳ್ಳಬೇಕಾದ ಕರ್ತವ್ಯ ಜಾತಿಯತೆ ಹಾಗೂ ಧರ್ಮಿಯತೆಯ ಭೀಕರ ರೋಗಗಳ, ವರದಕ್ಷಿಣೆಯನ್ನು ತೊಡೆದುಹಾಕುವ ಅಗತ್ಯ, ಜಪಾನು ವಸ್ತುಗಳ ಬಹಿಷ್ಕಾರ, ನಿರಕ್ಷರತಾ ನಿವಾರಣೆ, ನಿರುದ್ಯೋಗ ಸಮಸ್ಯೆಯ ನಿವಾರಣೋಪಾಯದ ಅಗತ್ಯ, ಕರ್ನಾಟಕ ಏಕೀಕರಣ, ಹೈಸ್ಕೂಲುಗಳಲ್ಲಿ ಶಾಲಾವೇತನದ ೯ ಕಂತುಗಳನ್ನು ೮ ಕಂತುಗಳಿಗಿಳಿಸುವ ಅಗತ್ಯ, ವಿಶ್ವವಿದ್ಯಾನಿಲಯ, ಸ್ವಯಂಸೇವಕ ದಳದ ರಚನೆ ಮೊದಲಾದ ವಿಚಾರಗಳ ಮೇಲೆ ಠರಾವುಗಳು ಪಾಸಾದವು

ತಿರುವಾಂಕೂರು, ಹೈದರಾಬಾದು ಸಂಸ್ಥಾನಗಳಲ್ಲಿನ ವಿದ್ಯಾರ್ಥಿಗಳ ಸ್ಥಿತಿ, ಅಣ್ಣಾಮಲೈಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮುಷ್ಕರದಂತಹ ಅಪ್ರಬುದ್ಧ ಧುಮುಕು, ಚೀನ ಮತ್ತು ಸ್ಪೈನ್ ವಿದ್ಯಾರ್ಥಿಗಳ ರಾಷ್ಟ್ರಪ್ರೇಮ ಮುಂತಾದುವುಗಳ ಕುರಿತೂ ಠರಾವುಗಳು ಮಾನ್ಯವಾದುವು

ಅಧ್ಯಕ್ಷರು ಪರಿಷತ್ತಿನ ಮುಕ್ತಾಯ ಭಾಷಣವನ್ನು ಮಾಡುತ್ತಾ, ದಕ್ಷಿಣ ಕನ್ನಡ ಜಿಲ್ಲೆಯಂತಹ ಮೇಧಾವಿಗಳ ಜಿಲ್ಲೆಯು ಬೇರೊಂದಿಲ್ಲವೆಂದೂ, ಎಲ್ಲಾ ಪ್ರಾಂತ್ಯದ ಆಫೀಸುಗಳಲ್ಲೂ ಈ ಜಿಲ್ಲೆಯವರಿಲ್ಲದೆ ಇಲ್ಲವೆಂದೂ, ವಿದ್ಯಾರ್ಥಿಗಳು ಸಾಧಿಸಿದರೆ ಸರ್ವಸಾಮಾನ್ಯ ಎಲ್ಲಾ ಕಾರ್ಯಗಳನ್ನು ಮಾಡಬಹುದೆಂದೂ, ಆದುದರಿಂದ ಸಂಘಟಿತರಾಗಿ ರಾಷ್ಟ್ರಸೇವೆಯನ್ನು ಮಾಡಿ ದೇಶದೇಳಿಗೆಗೆ ಮುಂದಾಗಬೇಕೆಂದರು

ಸಿಕ್ಕಿದ್ದನ್ನು ದಕ್ಕಿಸಿಕೊಳ್ಳಿ-ಇನ್ನೂ ಇನ್ನೂ ಬೇಕೆಂದರೆ ಗುಂಡಾಂತರವಾದೀತು

ಸರ್ವಾಧಿಕಾರಿಗಳಿಗೆ ಅಮೆರಿಕ ಪ್ರೆಸಿಡೆಂಟರ ಗದರಿಕೆಯ ಪತ್ರ

ಯುರೋಪದಲ್ಲೆಲ್ಲ ಇನ್ನೊಂದು ಭಯಂಕರ ಪ್ರಳಯಕಾರಿ ಮಹಾಯುದ್ಧದ ಕಾರ್ಮುಗಿಲುಗಳು ಆಕಾಶವನ್ನು ಮುಚ್ಚಿಕೊಂಡಿರುವಾಗ ಅಮೇರಿಕದ ಪ್ರೆಸಿಡೆಂಟ ಮಿ. ರೂಜವೆಲ್ಟರು 'ಜೋಕೆ! ಜಾಗ್ರತೆ!' ಎಂದು ಹಿಟ್ಲರ ಮುಸಲೋನಿಯವರನ್ನು ಗುಡುಗುಡಿಸಿರುವರು ಅವರು ಇದೇ ತಾ ೧೫ರ ದಿನ ಹಿಟ್ಲರ ಮುಸಲೋನಿಯರಿಗೆ ಒಂದು ತಂತಿಪತ್ರವನ್ನು ಕಳುಹಿಸಿ ನಿರೋಚಿತ ಕೆಲವು ಕಟ್ಟಡೆಯ ಮಾತುಗಳನ್ನಾಡಿದ್ದಾರೆ. ಈಗ-ಇಷ್ಟರ ತನಕ ಆಕ್ರಮಣ ಮಾಡಿ ಬಲಿತೆಗೆದುಕೊಂಡ ರಾಜ್ಯಗಳನ್ನು ದಕ್ಕಿಸಿಕೊಂಡರಾಯಿತು. ಇನ್ನೂ ಹಿಟ್ಲರ ಮುಸಲೋನಿಯರ ವಕ್ರದೃಷ್ಟಿ ಯುರೋಪಿನ ಇತರ ಸ್ವತಂತ್ರ ರಾಷ್ಟ್ರಗಳ ಮೇಲೆ ಇರುವುದಾದರೆ ಗುಂಡಾಂತರವಾದೀತು! ಅಮೇರಿಕವೂ ಶಾಂತಿಪಕ್ಷದ ರಾಷ್ಟ್ರಗಳನ್ನು ಸೇರಿ ಸರ್ವಾಧಿಕಾರಿಗಳ ವಿರುದ್ಧ ಹೋರಾಡಬೇಕಾದೀತು ಎಂದಿದ್ದಾರೆ. ಇನ್ನು ಕನಿಷ್ಠ ಹತ್ತು ವರ್ಷಗಳ ತನಕವಾದರೂ ಯುರೋಪಿನ ಫಿನ್ಲೆಂಡ, ಇಸ್ಟೋನಿಯ, ಲಾಟೇವಿಯ ಲಿಥುಯೇನಿಯಾ, ಸ್ವೀಡನ್, ನೋರ್ವೇ, ಡೆನ್ಮಾರ್ಕ, ಸ್ವಿಸ ಸ್ವಿಜರಲೆಂಡ ಲೀಚಿನ್‌ಸ್ಟೀನ್, ಲಕ್ಸೆಂಬರ್ಗ, ಪೋಲೆಂಡ್, ಹಂಗೆರಿ, ರುಮಾನ್ಯಾ, ಯುಗೋಸ್ಲೇವಿಯ, ರಷ್ಯಾ, ಬಲ್ಗೇರಿಯ ಗ್ರೀಸ ಟರ್ಕಿ ಇರಾಕ್, ಅರೇಬಿಯ, ಸಿರಿಯ ಪೆಲೆಸ್ಟೈನ ಈಜಿಪ್ಟ ಇರಾನ. ಹೊಲ್ಲೆಂಡ, ಬೆಲ್ಜಿಯಂ, ಗ್ರೇಟಬ್ರಿಟನ್ ಐರ್ಲೆಂಡ, ಫ್ರಾನ್ಸ ಮತ್ತು ಪೋರ್ಚುಗಲಿನ ಮೇಲೆ ಕೈಎತ್ತುವದಿಲ್ಲವೆಂದೂ ಬಲಾತ್ಕಾರದ ಆಕ್ರಮಣಗಳನ್ನು ಮಾಡುವುದಿಲ್ಲವೆಂದೂ, ಹಿಟ್ಲರ ಮುಸಲೋನಿಯರು ಮಾತಿನ ಭರವಸೆಯನ್ನು ಕೊಡಬೇಕು, ಅಲ್ಲವಾದರೆ ತಕ್ಕ ಪ್ರತೀಕಾರ ಉಪಾಯವನ್ನು ಚಿಂತಿಸಬೇಕಾಗುತ್ತದೆ ಅಂಥ ಭರವಸೆಯನ್ನು ಈ ಸರ್ವಾಧಿಕಾರಿಗಳು ಕೊಡುವುದಾದರೆ, ಅಷ್ಟು ವರ್ಷಗಳ ತನಕ ಈ ರಾಷ್ಟ್ರಗಳೂ ಇಟಲಿ ಜರ್ಮನಿಗಳನ್ನು ಆಕ್ರಮಿಸದಂತೆ ಭರವಸೆಕೊಡುವವು ಎಂದು ಮಿ. ರೂಜವೆಲ್ಟರು ಹಿಟ್ಲರ ಮುಸಲೋನಿಯರಿಗೆ ತಿಳಿಸಿದ್ದಾರೆ.

ಬ್ರಿಟನ ಫ್ರಾನ್ಸುಗಳ ಒಪ್ಪಿಗೆ

ಸರ್ವಾಧಿಕಾರಿಗಳು ತಮ್ಮ ಆಕ್ರಮಣ ನೀತಿಯನ್ನು ಬದಲಾಯಿಸಿರುವರೆಂದು ಭರವಸೆ ಕೊಡುವುದಾದರೆ ತಾವೂ ಅವರ ವಿರುದ್ಧ ಯಾವ ಆಕ್ರಮಣವನ್ನೂ ಮಾಡುವುದಿಲ್ಲವೆಂದು ಬ್ರಿಟನ ಫ್ರಾನ್ಸುಗಳು ತಮ್ಮ ಒಪ್ಪಿಗೆಯನ್ನು ಕೊಟ್ಟಿವೆ ಇಟಲಿಯೂ ಕೂಡ ಒಪ್ಪಿಗೆಯನ್ನು ಕೊಡುವ ತರದಲ್ಲಿದೆ ಅದಕ್ಕೋಸ್ಕರ ಇಟಲಿ ಫ್ರಾನ್ಸುಗಳು ಪರಸ್ಪರ ವ್ಯವಹಾರದಿಂದ ತೃಪ್ತವೆ ಎಂದ ಮಿ. ರೂಜವೆಲ್ಟರು ಇಟಲಿಯನ್ನು ಕೇಳಿರುವರು ಹಿಟ್ಲರನು ರೂಜವೆಲ್ಟರ ಪತ್ರವನ್ನು ಆಲೋಚಿಸುತ್ತಿದ್ದಾನೆ ಅವನು ತನ್ನ ನಿಶ್ಚಿತ ಅಭಿಪ್ರಾಯವನ್ನು ಕೊಟ್ಟಿರುವುದಿಲ್ಲ ಸರಿಯಾಗಿ ಜರ್ಮನಿಯ ಪತ್ರಿಕೆಗಳು ಮಿ. ರೂಜವೆಲ್ಟರನ್ನು ನಿಂದ್ಯವಾಗಿ ದೂರಿವೆ. ಕಟುವಾಗಿ ಟೀಕಿಸಿದ ಜರ್ಮನಿಯ ವೃತ್ತಪತ್ರಿಕೆಗಳ ಬಂದ ಅಭಿಪ್ರಾಯಗಳನ್ನು ಆಧಾರವಾಗಿಟ್ಟುಕೊಳ್ಳುವುದಾದರೆ ಹಿಟ್ಲರನು ಮಿ ರೂಜವೆಲ್ಟರಿಗೆ ಅನುಕೂಲವಾದ ಉತ್ತರವನ್ನು ಕೊಡಲಿಕ್ಕಿಲ್ಲವೆಂದು ಭಾವಿಸಲಾಗುತ್ತದೆ

ರಷ್ಯವು ಶಾಂತಿಪಕ್ಷದಲ್ಲಿ

ಮಿ ರೂಜವೆಲ್ಟರ ಪತ್ರಕ್ಕೆ ಹಿಟ್ಲರನು ಅನುಕೂಲವಾದ ಅಥವಾ ಪ್ರತಿಕೂಲವಾದ ಯಾವ ರೀತಿಯ ಉತ್ತರವನ್ನು ಕೊಡಲಿ ರಷ್ಯವನ್ನು ಶಾಂತಿಪಕ್ಷಕ್ಕೆ ಸೇರಿಸಲಿಕ್ಕೆ ಬ್ರಿಟನ್ ಮಾಡುತ್ತಿರುವ ಪ್ರಯತ್ನ ಮತ್ತು ಅದಕ್ಕೆ ಇದೇ ಕೆಲವು ದಿನಗಳಿಂದ ದೊರೆತಿರುವ ಸಫಲತೆಯನ್ನು ಹಿಟ್ಲರನು ಮನಗಾಣುವನಾದರೆ, ಇನ್ನು ಅವನ ಇತರ ರಾಷ್ಟ್ರಗಳ ಮೇಲೆ ಒಂದೇ ಒಂದು ಹೆಜ್ಜೆ ಮುಂದಿಡಬೇಕಾದರೆ, ತನ್ನ ಅಂಥ ಕಾರ್ಯದ ಭವಿಷ್ಯವನ್ನು ಕುರಿತು ಗಂಭೀರವಾಗಿ ಆಲೋಚಿಸಬೇಕಾಗುವುದು ಸ್ವಯಂಸಿದ್ಧವಾಗಿದೆ ಯುರೋಪಿನ ಪ್ರತಿಯೊಂದು ರಾಷ್ಟ್ರದಲ್ಲಿ ಭರದಿಂದ ನಡೆದಿರುವಂತೆ, ಬ್ರಿಟಿಷ ಸಾಮ್ರಾಜ್ಯಾಂತರ್ಗತ ದೇಶಗಳಲ್ಲಿಯೂ ಅಂದ ಸಿದ್ಧತೆಗಳು ನಡೆದಿವೆ ಆದ್ದರಿಂದ ಈಗ ಹಿಟ್ಲರನು ಯಾವದೇ ರಾಷ್ಟ್ರದ ಮೇಲೆ ಕೈಯೆತ್ತಬೇಕೆಂದರೆ ಹಿಂದು ಮುಂದು ತಿಳಿದು ನೋಡಿಕೊಳ್ಳಬೇಕಾಗುವುದು

ಅಮೇರಿಕದ ನಾವೆ ಶಾಂತಸಾಗರಕ್ಕೆ

ಯಾವದೊಂದು ಕಾರಣವನ್ನು ಕೊಡದೆ ಅಮೇರಿಕವು ತನ್ನ ಜಲಸೈನ್ಯವನ್ನು ಶಾಂತಸಾಗರಕ್ಕೆ ಕರಿಸಿಕೊಂಡಿದೆ ರೋಮ್ ಬರ್ಲಿನ ಟೋಕಿಯೋ ಮತ್ತು ಬರ್ಗೋಸ (ಸ್ಪೆಯಿನ್)ಗಳು ಒಂದಾಗಿ ಶಾಂತಿಪಕ್ಷವನ್ನು ಇದಿರಿಸುವ ಹಂಚಿಕೆಗಳಾಗಿವೆ ಎಂದು ಮಿ ರೂಜವೆಲ್ಟರ ಅನುಭವಕ್ಕೆ ಬಂದಿರುವುದರಿಂದ ಶಾಂತಸಾಗರದಲ್ಲಿ ಜಪಾನಿನ ಆಕ್ರಮಣವನ್ನು ತಡೆಯಲಿಕ್ಕೆ ಈ ರೀತಿ ಯುದ್ಧನಾವೆಗಳನ್ನು ಶಾಂತಸಾಗರಕ್ಕೆ ತಂದಿಟ್ಟುಕೊಂಡಿರಬಹುದೆಂದು ಊಹಿಸಿದ್ದಾರೆ ಜಪಾನು ಇಟಲಿ ಜರ್ಮನಿ ಸ್ಪೆಯಿನುಗಳನ್ನು ಕೂಡಿಕೊಳ್ಳುವುದೆಂಬ ಕುರಿತು ಜಪಾನಿನಲ್ಲಿ ವಾರ್ತೆಗಳು ಹರಡಿವೆ.

DAILY 2 SHOWS AT 5-30 & 9-30 P. M. | **From 22-4-'39** | **MATINESS** SAT. & SUN. AT 2-30 P. M.

The Greatest Mythological Wonder

of the year comes, with all its

Glamour, Scenic Beauty & Magnificence!

BALAJI—toping every other production! The sensation of the town! Triumphant run in ten centres! Still drawing crowded houses!

Two and a quarter million people have seen it!

Yet thousands are rushing!

NOW, to thrill you with its devotional songs and the famous Tirupathi sights you have always longed to SEE!

AT THIS THEATRE-DE-LUXE

NEW CHITRA TALKIES,

Famous Film's triumphant release--- MANGALORE.

BALAJI

OR

Sri Tirupathi Venkteshwara Mahatmyam

Scores of Andhra Stars gather to give you the best entertainment of

Directed by P. PULLAYA, B.A.,

Story by Poet RAMA REDDI, "KAVI KOKIL"

Music by A. NARASIMHA RAO and B. KUMARSW.

CAST

Sri Vishnu & Srinivas	C. S. R. Anj.
Narada	Bandaru Venkateshw
BALAJI	M. Buchanna Shastry
Hatha Yogi	T. Subramanya Shastry
Brahma	G. Suryanarayana
Shankara	O. Ramchandra Raju
Brigu	Pandit Rao
Varahaswami	B. Sitaramaiah
Nayudubava	V. V. Rama Rao
Gangaiaha	Gangaya Rao
Akasharaj	K. Ranga Rao
Padmavati	Shanta Kumari

Laxmi	Rajeshwari	Vakul	Raju
Malathi	Sanjivkumari	Parwathi	Nagamma
Saraswathi	Radha	Gaddaseni	Nagaven
Charini	Nagaratnam	Shanta	Suryakanti
Madhavi	Sarojini	Sita	Sita
Manjari	Krishnaveni &c. &c		

Thousands of pilgrims marching on Tirupathi Hills.

Rarest shots of Tirupathi Hills! The Temple Garudothsavam—Rathothsavam with all the pomp & splendeour charateristic of the mighty place

Papanasanam Falls **Gogarbham**

Lovely marriage ceremonies—with all the details and appropriate songs!

Only once in a generation comes a picture of such magnitude. A great accomplishment and a great opportunity for you.

Never Miss this Show of Shows!

Men, Women, Children—everybody—come one, come all! Thirupathi at your door—a pilgrimage for you for a trifle!

The Story:— The great Bhrigu finding Brahma and Shiva uncourteous curses them and when he comes to Vishnu's abode is enraged to see the Lord flirting with Laxmi. Bhrigu kicks the Lord in wrath. Lord Vishnu in affected humiliation messages the leg of the Saint and softly asks the revered Saint why he should be so angry. Laxmi is disgusted with the Lord for kissing the kicker and descends to earth (Kolhapur) for penance. Lord Vishnu also comes to earth............See the LORD and LAXMI unite together... ....on the Silver Screen.

Complete story in Kanarese is published in "Prabhath" Weekly dated 23-4-1939. Rates: Re. 1, As. 8, 6, 4, 3, and 2.

ತಾರೀಕು 22-4-'39ನೇ ಶನಿವಾರದಿಂದ

ದಿನಂಪ್ರತಿ 2 ದೇಖಾವೆಗಳು: ಸಾಯಂಕಾಲ 6-30 ಮತ್ತು ರಾತ್ರಿ 9-30ಕ್ಕೆ ಶನಿವಾರ ರವಿವಾರಗಳಲ್ಲಿ 2-30 ಘಂಟೆಗೆ ಮೆಟಿನಿ ದೇಖಾವೆ ಇದೆ

ಪುರಾಣ ಕಥೆಗಳಲ್ಲಿ ಅತೀ ಮಹತ್ವದ್ದಾದ— ಭಾರತೀಯರೆಲ್ಲರೂ ಕೇಳಿ ಮುದಗೊಂಡು ಹಾಡಿ ನಲಿವ ಅತೀ ಪುಣ್ಯಪ್ರದ ಕ್ಷೇತ್ರ ತಿರಪತಿಯ ಸುಮನೋಹರ ಕಥಾನಕವೀಗ ಚಿತ್ರವಾಗಿ ಬಂದಿದೆ!

ಯಾರು ತಿರುಪತಿಯ ಯಾತ್ರೆ ಮಾಡಬೇಕೆಂದು— ಆ ಪವಿತ್ರ ಕ್ಷೇತ್ರವನ್ನು ಸಂದರ್ಶಿಸಿ ಪುಣ್ಯ ಗಳಿಸಬೇಕೆಂದು ಹಾರೈಸುತಿದ್ದರೋ ಅವರೆಲ್ಲ ಇಲ್ಲಿ ಕುಳಿತಲ್ಲೇ ಆ ಮಹಾಕ್ಷೇತ್ರವನ್ನು ನೋಡುವಂತಾಗಿದೆ!

ನ್ಯೂ ಚಿತ್ರಾ ಟೋಕಿಸ್,

: : : : : ಮಂಗಳೂರು : : : : :

ಇಲ್ಲಿ, ಫೇಮಸ್ ಫಿಲ್ಮ್ಸ್‌ನವರ ಉಜ್ವಲ ಕೃತಿ

ಹತ್ತು ಮುಖ್ಯ ಕೇಂದ್ರಗಳಲ್ಲಿ ಆರು ವಾರಗಳಲ್ಲಿ ಇಪ್ಪತ್ತನಾಲ್ಕು ಲಕ್ಷ ಜನರು ಈ ಚಿತ್ರವನ್ನು ನೋಡಿದರು! ಪ್ರದರ್ಶಿತವಾದಲೆಲ್ಲ ಜನರು ಮುಗ್ಧರಾಗಿ ಇನ್ನೊಮ್ಮೆ ನೋಡುವ ಆತುರದಲ್ಲಿರುವರು ಚಿತ್ರರೂಪವಾಗಿ ಬಂದ ಪುರಾಣ ಕಥೆಗಳಲ್ಲೆಲ್ಲ ಅತ್ಯಂತ ಮಹತ್ವವಾದುದೆಂದು ಜನರು ಮುಕ್ತಕಂಠವಾಗಿ ಘೋಷಿಸುತ್ತಿರುವರು!

ಬಾ ಲಾ ಜಿ

ಅಥವಾ
ಶ್ರೀ ತಿರುಪತಿ
ವೆಂಕಟೇಶ್ವರ
ಮಹಾತ್ಮೆ!

ಅಥವಾ
ಶ್ರೀನಿವಾಸ
ಪದ್ಮಾವತಿಯರ
ಪರಿಣಯ!

ಪ್ರಸಿದ್ಧ ... ಗಳನ್ನು ...

ಆಂಧ್ರದ ಸುಪ್ರಸಿದ್ಧ ನಟನಟಿಯರು

[illegible]	ಶಾಂತಕುಮಾರಿ
...ವಾರ ವೆಂಕಟೇಶ್ವರುಲು	[illegible]
...ಣ ಶಾಸ್ತ್ರಿ	[illegible]
ಟಿ. ಸ. ಬ... ಶಾಸ್ತ್ರಿ	ಸಂಜೀವ...
...ಸೂರ್ಯನಾರಾಯಣ	ನಾಗ...
...ವ ಚಂದ್ರರಾವ್	ರಾಧಾ
ಪಂಡಿತರಾವ್	ನಾಗದೇವಿ
...ಸೀತಾರಾಮಯ್ಯ	ನಾಗರತ್ನಂ
ವಿ. ವಿ. ರಮಣರಾವ್	[illegible]
ಗಂಗಯ್ಯರಾವ್	[illegible]
... ರಂಗರಾವ್	ಸೀತಾ ಮತ್ತು ಕೃಷ್ಣವೇಣಿ

ತಿರುಪತಿ ಬೆಟ್ಟಕ್ಕೆ ಸಾವಿರಾರು ಯಾತ್ರಾರ್ಥಿಗಳು ನಡೆದು ಹೋಗುವ ದೃಶ್ಯಗಳು! ತಿರುಪತಿ ದೇವಾಲಯ, ಗರುಡೋತ್ಸವ, ರಥೋತ್ಸವ, ಪಾಪನಾಶನಂ ಜೋಗು, ಗೋಗರ್ಭಂ, ವಿವಾಹಸಮಾರಂಭಗಳು—ಇತ್ಯಾದಿ—ಇತ್ಯಾದಿ—

: : : : ಕಥಾಸಾರಾಂಶ : : : :

ಬ್ರಹ್ಮರ್ಷಿಗಳು ಯಜ್ಞಮಾಡುತ್ತಿರುವಾಗ ನಾರದ ಮಹಾಮುನಿಗಳು ಅತ್ತ ಬಂದು ಈ ಯಜ್ಞವು ಯಾರಿಗಾಗಿ? ಇದರ ಫಲವನ್ನು ಯಾರು ಅನುಭವಿಸುವರು ಎಂದು ಪ್ರಶ್ನಿಸಿದರು. ಈ ಪ್ರಶ್ನೆಯನ್ನು ಭೃಗುಋಷಿಯು ಮಾತ್ರ ಉತ್ತರಿಸಬಲ್ಲನೆಂಬುದಾಗಿ ನಿರ್ಧಾರವಾಗಲು, ಭೃಗುಋಷಿಯು ಬ್ರಹ್ಮನಲ್ಲಿಗೆ ಪ್ರಶ್ನೆಗೆ ಉತ್ತರ ತರಲು ಹೊರಟನು. ಬ್ರಹ್ಮನು ಭೃಗುವನ್ನು ಅಲಕ್ಷಿಸಿದನೆಂದು ಭೃಗುವು ಬ್ರಹ್ಮನನ್ನು ಧಿಕ್ಕರಿಸಿ ಶಿವನಲ್ಲಿಗೆ ಹೋದನು. ಶಿವನು ಪಾರ್ವತಿಯೊಡನೆ ಕಾಮಕೇಳಿಯಲ್ಲಿದ್ದನು. ಭೃಗುವಿನ ಮೇಲೆ ಶಿವನು ಕುಪಿತನಾಗಿ ಬೆನ್ನಟ್ಟಿ ಬಂದು ಶಾಪಕ್ಕೊಳಗಾದನು. ಭೃಗುವು ಅಲ್ಲಿಂದ ವೈಕುಂಠಕ್ಕೆ ಬರಲು ಅಲ್ಲಿ ವಿಷ್ಣುವು ಲಕ್ಷ್ಮಿಯೊಡನೆ ಸರಸವಾಡಿಕೊಂಡಿರುವುದನ್ನು ಕಂಡು ರೋಷದಿಂದ ವಿಷ್ಣುವನ್ನು ಒದ್ದನು. ವಿಷ್ಣುವು ಕೋಪಗೊಳ್ಳದೆ ಎದ್ದು ಬಂದು ಭೃಗುವಿನ ಪಾದಗಳನ್ನು ನಮಿಸಿ, 'ನೋವಾಯಿತೇ' ಎಂದು ಉಪಚರಿಸಲು, ಒದ್ದವನನ್ನು ಉಪಚರಿಸುವ ಈ ಕ್ರಮಕ್ಕಾಗಿ ಜಿಗುಪ್ಸೆಗೊಂಡು ಲಕ್ಷ್ಮಿಯು ಕೋಪದಿಂದ ಭೂಲೋಕಕ್ಕೆ ತೆರಳಿದಳು. (ಮುಂದಿನಂಶ ಚಿತ್ರದಲ್ಲಿ)

[ಪೂರ್ಣ ಕಥೆಯನ್ನು ತಾ 21—4—'39ರ ಪ್ರಭಾತ ವಾರಪತ್ರಿಕೆಯಲ್ಲಿ ಓದಬಹುದು]

ಮರೆಯದಿರಿ! ದರಗಳು ಎಂದಿನಂತೆಯೇ! ಮರೆಯದಿರಿ!

ಶಾರದಾ ... ಮಂಗಳೂರು

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV FR' P. W. FARIAS,

ST. PAULS CHURCH
Bolkunje Post, S K
Dated 4 h Jan 1939

To
THE JOINT MANAGERS,
The C. P. C. Co Ltd., Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I hear were done voluntarily

May the blessings of the almighty fall on you all and may you be able to do much good to the Public

Renewing my thanks I remain,
Yours Sincerely,
(Sd) P W Farias

Sri Parshwanathaswami,
PANCHAKALYANA POOJA MAHOSTHAM,
Venoor, S Kanara, 1939

To
THE JOINT MANAGERS,
The Combind Booking Agency Mangalore

Dear Sirs

Please permit us to express our thanks on behalf of the above committee for the efficient Service rendered by your combined Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Mr [illegible] Booking Clerk Mr B Krishnayya and also his other mates and Mr [illegible] who had specially come down from Mangalore to see to the needs and comforts of the travelling Public Thanking you once again

We remain Yours faithfully,

Venoor } (Sd) B Chandappa Indra (*Secretary P M Council*) (Sd) M Jagathpal (Sd) M Pachappa Shetty.
Dated 6-2-39 } (Sd) Anantharaj Shetty (*Members Panchakalyana Mahosthamam Committee*)

JOINT MANAGERS.

The Combined Booking Agency, MANGALORE

The Joint Booking Office, KODIALBAIL

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTD 1906
CANARA BANK, LIMITED.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಪೊಡಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲಿ ಈ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY MADRAS CALCUTTA

ತಾರೀಕು 22-4-’39ನೇ ಶನಿವಾರದಿಂದ

ದಿನಂಪ್ರತಿ 2 ದೇಖಾವೆಗಳು: ಸಾಯಂಕಾಲ 5-30 ಮತ್ತು ರಾತ್ರಿ 9-30ಕ್ಕೆ — ಶನಿವಾರ ರವಿವಾರಗಳಲ್ಲಿ 2-30 ಘಂಟೆಗೆ ಮೆಟಿನಿ ದೇಖಾವೆ ಇದೆ

ಪುರಾಣ ಕಥೆಗಳಲ್ಲಿ ಅತೀ ಮಹತ್ವದ್ದಾದ— ಭಾರತೀಯರೆಲ್ಲರೂ ಕೇಳಿ ಮುದಗೊಂಡು ಹಾಡಿ ನಲಿವ ಅತೀ ಪುಣ್ಯಪ್ರದ ಕ್ಷೇತ್ರ ತಿರುಪತಿಯ ಸುಮನೋಹರ ಕಥಾನಕವೀಗ ಚಿತ್ರವಾಗಿ ಬಂದಿದೆ!

ಯಾರು ತಿರುಪತಿಯ ಯಾತ್ರೆ ಮಾಡಬೇಕೆಂದು— ಆ ಪವಿತ್ರ ಕ್ಷೇತ್ರವನ್ನು ಸಂದರ್ಶಿಸಿ ಪುಣ್ಯ ಗಳಿಸಬೇಕೆಂದು ಹಾರೈಸುತಿದ್ದರೋ ಅವರೆಲ್ಲ ಇಲ್ಲಿ ಕುಳಿತಲ್ಲೇ ಆ ಮಹಾಕ್ಷೇತ್ರವನ್ನು ನೋಡುವಂತಾಗಿದೆ!

ನ್ಯೂ ಚಿತ್ರಾ ಟೋಕಿಸ್,

: : : : : ಮಂಗಳೂರು : : : : :

ಇಲ್ಲಿ, ಫೇಮಸ್ ಫಿಲ್ಮ್ಸ್‌ನವರ ಉಜ್ವಲ ಕೃತಿ

ಹತ್ತು ಮುಖ್ಯ ಕೇಂದ್ರಗಳಲ್ಲಿ ಆರು ವಾರಗಳಲ್ಲಿ ಇಪ್ಪತ್ತನಾಲ್ಕು ಲಕ್ಷ ಜನರು ಈ ಚಿತ್ರವನ್ನು ನೋಡಿದರು! ಪ್ರದರ್ಶಿತವಾದಲ್ಲೆಲ್ಲ ಜನರು ಮುಗ್ಧರಾಗಿ ಇನ್ನೊಮ್ಮೆ ನೋಡುವ ಆತುರದಲ್ಲಿರುವರು ಚಿತ್ರರೂಪವಾಗಿ ಬಂದ ಪುರಾಣ ಕಥೆಗಳಲ್ಲೆಲ್ಲ ಅತ್ಯಂತ ಮಹತ್ವವಾದುದೆಂದು ಜನರು ಮುಕ್ತಕಂಠವಾಗಿ ಘೋಷಿಸುತ್ತಿರುವರು!

ಬಾ ಲಾ ಜಿ

ಅಥವಾ
ಶ್ರೀ ತಿರುಪತಿ
ವೆಂಕಟೇಶ್ವರ
ಮಹಾತ್ಮೆ!

ಅಥವಾ
ಶ್ರೀನಿವಾಸ
ಪದ್ಮಾವತಿಯರ
ಪರಿಣಯ!



ಆಂಧ್ರದ ಸುಪ್ರಸಿದ್ಧ ನಟನಟಿಯರು

ಸಿ ... ಆಂಜನೇಯುಲು	ಶಾಂತಕುಮಾರಿ
... ವೆಂಕಟೇಶ್ವರುಲು	ರಂಜೇತರಿ
... ಶಾಸ್ತ್ರಿ	ರಾಜ
ಟಿ ಸುಬ್ರಹ್ಮಣ್ಯ ಶಾಸ್ತ್ರಿ	ಸಂಜೀವಿಕುಮಾರಿ
... ಸೂರ್ಯನಾರಾಯಣ	ನಾಗಮ್ಮ
ಡಂ. ವ. ಚಂದ್ರರಾವ	ರಾಧಾ
ಪಂಡಿತರಾವ್	ನಾಗವೇಣಿ
ಬಿ ಸೀತಾರಾಮಯ್ಯ	ನಾಗರತ್ನಂ
ವಿ ವಿ ರಮಣರಾವ್	ಸೂರ್ಯಕಾಂತಂ
ಗಂಗಲೆ ರಾವ್	ಸರೋಜ
" ರಂಗರಾವ್	ಸೀತಾ ಮತ್ತು ಕೃಷ್ಣವೇಣಿ

ತಿರುಪತಿ ಬೆಟ್ಟಕ್ಕೆ ಸಾವಿರಾರು ಯಾತ್ರಾರ್ಥಿಗಳು ನಡೆದು ಹೋಗುವ ದೃಶ್ಯಗಳು! ತಿರುಪತಿ ದೇವಾಲಯ, ಗರುಡೋತ್ಸವ, ರಥೋತ್ಸವ, ಪಾಪನಾಶನಂ ಜೋಗು, ಗೋಗರ್ಭಂ, ವಿವಾಹಸಮಾರಂಭಗಳು—ಇತ್ಯಾದಿ—ಇತ್ಯಾದಿ—

: : : : ಕಥಾಸಾರಾಂಶ : : : :

ಬ್ರಹ್ಮರ್ಷಿಗಳು ಯಜ್ಞಮಾಡುತ್ತಿರುವಾಗ ನಾರದ ಮಹಾಮುನಿಗಳು ಅತ್ತ ಬಂದು, ಈ ಯಜ್ಞವು ಯಾರಿಗಾಗಿ? ಇದರ ಫಲವನ್ನು ಯಾರು ಅನುಭವಿಸುವರು? ಎಂದು ಪ್ರಶ್ನಿಸಿದರು. ಈ ಪ್ರಶ್ನೆಯನ್ನು ಭೃಗುಋಷಿಯು ಮಾತ್ರ ಉತ್ತರಿಸಬಲ್ಲನೆಂಬುದಾಗಿ ನಿರ್ಧಾರವಾಗಲು ಭೃಗುಋಷಿಯು ಬ್ರಹ್ಮನಲ್ಲಿಗೆ ಪ್ರಶ್ನೆಗೆ ಉತ್ತರ ತರಲು ಹೊರಟನು. ಬ್ರಹ್ಮನು ಭೃಗುವನ್ನು ಅಲಕ್ಷಿಸಿದನೆಂದು ಭೃಗುವು ಬ್ರಹ್ಮನನ್ನು ಧಿಕ್ಕರಿಸಿ ಶಿವನಲ್ಲಿಗೆ ಹೋದನು. ಶಿವನು ಪಾರ್ವತಿಯೊಡನೆ ಕಾಮಕೇಳಿಯಲ್ಲಿದ್ದನು. ಭೃಗುವಿನ ಮೇಲೆ ಶಿವನು ಕುಪಿತನಾಗಿ ಬೆನ್ನಟ್ಟಿ ಬಂದು ಶಾಪಕ್ಕೊಳಗಾದನು. ಭೃಗುವು ಅಲ್ಲಿಂದ ವೈಕುಂಠಕ್ಕೆ ಬರಲು, ಅಲ್ಲಿ ವಿಷ್ಣುವು ಲಕ್ಷ್ಮಿಯೊಡನೆ ಸರಸವಾಡಿಕೊಂಡಿರುವುದನ್ನು ಕಂಡು ರೋಷದಿಂದ ವಿಷ್ಣುವನ್ನು ಒದ್ದನು. ವಿಷ್ಣುವು ಕೋಪಗೊಳ್ಳದೆ ಎದ್ದು ಬಂದು, ಭೃಗುವಿನ ಪಾದಗಳನ್ನು ಸವರಿ, ‘ನೋವಾಯಿತೇ?’ ಎಂದು ಉಪಚರಿಸಲು, ಒದ್ದವನನ್ನು ಉಪಚರಿಸುವ ಈ ಕ್ರಮಕ್ಕಾಗಿ ಜಿಗುಪ್ಸೆಗೊಂಡು ಲಕ್ಷ್ಮಿಯು ಕೋಪದಿಂದ ಭೂಲೋಕಕ್ಕೆ ತೆರಳಿದಳು— (ಮುಂದಿನಂಶ ಚಿತ್ರದಲ್ಲಿ)

[ಪೂರ್ಣ ಕಥೆಯನ್ನು ತಾ. 21—4—39ರ ಪ್ರಭಾತ ಪತ್ರಿಕೆಯಲ್ಲಿ ಓದಬಹುದು]

ಮರೆಯದಿರಿ! ದರಗಳು ಎಂದಿನಂತೆಯೇ! ಮರೆಯದಿರಿ!

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV FR P. W. FARIAS.

ST PAULS CHURCH,
Bolkunje Post, S K
Dated 4 h Jan 1939

To
THE JOINT MANAGERS
The C. P C Co Ltd, Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I hear were done voluntarily

May the blessings of the almighty fall on you all and may you be able to do much good to the Public

Renewing my thanks I remain
Yours Sincerely,
(Sd) **P W Farias**

Sri Parshwanathaswami,
PANCHAKALYANA POOJA MAHOSTHAM,
Venoor, S Kanara, 1939

To
THE JOINT MANAGERS
The Combind Booking Agency, Mangalore

Dear Sirs

Please permit us to express our thanks on behalf of the above committee for the efficient service rendered by your combined Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodbidri Booking Clerk Mr B Krishnayya and also his other mates and Mr Raghavendra Bhandary who had specially come down from Mangalore to see to the needs and comforts of the travelling Public. Thanking you once again

We remain Yours faithfully

Venoor } (Sd) B Chandappa Indra (*Secretary P M Council*) (Sd) M Jagathpal, (Sd) M Pachappa Shetty
Dated 6 2-39 } (Sd) Anantharaj Shetty (*Members Panchakalyana Mahosthamam Committee*)

JOINT MANAGERS.

The Combined Booking Agency, MANGALORE — **The Joint Booking Office,** KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding a Crore

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTD 1906
CANARA BANK, LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಚಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಬೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.
ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲಿ ಈ ಕಂಪೆನಿಯಲ್ಲಿ ದೊರೆಯುವುದು

ಸ್ವದೇಶಾಭಿಮಾನಿ

Established 1906 — Regd: No. M 340

ಸಂಪುಟ: ೩೩] ತಾರೀಖು ೨೧–೪–೧೯೩೯ (21–4–1939) [ಸಂಚಿಕೆ ೧೬

THE

BOMBAY LIFE ASSURANCE COMPANY, LTD.,

(ESTD 1908)

It is not material how much you can earn every month, but it is most important how much you save, so that you and your family can have uniform minimum comforts at a time when your income reduces or comes to nothing.

Best place it invest your such savings on a captalized value is THE BOMBAY LIFE ASSURANCE CO., LTD. which gives you best security and service.

Honest, Energetic and Influential persons will have great opportunity to help the cause of society and also to earn a permanent and decent remuneration

KOCHIKAR BROTHERS, LIIMTED,

Managers Branch Secretaries

The Bombay Life Assurance Co., Ltd.,

The Bombay Life Building — Gandhinagar UDIPI

or any of our following offices:

Post Box No 337, Mount Road, Madras

Visweshwarapuram Circle, Bangalore City

Charni Road, Girgaum, BOMBAY 4

Car Street, Mangalore

Puthiyara, Calicut

Central Station Road, Trivandrum

Ottapalam, S. Malabar

MAKE LIFE WORTH-LIVING!

Indigestion Insomnia – Dry Cough
Nervousness Weak Heart &c
these make you weary of Life!

GONSULT US AND BUY YOUR LIFE'S HAPPINESS!

Oils – that cool the brain and induce sleep
Lehas – that build-up your wasted system
Asavas – that regenerate your jaded nerve

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA N. KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ ಒಣ ಕೆಮ್ಮು
ನರಗಳ ಅಬಲತೆ ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನಿರಾಶೆಯನ್ನುಂಟು ಮಾಡುವುವು!

ನಮ್ಮನ್ನು ವಿಚಾರಿಸಿರಿ–ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ ತೈಲಗಳು.
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ–ಲೇಹಗಳು.
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ ಆಸವಗಳು

ಒಂದು ಶತಮಾನದ ಅನುಭವದ ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ–ದ. ಕನ್ನಡ

(ಬ್ರಾಂಚ್: ಕುಮುಟೆ, ಉತ್ತರ ಕನ್ನಡ)

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 28-4 1939

ತಾರೀಖು ೨೮—೪—೧೯೩೯



ಪುರಿಯ ಜಗನ್ನಾಥ ದೇವಾಲಯವು ಭಾರತೀಯರಿಗೆಲ್ಲ ವಿಶೇಷವಾದ ಯಾತ್ರಾ ಸ್ಥಳವಾಗಿದೆ. ಉತ್ಕಳ ಹಿಂದುಸ್ಥಾನದ ನಾಗರ ಪದ್ಧತಿಯಲ್ಲಿ ಇಲ್ಲಿನ ಭುವನೇಶ್ವರ ಮತ್ತು ಕೋನಾರಕದ ಗುಡಿಗಳು ನಿರ್ಮಿತವಾಗಿವೆ

ಸಚಿತ್ರ

ವಾರಪತ್ರಿಕೆ

The Emperor of China Saved by the Quina

Extract of French letter of Father Fontaney, missionary in China, to the Reverend Father de la Chaise, confessor of the King of France)

Tcheou-Chan February 15 1703

At the end of the year 1692, Father Visdelou and I returned to Canton. There we received an order to appear at the Court. The Emperor was ill when we arrived there. For the space of two years the Emperor had been examining closely our medicines from Europe, particularly the medicinal pastilles which the King of France distributed to the poor. We specified all the illnesses which are cured in France with these pills which in effect brought about such marvellous and quick cures that a man reduced to the last extremity and for whom there was no more hope was quickly out of danger the next day. Such prodigious results gave to these pills the name of "Chin-yo", or divine remedies.

The sickness which the Emperor was then suffering was the beginning of malignant fever. Even though he knew that these pastilles could cure his illness the Chinese doctors did not deem it convenient to prescribe them and they took another course but the Emperor seeing his illness getting worse and having another thing in mind he resolved to take them and had them give him a half dose of these pastilles. At nightfall the fever subsided and he felt better the following days later he had some more tertian attacks which caused him great anxiety. He made known throughout the whole city that if any one knew of a remedy for the tertian attacks he should come at once to the ... Not a day passed during which ... experiments were not tried.

They were engaged with this when Father ... and I ... at the Court. We ... with us one pound of Quina which had been sent us from Pondicherry. This remedy was still unknown in Peking. We went to present it as the surest remedy which they had in Europe against intermittent and tertian fevers. The four gentlemen who supervised the experiments ... the Emperor received us with great joy, we instructed them in the proper way to prepare the remedy and how to use it as they were accustomed to use it in France by the King's order. They were satisfied with this and wanted to know the origin of the quina, what were its effects and what it cured.

The following day experiments with this remedy were made on three people. I do not know whether God wanted to reveal this power or if it was the natural effect of the remedy, these three sick persons, who were kept in the palace under observation, were cured with the first dose of the quina. The Emperor was immediately informed of the case and he would have taken the quina the same day, had not the Prince Apparent who was extremely worried by the sickness of his father who he tenderly loved, feared the possible harmful effects of a remedy which was not known. He called the Grandees and scolded them for having spoken so soon to the Emperor. They excused themselves modestly, but to show him he had not to be afraid of anything all four offered to take it and the Prince agreed. Immediately they brought cups with wine and quina, the mixture was made by the Prince himself, and before him they took it. Later they went to bed and slept peacefully, with not the least feeling of uneasiness.

The Emperor who had passed a very poor night at three o'clock in the morning called before him Prince Susan and upon being informed that he and the other three gentlemen were all right without more thought took the quina. The same day the tertian attacks should have returned but they failed to appear, the rest of the day and the night he felt much alleviated. The joy in the palace was great, the four gentlemen thanked us for the cure effected by our remedy. The Emperor continued taking the quina, and day by day his health improved. He said publicly that the pastilles and the quina had given him life and had freed him from tertian fever. As a reward he gave us a big house which once belonged to a Mandarin who had committed capital offence and had been banished to Tartaria.

* * * *

Two hundred years ago the Quina or Cinchona bark gave marvellous cures. To-day its principal alcaloid, Quinine in daily doses of 15-18 grains taken during 5 to 7 days cures malaria effectively. To prevent this illness one should take 6 grains of quinine daily during the whole malarial season.

M E No 53

ವಿಶೇಷ ಮುದ್ರಿತ ಟಿನ್ನುಗಳು

ದೊಡ್ಡ ಸೈಜು (8 ಔನ್ಸು) ರೂ 1-4-0
(ದೊಡ್ಡ ಬಾಟ್ಲಿಗಳಲ್ಲಿದ್ದಷ್ಟೇ ಇರುತ್ತದೆ)
ಸಣ್ಣ ಸೈಜು (4 ಔನ್ಸು) ಆಣೆ 11

ಹೆಚ್ಚು ಯಾಕೆ ವ್ಯಯಿಸುತ್ತೀರಿ

ನೀವು ಇಷ್ಟರ ವರೆಗೆ ಬಾಟ್ಲಿಗಳಲ್ಲಿ ಕೊಂಡುಕೊಳ್ಳುತ್ತಿದ್ದ ಎಂಡ್ರ್ಯೂಸ್ ಲಿವರ್ ಸೋಲ್ಟ್ ಇಂದು ವಿಶೇಷವಾದ ಟಿನ್ನುಗಳಲ್ಲಿ ಬರುತ್ತದೆ. ನೀವು ಈಗ ಉತ್ತಮವಾದ ಲವಣವನ್ನು ಕಡಿಮೆ ಕ್ರಯಕ್ಕೆ ಟಿನ್ನುಗಳಲ್ಲಿ ಕೊಂಡುಕೊಳ್ಳಬಹುದು. ಎಂಡ್ರ್ಯೂಸ್ ಲವಣವು ಬೇರೆ ಎಲ್ಲಾ ಉಕ್ಕಿಬರುವ ಲವಣಗಳಿಗಿಂತ ಹೆಚ್ಚಾಗಿ ಮಾರಲ್ಪಡುತ್ತದೆ. ಇದು ಕಡಿಮೆ ಕ್ರಯದ್ದು ಮಾತ್ರವಲ್ಲ—ಉತ್ತಮವೂ ನವೀನವೂ ಆಗಿರುತ್ತದೆ. 50 ವರ್ಷಗಳಿಂದ ಗ್ಲೇಟ್ ಬ್ರಿಟನಿನಲ್ಲಿ ಮಾರಲ್ಪಡುತ್ತಿರುವುದು. ಎಲ್ಲಾ ಶ್ರೀಮಂತ ಔಷಧಿಗಳಲ್ಲಿ ಉತ್ತಮವಾದದ್ದು. ಇದರ ಪ್ರಧಾನವಾಗಿ ಉಕ್ಕಿಬರುವಗುಣವು ಈ ಲವಣವು ಬಹಳ ಉತ್ತಮವೂ ಆರೋಗ್ಯಕರವೂ ಆದುದೆಂದು ಮನ್ನಿಸಲ್ಪಟ್ಟಿದೆ. ಅಷ್ಟಲ್ಲದೆ ಎಂಡ್ರ್ಯೂಸ್ ಲವಣವು ಟಿನ್ನುಗಳಲ್ಲಿ ಉತ್ತಮವಾಗಿರುತ್ತದೆ. ಇದನ್ನು ತಯಾರಿಸುವಾಗ ಕೈ ಸೋಂಕಿರುವುದಿಲ್ಲ.

ಎಂಡ್ರ್ಯೂಸ್ ಲವಣವು ಮೊದಲಿನ ಬಾಟ್ಲಿಗಳಲ್ಲಿದ್ದಷ್ಟೇ ಟಿನ್ನುಗಳಲ್ಲಿದ್ದು ಕಡಿಮೆ ಕ್ರಯಕ್ಕೆ ಮಾರಲ್ಪಡುತ್ತದೆ.

ಈ ಕೆಳಗಿನವುಗಳಿಂದ ನರಳುವಿರಾದರೆ
ನಿಮಗೆ ಎಂಡ್ರ್ಯೂಸ್ ಲವಣವು ಅಗತ್ಯ
ಪಿತ್ತವಿಕಾರ ಮಲಬದ್ಧತೆ ಅಜೀರ್ಣತೆ ಅಗ್ನಿಮಾಂದ್ಯ,
ಆಲಸ್ಯತನ ಅಮ್ಲತೆ ತಲೆನೋವು, ಯಕೃತ್ತಿನ ದೋಷ
ಎದೆಯುರಿ ನರಗಳ ಅಶಕ್ತತೆ

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ
ಮಾರಲ್ಪಡುತ್ತದೆ

ಅಂತರೇಂದ್ರಿಯ ಶುದ್ಧಿಗೆ
ಎಂಡ್ರೂಸ್
ಲವಣ



713A

ANDREWS
LIVER SALT
for Inner Cleanliness

ಅಲ್ಪಸಂಖ್ಯಾತರ ಸಮಸ್ಯೆ—ಚಿತ್ರಾಲ ಮೋಹತಾರರ ಉಪಾಯ.

"ಮಹತ್ಮಾಜಿಯವರು ಈ ಸಮಸ್ಯೆಯನ್ನು ಬಿಡಿಸುವ ಆಸಕ್ತಿ ಉಳ್ಳವರಾದರೆ, ಇದನ್ನು ಬಿಡಿಸುವುದು ಬಹಳ ಸುಲಭವಾಗಿದೆ" ಎಂದು ಚಿತ್ರಾಲಯದ ಮೋಹತಾರರು ಪೇಶಾವರದಲ್ಲಿ ಹೇಳಿದರು. ಚಿತ್ರಾಲವು ರಸ್ಯಕ್ಕೆ ಒತ್ತಿಕೊಂಡು ಹಿಮಾಲಯಗಳಲ್ಲಿರುವ ಒಂದು ಚಿಕ್ಕ ರಾಜ್ಯ. ಅದರ ಮೋಹತಾರ (ರಾಜ)ರು ಹಜ್ ಯಾತ್ರೆಗೆ ಹೋದವರು ತಮ್ಮ ರಾಜ್ಯಕ್ಕೆ ಮರಳುತ್ತಿರುವಾಗ ಪತ್ರಿಕಾ ಪ್ರತಿನಿಧಿಯೊಡನೆ ಪೇಶಾವರದಲ್ಲಿ ಹೀಗೆ ಹೇಳಿದರು:— ಭಾರತೀಯ ಅಲ್ಪಸಂಖ್ಯಾತರು ಈಜಿಪ್ತದ ಅಲ್ಪಸಂಖ್ಯಾತರನ್ನು ಅನುಕರಿಸಬಹುದು. ಅಲ್ಲಿ ಬಹುಸಂಖ್ಯಾತರು ಅಲ್ಪಸಂಖ್ಯಾತರು ಕೇಳಿದುದನ್ನೆಲ್ಲಾ ಕೊಟ್ಟು ತಮ್ಮ ಉದಾರತೆಯನ್ನು ಪ್ರದರ್ಶಿಸಿದ್ದಾರೆ. ಹಾಗೆ ಇಲ್ಲೂ ಬಹುಸಂಖ್ಯಾತರ ಜನರು ಗಳ ಸೂಚನೆಗಳನ್ನು ಮನ್ನಿಸುವುದಾದರೆ ಈ ಪ್ರಶ್ನೆಯು ಸುಲಭದಲ್ಲಿ ತೀರ್ಮಾನವಾಗುತ್ತದೆ. ಹಿಂದೂಗಳು ಬಹು ದೊಡ್ಡ ಬಹುಮತವನ್ನು ಪಡೆದಿರುವುದರಿಂದ, ಅವರು ಮುಸ್ಲಿಮರು ಕೇಳುದುದನ್ನೆಲ್ಲ ಕೊಟ್ಟರೂ ಹಾನಿಯಿಲ್ಲ. ಹಿಂದುಗಳ ಕುರಿತು ಮುಸ್ಲಿಮರಿಗಿರುವ ಹೆದರಿಕೆಯನ್ನು ಸಂದೇಹವನ್ನೂ ನಿವಾರಿಸುವುದು ಹಿಂದೂಗಳ ಕರ್ತವ್ಯ. ಭಾರತ ಸರಕಾರವು ಅನುಮತಿಯನ್ನು ಕೊಡುವುದಾದರೆ ಗಾಂಧಿಯವರನ್ನು ನನ್ನ ದೇಶಕ್ಕೆ ಆಮಂತ್ರಿಸಲಿಕ್ಕೆ ನನಗೆ ಬಹಳ ಸಂತೋಷವಿದೆ.

ಡಾಕ್ಟರ ಮುಖರ್ಜೀಯವರ ಆದರ್ಶ

ಕಲ್ಕತ್ತದ ಡಾಕ್ಟರ ಎಚ್ ಸಿ ಮುಖರ್ಜಿಯವರು ಕ್ರೈಸ್ತರು. ಅವರು ಹಿಂದುಸ್ಥಾನದ ಒಂದು ಬಹು ಸಣ್ಣ ಅಲ್ಪಸಂಖ್ಯಾತ ಪಕ್ಷಕ್ಕೆ ಸೇರಿದವರು. ಆದರೆ ಅವರು ಅಲ್ಪಸಂಖ್ಯಾತ ಜಾತಿಗೆ ಸೇರಿದವರಾಗಿ ದೇಶದ ಮುಂದಿಟ್ಟ ಆದರ್ಶವು ಶ್ಲಾಘನೀಯವಾಗಿದೆ. ಎಂಗ್ಲೋ ಇಂಡಿಯನರು ಕಾಂಗ್ರೆಸಿಗೆ ಸೇರಬೇಕೆಂದು ... ಕ್ರೈಸ್ತರು ಕಾಂಗ್ರೆಸಿಗೆ ಸೇರಿರುವುದರಿಂದ ಮಾತ್ರ ಅವರು ಹಿತರಕ್ಷಣೆಯಾಗಿರುವುದೆಂದು ಶ್ರೀ ಮುಖರ್ಜಿಯವರು ನಾಗಪುರದ ದೇಶೀ ಕ್ರೈಸ್ತರ ಸಭೆಯಲ್ಲಿ ಹೇಳಿದರು. ಅವರು ಎಲ್ಲಾ ಅಲ್ಪಸಂಖ್ಯಾತರಿಗೆ ನ್ಯಾಯವಾದ ರಕ್ಷಣೋಪಾಯಗಳನ್ನು ಕೊಡುವ ಸಂಸ್ಥೆ ಭಾರತದಲ್ಲಿ ಯಾವುದಾದರೂ ಇರುವುದಾದರೆ ಅದು ಕಾಂಗ್ರೆಸ ಒಂದೇ. ಆದ್ದರಿಂದ ವಿಚಾರಿಗಳಾದ ಎಲ್ಲ ಅಲ್ಪಸಂಖ್ಯಾತರು ಕಾಂಗ್ರೆಸಿಗೆ ಸೇರುವರೆಂದಿದ್ದಾರೆ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರ ಆಭರಣಗಳ ಮೇಲೆ ಸದ್ರಿ ಬೇಂಕಿನಿಂದ ಪಡೆದ ಸಾಲಗಳ ಬಗ್ಗೆ ವಗೈರೆ ಕೊಡದೆ ಇದ್ದ ಕುರಿತು ರಿಜಿಸ್ಟ್ರಿ ನೋಟೀಸುಗಳ ಕೊಟ್ಟಲ್ಲಿ ಸದ್ರಿ ಆಸಾಮಿಗಳ ಪೈಕಿ ಕೆಲವರ ಮೃತಪಟ್ಟಿದ್ದಾರಾಗಿಯೂ ನೋಟೀಸ ವಾಪಾಸು ಬಂದಿರುವುದರಿಂದಲೂ ಕೆಲವರ ನೋಟೀಸು ತಡಕೊಂಡು ಬಗ್ಗೆ ಕೊಡದೇ ಇರುವುದರಿಂದಲೂ, ಸದ್ರಿ ಸಾಲಗಳಿಗೆ ಜವಾಬ್ದಾರಿಯಾಗುವ ದಾಗಿನೆಗಳನ್ನು ಇದೇ ಬರುವ ಮೇ ತಾ ೧೩ಕ್ಕೆ ಶನಿವಾರ ಮಧ್ಯಾಹ್ನ ಗಂಟೆ ೨ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಬೇರೆ ಯಾವುದಾದರೂ ಒಂದು ದಿವಸ ಪುನಃ ನೋಟೀಸು ವಗೈರೆ ಕೊಡದೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವವು ಎಂತ ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

(1) ಸಾಲದ ನಂಬ್ರ L 610/36 ಧರ್ಮ ಮಡಿವಾಳ ಲಿಂಗಪ್ಪ ಮಡಿವಾಳನ ಅಳಿಯ, ಅರಿಮಜಲು, ಬಾಳ್ತಿಲ ಗ್ರಾಮ ಬೊರಿಮಾರು ಪೋಸ್ಟು ಅಸ್ಲು ರೂ 50 0 0

(2) ಸಾಲದ ನಂಬ್ರ L 664/36 ವಿಂಗೆಲ್ ರೆಗೋ, ಸಿಕೊ ರೆಗೋನ ಮಗ ಬೊಂಡೆಲು, ಪುತ್ತಿಲ ಗ್ರಾಮ, ಪೋಸ್ಟು ಉಪ್ಪಿನಂಗಡಿ. ಅಸ್ಲು ರೂ 28-0-0

Office of the Bank, Bantval 25—4—1939

B Damodar Baliga.
Agent

ಗತ್ಯೈರ್ನುರ್ಗಹಾರ್ಯೈಸ್ತುತುರ್ಜುನ ದೇವಾ । ನ ಭೇಜಿರೇ ಭೀಮ ವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ದೊರೆಯಲಿಲ್ಲ ರತ್ನಗಳು ಸಾ । ಗರವ ಮಥಿಸಲು ಸುರರು ಗದರಿಂ । ಹರುಷವಾಯಿತೆ! ಮತೆ ವಿಶ್ವವ ಸುಡುವ ಬರುತಿರುವ ಗರಲಕಿನಿತಂಜಿದರೆ! ಸುಧೆಯನು ಪಡೆವ ತನಕ ದೊರೆಯದಿರೆ ತೆರೆದರು ಹೋರಾಡಿದರು ಧೀರರು ನಿಶ್ಚಿತಾರ್ಥನನು ॥

ತಾರೀಕು ೨೮—೪—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 28—4—1939

★ ರಾಜಕೋಟದ ನಿರಾಶಾಮಯ ವಿದ್ಯಮಾನಗಳು ★

ಠಾಕೋರರ ವಿನಾಶ ಕಾಲದ ವಿಪರೀತ ಬುದ್ಧಿ

ಸುಧಾರಣಾ ಸಮಿತಿಯನ್ನು ಮುರಿಯುವ ವೀರವಲ್ಲರ ಕಾರಸ್ಥಾನಗಳು

ರಾಜಕೋಟದ ವಿದ್ಯಮಾನಗಳು ತುಂಬ ನಿರಾಶಮಯವಾಗಿರುವುವು. ಅಲ್ಲಿ ರಾಜಕೀಯ ಸುಧಾರಣೆಗಳನ್ನು ಮಾಡಬೇಕೆಂಬ ಗಾಂಧಿಜಿಯವರ ಪ್ರಯತ್ನಗಳಿಗೆ ಎಲ್ಲಾ ಕಡೆಗಳಿಂದ ಅಭ್ಯಂತರಗಳುಂಟಾಗಿರುವುವು. ಮಹಾತ್ಮಾಜಿಯವರು ಸುಧಾರಣಾ ಸಮಿತಿಗೆ ಕಳುಹಿಕೊಟ್ಟ ಏಳು ಹೆಸರುಗಳಲ್ಲಿ ಅರನ್ನು ಠಾಕೋರರು ತಿರಸ್ಕರಿಸಿ, ಆ ಹೆಸರುಗಳ ಸದಸ್ಯರು ರಾಜಕೋಟದ ಪ್ರಜೆಗಳಾಗಿರುವರೆಂಬುವಕ್ಕೆ ಪ್ರಮಾಣಗಳಿಲ್ಲವೆಂದಿರುವರು. ಮಹಾತ್ಮರು ಅದಕ್ಕೆ ಸಾಕಾಗುವಷ್ಟು ಆಧಾರಗಳನ್ನು ಕೊಟ್ಟಿದ್ದಾರಾದರೂ, ಠಾಕೋರರಿಗೆ ತೃಪ್ತಿ ಉಂಟಾಗಿಲ್ಲ. ಅತ್ತ ಮುಸಲ್ಮಾನರೂ ಹರಿಜನರೂ, ಭಾಯತರೂ ತಮತಮಗೆ ಸುಧಾರಣಾ ಸಮಿತಿಯಲ್ಲಿ ಪ್ರತ್ಯೇಕ ಪ್ರಾತಿನಿಧ್ಯವಿರಬೇಕೆಂಬ ವಾದವನ್ನು ಮುಂದಿಟ್ಟು ಭಯಂಕರ ಚಳವಳವನ್ನು ನಡೆಸುತ್ತಿದ್ದಾರೆ. ಅವರ ... ಡಾ. ಅಂಬೇಡ್ಕರರೂ, ಮಿ. ಜಿನ್ನಾ ಸಾಹೇಬರೂ ಅವರ ಮುಂದಾಳುಗಳು ... ವೀರವಲ್ಲರ ಕೈಗೊಂಬೆಯಾಗಿರುವ ಠಾಕೋರರು ಸುಧಾರಣಾ ಸಮಿತಿಯನ್ನು ಮುರಿಯಬೇಕೆಂಬ ಉದ್ದೇಶದಿಂದಲೇ ಈ ಅಲ್ಪ ಸಂಖ್ಯಾಕರನ್ನು ಎತ್ತಿ ಕಟ್ಟಿರುವರೆಂಬುದಕ್ಕೆ ಸಂದೇಹವಿಲ್ಲ. ಅವರು ರಾಜಕೀಯ ಸುಧಾರಣೆಯ ಪ್ರಶ್ನೆಯನ್ನು ತೀರ್ಮಾನಿಸಬೇಕೆಂಬ ... ಸುಧಾರಣಾ ಸಮಿತಿಯ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ, ಅಲ್ಪ ಸಂಖ್ಯಾಕರಿಗೆ ... ಕೊಡುವುದು ಸಾಧ್ಯವಿಲ್ಲ ... ಅದಕ್ಕೆ ಅವರು ಒಪ್ಪದೆ ಇದ್ದಾರೆ ... ಪರಿಷತ್ತಿನ ಸದಸ್ಯರ ... ಕಾರಣಗಳನ್ನು ಮುಂದಿಟ್ಟು ಆಕ್ಷೇಪಿಸಿದ್ದಾರೆ ... ಬುದ್ಧಿವಂತರು ... ರಾಜ್ಯದಲ್ಲಿ ಶಾಂತಿ, ನೆಮ್ಮದಿ ಬೇಡವಾಗಿದೆ ಎನ್ನಬಹುದು. ಸರದಾರ ಪಟೇಲರ ಕಾರ್ಯಗಳನ್ನು ವ್ಯರ್ಥಮಾಡಬೇಕೆಂಬುದೇ ತನ್ನ ಉದ್ದೇಶವೆಂದು ವೀರವಲ್ಲರು ಹೇಳಿರುವುದರಿಂದ, ಅವರು ಹಿಂದೆ ನಿಂತು ಈ ಆಟವನ್ನು ಆಡುತ್ತಿದ್ದಾರೆಂದು ಹೇಳಬೇಕಾಗುತ್ತದೆ.

ವಿನಾಶ ಕಾಲದ ವಿಪರೀತ ಬುದ್ಧಿ

ವೀರವಲ್ಲರು ಏನು ಮಾಡಿದರೂ, ಅದರ ಜವಾಬುದಾರಿ ಠಾಕೋರರ ಮೇಲಿರುತ್ತದೆ. ಅವರು ತಮ್ಮ ವಿವೇಕ ಬುದ್ಧಿಗಳನ್ನು ಮಾರಿ, ಸುಧಾರಣೆಯ ಕಾರ್ಯಗಳಲ್ಲಿ ಅಡಚಣೆಗಳನ್ನು ನೋಡಿದರೆ ಖೇದವೂ ಆಶ್ಚರ್ಯವೂ ಆಗುತ್ತದೆ. ಅವರಿಗೆ ಸರ್ ಎಂ. ಗ್ವಾಯರ ನಿರ್ಣಯವನ್ನು ಅಲ್ಲಗಳೆಯುವ ಇಷ್ಟು ಸಾಹಸವು ಎಲ್ಲಿಂದ ಬಂದಿತೋ ತಿಳಿಯುವುದಿಲ್ಲ. ಬ್ರಿಟಿಷ್ ಇಂಡಿಯಾ ಸರಕಾರದ ರಾಜಕೀಯ ಖಾತೆಯು ಅವರ ಬೆಂಬಲಕ್ಕಿರಬಹುದು. ಅದು ಹೇಗಿದ್ದರೂ ದಶಂಬರ ೨೬ನೇ ತಾರೀಕಿನ ಠಾಕೋರರ ಪ್ರಕಟಣೆಯಂತೆ ರಾಜಕೋಟದಲ್ಲಿ ಸುಧಾರಣೆಯ ಕಾರ್ಯಗಳು ನಡೆಯುವ ವ್ಯವಸ್ಥೆ ... ಗಾಂಧಿಯವರಿಗೆ ... ಮಾತು ಕೊಟ್ಟಿದ್ದಾರೆ ... ಮತವನ್ನು ತಿರಸ್ಕರಿಸಿ ... ವಚನಭಂಗ ಮಾಡುವವರು ... ಠಾಕೋರರ ... ವಿನಾಶಕಾಲಕ್ಕೆ ವಿಪರೀತ ಬುದ್ಧಿ ಎನ್ನುತ್ತಾರೆ. ... ತ್ಯಾಗವಾದ, ... ಠಾಕೋರರೂ ದೇಶಾಂತರ ... ಠಾಕೋರರಿಗೆ ಸುಬುದ್ಧಿ ... ಸಮ್ಯತ್ತಾನವಾಗುತ್ತದೆ.

ಸಂಧಾನ ಪ್ರಯತ್ನ

ಠಾಕೋರರು ಸುಧಾರಣಾ ಸಮಿತಿಯ ರಚನೆಯಲ್ಲಿ ... ಭವಿಸುವುದನ್ನು ಕಾಣಬೇಕೆಂಬ ಆಸೆ ಅವರಿಗೆ ಉಂಟಾಗಿದೆ. ಪರಸ್ಪರ ... ಹೋರಾಟಗಳಿಂದ ... ರಾಜಕೀಯ ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ, ಸಂಸ್ಥಾನಾಧೀಶರನ್ನು ಸಮಜಾಯಿಸಿ ರಾಜಿಯಿಂದ ... ರಾಜಕೀಯ ಸುಧಾರಣೆಗಳನ್ನು ಪಡೆಯುವುದಾದರೆ ... ಸರದಾರ ಪಟೇಲರು ಒಂದು ಭಾಷಣದಲ್ಲಿ ಹೇಳಿದ್ದಾರೆ. ಇದೇ ನೀತಿಯನ್ನನುಸರಿಸಿ ಮಹಾತ್ಮರೂ ... ಅಲ್ಲಿಯ ರೆಸಿಡೆಂಟ ಗಿಬ್ಸನರೊಡನೆಯೂ ... ನಡೆಸಿದ್ದಾರೆ. ... ಸಂಧಾನ ಯೋಜನೆಗಳನ್ನು ಮುಂದಿಟ್ಟಿದ್ದಾರೆ. ... ವಿದ್ಯಮಾನವಾಗುತ್ತದೆ. ... ತಮ್ಮ ಶಕ್ತಿಯನ್ನು ... ಯೋಗಿಸುತ್ತಿರುವರು.

ವೀರವಲ್ಲರೊಡನೆ ಭೆಟ್ಟಿ

... ವಲ್ಲರೇ ಕಾರಣ ಪುರುಷರೆಂದು ಹೇಳುವುದಾದರೂ ಮಹಾತ್ಮಾಜಿಯವರು ಅವರನ್ನು ಪುನಃ ಭೆಟ್ಟಿಯಾದರು. ರಾಜಕೀಯ ಸುಧಾರಣಾ ಸಮಿತಿಯ ರಚನೆಗೆ ಸಂಬಂಧಪಟ್ಟ ಬೇರೆ ಬೇರೆ ಯೋಜನೆಗಳ ಸಮಾಲೋಚನೆಯಾಯಿತು. ಠಾಕೋರ ಸಾಹೇಬರೇ ಸುಧಾರಣಾ ಸಮಿತಿಯನ್ನು ರಚಿಸಿ, ಅದು ದಶಂಬರ ೨೬ನೇ ತಾರೀಕಿನ ಪ್ರಕಟಣೆಯಂತೆ ಸುಧಾರಣಾ ಮಸೂದೆಯನ್ನು ತಯ್ಯಾರಿಸಬೇಕು. ಪರಿಷತ್ತಿನ ಸದಸ್ಯರು ಪ್ರತ್ಯೇಕವಾಗಿ ತಮ್ಮ ಮಸೂದೆಯನ್ನು ತಯಾರಿಸುವರು. ಅದಲ್ಲವಾದರೆ ಸರದಾರ ಪಟೇಲರು ಒಂದು ಪ್ರತ್ಯೇಕ ಮಸೂದೆಯನ್ನು ತಯಾರಿಸುವರು. ಸುಧಾರಣಾ ಸಮಿತಿಯ ಮತ್ತು ಠಾಕೋರ ಸಾಹೇಬರು ಸಮ್ಮತಿಸುವ ಪರಿಷತ್ತಿನ ಅಥವಾ ಪಟೇಲರ ಮಸೂದೆಗಳಲ್ಲಿ ಚರ್ಚಾಸ್ಪದ ವಿಷಯಗಳಿದ್ದರೆ ಅವುಗಳನ್ನು ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶರು ಮಧ್ಯಸ್ಥಿಕೆಯಿಂದ ಇತ್ಯರ್ಥಗೊಳಿಸಬೇಕು ಎಂಬುದು ಮಹಾತ್ಮರ ಸೂಚನೆಯಾಗಿದೆ. ಆದರೆ ವಿವಾದಾಸ್ಪದ ಸಂಗತಿಗಳನ್ನು ಫೆಡರಲ್ ಕೋರ್ಟಿನ ಚೀಫ್ ಜಸ್ಟೀಸರ ತೀರ್ಮಾನಕ್ಕೆ ಬಿಡಲು ಠಾಕೋರರು ಒಪ್ಪುವುದಿಲ್ಲ.

ಯೂಸಫ ಮೇಹರಾಲಿಯವರ ಸಂದರ್ಶನ

... ಪರಿಷತ್ತಿನ ... ಮಹಾತ್ಮಾ ಗಾಂಧಿಯವರನ್ನು ... ದರು.

ವೈಸರಾಯರ ಪ್ರವೇಶವಾಗಬೇಕು

... ರಾಜಕೀಯ ... ಮಹಾತ್ಮಾ ಗಾಂಧಿಯವರು ... ಪ್ರಯತ್ನಗಳನ್ನು ಮಾಡುತ್ತಿದ್ದರೂ, ದರ್ಭಾರ ವೀರವಲ್ಲ ... ಠಾಕೋರರ ... ವ್ಯರ್ಥವಾಗುತ್ತಿವೆ ... ವೈಸರಾಯರು ... ಪ್ರವೇಶಮಾಡಿ, ಈ ವಿಷಯವನ್ನು ತೀರ್ಮಾನಿಸಬೇಕೆಂದು ಶ್ರೀ ಮಹಾದೇವ ದೇಸಾಯಿಯವರು ಹಿಂದುಸ್ಥಾನ ಟೈಮ್ಸ್ ಪತ್ರಿಕೆಗೆ ಲೇಖನ ಬರೆದಿದ್ದಾರೆ.

ಜಾಹೀರಾತುಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸಾಧನವೆನಿಸಿಕೊಂಡಿರುವುದು
ಪ್ರತಿಫಲ ಬರುವಂತೆ ಸಾಧಿಸುವುದು.

ಮುಸಲೋನಿಯ ಮುಂದಿನ ಬೇಟೆ ಯಾವುದು?

ಜಗತ್ತಿನಲ್ಲಿ ಫೆಸಿಂಜನ ಪ್ರಭಾವವು ಬೆಳೆಯುತ್ತಾ ಇದೆ. ಒಂದು ಕಡೆ ಹಿಟ್ಲರನು ಆಸ್ಟ್ರಿಯಾ, ಚೆಕೊಸ್ಲೊವಾಕಿಯಾ, ಮೆಮಲ್ ಪ್ರಾಂತಗಳನ್ನು ಕೊಳ್ಳೆಹೊಡೆಯಲು ಇತ್ತ ಮುಸಲೋನಿಯು ಸುಮ್ಮನಿರದೆ ಎಬಿಸಿನಿಯಾ ಆಲ್ಬೇನಿಯಾಗಳನ್ನು ಸ್ವಾಧೀನಪಡಿಸಿ ಸ್ಪೈಯಿನಿನ ಮೇಲೆ ತನ್ನ ಪ್ರಭಾವವನ್ನು ಬೀರಿರುವನು. (ಫ್ರಾಂಕೋ ಜಯವೆಂದರೆ ಇಟಲಿಯ ಜಯವೇಸರಿ) ಈ ಪ್ರಕಾರವಾಗಿ ಯೂರೋಪಿನ ಡಿಕ್ಟೇಟರರು ತಮ್ಮ ಅಮಾನುಷ ಕೃತ್ಯಗಳನ್ನು ಮುಂದರಿಸುತ್ತಲೇ ಇರುವರು. ಹಿಟ್ಲರನ ಮುಂದಿನ ಭೇಟಿಯು ಪೋಲೆಂಡೆಂಬುದು ನಿರ್ವಿವಾದವಾಗಿರುವಾಗ ಮುಸಲೋನಿಯ ಮುಂದಿನ ಭೇಟಿ ಯಾವುದು?

ಉತ್ತರ ಆಫ್ರಿಕದ ಮೇಲೆ ಕಣ್ಣು

ನಿರ್ವಿವಾದವಾಗಿ ಹೇಳುವುದಾದರೆ ಫ್ರೆಂಚ ಉತ್ತರ ಆಫ್ರಿಕ ಮೇಲೆ ಮುಸಲೋನಿಯ ಕಣ್ಣು ಬಿದ್ದಿರುವುದು. ಮುಸಲೋನಿಯು ಉತ್ತರ ಆಫ್ರಿಕ ಮೇಲೆ ದಂಡೆತ್ತಿ ಹೋಗುವುದಾದರೆ ಖಂಡಿತವಾಗಿಯೂ ಹಿಟ್ಲರನು ಅವನಿಗೆ ಸಹಾಯ ಮಾಡದಿರನು. ಹಿಟ್ಲರನು ಇಟಲಿಗೆ ಉತ್ತರ ಆಫ್ರಿಕದಲ್ಲಿಯೂ ಮೆಡಿಟರೇನಿಯನಿನಲ್ಲಿಯೂ ಸಹಾಯವಮಾಡುವೆನೆಂದು ಅಭಯವಿತ್ತಿರುವನು. ಈ ಅಭಯದಿಂದಾಗಿ ಇಟಲಿಯು ಉತ್ತರ ಆಫ್ರಿಕದ ಮೇಲೆ ದಂಡೆತ್ತಿ ಹೋಗುವ ಈ ಕಾರ್ಯದಲ್ಲಿ ಇನ್ನೂ ಉತ್ತೇಜಿತವಾಗಿರುವದು. ಪಾಯಶಃ ಮುಸಲೋನಿಯು ಬೇಗನೇ ಉತ್ತರ ಆಫ್ರಿಕದ ಮೇಲೆ ದಂಡೆತ್ತಬಹುದು.

ಒಂದೊಮ್ಮೆ ಇಟಲಿಯನ್ ಪಾರ್ಲಿಮೆಂಟಿನಲ್ಲಿ ಕೆಲವು ಮುತ್ಸದ್ದಿಗಳು 'ಟ್ಯುನಿಸ್ ಕೊರ್ಸಿಕಾ' ಎಂದು ಬೊಬ್ಬಿಡಲು, ಇದೀ ಜಗತ್ತು ಬೇಗನೆ ಮಹಾಪ್ರಳಯವೊಂದು ಸಂಭವಿಸಲಿರುವುದೆಂದು ಭಾವಿಸಿದರು. [illegible] ಇಟಲಿಯು ಬ್ರಿಟಿಷ ಮತ್ತು ಫ್ರೆಂಚರಿಗೆ ಸಂಬಂಧವಿರದ ಸಣ್ಣ ಸಣ್ಣ ರಾಷ್ಟ್ರಗಳನ್ನು ಕಬಳಿಸುತ್ತಾ ಬಂದಲ್ಲಿ ಯುದ್ಧವಾಗದೆಂಬುದು ನಿಶ್ಚಯ. ಆದರೆ ಬ್ರಿಟಿಷ ಮತ್ತು ಫ್ರೆಂಚರ ಮೆಡಿಟರೇನಿಯದಲ್ಲಿ ಪ್ರಧಾನ ನೆಲೆಯಾದ ಟ್ಯುನಿಸ್ ಮತ್ತು ಕೊರ್ಸಿಕಾಗಳ ಮೇಲೆ ಇಟಲಿಯು ಧಾಳಿ ಇಟ್ಟಲ್ಲಿ ಖಂಡಿತವಾಗಿಯೂ ಯುದ್ಧ ಸಂಭವಿಸುವುದು. ಈ ಯುದ್ಧದ ಭಯದಿಂದಾಗಿಯೇ ಮುಸಲೋನಿಯು ಹೆಜ್ಜೆಗಳನ್ನು ಹಿಂತೆಗೆದು ತಕ್ಕಸಮಯವನ್ನು ಕಾಯುತ್ತಿರುವನು. ಆದರೆ ಎಷ್ಟುಸಮಯ ಹೀಗೆ ಮುಸಲೋನಿಯು ತನ್ನ ಆಶೆಗಳನ್ನು ಹತೋಟಿಯಲ್ಲಿ ಕಾಯುತ್ತಿರುವನು? ಈ ಪ್ರಶ್ನೆಯನ್ನು ಉದಹರಿಸಲು ಮೆಡಿಟರೇನಿಯದಲ್ಲಿ ಇಟಲಿಯ ಮತ್ತು ಇತರ ಜನಾಂಗದ ಆಶೆ ಪ್ರತ್ಯಾಶೆಗಳನ್ನು ಅವಲೋಕಿಸಿದಲ್ಲಿ ತಿಳಿಯುವುದು.

ಮೆಡಿಟರೇನಿಯನ್

ಬ್ರಿಟಿಷರಿಗೆ ಇಂಗ್ಲಿಷ್ ಕಾಲುವೆಯು ಇದ್ದಂತೆ ಇಟಲಿಗೆ ಮೆಡಿಟರೇನಿಯನು. ಇಟಲಿಯು ಎದುರಾಗಿ ಮೆಡಿಟರೇನಿಯವನ್ನು ಮುಚ್ಚಿದಲ್ಲಿ ದುರ್ಬಲವಾಗುತ್ತದೆ. ಅದ ಕಾರಣ ಇಟಲಿಯು ಮೆಡಿಟರೇನಿಯವನ್ನು ಹೊಂದಿಕೊಂಡಿರುತ್ತದೆ. ಅದಕಾರಣದಿಂದಲೇ ಮುಸಲೋನಿಯು ಅದಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿರುವನು. ಇಟಲಿಯ ಎದುರಾಗಿ ಮೆಡಿಟರೇನಿಯವನ್ನು ಮುಚ್ಚಿದಲ್ಲಿ ಅದು ಆಫ್ರಿಕದಲ್ಲಿರುವ ತನ್ನ ವಸಾಹತುಗಳೊಡನೆ ಅದಕ್ಕೆ ಸಂಬಂಧವನ್ನಿಟ್ಟುಕೊಳ್ಳುವುದು ಅಸಾಧ್ಯ. ಇಟಲಿಯು ಮೆಡಿಟರೇನಿಯವನ್ನು ವಶಪಡಿಸಿ ಬ್ರಿಟಿಷ ಮತ್ತು ಫ್ರೆಂಚರ ಎದುರಾಗಿ ಅದನ್ನು ಮುಚ್ಚಿದಲ್ಲಿ ಬ್ರಿಟನ್ನಿಗೆ ಇಂಡಿಯಾ ಮತ್ತು ಇತರ ಪೂರ್ವ ದೇಶದೊಡನೆ ವ್ಯಾಪಾರ ನಡೆಸುವುದು ಕಷ್ಟವಲ್ಲದೇ ಅದು ಇಂಡಿಯದ ಆಶೆಯನ್ನು ತೊರೆಯಬೇಕಾಗುವ ಪ್ರಸಂಗವು ಬಾರದಿರದು. ಫ್ರಾನ್ಸು ಕೂಡಾ ಆಫ್ರಿಕದಲ್ಲಿ ತನಗಿರುವ ವಿಶಾಲವಾದ ವಸಾಹತುಗಳನ್ನು ತೊರೆಯಬೇಕಾದೀತು.

ಜಿಬ್ರಾಲ್ಟರು ತನ್ನ ವಶವಿರುವುದರಿಂದ ಮೆಡಿಟರೇನಿಯನಿನ ಸಿಂಹದ್ವಾರವು ತನ್ನ ವಶವಿರುವುದೆಂದು ಬ್ರಿಟನು ಜಂಭಕೊಚ್ಚಿಕೊಳ್ಳುತ್ತಿದೆ. ಸರಿಯಾಗಿ ನೋಡಿದಲ್ಲಿ ಮೆಡಿಟರೇನಿಯನು ಇಟಲಿಯನ್ ದ್ವೀಪವಾದ ಸಿಸಿಲಿಯ ಬಳಿ ಇಬ್ಭಾಗವಾಗಿ ವಿಂಗಡಿಸಲ್ಪಟ್ಟಿದೆ. ಒಂದು ಪಶ್ಚಿಮದ ಭಾಗ, ಇನ್ನೊಂದು ಪೂರ್ವ. ಆದ ಕಾರಣ ಜಿಬ್ರಾಲ್ಟರು ಕೇವಲ ಪಶ್ಚಿಮ ಭಾಗವನ್ನು ಸೇರುವ ಒಂದು ಹೆಬ್ಬಾಗಿಲಾಗಿರುತ್ತದೆ. ಆದರೂ ಕೂಡಾ ಜಿಬ್ರಾಲ್ಟರಿನ ಎದುರಿಗೆ ಉತ್ತರ ಆಫ್ರಿಕದ ಸ್ಪೆನಿಷ್ ಸರಕಾರದ ಆಧೀನವಿರುವ "ಕ್ಯುಟಾ"ವು ಕೂಡಾ ಅಷ್ಟೇ ಮಹತ್ವವುಳ್ಳದ್ದಾಗಿರುತ್ತದೆ. ಕ್ಯುಟವು ಸ್ಪೈನಿನ ಕೈಕೆಳಗಿರುವ ದೇಶವೆಂದರೆ ಅದು ಇಟಲಿಯವರ ಆಧೀನದಲ್ಲಿದ್ದಂತೆಯೇ ಸರಿ. ಆದುದರಿಂದ ಮೆಡಿಟರೇನಿಯವನ್ನು ಹೋಗುವ ಹೆಬ್ಬಾಗಿಲುಗಳು ಬ್ರಿಟಿಷ್ ಇಟಲಿ ಸ್ಪೈನ್ (ಪರೋಕ್ಷವಾಗಿ ಇಟಲಿ) ಸರಕಾರದ ಆಧೀನದಲ್ಲಿರುತ್ತವೆ. ಆದರೆ ಇವುಗಳಲ್ಲಿ ಇಟಲಿಯ ಆಧೀನವಿರುವ ಹೆಬ್ಬಾಗಿಲೇ ಮಹತ್ವದ್ದಾಗಿರುತ್ತದೆ. ಇಟಲಿಯ ಹೆಬ್ಬಾಗಿಲಿನ ಎದುರಿಗಿರುವ ಟ್ಯುನಿಸನ್ನು ಅದು ವಶಪಡಿಸಿಕೊಂಡಲ್ಲಿ ಅದು ಖಂಡಿತವಾಗಿ ಮೆಡಿಟರೇನಿಯವನ್ನು ಫ್ರಾನ್ಸ್ ಮತ್ತು ಬ್ರಿಟನಿನ ಎದುರಾಗಿ ಮುಚ್ಚುವುದು. ಅದೇ ಕಾರಣವೇ ಟ್ಯುನಿಸಿಗಾಗಿ ಇಟಲಿಯ [illegible] ವನ್ನು ಹೂಡಲು ಪ್ರಾರಂಭಿಸಿ[illegible]. ಫ್ರಾನ್ಸು ಟ್ಯುನಿಸನ್ನು ಇಟಲಿಗೆ ಬಿಟ್ಟುಕೊಟ್ಟಲ್ಲಿ ಬ್ರಿಟಿಷರ ವಶದಲ್ಲಿರುವ ಮಾಲ್ಟಾ ದ್ವೀಪವು ಸ್ವಲ್ಪ ಕಾಲದೊಳಗಾಗಿಯೇ ಇಟಲಿಯದಾಗುವುದು. ಇದರಿಂದಾಗಿ ಯುದ್ಧಸಮಯದಲ್ಲಿ ಬ್ರಿಟಿಷ ಮತ್ತು ಫ್ರೆಂಚರ ಒಂದೂ ಹಡಗೂ ಮೆಡಿಟರೇನಿಯನನ್ನು ಪ್ರವೇಶಿಸದಂತೆ ಇಟಲಿಯು ಮಾಡ[illegible]. [illegible] ಬ್ರಿಟಿಷರ [illegible] ಹಡಗುಗಳು ಆಫ್ರಿಕದ ಸುತ್ತ ತಿರುಗಿ ಹೋಗಬೇಕಾಗುವುದು. ಅದಕಾರಣ ಟ್ಯುನಿಸ್ ಫ್ರೆಂಚ ವಶದಲ್ಲಿದ್ದರೆ ಮಾತ್ರ ಮೆಡಿಟರೇನಿಯದಲ್ಲಿ ಬ್ರಿಟಿಷರ ಮಹತ್ವವು ಉಳಿಯುವುದು. ಇದರಿಂದಾಗಿ ಟ್ಯುನಿಸನ್ನು ವಶಪಡಿಸುವ ಮುಸಲೋನಿಯ ಎದುರಾಗಿ ಬ್ರಿಟನ್ನು ಫ್ರಾನ್ಸನ್ನು ಸಹಾಯ ಮಾಡಲೇ ಬೇಕಾಗುವುದು.

ಫ್ರಾನ್ಸಿನ ಮಹತ್ವ

ಮೆಡಿಟರೇನಿಯನು ಫ್ರಾನ್ಸಿಗೆ ಬ್ರಿಟನ್ನಿಗಿಂತಲೂ ಮಹತ್ವದ್ದಾಗಿರುತ್ತದೆ. ಆಫ್ರಿಕದಲ್ಲಿ ಫ್ರಾನ್ಸಿಗೆ ವಿಶಾಲವಾದ ವಸಾಹತುಗಳಿರುತ್ತವೆ. ಈ ವಸಾಹತುಗಳಲ್ಲಿ ಫ್ರಾನ್ಸು ಅಸಂಖ್ಯಾತ ಧನವನ್ನು ವೆಚ್ಚಮಾಡಿರುತ್ತದೆ. ಈ ವಸಾಹತುಗಳನ್ನು ಪರದೇಶಗಳ ಧಾಳಿಯಿಂದ ರಕ್ಷಿಸಲು ಟ್ಯುನಿಸದಲ್ಲಿರುವ ಬಿಜೆರ್ಟಾ ಮತ್ತು ಕೊರ್ಸಿಕಾಗಳೇ ಫ್ರಾನ್ಸಿನ ಎರಡು ಮುಖ್ಯ ಸೈನ್ಯ ನಿಲ್ದಾಣಗಳಾಗಿರುತ್ತವೆ. ಈ ವಸಾಹತುಗಳಿಂದ ಫ್ರಾನ್ಸಿಗೆ [illegible] ಕೂಡ [illegible] ವಸಾಹತುಗಳ [illegible] ಫ್ರಾನ್ಸು ಟ್ಯುನಿಸದಿಂದ ಹೊರಡಿಸುವ ಇಟಲಿಯ [illegible] ಕಟ್ಟಿಸಿದೆ! [illegible]

ಎಬಿಸಿನಿಯಾ

[illegible] ಜಯಿಸಿದ [illegible] ಪೂರ್ವ ಮೆಡಿಟರೇನಿಯದಲ್ಲಿ ಇಟಲಿಯ [illegible]. ಅದಲ್ಲದೆ ಈಗಾಗಲೇ ಇಟಲಿ [illegible] ಲಿಬ್ಯದಲ್ಲಿ [illegible] ಸೈನ್ಯ ನಿಲ್ದಾಣವನ್ನು ಸ್ಥಾಪಿಸಿರುತ್ತದೆ. ಬ್ರಿಟಿಷರ ಆಧೀನವಿದ್ದು ಮೆಡಿಟರೇನಿಯನಿನ ಹೆಬ್ಬಾಗಿಲುಗಳಲ್ಲೊಂದಾದ ಇಜಿಪ್ತದ ಸುಯೇಜ ಕಾಲುವೆಯು ಒಂದು ಕಡೆ ಲಿಬ್ಯದ ಇಟಲಿಯನ್ ಸೈನ್ಯ ನಿಲ್ದಾಣವೂ ಇನ್ನೊಂದು ಕಡೆ ಹೊಸತಾಗಿ ವಶಪಡಿಸಿಕೊಂಡ ಎಬಿಸಿನಿಯವು ಇರುತ್ತದೆ. ಸುಯೇಜ ಕಾಲುವೆಯು ಇಕ್ಕಡೆಗಳಲ್ಲಿದ್ದ ಇಟಲಿಯ ಸೈನ್ಯವನ್ನು ಇಜಿಪ್ತದ ಸೈನ್ಯಕ್ಕೆ ಹೋಲಿಸಿದಲ್ಲಿ ಇಟಲಿಯ ಸೈನ್ಯವು ಅಧಿಕಬಲವಾಗಿರುವುದು. ಇದರಿಂದ ಯುದ್ಧವುಂಟಾದಲ್ಲಿ ಸುಯೇಜ್ ಕಾಲುವೆಯು ಇಟಲಿಯ ವಶವಾಗುವುದು.

ಅದಕಾರಣ ಇಟಲಿಗೆ ಟ್ಯುನಿಸದೊಂದು ದೊರೆತಲ್ಲಿ ಮೆಡಿಟರೇನಿಯವು ಅದರ ವಶವಾದಂತೆಯೇ ಸರಿ. [illegible] ಇಟಲಿಯನ್ನು ತಡೆಯಲು ಯಾರಿಂದಲೂ ಸಾಧ್ಯವಾಗಲಿಕ್ಕಿಲ್ಲ. ಈಗಲೇ ಇಟಲಿಯ ಮೆಡಿಟರೇನಿಯದ ತನ್ನ ದ್ವೀಪಗಳಲ್ಲಿ ಮತ್ತು ಉತ್ತರ ಆಫ್ರಿಕದ ಕರಾವಳಿಗಳಲ್ಲೆಲ್ಲ ಸೈನ್ಯದ ನಿಲ್ದಾಣವನ್ನು ಮಾಡಿದೆ. ಅದರಿಂದ ಈಗಲಾದರೂ [illegible] ಮತ್ತು ಬ್ರಿಟನ್ ಇಟಲಿಯೊಡನೆ [illegible] [illegible] ಟ್ಯುನಿಸನ್ನು ಇಟಲಿಗೆ ಬಿಟ್ಟು[illegible] ಫ್ರಾನ್ಸು ತನ್ನ ಉತ್ತರ ಆಫ್ರಿಕದ ವಸಾಹತುಗಳನ್ನು ಬಿಟ್ಟ [illegible] ಇಂಡಿಯಾ [illegible] ಪೂರ್ವ [illegible] ತನ್ನ [illegible] [illegible] ಫ್ರಾನ್ಸು [illegible] ಇಟಲಿಯ [illegible] ತಡೆಯ[illegible]

ದ್ವಿತೀಯ ರೋಮ ಸಾಮ್ರಾಜ್ಯದ ಸ್ವಪ್ನ [illegible] ಉತ್ತರ ಆಫ್ರಿಕದಲ್ಲಿ [illegible] ಟ್ಯುನಿಸನ್ನು ವಶಪಡಿ[illegible] ಮುಸಲೋನಿಯು [illegible] ದ್ವಿತೀಯ ರೋಮ ಸಾಮ್ರಾಜ್ಯ [illegible] ಅಷ್ಟು ಮಹತ್ವವನ್ನು [illegible] ಒಂದು [illegible] ವಶಪಡಿಸಿಕೊಂಡ [illegible] ಬಿಜೆರ್ಟಾ [illegible] ಕನಸಿನಲ್ಲಿ ಈತನು ಮೆಡಿಟರೇನಿಯನ್ [illegible] ಉತ್ತರ ಆಫ್ರಿಕದ [illegible]

ಅದರಿಂದ ಇಟಲಿಯ ಮುಂದಿನ ಭೇಟಿ [illegible] ಕೊರ್ಸಿಕಾ ಮತ್ತು ಟ್ಯುನಿಸು ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಆದರೆ ಅವನು ತಕ್ಕ ಸಮಯವನ್ನು ಎದುರು ಕಾಯುತ್ತಿರುವನು. [illegible] ಇದರಿಂದ ಮಹಾಯುದ್ಧವು ಸಂಭವಿಸಿ ಯೂರೋಪಿನ ಬಲಾಬಲಗಳ ಪರೀಕ್ಷೆಯಾಗುವುದು.

ಭೇದೋಪಾಯ

ಇಷ್ಟರವರೆಗೆ ಇಟಲಿಯು ಫ್ರಾನ್ಸಿನ [illegible] ವಸಾಹತುಗಳಲ್ಲಿದ್ದ ಅರಬರ [illegible] ಇಟಲಿಯನರ ಆಳುವಿಕೆಗಿಂತಲೂ ಫ್ರೆಂಚರ ಆಳುವಿಕೆಯು ಎಷ್ಟೋ ರೀತಿಯಲ್ಲಿ ಉತ್ತಮವಾಗಿ [illegible] ವಿದೇಶಿಗಳಾದ ಅರಬರು ಮುಸಲೋನಿಯ ಮಾತಿಗೆ [illegible] ಈ ರೀತಿ ಉತ್ತರ ಆಫ್ರಿಕದಲ್ಲಿಯ ಫ್ರಾನ್ಸಿನ ವಸಾಹತುಗಳಲ್ಲಿ ಬಿಕ್ಕಟ್ಟನ್ನುಂಟುಮಾಡುವ ಇಟಲಿಯ ಉಪಾಯವು ನಿಷ್ಪ್ರಯೋಜಕವಾಯಿತು. ಅದಕಾರಣ ಉತ್ತಮವಾದ ಸೈನ್ಯ ಸರಂಜಾಮುಗಳಿಂದ ಕೂಡಿದ ಫ್ರಾನ್ಸಿನ ವಸಾಹತುಗಳ ಮೇಲೆ ಧಕ್ಕನೆ ಧಾಳಿ ಇಡಲು ಇಟಲಿಯು ಹೆದರುತ್ತದೆ. ಆದರೆ ಇಟಲಿಯು ಸುಮ್ಮನಿರದೆ, ತಕ್ಕ ಸಮಯವನ್ನು ನೋಡಿ ತಾನು ಸಾಕಷ್ಟು ಬಲಿಷ್ಠನಾದ ಕೂಡಲೆ ತನ್ನ ಮುಂದಿನ ಭೇಟಿಯನ್ನು ಹೊಡೆಯಬಹುದೆಂಬುದು [illegible]



೧೧ ಶ್ಯಾನುಭಾಗ ಶಂಕರರಾಯರು

ಶಂಕರರಾಯರ ಹುಟ್ಟು ಊರು ಹಟ್ಟಿಕುದುರು. ಅವರ ಕುಟುಂಬದವರು ಈಗ ಅಲ್ಲಿ ಯಾರು ಇಲ್ಲ. ತಮ್ಮಂದಿರು ಮೂವರು ಮುಂಬಯಿಯಲ್ಲಿ ಇದ್ದಾರೆ. ಶಂಕರರಾಯರ ಒತ್ತಿನವನು ಆರ್. ಎಸ್. ಹಟ್ಟಿಕುದುರು, ಅನಂತರ ಬಿ. ಎಸ್. ಹಟ್ಟಿಕುದುರು, ಆಬಳಿಕ ಟಿ. ಎಸ್. ಹಟ್ಟಿಕುದುರು. ಹಟ್ಟಿಕುದುರು ಶಂಕರರಾಯರ ಹಿರೀ ಮಗಂದಿರಾದ ಇವರು ಬರಿ ಶಂಕರರಾಯರಾಗಿಯೇ ಉಳಿದಿದ್ದಾರೆ. ಅವರಿಗೆ ನಮ್ಮ ಗ್ರಾಮದ ಮಾಗಣೆ ಶ್ಯಾನುಭೋಗಿ ಇದೆ. ಶಂಕರರಾಯರ ಮನೆತನವೇ ಜನ್ಮಸ್ಥಳಗಳು ಹೇಳುವ ಹಾಗೆ 'ಶಣವಂಟೆ''. ಅವರಿಗಿದ್ದ ಹಟ್ಟಿಕುದುರು ಗ್ರಾಮದ ಶ್ಯಾನುಭೋಗಿ ಎಂದೋ ಹೋಯಿತು. ಈಗ ಅಲ್ಲಿ ಅವರ ಮನೆಯೂ ಇಲ್ಲ. ಶಂಕರರಾಯರಿಗೆ ತಮ್ಮ ಹಿರಿಯರಿಂದ ಬಂದ ಶ್ಯಾನುಭೋಗಿ ಕಸುಬಿನ ಮೇಲೆ ತುಂಬ ಅಭಿಮಾನವಾದುದರಿಂದ, ಆ ವೃತ್ತಿ ಬಿಡಬಾರದೆಂದು ಹೇಗೋ ಹೇಗೋ ಸಾಹಸದಿಂದ, ನಮ್ಮೂರಿನ ಶ್ಯಾನುಭೋಗಿ ಹಕ್ಕನ್ನು ಕ್ರಯಕ್ಕೆ ಪಡೆದುಕೊಂಡರು. ಸುಮ್ಮನೆ ಅಲ್ಲ—ಅವರೇ ಅನ್ನುವಂತೆ ನಗದಿಂದಲೂ ಐನೂರು ರೂಪಾಯಿ ಕೊಟ್ಟು, ದೇವಪ್ಪಯ್ಯನವರ ಮಗನಿಂದ ಅವರ ಹಕ್ಕನ್ನು ಬರೆಯಿಸಿಕೊಂಡರು. ಆದು ದೇವಪ್ಪಯ್ಯನವರ ಮಗ, ೫೦೦ ರೂಪಾಯಿ ಎಣಿಸಿದೊಡನೆ ಬಾಯಿಬಿಟ್ಟು ಹಕ್ಕನ್ನು ಮಾರಿಯೂ ಬಿಟ್ಟನು. ಹಣತೆಗೆದುಕೊಂಡ ಮೂರ ತಿಂಗಳಲ್ಲಿ ದಕ್ಕಿಸಿ ಮಣ್ಣಗೂ ಸಿಸಿಯ ಆಯಿತು.

ಶಂಕರರಾಯರಿಗೆ ಹಾಗೂ ಹೀಗೂ ಜೀವನಕ್ಕೆ ಬೇಕಾಗುವಷ್ಟು ದಾರಿಯು ಸಿಕ್ಕಿತು. ಕುಂದಾಪುರದಲ್ಲಿ ಅವರ ರಾವುಟಿಕಾಣಿ ಇದ್ದರೆ ಸಹಜವಾಗಿಯೂ ಅವರ ಮನೆಯು ಪೇಟೆಗೆ ಹತ್ತಿರ ಹಿಡಿಯುವುದಿಲ್ಲ. ಎಲ್ಲರೂ ಬಿಟ್ಟ ಕಡೆಗಳಲ್ಲಿರುವವರು. ಅವರಿಗೆ ಹಟ್ಟಿಕುದುರಿನಲ್ಲಿ ಮನೆಯಿದ್ದಾಗಲೂ ಸಹ, ತಮ್ಮಂದಿರು ಮುಂಬಯಿಯಿಂದ ಬಂದರೆ, ಒಂದೇ ಒಂದು ದಿವಸ ಅಲ್ಲಿ ಕಳೆಯುವುದು ಸಾಧ್ಯವಾಗುತ್ತಿದ್ದಿಲ್ಲ. ಅದಕ್ಕೆಂದೇ ಶ್ಯಾನುಭೋಗಿ ಇರುವ ಗ್ರಾಮ ಹಳ್ಳಿಯಾದುದರಿಂದ ಕುಂದಾಪುರದಲ್ಲಿ ಮನೆಹೂಡಿ ಬಿಟ್ಟಿದ್ದಾರೆ. ಆ ಮೇಲೆ ಅವರ ಹೇಳುವುದುಂಟು:

'ಒಬ್ಬ ತಮ್ಮನಿಗೆ ತಿಂಗಳ ರೂ. ೨೦೦ ಇದೆ. ಇನ್ನೊಬ್ಬನಿಗೆ ೩೦೦, ಮತ್ತೊಬ್ಬನಿಗೆ ಥಾಮಸ್ ಕುಕ್ಕಿನಲ್ಲಿ ನೂರೈವತ್ತು. ದೇವರ ದಯೆಯಿಂದ ಏನೂ ಕಡಿಮೆಯಿಲ್ಲ. ನಮ್ಮ ಅಮ್ಮನೂ ಮುಂಬಯಿಯಲ್ಲಿದ್ದಾಳೆ. ತಮ್ಮಂದಿರಿಂದ ವಾರಕ್ಕೆ ಆರು ಕಾಗದ ಬರುತ್ತವೆ— ಬಾ, ಬಾ ನಮ್ಮ ಜತೆಯಲ್ಲಿರು ಎಂದು. ನಿನ್ನೊಬ್ಬನ ಸಂಸಾರ ನೋಡಿಕೊಳ್ಳುವ ಶಕ್ತಿಯಿಲ್ಲವೇ ನಮಗೆ' ಎನ್ನುತ್ತಾರೆ''

ಹೀಗಾಗಿ ಸಮಯ ಸಿಕ್ಕಿದರೂ ಸಾಂಟಾಕ್ರೂಜಿಗೆ ಹೋಗಿ ಸ್ವಲ್ಪ ದಿವಸ ಇರಬೇಕು ಎಂಬುದು ಶಂಕರರಾಯರ ಹಂಬಲ. ಆದರೆ ಅಲ್ಲಿಯ ತನಕ ಅವರು ಮುಂಬಯಿಯಲ್ಲಿದ್ದು ಏನು ಮಾಡುವುದು. ತಮ್ಮಂದಿರ ಹಾಗೆ ಇವರಿಗೆ ಹೆಚ್ಚಿನ ಇಂಗ್ಲಿಷ್ ಬಾರದು. ಏನೋ ಗ್ರಹಚಾರ ಕೆಟ್ಟು ಸೆಕೆಂಡ್ ಫಾರ್ಮಿನಲ್ಲಿ ಶಾಲೆ ಬಿಟ್ಟರು. ತಮ್ಮಂದಿರ ಮಾತ್ರ ಮುಂದೆ ಮುಂದೆ ಹೋಗಿ ಒಳ್ಳೆ ಸ್ಥಳಗಳನ್ನು ಸೇರಿಕೊಂಡರು.

ಭವಾನಿ ಶಂಕರರಾಯರಿಗೆ ಮದುವೆಯಾಗಿ ಇಪ್ಪತ್ತು ವರ್ಷವಾಯಿತು. ಎಂಟು ಜನ ಮಕ್ಕಳಿದ್ದಾರೆ. ಸರಿ—ಎರಡೆರಡು ವರ್ಷದ ಅಂತರ. ಹಿರೀ ಹುಡುಗ ಈ ವರ್ಷ ಮೆಟ್ರಿಕ್ಕಿಗೆ ಕುಳಿತಿದ್ದಾನೆ. ಕುಂದಾಪುರದಲ್ಲಿದ್ದರೆ ಶಾಲೆಗೂ ಅನುಕೂಲ. 'ಅಲ್ಲವೆ ಶ್ಯಾನುಭೋಗಿಯಿಂದಲೇ ಅವರ ದಿನ ನಡೆಯುವ ಹಾಗಿಲ್ಲ. ಒಬ್ಬೊಬ್ಬ ತಮ್ಮ ತಿಂಗಳು ಅವರಿಗೆ ಹತ್ತು ಹತ್ತು ರೂಪಾಯಿಯಂತೆ ಕಳುಹಿಸುತ್ತಿದ್ದಾನೆ.

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ. ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿರೂಪಗಳು, ಘಟನೆಯ ರೂಪಗಳು ಘಟನೆಯ ರೀತಿಗಳು, 'ಚಾಂಚ' ಆವರಣ—ಇವೆಲ್ಲ ವಾಸ್ತವವಾದುವು. ಹಳ್ಳಿಯು ನಾವೂನ್ನ ಕೋಟೆ ಕುಂದಾಪುರದೊಳಗಿನ ಒಂದು ಗ್ರಾಮ ಸಮೂಹ, ವ್ಯಕ್ತಿಗಳು, ಜೀವನ ರೀತಿಗಳು ಹಲವು ಅಲ್ಲಿನವು. ಬರಿಯ ಪಾತ್ರಪರಿಚಯಗಳೇ ಈ ಚರಿತ್ರಗಳ ಗುರಿ. ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಅನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡುವುದು ನಾನು ಬರೆದ ಪ್ರಸ್ತಾವನೆಯು ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅವರ ಮುಂದಿರುವ ಪಾತ್ರಗಳು ಇಂಥವು—ಎಂದು ಒದಗಿಸಿಕೊಡುತ್ತೇನೆ. ಇತಿ,

ಶಿವರಾಮ ಕಾರಂತ.

ಶಂಕರರಾಯರು ತಮ್ಮಂದಿರೇ ಕೊಟ್ಟ ಜನವನ್ನು ಅವರಿಟ್ಟಿಲ್ಲ. ಧಾರೇಶ್ವರ ಗಣೇಶಯ್ಯ, ಮುಡೇಶ್ವರ ಮಂಗೇಶಯ್ಯನ ತರ ಮನೆಯಲ್ಲಿ ಬರಿ ಪಂಚೆಯಲ್ಲಿ ಇರುತ್ತಾರೆ. ಕಟ್ಟೆಗಟ್ಟಲೆ ಗ್ರಾಮಕ್ಕೆ ಹೋಗುವಾಗ ಮಾತ್ರ ಕೋಟು ಶರ್ಟು ಇದ್ದರೂ ಅನ್ಯವೆಂತಿಲ್ಲ. ರಾತ್ರಿ ಊಟ ತಮ್ಮಂದಿರು ಬಂದಾಗ ಕೊಟ್ಟ "ಅಣ್ಣ ಘ" ಎಂದು ಕೋಟು ಕೋಟಿನ ಬಟ್ಟೆ ಎನೆದು ಹೋಗುತ್ತಾರೆ. ಆದರೆ ಅವೆಲ್ಲ ಕುಂದಾಪುರ ಪೇಟೆಗೆ ಹೋಗುವಾಗ ಕಾಣಿಸುವಾಗ ಗ್ರಾಮಕ್ಕೆ ತಾಕಿಕೊಂಡ ಹೋದರೆ, ಮನೆಗಾದರೆ ನಾಚಿಕೆಯಾಗಲಿಕ್ಕಿಲ್ಲವೆ? ಶಂಕರರಾಯರ ಕಷ್ಟ, ಮರ್ಜಿ ಹಳೆಯದು. ಊಟದ ಹೊತ್ತಿಗೆ ಪಟೇಲರು ಬಂದ ಮಾವ ತುತ್ತಿಗೆ ಅಕ್ಕಿ ನಮ್ಮದೇ ಕೊಡಿಸಿಯಾಯಿತು ಬರುತ್ತವೆ. ವತ್ತೀಸ, ಏಕೆ? ತರಕಾರಿ ತುಪ್ಪ ಕಟ್ಟಿಗೆ ಇಷ್ಟೇ ಅಲ್ಲವೆ. "ಇನ್ನೆಲ್ಲ ಶ್ಯಾನುಭಾಗರಾದವರ ಕಷ್ಟ ಕೇಳುವುದು ಪೂರೈಸೀತೇ" ಎಂದು ಶಂಕರರಾಯರ ಹೇಳುತ್ತಾರೆ. ಇವತ್ತು "ಹಣ" ತರಕಾರಿ ಇಲ್ಲ ಅಂದರೆ, ಬಗಸೆಯಿಂದ ತಂದು ಕೊಡುವ ಒಕ್ಕಲು ತಲೆಯ ಮೇಲೆ ಹೊತ್ತುಕೊಂಡವರು ಗಳು, ಆದರೆ ಶ್ಯಾನುಭಾಗರ ಮನೆಗೂ ತಂದು ತನ್ನ ಮನೆಗೆ ಮುಟ್ಟಿಸುತ್ತಾರೆ. ಅವರಲ್ಲಿ ಲೆಕ್ಕ ತಪ್ಪಿದ ಆಸಾಮಿಗಳು ತಿಂಗಳ ಒಂದರೆ ಬಿಡಿನ ಅಷ್ಟ ಪವನ ಎಷ್ಟು ಬಂದರೂ, ಅವರ ಮನೆಯ ಗೇರು ಮರದ ಹಣ್ಣನ್ನು ಉಪಕಾರ ತಪ್ಪುವಂತಿಲ್ಲ. ಮಳೆಗಾಲ ಬರುವ ವೇಳೆಗೆ ಹುಳಿಮಾವಿನ ಹಣ್ಣು, ಕಸು ಅಂಥಾದ್ದು ಇಂಥಾದ್ದು ಎಂದು ಒಂದಲ್ಲ ಒಂದು ಬಂದೇ ಬರುತ್ತದೆ—ಗ್ರಾಮದಿಂದ. ಶ್ಯಾನುಭಾಗರು ಎಂದ ಮೇಲೆ ಊರವರಿಗೂ ಹಂಗು ಉಂಟು. ಒಂದಲ್ಲ ಒಂದು ಕೆಲಸ ಅವರಿಂದ ಆಗಬೇಕಲ್ಲವೆ?

ನಾಡದಲ್ಲಿ ಎರಡು ದಿನ ಹಣಕ್ಕೆ ನಮ್ಮ ಅವರ ನಾಲ್ಕು ಗ್ರಾಮದಲ್ಲಿ ಶ್ಯಾನುಭೋಗಿಯ ಬಗ್ಗೆ ತಕರಾರಿಲ್ಲ. ಆದಾಯದ ಕೆಲಸಗಳ ಬಗ್ಗೆ ಶಂಕರರಾಯರ ಒಕ್ಕಲು ಯೆಂದರೆ ಹೀಗೆಯೇ ಎಂದೇ ಲಕ್ಷಣ. ದೇವರು ಮಾರಿಗೆ ಬರೆದ ಹಾಗೆ ಅವರಿಂದ ಜನಗಳ ಅಷ್ಟು ಕೆಲಸ ಶ್ಯಾನುಭಾಗರ ಒಳ್ಳೆತನ ಅತ್ತಿತ್ತ ಅಲೆಯುವಂತಿಲ್ಲ. ಜನ್ಮಸ್ಥಳಗಳ ವಸಾಹತಿನ ಒರವು ಶ್ಯಾನುಭಾಗರ ಒಕ್ಕಲೇ ಮೇಲು ಎನ್ನುತ್ತಾರೆ.

ನಾಗಯ್ಯ ಸೆಟ್ಟಿ ಎಂಬ ಬರಹ ಮಾಡಿಸುವುದರಲ್ಲಿ, ಹೊಸ ಕಂಡಾಯ ಬಗ್ಗೆ ಕೊಡಿಯೆ ಎಂದು ಅವರ ಗಾವು ದೊಡ್ಡದು ಅವರದೇ ಕೇಸು ಒಡೆದು ತಾನು ಒಪ್ಪದಿದ್ದರೆ ಶ್ಯಾನುಭಾಗರ ಅಡಿಯಲ್ಲಿ ಸಿವಿಲ್ ಆಯಿತು—ಇದು ಅಲ್ಲ, ಅಲ್ಲ ನೋಡಿ, ತಿಂಗಳ ಅದಕ್ಕೆ ತಗಲಿದ ಖರ್ಚು ಶಂಕರರಾಯರೆ ಕೊಡಿ ಎನ್ನುತ್ತಾರೆ. ಅವರಿಗೂ ಒಡವೆ ನಗದು ಹಣ ತೀರ ಕಷ್ಟ ಶಂಕರರಾಯರ ಹತ್ತಿರದಲ್ಲೇ ಬರುವುದು.

ಶಂಕರರಾಯರ ವಿಚಾರದಲ್ಲಿ ಊರವರೆಲ್ಲರಿಗೂ ಅಭಿಮಾನವೇ. ಎಲ್ಲರೂ ಎಂದರೆ, "ಭರಾಡಿಸ" ಜನರೆಲ್ಲರೂ ಎಂದು. ಅವರ ಎದುರಿನ 'ನಂಬರ್ ವನ್' ಜನ ಎಂದರೆ ನಸ್ಯಾಣಿ ಸುಬ್ಬಭಟ್ಟ. ಅವನಿಗೆ "ನಸ್ಯಾಣಿ" ಎಂಬ ಹೆಸರು ಬಂದುದೇ ಶಂಕರರಾಯರ ದೆಸೆಯಿಂದ. ಅವರ ಮನೆ ಹೆಸರು ಸಾಮಗ್ರಾಣಿ ಸುಬ್ಬರಾಯ ಭಟ್ಟ ಎಂದು. ಸುಬ್ಬಾಯರ ಮುಳ್ಳಿಗೆಮಗ ಒಂದು ದಿವಸ ಗ್ರಾಮದವರ ಹಸೆಗೆ ಹತ್ತಾಯಿತು. ಎಷ್ಟು ತಪ್ಪಿಸಿದರೂ ಒಂದೂ ಒಪ್ಪಲಿಗಾಗ ನಮ್ಮ ಸಾಮಗ್ರಿ ಸಿಗಲಿಲ್ಲ ಮಳೆಗಾಲ ಬಂದಿತು. ಇನ್ನೇನೂ ತಿರುಗಾಡಲಿಕ್ಕೆ ತೊಡಗಿದನು. "ಕೆಪಿನ್ನಕ್ಕಳದಿಂದ ಎರಡೇ ಎರಡು ಗುತ್ತಿಗೆ ಕೊಡಿಸಿರಿ" ಎಂದು ಬೇಡಿದನು. "ಆಯಿತು ನೋಡೋಣ—ನೀವು ಅರ್ಜಿ ಮಾಡಿ" ಎಂದರು ಶಂಕರರಾಯರು. ಅವರ ಹೇಳಿಕೆಯಂತೆ ಅರ್ಜಿ ಬರೆಯಿಸಿ ತಹಶಿಲ್ದಾರರಿಗೆ ಹೋಯಿತು.

ಬರುವ ವಾರ

ಕೊಸಳು ಮುದಾರ

卐

೧೨.

ಮುದರ ಲೆಕ್ಕದಲ್ಲಿ ಪ್ರವೀಣ
ಅವನ ಲೆಕ್ಕದಲ್ಲಿ ತಂದೆಗೆ ಎಂಟು ವರ್ಷವಾದರೆ
ಮಗನಿಗೆ ಹನ್ನೆರಡು ವರ್ಷ,
ಕುಂದಾಪುರದಿಂದ ಕಿರಿಮಂಜೇಶ್ವರಕ್ಕೆ ಮೂರೇ
ಹರದಾರಿ ದೂರ
ಅವನ ಎಷ್ಟು ತಿದ್ದಿದರೂ ತಪ್ಪುಲೆಕ್ಕವಿದು
ಅಂಥ ಮುದಾರನೂ ಮುಂದೆ ಕಾಂಗ್ರೆಸ್
ಕಮಿಟಿ ಅಧ್ಯಕ್ಷನಾಗುತ್ತಾನೆ

ಶ್ರೀ ಕಾರಂತರ
ಹಳ್ಳಿಯ 10 ಸಮಸ್ತರು
ಯಾವತ್ತು ಗ್ರಾಮ, ದೇಶ, ಪೇಟೆಗಳೇ!

ತಾನ ಇಷ್ಟು ಕೆಲಸಕ್ಕೆ ಅವನಿಗೆ ಏನ್ನೇ ದಿನವಾಯಿತು. ಕೆಲಸ ಕೊಟ್ಟದ್ದೇನೆ ಎಂದು ಸುಬ್ಬಾಯ ಭಟ್ಟನ ಹೇಳಿಕೆ. 'ಇದು ರೂಪಾಯಿ ಕೊಟ್ಟರೆ ಸಬ ತಲೆಯೇ ತಿರುಗಿತು''— ಎಂದು ಊರವರ ಎದುರೇ ನ್ಯಾಯ ಕೇಳುತ್ತೇನೆ'' ಎಂದು ಏನಿದಿರಬೇಕು. ಆ ಬಳಿಕ ನೈತಿಕಾರಿ ಶ್ಯಾನುಭಾಗರಲ್ಲಿ ಹೋಗಿ ಬಂದಾಗಲೆಲ್ಲ—"ಏನು ಅರ್ಜಿ ಕನವಿಗೆ ಏನಾಯಿತು" ಎಂದು ಕೇಳುವುದು. 'ಮಾಡಾಗ ಬರುತ್ತದೆ' ಎಂದ ಶೀಘ್ರವಿಲ್ಲ. ಮಾಡಿಗಿದ ಎಷ್ಟೋ ದಿನ ಕಳೆದು ಹೋಯಿತು. ಅರ್ಜಿ ಮಂಜೂರಾದ ಸುದ್ದಿಗಳಿಲ್ಲ. ಇಲ್ಲ. "ಅದರ ಮೇಲೆ ಅರ್ಜಿ ಬರೆಸಿ ಕೊಡಿ"

ಕೇಶರಾಶಿಯೇ
ಹೆಂಗಸಿನ ಸೌಂದರ್ಯ
ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿ
ಪರ್‌ಫ್ಯೂಮ್ಡ್ ಕೇಸ್ಟರ್ ಆಯಿಲ್
ಇದನ್ನು ಉಪಯೋಗಿಸಿದಲ್ಲಿ ಶುಭ್ರವಾದ ಮತ್ತು ನಯವಾದ ಕೂದಲು ಕೂಡಲೆ ಬೆಳೆಯುವುದೆಂದು ನಿಮಗೆ ಮುಂದಟ್ಟಾಗುವುದು.
ಅಹ್ಲಾದಕರವಾದ ಪರಿಮಳ
ಕೂದಲಿನಲ್ಲಿರುವ ಕಶ್ಮಲಗಳನ್ನು ಹೋಗಲಾಡಿಸುವುದಕ್ಕೆ ಬಹಳ ಪ್ರಯೋಜನಕಾರಿ
ಎಲ್ಲೆಲ್ಲೂ ಮಾರಲ್ಪಡುತ್ತದೆ

ಹರ್ ಹಿಟ್ಲರನ ಪಲಾಯನವಾದರೆ ಅವನ ಜೀವನಕ್ಕೇನು ಗತಿ?

ಆಂತರ್ರಾಷ್ಟ್ರೀಯ ಬೇಂಕುಗಳಲ್ಲಿ ಹಿಟ್ಲರನ ಹಣ ಠೇವಣಾತಿ ಇದೆ
ಇಟಾಲಿಯ ಬೇಂಕುಗಳಲ್ಲಿ ಹಿಟ್ಲರನ ಹಣವಿಲ್ಲ
ಹಿಟ್ಲರನಿಗೆ ಮುಸಲೋನಿಯ ಮೇಲೆ ಅವಿಶ್ವಾಸವೇ?

ಈ ಅಂತರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯು ವಿಷಮಕ್ಕೆ ಬಂದು ಮುಟ್ಟಿರುವುದೆಂದರೆ, ಯಾವ ಕಾಲದಲ್ಲಿ ಯಾವ ರಾಷ್ಟ್ರದ ಭವಿಷ್ಯ ಹೇಗೆ ರೂಪಿಸಲ್ಪಡಬಹುದು, ಯಾವ ರಾಜಕೀಯ ವ್ಯಕ್ತಿಯ ಜೀವನವು ಯಾವ ರೀತಿ ಪರಿವರ್ತನ ಹೊಂದಬಹುದು ಎಂದು ಹೇಳುವುದು ಯಾವ ಭವಿಷ್ಯವಾದಿಗೂ ಸಾಧ್ಯವಿಲ್ಲವಾಗಿದೆ ಆದ್ದರಿಂದ ಹಿಟ್ಲರ ಮುಸಲೋನಿಯರೇ ಮೊದಲಾದ ರಾಜಕೀಯ ವ್ಯಕ್ತಿಗಳು ತಮ್ಮ ರಾಷ್ಟ್ರದ ಭವಿಷ್ಯವನ್ನು ಕುರಿತು ಚಿಂತಿಸಬೇಕಾಗಿರುವುದಲ್ಲದೆ, ಅವರು ತಮ್ಮ ಭವಿಷ್ಯವನ್ನೂ ಆಲೋಚಿಸಬೇಕಾಗಿದೆ 'ಜಗತ್ತಿನ ರಾಜಕೀಯ ವ್ಯಕ್ತಿಗಳಲ್ಲಿ ಬೇಂಕಲೆಕ್ಕಾಚಾರವಿಲ್ಲದವನು ನಾನೊಬ್ಬನೇ' ಎಂದು ಬಡಾಯಿ ಕೊಚ್ಚುತ್ತಿದ್ದ ಹಿಟ್ಲರನೂ ಈಗ ಜಗತ್ತಿನ ಬೇರೆ ಬೇರೆ ಅಂತರ್ರಾಷ್ಟ್ರೀಯ ಬೇಂಕುಗಳಲ್ಲಿ ಹೆಚ್ಚು ಹಣವನ್ನು ತನ್ನ ಹೆಸರಿನಲ್ಲಿ ಠೇವಣಾತಿ ಇಟ್ಟಿರುತ್ತಾನೆ ತಾನು ದೇಶದಿಂದ ಪಲಾಯನ ಮಾಡಿ ವಿದೇಶಗಳಲ್ಲಿ ಅಲೆಯಬೇಕಾದ ಸಮಯವು ಬರಬಹುದೆಂಬ ಹೆದರಿಕೆಯು ಅವನಿಗೆ ತುಂಬಾ ಇದೆ ಆದ್ದರಿಂದ ಯೂರೋಪಿನ ಹದಿನೈದು ದೊಡ್ಡ ಬೇಂಕುಗಳಲ್ಲಿ ಹಿಟ್ಲರನ ಕೋಟ್ಯಾಂತರ ರೂಪಾಯಿಗಳ ಲೆಕ್ಕವಿರುವುದೆಂದು ಹೇಳುತ್ತಾರೆ

ಹಿಟ್ಲರನ ಸಂಪಾದನೆ

ಹಿಟ್ಲರನ ಸಂಪಾದನೆಯು ಅಂದಾಜು ಎಲ್ಲರಿಗೂ ಇರುವುದಿಲ್ಲ ಅವನು ಬರೆದ ಮೈನ ಕೇಂಫ ಎಂಬ ಪುಸ್ತಕದ ಮಾರಾಟದ ಲಾಭಾಂಶವು ಅವನಿಗೆ ದೊರೆಯುವಂಥಾದ್ದು ವರ್ಷಾವಧಿ ೧೭೦,೦೦೦ ಪವನುಗಳಿಗೆ ಕಡಿಮೆ ಯಾಗುವುದಿಲ್ಲ ಈ ಪುಸ್ತಕವು ಪ್ರಕಟವಾಗಿ ಈಗ ಅನೇಕ ವರ್ಷಗಳಾದುವು ಅಷ್ಟು ವರ್ಷಗಳಿಂದ ಅವನಿಗೆ ತನ್ನ ಪುಸ್ತಕದ ಇಷ್ಟು ಸಂಪಾದನೆಯಾಗುತ್ತದೆ. ಹಿಟ್ಲರನು ಸರ್ವಾಧಿಕಾರದ ಪಟ್ಟಕ್ಕೆ ಬಂದ ತರುವಾಯ ಇತರ ಮಾರ್ಗಗಳಿಂದ ಅವನ ಸಂಪಾದನೆಯೂ ಇದಕ್ಕೂ ಹೆಚ್ಚಾಗಿದೆ ಆದ್ದರಿಂದ ಅವನು ತನ್ನ ಹೆಸರಿನಲ್ಲಿ ಬೇಂಕುಗಳಲ್ಲಿ ಇಟ್ಟಿರುವ ಹಣವು ಎಷ್ಟಾಗಿರಬಹುದೆಂದು ಯಾರೂ ಊಹಿಸಲಾರರು

ಹಿಟ್ಲರನ ಕಾನೂನು
ಹಿಟ್ಲರನಿಗೆ ಬಾಧಕವಲ್ಲ!

ಜರ್ಮನಿಯ ಯಾರೂ, ಯಾವ ಸಂಘ ಸಂಸ್ಥೆಯೂ ತನ್ನ ಹಣಕಾಸುಗಳನ್ನು ಜರ್ಮನ ಬೇಂಕಿನಲ್ಲಿ ಅಲ್ಲದೆ, ವಿದೇಶಗಳ ಯಾವ ಬೇಂಕಿನಲ್ಲಿಯೂ ಠೇವಣಾತಿ ಇಡಕೂಡದೆಂದು ಹಿಟ್ಲರನು ಮಾಡಿದ ಒಂದು ಕಾನೂನು ಜಾರಿಯಲ್ಲಿದೆ. ಒಂದು ವೇಳೆ ವಿದೇಶೀ ಬೇಂಕುಗಳಲ್ಲಿ ಲೆಕ್ಕಾಚಾರವನ್ನು ಆರಂಭಿಸಬೇಕಾದ ಅತ್ಯಗತ್ಯವು ಉಂಟಾದರೆ ರೀಚ್ಚ ಬೇಂಕಿನಿಂದ ಅನುಮತಿಯನ್ನು ಪಡಕೊಳ್ಳಬೇಕು ಜರ್ಮನಿಯಲ್ಲಿ ಇಂಥ ನಿರ್ಬಂಧವು ಯಾಕೆಂದರೆ, ಯಾರ ಲೆಕ್ಕಕ್ಕೆ ಎಷ್ಟು ಹಣವಿದೆಯೆಂಬುದನ್ನು ಹಿಟ್ಲರನ ಸರಕಾರವು ತಿಳಕೊಳ್ಳುವುದು ಅಗತ್ಯವೆಂದು ಅಲ್ಲಿ ಊಹಿಸಲ್ಪಟ್ಟಿದೆ ಸಮಯಬಂದಾಗ ಅಷ್ಟು ಹಣವನ್ನು ಸರಕಾರದ ಲೆಕ್ಕಕ್ಕೆ-ಬರಕೊಳ್ಳುವುದು ಹಿಟ್ಲರನಿಗೆ ಸುಲಭವಾಗುತ್ತದೆ

ಆದರೆ ಹಿಟ್ಲರನ ಈ ಕಾನೂನು ಹಿಟ್ಲರನಿಗೆ ಅನ್ವಯವಾಗುವುದಿಲ್ಲ. ಅವನು ಎಲ್ಲಿ ಎಷ್ಟು ಹಣವನ್ನು ಠೇವಣಾತಿ ಇಟ್ಟಿರುವನೆಂಬುದನ್ನು ಯಾರೂ ಕೇಳಲಿಕ್ಕೂ ಕೂಡದು, ತಿಳಕೊಳ್ಳಲಿಕ್ಕೂ ಕೂಡದು ಕಾನೂನಿನ ಈ ನಿರ್ಬಂಧದಿಂದ ಜರ್ಮನಿಯಲ್ಲಿ ಹಿಟ್ಲರನೊಬ್ಬನಿಗೆ ಮಾತ್ರ ವಿನಾಯಿತಿ ಇರುತ್ತದೆ. ಜರ್ಮನಿಯಲ್ಲಿ ಹಿಟ್ಲರ ಸರಕಾರವು ಸಾವಿರಾರು ವರ್ಷಗಳ ತನಕ ಇರುವುದೆಂದು ನಾಝಿಗಳು ಪ್ರಚಾರಮಾಡುತಿದ್ದಾರಾದರೂ, ಅದು ನಾಳೆ ತನಕ ಉಳಿಯುವುದೇ ಇಲ್ಲವೇ ಎಂಬ ಕುರಿತು ಹಿಟ್ಲರನಿಗೇ ಧೈರ್ಯವಿಲ್ಲ. ಆದ್ದರಿಂದ ತನ್ನ ಪತನವಾಗಿ ತಾನು ದೇಶಾಂತರಗಳಲ್ಲಿ ಅಲೆಯಬೇಕಾದ ಸಂದರ್ಭ ಬಂದರೆ, ಬದುಕಿರುವಷ್ಟು ಕಾಲ ಸುಖದಿಂದ ಬಾಳಬೇಕೆಂಬುದಕ್ಕೋಸ್ಕರ ಹಿಟ್ಲರನು ಬುಡಾಪೆಸ್ಟ, ಬೆಲ್‌ಗ್ರೇಡ ಮೊದಲಾದ ಕಡೆಗಳಲ್ಲಿ ಅವನು ಹಣ ಠೇವಣಾತಿ ಇಟ್ಟಿರುವನು. ಇಲ್ಲಿಯ ಬೇಂಕುಗಳಲ್ಲಿ ಜೀವನಕ್ಕಾಗಿ ಅಲ್ಲದೆ ಇತರ ಕಾರ್ಯಗಳಿಗೆ ಠೇವಣಾತಿ ಹಣವನ್ನು ಹಿಂದಕ್ಕೆ ಪಡೆಯಬಾರದೆಂಬ ನಿಯಮವಿರುವುದು ಹಿಟ್ಲರನ ಹಣದಭದ್ರತೆಗೆ ಮತ್ತಷ್ಟು ಅನುಕೂಲವಾಗಿದೆ

ಮುಸಲೋನಿಯ ಮೇಲಿನ ವಿಶ್ವಾಸ

ಯೂರೋಪಿನ ಹೆಚ್ಚುಕಡಿಮೆ ಎಲ್ಲಾ ರಾಜಧಾನಿಗಳ ಬೇಂಕುಗಳಲ್ಲಿ ಹಿಟ್ಲರನು ಹಣವನ್ನು ಠೇವಣಾತಿ ಇಟ್ಟಿರುವನೆಂದು ತಿಳಿದುಬಂದಿದೆಯಾದರೂ, ಇಟಲಿಯಲ್ಲಿ ಅವನು ಹಣ ಠೇವಣಾತಿ ಇಟ್ಟಿರುವನೇ ಎಂದು ಯಾರೂ ಹೇಳುವುದಿಲ್ಲ. ಇಟಲಿಯ ಬೇಂಕುಗಳಲ್ಲಿ ಅವನ ಹಣ ಠೇವಣಾತಿ ಇರುವುದೇ ಇಲ್ಲವೆಂದು ಹೇಳುವರು ರಾಜಕೀಯ ಕಾರಣಗಳಿಂದ ಜರ್ಮನಿಯ ಹಿಟ್ಲರನೂ ಇಟಲಿಯ ಮುಸಲೋನಿಯೂ ಬಂದಾಗ ಪರಸ್ಪರ ಸ್ನೇಹದಿಂದಿರುವಂತೆ ಕಂಡುಬರುತ್ತದೆ ಆದರೆ ಅವರಿಗೆ ಸ್ವಾಭಾವಿಕವಾದ ಸ್ನೇಹವು ಇರುವುದಿಲ್ಲ ತಮ್ಮ ಸ್ವಾರ್ಥಸಾಧನೆಗಾಗಿ ಅವರು ಪರಸ್ಪರ ಅಗತ್ಯಬೇಕಾಗಿ ಬಂದರೆ, ಈಗಿನ ಅವರೊಳಗಿನ ಐಕ್ಯವು ಅದಕ್ಕೆ ಭಂಗತರುವಂಥದ್ದಲ್ಲ ಹಿಟ್ಲರನಿಗೆ ಮುಸಲೋನಿಯ ಮೇಲೆ ವಿಶ್ವಾಸವೂ ಇರುವುದಿಲ್ಲ ಒಬ್ಬರನ್ನೊಬ್ಬರು ಸಂದೇಹದೃಷ್ಟಿಯಿಂದ ಕಾಣುತ್ತಾರೆ ಆದ್ದರಿಂದ ನಾವು ಊಹಿಸುವಷ್ಟು ಸ್ನೇಹಬಂಧನದಿಂದ ಹಿಟ್ಲರ ಮುಸಲೋನಿಯರು [illegible] ಅನೇಕರು [illegible] ಜರ್ಮನಿಯಲ್ಲಿ ಮುಸಲೋನಿಯ ಗೂಢಚಾರರೂ, ಇಟಲಿಯಲ್ಲಿ ಹಿಟ್ಲರನ ಗೂಢಚಾರರೂ, ಈ ಸರ್ವಾಧಿಕಾರಿಗಳ ಅಂತರಂಗವನ್ನು ತಿಳಿಯಲಿಕ್ಕೆ ಪ್ರಯತ್ನಿಸುತಿದ್ದಾರೆಂದು ಬಂದ ವಾರ್ತೆಯ ಮೇಲಿಂದ ಜನರು ಆಡಿಕೊಳ್ಳುವ ಅಪವಾದವು ಸತ್ಯವೆಂದು ಕಾಣುತ್ತದೆ

ಹಿಟ್ಲರನ ಪತನವು ಖಂಡಿತ
ಭವಿಷ್ಯವಾದಿಯ ಭವಿಷ್ಯನುಡಿ

'ಯುದ್ಧದ ಕಾರ್ಮೋಡಗಳು ರಾಜಕೀಯ ಅಂತರಿಕ್ಷವನ್ನು ಮುಚ್ಚಿಕೊಂಡು ಜಗತ್ತಿನಲ್ಲೆಲ್ಲ ಗಾಢಾಂಧಕಾರವು ತುಂಬಿಕೊಳ್ಳುವುದು ಆದರೂ ಕೂಡ ಈ ವರ್ಷ ಮಹಾಯುದ್ಧವು ಆಗುವುದಿಲ್ಲ' ಎಂದು ಲಂಡನಿನಲ್ಲಿ ನೆರೆದ ಭವಿಷ್ಯವಾದಿಗಳ ಒಂದು ಸಭೆಯಲ್ಲಿ ಮಿ ಹೊಸ್ಟಿಂಗಬರ್ನೆಲ್ ಎಂಬವರು ಹೇಳಿದರು. ಅವರು ತಮ್ಮ ಭಾಷಣದಲ್ಲಿ ಇನ್ನು ಹೇಳಿದ್ದೇನೆಂದರೆ– 'ಸರ್ವಾಧಿಕಾರಿಗಳ ಪತನವು ಆಗಲಿಕ್ಕೇಬೇಕು ಆದರೆ ಅದು ಹೇಗೆ, ಯಾವಾಗ ಆಗುವುದೆಂಬುದನ್ನು ಹೇಳುವುದು ಮಾತ್ರ ಕಠಿನವಾಗಿದೆ ಹಿಟ್ಲರನು ನೀಚಸ್ಥಾನದಿಂದ ಬಹಳ ಉಚ್ಚಸ್ಥಾನಕ್ಕೆ ಏರುವನೆಂದು ಅವನ ಜಾತಕದಲ್ಲಿ ಬರೆದಿದೆ ಅವನ ಜೀವನದಲ್ಲಿ ಶನಿಯ ಪ್ರಾಬಲ್ಯವಿದೆ [illegible] ಶನಿಯು ಅವನನ್ನು ಉಚ್ಚಸ್ಥಾನಕ್ಕೆ ಏರಿಸುತ್ತದೆ [illegible] ನೆಪೋಲಿಯನನಂತೆ ಹಿಟ್ಲರನ ಪತನವೂ ಆಗುವುದು'

ಆಪ್ರಿಕದಲ್ಲಿ ಹಿಟ್ಲರನ ಸಂಚು
ಕಾರ್ಯಕ್ರಮದ ಅಸಫಲತೆ

ದಕ್ಷಿಣ ಆಪ್ರಿಕದಲ್ಲಿ ಪಟಗೋನಿಯ ಎಂಬ ಚಿಕ್ಕದೊಂದ ಪ್ರದೇಶವಿದೆ ಅಲ್ಲಿ ಜನಸಂಖ್ಯೆ ಬಹಳ ವಿರಳವಾಗಿದೆ ಅದು ಅರ್ಜೆಂಟಿನಾಕ್ಕೆ ಹೊಂದಿಕೊಂಡಿರುವುದಾದರೂ ಅಲ್ಲಿ ಯಾವ ರಾಷ್ಟ್ರದ ಸರಕಾರವೂ ಇರುವುದಿಲ್ಲ ಅದನ್ನು ಜರ್ಮನ ಸಾಮ್ರಾಜ್ಯಕ್ಕೆ ಸೇರಿಸಬೇಕೆಂದು ಹಿಟ್ಲರನಿಗೆ ತೋರಿ ಅವನು ಅಲ್ಲಿಗೆ ತನ್ನ ಅನೇಕ [illegible] [illegible] ಅನೇಕ [illegible] ಹೇಗೆ [illegible] ರಹಸ್ಯ [illegible] [illegible] ಗುಪ್ತ [illegible] [illegible] [illegible] ಪ್ರಯತ್ನ [illegible] ಸ್ವಸ್ಥಪರಿಂಚಾ [illegible] ಗಳನ್ನು ಕಳಿಹಿಸಿಕೊಟ್ಟು, ಕೋಟೆ ಕೊತ್ತಲಗಳನ್ನು ಕಟ್ಟುವ ಯೋಜನೆಯನ್ನು ತಯಾರಿಸಿದ್ದಾಯಿತು ಆದರೆ ಸಕಾಲದಲ್ಲಿ ಹಿಟ್ಲರನ ಈ ವಿಚಾರವು ಅರ್ಜೆಂಟೀನ ಸರಕಾರಕ್ಕೆ ಗೊತ್ತಾಗಿಬಿಟ್ಟುದರಿಂದ ಅದು ತನ್ನ ಪ್ರತಿಭಾರದ ಅಸ್ತ್ರವನ್ನು ಹೂಡಿತು. ಜರ್ಮನರ ಸಂಚು ಸಫಲವಾಗಲಿಲ್ಲ ಅರ್ಜೆಂಟೀನದ ವಿದೇಶಾಂಗ ಮಂತ್ರಿಗಳಾದ ಡಾಕ್ಟರ್ ಕೆಂಟಿಲೋ ಇವರು ಪೆಂಟಗೋನಿಯದ ಜರ್ಮನರ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದಾರೆ. ಆದ್ದರಿಂದ ಅಲ್ಲಿ ಹಿಟ್ಲರನ ತಂತ್ರಮಂತ್ರಗಳು ಪರಿಣಾಮವಿಲ್ಲವಾಗಿವೆ

ಹಿಟ್ಲರನ ಪತನವು
ಎರಡು ವರ್ಷಗಳಲ್ಲಾದೀತು!

ಹೀಗೆಂದು ಹಿಟ್ಲರನೇ ಹೇಳಲಾರಂಭಿಸಿದ್ದಾನೆ ಹಿಟ್ಲರನು ಭವಿಷ್ಯವಾದಿಯಲ್ಲ, ಆದರೂ ಅವನು ತಾನಿನ್ನು ಬಹಳಕಾಲ ಬದುಕುವುದಿಲ್ಲ, ಪರಂತು ಮಾಡಬೇಕಾದ ಕಾರ್ಯಗಳು ಬಹಳ ಇವೆ ಎಂದು ಯಾವಾಗಲೂ ಗಾಬರಿಯಿಂದಿರುತ್ತಾನೆ ನೆನಸಿದಂಥ ಕಾರ್ಯವು ಸಮಯದಲಿ ಆಗದಿದ್ದರೆ ಸಿಟ್ಟಿನಿಂದ ಸಂತಪ್ತನಾಗಿ ಬೆಂದುಹೋಗುತ್ತಾನೆ ಜರ್ಮನಿಯ ಉದ್ಧಾರ ಜರ್ಮನ ಸಾಮ್ರಾಜ್ಯದ ವಿಸ್ತಾರ, ಮತ್ತು ಬೊಲ್ಶೆವಿಕರ ನಾಶ-ಇವಿಷ್ಟು ತನ್ನ ಜೀವಿತದ ಉದ್ದೇಶಗಳು ಜರ್ಮನಿಯ ಉದ್ಧಾರವಂತೂ ಆಯಿತು ಜರ್ಮನ ಸಾಮ್ರಾಜ್ಯದ ವಿಸ್ತಾರಕ್ಕೆ ಯುಕ್ರೈನನ್ನು ಆಕ್ರಮಿಸುವುದು ಮತ್ತು ವಸಾಹತುಗಳನ್ನು ಪಡೆಯುವುದು ಇವು ಬಾಕಿ ಆದರೆ ಬೊಲ್ಶೆವಿಕರ ನಾಶವು ಆಗಿಯೇ ಇಲ್ಲ ಅದು ಇನ್ನೆರಡು ವರ್ಷಗಳೊಳಗಾಗಿ ಆಗುವುದೇ ಇಲ್ಲವೇ ಎಂದು ಹಿಟ್ಲರನು ಬಹಳ ಚಿಂತಿತನಾಗಿರುತ್ತಾನೆ ಕಳೆದವಾರ ಹಿಟ್ಲರನ [illegible] ಜನ್ಮದಿನೋತ್ಸವವು ಜರ್ಮನಿಯಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು ಜರ್ಮನ ಜನಾಂಗವು ಆ ಸಮಯ ಅವನಿಗೆ ದೀರ್ಘಾಯುರಾರೋಗ್ಯಗಳನ್ನು ಕೋರಿತು ಆದರೆ ತಾನು ಇನ್ನು ಎರಡು ವರ್ಷಗಳಿಗಿಂತ ಹೆಚ್ಚಿಗೆ ಸರ್ವಾಧಿಕಾರಿಯಾಗಿ ಬಾಳಲಿಕ್ಕೆ [illegible] ತಾಪೇರಣೆಯಾಗುತ್ತದಂತೆ' ಎನ್ನಬಹುದು!!

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ
ಪತ್ರಸ್ಥ
ಗೊನೊಕಿಲರ್ (ರಜಿಸ್ಟರ್ಡ)

CONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗರೂಕತೆಯಿಂದಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿ ಗುರುತಿನ ಲೇಬಲು ಸೀಲು ಮತ್ತು ಗೊನೊಕಿಲರ್ ಇರುತ್ತದೊ ಎಂಬುದನ್ನು ನೋಡಿರಿ

ಮುಂಬಯಿದಿನ ಅತ್ಯಂತ ಔಷಧ ಇಂಗ್ಲೀಷ ಮತ್ತು ಆಯುರ್ವೇದ ಔಷಧಗಳಿಂದಲೂ ಫಲಕಾರಿಯಾಗದೇ ಇನ್ಜೆಕ್ಷನ ಔಷಧ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬುದನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸುತ್ತಿದ್ದ ತೀವ್ರರೋಗವಾಗಿದ್ದರೂ ಗೊನೊಕಿಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳೆಯದಾಗಿದ್ದರೂ) ... ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ ಮೂತ್ರ ಹೋಗದಿರುವಿಕೆ, ... ಗೊನೊಕಿಲರ್ ... ವ್ಯಾಧಿಗಳಿಗೆ ಖಾತ್ರಿ ಗುಣಕಾರಿ
50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು 8 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4
Sole Manufacturer Dr D. N JASANI, Vithalbhai Patal Road, BOMBAY
ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.
ಸ್ಟಾಕಿಸ್ಟ—ಮೆಸರ್ಸ ಎ. ಫೆರ್ನಾಂಡಿಸ್ ಮತ್ತು ಕಂಪೆನಿ ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ, ಮಂಗಳೂರು.

ಪರಿಸ್ಥಿತಿಯು ಕೈಮೀರದಂತೆ

ಗಾಂಧಿ-ಸುಭಾಸ ಭೇಟಿಯಾಗಲಿ!

ಠಾಗೋರರ ತಂತಿ! ನೆಹರೂ ಅವರ ಮಾತುಕತೆ!

ಭೇಟಿ ಇದೇ ೨೭-೪-೧೯೩೯ರ ದಿನ

ಮಹಾಕವಿ ರವೀಂದ್ರನಾಥ ಠಾಗೋರರವರು ತಮ್ಮ ಆರೋಗ್ಯ ಸುಧಾರಣೆಗಾಗಿ ಶಾಂತಿನಿಕೇತನದಿಂದ ಪುರಿಗೆ ಹೊರಟಿದ್ದಾಗ ಪತ್ರಿಕಾಪ್ರತಿನಿಧಿಯು ಅವರನ್ನು ಕಲ್ಕತ್ತೆಯಲ್ಲಿ ಭೇಟಿಯಾಗಿ ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಚರ್ಚಿಸಿದನು. ಪರಸ್ಪರ ಐಕ್ಯತೆಯಿಲ್ಲದ್ದರಿಂದ ರಾಷ್ಟ್ರದ ಅಮೂಲ್ಯ ಸಮಯವು ವ್ಯರ್ಥ ಕಳೆದುಹೋಗುತ್ತಿರುವುದನ್ನು ನೋಡಿ ಠಾಗೋರರು ತಮ್ಮ ಹಾರ್ದಿಕ ಸಂತಾಪವನ್ನು ವ್ಯಕ್ತ ಮಾಡಿದರು. ಕಾಂಗ್ರೆಸಿನೊಳಗುಂಟಾದ ಬಿಕ್ಕಟ್ಟಿನ ನಿವಾರಣೆಗೆ ಗಾಂಧಿ ಭೋಸರ ಪರಸ್ಪರ ಭೇಟಿಯಾಗುವುದು ಪರಮಾವಶ್ಯಕವೆಂದೂ ತಾನು ಈ ಪ್ರಕಾರ ಇಬ್ಬರಿಗೂ ತಂತಿಮೂಲಕ ತಿಳಿಸಿದ್ದೇನಾಗಿಯೂ ಠಾಗೋರರು ಸೂಚಿಸಿದರು. ಹಾಗೆಯೇ ಡಾಕ್ಟರ ಪಿ. ಸಿ. ರೇಯವರು ಕೂಡ, ಗಾಂಧಿ-ಭೋಸರೊಡನೆ ವಿನಂತಿ ಮಾಡಿಕೊಂಡು, ಇಬ್ಬರೂ ಕೊಟ್ಟುಕೊಳ್ಳುವ ಧರ್ಮದಿಂದ ಬಿಕ್ಕಟ್ಟನ್ನು ಪರಿಹರಿಸಿ ದುಷ್ಪರಿಣಾಮಗಳಿಗೆ ಎಡೆಕೊಡದಂತೆ ಮುಂದಿನ ಕಾರ್ಯಕ್ರಮವನ್ನು ರೂಪಿಸಬೇಕೆಂದು ತಂತಿಮೂಲಕ ಪ್ರಾರ್ಥಿಸಿದ್ದಾರೆ.

ನೆಹರೂ ಅವರ ಮಾತುಕತೆ

ಇದೇ ತಾ ೧೯-೪-೧೯೩೯ರ ದಿನ ಪಂಡಿತ ನೆಹರೂ ಅವರು ಜ್ಯಾರಿಯಾದಲ್ಲಿ ಶ್ರೀ ಭೋಸರನ್ನು ಕಂಡು ಮಾತನಾಡಿದರು. ಗಾಂಧಿ-ಭೋಸರೊಳಗೆ ಪಂತ ಠರಾವಿನ ಕುರಿತು ಉಂಟಾಗಿರುವ ವಿವಾದ ಮತ್ತು ವರ್ಕಿಂಗ ಕಮಿಟಿಯ ರಚನೆಯಲ್ಲಿ ಉಂಟಾಗಿರುವ ವಿಳಂಬ—ಇವು ಚರ್ಚಾಸ್ಪದವಾಗಿದ್ದವು. ಈ ಮಾತುಕತೆಗಳ ಪರಿಣಾಮವಾಗಿ ಗಾಂಧಿ-ಭೋಸ ಭೇಟಿಯಾಗುವುದು ಅತ್ಯಗತ್ಯವೆಂದು ತಿಳಿದುಬಂದು ಈಗ ಆ ಭೇಟಿಯ ದಿನವನ್ನು ೨೭-೪-೧೯೩೯ಕ್ಕೆ ನಿಶ್ಚಯಿಸಲಾಗಿದೆ. ಮಹಾತ್ಮಾಜಿಯವರ ಆರೋಗ್ಯವು ದೀರ್ಘ ಪ್ರಯಾಣಕ್ಕೆ ಅನುಕೂಲವೆಂದು ತೋರಿದರೆ ಅವರು ಇದೇ ತಾ ೨೪ನೇ ತಾರೀಕಿನ ದಿನ ರಾಜಕೋಟೆಯಿಂದ ಹೊರಟು ೨೬ನೇ ತಾರೀಕಿನ ದಿನ ಕಲ್ಕತ್ತೆಯನ್ನು ಸೇರುವರು. ಅಲ್ಲಿ ಅವರು ಸುಭಾಸರನ್ನು ಕಂಡು ಮಾತನಾಡಿದ ಬಳಿಕವೇ ಕಾಂಗ್ರೆಸ ವರ್ಕಿಂಗ ಕಮಿಟಿಯ ರಚನೆಯಾಗುತ್ತದೆ. ಈ ಭೇಟಿಯಿಂದ ವಿವಾದದ ತೀರ್ಮಾನವಾಗದಿದ್ದರೆ, ಎಲ್ಲಾ ವಿಷಯಗಳು ಇದೇ ೨೯ರ ದಿನ ಕೂಡುವ ಎ ಐ ಸಿ. ಸಿ ಸಭೆಯಲ್ಲಿ ಚರ್ಚೆಗೆ ಬರಬಹುದು. ಆದರೆ ಹಾಗಾಗದಂತೆ ಎರಡೂ ಪಕ್ಷಗಳ ಮುಖಂಡರು ಭಗೀರಥ ಪ್ರಯತ್ನಗಳನ್ನು ಮಾಡುತಿದ್ದಾರೆ. ಪ್ರಾಯಶಃ ರಾಜಿಯಿಂದಲೇ ಎಲ್ಲ ಸಂಗತಿಗಳು ತೀರ್ಮಾನವಾಗಲಿವೆ.

ಠರಾವುಗಳ ಸೂಚನೆ

ಎ. ಐ ಸಿ ಸಿ ಅಖಿಲ ಭಾರತ ಕಾಂಗ್ರೆಸ ಕಮಿಟಿಯಲ್ಲಿ ಚರ್ಚಿಸುವುದಕ್ಕೋಸ್ಕರ ದೇಶದ ನಾನಾ ಭಾಗಗಳಿಂದ ಅನೇಕ ಠರಾವುಗಳ ಸೂಚನೆಗಳು ಬಂದಿವೆ. ದೇಶಕ್ಕೆ ಅಹಿತಕಾರಿ ಎಂದು ತೋರಿಬಂದಿರುವ ಇಂಡೋ ಬ್ರಿಟನ ವಾಣಿಜ್ಯ ಒಪ್ಪಂದಕ್ಕೆ ಕೇಂದ್ರ ಎಸೆಂಬ್ಲಿಯ ಮತ್ತು ವಾಣಿಜ್ಯ ಸಂಸ್ಥೆಗಳ ಅಭಿಪ್ರಾಯಗಳನ್ನು ಅಲಕ್ಷಿಸಿ, ವಾಯ್ಸರಾಯರು ತಮ್ಮ ವಿಶೇಷಾಧಿಕಾರದ ಸಮ್ಮತಿಯನ್ನು ಕೊಟ್ಟಿರುವುದರಿಂದ, ಅವರ ಆ ವರ್ತನವನ್ನು ಖಂಡಿಸಿ, ಬ್ರಿಟಿಷ ವಸ್ತುಗಳಿಗೆ ಬಹಿಷ್ಕಾರ ಹಾಕಬೇಕೆಂಬ, ಕಾಂಗ್ರೆಸ ಮಂತ್ರಿಮಂಡಲಗಳು ಜಾತಿಪಕ್ಷಪಾತಗಳನ್ನು ತೋರಿಸದೆ ಶಾಸನಕಾರ್ಯವನ್ನು ನಡೆಸಿರುವವೆಂಬುದಕ್ಕೆ ತಕ್ಕ ವಿಚಾರಣೆಯಾಗಬೇಕೆಂಬ, ದೇಶವನ್ನು ಸಂಪೂರ್ಣ ಸ್ವರಾಜ್ಯಕ್ಕೆ ಸಿದ್ಧಗೊಳಿಸುವುದಕ್ಕೋಸ್ಕರ ಕಾಂಗ್ರೆಸ ಮಂತ್ರಿಮಂಡಲಗಳು ಶಾಸನಕಾರ್ಯದಲ್ಲಿ ಬಿಕ್ಕಟ್ಟುಗಳನ್ನುಂಟುಮಾಡಬೇಕೆಂಬ, ಇತ್ಯಾದಿ ಅನೇಕ ವಿಷಯಗಳ ಮೇಲೆ ಠರಾವುಗಳ ಸೂಚನೆಗಳಾಗಿವೆ. ಗವರ್ನಮೆಂಟ ಆಫ ಇಂಡಿಯಾ ಆಕ್ಟಿನ ಉಪಸೂಚನೆಯನ್ನು ವಿರೋಧಿಸಬೇಕೆಂದೂ, ಯುದ್ಧಸಂಭವದಲ್ಲಿ ಕಾಂಗ್ರೆಸಿನ ಧೋರಣವನ್ನು ಸ್ಪಷ್ಟಮಾಡಬೇಕೆಂದೂ ಠರಾವುಗಳಾಗಲಿವೆ.

ಮಹಾತ್ಮರಮೇಲೆ ಪೂರ್ಣವಿಶ್ವಾಸ

ಕಾಂಗ್ರೆಸ ಕಾರ್ಯಕ್ರಮಗಳಬಗ್ಗೆ ಮಹಾತ್ಮರಮೇಲೆ ಪೂರ್ಣ ವಿಶ್ವಾಸವಿಟ್ಟು ಅವರನ್ನೇ ಕಾಂಗ್ರೆಸಿನ ಅಧಿನಾಯಕರನ್ನಾಗಿ ಮಾಡಬೇಕೆಂದೂ, ದೇಶವನ್ನು ಸ್ವಾತಂತ್ರ್ಯಪಥದಲ್ಲಿ ಮುನ್ನಡೆಯಲಿಕ್ಕೆ ಅವರೇ ಸಮರ್ಥರೆಂದೂ ಶ್ರೀ ಸತ್ಯಮೂರ್ತಿಯವರ ಅಂಬೋಣ. ಸಂಯುಕ್ತಪ್ರಾಂತಗಳ ಸಮಾಜವಾದಿಗಳೂ, ಬಂಗಾಳದ ಶ್ರೀ ಕಿರಣಶಂಕರ ರಾಯರವರ ಅನುಯಾಯಿಗಳೂ ಇದೇ ರೀತಿ ಅಭಿಪ್ರಾಯಪಟ್ಟಿರುವರು. ನಾಳೆ ಕೂಡುವ ಎ ಐ ಸಿ ಸಿ ಸಭೆಯಲ್ಲಿ ಮಹತ್ವದ ವಿಷಯಗಳು ಚರ್ಚೆಗೆ ಬಂದು ಅವುಗಳ ತೀರ್ಮಾನವಾಗಲಿರುವುದರಿಂದ ಎಲ್ಲ ಸದಸ್ಯರು ತಪ್ಪದೆ ಬರಬೇಕೆಂದು ಪ್ರಾಂತೀಯ ಕಾಂಗ್ರೆಸ ಮುಖಂಡರ ವಿನಂತಿಯಾಗಿದೆ. ಕಲ್ಕತ್ತೆಯಲ್ಲಿ ಕೂಡುವ ಈ ಸದಸ್ಯರ ಉಳಕೊಳ್ಳುವ ಬಗ್ಗೆ ಬಂಗಾಳ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಉತ್ತಮ ವ್ಯವಸ್ಥೆಗಳನ್ನು ಮಾಡಿರುತ್ತದೆ.

ಸುಭಾಸರು ಕಲ್ಕತ್ತಕ್ಕೆ ಬಂದಿದ್ದಾರೆ

ಶ್ರೀ ಸುಭಾಷಚಂದ್ರ ಭೋಸರು ಜ್ಯಾರಿಯಾದ ತಮ್ಮ ಆರೋಗ್ಯಧಾಮದಿಂದ ಕಲ್ಕತ್ತಕ್ಕೆ ಬಂದಿರುವರು. ಹೌರಾ ರೈಲ್ವೆ ಸ್ಟೇಷನದಲ್ಲಿ ಕಾಂಗ್ರೆಸ ಮುಖಂಡರು ಬಂದು ಅವರಿಗೆ ಸಂಭ್ರಮದ ಸ್ವಾಗತವನ್ನು ಕೊಟ್ಟರು. ಬೇರೆ ಬೇರೆ ಕಾಂಗ್ರೆಸ ಪಕ್ಷಗಳ ಮತ್ತು ಸಾರ್ವಜನಿಕ ಸಂಘಸಂಸ್ಥೆಗಳ ಕಡೆಯಿಂದ ಅವರಿಗೆ ಹೂಮಾಲೆಗಳು ಅರ್ಪಿಸಲ್ಪಟ್ಟವು. ಹೌರಾದಿಂದ ಕಲ್ಕತ್ತದ ತನಕ ದಾರಿಯುದ್ದಕ್ಕೂ ಜನರು ಸಾಲುಗಟ್ಟಿ ನಿಂತು ಅವರಿಗೆ ತಮ್ಮ ಶ್ರದ್ಧಾಂಜಲಿಗಳನ್ನು ಸಮರ್ಪಿಸಿದರು. ಸುಭಾಷರ ಆರೋಗ್ಯವು ಈಗ ಸಾಕಷ್ಟು ಸುಧಾರಿಸಿದೆ. ಆದರೆ ಶರೀರ ದುರ್ಬಲತೆ ಇನ್ನೂ ಉಂಟು.

ಎ ಐ ಸಿ ಸಿ ಯು ಪೂರ್ವತಯ್ಯಾರಿಗಳು

ಇವು ಬಹಳ ತೀವ್ರತೆಯಿಂದ ಆಗುತ್ತಾ ಇವೆ. ಕಲ್ಕತ್ತಕ್ಕೆ ಬಂದ ಶ್ರೀ ಭೋಸರು ಈಗ ತಮ್ಮನೇ ಸಾರ್ವಜನಿಕ ಕಾರ್ಯಗಳಲ್ಲಿ ಕೈಹಾಕಿದ್ದಾರೆ. ಅವರು ಮೊನ್ನೆ ಶ್ರದ್ಧಾನಂದ ಪಾರ್ಕಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಅಖಿಲಭಾರತೀಯ ದೃಷ್ಟಿಯಿಂದ ನಾವು ನಮ್ಮ ಸಮಸ್ಯೆಗಳನ್ನು ಬಿಡಿಸಬೇಕೆಂದೂ, ಪ್ರಾಂತೀಯ ದುರಭಿಮಾನವನ್ನು ತೋರಿಸಕೂಡದೆಂದೂ ಹೇಳಿದರು. ಬಂಗಾಳ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಚುನಾವಣೆಗಳು ಎ ಐ ಸಿ ಸಿ ಸಭೆಯ ಮೊದಲೇ ನಡೆದು, ಅದರಲ್ಲಿ ಶ್ರೀ ಭೋಸರಿಗೆ ಯಾವ ಪ್ರಕಾರ ಬೆಂಬಲವು ದೊರೆಯುತ್ತದೋ, ಅದರಂತೆ ಅವರು ತಮ್ಮ ಮುಂದಿನ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವರು.

ಗಡಿನಾಡಿನಲ್ಲಿ ಕಾಂಗ್ರೆಸಿನ ವಿಜಯ

ಪೆಶಾವರ ಜಿಲ್ಲೆಯ ಗ್ರಾಮ ಪಂಚಾಯತಿನ ಚುನಾವಣೆಗಳಲ್ಲಿ ಕಾಂಗ್ರೆಸ ಹುರಿಯಾಳುಗಳ ವಿರುದ್ಧನಿಂತ ಮುಸ್ಲಿಂಲೀಗ ಪ್ರತಿನಿಧಿಗಳು ಪೂರ್ಣ ಸೋತುಹೋಗಿರುವರು. ಎಲ್ಲೆಲ್ಲೂ ಕಾಂಗ್ರೆಸ ಪ್ರತಿನಿಧಿಗಳೇ ಬಹುಸಂಖ್ಯೆಯಿಂದ ಆರಿಸಿ ಬಂದಿರುತ್ತಾರೆ.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲಾಯ್ಡುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು. ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು, ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮಾಲು ಪರದೇಶದಿಂದ ಬರುವಂತೆ ಉಂಟು. ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ವಾಘ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್ —ಪಿ ಎಚ್. ಭಟ್ಟಾ. ಗದಗ —ವಿ. ಎಸ್. ಶೆಟ್ಟಿ.

ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜೆಂಟ್ —ಡಾ. ಕೆ ಭಾಸ್ಕರ ಪೈ.

ಸ್ಪೆಶಲ್ ಏಜಂಟ್.— ಬಿ ಪ್ಪಿ. ಹೊನ್ನಾವರ

ಕೃತಾರ್ಥರಾದವರಿಗೆ

ಗೇಟವೇ ಪ್ರೊಡಕ್ಟ್ಸನವರ ಅಮೂಲ್ಯ ಬಹುಮಾನ

ನಮ್ಮ ಭರವಸೆಯ ಇನಾಮು — **RS. 42,000** — ನಂಬ್ರ 7

ಸರಿಯಾದ ಉತ್ತರ ಕಳುಹಿಸಿದ ಇಪ್ಪತ್ತು ಮಂದಿಗಳೊಳಗೆ ಹಂಚಲ್ಪಡುವುದು!

ಬೊಂಬಾಯಿಯ ಪ್ರಸಿದ್ಧ ಬೇಂಕೊಂದರಲ್ಲಿಟ್ಟ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ ಕನಿಷ್ಠ ಎಂದರೂ ರೂ 2100 ದೊರಕವುದೆಂದು ಭರವಸೆಯನ್ನೀಯುತ್ತೇವೆ.

ಹೆಚ್ಚು ಸಂಖ್ಯೆಯ ಉತ್ತರ ಕಳುಹಿಸಿದ ಇಬ್ಬರಿಗೆ ಕ್ರಮವಾಗಿ ರೂ 200 ಮತ್ತು 100ರ ಎರಡು ಬಹುಮಾನಗಳ ಕೊಡಲಾಗುತ್ತದೆ. ಯಾವುದಾದರೂ ಒಂದು ಸಾಲನ್ನು ಸರಿಹೋಲುವ ಉತ್ತರಕ್ಕೆ ರೂ 10ರ 10 ಬಹುಮಾನಗಳನ್ನು ಕೊಡಲಾಗುತ್ತವೆ. ಮೇಲಿನ ಅಡ್ಡ ಸಾಲಿನ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ 5 ರೂ ಯ 20 ಬಹುಮಾನಗಳನ್ನು ಕೊಡಲಾಗುವುದು. ಮೇಲಿನ ಸಾಲಿನ (ಅಡ್ಡ) ಮೊದಲನೇ ಮತ್ತು ಎರಡನೇ ಸಂಖ್ಯೆಗಳನ್ನು ಸರಿಹೋಲುವ ಸಂಖ್ಯೆಗಳನ್ನು ಕಳುಹಿಸಿದ ಉತ್ತರಕ್ಕೆ 2 ರೂ ಯ 80 ಬಹುಮಾನಗಳನ್ನು ಕೊಡಲಾಗುವುದು. ಮೊದಲನೇ ಸಂಖ್ಯೆಯನ್ನು ಸರಿಹೋಲುವ ಉತ್ತರಕ್ಕೆ 2ರ ಯ 50 ಬಹುಮಾನಗಳನ್ನು ಕೊಡಲಾಗುವುದು.

ಮೇಲೆ ಕಾಣುವ ಸಣ್ಣ ಸಣ್ಣ ಚಚ್ಚೌಗಳಲ್ಲಿ 7ರಿಂದ 22ರ ವರೆಗೆ ಅಂಕಗಳನ್ನು ಬರೆಯಿರಿ. ಯಾವ ಸಾಲನ್ನೂ ಯಾ ಒಂದು ಮೂಲೆಯಿಂದ ಇನ್ನೊಂದು ಮೂಲೆ ವರೆಗೆ ಕೂಡಿಸಿದರೂ 58 ಬರಬೇಕು. ಒಂದು ಬಾರಿ ಉಪಯೋಗಿಸಿದ ಸಂಖ್ಯೆಯನ್ನು ಇನ್ನೊಂದು ಬಾರಿ ಉಪಯೋಗಿಸಬಾರದು.

ಉತ್ತರಗಳನ್ನು ಕಳುಹಿಸಲು ಕಡೇ ತಾ 8 5 1939 ಫಲಿತಾಂಶ 18-5-1939

ಪ್ರವೇಶಧನ 1 ಉತ್ತರಕ್ಕೆ ರೂ 1, 3 ಉತ್ತರಗಳಿಗೆ ರೂ 2, 8 ಉತ್ತರಗಳಿಗೆ ರೂ 5, 18 ಉತ್ತರದ ಸೆಟ್ಟಿಗೆ ರೂ 8

ಮೇಲೆ ಕಾಣಿಸಿದ ಪ್ರವೇಶಧನದೊಂದಿಗೆ ಖಾಲಿ ಕಾಗದದಲ್ಲಿ ಎಷ್ಟು ಉತ್ತರಗಳನ್ನೂ ಕಳುಹಿಸಬಹುದು. ಪ್ರವೇಶಧನವನ್ನು ಮನಿ ಆರ್ಡರು ಯಾ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಬೇಕು. ಮನಿಯಾರ್ಡರಿನ ಕೂಪನಿನ ಮೇಲೆ ಇಂಗ್ಲಿಷಿನಲ್ಲಿ ನಿಮ್ಮ ಪೂರ್ಣ ಹೆಸರನ್ನು ಬರೆಯಿರಿ. ನಿಮ್ಮ ಎಡ್ರೆಸು ಬರೆದ ಅಂಚೆ ಕವರೊಂದನ್ನು ಫಲಿತಾಂಶಕ್ಕಾಗಿ ಉತ್ತರದೊಂದಿಗೆ ಕಳುಹಿಸಿರಿ. ಮೆನೇಜರರ ತೀರ್ಮಾನವೇ ನ್ಯಾಯಬದ್ಧವೂ ಕಡೇದ್ದೂ ಆಗಿರುತ್ತದೆ.

ಪೂರ್ಣ ಉತ್ತರವನ್ನು ಕಳುಹಿಸುವವರಿಗೆ ನಮ್ಮ ಸ್ಪೆಶಲ್ ಕೆಮಿಕಲ್ ಭಂಗಾರದ ಉಂಗುರ ಮತ್ತು 8 ಉತ್ತರ ಕಳುಹಿಸುವವರಿಗೆ 1 ಜೊತೆ ಪಟರ್ ಗುಂಡಿಗಳು ಯಾ 1 ಬಳೆಗಳು 1 ಯು ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ನೆಕಲೇಸು ಯಾ 4 ಬಳೆಗಳು ಮತ್ತು 1 ಉಂಗುರವನ್ನು ಕೊಡುವೆವು.

ಕಳೆದ ಬಾರಿಯ 54 ಸಂಖ್ಯೆಯ ಉತ್ತರ.

1ನೇ ಸಾಲು	10	15	21	8
2ನೇ	20	9	11	14
3ನೇ ,	7	18	16	13
4ನೇ ,	17	12	6	19

ಎಲ್ಲಾ ಹಣ ಮತ್ತು ಉತ್ತರಗಳನ್ನು ಈ ಕೆಳಗಿನವರಿಗೆ ಕಳುಹಿಸಬೇಕು

The Manager

Gateway Products

Zaveri Bazar BOMBAY, 2

7 O'CLOCK



7 ಒ ಕ್ಲೋಕಿನ ಸೆಟ್ಟಿನಂತೆ ಅಗ್ಗ ಕ್ರಯವನ್ನು ಸರಿಗಟ್ಟಿದವುಗಳ ಬಹಳ ಕಡಿಮೆ

ಒಂದು ಸೆಟ್ಟಿನಲ್ಲಿ ಒಂದು 7 ಒ ಕ್ಲೋಕ್ ರೇಜರ್ ಎರಡು 7 ಒ ಕ್ಲೋಕಿನ ಉಕ್ಕಿನ ಬ್ಲೇಡುಗಳು ಒಂದು ಅಚ್ಚುಕಟ್ಟಾಗಿ ಚಂದವಾದ ಪೆಟ್ಟಿಗೆಯಲ್ಲಿ ಆಶ್ಚರ್ಯಕರ ಕಮ್ಮಿ ಕ್ರಯವಾದ ಕೇವಲ 12 ಆಣೆಗೆ ಮಾರಲ್ಪಡುತ್ತದೆ

7ಒ ಕ್ಲೋಕ್ 10 ಬ್ಲೇಡುಗಳಿಗೆ ಬರೇ 8 ಆಣೆ ಕ್ರಯ

7 O.10

ಮಂಗಳೂರು ಸಮಾಚಾರ

ಕಳೆದ ತಾ. ೨೧ರ ಸಂಚಿಕೆಯ ಪತ್ರಿಕೆಯಲ್ಲಿ ಸಿ. ಪಿ. ಸಿ. ಕಂಪೆನಿಯ ಕಂಡಕ್ಟರ್ ಅಸೇಲ್ ಅಮ್ಮಣ್ಣ ಮತ್ತು ಕ್ಲಾರ್ಕ ಹರಿದಾಸ ಶೆಣ್ಯರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿ ಜಿಲ್ಲಾ ಕಲೆಕ್ಟರರು ತೀರ್ಮಾನಿಸಿದರಾಗಿ ಪ್ರಕಟಿಸಲ್ಪಟ್ಟಿರುತ್ತದೆ. ಸದ್ರಿ ವಿಷಯ ತನಿಖೆ ಮಾಡಿಯೇ ತೀರ್ಮಾನಿಸಬೇಕಾಗಿ ಸಿ. ಪಿ. ಸಿ. ಜನರಲ್ ಮೆನೇಜರರ ಪತ್ರಾಯವಿದ್ದರೂ, ಯೂನಿಯನ್ ತರ್ಪಿನಿಂದಲೂ, ಕಲೆಕ್ಟರರು ತನಿಖೆ ಬೇಡವೆಂದೂ ಅವರು ಅವರ ಹಿಂದಿನ ನಡತೆ ಬಗ್ಗೆ ಕ್ಷಮಾಪಣೆ ಕೇಳಲು ತಯ್ಯಾರಿರುವರೆಂದೂ, ಅವರ ಕ್ಷಮಾ ಯಾಚನೆಯನ್ನು ಪಡೆದು ಅವರನ್ನು ಹಿಂದೆ ತೆಗೆದುಕೊಳ್ಳಬೇಕೆಂದೂ ಬಹಳವಾಗಿ ಕೇಳಿಕೊಂಡ ಕಾರಣದಿಂದ ಸಂಬಂಧಪಟ್ಟ ಕೆಲಸಗಾರರ ಮೇಲಿನ ಕನಿಕರದಿಂದ ಅವರನ್ನು ಹಿಂದೆ ತೆಗೆದುಕೊಂಡದ್ದಾಗಿ ನಾವು ತಿಳಿದುಕೊಳ್ಳುತ್ತೇವೆ. ಅಲ್ಲದೆ ಈ ವಿಷಯವು ಜಿಲ್ಲಾ ಕಲೆಕ್ಟರರ ದೊರೆಗಳ ಕನಿಕರ ವಿಗೆ ಬಾರದೇನೇ ಇತ್ಯರ್ಥಪಟ್ಟಿದೆ

ಭಜನೆ ಮಂಡಳಿಯ ವಾರ್ಷಿಕೋತ್ಸವ

ಸ್ಥಳೀಯ ಸೀರೇಶ್ವಾಲ್ಯ ಆರ್ಯಭಜನಾ ಮಂಡಳಿಯ ವಾರ್ಷಿಕೋತ್ಸವವು ಜಿ. ಬೋ. ಅಧ್ಯಕ್ಷರಾದ ಡಾ. ಕೆ. ವಿಟ್ಠಲಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೧೬ರಲ್ಲಿ ಜರಗಿತು. ಶ್ರೀ ಯು. ಗೋವಿಂದರಾವ್, ಶ್ರೀ ಪಿ. ಮೋಹನಪ್ಪತಿಂಗಳಾಯರೇ ಮೊದಲಾದವರು ಭಾಷಣ ಮಾಡಿದರು

ಆಗಮನ

ದೇಶೀಯ ವೈದ್ಯಸಮ್ಮೇಳನದ ಉದ್ಘಾಟನೆ ಮಾಡುವುದಕ್ಕಾಗಿ ಮದ್ರಾಸಿನ ಪ್ರಸಿದ್ಧ ವೈದ್ಯರಾದ ಡಾ. ಎ. ಲಕ್ಷ್ಮೀಪತಿಯವರು ಕಳೆದ ತಾ. ೨೧ರಲ್ಲಿ ಮಂಗಳೂರಿಗೆ ಬಂದರು. ಅವರನ್ನು ಸ್ವಾಗತಿಸಲು ಜಿಲ್ಲಾ ಎಲ್. ಐ. ಎಂ. ಎಸೋಸಿಯೇಶನಿನವರು ಏರ್ಪಾಡು ಮಾಡಿದ್ದರು. ವೈದ್ಯಸಮ್ಮೇಳನದ ಅಧಿಕಾರಿಗಳು ಡಾ. ಲಕ್ಷ್ಮೀಪತಿಯವರನ್ನು ಸಮ್ಮೇಳನಕ್ಕೋಸ್ಕರ ಕರೆದುಕೊಂಡ ಹೋದ್ದರಿಂದ ಸತ್ಕಾರವು ಪ್ರದಾನ ಅತಿಥಿಗಳಿಲ್ಲದೆ ನಡೆಯಬೇಕಾಯಿತು. ಅದಲ್ಲದೆ ತಾ. ೨೨ರಲ್ಲಿ ಡಾ. ಲಕ್ಷ್ಮೀಪತಿಯವರು ಬೆಳಿಗ್ಗೆಯ ಸಂಸಾರಕ್ಕೆ ಬಂದು ಸ್ವಮಾರು ಒಂದು ತಾಸು ಎಲ್ಲರಿಗೂ ಕಾಣಿಸಿ ಸಭೆಯಲ್ಲಿ ಕೇಳಿದ ಹಲವು ಪ್ರಶ್ನೆಗಳಿಗೆ ವಿಷಯಗಳಿಗೆ ಉತ್ತರವಿತ್ತರು.

ದೇಶೀಯ ವೈದ್ಯ ಸಮ್ಮೇಳನ

ತಾ. ೨೨ನೇ ಬೆಳಿಗ್ಗೆ ವೈದ್ಯ ಸಮ್ಮೇಳನದ ಅಂಗವಾಗಿ ಸಿದ್ಧಪಡಿಸಿದ್ದ ಪ್ರದರ್ಶನವನ್ನು ಜಿಲ್ಲಾ ಅಧ್ಯಕ್ಷರಾದ ಶ್ರೀ ಎ. ಶಾಂತರಾಮ ಪೈಯವರು ಉದ್ಘಾಟನ ಮಾಡಿದರು

ಅಂದೇ ಸಾಯಂಕಾಲ ಡಾ. ಎ. ಲಕ್ಷ್ಮೀಪತಿಯವರು ವೈದ್ಯ ಸಮ್ಮೇಳನದ ಉದ್ಘಾಟನೆಯನ್ನು ನಡೆಸುತ್ತ ಹಲವು ಸೂಚನೆಗಳನ್ನಿತ್ತರು. ಅನಂತರ ಡಾ. ಯು. ಆರ್. ಭಟ್ ಇವರ ಸ್ವಾಗತ ಭಾಷಣವಾಗಿ ಅನಂತರ ಡಾ. ವೇದ ಭೂಷಣ ಡಾ. ಯು. ಪಿ. ಶಾಸ್ತ್ರಿಗಳು ಅಧ್ಯಕ್ಷ ಭಾಷಣಮಾಡಿದರು. ಡಾ. ಶಾಸ್ತ್ರಿಗಳ ಭಾಷಣವು ಬಹಳ ಅರ್ಥಗರ್ಭಿತವಾಗಿದ್ದು ವೈದ್ಯ ವೃತ್ತಿಯನ್ನನುಸರಿಸುವವರಿಗೆ ಹಲವು ಮುಖ್ಯ ಸಲಹೆಗಳನ್ನೊಳಗೊಂಡಿದ್ದಿತು. ತಾ. ೨೨ರಲ್ಲಿ ಪರಿಷತ್ತು ಪುನಃ ಸೇರಿ ಹಲವು ಮಹತ್ವದ ಠರಾವುಗಳನ್ನು ಮಾನ್ಯಮಾಡಿತು. ಇಂತೂ ವೈದ್ಯರ ಪ್ರಥಮ ಸಮ್ಮೇಳನವು ಯಶಸ್ವಿಯಾಗಿ ಜರಗಿತು.

ಮಂಗಳೂರು ನಗರ ಸಭೆ.

ಕಳೆದ ತಾ. ೧೯ನೇ ಸಾಯಂಕಾಲ ನಗರ ಸಭೆಯು ಶ್ರೀ. ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಸೇರಿತು. ಕೆಲವು ವೆಚ್ಚಗಳಿಗೆ ಹಣ ಮಂಜೂರಾಗಿ, ಕೆಲವು ಸಿರಕಾರಿ ಹುಕುಮುಗಳನ್ನು ಓದಿ ರೆಕಾರ್ಡು ಮಾಡಲ್ಪಟ್ಟ ತರುವಾಯ ಶ್ರೀ. ಅಂದ್ರಾದೆಯವರು ಒಂದು ಠರಾವು ತಂದು ಪ್ರತಿ ತಿಂಗಳಲ್ಲಿ ಲೈಸೆನ್ಸ್ ಬಗ್ಗೆ ಬಂದ ಅರ್ಜಿಗಳನ್ನೂ ಅವುಗಳು ಸ್ಯಾಂಕ್ಷನ್ ಆದ ಸಂಗತಿಗಳನ್ನೂ ಮರುತಿಂಗಳಲ್ಲಿ ಕೌನ್ಸಿಲಿಗೆ ತಿಳುಹಿಸಬೇಕು ಎಂದು ತರಬೇಕೆಂದು ಸೂಚಿಸಿದರು. ಇದರಿಂದ ಹೆಲ್ತ್ ಆಫೀಸರರಿಗೂ ಕಮಿಶನರಿಗೂ ಅಗೌರವ ಮಾಡಿದಂತಾಗುವುದೆಂದು ವಿ. ಶ್ರೀನಿವಾಸ ಮತ, ಇದರಿಂದ ಯಾರಿಗೂ ಅಗೌರವವಿಲ್ಲವೆಂದೂ ಕೌನ್ಸಿಲಿಗೆ ಎಲ್ಲಿ ಲೈಸನ್ಸಿಲ್ಲದೆ ನಾಸಿ ಕಟ್ಟು ತ್ತಾರೆಂಬುದನ್ನು ತಿಳಿಯಲು ಅನುಕೂಲವಾಗುವುದರಿಂದ ಈ ಠರಾವಿನಿಂದ ಬಾಧಕವಿಲ್ಲವೆಂದು ಅಧ್ಯಕ್ಷರು ಸೂಚಿಸಿದರು. ಆದ ಮಾನ್ಯವಾಯಿತು. ವೆಬ್‌ಸ್ಟರ್ ಮಾರ್ಕೆಟಿನ ತರಕಾರಿ ವಿಭಾಗ ಎಲ್ಲಿಡಬೇಕೆಂಬ ವಿಷಯವಾಗಿ ಕಲೆಕ್ಟರ್ ದೊರೆಗಳು ಕೊಟ್ಟ ಸೂಚನೆಗಳನ್ನು ಸಭೆಯವರು ನಿರಾಕರಿಸಿದರು.

"ಜಿಲ್ಲೆಯಲ್ಲಿ ಮೋಟಾರು ಯೂನಿಯನ್ನಿಂದ ಹೊರತೆ ಇತರ ಯೂನಿಯನುಗಳ ವರೆಗೆ ಏನೇನೂ ರಾಜಕೀಯ ವಿಷಯ ತಿಳಿದಿಲ್ಲ ಮಾತ್ರವಲ್ಲ ಪ್ರೆಸ್ ವರ್ಕರ್‍ಸ್ ಯೂನಿಯನಿನ ಕಾರ್ಯದರ್ಶಿಯಾಗಿ ಏಕಕಾಲದಲ್ಲಿ ಟೌನ್ ಕಾಂಗ್ರೆಸ್ ಕಮಿಟಿಯ ಜೊತೆ ಕಾರ್ಯದರ್ಶಿಯಾಗಿರುವ ಐತಪ್ಪ ಶೆಟ್ಟಿರೂ ಅಲ್ಲದ್ದ ರಾಜಕೀಯ ವಿಚಾರದಲಿ ಏನೇನೂ ಪರಿಚಯವಿಲ್ಲದವರನ್ನು ಕಾಂಗ್ರೆಸ್ ಕಮಿಟಿಯ ಅಧಿಕಾರಸ್ಥಾನದಲ್ಲಿ ಹಾಕಿದೆ. ಮೋಟಾರ್ ಯೂನಿಯನಿನವರ ಪ್ರಕಾರ ಅಲ್ಲಿ ಅಧಿಕಾರದಲ್ಲಿ" ಎಂಬ ಅರ್ಥದ ತಾತ್ಪರ್ಯ ಬರೆದ ನೋಟೀಸಿನಲ್ಲಿ ಶ್ರೀ. ಕೆ. ಐತಪ್ಪ ಶೆಟ್ಟರು ನೊಸ್ಪೆ ತಾನೇ ಜರಗಿದ ಸಭೆಯೊಂದರಲ್ಲಿ ಇತರ ಮೂಲದ ಸೆಂಟರುಗಳನ್ನು ಕಾಂಗ್ರೆಸ್ ಕಮಿಟಿಯ ಕಾರ್ಯಕ್ಕೆ ತುಚ್ಛೀಕರಿಸಿ ಮಾತನಾಡಿದ ಪ್ರಯುಕ್ತ ಇದೇ ತಾ. ೨೨-೪-೪೯ರಂದು ಜರುಗಿದ ಸೌತ್ ಕೆನರಾ ಪ್ರೆಸ್ ವರ್ಕರ್‍ಸ್ ಯೂನಿಯನಿನ ... ಮಂಡಳಿಯ ಸಭೆಯಲ್ಲಿ ಚರ್ಚಿಸಿ ಒಂದು ಕಮಿಟಿಯ ಠರಾವು ಈ ಕಳಗಿನ ಠರಾವನ್ನು ಸ್ವೀಕರಿಸಿ ಮಂಜೂರು ಮಾಡಿರುತ್ತಾರೆ

ತಾ. ೧೯-೪-೪೯ರಂದು ಸಾರ್ವಜನಿಕ ಪ್ರೆಸ್ಸಿನ ಸಭೆಯ ಬಿ ನವಯುಗ ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಕೆ. ಶೆಟ್ಟರು ಬೇಜವಾಬ್ದಾರಿಯಿಂದ ಪ್ರೆಸ್ ಕೆಲಸಗಾರರ ಸಂಘಕ್ಕೆ ರಾಜಕೀಯ ಗಂಧವೇನೆಂಬುದೇ ಗೊತ್ತಿಲ್ಲವೆಂದು, ಯೂನಿಯನಿನ ಕಾರ್ಯದರ್ಶಿಗಳಾಗಿದ್ದು ಟೌನ್ ಕಾಂಗ್ರೆಸ್ ಕಮಿಟಿಯ ಜತೆ ಕಾರ್ಯದರ್ಶಿಗಳಾದ ಶ್ರೀ ಕೆ. ಐತಪ್ಪ ಸೆಟ್ಟರನ್ನು ವ್ಯಕ್ತಿದ್ವೇಷದಿಂದ ದೂಷಿದುದನ್ನು ತೀವ್ರವಾಗಿ ಖಂಡಿಸುತ್ತದೆ ಮತ್ತು ಇವರು ಇನ್ನು ಮುಂದಾದರೂ ತಮ್ಮ ತಪ್ಪು ಅಭಿಪ್ರಾಯವನ್ನು ತಿದ್ದಿಕೊಳ್ಳುವರೆ ಪ್ರಯತ್ನಿಸುವರೆಂದು ತಿಳಿಯುತ್ತದೆ

ಸರದಾರ ಭವನ Sirdar Bhavan

ಫೀಲ್ಡ್ಸ್ಪೆ ಬಜಾರ್—ಮಂಗಳೂರು.

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೋಣೆಗಳು ಸರ್ವರ ಚಿತ್ತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ ಎಲ್ಲಾ ವಿಧದಲ್ಲಿಯೂ ತೃಪ್ತಿಗೊಳಿಸುವಂಥವುಗಳೇ.

Proprietor— **H. R Rao,**

Bangalore Gust Emporium Madras

ತಾಲ್ಲೂಕು ಸಮಾಚಾರ

ಕಾರ್ಕಳ.

ತಾ ೧೯-೪-೧೯೪೯ರ ದಿನ ಸಾಯಂಕಾಲ ಬೋರ್ಡು ಹೈಸ್ಕೂಲಿನ ಎಲಿಮೆಂಟರಿ ಶಾಲೆಯಲ್ಲಿ ಕೂಡಿದ್ದ ಸಾರ್ವಜನಿಕ ಸಭೆಯಲ್ಲಿ ಶ್ರೀ. ಜೋಕಿಮ್ ಆಳ್ವ ಬಿ ಎ ಬಿ. ಎಲ್. ಯಮ್ ಪಿ ಮತ್ತು ಶ್ರೀಮತಿ ವಾಯೊಲೆಟ್ ಆಳ್ವ ಯಂ. ಎ. ಎಲ್. ಟಿ. ಬಿ. ಯವರು ಸದ್ಯದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ಕುರಿತು ಇಂಗ್ಲೀಷಿನಲ್ಲಿ ಹೃದಯಂಗಮವಾದ ಭಾಷಣಗಳನ್ನು ಕೊಟ್ಟರು. ಶ್ರೀ ಕೆ ಸದಾನಂದ ಹೆಗ್ಡೆ ಬಿ ಎ ಬಿ ಎಲ್ ರವರು ಅಧ್ಯಕ್ಷರಾಗಿದ್ದರು.

ತಾ. ೨೦-೪-೧೯೪೯ರ ದಿನ ಇಲ್ಲಿ ಅಖಿಲ ಭಾರತ ಹೈದರಾಬಾದ ದಿನಾಚರಣೆ ಜರಗಿತು. ಅಂದು ಬೆಳಿಗ್ಗೆ ಪ್ರಭಾತಫೇರಿ, ಸತ್ಸಂಗಸಭೆ, ಸಾಯಂಕಾಲ ಸ್ಥಳೀಯ ಹ್ಯಾಸ್ಕೂಲು ಉಪಾಧ್ಯಾಯರಾದ ಶ್ರೀ ಬಿ ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಮತ್ತು ಅನೇಕ ಮುಖಂಡರ ಭಾಷಣಗಳಾದವು

ಉಡುಪಿ

ಮಂಗಳೂರು ವಿದ್ಯಾರ್ಥಿ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದಿದ್ದ ಶ್ರೀ ಜೋಕಿಮ್ ಆಳ್ವರು ಮತ್ತು ಶ್ರೀಮತಿ ವಾಯೊಲೆಟ್ ಆಳ್ವರು ಸ್ವರೂರಿಗೆ ಬಂದಲ್ಲಿ ತಾ. ೧೩ಕ್ಕೆ ಗಾಂಧಿ ಮೈದಾನದಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣ ಮಾಡಿದರು. ಇವರನ್ನು ಸನ್ಮಾನಿಸಲಿಕ್ಕೆ ಶ್ರೀ ಆರ್ ಎಮ್ ಅಂದ್ರಾದೆಯವರು ತಾ. ೨೦ಕ್ಕೆ ಒಂದು ಉಪಹಾರ ಕೂಟವನ್ನೇರ್ಪಡಿಸಿದರು. ಸುಮಾರು ೩೦೦ ಮಂದಿ ಗೃಹಸ್ಥರೂ ಮಹಿಳೆಯರೂ ಹಾಜರಿದ್ದರು. ಉತ್ತರವಾಗಿ ಅತಿಥಿಗಳಿಬ್ಬರೂ ದೀರ್ಘಭಾಷಣಮಾಡುತ್ತ ಪುರಜನರು ತಮ್ಮ ಅಲ್ಪವಾದ ಸೇವೆಗೆ ಆದರಕೊಟ್ಟು ಸತ್ಕರಿಸಿದ್ದಕ್ಕೆ ಉಪಕಾರ ಸ್ಮರಣೆ ಮಾಡಿದರಲ್ಲದೆ, ಅಲ್ಪ ಸಂಖ್ಯಾಕರು ಹೆಚ್ಚೆಚ್ಚಾಗಿ ರಾಷ್ಟ್ರ ಕಾರ್ಯದಲ್ಲಿ ಮುಂದೊತ್ತಿ ಬಂದು ನಿಷ್ಕ್ರಾಮಪೂರ್ವಕ ದೇಶಸೇವೆ ಮಾಡಬೇಕೆಂದು, ಬಹು ಸಂಖ್ಯಾತರು ಯಾವಾಗಲೂ ತಮಗೆ ಮುಕ್ತಹಸ್ತದಿಂದ ಸ್ವಾಗತೀಕರಿಸಿದ್ದಾರೆಂದು, ಭಾರತ ಸ್ವತಂತ್ರವಿಲ್ಲದಿದ್ದರೂ ರಾಷ್ಟ್ರದೇಳಿಗೆಯು ಸಾಧ್ಯವೇ ಇಲ್ಲವೆಂದು, ಈ ಮಹಾ ವ್ರತಕ್ಕೆ ಪ್ರತಿಯೊಬ್ಬರೂ ತಂತಮ್ಮ ಪಾಲಿನ ಕರ್ತವ್ಯ ಪಾಲಿಸಬೇಕೆಂದೂ ಸೂಚನವಾಗಿ ಹೇಳಿದರು.

ಉಡುಪಿ ಟೌನ್ ಕಾಂಗ್ರೆಸ್ ಕಮಿಟಿ.

ಈ ಟೌನ್ ತಾ. 5-3-೪೯ಕ್ಕೆ ಸದ್ರಿ ಕಮಿಟಿಯ ಅಧಿಕಾರಿ ವರ್ಗ ಮತ್ತು ಕಾರ್ಯಕಾರಿ ಮಂಡಳಿಗೆ ಸದಸ್ಯರ ಚುನಾವಣೆಯಾದದ್ದು ಅನರ್ಧ್ಯವೆಂದೂ ಅದನ್ನು ರದ್ದುಪಡಿಸಲಾಗಿದೆಯೆಂದೂ ಹೊಸ ಚುನಾವಣೆಯು ಇದೇ ತಾ. ೨೩ಕ್ಕೆ ಜರಗಿಸಲಾಗುವುದೆಂದೂ ಚುನಾವಣೆ ಅಧಿಕಾರಿಗಳಾದ ಶ್ರೀ ಪಿ. ಕೃಷ್ಣರಾಯರು ನಾಯಕರು ತಾ. ೧೨-೪-೪೯ಕ್ಕೆ ಹೊರಡಿಸಿದ ನೋಟೀಸಿನಂತೆ ಕ್ರಿಶ್ಚನ್ ಕಾಲೇಜಿನ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸಭೆ ಸೇರಿತು. ಸಭಾಕಾರ್ಯಕ್ಕೆ ಶ್ರೀ ಪಿ. ರಘುನಾಥ ನಾಯಕರು ಆಗ್ರಾಸನ ವಹಿಸಿ ಸದ್ರಿ ಚುನಾವಣೆಯನ್ನು ಜರಗಿಸುವದೆ ತಾವು ಅಧಿಕೃತರಾಗಿರುವೆವೆಂದು ಹೇಳಿದರು. ಸಭಾಸದರು ಪ್ರಶ್ನಿಸಿದ್ದಕ್ಕೆ ತಮಗೆ ಬರಹಮೂಲಕ ಅಧಿಕಾರವಿಲ್ಲದಿದ್ದರೂ ಬಾಯ್ಮಾತಿನಿಂದ ಹೇಳಿರುವರೆಂದೂ ಅಧ್ಯಕ್ಷರು ಉತ್ತರವಿತ್ತರು. ಸಭಾಕಾರ್ಯದರ್ಶಿಗಳು ಶ್ರೀ. ಎಚ್. ಎಸ್. ನಾಯಕರು ಸದ್ರಿ ಚುನಾವಣೆಯ ಕುರಿತು ಜಿಲ್ಲಾ ಕಾಂಗ್ರೆಸು ಕಮಿಟಿಗೆ ಬರೆಕೊಂಡಿರುವುದಾಗಿ ಅದರ ಉತ್ತರ ಬರುವವರೆಗೆ ಸದ್ರಿ ಸಭಾಕಾರ್ಯವನ್ನು ಮುಂದರಿಸಬೇಕಾಗಿ ಸೂಚಿಸಿದರು. ಅಧ್ಯಕ್ಷರು ಸೂಚನೆಯನ್ನು ನಿರಾಕರಿಸಿದರು; ಈ ಬಗ್ಗೆ ಸ್ವಲ್ಪ ಚರ್ಚೆಯಾಯಿತು. ಪ್ರೊಸೀಡಿಂಗ್ಸನಲ್ಲಿ ತನ್ನ ಸೂಚನೆಯ ವಿಷಯ ಬರೆಯಬೇಕೆಂದು ಶ್ರೀ. ಎಚ್. ಎಸ್. ನಾಯಕರು ಅಪೇಕ್ಷಿಸಿದ್ದಕ್ಕೆ ಅಧ್ಯಕ್ಷರು ಒಪ್ಪಲಿಲ್ಲ. ಶ್ರೀ ಆರ್ ಎಮ್. ಅಂದ್ರಾದೆಯವರು ಅಧ್ಯಕ್ಷರಿಗೆ ಬರಹ ಮೂಲಕ ಅಧಿಕಾರವಿಲ್ಲದ್ದರಿಂದ ಸಭೆಯನ್ನು ಮುಂದರಿಸಬಹುದೆಂದು ಕೇಳಿದರು. ಅಧ್ಯಕ್ಷರು ಸಭೆಯನ್ನು ಮುಂದರಿಸಬಹುದೆಂದು ಹೇಳಿದರು. ಅಧ್ಯಕ್ಷರು ಸಭೆಯನ್ನು ವಿಸರ್ಜನೆ ಮಾಡಿದರೆಂದು ಓರ್ವ ಸದಸ್ಯರು ತಿಳಿಸುತ್ತಾರೆ.

ಹೊಟ್ಟೆಯಮೇಲೆ ಶಸ್ತ್ರಚಿಕಿತ್ಸೆಯಿಂದ ರಕ್ಷಿಸಲ್ಪಾದೆನು.

ಈ ಕೆಳಗೆ ಕೊಟ್ಟಿರುವ ಪತ್ರವು ಹೊಟ್ಟೆಬೇನೆಗಾಗಿ ಶಸ್ತ್ರಚಿಕಿತ್ಸೆಯಿಂದ ನಿಮ್ಮನ್ನು ರಕ್ಷಿಸಬಹುದು. ಹೊಟ್ಟೆಬೇನೆಗಳಿಂದ ನರಳುವವರಿಗೆ ಅದರಲ್ಲಿ ಒಳ್ಳೆ ಸೀತಿಯಿದೆ

ಮೂರು ವರ್ಷಗಳ ಹಿಂದ ಬಿ. ಎ. ಇ. ಆರ್. ಎಂಬವರ ಮೇಲೆ ಭಯಂಕರ ತರದ ಹೊಟ್ಟೆ ಬೇನೆಗಾಗಿ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಆದರೆ ಕಳೆದ ಮೇ ತಿಂಗಳಿಂದ ಅದರಲ್ಲಿ ಮತ್ತೊಮ್ಮೆ ಆ ಸಂಕಟವು ಕಾಣಿಸಿಕೊಂಡದಲ್ಲದೆ, ಅದರ ನೋವನ್ನು ತಾಳಲಾರದೆ ಇನ್ನೊಮ್ಮೆ ಶಸ್ತ್ರಚಿಕಿತ್ಸೆ ಮಾಡುವದನ್ನು ಸೇರುವ ಭರದಲ್ಲಿದ್ದೆನು. "ನೋವು ಕಠಿಣವಾಗುತ್ತಾ ಹೋಯಿತು. ಈ ನೋವಿನಿಂದ ರಾತ್ರೆಗಳಲ್ಲಿ ನನಗೆ ನಿದ್ರೆ ಬರಲೇ ಇಲ್ಲ. ಕೊನೆಗೆ ನಾನು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸಿದೆ. ಈ ಔಷಧಿಯ ನಾಲ್ಕು ಬಾಟ್ಲಿಗಳ ಉಪಯೋಗದ ತರುವಾಯ ನನ್ನ ಆರೋಗ್ಯವು ನೆಟ್ಟಗಾಯಿತು.

ಮೆಕ್ಲೀನ್ ಬ್ರಾಂಡ್ ಸ್ಟಾಮಕ್ ಪೌಡರನ್ನು ನಾನು ಮೊದಲಾಗಿ ಉಪಯೋಗಿಸುತಿದ್ದರೆ ನನಗೆ ಪ್ರಥಮದಲ್ಲೂ ಶಸ್ತ್ರಚಿಕಿತ್ಸೆಯು ಆಗತ್ಯ ಬೀಳುತ್ತಿರಲಿಲ್ಲವೆಂದು ನನ್ನ ದೃಢವಾದ ನಂಬಿಕೆಯಾಗಿರುತ್ತದೆ

ಈ ವಿಶಿಷ್ಟ ಗುಣಗಳ ಕಾರಣ, ಸಾವಿರಾರು ಸಾಕ್ಷ್ಯಗಳಿಂದ ಇದು ಬಂದ. ನಿಮ್ಮ ಸಿಡಿಯು ಭಯಂಕರ ರೂಪವನ್ನು ತಾಳದಲಿಕ್ಕಿಲ್ಲ. ಅದರೂ ಬರದೆ ಇರುವುದನ್ನು ಈಗ ಕರೆಯುತ್ತೀರಿ. ನಿರ್ಜೀವ ದಡೆ ಲೇಬಲಿನ ಹೊಟ್ಟೆ ಪಿಡಗಳ ಮೇಲೆ ಇಟ್ಟದೆ ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸಿ, ಎಲ್ಲಾ ನೋವುಗಳನ್ನು ಮತ್ತು ಅನಾಯಾಸಗಳನ್ನು ನಿವಾರಿಸಿ ಅದನ್ನು ಹೊಂದ ಹಸ್ತಾಕ್ಷರ ವಾಗ್ದಾ

Alex. C. Maclean

ಎಂಬ ಸಹಿಯು ನೋಡಿರಿ ಕುರಿತು ಬಾಗ ನೋಡಲಾಗಿದೆ, ಈ ಸಹಿ ಇರುವ ಕೆಂಪುಮುದ್ರೆಯಿಂದ ಕೂಡಿದ ಬಾಟ್ಲಿಯಲ್ಲಿ ಬರುತ್ತದು ಮಾತ್ರ ಖಾತ್ರಿಯಾದ ಮೆಕ್ಲೀನ್ ಬ್ರೇಂಡ್ ಪೌಡರು. ಪುಡಿಗೆ, ಮಾತ್ರೆಗಳು ರೂಪದಲ್ಲಿ ದೊರೆಯುತ್ತಾವೆ. ನಕಲಿ ಬಾಟಲಿನಿಂದ ಸಿರಿ... ಎಲ್ಲಾ ಔಷಧಾಲಯಗಳಲ್ಲಿ ಮತ್ತು ಅಂಗಡಿಗಳಲ್ಲಿ ದೊರೆಯುತ್ತದೆ



ಹಿಂದೂಸ್ಥಾನದಲ್ಲಿ ಮುಸಲ್ಮಾನ ಸಾಮ್ರಾಜ್ಯದ ಕನಸು

ಅಫ್ಘಾನಿನ ಯುವರಾಜ



'ಅಫ್ಘಾನಿಸ್ಥಾನದ ಯುವರಾಜನಾದ ಮಹಮ್ಮದ್ ಅಕ್ಬರಖಾನ್

ಮುಸ್ಲಿಂ ಲೀಗಿನಂಥ ಜಾತೀಯ ಸಂಸ್ಥೆಗಳು ಕೇವಲ ಜಾತೀಯ ಭಾವನೆಗಳಿಂದ ಪ್ರೇರಿತವಾಗಿ ದೇಶಸ್ವಾರ್ಥವನ್ನು ಬಲಿಕೊಡುತ್ತವೆ, ಅನಾವಶ್ಯಕ ಗೊಂದಲವನ್ನೆಬ್ಬಿಸಿ ದೇಶದ ಶಾಂತಿಯನ್ನೂ ಕೆಡಿಸುತ್ತವೆ ಅಂಥ ಸಂಸ್ಥೆಗಳೂ ಆ ಸಂಸ್ಥೆಗಳಿಗೆ ಸೇರಿದ ಜನರೂ ದಿವಂಗತ ಕೆಮಾಲ್ ಅಟಾಟರ್ಕರ ಆದರ್ಶ ಗುಣನಡತೆಗಳ ಅನುಕರಣ ಮಾಡುವರಾದರೆ ದೇಶಕ್ಕೆ ಎಷ್ಟೋ ಹಿತವಾಗುವುದು, ಜಾತಿಗಳ ಕಲ್ಯಾಣವೂ ಆಗುವುದು ಆದ್ದರಿಂದ ಜಾತೀಯವಾದಿಗಳು ಒಮ್ಮೆಗೆ ಅಟಾಟರ್ಕರ ಓರ್ವದೇಶವನ್ನು ಕಂಡುಬಂದರೆ ಒಳ್ಳೇದೆಂದು. ರಾಷ್ಟ್ರಪತಿ ಸುಭಾಷಬಾಬುಗಳು ಹಿತವಚನವನ್ನು ಆಡಿದ್ದಾರೆ ಅವರು ಹೇಳಿರುವರೇನೆಂದರೆ — ಮುಸ್ತಾಫ ಕೆಮಾಲ ಪಾಶರ ಜೀವನವು ಅವರ ದೇಶೀಯರಿಗೆ ಮಾತ್ರವಲ್ಲ, ಇಡೀ ಮಾನವ ಕುಟುಂಬಕ್ಕೆ ಸ್ಫೂರ್ತಿದಾಯಕವಾಗಿರುವುದು. ಅವರೊಬ್ಬ ವೀರರು, ಸಾಹಸಿಗಳು. ರಾಜಕಾರಣಪಟುಗಳು ಮಾತ್ರವಲ್ಲ ರಾಷ್ಟ್ರನಿರ್ಮಾತರೂ ಆಗಿದ್ದರು ಅವರು ನಿರ್ಮಿಸಿದಂಥ ಟರ್ಕಿ ರಾಷ್ಟ್ರವು ಮಾನವಕುಟುಂಬಕ್ಕೆ ಒಂದು ಆದರ್ಶವಾಗಿರುವುದು ಆದ್ದರಿಂದ ಜಾತೀಯ ಸ್ವಾರ್ಥದಿಂದ ಅಂಧರಾದ ಜಾತಿವಾದಿಗಳು ಒಂದು ಬಾರಿ ಆಧುನಿಕ ಟರ್ಕಿಯನ್ನು ಕಂಡುಬರುವುದು ಪ್ರಯೋಜನಕರವಾಗಿದೆ

ಮುಸ್ಲಿಂ ಲೀಗಿನ ಕನಸು

ಆದರೆ ಮುಸ್ಲಿಂ ಲೀಗು ಹಿಂದುಸ್ಥಾನದಲ್ಲಿ ಹಿಂದೂ ಮುಸಲ್ಮಾನ ಕ್ರೈಸ್ತ ಪಾರ್ಸಿ ಮೊದಲಾದ ಬೇರೆ ಬೇರೆ ಧರ್ಮೀಯರ ಪರಸ್ಪರ ಸಂಘಟಿತವಾದ ಒಂದು ರಾಷ್ಟ್ರದ ನಿರ್ಮಾಣವನ್ನು ಇಚ್ಛಿಸುವುದಿಲ್ಲ ಅದು ಹಿಂದುಸ್ಥಾನದಲ್ಲಿ ಕೇವಲ ಮುಸ್ಲಿಂ ಸಾಮ್ರಾಜ್ಯ ಸ್ಥಾಪನೆಯ ಕನಸನ್ನು ಕಾಣುತ್ತದೆ ಆದ್ದರಿಂದ ರಾಷ್ಟ್ರನಿರ್ಮಾಣಕ್ಕಾಗಿಯೇ ಅರ್ವತ್ತು ವರ್ಷಗಳಿಂದ ಪ್ರಯತ್ನಿಸುತ್ತಿರುವ ಕಾಂಗ್ರೆಸನ್ನು ಅದು ಯುದ್ಧಕ್ಕೆ ಕರೆದಿದೆ ಕಾಂಗ್ರೆಸಿನ ರಾಷ್ಟ್ರನಿರ್ಮಾಣದ ಕಾರ್ಯಕಲಾಪಗಳನ್ನು ಕೆಡಿಸುವುದೊಂದೇ ಅದರ ಉದ್ದೇಶವಾಗಿರುವುದೆಂಬಂತೆ ಕಾಣುತ್ತದೆ

ವಾರ್ಧಾ ಶಿಕ್ಷಣಯೋಜನೆಯನ್ನು ಹಿಂದುಸ್ಥಾನದ ಶಿಕ್ಷಣತಜ್ಞರು ಮಾತ್ರವಲ್ಲ, ಹೊರದೇಶಗಳ ಮಹಾ ಮಹಾ ಪಂಡಿತರು ಕೂಡಾ ಪ್ರಶಂಸಿಸಿದ್ದಾರೆ ಆದರೆ ಆ ಯೋಜನೆಯನ್ನು ತಯ್ಯಾರಿಸಿ ದೇಶದ ಮುಂದಿಟ್ಟವರು ಮಹಾತ್ಮಾ ಗಾಂಧಿಯವರು ಮತ್ತು ಅವರ ಕಾಂಗ್ರೆಸ ಅನುಯಾಯಿಗಳು ಎಂಬುದರಿಂದ ಪೀರಪುರ ನವಾಬರ ಅಧ್ಯಕ್ಷತೆಯಲ್ಲಿ ರಚಿತವಾದ ಮುಸ್ಲಿಂ ಲೀಗ ಕಮಿಟಿಯು ಆ ಯೋಜನೆಯನ್ನು ತ್ಯಾಜ್ಯವೆಂದು ನಿಷೇಧಿಸಿದೆ! ಮುಸ್ಲಿಮರ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ನಮ್ಮ ಪ್ರಾಂತಿಕ ಸರಕಾರಗಳು ಮಾಡಿದರೆ ಅದರಿಂದ ತೃಪ್ತಿ ಇರುವುದಿಲ್ಲ ಯಾಕಂದರೆ ಪ್ರಾಂತಿಕ ಸರಕಾರಗಳಲ್ಲಿ ಹೆಚ್ಚಿನವು ಕಾಂಗ್ರೆಸ ಮಂತ್ರಿಮಂಡಲಗಳ ಸೂತ್ರ ಸಂಚಾಲನೆಗೆ ಒಳಪಟ್ಟವೆ! ಅದಕಾರಣ ಮುಸ್ಲಿಮರ ವಿದ್ಯಾಪ್ರಚಾರಕ್ಕೆ ಬೇರೆಯೇ ಒಂದು ಮುಸ್ಲಿಂ ಎಜ್ಯುಕೇಶನ ಬೋರ್ಡು ಆಗಬೇಕೆಂದು ಲೀಗಿನ ಆಸೆ ಆ ಬೋರ್ಡಿಗೆ ಸರಕಾರಗಳು ಬೇಕಾದಷ್ಟು ಹಣ ಮಂತಿಗೆ ಕೊಡಬೇಕೆಂದು ಲೀಗಿನ ಹಟ ಬೋರ್ಡು ಮುಸ್ಲಿಮರ ವಿದ್ಯಾಭ್ಯಾಸ ಕ್ರಮವನ್ನು ಮುಸ್ಲಿಮರಿಗೆ ಬೇಕಾದಂತೆ ರೂಪಿಸಿಕೊಳ್ಳುವುದು--ರಾಷ್ಟ್ರನಿರ್ಮಾಣಕ್ಕೆ ಅನುಕೂಲವಾಗುವಂತೆ ಅಲ್ಲ! ಆದ್ದರಿಂದಲೇ ಲೀಗಿನ ದೃಷ್ಟಿಯಲ್ಲಿ ವಾರ್ಧಾಶಿಕ್ಷಣಯೋಜನೆಯು ಲೋಪದೋಷಗಳಿಂದ ತುಂಬಿ ತುಳುಕಾಡುತ್ತದೆ! ವಾರ್ಧಾ ಶಿಕ್ಷಣಯೋಜನೆಯು ಹಿಂದು ಮುಸಲ್ಮಾನ ಸಂಸ್ಕೃತಿಯ ಮಿಲನಕ್ಕೆ ಪ್ರಯತ್ನಿಸುವುದರಿಂದ, ಅದು ಲೀಗಿಗೆ ಬೇಡ! ಜಾತಿ ಸ್ವಾರ್ಥದ ವಿಷವು ಹೇಗೆ ಮುಸ್ಲಿಂ ಲೀಗಿನ ಮೈ ಸೇರಿಕೊಂಡಿರುವುದೆಂಬುದನ್ನು ಇದರಿಂದ ತಿಳಕೊಳ್ಳಬಹುದು.

ಜಾತೀಯ ಸ್ವಾರ್ಥಾಂಧತೆಯ ಇನ್ನೊಂದು ದೃಷ್ಟಾಂತ

ಭಾರತೀಯ ವಹಿಳೆಯರ ಸ್ಥಿತಿಗತಿಗಳ ತನಿಖೆಮಾಡಿ ಅವುಗಳ ಸುಧಾರಣೆಯ ಬಗ್ಗೆ ಸೂಚನೆಗಳನ್ನು ಕೊಡುವುದಕ್ಕೋಸ್ಕರ ಒಂದು

ಶೇಕ ಅಬ್ದುಲ್ಲರ ವಿರುದ್ಧ ಲೀಗಿನ ಅಪಪ್ರಚಾರ

ಕಾಶ್ಮೀರದಲ್ಲಿ ಜವಾಬುದಾರ ಸರಕಾರ ಸ್ಥಾಪನೆಗೆ ಪ್ರಯತ್ನಿಸುತ್ತಿರುವ ಶೇಕ ಅಬ್ದುಲ್ಲರ ವಿರುದ್ಧ ಮುಸ್ಲಿಂ ಲೀಗಿನ ಏಜಂಟರು ಕುಂಬಾ ಅಪಪ್ರಚಾರ ಮಾಡುತ್ತಿರುವರು ಅವರನ್ನು ಈ ಏಜಂಟರು ಕಾಫಿರನೆಂದು ಕರೆಯಲಿಕ್ಕೂ ಹೇಸಿರುವುದಿಲ್ಲ

ಲೀಗು ಅಬ್ದುಲ್ಲರ ಮೇಲೆ ಸಿಟ್ಟಾಗಿರುವ ಕಾರಣವೆಂದರೆ—ಅವರು ತಮ್ಮ ಆಂದೋಲನದಲ್ಲಿ ಕಾಶ್ಮೀರದ ಅಲ್ಪ ಸಂಖ್ಯಾಕರಾದ ಹಿಂದುಗಳನ್ನೂ ತೆಗೆದುಕೊಂಡಿದ್ದಾರೆ ಮತ್ತು ಕಾಂಗ್ರೆಸಿನ ಸಹಾಯವನ್ನು ಸ್ವೀಕರಿಸಿದ್ದಾರೆ ಶೇಕ ಅಬ್ದುಲ್ಲರು ಮಾಡಿದ ಅಪರಾಧವು ಅದೇ ಆಗಿದೆ

ಕಾಂಗ್ರೆಸು ಸಂಸ್ಥಾನಾಧೀಶರ ಶತ್ರು

ಲೀಗಿನ ಒಬ್ಬ ಪ್ರಮುಖ ಸದಸ್ಯರಾದ ಮೌಲಾನಾ ಜಫರಲಿ ಖಾನರ ಕಪುರ್ತಲಾದಲ್ಲಿ ಭಾಷಣ ಮಾಡುತ್ತ ಕಾಂಗ್ರೆಸು ಸಂಸ್ಥಾನಾಧೀಶರ ಶತ್ರುವೆಂದೂ ಮುಸ್ಲಿಂ ಲೀಗು ಅವರ ಸ್ನೇಹಿತನೆಂದ ಹೇಳಿದ್ದಾರೆ ಸಂಸ್ಥಾನಾಧೀಶರ ರಕ್ಷಣೆಗೆ ಮುಸ್ಲಿಂ ಲೀಗ ಇರುವುದೆಂದೂ ಅವರು ಪ್ರಕಟವಾಗಿ ಸಾರಿದರು ಇಂಥ ಭಾಷಣಗಳ ಪರಿಣಾಮ ಏನೆಂಬುದು ರಾಜಕೋಟಿದಲ್ಲಿ ಸ್ಪಷ್ಟವಾಗುತ್ತದೆ ಅಲ್ಲಿ ಅಲ್ಪಸಂಖ್ಯಾಕರಾದ ಮುಸಲ್ಮಾನರ ಪ್ರತಿನಿಧಿಗಳಿರಬೇಕೆಂಬ ... ಪ್ರತಿನಿಧಿಗಳಿರಬೇ

ಪಠಾಣ ನಾವಿಕರು

ಮುಂಬಯಿಯ ಪಠಾಣ ನಾವಿಕರ ತಮ್ಮ ಕಷ್ಟಗಳನ್ನು ಗೃಹಮಂತ್ರಿಗಳಿಗೆ ನಿವೇದಿಸಲು ಸೆಕ್ರೆಟೇರಿಯಟ್ಟಿಗೆ ... ತೆರಳುವುದು

ಕಮಿಟಿಯ ರಚನೆಯಾಗಬೇಕೆಂದು ಸಮ್ಮತ್ರೀ ಜಿನರಾಜ ಹೆಗ್ಡೆಯವರು ಕೇಂದ್ರ ಅಸೆಂಬ್ಲಿಯಲ್ಲಿ ಒಂದು ಠರಾವನ್ನು ತಂದಿದ್ದರು ಈ ಠರಾವಿನ ಚರ್ಚೆಯಾಗುತ್ತಿರುವ ಕಾಲಕ್ಕೆ ಮುಸ್ಲಿಂ ಲೀಗ ಸದಸ್ಯರೊಬ್ಬರೂ ಅದನ್ನು ವಿರೋಧಿಸಿ ಹಿಂದೂ ಜಾತಿಯಿಂದ ಮುಸ್ಲಿಂಜಾತಿಯು ಬೇರೆಯೆಂದೂ ಮುಸ್ಲಿಮರ ಪ್ರತ್ಯೇಕ ಒಂದು ಜನಾಂಗವಾಗಿರುವರೆಂದೂ, ಮುಸ್ಲಿಂ ಸ್ತ್ರೀಯರ ಸ್ಥಿತಿಗತಿಗಳ ವಿಚಾರದ ಜವಾಬುದಾರಿ ಮುಸ್ಲಿಮರದಾದ್ದರಿಂದ, ಅವರ ಕುರಿತು ಹಿಂದುಗಳು ಆಲೋಚಿಸಬೇಕಾಗಿಲ್ಲವೆಂದೂ ಹೇಳಿದರು ಭಾರತೀಯ ಮುಸ್ಲಿಮರು ಪ್ರತ್ಯೇಕ ಒಂದು ಜನಾಂಗವಲ್ಲ ಹಿಂದು ಮುಸಲ್ಮಾನ ಮೊದಲಾದ ಎಲ್ಲ ಭಾರತೀಯರು ಕೂಡಿಯೇ ಒಂದು ಜನಾಂಗವಾಗುವುದೆಂದು ಲೋಕನಾಯಕರೆನಿಸುವವರು ತಪ್ಪುದಾರಿ ಹಿಡಿದ ಈ ಮುಸ್ಲಿಂ ಸದಸ್ಯರಿಗೆ ತಿಳುವಳಿಕೆ ಹೇಳಿಕೊಟ್ಟರೂ ಅವರು ಆ ಮಾತುಗಳ ಕಡೆಗೆ ಲಕ್ಷ್ಯವನ್ನೇ ಕೊಡಲಿಲ್ಲ ಕೇಂದ್ರ ಸರಕಾರದ ವಾಣಿಜ್ಯ ಮತ್ತು ಶಿಲ್ಪಿಖಾತೆಯ ಸದಸ್ಯರಾದ ಸರ್ ಮಹ್ಮದ ಜಫರುಲ್ಲಾರವರೂ ಲೀಗ ಸದಸ್ಯರಿಗೆ ಸೈಚಾಕಿದ್ದರು ಭಾರತೀಯ ಮುಸ್ಲಿಮರು ಬಿಡಾರ ಬೇರೆಮಾಡಿಕೊಳ್ಳಲಿಕ್ಕೆ ಹೇಗೆ ಪ್ರಯತ್ನಿಸುತ್ತಾರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕೆಂದ ಹಟತೊಟ್ಟಿರುವುದರಿಂದ ರಾಜಕೋಟಿ ಸುಧಾರಣಾ ಕಾರ್ಯದಲ್ಲಿ ಭಯಂಕರ ಅಭ್ಯಂತರಗಳು ಉಂಟಾಗಿರುತ್ತವೆ ತತ್ಕಾಲಕ್ಕೆ ಲೀಗು ತಂದೊಡ್ಡುವ ಈ ಎಡರುಗಳಿಂದ ಸಂಸ್ಥಾನಾಧೀಶರ ತಾವು ಗೆದ್ದೆವೆಂದು ಸಂತೋಷಪಟ್ಟು, ಪ್ರಜೆಗಳ ನ್ಯಾಯವಾದ ಬೇಡಿಕೆಗಳನ್ನು ಅಲಕ್ಷಿಸಬಹುದಾದರೂ ಕೊನೆಗೆ ಪ್ರಜಾಪಕ್ಷಕ್ಕೇ ಜಯವಾಗಬೇಕ ಆಗ ... ಶತ್ರುವಾಗಿದ್ದ ಕಾಂಗ್ರೆಸ್ಸು ತಮ್ಮನ್ನು ತಪ್ಪುದಾರಿಗೆ ಕೊಂಡುಹೋದ ಮುಸ್ಲಿಂ ಲೀಗೇ ತಮ್ಮ ಶತ್ರುವಾಗಿತ್ತೆಂದ ಅವರಿಗೆ ತಿಳಿದು ಬಂದೀತು ಹೇಗಿದ್ದರೂ ಕಾಂಗ್ರೆಸನ್ನು ಲೀಗು ಪ್ರತಿಯೊಂದುಕಡೆ ವಿರೋಧಿಸುತ್ತಿರುವುದರಿಂದ ಗಾಳಿಯು ಯಾವ ಕಡೆಗೆ ಬೀಸುತ್ತದೆಂಬುದು ಗೊತ್ತಾಗುತ್ತದೆ

ಕನಸು ಕನಸಾಗಿಯೇ ಉಳಿಯುವುದು

ಬೇಕಾದರೆ ಮುಸ್ಲಿಂ ಲೀಗು ತನ್ನ ಈ ಎಲ್ಲಾ ವ್ಯಾಪಾರಗಳಿಂದ ಹಿಂದುಸ್ಥಾನದಲ್ಲಿ ಮುಸ್ಲಿಂ ಸಾಮ್ರಾಜ್ಯದ ಸ್ಥಾಪನೆಯಾಗುವುದೆಂದು ಕನಸುಕಾಣಲಿ ಆದರೆ ಅದರ ಕನಸು ಕನಸಾಗಿಯೇ ಉಳಿಯುವುದು ಹಿಂದುಸ್ಥಾನದಲ್ಲಿ ಇತರ ಜಾತಿ ಮತೀಯರ ಹಿತಾಸಕ್ತಿಗಳಿಂದ ಮುಸ್ಲಿಮರ ಹಿತಾಸಕ್ತಿಗಳನ್ನು ಬೇರೆ ಮಾಡಿ ಅವುಗಳನ್ನು ರಕ್ಷಿಸುವುದು ಸಾಧ್ಯವಲ್ಲ

ಜೆಕೊಸ್ಲೊವೇಕಿಯದಲ್ಲಿ ಅತ್ಯಾಚಾರ



ಜರ್ಮನಿಯ ಸೈನ್ಯವು ಜೆಕೊಸ್ಲೊವೇಕಿಯವನ್ನು ಪ್ರವೇಶಿಸಿದಾಗ ಜೆಕ್ಕರ ಶಾಂತರೀತಿಯಿಂದ ನೋಡುತ್ತಿರುವರ

ಸಾಯುವುದಾದರೂ ಒಡ ಕೂಡುವುದಾದರೂ, ಅಳಿಯುವುದಾದರೂ ಉಳಿಯುವುದಾದರೂ ಮುಸ್ಲಿಮರೂ ಇತರ ಭಾರತೀಯರೂ ಕೂಡಿಯೇ ಹೋಗಬೇಕಲ್ಲದೆ ಬೇರೆ ಬೇರೆಯಾಗಿ ಸಾಧ್ಯವಿಲ್ಲ ಮುಸ್ಲಿಮರ ಉನ್ನತಿಯೂ ಅಭಿವೃದ್ಧಿಯೂ ಇತರ ಭಾರತೀಯರ ಉನ್ನತಿ ಅಭಿವೃದ್ಧಿಗಳನ್ನು ಹೊಂದಿಕೊಂಡಿವೆ ಹಿಂದುಸ್ಥಾನದ ಭೌಗೋಲಿಕ ಆರ್ಥಿಕ ರಾಜಕೀಯ ಸ್ಥಿತಿಗಳು ... ಸಹಕಾರ ... ಸ್ನೇಹ ಸಹನ ಭಾವಗಳಿಂದ ಹಿಂದು ಮುಸಲ್ಮಾನರ ಪರಸ್ಪರ ಉನ್ನತಿ ಅಭಿವೃದ್ಧಿಯನ್ನು ಸಾಧಿಸುವಂತೆ ... ಆದ್ದರಿಂದ ಲೀಗಿನ ಬೇಧಬುದ್ಧಿಯ ... ಆತ್ಮಘಾತಕವಾಗಿ ಇರುವುದು. ಅದರ ಬೇಧಬುದ್ಧಿಯಿಂದ ದೇಶಕ್ಕೆ ಆಗುವ ನಷ್ಟಕ್ಕಿಂತ ಮುಸ್ಲಿಂ ಸಮಾಜಕ್ಕೆ ಆಗುವ ನಷ್ಟವೇ ಹೆಚ್ಚು ಎಷ್ಟರತನಕ ಲೀಗು ಅದರ ಪ್ರಮುಖರಾದ ಜಿನ್ನ ಜಫರಾಲಿ ಮೊದಲಾದವರೂ ತಾವು ಹಿಡಿದ ತಪ್ಪುದಾರಿಯಿಂದ ಹಿಂದೆ ಸರಿಯುವುದಿಲ್ಲವೋ ಅಷ್ಟರ ತನಕ ವಿಚಾರವಂತ ಮುಸ್ಲಿಮರು ... ದೂರವಿರು ಇರಬೇಕಾಗುತ್ತದೆ ಆದ್ದರಿಂದಲೇ ಕಾಶ್ಮೀರದ ಶೇಕ ಅಬ್ದುಲ್ಲರು ಜಿನ್ನರಿಗೆ ಮೊದ್ಲ ನಮಸ್ಕಾರ ಕೊಟ್ಟು ಆ ಸಂಸ್ಥಾನದಲ್ಲಿ ಜವಾಬುದಾರಿ ಸರಕಾರವನ್ನು ಸ್ಥಾಪಿಸಲಿಕ್ಕೆ ಕಾಂಗ್ರೆಸಿನ ನೆರವನ್ನು ಪಡೆದಿದ್ದಾರೆ ಸಂಪೂರ್ಣ ಸ್ವರಾಜ್ಯ ಸ್ಥಾಪನೆಯಾದಾಗ ಭಾರತೀಯರಲ್ಲಿ ಆ ಜಾತಿ, ಈ ಜಾತಿ, ಎಂದೇನು ಎಲ್ಲ ಜಾತಿಗಳ ಉದ್ಧಾರವಾಗುವುದು ಆಗ ಹಿಂದುಗಳಿಗೆ ಹಿಂದು ಸಾಮ್ರಾಜ್ಯದ ಆಗತ್ಯವಿರುವುದಿಲ್ಲ ಮುಸಲ್ಮಾನರಿಗೆ ಮುಸಲ್ಮಾನ ಸಾಮ್ರಾಜ್ಯದ ಆಗತ್ಯ ಕಾಣುವುದಿಲ್ಲ

'DILROZ' Regd

Dil Roz' is a sure cure t Oriental sores local sores all kinds of deep-rooted sores skin eruptions Pimples Eczema, Ringworm Sinus Fistula Auxillary Abscess.

There is no need of dressing the wounds nor are baths prohibited Price Rs. 2 Postage extra.

TAHIR DIN,
Anarkali LAHORE

ಸಮಾಚಾರ-ಸಂಗ್ರಹ

ಸಾಹಿತಿಗಳಿಗೆ ಜವಾಹರಲಾಲರ ಉಪದೇಶ

ಜಗತ್ತಿನ ಎಲ್ಲ ಭಾಗಗಳಲ್ಲಿ ಅಶಾಂತಿಯು ಹರಡಿದೆ. ಹಿಂದುಸ್ಥಾನದಲ್ಲಿಯೂ ಅಶಾಂತಿ ಇದೆ. ದಿನದಿನಕ್ಕೆ ಹೊಸ ಹೊಸ ಸಮಸ್ಯೆಗಳು ಉಪಸ್ಥಿತವಾಗುತ್ತವೆ. ಆದರೆ ಈ ಸಮಸ್ಯೆಗಳನ್ನು ಬಿಡಿಸಿಕೊಂಡು ರಾಷ್ಟ್ರವು ಉನ್ನತಿಯ ಮಾರ್ಗದಲ್ಲಿ ಮುನ್ನಡೆಯಿಡುವಂತೆ ಸಾಹಿತಿಗಳು ಜೀವಿತ ಸಾಹಿತ್ಯದ ನಿರ್ಮಾಣ ಮಾಡಬೇಕು. ಎಂದು ದಿಲ್ಲಿಯಲ್ಲಿ ಕೂಡಿದ ಹಿಂದೀ ಪರಿಷತ್ತಿಗೆ ಸಂದೇಶವನ್ನು ಕಳುಹಿಸುತ್ತಾ ಪಂಡಿತ ಜವಾಹರಲಾಲರು ಹೇಳಿದರು. 'ಜೀವಿತ ಸಾಹಿತ್ಯದ ನಿರ್ಮಾಣವಾಗದಿದ್ದರೆ ರಾಷ್ಟ್ರದ ಪ್ರಗತಿಯಾಗುವುದು ಅವಶ್ಯ. ಜೀವಿತಸಾಹಿತ್ಯದ ನಿರ್ಮಾಣವಾಗುವುದಕ್ಕೋಸ್ಕರ ಸಾಹಿತಿಗಳು ಬೇರೆ ಬೇರೆ ಭಾರತೀಯ ಭಾಷಾಸಾಹಿತ್ಯಗಳ ಅಧ್ಯಯನವಮಾಡಬೇಕು. ಈಗ ದೇಶೀಯ ಭಾಷೆಗಳ ನವೀನಕ್ರಮದಲ್ಲಿ ವಿಕಾಸವಾಗಿದೆ ಆದರೂ ನಾವು ಉತ್ತಮ ತರಗತಿಗೆ ಸೇರಿದ ಕೆಲವೇ ರಾಷ್ಟ್ರೀಯ ಪದಗಳನ್ನು ರಚಿಸಲು ಸಮರ್ಥರಾಗಲಿಲ್ಲ ಬೇರೆ ರಾಷ್ಟ್ರಗಳಲ್ಲಿ ಇಂಥ ಪರಿಸ್ಥಿತಿಯುಂಟಾದಾಗ ಅಂಥ ಹಲವು ರಾಷ್ಟ್ರೀಯ ಪದಗಳು ರಚಿಸಲ್ಪಡುತ್ತಿದ್ದುವು. ಚೀನದ ಕಡೆಗೇ ಲಕ್ಷ್ಯಕೊಟ್ಟು ನೋಡಿರಿ ಚೀನವು ಇಂದು ಜಪಾನಿಯರ ಆಕ್ರಮಣದಿಂದ ಬಹಳ ಕಷ್ಟದಲ್ಲಿದೆಯಾದರೂ ಸಾಹಿತ್ಯ ವಿಭಾಗದಲ್ಲಿ ಅದರ ಪ್ರಗತಿಯು ಅದ್ಭುತವಾಗಿರುವುದು. ಅದು ಚೀನಿಯರ ಗುಪ್ತಶಕ್ತಿಯ ಪರಿಚಯ ಮಾಡಿಸುತ್ತದೆ ಆದ್ದರಿಂದ ಆಕ್ರಮಣಗಳಿಂದ ಚೀನವನ್ನು ಗೆಲ್ಲುವುದು ಯಾವ ರಾಷ್ಟ್ರಕ್ಕೂ ಅಸಾಧ್ಯವೆಂದು ನಮಗೆ ತೋರುತ್ತದೆ ಆದ್ದರಿಂದ ನಮ್ಮ ದೇಶದ ಉನ್ನತಿಯಾಗುವಂತೆ ನಾವೂ ಜೀವಿತ ಸಾಹಿತ್ಯದ ನಿರ್ಮಾಣದ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು' ಎಂದು ಅವರು ತಮ್ಮ ಸಂದೇಶದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ

ದಾಕಿನ ಬದಲಿಗೆ ಹೊಸ ಚಿಕಿತ್ಸೋಪಾಯ

ಅಂಟುರೋಗಗಳು ಬಾರದಂತೆ ಈಗ ದಾಕು ಹಾಕಲಾಗುತ್ತದೆ' ದಾಕು ಹಾಕುವುದರಿಂದ ಆಯಾ ದಾಕಿನ ರೋಗಗಳು ... ದಾಕಿನ ದುಷ್ಪರಿಣಾಮದಿಂದ ಮನುಷ್ಯನು ... ಜಾತಿಯ ಅನೇಕ ರೋಗಗಳಿಗೆ ಬಲಿಯಾಗುತ್ತಾನೆ ಎಂದು ಹೇಳುತ್ತಾರೆ ಅದಕ್ಕೋಸ್ಕರ ಫ್ರಾನ್ಸಿನ ಒಬ್ಬ ವೈದ್ಯನು ದಾಕಿನ ಬದಲಿಗೆ ಇನ್ನೊಂದು ಚಿಕಿತ್ಸೋಪಾಯವನ್ನು ಕಂಡು ಹಿಡಿದಿರುತ್ತಾನೆ ಚರ್ಮವನ್ನು ಉಗುರಿನಿಂದ ಸ್ವಲ್ಪ ಪರಚಿಕೊಂಡು ಆ ಭಾಗದಲ್ಲಿ ಬೇರೆ ಬೇರೆ ರೋಗಗಳಿಗೆ ಸಿದ್ಧಮಾಡಿದ ಔಷಧ ಹಾಕಿಟ್ಟು ವಸ್ತ್ರದ ಪಟ್ಟಿ ಕಟ್ಟಿದರಾಯಿತು. ಆ ರೋಗವು ಮನುಷ್ಯನಿಗೆ ತಗಲುವುದಿಲ್ಲ ದಾಕಿನ ಅನಂತರ ದುಷ್ಪರಿಣಾಮಗಳೂ ಇಲ್ಲ ಎಂದು ಆ ವೈದ್ಯನು ಡಾಕ್ಟರ ಒಂದು ಸಭೆಯಲ್ಲಿ ಭಾಷಣಕೊಟ್ಟಿರುವನು

ಮೋರಾಣ ಸಾಗರದಲ್ಲಿ ಬಜಾಜರ ಬಂಧನ

'ಜಯಪುರ ಸರಕಾರವು ಜಯಪುರ ಸಂಸ್ಥಾನವನ್ನು ಪ್ರವೇಶಿಸ ಬಾರದೆಂದು ಕೊಟ್ಟ ನಿರ್ಬಂಧಾಜ್ಞೆಯನ್ನು ಮುರಿದುದರಿಂದ ಶ್ರೀ. ಜಮುನಾಲಾಲ ಬಜಾಜರನ್ನು ಜಯಪುರದ ಸರಕಾರವು ಬಂಧನದಲ್ಲಿಟ್ಟಿದೆ ಅಲ್ಲಿ ಪ್ರಜಾಪರಿಷತ್ತಿನ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿದೆಯಾದರೂ ಬಜಾಜರ ಬಿಡುಗಡೆಯಾಗಿರುವುದಿಲ್ಲ. ಮೋರಾಣ ಸಾಗರದ ಒಂದು ಮನೆಯಲ್ಲಿ ಬಜಾಜರು ಇದ್ದಾರೆ ಆ ಊರು ತುಂಬ ಅನಾರೋಗ್ಯಕರವಾಗಿರುವುದು ಕಳೆದ ಒಂದು ತಿಂಗಳಿನಿಂದ ಯಾವ ಡಾಕ್ಟರನೇ ಬಜಾಜರ ಶರೀರ ಪರೀಕ್ಷೆ ಮಾಡಿದುದಿಲ್ಲ. ನೀರು ಭಾರವಾಗಿರುವುದರಿಂದ ಬಜಾಜರು ದಿವಸಕ್ಕೆ ಒಂದೇ ಊಟಮಾಡುತ್ತಾರೆ. ಟಪ್ಪಾಲು, ವರ್ತಮಾನ ಪತ್ರಿಕೆ, ಆಹಾರ ಸಂಬಂಧವಾದ ಬಜಾಜರ ತಕರಾರುಗಳನ್ನು ಸರಕಾರವು ಇನ್ನೂ ದೂರ ಮಾಡಿಲ್ಲ. ಅವರಿಗೆ ಒಬ್ಬ ಸಂಗಾತಿಯು ಕೂಡ ಇರುವುದಿಲ್ಲ. ಮೋರಾಣ ಸಾಗರದ ಒಂದು ಮನೆಯಲ್ಲಿ ಅವರನ್ನು ಬಂಧನದಲ್ಲಿಟ್ಟಿರುವುದಕ್ಕಿಂತ ಜಯಪುರದ ಸೆಂಟ್ರಲ್ ಜೈಲಿನ ಸಣ್ಣ ಕೋಣೆಯಲ್ಲಿ ಇಟ್ಟಿದ್ದಾದರೂ ಆಗುತ್ತಿತ್ತು' ಎಂದು ಸೇಠ ರಾಧಾಕೃಷ್ಣ ಬಜಾಜರು ಪ್ರಕಟಣೆ ಕೊಟ್ಟಿದ್ದಾರೆ.

ಬೊಂಬಾಯಿಯಲ್ಲಿ ಸಾಕ್ಷರತೆಯ ಪ್ರಚಾರ

ಬೊಂಬಾಯಿಯಲ್ಲಿ ಸಾಕ್ಷರತೆಯ ಪ್ರಚಾರವು 'ತೀವ್ರಗತಿಯಿಂದ ನಡೆದಿರುವುದು ಆ ಸಂಬಂಧ ಬೊಂಬಾಯಿ ಪ್ರಧಾನ ಶ್ರೀ ಬಿ ಜಿ ಖೇರರಿಗೆ ಒಂದು ಸಂದೇಶವನ್ನು ಕೊಡುತ್ತಾ ಪಂಡಿತ ಜವಾಹರಲಾಲರು—'ನಿಮ್ಮ ಪ್ರಚಾರ ಕಾರ್ಯದ ಸಮಾಚಾರ ಕೇಳಿ ಬಹಳ ಸಂತೋಷವಾಯಿತು ಜ್ಞಾನದಾನಕ್ಕಿಂತ ಮಿಗಿಲಾದದಾನವಿಲ್ಲ ಜ್ಞಾನಕ್ಕಿಂತ ಮಿಗಿಲಾದ ಶಕ್ತಿಯಿಲ್ಲ ನಿಮ್ಮ ಈ ಪವಿತ್ರ ಕಾರ್ಯದಲ್ಲಿ ನಿಮಗೆ ಸಂಪೂರ್ಣ ಯಶಸ್ಸನ್ನು ಕೋರುತ್ತೇನೆ ಜನತೆಯು ನಿಮಗೆ ಸಂಪೂರ್ಣ ಸಹಕಾರ ಕೊಡವುದಾಗಿ ಆಶಿಸುತ್ತೇನೆ ' ಎಂದಿರುವರು

ಚೇಂಬರಲೇನರು ಪದಚ್ಯುತರಾಗಬೇಕಾದೀತು

ಯುರೋಪದ ಪರಿಸ್ಥಿತಿ ರಾಜಕೀಯ ವಾತಾವರಣದ ವಿಚಾರವಿಮರ್ಶೆ ಸುಪ್ರಸಿದ್ಧ ಲೇಖಕರಾದ ಎ ಜಿ ಗಾರ್ಡಿನರ ಎಂಬವರು— 'ಚೇಂಬರಲೇನರು ಸದ್ಯದಲ್ಲಿಯೇ ತಮ್ಮ ಪ್ರಧಾನ ಪಟ್ಟದಿಂದ ಚ್ಯುತರಾಗಬೇಕಾಗುವುದು. ಅವರ ನೀತಿಯಿಂದ ದೇಶಕ್ಕೆ ಲಾಭವಾಗ ವುದರ ಬದಲಿಗೆ ಹಾನಿಯೇ ಆಗಿದೆ ' ಎಂದು ಪ್ರಮಾಣಗಳನ್ನು ಕೊಟ್ಟು ಸ್ಪಷ್ಟಪಡಿಸಿ ಚೇಂಬರಲೇನರ ಅನಂತರ ವ್ಯಾಯಕೌಂಟ ಲೋರ್ಡ ಹೆಲಿಫೆಕ್ಸ (ನಮ್ಮ ದೇಶದ ವ್ಹಾಯ್ಸರಾಯರಾಗಿದ್ದ ಲಾರ್ಡ ಇರ್ವಿನ)ರು ಬ್ರಿಟಿಷ ಪ್ರಧಾನರಾಗಬಹುದು ಎಂದಿದ್ದಾರೆ

ಚೀನದಲ್ಲಿ ಅವ್ಯವಸ್ಥೆಯಿಂದ ವ್ಯವಸ್ಥೆಗೆ

ಅವ್ಯವಸ್ಥೆಯಿಂದ ಮನುಷ್ಯನ ಸಮಾಜದ ಪ್ರಗತಿಯು ಕಡೆಯುತ್ತದೆ ವ್ಯವಸ್ಥೆಯಿರುವುದರಿಂದ ಜಗತ್ತಿನ ಕಾರ್ಯನಿರ್ವಹವಾಗುತದೆ ಈಗ ಚೀನದಲ್ಲಿ ಜಪಾನಿಯರ ಆಕ್ರಮಣದಿಂದ ತುಂಬ ಅವ್ಯವಸ್ಥೆ ಉಂಟಾಗಿರುವುದಾದರೂ, ರಾತ್ರಿ ಕಳೆದ ಅನಂತರ ಹಗಲು ಬರುವಂತೆ ಈ ಅವ್ಯವಸ್ಥೆಯ ಅನಂತರ ವ್ಯವಸ್ಥೆ ಉಂಟಾಗಿ ಚೀನದ ಇತಿಹಾಸ ಸ್ಥಿತಿಯು ಅಭಿವೃದ್ಧಿಯಾಗುವುದೆಂದು ಚೇಂಗ್‌ಕೈ-ಶೇಕರು ಇಂಗ್ಲಂಡಿನ ತಮ್ಮ ಒಬ್ಬ ಮಿತ್ರರಿಗೆ ಪತ್ರ ಬರೆದಿರುವರು.

ಲಂಡನಿಗೆ ಜರ್ಮನ ಬಾಂಬುಗಳು

ಲಂಡನು ಇಂಗ್ಲಂಡಿನ ಸಮುದ್ರಕರೆಗೆ ಒತ್ತಾಗಿರುವುದರಿಂದ ಜರ್ಮನ ಯುದ್ಧ ವಿಮಾನಗಳು ಲಂಡನನ್ನು ಮುತ್ತಿ ಬಾಂಬುಗಳನ್ನು ಚೆಲ್ಲಿ ಲಂಡನಿನ ನಾಶಮಾಡುವುದು ಸುಲಭ ಎಂದು ಎಷ್ಟೋ ಮಂದಿ ಹೇಳುವರು. ಆದರೆ ಲಂಡನಿಗೆ ಜರ್ಮನ ಬಾಂಬುಗಳ ಭಯ ಇಲ್ಲವೇ ಇಲ್ಲವೆಂದು ನಿಸ್ಟೋಟ ಪ್ರೋಬ್ಬರ್ ಎಂಬುವರು ಸಂಡೇ ಎಕ್ಸಪ್ರೆಸ ಪತ್ರಿಕೆಯಲ್ಲಿ ಬರೆಯುತ್ತಾರೆ ಯಾಕೆಂದರೆ ಪ್ರಕೃತ ಒಂದು ಮಹಾಯುದ್ಧವು ಆರಂಭವಾದರೆ, ಯುದ್ಧೋಪಕರಣಗಳನ್ನು ನಡೆಸಲಿಕ್ಕೆ ಬೇಕಾದಷ್ಟು ಪೆಟ್ರೋಲು ಜರ್ಮನಿಯ ಹತ್ತಿರ ಇರುವುದಿಲ್ಲ. ಆದಕಾರಣ ಯುದ್ಧೋಪಕರಣಗಳ ಅಭಾವದಿಂದ ಅಲ್ಲ, ಪರಂತು ಅವುಗಳ ಚಲನೆಗೆ ಬೇಕಾದಷ್ಟು ಪೆಟ್ರೋಲಿನ ಸಂಗ್ರಹ ಇಲ್ಲವಾದುದರಿಂದ ಜರ್ಮನಿ ಲಂಡನಿನ ಕಡೆಗೆ ದೃಷ್ಟಿ ತಿರುಗಿಸದೆ ಸುಮ್ಮಗಿರಬೇಕಾಗುತ್ತದೆ ಎಂಬುದು ಇವರ ಅಭಿಪ್ರಾಯ

ರಷ್ಯದ ಬಲ ಪರೀಕ್ಷೆ

ಯುದ್ಧ ಸಂಭವದಲ್ಲಿ ರಷ್ಯದಿಂದ ಯಾರಿಗೆ ಎಷ್ಟು ಸಹಾಯವಾದೀತು ಎಂಬ ಕುರಿತು ಸಂದೇಹವಿದೆ ಹೊರಗಿನಿಂದ ರಷ್ಯವು ಎಷ್ಟು ಬಲಿಷ್ಠವೆಂದು ತೋರಿಸಿಕೊಳ್ಳುತ್ತದೋ ನಿಜವಾಗಿ ಅದು ಅಷ್ಟು ಬಲವಾಗಿರುವುದಿಲ್ಲವೆಂದು ಕೆಲವರ ಅಭಿಪ್ರಾಯ ಆದರೆ ತಾನು ಬಲದಲ್ಲಿ ಯಾರಿಗೂ ಕಡಿಮೆಯಾಗಿರುವುದಿಲ್ಲವೆಂದು ... ತಟಿದೆ ಬೇಕಾದರೆ ಬ್ರಿಟನು ... ದೇಶಗಳ ... ಬಂದ ಪರೀಕ್ಷೆ ನಡೆಸಬಹುದೆಂದೂ, ಅವರ ಪರೀಕ್ಷೆಗೆ ತಕ್ಕ ಅನುಕೂಲಗಳನ್ನು ತಾನು ಮಾಡಿಕೊಡುವುದಾಗಿಯೂ ಅದು ಹೇಳುತ್ತದೆ

ಬ್ರಿಟಿಷರನ್ನು ಚೀನದಿಂದ ಹೊರದೊಬ್ಬಿರಿ!

ಎಂದು ಜಪಾನಿಯರ ವಶವಾದ ಚೀನೀ ಪ್ರದೇಶಗಳಲ್ಲಿ ಚೀನಿಯರು ಪ್ರಚಾರಕ್ಕೆ ಆರಂಭವಾಗಿದೆ. ಹಿಂದಿನಿಂದ ಜಪಾನಿಯರು ಚೀನಿಯರನ್ನು ಈ ಕಾರ್ಯಕ್ಕೆ ಪ್ರೇರಿಸುತ್ತಿದ್ದಾರೆಂದೂ ವಾರ್ತೆ. ಬ್ರಿಟಿಷರ ಅಪ್ರತ್ಯಕ್ಷ ಸಹಾಯವು ಚೀನಿಯರಿಗೆ ದೊರೆತಿರುವುದರಿಂದ ತಾನು ಚೀನದಲ್ಲಿ ಗೆಲ್ಲದೆ ಇದ್ದೇನೆಂದು ಜಪಾನಿಗೆ ಬ್ರಿಟಿಷರ ಮೇಲೆ ತುಂಬಾ ಸಿಟ್ಟು ಇದೆ. ಆದ್ದರಿಂದ ಚೀನಿಯರನ್ನು ತಮ್ಮ ಕೈಯ ಗೊಂಬೆಗಳನ್ನಾಗಿ ಮಾಡಿ—ಬ್ರಿಟಿಷರನ್ನು ಚೀನದಿಂದ ಹೊರದೊಬ್ಬಬೇಕೆಂದು ಈ ಕಾರ್ಯವನ್ನು ಆರಂಭಿಸಿದ್ದಾರೆ.

ವಿಚಿತ್ರ ರೀತಿಯ ಸತೀತ್ವ ಪರೀಕ್ಷೆ

ಕಲಕತ್ತೆ ಸಂಸ್ಥಾನದ ಚಿತ್ರಕೂಟರು ಎಂಬಲ್ಲಿಯ ರಾಜಕೌಂಡನ ಎಂಬವನು ಒಬ್ಬ ನಾಯರ ಜಾತಿಯ ಹೆಂಗಸನ್ನು ಮದುವೆಯಾಗಿದ್ದನು. ಅವರಿಗೆ ಒಂದು ಮಗುವೂ ಹುಟ್ಟಿತ್ತು. ಈಗ್ಗೆ ಕೆಲವು ಸಮಯದ ಮೊದಲು ಆ ಹೆಂಗಸಿನ ಶೀಲದ ಕುರಿತು ಕೌಂಡನನಿಗೆ ಸಂದೇಹವುಂಟಾಯಿತು ತನ್ನ ಅಂಗೈ ಮೇಲೆ ಕರ್ಪೂರ ಹಚ್ಚಿಟ್ಟು ಆಕೆಯ ಸತೀತ್ವ ಪರೀಕ್ಷೆ ಮಾಡಬೇಕೆಂದು ಯೋಚಿಸಿ ಅವನು ಅವಳನ್ನು ಒತ್ತಾಯಿಸಿದನು ಕರ್ಪೂರ ಸುಟ್ಟುದರಿಂದ ಆಕೆಯ ಕೈ ಬೆಂದುದಾದರೆ ಅವಳು ವ್ಯಭಿಚಾರಿಣಿ ಆಗಿದ್ದಾಳೆಂಬುದು ಅವನ ಭಾವ. ನಿರುಪಾಯಳಾಗಿ ಅವಳು ಅಂಗೈ ಮೇಲೆ ಕರ್ಪೂರವನ್ನು ಉರಿಸಲು ಕೈ ಸುಟ್ಟು ಹೋಯಿತು ಕೌಂಡನನು ಆಕೆಯನ್ನು ತ್ಯಜಿಸಿ ಬಿಟ್ಟು, ಪೋಲೀಸರು ದಾವೆಮಾಡಿದಾಗ ಕೌಂಡನಿಗೆ ಎರಡು ವಾರಗಳ ಕಠಿಣ ಶಿಕ್ಷೆಯಾಯಿತು

ಬಿಲ್ಲುಗಳು ಮಂಜೂರಾದುವು

ಮಧ್ಯಪ್ರಾಂತ ಸರಕಾರವು ಮಂಡಿಸಿದ ಮಧ್ಯಪ್ರಾಂತೀಯ ಮುನ್ಸಿಪಾಲಿಟಿಗಳ ಸುಧಾರಣೆಯ ಮಸೂದೆ ಮತ್ತು ಬೊಂಬಾಯಿ ಸರಕಾರವು ಮಂಡಿಸಿದ ಒಗಟು ಸಮಸ್ಯೆಗಳ ಮೇಲೆ ತೆರಿಗೆ ಹಾಕುವ ಮಸೂದೆಗಳು ಅನುಕ್ರಮವಾಗಿ ಮಧ್ಯಪ್ರಾಂತ ಮತ್ತು ಬೊಂಬಾಯಿಯ ಎಸೆಂಬ್ಲಿಗಳಲ್ಲಿ ಮಂಜೂರಾದವು

ಜರ್ಮನಿಗಿಂತ ಭೂತರಾಜ್ಯವಾಗಬಹುದು

ನಾಝಿಜರ್ಮನಿಯಲ್ಲಿ ಜನರಿಗೆ ನಿಕ್ಕವ ಕಷ್ಟಗಳಿಗಿಂತ ಡೆವಿಲ್ಸ ಐಲೆಂಡ ಎಂಬಲ್ಲಿ ಜನರಿಗೆ ನಿಕ್ಕುವ ಕಷ್ಟಗಳು ಹೆಚ್ಚಿನವುಗಳಲ್ಲ ಎಂದು ... ವರ್ಷ ಪ್ರಾಯದ ಅನೇಸ್ಟ ಡೆಮಿಕೆಲ್ ... ಹೇಳುತ್ತಾನೆ ಮೊದಲು ಅವನು ಡೆವಿಲ್ಸ ಐಲೆಂಡಿನ ಬಂದೀಖಾನೆಯಿಂದ ತಪ್ಪಿಸಿಕೊಂಡು ಹಾಲೆಂಡಿನಲ್ಲಿ ಅನಂತರ ಜರ್ಮನಿಯಲ್ಲಿ ತಲೆಮರಸಿಕೊಂಡಿದ್ದನು. ಈಗ ಸ್ವಾನುಭವದ ಈ ಮಾತುಗಳನ್ನು ಅವನು ಹೇಳಿದ್ದನೆ

ಭೋಪಾಲ ನವಾಬರ ನಿರುದ್ಯೋಗಿ ಸಹಾಯಕ ಫಂಡು

ತಮ್ಮ ದಿನಗಳನ್ನು ಪಟ್ಟಿ ನವಾಬರಿಗೆ ಕೊಟ್ಟ ಮುದ್ದೆಮಾಡಿದ ಸಂತೋಷ ಸ್ಮಾರಕವಾಗಿ ನವಾಬರು ಈ ಫಂಡನ್ನು ಆರಂಭಿಸಿದ್ದಾರೆ. ಇದರಲ್ಲಿ ೨೫೦೦೦ ರೂಪಾಯಿಗಳು ಭೋಪಾಲ ನವಾಬರೂ ಅಷ್ಟೇ ಹಣವನ್ನು ಅವರ ಸರಕಾರವೂ ಕೊಡುವುದು. ಈ ಫಂಡಿನಿಂದ ಭೋಪಾಲದ ನಿರುದ್ಯೋಗಿಗಳಿಗೆ ಸಹಾಯ ದೊರೆಯುತ್ತದೆ . ಈ ಕಾರ್ಯದಲ್ಲಿ ಹೆಚ್ಚಿಗೆ ಹಣ ಬೇಕಾದರೆ ಕೊಡಲಾಗುತ್ತದೆ ನವಾಬರ ರಾಜ್ಯದಲ್ಲಿ ಗೋವಧವಾವು ಪೀಸನ್ನೂ ಮಾಫಿಮಾಡಿದ್ದಾರೆ

ಒಸಾಕದಲ್ಲಿ ಜಪಾನಿನ ಸೈನ್ಯ ವ್ಯೂಹನೆ



ಇತ್ತೀಚೆಗೆ ಒಸಾಕದಲ್ಲಿ ಜಪಾನಿನ ಸೇನಾ ಪ್ರದರ್ಶನ ... ನಡೆದ ಏಂಟಿ ಏರ್ ಕ್ರಾಫ್ಟ ಗನ್ನುಗಳ ಪ್ರದರ್ಶನ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೦ ಸಾರಥಿ ನಸ್ಯ 1 ಪೀಸಕ್ಕೆ ರೂ. 3-8-0 ಸಬಿಲ ಮಾರ್ಕು ಸಾರಥಿ ನಸ್ಯ 1 ಪೀಸಕ್ಕೆ ರೂ. 3-0-0

(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ವಿಳಾಸ —

ಎ. ಪಿ. ಸಾರಥಿ

ಮೆನ್ಯುಫೆಕ್ಚರರ್ಸ ಒಫ್ ಮೆಡ್ರಾಸ್ ಸ್ನಫ್, ಪೋ. ಬಿ. ನಂಬ್ರ 47 ಮದ್ರಾಸು

ಸ್ವದೇಶಾಭಿಮಾನಿ

ತಾರೀಕು ೨೮—೪—೧೯೩೯

ರಾಜಕೋಟೆ ಪ್ರಕರಣ

"ಕಾಥೆವಾಡದ ರಾಜಕೀಯ ವಾತಾವರಣದಲ್ಲಿ ನಾನು ಬಳಲಿ ಶಾಕ್ತಿ ಕೆಟ್ಟಿದ್ದೇನೆ. ರಾಜಕೋಟೆದ ಪರಿಷತ್ತಿನ ಕೆಲಸಗಾರರು ನನ್ನನ್ನೂ ಸರದಾರರನ್ನೂ ಮರೆಯಲಿ, ಪ್ರಜೆಗಳು ದರಬಾರ ವೀರವಾಲರೊಂದಿಗೆ ಕೂಡಿಕೊಂಡು ತಮಗೆ ಸಮಾಧಾನವಾಗುವ ಕಿಂಚಿತ್ತು ಸುಧಾರಣೆಗಳನ್ನು ಪಡೆಯುವುದಾದರೂ ನನ್ನನ್ನು ಆ ವಿಷಯದಲ್ಲಿ ವಿಚಾರಿಸಬೇಕೆಂದಿಲ್ಲ. ರಾಜಕೋಟೆದ ಸಮರದಲ್ಲಿ ನಾನು ಸೋತೆನು. ವೀರವಾಲರೇ ನೀವೇ ಜಯಶೀಲರಾಗಿ! ನಿಮ್ಮಿಂದ ಕೊಡಬಹುದಾದಷ್ಟನ್ನು ಪ್ರಜೆಗಳಿಗೆ ಕೊಟ್ಟು ಅವರನ್ನು ಸಂತವಿಸಿ ಅದನ್ನು ನನಗೆ ತಿಳಿಸಿದರೆ ಪ್ರಕೃತದ ನನ್ನ ನಿರಾಶೆಯು ನಿವಾರಣೆಯಾಗುವುದು"

ರಾಜಕೋಟೆದ ಅವ್ಯವಸ್ಥಿತ ವಾತಾವರಣದಿಂದ ಮನನೊಂದು ಜಿಗುಪ್ಸೆಗೊಂಡ ಮಹಾತ್ಮಾಜಿಯವರ ಮೇಲಿನ ಪ್ರಕಟಣೆಯನ್ನು ಓದಿದಲ್ಲಿ ದೇಶಿ ಸಂಸ್ಥಾನಗಳ ರಾಜಕೀಯ ಪರಿಸ್ಥಿತಿಯು ಮುಂದಟ್ಟಾಗುವುದು.

ರಾಜಕೋಟೆದ ಪರಿಸ್ಥಿತಿಯನ್ನು ಫೆಡರಲ್ ಕೋರ್ಟಿನ ನ್ಯಾಯಾಧೀಶರು ತೀರ್ಮಾನಿಸಿದ ಕೂಡಲೆ ಒಮ್ಮೆಗೆ ಬಿಕ್ಕಟ್ಟು ನಿವಾರಣೆಯಾಯಿತು. ಇನ್ನು ಸುಧಾರಣಾ ಸಮಿತಿಯು ನೇಮಕವಾಗಿ ಕಾರ್ಯವನ್ನು ಪ್ರಾರಂಭಿಸಿ ಸರಿಯಾಗಿ ಮುನ್ನಡೆಯುವುದೆಂದು ಎಲ್ಲರೂ ನಂಬಿದ್ದರು. ಆದರೆ ಗಾಂಧಿಜಿಯವರಿಂದ ನಿರ್ಮಿತವಾದ ಸಮಿತಿಯಲ್ಲಿ ತನ್ನ ಭಾವತ್ತು ಪ್ರಜೆಗಳ ಪ್ರಾತಿನಿಧ್ಯವಿಲ್ಲವೆಂಬ ಒಂದು ನೆಪವನ್ನು ತಂದೊಡ್ಡಿದ್ದರು.

ಮಹಾತ್ಮಾಜಿಯವರು ಅಲ್ಪ ಸಂಖ್ಯಾಕರ ಪ್ರಾತಿನಿಧ್ಯದ ವಿಷಯ ತಾನು ಠಾಕೋರ ಸಾಹೇಬರು ನೇಮಕ ಮಾಡುವ ನಾಲ್ಕು ಜನರನ್ನು ಅಂಗೀಕರಿಸುತ್ತೇನೆಂದೂ ಬಹುಪಕ್ಷೀಯರು ಆ ನಾಲ್ವರಲ್ಲಿ ತಮಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕೇಳಿದಲ್ಲಿ ತಾನು ಅವರನ್ನು ಸಮಾಧಾನಿಸುವೆನೆಂದೂ ಮತ್ತು ಪರಿಷತ್ತಿಗೆ ಒಂದು ಮತವು ಅಧಿಕವಾಗಿ ದೊರಕುವಂತೆ ಸುಧಾರಣಾ ಸಮಿತಿಯ ಮೆಂಬರರ ಸಂಖ್ಯೆಯನ್ನು 16ಕ್ಕೆ ಏರಿಸುವಂತೆ ಠಾಕೋರ ಸಾಹೇಬರನ್ನು ಕೇಳಿಕೊಳ್ಳಲು ಅದಕ್ಕೆ ಠಾಕೋರ ಸಾಹೇಬರು ಒಪ್ಪಿಗೆಯನ್ನೀಯಲಿಲ್ಲ. ಠಾಕೋರ ಸಾಹೇಬರು ನಿಜವಾಗಿಯೂ ಅಲ್ಪ ಸಂಖ್ಯಾಕರ ಹಿತಚಿಂತಕರಾಗಿದರೆ ಅವರು ಗಾಂಧಿಜಿಯವರ ಸಲಹೆಯನ್ನು ಒಪ್ಪಬಹುದಿತ್ತು. ಆದರೆ ಅದರ ಬದಲಾಗಿ ಠಾಕೂರ ಸಾಹೇಬರು ಅಲ್ಪಸಂಖ್ಯಾಕರ ಪ್ರಶ್ನೆಯನ್ನೇ ಗಟ್ಟಿಮಾಡಲು ಹರಿಜನರ ಪರವಾಗಿ ವಾದಿಸಲು ಡಾ। ಅಂಬೆಡ್ಕರರಿಗೆ ಆಮಂತ್ರಣವನ್ನಿತ್ತು ಬರಮಾಡಿಕೊಂಡರು. ಈ ಸಮಯವನ್ನು ಹೊಂಚುಹಾಕಿ ಕುಳಿತಿರುವ ಜಿನ್ನಾ ಸಾಹೇಬರಾದರೂ ಬಿಡುವರೇ? ಅವರು ನಾಟ್ಯರಂಗಕ್ಕಿಳಿದು ಮುಸ್ಲಿಮ ಪ್ರಾತಿನಿಧ್ಯದ ವಿಷಯ ಕೋಲಾಟವನ್ನೆಬ್ಬಿಸಿದರು. ಮುಸ್ಲಿಮ ಪ್ರತಿನಿಧಿಯು ಪರಿಷತ್ತಿನ ಧೋರಣೆಯಂತೆ ನಡೆವುದಾದರೆ ಅವರಿಗೆ ಪ್ರಾತಿನಿಧ್ಯವನ್ನು ಕೊಡುವೆನೆಂದು ಭಾಯಕ ಮತ್ತು ಹರಿಜನರಿಗೆ ಯಾವ ತರದ ಕುಂದು ಬಾರದಂತೆ ಪ್ರಜಾಪರಿಷತ್ತು ನೋಡಿಕೊಳ್ಳುವುದೆಂದು ಅಭಯವನ್ನಿತ್ತರು.

ಆದರೆ ಠಾಕೋರ ಸಾಹೇಬರು ಮಹಾತ್ಮಾಜಿಯವರು ಪ್ರಜಾಪರಿಷತ್ತಿನ ಕಡೆಯಿಂದ ಒಪ್ಪಿಸಿದ ಏಳು ಜನರ ಪೈಕಿ ಆರು ಜನರು ರಾಜಕೋಟೆಯವರಲ್ಲವೆಂದು ವಾದಿಸಿದರು. ಗಾಂಧಿಜಿಯವರು ಅವರೆಲ್ಲರೂ ರಾಜಕೋಟೆಯವರೆಂಬುದಕ್ಕೆ ತಕ್ಕ ಪ್ರಮಾಣಗಳನ್ನಿತ್ತರು. ಆದರೆ ಕೂಡಲೇ ರಾಜಕೋಟೆಯಲ್ಲುಂಟಾದ ಜಾತಿಯ ಮತ್ತು ಅಲ್ಪಸಂಖ್ಯಾಕರ ಪ್ರಾತಿನಿಧ್ಯದ ಬಿಕ್ಕಟ್ಟಿನ ವಾತಾವರಣದಲ್ಲಿ ನೊಂದು ಬೆಂಡಾದ ಮಹಾತ್ಮಾಜಿಯವರು ರೆಸಿಡೆಂಟರ ಮೂಲಕವಾಗಿ ಸುಧಾರಣಾ ಸಮಿತಿಯ ವಿಷಯ "ಸಮಿತಿಯ ಎಲ್ಲಾ ಮೆಂಬರರ ಹೆಸರನ್ನು ಠಾಕೋರ ಸಾಹೇಬರು ನೇಮಿಸಿ ಗ್ವಾಯರ್ ತೀರ್ಮಾನದ ಮೇರೆಗೆ ಸಮಿತಿಯು ಒಂದು ರಿಪೋರ್ಟನ್ನು ತಯಾರಿಸಲಿ. ಆ ರಿಪೋರ್ಟನ್ನು ಪರಿಷತ್ತಿನವರು ನೋಡಿ ಅದರಲ್ಲಿ ಕುಂದು ಕೊರತೆಗಳಿದ್ದರೆ ಅದನ್ನು ಫೆಡರಲ್ ನ್ಯಾಯಾಧೀಶರ ತೀರ್ಮಾನಕ್ಕೆ ಬಿಟ್ಟುಕೊಡುವುದೆಂದು" ಎಂದು ಸಲಹೆಯನ್ನಿತ್ತರು.

ಆದರೆ ಠಾಕೂರ ಸಾಹೇಬರು ಈ ಸಲಹೆಯನ್ನೂ ನಿರಾಕರಿಸಿದರು. ಇದೆಲ್ಲವೂ ದರಬಾರ ವೀರವಾಲರ ಕೈವಾಡವಾಗಿರುವುದು. ಇದರಿಂದಾಗಿ ನೊಂದ ಮಹಾತ್ಮಾಜಿಯವರು ಪ್ರಜಾಪರಿಷತ್ತಿನ ಮುಖಂಡರಿಗೆ ನೆಟ್ಟಗೆ ರಾಜಕೋಟೆರ ಸಾಹೇಬರನ್ನೂ ವೀರವಾಲರನ್ನೂ ಕಂಡು ಅವರಿಂದ ತಮಗೆ ಕಿಂಚಿತ್ತಾದರೂ ಸಮಾಧಾನ ...ಯ ...ಗುವುದೋ ನೋಡಿರಿ" ಎಂದು ಹೇಳಿದರು. ಆದರೆ ಮಹಾತ್ಮಾಜಿಯವರು ಇಷ್ಟರವರೆಗೆ ನಡೆಸಿದ ಅನೇಕ ಪ್ರಯತ್ನಗಳು ನಿಷ್ಫಲವಾಗಿರುವಾಗ ಈ ಪ್ರಯತ್ನವು ಜಯಪ್ರದವಾಗುವುದೆಂದರೆ ... ವಾಗಿರುವುದು. ಇದರಿಂದ ಜಯ ಪಡೆಯದಿದ್ದಲ್ಲಿ ಮಹಾತ್ಮಾಜಿಯವರು ನೇಮಿಸಿದ ಸಮಿತಿಯೇ ಕಾರ್ಯವನ್ನು ಪ್ರಾರಂಭಿಸುವುದ ... ಆಗ ಬಾರದರೂ ಸಂಸ್ಥಾನಾಧಿಕಾರಿಗಳೂ ತಮ್ಮ ಕರ್ತವ್ಯವನ್ನು ಪಾಲಿಸದಿದ್ದಲ್ಲಿ ಹಿಂದೆ ವೈಸರಾಯರು ರಾಜಕೋಟೆಯಧಿಕಾರಿಗಳ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗುವಂತೆ ನೋಡಿಕೊಳ್ಳುತ್ತೇನೆಂದು ವಿಶದೀಕರಿಸಿದ್ದರಷ್ಟೆ. ನಿನ್ನೆ ಡಿ. ಸಾರ್ವಭೌಮ ಸರಕಾರವಾದರೂ ಮುಂದೆ ಬಂದು ನ್ಯಾಯೋಚಿತವಾದ ತೀರ್ಮಾನ ಕೊಡುವುದೆಂದು ನಂಬುತ್ತೇವೆ

ಮದ್ರಾಸು ಎಸೆಂಬ್ಲಿಯಲ್ಲಿ ವಸ್ತು ಮಾರಾಟದ ಮಸೂದೆ

ಸಿಲೆಕ್ಟ ಕಮಿಟಿಯ ತಿದ್ದುಪಡಿಗಳು

ಸಿಲೆಕ್ಟ ಕಮಿಟಿಯಲ್ಲಾದ ತಿದ್ದುಪಡಿಗಳೊಂದಿಗೆ ಮದ್ರಾಸು ವಸ್ತು ಮಾರಾಟದ ಮಸೂದೆ ಮೊನ್ನೆ ದಿನ ಮದ್ರಾಸು ಎಸೆಂಬ್ಲಿಯ ಸಮಾಲೋಚನೆಗೆ ಬಗ್ಗೆ ಮುಂತರಲ್ಪಟ್ಟಿತು. ಅದನ್ನು ಚರ್ಚಿಸುವುದಕ್ಕೋಸ್ಕರ ಇದೇ ಮೇ ತಿಂಗಳ ೬ನೇ ತಾರೀಕನ್ನು ನಿಶ್ಚಯಿಸಿದ ಬಳಿಕ ಹೊಗೆಸೊಪ್ಪಿನ ಮಸೂದೆ ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿತು. ಈ ಮಸೂದೆಯು ಸರಕಾರದ ಆದಾಯವನ್ನು ಹೆಚ್ಚಿಸುವುದಕ್ಕೋಸ್ಕರ ಸರಕಾರವೇ ಮುಂತಂದ ಮಸೂದೆಯಾಗಿರುವುದರಿಂದ ಅವು ಸರಕಾರವು ಸ್ವೀಕರಿಸಬಹುದಾದ ಕೆಲವು ಚಿಕ್ಕ ತಿದ್ದುಪಡಿಗಳೊಂದಿಗೆ ಎಸೆಂಬ್ಲಿ ಕೌನ್ಸಿಲುಗಳ ಬಹುಮತದ ಮಂಜೂರಾತಿಯನ್ನು ಪಡೆಯುವುದು ಖಂಡಿತ.

ಕರಕಂದಾಯಗಳನ್ನು ಕೊಡುವುದು ಯಾರಿಗೂ ಬೇಡವಾದ ಸಂಗತಿ. ಹೊಸ ತೆರಿಗೆ ಎಂದರೆ ಜನರು ಮೂಗು ಮುರಿಯುತ್ತಾರೆ. ಆದರೆ ಮದ್ರಾಸು ಸರಕಾರವು ಜನರ ಅಸಂತೋಷಕ್ಕೆ ತಾನು ಗುರಿಯಾಗುವೆನೆಂದು ತಿಳಿದೂ ಈ ಹೊಸ ತೆರಿಗೆಯ ಮಸೂದೆಯನ್ನು ಮುಂತಂದಿದೆ. ಮದ್ರಾಸು ಸರಕಾರವು ಈ ಹೊಸ ತೆರಿಗೆಗಳನ್ನು ಜನತೆಯ ಒಳ್ಳೆಯದಕ್ಕಾಗಿ ಹೇರುವರು ಎಂಬುದು ಸ್ಪಷ್ಟ. ಈಗಿನ ಪರಿಸ್ಥಿತಿಯಲ್ಲಿ ಮದ್ಯನಿಷೇಧ, ಶಿಕ್ಷಣಪ್ರಚಾರ ಮೊದಲಾದ ಕಾರ್ಯಗಳು ಸಫಲವಾಗಬೇಕಾದರೆ ಸರಕಾರವು ಅದಕ್ಕೆ ಬೇಕಾದ ಹಣವನ್ನು ಹೊಸ ತೆರಿಗೆಗಳಿಂದ ಸಂಪಾದಿಸಬೇಕು. ಆದ್ದರಿಂದ ಮದ್ರಾಸು ಸರಕಾರವು ವಿದ್ಯುಚ್ಛಕ್ತಿ, ಪೆಟ್ರೋಲು, ಹೊಗೆಸೊಪ್ಪು, ವಸ್ತು ಮಾರಾಟಗಳ ಮೇಲೆ ತೆರಿಗೆ ಹೇರುವ ವಿಚಾರ ಮಾಡಿದೆ.

'ನಮಗೆ ಮದ್ಯ ನಿಷೇಧವೂ ಬೇಡ, ಶಿಕ್ಷಣ ಪ್ರಚಾರವೂ ಬೇಡ, ನಾವು ಹೊಸ ತೆರಿಗೆಗಳನ್ನು ಕೊಡುವವರಲ್ಲ' ಎಂದು ಹೇಳುವ ಜನರಿದ್ದಾರೆ. ಆದರೆ ಹಾಗೆ ಹೇಳುವವರು ಸಾಮಾನ್ಯ ಜನತೆಯಲ್ಲ. ತೆರಿಗೆ ಕೊಡಲು ಸಮರ್ಥರಾದ ಶ್ರೀಮಂತರು ಹಾಗೆ ಹೇಳುತ್ತಾರೆ. ಮದ್ಯನಿಷೇಧದಿಂದಾಗುವ ಹಾನಿಯನ್ನು ಅವರು ತಿಳಿಯಲಾರರು. ತಮ್ಮ ಮಕ್ಕಳು ಮರಿಗಳ ಶಿಕ್ಷಣ ವ್ಯವಸ್ಥೆಯನ್ನು ಅವರು ಸ್ವತಂತ್ರವಾಗಿ ಮಾಡಬಲ್ಲರು. ಆ... ದ ಹೊಸ ತೆರಿಗೆಗಳ ... ಅನ್ಯಾಯ ಪೂರ್ಣವಾಗಿ ... ಸಭೆ ಭಾಷಣ ... ಗಳ ... ವಿರೋಧ ... ಪಡಿಸಲು ... ದ್ದಾರೆ ... ತಮ್ಮ ಸ್ವಾರ್ಥವಿದ ಪ್ರೇರಿತರಾಗಿ ಅವರು ... ದರೆ ಆದರೆ ಅವ ಸ್ವಾರ್ಥ ... ದ ... ಸಾರ್ಥ ... ಯುದ್ದಾಗಿದೆ. ಜನತೆಗೆ ಮದ್ಯನಿಷೇಧ ಶಿಕ್ಷಣ ಪ್ರಚಾರಗಳು ... ದೇಶದ್ ... ಆದ್ದ ... ಕಾರ್ಯ ... ಆದರೆ ... ಮನ ... ಗಳನ್ನು ... ಅವರು ತಮ್ಮ ಸ್ವಾರ್ಥ ... ಗೆ ... ರಗಳ ... ಸ್ವಾರ್ಥ ಮತ್ತು ನ್ಯಾಯ ಪೂರ್ಣ ... ಸ್ಪಷ್ಟ ... ಹೊಸ ತೆರಿಗೆಗಳನ್ನು ಹಾಕುವಾಗ ... ತೆರಿಗೆ ಕೊಡಲು ... ಸಮರ್ಥರೋ ಅದನ್ನು ವಿಚಾರಕ್ಕೆ ತಂದ ಸರಕಾರವು ಈ ತೆರಿಗೆಗಳನ್ನು ಹಾಕಿದೆ.

ಸ್ವಾತಂತ್ರ ... ಕೆಲವು ವಸ್ತು ... ವ್ಯಾಪಾರ ... ಬಿಟ್ಟು ಇವುಗಳ ಮೇಲೆ ... ತೆರಿಗೆ ಇರುವ ... ಕೆಲವು ವಸ್ತುಗಳ ... ತೆರಿಗೆ ... ವರ್ಷಾವಧಿ ೧೦,೦೦೦ ರೂಪಾಯಿ ... ವ್ಯಾಪಾರಕ್ಕೆ ... ೨೦,೦೦೦ದ ವ್ಯಾಪಾರಕ್ಕೆ ... ಅನಂತರದ ವ್ಯಾಪಾರಕ್ಕೆ ... ವಂತೆ ತೆರಿಗೆ ವಿಧಿಸಲಾಗುತ್ತದೆ.

ಜನರಿಗೆ ಮದ್ಯನಿಷೇಧ, ಶಿಕ್ಷಣಪ್ರಚಾರ ಮೊದಲಾದ ಕಾರ್ಯಗಳ ... ದ ಮೂಲಕ ... ಆಗಬೇಕೆಂದಾದರೆ ... ಗೆ ತೆರಿಗೆಗಳನ್ನು ... ಕೆಲಸಂಗದೆ ಬಾಯಿ ಮುಚ್ಚಿಕೊಳ್ಳ ...

ದೃಷ್ಟಿಚಕ್ರ

ಮ ದಿವ್ಯದೃಷ್ಟಿ ... ಮಾಡಲಿ

ನೋಟೀಸ್

ಕೆನರಾ ಬ್ಯಾಂಕ್ ಲಿಮಿಟೆಡ್, ಕುಂದಾಪುರ

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಈಡಿನ ಮೇಲೆ ಸದರಿ ಬ್ಯಾಂಕಿನಿಂದ ಪಡೆದ ಸಾಲಗಳ ಬಡ್ಡಿ ವಗೈರೆಯನ್ನು ಬಾಕಿ ಮಾಡಿಕೊಂಡದ್ದರಿಂದ ಆ ವಿಷಯ ... ರಿಜಿಸ್ಟರ್ ನೋಟಿಸ್ ಕಳುಹಿಸಲಾಗಿ ... ನೋಟಿಸ್ ... ನೋಟಿಸುಗಳು ವಾಪಸು ... ಬ್ಯಾಂಕಿಗೆ ... 10-5-1939 ... ಬರತಕ್ಕ ಮೊಬಲಗನ್ನು ಪಾವತಿ ಮಾಡಿ ಸದ್ರಿ ಒಡವೆ ದಾಗಿನೆಗಳನ್ನು ... ಗಲಿಕ್ಕೆ ತಪ್ಪಿದರೆ ಅವುಗಳನ್ನು ಇದೇ ಬರುವ ತಾ 17-5-39ನೇ ... ಹಗಲು ... 12ಕ್ಕೆ ಸರಿಯಾಗಿ ಯಾವುದೇ ... ಬೇರೆ ಯಾವುದಾದರೂ ಒಂದು ದಿನ ಪುನಃ ನೋಟಿಸು ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ... ಲಿಲಾವು ಮಾಡಿ ಹುಟ್ಟಿಬಂದ ಮೊಬಲಗಿನಲ್ಲಿ ಬ್ಯಾಂಕಿಗೆ ಬರತಕ್ಕದ್ದನ್ನು ವಜಾ ಮಾಡಿ ಉಳಿಕೆ ಇದ್ದರೆ ಅವರವರ ಅಮಾನತ್ ಲೆಕ್ಕದಲ್ಲಿ ಜಮಾ ಇಡಬಹುದಾದ ಹಣಕ್ಕೆ ಬಡ್ಡಿ ನಡೆಯಲಿಕ್ಕಿಲ್ಲವೆಂತ ಈ ಮೂಲಕ ತಿಳಿಯಪಡಿಸಲಾಗುತ್ತದೆ.

ಸಾಲದ ಲೆಕ್ಕ	ತಾರೀಕು	ಹೆಸರು	ಅಸ್ಲು ಬಗ್ಗೆ ಮೊಬಲಗು
15/37	4 1 37	ಹಳ್ಳಿ ಮನೆ ... ಬಳು ... ನಾಗಪ್ಪ ಚಾಕನ ಮಗ ... ಯಮ ಪ್ರೋಸು	115 0 0
654/37	24 11 '37	ಸಿದ್ದಾಪುರ ಸುಬ್ರಾಯ ... ಶಂಕರ ... ಪ್ರೋ	55 0 0
694/37	15 12 '37	ಬೇಳೂರ ಗೋಪಾಲ ಶ್ಯಾನಭಾಗ ಅನಂತ ಶ್ಯಾನುಭಾಗರ ಮಗ ಬೇಳೂರ ಗ್ರಾಮ ಹಂಗಾರಕಟ್ಟೆ ಪೋಸ್ಟ	115 0 0
514/37	2 9 '37	ಗುಲ್ವಾಡಿ ದೊಡ್ಡ ಮನೆ ರಾಮಣ್ಣ ಶೆಟ್ಟಿ, ನಂದ್ಯಪ್ಪ ಶೆಟ್ಟಿ ಅಳಿಯ ಕಂದ್ಲೂರ ಪೋಸ್ಟು	678 0 0
111/38	12 3 '38	... ಶೆಟ್ಟಿ, ... ಶೆಟ್ಟಿ ಅಳಿಯ ... ಗ್ರಾಮ ... ಗೋಳಿ ಪೋಸ್ಟ	100 0 0
160/38	19 4 '38	... ಬೆರೆಕ್ ... ಸಂತಾನ ... ಗ್ರಾಮ ... ಕುಂದಾಪುರ ಪೋಸ್ಟ	40 0 0
3/37	18 1 '37	... ಚೆನ್ನ ... ಹೆಂಗ್ಸಿನ ಮಗ, ... ಗ್ರಾಮ ... ಕುಂದಾಪುರ ಪೋಸ್ಟ	15 0 0
88/37	22 6 '37	ಜನಾರ್ದನ ಸೋಮಯಾಜಿ, ವಾಸುದೇವ ಸೋಮಯಾಜಿರ ಮಗ ... ಗ್ರಾಮ, ಹಂಗಾರಕಟ್ಟೆ ಪೋಸ್ಟು	14 0 0
74/37	1 10 '37	ಗೋವಿಂದ ಶೆಟ್ಟಿ, ... ಶೆಟ್ಟಿ ಮಗ, ... ಪೋಸ್ಟು	7 0 0
14/38	21 3 38	... ಅಳಿಯ, ಕುಂದಾಪುರ	15 0 0

Office of the Bank, Coondapur
25—4—1939

For THE CANARA BANK Ltd
S. R. Achar
Agent, Coondapur

ಫ್ರೆಂಚ್ ಸೈನ್ಯಾಧಿಕಾರಿಗಳು



ಫ್ರೆಂಚ್ ಸೈನ್ಯದ ಮುಖ್ಯಾಧಿಕಾರಿಯಾದ ಜನರಲ್ ಗೆಮ್ಲಿನ್

ಸ್ವದೇಶಾಭಿಮಾನಿ

ತಾರೀಕು ೨೮—೪—೧೯೩೯

ರಾಜಕೋಟೆ ಪ್ರಕರಣ

“ಕಾಥೇವಾಡದ ರಾಜಕೀಯ ವಾತಾವರಣದಲ್ಲಿ ನಾನು ಬೆಳಕಿ ಕಾಳ್ಗಿಚ್ಚಿಟ್ಟಿದ್ದೇನೆ. ರಾಜಕೋಟೆಯ ಪರಿಷತ್ತಿನ ಕೆಲಸಗಾರರು ನನ್ನನ್ನೂ ಸರದಾರರನ್ನೂ ಮರೆಯಲಿ, ಪ್ರಜೆಗಳು ದರಬಾರ ವೀರವಾಲರೊಂದಿಗೆ ಕೂಡಿಕೊಂಡು ತಮಗೆ ಸಮಾನವಾಗುವ ಕಿಂಚಿತ್ತು ಸುಧಾರಣೆಗಳನ್ನು ಪಡೆಯುವುದಾದರೂ ನಮ್ಮನ್ನು ಆ ವಿಷಯದಲ್ಲಿ ವಿಚಾರಿಸಬೇಕೆಂದಿಲ್ಲ ರಾಜಕೋಟೆಯ ಸಮರದಲ್ಲಿ ನಾನು ಸೋತೆನು ವೀರವಾಲರೇ ನೀವೇ ಜಯಶೀಲರಾಗಿ! ನಿಮ್ಮಿಂದ ಕೊಡಬಹುದಾದಷ್ಟನ್ನು ಪ್ರಜೆಗಳಿಗೆ ಕೊಟ್ಟು ಅವರನ್ನು ಸಂತಯಿಸಿ ಅದನ್ನು ನನಗೆ ತಿಳಿಸಿದರೆ ಪ್ರಕೃತದ ನನ್ನ ನಿರಾಶೆಯು ನಿವಾರಣೆಯಾಗುವುದು.”

ರಾಜಕೋಟೆಯ ಅಸ್ವಸ್ಥಕರ ವಾತಾವರಣದಿಂದ ಮನನೊಂದು ಜಿಗುಪ್ಸೆಗೊಂಡ ಮಹಾತ್ಮಾಜಿಯವರ ಮೇಲಿನ ಪ್ರಕಟಣೆಯನ್ನು ಓದಿದಲ್ಲಿ ದೇಶೀ ಸಂಸ್ಥಾನಗಳ ರಾಜಕೀಯ ಪರಿಸ್ಥಿತಿಯು ಮುಂದಟ್ಟಾಗುವುದು.

ರಾಜಕೋಟೆಯ ಪರಿಸ್ಥಿತಿಯನ್ನು ಫೆಡರಲ್ ಕೋರ್ಟಿನ ನ್ಯಾಯಾಧೀಶರು ತೀರ್ಮಾನಿಸಿದ ಕೂಡಲೆ ಒಮ್ಮೆಗೆ ಬಿಕ್ಕಟ್ಟು ನಿವಾರಣೆಯಾಯಿತು. ಇನ್ನು ಸುಧಾರಣಾ ಸಮಿತಿಯು ನೇಮಕವಾಗಿ ಕಾರ್ಯವನ್ನು ಪ್ರಾರಂಭಿಸಿ ಸರಿಯಾಗಿ ಮುನ್ನಡೆಯುವುದೆಂದು ಎಲ್ಲರೂ ನಂಬಿದ್ದರು. ಆದರೆ ಗಾಂಧೀಜಿಯವರಿಂದ ನಿರ್ಮಿತವಾದ ಸಮಿತಿಯಲ್ಲಿ ತನ್ನ ಭಾಯಾತ್ತು ಪ್ರಜೆಗಳ ಪ್ರಾತಿನಿಧ್ಯವಿಲ್ಲವೆಂಬ ಒಂದು ನೆವವನ್ನು ತಂದೊಡ್ಡಿದ್ದರು.

ಮಹಾತ್ಮಾಜಿಯವರು ಅಲ್ಪ ಸಂಖ್ಯಾಕರ ಪ್ರಾತಿನಿಧ್ಯದ ವಿಷಯ. ತಾನು ರಾಕೋರ ಸಾಹೇಬರು ನೇಮಕ ಮಾಡ ಪ ನಾಲ್ಕು ಜನರನ್ನು ಅಂಗೀಕರಿಸುತ್ತೇನೆಂದೂ ಬ್ರಹ್ಮಪಕ್ಷೀಯರು ಆ ನಾಲ್ವರಲ್ಲಿ ತಮಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕೇಳಿದಲ್ಲಿ ತಾನು ಅವರನ್ನು ಸಮಾಧಾನಿಸುವೆನೆಂದೂ ಮತ್ತು ಪ ಜಾಪರಿಷತ್ತಿಗೆ ಒಂದು ಮತವು ಅಧಿಕವಾಗಿ ದೊರಕುವಂತೆ ಸುಧಾರಣಾ ಸಮಿತಿಯ ಮೆಂಬರರ ಸಂಖ್ಯೆಯನ್ನು 16ಕ್ಕೆ ಏರಿಸುವಂತೆ ರಾಕೋರ ಸಾಹೇಬರನ್ನು ಕೇಳಿಕೊಳ್ಳಲು ಅದಕ್ಕೂ ರಾಕೋರ ಸಾಹೇಬರು ಒಪ್ಪಿಗೆಯನ್ನೀಯಲಿಲ್ಲ ರಾಕೋರ ಸಾಹೇಬರು ನಿಜವಾಗಿಯೂ ಅಲ್ಪ ಸಂಖ್ಯಾಕರ ಹಿತಚಿಂತಕರಾಗಿದರೆ ಅವರು ಗಾಂಧೀಜಿಯವರ ಸಲಹೆಯನ್ನು ಒಪ್ಪಬಹುದಿತ್ತು. ಆದರೆ ಅದರ ಬದಲಾಗಿ ಠಾಕೂರ ಸಾಹೇಬರು ಅಲ್ಪಸಂಖ್ಯಾಕರ ಪ್ರಶ್ನೆಯನ್ನೇ ಗಟ್ಟಿಮಾಡಲು ಹರಿಜನರ ಪರವಾಗಿ ವಾದಿಸಲು ಡಾ| ಅಂಬೆಡ್ಕರರಿಗೆ ಆಮಂತ್ರಣವನ್ನಿತ್ತು ಬರಮಾಡಿಕೊಂಡರು. ಈ ಸಮಯವನ್ನು ಹೊಂಚುಹಾಕಿ ಕುಳಿತಿರುವ ಜಿನ್ನಾ ಸಾಹೇಬರಾದರೂ ಬಿಡುವರೇ? ಅವರು ನಾಟ್ಯರಂಗಕ್ಕಿಳಿದು ಮುಸ್ಲಿಮ ಪ್ರಾತಿನಿಧ್ಯದ ವಿಷಯ ಕೂಗಾಟವನ್ನೆಬ್ಬಿಸಿದರು. ಮುಸ್ಲಿಮ ಪ್ರತಿನಿಧಿಯು ಪರಿಷತ್ತಿನ ಧೋರಣೆಯಂತೆ ನಡೆವುದಾದರೆ ಅವರಿಗೆ ಪ್ರಾತಿನಿಧ್ಯವನ್ನು ಕೊಡುವೆನೆಂದು ಭಾಯಾತ ಮತ್ತು ಹರಿಜನರಿಗೆ ಯಾವ ತರದ ಕುಂದು ಬಾರದಂತೆ ಪ್ರಜಾಪರಿಷತ್ತು ನೋಡಿಕೊಳ್ಳುವುದೆಂದು ಅಭಯವನ್ನಿತ್ತರು.

ಆದರೆ ರಾಕೋರ ಸಾಹೇಬರು ಮಹಾತ್ಮಾಜಿಯವರು ಪ್ರಜಾಪರಿಷತ್ತಿನ ಕಡೆಯಿಂದ ಒಪ್ಪಿಸಿದ ಏಳು ಜನರ ಪೈಕಿ ಆರು ಜನರು ರಾಜಕೋಟೆಯವರಲ್ಲವೆಂದು ವಾದಿಸಿದರು ಗಾಂಧೀಜಿಯವರು ಅವರೆಲ್ಲರೂ ರಾಜಕೋಟೆಯವರೆಂಬುದಕ್ಕೆ ತಕ್ಕ ಪ್ರಮಾಣಗಳನ್ನಿತ್ತರು ಆದರೆ ಕೂಡಲೇ ರಾಜಕೋಟೆಯಲ್ಲುಂಟಾದ ಜಾತಿಯ ಮತ್ತು ಅಲ್ಪಸಂಖ್ಯಾಕರ ಪ್ರಾತಿನಿಧ್ಯದ ಬಿಕ್ಕಟ್ಟಿನ ವಾತಾವರಣದಲ್ಲಿ ನೊಂದು ಬೆಂಡಾದ ಮಹಾತ್ಮಾಜಿಯವರು ರೆಸಿಡೆಂಟರ ಮೂಲಕವಾಗಿ ಸುಧಾರಣಾ ಸಮಿತಿಯ ವಿಷಯ “ಸಮಿತಿಯ ಎಲ್ಲಾ ಮೆಂಬರರ ಹೆಸರನ್ನು ಠಾಕೋರ ಸಾಹೇಬರು ನೇಮಿಸಿ ಗ್ವಾಯರ್ ತೀರ್ಮಾನದ ಮೇರೆಗೆ ಸಮಿತಿಯು ಒಂದು ರಿಪೋರ್ಟನ್ನು ತಯಾರಿಸಲಿ ಆ ರಿಪೋರ್ಟನ್ನು ಪರಿಷತ್ತಿನವರು ನೋಡಿ ಅದರಲ್ಲಿ ಕುಂದು ಕೊರತೆಗಳಿದ್ದರೆ ಅದನ್ನು ಫೆಡರಲ್ ನ್ಯಾಯಾಧೀಶರ ತೀರ್ಮಾನಕ್ಕೆ ಬಿಟ್ಟುಕೊಡುವುದೆಂದು” ಎಂದು ಸಲಹೆಯನ್ನಿತ್ತರು.

ಆದರೆ ಠಾಕೂರ ಸಾಹೇಬರು ಈ ಸಲಹೆಯನ್ನೂ ನಿರಾಕರಿಸಿದರು ಇದೆಲ್ಲವೂ ದರಬಾರ ವೀರವಾಲರ ಕೈವಾಡವಾಗಿರುವುದು ಇದರಿಂದಾಗಿ ನೊಂದ ಮಹಾತ್ಮಾಜಿಯವರು ಪ್ರಜಾಪರಿಷತ್ತಿನ ಮುಖಂಡರಿಗೆ ನೆಟ್ಟಗೆ ಠಾಕೋರ ಸಾಹೇಬರನ್ನೂ ವೀರವಾಲರನ್ನೂ ಕಂಡು ಅವರಿಂದ ತಮಗೆ ಕಿಂಚಿತ್ತಾದರೂ ಸುಧಾರಣೆ

ಫ್ರೆಂಚ್ ಸೈನ್ಯದ ಮುಖ್ಯಾಧಿಕಾರಿಯಾದ ಜನರಲ್ ಗೆಮಾಲಿನ್

ಮದ್ರಾಸು ಎಸೆಂಬ್ಲಿಯಲ್ಲಿ ವಸ್ತು ಮಾರಾಟದ ಮಸೂದೆ

ಸಿಲೆಕ್ಟ ಕಮಿಟಿಯ ತಿದ್ದುಪಡಿಗಳು

ಸಿಲೆಕ್ಟ ಕಮಿಟಿಯಲ್ಲಾದ ತಿದ್ದುಪಡಿಗಳೊಂದಿಗೆ ಮದ್ರಾಸು ವಸ್ತು ಮಾರಾಟದ ಮಸೂದೆ ಮೊನ್ನೆ ದಿನ ಮದ್ರಾಸು ಎಸೆಂಬ್ಲಿಯ ಸಮಾಲೋಚನೆ ಬಗ್ಗೆ ಮುಂತರಲ್ಪಟ್ಟಿತು ಅದನ್ನು ಚರ್ಚಿಸುವುದಕ್ಕೋಸ್ಕರ ಇದೇ ಮೇ ತಿಂಗಳ ೬ನೇ ತಾರೀಕನ್ನು ನಿಶ್ಚಯಿಸಿದ ಬಳಿಕ ಹೊಗೆಸೊಪ್ಪಿನ ಮಸೂದೆ ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿತು. ಈ ಮಸೂದೆಯು ಸರಕಾರದ ಆದಾಯವನ್ನು ಹೆಚ್ಚಿಸುವುದಕ್ಕೋಸ್ಕರ ಸರಕಾರವೇ ಮುಂತಂದ ಮಸೂದೆಯಾಗಿರುವುದರಿಂದ ಅವು ಸರಕಾರವು ಸ್ವೀಕರಿಸಬಹುದಾದ ಕೆಲವು ಚಿಕ್ಕ ತಿದ್ದುಪಡಿಗಳೊಂದಿಗೆ ಎಸೆಂಬ್ಲಿ ಕೌನ್ಸಿಲುಗಳ ಬಹುಮತದ ಮಂಜೂರಾತಿಯನ್ನು ಪಡೆಯುವುದು ಖಂಡಿತ

ಕರಕಂದಾಯಗಳನ್ನು ಕೊಡುವುದು ಯಾರಿಗೂ ಬೇಡವಾದ ಸಂಗತಿ ಹೊಸ ತೆರಿಗೆ ಎಂದರೆ ಜನರು ಮೂಗು ಮುರಿಯುತ್ತಾರೆ ಆದರೆ ಮದ್ರಾಸು ಸರಕಾರವು ಜನರ ಅಸಂತೋಷಕ್ಕೆ ತಾನು ಗುರಿಯಾಗುವೆನೆಂದು ತಿಳಿದೂ ಈ ಹೊಸ ತೆರಿಗೆಯ ಮಸೂದೆಯನ್ನು ಮುಂತಂ

ಯ ... ಗುವುದೋ ನೋಡಿರಿ” ಎಂದು ಹೇಳಿದರು ಆದರೆ ಮಹಾತ್ಮಾಜಿಯವರು ಇಷ್ಟರವರೆಗೆ ನಡೆಸಿದ ಅನೇಕ ಪ ಯತ್ನಗಳು ನಿಷ್ಫಲವಾಗಿರುವಾಗ ಈ ಪ ಯತ್ನವು ಜಯಪ್ರದವಾಗುವುದೆಂದರೆ ... ಸ್ಪದವಾಗಿರುವುದು ಇದರಿಂಥ ಜಯವಾಗದಿದ್ದಲ್ಲಿ ಮಹಾತ್ಮಾಜಿಯವರು ನೇಮಿಸಿದ ಸಮಿತಿಯೇ ಕಾರ್ಯವನ್ನು ಪ್ರಾರಂಭಿಸುವುದು... ಆಗ ಬಾ ದರೂ ಸಂಸ್ಥಾನಾಧಿಕಾರಿಗಳು ತಮ್ಮ ಕರ್ತವ್ಯವನ್ನು ಪಾಲಿಸದಿದ್ದಲ್ಲಿ ಹಿಂದೆ ವೈಸರಾಯರು “ರಾಜಕೋಟೆಯಧಿಕಾರಿಗಳು ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗುವಂತೆ ನೋಡಿಕೊಳ್ಳುತ್ತೇನೆಂದು” ವಿಶದೀಕರಿಸಿದ್ದಂತೆ ನೆನೆದು ಸಾರ್ವಭೌಮ ಸರಕಾರವಾದರೂ ಮುಂದೆ ಬಂದು ನ್ಯಾಯೋಚಿತವಂತೆ ತೀರ್ಮಾನಿಸುವುದೆಂದು ನಂಬುತ್ತೇವೆ

ದೆ. ಮದ್ರಾಸು ಸರಕಾರವು ಈ ಹೊಸ ತೆರಿಗೆಗಳನ್ನು ಜನತೆಯ ಒಳ್ಳಿಯದಕ್ಕಾಗಿ ತೆರುವರು ಎಂಬುದು ಸ್ಪಷ್ಟ. ಈಗಿನ ಪರಿಸ್ಥಿತಿಯಲ್ಲಿ ಮದ್ಯನಿಷೇಧ, ಶಿಕ್ಷಣಪ್ರಚಾರ ಮೊದಲಾದ ಕಾರ್ಯಗಳು ಸಫಲವಾಗಬೇಕಾದರೆ ಸರಕಾರವು ಅದಕ್ಕೆ ಬೇಕಾದ ಹಣವನ್ನು ಹೊಸ ತೆರಿಗೆಗಳಿಂದ ಸಂಪಾದಿಸಬೇಕು ಆದ್ದರಿಂದ ಮದ್ರಾಸು ಸರಕಾರವು ವಿದ್ಯುಚ್ಛಕ್ತಿ, ಪೆಟ್ರೋಲು, ಹೊಗೆಸೊಪ್ಪು ವಸ್ತು ಮಾರಾಟಗಳ ಮೇಲೆ ತೆರಿಗೆ ತೆರುವ ವಿಚಾರ ಮಾಡಿದೆ

‘ನಮಗೆ ಮದ್ಯ ನಿಷೇಧವೂ ಬೇಡ, ಶಿಕ್ಷಣ ಪ್ರಚಾರವೂ ಬೇಡ, ನಾವು ಹೊಸ ತೆರಿಗೆಗಳನ್ನು ಕೊಡುವವರಲ್ಲ’ ಎಂದು ಹೇಳುವ ಜನರಿದ್ದಾರೆ ಆದರೆ ಹಾಗೆ ಹೇಳುವವರು ಸಾಮಾನ್ಯ ಜನತೆಯಲ್ಲ, ತೆರಿಗೆ ಕೊಡಲು ಸಮರ್ಥರಾದ ಶ್ರೀಮಂತರು ಹಾಗೆ ಹೇಳುತ್ತಾರೆ ಮದ್ಯನಿಷೇಧದಿಂದಾಗುವ ಹಾನಿಯನ್ನು ಅವರು ತಿಳಿಯಲಾರರು ತಮ್ಮ ಮಕ್ಕಳು ಮರಿಗಳ ಶಿಕ್ಷಣ ವ್ಯವಸ್ಥೆಯನ್ನು ಅವರು ಸ್ವತಂತ್ರವಾಗಿ ಮಾಡಬಲ್ಲರು ಆ

ದೃಷ್ಟಿಚಕ್ರ

ಮಾಂದದೃಷ್ಟಿಯಿಂದ ನರಳುತ್ತಿದ್ದ ಒಂದು ... ಯಂತ್ರ ... ಪರೀಕ್ಷಿಸುತ್ತಿದೆ

... ದ ಹೊಸ ತೆರಿಗೆಗಳು ... ಅನ್ಯಾಯ ಪೂರ್ಣವಾಗಿ ... ಅವರು ಸಭೆ ಭಾಷಣ ... ಗಳ ... ತಮ್ಮ ವಿರೋಧವ... ಪಡಿಸಲೂ ಇದ್ದಾರೆ ... ತಮ್ಮ ಸ್ವಾರ್ಥದಿಂದ ಪ್ರೇರಿತರಾಗಿ ಅವರು ಹೀಗೆ ... ರೆ ಆದರೆ ಅವರ ಸ್ವಾರ್ಥದಿಂದ ದೇಶದ ಸಾರ್ವ... ಒಳಿತೊಂದು ... ಯಿದ್ದಾಗದೆ ಜನತೆಗೆ ಮದ್ಯನಿಷೇಧ ಶಿಕ್ಷಣ ಪ್ರಚಾರಗಳು ಅತ್ಯ ... ದೇಶದ ... ಆದ್ದರಿಂದ ಕಾಂಗ್ರೆಸ ತನ್ನ ... ಕಾರ್ಯಕ್ರಮದಲಿ ಅದಕ್ಕೆ ... ಮಾ... ಮನ ... ಹೊಸ ತೆರಿಗೆಗಳನ್ನು ಕೂಡ ... ಅವರು ತಮ್ಮ ಸ್ವಾರ್ಥ... ಕಾಂಗ್ರೆಸ್ ಸರಕಾರಗಳ ನಿಸ್ವಾರ್ಥ ಮತ್ತು ನ್ಯಾಯಪೂರ್ಣ ಆಚರಣೆಯು ಅವರಿಗೆ ಸ್ಪಷ್ಟವಾದೀತು. ಹೊಸ ತೆರಿಗೆಗಳನ್ನು ಹಾಕುವಾಗ ... ತೆರಿಗೆ ಕೊಡಲು ... ಸಮರ್ಥರೋ ಅದನ್ನು ವಿಚಾರಕ್ಕೆ ತಂದ ಸರಕಾರವು ಈ ತೆರಿಗೆಗಳನ್ನು ಹಾಕಿದೆ

ಸ್ವಾತ ... ಸಿಗರೇಟು, ಚಿನ್ನ ... ಕೈಸೇರಿ ... ಬಟ್ಟೆ ಇವುಗಳ ಮೇಲೆ ವಸ್ತು ಮಾರಾಟದ ತೆರಿಗೆ ಇರುವುದು ... ಕೆಲವು ವಸ್ತುಗಳ ಮಾರಾಟದ ಮೇಲೆ ತೆರಿಗೆ ಹೊರಿಸುವಾಗ ಕೆಲವು ... ತೆರಿಗೆ ... ವಧಿ ೧೦ ೦೦೦ ರೂಪಾಯಿ ಕ್ಕಿಂತ ಕಡಿಮೆ ವ್ಯಾಪಾರಕ್ಕೆ ತೆರಿಗೆ ... ೧೦ ೦೦೦ ದಿಂದ ೨೦ ೦೦೦ ದ ವ್ಯಾಪಾರಕ್ಕೆ ತೆರಿಗೆ ... ರೂಪಾಯಿ, ಅನಂತರದ ವ್ಯಾಪಾರ ... ಟಾಕೆಯಂತೆ ತೆರಿಗೆ ವಿಧಿಸಲಾಗುತ್ತದೆ

ಜನರಿಗೆ ಮದ್ಯನಿಷೇಧ ಶಿಕ್ಷಣಪ್ರಚಾರ ಮೊದಲಾದ ಕಾರ್ಯಗಳ ಸ... ಮೂಲಕ ಆಗಬೇಕಾದರೆ ... ಹೆಚ್ಚಿಗೆ ತೆರಿಗೆಗಳನ್ನು ಕೊಡಲಿಕ್ಕೆ ... ಕಸಂಗದೆ ಬಾಯಿ ಮುಚ್ಚಿರಬೇಕಾಗುವುದಲ್ಲ

ನೋಟಿಸ್

ಕೆನರಾ ಬ್ಯಾಂಕ್ ಲಿಮಿಟೆಡ್ ಕುಂದಾಪುರ

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಈಡಿನ ಮೇಲೆ ಸದರಿ ಬ್ಯಾಂಕಿನಿಂದ ಪಡೆದ ಸಾಲಗಳ ಬಡ್ಡಿ ವಗೈರೆಯನ್ನು ಬಾಕಿ ಮಾಡಿಕೊಂಡದ್ದರಿಂದ ಆ ವಿಷಯ ಕಾಣಿಸಿ ರಿಜಿಸ್ಟರ್ ನೋಟಿಸ್ ಕಳುಹಿಸಲು ಕೆಲವರು ನೋಟೀಸ್ ಪಡೆಯದೆ ... ದರಿಂದಲೂ ಕೆಲವರ ವಿಳಾಸ ... ನೋಟೀಸ್‌ಗಳು ವಾಪಾಸು ಬಂದ ಪ್ರಯುಕ್ತದಲೂ ಉಳಿದವರ ಬಗ್ಗೆ ... ಇದ್ದುದರಿಂದ ಕೂಡ ಇದೇ ಬರುವ ತಾ 10 5—1939 ನೇ ವರೆಗೆ ಬ್ಯಾಂಕಿಗೆ ಬರತಕ್ಕ ಮೊಬಲಗನ್ನು ಪಾವತಿ ಮಾಡಿ ಸದ್ರಿ ಡಾಗಿನೆಗಳನ್ನು ವಾಪಸ ಕೊಂಡುಯೋಗಲಿಕ್ಕೆ ತಪ್ಪಿದರೆ ಅವುಗಳನ್ನು ಇದೇ ಬರುವ ತಾ 17-5 39ನೇ ... ಹಗಲು ಘಂಟೆ 12ಕ್ಕೆ ಸರಿಯಾಗಿ ಯಾ ಯುಕ್ತ ತೋರುವ ಬೇರೆ ಯಾವುದ್ದಾದರೂ ಒಂದು ದಿನ ಪುನಃ ನೋಟಿಸು ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಮೊಬಲಗಿನಲ್ಲಿ ಬ್ಯಾಂಕಿಗೆ ಬರತಕ್ಕದ್ದನ್ನು ವಜಾ ಮಾಡಿ ಉಳಿಕೆ ಇದ್ದರೆ ಅವರವರ ಅಕೌಂಟ್ ಲೆಕ್ಕದಲ್ಲಿ ಜಮಾ ಇಡಬಹುದಾದ ಹಣಕ್ಕೆ ಬಡ್ಡಿ ನಡಿಯಲಿಕ್ಕಿಲ್ಲವೆಂತ ಈ ಮೂಲಕ ತಿಳಿಯಪಡಿಸಲಾಗುತ್ತದೆ

ಸಾಲದ ನಂಬ್ರ	ತಾರೀಕು	ಹೆಸರು	ಅಸ್ಲು ಬಗ್ಗೆ ಮೊಬಲಗು
15/37	4 1 '37	ಹಳ್ಳಿ ಮೊಳೆ ಹಳೇಬಳು ಅನಂತ ಚಾರ್‍ಯ ನಾಗಪ್ಪಾಚಾರ್‍ನ ಮಗ ... ನಾರಾಯಣ ಪ್ರೋಸು	115 0 0
654/37	24 11 '37	ಸಿದ್ದಾಪುರ ಸುಬ್ರಾಯ ಮಂಜಾ... ಶೆಟ್ಟಿ ಮಂಜರ ಮಗ ... ನಾರಾಯಣ ಪ್ರೋಸು	55 0 0
694/37	15 12 '37	ಬೇಳೂರ ಗೋಪಾಲ ಶ್ಯಾನ ಭಾಗ ಅನಂತ ಶ್ಯಾನುಭಾಗರ ಮಗ ಬೇಳೂರ ಗ್ರಾಮ ಹಂಗಾರಕಟ್ಟೆ ಪೋಸ್ಟ	115 0 0
514/37	2 9 '37	ಗುಲ್ವಾಡಿ ದೊಡ್ಡ ಮನೆ ರಾಮಣ್ಣ ಶೆಟ್ಟಿ, ನಾರ್ಣಪ್ಪ ಶೆಟ್ಟಿ ಅಳಿಯ ಕುಂದಾಪುರ ಪ್ರೋಸ್ಟು	678 0 0
111/38	12 3 '38	ಕರಿಯಣ್ಣ ಶೆಟ್ಟಿ, ನ ಗಯ್ಯ ಶೆಟ್ಟಿ ಅಳಿಯ ಚಿತ್ತೂರು ಗ್ರಾಮ ... ಗೊಳ್ಳಿ ಪ್ರೋಸ	100 0 0
160/38	19 4 '38	ತನಗಳ ಅಂತೋನಿ ಬೆರೆಕ್ ಸಂತಾನ ಬೆರೆತರ ಮಗ, ತನಗಳ ಗ್ರಾಮ ಕುಂದಾಪುರ ಪೋಸ್ಟ	40 0 0
3/37	18 1 '37	ಫಳೀ ಪೈ ಚನ್ನಾ ... ಹೆಂಗ್ಸಿನ ಮಗ, ವಡೇರ ಹೋಬಳಿ ಗ್ರಾಮ ಕುಂದಾಪುರ ಪೋಸ್ಟ	15 0 0
88/37	28-6 '37	ಜನಾರ್ದನ ಸೋಮಯ್ಯಾಜಿ, ವಾಸುದೇವ ಸೋಮಯ್ಯಾಜಿರ ಮಗ ಪಾರುವಳ್ಳಿ ಗ್ರಾಮ, ಹಂಗಾರಕಟ್ಟೆ ಪೋಸ್ಟು	14 0 0
74/37	1 10 '37	ಗೋವಿಂದ ಶೆಟ್ಟಿ, ಹಸ್ಲಾಡಿ ಶೀನ ಶೆಟ್ಟಿ ಮಗ, ಹಸ್ಲಾಡಿ ಪೋಸ್ಟು	7 0 0
14/38	21 3 '38	ಬಾಡ್ಯ ಮುಂಡಾ, ಕೋಗನ ಅಳಿಯ, ಕುಂದಾಪುರ	15 0 0

Office of the Bank, Coondapur
25—4—'1939

For THE CANARA BANK, Ltd.,
S. R Achar
Agent, Coondapur

ಮೈಸೂರು ಕಾಂಗ್ರೆಸ ಸಭಾಧಿವೇಶ

ಸಂಸ್ಥಾನ ಪ್ರಜೆಗಳ ಸುಧಾರಣಾ ಚಳವಳಿ

ಕೆಲವು ಕಡೆ ರಿಯಾಯತಿ — ಕೆಲವು ಕಡೆ ದಬ್ಬಾಳಿಕೆ

ಮೈಸೂರು ಕಾಂಗ್ರೆಸ ಸಭಾಧಿವೇಶನವು ಕಳೆದವಾರ ಶ್ರೀ ಯಚ್ ಸಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ವಿಧುರ ನಗರದಲ್ಲಿ ಅತ್ಯಂತ ಯಶಸ್ವಿಯಾಗಿ ಜರಗಿತು ವಿದ್ಯುಚ್ಛಕ್ತಿಯನ್ನು ಕೊಡುವ ಮೊದಲಾದ ಕೆಲವು ಸಂಗತಿಗಳಲ್ಲಿ ಸರಕಾರದ ಸಹಕಾರವು ದೊರೆಯಲಿಲ್ಲವಾದರೂ, ಸಭಾಧಿವೇಶನದ ಕಾರ್ಯಕ್ರಮಗಳಲ್ಲಿ ಸರಕಾರವು ಹಸ್ತಕ್ಷೇಪ ಮಾಡಲಿಲ್ಲ. ಅಧ್ಯಕ್ಷರು ತನ್ನ ಭಾಷಣದಲ್ಲಿ ಮೈಸೂರು ಕಾಂಗ್ರೆಸಿನ ಧ್ಯೇಯಾದರ್ಶಗಳನ್ನು ವಿವರಿಸುತ್ತ ಮಹಾರಾಜರ ಛತ್ರಛಾಯೆಯಲ್ಲಿ ಜವಾಬದಾರಿ ಸರಕಾರವನ್ನು ಸಂಪಾದಿಸುವುದೇ ಕಾಂಗ್ರೆಸಿನ ಗುರಿಯಾಗಿರುವುದೆಂಬುದನ್ನು ಸ್ಪಷ್ಟಮಾಡಿದರು ಅಧಿವೇಶನವು ಮಹಾತ್ಮಾಗಾಂಧಿಯವರ ಮುಂದಾಳುತನದಲ್ಲಿ ತನ್ನ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಮಾಡಿತು ಕರ್ನಾಟಕ ಪ್ರಾಂತರಚನೆಯಾಗುವಾಗ ಬ್ರಿಟಿಷ ಕರ್ನಾಟಕವೂ ಮೈಸೂರೂ ಒಂದಾದರಾಗಬಹುದೆಂಬ ಅಭಿಪ್ರಾಯಕ್ಕೆ ಸಭೆಯಲ್ಲಿ ಬಹುಮತವು ದೊರೆಯಲಿಲ್ಲ ಸಭಾಧಿವೇಶನದ ಜೊತೆಗೆ ಪ್ರದರ್ಶನದ ಏರ್ಪಾಡೂ ಆಗಿದ್ದಿತು

ಲಿಂಬ್ಡಿಯಲ್ಲಿ ಬಂಡಾಟ

ರಾಜಕೋಟದ ಪ್ರತಿಕೂಲ ವಾತಾವರಣವು ಹತ್ತಿರದ ಲಿಂಬ್ಡಿ ಸಂಸ್ಥಾನಕ್ಕೂ ಹಬ್ಬಿರುವಂತೆ ಕಾಣುತ್ತದೆ ಅಲ್ಲಿಯ ಅಲ್ಪಸಂಖ್ಯಾಕರೂ ಪ್ರಜಾಪರಿಷತ್ತಿನ ವಿರುದ್ಧ ಆಂದೋಲನವನ್ನು ಆರಂಭಿಸಿದ್ದಾರೆ ಸಂಸ್ಥಾನದ ಮುಸಲ್ಮಾನರ, ಭಾಯಾತರ ಮತ್ತು ಹರಿಜನರ ಒಂದು ಮೆರವಣಿಗೆ ಪ್ರಜಾಪರಿಷತ್ತಿನ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಿ ಕೆಲವು ಅಂಗಡಿಗಳನ್ನು ಲೂಟಿಮಾಡಿದರೆಂದ ವಾರ್ತೆ

ಬಾವಲಿಪುರದಲ್ಲಿ ಕೈದು

ಈ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳ ಬೇಕೆಂದ ಜಮಾಯತ್ ಉಲ್ ಮುಸ್ಲಮೀನ ಸಂಘವು ಆರಂಭಿಸಿದ ಆಂದೋಲನದ ಸಂಬಂಧ, ಅದರ ಹದಿನೆರಡು ಮಂದಿ ಪ್ರಮುಖ ಕಾರ್ಯಕರ್ತರನ್ನು ಸಂಸ್ಥಾನ ಸರಕಾರವು ಕೈದುಮಾಡಿದೆ

ಪಾಟಿಯಾಲಾ ಸತ್ಯಾಗ ಹವು ನಿಂತಿತು.

ಪ್ರಜೆಗಳ ವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತು ಅವರ ಸಂಚಾರ, ಲೇಖನ, ಭಾಷಣ ಅಧಿಕಾರಗಳ ಮೇಲೆ ನಿರ್ಬಂಧವನ್ನು ಹಾಕಿದ ಹಲವು ವರ್ಷಗಳ ಹಿಂದಿನ ಸರಕಾರಿ ಆಜ್ಞೆಯನ್ನು ಹಿಂತೆಗೆದುಕೊಂಡು, ಪ್ರಜೆಗಳ ಬೇಡಿಕೆಗಳ ಕರಿತ ಸಹಾನುಭೂತಿಯಿಂದ ಸಮಾಲೋಚಿಸುವುದಾಗಿ ಪಾಟಿಯಾಲ ಮಹಾರಾಜರು ಭರವಸೆ ಕೊಟ್ಟಿರುವುದರಿಂದ ಅಲ್ಲಿ ಸತ್ಯಾಗ್ರಹವನ್ನು ನಿಲ್ಲಿಸಿದ್ದಾರೆ ಸರಕಾರವೂ ಸತ್ಯಾಗ್ರಹಿ ಕೈದಿಗಳನ್ನು ಜೈಲುಗಳಿಂದ ಬಿಡುಗಡೆ ಮಾಡಿದೆ

ತಿರುವಾಂಕೂರು ಸರಕಾರದ ರಿಯಾಯತಿ

ಸಂಸ್ಥಾನದ ಕೆಲವು ತಾಲೂಕುಗಳ ನಂಜ ಭೂಮಿಯ ಮೇಲಿನ ಕಂದಾಯವನ್ನು ಇನ್ನು ೫ ವರ್ಷಗಳ ತನಕ ನೇಕಡಾ ೨೦ರಷ್ಟು ಇಳಿಸುವ ನಿರ್ಧಾರವನ್ನು ತಿರುವಾಂಕೂರು ಸರಕಾರವು ಪ್ರಕಟಿಸಿರುವುದು. ಕಾಂಗ್ರೆಸ ಕೆಲಸಗಾರರ ಮೇಲಿನ ಸರಕಾರದ ವಕ್ರದೃಷ್ಟಿ ಹಾಗೇ ಇದೆಯಾದರೂ, ಕಾಂಗ್ರೆಸ ಕೆಲಸಗಾರರು ಸಂಸ್ಥಾನದಲ್ಲಿ ಜವಾಬುದಾರಿ ಸರಕಾರವನ್ನು ಸ್ಥಾಪಿಸುವ ಸಂಬಂಧ ಪ್ರಚಾರವನ್ನೂ ವಿಧಾಯಕ ಕಾರ್ಯಕ್ರಮವನ್ನೂ ಮುಂದೊತ್ತುತಿದ್ದಾರೆ. ಅವರ ಈ ಕಾರ್ಯಕ್ರಮದಲ್ಲಿ ಅವರಿಗೆ ಮಹಾತ್ಮಾಜಿಯವರ ಆಶೀರ್ವಾದವೂ ದೊರಕಿದೆ

ತಲ್ಚೇರದಲ್ಲಿ

ಮಾರ್ಚ ತಿಂಗಳಲ್ಲಿ ತಲ್ಚೇರದ ರಾಜರ ಪರವಾಗಿ ಪೊಲಿಟಿಕಲ್ ಏಜಂಟರು ಮತ್ತು ಪ್ರಜಾಪರಿಷತ್ತಿನ ಕಾರ್ಯಕರ್ತರೊಳಗಾದ ಒಡಂಬಡಿಕೆಯನ್ನು ರಾಜರು ಇದುವರೆಗೆ ಮನ್ನಿಸದೆ ಇರುವುದರಿಂದ ಸಂಸ್ಥಾನದಲ್ಲಿ ಘೋರ ಅತೃಪ್ತಿ ಉಂಟಾಗಿರುವುದು ಸಂಸ್ಥಾನದ ಸರಕಾರದ ದಬ್ಬಾಳಿಕೆಯನ್ನು ಸಹಿಸಲಾರದೆ ರಾಜ್ಯಬಿಟ್ಟು ಬ್ರಿಟಿಷ ಇಂಡಿಯದಲ್ಲಿ ಆಶ್ರಯ ಪಡೆದಿರುವ ೨೦೦೦೦ ನಿರಾಶ್ರಿತರು ಅನುಭವಿಸುತ್ತಿರುವ ಯಾತನೆಗಳು ನರಕಯಾತನೆಗಳಿಗಿಂತಲೂ ಕಷ್ಟಕರವಾಗಿರುವವು ಆದರೆ ಒಡಂಬಡಿಕೆಯನ್ನು ರಾಜರು ಮನ್ನಿಸದೆ ಈ ನಿರಾಶ್ರಿತರು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುವ ಹಾಗೆ ಇರುವುದಿಲ್ಲ ಮಹಾತ್ಮಾಜಿಯವರು ಈ ಸಂಬಂಧ ರಾಜರ ವರ್ತನವನ್ನು ತೀವ್ರವಾಗಿ ಖಂಡಿಸಿ ಹರಿಜನದಲ್ಲಿ ಒಂದು ಲೇಖನವನ್ನು ಬರೆದಿರುವರು

ಜಮಖಿಂಡಿ—ಪ್ರತಿನಿಧಿಗಳ ನಿರ್ಧಾರ

ಜಮಖಿಂಡಿಯ ಸುಧಾರಣಾ ಸಮಿತಿಯ ರಚನೆಯಲ್ಲಿ ಕಂಡುಬಂದ ಕೆಲವು ದೋಷಗಳನ್ನು ರಾಜರು ಸರಿಪಡಿಸದೆ ಇರುವುದರಿಂದ ಪ್ರಜಾಪ್ರತಿನಿಧಿಗಳು ಸಮಿತಿಯೊಡನೆ ಸಹಕರಿಸುವುದಿಲ್ಲವೆಂದು ನಿರ್ಧರಿಸಿದ್ದಾರೆ

ರಾಮದುರ್ಗ ಸಂಸ್ಥಾನಾಧೀಶರ ಪ್ರಕಟಣ

ರಾಮದುರ್ಗದಲ್ಲಿ ದಂಗೆಯಾಗಿ ಹಲವು ಮಂದಿಯ ಕೊಲೆಯಾಯಿತಷ್ಟೆ. ಅತ್ತ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಕಡೆಯಿಂದ ದಂಗೆಯ ಕಾರಣಗಳ ಇತ್ಯಾದಿಗಳ ಕುರಿತು ಒಂದು ವಿಚಾರಣಾ ಸಮಿತಿ ಉಂಟಾಗಿದ್ದಾಗ ಇತ್ತ ರಾಮದುರ್ಗದ ರಾಜರೂ ಒಂದು ಸ್ವತಂತ್ರ ಮತ್ತು ನಿಷ್ಪಕ್ಷಪಾತ ವಿಚಾರಣಾ ಸಮಿತಿಯನ್ನು ರಚಿಸಲಿದ್ದುದಾಗಿ ಪ್ರಕಟಣೆಯಾಗಿದೆ

ಕಚ್ಛದಿಂದ ಜನರ ನಿರ್ವಾಸನ

ತಮ್ಮ ಕಷ್ಟಗಳನ್ನು ರಾಜರು ದೂರಮಾಡದೆ ಇರುವ ಕಾರಣ, ಲಿಂಬ್ಡಿ ಜನರ ಅನುಕರಣ ಮಾಡುತ್ತ ಕಚ್ಛ ಸಂಸ್ಥಾನದ ಪ್ರಜೆಗಳು ಸಂಸ್ಥಾನ ಬಿಟ್ಟು ಬೇರೆಡೆ ಹೋಗುವ ಆಲೋಚನ ಮಾಡಿದ್ದಾರೆ ಕರಾಚಿ ತಾಲೂಕಿನಲ್ಲಿ ನೂರಾರು ಕುಟುಂಬಗಳ ಇಳಿದುಕೊಳ್ಳುವ ವ್ಯವಸ್ಥೆಯಾಗಿದೆ

ಶ್ರೇಷ್ಠ ತರದ
ದೃಷ್ಟಿಚಕ್ರಗಳಿಗೆ



ರಬ್ಬರು ಮೊಹರುಗಳಿಗೆ
ನಾಯಕ್ ಸ್ಟೋರ್ಸ್
ರಥಬೀದಿ, ಮಂಗಳೂರು.

ಪ್ರತೀ ಮನೆಯಲ್ಲುಂಟಾಗ ಅಪಘಾತಗಳಿಗೆ ಉತ್ತಮ ಔಷಧಿ

ಜ್ಯಾಂಬಕು ಯಾವತ್ತೂ ಕಜ್ಜಿ ಕುರುಗಳನ್ನು ಗುಣಪಡಿಸುತ್ತದೆ

ಮಕ್ಕಳು ಯಾವಾಗಲೂ ಬಾಧೆಗೊಳಪಡುವರು ಅವರು ಯಾವಾಗಲೂ ಬಿದ್ದು ನೋವು... ಗಾಯಗಳಾಗುವವು ಅವರ ಕೈಗಳು ಮುಂದು ಹೋಗುವ ಸಂಭವವು ಒದಗಬಹುದು ಬಿದ್ದ ಮುಖವು ಪರಚಿದಂತಾಗಬಹುದು ಆದರೆ ಈ ಎಲ್ಲಾ ಅಪಘಾತಗಳಿಂದುಂಟಾಗುವ ಗಾಯಗಳನ್ನು ವಿಷಹಾರಿ ಜ್ಯಾಂಬಕು ಗುಣಪಡಿಸುವುದು ಜ್ಯಾಂಬಕಿನಲ್ಲಿರುವ ಅನುಕೂಲವಾದ ಗಿಡಮೂಲಿಕೆಗಳ ಎಣ್ಣೆಯು ಆಳವಾಗಿ ನಿಮ್ಮ ನರನಾಡಿಗಳನ್ನು ಹೊಕ್ಕು ನೋವನ್ನು ಗುಣಪಡಿಸಿ ಬಾತುಕೊಳ್ಳುವುದನ್ನು ಕಡಿಮೆಮಾಡುತ್ತದೆ ವ್ರಣಗಳಿಂದ ಬರುವ ರಸಿಗೆ ಯಾ ಕೆಟ್ಟ ನೀರನ್ನು ಒಣಗಿಸಿ ಬಾಧೆ ಕಲೆಯುಂಟಾಗದಂತೆ ಜ್ಯಾಂಬಕು ಗುಣಪಡಿಸುತ್ತದೆ ಎಲ್ಲಾ ಔಷಧಿ ಅಂಗಡಿಗಳು ಜ್ಯಾಂಬಕನ್ನು ಏಜಂಟ್ಸ್ 1 ವತ್ತು 2–4 ರಂತೆ ಮಾರುತ್ತಾರೆ. ಮೆಸರ್ಸ ಬಾಥ ಮತ್ತು ಕಂಪ. ಪಾರ್ಕಟೌನ್ ಮದ್ರಾಸು

ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಜೀವನದಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಒಳಲಿಕ್ಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ ... ಮೊದಲಾದ ವ್ಯಾಧಿಗಳಿಗೆ "ಜೀವನಾಮೃತ" ಒಂದು ಹೊಸ ... ಶುದ್ಧ ರಕ್ತಾಭಿವೃದ್ಧಿಯನ್ನೂ ಉತ್ಸಾಹಗಳನ್ನು ಜೀವನದಲ್ಲಿ ಸುಖಾನಂದಗಳನ್ನು ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧಿ ದಕ್ಷಿ

ಪಂಡಿತ ಡಿ ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ
ಎಲ್ಲಾ ಋತುಗಳಲ್ಲಿಯೂ
ಸೇವಿಸಬಹುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು
ಆಯುರ್ವೇದಾಶ್ರಮ
ಮದರಾಸು

ಸ್ಟಾಕಿಸ್ಟರು

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ — ಜಮ್ಮಿ ವೆಂಕಟರಮಣಯ್ಯ
ವಿಶೇಷ ಮಾಹಿತಿಗೆ ಬರೆಯಿರಿ — ಲಿವರ್ ಮತ್ತು ಪ್ಲೀಹ ಸ್ಪೆಸಿಯಲಿಸ್ಟ್,
ಮೈಲಾಪುರ, ಮದ್ರಾಸು

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St., CALCUTTA

ಜರ್ಮನಿಯಲ್ಲಿ ಪಾನನಿಷೇಧ ಹಿಟ್ಲರನ ಸಫಲಯೋಜನೆ

ಜರ್ಮನಿಯಲ್ಲೆಲ್ಲ ಪಾನನಿಷೇಧ ಮಾಡ ಬೇಕೆಂಬ ಹಿಟ್ಲರನ ಕನಸು ಈಗ ನಿಜವಾಗಬ ಹುದೆಂದು ನ್ಯೂಸಕ್ರೊನಿಕಲ್ ಪತ್ರಿಕೆಯು ಬರೆ ಯುತ್ತದೆ. ಕಠಿನ್ನ ಅಮಲು ಪದಾರ್ಥಗಳನ್ನು ಇನ್ನು ಮುಂದೆ ಜರ್ಮನಿಯಲ್ಲಿ ತಯ್ಯಾರಿಸಬಾ ರದೆಂದು ಹಿಟ್ಲರನು ಆಜ್ಞಾಪಿಸಿದ್ದಾನೆ. ಹಿಂದೆ ತಯ್ಯಾರಾಗಿ ಈಗ ಮಾರಾಟವಾಗದೆ ಉಳಿದ ವನ್ನು ಅದು ಮುಗಿಯುವ ತನಕ ಮದ್ಯವ್ಯಾ ಪಾರಿಗಳು ಮಾರಬಹುದು. ಆದರೆ ಯಾವತ್ತು ಕಠಿನ ಅಮಲುಪದಾರ್ಥಗಳನ್ನು ಇನ್ನು ತಯ್ಯಾ ರಿಸಿ ಮಾರಕೂಡದು. ಮದ್ಯವನ್ನು ಬೆರಸಿ ಮಾರುವ ಚೊಕೊಲೇಟುಗಳೆಂಬ ತಿಂಡಿ ಪದಾ ರ್ಥವನ್ನುಕೂಡ ಇನ್ನು ಜರ್ಮನಿಯಲ್ಲಿ ತಯ್ಯಾ ರಿಸಕೂಡದಾಗಿದೆ.

ಈ ನಿರ್ಬಂಧಾಜ್ಞೆಯನ್ನು ಹೊರಡಿಸಿದುದ ರಿಂದ ಜರ್ಮನ ಜನತೆಯ ಮೇಲೆ ಯಾವ ಪರಿ ಣಾಮವುಂಟಾಗುತ್ತಿದೆಯೆಂಬುದನ್ನು ಜರ್ಮನ ಅಧಿಕಾರಿಗಳು ಕುತೂಹಲದಿಂದ ನಿರೀಕ್ಷಿಸುತ್ತಿ ರುವರು. ಜನರು ಈ ನಿರ್ಬಂಧಕ್ಕೆ ಸಂತೋ ಷದಿಂದ ಒಪ್ಪಿದ್ದಾದರೆ, ಅಷ್ಟು ಅಮಲುಕಾರಿ ಅಲ್ಲದ್ದ ಜರ್ಮನರ ಅತ್ಯಂತ ಮೆಚ್ಚಿಗೆಯ ಪಾ ನಕವಾದ ಬೀಯರನ್ನೂ ಸರಕಾರವು ನಿಷೇಧಿಸ ಬಹುದು. ಅದರ ಬದಲಿಗೆ ಅಮಲು ಗುಣವಿ ಲ್ಲದ, ಆದರೆ ಅಷ್ಟೇರುಚಿಕರವಾದ ಬೇರೊಂದು ಪಾನಕವನ್ನು ತಯ್ಯಾರಿಸಿ ಮಾರಬಹುದು.

ಹಿಟ್ಲರನಿಗೆ ಮದ್ಯವೆಂದರೆ ಆಗದು. ಅವ ನು ಹುಟ್ಟಿದಂದಿನಿಂದ ಈ ತನಕ ಮದ್ಯವನ್ನು ಮೂಸಿಕೂಡ ನೋಡಿದವನಲ್ಲ. ಸಾರ್ವಜ ನಿಕಸಭೆ–ಸಂತೋಷ ಕೂಟಗಳಲ್ಲಾದರೂ ತನ್ನ ತನ್ನ ಅನುಯಾಯಿಗಳು ಮದ್ಯಪಾನ ಮಾಡ ಬಾರದೆಂಬ ಆಜ್ಞೆಯನ್ನು ಅವನು ನಾಲ್ಕಾರು ವರ್ಷಗಳ ಮೊದಲೇ ಕೊಟ್ಟಿದ್ದುಂಟು.

ಸರದಾರ ಪಟೇಲರ ಆಫ್ರಿಕದ ಪ್ರಯಾಣ

ಇದೇ ಮೇ ತಿಂಗಳಲ್ಲಾಗಬಹುದು.

—○○○—

ನೇಶನಲ್ ಪತ್ರಿಕೆಯಲ್ಲಿ ಪ್ರಕಟವಾದಂತೆ ಸರದಾರ ಪಟೇಲರು ಇದೇ ಮೇ ತಿಂಗಳಲ್ಲಿ ಪೂರ್ವ ಆಫ್ರಿಕಕ್ಕೆ ಹೋಗಬಹುದೆಂದು ತಿಳಿದು ಬರುತ್ತದೆ. ಮಧ್ಯಪ್ರಾಂತ್ಯ ಸಂಸ್ಥಾನಗಳ ಒಂದು ಪ್ರಜಾಪರಿಷತ್ತು ಸದ್ಯದಲ್ಲಿಯೇ ಆಗು ವುದಿದ್ದು, ಅದರ ಅಧ್ಯಕ್ಷಸ್ಥಾನವನ್ನು ಸರದಾರ ಪಟೇಲರು ವಹಿಸಿಕೊಳ್ಳಬೇಕೆಂದು ಸ್ನೇಹಿತರೊ ಬ್ಬರು ಸೂಚಿಸಿದ್ದರು. ಆದರೆ 'ಏಪ್ರಿಲ್ ತಿಂಗ ಳಲ್ಲಿ ತುಂಬಾ ಕೆಲಸವಿದೆ. ಮೇ ತಿಂಗಳಲ್ಲಿ ನಾನು ವಿದೇಶಕ್ಕೆ ಪ್ರಯಾಣ ಹೋಗಬಹುದು. ಆದ್ದರಿಂದ ಕ್ಷಮಿಸಿರಿ' ಎಂದು ಅವರು ಸ್ನೇಹಿತ ರಿಗೆ ಉತ್ತರ ಬರೆದಿರುವರು. ವಿದೇಶಕ್ಕೆ ಪ್ರಯಾ ಣವೆಂಬುದರಿಂದ–ಮೊದಲೊಮ್ಮೆ ಪ್ರಕಟವಾದ ಪ್ರಕಾರ ಆಗಾಖಾನರು ಸೂಚಿಸಿ ಮಹಾತ್ಮರು ಅನುಮೋದಿಸಿದಂತೆ ಅವರು ಪೂರ್ವ ಆಫ್ರಿಕಕ್ಕೆ ಹೋಗಬಹುದೆಂದು ಅಂದಾಜು

ಪೂರ್ವ ಆಫ್ರಿಕವು ಮೊದಲು ಜರ್ಮನಿಯ ವಸಾಹತು ಆಗಿದ್ದಿತು. ಮಹಾಯುದ್ಧವು ಮುಗಿದ ಬಳಿಕ ಜನಾಂಗ ಸಂಘವು ಅದರ ಆಡ ಳಿತವನ್ನು ಬ್ರಿಟಿಷರ ಕೈಗೆ ಒಪ್ಪಿಸಿತು. ಈಗ ಇದೇ ವಸಾಹತನ್ನು ಹಿಟ್ಲರನು ಪುನಃ ಜರ್ಮ ನಿಗೆ ಕೊಡಬೇಕೆಂದಿದ್ದಾನೆ. ಈ ವಸಾಹತಿ ನಲ್ಲಿ ಬಹಳ ಹಿಂದೀಯರು ಹೋಗಿ ನೌಕರಿ ಚಾಕರಿ ವ್ಯಾಪಾರ ಉದ್ಯೋಗಗಳನ್ನು ಮಾಡಿ ಕೊಂಡು ಜೀವಿಸಿದ್ದಾರೆ. ಅಲ್ಲಿ ಬ್ರಿಟಿಷರ ಕೈ ಯಲ್ಲಿ ಈ ಹಿಂದೀಯರ ಕಷ್ಟಗಳಿಗೆ ಈಗಲೇ ಮಿತಿ ಇರುವುದಿಲ್ಲ. ಈ ವಸಾಹತು ಹಿಟ್ಲರನ ಕೈಸೇರಿಬಿಟ್ಟರೆ ಮತ್ತೆ ಪೂರ್ವ ಆಫ್ರಿಕವು ಅಷ್ಟು ಮಂದಿ ಹಿಂದೀಯರಿಗೆ ಪ್ರತ್ಯಕ್ಷ ನರಕವೇ ಆಗ ಬಹುದು. ಆದ್ದರಿಂದ ಪೂರ್ವ ಆಫ್ರಿಕದ ಹಿಂದೀಯರನ್ನು ಸಂಘಟಿಸಿ ಅವರ ಸ್ಥಿತಿಗತಿಗ ಳನ್ನು ಸುಧಾರಿಸಲಿಕ್ಕೂ, ಆ ವಸಾಹತು ಹಿಟ್ಲ ರನ ವಶವಾಗದೆ, ಸ್ವತಂತ್ರವಾಗಿರುವಂತೆ ತಕ್ಕ ಕಾರ್ಯಕ್ರಮಗಳನ್ನು ಹೂಡಲಿಕ್ಕೂ ಸರದಾರ ಪಟೇಲರು ಅಲ್ಲಿಗೆಹೋಗುವ ಉದ್ದೇಶವಾಗಿದೆ

ಖಡ್ಡಾಯ ಶಿಕ್ಷಣ ಪ್ರಚಾರದ ವಿರುದ್ಧ ಅಫಘಾನಿಸ್ಥಾನ

ಜನರ ಬಂಡಾಯ! ಅರಸರ ಬಾಂಬಿನ ಸುರಿಮಳೆ!!

ಅಫಘಾನಿಸ್ಥಾನದ ಸರಕಾರವು ಕಡ್ಡಾಯ ವಾಗಿ ಪ್ರಾಥಮಿಕ ಶಿಕ್ಷಣ ಪ್ರಚಾರಮಾಡುವು ದನ್ನು ನಿಷೇಧಿಸಿ ಅಲ್ಲಿಯ ಒಂದು ಪ್ರಜಾ ವರ್ಗವು ಸರಕಾರ ವಿರುದ್ಧ ದಂಗೆ ಎದ್ದಿತು! ಶಿಕ್ಷಣಪ್ರಚಾರದಿಂದ ತಮ್ಮ ಧರ್ಮವು ಕೆಡುವು ದೆಂದು ಆ ಜನರ ವಿಶ್ವಾಸ! ಅಲಿಘುನಾಯಿಯ ಮಹ್ಮದ ಅಫಜಾರಿ ಎಂಬ ೮೦ ವರ್ಷ ಪ್ರಾ ಯದ ಒಬ್ಬ ಪಾಳೆಯಗಾರನು ಈ ಬಂಡಾಯ ಗಾರರ ಮುಖಂಡ! ಅಫಘಾನಿಸ್ಥಾನ ಅರಸು– ಜಾಹೀರ ಶಾಹರು ಬಂಡಾಯವನ್ನು ಬಾಂಬು ಗಳ ಸುರಿಮಳೆಯಿಂದ ನಿಲ್ಲಿಸಿದ್ದಾರೆ. ಅಪ ರಾಧಿಗಳನ್ನು ಹಿಡಿದು ಕಠಿಣ ದಂಡನೆಗೆ ಗುರಿ ಮಾಡಿದ್ದಾರೆ

ನಮಗೆ ಕಡ್ಡಾಯ ಶಿಕ್ಷಣವು ಬೇಕೆಂದು ನಾವೆಲ್ಲ ಎಷ್ಟೋ ವರ್ಷಗಳಿಂದ ಹೋರಾಡು ತ್ತಿದ್ದೇವೆ. ಆದರೆ ಸರಕಾರವು ನಮ್ಮ ಮಾತು ಗಳನ್ನು ಕಾರ್ಯರೂಪದಲ್ಲಿ ಲಕ್ಷ್ಯಕ್ಕೆ ತರುವು ದಿಲ್ಲ. ಆದರೆ ಅಫಘಾನಿಸ್ಥಾನದಲ್ಲಿ ಕಡ್ಡಾಯ ಶಿಕ್ಷಣವನ್ನು ಕೊಡಿಸುತ್ತೇವೆಂದು ಸರಕಾರವು ತಾನಾಗಿ ಮುಂದೆ ಬಂದರೂ ಅದು ಜನರಿಗೆ ಬೇಡ. ಹೀಗಿಯೋ ಲೋಕದ ಸ್ಥಿತಿ ವಿಚಿತ್ರವೂ ಅದ್ಭುತವೂ ಆಗಿದೆ

ಹರಿಜನರಿಗೆ ದೇವಸ್ಥಾನ ಪ್ರವೇಶ

ಮಲಬಾರಿನಲ್ಲಿ ಹಣ ಸಂಗ್ರಹ

ಹೊಟೇಲುಗಳಿಗೆ ಪ್ರವೇಶ ದೊರೆಯುದುದಕ್ಕೆ ದಾವೆ

ಮಲಬಾರಿನಲ್ಲಿ ಗುರುವಾಯ್ಯೂರು ದೇವ ಸ್ಥಾನದಲ್ಲಿ ಹರಿಜನರಿಗೆ ಪ್ರವೇಶವನ್ನು ಕೊಡು ವೆಕೆಂಬುಜನಮತವನ್ನುತಿಳಿಯುವದಕ್ಕೋಸ್ಕರ ಅಲ್ಲಿ ಮದ್ರಾಸು ಹರಿಜನ ದೇವಸ್ಥಾನ ಪ್ರವೇಶ ಕಾನೂನಿಗನುಸಾರ ಚುನಾವಣೆಯಾಗಬೇಕಾ ಗಿದೆ. ಅದಕ್ಕೆ ಸಾವಿರಾರು ರೂಪಾಯಿಗಳ ಖರ್ಚು ಇದೆ. ಆದ್ದರಿಂದ ಪ್ರಸಿದ್ಧ ಹರಿಜನ ಸೇವಕರಾದ ಶ್ರೀ. ಕೇಳಪ್ಪನವರು ಗುರುವಾ ಯ್ಯೂರು ತಾಲೂಕಿನಲ್ಲಿ ಸಂಚರಿಸಿ, ಸಭೆ ಭಾಷ ಣಾದಿಗಳ ಮೂಲಕ ಪ್ರಚಾರಕಾರ್ಯಮಾಡು ತ್ತಲೂ, ಹಣವನ್ನು ಸಂಗ್ರಹಿಸುತ್ತಲೂ ಇದ್ದಾರೆ. ಮಧುರೆಯಲ್ಲಿ ಆ ಸಂಬಂಧ ೫೦೦ ರೂಪಾಯಿ ಗಳ ವಂತಿಗೆಯಾಗಿದೆ

ಹೊಟೇಲು ಪ್ರವೇಶದ ದಾವೆ

ಚಿಕಾಕೋಲದ ಕೆಲವು ಹೊಟೇಲು ವ್ಯಾಲ ಕರು ಹರಿಜನರಿಗೆ ತಮ್ಮ ಹೊಟೇಲುಗಳ ಪ್ರವೇಶವನ್ನೂ ತಿಂಡಿತೀರ್ಥಗಳನ್ನೂ ನಿರಾಕ ರಿಸುವುದರಿಂದ, ಶ್ರೀ ಎಸ್ ಗುರುವಲು ಎಂಬ ಕಾಂಗ್ರೆಸ ಎಮ್. ಎಲ್ ಎ ಗಳು ಈ ಹೊ ಟೇಲು ವ್ಯಾಲಕರ ಮೇಲೆ ಕಾನೂನು ಮೇರೆ ಗೆ ದಾವೆ ತಂದಿದ್ದಾರೆ. ಸಿವಿಲ್ ಡಿಸಬಿಲಿ ಟೀಸ್ ರಿಮೂವಲ್ ಎಕ್ಟ ಪ್ರಕಾರ ಹೊಟೇಲು ವ್ಯಾಲಕರು ಹರಿಜನರಿಗೆ ಪ್ರವೇಶ ಅಥವಾ ತಿಂಡಿ ತೀರ್ಥಗಳನ್ನು ನಿರಾಕರಿಸುವುದು ಅಪ ರಾಧವಾಗಿದೆ

ಹರಿಜನ ಸೇವೆಯು ಸರಕಾರಿ ಪ್ರಯತ್ನಗಳು

ಹರಿಜನರಿಗೆ ಉಚ್ಚವರ್ಣದ ಹಿಂದುಗಳಷ್ಟೇ ಸಮಾನ ಹಕ್ಕು ಅಧಿಕಾರಗಳನ್ನು ಕೊಡುವ ಒಂದು ಮಸೂದೆಯನ್ನೂ ಬೊಂಬಾಯಿ ಸರಕಾ ರವೂ, ದೇವಸ್ಥಾನಗಳಿಗೆ ಪ್ರವೇಶಕೊಡುವ ಮಸೂದೆಯನ್ನೂ ಸಂಯುಕ್ತಪ್ರಾಂತಗಳ ಸರ ಕಾರವೂ ಮುಂದೆ ತಂದಿದೆ

ಶ್ರೀ ದೈವನಾಗಲು ದೇವಸ್ಥಾನ, ಉದ್ಯಾವರ ಗ್ರಾಮ.

ಕಾಸರಗೋಡು, (ದಕ್ಷಿಣ ಕನ್ನಡ)

1937ನೇ ಜೂನ್ 30ನೇ ತಾರೀಕಿನವರೆಗಿನ ಜಮಾ ಖರ್ಚಿನ ವಿವರ.

	1935—'36	1936—'37		1935—36	1936—'37
ಕಾಣಿಕೆ	199 15 8	299 14 7	ಪೂಜಾ ಖರ್ಚು	480 8 9	528 6 0
ಸಾಲ ಪಡೆದದ್ದು	41 13 8	60 13 0	ತಂಗಿ	122 14 0	182 15 0
ಬಾಡಿಗೆ	298 6 5	329 10 7	ಕೋಡಿ ಖರ್ಚು		48 10 1
ಮಾರಾಟ	13 6 9	88 8 0	ಎಂಡೊಮೆಂಟಿಗೆ ವಂತಿಗೆ	—	36 0 2
ತಸ್ತಿಕು	24 0 0		ಸಾಲವನ್ನು ಹಿಂತಿರುಗಿ ಕೊಟ್ಟದ್ದು	17 3 6	68 10 0
ಬಡ್ಡಿ	43 0 0	87 0 0			
	620 9 8	850 8 3		620 9 8	850 8 3

ಮಂಗಳೂರು, ತಾ. 3-12-38. ಸರಿಯಾಗಿ ಪರಿಶೋಧಿಸಲ್ಪಟ್ಟಿದೆ ಬಿ ಶಾಂತರಾಮ ರಾವ್, ರಿಜಿಸ್ಟ್ರಾರ್ಡ್ ಎಕೌಂಟೆಂಟ್

ಶ್ರೀ ದೈವಾನಗಲು ದೇವಸ್ಥಾನ, ಉದ್ಯಾವರ ಗ್ರಾಮ.

ಕಾಸರಗೋಡು, (ದಕ್ಷಿಣ ಕನ್ನಡ.)

1937ನೇ ಜೂನ್ ತಾರೀಕು 30ಕ್ಕೆ ಮುಗಿಯುವ ಎರಡು ವರ್ಷಗಳ ಆಯವ್ಯಯದ ಪಟ್ಟಿ.

	1935—'36	1937—'38		1935—36	1936—'37
ಬರತಕ್ಕ ಬಾಡಿಗೆ.	395 12 4	395 12 4	ಪೂಜಾ ಖರ್ಚು	480 8 2	528 6 0
ಬರತಕ್ಕ ಬಡ್ಡಿ	48 10 1	48 10 1	ತಂಗಿ	123 14 0	182 14 0
ತಸ್ತಿಕು	24 0 0	24 0 0	ಎಂಡೊಮೆಂಟಿಗೆ ವಂತಿಗೆ	—	36 0 0
ಕಾಣಿಕೆ	199 15 8	299 14 7	ಕೋಡಿ ಖರ್ಚು	—	84 10 2
ಹೆಚ್ಚಿನ ಖರ್ಚು	—	13 9 2	ವ್ಯಯಕ್ಕಿಂತ ಹೆಚ್ಚಿನ ಆದಾಯ	64 15 6	—
ಹೆಚ್ಚಿನ ಆದಾಯ	—	—		668 5 8	781 14 2
	668 5 8	781 14 2			

ಮಂಗಳೂರು, 3–12–'38. ಸರಿಯಾಗಿ ಪರಿಶೋಧಿಸಲ್ಪಟ್ಟಿದೆ ಬಿ ಶಾಂತಾರಾಮ ರಾವ್, ರಿಜಿಸ್ಟರ್ಡ್ ಎಕೌಂಟೆಂಟ್

ಸುಭಾಸರ ದಸ್ತಗಿರಿಗೆ ಮಹಾತ್ಮರ ಅನುಮೋದನೆಯಂತೆ

ಕಳೆದ ಬಾರಿ ಮಧ್ಯಪ್ರಾಂತಗಳ ನ್ಯಾಯ ವಿಧಾಯಕ ಸಭೆಯಲ್ಲಿ ಆಯವ್ಯಯ ಅಂದಾಜು ಪಟ್ಟಿಯ ಚರ್ಚೆಯಾಗುತಿದ್ದಾಗ, ಕಾಂಗ್ರೆಸ ಪಕ್ಷದ ಸದಸ್ಯರಾದ ಶ್ರೀ ಉದಭೋಜ ಎಂಬವರು ಪಾರ್ಟಿಯ ಕ್ರಮನಿಂಬಂಧನೆಗಳಿಗೆ ವಿರೋಧವಾಗಿ, ಕೆಲವು ಕಟಿತದ ಸೂಚನೆಗಳನ್ನು ಕೊಟ್ಟು ತನ್ನ ಪಾರ್ಟಿಯ ಸರಕಾರವನ್ನು ವಿನಾ ಕಾರಣ ದೂಷಿಸುವುದರ ಮೂಲಕ ಪಾರ್ಟಿಗೇ ದ್ರೋಹಮಾಡಿದರೂ ಶ್ರೀ ಉದಭೋಜರು ತಮ್ಮದೊಂದು ಕಡಿತದ ಸೂಚನೆಗೆ ಸಂಬಂಧಪಟ್ಟ ಭಾಷಣಮಾಡುತ್ತಾ ಕಾಂಗ್ರೆಸ ಸರಕಾರಗಳು ಶ್ರೀ. ಬಾಬು ಸುಭಾಸಚಂದ್ರ ಭೋಸರನ್ನು ದಸ್ತಗಿರಿಮಾಡಲೂ ಬಹುದು, ಅಥವಾ ಅವರಿಗೆ ದೇಶಾಂತರ ವಾಸದ ಶಿಕ್ಷೆಯನ್ನು ಕೊಡಲೂ ಬಹುದು ಎಂದು ಆಕ್ಷೇಪಮಾಡಿದ್ದರು ಕಾಂಗ್ರೆಸ ಸರಕಾರವನ್ನು, ಸರಕಾರಿ ಪಕ್ಷದ ಒಬ್ಬ ಸದಸ್ಯರೇ ಹೀಗೆ ಆಕ್ಷೇಪಿಸಿರುವುದರಿಂದ, ಅವರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಮಧ್ಯಪ್ರಾಂತದಲ್ಲಿ ಒಂದು ದೊಡ್ಡ ಆಂದೋಲನವುಂಟಾಗಿದೆ

ಆಕ್ಷೇಪಕ್ಕೆ ಕಾರಣ

ಕಾಂಗ್ರೆಸ ಸರಕಾರವನ್ನು ಕಾಂಗ್ರೆಸ ಸದಸ್ಯರೇ ಈ ರೀತಿ ಆಕ್ಷೇಪಿಸಿರುವುದಕ್ಕೆ, ಮಧ್ಯಪ್ರಾಂತ್ಯದ ಕಾಂಗ್ರೆಸ ಸದಸ್ಯರಲ್ಲಿ ಐಕ್ಯಮತ್ಯವಿಲ್ಲದಿರುವುದು ಕಾರಣವೆಂದೂ ಊಹಿಸಲಾಗಿದೆ ಅಲ್ಲಿ ಕಾಂಗ್ರೆಸ ಶಿಸ್ತಿಗೆ ಬಲಿಯಾಗಿರುವ ಡಾಕ್ಟರ ಖರೆಯವರ ತಂಡ ಒಂದು ಈಗ ಕಾಂಗ್ರೆಸ ಪ್ರಧಾನರಾಗಿರುವ ಶ್ರೀ ಆರ್ ಎಸ್ ಶುಕ್ಲರ ತಂಡ ಇನ್ನೊಂದು ಈ ಎರಡು ತಂಡಗಳೊಳಗೆ ಯಾವಾಗಲೂ ಕಚ್ಚಾಟ ಹೋರಾಟಗಳು ನಡೆಯುತ್ತಲೇ ಇರುತ್ತವೆ ಆದ್ದರಿಂದ ಅಲ್ಲಿನ ಸತ್ಯ ಸ್ಥಿತಿಯನ್ನು ತಿಳಕೊಳ್ಳಲು ಸ್ವಲ್ಪ ಗಂಭೀರವಾಗಿ ಆಲೋಚಿಸಬೇಕಾಗುತ್ತದೆ ಡಾಕ್ಟರ ಖರೆಯವರು ತಮ್ಮ ರಾಜಕೀಯ ಎದುರಾಳಿಗಳ ಮೇಲಿನ ಸೇಡನ್ನು ತೀರಿಸಿಕೊಳ್ಳಲಿಕ್ಕೆ ಏನನ್ನಾದರೂ ಮಾಡಲಿಕ್ಕೆ ಹೇಸುವುದಿಲ್ಲವೆಂಬುದನ್ನು ನಾವಿಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು. ಜನ ಪ್ರಚಾರಂಮಾಡಿಯಾದರೂ ತಮ್ಮ ದ ಷ್ಟ ಸ್ವಾರ್ಥವನ್ನು ಸಾಧಿಸಲಿಕ್ಕೆ ಅವರು ಯಾವಾಗಲೂ ಸಿದ್ಧರೆಂಬುದನ್ನು ಅವರ ಇತ್ತೀಚಿಗಿನ ವರ್ತನವು ಸ್ಪಷ್ಟಮಾಡಿದೆ ಡಾಕ್ಟರ ಖರೆಯವರಿಂದ ಪ್ರೇರಿತರಾಗಿಯೇ ಶ್ರೀ ಉದಭೋಜರು ಕಾಂಗ್ರೆಸ ಸರಕಾರಗಳ ಮೇಲೆ ಮಿಥ್ಯಾಪವಾದವನ್ನು ಹೊರಿಸಿದ್ದಾರೆಂದು ತಿಳಿಯಲಿಕ್ಕೆ ಆಧಾರಗಳಿವೆ

ಖರೆಯವರ ಹೇಳಿಕೆ

"ಮಹಾತ್ಮಾಗಾಂಧಿಯವರು ಶ್ರೀ ಸುಭಾಸರನ್ನು ದಸ್ತಗಿರಿ ಮಾಡಿಸಲೂ ಬಹುದು. ಕಾಂಗ್ರೆಸ ಸರಕಾರಗಳು ಮಹಾತ್ಮರ ಅನುಮೋದನೆಯಿಂದ ಮಾಡದಿರುವಂಥ ಕಾರ್ಯವೊಂದೂ ಇರುವುದಿಲ್ಲ ಅಸಾಧ್ಯಕಾರ್ಯಗಳೂ ಅಲ್ಲಿ ಸಾಧ್ಯವಾಗುತ್ತವೆ" ಎಂದು ಡಾಕ್ಟರ ಖರೆಯವರು ಒಂದು ಹೇಳಿಕೆಯನ್ನು ಕೊಟ್ಟು, ಅಸೆಂಬ್ಲಿಯಲ್ಲಿ ಶ್ರೀ ಉದಭೋಜರಾಡಿದ ಮಾತುಗಳನ್ನು ಅವರು ಪುಷ್ಟೀಕರಿಸಿದ್ದಾರೆ "ನಾನು ಮಧ್ಯಪ್ರಾಂತ ಸರಕಾರದ ಕಾಂಗ್ರೆಸ ಮುಖ್ಯಮಂತ್ರಿಯಾಗಿದ್ದಾಗ ಗಾಂಧಿಜಿಯವರು ನನಗೆ ಒಂದು ಪತ್ರವನ್ನು ಬರೆದು– ಮಧ್ಯಪ್ರಾಂತಗಳ ಕಾಂಗ್ರೆಸ ಪ್ರಮುಖರಾದ ಜನರಲ್ ತಿವಾರಿಯವರು ಜನರನ್ನು ತಮ್ಮ ಭಾಷಣಗಳ ಮೂಲಕ ಹಿಂಸೆಗೆ ಪ್ರೋತ್ಸಾಹಿಸುತ್ತಿರುವರಾದರೆ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಅವರನ್ನೊಮ್ಮೆ ವಿಚಾರಿಸಿ ಎಚ್ಚರಿಸಬೇಕು ಅವರು ಅದನ್ನು ಲಕ್ಷಿಸದಿದ್ದರೆ ಅವರ ಮೇಲೆ ನೀವು ತಕ್ರಾರು ಮಾಡಬಹುದು ಈ ಕುರಿತು ನಿಮಗೆ ಏನಾದರೂ ಅನುಮಾನವಿದ್ದರೆ ನೀವು ಕಾಂಗ್ರೆಸ ಅಧ್ಯಕ್ಷರನ್ನು ಅಥವಾ ವರ್ಕಿಂಗ್ ಕಮಿಟಿಯನ್ನು ಕೇಳಿಕೊಳ್ಳಬೇಕು. ಆ ಕುರಿತು ಏನನ್ನಾದರೂ ಹೇಳುವ ಅಧಿಕಾರವು ನನಗೆ

ಅಸಾಧ್ಯ ಸಂಗತಿಗಳು ಸಾಧ್ಯವಾಗಲೂ ಬಹುದು-ಕಾಂಗ್ರೆಸ ರಾಜ್ಯದಲ್ಲಿ ಡಾಕ್ಟರ ಖರೆಯವರ ಮಿಥ್ಯಾಪವಾದ

ಇರುವುದಿಲ್ಲ" ಎಂದಿದ್ದರು ಆದ್ದರಿಂದ ಈಗ ಗಾಂಧಿಯವರು ಶ್ರೀ ಸುಭಾಸರನ್ನು ದಸ್ತಗಿರಿ ಮಾಡಲಿಕ್ಕೆ ಕಾಂಗ್ರೆಸ ಸರಕಾರಗಳನ್ನು ಪ್ರೇರೇಪಿಸುವುದು ಆಶ್ಚರ್ಯವೇನೂ ಅಲ್ಲ'ವೆಂದು ಡಾಕ್ಟರ ಖರೆಯವರು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ

ಸತ್ಯವು ಬಯಲಾಯಿತು

ಸತ್ಯವನ್ನು ಮರೆಮಾಡಿ ಗಾಂಧಿಯವರ ಮತ್ತು ಕಾಂಗ್ರೆಸ ಸರಕಾರಗಳ ವಿರುದ್ಧ ಅಪಪ್ರಚಾರ ಮಾಡಲಿಕ್ಕೆ ಡಾಕ್ಟರ ಖರೆಯವರು ತುಂಬಾ ಪ್ರಯತ್ನಪಟ್ಟಿದ್ದಾರೆ ಆದರೆ ಅವರು ತಮ್ಮ ಪ್ರಯತ್ನಗಳಲ್ಲಿ ಸಫಲರಾಗಲಿ ಅಸಫಲರಾಗಿರುವುದನ್ನು ಕಂಡು ತುಂಬಾ ಸಂತೋಷವುಂಟಾಗುತ್ತದೆ ಯಾರ ದಸ್ತಗಿರಿ ಮಾಡಲಿಕ್ಕೆ ಗಾಂಧಿಯವರ ಡಾಕ್ಟರ ಖರೆಯವರನ್ನು ಪ್ರೇರೇಪಿಸಿದ್ದರೆಂದು ಡಾಕ್ಟರ ಖರೆಯವರು ಈಗ ಹೇಳಿ ಗಾಂಧಿ ಮತ್ತು ಕಾಂಗ್ರೆಸಿನ ಧವಳ ಕೀರ್ತಿಗೆ ಕಳಂಕ ತರುವ ದುಸ್ಸಾಹಸವನ್ನು ತೋರಿಸಿದ್ದಾರೆಯೋ, ಆ ಜನರಲ್ ತಿವಾರಿಯವರೇ ಡಾಕ್ಟರ ಖರೆಯವರ ದೂಷಿತ ಮನೋವೃತ್ತಿಯನ್ನು ನಿಷೇಧಿಸುತ್ತ 'ಹಿತವಾದ' ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು, ನನ್ನ ದಸ್ತಗಿರಿಗೆ ಮಹಾತ್ಮರು ಡಾಕ್ಟರ ಖರೆಯವರನ್ನು ಪ್ರೇರೇಪಿಸಿದ್ದರೆಂಬ ಆರೋಪವು ಮಹಾತ್ಮರಿಗೆ ತಿಲಮಾತ್ರವೂ ಅನ್ವಯಿಸುವುದಿಲ್ಲ ನಾನು ಜನರನ್ನು ಹಿಂಸೆಗೆ ಪ್ರೇರೇಪಿಸುತ್ತಿರುವೆನೆಂದು ಡಾಕ್ಟರ ಖರೆಯವರೇ ನನ್ನ ಮೇಲೆ ಸುಳ್ಳು ಅಪರಾಧಗಳನ್ನು ಹೊರಿಸಿ ಮಹಾತ್ಮರಿಗೆ ದೂರು ಕೊಟ್ಟಿದ್ದರು. ನಾನು ನಿರಪರಾಧಿಯಾಗಿರುವೆನೆಂಬುದನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಯು ಅಧ್ಯಕ್ಷರಿಗೆ ಸಮಾಧಾನ ಮಾಡಿದಾಗ ಡಾಕ್ಟರ ಖರೆಯವರು ನನ್ನ ಮೇಲೆ ತಮ್ಮ ಯಾವ ಅಸ್ತ್ರವನ್ನೂ ಪ್ರಯೋಗಿಸಲಾರದಾದರು. ಡಾಕ್ಟರ ಖರೆಯವರಂಥ ಮನುಷ್ಯರು ಮಿಥ್ಯಾ ಪ್ರಚಾರದ ಮೂಲಕ ಇತರರ ಮೇಲೆ ಕೆಸರೆರಚಲು ಪ್ರಯತ್ನಿಸುತ್ತಿರುವುದನ್ನು ಕಂಡು ಬಹಳ ದುಃಖವಾಗುತ್ತದೆ' ಎಂದಿರುವರು.

ಈ ಆಟವೇಕೆ?

'ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ' ಹೀಗಾಗ ಬೇಕೆಂಬುದೇ ಡಾಕ್ಟರ ಖರೆಯವರ ಜೀವನದ ಆಸೆಯಾಗಿದ್ದಿರಬಹುದು ಶ್ರೀ ಸುಭಾಸರ ರಾಜಕೀಯ ಎದುರಾಳಿಗಳೆಂದರೆ ಮಹಾತ್ಮಾಗಾಂಧಿ ಮತ್ತು ಪಂಡಿತ ನೆಹರು ಎಂದು ಅವರು ತಿಳಕೊಂಡ ಹಾಗಿದೆ ಒಂದು ಕಡೆಯಿಂದ ಡಾಕ್ಟರ ಖರೆಯವರು ಪಂಡಿತ ನೆಹರುಗಳ ಮೇಲೆ ಮಾನನಷ್ಟದ ದಾವೆ ಹೂಡುವ ನೋಟೀಸನ್ನು ಕೊಟ್ಟಿದ್ದಾರೆ ಇನ್ನೊಂದು ಕಡೆಯಿಂದ ಅವರು ಮಹಾತ್ಮರ ಕಡೆಗೆ ಉಗುಳ ತೊಡಗಿದ್ದಾರೆ ಆದರೆ ಸೂರ್ಯನ ಕಡೆಗೆ ಉಗುಳಿದ ಉಗುಳು ಉಗುಳಿದವನ ಮುಖದ ಮೇಲೆಯೇ ಬಂದು ಬೀಳುತ್ತದೆಂಬುದನ್ನು ಡಾಕ್ಟರ ಖರೆಯವರು ಯಾಕೆ ತಿಳಿದಿಲ್ಲವೋ ಗೊತ್ತಿಲ್ಲ! ಪ್ರಾಯಶಃ ಸ್ವಾರ್ಥದಿಂದ ಅಂಧರಾದವರಿಗೆ ಏನೂ ಕಾಣದೆ ಹೋಗಬಹುದು ಪಂಡಿತ ನೆಹರು ಅವರನ್ನೂ ಗಾಂಧಿಯವರನ್ನೂ ದೂರಿ ರಾಷ್ಟ್ರಪತಿ ಸುಭಾಸರ ಮನವೊಲಿಸಿಕೊಳ್ಳುವ ಅಂತರಂಗದ ಉದ್ದೇಶದಿಂದ ಡಾಕ್ಟರ ಖರೆಯವರು ಅಪಪ್ರಚಾರದ ಈ ಆಟವನ್ನು ಆಡುತ್ತಿದ್ದಾರೆ ಆದರೆ ಇದು ಅವರಿಗೆ ಬೇಡವಾದ ಕೆಲಸ

ಸುಭಾಸರು ತಿಳಿಯದವರಲ್ಲ

ತನ್ನ ಹಿತಕಾರಿಗಳು ಯಾರ, ಅಹಿತಕಾರಿಗಳು ಯಾರು ಎಂದು ತಿಳಿಯುವುದಕ್ಕೆ ಸುಭಾಸರು ಡಾಕ್ಟರ ಖರೆಯವರಷ್ಟು ಹೆಡ್ಡರಾಗಿರಲಾರರು ಪ್ರತ್ಯೇಕ ಚೆನ್ನದ ಪರೀಕ್ಷೆಮಾಡಲಿಕ್ಕೆ ಅವರು ತಿಳಿದಿದ್ದಾರೆ ಡಾಕ್ಟರ ಖರೆಯವರ ಗುಣಸ್ವಭಾವ ಅವರಿಗೆ ಗೊತ್ತಿಲ್ಲವೆ? ಯಾವ ಡಾಕ್ಟರ ಖರೆಯವರು ಈಗ ಮಹಾತ್ಮರನ್ನೂ ಪಂಡಿತ ನೆಹರೂ ಅವರನ್ನೂ ದೂರಿ ಶ್ರೀ ಸುಭಾಸರ ಅನುಗ್ರಹಕ್ಕೆ ಪಾತ್ರರಾಗಲು ಹವಣಿಸಿದ್ದಾರೆಯೋ ಅವರೇ ಖರೆಯವರು ಶ್ರೀ. ಸುಭಾಸರನ್ನು ವಿನಾಕಾರಣ ಮೊದಲು ದೂರಿದ್ದರೆಂಬುದನ್ನು ಸುಭಾಸರು ಬಲ್ಲರು. ಡಾಕ್ಟರ ಖರೆಯವರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ನಡೆಸಿ ಅವರನ್ನು ಮಧ್ಯಪ್ರಾಂತಗಳ ಮಂತ್ರಿಪದವಿಯಿಂದ ದೂರಮಾಡಿದಾಗ ಇದೇ ಡಾಕ್ಟರ ಖರೆಯವರು ಶ್ರೀ ಸುಭಾಸರನ್ನು ಅಲ್ಲಸಲ್ಲದ ಮಾತುಗಳಿಂದ ದೂಷಿಸಿದ್ದರು ಮತ್ತು ಡಾಕ್ಟರ ಖರೆಯವರ ಗುಣಗಳನ್ನು ಚೆನ್ನಾಗಿ ಅರಿತುಕೊಳ್ಳಬೇಕಾದರೆ ಇನ್ನು ಒಂದು ದೃಷ್ಟಾಂತವನ್ನು ಕೊಡುತ್ತೇವೆ ಯಾವ ಸುಭಾಸರ ಅಜ್ಞಾಧಾರಕರಾಗಿ ಕೆಲಸಮಾಡಲು ಡಾಕ್ಟರ ಖರೆಯವರು ಆತುರರಾಗಿರುವರೋ ಮಧ್ಯಪ್ರಾಂತಗಳ ಅಸೆಂಬ್ಲಿಯ ಕಾಂಗ್ರೆಸ ಸದಸ್ಯಸ್ಥಾನಕ್ಕೆ ಖರೆಯವರು ರಾಜೀನಾಮೆ ಕೊಟ್ಟು ಹೊರಬರಬೇಕೆಂದು ಅದೇ ಸುಭಾಸರು ಕೊಟ್ಟ ಆಜ್ಞೆಯನ್ನು ಖರೆಯವರು ಇದುವರೆಗೆ ಮನ್ನಿಸದೆ ಇರುತ್ತಾರೆ ಅವರು ಈಗಲೂ ಸುಭಾಸರ ಆಜ್ಞೆಗೆ ವಿರೋಧವಾಗಿ ಮಧ್ಯಪ್ರಾಂತಗಳ ಅಸೆಂಬ್ಲಿ ಸದಸ್ಯರಾಗಿ ಇದ್ದಾರೆ

ಕಾಂಗ್ರೆಸಿನೊಳಗಿನ ಬಹುರೂಪಿಸಾಧುಗಳು

ಅಧಿಕಾರದ ಮಹತ್ವಾಕಾಂಕ್ಷೆಯಿಂದ ಪ್ರೇರಿತರಾಗಿ ಕಾಂಗ್ರೆಸನ್ನು ಸೇರಿರುವ ಬಹುರೂಪಿಸಾಧುಗಳು ಅನೇಕ ಮಂದಿ ಇರುತ್ತಾರೆ ಅಂಥವರೊಳಗೆ ಡಾಕ್ಟರ ಖರೆಯವರು ಅಗ್ರಗಣ್ಯರು ಇವರಿಗೆ ಸ್ವಾರ್ಥವೊಂದಲ್ಲದೆ, ಜೀವನಮಾನದಲ್ಲಿ ಸಾಧಿಸಲಿಕ್ಕೆ ಅದಕ್ಕಿಂತ ಪವಿತ್ರವಾದ ವಸ್ತುವು ಬೇರೊಂದಿರುವುದಿಲ್ಲ ಆದ್ದರಿಂದ ಜನತೆಯು ಇಂಥ ಬಹುರೂಪಿಸಾಧುಗಳು ಆಡುವ ಮಾತು ಮತ್ತು ಮಾಡುವ ಕ್ರಿಯೆಗಳಿಂದ ಬಹಳ ಎಚ್ಚರವಾಗಿರಬೇಕು. ಸತ್ಯಾಸತ್ಯವನ್ನು ಚೆನ್ನಾಗಿ ಪರೀಕ್ಷಿಸಿ ತಿಳಿಯುವ ತನಕ ಅವರ ಮಾತು ಮತ್ತು ಕೆಲಸಗಳ ಕಡೆಗೆ ಯಾರೂ ಪ್ರಾಮುಖ್ಯತೆಯನ್ನು ಕೊಡತಕ್ಕದ್ದಲ್ಲ

ಖರೆಯವರ ಇನ್ನೊಂದು ವಿಚಾರ

ಡಾಕ್ಟರ ಖರೆಯವರ ನಡೆನುಡಿಗಳನ್ನು ಆಕ್ಷೇಪಿಸಿ ಪಂಡಿತ ಜವಾಹರಲಾಲ ನೆಹರು ಅಂದು ಆಡಿದ ಮಾತುಗಳಿಂದ ನೊಂದ ಡಾಕ್ಟರ ಖರೆಯವರು ಪಂಡಿತರ ಮೇಲೆ ಮಾನ ನಷ್ಟದ ದಾವೆ ಮಾಡುವೆನೆಂದು ಬೆದರಿಕೆ ಹಾಕಿದ್ದರಷ್ಟೆ! ಈಗ ಮಾನ ನಷ್ಟದ ದಾವೆ ಬೇಡ, ತನ್ನೊಳಗಿನ ದಾವೆಯನ್ನು ಯಾರಾದರೂ ಪಂಚಾಯತರು ತೀರ್ಮಾನಿಸಲಿ, ಎನ್ನುತ್ತಾರೆ–ನಮ್ಮ ಖರೆಯವರು' ಡಾಕ್ಟರ ಖರೆಯವರು ಆಡಿದ ಮಾತಿನ ಪೊಳ್ಳು ಇದರಿಂದ ಗೊತ್ತಾಗುತ್ತದೆ ಯಾರನ್ನಾದರೂ ಹೆದರಿಸಿಬೆದರಿಸಿ ತಮ್ಮ ಕಾರ್ಯಸಾಧನೆಮಾಡುವ ಮನೋವೃತ್ತಿ ಡಾ. ಖರೆಯವರದ್ದು ಆದರೆ ಅವರು ತಮ್ಮ ಎದುರಾಳಿಯನ್ನು ಅರಿಸಿಕೊಳ್ಳುವಾಗ ಮೂರ್ಖರಾದರು ಪಂಡಿತರು ಅನ್ಯಾಯಪೂರ್ವ ಹೆದರಿಕೆ ಬೆದರಿಕೆಗಳಿಗೆ ಸ್ವಲ್ಪವಾದರೂ ತಲೆತಗ್ಗಿಸುವವರಲ್ಲ. ತಾನ ತನ್ನ ಜವಾಬುದಾರಿಯ ಸ್ಮರಿಸಿಕೊಂಡೇ ಡಾ ಖರೆಯವರು ಎಂಥವರೆಂದು ಪ್ರಪಂಚಕ್ಕೆ ಸಾರಿದ್ದಾಗಿ ಪಂಡಿತರು ಪ್ರಕಟಿಸಿದ್ದಾರೆ ತಮ್ಮ ಬೆದರಿಕೆಗೆ ಹೆದರಿ ಗಡಗಡ ನಡುಗದ ಪಂಡಿತರನ್ನು ಕಂಡು ಖರೆಯವರ ಕಂಗಾಲಾಗಿ–'ಬೇಡ ನಮ್ಮ ದಾವೆ ಪಂಚಾಯತಿಯಿಂದ ಜಗಳವನ್ನು ತೀರಿಸೋಣ ' ಎನ್ನುತ್ತಾರೆ ಹೇಗಿದ್ದಾರೆ ಡಾಕ್ಟರ ಖರೆಯವರು! ಇಂಥವರನ್ನು ನಂಬಿ ಹೊಳೆ ದಾಟಿ ಹೋದರೆ ಹೇಗಾದೀತು? ಇವರನ್ನು ಮಧ್ಯಪ್ರಾಂತಗಳ ಪ್ರಧಾನ ಪದವಿಯಿಂದ ಇಳಿಸಿದ ಕಾಂಗ್ರೆಸ ವರ್ಕಿಂಗ್ ಕಮಿಟಿಯು ತಪ್ಪೆ?

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Seson Deposits are accepted at 3½ % per annum.

Further particulars on application to any of our thirty-five offices.

ಜರ್ಮನಿಯಲ್ಲಿ ಪಾನನಿಷೇಧ ಹಿಟ್ಲರನ ಸಫಲಯೋಜನೆ

ಜರ್ಮನಿಯಲ್ಲೆಲ್ಲ ಪಾನನಿಷೇಧ ಮಾಡಬೇಕೆಂಬ ಹಿಟ್ಲರನ ಕನಸು ಈಗ ನಿಜವಾಗಬಹುದೆಂದು ನ್ಯೂಸ್‌ಕ್ರೊನಿಕಲ್ ಪತ್ರಿಕೆಯು ಬರೆಯುತ್ತದೆ. ಕಠಿನ ಅಮಲು ಪದಾರ್ಥಗಳನ್ನು ಇನ್ನು ಮುಂದೆ ಜರ್ಮನಿಯಲ್ಲಿ ತಯ್ಯಾರಿಸಬಾರದೆಂದು ಹಿಟ್ಲರನು ಆಜ್ಞಾಪಿಸಿದ್ದಾನೆ. ಹಿಂದೆ ತಯ್ಯಾರಾಗಿ ಈಗ ಮಾರಾಟವಾಗದೆ ಉಳಿದ ಸ್ಟಾಕನ್ನು, ಅದು ಮುಗಿಯುವ ತನಕ ಮದ್ಯವ್ಯಾಪಾರಿಗಳು ಮಾರಬಹುದು. ಆದರೆ ಯಾವತ್ತು ಕಠಿನ ಅಮಲುಪದಾರ್ಥಗಳನ್ನು ಇನ್ನು ತಯ್ಯಾರಿಸಿ ಮಾರಕೂಡದು. ಮದ್ಯವನ್ನು ಬೆರಸಿ ಮಾಡುವ ಚೊಕೊಲೇಟುಗಳೆಂಬ ತಿಂಡಿ ಪದಾರ್ಥವನ್ನುಕೂಡ ಇನ್ನು ಜರ್ಮನಿಯಲ್ಲಿ ತಯ್ಯಾರಿಸಕೂಡದಾಗಿದೆ.

ಈ ನಿರ್ಬಂಧಾಜ್ಞೆಯನ್ನು ಹೊರಡಿಸಿದುದರಿಂದ ಜರ್ಮನ ಜನತೆಯ ಮೇಲೆ ಯಾವ ಪರಿಣಾಮವುಂಟಾಗುತ್ತದೆಯೆಂಬುದನ್ನು ಜರ್ಮನ ಅಧಿಕಾರಿಗಳು ಕುತೂಹಲದಿಂದ ನಿರೀಕ್ಷಿಸುತ್ತಿರುವರು. ಜನರು ಈ ನಿರ್ಬಂಧಕ್ಕೆ ಸಂತೋಷದಿಂದ ಒಪ್ಪಿದ್ದಾದರೆ, ಅಷ್ಟು ಅಮಲುಕಾರಿ ಅಲ್ಲದ್ದ ಜರ್ಮನರ ಅತ್ಯಂತ ಮೆಚ್ಚಿಗೆಯ ಪಾನಕವಾದ ಬೀಯರನ್ನೂ ಸರಕಾರವು ನಿಷೇಧಿಸಬಹುದು. ಅದರ ಬದಲಿಗೆ ಅಮಲು ಗುಣವಿಲ್ಲದ, ಆದರೆ ಅಷ್ಟೇರುಚಿಕರವಾದ ಬೇರೊಂದು ಪಾನಕವನ್ನು ತಯ್ಯಾರಿಸಿ ಮಾರಬಹುದು

ಹಿಟ್ಲರನಿಗೆ ಮದ್ಯವೆಂದರೆ ಆಗದು ಅವನು ಹುಟ್ಟಿದಂದಿನಿಂದ ಈ ತನಕ ಮದ್ಯವನ್ನು ಮೂಸಿಕೂಡ ನೋಡಿದವನಲ್ಲ ಸಾರ್ವಜನಿಕಸಭೆ-ಸಂತೋಷ ಕೂಟಗಳಲ್ಲಾದರೂ ತನ್ನ ತನ್ನ ಅನುಯಾಯಿಗಳು ಮದ್ಯಪಾನ ಮಾಡಬಾರದೆಂಬ ಅಪ್ಪಣೆಯನ್ನು ಅವನು ನಾಲ್ಕಾರು ವರ್ಷಗಳ ಮೊದಲೇ ಕೊಟ್ಟಿದ್ದುಂಟು.

ಸರದಾರ ಪಟೇಲರ ಆಫ್ರಿಕದ ಪ್ರಯಾಣ

ಇದೇ ಮೇ ತಿಂಗಳಲ್ಲಾಗಬಹುದು.

—೦೦೦—

ನೇಶನಲ್ ಪತ್ರಿಕೆಯಲ್ಲಿ ಪ್ರಕಟವಾದಂತೆ ಸರದಾರ ಪಟೇಲರು ಇದೇ ಮೇ ತಿಂಗಳಲ್ಲಿ ಪೂರ್ವ ಆಫ್ರಿಕಕ್ಕೆ ಹೋಗಬಹುದೆಂದು ತಿಳಿದುಬರುತ್ತದೆ ಮಧ್ಯಪ್ರಾಂತ್ಯ ಸಂಸ್ಥಾನಗಳ ಒಂದು ಪ್ರಜಾಪರಿಷತ್ತು ಸಧ್ಯದಲ್ಲಿಯೇ ಆಗುವುದಿದ್ದು, ಅದರ ಅಧ್ಯಕ್ಷಸ್ಥಾನವನ್ನು ಸರದಾರ ಪಟೇಲರು ವಹಿಸಿಕೊಳ್ಳಬೇಕೆಂದು ಸ್ನೇಹಿತರೊಬ್ಬರು ಸೂಚಿಸಿದ್ದರು. ಆದರೆ 'ಎಪ್ರಿಲ್ ತಿಂಗಳಲ್ಲಿ ತುಂಬಾ ಕೆಲಸವಿದೆ ಮೇ ತಿಂಗಳಲ್ಲಿ ನಾನು ವಿದೇಶಕ್ಕೆ ಪ್ರಯಾಣ ಹೋಗಬಹುದು ಆದ್ದರಿಂದ ಕ್ಷಮಿಸಿರಿ' ಎಂದು ಅವರು ಸ್ನೇಹಿತರಿಗೆ ಉತ್ತರ ಬರೆದಿರುವರು. ವಿದೇಶಕ್ಕೆ ಪ್ರಯಾಣವೆಂಬುದರಿಂದ—ಮೊದಲೊಮ್ಮೆ ಪ್ರಕಟವಾದ ಪ್ರಕಾರ ಆಗಾಖಾನರು ಸೂಚಿಸಿ ಮಹಾತ್ಮರು ಅನುಮೋದಿಸಿದಂತೆ ಅವರು ಪೂರ್ವ ಆಫ್ರಿಕಕ್ಕೆ ಹೋಗಬಹುದೆಂದು ಅಂದಾಜು

ಪೂರ್ವ ಆಫ್ರಿಕವು ಮೊದಲು ಜರ್ಮನಿಯ ವಸಾಹತು ಆಗಿದ್ದಿತು. ಮಹಾಯುದ್ಧವು ಮುಗಿದ ಬಳಿಕ ಜನಾಂಗ ಸಂಘವು ಅದರ ಆಡಳಿತವನ್ನು ಬ್ರಿಟಿಷರ ಕೈಗೆ ಒಪ್ಪಿಸಿತು ಈಗ ಇದೇ ವಸಾಹತನ್ನು ಹಿಟ್ಲರನು ಪುನಃ ಜರ್ಮನಿಗೆ ಕೊಡಬೇಕೆಂದಿದ್ದಾನೆ ಈ ವಸಾಹತಿನಲ್ಲಿ ಬಹಳ ಹಿಂದೀಯರು ಹೋಗಿ ನೌಕರಿ ಚಾಕರಿ ವ್ಯಾಪಾರ ಉದ್ಯೋಗಗಳನ್ನು ಮಾಡಿಕೊಂಡು ಜೀವಿಸಿದ್ದಾರೆ. ಅಲ್ಲಿ ಬ್ರಿಟಿಷರ ಕೈಯಲ್ಲಿ ಈ ಹಿಂದೀಯರ ಕಷ್ಟಗಳಿಗೆ ಈಗಲೇ ಮಿತಿ ಇರುವುದಿಲ್ಲ ಈ ವಸಾಹತು ಹಿಟ್ಲರನ ಕೈಸೇರಿಬಿಟ್ಟರೆ ಮತ್ತೆ ಪೂರ್ವ ಆಫ್ರಿಕವು ಅಷ್ಟು ಮುಂದೆ ಹಿಂದೀಯರಿಗೆ ಪ್ರತ್ಯಕ್ಷ ನರಕವೇ ಆಗಬಹುದು ಆದ್ದರಿಂದ ಪೂರ್ವ ಆಫ್ರಿಕದ ಹಿಂದೀಯರನ್ನು ಸಂಘಟಿಸಿ ಅವರ ಸ್ಥಿತಿಗತಿಗಳನ್ನು ಸುಧಾರಿಸಲಿಕ್ಕೂ, ಆ ವಸಾಹತು ಹಿಟ್ಲರನ ವಶವಾಗದೆ, ಸ್ವತಂತ್ರವಾಗಿರುವಂತೆ ತಕ್ಕ ಕಾರ್ಯಕ್ರಮಗಳನ್ನು ಹೂಡಲಿಕ್ಕೂ ಸರದಾರ ಪಟೇಲರು ಅಲ್ಲಿಗೆಹೋಗುವ ಉದ್ದೇಶವಾಗಿದೆ

ಕಡ್ಡಾಯ ಶಿಕ್ಷಣ ಪ್ರಚಾರದ ವಿರುದ್ಧ ಅಫಘಾನಿಸ್ಥಾನ

ಜನರ ಬಂಡಾಯ! ಅರಸರ ಬಾಂಬಿನ ಸುರಿಮಳೆ!!

ಅಫಘಾನಿಸ್ಥಾನದ ಸರಕಾರವು ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಪ್ರಚಾರಮಾಡುವುದನ್ನು ನಿಷೇಧಿಸಿ ಅಲ್ಲಿಯ ಒಂದು ಪ್ರಜಾವರ್ಗವು ಸರಕಾರ ವಿರುದ್ಧ ದಂಗೆ ಎದ್ದಿತು! ಶಿಕ್ಷಣಪ್ರಚಾರದಿಂದ ತಮ್ಮ ಧರ್ಮವು ಕೆಡುವುದೆಂದು ಆ ಜನರ ವಿಶ್ವಾಸ! ಅಲಿಖೈಲಾಯಿಯ ಮಹ್ಮದ ಅಫಜಾಲಿ ಎಂಬ ೪೦ ವರ್ಷ ಪ್ರಾಯದ ಒಬ್ಬ ಪಾಳೆಯಗಾರನು ಈ ಬಂಡಾಯಗಾರರ ಮುಖಂಡ! ಅಫಘಾನಿಸ್ಥಾನ ಅರಸ—ಜಾಹೀರ ಶಾಹರು ಬಂಡಾಯವನ್ನು ಬಾಂಬುಗಳ ಸುರಿಮಳೆಯಿಂದ ನಿಲ್ಲಿಸಿದ್ದಾರೆ ಅಪರಾಧಿಗಳನ್ನು ಹಿಡಿದು ಕಠಿಣ ದಂಡನೆಗೆ ಗುರಿಮಾಡಿದ್ದಾರೆ

ನಮಗೆ ಕಡ್ಡಾಯ ಶಿಕ್ಷಣವು ಬೇಕೆಂದು ನಾವಿಲ್ಲ ಎಷ್ಟೋ ವರ್ಷಗಳಿಂದ ಹೋರಾಡುತ್ತಿದ್ದೇವೆ ಆದರೆ ಸರಕಾರವು ನಮ್ಮ ಮಾತುಗಳನ್ನ ಕಾರ್ಯರೂಪದಲ್ಲಿ ಲಕ್ಷ್ಯಕ್ಕೆ ತರುವುದಿಲ್ಲ ಆದರೆ ಅಫಘಾನಿಸ್ಥಾನದಲ್ಲಿ ಕಡ್ಡಾಯ ಶಿಕ್ಷಣವನ್ನು ಕೊಡಿಸುತ್ತೇನೆಂದು ಸರಕಾರವು ತಾನಾಗಿ ಮುಂದೆ ಬಂದರೂ ಅದು ಜನರಿಗೆ ಬೇಡ ಹೀಗೆಯೇ ಲೋಕದ ಸ್ಥಿತಿ ವಿಚಿತ್ರವೂ ಅದ್ಭುತವೂ ಆಗಿದೆ

ಹರಿಜನರಿಗೆ ದೇವಸ್ಥಾನ ಪ್ರವೇಶ

ಮಲಬಾರಿನಲ್ಲಿ ಹಣ ಸಂಗ್ರಹ ಹೊಟೇಲುಗಳಿಗೆ ಪ್ರವೇಶ ದೊರೆಯುದುದಕ್ಕೆ ದಾವೆ

ಮಲಬಾರಿನಲ್ಲಿ ಗುರುವಾಯ್ಯೂರು ದೇವಸ್ಥಾನದಲ್ಲಿ ಹರಿಜನರಿಗೆ ಪ್ರವೇಶವನ್ನು ಕೊಡುವ ಕುರಿತು ಜನಮತವನ್ನು ತಿಳಿಯುವದಕ್ಕೋಸ್ಕರ ಅಲ್ಲಿ ಮದ್ರಾಸು ಹರಿಜನ ದೇವಸ್ಥಾನ ಪ್ರವೇಶ ಕಾನೂನಿಗನುಸಾರ ಚುನಾವಣೆಯಾಗಬೇಕಾಗಿದೆ ಅದಕ್ಕೆ ಸಾವಿರಾರು ರೂಪಾಯಿಗಳ ಖರ್ಚು ಇದೆ. ಆದ್ದರಿಂದ ಪ್ರಸಿದ್ಧ ಹರಿಜನ ಸೇವಕರಾದ ಶ್ರೀ. ಕೇಳಪ್ಪನವರು ಗುರುವಾಯ್ಯೂರು ತಾಲೂಕಿನಲ್ಲಿ ಸಂಚರಿಸಿ, ಸಭೆ ಭಾಷಣಾದಿಗಳ ಮೂಲಕ ಪ್ರಚಾರಕಾರ್ಯಮಾಡುತ್ತಲೂ, ಹಣವನ್ನು ಸಂಗ್ರಹಿಸುತ್ತಲೂ ಇದ್ದಾರೆ. ಮಧುರೆಯಲ್ಲಿ ಆ ಸಂಬಂಧ ೫೦೦ ರೂಪಾಯಿಗಳ ವಂತಿಗೆಯಾಗಿದೆ

ಹೊಟೇಲು ಪ್ರವೇಶದ ದಾವೆ

ಚಿಕಾಕೋಲದ ಕೆಲವು ಹೊಟೇಲು ಮಾಲಕರು ಹರಿಜನರಿಗೆ ತಮ್ಮ ಹೊಟೇಲುಗಳಿಗೆ ಪ್ರವೇಶವನ್ನೂ ತಿಂಡಿತೀರ್ಥಗಳನ್ನೂ ನಿರಾಕರಿಸುವುದರಿಂದ, ಶ್ರೀ ಎಸ್ ಗುರುದಲು ಎಂಬ ಕಾಂಗ್ರೆಸ ಎಮ್. ಎಲ್ ಎ ಗಳು ಈ ಹೊಟೇಲು ಮಾಲಕರ ಮೇಲೆ ಕಾನೂನು ಮೇರೆಗೆ ದಾವೆ ತಂದಿದ್ದಾರೆ ಸಿವಿಲ್ ಡಿಸೆಬಿಲಿಟೀಸ್ ರಿಮೂವಲ್ ಎಕ್ಟ ಪ್ರಕಾರ ಹೊಟೇಲು ಮಾಲಕರು ಹರಿಜನರಿಗೆ ಪ್ರವೇಶ ಅಥವಾ ತಿಂಡಿ ತೀರ್ಥಗಳನ್ನು ನಿರಾಕರಿಸುವುದು ಅಪರಾಧವಾಗಿದೆ

ಹರಿಜನ ಸೇವೆಯ ಸರಕಾರಿ ಪ್ರಯತ್ನಗಳು

ಹರಿಜನರಿಗೆ ಉಚ್ಚವರ್ಣದ ಹಿಂದುಗಳಷ್ಟೇ ಸಮಾನ ಹಕ್ಕು ಅಧಿಕಾರಗಳನ್ನು ಕೊಡುವ ಒಂದು ಮಸೂದೆಯನ್ನೂ ಮುಂಬಾಯಿ ಸರಕಾರವೂ, ದೇವಸ್ಥಾನಗಳಿಗೆ ಪ್ರವೇಶಕೊಡುವ ಮಸೂದೆಯನ್ನೂ ಸಂಯುಕ್ತಪ್ರಾಂತಗಳ ಸರಕಾರವೂ ಮುಂದೆ ತಂದಿವೆ

ಶ್ರೀ ದೈವನಾಗಲು ದೇವಸ್ಥಾನ, ಉದ್ಯಾವರ ಗ್ರಾಮ.

ಕಾಸರಗೋಡು, (ದಕ್ಷಿಣ ಕನ್ನಡ)

1937ನೇ ಜೂನ್ 30ನೇ ತಾರೀಕಿನವರೆಗಿನ ಜಮಾ ಖರ್ಚಿನ ವಿವರ.

	1935—'36			1936—'37		
ಕಾಣಿಕೆ	199	15	8	299	14	7
ಸಾಲ ಪಡದದ್ದು	41	16	8	60	18	0
ಬಾಡಿಗೆ	298	6	5	329	10	7
ಮಾರಾಟ	13	6	9	33	8	0
ತಸ್ತಿಕು	24	0	0			
ಬಡ್ಡಿ	48	0	0	37	0	0
	620	9	8	850	8	3

	1935—36			1936— 17		
ಪೂಜಾ ಖರ್ಚು	430	8	9	528	6	0
ತೆರಿಗೆ	122	14	0	182	15	0
ಕೋರ್ಟು ಖರ್ಚು				48	10	1
ಎಂಡೋಮೆಂಟಿಗೆ ವಂತಿಗೆ				36	0	[illegible]
ಸಾಲವನ್ನು ಹಿಂತಿರುಗಿ ಕೊಟ್ಟದ್ದು	17	3	6	68	10	0
	620	9	8	850	8	3

ಮಂಗಳೂರು, ತಾ. 3-12-38 — ಸರಿಯಾಗಿ ಪರಿಶೋಧಿಸಲ್ಪಟ್ಟಿದೆ — ಬಿ ಶಾಂತರಾಮ ರಾವ್, ರಿಜಿಸ್ಟರ್ಡ ಎಕೌಂಟೆಂಟ್

ಶ್ರೀ ದೈವಾನಗಲು ದೇವಸ್ಥಾನ, ಉದ್ಯಾವರ ಗ್ರಾಮ.

ಕಾಸರಗೋಡು, (ದಕ್ಷಿಣ ಕನ್ನಡ.)

1937ನೇ ಜೂನ್ ತಾರೀಕು 30ಕ್ಕೆ ಮುಗಿಯುವ ಎರಡು ವರ್ಷಗಳ ಆಯುವ್ಯಯದ ಪಟ್ಟಿ

	1935—36			1937—'38		
ಬರತಕ್ಕ ಬಾಡಿಗೆ	395	12	4	395	12	4
ಬರತಕ್ಕ ಬಡ್ಡಿ	48	10	1	48	10	1
ತಸ್ತಿಕು	24	0	0	24	0	0
ಕಾಣಿಕೆ	199	15	8	299	14	7
ಹೆಚ್ಚಿನ ಖರ್ಚು	—			13	9	2
ಹೆಚ್ಚಿನ ಆದಾಯ	—			—		
	668	5	8	781	14	2

	1935—36			1936—37		
ಪೂಜಾ ಖರ್ಚು	430	8	2	528	6	0
ತೆರಿಗೆ	122	14	0	182	14	0
ಎಂಡೋಮೆಂಟಿಗೆ ವಂತಿಗೆ	—			36	0	0
ಕೋರ್ಟು ಖರ್ಚು	—			34	10	2
ವ್ಯಯಕ್ಕಿಂತ ಹೆಚ್ಚಿನ ಆದಾಯ	64	15	6	—		
	668	5	8	781	14	2

ಮಂಗಳೂರು, 3-12-'38 — ಸರಿಯಾಗಿ ಪರಿಶೋಧಿಸಲ್ಪಟ್ಟಿದೆ — ಬಿ ಶಾಂತಾರಾಮ ರಾವ್, ರಿಜಿಸ್ಟರ್ಡ ಎಕೌಂಟೆಂಟ್

ಸುಭಾಸರ ದಸ್ತಗಿರಿಗೆ ಮಹಾತ್ಮರ ಅನುಮೋದನೆಯಂತೆ

ಕಳೆದ ಬಾರಿ ಮಧ್ಯಪ್ರಾಂತಗಳ ನ್ಯಾಯವಿಧಾಯಕ ಸಭೆಯಲ್ಲಿ ಆಯವ್ಯಯ ಅಂದಾಜು ಪಟ್ಟಿಯ ಚರ್ಚೆಯಾಗುತಿದ್ದಾಗ, ಕಾಂಗ್ರೆಸ ಪಕ್ಷದ ಸದಸ್ಯರಾದ ಶ್ರೀ ಖುದಭೋಜ ಎಂಬವರು ಪಾರ್ಟಿಯ ಕ್ರಮನಿಂಬಂಧನೆಗಳಿಗೆ ವಿರೋಧವಾಗಿ, ಕೆಲವು ಕಡಿತದ ಸೂಚನೆಗಳನ್ನು ಕೊಟ್ಟು ತನ್ನ ಪಾರ್ಟಿಯ ಸರಕಾರವನ್ನು ವಿನಾಕಾರಣ ದೂಷಿಸುವುದರ ಮೂಲಕ ಪಾರ್ಟಿಗೇ ದ್ರೋಹಮಾಡಿದ್ದರೂ ಶ್ರೀ ಖುದಭೋಜರು ತಮದೊಂದು ಕಡಿತದ ಸೂಚನೆಗೆ ಸಂಬಂಧಪಟ್ಟ ಭಾಷಣಮಾಡುತ್ತಾ ಕಾಂಗ್ರೆಸ ಸರಕಾರಗಳು ಶ್ರೀ. ಬಾಬು ಸುಭಾಸಚಂದ್ರ ಭೋಸರನ್ನು ದಸ್ತಗಿರಿಮಾಡಲೂ ಬಹುದು, ಅಥವಾ ಅವರಿಗೆ ದೇಶಾಂತರ ವಾಸದ ಶಿಕ್ಷೆಯನ್ನು ಕೊಡಲೂ ಬಹುದು ಎಂದು ಆಕ್ಷೇಪಮಾಡಿದ್ದರು ಕಾಂಗ್ರೆಸ ಸರಕಾರವನ್ನು, ಸರಕಾರಿ ಪಕ್ಷದ ಒಬ್ಬ ಸದಸ್ಯರೇ ಹೀಗೆ ಆಕ್ಷೇಪಿಸಿರುವುದರಿಂದ, ಅವರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಮಧ್ಯಪ್ರಾಂತದಲ್ಲಿ ಒಂದು ದೊಡ್ಡ ಆಂದೋಲನವುಂಟಾಗಿದೆ

ಆಕ್ಷೇಪಕ್ಕೆ ಕಾರಣ

ಕಾಂಗ್ರೆಸ ಸರಕಾರವನ್ನು ಕಾಂಗ್ರೆಸ ಸದಸ್ಯರೇ ಈ ರೀತಿ ಆಕ್ಷೇಪಿಸಿರುವುದಕ್ಕೆ, ಮಧ್ಯಪ್ರಾಂತ್ಯದ ಕಾಂಗ್ರೆಸ ಸದಸ್ಯರಲ್ಲಿ ಐಕ್ಯಮತ್ಯವಿಲ್ಲದಿರುವುದು ಕಾರಣವೆಂದೂ ಊಹಿಸಲಾಗಿದೆ ಅಲ್ಲಿ ಕಾಂಗ್ರೆಸ ಶಿಸ್ತಿಗೆ ಬಲಿಯಾಗಿರುವ ಡಾಕ್ಟರ ಖರೆಯವರ ತಂಡ ಒಂದು. ಈಗ ಕಾಂಗ್ರೆಸ ಪ್ರಧಾನರಾಗಿರುವ ಶ್ರೀ ಆರ್ ಎಸ್ ಶುಕ್ಲರ ತಂಡ ಇನ್ನೊಂದು ಈ ಎರಡು ತಂಡಗಳೊಳಗೆ ಯಾವಾಗಲೂ ಕಚ್ಚಾಟ ಹೋರಾಟಗಳು ನಡೆಯುತ್ತಲೇ ಇರುತ್ತವೆ ಆದ್ದರಿಂದ ಅಲ್ಲಿನ ಸತ್ಯಸ್ಥಿತಿಯನ್ನು ತಿಳಕೊಳ್ಳಲು ಸ್ವಲ್ಪ ಗಂಭೀರವಾಗಿ ಆಲೋಚಿಸಬೇಕಾಗುತ್ತದೆ ಡಾಕ್ಟರ ಖರೆಯವರು ತನ್ನ ರಾಜಕೀಯ ಎದುರಾಳಿಗಳ ಮೇಲಿನ ಸೇಡನ್ನು ತೀರಿಸಿಕೊಳ್ಳಲಿಕ್ಕೆ ಏನನ್ನಾದರೂ ಮಾಡಲಿಕ್ಕೆ ಹೇಸುವುದಿಲ್ಲವೆಂಬುದನ್ನು ನಾವಿಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು. ಅವ ಪ್ರಚಾರವನ್ನಾದರೂ ಮಾಡಿಯಾದರೂ ತಮ್ಮ ದುಷ್ಟ ಸ್ವಾರ್ಥವನ್ನು ಸಾಧಿಸಲಿಕ್ಕೆ ಅವರು ಯಾವಾಗಲೂ ಸಿದ್ಧರೆಂಬುದನ್ನು, ಅವರ ಇತ್ತೀಚಿಗಿನ ವರ್ತನವು ಸ್ಪಷ್ಟಮಾಡಿದೆ ಡಾಕ್ಟರ ಖರೆಯವರಿಂದ ಪ್ರೇರಿತರಾಗಿಯೇ ಶ್ರೀ ಖುದಭೋಜರು ಕಾಂಗ್ರೆಸ ಸರಕಾರಗಳ ಮೇಲೆ ಮಿಥ್ಯಾಪವಾದವನ್ನು ಹೊರಿಸಿದ್ದಾರೆಂದು ತಿಳಿಯಲಿಕ್ಕೆ ಆಧಾರಗಳಿವೆ

ಖರೆಯವರ ಹೇಳಿಕೆ

'ಮಹಾತ್ಮಾಗಾಂಧಿಯವರು ಶ್ರೀ ಸುಭಾಸರನ್ನು ದಸ್ತಗಿರಿ ಮಾಡಿಸಲೂ ಬಹುದು. ಕಾಂಗ್ರೆಸ ಸರಕಾರಗಳು ಮಹಾತ್ಮರ ಅನುಮೋದನೆಯಿಂದ ಮಾಡದಿರುವಂಥ ಕಾರ್ಯವೊಂದೂ ಇರುವುದಿಲ್ಲ ಅಸಾಧ್ಯಕಾರ್ಯಗಳೂ ಅಲ್ಲಿ ಸಾಧ್ಯವಾಗುತ್ತವೆ'' ಎಂದು ಡಾಕ್ಟರ ಖರೆಯವರು ಒಂದು ಹೇಳಿಕೆಯನ್ನು ಕೊಟ್ಟು, ಎಸೆಂಬ್ಲಿಯಲ್ಲಿ ಶ್ರೀ ಖುದಭೋಜರಾಡಿದ ಮಾತುಗಳನ್ನು ಅವರು ಪುಷ್ಟೀಕರಿಸಿದ್ದಾರೆ 'ನಾನು ಮಧ್ಯಪ್ರಾಂತ ಸರಕಾರದ ಕಾಂಗ್ರೆಸ ಮುಖ್ಯಮಂತ್ರಿಯಾಗಿದ್ದಾಗ ಗಾಂಧೀಜಿಯವರು ನನಗೆ ಒಂದು ಪತ್ರವನ್ನು ಬರೆದು— ಮಧ್ಯಪ್ರಾಂತಗಳ ಕಾಂಗ್ರೆಸ ಪ್ರಮುಖರಾದ ಜನರಲ್ ಅವಾರಿಯವರು ಜನರನ್ನು ತಮ್ಮ ಲೇಖನಾದಿಗಳ ಮೂಲಕ ಹಿಂಸೆಗೆ ಪ್ರೋತ್ಸಾಹಿಸುತ್ತಿರುವರಾದರೆ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಅವರನ್ನೊಮ್ಮೆ ವಿಚಾರಿಸಿ ಎಚ್ಚರಿಸಬೇಕು ಅವರು ಅದನ್ನು ಲಕ್ಷಿಸದಿದ್ದರೆ ಅವರ ಮೇಲೆ ನೀವು ತಕ್ರಾರು ಮಾಡಬಹುದು ಈ ಕುರಿತು ನಿಮಗೆ ಏನಾದರೂ ಅನುಮಾನವಿದ್ದರೆ ನೀವು ಕಾಂಗ್ರೆಸ ಅಧ್ಯಕ್ಷರನ್ನು ಅಥವಾ ವರ್ಕಿಂಗ್ ಕಮಿಟಿಯನ್ನು ಕೇಳಿಕೊಳ್ಳಬೇಕು ಆ ಕುರಿತು ಏನನ್ನಾದರೂ ಹೇಳುವ ಅಧಿಕಾರವು ನನಗೆ

ಅಸಾಧ್ಯ ಸಂಗತಿಗಳು ಸಾಧ್ಯವಾಗಲೂ ಬಹುದು-ಕಾಂಗ್ರೆಸ ರಾಜ್ಯದಲ್ಲಿ ಡಾಕ್ಟರ ಖರೆಯವರ ಮಿಥ್ಯಾಪವಾದ

ಇರುವುದಿಲ್ಲ'' ಎಂದಿದ್ದರು ಆದ್ದರಿಂದ ಈಗ ಗಾಂಧಿಯವರು ಶ್ರೀ ಸುಭಾಸರನ್ನು ದಸ್ತಗಿರಿ ಮಾಡಲಿಕ್ಕೆ ಕಾಂಗ್ರೆಸ ಸರಕಾರಗಳನ್ನು ಪ್ರೇರೇಪಿಸುವುದು ಆಶ್ಚರ್ಯವೇನೂ ಅಲ್ಲ'ವೆಂದು ಡಾಕ್ಟರ ಖರೆಯವರು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ

ಸತ್ಯವು ಬಯಲಾಯಿತು

ಸತ್ಯವನ್ನು ಮರೆಮಾಡಿ ಗಾಂಧಿಯವರ ಮತ್ತು ಕಾಂಗ್ರೆಸ ಸರಕಾರಗಳ ವಿರುದ್ಧ ಅಪಪ್ರಚಾರ ಮಾಡಲಿಕ್ಕೆ ಡಾಕ್ಟರ ಖರೆಯವರು ತುಂಬಾ ಪ್ರಯತ್ನಪಟ್ಟಿದ್ದಾರೆ ಆದರೆ ಅವರು ತನ್ನ ಪ್ರಯತ್ನಗಳಲ್ಲಿ ಸಫಲರಾಗದೆ ಅಸಹಾಯರಾಗಿರುವುದನ್ನು ಕಂಡು ತುಂಬಾ ಕನಿಕರವುಂಟಾಗುತ್ತದೆ ಯಾರ ದಸ್ತಗಿರಿ ಮಾಡಲಿಕ್ಕೆ ಗಾಂಧಿಯವರು ಡಾಕ್ಟರ ಖರೆಯವರನ್ನು ಪ್ರೇರೇಪಿಸಿದ್ದರೆಂದು ಡಾಕ್ಟರ ಖರೆಯವರು ಈಗ ಹೇಳಿ ಗಾಂಧಿ ಮತ್ತು ಕಾಂಗ್ರೆಸಿನ ಧವಳ ಕೀರ್ತಿಗೆ ಕಳಂಕ ತರುವ ದುಸ್ಸಾಹಸವನ್ನು ತೋರಿಸಿದ್ದಾರೋ, ಆ ಜನರಲ್ ಅವಾರಿಯವರೇ ಡಾಕ್ಟರ ಖರೆಯವರ ದೂಷಿತ ಮನೋವೃತ್ತಿಯನ್ನು ನಿಷೇಧಿಸುತ್ತ ಹಿತವಾದ' ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದ ನನ್ನ ದಸ್ತಗಿರಿಗೆ ಮಹಾತ್ಮರು ಡಾಕ್ಟರ ಖರೆಯವರನ್ನು ಪ್ರೇರೇಪಿಸಿದ್ದರೆಂಬ ಆರೋಪವು ಮಹಾತ್ಮರಿಗೆ ತಿಳಿಯದ ವಿಷಯ [illegible] ನಾನು ಜನರನ್ನು ಹಿಂಸೆಗೆ ಪ್ರೇರೇಪಿಸುತ್ತಿರುವೆನೆಂದು ಡಾಕ್ಟರ ಖರೆಯವರೇ ನನ್ನ ಮೇಲೆ ಸುಳ್ಳು ಅಪರಾಧಗಳನ್ನು ಹೊರಿಸಿ ಮಹಾತ್ಮರಿಗೆ ದೂರು ಕೊಟ್ಟಿದ್ದರು ನಾನು 'ಅಹಿಂಸಾವಾದಿಯಾಗಿರುವೆ'ನೆಂಬುದನ್ನು ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಿಗೆ ಸಮಾಧಾನ ಮಾಡಿದಾಗ ಡಾಕ್ಟರ ಖರೆಯವರು ನನ್ನ ಮೇಲೆ ತನ್ನ ಯಾವ ಅಸ್ತ್ರವನ್ನೂ ಪ್ರಯೋಗಿಸಲಾರದಾದರು ಡಾಕ್ಟರ ಖರೆಯವರಂಥ ಮನುಷ್ಯರು ಪಿತೂರಿಯ ಮೂಲಕ ಇತರರ ಮೇಲೆ ಕೆಸರೆರಚಲು ಪ್ರಯತ್ನಿಸುತ್ತಿರುವುದನ್ನು ಕಂಡು ವಿಷಾದವಾಗುತ್ತದೆ'' ಎಂದಿರುವರು

ಈ ಆಟವೇಕೆ?

'ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ' ಹೀಗಾಗಬೇಕೆಂಬುದೇ ಡಾಕ್ಟರ ಖರೆಯವರ ಜೀವನದ ಆಶಯವಾಗಿದ್ದಿರಬಹುದು ಶ್ರೀ ಸುಭಾಸರ ರಾಜಕೀಯ ಎದುರಾಳಿಗಳೆಂದರೆ ಮಹಾತ್ಮಾಗಾಂಧಿ ಮತ್ತು ಪಂಡಿತ ನೆಹರು ಎಂದು ಅವರು ತಿಳಕೊಂಡ ಹಾಗಿದೆ ಒಂದು ಕಡೆಯಿಂದ ಡಾಕ್ಟರ ಖರೆಯವರು ಪಂಡಿತ ನೆಹರುಗಳ ಮೇಲೆ ಮಾನನಷ್ಟದ ದಾವೆ ಹೂಡುವ ನೋಟೀಸನ್ನು ಕೊಟ್ಟಿದ್ದಾರೆ ಇನ್ನೊಂದು ಕಡೆಯಿಂದ ಅವರು ಮಹಾತ್ಮರ ಕಡೆಗೆ ಉಗುಳ ತೊಡಗಿದ್ದಾರೆ ಆದರೆ ಸೂರ್ಯನ ಕಡೆಗೆ ಉಗುಳಿದ ಉಗುಳು ಉಗುಳಿದವನ ಮುಖದ ಮೇಲೆಯೇ ಬಂದು ಬೀಳುತ್ತದೆಂಬುದನ್ನು ಡಾಕ್ಟರ ಖರೆಯವರು ಏಕೆ ತಿಳಿದಿಲ್ಲವೋ ಗೊತ್ತಿಲ್ಲ! ಪ್ರಾಯಶಃ ಸ್ವಾರ್ಥದಿಂದ ಅಂಧರಾದವರಿಗೆ ಏನೂ ಕಾಣದೆ ಹೋಗಬಹುದು ಪಂಡಿತ ನೆಹರು ಅವರನ್ನೂ ಗಾಂಧಿಯವರನ್ನೂ ದೂರಿ ರಾಷ್ಟ್ರಪತಿ ಸುಭಾಸರ ಮನವೊಲಿಸಿಕೊಳ್ಳುವ ಅಂತರಂಗದ ಉದ್ದೇಶದಿಂದ ಡಾಕ್ಟರ ಖರೆಯವರು ಅಪಪ್ರಚಾರದ ಈ ಆಟವನ್ನು ಆಡುತ್ತಿದ್ದಾರೆ. ಆದರೆ ಇದು ಅವರಿಗೆ ಬೇಡವಾದ ಕೆಲಸ

ಸುಭಾಸರು ತಿಳಿಯದವರಲ್ಲ

ತನ್ನ ಹಿತಕಾರಿಗಳು ಯಾರು, ಅಹಿತಕಾರಿಗಳು ಯಾರು ಎಂದು ತಿಳಿಯುವುದಕ್ಕೆ ಸುಭಾಸರು ಡಾಕ್ಟರ ಖರೆಯವರಷ್ಟು ಹೆಡ್ಡರಾಗಿರಲಾರರು ಸ್ವತಃ ಚನ್ನದ ಪರೀಕ್ಷೆ ಮಾಡಲಿಕ್ಕೆ ಅವರು ತಿಳಿದಿದ್ದಾರೆ ಡಾಕ್ಟರ ಖರೆಯವರ ಗುಣಸ್ವಭಾವ ಅವರಿಗೆ ಗೊತ್ತಿಲ್ಲವೆ' ಯಾವ ಡಾಕ್ಟರ ಖರೆಯವರು ಈ ರೀತಿ ಮಹಾತ್ಮರನ್ನು ಪಂಡಿತ ನೆಹರೂ ಅವರನ್ನೂ ದೂರಿ ಶ್ರೀ ಸುಭಾಸರ ಅನುಗ್ರಹಕ್ಕೆ ಪಾತ್ರರಾಗಲು ಹವಣಿಸಿದ್ದಾರೋ ಅವರೇ ಖರೆಯವರು ಶ್ರೀ. ಸುಭಾಸರನ್ನೇ ವಿನಾಕಾರಣ ದೂಷಿಸಿ ಮೂದಲಿಸಿದ್ದರೆಂಬುದನ್ನು ಸುಭಾಸರು ಬಲ್ಲರು. ಡಾಕ್ಟರ ಖರೆಯವರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ನಡೆಸಿ ಅವರನ್ನು ಮಧ್ಯಪ್ರಾಂತಗಳ ಮುಖ್ಯ ಪದವಿಯಿಂದ ದೂರಮಾಡಿದಾಗ ಇದೇ ಡಾಕ್ಟರ ಖರೆಯವರು ಶ್ರೀ ಸುಭಾಸರನ್ನು ಅಶ್ಲೀಲವಾದ ಮಾತುಗಳಿಂದ [illegible] ಮತ್ತು ಡಾಕ್ಟರ ಖರೆಯವರ [illegible] ಕೊಳ [illegible] ವನ್ನು ಕೊಡುತ್ತೇವೆ [illegible] ಸುಭಾಸರ ಅಧ್ಯಕ್ಷಾಧಿಕಾರಕ್ಕಾಗಿ [illegible] ಡಾಕ್ಟರ ಖರೆಯವರು [illegible] ಮಧ್ಯಪ್ರಾಂತಗಳ [illegible] ಸದಸ್ಯರಿಂದ [illegible] ಕೊಟ್ಟು [illegible] ಸುಭಾಸರ ಕೃಪಾದೃಷ್ಟಿಯನ್ನು ಖರೆಯವರ [illegible] ಇರುತ್ತಾರೆ ಅವರು ಈಗಲೂ ಸುಭಾಸರ ಆಜ್ಞೆಗೆ ವಿರೋಧವಾಗಿ [illegible] ಗಳ ಎಸೆಂಬ್ಲಿ ಸದಸ್ಯರಾಗಿ ಇದ್ದಾರೆ

ಕಾಂಗ್ರೆಸಿನೊಳಗಿನ ಬಹುರೂಪಿಸಾಧುಗಳು

ಅಧಿಕಾರದ ಮಹತ್ವಾಕಾಂಕ್ಷೆಯಿಂದ ಪ್ರೇರಿತರಾಗಿ ಕಾಂಗ್ರೆಸನ್ನು ಸೇರಿರುವ ಬಹುರೂಪಿಸಾಧುಗಳು ಅನೇಕ ಮಂದಿ ಇರುತ್ತಾರೆ ಅಂಥವರೊಳಗೆ ಡಾಕ್ಟರ ಖರೆಯವರು ಅಗ್ರಗಣ್ಯರು. ಇವರಿಗೆ ಸ್ವಾರ್ಥವೊಂದಲ್ಲದೆ, ಜೀವಮಾನದಲ್ಲಿ ಸಾಧಿಸಲಿಕ್ಕೆ ಅದಕ್ಕಿಂತ ಪವಿತ್ರವಾದ ವಸ್ತುವು ಬೇರೊಂದಿರುವುದಿಲ್ಲ ಆದ್ದರಿಂದ ಜನತೆಯು ಇಂಥ ಬಹುರೂಪಿಸಾಧುಗಳು ಆಡುವ ಮಾತು, ಮತ್ತು ಮಾಡುವ ಕ್ರಿಯೆಗಳಿಂದ ಬಹಳ ಎಚ್ಚರವಾಗಿರಬೇಕು. ಸತ್ಯಾಸತ್ಯವನ್ನು ಚೆನ್ನಾಗಿ ಪರೀಕ್ಷಿಸಿ ತಿಳಿಯುವ ತನಕ ಅವರ ಮಾತು ಮತ್ತು ಕೆಲಸಗಳ ಕಡೆಗೆ ಯಾರೂ ಪ್ರಾಮುಖ್ಯತೆಯನ್ನು ಕೊಡತಕ್ಕದ್ದಲ್ಲ

ಖರೆಯವರ ಇನ್ನೊಂದು ವಿಚಾರ

ಡಾಕ್ಟರ ಖರೆಯವರ ನಡೆನುಡಿಗಳನ್ನು ಆಕ್ಷೇಪಿಸಿ ಪಂಡಿತ ಜವಾಹರಲಾಲ ನೆಹರು ಅಂದು ಆಡಿದ ಮಾತುಗಳಿಂದ ನೊಂದ ಡಾಕ್ಟರ ಖರೆಯವರು ಪಂಡಿತರ ಮೇಲೆ ಮಾನ ನಷ್ಟದ ದಾವೆ ಮಾಡುವೆನೆಂದು ಬೆದರಿಕೆ ಹಾಕಿದ್ದರಷ್ಟೆ' ಈಗ ಮಾನ ನಷ್ಟದ ದಾವೆ ಬೇಡ, ತಮ್ಮೊಳಗಿನ ದಾವೆಯನ್ನು ಯಾರಾದರೂ ಪಂಚಾಯತರು ತೀರ್ಮಾನಿಸಲಿ, ಎನ್ನುತ್ತಾರೆ— ನಮ್ಮ ಖರೆಯವರು. ಡಾಕ್ಟರ ಖರೆಯವರು ಆಡಿದ ಮಾತಿನ ಪೊಳ್ಳು ಇದರಿಂದ ಗೊತ್ತಾಗುತ್ತದೆ ಯಾರನ್ನಾದರೂ ಹೆದರಿಸಿಬೆದರಿಸಿ ತಮ್ಮ ಕಾರ್ಯಸಾಧನೆಮಾಡುವ ಮನೋವೃತ್ತಿ ಡಾ ಖರೆಯವರದ್ದು ಆದರೆ ಅವರ ತಮ್ಮ ಎದುರಾಳಿಯನ್ನು ಆರಿಸಿಕೊಳ್ಳುವಾಗ ಮೂರ್ಖರಾದರು. ಪಂಡಿತರು ಅನ್ಯಾಯಪೂರ್ಣ ಹೆದರಿಕೆ ಬೆದರಿಕೆಗಳಿಗೆ ಸ್ವಲ್ಪವಾದರೂ ತಲೆತಗ್ಗಿಸುವವರಲ್ಲ ತಾನು ತನ್ನ ಜವಾಬ್ದಾರಿಯ ಸ್ಥಿತಿ ಕಂಡೇ ಡಾ ಖರೆಯವರು ಎಂಥರದು ಪಂಚಾಯತಿ ಸಲಹೆಯನ್ನು ಪಂಡಿತರ ಮುಂದಿಟ್ಟಿದ್ದಾರೆ ತಮ್ಮ [illegible] ಪಂಡಿತರನ್ನು ಕಂಡ ಖರೆಯವರ ಕಂಗಾಲಾಗಿ—'ಬೇಡ ನಮ್ಮ ದಾವೆ ಪಂಚಾಯತಿಕೆಯಿಂದ ಜಗಳವನ್ನು ತೀರಿಸೋಣ ಎನ್ನುತ್ತಾರೆ ಹೇಗಿದ್ದಾರೆ ಡಾಕ್ಟರ ಖರೆಯವರ' 'ಇಂಥವರನ್ನು ನಂಬಿ ಹೊಳೆ ದಾಟಿ ಹೋದರೆ ಹೇಗಾದೀತು' ಇವರನ್ನು ಮಧ್ಯಪ್ರಾಂತಗಳ ಪ್ರಧಾನ ಪದವಿಯಿಂದ ಇಳಿಸಿದ [illegible] ತಪ್ಪು?

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Seson Deposits are accepted at 3½ % per annum.

Further particulars on application to any of our thirty-five offices.

ಹೈದರಾಬಾದ ಸತ್ಯಾಗ್ರಹ - ಬೊಂಬಾಯಿ ಸರಕಾರದ ಧೋರಣೆ

ಸರ್ ಅಕ್ಬರ ಹೈದರಿಯವರೊಡನೆ ಶ್ರೀ. ಮುನ್ಶಿಯವರ ಮಾತುಕತೆ

ರಾಜಗುರು ಸ್ಪೆಶಲ್! -- ಸಾವಿರ ಮಂದಿಯ ಸತ್ಯಾಗ್ರಹ!! -- ವಿಶೇಷ ಉತ್ಸಾಹ!!!

ನಿವೃತ್ತ ಜಡ್ಜರಿಗೆ ಒಂದು ವರ್ಷದ ಕಠಿನ ಸಜೆ — **ತುಳಜಾಪುರದಲ್ಲಿ ಪುನಃ ಲಾಠೀಚಾರ್ಜು**

ಹೈದರಾಬಾದದಲ್ಲಿ ಆರ್ಯಸಮಾಜಿಗಳು ಮತ್ತು ಹಿಂದುಗಳ ಮೇಲಾಗುತ್ತಿರುವ ಅತ್ಯಾಚಾರ ಅನಾಚಾರಗಳನ್ನು ಖಂಡಿಸಿ, ಅಲಹಾಬಾದಿನ 'ಹಿಂದೂ ಮಿತ್ರ' ಪತ್ರಿಕೆಯು ಹೀಗೆ ಬರೆಯುತ್ತದೆ:—ಒಂದು ಕಡೆಯಿಂದ ಹೈದರಾಬಾದಿನಲ್ಲಿ ಸತ್ಯಾಗ್ರಹಿಗಳ ಮೇಲೆ ಅತ್ಯಾಚಾರಗಳಾಗುತ್ತಿರುವ ಸಮಾಚಾರಗಳು ಬರುತ್ತಿರುವಾಗ, ಇನ್ನೊಂದು ಕಡೆಯಿಂದ ಆ ರಾಜ್ಯದಲ್ಲಿ ಶಾಸನ ಸುಧಾರಣೆಯಾಗುವುದೆಂಬ ವಾರ್ತೆಯೂ ಬಂದಿದೆ! ಮಹಾತ್ಮಾ ನಾರಾಯಣ ಸ್ವಾಮಿಯವರೊಡನೆ ಸರಕಾರವು ಸಂಧಾನದ ಪ್ರಸ್ತಾಪವನ್ನು ಬೆಳೆಸಿರುವದಾಗಿಯೂ ವಾರ್ತೆ ಇತ್ತು. ಸರಕಾರವು ನಿಜವಾಗಿಯೂ ರಾಜ್ಯದಲ್ಲಿ ಶಾಂತಿ ಮತ್ತು ಸುಧಾರಣೆಗಳನ್ನು ಇಚ್ಛಿಸುತ್ತಿರುವದಾದರೆ, ಅದು ಸತ್ಯಾಗ್ರಹಿಗಳ ಮೇಲೆ ಭಯಂಕರ ಅತ್ಯಾಚಾರಗಳನ್ನು ನಡೆಸಿ, ಉರಿಯುವ ಬೆಂಕಿಗೆ ತುಪ್ಪ ಹಾಕುತ್ತಿರುವದೇಕೆ? ಅದು ತನ್ನ ಧೋರಣೆಯಲ್ಲಿ ಯಾಕೆ ಬದಲಾವಣೆಗಳನ್ನು ಮಾಡುವದಿಲ್ಲ? ಹಿಂದುಗಳ ಮೇಲೆ ಹೈದರಾಬಾದ ರಾಜ್ಯದಲ್ಲಿರುವ ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರತಿಬಂಧಗಳ ಕುರಿತು ಇಡೀ ಪ್ರಪಂಚದಲ್ಲಿರುವ ಹಿಂದುಗಳಿಗೆ ಘೋರ ಅಸಂತೋಷ ಮತ್ತು ಅತೃಪ್ತಿ ಇರುತ್ತದೆ. ಸಾವಿರಾರು ಸತ್ಯಾಗ್ರಹಿಗಳು ದೇಶದ ಮೂಲೆಮೂಲೆಗಳಿಂದ ಬಂದು ಹೈದರಾಬಾದದ ಜೈಲುಗಳನ್ನು ಸೇರಿದ್ದಾರೆ. ಈ ಸತ್ಯಾಗ್ರಹಿಗಳಲ್ಲಿ ಅನೇಕ ವೃದ್ಧ ಸನ್ಯಾಸಿಗಳೂ, ಆಚಾರ್ಯರೂ, ವಿದ್ಯಾರ್ಥಿಗಳೂ, ಗಣ್ಯಮಾನ್ಯ ಮುಖಂಡರೂ ಸೇರಿದ್ದಾರೆ. ಈ ದೇಶವ್ಯಾಪೀ ಆಂದೋಲನವು ಕೇವಲ ಭರವಸೆ ಕೊಟ್ಟ ಮಾತ್ರದಿಂದ ನಿಲ್ಲುವುದಿಲ್ಲ. ಆದ್ದರಿಂದ ಸರಕಾರವು ನಿಜವಾಗಿಯೂ ಶಾಂತಿ ಮತ್ತು ಸುಧಾರಣೆಯನ್ನು ಇಚ್ಛಿಸುವುದಾದರೆ ಹಿಂದು ಮತ್ತು ಆರ್ಯಸಮಾಜಿಗಳಿಗೆ ಅಹಿತಕರವಾಗಿರುವ ಕಾಯಿದೆ ಕಾನೂನು, ನಿಯಮ ನಿಬಂಧನೆಗಳನ್ನು ಸರಕಾರವು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕು ಮತ್ತು ಎಲ್ಲಾ ಸತ್ಯಾಗ್ರಹಿಗಳನ್ನು ಜೈಲುಗಳಿಂದ ಬಿಡುಗಡೆ ಮಾಡಿ ಅವರ ಜುಲುಮಾನೆ ಹಣವನ್ನು ಬಿಟ್ಟುಬಿಡಬೇಕು. ಅನಂತರ ಚಿರಸ್ಥಾಯಿಯಾದ ಶಾಂತಿಯು ಸ್ಥಾಪಿಸಲ್ಪಡುವುದಕ್ಕೋಸ್ಕರ ಆರ್ಯಸಮಾಜ ಮತ್ತು ಹಿಂದೂ ಮುಖಂಡರನ್ನು ಕರೆಸಿ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಬೇಕು. ಸತ್ಯಾಗ್ರಹಿ ಮುಖಂಡರು ಹೈದರಾಬಾದ ಸರಕಾರದ ಅಥವಾ ಮುಸಲ್ಮಾನ ಜಾತಿಯ ದ್ವೇಷಿಗಳಾಗಿರುವುದಿಲ್ಲ. ಅವರು ಸರಕಾರದ ಅನ್ಯಾಯ ಮತ್ತು ಪಕ್ಷಪಾತಪೂರ್ಣ ನೀತಿ ಧೋರಣೆಯನ್ನು ಮಾತ್ರ ಖಂಡಿಸಿ ಅವುಗಳ ನಿವಾರಣೆಗೆ ಪ್ರಯತ್ನಿಸುತ್ತಿದ್ದಾರೆ. ಮುಸಲ್ಮಾನರಂತೆ ಇತರ ಜಾತಿ ಮತೀಯರಿಗೂ ಸಮಾನ ಹಕ್ಕು ಅಧಿಕಾರಗಳನ್ನು ಬಯಸುತ್ತಾರೆ. ಆದ್ದರಿಂದ ಸರಕಾರವು ಸುಬುದ್ಧಿಯಿಂದ ಕೆಲಸಮಾಡಿ ತನ್ನ ಸಮಸ್ತ ಪ್ರಜೆಗಳಿಗೆ ಸಮಾನ ನಾಗರಿಕ ಅಧಿಕಾರಗಳನ್ನು ಕೊಡುವುದೆಂದು ನಾವು ಆಶಿಸುತ್ತೇವೆ.

ಬೊಂಬಾಯಿ ಸರಕಾರದ ಧೋರಣೆ

'ಬೊಂಬಾಯಿ ಪ್ರಾಂತದ ವರ್ತಮಾನ ಪತ್ರಿಕೆಗಳು ಹೈದರಾಬಾದದ ನಿಜಾಮರ ಅಥವಾ ಅವರ ವಂಶದವರ ಆಡಳಿತವನ್ನು ಕೊನೆಗೊಳಿಸಲಿಕ್ಕೆ, ಅಥವಾ ಜಾತಿಜಾತಿಗಳೊಳಗೆ ಕಲಹವನ್ನುಂಟುಮಾಡಿ ಅವುಗಳನ್ನು ಹಿಂಸೆಗೆ ಪ್ರೇರಿಸಲಿಕ್ಕೆ ಲೇಖನಗಳನ್ನು ಪ್ರಕಟಿಸುವುದಾದರೆ ಅಂಥ ಪತ್ರಿಕೆಗಳ ಮೇಲೆ ಮಾತ್ರ ಸರಕಾರವು ನಿರ್ಬಂಧವನ್ನು ಹಾಕುವುದು' ಎಂದು ಶ್ರೀ ಕೆ ಯಮ್ ಮುನ್ಶಿಯವರು ಬೊಂಬಾಯಿ ಲೆಜಿಸ್ಲೇಟಿವ ಎಸೆಂಬ್ಲಿಯಲ್ಲಿ ಹೇಳಿದರು. ಬೊಂಬಾಯಿ ಸರಕಾರವನ್ನು ಟೀಕಿಸುವ ಸ್ವಾತಂತ್ರ್ಯವು ಪತ್ರಿಕೆಗಳಿಗೆ ಎಷ್ಟು ಇರುತ್ತದೋ ಅಷ್ಟೇ ಸ್ವಾತಂತ್ರ್ಯವು ಹೈದರಾಬಾದ ಸರಕಾರವನ್ನು ಟೀಕಿಸಲಿಕ್ಕೂ ಬೊಂಬಾಯಿ ಪತ್ರಿಕೆಗಳಿಗೆ ಇರುವುದು. ಆದರೆ ಪತ್ರಿಕೆಗಳು ಜನತೆಯನ್ನು ಹಿಂಸೆಗೆ ಪ್ರವರ್ತಿಸುವುವಾದರೆ ಅವುಗಳ ಮೇಲೆ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ. ಸ್ನೇಹದಲ್ಲಿರುವ ಒಂದು ಸರಕಾರಕ್ಕೆ ಇನ್ನೊಂದು ಸರಕಾರವು ಯಾವ ಯಾವ ವರ್ತಮಾನಗಳನ್ನು ಕೊಡಬಹುದಾಗಿದೆಯೋ ಅಂಥವುಗಳನ್ನು ಬೊಂಬಾಯಿ ಸರಕಾರವು ಹೈದರಾಬಾದ ಸರಕಾರಕ್ಕೆ ಕೊಡಲು ಸಿದ್ಧವಿದೆ. ಆದರೆ ಹೈದರಾಬಾದಿನ ಕಾನೂನಿಗೆ ವಿರೋಧವಾದ ಕೆಲಸವನ್ನು ಮಾಡುತ್ತಾರೆಂಬ ಕಾರಣದಿಂದ ಇಲ್ಲಿಂದ ಅಲ್ಲಿಗೆ ಹೋಗುವ ಜನರನ್ನು ಇಲ್ಲೇ ತಡೆದು ನಿರ್ಬಂಧಿಸಲಿಕ್ಕೆ ಬೊಂಬಾಯಿ ಸರಕಾರವು ಸಿದ್ಧವಿರುವುದಿಲ್ಲ, ಎಂದು ತಾನು ಸರಕಾರದ ಪರವಾಗಿ ಸರ್ ಅಕ್ಬರ ಹೈದರಿಯವರೊಡನೆ ಮಾತನಾಡಿದ್ದಾಗಿಯೂ ಶ್ರೀ ಮುನ್ಶಿಯವರು ಎಸೆಂಬ್ಲಿಯಲ್ಲಿ ಹೇಳಿದರು.

ನಿವೃತ್ತ ಜಡ್ಜರ ಕೈದು—ಕಠಿನ ಶಿಕ್ಷೆ

ಝೇಲಂ ಆರ್ಯ ಗುರುಕುಲದ ಪ್ರಧಾನರಾದ ಆಚಾರ್ಯ ರಾಮದೇವ, ಪಂಜಾಬಿನ ನಿವೃತ್ತ ಜಿಲ್ಲಾ ಮತ್ತು ಸೆಶ್ಶನ ಜಡ್ಜ ರಾವ್ ಸಾಹೇಬ ಲಾಲಾ ಮುರಾರಿಲಾಲ—ಇವರು ಹೈದರಾಬಾದದಲ್ಲಿ ಸತ್ಯಾಗ್ರಹ ಮಾಡಿದುದರಿಂದ ಅವರಿಗೆ ಒಂದು ವರ್ಷದ ಕಠಿನ ಶಿಕ್ಷೆಯಾಗಿದೆ. ಇವರೊಂದಿಗೆ ಸತ್ಯಾಗ್ರಹ ಮಾಡಿದ ಬೇರೆ ೬೩ ಸತ್ಯಾಗ್ರಹಿಗಳಿಗೂ ಶಿಕ್ಷೆಯಾಗಿದೆ. ಹೈದರಾಬಾದಿನಿಂದ ಹೈದರಾಬಾದ ಹೈಕೋರ್ಟಿನ ವಕೀಲ ಶ್ರೀ. ಕೇಶವರಾವರ ಧುರೀಣತೆಯಲ್ಲಿ ೬೯ ಮಂದಿ ಸತ್ಯಾಗ್ರಹಿಗಳು ಸತ್ಯಾಗ್ರಹ ಮಾಡಲಿಕ್ಕೆ ಕೊಲ್ಲಾಪುರದಿಂದ ಹೊರಟಿದ್ದಾರೆ. ಉಸ್ಮಾನಾಬಾದ ಜೈಲಿನಲ್ಲಿರುವ ಕಪೂರ್ತಲದ ಲಾಲಾ ರಾಮಸರನ ದಾಸರು ಉಪವಾಸ ಹಿಡಿದಿದ್ದಾರೆ. ಜುಲುಂದರ ಡಿ. ಎ. ವಿ. ಕಾಲೇಜಿನ ವ್ಯಾಸ ಪ್ರಾಧ್ಯಾಪಕರಾದ ಪ್ರೊ. ಗ್ಯಾನಚಂದ ಎಂ. ಎ. ಯವರ ಅಧ್ಯಕ್ಷತೆಯಿಂದ ಒಂದು ಸತ್ಯಾಗ್ರಹಿಗಳ ದಂಡನ್ನು ತೆಗೆದುಕೊಂಡು ಹೊರಟಿರುವರು.

ರಾಜಗುರು ಸ್ಪೆಶಲ್

ಸತ್ಯಾಗ್ರಹದ ಚತುರ್ಥ ಸರ್ವಾಧಿಕಾರಿ ರಾಜಗುರು ಶ್ರೀ ಧುರೇಂದ್ರ ಶಾಸ್ತ್ರಿಯವರು ೮೦೦ ಸತ್ಯಾಗ್ರಹಿಗಳನ್ನು ಕರಕೊಂಡು ಸ್ಪೆಶಲ್ ಟ್ರೇನಿನಲ್ಲಿ ಶೋಲಾಪುರಕ್ಕೆ ಬಂದು ಮುಟ್ಟಿದರು. ಇಷ್ಟು ಮಂದಿಯನ್ನು ಅವರು ಸ್ಪೆಶಲ್ ಟ್ರೇನಿನಲ್ಲಿ ಹೈದರಾಬಾದಿಗೆ ಕರಕೊಂಡು ಹೋಗಿ ಇದೇ ೨೨ನೆ ತಾರೀಕಿನ ದಿನ ಸತ್ಯಾಗ್ರಹವನ್ನಾಚರಿಸಿದರು. ಈ ಸತ್ಯಾಗ್ರಹಿ ದಂಡಿನಲ್ಲಿ ಬೊಂಬಾಯಿಯಿಂದ ಬಂದ ೩೫೦ ಮಂದಿಯೂ ಸೇರಿದ್ದಾರೆ. ಎಲ್ಲರನ್ನು ಕೈದುಮಾಡಿದ್ದಾರೆ.

ತುಳಜಾಪುರದಲ್ಲಿ ಪುನಃ ಲಾರೀಚಾರ್ಜು

ತುಳಜಾಪುರಕ್ಕೆ ಶೋಲಾಪುರದಿಂದ ಒಂದು ಸತ್ಯಾಗ್ರಹೀ ದಳವ ಕಳುಹಿಸಲ್ಪಟ್ಟಿತು. ಪೋಲೀಸರು ಸತ್ಯಾಗ್ರಹಿಗಳನ್ನು ಕೈದ ಮಾಡಿದಾಗಲೇ ಕೆಲವು ಜನ ಮುಸಲ್ಮಾನರು ಬಂದು ಸತ್ಯಾಗ್ರಹಿಗಳ ಮೈಮೇಲೆ ಬಿದ್ದು ಅವರನ್ನು ಕಠಿಣ ರೀತಿಯಿಂದ ಹಿಂಸಿಸಿದರು. ಆರ್ಯ ಸತ್ಯಾಗ್ರಹ ಸಮಿತಿಯು ತುಳಜಾಪುರಕ್ಕೆ ಇನ್ನೊಂದು ಸತ್ಯಾಗ್ರಹೀ ದಳವನ್ನು ಕಳುಹಿಸಿಕೊಟ್ಟಿತು. ಈ ಸಲ ಪೋಲೀಸರೇ ಈ ಸತ್ಯಾಗ್ರಹಿಗಳ ಮೈಮೇಲೆ ಬಿದ್ದು ಲಾಠೀಚಾರ್ಜು ಮಾಡಿದರು. ಅನೇಕ ವೀರರನ್ನು ಎಷ್ಟು ಹೊಡೆದು ಬಡೆದು ಹಿಂಸಿಸಿದರೆಂದರೆ ಅವರ ಶರೀರಗಳು ಕ್ಷತವಿಕ್ಷತವಾದುವು. ಆರ್ಯ ವೀರರು ಈ ಎಲ್ಲಾ ಅತ್ಯಾಚಾರಗಳನ್ನು ಬಹಳ ಶಾಂತಿಯಿಂದ ತಾಳಿಕೊಂಡಿರುವರು.

ಹೈದರಾಬಾದ ನಗರಸ್ಥಿತಿ

ಬೇಗಮ್ ಬಾಜಾರಿನ ಭಾಜೀ ಮಾರ್ಕೆಟಿನಲ್ಲಿ ಎಪ್ರಿಲ್ ೧೧ರ ದಿನ ರಾತ್ರಿ ಕೆಲವರು ಹಿಂದೂ ಕೂಲಿಗಳು ಮಲಗಿಕೊಂಡಿದ್ದರು. ಅಕಸ್ಮಾತ್ತಾಗಿ ಒಬ್ಬ ಮುಸಲ್ಮಾನ ಕಸಾಯಿಯು ಬಂದು ಅವರೆಲ್ಲರನ್ನು ಹೊಡೆದು ಬಡೆದನು. ಒಬ್ಬ ಹಿಂದೂ ಸ್ತ್ರೀಯೊಡನೆ ಬಲಾತ್ಕಾರಮಾಡಿದನು. ಪ್ರಾತಃಕಾಲ ಈ ಪಾಶವಿಕ ಅತ್ಯಾಚಾರದ ಸುದ್ದಿಯು ಪೇಟೆಯಲ್ಲೆಲ್ಲ ಹರಡಿದಾಗ ಹರತಾಳವಾಚರಿಸಲ್ಪಟ್ಟಿತು. ಆದರೆ ಮುಸಲ್ಮಾನ ಗೂಂಡರು ಬಂದು ಬಲಾತ್ಕಾರದಿಂದ ಅಂಗಡಿಗಳನ್ನು ತೆರೆಯಿಸಿದರು. ಎಪ್ರಿಲ್ ೧೧ರ ದಿನ ಆರ್ಯ ಸತ್ಯಾಗ್ರಹ ಸಮಿತಿಯು ಒಂದು ದಳವು ಸುಲ್ತಾನ ಬಾಜಾರಿನಲ್ಲಿ ಸತ್ಯಾಗ್ರಹ ಮಾಡಿದಾಗ ಪೋಲೀಸರು ಬಂದು ಅದನ್ನು ಕೈದುಮಾಡಿದರು. ತಾ. ೧೧ರ ದಿನ ಪ್ರಕಾಶಕಟಿನ ಫೆಕ್ಟರಿಯ ಯಜಮಾನರ ಹೆಸರಿನಲ್ಲಿ ಹಿಂಗೋಲಿಯ ಟಪ್ಪಾಲು ಮೊಹರು ಇರುವ ಒಂದು ಬೇರಿಂಗ ಕಾಗದವು ಬಂದಿದೆ. ಇಂಥ ಒಂದು ಸ್ಥಾನದಲ್ಲಿ ೧೫೦೦೦ ರೂಪಾಯಿಗಳನ್ನು ಕದ್ದು ಇಡಲಾಗಿದೆ ಆ ಹಿಂದೂ ಮಾಲಿಕನ ಕೊಲೆಯಾಗಲಿದೆಯೆಂದು ಯಾರೋ ಒಬ್ಬ ಮುಸಲ್ಮಾನನು ಅದರಲ್ಲಿ ಉರ್ದು ಮತ್ತು ಇಂಗ್ಲಿಷ ಭಾಷೆಯಲ್ಲಿ ಬರೆದಿದ್ದಾನೆ.

ಹಣ ಸಹಾಯ

ಶ್ರೀ ಸಂತ ಮುನ್ಶೀರಾಮ ಉಪಾಧ್ಯಾಯರು ತಮ್ಮದೊಂದು ಸತ್ಯಾಗ್ರಹೀ ದಳದೊಂದಿಗೆ ಪಂಜಾಬಿನಿಂದ ಹೊರಟು ಬರುತ್ತಾ ದಾರಿಯಲ್ಲಿ ಪ್ರಚಾರಕಾರ್ಯ ಮಾಡಿ ೩೦೦೦ ರೂಪಾಯಿಗಳನ್ನು ಸತ್ಯಾಗ್ರಹ ಸಹಾಯ ನಿಧಿಗೆ ದಾನರೂಪವಾಗಿ ಪಡೆದಿರುತ್ತಾರೆ. ಮುಜಫರನಗರದ ಆರ್ಯ ಸತ್ಯಾಗ್ರಹ ಸಮಿತಿಯು ಇಷ್ಟರ ತನಕ ಸಂಗ್ರಹಿಸಿದ ಹಣವು ೪೫೦೦ ಆಗಿದೆ.

ಬೆರಿಸ್ಟರ ಸಾವರಕರರ ಪ್ರಕಟಣೆ

ಎಲ್ಲಿಯ ತನಕ ನಿಜಾಮ ಸರಕಾರವು ಹಿಂದುಗಳಿಗೆ ತೃಪ್ತಿಕರವಾದ ಶಾಸನ ಸುಧಾರಣೆಗಳನ್ನು ಘೋಷಿಸುವುದಿಲ್ಲವೋ ಅಷ್ಟರ ತನಕ ಯಾರು ಏನುಬೇಕಾದರೂ ಮಾಡಲಿ ಹಿಂದು ಮಹಾಸಭೆಯು ಹೈದರಾಬಾದಿನಲ್ಲಿ ಸತ್ಯಾಗ್ರಹವನ್ನು ನಿಲ್ಲಿಸುವುದಿಲ್ಲವೆಂದು ಮಹಾಸಭೆಯ ಅಧ್ಯಕ್ಷರಾದ ಬೆರಿಸ್ಟರ ಸಾವರಕರರು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ.

ಹಳೆ ಜೈಲುಗಳು ತುಂಬಿದುವು
ಹೊಸ ಸ್ಥಾನಗಳನ್ನು ಹುಡುಕುತ್ತಿದ್ದಾರೆ

ಹೈದರಾಬಾದದ ಅಧಿಕಾರಿಗಳು ಸತ್ಯಾಗ್ರಹಿಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ಕಂಡು ಅವರನ್ನು ತುಂಬಿಸಲಿಕ್ಕೆ ಹೊಸ ಸ್ಥಾನಗಳನ್ನು ಹುಡುಕುತ್ತಿದ್ದಾರೆ. ಜೈಲುಗಳ ಕ್ರಿಮಿನಲ್ ಕೈದಿಗಳನ್ನು ಬೇರೆ ಕಡೆ ಸಾಗಿಸಿ ಆ, ವರ್ಕಶಾಪುಗಳನ್ನು ಸ್ಥಾನಾಂತರ ಮಾಡಿಯೂ ಸತ್ಯಾಗ್ರಹಿ ಕೈದಿಗಳಿಗೆ ಸ್ಥಳಾವಕಾಶ ಮಾಡಿಕೊಡುತ್ತಿದ್ದಾರೆ. ಜೈಲುಗಳ ಒಳ ಅಂಗಳಗಳಲ್ಲಿಯೂ ಸತ್ಯಾಗ್ರಹಿಗಳಿಗೋಸ್ಕರ ಬಿಡಾರಗಳನ್ನು ಹಾಕಿದ್ದಾರೆ. ಇಷ್ಟರ ತನಕ ೬೦೦೦ ಸತ್ಯಾಗ್ರಹಿಗಳು ಜೈಲುಗಳನ್ನು ಸೇರಿರುವರು.

ಶ್ರೀ. ವೆಂಕಟರಾವ್ ವಕೀಲರ ಮೃತ್ಯು

ಔರಂಗಾಬಾದ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ಶ್ರೀ ವೆಂಕಟರಾವ ವಕೀಲರು ಮೃತ್ಯುವಶರಾದರು. ಜೈಲಿನಲ್ಲಿ ಅವರು ಅಕಾಲ ಮರಣವನ್ನು ಹೊಂದಿದುದರ ಕಾರಣವು ತಿಳಿದುಬಂದಿರುವುದಿಲ್ಲ. ಹಾಗೆಯೇ ಗುಲ್ಬರ್ಗಾ ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ಶ್ರೀ. ತುಳಜಾರಾಮ ಭೋಯಿಂಗಾ ಎಂಬವರೂ ಜೈಲಿನಲ್ಲಿ ಅಕಾಲ ಮೃತ್ಯುವಿಗೆ ತುತ್ತಾಗಿದ್ದಾರೆ. ಅದರ ಕಾರಣವೂ ತಿಳಿದುಬಂದಿರುವುದಿಲ್ಲ.

ಪೋಲೀಸರ ಅನಾಚಾರ

ಆರ್ಯಸಮಾಜದ ಇಬ್ಬರು ಸತ್ಯಾಗ್ರಹಿಗಳು ಹೈದರಾಬಾದದಲ್ಲಿ ಸತ್ಯಾಗ್ರಹ ಮಾಡಲಿಕ್ಕೆ ಹೋದಾಗ ಪೋಲೀಸರು ಅವರನ್ನು ಹಿಡಿದು ಅವರ ಕೈಕಾಲು ಕಟ್ಟಿಹಾಕಿದರು. ಅನಂತರ ಬಲಪೂರ್ವಕ ಗೋಮಾಂಸವನ್ನು ತಿನ್ನಿಸಿ ಮತವನ್ನು ಕೆಡಿಸಿದರು. ಅವರು ವಿರೋಧಿಸಿದಾಗ ಚೆನ್ನಾಗಿ ಹೊಡೆದು ಒಂದು ಕತ್ತಲೆ ಕೋಣೆಯಲ್ಲಿ ಕಟಿಹಾಕಿದರು ಎರಡು ತಿಂಗಳು ಶಿಕ್ಷೆಯನ್ನು ಅನುಭವಿಸಿದ ಇಬ್ಬರು ಸತ್ಯಾಗ್ರಹಿಗಳನ್ನು ಪೋಲೀಸರು ಅವರ ಮನೆಗೆ ಬಿಟ್ಟು ಬರುವಾಗ ಮೂರು ಮೂರು ದಿನ ಅನ್ನಾಹಾರ ಕೊಡಲಿಲ್ಲ. ಅವರ ಶಿಖೆ ಸೂತ್ರಗಳನ್ನು ಕತ್ತರಿಸಿದರು ಮತ್ತು ಒಂದು ಕಾಲಿನ ಮೇಲೆ ನಿಲ್ಲಿಸಿದರು ಎಂದು ಪ್ರಕಟವಾಗಿದೆ.

ತುಳಜಾಪುರ ಅತ್ಯಾಚಾರಕ್ಕೆ ಬಲಿ

ಕೈದುಮಾಡಿದ ಸತ್ಯಾಗ್ರಹಿಗಳನ್ನು ಪೋಲೀಸರು ಕೊಂಡು ಹೋಗುತ್ತಿರುವಾಗ ಸತ್ಯಾಗ್ರಹಿಗಳ ಮೇಲೆ ಪೋಲೀಸರ ಆಕ್ರಮಣವಾಯಿತಷ್ಟೆ. ಇದರಲ್ಲಿ ಶ್ರೀ ಬ್ರಹ್ಮಾನಂದ ಎಂಬವರಿಗೆ ಪ್ರಾಣಾಂತಿಕ ಗಾಯಗಳಾಗಿ ಅವರು ಜೈಲಿನಲ್ಲಿ ಮೃತರಾದರು.

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ

ವಜ್ರಗಳು!

ಎಮ್ ಸ್ಟೆಬಿಲಿಯಿಂದ ಒರೆದ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯ ಸಿಗುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಹೊಳಪು ಮತ್ತು ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇಷ್ಟರಲ್ಲಿಯೇ ಪಂಡರಪುರದಲ್ಲಿ ತೆರೆಯಲಾಗಿದೆ

ಕೆ ಆರ್ ಕೆ ಶೆಟ್, ಮಂಗಳೂರು.

ಶಾಲಿವಾಹನ ಶಕ ೧೮೭೦ನೆಯ ವಿರೋಧಿ ಸಂವತ್ಸರದ ವೈಶಾಖ ಶು ೧೦ಶನಿವಾರದಿಂದ ವೈಶಾಖ ಬ ೧ ಶುಕ್ರವಾರದ ವರೆಗಿನ ಪಂಚಾಂಗ. (೧೯೪೯ನೇಯ ಮೇಷ ತಗ್ಗು)

29	ಶನಿ	೮	೫೪	ಪುಬ್ಬಾ	೪೯॥	೧೬	[illegible]
30	ರವಿ	೯	೪೯॥	ಉತ್ತರಾ	೪೬॥	೧೭	
1	ಸೋ.	೧೦	೪೫॥	ಹಸ್ತಾ	೪೪	೧೮	
2	ಕುಜ	೧೧	೪೨	ಚಿತ್ರಾ	೪೨	೧೯	
3	ಬುಧ	೧೨	೩೯॥	ಸ್ವಾತಿ	೪೧॥	೨೦	
4	ಗುರು	೧೩	೩೮॥	ವಿಶಾಖ	೪೨॥	೨೧	
5	ಶುಕ್ರ	೧೪	೩೮॥	ಅನುರಾಧಾ	೪೪।	೨೨	

THE PIE-MONEY BANK LTD,

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5%, 1 Year 4½%, For 6 months 4%, 3 months 3½%.

Auction [illegible] ranging from Rs 100/ to Rs 5000/ run regularly on systematic lines. Unique Banking facilities to Businessmen and interested Public.

Apply for particulars—**K. R. GURU**, *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ.— ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ್, (S. M. C.)

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಪೆನ್ನಿ ಬಹುಮಾನಗಳು!

[illegible]

The American Commercial Stores, Post Box No 12215 Calcutta (S A)

THE

Bank of Mangalore Ltd.,

MANGALORE

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For 3 months		3½%
„ 6 „		4%
„ 12 „		5%
„ 24	& upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted.

THE

Canara Banking Corporation Udipi, Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a

in denominations of

RS. 50/-, 100/-, 500/-, 1,000/-, & 5,000/

are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ.

ಅತ್ಯಂತ ಬಲಕಾರಿ

[illegible] 20 ತೊಲಿಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಆಂಡ್ ಕೋ.,

[illegible]

P O Peridepu (ನೆಲ್ಲೂರು ಜಿ.)

HOUNSA

ಹಂಸಾಸ್ನೋ ಮತ್ತು ಬ್ರಿಲ್ಲಿಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಮೋಟರ್‌ಸ್ಟಾಂಡ್ ಬಜಾರ್, ಮಂಗಳೂರು.

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

ಹಲ್ಲು ಮತ್ತು ಎಲುಬುಗಳನ್ನು ಗಟ್ಟಿ ಮಾಡಿ ನಿಮ್ಮ ಮಕ್ಕಳಿಗೆ ಪುಷ್ಟಿಯನ್ನು ಬಲವನ್ನು ಕೊಡ ಬಲ್ಲದು

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡ ಮುಡಿಗೆ	1—11—0	—
„ ದುಯಂ „ „	1—10—0	1—10—0
„ ಅವ್ವಲ್ ಸುಗ್ಗಿ „	1—10—0	—
„ ದುಯಂ „ „	1—9—0	—
ಅಕ್ಕಿ ಅವ್ವಲ್ ಗುಡ್ಡ „	4—2—0	4—2—0
„ ದುಯಂ „ „	3—14—0	3—14—0
„ ಅವ್ವಲ್ ಸುಗ್ಗಿ „	4—4—0	—
„ ದುಯಂ „ „	3—8—0	3—8—0
ತೆಂಗಿನ ಕಾಯಿ ಸುಳಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದದು „	37—8—0	47—8—0
ಕೊಬ್ಬರಿ ಆಳೀಸು ಖಂಡಿಗೆ	45—0—0	—
„ ದಿಲ್‌ಪಸಂದ „	47—8—0	—
ತೆಂಗಿನ ಎಣ್ಣೆ ಮಣಕ್ಕೆ	3—5—0	3—5—0
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	3—4—0	3—12—0
ಗೇರುಬೀಜ ಮುಡಿಗೆ	3—12—0	3—12—0
ಕಬ್ಬಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೆಮೆಣಸು ಹುಡ್ಡಮ್ಮೇಟಿಗೆ	15—8—0	16—6—0

ಸಂಸ್ಥಾನಾಧೀಶರಿಗೆ

ಸಿಂಧಿಯ ಮಹಾರಾಜರ ಹಿತವಾದ

ಕಾಲಗತಿಯನ್ನು ನೋಡಿ ಸಂಸ್ಥಾನ ಪ್ರಜೆಗಳಿಗೆ ಜವಾಬುದಾರಿ ಸರಕಾರವನ್ನು ಕೊಡಿರಿ'

'ಸಂಸ್ಥಾನಾಧೀಶರ ಛತ್ರಛಾಯೆಗಳಲ್ಲಿ ಸಂಸ್ಥಾನ ಪ್ರಜೆಗಳಿಗೆ ಜವಾಬುದಾರಿ ಸರಕಾರವನ್ನು ಕೊಡುವುದರ ಮೂಲಕ ಅವರ ರಾಜಕೀಯ ಮತ್ತು ಆರ್ಥಿಕ ಉನ್ನತಿಯನ್ನು ಸಾಧಿಸುವಂಥಾದ್ದೇ ಸಂಸ್ಥಾನಾಧೀಶರ ಗುರಿಯಾಗಿರಬೇಕು. ಕಾಲಗತಿಯು ಬದಲಾಗಿರುವುದನ್ನು ನೋಡಿ, ಸಂಸ್ಥಾನಾಧೀಶರು ಶಾಸನಕಾರ್ಯದಲ್ಲಿ ಕ್ರಮಾಗತವಾಗಿ ಪ್ರಜೆಗಳ ನಿಕಟ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಅವರಿಗೂ ಸಂಸ್ಥಾನಗಳಿಗೂ ಹಿತಕರವಾಗಿದೆ' ಎಂದು ಗ್ವಾಲಿಯರಿನಲ್ಲಿ ಕೂಡಿದ ಸಂಸ್ಥಾನಗಳ ಮಂತ್ರಿಮಂಡಲಗಳ ಮಹಾಧಿವೇಶನವನ್ನು ತೆರೆಯುತ್ತ ಸಿಂಧಿಯ ಮಹಾರಾಜರು ಹೇಳಿದರು. ಅವರು ಮುಂದರಿಯುತ್ತಾ-'ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಸ್ಥಿತಿಗತಿಗಳ ಕಡೆಗೆ ಲಕ್ಷ್ಯವನ್ನು ಕೊಟ್ಟಿದ್ದಾರೆ. ಸಂಸ್ಥಾನಾಧೀಶರು ಪರಿವರ್ತಿತ ಪರಿಸ್ಥಿತಿಗೆ ಸರಿಯಾಗಿ ತಮ್ಮನ್ನು ಹೊಂದಿಸಿಕೊಳ್ಳುವುದು ಅನಿವಾರ್ಯವಾಗಿರುವುದನ್ನು ತಿಳಿಯದೆ ಇರಲಾರರು. ಆದ್ದರಿಂದ ಮಂತ್ರಿಗಳು ಹಂಗುದಾಕ್ಷಿಣ್ಯಗಳಿಗೆ ಬಲಿಯಾಗದೆ ತಮ್ಮ ತಮ್ಮ ಮಹಾರಾಜರುಗಳಿಗೆ ಸಂದರ್ಭೋಚಿತ ಅನುಭವವನ್ನು ಕೊಟ್ಟು ಸಂಸ್ಥಾನಗಳಲ್ಲಿ ಪ್ರಜೆಗಳು ಶಾಂತರೂ ತೃಪ್ತರೂ ಆಗಿ ತಮ್ಮ ಉನ್ನತಿಯನ್ನು ಸಾಧಿಸಿಕೊಳ್ಳುವಂತೆ ಶಾಸನಕಾರ್ಯವನ್ನು ನಡೆಸುವರಾಗಿ ನಂಬಿದ್ದೇನೆ' ಎಂದು ತಮ್ಮ ಆಸೆಯನ್ನು ವ್ಯಕ್ತಪಡಿಸಿದರು. ಉತ್ತರ ಹಿಂದುಸ್ಥಾನದ ಸುಮಾರು ೫೦ ರಾಜ್ಯಗಳ ಮಂತ್ರಿಗಳು ಈ ಅಧಿವೇಶನಕ್ಕೆ ಬಂದಿದ್ದರು. 'ಕೃಷಿಕರು ಸಂಸ್ಥಾನಗಳ ಜೀವಾಳವಾಗಿದ್ದಾರೆ. ಆದರೆ ಕೃಷಿಕರ ಇಂದಿನ ಸ್ಥಿತಿಯು ಬಹಳ ಕೆಟ್ಟಿರುವುದರಿಂದ ಅವರು ಜೀವನ್ಮೃತರಂತಿದ್ದಾರೆ. ಅವರ ಸ್ಥಿತಿಗಳನ್ನು ಉದ್ಧರಿಸುವುದೇ ನಿಮ್ಮ ಧ್ಯೇಯವಾಗಿರಲಿ' ಎಂದು ಮಹಾರಾಜರು ತಮ್ಮ ಭಾಷಣವನ್ನು ಕೊನೆಗೊಳಿಸಿದರು.

ಮಹಾರಾಜರು ಸಂಸ್ಥಾನಾಧೀಶರಿಗೆ ಕೊಟ್ಟ ಬೋಧನೆಯು ವ್ಯರ್ಥವಾಗದೆಂದು ನಾವು ನಂಬಿದ್ದೇವೆ. ಸಂಸ್ಥಾನಗಳ ವಾತಾವರಣವು ಕಗ್ಗತ್ತಲೆಯಿಂದ ತುಂಬಿರುವಾಗ ಮಹಾರಾಜರ ಈ ಭಾಷಣವು ಆಶೋದಯವನ್ನುಂಟುಮಾಡುತ್ತದೆ. ಆದರೆ ಮಾತಿಗೂ ಕ್ರಿಯೆಗೂ ಆಜಗಜಾಂತರ ಭೇದವಿರುವುದಷ್ಟೆ! ಸಂಸ್ಥಾನಾಧೀಶರು ಹೇಳುವುದ ಶಾಸ್ತ್ರ, ಇಕ್ಕುವುದು ಗಾಳವಾದರೆ ಏನು ಪ್ರಯೋಜನ? ಅವರು ಹೀಗೆಯೇ ಮಾಡುತ್ತಿದ್ದಾರೆಂಬುದಕ್ಕೆ ರಾಜಕೋಟದ ಠಾಕೋರರು ಉತ್ತಮ ದೃಷ್ಟಾಂತವಾಗಿದ್ದಾರೆ. ಆದರೆ ಸಂಸ್ಥಾನಾಧೀಶರಿಗೆ ಉದಾರರೂ ಪರಿಸ್ಥಿತಿಯ ಪೂರ್ಣ ಅನುಭವಿಗಳೂ ಆದ ಮಂತ್ರಿಗಳು ದೊರೆತರೆ ಬಹಳ ಕಾರ್ಯವು ಸುಲಭವಾಗುತ್ತದೆ. ಸರ್ ಮಿರ್ಜಾ ಇಸ್ಮಾಯಿಲ್, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರಂಥವರು ಸಂಸ್ಥಾನಗಳ ಮಂತ್ರಿಗಳಾಗಿರುವುದು ದೇಶದ ದುರ್ಭಾಗ್ಯವು. ಆದ್ದರಿಂದ ಮಹಾರಾಜ ಸಿಂಧಿಯರು ಸಂಸ್ಥಾನಾಧೀಶರಿಗೆ ಹೇಗೋ, ಮಂತ್ರಿಗಳಿಗೂ ಹಾಗೆ ಕೆಲವು ಹಿತವಚನಗಳನ್ನು ಆಡಿದ್ದಾರೆ. ಪ್ರಜೆಗಳ ಕಲ್ಯಾಣದಲ್ಲಿ ತಮ್ಮ ಕಲ್ಯಾಣವಿದೆ ಎಂದು ಸಂಸ್ಥಾನಾಧಿಶರು ತಿಳಕೊಂಡು ತಮ್ಮ ಶಾಸನಕಾರ್ಯವನ್ನು ಅದಕ್ಕೆ ತಕ್ಕಂತೆ ರೂಪಿಸಿಕೊಂಡರೆ, ಸಿಂಧಿಯ ಮಹರಾಜರ ಭಾಷಣ ಪರಿಶ್ರಮವು ವ್ಯರ್ಥವಾಗಲಿಲ್ಲವೆನ್ನಬಹುದು.

ವಾಯ್ಸರಾಯರ ಬೋಧನೆಯ ಕುರಿತು ಅಮೆರಿಕದ ಟೈಮ್ಸ್ ಪತ್ರಿಕೆಯ ಅಭಿಪ್ರಾಯ.

ಮಹಾಯುದ್ಧ ಕಾಲದಿಂದ ಬ್ರಿಟಿಷರ ತೇಜೋವಧೆಯಾಯಿತು.. ಸಂಸ್ಥಾನಾಧೀಶರ ಒಳಆಡಳಿತವು ಲೋಪದೋಷ ಕುಂದುಕೊರತೆಗಳಿಂದ ತುಂಬಿದ್ದರೂ, ಅವರು ಬ್ರಿಟಿಷರ 'ಅಜ್ಞಾಕಿತ ಮೊಮ್ಮಕ್ಕಳಾಗಿ'ದ್ದರು. ಆಪತ್ಕಾಲದಲ್ಲಿ ಅವರ ಸಹಾಯವೇ ಬ್ರಿಟಿಷರಿಗೆ ಅತ್ಯಗತ್ಯವೆನ್ನಿಸುತಿತ್ತು. ಯಾಕೆಂದರೆ ಕಾಂಗ್ರೆಸಿಗೆ ಅಡ್ಡಗಾಲು ಹಾಕಲಿಕ್ಕೂ ರಾಷ್ಟ್ರೀಯತೆಯನ್ನು ವಿರೋಧಿಸಲಿಕ್ಕೂ ಸಂಸ್ಥಾನಾಧೀಶರು ಯೋಗ್ಯರಿದ್ದರು. ಆದ್ದರಿಂದ ಬ್ರಿಟಿಷರು ಇಷ್ಟರ ತನಕ ಸಂಸ್ಥಾನಾಧೀಶರ ವಿರುದ್ಧ ಒಂದೇ ಒಂದು ಮಾತನ್ನು ಪ್ರಕಟವಾಗಿ ಆಡುತ್ತಿರಲಿಲ್ಲ. ರಾಜಕುಮಾರ ಸಭೆಯು ೧೯೨೧ರ ಸುಮಾರಿಗೆ ಸ್ಥಾಪಿಸಲ್ಪಟ್ಟಿತಾದರೂ ೧೯೩೯ರ ತನಕ ಅದರ ಕಾರ್ಯಕ್ರಮಗಳು ರಹಸ್ಯದಲ್ಲಿಯೇ ನಡೆಯುತಿದ್ದವು.

ಕಳೆದ ಬಾರಿ

ಕಳೆದ ಬಾರಿ ರಾಜಕುಮಾರ ಸಭೆಯು ಕೂಡಿದಾಗ ಮಾತ್ರ ಹೀಗಾಗಲಿಲ್ಲ. ಬ್ರಿಟಿಷರ ಪ್ರತಿನಿಧಿ ವಾಯ್ಸರಾಯರು, ರಾಜಕುಮಾರಸಭೆಯಲ್ಲಿ ಪ್ರಕಟವಾಗಿಯೇ ಕೆಲವು ಮಾತುಗಳನ್ನಾಡಿ ಸಂಸ್ಥಾನಾಧೀಶರ ನಡೆನುಡಿ ಚಲನವಲನಗಳನ್ನು ಸ್ವಲ್ಪ ಕಟುವಾಗಿಯೇ ಟೀಕಿಸಿದರು. ಸಂಸ್ಥಾನಾಧೀಶರ ಸರಕಾರಗಳನ್ನು ಸುಧಾರಿಸಬೇಕೆಂದೂ, ಸಂಸ್ಥಾನಗಳಲ್ಲೀ ಇದ್ದ ಪ್ರಜೆಗಳ ಲಾಲನೆಪಾಲನೆ ಮಾಡುತ್ತಿರಬೇಕೆಂದೂ ಅವರು ಹೇಳಿದರು. ವಾಯ್ಸರಾಯರ ಮಾತುಗಳಿಗೆ ಯಾರೂ ಪ್ರತಿಯಾಡಲಿಲ್ಲ. ಮರುದಿನ ರಾಜಕುಮಾರ ಸಭೆಯು ಪ್ರಧಾನರಾದ ಪಟಿಯಾಲದ ಮಹಾರಾಜರು ಒಂದು ಸಹಾನುಭೂತಿಪರ ಭಾಷಣಮಾಡಿ ವಾಯ್ಸರಾಯರಿಗೆ ಕೃತಜ್ಞತೆಗಳನ್ನು ಸಮರ್ಪಿಸಿದರು. ಸಂಸ್ಥಾನಗಳಲ್ಲಿ ಸುಧಾರಣೆಗಳು ಎಷ್ಟು ಅಗತ್ಯವೆಂದು ಇದರಿಂದ ತಿಳಿಯುತ್ತದೆ.

ಹಳ್ಳಿಯ ಹತ್ತುಸಮಸ್ತರು

[೧೫ನೇ ಪುಟದಿಂದ ಮುಂದುವರಿದುದು]

ಮಣೆಗಾರರು ಗ್ರಾಮಕ್ಕೆ ಬಂದುಹೋದ''ರಂತೆ ಆ ಬಳಿಕ ಸುಬ್ರಾಯ ಭಟ್ಟನೆ ಧೈರ್ಯಮಾಡಿ ಒಂದು ದಿವಸ ಮಣೆಗಾರ ಕಿಸ್ತುಸೋಜರನ್ನು ಕಂಡು, ಸಲಾಮು ಮಾಡಿ "ನನ್ನ ಅರ್ಜಿಗೆ ಏನು ಹುಕುಂ ಮಾಡುತ್ತೀರಿ'' ಎಂದು ಕೇಳಿದನಂತೆ. ಸೋಜರು "ಯಾವ ಅರ್ಜಿ, ನನ್ನ ಹತ್ತಿರ ಬರಲೇ ಇಲ್ಲವಲ್ಲ'' ಎಂದರು. ಸರಿ-ಸುಬ್ರಾಯ ಭಟ್ಟನಿಗೆ ದಿಗಿಲು ಹಾರಿತು. 'ಶಾನುಭಾಗರ ರಕ್ಷೆ' ಎಂದು ಅವರ ಮೇಲೆ ಹಟತೊಟ್ಟನು. "ಅವರಿಗೆ ಮದುವೆ ಮಾಡಿಸುತ್ತೇನೆ'' ಎಂದು ಛಲತೊಡದಿ, ಯಾವುದೋ ಒಂದು ದರ್ಖಾಸ್ತಿನಲ್ಲಿ ಯಾರೋ ಒಬ್ಬರಿಂದ ಲಂಚತಿಂದರೆಂದು ತಳ್ಳಿ ಅರ್ಜಿಯನ್ನು ಕಲೆಕ್ಟರರಿಗೆ ಮಾಡಿದನು. ತಳ್ಳಿ ಅರ್ಜಿ ಇಂಥವರದೆಂದು ಶ್ಯಾನುಭಾಗರಿಗೆ ತಿಳಿಯಿತು "ಈ ನಸ್ರಾಣಿಸುಬ್ಬನ ಹೆಮ್ಮೆಹಾರಿಸ ತ್ತೇನೆ'' ಎಂದು ಅವರು ಹಟತೊಟ್ಟರು. ಸುಬ್ರಾಯನಿಗೆ ಅಂದಿನಿಂದ 'ಸಾಮ್ರಾಣಿ' ಎಂಬ ಹೆಸರು ಹೋಗಿ 'ನಸ್ರಾಣಿ' ಎಂಬ ಹೆಸರು ಕಾಯಂ ಆಯಿತು.

ಇತ್ತ ಸುಬ್ರಾಯಭಟ್ಟನಿಗೆ ಜಿದ್ದುಉಂಟಾಗಿ ತಹಶಿಲ್ದಾರ ದೊರೆಗಳವರ ಭೇಟಿಮಾಡಿದನು. ಗಾಣಿಗ ಸಂಕಪ್ಪನನ್ನು ಹಿಡಿದು ಒಳ್ಳೆ ಮೂರು ಹುಂಜಗಳನ್ನು ಅವರ ಮನೆಗೆ ಸಾಗಿಸಲಾಯಿತು. ಸರಿ, ಶ್ಯಾನುಭಾಗರಿಗೆ 'ಸದರಿ ಮತ್ತಿ ಮರಗಳನ್ನು, ಈ ಅರ್ಜಿದಾರನ ಮನೆ ಸುಟ್ಟು ಹೋದುದು ನಿಜವಾದಲ್ಲಿ ಕೊಡಿಸಬಹುದು.' ಎಂದು ಹುಕುಂ ದೊರೆಯಿತು. ಸುಬ್ರಾಯ ಭಟ್ಟನಿಗೆ ಕೋಡುಬಂದಿತು.

ಒಂದು ದಿವಸ ಅರ್ಜಿಯನ್ನು ತೆಗೆದುಕೊಂಡು ಶ್ಯಾನುಭಾಗರು ಸ್ಥಳ ತನಿಖೆಗೆ ಬಂದರು. ಮನೆ ಸುಟ್ಟ ವಿಚಾರ ತನಿಖೆಯಾಯಿತು. ಆ ಮೇಲೆ "ಯಾವ ಮರವನ್ನು ನೀವು ಅರ್ಜಿಯಲ್ಲಿ ನಮೂದಿಸಿದ್ದು?'' ಎಂದು ಅವನನ್ನು ಕರೆದುಕೊಂಡು ಸ್ಥಳಕ್ಕೆ ಹೋದರು. ಗ್ರಾಮದ ಗುಡ್ಡವನ್ನು ಇಬ್ಬರೂ ಸೇರಿದರು. ನಾಗಯ್ಯಶೆಟ್ಟರ ಸವಾರಿಯೂ ಅಲ್ಲಿಗೆ ಬಂದಿತ್ತು. ಸುಬ್ರಾಯ ಭಟ್ಟನು ಗೆಲುವಿಯಿಂದ ಹೊರಟವರ ರೀತಿಯಲ್ಲಿ ಬಂದಿದ್ದನು. ಬೆನ್ನಿಗೇ ಸಂಕಪ್ಪ ಮೋಗಿಯರು. ಆದರೆ ಅಲ್ಲಿ ಹೋಗಿ ನೋಡುವಾಗ ಇವರು ನಮೂದಿಸಿದ ಸದರಿ ಮತ್ತಿಮರಗಳೆರಡನ್ನು ಯಾರೋ ಕಡಿದು ಸಾಗಿಸಿಯಾಗಿತ್ತು.

"ಏ ದೇವರೆ ಈ ಮರಗಳನ್ನು ಕದ್ದು ಸಾಗಿಸಿದವರು ಯಾರು'' ಎಂದು ಸುಬ್ರಾಯ ದಿಗಿಲುಗೊಳ್ಳುವಂತಾಯಿತು. ಶಂಕರರಾಯರು ನಗುತ್ತ "ಹೇ . ಇದೋ . ಇದೆಂದು ಮೊದಲೇ ಹೇಳಿದ್ದರೆ ನಾನೇ ಹೇಳುತ್ತಿದ್ದೆನಲ್ಲ. ಕಳೆದ ತಿಂಗಳಲ್ಲಿ ಮೊಸೆಸುಬ್ಬನಿಗೆ ತಹಶಿಲ್ದಾರರೇ ಅದನ್ನು ಕೊಡಿಸಿದ್ದರು'-ಎಂದು ರಿಕಾರ್ಡನ್ನು ತೋರಿಸಿದರು. ನಸ್ರಾಣಿ ಸುಬ್ರಾಯನು ತಣ್ಣಗಾದನು.

ಗ್ರಾಮಕ್ಕೆ ಮರಳಿ ಬಂದು ವಿಚಾರಿಸಿದರೆ, ಇವನು ಅರ್ಜಿಮಾಡಿದ ತಿಂಗಳಿನ ಅನಂತರ ಮೊಸೆಸುಬ್ಬನು ಅರ್ಜಿಹಾಕಿದುದು. ಮೊಸೆಸುಬ್ಬನು ತನ್ನ ದನದ ಕೊಟ್ಟಿಗೆ ಸುಟ್ಟುಹೋಯಿತೆಂದು ಅವನ್ನು ಪಡೆದಿದ್ದನು. ಅವನು ಮುರಿಸಿಗಿಸಿ, ಹೊಸಕೊಟ್ಟಿಗೆಯನ್ನು ಹಾಕಿ ಆಗಿತ್ತು.

ಶಂಕರರಾಯರು ಗೆದ್ದವರ ದರ್ಪದಿಂದ "ಈ ನಸ್ರಾಣಿ ನನಗೆ ಬುದ್ಧಿ ಹೇಳುತ್ತಾನೇನು'' ಎಂದು ಕುಂದಾಪುರ ಸೇರಿದರು. ಮಳೆಗಾಲವೆಲ್ಲ ಸುಬ್ರಾಯಭಟ್ಟನ ಸೆಯುಲ್ಲದೆ ಸೋರುವ ಜೋಪಡಿಯೊಂದರಲ್ಲಿ ದಿನಕಳೆಯುವಂತಾಯಿತು. ಹೆಚ್ಚಿನ ಪಿಕಲಾಟಕ್ಕೆ ಅವನಲ್ಲಿ ಕಾಸಿಲ್ಲ. ಆದರೆ ಶ್ಯಾನಭಾಗರ ಕಾಲಿಗೆ ಉರುಳು ಹಾಕಿ ಸಿಕ್ಕಿಸದೆ ಬಿಡಲಾರೆ ಎಂದು ಅವನೂ ಪಣತೊಟ್ಟಿದ್ದಾನೆ.

ಈ ಶ್ಯಾನುಭಾಗರು ಸರಕಾರಿ ಕಾಡಿನಿಂದ ಈ ಮರಗಳನ್ನು ಕದ್ದು ಕುಂದಾಪುರಕ್ಕೆ ಸಾಗಿಸಿದ್ದಾರೆ''

'ಈ ದರ್ಖಾಸ್ತಿನಲ್ಲಿ ಇವರು ಗ್ರಾಮಸ್ಥರ ವಿಚಾರಣೆ ಮಾಡಿದ್ದೂ ಸುಳ್ಳು, ಕೇಳಿದ್ದೂ ಸುಳ್ಳು' ಹೀಗೆ ಒಂದರ ಮೇಲೆ ಒಂದು ಅರ್ಜಿಗಳನ್ನು ಹೊಸೆಯುತ್ತ ಬಂದನು. ಅಲ್ಲದೆ ಕೋರ್ಟುಗಳ ಪ್ರಭಾವದಿಂದ ತಹಶಿಲ್ದಾರರಿಗೆ ಶಂಕರರಾಯರ ಮೇಲೆ ಮನಸ್ಸು ಮುರಿಯಿತು. ತತ್ಕಾಲಕ್ಕೆ ಈ ತಹಶಿಲ್ದಾರರಾಗಿರುವಾಗ ಯಾವುದೂ ಬೇಡವೆಂದು ಶಂಕರರಾಯರು 'ನನಗೆ ಮೈ ಚೆನ್ನಾಗಿಲ್ಲ'' ಎಂದು ಆರು ತಿಂಗಳ ರಜೆಯ ಮೇಲೆ ಕುಳಿತಿದ್ದಾರೆ. ನಾಳೆ ಸ್ವಾಮಿಗೆ ಮುಂಬಡ್ತಿ ತನಕ ಒಂದು ಸರ್ಟಿಫಿಕೇಟು ಬೇಕಾಗಿದೆ ಎಂತಲೂ ಜನರ ಮಾತು ಇದೆ.

ನೋಟೀಸು

ಕೆನರಾ ಬೇಂಕ್ ಲಿಮಿಟೆಡ್ಡ್

ಕಾರ್ಕಳ

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲಬಾಬ್ತು ಹಣಗಳನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದೆ ಇರುವುದರಿಂದಲೂ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟಿಸು ಅವರು ಇಲ್ಲದಾಗಿ ಹಿಂತಿರುಗಿ ಬಂದ ದರಿಂದಲೂ ಇದೇ ಬರುವ ತಾ 18-5-39 ನೇ ಗುರುವಾರ ಯಾ ಬೇಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಸದ್ರಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಗಂಟೆ 12ಕ್ಕೆ ಸರಿಯಾಗಿ ಅವರು ಅಡವುಇಟ್ಟ ನಗಗಳನ್ನು ಬಹಿರಂಗವಾಗಿ ಏಲಂ ಮಾಡಿ ಹುಟ್ಟಿಬಂದ ಹಣದಿಂದ ಬೇಂಕಿನ ಸಾಲವನ್ನು ವಸೂಲುಮಾಡಿಕೊಳ್ಳಲಾಗುವುದು.

ಖಾತೆ ನಂ	ಹೆಸರು	ಸಾಲದ ಮೊಬಲಗು
೨೫ ನೇ	ಅಣ್ಣಪ್ಪ ಶೈ	ರೂ 45

Office of the Bank Karkala 20-4 1939 } C. Manjunath Kamath Agent.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಸದ್ವೈದ್ಯಶಾಲಾ (ರಿಜಿ.) ನಂಜನಗೂಡ.
(ಪ್ರೊಪ್ರೈಟರ್: ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರು)
ಇವರ ಅನುಭವ ಸಿದ್ಧೌಷಧಗಳು
ಕುಟುಂಬ ರಕ್ಷಿಣಿ

ಪ್ರತಿ ಸಂಸಾರಿಕರಿಗೂ, ಅತ್ಯಗತ್ಯವಾದ 8 ಬೇರೆ ಬೇರೆ ಅಮೋಘ ಔಷಧಗಳನ್ನು ವಿಸ್ತಾರವಾದ ಅನುಪಾನ ಪುಸ್ತಕದೊಡನೆ ಸೇರಿಸಲ್ಪಟ್ಟ ಅಂದವಾದ ಪೆಟ್ಟಿಗೆ
ಒಂದೇ ಒಂದು ಪೆಟ್ಟಿಗೆಯು ನಿಮ್ಮಲ್ಲಿದ್ದರೆ, ಪೂರ್ಣ ಅನುಭವಶಾಲಿಯಾದ ಓರ್ವ ವೈದ್ಯನು ನಿಮ್ಮಲ್ಲಿ ಯಾವಾಗಲೂ ಇದ್ದಂತೆಯೇ ಸರಿ. ಜೇಬಿನಲ್ಲಿಡಲು ಬಹಳ ಅನುಕೂಲವಾದ್ದು
ಅಂಚೆವೆಚ್ಚ ಉಚಿತ ಬೆಲೆ: 3-0-0
ನಮ್ಮ ಇತರ ಔಷಧಿಗಳನ್ನೊಳಗೊಂಡ ವಿಸ್ತೃತ ಕೆಟಲಾಗಿಗೆ ಇಂದೇ ಬರೆಯಿರಿ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST PAULS CHURCH,
Bolkuaje Post, S K
Dated 4th Jan 1939

To
THE JOINT MANAGERS,
The C. P. C. Co Ltd, Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for facilitating conveyance to all the Catholics bound to the Congress.

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Public

Renewing my thanks, I remain
Yours Sincerely,
(Sd) **P W Farias**

Sri Parshwanathaswami,
PANCHAKALYANA POOJA MAHOSTHAM,
Venoor, S Kanara, 1939

To,
THE JOINT MANAGERS,
The Combind Booking Agency, Mangalore.

Dear Sirs,

Please permit us to express our thanks on behalf of the above committee for the efficient Service rendered by your Combined Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodabidri Booking Clerk Mr B Krishnaiyya and also his other mates and Mr Raghavendra Upadhyaya who had specially come down from Mangalore to see to the needs of and comforts of the travelling Public Thanking you once again

We remain Yours faithfully

Venoor, Dated 6-2-'39 } (Sd) **B Chandappa Indra** (*Secretary, P M Council*) (Sd) **M. Jagathpal**; (Sd) **M Pachappa Shetty** (Sd) **Ananthraj Shetty** (*Members, Panchakalyana Mahosthamam Committee*)

JOINT MANAGERS,

The Combined Booking Agency,
MANGALORE

The Joint Booking Office,
KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER
A CRORE.

ESTD 1906
CANARA BANK,
LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಸುಕ್ಕಿಗೆ, ಥಂಡ, ಹಲ್ಲುವೇದನೆಗಳಿಗೂ ಎದೆನೋವು, ಛಾಯುಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದ ಬೇನೆ, ಪಕ್ಕಶೂಲೆ, ನೆಗಡಿಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುಂಬಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ)ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು.

ಮುಂಗಡ ವಾರ್ಷಿಕ ಚಂದಾ ರೂ. 2—0—0

ಸ್ವದೇಶಾಭಿಮಾನಿ

ಅಂಚೆ ಮೂಲಕ ರೂ. 2-13-0

Established 1906 Regd. No. M 340

ಸಂಪುಟ ೩೩] ತಾರೀಖು ೨೮-೪-೧೯೩೯ (28—4—1939) [ಸಂಚಿಕೆ ೧೭

THE BOMBAY LIFE ASSURANCE COMPANY, LTD.,

(ESTD: 1908.)

THE OFFICE

Which has provedits popularityby its progress.

Record of New Bussiness

Proposed.	Year.	Completed.
1,25,50,250	1934	1,04,88,750
1,50,48,915	1935	1,28,28,665
1,68,82,200	1936	1,36,01,500
1,72,579,75	1937	1,44,91,000
1,76,88,250	1938	1,44,91,000

1939 VALVATION YEAR.

Please take up a Policy Now and participate in Bonus.

To Insure or to Represent it pays you to consult us:-

Apply to — **KOCHIKAR BROTHERS, LIIMTED,**

Madras Branch Secretaries,

The Bombay Life Assurance Co., Ltd.,

The Bombay Life Building : : : Gandhinagar, UDIPI

or any of our following offices:

Post Box No. 337, Mount Road, Madras.

Visweshwarapuram Circle, Bangalore City.

Charni Road, Girgaum, BOMBAY 4.

Car Street, Mangalore.

Puthiyara, Calicut.

Central Station Road, Trivandrum.

Ottapalam, S. Malabar.

MAKE LIFE WORTH-LIVING!

Indigestion – Insomnia – Dry Cough – Nervousness – Weak Heart &c.

these make you wiery of Life!

CONSULT US AND BUY YOUR LIFE'S HAPPINESS!

Oils – that cool the brain and induce sleep

Lehas – that build-up your wasted system

Asavas – that regenerate your jaded nerves

All Genuine Ayurvedic Preparations-

-from this huge Ayurvedic Concern of a Century Standing –

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು - ನರಗಳ ಅಬಲತೆ - ದುರ್ಬಲ ಹೃತ್ಕ್ಲೇಶ - ಇವುಗಳು

ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು

ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು

ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, — ದ. ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 5—5 1939 ತಾರೀಕು ೫ ೫—೧೯೩೯



ಆನೆವಟ್ಟಿಯಲ್ಲಿರುವ ಮಧು ಕೈಟಭೇಶ್ವರ ದೇವಾಲಯ
ಇದು ಚಾಲುಕ್ಯ ವಾಸ್ತುಶಿಲ್ಪದ ಒಂದು ಉತ್ಕೃಷ್ಟ ಮಾದರಿಯಾಗಿದೆ

Photo by K. S. Karanth

ಸಚಿತ್ರ

ವಾರಪತ್ರಿಕೆ

THE NOBEL PRIZE WITH REGARD TO MALARIA

In the history of humanity malaria has played a more important part than any other endemic malady, for it rages continually over a large part of the globe.

It is most widespread and most dangerous in tropical and subtropical countries, but it is frequently met with in temperate regions and even here and there in cold climates.

From time immemorial the ideas of malaria and marshes have been associated in an indissoluble manner, so much so that malaria is often known as "marsh fever" but unfortunately this malady is not always restricted to marshy regions.

The great interest afforded by the fight against [illegible] throughout the world is revealed by the fact that the Nobel Prize for the Medicine has [illegible] been awarded for discoveries in connection with the struggle against malaria the first time in 1902 [illegible] Sir Ronald Ross who discovered that [illegible] was transmitted by mosquitos from [illegible] to the healthy subject [illegible] the second time [illegible] Laveran [illegible] malaria parasites [illegible] subject

[illegible]

The fight against malaria and the suppression of this malady therefore present [illegible] and economic interest of first order moreover the greatest attention is paid to these points. It is hoped to overcome malaria on the one hand by destroying the malaria mosquitos [illegible] [illegible] Malaria [illegible] ague [illegible] malaria [illegible] should [illegible] additional treatment is applied but in the event of a relapse the treatment is repeated as before.

Mal E 54

ಹೃದಯ ಬಡಿತವನ್ನು ತಿಳಿಯ ಲಿಕ್ಕೆ ಯಂತ್ರ ಸಾಧನ

[illegible] ಒರಟಾದ ರೀತಿ [illegible] ಮೊದಲಿಂದ ಲಕ್ಷಣಗಳ [illegible] ಸ್ವಭಾವಗಳನ್ನು [illegible] ವುದು

ಪಂಥಗೆಲ್ಲುವುದಕ್ಕೆ ಮೀನು ನುಂಗಿದ

ಅಮೇರಿಕದ ಹಾರ್ವರ್ಡ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಒಂದು ಪ್ರಸಂಗದಲ್ಲಿ ಒಂದು ವಿಚಿತ್ರವ ಘಟನೆ [illegible] ಯಾವ ವಿದ್ಯಾರ್ಥಿ ಮೂರಂಗುಲ ಉದ್ದದ ಗೋಲ್ಡ್ ಫಿಶ್ ಎಂಬ ಮೀನನ್ನು ಅದು ಜೀವದಿಂದಿರುವಾಗಲೇ ನುಂಗಿಬಿಡುವನೋ ಅವನಿಗೆ ಮೂರು [illegible] ಎಂಬುದ [illegible] ವಿದ್ಯಾರ್ಥಿಗಳ [illegible] ದಿವಸಗಳ [illegible]

ಚಂದ್ರಮಂಗಳಗಳಲ್ಲಿ ಜಂತುಜೀವಿಗಳಿವೆ

[illegible] ಚಂದ್ರ ಮಂಗಳಗಳಲ್ಲಿನ ವಾತಾವರಣವು ಜಂತುಜೀವಿಗಳ ಹುಟ್ಟು ಬೆಳವಣಿಗೆಗೆ ಅನುಕೂಲವಲ್ಲದಷ್ಟು ಶೀತವಾಗಿರುವುದರಿಂದ ಅಲ್ಲಿ ಯಾವ ಜೀವಿಗಳ ಇರಲಿಕ್ಕೇ ಇಲ್ಲವೆಂದು ಈ ವರೆಗಿನ ವಿಜ್ಞಾನಿಗಳ ಕಲ್ಪನೆಯಾಗಿತ್ತು ಆದರೆ ರೋಬರ್ಟ್ ಬಾರ್ಕರ್ ಎಂಬವರು ಮಾಡಿದ ಶೋಧನೆಗಳ ಮೇರೆಗೆ ಇವುಗಳಲ್ಲಿ ಮಂಗಡಗಳೂ ವಿಜ್ಞಾನಪಕ್ಷಿಗಳೂ ನೆಲಸಿರಬಹುದಾಗಿ ಕಂಡುಬರುತ್ತದೆ

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ತಾರೀಕು ೫—೫—೧೯೩೯ | ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 5—5—1939

★ ಪ್ರಜಾಸತ್ತಾತ್ಮಕ ರಾಜ್ಯಗಳ ಮೇಲೆ ತ್ರಿಮೂರ್ತಿಗಳ ಧಾಳಿ? ★

ಫ್ರಾಂಕೊ — ಹಿಟ್ಲರ್ — ಮುಸಲೋನಿ

ಗೋರಿಂಗ್ ಗೂಬೆಲ್ಸರ ಕಾರ್ಯಸಂಚಾಲನ

ಇಟಲಿಯ ಜರ್ಮನ್ ಆಫೀಸರರ ಕೈಗೊಂಬೆ

ವಸಾಹತುಗಳ ಆಫೀಸರರಿಗೆ ಆಜ್ಞೆ

ತ್ರಿಮೂರ್ತಿಗಳ ಧಾಳಿ

ಗೋರಿಂಗನ ಕಾರ್ಯಸಂಚಾಲನ

ಲಿಬ್ಯಕ್ಕೆ ಜರ್ಮನ್ ಸೈನ್ಯ

ಅಲ್ಲಿಂದ ಗೋರಿಂಗನು ಲಿಬ್ಯದಲ್ಲಿರುವ ಇಟಲಿಯನ್ ಸೈನ್ಯವನ್ನು ಪರೀಕ್ಷಿಸಲು ಟ್ರಿಪೋಲಿಗೆ ತೆರಳಿದನು. ಅಲ್ಲಿಯ ಸೈನ್ಯಗಳನ್ನು ಪರೀಕ್ಷಿಸುತ್ತಾ ಫ್ರೆಂಚ ವಸಾಹತುಗಳ ಮೇಲೆ ಇಟಲಿಯು ಧಾಳಿಮಾಡ ಬೇಕಾದರೆ ೩೦೦,೦೦೦ ಸೈನಿಕರಾದರೂ ಬೇಕೆಂದು ಸೂಚಿಸಿರುವನು. ಗೋರಿಂಗನು ೬೦,೦೦೦ ಇಟಲಿಯನ್ ಸೈನಿಕರನ್ನು ರೋಡ್ಸ್ ದ್ವೀಪಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತಿರುವನು. ಈ ಸೈನ್ಯವು ಎಷ್ಟು ಸಜ್ಜಾಗಿರವುದೆಂದರೆ ...ದ್ದವನ್ನೇ ... ಹೊರಡುವ ಸ್ಟೀಮರಂತೆ ಸನ್ನಾಹ ಯುಕ್ತವಾಗಿರುವುದು. ಈ ಸೈನ್ಯವು ಸಿರಿಯಾ, ಪೆಲೆಸ್ತೀನ್ ಯಾ ಇಜಿಪ್ತ ದೇಶಗಳ ಮೇಲೆ ಧಾಳಿ ಗೈಯಬಹುದೂ ಎಂಬ ಸಂಶಯವು ಅಲ್ಲಲ್ಲಿ ಉತ್ಪನ್ನವಾಗಿದೆ. ಗ್ರೀಸ ದೇಶವು ಇದನ್ನು ಕೇಳಿ ಬಹಳ ಕಳವಳಗೊಂಡಿದೆ. ಇದಲ್ಲದೆ ಜರ್ಮನಿಯಿಂದ ಒಂದೇ ಸವನೇ ಸೈನ್ಯವು ಬಂದು ಲಿಬ್ಯವನ್ನು ಸೇರುತ್ತಿದೆ. ಇಷ್ಟರ ವರೆಗೆ ೩೫,೦೦೦ ಜರ್ಮನ್ ಸೈನಿಕರು ಬಂದು ಸೇರಿರುವರು.

ಗೊಬೆಲ್ಸನ ಕಾರ್ಯಸಂಚಾಲನ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ. ಶಿವಪೇಟೆ. ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

DIAMONDS! DIAMONDS
BEST BRILLIANCY!
K. R. K. SHET
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ಕೆ. ಆರ್. ಕೆ. ಶೆಟ್, ...,
ಮಂಗಳೂರು.

ಸಮಾಚಾರ-ಸಂಗ್ರಹ

ಸಂಸ್ಥಾನಾಧೀಶರಿಗೆ ಹಿಟ್ಲರನ ಬೋಧನೆ.

ನಾಝೀ ತತ್ವಗಳ ಪ್ರಚಾರಕ್ಕಾಗಿ ಹಿಟ್ಲರನು ಹಿಂದುಸ್ಥಾನಕ್ಕೆ ಕೆಲವು ಮತೋಪದೇಶಿಗಳನ್ನು ಕಳುಹಿಸಿಕೊಟ್ಟಿರುವನು. ಅವರು ಎಲ್ಲಿ ತಮ್ಮ ಬೇಳೆ ಬೆಳೆಯುತ್ತದೋ ಅಲ್ಲಿಯೇ ತಮ್ಮ ಉಪದೇಶ ಪಾಂಡಿತ್ಯವನ್ನು ತೋರಿಸುವರು. ಹಿಟ್ಲರನ ಕಣ್ಣು ವಿಶೇಷವಾಗಿ ಇಲ್ಲಿಯ ಸಂಸ್ಥಾನಾಧೀಶರಮೇಲೆ ಇರುತ್ತದೆ. 'ನಮ್ಮಂತೆ ನೀವೂ ಆರ್ಯರು. ನಮ್ಮ ಆಳಿಕೆಗೂ ನಿಮ್ಮ ಆಳಿಕೆಗೂ ಅಂತರವು ಕಂಡುಬರುವುದಿಲ್ಲ. ಆ ಕಾರಣ ನಾವೂ ನೀವೂ ಒಂದಾಗಿರೋಣ' ಎಂದೇ ಈ ಉಪದೇಶಿಗಳು ಸಂಸ್ಥಾನಾಧೀಶರನ್ನು ಬೋಧಿಸುವರು. ಸಂಸ್ಥಾನಾಧೀಶರು ಹಿಟ್ಲರನ ಮಾತುಗಳಿಗೆ ಮರುಳಾಗಿ ಇದ್ದುದನ್ನು ಕಳೆಕೊಳ್ಳುವರೋ ನೋಡಲಿಕ್ಕಿದೆ. ನಾಝೀ ತತ್ವೋಪದೇಶಗಳ ಪ್ರಧಾನ ಕಾರ್ಯಾಲಯವು ಕಲ್ಕತ್ತದಲ್ಲಿ ತೆರೆಯಲ್ಪಟ್ಟಿದೆ. ಡಾಕ್ಟರ ಕ್ಲಾಸ ಥಾಮ್ಸನ್ ಎಂಬವರು ಈ ಕಾರ್ಯಾಲಯದ ಪ್ರಧಾನ ಕಾರ್ಯಕರ್ತರಾಗಿದ್ದಾರೆ.

ಪಾಯ್ಸರಾಯರು ಮಂತ್ರಿಗಳಿಗೆ ಹೇಳಬೇಕು!

ಏನನ್ನು? ಅವರು ಹಿಂದುಸ್ಥಾನದಲ್ಲಿ ಮದ್ಯನಿಷೇಧ ಮಾಡಬಾರದಾಗಿ—ಹೀಗೆ ಗ್ರೇಟ ಬ್ರಿಟನ ಫಂಡ ದಿ ಈಸ್ಟ ಎಂಬ ಪತ್ರಿಕೆಯು ಸೂಚಿಸಿದೆ. ಕಾಂಗ್ರೆಸ ಮಂತ್ರಿಮಂಡಲಗಳ ಮದ್ಯನಿಷೇಧ ಕಾರ್ಯಕ್ರಮದಿಂದ ಒಂದೊಂದು ಪ್ರಾಂತ್ಯದಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತದೆ. ಈ ನಷ್ಟವನ್ನು ತುಂಬಿಸಲಿಕ್ಕೆ ಪ್ರಾಂತಿಕ ಸರಕಾರಗಳು ಹೊಸ ಕಂದಾಯಗಳನ್ನು ಹೊರಿಸಬೇಕಾಗುತ್ತದೆ. ಇದರಿಂದ ದೇಶದ ಶಾಂತಿಗೂ ನೆಮ್ಮದಿಗೂ ಭಂಗವಾಗುತ್ತದೆ. ಆದ್ದರಿಂದ ಪಾಯ್ಸರಾಯರು ಕಾಂಗ್ರೆಸ ಮಂತ್ರಿಮಂಡಲಗಳಿಗೆ ತಿಳುವಳಿಕೆ ಹೇಳಿ ಅವು ಮದ್ಯನಿಷೇಧವನ್ನು ಮುಂದೊತ್ತದಹಾಗೆ ಮಾಡಬೇಕೆಂದು ಈ ಪತ್ರಿಕೆಯ ಸೂಚನೆಯಾಗಿದೆ. ಈ ಸೂಚನೆಯ ಹಿಂದೆ ವಿಲಾಯತಿಯ ಮದ್ಯವ್ಯಾಪಾರಿಗಳ ಸ್ವಾರ್ಥವಿರುವುದಿಲ್ಲವಷ್ಟೆ!

ಕಾಂಗ್ರೆಸಿನಲ್ಲಿ ವಿಶ್ವಾಸವಿಡಿರಿ

ನಮ್ಮ ದೇಶದ ಅಲ್ಪ ಸಂಖ್ಯಾಕ ಕ್ರೈಸ್ತರ ಕುರಿತು ಬೊಂಬಾಯಿಯ ಕ್ರೈಸ್ತ ಜರ್ನಲಿನಲ್ಲಿ ಒಂದು ಲೇಖನವನ್ನು ಬರೆಯುತ್ತಾ ಡಾಕ್ಟರ ಯಚ್. ಸಿ. ಮುಖರ್ಜಿಯವರು— 'ಕಾಂಗ್ರೆಸು ಮಂತ್ರಿಮಂಡಲಗಳು ಇಷ್ಟುಕಾಲ ಆ ಪ್ರಾಂತಗಳಲ್ಲಿ ಅಧಿಕಾರವನ್ನು ನಡೆಯಿಸುತ್ತಾ, ಅವು ಕ್ರೈಸ್ತರ ಧರ್ಮಾಚರಣೆಗೆ ಎಲ್ಲಿಯಾದರೂ ವಿಘ್ನವನ್ನು ತಂದ ಘಟನೆಯನ್ನು ನಾನು ಓದಿರುವುದಿಲ್ಲ. ಕಾಂಗ್ರೆಸು ಬಹು ಉದಾರ ಸಂಸ್ಥೆ. ಅದು ತನ್ನ ಸದಸ್ಯರಿಗೆ ಕೊಡುವಷ್ಟು ಧಾರ್ಮಿಕ ಸ್ವಾತಂತ್ರ್ಯವನ್ನು ಬೇರೆ ಯಾವ ರಾಜಕೀಯ ಸಂಸ್ಥೆಯೂ ಕೊಡುವುದಿಲ್ಲ. ಆದ್ದರಿಂದ ಕ್ರೈಸ್ತರೆಲ್ಲರು ಕಾಂಗ್ರೆಸಿಗೆ ಸೇರಬೇಕು' ಎಂದಿರುವರು.

ಕಿಸಾನರ ಸತ್ಕಾರದ ಉತ್ತರ—ಪ್ರಧಾನರಿಗೆ

ಬಂಗಾಳದ ಪ್ರಧಾನ ಮಂತ್ರಿ ನಾಮದಾರ ಫಜ್ಲುಲ್ ಹಕ್ಕರು ತಮ್ಮ ಸಂಗಾತಿಗಳೊಂದಿಗೆ ಟಾಂಗೇಲ ಎಂಬ ಗ್ರಾಮಕ್ಕೆ ಹೋಗಿದ್ದರು. ಅಲ್ಲಿ ಕಿಸಾನರ ಒಂದು ಸಭೆ ಕೂಡಿದ್ದಿತು. ಪ್ರಧಾನರು ಭಾಷಣವನ್ನು ಆರಂಭಿಸುವಾಗಲೇ ಗಲಭೆಯಾಗತೊಡಗಿತು! ಅವರ ಭಾಷಣ ವಿಷಯವು ಕಿಸಾನರಿಗೆ ರುಚಿಸಲಿಲ್ಲ. "ಕಿಸಾನರು ಮಂತ್ರಿಮಂಡಲದ ಮೇಲೆ ವಿಶ್ವಾಸವನ್ನಿಡಬೇಕು. ಅವರಿಗೆ ಬೇಕಾದುದನ್ನೆಲ್ಲ ಮಂತ್ರಿಮಂಡಲವು ಮಾಡುತ್ತದೆ" ಎಂದು ಪ್ರಧಾನರು ಹೇಳುತಿದ್ದ ಹಾಗೆ ನೂರಾರು ಮಂದಿ ಸಭೆ ಬಿಟ್ಟುಹೋದರು. ನಿರಾಶರಾಗಿ ಪ್ರಧಾನರು ತಮ್ಮ ಭಾಷಣವನ್ನು ಅರ್ಧದಲ್ಲೇ ಮುಗಿಸಬೇಕಾಯಿತು. ಉಳಿದ ಮಂತ್ರಿಗಳು ಮಾತನಾಡಲೇ ಇಲ್ಲ. ಸಭೆಯಲ್ಲಿ ಸೇರಿದವರೆಲ್ಲರೂ ಮುಸಲ್ಮಾನರಾಗಿದ್ದರು. 'ಮುಸಲ್ಮಾನರ ಧರ್ಮವು ಆಪತ್ತಿನಲ್ಲಿದೆ' ಎಂದು ಫ. ಹಕ್ಕರು ಹೇಳಿದರೂ ಅದು ಸಭಿಕರ ಮೇಲೆ ಪರಿಣಾಮವನ್ನುಂಟುಮಾಡಲಿಲ್ಲ. ಉಪವಾಸಿ ಹೊಟ್ಟೆಗಳಿಗೆ ಪರೋಪದೇಶ ಪಾಂಡಿತ್ಯವು ಹೇಗೆ ರುಚಿಸುತ್ತದೆ?

ಜಪಾನಿನ ಉರಿ—ಚೀನದಲ್ಲಿ ಕಾರಿಕೆ!

ರಷ್ಯ ಇಂಗ್ಲಾಂಡುಗಳೊಳಗೆ ಸಖ್ಯವುಂಟಾಗುವುದನ್ನು ಕೇಳಿ ಜಪಾನಿನ ಹೊಟ್ಟೆ ಉರಿಯತೊಡಗಿದೆ. ರಷ್ಯ-ಬ್ರಿಟನ ಒಪ್ಪಂದವಾಗಿ ಅಮೇರಿಕವು ಇವುಗಳ ಪಕ್ಷಕ್ಕೆ ಕೂಡಿಬಿಟ್ಟರೆ ಜಪಾನಿಗೆ ಮೂರುಕಡೆಗಳಿಂದ ಶತ್ರುಗಳಾಗುವರು. ಆಗ ಚೀನದಲ್ಲಿ ಅದರ ಯಾವ ಬೇಳೆಯೂ ಬೇಯುವುದಿಲ್ಲ. ಅದು ಇಟೆಲಿ ಜರ್ಮನಿಗಳೊಂದಿಗೆ ಪರಸ್ಪರ ಸಹಾಯದ ಒಪ್ಪಂದ ಮಾಡಿಕೊಂಡರೂ ಫಲವಾಗದು. ಯಾಕೆಂದರೆ ಇಟೆಲಿ-ಜರ್ಮನಿಗಳಿಗೆ ಯುರೋಪದಲ್ಲೇ ತುಂಬ ಕೆಲಸಗಳಿರುವಾಗ ಅವು ಜಪಾನಿನ ಕಡೆಗೆ ದೃಷ್ಟಿ ಬಿಡಲಾರವು. ಚೀನವು ಇಂಗ್ಲಾಂಡು ರಷ್ಯ ಅಮೇರಿಕಗಳ ಸಹಾನುಭೂತಿಯನ್ನು ಸಂಪಾದಿಸಿರುವುದರಿಂದ ಈ ನಾಲ್ಕು ರಾಜ್ಯಗಳ ಪರಸ್ಪರ ಒಡಂಬಡಿಕೆಯಿಂದ ಜಪಾನಿಗೆ ಹಾನಿಯೇ ಉಂಟು. ಆದಕಾರಣ ಈಗ ಅದು ಆ ರಾಜ್ಯಗಳ ಮೇಲೆ ನಂಜುಕಾರತೊಡಗಿದೆ.

ಜಗತ್ತಿನ ಪ್ರಬಲರಾಷ್ಟ್ರ

ಸೈನಿಕ ದೃಷ್ಟಿಯಿಂದ ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರವು ರಷ್ಯವೆಂದು ಪ್ರಕಟವಾಗಿದೆ. ರಷ್ಯದ ಹತ್ತಿರ ೧೦೦೦೦ ಟ್ಯಾಂಕುಗಳು, ೧೫೦೦೦ದಿಂದ ೧೭೦೦೦ದ ವರೆಗೆ ಯುದ್ಧವಿಮಾನಗಳು ಇರುವವಂತೆ. ಸಂಖ್ಯೆಯಿಂದ ಮಾತ್ರವಲ್ಲ, ಗುಣದಿಂದಲೂ ರಷ್ಯದ ಸೇನಾಬಲವು ಯುದ್ಧೋಪಕರಣಗಳು ಅತ್ಯುತ್ಕೃಷ್ಟವಾಗಿರುವುದು.

ಹಿಟ್ಲರ ಖೂನಿಗೆ ಪ್ರಯತ್ನ.

ಕಳೆದ ಬಾರಿ ವಿಲ್ ಹೆಲ್ಮ ಕ್ಷೇತ್ರದಲ್ಲಿ ಭಾಷಣ ಕೊಡುತಿದ್ದಾಗ ಹಿಟ್ಲರನು ಒಂದು ಗಾಜಿನ ಬಳೆಯ ಹಿಂದೆ ನಿಂತು ಭಾಷಣಕೊಟ್ಟಿದ್ದನು. ಆ ಸಮಯ ಅವನಿಗೆ ಉಬ್ಬಸದ ಬಾಧೆಯಿದ್ದುದರಿಂದ ಶೀತವಾಗಬಾರದೆಂದು ಹಾಗೆ ಇಟ್ಟಿದ್ದಾಗಿ ಹೇಳುವರಾದರೂ, ನಿಜವಾದ ಕಾರಣ ಬೇರೆಯಾಗಿತ್ತೆಂದು ಈಗ ತಿಳಿದುಬರುತ್ತದೆ. ವಿರೋಧಿಗಳು ಅವನ ಹತ್ಯೆಮಾಡುವರೆಂದು ಆಗ ಭಯವಿದ್ದಿತ. ಭಾಷಣಕೊಡುವಾಗ ಯಾರಾದರೂ ವಿರೋಧಿಗಳು ಗುಂಡು ಹಾರಿಸಿ ಅವನನ್ನು ಕೊಲ್ಲದಹಾಗೆ ಅವನು ಒಡೆಯದ ಗಾಜಿನ ಹಿಂದೆನಿಂತು ಭಾಷಣ ಮಾಡಿದ್ದನೆಂದು ಈಗ ಗೊತ್ತಾಗುತ್ತದೆ.

ಅಬಿಸೀನಿಯದ ಇಟಾಲಿಯಾನರಿಗೆ ಹಬಸೀ ಸೂಳೆಗಳು!

ಅಬಿಸೀನಿಯವನ್ನು ಇಟಾಲಿಯನಸಾಮ್ರಾಜ್ಯಕ್ಕೆ ಸೇರಿಸಿಕೊಂಡ ಅನಂತರ, ಅಲ್ಲಿ ಇಟಾಲಿಯನ ಹಬಸೀ ಸಂಬಂಧರಿಂದ ಮಿಶ್ರಜಾತಿಯುಂಟಾಗದ ಹಾಗೂ ವಂಶ ಮರ್ಯಾದೆಯನ್ನು ಕಾಪಾಡಿಕೊಳ್ಳಲಿಕ್ಕೂ ಮುಸಲೋನಿ ತುಂಬಾ ಜಾಗ್ರತೆ ತೆಗೆದುಕೊಂಡಿದ್ದಾನೆ. ಆದರೆ ಅದೀಸ ಅಬಾಬಾದಲ್ಲಿ ಎಷ್ಟು ಮಂದಿ ಇಟಾಲಿಯನ ಪುರುಷರಿದ್ದಾರೋ ಅಷ್ಟುಮಂದಿ ಸ್ತ್ರೀಯರಿರುವುದಿಲ್ಲ. ಆದ್ದರಿಂದ ಅದೀಸ ಅಬಾಬಾಕ್ಕೆ ಹೋದ ಇಟಾಲಿಯನ ಪುರುಷರ ಉಪಯೋಗಕ್ಕಾಗಿಯೇ ಮುಸಲೋನಿ ೧೫೦ ಮಂದಿ ಹಬಸೀ ಸೂಳೆಯರನ್ನೂ, ಕೆಲವು ನೂರು ಬಿಳಿ ಸೂಳೆಯರನ್ನೂ ಸಾಕಿದ್ದಾನೆ! ಈ ಸೂಳೆಗೇರಿಗಳಿಗೆ ಪ್ರವೇಶವಾಡುವ ಅಧಿಕಾರ ಕೇವಲ ಇಟಾಲಿಯನರಿಗೆ ಮಾತ್ರ ಇರುತ್ತದೆ. ಈ ಸೂಳೆ ಸಂಬಂಧವನ್ನಲ್ಲದೆ ಇಟಾಲಿಯಾನರ ಬೇರೆ ಯಾವ ಹಬಸೀ ಸ್ತ್ರೀಯನ್ನು ಮದುವೆಯಾಗುವುದಾಗಲೀ, ಅವಳನ್ನು ಇಟ್ಟುಕೊಳ್ಳುವುದಾಗಲೀ ಕೂಡದು.

ಸುಂಕಕೊಡದಿದ್ದುದಕ್ಕೆ ಶಿಕ್ಷೆ

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸುಪ್ರೀಮ್‌ಕೋರ್ಟ ನ್ಯಾಯಾಧೀಶ ಮಿ. ಎಡ್ವರ್ಡ ಲೇಮನರ ಹೆಂಡತಿ, ಸುಂಕ ಕೊಡದೆ ಫ್ರಾನ್ಸಿನಿಂದ ಕೆಲವು ಬಟ್ಟೆಗಳನ್ನು ತರಿಸಿದ್ದಾಳೆಂದು ಫಿರ್ಯಾದಿ ಆಗಿ ಮೂರು ತಿಂಗಳ ಶಿಕ್ಷೆ. ಆಕೆ ಸನ್ನಡತೆಯ ಬಗ್ಗೆ ಜಾಮೀನು ... ಈ ಶಿಕ್ಷೆ ವಿಧಿಸುವಾಗ ಆಕೆ ಬಡಿದು ತಪ್ಪಿ ಬಿದ್ದಳಂತೆ.

ರೋಗಿಯ ಚಿಕಿತ್ಸೆಗೆ ಬಂದ ಡಾಕ್ಟರನ ಮೃತ್ಯು

ಜರ್ಮನಿಯ ಡಾಕ್ಟರ ಕೋಜ ಎಂಬವ ವೃದ್ಧರೋಗಿಯ ಚಿಕಿತ್ಸೆಗೆ ಹೋಗಿದ್ದ. ರೋಗಿಗೆ ಪ್ರಾಣಾಂತಿಕವಾಗಿತ್ತು. ಹೋದ ಹಾಗೆ ಇವನು ಬದುಕಲಾರ ಬದುಕಲಾರ ಎನ್ನುತಿದ್ದ ಹಾಗೆಯೇ ಡಾಕ್ಟರನು ರೋಗಿಯ ಹಾಸಿಗೆಯ ಮೇಲೆ ಬಿದ್ದು ಹೃದಯಕ್ರಿಯೆ ನಿಂತುದರಿಂದ ಸತ್ತುಹೋದನು.

ನಿರುದ್ಯೋಗ ನಿವಾರಣೆಯ ಮದ್ರಾಸ ಸರಕಾರದ ಯೋಜನೆ.

ಬರುವ ವರ್ಷದಿಂದ ಮದ್ರಾಸ ಪ್ರಾಂತ್ಯದ ೫೦ ಮಂದಿ ಶಿಕ್ಷಿತರಿಗೆ ಉದ್ಯೋಗವನ್ನು ಕೊಡುವ ಒಂದು ಯೋಜನೆಯನ್ನು ಮದ್ರಾಸು ಸರಕಾರವು ತಯ್ಯಾರಿಸಿರುವುದಾಗಿ ನಾಮದಾರ ವಾರ್ಕಿಯವರು ಸೇಲಮಿನ ಒಂದು ಸಭೆಯಲ್ಲಿ ಹೇಳಿರುವರು. ಪ್ರತಿವರ್ಷ ೫೦—೫೦ರಂತೆ ನೇಮಿಸಲ್ಪಡುವ ಈ ಶಿಕ್ಷಿತರು ಹಳ್ಳಿಗಳಿಗೆ ಹೋಗಿ, ಅಲ್ಲಿಯೇ ಇದ್ದು ಹಳ್ಳಿಗರಿಗೆ ಓದು ಬರಹ, ಆರೋಗ್ಯ, ಶೌಚ ಮೊದಲಾದ ಸಂಗತಿಗಳನ್ನು ಹೇಳಿಕೊಟ್ಟು, ಹಳ್ಳಿಗಳನ್ನು ಒಳ್ಳೆಸ್ಥಿತಿಗೆ ತರಬೇಕು. ಇವರ ಪೈಕಿ ಪದವೀಧರರಿಗೆ ತಿಂಗಳಿಗೆ ೫೦ ರೂಪಾಯಿ ಮತ್ತು ಇತರರಿಗೆ ೨೦ ರೂಪಾಯಿಯಂತೆ ಸಂಬಳ ದೊರೆಯುವುದು. ಇದು ಕೆಲಸಗಾರರ ಯೋಗ್ಯತೆಗೆ ಕಡಿಮೆಯಾಗಿರುವುದಾದರೂ, ನಿರುದ್ಯೋಗಿಗಳು ಸೇವಾದೃಷ್ಟಿಯಿಂದ ಈ ಹೊಸ ಉದ್ಯೋಗವನ್ನು ಸ್ವೀಕರಿಸಿ ಯೋಜನೆಯ ಸಫಲತೆಗೆ ಕಾರಣೀಭೂತರಾಗುವರೆಂದು ನಾಮದಾರ ವಾರ್ಕಿಯವರು ಆಶಿಸುತ್ತಾರೆ. ಈ ಯೋಜನೆಗೆ ವರ್ಷಕ್ಕೆ ೬೮೦೦೦ ರೂಪಾಯಿಗಳಂತೆ ಖರ್ಚಿಗೆ ಬೇಕಾಗುವುದು. ಮೂರು ವರ್ಷಗಳಲ್ಲಿ ಬಹಳ ಮಂದಿ ಶಿಕ್ಷಿತ ನಿರುದ್ಯೋಗಿಗಳಿಗೆ ಇದರಿಂದ ಜೀವನೋಪಾಯವಾಗುತ್ತದೆ.

ದಕ್ಷಿಣ ಆಫ್ರಿಕದ ಹಿಂದೀಯರು.

ದಕ್ಷಿಣ ಆಫ್ರಿಕದ ಯೂನಿಯನ್ ಸರಕಾರದ ಕಡೆಯ ನೀತಿಯನ್ನು ಯುರೋಪಿಯನರು ಹಾಗೆ ಅಭಿಪ್ರಾಯಪಟ್ಟರೆ ಆ ಕಡೆಯ ಹಿಂದೀಯರನ್ನು ಅಲ್ಲಿಂದ ಹೊರಗಟ್ಟಬಹುದು. ದಕ್ಷಿಣ ಆಫ್ರಿಕ ಸರಕಾರದ ಆಲೋಚನೆಗೆ ಭಾರತೀಯರ ಮತ್ತು ಹಿಂದೀ ಸರಕಾರದ ತೀವ್ರ ವಿರೋಧವಿರುತ್ತದೆ. ಈ ಆಲೋಚನೆಯು ತುಂಬಾ ಅನ್ಯಾಯದ್ದಾಗಿದೆ. ಆದ್ದರಿಂದ ಕಾಂಗ್ರೆಸೂ ದಕ್ಷಿಣ ಆಫ್ರಿಕ ಹಿಂದೀಯರ ಕಷ್ಟದಲ್ಲಿ ಕ್ರಿಯಾತ್ಮಕ ಸಹಾನುಭೂತಿಯನ್ನು ತೋರಿಸಬೇಕೆಂದು ಸ್ವಾಮಿ ಭವಾನೀದಯಾಳರು ಅಜಮೀರದಿಂದ ವಿನಂತಿಮಾಡಿಕೊಂಡಿದ್ದಾರೆ.

ಬಿಹಾರಗವರ್ನರರ ಪ್ರಕಟಣೆ

ಕರನಿರಾಕರಣ ಅಥವಾ ಅಸಹಕಾರ ಚಳವಳಿಯ ... ಸರಕಾರಿ ಉದ್ಯೋಗದಿಂದ ನಿವೃತ್ತರಾದ, ರಾಜಿನಾಮೆಕೊಟ್ಟ, ತೆಗೆದುಹಾಕಲ್ಪಟ್ಟವರನ್ನು ಪುನಃ ಉದ್ಯೋಗಕ್ಕೆ ತೆಗೆದುಕೊಳ್ಳಲಿಕ್ಕೆ ಸರಕಾರದ ಆಕ್ಷೇಪವಿರುವುದಿಲ್ಲ. ಅಂಥವರನ್ನು ನೇಮಿಸುವಾಗ ಅವರ ಯೋಗ್ಯತಾಪರೀಕ್ಷೆಗಾಗಿ ಪಬ್ಲಿಕ ಸರ್ವಿಸ ಕಮಿಶನನ್ನು ಕೇಳಬೇಕಾದ್ದೂ ಇಲ್ಲ ಎಂದು ಬಿಹಾರ ಗವರ್ನರರು ಹೊಸ ನಿಬಂಧನೆ ಪ್ರಕಟಿಸಿದ್ದಾರೆ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದರ ಮೊದಲು ಕೋಳಿ ಗುರುತಿನ ಕಂಪ್ಣು ಸೀಲು ಮತ್ತು ಗೊನೊಕಿಲರ್ ಇರುತ್ತದೋ ಎಂಬುದನ್ನು ನೋಡಿರಿ.

ಪ್ರಾಚೀನಕಾಲದಿಂದ ಅದ್ಭುತವಾದ ಔಷಧ ... ಇಂಗ್ಲೀಷ ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇಂಜೆಕ್ಷನ್ ಮೊದಲಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ... ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ ... ಮುಂತಾದ ಎಲ್ಲಾ ... ವ್ಯಾಧಿಗಳಿಗೆ ... ಗುಣಕಾರಿ. 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು ... ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್ ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

Sole Manufacturers: Dr. D. N. JASANI, Vithalbhai Patel Road, BOMBAY

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ಸ್ಟಾಕಿಸ್ಟ — ಮೆಸರ್ಸ ಎ. ಫೆರ್ನಾಂಡಿಸ್ ಮತ್ತು ಕಂಪೆನಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್, ಮಂಗಳೂರು.

೧೨. ಕೂಸ ಮುದರ

ಮುದರ ಹೆಸರಿಗೆ ಬಂದುದ ಈ ವಸ್ತ, ಜಿದಾ ಮೊನ್ನೆ ಮೊನ್ನೆ ಪ್ರಸಿದ್ಧಿಗೆ ಬಂದುದು ಎಂದರೆ ಬಂದುದೇ ಅಲ್ಲ—ಉಳಿದರು ಅವನನ್ನು ಹೆಸರಿಗೆ ತರಿಸಿದ್ದು. ಅವನ ಹೆಸರೇನೋ ನಮ್ಮ ಊರವರ ಪಟ್ಟಿಗೆ ಚೆನ್ನಾಗಿ ತಿಳಿದಿದೆ ಬಾಳೆಹೊನ್ನೂರಿನ ಕೆಲವು ಕಾಫಿ ತೋಟದ ಮೇಸ್ತ್ರಿಗಳೂ ಅವನನ್ನು ಬಲ್ಲರು ಗಳಿಗಾಲದ ನಟ್ಟಿ ಮುಗಿದರೆ ಮುದರನ ಮುಂದಿನ ಮೊಕ್ಕಾಂ ಬಾಳೆಹೊನ್ನೂರು ಬಿಡಾರ ಸಮೇತ, ಅಲ್ಲಿಗೆ ಹೋದನೆಂದರೆ ಕೊಯ್ಲಿನ ಸಮಯವೇ ಊರಿಗೆ ಬರುವುದು ಅಲ್ಲಿಂದ ತಿರುಗಿ ಆಗುಂಬೆ ಘಟ್ಟ ಇಳಿಯುತ್ತಾನೆ 'ಕಾಫಿ ಸೀಜನ್' ಮುಗಿಯಿತು ಊರಿಗೆ ಮರಳಿ ಬಂದರೆ ತಿರುಗಿ ಹೋಗುವುದು ಮಳೆಗಾಲಕ್ಕೆ, ಈ ಸರ್ಕೀಟು ಬೇಸರ ಬಂದು, ತನ್ನ ನಂಟರನ್ನೋ ಮಕ್ಕಳನ್ನೋ ಮಾತ್ರ ತೋಟದ ಸೇರೆಗಾರರ ವಶ ಒಪ್ಪಿಸಿ ಅವನು ಊರಲ್ಲಿ ಕುಳಿತಿರ ಬಾರದು ಎಂಬುದೂ ಇಲ್ಲ ಮರ್ಜಿ ಕಂಡ ಹಾಗೆ

ಮುದರ ಮುದಕ, ಪ್ರಾಯ ಅರವತ್ತು ಹೇಗೂ ಮೀರಿರಬಹುದು ಅವನ ಕರಿ ಮೋರೆಯ ಮೇಲೆ ಜೋತಾಡುವ ಬಿಳಿ ಗೊಂಚಲು ಮೀಸೆ "ತಾನು ಇಲ್ಲಿ ಇದ್ದೇನೆ" ಎಂದು ಸಾರಿ ಹೇಳುವುದನ್ನು ಕಂಡರೆ ವರ್ಷ ಎಪ್ಪತ್ತು ಆಯಿತು ಎನ್ನಬಹುದು. ಆದರೂ ಕಂಬಳದ ಕೋಣದಂತೆ ಹಾಗೆ ಇದ್ದಾನೆ ಆಳು ಬೆಳಗ್ಗೆ ಊರಬಿಟ್ಟನು ಎಂದರೆ ಮಧ್ಯಾಹ್ನ ಹೊತ್ತು ಮುಳುಗುವ ಹೊತ್ತಿಗೆ ಹೇಗೂ ಸೋಮೇಶ್ವರ ಸೀದಾ ರಸ್ತೆ ಹಿಡಿದು ನಡೆಯುವುದೇ ಅವನಿಗೆ ಗೊತ್ತಿಲ್ಲ "ಸರಕಾರಿ ಹೆದ್ದಾರಿ ಧೂಳು ಮುಟ್ಟಿದರೆ ಕಣ್ಣಿಗೆ ಯಾಕೆ ಆದೀತು?" ಎಂಬ ವೈದ್ಯಶಾಸ್ತ್ರ ಬೇರೆ ಅವನಿಗೆ ತಿಳಿದಿದೆ, ಹೀಗೆಂದು ವಡ್ಡರ್ಸೆ ಸ್ವಾಬರ ಕಟ್ಟೆ ಹಿಲಿಯಾಣ—ಹಾಗೆ, ಹಾಗೆ ಎಂದು ನಾಲ್ವತ್ತು ಗುಡ್ಡಗಳ ಮುಳ್ಳು ಮೆಟ್ಟಿ, ಅರವತ್ತು ಬೈಲುಗಳ ಕೆಸರು ತುಳಿದರೆ ಅವನ ಕಣ್ಣಿಗೆ ತಂಪೆನಿಸುವುದು. "ಒಳದಾರಿಯಷ್ಟು ಸಮೀಪ ಈ ರಸ್ತೆಯಲ್ಲ" ಎಂಬ ಅವನ ತೀರ್ಮಾನ ಬ್ರಹ್ಮನಲ್ಲ ಅವನ ಅಪ್ಪ ಬಂದರೂ ಸಾಧ್ಯವಿಲ್ಲ

ಮುದಾರ ಹತ್ತಿರ 'ದೂರ ಎಷ್ಟು' ಕೇಳುವುದೂ ಅವನ ಪ್ರಾಯವೆಷ್ಟು ಎಂದು ಕೇಳುವುದೂ ಒಂದೇ ಒಮ್ಮೆ ನನಗೆ ನೆನಪಿದೆ—ಖಾನೇಶುಮಾರಿ ಸಮಯ ಅದಕ್ಕೆ ತನಿಖೆಯವರು ಮುದಾರನ ಹತ್ತಿರ 'ಮುದರ, ನಿನಗೆ ಪ್ರಾಯ ಎಷ್ಟಾದೀತು?' ಎಂದು ಕೇಳಿದರು "ಐದು ಐವತ್ತು ಬರಿ, ನಿಮಗೆ ಗೊತ್ತಿಲ್ಲದ್ದು ನಂಗಾ!" ಎಂದು ಉತ್ತರ ಬಂದಿತು 'ನಿನ್ನ ಕೂಸಿಗೆ?' ಕೂಸು ಎಂದರೆ ಮಗುವಲ್ಲ—ಕೂಸನ ಹೆಂಡತಿ ಆ ಪ್ರಶ್ನೆಗೆ ಉತ್ತರವಾಗಿ ಮುದರನು ಹೆಂಡತಿಯನ್ನು ಕರೆದನು. "ಚಿಕ್ಕ ಇಲ್ಲಿ ಬಾ, ರಾಯರು ನಿಂಗೆ ವರ್ಸ ಎಷ್ಟಾಯಿತು ಎಂದ ಕೇಂತ್ರು" ಅವಳ ಉತ್ತರ ಬಾರದುದನ್ನು ಕಂಡು "ಹೂ—ಒಂದು ಅರವತ್ತು ಬರಿ ಅದ್ರೊಳಗೆ ತಲೆ ಹೋಪ್ಪುದೇನು!" ಎಂದನು ಖಾನೇಶುಮಾರಿಯವರಿಗೆ ಗೊಳ್ಳೆಂದು ನಗೆ ಬಂದಿತು ಮುದರನಿಗೆ ಅವರು ಹಾಸ್ಯ ಮಾಡುತ್ತಿದ್ದಾರೆಂದು ತೋಚಿ "ನಗೋದು ಯಾಕೆ! ಬಡವರ ಮಕ್ಕಳ ಕಂಡ ತಾರೀಫು ಮಾಡ್ತ್ರಿಯಾ?" ಎಂದನು

ಅವರು ಸಂಗತಿಯನ್ನು ವಿವರಿಸಿ "ನಿನಗೆ ಐವತ್ತು ಅನ್ನುವಿ ಅವಳಿಗೆ ಅರವತ್ತು!" ಎಂದು ನಕ್ಕರು

ಮುದರ ಅಸಮಾಧಾನ ಹೆಚ್ಚಿತು—"ಏನು ನಗುವುದು ಅವಳಿಗೆ ಐವತ್ತು ಹಾಕಿನಿ ನನಗೆ ಅರವತ್ತು ಬರಿ ಆಯ್ತಲ್ಲ ಅಷ್ಟು ತಬ್ಬಲಿ ಮಾಡಿ ಭೂಮಿಕ್ಕೆ ಕಷ್ಟವೇ ಅದಕ್ಕಲ ಕುಸಾಲೇ!"

ಖಾನೇಶುಮಾರಿ ಶ್ಯಾನುಭೋಗರು ಬಲು ಕಷ್ಟದಿಂದ ಮುದರನಿಗೆ ಸಂಗತಿ ವಿವರಿಸಿ, ಸರಕಾರಿ ಹುಕುಂ ಪ್ರಕಾರ ತಾನು ಸಂಗತಿ ವಿಚಾರಿಸಿದೆ ಎಂದು ಹೇಳಿ ಸರಿಯಬೇಕಾಯಿತು. ಅವರು ಹೋದ ಮೇಲೆ ಮುದರನಿಗೆ ವರ್ಷ

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿ ರೂಪಗಳು, ಘಟನೆಯ ರೂಪಗಳು ಘಟನೆಯ ರೀತಿಗಳು, 'ಹಾಸ್ಯ' ಆವರಣ—ಇವೆಲ್ಲ ವಾಸ್ತವವಾದುವು. ಹಳ್ಳಿಯು ಸಾವಿರಾರು ಕೋಟಿ ಕುಂದಾಪುರದೊಳಗಿನ ಒಂದು ಗ್ರಾಮ ಸಮೂಹ, ವ್ಯಕ್ತಿಗಳು ಮಾತಿನ ರೀತಿಗಳು ಹಲವು ಅಲ್ಲಿನವೆ ಒರೆಯ ಪಾತ್ರಪರಿಚಯಗಳೇ ಈ ಚಿತ್ರಗಳ ಗುರಿ ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಅನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು ನಾನು ಬರೆದ ಪ್ರಸ್ತಾವನೆಯ ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅವರ ಮುಂದಿರುವ ಪಾತ್ರಗಳು ಇಂಥವು—ಎಂದು ಒದಗಿಸಿಕೊಡುತ್ತೇನೆ ಇತಿ,

ಶಿವರಾಮ ಕಾರಂತ

ಹೇಳಿದರೆ ಆಯುಸ್ಸ ಕಡಿಮೆಯಾತ್ತಲ್ಲ' ಎಂಬ ಚಿಂತೆ ಬಲು ಹೊತ್ತಿನ ವರೆಗೆ ಬಾಧಿಸುತಿತ್ತು

ಪ್ರಾಯದ ಗಣಿತ ಹೀಗಾದರೆ, ದೂರದ ಗಣಿತ ಹೇಳುತೇನೆ, ಒಮ್ಮೆ ಮುದಾರನೊಡನೆ "ಸೋಮೇಶ್ವರಕ್ಕೆ ನಮ್ಮ ಊರಿನಿಂದ ಎಷ್ಟು ದೂರವಾಗಬಹುದು" ಎಂಬ ಪ್ರಸಂಗ ಬಂದಿತು "ಏನು ಎರಡು ಹರದಾರಿಯಾದೀತು" ಎಂದು ಮುದರನ ಉತ್ತರ ಸಾಧಾರಣ ಎಂಟು ಹರದಾರಿಯ ಸರಕಾರಿ ರಸ್ತೆ ಅವನ ಅಳತೆಯಲ್ಲಿ ಎರಡೇ ಹರದಾರಿಯಷ್ಟಕ್ಕೆ ಕುಗ್ಗಿತು.

ಮುದರನ ಕುಟುಂಬ ಹಿರಿದು ಚಿಕ್ಕಿ ಪಿಳ್ಳೆಯೆಂದು ಸುಮಾರು ಇಪ್ಪತ್ತು ತಲೆಗಳು ತಂಬಿರುವ ಗುಡಿಸಲು ಅವನದು ಅಕ್ಕನ ಮಕ್ಕಳು, ತಂಗಿ ಮಕ್ಕಳು, ಮಕ್ಕಳು, ಮೊಮ್ಮಕ್ಕಳು,, ಮರಿಮಕ್ಕಳು ಎಂದು, ಗೂಡಿನಲ್ಲಿ ಕೋಳಿ ಮರಿ ತುಂಬಿದಂತೆ ಮನೆಯಲ್ಲಿ ಮಕ್ಕಳು ತುಂಬಿದ್ದಾರೆ ನಮ್ಮೂರ ಬೈಲಿನ ಅಗಲವಾದ ಒಂದು ಕಟ್ಟನ ಮೇಲೆ ಅವನ ಬಂಗ್ಲೆ ಹಗಲು ರಾತ್ರಿಯೂ ಕಡಲಿನ ಗಾಳಿ 'ರುಮುರುವ ' ಬೀಸುವಂತಾಪು ಮಳೆಗಾಲದ ಅಬ್ಬರವೆಂದರೆ ಮುದರನ ಮೀಸೆಯೇ ಉದುರಿದುದ ಆಶ್ಚರ್ಯ ಆದರೂ ಮುದರನ ಬಿಡಾರ ಅಲ್ಲಿಂದ ಕದಲುವುದಿಲ್ಲ' ಎರಡ ಗಜರು ಉಂಕಣ ವಿಶಾಲವಾದ ಗುಡಿಸಲು ಮಗ್ಗಲಲ್ಲಿ ತಿರುಗಿ ಅಷ್ಟೇ ದೊಡ್ಡ ಇನ್ನೆರಡು ಕೋಣೆಗಳು. ಮುಖ್ಯ ಗುಡಿಗೆ ಅರ್ಧ ಗೋಡೆ, ಮೇಲೆ ಮಡಲಿನ ತಟ್ಟಿ, ಕಟಕಿಯ ಬಗ್ಗೆಂದ ನಾಲ್ಕು ಗಡಿಗೆಯ ಕತ್ತಗಳು ಅದರ ಮೇಲೆ ಅಂಕುಡೊಂಕು, ಮರ ತಗುಗಳಿಂದ ಪೂರ್ಣವಾದ ಒಂದು ಮಾಡು ಬಳಿಯ ಕೊಟಗಿಗೆ ಅಷ್ಟು ಪೈಪವಿಲ್ಲ ಸುತ್ತಲೂ ಒಂದಡಿ ಎತ್ತರದ ಮಣ್ಣಿನ ದಂಡೆಯ ಪ್ಲದೆ ಒಳೆ ಮರೆಯಿಲ್ಲ ಮನೆಯ ಬಾಗಿಲಿಗೆ ಒಂದು ತೂಗಾಡುವ ಹನೆಹಡೆ ' ಮಳೆಗಾಲ ಬಂದರೆ, ಯಾರನ್ನಾದರೂ ಬೇಡಿಕಾಡಿ ಇನ್ನೊಂದು ಹತ್ತು ಹನಿಮರದ ಗರಿಗಳನ್ನು ತಂದು ನಾಲ್ಕು ಸುತ್ತಲೂ ತಗಿಸುತ್ತಾನೆ ಕಡಲಿನ ಘರ್ಜನೆಗೆ ಎದುರಾಗಿ ಇವುಗಳ ಪ್ರತಿಘರ್ಜನೆ 'ದರದರ ಬರಬರ' ಹಗಲೂರಾತ್ರಿ ಒಂದೇ ಸಮನೆ ಕೇಳಿಸುತ್ತದೆ

ಅವನು ಈ ಸಂಸಾರ ಸಾಲದೆಂದು ಮನೆಯ ಒಳಗೆ ಹೊರಗೆ ಸೊಂಪಾಗಿ ಅಂಡಲೆಯುವ ನಾಲ್ಕಾರು ಕಾಟುಮೋಟು ನಾಯಿಗಳು ಬೇರೆ ಇವನ ಸಂಸಾರದ ಜೊತೆಗೆ ಏನು ಬೇಕಿತ್ತದೆಯೋ, ಇವನು ಶ್ವಾನ ಸಂಸಾರಕ್ಕೆ ಏನು ದೊರೆತ್ತದೋ ನನಗಂತು ನಿಲುಕದ ವಿಷಯ.

ಮನೆಯವರು ಯಾರಿಟ್ಟರಿಗೂ ಮೈ ತುಂಬ ಹೊದಿಕೆ ಇಲ್ಲ, ಹೊಟ್ಟೆ ತುಂಬ ಕೂಳು ಏನೆಂದು ತಿಳಿದಿಲ್ಲ ಮನೆಯ ಹೆಂಗಸರು—ಅಲ್ಲಿ ಇಲ್ಲಿ ಗದ್ದೆ ಅಂಚಿನಲ್ಲಿ ಬೆಳೆದು ಹುಲ್ಲನ್ನು ಕದ್ದು, ಕೊಯ್ದು ಪೇಟೆ ಒಯ್ದು ಹೊರಗೆ ಒಂದ್ನಾಣೆಯಂತೆಯೋ, ಮಳೆಗಾಲದಲ್ಲಿ ಅರ್ಧಾಣೆಯಂತೆಯೋ ಮಾರಿ ಸಿಕ್ಕಿದಕ್ಕೆ ಭತ್ತ ಕೊಂಡುಕೊಂಡು ಬರುತ್ತಾರೆ ಈ ರೀತಿ ದುಡಿಯುವ ಆರು ಹೆಣ್ಣುಕ್ಕಳು ಮನೆಯಲ್ಲಿ,

ಮತ್ತೇನಾದರೂ ಊರಿನ ಚಿಲ್ಲರೆ ಕೆಲಸ ಸಿಗುತ್ತದೆ 'ಮುಟ್ಟಾಳು' ಅಲ್ಲವಾದುದರಿಂದ ಅತಿಶಯ ಕೂಲಿಗೆ ಅವಕಾಶವಿಲ್ಲ ಅವನ ಒಡೆರಗು ಹುಡುಗರು, ಅಳಿಯಂದಿರು ಘಟ್ಟಕ್ಕೆ ದುಡಿಯಲು ಹೋದರೆ ಬರುವಾಗ ಎಂಟಾಣೆ ನಗದು ತಂದರೆ ಜಾಸ್ತಿ ರೂಗಾಯಿ ಬೆಲೆಯಿದ್ದರ ತರುತ್ತಾರೆ

ಮುದರನ ಆರ್ಥಿಕ ಸಂಪತ್ತಾಗಲಿ ಉಳಿದ ಅವನು ಹೆಸರುವಾಸಿಯಾದ ವಿಚಾರವಾಗಲೀ ಮುಖ್ಯವಾಗಿಲ್ಲ ಇಷ್ಟೇ ಹೇಳುವೆನು ಒಂದು ದಿವಸ ಉಡುಪಿಯಿಂದ ಒಬ್ಬ ಕಾಂಗ್ರೆಸು ದೇಶಭಕ್ತರು ಬಂದು ಜನ್ನು ಪೈಗಳ ಅಂಗಡಿಯಲ್ಲಿ ಬಿಡಾರ ಹೂಡಿದರು ಆ ರಾತ್ರಿ ಪೈಗಳ ಅಂಗಳದಲ್ಲಿ ತಾಳಮದ್ದಲೆ ಇದೆಯೆಂದು ಸುದ್ದಿಯಾಯಿತು ತಾಳಮದ್ದಲೆ ಎಂದ ಮೇಲೆ ತಿಮ್ಮಪ್ಪ ಅಕ್ಕಸಾಲಿ, ಅಣ್ಣು, ನಾಗಯ್ಯ ಸೆಟ್ಟರು, ಸೀತೈತಾಳರು ಚನ್ನಪ್ಪ ಮಯ್ಯರು—ಅವರು ಇವರು— ಎಂದು

ಬರುವ ವಾರ

ಜುವಾಂ ಸೋಜರು

卐

೧೩

ಜುವಾಂ ಸೋಜರು ತಂದ ಸಟ್ಟಿ ಚೀಲ ಒಂದಕ್ಕೆ ಸಾವಾಗಿದೆ

ಅವರ ಪಾಮ್ರದಂಗಡಿಯಿಂದ, ತಿಮ್ಮಪ್ಪ ಪದ್ಮಲೆಕಾಟ ಸಂಪರ್ಕಾಲಿಗೆ ಬೇಕು ಅನಿಸಿದೆ

ಜುವಾಂ ಸೋಜರಿಗೆ ಕಾಂಗ್ರೆಸು ಇಷ್ಟವಿಲ್ಲ, ಎನದೆ ಅಧ್ಯಕ್ಷತೆ ... ಎಂಬುದು ಮ. ಸ್ವ—

ಆದರೂ ಪಾದ್ರಿಗಳ ಜೊತೆ ಮಾತು, ಕೊಟ್ಟ ಸಾಲವನ್ನು ಸಹ ಹಿಂದೆ ಕೊಡುವವರಲ್ಲ

ಶ್ರೀ ಕಾರಂತರ

ಹಳ್ಳಿಯ 10 ಸಮಸ್ತರು

ಯಾವತ್ತು ಗ್ರಾಮ, ದೇಶ, ದೇವತೆಗಳೇ!

'ತಪಾಟ' ಜನ ಜಮಾಯಿಸಿತು ರಾತ್ರಿ ಗದ್ದಲವೇ ಗದ್ದಲ ತಾಳದ ಧ್ವನಿ ಒಬ್ಬ ಅರ್ಬಟೆ ಎಂದ ಶುರುವಾಯಿತು ಆದರೆ ಒಮ್ಮೆಗೇ, ನಡುರಾತ್ರಿಗೆ ಅದನ್ನು ನಿಲ್ಲಿಸಿ ಉಡುಪಿಯಿಂದ ಒಂದ ಒಬ್ಬರು ಗಾಂಧಿ ಪಾರ್ಟಿಯವರು ಲೆಕ್ಚರು ಕೊಡಗಿದರು 'ಈ ಊರಲ್ಲೆಲ್ಲ ಕಾಂಗ್ರೆಸ್ಸಿನ ಪ್ರಾಬಲ್ಯ ಬಂದಿದೆ ಹೀಗಿರುತ್ತ ನಿಮ್ಮ ಊರಿಗೆ ಒಂದ ಕಾಂಗ್ರೆಸು ಕಮಿಟಿ ಇಲ್ಲವಾದರೆ ಭೂಷಣವಿಲ್ಲ ಎಂದು ಅನ್ನವೈವೇದ್ಯದವರನ್ನು ಹುರಿದುಂಬಿಸಿದರೆ ಪ್ರಾಸ್ತೈಗಳೂ ಲೆಕ್ಚರು ಕೇಳ ಉಬ್ಬಿದರು. ಉಡುಪಿಯವರ ಲೆಕ್ಚರಿನ ಬಳಿಕ ಪೈಗಳು ಸ್ವತಃ ಎದ್ದು ನಿಂತು 'ಕಾವಯ್ಯ ನಮ್ಮ ಪೈಗಳ ಕಮ್ಮಿಯರು ಹೇಳಿದ್ದ ಸನು ಅಲ್ಲೆಲ್ಲ ಭಾರೀ ಕಮಿಟಿಗಳಿವೆಯಾಗಿ ಡಿಸ್ಟ್ರಿಕ್ಟ್ ಬೋರ್ಡು, ಕೌನ್ಸಿಲುಗಳಿಗೆಲ್ಲ ಕಾಂಗ್ರೆಸು ಮೆಂಬರು ಹೋಗುತ್ತಿದ್ದಾರೆ. ಹೀಗಿದ್ದು ನಮ್ಮ ಊರಿನಲಿ ಇಂಥಾ ಅಂಥಹ 'ಹರಿಹರ' ಇರುತ್ತ ನಾವು ಮಾತ್ರ ಹೋಗಿ ಎಂದು ನಮ್ಮಲ್ಲೂ ಒಂದು ಕಮಿಟಿ ಇರಬಾರದೇಕೆ' ಎಂದರು

ಸರಿ, ಸೇರಿದ್ದ ಮಹಾಸಭಾವರಿಗೆ ಒಂದುಮಾದು ಉಂಟಾಯಿತು, ನಾಗಯ್ಯಸೆಟ್ಟರು 'ಹಿಂದುಮುಂದು ನೋಡುವುದೇನು ಒಂದು ಕಮಿಟಿ ಹುಡಿಹಾರಿಸುವ' ಎಂದರು ಹೆಚ್ಚು ಹೊತ್ತಿಲ್ಲ ಸರಸರ ನೂರು ಹೆಸರುಗಳನ್ನು ಕಾಂಗ್ರೆಸು ಮೆಂಬರಿಗೆ ಬರಾಯಿಸಲ್ಪಟ್ಟಿತು ಜನ್ನು ಪೈಗಳು ಹಿಗ್ಗಿನಿಂದ ವೈಕುಂಠ ಕಮ್ಮಿಯವರನ್ನು ಕಂಡು 'ಇನ್ನು ಬೇಕೇನು ಹೇಳಿ' ನಿಮಗೆ ಎಂದರು 'ಎಲ್ಲರೂ, ಅಂದರೆ ಈ ಹೆಸರು ಕೊಟ್ಟವರು ವರ್ಷಕ್ಕೆ ನಾಲ್ಕಾಣೆಯಂತೆ ಮಂತಿಗೆ ಕೊಟ್ಟರೆ ಸರಿ' ಎಂದ. ಉತ್ತರ ಬಂದಿತು. 'ಒಂದಾಣೆ ನಿಮ್ಮ ಊರಲ್ಲಿ ಉಳಿಯುತ್ತದೆ.' ಉಳಿದುದು ಪೋಳಿ ಜಿಲ್ಲಾ ಕಮಿಟಿ, ಕೆ ಪಿ ಸಿ. ಸಿ, ಎ ಐ ಸಿ ಸಿ ಹೀಗೆಲ್ಲಾ ಹೋಗುತ್ತದೆ' ಎಂದು ವಿವರಿಸಿದರು

ಸೀತೈತಾಳರಂಥವರಿಗೆ 'ನಾಲ್ಕಾಣೆ' ಎಂದುದು ಕೇಳಿ ಮುಕ್ಕಾಲು ದಮ್ಮು ಇಳಿಯಿತು ಅಲ್ಲಿ ಕೆಲವರು ನಾಲ್ಕಾಣೆಗೀಲ್ಕಾಣೆ ಪಂಚಾತಿಕೆಯಾದರೆ ನಮ್ಮ ಹೆಸರನ್ನು ಹೊಡೆಯಿರಿ ಎಂದರು ಒಬ್ಬರು 'ನಾಲ್ಕಾಣೆಗೆ ಅರ್ಧ ಬೇಳೆ ಎಷ್ಟು ಬರುತ್ತದೆ' ಎಂದರು ಸೀತೈತಾಳರು 'ಅಷ್ಟೆಲ್ಲ ಬೇಡ—ಕೊಡುವವಾಗಲಿಲ್ಲವೋ' ಎಂದು ಗರಗುಂಟಿಸಿ ಸುಮ್ಮನಾದರು. ಆ ದಿನದ ಸಭೆಗೆ ನಮ್ಮ ರೂರಲ್ ಆಸ್ಪತ್ರೆ ರಾಮರಾಯರು ಬಲು ಉಮೇದಿನಿಂದ ಬಂದಿದ್ದರು ರಾಮರಾಯರ ಹುಟ್ಟೂರು ನಮ್ಮದಲ್ಲ ಏನಾರ್ಗಳವೋ, ಕಾಪೋ, ಸುರತ್ಕಲೋ ಅಂತೆ ಅವರಿಗೆ ಕಾಂಗ್ರೆಸ್ ಸರಕಾರ ಬರುವ ವಿಚಾರದಲ್ಲಿ ಬಲು ಉತ್ಸಾಹ ನಮ್ಮ ಊರಿಗೆ 'ಇಂಗ್ಲಿಸ್ ಪೈಲು' ಮೊದಲಿಗೆ ತರಿಸಿದವರೇ ಅವರು ಒಟ್ಟಿಗೆ ನಮ್ಮಲ್ಲಿ 'ಟಿಸ್ ಪ್ರಸ್' ಮಾಡಬಲ್ಲವರೇ ನಾಲ್ಕಾರು ಮಂದಿ ಪೇಪರು ಓದುವವರೆಂದರೆ ರಾಮರಾಯರು. ಆದರೂ ಊರವರಿಗೆ ಗಾಳಿ ಹಾಕಿ ಒಂದ ಕ್ಲಬ್ ಸಹ ತೆರೆದರು. ಕ್ಲಬ್ಬಿನಲ್ಲಿ ಕಾಂಗ್ರೆಸು ಆಗುವುದರಲ್ಲಿ ರಾಮರಾಯರಿಗೆ ತುಂಬ ಸಂತೋಷ ಹಾಗಾಗಿ ರಾಮರಾಯರೇ ಮುಂದೆ ಬಂದು 'ಇಷ್ಟು ಮೆಂಬರು' ಇಲ್ಲಿ ಜಮಾವಾದ ಮೇಲೆ ಅಧ್ಯಕ್ಷರು ಉಪಾಧ್ಯಕ್ಷರನ್ನು ಆರಿಸಿ ಬಿಡುವ' ಎಂದು ಸೂಚಿಸಿದರು

[೧೫ನೇ ಪುಟವನ್ನು ನೋಡಿ]

S. U. N. & Co.,

Silk Merchants,

Chaukhambi, BENARES CITY

ಊಗಿನ ತರದ(ಕಾಶಿ) ಬನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿ ಅತ್ಯುತ್ಕೃಷ್ಟ ತುಂಬಾ ಸಭ್ಯ ಮಾಲು

18 ಮೊಳದ 2½ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150? ಸಾಧಾರಣ ತರದ್ದು 18 ಮೊಳ ಸಣ್ಣ ಬುಟ ಶೀರೆಗಳು ರೂ 35ರಿಂದ ರೂ 55 ವರಲು ಸಾದಾ ಶೀರೆ 18 ಮೊಳ ರೂ 32ರಿಂದ ರೂ. 65 ಉದ್ದ ಮೊಳ 16, ಅಗಲ 2½ ರೂ 30 ರಿಂದ 85ರ ವರೆಗೆ ಬೇರೆ ಮಾಲುಗಳು ಕೂಡಾ ಬೇಗನೆ ಕಳುಹಿಸಲಾದೀತು

ಬರೆಯಿರಿ—

ಶಿರೋಮಣಿ ನಾರಾಯಣಾಚಾರ್ಯ,

ಚೌಕಂಬಾ, ಬನಾರಿಸ್ ಸಿಟಿ

'DILROZ' Regd

'Dil Roz' is a sure cure for Oriental sores local sores, all kinds of deep-rooted sores skin eruptions Pimples, Eczema, Ringworm, Sinus Fistula auxillary-Abscess

There is no need of dressing the wounds nor are baths prohibited

Price Rs 2. Postage extra.

TAHIR DIN,

Anarkali, LAHORE

ಸಂಸ್ಥಾನಗಳ ಸ್ತಬ್ಧ ವಾತಾವರಣವು ಮುಂಬರುವ ಬಿರುಗಾಳಿಯ ಸೂಚನೆ

ಸಂಸ್ಥಾನಗಳಲ್ಲಿ ಸತ್ಯಾಗ್ರಹವು ಬೇಡವೆಂದ ಮಹಾತ್ಮರ ಇಂಗಿತವು ಇನ್ನೊಂದು ಪ್ರಚಂಡ ಆಂದೋಲನವನ್ನು ಆರಂಭಿಸುವುದಂತೆ

ಮುಂಬರುವ ಬಿರುಗಾಳಿಗೆ ಸಂಸ್ಥಾನಾಧೀಶರು ಹಾರಿಬೀಳುವರಂತೆ

ಸಂಸ್ಥಾನಾಧೀಶರಿಗೊಂದು ಪಾಠ!

ಪ್ರಜಾಜನರಿಗೊಂದು ಎಚ್ಚರಿಕೆ!!

ಸಂಸ್ಥಾನಗಳಲ್ಲಿ ಎಲ್ಲಿಯೂ ಸತ್ಯಾಗ್ರಹವು ಬೇಡವೆಂದು ಮಹಾತ್ಮರು ಹೇಳಿದರು. ಹೆಚ್ಚು ಕಡಿಮೆ ಎಲ್ಲಾ ಸಂಸ್ಥಾನಗಳಲ್ಲಿಯೂ ಸತ್ಯಾಗ್ರಹವು ನಿಂತಿತು. ಸಂಸ್ಥಾನ ಸರಕಾರಗಳು ಅಲ್ಲಿ ಇಲ್ಲಿ ಎಂಟಂತೆ ಪ್ರಜಾ ವರ್ಗದ ಮೇಲೆ ಸರ್ಪಾಸ್ತ್ರ, ಬ್ರಹ್ಮಾಸ್ತ್ರಗಳನ್ನು ಹೂಡುತ್ತಿರುವರಾದರೂ ಪ್ರಜಾವರ್ಗವು ಅವುಗಳಿಗೆ ತಲೆ ಕೊಟ್ಟಿದೆಯಲ್ಲದೆ, ಪ್ರತಿಕಾರಾಸ್ತ್ರವನ್ನು ಕೈಗೆ ತೆಗೆದುಕೊಂಡಿಲ್ಲ. ಆದ್ದರಿಂದ ಸಂಸ್ಥಾನಗಳಲ್ಲಿ ಸ್ತಬ್ಧ ವಾತಾವರಣವಿದೆ. ರಾಜಕೋಟೆಯಲ್ಲಿ, ತಿರುವಾಂಕೂರಿನಲ್ಲಿ, ಜಯಪುರದಲ್ಲಿ, ಹೈದರಾಬಾದಿನಲ್ಲಿ ಎಲ್ಲಿ ನೋಡಿದರೂ ಪ್ರಕೃತ ಮಹಾತ್ಮರು ಸೋತ ಹಾಗೆ ಕಾಣಿಸಿಕೊಳ್ಳುತ್ತಾರೆ. ಅವರು ಸಂಸ್ಥಾನ ಚಳವಳಿಯಿಂದ ಹಿಂದೆ ಸರಿದರೆಂದು ಅನೇಕರು ಊಹಿಸುತ್ತಾರೆ. ಆದ್ದರಿಂದ ದರ್ಬಾರ ವೀರವಲ್ಲರು ತಾವು ಗೆದ್ದೆವೆಂದು ನಲಿಯುತ್ತಾರೆ. ಸರ್ ಸಿ. ಪಿ. ಯ್ಯವರು ತಮ್ಮಂಥ ಸಾಹಸಿಗರು ಯಾರಿದ್ದಾರೆಂದು ಹೆಮ್ಮೆಪಡುತಿದ್ದಾರೆ.

ಹಿತಶತ್ರುಗಳ ಈ ಸಂತೋಷ!

ಪರಸ್ಥಿತು ಹಿತಶತ್ರುಗಳ ಈ ಸಂತೋಷವು ಎಷ್ಟು ದಿನಗಳ ತನಕ ಇದ್ದೀತು? ಮಹಾತ್ಮರ ಕಾರ್ಯ ನೀತಿಯ ಸೂಕ್ಷ್ಮ ಅಧ್ಯಯನ ಮಾಡಿದವರಿಗೆ, ಸಂಸ್ಥಾನಗಳಲ್ಲಿ ಈಗ ಕಂಡು ಬರುತ್ತಿರುವ ಈ ಸ್ತಬ್ಧತೆಯು ಕೆಲವೇ ದಿನಗಳ ತನಕ ಉಳಿಯುವಂಥಾದೆಂದೂ ಅನಂತರ ಸಂಸ್ಥಾನಾಧೀಶರ ವಿರುದ್ಧ ಒಂದು ಪ್ರಚಂಡ ಆಂದೋಲನವೇ ಉಂಟಾಗಬಹುದೆಂದೂ ತೋರುತ್ತದೆ

ಮಹಾತ್ಮರು ಯಾವದಾದರೊಂದು ಆಂದೋಲನವನ್ನು ಆರಂಭಿಸುವ ಮೊದಲು ತಮ್ಮ ವಿವಾದಿಗಳೊಂದಿಗೆ ಸಾಮೋಪಾಯದಿಂದ ನಡೆಕೊಳ್ಳುವರು ಮೊದಲು ಅವರನ್ನು ಕೇಳುವರು ಬೇಡುವರು ಹೇಗಾದರೂ ರಾಜಿಯಿಂದ ಅಥವಾ ಪಂಚಾಯತಿಕೆಯಿಂದ ನಮ್ಮೊಳಗಿನ ವಿವಾದವನ್ನು ತೀರ್ಮಾನಿಸಿಕೊಳ್ಳೋಣ ಎನ್ನುವರು. ಹಿತಬೋಧನೆಯನ್ನು ಕೊಟ್ಟು ಅವರನ್ನು ಸನ್ಮಾರ್ಗಕ್ಕೆ ತರುವ ಮಹಾಪ್ರಯತ್ನಗಳನ್ನು ಮಾಡುವರು. ಆದರೆ ಮಹಾತ್ಮರು ರಾಜಿಗಾಗಿ ಹೀಗೆ ದೈನ್ಯದಿಂದ ಅಂಗಲಾಚಿ ಬೇಡಿಕೊಳ್ಳುವುದನ್ನು ಕಂಡು—ಓಹೋ, ಮಹಾತ್ಮರ ಶಕ್ತಿ ಕುಂದಿದೆ, ಈಗ ಅವರಿಗೆ ಸೋಲು ಸಾಟವು ಬೇಡವಾಗಿದೆ ಈಗ ನಾವು ಹೇಳಿದ್ದೇ ಆಗುತ್ತದೆ ಎಂದುಕೊಂಡು ವಿವಾದಿಗಳೂ ದಿಟ್ಟರೂ ಛಲವಾದಿಗಳೂ ಆಗಿ ಮೋಸ ಹೋಗುತ್ತಾರೆ ಯಾವ ತರದ ರಾಜಿಗೂ ಒಪ್ಪುವದಿಲ್ಲ ಅಷ್ಟರೊಳಗಾಗಿ ಲೋಕಮತವೆಲ್ಲ ಮಹಾತ್ಮರಿಗೆ ಅನುಕೂಲವಾಗುವುದು ಕೆಲಸಗಾರರು ಪ್ರಚಂಡ ಆಂದೋಲನವನ್ನು ಹೂಡಲಿಕ್ಕೆ ಸಿದ್ಧರಿರುವರು. ಲೋಕಮತವು ಅನುಕೂಲವಾದಂತೆ ಮಹಾತ್ಮರಿಗೆ ತಮ್ಮ ಕಾರ್ಯದಲ್ಲಿ ಅರ್ಧ ಫಲತೆ ದೊರೆತ ಹಾಗೆ. ಉಳಿದ ಧರ್ಮವು ಅವರಿಗೆ ಕೆಲಸಗಾರರ ಅಹಿಂಸೆ, ಸತ್ಯ ಸಹನಾಶೀಲತೆಯಿಂದ ಕ್ಷಿಪ್ರದಲ್ಲಿ ದೊರೆಯುವುದು. ಇದೇ ಮಹಾತ್ಮರ ಸಫಲತೆ, ಕಾರ್ಯನೀತಿಯ ರಹಸ್ಯ! ಅವರ ಕಾರ್ಯಕುಶಲತೆಯ ವೈಶಿಷ್ಟ್ಯ!! ಆದ್ದರಿಂದಲೇ ಹಿತಶತ್ರುಗಳ ಸಂತೋಷವು ಬಹುಕಾಲ ಉಳಿಯಲಾರದೆನ್ನುತ್ತೇವೆ

ಬಿರುಗಾಳಿಯ ಸೂಚನೆ

ಸಂಸ್ಥಾನಗಳಲ್ಲಿ ಈಗ ಕಂಡುಬರುತ್ತಿರುವ ಸ್ತಬ್ಧ ವಾತಾವರಣವು ಮುಂಬರುವ ಬಿರುಗಾಳಿಯ ಸೂಚನೆಯೆಂದೇ ನಾವು ತಿಳಿಕೊಳ್ಳಬೇಕು. ಭಾರತ ಸ್ವಾತಂತ್ರ್ಯ ಆಂದೋಲನದ ಇತಿಹಾಸದಲ್ಲಿ ಮಹಾತ್ಮರ ಕಾರ್ಯಭಾಗವನ್ನು ನೋಡಿರಿ ೧೯೨೦–೨೧ರ ಅಸಹಕಾರ ಚಳವಳ, ಅನಂತರ ೧೯೩೦–೩೧ರ ಕರ ನಿರಾಕರಣ ಚಳವಳ, ಅವುಗಳ ನಡುವಿನ ಕಾಲದ ಸ್ತಬ್ಧತೆ, ಅನಂತರ ಎದ್ದ ಬಿರುಗಾಳಿ–ಈ ಬಿರುಗಾಳಿಯಲ್ಲಿ ತ್ರಿಸಂಚದಲ್ಲೇ ಮಹಾಬಲಿಷ್ಠ ಬ್ರಿಟಿಷ ಸರಕಾರದ ಪ್ರತಿನಿಧಿ–ವಾಯ್ಸರಾಯ ಪ್ರಭುವು ಮಹಾತ್ಮರೊಡನೆ ಸಂಧಿ ಕೂಡ ಮಾಡಿಕೊಳ್ಳುವಂತಾದ ಸಂದಿಗ್ಧ! ಇವನೆಲ್ಲ ಆಲೋಚಿಸಿದರೆ ಈಗಿರುವ ಸ್ತಬ್ಧ ವಾತಾವರಣದಲ್ಲಿ ಮುಂಬರುವ ಬಿರುಗಾಳಿಯು ಎಂಥಹದ್ದಾಗಬಹುದೋ ಎಂಬುದನ್ನು ಊಹಿಸಿರಿ ಅದರ ಪ್ರಚಂಡತೆಯನ್ನು ಊಹಿಸಲಿಕ್ಕೂ ಆಗುವದಿಲ್ಲ ಮುಂದಿನ ಪ್ರಚಂಡ ಚಳವಳವು ರಾಜಕೋಟೆಗೆ, ಅಥವಾ ತಿರುವಾಂಕೂರಿಗೆ, ಜಯಪುರಕ್ಕೆ ಅಥವಾ ಹೈದರಾಬಾದಿಗೆ, ಕಾಶ್ಮೀರಕ್ಕೆ ಅಥವಾ ಮೈಸೂರಿಗೆ ಸಂಬಂಧಿಸಿದ್ದು ಆಗಿಂದೆ ಅದು ಅಖಿಲಭಾರತ ರೂಪವನ್ನು ತಾಳಿಕೊಳ್ಳುವುದು ಆ ಬಿರುಗಾಳಿಯ ವೇಗದಲ್ಲಿ ಈಗ ತಾವು ಗದ್ದೆವೆಂದು ಎದೆ ತಟ್ಟಿಕೊಳ್ಳುವ ಅಥವಾ ಮೀಸೆ ಹುರಿ ಕಟ್ಟುತ್ತಿರುವ ವೀರವಲ್ಲ, ರಾಮಸ್ವಾಮಿಯವರಂತಹರೇನು, ಸಂಸ್ಥಾನಾಧೀಶರು ಕೂಡ ಹಾರಿಬಿದ್ದು ತಮ್ಮನ್ನೂ ತಮ್ಮದೆಲ್ಲವನ್ನೂ ಕಳಕೊಳ್ಳಬಹುದು ಆದ್ದರಿಂದ ಪ್ರಜಾಜನರ ಮಹಾತ್ಮರ ಕಾರ್ಯ ಪ್ರಣಾಲಿಯಿಂದ ಸಿದ್ಧ ಪಾಠವಾಗಬೇಕೆಂದು ಅವರು ಮುಂದಿನ ಆಂದೋಲನಕ್ಕೆ ಈಗಿಂದಲೇ ಸಿದ್ಧರಾಗಬೇಕು, ತರಬೇತಿಯನ್ನೂ ಅನುಭವವನ್ನೂ ಪಡೆಯಬೇಕು ಸಂಸ್ಥಾನಾಧೀಶರಾದವರು ಇದರಿಂದ ಒಂದು ಒಳ್ಳೆಯ ಪಾಠವನ್ನು ಕಲಿಯಬೇಕು. ಪ್ರಜಾಜನರ ನ್ಯಾಯವಾದ ಬೇಡಿಕೆ, ಅಂದರೆ ಕಾಲಪರಿಸ್ಥಿತಿಗನುಗುಣವಾಗಿ ಅವರಿಗೆ ಜವಾಬುದಾರಿ ಸರಕಾರವನ್ನು ಕೊಟ್ಟು, ಮುಂದೊಂದು ಆಂದೋಲನವು ಉಂಟಾಗದಂತೆ ಮಾಡಬೇಕು—ಆ ಪ್ರಕಾರ ಅವರು ತಮ್ಮನ್ನು ಕಾಪಾಡಿಕೊಳ್ಳಬೇಕು.

ಕಚ್ಛದಲ್ಲಿ ದಬ್ಬಾಳಿಕೆ

ಕಚ್ಛ ಸಂಸ್ಥಾನದ ಪ್ರಜಾಪರಿಷತ್ತಿನ ಆಶ್ರಯದಲ್ಲಿ ಮಾಂಕುವದಲ್ಲಿ ಕೂಡಿದ ಒಂದು ಸಭೆಯಲ್ಲಿ ಗಲಾಟೆಯಾಯಿತೆಂಬ ಕಾರಣದಿಂದ ಅಲ್ಲಿಯ ಸರಕಾರವು ಸಭೆಗಳನ್ನೇ ಕೂಡಿಸಬಾರದೆಂದು ಆಜ್ಞಾಪಿಸಿದೆ ಈ ರೀತಿ ನಿರ್ಬಂಧಾಜ್ಞೆಯನ್ನು ಹಾಕಿದ್ದು ಕಚ್ಛ ಸಂಸ್ಥಾನದ ಇತಿಹಾಸದಲ್ಲಿ ಇದೇ ಮೊದಲು ಮಹಾತ್ಮರ ಸತ್ಯಾಗ್ರಹ ಬೇಡವೆಂದಿರುವುದರಿಂದ ಪರಿಷತ್ತು ಆಜ್ಞೋಲ್ಲಂಘನ ಮಾಡದೆ ಇದೆ

ಭರತಪುರ – ಪುದುಕೋಟೆ

ಈ ಸಂಸ್ಥಾನಗಳ ರಾಜರು ಅಪ್ರಾಪ್ತ ವಯಸ್ಕರಿರುವುದರಿಂದ, ಅವರು ಪ್ರಾಪ್ತ ವಯಸ್ಕರಾಗಿ ಬರುವ ತನಕ ಪ್ರಜೆಗಳು ಜವಾಬುದಾರಿ ಸರಕಾರ ಪ್ರಶ್ನೆಯನ್ನು ಎತ್ತಬಾರದೆಂದು ರೀಜನ್ಸಿ ಸರಕಾರಗಳು ಹೇಳುತ್ತವೆ. ಆದರೆ ಪ್ರಜಾಪರಿಷತ್ತುಗಳು ಜವಾಬುದಾರ ಸರಕಾರದ ಪ್ರಶ್ನೆಯನ್ನು ತತ್ಕಾಲಕ್ಕೆ ಬದಿಗಿಟ್ಟು, ಸಧ್ಯಂತ ಸರಕಾರದ ಬೇರೆ ಮುಂದಿಟ್ಟ ಕನಿಷ್ಠ ಬೇಡಿಕೆಗಳನ್ನು ಈ ರೀಜನ್ಸಿ ಸರಕಾರಗಳು ತಿರಸ್ಕರಿಸಿವೆ. ಹೀಗಾದ್ದರಿಂದ ಈ ಸಂಸ್ಥಾನಗಳಲ್ಲಿ ಸರಕಾರಗಳಿಗೂ ಪ್ರಜಾಪರಿಷತ್ತುಗಳಿಗೂ ಒಳ್ಪೆಟ್ಟು ಉಂಟಾಗಿದೆ ಸಂಸ್ಥಾನಗಳಲ್ಲಿ ಅಸಂತೋಷವು ಹರಡುತ್ತಾ ಇದೆ

ಸಂಡೂರು

ತಾ ೨೨–೪–೩೯ರ ದಿನ ಶ್ರೀ ಗುರುಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ಪ್ರಜಾಪರಿಷತ್ತು ಸ್ಥಾಪಿಸಲ್ಪಟ್ಟಿತು ಜವಾಬುದಾರಿ ಸರಕಾರಕ್ಕಾಗಿ ಚಳವಳಿಸ ವುದಕ್ಕೋಸ್ಕರ ಈ ಮುಂದಿನ ಠರಾವು ಒಂದು ಸಭೆಯು ಕೂಡಿತು. ಪಟ್ಟಿಗಳ ಕಪ್ಪಕಾಣಿಕೆಗಳನ್ನು ಸರಕಾರದ ಮುಂದಿನ ಆದಾಯಕ್ಕೋಸ್ಕರ ಇನ್ನೊಂದು ಕಮಿಟಿಯನ್ನು ರಚಿಸಲ್ಪಟ್ಟಿತು ಸರಕಾರವು ನೇಮಿಸಿ ಈ ಕಾರ್ಯಕ್ಕಾಗಿ ಕೈಕೊಳ್ಳಲಿರುವ ಸಂಡೂರು ರಾಜಕೀಯ ಸುಧಾರಣಾ ಸಮಿತಿಯೊಂದಿಗೆ ಪ್ರಜಾಪರಿಷತ್ತು ಸಹಕರಿಸಬೇಕೆಂದು ನಿರ್ಣಯವಾಯಿತು

ಜುವ್ವಿಗೆ ಸುಧಾರಣೆ

ಜುವ್ವಿಯ ನವಾಬರು ತಮ್ಮ ಸಂಸ್ಥಾನಕ್ಕೆ ಕೆಲವು ರಾಜಕೀಯ ಸುಧಾರಣೆಗಳನ್ನು ಕೊಟ್ಟಿರುತ್ತಾರೆ ಈ ತನಕ ಅಲ್ಲಿ ಸರಕಾರದಿಂದ ನೇಮಿತರಾದ ಕೌನ್ಸಿಲು ಇದ್ದಿತ್ತು. ಇನ್ನು ಮುಂದೆ ೧೬ ಮಂದಿ ಚುನಾಯಿತರ ಕಾಯದೆ ಕೌನ್ಸಿಲು ಆಗುವುದು. ಈ ಕೌನ್ಸಿಲಿಗೆ ಅಧ್ಯಕ್ಷರನ್ನು ಆರಿಸುವ, ಬಜೇಟನ್ನು ಮಂಜೂರು ಮಾಡುವ ಇತ್ಯಾದಿ ಅಧಿಕಾರಗಳು ಪ್ರಾಪ್ತವಾಗಿರುವವು

ಮೈಸೂರು

ರಾಜದ್ರೋಹದ ಭಾಷಣಗಳನ್ನು ಮಾಡಿದ್ದರಿಂದ ಮೈಸೂರು ಸರಕಾರವು ಮೈಸೂರು ಕಾಂಗ್ರೆಸಿನ ಕೆಲವು ಪ್ರಮುಖರನ್ನು ಕೈದು ಮಾಡಿ ಶಿಕ್ಷೆಯನ್ನು ಕೊಟ್ಟಿದೆ ಅಲ್ಲಿ ಕಾಂಗ್ರೆಸ ಕೆಲಸಗಾರರು ಮದ್ಯದಂಗಡಿಗಳ ಪಹರೆ ಮಾಡುದುದಕ್ಕೆ ನಿರ್ಬಂಧ ಉಂಟಾಗಿದೆ

ಮೈಸೂರು ರಾಜಕೀಯ ಸುಧಾರಣಾ ಸಮಿತಿಯ ಕೆಲಸ ಕಾರ್ಯಗಳು ಮುಗಿಯುತ್ತ ಬಂದಿರುವವು ಮೈಸೂರು ಕಾಂಗ್ರೆಸು ಈ ಸಮಿತಿಯೊಂದಿಗೆ ಸಹಕರಿಸುವುದಿಲ್ಲ ಈ ಸಮಿತಿಯ ಒಬ್ಬ ಸದಸ್ಯರಾದ ಶ್ರೀ ಆರ್ ಚೆನ್ನಿಗ ರಾಮಯ್ಯನವರು ಮುಂದಿನ ಘಟನೆಯಲ್ಲಿ ಹರಿಜನರ ಹಿತಾಸಕ್ತಿಗಳನ್ನು ಹೇಗೆ ಕಾಪಾಡಬಹುದೆಂಬ ಬಗ್ಗೆ ಮಹಾತ್ಮರಿಂದ ಅನುಭವವನ್ನು ತೆಗೆದುಕೊಳ್ಳುವದಕ್ಕೋಸ್ಕರ ಸೇವಾಗ್ರಾಮಕ್ಕೆ ಹೊರಟು ಹೋಗಿದ್ದಾರೆ

ಬರೋಡ

ಬರೋಡದ ಹೊಸ ಮಹಾರಾಜರಾದ ಶ್ರೀ. ಪ್ರತಾಪಸಿಂಹಗಾಯಕವಾಡರ ಸಿಂಹಾಸನಾರೋಹಣ ಸಮಾರಂಭವು ಕಳೆದ ವಾರ ನಡೆಯಿತು. ಈ ಮಹಾರಾಜರು ರಾಜಕಾರ್ಯದಲ್ಲಿ ಪ್ರಾರಂಭದಿಂದಲೂ ಬಹಳ ಆಸಕ್ತಿಯನ್ನು ತೋರಿಸಿದವರಿದ್ದಾರೆ ಆದ್ದರಿಂದ ಇವರ ಕಾಲದಲ್ಲಿ ಬರೋಡ ಪ್ರಜೆಗಳಿಗೆ ಸುರಾಜ್ಯವು ಮಾತ್ರವಲ್ಲ ಅವರ ಛತ್ರಛಾಯೆಯಲ್ಲಿ ಸ್ವರಾಜ್ಯವೂ ಪ್ರಾಪ್ತವಾಗುವುದೆಂದು ಆಶಿಸಲಾಗಿದೆ.

[೧೬ನೇ ಪುಟವನ್ನು ನೋಡಿರಿ]



ಜನರು ಸ್ವಸ್ತಿಕಾ "ಕಾಂತಿ"

ಟ್ಯೊಲೆಟ್ ಸೋಪನ್ನೇ

ಯಾಕೆ ಆರಿಸುತ್ತಾರೆ?

ಯಾಕಂದರೆ ಪ್ರತಿನಿತ್ಯದ ಸ್ನಾನಕ್ಕೆ ಇದು ಬಹಳ ಉತ್ತಮವಾದದ್ದು ಮತ್ತು ಬಹಳ ಕಡಿಮೆ ಬೆಲೆಯ ಸಾಬೂನಾಗಿರುತ್ತದೆ.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.

ನಿಜಾಂ ಸರಕಾರದ ಧಾರ್ಮಿಕ ಪಕ್ಷಪಾತವನ್ನು ಕಾಂಗ್ರೆಸು ಸಮರ್ಥಿಸುವುದಿಲ್ಲ

ದಯಾನಂದ ಮಿಶ್ಯನಿನ ಶ್ರೀ. ದೇವೀಚಂದರಿಗೆ ಪಂಡಿತ ಜವಹರಲಾಲರ ಪತ್ರ

ಶ್ರೀ. ಭೋಪಟ್ಕರರ ಕೈದು!

ಹೈದರಾಬಾದು ಆರ್ಯ ಸತ್ಯಾಗ್ರಹದ ಕುರಿತು ಕಾಂಗ್ರೆಸಿನ ಧೋರಣೆ ಏನಿರುವದೆಂದು ದಯಾನಂದ ಮಿಶ್ಯನಿನ ಶ್ರೀ. ದೇವಿಚಂದರು ಕೇಳಿದುದಕ್ಕೆ ಪಂಡಿತ ಜವಾಹರಲಾಲ ನೆಹರು ಅವರು ಹೀಗೆ ಉತ್ತರ ಕೊಟ್ಟಿದ್ದಾರೆ—'ಲೂಧಿಯಾನದಲ್ಲಿ ಕೂಡಿದ ಅಖಿಲ ಭಾರತ ದೇಶೀ ಸಂಸ್ಥಾನಗಳ ಪ್ರಜಾ ಪರಿಷತ್ತು ಹೈದರಾಬಾದ ಸತ್ಯಾಗ್ರಹವನ್ನು ಖಂಡಿಸಿರುವುದಿಲ್ಲ; ಆ ಚಳವಳಿಯನ್ನು ಸಾಂಪ್ರದಾಯಿಕವೆಂದು ಅದು ಠರಾವು ಮಾಡಿದ್ದು ಇಲ್ಲ. ಹೈದರಾಬಾದಿನಲ್ಲಿ ಆರ್ಯಸಮಾಜಗಳಿಗೆ ಧಾರ್ಮಿಕ ಸ್ವಾತಂತ್ರ್ಯವಿರುವುದಿಲ್ಲವೆಂಬುದನ್ನು ಪರಿಷತ್ತು ಒಪ್ಪಿದೆ. ಇಂಥ ಸಂಕಷ್ಟಗಳ ನಿವಾರಣೆಗೆ ಆರ್ಯಸಮಾಜಗಳು ಮಾಡುವ ಪ್ರಯತ್ನಗಳು ಜಾತೀಯವಾಗುವುದಿಲ್ಲ. ಆದರೆ ಆರ್ಯ ಸತ್ಯಾಗ್ರಹದಿಂದ ಹೈದರಾಬಾದ ಸರಕಾರವು ಅಲ್ಲಿ, ಜವಾಬುದಾರಿ ಸರಕಾರ ಸ್ಥಾಪನೆಗೆ ಉಂಟಾದ ರಾಷ್ಟ್ರೀಯ ಚಳವಳಿಯನ್ನೇ' ಸಾಂಪ್ರದಾಯಿಕವೆಂದು ಮಿಥ್ಯಾಪವಾದವನ್ನು ಹೊರಿಸುವ ಸಂದರ್ಭ ಬಂದೀತೆಂಬ ಸಂದೇಹವು ಮಾತ್ರ ಪರಿಷತ್ತಿಗುಂಟಾಗಿತ್ತು. ಹೈದರಾಬಾದ ಸರಕಾರದ ಈಗಿನ ನೀತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಾಂಗ್ರೆಸು ಸಮರ್ಥಿಸುವುದೇ ಇಲ್ಲ.'

ಕೈದುಗಳು–ಶಿಕ್ಷೆಗಳು

ಡಾಕ್ಟರ ಗಂಧರಲಾಲರು ದಳಪತಿಗಳಾಗಿ ೧೦೭ ಆರ್ಯಸಮಾಜಿಗಳ ಒಂದು ದಳವು ಉಸ್ಮಾನಾಬಾದಿನಲ್ಲಿ, ಸ್ವಾಮಿ ಧರ್ಮಾನಂದರ ನಾಯಕತ್ವದಲ್ಲಿ ೯೭ ಆರ್ಯಸಮಾಜಿಗಳ ಇನ್ನೊಂದು ದಳವು ತುಳಜಾಪುರದಲ್ಲಿ ಕೈದಾದುವು. ಎಪ್ರಿಲ್ ೩೦ರ ದಿನ ಪೂನೆಯಿಂದ ಶ್ರೀ ಯಲ್ ಬಿ ಭೋಪಟ್ಕರರು ತೆಗೆದುಕೊಂಡು ಬಂದ ೨೫೯ ಹಿಂದು ಸತ್ಯಾಗ್ರಹಿಗಳ ದಳವು ೨೬ನೆ ತಾರೀಖಿನ ದಿನ ಹೈದರಾಬಾದಿನಲ್ಲಿ ಕೈದಾಯಿತು. ಶ್ರೀ. ಭೋಪಟ್ಕರರೂ ಕೈದಾದರು. ಇವರೆಲ್ಲರಿಗೆ ನಾನಾ ಪ್ರಕಾರ ಶಿಕ್ಷೆಗಳಾಗಿವೆ.

ರಾಜಗುರುಗಳ ವಕ್ತವ್ಯ

ಹೈದರಾಬಾದ ಸತ್ಯಾಗ್ರಹದಲ್ಲಿ ಕೇವಲ ಆರ್ಯಸಮಾಜಿಗಳು ಮತ್ತು ಹಿಂದುಗಳು ಮಾತ್ರ ಭಾಗವಹಿಸಿಕೊಳ್ಳಬಹುದು–ಇತರರು ಕೂಡದು ಎಂಬ ಭ್ರಮೆಯು ಉಂಟಾಗಿರುವುದರಿಂದ ಅದನ್ನು ನಿವಾರಿಸಲಿಕ್ಕೆ ಸತ್ಯಾಗ್ರಹದ ಚತುರ್ಥ ಸರ್ವಾಧಿಕಾರಿಗಳಾದ ರಾಜಗುರು ಧುರೇಂದ್ರ ಶಾಸ್ತ್ರಿಯವರು ಒಂದು ವಕ್ತವ್ಯವನ್ನು ಕೊಟ್ಟು–ಯಾರಿಗೆ ಧಾರ್ಮಿಕ ಸ್ವಾತಂತ್ರ್ಯವು ಪ್ರಿಯವಾಗಿದೆಯೋ ಅವರು ಮುಸಲ್ಮಾನ–ಕ್ರೈಸ್ತರಾಗಿದ್ದರೂ ಕೂಡ ಸತ್ಯಾಗ್ರಹದಲ್ಲಿ ಸಮ್ಮಿಳಿತರಾಗಬಹುದೆಂದು ಹೇಳಿದ್ದಾರೆ.

ಶ್ರೀ. ಶಂಕರಾಚಾರ್ಯರು–ಹೈದರಾಬಾದಿಗೆ

ಜ್ಯೋತಿರ್ಮಠದ ಶ್ರೀ. ಶಂಕರಾಚಾರ್ಯರು ಹೈದರಾಬಾದಿಗೆ ಹೊರಟು ಹೋಗುತ್ತಾರೆ. ಆರು ಲಕ್ಷ ಸನ್ಯಾಸಿಗಳನ್ನು ತೆಗೆದುಕೊಂಡು ಹೈದರಾಬಾದಿನಲ್ಲಿ ಸತ್ಯಾಗ್ರಹ ಮಾಡುವೆವೆಂದು ಘೋಷಿಸಿದವರು ಇವರೇ ಆಗಿದ್ದಾರೆ. ಹೈದರಾಬಾದದ ಸತ್ಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ತಿಳಕೊಳ್ಳಲಿಕ್ಕೆ ಇವರು ಬರುವವರಿದ್ದಾರೆಂದು ತಿಳಿದೊಡನೆ ಹೈದರಾಬಾದಿನ ಉಲೇಮ ರಲ್ಲೊಬ್ಬರಾದ ಮೌಲವೀ ಪಾದಶಾ ಹುಸ್ಸೇನ ಎಂಬವರು ಅವರಿಗೆ ಒಂದು ಪತ್ರ ಬರೆದು–ತಾವು ಬಂದು ನಮ್ಮನ್ನು ಸ್ವತಃ ಕಂಡು ಮಾತನಾಡಬೇಕೆಂದೂ, ಆ ಮೇಲೆ ಹೇಗೆ ತೋರುತ್ತದೋ ಹಾಗೆ ಮಾಡಬಹುದೆಂದೂ ಹೇಳಿದ್ದಾರೆ.

ರಾಜಗುರುಗಳ ವಕ್ತವ್ಯ!!

ಸತ್ಯಾಗ್ರಹೀ ಕೈದಿಯೊಬ್ಬರ ಧುರ್ಮರಣ

ಇಬ್ಬರ ಸಮಾಗಮ–ಭೇಟಿಯಾಗುವುದಕ್ಕೋಸ್ಕರ ಸಿದ್ಧತೆಗಳಾಗಿವೆ. ಸ್ವಾಮಿಯವರಿಗೆ ವಿಜೃಂಭಣೆಯ ಸ್ವಾಗತವನ್ನು ಕೊಡುವುದಕ್ಕೋಸ್ಕರ ಹಿಂದೂ ಮುಸಲ್ಮಾನ ಸದ್ಗೃಹಸ್ಥರಿಂದೊಡಗೂಡಿದ ಒಂದು ಸಮಿತಿಯು ರಚನೆಯಾಗಿದೆ. ಸರಕಾರವೂ ಈ ಸ್ವಾಗತ ಸಂಭ್ರಮದಲ್ಲಿ ಸಹಕರಿಸುವದೆಂದು ಗೊತ್ತಾಗಿರುವುದರಿಂದ, ಪ್ರಾಯಶಃ ಸ್ವಾಮಿಜಿಯವರ ಸಂದರ್ಶನದ ಫಲವಾಗಿ ಹಿಂದು ಮತ್ತು ಆರ್ಯಸಮಾಜಗಳಿಗೂ ಸರಕಾರಕ್ಕೂ ಒಂದು ಒಡಂಬಡಿಕೆಯಾಗಿ, ಹೈದರಾಬಾದದಲ್ಲಿ ಶಾಂತಿಸ್ಥಾಪನೆಯಾಗಬಹುದೆಂದು ಊಹಿಸಲಾಗಿದೆ.

ಸತ್ಯಾಗ್ರಹಿ ಕೈದಿಗಳ ಕಷ್ಟ

ಜೈಲುಗಳಿಂದ ಬಿಡುಗಡೆಹೊಂದಿದ ಇಬ್ಬರು ಸತ್ಯಾಗ್ರಹಿಗಳು ತಮ್ಮ ಜೈಲು ಜೀವನದ ಕತೆಯನ್ನು ಹೀಗೆ ಹೇಳಿದ್ದಾರೆ—'ಎಪ್ರಿಲ್ ೧೭ನೆ ತಾರೀಖಿನ ದಿನ ನಾವು ೩೮ ಮಂದಿ ಸತ್ಯಾಗ್ರಹಿಗಳು ಸತ್ಯಾಗ್ರಹ ಮಾಡಲಿಕ್ಕೆ ಲಾತೂರಿಗೆ ಹೋಗಿದ್ದೆವು. ಅದೇ ದಿನ ಪೋಲೀಸರು ನಮ್ಮನ್ನು ಕೈದುಮಾಡಿದರು. ಆ ದಿನ ನಮಗೆ ಊಟ ಕೊಡಲಿಲ್ಲ. ರಾತ್ರಿ ಸುಮಾರು ೮–೯ ಗಂಟೆಯಾಗುವಾಗ ನಮ್ಮಲ್ಲಿ ಒಬ್ಬೊಬ್ಬರನ್ನು ಒಂದೊಂದು ಕತ್ತಲೆ ಕೋಣೆಯಲ್ಲಿ ತುಂಬಿಸಿ ಚೆನ್ನಾಗಿ ಹೊಡೆದು ಬಡೆದು ನಮಗೆ ಅಮಾನುಷಿಕ ಕಷ್ಟಗಳನ್ನು ಕೊಟ್ಟರು. ನಮ್ಮನ್ನು ಸುಟ್ಟಿಡಲಿಕ್ಕೂ ತಯ್ಯಾರಿಮಾಡಿದರು. ಬಹಳ ಅಸಭ್ಯ ಶಬ್ದಗಳನ್ನು ಬೈದರು. ಆ ಮೇಲೆ ಬಲಾತ್ಕಾರದಿಂದ ಮಾಫೀನಾಮೆಗಳ ಮೇಲೆ ನಮ್ಮ ಹಸ್ತಾಕ್ಷರಗಳನ್ನು ತೆಗೆದುಕೊಂಡು, ಬಿಟ್ಟುಬಿಟ್ಟರು. ಬಿಡುವಾಗ ನಮ್ಮನ್ನು ಬೂಟ್ಸುಗಳಿಂದ ಒದೆದು ತುಳಿದರು. ೩ ದಿನ ಹವಾಲಾತಿನಲ್ಲೇ ಇದ್ದೆವು. ಈ ಮೂರು ದಿನಗಳಲ್ಲಿ ರಾತ್ರಿ ಒಂದು ಹೊತ್ತಿಗೆ ಮಾತ್ರ ಊಟ ಕೊಡುತ್ತಿದ್ದರು.

ತಿಂಗಳಿಗೆ ೫೦೦೦!

ಸತ್ಯಾಗ್ರಹವು ಇನ್ನೂ ಪರಿಣಾಮಕಾರಿಯಾಗಿ ನಡೆಯಬೇಕೆಂದು ಶೋಲಾಪುರ ಸತ್ಯಾಗ್ರಹ ಸಮಿತಿಯು ತಿಂಗಳಿಗೆ ೫೦೦೦ಕ್ಕೆ ಕಡಿಮೆಯಾಗದಷ್ಟು ಸತ್ಯಾಗ್ರಹಿಗಳನ್ನು ಹೈದರಾಬಾದಿಗೆ ಕಳುಹಿಸಿಕೊಡಬೇಕೆಂದು ನಿರ್ಣಯಿಸಿದೆ. ಸತ್ಯಾಗ್ರಹ ಪಂಚಮ ಸರ್ವಾಧಿಕಾರಿಗಳಾದ ಪಂಡಿತ ವೇದವ್ರತಜೀ ವಾನಪ್ರಸ್ಥಿಯವರು ಶೋಲಾಪುರಕ್ಕೆ ಬಂದು ಮುಟ್ಟಿದ್ದಾರೆ. ಅವರು ೫೦೦ ಸತ್ಯಾಗ್ರಹಿಗಳನ್ನು ಕರಕೊಂಡು ಇದೇ ಮೇ ೫ನೇ ತಾರೀಖಿನ ದಿನ ಸತ್ಯಾಗ್ರಹ ಮಾಡುವರು.

ಪ್ರಚಾರ–ಹಣ ಸಂಗ್ರಹ

ಅಹಮ್ಮದ ನಗರ, ಶಿಕೋಹಾಬಾದ, ಪಿರೋಜಾಬಾದ, ಹೋಶಿಯಾರಪುರ, ದಾನಾಪುರ, ಪ್ರತಾಪಗಡ, ಅಮರಾವತಿ, ಇಟಾವಾ ಪುರ, ದೇಹರಾದೂನ, ಜೋಧಪುರ ಮೊದಲಾದ ದಕ್ಷಿಣೋತ್ತರ ಎಲ್ಲ ಊರುಗಳಲ್ಲಿ ಸತ್ಯಾಗ್ರಹ ಪ್ರಚಾರ ಕಾರ್ಯವೂ ಸತ್ಯಾಗ್ರಹ ನಿಧಿಗೆ ಹಣ ಸಂಗ್ರಹವೂ ಆಗುತ್ತಾ ಇದೆ.

ಮದ್ರಾಸಿನಲ್ಲಿ ಬೃಹತ್ಸಭೆ

ನಿಜಾಮ ಹೈದರಾಬಾದದ ಹಿಂದುಗಳು ಮತ್ತು ಆರ್ಯಸಮಾಜಿಗಳ ವಿಷಯ ಸರಕಾರದ ಧೋರಣವನ್ನು ನಿಷೇಧಿಸುವುದಕ್ಕೋಸ್ಕರವೂ, ಆರ್ಯ ಸತ್ಯಾಗ್ರಹಕ್ಕೆ ಪ್ರೋತ್ಸಾಹವನ್ನು ಕೊಡುವುದಕ್ಕಾಗಿಯೂ ತಾ. ೨೪–೪–೩೯ರ ದಿನ ಸಾಯಂಕಾಲ ಟ್ರಿಪ್ಲಿಕೇನ ಸಮುದ್ರ ದಂಡೆಯ ಮೇಲೆ-ಶ್ರೀ. ರಮಾನಾಥ ಗೋಯಂಕರ ಅಧ್ಯಕ್ಷತೆಯಲ್ಲಿ ಒಂದು ಬೃಹತ್ ಸಾರ್ವಜನಿಕ ಸಭೆಯು ಕೂಡಿತು. ಹೈದರಾಬಾದ ಹಿಂದುಗಳು ಮತ್ತು ಆರ್ಯಸಮಾಜಗಳ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಹಕ್ಕು ಅಧಿಕಾರಗಳನ್ನು ಈಗ ರಕ್ಷಿಸದೆ ಹೋದರೆ ಹಿಂದೂ ಧರ್ಮವೇ ಶೀಘ್ರದಲ್ಲಿ ನಾಶವಾಗುವ ಭಯವುಂಟೆಂದೂ, ಆದ್ದರಿಂದ ಹೈದರಾಬಾದಿನ ತಮ್ಮ ಜಾತಿ ಸಹೋದರರೊಡನೆ ಉಳಿದ ಕಡೆಗಳ ಹಿಂದುಗಳು ಸಹಾನುಭೂತಿಯನ್ನು ತೋರಿಸಿ ಸಹಾಯ ಮಾಡುವುದು ಕರ್ತವ್ಯವಾಗಿದೆಯೆಂದೂ ಅಧ್ಯಕ್ಷರು ಹೇಳಿದರು. ಅನಂತರ ಶ್ರೀಗಳಾದ ಕರಮಚಂದ ಭಲ್ಲಾ, ಯಸ್. ಯಸ್. ರಾಜಗೋಪಾಲನ, ದಾಸ್. ಮಹಾಲಿಂಗಮ, ಎ. ಯಲ್. ಪಾಂಡ್ಯಾ, ಪಂಡಿತ ಸಚ್ಚಿದಾನಂದ ಮೊದಲಾದವರು ಭಾಷಣಗಳನ್ನು ಕೊಟ್ಟರು. ಅನೇಕ ಠರಾವುಗಳು ಮಂಜೂರಾದುವು. ಆ ಮೇಲೆ ಅಧ್ಯಕ್ಷರು ಸಭಾ ಕಾರ್ಯಕ್ರಮವನ್ನು ಮುಗಿಸುತ್ತಾ – 'ಹೈದರಾಬಾದದಲ್ಲಿ ಶೇಕಡ ೮೫ರಷ್ಟು ಮಂದಿ ಹಿಂದುಗಳಿರುತ್ತಾರಾದರೂ, ಸರಕಾರಿ ನೌಕರಿಗಳಲ್ಲಿ ಅವರಿಗೆ ದೊರೆತ ಪಾಲು ಬಹಳ ಕಡಿಮೆ. ಹೈದರಾಬಾದದಲ್ಲಿ ಜಾತಿದ್ವೇಷಕ್ಕೆ ಬಹಳ ಆಸ್ಪದವಾಗಿದೆ. ಅಲ್ಲಿ ಹಿಂದುಗಳಿಗೆ ವ್ಯಕ್ತಿಸ್ವಾತಂತ್ರ್ಯ, ನಾಗರಿಕ ಹಕ್ಕುಗಳು ಇರುವುದಿಲ್ಲ. ಹಿಂದುಗಳ ಬೇಡಿಕೆಗಳು ಮತ್ತು ಅವರ ಉನ್ನತಿಯ ಕಡೆಗೆ ಸರಕಾರವು ಲಕ್ಷ್ಯವನ್ನು ಕೊಡುವುದಿಲ್ಲ. ಆದ್ದರಿಂದ ಹಿಂದುಗಳೆಲ್ಲರು ಸಂಘಟಿತರಾಗಿ ಆರ್ಯ ಸತ್ಯಾಗ್ರಹವನ್ನು ಪ್ರೋತ್ಸಾಹಿಸಬೇಕೆಂದರು.

ಡಾಕ್ಟರ ಪರಾಂಜಪೆಯವರು ಪುನಃ ಸಿದ್ಧರು!

ಹೈದರಾಬಾದ ಜೈಲಿನಿಂದ ಬಿಡುಗಡೆಹೊಂದಿದ ಡಾಕ್ಟರ ಪರಾಂಜಪೆ ಮತ್ತು ಅವರ ಸಂಗಡಿಗ ಸತ್ಯಾಗ್ರಹೀ ವೀರರನ್ನು ಅಭಿನಂದಿಸುವುದಕ್ಕೋಸ್ಕರ ನಾಗಪುರದಲ್ಲಿ ಕೂಡಿದ ಒಂದು ಸಭೆಯಲ್ಲಿ–'ಸತ್ಯಾಗ್ರಹ' ಯುದ್ಧ ಸಮಿತಿಯು ಪುನಃ ನನ್ನನ್ನು ಕರೆಯುವುದಾದರೆ ನಾನು ಪುನಃ ಹೈದರಾಬಾದದಲ್ಲಿ ಸತ್ಯಾಗ್ರಹದ ಧರ್ಮಯುದ್ಧವನ್ನು ಮಾಡಲಿಕ್ಕೆ ಸಿದ್ಧನಿದ್ದೇನೆಂದು' ಹೇಳಿರುವರು.

ಉಪಾಧ್ಯಾಯರೊಬ್ಬರ ರಾಜಿನಾಮೆ

ಅಲೀಗಡ ಮುಸ್ಲಿಮ್ ಯುನಿವರ್ಸಿಟಿ ಉಪಾಧ್ಯಾಯರಾದ ಶ್ರೀ ನಾರಾಯಣ ವಿನಾಯಕ ಜೋಶಿ ಬಿ ಎ (ಆನರ್ಸ) ಇವರು ಹೈದರಾಬಾದ ಸತ್ಯಾಗ್ರಹದಲ್ಲಿ ಭಾಗವಹಿಸಿಕೊಳ್ಳುವುದಕ್ಕೋಸ್ಕರ ತಮ್ಮ ಪದವಿಗೆ ರಾಜಿನಾಮೆ ಕೊಟ್ಟಿರುತ್ತಾರೆ. ಅವರು ಕೊಲಾಬಾ ಜಿಲ್ಲೆಯ

ಜೈಲುಗಳಲ್ಲಿ ನರಕಯಾತನೆ!!

ದ್ವಿತೀಯ ಸರ್ವಾಧಿಕಾರಿಗಳಾಗಿ ಕೆಲಸ ಮಾಡುವರು.

ಸತ್ಯಾಗ್ರಹಿ ಕೈದಿಗಳ ದುರ್ಮರಣ

ಗುಲ್ಬರ್ಗದಲ್ಲಿ ಕೈದಾಗಿ ಹೈದರಾಬಾದ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ಸ್ವಾಮಿ ಸತ್ಯಾನಂದಜೀ ಎಂಬ ಸತ್ಯಾಗ್ರಹಿಗಳು ಜೈಲಿನಲ್ಲೇ ಮೃತ್ಯುವಶರಾದರು. ಅಧಿಕಾರಿಗಳು ಅವರ ಶವವನ್ನು ದಹನ ಸಂಸ್ಕಾರಕ್ಕಾಗಿ ಸ್ಥಳೀಯ ಆರ್ಯಸಮಾಜಕ್ಕೆ ಕೊಟ್ಟರು. ಮರಣದ ಕಾರಣವು ತಿಳಿದುಬರುವುದಿಲ್ಲ.

ಅಂಗಡಿ ಬಾಗಿಲು ಹಾಕಿದ್ದಕ್ಕೆ ಒಂದು ತಿಂಗಳ ಸಜೆ

ಇದೇ ೨೨–೪ ೩೯ರ ದಿನ ಆರ್ಯ ಬಾಂಧವ ಚತುರ್ಥ ಹೈದರಾಬಾದ ದಿನಾಚರಣೆ ಸಂಬಂಧ ಹೈದರಾಬಾದಿನ ನಾರಾಯಣಸ್ವಾಮಿ ಎಂಬ ಫೋಟೋಗ್ರಾಫರರು ಅಂಗಡಿ ಬಾಗಿಲು ಹಾಕಿದ್ದಕ್ಕೆ ಅವರಿಗೆ ಒಂದು ತಿಂಗಳ ಶಿಕ್ಷೆ ಮತ್ತು ೩೦೦ ರೂಪಾಯಿ ಜುಲ್ಮಾನೆಯಾಯಿತು. ಜುಲ್ಮಾನೆ ಹಣವನ್ನು ವಸೂಲು ಮಾಡುವುದಕ್ಕೋಸ್ಕರ ಅಂಗಡಿಯಲ್ಲಿದ್ದ ಕೆಮರಾ ವಗೈರೆ ಮತ್ತು ಇತರ ಕೆಲವು ಸಾಮಾನುಗಳು ಜಪ್ತಾಗಿವೆ.

ಸೇನಾಪತಿ ಬಾಪಟರ ಸೂಚನೆ

ಹೈದರಾಬಾದ ಸತ್ಯಾಗ್ರಹವು ಇನ್ನಷ್ಟು ಪರಿಣಾಮಕಾರಿಯಾಗಿ ಸಾರ್ವಭೌಮ ಸರಕಾರವು ಇದರಲ್ಲಿ ಪ್ರವೇಶಿಸಬೇಕೆ ಮಾಡುವುದಕ್ಕೋಸ್ಕರ ಹೈದರಾಬಾದ ಸಂಸ್ಥಾನದಲ್ಲಿ ಮಾತ್ರವಲ್ಲ ಬ್ರಿಟಿಷ ಇಂಡಿಯಾ ಪ್ರಾಂತಗಳಲ್ಲೂ ಸತ್ಯಾಗ್ರಹವನ್ನಾರಂಭಿಸಬೇಕಾಗಿ ಸೇನಾಪತಿ ಬಾಪಟರು ಸೂಚಿಸುತ್ತಾರೆ. ಅವರು ಸೂಚಿಸುವ ಪ್ರಕಾರ ಬ್ರಿಟಿಷ ಇಂಡಿಯಾದ ಆರ್ಯ ಸತ್ಯಾಗ್ರಹಿಗಳು ಹೈದರಾಬಾದಿನಲ್ಲಿ ಸತ್ಯಾಗ್ರಹ ಮಾಡುವರು. ಹೀಗಾದರೆ ಹೈದರಾಬಾದ ಸತ್ಯಾಗ್ರಹವು ದೇಶವ್ಯಾಪಿಯಾಗಿ ನಡೆಯುವುದು. ಮತ್ತು ಪರಿಣಾಮಗಳು ಕಡಿಮೆಯಾಗುವವು ಮತ್ತು ಶೀಘ್ರಗುಣಕಾರಿಯಾಗುವುದು.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

NACET

ಪರಿಷ್ಕೃತ ಮತ್ತು ಬೆಲೆಗೆ ನೆಸೆಟ್ ಕ್ಷೌರದ ಸೆಟ್ಟಿನಷ್ಟು ಸಮರ್ಪಕವು ಯಾವುದೂ ಇಲ್ಲ. ಈ ಸೆಟ್ಟಿನಲ್ಲಿ ಒಂದು ನೆಸೆಟ್ ರೇಜರು ಮತ್ತು ನೆಸೆಟ್ ಬ್ಲೇಡುಗಳು ಒಂದು ಅಚ್ಚುಕಟ್ಟಾದ ಪೆಟ್ಟಿಗೆಯಲ್ಲಿರುತ್ತವೆ. ಕ್ಷೌರ ಕ್ರಿಯೆಯಲ್ಲಿ ಅನೇಕ ಬಾರಿ ಸರಿಯಾಗಿ ಉಪಯೋಗಕ್ಕೆ ಬರುವ ಗುಣವುಳ್ಳ ಈ ಬ್ಲೇಡುಗಳನ್ನು ಹರಿತವಾಗಿ ಇಡಬಹುದು.



ನೆಸೆಟ್ ಬ್ಲೇಡುಗಳು 7 ಆಣೆಗೆ 10
ಒಂದು ಸೆಟ್ಟಿಗೆ ಆಣೆ 10

ಹಿಟ್ಲರನ ೫೦ನೆ ವರ್ಧಂತ್ಯುತ್ಸವ

ಹಿಟ್ಲರನು ಇಂದು ೫೦ ವರ್ಷದವನಾಗಿರುವನು—ಇಡೀ ಜರ್ಮನಿಯು ಈತನ ೫೦ನೇ ವರ್ಧಂತ್ಯುತ್ಸವವನು ಬಹಳ ವಿಜೃಂಭಣೆಯಿಂದ ಜರಗಿಸಿತು—ಹಿಂದೆ ಪರಾಕ್ರಮ ಶಾಲಿಗಳಾದ ಚಕ್ರವರ್ತಿಗಳಿಂದಲೂ ಸಾಧ್ಯವಾಗದ ಅಗಾಧ ಕಾರ್ಯಗಳನ್ನು ಹಿಟ್ಲರನು ನೆರವೇರಿಸಿರುವನು

ಜರ್ಮನ ಜನಾಂಗದ ನಾಯಕ

ಹಿಟ್ಲರನ ೫೦ನೇ ಜನ್ಮದಿನೋತ್ಸವವು ಸಮಗ್ರ ಜರ್ಮನಿಯಲ್ಲಿ ವಿಶೇಷ ಸ್ಫೂರ್ತಿಯಿಂದ ಆಚರಿಸಲ್ಪಟ್ಟಿತು. ಇಡೀ ಜರ್ಮನ್ ಜನಾಂಗಕ್ಕೆ ಹಿಟ್ಲರನು ದ್ವಿತೀಯ ಸಂಘೋತನಾದ ನಾಯಕನಾಗಿರುವನು. ಕಳೆದ ಮಹಾಯುದ್ಧದ ನಂತರ ಪರಾಜಿತ ಹೀನಾವಸ್ಥೆಗೆ ಇಳಿದಿದ್ದ ಜರ್ಮನ್ ಜನಾಂಗದ ಶಕ್ತಿಯನ್ನು ಪುನಃ ಸಂಘಟಿಸಿ ಕೃತಕೃತ್ಯನಾದ ಹಿಟ್ಲರ್ ಮಹಾಶಯನ ಜೀವಿತದಲ್ಲಿ ಯಾವದಾದರೊಂದು ಮಹತ್ವವು ಇದ್ದೇ ಇರಬೇಕು. ಹಿಟ್ಲರನ ವ್ಯಕ್ತಿತ್ವವು ವಿಚಿತ್ರವಾಗಿರುತ್ತದೆ.

ಜನನ

ಐವತ್ತು ವರ್ಷಗಳ ಹಿಂದೆ ಎಪ್ರಿಲ್ ೨೦ನೆ ತಾರೀಕಿನಂದು ಹಿಟ್ಲರನ ಜನನವು ಆಸ್ಟ್ರಿಯದಲ್ಲಾಯಿತು. ಆತನ ತಂದೆಯು ಸ್ವಲ್ಪ ಸಂಬಳ ದುಡಿಯುವ ಸರಕಾರಿ ನೌಕರನಾಗಿದ್ದನು. ತನ್ನ ಪುತ್ರನಿಗೆ ಸಾಕಷ್ಟು ವಿದ್ಯಾಭ್ಯಾಸವನ್ನು ಕಲಿಸಿ ಆತನನ್ನು ಸರಕಾರ್ದದಲ್ಲಿ ದೊಡ್ಡ ಹುದ್ದೆದಾರನಾಗಿ ಮಾಡಬೇಕೆಂಬುದೇ ಹಿಟ್ಲರನ ತಂದೆಯ ಮಹತ್ವಾಕಾಂಕ್ಷೆಯಾಗಿದ್ದಿತು. ಹಿಟ್ಲರನಿಗೆ ೧೬ ವರ್ಷಗಳು ತುಂಬುತ್ತಲೇ ತನ್ನ ತಂದೆಯನ್ನು ಕಳಕೊಂಡನು. ಇದರಿಂದ ಹಿಟ್ಲರನ ವಿದ್ಯಾಭ್ಯಾಸದ ಭಂಗವಾಯಿತು. ಜೀವನವು ಬಹಳ ಕಷ್ಟಮಯವಾಗಿ ಪರಿಣಮಿಸಿತು ಅನಾಥನಾಗಿ ಕಷ್ಟಪರಂಪರೆಗಳನ್ನು ಅನುಭವಿಸಿ ಅಲೆಯಬೇಕಾಯಿತು.. ಈ ಸಮಯದಲ್ಲಿ ಹಿಟ್ಲರನಿಗೆ ಜರ್ಮನ್ ಜನ ಸಾಮಾನ್ಯರ ಕಷ್ಟ ಬಳಕೆಗಳ ಮನವರಿಕೆಯಾಗಿ ತನ್ನ ಮನೋವೃತ್ತಿಯನ್ನು ತನ್ನ ಜನಾಂಗದ ಅಭಿವೃದ್ಧಿಗಾಗಿಯೇ ಕಳೆಯಬೇಕೆಂಬ ಧ್ಯೇಯವನ್ನಿಟ್ಟುಕೊಂಡನು. ಗತಿಸಿದ ಜೀವಜ್ಯೋತಿಗಳಾದ ಅಲೆಕ್ಸಾಂಡರ್, ಫ್ರೆಡರಿಕ್ ಮತ್ತು ನೆಪೋಲಿಯನ ಮೊದಲಾದ ಆದರ್ಶ ಜೀವಿಗಳ ಚರಿತ್ರೆಯಲ್ಲಿ ಹಿಟ್ಲರನಿಗೆ ವಿಶೇಷ ಅಭಿರುಚಿ ಈ ಮಹಾತ್ಮರ ಆದರ್ಶ ಜೀವನದಿಂದ ಸ್ಫೂರ್ತಿಯುಕ್ತನಾದ ಹಿಟ್ಲರನಿಗೆ ಮಾತೃದೇಶದ ಮೇಲಿದ್ದ ಅಭಿಮಾನವು ದ್ವಿಗುಣಿತವಾಯಿತು ತನ್ನ ಸರ್ವಸ್ವವನ್ನು ದೇಶಸೇವೆಗಾಗಿಯೇ ಅರ್ಪಿಸಬೇಕೆಂಬ ಮಹತ್ವಾಕಾಂಕ್ಷೆಯು ಆತನಲ್ಲಿ ಬಲವಾಗಿ ಬೇರೂರಿತು.

ವಿಯೆನ್ನಾಕ್ಕೆ ಪಯಣ

ಹಿಟ್ಲರನಿಗೆ ಕನ್ಹೆ ಹುಟ್ಟಿದ್ದಲ್ಲಿ ಏನೊಂದು ನೌಕರಿಯೂ ಸಿಗಲಿಲ್ಲ ಜೀವನಕ್ಕಾಗಿ ಅವನು ಸ್ವತಃ ದುಡಿಯಬೇಕಾದ ಸಮಯವದು ಕೆಲಸವನ್ನು ಹುಡುಕುತ್ತಾ ವಿಯೆನ್ನಾ ನಗರಕ್ಕೆ ತೆರಳಿದನು ಅಲ್ಲಿ ಅವನಿಗೆ ಕಟ್ಟೋಣಗಳನ್ನು ನಿರ್ಮಿಸುವ ಒಂದು ದಂಧೆಯು ಪ್ರಾಪ್ತವಾಯಿತು ಈ ನೌಕರಿಯಲ್ಲಿರುವಾಗಲೇ ಮೊದಲನೇ ಬಾರಿ ಹಿಟ್ಲರನಿಗೆ ಸೋಶಿಯಲಿಸ್ಟ (ಸಮತಾವಾದ) ಸಂಗಡದವರ ಅನುಭವವಾಯಿತು. ಸಮತಾವಾದದ ಪರಸ್ಪರ ಬಂಧು ಪ್ರೇಮವು ಹಿಟ್ಲರನ ಮೆಚ್ಚುಗೆಯನ್ನು ಪಡೆಯಿತು ಆದರೆ ಆಗಿನ ಸಮತಾವಾದಿಗಳಿಗೆ ರಾಷ್ಟ್ರ ಕಾರಣಪಟುಗಳ ಮೇಲೆ ವಿಶೇಷ ದುರಾಭಿಮಾನವಿತ್ತು ಈ ಧೋರಣೆಯನ್ನು ಹಿಟ್ಲರನು ವಿರೋಧಿಸುತ್ತಿದ್ದನು ಯಾಕಂದರೆ ಹಿಟ್ಲರನಲ್ಲಿ ದೇಶಪ್ರೇಮವೇ ಜೀವನದ ಮುಖ್ಯ ತಿರುಳಾಗಿತ್ತು. ದೇಶಪ್ರೇಮರಹಿತವಾದ ಸಮತಾವಾದವು ಹಿಟ್ಲರನಲ್ಲಿ ಭಯಂಕರ ಮನೋವೇದನೆಯನ್ನುಂಟುಮಾಡುತಿತ್ತು.

ಯಹೂದ್ಯರ ಮೇಲೆ ದ್ವೇಷ ಮತ್ತು ಮಹಾಯುದ್ಧ

ನಂತರ ಹಿಟ್ಲರನು ಕ್ರೈಸ್ತ ಸಮತಾವಾದಿಗಳನ್ನು ಕಂಡನು ಈ ಪಂಗಡವು ಯಹೂದಿಯರ ಹತೋಟಿಯಲ್ಲಿತ್ತು. ಆ ಕಾಲದಲ್ಲಿ ದೇಶದ ಆರ್ಥಿಕ ರಾಜಕೀಯ, ವೈಗ್ನಾನಿಕ, ಶಿಕ್ಷಣಿಕ ಮತ್ತು ನಿಯಾಮಕ ಕಾರ್ಯಗಳು ದೇಶದ ಹಿತದೃಷ್ಟಿಯಿಂದ ಸಾಗುತ್ತಿರಲಿಲ್ಲ. ಯಹೂದ್ಯರ ಈ ವರ್ತನೆಯಿಂದ ದೇಶಕ್ಕೆ ಭಯಂಕರ ಹಾನಿಯೊದಗುವ ಸಂಭವವಿತ್ತು. ಮಹಾಯುದ್ಧದ ಕಾಲದಲ್ಲಿ ಕೂಡ ಈ ಯಹೂದ್ಯರು ಜರ್ಮನ್ ಜನಾಂಗದ ಮೇಲೆ ವಿಷ ಕಾರುತ್ತಿದ್ದರು. ಯುದ್ಧಕಾಲದಲ್ಲಿ ಹಿಟ್ಲರನು ಸೈನ್ಯವನ್ನು ಸೇರಿ ನಾಲ್ಕು ವರ್ಷಕಾಲ ರಣರಂಗದಲ್ಲಿ ಕಾದಾಡಿ ಬಳಲಿದನು. ಈ ಸಮಯದಲ್ಲಿ ಯುದ್ಧ ಹೂಡುವ ರೀತಿ ಸೈನ್ಯ ವ್ಯೂಹಗಳ ರಚನೆಯ ವಿಷಯ ಹಿಟ್ಲರನಿಗೆ ಅಸಾಮಾನ್ಯವಾದ ಅನುಭವವು ಪ್ರಾಪ್ತವಾಯಿತು.

ಹಿಟ್ಲರನ ಅಭ್ಯುದಯ

ಮಹಾಯುದ್ಧವು ಮುಗಿಯಿತು. ಜರ್ಮನಿಯಲ್ಲಿ ಶಾಂತಿಯಿಲ್ಲ. ಜರ್ಮನರು ಅನ್ನಕ್ಕಾಗಿ ಬಳಲಬೇಕಾಯಿತು. ಜರ್ಮನಿಯ ಆಗಿನ ಸ್ಥಿತಿಯು ಚಿಂತಾಜನಕವಾಗಿತ್ತು ಆಗ ಇತರ ಜನಾಂಗಗಳು ಜರ್ಮನ್ ಜನಾಂಗದ ಮೇಲೆ ವರ್ಸಾಲಿ ಒಪ್ಪಂದವೆಂಬ ಅನೇಕ ಪ್ರತಿಬಂಧನಗಳು ಹೇರಿಸಲ್ಪಟ್ಟವು ದೇಶದಲ್ಲಿ ದಾರಿದ್ರ್ಯವು ಮನೆಮಾಡಿ ಆಹಾರ ಸಾಮಾಗ್ರಿಯು ಸಿಕ್ಕುವುದು ಬಹಳ ಕಷ್ಟವಾಯಿತು ಇದರಿಂದಾಗಿ ಜನಾಂಗವು ಕ್ಷೋಭೆಗೊಂಡಿತು. ರಾಜಕೀಯ ಚಳವಳದಲ್ಲಿ ಪರಂತರ ಬಿಕ್ಕಟ್ಟು ಪ್ರಾಪ್ತವಾಯಿತು ಈ ಸಮಯದಲ್ಲಿ ಜರ್ಮನ್ ಲೇಬರ್ ಪಂಗಡವು ತನ್ನ ಉದ್ದೇಶಗಳ ಕುರಿತು ಒಂದು ಕರಪತ್ರವನ್ನು ಪ್ರಕಟಿಸಿತು

ಈ ಕರಪತ್ರವು ಆಗಲೇ ದಾರಿದ್ರ್ಯದ

ಮಕ್ಕಳ ಆರಾಧಕ ಹಿಟ್ಲರ್

ಯಾತನೆಯಿಂದ ನರಳುತ್ತಿದ್ದ ಹಿಟ್ಲರನ ಕೈಸೇರಿತು. ಅದನ್ನು ಓದುವ ಕುತೂಹಲವು ಹಿಟ್ಲರನಿಗಾಗಲಿಲ್ಲ. ಆದರೆ ಆ ಕರಪತ್ರವನ್ನು ತಾನು ಸಾಕುವ ಎರಡು ಇಲಿಗಳಿಗೆ ಆಹಾರವನ್ನು ಕಟ್ಟಲು ಉಪಯೋಗಿಸಿದನು ತಾನು ಊಟಮಾಡಬೇಕಾದರೆ ತಾನು ಸಾಕಿದ ಇಲಿಗಳಿಗೆ ಆಹಾರವನ್ನು ಕೊಡುವುದು ಹಿಟ್ಲರನ ವಾಡಿಕೆ ಇಲಿಗಳಿಗೆ ಆಹಾರವನ್ನಿತ್ತು ಹಿಟ್ಲರನು ವಿರಾಮಿಸುತ್ತಿದ್ದಾಗ ಅಲ್ಲಿಯೇ ಬಿದ್ದ ಲೇಬರ್ ಪಾರ್ಟಿಯ ಪ್ರಕಟಣೆಯನ್ನು ಓದಿದನು. ಅದರಲ್ಲಿ ಸೃಷ್ಟಿಕರಿಸಿದ ೨೫ ಸೂತ್ರಗಳೇ ಹಿಟ್ಲರನಿಗೆ ನಾಜಿ ಪಂಗಡವನ್ನು ಉದ್ಧರಿಸಲು ಸ್ಫೂರ್ತಿಯನ್ನಿತ್ತಿತು ಈ ಘಟನೆಯ ನಂತರ ಹಿಟ್ಲರನು ನಾಜೀ ಪಾರ್ಟಿಯ ಅವ್ಯವಸ್ಥತೆಯನ್ನು ಸುಧಾರಿಸಿ ಅದನ್ನು ಸಮಗ್ರ ಜರ್ಮನಿಯಲ್ಲಿ ಪ್ರಬಲ ಸಂಸ್ಥೆಯನ್ನಾಗಿ ಪರ್ಯವಸಿದನು

ಹಿಟ್ಲರನ ಅಮೋಘವಾದ ಧೋರಣೆಗೆ ಜನ ಬೆಂಬಲವು ದೊರೆಯಿತು. ಇದರಿಂದಾಗಿ ಹಿಟ್ಲರನಿಗೆ ತನ್ನ ಪಂಗಡದ ಶಕ್ತಿಯನ್ನು ಬೆಳೆಸಲನುಕೂಲವಾಯಿತು. ಸ್ವಲ್ಪ ಸಮಯದಲ್ಲಿಯೇ ನಾಜಿಪಂಗಡಕ್ಕೆ ದೇಶದ ಸಂಪೂರ್ಣ ಬೆಂಬಲವು ದೊರೆಯಿತು. ಸರಕಾರವು ನಾಜಿಯವರ ಕೈ ಸೇರಿತು. ಮೊಟ್ಟಮೊದಲು ಹಿಟ್ಲರನು ತನ್ನ ಸಂಗಡದಲ್ಲಿ ಪ್ರತಿಭಟಿಸುವವರನ್ನು ಗುಪ್ತವಾಗಿ ಕೊಲ್ಲಿಸುತ್ತಿದ್ದನು ಈ ತರದ ದುರ್ಮಾರ್ಗ ವರ್ತನೆಗಳಿಂದ ಹಿಟ್ಲರನ ಆಗಿನ ನಡತೆಯು ಅವಮಾನ್ಯವಾಗಿದ್ದು ಆತನು ಕೇವಲ ರಾಕ್ಷಸೀ ಸ್ವಭಾವದ ನರಭಕ್ಷಕನಂತೆ ಅನ್ನಯಿಸುತ್ತಿದ್ದನು. ಆದರೆ ಈತನು ನಡೆಸಿದ ಯಾವತ್ತೂ ಕೊಲೆಗಳು ಜರ್ಮನ್ ರಾಷ್ಟ್ರತ್ವದ ಸಲುವಾಗಿದ್ದುವು. ಜರ್ಮನಿಗೆ ವಿರೋಧವಾದ ಬೊಲ್ಷೆವಿಕ ಹಾವಳಿಯನ್ನು ಅಡಗಿಸುವುದು, ವರ್ಸಾಲೀ ಒಪ್ಪಂದವನ್ನು ನಾಶಗೊಳಿಸುವುದು, ದೇಶದ್ರೋಹಿಗಳಾದ ಯಹೂದೀಯರನ್ನು ನಿರ್ಮೂಲಗೊಳಿಸುವುದು ಮತ್ತು ಜರ್ಮನ್ ಚಕ್ರಾಧಿಪತ್ಯವನ್ನು ಪುನಃ ಸ್ಥಾಪಿಸುವುದು ಇವೇ ಮೊದಲಾದುವು ಹಿಟ್ಲರನ ಕಾರ್ಯಕ್ರಮಗಳು. ಅನೇಕಾನೇಕ ಕಾರ್ಯಗಳ ಪೂರಣೆಯಾಗಿದೆ ಈತನ ಎಲ್ಲಾ ಕಾರ್ಯಕ್ರಮಗಳೂ ಜರ್ಮನಿಯಲ್ಲಿ ತಕ್ಕಷ್ಟು ಬೆಂಬಲವು ದೊರಕಿರುವ ಕಾರಣದಿಂದಲೇ ಇಂದು ಹಿಟ್ಲರನು ಇಡೀ ಜರ್ಮನ್ ಜನಾಂಗದ ಪರಮಾಗಿ ಜರ್ಮನ್ ಜನಾಂಗದ ಎಳ್ಗೆಗಾಗಿ ಯಾವ ರಾಷ್ಟ್ರಕ್ಕಾದರೂ ಕಠೋರ ಉತ್ತರಗಳ ಸ್ವೀಯತ್ರಪನ

ಹಿಟ್ಲರನ ಖಾಸಗೀ ಜೀವನ

ಹಿಟ್ಲರನ ಖಾಸಗೀ ಜೀವನವು ಅತ್ಯಂತ ವಿಚಿತ್ರವಾಗಿರುವುದು ಇದರಿಂದ ಜರ್ಮನಿಯ ೬೦ ಮಿಲ್ಲಿಯ ಜನಾಂಗವು ಹಿಟ್ಲರನನ್ನು ಕೊಂಡಾಡುತ್ತಿರುವುದ ಹಿಟ್ಲರನ ಖಾಸಗಿ ಜೀವನವು ಬಹಳ ಸರಳವಾಗಿರುವದು ಈತನಿಗೆ ಸಿಗರೇಟು ಸೇದಲಾಗಲಿ ಅನ್ನು ಸೇದುವ ಯಾ ಮಾದಕ ದ್ರವ್ಯಗಳನ್ನು ಕುಡಿಯುವ ಅಭ್ಯಾಸವಿರುವುದಿಲ್ಲ ಆದರೆ ಅತಿಥಿಗಳ ಸಲುವಾಗಿ ಈತನ ಮೇಜಿನ ಮೇಲೆ ಯಾವಾಗಲೂ ಸಿಗರೇಟು ಮತ್ತು ವೈನು ಧಾರಾಳವಾಗಿರುತ್ತವೆ ಶೋಕ ತಾತ್ಪರ್ಯಪೂರಿತ ಹೆಂಗಸರೊಡನಲ್ಲದೆ ಬಾಕಿ ಹೆಂಗಸರೊಡನೆ ಇವನು ಯಾವತ್ತೂ ಮಾತುಗಳನ್ನು ಆಡುವುದೇ ಇದಿವೆ.. ಹಿಟ್ಲರನು ಈ ಖಾಸಗಿ ಜೀವನವು ಅನೇಕರಿಗೆ ಅಸಹ್ಯವಾಗಿ ತೋರಬಹುದು ಆದರೆ ಹಿಟ್ಲರನ ತನ್ನ ಗುಪ್ತವಾದ ಈ ಖಾಸಗಿ ಜೀವನದಲ್ಲಿ ಕೂಡ ಬಹಳ ಸುಖಿಯಾಗಿರುವನು. ಹಿಟ್ಲರನ ದೇಹದಾರ್ಢ್ಯವು ಅಷ್ಟೊಂದು ಬಲವಂತದಲ್ಲ ಇವನು ಹೆಚ್ಚಾಗಿ ಗಾಯನದಲ್ಲಿಯೇ ಆಸಕ್ತಿಯುಳ್ಳವನು ಇವನಿಗೆ ಆಟಗಳಲ್ಲಿಯೂ ಅಥವಾ ಇತರ ಇಷ್ಟ ಮನೋರಥಗಳಲ್ಲಿ ಎಳ್ಳಷ್ಟೂ ಆಸಕ್ತಿಯಿಲ್ಲ, ಆದರೆ ಇಡೀ ಹಗಲು ರಾತ್ರೆಯನ್ನಾದರೂ ಗಾಯನದಲ್ಲಿ ಕಳೆಯುವನು. ಇವನ ವಾಸಸ್ಥಾನದಲ್ಲಿ ಸುಮಾರು ೬೦೦೦ ಪುಸ್ತಕಗಳ ಒಂದು ಲೈಬ್ರೆರಿಯು ಇರುವುದು

ಮಕ್ಕಳ ಪೂಜಕ

ಹಿಟ್ಲರನ ಖಾಸಗಿ ಜೀವನವು ಇಷ್ಟು ವೈಚಿತ್ರವಾದರೂ ಈತನು ಮಕ್ಕಳನ್ನು ಬಹಳವಾಗಿ ಪ್ರೀತಿಸುತ್ತಿರುವನು. ಕಂಡಕಂಡ ಹುಡುಗರನ್ನೆಲ್ಲಾ ಮುದ್ದಿಸಿ ಮಕ್ಕಳಿಗೆ ಇನಾಮನ್ನು ಕೊಡುವನು ಮತ್ತು ಮಕ್ಕಳನ್ನು ಯಾವ ರೀತಿಯಲ್ಲಿ ಪ್ರೀತಿಸಿ ಸಾಕಬೇಕೆಂದು ಮಕ್ಕಳ ತಾಯಂದಿರಿಗೆ ಬೋಧಿಸುವನು.

ಹಿಟ್ಲರನ ವಿವಾಹವಾಗುವುದೇ?

ಹಿಟ್ಲರನು ಇಷ್ಟು ವಯಸ್ಕನಾದರೂ ಆತನಿಗೆ ಇನ್ನೂ ವಿವಾಹವಾಗಿರುವುದಿಲ್ಲ ಆದರೆ ಹಿಟ್ಲರನು ಅನೇಕ ಸ್ತ್ರೀಯರೊಡನೆ ಸಂಬಂಧವನ್ನಿಟ್ಟುಕೊಂಡಿರುವನೆಂಬ ವಾರ್ತೆಯು ಕೇಳಬರುತ್ತದೆ ಆದರೆ ಇದರ ಸತ್ಯಾಂಶತೆಯು ಎಷ್ಟೆಂಬುದು ಇನ್ನೂ ತಿಳಿದಿರುವುದಿಲ್ಲ. ಆದರೆ ಇನ್ನಾದರೂ ಹಿಟ್ಲರನ ವಿವಾಹವಾಗುವುದೇ ಎಂಬುದು ಸಂಶಯಾಸ್ಪದವಾಗಿರುವುದು

ಹಿಟ್ಲರ್—ಗಾಂಧಿ

ಕೆಲವು ಸಮಯದ ಹಿಂದೆ ಒಬ್ಬ ಹೆಂಗಸು ಹಿಟ್ಲರೊಡನೆ ಸಂಭಾಷಿಸಿದಾಗ ಆಕೆಗೆ ಹಿಟ್ಲರನು ಗಾಂಧಿಜಿಯರ ಪ್ರತಿಯಂತೆ ಕಂಡು ಬಂದನಂತೆ. ಈತನು ಗಾಂಧಿಯನ್ನು ಸರಳನೂ, ತ್ಯಾಗಿಯೂ, ಸ್ವಭೋದವುಳ್ಳವನೂ ಆಗಿರುವನಂತೆ ಯಾಕಂದರೆ ಆತನು ಮಾತನಾಡುತ್ತಿದ್ದಾಗ ಈ ಕೆಳಗಿನ ವಾಕ್ಯಗಳನ್ನು ನುಡಿದನಂತೆ “ಇತರ ದೇಶಗಳ ವಿಷಯ ತನಗೇನೂ ತಿಳಿದಿಲ್ಲ ಇತರ ದೇಶಗಳ ವಿಷಯವಾಗಿ ನಾನು ತಪ್ಪನ್ನು ಮಾಡಬಹುದು ಆದರೆ ಜರ್ಮನಿಯ ವಿಷಯವಾಗಿ ನಾನು ಎಂದೂ ತಪ್ಪು ಮಾಡಲಾರೆನು”

ಯುದ್ಧದ ಹೀನಾವಸ್ಥೆಯ ವಿಷಯ ಮಾತಾಡುತ್ತಿರುವನು.

“ಈತನು ಯುದ್ಧದ ಭಯಂಕರಾವಸ್ಥೆಯನ್ನು ವರ್ಣಿಸಿ ಘೋಷಿಸುತ್ತಾ ಜರ್ಮನಿಯೆಂಬ ಭಾವಕ್ಕೆ ಜರ್ಮನ ಜನಾಂಗದವರಲ್ಲಿರುವವರೆಗೆ ಜರ್ಮನರು ಹುಲ್ಲನ್ನಾದರೂ ತಿಂದು ಜೀವಿಸಿದರೂ ದೊಡ್ಡದಲ್ಲ ಆದರೆ ತಮ್ಮ ಸ್ವಾತಂತ್ರ್ಯವನ್ನು ಕಳಕೊಳ್ಳುವೆವು' ಯುದ್ಧದಿಂದಾಗುವ ವಿನಾಶಕ್ಕಿಂತ ... ಮಾತನಾಡಿ ಬ್ರಿಟನಿನ ವಿಷಯ ಮಾತನಾಡುತ್ತ,

'ಬ್ರಿಟಿಷ್ ಜನಾಂಗವು ಇನ್ನು ಮುಂದೆ ಎಂದೂ ಯುದ್ಧವನ್ನೇ ಮಾಡದು ಯಾಕಂದರೆ ಇಂದು ಬ್ರಿಟಿಷ್ ಜನಾಂಗವು ಸುಖಸಾಗರದಲ್ಲಿ ನಲಿದಾಡುತ್ತಿದೆ ಬ್ರಿಟಿಷ್ ಮುತ್ಸದ್ದಿಗಳಿಂದ ಯುದ್ಧವಾಗದು ಯುದ್ಧವು ಜನತೆಯ ಬೆಂಬಲದಿಂದ ನಡೆಯುವುದು ... ಎಂದು ನುಡಿದಿರುವನು

ಫ್ರೆಂಚ್ ಜನಾಂಗದ ವಿಷಯ ಮಾತನಾಡುತ್ತಾ

“ಫ್ರೆಂಚ್ ಜನತೆಯು ತಮ್ಮ ರಾಷ್ಟ್ರಕ್ಕಾಗಿ ಪ್ರಾಣವನ್ನಾದರೂ ಅರ್ಪಿಸಬಹುದು ಆದರೆ ಒಂದು ಚಿಕ್ಕಾಸನ್ನದರೂ ದೇಶರಕ್ಷಣೆಗಾಗಿ ಕೊಡದು” ಎಂದು ನುಡಿಯುತ್ತಿರುವನು

ರಿಚ್ ಭಾಷಣ

ಜರ್ಮನ್ ಸಾಮ್ರಾಜ್ಯವನ್ನು ಊರ್ಜಿತಗೊಳಿಸುವುದೇ ಹಿಟ್ಲರನ ಧ್ಯೇಯ. ಮೊನ್ನೆ ಜರ್ಮನಿಯಲ್ಲಿ ಹಿಟ್ಲರನು ಅತ್ತ ಮಹತ್ವದ ಭಾಷಣದಲ್ಲಿ ಅಮೇರಿಕದ ಅಧ್ಯಕ್ಷ ರೂಸವೆಲ್ಟರ ಶಾಂತಿಸ್ಥಾಪನೆಯ ಆಹ್ವಾನೆಗೆ ಪ್ರತ್ಯುತ್ತರವಾಗಿ ಇಂಗ್ಲಿಷ್ ಜರ್ಮನರೊಳಗಿದ್ದ ನೌಕಾಸಂಧಿಯನ್ನು ಮುರಿದನು. ಪೋಲೆಂಡು ಜರ್ಮನಿಯೊಡನೆ ಮಾಡಿಕೊಂಡಿದ್ದ ಸಂಧಿಯನ್ನೂ ಮುರಿದನು. ಇತರ ಜನಾಂಗಗಳು ಅಧಿಕಾರಮತ್ತರಾಗಿ ಹಿಂದೆ ನಮಗೆ ಕೊಟ್ಟ ಉಪದ್ರವಗಳನ್ನೂ ಅನ್ಯಾಯವನ್ನೂ ಸಹಿಸಿಗೊಳಿಸದೆ ಜರ್ಮನಿಯು ಎಂದೂ ಬಿಡದು. ಆದಕಾರಣ ನಾನು ಯಾವ ಜನಾಂಗದ ಗೊಡವೆಗೂ ಹೋಗದೆ ಇಪ್ಪತ್ತು ವರ್ಷಗಳ ನಮ್ಮ ಹಿಂದಿನ ಸ್ವತ್ತನ್ನು ಪಡೆಯಲು ಯತ್ನಿಸುವೆವು” ಎಂದು ಉತ್ತರವಿತ್ತಿರುವನು

ಮಂಗಳೂರು ಸಮಾಚಾರ

ಜಿಲ್ಲಾ ಹರಿಜನ ಎಡ್ವೈಸರಿ ಕಮಿಟಿ

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಎಡ್ವೈಸರಿ ಕಮಿಟಿಯ ಸಭೆಯು ಕಳೆದ ತಾರೀಕು ೨೮ರಲ್ಲಿ ಕಲೆಕ್ಟರ ಆಫೀಸಿನಲ್ಲಿ ಕಮಿಟಿಯ ಅಧ್ಯಕ್ಷರಾದ ಕಲೆಕ್ಟರ್ ರಾವ ಬಹದ್ದೂರು ಶರೀಫ್ ಅಹ್ಮದ್ ಅಲಿ ಸಾಹೇಬರ ಅಧ್ಯಕ್ಷತೆಯಲ್ಲಿ ಜರುಗಿ ಹರಿಜನ ಹುಡುಗರ ವಿದ್ಯಾಭ್ಯಾಸಕ್ಕಾಗಿ ಪುತ್ತೂರು ತಾಲೂಕಿನ ಬೆಳ್ತಂಗಡಿಯ ಬಳಿಯ ಉಜಿರೆಯಲ್ಲಿ ಒಂದು ಲೇಬರ್ ಶಾಲೆಯನ್ನು ತೆರೆಯುವುದಾಗಿ ನಿಶ್ಚಯಿಸಿರುತ್ತಾರೆ. ಶಾಲೆಯು ಬರುವ ಜೂನ್ ತಿಂಗಳಿಂದ ಪ್ರಾರಂಭವಾಗುವುದು.

ಮೃತ ಹೆಂಗಸಿನ ಶರೀರ

ಕಳೆದ ತಾರೀಕು ೨೯ರಲ್ಲಿ ಮಧ್ಯಾಹ್ನ ಸ್ಥಳೀಯ ಫೆಲಿಕ್ಸ ಪೈ ಬಜಾರಿನಲ್ಲಿದ್ದ ಒಂದು ಮೋರಿಯಲ್ಲಿ ಸಾಧಾರಣ ೩೦ ವರ್ಷ ಪ್ರಾಯದ ಕ[illegible]ಯಾಳಿ ಹೆಂಗಸಿನ ಮೃತ ಶರೀರವು ತಿಳಿದುಬಂತು. ಹೆಂಗಸು ಮುಂಚಿನ ದಿವಸದಿಂದ ಕಾಣೆಯಾಗಿದ್ದಳೆಂದು ವಾರ್ತೆ. ಸ್ಥಳೀಯ ಸಬ್ ಇನ್ಸಪೆಕ್ಟರರಾದ ಶ್ರೀ ಅಂತಪ್ಪನವರು ವಿಚಾರಣೆ ನಡೆಸಿ ಹೆಂಗಸಿನ ಶರೀರವನ್ನು ಪೋಸ್ಟ ಮಾರ್ಟಮಿಗಾಗಿ ಆಸ್ಪತ್ರೆಗೆ ಸಾಗಿಸಿದರು.

ಖೂನಿ

ಬಲ್ಮಠದ ಬಳಿಯ ಕುದ್ರೋಳಿ ಹತ್ತಿರ ಬಳಿ ಒಬ್ಬನನ್ನು ಯಾರೋ ಖೂನಿ ಗೈದಿರುವರು. ಈ ವಿಷಯವಾಗಿ ಖೂನಿಗೈದವನನ್ನು ಕೈದ್ ಮಾಡಿರುವರೆಂದು ವಾರ್ತೆ ಇದೆ.

ಎಡಿಶನಲ್ ಕೋರ್ಟುಗಳು

ಬರುವ ಜೂನ್ ತಾರೀಕು ೧ರಿಂದ ಇಲ್ಲಿ ಒಂದು ಎಡಿಶನಲ್ ಸಬ್ ಕೋರ್ಟು ಕಾರ್ಕಳದಲ್ಲಿ ಕೋರ್ಟು ಪ್ರಾರಂಭವಾಗುವುದಲ್ಲದೆ ಒಂದು ಎಡಿಶನಲ್ ಮುನ್ಸಿಫ್ ಕೋರ್ಟು ತೆರೆಯಲ್ಪಡುವುವು.

ಜಿಲ್ಲಾ ಬೋರ್ಡು ಸಭೆ

ಬರುವ ಜಿಲ್ಲಾ ಬೋರ್ಡು ಸಭೆಯು ಇದೇ ತಿಂಗಳ ತಾ ೯ನೆ ಮಂಗಳವಾರ ಪೂರ್ವಾಹ್ನ ಗಂಟೆ ೧೧ಕ್ಕೆ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಜರಗುವುದು.

ಸೋಶಲಿಸ್ಟ ಪಕ್ಷದ ಮಹಾಸಭೆ

ಜಿಲ್ಲಾ ಕಾಂಗ್ರೆಸು ಸೋಶಲಿಸ್ಟ ಪಕ್ಷದ ಮಹಾ ಸಭೆಯೊಂದು ಇಂದು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಜರಗುವುದು. ಮೇ ತಾ ೧೩ರಲ್ಲಿ ಬೆಂಗಳೂರಲ್ಲಿ ಜರಗಲಿರುವ ಅಖಿಲ ಕರ್ನಾಟಕ ಕಾಂಗ್ರೆಸ್ ಸೋಶಲಿಸ್ಟ ಪಕ್ಷದ ಪ್ರಧಾನ ಕಾರ್ಯದರ್ಶಿಯವರು ತಿಳಿಸುತ್ತಾರೆ.

ತೆರಿಗೆದಾರರ ಸಭೆ

ಮಂಗಳೂರು ತೆರಿಗೆದಾರರು ಮುನಿಸಿಪಾಲಿಟಿಯ ಪ್ರಸ್ತುತದ ಕಂದಾಯ ಧೋರಣೆಯಲ್ಲಿ ಅತೃಪ್ತಿ ಸೂಚಿಸಲು ಕಳೆದ ಆದಿತ್ಯವಾರ ಸಂಜೆ ೬ ಗಂಟೆಗೆ ಸ್ಥಳೀಯ ಮೈದಾನಿನಲ್ಲಿ ಸಭೆ ಸೇರಿದರು. ಮುನ್ಸಿಪಾಲಿಟಿಯ ಕಂದಾಯ ಧೋರಣೆಯನ್ನು ಖಂಡಿಸಿ ಅನೇಕರು ಭಾಷಣವಿತ್ತರು. ಮೊದಲಿಗಿಂತಲೂ ಈಗಿನ ಕಂದಾಯವು ಹೆಚ್ಚಾಗಿದೆಯೆಂದೂ ಈ ವಿಷಯವನ್ನು ವಿರೋಧಿಸಲು ಒಂದು ಕಮಿಟಿಯನ್ನೇರ್ಪಡಿಸಬೇಕೆಂದೂ ನಿರ್ಣಯವಾಯಿತು.

ನಿಧನ

ಮಂಗಳೂರು ಕೊಡಿಯಾಲ ಗುತ್ತಿಗೆ ಸೇರಿದ ಪ್ರಸಿದ್ಧ ಶ್ರೀಮಂತರಾದ ಡಾಕ್ಟರ್ ಕೆ. ಸಂಜೀವ ಹೆಗ್ಡೆಯವರು ಕಳೆದ ತಾ ೨೯ರಲ್ಲಿ ಮೃತರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಮೃತರ ಆತ್ಮಕ್ಕೆ ಶಾಂತಿದೊರಕಲಿ.

ಈ ದಿನ ಬೆಳಿಗ್ಗೆ ಕುದ್ರೋಳಿ ಬಳಿ ಬಿಲ್ಲವ ಜಾತಿಯ ಮೂರ್ತೆಗಾರನೊಬ್ಬನು ಕಳ್ಳು ತೆಗೆಯಲು ತೆಂಗಿನ ಮರಕ್ಕೇರಿದವನು ಕಾರುತ್ತಾ ಮರದ ಮೇಲೆಯೇ ಸ್ಮೃತಿ ತಪ್ಪಿ ಬಿದ್ದಿರುವನೆಂದು ತಿಳಿದುಬರುತ್ತದೆ.

ಮಹಾಸಭೆ

ದಕ್ಷಿಣ ಕನ್ನಡದ ಶಾಲೆಗಳಲ್ಲಿ ಕನ್ನಡದಲ್ಲೇ ಪಾಠಗಳನ್ನು ಕಲಿಸಬೇಕು ಎಂಬ ಸರಕಾರಿ ಆಜ್ಞೆಯು ಎಲ್ಲಾ ಶಾಲೆಗಳಿಗೆ ಅನ್ವಯಿಸಬೇಕು ಎಂದು ಪ್ರತಿಪಾದಿಸಲು ಮಹಾಸಭೆಯೊಂದು 'ಸಂದೇಶ ಸಂಘ' ಮಿತ್ರಮಂಡಳಿ ಮತ್ತು ಕಲ್ಚರಲ್ ಎಸೋಸಿಯೇಷನಿನ ಆಶ್ರಯದಲ್ಲಿ ಇದು ಸಂಜೆ ೬ ಗಂಟೆಗೆ ಸ್ಥಳೀಯ ಥಿಯೋಸೊಫಿಕಲ್ ಲೋಜಿನಲ್ಲಿ ಶ್ರೀ ಕೆ ಬಿ ಜಿನರಾಜ ಹೆಗ್ಡೆ (ಎಮ್ ಎಲ್ ಎ)ರವರ ಅಧ್ಯಕ್ಷತೆಯಲ್ಲಿ ಜರಗುವುದು. ಕನ್ನಡ ಭಾಷಾಭಿಮಾನಿಗಳೆಲ್ಲರು ಬರಬೇಕಾಗಿ ಸಮ್ಮಂಧಪಟ್ಟವರ ವಿನಂತಿ.

ಸಹಕಾರಿ ಸಂಘ

ನಮ್ಮ ಜಿಲ್ಲೆಯ ಹಣ್ಣುಹಂಪಲಿನ ವ್ಯಾಪಾರಿಗಳ (Fruit Growers) ಒಂದು ಸಹಕಾರಿ ಸಂಘವನ್ನು ಮಂಗಳೂರಿನಲ್ಲಿ ತೆರೆಯಬೇಕಾಗಿ ನಿಶ್ಚಯಿಸಿರುವುದರಿಂದ ಈ ವಿಷಯ ತಾರೀಕು ೧೦-೫-೧೯೩೯ರಲ್ಲು ಬೆಳಿಗ್ಗೆ ಗಂಟೆ ೯-೩೦ ಸಮಯಕ್ಕೆ ಡಿಪ್ಯುಟಿ ರಜಿಸ್ಟ್ರಾರ್ ಒಫ್ ಕೋ-ಒಪರೇಟಿವ್ ಸೊಸೈಟಿಯ ಆಫೀಸಿನಲ್ಲಿ ಜರಗಲಿರುವ ಸದ್ರಿ ವ್ಯಾಪಾರಿಗಳ ಸಭೆಗೆ ಸರ್ವರೂ ಅಗತ್ಯವಾಗಿ ಬರಬೇಕಾಗಿ ಅಪೇಕ್ಷಿಸಲಾಗುತ್ತದೆ.

ಈ ವಿಷಯದಲ್ಲಿ ಕಳೆದ ತಾ ೧೬-೪-೧೯೩೯ರಲ್ಲು ಪ್ರಾಥಮಿಕ ವ್ಯಾಪಾರಿಗಳ ಒಂದು ಸಭೆ ಮಂಗಳೂರಲ್ಲಿಯೇ ಜರಗಿ, ಇಂಥಾ ಒಂದು ಸಹಕಾರಿ ಸಂಘವಾಗುವದಾದರೆ, ವ್ಯಾಪಾರಿಗಳಲ್ಲಿ ಹೆಚ್ಚಿನವರು ಅದಕ್ಕೆ ಸೇರಿ ಅದರ ಮೆಂಬರರಾಗದಿದ್ದರೆ, ಯಾರಿಗೂ ಏನೊಂದು ಪ್ರಯೋಜನವಾಗಲಿಕ್ಕಿಲ್ಲವೆಂದು ತೀರ್ಮಾನವಾದುದರಿಂದ, ಸರ್ವರೂ ಸ್ಥಳೀಕ ವ್ಯಾಪಾರಿಗಳ ಸದ್ರಿ ಸಭೆಗೆ ಬಂದು, ಸಹಕರಿಸಬೇಕಾಗಿ ನಂಬುತ್ತೇನೆಂದು ಡಿಪ್ಯುಟಿ ರಜಿಸ್ಟ್ರಾರಾದ ಶ್ರೀ ಕೆ ಸರ್ವೋತ್ತಮರಾಯರು ತಿಳಿಸುತ್ತಾರೆ.

ಶಾಲಾ ವರ್ಧಂತ್ಯುತ್ಸವ

ಇಲ್ಲಿಯ ಅನ್ನಛತ್ರದ ಬಳಿಯ [illegible] ಹಿರಿಯ ಕನ್ಯಾ ವಿದ್ಯಾಪೋಷಿಣೀ ಹಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಶ್ರೀ ಕಾರ್ಕಳ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು. ಶಾಲೆಯ ಹೆಡ್ ಮಾಸ್ಟರು ಶಾಲಾ ವರದಿಯನ್ನೋದಿ ಶಾಲಾ ಕಾರ್ಯದರ್ಶಿಯವರಾದ ಯು [illegible] ರು ಶಾಲೆಯ ಆರ್ಥಿಕ ಪರಿಸ್ಥಿತಿಯನ್ನು ತಿಳಿಸಿದರು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಶ್ರೀ [illegible] ಪುಟ್ಟಪ್ಪನವರಿಂದ ರಚಿತವಾದ 'ಜಲಗಾರ' ಮತ್ತು 'ಮನಸೋಲು' ಎಂಬ ಕಥೆಯನ್ನು ನಾಟಕರೂಪದಲ್ಲಿ ಬಹು ಚೆನ್ನಾಗಿ ಅಭಿನಯಿಸಿದರು.

ತಿದ್ದುಪಡಿ

ಕಳೆದ ಸಂಚಿಕೆಯ ಪುಟದಲ್ಲಿ ಪ್ರಕಟಿಸಲ್ಪಟ್ಟ ದೇವಸ್ಥಾನದ ಆಯವ್ಯಯದ ಮತ್ತು ಜಮಾ ಖರ್ಚು ಪಟ್ಟಿಗಳಲ್ಲಿ ದೇವಸ್ಥಾನದ ಹೆಸರನ್ನು ಧ್ವಜನಾಗಲು ಎಂಬುದರ ಬದಲಿಗೆ ಧ್ವಜಂಗಳು ಎಂದೂ ಜಮಾದಲ್ಲಿ 1936-37ರ ಬಾಕಿಯನ್ನು 829 -10--7ರ ಬದಲಿಗೆ 829-10-8 ಎಂದೂ ಖರ್ಚಿನಲ್ಲಿ 1936-37ರ ಸಾಲವನ್ನು ಹಿಂತಿರುಗಿ ಕೊಟ್ಟದ್ದು 68-10-0ರ ಬದಲಿಗೆ 68—10—2 ಎಂದೂ ಓದತಕ್ಕದ್ದು.

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋರ್ ಇರುತ್ತದೆ.

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store.
28 Meachua Bazar St., CALCUTTA

ತಾಲೂಕು ಸಮಾಚಾರ

ಉಡುಪಿ

ತಾ ೨೯ಕ್ಕೆ ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಸಾಧಾರಣ ಸಭೆಯು ಮುನಿಸಿಪಲ್ ಅಧ್ಯಕ್ಷರಾದ ಶ್ರೀ ಐರೂರು ಲಕ್ಷ್ಮೀನಾರಾಯಣ ರಾಯರ ಸಭಾಧಿಪತ್ಯದಲ್ಲಿ ಜರಗಿತು. ೧೫ ಸದಸ್ಯರು ಹಾಜರಿದ್ದರು. ರಸ್ತೆಗಳಿಗೆ ಜಂಕ್ಷನ್ ನಂಬರು ಮತ್ತು ಹೆಸರುಗಳನ್ನು ಕೊಡುವ ವಿಷಯವನ್ನು ಅಲ್ಲಲ್ಲಿ ಸೂಚಕ ನೋಟೀಸು ಗಳನ್ನು ಹಾಕಿಸುವುದನ್ನು ರೋಡ್ ಕಮಿಟಿಗೊಪ್ಪಿಸಲಾಯಿತು. ಮುನಿಸಿಪಲ್ ಲೈಬ್ರರಿ ಮತ್ತು ಪ್ರಯಾಣಿಕರ ಬಂಗಲೆಗೆ ಇಲೆಕ್ಟ್ರಿಕ್ ವಾಯರಿಂಗ್ ಹಾಕಿಸಬೇಕೆಂದಾಯಿತು. ಕೈಗಾರಿಕೆ ಪ್ರದರ್ಶನಾಲಯವನ್ನು ತೆರೆಯಬೇಕೆಂದಾಯಿತು. ಡಾಕ್ಟರ್ ಯು ಎಲ್ ನಾರಾಯಣರಾಯರು ರೂ. 1000/- ನಮ್ಮ ಮುನಿಸಿಪಾಲಿಟಿಗೆ ದಾನವಿತ್ತುದನ್ನು, ಅವರು ಅಪೇಕ್ಷಿಸಿದಂತೆ ರೇಡಿಯೋ ಹೌಸಿಗೆ ಭುಜಂಗಪಾರ್ಕು ಮತ್ತು ಹೊಸದಾಗಿ ನಿರ್ಮಿಸಲಿರುವ ವಿಹಾರ ತೋಟಕ್ಕೆ ಭುಜಂಗಪಾರ್ಕ್ ಎಂದು ಹೆಸರಿಡುವ ಶರ್ತದಂತೆ ಅಂಗೀಕರಿಸಲಾಯಿತು. ರೇಡಿಯೋ ಹೌಸಿಗೆ ಮತ್ತು ಮುನಿಸಿಪಲ್ ಅಧ್ಯಕ್ಷರು ಈಗಾಗಲೇ ಒಂದು ಗಡಿಯಾರವನ್ನು ಕೊಟ್ಟಿರುತ್ತಾರೆ ಇನ್ನೊಂದನ್ನು ಕೊಡುವೆನಾಗಿ ಹೇಳಿದರು. ಇತರ ಸಾಮಾನ್ಯ ಕಾರ್ಯಕ್ರಮವು ಮುಗಿಸಲಾಗಿ ಸಭೆ ಮುಕ್ತಾಯವಾಯಿತು.

ಈಚೆಗೆ ಮಂಗಳೂರಿಗೆ ಮುದ್ರಾಸಿನಿಂದ ಕಲ್ಪವೃಕ್ಷ ಮೈಲ್ ಟ್ರೈನು ಸಮಯವು ಬದಲಾಗಿ ಕಡವಾಗಿ ಬಂದಣಂತೆ ಕಾರ್ಕಳ, ಉಡುಪಿ ಪ್ರಯಾಣಿಕರಿಗೆ ಮುಖ್ಯತಃ 'ಹಿಂದೂ' ವಗೈರೆ ಪತ್ರಿಕೆಗಳ ಕಟ್ಟುಗಳನ್ನು ಕಾರ್ಕಳ ಮಾರ್ಗವಾಗಿ ಉಡುಪಿ ಹೊರಡುವ ಬಸ್ಸಿಗೆ ರವಾನಿಸುವರೆ ಅನನುಕೂಲವಾಗಿರುವುದರಿಂದ, ಉಡುಪಿ ನಿವಾಸಿಗಳ ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರವರಿಗೆ ಒಂದು ಮನವಿಯನ್ನು ಮಾಡಿ ಸದ್ರಿ ಬಸ್ಸನ್ನು ಮಂಗಳೂರಿಂದ ಬಿಡುವ ವೇಳೆಯನ್ನು ಅರ್ಧ ತಾಸಿಗೆ ಮುಂದ ವರಿಸಿ ಹುಕುಂ ಕೊಡಿಸಬೇಕಾಗಿ ಅಪೇಕ್ಷಿಸಿರುತ್ತಾರೆಂದು ತಿಳಿಯ ಬಂದಿದೆ. ಅಂತೆಯೇ ಬಸ್ಸು [illegible] ಮೈಲ್ ಟ್ರೈನಿನಲ್ಲಿ ಬರುವ ಬಸ್ಸಿನ ಮತ್ತೆ ಕಾರ್ಕಳ ಉಡುಪಿಗೆ ಸಾಗಿಸುವ ಬಸ್ಸಿನ ಮರುದಿನ ಕಳುಹಿಸುವ ಬದಲಿಗೆ ಅಂದೇ ಕಳುಹುವ ಏರ್ಪಾಡು ಮಾಡಿದರೆ ಬಹಳ ಅನುಕೂಲವಾದೀತು, ಮರುದಿನ ಪ್ರಾತಃ ಬಸ್ಸುಗಳನ್ನು ಬಟ್ವಾಡೆ ಮಾಡಿ ಸಿಕ್ಕುವ ಅವಕಾಶವಿರುವುದರಿಂದ, ಅಂಥ ಮರು ಬಸ್ಸುಗಳಿಗೆ ಉತ್ತರವೀಯಲಾಗುವುದಷ್ಟೆ.

ಕವತ್ತಾರು

ಇಲ್ಲಿ ವರ್ಷಂಪ್ರತಿ ಜರಗುವ ಜಾತ್ರೆಯು ತಾ ೩-೫-೩೯ರಲ್ಲು ಬಹು ವಿಜೃಂಭಣೆಯಿಂದ ನೆರವೇರಿತು.

ಕಾರ್ಕಳ

ಸ್ಥಳೀಯ ಶ್ರೀ ಶಂಕರ ಭವನದಲ್ಲಿ ತಾ ೨೫-೪-೧೯೩೯ರ ದಿನ ಶ್ರೀ ಶಂಕರ ಜಯಂತಿಯು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅಂದು ಸಾಯಂಕಾಲ ಶ್ರೀ ಆದಿ ಶಂಕರಾಚಾರ್ಯರ ಆದರ್ಶ ಜೀವನ ಚರಿತ್ರೆ ಮತ್ತು ಅವರ ಮತತ್ತ್ವಾರ್ಥಗಳ ಕುರಿತು ಅನೇಕ ಮಹನೀಯರ ಬೋಧಪ್ರದ ಭಾಷಣಗಳಾದುವು.

ನಿಡ್ಡೋಡಿ

ಇಲ್ಲಿಯ ಶ್ರೀ ಸತ್ಯನಾರಾಯಣ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ತಾ. ೨೬-೪-೩೯ರಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಶೇಷವಾಗಿ ಕೊನೆಗೊಂಡಿತು. ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಒಪ್ಪಿಕೊಂಡಿದ್ದ ದ ಕ ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ವಿಠಲ ಶೆಟ್ಟರು ಹಾಜರು ಇರಲಿಲ್ಲ.

ಮುಂಡ್ಕೂರು

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯ ವರ್ಷಾವಧಿ ವರ್ಧಂತ್ಯುತ್ಸವವು ಈ ವರ್ಷ ತಾ ೬-೫-೩೯ರಲ್ಲಿ ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಶ್ರೀ ವಿಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಲಿರುವುದಾಗಿ ಸದರಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ. ಸತ್ಯನಾರಾಯಣರಾಯರು ತಿಳಿಸುತ್ತಾರೆ.

ಕುಂದಾಪುರ

ಇಲ್ಲಿಯ ಪೋಲೀಸ್ ಕಾನಿಷ್ಟೇಬಲರು ಜಗಿಂದಾಗ್ಯೆ ಮಾಡುವ ಉಪದ್ರವವನ್ನು ನಿವಾರಿಸಲು ಸರಕಾರಿ ಅಧಿಕಾರಿಗಳಿಗೆ ಅರ್ಜಿ ಬರೆದುಕೊಂಡರೂ ಅವರು ಯಾವ ತರದ ವಿಚಾರಣೆಯನ್ನು ನಡೆಸಿದಲ್ಲ. ಈ ಕಾನಿಷ್ಟೇಬಲರ ಉಪದ್ರವು ಇನ್ನೂ ಹೆಚ್ಚಾಗಿ ಅನಾಹುತಗಳಾಗುವ ಸಂಭವವಿದೆ. ಆದುದರಿಂದ ಇನ್ನಾದರೂ ಮೇಲಾಧಿಕಾರಿಗಳು ವಿಚಾರಿಸುವರೆಂದು ಕೆಲವರು ಬರೆಯುತ್ತಾರೆ.

ಕಟೀಲು

ಇಲ್ಲಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವರ್ಷಾವಧಿ ಜರಗುವ ರಥೋತ್ಸವವು ತಾ ೩೦-೪-೩೯ರಲ್ಲಿ ಬಹು ವಿಜೃಂಭಣೆಯಿಂದ ನಡೆಯಿತು.

ನೋಟಿಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 104/1936,
R F P No 196/1939
R E A 204/1939

ಗಣಪಯ್ಯ ಶೆಟ್ಟಿ —ಅರ್ಜಿದಾರ
ಮತ್ತು
ಮುತ್ತು ಶೆಟ್ಟಿ ಸಹಾ—ಎದುರ.

1 ಮುತ್ತು ಶೆಟ್ಟಿ ದಾಸ ಶೆಟ್ಟಿ ಮಗಳು, ಉಡುಪಿ ತಾಲೂಕು ಕುತ್ಯಾರು ಗ್ರಾಮದ ಕುತ್ಯಾರು ಗುತ್ತಿನಲ್ಲಿರುವವಳು. 2 ಕಿಟ್ಟು ಶೆಟ್ಟಿ, 4 ವಾಸು ಶೆಟ್ಟಿ, 6 ಬಾಬು ಶೆಟ್ಟಿ, ಮುತ್ತು ಶೆಟ್ಟಿ ಮಕ್ಕಳು, ಮುಂಬಾಯಿಯಲ್ಲಿ British India General Insurance Co Ltd 35 43 Church gate Street, Fort Bombay ಎಂಬಲ್ಲಿರುತ್ತಾರೆ.

ಸದ್ರಿ ಅಮಲಜಾರಿಯಲ್ಲಿ ಡಿಕ್ರಿಯಲ್ಲಿ ಮಾಗಣೆಕ್ಕೆ ವಿಧಿಯಾದ ಸ್ಥಿರಾಸ್ತಿಗಳನ್ನು ಏಲಮಿಗೆ ಅಪೇಕ್ಷಿಸಿ ಅರ್ಜಿದಾರನು ದಾಖಲು ಮಾಡಿದ ಏಲಂ ಇಷ್ತಿಹಾರಿನ ಶರ್ತು ನಿರ್ಣಯಿಸುವ ಬಗ್ಗೆಯೂ, ಏಲಂ ಸಮಯ Bid ಮಾಡಲು ಪರ್ಮಿಷನ್ ಕೇಳಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿ ಕೊಡಾ ತಾರೀಕು 13—6—39ಕ್ಕೆ ಇಡಲಾಗಿದೆ. ಆ ಕುರಿತು ಆಕ್ಷೇಪವಿದ್ದರೆ ಸದ್ರಿ ತಾರೀಕ ದಿವಸ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸಲಿಕ್ಕೆ ತಪ್ಪಿದರೆ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ತೀರ್ಮಾನಿಸಲಾಗುವುದು ಎಂತ 1, 2, 4, 6ನೆ ಎದುರಿಗೆ ಈ ಮೂಲಕ ತಿಳಿಸಲಾಗುತ್ತದೆ.

ಕಾರ್ಕಳ, 3-5-'39. } P. SHAMBA SHETTY, ಅರ್ಜಿದಾರನ ಕಡೆ ವಕೀಲ.

ಹರ್ ಹಿಟ್ಲರನ ರೀಚ್ ಸ್ಟಾಗ ಭಾಷಣ

ರೂಜ್ವೆಲ್ಟರ ಶಾಂತಿ ಸಂದೇಶಕ್ಕೆ ನಕಾರದ ಪ್ರತ್ಯುತ್ತರ

ಇಂಗ್ಲಾಂಡಿನ ರಾಜದಂಪತಿಗಳು ಅಮೆರಿಕಕ್ಕೆ ಹೋದಾಗ ಪೋಲಾಂಡಿನ ಆಕ್ರಮಣವಾಗಬಹುದು

ಶಾಂತಿ ಪಕ್ಷದ ಯುದ್ಧಸಿದ್ಧತೆ ಭರದಿಂದ ಸಾಗಿದೆ

ಇದೇ ಜಗತ್ತು ಬಹಳ ಆತುರದಿಂದ ನಿರೀಕ್ಷಿಸಿಕೊಂಡಿದ್ದ ಹರ್ ಹಿಟ್ಲರನ ರೀಚ್‌ಸ್ಟಾಗ ಭಾಷಣದಿಂದ ಯುರೋಪದ ಪ್ರಕ್ಷುಬ್ಧ ವಾತಾವರಣದಲ್ಲಿ ಯಾವ ಪರಿವರ್ತನೆಯೂ ಆಗಿರುವುದಿಲ್ಲ. ಈ ಭಾಷಣದಲ್ಲಿ ಹಿಟ್ಲರನು ಇಂಗ್ಲಾಂಡ ಜರ್ಮನ ಮತ್ತು ಪೋಲಾಂಡ ಜರ್ಮನ ಎರಡು ಒಪ್ಪಂದಗಳನ್ನು ತಿರಸ್ಕರಿಸಿದ್ದಾನೆ. ಯೂರೋಪಿನ ಇನ್ನುಳಿದ ಸ್ವತಂತ್ರ ರಾಷ್ಟ್ರಗಳನ್ನು ಆಕ್ರಮಿಸುವುದಿಲ್ಲವೆಂದು ಮಿ ರೂಜವೆಲ್ಟರು ಕೇಳಿದ ಭರವಸೆಗೆ, ಅದಾಗುವುದಿಲ್ಲವೆಂದು ಉತ್ತರ ಕೊಟ್ಟಿದ್ದಾನೆ ಯುರೋಪಿನ ಸ್ವತಂತ್ರ ರಾಷ್ಟ್ರಗಳು ತಾನು ಕೇಳಿದ ಪ್ರಶ್ನೆಗೆ ಅವಕ್ಕೆ ತನ್ನ ಆಕ್ರಮಣದ ಭಯವಿರುವುದಿಲ್ಲವೆಂದು ಉತ್ತರ ಕೊಟ್ಟಿರುವುದರಿಂದ ಭರವಸೆ ಕೊಡುವ ಅಗತ್ಯವಿಲ್ಲವೆಂದಿದ್ದಾನೆ.

ಯುದ್ಧವಲ್ಲ - ಶಾಂತಿಯೂ ಅಲ್ಲ

ಹಿಟ್ಲರನು ಎರಡು ಒಡಂಬಡಿಕೆಗಳನ್ನು ತಿರಸ್ಕರಿಸಿ, ರೂಜವೆಲ್ಟರ ಶಾಂತಿ ಸಂದೇಶಕ್ಕೆ ನಕಾರದ ಉತ್ತರವನ್ನು ಕೊಟ್ಟಿರುವುದರಿಂದ ಯುರೋಪಿನಲ್ಲಿ ಯುದ್ಧವಾರಂಭವಾಗಿಲ್ಲವಾದರೂ ಅಲ್ಲಿ ಶಾಂತಿ ಉಂಟಾಗಿದೆ ಎಂದು ಹೇಳಲಾಗುವುದಿಲ್ಲ. ಅಲ್ಲಿಯ ಪರಿಸ್ಥಿತಿಯು ಈ ಎರಡು ಒಪ್ಪಂದಗಳ ತಿರಸ್ಕಾರದಿಂದ ಮತ್ತೂ ಕೆಟ್ಟು ಹೋಗಿರುತ್ತದೆ. ಪೋಲಾಂಡು ಸಮೀಪಬಂಧುವಾದ ಜರ್ಮನಿಯ ಸಹಾಯಕ್ಕೆ ಕೈ ಒಡ್ಡದೆ ಇಂಗ್ಲಾಂಡಿನ ಶರಣುಹೋಗಿರುವುದರಿಂದ ಹಿಟ್ಲರನು ಸಹಿಸಲಾರದಷ್ಟು ಸಿಟ್ಟಾಗಿರುವನು. ಪೋಲಾಂಡಿನ ಧಿಟ್ಟತನಕ್ಕೆ ಅದಕ್ಕೆ ಚೆನ್ನಾಗಿ ಬುದ್ಧಿ ಕಲಿಸಬೇಕೆಂದು ಅವನು ಹಠದಿಂದಿದ್ದಾನೆ. ಆದ್ದರಿಂದಲೇ ತನಗೆ ವಿಶೇಷ ಪ್ರಯೋಜನವಿರುವುದಿಲ್ಲವಾದರೂ ಇಂಗ್ಲಾಂಡ ಜರ್ಮನ ಒಪ್ಪಂದವನ್ನು ತಿರಸ್ಕರಿಸಿ ಅವನು ಇಂಗ್ಲಾಂಡನ್ನು ಪಂಥಕ್ಕೆ ಕರೆದಿರುವನು.

ಶಾಂತಿಪಕ್ಷವನ್ನು ಮುರಿಯುವ ಪ್ರಯತ್ನ

ಹಿಟ್ಲರನ ಆಕ್ರಮಣಗಳನ್ನು ತಡೆಯುವುದಕ್ಕೋಸ್ಕರ ಇಂಗ್ಲಾಂಡ, ಫ್ರಾನ್ಸ, ಪೋಲಾಂಡ, ಗ್ರೀಸ ಮೊದಲಾದ ಕೆಲವು ರಾಷ್ಟ್ರಗಳು ಕೂಡಿ ಒಂದು ಶಾಂತಿಪಕ್ಷವನ್ನು ಮಾಡಿಕೊಂಡಿವೆ. ಈ ಪಕ್ಷಕ್ಕೆ ರಷ್ಯವೂ ಟರ್ಕಿಯೂ ಸೇರುವಂತೆ ಪ್ರಯತ್ನಗಳಾಗಿವೆ ನಿಜವಾಗಿಯೂ ಈ ಶಾಂತಿಪಕ್ಷವು ಹಿಟ್ಲರನ ಆಕ್ರಮಣವನ್ನು ಮುರಿಯುವ ಪ್ರಯತ್ನ ಮಾಡುವದಾದರೆ ಹಿಟ್ಲರನ ತೇಜೋವಧೆಯಾಗುವುದು ಖಂಡಿತ ಆದ್ದರಿಂದ ಈ ಶಾಂತಿಪಕ್ಷವನ್ನು ಹೇಗಾದರೂ ಮಾಡಿ ಮುರಿದು ಹಾಕಬೇಕೆಂದು ಅವನು ಶಪಥ ಹಾಕಿಕೊಂಡಿರುವನು ತನ್ನನ್ನು ಸುತ್ತು ಹಾಕಿ ತನ್ನ ಸರ್ವನಾಶಮಾಡಲಿಕ್ಕೆ ಈ ಶಾಂತಿಪಕ್ಷವು ಕೆಲಸ ಮಾಡುತ್ತಲಿದೆ ಎಂದು ಸುಳ್ಳು ಅಪವಾದಗಳನ್ನು ಹೊರಿಸಿರುವನು ಆದರೆ ಜರ್ಮನಿಯನ್ನು ಸುತ್ತುಗಟ್ಟಿ ಅದರ ಕತ್ತು ಹಿಸುಕುವ ಉದ್ದೇಶವು ತಮ್ಮದಲ್ಲವೆಂದೂ ಹಿಟ್ಲರನ ಅನ್ಯಾಯ ಆಕ್ರಮಣಗಳನ್ನು ತಡೆಯುವುದಕ್ಕಾಗಿಯೇ ಶಾಂತಿಪಕ್ಷವಿದೆಯೆಂದೂ ಸ್ಪಷ್ಟಮಾಡಲಾಗಿದೆ ಪರಂತು ಹಿಟ್ಲರನಿಗೆ ಅದರಿಂದ ಸಮಾಧಾನವಿಲ್ಲ. ಅವನು ಮುಸಲೋನಿಯೊಂದಿಗೆ ಬೆರೆತು ತನ್ನ ಪಕ್ಷವನ್ನು ದೊಡ್ಡದು ಮಾಡಿಕೊಳ್ಳುತಿದ್ದಾನೆ. ಇಂಗ್ಲಾಂಡು ಫ್ರಾನ್ಸುಗಳ ಭರವಸೆಯಲ್ಲಿ ವಿಶ್ವಾಸವನ್ನಿಡಲಾರದ ಯುಗೊಸ್ಲೋವಿಯ ಮೊದಲಾದ ಚಿಕ್ಕ ರಾಷ್ಟ್ರಗಳು ಒಂದೊಂದಾಗಿ ಹಿಟ್ಲರನ ಪಕ್ಷವನ್ನು ಸೇರುತ್ತಿವೆ.

ಇಂಗ್ಲಾಂಡ ಫ್ರಾನ್ಸುಗಳ ಕರ್ತವ್ಯಭಾಗ

ಜೆಕೊಸ್ಲೋವೇಕಿಯಾ-ಮಾಮೆಲ್ ಮೊದಲಾದ ಸಣ್ಣ ಸ್ವತಂತ್ರ ರಾಷ್ಟ್ರಗಳನ್ನು ಹಿಟ್ಲರನೂ ಅಲ್ಬೇನಿಯವನ್ನು ಮುಸಲೋನಿಯೂ ಹೇಗೆ ಕಬಳಿಸಿಕೊಂಡರೆಂಬುದು ಇನ್ನೂ ಮರೆತುಹೋಗದೆ ಇರುವಾಗ ಸಣ್ಣ ರಾಷ್ಟ್ರಗಳು ಇಂಗ್ಲಾಂಡು ಫ್ರಾನ್ಸುಗಳ ಸಖ್ಯಕ್ಕಿಂತ ಹಿಟ್ಲರ ಮುಸಲೋನಿಯರ ಅಧೀನತೆಯನ್ನು ಒಪ್ಪಿಕೊಳ್ಳುವುದು ಸಹಜವಾಗಿದೆ ಇಂಗ್ಲಾಂಡು ಫ್ರಾನ್ಸುಗಳ ಮಾತುಗಳ ಮೇಲೆ ವಿಶ್ವಾಸ ಹುಟ್ಟದ ಹಾಗೆಯೇ ಆ ಎರಡು ರಾಷ್ಟ್ರಗಳು ಹಿಂದೆ ನಡೆಕೊಂಡಿವೆ ಈಗ ಹಿಟ್ಲರ ಮುಸಲೋನಿಯರ ಅಂತರಂಗದ ಉದ್ದೇಶವು—ಅವರವರ ರಾಷ್ಟ್ರಗಳ ಸ್ವಾತಂತ್ರ ಮತ್ತು ಮಾನರಕ್ಷಣೆ ಮಾಡುವುದು ಮಾತ್ರವಲ್ಲ, ಚಕುದೋಪಾಯಗಳಿಂದ ಇತರ ರಾಜ್ಯಗಳನ್ನು ಸೇರಿಸಿಕೊಂಡು ಸಾಮ್ರಾಜ್ಯ ವಿಸ್ತಾರ ಮಾಡುವುದೂ ಆಗಿದೆ ಎಂಬುದು ಗೊತ್ತಾಗಿ ಇಂಗ್ಲಾಂಡು ಫ್ರಾನ್ಸುಗಳು ತಮ್ಮ ಪರರಾಷ್ಟ್ರ ನೀತಿಯಲ್ಲಿ ಪರಿವರ್ತನ ಮಾಡಿಕೊಂಡಿರುವುದು ನಿಜ. ಈ ದೇಶಗಳು ಹಿಂದಿನಂತೆ ಹಿಟ್ಲರ ಮುಸಲೋನಿಯರನ್ನು ಸಂತುಷ್ಟಗೊಳಿಸುವ ಹವ್ಯಾಸಕ್ಕೆ ಹೋಗದೆ ಅವರ ಆಕ್ರಮಣಗಳನ್ನು ತಡೆಯುವ ಸಿದ್ಧತೆಗಳನ್ನು ಮಾಡಿವೆ. ಆದರೆ ಅಷ್ಟು ಸಾಲದು ಹಿಟ್ಲರ ಮುಸಲೋನಿಯರ ವಿರುದ್ಧ ತಾವು ಯುದ್ಧಕ್ಕಾದರೂ ಸಿದ್ಧರಿದ್ದೇವೆ, ಅದಕ್ಕೋಸ್ಕರ ತಮ್ಮ ಧ್ಯೇಯಾದರ್ಶಗಳಲ್ಲಿ ಪರಸ್ಪರ ವಿರೋಧವಿರುವುದಾದರೂ, ಹಿಟ್ಲರ ಮುಸಲೋನಿಯರನ್ನು ತಡೆಗಟ್ಟಲಿಕ್ಕೆ ರಷ್ಯದೊಡನೆ ಒಡಂಬಡಿಕೆ ಮಾಡಿಕೊಳ್ಳಲಿಕ್ಕೂ ಸಿದ್ಧರಿದ್ದೇವೆ ಎಂಬುದನ್ನು ಅವು ಈ ಸರ್ವಾಧಿಕಾರಿಗಳಿಗೆ ತೋರಿಸಿಕೊಡಬೇಕು ಹಿಟ್ಲರನ ಇನ್ನೊಂದು ಆಕ್ರಮಣವಾಗುವ ಮೊದಲೇ ಇಂಗ್ಲಾಂಡ ಫ್ರಾನ್ಸುಗಳು ಇದನ್ನು ಸರ್ವಾಧಿಕಾರಿಗಳಿಗೆ ತೋರಿಸಿಕೊಡಬೇಕು.

ಹಿಟ್ಲರನ ಇನ್ನೊಂದು ಆಕ್ರಮಣ

ಇಂಗ್ಲಾಂಡಿನ ರಾಜದಂಪತಿಗಳು ಅಮೇರಿಕೆಕ್ಕೆ ಪ್ರಯಾಣ ಹೋಗುವ ನಿರ್ಧಾರ ಮಾಡಿದ್ದಾರೆ ಅಮೇರಿಕದಲ್ಲಿ ಅವರ ಸ್ವಾಗತದ ಸಿದ್ಧತೆಗಳು ಭರದಿಂದ ಸಾಗಿವೆ. ರಾಜದಂಪತಿಗಳು ಅಮೆರಿಕಕ್ಕೆ ಹೋದಾಗಲೇ ಹಿಟ್ಲರನು ಇನ್ನೊಂದು ದೇಶವನ್ನು ಆಕ್ರಮಿಸಬಹುದೆಂದು ಸುದ್ದಿ ಉಂಟಾಗಿದೆ ಡಾಂಜಿಂಗ ನಗರ ಮತ್ತು ಓಣಿಯನ್ನು ಜರ್ಮನಿಗೆ ಕೊಡುವಂತೆ ಪೋಲಾಂಡನ್ನು ಕೇಳಿದಾಗ ಅದು ಹಿಟ್ಲರನ ಆ ಬೇಡಿಕೆಯನ್ನು ತಿರಸ್ಕರಿಸಿದ ಹಾಗೆ ಮೊನ್ನೆಯ ರೀಚ ಸ್ಟಾಗ ಭಾಷಣದಲ್ಲಿ ಹಿಟ್ಲರನು ಅಂದಿದ್ದಾನೆ. ಆದ್ದರಿಂದ ಅವನ ಮುಂದಿನ ಈ ಆಕ್ರಮಣವು ಆ ಕಡೆಗೇ ಆಗಬಹುದೆಂದು ಊಹೆ ಇದೆ. ಅರಸರು ದೇಶದಲ್ಲಿ ಇಲ್ಲದಾಗ ಇಂಗ್ಲಾಂಡಿಗೆ ಯಾವ ರಾಜ್ಯದ ಮೇಲೂ ಯುದ್ಧವನ್ನು ಸಾರಲಿಕ್ಕಾಗುವುದಿಲ್ಲ. ಒಂದು ದೇಶದ ಮೇಲೆ ಯುದ್ಧವನ್ನು ಸಾರುವ, ಅಥವಾ ಒಂದು ಯುದ್ಧದಲ್ಲಿ ಭಾಗಿಯಾಗುವ ಅಧಿಕಾರವು ಸ್ವತಃ ಅರಸನಿಗೆ ಸೇರಿರುವುದು, ಯುದ್ಧದ ವಿಚಾರವು ಪಾರ್ಲಿಮೆಂಟಿನಲ್ಲಿ ಮಂಜೂರಾಗಬೇಕು ಆ ಮಂಜೂರಿಗೆ ಅರಸನು ತನ್ನ ದಸ್ತಕತನಿಶಿ ಸಮ್ಮತಿಯನ್ನು ಕೊಡಬೇಕು ಅನಂತರ ಇಂಗ್ಲಾಂಡು ಯುದ್ಧ ಮಾಡಬಹುದು. ಆದ್ದರಿಂದ ಡಾಂಜಿಂಗ ಓಣಿಯನ್ನು ಆಕ್ರಮಿಸಲಿಕ್ಕೆ, ಇಂಗ್ಲಾಂಡಿನ ಅರಸರು ಅಮೆರಿಕಕ್ಕೆ ಹೋದ ಕಾಲವೇ ಅನುಕೂಲವೆಂದು ಹಿಟ್ಲರನು ತಿಳಿದಿರಬೇಕು

ಸರ್ ಜೋನ್ ಸೈಮನರ ಎಚ್ಚರಿಕೆ

ಪರಂತು ಬ್ರಿಟಿಷ ಮಂತ್ರಿಮಂಡಲದ ಪ್ರಮುಖ ಸದಸ್ಯರಲ್ಲೊಬ್ಬರಾದ ಸರ್ ಜೋನ ಸೈಮನರು—ಇಂಗ್ಲಾಂಡಿನ ವಿದೇಶಾಂಗ ನೀತಿಯಲ್ಲಿ ಪರಿವರ್ತನೆಯಾಗಿರುವುದನ್ನು ಹಿಟ್ಲರನಿಗೆ ತಿಳಿಸಿ, ದುರ್ದೈವದಿಂದ ಆಗುವ ದುಷ್ಪರಿಣಾಮಗಳನ್ನು ಸ್ಪಷ್ಟಮಾಡಿದ್ದಾರೆ ಯುರೋಪಿನಲ್ಲಿ ಎಲ್ಲಿಯಾದರೂ ... ಆಕ್ರಮಣಗಳನ್ನು ಇಂಗ್ಲಾಂಡ ಖಂಡಿತವಾಗಿ ವಿರೋಧಿಸುತ್ತದೆ ಎಂದು ಅವರು ಅಂದಿದ್ದಾರೆ

ಮಹಾತ್ಮಾ ಗಾಂಧಿಜಿ

ರಾಜಕೋಟದಿಂದ ಹಿಂದಿರುಗಿದ ಮಹಾತ್ಮಾಜಿಯವರು ಬೆ... ಯಲ್ಲಿ ಇಳಿದೊಡನೆ ತೆಗೆದ ಛಾಯಾಚಿತ್ರ ಅವರೊಡನೆ ಶ್ರೀ ವಲ್ಲಭಭಾಯಿ ಪಟೇಲರು ... ದೇಸಾಯಿ ಯವರನ್ನು ಕಾಣಬಹುದು

ನಿರ್ಬಂಧದ ಮಿಲಿಟರಿ ಶಿಕ್ಷಣ

ಎಲ್ಲಾ ಬಗೆಯ ವಿರೋಧಗಳೂ ಶಾಂತಿಪಕ್ಷದ ರಾಷ್ಟ್ರಗಳು ಸಿದ್ಧವಾಗಿವೆ ಎಂಬುದಕ್ಕೆ ಪ್ರತ್ಯಕ್ಷ ಪ್ರಮಾಣಗಳನ್ನು ಕೊಡಲಿಕ್ಕಾಗಿಯೇ, ಮಿ. ಚೆಂಬರಲೇನರು ಬ್ರಿಟನಿನಲ್ಲಿ ನಿರ್ಬಂಧದ ಮಿಲಿಟರಿ ಶಿಕ್ಷಣವನ್ನು ಜಾರಿಗೆ ತರುವರು ಶಾಂತಿಯ ಕಾಲದಲ್ಲಿ ಇಂಥ ಶಿಕ್ಷಣ ಕ್ರಮವನ್ನು ಜಾರಿಗೆ ತಂದ ದೃಷ್ಟಾಂತಗಳು ಬ್ರಿಟನಿನ ಇತಿಹಾಸದಲ್ಲಿ ಇಲ್ಲವೇ ಇಲ್ಲ. ಈಗ ಯುದ್ಧವಿಲ್ಲವಾದರೂ ಯುದ್ಧ ಪರಿಸ್ಥಿತಿ ಉಂಟಾಗಿರುವುದರಿಂದ ನಿರ್ಬಂಧದ ಸೈನಿಕ ಶಿಕ್ಷಣವು ಅಗತ್ಯವೆಂದು ಮಿ ಚೆಂಬರಲೇನರು ಪಾರ್ಲಮೆಂಟಿನಲ್ಲಿ ಅಂದರು ಬ್ರಿಟನಿನ ಬಜೆಟಿನಲ್ಲಿ ೬೩೦ ಮಿಲಿಯ ಪವನುಗಳನ್ನು ಸೇನಾ ಖರ್ಚಿಗೆ ಇಟ್ಟಿದೆ ಇದು ಕಳೆದ ವರ್ಷದ ಖರ್ಚಿಗಿಂತ ೫೦ ಮಿಲಿಯ ಪವನು ಹೆಚ್ಚಾಗಿರುವುದು ಫ್ರಾನ್ಸೂ ಯುದ್ಧಸಿದ್ಧತೆಯಲ್ಲಿ ಹಿಂದೆ ಬಿದ್ದಿಲ್ಲ, ಅಲ್ಲಿ ಅದು ಯುದ್ಧಕಾಲದ ನಿರ್ಬಂಧ ಸೇನೆಗೆ ಪ್ರಾಯಭರಿತ ಸ್ತ್ರೀ ಪುರುಷರನ್ನು ಮಾತ್ರವಲ್ಲದೆ ಅಪ್ರಾಯಸ್ಥ ಮಕ್ಕಳು ಮಂದಿಗಳನ್ನೂ ಪ್ರಾಯಸಂದ ಮುದುಕ ಮುದುಕಿಯರನ್ನೂ ಭರ್ತಿ ಮಾಡಿದೆ ಅಲ್ಲಿ ಸೈನಿಕ ತರಬೇತಿಯು ಭರದಿಂದ ಸಾಗಿದೆ ಇಂಗ್ಲಾಂಡು ಫ್ರಾನ್ಸುಗಳಲ್ಲಿ ಜಲ ನೆಲ ವಾಯುಸೇನೆಗಳ ಅಭ್ಯಾಸ ಕ್ರಮವು ರಭಸದಿಂದ ನಡೆದಿದೆ.

ಚಿಕ್ಕ ರಾಷ್ಟ್ರಗಳಿಗೆ ಭರವಸೆ

ಯೂರೋಪಿನ ಚಿಕ್ಕ ರಾಷ್ಟ್ರಗಳಿಗೆ ಇಂಗ್ಲಾಂಡು ಫ್ರಾನ್ಸುಗಳಲ್ಲಿ ನಂಬಿಕೆ ಕಡಿಮೆಯಾದುದರಿಂದ ಅವು ಒಂದೊಂದಾಗಿ ಹಿಟ್ಲರನಿಗೆ ಶರಣುಹೋಗಬಹುದೆಂದು ಹಿಂದೆ ಹೇಳಿದೆವಷ್ಟೆ. ಆದರೆ ಇಂಗ್ಲಾಂಡು ಫ್ರಾನ್ಸುಗಳು ಅವುಗಳಿಗೆ ತಮ್ಮ ಮೇಲೆ ನಂಬಿಕೆ ಬರುವುದಕ್ಕೋಸ್ಕರ ಪ್ರಯತ್ನಗಳನ್ನೂ ಮಾಡಿವೆ. ಮೇಲೆ ಹೇಳಿದಂಥ ಯುದ್ಧಸಿದ್ಧತೆಗಳ, ಅದಕ್ಕಾಗಿಯೇ ಆಗಿರುವವು ಅಲ್ಲದೆ ಇಂಗ್ಲಾಂಡು ರುಮೇನಿಯಕ್ಕೆ ಯುದ್ಧಸಿದ್ಧತೆ ಮತ್ತು ಸೇನಾ ಭರ್ತಿಗೋಸ್ಕರ ಐದು ಮಿಲಿಯ ಪವನುಗಳ ಸಾಲ ಕೊಡುವುದು ಇಂಥ ಸಾಲವನ್ನು ಪೋಲಾಂಡ ಮೊದಲಾದ ಇತರ ಚಿಕ್ಕ ರಾಷ್ಟ್ರಗಳಿಗೂ ಕೊಡುವ ಆಲೋಚನೆಯೂ ಇಂಗ್ಲಾಂಡಿಗೆ ಇದೆ ಆದರೆ ಇಂಗ್ಲಾಂಡು ಇಷ್ಟರಿಂದಲೇ ಸುಮ್ಮನಿರುವುದಲ್ಲ. ರಷ್ಯವನ್ನು ಅದು ಶಾಂತಿಪಕ್ಷಕ್ಕೆ ಸೇರಿಸಿಕೊಳ್ಳಲೇ ಬೇಕು ಇಂಗ್ಲಾಂಡ ಫ್ರಾನ್ಸ ರಷ್ಯಗಳು ಒಂದಾದುವೆಂದರೆ ಹಿಟ್ಲರ ಮುಸಲೋನಿಯರು ಒಂದು ಹೆಜ್ಜೆ ಮುಂದೆ ಇಡಬೇಕಾದರೂ ಹತ್ತು ಸಲ ಮುಂದು ಆಲೋಚಿಸಬೇಕಾಗುತ್ತದೆ. ಯಾಕೆಂದರೆ ಇಷ್ಟರ ತನಕ ಸುಲಭದಲ್ಲಿ ನುಂಗಿದ ರಾಜ್ಯಗಳನ್ನು ಈ ಮೂವರೊಡನೆ ಆಗುವ ಯುದ್ಧದಲ್ಲಿ ಜೀರ್ಣಿಸಿಕೊಳ್ಳುವುದು ಕಷ್ಟದ ಸಂಗತಿ ಎಂಬುದನ್ನು ಅವರು ಚೆನ್ನಾಗಿ ಬಲ್ಲರು

ಆರು ತಿಂಗಳ ಅನಂತರ ಆಹಾರವಿಲ್ಲದೆ ಉಪವಾಸ

ಹಿಟ್ಲರ ಮುಸಲೋನಿಯರು 'ಢೋಲ್ ಬಜಾವ್' ಮಾಡಿಕೊಂಡೇ ಇಷ್ಟರ ತನಕ ಇದ್ದಾರೆ ಅವರು ಎಷು ಮಾತ್ರಕ್ಕೂ ಲೋಕಯುದ್ಧಕ್ಕೆ ಸಿದ್ಧರಲ್ಲ ಯುದ್ಧಸಂಭವದಲ್ಲಿ ಇಟಲಿ ಜರ್ಮನಿಗಳಲ್ಲಿರುವ ಆಹಾರ ಸಂಗ್ರಹವು ೬ ತಿಂಗಳಿಗೂ ಸಾಲದು ಲೋಕಯುದ್ಧವು ೬ ತಿಂಗಳಿಗಿಂತ ಹೆಚ್ಚು ಕಾಲ ನಡೆದರೆ ಜರ್ಮನರೂ ಇಟಾಲಿಯನರೂ ಯುದ್ಧಕ್ಕೆ ಹೋಗಿ ಅಲ್ಲಿ ಉಪವಾಸ ಬಿದ್ದು ಸಾಯಬೇಕಾಗುವುದು ಆದ್ದರಿಂದ ಯುದ್ಧದ ಫಲವು ತಮಗೆ ಅನುಕೂಲವಲ್ಲವೆಂಬುದನ್ನು ಸರ್ವಾಧಿಕಾರಿಗಳು ತಿಳಿದಿದ್ದಾರೆ ಇಂಗ್ಲಾಂಡ ಫ್ರಾನ್ಸುಗಳು ಹಿಟ್ಲರ ಮುಸಲೋನಿಯರನ್ನು ತಡೆಯಲಿಕ್ಕೆ ಈಗ ಒಂದು ಹೆಜ್ಜೆ ಮುಂದಿಟ್ಟ ಹಾಗೆ, ಇನ್ನೂ ಹೆಜ್ಜೆ ಮುಂದಿಟ್ಟರೆ, ಈ ಸರ್ವಾಧಿಕಾರಿಗಳು ಸದ್ದಿಲ್ಲದೆ ಅಡಗಿಹೋಗುವರು. ಲೋಕದಲ್ಲಿ ಚಿರ ಶಾಂತಿಯು ಸ್ಥಾಪಿಸಲ್ಪಡುವುದು.

ರಾಮದುರ್ಗದಲ್ಲಿ ವಿಚಾರಣೆಯಾಗಲಿ

ರಾಮದುರ್ಗ ಸಂಸ್ಥಾನದಲ್ಲಿ ಗಲಭೆ ಗಲಾಟೆಗಳಾಗಿ ಕೆಲವು ಮಂದಿ ಸತ್ತುಹೋದರಷ್ಟೆ. ಎಲ್ಲಾ ಸಂಗತಿಗಳ ಪೂರ್ವಾಪರಗಳನ್ನು ಆಲೋಚಿಸಿ ಮಹಾತ್ಮಾಜಿಯವರು ಹರಿಜನದಲ್ಲಿ ಒಂದು ಲೇಖನ ಬರೆದು ಈ ಸಂಬಂಧ ವಿಚಾರಣೆ ಮಾಡಿ ವರದಿ ಮಾಡಲಿಕ್ಕೆ ನಿಷ್ಪಕ್ಷಪಾತಿಗಳ ವಿಚಾರಣಾ ಸಮಿತಿಯಾಗಬೇಕೆಂದಿದ್ದಾರೆ. ಪ್ರಾಯಶಃ ಈ ಕಾರ್ಯವನ್ನು ಒಬ್ಬ ಹೈಕೋರ್ಟ ಜಡ್ಜರಿಗೆ ಒಪ್ಪಿಸಿಕೊಡಬಹುದು

ಕರಾಚಿಯಲ್ಲಿ ಸರ್ವಸೇನಾಪತಿಗಳು

ಯುದ್ಧ ಸಂಭವದಲ್ಲಿ ಕರಾಚಿಯ ಮೇಲೆ ವಿಮಾನದಾಳಿಯ ಭಯವಿರುವುದರಿಂದ ನಮ್ಮ ಸರ್ವಸೇನಾಪತಿಗಳು ಕರಾಚಿಗೆ ಸಂದರ್ಶನವಿತ್ತು ಅದರ ರಕ್ಷಣೋಪಾಯಗಳನ್ನು ಮಿಲಿಟರ ಅಧಿಕಾರಿಗಳೊಂದಿಗೆ ಚರ್ಚಿಸಿರುವರು ಅಲ್ಲಿ ಹೊಸ ಆಸ್ಪತ್ರೆ, ಕೋಟೆಕೊತ್ತಲ, ಸೈನ್ಯಬಲಗಳನ್ನು ಹೆಚ್ಚಿಸುವ ಆಲೋಚನೆ ಅವರಿಗೆ ಇದೆ ನಾಗರಿಕರ ವಿಮಾನದಾಳಿಯಿಂದ ಸ್ವರಕ್ಷಣೆ ಹೇಗೆ ಮಾಡಿಕೊಳ್ಳಬಹುದೆಂಬ ಕುರಿತು ಅವರಿಗೆ ಶಿಕ್ಷಣವನ್ನು ಕೊಡುತಿದ್ದಾರೆ

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಮಹಾಸಭೆ

ಗಾಂಧೀ-ಭೋಸರ ಭೇಟಿಯ ಫಲಿತಾಂಶ

ರಾಷ್ಟ್ರಪತಿ ಸುಭಾಷ ಭೋಸರ ರಾಜೀನಾಮೆ

ಬಾಬು ರಾಜೇಂದ್ರ ಪ್ರಸಾದರು ಅಧ್ಯಕ್ಷರಾದರು

ಗಾಂಧೀ ಭೋಸರ ಭೇಟಿಯು ಪರಿಣಾಮವಾಗಿ ಅವರೊಳಗಿನ ವಿವಾದಾಂಶಗಳು ತೀರ್ಮಾನಿಸಲ್ಪಟ್ಟು ಎ. ಐ. ಸಿ. ಸಿ. ಮಹಾಸಭೆ ಕೂಡುವ ಮೊದಲೇ ವರ್ಕಿಂಗ್ ಕಮಿಟಿಯ ರಚನೆಯಾಗಬಹುದೆಂದು ದೇಶವು ಇಟ್ಟುಕೊಂಡ ಆಸೆಯು ನಿರಾಶೆಯಲ್ಲಿ ಪರ್ಯವಸಾನ ಹೊಂದಿತು. ಮಹಾತ್ಮರನ್ನುವ ಪ್ರಕಾರ ಸುಭಾಸರೇ ವರ್ಕಿಂಗ್ ಕಮಿಟಿಯ ರಚನೆಮಾಡುವುದು ಪಂತದರಾವಿಗೆ ಅನುಕೂಲವಾಗಿರಲಿಲ್ಲ ಹಾಗೆಂದು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಾಗುವ ಮೊದಲು ಇದ್ದ ವರ್ಕಿಂಗ್ ಕಮಿಟಿಯನ್ನು ಪುನಃ ರಚಿಸಲಿಕ್ಕೆ ಸುಭಾಸರು ಒಪ್ಪಲಿಲ್ಲ. ಹಿಂದಿನ ವರ್ಕಿಂಗ್ ಕಮಿಟಿಯ ಸದಸ್ಯರೊಡನೆ ಮಾತನಾಡಿಕೊಂಡು, ಪರಸ್ಪರ ಸಮ್ಮತಿಯಿಂದ ಹೊಸ ಕಮಿಟಿಯನ್ನು ರಚಿಸಿಕೊಳ್ಳಿರೆಂದ ಮಹಾತ್ಮರು ಸೂಚನೆ ಕೊಟ್ಟರಾದರೂ, ಅಂಥ ಮಾತುಕತೆಗಳಿಂದಲೂ ಏನೂ ಫಲವಾಗಲಿಲ್ಲ. ಆದ್ದರಿಂದ ಸುಭಾಸರು ನಿರುಪಾಯರಾಗಿ ತಮ್ಮ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡಬೇಕಾಯಿತು.

ನೆಹರೂ ಅವರ ರಾಜಿಪ್ರಯತ್ನ

ಗಾಂಧಿ-ಭೋಸರೊಳಗಿನ ವಿವಾದವನ್ನು ತೀರ್ಮಾನಿಸಿ ಅವರೊಳಗೆ ರಾಜಿ ಮಾಡುವುದಕ್ಕೋಸ್ಕರ ಪಂಡಿತ ನೇಹರು ಅವರು ಬಹಳ ಪ್ರಯತ್ನಪಟ್ಟಿದ್ದರು. ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿಯ ಪರಿಶೀಲನೆ ಮಾಡುವಾಗ ಕಾಂಗ್ರೆಸ್ಸಿನಲ್ಲಿ ಭಿನ್ನಭಾವಗಳಿಲ್ಲದ ಎಲ್ಲ ಪಕ್ಷದವರು ಒಮ್ಮನಸ್ಸಿನಿಂದ ಕೆಲಸಮಾಡುವುದು ಅಗತ್ಯವಾದ್ದರಿಂದ ಭೋಸರು ರಾಜಿನಾಮೆ ಕೊಡಬಾರದೆಂದೂ, ಕೊಟ್ಟ ರಾಜಿನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ನೆಹರು ಅವರು ಎ. ಐ. ಸಿ. ಸಿ. ಮಹಾಸಭೆಯಲ್ಲಿ ಠರಾವು ತಂದರು. ಪರಂತು ತಮ್ಮ ಪಕ್ಷದವರಿಗೆ ವರ್ಕಿಂಗ್ ಕಮಿಟಿಯಲ್ಲಿ ಒಂದೆರಡು ಸ್ಥಾನಗಳನ್ನು ಹೆಚ್ಚಿಗೆ ಕೊಡಲಿಕ್ಕೆ ಗಾಂಧಿಯವರೂ ಎ. ಐ. ಸಿ. ಸಿ. ಯೂ ಅನುಕೂಲ ಅಭಿಪ್ರಾಯವುಳ್ಳದ್ದಾಗಿದೆ ಎಂದು ತನಗೆ ಗೊತ್ತಾಗದ ಹೊರತು ರಾಜಿನಾಮೆಯನ್ನು ಹಿಂದೆಗೆದುಕೊಳ್ಳಲಿಕ್ಕಾಗುವುದಿಲ್ಲವೆಂದು ಭೋಸರು ಹೇಳಿದುದರಿಂದ ನೇಹರು ಅವರ ಠರಾವನ್ನು ಓಟಿಗೆ ಹಾಕಲಿಲ್ಲ.

ಎ. ಐ. ಸಿ. ಸಿ. ಮಹಾಸಭೆ

ಕಾಂಗ್ರೆಸಿನಲ್ಲಿ ಒಡಕು ಉಂಟಾಗಬಾರದು ಎಂಬ ಅಭಿಪ್ರಾಯದಿಂದ ಶ್ರೀ ಜಯಪ್ರಕಾಶ ನಾರಾಯಣ ಮೊದಲಾದ ಸಮಾಜವಾದಿ ಮುಖಂಡರು ಪಂಡಿತ ನೆಹರೂ ಅವರ ಠರಾವಿಗೆ ಒಪ್ಪಬೇಕೆಂದು ಭೋಸರನ್ನು ಬಹಳ ಒತ್ತಾಯ ಮಾಡಿದರು. ಈ ಸಮಾಜವಾದಿಗಳಾದರೂ ಸಂಪೂರ್ಣ ಬಲಪಕ್ಷದ ವರ್ಕಿಂಗ್ ಕಮಿಟಿಯಾಗಬೇಕೆಂಬುದಕ್ಕೆ ಸಮ್ಮತರಾಗಿರಲಿಲ್ಲ. ಹೊಸ ವರ್ಕಿಂಗ್ ಕಮಿಟಿಯಲ್ಲಿ ಇಬ್ಬರು ಮೂವರು ಸಮಾಜವಾದಿಗಳು ಹೆಚ್ಚಿಗೆ ಇರಬೇಕೆಂದು ಅವರದೂ ಅಭಿಪ್ರಾಯವಿತ್ತು. ಆದರೆ ಬಂಗಾಳದ ಎಡಪಕ್ಷದವರು ಪೂರ್ಣ ಸುಭಾಸರ ಪಕ್ಷಕ್ಕೆ ನಿಂತು, ವರ್ಕಿಂಗ್ ಕಮಿಟಿಯ ರಚನೆಯಲ್ಲಿ ಅಧ್ಯಕ್ಷರಿಗಿರುವ ಸ್ವಾತಂತ್ರ್ಯ ಮತ್ತು ಅಧಿಕಾರವನ್ನು ಅಧ್ಯಕ್ಷರೇ ಉಪಯೋಗಿಸಿಕೊಳ್ಳಬೇಕೆಂದು ಬಹಳ ಸಾಧಿಸಿದರು. ಈ ಎಲ್ಲ ಕಾರಣಗಳಿಂದ ವರ್ಕಿಂಗ್ ಕಮಿಟಿಯ ರಚನೆಯಲ್ಲಿ ತನಗೆ ಪೂರ್ಣ ಸ್ವಾತಂತ್ರ್ಯವಿದ್ದ ಹೊರತು ನಾನು ಅಧ್ಯಕ್ಷನಾಗಿ ಕಾಂಗ್ರೆಸಿಗೆ ಅಥವಾ ದೇಶಕ್ಕೆ ಹಿತವಾಗಲಾರದೆಂದು ಭೋಸರು ತನ್ನ ಅಧ್ಯಕ್ಷ ಪದವಿಗೆ ರಾಜಿನಾಮೆಯನ್ನಿತ್ತರು. ಶ್ರೀಮತಿ ಸರೋಜಿನಿ ದೇವಿಯವರ ಅಧ್ಯಕ್ಷತೆಯಲ್ಲಿ ಎ. ಐ. ಸಿ. ಸಿ. ಸಭೆಕೂಡಿತು. ಅದರಲ್ಲಿ ಭೋಸರ ರಾಜಿನಾಮೆ ಸ್ವೀಕರಿಸಲ್ಪಟ್ಟಿತು. ಅವರ ಬದಲಿಗೆ ಬಾಬು ರಾಜೇಂದ್ರ ಪ್ರಸಾದರು ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ವರ್ಕಿಂಗ್ ಕಮಿಟಿಯ ರಚನೆ.

ಮುಂದಿನ ವರ್ಷದ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಈ ಕೆಳಗಿನ ಸದಸ್ಯರನ್ನು ಶ್ರೀ ರಾಜೇಂದ್ರ ಬಾಬುಗಳು ನೇಮಕಮಾಡಿರುವರು. ಮೌಲನಾ ಅಬುಲ್ ಕಲಮ್ ಆಜಾದ್, ಮಿಸೆಸ್ ಸರೋಜಿನಿ ನಾಯ್ಡು, ಸರ್ದಾರ ವಲ್ಲಭಬಾಯಿ ಪಟೇಲ, ಸೇಠ್ ಜಮ್ನಾಲಾಲ ಬಜಾಜ, ಜಯರಾಮದಾಸ ದೌಲತ್ ರಾಮ, ಖಾನ್ ಅಬ್ದುಲ್ ಗಫರ್ ಖಾನ, ಜೆ. ಬಿ. ಕೃಪಾಲಿನಿ, ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ, ಭುಲಾಬಾಯಿ ದೇಸಾಯಿ, ಶಂಕರರಾವ ದೇವ, ಹರಿಕೃಷ್ಣ ಮಹತಾಬ, ಡಾಕ್ಟರ್ ಬಿಧನ್ ಚಂದ್ರ ರಾಯ ಮತ್ತು ಪ್ರಫುಲ್ಲ ಚಂದ್ರಘೋಷ.

ಬಾಬು ರಾಜೇಂದ್ರ ಪ್ರಸಾದರು ನೆಹರೂರವರನ್ನೂ ಸುಭಾಸ ಬಾಬುಗಳನ್ನೂ ಕಾರ್ಯಕಾರಿ ಮಂಡಳಿಯ ಸದಸ್ಯರಾಗುವಂತೆ ಬೇಡಿಕೊಂಡರೂ ಅವರು ತಮ್ಮ ಸಮ್ಮತಿಯನ್ನೀಯಲಿಲ್ಲ.

ಮುಂದೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ನಡೆದು ಯುದ್ಧ ನಿಷೇಧ, ಕಾಂಗ್ರೆಸ್ ಸಂಸ್ಥೆಯ ಶುದ್ಧೀಕರಣ, ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ಹೀನಾವಸ್ಥೆ, ಬಂಗಾಳದ ಮತ್ತು ಪಂಜಾಬದ ರಾಜಕೀಯ ಕೈದಿಗಳ ಬಿಡುಗಡೆ ಮೊದಲಾದ ವಿಷಯಗಳ ಚರ್ಚೆಗಳು ನಡೆದುವು. ಠರಾವುಗಳು ಮಂಜೂರಾದವು.

ಇತರ ಎಲ್ಲಾ ಖಾಸಗಿ ಠರಾವುಗಳೆಲ್ಲವು ಕಮಿಟಿಯ ಮುಂದಿನ ಅಧಿವೇಶನಕ್ಕೆ ಮುಂದರಿಸಲ್ಪಟ್ಟವು.

ಅಧಿವೇಶನದ ಸಮಾಪ್ತಿಯಾದೊಡನೆ ಮುಖಂಡರಿಗೆ ಅಧಿವೇಶನ ಮಂಟಪದಿಂದ ಹೊರಗೆ ಬರುವುದು ಬಹಳ ಪ್ರಯಾಸವಾಯಿತು. ನೆರೆದಸಭಿಕರಲ್ಲಿ ಒಂದು ತಂಡವು ನಿಂದಾಸ್ಪದವಾದ ವರ್ತನೆಯಿಂದ ವರ್ತಿಸಿತು. ಪೋಲೀಸು ಮತ್ತು ಸ್ವಯಂ ಸೇವಕರು ಅತ್ಯಂತ ಜಾಗರೂಕತೆಯಿಂದಿದ್ದುದರಿಂದ ಹೆಚ್ಚಾದ ಯಾವ ಅಪಘಾತಗಳು ಉಂಟಾಗಲಿಲ್ಲ.

ಶ್ರೀ ಬಿಧನ್ ಚಂದ್ರರಾಯರ ವಿರುದ್ಧ ಪ್ರದರ್ಶನ

ಶ್ರೀ. ಬಿ. ಸಿ. ರಾಯರ ಮನೆಯ ಮುಂದೆ ಜನರ ವಿರುದ್ಧವಾಗಿ ಅಲ್ಲಸಲ್ಲದ ಪ್ರದರ್ಶನಗಳನ್ನು ನಡೆಯಿಸಿ ಅವರ ಮನೆಗೆ ಕಲ್ಲಿನ ಮಳೆಯನ್ನು ಸುರಿಸಿದರು. ನಂತರ ಪೋಲಿಸರು ಬಂದು ನೆರೆದವರನ್ನು ಚದರಿಸಿದರು.

ಮುಖಂಡರ ಪ್ರಸ್ಥಾನ

ಮಹಾತ್ಮಾಗಾಂಧಿಯವರು ತಮ್ಮ ಬಳಗದೊಡನೆ ಚಂಪಾರಣ ಜಿಲ್ಲೆಯ ಬೃಂದಾವನದಲ್ಲಿ ಜರಗಲಿರುವ ಗಾಂಧಿ ಸೇವಾಸಂಘದ ಅಧಿವೇಶನಕ್ಕೆ ತೆರಳಿದರು. ರಾಜೇಂದ್ರ ಪ್ರಸಾದರೂ, ಪ್ರಫುಲ್ಲ ಚಂದ್ರಘೋಷರೂ ಬೃಂದಾವನಕ್ಕೆ ತೆರಳಿರುವರು.

ಬಳ್ಳಾರಿ ಕೊಂಗ್ರೆಸ್ ಸೆಕ್ರೆಟರಿಯರ ರಾಜೀನಾಮೆ

ಸುಭಾಸಬಾಬುಗಳಿಗೆ ಸಹಾನುಭೂತಿಯನ್ನು ತೋರಿಸುವುದಕ್ಕಾಗಿ ಬಳ್ಳಾರಿ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರಾದ ಶ್ರೀ ಡಿ. ಎಚ್. ವೆಂಕೋಬರಾಯರು ರಾಜಿನಾಮೆಯನ್ನಿತ್ತರು.

ವಾರದ ಕೊನೆಯ ವಾರ್ತೆಗಳು

ಪಂಜಾಬಿನ ಬೇರೆ ಬೇರೆ ಕೈಗಾರಿಕೆಗಳಿಗೆ ಹಣಸಹಾಯವನ್ನು ಕೊಡುವುದಕ್ಕೋಸ್ಕರ ಪಂಜಾಬ ಸರಕಾರವು ಈ ವರ್ಷ ೪,೭೦,೦೦೦ ರೂಪಾಯಿಗಳನ್ನು ಮಂಜೂರು ಮಾಡಿದೆ. ಇದರ ಪೈಕಿ ೨ಲಕ್ಷ ರೂಪಾಯಿಗಳನ್ನು ಸಣ್ಣಪುಟ್ಟ ಕೈಗಾರಿಕೆಗಳಿಗೆ ಸಾಲಕೊಡಲಾಗುತ್ತದೆ. ಉಳಿದ ಹಣವನ್ನು ಇತರ ವಿಧಾನಗಳಿಂದ ಸಹಾಯಕೊಡಲಿಕ್ಕೆ ಖರ್ಚಾಗುತ್ತದೆ.

† † †

ರಾಜಕೋಟದ ಠಾಕೋರರೂ ಅಲ್ಲಿಯ ಪ್ರಜಾವರ್ಗವೂ ಗೌರವ ಪೂರ್ಣವಾದ ಸಂಧಾನವಮಾಡಿಕೊಂಡುದಾದರೆ ತನಗಾದಷ್ಟು ಸಂತೋಷವು ಇತರರು ಯಾರಿಗೂ ಆಗಲಾರದೆಂದೂ, ಅಂಥ ಒಂದು ಒಡಂಬಡಿಕೆಯು ಆಗದ ಸಂದರ್ಭದಲ್ಲಿ ತಾನು ಮೇ ೧೨ಕ್ಕೆ ರಾಜಕೋಟಕ್ಕೆ ಬರಲಿರುವುದಾಗಿಯೂ ಮಹಾತ್ಮರು ಕಲ್ಕತ್ತೆಯಿಂದ ಠಾಕೋರರಿಗೂ ದರ್ಬಾರ ವೀರವಲ್ಲರಿಗೂ ತಂತಿಕೊಟ್ಟಿದ್ದಾರೆ.

† † †

ಗಂಗಾಪುರ ಸಂಸ್ಥಾನದಲ್ಲಾದ ಗೋಲೀಬಾರಿನ ಸಂಬಂಧ ಸಂಸ್ಥಾನ ಸರಕಾರವು ನ್ಯಾಯಖಾತೆಯ ಮುಖಾಂತರ ವಿಚಾರಣೆಗೆ ಅಪ್ಪಣೆಕೊಟ್ಟಿರುವುದಾಗಿ ತಿಳಿದುಬರುತ್ತದೆ.

† † †

ದಕ್ಷಿಣ ಆಫ್ರಿಕದ ಹಿಂದೀಯರನ್ನು ಸ್ನೇಹಪ್ರೇಮಗಳ ಸೂತ್ರದಿಂದ ಕಟ್ಟಿ ಅವರನ್ನು ಸಂಘಟಿಸಲಿಕ್ಕೂ ಉಂಟಾದ ನೇಟಾಲ ಇಂಡಿಯನ್ ಕಾಂಗ್ರೆಸ ಮತ್ತು ಕೊಲೊನಿಯಲ್ ಬಾರ್ನ ಸೆಟ್ಲರ್ಸ ಇಂಡಿಯನ ಎಸೋಸಿಯೇಶನ ಎಂಬೆರಡು ಸಂಸ್ಥೆಗಳನ್ನು ಒಂದುಗೂಡಿಸುವ ಆಲೋಚನೆಯಾಗಿದೆ. ಈ ಸಮ್ಮಿಳಿತ ಸಂಸ್ಥೆಗೆ ಒಂದು ಯೋಗ್ಯ ಹೆಸರನ್ನು ಇಡುವುದಕ್ಕೋಸ್ಕರ ಸಂಚಾಲಕರು ಮಹಾತ್ಮರನ್ನು ಕೇಳಿದ್ದಾರೆ.

† † †

ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡುವುದೇ ಅಮೇರಿಕಾ ಜನಾಂಗದ ಮನೋದ್ದೇಶವಾಗಿರುವುದೆಂದು ನ್ಯೂಯಾರ್ಕ ನಗರದಲ್ಲಿ ಸೇರಿದ ಜಗತ್ತಿನ ಸಂತೆಯ ಪ್ರಾರಂಭೋತ್ಸವವನ್ನು ನಡೆಸುತ್ತಾ ಪ್ರೆಸಿಡೆಂಟ ರೂಜವೆಲ್ಟರು ಘೋಷಣಕೊಟ್ಟರು. ಈ ಸಂತೆಯಲ್ಲಿ ಜಗತ್ತಿನ ೬೨ ರಾಷ್ಟ್ರಗಳು ಭಾಗವಹಿಸಿಕೊಂಡಿರುವವು. ಸಂತೆಯು ಮುಗಿಯುವುದರೊಳಗೆ ಜಗತ್ತಿನ ನಾನಾ ಭಾಗಗಳಿಂದ ೬೦-೭೦ ಮಿಲಿಯ ಜನರು ಇದನ್ನು ನೋಡಲಿಕ್ಕೆ ಬರಬಹುದು. ಈ ಸಂತೆಯು ಜಗತ್ತಿನಲ್ಲೇ ಮಹತ್ತರವಾಗಿದೆ.

† † †

ಮೇ ೧ ಅಂದರೆ ಇದೇ ಮೇ ತಿಂಗಳ ಮೊದಲನೆ ದಿನವು ಪ್ರಪಂಚದ ಶ್ರಮಜೀವಿಗಳಿಗೆ ಅತ್ಯಂತ ಪವಿತ್ರವಾದ ದಿನವು. ಈ ದಿನ ಜಗತ್ತಿನ ಬೇರೆ ಬೇರೆ ದೊಡ್ಡ ದೊಡ್ಡ ಕೈಗಾರಿಕೆ ಕೇಂದ್ರಗಳಲ್ಲಿ ಶ್ರಮಜೀವಿಗಳ ಮಹಾಸಭೆಗಳು ಕೂಡುವವು. ಅಲ್ಲಿ ಶ್ರಮಜೀವಿಗಳ ಉದ್ಧಾರದ ಆಲೋಚನೆಗಳು ಆಗುವವು. ಮೋಸ್ಕೋ ನಗರವು ಶ್ರಮಜೀವಿಗಳ ತೀರ್ಥಸ್ಥಾನ ಎನ್ನಿಸಿಕೊಳ್ಳುತ್ತದೆ. ಮೇ ಡೇ ದಿನ ಅಲ್ಲಿ ಕೂಡಿದ ಸಭೆಯಲ್ಲಿ — ಬ್ರಿಟಿನ್, ಫ್ರಾನ್ಸ್, ಮತ್ತು ಅಮೇರಿಕದ ಶ್ರಮಜೀವಿಗಳು ಒಕ್ಕಟ್ಟಾಗಿ ಸರ್ವಾಧಿಕಾರಿಗಳ ಆಕ್ರಮಣ ನೀತಿಯನ್ನು ತಡೆಯಬೇಕೆಂದೂ, ಚೀನ ಮತ್ತು ಈಗ ತಾನೇ ಪರತಂತ್ರರಾಗಿರುವ ಜೆಕೊಸ್ಲೋವೇಕಿಯ, ಅಲ್ಬೇನಿಯ, ಸ್ಪೈನ ಹಾಗೂ ಅಬಿಸೀನಿಯಗಳ ಸ್ವಾತಂತ್ರ್ಯ ಯುದ್ಧದಲ್ಲಿ ಸಹಾಯ ನೀಡಬೇಕೆಂದೂ ಅಂತರ್‌ರಾಷ್ಟ್ರೀಯ ಮಜೂರ ಸಂಘದ ಕಡೆಯಿಂದ ವಿನಂತಿಯಾಗಿದೆ.

† † †

ಈ ವರ್ಷ ಮೇ ಡೇ ಸೋಮವಾರ ಬಂದಿತು. ಇತರ ವರ್ಷಗಳಂತೆ ಅಂದು ಫ್ರಾನ್ಸಿನ ಕೆಲಸಗಾರರು ರಜೆ ತೆಗೆದುಕೊಳ್ಳಲಿಲ್ಲ. ಅವರು ಒಂದು ದಿನ ಮೊದಲೇ — ಅಂದರೆ ಮೊನ್ನೆಯ ಆದಿತ್ಯವಾರ ಮೇ ಡೇಯನ್ನು ಆಚರಿಸಿದರು. ಸೋಮವಾರ ದಿನ ಕೆಲಸಕ್ಕೆ ಹೋದರು. ಇದು ಹಿಟ್ಲರನ ಆಕ್ರಮಣ ನೀತಿಗೆ ಫ್ರಾನ್ಸದ ಕೆಲಸಗಾರರ ರೀತಿಯಾದ ಉತ್ತರ. ಅವರೆಲ್ಲರೂ ಹಿಟ್ಲರನಿಗೆ ವಿರೋಧವಾಗಿದ್ದಾರೆಂದು ತೋರಿಸುವ ಪ್ರದರ್ಶನ ಎಂದು ಫ್ರಾನ್ಸಿನ ಪತ್ರಿಕೆಗಳು ಅಭಿಪ್ರಾಯಪಟ್ಟಿವೆ. ಹಿಟ್ಲರ ಮುಸಲೋನಿಯರನ್ನು ವಿರೋಧಿಸಲಿಕ್ಕೆ ಇಂದು ಫ್ರಾನ್ಸಿನಲ್ಲಿ ಮಜೂರ ಮಾಲಿಕ ಎಲ್ಲಾ ಪಕ್ಷಗಳು ಒಂದಾಗಿರುವುದು ಹೌದು.

† † †

ಮದ್ರಾಸ ಪ್ರಾಂತ್ಯದ ಪ್ರಾಥಮಿಕ ಶಾಲೆಗಳ ಕೆಲಸದ ದಿನಗಳನ್ನು ವರ್ಷಾವಧಿ 200 ರಿಂದ 220ಕ್ಕೆ ಏರಿಸಲಿಕ್ಕೆ ಮದ್ರಾಸ ಸರಕಾರವು ಆಲೋಚಿಸಿರುವುದಾಗಿ ತಿಳಿದುಬರುತ್ತದೆ.

† † †

ಕೊಂಗ್ರೆಸ್ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟ ಬಾಬು ಸುಭಾಸ ಚಂದ್ರಬೋಸರು ಕೊಂಗ್ರೆಸಿನೊಳಗೆ ತಮ್ಮದೊಂದು ಪ್ರತ್ಯೇಕ ಪಕ್ಷವನ್ನು ಮಾಡಿಕೊಳ್ಳುವರಾಗಿ ಪ್ರಕಟವಾಗಿದೆ. ಈ ಹೊಸ ಪಕ್ಷದ ಘಟನೆ ನಿಯಮವಾವಳಿ ಮೊದಲಾದವು ಸದ್ಯದಲ್ಲೇ ಪ್ರಕಟವಾಗುವವು.

† † †

ಮದ್ರಾಸು ಪ್ರಾಂತ್ಯದ 1937-೩೮ನೇ ಇಸವಿಯ ವಿದ್ಯಾಪ್ರಚಾರದ ವರದಿಯು ಪ್ರಕಟವಾಗಿದೆ. ಅಸ್ವಯೋಜಕ ಮತ್ತು ಅಯೋಗ್ಯ ಶಾಲೆಗಳನ್ನು ತೆಗೆದುಹಾಕಿದುದರಿಂದ ವರದಿ ವರ್ಷದಲ್ಲಿ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆಯು ಕಡಿಮೆಯಾಗಿದೆಯಾದರೂ, ಶಾಲೆಗಳ ಯೋಗ್ಯತೆ ಪ್ರಯೋಜಕತೆ ಬೆಳೆದಿದೆ. ಹೇಗೆಂದರೆ ಪ್ರಾಥಮಿಕ ಶಾಲೆಗಳ ಸಂಖ್ಯೆ [illegible] ರಿಂದ [illegible]ಕ್ಕೆ ಬಂದಿತಾದರೂ ಮೊದಲನೆ ತರಗತಿ ಬಿಟ್ಟು ಉಳಿದ ಎಲ್ಲಾ ತರಗತಿಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ ಬೆಳೆದಿರುವುದನ್ನು ಈ ಕೆಳಗಿನ ತಪ್ತೆಯಿಂದ ಕಾಣಬಹುದು.

ತರಗತಿ	1936-37	1937-38
I	[illegible]	[illegible]
II	[illegible]	[illegible]
III	[illegible]	[illegible]
IV	[illegible]	[illegible]
V	[illegible]	[illegible]

ತರಬೇತಿಹೊಂದಿದ ಉಪಾಧ್ಯಾಯರ ಸಂಖ್ಯೆ ಹೆಚ್ಚಾಗಿದೆ. ಖಾಸಗಿ ಶಾಲೆಗಳ ಸಂಖ್ಯೆ ಕಡಿಮೆಯಾಗಿದೆ. ಸರಕಾರಿ ಶಾಲೆಗಳ ಸಂಖ್ಯೆ ಹೆಚ್ಚಿದೆ. ಪ್ರಾಂತದಲ್ಲಿ ಓದುಬರಹ ಕಲಿಯುತ್ತಿರುವವರ ಸಂಖ್ಯೆ ಗಂಡಸರು [illegible] ಹೆಂಗಸರು [illegible] ಸರಾಸರಿ [illegible] ಇದೆ. ವಿದ್ಯಾಭ್ಯಾಸದ ಖರ್ಚು [illegible] ಲಕ್ಷವಿದ್ದುದು [illegible] ಲಕ್ಷಕ್ಕೆ ಏರಿದೆ.

† † †

ಲಾಹೋರು ಕಿಸಾನ ಸತ್ಯಾಗ್ರಹವು ನಡೆಯುತ್ತಿದ್ದ ಪಂಜಾಬ ಎಸೆಂಬ್ಲಿ ಕಟ್ಟಡವನ್ನು ಸಭೆ ಮುಗಿದು ಮುಚ್ಚಿದ್ದರಿಂದ ಅಧಿಕಾರಿಗಳು ಇನ್ನು ಅಲ್ಲಿ ಸತ್ಯಾಗ್ರಹ ನಡೆಯಲಾರದೆಂದು ಊಹಿಸಿ ಗಳಿಗೆಯ ಕೆಲವಿನ ನಿರ್ಬಂಧವನ್ನು ತೆಗೆದುಹಾಕಿದ್ದರು. ಆದರೆ ಎಸೆಂಬ್ಲಿಯನ್ನು ಮುಂದರಿಸಿದ ಅನಂತರವೂ ಯಥಾಪ್ರಕಾರ ಸತ್ಯಾಗ್ರಹಿಗಳು ಎಸೆಂಬ್ಲಿ ಕಟ್ಟಡಕ್ಕೆ ಬರಲಾರಂಭಿಸಿದ್ದರಿಂದ ಪುನಃ ಆ ಕಲಮನ್ನು ಉಪಯೋಗಿಸಲಾಗಿದೆ. ಸತ್ಯಾಗ್ರಹಿಗಳು ಮೊದಲಿನಂತೆಯೇ ಸತ್ಯಾಗ್ರಹ ಮಾಡಿ ಸೆರೆಮನೆ ಸೇರುತ್ತಿದ್ದಾರೆ.

† † †

ಅಂತರ್‌ರಾಷ್ಟ್ರೀಯ ಪರಿಸ್ಥಿತಿಯು ಬಹಳ ಕೆಟ್ಟುಹೋಗಿರುವದರಿಂದ ಇಂಗ್ಲಂಡಿನಲ್ಲಿ ವಿವಾಹಕಾರ್ಯಗಳು ಬಹಳ ಅವಸರದಿಂದ ನಡೆಯಲಾರಂಭವಾಗಿದೆಯಂತೆ. ಪತಿಯು ಯುದ್ಧವಾರಂಭವಾದರೆ ಯುದ್ಧರಂಗಕ್ಕೆ ಅಥವಾ ಅನ್ಯತ್ರ ಹೋಗಬೇಕಾಗಬಹುದಾದ್ದರಿಂದ ಅವನು ಹೋಗುವ ಮೊದಲೇ ವಿವಾಹವಾಗಲಿ ಎಂಬುದು ಈ ಅವಸರದ ಉದ್ದೇಶವಾಗಿದೆ.

ಸ್ವದೇಶಾಭಿಮಾನಿ

ತಾರೀಖು ೫—೫—೧೯೩೯

ಕಾಂಗ್ರೆಸ್ ಅಧ್ಯಕ್ಷತನ

ಕಾಂಗ್ರೆಸು ಅಧ್ಯಕ್ಷ ಚುನಾವಣೆಯು ಮೊದಲ್ಗೊಂಡು ಕಳೆದ ನಾಲ್ಕು ತಿಂಗಳಿಂದ ಭಾರತದ ರಾಜಕೀಯ ರಂಗದಲ್ಲಿ ಎದ್ದ ಬಿರುಗಾಳಿಯ ಅಲೆಗಳು ಒಮ್ಮೆಗೆ ಶಾಂತವಾದುವು. ತ್ರಿಪುರಿಯಲ್ಲಿ ಮಂಜೂರಾದ ಪಂತ ಗೊತ್ತುವಳಿಯ ಪ್ರಕಾರ ಕಾರ್ಯಕಾರಿ ಮಂಡಳಿಯ ಸದಸ್ಯರ ನೇಮಕದ ವಿಷಯ ಗಾಂಧಿ ಬೋಸರೊಳಗೆ ಮಾತುಕತೆ ನಡೆದು ಮತಭೇದವು ತಲೆದೋರಿದ್ದರಿಂದ ಸುಭಾಸ ಬಾಬುಗಳು ರಾಜೀನಾಮೆಯನ್ನಿತ್ತರು. ಮುಂಬರುವ ಕಾಂಗ್ರೆಸ್ ಅಧಿವೇಶನದ ತನಕ ಕಾಂಗ್ರೆಸ್ ಕಾರ್ಯಕ್ರಮಗಳನ್ನು ಮುಂದೊತ್ತಲು ಕಲ್ಕತ್ತದಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಬಾಬು ರಾಜೇಂದ್ರ ಪ್ರಸಾದರನ್ನು ಕಾಂಗ್ರೆಸ್ ಗಾದಿಗೆ ಏರಿಸಿತು. ಬಂಗಾಳದ ಸಮತಾವಾದಿ ಪಕ್ಷವು ಬಿಹಾರ ಮುಖಂಡರನ್ನು, ಸುಭಾಸರ ಉತ್ತರಾಧಿಕಾರಿಯಾಗಿ ಆರಿಸಿದುದರಿಂದ ಗಾಯಗಳ ಮೇಲೆ ಬರೆ ಎಳೆದಂತಾಯಿತೆಂದು ದೂರಿಟ್ಟರೂ ಇಂಥಾ ಪರಿಸ್ಥಿತಿಯಲ್ಲಿ ಅಧಿಕಾರದ ಪದವನ್ನೇರಲು ಬಾಬು ರಾಜೇಂದ್ರ ಪ್ರಸಾದರ ರಾಜಕೀಯ ಹೋರಾಟ, ತ್ಯಾಗ ಬುದ್ಧಿ, ರಾಷ್ಟ್ರಸೇವೆ ಮೊದಲಾದವುಗಳನ್ನು ಪರಿಶೀಲಿಸಿದರೆ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ರಾಷ್ಟ್ರಪತಿಗಳಾಗಲು ಇವರೇ ಯೋಗ್ಯರೆಂದು ಭಾಸವಾಗುವುದು. ಸುಭಾಸ ಬಾಬುಗಳಾದರೂ ತಮ್ಮ ಭಾಷೆಯ ಪ್ರಕಾರ ಮುಂದೆ ಕಾಂಗ್ರೆಸಿನ ಸ್ವಾಮಿನಿಷ್ಠ ಅನುಯಾಯಿಯಾಗಿಯೇ ತಮ್ಮ ಕಳೆದ ವರುಷದ ಅನುಭವ ಪೂರಿತ ಸಲಹೆಗಳನ್ನಿತ್ತು ಬಾಬು ರಾಜೇಂದ್ರ ಪ್ರಸಾದರಿಗೆ ಸಹಾಯಕರಾಗುವರೆಂದು ನಾವು ಆಶಿಸುತ್ತೇವೆ. ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಅಧಿವೇಶನದ ಸಮಯ ಮತ್ತು ತದನಂತರ ಸುಭಾಸ ಬಾಬುಗಳ ಹಲ ಕೆಲವು ಅನುಯಾಯಿಗಳ ವರ್ತನೆಯು ತೀರಾ ನಿಂದಾಸ್ಪದವಾಗಿದೆ. ಸುಭಾಸ ಬಾಬುಗಳು ಇಂದು ಹಲವು ಕಾಲದಿಂದ ಭಾರತ ಭೂಮಿಯ ಸೇವೆಗಾಗಿ ನಾಮಾಂಕಿತ ಪುತ್ರರತ್ನಗಳನ್ನು ಒದಗಿಸಿಕೊಟ್ಟ ವಂಗ ಭೂಮಿಯ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿರುತ್ತಾರೆ. ಆದಕಾರಣ ಬಂಗಾಳದ ಸುತ್ತಮುತ್ತಲಿನ ಹಲವು ಪ್ರಾಂತ್ಯಗಳಲ್ಲಿ ಇವರ ವರ್ಚಸ್ಸು ತುಂಬಾ ಹಬ್ಬಿರುವುದು. ಬಂಗಾಳವು ಸುಭಾಸರ ಬೆಂಗಾವಲಿಗಿದೆ. ಅದಕ್ಕಾಗಿಯೇ ಸುಭಾಸರು ರಾಜೀನಾಮೆಯನ್ನಿತ್ತೊಡನೆ ಮಧ್ಯೆ ಸಂಧಾನವಾಗುವಂತೆ ಪಂಡಿತ ಜವಾಹರಲಾಲರೂ, ಶ್ರೀಮತಿ ಸರೋಜಿನಿ ದೇವಿಯರೂ ಮಾಡಿದ ಪ್ರಯತ್ನಗಳು ನಿಷ್ಫಲವಾದುವು. ಬೇರೆ ಉಪಾಯ ಕಾಣದೆ ಎಲ್ಲಾ ಪಕ್ಷದವರಿಗೂ ಹಿತವುಂಟಾಗುವಂತೆ ಬಾಬು ರಾಜೇಂದ್ರ ಪ್ರಸಾದರನ್ನು ಅಧ್ಯಕ್ಷ ಪದವಿಗೆ ಆರಿಸಲಾಯಿತು. ಮಧ್ಯೆ ತ್ರಿಪುರಿ ಅಧಿವೇಶನಕ್ಕೆ ಆರಿಸಿ ಬಂದ ಪ್ರತಿನಿಧಿಗಳಿಂದಲೇ ಅಧ್ಯಕ್ಷ ಚುನಾವಣೆಯಾಗಬೇಕೆಂದು ನರಿಮೋನರ ವಾದ. ಪ್ರತಿನಿಧಿಗಳಿಂದಲೇ ಚುನಾವಣೆಯಾಗುವುದಿದ್ದರೂ ಬಾಬು ರಾಜೇಂದ್ರ ಪ್ರಸಾದರೇ ಚುನಾವಣೆ ಹೊಂದುತಿದ್ದರೆಂದು ಧೈರ್ಯದಿಂದ ಹೇಳಬಹುದು. ಇಂದು ಕಾಂಗ್ರೆಸ್ಸಿನಲ್ಲಿ ಪ್ರಖ್ಯಾತಿಪಟ್ಟ ಪುರುಷರಲ್ಲಿ ರಾಜೇಂದ್ರ ಬಾಬುಗಳೊಬ್ಬರೆಂದು ಹೇಳಬಹುದು ಮತ್ತು ಇಂಥಾ ಬಿಕ್ಕಟ್ಟು ಪರಿಣಮಿಸಬಹುದಾದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಧ್ವಜವನ್ನು ಮುನ್ನಡೆಸಲು ಸಮರ್ಥರಾರೂ ದೊರಕುವುದಾದರೆ ಅವರಲ್ಲಿ ರಾಜೇಂದ್ರ ಬಾಬುಗಳೊಬ್ಬರೆಂದು ಹೇಳುವೆವು.

ರಾಜೇಂದ್ರ ಬಾಬುಗಳು ತಮ್ಮ ಭಾಷಣವನು ಮಾಡಿ ತನ್ನ ಕಾರ್ಯಕ್ರಮದ ವಿಷಯ ಮಾತನಾಡುತ್ತಾ "ಈಗಿನ ವಾತಾವರಣದಲ್ಲಿ ನಾವೇನೂ ಹೊಸಕಾರ್ಯಕ್ರಮಗಳನ್ನು ತಂದೊಡ್ಡುವುದಿಲ್ಲ. ನಮ್ಮ ಕಾರ್ಯಕ್ರಮಗಳು ಮೊದಲಿಂದಲೂ ಕಾಂಗ್ರೆಸು ಕೈಕೊಂಡ ಕಾರ್ಯಕ್ರಮಗಳೇ ಆಗಿರುತ್ತವೆ. ಆ ಕಾರ್ಯಕ್ರಮಗಳನ್ನು ಮುಂದೊತ್ತಲು ಹೊಸ ಹೊಸ ಹಂಚಿಕೆಗಳನ್ನು ಮಾತ್ರ ಹುಡುಕಬೇಕಾಗಿದೆ. ಈ ಹೊಸ ಹಂಚಿಕೆಗಳನ್ನು ಹುಡುಕಲು ಎಲ್ಲಾ ಪಂಗಡಗಳೂ ಪ್ರತೀ ಭಾರತೀಯನೂ ಒಗ್ಗಟ್ಟಾಗಿ ಸಹಾಯಕನಾಗಬೇಕು' ಎಂದು ವಿನಂತಿಸಿರುವರು. ಈ ವಿನಂತಿಗೆ ಸುಭಾಸ ಬಾಬುಗಳು ಎಲ್ಲಾ ವಿಧದಲ್ಲಿಯು ಬಾಬು ರಾಜೇಂದ್ರ ಪ್ರಸಾದರಿಗೆ ನೆರವಾಗುವರೆಂದು ನಂಬುತ್ತೇವೆ.

ಬಾಬು ರಾಜೇಂದ್ರ ಪ್ರಸಾದರ ಚುನಾವಣೆಯಿಂದ ಕಾಂಗ್ರೆಸು ಅಧಿಕಾರವೆಲ್ಲವು ಗಾಂಧಿವಾದಿಗಳ ಕೈ ಸೇರಿರುವುದು. ಅವರು ಕಳೆದ ನಾಲ್ಕು ತಿಂಗಳುಗಳಿಂದ ಘಟಿಸಿದ ಅನೇಕ ಘಟನೆಗಳನ್ನು ಪರಿಶೀಲಿಸಬೇಕು. ಮೊದಲನೇಯದಾಗಿ ಈಗ ಅಧ್ಯಕ್ಷರನ್ನಾಗಿ ಚುನಾಯಿಸಿದ ಅಖಿಲಭಾರತ ಕಾಂಗ್ರೆಸ್ ಕಮಿಟಿಗಿಂತಲೂ ಎಂಟು ಪಾಲಿಗೆ ದೊಡ್ಡದಾದ ಪ್ರಾಥಮಿಕ ಸದಸ್ಯರಿಂದ ಕಳುಹಲ್ಪಟ್ಟ ಪ್ರತಿನಿಧಿಗಳಿಂದ ಆರಿಸಲ್ಪಟ್ಟ ಸುಭಾಸರ ಚುನಾವಣೆಯು ಗಾಂಧಿವಾದಿಯ ಹಲವು ಮುಖಂಡರಿಗೆ ಒಂದು ಪಾಠವಾಗಿರುವುದು. ಯಾಕೆಂದರೆ ಅಂದಿನ ಚುನಾವಣೆಯು ಗಾಂಧಿವಾದಿ ಮುಖಂಡರ ಸ್ವತಂತ್ರ ವರ್ತನೆಯ ಹಾಗೂ ಪ್ರಾಂತೀಕ ಸರಕಾರಗಳ ಮೇಲೆ ನಡೆಸುತಿದ್ದ ತಮ್ಮ ಸ್ವಚ್ಛಂಧ ಅಧಿಕಾರದ ವಿರುದ್ಧ ಪ್ರದರ್ಶನವೆಂದು ತಿಳಿದುಕೊಳ್ಳಬಹುದು. ಆದಕಾರಣ ಅಂದಿನಿಂದ ಮೌನ ವೃತ್ತಿಯನ್ನು ಕೈಕೊಂಡ ಗಾಂಧಿವಾದಿಗಳು ಇಂದು ಪುನಃ ಅಧಿಕಾರರೂಢರಾಗಿರುವುದರಿಂದ, ಜನತೆಯು ತಮ್ಮ ಮೇಲೆ ಹೊರಿಸಲ್ಪಟ್ಟ ಜವಾಬ್ದಾರಿಯನ್ನು ಪಾಲಿಸುವಂತೆ ನೋಡಲು ನೋಡಿಕೊಳ್ಳಬೇಕು.

ಈಗ ನೇಮಕವಾಗಿರುವ ಕಾರ್ಯಕಾರಿ ಮಂಡಳಿಯ ಸಹಾಯದಿಂದ ಪ್ರಾಂತೀಕ ಚುನಾವಣಾ ಸಮಯದಲ್ಲಿ ಕಾಂಗ್ರೆಸು ಪ್ರಕಟಿಸಿದ ಚುನಾವಣಾ ಪ್ರಕಟಣೆ ಪ್ರಕಾರ ವರ್ತಿಸಿ ಭಾರತಾಂಬೆಯ ಎಲ್ಲಾ ಪುತ್ರರು ದೇಶದ ಒಂದೇ ಒಂದು ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ ಧ್ವಜದಡಿಯಲ್ಲಿ ನಿಂತು ಸ್ವಾತಂತ್ರ್ಯಪಥದಲ್ಲಿ ಮುನ್ನಡೆಯುವಂತೆ ಸಹಾಯ ಮಾಡುವರೆಂದು ಆಶಿಸುತ್ತೇವೆ.

ಮಹಾತ್ಮಾಜಿಯವರಿಗೆ ರಾಜಕೋಟ ಠಾಕೋರರ ತಂತಿ

'ಆದಷ್ಟು ಶೀಘ್ರದಲ್ಲಿ ರಾಜಕೋಟ ಸುಧಾರಣೆಯು ಇತ್ಯರ್ಥವಾಗಬೇಕೆಂದು ನನ್ನ ಆಸೆ. ಪರಸ್ಪರ ವಿವಾದಾಂಶಗಳನ್ನು ರಾಜಿಯಿಂದ ತೀರ್ಮಾನಿಸಿಕೊಳ್ಳುವುದಕ್ಕೋಸ್ಕರ ಮಹತ್ಪ್ರಯತ್ನಗಳು ನಡೆದಿರುತ್ತವೆ' ಎಂದು ರಾಜಕೋಟ ಠಾಕೋರರು ಗಾಂಧಿಯವರಿಗೆ ಕಲ್ಕತ್ತಕ್ಕೆ ತಂತಿ ಕೊಟ್ಟಿದ್ದಾರೆ. ತನ್ಮಧ್ಯೆ ವೀರವಲ್ಲರೂ ಗಾಂಧಿಯವರಿಗೆ ಇನ್ನೊಂದು ತಂತಿ ಬಿಟ್ಟು—'ಪ್ರಜಾಪರಿಷತ್ತಿನ ಅಧ್ಯಕ್ಷರಾದ ಶ್ರೀ ಢೇಬರರು ರಾಜಕೋಟ ವಿಷಯವಾಗಿ ಇನ್ನೂ ಇನ್ನೂ ಸರದಾರ ಪಟೇಲರ ಸಲಹೆ ತೆಗೆದುಕೊಳ್ಳುವುದು ವಿಳಂಬಕ್ಕೆ ಕಾರಣವಾಗುತ್ತದೆಂದೂ, ಆದ್ದರಿಂದ ಇನ್ನು ಮುಂದೆ ಪಟೇಲರು ಈ ಪ್ರಕರಣದಲ್ಲಿ ಕೈಹಾಕದಂತೆ ಅವರಿಗೆ ಸೂಚಿಸಬೇಕೆಂದೂ' ಹೇಳಿರುವರು.

ಶ್ರೀ ಢೇಭರರು ಸರದಾರ ಪಟೇಲರನು ಕಾಣಲಿಕ್ಕೆ ಬೊಂಬಾಯಿಗೆ ಹೋಗಿದ್ದಾರೆ. ಭಾಯತರಿಗೂ ಮುಸಲ್ಮಾನರಿಗೂ ಸುಧಾರಣಾ ಸಮಿತಿಯಲ್ಲಿ ಪ್ರಾತಿನಿಧ್ಯ ಕೊಡುತ್ತೇನೆಂದ ವಿಷಯದಲ್ಲಿ ಮಹಾತ್ಮರು ವಚನ ಭ್ರಷ್ಟರಾಗಿರುವರೇ ಎಂಬ ವಿಷಯವನ್ನು ಫೆಡರಲ್ ಚೀಫ್ ಜಸ್ಟೀಸರು ತೀರ್ಮಾನಿಸಬೇಕೆಂದು ಆ ಎರಡು ಜಾತಿಗಳ ಮುಖಂಡರು ಸೂಚಿಸಿದ್ದಾರೆ

ಪೌರ್ವಾತ್ಯ ಸಂಸ್ಕೃತಿಯ ರಕ್ಷಣೆಗೆ ಚೀನಾ-ಜಪಾನ ಯುದ್ಧ

'ಇದು ಸ್ವಾರ್ಥಸಾಧನೆಯ ಯುದ್ಧವಲ್ಲ. ಚೀನದಲ್ಲಿ ಜಪಾನಿಯರಿಗೆ ಅಂಥ ವಿಶೇಷ ಸ್ವಾರ್ಥವಾವುದೂ ಇರುವುದಿಲ್ಲ. ಪೌರ್ವಾತ್ಯ ಸಂಸ್ಕೃತಿಯನ್ನು ಕಾಪಾಡಲಿಕ್ಕಾಗಿಯೇ ನಾವು ಚೀನದಲ್ಲಿ ಈ ಯುದ್ಧವನ್ನು ಹೂಡಿರುವೆವು' ಎಂದು ಮೇಜರ ಜನರಲ್ ದೋಯಿಹಾರ ಎಂಬವರು ಟೋಕಿಯೋದ ಒಂದು ಪತ್ರಿಕೆಯಲ್ಲಿ ಲೇಖವನ್ನು ಬರೆದಿದ್ದಾರೆ. ಅವರ ಅಭಿಪ್ರಾಯದಲ್ಲಿ—

'ಶ್ವೇತವರ್ಣದವರ ಮೇಲೆ ಬಿಳಿ ಜನಾಂಗಗಳು ಅಧಿಕಾರ ನಡೆಸುತ್ತವೆ. ಆದ್ದರಿಂದ ಪೌರ್ವಾತ್ಯ ಸಂಸ್ಕೃತಿಗೆ ಅಳಿಗಾಲ ಬಂದಿತು. ಜಪಾನು ಮಾತ್ರ ಅಂಥ ನಮ್ಮ ಸಂಸ್ಕೃತಿಯು ಅಳಿದು ಹೋಗುವುದರಿಂದ ಅದನ್ನು ಕಾಪಾಡಿತು. ಕುಟುಂಬದ ಮೇಲೆ ಆದರವೇ ನಮ್ಮ ಸಂಸ್ಕೃತಿಯ ಜೀವಾಳ. ಈ ಆದರದ ಮೂಲಕವೇ ಆಧ್ಯಾತ್ಮವಿದ್ಯೆ, ಭ್ರಾತೃಭಾವ, ಸಾರ್ವಜನಿಕ ಸೇವೆಗಳಿಗೆ ನಮ್ಮಲ್ಲಿ ಪ್ರಾಧಾನ್ಯ ದೊರೆಯಿತು. ಇಂಥ ಅಪೂರ್ವ ಲಕ್ಷಣಗಳುಳ್ಳ ಸಂಸ್ಕೃತಿಯನ್ನು ಕಾಪಾಡಲಿಕ್ಕಾಗಿ, ನಾವು ಚೀನದೊಂದಿಗೆ ಹೋರಾಡುತಿದ್ದೇವೆ. ಆದುದರಿಂದ ಚೀನದ ನಾಶಕ್ಕಾಗಿ ನಾವೀ ಯುದ್ಧವನ್ನು ಮಾಡುತ್ತಿರುವುದಿಲ್ಲ. ಪರಂತು ಪಾಶ್ಚಾತ್ಯ ನಾಗರಿಕತೆ ಸಂಸ್ಕೃತಿಗಳ ಮಾಯಜಾಲದಲ್ಲಿ ಸಿಕ್ಕಿಬಿದ್ದು ತನ್ನ ಸರ್ವನಾಶಮಾಡಿಕೊಳ್ಳಲಿರುವ ಚೀನವನ್ನು ಬದುಕಿಸಿ ಉದ್ಧರಿಸಲಿಕ್ಕೆ ಈ ಯುದ್ಧ ನಡೆಸುತಿದ್ದೇವೆ' ಎಂದು ಚೀನ ಜಪಾನ ಯುದ್ಧದ ಕುರಿತು ಜಪಾನಿಯರ ತಿಳುವಳಿಕೆಯುದ್ದ ಹಾಗೆ ಕಂಡುಬರುತ್ತದೆ

ನಾವು ಶಾಂತಿಯ ಆರಾಧಕರು

'ಜಪಾನಿಯರು ಚೀನದಲ್ಲಿ ಅನ್ಯಾಯಯುದ್ಧವನ್ನು ನಡೆಸುತ್ತಿರುವರೆಂದು ಅಮೇರಿಕದಲ್ಲಿ ಜಪಾನಿಯರ ತುಂಬ ಅಪಪ್ರಚಾರ ನಡೆಯುತ್ತದೆ. ಆದರೆ ಜಪಾನಿಯರು ಅಂಥ ಅನ್ಯಾಯ ಯುದ್ಧವನ್ನೇನನ್ನೂ ನಡೆಸಲಿಲ್ಲ. ಅವರಿಗೆ ಯುದ್ಧವು ಬೇಡ. ಅವರು ಶಾಂತಿಯ ಆರಾಧಕರಾಗಿದ್ದಾರೆ. ಆದ್ದರಿಂದ ಚೀನಿಯರು ಅಮೇರಿಕದಲ್ಲಿ ಬೇಕುಬೇಕೆಂದೇ ಆರಂಭಿಸಿರುವ ಈ 'ಅಪಪ್ರಚಾರದಿಂದ ಭ್ರಮಿತರಾಗಬೇಡಿ' ಎಂದು ಜಪಾನಿಗರು ಅಮೇರಿಕದಲ್ಲಿ ಹೇಳಲಾರಂಭಿಸಿದ್ದಾರೆ. ಚೀನಜಪಾನ ಯುದ್ಧದಲ್ಲಿ ಲೋಕಮತವು ಜಪಾನಿಯರಿಗೆ ಪ್ರತಿಕೂಲವಾಗಿರುವುದನ್ನು ಕಂಡು ಜಪಾನಿಯರು ಬಹಳ ಹೆದರಿದ್ದಾರೆ. ಈಗಿನ ಕಾಲದಲ್ಲಿ ಲೋಕಮತವು ಪ್ರತಿಕೂಲವಾಗಿದ್ದಷ್ಟು ಕಾಲ ಯಾರು ಯಾರನ್ನಾದರೂ ಯುದ್ಧದಲ್ಲಿ ಸೋಲಿಸಲಿಕ್ಕಾಗುವುದಿಲ್ಲ

ವಸ್ತುಬಹಿಷ್ಕಾರದ ಪರಿಣಾಮ

ಚೀನಿ ಜಪಾನ ಯುದ್ಧದಲ್ಲಿ ಭಾರತೀಯರ ಸಹಾನುಭೂತಿಯು ಚೀನಿಯರ ಕಡೆಗೆ ಇದೆ. ಯಾಕೆಂದರೆ ಜಪಾನು ತನ್ನ ದೊಡ್ಡಸ್ತಿಕೆಯ ಕುರಿತು ಎಷ್ಟು ಪೌರುಷ ಕೊಚ್ಚಿಕೊಂಡರೂ ಅದು ಚೀನದಲ್ಲಿ ಮಾಡುವುದೆಲ್ಲ ಅನ್ಯಾಯವೆಂದು ತಿಳಿಕೊಂಡಿದೆ. ಆದರೆ ತಾನೇ ಪರತಂತ್ರವಾಗಿ ಸ್ವತಃ ಕಷ್ಟದಲ್ಲಿ ಸಿಕ್ಕಿಬಿದ್ದಿರುವ ಭಾರತವು ಚೀನಕ್ಕೆ ಏನು ಸಹಾಯಮಾಡೀತು? ಪರಂತು ಜಪಾನಿನ ಆಕ್ರಮಣಶೀಲತೆಗೆ ತನ್ನ ವಿರೋಧವನ್ನು ಸೂಚಿಸುವುದಕ್ಕೋಸ್ಕರ ಭಾರತವು ಜಪಾನಿ ವಸ್ತುಬಹಿಷ್ಕಾರವನ್ನು ಪ್ರಾರಂಭಿಸಿತು. ಈ ಬಹಿಷ್ಕಾರದ ಪರಿಣಾಮವಾಗಿ ಜಪಾನಿ ವ್ಯಾಪಾರವು ಬಹಳ ತಗ್ಗಿತು. ಸಿಟ್ಟುಗೊಂಡ ಜಪಾನು ಅಲ್ಲಿರುವ ಕೆಲವು ಭಾರತೀಯ ವರ್ತಕರನ್ನು ಕೈದು ಮಾಡಿದೆ. ನಾಣ್ಯ ಚಲಾವಣೆ ಕ್ರಮದಲ್ಲಿ ಜಪಾನನ್ನು ಅವರು ವಂಚಿಸಿದರಾಗಿ ಜಪಾನಿ ಸರಕಾರವು ಅವರ ಮೇಲೆ ಆರೋಪ ಹೊರಿಸಿದೆಯಾಗಿ ತಿಳಿದು ಬರುತ್ತದೆ. ಆದರೆ ಈ ವಿಷಯ ಹೆಚ್ಚಿಗೆ ವಿವರಗಳು ತಿಳಿದುಬಂದಿಲ್ಲ. ಭಾರತ ಸರಕಾರವು ಜಪಾನಿ ಸರಕಾರದೊಂದಿಗೆ ಪತ್ರ ವ್ಯವಹಾರ ಮಾಡಿ ಈ ವರ್ತಕರ ಬಿಡುಗಡೆಗೆ ತಕ್ಕ ಉಪಾಯ ಮಾಡಲಿದೆ. ಆದರೆ ಈ ಘಟನೆಯಿಂದ ಜಪಾನಿನ ಮನೋಭಾವವನ್ನು ತಿಳಕೊಳ್ಳಬಹುದು. ಅವಳು ತಾನು ಮಾಡುವುದೆಲ್ಲ ನ್ಯಾಯ. ಇತರರು ಮಾಡುವುದೆಲ್ಲ ಅನ್ಯಾಯವೆಂದು ಕಾಣುತ್ತದೆ. ಸ್ವಾರ್ಥಿಗಳ ದೃಷ್ಟಿಯೇ ಹೀಗೆ! ಹೀಗಿರುವಾಗ ಲೋಕಮತವು ಜಪಾನಿಗೆ ಪ್ರತಿಕೂಲವಾಗಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಭಾರತೀಯರು ಜಪಾನಿ ವಸ್ತು ಬಹಿಷ್ಕಾರ ಮಾಡಿದ್ದು ನ್ಯಾಯಪೂರ್ಣವೆಂದು ತೋರುತ್ತದೆ.

ಯುದ್ಧವಾರ್ತೆ

ಚೀನೀ ಜಪಾನ ಯುದ್ಧದಲ್ಲಿ ನಾಂಚಂಗದಿಂದ ಪಶ್ಚಿಮಕ್ಕಿರುವ ಕೋವಾನ ಪ್ರದೇಶವು ಪೂರ್ಣ ಚೀನಿಯರ ವಶವಾಗಿರುವುದು. ಷೆಸ್ಸಿಂಗ ರಣಕ್ಷೇತ್ರದಲ್ಲಿ ಭಯಂಕರ ಕಾದಾಟವು ನಡೆಯುತ್ತಾ ಇದೆ. ದಕ್ಷಿಣದಲ್ಲಿ ಚೀನಿಯರು ಕೇಂಟನನಗರಕ್ಕೆ ಸಮೀಪವಾಗಿರುವರು.

ಯುದ್ಧೋಪಕರಣಗಳ ನಿರಾಕರಣೆ

ಜಪಾನು ಹಿಂದೆ ಆದ ಒಡಂಬಡಿಕೆಗಳಿಗೆ ವಿರೋಧವಾಗಿ ನಡೆದಿರುವುದರಿಂದ, ೧೦ ದಿನಗಳ ಸಮಯ ಕೊಟ್ಟು ಅಮೇರಿಕದಿಂದ ಜಪಾನಿಗೆ ಅಸ್ತ್ರಶಸ್ತ್ರ ಯುದ್ಧೋಪಕರಣ ಮೊದಲಾದವನ್ನು ನಿರಾಕರಿಸುವ ಅಧಿಕಾರವನ್ನು ಅಮೇರಿಕದ ಪ್ರೆಸಿಡೆಂಟ ಮಿ ರೂಜವೆಲ್ಟರಿಗೆ ಕೊಡಬೇಕೆಂದು ಪಿಟಮೇನ ಎಂಬವರು ಅಮೇರಿಕದ ಶಾಸನ ಕೌನ್ಸಿಲಿನಲ್ಲಿ ಒಂದು ಠರಾವನ್ನು ತಂದಿದ್ದಾರೆ.

ಯುರೋಪದ ಪ್ರಕ್ಷುಬ್ಧ ವಾತಾವರಣ

ಡಿವೆಲೆರಾ ಅಮೇರಿಕಕ್ಕೆ ಹೋಗುವುದಿಲ್ಲ

ಯುರೋಪದಲ್ಲಿ ಯುದ್ಧವಾಗುವುದಾದರೆ ಆಯರ್ಲಂಡು ಯಾವ ಪಕ್ಷವನ್ನೂ ಕೂಡಿಕೊಳ್ಳುವುದಿಲ್ಲ. ಅದು ತಟಸ್ಥವಾಗಿರಲು ಪ್ರಯತ್ನಿಸುವುದು. ಹೀಗಿದ್ದರೂ ಇಂಗ್ಲಾಂಡಿನಲ್ಲಿ ನಿರ್ಬಂಧದ ಸೈನಿಕ ಶಿಕ್ಷಣ ನಡೆಯುವ ಕಾನೂನು ಆಗಿದೆ. ಇಂಗ್ಲಾಂಡ ಅಥವಾ ಉತ್ತರ ಆಯರ್ಲಂಡದ ಐರಿಷ ಪ್ರಜೆಗಳು ಈ ಕಾನೂನಿಗೆ ಬಲಿಯಾಗ ಬಾರದೆಂದು ಡಿ ವೆಲೆರಾ ಅಭಿಪ್ರಾಯ. ಆದುದರಿಂದ ಇಂಗ್ಲಾಂಡಿಗೂ ಆಯರ್ಲಂಡಿಗೂ ಬಿಕ್ಕಟ್ಟು ಉಂಟಾಗುವ ಸಂಭವವಿರುವುದರಿಂದ ಮೇ ೭ಕ್ಕೆ ಅಮೇರಿಕಕ್ಕೆ ಹೊರಡುವವನಾಗಿದ್ದ ಡಿ ವೆಲೆರಾ ಸದ್ಯ ಅಲ್ಲಿಗೆ ಹೋಗುವುದನ್ನು ನಿಲ್ಲಿಸಿದ್ದಾನೆ

ಶ್ರೇಷ್ಠ ತರದ

ದೃಷ್ಟಿಚಕ್ರಗಳಿಗೆ

ರಬ್ಬರು ಮೊಹರುಗಳಿಗೆ

ನಾಯಕ್ ಸ್ಟೋರ್ಸ್

ರಥಬೀದಿ, ಮಂಗಳೂರು

ಮುಸ್ಲಿಮ್ ಲೀಗಿಗೆ ಸರ್ ಯಚ್. ಗಜ್ನಾವಿಯವರ ರಾಜಿನಾಮೆ!

ಕೇಂದ್ರ ನ್ಯಾಯ ವಿಧಾಯಕ ಸಭೆಯ ಮುಸ್ಲಿಂಲೀಗ ಸದಸ್ಯರಾಗಿದ್ದ ಸರ್ ಅಬ್ದುಲ್ ಹಾಲಿಮ ಘಜ್ನಾವಿಯವರು ಲೀಗಿನೊಡನೆ ತಮಗಿದ್ದ ಯಾವತ್ತು ಸಂಬಂಧ ಸೂತ್ರಗಳನ್ನೂ ಕಡಿದು ಹಾಕಿರುವರು. ಮುಸ್ಲಿಂಲೀಗಿನ ಪ್ರಧಾನ ಕಾರ್ಯದರ್ಶಿಗಳಾದ ನವಾಬ ಜಾಹಾಲಿಯಕತ್ ಆಲಿ ಖಾನರಿಗೆ ಅವರು ಬರೆದ ರಾಜಿನಾಮೆಯ ಪತ್ರದಲ್ಲಿ—'ಅಖಿಲಭಾರತ ಮುಸ್ಲಿಂ ಲೀಗಿನ ಸದಸ್ಯತನಕ್ಕೂ ಕೌನ್ಸಿಲಿನ ಸದಸ್ಯತನಕ್ಕೂ ನಾನು ರಾಜಿನಾಮೆ ಕೊಟ್ಟಿರುವುದನ್ನು ನಿಮಗೆ ತಿಳಿಸಿದ್ದೇನೆ' ಎಂದಿದ್ದಾರೆ. ಮುಸ್ಲಿಂ ಲೀಗಿನ ಧೋರಣವು ಜಾತಿಗೆ ಅಥವಾ ದೇಶಕ್ಕೆ ಯಾವುದಕ್ಕೂ ಹಿತಕರವಾಗಿಲ್ಲದಿರುವುದು ಅವರ ರಾಜಿನಾಮೆಯ ಕಾರಣ.

ಭೂತೋಚ್ಚಾಟನ

ಕಾಶಿ ಹಿಂದೂ ವಿಶ್ವವಿದ್ಯಾಲಯದ ಮುಸ್ಲಿಂ ವಿದ್ಯಾರ್ಥಿಗಳು ಹಿಂದುಗಳ ಜಾತಿ ವಾದಕ್ಕೆ ಬಲಿಯಾಗಿ ಬಹಳ ಕಷ್ಟಗಳನ್ನು 'ಅನುಭವಿಸುತ್ತಿರುವರೆಂದು ಇತ್ಯಾದಿ ಕಲ್ಪಿತ್ತದ ಸ್ಟಾರ್ ಆಫ ಇಂಡಿಯಾ ಎಂಬ ಮುಸ್ಲಿಮ ಪತ್ರಿಕೆಯು ಕೆಲವು ವಾರ್ತೆಗಳನ್ನು ಪ್ರಕಟಿಸಿತ್ತು. ಬಂಗಾಳದ ಹಕ್ ಮಂತ್ರಿಮಂಡಲದ ಬೆಂಬಲಕ್ಕೆ ನಿಂತು ಆ ಪ್ರಾಂತ್ಯದಲ್ಲಿ ಜಾತೀಯ ದ್ವೇಷದ ಕಿಚ್ಚನ್ನು ಗಾಳಿಹಾಕಿ ಉರಿಸಲಿಕ್ಕೆ ಇದೇ ಪತ್ರಿಕೆ ಸಾಧನವಾಗಿರುವುದು. ಕಾಶಿಯಲ್ಲಾದ ಹಿಂದು ಮುಸಲ್ಮಾನ ದಂಗೆಯನ್ನು ಈ ಪತ್ರಿಕೆಯು ತನ ಜಾತಿಸ್ವಾರ್ಥದ ಬೇಳೆ ಬೇಯಿಸಲಿಕ್ಕೆ ಉಪಯೋಗಿಸಿಕೊಂಡಿದೆ. ಇಂಥ ಪತ್ರಿಕಾ ರೂಪೀ ಈ ಭೂತವು ಸಮಾಜದ ಶಾಂತತೆಯನ್ನು ಕೆಡಿಸುವುದನ್ನು ಕಂಡು ಹಿಂದೂ ವಿಶ್ವವಿದ್ಯಾಲಯದ ಮುಸ್ಲಿಂ ವಿದ್ಯಾರ್ಥಿಗಳು ಉಚ್ಚಾಟನ ಮಂತ್ರವನ್ನು ಪಠಿಸಿ ಅದಕ್ಕೆ ಬಾಷ್ಪ ಕಲಿಸತೊಡಗಿದ್ದಾರೆ. ಈ ವಿದ್ಯಾರ್ಥಿಗಳು ಒಂದು ಪ್ರಕಟನೆಯನ್ನು ಕೊಟ್ಟು—ಸ್ಟಾರ ಆಫ್ ಇಂಡಿಯಾ ಪತ್ರಿಕೆಯಲ್ಲಿ ತಮ್ಮ ಕುರಿತು ಬಂದ ವಾರ್ತೆಗಳು ಸಂಪೂರ್ಣ ಸುಳ್ಳಾಗಿರುವವು, ಕಾಶಿಯಲ್ಲಿ ಹಿಂದೂ ಮುಸಲ್ಮಾನ ದಂಗೆಯಾದಾಗ ಹಿಂದೂ ವಿಶ್ವವಿದ್ಯಾಲಯದಲ್ಲಿ ನಮ್ಮ ಮೇಲೆ ಯಾವ ಯಾವ ಆಕ್ರಮಣವೂ ಆಗಲಿಲ್ಲ. ನಾವು—ಹಿಂದೂ ಮುಸಲ್ಮಾನ ವಿದ್ಯಾರ್ಥಿಗಳು—ಒಡಹುಟ್ಟಿದ ಸಹೋದರರಂತೆ ಇದ್ದೆವು. ಆದ್ದರಿಂದ ಇಂಥ ಸುಳ್ಳು ವಾರ್ತೆಗಳು ಪ್ರಕಟವಾಗುವಾಗ ಜನರು ಅವುಗಳಿಂದ ಪ್ರಭಾವಿತರಾಗಬಾರದು. ಅವರು ಸತ್ಯವನ್ನು ಶೋಧಿಸಿ ತಿಳಿಯಬೇಕು. ಇಲ್ಲವಾದರೆ ನಮಗೆ ಅದರಿಂದ ಹಾನಿಯಾಗುತ್ತದೆ, ವಿಶ್ವವಿದ್ಯಾಲಯಕ್ಕೆ ಅನ್ಯಾಯವಾಗುತ್ತದೆ. ಯಾಕೆಂದರೆ ಜಾತಿ ಕಲಹವನ್ನು ಎಬ್ಬಿಸಿದ ಹಾಗಾಗುತ್ತದೆ' ಎಂದಿದ್ದಾರೆ. ವಿದ್ಯಾರ್ಥಿಸಮಾಜವನ್ನು ಹಿಂದೂ—ಮುಸಲ್ಮಾನ ಎಂದು ವಿಭಾಗಿಸಲಿಕ್ಕೆ ಪ್ರಯತ್ನಿಸುವ ಬೇಜವಾಬುದಾರ ಜಾತಿವಾದಿಗಳ ಬಣ್ಣವನ್ನು ಈ ಸ್ಟೇಟಮೆಂಟು ಹೇಳಿಕೊಡುತ್ತದೆ.

ವಿವೇಕೋದಯವೇ?

ಮಿ. ಹೈದರ ಇಮಾಮ ಎಂಬವರು ಬಿಹಾರದ ಮುಸ್ಲಿಂಲೀಗ ಮುಖಂಡರು. ಇವರು ಮೊನ್ನೆ ಮೊನ್ನೆಯ ತನಕ ಕಡು ಜಾತಿವಾದಿಗಳಾಗಿದ್ದರು. ಮುಸ್ಲಿಂಸ್ವಾರ್ಥದ ಮುಂದೆ ಇವರಿಗೆ ಬೇರೆ ಎಲ್ಲಾ ಸ್ವಾರ್ಥಗಳು ಅಲ್ಪವೆಂದು ತೋರುತ್ತಿದ್ದವು. ಆದರೆ ಮೊಂಘೀರದಲ್ಲಿ ಕೂಡಿದ ಜಿಲ್ಲಾ ಮುಸ್ಲಿಂ ವಿದ್ಯಾರ್ಥಿಗಳ ಪರಿಷತ್ತಿನಲ್ಲಿ ಭಾಷಣವನ್ನು ಕೊಡುತ್ತಾ ಇವರು—'ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಈ ಕಾಲದಲ್ಲಿ ನಾವು ಹಿಂದೂ ಮುಸಲ್ಮಾನರೆಂದು ಬೇರೆ ಬೇರೆ ವಿಭಾಗಗಳನ್ನು ಕಟ್ಟಿಕೊಂಡಿರಲಿಕ್ಕೆ ಸಾಧ್ಯವಿಲ್ಲ. ನಾವೆಲ್ಲರೂ ಒಂದಾಗಿ ದುಡಿಯಬೇಕು' ಎಂದಿರುವರು. ಇದು ಸಂತೋಷದ ಮಾತಾಗಿದೆ. ಹಿಂದೆ ಇವರೇ—ಮುಸಲ್ಮಾನರನ್ನು ರಾಷ್ಟ್ರೀಯ ಚಳವಳಿಯಿಂದ ಹಿಂದೆ ಸರಿಸಲಿಕ್ಕೆ ಬೇಕಷ್ಟು ಪ್ರಯತ್ನ ಮಾಡಿದ್ದರು. ಈಗ ತನ್ನ ಆ ಹಿಂದಿನ ನೀತಿಯನ್ನು ಅವರು ತಿಳಿಕೊಂಡು ವಿದ್ಯಾರ್ಥಿಗಳಿಗೆ ಈ ರೀತಿ ಭಾಷಣಕೊಟ್ಟಿರುವುದು ಶ್ಲಾಘನೀಯವಾಗಿದೆ. ಮಿ. ಇಮಾಮರಲ್ಲಿ ಹೃದಯ ಪರಿವರ್ತನೆಯೂ ವಿವೇಕೋದಯವೂ ಆಗಿರುವುದು ಶುಭಲಕ್ಷಣ. ಅವರ ಮಾತಿನ ಪ್ರಭಾವವು ಇತರ ಮುಸ್ಲಿಂಲೀಗ ಬಂಧುಗಳ ಮೇಲೂ ಬೀಳುವಂತೆ ಅವರು ಪ್ರಯತ್ನಿಸಿದರೆ ಎಲ್ಲರಿಗೂ ಶ್ರೇಯಸ್ಕರವಾಗುವುದು.

ಲೀಗಿನ ಜಾತಿವಾದದ ಭೂತಕ್ಕೆ ಮುಸ್ಲಿಂ ವಿದ್ಯಾರ್ಥಿಗಳ ಉಚ್ಚಾಟನ ಮಂತ್ರ!!

ಬಿಹಾರ ಮುಸ್ಲಿಮ್ ಮುಖಂಡರಿಗೆ ವಿವೇಕೋದಯ

ಇನ್ನೂ ಬುದ್ಧಿ ಬಂದಿಲ್ಲ

ನಾವು ಯಾಕೆ ಹೀಗೆ ಹೇಳುತ್ತಿದ್ದೇವೆಂದರೆ ಲೀಗಿನ ಇತರ ಮುಸ್ಲಿಂ ಬಂಧುಗಳಲ್ಲಿ ಮಿ. ಇಮಾಮರಂತೆ ವಿವೇಕೋದಯವಾಗಿರುವುದಿಲ್ಲ. ಅದಕ್ಕೆ ಉದಾಹರಣೆ ಬೇಕೆಂದಾದರೆ ಬಂಗಾಳದ ಹಕ್ಕಮಂಡಲದ ವರ್ತಮಾನ ನೀತಿಯನ್ನು ತೆಗೆದುಕೊಳ್ಳಿ. ಅವರು ಕಲ್ಕತ್ತ ಮುನ್ಸಿಪಲ್ ಕಾರ್ಪೊರೇಶನಿನಲ್ಲಿ ಹರಿಜನರಿಗೂ, ಕಾರ್ಮಿಕರಿಗೂ ಆಂಗ್ಲೋ ಇಂಡಿಯನರಿಗೂ ಪ್ರತ್ಯೇಕ ಪ್ರಾತಿನಿಧ್ಯವಿತ್ತು ಮುಸ್ಲಿಮರಿಗೆ ಕಾರ್ಪೊರೇಶನಿನಲ್ಲಿ ಈಗಿರುವುದಕ್ಕಿಂತ ಹೆಚ್ಚಿಗೆ ಸ್ಥಾನಗಳನ್ನು ಕೊಡುವ ಉದ್ದೇಶ ಮಾಡಿಕೊಂಡಿದ್ದಾರೆ. ಅವರ ಉದ್ದೇಶದಂತೆ ಕಾಯಿದೆಯು ತಿದ್ದುಪಡಿ ಆದರೆ ಕಲ್ಕತ್ತಾ ನಗರದಲ್ಲಿ ಹಿಂದುಗಳು ಬಹುಸಂಖ್ಯಾಕರಾಗಿದ್ದು ಕಾರ್ಪೊರೇಶನಿನಲ್ಲಿ ಅವರು ಅಲ್ಪಸಂಖ್ಯಾಕರಾಗುವರು. ಹಿಂದು ಸಮಾಜದಲ್ಲಿ ಹರಿಜನರಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವುದರಿಂದ ಅಲ್ಲಿ ಇತರರು ಮಾಡುತ್ತಿದ್ದಾಗ ಅವರೊಂದಿಗೆ ಒಳ್ಳೇದಿತ್ತು. ಪರಂತು ಇತರರ ಸಂಪಾದನೆಯಲ್ಲಿ ಪಾಲುಗಾರನಾಗುವಾಗಲೂ ಲೀಗಿನ ವಿಚಾರ ಬೇರೆಯೇ ಇದೆ. ಇದು ರಾಜಕೋಟದಲ್ಲಿ ಲೀಗಿನ ವರ್ತನೆಯಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ತಾನು ತಿನ್ನೆ ಬೇರೆಯವರಿಗೆ ಕೊಡೆ ಎನ್ನುವುದು ಲೀಗಿನ ನೀತಿ—ಈ ನೀತಿಯಲ್ಲಿ ಪರಿವರ್ತನೆಯಾಗಿ ತಾನು ತಿನ್ನುತ್ತೇನೆ, ಇತರರಿಗೆ ಕೊಡುತ್ತೇನೆ ಎಂದಾಗುವ ತನಕ ಮುಸ್ಲಿಂ ಲೀಗು ಮುಸ್ಲಿಮರ ಉನ್ನತಿಗೂ ದೇಶದ ಉದ್ಧಾರಕ್ಕೂ ಒಂದು ಆತಂಕವೇ ಸರಿ! ಆದ್ದರಿಂದ ಈಗೀಗ ಅನೇಕ ಮಂದಿ ಮುಸಲ್ಮಾನರು ಈ ಲೀಗಿನ ಸಂಬಂಧವನ್ನು ಕಡಿದುಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ.

ಈ ಸಮಾಜವು ವಿಭಾಗವಾಗಿ ಒಡೆದುಹೋಗುವುದು. ಹಕ್ಕ ಮಂತ್ರಿಮಂಡಲದ ಹಿಂದೂ ಮಂತ್ರಿಗಳು ಈ ತಿದ್ದುಪಡಿಗೆ ಪೂರ್ಣ ವಿರೋಧರಾಗಿ ರಾಜಿನಾಮೆ ಕೊಡಲಿಕ್ಕೂ ಸಿದ್ಧರಾದುದರಿಂದ ತಿದ್ದುಪಡಿಯ ಆಲೋಚನೆಯನ್ನೇ ಮುಂದರಿಸಿಟ್ಟಿದ್ದಾರೆ. ಹೀಗೆ ಮುಸ್ಲಿಂಲೀಗು ಎಲ್ಲೆಲ್ಲೂ ಮುಸ್ಲಿಂ ರಾಜ್ಯದ ಕನಸು ಕಾಣುವುದಾದರೆ ಹಿಂದು ಮುಸಲ್ಮಾನರು ಒಂದಾಗಿ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುವುದು ಹೇಗೆ ಸಾಧ್ಯ?

ಕೆಲಸಮಾಡಲಿಕ್ಕಿಲ್ಲ, ಉಣ್ಣಲಿಕ್ಕಿದೆ

ಮುಸ್ಲಿಂಲೀಗಿನ ತಂತ್ರ ಇನ್ನೂ ಚೆನ್ನಾಗಿ ನೋಡಿರಿ. ಯಾವ ಕಾರ್ಯವನ್ನೂ ಲೀಗು ತಾನು ಮಾಡುವುದಿಲ್ಲ. ಯಾವ ಕಾರ್ಯವು ಸಮಂವಾಗಿ ಜರುಗುವುದೋ ಅದರ ಫಲವನ್ನು ಉಣ್ಣಲಿಕ್ಕೆ ಮಾತ್ರ ಸಿದ್ಧವಾಗಿರುತ್ತದೆ. ರಾಜಕೋಟದ ಪ್ರಜಾಪರಿಷತ್ತು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿ ಹೋರಾಟವನ್ನು ನಡೆಸುತ್ತಿದ್ದಾಗ ಮುಸ್ಲಿಂ ಲೀಗು ಎಲ್ಲಿತ್ತೋ ಗೊತ್ತಿಲ್ಲ. ಆದರೆ ಆ ಹೋರಾಟದ ಪರಿಣಾಮವಾಗಿ ಸುಧಾರಣಾಸಮಿತಿಯ ರಚನೆಯಾಗುತ್ತಿದೆಯೆಂದಾದಾಗ ತನಗೂ ಪ್ರಾತಿನಿಧ್ಯ ಬೇಕೆಂದು ಲೀಗು ಮುಂದೆ ಬಂದಿತು. ಹಿಂದೆ ಕಷ್ಟ ಪಟ್ಟವರೊಂದಿಗೆ ಸಹಕರಿಸಿ ಅವರಿಗೆ ಸಹಾಯವನ್ನೀಯುವ ಬುದ್ಧಿ ಅದಕ್ಕಿದ್ದರೆ

ಬೊಂಬಾಯಿ ಹೋಟೆಲು ಕೆಲಸಗಾರರ ಸಂಕಷ್ಟ

ಮುಂಬಯಿಯ ಹೋಟೆಲು ಕೆಲಸಗಾರರ ... ಮೆರವಣಿಗೆ
ಎಸ್ ಎ ... ನಡೆಸುತ್ತಿರುವುದು

ಸದ್ವೈದ್ಯಶಾಲಾ (ರಿಜಿ) ನಂಜನಗೂಡ.
(ಪ್ರೊಪ್ರೈಟರ್: ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರು)
ಇವರ ಅನುಭವ ಸಿದ್ಧೌಷಧಗಳು.

ಕುಟುಂಬ ರಕ್ಷಿಣಿ

ಪ್ರತಿ ಸಂಸಾರಿಕರಿಗೂ, ಅತ್ಯಗತ್ಯವಾದ ೮ ಬೇರೆ ಬೇರೆ ಅಮೋಘ ಔಷಧಗಳನ್ನು ವಿಸ್ತಾರವಾದ ಅನುಪಾನ ಪುಸ್ತಕದೊಡನೆ ಸೇರಿಸಿಡಲ್ಪಟ್ಟ ಅಂದವಾದ ಪೆಟ್ಟಿಗೆ
ಒಂದೇ ಒಂದು ಪೆಟ್ಟಿಗೆಯು ನಿಮ್ಮಲ್ಲಿದ್ದರೆ, ಪೂರ್ಣ ಅನುಭವಶಾಲಿಯಾದ ಓರ್ವ ವೈದ್ಯನು ನಿಮ್ಮಲ್ಲಿ ಯಾವಾಗಲೂ ಇದ್ದಂತೆಯೇ ಸರಿ. ಚೀಲಿನಲ್ಲಿಡಲು ಬಹಳ ಅನುಕೂಲವಾದದ್ದು
ಅಂಚೆವೆಚ್ಚ ಉಚಿತ. ಬೆಲೆ: 3-0-0
ನಮ್ಮ ಇತರ ಔಷಧಿಗಳನ್ನೊಳಗೊಂಡ ವಿಸ್ತೃತ ಪಟ್ಟಿಗಾಗಿ ಇಂದೇ ಬರೆಯಿರಿ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಜಾಗರೂಕರಾಗಿರಿ!
ಮುಂಜಾನೆ ಸೇವಿಸಿರಿ!

ಕ್ರಮವಾಗಿ ಒಂದು ಗ್ಲಾಸ ಉಕ್ಕಿಬರುವ ಎಂಡ್ರೂಸ್ ಲವಣವನ್ನು ಸೇವಿಸಿದ್ದಲ್ಲಿ ಆರೋಗ್ಯದ ಮೊದಲಿನ ಸೋಪಾನವಾದ ನಿಮ್ಮ ಅಂತರೇಂದ್ರಿಯಗಳನ್ನು ಶುದ್ಧಗೊಳಿಸುವುದು

ANDREWS LIVER SALT

ಎಂಡ್ರೂಸ್ ಲವಣವು ಈಗ ಕಡಿಮೆ ಕ್ರಯದ ಬಾಟ್ಲಿಗಳಲ್ಲಿ ದೊರೆಯುತ್ತದೆ (ದೊಡ್ಡದು 1-1-0 ಚಿಕ್ಕದು 0-11-0) ಮೊದಲಿನ ಬಾಟ್ಲಿಗಳನ್ನು ಪಡೆಯುವುದರಿಂದ ಲಾಭದಾಯಕವಾದದ್ದು. ದ್ರುತ ಲಬ್ಧರು ಎಂಡ್ರೂಸ್ ಲಿವರ್ ಲವಣದಿಂದ ದೊರೆಯುವ ಪ್ರಯೋಜನವನ್ನು ಹೊಂದಬಹುದು. ಉತ್ತಮ ಲವಣಗಳಿಂದ ಕೂಡಿ ಅಂತರೇಂದ್ರಿಯಗಳನ್ನು ಶುದ್ಧಗೊಳಿಸುವ ಸ್ವಾಭಾವಿಕ ಭೇದಿಯ ಔಷಧಗಳಿಂದ ಮಾಡಲ್ಪಟ್ಟಿದೆ. ಎಂಡ್ರೂಸ್ ಡಬ್ಬಿಗಳಲ್ಲಿ ಬಹಳ ಉತ್ತಮವಾದದ್ದು. ಆದರೂ ಈ ಹೊಸ ನಿಮಗೆ ಚಿರಪರಿಚಿತವಾದ ಲವಣವು ಬಾಟ್ಲಿಗಳಲ್ಲಿಯೂ ದೊರೆಯುತ್ತದೆ

ಅಂತರೇಂದ್ರಿಯ ಶುದ್ಧಿಗೆ ಉತ್ತಮವಾದದ್ದು.

ಕಾಂಗ್ರೆಸ ಮಂತ್ರಿಮಂಡಲಗಳ ಸ್ವರ್ಗಸುಖ

ಕಾಂಗ್ರೆಸು ಹಿಂದುಸ್ಥಾನದ ೮ ಪ್ರಾಂತ್ಯಗಳಲ್ಲಿ ಅಧಿಕಾರಸೂತ್ರವನ್ನು ತನ್ನ ಕೈಗೆ ತೆಗೆದು ಕೊಂಡಂದಿನಿಂದ ಮಂತ್ರಿಮಂಡಲಗಳು ಸ್ವರ್ಗಸುಖವನ್ನೇ ಅನುಭವಿಸುತ್ತಿವೆ. ಅವುಗಳು ಸರ್ವತಂತ್ರ ಸ್ವತಂತ್ರ ನಿರಂಕುಶ ಪ್ರಭುಗಳಂತೆ ತಮ್ಮ ಪ್ರಾಂತ್ಯಗಳ ಆಡಳಿತವನ್ನು ನಡೆಸುತ್ತಿವೆ. ಅವುಗಳಿಗೆ ಕಷ್ಟವಿಲ್ಲ, ನಷ್ಟವಿಲ್ಲ, ಸುಖವೇ ಸುಖವೆಂದು ತಿಳಿದುಕೊಂಡಿರುವವರಿಗೆ, ಕಾಂಗ್ರೆಸ ಮಂತ್ರಿಮಂಡಲಗಳ ಸ್ವರ್ಗಸುಖವು ಅದೆಂಥಹದೆಂಬುದು ಈ ಲೇಖನದಿಂದ ಸ್ಪಷ್ಟವಾಗುವುದು. ಇದನ್ನು ಓದಿದರೆ ಕಾಂಗ್ರೆಸ ಮಂತ್ರಿಮಂಡಲಗಳ ಉಚ್ಚಪದವಿಗಾಗಿ ಮತ್ಸರಿಸುವವರು ಯಾರೂ ಇರಲಾರರು. ಅದರ ಬದಲಿಗೆ ಅವರು ಪ್ರಾಯಶಃ ಈ ಮಂತ್ರಿಮಂಡಲಗಳ ಕಷ್ಟಗಳಿಗಾಗಿ ಅವುಗಳೊಂದಿಗೆ ಸಹಾನುಭೂತಿಯನ್ನು ತೋರಿಸಬಹುದು.

ಮದ್ರಾಸು-ಮುಂಬಾಯಿ

ಮದ್ರಾಸಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲವು ಜಸ್ಟೀಸ್ ಪಕ್ಷದವರ ಪ್ರಬಲ ವಿರೋಧಕ್ಕೆ ತಲೆಕೊಡಬೇಕಾಗಿದೆ. ಮದ್ರಾಸಿನಲ್ಲಿ ಜಸ್ಟೀಸ್ ಪಕ್ಷದವರ ವಿರೋಧವು ನ್ಯಾಯಪೂರ್ಣ ಮಾರ್ಗವನ್ನು ಅವಲಂಬಿಸಿರುವುದಿಲ್ಲ. ಈ ಪಕ್ಷದ ಪ್ರಮುಖರು ಕಾಂಗ್ರೆಸ್ ಮಂತ್ರಿಮಂಡಲದ ಶರಾಬಂದಿಯ ನೀತಿ, ಹಿಂದೀ ಧೋರಣೆ, ಮಜೂರರ ಹಿತಾಸಕ್ತಿಗಳನ್ನು ಕಾಪಾಡುವ ಕೃಷಿ ವಿಚಾರಗಳ ಕುರಿತು ಅಪಪ್ರಚಾರ ಮಾಡಿ, ಮಂತ್ರಿಮಂಡಲಕ್ಕೆ ಹಾಳು ಹೆಸರನ್ನು ತರುವ ಪ್ರಯತ್ನವನ್ನು ಮಾಡುತ್ತಾರೆ. ಹಿಂದೀ ವಿರೋಧ ಆಂದೋಲನವು ಇದೇ ಕ್ರಮವನ್ನು ಅನುಸರಿಸಿದೆ. ಜಸ್ಟೀಸ್ ಪಕ್ಷವು ಹಿಂದೀ ವಿರೋಧಕ್ಕಾಗಿ ಅದನ್ನು ವಿರೋಧಿಸುತ್ತಿರುವುದಿಲ್ಲ. ಕೇವಲ ಮಂತ್ರಿಮಂಡಲದ ಕಾರ್ಯಕ್ರಮಗಳ ಕುರಿತು ಜನರು ದುರಭಿಪ್ರಾಯಪಡಬೇಕೆಂಬುದಕ್ಕಾಗಿಯೇ ಈ ಆಂದೋಲನವು ನಡೆಯುತ್ತದೆ.

ಮುಂಬಾಯಿಯಲ್ಲಿ ಕಾಂಗ್ರೆಸ್ ಮಂತ್ರಿಮಂಡಲದ ಮದ್ಯ ನಿಷೇಧ ಕಾರ್ಯಕ್ರಮದ ಕುರಿತು ಮದ್ಯ ವ್ಯಾಪಾರಿಗಳ ಪ್ರಬಲ ವಿರೋಧವು ಕಂಡುಬರುತ್ತದೆ. ಅವರು ಸತ್ಯಾಗ್ರಹವನ್ನು ಮಾಡಲಿಕ್ಕೂ ಸಿದ್ಧರಾಗಿದ್ದಾರೆ.

ಸಂಯುಕ್ತ ಪ್ರಾಂತ

ಪಂತ ಮಂತ್ರಿಮಂಡಲದ ಕಷ್ಟಗಳು ಅಸಹನೀಯವಾದವು. ಅದು ಮೂರು ಕಡೆಗಳಿಂದ ವಿರೋಧಿಗಳೊಂದಿಗೆ ಹೋರಾಡಬೇಕಾಗಿ ಬಂದಿದೆ. ಒಂದು ಕಡೆ ಅದರ ಶರಾಬಂದಿಯ ನೀತಿಯ ಕುರಿತು ಶ್ರೀಮಂತ ಮತ್ತು ಜಮೀನ್ದಾರರ ವಿರೋಧವುಂಟಾಗಿದೆ. ಸರ್. ಛತಾರಿಯ ನವಾಬರವರ ನೇತೃತ್ವದಲ್ಲಿ ಅವರು ಸರಕಾರವನ್ನು ಕೋರ್ಟು ಕಚೇರಿಗಳಲ್ಲಿ ಹೋರಾಡಲಿಕ್ಕೆ ಸಿದ್ಧರಾಗಿರುವುದು ಮಾತ್ರವಲ್ಲದೆ ಸತ್ಯಾಗ್ರಹವನ್ನು ಮಾಡುವರಂತೆ. ಆ ಮೇಲೆ ಅಲ್ಲಿ ಜಾತಿ ಸಮಸ್ಯೆಯು ವಿಷಮ ಸ್ಥಿತಿಗೆ ಬಂದಿರುವುದು. ಮುಸ್ಲಿಂ ಲೀಗು ಜಾತಿ ಕಲಹದ ಉರಿಯುವ ಬೆಂಕಿಗೆ ತುಪ್ಪ ಹಾಕಿ ಸರಕಾರವನ್ನು ಬೇಕುಬೇಕೆಂದೇ ಕಷ್ಟಕ್ಕೆ ಗುರಿ ಮಾಡುತ್ತಲಿದೆ. ಅದರೊಂದಿಗೆ ಹಿಂದೂ ಕಲಹಪ್ರಿಯರೂ ಕೂಡಿಕೊಂಡು ಈ ಅಗ್ನಿಯನ್ನು ಪ್ರಜ್ವಲಿಸುತ್ತಿದ್ದಾರೆ. ಒಂದು ಕಡೆಯಿಂದ ಮುಸ್ಲಿಂ ಲೀಗು ಸರಕಾರವನ್ನು ಹಿಂದೂ ಪಕ್ಷಪಾತಿ ಎಂದು ದೂರುತ್ತಿರುವಾಗ, ಇನ್ನೊಂದು ಕಡೆಯಲ್ಲಿ ಹಿಂದೂ ಮಹಾಸಭೆಯು ಅದೇ ಸರಕಾರವನ್ನು ಮುಸಲ್ಮಾನ ಪಕ್ಷಪಾತಿಯೆಂದು ದೂರುತ್ತದೆ. ಮೂರನೆಯದಾಗಿ ಗಿರಣಿ ಕಾಮಗಾರರು ಆಗಾಗ ಸಂಪುಗಳನ್ನು ಮಾಡಿ ಪ್ರಾಂತದ ಶಾಂತಿಭಂಗಕ್ಕೆ ಕಾರಣರಾಗುತ್ತಾರೆ. ಇವೆಲ್ಲ ಕಾರಣಗಳಿಂದ ಮಂತ್ರಿಮಂಡಲಕ್ಕೆ ತಲೆ ತುರಿಸಿಕೊಳ್ಳುವಷ್ಟು ಸಮಯವಿರುವುದಿಲ್ಲ.

ಒರಿಸ್ಸಾ

ಒರಿಸ್ಸಾದ ಮಂತ್ರಿಮಂಡಲವು ಕಷ್ಟಗಳಿಗೆ ಒರಿಸ್ಸಾ ವೈದ್ಯಕೀಯ ವಿದ್ಯಾರ್ಥಿಗಳು ಪ್ರಾರಂಭಿಸಿದ ಸತ್ಯಾಗ್ರಹವನ್ನೇ ದೃಷ್ಟಾಂತವಾಗಿ ತೆಗೆದುಕೊಳ್ಳಬಹುದು. ಕಾರಣಗಳಿದ್ದು ಕಾರಣಗಳಿಲ್ಲದೆಯೂ ವಿದ್ಯಾರ್ಥಿಗಳು ಈ ಸತ್ಯಾಗ್ರಹವನ್ನು ಆರಂಭಿಸಿದರು. ಅದನ್ನು ಮುಗಿಸಬೇಕಾದರೆ ಮಂತ್ರಿಮಂಡಲಕ್ಕೆ ಮತ್ತಿಗೆ ಬಂದಿತು. ಒರಿಸ್ಸಾದಲ್ಲಿರುವ ಸಣ್ಣ ಸಂಸ್ಥಾನಗಳ ಚಿಕ್ಕ ಅರಸರುಗಳ ಅತ್ಯಾಚಾರ ಅನಾಚಾರಗಳಿಗೆ ಬಲಿಯಾದ ಸಂಸ್ಥಾನ ಪ್ರಜೆಗಳು ಒರಿಸ್ಸಾ ಪ್ರಾಂತದಲ್ಲಿ ಬಂದು ಆಶ್ರಯ ತೆಗೆದುಕೊಂಡಿದ್ದಾರೆ. ಅವರನ್ನು ಸಾಕುವ ಸಮಸ್ಯೆಯು ಭೀಕರವಾಗಿದೆ.

ಅಸ್ಸಾಮು

ಇಲ್ಲಿಯ ಎಣ್ಣೆ ಗಣಿಗಳು ಯುರೋಪಿಯನ ಮಾಲಿಕರ ನಿಷ್ಠುರ ಧೋರಣೆಯಿಂದ ಮಾಲಕರಿಗೂ ಕಾಮಗಾರರಿಗೂ ಸಂಘರ್ಷವುಂಟಾಗಿ ಪೋಲೀಸರೂ ಮಿಲಿಟರಿಯವರೂ ಕಾಮಗಾರರ ಮೇಲೆ ಗೋಳಿಬಾರು ಮಾಡಿದರು. ಅನೇಕ ಮಂದಿಯು ಹತಾಹತರಾದರು. ಕಾಮಗಾರರು ಬಹಳ ಶಾಂತರೀತಿಯಿಂದ ವರ್ತಿಸುತ್ತಿದ್ದರಾದ್ದರಿಂದ ಗೋಳಿಬಾರು ಮಾಡುವ ಪ್ರಸಂಗವೇ ಇದ್ದಿಲ್ಲವೆಂದು ಕಾಣುತ್ತದೆ. ಆದರೂ ಪೋಲೀಸರು ಗುಂಡು ಹಾರಿಸಿದರು. ಈ ಪ್ರಕರಣವನ್ನು ಅಲ್ಲಿಗಲ್ಲಿಗೆ ಶಾಂತವಾಡಬೇಕಾದರೆ ಮಂತ್ರಿಮಂಡಲಕ್ಕೆ ಸಾಕೋಸಾಕಾಗಿದೆ.

ಮಧ್ಯಪ್ರಾಂತ—ಮಧ್ಯಪ್ರಾಂತ

ಈ ಪ್ರಾಂತದಲ್ಲಿ ಸರಹದ್ದಿನ ಜನರು ಬ್ರಿಟಿಷ್ ಇಂಡಿಯದ ಜನರನ್ನು ಲೂಟಿಮಾಡುವುದೂ ಅವರನ್ನು ಎತ್ತಿಕೊಂಡು ಹೋಗುವುದೂ ಒಂದು ಸಮಸ್ಯೆ. ಇದನ್ನು ಹೇಗೆ ಬಗೆಹರಿಸಬೇಕೆಂಬುದೇ ಮಂತ್ರಿಮಂಡಲಕ್ಕೆ ತಿಳಿಯುವುದಿಲ್ಲ. ಮಧ್ಯಪ್ರಾಂತದಲ್ಲಿ ಮಂತ್ರಿಮಂಡಲವನ್ನು ವಿರೋಧಿಸಲಿಕ್ಕೆ ಖಾರೆ-ರಾಘವೇಂದ್ರರಾವ ಪಾರ್ಟಿಗಳಿವೆ.

ಹೀಗೆ ಎಲ್ಲಾ ಕಾಂಗ್ರೆಸ್ ಮಂತ್ರಿಮಂಡಲಗಳ ಕಷ್ಟಗಳು ಅಸಹನೀಯವಾಗಿರುವುವು. ಅವನ್ನು ಕೇಳಿದರೆ ರೋಮಾಂಚನವಾಗುತ್ತದೆ. ಅವರ ಸ್ಥಿತಿ ಯಾರಿಗೂ ಬೇಡವೆನ್ನಿಸುತ್ತದೆ. ಆದರೆ ಇಷ್ಟು ಕಷ್ಟಗಳನ್ನು ಅನುಭವಿಸಿಯೂ ಅವರು ಜನಸೇವೆಗಾಗಿ ಇನ್ನೂ ಅಲ್ಲಿದ್ದಾರಲ್ಲ ಎಂದು ಮಂತ್ರಿಗಳ ಮೇಲೆ ಗೌರವ ಬುದ್ಧಿ ಬರುತ್ತದೆ.

ಹೊಗೆಸೊಪ್ಪಿನ ಮಸೂದೆ ಮಂಜೂರಾಯಿತು

ಹೊಗೆಸೊಪ್ಪಿನ ಮಾರಾಟದ ಮೇಲೆ ತೆರಿಗೆ ಹಾಕುವ ಮದ್ರಾಸು ಸರಕಾರದ ಮಸೂದೆಯು ಪ್ರಾಂತಿಕ ಅಸೆಂಬ್ಲಿಯಲ್ಲಿ ಮಂಜೂರಾತಿಯನ್ನು ಪಡೆದಿದೆ. ತೆರಿಗೆಯ ಕ್ರಮ ನಿಬಂಧನೆಗಳಲ್ಲಿ ಹಲವು ಪರಿವರ್ತನೆಗಳಾಗಿವೆ. ಅಸಿದ್ಧ ಹೊಗೆಸೊಪ್ಪಿನ ಮೇಲೆ ತೆರಿಗೆ ಇರುವುದಿಲ್ಲ. ಸಿದ್ಧ ಹೊಗೆಸೊಪ್ಪಿನ ಮೇಲೆ ತೆರಿಗೆಯ ದರವನ್ನು ಇಳಿಸಲಾಗಿದೆ. ಆದರೂ ತೆರಿಗೆಯು ಸರಿಯಾದ ಕ್ರಮಗಳಲ್ಲಿ ವಸೂಲಾಗುವುದಾದರೆ ಸರಕಾರಕ್ಕೆ ವರ್ಷಾವಧಿ ಸುಮಾರು ಒಂದು ಕೋಟಿಯ ರೂಪಾಯಿಗಳ ಕನಕವೂ ಲಾಭವಾಗಬಹುದು. ನಮ್ಮ ಸಂಸ್ಥಾನದಲ್ಲಿ ವರ್ಷಾವಧಿ ಮಾರಾಟವಾಗುವ ಹೊಗೆಸೊಪ್ಪಿನ ಬೆಲೆ ಸುಮಾರು ೮॥ ಕೋಟಿ ರೂಪಾಯಿ ಆಗುತ್ತದೆ. ಈ ಹೊಗೆಸೊಪ್ಪಿನ ವರ್ಷಾವಧಿ ಮಾರಾಟದ ಮೇಲೆ ಚಿಲ್ಲರೆ ವ್ಯಾಪಾರಿಗಳಿಗೆ ಮಾರಾಟವು ೨೦೦ ರೂ.ಗಳಿಗೆ ಮೀರದಿದ್ದರೆ ೬ ರೂ; ೨೦೦ರಿಂದ ೮೦೦ರ ತನಕ ೧೨ರೂ, ೮೦೦ಕ್ಕೆ ಮೀರಿದರೆ ಪ್ರಥಮದ ೮೦೦ಕ್ಕೆ ಸೇಕಡಾ ೩, ಅನಂತರ ಉಳಿದುದಕ್ಕೆ ಸೇಕಡಾ ೧೦ರಂತೆ; ಸಗಟು ವ್ಯಾಪಾರಿಗಳಿಗೆ ಸೇಕಡಾ ೨ರಂತೆ ತೆರಿಗೆ ಹಾಕಲಾಗಿದೆ. ೧೦೦೦ರೂ.ಗಳಿಗೆ ಮೀರದ ಬೆಲೆಯ ಹೊಗೆಸೊಪ್ಪನ್ನು ಉಪಯೋಗಕ್ಕೆ ಸಿದ್ಧಮಾಡಿ ಸಗಟು ವ್ಯಾಪಾರಿಗೆ ಮಾರುವವನಿಗೆ ಆ ಮಾರಾಟದ ಮೇಲೆ ತೆರಿಗೆ ಕೊಡಲಿಕ್ಕೆ ಇರುವುದಿಲ್ಲ. ತೆರಿಗೆ ವಸೂಲಿಗೆ ಪ್ರತ್ಯೇಕ ಸಿಬ್ಬಂದಿಯ ನೇಮಕವಾಗುವುದು.

ಅಪರಾಧಗಳು ಹೆಚ್ಚುವ ಕಾರಣ

ಪಂಜಾಬಿನಲ್ಲಿ ಅಪರಾಧಗಳು ಬೆಳೆಯುತ್ತಿವೆ. ಕೈದಿಗಳಿಗೆ ಜೈಲುಗಳು ಸಾಕಾಗುವುದಿಲ್ಲ. ಅಮೃತಸರದಲ್ಲಿ ೩೦೦೦೦೦ ರೂಪಾಯಿ ಖರ್ಚುಮಾಡಿ ಸರಕಾರವು ಆಧುನಿಕ ಕ್ರಮದಲ್ಲಿ ಒಂದು ಹೊಸ ಜೈಲನ್ನು ಕಟ್ಟಬೇಕೆಂದಿದೆ. ಆದರೆ ಎಲ್ಲಾ ಕೈದಿಗಳಿಗೆ ಇಂಥ ಇನ್ನೂ ಎರಡು ಮೂರು ಜೈಲುಗಳು ಹೆಚ್ಚಿಗೆ ಬೇಕಾಗಬಹುದು. ಪಂಜಾಬಿನಲ್ಲಿ ಹೀಗೆ ಅಪರಾಧಗಳು ಬೆಳೆಯುತ್ತಿರುವ ಕಾರಣವೇನು? ಪಂಜಾಬಿನ ಗವರ್ನರರು ಲಾಹೋರಿನಲ್ಲಿ ಕೂಡಿದ ಸ್ಕೌಟ ಸಭೆಯಲ್ಲಿ ಆ ವಿಷಯವಾಗಿ ಮಾತನಾಡುತ್ತಾ-ಇಂದ್ರಿಯ ನಿಗ್ರಹ ಮತ್ತು ಶಿಸ್ತುವ್ಯವಸ್ಥೆಯ ಅಭ್ಯಾಸ ಇಲ್ಲದಿರುವುದರಿಂದಲೇ ಅಪರಾಧಿಗಳು ಬೆಳೆಯುತ್ತವೆಂದು ಹೇಳಿದರು.

ಒರಿಸ್ಸಾ ವಿದ್ಯಾರ್ಥಿಗಳ ಸತ್ಯಾಗ್ರಹ

ಪರಸ್ಪರ ಒಡಂಬಡಿಕೆಯಾಗಿ ವಿದ್ಯಾರ್ಥಿಗಳ ಕಷ್ಟಗಳನ್ನು ದೂರಮಾಡುವುದಾಗಿ ಸರಕಾರವು ಭರವಸೆ ಕೊಟ್ಟದರಿಂದ ಒರಿಸ್ಸಾ ವೈದ್ಯಕೀಯ ವಿದ್ಯಾರ್ಥಿಗಳ ಸತ್ಯಾಗ್ರಹವು ನಿಂತಿತು. ಜೈಲಿನಲ್ಲಿದ್ದ ಸತ್ಯಾಗ್ರಹಿಗಳನ್ನು ಸರಕಾರವು ಬಿಡುಗಡೆಮಾಡಿದೆ.

ವೆಸ್ಟ್ ಇಂಡೀಸದ ಹಿಂದೀಯರು

ವೆಸ್ಟ್ ಇಂಡೀಸ ಮೊದಲಾದ ದ್ವೀಪಗಳಿಗೆ ಹೋಗಿ ನೆಲಸಿರುವ ಹಿಂದೀಯರು ಪಕ್ಷಪಾತದ ಮುಗ್ಗಟ್ಟಿನಿಂದಾಗಲೀ, ಸರಕಾರದ ನೀತಿ, ಬಿಳಿ ಜನರ ಉಪಟಳದಿಂದಾಗಲೀ ಜೀವನವು ಕಷ್ಟವಾಗಿ ಭಾರತಕ್ಕೆ ಹಿಂದಿರುಗುವುದಕ್ಕಿಂತಲೂ ಅವರು ಅಲ್ಲೇ ವಾಸವಾಗಿರುವುದು ಉತ್ತಮವೆಂಬದಾಗಿ, ಅಲ್ಲಿಯ ರೋಯಲ್ ಕಮೀಶನಿನ ಮುಂದೆ ಭಾರತ ಸರಕಾರದ ಪರವಾಗಿ ಸಾಕ್ಷಿ ಕೊಡಲು ಹೋದ ಮಿ. ವ್ಯಾಸನ ಎಂಬವರು ಮುಂಬಯಿಯಲ್ಲಿ ಹೇಳಿದರು. ವಸಾಹತುಗಳಲ್ಲಿ ವಾಸವಾಗಿರುವ ಹಿಂದೀಯರು ಈಗ ಭಾರತಕ್ಕೆ ಹಿಂದಿರುಗುವುದರಿಂದ ಅವರ ಕಷ್ಟಗಳು ಅಲ್ಲಿಗಿಂತ ಇಲ್ಲಿ ಇನ್ನೂ ಹೆಚ್ಚಾಗಬಹುದೆಂಬುದು ಪ್ರಚಲಿತ ಅಭಿಪ್ರಾಯವಾಗಿರುತ್ತದೆ.

ರಕ್ತ ಒತ್ತಾಟವು ಮುಂಚೆಗಿಂತ ಕಡಿಮೆಯಾಯಿತು.

ಕ್ರುಶನ್ ಲವಣಗಳ ಸೇವೆಯಿಂದ ಆತನ ಹಳೆ ಪೀಡೆಯು ಮಾಯವಾಯಿತು

ರಕ್ತ ಒತ್ತಾಟದ ಹೆಚ್ಚಳದಿಂದ ಅಪಾಯವಿರುವುದೆಂದೂ, ಸಮಯ ವಿಳಂಬವಾಗದೆ, ಅದರ ಚಿಕಿತ್ಸೆಯಾಗಬೇಕೆಂದೂ ವೈದ್ಯಕೀಯ ಜನರ ಅಭಿಪ್ರಾಯವಾಗಿರುತ್ತದೆ. ತಲೆ ತಿರುಗುವಿಕೆ ಪಿತ್ಥ, ಇತ್ಯಾದಿಗಳು ಈ ಪೀಡೆಯ ಕುರಿತು ಎಚ್ಚರಿಕೆಯ ಕುರುಹುಗಳು. ರಕ್ತ ಒತ್ತಾಟದ ಹೆಚ್ಚಳವನ್ನು ಅನುಭವಿಸಿದ ಓರ್ವರ ಪತ್ರವನ್ನು ಓದಿರಿ —

"ಅನೇಕ ವರ್ಷಗಳ ಸಮಯ ನಾನು ರಕ್ತ ಒತ್ತಾಟದ ಹೆಚ್ಚಳದಿಂದ ಪೀಡಿತನಾಗಿದ್ದು, ಅದರಿಂದ ಉಂಟಾದ ಅನಿಷ್ಟಗಳನ್ನು ಅನುಭವಿಸಿದೆನು. ಎಲ್ಲಾ ಬಗೆಯ ಔಷಧಗಳನ್ನು ಉಪಯೋಗಿಸಿದರೂ, ನಿರರ್ಥಕವಾಯಿತು. ಕಡೆಗೆ ನಾನು ಕ್ರುಶನ್ ಲವಣಗಳನ್ನು ಸೇವಿಸಿದೆ. ಎರಡು ದಿವಸಗಳೊಳಗೆ ನನಗೆ ಶಮನವು ದೊರಕಿತು. ಜಡಭಾರವಾಗಿದ್ದ ನನ್ನ ತಲೆಯು ಶುಭ್ರವಾಯಿತು. ಅದರೊಳಗೆ ಹೊಸ ಹುರುಪು ಕಾಣಿಸಿಕೊಂಡಿತು.

ಈಗ ನನ್ನಲ್ಲಿರುವ ವ್ಯಥೆಯು ಮಾಯವಾಗಿ ಸುಖಭಾವವು ಉಂಟಾಗಿರುತ್ತದೆ. ಬೆಳಗಾತ ಒಂದಿಷ್ಟು ಕ್ರುಶನ್ ಸೇವಿಸಿದರೆ ನನಗೆ ಹಿಂದಿನ ಪೀಡೆಯು ಬಾಧಿಸುವುದು ಇಲ್ಲ."

ಮಾನವನ ಅಂತರ್ಯದ ಅಂಗಗಳು ಸರಿಯಾಗಿ ಕಾರ್ಯಿಸದೆ, ವಿಷ ಹೊರದಿಸುವ ಕಲ್ಮಷಗಳು ಉದರದೊಳಗೆ ಶೇಖರವಾಗಿರುವುದೆ, ಆತನ ಸಂಕಟಗಳ ಮುಖ್ಯ ಕಾರಣವಾಗಿರುತ್ತದೆ.

ಈ ವಿಷಕಲ್ಮಷಗಳೆ ಆತನ ರಕ್ತ ಒತ್ತಾಟದ ಹೆಚ್ಚಳಕ್ಕೆ ಕಾರಣವು. ಅಂಗದೊಳಗೆ ವಿಷವು ಏರುವುದರಿಂದ ಹೃದಯಕ್ಕೆ ಹೆಚ್ಚಿನ ಶ್ರಮವಹಿಸಿ ಕಾರ್ಯಿಸಬೇಕಾಗುತ್ತದೆ. ಅದರಿಂದಲೆ ರಕ್ತಒತ್ತಾಟವು ಹೆಚ್ಚುತ್ತದೆ.

ಕ್ರುಶನ್ ಲವಣಗಳಲ್ಲಿ ನೈಸರ್ಗಿಕವಾದ ೬ ಲವಣಗಳಿವೆ, ಇವುಗಳು ಉದರವನ್ನು

ನಿರ್ಮಲಗೊಳಿಸುವುದುಮಾತ್ರವಲ್ಲದೆ ನಿಮ್ಮ ಅಂಗಾಂಗಗಳು ಸರಿಯಾಗಿ ಕಾರ್ಯಿಸುವಂತೆ ಮಾಡುವುದು ನಿಮ್ಮ ರಕ್ತವು ಪರಿಶುದ್ಧ ಹೊಂದುವುದು.

ಕ್ರುಶನ್ ಲವಣಗಳು ಎಲ್ಲಾ ಸ್ಟೋರುಗಳಲ್ಲಿ, ಬಜಾರಗಳಲ್ಲೂ ಮಾರಲ್ಪಡುತ್ತದೆ.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೂಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲ್ಯಾಯ್ಡುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು. ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು. ೪) ಸ್ಟೇಶನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮ್ಹಾಲು ಪರದೇಶದಂತೆ ಬರುವಂತೆ ಉಂಟು. ಏಜಂಟರಿಗೆ ತುಂಬಾ ಕಮಿಶನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ವಾಘ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್:—ಪಿ. ಎಚ್. ಭಟ್ಟ. ಗದಗ:—ವಿ. ಎಸ್. ಶೆಟ್ಟಿ.
ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜೆಂಟ್.—ಡಾ. ಕೆ. ಭಾಸ್ಕರ ಶೈ.
ಸ್ಪೆಶ್ಯಲ್ ಏಜಂಟ್:—ಬಿ. ವ್ಹಿ. ಹೊನ್ನಾವರ

ಹಳ್ಳಿಯ ಹತ್ತು ಸಮಸ್ತರು

[ಹಿಂದಿನ ಪುಟದಿಂದ ಮುಂದುವರಿದುದು.]

ಆದು ವೈಕುಂಠ ಕಮ್ತಿಯವರಿಗೂ ಇಷ್ಟವಿತ್ತು. ಹಾಗಾಗಿ ಮುಂದಿನ ಕಾರ್ಯಕ್ರಮಕ್ಕೆ ಕೈಹಾಕಲಾಯಿತು!

“ಈಗಲೇ ಒಬ್ಬ ಅಧ್ಯಕ್ಷರು, ಇನ್ನೊಬ್ಬರು ಉಪಾಧ್ಯಕ್ಷರು ಮತ್ತು ಖಜಾಂಚಿ ಕಾರ್ಯದರ್ಶಿಯರು ಇವರನ್ನು ಆರಿಸಿಬಿಟ್ಟರೆ ಕಮಿಟಿ ಫಾರ್ಮೇಶನ್ ಬಲವಾಯಿತು' ಎಂದು ಅವರು ಸೂಚಿಸಿದರು. ರಾಮರಾಯರ ಮನಸ್ಸಿನಲ್ಲಿ ಚನ್ನಮಯ್ಯರನ್ನು ಅಧ್ಯಕ್ಷರಾಗಿ ಮಾಡುವವೆಂಬ ಮನಸ್ಸಿತ್ತು. ಆ ದಿನದ ಸಭಾಚರೆಂದರೆ ವೈಯ್ಯರು; ಏನಾದರೂ ನಾಲ್ಕು ಕಾಸು ಖರ್ಚುಮಾಡಿಸಬಹುದು—ಹೀಗೆಂದು ಊಹಿಸಿ ‘ನಾನು ಚನ್ನಮಯ್ಯರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸುತ್ತೇನೆ' ಎಂದು ಜನ್ನಪ್ಯೆಗಳ ಹಿಂಗಡೆ ನಿಂತು, ಅವರ ಬಾಯಿಂದ ಅಷ್ಟು ಮಾತನ್ನು ಹೇಳಿಸಿದರು. ಸುತ್ತು ನೆರೆದವರ ಮುಖಮುಖ ನೋಡತೊಡಗಿದರು. ನಾಗಯ್ಯ ಸೆಟ್ಟರಿಗೆ ಸಿಟ್ಟು ಹಾಗಾಯಿತು. ಅಲ್ಲಿ ನರಸ ಉಪಾಧ್ಯಾಯರೂ ಇದ್ದರು. ಸೀತ್ಯೆತಾರಿಗೂ ಚನ್ನಮ್ಯೆಯ್ಯರ ಮೇಲಿನ ಹಳೇ ಬಾಕಿ ಮತ್ಸರವಿತ್ತು. ಇತ್ತ ಕೆರೆಕಟ್ಟೆ ನರಸಿಂಹಯ್ಯನೂ ನಿಂತಿದ್ದ. ಅವರೊಳಗೇ ಗುಡುಗುಜು ಮಾತಾಗಿ ‘ನಾನು ನಾಗಯ್ಯ ಸೆಟ್ಟರನ್ನು ಆ ಸ್ಥಾನಕ್ಕೆ ಸೂಚಿಸುತ್ತೇನೆ' ಎಂದು ನರಸಿಂಹಯ್ಯ ಸೂಚಿಸಿದನು. ಅಲ್ಲಿಗೆ ರಣಾಗ್ರಕ್ಕೆ ಸೀಟಿಯಾಯಿತು. ಡಾಕ್ಟರರು ನಮ್ಮ ಊರಿಗೆ ಬಂದು ಮೂರು ನಾಲ್ಕು ವರ್ಷವಾಗಬಹುದಾದರೂ ನಮ್ಮಲ್ಲಿನ ಸೀಲಿಸ ಗುಣ ಎಂಥದೆಂದು ಚೆನ್ನಾಗಿ ತಿಳಿದಿರಲಿಲ್ಲ. ಈ ಗದ್ದಲ ಕಂಡು ಅಂಜಿ ಅವರು ‘ಕಮ್ತಿಯವರೇ, ಇಲ್ಲಿಗೇನ ಬಿಡಿ. ಇವತ್ತು ಯಾವುದೂ ಬೇಡ. ಇನ್ನೂ ನೂರಿನ್ನೂರು ಮೆಂಬರರು ಸೇರಿಯಾಲಿ. ಎಲ್ಲರನ್ನು ಸೇರಿಸಿಯೇ ಆ ಮೇಲೆ ಅಧ್ಯಕ್ಷರನ್ನು ಆರಿಸುವ. ಸುಮ್ಮನೆ ನಮ್ಮನ್ನು ಕರೆಯಲಿಲ್ಲ, ನಮಗೆ ತಿಳಿದಿರಲಿಲ್ಲ ಎಂದು ಊರವರ ಪುಕಾರು ಕೇಳುವ ದಗಳೆ ಬೇಡ' ಎಂದರು. ಜನ್ನಪ್ಯೆಗಳಿಗೂ ಹಪೆ ಕೆಟ್ಟಿತು ಎಂಬುದು ತಿಳಿದು. ಅವರೂ ಸೈಗುಟ್ಟಿದರು. ಸಂಗತಿ ಮುಂದೆ ವರಿಯಿತು. ಇನ್ನು ರಾತ್ರಿ ಹಾಗೇ ಮನೆಗೆ ಎಲ್ಲರನ್ನೂ ಕಳುಹಿಸುವುದು ಸರಿಯಲ್ಲವೆಂದು ತಾಳಮದ್ದಲೆಯನ್ನು ಮುಂದುವರಿಸಿದರು.

ಸರಿ, ಮರುದಿನ ಬೆಳಗ್ಗೇನೆ ನಾಗಯ್ಯ ಸೆಟ್ಟರು, ಚನ್ನಮ್ಯೆಯ್ಯರು, ಕೆರೆಕಟ್ಟೆ ನರಸಿಂಹಯ್ಯನವರ ತಲೆಯ ಮೇಲೆ ಒಂದೊಂದು ಗಾಂಧಿ ಟೋಪಿ ಏರಿತು. ಮೂವರು ಕಾಂಗ್ರೆಸು ಮೆಂಬರನ್ನು ಸೇರಿಸುತ್ತ ಹೊರಟರು. ಎಂಟು ದಿವಸದಲ್ಲಿ ೫೦೦ ಮೆಂಬರರು ಮುಕ್ಕಿದರು. ಆದರೆ ಯಾರಾರ ಕಡೆಗೆ ಎಷ್ಟೆಷ್ಟು ಎನ್ನುವ ಹಾಗಿಲ್ಲ. ಅಂತು ಇಲೆಕ್ಷನಿಗಾಗಿ ನಾಗಯ್ಯ, ನರಸಿಂಹಯ್ಯ, ದ್ರೋಣಾಚಾರ್ಯರಾದ ಸೀತ್ಯೆತಾಳರು ಒಂದಾದರು. ಈ ತನಕ ನಾಗಯ್ಯ ಸೆಟ್ಟರಿಗೂ ಡಾಕ್ಟರರಿಗೂ ಇದ್ದ ಸ್ನೇಹ ಸಡಿಲಾಯಿತು. ಇತ್ತ ಡಾಕ್ಟರಿಗೆ ಚನ್ನಮಯ್ಯರ ವಂಗಡ ಬಿಡುವ ಇಷ್ಟವಾಗಲಿಲ್ಲ. ಅವರಲ್ಲಿ ಕಾಸಿರುವಷ್ಟರ ತನಕ ಜನರ ಬೆಂಬಲವೂ ಅವರಿಗೇನೆ ಎಂಬುದು ಡಾಕ್ಟರರ ತಿಳುವಳಿಕೆ.

ಅಂತು ಕಾಂಗ್ರೆಸು ಚುನಾವಣೆಯ ಸಭೆಯನ್ನು ಊರಿನ ಸಂತೆ ದಿವಸ ಕರೆದರು. ಆ ದಿವಸ ತಾಳಮದ್ದಲೆಗೆ ಬಂದುದರ ಇಮ್ಮಡಿ ಜನಕಲೆಯಿತ್ತು. ಡಾಕ್ಟರರನ್ನು ಸಭೆಗೆ ಅಧ್ಯಕ್ಷರನ್ನಾಗಿ ಮಾಡಿ ಚುನಾವಣೆ ಕೆಲಸ ಮುಂದರಿಸಲು ನಿರ್ಣಯವಾಯಿತು. ಈ ಸಭೆಯು ಜನ್ನಪ್ಯೆಗಳ ಅಂಗಳದಲ್ಲಿ ನೆರೆಯಿತು. ಆ ದಿವಸದ ಸಭೆಯಿಂದ ಪ್ಯೆಗಳ ವ್ಯಾಪಾರಕ್ಕೆ ಬಂದ ತೊಡಕು ಸ್ವಲ್ಪವಲ್ಲ. ಆದರೆ ಪ್ರಥಮ ಬಾರಿ ವೈಕುಂಠ ಕಮ್ತಿಯರ ದಾಕ್ಷಿಣ್ಯಕ್ಕೆ ಬಿದ್ದು ಮಾಡಿದ ಕೆಲಸ ಕೊನೆಗಾಣಿಸದೆ ಮಾರ್ಗವಿದೆಯೇ?

ಸಭೆ ತೊಡಗಿತು. ನಸ್ರಾಣಿ ಸುಬ್ಬಭಟ್ಟನು ಎದ್ದು ನಿಂತು ‘ನಾನು ಚನ್ನಮ್ಯೆಯ್ಯರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸುತ್ತೇನೆ' ಎಂದನು. ಜನ್ನಪ್ಯೆಗಳು ವ್ಯಾಪಾರದ ಗಡಿಬಿಡಿಯ ನಿಮಿತ್ತ ಸಭೆಯ ಹತ್ತಿರ ಸುಳಿಯಲಿಲ್ಲ. ಈ ಸೂಚನೆಯನ್ನು ಯಾರೋ ದೂರದಿಂದ ‘ನಾನು ಅನುಮೋದಿಸುತ್ತೇನೆ' ಎಂದರು. ಬೇರೆ ಇನ್ನೊಂದು ಹೆಸರು ಅಧ್ಯಕ್ಷಪದವಿಗೆ ಮುಂದೆ ಬರಲೇ ಇಲ್ಲ. ಡಾಕ್ಟರರಿಗೆ ಆಶ್ಚರ್ಯವಾಯಿತು. ನಾಗಯ್ಯ ಸೆಟ್ಟರು ಹಾಳೆಗಳಿಗೆ ಕಾಲಿರಿಸುವುದಿಲ್ಲ ಎಂಬ ಧೈರ್ಯವಾಯಿತು ಅವರಿಗೆ. ನಸ್ರಾಣಿ ಸುಬ್ಬಭಟ್ಟನನ್ನು ಯಾರೋ ಉಪಾಧ್ಯಕ್ಷ ಪದವಿಗೆ ಸೂಚಿಸಿದರು. ಅದೂ ಸ್ವೀಕೃತವಾಯಿತು. ಆ ಬಳಿಕ ಕಾರ್ಯದರ್ಶಿ ಯಾರೆಂದು ಯೋಚನೆ ಮಾಡುವಷ್ಟರಲ್ಲಿ ಎದ್ದು ನಿಂತು “ದೊಡ್ಡ ಬೈಲು ಮುದರನು ಕಾರ್ಯದರ್ಶಿಯಾಗಲಿ' ಎಂದರು, ಸಾಲದುದಕ್ಕೆ ‘ಮುದಾರ ಬಂದಿದೆಯಲ್ಲ' ಎಂದರು. ನರಸಿಂಹಯ್ಯ ‘ನಾನು ಅನುಮೋದಿಸುತ್ತೇನೆ' ಎಂದರು. ಮುದರನು ಸೆಟ್ಟರ ಹೇಳಿಕೆಯಂತೆ ಬಂದಿದ್ದ. ಬಂದಿದ್ದೀಯಲ್ಲ—ಎಂದು ಕೇಳಲು ಎದ್ದು ನಿಂತ—ಆದರೆ ಈ ಗದ್ದಲ ಏನೆಂದು ತಿಳಿಯುವಷ್ಟು ತಿಳುವಳಿಕೆ ಅವನಿಗೆ ಬರಲಿಲ್ಲ. ಮುದರನ ಹೆಸರು ಕೇಳಿ ಸಭೆ ನಕ್ಕಿತು. ಇನ್ನಾರೋ ಮುಂದೆ ಬಂದು ನಾನು ‘ಲಕ್ಷ್ಮಣ ಉಪಾಧ್ಯರು ಕಾರ್ಯದರ್ಶಿಯಾಗಲಿ' ಎಂದು ಸೂಚಿಸಿದರು. ಅವರ ಹೆಸರು ಹೆಚ್ಚಿನವರಿಗೆ ತಿಳಿಯದಾದರೂ ಈ ತೊಡಕು ತಪ್ಪಲಿ ಎಂದು ಯಾರೋ ಸೂಚನೆ ಮಾಡಿದರು. ಆವರೆ ಸಭೆಯಲ್ಲಿ ಗದ್ದಲ ಪ್ರಾರಂಭವಾಯಿತು. ಓಟು ತೆಗೆಯಬೇಕಾಯಿತು. ವೋಟು ತೆಗೆದರೆ ಮುದರನಿಗೆ ೪೯ ಓಟು, ಉಪಾಧ್ಯರಿಗೆ ೧೩, ಉಳಿದವರು ‘ನಮಗೆ ಹಂಟೆ ಬೇಡ' ಎಂದು ಸುಮ್ಮನಾದರು.

ಅಂದಿನ ಸಭೆಯು ಮುಕ್ತಾಯವಾಯಿತು. ಸಭೆಯು ಕೋಲಾಹಲ ಹೆಚ್ಚು ಕಮಿಟಿ ಮೆಂಬರ ಆಯ್ಕೆ ನಿಂತಿತು. ಎಲ್ಲರೂ ‘ಮುದರನ ಕಾಂಗ್ರೆಸ್ಸು' ಎಂದು ನಗುತ್ತ ನಡೆದರು. ಮುದರನಿಗೆ ಒಂದೂ ತಿಳಿಯದು. ನಾಗಯ್ಯ ಸೆಟ್ಟರು ಬಾ ಎಂದಿದ್ದರು. ಸ್ವಳೆಕೊಟ್ಟ ನರಸಿಂಹಯ್ಯನವರು ನೀನು ಅಲ್ಲಿರಬೇಕು—ಎಂದಿದ್ದರು. ಹಾಗೆ ಬಂದು ಇದ್ದ ತಪ್ಪಿಗೆ ಅವನ ತಲೆಗೆ ಕಾಂಗ್ರೆಸ್ಸು ಸುತ್ತಿತು. ಪನ್ನಿವ ವ್ಯಾಪಾರ ಎಹಿಂಗನಾಗಿ ದೀಗಪಿದ್ದರ ಮುದರನಿಗೆ ಇಷ್ಟು ಕೊಬ್ಬು ಬಂದಿತೇ?' ಎಂದ ಮಾತಾಡಿದರೆ.

ಆದರೆ ಮಧರನ ಕಾರ್ಯದರ್ಶಿತ್ವಕ್ಕೆ ಒಂದು ತಾರವೂ ಬಾಳ್ವೆ ದೊರೆಯಲಿಲ್ಲ.

ಮುಂದಿನ ಸೋಮವಾರ ಊರಿನ ಸಂತೆ ತಿರುಗಿ—ಆ ಸಂತೆಗೆ ಗ್ರಹಚಾರವಶದಿಂದ ಒಬ್ಬ ಕಂಬಳಿ ವ್ಯಾಪಾರಿ ಬಂದಿದ್ದನು. ಆ ವ್ಯಾಪಾರಿ ಸಂಜೆ ಅಲ್ಲಿ ಇದ್ದನೆಂದು ಹೇಳುತ್ತಾರೆ. ಅಂತು ಬೆಳಿಗ್ಗೆ ಸಂತೆಯ ಛಾವಣಿಯೊಂದರಲ್ಲಿ ಅವನ ಹೆಣ ಮಲಗಿತ್ತು. ಅವನ ಕಿಸೆಯಲ್ಲಿದ್ದ ಕಾಸುಗಳೂ ಬರಿದು. ಅವನ ಹತ್ತಿರ ರೂ. ೩೦೦ ನಗದಿಯಿಂದ ಇತ್ತು ಎನ್ನುತ್ತಾರೆ ಕೆಲವರು. ೫೫೦-೧೦-೬ ಇತ್ತು ಎಂದು ಅವನ ಕರಣೀಕರೆಂಬಷ್ಟು ಖಾತ್ರಿಯಿಂದ ನುಡಿಯುವವರು ಕೆಲವರು. ಅಂತು—ಅವನೂ ಇಲ್ಲ, ಅವನಲ್ಲಿ ಇರಬಹುದಾಗಿದ್ದ ಹಣವೂ ಇಲ್ಲ—ಎಂಬುದು ಖಂಡಿತ. ಮಂಗಳವಾರ ಸಂಜೆ ಸಮಯಕ್ಕೆ ಪಟೇಲರಿಂದ ಸುದ್ದಿ ಮುಟ್ಟಿ ಪೋಲೀಸರು ತನಿಖೆಗೆ ಬಂದರು. ಸ್ಥಳ ತನಿಖೆ ನಡೆದು ಹೆಣ ಸಾಗಿಸಲ್ಪಟ್ಟಿತು. ಗುಮಾನಿಯ ಮೇಲೆ ಕಾಂಗ್ರೆಸ್ಸು ಮುದರನನ್ನು ಹಿಡಿದುಕೊಂಡು ಹೋದರು. ಅವನ ಮನೆಯಲ್ಲಿ ಕಾಸೊಂದೂ ಸಿಗಲಿಲ್ಲ; ಅವನ ಮನೆಯವರಿಗೆ ಗೋಳು ಮಾತ್ರ ದೊರೆಯಿತು.

‘ನಾಳೆ ಸಂಜೆಯೊಳಗೆ ಮುದರನನ್ನು ಜಾಮೀನಿನಿಂದ ಬಿಡಿಸಿ ತರುವುದಲ್ಲದೆ ಈ ಕೊಲೆ ಯಾರಿಂದಾಯಿತು ಎಂಬುದನ್ನು ಹೊರಡಿಸದಿದ್ದರೆ ನಾನು ಮೀಸೆ ಹೊತ್ತುದು ಸುಳ್ಳು' ಎಂದು ನಾಗಯ್ಯ ಸೆಟ್ಟರು ಪಣತೊಟ್ಟರು. ಕೆರೆಕಟ್ಟೆ ನರಸಿಂಹಯ್ಯ ಗುಟ್ಟಿನಲ್ಲಿ ‘ಇದು ಸಂಕಪ್ಪನ ಪಟಿವಾಟಿರಬೇಕು' ಎಂದು ಪ್ರಸಿದ್ಧ ಮಾಡತೊಡಗಿದನು.



ಕಾಲುಕುಂಟು ಮತ್ತು ವ್ರಣಗಳಿಗೆ
ಆಶ್ಚರ್ಯಕರವಾದ ಔಷಧಿ.
ಜ್ಯಾಂಬಕು ಒಂದೂ ಕಲೆಯನ್ನು
ಬಿಡುವುದಿಲ್ಲ.

ಬಾತುಕಿಕೆ, ಕಾಲುಕುಂಟು, ವ್ರಣ ಮೊದಲಾದ ಕೇವಲ ಸಣ್ಣ ಸಣ್ಣ ಗಾಯಗಳಿಂದ ಉಂಟಾಗಬಹುದು. ಇವುಗಳನ್ನು ಗುಣಪಡಿಸಲು ವಿಶೇಷ ಜ್ಯಾಂಬಕು ಪ್ರಸಿದ್ಧವಾದದ್ದು. ಜ್ಯಾಂಬಕ್‌ನಲ್ಲಿರುವ ಅಮೂಲ್ಯವಾದ ಗುಣಮೂಲಿಕೆಗಳ ಸತ್ವವು ಚರ್ಮ ನರನಾಡಿಗಳನ್ನು ಪ್ರವೇಶಿಸುತ್ತದೆ. ಇದರಿಂದಾಗಿ ನೋವು ನಿವಾರಣೆಯೂ ಬಾತುಕಿಕೆಯೂ ಕಡಿಮೆಯಾಗುತ್ತದೆ. ಜ್ಯಾಂಬಕ ವಿಷಕ್ರಿಮಿಗಳನ್ನು ನಾಶಪಡಿಸುತ್ತದೆ. ಚರ್ಮ ಬೆಳೆಯುವಂತೆ ಮಾಡುತ್ತದೆ. ಒಂದೂ ಕಲೆಯನ್ನುಳಿಯದಂತೆ ಗುಣಪಡಿಸುತ್ತದೆ.

ಎಲ್ಲಾ ಔಷಧಿ ವ್ಯಾಪಾರಿಗಳು
ಜ್ಯಾಂಬಕನ್ನು ರೂ 1-0-0 ಮತ್ತು 2-4-0ರಂತೆ ಮಾರುತ್ತಾರೆ.
ಯಾವಾಗಲೂ ಜ್ಯಾಂಬಕನ್ನೇ ಉಪಯೋಗಿಸಿರಿ

ಏಜಂಟ್ಸ್ — ಮೆಸರ್ಸ್ ದಾಧಾ ಮತ್ತು ಕಂಪೆನಿ,
ಪಾರ್ಕ ಟೌನ್, ಮದರಾಸು.

ZAM-BUK

ಪ್ರಾಣಿ ಕೊಬ್ಬುಗಳಿಂದ ವಿರಹಿತವಾದದ್ದು.

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ



ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ
ಸಿಗುವುದು

ತಯಾರಿಸುವವರ
ಆಯುರ್ವೇದಾಶ್ರಮ :
ಮದರಾಸು

ಸ್ಟಾಕಿಸ್ಟರ
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರೇ, ನಮ್ಮ “ಸಾರಥಿ ನಸ್ಯ”ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕುದಾಗಿ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧. ಸಾರಥಿ ನಸ್ಯ 1 ಪೌಂಡಿಗೆ ರೂ 3-೮-0 ಹಸಿರು ಮಾರ್ಕ ಸಾರಥಿ ನಸ್ಯ 1 ಪೌಂಡಿಗೆ ರೂ 3-0-0
(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ:—
ಎ. ಪಿ. ಸಾರಥಿ
ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು.

ಸರದಾರ ಭವನ Sirdar Bhavan

ಫೆಲಿಕ್ಸ್ ಪೈ ಬಜಾರ್—ಮಂಗಳೂರು.

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ.

Proprtier— H. R. Rao,
Bangalore Gulf Emporaim Madras

ಚೀನೀಯರು ೭೦ ನಗರಗಳನ್ನು ಪುನಃ ಜಪಾನಿಯರಿಂದ ಕಿತ್ತುಕೊಂಡರು

ಚಾಂಗ ಕೈ ಶೇಕರ ವೀರ ವಾಕ್ಯ

ದಕ್ಷಿಣದ ಚೀನದಲ್ಲಿ ಜಪಾನಿಯರು ಹತಾಶ ರಾಗಿದ್ದಾರೆ ಚೀನ ಮರ್ಕಟ ಸೇನೆಯವರು ೭೦ ನಗರಗಳನ್ನು ಪುನಃ ಜಪಾನಿಯರಿಂದ ಕಿತ್ತುಕೊಂಡು, ಕೆಂಟನ ನಗರವನ್ನು ಸುತ್ತುಹಾಕಿದ್ದಾರೆ ಜಪಾನಿಗೆ ಈ ತನಕ ಸಿಕ್ಕಿದ ಗೆಲುಗಳೆಂಬವು ಬರೀ ಹೆಸರು ಪೂರ್ತಿಗೆ ಎಂಬುದು ಸ್ಪಷ್ಟವಾಗುತ್ತದೆ

ಚೀನದಲ್ಲಿ ಜಪಾನು ಸ್ವಾಧೀನಮಾಡಿಕೊಂಡ ಪ್ರದೇಶಗಳಲ್ಲಿ ಕೂಡ ಜಪಾನಿಯರಿಗೆ ಚೀನಿಯರ ಬೆಂಬಲವಿರುವುದಿಲ್ಲ. ಅವರು ಮರ್ಕಟ ಸೇನೆಯವರಿಗೇ ತಮ್ಮ ಕೈಲಾದ ಸಹಾಯಮಾಡುತಿದ್ದಾರೆ ಈ ಪ್ರಾಂತ್ಯಗಳಲ್ಲಿ ಮರ್ಕಟ ಸೇನೆಯ ಸರಕಾರವೇ ನಡೆಯುತ್ತದೆ. ಜಪಾನಿಯರ ಅತ್ಯಾಚಾರದಿಂದ ಕೃಷಿಕ ಮಜೂರರೂ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿರುವರು ಆದ್ದರಿಂದ ಮರ್ಕಟ ಸೈನಿಕರ ಸಂಖ್ಯೆಯು ತಾನಾಗಿ ಬೆಳೆಯುತ್ತಲಿದೆ.

ಚೀನದಲ್ಲಿ ಉಂಟಾದ ಜಾಗೃತಿ ಮತ್ತು ಮರ್ಕಟ ಸೇನೆಯ ಯುದ್ಧೋತ್ಸಾಹ ಸಾಹಸ ಬಲಗಳಿಂದ, ಜಪಾನಿಯರು ಚೀನದಲ್ಲಿ ವಿಜಯಿಗಳಾಗುವುದು ತೀರ ಅಸಂಭವವಾಗಿದೆ ಮೂರು ತಿಂಗಳೊಳಗಾಗಿ ಚೀನವನ್ನು 'ಶರಣು ಶರಣು' ಎನ್ನಿಸುವೆವೆಂದು ಪೌರುಷ ತೊಟ್ಟು ಜಪಾನಿಯರು ಬಂದಿದ್ದರಾದರೂ—ಈಗ ಯುದ್ಧ ಪ್ರಾರಂಭವಾಗಿ ಎರಡು ವರ್ಷಗಳಾಗಿವೆ—ಆದರೂ ಅವರಿಗೆ ಯುದ್ಧದ ಕೊನೆ ಸಿಕ್ಕುವುದಿಲ್ಲ ಜಪಾನಿಯರು ಹೀಗಾಗಿ ಮರೆಯದಿದ್ದರೆ ಯುದ್ಧವು ಇನ್ನು ೧೦–೧೫ ವರ್ಷಗಳ ತನಕ ನಡೆಯಲೂ ಬಹುದು ನೂರಾರು ವರ್ಷಗಳು ಕಳೆದರೂ ಈ ಯುದ್ಧದಿಂದ ಜಪಾನಿಯರಿಗೆ ಪರಿಣಾಮವು ಇಲ್ಲವೆಂದು ಅನೇಕ ಮಂದಿ ಹೇಳುತ್ತಾರೆ

ಹೀಗೆ ಜಪಾನಿಯರ ಭವಿಷ್ಯವು ಕಗ್ಗತ್ತಲೆಯಿಂದ ತುಂಬಿದೆ ಅವರಿಗೆ ಈ ಯುದ್ಧ ಸಂಬಂಧ ಪ್ರತಿನಿತ್ಯ ಒಂದು ಮಿಲಿಯ ಪವನು ಖರ್ಚುಮಾಡಬೇಕಾಗಿದೆ ಈ ಎರಡು ವರ್ಷಗಳಲ್ಲಿ ಜಪಾನಿನ ೫ ಲಕ್ಷ ಸೈನಿಕರು ಯುದ್ಧದಲ್ಲಿ ಹತರಾಗಿರುವರು ಈಗ ಅವರು ಈ ಅನ್ಯಾಯ ಆಕ್ರಮಣದ ಪಾಪ ಫಲವನ್ನು ಅನುಭವಿಸ ತೊಡಗಿದ್ದಾರೆ ಯುದ್ಧ ಇನ್ನು ಒಂದೆರಡು ನಡೆದರೂ ಸಾಕು, ಜಪಾನಿಯರ ಪತನವು ಖಂಡಿತ

ಚಾಂಗಕೈ ಶೇಕರ ವೀರ ವಾಕ್ಯ

ಚೀನಿಯರಿಗೆ ಸಂಪೂರ್ಣ ಸ್ವಾತಂತ್ರ್ಯವು ಪ್ರಾಪ್ತವಾದ ಹೊರತು ತನಗೆ ಸಮಾಧಾನವಿರುವುದಿಲ್ಲವೆಂದು ಚೀನೀ ಪ್ರಧಾನಿ ಮಾರ್ಷಲ ಚಾಂಗ ಕೈ ಶೇಕರು ವೀರ ವಾಕ್ಯಗಳನ್ನಾಡಿದ್ದಾರೆ ಯುದ್ಧವು ಎಷ್ಟು ದೀರ್ಘಕಾಲ ನಡೆಯುವುದೋ, ಅಷ್ಟಕ್ಕೆ ಅದರ ಶಕ್ತಿ ಬಲಗಳು ಕುಂದುವುವು ಅಂತರ ರಾಷ್ಟ್ರೀಯ ರಾಜಕಾರಣಗಳಲ್ಲಿ ಜಪಾನಿನ ಮಹತ್ವ ಕಡಿಮೆಯಾಗುವುದು ಇದೇ ಉದ್ದೇಶದಿಂದ ನಾವು ಜಪಾನಿಯರನ್ನು ಪ್ರತಿಭಟಿಸಿದ್ದೇವೆ ಎಂದು ಅವರು ಹೇಳಿರುವರು

ಚೀನಕ್ಕೆ ರಷ್ಯನರ ಸಹಾಯ

ದಕ್ಷಿಣ ಶಾನ್ಸಿಯಲ್ಲಿ ಚೀನಕ್ಕೆ ರಷ್ಯನರು ಸಹಾಯಮಾಡುತಿದ್ದಾರೆಂದು ಜಪಾನು ರಷ್ಯದ ಮೇಲೆ ಅಪವಾದ ಹೊರಿಸಿದೆ ಆದರೆ ಯಾರೂ ಇಂಥ ಮಾತುಗಳ ಕಡೆಗೆ ಪ್ರಾಮುಖ್ಯತೆಯನ್ನು ಕೊಡುತ್ತಿರುವುದಿಲ್ಲ.

ನಾನ್‌ಕಿಂಗಿನಲ್ಲಿ ಚೀನಿ ಯುದ್ಧ

ನಾನ್‌ಕಿಂಗ ಚನಕಿಯಾಂಗ ಕ್ಷೇತ್ರದಲ್ಲಿ ಜಪಾನಿಯರನ್ನು ಹೊಡೆದೋಡಿಸುವ ಪ್ರಯತ್ನಗಳು ಇದೇ ೨೩ರಿಂದ ಆರಂಭವಾಗಿವೆ ಕೀಂಗದಲ್ಲಿ ಚೀನರು ಅನಿರೀಕ್ಷಿತ ಮತ್ತು ಅಕಸ್ಮಾತಾಗಿ ಬಂದು ಮೈ ಮೇಲೆ ಬಿದ್ದುದನ್ನು ಕಂಡು ಜಪಾನಿಯರಿಗೆ ಪರಮಾಶ್ಚರ್ಯವಾಗಿದೆ. ನಾನ್‌ಕಿಂಗ ನಗರವನ್ನು ಚೀನಿಯರು ಮೂರು ಕಡೆಯಿಂದ ಸುತ್ತು ಬಳಸಿ ಬಂದಿರುವರು ನಿರ್ಗತಿಕರಾದ ೧೧ರಿಂದ ೧೬ ವರ್ಷದೊಳಗಿನ ಎರಡು ಲಕ್ಷ ಚೀನೀ ಮಕ್ಕಳು ಉತ್ತರ ಚೀನದಲ್ಲಿ ಜಪಾನಿಯರೊಂದಿಗೆ ಹೋರಾಡುತ್ತಿರುವ ಮರ್ಕಟ ಸೇನೆಗೆ ಸೇರಿದ್ದಾರೆ ಈ ಮಕ್ಕಳು ಪ್ರತ್ಯಕ್ಷ ಹೋರಾಟದಲ್ಲಿ ಭಾಗ ತೆಗೆದುಕೊಳ್ಳಲಾರದಾದರೂ ಯುದ್ಧಕ್ಕೆ ಪ್ರಬಂಧಿಸಿದ ಚಿಲ್ಲರೆ ಕೆಲಸಗಳನ್ನು ಅವರು ಮಾಡುವರು

[೬ನೆ ಪುಟದಿಂದ ಮುಂದುವರಿದುದು]

ತಿರುವಾಂಕೂರು

ಲಾರ್ಡ ವಿಲ್ಲಿಂಗ್ಡನ್ನರ ಪಟ್ಟ ಶಿಷ್ಯರೆಂದು ನಾಮಾಂಕಿತರಾದ ತಿರುವಾಂಕೂರು ದಿವಾನರು ವಿಭಾಗಿಸಿ ಆಳುವ ನೀತಿಯನ್ನು ಅನುಸರಿಸಿರುವರು ತಿರುವಾಂಕೂರು ಕಾಂಗ್ರೆಸ ಮುಂದಿಟ್ಟ ಜವಾಬುದಾರಿ ಸರಕಾರದ ಪ್ರಶ್ನೆಯನ್ನು ಅಲ್ಲಗಳೆದು, ಅದರ ಬದಲಿಗೆ ತಿರುವಾಂಕೂರು ಕಾಯದೆ ಕೌನ್ಸಿಲಿಗೆ ಚುನಾವಣಾಕ್ರಮದಲ್ಲಿ ತಿದ್ದುಪಡಿಗಳನ್ನು ಮಾಡಲಾರಂಭಿಸಿದ್ದಾರೆ ಇದರಿಂದ ಕೆಲವು ಜಾತಿಗಳು ಸರಕಾರ ಪಕ್ಷದಲ್ಲಿ ನಿಂತು ಅಲ್ಲಿ ಜಾತಿ ಸಂಬಂಧ ಕಲಹ ದ್ವೇಷಗಳು ಉಂಟಾಗಬಹುದೆಂಬ ಅಂಜಿಕೆಯುಂಟಾಗಿದೆ ಇಂಥ ಪ್ರತಿಕೂಲ ವಾತಾವರಣದಲ್ಲಿ ಜವಾಬುದಾರಿ ಸರಕಾರ ಸ್ಥಾಪನೆಯ ಪ್ರಶ್ನೆಯು ಹಿಂದಕ್ಕೆ ಬೀಳಬಹುದಾದ್ದರಿಂದ ಕಾಂಗ್ರೆಸು ಸರಕಾರದ ಈ ವರ್ತನವನ್ನು ಖಂಡಿಸಿದೆ ಕಾಂಗ್ರೆಸಿನ ಕಡೆಯಿಂದ ವಿಧಾಯಕ ಕಾರ್ಯಗಳು ನಡೆಯುತ್ತಾ ಇವೆ

ಮೈಸೂರು ಕಾಂಗ್ರೆಸಿಗೆ ಜವಾಹರಲಾಲರ ಪತ್ರ

ಮೈಸೂರು ಕಾಂಗ್ರೆಸಿನ ಸದಸ್ಯರಾಗುವವರು ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ಸದಸ್ಯರೂ ಆಗಿರಬೇಕೆಂಬ ನಿಯಮ ಪರಿವರ್ತನೆಯ ಕುರಿತು ಚಿತ್ತಲದುರ್ಗದ ಶ್ರೀ ಎಸ್ ವಾಸುದೇವರಾಯರು ಪಂಡಿತ ಜವಾಹರಲಾಲ ನೇಹರೂರವರ ಅಭಿಪ್ರಾಯವನ್ನು ಕೇಳಿರಲು—ಮೈಸೂರು ಕಾಂಗ್ರೆಸು ರಾಷ್ಟ್ರೀಯ ಮಹಾಸಭೆಯ ಸಂಬಂಧವನ್ನಿಟ್ಟುಕೊಂಡು ಕೆಲಸ ಮಾಡುವುದೇ ಹಿತಕರವೆಂದು ನನಗೆ ಕಾಣುತ್ತದೆ ಭವಿಷ್ಯವು ಹೇಗೆ ರೂಪಿಸಲ್ಪಡುವುದೆಂದು ನಾನು ಹೇಳಲಾರೆ ಆದರೂ ರಾಷ್ಟ್ರೀಯ ಮಹಾಸಭೆಯು ಭವಿಷ್ಯದಲ್ಲಿ ಸಂಸ್ಥಾನಗಳ ವಿಷಯಗಳಲ್ಲಿ ಹೆಚ್ಚುಚ್ಚು ಆಸಕ್ತಿಯನ್ನು ತೋರಿಸುವುದೆಂಬುದರಲ್ಲಿ ಸಂದೇಹವಿಲ್ಲ' ಎಂದು ಪತ್ರ ಬರೆದಿದ್ದಾರೆ

ಕಾಶ್ಮೀರ

ಕಾಶ್ಮೀರದ ಪ್ರಮುಖ ಕೆಲಸಗಾರರಾದ ಶ್ರೀ ಎಸ್. ಎಮ್ ಅಬ್ದುಲ್ಲರ ಅಧ್ಯಕ್ಷತೆಯಲ್ಲಿ ತಾ. ೨೭—೪—೩೯ರ ದಿನ ಕಾಶ್ಮೀರ ಮುಸಲ್ಮಾನರ ಒಂದು ಬೃಹತ್ಸಭೆಯು ಕೂಡಿ ಕಾಶ್ಮೀರ ಮುಸ್ಲಿಮ ಸಭೆಯಲ್ಲಿ ಎಲ್ಲಾ ಜಾತಿ ಮತ ಪಂಥಗಳ ಜನರು ಕೂಡಿ ಜವಾಬುದಾರ ಸರಕಾರಕ್ಕೋಸ್ಕರ ಚಳವಳಿಸುವುದಕ್ಕೋಸ್ಕರ, ಸಭೆಯು ಘಟನೆ ಮತ್ತು ನಿಯಮ ನಿರ್ಬಂಧನೆಗಳಲ್ಲಿ ಪರಿವರ್ತನೆಗಳಾಗಬೇಕೆಂದು ಸರ್ವಾನುಮತಿಯ ನಿರ್ಣಯವಾಯಿತು ಕಾಶ್ಮೀರ ಮಹಾರಾಜರು ಇತ್ತೀಚೆಗೆ ದಯಪಾಲಿಸಿದ ಕೆಲವು ಸುಧಾರಣೆಗಳಲ್ಲಿ ತನ್ನ ಅತೃಪ್ತಿಯನ್ನು ಸೂಚಿಸುವ ಮತ್ತು ಸರಕಾರದ ದಬ್ಬಾಳಿಕೆಯನ್ನು ಖಂಡಿಸುವ ನಿರ್ಣಯಗಳೂ ಈ ಸಭೆಯಲ್ಲಾದುವು.

ರಾಜಕೋಟೆ

ರಾಜಕೋಟೆಯ ದುರಂತ ವಿದ್ಯಮಾನಗಳಿಂದ ಬೇಸತ್ತ ಮಹಾತ್ಮರು—ನೀವು ನಿಮ್ಮ ಆಂದೋಲನವನ್ನು ಹೇಗೆ ಬೇಕಾದರೂ ಗತಿಕಾಣಿಸಿರಿ ಒಂದು ಅಲ್ಲಿಂದ ಹಿಂದೆ ಸರಿದಿರುವರಷ್ಟೆ ಈಗ ಪ್ರಕರಣವನ್ನು ಶಾಂತ ರೀತಿಯಿಂದ ಮುಗಿಸುವ ಹೊಣೆಗಾರಿಕೆ ಎಲ್ಲ ಗೊಂದಲಗಳಿಗೂ ಕಾರಣೀಭೂತರಾದ ವೀರವಲ್ಲರ ಮೇಲೆ ಬಂದು ಬಿದ್ದಿದೆ. ಆದ್ದರಿಂದ ಅವರೀಗ ಒಂದು ಹೊಸ ಯೋಜನೆಯನ್ನು ಮುಂದಿಟ್ಟಿದ್ದಾರೆ ಅದರ ಪ್ರಕಾರ ಆರೋಗ್ಯ ಶೌಚ, ಮತ್ತು ಲೋಕಲ್ ಬೋರ್ಡ ಇಲಾಖೆಗಳ ಜವಾಬುದಾರಿಯನ್ನು ಪ್ರಜೆಗಳಿಗೆ ಕೊಡಲಾಗುವುದು ಉಳಿದ ಇಲಾಖೆಗಳು ಠಾಕೋರ ಅಧೀನದಲ್ಲಿ ಇರುವವು ಆದರೆ ಸಂಪೂರ್ಣ ಜವಾಬುದಾರಿ ಸರಕಾರದ ಕುರಿತು ಈ ಯೋಜನೆಯಲ್ಲಿ ಪ್ರಸ್ತಾಪವಿರುವುದಿಲ್ಲ ಆದ್ದರಿಂದ ಈ ಯೋಜನೆಯು ಪ್ರಜಾಪರಿಷತ್ತಿಗೆ ಒಪ್ಪಿಗೆಯಾಗಿಲ್ಲ ಅದು ಯೋಜನೆಯ ಕುರಿತು ಜನಮತವನ್ನು ಸಂಗ್ರಹಿಸುತ್ತಾ ಇದೆ ಮಹಾತ್ಮಾಜಿಯವರು ರಾಜಕೋಟೆಯನ್ನು ಬಿಟ್ಟು ಬಂದಿರುತ್ತಾರಾದರೂ, ಅಲ್ಲಿ ವಿಶೇಷ ಪ್ರಕಾರದ ರಾಜಕೀಯ ಚಟುವಟಿಕೆಗಳು ಕಂಡು ಬರುತ್ತಲಿದೆ

ಗಂಗಾಪುರದಲ್ಲಿ ಗೋಳಿಬಾರು

ಗಂಗಾಪುರ ಎಂಬ ಒರಿಸ್ಸಾ ಸಂಸ್ಥಾನವೊಂದರಲ್ಲಿ ಪೋಲೀಸರೂ ಮಿಲಿಟರಿಯವರೂ ತಾ ೨೮ ೪—೩೯ರ ದಿನ ಜನತೆಯ ಮೇಲೆ ಗುಂಡು ಹಾರಿಸಿದುದರಿಂದ ೨೦ ಜನರು ಸತ್ತರು ೪೦ ಜನರಿಗೆ ಕಠಿಣ ಗಾಯಗಳಾಗಿವೆ ಪೋಲೀಸರು ಸಂಸ್ಥಾನದ ಒಬ್ಬ ಕೆಲಸಗಾರನನ್ನು ಕೈದು ಮಾಡಿದುದರಿಂದ ಗಲಾಟೆಯಾಗಿ ಅವರು ಗುಂಡು ಹಾರಿಸಿದರೆಂದು ಹೇಳಲಾಗಿದೆ ಒರಿಸ್ಸಾ ಸಂಸ್ಥಾನ ಪರಿಷತ್ತಿನ ಗೌರವ ಕಾರ್ಯದರ್ಶಿ ಶ್ರೀ. ಸಾರಂಗಧರದಾಸರು ಕಳುಹಿಸಿದ ತಂತಿ ಮೇರೆಗೆ ಈ ಹತ್ಯಾಕಾಂಡದಲ್ಲಿ ಮೃತರಾದವರ ಸಂಖ್ಯೆ ೬೫ ಎಂದು ತಿಳಿದುಬರುತ್ತದೆ.

ರಾಜಕೋಟೆಯಲ್ಲಿ ಪುನಃ ಸತ್ಯಾಗ್ರಹ

ಮಹಾತ್ಮಾಜಿಯವರು ಕಲ್ಕತ್ತದ ತಮ್ಮ ಕಾರ್ಯಗಳನ್ನು ಮುಗಿಸಿ ಹಿಂದಿರುಗುವುದರೊಳಗಾಗಿ ರಾಜಕೋಟ ಠಾಕೋರರು ಏನಾದರೊಂದು ವ್ಯವಸ್ಥೆಯನ್ನು ಮಾಡದಿದ್ದರೆ ಮಹಾತ್ಮಾಜಿಯವರು ದೇಶವ್ಯಾಪಿ ಆಂದೋಲನವನ್ನು ಆರಂಭಿಸುವರೆಂದು ಸುದ್ದಿಯುಂಟಾಗಿದೆ, ಅದಲ್ಲವಾದರೆ ಸ್ವತಂತ್ರ ವಿವೇಕ ಬುದ್ಧಿಗಳಿಲ್ಲದೆ ವೀರವಲ್ಲರ ಕೈಗೊಂಬೆಯಾಗಿರುವ ಠಾಕೋರರನ್ನು ಸಾರ್ವಭೌಮ ಸರಕಾರವು ಪದಚ್ಯುತ ಮಾಡಿ, ಅವರ ದಿಸಂಬರ ೨೬ನೇ ತಾರೀಕಿನ ಪ್ರಕಟನೆ ಮೇರೆಗೆ ಸುಧಾರಣಾಕಾರ್ಯವನ್ನು ಮುಂದರಿಸುವಂತೆ ವ್ಯವಸ್ಥೆಗೊಳಿಸುವುದಾಗಿಯೂ ವಾರ್ತೆ ಇದೆ ಹೇಗಿದ್ದರೂ ಠಾಕೋರರು ವೀರವಲ್ಲರ ಮಾಯಾಜಾಲದಿಂದ ಸರಿದು ನಿಂತ ಹೊರತು ಅವರಿಗೆ ಕ್ಷೇಮವಿರುವುದಿಲ್ಲ

ಕರಾಚಿಗೆ ವಿಮಾನದಾಳಿಯಿಂದ ರಕ್ಷಣೆ

ಮುಂದೊಂದು ಯುದ್ಧ ಸಂಭವಿಸಿದ ಕಾಲಕ್ಕೆ ಕರಾಚಿಯು ವಿಮಾನದಾಳಿಯಿಂದ ಧ್ವಂಸವಾಗದ ಹಾಗೆ ಅಲ್ಲಿ ಎಲ್ಲ ರಕ್ಷಣೋಪಾಯಗಳು ಕೈಕೊಳ್ಳಲ್ಪಟ್ಟಿವೆ ಜನರಿಗೆ ಆತ್ಮರಕ್ಷಣೆಯ ಶಿಕ್ಷಣವನ್ನು ಕೊಡಲಾಗಿದೆ ಸರಕಾರಿ ಕಚೇರಿ ಮುನ್ಸಿಪಲ್ ಆಫೀಸು ವಿಮಾನ ನಿಲ್ದಾಣ ಮೊದಲಾದುವುಗಳನ್ನು ಕಾಪಾಡುವ ಹೆಚ್ಚಿಗೆ ವ್ಯವಸ್ಥೆಗಳಾಗಿವೆ

PUBLIC NOTICE OF DISSOLUTION OF PARTNERSHIPS UNDER SECTION 72 OF THE INDIAN PARTNERSHIP ACT 1932

Public notice is hereby given that the firm of Machado & Co, registered as No 517 of 1934 and the firm of Lawrence J D'Sa & Sons, registered as No 173 of 1938 (both being partnerships at will and in both of which the only partners were Lawrence J D'Sa and Mr J B Machado)—have been dissolved by consent on 31 12 38 in pursuance of a written notice of dissolution of both the firms under Section 43 of the Indian Partnership Act sent by Mr Lawrence J D Sa to his partner the said Mr J B Machado

Mangalore 28 4 39

Lawrence J D'Sa
Lately Partner in the now dissolved firms of Lawrence J D Sa & Sons and Machado & Co

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Seson Deposits are accepted at 3½ % per annum.

Furtherparticulars on application to any of our thirty-five offices.

ಶಾಲಿವಾಹನ ಶಕ೧೮೬೧ನೆಯ ಪ್ರಮಾಥಿ ಸಂವತ್ಸರದ ವೈಶಾಖ ಬ ೩ ಶನಿವಾರದಿಂದ ವೈಶಾಖ ಬ ೮ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ಮೇ ವಗ್ಗ)

6	ಶನಿ	೧೫	೩೯॥	ಜ್ಯೇಷ್ಠಾ	೪೭।	೨೩
7	ರವಿ	೧೬	೪೩।	ಮೂಲಾ	೫೧॥	೨೪
8	ಸೋಮ	೧೭	೪೫॥	ಪೂ. ಷಾಢ	೪೫॥	೨೫
9	ಕುಜ	೧೮	೫೦।	ಉ. ಷಾಢ	೬೦	೨೬
10	ಬುಧ	೧೯	೫೫।	ಉ. ಷಾಢ	೨॥	೨೭
11	ಗುರು	೨೦	೬೦	ಶ್ರವಣಾ	೯	೨೮
12	ಶುಕ್ರ	೨೧	।	ಧನಿಷ್ಠಾ	೧೨॥	೨೯

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—**K R. GURU**, *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ... ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ... [illegible]

ಪತ್ರಾಸ ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, (S. M. C.)

ಬರೇ ರೂ 1–4–0ಕ್ಕೆ 8 ಗಡಿಯಾರಗಳು ಮತ್ತು 1295 ಫ್ರೀ ಬಹುಮಾನಗಳು

ಒಂದೇ ಬಾರಿಗೆ ರೂ 1–4–0ಕ್ಕೆ ... [illegible]

The American Commercial Stores Post Box No 12213 Calcutta (S. A.)

THE

Bank of Mangalore Ltd.,

MANGALORE

ESTD 193

Branches

Panemangalore, Mudabidri & Padubidri.

Fixed Deposits will be received at the following rates of interest

For 3 months	3½%
6	4%
12	5%
4 & upward	5½%

Interest Payable Quarterly

Savings Bank deposit** 3½% **on daily balances.

All kinds of banking business transacted

THE

Canara Banking Corporation Udipi, Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a

in denominations of

RS. 50/-, 100/-, 500/-, 1,000/-, & 5,000

are now issued at all our Branches

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ ಶರೀರದ ... [illegible] ಸಂಭೋಗ ಶಕ್ತಿಯ ... ಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನು ... ಮಾಡುವ 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿಗೆ ರೂ 1–4–0 (ವಿ ಪಿ ಚಾರ್ಜು ಪ್ರತ್ಯೇಕ)

ಕಿ. ಸಿ. ಎ. ಆರ್ ಕೋ,

... ಪೇಟೆ, ಪೆಂಡೂರು

(P. O. Pendur)

HOUNSA

ಹಂಸಾಸ್ನೋ

ಮತ್ತು

ಬ್ರಿಲ್ಲಿಂಟೈನ್

ಉಪಯೋಗಿಸಿರಿ.

ಕೆ ವೆಂಕಟೇಶ ಬಾಳಿಗ,

ಗೋಕರ್ಣ ... , ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

ಹಳೆಯ ... ಆರೋಗ್ಯವಾದ ಕೆಮ್ಮು ... ಕೈಕಾಲು ಸಣಕಲಾಗುವ ... ರೋಗಗಳನ್ನು ಗುಣ ಪಡಿಸಿ ಮಕ್ಕಳಿಗೆ ಪುಷ್ಟಿಯನ್ನು ... ಗನ್ನು ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ - ಅವ್ವಲ್ ತರದ ಗುಡ್ಡೆ ಮುಡಿಗೆ	1-11-0	—
,, ದುಯಂ ,, ,,	1—10—0	1—10—0
,, ಅವ್ವಲ್ ಸುಗಿ ,,	1—10—0	—
,, ದುಯಂ ,, ,,	1 9—0	
ಅಕ್ಕಿ ಅವ್ವಲ್ ಗುಡ್ಡೆ ,,	4—2—0	4—2—0
,, ದುಯಂ ,, ,,	3—14—0	3—14—0
,, ಅವ್ವಲ್ ಸುಗಿ	4—4—0	—
ದುಯಂ ,	3—8—0	3—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45 0—0
,, ಸಿಪ್ಪೆ ಇದ್ದದ	37—8—0	47—8—0
ಕೊಬ್ಬರಿ ಆಫೀಸು ಖಂಡಿಗೆ	45—0—0	—
,, ದಿಲ್‌ಪಸಂದು ,,	47—8—0	
ತೆಂಗಿನ ಎಣ್ಣೆ ಮಣಕ್ಕೆ	3—5—0	3—5—0
ಸಿಪ್ಪೆಯದ್ದ ಅಡಿಕೆ 1000ಕ್ಕೆ	3—4—0	3—12—0
ಗೇರುಬೀಜ ಮುಡಿಗೆ	3—12—0	3—12—0
ಕಬ್ಬಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	15—8—0	16—8—0

ಬರ್ಮಾ ದಂಗೆ-ಸರಕಾರದ ಕರ್ತವ್ಯ!

ಸಿಲೋನಿನಲ್ಲಿ ಹಿಂದೀಯರಿಗೆ ಬಹಿಷ್ಕಾರ

ಈಗ್ಗೆ ಕೆಲವು ತಿಂಗಳುಗಳ ಹಿಂದೆ ಬರ್ಮದಲ್ಲಿ ಭಯಂಕರ ಹಿಂದೀ ಬರ್ಮೀಯರ ದಂಗೆಯಾಗಿ ನೂರಾರು ಮಂದಿಯ ಪ್ರಾಣಹಾನಿಯಾಯಿತು, ಎಷ್ಟೋ ಮಂದಿ ಗಾಯಪಟ್ಟರು. ಲಕ್ಷಾಂತರ ರೂಪಾಯಿಗಳ ನಷ್ಟವಾಯಿತು. ಇಂಥ ದಂಗೆಯು ಬರ್ಮದಲ್ಲಿ ಇದೇ ಮೊದಲು ಆದುದಲ್ಲ. ಅದಕ್ಕೆ ಮೊದಲು ಎಷ್ಟೋ ಬಾರಿ ಆಗಿತ್ತು. ಆದ್ದರಿಂದ ಇಂಥ ದಂಗೆಗಳ ನಿವಾರಣೆಗೆ ಪರಿಣಾಮಕಾರಿಯಾದ ಉಪಾಯಗಳನ್ನು ಚಿಂತಿಸುವುದಕ್ಕೋಸ್ಕರ ಅಲ್ಲಿಯ ಸರಕಾರವು ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತ್ತು. ಅದರ ವರದಿಯು ಈಗ ಪ್ರಕಟವಾಗಿದೆ.

ದಂಗೆಯ ಕಾರಣಗಳು

ಪೋಲೀಸ ದಳದಲ್ಲಿದ್ದ ದೋಷಗಳು, ಅಧಿಕಾರಿ ವರ್ಗದ ಅಯೋಗ್ಯತೆ ಮತ್ತು ಪೋಂಗಿಗಳೆಂಬ ಬೌದ್ಧ ಭಿಕ್ಷುಗಳ ಉದ್ರೇಕ-ಇವೇ ಬರ್ಮದ ಜಾತಿ ದಂಗೆಗಳ ಕಾರಣಗಳೆಂದು ವಿಚಾರಣಾ ಸಮಿತಿಯ ವರದಿಯು ಹೇಳಿದೆ. ಇದೇ ಕಾರಣಗಳನ್ನು ದಂಗೆಯಾಗುವ ಕಾಲಕ್ಕೆ ಹಿಂದೀಯರು ಹೇಳಿ, ಸರಕಾರವು ಮುಂದೆ ದಂಗೆಗಳಾಗದಂತೆ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಅವರು ಪ್ರಾರ್ಥಿಸಿದ್ದರು. ಸರಕಾರವು ಈ ಕಾರಣಗಳನ್ನು ಒಪ್ಪಿ ಕಾರ್ಯ ಪ್ರವೃತ್ತರಾಗುವ ತನ್ನ ನಿರ್ಧಾರವನ್ನು ಪ್ರಕಟಿಸಿರುವುದು ಸಂತೋಷದ ವಿಷಯವಾಗಿದೆ.

ಪೋಲೀಸದಳದಲ್ಲಿದ್ದ ದೋಷಗಳನ್ನು ನಿವಾರಿಸಿ ಅವರಿಗೆ ಒಳ್ಳೆಯ ತರಬೇತಿಯನ್ನು ಕೊಡುವುದರಿಂದಲೂ, ಅಧಿಕಾರ ವರ್ಗದ ಅಯೋಗ್ಯತೆಯನ್ನು ತಿದ್ದುವುದರಿಂದಲೂ ಮುಂದೆ ದಂಗೆಗಳನ್ನು ಅಡಗಿಸುವುದು ಸುಲಭವಾಗಬಹುದು. ಆದರೆ ದಂಗೆಗಳೇ ಆಗದಂತೆ ಸರಕಾರವು ಕೆಲವು ಕಾರ್ಯಗಳನ್ನು ಮಾಡುವುದು ಅಗತ್ಯ. ಪೋಂಗಿಗಳೆಂಬ ಬೌದ್ಧ ಭಿಕ್ಷುಗಳನ್ನು ಸರಕಾರವು ಪವಿತ್ರ ದೃಷ್ಟಿಯಿಂದ ಕಾಣುವುದರಿಂದ ಅವರು ಮಹದಪರಾಧಗಳನ್ನು ಮಾಡಿದರೂ ಅವರಿಗೆ ಶಿಕ್ಷೆಯಾಗುವುದಿಲ್ಲ. ಅದರೂ ಸುಲಭ ಶಿಕ್ಷೆಯಾಗುತ್ತದೆ. ಆದ್ದರಿಂದ ಪೋಂಗಿಗಳು ದೊಡ್ಡ ದೊಡ್ಡ ಅಪರಾಧಗಳನ್ನು ಮಾಡಲಿಕ್ಕೂ ಹಿಂಜರಿಯುವುದಿಲ್ಲ. ಬರ್ಮದಲ್ಲಿ ಹಿಂದೀಯರ ವಿರುದ್ಧ ದಂಗೆಗಳಾಗಲಿಕ್ಕೆ ಈ ಪೋಂಗಿಗಳ ಅಪಪ್ರಚಾರವೂ ಉದ್ರೇಕವೂ ಕಾರಣವಾಗಿದೆ. ಅವರು ಯಾವ ಅಪರಾಧವನ್ನು ಮಾಡಿದರೂ ಇತರರಂತೆ ಅವರಿಗೂ ಕಾನೂನು ಪ್ರಕಾರ ಶಿಕ್ಷೆಯಾಗುತ್ತದೆ, ಸರಕಾರದ ಕಾಯಿದೆ ಕಾನೂನುಗಳಿಗೆ ಅವರು ಬಾಹಿರರಲ್ಲವೆಂದು ಸರಕಾರವು ಸಾರಿದರೆ, ದಂಗೆಯ ಬೀಜವನ್ನು ಆರಂಭದಲ್ಲೇ ಸುಟ್ಟು ಹಾಕಿದಂತಾಗುವುದು.

ದ್ವೇಷ ಮತ್ಸರಗಳ ಪರಿಣಾಮ

ಕೆಲವು ಹಿಂದೀಯರು ಬರ್ಮದಲ್ಲಿ ಹೋಗಿ ವ್ಯಾಪಾರ ಉದ್ಯೋಗ ಮಾಡಿಕೊಂಡಿದ್ದಾರೆ, ಹಲವರು ಕೂಲಿಗಳಾಗಿ ಗೇಯುತ್ತಾರೆ ಎಂಬುದರಿಂದ ಬರ್ಮೀಯರ ಹೊಟ್ಟೆಗೆ ಪೆಟ್ಟಾಗಿದೆ ಅಥವಾ ಅವರ ಆರ್ಥಿಕ ಸ್ಥಿತಿ ಕೆಟ್ಟಿತು ಎಂದು ಪೋಂಗಿಗಳು ಹೇಳುವ ಕಾರಣದಿಂದ ಬರ್ಮೀಯರು ಹಿಂದೀಯರನ್ನು ದ್ವೇಷಿಸುವದಾಗಲೀ ಅವರನ್ನು ಮತ್ಸರದಿಂದ ಕಾಣುವುದಾಗಲೀ ಸಲ್ಲದು. ಪೋಂಗಿಗಳು ಯಾವತ್ತೂ ವಿಚಾರಗಳನ್ನು ತಿಳಿದವರಲ್ಲ. ಬರ್ಮಕ್ಕೆ ಕೆಲವರು ಹಿಂದೀಯರು ಹೋಗಿ ನೆಲಸಿರುವುದರಿಂದ ಅವರಿಗೆ ಆಗಿರುವ ಲಾಭಕ್ಕಿಂತ, ಅವರ ದೆಸೆಯಿಂದ ಬರ್ಮೀಯರಿಗೆ ಆಗಿರುವ ಲಾಭಗಳೇ ಹೆಚ್ಚೆಂದು ಅನೇಕರು ಅಂಕೆಸಂಖ್ಯೆಗಳ ಆಧಾರಕೊಟ್ಟು ಸಿದ್ಧ ಮಾಡಿದ್ದಾರೆ. ಅಲ್ಲದೆ ಹಿಂದೀಯರಿಗೆ ಬರ್ಮೀಯರ ಮೇಲೆ ಸಹಾನುಭೂತಿಯಿದೆ. ವಿದೇಶೀಯರಿಗೂ ಬರ್ಮೀಯರಿಗೂ ಇರುವ ಸಂಬಂಧಕ್ಕಿಂತ ಭಾರತೀಯರಿಗೂ ಬರ್ಮೀಯರಿಗೂ ಇರುವ ಸಂಬಂಧ ನಿಕಟತರವಾದ್ದು. ಬರ್ಮೀಯರಿಗೆ ಭಾರತದಿಂದ ಆಗಿರುವ ಉಪಕಾರಗಳು ಬಹಳ. ಆದ್ದರಿಂದ ಬರ್ಮೀಯರು ಹಿಂದೀಯರನ್ನು ಬರ್ಮದಿಂದ ಹೊರಗಟ್ಟಲಿಕ್ಕೆ ದಂಗೆಯೇಳುವುದು ವಿಹಿತವಾದ ಮಾರ್ಗವಲ್ಲ. ಹಾಗೆ ಅವರು ಹಿಂದೀಯರ ಮೇಲಿನ ದ್ವೇಷದಿಂದ ದಂಗೆಯೆದ್ದು ಅವರನ್ನು ಕಷ್ಟನಷ್ಟಗಳಿಗೆ ಗುರಿಮಾಡುವುದರ ಮೂಲಕ ಸ್ವದೇಶಕ್ಕೆ ಮರಳುವಂತೆ ಮಾಡುವುದಾದರೆ, ಮುಂದಿನ ದುಷ್ಪರಿಣಾಮಗಳ ಹೊಣೆಗಾರರು ಬರ್ಮೀಯರೇ ಆಗುವರು. ವಿದೇಶಿಯರ ಸೂತ್ರದ ಗೊಂಬೆಗಳಾಗಿ ಇರಬೇಕಾಗುವುದು. ಆದ್ದರಿಂದ ಬರ್ಮಿ ಜನತೆಯು ಈ ಎಲ್ಲಾ ಸಂಗತಿಗಳನ್ನು ಪರ್ಯಾಲೋಚಿಸಿ, ಅಲ್ಲಿ ನ್ಯಾಯವನ್ನೂ ಶಾಂತಿಯನ್ನೂ ಕಾಪಾಡುವುದಾಗಿ ತಿಳಿಯುತ್ತೇವೆ.

ಸಿಲೋನಿನಲ್ಲಿ ಹಿಂದೀಯರು

ಬರ್ಮದಲ್ಲಿಯಂತೆ ಸಿಲೋನಿನ ಜನರು ಅಲ್ಲಿಗೆ ಹೋದ ಹಿಂದೀಯರ ಮೇಲೆ ದಂಗೆ ಎದ್ದಿರುವುದಿಲ್ಲವಾದರೂ, ಅವರೂ ಬರ್ಮೀಯರಂತೆ ಹಿಂದೀಯರನ್ನು ದ್ವೇಷ, ಮತ್ಸರಗಳಿಂದ ಕಾಣತೊಡಗಿದ್ದಾರೆ. ಸಿಲೋನಿನಿಂದ ಹಿಂದೀಯರನ್ನು ಹೊರಗಟ್ಟುವ ಕುಹಕೋಪಾಯಗಳಿಗೆ ಸಿಲೋನಿನವರು ಶರಣುಹೋಗಿದ್ದಾರೆ. ಆದರೆ ಹಿಂದೀ ಬರ್ಮಿ ಸಂಬಂಧವನ್ನು ಕುರಿತು ಮೇಲೆ ಯಾವ ಮಾತುಗಳನ್ನು ಹೇಳಲಾಗಿದೆಯೋ ಅದೇ ಮಾತುಗಳನ್ನು ಹಿಂದೀ ಸಿಲೋನೀ ಸಂಬಂಧವನ್ನು ಕುರಿತೂ ಹೇಳಬಹುದು. ಸಿಲೋನಿನಲ್ಲಿ ಹಿಂದೀಯರಿಗೆ ಬಹಿಷ್ಕಾರ ಹಾಕುವುದರಿಂದ ಪರಿಣಾಮದಲ್ಲಿ ಸಿಲೋನಿನವರಿಗೇ ನಷ್ಟ ಹೆಚ್ಚು. ಆದ್ದರಿಂದ ಅವರು ಈ ಆತ್ಮಘಾತುಕ ಪ್ರವೃತ್ತಿಗೆ ಬಲಿಯಾಗದೆ ಹಿಂದೀಯರೊಡನೆ ಸ್ನೇಹ ಮತ್ತು ಪ್ರೇಮ ಸಂಬಂಧವನ್ನು ಕಟ್ಟಿಕೊಳ್ಳುವರೆಂದು ಆಶಿಸುತ್ತೇವೆ.

ಭಾರತದ ಮುಕ್ತಿದ್ವಾರವು ಅಹಿಂಸೆಯಲ್ಲಿದೆ

ಬಾಬು ರಾಜೇಂದ್ರ ಪ್ರಸಾದರ ಸಂದೇಶ

ನಮಗೆ ನಮ್ಮದೆನ್ನುವ ನೌಕಾದಳವಾಗಲೀ ವಿಮಾನ ಪಡೆಯಾಗಲೀ ಇರುವುದಿಲ್ಲ! ಅವುಗಳನ್ನು ಏರ್ಪಡಿಸಿದಾಗ ರಚಿಸುವುದು ಸಾಧ್ಯವೂ ಅಲ್ಲ. ಅವಕ್ಕೆ ಹಲವು ವರ್ಷಗಳ ಅನುಭವವೂ ತರಬೇತಿಯೂ ಅಗತ್ಯ, ಅದಕ್ಕಿಂತ ಹೆಚ್ಚಿಗೆ ಅಪರಿಮಿತ ದ್ರವ್ಯಬೇಕು.

ಭಾರತೀಯ ನೌಕಾದಳ ಅಥವಾ ವಿಮಾನಪಡೆಯ ಕುರಿತು ನಾವು ಯೋಚಿಸಿದ್ದು ಕೂಡ ಇಲ್ಲ. ಭಾರತದಲ್ಲಿ ಬ್ರಿಟಿಷರ ನೀತಿಯು ಈಗಿರುವಂತೆ ಇರುವ ತನಕ ಅಂಥ ನೌಕಾದಳ ಅಥವಾ ವಿಮಾನಪಡೆಯನ್ನು ರಚಿಸಲಿಕ್ಕೆ ನಾವು ಸಮರ್ಥರಾಗಲಿಕ್ಕೂ ಇಲ್ಲ. ಹೀಗಿರುವಾಗ ನಾವು ಸಂಪೂರ್ಣ ಸ್ವಾತಂತ್ರ್ಯಕ್ಕೆ ಅರ್ಹರಾಗುವುದು ಹೇಗೆ? ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡರೂ ಅದನ್ನು ಉಳಿಸಿಕೊಳ್ಳುವುದು ಹೇಗೆ? ಹಿಂದುಸ್ಥಾನ ಟೈಮ್ಸ್ ಪತ್ರಿಕೆಯ ವಾರ್ಷಿಕ ಸಂಚಿಕೆಗೆ ಸಂದೇಶವನ್ನು ಕಳುಹಿಸಿ ಕೊಡುತ್ತ ಬಾಬು ರಾಜೇಂದ್ರ ಪ್ರಸಾದರು ಹೀಗೆನ್ನುತ್ತಾರೆ:

ಒಂದೇ ಉಪಾಯ

ಈ ಕಷ್ಟಗಳಿಂದ ಪಾರಾಗಲಿಕ್ಕೆ ನಮಗಿರುವ ಉಪಾಯವು ಒಂದೇ! ಸಂಪೂರ್ಣ ಸ್ವಾತಂತ್ರ್ಯವನ್ನು ಸಂಪಾದಿಸುವುದೂ, ಸಂಪಾದಿಸಿದ ಅನಂತರ ಅದನ್ನು ಉಳಿಸಿಕೊಳ್ಳುವುದೂ ಅಹಿಂಸೆಯಿಂದಲೇ ಸಾಧ್ಯ.

ಕೆಲವರೆನ್ನುತ್ತಾರೆ ಅದೆಂಥ ಅಹಿಂಸೆ? ಎಂದು. ಹೇಗೆ ತಾತ್ವಿಕ ದೃಷ್ಟಿಯಿಂದ ಕಾಣಬಹುದು ಸಂಪೂರ್ಣ ಸ್ವಾತಂತ್ರ್ಯದ ಉದ್ದೇಶಕ್ಕೂ ಅಹಿಂಸಾ ಮಾರ್ಗಕ್ಕೂ ಸಂಬಂಧವಿರುವುದಿಲ್ಲವೆಂದೂ ಅಹಿಂಸೆಗಾಗಿ ಸ್ವಾತಂತ್ರ್ಯವನ್ನು ಬಲಿಕೊಡಲಿಕ್ಕಾಗುವುದಿಲ್ಲವೆಂದೂ ಅವರು ಹೇಳಬಹುದು.

ಆದರೆ ಅಹಿಂಸೆಯಿಂದಲ್ಲದೆ ಬೇರೆ ಉಪಾಯದಿಂದ ಸ್ವಾತಂತ್ರ್ಯವನ್ನು ಸಂಪಾದಿಸುವ ಸ್ಥಿತಿಯಲ್ಲೇ ನಾವಿರುವುದಿಲ್ಲ. ಅಹಿಂಸೆಯು ನಮಗೆ ಪ್ರಸ್ತುತವಾದ ಅತಿ ಉತ್ಕೃಷ್ಟ ಅಸ್ತ್ರವಾಗಿರುವಂತೆ, ಅದು ನಮ್ಮ ಕೈಯಲ್ಲಿರುವ ಒಂದೇ ಒಂದು ಅಸ್ತ್ರವಾಗಿಯೂ ಇದೆ. ಅಹಿಂಸೆಯಿಂದಲ್ಲದೆ ನಮಗೆ ಬೇರೆ ನಿವೃತ್ತಿಯೇ ಇಲ್ಲ. ಆದ್ದರಿಂದ ಅಹಿಂಸೆಯನ್ನು ನಮ್ಮ ಉತ್ಕೃಷ್ಟ ಸಾಧನವೆಂಬುದಕ್ಕಾಗಿ ಮಾತ್ರವಲ್ಲ, ಅದು ನಮ್ಮ ಒಂದೇ ಒಂದು ಸಾಧನವೆಂಬುದಕ್ಕಾಗಿಯೂ ನಾವದನ್ನು ಸ್ವೀಕರಿಸಬೇಕಾಗಿದೆ.

ಅಹಿಂಸೆಯಲ್ಲಿ ವಿಶ್ವಾಸವಿಲ್ಲದಿದ್ದರೆ ಏನಾಯಿತು? ನಾವು ಬೇರೆ ಉಪಾಯ ಕಾಣದ ಅಸಹಾಯ ಸ್ಥಿತಿಯಲ್ಲಿದ್ದೇವೆ. ಆದ್ದರಿಂದಲೇ ನಾವು ಅಹಿಂಸೆಗೆ ಶರಣು ಹೋಗಬೇಕು. ನಮ್ಮ ಮುಕ್ತಿದ್ವಾರವು ಕೇವಲ ಅಹಿಂಸೆಯಲ್ಲಿದೆ.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಖಾತ್ರಿಕರವಾದುದು

ವಿಲಕ್ಷಣ ತಯಾರಿ: ಜಮ್ಮಿ ವೆಂಕಟ್ರಮಣಯ್ಯ
ವಿಶೇಷ ಮಾಹಿತಿಗೆ ಬರೆಯಿರಿ
ಲಿವರ್ ಮತ್ತು ಸ್ಪ್ಲೀನ್ ಸ್ಪೆಷಲಿಸ್ಟ್ಸ್,
ಮೈಲಾಪುರ, ಮದ್ರಾಸು

ಬಹಿಷ್ಠೆಯಾಗುವಾಗ ಉಂಟಾಗುವ ಯಾವತ್ತೂ ಬಾಧೆಗಳನ್ನು ಗುಣಪಡಿಸುತ್ತದೆ.
ಹೆಂಗಸರಿಗೆ ಬಲವನ್ನೂ ಆರೋಗ್ಯವನ್ನೂ ಉಂಟುಮಾಡುವ ಉತ್ತಮ ಟಾನಿಕ್.
ಪ್ರೊಪ್ರೈಟರ್ಸ್ ಮತ್ತು ತಯಾರಿಸುವವರು.
ಕೇಸರಿ ಕುಟೀರಂ, ೫೫ ೫೫ ೫೫ ಮದ್ರಾಸು
ಎಲ್ಲಾ ಕೆಮಿಸ್ಟರಲ್ಲಿಯೂ ಪೇಟೆಯಲ್ಲಿಯೂ ದೊರೆಯುವುದು
ಸ್ಟಾಕಿಸ್ಟರು: ಪೋರ್ಟ್ಸ್ ಸ್ಟೋರ್ಸ್, ರಥಬೀದಿ ಮಂಗಳೂರು

ಅಲಕ್ಷಿಸಲ್ಪಟ್ಟ ಹೊಟ್ಟೆನೋವುಗಳು ಪರಿಣಾಮ ಭಯಂಕರ ಶಸ್ತ್ರಚಿಕಿತ್ಸೆ

ಹೊಟ್ಟೆಸಂಕಟ ಪೀಡಿತರಾದವರನೇಕರು, ಹೊಟ್ಟೆನೋವುಗಳ ಅಲಕ್ಷ್ಯ, ಮಾಡಿ-ಊಟ ವಾದೊಡನೆ ಉಂಟಾಗುವ ನೋವುಗಳು, ಕೊನೆಗೆ ಸರ್ಜನರ ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಾಯಿತು. ಆ ನೋವುಗಳು ಬರೇ ಅಜೀರ್ಣ ಸಂಬಂಧವೆಂಬ ಭಾವನೆಯಿಂದ ಆತನು ಸಿಲ್ಕ್ ಮಾಡಿ-ಕೊನೆಗೆ ಕಠಿಣ ಪರಿಣಾಮಗಳನ್ನು ಅನುಭವಿಸುವವನಾಗುವನು.

ತಿಂದ ಮೇಲೆ ನಿಮ್ಮಲ್ಲಿ ಹೊಟ್ಟೆನೋವು ಉಂಟಾಗಲು ಕಾರಣವೇನು? ಆಹಾರವು ಜೀರ್ಣವಾಗದೆ ಹೊಟ್ಟೆಯಲ್ಲಿ ಕೊಳೆಯುತ್ತಿರುವುದೆಂದು ಅದರ ಅರ್ಥ-ಹೀಗೆ ಕೊಳೆಯುತ್ತಿರುವಾಗ ಉಂಟಾದ ದ್ರಾವಕಗಳು ನಿಮ್ಮ ಹೊಟ್ಟೆ ಪದರನ್ನು ಕೊರೆಯುತ್ತವೆ. ಹೀಗೆ ಕೊರೆಯುವಿಕೆಯು ಆಗುತ್ತಾ ಕೊನೆಗೆ ಅಲ್ಲಿ ವ್ರಣಗಳು ಉಂಟಾಗುವುವು. ನಿಮಗೆ ಗುಣವಾಗಬೇಕೆ? ಹಾಗಾದರೆ, ಆ ವ್ರಣಗಳ ಮೇಲೆ ಶಸ್ತ್ರಚಿಕಿತ್ಸೆಯು ನಡೆಯಲೇ ಬೇಕು.

ಹೊಟ್ಟೆಯೊಳಗೆ ವ್ರಣಗಳುಂಟಾಗುವಂತೆ ಆಸ್ಪದ ಕೊಡಬೇಡಿ. ತಿಂದೊಡನೆ ನಿಮ್ಮ ಹೊಟ್ಟೆಯೊಳಗೆ ನೋವು ಕಾಣಿಸಿಕೊಂಡರೆ, ಒಂದು ಡೋಸ್ ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರನ್ನು ಸೇವಿಸಿರಿ. ಹೊಟ್ಟೆಯೊಳಗಿರುವ ದ್ರಾವಕದ ಕೊರೆಯುವ ಗುಣವನ್ನು ಅದು ನಾಶಪಡಿಸುವುದು. ಹೊಟ್ಟೆಯೊಳಗೆ ಕೊಳೆಯುತ್ತಿರುವ ಆಹಾರವನ್ನು ಹೊರಗೆ ತಳ್ಳಿಬಿಡುವುದು. ತಿಂದ ನಂತರ ಹೊಟ್ಟೆನೋವನ್ನು ಅನುಭವಿಸಿದ್ದ ನೂರಾರು ಮಂದಿ ಸ್ತ್ರೀಪುರುಷರು ಈ ತರದಲ್ಲಿ ತಮ್ಮ ಕಷ್ಟ ನಿವಾರಣೆಯನ್ನು ಮಾಡಿರುವರು. ಇಂದೆ ಒಂದು ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರಿನ ಬಾಟ್ಲಿಯನ್ನು ಪಡೆಯಿರಿ.

Alex. C. Maclean

ಎಂಬ ಸಹಿಯು ಪೆಟ್ಟಿಗೆಯ ಮೇಲೂ, ಅದೇ ಸಹಿಯಿಂದ ಕೂಡಿದ ಕೆಂಪು ಮುದ್ರೆಯುಳ್ಳ ಬಾಟ್ಲಿಯಲ್ಲಿ ಬರುವ ಮೆಕ್ಲೀನ್ ಬ್ರಾಂಡ್ ಸ್ಟಮಕ್ ಪೌಡರನ್ನು ಪಡೆಯಿರಿ. ನಿಮಗೆ ಖಾತ್ರಿ ಮಾಲು ದೊರೆತಿರುವುದೆಂದು ಖಚಿತ ಮಾಡಿಕೊಳ್ಳಿರಿ. ಅದು ಬಿಲ್ಲೆರೀಯಾಗಿ ದೊರಾಕುವುದಿಲ್ಲ. ಪೌಡರು ಯಾ ಟ್ಯಾಬ್ಲೆಟ್ ರೂಪದಲ್ಲಿ ಸುಲಭ ಬೆಲೆ ಇವಿ ಟೀನ್ ಪ್ಯಾಕಿನಿಂದ ನಿಮಗೆ ಗ ಲಾಭ ದೊರಕದು. ಸಂಶಯವು ಇನ್ನೂ ಹೆಚ್ಚಾಗಬಹುದು. ಎಲ್ಲಾ ದವಾಖಾನೆಗಳಲ್ಲಿ ಮತ್ತು ಸ್ಟೋರ್ಸುಗಳಲ್ಲಿ ದೊರೆಯುತ್ತದೆ.

ಕೊಟ್ಟಿತ್ತಬೆಟ್ಟು ಕೂರವಾಡ ದೇವಸ್ಥಾನ, ನೀಲೇಶ್ವರ ಮತ್ತು ತಳೀಲ್ ನೀಲಕಾಂತ ಭಗವತಿ ದೇವಸ್ಥಾನ, ನೀಲೇಶ್ವರ.

1110 ಮತ್ತು 1111ರ ಎರಡು ಕೊಲ್ಲಂಗಳ ಜಮಾ ಖರ್ಚಿನ ವಿವರ

ವಿವರ.	1110 ನಗದಿ	1110 ಭತ್ತ	1111. ನಗದಿ	1111. ಭತ್ತ.
ಬಾಡಿಗೆ	401 2 0	1877 0 0	256 7 0	2050 8 0
ಭತ್ತ ಮಾರಾಟ	924 8 5	—	1168 4 4	—
ಕಾಣಿಕೆ . .	44 1 8	—	88 6 5	—
ಭದ್ರತೆಯ ಠೇವಣಾತಿ	150 0 0	—	—	—
ರಾಜರಿಂದ ಬಂದದ್ದು	778 12 8	—	957 7 10	—
	2298 8 9	1887 0 0	2420 10 1	2050 8 0

ವಿವರ	1110 ನಗದಿ	1110 ಭತ್ತ	1111 ನಗದಿ	1111 ಭತ್ತ
ಪೂಜಾ ಖರ್ಚು	786 14 11	898 0 0	787 9 6	882 0 0
ಸಂಬಳ	85 2 4	821 10 0	84 14 9	319 8 [illegible]
ತೆರಿಗೆ	1249 8 0	—	1866 14 10	—
ರಿಪೇರಿ ಮತ್ತು ಇತರ ಖರ್ಚು	5 2 6	12 6 0	0 8 0	4 8 [illegible]
ಭತ್ತ ಮಾರಾಟ	—	650 0 0	—	844 8 [illegible]
ರಾಜಾ ಹೈಸ್ಕೂಲಿಗೆ ವಂತಿಗೆ	221 13 0	—	230 11 0	—
	2298 8 9	1877 0 0	2420 10 1	2050

ಮಂಗಳೂರು,
ತಾ 8-12-38

ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

ಪಿ ಸೂ:-ಭತ್ತ ಪರಿಗೆ 0—8—0 ದರದಲ್ಲಿ ಬೆಲೆ ಹಿಡಿಯಲ್ಪಟ್ಟಿದೆ

ಬಿ. ಶಾಂತಾರಾಮ ರಾವ್,
ರಜಿಸ್ಟರ್ಡ್ ಎಕೌಂಟೆಂಟ್

ಕೊಟ್ಟಿತ್ತಬೆಟ್ಟು ಕೂರವಾಡ ದೇವಸ್ಥಾನ, ನೀಲೇಶ್ವರ ಮತ್ತು ತಳೀಲ್ ನೀಲಕಾಂತ ಭಗವತಿ ದೇವಸ್ಥಾನ, ನೀಲೇಶ್ವರ.

1110 ಮತ್ತು 1111ರ ಎರಡು ಕೊಲ್ಲಂಗಳ ಆಯವ್ಯಯದ ಪಟ್ಟಿ

ವಿವರ.	1110. ನಗದಿ.	1110. ಭತ್ತ	1111. ನಗದಿ	1111. ಭತ್ತ
ಬಾಡಿಗೆ	722 8 8	2426 8 0	722 8 8	2426 8 0
ಭತ್ತ ಮಾರಾಟ	924 8 5	—	1168 4 4	—
ಕಾಣಿಕೆ . .	44 1 8	—	88 6 5	—
ನಗದಿ ಹಣಕ್ಕೆ ಸರಿಪಡಿಸಿದ ಹೆಚ್ಚಿನ ಭತ್ತದ ಬೆಲೆ	549 8 0	—	376 0 0	—
ಆಯದ ಮೇಲಿನ ಹೆಚ್ಚಿನ ವ್ಯಯ	57 14 5	—	115 7 1	—
	2298 8 9	2426 8 0	2420 10 1	2426 8 0

ವಿವರ	1110 ನಗದಿ	1110 ಭತ್ತ.	1111 ನಗದಿ.	1111 ಭತ್ತ
ಪೂಜಾ ಖರ್ಚು	786 14 11	898 0 0	787 9 6	882 0 0
ಸಂಬಳ	85 2 4	821 10 0	84 14 9	319 8 0
ತೆರಿಗೆ	1249 8 0	—	2866 14 10	—
ರಿಪೇರಿ ಮತ್ತು ಇತರ ಖರ್ಚು	5 2 6	12 6 0	0 8 0	4 8 0
ಭತ್ತ ಮಾರಾಟ	—	650 0 0	—	844 8 0
ರಾಜಾ ಹೈಸ್ಕೂಲಿಗೆ ವಂತಿಗೆ	221 13 0	—	230 11 0	—
ನಗದಿ ಹಣಕ್ಕೆ ಸರಿಪಡಿಸಿದ ಹೆಚ್ಚಿನ ಭತ್ತದ ಬೆಲೆ	—	549 8 0	—	376 0 0
	2298 8 9	2426 8 0	2420 10 1	2426 8 0

ಮಂಗಳೂರು,
ತಾ 8—12—1938

ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

ಪಿ ಸೂ:-ಭತ್ತ ಪರಿಗೆ 0—8—0 ದರದಲ್ಲಿ ಬೆಲೆ ಹಿಡಿಯಲ್ಪಟ್ಟಿದೆ

ಬಿ ಶಾಂತಾರಾಮ ರಾವ
ರಜಿಸ್ಟರ್ಡ್ ಎಕೌಂಟೆಂಟ್.

ಕಿನ್ನಿಮಾಣಿ ಮತ್ತು ಸುಬ್ರಾಯ ದೇವಸ್ಥಾನ ಪುತ್ತಿಗೆ, ಕಾಸರಗೋಡು

1934ನೇ ಸಪ್ಟಂಬರ 1ನೇ ತಾರೀಕಿನಿಂದ 1937ನೇ ಆಗೋಸ್ತು 31ಕ್ಕೆ ಅಂತ್ಯವಾಗುವ 3 ವರ್ಷಗಳ ಆಯವ್ಯಯ.

ವಿವರ	1934-35	1935-36	1936-37
ಬಾಡಿಗೆಯಿಂದ ಆಯ.	787 0 0	922 10 0	651 15 6
ಕಾಣಿಕೆ	85 2 11	46 6 0	57 0 5
ತಸ್ತಿಕು	64 0 0	64 0 0	64 0 0
ಪೂಜೆ	55 14 9	61 8 8	69 2 7
ಇತರ ಆಯ	—	0 12 0	1 2 0
ಆಯಕ್ಕಿಂತಲೂ ಹೆಚ್ಚಿನ ವ್ಯಯ.	229 8 1	22 10 1	178 7 9
ಜುಮ್ಲಾ	1171 9 9	1117 14 9	1021 12 8

ವಿವರ	1934-35	1935-36	1936-37
ಸಂಬಳ	99 0 0	99 0 0	99 0 0
ಅಮೃತಪಡಿ	33 12 [illegible]	36 9 0	36 9 0
ಪೂಜಾ ಖರ್ಚು	79 13 6	91 3 5	101 13 6
ಉತ್ಸವ ಖರ್ಚು	291 4 8	297 7 10	282 13 [illegible]
ರಿಪೇರಿ ಇತ್ಯಾದಿ	45 7 7	114 4 6	120 5 0
ಎಂಡೋಮೆಂಟ್ ಬೋರ್ಡ ವಂತಿಗೆ	27 10 [illegible]	27 11 0	27 11 [illegible]
ತೆರಿಗೆ	160 6 0	162 1 0	148 14 0
ಕೋರ್ಟು ಖರ್ಚು	38 13 [illegible]	—	—
ಸಾಲಗಳ ಮೇಲಿನ ಬಡ್ಡಿ	393 7 [illegible]	289 11 0	204 13 0
ಜುಮ್ಲಾ	1171 [illegible]	1117 14 9	1021 12 8

ಮಂಗಳೂರು,
4-4-'38.

ಪರಿಶೋಧಿಸಲ್ಪಟ್ಟು, ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

ಬಿ ಶಾಂತಾರಾಮ ರಾವ್,
ರಜಿಸ್ಟರ್ಡ್ ಎಕೌಂಟೆಂಟ್

ಕಿನ್ನಿಮಾಣಿ ಮತ್ತು ಸುಬ್ರಾಯ ದೇವಸ್ಥಾನ ಪುತ್ತಿಗೆ, ಕಾಸರಗೋಡು

1934ನೇ ಸಪ್ಟಂಬರ 1ನೇ ತಾರೀಕಿನಿಂದ 1937 ಆಗೋಸ್ತು 31ನೇ ತಾರೀಕಿನ ವರೇಗಿನ ಜಮಾ ಖರ್ಚಿನ ವಿವರ

ವಿವರ	1934-35	1935-36	1936-37
ಪ್ರಾರಂಭದ ಶಿಲ್ಕು	149 4 10	221 2 11	220 5 10
ಬಾಡಿಗೆ	788 0 0	922 10 0	687 11 6
ಕಾಣಿಕೆ	85 2 11	46 6 0	57 0 5
ತಸ್ತಿಕು	64 0 0	64 0 0	64 0 0
ಪೂಜಾ ವಂತಿಗೆ	55 14 9	61 8 8	69 2 7
ವಸೂಲಾದ ಡಿಕ್ರಿ ಹಣ	406 2 2	—	—
ಇತರ ಆಯ	—	0 12 0	1 2 0
ಜುಮ್ಲಾ .	1583 8 8	1316 7 7	1049 6 4

ವಿವರ	1934-35	1935-36	1936-37
ಸಂಬಳ	99 0 0	99 0 0	99 0 0
ಅಮೃತಪಡಿ	38 12 0	36 9 0	36 9 0
ಪೂಜಾ ಖರ್ಚು	79 13 6	91 3 5	101 13 6
ಉತ್ಸವಗಳ ಖರ್ಚು	291 4 8	299 7 10	282 13 [illegible]
ರಿಪೇರಿ ಇತ್ಯಾದಿ	45 5 7	104 4 6	120 5 [illegible]
ತೆರಿಗೆ	160 6 0	162 1 0	148 14 [illegible]
ಎಂಡೋಮೆಂಟು ಬೋರ್ಡಿಗೆ ವಂತಿಗೆ	18 13 0	18 13 0	41 7 [illegible]
ಕೋರ್ಟು ಖರ್ಚು	88 13 0	—	—
ಸಾಲಗಳ ಮೇಲಣ ಬಡ್ಡಿ	600 2 0	289 11 0	—
ಅಂತ್ಯದ ಶಿಲ್ಕು . .	221 2 11	221 5 10	207 8 1
ಜುಮ್ಲಾ	1583 8 8	1316 7 7	1049 6 4

ಮಂಗಳೂರು,
ತಾ. 4—4—38.

ಪರಿಶೋಧಿಸಲ್ಪಟ್ಟು ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ.

ಬಿ ಶಾಂತಾರಾಮ ರಾವ್.
ರಜಿಸ್ಟರ್ಡ್ ಎಕೌಂಟೆಂಟ್

ಕೊಳ್ಯೂರು ಶ್ರೀ ಶಂಕರನಾರಾಯಣ ದೇವಸ್ಥಾನ, ಕೊಳ್ಯೂರು ಗ್ರಾಮ.

ಕಾಸರಗೋಡು, ದಕ್ಷಿಣ ಕನ್ನಡ.

1937ನೇ ಜೂನ್ 30ನೇ ತಾರೀಕಿಗೆ ಅಂತ್ಯವಾಗುವ ಮೂರು ವರ್ಷಗಳವರೆಗಿನ ಆಯವ್ಯಯದ ಪಟ್ಟಿ.

ಆಯ

ವಿವರ	1934-35			1935-36			1936-37		
ಪ್ರಾರಂಭದ ಸಿಲ್ಕು	2	0	0	21	6	1	148	4	3
ತಸ್ತೀಕು	200	0	0	200	0	0	200	0	0
ಬಾಡಿಗೆ	1178	14	6	1150	4	5	1266	10	4
ಮಾರಾಟ	482	0	2	520	5	11	609	8	5
ಕಾಣಿಕೆ	360	14	3	250	5	2	317	14	6
ಅಮೃತ ಪಡಿ	16	14	3	14	4	5	31	11	5
ಪೂಜಾ	284	4	0	284	8	0	284	8	0
ವಸೂಲಾದ ಬಡ್ಡಿ	475	2	0	408	15	4	322	8	0
ವಸೂಲಾದ ಎಡ್ವಾನ್ಸ್	111	2	0	—			518	12	0
ವಸೂಲಾದ ಸಾಲ	276	0	0	585	0	0	1875	0	0
ಬೇಂಕಿನಿಂದ ಪಡೆದ ಹಣ	—			—			1995	0	0
ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಹಾಯ	—			114	9	9	295	10	6
ವಸೂಲಾದ ಡಿಕ್ರಿ ಹಣ	—			-			160	5	5
ವಸೂಲಾದ ಅಡವು ಹಣ	—			—			6000	0	0
ಇತರ ಆಯ	5	14	8	—			2	8	8
	3348	1	5	3494	11	1	13972	11	1

ವ್ಯಯ.

ವಿವರ.	1934-35			1935-36			1936-37		
ಸಂಬಳ ಮತ್ತು ಕೂಲಿ	472	4	11	445	7	0	476	8	6
ಒಡಿಟ್ ಫೀಸು	—			—			250	0	0
ಕ್ರಯಕ್ಕೆ ಪಡೆದದ್ದು	790	9	2	774	3	2	917	14	10
ಪ್ರಯಾಣ ಖರ್ಚು	40	9	0	27	12	0	61	7	8
ಪ್ರಿಂಟಿಂಗ್, ಸ್ಟೇಷನರಿ ಮತ್ತು ಅಂಚೆಖರ್ಚು	29	9	9	5	10	0	4	9	8
ಬಡ್ಡಿ	2	6	0	80	6	2	59	8	9
ತೆರಿಗೆ	887	7	6	814	0	8	875	1	0
ಕೋರ್ಟು ಖರ್ಚು	166	12	0	110	0	0	15	13	0
ರಿಪೇರಿ	290	0	0	48	4	0	22	10	0
ದಕ್ಷಿಣೆ	31	5	2	16	4	0	20	2	0
ಸಾಲವನ್ನು ಹಿಂದೆ ಕೊಟ್ಟದ್ದು	226	0	0	520	2	0	1520	13	4
ಸಾಲಗಾರರು	825	8	4	851	8	5	909	8	5
ಪ್ರೋ ನೋಟಿನ ಮೇಲೆ ಎಡ್ವಾನ್ಸ್							8000	0	0
ಬೇಂಕ್ ಡಿಪೊಸಿಟು	—			—			2000	0	0
ಕೈಕಡ	—			—			28	10	0
ಕಬ್ಬಿಣದ ಬೇಲಿ	100	0	0	—			—		
ಟ್ರಸ್ಟಿಗಳಿಗೆ ಕೊಟ್ಟದ್ದು	—			—			3125	9	8
ದೇವಸ್ಥಾನ ಜೀರ್ಣೋದ್ಧಾರ ಖರ್ಚು	—			198	2	10	1033	12	1
ಇತರ ಖರ್ಚು	9	3	6	15	0	0	29	0	0
ಅಂತ್ಯದ ಶಿಲ್ಕು	21	6	1	148	4	3	122	0	0
	3348	1	5	3494	11	1	13972	11	1

ಪರಿಶೋಧಿಸಲ್ಪಟ್ಟು ಸರಿಯೆಂದು ಕಂಡು ಹಿಡಿಯಲ್ಪಟ್ಟಿದೆ

ಮಂಗಳೂರು
28 ನವಂಬರ 1938

ಬಿ ಶಾಂತಾರಾಮ ರಾವ್,
ರಿಜಿಸ್ಟರ್ಡ್ ಎಕೌಂಟೆಂಟ್

ಕೊಳ್ಯೂರು ಶ್ರೀ ಶಂಕರನಾರಾಯಣ ದೇವಸ್ಥಾನ, ಕೊಳ್ಯೂರು ಗ್ರಾಮ ಕಾಸರಗೋಡು, (ದಕ್ಷಿಣ ಕನ್ನಡ)

1937ನೇ ಜೂನ್ 30ಕ್ಕೆ ಅಂತ್ಯವಾಗುವ ಮೂರು ವರ್ಷಗಳ ಆಯವ್ಯಯದ ವಿವರ

ಆಯ

ವಿವರ	1934-35			1935-36			1936-37		
ತಸ್ತೀಕು	200	0	0	200	0	0	200	0	0
ಬಾಡಿಗೆ	1175	4	0	1132	14	0	1176	0	0
ಮಾರಾಟ	477	4	8	520	5	11	587	14	5
ಕಾಣಿಕೆ	360	14	3	250	5	2	317	14	6
ಅಮೃತಪಡಿ	16	14	3	14	4	5	31	11	5
ಪೂಜೆಗಳು	284	4	0	284	8	0	284	8	0
ಬರತಕ್ಕ ಬಡ್ಡಿ	381	4	0	381	4	0	458	7	0
ವಸೂಲಾದ ಡಿಕ್ರಿ ಹಣ	—			—			160	5	5
ಇತರ ಆಯ	5	14	8				2	8	8
ಆಯಕ್ಕಿಂತಲೂ ಹೆಚ್ಚಾದ ವ್ಯಯ	298	8	0	49	5	2	188	0	10
ಜುಮ್ಲಾ	3150	3	5	2772	14	8	3296	5	10

ವ್ಯಯ

ವಿವರ	1934-35			1935-36			1936-37		
ಸಂಬಳ	459	12	8	468	1	6	462	0	6
ಆಡಿಟ್ ಫೀಸ	—			—			250	0	0
ಕ್ರಯಕ್ಕೆ ಕೊಂಡು ತೆಗೊಂಡದ್ದು	1720	9	10	1642	0	9	1966	10	1
ಪ್ರಯಾಣ ಖರ್ಚು	40	9	0	27	12	0	61	7	8
ಪ್ರಿಂಟಿಂಗ್ ಮತ್ತು ಸ್ಟೇಷನರಿ ಮತ್ತು ಟಪ್ಪಾಲು ಖರ್ಚು	29	9	9	5	10	0	4	9	8
ತೆತ್ತ ಬಡ್ಡಿ	64	14	0	92	14	2	122	0	9
ತೆರಿಗೆ	887	7	6	847	0	5	812	1	0
ಕೋರ್ಟು ಖರ್ಚು	166	12	0	110	0	0	15	13	0
ರಿಪೇರಿ	290	0	0	48	4	0	22	10	0
ದಕ್ಷಿಣೆ	31	5	2	16	4	0	20	2	0
ಇತರ ಖರ್ಚು	9	3	6	15	0	0	29	0	0
ಜುಮ್ಲಾ	3150	3	5	2772	14	8	3296	5	10

ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

ಮಂಗಳೂರು,
28 ನವಂಬರ 1938

ಬಿ ಶಾಂತರಾಮ ರಾವ್,
ರಿಜಿಸ್ಟರ್ಡ್ ಎಕೌಂಟೆಂಟ್

ಹಿಟ್ಲರನ ಭಾಷಣದ ಅನಂತರದ ಯೂರೋಪದ ಪರಿಸ್ಥಿತಿ.

ರೀಚ್‌ಸ್ಟಾಗಿನಲ್ಲಿ ಹಿಟ್ಲರನು ಕೊಟ್ಟ ಭಾಷಣ ಮತ್ತು ಇಂಗ್ಲಾಂಡ ಜರ್ಮನ, ಪೋಲೆಂಡ ಜರ್ಮನ ಒಪ್ಪಂದಗಳನ್ನು ಅವನು ತಿರಸ್ಕರಿಸಿರುವುದರ ಪರಿಣಾಮವನ್ನು ಯೂರೋಪಿನ ರಾಜಧಾನಿಗಳು ಚರ್ಚಿಸಲಾರಂಭಿಸಿರುವುವು ಹಿಟ್ಲರನ ಬೆದರಿಕೆಗೆ ಪೋಲೆಂಡು ಸೊಪ್ಪು ಹಾಕುವ ಹಾಗಿಲ್ಲ ಡಾಂಜಿಂಗ ಮತ್ತು ಒಣಿಯ ಅತಿಕ್ರಮಣಕ್ಕೆ ಪೋಲಾಂಡು ಎಷ್ಟು ಮಾತ್ರಕ್ಕೂ ಒಪ್ಪಲಾರದು

ರಾಂಡಿನ ತಮ್ಮ ಧೋರಣ ಹೇಗಿರಬೇಕೆಂಬುದನ್ನು ಚರ್ಚಿಸುವುದಕ್ಕೋಸ್ಕರ ಹಿಟ್ಲರನು ತನ್ನ ಮಿಲಿಟರಿ ಅಧಿಕಾರಿಗಳನ್ನು ರೋಮಿಗೆ ಕಳುಹಿಸಿಕೊಟ್ಟಿದ್ದಾನೆ ಈ ಮಿಲಿಟರಿ ಅಧಿಕಾರಿಗಳು ಮುಸಲೋನಿಯು ಉತ್ತರ ಆಫ್ರಿಕದ ವಸಾಹತ. ಲಿಬಿಯಕ್ಕೂ ಹೋಗಿ ಯುದ್ಧಕಾಲದ ಶಸ್ತ್ರನಿಗ್ರಹ ಮತ್ತು ಆತ್ಮರಕ್ಷಣೆಯ ವ್ಯವಸ್ಥೆಗಳನ್ನು ನೋಡಲಿದ್ದಾರೆ ಅತ್ತ ಮುಸಲೋನಿಯೂ ಪೋಲಾಂಡಿಗೆ ಬಂದು ಎಚ್ಚರಿಕೆಯ ಪತ್ರವನ್ನು ಕಳುಹಿಸಿ, ಇಟೆಲಿಗೂ ಪೋಲೆಂಡಿಗೂ ಆಗಿರುವ ಒಪ್ಪಂದವು ಹಿಟ್ಲರನ ಮತ್ತು ತನ್ನ ಸ್ನೇಹಕ್ಕೆ ಎಷ್ಟು ಮಾತ್ರಕ್ಕೂ ಆತಂಕವಾಗಬಾರದೆಂದಿದ್ದಾನೆ ಹಿಟ್ಲರ ಮುಸಲೋನಿಯರು ಈ ಮೊದಲಿಗಿಂತಲೂ ಬಿಗಿಯಾಗಿ ಸ್ನೇಹಬಂಧನಗಳಿಂದ ಬಿಗಿಯಲ್ಪಟ್ಟಿರುವರೆಂದ ಅವನು ಸಾರಿದ್ದಾನೆ

ಬ್ರಿಟನಿನ ಆತ್ಮರಕ್ಷಣೋಪಾಯಗಳು ಚೆನ್ನಾಗಿ ಕೈಕೊಳ್ಳಲ್ಪಟ್ಟಿವೆ ಆಹಾರ ಸಂಗ್ರಹ, ಸೇನಾಭರ್ತಿ ಇತ್ಯಾದಿ ಕಾರ್ಯಗಳು ಬಹಳ ಉತ್ಸಾಹದಿಂದ ನಡೆದಿವೆ ಯುದ್ಧಸಮಿತಿಯು ಸಭೆಸೇರಿ ನಿರ್ಬಂಧ ಸೈನಿಕ ಶಿಕ್ಷಣದ ಮಸೂದೆಯನ್ನು ತಯಾರಿಸಿದೆ ಈ ಸಂದರ್ಭದಲ್ಲಿ ಇಂಗ್ಲಾಂಡಿಗೂ ಐರ್ಲಾಂಡಿಗೂ ಮನಸ್ತಾಪ ವಿರಬಾರದೆಂಬ ಉದ್ದೇಶದಿಂದ, ನಿರ್ಬಂಧ ಸೈನಿಕ ಶಿಕ್ಷಣದ ಮಸೂದೆಯು ಉತ್ತರ ಐರ್ಲಾಂಡಿಗೆ ಲಗಾವಾಗುವುದಿಲ್ಲವೆಂಬ ಭರವಸೆಯನ್ನು ಕೊಟ್ಟು ಬ್ರಿಟಿಷ ಸರಕಾರವು ಡಿವೇಲೆರನ ಆಸೆಯನ್ನು ಮನ್ನಿಸಿದೆ

ದರ್ಭಾಂಗದಲ್ಲಿ ಭೂಕಂಪ.

ಕಳೆದ ತಾ ೨೯-೪-೩೯ರ ದಿನ ದರ್ಭಾಂಗದಲ್ಲಿ ೩೦ ಸೆಕೆಂಡುಗಳ ಕಾಲ ಭೂಕಂಪವಾಗಿ ಕೆಲವು ಕಟ್ಟಡಗಳಿಗೆ ಹಾನಿಯಾಯಿತು ವಸತಿಗಳಿಂದ ಹೊರಗೆ ಓಡಿಬರುವ ರಭಸದಲ್ಲಿ ಪರಸ್ಪರ ತಿಕ್ಕಾಟವಾಗಿ ಅನೇಕ ಮಂದಿ ಗಾಯಗೊಂಡರು. ಆದರೆ ಯಾರೂ ಸತ್ತಿರುವುದಿಲ್ಲವೆಂದು ತಿಳಿದುಬರುತ್ತದೆ

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST. PAULS CHURCH,
Bolkonje Post, S K
Dated 4 / Jan 1939

To
THE JOINT MANAGERS,
The C P C Co Ltd, Mangalore

I thank you most sincerely of the promptness with which you arranged to take us Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for [illegible] convenience to all the Catholics [illegible] to the Congress

The glorious success of our congress is also due to your exertion in putting up the [illegible] of which [illegible] were done voluntarily

May the blessings of the almighty fall on you all and may you be able to do much good to the Public

Renewing my thanks I remain
Yours Sincerely
(Sd) P W Farias

Sri Parshwanathaswami,
PANCHAKALYANA POOJA MAHOSTHAM
Venur S Kanara 1939

To
THE JOINT MANAGERS
The Combind Booking Agency, Mangalore

Dear Sirs

Please permit us to express our thanks on behalf of the above committee for the efficient service rendered by [illegible] Booking Agency Staff at Venur to the visitors of the Panchakalyana Pooja Mahosthaman celebration held this year

Our thanks are also due to Moodabidri Booking Clerk Mr B Krishnayya and also his other mates and Mr R [illegible] who had specially come down from Mangalore to see to the needs and comforts of the travelling Public. Thanking you [illegible] again

We remain Yours faithfully

Venur, Dated 6-3-39 } (Sd) B Chandappa Indra (*Secretary, P M Council*) (Sd) M Jagathpal, (Sd) M Pachappa Shetty (Sd) Anantharaj Shetty (*Members Panchakalyana Mahosthaman Committee*)

JOINT MANAGERS.

The Combined Booking Agency,
MANGALORE

The Joint Booking Office,
KODIALBAIL

CONSTRUCTIVE BANKING

An understanding of how a modern Bank can operate to make itself useful to the individual, to business and to the public has enabled the CANARA BANK to have thousands of depositors and to build resources exceeding a Crore

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER
A CRORE.

ESTD 1906
CANARA BANK.
LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಚುಚ್ಚುಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದ ಬೇನೆ, ವಕ್ರವಾತ, ಮೊದಲಾದ
ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ) ಮಂಗಳೂರಲ್ಲಿ [illegible] ಕಂಪೆನಿಯಲ್ಲಿ ದೊರೆಯುತ್ತದೆ

AMRUTANJAN DEPOTS BOMBAY MADRAS CALCUTTA

ಸ್ವಾಭಿಮಾನಿ

Established 1906 — Regd. No. M 340

ಸಂಪುಟ ೩೩] ತಾರೀಖು ೫-೫-೧೯೩೯ (5-5-1939) [ಸಂಚಿಕೆ ೧೮

THE

BOMBAY LIFE ASSURANCE COMPANY, LTD.,

(ESTD 1908.)

THE OFFICE

Which has proved its popularity by its progress

Record of New Bussiness

Proposed	Year	Completed
1,25,50,250	1934	1 04 88 750
1 50,48,915	1935	1 28 28 666
1 68,88 200	1936	1 81 01,500
1 72,579,75	1937	1 44,91 000
1 76 89 250	1938	1 44 91 000

1939- VALUATION YEAR

Please take up a Policy Now and participate in Bonus.

[illegible]

— Apply to . — **KOCHIKAR BROTHERS, LIIMTED,**

Madras Branch Secretaries

The Bombay Life Assurance Co., Ltd.,

The Bombay Life Building Gandhinagar UDIPI

or any of our following offices:

Post Box No 337
Mount Road,
Madras

Visweshwarapuram Circle
Bangalore City

Charni Road
Girgaum
BOMBAY 4

Car Street,
Mangalore

Puthiyara,
Calicut

Central Station Road,
Trivandrum

Ottapalam,
S Malabar

MAKE LIFE WORTH-LIVING!

Indigestion Insomnia - Dry Cough -
Nervousness Weak Heart &c
these make you wiery of Life

CONSULT US AND BUY
YOUR LIFE'S HAPPINESS!

Oils - that cool the brain and induce sleep
Lehas - that build-up your wasted system
Asavas - that regenerate your jaded nerves

All Genuine Ayurvedic Preparations-
-from this huge Ayurvedic Concern of a Century Standing -

Bhuvanendra Products, Ltd.,
Katapady, S, Kanara.

(BRANCH - KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆಕೊಡುವ - ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ ಲೇಹಗಳು
ನಿಶ್ಶಕ್ತಿತ ನರಗಳಲ್ಲಿ ಹೊಸ ಚೈತ್ರವನ್ನು ಹರಿಸುವ - ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, - ದ ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

Edited, Printed & Published by A. S Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 12—5 1939

ತಾರೀಖು ೧೨ ೫—೧೯೩೯



ಬಿಜಾಪುರದಲ್ಲಿ ಹೆಸರಾದ 'ಇಬ್ರಾಹಿಮ' ರೋಜಾ ಎಂಬ ಮಸೀದಿ

ಸಚಿತ್ರ

ವಾರಪತ್ರಿಕೆ

SINGAPORE

The dedication of the new naval base is a final step in England's determination to protect the empire. But how many of us, sitting quietly by the fire at home realize that all the millions spent on the enterprise would have been useless but for one drug

Unfortunately, mosquitoes, especially the malarial sorts, infest just such large-scale tropical projects as this new naval base. Huge excavations and still larger areas flooded with warm waters invite even greater clouds of these pests than is usual"

Construction would be all but impossible if thousands of laborers were not protected against the inevitable malaria that results from the nature of such work. Engineers and sanitary officers, well knowing the hazard prevented an epidemic and cured the few malarial patients that one can scarcely avoid in a region like Singapore

Among tropical laborers, the only sure method of preventing malaria, is a daily prophylactic dose of six grains of quinine, and the best method of treatment is the short quinine treatment, consisting of a daily dose of 15-20 grains of quinine to be taken daily during 5 to 7 days, as recommended by the Malaria Commission of the League of Nations Perhaps the dedication speeches wont say this, but our new naval base is, like the Panama Canal, a tribute to quinine.

M E No 55

ಜ್ಞಾನ ಅನುಭವ ಆನಂದಗಳ ಸೂರೆಮಾಡಬೇಕಾದರೆ- ಮನೋಶಾಂತಿಯು ಲಭಿಸಬೇಕಾದರೆ

ಧಾರ್ಮಿಕ ಮತ್ತು ಜನಾಂಗಿಕ ದುರಭಿಮಾನದಿಂದ ದೂರವಾಗಿರಿ!

'ಯೇಸುಕ್ರಿಸ್ತನು ಶಾಂತಿಯ ಪಾವನ ಮೂರ್ತಿ, ಬುದ್ಧನು ಸೌಜನ್ಯತೆಯ ಪ್ರತ್ಯಕ್ಷ ಅವತಾರ, ಭಗವಾನ ಕೃಷ್ಣನಂಥ ಜ್ಞಾನಿಗಳಿಲ್ಲ ಮಹಮ್ಮದನು ಅಪ್ರತಿಮ ಶಕ್ತಿಬಲಗಳನ್ನು ಸಂಪಾದಿಸಿದ್ದನು ಇವರೆಲ್ಲರು ಪ್ರಪಂಚಕ್ಕೆ ಶಾಂತಿ, ಸೌಜನ್ಯತೆ ಬುದ್ಧಿ ಬಲಗಳ ಉಪದೇಶವನ್ನು ಕೊಟ್ಟರು ಒಬ್ಬೊಬ್ಬರ ಉಪದೇಶ ಮಾತ್ರದಿಂದ ಜೀವನವು ಪೂರ್ಣವಾಗುವುದಿಲ್ಲ ಆದಕಾರಣ ಜ್ಞಾನ ಅನುಭವ ಆನಂದಗಳ ಸೂರೆ ಮಾಡಬೇಕಾದರೆ, ನಿಜವಾದ ಮನೋಶಾಂತಿಯು ಲಭಿಸಬೇಕಾದರೆ ನಾವು ಧಾರ್ಮಿಕ ಮತ್ತು ಜನಾಂಗಿಕ ದುರಭಿಮಾನದಿಂದ ದೂರವಾಗಿರಬೇಕು ಕ್ರೈಸ್ತಧರ್ಮದಲ್ಲಿ ಹೇಗೋ ಇತರ ಧರ್ಮಗಳಲ್ಲಿ ಹಾಗೆ ಸತ್ಯ, ಜ್ಞಾನ, ಅನುಭವ ಆನಂದ ವಿಷಯಗಳಿವೆ ಎಂಬುದನ್ನು ಒಪ್ಪಿಕೊಳ್ಳಬೇಕು ವರ್ಣ, ವಂಶ ಸಂಬಂಧವಾದ ದುರಭಿಮಾನವನ್ನು ಸರ್ವಥಾ ಕಟ್ಟಿಕೊಳ್ಳಬಾರದು.' ಎಂದು 'ಶಾಂತಿ' (ಪೀಸ) ಎಂಬ ಪತ್ರಿಕೆಯು ಉಪದೇಶಿಸುತ್ತದೆ

ಸ್ವಾರ್ಥವನ್ನು ಬಿಟ್ಟು ಪರಾರ್ಥಗಳಿಗಾಗುವುದರಲ್ಲಿ ಸ್ವಾತಂತ್ರ್ಯ ಅಥವಾ ಮುಕ್ತಿಯು ಇರುತ್ತದೆ ನಾನು ನನ್ನದೆಂಬ ಅಹಂಭಾವವು ತೊಲಗಿದೊಡನೆ, ಅವನಲ್ಲಿ ದುರಭಿಮಾನವು ಉಳಿಯುವುದಿಲ್ಲ ಅವನು ತನ್ನ ವಂಶವೇ ಶ್ರೇಷ್ಠ, ತನ್ನ ಧರ್ಮವೇ ಉತ್ಕೃಷ್ಟ ಎಂದು ಸರ್ವಥಾ ಹೇಳುವುದಿಲ್ಲ ತನ್ನ ದೇವರನ್ನು ಪ್ರತಿಯೊಂದು ಧರ್ಮ, ಜಾತಿ, ಮತ, ಸಂಪ್ರದಾಯದವರಲ್ಲಿ ಕಂಡು ಅವನು ಸಂತೋಷಿಸುತ್ತಾನೆ ಸತ್ಯವು ದೇವರು, ದೇವರು ಸತ್ಯ- ಅಂಥ ದೇವರನ್ನ, ಯಾವ ಹೆಸರಿನಿಂದಲೇ ಕರೆಯಿರಿ, ದೇವರು ಈ ಸಿದ್ಧಾಂತದಿಂದ ಬೇರೆಯಾಗಿ ಅವನಿಗೆ ಕಾಣುವುದಿಲ್ಲ ಈ ಸತ್ಯವನ್ನು ಪೂರ್ವದಲ್ಲಾಗಲಿ, ಪಶ್ಚಿಮದಲ್ಲಾಗಲಿ, ಬಿಳಿಯವನಲ್ಲಾಗಲಿ, ಕರಿಯವನಲ್ಲಾಗಲಿ, ಒಂದೇ ಒಂದಾಗಿ ಅನುಭವವಮಾಡಿಕೊಳ್ಳುತ್ತಾನೆ ಇಂಥವನಿಗೆ ತಾನೇ ಮನೋಶಾಂತಿಯು ದೊರೆಯುವುದು ಅವನು ತಾನೇ ಜೀವನದ ಪರಮ ಸುಖವನ್ನು ಅನುಭವಿಸುವನು

ಸಾಧುಸಂತರಾಗಲಿಕ್ಕೆ ಕರ್ಮ ತ್ಯಾಗ ಮಾಡಬೇಕಾಗಿಲ್ಲ

ಹೆಂಡತಿ, ಮಕ್ಕಳು, ಮನೆಯನ್ನು ಬಿಟ್ಟು ಕಾಡುಗಳಲ್ಲಿ ತಪಸ್ಸು ಮಾಡುವವರು ಮಾತ್ರ ಸಾಧುಸಂತರಾಗಬಲ್ಲರು ಪರಮಾತ್ಮನ ಸಾನಿಧ್ಯವನ್ನು ಪಡೆಯಬಲ್ಲರು ಎಂದು ಅನೇಕ ಭಾವಿಸುತ್ತಾರೆ ಆದರೆ ಸಾಧುಸಂತರಾಗಲಿಕ್ಕೆ ಕರ್ಮತ್ಯಾಗವು ಅಗತ್ಯವಲ್ಲವೆಂದು ಸಂತತುಕಾರಾಮರು ಬೋಧಿಸಿದರು ತ್ಯಾಗವೆಂದರೆ ಕರ್ಮತ್ಯಾಗವಲ್ಲ, ಫಲಾಪೇಕ್ಷೆಯ ತ್ಯಾಗವಷ್ಟೇ ಆಗಿದೆ ಫಲಾಫಲವಿಚಾರ ಮಾಡದ ಮನುಷ್ಯನು ಧೈರ್ಯದಿಂದ ಪ್ರತಿಯೊಂದ ಸತ್ಕರ್ಮವನ್ನು ಮಾಡಿ ಹೋಗಬೇಕು ಇದುವೇ ಸಂತನಲಕ್ಷಣವಾಗಿದೆ ಪಶುತ್ವಕ್ಕೆ ತಿಲಾಂಜಲಿ ಕೊಟ್ಟು ಮನುಷ್ಯತ್ವವನ್ನು ಪಡೆಯುವುದು ಸಂತತನದ ಫಲವಾಗಿದೆ ಎಂದು ಸಂತ ತುಕಾರಾಮರ ಜೀವನದ ಸಂದೇಶವನ್ನು ಕುರಿತು ಬರೆಯುತ್ತಾ 'ಸಾಧನ' ಪತ್ರಿಕೆಯು – ಊರು ಕೇರಿಗಳನ್ನು ತ್ಯಜಿಸಬೇಕೆಂದಾಗಲೀ, ಹೆಂಡತಿ ಮಕ್ಕಳನ್ನು ಬಿಟ್ಟುಬಿಡಬೇಕೆಂದಾಗಲೀ, ತುಕಾರಾಮರು ಹೇಳಲಿಲ್ಲ ಯಾವಾಗಲೂ ತನ್ನ ಪಾಲಿಗೆ ಬಂದ ಪ್ರತಿಯೊಂದು ಕಾರ್ಯವನ್ನು ದೇವರನ್ನು ಚಿಂತಿಸುತ್ತಾ ಮಾಡಿ, ತನ್ನ ಭವಿಷ್ಯತ್ತಿನ ಕುರಿತು ಆ ದೇವರಲ್ಲಿ ಸಂಪೂರ್ಣ ವಿಶ್ವಾಸವನ್ನಿಟ್ಟಿರಬೇಕೆಂದೂ, ಅವನನ್ನು ತ್ರಿಕರಣಗಳಿಂದ ಆರಾಧಿಸಿ ಆತನ ಪ್ರೀತಿಗೆ ಪಾತ್ರರಾಗಬೇಕೆಂದೂ ತುಕಾರಾಮರು ಹೇಳಿದರು ಅವರು ಮುಕ್ತಿಲಾಭಕ್ಕೆ ತೋರಿಸಿಕೊಟ್ಟ ಮಾರ್ಗವು ಭಕ್ತಿಮಾರ್ಗವಲ್ಲದೆ, ಬೇರೆಯಲ್ಲ' ಎಂದು ತೋರಿಸಿಕೊಟ್ಟಿದೆ

ಮಿತವ್ಯಯದ ಡಬ್ಬಿ

ಎಷ್ಟು ಉಳಿತಾಯವಾಗುವುದೆಂದು ನೋಡಿರಿ!

ದೊಡ್ಡ ಸೈಜು (೮ ಔನ್ಸು) ರೂ. ೧—೪—೦

(ದೊಡ್ಡ ಬಾಟ್ಲಿಯ ಪರಿಮಾಣದಷ್ಟಿದೆ.

ಸಣ್ಣ ಸೈಜು (೪ ಔನ್ಸು) ಆಣೆ ೦—೧೧—೦

ಕೇವಲ ಕಳೆಯುವ ಲೆಕ್ಕವು ಎಂಡ್ರ್ಯೂಸ್ ಮಿತವ್ಯಯದ ಡಬ್ಬಿಗಳನ್ನು ಕೊಂಡುಕೊಂಡಲ್ಲಿ ದೊಡ್ಡ ಸೈಜಿನಲ್ಲಿ (8 ಔನ್ಸು) 6 ಆಣೆಯೂ, ಸಣ್ಣ ಸೈಜಿನಲ್ಲಿ (4 ಔನ್ಸು) 5 ಆಣೆಯೂ ಉಳಿತಾಯವಾಗುವುದು ಆದರೆ ಎಂಡ್ರ್ಯೂಸ್ ಲವಣವು ಎಂಥ ಉತ್ತಮ ಆರೋಗ್ಯವರ್ಧಕ ಲವಣವಾಗಿರುವುದೆಂಬುದು ಇದನ್ನು ಸೇವಿಸಿದಲ್ಲಿ ಖಚಿತವಾಗುವುದು

ಎಂಡ್ರ್ಯೂಸ್ ಅಜೀರ್ಣವನ್ನು ನಿಶ್ಶೇಷಗೊಳಿಸುತ್ತದೆ ಜೀರ್ಣೇಂದ್ರಿಯಗಳನ್ನು ಆರೋಗ್ಯವಾಗಿರಿಸುತ್ತದೆ ಮತ್ತು ಅಸ್ವಾಸ್ಥ್ಯವನ್ನು ನಾಶಗೊಳಿಸುತ್ತದೆ

ಇಂದೇ ಪ್ರಾರಂಭಿಸಿರಿ— ಒಂದು ವಾರದ ತನಕ ಪ್ರತೀ ಬೆಳಿಗ್ಗೆ ಎಂಡ್ರ್ಯೂಸ್ ಲವಣವನ್ನು ಸೇವಿಸಿರಿ- ಆರೋಗ್ಯವಾಗಿರಲು ಎಂಡ್ರ್ಯೂಸ್ ಲವಣವನ್ನ ಯಾವಾಗಲೂ ಸೇವಿಸಿರಿ

ಎಂಡ್ರ್ಯೂಸ್ ಲವಣಕ್ಕೆ ಇತರ ಲವಣಕ್ಕಿಂತ ಪ್ರಧಾನವಾಗಿ ಉಕ್ಕುವ ಒಂದು ಮಹತ್ವದ ಗುಣವಿರುವುದು ಈ ಗುಣದಿಂದಾಗಿ ಹೊಟ್ಟೆಯೊಳಗೆ ಆ ಗ್ಯಾಸು ವಾಯುವನ್ನುಂಟುಮಾಡಿ ಇದು ಹೊಟ್ಟೆಯ ಪರಿಯನ್ನು ಆರೋಗ್ಯದಲ್ಲಿರಿಸುತ್ತದೆ.

ಎಂಡ್ರ್ಯೂಸ್ ಲವಣದಿಂದ ಉತ್ತಮ ಪರಿಣಾಮವನ್ನು ಪಡೆಯಲು ಒಂದು ಯಾ ಎರಡು ಚಮಚೆಯಷ್ಟು ಎಂಡ್ರ್ಯೂಸ್ ಲವಣವನ್ನು ಒಂದ ಗ್ಲಾಸು ನೀರಿನಲ್ಲಿ ಹಾಕಿ ಚೆನ್ನಾಗಿ ಕದಡಿಸಿರಿ— ಅದು ಉಕ್ಕಿ ಬರುತ್ತಿರುವ ಸಮಯ ಕುಡಿಯಿರಿ.

ಡಬ್ಬಿಗಳಲ್ಲಿ ಕೊಡಲು ಬಾಟಿಗಳಲ್ಲಿದ್ದಷ್ಟೆ ಪರಿಮಾಣದ ಲವಣವಿರುವದು ಆದರೆ ಬೆಲೆಯು ಕಡಿಮೆ!

ಎಂಡ್ರ್ಯೂಸ್ ಲವಣವು ಲೋಕದ ಎಲ್ಲಾ ಲವಣಗಳಿಗಿಂತಲೂ ಹೆಚ್ಚಾಗಿ ಮಾರಾಟವಾಗುತ್ತದೆ ಮತ್ತು ಇದನ್ನು ತಯಾರಿಸುತ್ತಿರುವಾಗ ಕೈಸೋಂಕಿರುವುದಿಲ್ಲ.

ಎಂಡ್ರ್ಯೂಸ್ ಲಿವರ್ ಸೋಲ್ಟ್

ಅಂತರೇಂದ್ರಿಯ ಶುದ್ಧಿಗೆ ಉತ್ತಮ!

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.



Take
ANDREWS LIVER SALT
LARGEST SALE OF ANY EFFERVESCING SALT IN THE WORLD

ವಿವಿಧ ವಿಷಯಗಳನ್ನರಿಯಲು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ

ರತ್ನೈರ್ಮಹಾರ್ಹೈಸ್ತುತುಷುರ್ನ
ದೇವಾ । ನ ಭೇಜಿರೇ ಭೀಮ
ವಿಷೇಣ ಭೀತಿಮ್ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಲನುಪಮ ರತ್ನಗಳು
ಸಾ ! ಗರವ ಮಥಿಸಲು ಸುರರಿ
ಗದರಿಂ ! ಹಲುಪವಾಯಿತೆ! ಮತೆ
ವಿಷವ ನುಡುವ ಬರುತಿರುವ ॥
ಗರಳಕವರಂಜಿದರೆ! ಸುಧೆಯನೆ
ಮರೆತು ತಸ್ಸುದ್ರರ
ಕೆರದಿ ಕುಳಿತರೆ ! ಕೆಲಳ ಬಲ್ಲರೆ
ತೆಸರಿದು ಧೀರರು
ನಿಶ್ಚಿತಾರ್ಥ [illegible] ।

ತಾರೀಕು ೧೨—೫—೧೯೩೯ | ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 12—5—1939

ಇಂಡಿಯಾ ಆಕ್ಟಿನ ತಿದ್ದುಪಡಿ — ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ

ಅಖಿಲ ಭಾರತ ಕಾಂಗ್ರೆಸ ಕಮಿಟಿಯಲ್ಲಿ ಇಂಡಿಯಾ ಆಕ್ಟಿನ ತಿದ್ದುಪಡಿಗಳು [illegible] ಬಂದರೆ ಪ್ರಾಂತಿಕ ಸ್ವರಾಜ್ಯ ಸಟಸಿಯ [illegible] ಸಿಕ್ಕಿದ್ದ ಅಲ್ಪಸ್ವಲ್ಪ ಸ್ವಾತಂತ್ರ್ಯವೂ ಹೋಗುವುದು ಆದ್ದರಿಂದ ಜನತೆಯೂ ಪ್ರಾಂತಿಕ ಸರಕಾರಗಳೂ ಆ ತಿದ್ದುಪಡಿಗಳನ್ನು ಪ್ರಬಲವಾಗಿ ವಿರೋಧಿಸಬೇಕು ಎಂದ ಪಂಡಿತ ಜವಾಹರಲಾಲರು [illegible] ಕೆಲವೇ ಘಂಟೆಗಳಲ್ಲಿ ಪಾರ್ಲಿಮೆಂಟಿನಲ್ಲಿ ಇಂಡಿಯಾ ಸೆಕ್ರೆಟರಿಗೆ ಕೇಳಲಾಗಿದ್ದ ಪ್ರಶ್ನೆಗೆ ಉತ್ತರವಾಗಿ ಅಂಡರ ಸೆಕ್ರೆಟರಿ [illegible] ಉತ್ತರವನ್ನು [illegible] ತಿದ್ದುಪಡಿ [illegible] ಹಿಂತೆಗೆದುಕೊಳ್ಳಲಿಕ್ಕಾಗುವುದಿಲ್ಲವೆಂದು [illegible] ಉತ್ತರವನ್ನು ಕೊಟ್ಟರು. ಈ ತಿದ್ದುಪಡಿಗಳಿಗೆ [illegible] ಹೆಚ್ಚು ಕಡಿಮೆ ಎಲ್ಲಾ ಪ್ರಾಂತಿಕ ಸರಕಾರಗಳ ವಿರೋಧವಿದ್ದು ಬ್ರಿಟಿಷ ಸರಕಾರವು ಈ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಲಿಕ್ಕೆ ಒಪ್ಪದಿರುವುದನ್ನು ನೋಡುವಾಗ, ಭಾರತದ ಜನಮತವನ್ನು ಈಗಲೂ ಬ್ರಿಟಿಷ ಸರಕಾರವು ಅಲಕ್ಷಿಸುವುದನ್ನು ಬಿಟ್ಟಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಲೋಕಯುದ್ಧದ ವಿಶೇಷ ಸಂದರ್ಭವು ಒದಗಿಬಂದಾಗ, [illegible] ನ್ನು ಕಾನೂನು [illegible] ಬಂಧನಗಳಿಂದ [illegible] ಹಾಕಿ [illegible] ವಂತೆ [illegible] ಪ್ರಯತ್ನದಲ್ಲಿ [illegible] ಯಾವ ಪ್ರಯೋಜನವೂ ತೋರುವುದಿಲ್ಲ. ಅದೇ ಬ್ರಿಟನ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು, ಭಾರತವನ್ನು ಸ್ನೇಹದಿಂದ ಒಲಿಸಿಕೊಂಡದ್ದಾದರೆ, ಯುದ್ಧಕಾಲದಲ್ಲಿ ಬ್ರಿಟನಿಗೆ ಭಾರತದ ಹಾರ್ದಿಕ ಸಹಕಾರ ಸಹಾಯಗಳು ಪ್ರಾಪ್ತವಾಗುವುವು. ಇದನ್ನು ತಿಳಿದೂ ತಿಳಿಯದೆಯೂ, ಬ್ರಿಟನ ಯುದ್ಧಕಾಲದಲ್ಲಿ ಭಾರತದಿಂದ ಒತ್ತಾಯದ ಸೇವೆಯನ್ನು ತೆಗೆದುಕೊಳ್ಳಲು ಹವಣಿಸಿರುವುದು [illegible] ಗಿದೆ. ಒತ್ತಾಯದ ಸೇವೆಯನ್ನು ತೆಗೆದುಕೊಳ್ಳುವುದಾಗಿದ್ದರೂ ಈ ತಿದ್ದುಪಡಿಗಳ ಅಗತ್ಯವಿರಲಿಲ್ಲ. ಇಂಡಿಯಾ ಆಕ್ಟು ಈಗಿದ್ದ ಹಾಗೆ ಇದ್ದರೂ, ಯುದ್ಧಕಾಲದಲ್ಲಿ ಅದನ್ನು ವಜಾ ಮಾಡಿ, ತನ್ನಿಚ್ಛೆಗೆ ಅನುಸಾರ ಇಲ್ಲಿ ಶಾಸನ ಮಾಡುವ ಅಧಿಕಾರವು ಬ್ರಿಟನಿಗೆ ಕಾನೂನು ಮೂಲಕ ಪ್ರಾಪ್ತವಾಗಿದೆ. ಈ ತಿದ್ದುಪಡಿಗಳನ್ನು ಮಾಡಿದ್ದರ ಫಲವು ಹಿಂದುಸ್ಥಾನ ಬ್ರಿಟನ ಸ್ನೇಹಸಂಬಂಧವನ್ನು [illegible] ಮಾಡಿ ಪರಸ್ಪರ ದ್ವೇಷಾಸೂಯೆಗಳನ್ನು ಹೆಚ್ಚಿಸುವುದಲ್ಲದೆ ಬೇರೆ ಅಲ್ಲ.

ಜನತೆಯ ವಿರೋಧ

ಇಂಡಿಯಾ ಆಕ್ಟಿನ ತಿದ್ದುಪಡಿಗಳಿಗೆ ಇರುವ ಭಾರತೀಯರ ವಿರೋಧದ ಆಳವನ್ನು ಬ್ರಿಟನು ತಿಳಿದಿರುವುದಿಲ್ಲವಾದ್ದರಿಂದಲೇ ಅದು ಇಂಥ ಅನಾಗತ್ಯದ ಕಾರ್ಯಗಳಿಗೆ ಕೈಹಾಕಿದೆ ಎನ್ನಬಹುದು. ಯುದ್ಧಕಾಲದಲ್ಲಿ ಬ್ರಿಟನಿಗೆ ಜಯ [illegible] ಕ್ರಿಯಾತ್ಮಕ ಸಹಾನುಭೂತಿಯು

ಕಲ್ಕತ್ತದ ಪ್ರಚಂಡ ಸಭೆ-ಜವಹರಲಾಲರ ವಿರೋಧ ಭಾಷಣ

ಕಾಂಗ್ರೆಸ ಸರಕಾರಗಳಿಗೆ ಸೂಚನೆ

ಅತ್ಯಗತ್ಯ [illegible] ತಿದ್ದುಪಡಿ [illegible] ವಿರೋಧವಾಗಿದೆ [illegible] ತಿಳಿದಾಗ್ಯೂ [illegible] ನಡಿನ [illegible] ವೆಂದ ಬ್ರಿಟಿಷ [illegible] ವೆಲ್ಲವನ್ನು [illegible] ಸಂಧಿಗದಲ್ಲಿ [illegible] ಸ್ನೇಹವನ್ನು [illegible] ಬ್ರಿಟಿನ [illegible] ವಿರೋಧದ [illegible] ವಿರೋಧವು [illegible] ಹೃದಯದ ವೇಲೆ [illegible] ಆದ್ದರಿಂದ ವಿರೋಧವು [illegible] ಅಗತ್ಯ

ಜವಾಹರಲಾಲರ ಪ್ರಚಂಡ ಭಾಷಣ

ಈ ವಿರೋಧವು [illegible] ಬೇಕೆಂದೇ, ಪಂಡಿತ ಜವಾಹರಲಾಲ ನೇಹರು ಅವರು ಕಲ್ಕತ್ತದಲ್ಲಿ ಇದೇ ತಿಂಗಳ [illegible] ತಾರೀಕಿನ ದಿನ ಕಲ್ಕತ್ತದ ಮೈದಾನಿನಲ್ಲಿ ಮಾಡಿದ ೫೦೦೦೦ ಮಂದಿಯ ಬಹಿರ್ಸಭೆಯಲ್ಲಿ ಬ್ರಿಟಿಷ ಸರಕಾರದ ವರ್ತನವನ್ನು ಖಂಡಿಸಿ ಪ್ರಚಂಡವಾದ ಭಾಷಣವನ್ನು ಕೊಟ್ಟರು. ಈ ಭಾಷಣದಲ್ಲಿ ಅವರು ಬ್ರಿಟಿಷ ಪಾರ್ಲಿಮೆಂಟಿನ [illegible] ಸಭೆಯಲ್ಲಿ ಚರ್ಚೆಗೆ ಬಂದ ಇಂಡಿಯಾ ಆಕ್ಟಿನ ತಿದ್ದುಪಡಿ ಮಸೂದೆಯ ಕುರಿತು ಪ್ರಸ್ತಾಪಿಸಿ, ಅದು ಕಾನೂನಾದ ಪಕ್ಷದಲ್ಲಿ ಪ್ರಾಂತಿಕ ಸ್ವರಾಜ್ಯವೆಂಬುದು ಬರೀ ಒಂದು ಫಾರ್ಸು ಅಥವಾ ನಕಲಿ ಆಗುವದೆಂದರು. ಆದ್ದರಿಂದ ಇಂಥ ಮಸೂದೆಯನ್ನು ಜನತೆಯು ತನ್ನ ಸರ್ವ ಶಕ್ತಿಗಳನ್ನು ಉಪಯೋ

[illegible] ಭಾರತವು ಸ್ವತಂತ್ರವಾಗದೆ [illegible] ದ್ದರಲ್ಲಿ ಸೇರಿಕೊಳ್ಳಲಾರದು [illegible] ವಿಧಾನಗಳಿಂದ [illegible]

ಜಮರ್ಸಕ್ಕೆ ಲಗಾವಾಗುವುದಿಲ್ಲ

ಇಂಡಿಯಾ ಆಕ್ಟಿನ ತಿದ್ದುಪಡಿ [illegible] ಪಾರ್ಲಿಮೆಂಟಿನ [illegible] ಅದರ [illegible] ಸಭೆಯ [illegible] ಬಗ್ಗೆ [illegible]

ಕೆಲವು ತಿಂಗಳೊಳಗೆ ಕಾನೂನಾಗಲಿರುವುದು. ಈ ಕಾನೂನು ಬರ್ಮಕ್ಕೆ ಲಗಾವಾಗುವುದಿಲ್ಲ

ಪ್ರಾಂತಿಕ ಸರಕಾರಗಳ ವಿರೋಧ

ತಿದ್ದುಪಡಿ [illegible] ಬಂಗಾಳ [illegible] ಪಂಜಾಬ ಸರಕಾರಗಳು ಬಿಟ್ಟು [illegible] ಎಲ್ಲಾ ಪ್ರಾಂತಿಕ ಸರಕಾರಗಳು ತಮ್ಮ ವಿರೋಧ [illegible] ಅಸಮ್ಮತಿಯನ್ನು ಭಾರತ [illegible] ಆದ್ದರಿಂದ [illegible] ಬಂಗಾಳ ಪಂಜಾಬಗಳ [illegible] ಮಂತ್ರಿ [illegible] ಗಳನ್ನು ಪಾರ್ಲಿಮೆಂಟಿನಲ್ಲಿ [illegible] ದಲ್ಲಿ [illegible] ಸ್ವರಾಜ್ಯ ಸಂಗ್ರಾಮ [illegible] ಈ ವರ್ತನದಿಂದ [illegible]

ಕರಡಿ ಮನೆಯ ಸುಂದರಿ

[illegible] ಕರಡಿಯು [illegible] ಅವಳು ತನ್ನ [illegible] ಕರಡಿ [illegible] ತನ್ನ ಗುಹೆ [illegible] ಕರಡಿಯು [illegible] ಅವರ [illegible] ಅವಳ [illegible] ಸುಂದರಿ ಹೋದ್ದರಿಂದ ಕರಡಿಗೆ ಎಷ್ಟು ದುಃಖವಾಯಿತೋ! ಇದನ್ನು ಬರೆವಾಗ [illegible] ನೆನಪಾಗುತ್ತದೆ

ಅಸಿಂಧು ವಿವಾಹದಲ್ಲಿ ಹೆಂಡತಿಗೆ ಅಶನಾರ್ಥ

ಉಚ್ಚ ಜಾತಿಯ [illegible] ಹೆಂಡತಿಯನ್ನು [illegible] ಜಾತಿಯ [illegible] ಅದರ [illegible] ದಿನಗಳ ನಂತರ [illegible] ಸ್ನೇಹವಾಗಿ [illegible] ಎರಡನೆಯವಳನ್ನು ಬಿಟ್ಟನು. [illegible] ಅಶನಾರ್ಥಕ್ಕೆ ದಾವೆ [illegible] ದೃಷ್ಟಿಯಿಂದ ಉಚ್ಚ ಜಾತಿಯ ಗಂಡಸಿನೊಡನೆ [illegible] ವಿವಾಹವು ಹಿಂದೂ ಧರ್ಮದ [illegible] ಅಸಿಂಧು [illegible] ಹೆಂಡತಿಯು ತನ್ನ ಗಂಡನಿಂದ ಅಶನಾರ್ಥ [illegible] ಗರ್ಭದಾನ [illegible] ವಿವಾಹವಾಗಲಿಕ್ಕೆ [illegible] ಗಂಡನು ಅವಳಿಗೆ ಅಶನಾರ್ಥ ಕೊಡಬೇಕೆಂದು [illegible] ತೀರ್ಮಾನ ಕೊಟ್ಟಿದೆ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲು, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಕ್ಕುತ್ತವೆ

ಹೆಚ್ಚಿನ ವಿವರಕ್ಕೆ ಮೇಲಿನ ವಿಳಾಸಕ್ಕೆ ಬರೆಯಿರಿ

ಎ. ಐ. ಸಿ. ಸಿ.ಯಲ್ಲಿ ಗಾಂಧಿವಾದಿಗಳ ವಿಜಯ

ಶ್ರೀ ಸುಭಾಷಚಂದ್ರ ಭೋಸರು ಕಾಂಗ್ರೆಸ ಅಧ್ಯಕ್ಷಪದವಿಗೆ ಕೊಟ್ಟ ರಾಜೀನಾಮೆಯು, ಎ. ಐ. ಸಿ. ಸಿ.ಯಲ್ಲಿ ಮಹಾತ್ಮರ ಮತ್ತು ಅವರ ಅನುಯಾಯಿಗಳ ಪ್ರಚಂಡ ವಿಜಯವಾಗಿರುವುದೆಂದು ಲಂಡನಿನ ಡೈಲಿ ಟೆಲಿಗ್ರಾಫ ಪತ್ರಿಕೆಯು ಅಭಿಪ್ರಾಯಪಡುತ್ತದೆ. ಅದು ಈ ವಿಷಯವಾಗಿ ಬರೆದ ಒಂದು ಸಂಪಾದಕೀಯ ಲೇಖನದಲ್ಲಿ—'ಮಹಾತ್ಮರು ಕಳೆದ ಐದಾರು ವರ್ಷಗಳಿಂದ ರಾಜಕೀಯದಿಂದ ನಿವೃತ್ತರಾಗಿದ್ದರೂ, ಕಾಂಗ್ರೆಸಿನ ಸೂತ್ರಧಾರಿಗಳು, ಇನ್ನೂ ಅವರೇ ಆಗಿ ಉಳಿದಿದ್ದಾರೆ. ಅಂದು ಶ್ರೀ. ಸಿ. ಆರ್. ದಾಸರು ಮಹಾತ್ಮರನ್ನು ವಿರೋಧಿಸಿ ಸೋತಂತೆ, ಇಂದು ಶ್ರೀ ಭೋಸರೂ ಸೋತಿರುವರು. ಮುಂದಿನ ಯುದ್ಧಕಾಲದಲ್ಲಿ ಇಂಡಿಯವು ಬ್ರಿಟನ್ನಿನೊಡನಿರುವ ಯಾವತ್ತು ಸಂಬಂಧಗಳನ್ನು ಕಡಿದುಕೊಳ್ಳಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದರು. ಆದರೆ ಮಹಾತ್ಮರು ಅಂಥ ಯುದ್ಧ ಸಂದರ್ಭವನ್ನು ಬ್ರಿಟನಿಗೂ ಇಂಡಿಯಕ್ಕೂ ಶಾಶ್ವತವಾದ ರಾಜಕೀಯ ಒಡಂಬಡಿಕೆಯಾಗುವಂತೆ ಉಪಯೋಗಿಸಬೇಕೆಂದಿದ್ದರು. ಯಾಕೆಂದರೆ ಮುಂದಿನ ಯುದ್ಧದಲ್ಲಿ ಬ್ರಿಟನು ಸೋತರೆ, ಇಂಡಿಯದ ದುಃಖಗಳು ಇನ್ನೂ ಹೆಚ್ಚಾಗುವವು ಎಂಬುದು ಅವರಿಗೆ ತಿಳಿದಿತ್ತು. ಗಾಂಧಿವಾದಿಗಳ ವಿಜಯವಾದ್ದು ಭಾರತ ಮತ್ತು ಬ್ರಿಟನ್ನಿನ ಹಿತದೃಷ್ಟಿಯಿಂದ ಒಳ್ಳೆಯದೇ ಆಯಿತು' ಎಂದು ಅಭಿಪ್ರಾಯಪಟ್ಟಿದೆ.

ಗಾಂಧಿಯವರೇ ಯೋಗ್ಯರು.

'ಮಹಾತ್ಮರು ಶ್ರೀ ಬೋಸರಿಗೆ ಸೋಂದರೆ ಕೊಟ್ಟರು. ಪರಂತು ಮುಂದಿನ ವರ್ಷವು ಇಂಡಿಯಕ್ಕೆ ಬಿಕ್ಕಟ್ಟಿನ ಕಾಲವು. ಒಂದು ವರ್ಷದೊಳಗಾಗಿ ಬ್ರಿಟನ, ದೇಶೀರಾಜರು, ಮುಸ್ಲಿಮರು ಇತ್ಯಾದಿ ಪಂಗಡಗಳೊಡನೆ ವ್ಯವಹರಿಸಿ ಕಾಂಗ್ರೆಸು ಒಂದು ಇತ್ಯರ್ಥಕ್ಕೆ ಬರಬೇಕಾಗುವುದು. ಈ ಕಾರ್ಯಕ್ಕೆ ಶ್ರೀ ಭೋಸರಿಗಿಂತ ಗಾಂಧಿಯವರೇ ಹೆಚ್ಚು ಯೋಗ್ಯರಾಗಿರುವರು' ಎಂದು ಮೇಂಚೆಸ್ಟರ ಗಾರ್ಡಿಯನ್ ಬರೆದಿದೆ.

ಶ್ರೀ ಭೋಸರ ಮುಂದಿನ ಕಾರ್ಯಕ್ರಮ

ಕಾಂಗ್ರೆಸ ಅಧ್ಯಕ್ಷಪದವಿಗೆ ರಾಜೀನಾಮೆಯನ್ನು ಕೊಟ್ಟಬಳಿಕ, ಶ್ರೀ. ಸುಭಾಷಚಂದ್ರಭೋಸರು ಕಾಂಗ್ರೆಸಿನೊಳಗೇ ತಮ್ಮದೊಂದು ಪ್ರತ್ಯೇಕ ಪಕ್ಷವನ್ನು ಕಟ್ಟಿಕೊಳ್ಳುವ ನಿರ್ಧಾರಕ್ಕೆ ಬಂದಿದ್ದಾರೆ. ಈ ಪಕ್ಷಕ್ಕೆ ಅವರು ಫೊರ್ವರ್ಡ ಬ್ಲೋಕ ಅಂದರ ಮುಂದರಿದ ಕಾಂಗ್ರೆಸಿಜನರ ತಂಡವೆಂದು ನಾಮಕರಣ ಮಾಡಿದ್ದಾರೆ. ಕಲ್ಕತ್ತದ ಶ್ರದ್ಧಾನಂದ ಪಾರ್ಕಿನಲ್ಲಿ ಮೇ ೩ನೇ ತಾರೀಕಿನ ದಿನ ಕೂಡಿದ ೨೦೦೦೦ ಜನರ ಪ್ರಚಂಡ ಸಭೆಯಲ್ಲಿ ಭಾಷಣವನ್ನು ಕೊಡುತ್ತಾ ಶ್ರೀ ಭೋಸರು—'ತಮ್ಮದು ಒಂದು ಪ್ರತ್ಯೇಕ ಪಕ್ಷವಲ್ಲ. ಪರಂತು ಎಡಗಡೆಯ ಕಾಂಗ್ರೆಸ ಜನರು ವ್ಯವಸ್ಥಿತವಾಗಿ ಕೆಲಸಮಾಡಲಿಕ್ಕೆ ಅದೊಂದು ರಂಗಮಂಟಪವಾಗಿದೆ. ಕಾಂಗ್ರೆಸಿನ ಕಾರ್ಯಕ್ರಮವೂ ಧ್ಯೇಯಾದರ್ಶಗಳೂ ಆಗಿರುವವು.— ಮಹಾತ್ಮರ ಮೇಲೂ ಅವರ ಅಹಿಂಸೆ, ಸತ್ಯ ಮೊದಲಾದ ಜೀವನತತ್ವಗಳ ಮೇಲೂ ಈ ಹೊಸ ತಂಡಕ್ಕೆ ಪೂರ್ಣ ಶ್ರದ್ಧೆ ಇರುತ್ತದೆ. ಬಲಗಡೆಯ ಕಾಂಗ್ರೆಸ್ ಜನರು ಗಾಂಧಿ ಸೇವಾ ಸಂಘದ ಮೂಲಕ ಹೇಗೆ ವ್ಯವಸ್ಥಿತರಾಗುತ್ತಾರೋ ಹಾಗೆಯೇ ಎಡಗಡೆಯ ಕಾಂಗ್ರೆಸ್ ಜನರು ಈ ಹೊಸ ರಂಗಮಂಚದ ಮೇಲೆ ವ್ಯವಸ್ಥಿತರೂ ಸಂಘಟಿತರೂ ಆಗಬೇಕೆಂಬುದು ನನ್ನ ಆಸೆ ಆಗಿದೆ' ಎಂದಿರುವರು.

ಅಂತರಂಗದ ಪರಿಚಯ.

ಕಾಂಗ್ರೆಸಿನ ಧ್ಯೇಯಾದರ್ಶ ಕಾರ್ಯಧೋರಣೆಗಳಿಂದ ಶ್ರೀ ಸುಭಾಸರ ಧ್ಯೇಯಾದರ್ಶ ಕಾರ್ಯಧೋರಣೆಗಳು ಭಿನ್ನವಾಗಿರುವುದಿಲ್ಲವಾದರೆ, ಅವರು ಕಾಂಗ್ರೆಸಿನೊಳಗೆ ಒಂದು ಪ್ರತ್ಯೇಕ ತಂಡವನ್ನು ಕಟ್ಟಿಕೊಳ್ಳುವ ಆವಶ್ಯಕತೆಯೇ ಕಾಣುವುದಿಲ್ಲ. ಗಾಂಧಿ ಸೇವಾಸಂಘದಂತೆ ತಮ್ಮದೂ ಒಂದು ತಂಡವಿರಬೇಕೆನ್ನುವುದು ಶ್ರೀ ಸುಭಾಸರು ಸತ್ಯಜ್ಞಾನವಿಲ್ಲದೆ ಹೇಳುವುದಾಗಿದೆ. ಗಾಂಧಿ ಸೇವಾಸಂಘವು ಕಾಂಗ್ರೆಸಿನೊಳಗಿನ ಸಂಸ್ಥೆಯಲ್ಲ. ಅದು ರಾಜಕೀಯ ಸಂಸ್ಥೆಯಾಗಿರುವುದೂ ಇಲ್ಲ. ಮಹಾತ್ಮರ ಜೀವನ ಸಿದ್ಧಾಂತಗಳನ್ನು ಒಪ್ಪಿ ಅವರ ತತ್ವಗಳನ್ನು ಅನುಸರಿಸಲಿಕ್ಕೆ ಪ್ರಯತ್ನಿಸುವುದೇ ಈ ಸಂಘದ ಸದಸ್ಯರ ಉದ್ದೇಶವಾಗಿದೆ. ಆದ್ದರಿಂದ ಶ್ರೀ ಸುಭಾಸರು ತಮ್ಮ ತಂಡವನ್ನು ಗಾಂಧಿ ಸೇವಾಸಂಘಕ್ಕೆ ಹೋಲಿಸಿದ್ದು ತಪ್ಪೆನ್ನಬಹುದು. ಅವರು ಮಹಾತ್ಮರ ಮತ್ತು ಅವರ ಸಿದ್ಧಾಂತ ತತ್ವಗಳ ಮೇಲೆ ಶ್ರದ್ಧೆಯನ್ನು ತೋರಿಸಿರುವುದು ಜನರನ್ನು ಮರುಳು ಮಾಡಿ ತಮ್ಮ ಜಾಲದಲ್ಲಿ ಕೆಡಹಲಿಕ್ಕಾಗಿಯೇ ಎಂದೇ ಹೇಳಬೇಕು. ಯಾಕೆಂದರೆ ಅವರಿಗೆ ಮಹಾತ್ಮರ ಮೇಲೆ ನಿಜವಾದ ಶ್ರದ್ಧೆಯಿರುವುದಾದರೆ ಮಹಾತ್ಮರ ಇಚ್ಛೆಗೆ ಪ್ರತಿಕೂಲರಾಗಿ ನಡೆಯುತ್ತಿದ್ದಿಲ್ಲ. ಅಂತೂ ಇದು ಬಿಡಾರ ಬೇರೆಮಾಡಿಕೊಳ್ಳುವ ಹವ್ಯಾಸವಾಗಿದೆ. ಕಾಂಗ್ರೆಸಿನ ಮೇಲಧಿಕಾರಿಗಳ ನಿಷ್ಪಕ್ಷಪಾತ ಮತ್ತು ನ್ಯಾಯಪೂರ್ಣ ವ್ಯವಹಾರಗಳಿಂದ ಅತೃಪ್ತರಾದ ಕೆಲವೇ ಜನರ ನಾಯಕರಾಗಿ ಶ್ರೀ ಸುಭಾಸರು ಈ ಒಂದು ತಂಡವನ್ನು ಕಟ್ಟಿಕೊಳ್ಳುವ ಅಂತರಂಗದ ಉದ್ದೇಶವಾಗಿದೆ ಎನ್ನಬಹುದು.

ಅತೃಪ್ತರ ಇನ್ನೊಂದು ತಂಡ.

ಶ್ರೀ ಸುಭಾಸರ ಫೋರ್ವರ್ಡ ಬ್ಲೋಕ ಮಾತ್ರವಲ್ಲದೆ, ಕಾಂಗ್ರೆಸ ಕಾರ್ಯಕಾರಿಣಿಯ ಅತೃಪ್ತರಾದ ಬೇರೆ ಕೆಲವರು ಕೇಂದ್ರ ನ್ಯಾಯ ವಿಧಾಯಕ ಸಭೆಯ ಸದಸ್ಯರಾದ ಶ್ರೀ ಅಮರೇಂದ್ರನಾಥ ಚಟರ್ಜಿಯವರ ಅಧ್ಯಕ್ಷತೆಯಲ್ಲಿ ಮೇ ೨೮ ದಿನ ಸಭೆಕೂಡಿ 'ಲೀಗ ಆಫ ರೇಡಿಕಲ್ ಕಾಂಗ್ರೆಸ ಮೇನ' ಎಂಬ ಇನ್ನೊಂದು ಸಂಸ್ಥೆಯನ್ನು ಮಾಡಿಕೊಂಡಿದ್ದಾರೆ. ಇದು ಕಾಂಗ್ರೆಸಿನೊಳಗಿದ್ದೇ ಕೆಲಸಮಾಡುವುದು. ಕಾಂಗ್ರೆಸ ಧ್ಯೇಯಾದರ್ಶಗಳಲ್ಲಿ ಇದಕ್ಕೆ ಶ್ರದ್ಧೆ ಇದೆ. ಮಾತ್ರ ಈಗಿನ ಮೇಲಧಿಕಾರಿಗಳಲ್ಲಿ ಇದಕ್ಕೆ ತುಂಬಾ ಅವಿಶ್ವಾಸವಿರುವುದರಿಂದ ಇದು ರಚಿತವಾಗಿದೆ. ಕ್ರಾಂತಿಕಾರಕ ಭಾವನೆಗಳ ಪ್ರಚಾರವೇ ಈ ಲೀಗಿನ ಉದ್ದೇಶವು. ಶ್ರೀ. ಎಮ್. ಯನ್ ರಾಯರು ಇದರ ಸೂತ್ರಧಾರಕರು ಆಗಿದ್ದಾರೆ.

ಶ್ರೀ ಜವಾಹರಲಾಲರ ಸ್ತುತ್ಯ ಪ್ರಯತ್ನ.

ಕಾಂಗ್ರೆಸ್ ಜನರು ತಂಗಡಿತಂಡಗಳಾಗಿ ಒಡೆದುಹೋಗಿ, ಸಮಯ ಮತ್ತು ಶ್ರಮಗಳ ವ್ಯರ್ಥ ಅಪವ್ಯಯವಾಗುವುದನ್ನು ತಪ್ಪಿಸುವುದಕ್ಕೋಸ್ಕರ ಪಂಡಿತ ಜವಾಹರಲಾಲರು ಈ ಬೇರೆ ಬೇರೆ ತಂಡ ಪಕ್ಷವಾದಿಗಳನ್ನು ಒಂದೇ ರಂಗಮಂಚಕ್ಕೆ ತಂದು ಅವರೊಳಗೆ ಪ್ರೇಮ ಸೌಹಾರ್ದ ಭಾವನೆಗಳು ಹುಟ್ಟುವಂತೆ ಮಾಡುವ ಸ್ತುತ್ಯ ಕಾರ್ಯವನ್ನು ಕೈಕೊಂಡಿದ್ದಾರೆ. ವರ್ಕಿಂಗ ಕಮಿಟಿಯ ಒಳಗಿರ ಹೊರಗಿದ್ದು ತಾನು ಕಾಂಗ್ರೆಸಿನ ಅಮೂಲ್ಯ ಸೇವೆಯನ್ನು ಮಾಡಬಲ್ಲೆನೆಂದು ಅವರು ಮೊನ್ನೆ ತಾನೇ ಒಂದು ಭಾಷಣದಲ್ಲಿ ಆಡಿದ ಮಾತಿನ ಸತ್ಯವು ಈಗ ಮನಸ್ಸಿಗೆ ಚೆನ್ನಾಗಿ ಹೊಳೆಯುತ್ತದೆ. ಈ ಕಾರ್ಯಕ್ಕೆ ನಿಜವಾಗಿಯೂ ಅವರು ತುಂಬ ಯೋಗ್ಯರಿದ್ದಾರೆ.

ಗಾಂಧೀ ಸೇವಾಸಂಘದ ಸಭೆ

ಅಖಿಲಭಾರತ ಗಾಂಧೀ ಸೇವಾಸಂಘದ ೧೫ನೇ ಅಧಿವೇಶನದ ಮಹೋತ್ಸವವನ್ನು ಮಹಾತ್ಮರು ಬೃಂದಾವನದಲ್ಲಿ ನೆರವೇರಿಸಿದರು. ಈ ಮಹೋತ್ಸವಕ್ಕಾಗಿ ಹಲವು ಸಾವಿರ ಮಂದಿ ಪ್ರೇಕ್ಷಕರಾಗಿ ಬಂದಿದ್ದರು. ಸಂಘದ ಅಧಿವೇಶನವು ಮಹಾ ವಿಜೃಂಭಣೆಯಿಂದ ನಡೆಯಿತು. ಶ್ರೀ. ರಾಜೇಂದ್ರ ಪ್ರಸಾದರು ರಾಷ್ಟ್ರೀಯ ಧ್ವಜಾರೋಹಣ ಸಮಾರಂಭವನ್ನು ನಡೆಸುತ್ತ

ಶ್ರೀ ಸುಭಾಷ ಭೋಸರ ಮುಂದಿನ ಕಾರ್ಯಕ್ರಮ

ಬೃಂದಾವನದಲ್ಲಿ ಗಾಂಧಿ ಸೇವಾ ಸಂಘದ ಸಭೆ

ಅಹಿಂಸೆ, ಸತ್ಯ ಮೊದಲಾದ ಗಾಂಧಿ ಜೀವನ ತತ್ವಗಳ ಮಹತ್ವವನ್ನು ಮನಗಾಣಿಸಿ ಬೋಧಪ್ರದವಾದ ಉಜ್ವಲ ಭಾಷಣವನ್ನು ಕೊಟ್ಟರು. ಗಾಂಧಿಜೀಯವರು ವಸ್ತುಪ್ರದರ್ಶನವನ್ನು ತೆರೆದು ಖದ್ದರ, ಸ್ವದೇಶಿ, ಗ್ರಾಮೋದ್ಯೋಗಗಳ ಕುರಿತು ಮಾತನಾಡಿದರು. ಸಂಘದ ವಾರ್ಷಿಕ ಅಧಿವೇಶನವನ್ನು ತೆರೆಯುತ್ತ ಮಹಾತ್ಮರು ಸುಮಾರು ಒಂದು ತಾಸಿನ ತನಕ ಮಾತನಾಡಿ—ರಾಜಕೋಟವು ತನ್ನ ಸತ್ಯ ಮತ್ತು ಅಹಿಂಸಾತತ್ವಗಳ ಪ್ರಯೋಗ ಶಾಲೆಯಾಗಿ ಹೇಗೆ ಪರಿಣಮಿಸಿದೆ ಎಂದು ಹೇಳಿ ಎಲ್ಲರೂ ಜೀವನದ ಲಕ್ಷ್ಯವೊಂದನ್ನಿಟ್ಟುಕೊಂಡು ಅದರ ಸಾಧನೆಗಾಗಿ ಹಗಲಿರುಳು ದುಡಿಯಬೇಕೆಂದೂ ಸಾರ್ವಜನಿಕ ಅಥವಾ ಖಾಸಗಿ ಜೀವನದಲ್ಲಿ ಕೂಡಾ ಅಸತ್ಯ, ಕಪಟಾಚರಣೆಯೂ ಕೂಡದೆಂದೂ, ದೇವರ ಮೇಲೆ ಪೂರ್ಣ ಶ್ರದ್ಧೆಯಿರುವವರು ತಾನೇ ಸತ್ಯಾಗ್ರಹಿಗಳಾಗಬಲ್ಲರೆಂದೂ ಹೇಳಿ, ಜೀವನದಲ್ಲಿ ಸಂಪೂರ್ಣ ಸತ್ಯ ಮತ್ತು ಅಹಿಂಸೆಯನ್ನು ಕೋರಿದರು. ಸಭೆಯ ಕಾರ್ಯಕ್ರಮಗಳು ಮೇ ೩ರಿಂದ ಒಂದು ವಾರದ ತನಕ ಇರುವವು. ಕಸ್ತೂರಿಬಾ ಗಾಂಧಿ, ವಲ್ಲಭಭಾಯಿ ಪಟೇಲ, ಜಮನಾಲಾಲ ಬಜಾಜ, ಕಿಶೋರಿಲಾಲ ಮಶ್ರುವಾಲಾ, ಜೆ. ಜೆ. ಪೀರ, ಎ ಪಿ ಕಿಲ್ಲ ಮಾರ್ಗಬಂಧು ಪಟ್ನಾಯಿಕ, ಮೃದುಲಾ ಬೆನ್ ಸುಭಾದೇವ ದೇಸಾಯಿ, ಪ್ಯಾರೇಲಾಲ, ಶಂಕರರಾವ ದೇವ, ಡಾಕ್ಟರ ಸುಬ್ಬರಾವ ಮಹ್ಮದ ಜಗನ್ನಾಥ ಚೌಧುರಿ ಶ್ರೀ ಕೃಷ್ಣಸಿಂಹ ಮೊದಲಾದವರು ಬೃಂದಾವನಕ್ಕೆ ಬಂದಿರುವರು. ಬೃಂದಾವನದಲ್ಲಿ ಇವರೆಲ್ಲರ ಭಾಷಣಗಳು ನಡೆಯಲಿವೆ.

ಮಹಾತ್ಮರಲ್ಲಿ ಸಂಪೂರ್ಣ ವಿಶ್ವಾಸವನ್ನಿಡಿರಿ

ಸ್ವರಾಜ್ಯವೇ ನಮ್ಮ ಜೀವನದ ಗುರಿ. ಮತ್ತು ಈ ಧ್ಯೇಯದ ಸಾಧನೆಗಾಗಿ ಮುಂದುವರಿಯುವ ತನಕ ಕಾಂಗ್ರೆಸಿನೊಳಗೆ ಒಡಕುಗಳು ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. ನಾವು ಮಹಾತ್ಮರ ನಾಯಕತ್ವವನ್ನು ಒಪ್ಪಿದರೆ ಅಂತಃಕರಣಪೂರ್ವಕವಾಗಿ ಒಪ್ಪಬೇಕು; ಇಲ್ಲವಾದರೆ ನಮ್ಮೆಲ್ಲ ಶ್ರಮಗಳು ನಿಷ್ಫಲವಾಗುವುದು. ಆದ್ದರಿಂದ ಮಹಾತ್ಮರಲ್ಲಿ ಸಂಪೂರ್ಣ ವಿಶ್ವಾಸವನ್ನಿಡಬೇಕು ಎಂದು ಸಭಿಕರಲ್ಲಿ ಕೇಳಿಕೊಂಡರು.

ಸಫಲತೆಯನ್ನು ಪಡೆಯಿರಿ ಎಂದು ನಮ್ಮ ಪ್ರಧಾನ ಮಂತ್ರಿ ಶ್ರೀ. ರಾಜಗೋಪಾಲಾಚಾರಿಯವರು, ಮದ್ರಾಸಿನ ಸಭೆಯಲ್ಲಿ ಎ. ಐ. ಸಿ. ಸಿ.ಯ ತಮ್ಮ ಅನುಭವಗಳ ಕುರಿತು ಭಾಷಣಮಾಡುತ್ತಾ ಹೇಳಿದರು.

ಬಂಗಾಳದ ಮೇಲೆ ಅಶ್ರದ್ಧೆಯಿಲ್ಲ.

ಕಾಂಗ್ರೆಸ ಪ್ರೆಸಿಡೆಂಟ ಚುನಾವಣೆ ಮತ್ತು ಶ್ರೀ ಸುಭಾಸರು ರಾಜೀನಾಮೆ ಕೊಡಲೇಬೇಕಾದ ಪರಿಸ್ಥಿತಿಯಿಂದಾಗಿ ಬಂಗಾಳದ ಜನರು ಕಾಂಗ್ರೆಸು ಮತ್ತು ಅದರ ಇತರ ಮೇಲಧಿಕಾರಿಗಳ ಮೇಲೆ ರೇಗಿಬಿದ್ದಿರುವರು. ಅಲ್ಲಿಯ ಕೆಲವು ಭಾಷಣಗಳೂ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳೂ, ಎ ಐ ಸಿ ಸಿ. ಸಭೆಕೂಡಿದ ಕಾಲಕ್ಕೆ ಕೂಡಿದ ಪ್ರೇಕ್ಷಕರ ವರ್ತನವೂ ಹಿಂಸಾಪರವಾಗಿರುವುದು. ಶ್ರೀ ಸುಭಾಸ ಶರಚ್ಚಂದ್ರ ಪ್ರಭೃತಿಗಳ ಸ್ಥಾನದಲ್ಲಿ ಬಂಗಾಳದ ಪರವಾಗಿ ಕಾಂಗ್ರೆಸ ವರ್ಕಿಂಗ ಕಮಿಟಿಯಲ್ಲಿ ಡಾಕ್ಟರ ಬಿ ಸಿ ರಾಯ ಮತ್ತು ಡಾಕ್ಟರ ಪ್ರಫುಲ್ಲ ಚಂದ್ರಘೋಷರು ಸದಸ್ಯರಾಗದು ಲಜ್ಜಾಸ್ಪದ ಮತ್ತು ನಿಂದನೀಯ, ಆದ್ದರಿಂದ ಅವರು ಆ ಸ್ಥಾನಗಳಿಗೆ ಕೂಡಲೇ ರಾಜೀನಾಮೆ ಕೊಡಬೇಕೆಂದು ಕೂಡ ಬಂಗಾಳದಲ್ಲಿ ಆಂದೋಲನವುಂಟಾಗಿದೆ. ಕಾಂಗ್ರೆಸು ಬಂಗಾಳವನ್ನು ಅಲಕ್ಷ್ಯದಿಂದ ಕಾಣುತ್ತದೆ, ಬಂಗಾಳ ಮುಖಂಡರ ಮೇಲೆ ಕಾಂಗ್ರೆಸಿನೊಳಗೆ ಪ್ರಬಲರಾಗಿರುವ ಗಾಂಧಿವಾದಿಗಳಿಗೆ ಶ್ರದ್ಧೆ ವಿಶ್ವಾಸಗಳಿರುವುದಿಲ್ಲ ಎಂಬ ತಪ್ಪು ಅಭಿಪ್ರಾಯವೇ ಕಾರಣವಾಗಿದೆ. ಆದ್ದರಿಂದ ಶ್ರೀ. ಬಿ. ಸಿ. ರಾಯರು ಒಂದು ಹೇಳಿಕೆಯನ್ನು ಕೊಟ್ಟು—ಭೋಸ ಸಹೋದರರೂ ಜವಾಹರಲಾಲರೂ ಸ್ವಂತದ ಖಾಸಗಿ ಕಾರಣಗಳನ್ನು ಕೊಟ್ಟು ವರ್ಕಿಂಗ ಕಮಿಟಿಯಲ್ಲಿರಲಿಕ್ಕೆ ನಿರಾಕರಿಸಿದ್ದರಿಂದ, ತಾವು ಅವರ ಬದಲಿಗೆ ಕರ್ತವ್ಯದೃಷ್ಟಿಯಿಂದ ಆ ಸ್ಥಾನಗಳನ್ನು ಸ್ವೀಕರಿಸುವಂತಾಯಿತೆಂದೂ, ತಮಗೆ ಅಧಿಕಾರ ಲೋಭವು ಇರುವುದಿಲ್ಲವೆಂದೂ, ಬಂಗಾಳದ ಮೇಲೆ ಕಾಂಗ್ರೆಸಿಗೆ ಸಂಪೂರ್ಣ ಶ್ರದ್ಧೆ ವಿಶ್ವಾಸಗಳಿರುವವೆಂದೂ ಬಂಗಾಳ ಮತ್ತು ದೇಶದ ಹಿತವನ್ನು ಸಾಧಿಸಲಾರೆವೆಂದು ತಿಳಿದಾಕ್ಷಣ ತಾವು ವರ್ಕಿಂಗ ಕಮಿಟಿಯಿಂದ ಹೊರಬರುವುದು ನಿಶ್ಚಯವೆಂದೂ ಹೇಳಿದ್ದಾರೆ. ಇದರಿಂದಾಗಿ ಅಲ್ಲಿ ಕಾಂಗ್ರೆಸಿನ ವಿರುದ್ಧ ಅಪಪ್ರಚಾರವು ನಿಲ್ಲಬಹುದೆಂದು ಎಣಿಸಲಾಗಿದೆ.

...ನಮ್ಮ ನಿಮ್ಮೊಳಗಿನ ವಿವಾದಗಳನ್ನು ನಾವು ನೀವೇ ತೀರ್ಮಾನಿಸಿಕೊಳ್ಳಬಹುದು. ಅದಕ್ಕೆ ಅಷ್ಟು ದೂರದಲ್ಲಿರುವ ಅಮೇರಿಕಾ ಪ್ರೆಸಿಡೆಂಟರ ಮಧ್ಯಸ್ಥಿಕೆ ಬೇಡ. ಯುದ್ಧ ಮಾಡಿ ನಮ್ಮ ಸಮಸ್ಯೆಗಳನ್ನು ಬಿಡಿಸಬೇಕೆಂದು ನಾನು ಹೇಳುವುದಿಲ್ಲ. ಇಷ್ಟರ ವರೆಗೆ ನಾನು ನನ್ನ ಸಮಸ್ಯೆಗಳನ್ನು ಬಿಡಿಸುವಾಗ ಎಲ್ಲಿಯಾದರೂ ಯುದ್ಧಕ್ಕೆ ಹೋದ ಒಂದೇ ಒಂದು ಸಂದರ್ಭವನ್ನಾದರೂ ಸೂಚಿಸಲಾಪಿರಾ? ಹಾಗೆ ಯುದ್ಧ ಮಾಡದೆ ನಾವು ನಮ್ಮ ಸಮಸ್ಯೆಗಳನ್ನು ಬಿಡಿಸಿದೆವೆಂದು ಇತಿಹಾಸವೇ ಹೇಳೀತು' ಎಂಬುದು ಹಿಟ್ಲರನು ಮಾಡಿದ ರೀಚ್‌ಸ್ಟಾಗ ಭಾಷಣದ ಒಂದಂಶವಾಗಿದೆ.

ಹಿಟ್ಲರನು ರ್‍ಹೈನ್‌ಲೇಂಡ್, ಆಸ್ಟ್ರೀಯ, ಜೆಕೊಸ್ಲೊವೇಕಿಯ, ಮಾಮೆಲ್ ಮೊದಲಾದ ದೇಶಗಳನ್ನು ಜರ್ಮನಿಗೆ ಸೇರಿಸಿ ತನ್ನ ಮನೋರಥಗಳನ್ನು ಒಂದೊಂದಾಗಿ ಪೂರೈಸಿರುವುದು ಯುದ್ಧ ಮಾಡದೆ ನಿಜ. ಪರಂತು ಸೇನಾಬಲವಿಲ್ಲದಿದ್ದರೆ ಅವನಿಗೆ ಇವುಗಳನ್ನು ಸಂಪಾದಿಸುವುದು ಸಾಧ್ಯವಿತ್ತೇ? ಯುದ್ಧ ಮಾಡಿಲ್ಲವಾದರೂ, ಯುದ್ಧ ಮಾಡುವೆನೆಂಬ ಭಯಹಾಕಿಯೇ ಅವನು ತನ್ನ ಕಾರ್ಯಗಳನ್ನು ಸಾಧಿಸಿದ್ದಾನೆ ಇನ್ನು ಮುಂದೆಯೂ ಸಾಧಿಸುವನೆಂದಿದ್ದಾನೆ.

ಹಿಟ್ಲರನ ನ್ಯಾಯಬುದ್ಧಿ

ಮೊದಲು ಜರ್ಮನಿಗೆ ಸೇರಿಲ್ಲದ ಯಾವ ದೇಶವನ್ನಾದರೂ ಈಗ ನಾನು ಪುನಃ ಜರ್ಮನಿಗಾಗಿ ಪಡೆದಿಲ್ಲ. ಅಂಥಾದ್ದನ್ನು ಪಡೆಯುವ ಇಚ್ಛೆಯು ನನಗೆ ಇನ್ನು ಮುಂದಕ್ಕೂ ಇರುವುದಿಲ್ಲ ಎಂದು ಹಿಟ್ಲರನು ಹೇಳಿದ್ದಾನೆ. ಅವನ ನ್ಯಾಯಬುದ್ಧಿಯನ್ನು ನೋಡಿ ಪರಮಾಶ್ಚರ್ಯವಾಗುತ್ತದೆ. ಹಿಂದೆ ಇದ್ದುದನ್ನೇ ಹಿಟ್ಲರ ಸಂಪಾದಿಸುವುದಾಗಿದ್ದರೆ ಆಗ ಹಿಟ್ಲರನ ಜರ್ಮನ ಸಾಮ್ರಾಜ್ಯಕ್ಕೆ ಯುರೋಪಿನ ಈಗಿನ ಎಷ್ಟೂ ಕೆಲವು ಸ್ವತಂತ್ರರಾಷ್ಟ್ರಗಳು ಸೇರಿಕೊಳ್ಳಬೇಕಾಗುವುವು. ಹಿಟ್ಲರನಂತೆ ಮುಸಲೋನಿಯೂ ಹೇಳುವನಾದರೆ ಫ್ರಾನ್ಸ್, ಸ್ಪೈನ್, ಬಾಲ್ಕನ, ಇಂಗ್ಲಾಂಡ ಮೊದಲಾದ ದೇಶಗಳೆಲ್ಲ ಇಟಾಲಿಯನ ಸಾಮ್ರಾಜ್ಯಕ್ಕೆ ಸೇರಿಕೊಳ್ಳಬೇಕಾಗುವವು. ಯಾಕೆಂದರೆ ಒಂದು ಕಾಲದಲ್ಲಿ ಇವುಗಳೆಲ್ಲ ರೋಮನ್ ಸಾಮ್ರಾಜ್ಯಕ್ಕೆ ಸೇರಿದ್ದುವು.

ವಸಾಹತುಗಳು ಬೇಕು

'ನಮ್ಮ ಕೊಲನಿಗಳನ್ನು ನಮಗೆ ಕೊಟ್ಟುಬಿಟ್ಟರೆ ಮತ್ತೆ ನಮಗೂ ನಿಮಗೂ ಜಗಳವಿಲ್ಲ'ವೆಂದು ಹಿಟ್ಲರ ಇಂಗ್ಲಾಂಡಿಗೆ ಹೇಳಿದ್ದಾನೆ. ಆದರೆ ಆಫ್ರಿಕದ ವಸಾಹತುಗಳು ಹಿಟ್ಲರನಿಗೆ ಕೊಡುವುದು ಎರಡು ವರ್ಷಗಳ ಹಿಂದಿನಷ್ಟು ಸುಲಭವಾಗಿರುವುದಿಲ್ಲ. ಕೊಲನಿಗಳನ್ನು ಕೊಡಲಿಕ್ಕೆ ಇಂಗ್ಲಾಂಡು ಒಪ್ಪಿದರೆ ಸಾಲದು, ಬ್ರಿಟಿಶ್ ಸಾಮ್ರಾಜ್ಯಾಂತರ್ಗತ ಡೊಮಿನಿಯನುಗಳೂ, ಅಮೇರಿಕ, ಜಪಾನ ಮೊದಲಾದ ಇತರ ರಾಷ್ಟ್ರಗಳೂ ತಮ್ಮ ಸಮ್ಮತಿಯನ್ನು ಕೊಡಬೇಕು. ಹೀಗೆ ಕೊಡಲಿಕ್ಕೆ ಡಾಮಿನಿಯನುಗಳೂ ವಿರೋಧವಾಗಿವೆ, ಅಮೇರಿಕವು ಒಪ್ಪುವುದಿಲ್ಲ. ತನ್ನ ಘನತೆ ಗೌರವಗಳು ಬೆಳೆಯಬೇಕು, ಆಕ್ರಮಣ, ಕಲಹವನ್ನೆಬ್ಬಿಸುವ ಶಕ್ತಿ ಸಾಮರ್ಥ್ಯಗಳು ಹೆಚ್ಚಬೇಕು ಎಂಬುದಕ್ಕಾಗಿ ಜರ್ಮನಿಯು ವಸಾಹತುಗಳನ್ನು ಕೇಳುವ ಒಳಗುಟ್ಟು. ಸರ್ಪಕ್ಕೆ ಹಾಲಿಡುವ ಈ ಪರೋಪಕಾರ ಬುದ್ಧಿಯು ಇಂಗ್ಲಾಂಡಿಗೂ ಬರಲಿಕ್ಕಿಲ್ಲ. ಹಿಟ್ಲರನು ಬ್ರಿಟನ್ ಜರ್ಮನ್ ನೌಕಾಸಂಧಿಯನ್ನು, ಪೋಲಾಂಡ್ ಜರ್ಮನ್ ಒಪ್ಪಂದವನ್ನೂ, ಮಿ. ರೂಜವೆಲ್ಟರ ಶಾಂತಿ ಸಂದೇಶವನ್ನು ಕಸದ ಬುಟ್ಟಿಗೆ ಒಗೆದಿರುವುದರಿಂದ, ಅವನ ವಸಾಹತುಗಳ ಬೇಡಿಕೆಗೆ ಇದ್ದ ಅಲ್ಪ ಸ್ವಲ್ಪ ಸಹಾನುಭೂತಿಯೂ ಹೋಗಿಬಿಟ್ಟಿದೆ.

ಹಿಟ್ಲರ್ ಪೀಡೆ ಹೆಚ್ಚುತ್ತಿದೆ

ಇದನ್ನು ಹಿಟ್ಲರನು ತಿಳಿದೇ ಇದ್ದನಾದರೂ, ಹೇಗಾದರೂ ಮಾಡಿ ತನ್ನ ಮನೋರಥಗಳನ್ನು ಕೈಗೂಡಿಸಿಕೊಳ್ಳುವ ದೃಢಸಂಕಲ್ಪವನ್ನು ಅವನು ಮಾಡಿದ್ದಾನೆ. ಅವನ ವಿಮಾನ ಪಡೆ ಅತ್ಯು-

ಜಗತ್ತಿಗೆ ಹಿಟ್ಲರ್ ಪೀಡೆ ತಪ್ಪಲಿಲ್ಲ!

ಇಂಗ್ಲಾಂಡಿಗೆ ಜರ್ಮನ ವಿಮಾನ ದಾಳಿಯ ಭಯ

ಪೆಲೆಸ್ಟೈನಿಗೆ ಹಿಟ್ಲರನ ಅಭಯವೇ?

ಮಿ. ಬಾಲ್ಡ್‌ವಿನ್ನರ ಎಚ್ಚರಿಕೆ

ತ್ಕೃಷ್ಟವಿರುವುದು. ಅದು ರಸ್ಯದ ವಿಮಾನ ಪಡೆಗೂ ಮಿಗಿಲಾಗಿರುವುದೆಂದು ಕೆಲವು ತಜ್ಞರು ಹೇಳುತ್ತಾರೆ. ಪ್ರಪಂಚಕ್ಕೆ ಹಿಟ್ಲರನ ಭಯವೆಂದರೆ ಅವನ ವಿಮಾನ ಪಡೆಯ ಭಯವಾಗಿರುವುದು. ಅವನ ವಿಮಾನ ದಾಳಿಯಿಂದ ಲಂಡನ್, ಪೆರಿಸ್ ಮೊದಲಾದ ನಗರಗಳಿಗೆ ಆಗಬಹುದಾದ ಹಾನಿಯನ್ನು ಆಲೋಚಿಸಿಯೇ ಥರಥರ ನಡುಗಬೇಕಾಗುತ್ತದೆ. ಕ್ಷಣಮಾತ್ರದಲ್ಲಿ ಆ ನಗರಗಳು ಹೇಳ ಹೆಸರಿಲ್ಲದಂತೆ ಆಗಬಹುದು. ಅಷ್ಟು ಭಯಂಕರರಾಗಿ ಧ್ವಂಸಕಾರ್ಯವು ನಡೆಯುವುದು. ಹಿಟ್ಲರನ ಯುದ್ಧೋಪಕರಣಗಳಲ್ಲಿ ರೋಗಾಣುಗಳ ಬುರುಡೆಗಳೂ ಸೇರಿವೆ. ಈ ಬುರುಡೆಗಳನ್ನು ಎಲ್ಲಿಯಾದರೂ ಒಡೆದುಬಿಟ್ಟರೆ ಆ ಕ್ಷಣ ಅಲ್ಲಿ ಪ್ಲೇಗ್ ವಾಂತಿಭೇದಿ ಮೊದಲಾದ ಮಹಾರೋಗಗಳು ಹರಡಿಕೊಂಡು ವಿಮಾನದಾಳಿಯಿಂದ ನಾಶವಾಗದೆ ಉಳಿದದ್ದು ಏನಾದರೂ ಇದ್ದರೆ, ಅದರ ನಾಶಕಾರ್ಯವು ಈಗ ನಡೆಯುವುದು.

ಅನುಕೂಲ ಪ್ರಚಾರಕಾರ್ಯ

ಹಿಟ್ಲರನ ಅನುಕೂಲ ಪ್ರಚಾರ ಕಾರ್ಯವೂ ರಕ್ಷಣೋಪಾಯಗಳೂ, ಯುದ್ಧ ಸಿದ್ಧತೆಗಳೂ ಸರ್ವತ್ರ ಆಗಿರುವುವು. ಪೆಲೆಸ್ತೈನಿನಲ್ಲಿ ಭಯಂಕರ ಬ್ರಿಟನ್ ವಿರುದ್ಧ ಪ್ರಚಾರಕಾರ್ಯವು ನಡೆದಿದೆ. ಹಿಟ್ಲರನ ಏಜಂಟರಿಂದ ಹುರಿದುಂಬಿಸಲ್ಪಟ್ಟ ಅರಬರು ಬ್ರಿಟಿಷರ ವಿರೋಧ, ಹಿಟ್ಲರನೇ ತಮ್ಮ ಅಧಿನಾಯಕನಾಗಲಿ ಎನ್ನತೊಡಗಿದ್ದಾರೆ. ಈ ಪ್ರಚಾರಕಾರ್ಯವು ರಹಸ್ಯದಲ್ಲಿ ರೇಡಿಯೋ ಮೂಲಕ ನಡೆಯುವುದು. ಹಿಟ್ಲರನು ದೀನದಲಿತ ಜನರ ಉದ್ಧಾರಕನು ಎಂದು ಅರಬ ದೇಶಗಳಲ್ಲಿ ಹೇಳಲಾಗಿದೆ. ಅರಬ ಏಜಂಟರ ಹಳ್ಳಿ ಹಳ್ಳಿಗಳಿಗೆ ಹೋಗಿ ತಮ್ಮ ಉದ್ಧಾರಮಾಡಲಿಕ್ಕೆ ಹಿಟ್ಲರ ಬರಬೇಕೆನ್ನುವ ಅರ್ಜಿಗೆ ಜನರ ದಸ್ಕತುಗಳನ್ನು ಪಡೆಯುತ್ತಿದ್ದಾರೆ. ಅರಬರನ್ನು ಬ್ರಿಟಿಷರ ವಿರುದ್ಧ ಎತ್ತಿಕಟ್ಟಿ ನಿಲ್ಲಿಸಲಿಕ್ಕೆ ಹಿಟ್ಲರನು ಮಾಡಬೇಕಾದುದನ್ನೆಲ್ಲ ಮಾಡಿದ್ದಾನೆ. ಅಮೇರಿಕದ ಪೆರುವಿನಲ್ಲಿ ಹಿಟ್ಲರನ ಒಂದು ನೌಕಾಪಡೆಯಾಗಿದೆ. ಬ್ರೇಜಿಲಿನಲ್ಲಿ ಇಟಾಲಿಯನ ಹಡಗುಗಳ ಸಂಚಾರವಿದೆ. ದಕ್ಷಿಣ ಅಮೇರಿಕದ ಕೆಲವು ಪ್ರದೇಶಗಳನ್ನು ತಾವು ಹಂಚಿಕೊಳ್ಳಬೇಕೆಂಬ ಆಲೋಚನೆಯನ್ನು ಹಿಟ್ಲರ ಮುಸಲೋನಿಯರು ಮೊದಲೇ ಮಾಡಿದ್ದಾರೆ. ಬ್ರೆಜಿಲದ ಕೆಲವು ಭಾಗಗಳು, ಅರ್ಜೆಂಟೈನ ಉರಗ್ವೆಗಳನ್ನು ಅಂಟಾರ್ಕ್‌ಟಿಕಾ ಜರ್ಮನಿಕಾ ಎಂದು ಹೆಸರಿಟ್ಟು ಅಚ್ಚು ಹಾಕಿದ ನಕಾಶೆಗಳು ಈಗ ಅಲ್ಲಿ ಬಹಳ ಪ್ರಚಾರದಲ್ಲಿವೆ. ಮಾಲಪ್ರಿಗೋ ಎಂಬುದು ಜರ್ಮನರ ನೌಕಾ ಠಾಣೆಯಾಗಿರುವುದು. ಪೆರುವಿನಲ್ಲಿ ಇಟಾಲಿಯನರ ಬೋಂಬಿನ ಕಾರ್ಖಾನೆಯಾಗಿದೆ. ಪೇರುವಿನ ಆರ್ಥಿಕ ವ್ಯವಸ್ಥೆ ಅರ್ಧದಷ್ಟು ಇಟಲಿಯ ಕೈಯಲ್ಲಿದೆ. ಹೀಗೆ ಹಿಟ್ಲರ ಪೀಡೆಯು ಸಾರ್ವತ್ರಿಕವಾಗಿ ಪರಿಣಮಿಸಿರುವದು.

ಬಾಲ್ಡ್ವಿನ್ನರ ಎಚ್ಚರಿಕೆ

'ಯುದ್ಧದಿಂದ ನಾಗರಿಕತೆಯು ನಾಶವಾಗಲೂ ಬಹುದು. ಆಗದೆ ಇರಲೂಬಹುದು. ಪರಂತು ನಾಜಿಗಳ ವಿಜಯದಿಂದ ನಾಗರಿಕತೆಯು ಸರ್ವನಾಶವಾಗುವುದು ಖಂಡಿತ. ಒಂದು ಜನಾಂಗವು ತನಗಾಗಬೇಕು ಬೇಕಾದ ಧ್ಯೇಯಾದರ್ಶಗಳನ್ನಿಟ್ಟುಕೊಳ್ಳಬಹುದು. ಅವೇ ಧ್ಯೇಯಾದರ್ಶಗಳನ್ನು ಇತರ ರಾಷ್ಟ್ರಗಳೂ ಸ್ವೀಕರಿಸಬೇಕು ಎನ್ನುವುದು ಪರಮ ಅನ್ಯಾಯ. ಅಂಥ ಅನ್ಯಾಯಕ್ಕೆ ತಕ್ಕ ಪ್ರತೀಕಾರವನ್ನು ಎಲ್ಲ ಸ್ವತಂತ್ರ ರಾಷ್ಟ್ರಗಳು ಮಾಡಲೇ ಬೇಕು' ಎಂದು ಮಿ. ಬಾಲ್ಡ್ವಿನ್ನರೂ ನಾಝಿ ತತ್ವ ಪ್ರಚಾರವನ್ನು ಪ್ರತಿಭಟಿಸುವ ಎಚ್ಚರಿಕೆಯನ್ನು ಕೊಟ್ಟಿದ್ದಾರೆ.

ಇಂಗ್ಲಾಂಡಿನ ಕಾರ್ಯಕ್ರಮ

ಅರೇಬಿಯದಲ್ಲಿ ಹಿಟ್ಲರ ಪ್ರಚಾರವನ್ನು ತಡೆಗಟ್ಟಲಿಕ್ಕೆ ಬ್ರಿಟನು ಪಾಲಸ್ತೀನ ಸಮಸ್ಯೆಯನ್ನು ಅರಬರಿಗೆ ಅನುಕೂಲವಾಗುವ ಹಾಗೆ ತೀರ್ಮಾನಿಸಲಿದೆ. ಕೈರೋದಿಂದ ಅರಬ ಶಿಷ್ಟ ಮಂಡಲವು ಕೊನೆಯ ಬಾರಿಗೆ ಕಳುಹಿಸಿಕೊಟ್ಟ ಸೂಚನೆಗಳನ್ನು ಬ್ರಿಟಿಷ ಮಂತ್ರಿಮಂಡಲವು ಸ್ವೀಕರಿಸಬಹುದು. ಪಾಲಸ್ತೀನಿನಲ್ಲಿ ನ್ಯಾಶನಲ್ ಸರಕಾರ ಸ್ಥಾಪನೆಯಾಗಬೇಕು, ಯಹೂದಿಯರ ಜನಸಂಖ್ಯೆಗೆ ಮಿತಿ ಇರಬೇಕು, ಅವರಿಗೆ ಆಸ್ತಿ ಮಾರಾಟದ ಅಧಿಕಾರವಿರಬಹುದು, ಮೂರು ವರ್ಷಗಳೊಳಗೆ ರಾಷ್ಟ್ರೀಯ ಸರಕಾರವು ಏರ್ಪಡಬೇಕು, ಅದಕ್ಕೆ ಬೇಕಾಗಿ ಕಾನ್ಸ್ಟಿಟ್ಯುಯೆಂಟ್ ಎಸೆಂಬ್ಲಿಯನ್ನು ಮಾಡಬೇಕು ಎಂಬಿತ್ಯಾದಿ ಅರಬರ ಸೂಚನೆಗಳಿವೆ. ಈ ಸೂಚನೆಗಳು ಮನ್ನಿಸಲ್ಪಟ್ಟರೆ ಯಹೂದಿಯರಿಗೆ ಬೇಕಾದುದೆಲ್ಲ ದೊರೆಯದಿದ್ದರೂ ಅವರು ಸುಖಜೀವನ ನಡೆಸಬಹುದು. ಅರಬರೂ ತೃಪ್ತಿಯಿಂದಿರಬಹುದು. ಈ ಸಮಸ್ಯೆಯು ಹೀಗೆ ತೀರ್ಮಾನವಾಗುವುದು ಇಂಗ್ಲಾಂಡಿಗೂ ಅನುಕೂಲವಾಗಿದೆ.

ಅಂತಃಕಲಹವು ಬೇಡ

ಇಂಗ್ಲಾಂಡಿಗೆ ಈ ಸಂದಿಗ್ಧಕಾಲದಲ್ಲಿ ಅಂತಃಕಲಹವು ಬೇಡವಾಗಿದೆ. ಆದ್ದರಿಂದ ಡಿ ವೆಲೆರನ ಅಂಕೆಯನ್ನು ಮನ್ನಿಸಿ ಅದು ತನ್ನ ನಿರ್ಬಂಧ ಮಿಲಿಟರಿ ಶಿಕ್ಷಣದ ಕಾನೂನು ಐರ್ಲಾಂಡಿಗೆ ಅನ್ವಯವಾಗುವುದಿಲ್ಲವೆಂದಿದೆ. ಇಂಗ್ಲಾಂಡಿನಲ್ಲಿ ಯುದ್ಧ ಸಿದ್ಧತೆಯು ಭರದಿಂದಾಗಿದೆ. 'ನಮಗೆ ೧೦ ಲಕ್ಷ ಮಂದಿ ದೇಶರಕ್ಷಕರು ಬೇಕು. ಕೊನೆಯ ತನಕವೂ ನಾವು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವೆವು. ನಾವು ಯುದ್ಧಕ್ಕೆ ಹೆದರುತ್ತೇವೆಂದು ಜರ್ಮನಿ ನಮ್ಮನ್ನು ಹಂಗಿಸುತ್ತದೆ. ಇದಕ್ಕೆ ನಾವು ಸರಿಯಾದ ಉತ್ತರವನ್ನು ಕೊಡಬೇಕು' ಎಂದು ಡಿಫೆನ್ಸ್ ಮಂತ್ರಿ ಲಾರ್ಡ ಚಾಟ್‌ಫೀಲ್ಡರು ತಮ್ಮ [illegible] ಭಾಷಣದಲ್ಲಿ ತಿಳಿಸಿರುವರು.

ಹಿಟ್ಲರನ ದಂಡಯಾತ್ರೆ ಪೋಲಾಂಡಿಗೆ

ಹಿಟ್ಲರನ ಮುಂದಿನ ದಂಡಯಾತ್ರೆಯು ಪೋಲಾಂಡಿಗೆ ಆಗಬಹುದು. ಅವನು ಡಾಂಜಿಂಗ ಓಣಿಯನ್ನು ಜರ್ಮನಿಗೆ ಬಿಟ್ಟುಕೊಡುವ ಕುರಿತು ಪೋಲಾಂಡಿಗೆ ಕೆಲವು ಶರ್ತಗಳನ್ನು ಹಾಕಿದ್ದಾನೆ. ಅದಕ್ಕೆ ಪೋಲಾಂಡು—'ನಿಮ್ಮ ಯುದ್ಧ ಸಿದ್ಧದ ಬೆದರಿಕೆಗೆ ನಾವು ಮಣಿಯುವವರಲ್ಲ. ನೀವು ಯುದ್ಧಕ್ಕೆ ಬರುವಿರಾದರೆ ನಾವೂ ಅದಕ್ಕೆ ಸಿದ್ಧರಿದ್ದೇವೆ. ರಾಜಿಯಿಂದ ನಮ್ಮ ನಿಮ್ಮ ವಿವಾದಗಳನ್ನು ತೀರ್ಮಾನಿಸುವುದರಿಂದ ಮಾತ್ರ ಪ್ರಯೋಜನವಲ್ಲದೆ ಯುದ್ಧದಿಂದ ಫಲವಿಲ್ಲ'ವೆಂದು ಠೀಕಾದ ಉತ್ತರ ಕೊಟ್ಟಿದೆ. ಈಗ ಪೋಲಾಂಡಿನ ಗಡಿ ಪ್ರದೇಶದಲ್ಲಿ ಹಿಟ್ಲರನು ಸೈನ್ಯವನ್ನು ತಂದಿಟ್ಟಿದ್ದಾನೆ. ಅದು ಗಡಿ ಕಾಯಲಿಕ್ಕಾಗಿ ಯುದ್ಧಕ್ಕೆ ಅಲ್ಲ ಎಂದು ಹಿಟ್ಲರ ಹೇಳಿದ್ದಾನೆ.

ಗಡೀಪಾರು

ಬ್ರಿಟನಿನಲ್ಲಿ ಬ್ರಿಟನಿನ ವಿರುದ್ಧ ಅಪಪ್ರಚಾರ ಮಾಡುವವರೆಂದು ಬ್ರಿಟಿಷ್ ಸರಕಾರವು ಕೆಲವು ಮಂದಿ ಜರ್ಮನರನ್ನು ಒತ್ತಾಯದಿಂದ ಹಿಂದಕ್ಕೆ ಕಳುಹಿಸಿತ್ತು. ಆದರಿಂದ ಸಿಟ್ಟಾದ ಹಿಟ್ಲರ ಜರ್ಮನಿಯಲ್ಲಿದ್ದ ಹಲವು ಬ್ರಿಟಿಷರನ್ನು ಗಡೀಪಾರು ಮಾಡಿದ್ದಾನೆ. ಮಿ. ಚೇಂಬರ್ಲೇನರ ಹಾಗೂ ಹಿಟ್ಲರನ ಭಾವಚಿತ್ರಗಳು ಒಟ್ಟಿಗೆ ಇರುವ ಟಪಾಲು ಕಾರ್ಡನ್ನು ಮುಂದಕ್ಕೆ ಮಾರಕೂಡದೆಂದೂ ಜರ್ಮನಿಯಲ್ಲಿ ಆಜ್ಞೆಯಾಗಿದೆ.

ಅಮೇರಿಕದ ರಕ್ಷಣೆಗಾಗಿ

ಮಿ. ರೂಜವೆಲ್ಟರು ಸೈನಿಕ ಸಿದ್ಧತೆಗೆ ೧೮೫ ಮಿಲಿಯ ಡಾಲರುಗಳ ಖರ್ಚಿನ ಅಧಿಕಾರವನ್ನು ಕಾಂಗ್ರೆಸಿನಿಂದ ಅಪೇಕ್ಷಿಸಿದ್ದಾರೆ. ಅಲ್ಲಿ ಜರ್ಮನ ವಸ್ತು ಒಡವೆಗಳ ಬಹಿಷ್ಕಾರಕ್ಕೆ ಆರಂಭವಾಗಿದೆ. ಅಮೇರಿಕವು ಜರ್ಮನಿಯಿಂದ ವರ್ಷಕ್ಕೆ ೧೦ ಮಿಲಿಯ ಡಾಲರುಗಳ ವಿಜ್ಞಾನ ಉಪಕರಣಗಳನ್ನು ತರಿಸಿಕೊಳ್ಳುತ್ತದೆ. ಅಮೇರಿಕದ ವಿಜ್ಞಾನಿಗಳು ಇವನ್ನೆಲ್ಲ ಬಹಿಷ್ಕರಿಸುವ ನಿರ್ಣಯ ಮಾಡಿದ್ದಾರೆ.

ರಸ್ಯದ ಯುದ್ಧ ಸಿದ್ಧತೆ

ರಸ್ಯದಲ್ಲಿ ಮೇ ದಿನವು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ೧೫ ಲಕ್ಷ ಸೈನಿಕರು ಭಾಗವಹಿಸಿದ್ದರು. ನೂರಾರು ಟ್ಯಾಂಕುಗಳು ೭೦೦—೮೦೦ ಬಾಂಬರುಗಳು ಮೊದಲಾದ ಆಧುನಿಕ ಯುದ್ಧೋಪಕರಣಗಳ ಪ್ರದರ್ಶನವಾಯಿತು. ಕೆಂಪು ಸೈನ್ಯವು ದೊಡ್ಡ ಯುದ್ಧಕ್ಕೆ ಸಿದ್ಧ ಎಂಬುದು ಸಾರ್ವತ್ರಿಕವಾಗಿ ಸಾರಲಾಯಿತು. ರಸ್ಯದೊಡನೆ ಬ್ರಿಟನ್ ನಡೆಸುತ್ತಿರುವ ಮಾತುಕತೆಗಳು ಇನ್ನೂ ಮುಗಿದಿರುವುದಿಲ್ಲ. ತನ್ಮಧ್ಯ ರಸ್ಯದ ವಿದೇಶಾಂಗ ಮಂತ್ರಿಗಳಾದ ಲಿಟ್ವಿನೋಫರು ತಮ್ಮ ಪದವಿಗೆ ರಾಜಿಯನ್ನು ಕೊಟ್ಟಿರುತ್ತಾರೆ. ಇದು ಬ್ರಿಟನ್-ರಸ್ಯ ಒಡಂಬಡಿಕೆಗೆ ಅನುಕೂಲವೆಂದೂ ಪ್ರತಿಕೂಲವೆಂದೂ ಭಿನ್ನಭಿನ್ನಾಭಿಪ್ರಾಯ ಉಂಟಾಗಿದೆ. ಆದರೆ ಅದರ ನಿಶ್ಚಯವು ಮುಂದಿನ ಘಟನಾ ಚಕ್ರದಿಂದ ತಿಳಿಯಬೇಕು.

ಹಿಟ್ಲರನ ಮತ್ತೊಂದು ತಂತ್ರ

ಬ್ರಿಟನ್ ರಸ್ಯ ಒಡಂಬಡಿಕೆಯಾಗಲಿಕ್ಕೆ ಇಷ್ಟು ದಿನಗಳು ಕಳೆಯುವದು ಹಿಟ್ಲರನಿಗೆ ಅನುಕೂಲವಾಗಿದೆ. ಅವನು ನೋರ್ವೆ ಸ್ವೀಡನ್ ಮೊದಲಾದ ಸ್ಕೇಂಡಿನೇವಿಯನ್ ಮತ್ತು ಬಾಲ್ಟಿಕ ರಾಷ್ಟ್ರಗಳೊಂದಿಗೆ ಸ್ನೇಹಾಚಾರದ ಕರಾರುಗಳನ್ನು ಮಾಡ ತೊಡಗಿದ್ದಾನೆ. ಈ ರಾಷ್ಟ್ರಗಳು ಮುಂದಿನ ಯುದ್ಧದಲ್ಲಿ ಹಿಟ್ಲರನೊಡನೆ ಕೂಡಿಕೊಳ್ಳದಿದ್ದರೂ, ಉದಾಸೀನವಾಗಿದ್ದರೂ ಕೂಡ ಶಾಂತಿ ಪಕ್ಷದವುಗಳಿಗೆ ಹಿಟ್ಲರನೊಡನೆ ಯುದ್ಧದಲ್ಲಿ ವಿಜಯಿಯಾಗುವುದು ಬಹಳ ಕಷ್ಟವಾಗುವುದು. ಆದ್ದರಿಂದ ರಸ್ಯ-ಬ್ರಿಟನ್-ಫ್ರಾನ್ಸ್ ಒಪ್ಪಂದವಾಗುವುದು ಈಗ ಅತ್ಯಂತ ಅವಶ್ಯಕವಾಗಿದೆ. ಯಾಕೆಂದರೆ ರಸ್ಯದ ಬಲವು ಅಪ್ರತಿಮವಾದ್ದೆಂಬುದನ್ನು ಹಿಟ್ಲರನೂ ಒಪ್ಪಿದ್ದಾನೆ. ಹಿಟ್ಲರನಿಗೆ ಯುರೋಪಿನ ಯಾವುದಾದರೂ ರಾಜ್ಯಶಕ್ತಿಯ ಭಯವಿರುವುದಾದರೆ, ಅದು ರಸ್ಯದ ಒಂದು ಶಕ್ತಿಯ ಭಯವಲ್ಲದೆ ಬೇರೆ ಯಾವುದರದ್ದೂ ಅಲ್ಲ. ಆದ್ದರಿಂದ ಬ್ರಿಟಿಷ್-ಫ್ರಾನ್ಸ್-ರಸ್ಯ ಒಡಂಬಡಿಕೆಯ ಪ್ರಕರಣದಲ್ಲಿ ಮಿ. ಲಿಟ್ವಿನೋಫರ ರಾಜೀನಾಮೆಯ ಕಾರಣವನ್ನು ತಿಳಿದು ಬ್ರಿಟನ್ ಫ್ರಾನ್ಸುಗಳು ಒಡಂಬಡಿಕೆಯಾಗುವಂತೆ ಸರ್ವ ಪ್ರಯತ್ನಗಳನ್ನು ಮಾಡಬೇಕು. ಅಲ್ಲವಾದರೆ ಹಿಟ್ಲರ ಪೀಡೆಯು ಸರ್ವಥಾ ತಪ್ಪಲಿಕ್ಕಿಲ್ಲ.

S. U. N. & Co.,

Silk Merchants,

Chaukhamba, BENARES CITY.

ಈಗಿನ ತರಹ(ಕಾಶಿ) ಬನಾರಸ್ ಶೀರೆ ನಿಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು.

18 ಮೊಳದ 2¼ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ. 45ರಿಂದ 150. ಸಾಧಾರಣತರದ್ದು 18 ಮೊಳ ಸಣ್ಣ ಬುಟಿ ಶೀರೆಗಳು ರೂ. 35ರಿಂದ ರೂ. 55. ಮಡಲು ಸಾದಾ ಶೀರೆ 18 ಮೊಳ ರೂ. 32ರಿಂದ ರೂ. 65. ಉದ್ದ ಮೊಳ 10, ಅಗಲ 2¼ ರೂ. 20ರಿಂದ 35ರ ವರೆಗೆ. ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ:—

ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬನಾರಸ್ ಸಿ.

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ವ್ಯಕ್ತಿ, ವ್ಯಕ್ತಿಗಳ ಚಿತ್ರ. ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿರೂಪಗಳು, ಘಟನೆಯ ರೂಪಗಳು ಘಟನೆಯ ರೀತಿಗಳು, 'ಕಾಂತ' ಅವರಣ—ಇವೆಲ್ಲ ವಾಸ್ತವವಾದುವು. ಹಳ್ಳಿಯು ಸಾವಿರಾರು ಕೋಟಿ ಕುಂದಾಪುರದೊಳಗಿನ ಒಂದು ಗ್ರಾಮ ಸಮೂಹ, ವ್ಯಕ್ತಿಗಳು ವಹಿಸಿದ ರೀತಿಗಳು ಹಲವು ಅಲ್ಲಿ ನವೆ. ಒಂದು ಪಾತ್ರಪರಿಚಯಗಳೇ ಈ ಚಿತ್ರಗಳ ಗುರಿ. ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಅನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು ನಾನು ಬರೆದ ಪ್ರಸ್ತಾವನೆಯು ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅದರ ಮುಂದಿರುವ ಪಾತ್ರಗಳು ಇಂಥವು—ಎಂದು ಒಪ್ಪಿಸಿಕೊಳ್ಳುತ್ತೇನೆ. ಇತಿ,

ಶಿವರಾಮ ಕಾರಂತ

೩೩. ಜುವಾಂ ಸೋಜರು

ನಮ್ಮ ಊರಿಗೆ ಜುವಾಂ ಸೋಜರು ಬಂದ ಇತಿಹಾಸವೆಂದರೆ ನಮ್ಮ ದೇಶಕ್ಕೆ ಇಂಗ್ಲಿಷ್ ಇಂಡಿಯಾ ಕಂಪೆನಿ ಬಂದ ಹಾಗೆ—ಎಂದು ನಮ್ಮ ಶಾಲಾ ಮಾಸ್ತರು ಹೇಳುವುದುಂಟು. ಅದರ ಅರ್ಥ ನಮ್ಮ ಊರವರಿಗೆ ಆಗುತ್ತದೆಯೋ ಇಲ್ಲವೋ. ಅದರೆ—ನಮ್ಮ ಊರಿನಲ್ಲಿ ನಾಲ್ಕು ಕಡೆಯಿಂದ ಎಳೆಯುತ್ತಿರುವ ಎತ್ತುಗಳ ಜತೆಗೆ ಇನ್ನೊಂದು ನಾಲ್ಕು ಕಡೆಗೆ ಎಳೆಯುವ ಹೊಸ ಕೋಣಗಳನ್ನು ಹೂಡಿದ ಹಾಗಾಯಿತು.

ಇಪ್ಪತ್ತೈದು ವರ್ಷಗಳ ಹಿಂದೆ ನಮ್ಮ ಊರಲ್ಲಿನ ಮುಖ್ಯ ಜನಸಂಖ್ಯೆ—ಎಂದರೆ ಬ್ರಾಹ್ಮಣರು, ನಾಡವರು, ಉಳಿದವರು ಇಲ್ಲ ಎಂದಲ್ಲ. ಬ್ರಾಹ್ಮಣ್ಯ, ಗದ್ದೆ-ಒಕ್ಕಲು ಮುಖ್ಯ ಇವರು ಬೇರು ಆ ಮೇಲೆ ಕಲಿಯುಗಕ್ಕೆ ಸಮನಾಗಿ ಒಂದೊಂದೇ ಪಂಗಡ ಮೇಲೆದ್ದು ಇವರಿಗೆ ಮುದರ ಸಹ ಮನುಷ್ಯನಾದ ಕಥೆ ನಿಮಗೆ ಗೊತ್ತುಂಟು. ಆದರೆ ಇವರೆಲ್ಲರು ಸೇರಿದರೂ ಇವರ ಒಲ ತಪ್ಪಿಸುವ ಪಂಗಡ ಬಂದದ್ದು—ನಮ್ಮ ಜುವಾಂ ಸೋಜರು ಬಂದ ಮೇಲೆ. ಇವರೂ ಜುವಾಂ ಸೋಜರೇ. ನಮ್ಮ ಊರಿನ ಮುಖಂಡರಲ್ಲ ಆದರೆ ಕೊಯಿಲೋ ಪಾದ್ರಿಗಳು ಹಿಂದೆ ನಿಂತು—ಜುವಾಂ ಸೋಜರಿಂದ ತಮ್ಮ ಉದ್ದೇಶ ಚಲಾಯಿಸುವುದರಿಂದ ಜುವಾಂ ಸೋಜರು ಆರು ಭಾಗಗಳ ಸೈಕಿ ಒಬ್ಬರು ಅನಿಸಿದ್ದಾರೆ.

ನಾನು ಚಿಕ್ಕವನಿರುವಾಗ ನಮಗೆ ಯಾರಾದರೂ ಕ್ರಿಶ್ಚನರನ್ನು ಕಂಡರೆ ಅವರು ಕ್ರಿಶ್ಚನರು ಎಂದು ತೋರಿಸುವ ಹಂಬಲ. ಊರಿಗೆ ಡಿಸ್ಟ್ರಿಕ್ಟ್ ಕಲೆಕ್ಟರ್, ಬಂಗೀಶಯರು ಕೋಟು ಗುಮ್ಮನು—ಇವರೆಲ್ಲ ಬಂದರೆ ಹೇಗೆ ಆಶ್ಚರ್ಯವೋ ಮೊದಲು ಮೊದಲು ನಮಗೆ ಇವರನ್ನೂ ಇವರ ಉಡುಗೆಯನ್ನೂ ಕಂಡರೆ ಆಶ್ಚರ್ಯ ಆಗುತ್ತಿದೆ. ನಮ್ಮ ಊರಿನಲ್ಲಿ ಅವರ ಜನಸಂಖ್ಯೆ ಸಾಕಷ್ಟು ಏರಿಬಿಟ್ಟಿದೆ. ನಿತ್ಯ ಅವರನ್ನು ಕಾಣುತ್ತೇವೆ.

ಮೊದಲು ನಮ್ಮ ಊರಿನ ಮಹಾಲಿಂಗೇಶ್ವರನ ಗುಡಿಯಲ್ಲಿ ಜಾತ್ರೆಯಾದರೆ ಗಂಗೊಳ್ಳಿಯಿಂದಲೋ, ಬಾರಕೂರಿನಿಂದಲೋ ಕೆಲವರು ತಾವು ವ್ಯಾಪಾರಿಗಳು ಬರುತ್ತಿದ್ದರು. ಅಂಥವರಲ್ಲಿ ಮೊದಲಿಗೆ ಕಾಣಿಸಿದವರು ಜುವಾಂ ಸೋಜರು. ಸೋಜರ ಆಕಾರ ಉರುಟು. ಆಗ ಹೇಗೆ ಗುಂಡು ಗುಂಡು ಮುಖ, ಮೋಲು ಮೀಸೆಗಳಿದ್ದವೋ ಈಗಲೂ ಹಾಗೇ ಇದ್ದಾರೆ. ಯೂರೋಪಿನಲ್ಲಿ ಮಹಾ ಯುದ್ಧವಾಗಿ ಹಲವು ಅರಸರು ರಾಜ್ಯ ಕಳೆದುಕೊಂಡರೂ ಜುವಾಂ ಸೋಜರ ಹೂವಿನ ಟೋಪಿಯಾಗಲಿ ಚೌಕಳಿ ಅಂಗಿಯಾಗಲಿ ತಪ್ಪಲು ಆಗಲಿಲ್ಲ. ಅವರು ಪರಿಶೆಯಲ್ಲಿ ತಾಮ್ರದ ಗುಡಾಣ ಕೊಳಪಾನ ದಬಂ ರಾಶಿ ಹಾಕಿಕೊಂಡು ಸಾಹುಕಾರರಿಗೆ ಮಾಡಿದಾಗ ನಮ್ಮ ಊರವರಿಗೆ 'ಮನೆಗೇ ಕೊಪ್ಪರಿಗೆ ಬಂದ ಹಾಗೆ' ಅನಿಸಿತು. ಮೊದಲು ನಮ್ಮಲ್ಲಿಗೆ ತಾಮ್ರದ ವ್ಯಾಪಾರ ತಂದ ಮುಕದಮ್ ಸಾಹೆಬರು ಬರುತ್ತಿರುವಾಗಲೇ ಇವರು ಬಂದರು. ಅವರು ಹಾಕುವ ಕಲಾಯಿ, ಬೆಸಗೆ ನಾಲ್ಕು ದಿನ ಉಳಿಯುವುದಿಲ್ಲ ಎಂದು ಬೇಸರಿಸುವ ಕಾಲದಲ್ಲಿ ಇವರು ಬಂದುದರಿಂದ ಹೊಸ ಇನ್ನೊಬ್ಬರು ಭಾರಿ ಸಾಹುಕಾರರು ಊರಿಗೆ ಬಂದರು' ಎಂಬ ಹೆಸ್ರು ಎಲ್ಲರಿಗೂ ಆಯಿತು. ಜುವಾಂ ಸೋಜರ ಬಾಯಿ, ಕೈ ಬೆಸಗೆಗಳಿಂದ (ಈ ಪಾತ್ರೆ, ಈ ಕೊಳಗೆ, ಈ ಬೋಗುಣಿ—ನೀವು ತೆಗೆದುಕೊಂಡು ಹೋಗಿ, ನೂರು ವರ್ಷ ಬಂದರೆ ಆಯಿತಲ್ಲ'—ಎಂಬ ವಿಶ್ವಾಸ ಜನರಿಗೆ ಉಂಟಾಯಿತು.

ಸರಿ, ಮೊದಲಿನ ವರ್ಷ ಅವರಿಗೆ ಆದ ವ್ಯಾಪಾರ ಇನ್ಯಾರಿಗೂ ಆಗಲಿಲ್ಲ. ಹೀಗೆ ನಾಲ್ಕು ವರ್ಷ ನಡೆಯುವಾಗ ನಮ್ಮ ನರಸ ಉಪಾಧ್ಯರು, ಸೀತೈತಾಳರಂಥವರು ಸೋಜರನ್ನು ಕಂಡು—'ಸೋಜರೇ ವರ್ಷ ವರ್ಷ ಬಂದು ಹೋಗುವ ಬದಲಿಗಿಂತ ನಮ್ಮ ಊರಲ್ಲಿ ಒಂದು ಕಾಯಂ ಬಿಡಾರ ಮಾಡಬಾರದೇ? ಒಳ್ಳೆ ವ್ಯಾಪಾರವಾದೀತು ರಸ್ತೆ ಬದಿಯಲ್ಲಿ ಒಂದು ಲಾಯ ಹಾಕಿ ಕುಳಿತುಬಿಟ್ಟರೆ' ಅಂದರು. ಐತಾಳರ ಸ್ನೇಹ ಹಾಗೂ ಅವರ ದಾಕ್ಷಿಣ್ಯಕ್ಕೆ 'ಆಯಿತು' ಎಂದರಂತೆ. ಈ ಹೊತ್ತಿನ ತನಕವೂ ಜುವಾಂ ಸೋಜರ ಹತ್ತಿರ ನಮ್ಮ ಊರವರು 'ಸೋಜರೇ, ದಿಮ್ಮನವರ ಬೆನ್ನಾಗಿಲ್ಲವೆ?' ಎಂದು ಕೇಳಿದರೆ 'ಏನೂ ಸ್ವಾರಸ್ಯವಿಲ್ಲ, ನಿಮ್ಮ ಊರಿಗೆ ಬಂದು ಸಿಕ್ಕಿಬಿದ್ದೆ. ನಮ್ಮ ಊರಿಗೆ ಹೋಗುವುದು ನಾಳೀಚು. ಇಲ್ಲೆ ಕಾಮ್ತು ಕುಟ್ಟಿ ಜೀವನ ಮಾಗುವ ಹಾಗಿಲ್ಲ' ಎಂದರೆ. ಮುಡಿ ಗದ್ದೆ ಸಾಗುವಳಿ ಮಾಡಬೇಕು' ಅನ್ನತೊಡಗಿದರು.

ಇಪತ್ತಾದರೂ ಸೋಜರ ಹತ್ತಿರ ವ್ಯಾಪಾರ ಹೇಗೆ ಎಂದು ಕೇಳಿದ್ದರೆ ಮಹಾಪ್ರಾಯರೇ—ಹಿರಿಯರು ಮಾಡಿದ ಕಾಸು ಇಲ್ಲಿ ಬಂದೆ ನಿಕಾಲಿಯಾದು ಕ' ಎನ್ನುತ್ತಾರೆ. ಅದರೆ ಅವರು ಬರುವಾಗ ಹಾಕಿದ ಕೊಗಳು ಹೋಗಿ ಹಂಚಿನ ಉಪ್ಪರಿಗೆ ಮನೆಯಾಯಿತು. ಅಷ್ಟೇ ಅಲ್ಲ ಇರಲು ಅಂಗಡಿ ಆಯಿತು, ಗೇಣಿ ವಹಿವಾಟಿನ ವ್ಯಾಪಾರದಲ್ಲಿ ಬಿಡುವಿಲ್ಲ. ಪ ಕೆವರ್ಷ ನಷ್ಟವಾಗಿಕೊಂಡೇ ಈ ಸ್ಥಿತಿಗೆ ಅವರು ಬಂದುದು ಕಂಡರೆ ಯಾರಿಗೂ ದುಃಖವಾಗುವುದು ಸರಿ.

ಜುವಾಂ ಸೋಜರ ಸಾಹಸಿಕ ಹರಿಕಥೆ ಕಂಡವರ ಮೊದಲಿಗೆ ಸೀತೈತಾಳರು. ಅನಂತರ ಅವರ ಹೆಸರು ಕೇಳಿದವರು ತಿಡಿತಿಣ್ಣಿಯಾದವರೂ ಸೀತೈತಾಳರೇ. ಏನು ಕಥೆಯಿಂದ ಅವರನ್ನೇ ಕೇಳಬೇಕು. ಸೀತೈತಾಳರ ಸಂದರ್ಭ ಯಾರ ಮನೆ ಜಗ ಬಿಡಾರದಿಂದ ಸೇರಿ ಇಲ್ಲ ನಾಲ್ಕು ಜನರ ಮುಂದೆ ಬೆಳಿಸು ತ್ತಾನೆ. ... ಸೇರಿದಂತೆ ಮಾತನಾಡುವುದು. ಇದು ಹೀಗಾಗಿ ಜುವಾಂ ಸೋಜರ ಹಾವಭಾವಗಳು ಅವರು ಕಟ್ಟೆ ಕಟ್ಟೆಗೆ ತೊಡಗಿದರು. ಎರಡು ನಾಲ್ಕು ವರ್ಷದೊಡನೆ ಗಿರಾಕಿ—ಸಂಬಂಧ ಹೂಡಲಿಕ್ಕೆ ಜುವಾಂ ಸೋಜರಿಗೂ ಇವರೇ ಕೊನೆಗೆ—ಅವರು ಅಷ್ಟು ಸೂಕ್ಷ್ಮ ಯೋಚನೆ ಮಾಡಿದಾಗ ಒಬ್ಬೊಬ್ಬರ ಅಸ್ತಿ ಸೋಜರನ್ನೆ ಗಿರಾಕಿಯಾಗಿ ತಗಲಿಹಾಕಿಸಿದವರೂ ಐತಾಳರೆ. ಹೀಗಾಗಿ ಅವರಿಗೆ ಐತಾಳರ ಬಂದೆ. ಮುಂದೆ ಸ್ವರೂಪವಾದರು, ಕೇವು ದಿನಗಳ ತನಕ ಮಾತ್ರ.

ಒಂದು ವರ್ಷ ಮಳೆ ಕಡಿಮೆಯಾಯಿತು. ಐತಾಳರ ಸ್ವಂತ ನಾಲ್ಕು ಗೇಣಿ ಒಕ್ಕಲುಗಳು ಗೇಣಿ ಸಾಮುಹಾಕಿದರು. ಐತಾಳರು 'ಸ್ವಾಮಿ ಕಾಹಿ' ಅಂದರೂ ಅವರನ್ನು ಬಿಡಲಾರೆ ಎಂದು ಬೆಳಿಗ್ಗೆ ಸಂಜೆ ಒಕ್ಕಲು ಮನೆಯ ಮುಂದೆ ಸತ್ಯಾಗ್ರಹಕ್ಕೆ ತೊಡಗಿದರು. ಒಂದು ರಾತ್ರಿ—ಎಪ್ರಿಲ್ ತಿಂಗಳ—ಮಳೆ ಕ... ಐತಾಳರ ಒಕ್ಕಲುಗಳನ್ನು ಕರೆಸಿ ನಾಳೆಗೆ ಭತ್ತ ಹಾಕದ ದಿನ ಬಿಟ್ಟು ... ಬಿಟ್ಟರೆ ನಾನಾದರೂ ಗದ್ದೆ ಸಾಗುವಳಿ ಮಾಡಬೇಕು. ಗೇಣಿ ಕೊಡದೆ, ಗದ್ದೆ ಬಿಡದೆ ಮಾಡುವ ಕ್ರಮ ... ಎಂದು ಅವರಿಗೆ ಬೆದರಿಸಿದನೆಂದು. ಒಕ್ಕಲುಗಳಿಂದ ಹೊರಟರು. ಕೆಳಪೈಲಿನ ದೇಗುಲ ಸೇರಿ ಪಂಚಾಯತಿ—ಎಂದು ಹೇಳಿದರು. ಸೋಜರ ಬುದ್ಧಿಗೇ ಇದು ಇಲ್ಲಿ ಸಾಹಸಿಸ್ಸು ಒಕ್ಕಲುಗಳ ಮನೆ ... ಮತ್ತೆ ಟ್ರಿಲಾರೆ... ಹೀನ ಮಾಡುತ್ತಿದ್ದವರು ಸೋಜರು ನೋಡಿ ಬೆಳ್ತಿಗೆಯಿಂದ ಒಕ್ಕಲು ಮನೆ ಹೊಕ್ಕದೆ ಅಲ್ಲಿ ಮಾತಾಡಿ ಇದರಲ್ಲಿ ಕೊಟ್ಟಿಗೆಯಲ್ಲಿ ಜಾನುವಾರು ಇಟ್ಟು ... ಎಲ್ಲಾ ಕ್ರಮ ಗಳ್ಳೇ ಎಂದು ... ಒಕ್ಕಲಿಗೆ ಮನೆ ಹೋದರೆ ... ಒಕ್ಕಲಿಗ ಬಿಟ್ಟು ... ಗದ್ದೆ ...

ಸೀತೈತಾಳರಿಗೆ ಸಾಗುವಳಿ ಬರುಡಿ ಅವರಿಂದ ಅಷ್ಟೇ ಸ್ವಂತ ಸಾಗುವಳಿ ಆಗದು. ಇಷ್ಟು ಕೊನೆಗೆ ಹೊಸ ಒಕ್ಕಲು ಜುವಾಂ ಸೋಜರ ಮಕ್ಕಳು ತಂಡಕ್ಕೆ ಒಳಗಾದರು. ಅದೇ ಸಂಜೆ ಸಿಕ್ಕಿದ ಪಟ್ಟಾಂಗ ಜುವಾಂ ಸೋಜರ ಅಂಗಡಿಯಲ್ಲಿ ನಡೆಯುವಾಗ ಈ ಒಕ್ಕಲುಗಳನ್ನು ನಂಬಿ ನಾನು ಕೆಟ್ಟೆ' ಎಂದರು. ಜುವಾಂ ಸೋಜರು ತೆರೆದ ಬಾಯಿಗೆ 'ನಮ್ಮ ದೋಗೇರ ಒಕ್ಕಲು ಒಕ್ಕಲಿಗೆ ಬಂದಾರು. ನಾನು ನಾಲ್ಕು ಜನ ಕ್ರಿಶ್ಚಿಯನ್ ಒಕ್ಕಲು ಕೊಡುತ್ತೇನೆ. ಅರೇ ತಿಂಗಳಲ್ಲಿ ನಿಮ್ಮ ಗದ್ದೆ ಚಿನ್ನವಾಗಬೇಕು!' ಎಂದರು. ಇದರೆ ಮಾತ್ರ ಈ ವರ್ಷಕ್ಕೆ ಅವರಿಗೆ ಹೂಡಲು ಎತ್ತು ಕೊಡಬೇಕು. ನಿಮ್ಮ ಹಾಲ್ತಿ ಗೇಣಿ ಧಾರಣೆ ಸಮಾನಿಗೆ ಎಂಟು ಆದರೆ ಆರ್ಕೆ ಕೊಡಬೇಕು. ಮುಂದೆ ಸಮನಾದ ಗೇಣಿ ಕೊಡಿಸುವೆ ಎಂದರು. ಐತಾಳರಿಗೆ ಗೇಣಿ ಹೋಗುತ್ತದೆ, ಎತ್ತುಗಳನ್ನು ತೆಗೆಯಿಸಿ ಕೊಡಬೇಕು ಎಂಬುದು ಕಷ್ಟ ಕಂಡರೂ—ಎಲ್ಲಾ ಹೋಗುವುದಕ್ಕಿಂತ ಗದ್ದೆ ಚಿನ್ನ ಮಾಡುವ ಒಕ್ಕಲು ಸಿಕ್ಕಿದರೆ ಆಗಬಹುದು ಎಂದು ಕಂಡಿತು. 'ನಾಳೆಗೇ ಬರಲಿ' ಎಂದರು. ಸರಿ, ಎಂಟು ದಿವಸದಲ್ಲಿ ಕುಟುಂಬ ಸಮೇತ ಹೊಸ ಬಿಡಾರ ನಾಲ್ಕು ಬಂದಿತು. ಐತಾಳರು ನಾಲ್ಕು ಮನೆಗಳಿಗೆ ಎರಡು ಜತೆ ಕೋಣ ಕೊಡಿಸಿದರು. ನಗದಿಯಿಂದ ಅವರಲ್ಲೂ ಕಾಸಿರಲಿಲ್ಲ. ಜುವಾಂ ಸೋಜರಿಗೆ ನೋಟು ಬರೆದುಕೊಟ್ಟು ಅಷ್ಟು ಕೆಲಸಮಾಡಿದರು. ಮಳೆ ಬೀಳುವುದರಲ್ಲಿ ಒಕ್ಕಲು ಬಸ್ತ್ಯಾಂ, ರುಜಾರಿ, ಪೇದು, ವಾಸ್ಕು ನಾಲ್ಕು ಮಂದಿ ಅವರ ಹೆಂಡಿರು ಮಕ್ಕಳು ಎಂದು ಬೆವರು ಸುರಿಸಿ ಒಂದಕ್ಕೊಂದು ಕೆಲಸಮಾಡತೊಡಗಿದರು. ದಾರಿಯ ಕರವನ್ನಿಗೆ 'ಹೋ ಚಿನ್ನದಂಥಾ ಒಕ್ಕಲು ಸಿಕ್ಕಿತು. ಬಿಡು ಬಿಡು ಚಿಂತೆಯು' ಎನಿಸಿತು.

ಸರಿ, ಮೊದಲಿನ ಏಳೆ ಕಟಾವಾಯಿತು ಗೇಣಿ ವಸೂಲಿ ಸಮಯ ಬಂದಿತು. ಹಾಗೂ ಹೀಗೂ ಮುಚ್ಚಿಗೆ ಬದರಂತೆ ಗೇಣಿ ವಸೂಲಾಯಿತು. ಎರಡನೇ ವರ್ಷ ಐತಾಳರು 'ಸೋಜರೇ—ನೋಡಿ ಒಂದು ವರ್ಷಕ್ಕೆ ಮಾತ್ರ ಗೇಣಿ ಕರಾರು ಮಾಡಿದ್ದು. ಈ ವರ್ಷ ಅದರಂತೆ ಕೊಡಿಸುವ ನಿರ್ವಾಹವಿಲ್ಲ' ಎಂದರು. ಜುವಾಂ ಸೋಜರ ಮಧ್ಯಸ್ತಿಕೆಯಿಂದ ಬಂದ ಒಕ್ಕಲಲ್ಲವೇ. ಅವರ ಮಧ್ಯಸ್ತಿಕೆಯಿಂದಲೇ ಎಲ್ಲ ಆಗಲಿ ಎಂದು ಐತಾಳರು ಯೋಚಿಸಿದರು. ಆದರೆ ಒಕ್ಕಲಿನಿಂದ ವಾಸ್ಕು ತನಕ ಎಲ್ಲರೂ 'ಈ ನಮಗೆ ಗದ್ದೆಯನ್ನು ನಂಬಿ, ಬಾರಕೂರಿನ ಊಂಚಿ ಗದ್ದೆ ಬಿಟ್ಟು ಬಂದು ನಾವು ಮುಳುಗಿದೆವು' ಎಂದು ಸೋಜರ ಮುಂದೆ ಪಿಟಿಲು ಬಾರಿಸಿದರು.

ಸರಿ ಎರಡನೇ ವರ್ಷವೂ ಹಳೆ ಗೇಣಿ ಧಾರಣೆ ಆಯಿತು. ಮುಂದಿನ ವರ್ಷ ಅಗೆ ಹಾಕುವ ಕಾಲಕ್ಕೆ ನಾಲ್ವರ ಗೇಣಿಗಿಂತ ಹೆಚ್ಚು ಗಾಡದ ಗದ್ದೆಗಳು ನಮಗೆ ಬೇಡ—ಎಂದರು. ಅಂತ ನಾಲ್ಕನೆ ವರ್ಷದ ಆರಂಭದಲ್ಲಿ ಐತಾಳರಿಗೆ 'ಜೇಕು ಕುಳ ನಾಲ್ಕು ಸಿಕ್ಕಿತು, ಒಡೆಯರಿಕ್ಕಲ್ಲ ಬಿಡಲಿಕ್ಕಿಲ್ಲ' ಎನಿಸಿತು. ಇವರು ಜುವಾಂ ಸೋಜರಿಂದ ಕೋಣಗಳ ... ಬಡ್ಡಿ ಸಹಿತ ... ಬಾಕಿ ಬೆಟ್ಟದಷ್ಟು ಆಯಿತು. ಗೇಣಿ ಬರುವುದು ಕಡಿಮೆಯಾಯಿತು. ಅಲ್ಲದೆ ಹಾಗೆ ಹೀಗೆ, ಪಾಕಿ ಸರದಿ ನಗದು ಮತ್ತು ಎಂದು ಜುವಾಂ ಸೋಜರಿಂದ ಅವರು ಪಡೆದ ಸಾಲ ಅಂದಕ್ಕೆ ... ಸೋಜರು ಐತಾಳರ ಮೇಲಿನ ಹಂಗು ಬಿಟ್ಟು ಗದರಿಸಲು ತೊಡಗಿದರು.'

ಐದನೇ ವರ್ಷ ಸಾಗುವಳಿ ಸಮಯ ಬಂದಿತು. ನಾಲ್ವರು ಒಕ್ಕಲು ಸೇರಿ—ಐತಾಳರ ಕೆರೆಯ ನೀರನ್ನು ಖಾಲಿಮಾಡಿದರು. ಐತಾಳರು ಗಾಬರಿಯಾಗಿ 'ನಿಮ್ಮ ಅಗೆಗೆ ಇಷ್ಟು ನೀರು ಬೇಡ. ಬೇಗನೆ ಸನ್ನ ಕೆಳಗದ್ದೆಗಳಿಗೆ ನೀರು ಬಂತೆ ಮಾಡಿದರೆ ಹೇಗೆ?' ಎಂದು ಕೇಳಿದರೆ 'ಇಲ್ಲ ನಾವು ಈ ವರ್ಷ ಎಲ್ಲಾ ಗದ್ದೆಗಳಿಗೂ ಅಗೆ ಹಾಕುತ್ತೇವೆ' ಎಂದರು. ಎಲ್ಲವುದಕ್ಕೆ ಅಗೆ ಹಾಕಿ ಮಾಡುವುದೇನು?' ಎಂದರೆ 'ಇಲ್ಲ ಜುವಾಂ ಸೋಜರ ಗದ್ದೆ ಸಾಗುವಳಿಯನ್ನು ವಹಿಸಿಕೊಂಡಿದ್ದೇವೆ. ಅವರಿಗೆ ಅಗೇಡಿ ಇಲ್ಲ' ಎಂದರು. ಸರಿ, ಐತಾಳರು ರೇಗಿ ಮನೆಗೆ ಬಂದರು. ಆ ವರ್ಷ ಅವರ ಸ್ವಂತ ಸಾಗುವಳಿಗೆ ಅಗೆ ಇಲ್ಲ. ಮಾಸಿನಲ್ಲಿ ಅವರು ಅಗೆಯನ್ನು ಕೈಮುಕ್ಕೆ ಕೊಂಡರು. ಜುವಾಂ ಸೋಜರಿಗೆ ಹೆಸರು ಕೊಟ್ಟರೆ—ಇವರ ಒಕ್ಕಲಿನ ಸುದ್ದಿ

[೧೬ನೇ ಪುಟಕ್ಕೆ ಮುಂದುವರಿಸಿದೆ.]

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನಿಮಾದಲ್ಲಿ ತೋರಿಸುವರು. ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವುದು. ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು. ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ವ್ಯಾಲ್ಯು ಪೇಬಲ್ ಪರದೇಶದಿಂದ ಬರುವಂತೆ ಉಂಟು. ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ವಾಘ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್.—ಪಿ. ಎಚ್. ಭಕ್ತಾ ಗದಗ—ವಿ. ಎಸ್. ಶೆಟ್ಟಿ

ಮೈಸೂರು, ಕೊಡಗು, ದಕ್ಷಿಣ ಕನ್ನಡಾ ಏಜೆಂಟ್ ಡಾ. ಕೆ. ಭಾಸ್ಕರ ಪೈ.

ಸ್ಪೆಶಲ್ ಏಜಂಟ್—ಟಿ. ವ್ಹಿ. ಹೊನ್ನಾವರ

★ ಜಯಪುರ ಸಂಸ್ಥಾನಾಧೀಶರಿಗೆ ಮಹಾತ್ಮಾಜಿಯವರ ವಿನಂತಿ ★

ಮಹಾತ್ಮಾ ಗಾಂಧಿಯವರು ತಮ್ಮ ಹರಿಜನ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು 'ಜಯಪುರದ ಅಧಿಕಾರಿಗಳು ಸೇಟ ಜಮುನಾಲಾಲ ಬಜಾಜರನ್ನು ಹೆದ್ದಾರಿ ಬಿಟ್ಟು ಇರುವ ದೂರದ ನೀರಿನ ಅಭಾವವಿರುವ ಒಂದು ಪ್ರದೇಶದಲ್ಲಿ ಬಂಧನಕೈದಿಗಳನ್ನಾಗಿ ಇಟ್ಟಿದ್ದಾರೆ. ಹೀಗೆ ಅವರನ್ನು ಇಡಲಿಕ್ಕೆ ಅವರು ಅಪಾಯಕಾರಿ ವ್ಯಕ್ತಿಗಳಾಗಿದ್ದಾರೆಯೋ? ಅವರೇನು ಕ್ರಾಂತಿಕಾರಿಗಳಾಗಿರುವರೆ? ಜಯಪುರದ ದರ್ಬಾರಿನ ಆಜ್ಞೋಲ್ಲಂಘನ ಮಾಡಿದ ಕಾರಣದಿಂದ ಅವರನ್ನು ಸೆರೆಮನೆಯಲ್ಲಿಟ್ಟಿರುವುದು ಎಲ್ಲರಿಗೂ ಗೊತ್ತು. ಪರಂತು ಸೇಟರು ಒಬ್ಬ ಪ್ರಥಮ ದರ್ಜೆಯ ಕೈದಿಗಳಾಗಿದ್ದಾರೆ. ಅವರು ಜೈಲಿನ ಯಾವತ್ತು ನೇಮಬಂಧನೆಗಳನ್ನು ಅಕ್ಷರಶಃ ಪಾಲಿಸುವವರು. ಹಾಗಿರುತ್ತ ಅವರನ್ನು ಬಾಹ್ಯಪ್ರಪಂಚದಿಂದ ಬೇರೆ ಮಾಡಬೇಕೇಕೆ? ಕೈದಿಗಳ ಮುಖ್ಯ ಆವಶ್ಯಕತೆಯೆಂದರೆ ಅವರಿಗೆ ಜೈಲಿನಲ್ಲಿ ಅವರಂಥ ಸಂಗಾತಿಗಳು ಬೇಕು. ಆದ್ದರಿಂದ ಸೇಟರನ್ನು ಉತ್ತಮವಾದ ಬೇರೊಂದು ಕಡೆಗೆ ವರ್ಗಾಯಿಸಿ ಜಯಪುರದ ಅಧಿಕಾರಿಗಳು ಅವರಿಗೆ ಒಬ್ಬ ಯೋಗ್ಯ ಸಂಗಾತಿಯನ್ನು ಕೊಡಬೇಕಾಗಿ ನಾನು ಸೂಚಿಸುತ್ತೇನೆ.

ಲಾಂಬದ ಸತ್ಯಾಗ್ರಹಿ ಕೈದಿಗಳು

'ಲಾಂಬದ ಸತ್ಯಾಗ್ರಹಿ ಕೈದಿಗಳ ಸ್ಥಿತಿಯು ಸೇಟರ ಸ್ಥಿತಿಗಿಂತ ಕೆಟ್ಟದ್ದಾಗಿದೆ. ಅವರ ಬಂದೀಖಾನೆಯು, ಹಾವು ಚೇಳುಗಳಂಥ ವಿಷಜಂತುಗಳಿಂದ ತುಂಬಿದ ಪುರಾತನ ಹಾಳು ಬಿದ್ದ ಕೋಟೆಯಾಗಿದೆ. ಆ ಸ್ಥಳವು ಹಾಗಿದ್ದರೂ, ಇದು ವರೆಗೆ ಯಾವ ಕೈದಿಯೂ ಚೇಳುಗಳಿಂದ ಕಚ್ಚಿಸಿಕೊಂಡಿರುವುದಿಲ್ಲವೆಂದು ಜಯಪುರದ ಅಧಿಕಾರಿಗಳು ಹೇಳುವರು. ಕಚ್ಚಿ ಕೆಲವು ಜನರು ಕೊಲ್ಲಲ್ಪಟ್ಟ ಅನಂತರವೇ ಈ ಕೈದಿಗಳ ಸ್ಥಳ ಬದಲಾವಣೆ ಕುರಿತು ಆಲೋಚಿಸಬಹುದೆಂದು ಅಧಿಕಾರಿಗಳು ತಿಳಿದಿದ್ದಾರೆಯೋ? ಉತ್ತಮ ರೀತಿಯಲ್ಲಿ ತಮ್ಮನ್ನು ನಡೆಸಬೇಕೆಂದು ಸಿರಸನಲ್ಲಿ ಹಿಡಿದದ್ದ ಈ ಕೈದಿಗಳನ್ನು ಲಾಂಬಕ್ಕೆ ವರ್ಗಾಯಿಸಲಾಗಿತ್ತು. ನಾನಾ ಕೈದಿಗಳನ್ನು ತಡೆಯಲಿಕ್ಕೆ ಅವರ ಉಪವಾಸವು ಮತ್ತು ಮುಂದುವರಿಯಿತು.

ಪ್ರಜಾಸಂಘದ ಮನ್ನಣೆ

'ಇನ್ನು ಪ್ರಮುಖವಾದ ಇನ್ನೊಂದು ಸಂಗತಿ ಇದೆ. ಪ್ರಜಾಸಂಘಕ್ಕೆ ದರ್ಬಾರಿನ ಮನ್ನಣೆ ದೊರೆಯಲಿಕ್ಕೆ ಅಧಿಕಾರಿಗಳು ಅಸಾಧ್ಯ ಕರ್ತವನ್ನು ಹಾಕಿದ್ದಾರೆ. ನನ್ನ ಮಧ್ಯಸ್ಥಿಕೆಯಿಂದ ಪ್ರಜಾಸಂಘವು ಸತ್ಯಾಗ್ರಹವನ್ನು ನಿಲ್ಲಿಸಿತು. ಇತರ ಸಂಸ್ಥಾನಗಳಲ್ಲಿ ಸತ್ಯಾಗ್ರಹವು ನಿಲ್ಲಲಿಕ್ಕೆ ನನ್ನ ಮಧ್ಯಸ್ಥಿಕೆಯೇ ಕಾರಣವು. ಇದ್ದಾಗ್ಯೂ ಅನಿಶ್ಚಿತಕಾಲದ ತನಕ ಸತ್ಯಾಗ್ರಹವು ಎಲ್ಲಿ ಹೀಗೆ ನಿಂತೀತೆಂದು ನಾನೇ ಹೇಳಲಾರೆ! ಸಂಸ್ಥಾನ ಪ್ರಜೆಗಳು ಈಗ ತುಂಬಾ ಜಾಗೃತರಾಗಿದ್ದಾರೆ. ಇದನ್ನು ಅರಿತು ಸಂಸ್ಥಾನಾಧೀಶರು ಯೋಗ್ಯ ರೀತಿಯಿಂದ ವರ್ತಿಸುವರೆಂದು ನಂಬಿದ್ದೇನೆ. ಸತ್ಯಾಗ್ರಹದ ಹಳೆಯ ಕೈದಿಯಾದ ಸೇಟರನ್ನು ಇತರ ಸತ್ಯಾಗ್ರಹಿ ಕೈದಿಗಳನ್ನು ಜೈಲಿನಲ್ಲಿಟ್ಟಿರುವದು ತಪ್ಪೆಂದು ಜಯಪುರ ದರ್ಬಾರಿಗೆ ತೋರಿಸಲಿಚ್ಛಿಸುತ್ತೇನೆ.

ಕೈದಿಗಳ ಬಿಡುಗಡೆ ಇನ್ನೂ ಆಗಿರುವದಿಲ್ಲ

ಮೇ ತಿಂಗಳ ೬ರ ಹರಿಜನದಲ್ಲಿ ಪ್ರಕಟವಾಗಬೇಕಾದ ಈ ಲೇಖನವನ್ನು ಮಹಾತ್ಮರು ಮೇ ೧ನೇ ತಾರೀಕಿನ ದಿನವೇ ಇತರ ಪತ್ರಿಕೆಗಳಿಗೆ ಪ್ರಕಟನೆ ಕೊಟ್ಟರು. ಜಯಪುರದ ಅಧಿಕಾರಿಗಳು ತಮ್ಮ ಸೂಚನೆಯ ಕುರಿತು ಶೀಘ್ರದಲ್ಲಿಯೇ ಸಮಾಲೋಚಿಸುವಂತಾಗಬೇಕೆಂದು ಅವರು ಹೀಗೆ ಮಾಡಿದರು. ಪರಂತು ಒಂದು ವಾರವು ಕಳೆದು ಎರಡನೆ ವಾರವು ಆರಂಭವಾಯಿತಾದರೂ ಜಯಪುರ ಸತ್ಯಾಗ್ರಹಿ ಕೈದಿಗಳ ಬಿಡುಗಡೆ ಆಗಿರುವದೂ ಇಲ್ಲ, ಅವರನ್ನು ಸ್ಥಳಾಂತರ ಮಾಡಿದ್ದೂ ಇಲ್ಲ.

ದೇಶೀ ರಾಜ್ಯಗಳ ಕುರಿತು ಸರ್ ಬೆನರ್ಜಿಯವರ ಭವಿಷ್ಯ

ಸಂಸ್ಥಾನಗಳ ಸಿಂಹಾವಲೋಕನ

ಭವಿಷ್ಯ ನುಡಿ

ಸಂಸ್ಥಾನಗಳ ಇತ್ತೀಚಿನ ಪರಿಸ್ಥಿತಿಯ ಸಮಾವಲೋಕನ ಮಾಡಿ ಸರ್ ಅಲ್ಬಿಯನ್ ಬೆನರ್ಜಿಯವರು ಲಂಡನ ಟ್ರಾನ್ಸ್ ಪತ್ರಿಕೆಯಲ್ಲಿ ಒಂದು ಮಹತ್ವದ ಲೇಖನವನ್ನು ಬರೆದಿದ್ದಾರೆ. ಸರ್ ಅಲ್ಬಿಯನರು ಹಲವು ಸಂಸ್ಥಾನಗಳ ದಿವಾನರಾಗಿ ಅಲ್ಲಿಯ ಸ್ಥಿತಿಗತಿಗಳ ವಿಶೇಷ ಅನುಭವವುಳ್ಳವರಾದ್ದರಿಂದ ಅವರ ಮಾತುಗಳು ಅಮೂಲ್ಯವಾಗಿವೆ. ಒಂದು ಕಡೆಯಿಂದ ಜಾಗೃತ ಸಂಸ್ಥಾನ ಪ್ರಜೆಗಳ ಜವಾಬ್ದಾರ ಸರಕಾರ ಸ್ಥಾಪನೆಯ ಬೇಡಿಕೆ ಹಾಗೂ ಅದಕ್ಕೆ ಪ್ರಾಪ್ತವಾದ ಕಾಂಗ್ರೆಸ್ಸಿನ ಬೆಂಬಲ, ಇನ್ನೊಂದು ಕಡೆಯಿಂದ ಸಂಸ್ಥಾನಾಧೀಶರಿಗೆ ತಮ್ಮ ನಿರಂಕುಶ ಅಧಿಕಾರಗಳನ್ನು ಬಿಟ್ಟು ಕೊಡಲು ಸ್ವಲ್ಪವಾದರೂ ಇಚ್ಛೆಯಿಲ್ಲದಿರುವುದು ಇವುಗಳಿಂದ ಶೀಘ್ರದಲ್ಲಿಯೇ ಈ ಸಂಸ್ಥಾನಗಳಲ್ಲಿ ಪ್ರಚಂಡ ಆಂದೋಲನವು ಉಂಟಾಗಲಿದೆ. ಈ ಆಂದೋಲನದ ಪರಿಣಾಮವು ಮಹಾತ್ಮರ ಕಾರ್ಯಕೌಶಲ್ಯ ಮತ್ತು ಬುದ್ಧಿವಿವೇಕಗಳನ್ನು ಹೊಂದಿರುತ್ತದೆ ಎಂದು ಅವರು ಭವಿಷ್ಯವನ್ನು ನುಡಿದಿದ್ದಾರೆ.

ಮೈಸೂರು ಸುಧಾರಣಾ ಸಮಿತಿ

ಮೈಸೂರಿನ ರಾಜಕೀಯ ಸುಧಾರಣಾ ಸಮಿತಿಯು ೮-೫-೧೯೩೯ರ ತನ್ನ ಸಭೆಯಲ್ಲಿ ಮೈಸೂರು ಜನರ ರಾಜಕೀಯ ಧ್ಯೇಯದ ಕುರಿತು [illegible] ಮೈಸೂರು ಮಹಾರಾಜರ ಛತ್ರಛಾಯೆಯಲ್ಲಿ ಸಂಪೂರ್ಣ ಜವಾಬ್ದಾರಿ ಸರಕಾರ ಸ್ಥಾಪನೆಯೇ ಈ ಧ್ಯೇಯವಾಗಿರಬೇಕು. ಆದರ ಕಾರ್ಯಕ್ರಮ [illegible] ತಿಳಿದು ಬರುತ್ತದೆ. ಮಹಾತ್ಮಾಜಿಯವರ ವಿಶ್ವಾಸದ [illegible] ಸಭೆಗಳ [illegible] [illegible] [illegible] ವಹಿಸಿದ [illegible] [illegible] ಮಹಾರಾಜರು [illegible] ಯೋಗ್ಯತೆ [illegible] ಈ ಸಂಬಂಧವಾಗಿ ಮೈಸೂರು ಸ್ಟೇಟ್ ಕಾಂಗ್ರೆಸ ಪತ್ರಿಕೆಗಳು ಮಹಾತ್ಮರನ್ನು [illegible] [illegible]

ತಿರುವಾಂಕೂರು

ತಿರುವಾಂಕೂರು ಸರಕಾರವು ಜವಾಬ್ದಾರ ಸರಕಾರದ ಸ್ಥಾಪನೆಯ ಪ್ರಶ್ನೆಯನ್ನು ಮುಗಿಸಿ, ಸಂಸ್ಥಾನದಲ್ಲಿ ಪುನಃ ಶಾಂತಿ [illegible] ಪ್ರಜ್ವಲಿಸುವ [illegible] ಕೆಲವು ಪರಿವರ್ತನೆಗಳನ್ನು ಮಾಡಿದ [illegible] ಎಲ್ಲರು [illegible] ವಿಶೇಷ [illegible] ಸ್ಟೇಟ್ ಕಾಂಗ್ರೆಸ [illegible] ಕಾರ್ಯಕ್ರಮವನ್ನು ರಚಿಸುವುದಕ್ಕೆ [illegible] ತ್ವರ ಸಭೆಯನ್ನು ಕರೆದಿರುವದು.

ಕಾಠಿಯಾವಾಡ ರಾಜಕುಮಾರರು

ಜಾಮನಗರ, ಪೋರಬಂದರ, ಮೋರ್ವಿ, ಧ್ರಾಂಗಧರ, ಪಾಲಿತಾಣ, ರಾಜಕೋಟ, ಧ್ರೋಲ, ಜಸ್ದನ, ವಡಿಲಿ ಇವುಗಳ ರಾಜರು ಈ ಸಂಸ್ಥಾನಗಳಿಗೆ ಸಂಬಂಧಪಟ್ಟ ವಿವಿಧ ಸಮಸ್ಯೆಗಳನ್ನು ಒಂದಾಗಿ ಏಕಮತ್ಯದಿಂದ ಬಿಡಿಸಲಿಕ್ಕೆ ತಿಂಗಳಿಗೊಮ್ಮೆ ಸಭೆ ಕೂಡುವ ನಿರ್ಧಾರಕ್ಕೆ ಬಂದಿರುವರು. ತಮ್ಮ ಪಕ್ಷದ ಅಧಿಕಾರಿಗಳ ರಕ್ಷಣೆಗೆ ಇದು ಬಹಳ ಸುಭಿಕ್ಷವಾಗುವುದೆಂದು ಅವರು ತಿಳಿದಂತಿದೆ. ಈ ಸಂಸ್ಥಾನಗಳಲ್ಲಿ ಪ್ರಜಾ ಚಳವಳಿಯು ಉಗ್ರರೂಪವನ್ನು ತಾಳಿರುವುದೇ ಅವರು ಈ ರೀತಿ ಒಂದಾಗಿರುವ ರಹಸ್ಯವಾಗಿದೆ.

ತಲ್ಚಾರು

ಒರಿಸ್ಸದೊಳಗಿನ ತಲ್ಚಾರ ಸಂಸ್ಥಾನದ ರಾಜರು ಅರಮನೆಯಲ್ಲಿ ಕೂಡಿದ ಸಭೆಯಲ್ಲಿ ರಾಜ್ಯಬಿಟ್ಟು ಹೋದ ನಿರಾಶ್ರಿತರಿಗೆ ಕೆಲವು ಭರವಸೆಗಳನ್ನು ರಿಯಾಯತಿಗಳನ್ನು ಘೋಷಿಸಿದ್ದಾರೆ. ಆದರೆ ಇವು ಹಿಂದೆ ಪ್ರಜಾಪರಿಷತ್ತಿಗೂ ರಾಜರ ಕಡೆಯಿಂದ ಪೊಲಿಟಿಕಲ್ ಏಜಂಟರಿಗೂ ಆದ ಒಡಂಬಡಿಕೆಗೆ ಅನುಕೂಲವಾಗಿರುವುದಿಲ್ಲ. ಆದ್ದರಿಂದ ನಿರಾಶ್ರಿತರ ಸಮಸ್ಯೆಯೂ ಇನ್ನೂ ಯೋಗ್ಯ ರೀತಿಯಿಂದ ಬಿಡಿಸಲ್ಪಟ್ಟಿರುವುದಿಲ್ಲ. ಅವರ ಕಷ್ಟಗಳು ದಿನದಿನಕ್ಕೆ ಬೆಳೆಯುತ್ತಲಿವೆ. ರಾಜರ ರಿಯಾಯತಿಗಳಿಂದ ತಮ್ಮ ಅತೃಪ್ತಿಯನ್ನು ಸೂಚಿಸಿ ಒರಿಸ್ಸಾ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷ ಶ್ರೀ ಹರೇಕೃಷ್ಣ ಮಹತಾಬರು ಮಹಾತ್ಮರಿಗೆ ತಂತಿ ಬಿಟ್ಟಿರುವರು.

ಕಾಪುರ್ತಲ

[illegible] ಘಟಿಸಲಿರುವ ಹಕ್ಕಿಗಳ [illegible] ಒಂದು [illegible] [illegible] [illegible] [illegible] ಸಭೆಗಳನ್ನು [illegible]

ಮೈಸೂರು ಕಾಂಗ್ರೆಸ ಸಪ್ತಾಹ

[illegible] ಮೈಸೂರು ಸ್ಟೇಟ ಕಾಂಗ್ರೆಸ ನೇತೃತ್ವದಲ್ಲಿ [illegible] ತನಕ [illegible] [illegible] ಈ ಸಪ್ತಾಹದಲ್ಲಿ ಮೈಸೂರು [illegible] ಕಾರ್ಯಕ್ರಮಗಳ ನಡೆದುವು

ಸಂಡೂರು

ಸಂಡೂರು ರಾಜಕೀಯ ಸುಧಾರಣಾ ಸಮಿತಿಯು [illegible] ವ್ಯವಸ್ಥೆಗೆ [illegible] [illegible] ಜವಾಬ್ದಾರ ಸರಕಾರ ಸ್ಥಾಪನೆಯ [illegible] ತಿಳಿಸಿದೆ. [illegible] ಆಡಳಿತ [illegible] ಅಧಿಕ [illegible] ಸಮಿತಿಯು ಕಾರ್ಯಕಲಾಪಗಳ ಕುರಿತು ಸಂದೇಹವನ್ನು ಪ್ರಕಟ ಮಾಡಿದೆ.

ಎಸೆಂಬ್ಲಿ ಕೌನ್ಸಿಲುಗಳಿಗೆ ಜಾಸ್ತಿ ಅಧಿಕಾರಗಳು

ಮೈಸೂರ ರಾಜಕೀಯ ಸುಧಾರಣಾ ಸಮಿತಿಯು ಮೈಸೂರ ಎಸೆಂಬ್ಲಿ ಕೌನ್ಸಿಲುಗಳ ಜೀವನಾವಧಿಯನ್ನು ೪ ವರ್ಷವೆಂದು [illegible] [illegible] ಆದಕ್ಕೆ [illegible] [illegible] ಜಾಸ್ತಿ ಅಧಿಕಾರಗಳನ್ನು [illegible] ಕೊಡು [illegible]

ರಾಜಕೋಟ

ಶ್ರೀ ವೀರವಲ್ಲಭ ಸುಧಾರಣಾ ಸಮಿತಿಯ ರಚನಾಕಾರ್ಯದಲ್ಲಿ ಇನ್ನು ಇನ್ನು ವಿಘ್ನವಿದ್ಯ್ವಗಳನ್ನು ತಂದೊಡ್ಡುವ ಆಲೋಚನೆಯಲ್ಲಿದ್ದಾರೆ. ಪ್ರಜಾಪರಿಷತ್ತಿನ ಅಧ್ಯಕ್ಷ ಶ್ರೀ ದೇವರರು ಕೂಡ ರಾಜಕೋಟದ ಪ್ರಜೆಗಳಾಗಿರುವುದರಿಂದ ಅವರಿಗೂ ಸುಧಾರಣಾ ಸಮಿತಿಯ ಪ್ರತಿನಿಧಿತ್ವ ಕೊಡಬೇಕೆಂದಿದ್ದಾರೆ. ಪಟೇಲರು ಹೇಗೂ ರಾಜಕೋಟಕ್ಕೆ ಬರಲಾರರಲ್ಲ, ಗಾಂಧಿಯವರು ಕೂಡ ಅಲ್ಲಿ ಬರಬಾರದೆಂದು ಅವರು ಹೇಳಿರುವರು. ಪರಂತು ಗಾಂಧಿಯವರು ಬೃಂದಾವನದ ಕೆಲಸಗಳು ಮುಗಿದೊಡನೆ ತಾ ೧೮ರ ದಿನ ರಾಜಕೋಟಕ್ಕೆ ಹೋಗುವರು. ಅಲ್ಲಿ ತೃಪ್ತಿಕರವಾದ ಇತ್ಯರ್ಥವು ಆಗದಿದ್ದರೆ, ಪುನಃ ಸತ್ಯಾಗ್ರಹವು ಆರಂಭವಾಗಬಹುದು.

ಕಾಶ್ಮೀರ

ಮಹಾರಾಜರು ಕೆಲವು ತಿಂಗಳ ಹಿಂದೆ ಘೋಷಿಸಿದ ಪ್ರಕಾರ ಕೊಟ್ಟ ಕೆಲವು ರಾಜಕೀಯ ಸುಧಾರಣೆಗಳನ್ನು ಒಳಗೊಳಿಸಿ ರಾಜಕೀಯ ಘಟನೆಯನ್ನು ತಯಾರಿಸುವುದಕ್ಕೋಸ್ಕರ ಒಂದು ಕಮಿಟಿಯನ್ನು ನೇಮಿಸಿದ್ದಾರೆ.

ಬಿಕಾನೀರ

ಕಾಂಗ್ರೆಸ ಎಂದರೆ ಸಂಸ್ಥಾನಗಳು ಬೆಚ್ಚಿ ಬೀಳುವ ಹಾಗೆ ಕಾಣುತ್ತದೆ. ಇದಕ್ಕೆ ಬಿಕಾನೀರವು ಉತ್ತಮ ಉದಾಹರಣೆಯಾಗಿದೆ. ಜವಾಬ್ದಾರಿ ಸರಕಾರ ಸ್ಥಾಪನೆಗೆ ಪ್ರಜೆಗಳು ಚಳವಳಿಸುವಾಗ ಕಾಂಗ್ರೆಸ ಅವುಗಳ ಬೆಂಬಲಿಸುವುದನ್ನು ಸಂಸ್ಥಾನಾಧೀಶರು ವಿರೋಧಿಸುವದೆ ಅವಕ್ಕೊಂದು ಆರೋಪವುಂಟು. ಆದರೆ ಕಾಂಗ್ರೆಸ ಬರಗಾಲ ಆದಿ ಕಷ್ಟಗಳಿಗೆ ಸಿಲುಕಿದ ಜನರಿಗೂ ಸಹಾಯ ಮಾಡಬಾರದೆಂದು ಸಂಸ್ಥಾನಾಧೀಶರ ಪ್ರಯತ್ನವಾಗಿ [illegible] ವರ್ತನೆಯು ಅರ್ಥವೇ ಆಗುವುದಿಲ್ಲ. ಬಿಕಾನೀರು ದರಬಾರು ಸಂಸ್ಥಾನದಲ್ಲಿ ಕಾಂಗ್ರೆಸ ಕೆಲಸಗಾರರ ಸಭೆ ಇತ್ಯಾದಿ [illegible] ನಡೆಯದಂತೆ [illegible] ಹಾಕಿರುವದು ಮಾತ್ರವಲ್ಲ [illegible] ಜನರ ಸಂಕಟದಲ್ಲಿ [illegible] [illegible] ಸರಕಾರ [illegible] ಕನ್ನಡದಲ್ಲಿ [illegible] ಕಾಂಗ್ರೆಸ ಕೆಲಸಗಾರರು ಅವರಿಗೆ ಸಹಾಯ ಮಾಡಲೂ ಈ ಸಂಸ್ಥಾನವು ಬಿಡುವದಿಲ್ಲ.

ತಿರುಕಡಲ್ಲಿ ಹಿಂದೀಯರು

ಮಾರೀಷಸ [illegible] ಗಳಿಂದ [illegible] [illegible] [illegible] [illegible] [illegible] [illegible] [illegible] ಅವರು ತಮ್ಮ ದೇಶಕ್ಕೆ [illegible] [illegible]

ಮದ್ಯನಿಷೇಧಕ್ಕೆ ಸ್ಪೆಶಲ್ ಪೋಲಿಸರು

ಮುಂಬಯಿಯಲ್ಲಿ [illegible] ರಿಂದ ಮದ್ಯನಿಷೇಧವಾಗುವದಕ್ಕೆ [illegible] ಜನರು ಕಾನೂನು ಮುರಿದು ಅನ್ಯಾಯಕ್ಕೆ ಪ್ರವರ್ತಿಸದಂತೆ ತಡೆಯಲಿಕ್ಕೆ [illegible] ಸರಕಾರವು ಸ್ಪೆಶಲ್ ಪೋಲಿಸರ ಪಂಗಡವನ್ನು ನಿರ್ಮಿಸಿ ಅದಕ್ಕೆ ವಿಶೇಷ ಅನುಭವ ತರಬೇತಿಯನ್ನು ಕೊಡುತ್ತಲಿದೆ. ಈ ಪೋಲಿಸ ದಳದೊಳಗೆ ಸಹಕರಿಸಲಿಕ್ಕೆ [illegible] [illegible] ಸ್ವಯಂಸೇವಕ ದಳವು ಸಿದ್ಧವಾಗುತ್ತಲಿದೆ.

ವಿದ್ಯಾಶಾಲೆಗಳಿಗೆ
ಪ್ರತಿ ವಾರವೂ
ಸ್ವದೇಶಾಭಿಮಾನಿ
ಅತ್ಯಾವಶ್ಯಕ ವಾಚನೀಯ
ವಿಷಯಗಳನ್ನು
ಒದಗಿಸುವುದು.

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ. ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿ ರೂಪಗಳು, ಘಟನೆಯ ರೂಪಗಳು ಘಟನೆಯ ರೀತಿಗಳು, 'ವಾಂತ' ಆವರಣ—ಇವೆಲ್ಲ ವಾಸ್ತವವಾದುವು. ಹಳ್ಳಿಯು ಸಾಮಾನ್ಯ ಕೋಟ ಕುಂದಾಪುರದೊಳಗಿನ ಒಂದು ಗ್ರಾಮ ಸಮೂಹ, ವ್ಯಕ್ತಿಗಳು ಮಾತಿನ ರೀತಿಗಳು ಹಲವು ಅಲ್ಲಿನವೆ. ಬರಿಯ ಪಾತ್ರಪರಿಚಯಗಳೇ ಈ ಚಿತ್ರಗಳ ಗುರಿ. ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ ಅನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು ನಾನು ಬರೆದ ಪ್ರಸ್ತಾವನೆಯು ಓದಿದ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅದರ ಮುಂದಿರುವ ಪಾತ್ರಗಳು ಇಂಥವು—ಎಂದು ಒದಗಿಸಿಕೊಡುತ್ತೇನೆ ಇತಿ

ಶಿವರಾಮ ಕಾರಂತ

೧೩. ಜುವಾಂ ಸೋಜರು

ನಮ್ಮ ಊರಿಗೆ ಜುವಾಂ ಸೋಜರು ಬಂದ ಇತಿಹಾಸವೆಂದರೆ ನಮ್ಮ ದೇಶಕ್ಕೆ ಈಸ್ಟ್ ಇಂಡಿಯಾ ಕಂಪೆನಿ ಬಂದ ಹಾಗೆ—ಎಂದು ನಮ್ಮ ಶಾಲಾ ಮಾಸ್ತರು ಹೇಳುವುದುಂಟು ಅದರ ಅರ್ಥ ನಮ್ಮ ಊರವರಿಗೆ ಆಗುತ್ತದೆಯೋ ಇಲ್ಲವೋ ಅಂತೂ—ನಮ್ಮ ಊರಿನಲ್ಲಿ ನಾಲ್ಕು ಕಡೆಯಿಂದ ಎಳೆಯುತ್ತಿರುವ ಎತ್ತುಗಳ ಜತೆಗೆ ಇನ್ನೂ ಒಂದು ನಾಲ್ಕು ಕಡೆಗೆ ಎಳೆಯುವ ಹೊಸ ಕೋಣಗಳನ್ನು ಹೂಡಿದ ಹಾಗಾಯಿತು

ಹತ್ತಿಪ್ಪತ್ತು ವರ್ಷಗಳ ಹಿಂದೆ ನಮ್ಮ ಊರಲ್ಲಿನ ಮುಖ್ಯ ಜನಸಂಖ್ಯೆ—ಎಂದರೆ ಬ್ರಾಹ್ಮಣರು, ನಾಡವರು ಉಳಿದವರು ಇಲ್ಲ ಎಂದಲ್ಲ ರಜಾಗ್ರಕ್ಕೆ, ಗದ್ದಲಕ್ಕೆ ಮುಖ್ಯ ಇವರು ಬೇಕು ಆ ಮೇಲೆ ಕಲಿಯುಗಕ್ಕೆ ಸಮನಾಗಿ ಒಂದೊಂದೇ ಪಂಗಡ ಮೇಲೆದ್ದು ಇವತ್ತಿಗೆ ಮುದರ ಸಹ ಮನುಷ್ಯನಾದ ಕಥೆ ನಿಮಗೆ ಗೊತ್ತುಂಟು ಆದರೆ ಇವರೆಲ್ಲರು ಸೇರಿದರೂ ಇವರ ಒಲ ಕಪ್ಪಿನುಸ ಪಂಗಡ ಬಂದದ್ದು—ನಮ್ಮ ಜುವಾಂ ಸೋಜರು ಬಂದ ಮೇಲೆ ಇವತ್ತೂ ಜುವಾಂ ಸೋಜರೇ ನಮ್ಮ ಊರಿನ ಮುಖಂಡರಲ್ಲ ಆದರೆ ಕೊಯಿಲೋ ಪಾದ್ರಿಗಳು ಹಿಂದೆ ನಿಂತು—ಜುವಾಂ ಸೋಜರಿಂದ ತಮ್ಮ ಉದ್ದೇಶ ಚಲಾಯಿಸುವುದರಿಂದ "ಜುವಾಂ ಸೋಜರು ಕಾರುಭಾರಿಗಳ ಪೈಕಿ ಒಬ್ಬರು ಅನಿಸಿದ್ದಾರೆ

ನಾನು ಚಿಕ್ಕವನಿರುವಾಗ ನಮಗೆ ಯಾರಾದರೂ ಕ್ರಿಶ್ಚನರನ್ನು ಕಂಡರೆ ಅವರು ಕ್ರಿಶ್ಚನರು ಎಂದು ತೋರಿಸುವ ಹಂಬಲ ಊರಿಗೆ ಡಿಸ್ಟ್ರಿಕ್ಟ್ ಕಲೆಕ್ಟರ್, ಬಂಕೇಶಯರು ಕೋಟು ಪ್ಯಾಂಟು—ಇವರೆಲ್ಲ ಬಂದರೆ ಹೇಗೆ ಆಶ್ಚರ್ಯವೋ ಮೊದಲು ಮೊದಲು ನಮಗೆ ಇವರನ್ನು ಇವರ ಉಡುಗೆಯನ್ನೂ ಕಂಡರೆ ಆಶ್ಚರ್ಯ ಈಗಲೋ—ನಮ್ಮ ಊರಿನಲ್ಲಿ ಅವರ ಜನಸಂಖ್ಯೆ ಸಾಕಷ್ಟು ಏರಿಬಿಟ್ಟಿದೆ ನಿತ್ಯ ಅವರನ್ನು ಕಾಣುತ್ತೇವೆ

ಮೊದಲು ನಮ್ಮ ಊರಿನ ಮಹಾಲಿಂಗೇಶ್ವರನ ಗುಡಿಯಲ್ಲಿ ಜಾತ್ರೆಯಾದರೆ ಗಂಗೊಳ್ಳಿಯಿಂದಲೋ, ಬಾರಕೂರಿನಿಂದಲೋ ಕೆಲವರು ತಾವು ವ್ಯಾಪಾರಿಗಳು ಬರುತಿದ್ದರು. ಅಂಥವರಲ್ಲಿ ಮೊದಲಿಗೆ ಕಾಣಿಸಿದವರು ಜುವಾಂ ಸೋಜರು ಸೋಜರ ಆಕಾರ ಕುರುಟು ಆಗ ಹೇಗೆ ಗುಂಡು ಗುಂಡು ಮುಖ ಕೋಲು ಮೀಸೆಗಳಿದ್ದವೋ ಈಗಲೂ ಹಾಗೇ ಇದ್ದಾರೆ ಯೂರೋಪಿನಲ್ಲಿ ಮಹಾ ಯುದ್ಧವಾಗಿ ಹಲವು ಅರಸರು ರಾಜ್ಯ ಕಳೆದುಕೊಂಡರೂ ಜುವಾಂ ಸೋಜರ ಹೂವಿನ ಟೋಪಿಯಾಗಲಿ ಚೌಕಳಿ ಅಂಗಿಯಲ್ಲಾಗಲಿ ಕಡ್ಡಿಲು ಆಗಲಿಲ್ಲ ಅವರು ಪರಿಶೆಯಲ್ಲಿ ತಾಮ್ರದ ಗುಡಾಣ ಕೊಡಪಾನ ದಬರಿ ರಾಶಿ ಹಾಕಿಕೊಂಡು ಸಾಹುಕಾರಗಿರಿ ಮಾಡಿದಾಗ ನಮ್ಮ ಊರವರಿಗೆ ಮನೆಗೇ ಕೊಪ್ಪರಿಗೆ ಬಂದ ಹಾಗೆ ಅನಿಸಿತು ಮೊದಲು ನಮ್ಮಲ್ಲಿಗೆ ತಾಮ್ರದ ವ್ಯಾಪಾರ ತಂದ ಮುಕದಮ್ ಸಾಹೆಬರು ಬರುತ್ತಿರುವಾಗಲೇ ಇವರು ಬಂದರು ಅವರು ಹಾಕುವ ಕಲಾಯಿ, ಬೆಸಗೆ ನಾಲ್ಕು ದಿನ ಉಳಿಯುವುದಿಲ ಎಂದು ಬೇಸರಿಸುವ ಕಾಲದಲ್ಲಿ ಇವರು ಬಂದುದರಿಂದ ಹೊಸ ಇನ್ನೊಬ್ಬರು ಭಾರಿ ಸಾಹುಕಾರರು ಊರಿಗೆ ಬಂದರು' ಎಂಬ ಹೆಮ್ಮೆ ಎಲ್ಲರಿಗೂ ಆಯಿತು ಜುವಾಂ ಸೋಜರ ಬಾಯಿ, ಕೈ ಬೆಸಗೆಗಳಿಂದ ('ಈ ಪಾತ್ರೆ, ಈ ಕೊರಳೆ, ಈ ಬೋಗಣಿ—ನೀವು ತೆಗೊಂಡು ಹೋಗಿ ನೂರು ವರ್ಷ ಬಂದರೆ ಆಯಿತಲ್ಲ'—ಎಂಬ ವಿಶ್ವಾಸ ಜನರಿಗೆ ಉಂಟಾಯಿತು

ಸರಿ, ಮೊದಲಿನ ವರ್ಷ ಅವರಿಗೆ ಆದ ವ್ಯಾಪಾರ ಇನ್ನಾರಿಗೂ ಆಗಲಿಲ್ಲ ಹೀಗೆ ನಾಲ್ಕು ವರ್ಷ ನಡೆಯುವಾಗ ನಮ್ಮ ನರಸ ಉಪಾಧ್ಯರು, ಸೀತ್ತೈತಾಳರಂಥವರು ಸೋಜರನ್ನು ಕಂಡು—'ಸೋಜರೇ ವರ್ಷ ವರ್ಷ ಬಂದು ಹೋಗುವ ರಗಳೆಗಿಂತ ನಮ್ಮ ಊರಲ್ಲಿ ಒಂದು ಶಾಶ್ವತ ಬಿಡಾರ ಮಾಡಬಾರದೇ? ಒಳ್ಳೆ ವ್ಯಾಪಾರವಾದೀತು ರಸ್ತೆ ಬುಡದಲ್ಲಿ ಒಂದು ಬಾಯ ಹಾಕಿ ಕುಳಿತುಬಿಟ್ಟರೆ' ಅಂದರು ಐತಾಳರ ಸ್ನೇಹಾಚಾರದ ದಾಕ್ಷಿಣ್ಯಕ್ಕೆ 'ಆಯಿತು ಎಂದರಂತೆ ಈ ಹೊತ್ತಿನ ತನಕವೂ ಜುವಾಂ ಸೋಜರ ಹತ್ತಿರ ನಮ್ಮ ಊರವರು ಸೋಜರೇ, ವ್ಯಾಪಾರ ಚೆನ್ನಾಗಿಲ್ಲವೆ?' ಎಂದು ಕೇಳಿದರೆ 'ಏನೂ ಸ್ವಾರಸ್ಯವಿಲ್ಲ. ನಿಮ್ಮ ಊರಿಗೆ ಬಂದು ಸಿಕ್ಕಿಬಿದ್ದೆ ಇನ್ನು ಊರಿಗೆ ಹೋಗುವುದು ನಾಲೀಸು ಇಲ್ಲಿ ತಾವು ಕುಟ್ಟಿ ಜೀವನವಾಗುವ ಹಾಗಿಲ್ಲ ಒಂದೆರಡು ಮುಡಿ ಗದ್ದೆ ಸಾಗುವಳಿ ಮಾಡಬೇಕು' ಅನ್ನತೊಡಗಿದರು

ಇರಲಿ, ಹ್ಯಾಗಾದರೂ ಸೋಜರ ಹತ್ತಿರ ವ್ಯಾಪಾರ ಹೇಗೆ ಎಂದು ಕೇಳಿದರೆ ಪುಣ್ಯಾತ್ಮರು ರೇ ಹಿರಿಯರು ಮಾಡಿದ ಕಾಸು ಇಲ್ಲಿ ಬಂದು ನಿಕಾಲೆಯಾಯಿತು ಎನ್ನುತ್ತಾರೆ ಆದರೆ ಅವರ ಬರುವಾಗ ಹಾಕಿದ ತೊಗಲು ಹೋಗಿ ಹುಟ್ಟಿಸ ಉಪ್ಪರಿಗೆ ಮನೆಯಾಯಿತು ಆಸ್ತಿ ಕೊಂಡಾಯಿತು, ಬೇರೆ ಪಟಿಪಾಟಿಯ ವ್ಯಾಪಾರದಲ್ಲಿ ಬಿಡುವಿಲ ಪ್ರತಿವರ್ಷ ನಷ್ಟಮಾಡಿಕೊಂಡೇ ಈ ಸ್ಥಿತಿಗೆ ಬಂದರು ಎಂದುದು ಕಂಡರೆ ಯಾರಿಗೂ ದುಃಖವಾಗುವುದೇ ಸರಿ

ಜುವಾಂ ಸೋಜರ ನಾಲಿಗೆಯ ಚಂಕ್ರ ಕಂಡವರ ಮೊದಲಿಗೆ ಸೀತ್ತೈತಾಳರ ಅನಂತರ ಪ್ರಿವಂ ಹೆಸರು ಕೇಳಿದರೆ ಕಿಡಿಕಿಡಿಯಾದರೂ ಸೀತ್ತೈತಾಳರೇ [illegible] ಕಥೆಯೊಂದು ಅವನ ಕೇಳಬೇಕ [illegible] ಸೀತ್ತೈತಾಳರಿಗೆ [illegible] ಯಾರ ಮನೆ ಜಗಲಿಯಾದರೂ [illegible] ನಾಲ್ಕು ಜನರ ಮುಂದೆ ಕುಳಿತು ತಾನ [illegible] ನೆನ್ನುವಂತೆ ಮಾತನಾಡುವುದು ರೂಢಿ ಹೀಗಾಗಿ ಜುವಾಂ ಸೋಜರ ಪಾವಡಿಯಲ್ಲಿ ಅವರ ಕಟ್ಟೆ ಕಚೇರಿಗೆ ತೊಡಗಿದರು ಬರು[illegible] ನಾಲ್ಕು [illegible] ಗಿರಾಕಿ—ಸಂಬಂಧ ಕೂಡಬಳಿ ಜುವಾಂ ಸೋಜರಿಗೂ ಇಷ್ಟವೇ ಕೊನೆಗೆ—ಅವರ ಆಸ್ತಿ ಮಾಡುವ ಯೋಚನೆ ಮಾಡಿದಾಗ ಒಪ್ಪಿಟ್ಟರ ಆಸಿಗೆ ಸೋಜರನ್ನ ಗಿರಾಕಿಯಾಗಿ ತಗಲಿಹಾಕಿಸಿದವರೂ ಐತಾಳರೆ ಹೀಗಾಗಿ ಅವರಿಗೆ ಐತಾಳರ ಒಂದ ಮಂತ್ರ ಸ್ವರೂಪರಾದರು, ಕೆಲವು ದಿನಗಳ ತನಕ ಮಾತ್ರ

ಒಂದು ವರ್ಷ ಮಳೆ ಕಡಿಮೆಯಾಯಿತು ಐತಾಳರ ಸ್ವಂತ ನಾಲ್ಕು ಗೇಣಿ ಒಕ್ಕಲುಗಳು ಗೇಣಿ ನಾಮಹಾಕಿದರು ಐತಾಳರು 'ತ್ರಾಹಿ ತ್ರಾಹಿ' ಅಂದರೂ ಅವರನ್ನು ಬಿಡಲಾರೆ ಎಂದು ಬೆಳಿಗ್ಗೆ ಸಂಜೆ ಒಕ್ಕಲು ಮನೆಯ ಮುಂದೆ ಕುಳಿತ್ಕಾಡತೊಡಗಿದರು ಒ[illegible]—ಏಪ್ರಿಲ್ ತಿಂಗಳ—[illegible] ಐತಾಳರ ಒಕ್ಕಲ[illegible] ನಾಳೆಗೆ ಭತ್ತ [illegible] ನಾದಾದರೂ ಗದ್ದೆ [illegible] ಮಾಡಬೇಕು ಗೇಣಿ [illegible] ಹಾಗಿಲ್ಲ ಎಂದ ಅವರಿಗೆ ಬದಲಿಕ ಬೇನೆಂದು ಒಳನಗೆಯೊಂದ ಹುಟ್ಟಿ ಕಳಪ್ಪಲಿನ ಶೆಂಗು [illegible] ಹೊಸಸಿ ಕುಸಿರೇ ಇರಲಿ [illegible] ಒಕ್ಕಲುಗಳ ಮನೆ ಕೇಳಿ[illegible] ಹೀನ ಮಾಡ [illegible] ನೋಡಿ ಯೋ ಚನೆಯಿಂದ ಒಕ್ಕಲು ಮನೆ ಹೊಕ್ಕರೆ ಅಲ್ಲಿ ಯಾರೂ ಇರಲಿಲ್ಲ ಕೊಟ್ಟಿಗೆಯಲ್ಲಿನ ಜಾನುವಾರು [illegible] ಎಲಾ [illegible] ಎಂದ [illegible] ಒಕ್ಕಲಿಗ [illegible] ಅಲ್ಲೂ [illegible] ಕ್ಕಲಿಗಳ [illegible]

ಸೀತ್ತೈತಾಳರಿಗೆ [illegible] ಅವ ರಿಂದ ಅಷ್ಟೇ [illegible] ಇಷ್ಟು ಕೂನಿ ಹೊಸ ಒಕ್ಕಲು [illegible] ವುದ [illegible] ಚಿಂತೆಗೆ ಒಳಗಾದರು. ಅದೇ [illegible] ಜುವಾಂ ಸೋಜರ ಅಂಗಡಿಯಲ್ಲಿ ನಡೆಯುವಾಗ ಈ ಒಕ್ಕಲ ಕಳ್ಳರನ್ನು ನಂಬಿ ನಾನ ಕೆಟ್ಟೆ ಎಂದರ ಜುವಾಂ ಸೋಜರ ತೆರೆದ ಬಾಯಿಗೆ ನಮ್ಮ ಘೋಗೇರ ಒಕ್ಕಲ [illegible] ಬಂದರೇ?

ನಾನು ನಾಲ್ಕು ಜನ ಕ್ರಿಸ್ತಾಂ ಒಕ್ಕಲು ಕೊಡುತ್ತೇನೆ ಆರೇ ತಿಂಗಳಲ್ಲಿ ನಿಮ್ಮ ಗದ್ದೆ ಚಿನ್ನವಾಗಬೇಕು ಎಂದರು ಆದರೆ ಮಾತ್ರ ಈ ವರ್ಷಕ್ಕೆ ಅವರಿಗೆ ಹೂಡಲು ಎತ್ತು ಕೊಡಬೇಕು ನಿಮ್ಮ ಚಾಲ್ತಿ ಗೇಣಿ ಧಾರಣೆ ಮುಡಿಗೆ ಎಂಟು ಆದರೆ ಅಕ್ಕಿ ಕೊಡಬೇಕು ಮುಂದೆ ಸಮನಾದ ಗೇಣಿ ಕೊಡಿಸುವ ಎಂದರು. ಐತಾಳರಿಗೆ ಗೇಣಿ ಹೋಗುತ್ತದೆ, ಎತ್ತುಗಳನ್ನು ತೆಗೆಯಿಸಿ ಕೊಡಬೇಕು ಎಂಬುದು ಕಷ್ಟ ಕಂಡರೂ—ಎಲ್ಲಾ ಹೋಗುವುದಕ್ಕಿಂತ ಗದ್ದೆ ಚಿನ್ನ ಮಾಡುವ ಒಕ್ಕಲು ಸಿಕ್ಕಿದರೆ ಆಗಬಹುದು ಎಂದು ಕಂಡಿತು ನಾಳೆಗೇ ಬರಲಿ ಎಂದರು ಸರಿ, ಎಂಟು ದಿವಸದಲ್ಲಿ ಕುಟುಂಬ ಸಮೇತ ಹೊಸ ಬಿಡಾರ ನಾಲ್ಕು ಬಂದಿತು ಐತಾಳರು ನಾಲ್ಕು ಮನೆಗಳಿಗೆ ಎರಡು ಜತೆ ಕೋಣ ಕೊಡಿಸಿದರು ನಗದಿಯಿಂದ ಅವರಲ್ಲೂ ಕಾಸಿರಲಿಲ್ಲ ಜುವಾಂ ಸೋಜರಿಗೆ ನೋಟು ಬರೆದು ಕೊಟ್ಟು ಅಷ್ಟು ಕೆಲಸಮಾಡಿದರು ಮಳೆ ಬೀಳುವುದರಲ್ಲಿ ಒಕ್ಕಲು ಬಸ್ತ್ಯಾಂ, ರುಜಾರಿ, ಪೇದು, ಪಾಸ್ಕು ನಾಲ್ಕು ಮಂದಿ ಅವರ ಹೆಂಡಿರು ಮಕ್ಕಳು ಎಂದು ಬೆವರು ಸುರಿಸಿ ಒಂದಕ್ಕೆರಡು ಕೆಲಸ ಮಾಡತೊಡಗಿದರು ಐತಾಳರ ಮನಸ್ಸಿಗೆ 'ಹೋ ಚಿನ್ನದಂಥಾ ಒಕ್ಕಲು ಸಿಕ್ಕಿತು. ಬಿಡು ಬಿಡು ಚಿಂತೆಯು ಎನಿಸಿತು.

ಸರಿ, ಮೊದಲಿನ ಬೆಳೆ ಕಟಾವಾಯಿತು ಗೇಣಿ ವಸೂಲಿ ಸಮಯ ಬಂದಿತು ಹಾಗೂ ಹೀಗೂ ಮುಡಿಗೆ ಐದರಂತೆ ಗೇಣಿ ವಸೂಲಾಯಿತು ಎರಡನೇ ವರ್ಷ ಐತಾಳರು ಸೋಜರೇ—ನೋಡಿ ಒಂದ ವರ್ಷಕ್ಕೆ ಮಾತ್ರ ಗೇಣಿ ಕಡಿಮೆ ಮಾಡಿದ್ದು ಈ ವರ್ಷ ಕರಾರಿನಂತೆ ಕೊಡಿಸದೆ ಪರ್ಯಾಯವಿಲ್ಲ ಎಂದರು ಜುವಾಂ ಸೋಜರ ಮಧ್ಯಸ್ಥಿಕೆಯಿಂದ ಬಂದ ಒಕ್ಕಲಲ್ಲವೇ ಅವರ ಮಧ್ಯಸ್ಥಿಕೆಯಿಂದಲೇ ಎಲ್ಲ ಆಗಲಿ ಎಂದೆ ಐತಾಳರು ಯೋಚಿಸಿದರು ಆದರೆ ಬಸ್ತ್ಯಾಂ ಇದ ಪಾಸ್ಕು ತನಕ ಎಲ್ಲರೂ ಆ ಮಾತು ಗದ್ದೆಯನ್ನು ನಂಬಿ ಬಾರಕೂರಿನಿಂದ ಗದ್ದೆ ಬಿಟ್ಟು ಬಂದ ನಾವು ಮುಳುಗಿದೆವು ಎಂದ ಸೋಜರ [illegible] ಬಿಡದ

[illegible] ಎರಡನೇ ವರ್ಷವೂ ಹಳೆ ಗೇಣಿ ಧಾರಣೆ [illegible] ಮುಂದಿನ ವರ್ಷ ಆಗ ಹಾಕುವ ಕಾಲಕ್ಕೆ ನಾಲ್ವರ ಗೇಣಿಗಿಂತ ಹೆಚ್ಚು [illegible] ಗದ್ದೆಗಳ ನಮಗೆ ಬೇಡ—ಎಂದರು [illegible] ನಾಲ್ಕನೆಯ ವರ್ಷದ ಆ ಧಿಯಲಿ ಐತಾಳರಿಗೆ ಚೀಟು ಕುಳ ನಾಲ್ಕು ಸಿಕ್ಕಿತು ಓಡಿಸಲಿಕ್ಕಲ್ಲ ಬಿಡಲಿಕ್ಕಲ್ಲ ಎನಿಸಿತು ಇಷ್ಟೆ [illegible] ಸೋಜರಿಂದ [illegible] ಒಬ್ಬೊಬ್ಬರಾಗಿ [illegible] ಗೇಣಿ ಬರುವುದ ಕಡಿಮೆಯಾಯಿತು ಅಲ್ಲದೆ ಹಾಗೆ ಹೀಗೆ [illegible] ಎಂದು ಜುವಾಂ ಸೋಜರಿಂದ ಅವರ ಪಡೆದ ಸಾಲ [illegible] ಸೋಜರು ಐತಾಳರ ಮೇಲಿನ ಹಂಗ ಬಿಟ್ಟು ಗದರಿಸಲು ತೊಡಗಿದರು

ಐದನೇ ವರ್ಷ ಸಾಗುವಳಿ ಸಮಯ ಬಂದಿತು ನಾಲ್ವರು ಒಕ್ಕಲು ಸೇರಿ ಐತಾಳ ರೆರೆಯ ಸೀರೆನ್ನು ಪಾಲುಮಾಡಿದರು ಐತಾಳರು ಗಾಬರಿಯಾಗಿ ನಿಮ್ಮ ಆಗೆಗೆ ಇಷ್ಟು ನೀರು ಬೇಡ ಹೀಗಿರಲು ನನ್ನ ಕೆಳಗದ್ದೆಗಳಿಗೆ ನೀರಿಲ್ಲದಂತೆ ಮಾಡಿದರೆ ಹೇಗೆ? ಎಂದು ಕೇಳಿದರು. 'ಇಲ್ಲ ನಾವು ಈ ವರ್ಷ ಎಲ್ಲಾ ಗದ್ದೆಗಳಿಗೆ ಆಗೆ ಹಾಕುತ್ತೇವೆ' ಎಂದರು ಎಲ್ಲವುದು ಆಗೆ ಹಾಕಿ ಮಾಡುವುದೇನ? ಎಂದರೆ 'ಇದು ಜುವಾಂ ಸೋಜರ ಗದ್ದೆ ಸಾಗುವಳಿಯನ್ನ ವಹಿಸಿಕೊಂಡಿದ್ದೇವೆ ಅವರಿಗೆ ಆಗೇಡಿ ಇಷ್ಟು ಎಂದರು ಸರಿ, ಐತಾಳರ ರೇಗಿ ಮನೆ ಬಂದರ ಆ ವರ್ಷ ಅವರ ಸ್ವಂತ ಸಾಗುವಳಿಗೆ ಆಗೆ ಇಲ್ಲ ಜೂನಲ್ಲಿ ಅವರು ಆ [illegible]ಯನ್ನು ಕ್ರಯಕ್ಕೆ ಕೊಂಡರು. ಜುವಾಂ ಸೋಜರಿಗೆ ದೂರು ಕೊಟ್ಟರೆ—ಇವರ ಒಕ್ಕಲಿನ ಸು[illegible]

(ಇನ್ನೂ ಮುಂದುವರಿಸಿದೆ)

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೂಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಅನುಕೂಲಿದ್ದಾರೆ. ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲ್ಯಾಯ್ಡುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವದು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡಿಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ ಮಾಲು ಪರದೇಶದಿಂದ ಬರುವಂತೆ ಉಂಟು ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು ಕನ್ನಡ ಗುಜರಾತಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎನ್. ಎಮ್. ಪಾರ್ಖ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್—ಪಿ. ಎಚ್. ಭಟ್ಕಳ್ ಗದಗ—ವಿ. ಎಸ್. ನಿಟ್ಟೆ

ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜಂಟ್—ಡಾ. ಕೆ. ಭಾಸ್ಕರ ಶೈ.

ಸ್ಪೆಶಲ್ ಏಜಂಟ್—ಬಿ. ವ್ಹಿ. ಹೊನ್ನಾವರ

★ ಜಯಪುರ ಸಂಸ್ಥಾನಾಧೀಶರಿಗೆ ಮಹಾತ್ಮಾಜಿಯವರ ವಿನಂತಿ ★

ಮಹಾತ್ಮಾ ಗಾಂಧಿಯವರು ತಮ್ಮ ಹರಿಜನ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದು 'ಜಯಪುರದ ಅಧಿಕಾರಿಗಳು ಸೇಟ ಜಮುನಾಲಾಲ ಬಜಾಜರನ್ನು ಹೆದ್ದಾರಿ ಬಿಟ್ಟು ಇರುವ ದೂರದ ನೀರಿನ ಅಭಾವವಿರುವ ಒಂದು ಪ್ರದೇಶದಲ್ಲಿ ಒಬ್ಬಂಟಿಗರನ್ನಾಗಿ ಇಟ್ಟಿದ್ದಾರೆ. ಹೀಗೆ ಅವರನ್ನು ಇಡಲಿಕ್ಕೆ ಅವರು ಅಪಾಯಕಾರಿ ವ್ಯಕ್ತಿಗಳಾಗಿದ್ದಾರೆಯೆ? ಅವರೇನು ಕ್ರಾಂತಿಕಾರಿಗಳಾಗಿರುವರೆ? ಜಯಪುರದ ದರ್ಬಾರಿನ ಆಜ್ಞೋಲ್ಲಂಘನ ಮಾಡಿದ ಕಾರಣದಿಂದ ಅವರನ್ನು ನಿರ್ಭಂಧದಲ್ಲಿಟ್ಟಿರುವುದು ಎಲ್ಲರಿಗೂ ಗೊತ್ತು. ಪರಂತು ಸೇಟರು ಒಬ್ಬ ಆದರ್ಶ ಕೈದಿಗಳಾಗಿದ್ದಾರೆ. ಅವರು ಜೈಲಿನ ಯಾವತ್ತು ನೇಮ ನಿಬಂಧನೆಗಳನ್ನು ಅಕ್ಷರಶಃ ಪಾಲಿಸುವವರು. ಹಾಗಿರುತ್ತ ಅವರನ್ನು ಬಾಹ್ಯಪ್ರಪಂಚದಿಂದ ಬೇರೆ ಮಾಡಬೇಕೇಕೆ? ಕೈದಿಗಳ ಮುಖ್ಯ ಆವಶ್ಯಕತೆಯೆಂದರೆ ಅವರಿಗೆ ಜೈಲಿನಲ್ಲಿ ಅವರಂಥ ಸಂಗಾತಿಗಳು. ಬೇಕಿದ್ದರಿಂದ ಸೇಟರನ್ನು ಉತ್ತಮವಾದ ಬೇರೊಂದು ಕಡೆಗೆ ವರ್ಗಾಯಿಸಿ ಜಯಪುರದ ಅಧಿಕಾರಿಗಳು ಅವರಿಗೆ ಒಬ್ಬ ಯೋಗ್ಯ ಸಂಗಾತಿಯನ್ನು ಕೊಡಬೇಕಾಗಿ ನಾನು ಸೂಚಿಸುತ್ತೇನೆ.

ಲಾಂಬದ ಸತ್ಯಾಗ್ರಹಿ ಕೈದಿಗಳು

'ಲಾಂಬದ ಸತ್ಯಾಗ್ರಹಿ ಕೈದಿಗಳ ಸ್ಥಿತಿಯು ಸೇಟರ ಸ್ಥಿತಿಗಿಂತ ಕೆಟ್ಟದ್ದಾಗಿದೆ. ಅವರ ಬಂದೀಖಾನೆಯು ಹಾವು ಚೇಳುಗಳಂತಹ ವಿಷಜಂತುಗಳಿಂದ ತುಂಬಿದ ಪುರಾತನ ಪಾಳುಬಿದ್ದ ಕೋಟೆಯಾಗಿದೆ. ಆ ಸ್ಥಳವು ಹಾಗಿದ್ದರೂ, ಇದುವರೆಗೆ ಯಾವ ಕೈದಿಯೂ ಚೇಳುಗಳಿಂದ ಕಚ್ಚಲ್ಪಟ್ಟಿರುವುದಿಲ್ಲವೆಂದ ಜಯಪುರದ ಅಧಿಕಾರಿಗಳು ಹೇಳುವರು. ಕಚ್ಚಿ ಕೆಲವು ಜನರು ಕೊಲ್ಲಲ್ಪಟ್ಟ ಅನಂತರವೇ ಈ ಕೈದಿಗಳ ಸ್ಥಳ ಬದಲಾವಣೆ [illegible] ಆಲೋಚಿಸಬಹುದೆಂದ ಅಧಿಕಾರಿಗಳು ತಿಳಿದಿದ್ದಾರೆಯೆ? ಉತ್ತಮ ರೀತಿಯಲ್ಲಿ ತಮ್ಮನ್ನು ನಡೆಸಬೇಕೆಂದ [illegible] ಹಿಡಿದುದಕ್ಕೆ ಈ ಕೈದಿಗಳನ್ನು ಲಾಂಬಕ್ಕೆ [illegible] ನಾನು ಕೈದಿಗಳನ್ನು ತಡೆಯದಿರುತ್ತಿದ್ದರೆ ಅವರ ಉಪವಾಸವು [illegible]

ಪ್ರಜಾಸಂಘದ ಮನ್ನಣೆ.

'ಇನ್ನು ವಿಶ್ವಾಸಾರ್ಹವಾದ ಇನ್ನೊಂದು ಸಂಗತಿ ಇದೆ. ಪ್ರಜಾಸಂಘಕ್ಕೆ ದರ್ಬಾರಿನ ಮನ್ನಣೆ ದೊರೆಯಲಿಕ್ಕೆ ಅಧಿಕಾರಿಗಳ ಅಸಾಧ್ಯಶರ್ತವನ್ನು ಹಾಕಿದ್ದಾರೆ. ನನ್ನ ಪ್ರಶ್ನೆಯಿಂದ ಪ್ರಜಾಸಂಘವು ಸತ್ಯಾಗ್ರಹವನ್ನು ನಿಲಿಸಿತು. ಇತರ ಸಂಸ್ಥಾನಗಳಲಿ ಸತ್ಯಾಗ್ರಹವು ನಿಲ್ಲಲಿಕ್ಕೆ ನನ್ನ ಮಧ್ಯಸ್ಥಿಕೆಯೇ ಕಾರಣವು. ಇಷ್ಟಾದರೂ ಅನಿಶ್ಚಿತ ಕಾಲದ ತನಕ ಸತ್ಯಾಗ್ರಹವು ಎಲ್ಲಿ ಹೇಗೆ ನಿಂತೀತೆಂದ [illegible] ಹೇಳಲಾರೆ! ಸಂಸ್ಥಾನ ಪ್ರಜೆಗಳು ಈಗ ತುಂಬಾ ಜಾಗೃತರಾಗಿದ್ದಾರೆ. ಇದನ್ನು ಅರಿತು ಸಂಸ್ಥಾನಾಧೀಶರು ಯೋಗ್ಯ ರೀತಿಯಿಂದ ವರ್ತಿಸುವರೆಂದು ನಂಬಿದ್ದೇನೆ. ಸತ್ಯಾಗ್ರಹವನ್ನು ನಿಲ್ಲಿಸಿದ ಮೇಲೂ ಸೇಟರನ್ನು ಇತರ ಸತ್ಯಾಗ್ರಹಿ ಕೈದಿಗಳನ್ನು ಜೈಲಿನಲ್ಲಿಟ್ಟಿರುವದು ತಪ್ಪೆಂದು ಜಯಪುರ ದರ್ಬಾರಿಗೆ ಸೂಚಿಸಲಿಚ್ಛಿಸುತ್ತೇನೆ.

ಕೈದಿಗಳ ಬಿಡುಗಡೆ ಇನ್ನೂ ಆಗಿರುವದಿಲ್ಲ

ಮೇ ತಿಂಗಳ ೬ರ ಹರಿಜನದಲ್ಲಿ ಪ್ರಕಟವಾಗಬೇಕಾದ ಈ ಲೇಖನವನ್ನು ಮಹಾತ್ಮರು ಮೇ ೧ನೇ ತಾರೀಕಿನ ದಿನವೇ ಇತರ ಪತ್ರಿಕೆಗಳಿಗೆ ಪ್ರಕಟನೆ ಕೊಟ್ಟರು. ಜಯಪುರದ ಅಧಿಕಾರಿಗಳು ತಮ್ಮ ಸೂಚನೆಯ ಕುರಿತು ಶೀಘ್ರದಲ್ಲಿಯೇ ಸಮಾಲೋಚಿಸುವಂತಾಗಬೇಕೆಂದು ಅವರು ಹೀಗೆ ಮಾಡಿದರು. ಪರಂತು ಒಂದು ವಾರವು ಕಳೆದು ಎರಡನೆ ವಾರವು ಆರಂಭವಾಯಿತಾದರೂ ಜಯಪುರದ ಸತ್ಯಾಗ್ರಹಿ ಕೈದಿಗಳ ಬಿಡುಗಡೆ ಆಗಿರುವದೂ ಇಲ್ಲ ಅವರನ್ನು ಸ್ಥಳಾಂತರ ಮಾಡಿದ್ದೂ ಇಲ್ಲ.

ದೇಶೀ ರಾಜ್ಯಗಳ ಕುರಿತು ಸರ್ ಬೆನರ್ಜಿಯವರ ಭವಿಷ್ಯ

ಸಂಸ್ಥಾನಗಳ ಸಿಂಹಾವಲೋಕನ

ಭವಿಷ್ಯ ನುಡಿ

ಸಂಸ್ಥಾನಗಳ ಇತ್ತೀಚೆಗಿನ ಪರಿಸ್ಥಿತಿಯ ಸಮ್ಯಾವಲೋಕನ ಮಾಡಿ ಸರ್ ಆಲ್ಬಿಯನ್ ಬೆನರ್ಜಿಯವರ ಲಂಡನ ಟೈಮ್ಸ್ ಪತ್ರಿಕೆಯಲ್ಲಿ ಒಂದು ಮಹತ್ವದ ಲೇಖನವನ್ನು ಬರೆದಿದ್ದಾರೆ. ಸರ್ ಆಲ್ಬಿಯನರು ಹಲವು ಸಂಸ್ಥಾನಗಳ ದಿವಾನರಾಗಿ ಅಲ್ಲಿಯ ಸ್ಥಿತಿಗತಿಗಳ ವಿಶೇಷ ಅನುಭವವುಳ್ಳವರಾದ್ದರಿಂದ ಅವರ ಮಾತುಗಳು ಅಮೂಲ್ಯವಾಗಿವೆ. ಒಂದು ಕಡೆಯಿಂದ ಜಾಗೃತ ಸಂಸ್ಥಾನ ಪ್ರಜೆಗಳ ಜವಾಬದಾರ ಸರಕಾರ ಸ್ಥಾಪನೆಯ ಬೇಡಿಕೆ ಮತ್ತು ಅದಕ್ಕೆ ಪ್ರಾಪ್ತವಾದ ಕಾಂಗ್ರೆಸ್ಸಿನ ಬೆಂಬಲ, ಇನ್ನೊಂದು ಕಡೆಯಿಂದ ಸಂಸ್ಥಾನಾಧೀಶರಿಗೆ ತಮ್ಮ ನಿರಂಕುಶ ಅಧಿಕಾರಗಳನ್ನು ಬಿಟ್ಟುಕೊಡಲು ಸ್ವಲ್ಪವಾದರೂ ಇಚ್ಛೆಯಿಲ್ಲದಿರುವುದು ಇವುಗಳಿಂದ ಶೀಘ್ರದಲ್ಲಿಯೇ ಈ ಸಂಸ್ಥಾನಗಳಲ್ಲಿ ಪ್ರಚಂಡ ಆಂದೋಲನವು ಉಂಟಾಗಲಿದೆ. ಈ ಆಂದೋಲನದ ಫಲಾಫಲವು ಮಹಾತ್ಮರ ಕಾರ್ಯಕುಶಲತೆ ಮತ್ತು ಬುದ್ಧಿವಿವೇಕಗಳನ್ನು ಹೊಂದಿರುತ್ತದೆ ಎಂದು ಅವರ ಭವಿಷ್ಯವನ್ನಾಡಿದ್ದಾರೆ.

ಮೈಸೂರು ಸುಧಾರಣಾ ಸಮಿತಿ

ಮೈಸೂರು ರಾಜಕೀಯ ಸುಧಾರಣಾ ಸಮಿತಿಯು [illegible] ತನ್ನ ಸಭೆಯಲ್ಲಿ ಮೈಸೂರು [illegible] ರಾಜಕೀಯ ಧ್ಯೇಯದ ಕುರಿತು ವಿಚಾರ [illegible] ನಡೆಸಿತು. ಮೈಸೂರ ಮಹಾರಾಜರ ಛತ್ರಛಾಯೆಯಲ್ಲಿ ಸಂಪೂರ್ಣ ಜವಾಬದಾರಿ ಸರಕಾರ ಸ್ಥಾಪನೆಯೇ ಈ ಧ್ಯೇಯವಾಗಿರಬೇಕೆಂದು ಅದರ ತೀರ್ಮಾನವಾಗಿದೆಯಾಗಿ ತಿಳಿದು ಬರುತ್ತದೆ. ಮಹಾರಾಜರ ವಿಶ್ವಾಸಪಾತ್ರವಾಗಿ [illegible] ಸಭೆಗಳ [illegible] [illegible] ದಲ್ಲಿ [illegible] [illegible] ಸಮಿತಿ [illegible] ಕೊಳ್ಳುವ [illegible] ಮಹಾರಾಜ [illegible] [illegible] ವಿಷಯವನ್ನು [illegible] ಮಹಾರಾಜರ [illegible] [illegible] ಸಂಘ ಮೈಸೂರು ಸ್ಟೇಟ್ ಕಾಂಗ್ರೆಸ ಪ್ರತಿನಿಧಿಗಳ ಮಹಾತ್ಮಾಜಿಯವರ ಪ್ರಸಾದ [illegible]

ತಿರುವಾಂಕೂರು

ತಿರುವಾಂಕೂರು ಸರಕಾರವು ಜವಾಬದಾರ ಸರಕಾರ ಸ್ಥಾಪನೆಯ ಪ್ರಶ್ನೆಯನ್ನು ಮರೆತಿರೆತ್ತ, ಸಂಸ್ಥಾನದಲ್ಲಿ ಪುನಃ ಜಾತಿ ಜಾತಿಯೊಳಗಿನ ದ್ವೇಷಾಸೂಯೆಗಳ ಕಿಚ್ಚು ಪ್ರಜ್ವಲಿಸುವ ಹಾಗೆ ಶಾಸನ [illegible] ದಲ್ಲಿ ಕೆಲವು ಪರಿವರ್ತನೆಗಳನ್ನು ಮಾಡಿರುವದರಿಂದ ಎಲ್ಲುವರು ನೊಂದಲಾದವರಿಗೆ ವಿಶೇಷ ಬಿಕ್ಕಟ್ಟು ಉಂಟಾಗಿದೆ. ಸ್ಟೇಟ್ ಕಾಂಗ್ರೆಸು ಮುಂದಿನ ಕಾರ್ಯಕ್ರಮವನ್ನು ರಚಿಸುವುದಕ್ಕೆ ಮಹಾತ್ಮರ ಸಲಹೆಯನ್ನು ಕೇಳಿರುವದು.

ಕಾಥಿಯಾವಾಡ ರಾಜಕುಮಾರರು

ಜಾಮನಗರ, ಪೋರಬಂದರ, ಮೋರ್ವಿ, ಧ್ರಾಂಗಧರ, ಪಾಲಿಟಣ್ಣ, ರಾಜಕೋಟ, ಧ್ರೋಲ, ಹನಸ್ಕಾನ, ಮುಳಿ ಇವುಗಳ ರಾಜರು ಈ ಸಂಸ್ಥಾನಗಳಿಗೆ ಸಮ್ಬಂಧಪಟ್ಟ ವಿವಿಧ ಸಮಸ್ಯೆಗಳನ್ನು ಒಂದಾಗಿ ಏಕಮತ್ಯದಿಂದ ಬಿಡಿಸಲಿಕ್ಕೆ ತಿಂಗಳಿಗೊಮ್ಮೆ ಸಭೆ ಕೊಡುವ ನಿರ್ಧಾರಕ್ಕೆ ಬಂದಿರುವರು. ತಮ್ಮ ಹಕ್ಕು ಅಧಿಕಾರಗಳ ರಕ್ಷಣೆಗೆ ಇದುವೇ ಸುಲಭೋಪಾಯವೆಂದು ಅವರು ತಿಳಿದಂತಿದೆ. ಈ ಸಂಸ್ಥಾನಗಳಲ್ಲಿ ಪ್ರಜಾ ಚಳವಳಿಯು ಉಗ್ರರೂಪವನ್ನು ತಾಳಿರುವುದೇ ಅವರು ಈ ರೀತಿ ಒಂದಾಗಿರುವ ರಹಸ್ಯವಾಗಿದೆ.

ತಲ್ಚೇರು

ಒರಿಸ್ಸದೊಳಗಿನ ತಲ್ಚೇರು ಸಂಸ್ಥಾನದ ರಾಜರು ಅರಮನೆಯಲ್ಲಿ ಕೂಡಿದ ಸಭೆಯ [illegible] ರಾಜ್ಯ [illegible] ನಿರಾಶ್ರಿತರಿಗೆ ಕೆಲವು ಭರವಸೆಗಳನ್ನು [illegible] ಕೊಟ್ಟಿದ್ದಾರೆ. ಆದರೆ ಇತ್ತ ಹಿಂದೆ ಪ್ರಜಾಪರಿಷತ್ತಿಗೂ ರಾಜರ ಕಡೆಯಿಂದ ಪೊಲಿಟಿಕಲ್ ಏಜಂಟರಿಗೂ ಆದ ಒಡಂಬಡಿಕೆಗೆ ಅನುಕೂಲವಾಗಿರುವುದಿಲ್ಲ. ಆದ್ದರಿಂದ ನಿರಾಶ್ರಿತರ ಸಮಸ್ಯೆಯು ಇನ್ನೂ ಯೋಗ್ಯ ರೀತಿಯಿಂದ ಬಿಡಿಸಲ್ಪಟ್ಟಿರುವುದಿಲ್ಲ. ಅವರ ಕಷ್ಟಗಳು ದಿನದಿನಕ್ಕೆ ಬೆಳೆಯುತ್ತಲಿವೆ. ರಾಜರ ರಿಯಾಯತಿಗಳಿಂದ ತಮ್ಮ ಅತೃಪ್ತಿಯನ್ನು ಸೂಚಿಸಿ ಒರಿಸ್ಸಾ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷ ಶ್ರೀ ಹರಿಕೃಷ್ಣ ಮಹತಾಬರು ಮಹಾತ್ಮರಿಗೆ ತಂತಿ ಬಿಟ್ಟಿರುವರು.

ಕಾಪುರ್ತಲ

[illegible] ವಿವಾದವನ್ನು ಪರಿಹರಿಸಲಿಕ್ಕೆ ಹಳ್ಳಿಗಳ ಉನ್ನತಿಗೂ ಒಂದು ಯೋಜನೆಯನ್ನು ತಯಾರಿಸುವದಕ್ಕೋಸ್ಕರ ರಾಜಕೀಯ [illegible] ಅಧ್ಯಕ್ಷತೆಯಲ್ಲಿ ಒಂದು ಎಡ್ವೈಸರಿ ಕೌನ್ಸಿಲಿನ ರಚನೆಯಾಗಿದೆ. ಆದ [illegible] ಈ ಕೌನ್ಸಿಲ ಸೂಚನೆಗಳನ್ನು [illegible]

ಮೈಸೂರು ಕಾಂಗ್ರೆಸ ಸಪ್ತಾಹ

ಇದ ಮೈಸೂರು ಸ್ಟೇಟ ಕಾಂಗ್ರೆಸ ನೇತೃತ್ವದಲ್ಲಿ [illegible] ತನಕ [illegible] ಮೊದಲನೆ ದಿನವನ್ನು [illegible] ದಿನವನ್ನು ಜವಾಬದಾರ ಸರಕಾರ ದಿನ [illegible] ಈ ಸಪ್ತಾಹದಲ್ಲಿ ಮೈಸೂರಿನಲ್ಲಿ ಸ್ಟೇಟ ಕಾಂಗ್ರೆಸ್ಸಿನ [illegible] ಕಾರ್ಯಗಳ ನಡೆದವು.

ಸಂಡೂರು

ಸಂಡೂರು ರಾಜಕೀಯ ಸುಧಾರಣಾ ಸಮಿತಿಯು [illegible] ಹಸಿದ ವಿದ್ಯಾವರ್ಗ [illegible] [illegible] [illegible] [illegible] ಜವಾಬದಾರ ಸರಕಾರ ಸ್ಥಾಪನೆ [illegible] ತಿಳಿಸಿದ [illegible] ರಂತ [illegible] ಸಮಿತಿಯಲ್ಲಿ ಅಧಿಕ ಸಂಖ್ಯಾಕರಾಗಿರುವುದರಿಂದ ಸಮಿತಿಯ ಕಾರ್ಯಕಲಾಪಗಳ [illegible] ಸಂದೇಹವನ್ನು ಪ್ರಕಟ ಮಾಡಿದೆ.

ಎಸೆಂಬ್ಲಿ ಕೌನ್ಸಿಲುಗಳಿಗೆ ಜಾಸ್ತಿ ಅಧಿಕಾರಗಳು

ಮೈಸೂರು ರಾಜಕೀಯ ಸುಧಾರಣಾ ಸಮಿತಿಯು ಮೈಸೂರು ಎಸೆಂಬ್ಲಿ ಕೌನ್ಸಿಲುಗಳ ಜೀವನಾವಧಿಯನ್ನು ೪ ವರ್ಷವೆಂದು [illegible] ಯಿಸಿ, ಅದಕ್ಕೆ [illegible] ಹಾಗೂ [illegible] ಕೆಂದು ಜಾಸ್ತಿ ಅಧಿಕಾರಗಳನ್ನು ಕೊಡಬೇಕೆಂದು ಶಿಫಾರಸು ಮಾಡಿದೆ.

ರಾಜಕೋಟ

ಶ್ರೀ ವೀರವಲ್ಲಭ ಸುಧಾರಣಾ ಸಮಿತಿಯ ರಚನಾಕಾರ್ಯದಲ್ಲಿ ಇನ್ನೂ ಇನ್ನೂ ವಿಘ್ನವಿರೋಧಗಳನ್ನು ತಂದೊಡ್ಡುವ ಆಲೋಚನೆಯಲ್ಲಿದ್ದಾರೆ. ಪ್ರಜಾಪರಿಷತ್ತಿನ ಅಧ್ಯಕ್ಷ ಶ್ರೀ ದೇವರರು ಕೂಡ ರಾಜಕೋಟದ ಪ್ರಜೆಗಳಾಗಿರುವುದರಿಂದ ಅವರಿಗೂ ಸುಧಾರಣಾ ಸಮಿತಿಯ ಪ್ರಸ್ತಾಪವೇಕೆಂದಿದ್ದಾರೆ. ಪಟೇಲರು ಹೇಗೂ ರಾಜಕೋಟಕ್ಕೆ ಬರಲಾರರಲ್ಲ, ಗಾಂಧಿಯವರು ಕೂಡ ಅಲ್ಲಿ ಬರಬಾರದೆಂದು ಅವರು ಹೇಳಿರುವರು. ಪರಂತು ಗಾಂಧಿಯವರು ಬೃಂದಾವನದ ಕೆಲಸಗಳು ಮುಗಿದೊಡನೆ ತಾ [illegible] ದಿನ ರಾಜಕೋಟಕ್ಕೆ ಹೋಗುವರು. ಅಲ್ಲಿ ತೃಪ್ತಿಕರವಾದ ಇತ್ಯರ್ಥವು ಆಗದಿದ್ದರೆ ಪುನಃ ಸತ್ಯಾಗ್ರಹವು ಆರಂಭವಾಗಲೂಬಹುದು.

ಕಾಶ್ಮೀರ

ಮಹಾರಾಜರು ಕೆಲವು ತಿಂಗಳ ಹಿಂದೆ ಘೋಷಿಸಿದ ಪ್ರಕಾರ ಕೆಲವು ಕೆಲವು ರಾಜಕೀಯ ಸುಧಾರಣೆಗಳನ್ನು ಒಳಗೊಂಡ ರಾಜಕೀಯ ಘಟನೆಯನ್ನು ತಯಾರಿಸುವದಕ್ಕೋಸ್ಕರ ಒಂದು ಕಮಿಟಿಯನ್ನು ಮಾಡಿದ್ದಾರೆ.

ಬೀಕಾನೇರ

ಕಾಂಗ್ರೆಸು ಎಂದರೆ ಸಂಸ್ಥಾನಗಳು ಬೆಚ್ಚಿಬೀಳುವ ಹಾಗೆ ಕಾಣುತ್ತದೆ. ಅದಕ್ಕೆ ಬಿಕಾನೇರವು ಉತ್ತಮ ಉದಾಹರಣೆಯಾಗಿದೆ. ಜವಾಬದಾರಿ ಸರಕಾರ ಸ್ಥಾಪನೆಗೆ ಪ್ರಜೆಗಳು ಚಳವಳಿಸುವಾಗ ಕಾಂಗ್ರೆಸು ಅವುಗಳ ಬೆಂಬಲಕ್ಕಿರುವುದನ್ನು ಸಂಸ್ಥಾನಾಧೀಶರು ವಿರೋಧಿಸಿದರೆ ಅದಕ್ಕೊಂದು ಅರ್ಥವುಂಟು. ಆದರೆ ಕಾಂಗ್ರೆಸ ಬರಗಾಲ ಆದಿ ಕಷ್ಟಗಳಿಗೆ ಸಿಲುಕಿದ ಜನರಿಗೂ ಸಹಾಯ ಮಾಡಬಾರದೆಂದು ಸಂಸ್ಥಾನಾಧೀಶರ ಪ್ರಯತ್ನಿಸುವಾಗ ಅಂಥವರ ವರ್ತನೆಯ ಅರ್ಥವೇ ಆಗುವುದಿಲ್ಲ. ಬಿಕಾನೇರು ದರಬಾರು ಸಂಸ್ಥಾನದಲ್ಲಿ ಕಾಂಗ್ರೆಸ ಕೆಲಸಗಾರರ ಸಭೆ ಇತ್ಯಾದಿ ಯಾವುವೂ ನಡೆಯದಂತೆ ನಿರ್ಬಂಧ ಹಾಕಿರುವದು ಮಾತ್ರವಲ್ಲದೆ, ಅವರು ಜನರ ಸಂಪರ್ಕದಲ್ಲಿ ಕೂಡ ಬರದಂತೆ ಜಂಗಲ [illegible] ಕೆಲ್ಲವೇಕೆಂದು ಸರಕಾರಿ ನೌಕರರನ್ನು ಆಜ್ಞಾಪಿಸಿದೆ. ಕಷ್ಟದಲ್ಲಿ [illegible] ಜನರ ಕಷ್ಟ ನಿವಾರಣೆಯಾದಿ ಕಾಂಗ್ರೆಸ ಕೆಲಸಗಾರರು ಅವರಿಗೆ ಸಹಾಯ ಮಾಡಲಿಕ್ಕೂ ಈ ಸಂಸ್ಥಾನವು ಬಿಡುವದಿಲ್ಲ.

ಆಫ್ರಿಕದಲ್ಲಿ ಹಿಂದೀಯರು

ಯುರೋಪಿಯನ ವಸತಿಗಳಿಂದ ಭಾರತೀಯರ ವಸತಿಗಳನ್ನು [illegible] ಸರಕಾರ [illegible] ದಕ್ಷಿಣ ಆಫ್ರಿಕಾ [illegible] [illegible] [illegible] ಅಗತ್ಯವಿದ್ದವನ್ನೇ [illegible] ದೆಯಲ್ಲಿ [illegible] [illegible] [illegible] [illegible] [illegible] ಬಹುದು

ಮದ್ಯನಿಷೇಧಕ್ಕೆ ಸ್ಪೆಷಲ್ ಪೋಲಿಸರು

[illegible] ಮದ್ಯನಿಷೇಧವಾಗುವುದಕ್ಕೆ [illegible] ಜನರ [illegible] ಪ್ರವರ್ತಿಸದಂತೆ ತಡೆಯಲಿಕ್ಕೆ [illegible] ಸರಕಾರವು ಸ್ಪೆಶಲ್ ಪೋಲಿಸರ ಒಂದು ದಳವನ್ನೇರ್ಪಡಿಸಿ ಅವರ್ಕೆ [illegible] ಅನುಭವ [illegible] ಈ ಪೋಲಿಸ ದಳ [illegible] [illegible] ದಳವು [illegible] [illegible]

ವಿದ್ಯಾಶಾಲೆಗಳಿಗೆ
ಪ್ರತಿವಾರವೂ
ಸ್ವದೇಶಾಭಿಮಾನಿ
ಅತ್ಯಾವಶ್ಯಕ ವಾಚನೀಯ
ವಿಷಯಗಳನ್ನು
ಒದಗಿಸುವುದು.

ನಿರಕ್ಷರತೆಯೊಡನೆ ಹೋರಾಟ

ಸಿಂಧ ಗವರ್ನರರ ಬೋಧನೆ

ಬೊಂಬಾಯಿಯ ಆಂದೋಲನ - ಇಂದೋರಿನ ಚಳವಳಿ

ನಮ್ಮಲ್ಲಿ ಸಾಕ್ಷರತೆಯ ಪ್ರಚಾರವಾಗಬೇಕಾದ್ದು ಅತ್ಯಂತ ಅವಶ್ಯಕವಾಗಿರುವುದು. ನಮ್ಮ ನಾಗರಿಕತೆಯು ಉಳಿಯಲ್ಲಿ ಅಳಿಯಲಿ, ಜನರೆಲ್ಲರೂ ಅಕ್ಷರ ಜ್ಞಾನವನ್ನು ಪಡೆಯಬೇಕಾಗಿದೆ. ಯಾಕೆಂದರೆ ನಮ್ಮ ಭವಿಷ್ಯವು ನಮ್ಮ ಈ ಪ್ರಯತ್ನದ ಸಫಲತೆಯನ್ನು ಹೊಂದಿ ಉಜ್ವಲವಾಗುವುದು. ಪರಂತು ಈ ಮಾತು, ಒತ್ತಾಯದಿಂದ ಸಾಕ್ಷರತೆಯ ಪ್ರಚಾರವನ್ನು ಮಾಡುವುದು ಫಲಕಾರಿಯಾಗದು, ಸ್ವಯಂ ಸ್ಫೂರ್ತಿಯಿಂದ ನಿರಕ್ಷರರು ಸಾಕ್ಷರರಾಗುವುದಾದರೆ ಅದರ ಫಲವು ಚಿರಸ್ಥಾಯಿಯಾಗುವುದು' ಎಂದು ಸಿಂಧಪ್ರಾಂತದ ಸಾಕ್ಷರತೆಯ ಪ್ರಚಾರದ ಪ್ರಾರಂಭೋತ್ಸವವು ನಡೆದಾಗ, ಸರ್ ಲೇನ್ಸಲೊಟ ಗ್ರಹಾಮರು ಹೇಳಿದರು

ಎಣಿಸಿದಷ್ಟು ಸುಲಭವಲ್ಲ

ಕೆಲಸಗಾರರಿಗೆ ಒಂದು ಎಚ್ಚರಿಕೆಯನ್ನು ಕೊಡುತ್ತಾ ಸಿಂಧ ಗವರ್ನರರು ಹೇಳಿದ್ದೇನೆಂದರೆ—ಸಾಕ್ಷರತೆಯ ಪ್ರಚಾರವನ್ನು ಮಾಡುವುದು ಎಣಿಸಿದಷ್ಟು ಸುಲಭವಲ್ಲ. ನಿರಕ್ಷರರನ್ನು ಹೇಗೆ ಸಾಕ್ಷರರನ್ನಾಗಿ ಮಾಡುವರೋ, ಹಾಗೆ ಅವನು ಪುನಃ ನಿರಕ್ಷರರಾಗದಂತೆಯೂ ಕೆಲಸಗಾರರು ಜಾಗ್ರತೆ ತೆಗೆದುಕೊಳ್ಳಬೇಕು. ಇದಕ್ಕೋಸ್ಕರ ವಿಶೇಷವಾಗಿ ಹಳ್ಳಿಗರಿಗೆ ಪ್ರಯೋಜನಕ್ಕೆ ಬೀಳುವ ಒಂದು ವಾರ್ತಾ ಪತ್ರಿಕೆಯ ಸಾರ್ವತ್ರಿಕ ಪ್ರಚಾರವಾಗುವ ದಿನವನ್ನು ಎದುರು ನೋಡುವೆನು

'ಎಲ್ಲಾ ಶಾಲೆಗಳು ಮುಚ್ಚಿದ್ದುವು

ಸಿಂಧದಲ್ಲಿ ನಿರಕ್ಷರತೆಯೊಡನೆ ಹೋರಾಟವು ಆರಂಭವಾಗಿರುವುದರ ಸ್ಮಾರಕವಾಗಿ, ಸಾಕ್ಷರತೆಯ ಪ್ರಚಾರದ ಪ್ರಾರಂಭೋತ್ಸವವು ನಡೆದದ್ದು ಇದೇ ಮೇ ತಿಂಗಳ ಮೊದಲನೆ ದಿನ ಎಲ್ಲ ಶಾಲೆಗಳಿಗೆ ರಜೆ ಕೊಡೋಣಾಗಿತ್ತು ಕರಾಚಿ ನಗರದಲ್ಲಿ ವಿಮಾನದ ಮೇಲೆಗಡೆಯಿಂದ ಆ ದಿನ ನಗರದ ವಾಸಿಗಳಿಗೆ ಕರಪತ್ರಗಳು ಹಂಚಲ್ಪಟ್ಟವು. ಸ್ವಯಂ ಸೇವಕ ಉಪಾಧ್ಯಾಯರು ನಿರಕ್ಷರರ ಕ್ಲಾಸುಗಳನ್ನು ತೆರೆಯುವ ಮೊದಲು ೧೫ ದಿನಗಳ ತನಕ ಪ್ರಚಂಡ ಪ್ರಚಾರ ಕಾರ್ಯವು ನಡೆಯುವುದು. ಆ ಮೇಲೆ ಸಿಂಧದ ಎಲ್ಲ ಕಡೆಗಳಲ್ಲಿ ನಿರಕ್ಷರರ ಬಗ್ಗೆ ರಾತ್ರಿ ಶಾಲೆಗಳು ತೆರೆಯಲ್ಪಡುವವು ಇದಕ್ಕೆ ಸರಕಾರವು ಸಾಧ್ಯವಿದ್ದ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ

ಬೊಂಬಾಯಿಯಲ್ಲಿ ಕ್ಲಾಸುಗಳ ಆರಂಭ

ಬೊಂಬಾಯಿಯಲ್ಲಿ ಮೇ ಒಂದನೇ ತಾರೀಕಿನ ದಿನ ರಾತ್ರಿ ನೂರೈವತ್ತು ಪ್ರಾಯಸ್ಥ ಅಶಿಕ್ಷಿತರ ಶಿಕ್ಷಣ ತರಗತಿಗಳು ತೆರೆಯಲ್ಪಟ್ಟವು ಕಳೆದ ೧೫ ದಿನಗಳಿಂದ ಪ್ರಚಾರಕಾರ್ಯ ನಡೆಯುತ್ತಿದ್ದ ನಿರಕ್ಷರತೆ ನಿವಾರಣಾಸಮಿತಿಯು ಇದಕ್ಕೆ ಬೇಕಾಗಿ ಮುಂದೆ ಒಂದು ತಿಂಗಳ ತನಕ ೩೫೦೦ ಸ್ವಯಂ ಸೇವಕ ಉಪಾಧ್ಯಾಯರನ್ನು ಭರ್ತಿಮಾಡಿಯವುದು ಈ ತಿಂಗಳೊಳಗಾಗಿ ಬೊಂಬಾಯಿ ನಗರದೊಳಗಿನ ಅಶಿಕ್ಷಿತರಲ್ಲಿ ೧೦೦೦೦ ಜನರು ಓದುಬರಹ ಜ್ಞಾನವನ್ನು ಸಂಪಾದಿಸುವರಾಗಿ ಅಂದಾಜುಮಾಡಲಾಗಿದೆ ಇದರಲ್ಲಿ ಸಫಲತೆಯು ದೊರೆತುದಾದರೆ ಸಮಿತಿಯು ತನ್ನ ಕಾರ್ಯಕ್ಷೇತ್ರವನ್ನು ಬರುವ ತಿಂಗಳಿಂದ ಇನ್ನೂ ವಿಸ್ತರಿಸುವುದು

ಇಂದೋರಿನ ಚಳವಳಿ

ಇಂದೋರಿನ ಗೃಹಮಂತ್ರಿ ಶ್ರೀ ಎಮ್ ಎ ರಾಶೀಧರ ನೇತೃತ್ವದಲ್ಲಿ ಇಂದೋರಿನಲ್ಲಿ ಹರಿಜನರೊಳಗೆ ಸಾಕ್ಷರತೆಯ ಪ್ರಚಾರ ಕಾರ್ಯವು ಆರಂಭವಾಯಿತು ಈ ಕಾರ್ಯಕ್ಕೆ ಸಂಪೂರ್ಣ ಸಫಲತೆಯನ್ನು ಕೋರಿ ಹೋಳ್ಕರ ಮಹಾರಾಜರು ಸಂದೇಶವನ್ನು ಕಳುಹಿಸಿದ್ದರು ದೇಶದ ಗಣ್ಯಮಾನ್ಯ ಮುಖಂಡರು ಸಂಘ ಸಂಸ್ಥೆಗಳೂ ಸಂದೇಶವನ್ನು ಕಳುಹಿಸಿದ್ದುವು. ಶಿಕ್ಷಿತರಾದವರು ತಮಗಿಂತ ಕಡಿಮೆ ಸೌಭಾಗ್ಯ ಶಾಲಿಗಳಾದ ನಿರಕ್ಷರರಿಗೆ ಓದುಬರಹ ಜ್ಞಾನವನ್ನು ಕೊಡುವುದು ಅವರ ಆದ್ಯಕರ್ತವ್ಯವಾಗಿದೆ ಎಂದು ಗೃಹಮಂತ್ರಿಗಳು ಭಾಷಣಕೊಟ್ಟರು

ಪಂಜಾಬ ಉಪಾಧ್ಯಾಯರ ಸಭೆ

'ಪ್ರಾಂತಿಕ ಸ್ವಾಯತ್ತತೆಯ ಅಧಿಕಾರವು ದೊರೆತ ಬಳಿಕ ಪ್ರಾಂತದ ನಡವಳಿಕೆಯಲ್ಲಿ ಪರಿವರ್ತನೆಯಾಗಿದೆ ಆದರೆ ನಿಜವಾದ ಪರಿವರ್ತನೆಯು, ಹಿಂದೂಸ್ಥಾನದ ಭಾಗ್ಯನಿರ್ಮಾತರಾದ ಹಳ್ಳಿ ಶಾಲೆಗಳ ಉಪಾಧ್ಯಾಯರಿಂದಲೇ ಆಗಲಿರುವುದು' ಎಂದು ಪಂಜಾಬಿನ ಶಿಕ್ಷಣ ಮಂತ್ರಿ ಮಿಯಾನ ಅಬ್ದುಲಹಾಯಿಯವರು ಪಂಜಾಬು ಹಳ್ಳಿಶಾಲೆಗಳ ಉಪಾಧ್ಯಾಯರ ಪರಿಷತ್ತನ್ನು ತೆರೆಯುತ್ತ ಹೇಳಿದರು ಇದೀ ಪ್ರಾಂತ್ಯದಿಂದ ಸುಮಾರು ೪೦೦ ಮಂದಿ ಉಪಾಧ್ಯಾಯ ಪ್ರತಿನಿಧಿಗಳು ಪರಿಷತ್ತಿಗೆ ಬಂದಿದ್ದರು ಉಪಾಧ್ಯಾಯರಿಗೆ ಶಿಕ್ಷಣಕ್ರಮದ ಸುಧಾರಣೆ, ಹಾಗೂ ಧಾರ್ಮಿಕ ಮತ್ತು ನೈತಿಕ ಶಿಕ್ಷಣದಲ್ಲಿ ತರಬೇತಿಯನ್ನು ಕೊಡುವ ಅವಶ್ಯಕತೆಯನ್ನು ಶಿಕ್ಷಣ ಮಂತ್ರಿಗಳು ಸೂಚಿಸಿದರು ಜಾಮತಿಕ ಮಂದ ಸಂಬಂಧವಾದ ಪ್ರತೀಕಾರೋಪಾಯಗಳು ತೊಲಗಬೇಕಾದರೆ ಉಪಾಧ್ಯಾಯರಿಗೆ ಧಾರ್ಮಿಕ ಶಿಕ್ಷಣದ ತರಬೇತಿಯು ಅಗತ್ಯವೆಂದರು.

ಸಾರ್ವತ್ರಿಕ ಆಂದೋಲನ

ಸಾಕ್ಷರತೆಯ ಪ್ರಚಾರ ಆಂದೋಲನವು ಸಿಂಧ, ಬೊಂಬಾಯಿ, ಇಂದೋರ ಪಂಜಾಬಗಳಲ್ಲಿ ಮಾತ್ರ ಆರಂಭವಾಗಿರುವುದಲ್ಲ ಬಂಗಾಳದಲ್ಲಿಯೂ ಮೈಸೂರು ಹೈದರಾಬಾದ ಮೊದಲಾದ ದೇಶೀಸಂಸ್ಥಾನಗಳಲ್ಲಿಯೂ ಈ ಆಂದೋಲನ ಪ್ರಾರಂಭವಾಗಿದೆ. ಬಿಂಧ ಸಂಡೂರು ಮೊದಲಾದ ಮುಂದುವರಿದ ಕೆಲವು ಸಂಸ್ಥಾನಗಳಲ್ಲಿ ರಾಜಕುಮಾರರೂ, ರಾಜಪರಿವಾರದವರೂ ಈ ಕಾರ್ಯದಲ್ಲಿ ತುಂಬಾ ಆಸಕ್ತಿಯನ್ನು ತೋರಿಸಿರುವರು ಕಾಂಗ್ರೆಸ ಪ್ರಾಂತ್ಯಗಳಲಂತೂ ಈ ಚಳವಳಿಗಳಿಗೆ ಬಹಳ ಪ್ರಾಧಾನ್ಯತೆಯು ಕೊಡಲ್ಪಡಿದೆ. ಇದೀಗ ನಮ್ಮ ದೇಶದ ಸಾರ್ವತ್ರಿಕ ಆಂದೋಲನವಾಗಿರುವುದು. ಈ ಆಂದೋಲನದಲ್ಲಿ ಬಿಹಾರು ಅಗ್ರಮಿಯಾಗಿರುವುದು ಅಲ್ಲಿ ಕಳೆದ ೬ ತಿಂಗಳಲ್ಲಿ ೫೦೦೦ಕ್ಕೂ ಮಿಕ್ಕಿದ ನಿರಕ್ಷರ ಹಳ್ಳಿಗರು ಪೂರ್ಣಸಾಕ್ಷರರಾಗಿರುವರು

DIAMONDS! DIAMONDS!
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಾಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚಾಕಾಚಕ್ಯತೆಯೂ ಸುಲಕ್ಷಣಗಳೂ ತಾನಾಗಿಯೇ ತಿಳಿದು ಬರುವುದು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ ಆರ್ ಕೆ. ಶೆಟ್, ಜುವೆಲ್ಲರ್,
ಮಂಗಳೂರು

ಶ್ರೀ ಸುಬ್ರಾಯ ದೇವಸ್ಥಾನ, ಕಾಟುಕುಕ್ಕೆ ಗ್ರಾಮ, ಕಾಸರಗೋಡು, ದಕ್ಷಿಣ ಕನ್ನಡ.

1987ನೇ ಜೂನ್ 30ಕ್ಕೆ ಅಂತ್ಯವಾಗುವ ಮೂರು ವರ್ಷಗಳ ಜಮಾಖರ್ಚಿನ ವಿವರ

ಜಮಾ

ವಿವರ	1934-35	1935-36	1936-37
ಬಾಡಿಗೆ	1085 8 0	1085 8 0	1085 8 0
ಮಾರಾಟ	42 5 8	191 6 11	66 11 8
ಕಾಣಿಕೆ	15 8 0	122 9 4	187 3 2
ವಸೂಲಾದ ಬಡ್ಡಿ	198 4 0	60 0 0	20 0 0
ವಸೂಲಾದ ಡಿಕ್ರಿ ಹಣ	169 8 0		1870 7 0
ಜಮೆಗಿಂತಲೂ ಹೆಚ್ಚಾದ ಖರ್ಚು	588 12 11	252 8 1	
ಜುಮ್ಲಾ	2049 15 7	1712 0 4	2679 13 10

ಖರ್ಚು

ವಿವರ	1934-35	1935-36	1936-37
ಶಾಸ್ತ್ರಿ ಖರ್ಚ	819 0 10	965 12 1	946 7 2
ಸಂಬಳ	418 4 0	355 8 0	355 8 0
ತೆರಿಗೆ	552 14 0	250 2 6	311 15 6
ತೆತ್ತ ಬಡ್ಡಿ	—	90 0 0	125 10 0
ಪ್ರಯಾಣ ಖರ್ಚು	68 1 9	89 5 6	51 8 9
ಕೋರ್ಟು ಖರ್ಚು	171 10 0	—	9 4 0
ಪ್ರಿಂಟಿಂಗ್	8 2 0	—	3 1 0
ಟಪ್ಪಾಲು ಖರ್ಚು	10 8 9	8 6 0	0 5 6
ಇತರ ಖರ್ಚು	11 6 8	7 14 8	23 8 6
ಖರ್ಚಿನ ಮೇಲಿನ ಹೆಚ್ಚಾದ ಜಮೆ		—	852 9 5
ಜುಮ್ಲಾ	2049 15 7	1712 0 4	2679 13 10

ಮಂಗಳೂರು,
29-11-'38

ಪರಿಶೋಧಿಸಲ್ಪಟ್ಟು ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

ಬಿ ಶಾಂತಾರಾಮ ರಾವ್
ರಿಜಿಸ್ಟರ್ಡ್ ಎಕೌಂಟೆಂಟ್

ಶ್ರೀ ಸುಬ್ರಾಯ ದೇವಸ್ಥಾನ, ಕಾಟುಕುಕ್ಕೆ ಗ್ರಾಮ ಕಾಸರಗೋಡು, (ದಕ್ಷಿಣ ಕನ್ನಡ)

1937ನೇ ಜೂನ್ 30ಕ್ಕೆ ಅಂತ್ಯವಾಗುವ ಮೂರು ವರ್ಷಗಳ ಆಯ ವ್ಯಯದ ವಿವರ.

ಆಯ

ವಿವರ	1934-35	1935-36	1936-37
ಬಾಡಿಗೆ	959 4 0	1268 0 0	1124 9 7
ಮಾರಾಟ	42 5 8	191 6 11	66 11 8
ಕಾಣಿಕೆ	15 8 0	122 9 4	187 8 2
ವಸೂಲಾದ ಬಡ್ಡಿ	198 4 0	60 0 0	20 0 0
ಸಾಲ	1000 0 0	—	—
ವಸೂಲಾದ ಡಿಕ್ರಿ ಹಣ	169 8 0	—	1870 7 0
ಟ್ರಸ್ಟಿಗಳಿಗೆ ಸಲತಕ್ಕ ನಿಕೃಹಣ	218 10 4	298 10 5	401 15 5
	2603 8 0	1980 10 8	3120 14 10

ವ್ಯಯ

ವಿವರ	1934-35	1935-36	1936-37
ಟ್ರಸ್ಟಿಗಳಿಗೆ ಸಲ್ಲತಕ್ಕ ಹಣ	295 8 8	218 10 4	298 10 5
ಶಾಸ್ತ್ರಿ ಖರ್ಚು	819 0 10	965 12 1	946 7 2
ಸಂಬಳ	418 4 0	355 8 0	355 8 0
ತೆರಿಗೆ	552 14 0	250 2 6	311 15 6
ತೆತ್ತ ಬಡ್ಡಿ	—	90 0 0	125 10 0
ಪ್ರಯಾಣ ಖರ್ಚು	68 1 9	89 5 6	51 8 9
ಕೋರ್ಟು ಖರ್ಚು	171 10 0	—	9 4 0
ಪ್ರಿಂಟಿಂಗ್ ಚಾರ್ಜು	8 2 0	—	3 1 0
ಟಪ್ಪಾಲು ಖರ್ಚು	10 8 9	3 6 0	0 5 6
ತೆತ್ತ ಸಾಲ	258 0 2	--	1000 0 0
ಇತರ ವ್ಯಯ	11 6 3	7 14 8	23 8 6
	2603 8 0	1980 10 8	3120 14 10

ಮಂಗಳೂರು,
29 ನವಂಬರ 1938

ಪರಿಶೋಧಿಸಲ್ಪಟ್ಟು ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

ಬಿ ಶಾಂತರಾಮ ರಾವ್,
ರಿಜಿಸ್ಟರ್ಡ್ ಎಕೌಂಟೆಂಟ್

ಮಂಗಳೂರು ಸಮಾಚಾರ

ಕೊಂಬ್ಯಾ ಸ್ಟೀಮ್ ನೆವಿಗೇಶನ್

ಹವಾಗುಣವು ಅನುಕೂಲವಾಗಿದ್ದರೆ ಈ ಕಂಪೆನಿಯು ಈ ಸೀಜನಿನ ಕೊನೆಯ. ಹಡಗವು ಇದೇ ಬರುವ ಮೇ ತಿಂಗಳ ತಾ. ೧೨ರಲ್ಲು ಮುಂಬ್ಯಾಯಿಂದ ಹೊರಟು ಕರಾವಳಿಯ ಬಂದರುಗಳ ಮೂಲಕವಾಗಿ ತಾ. ೧೪ಕ್ಕೆ ಬಂದು ಮಂಗಳೂರಿಗೆ ತಲುಪುವುದು. ಆ ಹಡಗವು ಮೇ ತಿಂಗಳ ೧೬ಕ್ಕೆ ಹಿಂದಕ್ಕೆ ಮುಂಬಯ್ಯಿಗೆ ತೆರಳುವುದು. ಸ್ಪೆಶಲ್ ಸ್ಟೀಮರುಗಳಿದ್ದರೆ ಆ ಬಗ್ಗೆ ಪ್ರಕಟಣೆ ಮಾಡಲಾಗುವುದು

ಯುನಿವರ್ಸಿಟಿ ಪರೀಕ್ಷೆಯ ಫಲಿತಾಂಶ 1939

ಸೈಂಟ್ ಎಲೊಸಿಯಸ್ ಕಾಲೇಜು ಇಂಟರ್‌ಮಿಡಿಯೆಟ್ ಪರೀಕ್ಷೆ

	ಪರೀಕ್ಷೆಗೆ ಕೂತ ಸಂಖ್ಯೆ	ಪಾಸಾದ ಸಂಖ್ಯೆ	ಶೇಕಡಾ
ಎಲ್ಲಾ ಭಾಗಗಳಲ್ಲಿ	118	82	69 5
1ನೇ ಭಾಗ	118	109	92·4
2ನೇ ,,	118	110	93 2
3ನೇ ,,	118	88	75 2

ಇವುಗಳ ಪೈಕಿ 27 ಜನರು ಫಸ್ಟ್‌ಕ್ಲಾಸ್ ಮತ್ತು 65 ಜನರು ಸೆಕೆಂಡ್ ಕ್ಲಾಸ್ ಪಾಸಾಗಿರುತ್ತಾರೆ.

ಭಾಷಾನ್ವಯ			
ಕನ್ನಡ	80	74	92 5
ಮಲಯಾಳಿ	6	6	100
ಸಂಸ್ಕೃತ	16	15	93·8
ಫ್ರೆಂಚ್	16	15	93 8

ಶಿವಾಜಿ ಫಿಜಿಕಲ್ ಕಲ್ಚರ ಇನ್‌ಸ್ಟಿಟ್ಯೂಟ್

ಇದೇ ತಿಂಗಳ ತಾ ೧೩ನೇ ಶನಿವಾರ ರಾತ್ರೆ ೯ ಘಂಟೆಗೆ ಶಿವಾಜಿ ಫಿಜಿಕಲ್ ಕಲ್ಚರ್ ಇನ್‌ಸ್ಟಿಟ್ಯೂಟ್, ಮಂಗಳೂರು ವಿದ್ಯಾರ್ಥಿಗಳು ತಮ್ಮ ಅಪೂರ್ವವೂ ಅದ್ಭುತವೂ ಆದ ದೇಹಾವೆಗಳನ್ನು ಸ್ಥಳೀಯ ಮಿಶ್ಶನ್ ಹೈಸ್ಕೂಲಿನ ಹೋಲಿನಲ್ಲಿ ಪ್ರದರ್ಶಿಸಲಿರುವುದರಿಂದ ಮಹಾಜನರು ಬಂದು ಈ ಸಂಸ್ಥೆಯನ್ನು ಪ್ರೋತ್ಸಾಹಿಸಬೇಕೆಂದು ವಿನಂತಿ

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಸಿಬೇಸ್ವರ ಕೊಟ್ಟಿತ್ತ ಬೆಟ್ಟ ಕೊರವಾಡ ದೇವಸ್ಥಾನದ ಜಮಾ ಖರ್ಚಿನ ವಿವರದಲ್ಲಿ 1111ನೇ ಕೊಲ್ಲಂ ಬಾಡಿಗೆಯನ್ನು (ಭಕ್ತ)2050 8-0ರ ಬದಲಿಗೆ 2050-8-6 ಎಂದೂ ಆಯ ವ್ಯಯದ ಪಟ್ಟಿಯಲ್ಲಿ ತೆಂಗಿನನ್ನು (ನಗದು) 2866-14-10ರ ಬದಲಿಗೆ 1866-14-10 ಎಂದೂ ಓದುವುದು. ವೃತ್ತಿಗೆ ಕಿಸ್ಸ ನಾಣಿ ಮತ್ತು ಸುಬ್ರಾಯ. ದೇವಸ್ಥಾನದ ಜಮಾ ಖರ್ಚಿನ ವಿವರದಲ್ಲಿ 1936-37ನೇ ವರ್ಷ ...ವನ್ನು ಹಿಂತಿರುಗಿ ಕೊಟ್ಟದ್ದು 11 0 0''ಎಂದ ಸೇರಿಸಿಯೂ ಅಂತ್ಯದ ಸಿಲ್ಕು (1935—36) 221—5—10ರ ಬದಲಿಗೆ 220 5-10 ಎಂದೂ ಓದುವುದು.

ಅಳಿಯ ಸಂತಾನ ಸಮಾಜ ಸುಧಾರಣಾ ಪರಿಷತ್ತು

ಅಳಿಯ ಕಟ್ಟಿನ ಸುಧಾರಣೆಯ ಅವಶ್ಯಕವೆಂದೂ ಮತ್ತು ಶ್ರೀ ಎ ಬಿ ಶೆಟ್ಟಿ ಮದ್ರಾಸು ಕೌನ್ಸಿಲಿನಲ್ಲಿ ತಂದಿದ್ದ ಮಸೂದೆಯನ್ನು ಆಧಾರವಾಗಿ ತೆಗೆದುಕೊಂಡ ಅವರಲ್ಲಿ ಅಗತ್ಯವಿರುವ ತಿದ್ದುಪಡಿಗಳನ್ನು ಮಾಡಿ ಬಳಿಯ ಕಟಿನ ಸುಧಾರಣಾ ಮಸೂದೆಯೆಂದನ್ನು ಮದ್ರಾಸು ಎಸೆಂಬ್ಲಿಯಲ್ಲಿ ಬೇಗನೆ ತರಲ್ಪಡುವಂತೆ ಮಾಡಲು ಇದೇ ಮೇ ತಿಂಗಳ ತಾ ೨೨ನೇ ಸೋಮವಾರ ಪೂರ್ವಾಹ್ನ ೧೦ ಘಂಟೆಗೆ ಮಂಗಳೂರಲ್ಲಿರುವ ಬಂಟರ ಯಾನೆ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಚಾವಡಿಯಲ್ಲಿ 'ಅಳಿಯ ಸಂತಾನ ಸಮಾಜ ಸುಧಾರಣಾ ಪರಿಷತ್ತು' ಶ್ರೀ. ದಿವಾನ ಬಹದೂರ್ ಮಹಾಬಲ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗುವುದು

ಕುಂಜತ್ತಬೈಲು

ಇದೇ ತಾ. ೧೪—೫—೩೯ನೇ ಆದಿತ್ಯವಾರ ಶ್ಯಾಮ ಘಂಟೆ ೮-೩೦ಕ್ಕೆ ಮಹಲಿಂಗೇಶ್ವರ ಸೇವಾ ಸಂಘದವರು ಕುಂಜತ್ತಬೈಲು ಬೋರ್ಡ ಶಾಲೆಯಲ್ಲಿ 'ಭದ್ರಾಚಲ ರಾಮದಾಸ್' ಎಂಬ ನಾಟಕವನ್ನು ಮಂಗಳೂರು ಮುನ್ಸಿಪಲ್ ಶಾಲಾ ಅಧ್ಯಾಪಕ ಶ್ರೀನಿವಾಸ್ ಎಂ ಕಾಂತಪ್ಪನವರ ಅಧ್ಯಕ್ಷತೆಯಲ್ಲಿ ಅಭಿನಯಿಸಲಿಕ್ಕಿದ್ದಾರೆ.

ತಾಲೂಕು ಸಮಾಚಾರ

ಉಡುಪಿ

ತಾ. ೮ನೇ ದಿನ ಉಡುಪಿ ಶಹರಿನ ಗುಂಡಿಬೈಲು ಬಳಿ ಓರ್ವ ೮—೯ ವರ್ಷದ ಬ್ರಾಹ್ಮಣ ಬಾಲಕನು ಫಕ್ಕನೆ ಮಾರ್ಗದ ಅಡ್ಡಕ್ಕೆ ಹಾಯ್ದು ಬರಲು ಚಲಾವಣೆಯಲ್ಲಿದ್ದ ಮೋಟಾರು ಕಾರಿನ ಅಡಿಗೆ ಬಿದ್ದು ಮರಣಾಂತ ಜಖಮು ಗೊಂಡನು. ಸದ್ರಿಯವನನ್ನು ಕೂಡಲೆ ಮೋಟರಿನಲ್ಲಿ ಆಸ್ಪತ್ರೆಗೊಯ್ದಾಗ್ಗ್ಯೂ ಪೆಟ್ಟಿನ ಜೋರಿನಿಂದ ಒಡನೆಯೆ ವ್ಯತನಾದನು ಪೋಲಿಸನವರು ತನಿಖೆ ನಡಿಸುತ್ತಿರುವರೆಂದು ಸುದ್ದಿ. ಪೇಟೆಯಲ್ಲಿ ಮೋಟರು ಚಲಾವಣೆಯ ರಸ್ತೆಯಲ್ಲಿ ಜನಸ್ತೋಮ ಅಡ್ಡ ಹಾಯುವುದರಲ್ಲಿ ಹೆಚ್ಚಿನ ಜಾಗರೂಕತೆಯುಳ್ಳವರಿರುವುದು ತುಂಬಾ ಅವಶ್ಯವಾಗಿದೆಯಷ್ಟೆ'

ಕಾರ್ಕಳ

ಕಾರ್ಕಳ ಪಂಚಾಯತ ಬೋರ್ಡಿನ ಒಂದು ಸಭೆಯು ತಾ ೧—೫—೧೯೩೯ರ ದಿನ ಜನಾಬ್. ಎಚ್. ಎಸ್. ಹುಸ್ಸೇನ್, ಯಂ. ಯಲ್. ಎ.ಯವರ ಅಧ್ಯಕ್ಷತೆಯಲ್ಲಿ ಕೂಡಿ ಕೆಲವು ಹೊಸ ಕಾಮಗಾರಿಗಳು ಮತ್ತು ಹೆಚ್ಚಿಗೆ ದೀಪದ ಕಂಬಗಳನ್ನಿಡುವ ಬಗ್ಗೆ ಹಣ ಮಂಜೂರಾಯಿತು.

ಹರಿಜನ ಸೇವಾಸಂಘದ ವಾರ್ಷಿಕ ಮಹಾಸಭೆ ತಾ. ೧— —೩೯ರ ದಿನ ಶ್ರೀ. ಕೆ ಮಹಾಬಲ ಹೆಗ್ಗಡೆ ಅಧ್ಯಕ್ಷತೆಯಲ್ಲಿ ಕೂಡಿ ಹಿಂದಿನ ವರ್ಷದ ಕೆಲಸದ ವರದಿ, ಲೆಕ್ಕ ಪತ್ರಗಳು ಒಪ್ಪಲ್ಪಟ್ಟವು

ಕಾರ್ಕಳ ಬೋರ್ಡ ಹ್ಯಾಸ್ಕೂಲಿನಿಂದ ಶೀಗಳಾದ ಕೆ ಟಿ ಶೆಟ್ಟಿಗಾರರು ಬೈಂದೂರಿಗೂ ಜೆ. ಬಿ ವಿ. ಪಾಯಸ ಮತ್ತು ಯನ್ ಗೋಪಾಲ ಕೃಷ್ಣರಾಯರು ಕಾಸರಗೋಡಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ದ. ಕ. ಜಿಲ್ಲಾ ನೇಕಾರ ಮಜೂರರ ಪ್ರಥಮ ಪರಿಷತ್ತು.

ಇದೇ ತಾ ೭—೫—೩೯ನೇ ಆದಿತ್ಯವಾರ ಜಿಲ್ಲಾ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಶ್ರೀ ಎಸ್ ಎನ್ ಪೊಳಲಿ ಅಧ್ಯಕ್ಷತೆಯಲ್ಲಿ ಜರಗಿತು

ಕಿರೆಂ

ಇಲ್ಲಿಯ ತಾಳಿಪಾಡಿ ಪೊಂಪೈ ಹಾಯಿ ಶಾಲೆಯ ವರ್ಷಾವಧಿ ಪರೀಕ್ಷೆಯು ಮಂಗಳೂರ ರೋಂಜಿನ ಜ್ಯೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ಸ್ ಶ್ರೀ ಟಿ. ಎಲ್ ರಾವ್, ಬಿ. ಎ ಎಲ್ ಟಿ ಯವರಿಂದ ತಾ ೬ ೫ '೩೯ನೇ ಶನಿವಾರ ಅಪರಾಹ್ನ ನಡೆಯಿತು.

ಕೊಟ್ಟಿತ್ತಾಜೆ ಅಮ್ಮನವರು ದೈವ, ದೇವಸ್ಥಾನ, ವೊರ್ಕಾಡಿ, ಕಾಸರಗೋಡು

1937ನೆ ಜೂನ್ 30ಕ್ಕೆ ಅಂತ್ಯವಾಗುವ ಮೂರು ವರ್ಷಗಳ ಆಯುವ್ಯಯದ ಪಟ್ಟಿ

ಆಯ

ವಿವರ	1934-35	1935 36	1936-87
ಬಾಡಿಗೆ	402 2 0	192 2 0	514 14 0
ಬಡ್ಡಿ	225 0 0	225 0 0	225 0 0
ಶಿಸ್ತು	60 0 0	60 0 0	60 0 0
ಕಾಣಿಕೆ ಮತ್ತು ತಬ್ಬಿ	28 12 6	76 7 3	81 5 10
ಅಸವು ಮೊಬಲಗು		50 0 0	—
	805 14 6	1103 9 3	831 3 10

ವ್ಯಯ

ವಿವರ	1934-36	1935 36	1936-87
ಬೋರ್ಡಿಗೆ ವಂತಿಗೆ	20 10 0	20 10 0	20 10 0
ಪೂಜೆ ಖರ್ಚು	148 15 6	148 5 8	139 15 8
ತೆಂಗಿಗಳು	172 9 0	184 1 0	184 1 0
ರಿಪೇರಿ	9 0 0	9 0 0	9 0 0
ಸಂಬಳ	268 8 0	268 8 0	268 8 0
ಬಡ್ಡಿ		93 12 0	125 0 0
ಸಾದಿಲವಾರು	8 0 6	8 2 2	8 2 4
ಖರ್ಚು ಕಳೆದು ಆದಾಯದ ಉಳಿತಾಯ	183 8 6	381 2 5	71 9 8
	805 14 6	1103 9 3	831 3 10

ಮಂಗಳೂರು, 18 – 10 – '38.

ಪರಿಶೋಧಿಸಲ್ಪಟ್ಟು ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

ಬಿ ಶಾಂತಾರಾಮ ರಾವ್
ರಜಿಸ್ಟರ್ಡ್ ಎಕೌಂಟೆಂಟ್

ಕೊಟ್ಟಿತ್ತಾಜೆ ಅಮ್ಮನವರು ದೈವ ದೇವಸ್ಥಾನ, ವಾರ್ಕಾಡಿ, ಕಾಸರಗೋಡು

1937ನೇ ಜೂನ್ 30ಕ್ಕೆ ಅಂತ್ಯವಾಗುವ ಮೂರು ವರ್ಷಗಳ ಜಮಾಖರ್ಚಿನ ಪಟ್ಟಿ

ಜಮಾ

ವಿವರ	1934-35	1935-36	1936-36
ಬಾಡಿಗೆ	410 1 0	513 9 0	517 0 0
ಬಡ್ಡಿ	425 0 0	– – –	375 0 0
ಶಿಸ್ತು	60 0 0	60 0 0	60 0 0
ಕಾಣಿಕೆ	28 12 6	76 7 8	81 5 10
ವಸೂಲಾದ ಸಾಲ	–	1000 0 0	–
ಅಡವು ಮೊಬಲಗು	—	250 0 0	–
ಟ್ರಸ್ಟಿಗಳಿಗೆ ಎಡ್ವಾನ್ಸು	2677 14 4	2956 8 5	3865 9 2
	3601 11 10	4856 3 8	4848 15 0

ಖರ್ಚು

ವಿವರ	1934-45	1935-36	1936-37
ಕಟ್ಟಡ ಖರ್ಚು	210 12 10	1184 14 0	75 1 0
ಪೂಜಾ ಖರ್ಚು	148 15 6	143 5 8	139 15 8
ಸಂಬಳ	268 8 0	268 8 0	268 8 0
ತೆಂಗೆ	193 8 0	204 11 0	209 1 0
ರಿಪೇರಿ	9 0 0	9 0 0	9 0 0
ಇತರ ಖರ್ಚು	3 0 6	3 2 2	8 3 4
ಟ್ರಸ್ಟಿಗಳಿಗೆ ಕೊಟ್ಟದ್ದು	2768 4 0	2677 14 4	2956 8 5
ಪ್ರಾರಂಭದ ನಗದಿ ಖರ್ಚು	—	414 12 6	—
	3601 11 10	4856 3 8	4848 15 0

ಮಂಗಳೂರು, 18—10—1938.

ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ.

ಬಿ. ಶಾಂತರಾಮರಾವ್,
ರಿಜಿಸ್ಟರ್ಡ್ ಎಕೌಂಟೆಂಟ್.

ಫ್ರಾನ್ಸಿನ ಸ್ಥಾನ—

[illegible]

ಎಲ್ಲ ತೂಕ ಡಾಂಜಿಗ್‌ನ ಮೇಲೆ

[illegible]

ಅಂಗ್ಯನೋಟ

[illegible] ಕಾರಣ?

ಪೋಲೆಂಡಿನ ಮೇಲೆ ಹಗೆತನ—

ಮೇಲಿನ ಧೋರಣೆಗೆ ಆಧಾರವಿಲ್ಲದ ಜರ್ಮನ ಪತ್ರಿಕೆಗಳು ಪೋಲೆಂಡಿನ ಮೇಲೆ [illegible]. ಪೋಲೆಂಡಿನಲ್ಲಿ ಜರ್ಮನ್ [illegible] ಹಿಂಸೆ ಕೊಡುತ್ತಾರೆ ಎಂಬ [illegible] ಸುಳ್ಳು ಕಥೆಗಳು ಜರ್ಮನ ಪತ್ರಿಕೆಗಳಲ್ಲಿ ನಿರ್ಮಾಣವಾಗುತ್ತಿವೆ. [illegible] ಜನರು ಬ್ರಿಟನಿನ ಕರಣ ಹೋದರೆಂದು ಹಿಟ್ಲರನ ಉದ್ವೇಗ ಅಷ್ಟಿಷ್ಟಲ್ಲ.

ಈ ಎರಡು ಭಿನ್ನಧೋರಣೆಯು ಹಿಟ್ಲರನು ತಕ್ಕಾಲಕ್ಕೆ ಚಂಚಲಮನಸ್ಕನಾಗಿರುವುದಕ್ಕೆ ಸಾಕ್ಷಿ.

ರೂಸವೆಲ್ಟರ ರಾಜನೀತಿ—

ಈ ಕಾಲಕ್ಕೆ ರೂಸವೆಲ್ಟರು ಜರ್ಮನ ಮತ್ತು ಇಟಲಿಯ ನಾಯಕರಿಗೆ ಬರೆದುದೇ [illegible]

"ಪ್ರೆಸಿಡೆಂಟ್ ರೂಸವೆಲ್ಟ್"

[illegible]

ಹಿಟ್ಲರನ ಜಯಂತಿ ಭಾಷಣ

[illegible]

ಪಕ್ಷದ ವಿಶೇಷ ಲೇಖಕರು:
ಶ್ರೀ| ಶಿವರಾಮ ಕಾರಂತರು

ನಿಯನ್ನು ಸುತ್ತವರಿಯಲು ತೊಡಗಿದ ಶಕ್ತಿಗಳ ಧೋರಣೆಗೇ ಮೊದಲು ಅದು ಸಿದ್ಧವಾಗಿತ್ತು.

ಈಗೇನು

ಈಗೇನು ಮಾಡುವುದೆಂಬುದರಲ್ಲಿ ಸಂಶಯ ಹಿಟ್ಲರನಿಗೆ ಬಂದಿದೆ. [illegible] ಡಾಂಜಿಗ್ ವಿಷಯವಾಗಿ ಯುದ್ಧ ಹೂಡಲೆಂಬ ಸಲಹೆ ಕೊಡುತ್ತಿರುವನೆಂದೂ, [illegible] ಪೋಲೆಂಡನ್ನು [illegible] ಡಾಂಜಿಗ್ [illegible] ಮಾಡುತ್ತಾನೆಂದೂ ತಿಳಿದುಬರುವುದು. [illegible]

ಇತ್ತ ಪೋಲೆಂಡಿನ ಮುಖ್ಯಸ್ಥನಾದ ಕರ್ನಲ್ ಬೆಕ್ ನು ಹಿಟ್ಲರನು ತಮ್ಮೊಳಗಿನ ಒಪ್ಪಂದವನ್ನು ಮುರಿದುದು ಚಂದವಲ್ಲವೆಂದಿದ್ದಾನೆ. ಇಂಗ್ಲೆಂಡಿನೊಡನೆ ನಮಗೂ ಸಹಾಯ [illegible] ಒಪ್ಪಂದ [illegible]

[illegible]

ಜರ್ಮನ ಸೇನಾನಿಗಳು

[illegible]

ಇಂಗ್ಲೆಂಡ್ ರಷ್ಯ

[illegible]



[illegible] ತೆಗೆದರು. ಇದು ಹಲವು [illegible] ಕಾರಣವಾಗಿದೆ. ಹೋರಿಕೆಯ ಮಟ್ಟಿಗೆ — ಈಗಿನ ಪ್ರಸ್ತಾವಗಳ [illegible] ಅವರನ್ನು ತೆಗೆದಿರಬೇಕು ಎನ್ನುತ್ತಾರೆ. ಅಂತು ಇಂಗ್ಲೆಂಡ್ ರಷ್ಯದೊಡನೆ ಕೂಡುವುದರಲ್ಲಿ ಕಡವಾದಂತೆ ಪುಟ್ಟ ರಾಜ್ಯಗಳ ಭೀತಿಯು [illegible] ಜರ್ಮನಿ ಇಟಲಿಗಳೂ ಅವುಗಳನ್ನು [illegible] ಸುಮ್ಮಗಿರಿಸಿದರೂ ಸಾಕು. ಆಗ ಇವರ [illegible] ಕಷ್ಟವಿದೆ.

[illegible] ಅಮೇರಿಕದ ವಾಶಿಂಗಟನ್ ಪೋಸ್ಟ್ [illegible] ಸಂಯುಕ್ತ ಅಮೇರಿಕ ಮತ್ತು [illegible] ಈ ಎರಡು [illegible] ಪೂರ್ಣ ಕಳೆದಿಲ್ಲ.

ಸಂತರ್ಪಣೆ ಬೇಡವೆಂದು ಬ್ರಾಹ್ಮಣರ ಉಪವಾಸ ವ್ರತ

[illegible]

ಆಟಗಾರರ ಸಂಜೀವನ

[illegible]

ಸಮಾಚಾರ ಸಂಗ್ರಹ

"ಒಪ್ಪಂದವಾಗದಿದ್ದರೆ ನಾನು ರಾಜಕೋಟೆಗೆ ಪುನಃ ಬರುವೆನು"

(ಮಹಾತ್ಮಾ ಗಾಂಧಿ.)

ರಾಜಕೋಟದ ರಾಜಪ್ರಜೆಗಳೊಳಗೆ ನ್ಯಾಯ ರೀತಿಯಲ್ಲಿ ಒಪ್ಪಂದವಾಗದಿದ್ದರೆ ತಾನು ಪುನಃ ರಾಜಕೋಟೆಕ್ಕೆ ಖಂಡಿತವಾಗಿಯೂ ಬರುವೆನೆಂದು ಮಹಾತ್ಮಾ ಗಾಂಧಿಯವರು ವೀರವಾಲರಿಗೆ ತಿಳಿಸಿರುವರು.

ಮುಂದಿನ ಕಾಂಗ್ರೆಸು

ಬಿಹಾರ ಕಾಂಗ್ರೆಸ್ ಕಮಿಟಿಯವರು ಮುಂದಿನ ಕಾಂಗ್ರೆಸನ್ನು ಪಾಟ್ನಾದಿಂದ ಏಳು ಮೈಲು ದೂರವಿರುವ ಫುಲ್ವಾರಿ ಶರೀಫ್ ಎಂಬಲ್ಲಿ ಜರುಗಿಸುವುದೆಂದು ನಿಶ್ಚಯಿಸಿದ್ದರು. ಆದರೆ ಗಾಂಧಿಜಿಯವರು ಇದಕ್ಕೆ ಅಸಮ್ಮತಿಯನ್ನು ಸೂಚಿಸಿರುವರು. ಫುಲ್ವಾರಿ ಶರೀಫ್ ಹಳ್ಳಿಯಲ್ಲವೆಂಬುದೇ ಮುಖ್ಯ ಕಾರಣ. ಆದ್ದರಿಂದ ಮುಂದಿನ ಕಾಂಗ್ರೆಸು ಗಂಗಾನದಿಯ ಬಳಿಯ ಸೋನೆಪುರದಲ್ಲಿ ಜರುಗಬಹುದು.

ಲಿಟ್ವಿನೋಫರ ರಾಜಿನಾಮೆ

ರಷ್ಯದ ವಿದೇಶಾಂಗ ಸಚಿವರಾದ ಲಿಟ್ವಿನೋಫರು ರಾಜಿನಾಮೆಯಿತ್ತುದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ. ಕಾರಣ ವು ಇನ್ನೂ ತಿಳಿದುಬಂದಿಲ್ಲ. ಆದರೆ ಬ್ರಿಟನ್ ರಷ್ಯಗಳೊಳಗೆ ನಡೆದ ಮಾತುಕತೆಗಳು ಬಹಳ ಮಂದವಾಗಿ ಸಾಗಿದ್ದನ್ನು ಕಂಡು ಬೇಸರಗೊಂಡ ಲಿಟ್ವಿನೋಫರು ರಾಜಿನಾಮೆಯಿತ್ತಿರುವರೆಂದು ಊಹಿಸಲಾಗಿದೆ.

ಜರ್ಮನಿಗೆ ಪೋಲೆಂಡದ ಉತ್ತರ

ಜರ್ಮನ್ ಪೋಲಿಶ್ ಒಪ್ಪಂದವನ್ನು ಮುರಿದು ಹಾಕಿದೆ ಎಂಬ ಜರ್ಮನಿಯ ವಕ್ತವ್ಯಕ್ಕೆ ಪೋಲೆಂಡು ಉತ್ತರ ಕೊಡುತ್ತಾ ಜರ್ಮನ್ ಪೋಲಿಶ್ ಒಪ್ಪಂದಕ್ಕೂ ಆಂಗ್ಲೋ ಪೋಲಿಶ್ ಒಪ್ಪಂದಕ್ಕೂ ಸಂಬಂಧ ಕಲ್ಪಿಸುವುದು ಸಮಂಜಸವಲ್ಲವೆಂದೂ, ಜರ್ಮನ್ ಪೋಲಿಶ್ ಒಪ್ಪಂದವನ್ನು ಮುರಿಯಲು ಹಿಟ್ಲರನಿಗೆ ಯಾವ ಅಧಿಕಾರವೂ ಇಲ್ಲವೆಂದು ತಿಳಿಸಿದೆ. ಮತ್ತು ಜರ್ಮನಿಯು ಸ್ನೇಹಪೂರ್ವವಾದ ಯಾವ ಮಾತನ್ನಾದರೂ ವಿಚಾರಿಸಲು ಪೋಲೆಂಡು ಸಿದ್ಧವಿದೆ ಎಂದು ತಿಳಿಸಿದೆ.

ಜರ್ಮನ್ ಹಡಗುಗಳ ಓಡಾಟ

ಭೂಮಧ್ಯ ಸಮುದ್ರದಲ್ಲಿ ಜರ್ಮನಿಯ ಯುದ್ಧ ಹಡಗುಗಳು ಓಡಾಡುತ್ತಿರುವವು. ಜಿಬ್ರಾಲ್ಟರ್ ಬಂದರದಲ್ಲಿ ಕಳ್ಳದ್ದ [illegible] ಗಳನ್ನು ಕಳೆದ ತಾರೀಕು [illegible] ತಪ್ಪು ಹಾಕಲಾಯಿತು.

ಹಾಂಕೋ ಬಳಿ ಚೀನೀಯರ ಪರಾಜಯ

ಹಾಂಕೋ ನಗರದ ವಾಯುವ್ಯ ದಿಕ್ಕಿನಲ್ಲಿ [illegible] ಧಾಳಿಯನ್ನು [illegible] ಚೀನಿ ದಂಡುಗಳು ಬಳಲಿ ಹಿಂತಿರುಗಿರುವುವೆಂದು ಹಾಂಕೋದಿಂದ ವಾರ್ತೆ. ಇದೇ ಸಂಧಿಯನ್ನು ಸಾಧಿಸಿ ಜಪಾನೀಯರು [illegible] ಎಂಬಲ್ಲಿ ಚೀನೀಯರನ್ನು ಸುತ್ತುಗಟ್ಟಿರುವರು. ಆದರೆ ಚೀನೀಯರು ಗುಪ್ತಗಾಮಿಗಳಾಗಿ [illegible] ತಿಳಿದುಬರುತ್ತದೆ.

ಪ್ರೆ. ಸಾ. ಕಿ. ಸಿ.

ಸೆಕ್ರೆಟರಿ ಆಚಾರ್ಯ ಕೃಪಲಾನಿ

ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಜನರಲ್ ಸೆಕ್ರೆಟರಿಗಳಾಗಿ ಆಚಾರ್ಯ ಜೆ. ಬಿ. ಕೃಪಲಾನಿಯವರನ್ನೂ ಕೋಶಾಧಿಕಾರಿಗಳಾಗಿ ಶ್ರೀಯುತ ಜಮ್ನಾಲಾಲ ಬಜಾಜರನ್ನೂ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ ನೇಮಿಸಿರುವರು.

ಮುಂದಿನ ಎ. ಐ. ಸಿ. ಸಿ. ಸಭೆ

ಮುಂದಿನ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಜೂನ್ ತಾರೀಕು [illegible] ನಡೆಯುವುದೆಂದು ಪ್ರಕಟಿಸಲ್ಪಟ್ಟಿದ್ದರೂ ಆದೇ ಸಮಯಕ್ಕೆ ಜಿನಿವಾ [illegible] ಸಭೆಯು ಜರಗುವುದರಿಂದ, ಎ. ಐ. ಸಿ. ಸಿ. ಸಭೆಯನ್ನು ಮುಂದರಿಸಬೇಕೆಂದು ಶ್ರೀ ಜವಾಹರಲಾಲರ ವಿನಂತಿಯ ಮೇರೆಗೆ ಶ್ರೀ ಬಾಬು ರಾಜೇಂದ್ರ ಪ್ರಸಾದರು ಎ. ಐ. ಸಿ. ಸಿ. ಸಭೆಯನ್ನು ಜೂನ್ ಕಡೇಯ ಜೂನ್ ಕಡೆಯ ವಾರಕ್ಕೆ ಮುಂದರಿಸಲು ಒಪ್ಪಿರುವರು.

ಅಸ್ಸಾಮದ ಮುಖ್ಯ ಮಂತ್ರಿಗಳಾದ

ಶ್ರೀ. ಗೋಪಿನಾಥ ಬಾರ್ದೋಲಿಯವರು

ವೆಲ್ಲೂರಿನಲ್ಲಿ ಹಿಂದೂ ಮುಸಲ್ಮಾನ ದಂಗೆ

ಕಳೆದ ವಾರ ವೆಲ್ಲೂರಿನಲ್ಲಿ ಜೋರಾದ ಹಿಂದೂ ಮುಸಲ್ಮಾನ ದಂಗೆಯು ನಡೆಯಿತು. ಹಿಂದುಗಳ ಮೆರವಣಿಗೆಯು ಮಸೀದಿ ಮುಂದೆ ವಾದ್ಯ [illegible] ಎಂಬುದು ದಂಗೆಯ ಕಾರಣವು. [illegible] ಪೋಲೀಸರು ಗುಂಡು [illegible] [illegible] ಮಂದಿ [illegible] ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ಇತ್ತೀಚೆ ಮುಂದುವರಿದ ಮತ್ತು [illegible] ಈ ಕಾಲದಲ್ಲಿ ಹಿಂದೂ-ಮುಸಲ್ಮಾನರು [illegible] [illegible] ಮತ್ತು [illegible] [illegible] ಹೇಳುತ್ತದೆ.

[illegible] ಹಿಂದುಗಳಲ್ಲಿ [illegible] ಹಿಂದೂ [illegible] ಮುಸಲ್ಮಾನರ [illegible] ಹೇಳುತ್ತದೆ.

ಸಂಕ ನೋಡಿ ಕಳ್ಳತನ ಬಿಟ್ಟ

ಶಾಲೆಗೆ ಹೋಗುವ ಬಾಲಕನೊಬ್ಬನು ಸಂಕ ನೋಡಿ ಕಳ್ಳತನ ಬಿಟ್ಟ ಒಂದು ಮೋಜಿನ ಸಮಾಚಾರವು ಪ್ರಕಟವಾಗಿದೆ. [illegible] ಬಾಲಕನು ಶಾಲೆಯಿಂದ ಮನೆಯಲ್ಲಿ [illegible] [illegible]

[illegible] ತಿಳಿಯುತ್ತದೆ.

ಮಲೆರಿಯದ ಭಯಂಕರ ಹಾವಳಿ

ವಿಮಾನ ಸಂಚಾರದಿಂದ ಅಮೇರಿಕಕ್ಕೆ ನಷ್ಟ

ದಕ್ಷಿಣ ಅಮೇರಿಕದಲ್ಲಿ ಮಲೇರಿಯದ ಹಾವಳಿಯು [illegible] [illegible]

ವಿಮಾನದ ಮೂಲಕ ಹೋಗಿದ್ದರಿಂದ

[illegible] ಮಾಡಿತು. [illegible]

ದಾದಾ ಧರ್ಮಾಧಿಕಾರಿಗಳ ಅನ್ನಸೇವೆ

[illegible]

[illegible] ಒಂದು ವರ್ಷದ ಅನಂತರ

[illegible]

ರುವುದನ್ನು ಕಂಡನು. ಆದರೆ ಅವನು ಆ ಕಡೆಗೆ ಲಕ್ಷ್ಯ ಕೊಡಲಿಲ್ಲ. [illegible]

ಆ ದೇಶದಲ್ಲಿ [illegible]

ಅಲಕ್ಷ್ಯದ ಪರಿಣಾಮ

ಈ ಅಲಕ್ಷ್ಯದ ಪರಿಣಾಮವು [illegible]

[illegible]

ಇಂಗ್ಲಾಂಡಿನ ಭಯ

[illegible]

LEGAL NOTICE.

HIGH COURT. MADRAS.

Tuesday the 18th day of April 1939.
The Hon'ble Mr. Justice
Venkataramana Rao.
(In Chambers)
O. P. 29 of 1939.

In the matter of the Indian Companies' Act VII of 1913.

and

In the matter of the Canara Banking Corporation Udipi Ltd.

The Canara Banking Corporation Ltd., by its Manager V. R. Kamath ... Petitioner.

This petition coming on this day before this Court for hearing in the presence of Mr. K. P. Sarvothama Rao, Advocate for the petitioner herein and upon reading the Petition filed herein on the 25th day of January 1939 together with the copy of the Memorandum and Articles of Association of the Company abovenamed annexed thereto,

IT IS ORDERED AS follows:—

1. That the following alterations Viz.
   a. that the name of the Bank be altered to the Canara Banking Corporation Ltd. and that the paragraphs 1 to 5 (both inclusive) of the present Memorandum of Association as set out in the Schedule A hereto be deleted and paragraphs 1 to 5 as set out in the Schedule B hereto be inserted in their place.

K. P. Sarvothama Rao,
Advocate for the Petitioner.

Copies of Schedule A and Schedule B referred to above can be had from the Registered Office and Branches of the above Company.

ಸ್ಪೈನಿನ ಫಾಸಿಸ್ಟ್—

ಸ್ಪೈನಿನ ಈಗಾಗಲೇ ತನ್ನದೇ ಒಂದು ನಾಜಿ ಪಂಥವನ್ನು ಕಲ್ಪಿಸುತ್ತಿದ್ದ. ಹೆಸರಿನಿಂದಲೂ, ಅದು ಫಾಸಿಸ್ಟ್-ಪಂಥವೂ ಅಲ್ಲ, ನಾಜಿ ಪಂಥವೂ ಅಲ್ಲ. ಅದರ ಅನುಯಾಯಿಗಳು ಫಲಾಂಜಿಸ್ಟರೆನಿಸಿಕೊಳ್ಳುತಿದ್ದಾರೆ. ಇವರ ಎಲ್ಲ ಉದ್ದೇಶ ರೀತಿಗಳೂ ನಾಜಿಗಳ ಅನುಕರಣೆಯೆ. ಈ ಪಂಗಡದ ಬೆಳವಣಿಗೆಯೂ ಭರದಿಂದ ಸಾಗುತ್ತಿದೆ. ಅಲ್ಲದೆ ಈಗಾಗಲೇ ಪ್ರತ್ಯಕ್ಷ ಪ್ರತಿಭಟನೆಯು ಅವರಿಗೆ ಇಲ್ಲ. ಹಿಂದಿನ ಫ್ರಾಂಕೋ ವಿರೋಧಿಗಳು ಅದರ ಸದಸ್ಯರಾಗುತ್ತಲಿದ್ದಾರೆ. ಬಾಸ್ಕ ಜನರನ್ನು ಬಿಟ್ಟರೆ ಉಳಿದವರಿಲ್ಲ ಅದರ ಅನುಯಾಯಿಗಳು

ಈ ಸ್ಥಿತಿಯಲ್ಲಿ ಅದು ಮುಂದರಿಯುತ್ತಿರುವುದು ಇತ್ತ ದೇಶದ ಕೇಂದ್ರ ರೇವು ಬಂದರುಗಳು ಜರ್ಮನ್ ಶಾಸ್ತ್ರಜ್ಞರಿಂದ ತಿದ್ದು ಪಡೆಹೊಂದುತ್ತಿವೆ ಇಟೆಲಿಯ ಸೇನೆಯು ಮರಳಿದಂತಿಲ್ಲ ಅಲ್ಲದೆ ಮೆಂಚೆಸ್ಟರ್ ಗಾರ್ಡಿಯನ್‌ನಂಥ ಪತ್ರಿಕೆಯ ಒಳಸುದ್ದಿಗಾರರ ಪ್ರಕಾರ ಹೊಸ ಸೇನೆಗಳು ಬಂದಂತೆ ಇವೆ ಇತ್ತ ಸ್ಪೆನಿಷ್ ಮೊರಾಕೋವಿನಲ್ಲೂ ಶಸ್ತ್ರ ಸಿದ್ಧತೆಗಳು ಅನಿಶ್ಚಿಂತವಾಗಿ ಸಾಗುತ್ತಿವೆ ಜಿಬ್ರಾಲ್ಟರಿಗೆ ಸಮೀಪವಾಗಿ ಫ್ರಾಂಕೋ ಸೈನ್ಯಗಳು ಇವೆ. ಫ್ರಾಂಕೋವಿಗೆ ಪೋರ್ಚುಗಲ್ ದೇಶದ ಮೇಲೂ ಸಂಶಯ ಬಂದಿರಬೇಕು—ಇಲ್ಲವಾದರೆ ಸ್ಪೈನು, ಪೋರ್ತುಗಲ್ ಗಡಿನಾಡನ್ನು ಭದ್ರಪಡಿಸುವ ಕಾರಣವಿಲ್ಲ

ಫ್ರಾಂಕೋ ಇಟೆಲಿ—ಜರ್ಮನಿಗಳು ಎಂಟಿ ಕಾಮಿಂಟರ್ನ್ ಅಂದರೆ ರಶ್ಯನ್ ವಿರೋಧಕೂಟವನ್ನು ಸೇರಬಾರದೆಂದು ಫ್ರಾನ್ಸಿನ ಇಚ್ಛೆ ಇರಬಹುದು ಆದರೆ ಫ್ರಾಂಕೋ ಸುದ್ದಿಯಿಲ್ಲದೆ ಅವರ ಸೇವಕನಾಗಿದ್ದಾನೆ ಹೀಗಾಗಿಯೇ ಫ್ರಾನ್ಸು ತುಂಬ ತಳಮಳಗೊಂಡಿದೆ ರಿಪಬ್ಲಿಕ ಸರಕಾರವು ಫ್ರಾನ್ಸಿನ ಬ್ಯಾಂಕುಗಳಲ್ಲಿ ಇರಿಸಿದ ಮೊತ್ತವನ್ನು ೭,೫೦೦,೦೦೦ ಪವನುಗಳನ್ನು ಹಿಂದೆ ಸಲಿಸುವುದು ಅವಶ್ಯವಾಗಿದೆ ಅದನ್ನು ಸ್ಪೈನಿನಿಂದ ಅಲ್ಲಿಗೆ ಬಂದ ಯುದ್ಧದ ಭೀತರನ್ನು ಮರಳಿ ಕಳುಹಿಸಲು ಉಪಯೋಗಿಸುವುದಕ್ಕೆ ಫ್ರಾಂಕೋ ಅನುಮತಿಯಿಲ್ಲ. ಹೀಗೆ ಫ್ರಾನ್ಸಿಗೆ ಶರಣುಬಂದವರು ನಾಲ್ಕು ಲಕ್ಷ ಮಂದಿ ಇದ್ದಾರೆ ಇವರಿಗೆ ಸಮನಾಗಿ ಹೆಚ್ಚು ಬೇಕಾಗಿಲ್ಲ ಮೊದಲೇ ಆಗಿದ್ದರೆ ಅವರದ್ದೇ ಒಂದು ಸೈನ್ಯವನ್ನು ಫ್ರಾನ್ಸು ತನಗಾಗಿ ಕಲ್ಪಿಸುವುದು ಶಕ್ಯವಿತ್ತು ಆದರೆ ಈಗ ಶಕ್ತಿಹೀನರಾದ ಅವರಿಂದ ಏನೂ ನಡೆಯದು

ಎಲ್ಲ ತೂಕ ಡಾಂಜಿಗ್‌ದ ಮೇಲೆ

ಹಿಂದೊಂದು ದಿನ ಎಲ್ಲ ಕೋಪವು ಸುಡೆಟನ್ ನಾಡಿನ ಮೇಲೆ ಬಿದ್ದು ಅಲ್ಲೋಲ ಕಲ್ಲೋಲವಾದಂತೆ ಈಗ ಪೋಲೆಂಡಿನ ಅಧೀನವಾಗಿರುವ ಡಾಂಜಿಗ್ ಬಂದರಿನ ಮೇಲೆ ಮುಂದಿನ ಕೋಲ ಕುಳಿತಿದೆ ಡಾಂಜಿಗ್ ಮೊದಲು ಜರ್ಮನಿಗೆ ಸೇರಿ ಮಹಾಯುದ್ಧದ ಫಲವಾಗಿ ಪೋಲೆಂಡಿನ ಅಧೀನವಾಯಿತು ಹಿಟ್ಲರನು ಅದರ ವಿಷಯದಲ್ಲಿ ಆತುರನು ಅಲ್ಲಿಗೆ ತೆರಳುವುದರಲ್ಲೂ ಇದ್ದನು ಪೋಲೆಂಡಿಗೆ ಅದನ್ನು ತನಗೆ ಕೊಡಬೇಕು, ಮುಂದೆ ಅಲ್ಲಿಗೆ ಹೋಗಲು ಒಂದು ಹಾದಿಯನ್ನು ಒಪ್ಪಿಸಬೇಕು ಎಂದು ಕೇಳಿಯಾಯಿತು ಆದರೆ ಪೋಲೆಂಡು ಒಪ್ಪಲಿಲ್ಲ ಈಗ—ಪೋಲೆಂಡು ಇಂಗ್ಲೆಂಡ್—ಫ್ರಾನ್ಸುಗಳ ಸಹಾಯವನ್ನೂ ಪಡೆಯಲು ಒಪ್ಪಿದೆಯೆಂಬುದರಿಂದ—ಪೋಲೆಂಡಿಗೂ ನಮಗೂ ಇರುವ ಸಂಧಿಯು ಮುರಿಯಿತು ಎಂತು ಹಿಟ್ಲರನು ನುಡಿದಿದ್ದಾನೆ. ಅವನಿಗೆ ಸಂಧಿ ಮುರಿಯಲು ನೆಪಗಳು ಮಾತ್ರಬೇಕು. ಆದರೆ ಒಳಗಿಂದ ಡಾಂಜಿಗ್‌ದ ನಾಜಿ ಗುಂಪಿಗೆ ನೀವು ಯಾವ ಗಲಾಟೆಯನ್ನು ನಡೆಯಿಸಬೇಡಿರಿ—ಎಂದು ಅಪ್ಪಣೆಯಿದೆ ಕಾಳಗಕ್ಕೆ ಮೊದಲು ಆ ಸ್ಥಳಗಳಲ್ಲಿ ದಾಂಧಲೆ ಎಬ್ಬಿಸಿ, ಆ ಬಳಿಕ ಅದನ್ನೆ ನೆವವಾಗಿ ಹೂಡಿ "ಜರ್ಮನ ಜೀವಕ್ಕೆ ಧಕ್ಕೆ"ಯಿದೆ ಎಂಬ ನೆವದಿಂದ ಪರರಾಜ್ಯ ಪ್ರವೇಶ ಮಾಡುವುದು ಹಿಟ್ಲರನ ರಾಜನೀತಿ ಹೀಗಿದ್ದರೂ ಡಾಂಜಿಗ್‌ನಲ್ಲಿ ಅವನು

ಅಂಗೈನೋಟ

ತಿಂತವಾಗಿರಲು ನಾಜಿಗಳನ್ನು ಪ್ರೇರಿಸಿದ ಕಾರಣ?

ಪೋಲೆಂಡಿನ ಮೇಲೆ ಹಗೆತನ—

ಮೇಲಿನ ಧೋರಣೆಗೆ ಆದರವಿಲ್ಲದೆ ಜರ್ಮನ ಪತ್ರಿಕೆಗಳು ಪೋಲೆಂಡಿನ ಮೇಲೆ ವಿಷಕಾರುತ್ತಿವೆ ಪೋಲೆಂಡಿನಲ್ಲಿ ಜರ್ಮನ್ ನಿವಾಸಿಗಳಿಗೆ ಹಿಂಸೆ ಕೊಡುತ್ತಾರೆ ಎಂಬ ನೂರಾರು ಸುಳ್ಳು ಕಥೆಗಳು ಜರ್ಮನ ಪತ್ರಿಕೆಗಳಲ್ಲಿ ನಿರ್ಮಾಣವಾಗುತ್ತಿವೆ ಪೋಲಿಷ ಜನರು ಬ್ರಿಟನಿನ ಶರಣು ಹೋದರೆಂದು ಹಿಟ್ಲರನ ಉದ್ವೇಗ ಅತ್ಯಲ್ಪವಲ್ಲ

ಈ ಎರಡು ಭಿನ್ನಧೋರಣೆಯು ಹಿಟ್ಲರನು ತತ್ಕಾಲಕ್ಕೆ ಚಂಚಲಮನಸನಾಗಿರುವುದಕ್ಕೆ ಸಾಕ್ಷಿ

ರೂಸವೆಲ್ಟರ ರಾಜನೀತಿ—

ಈ ಚಾಂಚಲ್ಯಕ್ಕೆ ರೂಸವೆಲ್ಟರು ಜರ್ಮನ ಮತ್ತು ಇಟೆಲಿಯ ನಾಯಕರಿಗೆ ಬರೆದುದೇ

[ಪ್ರೆಸಿಡೆಂಟ್ ರೂಸ್‌ವೆಲ್ಟರು]

ಕಾರಣ ರೂಸವೆಲ್ಟರ ಲೇಖ ರಾಜನೀತಿಯ ನಯನಾಗರಿಕತೆಯನ್ನು ಮೀರಿತ್ತು ಅದೊಂದು ಬಹಿರಂಗ ಪತ್ರವೆನ್ನಬೇಕು ಹಿಂದೆ ಇತ್ತೀಚೆಗೆ ಹಲವು ರಾಜ್ಯಗಳ ಸ್ವಾತಂತ್ರ್ಯ ನಷ್ಟವಾದುದನ್ನು ಉದಹರಿಸಿ, ಸ್ವಿಜರ್ಲೆಂಡ್, ಹಾಲೆಂಡ್, ಪೋಲೆಂಡ್ ಆದಿಯಾಗಿ ೨೪ ಇತರ ರಾಷ್ಟ್ರಗಳ ಮುಂದಿನ ನೆಮ್ಮದಿ ಅಪಾಯಕ್ಕೀಡಾಗಿದೆ ಎಂಬುದನ್ನು ಹೇಳಿ—ಮುಂದೆ ಪ್ರಸ್ತಾಪದಿಂದ ನಮ್ಮ ವೈಮನಸ್ಯ, ಮತಭೇದಗಳನ್ನು ತೀರಿಸಲು ಬಂದೀತೆಂದು—ಮುಸೋಲಿನಿ ಹಿಟ್ಲರುಗಳಿಗೆ ಬರೆದ ಪತ್ರವು—ಸಮನಾಗಿ ಅವರನ್ನು ಅಪರಾಧಿತರನ್ನಾಗಿ ತೋರಿಸುತ್ತಿದೆ ಇದು ದೂರ್ತತನ ಎಲ್ಲಿ ಸಮಯಕ್ಕೆ ಒಪ್ಪದೆ ಹೋದರೂ, ಸಾಮವಿಧಾನಗಳು ವ್ಯರ್ಥವಾಗಿರುವ ಈ ದಿನಗಳಲ್ಲಿ ಸಾಮವಿಚಾರಕ್ಕೂ ಮಾತಿಗೂ ಮನ್ನಣೆಯಿಂದ ಇಬ್ಬರು ರಾಜನೀತಿಜ್ಞರಿಗೆ ಸಮನಾದುದು

ಅದಕ್ಕೆ ಹಿಟ್ಲರನಾದ ತನ್ನ ಜಯಂತಿ ದಿನ ಎಪ್ರಿಲು ೨೮ಕ್ಕೆ ಉತ್ತರಿಸುವೆನೆಂದನು ಅದಕ್ಕೆ ಮೊದಲೇ ನೆರೆಯ ಪುಟ್ಟ ರಾಜ್ಯಗಳನ್ನು 'ನಿನಗೆ ನನ್ನ ಹೆದರಿಕೆಯೇ' ಎಂದು ಕೇಳಿದನು ಬಹಿರಂಗವಾಗಿ ನಾವು ಜರ್ಮನಿಗೆ ಅಂಜಿರುವೆವು ಎಂದು ಯಾರು ಹೇಳುವರು ಹಾಲೆಂಡ್ ಸಹ ಹೇಳಲಿಲ್ಲ ಆದರೆ ಹಾಲೆಂಡ ಮಾಡುತ್ತಿರುವ ಯುದ್ಧ ಸಿದ್ಧತೆಯು ಅದರ ಭೀತಿಯನ್ನು ಸೂಚಿಸುವುದು.

ಹಿಟ್ಲರನ ಜಯಂತಿ ಭಾಷಣ

ಈ ಉಪನ್ಯಾಸದಲ್ಲಿ ಏನೂ ಹೊರಡಲಿಲ್ಲ ತಾನು ಇಂಗ್ಲೆಂಡಿನೊಡನೆ ಮಾಡಿಕೊಂಡ ನೌಕಾ ಒಪ್ಪಂದವೂ, ಪೋಲೆಂಡಿನೊಡನಾದ 'ಪ್ರತಿರೋಧ ಒಪ್ಪಂದವೂ, ರದ್ದಾದುವು—ಎಂಬುದೇ ಮುಖ್ಯ ಮಾತುಗಳು ಮೊದಲಿನ ಒಪ್ಪಂದದ ವಿಚಾರ ಹೊಸ ವಾರ್ತೆಯಲ್ಲ ಈ ಒಪ್ಪಂದಕ್ಕೆ ವಿರೋಧ ೪೦,೦೦೦ ಟನ್ ಯುದ್ಧನಾವೆಗಳ ನಿರ್ಮಾಣಕ್ಕೆ ಹಿಟ್ಲರನ್ನು ಅಣಿಮಾಡುತಿದ್ದಾನೆ ಎಂಬುದು ಬಲು ಮೊದಲಿಗೇ ಬಯಲಾಗಿತ್ತು ಜರ್ಮ

ಪಕ್ಷದ ವಿಶೇಷ ಲೇಖಕರು:

ಶ್ರೀ| ಶಿವರಾಮ ಕಾರಂತರು

ನಿಯನ್ನು ಸುತ್ತವರಿಯಲು ಡೆಮಾಕ್ರಸಿಗಳ ಧೋರಣೆಗೇ ಮೊದಲು ಅದು ಸಿದ್ಧವಾಗಿತ್ತು.

ಈಗೇನು

ಈಗೇನು ಮಾಡುವುದೆಂಬುದರಲ್ಲಿ ಸಂಶಯ ಹಿಟ್ಲರನಿಗೆ ಬಂದಿದೆ ಮುಸೋಲಿನಿಯು ಸಹಾ ಡಾಂಜಿಗ್ ವಿಷಯವಾಗಿ ಯುದ್ಧ ಹಿತವಲ್ಲವೆಂಬ ಸಲಹೆ ಕೊಡುತ್ತಿರುವನೆಂದೂ, ಸದ್ಯವೇ ಪೋಲೆಂಡನ್ನು ಗದರಿಸಿಯಾದರೂ, ಡಾಂಜಿಗ್ ಇತ್ಯರ್ಥ ಮಾಡುತ್ತಾನೆಂದೂ ತಿಳಿದುಬರುವುದು ಚಿಕ್ಕ ಡಾಂಜಿಗನ ವಿಷಯ ಇಂಗ್ಲೆಂಡೂ, ಉದಾಸೀನ ತಾಳಬಹುದೋ ಏನೋ—ಅಂತು ಅದೇ ಮಹಾಕಾರಣವಾಗಬಾರದೆಂಬ ಅಪೇಕ್ಷೆ ಇಂಗ್ಲೆಂಡಿಗಿದೆ

ಇತ್ತ ಪೋಲೆಂಡಿನ ಮುಖ್ಯಸ್ಥರಾದ ಕರ್ನಲ್ ಬೆಕ್‌ರು ಹಿಟ್ಲರನು ತಮ್ಮೊಳಗಿನ ಒಪ್ಪಂದವನ್ನು ಮುರಿದುದು ಚಂದವಲ್ಲವೆಂದಿದ್ದಾನೆ ಇಂಗ್ಲೆಂಡಿಗೂ ನಮಗೂ ಸಹಾಯ ಸ್ವೀಕಾರದ ಒಪ್ಪಂದವಾದರೆ ಜರ್ಮನಿಗೆ ನಾವು ವೈರಿಗಳಾಗಲೇ ಬೇಕೆಂಬ ಅರ್ಥವಿಲ್ಲವೆಂದು, ಕಾರಣ ಇಂಗ್ಲೆಂಡಿಗೆ ಒಪ್ಪಂದವೇನು ಪೋಲೆಂಡಿನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ, ಆಗ ಪೋಲೆಂಡು ತನ್ನ ವೈರಿಗಳನ್ನು ಪ್ರತಿಭಟಿಸಿದರೆ ಇಂಗ್ಲೆಂಡು ಫ್ರಾನ್ಸು ಸಹಾಯ ಮಾಡವುದೆಂದು. ಇದನ್ನು ಪೋಲೆಂಡ್ ಸ್ವೀಕರಿಸ ಬೇಕೆಂದು ಹೀಗೆ ಮಾತು. ಪೋಲೆಂಡಿನ ಸ್ವಾತಂತ್ರ್ಯಕ್ಕೆ ಜರ್ಮನಿಯಿಂದ ಧಕ್ಕೆ ಬರಬೇಕು ಅದರ ಬಳಿಕಲ್ಲವೆ ಈ ಹೊಸ ಒಪ್ಪಂದದ ರಂಗಣ್ಣನು ಅದಕ್ಕೆ ಧಕ್ಕೆ ತರುವ ರಾಜ್ಯವು ಜರ್ಮನಿಯೇ, ಹೀಗಿರಲು ಪೋಲೆಂಡನ್ನು "ಏರಿ ಫಲವೇನು" ಈ ಡಾಂಜಿಗ್ ವಿಷಯದಲ್ಲಿ ಬೆಕ್‌ರು—ಕಟ ಪಲ್ಲದ ಇದರೂ ಅಂಜುಬುರುಕತನ ತೋರದ ಉತ್ತರ ಕೊಟ್ಟಿರುವರು

ಜರ್ಮನ ಸೇನಾನಿಗಳು

ಇತ್ತ ಜರ್ಮನ ಸೇನಾನಿಗಳು ಇಟಲಿಗೆ ಧಾವಿಸಿದ್ದಾರೆ ಲಿಬಿಯಾಕ್ಕೆ ಓಡಿದ್ದಾರೆ ಯುದ್ಧ ಭ್ಯಾಸದ ನೆಪದಿಂದ ಜರ್ಮನ ನಾವೆಗಳು ಭೂಮಧ್ಯ ಸಮುದ್ರವನ್ನು ಸೇರಿವೆ ಜರ್ಮನ ಸಬ್‌ಮೆರೀನ ಗಳು ಜಿಬ್ರಾಲ್ಟರ್ ಮಾರ್ಗವಾಗಿ ಅಟ್ಲಾಂಟಿಕದಲ್ಲಿ ಅಲೆಯುತ್ತಿವೆ ಎಂದರೆ ಅವುಗಳ ಉದ್ದೇಶ ಭಾವಿ ಯುದ್ಧ ರಂಗವು ಭೂಮಧ್ಯ ಸಮುದ್ರಕ್ಕೆ ಹತ್ತಿರಕ್ಕೆ ಸರಿಯಬೇಕು—ಎಂಬುದಿರಬೇಕು ಪ್ರಕೃತದ ಸ್ಥಿತಿಯಲ್ಲಿ ಈ ಸಮುದ್ರವು ಅಗ್ನಿಕುಂಡವಾಗಿರುವುದೂ ನಿಜ ಆದರೆ ಪೋಲೆಂಡ್ ಗಡಿನಾಡಿನಲ್ಲಿ ಜರ್ಮನ್ ಸೇನೆ ತುಂಬಿದೆ ಪೋಲೆಂಡು ಸೇನೆಯು ಬಲವಾಗಿದೆ ಈ ತನಕ ಪೋಲೆಂಡ್ ರಶ್ಯದ ಕಡೆಗೆ ತಣ್ಣಗಿತ್ತು ಈಗ ರಶ್ಯನ್ ವಿರೋಧ ಪತ್ರಿಕೆಗಳು ರಶ್ಯನ ಸೇನೆ ಪಡೆಗಳ ವಿಷಯ ಹೊಗಳಿಕೆ ಮಾಡುತ್ತಿರುವುದನ್ನು ಕಂಡರೆ ರುಮೇನಿಯ—ಪೋಲೆಂಡ್—ರಶ್ಯಗಳೊಳಗೆ ಯುದ್ಧ ಸ್ನೇಹದ ತಯಾರಿಗೆ ಬಯಕೆಯುಂಟಾಗಿದೆ

ಇಂಗ್ಲೆಂಡ್-ರಶ್ಯ

ಆದರೆ ರಶ್ಯವನ್ನು ತಮ್ಮ ಮೈತ್ರಿಗೆ ಸೆಳೆದುಕೊಳ್ಳುವ ಇಂಗ್ಲೆಂಡಿನ ಯತ್ನ ಹೇಗೆ ಕಾರ್ಯಕ್ಕೆ ಬಂದೀತೆಂದು ತಿಳಿಯುವುದಿಲ್ಲ ಈ ಮೈತ್ರಿ ಸಫಲವಾಗಲು ಯುದ್ಧಕಾಲಕ್ಕೆ ಸಮನಾದ ಸೇನಾಗೆಳೆತನ ಅವಶ್ಯವಿದೆ ಇದರ ತಯಾರಿಗೆ ಇನ್ನೂ ಸ್ನೇಹ ಪಕ್ವವಾಗಿಲ್ಲ ರಶ್ಯದ ಸಂಶಯವೂ ಅಷ್ಟಕ್ಕೆ ಮಾಯವಾಗಿಲ್ಲ ರಶ್ಯವು ತಮ್ಮ ರಕ್ಷಣೆ ಸಹಾಯಗಳನ್ನು ಕೊಡುವ ವಿಷಯದಲ್ಲಿ ಸ್ವಿಜರ್ಲೆಂಡ್ ಹಾಲೆಂಡ್, ಲಕ್ಸೆಂಬರ್ಗ ಇಸ್ಟೋನಿಯ, ಫಿನ್‌ಲೆಂಡ್ ರುಮೇನಿಯಗಳೆಲ್ಲವನ್ನೂ ಸೇರಿಸುತ್ತಿದೆ ಆದರೆ ಅಷ್ಟು ಹೆಸರುಗಳನ್ನು ಸೇರಿಸಿದರೆ ಜರ್ಮನಿಯನ್ನು ಸುತ್ತುವರೆದವು ಎಂಬ ಅಪವಾದ ತಮಗೆ ಬಂದೀತೇ ಎಂಬ ಅಂಜಿಕೆ ಇಂಗ್ಲೆಂಡಿಗೆ

ರಶ್ಯದೊಡನೆ ಸಹಕಾರ ಪ್ರಸ್ತಾಪ ನಡೆಯುತ್ತಿರುವಾಗಲೇ ರಶ್ಯನ್ ರಾಯಭಾರಿ ಲಿಟ್ವಿ



ನಾಫ್‌ರನ್ನು ಇಂಗ್ಲೆಂಡಿನಿಂದ ತೆಗೆದರು ಇದು ಹಲವು ಊಹೆಗಳಿಗೆ ಕಾರಣವಾಗಿದೆ ತೋರಿಕೆಯ ಮಟ್ಟಿಗೆ—ಈಗಿನ ಪ್ರಸ್ತಾವಗಳ ಸಾವಧಾನತೆಗಾಗಿ ಅವರನ್ನು ತೆಗೆದಿರಬೇಕು ಎನ್ನುತ್ತಾರೆ ಅಂತು ಇಂಗ್ಲೆಂಡ್ ರಶ್ಯದೊಡನೆ ಕೂಡುವುದರಲ್ಲಿ ತಡವಾದಂತೆ ಪುಟ್ಟ ರಾಜ್ಯಗಳ ಭೀತಿಯು ಮುಂದುವರಿಸುವುದು ಸಾವಕಾಶವಾದರೆ ಜರ್ಮನಿ ಇಟಲಿಗಳೂ ಅವುಗಳನ್ನು ಬೆದರಿಸಿ ಸುಮ್ಮಗಿರಿಸಿದರೂ ಸಾಕು. ಆಗ ಇವರ ಸ್ನೇಹವು ಸಫಲವಾಗಲು ಇನ್ನಷ್ಟು ಕಷ್ಟವಿದೆ

ಸಂ ಅಮೇರಿಕದ ವಾಶಿಂಗಟನ್ ಪೋಸ್ಟ್ ಪತ್ರಿಕೆಯು ಸಂಯುಕ್ತ ಅಮೇರಿಕ ಮತ್ತು ರಶ್ಯಗಳಿಂದ ಡೆಮಾಕ್ರಸಿಗಳ ಬೆಂಗಡೆ ಬಾರದೆ ಶಾಂತಿಯಿಲ್ಲವೆನ್ನುತ್ತದೆ ಆದರೆ ಈ ಎರಡು ದೇಶಗಳಲ್ಲಿ ಇಂಗ್ಲೆಂಡಿನ ರಾಜನೀತಿಯು ವಿಷಯದಲ್ಲಿ ಅನುಮಾನ ಪೂರ್ಣ ಕಳೆದಿಲ್ಲ

ಸಂತರ್ಪಣೆ ಬೇಡವೆಂದು ಬ್ರಾಹ್ಮಣರ ಉಪವಾಸ ವ್ರತ

ಕಾನಪುರದ ಬಾಬಾ ತುಳಸೀರಾಮ ಎಂಬ ಬಹು ದೊಡ್ಡ ವ್ಯಾಪಾರಿಗಳು ಕಾನಪುರದ ಎಲ್ಲ ಜಾತಿಗಳ ಬ್ರಾಹ್ಮಣರಿಗೆ ಒಂದು ದೊಡ್ಡ ಊಟವನ್ನು ಕೊಡಲಿಕ್ಕಿದ್ದರು ಅದರಿಂದ ಲಕ್ಷಾಂತರ ರೂಪಾಯಿಗಳ ವ್ಯರ್ಥ ಖರ್ಚಾಗುವದಿತ್ತು ಈ ಅಪವ್ಯಯವನ್ನು ತಡೆಯುವುದಕ್ಕೋಸ್ಕರ ಕಾನಪುರದ ಕೆಲವು ಜನ ಗೌಡ ಬ್ರಾಹ್ಮಣರ ತುಳಸೀರಾಮರ ಮನೆ ಮುಂದೆ ಕುಳಿತು ಮರಣಾಂತ ಉಪವಾಸ ವ್ರತವನ್ನು ಕೈಕೊಂಡರು ಬ್ರಾಹ್ಮಣ ಸಂತರ್ಪಣೆಯ ಪುಣ್ಯ ಕಟ್ಟಿಕೊಳ್ಳಲಿಕ್ಕೆ ಹೋಗಿ, ಈ ಉಪವಾಸದಿಂದ ಬ್ರಹ್ಮಹತ್ಯೆಯ ಪಾಪ ತಟ್ಟೀತೆಂದ ಹೆದರಿಕೆ ತುಳಸೀರಾಮರು ಸಂತರ್ಪಣೆಯ ವಿಚಾರವನ್ನು ಬಿಟ್ಟುಬಿಟ್ಟರು ಹೀಗೆ ಎಲ್ಲ ಬ್ರಾಹ್ಮಣರು ಮಾಡುವುದಾದರೆ ನಮ್ಮ ದೇಶದಲ್ಲಿ ವರ್ಷವರ್ಷವೂ ಬ್ರಾಹ್ಮಣ ಸಂತರ್ಪಣೆಗೆ ಖರ್ಚಾಗುವ ಕೋಟ್ಯಾಂತರ ರೂಪಾಯಿಗಳು ಬೇರೆ ದೇಶೋದ್ಧಾರದ ಕಾರ್ಯಗಳಿಗೆ ದೊರೆಯಬಹುದು

ಆಟಗಾರರ ಸಂಜೀವನ

ಜಾರ್ಜ ಬರಿಲ್‌ರೇ ಎಂಬ ನ್ಯೂಯೋರ್ಕ ನಗರದ ಡಾಕ್ಟರರೊಬ್ಬರು ಆಟಗಾರರ ಸ್ಪೆಸಿಕರ ಪೋಲಿಸರ—ಮುಖ್ಯವಾಗಿ ಬಹಳ ಶ್ರಮಪಟ್ಟು ಕೆಲಸ ಮಾಡುವವರ ಒಂದು ಸಂಜೀವನವನ್ನು ಕಂಡುಹಿಡಿದಿದ್ದಾರ ಅದಕ್ಕೆ ಜಲಿಟಿನ ಎಂದ ಹೆಸರು ಇದನ್ನು ತಕ್ಕ ಪರಿಮಾಣದಲ್ಲಿ ದಣಿದು ಬಂದವರಿಗೆ ಕೊಟ್ಟದ್ದಾದರೆ ಅತ್ಯಲ್ಪ ಸಮಯದಲ್ಲಿ ದಣಿವಿನ ಪರಿಹಾರವಾಗುವುದು ಮಾತ್ರವಲ್ಲ ಅವರು ತಮ್ಮ ಕೆಲಸದಲ್ಲಿ ಕಳೆಕೊಂಡ ಶಕ್ತಿಗಿಂತಲೂ ಮಿಗಿಲಾದ ಶಕ್ತಿಯನ್ನು ಪುನಃ ಸಂಪಾದಿಸುವರೆಂದು ಅನೇಕ ಮಂದಿಯ ಮೇಲೆ ಪ್ರಯೋಗ ಮಾಡಿ ದೊರಕಿದ ಅನುಭವದಿಂದ ಆ ಡಾಕ್ಟರರು ಹೇಳಿದ್ದಾರೆ ಆದರೆ ಈ ಔಷಧಿಯಿಂದ ಪುರುಷರ ಮೇಲೆ ಕಂಡುಬಂದಷ್ಟು ಸತ್ಪರಿಣಾಮವು ಸ್ತ್ರೀಯರ ಮೇಲೆ ಕಂಡುಬರುವುದಿಲ್ಲ ಅದಕ್ಕೆ ಸ್ತ್ರೀಯರ ಶರೀರರಚನೆಯಲ್ಲಿರುವ ಒಂದು ದೋಷವೇ ಕಾರಣವೆಂದ ಅವರ ಅಭಿಪ್ರಾಯ ಪಡುತ್ತಾರೆ

ಸಮಾಚಾರ ಸಂಗ್ರಹ

"ಒಪ್ಪಂದವಾಗದಿದ್ದರೆ ನಾನು ರಾಜಕೋಟೆಗೆ ಪುನಃ ಬರುವೆನು"

(ಮಹಾತ್ಮಾ ಗಾಂಧಿ)

ರಾಜಕೋಟದ ರಾಜಪ್ರಜೆಗಳೊಳಗೆ ನ್ಯಾಯ ರೀತಿಯಲ್ಲಿ ಒಪ್ಪಂದವಾಗದಿದ್ದರೆ ತಾನು ಪುನಃ ರಾಜಕೋಟಿಗೆ ಖಂಡಿತವಾಗಿಯೂ ಬರುವೆನೆಂದು ಮಹಾತ್ಮಾ ಗಾಂಧಿಯವರು ವೀರವಾಲರಿಗೆ ತಿಳಿಸಿರುವರು.

ಮುಂದಿನ ಕಾಂಗ್ರೆಸ

ಬಿಹಾರ ಕಾಂಗ್ರೆಸ್ ಕಮಿಟಿಯವರು ಮುಂದಿನ ಕಾಂಗ್ರೆಸನ್ನು ಪಾಟ್ನಾದಿಂದ ಐದು ಮೈಲು ದೂರವಿರುವ ಪುಲ್ವಾರಿ ಶರೀಫ್ ಎಂಬಲ್ಲಿ ಜರಗಿಸುವುದೆಂದು ನಿಶ್ಚಯಿಸಿದ್ದರು ಆದರೆ ಗಾಂಧಿಜಿಯವರು ಇದಕ್ಕೆ ಅಸಮ್ಮತಿಯನ್ನು ಸೂಚಿಸಿದರು ಪುಲ್ವಾರಿ ಶರೀಫ್ ಹಳ್ಳಿಯಲ್ಲವೆಂಬುದೇ ಮುಖ್ಯ ಕಾರಣ ಆದ್ದರಿಂದ ಮುಂದಿನ ಕಾಂಗ್ರೆಸ ಗಂಗಾನದಿಯ ಬಳಿಯ ಸೋನೆಪುರದಲ್ಲಿ ಜರುಗಬಹುದು

ಲಿಟ್ವಿನೋಫರ ರಾಜಿನಾಮೆ

ರಶ್ಯದ ವಿದೇಶಾಂಗ ಸಚಿವರಾದ ಲಿಟ್ವಿನೋಫರು ರಾಜೀನಾಮೆಯಿತ್ತುದ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ ಕಾರಣವು ಇನ್ನೂ ತಿಳಿದು ಬಂದಿಲ್ಲ ಆದರೆ ಬ್ರಿಟನ್ ರಶ್ಯಗಳೊಳಗೆ ನಡೆದ ಮಾತುಕತೆಗಳು ಬಹಳ ಮಂದವಾಗಿ ಸಾಗಿದ್ದನ್ನು ಕಂಡು ಬೇಸರಗೊಂಡ ಲಿಟ್ವಿನೋಫರು ರಾಜಿನಾಮೆಯಿತ್ತಿರಬಹುದೆಂದು ಊಹಿಸಲಾಗಿದೆ

ಜರ್ಮನಿಗೆ ಪೋಲೆಂಡದ ಉತ್ತರ

ಜರ್ಮನ್ ಪೋಲಿಶ್ ಒಪ್ಪಂದವನ್ನು ಮುರಿದು ಹಾಕಿದ ಜರ್ಮನಿಯ ಪತ್ರಕ್ಕೆ ಪೋಲೆಂಡ ಉತ್ತರ ಕೊಡುತ್ತಾ ಜರ್ಮನ್ ಪೋಲಿಶ್ ಒಪ್ಪಂದಕ್ಕೂ ಆಂಗ್ಲ ಪೋಲಿಶ್ ಒಪ್ಪಂದಕ್ಕೂ ಸಂಬಂಧ ತಪ್ಪುವುದು ಸಮಂಜಸವಲ್ಲವೆಂದೂ, ಜರ್ಮನ ಪೋಲಿಶ್ ಒಪ್ಪಂದವನ್ನು ತಿರಸ್ಕರಿಸಲು ಹಿಟ್ಲರರಿಗೆ ಯಾವ ಅಧಿಕಾರವೂ ಇಲ್ಲವೆಂದು ತಿಳಿಸಿದೆ ಮತ್ತು ಜರ್ಮನಿಯು ಸ್ನೇಹಪೂರ್ಣವಾದ ಯಾವ ಮಾತನ್ನಾದರೂ ವಿಚಾರಿಸಲು ಪೋಲೆಂಡು ಸಿದ್ಧವಿದೆ ಎಂದು ತಿಳಿಸಿದೆ

ಜರ್ಮನ್ ಹಡಗುಗಳ ಓಡಾಟ

ಭೂಮಧ್ಯ ಸಮುದ್ರದಲ್ಲಿ ಜರ್ಮನಿಯ ಯುದ್ಧ ಹಡಗುಗಳು ಓಡಾಡುತ್ತಿರುವುದು ಜಿಬ್ರಾಲ್ಟರ್ ಬಂದರದಲ್ಲಿ ಕಟ್ಟಿದ್ದ ಬತ್ತಗೋಡೆಗಳನ್ನು ಕಳೆದ ತಾರೀಕು ಎರಡರಲ್ಲಿ ಕಿತ್ತು ಹಾಕಲಾಯಿತು

ಹಾಂಕೋ ಬಳಿ ಚೀನೀಯರ ಪರಾಜಯ

ಹಾಂಕೋ ನಗರದ ವಾಯವ್ಯ ದಿಕ್ಕಿನಲ್ಲಿ ಹೊಸದಾಗಿ ಧಾಳಿಯನ್ನು ಪ್ರಾರಂಭಿಸಿದ್ದ ಚೀನಿ ದಂಡುಗಳು ಬಳಲಿ ಹಿಂತಿರುಗಿರುವುವೆಂದು ಹಾಂಕೋದಿಂದ ವಾರ್ತೆ ಇದೇ ಸಂಧಿಯನ್ನು ಸಾಧಿಸಿ ಜಪಾನಿಯರು ಇಂಗಶಾನ ಎಂಬಲ್ಲಿ ಚೀನಿಯರನ್ನು ಸುತ್ತುಗಟ್ಟಿರುವರು ಆದರೆ ಚೀನಿಯರು ಗುಡ್ಡಗಾಡುಗಳಲ್ಲಿ ಅಡಗಿರುವರೆಂದು ತಿಳಿದುಬರುತ್ತದೆ

ಎ ಐ ಸಿ ಸಿ ಸೆಕ್ರೆಟರಿ ಆಚಾರ್ಯ ಕೃಪಲಾನಿ

ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಜನರಲ್ ಸೆಕ್ರೆಟರಿಗಳಾಗಿ ಆಚಾರ್ಯ ಜೆ. ಬಿ ಕೃಪಲಾನಿಯವರನ್ನೂ ಕೋಶಾಧಿಕಾರಿಗಳಾಗಿ ಶ್ರೀಯುತ ಜಮ್ನಾಲಾಲ ಬಜಾಜರನ್ನೂ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ ನೇಮಿಸಿರುವರು

ಮುಂದಿನ ಎ ಐ ಸಿ ಸಿ ಸಭೆ

ಮುಂದಿನ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ಜೂನ್ ತಾರೀಕು ೬ಕ್ಕೆ ನೆರವೇರುವುದೆಂದು ಪ್ರಕಟಿಸಲ್ಪಟ್ಟಿದ್ದರೂ ಅದೇ ಸಮಯಕ್ಕೆ ನೆಶನಲ್ ಪ್ಲೇನಿಂಗ್ ಕಮಿಟಿಯ ಸಭೆಯು ಜರಗುವುದರಿಂದ ಎ. ಐ ಸಿ ಸಿ ಸಭೆಯನ್ನು ಮುಂದರಿಸಬೇಕೆಂದು ಶ್ರೀ ಜವಾಹರಲಾಲರು ವಿನಂತಿಸಿಕೊಂಡ ಮೇರೆಗೆ ಶ್ರೀ ಬಾಬು ರಾಜೇಂದ್ರ ಪ್ರಸಾದರು ಎ ಐ ಸಿ ಸಿ ಸಭೆಯನ್ನು ಜೂನ್ ಕಡೇಯ ಜೂನ್ ಕಡೆಯ ವಾರಕ್ಕೆ ಮುಂದರಿಸಲು ಒಪ್ಪಿರುವರು

ಅಸ್ಸಾಮುದ ಮುಖ್ಯ ಮಂತ್ರಿಗಳಾದ

ಶ್ರೀ ಗೋಪಿನಾಥ ಬಾರ್ಡೋಲಿಯವರು

ವೆಲ್ಲೂರಿನಲ್ಲಿ ಹಿಂದೂ ಮುಸಲ್ಮಾನ ದಂಗೆ

ಕಳೆದ ವಾರ ವೆಲ್ಲೂರಿನಲ್ಲಿ ಭೀಕರಪೂರ್ಣ ಹಿಂದೂ ಮುಸಲ್ಮಾನ ದಂಗೆಯು ನಡೆಯಿತು ಹಿಂದುಗಳ ಮಸೀದಿಯ ಮುಂದೆ ವಾದ್ಯವಾದಿದರು ಎಂಬುದು ದಂಗೆಯ ಕಾರಣವು ದಂಗೆಯಾಗಿಯೂ ಪೋಲೀಸರು ಗುಂಡು ಹಾರಿಸಿದರು ಅನೇಕ ಮಂದಿ ಸತ್ತರು ಬಹಳ ಜನ ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟರು

ಇನ್ನು ಮುಂದುವರಿದ ಮತ್ತು ಜಾಗ್ರತರಾದ ಈ ಕಾಲದಲ್ಲಿ ನಾವು—ಹಿಂದು ಮುಸಲ್ಮಾನರ ಸಹೋದರರಂತೆ ಇರಲಾರೆವು ಎರಡು ಜಾತಿಗಳಿಗೂ ಪರಮಪವಿತ್ರವಾಗಿರುವ ದೇವಾಲಯ ಮತ್ತು ಮಸೀದಿಗಳ ಕೊಲೆ ಹೊಡೆದಾಟಗಳಾಗದೆ ಹಾಗೆ ಇರುವುದು ಎಂಬುದು ಬಹಳ ಲಜ್ಜಾಸ್ಪದವಾಗಿದೆ ಎಂದು ಸಂಡೇ ಟೈಮ್ಸ ಹೇಳುತ್ತದೆ

ಮಸೀದಿ ಮುಂದೆ ಸಂಗೀತ ಸಮಸ್ಯೆಯನ್ನು ಶಾಶ್ವತವಾಗಿ ಬಿಡಿಸಬೇಕು ಅದಕ್ಕಾಗಿ ಕಾನೂನಿನ ಆಶ್ರಯ ಕೇಳಬೇಕೆಂದಲ್ಲ, ಹಿಂದುಗಳಲ್ಲಿ ಹೃದಯ ಪರಿವರ್ತನೆಯಾಬೇಕು ಹಿಂದೂ ಜಾತಿಯು ಅಥವಾ ಧರ್ಮದ ಮಹತ್ವವು ಮಸೀದಿಗಳ ಮುಂದಿನ ಸಂಗೀತವನ್ನು ಅವಲಂಬಿಸಿರುವುದಿಲ್ಲ. ಕ್ಷುಲ್ಲಕ ವಿಷಯಗಳಿಗೆ ಪ್ರಾಮುಖ್ಯತೆಯನ್ನು ಕೊಡಬಾರದ ಸಮಯವು ಬಂದಿದೆ ಹಿಂದುಗಳ ಹೃದಯಪರಿವರ್ತನೆಯಾದಾಗ ಅದರ ಪ್ರಭಾವವು ಮುಸಲ್ಮಾನರ ಮೇಲೂ ಕಾಣಿಸದಿರಲಿಕ್ಕಿಲ್ಲ. ಒಟ್ಟು ದೇಶದ ಹಿತದೃಷ್ಟಿಯಿಂದ ಹಿಂದುಗಳು ಸ್ವಲ್ಪ ಜಾಸ್ತಿ ಉದಾರತೆಯನ್ನು ತೋರಿಸಿದರೆ ಅವರಿಗಾಗಲೀ ನಷ್ಟವಿಲ್ಲ ಹಿಗ್ಗಲಿಕ್ಕಾ ಬಗ್ಗುವರು ಎಂದು ಅವರು ತಿಳಿಯಬೇಕು ಎಂದು ಅದೇ ಪ್ರತಿಕೆ ಹೇಳುತ್ತದೆ

ಸಂಕ ನೋಡಿ ಕಳ್ಳತನ ಬಿಟ್ಟ

ಶಾಲೆಗೆ ಹೋಗುವ ಬಾಲಕನೊಬ್ಬನು ಸಂಕನೋಡಿ ಕಳ್ಳತನ ಬಿಟ್ಟ ಒಂದು ಬೋಧಪ್ರದ ಸಮಾಚಾರವು ಪ್ರಕಟವಾಗಿದೆ ಆ ಬಾಲಕನು ಶಾಲೆಯಲ್ಲಿ ಮನೆಯಲ್ಲಿ ಯಾವಾಗಲೂ ಏನನ್ನಾದರೂ ಚಾರಿಸುತ್ತಿದ್ದನು ಕಡೆಗೊಂದು ದಿನ ಒಂದು ಸ್ಕೇಟನ್ನು ಕದ್ದನು ಕೋರ್ಟಿನವರು ಅವನ ವಿಚಾರಣೆ ಮಾಡಿ ತಿದ್ದಿ ಸರಿದಾರಿಗೆ ತರುವುದಕ್ಕೋಸ್ಕರ ಒಂದು ಸಂಸ್ಥೆಗೆ ಕಳುಹಿಸಿಕೊಟ್ಟರು ಸಂಸ್ಥೆಯವರಿಂದ ಎಷ್ಟು ಪ್ರಯತ್ನವಿಟ್ಟರೂ ಬಾಲಕನ ದುರಭ್ಯಾಸ ದೂರಾಗುವಂತೆ ಕಂಡುಹಿಂಡಿಯಲಿಕ್ಕಾಗಲಿಲ್ಲ ಕಡೆಗೊಂದು ದಿನ ಬಾಲಕನ ತಾಯಿ ಬಂದು ಆತನು ಲಂಡನಿನ ಟವರ ನೋಡುವೆಯ, ಚಿತ್ರವ ನೋಡಬೇಕೆಂದಿದ್ದನೆಂದು ಹೇಳಿದಳು. ಬಾಲಕನಿಗೆ ಅದನ್ನು ನೋಡುವ ಆಸೆಯಾಗಿರಬಹುದೆಂದು ಸಂಸ್ಥೆಯವರು ಆತನನ್ನು ಟವರ ನೋಡುವೆಗೆ ಕರಕೊಂಡು ಹೋದರು ಬಾಲಕನು ಅದನ್ನೆಲ್ಲ ನೋಡಿ ತನ್ನ ಆಸೆಯನ್ನು ತೀರಿಸಿಕೊಂಡನು ಅಂದಿನಿಂದ ಅವನು ಕದಿಯುವುದನ್ನು ಬಿಟ್ಟುಬಿಟ್ಟನು ಜೀವನದ ಪೂರ್ತಿಯಾಗದ ಆಸೆಗಳೇ ಮನುಷ್ಯನನ್ನು ಕೆಟ್ಟದಾರಿಗೆ ಎಳೆಯುತ್ತವೆ ಎಂಬುದು ಇದರಿಂದ ತಿಳಿಯುತ್ತದೆ

ಮಲೇರಿಯದ ಭಯಂಕರ ಹಾವಳಿ

ವಿಮಾನ ಸಂಚಾರದಿಂದ ಅಮೇರಿಕಕ್ಕೆ ನಷ್ಟ

ದಕ್ಷಿಣ ಅಮೇರಿಕದಲ್ಲಿ ಮಲೇರಿಯದ ಹಾವಳಿಯು ಈಗ ತಡೆಯಲಿಕ್ಕಾಗದಷ್ಟಾಗಿರುವುದು. ಹತ್ತು ವರ್ಷಗಳ ಮೊದಲು ಮಲೇರಿಯದ ಎನೋಫಿಲಸ ಸೊಳ್ಳೆಯು ಹಡಗಿನ ದಾರಿಯಿಂದ ಆಗಮಿಸಿತ್ತಿದ್ದಿತು ಈಗ ದಕ್ಷಿಣ ಅಮೇರಿಕವು ಅಂಥ ಅಸಂಖ್ಯ ಎನೋಫಿಲಸ ಸೊಳ್ಳೆಗಳ ತವರುಮನೆಯಾಗಿ ಪರಿವರ್ತಿಸಿರುವುದು.

ವಿಮಾನದ ಮೂಲಕ ರೋಗಪ್ರಸಾರ

ವಿಮಾನವು ಹಲವು ರೋಗಗಳ ಪ್ರಸಾರ ಸಾಧನವಾಗಿ ಪರಿಣಮಿಸಿರುವುದು ೧೯೩೦ರಲ್ಲಿ ಹೀಗೋ ಒಂದು ಎನೋಫಿಲಸ ಹೆಣ್ಣು ಸೊಳ್ಳೆಯು ಆಫ್ರಿಕದ ಒಂದು ವಿಮಾನಕ್ಕೆ ಅಂಟಿಕೊಂಡು ದಕ್ಷಿಣ ಅಮೇರಿಕಕ್ಕೆ ಪ್ರಯಾಣ ಮಾಡಿತು ... ಆಗಮನದಿಂದ ಅಶಾಂತಿ

ರಾಜಾ ರಣಜಿತಸಿಂಗರ ಆಪ್ತನೇಹಿತ

ಬಾಬಾ ಬಮಿತನೆಂದು ಈತನ ಹೆಸರು ಈತನ ವಯಸ್ಸು ೧೩೦ ವರ್ಷ ಹಿಂದೆ ಪಂಜಾಬದ ಸಿಖ್ಖ ಅರಸನಾದ ರಾಜಾ ರಣಜಿತಸಿಂಗನ ಆಪ್ತ ಸ್ನೇಹಿತನಾಗಿದ್ದನಂತೆ ಈಗ ಬೇಡಿಕೊಂಡು ಹೊಟ್ಟೆ ಹೊರೆಕೊಳ್ಳುತಿದ್ದಾನೆ

ಮಹಾ ಸಾಗರವನ್ನು ದಾಟಿ ದಕ್ಷಿಣ ಅಮೇರಿಕದ ಬ್ರೇಜಿಲ್ ಪ್ರದೇಶದಲ್ಲಿ ಕಾಲಿಡುತ್ತಲೇ ಆ ಸೊಳ್ಳೆ ಅಲ್ಲಿ ಮೊಟ್ಟೆಗಳನ್ನಿಟ್ಟಿತು.

ಒಂದು ವರ್ಷದ ಅನಂತರ

ಒಬ್ಬನು ಆ ವರೆಗೆ ಕಾಣದ ಕೆಲವು ಸೊಳ್ಳೆಗಳು ಮನೆಯ ಗೋಡೆಗಳ ಮೇಲೆ ಕೂತಿರುವುದನ್ನು ಕಂಡನು. ಆದರೆ ಅವನು ಆ ಕಡೆಗೆ ಲಕ್ಷ ಕೊಡಲಿಲ್ಲ. ಅದೇನೋ ವಿಚಿತ್ರವಾದ ಸೊಳ್ಳೆಯಾಗಿರಬಹುದೆಂದು ಸುಮ್ಮನಿದ್ದನು ವರ್ಷಗಳು ಕಳೆದ ಹಾಗೆ ಈ ಸೊಳ್ಳೆಗಳು ಅಸಂಖ್ಯವಾಗಿ ಬೆಳೆದುವು. ಒಬ್ಬನ ಅಲಕ್ಷದಿಂದ ಮಲೇರಿಯದ ಮಹಾಮಾರಿಗೇ ಆ ದೇಶದಲ್ಲಿ ಸ್ವಾಗತವನ್ನು ಕೊಟ್ಟಂತಾಯಿತು

ಅಲಕ್ಷದ ಪರಿಣಾಮ

ಈ ಅಲಕ್ಷದ ಪರಿಣಾಮವು ಹೇಗಾಗಿದೆಯೆಂದರೆ — ಕಳೆದ ವರ್ಷ ಒಂದು ಚಿಕ್ಕ ಪ್ರದೇಶದಲ್ಲಿರುವ ೫೦,೦೦೦ ಜನರು ಮಲೇರಿಯ ರೋಗಕ್ಕೆ ಗುರಿಯಾದರು ಅವರಲ್ಲಿ ೧೦ರಲ್ಲಿ ಒಬ್ಬರಂತೆ ಎಲ್ಲರು ರೋಗಕ್ಕೆ ಬಲಿಯಾದರು ಈಗ ಈ ರೋಗದ ಹಾವಳಿ ಸಾನ ಫ್ರಾನ್ಸಿಸ್ಕೊ ನದಿಯ ಪ್ರದೇಶದಲ್ಲಷ್ಟೇ ಇದೆ ಸೊಳ್ಳೆಗಳು ಈ ಪ್ರದೇಶವನ್ನು ದಾಟಿ ಮುಂದಾದುದಾದರೆ ರೋಗವು ಉತ್ತರ ದಕ್ಷಿಣ ಎರಡೂ ಅಮೇರಿಕಗಳಲ್ಲಿ ಹರಡಿಕೊಳ್ಳಬಹುದು,

ಇಂಗ್ಲಾಂಡಿನ ಭಯ

ದಕ್ಷಿಣ ಅಮೇರಿಕದಲ್ಲಿ ಹರಡಿದ ಈ ರೋಗದ ಭಯಂಕರ ಹಾವಳಿಯನ್ನು ಕಂಡು ಇಂಗ್ಲಾಂಡಿಗೂ ಭಯವಾಗಿರುವುದು. ಆಫ್ರಿಕದ ಎನೋಫಿಲಸ ಸೊಳ್ಳೆಗಳಿಂದ ಹಿಟ್ಲರ ಮುಸೊಲೀನಿಯರ ಆಕ್ರಮಣ ಕೀಳು ಸೈನಿಕರಿಗಿಂತಲೂ ಹೆಚ್ಚು ಭಯವಾಗಿರುವುದು ದಕ್ಷಿಣ ಅಮೇರಿಕದಲ್ಲಿ ಎನೋಫಿಲಸ ಸೊಳ್ಳೆಗಳ ಒಂದು ತಂಡವು ಬಂದಿತೆಂದರೆ ದುರ್ಬಲ ರಾಷ್ಟ್ರದ ಆಕ್ರಮಣಕ್ಕೆ ಒಂದ ಅಜೀಯ ರಾಜನ ದಂಡಿನ ಹಾಗೆ ಜಗದ ಜಗತ್ತಿನ ಇತಿಹಾಸದಲ್ಲಿ ದಕ್ಷಿಣ ಅಮೇರಿಕದ ಮಲೇರಿಯ ಹಾವಳಿಯು ಅತ್ಯಂತ ಭಯಂಕರವಾಗಿ ಪರಿಣಮಿಸುವುದು

LEGAL NOTICE.

HIGH COURT MADRAS

Tuesday the 18th day of April 1939
The Hon'ble Mr Justice
Venkataramana Rao
(In Chambers)
O P 29 of 1939

In the matter of the Indian Companies Act VII of 1913

and

In the matter of the Canara Banking Corporation (Udipi) Ltd

The Canara Banking Corporation Ltd by its Manager V R Kamath — *Petitioner*

The petition coming on this day before this Court for hearing in the presence of Mr K P Sarvothama Rao Advocate for the petitioner herein and upon reading the Petition filed herein on the 25th day of January 1939 together with the copy of the Memorandum and Articles of Association of the Company abovenamed annexed thereto

IT IS ORDERED AS follows

1 That the following alterations viz

(a) that the name of the Bank be altered to the Canara Banking Corporation Ltd and

(b) that the paragraphs 1 to (both inclusive) of the present Memorandum of Association (as set out in the Schedule A hereto) be deleted and paragraphs 1 to 5 as set out in the Schedule B hereto be substituted in their place

K P Sarvothama Rao,
Advocate for the Petitioner

N B Copies of Schedule A and Schedule B referred to above can be had from the Registered Office and Branches of the above Company.

ಸ್ವದೇಶಾಭಿಮಾನಿ

ತಾರೀಖು ೧೨—೫—೧೯೪೧

ಭಾರತವೂ ಮುಂದಿನ ಯುದ್ಧವೂ

ಯುರೋಪಿನಲ್ಲಿ ಈಗಾಗಲೇ ಯುದ್ಧದ ಕಾರ್ಮೋಡಗಳು ಕಟ್ಟಿರುವವು. ಇವು ಎಂದು ಮಳೆಗರೆಯಬಹುದೆಂದು ಹೇಳಲಸಾಧ್ಯ. ಅಂಥಾ 'ಯುದ್ಧ ಸಂಭವಿಸಿದಲ್ಲಿ ಭಾರತವು ಏನು ಮಾಡುವುದು?' ಇದನ್ನು ಮೊನ್ನೆ ಕಲ್ಕತ್ತದಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಪಂಡಿತ ಜವಾಹರಲಾಲ ನೆಹರೂರವರು ಈ ರೀತಿಯಾಗಿ ಸ್ಪಷ್ಟೀಕರಿಸಿರುವರು: 'ಭಾರತೀಯರ ಸಮ್ಮತಿ ಇಲ್ಲದೆ ಹಿಂದೂದೇಶವನ್ನು ಯುದ್ಧಕ್ಕೆ ಎಳೆದಲ್ಲಿ ಕಾಂಗ್ರೆಸು ತತಕ್ಷಣ ಮಾಡಿ ಅದನ್ನು ವಿರೋಧಿಸುವುದು.' ಆದರೆ ಬ್ರಿಟನ್ನು ಯುರೋಪಿನಲ್ಲಿ ಯುದ್ಧ ಹೂಡುವ ಸಂಭವದಲ್ಲಿ ಭಾರತೀಯರ ಒಪ್ಪಿಗೆಯನ್ನು ಪಡೆಯಲು ಕಾದುಕುಳ್ಳಿರದೆಂಬುದು ಖಂಡಿತವಾದ ವಿಷಯವಾಗಿರುವುದು. ಹೀಗೆ ಯುದ್ಧ ಹೂಡಿದಲ್ಲಿ ಭಾರತೀಯರಿಗೆ ಮನಸ್ಸಿಲ್ಲದಿದ್ದರೂ ಪ್ರತ್ಯಕ್ಷವಾಗಿಯಲ್ಲದಿದ್ದರೂ ಪರೋಕ್ಷವಾಗಿಯಾದರೂ ಯುದ್ಧದಲ್ಲಿ ಭಾಗಿಯಾಗಬೇಕಾಯಿತೇ ಸರಿ. ಯುದ್ಧ ಸಂಭವಿಸುವ ಮೊದಲು ಈಗಾಗಲೇ ಹಿಂದೀ ಸೈನ್ಯವು ಸಾರ್ವಭೌಮ ರಾಜ್ಯದ ಸಲುವಾಗಿ ಹೊರದೇಶಗಳಿಗೆ ಕಳುಹಲ್ಪಟ್ಟಿದೆ. ಈ ವಿಷಯವಾಗಿ ಕಾಂಗ್ರೆಸಿನ ಮುಖಂಡರು ಮಾಡಿದ್ದೇನೆಂದರೆ ಅದನ್ನು ಬಾಯಿಮಾತುಗಳಿಂದ ವಿರೋಧಿಸಿದ್ದು! ಯುದ್ಧ ಸಂಭವವು ಖಂಡಿತವೆಂದು ಮನಗಂಡಿರುವ ಬ್ರಿಟನು ಪ್ರಾಂತೀಯ ಸರಕಾರಗಳು ನಿರುತ್ತರವಾದ ಕೇಂದ್ರ ಸರಕಾರದ ಕೈಗೊಂಬೆಯ ಹಾಗಾಗಿ ವರ್ತಿಸುವಂತೆ ಇಂಡಿಯಾ ಆಕ್ಟಿನ ತಿದ್ದುಪಡಿ ಮಾಡುತ್ತಿರುವರು. ಆದರೆ ಇದನ್ನು ಎಲ್ಲಾ ರೀತಿಗಳಲ್ಲಿಯೂ ಎದುರಾಯಿಸಬೇಕೆಂದು ಖಚಿತಪಡಿಸಿಕೊಂಡ ಕಾಂಗ್ರೆಸು ಮುಖಂಡರು ಬ್ರಿಟನು ಭಾರತದ ಮೇಲೆ ಬಲಾತ್ಕಾರವಾಗಿ ಯುದ್ಧವನ್ನು ಹೊರಿಸಿದಲ್ಲಿ ಅದನ್ನು ಎದುರಾಯಿಸಲು ಯಾವ ರೀತಿಯ ಧೋರಣೆಗಳನ್ನು ಕೈಕೊಳ್ಳಬೇಕೆಂದು ಇನ್ನೂ ನಿಶ್ಚಯಿಸಿರುವುದಿಲ್ಲ.

ಈ ವಿಷಯವಾಗಿ ನೆಹರೂರವರು ಇಷ್ಟನ್ನೆ ಹೇಳಿರುವರು. 'ಇಂಡಿಯಾ ಆಕ್ಟಿನಲ್ಲಿ ಅಂಥಾ ತಿದ್ದುಪಡಿಗಳು ಉಂಟಾದಲ್ಲಿ ಕಾಂಗ್ರೆಸು ಎಲ್ಲಾ ವಿಧಾನಗಳಿಂದಲೂ ಅದನ್ನು ಎದುರಾಯಿಸಿಯೇ ಬಿಡುವುದು' ಕಾಂಗ್ರೆಸು ಪ್ರಾಂತೀಯ ಸರಕಾರಗಳು ಈ ವಿಷಯಗಳಲ್ಲಿ ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಳಿಯು ಕೈಕೊಳ್ಳಬಹುದಾದ ಧೋರಣೆಗಳನ್ನು ಮುಂದೊತ್ತಲು ಸಜ್ಜಾಗಿರಬೇಕೆಂದು ಎಚ್ಚರಿಸಲ್ಪಟ್ಟಿವೆ. ಆದರೆ ಕಾಂಗ್ರೆಸು ಯಾವ ಧೋರಣೆಯನ್ನು ಕೈಕೊಳ್ಳುವುದೆಂದು ಅವುಗಳಿಗೆ ಕೂಡ ಇನ್ನೂ ತಿಳಿದಿರುವುದಿಲ್ಲ. ಇದಲ್ಲದೆ ಕಳೆದ ಎ. ಐ. ಸಿ. ಸಿ. ಸಭೆಯಲ್ಲಿ ಕಾಂಗ್ರೆಸು ಪ್ರಾಂತೀಯ ಸರಕಾರಗಳು ಇಂಡಿಯಾ ಆಕ್ಟಿನಲ್ಲಿ ಉಂಟಾಗುವ ತಿದ್ದುಪಡಿಗಳನ್ನು ಈಗಲೇ ಸಂಘಟಿತವಾಗಿ ನಿಷೇಧಿಸಬೇಕೆಂದು ಶ್ರೀ. ಭಾರದ್ವಾಜರು ತಂದ ತಿದ್ದುಪಡಿಯನ್ನು ಜವಹರಲಾಲ ನೆಹರೂರವರ ಬಿನ್ನಹದ ಮೇರೆಗೆ ಹಿಂದೆ ತೆಗೆದುಕೊಂಡರು. ಇದು ಮುಂದಿನ ಕಾಂಗ್ರೆಸು ಧೋರಣೆಯ ವಿಷಯ ಸಂಶಯವನ್ನುಂಟುಮಾಡುವುದು.

ಇಂತಹ ಸಂಶಯಾಸ್ಪದ ವಾತಾವರಣದಲ್ಲಿ ಕಾಂಗ್ರೆಸು ಮುಖಂಡರ ಅಭಿಮತವನ್ನು ಪರಿಶೀಲಿಸುವಾಗ ಇವುಗಳ ಮೇಲೆ ಬ್ರಿಟಿಷ ಪತ್ರಿಕೆಗಳು ಸಾರಿರುವ ಟೀಕೆಯನ್ನಾದರೂ ಪರಿಶೀಲಿಸಬೇಕಾಗುವುದು. ಮೆಂಚೆಸ್ಟರ್ ಗಾರ್ಡಿಯನ್ ಎಂಬ ಪತ್ರಿಕೆಯು ಕಲ್ಕತ್ತಾದಲ್ಲಾದ ಮಹತ್ತರ ವಿಜಯವನ್ನು ಹೊಗಳುತ್ತಾ, ಬರುವ ವರ್ಷ ಕಾಂಗ್ರೆಸಿಗೆ ಬ್ರಿಟಿಷರೊಡನೆಯೂ, ದೇಶಿ ರಾಜರುಗಳೊಡನೆಯೂ ಮುಸ್ಲಿಮರೊಡನೆಯೂ ಮಹತ್ವದ ಮಾತುಕತೆಗಳು ನಡೆಯಬಹುದಾದ ಸಂಭವವಿರುವುದರಿಂದ ಇದಕ್ಕೆ ಗಾಂಧಿಯವರೇ ಯೋಗ್ಯರೆಂದು' ಸಾರಿರುತ್ತದೆ. ಯುರೋಪ್ನ ಯುದ್ಧದಲ್ಲಿ ಕಾಂಗ್ರೆಸಿನ ಧೋರಣೆಯ ವಿಷಯ ಟೀಕಿಸುತ್ತಾ ಲಂಡನಿನ ಡೈಲಿ ಟೆಲಿಗ್ರಾಫ್ ಪತ್ರಿಕೆಯು 'ಶ್ರೀ. ಬೋಸರು ಅಧಿಕಾರದಲ್ಲಿರುತ್ತಿದ್ದರೆ ಬ್ರಿಟನ್ನಿನ ಸಂಬಂಧವನ್ನೇ ತೊರೆಯಲು ಪ್ರಯತ್ನಿಸುತ್ತಿದ್ದರು. ಆದರೆ ಈಗ ಗಾಂಧಿಜೀಯವರೂ ಬಾಬು ರಾಜೇಂದ್ರ ಪ್ರಸಾದರೂ ತಮಗೆ ತಕ್ಕುದಾದ ಸಮಯವನ್ನು ನಿರೀಕ್ಷಿಸುತ್ತಿರುವರು. ಅದಲ್ಲದೆ ತಟಸ್ಥ ಭಾರತವು ಬ್ರಿಟನಿನಿಂದ ಸ್ವತಂತ್ರವಾದರೂ ಇನ್ನಷ್ಟು ಪೀಡಕವಾದ ಯುರೋಪ್ನ ರಾಷ್ಟ್ರವೊಂದಕ್ಕೆ ಬಲಿ ಬೀಳದಿರದೆಂದು ಅವರಿಗೆ ಮನವರಿಕೆಯಾಗಿರಬೇಕು' ಎಂದು ಘೋಷಿಸಿರುವುದು.

ಇದರಿಂದ ಕಾಂಗ್ರೆಸು ಮುಖಂಡರು ಬ್ರಿಟನಿನೊಡನೆ ಸಂಧಾನ ಮಾಡಿ ತಮ್ಮ ಧ್ಯೇಯವಾದ ಸ್ವಾತಂತ್ರ್ಯವನ್ನು ಪಡೆವೆವೆಂದು ಭಾವಿಸಿ ತಮ್ಮ ಧೋರಣೆಯನ್ನು ಬದಲಾಯಿಸಬಹುದೆಂದು ಭಾಸವಾಗುತ್ತದೆ. ಹಾಗಾದರೆ ಯುದ್ಧ ಸಮಯದಲ್ಲಿ ನಮಗೆ ಇದರಿಂದ ಲಾಭವಾಗಬಹುದೆ? ಅಲ್ಪ ರಿಯಾಯತಿಗಳು ದೊರೆತಲ್ಲಿ ಭಾರತವು ಯುದ್ಧಕ್ಕೆ ತೆರಳದೆಂಬುದು ನಿರ್ವಿವಾದ. ಆದರೆ ಬ್ರಿಟಿಷ ಪತ್ರಿಕೆಗಳ ಟೀಕೆಯ ಅಭಿಪ್ರಾಯವಾದರೂ ಏನಿರಬಹುದು? ಭಾರತೀಯರ ಸಮ್ಮತಿ ವಿನಹ ಹಿಂದುದೇಶವು ಯುದ್ಧದಲ್ಲಿ ಭಾಗಿಯಾಗದು ಎಂದು ಸಾರುತ್ತಿರುವ ಕಾಂಗ್ರೆಸು 'ಶ್ರೀ ಬಾರದ್ವಜರ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವಂತೆ ವಿನಂತಿಸಿದರ ಹುರುಳಾದರೂ ಏನಿರಬಹುದು?

ರಾಜಕೀಯ ರಂಗದಲ್ಲಿ ಸಂಧಾನಗಳು ಅತ್ಯಗತ್ಯ. ಅದರಲ್ಲಿಯೂ ಈಗಲೇ ನಮ್ಮ ಧ್ಯೇಯವನ್ನು ಪಡೆಯಲು ತಕ್ಕಷ್ಟು ಬಲಿಷ್ಠರಾಗದ ನಾವು ಅದನ್ನು ಕೈಕೊಳ್ಳುವುದರಲ್ಲಿ ಆಕ್ಷೇಪಗಳು ಇಲ್ಲ. ಆದರೆ ಪ್ರತೀ ಒಬ್ಬ ಭಾರತೀಯನು ಯಾವ ರೀತಿಯಲ್ಲಿ ಸಂಧಾನವಾಗಬಹುದೆಂಬುದು ಮೊದಲಾಗಿ ತಿಳಿಯುವುದಗತ್ಯ. ಭಾರತವು ನಾಜಿ ಅತ್ಯಾಚಾರವನ್ನು ಸದೆಬಡಿಯಲು ಸಾಮ್ರಾಜ್ಯಶಾಹಿ ಪ್ರಜಾಪ್ರಭುತ್ವಗಳೊಡನೆ ಮುಂದಿನ ಯುದ್ಧದಲ್ಲಿ ಭಾಗಿಯಾದರೆ ಎಷ್ಟರ ಸ್ವಾತಂತ್ರ್ಯವು ಭಾರತಕ್ಕೆ ದೊರೆಯುವುದೆಂದು ಮೊದಲು ತಿಳಿಯುವುದವಶ್ಯಕ. ರಷ್ಯಾದೇಶವು ಬ್ರಿಟಿಷ್, ಫ್ರಾನ್ಸ್ ಮತ್ತು ಸಂಯುಕ್ತ ಅಮೇರಿಕದ ಕಲಸಗಾರರಿಗೆ, ಚೈನಾ, ಜೆಕೊಸ್ಲೊವಾಕಿಯಾ, ಆಲ್ಬೇನಿಯಾ, ಸ್ಪೇನ್, ಇತಿಯೋಪಿಯಾ ದೇಶಗಳನ್ನು ನಾಜಿ ಅತ್ಯಾಚಾರಗಳಿಂದ ರಕ್ಷಿಸಲು ಸಜ್ಜಾಗಬೇಕೆಂದು ಕರೆಕೊಂಡಿದೆ. ಇದನ್ನು ಕೇಳಿ ಭಾರತೀಯರು ಖಂಡಿತವಾಗಿಯೂ ಸಂತೋಷಪಡಬಹುದು. ಆದರೆ ಮೇಲಿನ ರಾಷ್ಟ್ರಗಳಲ್ಲಿ ಹಿಂದೂದೇಶದ ಹೆಸರು ಬಾರದಿರುವುದು ಆಶ್ಚರ್ಯವನ್ನುಂಟುಮಾಡದಿರದು. ಪ್ರಜಾಧಿಪತ್ಯವನ್ನು ಶಾಶ್ವತಗೊಳಿಸಲು ಹವಣಿಸುತ್ತಿರುವ ರಷ್ಯವು ಚೈನಾ ಮತ್ತು ಹಲವು ಸಣ್ಣ ಯುರೋಪ್ನ ರಾಷ್ಟ್ರಗಳ ಸ್ವಾತಂತ್ರ್ಯದ ವಿಷಯ ಅಷ್ಟು ಮಹತ್ವ ಕೊಟ್ಟು ಸಾರುತ್ತಿರುವಾಗ ಹಿಂದೂದೇಶದ ಸ್ವಾತಂತ್ರ್ಯದ ವಿಷಯ ಒಂದು ಮಾತನ್ನಾದರೂ ಎತ್ತದಿದ್ದುದು ನೋಡಿದರೆ ಯುರೋಪಿನ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಮನೋವೃತ್ತಿಯು ತಿಳಿಯುವುದಿಲ್ಲವೇ? ಆದರೆ ಭಾರತೀಯರು ತಮ್ಮ ಧ್ಯೇಯವಾದ ಪೂರ್ಣ ಸ್ವರಾಜ್ಯವನ್ನು ಪಡೆಯಲು ಇಷ್ಟರ ವರೆಗೆ ಹೂಡಿದ ಸಮರವನ್ನೇ ಮುಂದರಿಸಬೇಕಾಗುವುದು.

"ಜಾತಿವಾದದ ಭೂತಕ್ಕೆ ಬಲಿಯಾಗದಿರಿ!"

ಗಡಿನಾಡಿನ ಮಂತ್ರಿಗಳ ಬೋಧನೆ.

—೦೦—

'ಧರ್ಮದ ಸೋಗು ಹಾಕಿಕೊಂಡು ಜನತೆಯನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುವ ಜಾತಿವಾದಿಗಳ ಭೂತಕ್ಕೆ ಬಲಿಯಾಗದಿರಿ' ಎಂದು ಪೇಷಾವರ ಕೆಂಟೋನ್ಮೆಂಟಿನಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಗಡಿನಾಡಿನ ಅರ್ಥಮಂತ್ರಿ ಶ್ರೀ. ದಿವಾನ ಭಂಜುರಾಮ ಗಾಂಧಿಯವರು ಹೇಳಿದರು. 'ಧರ್ಮದ ನಾಶವಾಗುತ್ತಲಿದೆ!' ಎಂದು ಬೊಬ್ಬಿಟ್ಟು ಅಪಪ್ರಚಾರ ಮಾಡುವ ಜನರು ಧರ್ಮದ ಮಿತ್ರರಲ್ಲ, ಶತ್ರುಗಳಾಗಿದ್ದಾರೆ. ದೇಶವು ಸಂಪೂರ್ಣ ಸ್ವತಂತ್ರವಾಗಬೇಕಾದರೆ ಎಲ್ಲಾ ಜಾತಿಗಳೊಳಗೆ ಏಕಮತವು ಅಗತ್ಯ. ಗಡಿನಾಡಿನ ದಕ್ಷಿಣಭಾಗದಲ್ಲಿ ಜಾತಿವಾದಿಗಳು ಗಡಿನಾಡಿನ ಆಚೆಗಿರುವ ಕೆಲವರು ಮಾಡುತ್ತಿರುವ ಸುಲಿಗೆಗಳು ತುಂಬಾ ವಿಷಮ ಸ್ಥಿತಿಯನ್ನು ತಂದೊಡ್ಡಿದೆ. ಇಂಥವರ ಜಾಲದಲ್ಲಿ ಯಾರೂ ಬೀಳಬಾರದು ಎಂದು ಅವರು ಹೇಳಿದರು.

ಕಲ್ಕತ್ತಾ ಮುನ್ಸಿಪಲ್ ಮಸೂದೆ

ಕಲ್ಕತ್ತಾ ಕಾರ್ಪೊರೇಶನಿನಲ್ಲಿ ಮುಸಲ್ಮಾನರಿಗೆ ಇದುವರೆಗೆ ಜಂಟಿ ಪ್ರಾತಿನಿಧ್ಯವಿದ್ದಿತು. ಅದನ್ನು ಬದಲಿಸಿ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡುವ ಕಲ್ಕತ್ತಾ ಮುನ್ಸಿಪಲ ಮಸೂದೆ ಬಂಗಾಳ ಮುಸ್ಲಿಂಲೀಗ ಮಂತ್ರಿಮಂಡಲದಿಂದ ಮುಂತರಲ್ಪಟ್ಟು ಎಸೆಂಬ್ಲಿಯಲ್ಲಿ ಬಹುಮತದಿಂದ ಮಂಜೂರಾಯಿತು. ಕಾಂಗ್ರೆಸ ಪಕ್ಷವು ಈ ಬಿಲ್ಲನ್ನು ಬಹಳ ವಿರೋಧಿಸಿತು. ಆದರೂ ಫಲವಾಗಲಿಲ್ಲ. ಇದರಿಂದ ಕಾರ್ಪೊರೇಶನಿನ ಮುಷ್ಟಿಗೆ ಮುಸ್ಲಿಮರು ಬೇರೆ ಬಿಡಾರ ಕಟ್ಟಿಕೊಳ್ಳಲಿಕ್ಕೆ ಅನುಕೂಲವಾಯಿತು. ಮುಸ್ಲಿಂ ಲೀಗ ಮಂತ್ರಿಮಂಡಲದ ಈ ವರ್ತನೆಯಿಂದ ಬಂಗಾಳದಲ್ಲಿ ಬಹಳ ಅತೃಪ್ತಿಯುಂಟಾಗಿದೆ.

ಲೀಗಿನ ಆತ್ಮವಂಚನೆಯ ಧೋರಣೆ

'ಮುಸಲ್ಮಾನರೆಲ್ಲರೂ ಒಕ್ಕಟ್ಟಾಗಬೇಕು.' ಎಂದು ಮುಸ್ಲಿಂ ಲೀಗು ಒದರುತ್ತಿರುವುದನ್ನು ಸಹಿಸಲಾರದೆ ಮುಜ್ಲಿಸ ಅಹರಾರಲ್ಲಿಂದ ಅಧ್ಯಕ್ಷ ಮೌಲಾನಾ ಹಬಿಬುಲ್ಲ ರಹಮಾನರವರು—ಲೀಗಿಗೆ ಬೇಕಾದ್ದು ಕೇವಲ ಭಾರತೀಯ ಮುಸಲ್ಮಾನರ ಸಂಘಟನೆಯೇ ಅಥವಾ ಜಗತ್ತಿನ ಮುಸಲ್ಮಾನರ ಸಂಘಟನೆಯು ಆಗಬೇಕೆಂದು ಅದು ಹೇಳುತ್ತದೆ?' ಎಂದು ಕೇಳಿರುವರು. ಕೇವಲ ಭಾರತೀಯ ಮುಸಲ್ಮಾನರ ಸಂಘಟನೆಯನ್ನೇ ಅದು ಇಚ್ಛಿಸುವುದಾದರೆ, ಲೀಗಿಗೆ ಪ್ರಪಂಚದ ಬೇರೆ ಮುಸಲ್ಮಾನರ ಪರವಾ ಇಲ್ಲವೆಂದಾಯಿತು. ಹೀಗಿರುತ್ತ ಸ್ವಾರ್ಥಿ ಲೀಗಿನಿಂದ ಮುಸಲ್ಮಾನ ಜಗತ್ತಿನ ಯಾವ ಸೇವೆಯಾಗಬಹುದು? ಇನ್ನು ಮುಸ್ಲಿಂ ಲೀಗು ಜಗತ್ತಿನ ಮುಸಲ್ಮಾನರ ಸಂಘಟನೆಯೂ ಆಗಬೇಕೆನ್ನುತ್ತದಾದರೆ, ಲೀಗಿನ ಅಧಿರಥ ಮಹಾರಥರಾದ ಸರ್ ಸಿಕಂದರ ಹಯಾತ ಖಾನ ಮೊದಲಾದವರು ಹಿಂದಿನ ಯುದ್ಧದಲಿ ಖಲೀಫರಿಗೆ ವಿರುದ್ಧ ಬ್ರಿಟಿಷರಿಗೇಕೆ ಸಹಾಯವನ್ನು ಕೊಟ್ಟ ತುರ್ಕಿ ಸಾಮ್ರಾಜ್ಯವು ಒಡೆದು ಹೋಗಲಿಕ್ಕೆ ಕಾರಣೀಭೂತರಾದರು?—ಅಂದರೆ ಮುಸ್ಲಿಂ ಲೀಗಿನಲ್ಲಿ ತ್ರಿಕರಣ ಶುದ್ಧಿ ಇರುವುದಿಲ್ಲ. ಅದರ ಧೋರಣವು ಆತ್ಮವಂಚನೆಯದ್ದಾಗಿದೆ ಎಂಬ ಅಭಿಪ್ರಾಯವನ್ನು ಕೊಡುವ ಮಾತುಗಳನ್ನು ಅವರು ಆಡಿದ್ದಾರೆ.

ಕುಂಭಕೋಣಾಪುರದ ಸಮೀಪದ ಒಂದು ಹಳ್ಳಿಯ ಹಾಳು ಬಿದ್ದ ಮನೆಯ ಗೋಡೆಯನ್ನು ಕಡಿಯುವಾಗ ೧೦೦ ವರ್ಷ ಹಿಂದಿನ ಚಿನ್ನ ಬೆಳ್ಳಿಯ ನಾಣ್ಯಗಳೇ ತುಂಬಿದ್ದ ಒಂದು ಚರಿಗೆ ಸಿಕ್ಕಿತು. ಪೋಲೀಸ ಮುತ್ತ ಪೆಟಿಸ್ಸು ಪಾತೆಯು ತನಖಿಯಾಗುತ್ತಲಿದೆ!



ಬೆಂಕಿ ಮೇಲಿಟ್ಟರೂ ಬಿಸಿಯಾಗದ ನೀರು!

ಐರಿಷ್ ಜನರ ಪುರಾಣ ಕತೆ!!

ಆಯರ್ಲೆಂಡಿನಲ್ಲಿ ಘೋರ ಎಂಬುದು ಚಿಕ್ಕ ಹಳ್ಳಿ. ಅದರಲ್ಲಿ ಒಂದು ಪುರಾಣ ಕತೆಯ ಸಂಬಂಧವುಳ್ಳ ವಿಚಿತ್ರ ಬಾವಿ ಇದೆ ಇದನ್ನು ಕುದಿಸಿದರೂ ಅದು ಕುದಿಯುವುದಿಲ್ಲವಂತೆ ಮಾತ್ರವಲ್ಲ ಕುದಿಸಲಿಕ್ಕೆ ಪ್ರಯತ್ನಿಸಿದ ಮನುಷ್ಯನು ಆ ಪ್ರಯತ್ನದ ದೆಸೆಯಿಂದ ಏನಾದರೊಂದು ಗಂಡಾಂತರದಲ್ಲಿ ಸಿಲುಕಿಕೊಳ್ಳುವನಂತೆ

ಬಾವಿಯ ಇತಿಹಾಸ

ಈ ವಿಚಿತ್ರ ಬಾವಿಯು ಘೋರ ಹಳ್ಳಿಯ ಇಗರ್ಜಿಯ ಹತ್ತಿರ ಒಂದು ಮರದ ಬುಡದಲ್ಲಿ ಇದೆ ಘಂಟೆ ಘಂಟೆಗೂ ಈ ಬಾವಿಯಿಂದ ನೂರಾರು ಕೊಡ ಪಾನ ನೀರು ಉಕ್ಕಿಬರುತ್ತದೆ ನೋಡಲಿಕ್ಕೆ ಈ ನೀರು ಇತರ ಬಾವಿಗಳ ನೀರಿನಂತೆ ರುಚಿ, ಬಣ್ಣ ಪರಿಮಳ ಯಾವುದೂ ಇಲ್ಲದೆ ಸಾಮಾನ್ಯವಾಗಿರುವುದು ಆದರೆ ಆ ಹಳ್ಳಿಯ ಜನರು ಮಾತ್ರ, ಈ ಬಾವಿಯ ನೀರು ಕುದಿಯುವುದಿಲ್ಲವೆಂದೂ, ಕುದಿಸಲಿಕ್ಕೆ ಪ್ರಯತ್ನಿಸಿದವನು ಆಪತ್ತಿಗೆ ಗುರಿಯಾಗುವನೆಂದೂ ನಂಬಿದ್ದಾರೆ

ಪ್ರತ್ಯಕ್ಷ ಪ್ರಮಾಣ

ಸಂಶಯಿಗಳಿಗೆ ಆ ಹಳ್ಳಿಯ ಜನರು ಪ್ರತ್ಯಕ್ಷ ಪ್ರಮಾಣವನ್ನು ತೋರಿಸುವರು ಅವರು ಅಂಥವರಿಗೆ ಆ ಹಳ್ಳಿಯ ಒಬ್ಬ ಹುಚ್ಚನ ಕಡೆಗೆ ಬೆರಳು ನೀಡುತ್ತಾರೆ ಸ್ವಲ್ಪ ಕಾಲದ ಹಿಂದೆ ಹಳ್ಳಿಯ ಹುಚ್ಚನು ಹುಚ್ಚನಾಗಿರಲಿಲ್ಲ ಪರಂತು ಒಂದು ದಿನ ಅವನು ಬಾವಿಯಿಂದ ಪಾತ್ರ ತುಂಬಾ ನೀರು ತೆಗೆದನು. ಅದನ್ನು ಒಲೆಯ ಮೇಲಿಟ್ಟು ಬೆಂಕಿ ಮಾಡಿದ್ದನು ಆದರೆ ಬೆಂಕಿಯಾಗ ಬೇಕಾದರೆ ಆ ಮನುಷ್ಯನು ಬೋಧತಪ್ಪಿ ಬಿದ್ದು ಬಿಟ್ಟನಂತೆ ಅವನು ಎಚ್ಚರವಾದಾಗ ತನ್ನ ಬುದ್ಧಿ ಸ್ವಾಸ್ಥ್ಯವನ್ನು ಕಳಕೊಂಡ ಹುಚ್ಚನಾಗಿದ್ದನು!

ಪುರಾತನ ಸಂಬಂಧ

ಬಹು ಪುರಾತನ ಕಾಲದಲ್ಲಿ ಸ್ಯಾಂಟ್ ಫೇಚಿನ ಎಂಬ ಐರಿಷ್ ಸಾಧುವು ಅದೇ ಬಾವಿ ಕಟ್ಟೆಯ ಬಳಿಯ ಮರದ ನೆರಳಲ್ಲಿ ಕಾಲಕ್ಷೇಪವನ್ನು ಮಾಡುತಿದ್ದನಂತೆ. ಅವನು ರಾತ್ರಿಕಾಲದಲ್ಲಿ ಆ ಬಾವಿಯ ನೀರನ್ನು ತಲೆ ಮೇಲೆ ಚಿಮುಕಿಸಿಕೊಳ್ಳುತ್ತಾ ದೇವರ ಪ್ರಾರ್ಥನೆ ಮಾಡುತಿದ್ದನು ಆ ಸಾಧುವು ಮಣ್ಣುಪಾಲಾಗಿದ್ದಾಗ್ಯೂ ಅವನ ಆತ್ಮವು ಅದೇ ಸ್ಥಳದಲ್ಲಿ ಸಂಚರಿಸುವುದು. ಬಾವಿಯ ನೀರನ್ನು ಕುದಿಸಿದಾಗ ಸಾಧುವಿನ ಆತ್ಮಕ್ಕೆ ಕಷ್ಟವಾಗುವುದರಿಂದ, ನೀರನ್ನು ಕುದಿಸಲಿಕ್ಕೆ ಪ್ರಯತ್ನಿಸಿದವರಿಗೆ, ಆವನು ಹಾಗೆ ಮಾಡದಂತೆ ಏನಾದರೊಂದು ಆಪತ್ತು ಬರುವದಾಗಿ ಹಳ್ಳಿಗರ ವಿಶ್ವಾಸ!

ರಥದ ಮೇಲೆ ರಾಷ್ಟ್ರಧ್ವಜ

ತುಕಕೋರಿನಿನಲ್ಲಿ ಮೊನ್ನೆ ಬಹುಸಂಖ್ಯಾಕ ಭಕ್ತ ಜನರು ಅಪೇಕ್ಷಿಸಿದ ಮೇರೆಗೆ ರಥಕ್ಕೆ ರಾಷ್ಟ್ರಧ್ವಜವನ್ನು ಕಟ್ಟಿ ರಥೋತ್ಸವವಾಯಿತು ಅದನ್ನು ಆಕ್ಷೇಪಿಸಿದ ಕೆಲವರನ್ನು ಪೋಲೀಸರು ಠಾಣೆಗೆ ಕೊಂಡೊಯ್ದರು

ಹಾಲು ಕರೆಯುವ ಗೂಳಿ

ಪ್ರೊದತ್ತೂರ ಗ್ರಾಮದ ಒಂದು ಗೂಳಿಯು ಅಸ್ವಸ್ಥ ಬಿದ್ದುದನ್ನು ಚಿಕಿತ್ಸೆ ಬಗ್ಗೆ ಅನಂತಪುರದ ಪಶುವೈದ್ಯಾಲಯಕ್ಕೆ ತಂದಿದ್ದರು ವೈದ್ಯರು ಗೂಳಿಯ ಪರೀಕ್ಷೆ ಮಾಡಿದಾಗ, ಅದು ಕೆಚ್ಚಲು ಬಿಟ್ಟಿರುವುದನ್ನೂ ಹಾಲು ಕರೆಯುವುದನ್ನೂ ಕಂಡು ಆಶ್ಚರ್ಯಪಟ್ಟರು ಗೂಳಿಯ ಪ್ರಾಯ ೨೦ ವರ್ಷ ನೋಡಲಿಕ್ಕೆ ಗಟ್ಟಿಮುಟ್ಟಾಗಿದೆ ಹಾಲು ಕರೆಯುವ ಎತ್ತನ್ನು ಕಂಡದ್ದು ಇದೇ ಪ್ರಥಮಬಾರಿಯೆಂದು ಪಶುವೈದ್ಯರುಹೇಳಿದರು ಈ ಅದ್ಭುತ ಗೂಳಿಯನ್ನು ನೋಡಲಿಕ್ಕೆ ಸಾವಿರಾರು ಮಂದಿ ಬರುತ್ತಿರುವರು

ಕೆಲಸದಿಂದ ತೆಗೆದುಹಾಕಿದಕ್ಕೆ ದಾವೆ.

ಶಾಲೆಯ ಮೆನೇಜರು ಅನ್ಯಾಯದಿಂದ ಶಾಲಾ ಮುಖ್ಯೋಪಾಧ್ಯಾಯರನ್ನು ನುಳ್ಳನೆಪವನ್ನು ಕೊಟ್ಟು ಕೆಲಸದಿಂದ ತಳ್ಳಿಹಾಕಿದ್ದಕ್ಕೆ ಚಿತ್ತೂರಿನ ಆ ಶಾಲೆಯ ಉಪಾಧ್ಯಾಯರು ನಷ್ಟದ್ರವ್ಯವನ್ನು ಕೊಡಬೇಕೆಂದು ಮುನ್ಸೀಫ ಕೋರ್ಟಿನಲ್ಲಿ ಶಾಲಾ ಮೆನೇಜರರ ಮೇಲೆ ದಾವೆ ತಂದರು ಆ ಉಪಾಧ್ಯಾಯರನ್ನು ಶಾಲಾ ಮೆನೇಜರರು ಖಾಸಗಿ ದ್ವೇಷವನ್ನಿಟ್ಟುಕೊಂಡು ಅನ್ಯಾಯವಾಗಿ ಕೆಲಸದಿಂದ ತಳ್ಳಿಹಾಕಿದ್ದು ನಿಜವೆಂದು ತೀರ್ಮಾನಿಸಿ, ಉಪಾಧ್ಯಾಯರಿಗೆ ಒಟ್ಟು ಮೂರು ತಿಂಗಳ ಸಂಬಳ ೧೧೧ ರೂಪಾಯಿಗಳು ನಷ್ಟದ್ರವ್ಯ ವ್ಯಾಜ್ಯದ ಖರ್ಚು ಮತ್ತು ಅದರ ಮೇಲೆ ವಸೂಲಿ ತನಕ ಶೇಕಡಾ ೬ರ ಸಲೆ ಬಡ್ಡಿಯ ಡಿಕ್ರಿಯನ್ನು ಕೊಟ್ಟರು

ಇಂಗ್ಲಾಡಿನ ಉಪಾಧ್ಯಾಯರ ನಿರ್ಣಯ

ಇಂಗ್ಲಾಡಿನ ನೇಶನಲ್ ಎಸೋಸಿಯೇಶನ ಆಫ್ ಸ್ಕೂಲ್ ಮಾಸ್ಟರ್ಸ ಎಂಬ ಉಪಾಧ್ಯಾಯ ಸಂಘವು ಸಭೆ ಕೂಡಿ ಇಂದಿನ ಬಾಲಕರು ಮುಂದಿನ ನಾಗರಿಕರಾಗಿ ಸಾಮಾಜಿಕ ರಾಷ್ಟ್ರೀಯ. ಮೊದಲಾದ ಕಾರ್ಯಗಳನ್ನು ಮಾಡಲಿಕ್ಕೆ ಯೋಗ್ಯರೂ ಸಮರ್ಥರೂ ಆಗಬೇಕಾದರೂ, ಅವರು ಜೀವನದಲ್ಲಿ ಸಫಲರಾಗಬೇಕಾದರೂ ಬಾಲಕರ ಶಿಕ್ಷಣಕಾರ್ಯವನ್ನು ಉಪಾಧ್ಯಾಯರೇ ಕೈಕೊಳ್ಳಬೇಕಲ್ಲದೆ, ಉಪಾಧ್ಯಾಯಿನಿಯರಲ್ಲ ಆದ್ದರಿಂದ ಬಾಲಕರ ಶಿಕ್ಷಣದ ಹೊಣೆಗಾರಿಕೆಯನ್ನು ಉಪಾಧ್ಯಾಯಿನಿಯರಿಗೆ ಒಪ್ಪಿಸಬಾರದ ಬಾಲಕರ ಶಾಲೆಗಳಿಗೆ ಉಪಾಧ್ಯಾಯಿನಿಯರನ್ನು ನೇಮಿಸಬಾರದು ಎಂದು ಬೋರ್ಡ ಆಫ ಎಜ್ಯುಕೇಶನನ್ನು ವಿನತಿಸುವ ಠರಾವು ಮಾಡಿಕೊಂಡಿರುವರು

ತುಂಟ ಹುಡುಗಿಗೆ ಬಹುಮಾನ'

ಚೆನ್ನಾಗಿ ಕಲಿಯುವ, ಆಟಪಾಟಗಳಲ್ಲಿ ಪ್ರವೀಣತೆಯನ್ನು ತೋರಿಸಿದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡುವ ಪಾಠಶಾಲೆಗಳು ಹೇರಳವಾಗಿವೆ ಆದರೆ ತುಂಟರಾಗಿದ್ದವರಿಗೂ ಬಹುಮಾನ ಕೊಡುವ ಶಾಲೆಗಳಿವೆ ಎಂಬುದು ಆಶ್ಚರ್ಯವಲ್ಲವೇ! ಮಂಗಳೂರು ಇಂಗ್ಲಂಡಿನಲ್ಲಿ ಅಂಥ ಒಂದು ಶಾಲೆಯಿದೆ ಅದು ಆ ದೇಶದಲ್ಲಿ ಒಬ್ಬದೇ ಒಂದಾಗಿದೆ ಕೆಂಟ ಪರಗಣೆಯ ಮಾರ್ಗೆರಿಟ್ ಎಂಬಲ್ಲಿರುವ ಆ ಶಾಲೆಯ ಹೆಸರು ಸ್ಯಾಂಟ್ ಹಿಲಾರೀಸ್ ಸ್ಕೂಲ್ ಎಂದು. ಮೇಜರ್ ಸಿ ಎಚ್ ಎಸ್ ವ್ಹಿಟ್ಸ್ ಎಂಬವರು ಆ ಶಾಲೆಯ ಅತ್ಯಂತ ತುಂಟ ಹುಡುಗಿಗೆ ಪ್ರತಿ ವರ್ಷ ಒಂದು ಬಹುಮಾನ ಕೊಡಲಿಕ್ಕಾಗಿಯೇ ಹಣ ಇಟ್ಟು ಕೊಟ್ಟಿದ್ದಾರೆ ಇಂದಿನ ತುಂಟರೇ ನಾಳೆಯ ಬಂಟರಾಗುವರೆಂಬುದು ಮಿ ವ್ಹಿಟ್ಸರ ಭಾವನೆ ಆ ಊರ ಶೀನುಕಿ ಎಂ ಸಿಯರ್ಸನ ಎಂಬವಳ ಸ್ಮಾರಕವಾಗಿ ಈ ಬಹುಮಾನವು ಕೊಡಲಾಗುತ್ತದೆ ಸಿಯರ್ಸನ್ನಳು ಬಾಲ್ಯದಲ್ಲಿ ಬಹಳ ತುಂಟಳಾಗಿದ್ದಳು ಶತಮಾನ ಕಾಲ ಬದುಕಿ ಕೆಲವೇ ವರ್ಷಗಳ ಹಿಂದೆ ತೀರಿಕೊಂಡಳು ಬಾಲ್ಯದಲ್ಲಿ ತುಂಟಳಾಗಿದ್ದರೂ ಮತ್ತೆ ಅವಳು ಆ ಊರ ಆದರ್ಶ ರಮಣಿಯಾದಳು ಆದ್ದರಿಂದ ಅವಳ ಪುಣ್ಯ ಸ್ಮಾರಕವಾಗಿ ಈ ಬಹುಮಾನ!

ಭಾಷಣಕರ್ತರಿಗೆ ಸರ್ಟಿಫಿಕೇಟು

ಕಾಂಗ್ರೆಸಿನ ನೇತೃತ್ವದಲ್ಲಿ ನಡೆಯುವ ಸಭೆಗಳಲ್ಲಿ ಮಾತಾಡುವ ಭಾಷಣಕರ್ತರು ಕಾಂಗ್ರೆಸ ಧ್ಯೇಯಾದರ್ಶಗಳಿಗೆ ವಿರೋಧವಾಗಿ ಭಾಷಣ ಕೊಡುವುದನ್ನು ನಿಲ್ಲಿಸುವುದಕ್ಕೋಸ್ಕರ ಕಾಂಗ್ರೆಸ ಕಮಿಟಿಗಳು ಅಂಥ ಭಾಷಣಕರ್ತರಿಗೆ ಸರ್ಟಿಫಿಕೇಟುಗಳನ್ನು ಕೊಡಬೇಕೆಂದೂ, ಸರ್ಟಿಫಿಕೇಟು ಇರುವವರನ್ನು ಮಾತ್ರ ಕಾಂಗ್ರೆಸ ಸಭೆಗಳಲ್ಲಿ ಮಾತನಾಡ ಬಿಡಬೇಕೆಂದೂ ತಿನ್ನವಲ್ಲಿ ಕಾಂಗ್ರೆಸ ಕಮಿಟಿಯಲ್ಲಿ ನಿರ್ಣಯವಾಗಿದೆ.

PUBLIC NOTICE OF DISSOLUTION OF PARTNERSHIPS UNDER SECTION 72 OF THE INDIAN PARTNERSHIP ACT 1932.

Public notice is hereby given that the firm of Machado & Co registered as No. 817 of 1934 and the firm of Lawrence J D'Sa & Sons, registered as No 173 of 1938 (both being partnerships at will and in both of which the only partners were Lawrence J D'Sa and Mr J B Machado)—have been dissolved by consent on 31-12-38 in pursuance of a written notice of dissolution of both the firms under Section 43 of the Indian Partnership Act sent by Mr Lawrence J D'Sa to his partner the said Mr J B Machado

Mangalore 28 4 39

Lawrence J D'Sa
Lately Partner in the now dissolved firms of Lawrence J D Sa & Sons and Machado & Co

ಶ್ರೇಷ್ಠ ತರದ
ದೃಷ್ಟಿ ಚಕ್ರಗಳಿಗೆ

ರಬ್ಬರು ಮೊಹರುಗಳಿಗೆ
ನಾಯಕ್ ಸ್ಟೋರ್ಸ್
ರಥಬೀದಿ, ಮಂಗಳೂರು.

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಒಳಲಿಕ್ಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ ನಿದ್ರಾಹೀನತೆ ಕೃಶ ಮುಂತಾದ ವ್ಯಾಧಿಗಳಿಂದ ಪಾತಿಸಲ್ಪಟ್ಟ ಜನರಿಗೆ ಒಂದು ಹೊಸ ಜೀವನವನ್ನು ನೀಡಿ ... ಶುದ್ಧ ರಕ್ತಾಭಿವೃದ್ಧಿಯನ್ನೂ, ಉತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೇ ದರಿ

ಪಂಡಿತ ಡಿ ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ
ಮದರಾಸು

ಸ್ಟಾಕಿಸ್ಟರು:
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಸದ್ವೈದ್ಯಶಾಲಾ (ರಿಜ) ನಂಜನಗೂಡ.
(ಪ್ರೊಪ್ರೈಟರ್: ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರು)
ಇವರ ಅನುಭವ ಸಿದ್ಧೌಷಧಗಳು

ಕುಟುಂಬ ರಕ್ಷಿಣಿ

ಪ್ರತಿ ಸಂಸಾರಿಕರಿಗೂ, ಅತ್ಯಗತ್ಯವಾದ ೮ ಬೇರೆ ಬೇರೆ ಅಮೋಘ ಔಷಧಗಳನ್ನು ವಿಸ್ತಾರವಾದ ಅನುಪಾನ ಪುಸ್ತಕದೊಡನೆ ಸೇರಿಸಿಡಲ್ಪಟ್ಟ ಅಂದವಾದ ಪೆಟ್ಟಿಗೆ
ಒಂದೇ ಒಂದು ಪೆಟ್ಟಿಗೆಯು ನಿಮ್ಮಲ್ಲಿದ್ದರೆ, ಪೂರ್ಣ ಅನುಭವಶಾಲಿಯಾದ ಓರ್ವ ವೈದ್ಯನು ಮನೆಯಲ್ಲಿ ... ಇದ್ದಂತೆ
ಅಂಚೆವೆಚ್ಚ ಉಚಿತ ಬೆಲೆ: 3-0-0
ನಮ್ಮ ಇತರ ಔಷಧಗಳನ್ನು ಕುರಿತ ವಿಸ್ತೃತ ಕೆಟಲಾಗಿಗೆ ಇಂದೇ ಬರೆಯಿರಿ

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.



★ ಪೋಲೀಸ ಅಧಿಕಾರಿ ಮುಂದಿನ ವಾಯಿಸರಾಯಿಯಾಗುವರೆ? ★

ಹೈದರಾಬಾದಿನಲ್ಲಿ ೧೦೦೦ ಮಂದಿಯ ಕೈದು!

ಹಿಟ್ಲರ ಹಿಂದುಸ್ಥಾನದ ಒಡೆಯನಾದರೆ...?

ದೇಶ-ವಿದೇಶಗಳ ಸಮಾಚಾರ

ಬ್ರಿಟಿಷ ಪ್ರಧಾನ ಮಂತ್ರಿಗಳ ಹೊರದೇಶ ವ್ಯವಹಾರಗಳು ತೀರ ಅತೃಪ್ತಿಕರವಿರುವುದರಿಂದ ಅವರು ತಮ್ಮ ಮಂತ್ರಿಪದವಿಗೆ ರಾಜಿನಾಮೆಯನ್ನೀಯಬೇಕೆಂದು ಬ್ರಿಟನ್ನಿನಲ್ಲಿ ಕೂಗೆದ್ದಿದೆ. ಆದರೆ ಚೆಂಬರಲೇನ ಮಂತ್ರಿಮಂಡಲವು ರಾಜಿನಾಮೆಯಿತ್ತು ಬ್ರಿಟನ್ನಿನಲ್ಲಿ ಹೊಸ ಚುನಾವಣೆಗಳಾದರೆ ಈ ಅಧಿಕಾರಾರೂಢವಾಗಿರುವ ಟೋರಿ ಅನುದಾರ ಪಕ್ಷದವರೇ ಪುನಃ ಬಹುಸಂಖ್ಯಾಕರಾಗಿ ಆರಿಸಿ ಬಂದು ಮಂತ್ರಿಮಂಡಲವನ್ನು ರಚಿಸುವರೆಂದು ಹೇಳಲಿಕ್ಕಾಗುವುದಿಲ್ಲ. ಒಂದು ವೇಳೆ ಸೋಶಿಯಾಲಿಸ್ಟ-ಸಮಾಜವಾದಿಗಳು ಅಧಿಕಾರಕ್ಕೆ ಬರಲೂಬಹುದು. ಆಗ ಬ್ರಿಟನ-ಇಂಡಿಯಾ ನೀತಿಯಲ್ಲಿ ಬದಲಾವಣೆಯಾಗಿ ಈಗಿನ ವಾಯ್ಸರಾಯಿಗಳು ನಿವೃತ್ತರಾದಾಗ ಸೋಶಿಯಾಲಿಸ್ಟರೊಬ್ಬರು ವಾಯ್ಸರಾಯಿಗಳಾಗಲೂ ಬಹುದು. ಇದು ಟೋರಿಗಳಿಗೆ ಸಮ್ಮತವಾಗಿಲ್ಲ. ಆದ್ದರಿಂದ ಚೆಂಬರಲೇನ ಮಂತ್ರಿಮಂಡಲವು ರಾಜಿನಾಮೆಕೊಡುವ ಮೊದಲೇ ಅದು ಟೋರಿಗಳೊಬ್ಬರನ್ನು ಮುಂದಿನ ವಾಯ್ಸರಾಯಿಯನ್ನಾಗನೇಮಿಸಬೇಕೆಂದು ಟೋರಿಗಳ ಸೂಚನೆಯಾಗಿದೆಯಂತೆ. ಲಂಡನಿನ ನಿವೃತ್ತ ಪೋಲೀಸ ಕಮಿಶನರರಾದ ಲೋರ್ಡ ಟ್ರೆಂಚಾರ್ಡರಿಗೆ ಮುಂದಿನ ವಾಯ್ಸರಾಯಿಪಟ್ಟವಾಗಬಹುದೆಂದು ರೇನೋಲ್ಡ್ಸ ವೀಕ್ಲಿ ಎಂಬುದು ಹೇಳುತ್ತದೆ. ಲೋರ್ಡ ಟ್ರೆಂಚಾರ್ಡರು ಕಡು ಅನುದಾರಿಗಳು. ಅವರ ನೇಮಕವಾದರೆ, ಬ್ರಿಟನಿನಲ್ಲಿ ಮುಂದೆ ಯಾರು ಅಧಿಕಾರಕ್ಕೆ ಬಂದರೂ ಹಿಂದುಸ್ಥಾನದಮಟ್ಟಿಗೆ ತಾವು ಸುರಕ್ಷಿತ ಎಂದು ಟೋರಿಗಳು ತಿಳಕೊಂಡ ಹಾಗೆ ಇದೆ. ಮಿ. ಚೇಂಬರಲೇನರು ಪ್ರಧಾನ ಮಂತ್ರಿಪದವಿಗೆ ರಾಜಿನಾಮೆಕೊಟ್ಟರೆ ತಾವು ಅವರ ಪದವಿಗೆ ಬರಬಹುದೆಂಬ ಆಸೆ ಸರ್ ಸಾಮುವೆಲ್ ಹೋರ್ರಿಗಿದ್ದಿತಂತೆ. ಆದರೆ ಬ್ರಿಟಿಷ ಜನತೆಗೆ ಅವರ ಮೇಲೂ ಸಂಪೂರ್ಣ ವಿಶ್ವಾಸವಿರುವುದಿಲ್ಲ. ಆದ್ದರಿಂದ ಈಗವರು ಲಾರ್ಡ ಲಿನ್ಲಿತಗೋರವರ ಅನಂತರ ತಾವು ಭಾರತದ ವಾಯ್ಸರಾಯರಾಗಬೇಕೆಂದು ಇಚ್ಛಿಸುತ್ತಾರಾಗಿಯೂ ಸುದ್ದಿ ಇದೆ.

ಅಖಿಲಭಾರತ ರೈಲ್ವೆ ಫೆಡರೇಶನು.

ಇದರ ವಾರ್ಷಿಕ ಮಹಾಸಭೆಯು ಮದ್ರಾಸಿನಲ್ಲಿ ಶ್ರೀ. ಜಮುನಾದಾಸ ಮೆಹತಾರವರ ಅಧ್ಯಕ್ಷತೆಯಲ್ಲಿ ಕಳೆದ ವಾರ ವಿಜೃಂಭಣೆಯಿಂದ ಜರಗಿತು. ಶ್ರೀ. ವಿ. ವಿ. ಗಿರಿಯವರು ಅಧಿವೇಶನದ ಪ್ರಾರಂಭೋತ್ಸವವನ್ನು ನಡೆಸಿ; ರೈಲ್ವೆ ಕೆಲಸಗಾರರಿಗೆ ಉತ್ತಮವಾದ ಬೋಧನೆಯನ್ನು ಕೊಟ್ಟರು. ಶ್ರೀ. ಯನ್. ಯಮ್. ಜೋಶಿ ಮೊದಲಾದ ಶ್ರಮಜೀವಿಗಳ ಮುಖಂಡರು ಸಭೆಗೆ ದಯಮಾಡಿಸಿದ್ದರು. ಕೆಲಸಗಾರರಿಗೂ ಅಧಿಕಾರಿಗಳಿಗೂ ಉಂಟಾಗುವ ವಿವಾದದ ತೀರ್ಮಾನಕ್ಕೆ ಒಂದು ಬೋರ್ಡ ಆಗಬೇಕು. ರೈಲ್ವೆ ಖಾತೆಯು ಜನತೆಯ ಆಡಳಿತಕ್ಕೆ ಒಳಪಡಬೇಕು ಇತ್ಯಾದಿ ಹಲವು ಪ್ರಾಮುಖ್ಯ ಠರಾವುಗಳು ಮಂಜೂರಾದುವು.

ಹಿಟ್ಲರ್ ಹಿಂದುಸ್ಥಾನದ ಒಡೆಯನಾದರೆ?

ಮುಂದಿನ ಯುದ್ಧದಲ್ಲಿ ಭಾರತವು ಯಾವ ವಿಧದಿಂದಲೂ ಭಾಗತೆಗೆದುಕೊಳ್ಳಕೂಡದೆಂದು ಕಾಂಗ್ರೆಸು ನಿರ್ಧರಿಸಿದೆ. ಪರಂತು ತನಗೆ ಬೇಕಾಗ ಭಾರತವು ಯುದ್ಧದಲ್ಲಿ ಸೇರಿಯೇ ಸೇರುವಂತೆ ಇಂಡಿಯಾ ಆಕ್ಟಿನಲ್ಲಿ ತಿದ್ದುಪಡಿಗಳನ್ನು ಮಾಡಲಿಕ್ಕೆ ಇಂಗ್ಲಾಂಡುಕಟಿಬದ್ಧವಾಗಿದೆ. ಭಾರತವು ಯುದ್ಧದಲ್ಲಿ ಸೇರಲೇಬೇಕಾದೀತೆಹೇಗೆ ಎಂಬ ಕುರಿತು ಕಾಂಗ್ರೆಸಿನ ಮತ್ತು ಬ್ರಿಟಿಷ ಸರಕಾರಗಳೊಳಗೆ ಭಿನ್ನಾಭಿಪ್ರಾಯಗಳಿರುವುದಲ್ಲ, ಭಾರತೀಯರಲ್ಲಿಯೂ ಭಿನ್ನಾಭಿಪ್ರಾಯಗಳಿವೆ. ಬ್ರಿಟನು ತನ್ನ ಸ್ವಾರ್ಥಸಾಧನೆಗಾಗಿ ಲೋಕಯುದ್ಧದಲ್ಲಿ ಸೇರಿಕೊಳ್ಳುವುದಾದರೂ, ಹಿಂದುಸ್ಥಾನಕ್ಕೆ ಬ್ರಿಟನಿನ ಬೆಂಬಲಕ್ಕೆ ನಿಲ್ಲದೆ ಗತ್ಯಂತರವಿಲ್ಲವೆಂದು ಲೀಡರ್ ಮತ್ತು ಇತರ ಕೆಲವು ರಾಷ್ಟ್ರೀಯ ಪತ್ರಿಕೆಗಳು ಹೇಳುತ್ತವೆ. ಯಾಕೆಂದರೆ ಬ್ರಿಟನು ಒಂದು ವೇಳೆ ಯುದ್ಧದಲ್ಲಿ ಸೋತು ತನ್ನ ಪಾಪಫಲವನ್ನು ಉಣ್ಣುವುದಾದರೂ, ಪಾಪಿಯೊಂದಿಗಿದ್ದ ಪುಣ್ಯವಂತರೂ ಒಂದು ಗುಟುಕು ನೀರು ಕುಡಿಯಬೇಕಾದಂತೆ, ಭಾರತಕ್ಕೂ ಬ್ರಿಟನ್ನಿನ ಸೋಲಿನಿಂದ ಅನಿಷ್ಟಫಲವು ತಪ್ಪುವಹಾಗಿಲ್ಲವೆಂದು ಬ್ರಿಟನುಸೋತುಹಿಟ್ಲರಅಥವಾ ಅವನಂಥವರು ಹಿಂದುಸ್ಥಾನದ ಒಡೆಯರಾಗಿಬಿಟ್ಟರೆ ಮತ್ತೆ ಇಲ್ಲಿಯ ಜನರಿಗೆ ನಾಗರಿಕ ಹಕ್ಕು ಸ್ವಾತಂತ್ರ್ಯಗಳು ಯಾವುವು ಇರಲಾರವು. ಭಾರತೀಯರು ಮೂಕಪಶುಗಳಂತೆ ಜೀವಿಸಬೇಕಾಗುವುದು. ಸ್ವಾತಂತ್ರ್ಯವಾದಿಗಳು ಕೊನ್ಸೆಂಟ್ರೇಶನಕ್ಯಾಂಪುಗಳಲ್ಲಿ ನರಕಯಾತನೆಗಳನ್ನು ಅನುಭವಿಸಬೇಕಾದೀತು. ಮೊದಲು ಬಂದ ಕಿವಿಗಿಂತ ಮತ್ತೆ ಬಂದ ಕೋಡಿನ ಉಪದ್ರವ ಹೆಚ್ಚು ಇರುವಂತೆ, ಬ್ರಿಟಿಷರು ಹೋಗಿ ಸರ್ವಾಧಿಕಾರಿಗಳು ಬಂದರೆ ಭಾರತೀಯರ ಜೀವನವು ಎಲ್ಲಾ ದೃಷ್ಟಿಗಳಿಂದ ಅಸಹನೀಯವಾಗುವುದು. ಭಾರತದಲ್ಲಿ ರಾಕ್ಷಸ ರಾಜ್ಯಭಾರವೇ ಸ್ಥಾಪಿತವಾಗಬಹುದು. ಆದ್ದರಿಂದ ಬ್ರಿಟನಿನ ಪ್ರಯೋಜನಕ್ಕಾಗಿಯಾದರೂ ಮುಂದಿನ ಯುದ್ಧದಲ್ಲಿ ಭಾರತವು ಬ್ರಿಟನ್ನಿನ ಬೆಂಬಲಕ್ಕಿರಬೇಕಾಗಿರುತ್ತದೆಂಬುದು ಈ ಪತ್ರಿಕೆಗಳ ಅಭಿಪ್ರಾಯವಾಗಿದೆ.

ಓಧ ಜನಸಮುದಾಯ.

ಪಂಜಾಬ ಸರಕಾರವನ್ನು ಅಲಕ್ಷಿಸಿ, ತಮ್ಮದೇ ಆದ ಕಾಯಿದೆ ಕಾನೂನುಗಳನ್ನು ಕೋರ್ಟು ಕಚೇರಿಗಳನ್ನು ಮಾಡಿಕೊಂಡು ಸ್ವತಂತ್ರ ಜೀವನವನ್ನು ನಡೆಸುವ ಓಧ ಎಂಬ ಒಂದು ವಿಚಿತ್ರ ಜನಸಮುದಾಯವು ಪಂಜಾಬಿನಲ್ಲಿರುವುದು ಇತ್ತೀಚೆಗೆ ಗೊತ್ತಾಗಿರುವುದು. ಓಧರು ಪಂಜಾಬಿನ ಎಲ್ಲ ಕಡೆಗಳಲ್ಲಿ ಹರಡಿರುವರಾದರೂ ಅವರು ಈ ವರೆಗೆ ಪಂಜಾಬ ಸರಕಾರದ ಮತ್ತು ಪೋಲೀಸಿನ ಸಹಾಯ ಆಶ್ರಯಗಳನ್ನು ಇಚ್ಛಿಸಿದುದಾಗಲೀ ಪಡೆದುದಾಗಲೀ ಇಲ್ಲ. ಈ ಎಲ್ಲಾ ಜನರು ಕೇವಲ ತಮ್ಮ ಗುರಿಕಾರರ ಆಜ್ಞೆಗಳಂತೆ ನಡೆದು ಜೀವನಯಾತ್ರೆಯನ್ನು ಮಾಡುತ್ತಿರುವರು. ಆಜ್ಞೋಲ್ಲಂಘನ ಅಥವಾ ಜಾತಿ ಕಟ್ಟುಕಟ್ಟಳೆಗಳನ್ನು ಮೀರಿದವರಿಗೆ ಗುರಿಕಾರರು ೪೦೦೦ ರೂಪಾಯಿ ತನಕ ದಂಡ ವಿಧಿಸುವರು. ಸ್ವತಂತ್ರವಾಗಿ ನಡೆಯುವ ಈ ಜನಸಮುದಾಯದಿಂದ ಪಂಜಾಬ ಸರಕಾರದ ಕಾರ್ಯಸಿ ವಾ ರ ಹಕ್ಕೆ ಭಂಗಬರುತ್ತಿರುವುದರಿಂದ ಅದನ್ನು ಹತೋಟಿಗೆ ತರಲಿಕ್ಕೆ ಈಗ ಆ ಸರಕಾರವು ಯತ್ನಿಸಿದೆ.

ಸಮಗ್ರಭಾರತ ಲೂಟ್‌ಪಟ್ ಸಮಿತಿ.

ಕಾಂಗ್ರೆಸ ಮತ್ತು ಕಾಂಗ್ರೆಸೇತರ ಮಂತ್ರಿಮಂಡಲಗಳ ಖರ್ಚಿನ ಪಟ್ಟಿಯನ್ನು ತಯ್ಯಾರಿಸಿ ಅವುಗಳನ್ನು ಹೋಲಿಸುತ್ತ ಕಾಂಗ್ರೆಸೇತರ ಮಂತ್ರಿಮಂಡಲಗಳನ್ನು ಒಬ್ಬರು ಲೂಟ್‌ಪಾಟ್ ಸಮಿತಿಗಳೆಂದು ಕರೆದಿರುವರು. ಬಂಗಾಳದ ಹಕ್ಕ ಮಂತ್ರಿಮಂಡಲವು ವರ್ಷಕ್ಕೆ ೭ ಲಕ್ಷ ರೂಪಾಯಿಗಳನ್ನು ತನಗಾಗಿ ಖರ್ಚುಮಾಡುತ್ತದೆ. ಬಂಗಾಳ ಎಸೆಂಬ್ಲಿ ಮತ್ತು ಕೌನ್ಸಿಲು ೯ ಲಕ್ಷ ಖರ್ಚಿಗೆ ತೆಗೆದುಕೊಳ್ಳುತ್ತದೆ. ಬಂಗಾಳದಲ್ಲಿ ಪ್ರತಿಯೊಬ್ಬ ಮಂತ್ರಿಯು ವರ್ಷಕ್ಕೆ ೩೭೫೦೦ ರೂಪಾಯಿಗಳನ್ನು ಖರ್ಚಿಗೆ ತೆಗೆದುಕೊಳ್ಳುತ್ತಾನೆ. ಪಂಜಾಬದ ಮಂತ್ರಿ ೪೫೮೦೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾನೆ. ಬಂಗಾಳ ಮತ್ತು ಪಂಜಾಬದ ಮಂತ್ರಿಗಳು ಕಾಂಗ್ರೆಸೇತರ ಮಂತ್ರಿಮಂಡಲಗಳಿಗೆ ಸೇರಿದವರು. ಈಗ ಕಾಂಗ್ರೆಸ ಮಂತ್ರಿಮಂಡಲಗಳು ಖರ್ಚು ಮಾಡುವುದೆಷ್ಟೆಂದು ನೋಡೋಣ. ಮದ್ರಾಸಿನ ಒಬ್ಬೊಬ್ಬ ಮಂತ್ರಿಯ ವಾರ್ಷಿಕ ಖರ್ಚು ೧೩೫೦೦ ರೂ. ಅಸ್ಸಾಮಿನಲ್ಲಿ ೧೧೩೦೦ ರೂ. ಬಿಹಾರದಲ್ಲಿ ೧೪೦೦೦ ರೂ. ಆಗಿದೆ. ಈ ಹಣದಲ್ಲಿ ಅವರ ಸಂಬಳ, ಭತ್ತೆ, ಸಾದಿಲುವಾರು ಇತ್ಯಾದಿ ಎಲ್ಲಾ ಖರ್ಚುಗಳು ಸೇರಿರುತ್ತವೆ. ಹೀಗೆ ನೋಡುವಾಗ ಮದ್ರಾಸ ಮಂತ್ರಿಮಂಡಲದ ಖರ್ಚು ಬಂಗಾಳದಕ್ಕಿಂತ ೩ಪಾಲು, ಪಂಜಾಬದಕ್ಕಿಂತ ೩ಪಾಲಿನಷ್ಟು ಕಡಿಮೆಯಾಗಿದೆ. ಮದ್ರಾಸಿನ ವಿಸ್ತಾರ ಉತ್ಪತ್ತಿ ಮೊದಲಾದುವು ಬಂಗಾಳ ಪಂಜಾಬದಕ್ಕಿಂತ ಹೆಚ್ಚಾಗಿ ಇರುವುದಾದರೂ, ಒಟ್ಟು ಖರ್ಚು ಆ ಪ್ರಾಂತ್ಯಗಳಿಗಿಂತ ಕಡಿಮೆ ಇರುತ್ತದೆ. ಬಿಹಾರದ ಒಟ್ಟು ಖರ್ಚು ಬಂಗಾಳದಕ್ಕಿಂತ ೩ಪಾಲು, ಮದ್ರಾಸಿನದು ೩ಪಾಲು ಇರುತ್ತದೆ. ಆದ್ದರಿಂದ ಬಂಗಾಳ ಪಂಜಾಬ ಮಂತ್ರಿಮಂಡಲಗಳನ್ನು ಲೂಟಪಾಟಿ ಸಮಿತಿಗಳೆಂದು ಕರೆಯುವಲ್ಲಿ ಏನೂ ಆಶ್ಚರ್ಯವಿಲ್ಲ. ಆ ಮಂತ್ರಿಮಂಡಲಗಳು ಕಾಂಗ್ರೆಸ ಮಂಡಲಗಳಷ್ಟು ಜನೋಪಕಾರಿಯಾಗಿ ಪರಿಣಮಿಸದಿರಲಿಕ್ಕೆ ಈ ಖರ್ಚಿನ ಪಟ್ಟಿಯಿಂದಲೇ ಒಂದು ಕಾರಣವನ್ನು ತಿಳಕೊಳ್ಳಬಹುದು. ಸಿಕ್ಕಿದ್ದನ್ನು ತಾನೇ ನುಂಗಿಕೊಳ್ಳುವವನು ಇತರರಿಗಾಗಿ ಎಷ್ಟು ಖರ್ಚು ಮಾಡಿಯಾನು?

ಯುಥಾನಾಸಿಯಾ!

ಲಂಡನಿನಲ್ಲಿ ಯುಥಾನಾಸಿಯಾ ಎಂಬ ಒಂದು ಸಂಘದ ಸ್ಥಾಪನೆಯಾಗಿದೆ. ಜಾರ್ಜ ಬರ್ನಾರ್ಡ ಶಾರವರು ಈ ಸಂಘದ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಆದ್ದರಿಂದ ಸಂಘಕ್ಕೆ ಬಹಳ ಪ್ರಾಮುಖ್ಯತೆ ಬಂದಿದೆ. ಅಸಾಧ್ಯರೋಗಿಗಳನ್ನು ನೋವಿಲ್ಲದಂತೆ ಸಾಯಗೊಳಿಸಿ ಅವರ ನರಕ ಯಾತನೆಗಳನ್ನು ಕೊನೆಮುಟ್ಟಿಸಲಿಕ್ಕೆ ಈಗ ಕಾನೂನಿನ ಸಮ್ಮತಿ ಇರುವುದಿಲ್ಲ. ಎಂಥ ಅಸಾಧ್ಯ ರೋಗಿಯಾದರೂ ತಾನಾಗಿ ಸಾಯಬೇಕಲ್ಲದೆ, ಅವನನ್ನು ಮದ್ದು ಕೊಟ್ಟು ಸಾಯಬಿಡಬಾರದು. ಪರಂತು ಹೀಗೆ ಮದ್ದುಕೊಟ್ಟು ಸಾಯಬಿಡುವುದು ಕಾನೂನಿಗೆ ಒಪ್ಪಿಗೆಯಾಗುವಂತೆ ಚಳವಳಿಸುವುದೇ ಯುಥಾನಾಸಿಯಾ ಸಂಘದ ಒಂದೇ ಒಂದು ಉದ್ದೇಶವಾಗಿದೆ. ಅಸಾಧ್ಯ ರೋಗಿಗಳನ್ನು ಕೊಲ್ಲಿಸಲಿಕ್ಕೆ ಕಾನೂನು ಪರಿವರ್ತನೆಯಾಗಬೇಕಾಗಿದೆಲ್ಲದೆ, ಜೀವ ಬಾರದವರಿಗೆ ಆತ್ಮಘಾತವನ್ನು ಮಾಡಿಕೊಳ್ಳಲಿಕ್ಕೂ ಕಾನೂನು ಸ್ವಾತಂತ್ರ್ಯವನ್ನು ಕೊಡಬೇಕೆಂದು ಬರ್ನಾರ್ಡ ಶಾರು ಹೇಳುವರು. ಈಗ ಕಾನೂನು ಆತ್ಮಘಾತ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸಿ ಬದುಕಿದವರನ್ನು ದಂಡಿಸುತ್ತದೆ. ಆದರೆ ಸತ್ತವರಿಗೆ ಏನೂ ಮಾಡುವುದಿಲ್ಲ. ಬರ್ನಾರ್ಡ ಶಾರು ಇದನ್ನು ಪರಮ ಅನ್ಯಾಯವೆಂದಿರುವರು.

ಪೈಗಂಬರರ ದಿನಾಚರಣೆ.

ಇಷ್ಟು ವರ್ಷ ಇದು ಹಿಂದುಸ್ಥಾನದಲ್ಲಿ ಹಿಂದು ಮುಸಲ್ಮಾನ ಕಲಹ ದಂಗೆಗಳ ಕಾಲವಾಗಿ ಪರಿಣಮಿಸುತ್ತಿತ್ತು. ಪರಂತು ಈ ವರ್ಷ ಹಾಗಾಗದಿದ್ದುದು ದೇಶದ ಭಾಗ್ಯವೆನ್ನಬೇಕು. ಲಕ್ನೋವಿನಲ್ಲಿ ಶಿಯಾ ಸುನ್ನಿಜನಗಳವು ತೀರ್ಮಾನವಾಗದೆ, ರಾಜಿ ಪ್ರಸ್ತಾವವು ಅಲ್ಲಿಂದಲ್ಲಿಗೆ ಬಿದ್ದುಹೋದುದರಿಂದ, ಮಾಧೆಸಹಾಬಾ ಓದುತ್ತ ಸುನ್ನಿ ಮೆರವಣಿಗೆಯು ಹೊರಡುವಾಗ ಸರಕಾರವು ಅಲ್ಲಿ ವಿಶೇಷ ವ್ಯವಸ್ಥೆಯನ್ನು ಮಾಡಬೇಕಾಯಿತು. ಮೆರವಣಿಗೆ ದಾರಿಯನ್ನು ಕೂಡುವ ಇತರ ಮಾರ್ಗಗಳನ್ನು ಮುಳ್ಳುಸರಿಗೆಯ ಬೇಲಿಹಾಕಿ ಅಡ್ಡಕಟ್ಟಬೇಕಾಯಿತು. ಲಕ್ನೋವಿನಲ್ಲಿ ಆ ಸಮಯ ೧೪೪ನೇ ಸೆಕ್ಷನಿನ ನಿರ್ಬಂಧ, ದಂಡನೆ ಪೋಲೀಸರು, ಜಾಸ್ತಿ ಪೋಲೀಸರು, ಮಿಲಿಟರಿ ಎಲ್ಲಾ ಇದ್ದಿತು. ಪರಂತು ಗಲಭೆ ಗಲಾಟೆಗಳೇನೂ ಆಗಲಿಲ್ಲ. ಸರಕಾರಿ ನಿಷೇಧಾಜ್ಞೆಯನ್ನು ಮುರಿದು ತಬರ್ರಾವನ್ನು ಸಾರ್ವಜನಿಕ ಸ್ಥಳಗಳಲ್ಲಿ ಓದಿದ ಶಿಯಾಗಳು ದಸ್ತಗಿರಿಯಾದರು. ಶಿಯಾ ಸುನ್ನಿ ಸತ್ಯಾಗ್ರಹವು ಲಕ್ನೋವಿನಲ್ಲಿ ಯಥಾಪ್ರಕಾರ ನಡೆದಿದೆ. ಕಲ್ಕತ್ತಾ, ಮದ್ರಾಸು, ಬೊಂಬಾಯಿ ಮೊದಲಾದ ಕಡೆಗಳಲ್ಲಿ ಪೈಗಂಬರರ ದಿನಾಚರಣೆಯು ಶಾಂತಿಯಿಂದ ನಡೆಯಿತು.

(೧೫ನೇ ಪುಟವನ್ನು ನೋಡಿರಿ)

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Seson Deposits are accepted at 3½ % per annum.

For Further particulars apply to the Car-Street Branch, Mangalore.

ದೇಶ-ವಿದೇಶಗಳ ಸಮಾಚಾರ

[೧೪ನೇ ಪುಟದಿಂದ ಮುಂದುವರಿದುದು]

ಲಂಡನಿನಿಂದ ಸಮ್ಮತಿ ಕೇಳಲಿಕ್ಕೆ ಪಾರ್ಲಿಮೆಂಟ ಸ್ಥಗಿತ!

ಲೋಕಯುದ್ಧದಲ್ಲಿ ಕೆನಡವು ಬ್ರಿಟನ್ನಿನ ಬೆಂಬಲಕ್ಕಿರುವುದೆಂದು ಕೆನಡದ ಪಾರ್ಲಿಮೆಂಟಿನಲ್ಲಿ ಅಲ್ಲಿಯ ಪ್ರಧಾನ ಮಂತ್ರಿ ಮೆಕೆಂಜಿ ಕಿಂಗರವರು ತಮ್ಮ ಭಾಷಣವನ್ನು ಓದುತ್ತಿದ್ದ ಹಾಗೆ ಅಕಾಸ್ಮತ ೧೫ ಮಿನುಟಗಳ ತನಕ ಗಾಭರಿಯಾದವರಂತೆ ಸ್ತಬ್ಧರಾದರು. ಬರೆದ ಭಾಷಣದಲ್ಲಿ ಕೆಲವು ಹಾಳೆಗಳು ಮಾಯವಾಗಿದ್ದುವಂತೆ. ಹೇಗೆ ಮಾಯವಾದುವೆಂದು ಯಾರಿಗೂ ಹೇಳಲಿಲ್ಲ. ಅವರು ತಮ್ಮ ಕಾರ್ಯಾಲಯಕ್ಕೆ ಹೋಗಿ ೧ ತಾಸು ಕಳೆದಬಳಿಕ ಹಿಂದಿರುಗಿ ಪುನಃ ತಮ್ಮ ಭಾಷಣವನ್ನು ಓದಿ ಮುಗಿಸಿದರು. ಕಳೆದುಹೋದ ಭಾಷಣದ ಅಂಶವನ್ನು ಪುನಃ ತಯ್ಯಾರಿಸಲಿಕ್ಕೆ ೧೦ ೧೫ ಮಿನಿಟುಗಳ ಸಾಕಾಗಿದ್ದುವೆಂದೂ, ಅವರು ಹಿಂತಿರುಗಲಿಕ್ಕೆ ೧ ತಾಸು ತಗೆದುದನ್ನು ನೋಡುವಾಗ ಏನೋ ರಹಸ್ಯವಿದ್ದಿರಬೇಕೆಂದೂ ಕೆಲವರು ಊಹಿಸಿದರು. ಭಾಷಣದ ಕೆಲವು ವಿಷಯಗಳ ಕುರಿತು ಬ್ರಿಟಿಷ್ ಮಂತ್ರಿಮಂಡಲದ ಸಮ್ಮತಿಯನ್ನು ಪಡೆಯುವುದು ಅಗತ್ಯವೆಂದು ಕಂಡುಬಂದುದರಿಂದ ಮೆಕೆಂಜಿ ಕಿಂಗರು ನೆವನ ಮಾಡಿ ಕಾರ್ಯಾಲಯಕ್ಕೆ ಹೋದರೆಂದೂ, ಟೆಲಿಫೋನಿನ ಮೂಲಕ ಲಂಡನಿನಿಂದ ಸಮ್ಮತಿಯನ್ನು ಪಡೆಯಲಿಕ್ಕೆ ೧ ಗಂಟೆಯ ತನಕ ಪಾರ್ಲಿಮೆಂಟನ್ನು ಸ್ಥಗಿತ ಮಾಡಿದರೆಂದೂ ಅಮೇರಿಕನ ಟ್ರ್ಯಾವೆಲ್ಸ್ ಹೇಳುತ್ತದೆ. ರಾಜಕಾರಣಗಳಲ್ಲಿ ಹೀಗಾಗುವುದು ಅಸಂಭವವಲ್ಲ.

೧೦೦೦ ಮಂದಿಯ ಕೈದು

ಹೈದರಾಬಾದ ಸತ್ಯಾಗ್ರಹದ ೫ನೇ ಸರ್ವಾಧಿಕಾರಿಗಳಾದ ಶ್ರೀ ಪಂಡಿತ ವೇದ ವ್ರತವಾನಪ್ರಸ್ಥಿಯವರು ೫೩೪ ಸತ್ಯಾಗ್ರಹಿಗಳನ್ನು ತಗೆದುಕೊಂಡು ಹೈದರಾಬಾದದಲ್ಲಿ ಇದೇ ತಾ ೫-೫-೩೯ರ ದಿನ ಸತ್ಯಾಗ್ರಹ ಮಾಡಿದರು. ಪೋಲೀಸರು ಬಂದು ಎಲ್ಲರನ್ನು ಕೈದ ಮಾಡಿದರು. ಅದೇ ದಿನ ಹೈದರಾಬಾದಿನ ಬೇರೆ ಬೇರೆ ಕೇಂದ್ರಗಳಲ್ಲಿ ಇತರ ೫೦೦ ಮಂದಿ ಸತ್ಯಾಗ್ರಹ ಮಾಡಿ ಜೈಲುಪಾಲಾದರೆಂದೂ ತಿಳಿದು ಬರುತ್ತದೆ. ಶೋಲಾಪುರದಲ್ಲಿ ಮುಸ್ಲಿಂ ಲೀಗ ಪರಿಷತ್ತು ನಡೆಯುತ್ತಿರುವುದರಿಂದ ಸತ್ಯಾಗ್ರಹ ಸಮಿತಿಯು ಕಾರ್ಯಾಲಯವನ್ನು ತಾತ್ಕಾಲಿಕವಾಗಿ ಶೋಲಾಪುರದಿಂದ ಬೇರಾರಿಗೆ ಸ್ಥಳಾಂತರಿಸಿದ್ದಾರೆ.

ಬೈದ ಬಾಯಿಗೆ ಜ್ಯೊದ ಪೆಟ್ಟು

'ಕಾಂಗ್ರೆಸ ಮಂತ್ರಿಗಳು ರಾಜಕೀಯ ನಡತೆಹೀನರು, ಅವರಿಗೆ ಆಡಳಿತದಲ್ಲಿ ಅನುಭವೂ ಇರುವುದಿಲ್ಲ' ಎಂದು ಹಿಂದೊಮ್ಮೆ ಮಧ್ಯಪ್ರಾಂತಗಳ ಗವರ್ನರರಾಗಿದ್ದ ಡಾಕ್ಟರ ರಾಘವೇಂದ್ರರಾಯರು ಅಂದುದಕ್ಕೆ ಉತ್ತರ ಕೊಡುತ್ತ ಶ್ರೀ ಡಿ ಪಿ ಮಿಶ್ರರು—"ಮಧ್ಯಪ್ರಾಂತದಲ್ಲಿ ನಾವು ಯಾವ ಪ್ರಕಾರ ಶಾಸನ ಕಾರ್ಯಗಳನ್ನು ನಡೆಸಿದ್ದೇವೆ ಎಂಬುದನ್ನು ನಮ್ಮ ಮುಂದಿನವರು ಹೇಳಬೇಕು. ಆದರೆ ಡಾಕ್ಟರ ರಾಘವೇಂದ್ರರಾಯರ ಆಡಳಿತವು ಯಾವ ಪ್ರಕಾರದಿತ್ತೆಂಬುದನ್ನು ನಾವೀಗ ಹೇಳಬಲ್ಲೆವು. ಐಸಿಯಸ ಆಫೀಸರುಗಳಿಗೆ ಮೇಜವಾನಿ ಕೊಟ್ಟು ಅವರ ಮುಂದೆ ಮಂಡಿಯೂರಿ ಕೃಪಾಭಿಕ್ಷೆಯನ್ನು ಯೋಚಿಸುವುದು ಶಾಸನ ಕಲೆ ಅಥವಾ ಆಡಳಿತ ವಿಜ್ಞಾನ ಅನ್ನಿಸಿಕೊಳ್ಳುವುದಿಲ್ಲವಾದರೆ, ಡಾಕ್ಟರ ರಾಯರು ಅಧಿಕಾರದಲ್ಲಿದ್ದಾಗ ಅವರು ಶಾಸನ ಕಲೆ ಅಥವಾ ಆಡಳಿತ ವಿಜ್ಞಾನದ ವಿಕಾಸಕ್ಕಾಗಿ ಹೆಚ್ಚಿನದೇನನ್ನೂ ಮಾಡಿಲ್ಲವೆಂದು ಸೆಕ್ರಿಟೆರಿಯೆಟಿನ ಕಾಗದ ಪತ್ರಗಳು ಹೇಳುತ್ತವೆ. ಡಾಕ್ಟರ ರಾಯರ ಫೈಲುಗಳು ಅವರು ನಡತೆಹೀನರಾಗಿದ್ದರೆಂಬುದನ್ನು ಸ್ಪಷ್ಟಮಾಡುತ್ತವೆ. ಜೈಲಿಗೆ ಹೋದ ಕಾರಣದಿಂದಲೇ ಜನರನ್ನು ಏಸೆಂಬ್ಲಿ ಕೌನ್ಸಿಲುಗಳಿಗೆ ಕಳುಹಿಸಿಕೊಡುವುದು ಅಪರಾಧವೆಂದು ಡಾಕ್ಟರ ರಾಯರು ಹೇಳುತ್ತಾರೆ. ಜೈಲಿಗೆ ಹೋದವರು ಕಾಯದೆ ಕೌನ್ಸಿಲುಗಳಿಗೆ ಅಯೋಗ್ಯರಾದರೆ, ಜೈಲಿಗೆ ಕಳುಹಿಸಿದವರು ಅವರಿಗಿಂತಲೂ ಅಯೋಗ್ಯರು. ಆದಕಾರಣ ಜೈಲಿಗೆ ಕಳುಹಿಸಿದವರನ್ನು ಬಿಟ್ಟು ಜನರು ಜೈಲಿಗೆ ಹೋದವರನ್ನೇ ಆರಿಸಬೇಕಾಯಿತು" ಎಂದು ಶ್ರೀ ಮಿಶ್ರರು ಬೈದ ಬಾಯಿಗೆ ಜ್ಯೊದ ಪೆಟ್ಟನ್ನು ಕೊಟ್ಟಿದ್ದಾರೆ.

ಸಮಗ್ರ ಭಾರತ, ಫಿಲ್ಮ್ ಕಾಂಗ್ರೆಸ

ಇದು ಬೊಂಬಾಯಿಯಲ್ಲಿ ಶ್ರೀ ಮಾಸ ಎಸ್. ಸತ್ಯಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಫಿಲ್ಮ ಕೈಗಾರಿಕೆಗೆ ಸಂಬಂಧಪಟ್ಟ ಉಪ ಅಧಿವೇಶನಗಳೂ, ಅದರ ಉನ್ನತಿಗೆ ಬೇಕಾಗಿ ಅನೇಕ ನಿರ್ಣಯಗಳೂ ಆದುವು. ಹಿಂದೂಸ್ಥಾನದಲ್ಲಿ ಫಿಲ್ಮ ಕೈಗಾರಿಕೆಯು ಆರಂಭವಾಗಿ ಇದೇ ೨೫ ವರ್ಷಗಳು ಕಳೆದುವು. ಆದ್ದರಿಂದ ಕಾಂಗ್ರೆಸಿನ ಕಾಲದಲ್ಲೇ ಫಿಲ್ಮ ಕೈಗಾರಿಕೆಯು ರಜತ ಮಹೋತ್ಸವವೂ ವಿಜೃಂಭಣೆಯಿಂದ ನಡೆಯಿತು.

ಓಂ ಮಂಡಲಿ.

ಕರಾಚಿಯ ಈ ಮಂಡಲಿಯ ಕಾರ್ಯಕ್ರಮಗಳು ಸಮಾಜ ಕಟ್ಟುಕಟ್ಟಳೆಗಳಿಗೆ ವಿರೋಧವಾಗಿರುವುದರಿಂದ ಅದರ ಸ್ತ್ರೀಪುರುಷ ಸದಸ್ಯರನ್ನು ಬೇರೆ ಬೇರೆಯಾಗಿರಲಿಕ್ಕೆ ಜಿಲ್ಲಾ ಮೆಜಿಸ್ಟ್ರೇಟರ ಕೊಟ್ಟ ಆಜ್ಞೆಯನ್ನು ತಗೆದುಹಾಕಲಿಕ್ಕಾಗುವುದಿಲ್ಲವೆಂದ ಸಿಂಧ ಜುಡಿಶಿಯಲ್ ಕಮಿಶನರರು ತೀರ್ಮಾನಿಸಿದರು. ಆ ಕುರಿತು ಓಂ ರಾಧೆಯವರು ಮಾಡಿದ ಅರ್ಜಿ ತಿರಸ್ಕರಿಸಲ್ಪಟ್ಟಿದೆ. ದಾದಾಲೇಖರಾಜರ ಮೇಲಿನ ೧೪೪ನೆ ಸೆಕ್ಷನದ ನಿರ್ಬಂಧವು ಹಾಗೆಯೇ ಇದೆ.

ಹೆಂಗಸು ಮಕ್ಕಳ ವ್ಯಾಪಾರ.

ಇದರಿಂದ ಸಮಾಜದಲ್ಲಿ ಅನೀತಿಯು ಹರಡುವುದರಿಂದ ಲೋಕಲ್ ಬೋರ್ಡುಗಳು ಈ ವ್ಯಾಪಾರವನ್ನು ತಡೆಯಲಿಕ್ಕೂ ಅನಾಥ ಸ್ತ್ರೀಯರ ರಕ್ಷಣೆಗೂ ತಮ್ಮ ಸ್ವಂತ ಆದಾಯದಿಂದ ಹಣ ಖರ್ಚುಮಾಡಬಹುದೆಂದೂ, ರಕ್ಷಣಾಲಯಗಳನ್ನು ಇಡಬಹುದೆಂದೂ, ಆ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಸಂಘ ಸಂಸ್ಥೆಗಳಿಗೆ ಸಹಾಯದ್ರವ್ಯ ಕೊಡಬಹುದೆಂದೂ ಮದ್ರಾಸ ಸರಕಾರವು ಸೂಚಿಸಿದೆ.

ಸರಕಾರದ ಇನ್ನೊಂದು ಆಜ್ಞೆ

ತಮ್ಮ ಸ್ವಂತ ಖರ್ಚಿನಿಂದ ಮುನಿಸಿಪಾಲಿಟಿಗಳ ವಿವಿಧ ಭಾಗಗಳನ್ನು ಉತ್ತಮ ಸ್ಥಿತಿಗೆ ತರಲು ಆರ್ಥಿಕ ದೃಷ್ಟಿಯಿಂದ ಅಸಮರ್ಥರಾದ ಮುನ್ಸಿಪಲ್ ಚೇರಮೇನರು ಮುನ್ಸಿಪಾಲಿಟಿಗಳ ಪ್ರೆಸಿಡೆಂಟರು ಮತ್ತು ಇನ್ಸಪೆಕ್ಟರ ಆಫ್ ಲೋಕಲ್ ಬೋರ್ಡುಗಳ ಸಮ್ಮತಿಪಡೆದು ಮುನ್ಸಿಪಲ್ ಆದಾಯದಿಂದ ಪ್ರಯಾಣ ಭತ್ತೆಯನ್ನು ತೆಗೆದುಕೊಳ್ಳಬಹುದಾಗಿ ಮದ್ರಾಸು ಸರಕಾರದ ಇನ್ನೊಂದು ಆಜ್ಞೆಯಾಗಿದೆ. ಮುನಿಸಿಪಲ್ ಆದಾಯವು ಒಂದು ಲಕ್ಷಕ್ಕೆ ಕಡಿಮೆ ಆಗಿದ್ದರೆ ೩೫೦ ರೂ, ಅದನ್ನು ಮೀರಿ ೩ ಲಕ್ಷಕ್ಕೆ ಕಡಿಮೆಯಾದರೆ ೬೦ ರೂ, ಅದನ್ನು ಮೀರಿದ್ದರೆ ೫೦ ರೂಪಾಯಿಗಳ ತಿಂಗಳ ಮೋಟರಕಾರ ಎಲೋವೆನ್ಸು ಅಥವಾ ತಿಂಗಳಿಗೆ ೨೫ ರೂಪಾಯಿಗಳ ಜಟ್ಕ ಎಲೋವೆನ್ಸನ್ನು ಅವರು ಪಡೆಯಬಹುದಾಗಿದೆ.

ಲಾಹೋರಿನಲ್ಲಿ ಸ್ತ್ರೀಪೋಲೀಸರು

ಲಾಹೋರಿನಲ್ಲಿ ನಡೆಯುತ್ತಿರುವ ಕಿಸಾನ ಸತ್ಯಾಗ್ರಹದಲ್ಲಿ ಸ್ತ್ರೀಯರೂ ಭಾಗವಹಿಸುತ್ತಿರುವುದರಿಂದ ಸರಕಾರವು ಅದಕ್ಕಾಗಿ ಅಲ್ಲಿ ಸ್ತ್ರೀ ಪೋಲೀಸರನ್ನು ನೇಮಿಸಿದೆ. ಇವರಿಗೆ ಯಾವ ತರಬೇತಿಯೂ ಇಲ್ಲ. ತಮ್ಮ ಸದಾ ಪೋಷಾಕಿನಲ್ಲೇ ಇರುವರು. ಸತ್ಯಾಗ್ರಹವು ನಿಂತೊಡನೆ ಈ ದಳದ ವಿಸರ್ಜನೆಯಾಗುವುದು. ಸತ್ಯಾಗ್ರಹವು ನಡೆಯುತ್ತಾ ಇದೆ.

ಧೂಳು ಮತ್ತು ಕ್ರಿಮಿಗಳು ನಿಮ್ಮ ಶ್ವಾಸಕೋಶಗಳನ್ನು ಸೋಂಕುತ್ತವೆ

ಧೂಳಿನಲ್ಲಿ ಮಿಲಿಯಾಂತರ ರೋಗಾಣುಗಳು ಇರುತ್ತವೆ. ಇದು ನಿಮ್ಮ ಗಂಟಲು ಮತ್ತು ಶ್ವಾಸಕೋಶಗಳನ್ನು ಪ್ರವೇಶಿಸುತ್ತದೆ. ಇದರ ಫಲವಾಗಿ ಇನ್‌ಫ್ಲುಯೆಂಜಾ, ಕೆಮ್ಮು ಮೊದಲಾದ್ದು ಪ್ರಾರಂಭವಾಗಿ ನಿಮ್ಮ ಸ್ನೇಹಿತರಲ್ಲಿಯೂ ಪಸರಿಸುತ್ತದೆ. ಆದ್ದರಿಂದ ವಿಷಹಾರಿ ಶ್ವಾಸನೀಯ ಪೆಪ್ಸ ಗುಳಿಗೆಗಳನ್ನು ಸೇವಿಸಿ ನಿಮ್ಮನ್ನು ರಕ್ಷಿಸಿಕೊಳ್ಳಿರಿ.

ಪೆಪ್ಸ ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಹೊಕ್ಕುತ್ತವೆ. ಈ ರೀತಿಯಿಂದ ಪೆಪ್ಸ ರೋಗಾಣುಗಳನ್ನು ನಾಶಮಾಡಿ ಬಾತುಕೊಂಡ ಶ್ವಾಸಕೋಶದ ಪರೆಯನ್ನು ಆರೋಗ್ಯದಲ್ಲಿರಿಸಿ ಇತರ ಯಾವತ್ತೂ ಬ್ರೋಂಕಾಯ್ಲ್ ರೋಗಗಳಿಂದ ರಕ್ಷಿಸುತ್ತದೆ. ಎಲ್ಲಾ ಔಷಧ ವ್ಯಾಪಾರಿಗಳು ಪೆಪ್ಸನ್ನು ೮೩ ೧ರಂತೆ ಮಾರುತ್ತಾರೆ.

ಏಜೆಂಟ್ಸ: ಮೆಸರ್ಸ ದಾಧಾ ಮತ್ತು ಕಂಪೆನಿ, ಪಾರ್ಕಟೌನ್ ಮದ್ರಾಸ.

ಯಾವಾಗಲೂ ಪೆಪ್ಸನ್ನೇ ಉಪಯೋಗಿಸಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು

ಒಂದು ಬಾರಿ ಪರೀಕ್ಷಿಸಿರಿ!

ಸುಪ್ರಾಜನರಿಗೆ ನಮ್ಮ "ಸಾರಥಿ ನಸ್ಯ"ವನ್ನು ಕೊಂಡ ಕೂಡಲೇ ಅದ ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕದಾಗಿದೆ. ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು

ನಂ ೧ ಸಾರಥಿ ನಸ್ಯ 1 ಪೌಂಡಿಗೆ ರೂ 1-2-0 ನವಿಲಿನ ಮಾರ್ಕ ಸಾರಥಿ ನಸ್ಯ 1 ಪೌಂಡಿಗೆ ರೂ 1 0-0

ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ

ಏಜೆಂಟರು ಬೇಕಾಗಿದ್ದಾರೆ

ವಿಳಾಸ:—
ಎ ಪಿ ಸಾರಥಿ
ಮೆನ್ಯುಫೆಕ್ಚರರ್ಸ ಆಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸ

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ
ವಿಶೇಷ ವಾಹಿಗೆ ಬರೆಯಿ.

ಪಮ್ಮಿ ವೆಂಕಟ್ರಮಣಯ್ಯ
ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ,
ಮೈಲಾಪುರ, ಮದ್ರಾಸು

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಗ್ರಿಗಳು ನಮ್ಮಲ್ಲಿ ದೊರಕುತ್ತವೆ

Allamgir Leather Store,
28 Meachua Bazar St. CALCUTTA

ಸರದಾರ ಭವನ. Sirdar Bhavan
ಫೆಲಿಕ್ಸ್‌ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂದಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೋಣೆಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸ ಬಂಥವುಗಳೇ.

Propritor— H. R Rao,
Bangalore Guit Emporium Madras.

ಹಳ್ಳಿಯ ಹತ್ತು ಸಮಸ್ತರು

[ಹಿಂದಿನ ಸಂಚಿಕೆಯಿಂದ ಮುಂದುವರಿದುದು]

ಯನ್ನೆ ಅವರು ಹೇಳದೆ ತಮ್ಮ ಹಣದ ಪಿಟಲು ಬಿಚ್ಚಿಸಿದರು. ಮರುವರ್ಷ ಬಂದಿತು ಗೇಣಿ ವಸೂಲಿಗೆ ಹೋದರೆ ಪಾಸ್ಕು ಹೇಳಿದನಂತೆ—'ಎಲ್ಲಾ ಗೇಣಿ ತಮಗೇ ಕೊಡಬೇಕು ಎಂದು ಜುವಾಂ ಸೋಜರ ತಾಕೀತಾಗಿದೆ' ಎಂದು. ಒಕ್ಕಲಿಗರಿಗೆ ಚಳಿ ಶುರುವಾಯಿತು. ಅವರು ದೂರನ್ನು ಒಯ್ಯಲು ಮುಂದಾದರು. ಯಾರೊ ಡನೆ ಹೇಳಲಿ? ಒಂದೊ ನಾಗಯ್ಯನಿಗೆ ಹೇಳ ಬೇಕು. ಇಲ್ಲವಾದರೆ ಹೊಸತಾಗಿ ಬಂದಿರುವ ಕೊಯಿಲೊ ಪಾದ್ರಿಗಳಿಗೆ ತಿಳಿಸಬೇಕು ಉಪಾಯ ಮಾಡುವೆನೆಂದು ಅವರು ತಮ್ಮ ದೂರನ್ನು ಪಾದ್ರಿಗಳ ಬಳಿಗೇನೆ ಒಯ್ದರು ಪಾದ್ರಿಗಳು 'ಈ ಎಲ್ಲಾ ರಗಳೆ ನಿಮಗೆ ಬೇಡ, ನೀವು ಹೇಗೂ ಜುವಾಂ ಸೋಜರಿಗೆ ಹಣ ಕೊಡುವುದಕ್ಕಿದೆ, ಆಸ್ತಿಯನ್ನು ಅವರಿಗೆ ಮಾರಿ ಬಿಡಿ' ಎಂದರು. ಒಕ್ಕಲಾಳುಗಳು ತಲೆಯ ಮೇಲೆ ಕೈಯಿರಿಸಿಕೊಂಡು ಮರಳಿದರು ಒಕ್ಕಲಿನ ಹಿಂದೆ ಅವರಿಗೆ ಕೊಟ್ಟ ಕೋಣಗಳು, ಅದರ ಹಿಂದೆ ಅವರಿಗೆ ಕೊಟ್ಟ ಗದ್ದೆಗಳು ಜುವಾಂ ಸಾಲಕ್ಕೆ ಹೊರಟು ಹೋದುವು

ಜುವಾಂ ಸೋಜರೆಂದರೆ ತಲೆಯ ಮೇಲೆ ಕುಳ್ಳಿರಿಸಿಕೊಂಡ ಒಕ್ಕಲಾಳರು ಈಗ ಅವರ ಪ್ರತಿ ಕಕ್ಷಿಗಳಾದರು ಮುಂದೆ ಒಂದೆರಡು ವರ್ಷ ದಲ್ಲಿ ಬೇರೊಂದು ರಣಾಗ್ರವಾಯಿತು ಅದ ರಲ್ಲೂ ಜುವಾಂ ಸೋಜರ ಹೆಸರು ಮುಂದೆ ಬಂದಿತು ಅದು ನಮ್ಮ ಊರಿನ ಗುಡ್ಡೆ ದರ್ಖಾಸ್ತಿನ ವಿಚಾರ ಜುವಾಂ ಸೋಜರ ನಮ್ಮ ಊರಿನ ಗುಡ್ಡೆಯಲ್ಲಿ ೧೫ ಎಕ್ರೆ ಭೂಮಿ ತಮಗೆ ದರ್ಖಾಸ್ತಿಗೆ ಸಿಗಲೆಂದು ಕೇಳಿದರು ಈ ಪ್ರಸ್ತಾಪ ನೇರಾಗಿ ಕಂದರೆ ಊರಲ್ಲಿ ಗದ್ದಲ ವಾಧೀತೆಂದು ಅವರು ಆಗಿನ ಮಣೆಗಾರ ಕಿಸ್ತು ಸೋಜರ ಮುಖಾಂತರ ಅರ್ಜಿ 'ದವಾಯಿಸಿ' ದರು ಅರ್ಜಿ ತಹಶಿಲ್ದಾರರಲ್ಲಿಗೆ ಹೋಯಿತು ಅಲ್ಲಿಂದ ತಿರುಗಿ ಶ್ಯಾನುಭಾಗರಿಗೆ ತನಿಖೆಗೆ ಬಂದಿತು. ಅರ್ಜಿ ಹೊತ್ತಿರುವ ಆಶೀರ್ವಾದಗಳ ದೆಸೆಯಿಂದ ಶ್ಯಾನುಭಾಗ ಶಂಕರರಾಯರಿಗೆ—ಆಚೆಯೋ ಈಚೆಯೋ—ಎನ್ನುವ ಸಂಶಯ ಬಂದಿತು ಅವರು ಎದುರಿಗೆ ಕಾಣಿಸ್ವೇನೆ ಎಂದು ತೋರಿಸದೆ ಸಂಗತಿಯನ್ನು ನಾಗಯ್ಯ ಸೆಟ್ಟರಿಗೂ, ಒಕ್ಕಲಾಳುಗಳು ಮೊದಲಾದವರಿಗೂ ತಿಳಿಸಿ ದರು ಕೂಡಲೆ ನಾಲ್ಕಾರು ಆಕ್ಷೇಪಕ ಅರ್ಜಿಗಳು, ಕೆಲವು ತಕ್ಕ ಅರ್ಜಿಗಳು ಹೊರಟುವು 'ಗೋಚರಾವಿನ ಸ್ಥಳ ಅದು'—ಎಂದು ಊರವರ ಕಡೆ ಬಂದಿತು ಒಂದು ವರ್ಷ ಕಾಲ ಅರ್ಜಿ ನಿದ್ರಿಸಿದಂತಾಗಿ ಎಲ್ಲರಿಗೂ ಸಂತೋಷವಾಯಿತು

ಮುಂದಿನ ವರ್ಷ ಮಳೆಗಾಲದಲ್ಲಿ ಜುವಾಂ ಸೋಜರು ಸ್ಥಳಕ್ಕೆ ಅಗಳು ಹಾಕಿದರು ಗೇರು ಬೀಜದ ಸಸಿಗಳನ್ನು ನೆಟ್ಟರು ತಿರುಗಿ ಊರವರ ತಕರಾರು ಹೋಯಿತು 'ಜುವಾಂ ಸೋಜರಿಗೆ ಅದು ಸಿಗಲೇ ಕೂಡದು, ಕೊಡುವುದಾದರೆ ಸುತ್ತ ತಮ್ಮೆಲ್ಲರಿಗೆ ಒಗ್ಗು ಸ್ಥಳ ಇರುವುದರಿಂದ ಅದು ತಮಗೇ ಸಲಕಕ್ಕದು' ಎಂದು ವಾದ ಹೂಡಿದರು ಈ ತಕರಾರುಗಳು ನಡೆಯುತ್ತಿರುವಾಗಲೇ ೮ ಜಮೀನಿನಲ್ಲಿ ದರೆಗಳ ಮೇಲೆ ದರೆಗಳೂ, ಗುಡಿಗಳ ಮೇಲೆ ಗುಡಿಗಳೂ ಆದುವು 'ಡಿಪ್ರೆಸ್ಡ್ ಜನರಿಗೆ ಸದರಿ ಸ್ಥಳಗಳು ಕೊಡಲ್ಪಟ್ಟಿವೆ' ಎಂದು ಪ್ರಕಟವಾಯಿತು. ಊರವರ ಅರ್ಜಿಗಳು ತಿರುಗಿ ವ್ಯರ್ಥವಾದುವು.

ಮುಂದಿನ ವರ್ಷದೊಳಗೆ ಅಲ್ಲಿ ಬಾವಿ, ಬಾಳೆ ತೆಂಗುಗಳೆಲ್ಲ ಮೂಡಿದುವು. ಹತ್ತೆಂಟು ಆದಿದ್ರಾವಿಡ ಕ್ರಿಶ್ಚನರ ಮನೆಗಳು ಅಲ್ಲಿ ಕಾಣಿಸಿಕೊಂಡುವು ಅದರ ಮರುವರ್ಷ ಬಾಧಾ ಸಣ್ಣ ಇಗರ್ಜಿ ಕಾಣಿಸಿಕೊಂಡಿತು ಈಗ ಜಾಗ ಜುವಾಂ ಸೋಜರಿಗೆ ಹರಿಜನರಿಂದ ಆದವು, ಜುವಾಂ ಸೋಜರಿಂದ ಇಗರ್ಜಿಗೆ ಗೇಣಿ.

ಅಂತು ವಾಸ್ತವದಲ್ಲಿ ಯಾವತ್ತು ಪಾರುಪತ್ಯ ಹೊಸತಾಗಿ ಬಂದ ಪಾದ್ರಿಗಳಾದ ರೆವರೆಂಡ್ ಕೊಯಿಲೋ ಇವರದು

ಕೊಯಿಲೋ ಪಾದ್ರಿಗಳು ಬರುವ ತನಕ ಜುವಾಂ ಸೋಜರು ಊರವರ ಪಂಗಡಕ್ಕೆ ಇದ್ದರು, ಕೊನೆಗೆ ಅವರ ಪಂಗಡ ಬೇರೆಯಾಯಿತು—ಪಾಸ್ಕು, ಬಸಪ್ಪರೆಲ್ಲ ಬಂದ ಬಳಿಕ ಅವರೀಗ ಸ್ವತಃ ಧನಿಯಾಗಿದ್ದಾರೆ. ಬಹಿರಂಗವಾಗಿ 'ತನಗೆ ಯಾರ ಮುಲಾಜೂ ಇಲ್ಲ' ಎನ್ನುತಿದ್ದಾರೆ. ಇವತ್ತು ಒಂದು ಮನೆ ಇದ್ದುದು ಹೋಗಿ ಮೂವತ್ತಕ್ಕೆ ಕಡಿಮೆ ಇಲ್ಲದಷ್ಟು ಕ್ರಿಶ್ಚನರ ಗುಡಿಸಲುಗಳಾಗಿವೆ. ಹಾಗಾಗಿ ಕೊಯಿಲೋ ಪಾದ್ರಿಗಳು ನಮ್ಮ ಊರಿಗೆ ಬಂದು ಅವರ ಧರ್ಮವನ್ನು ಕಾಯುತ್ತಿದ್ದಾರೆ ಹಾಗಿರಲು ಜುವಾಂ ಸೋಜರ ಪಂಗಡ ಕೊಯಿಲೋ ಪಾದ್ರಿಗಳ ಪಂಗಡವೆಂದಾಯಿತು

ಕೊಯಿಲೋ ಪಾದ್ರಿಗಳೂ ಸಾಹಸಿಗಳು ಅವರು ನಮ್ಮೂರಿಗೆ ಬಂದು ಬರಿಯ ನಾಲ್ಕಾರು ವರ್ಷದಲ್ಲಿ ಭಾರೀ ಇಗರ್ಜಿಯಾಯಿತು. ಪೂರ್ವದ ಡಿಪ್ರೆಸ್ಡ್ ದರ್ಖಾಸ್ತುಗಳೆಲ್ಲ, ತೆಂಗು ಮಾವು, ಹಲಸು, ಗೇರುಮರಗಳ ತೋಟವಾಗಿದೆ. ಯಾವಾಗಲೂ ಗುಡ್ಡೆ ಅಗೆದಗೆದು ಗದ್ದೆಗಳಾಗುತ್ತಿವೆ. 'ಮೂರು ವರ್ಷದ ಮಗುವೂ ಅಲ್ಲಿ ಮಣ್ಣು ಹೊತ್ತು ಗದ್ದೆ ಮಾಡುತ್ತಿದೆ' ಎಂದು ಒಕ್ಕಲಾಳರು ಹೇಳುತ್ತಾರೆ ಅಲ್ಲದೆ ಕೊಯಿಲೋ ಪಾದ್ರಿಗಳು ಒಳ್ಳೆ ಹಣದ ವಹಿವಾಟು ಬಲ್ಲವರು ಊರಿನ ಯಾವ ಆಸ್ತಿಯೂ ಹಾಳುಬೀಳದಂತೆ, ನೋಡುತ್ತಿದ್ದಾರೆ ಅವರ

> **ಬರುವ ವಾರ**
>
> **ಮೂಸೆ ಬ್ಯಾರಿಗಳು**
>
> ೧೪.
>
> ಜುವಾಂ ಸೋಜರ ಎದುರಿಗೆ ನಿಲ್ಲುವುದಕ್ಕೆ
> ಮೂಸೆಬ್ಯಾರಿಗಳಿಗೆ ದಾಕ್ಷಿಣ್ಯವೂ ಇಲ್ಲ ಭೀತಿಯೂ ಇಲ್ಲ
> ಮೂಸೆ ಬ್ಯಾರಿಗಳ ವ್ಯಾಪಾರ ಹೊಗೆಹೋಗ್ಸವನು
> ಅದನ್ನು ಜುವಾಂ ಸೋಜರು ತಿಂದರೂ
> ಅಡ್ಡಿಯಿಲ್ಲ ಬಿಟ್ಟರೂ ಅಡ್ಡಿಯಿಲ್ಲ
> ಜುವಾಂ ಸೋಜರಿಗೆ ಆಗದವರು ಮೂಸೆ ಬ್ಯಾರಿಗಳಿಗೆ ಬೇಕು
> ಆದರೆ ನಾಗಯ್ಯ ಬ್ಯಾರಿ ಮಟ್ಟಿಗೆ ಅವರು ಗಟ್ಟಿ ವಿರೋಧಿ
>
> ಶ್ರೀ ಕಾರಂತರ
>
> **ಹಳ್ಳಿಯ 10 ಸಮಸ್ತರು**
>
> ಯಾವತ್ತು ಗ್ರಾಮ, ಧರ್ಮ, ದೇವತೆಗಳೇ!

ಅಣ್ಣನ ಹೆಸರಲ್ಲಿ ಹಲವು ಜಮೀನನ್ನು ಕೊಂಡು ಕೊಂಡರು ಅಲ್ಲದೆ ನಮ್ಮ ಊರಲ್ಲಿ ಸಾಮಾನ್ಯರಾದವರು ಅವರಿಂದ ಸಾಲಪಡೆಯದೆ ಇಲ್ಲ ಸಾಲ ಬೇಕಾದವರು ಜುವಾಂ ಸೋಜರ ಮುಖಾಂತರವೇ ಪಾದ್ರಿಗಳಲ್ಲಿಗೆ ಹೋಗುತ್ತಾರೆ—ಎಂದ ಮೇಲೆ ಜುವಾಂ ಸೋಜರ ಭರಾಮು ಊರಲ್ಲಿ ತನ್ನಂತೆ ಹೆಚ್ಚಲಿಲ್ಲವೆ?

ಈಗ ಜುವಾಮರು ಜವುಳಿ ಅಂಗಡಿ ತೆರೆದಿದ್ದಾರೆ ಅಂಗಡಿ ಜಗುಲಿಯ ಮೇಲೆ ಹಗಲು ರಾತ್ರಿ ಸಿಂಗರು ಮೆಶಿನುಗಳು ಕಟಿಕಟಿ ಅನ್ನುತ್ತಲೇ ಇವೆ ಆದರೆ ಅದಾದರೂ ಆದೀತು, ಅವರ ತಾಮ್ರದಂಗಡಿಯ 'ಕೊಟಂ ಕೊಟ' ಬೇಡವಂತೆ ಜುವಾಮರ ವಿಚಾರ ಕೇಳಲು ಕರೆಕಟ್ಟೆ ನರಸಿಂಹಯ್ಯನನ್ನು ಮಾತನಾಡಿಸಬೇಕು ನರಸಿಂಹಯ್ಯನಿಗೆ ಅವರ ಮೇಲೆ ಸಾಧಾರಣ ಸಿಟ್ಟಲ್ಲ ಮೊದಲಿನ ಸಿಟ್ಟು ಮುದರನನ್ನು ತಲೆಬೋಳಿಸಲ ಕರೆದುದಕ್ಕೆ' ಮುದರನನ್ನು ಕರೆದು 'ನೋಡು ಮುದಾರ, ನಮ್ಮ ಇಗರ್ಜಿಗೆ ಬಾ ನಮ್ಮ ಗುರುಗಳು ಎಷ್ಟು ಜನ ನಿಮ್ಮವರನ್ನು ಉದ್ಧಾರಮಾಡಿದರು ನೋಡು ಎಲ್ಲರಿಗೆ ಈಗೊಂದೊಂದು ಸ್ವಂತ ಮನೆಯಿದೆ ಕೆಲಸಕ್ಕೆ ಯಾರೂ ಧಣಿಯಲ್ಲಿಗೆ ಹೋಗಬೇಕಾಗಿಲ್ಲ' ಎಂದು ಬೋಧಿಸತೊಡಗಿದರು ಅವನ ಮನಸ್ಸು ತಿರುಗುತ್ತಲಿತ್ತು. ಆದರೆ ಸಂಗತಿ ನರಸಿಂಹಯ್ಯನಿಗೆ ತಿಳಿಯಿತು ಅವನು ಓಡಿಬಂದು 'ಮುದರ, ಸಾಯುವ ಕಾಲಕ್ಕೆ ನೊಣ ತಿಂದು ಜಾತಿ ಬಿಟ್ಟ ಎಂಬ ಹಾಗೆ ಮಾಡುತ್ತೀಯಾ! ನಿನ್ನ ಜಾಗಕ್ಕೆ ಗೇಣಿಯನ್ನು ನಾನು ಕೇಳಿದ್ದೇನೆಯೋ? ಈಗ ನಿನ್ನ ಇಷ್ಟಬಂದಂತೆ ಇದ್ದೀ ನೀನು. ಇಗರ್ಜಿಗೆ ಹೋದ ಚೌಡುವಿನ ಕಥೆಯೇನಾಯಿತು? ಅವರು ಎರಡಾನೆ ಕೊಟ್ಟರೂ ಸಂಬಳವೇ, ಕೊಡದಿದ್ದರೂ ಸಂಬಳವೇ! ಕೊನೆಗೆ ಚೌಡು ಗಟ್ಟಕ್ಕೆ ಓಡಿದ್ದು ಗೊತ್ತಿಲ್ಲವೆ ನಿನಗೆ?'—ಎಂದನು ಚೌಡು ಪಾದ್ರಿವಾತಕ್ಕೆ ಸೇರಿ, ಇಗರ್ಜಿ ಸುತ್ತಲಿನ ಗುಡ್ಡ ಕಡಿದು ಇಳಿಸಿ ಇಳಿಸಿ ದಣಿದವ ಈಗ ಅವನ ಟಿಕಾಣಿಯೇ ಕಾಣೆ ಆದರೆ ಮುದರನಿಗೆ 'ನಿನ್ನ ದೇವರನ್ನು ನಂಬಿದರೆ ಸ್ವರ್ಗವಿಲ್ಲ' ಎಂದು ಜುವಾಂ ಸೋಜರು ಖಾತ್ರಿಪಡಿಸಿ ಹೇಳಿದ್ದಾರೆ ಅವರ ಉತ್ಸವಗಳನ್ನು ಕಂಡು ಅವನು ಮೆಚ್ಚಿದ್ದಾನೆ. ಸಾಲದುದಕ್ಕೆ 'ಇಲ್ಲಿ ಹೊಲೆಯನಾಗಿಯೇ ಬಿದ್ದಿರಬೇಕು—' ಎಂಬ ಚಿಂತೆ ನರಸಿಂಹಯ್ಯನಿಗೆ ಅವನ ಈ ಸಂಶಯವೂ ತಿಳಿಯಿತು ಅದಕ್ಕೆ ಹೇಳಿತು ಸವಾಲ—'ಸ್ವರ್ಗಕ್ಕೆ ಅವರು ಹೋಗಲೂ ಇಲ್ಲ, ನಾನೂ ಹೋಗಲಿಲ್ಲ ಹೋಗಿ ನೋಡಿ ಬಂದವರಿದ್ದರೆ ಅದು ಹ್ಯಾಗಿದೆಯೆಂದು ತಿಳಿದು ಆ ಮೇಲೆ ಅವರ ಜಾತಿ ಸೇರುವ ಬೇಕಾದರೆ ನಾನೂ ಬರುತ್ತೇನೆ ಮತ್ತೆ—ಹೊಲೆಯರಿದ್ದವರು ಕ್ರಿಶ್ಚನರಾದರೂ ಅವರನ್ನೂ ಇನ್ನು ಬೇರೆಯೇ ಒಂದು ಜಾತಿಮಾಡಿದ್ದಾರೆ ಉಳಿದವರಿಗೂ ಅವರಿಗೂ ಹೆಣ್ಣು ಗಂಡು ನಡೆಯುವುದು ಕಾಣುವುದಿಲ್ಲ—ಹೀಗಿರುತ್ತ 'ನಗೆ ಮರಳು' ಎಂದರು

ಸರಿ, ಮುದರನ ಮನಸ್ಸು ತಿರುಗಿತು ಜುವಾಂ ಸೋಜರು ಹತಾಶರಾದರು ನರಸಿಂಹಯ್ಯನಿಗೆ ಬುದ್ಧಿ ಕಲಿಸುತ್ತೇನೆ ಎಂದ ಯೋಚಿಸಿದರು ನರಸಿಂಹಯ್ಯನಿಗೆ ಯಾರಿಂದಲೋ ನೂರ ರೂಪಾಯಿ ಬರ ಪುದಿತ್ತು ಅದರ ದಸ್ತಾವೇಜನ್ನು ಜುವಾಂ ಸೋಜರು ಹೊತ್ತರು ನರಸಿಂಹಯ್ಯನ ಅವರನ್ನು ಸಿವಿಲು ಜೈಲಿಗೆ ರವಾನಿಸಿಯೇ ಶುದ್ಧ ಎಂದು ಪಣ ತೊಟ್ಟಾಗ, 'ಛೀ ಛೀ ಬಡವ ನಾನು ನಿಮಗೆ ಜಾಮೀನು ಎಂದು ಬಡಿಸಿದರು ಮುಂದೆ ಆರು ತಿಂಗಳು ಕಳೆದರೆ ಅವನಿಂದ ಹಣವಿಲ್ಲ, ಜುವಾಂರಿಂದ ಕಾಸಿಲ್ಲ ಕೇಳಿದರೆ ಅದನ್ನು ಕೊಡಬೇಕಾದರೆ ಪಾದ್ರಿಗಳನ್ನು ಕೇಳಬೇಕು ಎಂದರು ಅಂದರೆ ಮೂಲ ಸಾಲದವನಿಂದ ಎಷ್ಟುಗಳಿಗೆ ಒಂದು ನೂರು ಬರುವುದಿದೆಯಂತೆ, ನಾನೂ ಆಪತ್ತ ಬಗ್ಗೆ ಕೊಡುವುದಾದರೆ ಅದು ಪಾದ್ರಿಗಳಿಗೇನೆ ಸಲ್ಲುವುದು ನ್ಯಾಯ ನಿಮ್ಮ ಸಾಲ ಅನಂತರದ್ದಲ್ಲವೆ—' ಎಂದಿತು ಸರಿ—ನರಸಿಂಹಯ್ಯನ ಉಗ್ರ ಹೆಚ್ಚಿತು ಆದದ್ದು ಏನಿಲ್ಲ ಅನ್ನಿ. ನೂರು ರೂಪಾಯಿಗೆ ಖಾರ

ಇಷ್ಟೆಲ್ಲಾ ಜುವಾಂ ಸೋಜರ ಇತಿಹಾಸ ನಡೆದಿರುವಾಗ ಈ ಕಾಂಗ್ರೆಸು ಕಾಳಗ ಪ್ರಾರಂಭವಾಯಿತು ಕೊಯಿಲೊ ಪಾದ್ರಿಗಳು ಎಲ್ಲ ಕ್ರಿಶ್ಚನರಿಗೂ ನಿಮಗೆ ಖಾದಿ ಟೊಪ್ಪಿ ಬೇಡ ಎಂದು ಉಪದೇಶಿಸಿದ್ದರು ಆದರೆ ಈಗಾಗಲೇ ಕಾಂಗ್ರೆಸ್ಸಿನ ಹೆಸರಿನಲ್ಲಿ ಅವರು ಇವರು ಖರ್ಚಿಲ್ಲದೆ ಬೋರ್ಡಿನೊಳಗೆ ನುಸುಳಿದ ವರ್ತಮಾನ ತಿಳಿದ ಜುವಾಂರನ್ನು ಬೋರ್ಡು ಮೆಂಬರಿಕೆಗೆ ಏರಿಸುವ ಎಂದು ಯೋಚನೆಮಾಡಿದರು ಅದರಿಂದಲೇ ಜುವಾಂ ಸೋಜರು ಅನಾದಿಯ ಉರಟು ಟೋಪಿಯನ್ನು ಕಳಗಿರಿಸಿ ಖಾದಿ ಟೋಪಿ ಇಟ್ಟುಕೊಂಡು ಮೊದಲಿಗೆ ಕಾಂಗ್ರೆಸು ಕಮಿಟಿ ಅಧ್ಯಕ್ಷನಾಗುವ ಯೋಚನೆ ಮಾಡಿದ್ದಾರೆ ಪಾದ್ರಿಸಾಹೇಬರ ಬಲವೆಲ್ಲ ಅವರಿಗೇನೆ ಇದೆ. ಪಾದ್ರಿಗಳಿಂದ ಸಾಲ ಪಡೆದವರೆಲ್ಲರಿಗೂ 'ಜುವಾಂ ಸೋಜರನ್ನು ಬಿಟ್ಟು ಹಾಕಕೂಡದು. ನಿಮ್ಮ ಊರಿಗೆ ಒಂದು ಸಂಕವೋ, ರಸ್ತೆಯೋ, ಮತ್ತೊಂದೋ ಆಗಬೇಕಾದರೆ, ಅವರು ಹೆಸರಿಗೆ ಮಾತ್ರ ಮುಂದಿದ್ದರೆ ನಾನು ಅವರಿಂದ ಬೇಕಾದ ಕೆಲಸ ಮಾಡಿಸಿಯೇನು'—ಎಂದು ಬೆನ್ನೆ ಸವರಿ ಮಾತನಾಡುತ್ತಿದ್ದಾರೆ

ಇದರಲ್ಲಿ ಉಳಿದವರಿಗೆ ಹೆಚ್ಚಿನ ತೊಂದರೆಯಿಲ್ಲ—ಜನ್ನು ಪೈಗಳು, ನಾಗಯ್ಯ ಸೆಟ್ಟರು ತುಸು ಯೋಚನೆಗೀಡಾಗಿದ್ದಾರೆ ಜನ್ನು ಪೈಗಳು ಬಹಿರಂಗವಾಗಿ ಬರುವುದಾದರೆ ನಾಗಯ್ಯನ ಹೇಳಿಕೆಯಂತೆ ಇರಬೇಕೋ ಏನೋ. ಜುವಾಂ ಸೋಜರು—'ನಾನು ಜೀನಸಿನ ಅಂಗಡಿ, ಭಂಡಸಾಲೆ ಇಡುತ್ತೇನೆ' ಎಂದು ಬೆದರಿಸಿದರೆ ಮುಂದೇನೋ ಎಂಬ ಅಂಜಿಕೆ ಇವರಿಗೆ! ಇತ್ತ ನಾಗಯ್ಯ ಸೆಟ್ಟರು ಹೇಳಲಾರದ ಒಂದು ವಿಷಯದಲ್ಲಿ ಕೊಯಿಲೋ ಪಾದ್ರಿಗಳ ಬಿರಳೊತ್ತಿಗೆ ಬಲಿಯಾಗಿದ್ದಾರೆ ಎಂದು ವದಂತಿ ಹೀಗಾಗಿ ಊರಿನ ಕಾಂಗ್ರೆಸು ಗಲಾಟೆ ಯಾವ ರೀತಿಯಾದೀತು ಎಂದು 'ಆ ಪರಮಾತ್ಮನಿಗೇನೆ ಗೊತ್ತು.'

'DILROZ' Regd

'Dil Roz' is a sure cure for Oriental sores local sores all kinds of deep-rooted sores, skin eruptions Pimples, Eczema, Ringworm, Sinus Fistula auxillary-Abscess

There is no need of dressing the wounds, nor are baths prohibited

Price Rs. 2. Postage extra

TAHIR DIN,
Anarkali LAHORE

ಹೊಟ್ಟೆನೋವಿನಿಂದ ನರಳುವವರು

'ಎಲುಬಿನ ಒಂದು ಅಸ್ಥಿಪಂಜರ'

ನಿಮ್ಮನ್ನು 'ಕೃಶಾಂಗರನ್ನಾಗಿ' ಮಾಡಲಿಕ್ಕೆ ಜಠರ ಬಾಧೆಗಿಂತ ಭಯಂಕರವಾದುದು ಯಾವುದೂ ಇಲ್ಲ ಉದಾಹರಣೆಗಾಗಿ ಮಿಸೆಸ್ ಎಲ್ ಎಚ್ ಎಂಬವರು ಬಹಳ ಕೃಶರಾದರು ಮತ್ತು ತೀವ್ರ ಯಾತನೆಯ [illegible] ರಳಿದರು

ಅವರು ಹೀಗೆ ಬರೆ[illegible] ತಿಯ ವಾತಾವರಣದಲ್ಲಿ ಕೆಲಸ ಮಾಡಿ[illegible] ತನಗೆ ಅಜೀರ್ಣವೂ ಜಠರ ವೇದನೆಯೂ ಉಂಟಾಗಿ ಅನೇಕ ಮದ್ದುಗಳನ್ನು ಉಪಯೋಗಿಸಿದೆನು. ಆದರೆ ಒಂದೂ ಫಲದಾಯಕವಾಗಲಿಲ್ಲ ಹೊಟ್ಟೆನೋವು ಎಷ್ಟು ಉಗ್ರವಾಯಿತೆಂದು ಒಂದು ಗುಟುಕು ಬಿಸಿನೀರನ್ನು ಸೇವಿಸಿದರೂ ವಾಂತಿಯಾಗುತಿತ್ತು ನಾನು ಕೇವಲ ಒಂದು ಅಸ್ಥಿಪಂಜರದಂತಾದೆನು ಹೊಟ್ಟೆನೋವು ಕಠಿಣವಾಗಿತ್ತು ಕಡೆಗೆ ಒಂದೇ ಉಪಾಯವೆಂದು ನಾನು ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರನ್ನು ತೆಗೆದ ಕೊಳ್ಳಲು ಯೋಚಿಸಿದೆನು ಕೇವಲ ಒಂದಾವರ್ತಿ ಸೇವಿಸಿದುದರಿಂದಲೇ ನನಗೆ ಗುಣವು ಕಂಡುಬಂತು ವೇದನೆಯು ನಿಂತಿತು ಕೂಡಲೇ ನಾನು ಆಹಾರವನ್ನು ತೆಗೆದುಕೊಳ್ಳಲುಪಕ್ರಮಿಸಿದೆನು ಈಗ ನಾನು ಏನನ್ನೂ ಬೇಕಾದರೂ ಜಠರ ಬಾಧೆ ಇಲ್ಲದೆ ಸೇವಿಸುತ್ತಿದ್ದೇನೆ.

ಸ್ವಲ್ಪವೆಂದು ಕಂಡುಬಂದರೂ ನಿಮ್ಮ ಉದರ ವೇದನೆಯನ್ನು ನಿವಾರಿಸದಿರಿ ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸಿ ಎಲ್ಲಾ ಕಡೆಗಳಲ್ಲಿಯ ಈ ಭಯಂಕರವಾದ ಹೊಟ್ಟೆನೋವಿದ್ದವರಿಗೆ ಸುಖವನ್ನು ತಂದು ಕೊಟ್ಟ ಔಷಧವಿದು ಆದರೆ ಗುಣಪಡಿಸುವ ನಿಜವಾದ ಮೆಕ್ಲೀನ್ ಬ್ರಾಂಡನ್ನೇ ತೆಗೆದುಕೊಳ್ಳಿ ಯಾವಾಗಲೂ 'ಎಲೆಕ್ಸ ಸಿ ಮೆಕ್ಲೀನ್'

Alex C Maclean

ಎಂಬ ಸಹಿಯು ಬಾಟ್ಲಿಯ ಮೇಲೂ, ಪೆಟ್ಟಿಗೆಯ ಮೇಲೂ ಮತ್ತು ಕೆಂಪು ಸೀಲು ಇರುವುದೊ ಎಂದು ನೋಡಿರಿ ಶುದ್ಧವಾದ ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರ್ ಪೆಟ್ಟಿಗೆಯಲ್ಲಿರುವ ಬಾಟಿಯಲ್ಲಿ ಮಾರಲ್ಪಡುತ್ತಿದೆ ಹುಡಿಯಾಗಿಯೂ ಮಾತ್ರೆಯಾಗಿಯೂ ಇರುತ್ತದೆ ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ ಕಡಿಮೆ ಕ್ರಯಕ್ಕೆ ಸಿಕ್ಕುವ ನಕಲಿ ವಸ್ತುಗಳು ನಿಷ್ಪ್ರಯೋಜನ ಮತ್ತು ಹಾನಿಕರವಾಗಿದೆ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ



ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ವೈಶಾಖ ಬ॥ ೯ ಶನಿವಾರದಿಂದ ವೈಶಾಖ ಬ॥ ೧೦ ಶುಕ್ರವಾರದ ವರೆಗಿನ ಪಂಚಾಂಗ. (ಗಣಕನೇಯು ವೃಷಭ ಬೇಶ)

13	ಶನಿ	೨೨	೫	ಶತಭಿಷಾ	೨೦॥	೩೦	ತಾ. 15 [illegible]
14	ರವಿ	೨೩	೯	ಪೂ ಭಾದ್ರಾ	೨೭	೩೧	
15	ಸೋಮ.	೨೪	೧೨	ಉ ಭಾದ್ರಾ	೩೧।	೧	
16	ಕುಜ	೨೫	೧೪	ರೇವತಿ	೩೪॥	೨	
17	ಬುಧ	೨೬	೧೪॥	ಅಶ್ವಿನಿ	೩೬॥	೩	
18	ಗುರು	೨೭	೧೪	ಭರಣಿ	೩೭	೪	
19	ಶುಕ್ರ	೨೮	೧೩।	ಕೃತಿಕಾ	೩೬॥।	೫	

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—K R. GURU, *Managing Director*

ಗುಣಬಾರದಿದರೆ ಹಣ ವಾಪಾಸು.

ಸುಪ್ರಸಿದ್ಧ ವೈದ್ಯರಾದ ಎ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ ಸಂಜೀವಿನೀ ಔಷಧಾಲಯ ನಂ ೫. ಮಿರಜ, (S. M. C.)

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಕ್ಕೆ ಬಹುಮಾನಗಳು

ಒಂದು ವಾಚಿಗೆ ರೂ 1-4-0ಕ್ಕೆ ... [illegible] ... 300 ... 10 ... 0—14—0 ...

The American Commercial Stores, Post Box No 12218 Calcutta (S A)

THE

Bank of Mangalore Ltd.,

MANGALORE

ESTD 1931

Branches-

Panemangalore Mudabidri & Padubidri.

Fixed Deposits will be received at following rates of interest

For 3 months	3½%
6 "	4%
12 "	5%
24 " & upwards	5½%

Interest Payable Quarterly

Savings Bank deposit 3½% on daily balances.

All kinds of banking business transacted

THE

Canara Banking Corporation Udipi, Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-,100/-,500/-,1,000/-, & 5,000/

are now issued at all our Branches

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರಮುಖ ಆಶ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗ ... [illegible] ... 20 ... 1-1-0 ...

ಟಿ. ಸಿ. ಎ. ಅಂಡ್ ಕೋ, ... Pimlipi ...

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ, [illegible] ಮಂಗಳೂರು

ಡೂಂಗರೆ

ಇವರ

ಬಾಲಾಮೃತವು

ಮಕ್ಕಳ [illegible]

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ ಅಸ್ವಲ್ ತರದ ಗುಡ್ಡೆ ಮುಡಿಗೆ	1—11—0	—
" ದುಯಂ " "	1—10—0	1—10 0
" ಅಸ್ವಲ್ ಸುಗ್ಗಿ "	1—10—0	—
" ದುಯಂ " "	1—9—0	—
ಅಕ್ಕಿ ಅಸ್ವಲ್ ಗುಡ್ಡೆ "	4—2—0	4—2—0
" ದುಯಂ " "	3—14—0	3—14—0
" ಅಸ್ವಲ್ ಸುಗ್ಗಿ	4—4—0	—
" ದುಯಂ " "	3—8—0	3—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
" ಸಿಪ್ಪೆ ಇದ್ದದು "	37—8—0	47—8—0
ಕೊಬ್ಬರಿ ಆಫೀಸು ಖಂಡಿಗೆ	45—0—0	—
" ದಿಲ್‌ಪಸಂದ "	47—8—0	—
ತೆಂಗಿನ ಎಣ್ಣೆ ಮಣಕ್ಕೆ	3—5—0	3—5—0
ಸಿಪ್ಪೆಸುಲಿದ್ದ ಅಡಿಕೆ 1000ಕ್ಕೆ	3—4—0	3—12—0
ಗೇರುಬೀಜ ಮುಡಿಗೆ	3—12—0	3—12—0
ಕಲ್ಲಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	15—8—0	16—8—0

ಜ್ಯೋತಿರ್ಮಠದ ಶ್ರೀ ಶಂಕರಾಚಾರ್ಯರ ಸಂಧಾನ ಪ್ರಯತ್ನ

ನಿಜಾಮು ಹೈದರಾಬಾದದ ಹಿಂದುಗಳ ಸ್ಥಿತಿಗತಿಯ ಸಮಾವಲೋಕನ ಮಾಡುವುದಕ್ಕೋಸ್ಕರ ಅಲ್ಲಿಗೆ ತೆರಳಿದ್ದ ಜ್ಯೋತಿರ್ಮಠದ ಶ್ರೀ ಶಂಕರಾಚಾರ್ಯರು ಕಳೆದವಾರ ನಾಲ್ಕೈದು ದಿನಗಳ ತನಕ ಹೈದರಾಬಾದದ ಸಂಚಾರ ಮಾಡಿ, ಚಂದ್ರಗ್ರಹಣ ಸಮಯ, ನದೀಸ್ನಾನಕ್ಕಾಗಿ ಔರಂಗಾಬಾದಕ್ಕೆ ತೆರಳಿದರು. ಅಲ್ಲಿಂದ ಅವರು ಶೋಲಾಪುರಕ್ಕೆ ಹೋಗಿ ಪುನಃ ಹೈದರಾಬಾದಿಗೆ ಹಿಂತಿರುಗುವರು.

ಸಮಾಗಮ ಭೇಟಿ

ಔರಂಗಾಬಾದಿಗೆ ಹೊರಡುವ ಮೊದಲು ಶ್ರೀ ಸ್ವಾಮಿಯವರ ಮತ್ತು ಹೈದರಾಬಾದಿನ ಹಿಂದು ಮುಸಲ್ಮಾನ ಧಾರ್ಮಿಕ ಮುಖಂಡರ ಪರಸ್ಪರ ಸಮಾಗಮ ಭೇಟಿಗಳಾಗಿ ವಸ್ತುಸ್ಥಿತಿಯ ಕುರಿತು ಸಮಾಲೋಚನೆ ಪರಾಮರ್ಶೆಗಳಾದುವು. ಹೈದರಾಬಾದಿನ ಪ್ರಧಾನ ಮಂತ್ರಿ ಸರ್ ಅಕ್ಬರ ಹೈದರಿಯವರೂ, ಕೌನ್ಸಿಲಿನ ಇತರ ಸಭಾಸದರೂ ಶ್ರೀ ಸ್ವಾಮಿಯವರನ್ನು ಕಂಡು ಮಾತನಾಡಿದರು. ಶ್ರೀ ಸ್ವಾಮಿಯವರು ಹೈದರಾಬಾದಿನ ಮಸೀದಿಗಳನ್ನೂ ಹಾಳು ಬಿದ್ದ ಎರಡು ಹಿಂದೂ ದೇವಾಲಯಗಳನ್ನೂ ಸಂದರ್ಶಿಸಿದರು. ಅವರಿಗೆ ಹೋದಲ್ಲೆಲ್ಲ ಸಂಭ್ರಮದ ಸ್ವಾಗತವು ದೊರೆಯಿತು. ಪತ್ರಿಕಾ ಸುದ್ದಿಗಾರರು ಬಂದು, ಹೈದರಾಬಾದದ ಕುರಿತು ತಮ್ಮ ಅಭಿಪ್ರಾಯವೇನೆಂದು ಕೇಳಲು, ಹಿಂದೂ ಮುಸಲ್ಮಾನರ ಹಿತದೃಷ್ಟಿಯಿಂದ ಅದನ್ನು ಈಗ ಹೇಳುವುದು ಆಯುಕ್ತವೆಂದರು. ಅವರು ಸರಕಾರಕ್ಕೂ ಸತ್ಯಾಗ್ರಹ ಸಮಿತಿಗೂ ಒಂದು ಒಡಂಬಡಿಕೆಯಾಗುವಂತೆ ಮಾಡಿ, ಸತ್ಯಾಗ್ರಹವನ್ನು ನಿಲ್ಲಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಸಂಧಾನ ಪ್ರಯತ್ನ

ಈಗ ಪ್ರಾಯಶಃ ಮುಸಲ್ಮಾನರೇ (ಅಧಿಕಾರಿಗಳಾಗಿರುವ ಮುಜರಾಯಿ ಇಲಾಖೆಯನ್ನು ಎರಡಾಗಿ ವಿಭಾಗಿಸಿ, ಒಂದನ್ನು ಹಿಂದೂ ಸಮಿತಿಯ ಅಧಿಕಾರಕ್ಕೂ ಇನ್ನೊಂದನ್ನು ಮುಸಲ್ಮಾನ ಸಮಿತಿಯ ಅಧಿಕಾರಕ್ಕೂ ಒಳಪಡಿಸುವ ಅಭಿಪ್ರಾಯವು ಶ್ರೀ ಸ್ವಾಮಿಯವರಿಗಿದೆ. ಹಿಂದೂ ಧರ್ಮ ಸಂಬಂಧವಾದ ಸಮಸ್ಯೆಗಳನ್ನು ಮುಜರಾಯಿ ಇಲಾಖೆಯ ಹಿಂದೂ ಸಮಿತಿಯೂ, ಮುಸಲ್ಮಾನ ಸಂಬಂಧವಾದ ಸಮಸ್ಯೆಗಳನ್ನು ಮುಸಲ್ಮಾನ ಸಮಿತಿಯೂ ಬಿಡಿಸುವ ಅಧಿಕಾರವುಳ್ಳದ್ದಾಗಿದೆ. ಒಬ್ಬ ಹಿಂದುವು ಮುಸಲ್ಮಾನ ಮತಕ್ಕೆ ಸೇರುವ ಬಾಬಿನಲ್ಲಿ ಸರಕಾರವು ಅವನ ಒಂದು ಅರ್ಜಿಯನ್ನು ತೆಗೆದುಕೊಂಡು ಮೊದಲು ಹಿಂದೂ ಸಮಿತಿಗೆ ಕಳುಹಿಸಿ ಕೊಡಬೇಕು. ಹಿಂದು ಸಮಿತಿಯು ಅವನು ಮತಾಂತರ ಹೊಂದದ ಹಾಗೆ ಪ್ರಯತ್ನಿಸುವುದು. ಆ ಪ್ರಯತ್ನದಲ್ಲಿ ಸಮಿತಿಯು ಅಸಫಲವಾದರೆ ಆಗ ಅದು ಆತನ ಅರ್ಜಿಯನ್ನು ಮುಸಲ್ಮಾನ ಸಮಿತಿಗೆ ಕಳುಹಿಸಿಕೊಡುವುದು. ಆ ಸಮಿತಿಯು ಅವನನ್ನು ಮುಸಲ್ಮಾನನನ್ನಾಗಿ ಮಾಡುವುದು. ಇದೇ ರೀತಿ ಒಬ್ಬ ಮುಸಲ್ಮಾನನು ಹಿಂದೂವಾಗಲಿಚ್ಛಿಸಿದರೂ ಆತನ ಮೊದಲು ಮುಸಲ್ಮಾನ ಸಮಿತಿಗೆ ಅರ್ಜಿಮಾಡಿಕೊಂಡು ಅವರ ಅಪ್ಪಣೆಯನ್ನು ಪಡೆದ ತರುವಾಯವೇ ಹಿಂದೂ ಸಮಿತಿಯ ಮೂಲಕ ಹಿಂದೂ ಧರ್ಮಕ್ಕೆ ಸೇರಬಲ್ಲನು. ಈ ತೆರದ ವ್ಯವಸ್ಥೆ ಮಾಡುವುದರಿಂದ ಮತಮತಾಂತರ ಗೊಂದಲವು ತಪ್ಪುತ್ತದೆಂಬುದು ಸ್ವಾಮಿಯವರ ಅಭಿಪ್ರಾಯವು. ಹಿಂದೂ ಮುಸಲ್ಮಾನ ಧಾರ್ಮಿಕ ಸಂಘ ಸಂಸ್ಥೆಗಳ ಮೇಲು ವಿಚಾರದ ಅಧಿಕಾರವು ಸಂಪೂರ್ಣವಾಗಿ ಈ ಎರಡು ಸಮಿತಿಗಳದಾಗಿರುತ್ತದೆ. ಈ ಸಮಿತಿಗಳ ನಿರ್ಧಾರವೇ ಕೊನೆಯದಾಗಿರುತ್ತದೆ. ಅದರ ಮೇಲೆ ಅಪೀಲು ಇರುವುದಿಲ್ಲ. ನಿಷ್ಪಕ್ಷಪಾತಿ ಮತ್ತು ಎರಡು ಸಮಾಜಗಳ ವಿಶ್ವಾಸಕ್ಕೆ ಪಾತ್ರರಾದ ಮುಖಂಡರು ಈ ಸಮಿತಿಗೆ ನೇಮಿಸಲ್ಪಡುವರು. ಈ ಸೂತ್ರಗಳನ್ನನುಸರಿಸಿ ಒಂದು ಯೋಜನೆಯು ತಯ್ಯಾರಾಗುತ್ತಲಿದೆ. ಎರಡೂ ಸಮಾಜಗಳ ಮುಖಂಡರ ಒಪ್ಪಿಗೆಯು ದೊರೆತೊಡನೆ ಅದನ್ನು ಪ್ರಕಟಿಸುವರು.

ಹೈದರಾಬಾದ ಸರಕಾರಕ್ಕೆ ಒಡಂಬಡಿಕೆಯ ಸೂಚನೆ

ಜೈಲಿನಲ್ಲಿ ಸತ್ಯಾಗ್ರಹಿಯ ಮರಣ

ಕೈದಿಗಳ ಬಿಡುಗಡೆ

ಈ ರೀತಿಯ ಒಡಂಬಡಿಕೆಯಾಗಲಿಕ್ಕೆ ಸರಕಾರವೂ ಹಿಂದೂ ಮುಸಲ್ಮಾನ ಮುಖಂಡರೂ ಒಪ್ಪಿದ್ದಾರೆ, ಸರಕಾರವು ಸತ್ಯಾಗ್ರಹಿ ಕೈದಿಗಳನ್ನು ಕೂಡಲೇ ನಿಶ್ಶರ್ತವಾಗಿ ಬಿಡುಗಡೆಮಾಡಬೇಕು. ಶ್ರೀ ಸ್ವಾಮಿಯವರಿಗೆ ಹಿಂದೂ ಮುಸಲ್ಮಾನ ಮುಖಂಡರಿಂದಲೂ ಸರಕಾರದಿಂದಲೂ ದೊರೆತ ಸನ್ಮಾನ ಸಹಕಾರಗಳನ್ನು ನೋಡುವಾಗ, ಶೀಘ್ರದಲ್ಲಿಯೇ ಶ್ರೀ ಸ್ವಾಮಿಯವರು ಸಂಧಾನಮಾಡಿ, ರಾಜ್ಯದಲ್ಲುಂಟಾದ ಅಶಾಂತಿಯನ್ನು ದೂರಮಾಡಲು ಸಮರ್ಥರಾಗಬಹುದಾಗಿ ಊಹಿಸಲಾಗಿದೆ.

ಬಂಗಾಳದಿಂದ ಕೈದಿಗಳ ಜತ್ಥಾ

ಘೊಟೊಲದ ಭಟ್ವೇಕೃಷ್ಣ ಘೋಷರ ಮುಖಂಡತ್ವದಲ್ಲಿ ಬಂಗಾಳದ ನಾಲ್ಕನೆ ಸತ್ಯಾಗ್ರಹಿ ದಳವು ಇದೇ ತಿಂಗಳ ೩ನೇ ತಾರೀಕಿನ ದಿನ ಬೆಜವಾಡದಿಂದ ಹೈದರಾಬಾದಿಗೆ ಹೊರಟು ಸತ್ಯಾಗ್ರಹಮಾಡಿತು. ಈ ದಳದಲ್ಲಿ ೭೫ ಮಂದಿ ಸತ್ಯಾಗ್ರಹಿಗಳಾಗಿದ್ದರು. ಭವಾನಿಪುರದ ಆರ್ಯ ಸಮಾಜವು ಪ್ರಥಮ ಕಂತಾಗಿ ೧೦೦೦ ರೂಪಾಯಿಗಳ ಸಹಾಯ ದ್ರವ್ಯವನ್ನು ಶೋಲಾಪುರಕ್ಕೆ ಕಳುಹಿಸಿಕೊಟ್ಟಿದೆ.

ರಾಯಚೂರು ಸತ್ಯಾಗ್ರಹಿಗಳಿಗೆ ಶಿಕ್ಷೆ

ಪಂಡಿತ ಸೋಬರಾಜರು ನಾಯಕರಾಗಿ ಎಪ್ರಿಲ್ ೨೭ರ ದಿನ ರಾಯಚೂರಿನಲ್ಲಿ ಕೈದಾದ ಸತ್ಯಾಗ್ರಹಿ ದಳಕ್ಕೆ ಎರಡು ವರ್ಷಗಳ ಕಠಿನ ಶಿಕ್ಷೆಯಾಗಿದೆ. ಮತ್ತೆ ಅನೇಕ ಮಂದಿ ಸತ್ಯಾಗ್ರಹಿಗಳು ಲಾತೂರು, ಗುಲ್ಬರ್ಗ, ಹೈದರಾಬಾದಿನಲ್ಲಿ ಮೇ ೨ರ ದಿನ ಸತ್ಯಾಗ್ರಹಮಾಡಿ ಕೈದಾಗಿದ್ದಾರೆ. ಬಿಹಾರ, ಅವರಂಗಾಬಾದ ಪ್ರಭಾಣಿ ಜಿಲ್ಲೆಗಳಿಂದ ೧೦೪ ಮಂದಿ ಹೊಸಬರು ಸತ್ಯಾಗ್ರಹಿಗಳಾಗಿ ಶೋಲಾಪುರಕ್ಕೆ ಬಂದು ಮುಟ್ಟಿದ್ದಾರೆ.

ಉಸ್ಮಾನಾಬಾದಿನಲ್ಲಿ ಕೈದು

ಉಸ್ಮಾನಾಬಾದಿನಲ್ಲಿ ಸತ್ಯಾಗ್ರಹಮಾಡುವುದಕ್ಕೋಸ್ಕರ ಮೇ ೩ರ ದಿನ ೫೦ ಸತ್ಯಾಗ್ರಹಿಗಳು ಹೊರಟಿದ್ದಾರೆ. ಡಾಕ್ಟರ ಗಿರಿಧರಲಾಲರ ೧೧೬ ಸತ್ಯಾಗ್ರಹಿಗಳ ದಳವು ಅಲ್ಲಿ ಅದೇ ದಿನ ಕೈದಾಯಿತು.

ಹೊಸ ಜತ್ಥಾಗಳ ಆಗಮನ

ಬಿಹಾರ, ಜಲಂಧರ, ಅಜಮೀರ, ಇಂದೋರು, ದೇಹರಾಡೂನು ಮೊದಲಾದ ಕಡೆಗಳಿಂದ ನೂರಾರು ಮಂದಿ ಸತ್ಯಾಗ್ರಹಿಗಳ ದಳಗಳು ಹೊರಟು ಪ್ರಚಾರಮಾಡುತ್ತಾ ಶೋಲಾಪುರಕ್ಕೆ ಬಂದು ಮುಟ್ಟಿವೆ. ಪಂಡಿತ ಭಾರ್ಗವ ರಾಯರ ದಳಕ್ಕೆ ೮ ತಿಂಗಳ ಶಿಕ್ಷೆಯಾಗಿದೆ. ಮದ್ರಾಸಿನ ೨೧ ಸತ್ಯಾಗ್ರಹಿಗಳ ದಳದ ಕೈದಾಗಿದೆ.

ಸ್ವಾಮಿ ಸತ್ಯಾನಂದರ ಅಂತ್ಯಕ್ರಿಯೆ

ಸತ್ಯಾಗ್ರಹಮಾಡಿ ಜೈಲುಪಾಲಾದ ಸ್ವಾಮಿ ಸತ್ಯಾನಂದರೆಂಬ ವೃದ್ಧರು ಜೈಲಿನಲ್ಲಿಯೆ ಮೃತರಾದರು. ಹೃದಯ ಕ್ರಿಯೆ ನಿಂತು ಅವರು ಮೃತರಾದರೆಂದು ಸರಕಾರವು ಪ್ರಕಟಿಸಿದೆ. ಅವರ ಶವಮೆರವಣಿಗೆಯು ಹೈದರಾಬಾದಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ೨೦೦೦ ಮಂದಿ ಹೈದರಾಬಾದಿನ ಹಿಂದುಗಳು ಈ ಮೆರವಣಿಗೆಯಲ್ಲಿ ಸೇರಿದ್ದರು. ಸ್ವಾಮಿ ಸತ್ಯಾನಂದರು ಬೆಂಗಳೂರು ಆರ್ಯಸಮಾಜ ಮತ್ತು ಶ್ರದ್ಧಾನಂದ ಆಶ್ರಮಗಳ ಸ್ಥಾಪಕರಾಗಿದ್ದರು. ಅವರು ಹೈದರಾಬಾದ ಜೈಲಿನಲ್ಲಿ ೨೩ ಸತ್ಯಾಗ್ರಹಿಗಳೊಂದಿಗೆ ನಿರಶನವ್ರತವನ್ನು ಕೈಕೊಂಡಿದ್ದರು.

ಒಟ್ಟು ಕೈದಿಗಳ ಸಂಖ್ಯೆ

ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಹೈದರಾಬಾದದಲ್ಲಿ ಸತ್ಯಾಗ್ರಹವಮಾಡಿ ಕೈದಾದವರ ಸಂಖ್ಯೆ ಈಗ ೬೦೦೦ಕ್ಕೆ ಸಮೀಪವಾಗಿರುವುದು. ಏನಾದರೊಂದು ಒಡಂಬಡಿಕೆಯಾಗದಿದ್ದರೆ ಸಂಖ್ಯೆ ಇನ್ನೊಂದು ತಿಂಗಳೊಳಗಾಗಿ ೧೦೦೦೦ಕ್ಕೆ ಮುಟ್ಟಬಹುದು.

ದತ್ತಾತ್ರೇಯ ಪ್ರಸಾದರ ಸ್ಥಿತಿ

ನಿಜಾಮ ಹೈದರಾಬಾದದ ಡಿಕ್ಟೇಟರ [illegible] ಸರ್ವಾಧಿಕಾರಿಗಳಾದ ವಕೀಲ ಪಂಡಿತ ದತ್ತಾತ್ರೇಯ ಪ್ರಸಾದರನ್ನು ಸರಕಾರವು ಜೈಲಿನ ಒಂದು ಪ್ರತ್ಯೇಕ ಕೋಣೆಯಲ್ಲಿ ಒಬ್ಬೊಂಟಿಗರನ್ನಾಗಿ ಇಟ್ಟಿದ್ದಾರೆ. ಅವರೊಡನೆ ಯಾರನ್ನೂ ಬಂದು ಕಾಣಲಿಕ್ಕೆ ಬಿಡುವುದಿಲ್ಲ. ಇದೇ ಪ್ರಕಾರದ ಬೇರೆ ಅತ್ಯಾಚಾರ ಅನಾಚಾರ, ಹೊಡೆದಾಟ ಬಡೆದಾಟಗಳು ಜೈಲುಗಳಲ್ಲಿ ನಡೆದೇ ಇವೆ.

ಬೆಂಗಳೂರಿನಲ್ಲಿ ಸಭೆ

ಕೈಲಾಸ ಶಾಳೆಯ [illegible] ಆರ್ಯಸಮಾಜ ಮಂದಿರದಲ್ಲಿ ಹೈದರಾಬಾದದ ನಿವಾಸಿಗಳಾದ ಶ್ರೀ ಮಹಾವೀರ ಪ್ರಸಾದರ ಅಧ್ಯಕ್ಷತೆಯಲ್ಲಿ ಅಖಿಲಭಾರತ ಹೈದರಾಬಾದ ದಿನವು ಆಚರಿಸಲ್ಪಟ್ಟಿತು. ಅಧ್ಯಕ್ಷರಿಗೆ ಧೂರಪೇಠ ಮಾಮಲೆಯಲ್ಲಿ ೨೧॥ ವರ್ಷಗಳ ಶಿಕ್ಷೆಯಾಗಿತ್ತು. ಅಪೀಲಿನಲ್ಲಿ ಇತರ ಸಂಗಡಿಗರೊಡನೆ ಅವರ ಬಿಡುಗಡೆಯಾಗಿತ್ತು. ಪ್ರಾರ್ಥನಾದಿಗಳಾದ ಬಳಿಕ ಶ್ರೀ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರು ಮಾನ್ಯ ಅತಿಥಿಯ ಪರಿಚಯ ಮಾಡಿ ಕೊಡುತ್ತಾ ಕೆಲವು ವರ್ಷಗಳ ಹಿಂದೆ ಹೈದರಾಬಾದ ಆರ್ಯಸಮಾಜದ ವಾರ್ಷಿಕೋತ್ಸವ ನಡೆಯುತಿದ್ದ ಕಾಲಕ್ಕೆ ಅವತಾರವಾದದ ಕುರಿತು ತನಗೂ ಅಧ್ಯಕ್ಷರಿಗೂ ಆದ ಶಾಸ್ತ್ರಾರ್ಥವನ್ನು ನೆನಪಿಗೆ ತಂದು, ಆಗ ಅಧ್ಯಕ್ಷರು ಆರ್ಯಸಮಾಜದ ವಿರೋಧಿಗಳಲ್ಲಿ ಒಬ್ಬರಾಗಿದ್ದರು. ಪರಂತು ಘಟನಾ ಚಕ್ರವು ಅವರ ವಿಚಾರಗಳಲ್ಲಿ ಅನೇಕ ಪರಿವರ್ತನಗಳನ್ನು ಮಾಡಿತು. ಈಗ ಅವರು ಆರ್ಯಸಮಾಜದ ಅತ್ಯಂತ ಪ್ರೇಮಿ ಮತ್ತು ಮಹರ್ಷಿದಯಾನಂದರ ಪರಮ ಭಕ್ತರಾಗಿದ್ದಾರೆ ಎಂಬುದನ್ನೂ ತಿಳಿಸಿದರು. ಆ ಮೇಲೆ ಪಂಡಿತರು ಹೈದರಾಬಾದಿನ ಭಯಂಕರ ಪರಿಸ್ಥಿತಿಯ ರೋಮಾಂಚಕಾರಿ ವರ್ಣನೆ ಮಾಡುತ್ತ ಈ ಪವಿತ್ರ ಧರ್ಮಯುದ್ಧದಲ್ಲಿ ಎಲ್ಲರೂ ತನುಮನ ಧನ ಸಹಾಯಮಾಡಬೇಕೆಂದು ವಿನಂತಿಮಾಡಿದರು.

ಒಬ್ಬ ಕೈದಿಯ ಮರಣ

ಲ್ಯಾಲಪುರದಿಂದ ಬಂದು ಗುಲ್ಬರ್ಗಾ ಜೈಲಿನಲ್ಲಿ ಸತ್ಯಾಗ್ರಹಿ ಕೈದಿಯಾಗಿ ಶಿಕ್ಷೆಯನ್ನು ಅನುಭವಿಸುತಿದ್ದ ಶ್ರೀ ಛೋಟೇಲಾಲ ಎಂಬವರು ಅಲ್ಲಿಯೇ ಸ್ವರ್ಗಸ್ಥರಾದರು. ಜೈಲಿನಲ್ಲಿದ್ದ ಲಾಲಕುಶಲ ಚಂದ, ಧುರೇಂದ್ರ ಶಾಸ್ತ್ರಿ ಮೊದಲಾದ ಮುಖಂಡರು ಇತರ ಸತ್ಯಾಗ್ರಹ ಕೈದಿಗಳೂ ಊರ ಜನರೂ ಕೂಡಿ ವಿಜೃಂಭಣೆಯಿಂದ ಶವ ಸಂಸ್ಕಾರವನ್ನು ನಡೆಸಿದರು. ಹೀಗೆ ಜೈಲಿನಲ್ಲಿ ಸತ್ಯಾಗ್ರಹಿಯಾಗಿ ಸತ್ತ ಇದು ೬ನೇ ಘಟನೆಯಾಗಿರುವುದು.

ಬೊಂಬಾಯಿ ದಳ

ಬೊಂಬಾಯಿಯಿಂದ ೨೨ ಮಂದಿ ಒಂದು ಸತ್ಯಾಗ್ರಹಿ ದಳವು ಶೋಲಾಪುರಕ್ಕೆ ಬಂದು ಮುಟ್ಟಿದೆ. ಶೋಲಾಪುರದಿಂದ ರಾಯಚೂರು ಮತ್ತು ಕಲ್ಯಾಣಕ್ಕೆ ಎರಡು ದಳಗಳು ಹೊರಟಿವೆ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗರೂಕತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿ ಗುರುತಿನ ಟ್ರೇಡ್ ಸೀಲು ಮತ್ತು ಗೊನೊಕಿಲರ್ ಇರುತ್ತದೋ ಎಂಬುದನ್ನು ನೋಡಿರಿ

ಇಂದಿನ ಅತ್ಯುತ್ತಮ ಔಷಧ. ಇಂಗ್ಲೀಷು ಮತ್ತು ಆಯುರ್ವೇದ ಔಷಧಿಗಳಿಂದಲೂ ಫಲಕಾರಿಯಾಗದೇ ಇನ್‌ಜೆಕ್ಷನ್ ಔಷಧಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ ಗೊನೊಕಿಲರ್ ಎಂಬ [illegible] ಉಪಯೋಗಿಸಿ ನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ [illegible] ಗೊನೊರಿಯಾ, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ ಜನನೇಂದ್ರಿಯಗಳ ಬಾತುವಿಕೆ, ಸರ್ವ ಪ್ರಕಾರದ ಪ್ರಮೇಹ (ಎಷ್ಟೇ ಹಳತು [illegible]), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, [illegible], ಬಿಳುಪು ಹರಿಯುವುದು ಇವೇ ಮೊದಲಾದ ಯಾವತ್ತು ಗೊನೊಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

60 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3–0–0 (ಮೂರು) ವಿ ಪಿ ಛಾರ್ಜು 8 ಆಣೆ ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4

Sole Manufacturer: **Dr D. N JASANI,** Vithalbhai Patal Road, BOMBAY.

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ.

ಸ್ಟಾಕಿಸ್ಟ್—ಮೆಸರ್ಸ್ ಎ ಫೆರ್ನಾಂಡಿಸ್ ಮತ್ತು ಕಂಪೆನಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್, ಮಂಗಳೂರು

ವಿಷ್ಣು ಮಂಗಲಮ್ ದೇವಸ್ಥಾನ ಪುಲ್ಲೂರು ಕಾಸರಗೋಡು, (ದಕ್ಷಿಣ ಕನ್ನಡ.)

ಕೊಲ್ಲಂ 1110ರಿಂದ 1112ಕ್ಕೆ ಅಂತ್ಯವಾಗುವ ಮೂರು ವರ್ಷಗಳ ಜಮಾ ಖರ್ಚಿನ ವಿವರ

ನಗದಿ

ವಿವರ	1110	1111	1112
ವಸೂಲಾಗುವ ಬಾಡಿಗೆ	810 8 4	848 8 5	865 10 5
ಭತ್ತ ಮಾರಾಟ	540 1 6	485 4 9	657 14 8
ಕಾಣಿಕೆ	4 11 8	2 4 5	2 10 8
ಜಮೆಗಿಂತಲೂ ಹೆಚ್ಚಿನ ಖರ್ಚು	146 7 2	111 8 11	– – –
	1001 7 3	892 10 6	1026 2 11

ವಿವರ	1110	1111	1112
ಪೂಜಾ ಖರ್ಚು	49 6 6	57 11 0	58 18 9
ಉತ್ಸವ ಖರ್ಚು	40 4 2	44 1 9	82 8 7
ಸಂಬಳ	71 0 0	35 0 0	88 0 0
ರಿಪೇರಿ	110 6 0	120 3 4	15 15 9
ತೆರಿಗೆ	561 8 8	486 7 11	544 3 7
ಕೋರ್ಟು ಖರ್ಚು	99 2 7	103 4 9	98 15 3
ಟ್ರಸ್ಟಿಗಳಿಗೆ ಕೊಟ್ಟದ್ದು	56 0 0	22 13 3	44 0 0
ಪ್ರಯಾಣ ಖರ್ಚು	– – –	1 8 9	1 15 0
ಸ್ಟೇಶನರಿ ಮತ್ತು ಟಪ್ಪಾಲು	2 4 4	7 2 9	8 7 11
ಧರ್ಮ	– – –	3 8 0	0 12 0
ಕೂಲಿ	1 1 0	– – –	– – –
ಇತರ ಖರ್ಚು	10 6 0	10 13 0	14 12 0
ಖರ್ಚಿಗಿಂತಲೂ ಹೆಚ್ಚಿನ ಜಮೆ	– – –	– – –	171 11 10
	1001 7 3	892 10 6	1026 2 11

ಭತ್ತ

ವಿವರ	1110	1111	1112
ವಸೂಲಾಗುವ ಬಾಡಿಗೆ	1703 8 0	1697 1 2	1703 0 1
	1703 8 0	1697 1 2	1703 0 1

ವಿವರ	1110	1111	1112
ಪೂಜಾ ಖರ್ಚು	21 0 3	22 9 2	22 2 3
ಉತ್ಸವ ಖರ್ಚು	38 2 2	41 7 2	23 3 2
ಸಂಬಳ	288 0 0	288 0 0	312 0 0
ವಿಕ್ರಯ	942 2 0	788 9 2	1188 1 2
ರಿಪೇರಿ	71 8 0	75 1 2	71 2 2
ಕೂಲಿ	3 8 0	4 9 0	4 8 0
ಟ್ರಸ್ಟಿಗಳಿಗೆ ಕೊಟ್ಟದ್ದು	180 0 0	144 1 0	48 0 0
ಧರ್ಮ	5 0 0	– – –	– – –
ಇತರ ಖರ್ಚು	18 3 3	17 10 2	17 7 3
ಖರ್ಚಿಗಿಂತಲೂ ಹೆಚ್ಚಿನ ಜಮೆ	135 6 0	314 0 0	– –
	1703 8 0	1697 1 2	1703 0 1

ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ

ಮಂಗಳೂರು,
ತಾ 6-12-38

ಬಿ. ಶಾಂತರಾಮ ರಾವ್,
ರಿಜಿಸ್ಟರ್ಡ್ ಎಕೌಂಟೆಂಟ್

ವಿಷ್ಣು ಮಂಗಲಮ್ ದೇವಸ್ಥಾನ ಪುಲ್ಲೂರು ಕಾಸರಗೋಡು, (ದಕ್ಷಿಣ ಕನ್ನಡ)

ಕೊಲ್ಲಂ 1110ರಿಂದ 1112ಕ್ಕೆ ಅಂತ್ಯವಾಗುವ ಮೂರು ವರ್ಷಗಳ ಆಯವ್ಯಯದ ವಿವರ

ವಿವರ	1110	1111	1112
ವಸೂಲಾದ ಬಾಡಿಗೆ	160 8 11	220 14 6	171 3 7
ಭತ್ತ ವಿಕ್ರಯ	540 1 6	485 4 9	657 14 8
ಕಾಣಿಕೆ.	4 11 8	2 4 5	2 10 8
ಟ್ರಸ್ಟಿಗಳಿಂದ ಎಡ್ವಾನ್ಸಾಗಿ ಬಂದುದು	302 6 7	240 2 10	22 11 0
	1007 7 3	898 10 6	854 7 1

ವಿವರ	1110	1111	1112
ಪೂಜಾ ಖರ್ಚು	49 6 6	57 11 0	58 13 0
ಉತ್ಸವ ಖರ್ಚು	40 4 2	44 1 9	32 8 7
ಸಂಬಳ	71 0 0	35 0 0	33 0 0
ರಿಪೇರಿ	110 6 0	120 3 4	15 15 9
ತೆರಿಗೆ	561 8 8	486 7 11	544 3 7
ಕೋರ್ಟು ಖರ್ಚು	99 2 7	103 4 9	98 15 3
ಟ್ರಸ್ಟಿಗಳಿಗೆ ಕೊಟ್ಟದ್ದು	56 0 0	22 13 3	11 0 0
ಪ್ರಯಾಣ ಖರ್ಚು	—	1 8 9	1 15 0
ಸ್ಟೇಷನರಿ ಮತ್ತು ಟಪ್ಪಾಲು	2 4 4	7 2 9	8 7 11
ಎಡ್ವಾನ್ಸು .	6 0 0	6 0 0	6 0 0
ಧರ್ಮ	—	3 8 0	0 12 0
ಕೂಲಿ	1 1 0	—	—
ಇತರ ಖರ್ಚು	10 6 0	10 13 0	14 12 0
	1007 7 3	898 10 6	854 7 1

ಭತ್ತ

ವಿವರ	1110	1111	1112
ವಸೂಲಾದ ಬಾಡಿಗೆ	1801 2 1	1598 9 3	1690 3 0
	1801 2 1	1598 9 3	1690 3 0

ವಿವರ	1110	1111	1112
ಪೂಜಾ ಖರ್ಚು	21 0 3	22 9 2	22 2 3
ಉತ್ಸವ ಖರ್ಚು	38 2 2	41 7 2	23 3 2
ಸಂಬಳ	288 0 0	288 0 0	312 0 0
ಮಾರಾಟ	942 2 0	788 9 2	1136 1 2
ರಿಪೇರಿ	71 8 0	75 1 2	84 2 2
ಕೂಲಿ	3 8 0	4 9 0	4 8 0
ಟ್ರಸ್ಟಿಗಳಿಗೆ ಕೊಟ್ಟದ್ದು	180 0 0	144 0 0	48 0 0
ಧರ್ಮ	5 0 0	—	—
ಇತರ ಖರ್ಚು	18 3 3	17 10 2	17 7 3
ಟ್ರಸ್ಟಿಗಳ ಹತ್ತಿರವಿರುವ ಭತ್ತ	288 0 1	215 3 1	—
	1801 2 1	1598 9 3	1690 3 0

ಮಂಗಳೂರು,
6—12—1938.

ಪರಿಶೋಧಿಸಿ ಸರಿಯೆಂದು ಕಂಡುಹಿಡಿಯಲ್ಪಟ್ಟಿದೆ.

ಬಿ. ಶಾಂತಾರಾಮ ರಾವ್,
ರಿಜಿಸ್ಟರ್ಡ್ ಎಕೌಂಟೆಂಟ್.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR P. W. FARIAS.

ST PAULS CHURCH,
Bolkonje Post, S K
Dated 4 h Jan 1939

To
THE JOINT MANAGERS,
The C. P. C. Co Ltd., Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound for the Congress

The glorious success of our congress is also due to your exertion in putting up the various lights some of which I hear were done voluntarily

May the blessings of the almighty fall on you all and may you be able to do much good to the Public

Renewing my thanks I remain
Yours Sincerely
(Sd) P W Farias

Sri Parshwanathaswami,
PANCHAKALYANA POOJA MAHOSTHAM
Venoor, 5 January 1939

To
THE JOINT MANAGERS,
The Combind Booking Agency, Mangalore

Dear Sirs,

Please permit us to express our thanks on behalf of the above committee for the efficient Service rendered by your Combined Booking Agency Staff at Venoor to the visitors of the Panchakalyana Pooja Mahosthamum celebration held this year

Our thanks are also due to Moodabidri Booking Clerk Mr B Krishnayya and also his other mates and Mr Raghavendra Bhandary who had specially come down from Mangalore to see to the needs of and comforts of the travelling Public Thanking you once again

We remain Yours faithfully

Venoor Dated 6-2-39 (Sd) B Chandappa Indra (*Secretary P M Council*) (Sd) M Jagathpal (Sd) M Pachappa Shetty (Sd) Anantharaj Shetty (*Members, Panchakalyana Mahosthamam Committee*)

JOINT MANAGERS,

The Combined Booking Agency, **MANGALORE.**

The Joint Booking Office, **KODIALBAIL.**

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER A CRORE.

ESTD 1906
CANARA BANK, LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಚಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಜ್ಜಿ, ಬಿಳಿ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು.

ಸ್ವದೇಶಾಭಿಮಾನಿ

Established 1906 — Regd. No. M 3400

ಸಂಪುಟ ೩೩] ತಾರೀಕು ೧೨-೫-೧೯೩೯ (12—5—1939) [ಸಂಚಿಕೆ ೧೯

THE

BOMBAY LIFE ASSURANCE COMPANY, LTD.,

(ESTD 1908.)

THE OFFICE

Which has proved its popularity by its progress

Record of New Bussiness

Proposed	Year.	Completed
1,25 50,250	1934	1,04,38,750
1 50 48,915	1935	1,28 28 665
1 68 38 200	1936	1 36 01 500
1,72,579,75	1937	1,44 91 000
1,76 88 250	1938	1 44 91 000

1939 - VALUATION YEAR

Please take up a Policy Now and participate in Bonus.

In Insure or to Represent it pays you to consult us

Apply to . **KOCHIKAR BROTHERS, LIIMTED,**

Madras Branch Secretaries,

The Bombay Life Assurance Co., Ltd ,

The Bombay Life Building, Gandhinagar, UDIPI

or any of our following offices:

Post Box No 337
Mount Road,
Madras

Visweshwarapuram Circle,
Bangalore City

Charni Road
Girgaum
BOMBAY 4

Car Street,
Mangalore

Puthiyara,
Calicut

Central Station Road,
Trivandrum

Ottapalam,
S Malabar.

MAKE LIFE WORTH-LIVING!

Indigestion – Insomnia – Dry Cough—
Nervousness – Weak Heart &c ,
these make you wiery of Life!

GONSULT US AND BUY
YOUR LIFE'S HAPPINESS!

Oils – that cool the brain and induce sleep
Lehas – that build-up your wasted system
Asavas = that regenerate your jaded nerves

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S, Kanara.

(BRANCH—KUMTA, N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆಕೊಡುವ – ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಶಕ್ತ ನರಗಳಲ್ಲಿ ಹೊಸ ಚೈತ್ರವನ್ನು ತರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, – ದ ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 19-5 1939 ತಾರೀಖು ೧೯—೫—೧೯೩೯

ಸ್ಥಳೀಯ ನ್ಯೂ ಚಿತ್ರಾ ಟೋಕೀಸ್‌ನಲ್ಲಿ ತಾ. 21ರಿಂದ ಪ್ರದರ್ಶಿಸಲ್ಪಡಲಿರುವ
'ಬ್ರಹ್ಮಚಾರಿ' ಎಂಬ ಚಿತ್ರದಲ್ಲಿನ ಒಂದು ದೃಶ್ಯ

ಸಚಿತ್ರ

ವಾರಪತ್ರಿಕೆ

ಒಂದು ಕಾಲಿನಿಂದ ಕುಣಿಯುವ ಮಾಟದ ಮೇಜು

[illegible] ಎಂಬ ಊರಿನಲ್ಲಿ [illegible] ದೇಬರ್ಗ್ ಎಂಬ [illegible] ಹತ್ತಿರವಿರುವ ನಾಲ್ಕು ಕಾಲಿನ ಮೇಜು, ಮಾಲೀಕನ ಅಪ್ಪಣೆಯಂತೆ, ಒಂದು, ಎರಡು, ಮೂರು, ನಾಲ್ಕು ಕಾಲುಗಳಿಂದ ನಿಲ್ಲುತ್ತದೆ! ಅವನ ಅಪ್ಪಣೆಯಂತೆ ಚಲಿಸುತ್ತದೆ!! ಕೇಳಿದ ಪ್ರಶ್ನೆಗಳಿಗೆ ವಿಚಿತ್ರ ರೀತಿಯಲ್ಲಿ ಉತ್ತರಗಳನ್ನು ಕೊಡುತ್ತದೆ.

ಪತ್ರಿಕಾ ಪ್ರತಿನಿಧಿಯೊಬ್ಬನು ಒಂದು ದಿನ ದೇಬರ್ಗನನ್ನು ಸಂಧಿಸಿ ಮೇಜಿನ ವಿವರವನ್ನು ಕೇಳಿದನು. ದೇಬರ್ಗನು ಅವನನ್ನು ಮೇಜು ಇರುವ ತನ್ನ ಕೋಣೆಗೆ ಕರೆದುಕೊಂಡು ಹೋಗಿ– ಮೇಜಿನ ಸಮೀಪ ಕುರ್ಚಿಕೊಟ್ಟು ಕೂತುಕೊಳ್ಳಿಸಿದನು. ಆಗ ದೇಬರ್ಗನ ಶ್ರೀಮತಿ ಬಂದು ಮೇಜಿನ ಮೇಲೆ ಮೆಲ್ಲಗೆ ಕೈಯಿಟ್ಟು– 'ಮೇಜೇ, ಮೇಜೇ, ಎರಡು ಕಾಲಿನ ಮೇಲೆ ನಿಲ್ಲು' ಎಂದು ಏಳೆಂಟು ಬಾರಿ ಹೇಳಿದಳು. ಮೇಜು ಮೆಲ್ಲ ಮೆಲ್ಲಗೆ ತನ್ನ ಮುಂದಿನ ಎರಡು ಕಾಲುಗಳನ್ನು ನೆಲದಿಂದ ಸುಮಾರು ೬ ಅಂಗುಲ ಎತ್ತರಕ್ಕೆ ಎತ್ತಿ ಹಿಡಿದು ಎರಡೇ ಕಾಲುಗಳ ಮೇಲೆ ನಿಂತಿತು. ಮತ್ತೆ ಅವಳು ಅದೇ ಪ್ರಕಾರ ಬೇರೆ ಬೇರೆಯಾಗಿ ಅಪ್ಪಣೆಕೊಟ್ಟಂತೆ ಅದು ಒಂದು, ಮೂರು, ಕಾಲುಗಳ ಮೇಲೆ ನಿಲ್ಲುತ್ತಿತ್ತು, ಕುಣಿಯುತ್ತಿತ್ತು; ಕಪ್ಪೆ ಹಾರಿದಂತೆ ಹಾರಿಕೊಂಡು ಹಿಂದೆ ಮುಂದೆ ಚಲಿಸುತ್ತಿತ್ತು.

ಇದನ್ನು ಕಂಡು ಪತ್ರಿಕಾ ಪ್ರತಿನಿಧಿಗೆ ಬಹಳ ಆಶ್ಚರ್ಯವಾಯಿತು. ಶ್ರೀಮತಿ ದೇಬರ್ಗಳು ಸೂಚಿಸಿದಂತೆ ಅವನು ಮೇಜಿಗೆ ಹಲವು ಪ್ರಶ್ನೆಗಳನ್ನು ಕೇಳಿದನು. ಮೇಜು ಎಲ್ಲಕ್ಕೂ ಸರಿಯಾದ ಉತ್ತರ ಕೊಟ್ಟಿತು. ಸಿಗರೇಟು ಡಬ್ಬಿಯಲ್ಲಿ ಸಿಗರೇಟು ಎಷ್ಟು ಇವೆ ಎಂದು ಕೇಳಿದಾಗ ಮೇಜು ೭ ಬಾರಿ ನೆಲಕ್ಕೆ ಕಾಲುಗಳನ್ನು ಬಡಿಯಿತು. ಲೆಕ್ಕಮಾಡಿದಾಗ ಪೆಟ್ಟಿಗೆಯಲ್ಲಿ ೭ ಸಿಗರೇಟುಗಳಿದ್ದುವು! ಗೊಂಚಲಿನಲ್ಲಿ ಬೀಗದ ಕೈಗಳೆಷ್ಟು ಎಂದು ಇನ್ನೊಬ್ಬನು ಕೇಳಿದಾಗ, ಲೆಕ್ಕಮಾಡಿದ ಹಾಗೆ ಅದಕ್ಕೂ ಮೇಜು ಸರಿಯಾದ ಉತ್ತರ ಕೊಟ್ಟಿತು.

ಶ್ರೀಯುತ ದೇಬರ್ಗ್ ಅಥವಾ ಶ್ರೀಮತಿ ದೇಬರ್ಗ್ ಮಾಟಗಾರರಲ್ಲ, ಅವರಿಗೆ ಇಂದ್ರಜಾಲ ಮಹೇಂದ್ರಜಾಲ ತಿಳಿದಿರುವುದೂ ಇಲ್ಲ. ಮೇಜಿನಲ್ಲೇ ಏನೋ ಒಂದು ಅದ್ಭುತಶಕ್ತಿ ಇರುವುದೆಂದು ಆ ದಂಪತಿಗಳು ಹೇಳುತ್ತಾರೆ!

ಆನೆಯಂತೆ ಘೀಳಿಡುವ ವಿಚಿತ್ರ ಹುಡುಗಿ!

ಉತ್ತರ ಐಯರ್ಲ್ಯಾಂಡಿನ ಲಂಡನ ಡೆರ್ರಿ ಎಂಬಲ್ಲಿ ೧೬ ವರ್ಷ ಪ್ರಾಯದ ಒಬ್ಬ ವಿಚಿತ್ರ ಹುಡುಗಿ ಇದ್ದಾಳೆ. ಕೆಥಲಿನ ಮೆಕ್ ಕಾರ್ಟ್ನಿ ಎಂದು ಅವಳ ಹೆಸರು. ಅವಳು ಯಾವುದಾದರೊಂದು ಪ್ರಾಣಿಯ ಅಥವಾ ಮನುಷ್ಯನ ಕಂಠಸ್ವರವನ್ನು ಒಂದು ಬಾರಿಗೆ ಕೇಳಿದರೆ ಸಾಕು. ಅದರಂತೆಯೇ ಅವಳೂ ಆಡಬಲ್ಲಳು. ನಿಜ ಕಂಠ ಸ್ವರಕ್ಕೂ ನಕಲಿ ಸ್ವರಕ್ಕೂ ಯಾವ ಅಂತರವೂ ಕಂಡುಬರುವುದಿಲ್ಲ. ಆದ್ದರಿಂದ ಜನರು ಅವಳನ್ನು ಮನುಷ್ಯರೂಪದ ಗ್ರಾಮಫೋನ್ ಅನ್ನತೊಡಗಿದ್ದಾರೆ.

ಅವಳು ರೇಡಿಯೋದಲ್ಲಿ ಕೆಲಸಕ್ಕೆ ಸೇರುವ ಆಸೆಯಿಂದಿದ್ದಾಳೆ. ಇತರರ ಕಂಠ ಸ್ವರದ ನಕಲುಮಾಡುವುದರಲ್ಲಿ ಅವಳಷ್ಟು ಪ್ರವೀಣೆ, ಪ್ರಾಯಶಃ ಪ್ರಪಂಚದಲ್ಲೇ ಬೇರೊಬ್ಬರು ಇರಲಾರರು. ಅನೇಕ ಮಂದಿ ತರುಣರು ಅವಳನ್ನು ವಿವಾಹವಾಗಬೇಕೆಂದು ಬಂದರು. ಪರಂತು ಪ್ರತಿಯೊಬ್ಬರೂ ನಿರಾಶರಾಗಬೇಕಾಯಿತು. ಕೆಥಲಿನಳಿಗೆ ವಿವಾಹವಾಗುವ ಇಚ್ಛೆಯೇ ಇಲ್ಲ. ಒಳ್ಳೇ ಹೆಸರನ್ನು ಸಂಪಾದಿಸದ ಹೊರತು ತಾನು ಯಾರ ಕೈಹಿಡಿಯುವುದೂ ಇಲ್ಲವೆಂದು ಅವಳನ್ನುತ್ತಾಳೆ. ಅಲ್ಲದೆ 'ನಾನು ಬೆಳಗ್ಗೆ ಆನೆಯಂತೆ ಘೀಳಿಟ್ಟರೆ, ಮಧ್ಯಾಹ್ನ ಸಿಂಹದಂತೆ ಗರ್ಜಿಸಿದರೆ, ಸಾಯಂಕಾಲ ನಾಯಿಯಂತೆ ಬೊಗಳಿದರೆ, ರಾತ್ರಿ ಹುಲಿಯಂತೆ ಅರ್ಭಟಿಸಿದರೆ ನನ್ನ ಗಂಡನ ಸ್ಥಿತಿ ಏನಾಗಬಹುದೋ ಎಂದು ನನಗೆ ಭಯವಾಗುತ್ತದೆ ಆದ್ದರಿಂದ ಮದುವೆ ಬೇಡ!' ಎಂದು ಅವಳು ಹೇಳುತ್ತಾಳೆ. ನಿಜ. ಇಂಥ ಒಬ್ಬ ಹುಡುಗಿಯು ಕೈಹಿಡಿದವನ ಜೀವನ ನರಿನಾಯಿಗಳಿಗೂ ಬೇಡವಾದೀತು!

ಎಮ್ ಸ್ಟರ್ಡಾಮಿನ ಹೆಂಗಸರ ಬೇಂಕು

ಎಮ್ ಸ್ಟರ್ಡಾಮಿನಲ್ಲಿ ಕೇವಲ ಹೆಂಗಸರಿಗಾಗಿಯೇ ಒಂದು ಬೇಂಕು ಸ್ಥಾಪಿತವಾಗಿದೆ. ಅದರ ಸ್ಥಾಪಕನು ಗಂಡಸನಾದರೂ ಬೇಂಕಿನ ನೌಕರ ಚಾಕರರೆಲ್ಲರೂ ಹೆಂಗಸರು! ವಹಿವಾಟುಗಳು ಕೂಡ ಹೆಂಗಸರಿಗಾಗಿಯೇ ಇರುವುವು. ಹೆಂಗಸರ ಆವಶ್ಯಕತೆಗಳು ಏನೆಂಬುದು ಗಂಡಸರಿಗೆ ತಿಳಿಯುವುದಿಲ್ಲವಾದ್ದರಿಂದ, ಹೆಂಗಸರಿಗಾಗಿ ಈ ಬೇಂಕನ್ನು ಸ್ಥಾಪಿಸಬೇಕಾಯಿತೆಂದು ಸ್ಥಾಪಕನು ಹೇಳುತ್ತಾನೆ. ಈ ಬೇಂಕಿನಲ್ಲಿ ಬೇಂಕಿಗೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳು ಹೆಂಗಸರಿಂದ, ಹೆಂಗಸರಿಗೋಸ್ಕರ ನಡೆಯುವುವು. ಅಲ್ಲದೆ ಸೀರೆ ಕುಪ್ಪಸ, ನಗ ಆಭರಣ, ಪೌಡರ್ ಸ್ನೋ ಮೊದಲಾದವುಗಳಿಗೆ ಯಾರು ಎಷ್ಟು ಖರ್ಚು ಮಾಡಬೇಕೆಂಬ ಇತ್ಯಾದಿ ಗೃಹಕೃತ್ಯದ ಅನುಭವಗಳನ್ನು ಈ ತನ್ನ ಗಿರಾಕಿಗಳಿಗೆ ಕೊಡುತ್ತದೆ.

ಶೀಯಾಸುನ್ನಿ ಸತ್ಯಾಗ್ರಹ

ಲಖ್ನೋದಲ್ಲಿ ನಡೆಯುತ್ತಿರುವ ಈ ಸತ್ಯಾಗ್ರಹದಲ್ಲಿ ಸಂಯುಕ್ತಪ್ರಾಂತವಷ್ಟೇ ಅಲ್ಲ, ಹೊರಗಿನ ಶೀಯರೂ ಭಾಗ ತೆಗೆದುಕೊಂಡು ಸತ್ಯಾಗ್ರಹಮಾಡಲಾರಂಭಿಸಿದ್ದಾರೆ. ದಿವಸನಿತ್ಯ ಕೈದುಗಳಾಗುತ್ತಿವೆ. ಶೀಯಾ ಸುನ್ನಿಯರೊಳಗೆ ಸಂಧಾನಮಾಡಬೇಕೆಂದು ಪ್ರಯತ್ನಿಸಿದ ಮುಸ್ಲಿಮ ಮುಖಂಡರು ವಿಫಲರಾಗಿರುವರು. ಈಗ ರಾಷ್ಟ್ರಪತಿ ಬಾಬುರಾಜೇಂದ್ರ ಪ್ರಸಾದರು ಈ ವಿಷಯವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ. ಸಂಯುಕ್ತಪ್ರಾಂತ ಪ್ರಧಾನ ಮಂತ್ರಿ ಶ್ರೀ. ಪಂತರಿಂದ ವಿವರಗಳನ್ನು ಪಡೆದಿದ್ದಾರೆ. ಇಕ್ಕಡೆಯ ಮುಸ್ಲಿಂ ಮುಖಂಡರ ಸಲಹೆಗಳನ್ನೂ ಅಭಿಪ್ರಾಯಗಳನ್ನೂ ಕೇಳಿರುವರು.

ಕಮ್ಯೂನಿಷ್ಟ ಪಾರ್ಟಿಯ ಮೇಲಿನ ನಿರ್ಬಂಧ

ಸಮಗ್ರ ಭಾರತ ಕಮ್ಯೂನಿಷ್ಟ ಪಾರ್ಟಿಯ ಮೇಲಿದ್ದ ನಿರ್ಬಂಧವನ್ನು ತೆಗೆದುಹಾಕುವಂತೆ ಸಂಯುಕ್ತಪ್ರಾಂತ ಎಸೆಂಬ್ಲಿಯು ಭಾರತ ಸರಕಾರಕ್ಕೆ ಶಿಫಾರಸು ಮಾಡಿದೆ. ಪ್ರಾಂತೀಯ ಸರಕಾರವು ನಿರ್ಣಯಕ್ಕೆ ತನ್ನ ಸಮ್ಮತಿಯನ್ನು ಕೊಟ್ಟಿದೆ.

ಲಕ್ಷ್ಮೀರ್ಮಂ ಹಾರ್ಯಸ್ತು ಕುರ್ಮನ ದೇವಾ। ನ ಭೀಜರೀ ಭೀಮ ವಿಶೀಣ ಭೀತಿನ್‌। ಸುಭಾಂ ವಿನಾ ನ ವಯಯ ಪರಿಣಾವ ಂ ನ ಸಿಶ್ಚಿತಾರ್ಥಸ್ಯಾಪಿ ಅ ತಿ ಭೀತಾ।

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟಿತು

ದೊರೆಯಲಿನ ನವ ರತ್ನಗಳು ಸಾ। ಗರ ಮಥಿಸಲು ಸುರರಿ ಗದರಿಂ। ಹರುಷವಿಂ ಕೆ! ಮತೆ ವಿಕಟ ಸುಡುವ ಬರ ತದ ನ। ಗರಲ ನರಂಜದರ! ಸ ಭಯನು ಮರೆತು ಕ್ಷುದ್ರರ ಕೆರದ ಕಾಳಿತೆ ತೆ ಆ ಬಲ್ಲಿರಿ ಕೇಂದಿಂ. ಧೀರರು ಪಕ್ಷಿಪಾರ್ಥದ ನ

ತಾರೀಕು ೧೯—೫—೧೯೩೯ | ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 19—5—1939

★ ರಾಜಕೋಟೆಕ್ಕೆ ಪುನಃ ಮಹಾತ್ಮಾಜಿಯವರ ಆಗಮನ ★

ಮಹಾತ್ಮರು ಪುನಃ ರಾಜಕೋಟೆಕ್ಕೆ ಬಂದಿರುವರು. ಅದ್ದರಿಂದ ರಾಷ್ಟ್ರೀಯ [illegible] ನವ ಕಳತದಿಂದ ಪುನಃ ರಾಜಕೋಟೆ [illegible] ಗಿದೆ. ಎಲ್ಲರ ಲಕ್ಷ್ಯವು ಆ ಕಡೆಗೆ ಸೆಳೆಯಲ್ಪಟ್ಟಿದೆ. ರಾಜಕೋಟೆಯ ಠಾಕೂರರು [illegible] ಪ್ರಜೆಗಳು ಒಂದು ಗೌರವಪೂರ್ಣ ಒಪ್ಪಂದಕ್ಕೆ ಬರುವಾದರೆ ಒಳ್ಳೆಯ [illegible] ಮಹಾತ್ಮರು ಆಶಿಸಿದ್ದರಾದರೂ ಅವರ ಆಶೆ [illegible] ಠಿಯಾಯಿತು. ರಾಜಕೋಟೆಯ ಪರಿಸ್ಥಿತಿ [illegible] ದಲಿಂದ [illegible] ಭೀಕರವಾಗಿದೆ. ಅಲ್ಲಿ [illegible] ಸ್ವಾತಂತ್ರ್ಯವನ್ನು [illegible] ಕೆಯ [illegible] ಅಗಿರುವುದು ಮಾತ್ರ [illegible] ಪ್ರಜಾಪರಿಷತ್ತಿನ ಕೆಲವು [illegible] ಗಳನ್ನು [illegible] ನವನ ಮಾಡಿ ಸರ[illegible] ಸ್ವಾಧೀನ ಮಾಡಿಕೊಂಡಿದೆ. ಇದ[illegible] ಜನರು ಪ್ರತೀಕಾರ ಭಾವನೆಯಿಂದ [illegible] [illegible]

ಮಹಾತ್ಮರು ವೀರವಲ್ಲಭರೊಡನೆ [illegible] ರಾಜಕೋಟೆಯ [illegible] ಸಂದರ್ಭದ ಮುಖ ಪ್ರಯೋಗವನ್ನು ಅವರು [illegible] ರಾಜರು [illegible] ವಿವಾದವನ್ನು [illegible] ಮಾಡಿಸಿಕೊಳ್ಳುವುದರ [illegible] ದವ ಇತ್ಯರ್ಥವು ಕಠಿಣವಾಗುವುದು [illegible] ವೀರವಲ್ಲಭರು ಹೊಸ [illegible] ರಾಜಕೋಟೆಯಲ್ಲಿ [illegible] ಸ್ಥಾನಗಳಲ್ಲಿ [illegible] ಪ್ರಜೆಗಳೊಳಗಿನ ವಿವಾದಗಳನ್ನು ಅವರವರೇ ತೀರ್ಮಾನಿಸಿಕೊಳ್ಳುವುದು ನ್ಯಾಯಯುಕ್ತ ಮತ್ತು ಹಿತಕರ ಎಂದು [illegible] ರಾಜಕೋಟೆಯ [illegible] ಹಾಗಾಗ ವುದು ಅಸಾಧ್ಯವಾಗಿದೆ. ಅದ್ದರಿಂದ ಮೊರ[illegible] ಗಿನ [illegible] ಮಹಾತ್ಮರು ತಮ್ಮ [illegible] ವನ್ನು ಬಿಟ್ಟು ಪುನ ರಾಜಕೋಟೆ [illegible] ದಲ್ಲಿ ಕೈಹಾಕಬೇಕಾಗಿ ಬಂದಿದೆ. ಈಗ ಅವರು [illegible] ತಿಂಗಳ ತನಕ ರಾಜಕೋಟೆಯವನ್ನೇ ತಮ್ಮ ಠಾಣ್ಯ ಮಾಡಿಕೊಂಡಿರುವರು. ಜೂನ್ ತಿಂಗಳ ಅಂತ್ಯಭಾಗಕ್ಕೆ ಎ. ಐ. ಸಿ. ಸಿ. ಸಭೆ ಕೂಡುವ ಸಮಯ ಕೆಲವು ದಿನಗಳ [illegible] ಬೊಂಬಾಯಿಗೆ ಹೋಗಿ ಪುನಃ ರಾಜಕೋಟೆಕ್ಕೆ [illegible] ರಾಜಕೋಟೆಯ ವಿವಾದವು [illegible] ರ್ಮಾನವಾದ ಹೊರತು ಅವರು ಸದ್ಯ ಬೇರೆ ಯಾವ ಕಾರ್ಯಕ್ಕೂ ಕೈಹಾಕುವಂತೆ ತೋರು[illegible] ಅದ್ದರಿಂದಲೇ ಅಲ್ಲಿಯ ಪರಿಸ್ಥಿತಿ ಎಷ್ಟು ಭೀಕರವಾಗಿದೆ ಎಂಬುದರ ಅಂದಾಜು ಮಾಡಬಹುದು.

ರಾಜಕೋಟೆಯಲ್ಲಿ ಸಾರ್ವಭೌಮ ಸರಕಾರದ ನೆರವಾಗಿ ಮೈಸ್ವಾರಿಂಯರು ಕೂಡ ಕೈಹಾಕಬೇಕಾದ ಪ್ರಸಂಗ ಬರಲೂ ಬಹುದು. ಅವರು ಮುದಗೆಂತ್ರ ವೀರವಲ್ಲಭರಿಂದ ದಾರಿ ತಪ್ಪಿದ ಠಾಕೋರರನ್ನು ಸರಿದಾರಿಗೆ ತರಬೇಕಾಗುವುದು. ಅವರಿಂದ ಕೆ ನಡಕೊಳ್ಳದಿದ್ದರೆ ಠಾಕೋರರು [illegible] ತ್ಯಾಗಮಾಡಲೂ ಬೇಕಾಗುವುದು.

ಮೈಸೂರಿನ ರಾಜಕೀಯ ಪರಿಸ್ಥಿತಿ
ಬಾಪೂಜಿಪುರದಲ್ಲಿ ಕ್ಷಿದ

ತಮ್ಮ ಅಧಿಕಾರವನ್ನು ಫೆಡರಲ್ ಕೋರ್ಟಿಗೆ ಕೊಡಬೇಕು

[illegible] ಗಳ [illegible] ಮೈಸೂರು [illegible] ವುದು ಅಗತ್ಯವೆಂದು [illegible] ಮೈಸೂರು [illegible] ಸಂಸ್ಥಾನ ಧೀಶರ ಮೇಲೆ [illegible] ದ [illegible] ಸಂಸ್ಥಾನಾಧೀಶರು ಮಾಡುವ [illegible] ವಿಷ್ಯಕ್ಕೆ [illegible] ಎಷ್ಟೋ [illegible] ಟು [illegible] ಕಾರಣಗಳಿಂದ ಮೈಸೂರು ಸಂಸ್ಥಾನಾಧೀಶರ [illegible] ತ್ವದ ಅಧಿಕಾರ [illegible] ಕೊಡಬಾರದು. [illegible] ವುದಿಲ್ಲ. ಅದ್ದರಿಂದ [illegible] ಮೈಸೂರು [illegible] ಅವರ [illegible] ಫೆಡರಲ್ ಕೋರ್ಟಿಗೆ ಇಟ್ಟುಕೊಡಬೇಕೆಂದು [illegible] ಪತ್ರಿಕೆ ಯಲಿ ಬರೆದಿದ್ದಾರೆ. [illegible] ಸಿಬ್ಬ ಧವು [illegible] ದ್ದಾಗಿದೆ. ಸಂಸ್ಥಾನ ಧೀಶರು ಮೊದಲ [illegible] ಹೊರತು [illegible] ಅವರ [illegible] ಸಿವಿಲ್ [illegible] ಸಂಸ್ಥಾನಾಧೀಶರನ್ನು [illegible] ಅಧಿಕಾರವು [illegible] ಸಿದ್ಧವಾಗಿದೆ. ಅದ್ದರಿಂದ ಮೈಸೂರು ರು ತಮ್ಮ ಆ ಅಧಿಕಾರವನ್ನು ಫೆಡರಲ್ ಕೋರ್ಟಿಗೆ ಬಿಟ್ಟುಕೊಡಬೇಕೆಂದು [illegible] ಪತ್ರಿಕೆಯ ಆ ಲೇಖಕರು ಹೇಳುತ್ತಾರೆ.

ಮೈಸೂರು ರಾಜಕೀಯ ಪರಿಸ್ಥಿತಿ

ಇದರ ವಿಚಾರವನ್ನು ಮಹಾತ್ಮರಿಗೆ ತಿಳಿಯಪಡಿಸುವುದಕ್ಕೋಸ್ಕರ ಮೈಸೂರು ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಚೆಂಗಲರಾಯ ರೆಡ್ಡಿಯವರು ಮಹಾತ್ಮರನ್ನು ಬೃಂದಾವನದಲ್ಲಿ ಕಂಡರು. ಮಹಾತ್ಮರು ಸಂಸ್ಥಾನ ಚಳವಳಿಯ ಕುರಿತು ಮತ್ತು ಮೈಸೂರಿನಲ್ಲಾಗಬೇಕಾದ ಕಾರ್ಯಕ್ರಮಗಳ ಕುರಿತು ತನ್ನ ಅಭಿಪ್ರಾಯವನ್ನು ಚೆನ್ನಾಗಿ ಮಥಿಸಿ ಮೈಸೂರು ಕಾಂಗ್ರೆಸ್ ತನ್ನ ಮುಂದಿನ ಕಾರ್ಯಕ್ರಮವನ್ನು ರಚಿಸುವುದು.

ಸಂಡೂರು ಸುಧಾರಣಾ ಸಮಿತಿ

ಇದರ ಒಂದು ಸಭೆಯು ಕಳೆದ ವಾರ ಕೂಡಿ, ಆಲೋಚನೆ ಬಗ್ಗೆ ಬಂದ ಬಾದಾಭಿನ್ನ ವತ್ತಳೆಯನ್ನು ರಿಕಾರ್ಡು ಮಾಡಿತು. ಈ ಸಮಿ[illegible]

[illegible] ಸಂಸ್ಥಾನದ ಸರಕಾರ [illegible] ಜನರ [illegible] ಸಭೆ [illegible] ಅಧ್ಯಕ್ಷ [illegible] ಬೇಕೆಂದು [illegible] ಪ್ರಗತಿ [illegible]

ಹೈದರಾಬಾದು

ಹೈದರಾಬಾದಿನ ರಾಜಕೀಯ ಸ್ಥಿತಿಗತಿ [illegible] ವರು ವಿಷ್ಯರ ವರುದರು. ಹೈದರಾಬಾದ [illegible] ಇಟ್ಟಿದ್ದ [illegible] ಗಯೇ ಇದೆ. ಹೈದರಾಬಾದಿನಲ್ಲಿ ಆಗಲಿರುವ ರಾಜಕೀಯ ಸುಧಾರಣೆಗಳನ್ನು ಸದ್ಯದಲ್ಲೇ ಪ್ರಕಟಿಸಲಿಯುವುದರಿಂದ ಕಾರ್ಯವು ಅಸ್ತವ್ಯಸ್ತವಾಗಿಂದ [illegible] ದಿನದವರೆ ಅವುಗಳ ಆಲೋಚನೆ [illegible] ಸಂದೇಶವು [illegible] ಲಿದ್ದ [illegible] ದನ್ನು ದಬ್ಬಾಳಿಕೆಯ ಶಾಸನ ಗಳನ್ನು ಹಿಂದಕ್ಕೆ [illegible] ಹಿಂದೂ [illegible] ಅಧ್ಯಕ್ಷರಾದ ಶ್ರೀ [illegible] ರು ಪ್ರಕಟಣೆ ಕೊಟ್ಟಿದ್ದಾರೆ.

ಬಾವಲಪುರ

ಈ ಸಂಸ್ಥಾನದಲ್ಲಿ ಜವಾಬ್ದಾರಿ [illegible] [illegible] ಕೆಲವು ಕ್ಷಿದ [illegible]

ಗ್ವಾಲಿಯರದ ಪ್ರಜಾಪರಿಷತ್ತು

[illegible] ಪ್ರಜಾ [illegible] ಪತ್ತು [illegible] ಅಧ್ಯಕ್ಷತೆಯಲಿ ಕಳೆದ [illegible] ಶ್ರೀ [illegible] ಕೃಷ್ಣ [illegible] ಉದ್ಘಾಟನ [illegible] ರಂಭ [illegible] ಬಿರಿದರು [illegible] ಮಹಾರಾಜರ ಸ್ವಾಮಿನಿಯ ಆಗಮನ [illegible] ಕ್ಕೆ ಬರುವರೆಂದು [illegible] ದೇಶಸ್ವಾತಂತ್ರ್ಯ ಪಡೆದು [illegible] ಎದು ನೊಂದಲಾಗಿ ದಿಂದವಗಳುದ [illegible] ಸಮಗ್ರ ಭಾರತ ರಾಷ್ಟ್ರೀಯ ಸಭೆಯ ಸ್ವಾತಂತ್ರ್ಯ [illegible] ದಿಂದ ಸಾಧ್ಯವೆಂದು [illegible] ಅಧ್ಯಕ್ಷರು ಭಾಷಣ ಕೊಟ್ಟರು.

ತಿರುವಾಂಕೂರು

ತಿರುವಾಂಕೂರಿನ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ತಿಳಿಸಲಿಕ್ಕೆ ಮಹಾತ್ಮರು ಶ್ರೀ ಜ[illegible] ರಾಮದಾಸರವರನ್ನು ತಿರುವಾಂಕೂರಿನಿಂದ ರಾಜಕೋಟೆಕ್ಕೆ ಕರಿಸಿದ್ದರು. ಅಲ್ಲಿ ಮುಂದಿನ ಕಾರ್ಯಕ್ರಮದ ರಚನೆಯಾಗುವುದು. ತಿರುವಾಂಕೂರಿನಿಂದ ಒಂದೆರಡು ತಿಂಗಳ ಹಿಂದೆ ಹೋದ ಶ್ರೀ. ಜ್ಞಾನ್ ಫಿಲಿಪ್ಪೋಸರವರು ಈಗಲೂ ಮಹಾತ್ಮರೊಂದಿಗೆ ಇದ್ದಾರೆ.

ಕಲ್ಸಾರು

ಕಲ್ಸಾರು ಪ್ರಜಾಮಂಡಲದ ಸದಸ್ಯರ ಮೇಲೆ ಕಲ್ಸಾರು ಸಂಸ್ಥಾನದ ಸರಕಾರವು ಹೊರಡಿಸಿದ ವಾರಂಟುಗಳನ್ನ ಸರ್ಕಾರಿ [illegible] ಸರಕಾರ[illegible]

[illegible] ಕೈದುಮಾಡಿದ [illegible] ಬಿಟ್ಟಿದೆ. ರಾಜಕೀಯ ಕೈದಿಗಳ [illegible] ಅಧಿಕಾರಿಗಳ ಈ ಪಾಂಡಿತ್ಯ [illegible] ಸಂಸ್ಥಾನ ಅಧಿಕಾರಿಗಳ [illegible] ದ [illegible] ದಿಗಳ [illegible] ಕಾರವನ್ನು [illegible]

ಚರಖಾರಿ-ದೇವಾಸ ಸಂಸ್ಥಾನಗಳಿಗೆ ಸುಧಾರಣೆ

[illegible] ಸಂಸ್ಥಾನದ [illegible] ಕೆಲವು ರಾಜಕೀಯ ಸುಧಾರಣೆಗಳನ್ನು ಕೊಡ [illegible] ಇಚ್ಛೆಯನ್ನು ಪ್ರಕಟಗೊಳಿಸಿದ್ದಾರೆ.

ರಾಜಕೋಟೆಯಲ್ಲಿ ಮಹಾತ್ಮರು

[illegible] ದವರು ಸಂದರ್ಭದಿ ವಕ್ತೆ ಶ್ರೀ ಕಾಲಿದಾಸ ವೇಳಾಂಗ ಮಹಾತ್ಮರ ಭೇಟಿ ತೆಗೆದು ಗೊಂಡ ಮಾತಾಡಿದರು. ಒಂದು ಕಡೆಯಿಂದ [illegible] ವಜ್ರಗ [illegible] ಪ್ರಕಟವಾಗುವಂತೆ [illegible] ಕಡೆಯಿಂದ ಫೆಡರಲ್ ಕೋರ್ಟಿನ [illegible] ಗಳ ವಿರುದ್ಧವಂತೆಯೂ। ಅದ[illegible]

DIAMONDS! DIAMONDS
BEST BRILLIANCY!

K. R. K. SHET
MANGALORE

[illegible] ನಿಜ ಸ್ವಾಮಾನ!

ವಜ್ರಗಳು!

[illegible] ಬರುವ ವಜ್ರಗಳು [illegible] ಗಳು [illegible] ಕಡಿಮೆ ದರದಲ್ಲಿ ನಮ್ಮಲ್ಲಿ ವಿಕ್ರಯಿಸಲ್ಪಡು ತವೆ.

[illegible] ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ [illegible] ತಿಳಿದುಬಂ[illegible]

ನಿಮಗೆ ಬೇಕಾದುದನ್ನು ವಿನೋದವೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ಕೆಟ್ಟ ಬ್ರಾಂಚು ಒಂದು ಇಲ್ಲದೆ [illegible] ತಿಳಿಯತಕ್ಕದ್ದು

ಕೆ. ಆರ್. ಕೆ. ಶೇಟ್, ಜುವೆಲ್ಲರ್,

ಮಂಗಳೂರು

ಸರದಾರ ವಲ್ಲಭಾಯಿ ಪಟೇಲರ ವೃಂದಾವನ ಭಾಷಣ

ಬಾಬು ರಾಜೇಂದ್ರ ಪ್ರಸಾದರ ದುಃಖೋದ್ಗಾರ

ಅಲ್ಟಿಮೇಟಮ್ ಕೊಡುವ ಸಮಯ ಇದಲ್ಲ!



ವೃಂದಾವನದಲ್ಲಿ ಕೂಡಿದ ಗಾಂಧಿ ಸೇವಾ ಸಂಘದ ಮಹಾಸಭೆಯಲ್ಲಿ ತಮ್ಮ ಮುಕ್ತಾಯ ಭಾಷಣವನ್ನು ಕೊಡುತ್ತ ದೇಶದ ಸದ್ಯದ ರಾಜಕೀಯ ಪರಿಸ್ಥಿತಿ ಮತ್ತು ನಮ್ಮ ಮುಂದಿನ ಕರ್ತವ್ಯಗಳ ಕುರಿತು ಹಲವು ಮಹತ್ವದ ವಿಷಯಗಳನ್ನು ಜನತೆಯ ಗಮನಕ್ಕೆ ತಂದಿರುವರು

ನಾನು ಹಿಟ್ಲರನಲ್ಲ!

'ಕೆಲವರು ನನ್ನನ್ನು ಹಿಟ್ಲರನೆಂದು ಕರೆಯುತ್ತಾರೆ. ಆದರೆ ಗಾಂಧಿಯವರಿಗಿಂತ ದೊಡ್ಡ ಹಿಟ್ಲರರು ನಮ್ಮ ದೇಶದಲ್ಲೇ ಇರುವುದಿಲ್ಲ ಪರಂತು ಅವರು ಪಶುಬಲವನ್ನು ತೋರಿಸಿ ಜರ್ಮನಿಯ ಹಿಟ್ಲರನಂತೆ ನಮ್ಮ ದೇಶದ ಹಿಟ್ಲರ ಆಗಿರುವುದಿಲ್ಲ ಕೇವಲ ಅನುಪಮ ವಿಶ್ವಪ್ರೇಮ ಮತ್ತು ಸಹನಶೀಲತೆಯಿಂದ ಅವರು ವಿಶ್ವವ್ಯಾಪಕ ನೈತಿಕಶಕ್ತಿಯನ್ನು ಸಂಪಾದಿಸಿರುವರು ಆದ್ದರಿಂದ ಅವರು ನಮ್ಮ ದೇಶದ ಸರ್ವಾಧಿಕಾರಿಯ ಪಟ್ಟದಲ್ಲಿ ಶೋಭಿಸಿದ್ದಾರೆ ಅಂಥ ಮಹಾತ್ಮರೊಡನೆ ಕೆಲಸ ಮಾಡಲಿಕ್ಕೆ ನಾವು ಯೋಗ್ಯರೋ, ಅದು ನಮಗೆ ತಿಳಿದಿಲ್ಲ ಪರಂತು ಅವರ ವಿಶ್ವಾಸವು ನಮ್ಮ ಮೇಲೆ ಇರುವ ಹಾಗೆ ತೋರುತ್ತದೆ ಅವರು ಪುರುಷೋತ್ತಮರಾಗಿದ್ದರೂ ಅವರ ಮೇಲೆ ಅನೇಕ ಮಂದಿಯ ಹೀಗೆ ಸಾಧನೆಯ ಟೀಕೆಗಳು ಆಗಿವೆ ಅದಕ್ಕೆ ಅವರ ಅನುಯಾಯಿಗಳೆನ್ನಿಸಿಕೊಳ್ಳುವ ನಮ್ಮ ದೌರ್ಬಲ್ಯವೇ ಕಾರಣ ನಮ್ಮ ದೇಶದಲ್ಲಿ ಯಾರೇ ಆಗಲಿ, ಎಷ್ಟೇ ಪ್ರತಿಭಾಸಂಪನ್ನ ಪ್ರಸಿದ್ಧನಾಗಿರಲಿ, ಮಹಾತ್ಮಾಜಿಯವರ ಸ್ನೇಹ ಒಲವುಗಳಿಲ್ಲದೆ ಅವನ ದಿನಗಳು ಹಾಗೆ ಕಳೆಯಲಾರವು

ನಮ್ಮ ಪತನದ ಕಾರಣ

ನಾಳಿಯದೊಳಗಿನ ಕಚ್ಚಾಟವು ನಮ್ಮ ಪತನಕ್ಕೆ ಕಾರಣವಾಗಿದೆ ಕಾಂಗ್ರೆಸ್ ಯಂತ್ರಸಾಧನವನ್ನು ನಾವು ನ್ಯಾಯಮಾರ್ಗದಲ್ಲಿ ಉಪಯೋಗಿಸಿದರೆ, ನಾವು ಹೋರಾಟವಿಲ್ಲದೆ, ಸುಲಭದಲ್ಲಿ ಸ್ವಾತಂತ್ರ್ಯವನ್ನು ಸಂಪಾದಿಸಬಹುದು ನಾವು ನಮ್ಮ ಪ್ರತಿದ್ವಂದ್ವಿಗಳಾದವರೊಡನೆ ಹೋರಾಡುವುದನ್ನು ಬಿಟ್ಟು, ನಮ್ಮ ನಮ್ಮೊಳಗೇ ಕಚ್ಚಾಡಿಕೊಳ್ಳುವುದು ಅತ್ಯಂತ ಖೇದಾಸ್ಪದವಾಗಿದೆ' ಎಂದು ಮೊದಲಾಗಿ ಸರದಾರ ಪಟೇಲರು ತಮ್ಮ ಅನುಭವದ ವಿಷಯಗಳನ್ನು ಜನರ ಮುಂದಿಟ್ಟಿರುವರು

ವ್ಯರ್ಥ ದೋಷಾರೋಪಣ

ಹೀಗಿದ್ದರೂ ನಮ್ಮ ವೀರ, ಧೀರ ಮುಖಂಡರೆನ್ನಿಸಿಕೊಳ್ಳುವವರು ಒಬ್ಬರೊಬ್ಬರ ಮುಖದ ಮೇಲೆ ಉಗುಳುವುದನ್ನು ಇನ್ನೂ ಬಿಟ್ಟಿರುವುದಿಲ್ಲ. ಕೆಲವರಂತೂ ಸದುದ್ದೇಶದಿಂದ ಮಾಡಿದ ಕಾರ್ಯಗಳಲ್ಲೂ ದೋಷಗಳನ್ನು ಹುಡುಕಿ, ಕ್ಷುಲ್ಲಕ ಕಾರಣಗಳಿಂದ ಅವುಗಳನ್ನು ವಿರೋಧಿಸತೊಡಗಿದ್ದಾರೆ ಬಾಬು ರಾಜೇಂದ್ರ ಪ್ರಸಾದರನ್ನು ಹೊಸ ಅಧ್ಯಕ್ಷರನ್ನಾಗಿ ಆರಿಸಿದ ರೀತಿಯು ಕ್ರಮಬದ್ಧವಲ್ಲವೆಂದು ಬೊಂಬಾಯಿಯ ವೀರ ನರಿಮನ್ನರು ಒಂದು ದೊಡ್ಡ ಸ್ಟೇಟ್‌ಮೆಂಟನ್ನೇ ಹೊರಡಿಸಿಬಿಟ್ಟಿದ್ದಾರೆ. ಕಾಂಗ್ರೆಸಿನ ಹೊಸ ಅಧ್ಯಕ್ಷರ ಆಯ್ಕೆಯು ಕ್ರಮಬದ್ಧವಲ್ಲವಾದರೂ, ದೇಶಹಿತ ದೃಷ್ಟಿಯಿಂದ ಮಾಡಿದ ಕಾರ್ಯಗಳಲ್ಲಿ ಕಾನೂನಿನ ದೋಷಗಳನ್ನು ಹುಡುಕುವುದು ಅಯುಕ್ತವೆಂಬುದು ಈ ಕಾನೂನುವಾದಿಗಳಿಗೆ ಗೊತ್ತಾಗುವುದಿಲ್ಲ ಅತ್ತ ಸಮಾಜವಾದಿಗಳು, ಫಾರ್ವರ್ಡ್ ಬ್ಲಾಕಿನವರು, ರೆಡಿಕಲ್ ಕಾಂಗ್ರೆಸಿನವರು ಎಂದು ಕಾಂಗ್ರೆಸು ತಂಡ ತಂಡವಾಗಿ ಒಡೆದು ಹೋಗಿ ಅದರ ಶಕ್ತಿ, ಪರಿಶ್ರಮಗಳ ಅಪವ್ಯಯವಾಗುತ್ತಿರುವುದನ್ನು ಕಂಡು ಯಾರಿಗೆ ದುಃಖವಾಗದು

ರಾಜೇಂದ್ರ ಪ್ರಸಾದರ ದುಃಖೋದ್ಗಾರ

ಕಾಂಗ್ರೆಸಿನಲ್ಲಿ ಒಮ್ಮತವಿಲ್ಲದಿರುವುದರಿಂದ ಕಾಂಗ್ರೆಸ್ ಕಾರ್ಯಗಳು ಮುಂದರಿಯುವುದು ಕಷ್ಟತರವಾಗಿದೆ ತಾನು ಹಿಂದೊಮ್ಮೆ ರಾಷ್ಟ್ರಪತಿಯಾಗಿದ್ದಾಗಿನ ಕಾಂಗ್ರೆಸಿನ ಸ್ಥಿತಿಯು ಈಗ ಇರುವುದಿಲ್ಲ ಕಾಂಗ್ರೆಸಿನೊಳಗೆ ಭಿನ್ನ ಭಿನ್ನ ಅಭಿಪ್ರಾಯಗಳು ಹುಟ್ಟಿದುದರಿಂದ ತಾನು ತನ್ನ ಪ್ರಾಂತ್ಯದಲ್ಲೇ ಬಲಹೀನನಾಗಿರುವೆನು ಎಂದು ಬಾಬು ರಾಜೇಂದ್ರ ಪ್ರಸಾದರು ಮೊನ್ನೆಯ ತಮ್ಮ ಭಾಷಣದಲ್ಲಿ ಅಂದರು. ಹೀಗಿನ್ನುವಾಗ ನಮ್ಮ ಈಗಿನ ಸ್ಥಿತಿಗತಿಗಳು ಎಂಥವು ಎಂಬುದು ನಮಗೆ ಸರಿಯಾಗಿ ಅರ್ಥವಾಗಬಹುದು ಇಂಥ ಸ್ಥಿತಿಗತಿಗಳು ನಮ್ಮ ಉನ್ನತಿಗೆ ದೊಡ್ಡ ತಡೆಗಳಾಗಿವೆ

ಕಾಂಗ್ರೆಸಿನೊಳಗೆ ಗೋಮುಖವ್ಯಾಘ್ರರು

ಕಾಂಗ್ರೆಸಿನೊಳಗೆ ಅನೇಕ ಮಂದಿ ಗೋಮುಖ ವ್ಯಾಘ್ರರು ಸೇರಿಕೊಂಡಿದ್ದಾರೆ ಬಹುರೂಪೀ ಸಾಧುಗಳೂ ಅಲ್ಲಿ ಅನೇಕ ಮಂದಿ ಇದ್ದಾರೆ ಅವರು ಸ್ವಾರ್ಥಬುದ್ಧಿಯಿಂದ ತಿಂದು ಮಾಡುವುದೆಲ್ಲ ಕಾಂಗ್ರೆಸಿನ ಸೇವೆ ದೇಶದ ಸೇವೆ ಎಂದು ಅನ್ನುವುದಾದರೂ ಅವರ ಕಾರ್ಯಗಳ ಮುಖ್ಯ ಉದ್ದೇಶವು ಸ್ವಾರ್ಥಸಾಧನೆ ಅಥವಾ ಅಹಂ ಸಾಧನೆಯೇ ಆಗಿದೆ ಕಾಂಗ್ರೆಸ್ ಜನರೊಳಗೆ ಭಿನ್ನಾಭಿಪ್ರಾಯಗಳು ಹುಟ್ಟಬಹುದಾದರೂ ಆ ಭಿನ್ನಾಭಿಪ್ರಾಯಗಳು ಬೇರೆ ಬೇರೆ ಪಕ್ಷಪಾರ್ಟಿಗಳನ್ನು ಕಟ್ಟಿಕೊಳ್ಳುವಷ್ಟರ ಹಂತಕ್ಕೆ ಮುಂದರಿದು ಹೋಗಬಾರದು ಕಾಂಗ್ರೆಸಿನಲ್ಲಿರುವ ಒಬ್ಬೊಬ್ಬನು ತನ್ನ ಒಂದೊಂದು ಭಿನ್ನಾಭಿಪ್ರಾಯಕ್ಕಾಗಿ ಒಂದೊಂದು ಪಕ್ಷವನ್ನು ಕಟ್ಟಿಕೊಳ್ಳುವನೆಂದಾದರೆ ಕಾಂಗ್ರೆಸಿನ ಭವಿಷ್ಯವೇನಾಗಬಹುದು? ದೇಶದ ಭವಿಷ್ಯವು ಹೇಗೆ ರೂಪಿಸಲ್ಪಡಬಹುದು? ಆದ್ದರಿಂದ ಕಾಂಗ್ರೆಸಿನ ಮತ್ತು ದೇಶದ ಹಿತಕ್ಕಾಗಿ, ಈ ಗೋಮುಖ ವ್ಯಾಘ್ರರನ್ನೂ ಬಹುರೂಪಿ ಸಾಧುಗಳನ್ನೂ ಕಾಂಗ್ರೆಸಿನೊಳಗಿಂದ ಹೊರಗಟ್ಟುವುದು ಅಗತ್ಯವಾಗಿದೆ ಕಾಂಗ್ರೆಸಿನ ಶುದ್ಧೀಕರಣವಾಗಿ ಏಕಮುಖವಾದ ಪ್ರಯತ್ನಗಳಿಂದ ದೇಶಹಿತವು ಸಾಧಿಸಲ್ಪಡಬೇಕಾಗಿದೆ.

ಕಾಂಗ್ರೆಸಿನ ಶುದ್ಧೀಕರಣ

ಇದಕ್ಕಾಗಿ ಬಾಬು ರಾಜೇಂದ್ರ ಪ್ರಸಾದ, ಪಂಡಿತ ಜವಾಹರಲಾಲ ನೇಹರು, ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ, ಆಚಾರ್ಯ ನರೇಂದ್ರದೇವ ಮತ್ತು ಜೆ ಬಿ ಕೃಪಲಾನಿಯವರಿಂದೊಡಗೂಡಿದ ಕಾಂಗ್ರೆಸ್ ಶುದ್ಧೀಕರಣ ಉಪಸಮಿತಿಯು ಈಗಾಗಲೇ ಕಾರ್ಯಾರಂಭವನ್ನು ಮಾಡಿರುವರು ತ್ರಿಪುರಿ ಕಾಂಗ್ರೆಸಿನಲ್ಲಿ ಈ ಸಂಬಂಧ ಆದ ಠರಾವಿನ ಗುಣವಾಗಿ ಇದು ಕೆಲಸಮಾಡಿ, ಕಾಂಗ್ರೆಸಿನ ಶುದ್ಧೀಕರಣಕ್ಕೆ ತಕ್ಕ ಸೂಚನೆಗಳನ್ನು ಕೊಟ್ಟು ವರದಿ ಬರೆಯುವುದು ಈ ವರದಿಯು ಇದೇ ಜೂನ್ ತಿಂಗಳ ಅಂತ್ಯಭಾಗದಲ್ಲಿ ಬೊಂಬಾಯಿಯಲ್ಲಿ ಕೂಡುವ ಎ. ಐ. ಸಿ. ಸಿ. ಸಭೆಯಲ್ಲಿ ಮಂಜೂರಾತಿ ಬಗ್ಗೆ ಇಡಲ್ಪಟ್ಟು, ಅನಂತರ ಅದರಲ್ಲಾದ ವ್ಯವಸ್ಥೆಯಂತೆ ಮುಂದಿನ ಕಾರ್ಯಗಳು ಕೈಕೊಳ್ಳಲ್ಪಡುವವು ಇದೇ ಜೂನ್ ತಿಂಗಳ ೩, ೪, ೫ನೆ ತಾರೀಕುಗಳಲ್ಲಿ ಬೊಂಬಾಯಿಯಲ್ಲಿ ಈ ಸಮಿತಿಯ ಸಭೆಯೂ ಕೂಡುವುದೆಂದು ಪ್ರಕಟವಾಗಿದೆ

ವರ್ಕಿಂಗ್ ಕಮಿಟಿಯ ಸಭೆ

ಮುಂದಿನ ವರ್ಕಿಂಗ್ ಕಮಿಟಿಯ ಸಭೆಯು ಅಹ್ಮದಾಬಾದಿನಲ್ಲಿ ಕೂಡುವುದೆಂದು ಹಿಂದೊಮ್ಮೆ ಪ್ರಕಟವಾಗಿದ್ದಿತ್ತಾದರೂ, ಅದು ಜೂನ್ ತಿಂಗಳ ಮೂರನೆ ವಾರದಲ್ಲಿ ಬೊಂಬಾಯಿಯಲ್ಲಿ ಕೂಡುವುದೆಂದು ಖಚಿತವಾಗಿ ತಿಳಿದು ಬಂದಿದೆ ಅದರಲ್ಲಿ ದೇಶದ ಮುಂದಿಡಬೇಕಾದ ಭಾವೀ ಕಾಂಗ್ರೆಸ್ ಕಾರ್ಯಕ್ರಮವನ್ನು ಕುರಿತು ಆಲೋಚಿಸಲಾಗುವುದು ಕಾಂಗ್ರೆಸ್ ಮಂತ್ರಿಮಂಡಲಗಳ ಇಷ್ಟರ ತನಕದ ಕಾರ್ಯಭಾಗವನ್ನು ಪರಿಶೀಲಿಸುವುದಾಗಿಯೂ ತಿಳಿದು ಬರುತ್ತದೆ

ಸರದಾರರು ರಾಜೀನಾಮೆ ಕೊಡುವುದಿಲ್ಲ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ತಮ್ಮ ಸದಸ್ಯತ್ವಕ್ಕೆ ಸರದಾರ ಪಟೇಲರು ರಾಜೀನಾಮೆ ಕೊಡುವರೆಂದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯನ್ನು ಅವರು ಸಂಪೂರ್ಣ ಸುಳ್ಳೆಂದು ನಿರಾಕರಿಸಿದ್ದಾರೆ ಈ ಸುದ್ದಿಗೆ

ಯಾವ ಆಧಾರವೂ ಇರುವುದಿಲ್ಲವೆಂದೂ ಇದು ತನ್ನ ವಿರುದ್ಧ ನಡೆದಿರುವ ಅಪಪ್ರಚಾರದ ಒಂದು ಉದಾಹರಣೆಯೆಂದೂ ಶ್ರೀ ಪಟೇಲರು ಜಬ್ಬಲಪುರದಲ್ಲಿ ಪತ್ರಿಕಾ ಪ್ರತಿನಿಧಿಯ ಭೇಟಿ ಕೊಟ್ಟಾಗ ಹೇಳಿದರು ಇದೇ ಸಂಧಿ ಕಾಲಿಯಲ್ಲಿ ಭಾಷಣ ಕೊಡುತ್ತಾ ಅವರು ಅಂದದ್ದೇನಂದರೆ 'ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ನಾನು ಬೇಕಾಗಿದ್ದರೆ, ಅಲ್ಲಿ ನಾನು ಇರುವೆನು ಕಾಂಗ್ರೆಸಿಗೆ ಅಲ್ಲಿ ನಾನಿರುವುದು ಬೇಡವಾಗಿದ್ದರೆ ಹೊರಬರುವೆನು ಕಾಂಗ್ರೆಸ್ ಕಮಿಟಿಯಲ್ಲಿ ಇದ್ದು ಅಥವಾ ಇಲ್ಲದೆ ದೇಶದಲ್ಲಿ ಮಾಡಬೇಕಾದ ಕಾರ್ಯಗಳು ತುಂಬಾ ಇವೆ ಯೋಗ್ಯರಾದವರು ಮಾತ್ರ ವರ್ಕಿಂಗ್ ಕಮಿಟಿಯಲ್ಲಿ ಇರಬೇಕೆಂಬುದು ನನ್ನ ಆಸೆ ದೇಶದ ರಾಜಕೀಯ ಪರಿಸ್ಥಿತಿಯು ಬಹಳ ಪಕ್ವಬದ್ಧವಾಗಿರುವುದರಿಂದ ಸರದಾರ ಪಟೇಲರು ಇದೇ ತಿಂಗಳಲ್ಲಿ ಆಗಬೇಕಾಗಿದ್ದ ತಮ್ಮ ದಕ್ಷಿಣ ಆಫ್ರಿಕದ ಪ್ರಯಾಣವನ್ನು ಕೂಡ ಅನಿಶ್ಚಿತ ಕಾಲಕ್ಕೆ ಮುಂದುವರಿಸಿದ್ದಾರೆ

ಅಲ್ಟಿಮೇಟಮ್ ಈಗ ಕೊಡಬಾರದು

ಆರು ತಿಂಗಳ ಅವಧಿಯೊಳಗೆ ಬ್ರಿಟಿಷ್ ಸರಕಾರವು ನಮ್ಮ ರಾಷ್ಟ್ರೀಯ ಬೇಡಿಕೆಗಳನ್ನು ಮನ್ನಿಸಬೇಕೆಂದು ಅಲ್ಟಿಮೇಟಮ್ ಕೊಡಬೇಕಾಗಿ ಶ್ರೀ ಸುಭಾಷರು ಹೇಳುವರು ಪರಂತು ಅಲ್ಟಿಮೇಟಮ್ ಕೊಡಲಿಕ್ಕೆ ಇದು ಅನುಕೂಲವಾದ ಸಮಯವು ಆಗಿರುವುದಿಲ್ಲ ಈಗ

ಎಲ್ಲೆಲ್ಲೂ ಅಸತ್ಯ ಹಿಂಸೆ, ದ್ವೇಷ, ಕಲಹಗಳು ಕಂಡುಬರುತ್ತಿವೆ ಇವುಗಳಿಂದ ಕಾಂಗ್ರೆಸು ದುರ್ಬಲವಾಗಿದೆ ಅಲ್ಟಿಮೇಟಮ್ ಕೊಟ್ಟು ಅದರಂತೆ ಕಾರ್ಯವಾಗದಿದ್ದರೆ ಕಾಂಗ್ರೆಸು ಅಪಹಾಸ್ಯಕ್ಕೆ ಪಾತ್ರವಾಗುವುದು ದೇಶವು ಸತ್ಯಾಗ್ರಹ ಮಾಡಲಿಕ್ಕೂ ಸಿದ್ಧವಾಗಿರುವುದಿಲ್ಲ ಎಲ್ಲಕ್ಕೂ ಮುಖ್ಯವಾಗಿ ಈಗ ಕಾಂಗ್ರೆಸಿನ ಶುದ್ಧೀಕರಣವಾಗಬೇಕು ಕಾಂಗ್ರೆಸ್ ಧ್ಯೇಯಾದರ್ಶಗಳನ್ನು ತ್ರಿಕರಣ ಪೂರ್ವಕ ಒಪ್ಪುವವರು ಮಾತ್ರ ಅದರಲ್ಲಿರಬೇಕು ನಾವು ನಮ್ಮೊಳಗಿನ ದ್ವೇಷ ಕಲಹಗಳನ್ನು ಬದಿಗೊತ್ತಿ, ಒಮ್ಮತದಿಂದ ಸ್ವಾತಂತ್ರ್ಯ ಸಂಪಾದನೆಗಾಗಿ ಹೋರಾಡಲು ಸಿದ್ಧರಾಗಬೇಕು ಹಳ್ಳಿಯೊಳಗಿನ ಟೀಕೆ ಪ್ರಚಾರ ಕಾರ್ಯಗಳಿಂದ ದೇಶಹಿತಕ್ಕೇ ಕೇಡಾಗುವುದು ಗಾಂಧೀ ಭೋಸ ಪತ್ರವ್ಯವಹಾರವು ಪ್ರಕಟವಾದಾಗ ಸತ್ಯ ಸಂಗತಿಗಳು ಬಯಲಾಗಿ, ಎಲ್ಲ ಅಪವಾದ ತರ್ಕ ವಾಗ್ವಾದಗಳು ಕೊನೆಗೊಳ್ಳುವವಾಗಿ ತಾನು ನಂಬುತ್ತೇನೆ ಎಂದು ಸರದಾರ ಪಟೇಲರು ಕಾಶಿಯ ಸಾರ್ವಜನಿಕ ಸಭೆಯಲ್ಲಿ ಭಾಷಣ ಕೊಟ್ಟರು ಗಾಂಧಿಯವರ ಮೇಲೆಯೇ ತಮಗೆ ವಿಶ್ವಾಸವಿರುವುದೆಂದೂ ದೇಶದ ಮಾನರಕ್ಷಣೆಯ ಗೌರವವು ಅವರಿಗೇ ಸಲ್ಲತಕ್ಕದ್ದೆಂದೂ ಗಾಂಧಿಯವರ ಮಾರ್ಗ ಧೋರಣದಿಂದ ಭಿನ್ನವಾದ ಕಾರ್ಯಧೋರಣವು ತಮಗೆ ಬೇಕಾಗುವುದಿಲ್ಲವೆಂದೂ ಇದೇ ಸಭೆಯಲ್ಲಿ ಆಚಾರ್ಯ ಕೃಪಲಾನಿಯವರು ಹೇಳಿದರು

ಯು. ಪಿ ಯಲ್ಲಿ ಕಾಂಗ್ರೆಸ್ ಚುನಾವಣೆ

ಕಾಂಗ್ರೆಸ್ ಸದಸ್ಯರೆಂದು ಸುಳ್ಳು ಹೆಸರುಗಳನ್ನು ದಾಖಲು ಮಾಡಿ, ಅವುಗಳ ಆಧಾರದ ಮೇಲೆ ಆರಿಸಿ ಬಂದ ಕಾಂಗ್ರೆಸ್ ಕಮಿಟಿ ಮೆಂಬರರು ರಾಜೀನಾಮೆ ಕೊಡಬೇಕೆಂದೂ, ನಾಮಿನೇಶನ ಪತ್ರಗಳನ್ನು ಕೊಟ್ಟವರೂ ಅವುಗಳನ್ನು ಹಿಂತೆಗೆದುಕೊಳ್ಳಬೇಕೆಂದೂ, ಇಲ್ಲವಾದರೆ ಅವರ ಮೇಲೆ ಕಠಿಣ ರೀತಿಯ ಶಿಸ್ತು ಜಾರಿಯಾಗುವುದೆಂದೂ ಸಂಯುಕ್ತ ಪ್ರಾಂತ ಕಾಂಗ್ರೆಸ್ ಕಮಿಟಿಯ ಚುನಾವಣಾ ಸಮಿತಿಯು ಸೂಚಿಸಿದೆ ಸುಳ್ಳು ಮತದಾರರ ಹೆಸರುಗಳನ್ನು ದಾಖಲುಮಾಡಿದವರ ಮೇಲೆ ಕೂಡ ಶಿಸ್ತು ಜಾರಿಯಾಗುತ್ತದೆ ಇದು ಇತರ ಪ್ರಾಂತಿಕ ಕಾಂಗ್ರೆಸು ಕಮಿಟಿಗಳಿಗೂ ಅನುಕರಣೀಯವಾಗಿದೆ

ಶ್ರೀ ಸುಭಾಷಚಂದ್ರರ ಭಾಷಣ

ಹೌರಾದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಶ್ರೀ ಸುಭಾಷಚಂದ್ರ ಭೋಸರು ತಾವು ಕಾಂಗ್ರೆಸಿನೊಳಗೆ ಒಂದು ಫಾರ್ವರ್ಡ ಬ್ಲಾಕನ್ನು ಮಾಡುವ ಉದ್ದೇಶವನ್ನು ವಿವರಿಸಿದರು ಕಾಂಗ್ರೆಸ್ ಮಂತ್ರಿಗಳು ಕ್ರಾಂತಿಕಾರಕ ಭಾವಗಳಿಗೆ ಮೆಲ್ಲಗೆ ತಿಲಾಂಜಲಿ ಕೊಡುತ್ತ, ಆಡಳಿತ ಯಂತ್ರದೊಳಗೆ ಸಮಾವೇಶವಾಗುತ್ತಿರುವರಾದ್ದರಿಂದಲೂ, ಅವರಲ್ಲಿ ಮಂದಗಾಮಿಗಳ ಮನೋವೃತ್ತಿಯು ಸುಳಿದಾಡುತ್ತಿರುವುದರಿಂದಲೂ, ಕಾಂಗ್ರೆಸಿನ ಕಾರ್ಯಕ್ರಮ

(೧೬ನೇ ಪುಟವನ್ನು ನೋಡಿರಿ)

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ. ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿರೂಪಗಳು, ಘಟನೆಯ ರೂಪಗಳು ಘಟನೆಯ ರೀತಿಗಳು, 'ಶಾಂತ' ಅವರಣ—ಇವೆಲ್ಲ ವಾಸ್ತವವಾದುವು. ಹಳ್ಳಿಯು ಸಾವಿರಾರು ಕೋಟಿ ಉಂಡಾವುರದೊಳಗಿನ ಒಂದು ಗ್ರಾಮ ಸಮೂಹ, ವ್ಯಕ್ತಿಗಳು ಮಾತಿನ ರೀತಿಗಳು ಹಲವು ಅಲ್ಲಿನವೆ. ಬರಿಯ ಪಾತ್ರಪರಿಚಯಗಳೇ. ಈ ಚಿತ್ರಗಳ ಗುರಿ ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ ಅನಂತರದಲ್ಲಿ ಸಾಧಾರಣ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು. ನಾನು ಬರೆದ ಪ್ರಸ್ತಾವನೆಯ ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅವರ ಮುಂದಿರುವ ಪಾತ್ರಗಳು ಇಂಥವು—ಎಂದು ಒದಗಿಸಿಕೊಡುತ್ತೇನೆ. ಇತಿ,

ಶಿವರಾಮ ಕಾರಂತ

೧೪. ಮೂಸೆಬ್ಯಾರಿ

ಹೊಗೆಸೊಪ್ಪಿನ ವ್ಯಾಪಾರಿ ಮೂಸೆಬ್ಯಾರಿಯೆಂದರೆ ಭಾರೀ ಮನುಷ್ಯ. ಅವನು ನಮ್ಮೂರಿಗೆ ಬರುವಾಗ 'ಟೀಂಟು ಟಂಕಾಗ' ಇದ್ದರೂ ಈಗ ಬರಾಬ್ಬರಿ ದಾಂಡಿಗನಾಗಿ ಕಾಣಿಸುತ್ತಾನೆ. ಮೈ ಬಿಟ್ಟು ತಿರುಗಾಡುವ ಪದ್ಧತಿ ಅವನದು. ಉಡಲು ಲುಂಗಿ, ನಡುವಿಗೆ ದಪ್ಪದ ಪಾಕೀಟಿನ 'ಬೆಲ್ಟು.' ಅದಕ್ಕೆ ಸಿಕ್ಕಿಸಲು ಚೂರಿಯೊಂದು. ತೋಳಿಗೆ ತಾಯಿತು. ತಲೆಗೆ ಪೇಟೆಂಟು ನೂಪಿಳ್ಳ ಟೊಪ್ಪಿ. ಬ್ಯಾರಿಗಳು ಸಾಹುಕಾರರಾದ ಬಳಿಕ ಟೋಪಿಯ ಹೊರಗಡೆ ಒಂದು ಶಲ್ಲಿ ಬೇರೆ ಸುತ್ತುತ್ತಾರೆ.

ನಮ್ಮೂರಿನಲ್ಲಿ ಮಾಪಿಳ್ಳೆಯರು ಬೇರೂರಿ ಹತ್ತು ವರ್ಷ ಸುಮಾರಾಯಿತು. ಇಲ್ಲಿಗೆ ಕ್ರಿಶ್ಚನರು ಬರುವ ಮೊದಲೇ ಬಂದವರು. ಸಾಮಾನ್ಯ ಅವರ ಪಠಾಲವು ಮಳೆ ಮುಗಿದೊಡನೆ ಘಟ್ಟದ ಪ್ರಾಂತಕ್ಕೆ ಸಾಲುಸಾಲಾಗಿ, ಓಲಿ ಹೇಟು ಧರಿಸಿ ಹೋಗುವುದನ್ನು ಚಿಕ್ಕಂದಿನಲ್ಲಿ ಕಂಡ ನೆನಪು. ಅವರಲ್ಲಿ ಕೆಲವರು ನಮ್ಮ ಬೆಂಗರೆಗೆ ವಿಷಯದ ವ್ಯಾಪಾರಕ್ಕಾಗಿ ಬಂದು ಹೋಗುತ್ತಿದ್ದರು. ಅಂಥವರಲ್ಲಿ ಸೇರಿಕೊಂಡು ಮೂಸೆಬ್ಯಾರಿ ೧೬ ವರ್ಷದ ಹುಡುಗನಾಗಿದ್ದಾಗ ನಮ್ಮೂರಿಗೆ ಬಂದುದು. ದೊಡ್ಡ ವಿಷಯದ ವ್ಯಾಪಾರಿಯೆಂದು ಹೆಸರಾದ ಶೇಕುಬ್ಯಾರಿಗಳ ಪಂಚಾಕರಿಯವನಾಗಿ ಬಂದವನು ಎರಡು ಮೂರು ವರ್ಷವೂ ಬಂದು ಹೋಗುವ ಸಂಬಳ ಮಾಡಿಕೊಂಡನು. ಕೊನೆಗೇಕೋ ಪಾರತಂತ್ರ್ಯ ಬೇಡವೆಂದು, ಕಾಂಬರೆಗೋಟಿನಿಂದ ಹೊಗೆಸೊಪ್ಪು ತಂದು ಸ್ವತಂತ್ರ ವ್ಯಾಪಾರ ಮಾಡ ತೊಡಗಿದನು. ಈ ವ್ಯಾಪಾರದಲ್ಲಿ ಸರಾಸರಿ ಮೂರು ನಾಲ್ಕು ವರ್ಷಗಳ ತನಕ ಅವನಿಗೆ ಎದುರಾಳಿಗಳು ಇರಲಿಲ್ಲ. ಅಲ್ಲದೆ ನಮ್ಮ ಊರಿನ ಜನ್ನಪ್ಪೈಗಳಂಥವರು ಹೊಗೆಸೊಪ್ಪಿನ ಕಮಿಷನ್ ಗಿರಾಕಿ ಆಗಿದ್ದರು. ವ್ಯಾಪಾರ ನಡೆಯಿತು. 'ಪನೋ ಅಲ್ಲಾನ ದೆಸೆಯಿಂದ ನಸೀಬ ಖುಲಾಯಿಸಿತು'—ನಸೀಕರೆಯಲ್ಲಿ ಪುಗ್ಗೆರೆ ಆದರೆ ನಿನ್ನ ಬೆಂಗ್ರೆಯಲ್ಲಿ ಪುಗ್ಗೆರೆ ಆಗಬಾರದೇಕೆ ಎಂದು ಧೈರ್ಯ ಮಾಡಿ ಮೂಸೆಯು ಒಂದು ವರ್ಷ ನಮ್ಮೂರಲ್ಲಿ ೧೦ ಎಕ್ರೆ ಹೊಗೆಸೊಪ್ಪು ಬೆಳೆಸಿದನು. ಅದಕ್ಕೆ ನೀರೆಯ ಮಾಪಿಳ್ಳೆ ಹುಡುಗರ ನಾಲ್ವರು, ಇಪ್ಪತ್ತು ಗದಿಗೆಗಳ ಸಹಿತ ಕಾಸರಗೋಡಿನಿಂದ ಬಂದರು.

ಆಗ ನಮ್ಮ ಊರವರೆಂದರೆ—'ಬ್ಯಾರಿಗೆ ಅದೇ ಆಸೆ ಕಾಸರಗೋಡಿನಲ್ಲಿ ಹೊಗೆಸೊಪ್ಪು ಆಗುತ್ತದೆಂದು ಇಲ್ಲಿನ ನೆಲದ ಗುಣಕ್ಕೆ ಆದೀತೆ' ಎಂದು ನಕ್ಕರು. ಮೂಸೆಗೆ ಜನರ ಹಣೆಬರಹ ಚೆನ್ನಾಗಿ ಗೊತ್ತು—ನಿಮಗೆ ನಾನ ತೋರಿಸಿದ ರಾಮಾಯಣ ಎಂದು ಪರಿಹಾಸ್ಯ ಮಾಡಿದನು. ಆ ವರ್ಷ ಊರಲ್ಲಿ ವಿಷಯದ ಗಾಣಗಳು ವಿಪರೀತ ಬಿದ್ದವು. ವಿಷಯದ ಬೆಳೆಗೆ ಕಡಿಮೆ ಬೆಲೆಯಾಯಿತು. ಮೊಗೇರ ಅಣ್ಣ ಹೇಳುವ ಹಾಗೆ 'ಬ್ಯಾರಿಗಳು ಬಡಾಯಿ ಸಿದವನು ಗೊಬ್ಬರ ಹಾಕಿದರು—ಅಬ್ಬಾ ಒಂದೊಂದು ಹೊಗೆಸೊಪ್ಪಿನ ಎಸಳು ಎಂದರೆ ಆನೆ ಕಿವಿ ಹಾಗೆ' ಆಯಿತಂತೆ. ಆ ವರ್ಷ ನಿಜಕ್ಕೂ ಬಲು ಹುಲುಸಾದ ಪೈರು ಬಂದಿತು. ಈಗ ಕಾಯಂ ೧೦—೨೦—೩೦ ಎಕ್ರೆ ಎಂದು ಬ್ಯಾರಿಗಳು ಹೀಗೆ ಸಾಲು ಬೆಳೆಯಿಸುತ್ತಿದ್ದಾರೆ, ಅಲ್ಲದೆ ಬಾಂಗೇನಿ ಗದ್ದೆಗಳಲ್ಲಿ ಹಲವು ಅವರ ಸ್ವಂತ ಹೆಸರಿಗೆ ಒಂದೊಂದಾಗಿ ಆಗುತ್ತ ಬಂದಿವೆ. ಬ್ಯಾರಿಯು ಬ್ಯಾಂಗಳೆನ್ನುವ ಪದವಿಗೇರಿದನು.

ವ್ಯಾಪಾರದಲ್ಲಿ ಮೂಸೆಬ್ಯಾರಿಗಳು ಸಾಮಾನ್ಯರಂತೆ ಬಿಟ್ಟುಕೊಡುವ ಕುಳವಲ್ಲ. ನಮ್ಮ ಅನಂತ ಪ್ರಭುವಿನ ಅಂಗಡಿಯಲ್ಲಿ ಒಂದು ಸಿಂಗಲ್ ಚಾ ಹೊಡೆದರೆ ರಾತ್ರಿ ಹತ್ತು ಘಂಟೆಯ ತನಕ ಏನೂ ಇಲ್ಲ. ಕೆಲಸ ಮಾಡುವಂಥ ಗಟ್ಟಿಗರು. ಬ್ಯಾರಿಗಳ ಮನೆಯೋ—ಬಿಡಾರ ಸಹಿತವಾಗಿ ಪೇಟೆಗೆ ಕೂಸು ದೂರದಲ್ಲಿದೆ. ಎರಡೇ ಅಂತರದ ಮನೆ. ೧೦ ಸೆಂಟ್ಸ್ ಜಾಗ. ಒಂದು ಬಾವಿ, ಹಿತ್ತಲಲ್ಲಿ ಒಂದೂ ಗಿಡವಿಲ್ಲ. ಗಿಡ ಕಡಿಮೆಯಾದರೂ ಆಡುಗಳು ತಪ್ಪಿದ ಅಂಗಳವಲ್ಲ. ಅದಿನ ಮೇವು ನೆರೆಕರೆಯ ಹಿತ್ತಿಲಿಂದ ತಸ್ಕರತೆಯಿಂದ ಬರುತ್ತದೆ. 'ಬ್ಯಾರಿಗಳ ಮನೆಯಲ್ಲಿ ಹೊಗೆ ಹೊರಟದ್ದು ನಾನು ನೋಡಿಲ್ಲ' ಎಂದು ಅವರ ಚೌಕಶಿಗಾಗಿ ಚೇಷ್ಟೆ ಮಾಡುವವರೂ ಇದ್ದಾರೆ. ಆದರೆ ಬ್ಯಾರಿಗಳ ಹಂಗು ಇಲ್ಲದವರು ಕಡಿಮೆ. ಅವರ ಜನ್ನಪ್ಪೈಗಳಿಗೆ ಆ ಗತಿ ಜವಾಬ್ದಾರಿಯ ಮೇಲೆ ಸಾವಿರ ಸಾಲ ಕೊಟ್ಟಿದ್ದಾರೆ ಎಂದು ವದಂತಿಯಿದೆ.

ಇನ್ನು ಈಗಿನ ಆಲೋಚನೆಯು ಹೀಗಿದ್ದಾಗಲೇ ಗೇರುಬೀಜದ ವ್ಯಾಪಾರಗಳು, ಹೊಗೆಸೊಪ್ಪಿನೊಂದಿಗೆ ಸೇರಿವೆ. ದಿವೆ ಹಗಲು ಬ್ಯಾರಿಗಳನ್ನು ಕಾಣಲಿಕ್ಕೆ ದುರ್ಲಭವಾದರೂ ಸಂಜೆ ೬ಕ್ಕೆ ಅಂಗಡಿ ಬಾಗಿಲು ತೆರೆದರೆ ಬೆಳಗಿನ ತನಕ ಚಿಮಿಣಿ ದೀಪ ಉರಿಯುತ್ತದೆ. ಈಗಲೋ ಇನ್ನೊಂದು ಗಳಿಗೆಗೋ ಎಂಬ ಮಾದರಿಯಲ್ಲಿ ಉರಿಯುತ್ತಿರುತ್ತದೆ.

> ## ಬರುವ ವಾರ
>
> ### ೧೫. ರಾಮರಾಯರು.
>
> ಶ್ರೀರಾಮ ಎಂಬುದು ಸಂಕೇತ ನಾಮ.
> ಪಾಟೀಲ ಪದವು ಅವರನ್ನು ಹೊಗಳುವಷ್ಟು
> ನರಸಿಂಹಯ್ಯ ದೂರುತ್ತಾರೆ
> ಕಾಂಗ್ರೆಸಿಗೆ ಕೈಹಾಕಿ ರಾಮರಾಯರ ಮೂಕ
> ಮೊಗ್ಗು ಸುಟ್ಟಿತು
> ದೇಶ ಉದ್ಧಾರ ಮಾಡಲು ಹೊರಟವರು ತನ್ನ
> ಬಳಗವು ಆದರೆ ಸಾಕೆಂದು ಹಿಂತಿರುಗಿದರು
>
> ಶ್ರೀ ಕಾರಂತರ
> ## ಹಳ್ಳಿಯ 10 ಸಮಸ್ತರು
> ಯಾವತ್ತು ಗ್ರಾಮ ದೇವ್ರ ದೇವತೆಗಳೇ!

ಮೊನ್ನೆಯು ಕಾಂಗ್ರೆಸು ಸಭೆಗೆ ಬಂದವರಲ್ಲಿ ಬ್ಯಾರಿಗಳು ಒಬ್ಬರು. ಯಕ್ಷಗಾನದಲ್ಲೂ ಅವರಿಗೆ ಅಭಿರುಚಿ ಬಂದಿದೆ. ಸಾಮಾನ್ಯ ಅರ್ಥದಾರರು ಕಮ್ಮಿ ಬಿದ್ದರೆ ಬ್ಯಾರಿಗಳು ಒಂದು ಅರ್ಥ ಹಾರಿಸಿದರೂ ಹಾರಿಸಿದರೇ. ಜನ್ನಪ್ಪೈಗಳಿಗೆ ಆ ದಿವಸ ಆದ ಗದ್ದಲಿನೊಡನೆ ಮುದರ ಚೆನ್ನಮ್ಮೆಯರು ಎಂದು ಗದ್ದಲ ಹಾಕುವುದರ ಬದಲು ಡಾಕ್ಟರ್, ಕೌನ್ಸಿಲರು ಹಾಗೆ ನಮ್ಮ ಮೂಸೆ ಬ್ಯಾರಿಗಳು. ಯಾಕೆ ಅವರನ್ನು ಕಾಂಗ್ರೆಸು ಅಧ್ಯಕ್ಷರನ್ನಾಗಿ ಮಾಡಬಾರದು, ಮೂಸೆ ಬ್ಯಾರಿಗಳು ಯಾರಿಗೂ ಬೇಡದವರಲ್ಲ, ಎಲ್ಲರಿಗೂ ಸಮಾನರಾಗಿರುವ ಜನ ಅವರು' ಎಂದು ಸೂಚನೆ ಮಾಡಿದರು. ಡಾಕ್ಟರರ ತಲೆಯಲ್ಲಿ 'ಈ ವರ್ಷದ ಮಟ್ಟಿಗೆ ಚೆನ್ನಮ್ಮಯ್ಯರಿಗೆ ಸಲಾಂ ಹಾಕಿ ಅವರ ಹೆಸರನ್ನು ಹಿಂದೆಗೆಸುವುದು, ನರಸಿಂಹಯ್ಯ ಆಗ ಪ್ರವರವನ್ನು ಹಿಂದೆಗೆಯುಸಿ ಯಾರು—ಆಗ ಜನ್ನಪ್ಪೈಗಳು ಹೇಳಿದ ಹಾಗೆ ಮೂಸೆ ಬ್ಯಾರಿಗಳನ್ನು ಅಧ್ಯಕ್ಷರಾಗಿ ಮಾಡುವುದು. ಇನ್ನು ತಮ್ಮ ಹೇಳಿಕೆಯಲ್ಲಿರುವ ಮಾರನನ್ನಾದರೂ ಕಾರ್ಯದರ್ಶಿಯನ್ನಾಗಿ ಮಾಡಿ ಒಂದು ವರ್ಷ ತಳ್ಳುವ. ಅಷ್ಟರೊಳಗೆ ಒಮ್ಮೆಗಾದ ಜಗಳ ತಣಿದೀತು. ಮುಂದಿನ ವರ್ಷ ನೋಡೋಣ' ಎಂಬ ಯೋಚನೆ ಬಂದಿತು. ಅವರು ಈ ವಿಷಯವನ್ನು ಒಂದೆರಡಾಗಿ ಮೆಲ್ಲ ಪ್ರಕಾರವು ನರಸಿಂಹಯ್ಯನ ಹತ್ತಿರವೂ ಮಾತನಾಡಿದರು.

ಈ ಸಂಗತಿ ಮೂಸೆ ಬ್ಯಾರಿಗಳಿಗೂ ತಿಳಿಯಿತು. ಕಾಂಗ್ರೆಸು ಪಟ್ಟ ತನಗೆ ಬರುತ್ತದೆ ಎಂಬ ವಿಷಯದಲ್ಲಿ ಅವರ ಹಿಗ್ಗು ಹೇಳತೀರದು. ಇಷ್ಟೆಲ್ಲಾ ರೂರಲ್ ಅಸ್ಸೆಂಬ್ಲಿಯಲ್ಲೂ ಪಂಚಾಯತಿ ಮಾಡಿದ್ದರು. ಒಳಗಿಂದೊಳಗೇನೆ ನಾಗಯ್ಯ ಸೆಟ್ಟರಿಗೆ ತಿಳಿಯದೆ ನಡೆದ ಈ ಮಾತುಗಳಿಂದ ನಾಗಯ್ಯನ ಮನಸ್ಸಿನಲ್ಲಿ ಮೊದಲೇ ತಾನು ಕಾಂಗ್ರೆಸ್ ಪಾರ್ಟಿ ಸೇರಿಕೊಂಡು ಮುಂದಿನ ಇಲೆಕ್ಷನಿಗೆ ಬೋರ್ಡಿಗೆ ನಿಲ್ಲಬೇಕೆಂಬ ಆಸೆಯಿತ್ತು. ಅದಾಗದಿದ್ದರೂ ಕಾಂಗ್ರೆಸು ಪ್ರೆಸಿಡೆಂಟನಾದರೂ ಆಗಬಹುದಲ್ಲ ಎಂಬ ಆಸೆಯಿತ್ತು. ಆದರೆ ಡಾಕ್ಟರರ ಅಭಿಪ್ರಾಯ ಹೀಗೆ ಎಂದ ನರಸಿಂಹಯ್ಯನ ತಿಳಿದೊಡನೆ ನಾಗಯ್ಯ ಸೆಟ್ಟರಿಗೆ ಗಡಿಬಿಡಿಯಾಯಿತು. ಅವರ ಇವರ ಎಂದು ತನಗೆ ಆ ಪಟ್ಟ ಸಿಗದೆ ಇರುವ ಸಂಭವವಾದರೆ ಅವಮಾನವೆಂದ ಗಳಿಕೆ ಬಂದಿತು. ಒಂದೇ ಸಮಯದಲ್ಲಿ—ಅವರ ಮುಂದೆ ಎರಡು ಪ್ರಶ್ನೆಗಳು ಕುಳಿತುವು—ಮುದರರನ್ನ ನಿರಾಕರಿಸಿಂದ ಬಿಡಿಸುತ್ತೇನೆಂಬ ಪ್ರತಿಜ್ಞೆ. ಇತ ತನ್ನನ್ನು ಬಿಟ್ಟು ಕಾಂಗ್ರೆಸು ಕಮಿಟಿ ಆಗುವುದು. ಹೇಗೆ ನೋಡುವುದು ಎಂಬ ಹಟ.

ನರಸಿಂಹಯ್ಯನ ಮನಸ್ಸು ಇತ್ತಂದ ಮುದರನ ಬಿಡುಗಡೆಯಾಗಬೇಕು. ತನ್ನ ತಮ್ಮನ ಕಾಲಿಗೆ ಬೆಂಬಲವಾಗ ಮಾರದರು ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಬೇಕೆಂದು. ಈ ಲೆಕ್ಕದಲ್ಲಿ ಮೂಸೆಬ್ಯಾರಿಗಳನ್ನು ಎತ್ತಿ ಕಟ್ಟಿಸಿ ಕೆಲಸ ಮಾಡಬಹುದು ಎಂದು ಅವನ ತಿಳಿವು. ಗಿಟ್ಟು. ಆದರೆ ನಾಗಯ್ಯನಿಗೆ ಆ ಹಂಬಲ ನಿಶ್ಚಂದ ಮೇಲೆ—ನಾಗಯ್ಯ ಸೆಟ್ಟರ ಪಕ್ಷ ಹಿಡಿಯದಿರಲು ಮಾರ್ಗವಿಲ್ಲ, ಡಾಕ್ಟರ ಮನಸ್ಸು ಹೀಗೆ ಎಂದು ಮೂಸೆಬ್ಯಾರಿಗಳಿಗೆ ಹೇಳಿದನು. ನರಸಿಂಹಯ್ಯ ಈಗ ಮೂಸೆಬ್ಯಾರಿಗಳು. 'ಏನಾಯಿತು, ಏನಾಯಿತು ಎಂದು ಕೇಳುವಾಗ 'ಯಾವುದಕ್ಕೂ ನೋಡಿ ಮುದರನ ಕೇಸು. ಪದ್ಮಾಗದೆ ನನ್ನ ಬುದ್ಧಿ ಹರಿಯುವುದಿಲ್ಲ' ಎಂದು ಬಿಟ್ಟನು. ಮೂಸೆಬ್ಯಾರಿಗಳು ಜನ್ನಪ್ಪೈಗಳಲ್ಲಿಗೆ ವ್ಯಾಪಾರಕ್ಕೆ ಬಂದಾಗ ನಾಗಯ್ಯ ಸೆಟ್ಟರು ಉಮೇದುವಾರರಾಗಿದ್ದಾರೆ ಎಂಬುದು ತಿಳಿಯಿತು.

ಮೂಸೆಬ್ಯಾರಿಗಳು, ವ್ಯಾಪಾರದಲ್ಲಿ ಬಹಳ ಹಾಕ್ಕೆರಂದಿಗರು. ಒಂದು ಸೇರು ಹೊಗೆಸೊಪ್ಪಿಗೆ ೪ ಆಣೆ ಎಂದರೆ ಅರ್ಧ ಘಂಟೆ ಚೌಕಶಿ ಮಾಡಿ, ಪೈಪೈಯಿಂತೆ ಕಡಿಮೆಮಾಡುತ್ತ ಬಂದು ಮೂರು ಮುಕ್ಕಾಲು ಆಣೆಗೆ ಕೊಡುವ ಪ್ರಾಮಾಣಿಕ್ಯದ ಆದರ್ಶವಾದ ಕೆಟ್ಟಿಗಳಿಗೆಯೋ ಏನೋ, 'ಅಲ್ಲ—ಬೇರೆಯೇನಾದರೂ ಒಳಗುಟ್ಟಿರಬೇಕೋ ತಿಳಿಯದು'—ಬರ್ರೆಗೇ ಹಾಕ್ಕೆ ತಪ್ಪಿ 'ನಾಗಯ್ಯ ಸೆಟ್ಟರು ತಮ್ಮ ಆಸ್ತಿ ಮನೆ ಮಹಿಮಾಟು ನೋಡಿ ಬಿದ್ದಿರಬಾರದೇ! ಮೈ ತುಂಬ ಸಾಲವಾಡಿಕೊಂಡ ತಿರುಗುವವರಿಗೆ ಈ ಡಬ್ಬು ಯಾಕೆ!!' ಎಂದರು. ಎಂದಾಗ ಅಲ್ಲಿ ಯಾರೂ ಇದ್ದಿರಲಿಲ್ಲ. ಸಾಹುಕಾರರು, ಮೂಸೆಬ್ಯಾರಿಗಳು ಮಾತ್ರ. ಆದರೆ ಮರು ದಿವಸ ಸಂಜೆಯೊಳಗೆ ನಾಗಯ್ಯ ಸೆಟ್ಟರಿಗೆ ಆ ಸುದ್ದಿ ಮುಟ್ಟಿದೆ.

ಅಂದರೆ ಸಂಗತಿ ಹೀಗೆ. ಜನ್ನಪ್ಪೈಗಳ ಸ್ವರ ತೀರ ಕಡಿಮೆಗೆ ಇಳಿದರೆ ೧೨೦ ಗಜ ದೂರದವರಿಗೆ ಕೇಳಿಸಬಹುದು. ಆ ದಿವಸ ಅಷ್ಟು ಪಟಾರದಲ್ಲಿಯೂ ಯಾರಿದ್ದಿಲ್ಲ. ಕಾರಣ ಮೂಸೆ, ಜನ್ನಪ್ಪೈಗಳ ಮಾತುಕತೆ ಆಗುವುದೇ ರಾತ್ರಿ ಊಟ ಮುಗಿದ ಮೇಲೆ ೧೦ ಘಂಟೆಗೆ ಜನ್ನ ಸಾಹುಕಾರರು ಹೊರಬಿದ್ದರೆ, ಹೊಗೆಸೊಪ್ಪಿನ ಸಾಹುಕಾರರು ೧೨ರ ನಂತರಗೆ ಕುಳಿತ ಹರಟುತ್ತಿದ್ದು ಆ ಮೇಲೆ ಊಟಕ್ಕೆ ಹೋಗುವವರು. ಊರ ಮೇಲಿನ ಪಟ್ಟಾಂಗ ಎಂದರೆ ಕಾವೇರಮ್ಮನ ಕಿವಿಗೆ ಈ ಕಾಂಗ್ರೆಸಿನ ತಲೆಬೇನೆ ಕೇಳಿಯೋ ಅವರಿಗೆ ಗೊತ್ತು. ಹಾಗಾಗಿ ಮರುದಿವಸ ರುಕ್ಕ ಪೆಂಗನ ಬತ್ತ ಕಟ್ಟಲಿಕ್ಕೆ ಬಂದಾಗ ಸಾತನಾಗು ತ್ತಿರುವಾಗ ಮುದರನನ್ನು ಹಿಡಿದದ್ದು ನಾಗಯ್ಯ ಸೆಟ್ರು ಬಿಡಿಸಿ ತರುತ್ತಾನೆಂದ ಎನೋ ಜಗದೆ ಸುಮ್ಮನಿದ್ದಳು. ಬ್ಯಾರಿಗಳು ಜನ್ನರನ್ನು ಹಿಂದಿನ ರಾತ್ರಿ ಹೇಳಿದ್ದು—ಎಲ್ಲಾ ಹಿಂದಿನವರು ಹೇಳಿ ಯಾಗಿತ್ತು, ಹೇಳಿದ್ದೆನೆಂದ ಮಾತೆಂದೂ ಆಯಿತು.

ರುಕ್ಕ ಕೇಳಿದ ಮಾಡಿ ಮನೆಗೆ ಹೋದವಳು ಮೊಗೇರ ಅಣ್ಣನಿಗೆ ಸಂಗತಿ ಹೇಳಿದಳು. ಅಣ್ಣನಿಗೆ ಒಬ್ಬ ಸಿಕ್ಕಿದರೆ ಒಬ್ಬ ಮಾಲು ಮಾಡಿ ಪ್ರಚಾರ ಮಾಡುವವನಿದ್ದ.

PUBLIC NOTICE OF DISSOLUTION OF PARTNERSHIPS UNDER SECTION 72 OF THE INDIAN PARTNERSHIP ACT 1932.

Public notice is hereby given that the firm of Machado & Co registered as No 617 of 1934 and the firm of Lawrence J D Sa & Sons registered as No 173 1 1 38 both being partnerships at will and in both of which the only partners were Lawrence J D Sa and Mr J B Machado has been dissolved by consent on 31 12 38 in pursuance of a written notice of dissolution of both the firms under Section 43 of the Indian Partnership Act sent by Mr Lawrence J D Sa to his partner the said Mr J B Machado

Mangalore
28-4 39

Lawrence J D Sa
Lately Partner in the now dissolved firms of Lawrence J D Sa & Sons and Machado & Co

---

S. U. N. & Co.,

Silk Merchants,
Chaukhamba BENARES CITY

ಈಗಿನ ಕರಾ(ಸಾಕಿ) ಬನಾರಿಸ್ ಸೀರೆ ಕಮ್ಮಿ ಭೀಕಾನಕೆ ಕದ್ದುನ್ನು ಸುಲಿಯಾಬೀದಿ ಈಗ ಕ್ರಯ ತುಂಬಾ ಸುಲಭ ಮಾತ್ರ ಮಾಲು.

18 ಮೊಳದ 2¼ ಅಗಲದ ಸಣ್ಣ ಬುಟ್ಟ ಸೀರೆಗಳು 1ಕ್ಕೆ ರೂ. 45ರಿಂದ 150 ಸಾಧಾರಣವಾದ್ದು 18 ಮೊಳ ಸಣ್ಣ ಬುಟ ಸೀರೆಗಳು ರೂ. 35ರಿಂದ ರೂ 55 ವರೆಗು ಸಾದಾ ಸೀರೆ 18 ಮೊಳ ರೂ 32ರಿಂದ ರೂ. 65. ಉದ್ದ ಮೊಳ 16, ಅಗಲ 2¼ ರೂ 30 ರಿಂದ 35ರ ವರೆಗೆ ಬೇರೆ ಮಾಲುಗಳ ಕಟ ಬಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯರ್,
ಚೌಕಂಭಾ, ಬನಾರಿಸ್ ಸಿಟಿ.

ಇಟಾಲಿಯನ್ ಜರ್ಮನ್ ಸೈನಿಕ ಒಪ್ಪಂದ

ಬ್ರಿಟನಿಗೆ ಸರ್ವಾಧಿಕಾರಿಗಳ ಅಲ್ಟಿಮೇಟಮ್!

ಒಪ್ಪಂದದ ಕಾರಣ ಪರಿಣಾಮ

ಇಟಲಿ, ಜರ್ಮನಿ ಎರಡು ದೇಶಗಳು ಮಿಲಿಟರಿ ವಿಚಾರಗಳಲ್ಲಿ ಒಂದಾಗಿ ಇರಬೇಕೆಂದು ಹಿಟ್ಲರ ಮುಸಲೋನಿಯರು ಒಂದು ಒಪ್ಪಂದ ಮಾಡಿಕೊಂಡಿರುವರು. ಈ ಸರ್ವಾಧಿಕಾರಿಗಳೊಳಗೆ ಮೊದಲಿನಿಂದಲೂ ಸಖ್ಯಭಾವವಿದ್ದಿತೆಂಬುದು ಜನಜನಿತವಾಗಿತ್ತಾದರೂ, ಅವರೊಳಗೆ ಮಿಲಿಟರಿ ಒಪ್ಪಂದವಾಗಿರುವುದು ಅವರ ಸಖ್ಯವನ್ನು ಇನ್ನಷ್ಟು ಬಲಪಡಿಸಿತೆಂದು ಧಾರಾಳವಾಗಿ ಹೇಳಬಹುದು. ಈ ಸಖ್ಯವು ಅವರ ವಿರೋಧಿಗಳ ಸೊಕ್ಕಟವನ್ನು ಮುರಿಯಲಿಕ್ಕಾಗಿಯೇ ಆಗಿದೆ ನಿಜ. ಹಿಟ್ಲರ ಮುಸಲೋನಿಯರ ಆಕ್ರಮಣ ನೀತಿಯನ್ನು ತಡೆಯಲಿಕ್ಕೆ ಹೋದ ಬ್ರಿಟನ ಫ್ರಾನ್ಸ್‌ಗಳ ರಾಜಕಾರಣ ಪಟುಗಳ ಪ್ರತಿಷ್ಠೆಗೆ ಈ ಒಪ್ಪಂದದಿಂದ ಬಹಳ ಧಕ್ಕೆ ತಗಲಿದಂತಾಯಿತು. ಅವರು ಈ ಕರಾರಿನ ಪ್ರಾಮುಖ್ಯತೆಯನ್ನು ಎಷ್ಟು ಕಡಿಮೆ ಮಾಡಿ ತೋರಿಸಿದರೂ, ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ಕಾರ್ಯವು ಇನ್ನಷ್ಟು ಕಠಿನವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಈ ಒಪ್ಪಂದದಂತೆ ಬಾಲ್ಟಿಕ ಮತ್ತು ಮಧ್ಯ ಯೂರೋಪದ ರಾಷ್ಟ್ರಗಳಲ್ಲಿ ಮನಸ್ಸಿಗೆ ಬಂದಂತೆ ಮಾಡಲು ಹಿಟ್ಲರನೂ, ಭೂಮಧ್ಯ ಸಮುದ್ರ ಮತ್ತು ಬಾಲ್ಕನ ರಾಷ್ಟ್ರಗಳಲ್ಲಿ ಸ್ವೇಚ್ಛೆಯಿಂದ ನಡೆಯಲಿಕ್ಕೆ ಮುಸಲೋನಿಯೂ ಸ್ವತಂತ್ರರಾಗಿದ್ದಾರೆ. ಅವರ ಈ ಕಾರ್ಯಗಳಲ್ಲಿ ಅವರು ಒಬ್ಬರನ್ನೊಬ್ಬರು ತಡೆಯುವುದಿಲ್ಲ ಮಾತ್ರವಲ್ಲ, ಸಂದರ್ಭ ಬಂದಾಗ ಮಿಲಿಟರಿ ಸಹಾಯವನ್ನು ಕೊಡಲಿಕ್ಕೂ ಸಿದ್ಧರಾಗಿದ್ದಾರೆ. ಈ ಸರ್ವಾಧಿಕಾರಿಗಳ ಹಿತಾಸಕ್ತಿಗೆ ಭಂಗ ಬರುವಲ್ಲೆಲ್ಲ ಅವರು ಇಬ್ಬರು ಕೂಡಿಯೇ ತಮ್ಮ ಸ್ಥಳಕ್ಕೆ ಸೆಳೆಯುತ್ತಿರುವರು. ಹೀಗೆ ಸರ್ವಾಧಿಕಾರಿಗಳ ... ಯಲ್ಲಿ ಶಾಂತಿ ... ದರೂ ಒಳಗಿಂದೊಳಗೇ ಸಮಸ್ತ ಯೂರೋಪನ್ನು ತಮ್ಮ ದವಡೆಗೆ ಹಾಕಿಕೊಳ್ಳುವ ಸಂಚನ್ನು ನಡೆಸುತ್ತಿರುವರು.

ಯಾಕೆ ಈ ಒಪ್ಪಂದವಾಯಿತು?

ಹಿಟ್ಲರ ಮುಸಲೋನಿಯರು ಜೀವದ ಗೆಳೆಯರಾಗಿ ಇದ್ದರೂ ಅವರೊಳಗೆ ಈ ಮಿಲಿಟರಿ ಒಪ್ಪಂದವು ಯಾಕೆ ಆಗಬೇಕಾಯಿತೆಂಬುದಕ್ಕೆ ಬೇರೆ ಕಾರಣಗಳೂ ಇವೆ. ಹಿಟ್ಲರ ಮುಸಲೋನಿಯರು ಒಂದಾಗಿದ್ದರಾದರೂ, ಜರ್ಮನರ ಆಕ್ರಮಣದಿಂದ ದೊರೆತ ಅಂಶದಲ್ಲಿ ಮುಸಲೋನಿ ಬಹಳ ಅತೃಪ್ತನಾಗಿದ್ದನು. ಹಿಟ್ಲರನು ಆಸ್ಟ್ರಿಯಾ, ಜೆಕೊಸ್ಲೊವೇಕಿಯಾ, ಮೆಮೆಲ್ ಮೊದಲಾದ ಅತಿ ಫಲವತ್ತಾದ ಮತ್ತು ಅಮೂಲ್ಯ ರಾಷ್ಟ್ರಗಳನ್ನು ಜರ್ಮನಿಗೆ ದೊರಕಿಸಿಕೊಂಡಿರುವಾಗ ಮುಸಲೋನಿಗೆ ದೊರೆತದ್ದು ಕೇವಲ ಅಬಿಸೀನಿಯದಂಥ ಕಾಡು ಗುಡ್ಡ ಪ್ರದೇಶವೇ. ಅಬಿಸೀನಿಯವನ್ನು ಇಟಲಿಗೆ ಸೇರಿಸಿದ್ದರಿಂದ ಮುಸಲೋನಿಗೆ ನಷ್ಟವಾಗಿದೆಯಲ್ಲದೆ ಲಾಭವಾಗಿಲ್ಲ. ಅಬಿಸೀನಿಯದಲ್ಲಿ ಇಟಾಲಿಗೆ ವಿರೋಧವು ಹೆಚ್ಚುತ್ತ ಬಂದಿದ್ದು ಆಗಾಗ ಅಲ್ಲಿ ದಂಗೆ ದರೋಡೆಗಳು ಆಗುತ್ತಾ ಇವೆ. ಅಬಿಸೀನಿಯರು ಇಟಲಿಯ ಸಾಮ್ರಾಜ್ಯವನ್ನು ಇನ್ನೂ ಒಪ್ಪಿಕೊಂಡಿರುವುದಿಲ್ಲ. ದೇಶವು ಅನಾರೋಗ್ಯಕರ ಮತ್ತು ಬೆಂಗಾಡು ಆಗಿರುವುದರಿಂದ ಇಟಾಲಿಯನರ ವಸತಿಗೂ ಅದು ಅಯೋಗ್ಯವಾಗಿದೆ. ಮುಸಲೋನಿಗೆ ಸ್ಪೈನ ಅಲ್ಬೇನಿಯಗಳಿಂದ ಯುದ್ಧಕಾಲದಲ್ಲಿ ಸೈನಿಕ ದೃಷ್ಟಿಯಿಂದ ಮಾತ್ರ ಪ್ರಯೋಜನವಾಗಬಹುದು. ಆದ್ದರಿಂದ ಅತೃಪ್ತ ಮುಸಲೋನಿಯನ್ನು ಹಿಟ್ಲರನು ಸಂತೋಷಪಡಿಸುವ ಅಗತ್ಯ ಬಿದ್ದಿತು. ಅದಕ್ಕೋಸ್ಕರ ಹಿಟ್ಲರನು ಮಿಲಿಟರಿ ಒಪ್ಪಂದ ಮಾಡಿಕೊಂಡು— 'ಭೂಮಧ್ಯ ಸಮುದ್ರ ಪ್ರದೇಶಗಳಲ್ಲಿ ನೀನು ಏನು ಮಾಡಿದರೂ, ನಾನು ಸೈನ್ಯ ತೆಗೆದುಕೊಂಡು ನಿನ್ನ ಸಹಾಯಕ್ಕೆ ಬರುತ್ತೇನೆ' ಎಂದು ಭರವಸೆ ಕೊಡಬೇಕಾಯಿತು.

ಮುಂದಿನ ಯುದ್ಧರಂಗ

ಹಿಟ್ಲರನು ಈ ಭರವಸೆ ಕೊಟ್ಟಿರುವುದರಿಂದ ಮುಂದಿನ ಯುದ್ಧರಂಗವು ಭೂಮಧ್ಯ ಸಮುದ್ರ ಭಾಗವಾಗಬಹುದೆ ಎಂಬ ಸಂದೇಹ ಉಂಟಾಗುತ್ತದೆ. ಸ್ಪೈನಿನಿಂದ ಇಟಾಲಿಯ ಸೈನಿಕರನ್ನು ಮುಸಲೋನಿ ಇನ್ನೂ ಹಿಂದಕ್ಕೆ ಕರೆಸಿರುವುದಿಲ್ಲ. ಮುಸಲೋನಿ ಇದಕ್ಕೆ ಇನ್ನೂ ಸಮಯ ಸಾಧಿಸುತ್ತಾ ಇದ್ದಾನೆ. ಭೂಮಧ್ಯ ಸಮುದ್ರ ಭಾಗವು ಮುಂದಿನ ಯುದ್ಧರಂಗವಾಗುವುದಿಲ್ಲವಾದರೆ, ಅದು ಪೋಲಾಂಡ ಪ್ರದೇಶದಲ್ಲಿ ಆಗುವುದು ಖಂಡಿತ. ಪೋಲಾಂಡಿನ ವಿಚಾರದಲ್ಲಿ ಮಾತನಾಡುತ್ತ ಮಿ. ಚೇಂಬರಲೇನರು— 'ಡಾಂಜಿಗ ಮತ್ತು ಓಣಿಯ ಪ್ರಶ್ನೆಯನ್ನು ಜರ್ಮನಿ ಮತ್ತು ಪೋಲಾಂಡುಗಳು ರಾಜಿಯಿಂದ ಇತ್ಯರ್ಥ ಮಾಡಿಕೊಳ್ಳುವದಾದರೆ ನಮಗೆ ಬಹಳ ಸಂತೋಷ. ಬ್ರಿಟನು ಆ ಸಂಬಂಧ ಮಧ್ಯಸ್ಥಿಕೆ ಮಾಡಲಿಕ್ಕೆ ಯಾವಾಗಲೂ ಸಿದ್ಧವಿದೆ' ಎಂದಿರುವರು. ಈ ಮಾತು ಹಿಟ್ಲರನಿಗೆ ಹೊಸ ಬಲವನ್ನೂ ಧೈರ್ಯವನ್ನೂ ಕೊಟ್ಟಿರುವುದು. ಬ್ರಿಟನ್ನು ಯುದ್ಧಕ್ಕೆ ಸಿದ್ಧವಿಲ್ಲ. ಹೇಗಾದರೂ ಯುದ್ಧಕಾಲವನ್ನು ಮುಂದಕ್ಕೆ ಹಾಕುವುದೇ ಅದರ ಉದ್ದೇಶ ಎಂದು ಹಿಟ್ಲರ ತಿಳಿಯುವಂತಾಗಿದೆ.

ಪ್ರಜಾಸತ್ತಾತ್ಮಕ ರಾಜ್ಯಗಳ ದೌರ್ಬಲ್ಯ

ಬ್ರಿಟನ ಫ್ರಾನ್ಸ ರಶ್ಯ ಪ್ರಜಾಸತ್ತಾತ್ಮಕ ರಾಜ್ಯಗಳಲ್ಲಿ ಸೈನಿಕ ದೌರ್ಬಲ್ಯವು ಇರಲಾರದು. ಯಾಕೆಂದರೆ ಈ ಮೂರು ರಾಷ್ಟ್ರಗಳ ಸಮ್ಮಿಳಿತ ಸೈನಿಕ ಶಕ್ತಿಯು ಅಜೇಯವಾದುದೆಂಬುದನ್ನು ಎರಡೂ ಪಕ್ಷಗಳ ಸೈನಿಕ ತಜ್ಞರು ಒಪ್ಪಿದ್ದಾರೆ. ಪರಂತು ಈ ರಾಷ್ಟ್ರಗಳಲ್ಲಿ ಸೈನಿಕ ದುರ್ಬಲತೆ ಇರುವುದಿಲ್ಲವಾದರೂ ಮನೋದೌರ್ಬಲ್ಯ ತುಂಬಾ ಇದೆ. ಆದ್ದರಿಂದ ಆಗಬೇಕಾದ ಕಾರ್ಯಗಳು ಕಾಲಬದ್ಧವಾಗಿ ಆಗುವುದಿಲ್ಲ. ಅವರ ಕಾಲವಿಳಂಬವು ಸರ್ವಾಧಿಕಾರಿಗಳ ಪ್ರಬಲ ಪ್ರತಾಪ ಮತ್ತು ಪ್ರಭಾವಕ್ಕೆ ಸಹಾಯ ಮಾಡಿಕೊಟ್ಟಿದೆ. ಈಗ ಈ ರಾಷ್ಟ್ರಗಳು ಪರಸ್ಪರ ಸಂದೇಹದಲ್ಲಿ ... ಕಾಲಹರಣ ಮಾಡುತ್ತ ... ವಾಗುವುದಾದರೆ ಒಂದರ ಮೇಲೆ ಒಂದರಂತೆ ಚಿಕ್ಕ ದೊಡ್ಡ ಎಲ್ಲಾ ಪ್ರಜಾಸತ್ತಾತ್ಮಕ ರಾಜ್ಯಗಳ ಪತನವಾಗುವುದು. ಸುಡೇಟನ ಲ್ಯಾಂಡನ್ನು ಹಿಟ್ಲರನಿಗೆ ಕೊಟ್ಟುದರಿಂದ ಇಡೀ ಜೆಕೊಸ್ಲೊವೇಕಿಯಾ ಹಿಟ್ಲರನ ಕೈವಶವಾಯಿತು. ಈಗ ಡಾಂಜಿಂಗ ಮತ್ತು ಓಣಿಯನ್ನು ಹಿಟ್ಲರನಿಗೆ ಕೊಟ್ಟರೂ ಪೋಲಾಂಡಿನ ಗತಿಯು ಜೆಕೊಸ್ಲೊವೇಕಿಯದಂತೆಯೇ ಆಗುವುದು. ಆದ್ದರಿಂದ ಬ್ರಿಟನು ಫ್ರಾನ್ಸ-ರಶ್ಯಗಳೊಳಗೆ ಒಪ್ಪಂದವಾಗಿ ಶಾಂತಿಪಕ್ಷದ ಸ್ಥಾಯೀ ರಚನೆಯಾಗುವುದು ಅಗತ್ಯವಾಗಿದೆ. ಈ ರಾಜ್ಯಗಳು ತಮ್ಮ ಮನೋದೌರ್ಬಲ್ಯವನ್ನು ದೂರಮಾಡಿ ಧೈರ್ಯದಿಂದ ಮುಂದರಿದರೆ ಹಿಟ್ಲರ ಮುಸಲೋನಿಯರನ್ನು ಇಷ್ಟು ದಿನಗಳ ಅನಂತರವಾದರೂ ತಡೆಯುವುದು ಕಠಿನವಾಗುವುದಿಲ್ಲ.

ಬ್ರಿಟನ ರಶ್ಯಾ ಒಪ್ಪಂದ

ಈ ಸಂಬಂಧ ಬ್ರಿಟನ ಫ್ರಾನ್ಸ ರಶ್ಯಗಳೊಳಗಿನ ವ್ಯವಹಾರಗಳ ತೀರ್ಮಾನವು ಇನ್ನೂ ಆಗಿರುವುದಿಲ್ಲ. ರಶ್ಯವು ತನ್ನ ಗಡಿಯಲ್ಲಿರುವ ರಾಷ್ಟ್ರಗಳ ಭದ್ರತೆಗೆ ಸಹಾಯ ಕೊಡುವುದೆಂದೂ ಯುದ್ಧವಾದರೆ ಬ್ರಿಟನು ಫ್ರಾನ್ಸುಗಳು ರಶ್ಯಕ್ಕೆ ಸಹಾಯ ಮಾಡಬೇಕೆಂದೂ ಅದು ಬ್ರಿಟನಿಗೆ ಸೂಚಿಸಿದೆಯಾಗಿ ವರ್ತಮಾನ. ಪರಂತು ಇಟಲಿ ಜರ್ಮನಿ ಮಾಡಿಕೊಂಡ ಮಿಲಿಟರಿ ಒಪ್ಪಂದದ ಹಾಗೆ ಬ್ರಿಟನ ಫ್ರಾನ್ಸ ರಶ್ಯಗಳೊಳಗೆ ಮಿಲಿಟರಿ ಒಪ್ಪಂದ ಮಾಡಿಕೊಳ್ಳಲಿಕ್ಕೆ ಬ್ರಿಟನ ಫ್ರಾನ್ಸುಗಳು ಸಿದ್ಧವಿರುವುದಿಲ್ಲ. ಅಂಥ ಒಪ್ಪಂದವಾದರೆ ರಶ್ಯದ ಸೇನೆಯನ್ನು ಪೋಲಾಂಡ ರುಮೇನಿಯಗಳೊಳಗೆ ಬಿಡಬೇಕಾಗುವುದೆಂದೂ ಅದಕ್ಕೆ ಆ ರಾಷ್ಟ್ರಗಳು ಸಿದ್ಧವಿರುವುದಿಲ್ಲವೆಂದೂ ಬ್ರಿಟನಿನ ಅಂಬೋಣ. ಆದರೆ ಈ ಸಂಬಂಧ ಪೋಲಾಂಡಿನ ಅಭಿಪ್ರಾಯವು ಈಗ ಪರಿವರ್ತಿತವಾಗಿದೆ. ಪೋಲಾಂಡಿನ ಸರಕಾರಿ ಪತ್ರಿಕೆ ಗಜೇಟಾ ಪೊಲಸ್ಕಾ ಕೂಡ ರಶ್ಯದ ಸೇನೆಯನ್ನು ಮೆಚ್ಚಿಕೊಂಡಿದೆ. ತನ್ನ ಸ್ವಾತಂತ್ರ್ಯರಕ್ಷಣೆಗೆ ರಶ್ಯದ ಸಹಾಯವನ್ನು ಸ್ವೀಕರಿಸದೆ ಉಪಾಯವಿಲ್ಲವೆಂದು ಅದಕ್ಕೆ ತಿಳಿದಿದೆ. ಬ್ರಿಟನ ಫ್ರಾನ್ಸುಗಳ ಹಿಂದಿನ ಧೋರಣೆಯಿಂದಾಗಿ ಈಗ ಅವುಗಳ ಮಾತಿನ ಮೇಲೆ ರಶ್ಯಕ್ಕೆ ವಿಶ್ವಾಸ ಹುಟ್ಟದಿರುವುದು ಸಹಜವಾಗಿದೆ. ಆದ್ದರಿಂದ ಮೂರು ರಾಷ್ಟ್ರಗಳ ಮಿಲಿಟರಿ ಒಪ್ಪಂದವಾಗಬೇಕೆಂದು ಅದು ಹೇಳುತ್ತದೆ. ಅಂಥ ಒಪ್ಪಂದವು ಆದರೆ ಮಾತ್ರವೇ ಶಾಂತಿಪಕ್ಷದ ... ಪ್ರತಾಪಗಳು ಬೆಳೆದು ಹಿಟ್ಲರ ಮುಸಲೋನಿಯರು ... ಅಂಥ ಒಪ್ಪಂದವು ಆಗದಿದ್ದರೆ ಮುಂದಿನ ಅನರ್ಥಪರಂಪರೆಗೆ ... ಬ್ರಿಟನ್ನೇ ಹೊಣೆಯಾಗುವುದು.

ಡ್ಯೂಕ ಅಫ್ ವಿಂಡ್ಸರರ ಭಾಷಣ

ಮಾಜಿ ಬ್ರಿಟನ ಸಮ್ರಾಜರಾದ ಡ್ಯೂಕ ಅಫ್ ವಿಂಡ್ಸರರು ತಮ್ಮದೊಂದು ರೇಡಿಯೋ ಭಾಷಣದಲ್ಲಿ ಯುದ್ಧದ ಅನರ್ಥಗಳನ್ನು ಹೇಳಿ ಶಾಂತಿಯ ಸಂದೇಶವನ್ನು ಕೊಟ್ಟಿದ್ದಾರೆ. ಯುದ್ಧದ ಪರಿಣಾಮವು ಅನಾಯುಕತ್ವ, ಅರಾಜಕತ್ವ ಮತ್ತು ದುಃಖ ಸಂಕಟಗಳಲ್ಲದೆ ಬೇರೇನೂ ಇರುವುದಿಲ್ಲವೆಂದು ಹೇಳಿ, ಜನರ ಮನಸ್ಸನ್ನು ಕಲ್ಲುಷಿತಮಾಡುವ ಎಲ್ಲ ಆಂದೋಲನಗಳನ್ನು ನಿರುತ್ಸಾಹಗೊಳಿಸಿ ಮಾನವ ಸಮಾಜವನ್ನು ಯುದ್ಧರಾಕ್ಷಸನಿಂದ ಕಾಪಾಡುವಂತೆ ಎಲ್ಲ ಸರಕಾರಗಳೂ ರಾಜನೀತಿಜ್ಞರೂ ಪ್ರಯತ್ನಿಸಬೇಕೆಂದೂ ಅವರ ಪ್ರಯತ್ನಗಳಿಂದ ಲೋಕದಲ್ಲಿ ಶಾಂತಿಸ್ಥಾಪನೆಯಾಗಬೇಕೆಂದೂ ಅಂದರು.

ಬ್ರಿಟನ ಟರ್ಕಿ ಒಪ್ಪಂದವಾಯಿತು

ಬ್ರಿಟನಿಗೂ ಪೋಲಾಂಡ, ರುಮೇನಿಯಗಳಿಗೂ ಪರಸ್ಪರ ಸಹಾಯದ ಒಪ್ಪಂದವಾದಂತೆ ಟರ್ಕಿಗೂ ಒಪ್ಪಂದವಾಗಿರುವುದಾಗಿ ವರ್ತಮಾನವಿದೆ. ಇದರಿಂದ ಟರ್ಕಿಯ ಮೇಲೆ ಹಿಟ್ಲರ ಮುಸಲೋನಿಯರ ಆಕ್ರಮಣವಾದರೆ, ಅವರನ್ನು ತಡೆಯಲಿಕ್ಕೆ ಬ್ರಿಟನ ಫ್ರಾನ್ಸುಗಳು ಸೈನಿಕ ಸಹಾಯವನ್ನು ಕಳುಹಿಸಿ ಕೊಡುವುವು.

ಸರ್ವಾಧಿಕಾರಿಗಳ ಅಲ್ಟಿಮೇಟಮು

ಸಿ. ವಿ. ಆಸ್‌ಬರ್ನ ಎಂಬ ಒಬ್ಬ ನಿವೃತ್ತ ಜಲಸೇನಾಧಿಕಾರಿಗಳು ಮೆಂಚೆಸ್ಟರ ಗಾರ್ಡಿಯನ ಪತ್ರಿಕೆಯಲ್ಲಿ ಒಂದು ಸ್ವಾರಸ್ಯವಾದ ಲೇಖನವನ್ನು ಬರೆದು— ಜರ್ಮನಿಯ ಸೇನೆ ಡಾಂಜಿಂಗಿನ ಬಳಿ ಸಂಗ್ರಹೀತವಾಗಿದೆ. ಅಪೇಕ್ಷಿತವಾಗಿ ಅದು ಪೋಲಾಂಡಿನ ಮೇಲೆ ಬಿದ್ದು ಡಾಂಜಿಂಗನ್ನು ಜರ್ಮನಿಗೆ ಸೇರಿಸುವುದು. ಆ ಮೇಲೆ ಪೂರ್ಣ ಪೋಲಾಂಡು ಜರ್ಮನಿಯ ವಶವಾಗುವುದು. ಅನಂತರ ಹೊಲಾಂಡ ಡೆನ್ಮಾರ್ಕಗಳ ಮೇಲೂ ಹಿಟ್ಲರನ ಆಕ್ರಮಣಗಳಾಗುವುವು. ಆ ಮೇಲೆ ಬಾಲ್ಟಿಕ ಪ್ರದೇಶದಲ್ಲಿ ಹಿಟ್ಲರನ ಸರ್ವಾಧಿಕಾರವಾಗುವುದು. ಅದಾದ ನಂತರ ಸ್ವಿಜರ್ಲೆಂಡ, ಫ್ರಾನ್ಸಗಳ ಕಡೆಗೆ ಹಿಟ್ಲರನ ದೃಷ್ಟಿ ಹೊರಳುವುದೂ ಅಸಂಭವವಲ್ಲ. ದಕ್ಷಿಣದಲ್ಲಿ ಮುಸಲೋನಿ ಲಿಬಿಯದಲ್ಲಿ ದೊಡ್ಡ ವಿಮಾನ ಸೈನ್ಯವನ್ನು ಇಟ್ಟಿರುವನು. ಒಂದೆರಡು ವಾರಗಳೊಳಗಾಗಿ ಅಲ್ಲಿಂದ ಈಜಿಪ್ತನ್ನು ಆಕ್ರಮಿಸಿ ಜಯಿಸುವುದು ಸುಲಭವೆಂದು ಮುಸಲೋನಿ ತಿಳಿದಿದ್ದಾನೆ. ... ಮುಸಲೋನಿಗೆ ಸಾಧಾರಣ ... ಅಲ್ಲಿಂದ ಜಿಬ್ರಾಲ್ಟರನ್ನು ... ಮುಸಲೋನಿ ಜಿಬ್ರಾಲ್ಟರನ್ನು ತನಗೆ ಕೊಡಬೇಕೆಂದು ಬ್ರಿಟನಿಗೆ ಅಲ್ಟಿಮೇಟಮ್ ಕೊಡುವನು ಎಂದಿರುವರು.

'DILROZ'

Dil Roz' is a sure cure for Oriental sores lo.. sores, all kinds of deep rooted sores, skin eruptions Pimples Eczema Ringworm ... Fistula axillary Abscess

There is no need of dressing the wounds, ... are both ... prohibit

Price Rs. 2 Postage extra

TAHIR DIN
Anarkali, LAHORE

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Season Deposits are accepted at 3½ % per annum.

For Further particulars apply to the Car-Street Branch, Mangalore.

★ ಬೊಂಬಾಯಿಯಲ್ಲಿ ಮದ್ಯನಿಷೇಧ ಆಂದೋಲನ ★

ಬೊಂಬಾಯಿಯಲ್ಲಿ ಮದ್ಯನಿಷೇಧ ಮಾಡುವ ಬೊಂಬಾಯಿ ಸರಕಾರದ ಕಾರ್ಯಕ್ರಮದಿಂದ ಬೊಂಬಾಯಿಯ ಕೆಲವು ಪಾರ್ಸಿಯರು ಬಹಳ ಅತೃಪ್ತರಾಗಿದ್ದಾರೆ. ಅವರು ಮದ್ಯನಿಷೇಧದಿಂದಾಗಿ ತಾವು ಹಲವು ವರ್ಷಗಳಿಂದ ಮಾಡಿಕೊಂಡಿದ್ದ ಮದ್ಯ ವ್ಯಾಪಾರವು ನಷ್ಟವಾಗುವುದೆಂದು ತಿಳಿದು, ಕಾನೂನನ್ನೇ ತಮ್ಮ ಕೈಗೆ ತೆಗೆದುಕೊಂಡು ವರ್ತಿಸುತ್ತಿರುವರು. ಕಳೆದ ವಾರ ಬೊಂಬಾಯಿಯ ಸರ್ ಕವಾಸ್ಜೀ ಜಹಾಂಗೀರ ಹಾಲಿನಲ್ಲಿ ಸರಕಾರದ ಕಡೆಯಿಂದ ಕೂಡಿದ ಸಭೆಗಳಲ್ಲಿ ವಿರೋಧಿಗಳಾದ ಪಾರ್ಸಿಗಳು ಬಹಳ ಅಸಭ್ಯ ರೀತಿಯಿಂದ ನಡೆಕೊಂಡರು. ಅವರು ಸಭೆಗಳಲ್ಲಿ ಗಲಿಬಿಲಿ ಗಲಾಟೆಗಳನ್ನು ಮಾಡಿದರು. ಕುಡಿದು ಮತ್ತರಾದವರಂತೆ ಕಿಟಿಕಿ ಬಾಗಿಲುಗಳನ್ನು ಒಡೆದರು. ಕುರ್ಚಿ ಮೇಜುಗಳನ್ನು ಒಂದು ಕಡೆಯಿಂದ ಒಂದು ಕಡೆಗೆ ಎಸೆಯತೊಡಗಿದರು. ವಿರೋಧಿಗಳಿಗೂ ಮಾತನಾಡಲಿಕ್ಕೆ ಸಮಯ ಕೊಡಲಾಗುವುದೆಂದು ಶ್ರೀ ಕೆ. ಯಮ್. ಮುನ್ಷಿ ಮೊದಲಾದವರು ಹೇಳಿದರೂ ಕೇಳಲಿಲ್ಲ. ಕೊನೆಗೆ ಪೋಲೀಸರ ಸಹಾಯದಿಂದ ಶಾಂತಿಯನ್ನು ಕಾಪಾಡಬೇಕಾಯಿತು. ಸ್ವಾರ್ಥದಿಂದ ಮನುಷ್ಯರು ಹೇಗೆ ಕುರುಡರಾಗುತ್ತಾರೆಂಬುದನ್ನು ಇದರಿಂದ ತಿಳಿಯಬಹುದು.

'ಪಾರ್ಸಿಗಳು ಹಲವು ಶತಮಾನಗಳಿಂದ ಈ ದೇಶದ ಎಲ್ಲಾ ಜಾತಿಗಳೊಂದಿಗೆ ಬಹಳ ಸ್ನೇಹದಿಂದ ಇದ್ದಾರೆ. ದೇಶವು ಅವರನ್ನು ಪರಕೀಯರೆಂದು ಪರಿಗಣಿಸದೆ ಸ್ವಾಗತವನ್ನು ಕೊಟ್ಟಿದೆ. ಪಾರ್ಸಿಗಳು ಈ ದೇಶದಿಂದ ಬಹಳ ಉಪಕೃತರಾಗಿರುವರು. ಈಗ ಅವರು ಆ ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕಾದ ಸಮಯ ಬಂದಿದೆ. ದೇಶದ ಹಿತಕ್ಕಾಗಿರುವ ಮದ್ಯನಿಷೇಧ ಕಾನೂನಿಗೆ ಅವರು ವಿರೋಧವನ್ನು ತೋರಬಾರದು' ಎಂದು ಗೃಹಮಂತ್ರಿ ಶ್ರೀ ಮುನ್ಷಿಯವರು ಭಾಷಣ ಕೊಟ್ಟರು.

ಕರ್ನಲ್ ಗಾಡಿವಾಲಿಯವರು ವೈದ್ಯಕೀಯ ದೃಷ್ಟಿಯ ಮೂಲಕ ಮದ್ಯಪಾನದಿಂದಾಗುವ ಹಾನಿಗಳ ಕುರಿತು ಭಾಷಣ ಕೊಟ್ಟರು. ಮಂತ್ರಿ ಶ್ರೀ ಎಂ. ಪಿ. ಪಾಟೀಲರವರು ಆಗಾಗ ಸಭೆಯನ್ನು ಸ್ಥಗಿತಗೊಳಿಸಿದರು. ಅಂದು ಕೂಡ ವಿರೋಧ ಪ್ರದರ್ಶನವಾಗಬಹುದೆಂಬ ಸಂದೇಹವುಂಟಾಗಿ, ಪೋಲೀಸಿನ ಬಲವಾದ ಕಾವಲು ಇಟ್ಟಿದ್ದರು. ಗಲಾಟೆಗಾರರಲ್ಲಿ ಕೆಲವರನ್ನು ಪೋಲೀಸರು ಹಿಡಿದು ಸಭೆ ಮುಗಿದ ತರುವಾಯ ಬಿಟ್ಟರು. ಭಾಷಣಕರ್ತರು, ಆರ್ಥಿಕ, ನೈತಿಕ, ಸಾಮಾಜಿಕ, ಶಾರೀರಿಕ ಇತ್ಯಾದಿ ಪ್ರಕಾರದಿಂದ ದೃಷ್ಟಿಯಿಂದ ವಿಚಾರಮಾಡಿ ಮದ್ಯಪಾನದಿಂದಾಗುವ ಹಾನಿಗಳನ್ನು ತಿಳಿಸಿದರು. ಮಂತ್ರಿಯವರು ಕೆಲವು ಮಾತುಗಳನ್ನಾಡಿ 'ಪಶುಬಲದ ಪ್ರದರ್ಶನದಿಂದ ವಿರೋಧಿಗಳಿಗೆ ಪ್ರಯೋಜನವಿಲ್ಲವೆಂದೂ, ಮದ್ಯನಿಷೇಧದಿಂದ ಯಾರಿಗಾದರೂ ನಿಜವಾದ ಹಾನಿಯಾಗುವದಿದ್ದಲ್ಲಿ ಅದನ್ನು ನ್ಯಾಯೋಚಿತ ಉಪಾಯಗಳಿಂದ ಸರಕಾರದ ಗಮನಕ್ಕೆ ತಂದರೆ ಸರಕಾರವು ಅವರ ಸಂಗತಿಯನ್ನು ಸಹಾನುಭೂತಿಯಿಂದ ಸಮಾಲೋಚಿಸುವುದೆಂದೂ ಭರವಸೆಯನ್ನು ಕೊಟ್ಟರು.

ಅಧಿಕಾರಿಗಳೊಡನೆ ವಿಚಾರ ಪರಾಮರ್ಶೆ

ಮದ್ಯ ಖಾತೆಯ ಮಂತ್ರಿಗಳಾದ ಡಾಕ್ಟರ ಗಿಲ್ಡರರು ಬೊಂಬಾಯಿಯಿಂದ ಸ್ಥಳೀಯ ಅಧಿಕಾರಿಗಳೊಡನೆ ವಿಚಾರ ಪರಾಮರ್ಶೆ ಮಾಡಿರುವರು. ಸರಕಾರವು ಆಗೋಸ್ತು ೧ರಿಂದ ಮದ್ಯನಿಷೇಧ ಕಾನೂನನ್ನು ಬೊಂಬಾಯಿಯಲ್ಲಿ ಜಾರಿಗೆ ತಂದಿರುವುದನ್ನು ಸೂಚಿಸಿ, ಸರಕಾರಿ ಕಾರ್ಯಕ್ರಮವು ಸಫಲವಾಗುವಂತೆ ಅವರ ಸಹಕಾರವು ಯಾವ ರೀತಿಯಲ್ಲಿ ದೊರೆಯಬೇಕಾಗಿದೆ ಎಂಬುದನ್ನು ಹೇಳಿದರು. ಪೂರ್ಣ ನಗರವನ್ನು ೨೦ ವಾರ್ಡುಗಳಾಗಿ ವಿಭಜಿಸಿ ಅವುಗಳಿಗೆಲ್ಲ ಅಧಿಕಾರಿಗಳನ್ನು ನೇಮಿಸಿದ್ದಾರೆ. ಇದೇ ನಗರದಲ್ಲಿ ೮೦೮ ಮಂದಿ ಕೆಲಸಗಾರರು

ಗಾಂಧಿಜಿಯವರಿಗೆ ಸಾವಿರ ರೂಪಾಯಿಗಳ ದಾನ

ಪಾರ್ಸಿಯರ ವಿರೋಧಕ್ಕೆ ಪ್ರಾಯಶ್ಚಿತ್ತ

ಮಾತ್ರವಲ್ಲದ ಅವರೊಡನೆ ಸಹಕರಿಸಲಿಕ್ಕೆ ಅನೇಕ ಸಮಿತಿ ಉಪಸಮಿತಿಗಳು ರಚಿಸಲ್ಪಟ್ಟಿವೆ.

ಯೂರೋಪಿಯನರ ಸಹಕಾರ

ಮದ್ಯಪಾಯಿಗಳಾದ ಯೂರೋಪಿಯನರಿಗೆ ಮದ್ಯನಿಷೇಧದ ಕಾನೂನಿನಲ್ಲಿ ರಿಯಾಯ್ತಿಗಳಿವೆ. ಅವರು ಸರಕಾರದಿಂದ ಪರ್ಮಿಟುಗಳನ್ನು ಪಡೆದು ಮದ್ಯಪಾನ ಮಾಡಬಹುದು. ಆದರೆ ಹೀಗೆ ಪರ್ಮಿಟ ಪಡೆಯುವ ಅಧಿಕಾರಿಗಳು ಜುಲಾಯಿ ೩೧ರ ತನಕ ಇರುವುದು. ಬೊಂಬಾಯಿಯ ಹೆಚ್ಚಿನ ಮಂದಿ ಯುರೋಪಿಯನರು ತಾವು ಪರ್ಮಿಟಗಳನ್ನು ಪಡೆಯುವುದಿಲ್ಲವೆಂದು ನಿಶ್ಚಯಿಸಿರುವರಂತೆ. ಮದ್ಯನಿಷೇಧವು ಬೊಂಬಾಯಿಯಲ್ಲಿ ಸಂಪೂರ್ಣ ಸಫಲವಾಗುವಂತೆ ಎಲ್ಲ ಉಪಾಯಗಳನ್ನು ಕೈಕೊಂಡಿದ್ದಾರೆ. ಇದೇ ತಿಂಗಳ ಕೊನೆಯ ವಾರವನ್ನು ಮದ್ಯನಿಷೇಧ ಸಪ್ತಾಹವೆಂದು ಆಚರಿಸಿ ಸರಕಾರವು ಪ್ರಬಲ ಪ್ರಚಾರಕಾರ್ಯವನ್ನು ನಡೆಸುವುದು.

ಪಾರ್ಸಿಗಳೊಬ್ಬರ ಪಶ್ಚಾತ್ತಾಪ

ಕೆಲವು ಪಾರ್ಸಿಗಳು ಬೊಂಬಾಯಿ ಸರಕಾರದ ಮದ್ಯನಿಷೇಧ ಕಾರ್ಯಕ್ರಮವನ್ನು ವಿರೋಧಿಸಿ ಗಾಂಧಿಯವರಿಗೆ ಕಾಗದಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವರು ಅವರನ್ನು ಕಟೋಕ್ತಿಗಳಿಂದ ಟೀಕಿಸಿ ಬರೆದುದಿದೆ. ಪರಂತು ಪಾರ್ಸಿಗಳ ಈ ವಿರೋಧವು ಎಲ್ಲ ಪಾರ್ಸಿಗಳ ವಿರೋಧವಲ್ಲವೆಂಬುದನ್ನು ಇಲ್ಲಿ ತೋರಿಸಿಕೊಡಬೇಕಾಗಿದೆ. ಪಾರ್ಸಿಗಳ ಒಟ್ಟು ಜನಸಮುದಾಯವನ್ನು ಕುರಿತು ಹೇಳುವುದಾದರೆ ಅವರು ಉದಾರಿಗಳೂ ತಿಳುವಳಿಕೆ ಉಳ್ಳವರೂ ಆಗಿದ್ದಾರೆ. ಕಳೆದ ೫೦ ವರ್ಷಗಳಿಂದ ಗಾಂಧಿಯವರೊಡನೆ ದೇಶಹಿತ ಕಾರ್ಯಗಳನ್ನು ಮಾಡಿಕೊಂಡಿದ್ದ, ಈಗ ರಂಗೂನಿನಲ್ಲಿರುವ ಪಾರ್ಸಿ ಸದ್ಗೃಹಸ್ಥರೊಬ್ಬರು ಗಾಂಧಿಯವರಿಗೆ ಬರೆದ ಪತ್ರದಿಂದ ಇದು ಸಿದ್ಧವಾಗುತ್ತದೆ. ಬೊಂಬಾಯಿಯ ಮದ್ಯನಿಷೇಧ ಕಾರ್ಯಕ್ರಮವನ್ನು ವಿರೋಧಿಸುವ ಕೆಲವು ಪಾರ್ಸಿಯರ ಅಕೃತ್ಯಗಳಿಂದ ನೊಂದು ಬರೆದ ಅವರು, ಗಾಂಧಿಯವರಿಗೆ ಬರೆದ ಪತ್ರದ ಸಾರಾಂಶವು ಹೀಗೆ ಇದೆ —

'ನನ್ನ ಜಾತಿಯವರಲ್ಲಿ ಕೆಲವರು ಏತಕ್ಕೆ ಮದ್ಯನಿಷೇಧ ಕಾರ್ಯಕ್ರಮವನ್ನು ವಿರೋಧಿಸುತ್ತಿದ್ದಾರೋ, ಅದು ದೇಶಕ್ಕೆ ಮಾತ್ರವಲ್ಲದೆ ಪಾರ್ಸಿಯರಿಗೂ ಹಿತಕರವಾಗಿದೆ ಎಂಬುದರಲ್ಲಿ ನನಗೆ ಯಾವ ಸಂದೇಹವೂ ಇರುವುದಿಲ್ಲ. ಕೆಲವು ಜನ ಪಾರ್ಸಿಗಳ ಈ ವಿರೋಧವು ಅಲ್ಪಕಾಲದ ತನಕ ಇರುವಂಥಾದ್ದೆಂದು ನಾನು ನಿಮಗೆ ಆಶ್ವಾಸನವನ್ನೀಯುತ್ತೇನೆ. ಪರೋಪಕಾರ ನಿರತವಾದ ನಮ್ಮ ಸಮಾಜವು ಮದ್ಯನಿಷೇಧದ ಮಹತ್ವವನ್ನು ತಿಳಿದುಕೊಳ್ಳಲು ಎಲ್ಲ ವಿರೋಧವೂ ನಾಶವಾಗುವುದು. ಜಗತ್ತಿಗೆ ಸಮಾಜವು ಮದ್ಯನಿಷೇಧ ಆಂದೋಲನದ ಮೂಲಪುರುಷರಾದ ಗಾಂಧಿಯವರನ್ನು, ಬೊಂಬಾಯಿಯಲ್ಲಿ ಅದರ ಸಫಲತೆಗೆ ಜವಾಬುದಾರರಾದ ಡಾಕ್ಟರ ಗಿಲ್ಡರರನ್ನೂ, ಸಮಾಜದ ಉದ್ಧಾರಕರೆಂದು ಪುರಸ್ಕರಿಸದೆ ಇರಲಾರದು. ನಾನೂ ನನ್ನಾಕೆಯೂ ನಿಮ್ಮ ಈ ಆಂದೋಲನದ ಸಂಪೂರ್ಣ ಸಫಲತೆಗೆ ಪ್ರಾರ್ಥಿಸುತ್ತಿದ್ದೇವೆಂಬುದನ್ನು ನಾನು ಹೇಳಬೇಕಾಗಿಲ್ಲ. ಆದರೂ ನನ್ನ ಸ್ವಜಾತಿಯ ಬಾಂಧವರ ವಿರೋಧ ಪ್ರದರ್ಶನದ ಅಕೃತ್ಯಗಳಿಂದ ನನಗೆ ಬಹಳ ಪಶ್ಚಾತ್ತಾಪವಾಗುತ್ತದೆ. ಅವರ ಅಪರಾಧದ ಪ್ರಾಯಶ್ಚಿತ್ತವಾಗಿ ನಾನು ತಮಗೆ ಸ್ವಲ್ಪ ಪರಿಹಾರ ದ್ರವ್ಯವನ್ನು ಕಳುಹಿಸಿಕೊಡುತ್ತೇನೆ. ಅದನ್ನು ತಾವು ಮದ್ಯನಿಷೇಧಕ್ಕಾಗಲೀ, ಹರಿಜನ ಸೇವೆಗಾಗಲೀ ಉಪಯೋಗಿಸಬೇಕೆಂದು ನನ್ನ ವಿನಂತಿ. ಧರ್ಮವು ಮದ್ಯನಿಷೇಧಕ್ಕೆ ವಿರೋಧವಾಗಿ ಎನ್ನುವುದು ಮೂರ್ಖತನವಾಗಿದೆ. ಸ್ವಾರ್ಥಸಾಧನೆಗೆ ಕೆಲವರು ಧರ್ಮದ ಆಶ್ರಯವನ್ನು ಪಡೆಯುವುದನ್ನು ಕಂಡು ನನಗೆ ಬಹಳ ವ್ಯಸನವಾಗುತ್ತದೆ.'

ಉದಾರ ದಾನ

ಈ ಪಾರ್ಸಿ ಸದ್ಗೃಹಸ್ಥರು ಕಳುಹಿಸಿಕೊಟ್ಟ ದಾನವು ಒಂದು ಸಾವಿರ ರೂಪಾಯಿಗಳಾಗಿದೆ. ಆದರೆ ಅದರ ಮೌಲ್ಯವು ಅದಕ್ಕಿಂತ ನೂರು ಪಾಲು ಹೆಚ್ಚಿಗೆ ಇರುವುದೆಂದು ಶ್ರೀ ಮಹಾದೇವ ದೇಸಾಯಿಯವರು ಬರೆದಿರುವರು. ಯಾಕೆಂದರೆ ಆ ಸದ್ಗೃಹಸ್ಥರು ತಮ್ಮ ಕಷ್ಟಾರ್ಜಿತದ ಒಂದು ದೊಡ್ಡ ಅಂಶವನ್ನು ಜಾತಿಬಾಂಧವರ ಅಪರಾಧದ ಪ್ರಾಯಶ್ಚಿತ್ತಕ್ಕೆ ದಾನ ಮಾಡಿ ಕೊಟ್ಟಿದ್ದಾರೆ. ಈ ಹಣವನ್ನು ಕಳೆದುಕೊಂಡ ಬಳಿಕ ಅವರು ಮುಂದೆ ಬಹಳ ಕಷ್ಟದಲ್ಲಿ ಕಾಲಯಾಪನೆ ಮಾಡಬೇಕಾಗುವುದು. ಅದ್ದರಿಂದ ಇವರದನ್ನು ಉದಾರ ದಾನವು ಬೇರೊಂದಿರುವುದಿಲ್ಲ. ಅವರು ರೋಗಿಗಳಾಗಿ ಹಾಸಿಗೆ ಮೇಲೆ ಬಿದ್ದು ಇದ್ದಿಲ್ಲವಾದರೆ ಈಗ ತಮ್ಮ ಸಂಪೂರ್ಣ ಸಮಯವನ್ನು ಮದ್ಯನಿಷೇಧಕ್ಕೆ ಕಳೆಯುತ್ತಿದ್ದರು. ಅವರ ಈ ಕಾರ್ಯದಿಂದ ಪಾರ್ಸಿ ವಿರೋಧಿಗಳ ಹೃದಯ ಪರಿವರ್ತನೆಯಾದೀತೆಂದು ಆಶೆಯುಂಟಾಗಿದೆ.

ಒರಿಸ್ಸಾ ಸರಕಾರದ ನಿರ್ಧಾರ

ಒರಿಸ್ಸಾ ಪ್ರಾಂತದ ಬಾಲಸೋರ ಜಿಲ್ಲೆಯಲ್ಲಿ ಸಂಪೂರ್ಣ ಮದ್ಯನಿಷೇಧ ಮಾಡಬೇಕೆಂದು ಒರಿಸ್ಸಾ ಸರಕಾರವು ನಿಶ್ಚಯಿಸಿದೆ. ಮುಂದಿನ ವರ್ಷ ಇತರ ಜಿಲ್ಲೆಗಳಲ್ಲಿಯೂ ಮದ್ಯನಿಷೇಧ ನಡೆಯಲಾಗುತ್ತದೆ. ಈ ಒಂದು ಜಿಲ್ಲೆಯಲ್ಲಿ ಮದ್ಯನಿಷೇಧ ಮಾಡುವುದರಿಂದ ಸರಕಾರಕ್ಕೆ ೫ ಲಕ್ಷ ರೂಪಾಯಿಗಳ ವಾರ್ಷಿಕ ಆದಾಯವು ಕಡಿಮೆಯಾಗುವುದು. ಇದು ಒರಿಸ್ಸಾ ಪ್ರಾಂತ್ಯದ ಮದ್ಯ ಉತ್ಪತ್ತಿಯ ಆರನೇ ಒಂದಂಶದಷ್ಟು ಆಗಿದೆ. ಬಾಲಸೋರ ಜಿಲ್ಲೆಯಲ್ಲಿ ಈ ತಿಂಗಳಿನಿಂದಾರಂಭಿಸಿ ಪರ್ಮಿಟ ಪಡೆದವರ ಹೊರತು ಅಫೀಮು, ಗಾಂಜಾ ಮೊದಲಾದವುಗಳನ್ನು ಕನಿಷ್ಠ ಪರಿಮಾಣದಲ್ಲಿ ಕೊಂಡು ಉಪಯೋಗಿಸಬಹುದು. ಎಲ್ಲರೂ ಅವುಗಳನ್ನು ಉಪಯೋಗಿಸಲಿಕ್ಕೆ ಸರಕಾರದ ನಿಷೇಧವಿರುತ್ತದೆ.

ಸಮಗ್ರಭಾರತ ಕ್ರಿಸ್ತೀ ಮಹಿಳೆಯರ ಅಭಿನಂದನೆ

ಜಬ್ಬಲಪುರದಲ್ಲಿ ಕೂಡಿದ ಆಲ್ ಇಂಡಿಯಾ ಕನ್ವೆನ್ಶನ ಆಫ್ ದಿ ವಿಮೆನ್ಸ್ ಕ್ರಿಶ್ಚನ್ ಟೆಂಪರೆನ್ಸ ಯೂನಿಯನ್ ಎಂಬ ಸಭೆಯಲ್ಲಿ ಮದ್ಯನಿಷೇಧವನ್ನಾರಂಭಿಸಿ ಪ್ರಾಂತೀಯ ಸರಕಾರಗಳನ್ನು ಅಭಿನಂದಿಸುವ ನಿರ್ಣಯವು ಸರ್ವಾನುಮತಿಯಿಂದ ಮಂಜೂರಾಗಿರುವುದು. ಮಾತ್ರವಲ್ಲದೆ ಕ್ರಿಸ್ತೀ ಮಹಿಳೆಯರ ಈ ಸಭೆಯು ಸರಕಾರದ ಮದ್ಯನಿಷೇಧಕ್ಕೆ ಸಂಬಂಧಪಟ್ಟ ಎಲ್ಲ ಕಾರ್ಯಗಳ ಸಫಲತೆಗೆ ತನ್ನ ಸಂಪೂರ್ಣ ಸಹಕಾರ-ಸಹಾಯಗಳನ್ನು ಕೊಡುವುದೆಂಬ ಭರವಸೆಯನ್ನು ಕೊಟ್ಟಿದೆ. ಮದ್ಯನಿಷೇಧ ಮಾಡಿದ ಪ್ರಾಂತಿಕ ಸರಕಾರಗಳನ್ನು ಇತ್ತ ಬೊಂಬಾಯಿಯಲ್ಲಿ ಪಾರ್ಸಿಯರು ಕೂಡ ಸ್ವಸ್ಥಚಿತ್ತರಾಗುತಿದ್ದಾರೆ. ಮದ್ಯನಿಷೇಧ ಪ್ರಚಾರದ ಸಚಿವ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಕೂಡಿದಾಗ ಕರ್ನಲ್ ಡಿ. ಪಿ. ಗಾಡಿವಾಲಿಯರು ಮದ್ಯಪಾನದಿಂದಾಗುವ ಅನರ್ಥಗಳ ಕುರಿತು ಮನೋರಮ ಭಾಷಣವನ್ನು ಕೊಟ್ಟರು. ಸಭಾಭವನವು ಜನಸಮುದಾಯದಿಂದ ಕಿಕ್ಕಿರಿದಿತ್ತಾದರೂ ಗಲಿಬಿಲಿ ಗಲಾಟೆಗಳಾಗಲಿಲ್ಲ. ಹೊರಗೆ ಮಾತ್ರ ಕೆಲವರು ಕೂಡಿ ಸರಕಾರದ ಧೋರಣವನ್ನು ನಿಂದಿಸಿ ಕೂಗುತ್ತಿದ್ದರು.



ಒಂದೇ ವಾರದಲ್ಲಿ ನೋವು ಮಾಯವಾಯಿತು!

ನಾನು ಇಂದಿಗೆ 10 ವರ್ಷಗಳಿಂದ ಹೊಟ್ಟೆ ಕರುಳಿನ ವ್ಯಾಧಿಯಿಂದ ನರಳುತ್ತಿದ್ದೆನು. ನನಗೆ ಬೇಕಾದುದನ್ನು ತಿನ್ನಲಿಕ್ಕಾಗುತ್ತಿರಲಿಲ್ಲ. ಈ ಕಾರಣದಿಂದ ನನ್ನ ಜೀವನವು ಅತ್ಯಂತ ಸಂಕಟಮಯವಾಗಿತ್ತು.

ಕೊನೆಗೆ ಎರಡು ವರ್ಷಗಳ ಹಿಂದೆ ನಾಗೆ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿದೆ. ಆದರೂ ಸ್ವಲ್ಪ ವರ್ಷದ ಪಥ್ಯಪಾನಕ್ಕಾಗಿ ನನಗೆ ಜೋಡಿಸಿದರು. ಮತ್ತು ಗುಣ ದೊರಕದಿದ್ದರೆ ಪುನಃ ಶಸ್ತ್ರಚಿಕಿತ್ಸೆ ಮಾಡಬೇಕಾಗುವುದೆಂದು ತಿಳಿಸಲಾಗಿತ್ತು.

ಮತ್ತೊಮ್ಮೆ ನೋವು ಕಾಣಿಸಿಕೊಂಡಿತು. ಆಗ ಸ್ನೇಹಿತರು ಮೊದಲಿಗಿಂತ ಹಾಳಾದೆನು. ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರ್ ತೆಗೆದುಕೊಳ್ಳುವಂತೆ ಒಬ್ಬರು ನನ್ನಾಕೆ ಎಂದರು. ಈ ಔಷಧಿಗೆ ಪರೀಕ್ಷಾರ್ಥವಾಗಿ ಉಪಯೋಗಿಸಿದೆ. ಅದರ ಸೇವನೆಯ ಒಂದೇ ಒಂದು ವಾರದೊಳಗೆ ಹೊಟ್ಟೆ ನೋವು ಪೂರ್ಣ ಮಾಯವಾಯಿತು. I. W.

ಇದೇ ಅಭಿಪ್ರಾಯದಿಂದ ಕೂಡಿದ ಸಾವಿರಾರು ಪತ್ರಗಳೂ ನಮಗೆ ಬರುತ್ತಲಿವೆ. ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರಿನ ಅನುಕರಣೆಗಳಿಂದ ತಿಳಿದು ಒಡೆಯುವುದು. ಆದರೆ ಖಾತ್ರಿಯಾದ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ಪಡೆದುಕೊಳ್ಳಬೇಕು. ಅಲೆಕ್ಸ್ ಸಿ. ಮೆಕ್ಲೀನ್ ಸಹಿಯಿಂದ ಸೀಲ್ದ ಖಾತ್ರಿ ಪಡಿಸಬೇಕು. ಒಡೆದು ಮಾತ್ರ ಪುಡಿ ರೂಪದಲ್ಲಿ ಮಾರಾಟವಾಗುತ್ತದೆ. ಚಿಲ್ಲರೆಯಾಗಿ ಮಾರಾಟವಾಗುವುದಿಲ್ಲ. ಎಲ್ಲಾ ದವಾಖಾನೆಗಳಲ್ಲಿ ದೊರೆಯುತ್ತದೆ.

ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರ್

ಬಾಟ್ಲಿಯ ಮೇಲೆ ಮತ್ತು ಪೆಟ್ಟಿಗೆಯ ಮೇಲೆ ಈ ಕೆಳಗಿನ ಸಹಿಯು ಇರುವಾಗ ಜಾಗರೂಕರಾಗಿರಿ

MACLEAN BRAND Stomach Powder

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ಜಮ್ಮಿ ವೆಂಕಟರಮಣಯ್ಯ

ವಿಲಕ್ಷಣ ತಯಾರಿ. ವಿಶೇಷ ಚಿಕಿತ್ಸೆ ಬರೆಯಿರಿ.

ಲಿವರ್ ಮತ್ತು ಸ್ಪ್ಲೀನ್ ಸ್ಪೆಶಿಯಲಿಸ್ಟ್, ಮೈಲಾಪುರ, ಮದ್ರಾಸು.

ಮುಸಲೋನಿಯ ಅಂತ್ಯಕಾಲವು ಸಮೀಪಿಸಿತು!

ಇಟಾಲಿಯ ಮೇಲೆ ಮುಸಲೋನಿಯ ಹಿಡಿತವು ತಪ್ಪುತ್ತಾ ಇದೆ. ಅವನೀಗ ಇಟಲಿಯ ಸರ್ವಾಧಿಕಾರಿಯಲ್ಲ. ಸೂತ್ರದ ಗೊಂಬೆ ಎಂದು ಜಾರ್ಜ್ ಸ್ಲೊಕೋಮುಯವರು ಸಂಡೇ ಎಕ್ಸ್‌ಪ್ರೆಸ್‌ದಲ್ಲಿ ಬರೆಯುತ್ತಾರೆ. ಮುಸಲೋನಿ ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಬಹಳ ಜೀರ್ಣನಾಗಿರುವನು. ಅವನಲ್ಲಿ ಮೊದಲಿನ ಆತ್ಮವಿಶ್ವಾಸ, ಶಕ್ತಿ ಬಲಗಳು ಕಾಣುವುದಿಲ್ಲ. ಅವನು ಸ್ಫೂರ್ತಿಹೀನನೂ ನಿರುತ್ಸಾಹಿಯೂ ಆಗಿದ್ದಾನೆ ಎಂದು ಅವರು ಹೇಳಿರುವರು ಇದರ ಕಾರಣವನ್ನು ಹೀಗೆಂದು ಊಹಿಸುತ್ತಾರೆ ಇನ್ನು ಮೂರು ತಿಂಗಳಲ್ಲಿ ಮುಸಲೋನಿಯ ಪ್ರಾಯ ೫೬ ವರ್ಷ ಆಗುತ್ತದೆ ಆಗ ಅವನು ಹಿಟ್ಲರನಿಗಿಂತ ೬ ವರ್ಷಕ್ಕೆ, ನೆಪೋಲಿಯನನಿಗಿಂತ ೮ ವರ್ಷಕ್ಕೆ ಹಿರಿಯನಾಗುವನು ಕ್ರೋಮವೆಲ್ಲನಿಗಿಂತ ಮೂರು ವರ್ಷಕ್ಕೆ ಮತ್ತು ಜೂಲಿಯಸ್ ಸೀಝರನಿಗಿಂತ ಒಂದ ವರ್ಷಕ್ಕೆ ಕಿರಿಯನಾಗುವನು ಆದ್ದರಿಂದ ಅವನ ಅಂತ್ಯಕಾಲವು ಸಮೀಪವಾಯಿತೆ ಎಂದು ಹಲವರಿಗೆ ಸಂದೇಹವುಂಟಾಗಿರುವುದು ಅವನಿಗೆ ಮೊದಲಿನಂತೆ ಅಧಿಕಾರ ಲಾಲಸೆ ಅಥವಾ ರಾಕ್ಷಸಿ ಕೃತ್ಯಗಳಲ್ಲಿ ಸಂತೋಷವು ಕಂಡುಬರುವುದಿಲ್ಲ ಜೀವನದಲ್ಲಿ ಅವನಿಗೆ ಬೇಸರವೇ ಬೇಸರ ನೆಪೋಲಿಯನನು ಪತಿತನಾಗುವ ಮೊದಲು ೧೬ ವರ್ಷ ಅಧಿಕಾರದಲ್ಲಿದ್ದನು. ಮುಸಲೋನಿ ಅಧಿಕಾರಕ್ಕೆ ಬಂದೂ ೧೬ ವರ್ಷಗಳಾದುವು ಆದ್ದರಿಂದ ಅವನು ಶೀಘ್ರದಲ್ಲಿ ಪತನೋನ್ಮುಖನಾಗಬಹುದೆಂಬುದು ಕೆಲವರ ಅಂದಾಜಾಗಿದೆ.

ಸರ್ವತ್ರ ನಮ್ಮ ಮಿತ್ರರು

ಅಂತರಾಷ್ಟ್ರೀಯ ಸೇವಾ ಭಾವನೆಯಿಂದ ಪ್ರೇರಿತವಾಗಿ, ಜಗತ್ತಿನಲ್ಲಿ ಸುಖಶಾಂತಿ ಸಮಾಧಾನಗಳು ನೆಲೆಗೊಳ್ಳಬೇಕೆಂಬುದಕ್ಕೋಸ್ಕರ ರಷ್ಯದ ಕೆಂಪು ಸೇನೆಯಿರುತ್ತದೆ ಜಗತ್ತಿನ ಶಾಂತಿಯೇ ಈ ಸೇನೆಯ ಉದ್ದೇಶ ಅದು ಪ್ರಪಂಚದ ಎಲ್ಲಾ ಕೆಲಸಗಾರರ ಸೇನೆ ಹೀಗಿರುವುದರಿಂದ ಈ ಸೇನೆಯು ಸ್ವತಹ ಬಹಳ ಬಲಿಷ್ಟವಾಗಿರುವುದಷ್ಟೇ ಅಲ್ಲ, ಜಗತ್ತಿನ ಎಲ್ಲಾ ಭಾಗಗಳಿಂದ ಶಕ್ತಿ ಬಲಗಳು ದೊರಕಿ ಅದು ಅಜೇಯವಾಗಿರುವುದು ಶತ್ರುಗಳು ಎಂದಾದರೂ ಈ ಸೇನೆಯ ಮೇಲೆ ಬೀಳುವುದಾದರೆ ಅದಕ್ಕೆ ಬೆಂಬಲವನ್ನು ಕೊಡುವ ನಮ್ಮ ಮಿತ್ರರು ಶಾಂಘಾಯಿಯಿಂದ ನ್ಯೂಯೋರ್ಕ ತನಕ, ಲಂಡನಿನಿಂದ ಕಲ್ಕತ್ತದ ತನಕ ಸರ್ವತ್ರ ಇರುವುದನ್ನು ಕಾಣಬಹುದು ಎಂದು ರಷ್ಯದ ಪ್ರಧಾನರಾದ ಮ್ಯಾಂ ಸ್ಟೇಲಿನರವರು ಮೊಸ್ಕೊದ ಒಂದು ಭಾಷಣದಲ್ಲಿ ಹೇಳಿದ್ದಾರೆ

ಬ್ರಿಟನು ಜಗತ್ತಿನ ಪ್ರಧಾನ ಶಕ್ತಿಯಲ್ಲ

ಸಮಗ್ರ ಯೂರೋಪ ಭಾರತೀಯ ವಿದ್ಯಾರ್ಥಿ ಸಂಘಗಳ ಒಂದು ಪ್ರತಿನಿಧಿ ಸಭೆಯು ಕೆಲ ದಿನಗಳ ಹಿಂದೆ ಲಂಡನಿನಲ್ಲಿ ಕೂಡಿತು ಶ್ರೀ ಜಲ್ಲಿಯಾಕಸರವರು ಮುಖ್ಯ ಭಾಷಣ ಕರ್ತರಾಗಿದ್ದರು ಅವರು ತಮ್ಮ ಭಾಷಣದಲ್ಲಿ– 'ನಾವು ಬ್ರಿಟಿಷರಿಂದ ಮಹತ್ವದ ಏನನ್ನೂ ನಿರೀಕ್ಷಿಸಬೇಕಾಗಿಲ್ಲ ಬ್ರಿಟನು ಈಗ ಜಗತ್ತಿನ ಒಂದು ಪ್ರಧಾನ ಶಕ್ತಿಯಲ್ಲ ಬ್ರಿಟನು ಫ್ರಾನ್ಸುಗಳು ಒಂದಾದರೂ, ಅವು ಸರ್ವಾಧಿಕಾರಿಗಳನ್ನು ಎದುರಿಸಲು ಸಮರ್ಥವಾಗಿವೆಯೋ ಎಂಬುದು ಸಂದೇಹಾಸ್ಪದವಾಗಿದೆ ಸರ್ವಾಧಿಕಾರಿಗಳು ಜೆಕೊಸ್ಲೊವೇಕಿಯ ಮತ್ತು ಸ್ಪೈನನ್ನು ತಮ್ಮ ಸ್ವಾಧೀನ ಮಾಡಿಕೊಳ್ಳಲಿಕ್ಕೆ ಮಿ ಚೆಂಬರ್ಲೇನ ಮತ್ತು ಬ್ರಿಟಿಷ ಸಾಮ್ರಾಜ್ಯಶಕ್ತಿಯ ದುರ್ಬಲತೆಯೇ ಕಾರಣವಾಯಿತು. ಬ್ರಿಟನು ಫ್ರಾನ್ಸು ರಷ್ಯಗಳು ಒಂದಾದರೆ ಮಾತ್ರ ಸರ್ವಾಧಿಕಾರಿಗಳನ್ನು ಬಗ್ಗಿಸಬಹುದು. ಅಲ್ಲದೆ ಅಂಥ ಸಂದರ್ಭದಲ್ಲಿ ಅವರು ಹಿಂದುಸ್ಥಾನದಂತ ಪರಾಧೀನ ರಾಷ್ಟ್ರಗಳನ್ನು ಸ್ವತಂತ್ರ ಮಾಡಲಿಕ್ಕೆ ಬ್ರಿಟನ ಪ್ರತಿಜ್ಞಾಬದ್ಧವಾಗಬೇಕಾಗುವುದು. ಆದರೆ ರಷ್ಯದ ಧ್ಯೇಯಾದರ್ಶಗಳು ಬ್ರಿಟನಿಗೆ ಸಹನೀಯವಾಗಿಲ್ಲ. ಬ್ರಿಟನು ಆತ್ಮಘಾತವಾಡಿಕೊಂಡೀತಲ್ಲದೆ ರಷ್ಯದ ಸ್ನೇಹವನ್ನು ಇಚ್ಛಿಸಲಾರದು ತನ್ನ ಪತನಕ್ಕೆ ಕಾರಣವಾಗುವ ಧೋರಣವನ್ನು ಬ್ರಿಟನು 'ಈಗ ಕೈಕೊಂಡಿದೆ' ಎಂದರು

ಹಿಟ್ಲರ ಇಟಲಿಯನ್ನು ಆಕ್ರಮಿಸುವನು!!

ದಾದಾ ಲೇಖರಾಜರು ಬೊಂಬಾಯಿಗೆ ಬರುವರು

ಮದ್ರಾಸು ಎಸೆಂಬ್ಲಿಯಲ್ಲಿ ವಸ್ತ್ರಮಾರಾಟ ಮಸೂದೆ

ದಾದಾಲೇಖರಾಜರು ಬೊಂಬಾಯಿಗೆ

ಕರಾಚಿಯ ಓಂ ಮಂಡಲಿಯಲ್ಲಿ ಪ್ರಸಿದ್ಧರಾಗಿರುವ ದಾದಾಲೇಖ ರಾಜರು ಬೊಂಬಾಯಿಗೆ ಬರುವರೆಂದು ಸುದ್ದಿ ಉಂಟಾಗಿದೆ ಅವರು ಅಲ್ಲಿ ಒಂದು ದೊಡ್ಡ ಬಂಗಲೆಯನ್ನು ಕ್ರಯಕ್ಕೆ ಪಡಕೊಂಡಿರುವುದಂತೆ ಆರಿಸಿ ತೆಗೆದು ಕೆಲವು ತರುಣಿ ಶಿಷ್ಯೆಯರೊಂದಿಗೆ ಅವರು ಆ ಬಂಗಲೆಗೆ ಬಂದು ನೆಲಸುವರು ಓಂ ಮಂಡಲಿಯಲ್ಲಿ ತರುಣಿಯರು ನೀತಿಭ್ರಷ್ಟರಾಗುವುದರಿಂದ ತಮ್ಮ ಹೆಣ್ಣು ಮಕ್ಕಳು ಈ ಲೇಖರಾಜರ ಬಲೆಯಲ್ಲಿ ಬೀಳದ ಹಾಗೆ ಬೊಂಬಾಯಿ ನಗರನಿವಾಸಿಗಳು ಎಚ್ಚರ ತೆಗೆದುಕೊಳ್ಳಬೇಕೆಂದು ಅಲ್ಲಿಯ ಒಂದು ಗುಜರಾತಿ ಪತ್ರಿಕೆ ಹೇಳುತ್ತದೆ

ಆಫ್ರಿಕಾ ಸರಕಾರದ ಅನ್ಯಾಯ

ದಕ್ಷಿಣ ಆಫ್ರಿಕದಲ್ಲಿ ನೆಲಸಿರುವ ಹಿಂದೀಯರ ವಸತಿಗಳನ್ನು ಯೂರೋಪಿಯನರ ವಸತಿಗಳಿಂದ ಬೇರೆ ಮಾಡಲಿಕ್ಕೆ ಅಲ್ಲಿಯ ಸರಕಾರವು ಮುಂತಂದ ಕಾನೂನನ್ನು ಶುದ್ಧ ಅನ್ಯಾಯವೆಂದು ಮಹಾತ್ಮರು ಅದನ್ನು ಖಂಡಿಸಿದ್ದಾರೆ ಈ ಕಾನೂನಿನ ಸಂಬಂಧ ದಕ್ಷಿಣ ಆಫ್ರಿಕದ ಭಾರತೀಯರು ಸತ್ಯಾಗ್ರಹ ನಡೆಸುವದನ್ನು ತಿಳಿದು ಈಗಲಾದರೂ ಸರಕಾರವು ಭಾರತೀಯರಿಗೆ ನ್ಯಾಯದಾನ ಮಾಡಿತೆಂದು ಅವರು ಆಶಿಸಿದ್ದಾರೆ ಪರಂತು ದಕ್ಷಿಣ ಆಫ್ರಿಕದ ಸರಕಾರದ ಈ ವಿಷಯವನ್ನು ಇಂಡಿಯಾ ಸರಕಾರದೊಡನೆಯೂ ಚರ್ಚಿಸಲಿಕ್ಕೂ ನಿರಾಕರಿಸಿದೆ ಬನಸಿಕ್ಕದ ದಕ್ಷಿಣ ಆಫ್ರಿಕದ ಭಾರತೀಯರ ಕಷ್ಟಗಳು ಇಮ್ಮಡಿ ನಾಲ್ಮಡಿ ಬೆಳೆಯ ತೊಡಗಿವೆ ವಿದೇಶಗಳಲ್ಲಿ ನೆಲಸಿದ ಭಾರತೀಯ ಜೀವನಕ್ಕೆ ಜವಾಬ್ದಾರವಾದ ಇಂಡಿಯಾ-ಸರಕಾರವು ಕೂಡಲೇ ಈ ವಿಷಯದಲ್ಲಿ ಅಗತ್ಯವುಳ್ಳದ್ದನ್ನು ಮಾಡದಿದ್ದರೆ ಪರಿಸ್ಥಿತಿಯು ಕೈಮೀರಿ ಹೋಗಬಹುದ.

ಮದ್ರಾಸಿನ ವಸ್ತ್ರ ಮಾರಾಟ ಮಸೂದೆ

ಇದರ ಚರ್ಚೆಯು ಮದ್ರಾಸು ಎಸೆಂಬ್ಲಿಯಲ್ಲಿ ಆಗಿದೆ ಈ ಮಸೂದೆಯಿಂದ ವ್ಯಾಪಾರಿಗಳಿಗೆ ಬಹಳ ಕಷ್ಟವಾಗುವದೆಂಬ ಒಂದೇ ಕಾರಣದಿಂದ ಎದುರು ಪಕ್ಷದವರು ಮಸೂದೆಯನ್ನು ವಿರೋಧಿಸಿರುವರು ಮದ್ಯಪಾನ ನಿಷೇಧದಂಥ ಜನೋಪಕಾರ ಯೋಜನೆಗಳನ್ನು ಸರಕಾರವು ತನ್ನ ಕೈಗೆ ತೆಗೆದುಕೊಂಡಿರುವಾಗ, ಕಡಿಮೆ ಬೀಳುವ ಸರಕಾರದ ಹಣವನ್ನು ಹೇಗೆ ಭರ್ತಿಮಾಡಬಹುದೆಂಬ ಕುರಿತು ಎದುರು ಪಕ್ಷದವರು ವ್ಯವಹಾರಿಕ ಸೂಚನೆಗಳನ್ನು ಕೊಡಲಿಕ್ಕೆ ಸಮರ್ಥರಾಗಿಲ್ಲ ಆದ್ದರಿಂದ ಈ ಮಸೂದೆಯು ಅನಿವಾರ್ಯವಾಗಿದೆ ಎಂಬುದು ತನ್ನಂತೆ ಸಿದ್ಧವಾಗುತ್ತದೆ ಮಸೂದೆಯನ್ನು ವಿರೋಧಿಸಿ ಎದುರು ಪಕ್ಷದ ಜಸ್ಟೀಸ ಮತ್ತು ಮುಸ್ಲಿಂ ಲೀಗ ಸದಸ್ಯರು ಸಭೆಬಿಟ್ಟುಹೋದರು ತಾವು ತಮ್ಮ ಸದಸ್ಯಸ್ಥಾನಗಳಿಗೆ ರಾಜಿಕೊಟ್ಟು ಪುನಃ ಚುನಾವಣೆಗೆ ನಿಲ್ಲುವದಾಗಿಯೂ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದರೆ ಇದು ಪಕ್ಷಸಾಧನೆಯ ಒಂದು ರಾಜಕೀಯ ತಂತ್ರ ಮಾತ್ರ ಅವರು ಹಾಗೆ ಮಾಡಿದಾದರೆ ಸೋಲುವುದು ಖಂಡಿತ ಆದ್ದರಿಂದ ಎಚ್ಚರಿಕೆ ಕೊಟ್ಟು ಮಾತ್ರ ತೃಪ್ತರಾಗಿದ್ದಾರೆ ರಾಜಿ ಕೊಟ್ಟಿಲ್ಲ! ಈ ಮಸೂದೆಯಿಂದ ಪ್ರಾರಂಭದಲ್ಲಿ ಸ್ವಲ್ಪ ಕಷ್ಟಗಳು ತೋರಿದರೂ ಪರಿಣಾಮದಲ್ಲಿ ಅದರಿಂದ ಪ್ರಾಂತ್ಯಕ್ಕೆ ಶುಭವೇ ಆಗುವದು ಯಾರಿಗೂ ಯಾವ ತರದಿಂದಲೂ ನಷ್ಟವಾಗಲಾರದು

ಯುದ್ಧ ಸಂಭವದಲ್ಲಿ

… ನೇತೃತ್ವದ ಕಾರ್ಯಕಲಾಪಗಳು … ಈಗಿನ ಜನಸೇವಾ ಕಾರ್ಯಾಲಯ … ನಡೆಯೆ … ವಿಹಿತವ … ಸಂದರ್ಭದಲ್ಲಿ ಜನಾಂಗ ಸಂಘದ ಕಾರ್ಯ … ಅತೀ ಶೀಘ್ರ … ಒಂದು … ಸ್ಥಾನಕೆ … ಆಗಿದೆ ಹಾಗೆ ಯುದ್ಧ ಸಂಭವದಲ್ಲಿ ಒಂದು … ಕಚೇರಿಗಳನ್ನು ಎಲ್ಲಿಗೆ ಒಯ್ಯಬೇಕೆಂಬ ಪರ ಕುರಿತೂ ನಿಶ್ಚಯವಾಗಿದೆ

ಹಿಟ್ಲರ ಇಟಲಿಯನ್ನು ಆಕ್ರಮಿಸುವನೆ?

ಇನ್ನು ಕೆಲವು ತಿಂಗಳುಗಳಲ್ಲಿ ಇಟಲಿಯ ವಿದೇಶಾಂಗ ನೀತಿಯಲ್ಲಿ ಪರಿವರ್ತನೆಯಾಗುವದು ಅದರಿಂದ ಮುಸಲೋನಿ ತನ್ನ ಸ್ನೇಹಿತರಿಂದಲೂ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ ಈ ವಿರೋಧದ ಪರಿಣಾಮವಾಗಿ ಹಿಟ್ಲರನು ಇಟಲಿಯನ್ನು ಆಕ್ರಮಿಸಲೂಬಹುದು ಆದ್ದರಿಂದ ಮುಸಲೋನಿ ಸ್ಪೈನಿನಿಂದಲೂ ಅಬಿಸೀನಿಯದಿಂದಲೂ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಸುವ ಆಲೋಚನೆ ಮಾಡಿದ್ದಾನೆ ಆಕ್ರಮಣವು ೧೯೪೦ರಲ್ಲೇ ನಡೆಯಬಹುದಾಗಿ ಲಂಡನಿನ ಎಷ್ಟರ್ ಲಿಂಡೋ ಎಂಬ ಜ್ಯೋತಿಷಿಗಳು ಭವಿಷ್ಯ ನುಡಿದಿರುವರು

ಇಂಡಿಯದಲ್ಲಿ ಬ್ರಿಟಿಷರು

ಮಿ ಎಲ್‌ಡೂರಾಂಟಿ ಎಂಬ ಅಮೇರಿಕದ ಪ್ರಸಿದ್ಧ ಗ್ರಂಥಕರ್ತರು 'ದಿ ಕೇಜ್ ಫೋರ ಇಂಡಿಯಾ' ಎಂಬ ಒಂದು ಪುಸ್ತಕವನ್ನು ಬರೆದಿರುತ್ತಾರೆ ಅದರಲ್ಲಿ ಅವರು–'ಬ್ರಿಟಿಷರ ನ್ಯಾಯನೀತಿಗಳನ್ನ, ಮೆಚ್ಚಿ ನಾನು ಇಂಡಿಯಕ್ಕೆ ಹೋದಿದ್ದೆ ಆದರೆ ಅವರ ಮೇಲೆ ತಾತ್ಸಾರವನ್ನಿಟ್ಟು ನಾನು ಆ ದೇಶದಿಂದ ಹಿಂದಿರುಗಬೇಕಾಯಿತು ಎಂದು ಹೇಳಿ–'ಇಂಡಿಯದಲ್ಲಿ ಬ್ರಿಟಿಷರ ಶಾಸನವು ದೇಶೀಯರಿಗೆ ಒಂದು ಅಭಿಶಾಪವಾಗಿ ಪರಿಣಮಿಸಿತು' ಎಂದು ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರು ಬ್ರಿಟಿಷರ ವಿಭಾಗಿಸಿ ಆಳುವ ನೀತಿ, ತಂತ್ರಮಂತ್ರಗಳಿಂದ ದೇಶೀಯರ ಉನ್ನತಿಯಾಗುವ ಬದಲಿಗೆ ಅವರ ಪತನವಾಗಿದೆ ಸಂಪತ್ತಿಕ ಜೀವನಕ್ರಮದಲ್ಲಿ ದೇಶೀಯರು ಗಾಂಜಾ ಅಫೀಮುಗಳ ಸೇವನೆಯಂಥ ದುರ್ವ್ಯಸನಗಳಿಗೂ ಬಲಿಯಾಗಬೇಕಾಯಿತು ಕೇವಲ ತನ್ನ ಸ್ವಾರ್ಥಸಾಧನೆಗೆ ಬಂದ ಬ್ರಿಟಿಷರು ಹಿಂದ ಸ್ಥಾನದಲ್ಲಿ ಆಳಿನಿಗೆ ಗಿರಾಯಿಕಿಗಳು ಬೇಕೆಂದು ಅದನ್ನು ಪುಷ್ಟಿ ಹಂಚಿ ದೇಶೀಯರಿಗೆ ಅದರ ರುಚಿ ಹತ್ತಿಸಿದರು ದೇಶದ ಪುನರುದ್ಧಾರಕ್ಕೆ ಅವತರಿಸಿದ ಗಾಂಧಿಯವರ ಬುದ್ಧನಿಗಿಂತಲೂ ದೊಡ್ಡವ ಮಹಾತ್ಮರಾಗಿರುವರು ಎಂದು ಮೊದಲಾಗಿ ಹೇಳಿ ಹಿಂದುಸ್ಥಾನವು ಸ್ವರಾಜ್ಯಕ್ಕೆ ಯೋಗ್ಯವಾಗಿದೆ ಎಂದಿದ್ದಾರೆ

ಜರ್ಮನಿಯಲ್ಲಿ ಸಂತಾನವೃದ್ಧಿ

ಜರ್ಮನಿಯಲ್ಲಿ ಜನಸಂಖ್ಯೆಯು ಕಡಿಮೆಯಾಗುತ್ತಾ ಬರುವದು ಹಿಟ್ಲರನಿಗೆ ಬಹಳ ಯೋಚನೆಗಿಟ್ಟಿದೆ ಎಲ್ಲಾ ಉಪಾಯಗಳಿಂದಲೂ ಆರ್ಯಜಾತಿಯ ಸಂತಾನವೃದ್ಧಿಯಾಗಬೇಕೆಂದು ಅವನು ಬಯಸಿರುವನು ಅದಕ್ಕೋಸ್ಕರ ಅವ ಪ್ರತಿಯೊಂದು ಯೋಜನೆಯನ್ನು ಅವನು ದ್ರವ್ಯಸಹಾಯಮಾಡಿ ಪ್ರೋತ್ಸಾಹಿಸುತ್ತಿದ್ದಾನೆ ಮೊದಲಿನ ಮಹಾಯುದ್ಧವಿಲ್ಲದಿರುತ್ತಿದ್ದರೆ ವಿವಾಹಿತರಾಗಿ ಈಗ ಪುತ್ರವತಿಯರಾಗುತಿದ್ದ ಮೂವತ್ತು-ಮೂವತ್ತೈದು ವರ್ಷ ಪ್ರಾಯದ ಸುಮಾರು ಎರಡು ಮಿಲಿಯ ಅವಿವಾಹಿತ ಸ್ತ್ರೀಯರು ಜರ್ಮನಿಯಲ್ಲಿದ್ದಾರೆ ಈಗ ಸ್ತ್ರೀಯರಲ್ಲಿ ಯಾರಾದರೂ ತಾವು ತಾಯಂದಿರಾಗುವ ಇಚ್ಛೆಯನ್ನು ಅಧಿಕಾರಿಗಳಲ್ಲಿ ಪ್ರಕಟಿಸಿದರೆ ಸರಕಾರವು ಅವರಿಗೊಬ್ಬೊಬ್ಬರಿಗೆ ೫೦೦ ನಾಣ್ಯಗಳ ಹಣ ಸಹಾಯಮಾಡುವುದು. ಅವರಿಗೆ ಬೇಕಾದಷ್ಟು ಪುರುಷರನ್ನು ಸರಕಾರವೇ ಒದಗಿಸಿ ಕೊಟ್ಟು ಶುದ್ಧ ಆರ್ಯ ರಕ್ತದ ಮಕ್ಕಳು ಅವರಿಗೆ ಹುಟ್ಟುವಂತೆ ಅದು ನೋಡುವುದು ಹುಟ್ಟಿದ ಮಕ್ಕಳು ಪ್ರಾಯಸಮರ್ಥರಾಗುವ ತನಕ ಸರಕಾರವೇ ಆ ಮಕ್ಕಳನ್ನು ಪೋಷಿಸುವುದು ಇಂಥ ಯೋಜನೆಗೆ ಹಿಟ್ಲರ ತನ್ನ ಸಮ್ಮತಿಯನ್ನು ಕೊಟ್ಟಿದ್ದಾನ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಸರದಾರ ಭವನ Sirdar Bhavan
ಫೆಲಿಕ್ಸ್‌ಪೈ ಬಜಾರ್-ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂದಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೋಣೆಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳು

Propriter— **H R Rao,**
Bangalore Gurt Emporuim Madras

ತಾ. ೨೧-೫-೧೯೩೯ರಿಂದ
ಮೀನಾಕ್ಷಿ ಮತ್ತು ವಿನಾಯಕ
ಇವರು ಅತ್ಯುತ್ತಮವಾಗಿ ಅಭಿನಯಿಸಿದ
ಬ್ರಹ್ಮಚಾರಿ — ಬ್ರಹ್ಮಚಾರಿ
ಸ್ಥಳೀಯ ಚಿತ್ರಾ ಟಾಕೀಸ್‌ನಲ್ಲಿ ಪ್ರದರ್ಶಿಸಲಾಗುವುವು.

ಮಂಗಳೂರು ಸಮಾಚಾರ

ಶಾರದ ಸಭೆ

ನಮ್ಮ ಶಾರದ ಸಭೆಯು ಕಳೆದ ಶುಕ್ರವಾರ ಸಾಯಂಕಾಲ ೫½ ಗಂಟೆಗೆ ಅಧ್ಯಕ್ಷರಾದ ಶ್ರೀ ಬಿ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಡಾ ಕೆ ಗಿರಿಧರ ರಾಯರು ದಿವಂಗತ ಡಾ ಕೆ ಸಂಜೀವ ಹೆಗ್ಡೆಯವರ ಅಕಾಲ ನಿಧನದ ಸೂಚಕ ಠರಾವನ್ನು ತರಲು ಅದು ಡಾ ಎನ್ ಉಪೇಂದ್ರ ಪೈಗಳಿಂದ ಅನುಮೋದಿಸಲ್ಪಟ್ಟು ಮಂಜೂರಾಯಿತು

ವಧ್ಯಸ್ಥಾನಕ್ಕೆ ಒಯ್ಯುತ ಗೋವುಗಳನ್ನು ವೆಲ್ಲಿಂಗ್ಟನ್ ಮಾರ್ಕೆಟ್ ತನಕ ತಂದು ಅಲ್ಲಿ ಅವಕ್ಕೆ ಮುದ್ರೆ ಒತ್ತಿ ಅನಂತರ ಅವನ್ನು ನೇಟಿ ಯಿಂದ ಕಡಿವ ಸ್ಥಳಕ್ಕೆ ಒಯ್ಯುವ ವಿಚಾರ ನಡೆದು, ಗೋದವಸ್ತ್ರರ ಅವರ ಕಡಿವಲ್ಲಿಗೆ ತರಲಿ, ಅವಕ್ಕೆ ಅಲ್ಲೀ ಮುದ್ರೆಯೊತ್ತಬೇಕೆಂದ ತೀರ್ಮಾನಿಸಲ್ಪಟ್ಟಿತು.

ಹಲವು ಬಿಲ್ಲುಗಳು ಮಂಜೂರಾದುವು ... ಗಳ ರಿಕಾರ್ಡು ಮಾಡಲ್ಪಟ್ಟವು ಸರಕಾರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೂಲಿ ... ತನದ ... ಇರುವ ... ವೇತನ ಗಳಲ್ಲಿ ತಮಿಳು ಭಾಷೆ ಹಾಗೂ ತೆಲುಗು ಭಾಷೆ ತಿಳಿದವರಿಗಿರುವುದರಿಂದ ಕನ್ನಡ ಮತ್ತು ತುಲಯಾಳ ಜಿಲ್ಲೆಗಳು ಮದ್ರಾಸು ಸಂಸ್ಥಾನಕ್ಕೆ ಸೇರಿದೆಯಾದರೂ ಅದಕ್ಕೇನೂ ಸ್ಥಾನವಿಲ್ಲದಿರುವುದರಿಂದ ಮದ್ರಾಸು ಸರಕಾರದ ಈ ಧೋರಣೆಯನ್ನು ಪರಿಶೋಧಿಸಬೇಕೆಂದು ತೀರ್ಮಾನವಾಯಿತು

ಕೌನ್ಸಿಲಿನ ಪೇಪರ್ ವೇಸ್ಟು, ಬಾರಿ ಶ್ರೀ ... ಮುಂತಾದವರಿಗೆ 'ಮುನಿಸಿಪೋಲಿಟಾನ್' ಕುಡಿಗೆ ಕೊಡಿಸುವ ವಿಷಯ ಒಂದು ಸಮಿತಿಯು ನೇಮಿಸಲ್ಪಟ್ಟಿತು ಮೈದಾನದಲ್ಲಿ ಟೌನಿನ ಗಡಿಯಾರವು ... ಕಾರಣದಿಂದ ಮುನ್ಸಿಪಾಲಿಟಿಯು ಅಂಕೆಯಲ್ಲಿದ್ದು, ವರ್ಷಂಪ್ರತಿ ಅದರ ರಿಪೇರಿ ಮಾಡಲಾದ್ದಕ್ಕೆ ಸಲ್ಲತಕ್ಕದ್ದ ರೂ ೩೦೦ ವಾರ್ಷಿಕ ವೇತನವು ಮುಂದೆಯೂ ಕೊಡುವಂತಾಯಿತು

ನಾಯಿ ಹಿಡಿಯುವವರಿಗೆ ಹೆಚ್ಚಳಿಸ ... ಸಲಹೆಯಂತೆ ಹೊ ಮುಂದೂರಿಗಿ ತಿಂಗಳಲ್ಲಿ ಅತೀ ಹೆಚ್ಚು ನಾಯಿ. ಹಿಡಿದವನಿಗೆ ರೂ ... ಬಹುಮಾನವು ಕೊಡಲ್ಪಡಬೇಕೆಂಬ ಸಲಹೆಯು ಮಂಜೂರಾಯಿತು

ವೆಲ್ಲಿಂಗ್ಟನ್ ಮಾರ್ಕೆಟಿನ ... ಇಸ್ತಿ ... ಮಂಜೂರು ಮಾಡಬೇಕೆನ್ನುವ ಶ್ರೀ ... ಲ್ ಯಸ್ ಕ್ಯಾಲೋರವರ ಪತ್ರ ಹಾಗೂ ರೂ ೮,೫೦೦ಕ್ಕೆ ತನಗೆ ಕೊಡಿಸಬೇಕೆಂಬ ಶ್ರೀ ಇನಾಸ್ ರುಜಾರಿಯೋರವರ ಪತ್ರಗಳ ವಿಚಾರಗಳಲ್ಲಿ ವಕೀಲರೆನ್ನುವಂತೆ ಕಮಿಷನರು ನಡೆಯಬಹುದೆಂದಾಯಿತು. ಕೌನ್ಸಿಲಿನ ಎದಿರಿದ ಕರಿಗೆ ವಿಚಾರದಲ್ಲಿ ಪತ್ರಿಕೆಗಳಲ್ಲಿ ಪ್ರಕಟಣೆ ಕೊಡುವ ಮುನ್ಸಿಪಾಲಿಟಿಗೆ ಕುರಿತು ತಿಂಗಳೊಂದರ ರೂ ೩೦ರಂತೆ ಕೊಡುವ ಕುರಿತು ಮತ್ತು ಇನ್ನೂ ಅನೇಕ ವಿಷಯ ನಿರ್ಧಾರಗೊಂಡುವು.

ಎಡಿಶನಲ್ ಸಬ್ ಜಡ್ಜರು.

ಮಂಗಳೂರಲ್ಲಿ ಆರಂಭವಾಗಲಿರುವ ಎಡಿಶನಲ್ ಸಬ್ ಕೋರ್ಟಿಗೆ ಶ್ರೀ. ಟಿ ವಾಸುದೇವರಾಯರು ಎಡಿಶನಲ್ ಸಬ್ ಜಡ್ಜರಾಗಿ ನೇಮಕ ಹೊಂದಿರುವರು

ಮುನ್ಸೀಫರು

ನಮ್ಮ ಮುನ್ಸಿಫರಾಗಿದ್ದ ಶ್ರೀ. ಎ. ಸೋಂ. ಯಸ್ ಟಾಗಟ್‌ರವರು ತೆನ್ನಾಲಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಅವರ ಸ್ಥಾನಕ್ಕೆ ಶ್ರೀ ಎಸ್ ಎ. ವೈದ್ಯನಾಥ ಅಯ್ಯರವರು ನೇಮಕ ಹೊಂದಿದವರು

ದ. ಕ. ಜಿಲ್ಲಾ

ಪ್ರಥಮ ಮಜೂರ ಪರಿಷತ್ತು.

ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ಮಜೂರರ ಪರಿಷತ್ತು ಇದೇ ಮೇ ತಾ ೨೦ ಮತ್ತು ೨೧ರಲ್ಲಿ ಸ್ಥಳೀಯ ಮಿಶನ್ ಹೈಸ್ಕೂಲಿನಲ್ಲಿ ಜರಗುವುದು ಮದ್ರಾಸಿನ, ಕೋಮ್ರೇಡ್ ಶ್ರೀ ಮಾನ್ ಎ ಕೆ ಸಿಳ್ಳೆ, ಬಾರ್-ಎಟ್-ಲಾ ಇವರು ಅಧ್ಯಕ್ಷಸ್ಥಾನವನ್ನು ವಹಿಸುವರು.

ಜಿಲ್ಲಾ ರೆಡ್ ಕ್ರಾಸ ಸೊಸೈಟಿ

ಜಿಲ್ಲಾ ರೆಡ್ ಕ್ರಾಸ್ ಸೊಸೈಟಿಯ ಸಭೆಯೊಂದು ಕಳೆದ ಶನಿವಾರ ಶ್ರೀ. ಯಂ ವೆಂಕಟೇಶ ಪೈಯವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ... ಜಿಲ್ಲೆಯಲ್ಲಿನ ಸೊಸೈಟಿಯು ... ಜಿಲ್ಲಾ ಸೊಸೈಟಿಯು ಅಂಗವಾಗಿ ಸ್ವೀಕರಿಸುವ ಮುಂದಿನ ಜೂನ್ ತಿಂಗಳ ... ಪಕ್ಷ ೭೦೦ ಸದಸ್ಯರನ್ನು ಸೇರಿಸಿಕೊಳ್ಳುವ ಹಾಗೂ ... ಕೆನರಾ ... ಸ್ಕೂಲಿನ ... ಯ ವರಿಂದ ... ಮಂಗಳವಾರ ಮತ್ತು ಶುಕ್ರವಾರಗಳಲ್ಲಿ ... ಚಿಕಿತ್ಸೆ ... ಕ್ಲಾಸುಗಳನ್ನು ತೆರೆ... ನಿರ್ಧಾರ...

ಅತ್ತಾವರ ಎಂಡ್ ಜವಾಹರ್ ಬೇಂಕ್, ಲಿಮಿಟೆಡ

ಮಂಗಳೂರಿನಲ್ಲಿ ... ಅತ್ತಾವರ ... ಬೇಂಕ್ ಮತ್ತು ಜವಾಹರ್ ಬೇಂಕ್ ರಿಜಿಸ್ಟರ್ಡ್ ... ಹೆಸರಿಂದ ವ್ಯವಹಾರ ನಡೆಸುತ್ತಿದ್ದ ಬೇಂಕುಗಳ, ತಾ ... ೧೯೩೯ರಲ್ಲಿ ಅತ್ತಾವರ ಎಂಡ್ ಜವಾಹರ ಬೇಂಕ್ ಲಿಮಿಟೆಡ ... ಹೆಸರಿನಿಂದ ರಿಜಿಸ್ಟರ ಮಾಡಲ್ಪಟ್ಟಿದೆ.

ಕೆನರಾ ಇಂಡಸ್ಟ್ರಿಯಲ್ ಎಂಡ ಬೇಂಕಿಂಗ ಸಿಂಡಿಕೇಟ್, ಲಿಮಿಟೆಡ್

ಈ ... ಬೇಂಕಿಂಗ ಸಂಸ್ಥೆ ... ದಿವಂಗತ ... ವೆಂಕಟೇಶ ಪೈಗಳ ... ಚಿತ್ರದ ಅನಾವರಣ ... ಈ ಸಂಸ್ಥೆಯ ... ಕಾರ್ಯಾಲಯದಲ್ಲಿ ಇದೇ ... ಸಂಜೆ ... ಗಂಟೆಗೆ ಶ್ರೀ ವೆಂಕಟರಾವ ಬಾಳಿಗ ಎಂ ಎಲ್ ... ದವರಿಂದ ನೆರವೇರಿಸಲ್ಪಡುವುದು

ಲಾರಿಯು ಬಿತ್ತು

... ಕದ್ರಿ ... ದಿಂದ ಮಂಗಳೂರಿಗೆ ಬರುತ್ತಿದ್ದ ಲಾರಿಯೊಂದು ... ಕಲಿನ ಸಮೀಪದ ಕೆಸ್ರುಗದ್ದೆ ಎಂಬಲ್ಲಿ, ಮಾರ್ಗದಿಂದ ಜಾರಿ, ಕೆಳಗೆ ಕಳೆದ ಶುಕ್ರವಾರ ದಿನ ಬಿದ್ದಿತು. ಡ್ರೈವರನು ಒಡನೆಯೇ ಮೃತನಾಗಿರುವನು ಲಾರಿಯಲ್ಲಿದ್ದ ಕಂಡಕ್ಟರ್ ಮತ್ತು ಇನ್ನೊಬ್ಬರು ಗಾಯಗೊಂಡಿದ್ದು ಮೂಡಬಿದ್ರೆ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು ಲಾರಿಯು ಇನ್ನೂ ಕಣಿಯಲ್ಲಿ ಇರುವುದೆಂದು ತಿಳಿದು ಬರುತ್ತದೆ.

ಗೌರವ ಮೆಡಿಕಲ್ ಆಫೀಸರರು

ಸ್ಥಳೀಯ ವೆನಲಾಕ್ ಆಸ್ಪತ್ರೆಯ ಗೌರವ ಮೆಡಿಕಲ್ ಆಫೀಸರರಾಗಿ ಈ ಕೆಳಗಿನವರು ನೇಮಿಸಲ್ಪಟ್ಟಿರುವರು ಡಾ. ಕೆ. ಕೆ. ಹೆಗ್ಡೆ (ಮೆಡಿಸಿನಲ್ ಡಿಪಾರ್ಟಮೆಂಟ್), ಡಾ. ಪಿ ಬಾಲಕೃಷ್ಣ ರಾವ್ (ಸರ್ಜಿಕಲ್ ಡಿಪಾರ್ಟಮೆಂಟ್) ಮತ್ತು ಡಾ. ಸಿ. ವಿಶ್ವನಾಥ್ (ಒಪ್ತಲ್ಮಿಕ್ ಡಿಪಾರ್ಟಮೆಂಟ್)

ತಾಲೂಕು ಸಮಾಚಾರ

ಕಾರ್ಕಳ

ಇಲ್ಲಿಯ ತಾಲೂಕು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಒಂದು ಸಭೆಯು ಕಳೆದ ವಾರ ಶ್ರೀ ಕೆ ಪಿ ಜನಾರ್ಧನ ಪ್ರಭು ಬಿ. ಎ ಯವರ ಅಧ್ಯಕ್ಷತೆಯಲ್ಲಿ ಕೂಡಿ ಹಿಂದಿನ ವರ್ಷದ ವರದಿ, ಪರಿಶೋಧಿತ ಲೆಕ್ಕಪತ್ರ, ಮುಂದಿನ ವರ್ಷದ ಬಜೆಟು ಮತ್ತು ಕಾರ್ಯಕ್ರಮ ಇತ್ಯಾದಿಗಳನ್ನು ತಯಾರು ಮಾಡಿ ... ಸಭೆಯಲ್ಲಿ ಮಂಡಿಸಬೇಕೆಂದು ನಿರ್ಣಯವಾಯಿತು.

ತಾ ೧೨-೫-೩೯ರ ಬೆಳಗ್ಗೆ ಬೇಗನಾಯಿತು. ಬೋರ್ಡ್ ಎಲಿಮೆಂಟರಿ ಶಾಲೆಯ ಸಮೀಪ ... ಲಾರಿಯು ... ಡ್ರೈವರನು ... ಅಪಘಾತವನ್ನು ತಪ್ಪಿಸುವುದಕ್ಕೆ ... ದೇವಸ್ಥಾನದ ... ಭಾಗಕ್ಕೆ ಲಾರಿಯು ಮೇಲ್ಭಾಗವು ಜರಿದು, ಡ್ರೈವರನು ಸತ್ತನೆಂದು ಹೇಳಲಾಗಿದೆ ... ಗಳಲ್ಲಿ ... ಉಂಟುಮಾಡುವ ... ಪೋಲೀಸ್ ತನಿಖೆ ನಡೆಯುತ್ತಾ ಇದೆ

ಅಧಿಕ ತೋಟಗಳಿಗೆ ಬರುವ ಮಹಾರೋಗದ ನಿವಾರಣಾರ್ಥ ಇಲ್ಲಿಯ ವಕೀಲ ಶ್ರೀ ಟಿ ವಿ. ಭಟ್ಟರ ಅಧ್ಯಕ್ಷತೆಯಲ್ಲಿ ಕುಂದಾಪುರ ... ಕಾರ್ಕಳ ತಾಲೂಕುಗಳ ... ಒಂದು ಸಹಕಾರ ಸಂಘದ ಸ್ಥಾಪನೆಯು ... ಸಂಬಂಧಪಟ್ಟವರು ಸಂಘಕ್ಕೆ ಸೇರಿ ಅದರ ಧ್ಯೇಯೋದ್ದೇಶಗಳನ್ನು ಪೂರ್ಣ ಸಾಧಿಸಿ ಪ್ರಯೋಜನ ಪಡೆಯಬೇಕೆಂದು ಸಂಘದ ಕಡೆಯಿಂದ ವಿನಂತಿಯು ... ದೆ

ಉಡುಪಿ

ತಾ ೧೪ನೆ ... ಬೋರ್ಡ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ ಅಧ್ಯಾಪಕರುಗಳ ಸಭೆಯು ಜಿಲ್ಲಾ ಬೋರ್ಡ ಅಧ್ಯಕ್ಷರಾದ ಡಾ ಕೆ. ವಿಟ್ಠಲ ಶೆಟ್ಟರವರ ಅಧ್ಯಕ್ಷತೆಯಲ್ಲಿ ಸೇರಿತು ಜಿ. ಬೋ ಉಪಾಧ್ಯಕ್ಷರಾದ ಶ್ರೀ ಪಿ ಎಸ್ ನಾರಾಯಣರಾಯರೂ ಬಂದಿದ್ದರು ಸಭೆಯ ಉದ್ದೇಶವು ವಿವರಿಸಲ್ಪಡಲಾಗಿ ಅಧ್ಯಾಪಕರುಗಳ ಪರವಾದ ಅಹವಾಲುಗಳು ನಿವೇದಿಸಲ್ಪಟ್ಟವು ಜಿಲ್ಲೆಗೊಂದು ದ ಕ ಜಿ ಬೋರ್ಡ ಕಂಟ್ರಾಕ್ಟರುಗಳ ಸಂಘವೊಂದನ್ನು ಸ್ಥಾಪಿಸುವುದು ಅವಶ್ಯವೆಂದು ನಿರ್ಣಯವಾಗಿ ಸದ್ರಿ ಸಂಘದ ನಿಯಮಾವಳಿಯನ್ನು ತಯಾರಿಸಿ ಕಾರ್ಯ ಮುಂದರಿಸಲು ... ಸಮಿತಿಯು ಆರಿಸಲ್ಪಟ್ಟಿತು ಮುಂದಣ ಸಭೆಯು ... ಗಳಲ್ಲಿ ಸೇರಬೇಕಾಗಿಯೂ ನಿಶ್ಚಯವಾಯಿತು ಜಿಲ್ಲೆಯೊಳಗಣ ಬೇರೆ ಬೇರೆ ಭಾಗಗಳಿಂದ ಸುಮಾರು ೬೫ ಕಂಟ್ರಾಕ್ಟರುಗಳು ಹಾಜರಿದ್ದು ಸದ್ರಿ ಸಭೆಯು ಯಶಸ್ವಿಯಾಗಿತ್ತು.

ಮೋಟಾರು ಅಪಘಾತ ಸಿನೆಮಾ ನೋಟೀಸು ಮೃತ್ಯುಪ್ರಾಯವಾಯಿತು.

ಕಳೆದ ಸೋಮವಾರ ಪೂರ್ವಾಹ್ನ ಗುಂಡಿಬೈಲು ಬಡಕಿಲ್ಲಾಯ ಕುಟುಂಬದ ಸಾಧಾರಣ ಎಂಟು ವರುಷ ಪ್ರಾಯದ ಕೃಷ್ಣನೆಂಬ ಬಾಲಕನು ಪುತ್ತೂರು. ಸಾಲ್ಮರ ರಸ್ತೆಯಲ್ಲಿ ಎಸ್ ಕೆ ... ನೇ ಮೋಟರ್ ಕಾರಿನಡಿಗೆ ಬಿದ್ದು ಮರಣೋನ್ಮುಖನಾದನೆಂಬುದು ವಿಷಾದಕರವಿದೆ ಸ್ಥಳೀಯ ಸಿನೆಮಾ ಕಂಪೆನಿಯ ಜಟಕಾ ಗಾಡಿಯೊಂದು ನೋಟೀಸು ಹಂಚಿಕೊಂಡು ಹೋಗುತ್ತಿದ್ದ ವೇಳೆ ಈ ಬಾಲಕನೂ ನೋಟೀಸ ಹಿಡಿಯಲು ಹೋಗಿ ಮುಂಗಟ್ಟೆ ರಲ್ಲೀ ಕಾರು ಬಂದು ಹುಡುಗನು ಅದಿಗೆ ಬೀಳುವ ವಿಷಯ ... ಕಂತೆ

ಸಾಕ್ಷರ ಪ್ರಚಾರದ ಕುರಿತು ಭಾಷಣ

ಸರ್ವರೂ ಸಾಕ್ಷರಜ್ಞರಾಗಬೇಕೆಂಬ ಸದುದ್ದೇಶದಿಂದ ಪ್ರಚಾರ ಕಾರ್ಯವನ್ನು ಕೈಕೊಂಡ ವಕೀಲ ಶ್ರೀ ಪಿ ವಿ. ಉಪಾಧ್ಯಾಯರ ಕಳೆದ ವಾರ ... ಗಾಂಧಿ ಮೈದಾನದಲ್ಲಿ ಮಹಾಸಭೆಯ ... ಭಾಷಣ ... ಶ್ರೀ. ಕೆ. ಶಿವರಾಮ ಕಾರಂತರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ನಿರಕ್ಷರತೆಯನ್ನು ಹೋಗಲಾಡಿಸುವ ಕಾರ್ಯದಲ್ಲಿ ... ರಷ್ಯ, ಟರ್ಕಿ ದೇಶಗಳಂತೆ ಹಿಂದುಸ್ಥಾನವೂ ... ಈ ವಿಷಯದಲ್ಲಿ ... ಮದ್ರಾಸು ಸರಕಾರ ... ಶ್ರೀ ಉಪಾಧ್ಯಾಯರು ... ಸಾರ್ವಜನಿಕ ವಾಚನಾಲಯಗಳು, ಸಣ್ಣ ಲೀಟರಿಂಗ್ ಲೈಬ್ರೆರಿಗಳೂ ಅತ್ಯಾವಶ್ಯಕವೆಂದು ಶ್ರೀ ಕಾರಂತರು ನುಡಿದರು.

ತಾಲೂಕು ವಿದ್ಯಾಸಮಿತಿಗಳು.

ಸರಕಾರದವರು ಜಿಲ್ಲಾ ಎಜ್ಯುಕೇಶನಲ್ ಸಮಿತಿಯನ್ನು ರದ್ದು ಮಾಡಿದ್ದಾರಷ್ಟೆ ಅದರ ಬದಲಾಗಿ ಪ್ರತಿ ತಾಲೂಕಿನಲ್ಲಿಯೂ ಒಂದೊಂದು ಸಮಿತಿಯನ್ನು ಸ್ಥಾಪಿಸಿದ್ದಾರೆ ಅದಕ್ಕೆ ಮೂವ್ವರು ಸದಸ್ಯರನ್ನು ನೇಮಿಸಿದ್ದಾರೆ ಇಲಾಖಾ ಅಧಿಕಾರಿಗಳು, ಪ್ರಜಾ ನಾಗರಿಕರೂ, ಸರಕಾರಿ ನೌಕರರೂ, ನ್ಯಾಯ ವಿಧಾಯಕರೂ ಈ ಸಮಿತಿಗಳಲ್ಲಿದ್ದಾರೆ

ಮುಂಡ್ಕೂರು

ಇಲ್ಲಿಯ ಹೈಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವ ತಾ ... ರಕ್ಕೆ ಮಹಾಸ್ಥ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಶ್ರೀ ... ವಿಟ್ಠಲ ಶೆಟ್ಟಿ ... ಅಧ್ಯಕ್ಷತೆಯಲ್ಲಿ ... ವಿಜೃಂಭಣೆ ... ಗಾನ ... ನಾಟಕ ... ಡೆಗಳು, ... ವಿವಿಧ ವಿನೋದಾವಳಿಗಳು ಶಾಲಾ ಮಕ್ಕಳ ... ಬಹಳ ತೃಪ್ತಿಕರವಾಗಿ ಪ್ರದರ್ಶಿಸಲ್ಪಟ್ಟವು ಅಧ್ಯಕ್ಷರು ತಮ್ಮ ... ಭಾಷಣದಿಂದ ಶಾಲಾ ವರ್ಧಂತಿಗೆ ಒಳಪಟ್ಟ ವಿವಿಧ ವಿಷಯಗಳನ್ನು ವಿಶ್ವಪ್ರತ್ಯೇಕ ... ಯೋಗ್ಯ ಸೂಚನೆಗಳ ಮೂಲಕ ಅಧ್ಯಾಪಕರುಗಳಿಗೂ ವಿದ್ಯಾರ್ಥಿಗಳಿಗೂ ಕೊಡಿದ ಕಥೆಗಳಿಗೂ ಸಂಪೂರ್ಣ ಸಮಾಧಾನವನ್ನು ಕೊಟ್ಟು ಶಾಲಾಭಿವೃದ್ಧಿಯನ್ನು ಬಯಸಿ ರಾತ್ರಿಗೆಕ್ಕೆಯೊಂದಿಗೆ ಸಭೆಯ ... ಮುಗಿಸಿದರು.

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ.

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store.

28 Meachua Bazar St, CALCUTTA

ಮುಸಲೋನಿಯ ಅಂತ್ಯಕಾಲವು ಸಮೀಪಿಸಿತು!

ಹಿಟ್ಲರ ಇಟಲಿಯನ್ನು ಆಕ್ರಮಿಸುವನು!!

ದಾದಾ ಲೇಖರಾಜರು ಬೊಂಬಾಯಿಗೆ ಬರುವರು

ಮದ್ರಾಸು ಎಸೆಂಬ್ಲಿಯಲ್ಲಿ ವಸ್ತು ಮಾರಾಟ ಮಸೂದೆ

ಇಟಾಲಿಯ ಮೇಲೆ ಮುಸಲೋನಿಯ ಹಿಡಿತವು ತಪ್ಪುತ್ತಾ ಇದೆ. ಅವನೀಗ ಇಟಲಿಯ ಸರ್ವಾಧಿಕಾರಿಯಲ್ಲ. ಸೂತ್ರದ ಗೊಂಬೆ ಎಂದು ಜಾರ್ಜ್ ಸ್ಲೊಕೋಮಯವರು ಸಂಡೇ ಎಕ್ಸ್‌ಪ್ರೆಸ್‌ದಲ್ಲಿ ಬರೆಯುತ್ತಾರೆ. ಮುಸಲೋನಿ ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಬಹಳ ಜೀರ್ಣನಾಗಿರುವನು. ಅವನಲ್ಲಿ ಮೊದಲಿನ ಆತ್ಮವಿಶ್ವಾಸ, ಶಕ್ತಿ ಬಲಗಳು ಕಾಣುವುದಿಲ್ಲ. ಅವನು ಸ್ಫೂರ್ತಿಹೀನನೂ ನಿರುತ್ಸಾಹಿಯೂ ಆಗಿದ್ದಾನೆ ಎಂದು ಅವರು ಹೇಳಿರುವರು. ಇದರ ಕಾರಣವನ್ನು ಹೇಗೆಂದು ಊಹಿಸುತ್ತಾರೆ. ಇನ್ನು ಮೂರು ತಿಂಗಳಲ್ಲಿ ಮುಸಲೋನಿಯ ಪ್ರಾಯ ೫೬ ವರ್ಷ ಆಗುತ್ತದೆ. ಆಗ ಅವನು ಹಿಟ್ಲರನಿಗಿಂತ ೬ ವರ್ಷಕ್ಕೆ, ನೆಪೋಲಿಯನನಿಗಿಂತ ೪ ವರ್ಷಕ್ಕೆ ಹಿರಿಯನಾಗುವನು. ಕ್ರೊಮ್ವೆಲ್ಲನಿಗಿಂತ ಮೂರು ವರ್ಷಕ್ಕೆ ಮತ್ತು ಜೂಲಿಯಸ್ ಸೀಜರನಿಗಿಂತ ಒಂದು ವರ್ಷಕ್ಕೆ ಕಿರಿಯನಾಗುವನು. ಆದ್ದರಿಂದ ಅವನ ಅಂತ್ಯಕಾಲವು ಸಮೀಪವಾಯಿತೆ ಎಂದು ಹಲವರಿಗೆ ಸಂದೇಹವುಂಟಾಗಿರುವುದು. ಅವನಿಗೆ ಮೊದಲಿನಂತೆ ಅಧಿಕಾರ ಲಾಲಸೆ ಅಥವಾ ರಾಕ್ಷಸಿ ಕೃತ್ಯಗಳಲ್ಲಿ ಸಂತೋಷವು ಕಂಡುಬರುವುದಿಲ್ಲ. ಜೀವನದಲ್ಲಿ ಅವನಿಗೆ ಬೇಸರವೇ ಬೇಸರ. ನೆಪೋಲಿಯನನು ಪತಿತನಾಗುವ ಮೊದಲು ೧೬ ವರ್ಷ ಅಧಿಕಾರದಲ್ಲಿದ್ದನು. ಮುಸಲೋನಿ ಅಧಿಕಾರಕ್ಕೆ ಬಂದೂ ೧೬ ವರ್ಷಗಳಾದುವು. ಆದ್ದರಿಂದ ಅವನು ಶೀಘ್ರದಲ್ಲಿ ನ್ಯಿಕ್ಕ್ಯಮುಖನಾಗಬಹುದೆಂಬುದು ಕೆಲವರ ಅಂದಾಜಾಗಿದೆ.

ಸರ್ವತ್ರ ನಮ್ಮ ಮಿತ್ರರು

ಅಂತರ್‌ರಾಷ್ಟ್ರೀಯ ಸೇವಾ ಭಾವನೆಯಿಂದ ಪ್ರೇರಿತವಾಗಿ, ಜಗತ್ತಿನಲ್ಲಿ ಸುಖಶಾಂತಿ ಸಮಾಧಾನಗಳು ನೆಲೆಗೊಳ್ಳಬೇಕೆಂಬುದಕ್ಕೋಸ್ಕರ ರಷ್ಯದ ಕೆಂಪು ಸೇನೆಯಿರುತ್ತದೆ. ಜಗತ್ತಿನ ಕ್ರಾಂತಿಯೇ ಈ ಸೇನೆಯ ಉದ್ದೇಶ. ಅದು ಪ್ರಪಂಚದ ಎಲ್ಲಾ ಕೆಲಸಗಾರರ ಸೇನೆ. ಹೀಗಿರುವುದರಿಂದ ಈ ಸೇನೆಯು ಸ್ವತಹ ಬಹಳ ಬಲಿಷ್ಟವಾಗಿರುವುದಷ್ಟೇ ಅಲ್ಲ, ಜಗತ್ತಿನ ಎಲ್ಲಾ ಭಾಗಗಳಿಂದ ಶಕ್ತಿ ಬಲಗಳು ದೊರಕಿ ಅದು ಅಜೇಯವಾಗಿರುವುದು. ಶತ್ರುಗಳು ಎಂದಾದರೂ ಈ ಸೇನೆಯ ಮೇಲೆ ಬೀಳುವುದಾದರೆ ಅದಕ್ಕೆ ಬೆಂಬಲವನ್ನು ಕೊಡುವ ನಮ್ಮ ಮಿತ್ರರ ಶಾಂಘಾಯಿಯಿಂದ ನ್ಯೂಯೋರ್ಕ ತನಕ, ಲಂಡನಿನಿಂದ ಕಲ್ಕತ್ತದ ತನಕ ಸರ್ವತ್ರ ಇರುವುದನ್ನು ಕಾಣಬಹುದು ಎಂದು ರಷ್ಯದ ಪ್ರಧಾನರಾದ ಮ. ಸ್ಟೇಲಿನರವರು ಮೊನ್ನೆಯ ಒಂದು ಭಾಷಣದಲ್ಲಿ ಹೇಳಿದ್ದಾರೆ.

ಬ್ರಿಟನು ಜಗತ್ತಿನ ಪ್ರಧಾನ ಶಕ್ತಿಯಲ್ಲ

ಸಮಗ್ರ ಯುರೋಪ ಭಾರತೀಯ ವಿದ್ಯಾರ್ಥಿ ಸಂಘಗಳ ಒಂದು ಪ್ರತಿನಿಧಿ ಸಭೆಯು ಕೆಲ ದಿನಗಳ ಹಿಂದೆ ಲಂಡನಿನಲ್ಲಿ ಕೂಡಿತು. ಶ್ರೀ ಜಲ್ಲಿಯಾಕಸರವರು ಮುಖ್ಯ ಭಾಷಣ ಕರ್ತರಾಗಿದ್ದರು. ಅವರು ತಮ್ಮ ಭಾಷಣದಲ್ಲಿ— 'ನಾವು ಬ್ರಿಟಿಷರಿಂದ ಮಹತ್ವದ ಏನನ್ನೂ ನಿರೀಕ್ಷಿಸಬೇಕಾಗಿಲ್ಲ. ಬ್ರಿಟನು ಈಗ ಜಗತ್ತಿನ ಒಂದು ಪ್ರಧಾನ ಶಕ್ತಿಯಲ್ಲ. ಬ್ರಿಟನು ಫ್ರಾನ್ಸುಗಳು ಒಂದಾದರೂ, ಅವು ಸರ್ವಾಧಿಕಾರಿಗಳನ್ನು ಎದುರಿಸಲು ಸಮರ್ಥವಾಗಿವೆಯೋ ಎಂಬುದು ಸಂದೇಹಾಸ್ಪದವಾಗಿದೆ. ಸರ್ವಾಧಿಕಾರಿಗಳು ಜೆಕೊಸ್ಲೊವೇಕಿಯ ಮತ್ತು ಸ್ಪೈನನ್ನು ತಮ್ಮ ಸ್ವಾಧೀನ ಮಾಡಿಕೊಳ್ಳಲಿಕ್ಕೆ ಮ್ಯುನಿಚ್ ಬರ್ಲಿನ ಮತ್ತು ಬ್ರಿಟಿಷ ಸಾಮ್ರಾಜ್ಯಶಕ್ತಿಯ ದುರ್ಬಲತೆಯೇ ಕಾರಣವಾಯಿತು. ಬ್ರಿಟನು ಫ್ರಾನ್ಸ್ ರಷ್ಯಗಳು ಒಂದಾದರೆ ಮಾತ್ರ ಸರ್ವಾಧಿಕಾರಿಗಳನ್ನು ಬಗ್ಗಿಸಬಹುದು. ಅಲ್ಲದೆ ಅಂಥ ಸಂದರ್ಭದಲ್ಲಿ ಅವರು ಹಿಂದುಸ್ಥಾನದಂತ ಪರಾಧೀನ ರಾಷ್ಟ್ರಗಳನ್ನು ಸ್ವತಂತ್ರ ಮಾಡಲಿಕ್ಕೆ ಬ್ರಿಟನ್ ಪ್ರತಿಜ್ಞಾಬದ್ಧನಾಗಬೇಕಾಗುವುದು. ಆದರೆ ರಷ್ಯದ ಧ್ಯೇಯಾದರ್ಶಗಳು ಬ್ರಿಟನಿಗೆ ಸಹನೀಯವಾಗಿಲ್ಲ. ಬ್ರಿಟನು ಆತ್ಮಘಾತವಾಗಿಕೊಂಡೀತಲ್ಲದೆ ರಷ್ಯದ ಸ್ನೇಹವನ್ನು ಇಚ್ಛಿಸಲಾರದು. ತನ್ನ ಪತನಕ್ಕೆ ಕಾರಣವಾಗುವ ಧೋರಣವನ್ನು ಬ್ರಿಟನು ಈಗ ಕೈಕೊಂಡಿದೆ' ಎಂದರು.

ದಾದಾಲೇಖರಾಜರು ಬೊಂಬಾಯಿಗೆ

ಕರಾಚಿಯ ಓಂ ಮಂಡಲಿಯಲ್ಲಿ ಪ್ರಸಿದ್ಧರಾಗಿರುವ ದಾದಾಲೇಖ ರಾಜರು ಬೊಂಬಾಯಿಗೆ ಬರುವರೆಂದು ಸುದ್ದಿ ಉಂಟಾಗಿದೆ. ಅವರು ಅಲ್ಲಿ ಒಂದು ದೊಡ್ಡ ಬಂಗಲೆಯನ್ನು ಕ್ರಯಕ್ಕೆ ಪಡಕೊಂಡಿರುವುದಂತೆ. ಆರಿಸಿ ತೆಗೆದ ಕೆಲವು ತರುಣ ಶಿಷ್ಯೆಯರೊಂದಿಗೆ ಅವರು ಆ ಬಂಗಲೆಗೆ ಬಂದು ನೆಲಸುವರು. ಓಂ ಮಂಡಲಿಯಲ್ಲಿ ತರುಣಿಯರು ನೀತಿಭ್ರಷ್ಟರಾಗುವುದರಿಂದ ತಮ್ಮ ಹೆಣ್ಣು ಮಕ್ಕಳು ಈ ಲೇಖರಾಜರ ಬಲೆಯಲ್ಲಿ ಬೀಳದ ಹಾಗೆ ಬೊಂಬಾಯಿ ನಗರ ನಿವಾಸಿಗಳು ಎಚ್ಚರ ತೆಗೆದುಕೊಳ್ಳಬೇಕೆಂದು ಅಲ್ಲಿಯ ಒಂದು ಗುಜರಾತಿ ಪತ್ರಿಕೆ ಹೇಳುತ್ತದೆ.

ಆಫ್ರಿಕಾ ಸರಕಾರದ ಅನ್ಯಾಯ

ದಕ್ಷಿಣ ಆಫ್ರಿಕದಲ್ಲಿ ನೆಲಸಿರುವ ಹಿಂದೀಯರ ವಸತಿಗಳನ್ನು ಯುರೋಪಿಯನರ ವಸತಿಗಳಿಂದ ಬೇರೆ ಮಾಡಲಿಕ್ಕೆ ಅಲ್ಲಿಯ ಸರಕಾರವು ಮುಂತಂದ ಕಾನೂನನ್ನು ಶುದ್ಧ ಅನ್ಯಾಯವೆಂದು ಗಾಂಧಾತ್ಮರು ಅದನ್ನು ಖಂಡಿಸಿದ್ದಾರೆ. ಈ ಕಾನೂನಿನ ಸಂಬಂಧ ದಕ್ಷಿಣ ಆಫ್ರಿಕದ ಭಾರತೀಯರು ಸತ್ಯಾಗ್ರಹ ಮಾಡುವುದನ್ನು ತಿಳಿದು ಈಗಲಾದರೂ ಸರಕಾರವು ಭಾರತೀಯರಿಗೆ ನ್ಯಾಯದಾನ ಮಾಡೀತೆಂದು ಅವರು ಆಶಿಸಿದ್ದಾರೆ. ಪರಂತು ದಕ್ಷಿಣ ಆಫ್ರಿಕದ ಸರಕಾರವು ಈ ವಿಷಯವನ್ನು ಇಂಡಿಯಾ ಸರಕಾರದೊಡನೆಯೂ ಮುಖಂಡರೊಡನೆಯೂ ಚರ್ಚಿಸಲಿಕ್ಕೂ ನಿರಾಕರಿಸಿದೆ. ದಿನಸಿಕ್ಕದ ದಕ್ಷಿಣ ಆಫ್ರಿಕದ ಭಾರತೀಯರ ಕಷ್ಟಗಳು ಇಮ್ಮಡಿ ನಾಲ್ಮಡಿ ಬೆಳೆಯುತ್ತಿರುವವು. ವಿದೇಶಗಳಲ್ಲಿ ನೆಲಸಿದ ಭಾರತೀಯ ಜೀವನಕ್ಕೆ ಜವಾಬುದಾರ ಮಾದ ಇಂಡಿಯಾ ಸರಕಾರವು ಕೂಡಲೇ ಈ ವಿಷಯದಲ್ಲಿ ಅಗತ್ಯವುಳ್ಳದ್ದನ್ನು ಮಾಡದಿದ್ದರೆ ಪರಿಸ್ಥಿತಿಯು ಕೈಮೀರಿ ಹೋಗಬಹುದು.

ಮದ್ರಾಸಿನ ವಸ್ತು ಮಾರಾಟ ಮಸೂದೆ

ಇದರ ಚರ್ಚೆಯು ಮದ್ರಾಸು ಎಸೆಂಬ್ಲಿಯಲ್ಲಿ ಆಗಿದೆ. ಈ ಮಸೂದೆಯಿಂದ ವ್ಯಾಪಾರಿಗಳಿಗೆ ಬಹಳ ಕಷ್ಟವಾಗುವದೆಂಬ ಒಂದೇ ಕಾರಣದಿಂದ ಎದುರು ಪಕ್ಷದವರ ಮಸೂದೆಯನ್ನು ವಿರೋಧಿಸಿರುವರು. ಮದ್ಯಪಾನ ನಿಷೇಧದಂಥ ಜನೋಪಕಾರ ಯೋಜನೆಗಳನ್ನು ಸರಕಾರವು ತನ್ನ ಕೈಗೆ ತೆಗೆದುಕೊಂಡಿರುವಾಗ, ಕಡಿಮೆ ಬೀಳುವ ಸರಕಾರದ ಹಣವನ್ನು ಹೇಗೆ ಭರ್ತಿಮಾಡಬಹುದೆಂಬ ಕುರಿತು ಎದುರು ಪಕ್ಷದವರು ವ್ಯವಹಾರಿಕ ಸೂಚನೆಗಳನ್ನು ಕೊಡಲಿಕ್ಕೆ ಸಮರ್ಥರಾಗಿಲ್ಲ. ಆದ್ದರಿಂದ ಈ ಮಸೂದೆಯು ಅನಿವಾರ್ಯವಾಗಿದೆ ಎಂಬುದು ತನ್ನಂತೆ ಸಿದ್ಧವಾಗುತ್ತದೆ. ಮಸೂದೆಯನ್ನು ವಿರೋಧಿಸಿ ಎದುರು ಪಕ್ಷದ ಜಸ್ಟೀಸ ಮತ್ತು ಮುಸ್ಲಿಂ ಲೀಗ ಸದಸ್ಯರು ಸಭೆಬಿಟ್ಟು ಹೋದರು. ತಾವು ತಮ್ಮ ಸದಸ್ಯಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಪುನಃ ಚುನಾವಣೆಗೆ ನಿಲ್ಲುವದಾಗಿಯೂ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಇದ ಪಕ್ಷಪಾತದ ಒಂದು ರಾಜಕೀಯ ತಂತ್ರ ಮಾತ್ರ. ಅವರು ಹಾಗೆ ಮಾಡಿದಾದರೆ ಸೋಲುವುದು ಖಂಡಿತ. ಆದ್ದರಿಂದ ಎಚ್ಚರಿಕೆ ಕೊಟ್ಟು ಮಾತ್ರ ತೃಪ್ತರಾಗಿದ್ದಾರೆ, ರಾಜೀ ಕೊಟ್ಟಿಲ್ಲ! ಈ ಮಸೂದೆಯಿಂದ ಪ್ರಾರಂಭದಲ್ಲಿ ಸ್ವಲ್ಪ ಕಷ್ಟಗಳು ತೋರಿದರೂ ಪರಿಣಾಮದಲ್ಲಿ ಅದರಿಂದ ಪ್ರಾಂತ್ಯಕ್ಕೆ ಶುಭವೇ ಆಗುವದು. ಯಾರಿಗೂ ಯಾವ ತರದಿಂದಲೂ ನಷ್ಟವಾಗಲಾರದು.

ಯುದ್ಧ ಸಂಭವದಲ್ಲಿ

ಈಗ ಆಫ ನೇಶನ್ಸನ ಕಾರ್ಯಾಲಯಗಳು ಜಿನೀವಾದ ಆಫೀಸುಗಳು ... ಜಿನೀವಾ ಕಾರ್ಯಾಲಯ ... ನಡೆಯ ... ನಿಶ್ಚಿತವಾಗಿ ... ಆದ್ದರಿಂದ ಅಂಥ ಸಂದರ್ಭದಲ್ಲಿ ... ಸಂಘದ ಕಾರ್ಯ ... ಒಂದು ... ಸ್ಥಾನ ... ನಿರ್ಮಾಣ ಆಗಿದೆ. ಹಾಗೆ ಯುದ್ಧ ಸಂಭವದಲ್ಲಿ ಒಂದ ... ನ ಕೋರ್ಟಿನ ಕಚೇರಿಗಳನ್ನು ಎಲ್ಲಿಗೆ ಒಯ್ಯಬೇಕೆಂಬುದರ ಕುರಿತೂ ನಿಶ್ಚಯವಾಗಿದೆ.

ಹಿಟ್ಲರ ಇಟಲಿಯನ್ನು ಆಕ್ರಮಿಸುವನೆ?

ಇನ್ನು ಕೆಲವು ತಿಂಗಳುಗಳಲ್ಲಿ ಇಟಲಿಯ ವಿದೇಶಾಂಗ ನೀತಿಯಲ್ಲಿ ಪರಿವರ್ತನೆಯಾಗುವದು. ಅದರಿಂದ ಮುಸಲೋನಿ ತನ್ನ ಸ್ನೇಹಿತರಿಂದಲೂ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಈ ವಿರೋಧದ ಪರಿಣಾಮವಾಗಿ ಹಿಟ್ಲರನು ಇಟಲಿಯನ್ನು ಆಕ್ರಮಿಸಲೂಬಹುದು. ಆದ್ದರಿಂದ ಮುಸಲೋನಿ ಸ್ಪೈನಿನಿಂದಲೂ ಅಬಿಸೀನಿಯದಿಂದಲೂ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಸುವ ಆಲೋಚನೆ ಮಾಡಿದ್ದಾನೆ. ಆಕ್ರಮಣವು ೧೯೪೦ರಲ್ಲೇ ನಡೆಯಬಹುದಾಗಿ ಲಂಡನಿನ ಎಡ್ವರ್ಡಲಿಂಡೋ ಎಂಬ ಜ್ಯೋತಿಷಿಗಳು ಭವಿಷ್ಯ ನುಡಿದಿರುವರು.

ಇಂಡಿಯಾದಲ್ಲಿ ಬ್ರಿಟಿಷರು

ಮಿ. ಎಲ್‌ಡೂರಾಂಟ ಎಂಬ ಅಮೇರಿಕದ ಪ್ರಸಿದ್ಧ ಗ್ರಂಥಕರ್ತರು 'ದಿ ಕೇಜ್ ಫೋರ ಇಂಡಿಯಾ' ಎಂಬ ಒಂದು ಪುಸ್ತಕವನ್ನು ಬರೆದಿರುತ್ತಾರೆ. ಅದರಲ್ಲಿ ಅವರು—'ಬ್ರಿಟಿಷರ ನ್ಯಾಯನೀತಿಗಳನ್ನು ಮೆಚ್ಚಿ ನಾನು ಇಂಡಿಯಕ್ಕೆ ಹೋಗಿದ್ದೆ. ಆದರೆ ಅವರ ಮೇಲೆ ತಾತ್ಸಾರವುಳ್ಳ ನಾನು ಆ ದೇಶದಿಂದ ಹಿಂದಿರುಗಬೇಕಾಯಿತು' ಎಂದು ಹೇಳಿ—'ಇಂಡಿಯದಲ್ಲಿ ಬ್ರಿಟಿಷರ ಶಾಸನವು ದೇಶೀಯರಿಗೆ ಒಂದು ಅಭಿಶಾಪವಾಗಿ ಪರಿಣಮಿಸಿತು' ಎಂದು ತಮ್ಮ ಅಭಿಪ್ರಾಯವನ್ನು ಕೊಟ್ಟಿರುವರು. ಬ್ರಿಟಿಷರ ವಿಭಾಗಿಸಿ ಆಳುವ ನೀತಿ, ತಂತ್ರಮಂತ್ರಗಳಿಂದ ದೇಶೀಯರ ಉನ್ನತಿಯಾಗುವ ಬದಲಿಗೆ ಅವರ ಪತನವಾಗಿದೆ. ಪರಿವರ್ತಿತ ಜೀವನಕ್ರಮದಲ್ಲಿ ದೇಶೀಯರು ಗಾಂಜಾ ಅಫೀಮುಗಳ ಸೇವನೆಯಂಥ ದುರ್ವ್ಯಸನಗಳಿಗೂ ಬಲಿಯಾಗಬೇಕಾಯಿತು. ಕೇವಲ ತನ್ನ ಸ್ವಾರ್ಥಸಾಧನೆಗೆ ಬಂದ ಬ್ರಿಟಿಷರು ಹಿಂದ ಸ್ಥಾನದಲ್ಲಿ ಅಧೀನಿಗೆ ನಾಯಕರುಗಳಾಗಬೇಕೆಂದು, ಅದನ್ನು ಪುಷ್ಟೀಕರಿಸಿ ದೇಶೀಯರಿಗೆ ಅದರ ರುಚಿ ಹತ್ತಿಸಿದರು. ದೇಶದ ಪುನರುದ್ಧಾರಕ್ಕೆ ಅವತರಿಸಿದ ಗಾಂಧಿಯವರು ಬುದ್ಧನಿಗಿಂತಲೂ ದೊಡ್ಡ ಮಹಾತ್ಮರಾಗಿರುವರು ಎಂದು ಮೊದಲಾಗಿ ಹೇಳಿ ಹಿಂದುಸ್ಥಾನವು ಸ್ವರಾಜ್ಯಕ್ಕೆ ಯೋಗ್ಯವಾಗಿದೆ ಎಂದಿದ್ದಾರೆ.

ಜರ್ಮನಿಯಲ್ಲಿ ಸಂತಾನವೃದ್ಧಿ

ಜರ್ಮನಿಯಲ್ಲಿ ಜನಸಂಖ್ಯೆಯು ಕಡಿಮೆಯಾಗುತ್ತಾ ಬರುವದು ಹಿಟ್ಲರನಿಗೆ ಬಹಳ ಯೋಚನೆಗಿಟ್ಟಿದೆ. ಎಲ್ಲಾ ಉಪಾಯಗಳಿಂದ ಅಲ್ಲಿ ಆರ್ಯಜಾತಿಯ ಸಂತಾನವೃದ್ಧಿಯಾಗಬೇಕೆಂದು ಅವನು ಬಯಸಿರುವನು. ಅದಕ್ಕೋಸ್ಕರ ಆದ ಪ್ರತಿಯೊಂದು ಯೋಜನೆಯನ್ನು ಅವನು ದ್ರವ್ಯಸಹಾಯ ಮಾಡಿ ಪ್ರೋತ್ಸಾಹಿಸುತ್ತಿದ್ದಾನೆ. ಮೊದಲಿನ ಮಹಾಯುದ್ಧವಿಲ್ಲದಿರುತ್ತಿದ್ದರೆ ವಿವಾಹಿತರಾಗಿ ಈಗ ಪುತ್ರವತಿಯರಾಗುತ್ತಿದ್ದ ಮೂವತ್ತು-ನಾಲ್ವತ್ತೈದು ವರ್ಷ ಪ್ರಾಯದ ಸುಮಾರು ಎರಡು ಮಿಲಿಯ ಅವಿವಾಹಿತ ಸ್ತ್ರೀಯರು ಜರ್ಮನಿಯಲ್ಲಿದ್ದಾರೆ. ಈಗ ಸ್ತ್ರೀಯರಲ್ಲಿ ಯಾರಾದರೂ ತಾವು ತಾಯಂದಿರಾಗುವ ಇಚ್ಛೆಯನ್ನು ಅಧಿಕಾರಿಗಳಲ್ಲಿ ಪ್ರಕಟಿಸಿದರೆ ಸರಕಾರವು ಅವರಿಗೊಬ್ಬೊಬ್ಬರಿಗೆ ೫೦೦ ನಾಣ್ಯಗಳ ಹಣ ಸಹಾಯ ಮಾಡುವುದು. ಅವರಿಗೆ ಬೇಕಾದಷ್ಟು ಪುರುಷರನ್ನು ಸರಕಾರವೇ ಒದಗಿಸಿ ಕೊಟ್ಟು ಶುದ್ಧ ಆರ್ಯರಕ್ತದ ಮಕ್ಕಳು ಅವರಿಗೆ ಹುಟ್ಟುವಂತೆ ಅದು ನೋಡುವುದು. ಹುಟ್ಟಿದ ಮಕ್ಕಳು ಪ್ರಾಯಸಮರ್ಥರಾಗುವ ತನಕ ಸರಕಾರವೇ ಆ ಮಕ್ಕಳನ್ನು ಪೋಷಿಸುವುದು. ಇಂಥ ಯೋಜನೆಗೆ ಹಿಟ್ಲರ ತನ್ನ ಸಮ್ಮತಿಯನ್ನು ಕೊಟ್ಟಿದ್ದಾನೆ.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಕೊಳ್ಳಿರಿ

ಸರದಾರ ಭವನ **Sirdar Bhavan**
ಫೆಲಿಕ್ಸ್‌ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ

Proprieter— **H R Rao,**
Bangalore Guit Emporuim Madras

ತಾ. ೨೧-೫-೧೯೪೩ರಿಂದ
ಮೀನಾಕ್ಷಿ ಮತ್ತು ವಿನಾಯಕ
ಇವರು ಅತ್ಯುತ್ತಮವಾಗಿ ಅಭಿನಯಿಸಿದ
ಬ್ರಹ್ಮಚಾರಿ — ಬ್ರಹ್ಮಚಾರಿ
ಸ್ಥಳೀಯ ಚಿತ್ರ ಟಾಕೀಸ್‌ನಲ್ಲಿ ಪ್ರದರ್ಶಿಸಲಾಗುವುದು

ಮಂಗಳೂರು ಸಮಾಚಾರ

ಪೌರಸಭೆ

ನಮ್ಮ ಪೌರ ಸಭೆಯು ಕಳೆದ ಶುಕ್ರವಾರ ಸಂಜೆ ೫॥ ಗಂಟೆಗೆ ಅಧ್ಯಕ್ಷರಾದ ಶ್ರೀ ಬಿ ವೆಂಕಟಪ್ಪಯ್ಯ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲಿ ಡಾ ಕೆ. ಗಿರಿಧರ ರಾಯರು ದಿವಂಗತ ಡಾ. ಕೆ ಸಂಜೀವ ಹೆಗ್ಡೆಯವರ ಅಕಾಲ ನಿಧನದ ಸೂಚಕ ಠರಾವನ್ನು ತರಲು ಅದು ಡಾ. ಎನ್ ಉಪೇಂದ್ರ ಪೈಗಳಿಂದ ಅನುಮೋದಿಸಲ್ಪಟ್ಟು ಮಂಜೂರಾಯಿತು.

ವಧ್ಯಸ್ಥಾನಕ್ಕೆ ಒಯ್ಯುವ ಗೋವುಗಳನ್ನು ವೆಲ್ಲಿಂಗ್ಟನ್ ಮಾರ್ಕೆಟ್ ತನಕ ತಂದು ಅಲ್ಲಿ ಅವಕ್ಕೆ ಮುದೆ ಒತ್ತಿ ಅನಂತರ ಅವನ್ನು ಪೇಟೆಯಿಂದ ಕಡಿವ ಸ್ಥಳಕ್ಕೆ ಒಯ್ಯುವ ವಿಚಾರ ನಡೆದು, ಗೋದಾಕ್ತರರು ಅವುಗಳನ್ನು ಕಡಿವಲ್ಲಿಗೆ ತೆರಳಿ, ಅವಕ್ಕೆ ಅಲ್ಲೇ ಮುದ್ರೆಯೊತ್ತಬೇಕೆಂದು ತೀರ್ಮಾನಿಸಲ್ಪಟ್ಟಿತು.

ಹಲವು ಬಿಲ್ಲುಗಳು ಮಂಜೂರಾದುವು ಜಿ ಒ ಗಳು ರಿಕಾರ್ಡು ಮಾಡಲ್ಪಟ್ಟವು ಸರಕಾರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೂಲಗಿತ್ತಿತನದ ತರಬೇತಿಗಾಗಿ ಇರುವ ಗಿರು ವೇತನಗಳಲಿ ತಮಿಳು ಮ ಭಾಷೆ ಹಾಗೂ ತೆಲುಗು ಭಾಷೆ ತಿಳಿದವರಿಗಿರುವುದರಿಂದ ಕನ್ನಡ ಮತ್ತು ಮಲಯಾಳ ಜಿಲ್ಲೆಗಳು ಮದ್ರಾಸು ಸಂಸ್ಥಾನಕ್ಕೆ ಸೇರಿವೆಯಾದರೂ ಅದಕ್ಕೇನೂ ಸ್ಥಾನವಿಲ್ಲದಿರುವುದರಿಂದ ಮದ್ರಾಸು ಸರಕಾರದ ಈ ಧೋರಣೆಯನ್ನು ವಿರೋಧಿಸಬೇಕೆಂದು ತೀರ್ಮಾನವಾಯಿತು

ಕೌನ್ಸಿಲಿನ ಸೇಫ್ ಪೋಸ್ಟ್ ಲಾವಿ ಶ್ರೀ ನರ ಮುಂತಾದವರಿಗೆ 'ಯೂನಿಫೋರ್ಮ್' ಉಡಿಗೆ ಕೊಡಿಸುವ ವಿಷಯ ಒಂದು ಸಮಿತಿಯು ನೇಮಿಸಲ್ಪಟ್ಟಿತು ಪ್ಯಾರಿಸಿನಲಿ ಟವರಿನ ಗಡಿಯಾರವು ೧೮೯೩ರಿಂದ ಮುನಿಸಿಪಾಲಿಟಿಯು ಅಂಕೆಯಲ್ಲಿದ್ದು, ವರ್ಷಂಪ್ರತಿ ಅದರ ರಿಪೇರಿ ಮೊದಲಾದ್ದಕ್ಕೆ ಸಲ್ಲುತ್ತಿದ್ದ ರೂ ೩೦೦ ವಾರ್ಷಿಕ ವರದಾನವು ಮುಂದೆಯೂ ತೆರುವಂತಾಯಿತು

ನಾಯಿ ಹಿಡಿಯುವವರಿಗೆ ಹೆಲ್ತಾಫೀಸರ ಸಲಹೆಯಂತೆ ಹಣ ಮಂಜೂರಾಗಿ, ತಿಂಗಳಲ್ಲಿ ಅತೀ ಹೆಚ್ಚು ನಾಯಿ ಹಿಡಿದವನಿಗೆ ರೂ ೩ರ ಬಹುಮಾನವು ಕೊಡಲ್ಪಡಬೇಕೆಂಬ ಸಲಹೆಯು ಮಂಜೂರಾಯಿತು.

ವೆಲ್ಲಿಂಗ್ಟನ್ ಮಾರ್ಕೆಟಿನ ವಿಲೆ ಇಸ್ತಿಮಾರು ಮಂಜೂರು ಮಾಡಬೇಕೆನ್ನುವ ಶ್ರೀ ಯಲ್ ಯಸ್ ಕ್ವಾಲ್ರೋಸವರ ಪತ್ರ ಹಾಗೂ ರೂ. ೮೫೦ಂಕ್ಕೆ ಕನಗೆ ಕೊಡಿಸಬೇಕೆಂಬ ಶ್ರೀ ಇನಾಸ್ ರುಜಾರಿಯೋರವರ ಪತ್ರಗಳ ವಿಚಾರಗಳಲ್ಲಿ ವಕೀಲರಿನ್ನುವಂತೆ ಕಮಿಶನರು ನಡೆಯಬಹುದೆಂದಾಯಿತು ಕೌನ್ಸಿಲಿನ ಎರಿಸಿದ ಕರಿಗೆ ವಿಚಾರದಲ್ಲಿ ಪತ್ರಿಕೆಗಳಲ್ಲಿ ಪ್ರಕಟಣೆ ಕೊಡುವ ಮುದ್ರಣಯನ್ನಿಗೆ ಕುರಿತು ತಿಂಗಳೊಂದರ ರೂ. ೩೦ರಂತೆ ಕೊಡುವ ಕುರಿತು ಮತ್ತು ಇನ್ನೂ ಅನೇಕ ವಿಷಯ ನಿರ್ಧಾರಗಳಾದುವು.

ಎಡಿಶನಲ್ ಸಬ್ ಜಡ್ಜರು.

ಮಂಗಳೂರಲ್ಲಿ ಆರಂಭವಾಗಲಿರುವ ಎಡಿಶನಲ್ ಸಬ್ ಕೋರ್ಟಿಗೆ ಶ್ರೀ. ಟಿ. ವಾಸುದೇವರಾಯರು ಎಡಿಶನಲ್ ಸಬ್ ಜಡ್ಜರಾಗಿ ನೇಮಕ ಹೊಂದಿರುವರು.

ಮುನ್ಸೀಫರು

ನಮ್ಮ ಮುನ್ಸಿಫರಾಗಿದ್ದ ಶ್ರೀ. ಪಿ. ಯಂ. ಯಸ್. ಟಾಗರ್ರವರು ತೆನ್ನಾಲಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ. ಅವರ ಸ್ಥಾನಕ್ಕೆ ಶ್ರೀ. ಎಸ್. ಎ. ವೈದ್ಯನಾಥ ಅಯ್ಯರವರು ನೇಮಕ ಪಟ್ಟಿರುವರು

ದ. ಕ. ಜಿಲ್ಲಾ ಪ್ರಥಮ ಮಜೂರ ಪರಿಷತ್ತು.

ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ಮಜೂರ ಪರಿಷತ್ತು ಇದೇ ಮೇ ತಾ. ೩೦ ಮತ್ತು ೩೧ರಲ್ಲಿ ಸ್ಥಳೀಯ ಮಿಶ್ಯನ್ ಹೈಸ್ಕೂಲಿನಲ್ಲಿ ಜರಗುವುದು, ಮದ್ರಾಸಿನ ಕೊಮ್ರೇಡ್ ಶ್ರೀ ಮಾನ್ ಎ. ಕೆ ಪಿಳ್ಳೆ, ಬಾರ್-ಎಟ್-ಲಾ ಇವರು ಅಧ್ಯಕ್ಷಸ್ಥಾನವನ್ನು ವಹಿಸುವರು

ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿ

ಜಿಲ್ಲಾ ರೆಡ್‌ಕ್ರಾಸ್ ಸೊಸೈಟಿಯ ಸಭೆಯೊಂದು ಕಳೆದ ಶನಿವಾರ ಶ್ರೀ. ಯಂ ವೆಂಕಟೇಶ ಪೈಯವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಕೆನರಾ ಹೈಸ್ಕೂಲಿನಲ್ಲಿ ಜರುಗಿತು ಮೂಡಬಿದ್ರೆಯಲ್ಲಿನ ಸೊಸೈಟಿಯ ಶಾಖೆಯನ್ನು ಜಿಲ್ಲಾ ಸೊಸೈಟಿಯು ಅಂಗವಾಗಿ ಸ್ವೀಕರಿಸುವ, ಮುಂದಿನ ಜೂನ್ ತಿಂಗಳಂತ್ಯದೊಳಗೆ ಇದರ ಸಲ್ಲಿ ೬೦೦ ಸದಸ್ಯರನ್ನು ಸೇರಿಸಿಕೊಳ್ಳುವ ಹಾಗೂ ಸ್ವಯಂಸೇವಕರಾಗಿ ಜೂನ್ ತಿಂಗಳಿಂದ ಕೆನರಾ ಹೈಸ್ಕೂಲಿನ ಎ ಸ ... ಸ್ಕ್ವಾ ಕ ... ದಲ್ಲಿ ಡಾ ಕೆ ... ಯವರಿಂದ ಸ ಕೀ ಮಂಗಳವಾರ ಮತ್ತು ಶುಕ್ರವಾರಗಳಲ್ಲಿ ಪ್ರಥಮ ಚಿಕಿತ್ಸೆಯ ಕ್ಲಾಸುಗಳನ್ನು ತೆರೆಯ ... ಯೋಜನೆಯನ್ನು ಮಾಡಲಾಯಿತು

ಅತ್ತಾವರು ಎಂಡ್ ಜವಾಹರ್ ಬೇಂಕ್, ಲಿಮಿಟೆಡ್

ಮಂಗಳೂರಲ್ಲಿ ಈ ಮೊದಲು ಅತ್ತಾವರು ಸೈಕಿಂಡ ಪ್ರಭು ಬೇಂಕ್ ಮತ್ತು ಜವಾಹರ್ ಬೇಂಕ್ ರಿಜಿಸ್ಟರ್ಡ್ ಎಂಬ ಹೆಸರಿನಿಂದ ವಹಿವಾಟ ನಡೆಸುತ್ತಿದ್ದ ಬೇಂಕುಗಳು, ತಾರೀಕು ೧೦-೫-೩೯ರಲ್ಲಿ ದಿ ಅತ್ತಾವರು ಎಂಡ್ ಜವಾಹರ ಬೇಂಕ್, ಲಿಮಿಟೆಡ್ ಎಂಬ ಹೆಸರಿನಿಂದ ರಿಜಿಸ್ಟರ್ ಮಾಡಲ್ಪಟ್ಟಿವೆ

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಈ ಸುಪ್ರಸಿದ್ಧ ಬೇಂಕಿನ ಸಂಸ್ಥಾಪಕ ದಿವಂಗತ ಡೈರೆಕ್ಟರರಾದ ಶ್ರೀ ಕಾಗಲು ವಾಮನ ವೆಂಕಟೇಶ ಪೈಗಳ ಛಾಯಾಚಿತ್ರದ ಅನಾವರಣ ಮಹೋತ್ಸವವು, ಇಲ್ಲಿನ ಈ ಸಂಸ್ಥೆಯ ರಥಬೀದಿ ಕಾರ್ಯಾಲಯದಲ್ಲಿ ಇದೇ ಶನಿವಾರ ಸಂಜೆ ೫॥ ಗಂಟೆಗೆ ಶ್ರೀ ವೆಂಕಟರಾವ ಬಾಳಿಗ ಎಂ ಎಲ್ ಎ ಇವರಿಂದ ನೆರವೇರಿಸಲ್ಪಡುವುದು

ಲಾರಿಯು ಬಿತ್ತು

ಕಾರ್ಕಳದತ್ತಕಡೆಯಿಂದ ಮಂಗಳೂರಿಗೆ ಬರುತ್ತಿದ್ದ ಲಾರಿಯೊಂದು ಬಸ್ತಿ ಕಲ್ಲಿನ ಸಮೀಪದ ಕೆಸ್ಸಗದ್ದೆ ಎಂಬಲ್ಲಿ, ದಾರಿಯಿಂದ ಜಾರಿ, ಕೆಳಗೆ ಕಣಿಗೆ ಕಳೆದ ಶುಕ್ರವಾರ ದಿನ ಬಿದ್ದಿತು. ಡ್ರೈವರನು ಒಡನೆಯೇ ಮೃತನಾಗಿರುವನು. ಲಾರಿಯಲ್ಲಿದ್ದ ಕಂಡಕ್ಟರ್ ಮತ್ತು ಇನ್ನೊಬ್ಬರು ಗಾಯಗೊಂಡಿದ್ದು ಮೂಡಬಿದ್ರೆ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಲಾರಿಯು ಇನ್ನೂ ಕಣಿಯಲ್ಲೇ ಇರುವುದೆಂದು ತಿಳಿದು ಬರುತ್ತದೆ.

ಗೌರವ ಮೆಡಿಕಲ್ ಆಫೀಸರರು

ಸ್ಥಳೀಯ ವೆನಲಾಕ್ ಆಸ್ಪತ್ರೆಯ ಗೌರವ ಮೆಡಿಕಲ್ ಆಫೀಸರರಾಗಿ ಈ ಕೆಳಗಿನವರು ನೇಮಿಸಲ್ಪಟ್ಟಿರುವರು. ಡಾ. ಕೆ. ಕೆ. ಹೆಗ್ಡೆ (ಮೆಡಿಸಿನಲ್ ಡಿಪಾರ್ಟ್‌ಮೆಂಟ್), ಡಾ. ಪಿ. ಬಾಲಕೃಷ್ಣ ರಾವ್ (ಸರ್ಜಿಕಲ್ ಡಿಪಾರ್ಟ್‌ಮೆಂಟ್) ಮತ್ತು ಡಾ. ಸಿ. ವಿಕ್ರಾಮಕ್ (ಒಪ್ತಲ್ಮಿಕ್ ಡಿಪಾರ್ಟ್‌ಮೆಂಟ್)

ತಾಲೂಕು ಸಮಾಚಾರ

ಕಾರ್ಕಳ

ಇಲ್ಲಿಯ ತಾಲೂಕು ಕಾಂಗ್ರೆಸ್ ಕಮಿಟಿಯ ಒಂದು ಸಭೆಯು ಕಳೆದ ವಾರ ಶ್ರೀ. ಕೆ ಪಿ ಜನಾರ್ದನ ಪ್ರಭು ಬಿ. ಎ.ಯವರ ಅಧ್ಯಕ್ಷತೆಯಲ್ಲಿ ಕೂಡಿ ಹಿಂದಿನ ವರ್ಷದ ವರದಿ, ಸಂಶೋಧಿತ ಲೆಕ್ಕಪತ್ರ, ಮುಂದಿನ ವರ್ಷದ ಬಜೆಟು, ಮತ್ತು ಕಾರ್ಯಕ್ರಮ ಇತ್ಯಾದಿಗಳನ್ನು ತಯಾರುಮಾಡಿ ತಾ. ೩೧ನೇ ಜನರಲ್ ಸಭೆಯಲ್ಲಿ ಮಂಜೂರಾತಿ ಬಗ್ಗೆ ಇಡಬೇಕೆಂದು ನಿರ್ಣಯವಾಯಿತು.

ತಾ ೧೩-೫-೩೯ರ ಬೆಳಿಗ್ಗೆ ಬೇಲಾರಾಯರ ಬೋರ್ಡ್ ಎಲಿಮೆಂಟರಿ ಶಾಲೆಯ ಸಮೀಪ ಒಂದು ಲಾರಿಯು ಅಪಘಾತವಾಗಿ ದ್ರೈವರನು ಆ ಕ್ಷಣ ಅಪಮೃತ್ಯುವಿಗೆ ಬಲಿಯಾದನು. ಹದಿನಾರು ಸಾಮಾನನ್ನು ಹೊರಿಸಿದ್ದರಿಂದ ಅದರ ಭಾರಕ್ಕೆ ಲಾರಿಯು ಮೊಗಚ್ಚಿಗಿತು ಇದೆ, ದ್ರೈವರನು ಸತ್ತನಾಗಿ ಹೇಳುವರು. ಲಾರಿಗಳಲ್ಲಿ ಮಿತಿಮೀರಿ ಸಾಮಾನು ಹೊರಿಸುವವರು ಈಗಲಾದರೂ ಎಚ್ಚರಗೊಳ್ಳಬಹುದು. ಪೋಲೀಸ್ ತನಿಖೆ ನಡೆಯುತ್ತಾ ಇದೆ.

ಅಡಿಕೆ ತೋಟಗಳಿಗೆ ಒದಗುವ ಮಹಾಳಿ ರೋಗದ ನಿವಾರಣಾರ್ಥ ಇಲ್ಲಿಯ ವಕೀಲ ಶ್ರೀ ಡಿ ವಿ ಭಟ್ಟರ ಅಧ್ಯಕ್ಷತೆಯಲ್ಲಿ ಉಡುಪಿ ಕಾರ್ಕಳ ತಾಲೂಕುಗಳ ಬಗೆ ಒಂದು ಸಹಕಾರ ಸಂಘದ ಸ್ಥಾಪನೆಯಾಗಿದೆ ಸಂಬಂಧಪಟ್ಟವರು ಸಂಘಕ್ಕೆ ಸೇರಿ ಅದರ ಧ್ಯೇಯೋದ್ದೇಶಗಳನ್ನು ಪೂರ್ಣ ಸಾಧಿಸಿ ಪ್ರಯೋಜನ ಪಡೆಯಬೇಕೆಂದು ಸಂಘದ ಕಡೆಯಿಂದ ವಿನಂತಿಸಲಾಗಿದೆ

ಉಡುಪಿ

ತಾ. ೧೨ನೇ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಕಂಟ್ರಾಕ್ಟರುಗಳ ಸಭೆಯು ಜಿ ಬೋ ಅಧ್ಯಕ್ಷರಾದ ಡಾ ಕೆ. ವಿಠ್ಠಲ ಶೆಟ್ಟರವರ ಅಧ್ಯಕ್ಷತೆಯಲ್ಲಿ ಸೇರಿತು ಜಿ. ಬೋ ಉಪಾಧ್ಯಕ್ಷರಾದ ಶ್ರೀ ಎ ಎಲ್. ನಾರಾಯಣರಾಯರೂ ಹಾಜರಿದ್ದರು. ಸಭೆಯ ಉದ್ದೇಶವು ವಿವರಿಸಲ್ಪಡಲಾಗಿ ಕಂಟ್ರಾಕ್ಟರುಗಳ ಪರವಾದ ಅಹವಾಲುಗಳು ನಿವೇದಿಸಲ್ಪಟ್ಟವು. ಜಿಲ್ಲೆಗೊಂದು ದ. ಕ. ಜಿ ಬೋರ್ಡ್ ಕಂಟ್ರಾಕ್ಟರುಗಳ ಸಂಘವೊಂದನ್ನು ಸ್ಥಾಪಿಸುವುದು ಅವಶ್ಯವೆಂದು ನಿರ್ಣಯವಾಗಿ ಸದ್ರಿ ಸಂಘದ ನಿಯಮ ವಗೈರೆಯನ್ನು ತಯಾರಿಸಿ ಕಾರ್ಯ ಮುಂದರಿಸಲು ಕಾರ್ಯ ನಿರ್ವಾಹಕ ಸಮಿತಿಯು ಆರಿಸಲ್ಪಟ್ಟಿತು. ಮುಂದಣ ಸಭೆಯು ಮಂಗಳೂರಲ್ಲಿ ಸೇರಬೇಕಾಗಿಯೂ ನಿಶ್ಚಯವಾಯಿತು ಜಿಲ್ಲೆಯೊಳಗಣ ಬೇರೆ ಬೇರೆ ಭಾಗಗಳಿಂದ ಸುಮಾರು ೬೫ ಕಂಟ್ರಾಕ್ಟರುಗಳು ಹಾಜರಿದ್ದು ಸದ್ರಿ ಸಭೆಯು ಯಶಸ್ವಿಯಾಗಿತ್ತು.

ಮೋಟಾರು ಅಪಘಾತ, ಸಿನೆಮಾ ನೋಟೀಸು ಮೃತ್ಯುಪ್ರಾಯವಾಯಿತು.

ಕಳೆದ ಸೋಮವಾರ ಪೂರ್ವಾಹ್ಣ ಗುಂಡಿಬೈಲು. ಬಡಕಿಲ್ಲಾಯ ಕುಟುಂಬದ ಸಾಧಾರಣ ಎಂಟು ವರುಷ ಪ್ರಾಯದ ಕೃಷ್ಣನೆಂಬ ಬಾಲಕನು ಪ್ರತಿಷ್ಠರು ಸಾಮ್ರರ ರಸ್ತೆಯಲ್ಲಿ ಎಸ್. ಕೆ ಗಣಪತಿ ಮೋಟರು ಕಾರಿನಡಿಗೆ ಬಿದ್ದು ಮರಣವನ್ನಪ್ಪಿದನೆಂಬುದು ವಿಷಾದಕರವಿದೆ. ಸ್ಥಳೀಯ ಸಿನೇಮಾ ಕಂಪೆನಿಯ ಜಟಕಾ ಗಾಡಿಯೊಂದು ನೋಟೀಸು ಹಂಚಿಕೊಂಡು ಹೋಗುತ್ತಿದ್ದ ವೇಳೆ ಈ ಬಾಲಕನೂ ನೋಟೀಸು ಹಿಡಿಯಲು ಹೋಗಿ ಮಾರ್ಗ ಮಧ್ಯದಲ್ಲೇ ಕಾರು ಬಂದು ಹುಡುಗನು ಅದಿಗೆ ಬೀಳುವ ಪ್ರಸಂಗ ಒದಗಿತೆಂದು ತಿಳಿದುಬಂದಿದೆ.

ಸಾಕ್ಷರ ಪ್ರಚಾರದ ಕುರಿತು ಭಾಷಣ.

ಸರ್ವರೂ ಸುಶಿಕ್ಷಿತರಾಗಬೇಕೆಂಬ ಸದುದ್ದೇಶದಿಂದ ಪ್ರಚಾರ ಕಾರ್ಯವನ್ನು ಕೈಕೊಂಡ ವಕೀಲ ಶ್ರೀ ಪಿ ವಿ. ಉಪಾಧ್ಯಾಯರು ಕಳೆದ ವಾರ ಅಜ್ಜರ ಕಾಡು ಗಾಂಧಿ ಮೈದಾನದಲ್ಲಿ ಮಹಾಸಭೆಯ ಮುಂದೆ ಭಾಷಣ ಮಾಡಿದರು. ಶ್ರೀ. ಕೆ. ಶಿವರಾಮ ಕಾರಂತರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ನಿರಕ್ಷರತೆಯನ್ನು ಹೋಗಲಾಡಿಸುವ ಕಾರ್ಯದಲ್ಲಿ ಜಯಶೀಲರಾದ ರಷ್ಯಾ, ಟರ್ಕಿ ದೇಶಗಳಂತೆ ಹಿಂದೂಸ್ಥಾನದಲ್ಲೂ ಸುಶಿಕ್ಷಿತೆಯು ಬೆಳೆಯಬೇಕಾಗಿದೆ. ಪ್ರಾಂತಿಕ ಸರಕಾರಗಳು ಈ ವಿಷಯದಲ್ಲಿ ಆಗಲೇ ಕೆಲಸ ಆರಂಭಿಸಿರುತ್ತವೆ. ಮದ್ರಾಸು ಸರಕಾರ ಪ್ರೋತ್ಸಾಹಿಸುತ್ತಾರೆಂಬ ಗಿರಿಯೆಂದರು. ಶ್ರೀ ಉಪಾಧ್ಯಾಯರು ನಿರಕ್ಷರತೆಯನ್ನು ನೀಗಲು ಸಾರ್ವಜನಿಕ ವಾಚನಾಲಯಗಳು, ಸರ್ಕ್ಯುಲೇಟಿಂಗ್ ಲೈಬ್ರರಿಗಳು ಅತ್ಯಾವಶ್ಯಕವೆಂದು ಶ್ರೀ ಕಾರಂತರು ಸೂಚಿಸಿದರು.

ತಾಲೂಕು ವಿದ್ಯಾಸಮಿತಿಗಳು.

ಸರ್ಕಾರದವರು ಜಿಲ್ಲಾ ಎಜ್ಯುಕೇಶನಲ್ ಸಮಿತಿಯನ್ನು ವಜಾ ಮಾಡಿದ್ದಾರಷ್ಟೆ ಅದರ ಬದಲಾಗಿ ಪ್ರತಿ ತಾಲೂಕಿನಲ್ಲಿಯೂ ಒಂದೊಂದು ಸಮಿತಿಯನ್ನು ಸ್ಥಾಪಿಸಿದ್ದಾರೆ ಅದಕ್ಕೆ ಮಾನ್ಯ ಕಲೆಕ್ಟರರು ಸದಸ್ಯರನ್ನು ನೇಮಿಸಿದ್ದಾರೆ ಇಲಾಖಾ ಅಧಿಕಾರಿಗಳು, ಪ್ರಮುಖ ನಾಗರಿಕರೂ, ಸರಕಾರಿ ನೌಕರರೂ, ನ್ಯಾಯ ವಿಧಾಯಕರೂ ಈ ಸಮಿತಿಗಳಲ್ಲಿದ್ದಾರೆ

ಮುಂಡ್ಕೂರು

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವ ತಾ. ೬-೫-೩೯ರಲ್ಲಿ ಮಾನ್ಯ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಶ್ರೀಯುತ ಡಾಕ್ಟರ್ ವಿಟ್ಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರುಗಿತು ಗೀತ, ನಾಟಕ, ಯಕ್ಷಗಾನ, ತಾಳ ನಾಟಕ, ಸ್ಪೋರ್ಟ್ಸ್ ಆಟಗಳು, ಲೆಜಿಮ್ ಡ್ರಿಲ್, ಕೋಲಾಟ, ಕುಮ್ಮಿ ಡೆನ್ಸ್, ಈ ವಿವಿಧ ವಿನೋದಾವಳಿಗಳು ಶಾಲಾ ಮಕ್ಕಳಿಂದ ಬಹಳ ತೃಪ್ತಿಕರವಾಗಿ ಪ್ರದರ್ಶಿಸಲ್ಪಟ್ಟವು ಅಧ್ಯಕ್ಷರು ತನ್ನ ಸುಂದರವಾದ ಭಾಷಣದಿಂದ ಶಾಲಾ ವರ್ಧಂತಿಗೆ ಬೇಕಾಗಿದ್ದ ವಿವಿಧ ವಿಷಯಗಳನ್ನು ಪ್ರತ್ಯಕ್ಷ ಕಾಣಿಸಿ ಯೋಗ್ಯ ಸೂಚನೆಗಳ ಮೂಲಕ ಅಧ್ಯಾಪಕರುಗಳಿಗೂ ವಿದ್ಯಾರ್ಥಿಗಳಿಗೂ, ಕೂಡಿದ ಸಭಿಕರಿಗೂ ಸಂಪೂರ್ಣ ಸಮಾಧಾನವನ್ನು ಕೊಟ್ಟು ಶಾಲಾಭಿವೃದ್ಧಿಯನ್ನು ಬಯಸಿ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಳಿಸಿದರು.

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ.

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,

28 Meachua Bazar St., CALCUTTA

ಮದ್ರಾಸು ಎಸೆಂಬ್ಲಿಯಲ್ಲಿ ವಸ್ತುಮಾರಾಟದ ಮಸೂದೆ ಕಾನೂನಾಯಿತು

ಅಸ್ಸಾಮದಲ್ಲಿ ಮಂತ್ರಿಮಂಡಲದ ಬಿಕ್ಕಟ್ಟು ಇಲ್ಲ

ರಾಜಕೋಟದಲ್ಲಿ ಸಂಧಾನ ಪ್ರಯತ್ನ.

ಮಹಾತ್ಮಾ ಗಾಂಧಿಯವರು ರಾಜಕೋಟಕ್ಕೆ ಬಂದು ತಮ್ಮ ಸಂಪೂರ್ಣ ಸಮಯವನ್ನು ಸಂಧಾನ ಪ್ರಯತ್ನದಲ್ಲಿ ಕಳೆಯುತ್ತಿರುವರು ಅವರು ಈ ವಾರ ರಾಜಕೋಟದ ಮುಂದಗಾಮಿ ಪಕ್ಷದ ಮುಖಂಡರಾದ ಶ್ರೀ ಕಾಲಿದಾಸ ಪರೀಖರೊಡನೆ ಮಾತುಕತೆ ನಡೆಸಿದರು ಶ್ರೀ ವೀರವಲ್ಲರು ರಾಜಕೋಟದ ಪ್ರಜೆಗಳಿಗೆ ಎಷ್ಟರ

ಮಟ್ಟಿನ ಸುಧಾರಣೆಗಳನ್ನು ಕೊಡಿಸಲಿಕ್ಕೆ ಸಿದ್ಧರಿರುವರೆಂಬುದನ್ನು ಮಹಾತ್ಮರು ಶ್ರೀ ಪರೀಖರನ್ನು ಕೇಳಿದರು ಮತ್ತು ಅವರು ತಮ್ಮ ವಾಗ್ದಾನದಂತೆ ನಡೆಯುವರೆಂಬುದಕ್ಕೆ ಭರವಸೆ ಕೊಡುವರೇ ಎಂದು ಪ್ರಶ್ನಿಸಿದರು ಅಂಥ ಭರವಸೆಯನ್ನು ಕೊಡುವುದು ಶ್ರೀ ಪರೀಖರಿಂದ ಸಾಧ್ಯವಾಗಲಿಲ್ಲ ಮೊದಲು ಗಾಂಧಿಯವರಿಗೂ ಶ್ರೀ ವೀರವಲ್ಲರಿಗೂ ಮಧ್ಯಸ್ಥರಾಗಿ ಕೆಲಸ ಮಾಡಿದ್ದ ಶ್ರೀ ಮೋಹನಲಾಲರೂ ಗಾಂಧಿಯವರನ್ನು ಕಂಡು, ಮಾತನಾಡಿದ್ದಾರೆ

ಮಿ. ಹಕ್ಕರಿಗೆ ಶ್ರೀ ಭೋಸರ ಪತ್ರ

ಬಂಗಾಳ ಸರಕಾರದಲ್ಲಿ ಕೋಮುವಾರು ನೌಕರಿ ಚಾಕರಿಗಳನ್ನು ಕೊಡುವ ಕುರಿತು ಆಲೋಚನೆ ಬಗ್ಗೆ ಮಿ ಹಕ್ಕರು ಕರೆದಿದ್ದ ಬಂಗಾಳ ಎಸೆಂಬ್ಲಿ ಮುಖಂಡರ ಸಭೆಯು ಯಾವ ತೀರ್ಮಾನಕ್ಕೂ ಬಾರದೆ ಚದರಿತು. ಈ ಸಂಬಂಧ ಬಂಗಾಳ ಎಸೆಂಬ್ಲಿ ಕಾಂಗ್ರೆಸ ಪಾರ್ಟಿಯ ಮುಖಂಡರಾದ ಶ್ರೀ ಶರತಚಂದ್ರ ಭೋಸರು ಮಿ ಹಕ್ಕರಿಗೆ ಬರೆದ ಪತ್ರವು ಸಭೆಯಲ್ಲಿ ಓದಲ್ಪಟ್ಟಿದ್ದು ಪ್ರಕಟವಾಗಿದೆ ಅದರಲ್ಲಿ ಅವರು ಬಂಗಾಳದ ಸರಕಾರ ಆಡಳಿತಕ್ಕೆ ಜವಾಬುದಾರರಾದ ಪ್ರಧಾನ ಮಂತ್ರಿ ಮಿ ಫಜ್ಲುಲ್ ಹಕ್ಕರೂ ಅವರ ಪಾರ್ಟಿಯೂ ಜಾತಿಸ್ವಾರ್ಥದಿಂದ ಅಂಧರಾಗಿರುವುದರಿಂದ ಹಿಂದೂ ಮುಸಲ್ಮಾನ ಐಕ್ಯ ಸ್ಥಾಪನೆಗೆ ಬಂಗಾಳದ ವಾತಾವರಣವು ಹೇಗೆ ಪ್ರತಿಕೂಲವಾಗಿರುವದೆಂಬುದನ್ನು ನಿರೂಪಿಸಿ, ಅಂಥ ಐಕ್ಯ ಸ್ಥಾಪನೆಯಿಂದ ಮಾತ್ರ ಬಂಗಾಳದಲ್ಲಿ ಜಾತಿ ಜಾತಿಗಳಿಗೆ ನ್ಯಾಯವು ದೊರೆಯಬಹುದಾಗಿದೆಯೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿರುವುದು. ಈಗಿನ ವಾತಾವರಣವು ಸರಕಾರದಲ್ಲಿ ಕೋಮುವಾರು ನೌಕರಿಚಾಕರಿಗಳ ಪ್ರಮಾಣವನ್ನು ನಿರ್ಧರಿಸಲಿಕ್ಕೆ ಅನುಕೂಲವಾಗಿರುವುದಿಲ್ಲವೆಂದು ಸಭೆಯಲ್ಲಿ ಬಂದ ಇತರ ಮುಖಂಡರೂ ಅಭಿಪ್ರಾಯಪಟ್ಟರು ತನ್ನಿಮಿತ್ತ ಬಂಗಾಳದ ಹಿಂದುಗಳ ಅಭಿಪ್ರಾಯವು ಈ ವಿಷಯದಲ್ಲಿ ಏನಿದೆಯೆಂದು ಹಿಂದೂ ಮುಖಂಡರಿಂದ ತಿಳಕೊಳ್ಳುವ ಮೊದಲು ಗವರ್ನರರು ಈ ವಿಷಯವಾದ ಯಾವ ತೀರ್ಮಾನಕ್ಕೂ ತಮ್ಮ ಸಮ್ಮತಿಯನ್ನು ಕೊಡಬಾರದೆಂದು ವಿಶ್ವಕವಿ ಠಾಗೋರರೇ ಆದಿಯಾಗಿ ಹಲವು ಮಂದಿ ಹಿಂದೂ ಮುಖಂಡರು ಬಂಗಾಳ ಗವರ್ನರರಿಗೆ ಬಿನ್ನವತ್ತಳೆಯನ್ನು ಕಳುಹಿಸಿಕೊಟ್ಟಿದ್ದಾರೆ.

ಲುಧಿಯಾನದಲ್ಲಿ ಜಾತಿ ಕಲಹ.

ಪಂಜಾಬದಲ್ಲಿ ಎಸೆಂಬ್ಲಿ ಚುನಾವಣೆಗಳಾದಾಗ ಮುಸ್ಲಿಮ್ ಲೀಗ್ ಮತ್ತು ಅಹರಾರ್ ಸಭೆಯ ಮುಸಲ್ಮಾನರೊಳಗೆ ಉಂಟಾಗಿದ್ದ ಮನಸ್ತಾಪವು ಮೊನ್ನೆ ಪ್ರತ್ಯಕ್ಷ ರೂಪವನ್ನು ತಾಳಿತು. ಲುಧಿಯಾನದಲ್ಲಿ ಎರಡೂ ಪಕ್ಷದ ಮುಸಲ್ಮಾನರೊಳಗೆ ಒಂದು ಮೆರವಣಿಗೆಯ ಕಾಲದಲ್ಲಿ ಹೋರಾಟವಾಗಿ ೩೦ ಮಂದಿ ಗಾಯಪಟ್ಟರು. ಮುಸ್ಲಿಂ ಲೀಗ ಮೆರವಣಿಗೆಯ ಮೇಲೆ ಕೆಲವು ಮುಸಲ್ಮಾನ ಸ್ತ್ರೀಯರು ಕಲ್ಲು ಬಿಸಾಡಿದ್ದರಿಂದ ದಂಗೆಯಾಯಿತೆಂದು ಕೆಲವರು ಹೇಳುವರು ಅಹರಾರ ಪಕ್ಷದ ಮುಸಲ್ಮಾನ ಸ್ವಯಂಸೇವಕರು ಮೆರವಣಿಗೆ ಮಾರ್ಗದಲ್ಲಿದ್ದ ತ್ರಿವರ್ಣ ಪತಾಕೆಗಳನ್ನು ಹರಿದು ದಂಗೆಯ ಕಾರಣವೆಂದು ಮತ್ತೆ ಕೆಲವರು ಹೇಳುವರು

ಇನ್ನೊಂದು ರೈಲ್ವೆ ಅಪಘಾತ

ಬೊಂಬಾಯಿಯಲ್ಲಿ ಆಸುಪಾಸಿನ ಎರಡು ರೈಲ್ವೆಗಾಡಿಗಳು ಒಂದಕ್ಕೊಂದು ಢಿಕ್ಕಿಹೊಡೆದು ಒಂದು ಸಣ್ಣ ಅಪಘಾತವಾಯಿತು ಸೌಭಾಗ್ಯದಿಂದ ಏನೂ ಪ್ರಾಣಹಾನಿಯಾಗಲಿಲ್ಲ ೧೨ ಮಂದಿ ಪ್ರಯಾಣಿಕರಿಗೆ ಸಣ್ಣ ಗಾಯಗಳಾಗಿವೆ ಮಾತ್ರ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ಬ್ರಿಟನ ಟರ್ಕಿ ಒಡಂಬಡಿಕೆಯ ಪರಿಣಾಮ

ಇದು ಆದುದರಿಂದ ಯುರೋಪಿನ ರಾಜಕೀಯ ವಾತಾವರಣವು ಸ್ವಲ್ಪ ಸುಧಾರಿಸಿದೆ ಎಂದು ರಾಜನೀತಿಜ್ಞರು ಅಭಿಪ್ರಾಯ ಪಡುವರು ಮೊನ್ನೆ ಬ್ರಿಟನ ಪಾರ್ಲಿಮೆಂಟಿನಲ್ಲಿ

ಚೇಂಬರಲೇನರು

ಮಿ ಚೇಂಬರಲೇನರು ಮತ್ತು ದಲಾಡಿಯರು ಫ್ರೆಂಚ ಸೆನೆಟಿನಲ್ಲಿ ಮಾಡಿದ ಭಾಷಣಗಳಿಂದಲೂ, ಬ್ರಿಟನ ಟರ್ಕಿ ಪರಸ್ಪರ ಸಹಾಯದ ಒಡಂಬಡಿಕೆಯಾಗಿ ಟರ್ಕಿಯು ತಾಟಸ್ಥ್ಯ ಧೋರಣಕ್ಕೆ ತಿಲಾಂಜಲಿ ಕೊಟ್ಟುದರಿಂದಲೂ ಸರ್ವಾಧಿಕಾರಿಗಳು ತಮ್ಮ ಪ್ರತಿಕೂಲ ಪರಿಸ್ಥಿತಿಯ ಕಡೆಗೆ ಕಣ್ಣುಬಿಟ್ಟು ನೋಡತೊಡಗಿದ್ದಾರೆ ಈಗ ಅವರು ಆಲೋಚನಾಪರರಾಗಿರುವರು ಬ್ರಿಟನ ಟರ್ಕಿ ಒಡಂಬಡಿಕೆಯು ತನ್ನ ವಿರೋಧ ಪ್ರದರ್ಶನವೆಂದು ಜರ್ಮನಿ ಹೇಳಿದೆ ಇದಕ್ಕೆ ಪ್ರತ್ಯುತ್ತರ ರೂಪ ಹಿಟ್ಲರನು ಜರ್ಮನ ಸ್ಪೈನ ಸೈನಿಕ ಮತ್ತು ವಾಣಿಜ್ಯ ಒಡಂಬಡಿಕೆಯನ್ನು ಮಾಡಿಕೊಳ್ಳಲಿಕ್ಕೆ ತನ್ನ ದೂತರನ್ನು ಫ್ರಾಂಕೋ ಬಳಿಗೆ ಕಳುಹಿಸಿದ್ದಾನೆ ಡಾಂಜಿಗ್‌ನಲ್ಲಿ ಪೋಲರ ಮೇಲೆ ಜರ್ಮನ ಅತ್ಯಾಚಾರಕ್ಕಾರಂಭವಾಗಿರುವದು ಜರ್ಮನ ಪುಂಡರು ಪೋಲರ ಹೊಟೇಲು ಮತ್ತು ವ್ಯಾಪಾರ ಮಳಿಗೆಗಳನ್ನು ಲೂಟಿ ಮಾಡಿರುವರು ನಾಜಿಗಳೇ ಬಹುಸಂಖ್ಯಾಕರಾಗಿರುವ ಡಾಂಜಿಗ ಸೆನೆಟ ಸಭೆಯು ಪೋಲರ ಪತ್ರಿಕೆಗಳಿಗೆ ನಿಬಂಧ ಹಾಕಿರುವದು ಬ್ರಿಟನು ನಮ್ಮ ವಿರುದ್ಧ ಶಕ್ತಿಹಿಂದು ಜೋಕೆ ಎಂದರೂ ನಾವು ಹೆದರದೆ ಡಾಂಜಿಗನ್ನು ಜರ್ಮನಿಗೆ ಸೇರಿಸಿಯೇ ಸೇರಿಸುವೆವು ಎಂದು ಜರ್ಮನ ಪತ್ರಿಕೆಗಳು ಪೋಲಂಡನ್ನು ಹೆದರಿಸತೊಡಗಿವೆ ಹೀಗೆ ಪ್ರಜಾಪ್ರಭುತ್ವ ಮತ್ತು ಸರ್ವಾಧಿಕಾರಿ ರಾಷ್ಟ್ರಗಳು, ತಮ್ಮ ತಮ್ಮ ತಂತ್ರಮಂತ್ರ

ಹಿಟ್ಲರ

ಮಾಡುವುದಿಗೆ [illegible] ತೊಡಗಿವೆ

ಹೈದರಾಬಾದ ಸತ್ಯಾಗ್ರಹ

ಮೇ ತಾ [illegible] ದಿಂದ ಹೈದರಾಬಾದ ಸತ್ಯಾಗ್ರಹದ [illegible] ಸರ್ವಾಧಿಕಾರಿ [illegible] ವರ್ಷ ಶಿಕ್ಷೆಯಾಗಿದೆ [illegible] ಸತ್ಯಾಗ್ರಹಿಗಳಿಗೆ [illegible] ವರ್ಷದ ಶಿಕ್ಷೆಯಾಗಿರುವದ [illegible] ಸರ್ವಾಧಿಕಾರಿ [illegible] ಜೂನ್ [illegible] ದಿನ [illegible] ಮಂದಿ ಸ್ವಯಂಸೇವಕರೊಂದಿಗೆ ಸತ್ಯಾಗ್ರಹ ಮಾಡುವರು ಪಂಜಾಬಿನ [illegible] ಹೈದರಾಬಾದ ಸಂಸ್ಥಾನ [illegible] ಸರಕಾರವು [illegible] ಹಿಂದುಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಡುವುದು [illegible] ನ್ಯಾಯವೆಂದೂ [illegible] ಧಾರ್ಮಿಕ ಆಂದೋಲನದಲ್ಲಿ ಸೇರದೆ ಇದ್ದ [illegible] ವ್ಯಕ್ತಿಗತವಾಗಿ [illegible] ಈ ಆಂದೋಲನದಲ್ಲಿ ಸೇರಲು ಸ್ವತಂತ್ರರಿದ್ದಾರೆಂದೂ ಹೇಳಿದರು ಪೂನೆಯಲ್ಲಿ ಶ್ರೀ [illegible] ಸಾವರಕರರು ಒಂದು ಭಾಷಣವನ್ನು ಕೊಟ್ಟು, ಹಿಂದೂಗಳಿಗೆ ಧಾರ್ಮಿಕ ಸ್ವಾತಂತ್ರ್ಯವು ದೊರೆಯುವ ತನಕ [illegible] ಇರುವ ಹೈದರಾಬಾದ ಹಿಂದುಗಳು ತಮ್ಮ ಆಂದೋಲನವನ್ನು ಮುಂದೊತ್ತುವರೆಂದರು

ಭರತಪುರದಲ್ಲಿ ಸ್ವಾತಂತ್ರ್ಯ ಆಂದೋಲನ

ಈ ಸಂಬಂಧ ಭರತಪುರ ಸರಕಾರವು ೧೬ ಮಂದಿ ಪ್ರಜಾಪರಿಷತ್ತಿನ ಕೆಲಸಗಾರರನ್ನು ಈ ವಾರ ಕೈದುಮಾಡಿದೆ ಸಭೆ ಮಾಡಬಾರದೆಂಬ ಸರಕಾರಿ ಆಜ್ಞೆಯನ್ನು ಮುರಿದರೆಂಬುದು ಈ ದಸ್ತಗಿರಿಗಳ ಕಾರಣವಾಗಿದೆ ಈ ಕೈದುಗಳ ನಿಷೇಧಾರ್ಥ ಭರತಪುರದಲ್ಲಿ ಹರತಾಳವಾಯಿತು

ಅಸ್ಸಾಮದಲ್ಲಿ ಮಂತ್ರಿಮಂಡಲದ ಬಿಕ್ಕಟ್ಟಿಲ್ಲ

ಅಸ್ಸಾಮದಲ್ಲಿ ಮಂತ್ರಿಮಂಡಲದ ಬಿಕ್ಕಟ್ಟು ಉಂಟಾಗಿರುವುದು ಸುಳ್ಳೆಂದು ಪ್ರಧಾನ ಮಂತ್ರಿ ಶ್ರೀ ಎಸ್ ಸಿ ಬಾರ್ದೋಲಿಯವರು ಸರದಾರ ಪಟೇಲರಿಗೂ ಬಾಬುರಾಜೇಂದ್ರ ಪ್ರಸಾದರಿಗೂ ತಂತಿ ಮೂಲಕ ತಿಳಿಸಿದ್ದಾರೆ

ಮದ್ರಾಸ್ ಕೇಂದ್ರ ಸರಕಾರ ವಿವಾದ

ಮದ್ರಾಸ ಎಸೆಂಬ್ಲಿಯಲ್ಲಿ ಬರ್ಮಾ ದಂಗೆ ಮತ್ತು ಅನಂತರದ ಅಲ್ಲಿಯ ಪರಿಸ್ಥಿತಿಯ ಕುರಿತು ಪ್ರಶ್ನೋತ್ತರಗಳಾದುವು ಬರ್ಮಾದಲ್ಲಿ ನೆಲಸಿರುವ ಭಾರತೀಯರು ಹೆಚ್ಚಾಗಿ ಮದ್ರಾಸಿಗಳೇ ಆಗಿರುವ ಪ್ರಯುಕ್ತ, ಅವರ ಹಕ್ಕು ಅಧಿಕಾರ ಹಿತರಕ್ಷಣೆಗೆ ಬರ್ಮಾದಲ್ಲಿ ನೇಮಿಸಲ್ಪಡುವ ಭಾರತ ಏಜಂಟರು ಮದ್ರಾಸಿಗಳ ವಿಷಯದಲ್ಲಿ ವಿಶೇಷ ಪರಿಚಯ ಮತ್ತು ಸಹಾನುಭೂತಿ ಉಳ್ಳವರಾಗಿರಬೇಕೆಂದೂ, ಅವರ ನೇಮಕವನ್ನು ಇಂಡಿಯಾ ಸರಕಾರವು ಮಾಡುವುದಾಗಿದ್ದರೂ, ನೇಮಕ ವಿಚಾರದಲ್ಲಿ ಮದ್ರಾಸ್ ಸರಕಾರದ ಅಭಿಪ್ರಾಯಗಳಿಗೆ ಮನ್ನಣೆ ದೊರೆಯಬೇಕೆಂದೂ ಎಸೆಂಬ್ಲಿ ಸದಸ್ಯರು ಏಕಕಂಠದಿಂದ ತಮ್ಮ ಅಭಿಪ್ರಾಯವನ್ನು ಕೊಟ್ಟರು ಎಸೆಂಬ್ಲಿ ಸದಸ್ಯರ ಅಭಿಪ್ರಾಯವೇ ಮದ್ರಾಸ್ ಸರಕಾರದ ಅಭಿಪ್ರಾಯವಾಗಿರುವುದೆಂದೂ, ಈ ವಿಷಯವು ಮದ್ರಾಸ್ ಸರಕಾರ ಮತ್ತು ಭಾರತ ಸರಕಾರದ ವಿವಾದದಲ್ಲಿರುವುದರಿಂದ ತಾನು ಹೆಚ್ಚಿಗೆ ಏನೂ ಹೇಳಲಾರದವನಾಗಿದ್ದೇನೆಂದು, ಪ್ರಧಾನರಾದ ಶ್ರೀ ರಾಜಗೋಪಾಲಾಚಾರ್ಯರು ಹೇಳಿ ಸದಸ್ಯರ ಬೆಂಬಲಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು ಮದ್ರಾಸ್ ಸರಕಾರ ಮತ್ತು ಕೇಂದ್ರ ಸರಕಾರದೊಳಗಾಗಿರುವ ಈ ವಿವಾದವು ಹೇಗೆ ತೀರ್ಮಾನವಾಗಲಿದೆಯೊ ನೋಡಬೇಕು

ರಸ್ಯ ಬಾಲ್ಟಿಕ್ ರಾಷ್ಟ್ರಗಳ ಸಂಬಂಧ

ರಸ್ಯವು ಬಾಲ್ಟಿಕ್ ರಾಷ್ಟ್ರಗಳಿಗೆ ಸಹಾಯ ಭರವಸೆಯನ್ನು ಕೊಟ್ಟಿರುವುದಾಗಿ ಸುದ್ದಿ [illegible] ಟಾಗಿದೆ

ಇಂದೋರಿನ ಪ್ರಜಾಮಂಡಲ

ಇದರ ಅಧ್ಯಕ್ಷಸ್ಥಾನವನ್ನು ಶ್ರೀ ಸುಭಾಷ ಚಂದ್ರ ಭೋಸರು ವಹಿಸುವರಾಗಿ ಪ್ರಕಟವಾಗಿತ್ತು ಆದರೆ ಪ್ರಜಾಮಂಡಲದ ಕಾರ್ಯಕಲಾಪಗಳಲ್ಲಿ ಹೊರಗಿನವರು ಯಾರೂ ಪ್ರವೇಶಿಸಬಾರದೆಂದು ಸರಕಾರಿ ಆಜ್ಞೆ ಹೊರಟ ಕಾರಣ, ಕಾರ್ಯಕ್ರಮಗಳಲ್ಲಿ ಬದಲಾವಣೆಗಳಾಗಿವೆ

ಗಾಂಧಿಜೀಯವರು ಗಡಿನಾಡನ್ನು ಸಂದರ್ಶಿಸಲಿರುವರು

ರಾಜಕೋಟೆಯ ಸಮಸ್ಯೆಯು ಬಗೆಹರಿಯಲ್ಪಟ್ಟರೆ ವರ್ಕಿಂಗ್ ಕಮಿಟಿಯ ಬೊಂಬಾಯಿ ಅಧಿವೇಶನದ ನಂತರ ಮಹಾತ್ಮಾಜಿಯವರು ಗಡಿ

ಅಬ್ದುಲ್ ಗಫೂರ್ ಖಾನ್

ನಾಡಿನ ಸಂದರ್ಶನವನ್ನು ಕೈಕೊಳ್ಳಲಿರುವರೆಂದು ಖಾನ್ ಗಫರ್ ಖಾನರು ತಿಳಿಸುತ್ತಾರೆ

ಪಾರ್ಲಿಮೆಂಟರಿ ಸಬ್‌ಕಮಿಟಿ

ಹಳೆಯ ಪಾರ್ಲಿಮೆಂಟರಿ ಸಬ್‌ಕಮಿಟಿಯನ್ನೇ ಈಗ ಪುನಃ ಸದ್ಯಕ್ಕೆ ನೇಮಿಸಲಾಗಿದೆಯೆಂದೂ, ಹೊಸ ಕಾರ್ಯಕಾರಿ ಮಂಡಳಿಯ ಮೀಟಿಂಗು ನಡೆಸಿ ಈ ಬಗ್ಗೆ ಸೂಕ್ತವಾದ ಏರ್ಪಾಡು ಮಾಡಲಾಗುವುದೆಂದು ರಾಷ್ಟ್ರಪತಿಗಳು ತಿಳಿಸುತ್ತಾರೆ

ಪಂಜಾಬದ ಮಂತ್ರಿಗಳು ಕ್ಷಮೆ ಬೇಡಿದರು :::: ರಾಷ್ಟ್ರಪತಿಗಳ ವಿನಂತಿ

ಪಂಡಿತ ಮಾಲವೀಯರೊಡನೆ ಮಹಾತ್ಮರ ಭೇಟಿ

ಮಹಾತ್ಮಾ ಗಾಂಧಿಯವರು ಬೃಂದಾವನದಿಂದ ಬೊಂಬಾಯಿಗಾಗಿ ರಾಜಕೋಟಕ್ಕೆ ಹೋಗುತ್ತಾ ದಾರಿಯಲ್ಲಿ ಕಾಶಿಯಲ್ಲಿ ಇಳಿದು ಪಂಡಿತ ಮದನಮೋಹನ ಮಾಲವೀಯರ ಭೇಟಿ ತೆಗೆದುಕೊಂಡರು. ಅವರಿಗೆ ಕಾಶಿಯಲ್ಲಿ ಸಂಭ್ರಮದ ಸ್ವಾಗತವು ಕೊಡಲ್ಪಟ್ಟಿತು. ಹಿಂದೂ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಮತ್ತು ಮಾಲವೀಯರ ಅನಂತರ ವಿಶ್ವವಿದ್ಯಾಲಯಕ್ಕೆ ಯಾರನ್ನು ಕುಲಪತಿಯಾಗಿ ಆರಿಸಬಹುದೆಂಬ ಕುರಿತು ಇಬ್ಬರೊಳಗೂ ಮಾತುಕತೆಗಳಾದುವು. ಮಹಾತ್ಮರು ಒಬ್ಬ ಪ್ರಮುಖ ರಾಷ್ಟ್ರೀಯ ಕೆಲಸಗಾರರ ಹೆಸರನ್ನು ಕುಲಪತಿಯ ಸ್ಥಾನಕ್ಕೆ ಸೂಚಿಸಿರುವರಾಗಿ ತಿಳಿದುಬರುತ್ತದೆ.

ಬಿಹಾರದಲ್ಲಿ ಜಾತಿದಂಗೆ

ಇವುಗಳನ್ನು ಅಡಗಿಸುವುದಕ್ಕೋಸ್ಕರ ಅಲ್ಲಿಯ ಕಾಂಗ್ರೆಸ ಸರಕಾರವು ಇನ್ನೂ ಕಠಿನ ಕಾರ್ಯಕ್ರಮವನ್ನು ಕೈಕೊಳ್ಳಲಿದೆ. ಜಾತಿದಂಗೆಗಳು ಎದ್ದಾಗ ಅಥವಾ ಏಳುವ ಸಂಭವವಿದ್ದಾಗ ಸ್ಥಳೀಯ ಅಧಿಕಾರಿಗಳು ಹೇಗೆ ನಡೆಕೊಳ್ಳಬೇಕೆಂಬ ಕುರಿತು ಸರಕಾರವು ವಿಸ್ತಾರವಾದ ಸೂಚನೆಗಳನ್ನು ಕೊಟ್ಟಿದೆ. ಜನರನ್ನು ಹಿಂಸೆಗೆ ಪ್ರೇರಿಸುವ ಭಾಷಣಕರ್ತರನ್ನು ಲೇಖಕರನ್ನು ಕಠಿನವಾಗಿ ದಂಡಿಸಬೇಕೆಂದೂ ಅಂಥವರ ಮೇಲೆ ಯಾವ ತರಹದ ದಯಾಭಾವವನ್ನು ತೋರಿಸಬಾರದೆಂದೂ ಸರಕಾರವು ಅಭಿಪ್ರಾಯಪಟ್ಟಿದೆ. ಕಳೆದ ವಾರ ಉಂಟಾದ ಒಂದು ದಂಗೆಯು ಹೀಗೆ ಶೀಘ್ರದಲ್ಲಿ ಅಡಗಿಸಲ್ಪಟ್ಟಿತು.

ರಾಷ್ಟ್ರಪತಿಗಳ ವಿನಂತಿ

ರಾಜಕೀಯ ಕೈದಿಗಳ ಬಿಡುಗಡೆಯು ಕೆಲವು ಪ್ರಾಂತ್ಯಗಳಲ್ಲಿ ಮುಖ್ಯವಾಗಿ ಬಂಗಾಳದ ಜಾಗಗಳಲ್ಲಿ ಇನ್ನೂ ಪೂರ್ಣವಾಗಿ ನಡೆಯದಿರುವುದರಿಂದ, ಅವರ ಬಿಡುಗಡೆಗೆ ಈ ದೇಶವ್ಯಾಪಿ ಆಂದೋಲನದ ಅವಶ್ಯಕತೆ ಉಂಟಾಗಿದೆ. ಆದ್ದರಿಂದ ಬರುವ ಮೇ ೨೧ನೇ ದಿನವನ್ನು ಅಖಿಲ ಭಾರತ ರಾಜಕೀಯ ಕೈದಿಗಳ ದಿನವನ್ನಾಗಿ ಆಚರಿಸಬೇಕೆಂದೂ, ಆ ದಿನ ಕೈದಿಗಳ ಬಿಡುಗಡೆಗೆ ಠರಾವುಗಳಾಗಬೇಕೆಂದು ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ವಿನಂತಿ ಮಾಡಿಕೊಂಡಿರುವರು.

ಪಾರ್ಲಿಮೆಂಟರಿ ಬೋರ್ಡು

ಜೂನಿನಲ್ಲಿ ಬೊಂಬಾಯಿಯಲ್ಲಿ ಕೂಡುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಹೊಸದಾಗಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡನ್ನು ನೇಮಿಸುವ ಅಥವಾ ಅದರ ಸ್ಥಾನದಲ್ಲಿ ಬೇರೆ ವ್ಯವಸ್ಥೆಯಾಗುವ ತನಕ ಹಳೆ ಪಾರ್ಲಿಮೆಂಟರಿ ಬೋರ್ಡೇ ಯಥಾಪ್ರಕಾರ ಕೆಲಸಮಾಡುವುದೆಂದು ಕಾಂಗ್ರೆಸ್ ಕಚೇರಿಯಿಂದ ಪ್ರಕಟನೆಯಾಗಿದೆ.

ವಿಶ್ವಕವಿಗಳ ಜನ್ಮವರ್ಧಂತಿ

ವಿಶ್ವಕವಿ ರವೀಂದ್ರನಾಥ ಠಾಕೂರರ ೭೯ನೇ ಜನ್ಮ ದಿನಾಚರಣೆಯು ಕಳೆದ ವಾರ ಪುರಿಯಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಒರಿಸ್ಸದ ಪ್ರಧಾನ ಮಂತ್ರಿ ಶ್ರೀ ವಿಶ್ವನಾಥ ದಾಸರಿಂದ ೫೦೦೦ ಮಂದಿ ಆಮಂತ್ರಿತರಾಗಿ ಉತ್ಸವದಲ್ಲಿ ಭಾಗಿಗಳಾಗಿದ್ದರು. ಶ್ರೀ. ರವೀಂದ್ರನಾಥ ಠಾಕೂರರಿಗೆ ಮಾನಪತ್ರಗಳು ಸಮರ್ಪಿಸಲ್ಪಟ್ಟು, ಅವರಿಗೆ ದೀರ್ಘಾಯುರಾರೋಗ್ಯಗಳನ್ನು ಕೋರಿ ಭಾಷಣಗಳಾದುವು. ಸ್ತ್ರೀಯರೂ ಈ ಸಮಾರಂಭಗಳಲ್ಲಿ ಭಾಗಿಗಳಾಗಿದ್ದಾರೆ.

ಪೋಲೆಂಡದ ಜರ್ಮನರಿಗೆ ಬಹಿಷ್ಕಾರ

ಸುಳ್ಳು ವಾರ್ತೆಗಳನ್ನು ಹರಡಿಸುತ್ತಿರುವರೆಂದು ಪೋಲೆಂಡ ಸರಕಾರವು ತನ್ನ ದೇಶದೊಳ

ಕಲ್ಕತ್ತಾ ಮುನಿಸಿಪಲ್ ಬಿಲು ಎಸೆಂಬ್ಲಿಯಲ್ಲಿ ಮಂಜೂರಾಯಿತು

ಮೇ ತಾ, ೨೧ ಅಖಿಲ ಭಾರತ ರಾಜಕೀಯ ಕೈದಿಗಳ ದಿನ

ಅಸ್ಸಾಮದಲ್ಲಿ ಮಂತ್ರಿಮಂಡಲದ ಬಿಕ್ಕಟ್ಟು

ಗಿನ ಅನೇಕ ಮಂದಿ ಜರ್ಮನರನ್ನು ಬಹಿಷ್ಕಾರ ಹಾಕಿ ಗಡೀಪಾರು ಮಾಡಿದೆ.

ಯಹೂದಿಯರಿಗೆ ಹೊಸ ರಾಜ್ಯ

ಬ್ರಿಟಿಷ ಗಿಯಾನಾದಲ್ಲಿ ಕೆಲವು ಸಾವಿರ ಮಂದಿ ನಿರಾಶ್ರಿತ ಯಹೂದಿಯರಿಗೆ ಆಶ್ರಯ ಕೊಡಲು ಅನುಕೂಲವಾಗಬಹುದೆಂದು ಮಿ. ಮೆಕಡನಾಲ್ಡರು ಪಾರ್ಲಿಮೆಂಟಿನಲ್ಲಿ ಹೇಳಿದರು. ಮಿ. ಚೆಂಬರ್ಲೇನರು ಕೂಡ ಅಂಥ ಅನುಕೂಲತೆಗಳನ್ನು ಒದಗಿಸಿ ಕೊಡಬಹುದಾಗಿ ಸೂಚಿಸಿದ್ದಾರೆ.

ಅಖಿಲ ಭಾರತ ಚರಕ ಸಭೆ

ಅಖಿಲ ಭಾರತ ಚರಕಾ ಸಭೆಯ ಕಳೆದ ವರ್ಷದ ವರದಿಯು ಪ್ರಕಟವಾಗಿದೆ. ಸಭೆಯ ಕಾರ್ಯಕ್ಷೇತ್ರವು ವಿಸ್ತಾರವಾಗಿದೆ. ಕೂಲಿ ಟಿಕೆಗಳು ಹೆಚ್ಚಿವೆ. ಕಾಂಗ್ರೆಸ್ ಮಂತ್ರಿಮಂಡಲಗಳ ಅಧಿಕಾರ ಬಂದಂದಿನಿಂದ ಸಭೆಯ

ಉಪಯುಕ್ತ ಕಾರ್ಯಗಳು ಬೆಳೆದಿವೆ. ಪಂಜಾಬ ಪ್ರಾಂತದಲ್ಲಿ ಕೆಲಸಗಾರರ ಮತ್ತು ನೇಕಾರರ ಸಂಖ್ಯೆ ಹೆಚ್ಚಿ ಖದ್ದರ ಉತ್ಪತ್ತಿ ಬೆಳೆದಿದೆಯಾದರೂ ಅದೇ ಪ್ರಮಾಣದಲ್ಲಿ ಖದ್ದರಧಾರಿಗಳ ಸಂಖ್ಯೆ ಬೆಳೆದಿಲ್ಲ. ಆದ್ದರಿಂದ ಬಹಳ ಖದ್ದರು ದಾಸ್ತಾನಾಗಿ ಧಂಧೆಗಳ ಅಭಾವದಿಂದ ಸಭೆಯು ಕೈಕಟ್ಟಿದಂತಾಗಿದೆ. ಮಹಾಜನರು ಖದ್ದರನ್ನೇ ಉಪಯೋಗಿಸಿ ಈ ಮೂಲಕ ದೇಶಸೇವೆ ಮಾಡಬೇಕೆಂದು ವಿನಂತಿಯಾಗಿದೆ.

ಅಸ್ಸಾಮದಲ್ಲಿ ಮಂತ್ರಿಮಂಡಲದ ಬಿಕ್ಕಟ್ಟು

ದಿಗಬೋಯಿಯಲ್ಲಿ ಉಂಟಾದ ಎಣ್ಣೆ ಕೆಲಸಗಾರರ ಸಂಪು, ಮಾಲೀಕರ ನೀತಿ, ಪೋಲೀಸರ ಗೋಳಿಬಾರ, ಮಿಲಿಟರಿಯವರ ಆಕ್ರಮಣ ಇವೇ ಮೊದಲಾದ ಘಟನೆಗಳಿಂದಾಗಿ ಅಸ್ಸಾಮ ಗವರ್ನರರಿಗೂ ಅಲ್ಲಿಯ ಕಾಂಗ್ರೆಸ್ ಮಂತ್ರಿಮಂಡಲಕ್ಕೂ ಭಿನ್ನಾಭಿಪ್ರಾಯಗಳು ಹುಟ್ಟಿರುವವೆಂದೂ, ಮಂತ್ರಿಮಂಡಲದ ಘೋಷಣೆಗೆ ಅನುಗುಣವಾಗಿ ನಡೆಸಲ್ಪಡುವುದರಲ್ಲಿ ಸರಕಾರದ ಅಧಿಕಾರಿಗಳು ಅಡ್ಡನಿಲ್ಲುತ್ತಿರುವರೆಂದೂ ಸುದ್ದಿ ಉಂಟಾಗಿದೆ. ಅಸ್ಸಾಮದ ಮಂತ್ರಿಮಂಡಲವು ರಾಜಿನಾಮೆ ಕೊಡಲು ಸಿದ್ಧವಾಗಿದೆಯಂತೆ. ಆ ಸಂಬಂಧ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ದಿನಗಳನ್ನು ಕಳೆಯುವರು.

ಆಂಗ್ಲ ರುಮಾನಿಯಾನ ವ್ಯಾಪಾರ ಸಂಬಂಧ

ಒಂದು ಕರಾರು ಆಗಿದೆ. ಇದರಿಂದ ಆ ದೇಶಗಳ ಸ್ನೇಹಬಂಧ ಬಲಿಷ್ಠವಾಯಿತು. ಈ ಎರಡು ದೇಶಗಳೊಳಗೆ ಪರಸ್ಪರ ಸಹಾಯದ ಕರಾರು ಕೂಡ ಆಗಿದೆ. ಇಂಗ್ಲಂಡ ರುಮಾನಿಯಾದಿಂದ ಧಾನ್ಯವನ್ನು ಕೊಂಡುಕೊಳ್ಳುವದು. ರುಮಾನಿಯಾ ಅದರ ಬದಲಿಗೆ ಯಂತ್ರೋಪಕರಣಗಳನ್ನು, ಇತರ ಕೈಗಾರಿಕೆ ಸಾಮಾನುಗಳನ್ನು ಪಡೆಯುವದು.

ಬಾಲ್ಟಿಕ ರಾಷ್ಟ್ರಗಳಿಗೆ ರಸ್ಯದ ಸಹಾಯ

ರಸ್ಯವು ಜರ್ಮನಿಗಳಿಂದ ಭೀತಿಯುಳ್ಳ ಬಾಲ್ಟಿಕ ರಾಷ್ಟ್ರಗಳಿಗೆ ಅವಶ್ಯ ಕಾಲದಲ್ಲಿ ಸಹಾಯದ ಭರವಸೆಯನ್ನು ಕೊಟ್ಟಿದೆಯಾಗಿ ವರ್ತಮಾನವಿದೆ. ಈ ಸಂಬಂಧ ಕರಾರು ಎಸ್ಟೋನಿಯಾ, ಲಾಟ್ವಿಯಾ ಮೊದಲಾದ ಸಂಬಂಧಪಟ್ಟ ರಾಷ್ಟ್ರಗಳ ರಾಜಕೀಯ ಮಾತುಕತೆ ನಡೆಯುತ್ತಿದೆ ಎಂದು ತಿಳಿದುಬರುತ್ತದೆ.

ಕಲ್ಕತ್ತಾ ಮುನ್ಸಿಪಲ ಬಿಲು

ಬಂಗಾಳದ ಹಕ್ ಮಂತ್ರಿಮಂಡಲವು ಮುಂತಂದ ಕಲ್ಕತ್ತಾ ಮುನ್ಸಿಪಲ್ ಬಿಲು ಬಂಗಾಳ ಎಸೆಂಬ್ಲಿಯಲ್ಲಿ ಮಂಜೂರಾಯಿತು. ಈ ಪ್ರಜಾಸತ್ತಾತ್ಮಕ ತತ್ವಗಳಿಗೂ ರಾಷ್ಟ್ರೀಯತೆಗೂ ವಿರೋಧವಾಗಿರುವದೆಂದು ಕಾಂಗ್ರೆಸ ಪಕ್ಷವು ಅದನ್ನು ನಿರಾಕರಿಸಲಿಕ್ಕೆ ಬಗೆಬಗೆಯ ಪ್ರಯತ್ನಗಳನ್ನು ಮಾಡಿತಾದರೂ ಸಫಲವಾಗಲಿಲ್ಲ. ಈ ಬಿಲು ಕಲ್ಕತ್ತಾ ಕಾರ್ಪೋರೇಶನಿನಲ್ಲಿ ಕೋಮುವಾರು ಪ್ರಾತಿನಿಧ್ಯ ಮತ್ತು ಪ್ರತ್ಯೇಕ ಮತದಾನಕ್ಕೆ ಅವಕಾಶವನ್ನು ಕೊಟ್ಟಿರುವದರಿಂದ, ಮೊದಲೇ ದೂಷಿತವಾದ ವಾತಾವರಣವು ಮತ್ತಷ್ಟು ಕೆಟ್ಟು, ಅದು ಜಾತಿಜಾತಿಗಳ ಕಲಹಕ್ಕೆ ಮೂಲವಾಗಿ ಪರಿವರ್ತನೆ ಹೊಂದಬಹುದೋ ಎಂಬ ಅಂಜಿಕೆಯುಂಟಾಗಿದೆ.

ಇಂದಿನ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಮತ್ತು ಅವರ ಪತ್ನಿ

ಸಂಯುಕ್ತ ಪ್ರಾಂತದ ಶಿಕ್ಷಣ ಸಮಿತಿ

ಸಂಯುಕ್ತ ಪ್ರಾಂತದ ಕಾಂಗ್ರೆಸ ಸರಕಾರವು ನೇಮಿಸಿದ ಶಿಕ್ಷಣ ಸಮಿತಿಯು ವಿಚಾರಣೆ ನಡಿಸಿ ತನ್ನ ವರದಿಯನ್ನು ಬರೆದಿದೆ. ಪ್ರಾಂತದ ಶಿಕ್ಷಣ ಪದ್ಧತಿಯಲ್ಲಿ ಸಂಪೂರ್ಣ ಪರಿವರ್ತನೆಯಾಗಬೇಕೆಂದೂ ವಾರ್ಧಾಶಿಕ್ಷಣ ಪದ್ಧತಿಯ ಶಾಲೆಗಳನ್ನು ಸ್ಥಾಪಿಸಬೇಕೆಂದೂ ಅದು ಸರಕಾರಕ್ಕೆ ಶಿಫಾರಸು ಮಾಡಿದೆ.

ಇಟಲಿಯಾನರಿಗೆ ಬಹುಮಾನ

ಜನರಲ್ ಫ್ರಾಂಕೋ ಕಳೆದ ವಾರ ಸ್ಪೇನಿನಲ್ಲಿರುವ ಇಟಾಲಿಯಾನರ ವಿಮಾನದಳವನ್ನು ನಿರೀಕ್ಷಿಸಿ, ತನ್ನ ಸಹಾಯಕ್ಕೆ ಇದ್ದ ಇಟಾಲಿಯಾನ ಸೇನಾಧಿಕಾರಿಗಳನ್ನು ವಿಶೇಷ ರೀತಿಯಿಂದ ಬಹುಮಾನಗಳನ್ನು ಕೊಟ್ಟು ಗೌರವಿಸಿದನು. ಒಂದಣ ಕಲಹದಲ್ಲಿ ಸ್ಪ್ಯಾನಿಷ ನಷ್ಟವಾದ ಯುದ್ಧೋಪಕರಣಗಳನ್ನು ಪುನಃ ಫ್ರಾಂಕೋನಿಗೆ ಕೊಡಮಾಡಿ ನಿಲ್ಲಿಸಿದೆ.

ನಾಗಪುರದಲ್ಲಿ ಕಿಸಾನ ಸತ್ಯಾಗ್ರಹ.

ನಾಗಪುರದಿಂದ ೩೦ ಮೈಲು ದೂರ ಇರುವ ರೇವ ಎಂಬಲ್ಲಿಯ ಕಿಸಾನರು ಸರಕಾರದ ನಿಯಮಗಳಿಂದ ಅತೃಪ್ತರಾಗಿ ಇದೇ ಮೇ ೩೧ರಿಂದ ಸತ್ಯಾಗ್ರಹ ಮಾಡುವರಾಗಿ ತಿಳಿದುಬರುತ್ತದೆ. ಕಮಿಶನರರ ಬಳಿಗೆ ಕಿಸಾನರ ನಿಯೋಗ ಕಷ್ಟಗಳನ್ನು ತಿಳಿಸಲು ಹೋದಾಗ, ಸರಕಾರವು ಅವರ ಕಷ್ಟಗಳನ್ನು ದೂರಮಾಡಲಿಕ್ಕೆ ಹೇಗೆ ಹೇಗೆ ಪ್ರಯತ್ನಿಸಿದೆ ಎಂದು ತಿಳಿಸಿ, ಅವರಿಗೆ ಸರಕಾರದ ಸಹಾನುಭೂತಿಯಿದೆ ಎಂದರೂ ಕಿಸಾನರು ಅಸಂತೃಪ್ತರಾಗಿರುವರು.

ಕೆಲಸಗಾರರಿಗೆ ಬೊಂಬಾಯಿ ಸರಕಾರದ ಎಚ್ಚರಿಕೆ

ಕೆಲಸಗಾರರು ಮಾಲೀಕರ ಅಪ್ಪಣೆ ಇಲ್ಲದೆ ಕಾರಖಾನೆಗಳಲ್ಲಿ ಸ್ಟ್ರೈಕ್ ಮಾಡಿದರೆ ಕೆಲಸದ ಸ್ಥಾನಬಿಟ್ಟು ಹೋಗದೆ ಕೂಡುವ ಪದ್ಧತಿಗಳಿಂದ ಮಾಲೀಕರಿಗೆ ನಷ್ಟ ಮತ್ತು ಕ್ರಿಮಿನಲ್ ಅಪರಾಧವಾಗುತ್ತದೆ. ಅಂಥ ಕೆಲಸಗಾರರ ಮೇಲೆ ಫಿರ್ಯಾದ ದಂಡಗಳಾಗುತ್ತವೆಂದು ಬೊಂಬಾಯಿ ಸರಕಾರವು ಪ್ರಾಂತದ ಕೆಲಸಗಾರರನ್ನು ಎಚ್ಚರಿಸಿದೆ.

ಪಂಜಾಬದ ಮಂತ್ರಿಗಳು ಮಾಫಿ ಬೇಡಿದರು

ಲಾಹೋರದಲ್ಲಿ ಕೂಡಿದ ಒಂದು ಸಭೆಯಲ್ಲಿ ಪಂಜಾಬಿನ ಪ್ರಧಾನ ಮಂತ್ರಿ ಸರ್ ಸಿಕಂದರ ಹಯಾತಖಾನರು ಅಲ್ಲಿಯ ಒಬ್ಬ ಕಾಂಗ್ರೆಸ ಎಮ್. ಎಲ್. ಎ.ರವರನ್ನು ದೂಷಿಸಿ ಮಾತನಾಡಿದರು. ಆ ಸಭೆಯಲ್ಲಿ ಪಂಜಾಬದ ಪ್ರಧಾನ ಮಂತ್ರಿ ಸರ್ ಸಿಕಂದರ ಹಯಾತಖಾನರು ಇದ್ದರು. ಕಾಂಗ್ರೆಸ ಎಮ್. ಎಲ್. ಎ. ಆದ ಶ್ರೀ ಭಗತ್ ರಾಮ್ ಎಂಬವರು ತಾನು ಬ್ರಾಹ್ಮಣ ಜಾತಿಯ ಕ್ಷತ್ರಿಯನಾಗಿದ್ದು ಕಾಂಗ್ರೆಸ ಪಾರ್ಟಿಯನ್ನು ತ್ಯಜಿಸಿ ಸಿಕಂದರ ಹಯಾತಖಾನರ ಯೂನಿಯನಿಸ್ಟ ಪಾರ್ಟಿಗೆ ಸೇರಿದ ಇನ್ಸ್ಪೆಕ್ಟರ ನ್ಯಾಯ ಪ್ರಕಟಿಸಿ ಕಾಗದ ಬರೆದನ್ನಾದ್ದರಿಂದ ಛೋಟೂರಾಮ್, ಮಂತ್ರಿಗಳು ಹೇಳಿದರು. ಆಗ ಸಭೆಯಲ್ಲಿ ಉಪಸ್ಥಿತ ಪಂಡಿತ ಭಗತ್ ರಾಮರು ಎದ್ದು ನಿಂತು ಸರ್ ಛೋಟೂರಾಮರು ನನ್ನ ಕುರಿತು ಅಪಮಾನಕರ ಮಾತುಗಳನ್ನಾಡಿದ್ದಾರೆ. ಅವರು ಹೇಳುವುದೆಲ್ಲ ಸುಳ್ಳು. ನಾನು ಕಾಗದವನ್ನು ಬರೆದದ್ದು ನಿಜವಾದರೆ ಅದನ್ನು ತೋರಿಸಲಿ ಎಂದರು. ಸರ್ ಛೋಟೂರಾಮರು ತಪ್ಪಿದ್ದಾಗಿ ಕೈಮುಗಿದು, ತಾವು ತಪ್ಪಭಿಪ್ರಾಯದಿಂದ ಹಾಗೆ ಹೇಳಿದೆ. ಪತ್ರ ಬರೆದದ್ದು ಸುಳ್ಳು ಎಂದು ತಮ್ಮ ಮಾತುಗಳನ್ನು ಹಿಂತೆಗೆದು ಪಂಡಿತ ಭಗತರಾಮರೊಂದಿಗೆ ಕ್ಷಮೆ ಬೇಡಿದರು.

ಸ್ವದೇಶಾಭಿಮಾನಿ

ತಾರೀಕು ೧೯—೫—೧೯೩೯

ಬರ್ಮದ ಹಿಂದಿಯರಿಗೆ ಪರಿಹಾರ ದ್ರವ್ಯ

ಬರ್ಮಾ ದಂಗೆಯ ಕುರಿತು ವಿಚಾರಿಸಲು ನೇಮಿಸಲ್ಪಟ್ಟ ಬ್ರೌಂಡ್ ಕಮಿಟಿಯು ತನ್ನ ವರದಿಯನ್ನು ಒಪ್ಪಿಸಿ ಕೆಲ ಸಮಯವು ಕಳೆಯಿತು. ಆದರೆ ಕಳೆದ ಬರ್ಮಾ ದಂಗೆಯ ಸಮಯ ವಿಪಲ ನಷ್ಟ ಹೊಂದಿ ಪರಿಹಾರ ದ್ರವ್ಯಕ್ಕೆ ಭಾಧ್ಯರಾದ ಬರ್ಮದ ಹಿಂದೀಯರಿಗೆ ಅದನ್ನು ಕೊಡಿಸುವ ವಿಷಯ ಇಂಡಿಯಾ ಸರಕಾರವು ಬರ್ಮಾ ಸರಕಾರದೊಡನಾಗಲೀ ಅಥವಾ ಸೆಕ್ರಿಟರಿ ಒಫ್ ಸ್ಟೇಟರೊಡನಾಗಲೀ ಆ ವಿಷಯ ಪ್ರಸ್ತಾಪಿಸಿದ್ದು ಕಂಡು ಬರುವುದಿಲ್ಲ. ಕಳೆದ ತಿಂಗಳು ಈ ವಿಷಯವಾಗಿ ಕೇಂದ್ರ ಎಸೆಂಬ್ಲಿಯಲ್ಲಿ ಪ್ರಶ್ನೋತ್ತರಗಳು ನಡೆದಾಗ ಸರ್ ಗಿರಿಜಾಶಂಕರ ಬಜಪಾಯಿಯವರು "ಬರ್ಮಾ ಸರಕಾರದೊಡನೆ ಪರಿಹಾರ ದ್ರವ್ಯವನ್ನು ಕೇಳುವ ಮೊದಲು ಜನರು ಪಟ್ಟನಷ್ಟ ಮತ್ತು ಅವರು ಹಾಕಿರುವ ತಮ್ಮ ಹಕ್ಕು ಭಾಧ್ಯತೆಗಳ ಪರಿಶೀಲನೆಯಾಗುವುದಗತ್ಯ"ವೆಂದು ತಿಳಿಸಿ, "ಈ ವಿಷಯವಾಗಿ ಎಂಟು ತಿಂಗಳ ಹಿಂದೆಯೇ ಇಂಡಿಯಾ ಸರಕಾರವು ಸೆಕ್ರಿಟರಿ ಒಫ್ ಸ್ಟೇಟರೊಡನೆ ಪ್ರಸ್ತಾಪವೆತ್ತಿದೆಂದೂ ಜನರ ನಷ್ಟ ಮತ್ತು ಹಕ್ಕುಭಾಧ್ಯತೆಗಳ ವಿಷಯ ಬ್ರೌಂಡ್ ಕಮಿಟಿಯ ವರದಿಯ ಮೇರೆಗೆ ವ್ಯವಹರಿಸಲ್ಪಡುವುದು"ಎಂದು ಉತ್ತರಿಸಿರುವರು. ಅಂದರೆ ಇಂಡಿಯಾ ಸರಕಾರವು ಬರ್ಮಾ ಸರಕಾರದೊಡನೆ ಪರಿಹಾರ ದ್ರವ್ಯದ ಪ್ರಸ್ತಾಪವೆತ್ತಲು ಬ್ರೌಂಡ್ ಕಮಿಟಿಯ ವರದಿಯನ್ನು ಕಾಯುತ್ತಿತ್ತೆಂದಾಯಿತು.

ಆ ವರದಿಯು ಪ್ರಕಟಿಸಲ್ಪಟ್ಟು ಕೆಲ ಸಮಯವಾದರೂ ನವಿಷ್ಟು ಸರಕಾರವು ಬರ್ಮಾ ಸರಕಾರದೊಡನಾಗಲೀ ಸ್ಟೇಟ್ ಒಫ್ ಸೆಕ್ರಿಟರಿಗಳೊಡನಾಗಲೀ ನೂತಕ್ತಿದ ಲಕ್ಷಣಗಳಿಲ್ಲ. ಜನರ ಹಕ್ಕುಭಾಧ್ಯತೆಗಳ ವಿಷಯ ಎಲ್ಲಿಯೂ ಭಿನ್ನಾಭಿಪ್ರಾಯಗಳು ಕಂಡುಬರುವುದಿಲ್ಲವೆಂಬುದು ನಿರ್ವಿವಾದ. ಈ ವಿಷಯವನ್ನು ಬ್ರೌಂಡ್ ಕಮಿಟಿಯು ಕೂಡಾ ಸ್ಪಷ್ಟವಾಗಿ ಉಲ್ಲೇಖಿಸಿರುವುದು. ಕಮಿಟಿಯು ತನ್ನ ವರದಿಯಲ್ಲಿ ಬರ್ಮಾ ದಂಗೆಯಲ್ಲಿ ರಂಗೂನ್ ಮತ್ತು ಬರ್ಮದ ಸುತ್ತಮುತ್ತಲಿನ ಹಳ್ಳಿಪಟ್ಟಣಗಳಲ್ಲಿ ಅಧಿಕವಾಗಿ ನಷ್ಟಹೊಂದಿದವರು ಹಿಂದಿಯರು. ಅವರಲ್ಲಿಯೂ ಮುಸ್ಲಿಮರೇ ಹೆಚ್ಚಿನವರು" ಎಂದು ಹೇಳಿದೆ. ಪ್ರಕಟಿಸಲ್ಪಟ್ಟ ಪಟ್ಟಿಯ ಪ್ರಕಾರ ಒಟ್ಟು ೧೮೧ ಮಂದಿಗಳು ದಂಗೆಕೋರರಿಂದ ಹತರಾಗಿರುವರು. ಇವರಲ್ಲಿ ೧೩೯ ಮಂದಿ ಹಿಂದೀಯರು (೧೩೯ ಮುಸ್ಲಿಮರು, ೨೫ ಮಂದಿ ಹಿಂದುಗಳು) ಕೇವಲ ೧೭ ಮಂದಿ ಬರ್ಮನರು. ಗಾಯಹೊಂದಿದ ೮೭೫ ಮಂದಿಗಳಲ್ಲಿ ೭೧೧ ಮಂದಿ ಹಿಂದೀಯರು. ಸೊತ್ತು ಮೊದಲಾದುವುಗಳ ವಿಷಯ, ಜನರ ಮತ್ತು ಕಮಿಟಿಯ ವರದಿಗಳಿಗೆ ತುಂಬಾ ವ್ಯತ್ಯಾಸವು ತೋರುವುದು. ಕಮಿಟಿಯ ವರದಿಯ ಪ್ರಕಾರ ಒಟ್ಟು ೧೭.೭೫ ಲಕ್ಷ ರೂಪಾಯಿಗಳ ನಷ್ಟವೆಂದು ಕಂಡುಬರುತ್ತಿದೆ. ಆದರೆ ಕಮಿಟಿಯ ಮುಂದೆ ಜನರುಕೊಟ್ಟ ತಮ್ಮ ಹಕ್ಕುಬಾಧ್ಯತೆಗಳ ಮೌಲ್ಯವು ೫೪.೪೩ ಲಕ್ಷಕ್ಕೆ ಕಡಿಮೆಯಿಲ್ಲ. ಆದರೆ ಮೇಲೆ ತೋರುವ ಈ ವ್ಯತ್ಯಾಸದಲ್ಲಿ ತೋರಿಬರುತ್ತಿರುವ ಒಂದು ಆಶ್ಚರ್ಯವೇನೆಂದರೆ ಕಮಿಟಿಯು ತನ್ನ ವರದಿಯಲ್ಲಿ ಹಿಂದೀಜನರಿಗುಂಟಾದ ಸಾಮಾನ್ಯ ನಷ್ಟದ ಸಂಖ್ಯೆಯಲ್ಲಿಯೂ ಜನರು ಕಮಿಟಿಯ ಮುಂದೆ ಕೊಟ್ಟ ಸಾಮಾನ್ಯ ನಷ್ಟ ಸಂಖ್ಯೆಯಲ್ಲಿಯೂ ಹೆಚ್ಚು ಕಡಿಮೆ ಯಾವ ವ್ಯತ್ಯಾಸವೂ ಕಂಡುಬರುತ್ತಿಲ್ಲ. ಇದರಿಂದ ಕಮಿಟಿಯ ಮುಂದೆ ಜನರು ಕೊಟ್ಟ ಹಕ್ಕು ಭಾಧ್ಯತೆಗಳ ಮೌಲ್ಯವೇ ಸತ್ಯವೆಂದು ಭಾಸವಾಗಿರಲು ಆದರೆ ಕಮಿಟಿಯು ಜನರಹಕ್ಕುಬಾಧ್ಯತೆಗಳ ವಿಷಯ ಇನ್ನೂ ಪರಿಶೀಲಿಸಿ, ಜನರು ಹಾಕಿದ ಹಕ್ಕು ಬಾಧ್ಯತೆಗಳ ಮೌಲ್ಯವು ನಷ್ಟಹೊಂದಿದ ಕಟ್ಟಡಗಳ ಮೌಲ್ಯವನ್ನು ಕೂಡಿಸಿದರೆ ಅಷ್ಟಾಗಲೂ ಬಹುದು ಎಂದು ಒಂದೂ ಸೂಚನೆಯನ್ನಿತ್ತಿದೆ. ಕಮಿಟಿಯ ಪರಿಶೋಧನೆಯ ಪ್ರಕಾರ ಒಟ್ಟು ೧೧೩ ಕಟ್ಟಡಗಳು ನಾಶವಾಗಿವೆ. ಇವುಗಳಲ್ಲಿ ಹೆಚ್ಚಿನವು ಮಸೀದಿಗಳು.

ಈಗ ನಷ್ಟದ ವಿಷಯ ಬರ್ಮದ ಹಿಂದೀಯರಿಗುಂಟಾದ ನಷ್ಟವನ್ನು ಬರ್ಮಾ ಸರಕಾರವೇ ತೆರಬೇಕೆಂದು ಬ್ರೌಂಡ್ ಕಮಿಟಿಯು ಸೂಚಿಸಿದೆ. ದಂಗೆಯನ್ನೆಬ್ಬಿಸಲು ಕಾರಣರೇ ಬರ್ಮೀಯರೆಂದು ಪ್ರಕಟಿಸಲ್ಪಟ್ಟದೆ. ಆದುದರಿಂದ ನಷ್ಟವನ್ನು ತೆರಲು ಬರ್ಮಾ ಸರಕಾರವೇ ಭಾಧ್ಯವಾಗಿರುತ್ತದೆ. ಇದರಿಂದ ಹಿಂದೀಯರಿಗೆ ಬರ್ಮಾ ಸರಕಾರವು ತಕ್ಕ ರಕ್ಷಣೆಯನ್ನೀಯುತ್ತಿರಲಿಲ್ಲವೆಂದು ಖಚಿತವಾದಂತಾಯಿತು. ರಂಗೂನ್ ಮತ್ತು ಬರ್ಮಾಗಳಲ್ಲಿದ್ದ ಪೋಲಿಸರು ಹಿಂದೀಯರಿಗೆ ತಕ್ಕ ಸಹಾಯವನ್ನೀಯಲಿಲ್ಲವೆಂದು ಬರ್ಮಾ ಸರಕಾರವು ೧೯೩೮ನೇ ಮೇ ತಿಂಗಳಲ್ಲಾದ ರಂಗೂನ ದಂಗೆಯ ವಿಚಾರಣಾ ಸಮಿತಿಯ ಸಲಹೆಗಳನ್ನು ಅಲಕ್ಷಿಸದಂತೆ ಕಂಡುಬರುತ್ತಿದೆ ಎಂದು ಕಮಿಟಿಯ ಟೀಕೆ. ವರದಿಯ ಪ್ರಕಾರ ಪರಿಹಾರದ್ರವ್ಯವನ್ನು ತೆರಲು ಬರ್ಮಾ ಸರಕಾರವೇ ಹೊಣೆಯಾಗಿರುವಾಗ ಇಂಡಿಯಾಸರಕಾರವು ಬರ್ಮಾ ಸರಕಾರದೊಡನೇ ಈ ವಿಷಯವಾಗಿ ವ್ಯವಹರಿಸಿ ದಂಗೆಯಲ್ಲಿ ನಷ್ಟಹೊಂದಿದ ಹಿಂದೀಯರಿಗೆ ನ್ಯಾಯಗಳಿಸಿ ಕೊಡುವ ಭಾರವು ತನ್ನ ಮೇಲಿರಲು ಮೌನ ಧಾರಣೆಯನ್ನು ತಳೆದಿರುವುದು ಯಾಕೆಂದು ತಿಳಿಯುವುದಿಲ್ಲ.

ಮುಂದಿನ ಕೊಂಗ್ರೆಸು

ಮುಂದಿನ ಕೊಂಗ್ರೆಸು ಅಧಿವೇಶನವು ಬರುವ ದಶಂಬರ ತಿಂಗಳ ಕ್ರಿಸ್ತಮಸಿನ ಸಮಯ ಹಜಾರಿಭಾಗ ಜಿಲ್ಲೆಯ ರಾಮಘರ ಎಂಬ ಹಳ್ಳಿಯಲಿ ನಡೆಯುವುದೆಂದು ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರು ಪ್ರಕಟನೆ ಕೊಟ್ಟಿದ್ದಾರೆ. ಇದಕ್ಕ ಬಳಿಯಲ್ಲಿ ದಾಮೋದರ ನದಿಯ ಗತ್ಯಗಾದುಗಳ ಪ್ರದೇಶವು ಚಿಕ್ಕ ನೇತ್ರಣೀಯ ವಾಗಿದೆ.

ರಾಜಕೀಯ ಕೈದಿಗಳ ದಿನಾಚರಣೆ

ಇದೇ ತಿಂಗಳ 21ನೇ ತಾರೀಕನ್ನು ಅಖಿಲ ಭಾರತ ರಾಜಕೀಯ ಕೈದಿಗಳ ದಿನವನ್ನಾಗಿ ಆಚರಿಸಬೇಕೆಂದು ರಾಷ್ಟ್ರಪತಿಗಳ ಪ್ರಸಿದ್ಧಪಡಿಸಿರುತ್ತಾರೆ.

ಶ್ರೀ॥ ಸುಭಾಷಬಾಬುಗಳಿಗೆ 'ದೇಶಗೌರವ' ಎಂಬ ಪ್ರಶಸ್ತಿ

ಕೊಂಗ್ರೆಸ್ ಅಧ್ಯಕ್ಷತೆಗೆ ರಾಜಿನಾಮೆ ಕೊಟ್ಟ ಮುನಾಯಕರಾದಂದಿನಿಂದ ಶ್ರೀ ಬೋಸರಿಗೆ ಕೇಳಿಸಿದ ಸಹಿತ್ಯಕ್ಕೆ ಜನತೆ... ಜೆ ಕಲ್ಕತ್ತೆಯ ಜನರು ಅವರಿಗೆ 'ದೇಶಗೌರವ' ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದರು.

ಓಂ ಮಂಡಳಿ

ಓಂ ಮಂಡಳಿಯು ನ್ಯಾಯಬಾಹಿರ ಸಂಸ್ಥೆಯೆಂದು ಸಿಂಧ ಸರಕಾರವು ಅದರ ಮೇಲೆ ಪ್ರತಿಬಂಧಕಾಜ್ಞೆ ಹಾಕುವುದೆಂದು ತಿಳಿದುಬರುತ್ತದೆ.

ಭಾರತಕ್ಕೆ ಹೊಸ ಯುದ್ಧವಿಮಾನಗಳು

ಕಳೆದ ತಿಂಗಳಲ್ಲಿ 80 ಯುದ್ಧವಿಮಾನಗಳು ಇಂಗ್ಲೆಂಡಿನಿಂದ ಭಾರತಕ್ಕೆ ಬಂದಿದ್ದವು. ಮೊನ್ನೆ ಪುನಃ 16 ಹೊಸ ಯುದ್ಧದ ವಿಮಾನಗಳು ಬಂದಿವೆ. ಇವನ್ನು ಯುದ್ಧಕಾಲದಲ್ಲಿ ಭಾರತದ ರಕ್ಷಣೆಗಾಗಿ ಉಪಯೋಗಿಸಲಾಗುವುದು.

ವಲ್ಲಭಭಾಯಿ ಪಟೇಲರು ವರ್ಕಿಂಗ್ ಕಮಿಟಿಯ ಸದಸ್ಯತನಕ್ಕೆ ರಾಜಿನಾಮೆ ಕೊಡುವುದಿಲ್ಲ

ಕೊಂಗ್ರೆಸಿನಲ್ಲಿ ಈಗುಂಟಾಗಿರುವ ಭಿನ್ನತೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಶ್ರೀ ವಲ್ಲಭಭಾಯಿಯವರು ವರ್ಕಿಂಗ್ ಕಮಿಟಿಯ ತನ್ನ ಸದಸ್ಯತನಕ್ಕೆ ರಾಜಿನಾಮೆ ಕೊಡುವರೆಂಬ ಸಂಗತಿಯು ನಿರಾಧಾರವಾಗಿದೆಯೆಂದು ತಿಳಿದುಬರುತ್ತದೆ.

ದಕ್ಷಿಣಭಾರತ ವಿದ್ಯಾರ್ಥಿ ಪರಿಷತ್ತು

ದಕ್ಷಿಣ ಹಿಂದುಸ್ಥಾನದ ವಿದ್ಯಾರ್ಥಿ ಪರಿಷತ್ತು ಮೇ ತಿಂಗಳ ೨೦ನೇ ತಾರಿಖಿನಲ್ಲಿ ಔಂಧ ಸಂಸ್ಥಾನದ ಕಿರ್ಲೋಸ್ಕರ ವಾಡಿಯಲ್ಲಿ ಶ್ರೀ ಅಚ್ಯುತ ಪಟವರ್ಧನರ ಅಧ್ಯಕ್ಷತೆಯಲ್ಲಿ ಜರಗುವದು. ಔಂಧ ಸಂಸ್ಥಾನದ ಯುವರಾಜರಾದ ಶ್ರೀ ಅಪ್ಪಾಸಾಹೇಬರೇ ಸ್ವಾಗತಾಧ್ಯಕ್ಷರಾಗಿರುವರು.

ಕೊಂಗ್ರೆಸು ಶುದ್ಧೀಕರಣ

ಕೊಂಗ್ರೆಸಿನಲ್ಲಿ ಈಗುಂಟಾಗಿರುವ ಹೊಲಸನ್ನು ತೆಗೆದು ಶುದ್ಧೀಕರಿಸಲು ತಕ್ಕ ಯೋಜನೆಯನ್ನು ಮಾಡಲು ಜೂನ್ 3ನೇ ತಾರೀಕಿನಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದ, ಜವಾಹರಲಾಲ ನೆಹರು, ... ಸೀತಾರಾಮಯ್ಯ, ... ನರೇಂದ್ರದೇವ ... ಕೃಪಾಲಾನಿಯವರನ್ನೊಳಗೊಂಡ ಕಮಿಟಿಯು ಸೇರುವುದು.

ಪಾನ್ಯ ಮುರಾರಜಿಯವರಿಗೆ ಫಾರ್ಸಿ ಯುವಕನ ಬೆದರಿಕೆ

ಸರ್ ಕವಾಸ್ಜಿ ಜಹಾಂಗೀರ ... ಕಾನೂನು ಸಭೆಯ ಅಧ್ಯಕ್ಷತೆ ... ಮುಂಬಯಿಯ ಮಂತ್ರಿಗಳಾದ ಶ್ರೀ ಮುರಾರಜಿ ದೇಸಾಯಿಯವರು ... ಬರುತ್ತಿರುವಾಗ ಓರ್ವ ಫಾರ್ಸಿ ಯುವಕನು ... ಫಾರ್ಸಿ ಸಮಾಜಕ್ಕೆ ... ತನ್ನ ಕೈಯಲ್ಲಿ ಪಿಸ್ತೂಲು ಇದ್ದು ... ಈಗಲೇ ... ಹಾಕಿ ಕೊಲ್ಲುತ್ತಿದ್ದೆನು ... ಮುರಾರಜಿಯವರ ... ಸಂಕೋಚ ... ಈಗಲೇ ಗುಂಡು ಹಾಕಿ ... ಉತ್ತರಿಸಿದರು.

ತನ ಫಾರ್ಸಿ ಸಮಾಜಕ್ಕೆ ... ಇಲ್ಲಿ ಒಂದ ಕೆಲವು ... 'ದ್ವೈವೆನು' ಎಂದ ಹೇಳಿದ್ದ.

ಕಾರಗೋಪ ಸಮಸ್ಯೆ ಮದ್ರಾಸು ಸರಕಾರದ ಉತ್ತರ

ದಕ್ಷಿಣ ... ಜಿಲ್ಲೆಯ ... ಗಳಲಿ ದಕ್ಷಿಣ ಕನ್ನಡದ ... ಹಳ್ಳಿಗಳು ... ಜಿಲ್ಲೆಗೆ ಸೇರಿಸಬೇಕೆಂದು ... ಸರಕಾರಕ್ಕೆ ... ಮದ್ರಾಸು ಸರಕಾರವು ಅವರ ವಿನಂತಿಗೆ ಉತ್ತರ ... ಈಗ ವಿಚಾರದ ... ಸದ್ಯಕ್ಕೆ ಬಿಟ್ಟುಬಿಡುವುದೇ ಉತ್ತಮವೆಂದು ಸೂಚಿಸಿ.

ಹೈದರಾಬಾದು ಸತ್ಯಾಗ್ರಹ

ಸೋಲಾಪುರದ ಆರ್ಯಸಮಾಜದ ಪ್ರಕಟನೆಯ ಮೇರೆಗೆ ಔರಂಗಾಬಾದ ಜೈಲಿನಲ್ಲಿ ಸುಮಾರು ೨೦೦ ಸತ್ಯಾಗ್ರಹಿಗಳು ನಿರಶನ ವ್ರತವನ್ನು ಕೈಕೊಂಡಿರುವರೆಂದು ತಿಳಿದುಬರುತ್ತದೆ.

ಶೀಯಾ ಸುನ್ನಿ ಒಪ್ಪಂದದ ಮಾತುಕತೆಗಳು

ಶೀಯಾ ಸುನ್ನಿ ಒಪ್ಪಂದದ ಮಾತುಕತೆಗಳು ಇನ್ನೂ ಹಾಗೆಯೇ ಸಾಗಿವೆ. ... ಮತ್ತು ... ಸಂಗಡಿಗರೊಡನೆ ... ವಿಚಾರ ... ನಡೆಸಿದರು.

ಗಡಿನಾಡು ಮುಸ್ಲಿಂಲೀಗಿನ ಇಬ್ಬರು ಎಸೆಂಬ್ಲಿ ಸದಸ್ಯರು ಕಾಂಗ್ರೆಸ್ ಪಕ್ಷ ಸೇರಿದರು

ಗಡಿನಾಡಿನ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷವೊಂದೇ ನ್ಯಾಯಯುತ ಪ್ರಗತಿಪರ ಪಕ್ಷವೂ ಆಗಿರುವುದರಿಂದ ನಾವು ಅದಕ್ಕೆ ಸೇರುತ್ತೇವೆಂದು ಮುಸ್ಲಿಂಲೀಗ್ ಪಕ್ಷದ ಸದಸ್ಯರಾದ ರಾಜಾ ಮನುಚಿಹರ ಖಾನ್ ಮತ್ತು ಮಹಮ್ಮದ್ ಝಿಯಾಖಾನ್ ಇವರಿಬ್ಬರು ಕಾಂಗ್ರೆಸ್ ಪಕ್ಷವನ್ನು ಸೇರಿರುವರು. ಇವರಿಬ್ಬರು ಈಗ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದರಿಂದ ಕಾಂಗ್ರೆಸಿನಲ್ಲಿ ೨೭ ಸದಸ್ಯರೂ ಮುಸ್ಲಿಂ ಲೀಗಿನಲ್ಲಿ ೧೨ ಸದಸ್ಯರೂ ಇದ್ದಂತಾಯಿತು. ಮುಸ್ಲಿಂ ಲೀಗಿನ ಇನ್ನೂ ಇಬ್ಬರು ಸದಸ್ಯರು ಕಾಂಗ್ರೆಸ್ ಪಕ್ಷವನ್ನು ಸೇರುವ ಸಂಭವವಿದೆ.

ಭಾವನಗರದ ಪ್ರಜಾಪರಿಷತ್ತು

ಭಾವನಗರ ಸಂಸ್ಥಾನದ ಪಂಚಮ ಪ್ರಜಾ ಪರಿಷತ್ತು ಇದೇ ವಾರ ಸರದಾರ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಜರಗಿತು. ಭಾರತದ ಸಂಸ್ಥಾನಾಧೀಶರ ಕಾಲಗತಿಯನ್ನು ನೋಡಿ ತಮ್ಮ ಸಂಸ್ಥಾನಗಳ ಆಡಳಿತದಲ್ಲಿ ಪ್ರಜೆಗಳಿಗೆ ಹಕ್ಕು ಅಧಿಕಾರಗಳನ್ನು ಕೊಡುವದು ಸೂಕ್ತವಾಗಿದೆ. ಅಲ್ಲವಾದರೆ ಪರಿಣಾಮವು ಬಹಳ ಕೆಟ್ಟದಾಗುವದೆಂದು ಸರದಾರ ವಲ್ಲಭಭಾಯಿಯವರು ಒಂದು ನಿಷ್ಪಕ್ಷಪಾತವಾದ ಅಧ್ಯಕ್ಷಭಾಷಣವನ್ನು ಕೊಟ್ಟರು. ಸರದಾರರು ಭಾವನಗರಕ್ಕೆ ಬಂದು ಅಲ್ಲಿಂದ ಅವರನ್ನು ಪರಿಷತ್ತಿನ ಮಂಟಪಕ್ಕೆ ಮೆರವಣಿಗೆಯಿಂದ ಕರಕೊಂಡು ಹೋಗುತ್ತಿದ್ದಾಗ, ಕೆಲವು ಜನರು ಸಲ್ಯಾರದ ಕತ್ತಿ ದೊಣ್ಣೆ ಭಲ್ಲೆ ಈಟಿಗಳನ್ನು ಹಿಡಕೊಂಡು ದಾರಿಯಲ್ಲಿ ನಿರವಣಿಗೆಯನ್ನು ಅಡ್ಡಕಟ್ಟಿದರು. ಬಹಳ ಧೈರ್ಯಯುಕ್ತಿಯಾಗಿ ಅನೇಕ ಮಂದಿ ಗಾಯವಾಗಿದ್ದರು. ಪ್ರಜಾಪರಿಷತ್ತಿನ ಪ್ರಸಿದ್ಧ ಕೆಲಸಗಾರರಾದ ಶ್ರೀ ಭಾಟಿಯಾ ... ... ಹತರಾದರು. ಶ್ರೀ ಜಾದವಜೀ ... ಮೋದೀ ... ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಮೆರವಣಿಗೆಯು ಆಸ್ಪತ್ರೆಯಿಂದ ಪೋಲಿಸ ಸಹಾಯದಿಂದ ದ ... ಸರದಾರ ಪಟೇಲರನ್ನ ... ಕರೆದೊಯ್ದರು. ಭಾವನಗರದಲ್ಲಿ ಸಂಪೂರ್ಣ ಹರತಾಳವಾಗಿದೆ. ... ಭಾವುಭಾಯಿ ... ಜನಸಂಸ್ಥಾನವು ಸಾರ್ವಜನಿಕವಾಗಿ ನಡೆಯಿತು. ... ಕಗೊಂಡು ಯಾರೂ ಪರಿಸ್ಥಿತಿಯನ್ನು ಕಡಿಸಿ ... ಬಾರದಾಗಿ ... ನಡೆದು ಇವೆ.

ಮಧ್ಯಭಾರತ ಸಂಸ್ಥಾನಗಳ ಸ್ಥಿತಿಗತಿ

ಮಧ್ಯಭಾರತ ಸಂಸ್ಥಾನಗಳ ಪ್ರಜೆಗಳು ಇತರ ಸಂಸ್ಥಾನ ಪ್ರಜೆಗಳಿಗಿಂತ ಹೆಚ್ಚು ದಬ್ಬಾಳಿಕೆಗೆ ಒಳಿಯಾಗಿದ್ದಾರೆ. ಆ ಸಂಸ್ಥಾನಗಳ ಹೆಚ್ಚಿನವುಗಳಲ್ಲಿ ನಾಗರಿಕ ಸ್ವಾತಂತ್ರ್ಯವೆಂಬ ದ ಹೆಸರು ಕೂಡ ಇಲ್ಲವುದಿಲ್ಲ. ಜನರ ಆರ್ಥಿಕ ಸ್ಥಿತಿಯು ಬಹಳ ಕೆಟ್ಟದ್ದು. ಆದರ ಸುಧಾರಣೆಗೆ ಸಂಸ್ಥಾನ ಸರಕಾರಗಳು ಏನು ಲಕ್ಷ್ಯಕೊಡುವುದಿಲ್ಲ. ಕರಕಂದಾಯಗಳ ಭಾರದಿಂದ ಜನರು ಬಳಲುತ್ತಿದ್ದಾರೆ. ಹೊರಗಿನವರ ಕಣ್ಣಿಗೆ ದಣ್ಣು ಹಾಕಲಿಕ್ಕಾಗಿ ಕೆಲವು ಸಂಸ್ಥಾನಾಧೀಶರು ತಮ್ಮ ಸಂಸ್ಥಾನಗಳಿಗೆ ಕೆಲವು ಸುಧಾರಣೆಗಳನ್ನು ಕೊಟ್ಟಂತೆ ಮಾಡಿದ್ದಾರೆ. ಆದರೆ ಸಂಪೂರ್ಣ ಜವಾಬದಾರಿ ಸರಕಾರವು ಸ್ಥಾಪಿತವಾದ ಹೊರತು ತಮ್ಮ ಕಷ್ಟಗಳು ದೂರವಾಗುವುದಿಲ್ಲವೆಂಬುದನ್ನು ಜನರು ಈಗ ತಿಳಿದಿದ್ದಾರೆ ಎಂದು ಭಾವನಗರ ಪ್ರಜಾಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ ಕವಿಲಾಸಶಂಕರ ನಾ... ... ಸ್ವಾಗತ ಭಾಷಣ ಕೊಟ್ಟು, ದೇಶೀ ಸಂಸ್ಥಾನಗಳ ಚಳವಳಿಯಲ್ಲಿ ಮಹಾತ್ಮರು ಹೆಚ್ಚಿನ ಆಸಕ್ತಿಯನ್ನು ತೋರಿಸಿರುವುದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ.

ಮದ್ರಾಸಿನಲ್ಲಿ ಪ್ರಾಂತಿಕ ವಿದ್ಯಾ ಸಮ್ಮೇಲನ

ತಾಲೂಕು ಎಡ್ವ್ಯಾಜರಿ ಕಮಿಟಿಗಳ ನಿರ್ಮಾಣ

ಉಪಾಧ್ಯಾಯರ ಆಂಧೋಲನದ ಆವಶ್ಯಕತೆ

ಮೂವತ್ತನೆ ಪ್ರಾಂತಿಕ ವಿದ್ಯಾಸಮ್ಮೇಳನವು ಮದ್ರಾಸಿನಲ್ಲಿ ಶ್ರೀ ಆದಿಶೇಷಯ್ಯನವರ ಅಧ್ಯಕ್ಷತೆಯಲ್ಲಿ ಕೂಡಿತು. ವಿದ್ಯಾಮಂತ್ರಿ ಶ್ರೀ ಸಿ ಜೆ ವಾರ್ಕಿಯವರು ಪ್ರಾರಂಭೋತ್ಸವವನ್ನು ನಡೆಸಿದರು. ಅವರು ತಮ್ಮ ಭಾಷಣದಲ್ಲಿ ವಿದ್ಯಾಪ್ರಚಾರಕ್ಕಾಗಿ ಮದ್ರಾಸಿನ ಕಾಂಗ್ರೆಸ ಸರಕಾರವು ಮಾಡಿದ ಕೆಲಸಗಳನ್ನು ಹೇಳಿ ಶಿಕ್ಷಣದ ಮಾಧ್ಯಮವನ್ನಾಗಿ ಮಾತೃಭಾಷೆಗೆ ಪ್ರಥಮಸ್ಥಾನವನ್ನು ಕೊಟ್ಟಿರುವ, ವಿದ್ಯಾಪದ್ಧತಿಯಲ್ಲಿ ಕೃಷಿಕೈಗಾರಿಗೆಗಳಿಗೆ ಉಚ್ಚಸ್ಥಾನವನ್ನು ಕೊಟ್ಟಿರುವ, ಶಾಲಾ ಕಟ್ಟಡಗಳ ಬಾಬಿನಲ್ಲಿ ಸಾರ್ವಜನಿಕ ಜನ ಅನುಕೂಲಕ್ಕೆ ಸರಿಯಾಗಿ ನಡಕೊಳ್ಳುವ, ಉಪಾಧ್ಯಾಯರಿಗೆ ಸಕಾಲದಲ್ಲಿ ಸಂಬಳ ಬಟವಾಡೆಯಾಗುವಂತೆ ಮಾಡುವ, [illegible] ಕೌನ್ಸಿಲುಗಳನ್ನು ರದ್ದುಮಾಡಿ, ಅವುಗಳ ಬದಲಿಗೆ ತಾಲೂಕು ಎಡ್ವೈಜರಿ ಕಮಿಟಿಗಳನ್ನು ನಿರ್ಮಿಸುವ ಇತ್ಯಾದಿ ಸುಧಾರಣೆಗಳನ್ನು ಸಭಿಕರ ಗಮನಕ್ಕೆ ತಂದರು. ಆದರೆ ಭಾಷಣವಾದ ತರುವಾಯ ಉಪಾಧ್ಯಾಯರು ಸರಕಾರದ ಧೋರಣೆಯನ್ನು ಟೀಕಿಸಿ ಪತ್ರಿಕೆಗಳ ಆಶ್ರಯಕ್ಕೆ ಹೋಗುವ ಕುರಿತು ಆಡಿದ ಕೆಲವು ಮಾತುಗಳು ಉಪಾಧ್ಯಾಯರ ಮನಸ್ಸನ್ನು ನೋಯಿಸುವಂಥವಾಗಿದ್ದುವಾದ್ದರಿಂದ, ಸಮ್ಮೇಳನದಲ್ಲಿ ಅವುಗಳ ಯುಕ್ತಾಯುಕ್ತತೆಯ ಕುರಿತ ತೀವ್ರ ಚರ್ಚೆ ನಡೆದು ಅವರು ಹಾಗೆ ಮಾತನಾಡಿದ್ದು ಅಷ್ಟು ಸರಿಯಲ್ಲವೆಂದು ತೀರ್ಮಾನಿಸಿತು. ಆ ವೇಳೆ ಉಪಾಧ್ಯಾಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವ, ಜನಸಾಮಾನ್ಯರಲ್ಲಿ ವಿದ್ಯಾಪ್ರಚಾರಕ್ಕಾಗಿ ಕೈಕೊಳ್ಳಬಹುದಾದ ಉಪಾಯಗಳು ವಾರ್ಧಾಶಿಕ್ಷಣ ಪದ್ಧತಿಯನ್ನು ಹ್ಯಾಸ್ಕೂಲು ಶಿಕ್ಷಣ ಪದ್ಧತಿಗೆ ಹೊಂದಿಸಿಕೊಳ್ಳುವ, ಉಪಾಧ್ಯಾಯ ಸಭೆಗಳ ವಿದ್ಯಾಖಾತೆಗೆ ಇರಬೇಕಾದ ಸಂಬಂಧ ಇತ್ಯಾದಿಗಳ ಕುರಿತ [illegible] ಅಲ್ಲಿ ಆದುವು.

ಖಾಸಗಿ ಶಾಲೆಗಳನ್ನು ಸರಕಾರ ತೆಗೆದುಕೊಳ್ಳುವ ವಿಚಾರ

ಖಾಸಗಿ ಶಾಲೆಗಳನ್ನು ವ್ಯಾಪಾರ ಮತ್ತು ಲಾಭಸಂಪಾದನೆಯ ಸಾಧನಗಳನ್ನಾಗಿ [illegible] ಉಪಯೋಗಿಸಿಕೊಳ್ಳುತ್ತಿರುವುದರಿಂದ, ವಿದ್ಯಾಪ್ರಚಾರದ ದೃಷ್ಟಿಯಿಂದ ಅವುಗಳನ್ನು ಸರಕಾರದ ತಾಬೆಗೆ ತೆಗೆದುಕೊಳ್ಳುವುದು ಹಿತವಾಗಿದೆ ಎಂದು ಸಂಯುಕ್ತಪ್ರಾಂತ ಸರಕಾರವು ಎಣಿಸಿದೆ. ಪ್ರಾಂತದ ಖಾಸಗಿ ಶಾಲೆಗಳ ಆರ್ಥಿಕ ಸ್ಥಿತಿಗತಿಗಳ ವಿಚಾರಣೆ ನಡೆಸಿ, ಆ ಶಾಲೆಗಳನ್ನು ಉತ್ತಮ ಸ್ಥಿತಿಗೆ ತರುವ ಬಗ್ಗೆ ಸರಕಾರವು ಒಂದು ಸಮಿತಿಯನ್ನು ನೇಮಿಸಿದೆ.

ಸಿಂಧದಲ್ಲಿ ಸಾಕ್ಷರತೆಯ ಪ್ರಚಾರ

ಕರಾಚಿಯಲ್ಲಿ ಕೂಡಿದ ಒಂದು ದೊಡ್ಡ ಸಭೆಯಲ್ಲಿ ಭಾಷಣಮಾಡುತ್ತ ಸಿಂಧದಲ್ಲಿ ವಿದ್ಯಾಮಂತ್ರಿ ಪೀರ್ ಇಲ್ಲಾಹಿಭಕ್ಷರವರು— ಹಿಂದುಸ್ಥಾನದ ಎಲ್ಲಾ ಸ್ತ್ರೀ ಪುರುಷ ಮಕ್ಕಳ ಸಾಕ್ಷರರಾದಾಗಲೇ ಹಿಂದುಸ್ಥಾನವು ಸ್ವತಂತ್ರವಾಗುವುದೆಂದೂ, ಸರಕಾರದ ಪರವಾಗಿ ಸ್ಥಾಪಿತವಾದ ರಾತ್ರಿ ಶಾಲೆಗಳ ಉಪಯೋಗವನ್ನು ನಿರಕ್ಷರರು ಪಡೆಯದಿದ್ದುದಾದರೆ ಅವರ ಕುರಿತು ಕಠಿಣವಾಗಿ ಆಲೋಚಿಸಬೇಕಾಗುವುದೆಂದೂ ಹೇಳಿದರು. ಸಿಂಧ ಎಸೆಂಬ್ಲಿ ಮೆಂಬರರೂ ನಿರಕ್ಷರರಿಗೆ ಪಾಠ ಹೇಳಿಕೊಡುವಂತೆ ಅವರ ಬಗ್ಗೆ ತರಬೇತಿ ಕ್ಲಾಸುಗಳಾಗಬೇಕೆಂದು ಶಿಕಾರಪುರದ ಒಬ್ಬ ನಗರಸಭೆಯ ಮ್ಯುನ್ಸಿಪಲ್ ಕೌನ್ಸಿಲರೂ ವಿದ್ಯಾಮಂತ್ರಿಗೆ ಸೂಚಿಸಿರುವರು. ಈ ಪ್ರಾಥಮಿಕ ಶಿಕ್ಷಣದ ಅವಧಿಯನ್ನು ೫ ವರ್ಷಗಳಿಂದ ೪ ವರ್ಷಗಳಿಗೆ ಇಳಿಸಿ ಕನಿಷ್ಠಕಾಲಕ್ಕೆ ಹೆಚ್ಚಿಗೆ ವಿದ್ಯಾಪ್ರಚಾರ ಮಾಡುವ ಕುರಿತು ಸಿಂಧದ ವಿದ್ಯಾಖಾತೆಯ ಡೈರೆಕ್ಟರರು ಒಂದು ಯೋಜನೆಯನ್ನು ತಯಾರಿಸಿದ್ದಾರೆ.

ವಾರ್ಧಾ ಶಿಕ್ಷಣ ಪದ್ಧತಿಯ ಕುರಿತು ಕೇಂದ್ರ ಸರಕಾರದ ಸೂಚನೆ

ವಾರ್ಧಾ ಶಿಕ್ಷಣ ಪದ್ಧತಿಯನ್ನು ಪರೀಕ್ಷಿಸಿ ತನ್ನ ಅಭಿಪ್ರಾಯವನ್ನು ಕೊಡಲಿಕ್ಕೆ ಶ್ರೀ ಬಿ ಜಿ ಖೇರರ ಅಧ್ಯಕ್ಷತೆಯಲ್ಲಿ ಉಂಟಾದ ಸೆಂಟ್ರಲ್ ಎಡ್ವ್ಯಾಜರಿ ಬೋರ್ಡ ಆಫ್ ಎಡ್ಯುಕೇಶನಿನ ಉಪಸಮಿತಿಯು ಜೂನ್ ತಿಂಗಳಲ್ಲಿ ಸೇರುವುದು. ಆ ಸಮಿತಿಯಲ್ಲಿ ವಾರ್ಧಾ ಶಿಕ್ಷಣ ಪದ್ಧತಿಯು ಹ್ಯಾಸ್ಕೂಲು ಶಿಕ್ಷಣ ಪದ್ಧತಿಗೆ ಹೊಂದಿಕೊಳ್ಳುವಂತೆ ಅದರಲ್ಲಿ ಆಗಬೇಕಾದ ಪರಿವರ್ತನೆಗಳ ಕುರಿತಾಗಿಯೂ ಆಲೋಚಿಸುವುದು. ವಾರ್ಧಾ ಶಿಕ್ಷಣ ಪದ್ಧತಿಯಲ್ಲಿ ಉಪಾಧ್ಯಾಯರಿಗೆ ಕೊಡಬೇಕಾದ ತರಬೇತಿ, ಉಪಾಧ್ಯಾಯರನ್ನು ಹೆಚ್ಚಾಗಿ ಕೆಲಸಕ್ಕೆ ತೆಗೆದುಕೊಳ್ಳುವ ಪ್ರಯೋಜನಗಳ ಕುರಿತೂ ಅಲ್ಲಿ ಆಲೋಚನೆಯಾಗಬಹುದು. ವಾರ್ಧಾ ಶಿಕ್ಷಣ ಪದ್ಧತಿಯ ಸಾಧ್ಯಸಾಧ್ಯತೆಯ ಕುರಿತು ಏನಾದರೂ ಸಂದೇಹಗಳಿರುವುದಾದರೆ, ಅವುಗಳನ್ನು ತಿಳಿಸಬೇಕೆಂದು ಕೇಂದ್ರ ಸರಕಾರವು ಪ್ರಾಂತಿಕ ಸರಕಾರಗಳಿಗೆ ಸೂಚಿಸಿದೆ. ಪ್ರಾಂತಿಕ ಸರಕಾರಗಳ ಸಂದೇಹಗಳ ಒಂದಿಗೆ, ಅವುಗಳ [illegible] ಕೇಂದ್ರ ಸರಕಾರವು ತನ್ನ ಬೋರ್ಡ ಆಫ್ ಎಡ್ಯುಕೇಶನ ಮುಂದಕ್ಕೆ ಕಳಿಸುವುದು.

ಪ್ರಾಯಸ್ಥರ ಶಿಕ್ಷಣ ಸಮಿತಿ

ಕೇಂದ್ರ ಸರಕಾರವು ಡಾಕ್ಟರ ಸಯ್ಯದ ಮಹ್ಮದರ ಅಧ್ಯಕ್ಷತೆಯಲ್ಲಿ ರಚಿತವಾದ ಪ್ರಾಯಸ್ಥರ ಶಿಕ್ಷಣ ಸಮಿತಿಯು [illegible] ತಿಂಗಳಲ್ಲಿ ಕೂಡುವುದು. [illegible] ಅನುಭವಗಳನ್ನು ಪಡೆಯಲಿಕ್ಕೆ [illegible] ಶಿಕ್ಷಣ ಪ್ರಚಾರದಲ್ಲಿ [illegible] ಸರಕಾರಗಳನ್ನು ಕೇಳಿದೆ.

ಉಪಾಧ್ಯಾಯರಿಗೆ ತರಬೇತಿ

ವಾರ್ಧಾಶಿಕ್ಷಣ ಪದ್ಧತಿಯಲ್ಲಿ ಉಪಾಧ್ಯಾಯರಿಗೆ ತರಬೇತಿ [illegible] ಮದ್ರಾಸಪ್ರಾಂತ್ಯದ ಉಪಾಧ್ಯಾಯರ ಬಗ್ಗೆ ಕೊಯಮುತ್ತೂರಿನಲ್ಲಿ ಒಂದು ಟ್ರೇನಿಂಗ ಶಾಲೆಯು ಇದೇ ಜುಲಾಯಿಯಿಂದ ತೆರೆಯಲ್ಪಡುತ್ತದೆ. ತರಬೇತಿಯ ಅವಧಿಯು ೯ ತಿಂಗಳು ಆಗಿದೆ. ಕೈಗಾರಿಕೆಯ ಮೂಲಕ ಶಿಕ್ಷಣದಲ್ಲಿ ಅಭಿರುಚಿ ಇರುವ ಸೆಕೆಂಡರಿ ಗ್ರೇಡಿನ ೩೦ ಮಂದಿ ಉಪಾಧ್ಯಾಯರನ್ನು ಮಾತ್ರ ಈ ವರ್ಷ ಡಿಸ್ಟ್ರಿಕ್ಟ ಎಡ್ಯುಕೇಶನಲ್ ಆಫೀಸರರು ಆರಿಸಿ ಈ ಶಾಲೆಗೆ ಕಳುಹಿಸುವರು. ಈ ಶಾಲೆಯ ಪ್ರಾರಂಭೋತ್ಸವಕ್ಕೆ ನಮ್ಮ ಪ್ರಾಂತ್ಯದ ವಿದ್ಯಾ ಮತ್ತು ಕೈಗಾರಿಕೆ ಮಂತ್ರಿಗಳು ಬರುವರು. ಹಾಯರ ಗ್ರೇಡ ಮತ್ತು ಇತರ ಉಪಾಧ್ಯಾಯರಿಗೆ ಇಂಥ ತರಬೇತಿ ಶಾಲೆಗಳು ಯಾವಾಗ ಸ್ಥಾಪಿಸಲ್ಪಡುವವೆಂಬುದನ್ನು ಸರಕಾರವು ಪ್ರಕಟಿಸಿರುವುದಿಲ್ಲ. ಇದನ್ನು ಆ ಉಪಾಧ್ಯಾಯರು ಲಕ್ಷದಲ್ಲಿಡಬೇಕು.

ಬೊಂಬಾಯಿಯಲ್ಲಿ ಓದುಬರಹಗಳ ಪ್ರಚಾರ

ಪ್ರಸಿದ್ಧವಾದ ಬೊಂಬಾಯಿ ನಗರದ ಹತ್ತು ಸಾವಿರ ಜನರು ಒಂದೇ ಒಂದು ವಾರದಲ್ಲಿ ಸುಲಭ ಪಾಠಗಳನ್ನು ಬರೆಯಲಿಕ್ಕೂ ಓದಲಿಕ್ಕೂ ಕಲಿತುಕೊಂಡಿದ್ದಾರೆ. ಸರಕಾರದ ಸತತ ಪರಿಶ್ರಮದ ಫಲದಿಂದ ಉತ್ಸಾಹೀ ಕೆಲಸಗಾರರೂ ಉತ್ತಮ ಮಾರ್ಗದರ್ಶಕರೂ ಇದ್ದರೆ, ಅತ್ಯಂತ ಕಠಿನವೆಂದು ತೋರುವ ಕೆಲಸಗಳನ್ನು ಕೂಡ ಸಾಧ್ಯಮಾಡಬಹುದೆಂಬುದಕ್ಕೆ ಇದು ಒಂದು ದೃಷ್ಟಾಂತವಾಗಿದೆ. ಬೊಂಬಾಯಿ ನಗರದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವು ಜಾರಿಗೆ ಬರುತ್ತದೆ.

ದಕ್ಷಿಣ ಕನ್ನಡ ತಾಲೂಕು ಎಡ್ವ್ಯಾಜರಿ ಕಮಿಟಿಗಳು

ಡಿಸ್ಟ್ರಿಕ್ಟ ಎಡ್ಯುಕೇಶನಲ್ ಕೌನ್ಸಿಲುಗಳ ಬದಲಿಗೆ [illegible] ಪ್ರಾಥಮಿಕ ಶಿಕ್ಷಣ ಪ್ರಚಾರಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ತಾಲೂಕು ಎಡ್ವೈಜರಿ ಕಮಿಟಿಗಳ ರಚನೆಯಾಗಿದೆ. ನಮ್ಮ ಜಿಲ್ಲೆಯ ಕಮಿಟಿಗಳ [illegible] ಕೆಳಗಿನವರನ್ನು [illegible] ಆರಿಸಿದೆ:—

ಮಂಗಳೂರು ತಾಲೂಕು—ಶ್ರೀಗಳಾದ ಎಮ್ ಎಸ್ ಶೆಣೈ (ಅಧ್ಯಕ್ಷ), ಕೆ ಆರ್ ಕಾರಂತ, ಬಿ ವೆಂಕಟರಾವ್ ಬಂಗೇರ, ಕೆ. ಈಶ್ವರ, ಜೆರೋಮ ಸಾಲ್ಡಾನ್ಹ, ಡಾಕ್ಟರ ಕೆ ವಿಟ್ಠಲ ಶೆಟ್ಟಿ, ಎಸ್ ಕೃಷ್ಣ ನಾಯಕ, ಎನ್ ರಾಮರಾವ್, ರೆ. ಫಾ ಕೆ ಆರ್. ಕರುಣಾಕರ, ಎಮ್ ಮಹ್ಮದ್ ಸಾಹೇಬ, ಶಂಭವಿ ಆರ್. ಪೂಂಜ.

ಪುತ್ತೂರು ತಾಲೂಕು—ಶ್ರೀಗಳಾದ ಎಮ್. ಶಿವರಾವ್ (ಅಧ್ಯಕ್ಷ) ಬಿ. ಮಂಜಪ್ಪ ಹೆಗ್ಡೆ, ಬಿ ರಮಾನಾಥ, ಎಸ್. ಕೆ ಭಿಡೆ, ಎಳಿಜಬೆತ ಮಥಾಯಸ್ ರಾ ಸಾ. ಲಕ್ಷ್ಮೀನಾಥ ಅರಸು, ಮೊಕದುಮ್ ಇಸ್ಮಾಯಿಲ್ ಸಾಹೇಬ, ಯು ಸದಾಶಿವ ರಾವ್.

ಕಾಸರಗೋಡು ತಾಲೂಕು—ಖಾ ಬಿ. ಮಹ್ಮದ್ ಚಮ್ನಾಡ ಸಾಹೇಬ (ಅಧ್ಯಕ್ಷ), ಕೆ. ಕೃಷ್ಣ ಹೆಗ್ಡೆ, ಪಿ. ಕೆ ರಾಘವನ ನಂಬಿಯಾರ, ಅಪ್ರೈಲ್ ಸಾಮುವೆಲ್ ಕೌರಟ, ಬಿ. ನಾರಾಯಣ ಭಟ್ಟ, ಹೇಮಲತಾ ಶೆಟ್ಟಿ, ಪಿ ಅಹ್ಮದ ಸಾಹೇಬ, ಕೆ ರಾಮಕೃಷ್ಣ ರಾವ್.

ಉಡುಪಿ ತಾಲೂಕು—ಶ್ರೀಗಳಾದ ಕೆ ಜಿ. ಒಳ್ಳಾಳ (ಅಧ್ಯಕ್ಷ) ಎ ಲಕ್ಷ್ಮೀನಾರಾಯಣ ರಾವ್, ಟಿ. ಸದಾಶಿವ ರಾವ್, ಎಮ್ ವಿಟ್ಠಲ ಕಾಮತ್, ರೆ ಫಾ ಕೊಲಾಸೋ, ಮಹ್ಮದ ಉಸ್ಮಾನ ಸಾಹೇಬ, ಲೀಲಾಬಾಯಿ ಕಾಮತ.

ಕುಂದಾಪುರ ತಾಲೂಕು—ಶ್ರೀಗಳಾದ ಎಚ್. ಮಾದಪ್ಪಯ್ಯ (ಅಧ್ಯಕ್ಷ), ಎಮ್ ವಾಸುದೇವ ಮಯ್ಯ, ಕೆ ವೆಂಕಪ್ಪ ಶೆಟ್ಟಿ, ಕೆ ಅಬ್ದುಲ್ ಖಾದರ್ ಸಾಹೇಬ ಬಿ ಶಿವರಾಮ ಶೆಟ್ಟಿ, ರೆ ಫಾ ಡಿಬೆಲ್ಲೋ, ಎಚ್ ಸುಶೀಲಾಬಾಯಿ.

ಕಾರ್ಕಳ ತಾಲೂಕು—ಎಚ್ ಎಸ್ ಹುಸೇನ ಸಾಹೇಬ (ಅಧ್ಯಕ್ಷ), ಕೆ ಎಸ್ ರಾಮಣ್ಣ ರೈ, ಎನ್ ಎಮ್ ಅಡ್ಯಂತಾಯ ಕೆ ಸಿ ಕಾಮತ್ [illegible] ಭಟ್ಟ, ರೆ ಫಾ [illegible], ಎಚ್ [illegible] ಎನ್. ಭವಾನಿ ಎ. ಬಿ.

ಆ ಆಯಾ ತಾಲೂಕುಗಳ ತರುವಾಯರು, ಡೆಪ್ಯುಟಿ ಇನ್ಸಪೆಕ್ಟರರು, ಸಬ್ ಅಸಿಸ್ಟಂಟ ಇನ್ಸಪೆಕ್ಟರರೂ ಕಮಿಟಿಯ ಸದಸ್ಯರಾಗಿರುತ್ತಾರೆ. ಡೆಪ್ಯುಟಿ ಇನ್ಸಪೆಕ್ಟರರು ಕಮಿಟಿಯ ಕಾರ್ಯದರ್ಶಿಗಳಾಗಿರುವರು.

ಆಂಧೋಲನದ ಆವಶ್ಯಕತೆ

ಎಡ್ವೈಜರಿ [illegible] ಉಪಾಧ್ಯಾಯರ [illegible] ಎಡ್ವೈಜರಿ ಕಮಿಟಿಗಳಲ್ಲಿ ಉಪಾಧ್ಯಾಯರ [illegible] ವಿದ್ಯಾ ಮಂತ್ರಿಗಳು [illegible] ಕಮಿಟಿಗಳಲ್ಲಿ ಉಪಾಧ್ಯಾಯರ [illegible] ಕೊಟ್ಟಿರುವುದಿಲ್ಲ. ವಿದ್ಯಾಖಾತೆಯ ಅಧಿಕಾರಿಗಳು ಮತ್ತು ಕಮಿಟಿಯ ಇತರ ಸದಸ್ಯರ ಒಲವುಗಳ ಮೇಲೆ ಈ ಕಮಿಟಿಗಳು [illegible] ಹೇಗೆ ಉಪಯುಕ್ತವಾಗಬಹುದೋ ಎಂಬ ಸಂದೇಹವಿದೆ. ಇಲ್ಲಿಯ ತನಕ ಪ್ರಾತಿನಿಧ್ಯ ಪದ್ಧತಿಯಿಂದ ಜಾತೀಯ ಸ್ಪರ್ಧೆಯ [illegible] ಗಳ ಪ್ರದರ್ಶನಕ್ಕಾಗಿ ಈ ಕಮಿಟಿಗಳು [illegible] ಸಂದೇಹಕ್ಕೆ [illegible] ಕಮಿಟಿಗಳ [illegible] ನ್ನು [illegible] ಎಡ್ಯುಕೇಶನಲ್ ಕೌನ್ಸಿಲುಗಳಲ್ಲಿ [illegible] ಕಮಿಟಿಗಳಲ್ಲಿ [illegible] ಕಾಣುತ್ತದೆ. ಆದ್ದರಿಂದ ಇವುಗಳ ಸುಧಾರಣೆ, ಉಪಾಧ್ಯಾಯರಿಗೆ, ಪ್ರಾಥಮಿಕ ಶಿಕ್ಷಣ ಪ್ರಚಾರದಲ್ಲಿ ಹೆಚ್ಚಿನ [illegible] ಇವರ ಆಂಧೋಲನ ಮಾಡುವುದು ಅಗತ್ಯವಾಗಿದೆ.

ಚಿಂಪಾಂಜಿಗಳಿಗೂ ನಗನಾಣ್ಯಗಳ ಬೆಲೆ ಗೊತ್ತು

ಗ್ರೇಟಬ್ರಿಟನು ಸಮುದ್ರರಾಜನಿಗೆ ಸ್ವಾಹವಾಗುತ್ತಿದೆ

ನ್ಯೂಯೋರ್ಕದಲ್ಲಿ ೯೩ ಮುಖಬಿಲ್ಲೆಗಳ ಗಡಿಯಾರ

ಚಿಂಪಾಂಜಿಗಳು ಮಂಗನ ಜಾತಿಗೆ ಸೇರಿದುವು. ಅವುಗಳಿಗೂ ಮನುಷ್ಯನಿಗೂ ಸಮೀಪದ ನಂಟುತನವಿದೆ. ಮನುಷ್ಯನ ಹಿರಿಯನು ಎಂದೋ ಒಮ್ಮೆ ಚಿಂಪಾಂಜಿಯು ತಮ್ಮನಾಗಿದ್ದನಂತೆ. ಚಿಂಪಾಂಜಿಗಳೂ ಮನುಷ್ಯನಂತೆ ನಗನಾಣ್ಯಗಳ ಬೆಲೆಯನ್ನರಿತು ಅವುಗಳನ್ನು ದಿನನಿತ್ಯದ ವ್ಯವಹಾರಗಳಲ್ಲಿ ಉಪಯೋಗಿಸಿಕೊಳ್ಳಬಲ್ಲುವೆಂಬುದನ್ನು ಈಗ ತಾನೇ ಹಲವು ಶೋಧಗಳ ಮೂಲಕ ತಿಳಿಸಿದ್ದಾರೆ.

ಈ ಶೋಧಗಳನ್ನು ಮಾಡಿದವರಲ್ಲಿ ಮಿಸ್ಸಿಸಿಪಿ ಯುನಿವರ್ಸಿಟಿಯ ಡಾಕ್ಟರ ಜಾನ ವೊಲ್ಫ್ ಎಂಬವರು ಪ್ರಮುಖರು. ಅವರು ಮೊದಲು ತಮ್ಮ ಕೆಲವು ಚಿಂಪಾಂಜಿಗಳಿಗೆ ಆಹಾರ ಸಂಪಾದನೆಗಾಗಿ ಕೆಲಸಮಾಡಬೇಕಾಗಿರುವುದನ್ನು ಕಲಿಸಿದರು. ಆ ಮೇಲೆ ಒಂದು ಯಂತ್ರಸಾಧನವನ್ನು ಚಿಂಪಾಂಜಿಗಳ ಮುಂದಿಟ್ಟು, ಯಾವ ನಾಣ್ಯವನ್ನು ಹಾಕಿದರೆ ಯಾವ ಆಹಾರ ಪದಾರ್ಥವು ಮೇಲಕ್ಕೆ ಬರುವುದೆಂಬುದನ್ನು ಕಲಿಸಿ ಬೇರೆ ಬೇರೆ ನಾಣ್ಯಗಳ ಪರಿಚಯವಾಗುವಂತೆ ಮಾಡಿದರು. ಆ ಮೇಲೆ ಕೆಲವು ಕೆಲಸಕ್ಕೆ ಬಾರದ ನಾಣ್ಯಗಳನ್ನು ಯಂತ್ರದಲ್ಲಿ ಹಾಕಿದಾಗ ಆಹಾರವು ಬಾರದೆ ಇರುವುದನ್ನು ತಿಳಿಸಿ, ಖೊಟ್ಟಿ ನಾಣ್ಯಗಳ ಪರಿಚಯಮಾಡಿಕೊಟ್ಟರು.

ಆ ಚಿಂಪಾಂಜಿಗಳು ಈಗ ವ್ಯಾಪಾರ ಧರ್ಮವನ್ನು ಕಲಿಯುತಿವೆ. ಎರಡು ಚಿಂಪಾಂಜಿಗಳ ಮುಂದೆ ಎರಡು ಯಂತ್ರಗಳನ್ನಿಟ್ಟು, ಡಾಕ್ಟರ ವೂಲ್ಫರು ಒಂದೊಂದು ಆಹಾರ ಪದಾರ್ಥವು ಬರುವ ಕೆಲವು ನಾಣ್ಯಗಳನಷ್ಟೆ ಚಿಂಪಾಂಜಿಗಳಿಗೆ ಕೊಟ್ಟರು. ಚಿಂಪಾಂಜಿಗಳು ತಮ್ಮ ಯಂತ್ರಗಳಲ್ಲಿ ನಾಣ್ಯಗಳನ್ನು ಹಾಕಿದಾಗ ತಮಗೆ ಬೇಡವಾದ ಆಹಾರಗಳು ಬರುವುದನ್ನು ಕ್ಷಣಕಾಲ ಚಿಂತಿಸಿ, ಮತ್ತೆ ಅವು ಒಂದು ಉಪಾಯವನ್ನು ತಾವಾಗಿ ಹುಡುಕಿಕೊಂಡವು. ತಮಗೆ ಬೇಡವಾದ ಪದಾರ್ಥಗಳನ್ನು ಬೇಕಾದವುಗಳಿಗೆ ಕೊಟ್ಟು, ವ್ಯಾಪಾರವನ್ನಾರಂಭಿಸಿದುವು! ಈ ಶೋಧನೆಗಳಿಂದ ಚಿಂಪಾಂಜಿಗಳಿಗೂ ಮನುಷ್ಯರಿಗೂ ನಂಟುತನವಿರುವುದು ನಿಜ, ಅವಕ್ಕೂ ಒಳ್ಳೆ ಅನುಕೂಲತೆಗಳನ್ನು ಒದಗಿಸಿ ಕೊಟ್ಟರೆ, ಮನುಷ್ಯರಂತೆ ತಮ್ಮ ಬುದ್ಧಿ, ವಿಚಾರಶಕ್ತಿಗಳ ವಿಕಾಸ ಮಾಡಿಕೊಳ್ಳಬಲ್ಲವು ಎಂಬುದನ್ನು ಡಾಕ್ಟರ ವೂಲ್ಫರು ಸಿದ್ಧಾಂತಮಾಡಿ ತೋರಿಸಿದ್ದಾರೆ.

ಗ್ರೇಟ ಬ್ರಿಟನು ಮುಳುಗುತ್ತಿದೆ

ಮೆಲ್ಲ ಮೆಲ್ಲನೆ ಗ್ರೇಟ ಬ್ರಿಟನು ಸಮುದ್ರದಡಿಯಲ್ಲಿ ಮುಳುಗುತ್ತಾ ಇದೆ, ಅಥವಾ ಸಮುದ್ರವು ಗ್ರೇಟ ಬ್ರಿಟನನ್ನು ಸ್ವಾಹಾಮಾಡುತ್ತಿದೆ. ಈಗಿನಂತೆಯೇ ಗ್ರೇಟ ಬ್ರಿಟನು ಮುಳುಗುತ್ತಾ ಇದ್ದರೆ ಇನ್ನು ಕೆಲವು ಸಾವಿರ ವರ್ಷಗಳು ಕಳೆದಾಗ ಈ ದೇಶವು ಹೆಸರು ಪುಸ್ತಕಗಳಿಗೆ ಮಾತ್ರ ಉಳಿಯಬಹುದು ಎಂಬುದನ್ನು ವಿಜ್ಞಾನಿಗಳು ತೋರಿಸಿಕೊಟ್ಟಿರುವರು. ಹಿಂದೆ ಜನನಿಬಿಡವಾಗಿದ್ದ ಎಷ್ಟೋ ಸಮುದ್ರ ಕರೆಯ ಪಟ್ಟಣಗಳು ಈಗ ನೀರಿನೊಳಗಿರುವವು. ಉದಾಹರಣಾರ್ಥ ಹಿಂದಿದ್ದ ಡನ್ವಿಚ್, ಕೆನವಾಲ್, ರಾವನ ಶಾಯರ್ ಮೊದಲಾದ ಬಂದರುಗಳು ಈಗ ಪೂರ್ಣ ನೀರಿನಲ್ಲಿ ಮುಳುಗಿರುವವು ಅಥವಾ ಮುಳುಗುತ್ತಾ ಇರುವುವು.

೪೩ ಮುಖಬಿಲ್ಲೆಗಳ ಗಡಿಯಾರ

ಜಗತ್ತಿನ ಬೇರೆ ಯಾವ ಭಾಗದಲ್ಲಿಯೂ ಇಲ್ಲದ ಒಂದು ವಿಚಿತ್ರವಾದ ಗಡಿಯಾರವನ್ನು ತಯಾರಿಸಿ ಬೆಲ್ಜಿಯಮಿನಿಂದ ನ್ಯೂಯೋರ್ಕಿಗೆ ಕಳುಹಿಸಿ ಕೊಟ್ಟಿರುವರು. ಅಲ್ಲಿ ಅದನ್ನು ಒಂದು ವಸ್ತುಪ್ರದರ್ಶನಾಲಯದಲ್ಲಿ ಇಡುವರು. ಈ ಗಡಿಯಾರಕ್ಕೆ ೯೩ ಮುಖಬಿಲ್ಲೆಗಳು ಇವೆ. ಬೇರೆ ಯಾವ ಗಡಿಯಾರವೂ ಹೇಳಿಕೊಡದಷ್ಟು ಸಂಗತಿ ಸಮಾಚಾರಗಳನ್ನು ಈ ಗಡಿಯಾರವು ತನ್ನ ಬೇರೆ ಬೇರೆ [illegible] ಮುಖಬಿಲ್ಲೆಗಳಲ್ಲಿ ಎಳ್ಳಷ್ಟು ಹೆಚ್ಚು ಕಡಿಮೆಯಾಗದಂತೆ ತಿಳಿಸುತ್ತದೆ. ಇದು ಪ್ರಪಂಚದ ಬೇರೆ ಬೇರೆ ಮುಖ್ಯ ಊರುಗಳ ಸಮಯವನ್ನು ಏಕಕಾಲದಲ್ಲಿ ಸೂಚಿಸುವುದು ಮಾತ್ರವಲ್ಲದೆ, ಇಳಿತ ಭರತ, ಸೂರ್ಯ ಚಂದ್ರ ಗ್ರಹನಕ್ಷತ್ರಗಳ ಗತಿ ಇತ್ಯಾದಿಯನ್ನೂ ಹೇಳಿಕೊಡುತ್ತದೆ.

ಹೆಚ್ಚಿಗೆ ಬಿಸಿಲು ಎಲ್ಲಿ ಬೀಳುತ್ತದೆ?

ಎಂದು ಯಾರನ್ನಾದರೂ ಕೇಳಿದರೆ ಭೂಮಧ್ಯಪ್ರದೇಶಗಳಲ್ಲಿ ಎಂದು ಅವರು ಥಟ್ಟನೆ ಹೇಳಿಬಿಡಬಹುದು. ಪರಂತು ಇದನ್ನು ವಿಚಾರ ಮಾಡದೆ ಹೇಳಿದಂತಾಗುತ್ತದೆ. ಭೂಮಧ್ಯಪ್ರದೇಶದಲ್ಲಿ ಬೀಳುವ ಬಿಸಿಲಿನ ಶಾಖವು ಹೆಚ್ಚಾಗಿರುತದೆ, ಹೊರತು ಬಿಸಿಲು ಹೆಚ್ಚಾಗಿರುವುದಿಲ್ಲ. ಸೂರ್ಯಕಿರಣಗಳು ಭೂಪೃಷ್ಠದ ಮೇಲೆ ನೇರವಾಗಿ ಬೀಳುವುದರಿಂದ ಶಾಖವು ಹೆಚ್ಚಾಗುವುದು. ಭೂಮಧ್ಯಪ್ರದೇಶದಲ್ಲಿ ಬೀಳುವ ಕಿರಣಗಳು ನೇರವಾಗಿ ಇರುತ್ತವೆ. ಆದ್ದರಿಂದ ಅಲ್ಲಿ ಶಾಖವು ಹೆಚ್ಚು. ಪರಂತು ಧ್ರುವಪ್ರದೇಶಗಳಲ್ಲಿ ಶಾಖವು ಕಡಿಮೆ. ಯಾಕೆಂದರೆ ಸೂರ್ಯನ ಕಿರಣಗಳು ಅಲ್ಲಿ ಬಹಳ ವಕ್ರವಾಗಿವೆ. ಆದರೂ ಕೂಡ ಅಲ್ಲಿ ಬೀಳುವ ಬಿಸಿಲು ಭೂಮಧ್ಯಪ್ರದೇಶಗಳಲ್ಲಿ ಬೀಳುವ ಬಿಸಿಲಿಗಿಂತಲೂ ಹೆಚ್ಚು, ಅಂದರೆ ಅಧಿಕ ಸಮಯದ ತನಕ ಇರುವುದು.

ಕೆಲವು ಅದ್ಭುತ ಶೋಧಗಳು

ಅಮೇರಿಕದ ವಿಜ್ಞಾನಿಗಳು ನಿತ್ಯ ಜೀವನಕ್ಕೆ ಉಪಯುಕ್ತವಾದ ಕೆಲವು ಅದ್ಭುತ ಉಪಕರಣಗಳನ್ನು ಶೋಧಿಸಿ ಸರಕಾರದಲ್ಲಿ ರಿಜಿಸ್ಟರಮಾಡಿದ್ದಾರೆ. ಹಲ್ಲಿನ ಎಡೆಗಳಲ್ಲಿ ಸಿಕ್ಕಿಕೊಂಡಿರುವ ಆಹಾರ ಪದಾರ್ಥಗಳನ್ನು ಊದಿ ತೆಗೆಯುವ [illegible] ಇದಲಿಕ್ಕಾಗುವ ರಬ್ಬರಿನ [illegible] ಮೇಜು ಇತ್ಯಾದಿ ಸಾಹಿತ್ಯಗಳು [illegible] ಸಮಯದಲ್ಲಿ [illegible] ದನದ ಹಾಲು ಕುಡಿದು ಗೌಳಿಗನಿಗೆ ನಷ್ಟಮಾಡುವಂತೆ [illegible] ಬಾಯಿಕೊಟ್ಟಾಗ, ಕೆಚ್ಚಲನ್ನು [illegible] ಸಾಧನ, ಕಳ್ಳನು [illegible] ವಿದ್ಯುಚ್ಛಕ್ತಿಯನ್ನು ಹೊರಡಿಸಿ ಅವನನ್ನು ಎಚ್ಚರಿಸಿ ತಪ್ಪಿಸುವ ಮತ್ತು ಭಯಸೂಚಕ ಗಂಟೆ ಬಾರಿಸಿ ಪೊಲೀಸ್ ರೇಡಿಯೋ ವರ್ತಮಾನ ಕಳುಹಿಸುವ ಹಣದ ಚೀಲ, ಇವುಗಳು ಆ ಶೋಧಗಳಲ್ಲಿ ಮುಖ್ಯವಾಗಿವೆ.

ಜಾಹೀರಾತುಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು
ಪ್ರತಿಫಲಬರುವಂತೆ ಸಾಧಿಸುವುದು

ಜಗತ್ತಿನ ರಾಷ್ಟ್ರಗಳಿಗೆ ಜಪಾನಿನ ಎಚ್ಚರಿಕೆ

ಚೀನದ ಪುನರುದ್ಧಾರವಾಗುವುದು ಖಂಡಿತ

ಶ್ರೀಮತಿ ಚಿಯಾಂಗ್‌ಕೈಶೇಕರ ವಿಶ್ವಾಸ

ಮೊದಲಿನಂತೆ ಇನ್ನೂ ಇನ್ನೂ ಜಗತ್ತಿನ ರಾಷ್ಟ್ರಗಳು ಚೀನಕ್ಕೆ ಜಪಾನಿನ ವಿರುದ್ಧ ಸಹಾಯ ಪ್ರೋತ್ಸಾಹಗಳನ್ನು ಕೊಡುವುದಾದರೆ ತಾವು ಪ್ರತಿಕಾರ ಉಪಾಯಗಳನ್ನು ಕೈಕೊಳ್ಳಬೇಕಾಗುವುದೆಂದು ಜಪಾನಿನ ಯುದ್ಧಮಂತ್ರಿ ಜನರಲ್ ಇಟಾಗಾಕಿಯವರು ಟೋಕಿಯೊದಲ್ಲಿ ಹೇಳಿದರು. ಚೀನ ಜಪಾನ ಸಂಗ್ರಾಮದಲ್ಲಿ ಹೊರಗಿನ ರಾಷ್ಟ್ರಗಳ ಹಿತಾಸಕ್ತಿಗಳಿಗೆ ಭಂಗಬಾರದ ರೀತಿಯಲ್ಲಿ ಜಪಾನಿ ಸೈನ್ಯವು ವರ್ತಿಸಿರುವುದಾದರೂ, ಆ ಉಪಕಾರವನ್ನು ಮರೆತು ಈ ರಾಷ್ಟ್ರಗಳು ಚೀನಕ್ಕೆ ಸಹಾಯಮಾಡುತ್ತಾ ಇವೆ. ಈ ರಾಷ್ಟ್ರಗಳು ಪರಿಸ್ಥಿತಿಯ ಪರ್ಯಾಲೋಚನೆ ಮಾಡಬೇಕಾದ ದಿನಗಳು ಬಂದಿವೆ. ಹೊರ ರಾಷ್ಟ್ರಗಳೊಂದಿಗೆ ದ್ವೇಶಸಾಧಿಸುವ ಇಚ್ಛೆ ಜಪಾನಿಗೆ ಇರುವುದಿಲ್ಲ. ಆದರೂ ಕೂಡ ಆ ರಾಷ್ಟ್ರಗಳು ಜಪಾನಿಗೆ ಮಾಡುವ ಈ ಅನ್ಯಾಯವನ್ನು ಜಪಾನು ಹೆಚ್ಚು ದಿನ ತಾಳಲಾರದು. ಜಪಾನಿನ ರಾಷ್ಟ್ರೀಯ ಆಸೆಗಳನ್ನು ವಿರೋಧಿಸುವ ರಾಷ್ಟ್ರಗಳೊಂದಿಗೆ ಅದು ವಿರೋಧವನ್ನು ತೋರಿಸಬೇಕಾಗುವುದು ಎಂದು ಯುದ್ಧ ಮಂತ್ರಿಗಳು ಅಂದರು.

ಚೀನದ ಪುನರುದ್ಧಾರ

ಚೀನದ ಪತನವಾಯಿತೆಂದು ಭಾವಿಸುವ ಅನೇಕ ಮಂದಿ ಇದ್ದಾರೆ. ಆದರೆ ಅವರು ಇತಿಹಾಸದ ಅಧ್ಯಯನ ಮಾಡಿದವರು ಅಲ್ಲವೆನ್ನಬಹುದು. ಚೀನದ ಇತಿಹಾಸವು ಅದ್ಭುತವಾದ್ದು. ಚೀನ ಜಪಾನ ಸಂಗ್ರಾಮಕ್ಕಿಂತಲೂ ಭಯಂಕರವಾದ ಆಪತ್ತುಗಳಿಗೆ ಎದೆಕೊಟ್ಟು ಚೀನವು ಸಾವಿರಾರು ವರ್ಷಗಳಿಂದ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿದೆ. ಅದನ್ನು [illegible] ಚೀನದ ಶಕ್ತಿಯು ಈಗಲಾದರೂ ನಷ್ಟವಾಗಿರುವುದಿಲ್ಲ ಎಂದು ಶ್ರೀಮತಿ ಚಾಂಗ ಕೇ ಶೇಕರು ಚಾಯ್ನೀಸ ವೀಕ್ಲಿ ರಿವ್ಯೂದಲ್ಲಿ ಬರೆದಿದ್ದಾರೆ.

ಬದುಕಿ ಉಳಿಯುವುದಕ್ಕಾಗಿ [illegible] ಜಪಾನಿನ ಎದುರು [illegible] ಗಳಿಂದು [illegible] ಗಟ್ಟಲೆ [illegible] ಒಡೆಯ [illegible] ಸಂಯುಕ್ತ [illegible] ದಲ್ಲಿ ಅವರ ಚೀನದ ಬಿಟ್ಟು [illegible] ಪತ್ರಗಳ [illegible] ಅವರು ತಮ್ಮ [illegible]

ಚೀನ ಜಪಾನ ಸಂಗ್ರಾಮದಿಂದ ಚೀನದ [illegible] ಯ ಕಡೆಗೆ [illegible] ಕೊಡದವರಾದರೆ ಅವರ ಭವಿಷ್ಯವು ಅಂಧಕಾರಮಯವಾಗಿದೆ ಎಂದು ತಿಳಿಕೊಳ್ಳದೆ ಇರಲಾರರು. ಬಿದ್ದಲ್ಲಿಂದ ಎದ್ದು ಬರುವುದೇ ಚೀನದ ವೈಶಿಷ್ಟ್ಯ.

ಚೀನದ ಅನುಪಮ ಶಕ್ತಿ

ಚೀನವು ಹೊರಗಿನ ಆಕ್ರಮಣಕಾರರನ್ನು ಅನಿಶ್ಚಿತಕಾಲದ ತನಕ ವಿರೋಧಿಸಲಿಕ್ಕೆ ಪೂರ್ಣ ಸಮರ್ಥವಾಗಿರುವುದು. ಚೀನದ ಅಧಿನಾಯಕರಾದ ಚಾಂಗ ಕೇ ಶೇಕರು ಅಜೇಯರಾಗಿರುವರು ಎಂದು ಬ್ರಿಗೆಡಿಯರ್ ಜನರಲ್ ಚಾರ್ಲ್ಸ ಮೂಡ್ರೋಫ ಎಂಬ ಬ್ರಿಟಿಷ ಸೇನಾನಿಗಳು ತಮ್ಮ ಅನುಭವವನ್ನು ಹೇಳಿದ್ದಾರೆ. ಚೀನದಲ್ಲಿ ನವಜೀವನವು ಆರಂಭವಾಗಿರುವುದೆಂದೂ, ಕಾಲವು ಕಳೆದಂತೆ ಅದರ ಶಕ್ತಿಸಾಮರ್ಥ್ಯಗಳು ಬೆಳೆಯುತ್ತವೆ ಎಂದೂ, ಚಾಂಗ ಕೇ ಶೇಕರಂಥ ಸೇನಾನಿಗಳು ಮತ್ತು ರಾಜನೀತಿಜ್ಞರು ಅಪರೂಪರೆಂದೂ ಅವರ ಕೈಯಲ್ಲಿ ಚೀನದ ಸೌಭಾಗ್ಯವು ಸುರಕ್ಷಿತವಾಗಿರುವುದೆಂದೂ ಅವರಂದರು.

ಚಂಕಿಂಗಿನಲ್ಲಿ ಜಪಾನರ ಅತ್ಯಾಚಾರ

ಚಂಕಿಂಗಿನಲ್ಲಿ ಜಪಾನಿಯರ ೨೧ ಯುದ್ಧ ವಿಮಾನಗಳು ಹಾರಿ ಬಾಂಬುಗಳನ್ನು ಚೆಲ್ಲಿದ್ದುವು. ಚೀನಿಯರು ಮೂರು ವಿಮಾನಗಳನ್ನು ಕೆಳಗಿಳಿಸಲಿಕ್ಕೆ ಸಮರ್ಥರಾದರು. ಬಾಂಬುಗಳು ಸಿಡಿದು ದೊಡ್ಡ ದೊಡ್ಡ ಬೆಂಕಿಗಳೆದ್ದಿವೆ. ಚೀನಿಯರಿಗೆ ಅಪಾರ ನಷ್ಟವುಂಟಾಗಿರುವುದ [illegible] ಕೆಂಟನಿನಲ್ಲಿ ಜಪಾನು ಮಾರ್ಶಲಲಾವನ್ನು ಜಾರಿಗೆ ತಂದಿದೆ.

ಮೊದಲಿಗಿಂತಲೂ ರಕ್ತದ ಒತ್ತಾಟವು ಕಡಿಮೆ ಯಾಯಿತು!

ಕ್ರುಶನ್ ಲವಣವನ್ನು ಸೇವಿಸಿದವರ ಅನುಭವ

ಅವನ ಎಲ್ಲಾ ರೋಗಗಳೂ ಮಾಯವಾದುವು!

ಅಧಿಕವಾದ ರಕ್ತದ ಒತ್ತಾಟವನ್ನು ಈಗಲೆ ಕಡಿಮೆ ಮಾಡಬೇಕು ಎಂದು ಡಾಕ್ಟರರು ಒಪ್ಪುತ್ತಾರೆ. ತಲೆನೋವು ಮತ್ತು ಆಲಸ್ಯವೇ ಇದರ ಪ್ರಾರಂಭದ ಲಕ್ಷಣಗಳು. ಇದು [illegible] ಭಯಂಕರ ರೋಗದ ಪ್ರಕೃತಿ ಲಕ್ಷಣ. ಈ ಕೆಳಗಿನ ರಕ್ತದ ಒತ್ತಾಟದ ಒಂದು ಸ್ವಾರಸ್ಯವಾದ ಲೇಖನವನ್ನು ಓದಿರಿ.

'ನಾನು ವರ್ಷಗಟ್ಟಲೆ ಬಹಳ [illegible] ರಕ್ತದ ಒತ್ತಾಟದಿಂದ [illegible] ನರಳುತ್ತಿದ್ದೆ. ನಾನು ಎಲ್ಲಾ ತರದ ಮದ್ದುಗಳನ್ನು ಉಪಯೋಗಿಸಿದೆ. ಅದರಿಂದ ತಾತ್ಕಾಲಿಕ ಗುಣ ಮಾತ್ರ ದೊರೆಯುತ್ತಿತ್ತು. ಆದರೆ ಎರಡು ಡೋಸುಗಳಲ್ಲಿಯೇ ಕ್ರುಶನ್ ಲವಣವು ನನ್ನನ್ನು ಗುಣಪಡಿಸಿತು. ನನಗೆ ಇದು ಸ್ಫೂರ್ತಿಯನ್ನುಂಟುಮಾಡಿತು. ಉತ್ತೇಜನಗೊಳಿಸಿತು. ಪ್ರತಿನಿತ್ಯ [illegible] ಕ್ರುಶನ್ [illegible] ಸೇವಿಸುವುದರಿಂದ ನನಗೆ ಈಗ ಮೊದಲಿದ್ದ ಆಲಸ್ಯತನ, ತಲೆನೋವು, ತಲೆಭಾರ, ಹೃದ್ರೋಗ ಮುಂತಾದ ಯಾವ ಬಾಧೆಯೂ ಕಂಡು ಬರುವುದಿಲ್ಲ.'

ಎಫ್. ಬಿ.

ಜನತೆಗೆ ಬಾಧೆಯುಂಟುಮಾಡುವ ಎಲ್ಲಾ ರೋಗಗಳು ಉದರದೊಳಗಿನ ವಿಷಪದಾರ್ಥಗಳಿಂದ ಉಂಟಾಗುವುವು. ದೇಹದ ಒಳಭಾಗವನ್ನು ಶುದ್ಧಗೊಳಿಸದಿದ್ದರೆ ರಕ್ತದಲ್ಲಿ ವಿಷಕಾರಿ ಪದಾರ್ಥವು ಹೋಗಿ ಅಧಿಕವಾದ ರಕ್ತದ ಒತ್ತಾಟವುಂಟಾಗುವುದು. ಇದರಿಂದ [illegible] ಅಂಗಾಂಗಗಳು ಬಾಧೆಗೊಳಗಾಗುವುವು. ಹೃದಯವೂ ಕೂಡ ರಕ್ತ ಚಲಾವಣೆಗೆ ಅಧಿಕ ಶ್ರಮದಿಂದ ಕೆಲಸಮಾಡಬೇಕಾಗುವುದು. ಇದೆಲ್ಲವೂ ಭಯಂಕರವಾದ ಅಧಿಕ ರಕ್ತದ ಒತ್ತಾಟದ [illegible]

ಕ್ರುಶನ್ ಲವಣವು ಪ್ರಕೃತಿಯ ಆರು ಲವಣಗಳ ಒಂದು ಕೂಡಿಕೆಯಾಗಿದ್ದು ಅಂಗಾಂಗಗಳನ್ನು ಆರೋಗ್ಯಸ್ಥಿತಿಯಲ್ಲಿರಿಸುತ್ತದೆ. ಕಲ್ಮಷದ ಭಾಗವನ್ನು ದೇಹದಿಂದ ಹೊರಗೆ ಹಾಕಿ ರಕ್ತವನ್ನು ಶುದ್ಧವಿರಿಸುತ್ತದೆ.

ಕ್ರುಶನ್ ಲವಣವು ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

No 91

Now! NACET SLOTTED BLADES

ಎಲ್ಲರ ಮನ್ನಣೆಗೆ ಪಾತ್ರವಾದ ನೆಸೆಟ್ ಬ್ಲೇಡುಗಳ ಚೊಕ್ಕಟವಾದ ಕ್ಷೌರದ ಸಂಪ್ರದಾಯವನ್ನು ಮುಂದರಿಸಲು ಈ ಹೊಸದಾದ ನೆಸೆಟ್ ಡಿ ಲಕ್ಸ್ ಬ್ಲೇಡುಗಳನ್ನು ಹೊರಡಿಸಿದ್ದೇವೆ. ಆದರೆ ಈ ಬಾರಿ ಅಧಿಕ ಉತ್ತಮತರದ್ದಾಗಿದೆ—

ಹೊಸ ಬ್ಲೇಡುಗಳು ಸೀಳಾಗಿವೆ. ಒಂದು ಬಾರಿ ಪರೀಕ್ಷಿಸಿದಲ್ಲಿ ಅದರ ಸ್ವಲ್ಪ ಹೆಚ್ಚಿಸಿದ ಬೆಲೆಯ ಗುಣವನ್ನು ಕಂಡು ಸಮಾಧಾನವಾದೀತು. ಅದು ಅಲ್ಲದೆ ಇದು ಹೊಸ ಯಾ ಹಳೆಯ ರೇಜರುಗಳಿಗೆ ಒಗ್ಗುವ ತರದ್ದಾಗಿರುತ್ತದೆ.

10 ಬ್ಲೇಡುಗಳಿಗೆ ಆಣೆ 8

ಹೈದ್ರಾಬಾದ ಆರ್ಯ ಸತ್ಯಾಗ್ರಹದಲ್ಲಿ ಅಪೂರ್ವ ಉತ್ಸಾಹ ಮತ್ತು ತ್ಯಾಗಪ್ರದರ್ಶನ

ಆರ್ಯನ ಲೀಗ್ ಕೌನ್ಸಿಲಿನ ಸಭೆ-

--ಡಾಕ್ಟರ ಮುಂಜೆಯವರ ಭಾಷಣ

ಖಿಷ್ಠಿಯದ ಲಕ್ಷಾಧಿಪತಿಗಳಾದ ಸಾಹುಕಾರ ಲಾಲ ರಾಮಚಂದ್ರ ಎಂಬವರು ಖಿಷ್ಠಿಯಿಂದ ಹೈದರಾಬಾದಿಗೆ ಸತ್ಯಾಗ್ರಹಿಗಳಾಗಿ ಹೋಗುವ ಧರ್ಮವೀರರ ಎಲ್ಲ ಖರ್ಚುಗಳನ್ನು ತಾನು ಕೊಡುವುದಾಗಿ ಘೋಷಣಮಾಡಿದ್ದಾರೆ ಅಲ್ಲಿಂದ ಒಂದ ಸ್ವಯಂಸೇವಕ ದಳವು ಶೋಲಾಪುರಕ್ಕೆ ಹೊರಟಿದೆ ಅದರಲ್ಲಿ ಒಬ್ಬ ಮುಸಲ್ಮಾನನೂ ಸೇರಿರುವನು ಧರೊಂಥದ ವಾರ್ಷಿಕೋತ್ಸವ ಕಾಲದಲ್ಲಿ ಬಂದಿದ್ದ ಎಲ್ಲ ಮಹಿಳೆಯರು ಹೈದರಾಬಾದ ಸತ್ಯಾಗ್ರಹಕ್ಕಾಗಿ ಒಂದೊಂದು ಮನೆಯಿಂದ ಎರಡೆರಡು ರೂಪಾಯಿಗಳನ್ನು ಕೊಡಿಸುವುದಾಗಿ ಪ್ರತಿಜ್ಞಾಬದ್ಧರಾಗಿರುವರು. ಲೋಹಗಡದ ಸ್ತ್ರೀಯರು-ಹೈದರಾಬಾದ ಸತ್ಯಾಗ್ರಹವು ನಿಲ್ಲುವ ತನಕ ರೇಶ್ಮೆ ವಸ್ತ್ರಗಳನ್ನು ಉಟ್ಟುಕೊಳ್ಳುವುದಿಲ್ಲವೆಂದೂ, ಅದರ ಉಳಿಕೆ ಹಣವನ್ನು ಸತ್ಯಾಗ್ರಹ ನಿಧಿಗೆ ಕೊಡುವುದಾಗಿಯೂ ಪ್ರತಿಜ್ಞೆ ತೆಗೆದುಕೊಂಡಿದ್ದಾರೆ ನಡುಕಾಲದಲ್ಲಿ ವಿವಾಹವಾಗುವದಿದ್ದರೂ ಅದನ್ನು ಮುಂದರಿಸಿಟ್ಟು ಒಬ್ಬ ಸತ್ಯಾಗ್ರಹಿಯೂ, ತನ್ನ ನೌಕರಿಗೆ ತಿಲಾಂಜಲಿಕೊಟ್ಟು ಇನ್ನೊಬ್ಬನೂ ಫಿರೋಜಪುರದಿಂದ ಹೈದರಾಬಾದಿಗೆ ಹೊರಟಿರುವರು ಜಲಂಧರದ ಮಹಾಶಯ ಲಾಲ ಚಂದ ಎಂಬವರು ತನ್ನನ್ನೇ ಆಶ್ರಯಿಸಿಕೊಂಡಿದ್ದ ಹೆಂಡತಿಮಕ್ಕಳ ಜೀವನದ ಭಾರವನ್ನು ಪರಮಾತ್ಮನ ಮೇಲೆ ಬಿಟ್ಟು ಮನೆಮಠದೊಡನೆ ತಿಲಾಂಜಲಿಕೊಟ್ಟು ಹೈದರಾಬಾದ ಯುದ್ಧಕ್ಕೆ ಹೊರಟಿದ್ದಾರೆ ಹಿಸ್ಸಾರದ ವೇದಪ್ರಕಾಶರನ್ನು ಹೈದರಾಬಾದಿಗೆ ಬೀಳ್ಕೊಡುತ್ತಾ, ಅವರ ವೃದ್ಧ ಮಾತೆಯು -ಅಗತ್ಯಬಿದ್ದರೆ ನನ್ನ ಇನ್ನೊಬ್ಬ ಮಗನನ್ನು ಕಳುಹಿಸಿಕೊಡುವೆನೆಂದು ಹೇಳಿದ[illegible] ಮೌಜ[illegible]ದೀಲಪೂರಾಯಾದ ಒಬ್ಬ ಬಡ [illegible] ಗನ ಕಾಡಿಗೆ ಹೋಗಿ ಸ್ವಲ್ಪ ಜೇನನ್ನ ಸಂಗ್ರಹಿಸಿ ತಂದು- ನಾನು ಅತ್ಯ [illegible] ಮನೆಯಲ್ಲಿ [illegible] ಏನೂ ಇಲ್ಲ [illegible] [illegible] ಮಾರಿದಾಗ ಕೆಲವು ಆದನ್ನು [illegible] ರೂಪಾಯಿಗಳಿಗೆ ಕೊಂಡ [illegible] ಹಣವು ಸತ್ಯಾಗ್ರಹ ನಿಧಿಗೆ ಕಳುಹಿಸಲ್ಪಟ್ಟಿದೆ [illegible] [illegible] ಹೈದರಾಬಾದ ಸತ್ಯಾಗ್ರಹದ [illegible] ಸಮ್ಮಿಲಿತರಾಗಲು ಇಚ್ಛಿಸಿರುವುದ [illegible] ಲ್ಲಿ [illegible] ವ ಗನನ್ನು ಕೂಡಲೇ ಹಿಂದಕ್ಕೆ [illegible] ವಂತೆ ಪತ್ರ ಬರೆದಿದ್ದಾರೆ [illegible] ಧರ್ಮ ಯುದ್ಧದಲ್ಲಿ ಅಪೂರ್ವ ಉತ್ಸಾಹ ಮತ್ತು ತ್ಯಾಗ ಪ್ರದರ್ಶನವು ಕಂಡು ಬಂದಿದೆ

ಆರ್ಯನ ಲೀಗ ಕೌನ್ಸಿಲಿನ ಸಭೆ

ಸ್ವಾಮಿಸ್ವತಂತ್ರನಂದರ ಅಧ್ಯಕ್ಷತೆಯಲ್ಲಿ ಆರ್ಯನ ಲೀಗ ಕೌನ್ಸಿಲಿನ ಒಂದು ಜರೂರಿ ಸಭೆಯು ಕೂಡಿ, ಹೈದರಾಬಾದ ಜೈಲುಗಳಲ್ಲಿ [illegible] ಮಂದಿ ಸತ್ಯಾಗ್ರಹಿ ಕೈದಿಗಳ ಅಕಾಲ ಮರಣವನ್ನ ಹೊಂದಿರುತ್ತಾ, ಅದರ ಕಾರಣ ಇತ್ಯಾದಿಗಳನ್ನು ಜೈಲುಗಳ ಸ್ಥಿತಿಗಳನ್ನು ತಿಳಿಯಲಿಕ್ಕೆ ನಿಷ್ಪಕ್ಷಪಾತ ವಿಚಾರಣಾ ಸಮಿತಿಯ ರಚನೆಯಾಗಬೇಕೆಂದ ನಿರ್ಣಯವಾಯಿತು ಈ ನಿರ್ಣಯದ ಪತ್ರಿಕೆಗಳನ್ನು ಕೌನ್ಸಿಲು, ಮಹಾತ್ಮಗಾಂಧಿಯವರಿಗೂ, ಬಾಬುರಾಜೇಂದ್ರ ಪ್ರಸಾದರಿಗೂ, ವಾಯ್ಸರಾಯರಿಗೂ, ಎಲ್ಲ ಗವರ್ನರರು ಮತ್ತು ಅವರ ಮಂತ್ರಿಮಂಡಲಗಳಿಗೂ ಕಳುಹಿಸಿಕೊಟ್ಟಿದೆ. ಸಾರ್ವಭೌಮ ಸರಕಾರವು ತಾಟಸ್ಥ್ಯವನ್ನು ಬಿಟ್ಟು ಹೈದರಾಬಾದಿನಲಿ ವಿಚಾರಣೆ ನಡೆಸಿ ನ್ಯಾಯದಾನ ಮಾಡಬೇಕೆಂದೂ ವಿನಂತಿಸಿ ನಿರ್ಣಯವಾಯಿತು ಒರುವ ಮೇ [illegible] ನವನ್ನು ಅಖಿಲ ಭಾರತ ಹೈದರಾಬಾದ ಧರ್ಮವೀರರ ದಿನವೆಂದು ಆಚರಿಸಬೇಕಾಗಿಯೂ ಸಭೆಯಲ್ಲಿ ಠರಾವಾಯಿತು.

ಕೈದು-- ಶಿಕ್ಷೆಗಳು

ಡಾಕ್ಟರ ಮುಂಜೆಗಳ ಭಾಷಣ

ಹೈದರಾಬಾದ ಸತ್ಯಾಗ್ರಹಕ್ಕೆ ಬೆಂಬಲವನ್ನು ಕೊಡುವುದಕ್ಕೋಸ್ಕರ ನಾಗಪುರದಲ್ಲಿ ಹಿಂದುಗಳ ಪ್ರಚಂಡ ಸಭೆಯು ಕೂಡಿತ್ತು ಅದರಲ್ಲಿ ಡಾಕ್ಟರ ಬಿ ಎಸ್, ಮುಂಜೆಯವರು ಭಾಷಣ ಕೊಡುತ್ತಾ ಹೈದರಾಬಾದದಲ್ಲಿ ಹಿಂದುಗಳ ಆಂದೋಲನವು ಸಾಂಪ್ರದಾಯಿಕವಲ್ಲವೆಂದೂ, ಅಲ್ಲಿ ಮುಸಲ್ಮಾನರಿಗೆ ಎಷ್ಟು ಹಕ್ಕು ಅಧಿಕಾರ ನಾಗರಿಕ ಸ್ವಾತಂತ್ರ್ಯಗಳಿವೆಯೋ ಅಷ್ಟು ಇತರ ಜಾತಿಮತದವರಿಗೂ ಪ್ರಾಪ್ತವಾಗಿರಬೇಕೆಂಬುದು ಸತ್ಯಾಗ್ರಹದ ಉದ್ದೇಶವೆಂದೂ ಹೇಳಿ, ಈ ಆಂದೋಲನವನ್ನು ಖಂಡಿಸಿ ಶೋಲಾಪುರ ಮುಸ್ಲಿಂ ಲೀಗ ಪರಿಷತ್ತಿನಲ್ಲಿ ಮಾತನಾಡಿದ ಸರ್ ಸಿಕಂದರ ಹಯಾತ ಖಾನರನ್ನು ಟೀಕಿಸಿ, ಹೈದರಾಬಾದಿನಲ್ಲಿ ಹಿಂದುಗಳ ಆಂದೋಲನವೂ ಅನ್ಯಾಯಪೂರ್ಣವೆಂದಾದರೆ ಕಾಶ್ಮೀರದಲ್ಲಿ ಮುಸಲ್ಮಾನರ ಆಂದೋಲನವು ಅನ್ಯಾಯಪೂರ್ಣವಾಗಿರುವುದ ಇದು ಸರ್ ಸಿಕಂದರರಂಥ ಜಾಣನಾದಿಗಳಿಗೆ ಗೊತ್ತಾಗದಿದ್ದರೂ ಇತರರಿಗೆ ತಿಳಿಯುತ್ತದೆ ಎಂದರು

ಕೈದು ಶಿಕ್ಷೆಗಳು

ದಿನನಿತ್ಯವೆಂಬಂತೆ ಶೋಲಾಪುರದಿಂದಲೂ ಇತರ ಸತ್ಯಾಗ್ರಹ ಶಿಬಿರಗಳಿಂದಲೂ ನೂರಾರು ಸತ್ಯಾಗ್ರಹಿಗಳು ತಂಡ ಕಟ್ಟಿ ಹೈದರಾಬಾದದ ಬೇರೆ ಬೇರೆ ಕೇಂದ್ರಗಳಲ್ಲಿ ಸತ್ಯಾಗ್ರಹಮಾಡುವ ಕ್ರಮವು ನಡೆದೇ ಇದೆ ಕೈದುಗಳೂ ಶಿಕ್ಷೆಗಳೂ ಆಗುವುದು ನಿಂತಿಲ್ಲ ಹೇಗೆ ಹೇಗೆ ಸರಕಾರದ ದಬ್ಬಾಳಿಕೆಯು ಹೆಚ್ಚುತ್ತದೋ ಹಾಗೆ ಹಾಗೆ ಸತ್ಯಾಗ್ರಹ ಆಂದೋಲನವು ಜೋರಿನಿಂದ ನಡೆಯುವುದು ಕಂಡುಬರುತ್ತದೆ ಮೇ ೨ರ ತನಕ ಈ ತಿಂಗಳಲ್ಲಿ ೧೫೦೦ ಮಂದಿ ಸತ್ಯಾಗ್ರಹಿಗಳು ಕೈದಾಗಿದ್ದಾರೆ ೫೦೦೦ ಮಂದಿಯನ್ನು ಈ ತಿಂಗಳಲ್ಲಿ ಸತ್ಯಾಗ್ರಹಕ್ಕೆ ಕಳುಹಿಸಬೇಕೆಂದು ಸಮಿತಿಯು ನಿರ್ಧರಿಸಿದೆ ಇವರ ಪೈಕಿ ೧೦೦೦ ಮಂದಿ ಹೈದರಾಬಾದದವರೇ ಆಗಿರುವರು

A FEW WORDS ABOUT MOSQUITOS

There are mosquitos and mosquitos. There are tiny ones that have a preference for flying into the eyes of innocent cyclists and dying there; there are large ones that after a scorching day annoy town dwellers and peasants who are taking a breath of fresh air on balconies outside cafes or in front of their cottages; there are also species of mosquitos that whirl about in millions and make positive clouds and render main roads useless, because motor car radiators become choked and screen wipers are unable to remove such quantities of insects.

Dutchmen in their water logged country can tell about mosquitos. Nevertheless speaking generally they are very lucky [illegible] the exception of certain districts there are no mosquitos in this country whose bites have [illegible] consequences.

[illegible] are bitten by [illegible] mosquito [illegible] tropical regions there is every possibility that you will be [illegible] to your bed shortly afterwards with [illegible] fever. This is caused by the malaria [illegible] (anopheles). It [illegible] the advice of the Malaria Commission [illegible] League of Nations [illegible] recommends [illegible] malaria [illegible] daily dose of 10 to 20 grains of quinine [illegible] taken [illegible] This kind of mosquito frequently occurs in hot countries and [illegible] national calamities [illegible] the last epidemic in Ceylon.

Naturally steps can be taken to protect oneself by preventing the mosquitos from penetrating into houses and by sleeping under a mosquito net, but this is not sufficient. Quinine must also be taken [illegible] neutralise the effect produced by the bite of the anopheles. According to the above said Malaria Commission a daily dose of 6 grains of quinine throughout the [illegible] season is the right quantity for preventing malaria. Thus quinine is an absolutely indispensable remedy in the tropics.

But in other countries quinine is equally indispensable.

It seems in fact that this product wards off influenza, colds and influenza and that 3 grains per day [illegible] an excellent preventive remedy against these maladies.

Many well known scientists such as Professor Spitta, Professor Berger and Professor Laubenheimer have proved experimentally that influenza can be warded off by taking small doses of quinine every day during the cold season.

M Eng. 59

ಸರದಾರ ಪಟೇಲರ ವೃಂದಾವನ ಭಾಷಣ

[ಒಳೇ ಪುಟದಿಂದ ಮುಂದುವರಿದುದು]

ಗಳಲ್ಲಿ ಸ್ಫೂರ್ತಿ ಉತ್ಸಾಹಗಳ ಅಭಾವವಿರುವು ದರಿಂದಲೂ, ಈ ಎಲ್ಲ ಕುಂದುಕೊರತೆ ಲೋಪ ದೋಷಗಳನ್ನು ನಿವಾರಿಸಿ ಕಾಂಗ್ರೆಸಿನೊಳಗೆ ಸ್ಫೂರ್ತಿ ಉತ್ಸಾಹಗಳನ್ನು ತುಂಬಿಸುವುದಕ್ಕೋಸ್ಕರ ಫಾರ್ವರ್ಡ್ ಬ್ಲೋಕ್ ಕೆಲಸ ಮಾಡುವುದೆಂದು ಹೇಳಿ, ಅಖಿಲ ಭಾರತ ಸ್ವಯಂಸೇವಕ ದಳವೊಂದನ್ನು ನಿರ್ಮಿಸಿ ಕಾಂಗ್ರೆಸ್ ವಿರೋಧಿ ಸಂಸ್ಥೆಗಳನ್ನು ಮುರಿಯಬೇಕೆಂದೂ ದೇಶೀಸಂಸ್ಥಾನ ಪ್ರಜೆಗಳಿಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸೀದಾ ಬೆಂಬಲವು ಇರಬೇಕೆಂದೂ ಬ್ರಿಟಿಶಾಹೀ ತತ್ವ ವಿರುದ್ಧ ಎಲ್ಲ ಸಂಸ್ಥೆಗಳು ಫಾರ್ವರ್ಡ್ ಬ್ಲೋಕಿನಲ್ಲಿ ಸೇರಲೆಡೆಯಾದೆಯೆಂದೂ, ಫೆಡರೇಶನನ್ನು ವಿರೋಧಿಸಲಿಕ್ಕೆ ಸತ್ಯಾಗ್ರಹವನ್ನು ಕೂಡ ಆರಂಭಿಸುವ ಉಗ್ರ ಕಾರ್ಯಕ್ರಮವು ಬೇಕೆಂದೂ ಅವರು ತಮ್ಮ ಅಭಿಪ್ರಾಯಗಳನ್ನು ಕೊಟ್ಟರು.

ನುಡಿಯಂತೆ ನಡೆ

ಪರಂತು ರಾಷ್ಟ್ರಪತಿಯು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಡುತಿದ್ದಾಗಲೇ ಶ್ರೀ. ಸುಭಾಸರು—'ನಾನು ರಾಷ್ಟ್ರಪತಿಯಾಗಿಲ್ಲದ ಮಾತ್ರಕ್ಕೆ ಏನಾಯಿತು? ನನ್ನ ಸೇವೆಯು ಕಾಂಗ್ರೆಸ್ಸಿಗಾಗಿಯೇ ಇರುವುದು. ಭಾರತೀಯ ರಾಜಕೀಯ ಸ್ವಾತಂತ್ರ್ಯ ಮತ್ತು ಆರ್ಥಿಕ ಉನ್ನತಿಯ ಆಂದೋಲನದಲ್ಲಿ ಒಬ್ಬ ಸಾಮಾನ್ಯ ಸೇವಕನಂತೆ ಕೆಲಸ ಮಾಡಲಿಕ್ಕೆ ಬೇಕಾದಷ್ಟು ದೇಶಾಭಿಮಾನ ಮತ್ತು ಶಿಸ್ತು ನನ್ನಲ್ಲಿದೆ' ಎಂದು ಹೇಳಿದ್ದರು. ಅವರು ಹೀಗೆ ಹೇಳಹೇಳುತ್ತಿದ್ದ ಹಾಗೆಯೇ ಕಾಂಗ್ರೆಸಿನೊಳಗೊಂದು ತಮ್ಮದೊಂದು ಪಾಳೆಯವನ್ನು ಬೇರೆ ಮಾಡಿಕೊಂಡಿದ್ದಾರೆ. ಇದು ಪಾಳೆಯದೊಳಗಿನ ಬಿಕ್ಕಟ್ಟು ಎಂಬುದನ್ನು ಶ್ರೀ. ಸುಭಾಸರೂ ಒಪ್ಪಿದ್ದಾರೆ. ಇವತ್ತು ಅಲ್ಲವಾದರೆ ನಾಳೆ ಕಾಂಗ್ರೆಸಿನೊಳಗೆ ಬಿಕ್ಕಟ್ಟು ಉಂಟಾಗಲೇ ಬೇಕೆಂದು ಅವರು ಹೇಳುತ್ತಾರೆ. ಕಾಂಗ್ರೆಸಿನ ಮೇಲಧಿಕಾರಿಗಳು ತಮ್ಮ ವಿರೋಧಿಗಳಿಗೆ ಬಹಳ ನಿಷ್ಠುರರಾಗಿದ್ದಾರೆಂದು ಶ್ರೀ. ಸುಭಾಸರು ಅವರ ಮೇಲೆ ದೋಷಾರೋಪಣ ಮಾಡುತ್ತಾರೆ. ಪರಂತು ಕಾಂಗ್ರೆಸಿನೊಳಗೆ ಬಿಕ್ಕಟ್ಟು ಆಗಿಯೇ ಆಗುವುದೆಂದು ಯಾಕೆ ಭಾವಿಸಬೇಕು? ವಿಚಾರಿಗಳಿಗೆ ಶ್ರೀ. ಸುಭಾಸರ ಮಾತಿನ ಅರ್ಥವಾಗುವುದಿಲ್ಲ. ಕಾಂಗ್ರೆಸಿನ ಶಿಸ್ತು ವ್ಯವಸ್ಥೆಗಳಿಗೆ ಭಂಗಬರುವ ಹಾಗೆ ನಡೆಯುವ ಕಾಂಗ್ರೆಸಿನೊಳಗಿನ ಬಹುರೂಪಿ ಸಾಧುಗಳೊಡನೆ ಕಾಂಗ್ರೆಸಿನ ಮೇಲಧಿಕಾರಿಗಳು ನಿಷ್ಠುರರಾಗಿ ಅವರ ಮೇಲೆ ಶಿಸ್ತಿನ ಕಾರ್ಯಕ್ರಮ ನಡೆಸಿರುವುದು ನಿಜ, ಪರಂತು, ಕಾಂಗ್ರೆಸಿನೊಳಗೆ ಬಿಕ್ಕಟ್ಟು ಉಂಟಾಗದಂತೆ ಹೀಗೆ ಮಾಡುವುದು ಅಗತ್ಯವಾಗಿದೆ. ಶ್ರೀ. ಸುಭಾಸರ ಮಾತುಗಳಿಂದ ಇಷ್ಟೇ ಅರ್ಥ ಮಾಡಿಕೊಳ್ಳಬಹುದು—'ಮನುಷ್ಯನು ಇವತ್ತು ಅಲ್ಲವಾದರೆ ನಾಳೆ ಸಾಯಲೇ ಬೇಕು. ಆದ್ದರಿಂದ ಇವತ್ತೇ ಸಾಯಲಿ!' ಮುಂದೆಂದೋ ಕಾಂಗ್ರೆಸಿನೊಳಗೆ ತಂಡವಿತಂಡಗಳಾಗುವುದು ನಿಶ್ಚಯವೆಂದು ಭಾವಿಸಿ ಅವರು ಈಗಲೇ ಕಾಂಗ್ರೆಸಿನೊಳಗೆ ತಂಡ ವಿತಂಡಗಳನ್ನು ಮಾಡಲಿಕ್ಕೆ ಪ್ರಯತ್ನಪಟ್ಟಿದ್ದಾರೆ. ಮಹಾತ್ಮಾಜಿಯವರ ಜೀವನ ಸಿದ್ಧಾಂತ ಕಾಂಗ್ರೆಸಿನ ಧ್ಯೇಯಾದರ್ಶಗಳಿಗೆ ಅನುಗುಣವಾಗಿಯೇ ತಾವು ಕೆಲಸ ಮಾಡುವೆವೆಂದು ಶ್ರೀ. ಸುಭಾಸರು ಹೇಳುವರಾದರೂ ಅವರ ಫಾರ್ವರ್ಡ್ ಬ್ಲಾಕಿನ ರಚನೆಯಿಂದ ದೇಶಕ್ಕೂ ಕಾಂಗ್ರೆಸಿಗೂ ಅನಿಷ್ಟವಿದೆಯೆಂದೇ ನಮಗನ್ನಿಸುತ್ತದೆ. ಬೊಂಬಾಯಿ, ಕರಾಚಿ, ನಾಗಪುರ, ಢಿಲ್ಲಿ, ಲಾಹೋರುಗಳಲ್ಲಿ ನಡೆಯುತ್ತಿರುವ ಕಾರ್ಯಗಳಿಂದ ಇದನ್ನು ಸರಿಯಾಗಿ ತಿಳಕೊಳ್ಳಬಹುದು. ಫಾರ್ವರ್ಡ್ ಬ್ಲಾಕಿನ ನುಡಿಯಂತೆ ನಡೆಯುವುದಿಲ್ಲವೆಂಬುದಕ್ಕೆ, ಶ್ರೀ. [illegible]ಸರ ಅನುಯಾಯಿಗಳೆನ್ನಿಸಿಕೊಳ್ಳುವವರ, ಕಾಂಗ್ರೆಸ್ ತತ್ವಕ್ಕೆ ವಿರೋಧವಾದ ಹಿಂಸಾಪರ ಮನೋವೃತ್ತಿಯೂ ಕೆಲಸ ಕಾರ್ಯಗಳು ಸಾಕ್ಷಿಯಾಗಿವೆ.

ಜನತೆಯ ಕರ್ತವ್ಯ

ಜನತೆಯು ಕಾಂಗ್ರೆಸಿನ, ಅದಕ್ಕೂ ಹೆಚ್ಚಾಗಿ ದೇಶದ ಮತ್ತು ತನ್ನ ಹಿತವನ್ನು ಇಚ್ಛಿಸುವುದಾದರೆ, ಸ್ವಾರ್ಥಸಾಧಕರು ಒಡ್ಡುವ ಇಂಥ ಮಾಯಾಜಾಲದಲ್ಲಿ ಎಂದೂ ಸಿಕ್ಕಿ ಬೀಳಬಾರದು. ಇಂದು ದೇಶದ ಹಿತವು ಕೇವಲ ಗಾಂಧಿಜಿಯವರ ಮಾರ್ಗಾನುಸರಣ ಮಾಡುವುದರಿಂದಲೇ ಆಗಲಿಕ್ಕಿದೆ. ಇದನ್ನು ಮಹಾತ್ಮರ ಮೇಲಿನ ಅಂಧಶ್ರದ್ಧೆ, ಗುರುಭಕ್ತಿ ಅಂದರೂ ಚಿಂತೆ ಇಲ್ಲ. ಗಾಂಧಿಯವರೇ ಭಾರತದ ಪ್ರತಿನಿಧಿಯಾಗಿ ಪರಿಣಮಿಸಿರುವುದರಿಂದ, ಅವರ ಕಾರ್ಯಕ್ರಮದಿಂದ ನಮ್ಮ ಕಾರ್ಯಕ್ರಮವು ಭಿನ್ನವಾಗಿರುವುದು ಸಾಧ್ಯವಲ್ಲ. ಆದ್ದರಿಂದ ಅವರ ಸಂಪೂರ್ಣ ಅನುಕರಣವೇ ನಮ್ಮ ಕರ್ತವ್ಯವಾಗಿದೆ.

ಹಳ್ಳಿಯ ಹತ್ತುಸಮಸ್ತರು

[ಒಳೇ ಪುಟದಿಂದ ಮುಂದುವರಿದುದು]

ಕ ವರ್ತಮಾನ ಅಂತಿಯ ಹಾಗೆ ಮೂರುಮೈಲು ಸಂಚರಿಸಿ ನಾಗಯ್ಯ ಸೆಟ್ಟರಿಗೆ ನಿದ್ರೆಮಾಡುವ ಹೊತ್ತಿಗೆ ತಲುಪಿತು.

ಸಂ—ನಾಗಯ್ಯ ಸೆಟ್ಟರಿಗೆ ಮೊದಲಿಂದ ಮೂಸೆ ಬ್ಯಾರಿಗಳ ಮೇಲೆ ಸಿಟ್ಟಿತ್ತು ಎಂದು ಅವರ ಮಾತಿಂದ ತಿಳಿಯುತ್ತದೆ 'ಹೋ .... ಈ ಬ್ಯಾರಿ ನನಗೆ ಅಡ್ಡ ಕಾಲಿಡುತ್ತಾನೆಯೋ ... ಹಾಗಾದರೆ ಕಲಿಸುತ್ತೇನೆ' ಎಂದು ರಾತ್ರಿಯೇ ಹೊರಟು, ಸೀತೈತಾಳರ ಮನೆಗೆ ಹೋಗಿ ಬಾಗಿಲು ಬಡಿದರು. ರಾತ್ರಿ ಬಹಳ ಹೊತ್ತಿನ ತನಕ ಸೀತೈತಾಳರೂ ನಾಗಯ್ಯ ಸೆಟ್ಟರೂ ಗುಜುಗುಜು ಮಾತಾಡಿಕೊಂಡಿದ್ದರು. ಅವರ ಕೈನಾತಿ ಬಚ್ಚನಿಗೂ ಸಹ ನೀನು 'ಚಾವಡಿಯಲ್ಲಿ ಮಲಗಿರು' ಎಂದು ಹುಕುಮಾಗಿತ್ತು. ತನ್ನನ್ನು ಬಿಟ್ಟು ಪಂಚಾಯತಿಯೇನಪ್ಪ ಎಂದು ಬಚ್ಚನಿಗೆ ಆಶ್ಚರ್ಯ.

ಅವರ ಪಂಚಾಯತಿ ಮುಗಿಯುವಾಗ ಬೆಳಗಿನ ಜಾವವಾಗಿತ್ತು. ಅಲ್ಲಿಂದ ನಾಗಯ್ಯನವರು ಹೊರಟು ಹೋದರು. ಎಲ್ಲಿಗೆ ಎಂಬ ವಿಷಯ ಸೀತೈತಾಳರನ್ನು ಬಿಟ್ಟು ಇನ್ಯಾರಿಗೂ ಗೊತ್ತಿಲ್ಲ.

ಕಂಬಳಿ ವ್ಯಾಪಾರಿಯನ್ನು ಕೊಂದು ಇಂದಿಗೆ ನಾಲ್ಕು ದಿವಸ ಕಳೆದಿತ್ತು. ನಾಗಯ್ಯ ಸೆಟ್ಟರಿಂದ ಮುದರನನ್ನು ಬಿಡಿಸಲಿಕ್ಕಾಯಿತೆ' ಎಂಬ ವಿಷಯದಲ್ಲಿ ಚನ್ನಮ್ಮಯ್ಯರು ಬಡಾಯಿ ಹಾರಿಸುತ್ತಿದ್ದರು. ಅದೇ ವಿಷಯವಾಗಿ ಈ ದಿವಸವೂ ಜನ್ನಪ್ಪೆಗಳ ಭಂಡಸಾಲೆ ಎದುರು ಕುಳಿತು ಟಪಿನಿಯಾಗುವಾಗ ಕೊಚ್ಚುತ್ತಿದ್ದರು. ಗಾಣದ ಸಂಕಪ್ಪನು ಸಹ 'ವಿಷಯಯುದ್ಧ ಗಂಡನಾಗಿದ್ದರೆ ಮುದರನನ್ನು ಬಿಡಿಸುತ್ತಿದ್ದರ.' ಎಂದನಂತೆ. ಇಂಥಾ ಪಟ್ಯಾಂಗ ಬಂದರೆ ಜನ್ನಪ್ಪೆಗಳು ದೂರ. ಏನಾದರೂ ಕೆಲಸದ ನೆಪ ಮಾಡಿಕೊಂಡು ದೂರ ಸರಿಯುತ್ತಿದ್ದರು. ಹಾಗೇನೇ ಈಗಲೂ ಸರಿದರು. ಆದರೆ ಕಾವೇರಮ್ಮ ಕಿಟಕಿಗೆ ಕಿವಿಕೊಟ್ಟು ಚೂರೂ ಬಿಡದಂತೆ ಕೇಳುತ್ತಿದ್ದರು. ಚನ್ನಮ್ಮಯ್ಯರ ಟಪಿನು ಮುಗಿಲಿಲ್ಲ. ಮುದರನ ಸವಾರಿ ಅದೇ ದಾರಿಯಾಗಿ ಹಾದು ಕಂಡಿತು. ಮ್ಮಯ್ಯರ ಎದೆ 'ಅಜನೆ' ಆಯಿತು.

ಅಲ್ಲಿಂದ ಎದ್ದು ಸಂಗತಿಯೇನೆಂದು ತಿಳಿಯುವರೆ ಅವರು ಹೊರಟು ಮುಂದೆ ಬರುವಾಗ ಅದೇ ಒಂದು ತಾಸಿನ ಮೊದಲು ಮೂಸೆಬ್ಯಾರಿಗಳ ಅಂಗಡಿಯಲ್ಲಿ [illegible] ಕಂಬಳಿಗಳ ಒಂದು ಅಂಡಿಗೆಯೇ ಸಿಕ್ಕಿತೆಂದು, ಬ್ಯಾರಿಗಳನ್ನು [illegible] ವಿನಲ್ಲಿ ಒಯ್ಯಲಾಯಿತೆಂದೂ ಸುದ್ದಿ ಬಂದಿತು. ಜನ್ನಪ್ಪೆಗಳಿಗೆ ಅಗಷ್ಟೆ [illegible] ಯಾದರೂ ಓಡಿದುದು ಅದಕ್ಕೇನೆ. ಮೂಸೆಬ್ಯಾರಿಯು ತನ್ನನ್ನು ಜಾಮೀನಿನಲ್ಲಿ ಬಿಡಿಸಲು ಅವರಿಗೆ ಹೇಳಿ ಕಳುಹಿಸಿದ್ದನಂತೆ. ಪೈಗಳು ಬ್ಯಾರಿಯ ಅಂಗಡಿಯ ತನಕ ಹೋಗಿ, ಅವನಿಲ್ಲದ ವಿಚಾರ ತಿಳಿದು ತಲೆ ಕೆರೆಯುತ್ತಿರುವಾಗ ನಾಗಯ್ಯ ಸೆಟ್ಟರ ಸವಾರಿ ಅವರಿಗೆ ಭೇಟಿಯಾಗಿ—'ಸಾಹುಕಾರರೇ—ನೀವು ಈ ಗದ್ದಲದಲ್ಲಿ ಕೈ ಹಾಕಬೇಡಿ. ಬ್ಯಾರಿಗೆ ಕಾಲಬಂದಿದೆ ...' ಕರೆದುಕೊಂಡು ಹೋದರು. ಇಡೀ ಕಂಬಳಿ ಅಂಡಿಗೆ ಅಂಡಿಗೆಯೇ ಅವನ ಮನೆಯಲ್ಲಿರಬೇಕಾದರೆ! ನನಗೆ ಆ ಬ್ಯಾರಿಯ ಮೇಲೆ ಮೊದಲಿಂದಲೂ ಸಂಶಯ. ಅಲ್ಲವಾದರೆ ನಾಲ್ಕು ಹೊಗೆಸೊಪ್ಪಿನ ಎಸಳು ಮಾರಿ ಇಷ್ಟೆಲ್ಲ ಹಣ ಹೊರಗೆ ಕೊಡಲು ಬಂದೀತೆ?' ಎಂದರು. ಜನ್ನಪ್ಪೆಗಳು ತೀರ ಗಡಿಬಿಡಿಯಾಗಿ ಮನೆಗೆ ಮರಳಿದರು.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲ್ಯಾಯ್ಡುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು. ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹೀರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು. ೪) ಸ್ಟೇಶನ್ ಡಿಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮ್ಹಾಲು ಪರದೇಶದಿಂದ ಬರುವಂತೆ ಉಂಟು ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ವಾಘ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್:—ಪಿ. ಎಚ್. ಭಟ್ಟ. ಗದಗ:—ವಿ. ಎಸ್. ಶೆಟ್ಟಿ.
ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜೆಂಟ್:—ಡಾ. ಕೆ. ಭಾಸ್ಕರ ಪೈ.
ಸ್ಪೆಶ್ಯಲ್ ಏಜಂಟ್:—ಬಿ. ವ್ಹಿ. ಹೊನ್ನಾವರ

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರ:
ಆಯುರ್ವೇದಾಶ್ರಮ :: ::
ಮದರಾಸು

ಸಬ್ ಏಜಂಟ್:—

ವೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಸದ್ವೈದ್ಯಶಾಲಾ (ರಿ) ನಂಜನಗೂಡು.

(ಪ್ರೊಪ್ರೈಟರ್: ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರು)

ಇವರ ಅನುಭವ ಸಿದ್ಧೌಷಧಗಳು.

ಕುಟುಂಬ ರಕ್ಷಿಣೀ

ಪ್ರತಿ ಸಂಸಾರಿಕರಿಗೂ, ಅತ್ಯಗತ್ಯವಾದ ೫ ಬೇರೆ ಬೇರೆ ಅನೇಕ ಔಷಧಗಳನ್ನು ವಿಸ್ತಾರವಾದ ಅನುಪಾನ ಪುಸ್ತಕದೊಡನೆ ಸೇರಿಸಿಡಲ್ಪಟ್ಟ ಅಂದವಾದ ಪೆಟ್ಟಿಗೆ. ಒಂದೇ ಒಂದು ಪೆಟ್ಟಿಗೆಯು ನಿಮ್ಮಲ್ಲಿದ್ದರೆ, ಪೂರ್ಣ ಅನುಭವಶಾಲಿಯಾದ ಒಬ್ಬ ವೈದ್ಯನು ನಿಮ್ಮಲ್ಲಿ ಯಾವಾಗಲೂ ಇದ್ದಂತೆಯೇ. ಸರಿ ಜೀವನದಲ್ಲಿ ಬಹಳ ಅನುಕೂಲವಾದದ್ದು.

ಅಂಚೆವೆಚ್ಚ ಉಚಿತ. ಬೆಲೆ: 3-0-0

ನಮ್ಮ ಇತರ ಔಷಧಗಳನ್ನೊಳಗೊಂಡ ವಿಸ್ತೃತ ಕೆಟಲಾಗಿಗೆ ಇಂದೇ ಬರೆಯಿರಿ.

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರೆಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕುದಾಗಿ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧. ಸಾರಥಿ ನಸ್ಯ 1 ಸೀಸಕ್ಕೆ ರೂ. 3-8-0 ನವಿಲಿನ ಮಾರ್ಕು ಸಾರಥಿ ನಸ್ಯ 1 ಸೀಸಕ್ಕೆ ರೂ 3-0-0

(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ವಿಳಾಸ:—
ಎ. ಪಿ. ಸಾರಥಿ
ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ ೬೭ ಮದ್ರಾಸ

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ವೈಶಾಖ ಕೃ ೧ ಶನಿವಾರದಿಂದ ಜ್ಯೇಷ್ಠ ಶು ೮ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ವೃಷಭ ಬೇಶ)

[illegible]	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
20	ಶನಿ	೨೯	೯।	ರೋಹಿಣಿ	೩೫।	೬	
21	ರವಿ	೧	೫॥	ಮೃಗಶಿರಾ	೩೨॥	೭	
22	ಸೋಮ.	೨	॥ಶ್ರಾ ೫೩॥	ಆರ್ದ್ರಾ	೨೯॥।	೮	
23	ಕುಜ	೩	೪೯॥	ಪುನರ್ವಸೂ	೨೬	೯	
24	ಬುಧ	೪	೪೩॥	ಪುಷ್ಯಾ	೨೨।	೧೦	
25	ಗುರು	೫	೩೭॥।	ಆಶ್ಲೇಷಾ	೧೮।	೧೧	
26	ಶುಕ್ರ	೬	೩೧॥।	ಮಘಾ	೧೦॥	೧೨	

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½%per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs 100/ toRs 5000/ run regularly on systematic lines Unique Banking facilities to Businessmen and interested Public

Apply for particulars—**K. R. GURU,** *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹೆರಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಜನರಲ್ಲಿ ಹಣ ಕೊರತೆಯಾಗುವುದರಿಂದ ದಾರಿದ್ರ್ಯವಾಗುತ್ತದೆ ... [illegible]

ವಿಲಾಸ ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ್, (S. M. C.)

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 12 ಘೆನ್ಸಿ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೇರ ಹಲ್ಲುಪುಡಿಯ ... [illegible] ... 1 ಪೋಕೆಟು ವಾಚು ಒಂದು ಟೈಮ್‌ಪೀಸ್ ... ಒಂದು ರಿಸ್ಟ್ ವಾಚು, 14 ಕ್ಯಾರೆಟ್ ರೋಲ್ಡ್ ಗೋಲ್ಡ್ ... 360 ಫೀಟ್ ಪೋಕಸ್ ... 10 ವರ್ಷ ಗ್ಯಾರಂಟಿ ... ಪೋಸ್ಟೇಜ್ ಮತ್ತು ಪ್ಯಾಕಿಂಗ್ ಖರ್ಚು 0-14-0 ಪ್ರತ್ಯೇಕ

The American Commercial Stores, Post Box No. 12215 Calcutta (S. A)

THE

Bank of Mangalore Ltd.,

MANGALORE

ESTD 19[illegible]

Branches-

Panemangalore Mudabidri & Padubidri.

Fixed Deposits will be received at following rates of interest

For	3 months	3½%
„	6 „	4%
„	12 „	5%
„	24 „ & upwards	5½%

Interest Payable Quarterly

Savings Bank deposit 3½% ***on daily balances.***

All kinds of banking business transacted

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-,100/-,500/-,1,000/-, & 5,000/

are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರದುರ್ಬಲತೆ, ನಿಶ್ಶಕ್ತಿ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿ ಮನ್ನುಂಟು ಮಾಡಲು 2 ಡಬ್ಬಿ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಛಾರ್ಜು ಪ್ರತ್ಯೇಕ)

ಟಿ. ಸಿ. ಎ. ಅರ್ ಕೋ,

ಆಯುರ್ವೇದಿಕ್ ಫಾರ್ಮಸಿ ಪೆರ್ಡೂರು

P. O. Perdoor (ದ. ಕ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಳಿಕಟ್ಟಾ ಬಜಾರ್, ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

ಹಳೆಯ, ಮತ್ತು, ಅಸಹ್ಯವಾದ ರೋಗವನ್ನು ವಾಸಿ ಮಾಡಿ ಅವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೂಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕೆರದ ಗುಡ್ಡು ಮುಡಿಗೆ	1—11—0	–
„ ದುಯಂ „ „	1—10—0	1—10—0
„ ಅವ್ವಲ್ ಸುಗ್ಗಿ	1—10—0	–
„ ದುಯಂ „ „	1—9—0	–
ಅಕ್ಕಿ ಅವ್ವಲ್ ಗುಡ್ಡು „	4—2—0	4—2—0
„ ದುಯಂ „ „	3—14—0	3—14—0
„ ಅವ್ವಲ್ ಸುಗ್ಗಿ „	4—4—0	–
„ ದುಯಂ „ „	3—8—0	3—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದದು „	37—8—0	47—8—0
ಕೊಬ್ಬರಿ ಆಫೀಸು ಖಂಡಿಗೆ	45—0—0	–
„ ದಿಲ್‌ಪಸಂದ „	47—8—0	–
ತೆಂಗಿನ ಎಣ್ಣೆ ಮುಡಕ್ಕೆ	3—5—0	3—5—0
ಸಿಪ್ಪೆಯುಳ್ಳ ಅಡಿಕೆ 1000ಕ್ಕೆ	3—4—0	3—12—0
ಗೇರುಬೀಜ ಮುಡಿಗೆ	3—12—0	3—12—0
ಕಬ್ಬಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	15—8—0	16—8—0

ಕರ್ನಲ್ ಬೆಕ್ಕರ ಸಿಂಹಗರ್ಜನೆ

ಹಿಟ್ಲರ ಮುಸಲೋನಿಯರಿಗೆ ಜಪಾನಿನ ಉತ್ತರ

ಜಾರ್ಜ ಬಾದಶಹರ ಕೆನಡಾ ಪ್ರಯಾಣ

ಡಾಂಜಿಗ ನಗರ ಮತ್ತು ಓಣಿಯನ್ನು ಜರ್ಮನಿಗೆ ಒಪ್ಪಿಸುವ ಕುರಿತು ಹಿಟ್ಲರನು ಕೊಟ್ಟ ಕರೆಗಳಿಗೆ ಉತ್ತರವನ್ನು ಕೊಡುತ್ತಾ, ಪೋಲಾಂಡಿನ ವಿದೇಶಾಂಗ ಖಾತೆಯ ಮಂತ್ರಿ ಕರ್ನಲ್ ಬೆಕ್ಕರವರು ಒಂದು ಭಾಷಣವನ್ನು ಮಾಡಿ—'ಸಮುದ್ರ ವ್ಯಾಪಾರ ಮತ್ತು ಡಾಂಜಿಗನ ಕುರಿತು ನಮ್ಮ ಧೋರಣೆ ಪ್ರಸಿದ್ಧವಾಗಿಯೇ ಇದೆ. ಆ ಕುರಿತಾದ ನಮ್ಮ ನಿರ್ಧಾರವನ್ನು ಬದಲಾಯಿಸಲಾಗುವುದಿಲ್ಲ. ಜರ್ಮನಿಯು ಶಾಂತರೀತಿಯಿಂದ ವರ್ತಿಸಿದರೆ, ಅದರೊಡನೆ ಹಾಗೆಯೇ ವರ್ತಿಸುವೆವು. ಯುದ್ಧದ ಬೆದರಿಕೆ ಹಾಕಿದರೆ ನಾವು ನಮ್ಮ ಹಕ್ಕು ಅಧಿಕಾರಗಳನ್ನು ಎಂದೂ ಜರ್ಮನಿಗೆ ಹೆದರಿ ಬಿಟ್ಟುಕೊಡುವವರಲ್ಲ. ಡಾಂಜಿಗ ಮತ್ತು ಓಣಿಯ ಕುರಿತು ನಾವು ಪಂಚಾಯತಿಕೆ ಮಾಡಿ ಜರ್ಮನಿಗೆ ಕೆಲವು ರಿಯಾಯತಿಗಳನ್ನಷ್ಟೇ ಕೊಡಬಲ್ಲೆವು. ನಮ್ಮ ಸ್ವಾತಂತ್ರ್ಯವನ್ನು ಮಾರಿಕೊಂಡು ನಾವು ಶಾಂತಿಯನ್ನು ಇಚ್ಛಿಸುವುದಿಲ್ಲ' ಎಂದರು. ಇದು ಹಿಟ್ಲರನನ್ನು ಸೋಲಿಸುವ ಭಾಷಣವೆಂದು ಬ್ರಿಟನ್ನು ಅಭಿಪ್ರಾಯ ಪಟ್ಟಿರುವಾಗ, ಪೋಲಾಂಡಿನ ದರ್ಪ ಇಳಿದಿದೆ ಎಂದು ಜರ್ಮನಿ ಅಂದಿದೆ. ಆದರೆ ಅವಸರದಿಂದ ದುಡುಕಬೇಡಿರೆಂದು ಇಟಾಲಿ, ಹಿಟ್ಲರನನ್ನು ಎಚ್ಚರಿಸಿದೆ. ಮುಂದೇನು ಮಾಡಬೇಕೆಂಬ ಕುರಿತು ಇಟಾಲಿಯನ್ ಜರ್ಮನ ಅಧಿಕಾರಿಗಳೊಳಗೆ ಸಮಾಲೋಚನೆ ನಡೆಯುತ್ತಿರುವುದು. ಪೋಪರೂ ಕೂಡಾ ಯೂರೋಪಿನ ಪ್ರಕ್ಷುಬ್ಧ ವಾತಾವರಣ ಮತ್ತು ಇಕ್ಕಡೆಯ ಯುದ್ಧಸಿದ್ಧತೆಗಳನ್ನು ಕಂಡು ಬಹಳ ನೊಂದಿದ್ದಾರೆ. ಅವರ ಕಡೆಯ ದೂತರು ಯೂರೋಪ ರಾಜಧಾನಿಗಳಲ್ಲಿ ರಾಜಕಾರಣ ತಜ್ಞರನ್ನು ಕಂಡು ಮಾತನಾಡಿಸಿ, ಶಾಂತಿ ಸ್ಥಾಪನೆಗೆ ಪ್ರಯತ್ನಿಸತೊಡಗಿದ್ದಾರೆ.

ಬ್ರಿಟನ-ಫ್ರಾನ್ಸ-ರಸ್ಯ ಒಪ್ಪಂದ

ರಸ್ಯ-ಬ್ರಿಟನ ಒಡಂಬಡಿಕೆ ಇನ್ನೂ ಆಗದಿರುವುದಕ್ಕೆ ಭಿನ್ನಾಭಿಪ್ರಾಯವುಂಟಾಗಿರುವುದು ವಿಳಂಬಕ್ಕೆ ಕಾರಣವಾಗಿದೆ. ಯುದ್ಧಕಾಲದಲ್ಲಿ ರಸ್ಯವು ಯುದ್ಧೋಪಕರಣಗಳನ್ನಷ್ಟೇ ಕೊಟ್ಟು ಪೋಲಾಂಡ, ರುಮೇನಿಯ ಮೊದಲಾದ ಚಿಕ್ಕ ರಾಷ್ಟ್ರಗಳಿಗೆ ಸಹಾಯವನ್ನಿತ್ತರೆ ಸಾಕೆಂದು ಬ್ರಿಟನಿನ ಅಭಿಪ್ರಾಯವಾಗಿರುವುದು. ಪೋಲಾಂಡ್ಡ ರುಮೇನಿಯಗಳಲ್ಲಿ ರಸ್ಯದ ಸೇನೆಯು ಒಂದು ಠಾಣ್ಯವನ್ನೂರುವುದು ಆ ದೇಶಗಳಿಗೆ ಸಮ್ಮತವಾಗಿಲ್ಲ. ಶಾಂತಿಪಕ್ಷಗಳಿಗೆ ಸಂಪೂರ್ಣ ಸೇನಾ ಸಹಾಯದ ಒಡಂಬಡಿಕೆಯಾಗಬೇಕೆಂದು ರಸ್ಯ ಹೇಳುತ್ತದೆ. ಪರಂತು ಬ್ರಿಟನ ಫ್ರಾನ್ಸ ರಸ್ಯಗಳೊಳಗೆ ಒಡಂಬಡಿಕೆಯಾಗದಿರುವುದು ಹಿಟ್ಲರ ಮುಸಲೋನಿಯರಿಗೆ ಅನುಕೂಲವಾಗಿರುವುದು. ಅವರು ಯುದ್ಧಕಾಲದಲ್ಲಿ ಪರಸ್ಪರ ಸಹಾಯದ ಒಡಂಬಡಿಕೆ ಮಾಡಿಕೊಂಡಿರುವರು. ಹಿಟ್ಲರನ ವಿರುದ್ಧ ಮುಸಲೋನಿಯನ್ನು ಎತ್ತಿ ಕಟ್ಟಬೇಕೆಂಬ ಶಾಂತಿಪಕ್ಷದ ಪ್ರಯತ್ನವು ಹೀಗೆ ವಿಫಲವಾಗಿರುವುದು.

ಚಕ್ರವರ್ತಿಯರ ಕೆನಡಾ ಪ್ರಯಾಣ

ಬ್ರಿಟಿಷ ರಾಜದಂಪತಿಗಳು ಕೆನಡಕ್ಕೆ ಪ್ರಯಾಣ ಹೊರಟಿರುವರು. ಇಂಗ್ಲಂಡಿನಲ್ಲಿ ಪೋರ್ಟ್ಸ್‌ಮೌತನಲ್ಲಿಯೂ [illegible] ಜನರು ಕೂಡಿ ಅವರಿಗೆ ಸಂಭ್ರಮದ ವಿದಾಯ ಸತ್ಕಾರವನ್ನಿತ್ತರು. ರಾಜಪರಿವಾರದವರೂ ಮಕ್ಕಳೂ ಸಂತೋಷದಿಂದ ಅವರನ್ನು ಬೀಳ್ಕೊಟ್ಟರು. ಕೆನಡ ಅಮೇರಿಕಗಳಲ್ಲಿ ರಾಜದಂಪತಿಗಳ ಸ್ವಾಗತಕ್ಕಾಗಿ ವಿಶೇಷ ವ್ಯವಸ್ಥೆಗಳಾಗಿವೆ.

ಜಪಾನಿನ ಉತ್ತರ

'ಯುದ್ಧಪ್ರಸಂಗದಲ್ಲಿ ಪರಸ್ಪರ ಸಹಾಯಕ್ಕೆ ಬರುವ ಹಾಗೆ ಮಿಲಿಟರಿ ಒಪ್ಪಂದವಾಗಲೆ'ಂದು ಸರ್ವಾಧಿಕಾರಿಗಳು ಸೂಚಿಸಿದುದಕ್ಕೆ—'ಪೂರ್ವದಲ್ಲಿ ರಸ್ಯವನ್ನು ವಿರೋಧಿಸಲಿಕ್ಕೆ ಮಾತ್ರ ನಾವು ನಿಮ್ಮೊಡನೆ ಮಿಲಿಟರಿ ಒಪ್ಪಂದ ಮಾಡಿಕೊಳ್ಳಬಹುದು. ಇತರ ಕಡೆಗಳಲ್ಲಿ ಆಗುವ ಯುದ್ಧಗಳಲ್ಲಿ ನಾವು ಭಾಗಿಯಾಗಲಾರೆವು' ಎಂದು ಜಪಾನು ಉತ್ತರ ಕೊಟ್ಟಿದೆ. ಆದ್ದರಿಂದ ಮುಂದಿನ ಯುದ್ಧದಲ್ಲಿ ಸರ್ವಾಧಿಕಾರಿಗಳಿಗೆ ಜಪಾನಿನ ಸಹಾಯವು ಎಷ್ಟರ ಮಟ್ಟಿಗೆ ದೊರೆಯುವುದೆಂದು ಹೇಳಬರುವುದಿಲ್ಲ.

ಸುಭಾಷರ ದ್ವಿತೀಯ ಭಾಷಣ

ಮಾಜಿ ರಾಷ್ಟ್ರಪತಿಗಳಾದ ಶ್ರೀ. ಸುಭಾಷ ಭೋಸರು ಕಲ್ಕತ್ತದಲ್ಲಿ ತಮ್ಮ ದ್ವಿತೀಯ ಭಾಷಣವನ್ನು ಕೊಡುತ್ತಾ, ತಾವು ಅಧ್ಯಕ್ಷರಾಗಿ ಆರಿಸಲ್ಪಟ್ಟಂದಿನಿಂದ, ತಮ್ಮ ಪದವಿಗೆ ರಾಜೀನಾಮೆ ಕೊಡುವ ತನಕ ನಡೆದ ವೃತ್ತಾಂತಗಳನ್ನು ಹೇಳಿ, ಗಾಂಧಿವಾದಿಗಳು ತಮ್ಮ ಪಕ್ಷದವರಿಗೆ ವರ್ಕಿಂಗ ಕಮಿಟಿಯಲ್ಲಿ ೨ ಸ್ಥಾನಗಳನ್ನು ಕೊಡಲಿಕ್ಕೂ ಕೂಡ ಸಿದ್ಧರಿಲ್ಲದುದರಿಂದಲೂ, ಗಾಂಧಿಯವರು ಹೇಳಿದಂತೆ ಸಂಪೂರ್ಣ ತಮ್ಮ ಪಕ್ಷೀಯರೇ ಇರುವ ವರ್ಕಿಂಗ ಕಮಿಟಿಯನ್ನು ರಚಿಸುವುದು ತಮಗೆ ಸಮ್ಮತವಾಗದುದ್ದರಿಂದಲೂ ತಾವು ರಾಜೀನಾಮೆ ಕೊಡಬೇಕಾಯಿತೆಂದರು.

ಗಯಾದಲ್ಲಿ ಜಾತಿದಂಗೆ

ಗಯಾದಲ್ಲಿ ಕಳೆದ ವಾರ ಒಂದು ಭಯಂಕರ ಜಾತಿದಂಗೆಯು ನಡೆಯಿತು. ೬ ಮಂದಿ ಕೊಲ್ಲಲ್ಪಟ್ಟರು. ೮೨ ಮಂದಿಗೆ ಗಾಯವಾಯಿತು. ದಂಗೆಯನ್ನು ಅಡಗಿಸುವುದಕ್ಕೋಸ್ಕರ ಸರಕಾರವು ಸ್ಪೆಶಲ್ ಪೋಲೀಸರನ್ನು ನೇಮಿಸಿದೆ. ಇಂಡಿಯನ್ ಪೋಲೀಸ ಆಕ್ಟಿನ [illegible] ಪ್ರಕರಣವನ್ನನುಸರಿಸಿ ಗಯಾ ಮುನಿಸಿಪಾಲಿಟಿಯೊಳಗಿನ ಪ್ರದೇಶವನ್ನು ದಂಗೆಯ ಪ್ರದೇಶವೆಂದು ಸಾರಲಾಗಿದೆ.

ಕೋಲಾಪುರದ ಮುಸ್ಲಿಂ ಲೀಗ ಮಹಾಸಭೆ

ಇದು ಪಂಜಾಬಿನ ಪ್ರಧಾನ ಮಂತ್ರಿ ಸರ್ ಸಿಕಂದರ ಹಯಾತಖಾನರ ಅಧ್ಯಕ್ಷತೆಯಲ್ಲಿ ನಡೆಯಿತು. ದೇಶೀ ಸಂಸ್ಥಾನಗಳ ರಾಜಕಾರಣಗಳಲ್ಲಿ ಲೀಗು ಪ್ರವೇಶಿಸಬಾರದೆಂದೂ, ಕಾಂಗ್ರೆಸ ಪ್ರಾಂತಗಳಲ್ಲಿ ಮುಸ್ಲಿಮರ ಹಕ್ಕು ಅಧಿಕಾರಗಳಿಗೆ ಭಂಗ ತರುವ ಕಾಂಗ್ರೆಸ ಮಂತ್ರಿಮಂಡಲಿಗಳ ನೀತಿಯನ್ನು ಖಂಡಿಸಿ [illegible] ಜಿನ್ನರ ಭಾಷಣವಾಯಿತು. ಪೆಲೆಸ್ತೀನ ಅಥವಾ ಇತರ ಯಾವತ್ತು ಪ್ರಾಂತ್ಯ ವಿಚಾರಗಳಲ್ಲಿ ಬ್ರಿಟಿಷ ಸರಕಾರವು ಕಾಂಗ್ರೆಸಿನ ಅಭಿಪ್ರಾಯಗಳನ್ನು ಮಾತ್ರ ಕೇಳುವದಲ್ಲ, ತಮ್ಮನ್ನು ಕೇಳಬೇಕೆಂದೂ, ಹಾಗೆ ಕೇಳದಿದ್ದರೆ ಸರಕಾರವನ್ನು ತೃಪ್ತಿಕರವಾಗಿ ಬದಿಸಲಾಗುವ ಎಲ್ಲ ಮೊದಲ ಅವರು ತಿಳಿಸಿದರು. ಈ ಮಹಾಸಭೆಯ [illegible] ಸ್ವಾತಂತ್ರ್ಯಪ್ರಿಯ [illegible] ನಡೆದ [illegible]

ಗಾಂಧಿ ಸೇವಾ ಸಂಘ

ಬೃಂದಾವನದಲ್ಲಿ ಕೂಡಿದ ಗಾಂಧಿ ಸೇವಾ ಸಂಘದ ಮಹಾಸಭೆಯಲ್ಲಿ ಗಾಂಧಿಯವರನ್ನು ಅನುಸರಿಸಬೇಕೆಂದು ಸರದಾರ ಪಟೇಲರೂ, ಕಾಂಗ್ರೆಸಿನ ಮತ್ತು ಮಹಾತ್ಮರ ಮಹತ್ತು ಎಂಥಹದೆಂಬುದನ್ನು ಖಾನ್ ಅಬ್ದುಲ್ ಗಫರ್ ಖಾನರೂ, ರೈತರಿಗೆ ಗಾಂಧಿಜಿಯವರಿಂದಾದ ಪ್ರಯೋಜನಗಳ ಕುರಿತು ಬಾಬು ರಾಜೇಂದ್ರ ಪ್ರಸಾದರೂ, ಚರಕ, ಖಾದಿಗಳ ಕುರಿತು ಶಂಕರರಾವ ದೇವರವರೂ, ವಾರ್ಧಾ ಶಿಕ್ಷಣ ಕ್ರಮದ ಕುರಿತು ಆಚಾರ್ಯ ಕೃಪಲಾನಿಯವರೂ, ಗಾಂಧಿಯವರಿಂದ ಬೃಂದಾವನಕ್ಕೆ ಬಂದ ಮಹಾತ್ಮಾ [illegible] ಬಿ ಜಿ ಖೇರರವರು, ಮಹಾತ್ಮರ ಧುರೀಣತ್ವದ ಕುರಿತು ಭುಲಾಭಾಯಿ ದೇಸಾಯಿಯವರೂ ಭಾಷಣಗಳನ್ನು ಕೊಟ್ಟರು. ಸಂಘದ ಸದಸ್ಯರು ರಾಜಕೀಯದಲ್ಲಿ ಭಾಗ ತೆಗೆದುಕೊಳ್ಳಬಹುದೇ ಎಂಬ ಕುರಿತು ದೀರ್ಘ ಚರ್ಚೆ ನಡೆದ, ಸಂಘದ ಧ್ಯೇಯೋದ್ದೇಶಗಳ ಸಾಧನೆಗಾಗಿ ರಾಜಕೀಯದಲ್ಲಿ ಭಾಗ ತೆಗೆದುಕೊಳ್ಳುವುದು ಅಗತ್ಯವೆಂದಾಯಿತು. ಟೀಕಾಟೂಕೆಗಳನ್ನು ಲಕ್ಷಿಸದೆ, ಸಂಘದ ಧ್ಯೇಯೋದ್ದೇಶಗಳನ್ನು ಸಾಧಿಸುತ್ತಿರ [illegible] ಅಗತ್ಯದ ಕುರಿತು ಮಹಾತ್ಮರು ಒಂದು ಭಾಷಣ ಮಾಡಿದರು.

ರಾಜಕೋಟೆ

ಅಲ್ಲಿ ಸಭಾ ಪರಿಷತ್ತಿಗೂ ರಾಜಕೋಟ ದರ್ಬಾರಿನವರಿಗೂ ಇದುತನಕ ಯಾವುದೇ ಒಂದು ಗೌರವಪೂರ್ಣ ಒಡಂಬಡಿಕೆಯಾಗಿ ರಾಜಕೀಯ ಸುಧಾರಣೆಗಳ ತೀರ್ಮಾನವಾಗಿಲ್ಲದಿರುವುದರಿಂದ ತಾನು ಇದೇ [illegible] ತಾರೀಕಿಗೆ ರಾಜಕೋಟಕ್ಕೆ ಬರಲಿರುವೆನೆಂದು, ತನ್ನ ಮುಂದಿನ ಕಾರ್ಯಕ್ರಮವು [illegible] ಮಹಾತ್ಮರು ದರ್ಬಾರ ವೀರವಾಲನಿಗೆ ತಂತಿ ಕೊಟ್ಟಿದ್ದಾರೆ.

ಆಫ್ರಿಕದಲ್ಲಿ ಹಿಂದೀಯರ ಸತ್ಯಾಗ್ರಹ

ದಕ್ಷಿಣ ಆಫ್ರಿಕದಲ್ಲಿ ಹಿಂದೀಯರ ವಸತಿಗಳನ್ನು ಇತರ ವಸತಿಗಳಿಂದ ಬೇರೆ ಮಾಡುವ ಸರಕಾರದ ನೀತಿಯ ವಿರುದ್ಧ ಅಲ್ಲಿನ ಭಾರತೀಯರು ಸತ್ಯಾಗ್ರಹ ಮಾಡುವ ನಿರ್ಣಯ ಮಾಡಿದ್ದಾರೆ. ಅವಕಾಶೋಸ್ಕರ ಪ್ರಚಾರ ಕಾರ್ಯವು ಆರಂಭವಾಗಿದೆ.

ಚಾಂಕಿಂಗಿನಲ್ಲಿ

ಜಪಾನಿಯರು ಚಾಂಕಿಂಗನ್ನು ಬಾಂಬುಗಳಿಂದ ಸುಟ್ಟಿಟ್ಟ ೫೦೦೦ ಮಂದಿ ಹತರಾದರು. ಬಾಂಬುಗಳಿಂದಾದ ಬೆಂಕಿ ಕೆಲವು ದಿನಗಳಿಂದ ಉರಿಯುತ್ತಾ ಇದೆ. ಬ್ರಿಟಿಷ ರಾಯಭಾರಿಗಳ ಕಾರ್ಯಾಲಯದ ಸಮೀಪದಲ್ಲೂ ಬಾಂಬುಗಳ ಬಿದ್ದು ಬೆಂಕಿಹಾಗಿದೆ. ರಾಯಭಾರಿಗಳು ಈ ಅತ್ಯಾಚಾರವನ್ನು ನಿಷೇಧಿಸಿ ಜಪಾನಿಗೆ ತಿಳಿಸಿದ್ದಾರೆ. ಸ್ವಾಟೋವಿನ ಮೇಲೂ ಜಪಾನಿಗಳ ಬಾಂಬುಗಳು ಬಿದ್ದು ಅಸಹಾಯರಾದ ಜನರ ರಕ್ತವು ಕಾಲುವೆ ಕಟ್ಟಿ ಹರಿಯಿತು.

ಹಿಟ್ಲರನಿಗೆ ಜರ್ಮನರ ವಿರೋಧ

ದಕ್ಷಿಣ ಆಫ್ರಿಕದಲ್ಲಿ ಕಾಯಂ ವಾಸ್ತವ್ಯ ಮಾಡಿಕೊಂಡಿರುವ ಜರ್ಮನರು, ಹಿಟ್ಲನ ಮಹತ್ವಾಕಾಂಕ್ಷೆಯನ್ನು ಖಂಡಿಸಿರುವರಲ್ಲದೆ, ಅವನಿಗೆ ತಮ್ಮ ಯಾವದೇ ಪ್ರಕಾರದ ಸಹಾಯ ಸಹಕಾರಗಳು ಪ್ರಾಪ್ತವಾಗಲಾರವೆಂದು ಪ್ರಕಟನೆ ಹೊರಡಿಸಿದ್ದಾರೆ.

ಕರಾಚಿ ಕಾರ್ಪೋರೇಶನ ಚುನಾವಣೆ

ಕರಾಚಿ ಕಾರ್ಪೋರೇಶನಿನಲ್ಲಿ ಕಾಂಗ್ರೆಸ ಪ್ರತಿನಿಧಿಗಳಾದ ಶ್ರೀ ಆರ್. ಕೆ. ಸಿದ್ವಾರವರು ಮೇಯರರಾಗಿಯೂ ಇಬ್ರಾಹಿಮ ಬದಾಸ ಬೇಚಾರರು ಡೆಪ್ಯುಟಿ ಮೇಯರರಾಗಿಯೂ ಆರಿಸಲ್ಪಟ್ಟಿದ್ದಾರೆ. ಕಾಂಗ್ರೆಸ ಪ್ರತಿನಿಧಿಗಳು ಕರಾಚಿಯಲ್ಲಿ ಈ ಗೌರವಕ್ಕೆ ಪಾತ್ರರಾದುದು ಇದು ಮೊದಲನೆ ಬಾರಿಯಾಗಿದೆ.

ಹೊಸ ಕಾಮರ್ಸ ಮೆಂಬರರು

ಇಂಡಿಯಾ ಸರಕಾರದ ವಾಣಿಜ್ಯ ಖಾತೆಯ ಮೆಂಬರರಾದ ಸರ್ ರಾಮಸ್ವಾಮಿ ಮುದಲಿಯಾರರು ಅಧಿಕಾರ ಸ್ವೀಕಾರ ಮಾಡಿದರು. ಇವರು ಮದ್ರಾಸಿನಲ್ಲಿದ್ದಾಗ ಪ್ರಧಾನ ಮಂತ್ರಿ ಶ್ರೀ ರಾಜಗೋಪಾಲಾಚಾರ್ಯರನ್ನೂ, ವ್ಯಾಪಾರಿ ಮಂತ್ರಿ ಶ್ರೀ ವಿ. ವಿ. ಗಿರಿಯವರನ್ನೂ ಸೆಕ್ರೆಟರಿಯೇಟಿನಲ್ಲಿ ಕಂಡು ಮಾತನಾಡಿದರು. ಮದ್ರಾಸ ಮತ್ತು ಇಂಡಿಯಾ ಸರಕಾರಗಳೊಳಗೆ ಪರಸ್ಪರ ವ್ಯವಹಾರದಲ್ಲಿರುವ ವಾಣಿಜ್ಯ ಮತ್ತು ಕೈಗಾರಿಕೆ ವಿಷಯಗಳ ಕುರಿತು ಮಾತನಾಡಿದರೆಂದು ತಿಳಿದುಬರುತ್ತದೆ.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.
ಡಾ ಜಸಾನಿಯವರ
ಜಗತ್ಪ್ರಸಿದ್ಧ
ಗೊನೋಕಿಲರ್ (ರಜಿಸ್ಟರ್ಡ)
ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿ ಗುರುತಿನ ರೆಜಿಸ್ಟರ್ಡ ಲೇಬಲು ಮತ್ತು 'ಗೊನೋಕಿಲರ್' ಇರುತ್ತದೋ ಎಂಬುದನ್ನು ನೋಡಿರಿ

[illegible] ಗೊನೋಕಿಲರ್ [illegible]

50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ 3-0-0 (ಮೂರು) ವಿ ಪಿ ಛಾರ್ಜು [illegible] ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4
Sole Manufacturer: Dr. D. N JASANI, Vithalbhai Patal Road, BOMBAY
ಎಲ್ಲಾ ಪತ್ರ ವ್ಯವಹಾರಗಳು ಇಂಗ್ಲಿಷಿನಲ್ಲಿ
ಸ್ಟಾಕಿಸ್ಟ: — ಮೆಸರ್ಸ ಎ. ಫೆರ್ನಾಂಡಿಸ್ ಮತ್ತು ಕಂಪನಿ, ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ, ಮಂಗಳೂರು.

ದಿ ಕಂಬೈಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV FR. P. W. FARIAS.

ST PAULS CHURCH,
Bolkonje Post, S K
Dated 5 h Jan 1939

To

THE JOINT MANAGERS,
The C. P C. Co Ltd, Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress

The glorious success of our Congress is also due to your exertion in putting up the various lights some of which I hear were done volunterily

May the blessings of the almighty fall on you all and may you be able to do much good to the Public

Renewing my thanks, I remain
Yours Sincerely,
(Sd) **P W Farias**

Sri Parshwanathaswami,
PANCHAKALYANA POOJA MAHOSTHAM,
Venoor, S. Kanara 1939

To,

THE JOINT MANAGERS
The Combind Booking Agency, Mangalore

Dear Sirs,

Please permit us to express our thanks on behalf of the above committee for the efficient Service rendered by your combined Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodabidri Booking Clerk Mr B Krishnayya and also his other mates and Mr Raghavendra Bhat driver who had specially come down from Mangalore to see to the needs of and comforts of the travelling Public. Thanking you once again

We remain Yours faithfull

Venoor, Dated 6-2-39 (Sd) B Chandappa Indra (*Secretary P M Council*) (Sd) M. Jagathpal (Sd) M Pachappa Shetty (Sd) Anantharaj Shetty (*Members Panchakalyana Mahosthamam Committee*)

JOINT MANAGERS,

The Combined Booking Agency,
MANGALORE

The Joint Booking Office,
KODIALBAIL,

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER
A CRORE.

ESTD 1906
CANARA BANK, LIMITED.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಛಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಚಿಕ್ಕೆ, ಪಕ್ಷವಾತ, ನೂಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ)ಮಂಗಳೂರಲಿ ಈ ಕಂಪೆನಿಯಲ್ಲಿ ದೊರೆಯುವುದು.

ಸ್ವದೇಶಾಭಿಮಾನಿ

Established 1906 Regd. No. M 3400

ಸಂಪುಟ ೩೩] ತಾರೀಖು ೧೯-೫-೧೯೩೯ (19—5—1939) [ಸಂಚಿಕೆ ೨೦

THE

BOMBAY LIFE ASSURANCE COMPANY, LTD.,

(ESTD 1908)

THE OFFICE

Which has proved its popularity by its progress

Record of New Bussiness

Proposed	Year	Completed
1,26 50,250	1934	1 04 83 750
1 50 48,915	1935	1 23 28 665
1 68 88 200	1936	1 81 01 500
1 72 579 75	1937	1 40,0 8727
1 76 88,250	1938	1 11 91 000

1939-VALUATION YEAR

Please take up a Policy Now and participate in Bonus

[illegible] Report [illegible] consult

Apply to **KOCHIKAR BROTHERS, LIIMTED,**
Madras Branch Secretaries
The Bombay Life Assurance Co., Ltd.,
The Bombay Life Building Gandhinagar UDIPI

or any of our following offices:

Post Box No 337
Mount Road,
Madras

Visweshwarapuram Circle
Bangalore City

Charni Road
Girgaum
BOMBAY 4

Car Street,
Mangalore

Puthiyara,
Calicut

Central Station Road,
Trivandrum

MAKE LIFE WORTH-LIVING!

Indigestion Insomnia Dry Cough–
Nervousness Weak Heart &c
these make you wiery of Life!

CONSULT US AND BUY
YOUR LIFE'S HAPPINESS!

Oils – that cool the brain and induce sleep
Lehas – that build up your wasted system
Asavas – that regenerate your jaded nerves

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara

(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ ಒಣ ಕೆಮ್ಮು-
ನರಗಳ ಅಬಲತೆ ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ—ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆಕೊಡುವ – ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಶೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, – ದ ಕನ್ನಡ

(ಬ್ರಾಂಚ್. ಕುಮಟೆ, ಉತ್ತರ ಕನ್ನಡ)

Edited, Printed & Published by A. S Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 26–5 1939

ತಾರೀಖು ೨೬ ೫—೧೯೩೯



ಹಂಪಿಯ ವಿರೂಪಾಕ್ಷ ಗುಡಿಯ ಮುಂದಿನ ವಿಮಾನ.

ಹಾಳ ಹಂಪಿಯ ಭಗ್ನಾವಶೇಷಗಳ ಎಡೆಯಲ್ಲಿ ಇನ್ನೂ [illegible] ಉಳಿದಿರುವ [illegible]
[illegible]ರುವ ಈ ವಿಮಾನವು ಅಲ್ಲಿನ ರಮಣೀಯ [illegible]ಗಳಲ್ಲೊಂದಾಗಿ ಒಳ್ಳೆ [illegible]

ಸಚಿತ್ರ

ವಾರಪತ್ರಿಕೆ

ಸ್ವದೇಶಾಭಿಮಾನಿ
Swadeshabhimani. Estd 1906

Date 26-5 1939 ತಾರೀಖು ೨೬ ೫—೧೯೩೯



ಹಂಪಿಯ ವಿರೂಪಾಕ್ಷ ಗುಡಿಯ ಮುಂದಿನ ವಿಮಾನ.
ಹಾಳು ಹಂಪಿಯ ಭಗ್ನಾವಶೇಷಗಳ ಎಡೆಯಲ್ಲಿ ಇನ್ನೂ ನಾವು ಬದುಕಿರುವೆವೆಂದು ಸಾರುತ್ತಿ ರುವ ಈ ವಿಮಾನವು ಅಲ್ಲಿನ ರಮಣೀಯ ನೋಟಗಳಲ್ಲೊಂದಾಗಿ ಒಪ್ಪ ದೊರಕಿಸುತ್ತದೆ

ಸಚಿತ್ರ
ವಾರಪತ್ರಿಕೆ

A SENSATIONAL INTERVIEW

How would the world get on without interviews? Journalists who make a speciality of interviewing travel all over the world; they penetrate into houses and workshops, into laboratories and offices, go behind the scenes of theatres and visit the dressing room at sportsgrounds, and ask questions and take notes.

In the morning, you open your newspaper and read the results of a thousand and-one interviews. You learn how Dr. Willem Mengelberg works, what books Greta Garbo prefers, how Henry Ford began to make cars and how many letters Roosevelt must read every day.

As soon as you have done something out of the ordinary you are interviewed. You are asked every possible kind of question and others, because the world wants to know something about.

Not long ago I interviewed Juan Vujtech. Do you know him, this Czech who is remarkable on account of his perseverance? In July 1937, the paper stated that he had just taken a decision as strange as it was audacious he wanted to go round the world on foot and he had commenced his journey. We are now in 1938 and Vujtech has already covered 80 000 miles! I met him in South Africa and was able to have a five minutes talk with this sensational globe trotter. 'How are you?' I enquired. "Well, sir, I've had nothing to worry about anywhere everything has gone swimmingly you understand. Naturally one catches cold occasionally. You do not merely go round the world. In Egypt I was held up for some time by malaria but thanks to the recommendations of the Malaria Commission of the League of Nations advising that for a cure of malaria daily dose of 15 to 20 grains of quinine should be taken from [illegible] to 6 days that is all finished now and [illegible] good you know. According to the abovesaid Malaria Commission I now take 6 grains of quinine [illegible] other medicine every day [illegible] have no further trouble. That's the product that has immunised me. To prevent malaria in hot countries I take 6 grains a day and to prevent influenza or colds [illegible] I always take [illegible] grains of quinine every day. You ought to do the same, it's good for everybody."

'I'll think about it,' I replied.

"Tired? I never get tired. I never do less than 25 miles a day. Sometimes as much as 30. And now I'm just going to the boat for Australia."

Juan Vujtech continues his journey . . on foot round the world.

Moi Eng 57

ಒಣಗಿದ ಎಲೆಗಳಿಂದ ಪೆಟ್ರೋಲು ತಯ್ಯಾರಿ

ಜರ್ಮನಿಯ ವೈಜ್ಞಾನಿಕರ ಅದ್ಭುತ ಶೋಧ

ಒಣಗಿದ ಎಲೆಗಳಿಂದ ಪೆಟ್ರೋಲು ತಯ್ಯಾರಿಸುವ ಹಲವು ವರ್ಷಗಳ ಪ್ರಯತ್ನದಲ್ಲಿ ಜರ್ಮನಿನ ವೈಜ್ಞಾನಿಕರು ಜಯಶೀಲರಾಗಿರುವರು. ಯುದ್ಧ ಕಾಲದಲ್ಲಿ ಯುದ್ಧೋಪಕರಣಗಳ ಯಂತ್ರ ಸಾಮಗ್ರಿಗಳಿಗೆ ಈ ಪೆಟ್ರೋಲು ಬಹಳ ಉಪಯುಕ್ತವೆಂದು ಕಂಡುಬಂದಿದೆ. ಅದಕ್ಕೋಸ್ಕರ ಜರ್ಮನಿಯ ಬ್ಲೇಕ್ ಫಾರೆಸ್ಟ ಎಂಬ ಗೊಂಡಾರಣ್ಯ ಪ್ರದೇಶದಲ್ಲಿ ದೊಡ್ಡ ಒಂದು ಯಂತ್ರವನ್ನು ಇಟ್ಟು ಪೆಟ್ರೋಲು ತಯ್ಯಾರಿಸಲಿಕ್ಕೆ ಆರಂಭಿಸಿದ್ದಾರೆ. ಕೆಲಸಗಾರರು ಕಾಡುಗಳಿಗೆ ಹೋಗಿ ಟನ್ನುಗಟ್ಟಲೆ ಒಣಗಿದ ಎಲೆಗಳನ್ನು ಗುಡಿಸಿ ತರುವರು. ಪೆಟ್ರೋಲು ತಯ್ಯಾರಿಗೆ ಕೆಲವು ಜಾತಿಯ ಎಲೆಗಳು ಮಾತ್ರ ಉಪಯುಕ್ತವಾಗಿರುವುದರಿಂದ ಒಂದು ಯಂತ್ರ ಸಾಧನವು ಎಲೆಯ ರಾಶಿಗಳಿಂದ ಅಂಥ ಎಲೆಗಳನ್ನೇ ಸಂಗ್ರಹಿಸಿ ಇಡುವುದು. ಕನಿಷ್ಟ ತರಗತಿಯ ಸುಮಾರು ಒಂದು ಗೆಲನ ಪೆಟ್ರೋಲನ್ನು ಈ ಎಲೆಗಳಿಂದ ತಯ್ಯಾರಿಸಲಿಕ್ಕೆ ವೈಜ್ಞಾನಿಕರಿಗೆ ೮೦೦ ಪವನುಗಳಷ್ಟು ಖರ್ಚಾಗಿದೆ. ಆದರೆ ಈ ಬಗೆಯ ಪೆಟ್ರೋಲು ತಯ್ಯಾರಿಯಲ್ಲಿ ಇನ್ನೂ ಕೆಲವು ಸುಧಾರಣೆಗಳಾದಾಗ ಅದನ್ನು ಖನಿಗಳಿಂದ ತೆಗೆದ ಪೆಟ್ರೋಲಿನಷ್ಟೇ ಸುಲಭ ಕ್ರಯಕ್ಕೆ ಮಾರಬಹುದೆಂದು ಅವರು ಹೇಳುತ್ತಾರೆ.

ಮಂಗಳನ ರಹಸ್ಯ ಭೇದನ

ಮಂಗಳ ಗ್ರಹದ ಸಂಪೂರ್ಣ ರಹಸ್ಯಗಳನ್ನು ಈ ವರ್ಷ ತಿಳಕೊಳ್ಳಬಹುದಾಗಿ ಪ್ರಪಂಚದ ವೈಜ್ಞಾನಿಕರು ಆಶಿಸಿರುವರು. ಈ ವರ್ಷ ಮಂಗಳ ಗ್ರಹವು ಕಳೆದ ೧೫ ವರ್ಷಗಳಿಗಿಂತ ೨೮ ಮಿಲಿಯ ಮೈಲು ಭೂಮಿಗೆ ಸಮೀಪವಾಗುತ್ತದೆ. ಆದ್ದರಿಂದ ದೂರದರ್ಶಿಯ ಮೂಲಕ ಅದರ ಪರೀಕ್ಷೆ ಪರೀಕ್ಷೆಗಳನ್ನು ಮಾಡಲಿಕ್ಕೆ ಈ ವರ್ಷವು ಬಹಳ ಅನುಕೂಲವಾಗಿ ಕಂಡುಬಂದಿದೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿರುವ ೩೦ ದೊಡ್ಡ ಪರೀಕ್ಷಣಾಲಯಗಳಿಂದ ಖಗೋಲಶಾಸ್ತ್ರಿಗಳು ಮಂಗಳನನ್ನು ಎಡೆಬಿಡದೆ ಹಗಲೂ ರಾತ್ರಿ ಪರೀಕ್ಷಿಸುತ್ತಿದ್ದಾರೆ. ಈ ಪರೀಕ್ಷಣೆಯ ಫಲವಾಗಿ—ಮಂಗಳನಲ್ಲಿ ಸಸ್ಯ ಮತ್ತು ಪ್ರಾಣಿವರ್ಗಗಳಿರಬಹುದೆಂಬ ವಾದಕ್ಕೆ ಪುಷ್ಟಿಯು ದೊರೆತಿದೆ. ಅದರಲ್ಲಿ ಮನುಷ್ಯನಂಥ ಬುದ್ಧಿಯುಳ್ಳ ಪ್ರಾಣಿವರ್ಗವಿರಬಹುದೆಂಬ ಊಹೆಯೂ ಉಂಟಾಗಿದೆ. ಒಂದೇ ವಲಯವು ಹಸುರಾಗಿದ್ದುದು, ಋತುಭೇದದಿಂದ ಕಂದು ಇತ್ಯಾದಿ ಬೇರೆ ಬೇರೆ ಬಣ್ಣಗಳಿಗೆ ಮಾರ್ಪಡುತ್ತಿರುವುದರಿಂದ, ಉಚ್ಚ ಜಾತಿಯ ಜೀವಿಗಳು ಅಲ್ಲಿ ಬೇಸಾಯದಲ್ಲಿ ತೊಡಗಿರಬಹುದೆಂದೂ, ಆ ಕಾರಣದಿಂದ ವರ್ಣ ಪರಿವರ್ತನವಾಗುತ್ತದೆಂದೂ ಕೆಲವು ವೈಜ್ಞಾನಿಕರು ಹೇಳತೊಡಗಿದ್ದಾರೆ.

ಬಣ್ಣ ಬಣ್ಣದ ಮಿರುಗುಟ್ಟುವ ಉಕ್ಕು

ಇತ್ತೀಚೆಗೆ ಆಗಿರುವ ಇನ್ನೊಂದು ಉಪಯುಕ್ತ ಶೋಧವೆಂದರೆ ಬಣ್ಣಬಣ್ಣದ ಮಿರುಗುಟ್ಟುವ ಉಕ್ಕಿನದಾಗಿದೆ. ಇದನ್ನು ಅಮೇರಿಕದ ವಿಜ್ಞಾನಿಯು ಕಂಡುಹಿಡಿದಿರುವನು. ಓಸ್ವಾಲ್ಡ ಬ್ರ್ಯಾನೋವಾಕ್ ಎಂಬುದು ಆ ವೈಜ್ಞಾನಿಕನ ಹೆಸರಾಗಿದೆ. ವಿಜ್ಞಾನಿಯು ಮೊದಲು ಉಕ್ಕನ್ನು ಒಂದು ದ್ರಾವಕ (ಎಸಿಡ್) ದಲ್ಲಿ ಮುಳುಗಿಸುವನು. ಆ ಮೇಲೆ ಗುಪ್ತವಾಗಿಟ್ಟ ಕೆಲವು ರಾಸಾಯನಿಕ ಪದಾರ್ಥಗಳನ್ನು ಆ ಉಕ್ಕಿಗೆ ಲೇಪಿಸುವನು. ಮತ್ತೆ ಅದನ್ನು ಬೆಂಕಿಯಲ್ಲಿಟ್ಟು ಕಾಯಿಸುವನು. ಆಗ ಉಕ್ಕಿಗೆ ಯಾವ ರಾಸಾಯನಿಕ ಪದಾರ್ಥದ ಲೇಪನವಾಗಿದೆಯೋ, ಅದರಂತೆ ಕಪ್ಪು, ನೀಲ, ಕೆಂಪು, ಹಸುರು ಇತ್ಯಾದಿ ಬಣ್ಣಗಳು ಬರುವುವು. ಈ ಬಣ್ಣಗಳು ಸರ್ವಥಾ ಹಾರಿಹೋಗುವುದಿಲ್ಲ. ಈ ಬಗೆಯ ಉಕ್ಕಿಗೆ ತುಕ್ಕು ಹಿಡಿದು ಅದರ ನಷ್ಟವಾಗುವ ಪ್ರಮಾಣವು ಕೂಡ ಬಹಳ ಕಡಿಮೆಯಾಗಿರುವುದೆಂದು ಹೇಳಲಾಗುತ್ತದೆ.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯುಂಟಾಗುವ ಬಳಲಿಕೆ, ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ
ಮದರಾಸು.



ಸ್ಟಾಕಿಸ್ಟರು:
ಪಾಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಜೊಯ್ನಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ

ಏಜಂಟರ ಸಲುವಾಗಿ ನಾವು ಮಾಡಿದ ತನ್ನ ಸ್ವಂತ ಖರ್ಚಿನಿಂದ (೧) ಉತ್ತಮ ಬಣ್ಣದ ಸಾಮ್ಪ್ಲ್‌ಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವದು (೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವದು (೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು (೪) ಸ್ಟೇಷನ್ ಡೆಲಿವರಿ ಕೊಡುವದು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮಾಲು ಪರದೇಶದಿಂದ ಬರುವಂತೆ ಉಂಟು. ಏಜಂಟರಿಗೆ ಹೆಚ್ಚಾ ಕಮಿಶನ್ ಕೊಡಲಾಗುವದು. ಕನ್ನಡ, ಮರಾಠಿ, ಇಂಗ್ಲಿಷ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ
ಎಸ್. ಎಮ್. ಶಾಹ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್ — ಟಿ. ಎಚ್. ಭಟ್ಕಳ; ಗದಗ — ವಿ. ಎಸ್. ಶೆಟ್ಟಿ
ಮೈಸೂರು ಕೊರ್ಗ, ದಕ್ಷಿಣ ಕನ್ನಡ ಏಜೆಂಟ್ — ಡಾ. ಕೆ. ಭಾಸ್ಕರ ಪೈ.
ಸ್ಪೆಶಲ್ ಏಜಂಟ್ — ಬಿ. ವ್ಹಿ. ಹೊನ್ನಾವರ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡ ಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲವರ ರುಚಿಗೆ ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು

ನಂ. ೧ ಸಾರಥಿ ನಸ್ಯ 1 ಪೌಂಡಿಗೆ ರೂ 3 [illegible] ಸಪೆಶಲ್ ಮಾರ್ಕ ಸಾರಥಿ ನಸ್ಯ 1 ಪೌಂಡಿಗೆ ರೂ 3 0 0
(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ —
ಎ. ಪಿ. ಸಾರಥಿ
ಮೆನ್ಯುಫೆಕ್ಚರರ್ಸ ಆಫ್ ಮದ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸ

ಸರದಾರ ಭವನ Sirdar Bhavan

ಫೆಲಿಕ್ಸ್ ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಉಪಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳು

Proprietor— H R Rao,
Bangalore Gilt Emporium Madras

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ತಾರೀಕು [illegible] | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 26—5—1939

ಕಾಂಗ್ರೆಸಿನೊಳಗೆ 'ಫೊರ್ವರ್ಡ್ ಬ್ಲೊಕ್' ಅವಾಂಛನೀಯ

ಡಾಕ್ಟರ ಎನ್. ಎಸ್. ಹರ್ಡೀಕರರ ಅಭಿಪ್ರಾಯ

ಹೆಚ್ಚು ಜನ ಸದಸ್ಯರಿರುವ ಸಂಘ ಸಂಸ್ಥೆಗಳಲ್ಲಿ ಅಭಿಪ್ರಾಯ ಭೇದಗಳು ಬರುವುದು ಸಹಜ. ಆದರೆ ಅದೇ ಕಾರಣದಿಂದ ಸಂಘ ಸಂಸ್ಥೆಗಳೊಳಗೆ ಪಾರ್ಟಿ ಪಂಗಡಗಳನ್ನು ಮಾಡಿಕೊಳ್ಳುವುದು ಸಂಘ ಸಂಸ್ಥೆಗಳ ಬಲಕ್ಕೆ ಹಾನಿಕರವಾಗಿದೆ ಎಂದು ಹೇಳಿ [illegible]

[illegible]

ಕಾಂಗ್ರೆಸ ವರ್ಕಿಂಗ ಕಮಿಟಿಯಲ್ಲಿ ವಿಶ್ವಾಸ

[illegible]

ಕಾಂಗ್ರೆಸಿಗೆ ಮುಸ್ಲಿಮರ ಸಹಾಯ ಪ್ರೋತ್ಸಾಹ

[illegible]

ಆಚಾರ್ಯ ಕೃಪಲಾನಿಯವರ ಸೂಚನೆ

[illegible]

ಫೆಡರೇಶನಿನ ಬಲಾತ್ಕಾರವಾದರೆ—

[illegible]

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲ್ಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

[illegible]

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ [illegible]

ಪಂಡಿತ ವೆಂಕಟರಮಣಯ್ಯ
ಲಿವರ್ ಮತ್ತು ಸ್ಪ್ಲೀನ್ ಸ್ಪೆಶಿಯಲಿಸ್ಟ್
ಮೈಲಾಪುರ, ಮದ್ರಾಸ

A SENSATIONAL INTERVIEW

How could the world get on without "interviews"? Journalists who make a speciality of interviewing travel all over the world; they penetrate into houses and workshops, into laboratories and offices, go behind the scenes of theatres and visit the dressing room at sports grounds, and ask questions and take notes.

In the morning, you open your newspaper and read the results of a thousand and-one interviews. You learn how Dr. Willem Mengelberg works, what books Greta Garbo prefers, how Henry Ford began to make cars and how many letters Roosevelt must read every day ... .

As soon as you have done something out of the ordinary you are interviewed. You are asked every possible kind of question, and others, because the world wants to know something about.

Not long ago I interviewed Juan Vujtech. Do you know him, this Czech who is remarkable on account of his perseverance? In July 1937, the paper stated that he had just taken a decision as strange as it was audacious: he wanted to go round the world on foot and he had commenced his journey. We are now in 1938 and Vujtech has already covered 80 000 miles! I met him in South Africa and was able to have a five minutes talk with this sensational globe-trotter. "How are you" I enquired. "Well, sir, I've had nothing to worry about anywhere, every thing has gone swimmingly you understand. Naturally, one catches cold occasionally. You don't merely go round the world. In Egypt I was held up for some time by malaria, but thanks to the recommendations of the Malaria Commission of the League of Nations advising that for a cure of malaria a daily dose of 15 to 20 grains of quinine should be taken from 5 to 6 days that is all finished now and for good, you know. According to the abovesaid Malaria Commission I now take 6 grains of quinine no other medicine) every day. I have no further trouble. That's the product that has immunised me. To prevent malaria in hot countries I take 6 grains a day and to prevent influenza in cold ones I always take 3 grains of quinine every day. You ought to do the same, it's good for everybody."

'I'll think about it", I replied.

"Tired? I never get tired. I never do less than 25 miles a day. Sometimes as much as 30. And now I'm just going to the boat for Australia.

Juan Vujtech continues his journey on foot round the world.

Mal Eng 57

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಬಿಳಿಗಿದ ಎಲೆಗಳಿಂದ ಪೆಟ್ರೋಲು ತಯಾರಿ

ಅಮೇರಿಕನ ವೈಜ್ಞಾನಿಕನ ಅದ್ಭುತ ಶೋಧ

ಒಣಗಿದ ಎಲೆಗಳಿಂದ ಪೆಟ್ರೋಲು ತಯಾರಿಸುವ ಹಲವು ವರ್ಷಗಳ ಪ್ರಯತ್ನದಲ್ಲಿ ಅಮೇರಿಕನ ವೈಜ್ಞಾನಿಕರು ಜಯಶೀಲರಾಗಿರುವರು. ಯುದ್ಧ ಕಾಲದಲ್ಲಿ ಯುದ್ಧೋಪಕರಣಗಳ, ಯಂತ್ರ ಸಾಮಗ್ರಿಗಳಿಗೆ ಈ ಪೆಟ್ರೋಲು ಬಹಳ ಉಪಯುಕ್ತವೆಂದು ಕಂಡುಬಂದಿದೆ. ಅದಕ್ಕೋಸ್ಕರ ಜರ್ಮನಿಯ ಬ್ಲೇಕ ಫೋರಿಸ್ಟ ಎಂಬ ಗೊಂಡಾರಣ್ಯ ಪ್ರದೇಶದಲ್ಲಿ ದೊಡ್ಡ ಬಳೆ ಯಂತ್ರವನ್ನು ಇಟ್ಟು ಪೆಟ್ರೋಲು ತಯಾರಿಸಲಿಕ್ಕೆ ಆರಂಭಿಸಿದ್ದಾರೆ. ಕೆಲಸಗಾರರು ಕಾಡುಗಳಿಗೆ ಹೋಗಿ ಟನ್ನುಗಟ್ಟಲೆ ಒಣಗಿದ ಎಲೆಗಳನ್ನು ಗುಡಿಸಿ ತರುವರು. ಪೆಟ್ರೋಲು ತಯಾರಿಗೆ ಕೆಲವು ಜಾತಿಯ ಎಲೆಗಳು ಮಾತ್ರ ಉಪಯುಕ್ತವಾಗಿರುವುವಂತೆ. ಒಂದು ಯಂತ್ರ ಸಾಧನವು ಎಲೆಯ ರಾಶಿಗಳಿಂದ ಅಂಥ ಎಲೆಗಳನ್ನೇ ಸಂಗ್ರಹಿಸಿ ಇಡುವುದು. ಕನಿಷ್ಟ ತರಗತಿಯ ಸುಮಾರು ಒಂದು ಗೆಲನ ಪೆಟ್ರೋಲನ್ನು ಈ ಎಲೆಗಳಿಂದ ತಯಾರಿಸಲಿಕ್ಕೆ ವೈಜ್ಞಾನಿಕರಿಗೆ ೮೦೦ ಪವನುಗಳಷ್ಟು ಖರ್ಚಾಗಿದೆ. ಆದರೆ ಈ ಬಗೆಯ ಪೆಟ್ರೋಲು ತಯಾರಿಯಲ್ಲಿ ಇನ್ನೂ ಕೆಲವು ಸುಧಾರಣೆಗಳಾದಾಗ ಅದನ್ನು ಖನಿಗಳಿಂದ ತೆಗೆದ ಪೆಟ್ರೋಲಿನಷ್ಟೇ ಸುಲಭಕ್ರಯಕ್ಕೆ ಮಾರಬಹುದೆಂದು ಅವರು ಹೇಳುತ್ತಾರೆ.

ಮಂಗಳನ ರಹಸ್ಯ ಭೇದನ

ಮಂಗಳ ಗ್ರಹದ ಸಂಪೂರ್ಣ ರಹಸ್ಯಗಳನ್ನು ಈ ವರ್ಷ ತಿಳಕೊಳ್ಳಬಹುದಾಗಿ ಪ್ರಪಂಚದ ವೈಜ್ಞಾನಿಕರು ಆಶಿಸಿರುವರು. ಈ ವರ್ಷ ಮಂಗಳ ಗ್ರಹವು ಕಳೆದ ೧೫ ವರ್ಷಗಳಿಗಿಂತ ೨೮ ಮಿಲಿಯ ಮೈಲು ಭೂಮಿಗೆ ಸಮೀಪವಾಗುತ್ತದೆ. ಆದ್ದರಿಂದ ದೂರದರ್ಶಿಯ ಮೂಲಕ ಅದರ ನಿರೀಕ್ಷೆ ಪರೀಕ್ಷೆಗಳನ್ನು ಮಾಡಲಿಕ್ಕೆ ಈ ವರ್ಷವು ಬಹಳ ಅನುಕೂಲವಾಗಿ ಕಂಡುಬಂದಿದೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿರುವ ೩೦ ದೊಡ್ಡ ನಿರೀಕ್ಷಣಾಲಯಗಳಿಂದ ಖಗೋಲಶಾಸ್ತ್ರಿಗಳು ಮಂಗಳನನ್ನು ಎಡೆಬಿಡದೆ ಹಗಲೂ ರಾತ್ರಿ ನಿರೀಕ್ಷಿಸುತ್ತಿದ್ದಾರೆ. ಈ ನಿರೀಕ್ಷಣೆಯ ಫಲವಾಗಿ—ಮಂಗಳನಲ್ಲಿ ಸಸ್ಯ ಮತ್ತು ಪ್ರಾಣಿವರ್ಗಗಳಿರಬಹುದೆಂಬ ವಾದಕ್ಕೆ ಪುಷ್ಟಿಯು ದೊರೆತಿದೆ. ಅದರಲ್ಲಿ ಮನುಷ್ಯನಂಥ ಬುದ್ಧಿಯುಳ್ಳ ಪ್ರಾಣಿವರ್ಗವಿರಬಹುದೆಂಬ ಊಹೆಯೂ ಉಂಟಾಗಿದೆ. ಒಂದೇ ವಲಯವು ಹಸುರಾಗಿದ್ದುದು, ಋತುಭೇದದಿಂದ ಕಂದು ಇತ್ಯಾದಿ ಬೇರೆ ಬೇರೆ ಬಣ್ಣಗಳಿಗೆ ಮಾರ್ಪಡುತ್ತಿರುವುದರಿಂದ, ಉಚ್ಚ ಜಾತಿಯ ಜೀವಿಗಳು ಅಲ್ಲಿ ಬೇಸಾಯದಲ್ಲಿ ತೊಡಗಿರಬಹುದೆಂದೂ, ಆ ಕಾರಣದಿಂದ ವರ್ಣ ಪರಿವರ್ತನವಾಗುತ್ತದೆಂದೂ ಕೆಲವು ವೈಜ್ಞಾನಿಕರು ಹೇಳತೊಡಗಿದ್ದಾರೆ.

ಬಣ್ಣ ಬಣ್ಣದ ಮಿರುಗುಟ್ಟುವ ಉಕ್ಕು

ಇತ್ತೀಚೆಗೆ ಆಗಿರುವ ಇನ್ನೊಂದು ಉಪಯುಕ್ತ ಶೋಧವೆಂದರೆ ಬಣ್ಣಬಣ್ಣದ ಮಿರುಗುಟ್ಟುವ ಉಕ್ಕಿನದಾಗಿದೆ. ಇದನ್ನು ಅಮೇರಿಕದ ವಿಜ್ಞಾನಿಯು ಕಂಡುಹಿಡಿದಿರುವನು. ಓಸ್ವಾರ ಬ್ರಾನೋಬಾಕ್ ಎಂಬುದು ಆ ವೈಜ್ಞಾನಿಕನ ಹೆಸರಾಗಿದೆ. ವಿಜ್ಞಾನಿಯು ಮೊದಲು ಉಕ್ಕನ್ನು ಒಂದು ದ್ರಾವಕ (ಎಸಿಡ್) ದಲ್ಲಿ ಮುಳುಗಿಸುವನು. ಆ ಮೇಲೆ ಗುಪ್ತವಾಗಿಟ್ಟ ಕೆಲವು ರಾಸಾಯನಿಕ ಪದಾರ್ಥಗಳನ್ನು ಆ ಉಕ್ಕಿಗೆ ಲೇಪಿಸುವನು. ಮತ್ತೆ ಅದನ್ನು ಬೆಂಕಿಯಲ್ಲಿಟ್ಟು ಕಾಯಿಸುವನು. ಆಗ ಉಕ್ಕಿಗೆ ಯಾವ ರಾಸಾಯನಿಕ ಪದಾರ್ಥದ ಲೇಪನವಾಗಿದೆಯೋ, ಅದರಂತೆ ಕಪ್ಪು, ನೀಲ, ಕೆಂಪು, ಹಸುರು ಇತ್ಯಾದಿ ಬಣ್ಣಗಳು ಬರುವುವು. ಈ ಬಣ್ಣಗಳು ಸರ್ವಥಾ ಹಾಳಾಹೋಗುವುದಿಲ್ಲ. ಈ ಬಗೆಯ ಉಕ್ಕಿಗೆ ತುಕ್ಕು ಹಿಡಿದು ಅದರ ನಷ್ಟವಾಗುವ ಪ್ರಮಾಣವು ಕೂಡ ಬಹಳ ಕಡಿಮೆಯಾಗಿರುವುದೆಂದು ಹೇಳಲಾಗುತ್ತದೆ.

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಒಳಲೆ, ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ
ಎಲ್ಲಾ ಋತುಗಳಲ್ಲಿಯೂ
ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:
ಆಯುರ್ವೇದಾಶ್ರಮ
ಮದರಾಸು.

ಸ್ಟಾಕಿಸ್ಟರು:
ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹೀರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮಾಲು ಪರದೇಶದಿಂದ ಬರುವಂತೆ ಉಂಟು. ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ
ಮಿಸ್. ಎಮ್. ಶಾಹ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್ — ಪಿ. ಎಚ್ ಭಟ್ಕಳ | ಗದಗ - ವಿ ಎಸ್ ಶೆಟ್ಟಿ
ಮೈಸೂರು, ಕೂರ್ಗ, ದಕ್ಷಿಣ ಕನ್ನಡ ಏಜೆಂಟ್ — ಡಾ ಕೆ ಭಾಸ್ಕರ ಪೈ.
ಸ್ಪೆಶಲ್ ಏಜಂಟ್ — ಟಿ ಪ್ಪಿ. ಹೊನ್ನಾವರ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡ ಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲವರ ರುಚಿಗೆ ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು

ನಂ ೧ ಸಾರಥಿ ನಸ್ಯ 1 ವೀಸಕ್ಕೆ ರೂ 3-4-0 ಸಪೆಶಿಯಲ ಮಾರ್ಕ ಸಾರಥಿ ನಸ್ಯ 1 ವೀಸಕ್ಕೆ ರೂ 3 9 0
(ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ —
ಎ ಪಿ ಸಾರಥಿ
ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ ಬಿ ನಂಬ್ರ 47 ಮದ್ರಾಸ

ಸರದಾರ ಭವನ Sirdar Bhavan

ಫೆಲಿಕ್ಸ್ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೆ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಉಪಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ

Propriter — H. R. Rao,
Bangalore Gult Emporium Madras

ರಕ್ಷ್ಯನ್ತು ಹಾರ್ಯಮಸ್ತು ಕರ್ಮಣ
ದೇವಾ । ನ ಭೀಷಿರೇ ಭೀತಾ
ವಿಶೀರ್ಣ ಭೀತಿನಾ ॥ ಸುಧಾಂ
ವಿನಾ ನ ಪ್ರಯಯುರ್ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ದೊರೆಯ ಬಿನುಗನು ರತ್ನಗಳು
ಸಾ । ಗರನ ಮಥಿಸಲು ಸುರರು
ಗದರಿಂ । ಹರುಷವಾಯಿತೆ! ಮತೆ
ವಿಶ್ವವ ಸುಡುವ ಬರುತಿರುವ ॥
ಗರಲಕವರಂಜಿದರೆ! ಸುಧೆಯಾಗು
ವರಿಕು ಕ್ಷಮ್ಯರ
ತೆರದಿ ಕುಲಕರಿ । ತೆಲಸ ಬಲದಿ
ತೆರೆರಿದು ಧೀರರು
ನಿಶ್ಚಿತಾರ್ಥವನ ॥

ತಾರೀಕು ೨೬—೫—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 26—5—1939

ಕಾಂಗ್ರೆಸಿನೊಳಗೆ 'ಫಾರ್ವರ್ಡ್ ಬ್ಲಾಕ್' ಅವಾಂಛನೀಯ

ಡಾಕ್ಟರ ಎಸ್. ಎಸ್. ಹರ್ಡೀಕರರ ಅಭಿಪ್ರಾಯ

ಹೆಚ್ಚು ಮಂದಿ ಸದಸ್ಯರಿರುವ ಸಂಘ ಸಂಸ್ಥೆಗಳಲ್ಲಿ ಅಭಿಪ್ರಾಯ ಭೇದಗಳು ಬರುವುದು ಸಹಜ. ಆದರೆ ಅದೇ ಕಾರಣದಿಂದ ಸಸ ಸಂಸ್ಥೆಗಳೊಳಗೆ ಪಾರ್ಟಿ ಪಂಗಡಗಳನು ಮಾಡಿಕೊಳ್ಳುವುದು ಸಂಘ ಸಂಸ್ಥೆಗಳ ... [illegible] ... ಅಧಿಕಾರ ಸ್ಥಾನಗಳನ್ನು ಕಿತ್ತುಕೊಳ್ಳುವ ... ಸೆಯಿಂದ ಪಾರ್ಟಿಗಳನ್ನು ಮಾಡಿಕೊಳ್ಳುವುದು ಅನಾವಶ್ಯ ಮತ್ತು ಅವಾಂಛನೀಯ ಎಂದು ಡಾಕ್ಟರ ಹರ್ಡೀಕರರ ಅಭಿಪ್ರಾಯವಾಗಿದೆ.

[illegible]

ಕಾಂಗ್ರೆಸ ವರ್ಕಿಂಗ ಕಮಿಟಿಯಲ್ಲಿ ವಿಶ್ವಾಸ

ಮಧುರಾಂತಕಮ್, ... ಮೊದಲಾದ ಕಡೆಗಳಲ್ಲಿ ಪ್ರಚಂಡ ಸಾರ್ವಜನಿಕ ಸಭೆಗಳಾಗಿ ಮಹಾತ್ಮಾ ಗಾಂಧಿಯವರಲ್ಲಿ ... ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ ಮತ್ತು ಅವರ ಕಾಂಗ್ರೆಸ ವರ್ಕಿಂಗ ಕಮಿಟಿಯಲ್ಲಿ ಯೂ ತಮ್ಮ ದೃಢ ವಿಶ್ವಾಸಗಳನ್ನು ಸೂಚಿಸುವ ಠರಾವುಗಳು ಸ್ವೀಕರಿಸಲ್ಪಟ್ಟಿರುವದರಿಂದ ಮುಂಬಯಿಯಲ್ಲಿ ಶ್ರೀ ಭುಲಾಭಾಯಿ ದೇಸಾಯಿಯವರು ಗಾಂಧಿಯವರ ತತ್ವ ಸಿದ್ಧಾಂತಗಳನ್ನು ಒಪ್ಪಿ ಕಾಂಗ್ರೆಸ ಕಾರ್ಯ ಗಾರರಾಗಲಿಚ್ಛಿಸುವವರ ಒಂದು ಸಂಘ ಸ್ಥಾಪನೆ ಮಾಡಲಿದ್ದಾರೆ. ಈ ಸಂಘದ ಸದಸ್ಯರು ಕಾಂಗ್ರೆಸ ಮೆಂಬರರಾಗಿರಬೇಕಾದ್ದು ಮಾತ್ರವಲ್ಲದೆ ಅವರು ದಿನನಿತ್ಯ ನೂಲುವವರೂ ಸತತ ಖಾದಿಧಾರಿಗಳೂ ಆಗಿರಬೇಕು. ಗಾಂಧಿಯವರ ಅನುಸರಣದಿಂದಲೇ ಭಾರತದ ಉದ್ಧಾರ ಎಂಬುದು ಈ ಸಂಘದ ನಿಶ್ಚಿತ ಅಭಿಪ್ರಾಯವಾಗಿರುವುದು.

ಕಾಂಗ್ರೆಸಿಗೆ ಮುಸ್ಲಿಮರ ಸಹಾಯ ಪ್ರೋತ್ಸಾಹ

ಮಲಬಾರದ ರಾಷ್ಟ್ರೀಯ ಮುಸ್ಲಿಮರ ಒಂದು ಪರಿಷತ್ತು ಕಳೆದವಾರ ಕನ್ನಾನೂರಿನಲ್ಲಿ ಕಲ್ಲಿಕೋಟೆಯ ಅಲ್ ಅಮೀನ ಪತ್ರಿಕೆಯ ಸಂಪಾದಕ ... [illegible]

... ಗಳ ಅಭಿಪ್ರಾಯವಾಗಿದೆ.

... ದೇಶದ ಎಲ್ಲ ಕಡೆಗಳ ಅನೇಕ ಮುಸಲ್ಮಾನ ಮುಖಂಡರು ಒಂದಿದ್ದರು. ... ಕಾಂಗ್ರೆಸ ದೇಶದ ... ದೊಡ್ಡ ರಾಷ್ಟ್ರೀಯ ಸಂಸ್ಥೆಯಾಗಿ ... ಪ್ರಾಂತ್ಯಗಳಲ್ಲಿ ಅಧಿಕಾರ ನಡೆಸುತ್ತಿರುವುದರಿಂದ ಅದು ... ಸಮರ್ಥವಾಗಿರುವುದೆಂಬುದು ಈ ... ಅಭಿಪ್ರಾಯ. ... ಈ ಪರಿಷತ್ತಿನಲ್ಲಿ ಕೂಡ ಮುಸಲ್ಮಾನರು ಕಾಂಗ್ರೆಸಿನೊಂದಿಗೆ ಸಹಕರಿಸಬೇಕೆಂದು ಠರಾವಾಗಿದೆ. ಮುಸ್ಲಿಮ್ ಲೀಗು ... ಸಭೆ ಕೂಡ ಈ ಪರಿಷತ್ತನ್ನು ಬಹಿಷ್ಕರಿಸಬೇಕೆಂದು ... ಪರಿಷತ್ತಿನ ಮೇಲೆ ಸ್ವಲ್ಪವಾದರೂ ... ಪರಿಷತ್ತು ಬಹಳ ವಿಜೃಂಭಣೆಯಿಂದ ತನ್ನ ಕಾರ್ಯಕಲಾಪಗಳನ್ನು ಮಾಡಿ ... [illegible]

ಆಚಾರ್ಯ ಕೃಪಲಾನಿಯವರ ಸೂಚನೆ

ಕಾಂಗ್ರೆಸ ತತ್ವ ಸಿದ್ಧಾಂತಗಳನ್ನು ಒಪ್ಪದ ಅನೇಕ ಜನರು ತಮ್ಮ ಸ್ವಾರ್ಥಸಾಧನೆಗೆ ಕಾಂಗ್ರೆಸನ್ನು ಉಪಯೋಗಿಸುತ್ತಿರುವ ... ದಿಂದ, ... [illegible]

[illegible]

ಫೆಡರೇಶನಿನ ಬಲಾತ್ಕಾರವಾದರೆ-

ಬ್ರಿಟಿಷ ಸರಕಾರವು ಹಿಂದುಸ್ಥಾನದ ಮೇಲೆ ಫೆಡರೇಶನನ್ನು ಬಲವಂತದಿಂದ ಹೇರಿಸಿದ್ದಾದರೆ ಏನು ಮಾಡಬೇಕೆಂಬ ... ಶ್ರೀ ... ನವರು ... ಒಂದು ... [illegible]

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಮಕ್ಕಳ ಎಲ್ಲಾ ಸ್ಲೀಹ ಮತ್ತು ಯಕೃತ್ತುಗಳ ಬಾಧೆಗೆ
"ಲಿವರ್ ಕ್ಯೂರ್"
ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು
ವಿಲಕ್ಷಣ ತಯಾರಿ
ವಿಶೇಷ ವಿವರಕ್ಕೆ ಬರೆಯಿರಿ
ಜಮ್ಮಿ ವೆಂಕಟರಮಣಯ್ಯ
ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ,
ಮೈಲಾಪುರ, ಮದ್ರಾಸು.

ಹೈದರಾಬಾದ ಜೈಲುಗಳ ರೋಮಾಂಚನಕಾರಿ ಸಮಾಚಾರ

ಕಾಂಗ್ರೆಸಿನ ಸಂಬಂಧವಿಲ್ಲದಿದ್ದಾಗ್ಯೂ ಹೈದರಬಾದ ಸತ್ಯಾಗ್ರಹವು ದಿನೇ ದಿನೇ ಹೆಚ್ಚೆಚ್ಚು ಸ್ಫೂರ್ತಿ ಉತ್ಸಾಹಗಳಿಂದ ಕೂಡಿ ನಡೆಯುತ್ತಿರುವದು. ಹೈದರಾಬಾದ ಮತ್ತು ಹೊರಗಿನ ಸ್ವಾರ್ಥಾಂಧರಾದ ಮುಸಲ್ಮಾನರು ಎಷ್ಟು ಅಪಪ್ರಚಾರ ಮಾಡಿದರೂ, ಈ ಸತ್ಯಾಗ್ರಹ ಆಂದೋಲನವು ಸಾಂಪ್ರದಾಯಿಕವಾಗಿಲ್ಲ, ಅದು ವಿಶುದ್ಧ ಧಾರ್ಮಿಕ ಆಂದೋಲನವಾಗಿರುವದೆಂಬುದನ್ನು ಕಾಂಗ್ರೆಸ ಅಧಿಕಾರಿಗಳು ಕೂಡ ಒಪ್ಪಿದ್ದಾರೆ. ಆದ್ದರಿಂದ ಆರ್ಯ ಸಮಾಜ ಹಾಗೂ ಹಿಂದೂ ಮಹಾಸಭೆಯವರು ಈ ಆಂದೋಲನದ ಸೂತ್ರಧಾರರಾಗಿದ್ದರಾದರೂ, ಕಾಂಗ್ರೆಸ ಮಂದಿ ಈ ಸತ್ಯಾಗ್ರಹದಲ್ಲಿ ವ್ಯಕ್ತಿಗತವಾಗಿ ಭಾಗವಹಿಸಲಿಕ್ಕೆ ಸ್ವತಂತ್ರರಿದ್ದಾರೆಂದು ಘೋಷಿಸಲ್ಪಟ್ಟಿದೆ. ಈ ಎಲ್ಲಾ ಕಾರಣಗಳಿಂದ ಈ ದಿನಗಳಲ್ಲಿ ಹೈದರಾಬಾದದಲ್ಲಿ ಪ್ರತಿನಿತ್ಯ ನೂರಿನ್ನೂರು ಮಂದಿ ಧರ್ಮವೀರರು ಸತ್ಯಾಗ್ರಹ ಮಾಡಿ ಧಾರ್ಮಿಕ ಸ್ವಾತಂತ್ರ್ಯದ ಬಲಿವೇದಿಯ ಮೇಲೆ ತಮ್ಮನ್ನು ಬಲಿಗೊಟ್ಟು ಧರ್ಮ ರಕ್ಷಣೆ ಮಾಡಲಿಕ್ಕೆ ಸಿದ್ಧರಾಗಿರುವರು. ದೇಶದ ಹಲವು ಭಾಗಗಳಿಂದ ಬಾಲಕಬಾಲಿಕೆಯರು, ಸ್ತ್ರೀಯರು, ವೃದ್ಧರು ಕೂಡ ಸತ್ಯಾಗ್ರಹದಲ್ಲಿ ಭಾಗಿಯಾಗುವ ತಮ್ಮ ಇಚ್ಛೆಯನ್ನು ಪ್ರಕಟ ಮಾಡುತ್ತಾರೆ. ಇತ್ತಕಡೆಗೆ ಗೌರವಪೂರ್ಣವಾದ ಒಂದು ಸಂಧಾನವಾಗಿ ಹೈದರಾಬಾದದಲ್ಲಿ ಮುಸಲ್ಮಾನರಿಗೆ ಎಷ್ಟು ಧಾರ್ಮಿಕ ಸ್ವಾತಂತ್ರ್ಯವಿದೆಯೋ ಅಷ್ಟು ಹಿಂದುಗಳೇ ಆದಿಯಾಗಿ ಇತರ ಜಾತಿ ಮತ ಧರ್ಮೀಯರಿಗೂ ದೊರೆಯುವ ತನಕ ಸತ್ಯಾಗ್ರಹವು ನಿಲ್ಲುವ ಲಕ್ಷಣಗಳು ಕಂಡು ಬರುವದಿಲ್ಲ.

ರೋಮಾಂಚನಕಾರಿ ಸಮಾಚಾರಗಳು

ಹೈದರಾಬಾದ ಜೈಲುಗಳಿಂದ ರೋಮಾಂಚನಕಾರಿ ಸಮಾಚಾರಗಳು ಬರಲಾರಂಭಿಸಿರುವವು. ಹೈದರಾಬಾದದ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಹೊಂದಿದ ಇಬ್ಬರು ಸತ್ಯಾಗ್ರಹಿಗಳು ಶೋಲಾಪುರ ಸತ್ಯಾಗ್ರಹ ಸಮಿತಿಯ ಮುಂದೆ ಕೊಟ್ಟ ಹೇಳಿಕೆಯಲ್ಲಿ—'ಸತ್ಯಾಗ್ರಹಿಗಳು ಕ್ಷಮೆ ಬೇಡಿ ಜೈಲುಗಳಿಂದ ಹೊರಗೆ ಹೋಗಬೇಕೆಂಬುದಕ್ಕೋಸ್ಕರ ಅವರೊಡನೆ ಪಶುತುಲ್ಯ ವ್ಯವಹಾರವಾಗುತ್ತದೆ. ಅವರನ್ನು ಬಹಳ ನಿರ್ದಯವಾಗಿ ಹೊಡೆಯುತ್ತಾರೆ. ಲಾಥಿ ಹೊಡೆಯುತ್ತಾ ಎಲುಬು ಮುರಿಯುತ್ತದೆಯೋ ಎಂಬ ಕಡೆಗೆ ಕೂಡ ಲಕ್ಷಕೊಡುವದಿಲ್ಲ. ಪೆಟ್ಟು ತಿಂದು ತಿಂದು ಅನೇಕ ಮಂದಿ ಸ್ಮೃತಿ ತಪ್ಪಿ ಬೀಳುತ್ತಾರೆ. ಅನೇಕ ಮಂದಿ ಗಾಯಗೊಂಡು ಆಸ್ಪತ್ರೆಗೆ ಕಳುಹಿಸಲ್ಪಡುತ್ತಾರೆ. ನಾವು ಮಾಫಿ ಬೇಡಲಾರೆವೆಂದು ಖಂಡಿತ ಹೇಳಿದಾಗ ಜೈಲಿನ ಅಧಿಕಾರಿಗಳು ಸಿಟ್ಟಾಗಿ ನಮ್ಮನ್ನು ಕೈಕಾಲು ಕಟ್ಟಿ ಒಂದು ಕತ್ತಲೆ ಕೋಣೆಯಲ್ಲಿ ದೊಬ್ಬಿಬಿಟ್ಟರು. ಅನಂತರ ನಿತ್ಯವೂ ನಮ್ಮನ್ನು ಹೊಡೆಯುತ್ತಿದ್ದರು. ಹೊಟ್ಟೆ ತುಂಬ ಅನ್ನ ಕೂಡ ಕೊಡುತ್ತಿದ್ದಿಲ್ಲ. ೧೫ ದಿನಗಳ ತನಕ ಹೀಗೆಯೇ ಮಾಡಿ ಒಂದು ದಿನ ಬಲಾತ್ಕಾರದಿಂದ ಮಾಫಿನಾಮೆಯ ಮೇಲೆ ನಮ್ಮ ದಸ್ಕತು ಪಡೆದು ಆ ಮೇಲೆ ಬಿಟ್ಟುಬಿಟ್ಟರು' ಎಂದಿದ್ದಾರೆ. ಈ ಇಬ್ಬರೂ ಸತ್ಯಾಗ್ರಹಿಗಳ ಶರೀರದ ಅಂಗೋಪಾಂಗಗಳು ಬಾತಿವೆ. ಸಮಿತಿಯು ಅವರನ್ನು ಶೋಲಾಪುರದ ಒಂದು ಆಸ್ಪತ್ರೆಗೆ ಕಳುಹಿಸಿದೆ. ಪೂರ್ಣ ಸ್ವಸ್ಥರಾದ ಬಳಿಕ ಪುನಃ ಸತ್ಯಾಗ್ರಹ ಮಾಡಲಿಕ್ಕೆ ಹೈದರಾಬಾದಿಗೆ ಹೋಗುವರು.

ಔರಂಗಾಬಾದ ಜೈಲಿನಲ್ಲಿ

ಸತ್ಯಾಗ್ರಹಿಗಳಿಗೆ ಎರಡು ತಿಂಗಳ ತನಕ ಗೋದಿ ರೊಟ್ಟಿ ಕೊಡುತ್ತಿದ್ದರು. ಆದರೆ ಮೇ ೨ನೇ ದಿವಸದಿಂದ ಒಪ್ಪೊತ್ತು ಜೋಳದ ರೊಟ್ಟಿ

ಸತ್ಯಾಗ್ರಹಿಗಳ ಮೇಲೆ ಪಾಶವಿಕ ಅತ್ಯಾಚಾರ!

ಕುಪ್ಪಿಚೂರು ಬೆರಸಿದ ಆಹಾರ, ಮಾಫಿಬೇಡಲಿಕ್ಕೆ ಬಲಾತ್ಕಾರ

ಒಬ್ಬ ಸತ್ಯಾಗ್ರಹೀ ವೀರನ ಆಮರಣಾಂತ ಉಪವಾಸ

ಮಾತ್ರ ದೊರೆಯುತ್ತದೆ. ಸುಮಾರು ಒಂದು ಸಾವಿರ ಸತ್ಯಾಗ್ರಹಿಗಳು ಈ ಜೈಲಿನಲ್ಲಿದ್ದಾರೆ. ಅವರು ಇದರ ನಿಷೇಧಾರ್ಥ ಒಂದು ದಿನ ಉಪವಾಸ ಮಾಡಿದರು. ಮೇ ೯ರ ದಿನ ಸತ್ಯಾಗ್ರಹಿಗಳಿಗೆ ಗಾಜಿನ ಚೂರುಗಳು ಸೇರಿದ್ದ ರೊಟ್ಟಿಗಳು ಕೊಡಲ್ಪಟ್ಟಿದ್ದುವು. ಅದನ್ನು ಜೈಲಧಿಕಾರಿಗಳಿಗೆ ತೋರಿಸಲಾಯಿತು. ಜೈಲಿನಲ್ಲಿ ಬಹಳ ಅಸಂತೋಷ ಮತ್ತು ಭಯವು ಉಂಟಾಗಿದೆ. ಸಿಂಧ ಹೈದರಾಬಾದದ ಸತ್ಯಾಗ್ರಹಿ ದಳವಾಯಿಗಳಾಗಿ ಔರಂಗಾಬಾದ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಶ್ರೀ ಪಂಡಿತ ಮದನ ಮೋಹನರವರು ಜೈಲಿನಲ್ಲಿ ಸತ್ಯಾಗ್ರಹಿಗಳೊಡನೆ ಆಗುತ್ತಿರುವ ದುರ್ವ್ಯವಹಾರಗಳ ಪ್ರತಿ ಅಸಂತೋಷ ಮತ್ತು ವಿರೋಧವನ್ನು ಪ್ರಕಟಿಸುವುದಕ್ಕೆ ಮೇ ೯ರಿಂದ ಆಮರಣಾಂತ ಉಪವಾಸವನ್ನು ಕೈಕೊಂಡಿರುವರು. ೩೨ ಜನರಿಂದ ಬೇರೆ ೨೦೦ ಮಂದಿ ಉಪವಾಸದಲ್ಲಿದ್ದಾರೆ.

ಗುಲ್ಬರ್ಗದಲ್ಲಿ

ಹೊಸ ಜೈಲನ್ನು ಕಟ್ಟಿಸುತ್ತಿದ್ದಾರೆ. ಹಳೆ ಜೈಲು ಸತ್ಯಾಗ್ರಹಿಗಳಿಂದ ತುಂಬಿಹೋಗಿರುವದು. ಶ್ರೀ ಮಹಾವೀರಸಿಂಹ ಮೊದಲಾದ ಸತ್ಯಾಗ್ರಹಿ ಕೈದಿಗಳಿಂದ ಭೂಮಿ ಅಗೆಯುವ ಕೆಲಸವನ್ನು ಮಾಡಿಸುತ್ತಿದ್ದಾರೆ. ಭೂಮಿಯು ಬಹಳ ಕಠಿಣವಾಗಿರುವುದು. ಶೋಲಾಪುರದ ಮುಸ್ಲಿಂ ಲೀಗ್ ಪರಿಷತ್ತಿನಿಂದ ಹಿಂದಿರುಗಿದ ಕೆಲವು ಮುಸಲ್ಮಾನ ಸ್ವಯಂಸೇವಕರು ಗುಲ್ಬರ್ಗ ಜೈಲುಮಾರ್ಗವಾಗಿ ಹೋಗುತ್ತಿದ್ದಾಗ ಜೈಲಾಧಿಕಾರಿಗಳು ಸತ್ಯಾಗ್ರಹಿ ಕೈದಿಗಳಿಂದ ಕಲ್ಲು ಕಡಿಯುವ ಕೆಲಸ ತೆಗೆದುಕೊಳ್ಳುತ್ತಿದ್ದರು. ಮುಸ್ಲಿಂ ಸ್ವಯಂಸೇವಕರು "ನಿಜಾಮ ಸರಕಾರ ಆರ್ಯಸಮಾಜ ಮುರ್ದಾಬಾದ—ಆರ್ಯ ಸಮಾಜ ಮುರ್ದಾಬಾದ—ಆರ್ಯ ಸಮಾಜ ನಾಶವಾಗಲಿ" ಎಂದು ಕೂಗಿ ಸತ್ಯಾಗ್ರಹಿ ಕೈದಿಗಳನ್ನು ಕೆರಳಿಸಿದಾಗ ಅವರು ಶಾಂತರಾಗಿ 'ಆರ್ಯ ಸಮಾಜವು ಅಮರವಾಗಲಿ' ಎಂದರು. ಇಷ್ಟಕ್ಕಾಗಿಯೇ ಜೈಲಧಿಕಾರಿಗಳು ಸತ್ಯಾಗ್ರಹಿ ಕೈದಿಗಳನ್ನು ಬಹು ವಿಧ ಪೀಡಿಸಿದರು.

ಪಂಚಮ ಸರ್ವಾಧಿಕಾರ ದಳಕ್ಕೆ ಜೈಲಿನಲ್ಲಿ ಸ್ಥಳವಿಲ್ಲ

ಪಂಚಮ ಸರ್ವಾಧಿಕಾರಿಗಳಾದ ಶ್ರೀ ಪಂಡಿತ ದೇವವ್ರತ ವಾನಪ್ರಸ್ಥಿಯವರೊಡನೆ ಕೈದಾದ ೫೩೬ ಮಂದಿ ಸತ್ಯಾಗ್ರಹಿಗಳಿಗೆ ಜೈಲಿನಲ್ಲಿ ಸ್ಥಳವಿಲ್ಲದೆ ಅವರನ್ನು ಒಂದು ಮರದ ಛಾಯೆಯಲ್ಲಿ ಇಟ್ಟಿದ್ದಾರೆ. ಅವರು ಅಲ್ಲಿಯೇ ಉಂಡು ತಿಂದು ಮಲಗುತ್ತಾರೆ. ಹಾಗೆಯೇ ದಿನ ಕಳೆಯುತ್ತಾರೆ. ಬೇಕಾದಷ್ಟು ಹಾಸಿಗೆ ವಸ್ತ್ರಗಳು ಕೂಡ ದೊರೆಯುತ್ತಿಲ್ಲ. ತಿನ್ನಲಿಕ್ಕೆ ಬೇಯಿಸಿದ ಕಡಲೆ ಮತ್ತು ಬೆಲ್ಲನೀರು ಕೊಡುತ್ತಾರೆ. ಹೀಗಿದ್ದರೂ ಅವರನ್ನು ಪರಸ್ಪರ ಮಾತನಾಡಲಿಕ್ಕೆ ಬಿಡುವುದಿಲ್ಲ. ಗುಂಡು ಹೊಡೆಯುವ ಬೆದರಿಕೆ ಹಾಕುತ್ತಾರೆ. ಒಬ್ಬನನ್ನು ಬೆತ್ತಲೆ ಮಾಡಿ ಛಡಿ ಹೊಡೆಯಲಿಕ್ಕೆ ಕರಕೊಂಡು ಹೋದರು. ಈ ಸಂಬಂಧ ಹೈದರಾಬಾದಿನ ಪ್ರಧಾನರಾದ ಸರ ಅಕ್ಬರ ಹೈದರಿಯವರಿಗೆ ತಂತಿ ಕೊಟ್ಟಿದ್ದಾರೆ. ಅದೇ ದಳದಲ್ಲಿದ್ದ ಪ್ರಿನ್ಸಿಪಾಲ ಜ್ಞಾನಚಂದರೊಡನೆ ಮಾಡಿದ ದುರ್ವ್ಯವಹಾರ ನಿಮಿತ್ತ ಪೋಲೀಸರು ಕ್ಷಮೆ ಬೇಡಿದ್ದಾರೆ.

ಅನ್ನಾಹಾರ ಕಡಿಮೆಯಾಗಿದೆ

ಗುಲ್ಬರ್ಗ ಜೈಲಿನಲ್ಲಿ ಅನ್ನ ಸಮಾಪ್ತಿಯಾಗಿದೆ. ಅಲ್ಲಿ ಬೇಕಾದಷ್ಟು ಭೋಜನವನ್ನು ಕೊಡುವುದಿಲ್ಲ. ಆರ್ಯವೀರರು ಉಪವಾಸ ಬೀಳತೊಡಗಿದ್ದಾರೆ. ಕೊಟ್ಟ ಅನ್ನದಿಂದ ಹೊಟ್ಟೆ ತುಂಬುವುದಿಲ್ಲ. ಕೇಳಿದಾಗ ಮುಂದಕ್ಕೆ ಕೊಡಲಾಗುವದೆಂದು ಜೈಲಧಿಕಾರಿಗಳು ಹೇಳಿದರು.

ಜೈಲುಗಳಲ್ಲಿ ಕೈದಿಗಳ ಮರಣ

ಜೈಲುಗಳಲ್ಲಿ ಆರು ಮಂದಿ ಸತ್ಯಾಗ್ರಹಿ ಕೈದಿಗಳು ಆಕಸ್ಮಿಕವಾಗಿ ಅಕಾಲ ಮರಣ ಹೊಂದಿರುವರು. ಇವರೆಲ್ಲರೂ ವಿವಿಧ ರೋಗಗಳಾಗಿದ್ದು, ಆ ರೋಗಗಳಿಂದ ಸತ್ತರೆಂದು ಹೈದರಾಬಾದ ಸರಕಾರವು ಒಂದು ಪ್ರಕಟಣೆಯನ್ನು ಕೊಟ್ಟಿದೆ. ಆದರೆ ಸರಕಾರವು ಈ ಕೈದಿಗಳ ಮೃತ್ಯು ಸೂಚನೆಯನ್ನು ಸತ್ಯಾಗ್ರಹ ಸಮಿತಿಗೆ ಕೊಟ್ಟಿದ್ದಿಲ್ಲ. ಹೊರಗಿನ ಡಾಕ್ಟರರಿಂದ ಅವರ ಶರೀರ ಪರೀಕ್ಷೆ ಮಾಡಿಸಿಲ್ಲ. ಆದ್ದರಿಂದ ಅವರ ಮರಣವು ಅಸ್ವಾಭಾವಿಕವಾಗಿದೆ ಎಂದು ಸಂಶಯ ಉತ್ಪನ್ನವಾಗುತ್ತದೆ. ಆದ ಕಾರಣ ಮುಂದೆ ಸತ್ಯಾಗ್ರಹಿ ಕೈದಿಗಳು ರೋಗಾವಸ್ಥೆಯಲ್ಲಿದ್ದಾಗ ಸರಕಾರವು ಸತ್ಯಾಗ್ರಹ ಸಮಿತಿಗೆ ಸೂಚನೆ ಕೊಡಬೇಕೆಂದೂ, ಅವರ ಚಿಕಿತ್ಸೆಯನ್ನು ಹೊರಗಿನ ಡಾಕ್ಟರರಿಂದ ಮಾಡಿಸಬೇಕೆಂದೂ ಅವರನ್ನು ಕಾಣುವ ಸೌಲಭ್ಯಗಳನ್ನು ಕೊಡಬೇಕೆಂದೂ ಶ್ರೀ ಪಂಡಿತ ಮಾಲವೀಯವರು ಸರಕಾರಕ್ಕೆ ತಿಳಿಸಿದ್ದಾರೆ.

ಧರ್ಮವೀರಸ್ಮಾರಕ ದಿವಸ

ಇದೇ ೨೬-೫-೧೯೩೯ರನ್ನು ಸಮಗ್ರ ಭಾರತ ಧರ್ಮವೀರ ಸ್ಮಾರಕ ದಿನವೆಂದು ಹಿಂದೂಸ್ಥಾನದ ಎಲ್ಲ ಕಡೆಗಳಲ್ಲಿಯೂ ಆಚರಿಸಲ್ಪಟ್ಟಿತು. ಅಂದು ಹೈದರಾಬಾದ ದಿವಸವು ಆಚರಿಸಲ್ಪಟ್ಟಿತು. ಹೈದರಾಬಾದ ಧರ್ಮಯುದ್ಧದಲ್ಲಿ ವೀರಗತಿಯನ್ನು ಪಡೆದ ಧರ್ಮವೀರರ ಕುಂದ ಸ್ಮೃತಿಸ್ಮರಣೆ ಮಾಡಿ ಹೈದರಾಬಾದದಲ್ಲಿ ಜರುಗುವ ಸತ್ಯಾಗ್ರಹಿಗಳ ಮೇಲಾಗುತ್ತಿರುವ ಸ್ವರೂಪ ಅತ್ಯಾಚಾರಗಳ ಖಂಡನಾತ್ಮಕ ಭಾಷಣಗಳಾಗಿ, ಸತ್ಯಾಗ್ರಹೀ ಕೈದಿಗಳ ಆಕಸ್ಮಿಕ ಮತ್ತು ಅಕಾಲಿಕ ಮರಣದ ಕುರಿತು ನಿಷ್ಪಕ್ಷಪಾತ ವಿಚಾರಣಾ ಸಮಿತಿಯನ್ನು ರಚಿಸಬೇಕೆಂದು ಸಾರ್ವಭೌಮ ಸರಕಾರದ ಪ್ರತಿನಿಧಿ ವಾಯಿಸ್‌ರಾಯರನ್ನು ವಿನಂತಿಸುವ ನಿರ್ಣಯ ಮಾಡಲಾಯಿತು. ಈ ಸಂಬಂಧ ಮೇ ೨೨ ಒಂದೇ ದಿನ ೧೨೦೦ ಮಂದಿ ಸ್ವಯಂಸೇವಕರು ಹೈದರಾಬಾದ ರಾಜ್ಯದಲ್ಲಿ ಸತ್ಯಾಗ್ರಹ ಮಾಡಿದರು.

ಕೈದು ಶಿಕ್ಷೆಗಳು

ಕಳೆದ ವಾರದಲ್ಲಿಯೂ ಇವುಗಳು ಕಡಿಮೆಯಾಗಿರುವದಿಲ್ಲ. ಹೈದರಾಬಾದ, ಗುಲ್ಬರ್ಗ, ಹುಮನಾಬಾದ, ಔರಂಗಾಬಾದ, ಲಾತೂರ ಮೊದಲಾದ ಕೇಂದ್ರಗಳಲ್ಲಿ ಕಳೆದ ವಾರ ದೇಶದ ಹಲವು ಕಡೆಗಳಿಂದ ಬಂದ ದಳಗಳು ಸತ್ಯಾಗ್ರಹ ಮಾಡಿ ಕೈದಾದುವು. ಹಲವರಿಗೆ ಶಿಕ್ಷೆಯಾಗಿದೆ. ಕಳೆದ ವಾರ ಒಟ್ಟು ಕೈದಾದ ಸತ್ಯಾಗ್ರಹಿಗಳ ಸಂಖ್ಯೆ ೧೨೦ ಮತ್ತು ಶಿಕ್ಷೆ ಹೊಂದಿದವರ ಸಂಖ್ಯೆ ೧೨೪ಕ್ಕೆ ಕಡಿಮೆಯಾಗಿರುವುದಿಲ್ಲ. ಹೈದರಾಬಾದ ವಿಜ್ಞಾಪನೆಯಂತೆ ಕೈದಾದವರ ಸಂಖ್ಯೆ ಇದರಲ್ಲಿ ಸೇರುವುದಿಲ್ಲ.

ಮಹಾತ್ಮರ ಬಳಿಗೆ ಶಿಷ್ಟಮಂಡಳ

ಶೋಲಾಪುರ ಸತ್ಯಾಗ್ರಹ ಸಮಿತಿಯ ಕಡೆಯಿಂದ ಶ್ರೀ ನಾಮದಾರ ಘನಶ್ಯಾಮದಾಸ ಗುಪ್ತ, ದೇಶಬಂಧು ಗುಪ್ತ, ಪ್ರೊಫೆಸರ ಸುಧಾಕರ ಮತ್ತು ಪಂಡಿತ ದುರ್ಗಾ ಪ್ರಸಾದರವರು ರಾಜಕೋಟೆಯಲ್ಲಿ ಮಹಾತ್ಮರನ್ನು ಕಂಡು ಅವರಿಗೆ ಹೈದರಾಬಾದ ಸತ್ಯಾಗ್ರಹ ಸಮಾಚಾರ ಮತ್ತು ಪರಿಸ್ಥಿತಿಯನ್ನು ತಿಳಿಸಿದರಾಗಿ ವರ್ತಮಾನವಿದೆ. ಅವರು ಶಿಷ್ಟಮಂಡಲವನ್ನು ಕೊಂಡುಹೋದುದರ ಪರಿಣಾಮವು ಮಾತ್ರ ತಿಳಿಯಲಿಲ್ಲ. ಆದರೂ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ತಾವು ಕೂಡಿದಷ್ಟು ಪ್ರಯತ್ನಪಡುವುದಾಗಿ ಮಹಾತ್ಮರು ಆಶ್ವಾಸನ ಕೊಟ್ಟಿರುವರೆಂದು ಊಹಿಸಲಾಗುತ್ತದೆ.

ಸೀಖರ ಸತ್ಯಾಗ್ರಹೀ ದಳ

ಮಾರ್ಶಲ್‌ಲಾ ಕೈದಿಯಾಗಿ ಈಗ ಬಿಡುಗಡೆ ಹೊಂದಿದ ಶ್ರೀ ಬಾಬಾ ಮದನಸಿಂಗ ಗಾಗಾರವರು ದಳನಾಯಕರಾಗಿ ೧೬ ಮಂದಿ ಸೀಖರು ಹೈದರಾಬಾದ ಸತ್ಯಾಗ್ರಹದಲ್ಲಿ ಭಾಗವಹಿಸುವುದಕ್ಕೋಸ್ಕರ ಲಾಹೋರಿನಿಂದ ಹೊರಟಿರುವರು. ಅವರೊಡನೆ ಇತರ ೧೧ ಮಂದಿ ಹಿಂದೂ ಸತ್ಯಾಗ್ರಹಿಗಳೂ ಇದ್ದಾರೆ. ಆರನೆ ಸರ್ವಾಧಿಕಾರಿಗಳಾದ ಮಹಾಶಯ ಕೃಷ್ಣರು ಮೇ ೨೮ರ ದಿನ ಲಾಹೋರಿನಿಂದ ಶೋಲಾಪುರಕ್ಕೆ ಹೊರಡುವರೆಂದು ಪ್ರಕಟವಾಗಿದೆ. ಹಾಗೆಯೇ ಕರಾಚಿ, ದಿಲ್ಲಿ ಹೋಶಿಯಾರಪುರ ಮೊದಲಾದ ಕಡೆಗಳಿಂದಲೂ ಸತ್ಯಾಗ್ರಹಿ ದಳಗಳು ಹೊರಟಿರುವುವು.

ಆಚಾರ್ಯ ಮುಕ್ತಿರಾಮರ ಕೈದು

ಹೈದರಾಬಾದದಲ್ಲಿ ಧರ್ಮಪ್ರಚಾರ ಮಾಡುವುದಕ್ಕೋಸ್ಕರ ಶೋಲಾಪುರದಿಂದ ಹೊರಟಿದ್ದ ಆಚಾರ್ಯ ಮುಕ್ತಿರಾಮರು ಹೈದರಾಬಾದದ ಕಲಬುರ್ಗಿಯಲ್ಲಿ ತಮ್ಮ ೬ ಮಂದಿ ಇತರ ಸಂಗಡಿಗರೊಡನೆ ಕೈದಾಗಿದ್ದಾರೆ.

ಶ್ರೀ ಭೋಪಟಕರರ ವಿಚಾರಣೆ

ಮೇ ೩೦ ೧೭ರ ದಿನ ಔರಂಗಾಬಾದದಲ್ಲಿ ಶ್ರೀ ಭೋಪಟಕರರ ವಿಚಾರಣೆಗಾರಂಭವಾಯಿತು. ತಾನು ಎಪ್ರಿಲ್ ೨೦ರ ದಿನ ಔರಂಗಾಬಾದಿಗೆ ಬಂದಿದ್ದಾದರೂ, ಆ ದಿನ ಜನ ಮುತ್ತಿಗೆಯಿಂದ ಮೆರವಣಿಗೆ ಹೊರಡದೆ ಪೇಠಿಯಲ್ಲಿಯೇ ಸಭೆಯಲ್ಲಿ ಭಾಷಣ ಮಾಡಿದೆನೆಂದು ಪೋಲೀಸರು ತನ್ನ ಮೇಲೆ ಹೊರಿಸಿದ ಆರೋಪವು ಸುಳ್ಳಾಗಿರುವುದೆಂದು ಅವರು ಮೆಜಿಸ್ಟ್ರೇಟರ ಮುಂದೆ ಹೇಳಿದರು. ತನಗೆ ಎಪ್ರಿಲ್ ೨೦ರ ದಿನ ಸತ್ಯಾಗ್ರಹ ಮಾಡುವ ಆಲೋಚನೆ ಇದ್ದಿಲ್ಲ. ಮರುದಿನ ಸತ್ಯಾಗ್ರಹ ಮಾಡುವವನಿದ್ದೆ ಎಂದು ಕೂಡ ಅವರು ವಾದಿಸಿದರು. ವಿಚಾರಣೆ ಮುಗಿದಿರುವದಿಲ್ಲ. ಶ್ರೀ ಭೋಪಟಕರರು ಮಹಾರಾಷ್ಟ್ರದ ಡೆಮೊಕ್ರಟಿಕ ಸ್ವರಾಜ್ಯ ಪಾರ್ಟಿಯ ಪ್ರಮುಖ ಸದಸ್ಯರಾಗಿದ್ದಾರೆ.

ಪರಂಡದಲ್ಲಿ ಮುಸಲ್ಮಾನರ ಆಕ್ರಮಣ

ಪರಂಡ ಎಂಬಲ್ಲಿ ಕೆಲವು ಮುಸಲ್ಮಾನರು ಸುಮಾರು ೨೦ ಸತ್ಯಾಗ್ರಹಿ ಕೈದಿಗಳ ಮೈಮೇಲೆ ಬಿದ್ದು ಅತಿಯಾಗಿ ಹಿಂಸಿಸಿದರೆಂದು ವರ್ತಮಾನ ಬಂದಿದೆ. ಗಾಯಗೊಂಡ ಕೈದಿಗಳನ್ನು ಬಾರಸಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಒಬ್ಬ ಸತ್ಯಾಗ್ರಹಿಯ ಸ್ಥಿತಿಯು ಚಿಂತಾಜನಕವಾಗಿರುವದು.

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxiliary-Abscess

There is no need of dressing the wounds, nor are baths prohibited

Price Rs. 2 Postage extra.

TAHIR DIN,
Anarkali, LAHORE.

ಹಳ್ಳಿಯ ಹತ್ತು ಸಮಸ್ತರು

ಮೊದಲ ಮಾತು.

ಇದು ನಮ್ಮ ಗ್ರಾಮಜೀವನದ ಹಲವು ಪ್ರಮುಖ ವ್ಯಕ್ತಿಗಳ ಚಿತ್ರ. ಯಾರನ್ನಾದರೂ ಉದ್ದೇಶಿಸಿಯೇ ಬರೆಯಲಿಲ್ಲವಾದರೂ ವ್ಯಕ್ತಿ ದೋಷಗಳು, ಘಟನೆಯ ದೋಷಗಳು ಘಟನೆಯ ರೀತಿಗಳು, 'ಕಾಂತ' ಆದರೂ—ಇವೆಲ್ಲ ವಾಸ್ತವವಾದುವು. ಹಳ್ಳಿಯು ಸಾವಿರಾರು ಕೋಟಿ ಕುಂದಾಪುರದೊಳಗಿನ ಒಂದು ಗ್ರಾಮ. ಸಮೂಹ, ವ್ಯಕ್ತಿಗಳು ಮಾತಿನ ರೀತಿಗಳು ಹಲವು ಅಲ್ಲಿನವೆ. ಒಂದು ಪಾತ್ರಪರಿಚಯಗಳೇ ಈ ಚಿತ್ರಗಳ ಗುರಿ. ಅವನ್ನು ಓದಿಕೊಂಡು ಮುಂದೆ ಬರುವ ಪ್ರಸ್ತಾವನೆಯನ್ನು ಓದಿದರೆ, ಅನಂತರದಲ್ಲಿ ಸಾಮಾಜಿಕ ಜೀವನದ ಒಂದು ಸಮಸ್ಯೆಯು ನಮ್ಮ ಹಳ್ಳಿಯಲ್ಲಿ ಹೇಗೆ ಬಿಡಿಸಲ್ಪಡಬಹುದು ನಾನು ಬರೆದ ಪ್ರಸ್ತಾವನೆಯ ಬಳಿಕ ವಾಚಕರು ಒಂದೊಂದು ಕಾದಂಬರಿಯನ್ನು ಕಲ್ಪಿಸಲಿ, ಅವರ ಮುಂದಿರುವ ಪಾತ್ರಗಳು ಇಂಥವು—ಎಂದು ತಿಳಿಸಿಕೊಡುತ್ತೇನೆ. ಇತಿ,

ಶಿವರಾಮ ಕಾರಂತ

೧೪. ರೂರಲ್ ಆಸ್ಪತ್ರೆ ರಾಮರಾಯರು

"ಶೂ ಠಾ, ರಾ ನೋ?" ಎಂದು ನಸ್ಯದ ಸುಬ್ಬಭಟ್ಟನು ಪಾಟಾಳಿ ಪರಮಯ್ಯನೊಡನೆ ಮಾತನಾಡುವುದು ಕೇಳಿಸಿತು. ಪರಮಯ್ಯನಿಗೆ ಇದೆಲ್ಲಾ ಅರ್ಥವಾದೀತೇ? ನೀನು ಹೇಳುವುದನ್ನು ಬಾಯಿಬಿಡಿಸಿ ಹೇಳಬಾರದೆ ಎಂದು ಕೇಳಿದನು.

"ರೂರಲ್ ಆಸ್ಪತ್ರೆ ರಾಮರಾಯರನ್ನೋ ಎಂದು ಕೇಳಿದೆ"-ಎಂದು ಉತ್ತರ ಬಂದಿತು. ಡಾಕ್ಟರು ರಾಮರಾಯರ ಹೆಸರಿನ ಮೊದಲಿನ ಅಕ್ಷರಗಳನ್ನೆಲ್ಲಾ ಜೋಡಿಸಿ "ರೂರಾರಾ" ಎಂದು ಗೇಲಿಮಾಡುವುದು ನಮ್ಮೂರ ವಾಡಿಕೆಯಾಗಿತ್ತು. ನಸ್ಯದ ಸುಬ್ಬಭಟ್ಟನಿಗೆ ರಾಮರಾಯರ ಹೆಸರು ಕೇಳಿದರೂ ಆಗದು, ಆದರೆ ಚೆನ್ನಪ್ಪಯ್ಯನಿಗೆ ಅವರು ತೀರ ಬೇಕಾದವರು. ಹಾಗೇ ತ್ರೈನಾಥ ಬಚ್ಚನಿಗೆ ಈ ಡಾಕ್ಟರರ ಹೆಸರಾಗದು. ನಾಗಯ್ಯ ಸೆಟ್ಟರು ಅಂತರಂಗದಲ್ಲಿ ಅಲ್ಲವಾದರೂ ಬಹಿರಂಗದಲ್ಲಿ ಅವರ ವಿಷಯ ತುಂಬಾ ಚೆನ್ನಾಗಿದ್ದಾರೆ. ಆಸ್ಪತ್ರೆ ಡಾಕ್ಟರರು ಬರುವಾಗ ಎದುರಿನ ಮಟ್ಟಿಗಾದರೂ ರಾಮರಾಯರಿಗೂ ಊರವರಿಗೂ ಒಳ್ಳೇದಿದೆ. ಅದ್ದರಿಂದಲೇ ಪರಮಯ್ಯನನ್ನು ಈ ಸುಬ್ಬಭಟ್ಟನ ದ್ವೇಷ ಚೇಷ್ಟೆಗಳನ್ನು ಕಂಡು ಒಂದು ದಿವಸ "ಹೌದೇ ಸುಬ್ಬಣಯ್ಯ-ಅಂಥವ ಚಿನ್ನದಂಥ ಡಾಕ್ಟರರಿಗೂ ನಿನ್ನ ತಮಾಷೆಯೇ. ಏನೂ ಇರಲಿ, ಡಾಕ್ಟರು ಬಂದ ಮೇಲೆ ಪ್ರಾಣ ಹೋಗುವ ಕಾಲದಲ್ಲಿ ಒಂದಿಷ್ಟು ಮದ್ದಾದರೂ ಸಿಗುತ್ತದೆ-ಅಲ್ಲವಾದರೆ ಕುಂದಾಪುರ ಆಸ್ಪತ್ರೆಗೇ ಹೋಗಬೇಕಿತ್ತು. ಇಲ್ಲವೇ ಕೊಳ್ಕೂರಿನ ನಾಪಿನ ಕೆಂಪು ನೀರು ತರಬೇಕಿತ್ತು" ಎಂದನು.

ಸುಬ್ಬಭಟ್ಟನಿಗೆ ರಾಮರಾಯರ ಶಿಫಾರಸು ಕೇಳುವುದೆಂದರೆ ಕಿವಿಯಲ್ಲಿ ಕಾದ ಸೀಸ ಸುರಿದ ಹಾಗೆ. 'ಡಾಕ್ಟರು ಅಂದರೆ ಧನ್ವಂತರಿಯ ಪದ್ದೇ ಅವತಾರ. ಇನ್ನೇನೆ ಊರು ಉದ್ಧಾರ ಮಾಡಲಿಕ್ಕೆ ಎಂದಿದ್ದಾರೆ. ಸರಕಾರದವರು ತಿಂಗಳತಿಂಗಳ ರೂಪಾಯಿ ದಂಡ ಕೆತ್ತರೆ ಇವನು ಕನ್ನಡೇ ಅಂಗಡಿಯಂತೆ ತೆರೆದು ಮದ್ದು ಕೊಡುತ್ತಾನೆ. ಬಡಬಗ್ಗರಿಗೆ ಪ್ರಾಣಹೋದರೆ ಇಷ್ಟು ಮದ್ದು ಕೊಡಲಿಕ್ಕಿಲ್ಲ"-ಎಂದನು. ಪರಮಯ್ಯನಿಗೆ ಸಿಟ್ಟು ಬಂದಿತು. ಯಾಕೆ ಅಸ್ಯಾಯ ಹೇಳುತ್ತೀ ಮಹಾರಾಯಾ? ನಾನೇನ ರಾಮರಾಯರಿಗೆ ಕೊಟ್ಟಿದ್ದೆ? ಅಲ್ಲ—ನನ್ನಲ್ಲಿ ಕೊಡಲಿಕ್ಕೇನು ಉಂಟು? ಮೊನ್ನೆ ನನ್ನ ಮಗಳು ಸತ್ತೇ ಹೋಯಿತು ಎಂದು ಮಲಗಿದ್ದಳು ಬದುಕಿ ಬಂದು ಗ್ರಹಿಸಿದ್ದೆ. ಆ ಮದ್ದು, ಈ ಬೇರು ಎಂದು ಹಾದಿಯೆಲ್ಲಾ ಹರಡಿ ಸಿಕ್ಕಂತಾನ ಮಾಡಿದರೂ ಮಗುವಿಗೆ ಹಿಡಿದ ಜ್ವರ ಬಿಡಲಿಲ್ಲ. ಕಡೆಗೆ ರಾಮರಾಯರಲ್ಲಿ ಹೋಗಿ ದಮ್ಮಯ್ಯ ಅಂದೆ. ನನ್ನಲ್ಲಿ ಕಾಸಿಲ್ಲ—ಮಗುವನ್ನೊಂದು ಉಳಿಸಿದ ಪುಣ್ಯ ಬರುತ್ತ—ಅಂದೆ. ಅರ್ಧ ಊಟದಲ್ಲೇ ಬಿಟ್ಟು ಮನೆವರೆಗೆ ಬಂದು ಇಂಜೆಕ್ಷನ ಮಾಡಿ ಹೋದರು. ಮಗುವು ಹುಷಾರಾಯಿತು." ಅವರಾಗಿ ಒಂದು ಕಾಸು ಕೇಳಲಿಲ್ಲ. ನಾನೇ ಅವರ ಋಣ ಉಳಿಸಬಾರದು ಎಂದು ಎರಡು ಕೋಳುಮೊಟ್ಟೆ ಮರಸಣಿಗೆ ಅವರ ಮನೆಗೆ ಮುಟ್ಟಿಸಿ "ಅಯ್ಯಾ- ಇದೇ ಬಡವನಿಂದಾಗುವುದು. ಏನಾದರೂ ಬೆಟ್ಟ ಬೇಕಾದ್ದರೆ ಹೇಳಿ—ಪಾಟಾಳಿ ಪರಮನಿದ್ದಾನೆ" ಎಂದೆ.

ಸುಬ್ಬನಿಗೂ ತಡೆಯಲಿಲ್ಲ—"ನೀನು ಪರಮು, ಅಮಟೆಕಾಯಿಯನ್ನು ಅಮೃತ ಮಾಡುವೆ. ನಿನಗೊಂದು ಉಪಕಾರ ಮಾಡಿದರಾಯಿತೇ? ಚೆನ್ನಪ್ಪಯ್ಯ ಅವರಿಗೆ ಅಷ್ಟು ಹಣ ಸುರುವಿದರಲ್ಲ. ನಾನು ಅವರ ಎದುಗೈ ಏನೋ ಮೈ ಭಾರಾಗುತ್ತ ಬಂದಿದೆ—ಒಂದು ಇಂಜೆಕ್ಷನ್ ಮಾಡಿ" ಎಂದರೆ ನಗುತ್ತ ಕಾಲಹರಣ ಮಾಡಿದರೇ ವಿನಹ ಮಾತನಾಡಲಿಲ್ಲ. ಕಡೆಗೆ ನಾನೇ ಇಂಜೆಕ್ಷನ ಸಲುಗೆ ತಂದು, ಅವರ ಮನೆಗೆ ಹೋಗಿ ಇನ್ನಾದರೂ ಇಷ್ಟು ಮದ್ದು ಚುಚ್ಚಿ ಅಂದೆ—'ಆಸ್ಪತ್ರೆಗೆ ಬಾ ಅದು ಮನೆಯಲ್ಲಿಲ್ಲ'—ಎಂದರು. ಅಬ್ಬ ನಮ್ಮ ಹಳ್ಳಿಯಲ್ಲೂ ಆಸ್ಪತ್ರೆ ಮನೆ ಎಂದು ದೌಲು ಮಾಡುತ್ತಾರಲ್ಲ . . . . . ನೋಡುವ ಒಂದು ದಿನ ಸಿಕ್ಕಿಯಾರು ನನ್ನ ಕೈಗೆ"

"ಹಾಂಗೆಲ್ಲ ಮಾತಬೇಡ—ಏನು ಸಂಗತಿಯೆಂದು ನಾನು ರಾಮರಾಯರನ್ನು ಕೇಳಿ ಹೇಳುತ್ತೇನೆ. ಅವರು ಅಂಥಾ ಜನವೇ ಅಲ್ಲ" ಹೀಗೆಂದು ಮಾತಿನ ಬಿಗಿಸಿ ಪರಮಯ್ಯನು ಹೊರಟನು. ಸುಬ್ಬಭಟ್ಟರ ಸವಾರಿ ಉಡುಪಿಗೆ ಹೋಗಿಬರುತ್ತೇನೆ ಎಂದು ಹೊರಟಿತು. ಅದೇ ದಿವಸ ಸಂಜೆ ಪರಮಯ್ಯನ ಸವಾರಿ ಕಿವಿತುರಿಸುತ್ತ ಡಾಕ್ಟರ ಮನೆಗೆ ಹೋಯಿತು.

'ಏನು ಬ ಪರಮ'—ಎಂದು ಡಾಕ್ಟರು ಕೇಳಿದರು. ಪರಮು ಕೊಂಕಿಕೊಂಡೇ ಸಂಗತಿ ಹೇಳಿ—'ನನಗೆ ತಿಳಿದೇ ಹೇಳುತ್ತೇನೆ ಡಾಕ್ಟರರೇ, ಆ ಸುಬ್ಬಣ್ಣನಿಗೆ ನಾಲಿಗೆ ದೊಡ್ಡದು. ಆದರೆ ಅವನಲ್ಲಿ ನತ್ತೆಗೆ ರೋಗವಿಲ್ಲ, ಬಡವ ಎಂದು ಎಣಿಸಿ ಪಾಪ ಹೇಗಾದರೆ ಒಂದು ಇಂಜೆಕ್ಷನ ಕೊಟ್ಟುಬಿಡಬಾರದೇಕೆ? ಅವನೇ ಮದ್ದು ತರುತ್ತಾನಂತಲ್ಲ. ಸ್ವಾಯತ್ತ ಅದು

ಅಂದರೆ ನೋಡಿ—ಚೆನ್ನಪ್ಪಯ್ಯನಿಗೆ ಅದು ಬೇಕಾದದ್ದು ಉಪಕಾರಕ್ಕಾಗಿದ್ದರೆ. ಅವನಿಂದ ಉಪಕಾರ ಆಗಲಿಕ್ಕೆ ಇದೆಯಲ್ಲ. ನಮ್ಮೂರು ನೋಡಿ ಡಾಕ್ಟರರೇ—ಜಬ್ಬು ತೆಗೆಯುವವರು" ಎಂದು ದೀರ್ಘಭಾಷಣ ಮಾಡಿದನು.

ಡಾಕ್ಟರರು ನಗುತ್ತ ಕೇಳುತ್ತಿದ್ದವರು 'ಪರಮು—ನೀನು ಬೆಳ್ಳಗಿದ್ದದ್ದೆಲ್ಲ ಹಾಲೆನ್ನುವ ಜಾತಿ. ಸುಬ್ಬಣ್ಣನಿಗೆ ಮದ್ದು ನಾನು ಯಾರು ಬಿಡಬೇಕೇ? ಅವನಂಥವರ ಸಹಾಯ ಮಾಡಿ ಏನೂ ಲಾಭವಿಲ್ಲ. ಬಡವನೂ ಸರಿ. ಆದರೆ ಚೆನ್ನಪ್ಪಯ್ಯನನ್ನು ಹಳಿಯಲು ಇವ ಯಾರು? ಅವನು ನಿಜವಾಗಿಯೂ ಕಸಗೆ ಇಂಥದೇ ಕಾಯಿಲೆ ಎಂದು ಹೇಳಿದರೆ ಒಂದು ಲೆಕ್ಕ. ನ್ಯಾಯ ಒದಗುತ್ತಿತ್ತು ಎಂದು ಹೇಳಿ ಫರಂಗಿ ರೋಗದ ಮದ್ದು ನನಗೆ ತಂದು ತೋರಿಸುತ್ತಾನೆ. ಪರಮಯ್ಯ ರೋಗ ತಗಲುವಂಥದ್ದು ಇವನಿಗೆ ಕಾಸುಂಟು, ಮದ್ದಿಗೆ ಕಾಸಿಲ್ಲವೇನು? ಹೆಣ್ಣುಗಳ ಹಿಂದೆ ಸುತ್ತಾಡುವ ಈ ಮನುಷ್ಯರಿಗೆ ಕದ್ದು ನಾನು ಧರ್ಮಮಾಡುವವನಲ್ಲ. ಆಸ್ಪತ್ರೆಗೆ ಬಂದರೆ ಲೆಕ್ಕಾಚಾರದ ಮದ್ದು ಕೊಟ್ಟು ಕಳುಹುತ್ತೇನೆ"

ಪರಮಯ್ಯನಿಗೆ ಸುಬ್ಬಣ್ಣಭಟ್ಟನ ಕಾಯಿಲೆಯು ಸುದ್ದಿ ಹೊಸ ಸಿಕ್ಕಿದ್ದೆ ಒಂದು ಅನುಭವವಾಯಿತು. "ನಿಮ್ಮ ಪ್ಯಾಂಟು ಬರಬರಿ—ತಿಂದು ಸೊಕ್ಕಿ ತಿಂದುಕೊಂಡ ಜಡಕ್ಕೆ ನೀವು ದೇವರ ಮದ್ದು ಕೊಡುವುದೆಂದರೆ ಅರ್ಥವಿಲ್ಲ"—ಎಂದು ಅವನು ಸಹ ಹೇಳಿದನು.

ರಾಮರಾಯರು ನಮ್ಮ ಹಳ್ಳಿಯ ಜೀವನದಲ್ಲಿ ಸಿಲುಕಿ ಮೂರು ವರ್ಷವಾಯಿತು. ವಿದೇಶದ ಮಾರ್ಗದಿಂದ ಬಂದ ಒಂದು ಶಿವಳ್ಳಿ ಬ್ರಾಹ್ಮಣರು ಅವರು. ಅವರು ಕಾಲೇಜಿನಲ್ಲಿ ಓದುತ್ತಿದ್ದಾಗ ಅವರಿಗೆ ದೇಶೋದ್ಧಾರದ ಹುಚ್ಚು ಹಿಡಿಯಿತು. ಅದಕ್ಕಾಗಿ ಶಾಲೆ ಬಿಟ್ಟು ಜೈಲಿಗೆ ಹೋಗುವ ಯೋಚನೆ ಮಾಡಿದರು. ಅದು ತಿಳಿದ ತಕ್ಷಣ ಅವರ ಅಪ್ಪ ಹಮಾಪನ ಯಿಂಬಾಲಿ ತಿತ್ತಾಯರು ಮಂಗಳೂರಿಗೆ ಓಡಿಬಂದರು—"ಮಗನೇ, ನಿನಗಾಗಿ ಆಸ್ತಿಪಾಸ್ತಿ ಇಂಗ್ಲಿಷು ವಿದ್ಯೆ ಮಾಡಿಸಿದರೆ—ನೀನು ಯಾವುದೂ ಸಾರ್ಥಕಕ್ಕೆ ಬರದ ಕೆಲಸ ಮಾಡುತ್ತೀಯೇನು?" ಎಂದು ಅತ್ತರು. ರಾಮಣ್ಣನ ಸವಾರಿ ದೇಶದ ದಾರಿ ಪ್ರವೃತ್ತಿಯ ಮೇಲೆ ಒಂದು ಉಪನ್ಯಾಸ ಮಾಡಿತು. ಅದಕ್ಕೆ ತಂದೆ "ಮಗು, ಊರು ಉದ್ಧಾರ ಮಾಡುವವನು ಪರಮಾತ್ಮ" ಮಾನ ಹ್ನನಿಂದೇನು ಆದೀತು? ನಿನಗೆ ಅಷ್ಟು ಮನಸ್ಸಿದ್ದರೆ ಮುಂದೆ ಪಠನವಾಗಿ ಕೆಲಸನೋಡಿ, ಸಂಪಾದನೆ ಮಾಡಿ ನಿನ್ನ ಜೀವನ ನಡೆಸಿ ಉಳಿದ ಕಾಲ ಬೇಕಾದವರಿಗೆ ಉಪಕಾರವಾಗುವ ಹಾಗೆ ಕಳೆದು ಊರಿಗೆ ಉಪಕಾರದೇ" ಎಂದು ಯುಕ್ತಿಯ ಮಾತನಾಡಿದರು. ಮೇಲೆ ಕಣ್ಣೀರನ್ನು ಬೇರೆ ಕರೆದರು.

ರಾಮರಾಯ ನಿಗೆ ಆಗ ರೂಪ, ವಯಸ್ಸು—ನ್ನೂ ನಷ್ಟು ಧಾರಾಳವಾಗಿತ್ತು. ಅದರಿಂದ ಕನ್ಯಾಪಿತೃ ತನ್ನಲ್ಲಿ ಮುಪ್ಪಾನುಡಿದ ಅವೇಶವನ್ನು ತಡೆದುಕೊಂಡನು. ಇಂಟರ ಪರೀಕ್ಷೆ ಮುಗಿಯಿತು. ಮುಂದೆ ವಕಾಲತೋ ಡಾಕ್ಟರಿಯೋ ಎಂದು ಕೂಗಿ ತೂಗಿ ನೋಡಿ, ಬಳಿಕ ತಂದೆ ಯೋಚನೆಯತ್ತಾಯರಿಗೆ ಮನೋಸಹ್ಯ ಸಮಾಧಾನವಿಲ್ಲದ ಹೊಸಿಗೆಯ ಡಾಕ್ಟರಿಯನ್ನು ಕಲಿಯಲು ನಿರ್ಣಯ ಮಾಡಿದನು. ಈ ವರ್ಷ ಮದ್ರಾಸು ವನವಾಸ ಮುಗಿದು ಊರಿಗೆ ಬಂದನು. ಇನ್ನು ಏನು ಎಂಬ ಪ್ರಶ್ನೆ ಬಂದಿತು. ಆತ್ತಲಾಗಿ ಜಾತಕದ ರಾಶಿಗಳು ಬಂದು ಸುರಿದವು. ಮೊದಲಾಗಿ ಒಂದು ಮದುವೆ ಎನ್ನುವುದನ್ನು ಮಾಡಿಕೊಂಡ—ಬೋರ್ಡಿನ ಆಶ್ರಯದಲ್ಲಿ ರೂರಲ್ ಆಸ್ಪತ್ರೆಯ ಅಧಿಕಾರಿಯಾಗಿ ನಮ್ಮ ಊರಿಗೆ ಬಂದನು. ಬರುವಾಗಲೇ ರಾಮರಾಯರು "ಮಗು ಕೋಟದವರ ಹಿಂದು ಅಲ್ಲಿ ಜಾಸ್ತಿ. ಏನೂ ಮಾಡಿಯಾರು" ಎಂದು ಎಚ್ಚರಕೊಟ್ಟಿದ್ದರು. ರಾಮರಾಯರು ಶಿವಳ್ಳಿಯವರು ಎಂದು ಕೇಳಿದೊಡನೆಯೇ "ಹಾ—ಉಡುಪಿ ಶಿವಳ್ಳಿ ನಮ್ಮೂರಿಗೇನು? ಆಗಲಿ ಯಾವ ಜಾತಿಯವರು ಬರುವುದಕ್ಕಿಂತ ಬ್ರಾಹ್ಮಣರೇ ಬಂದರಲ್ಲ." ಎಂದು ಸೀತ್ಕಾರದ ಹಾಗಿ ನವರಿಗೆ ಸಮಾಧಾನವಾಯಿತು.

ರಾಮರಾಯರು, ಇನ್ನೂ ಹರೆಯದ ವಯಸ್ಸಿನವರು. ಅವರಿಗೆ ಬಂದಾಗ ಇದ್ದ ಉಮೇದು ಹೇಳತೀರದು. ತಮ್ಮ ಡಾಕ್ಟರಿ ವೃತ್ತಿಯಿಂದ ನರಳುವ ಜೀವಿಗಳನ್ನು ಉಳಿಸುವ ಸಂದರ್ಭ ಎಂದು ತಿಳಿದಿದ್ದರು. ಆಸ್ಪತ್ರೆ ಧರ್ಮದ್ದು, ಮದ್ದು ಕೊಡುವವರು ಬ್ರಾಹ್ಮಣರು ಎಂದು ಕೇಳಿ ಕಾಯಿಲೆ ಇದ್ದವರು ಇಲ್ಲದವರು ಸಾಲಾಸಾಲು ಬರತೊಡಗಿದರು. ಬ್ರಾಹ್ಮಣರು ಒಂದು ಇಷ್ಟು ಆಸ್ಪತ್ರೆಗೆ ಬರುವುದನ್ನು ನೋಡಿ ನಾಗಯ್ಯ "ಇದೇನು ಆಸ್ಪತ್ರೆ ಎಂದರೆ ಭೋಜನಶಾಲೆಯೋ ಎಂದು ನಗಾಡಿದ್ದೂ ಉಂಟು.

ಬಂದ ಒಂದು ವರ್ಷ ಡಾಕ್ಟರರಿಗೆ ಉಸಿರಿಗೆ ಬಿಡುವಿಲ್ಲ. ವಿಸಿಟು, ವಿಸಿಟು, ವಿಸಿಟು— ಪ್ರತಿಫಲವೆಂದರೆ ಆಸ್ಪತ್ರೆಯ ಗ್ರಾಂಟು ಮದ್ದಿಗೆ ಸಾಲದು; ಮನೆಯಲ್ಲಿರಲಿಕ್ಕೆ ಪುರುಸೊತ್ತು ಸಾಲದು, ಹೆಂಡತಿಗೆ ಗಂಡನ ಭೇಟಿಯಾಗುವುದು ಊಟದ ಕಾಲಕ್ಕೆ ಮಾತ್ರ—ಇತ್ತ ಊಟಕ್ಕೆ ಹರ ಹರ ಅಂದರೆ ಅರ. ಏಳು ಕೋರ್ಟು ಅಕ್ಕಿಯುಳ್ಳವ ಹಳ್ಳಿಯವರೂ ಸಹ ಸ್ವಾಧೀನಧಾರಿಯಾಗಿ ಬಂದು, "ಏನೂ ಗತಿಯಿಲ್ಲ ಒಂದು ಹೆರಿಗೆ ಮಾಡಿಸಿಕೊಡಿ" ಎಂದು ಅತ್ತರೆ ಅವರೇನು ಮಾಡುವುದು? ಕ್ರಮೇಣ—ಊರಲ್ಲಿ ರಾಯರಿಗೆ ಗಂಜಿಗೆ ಗತಿಯಿರುವವರು ಯಾರು? ಯಾರ್ಯಾರು ಇಲ್ಲದವರು ಎಂದು ತಿಳಿಯಿತು. ಅದ್ದರಿಂದ ಮನೆಗೆ ಬನ್ನಿ ಎಂದು ಕರೆದರೆ 'ಫೀಸು' ಎಂದು ಬಾಯಿತೆರೆಯಲು ತೊಡಗಿದರು. ಆಗ ಬಂತು ಕೇಡು, ಅಬ್ಬಾ 'ಒಂದು ದುಡ್ಡಿನ ಭಂಕರು ಮಹಾ ಎಂದು ಸುದ್ದಿ ಹೊರಟಿತು. ಉಪಾಯವಿಲ್ಲದೆ ದುಡ್ಡು ಕೊಟ್ಟ ಮಹಾನುಭಾವರು ಬರೀ ಕಹಿ ನೀರು ಕೊಟ್ಟದ್ದು ಡಾಕ್ಟರರು. ೧೫ ದಿವಸ ಕುಡಿಸಿ ನೋಡಿಯಾಯಿತು—ಏನಾದರೂ ಫಲ ಏನೆಯೋ ಎನ್ನ ತೊಡಗಿದರು.

ಈಗ ರಾಮರಾಯರು ಊರವರ ವಿಷಯದಲ್ಲಿ ತುಸು ಎಚ್ಚರವಾಗಿದ್ದಾರೆ. ತೀರ ರೋಗಿಷ್ಟರಿಗೆ ಅವರು ಸಿದ್ಧರಾಗಿಯೇ ಇಲ್ಲ. ಏನೊ, ಬಡವರೆಂದು ಖಾತ್ರಿಯಾದರೆ ತಮ್ಮಿಂದಾಗುವ ಸಹಾಯ ಮಾಡುತ್ತಾರೆ. ಅಲ್ಲದೆ ಅವರ ಮನೆಯು ಮಟಮಟವೆಷ್ಟು ಎಳೆದ ಸಂಸಾರದಲ್ಲಿ ಬಂದು ಕೂಸು ಹೆಚ್ಚಾಯಿತು.. ತಂದೆಯವರು ತೀರಿಕೊಂಗುದರಿಂದ ಎಮ್ಮಾರ್ಗದಿಂದ ತಾಯಿಯನ್ನು ಕರೆಯುತಂದಿದ್ದಾರೆ. ಜತೆಗೆ ಒಂದೆರಡು ತಂಗಿಯರು. ಇವರೆಲ್ಲರೂ ಉನ್ನತ ಅಭ್ಯಾಸದಲ್ಲಿ ಕಲಿತವರಾದುದರಿಂದ ಕಾಸಿಲ್ಲದೆ ಸಂಸಾರ ನಡೆಯಲಾರದು. ಹೀಗಾಗಿ ರಾಮರಾಯರು ಬಾಯಿಬಿಟ್ಟು ಕಾಸು ಎಂದು ಕೇಳಿಸದಿದ್ದರೂ ಕೇಳಿ ವ್ಯವಹರಿಸಿಕೊಳ್ಳುವಂತಾಯಿತು.

ಏನು ಮಾಡುವುದು? ನಮ್ಮ ಊರವರಾದರೂ ದುಡ್ಡುಕೊಟ್ಟು ಮದ್ದುಕೊಳ್ಳುವ ದುಶ್ಚಾಳಿಯನ್ನು ಕಲಿಯುತ್ತಿರುವುದು ಈಗೀಗ. ಕೇಳು ವೈದ್ಯನ ಕಷಾಯದ ಶಕ್ತಿಗೆ ಆರಾಣೆಯಾದರೂ ಸಲ್ಲುವುದು ತಿಳಿಯುವುದಿಲ್ಲ. ಕಾರಣ—ಒಂದು ಕುಡ್ತೆ ಕಷಾಯ ಬಿದ್ದರೆ ಕನಿಷ್ಠ ನೂರು ಜಡಜಾಪತ್ರಗಳನ್ನು ಗುಣಮಾಡುವ ಶಕ್ತಿ ಅದಕ್ಕಿದೆ. ಆಸ್ಪತ್ರೆ ನೀರ—ಜ್ವರಕ್ಕೆ ಒಯ್ದರೆ ಜ್ವರವನ್ನು ನಿವಾರಿಸುವುದು. ಸಂಶಯ ಎಂದು ಅವರ ತಿಳಿವು.

ರಾಮರಾಯರನ್ನು ಊರವರ ಕಲಹಗಳಲ್ಲಿ ಎಳೆಯಲು ಯತ್ನಿಸಿದವರು ಬಹಳ ಜನರು. ಬಲು ಜಾಗ್ರತೆಯಿಂದ ಇದ್ದಾರೆ. ದೇಶಸ್ನೇಹಿತರು, ಉತ್ಸಾಹವಾಗಿ ಕಾಂಗ್ರೆಸು ಕಮಿಟಿಯನ್ನು ಮಾಡಿ, ಸಕ್ಕ ಅಹಿಂಸಾ ತತ್ವಗಳ ಪ್ರಚಾರಕ್ಕೆ ಅವರು ಯತ್ನಿಸಿದರು. ಅದರ ಫಲ ತಿಳಿಯಿತು. ಅತ್ತ ಚೆನ್ನಪ್ಪಯ್ಯರು, ಇತ್ತ ಮಹಾ ಬ್ರಾಹ್ಮಣರು, ಮಗದೊಂದು ಕಡೆ ನಾಗಯ್ಯ ಸೆಟ್ಟರು—ಎಲ್ಲರಿಗೂ ಬೇಡದವನಾಗಿ ಕುಳಿತರು. ಈಗೀಗ ಅವರಿಗೆ ಅನಿಸತೊಡಗಿದೆ "ಯಾರ ಪಕ್ಷಕಕ್ಕೂ ಇಲ್ಲ ಎಂದರೆ ಯಾರಿಗೂ ಬೇಡವಾದೇನು. ಯಾರಾದ್ದರೂ ಆಶ್ರಯ ಬೇಕು. ಆದರೆ ಈ ಹಳ್ಳಿಯಲ್ಲಿ ಯಾರನ್ನು ಹಿಡಿಯಲಿ? ಯಾರನ್ನು ಬಿಡಲಿ ಎಂಬ ತೊಡಕಿನಲ್ಲಿದ್ದಾರೆ. ಸಂಜೆ ಬೇಸರವಾದರೆ ಯಾರನ್ನಾದರೂ ಕರೆದು ಮಾತನಾಡಲಿಕ್ಕಿಲ್ಲ.

ಹೀಗಾಗಿ ಹೆಂಡತಿಯನ್ನು ಕರೆಕೊಂಡು ಮಗುವನ್ನು ಹೊತ್ತುಕೊಂಡು ತನ್ನಷ್ಟಕ್ಕೆ ಇಂತಿಂಗಿಗೆ ಹೋಗುತ್ತಾರೆ. ಅದೂ ಕಷ್ಟವೇ? "ನಮ್ಮ ರೂರಾರಾರಿಗೆ ಇದು ಮುಂಬಯಿ ಕಹ ರು ಎಂದು ತಿಳಿಯಲಿಲ್ಲ. ಅಲ್ಲವಾದರೆ ನಮ್ಮ ಹಳ್ಳಿಯಲ್ಲಿ ಇವರ ವಾಕಿಂಗು ಗೀಕಿಂಗು ಯಾಕೆ ಬೇಕು? ಯಾರ. ಇವರ ದೌಲು ನೋಡಿ "ಬೀಷ್" ಎನ್ನುವವರು—ಎನ್ನತೊಡಗಿದ್ದಾರೆ. ಇನ್ನು ಕೆಲವರು "ಆಸ್ಪತ್ರೆಗೆ ಬರುವವರಿಲ್ಲ ಎಂದು ಕಾಯುತ್ತದೆ" ಎನ್ನುತ್ತಾರೆ.

ಲೋಕಶಾಂತಿಯನ್ನು ಕಾಪಾಡುವ ಮಹಾಶಕ್ತಿ ರಸ್ಯಕ್ಕೊಂದಕ್ಕೇ ಇದೆ!

★ ಹಿಟ್ಲರ ಮುಸಲೋನಿಯರ ಮಾರಣಮಂತ್ರದ ಫಲ ಸೊನ್ನೆಯೇ ಸರಿ ★

ಹಿಟ್ಲರ ಮುಸಲೋನಿಯರು ಬಿಂಾವಣ ವ್ಯಾ ರಾವಣರಂತೆ ತಮ್ಮ ಡೋಲುಬಾರಿಸಿ ಜಗತ್ತನ್ನೇ ಧಿಗಿಲುಗೊಳಿಸುವ ಸ್ವಪ್ನ ಕಾಣುತ್ತಿರುವರು ಆದರೆ ಅವರ ಈ ರೀತಿಯ ಡೋಲ್ ಬಜಾವಿನಿಂದ ಜಗತ್ತು ಧಿಗಿಲುಗೊಳ್ಳುವಂತಿಲ್ಲವೆಂಬುದು ಅವರಿಗೆ ಇಷ್ಟರಲ್ಲೇ ತಿಳಿದಿರಬೇಕು. ಫ್ರಾನ್ಸನ್ನು ದಂಗುಬಡಿಸುವುದಕ್ಕಾಗಿ ಕಳೆದ ವಾರ ಈ ಬಿಂಕಿವಣ ವ್ಯೈರಾವಣರು ಫ್ರಾನ್ಸಿಗೆ ಒತ್ತಿರುವ ತಮ್ಮ ತಮ್ಮ ಗಡಿನಾಡುಗಳ ಪರೀಕ್ಷಣಮಾಡಿದರು. ಆದರೆ ಇವರ ಆ ಪರೀಕ್ಷಣದಿಂದ ಫ್ರಾನ್ಸಿನಲ್ಲೇನೂ ಉತ್ಪಾತಗಳಾಗಲಿಲ್ಲ. ಫ್ರಾನ್ಸು ತನ್ನ ಮನೆಮಾರನ್ನು ಮಾರನ್ನೆಯವರಿಗೆ ಆಸರೆಕೊಡದಂತೆ ಉತ್ತಮಸ್ಥಿತಿಯಲ್ಲಿಡಲಿಕ್ಕೆ ಚೆನ್ನಾಗಿ ಕಲಿತುಕೊಂಡಿದೆ. ಫ್ರಾನ್ಸಿನಲ್ಲಿ ಎಷ್ಟು ರಾಜಕೀಯ ಪಕ್ಷವಿಪಕ್ಷಗಳಿದ್ದರೂ, ವಿದೇಶಾಂಗ ನೀತಿಯ ಕುರಿತು ಅವೆಲ್ಲವುಗಳು ಒಂದಾಗಿ—ಉಗ್ರಧೋರಣವನ್ನು ಕಟ್ಟಿಕೊಳ್ಳುವುವು ಅದರ ರಕ್ಷಣ ಮತ್ತು ಆಕ್ರಮಣ ಸಿದ್ಧತೆಗಳು ಈಗ ಪೂರ್ಣವಾಗಿರುವುವು. ಅದರ ಆರ್ಥಿಕಸ್ಥಿತಿಯು ಈಗ ಮೊದಲಿಗಿಂತ ನೂರ್ಪಾಲು ಉತ್ತಮವಾಗಿರುವುದು. ಒಂದೇ ವಾಕ್ಯದಲ್ಲಿ ಹೇಳುವುದಾದರೆ ಫ್ರಾನ್ಸು ಯುದ್ಧಕ್ಕೆ ಹೋಗಲು ಈಗ ಯಾವಾಗಲು ಸಿದ್ಧವಾಗಿರುವುದು.

ಇಟಲಿ ಅರಸರ ಜರ್ಮನಿ ಪ್ರಯಾಣ

ಇಟಲಿಯ ಇಮ್ಯಾನುವೇಲ್ ಅರಸರು ಈ ವಾರ ಜರ್ಮನಿಗೆ ಪ್ರಯಾಣ ಬೆಳಸುವರು ಅವರ ಸಂಭ್ರಮಪೂರ್ವಕ ಸ್ವಾಗತದ ಸಿದ್ಧತೆಗಳಾಗಿವೆ. ಅತ್ತ ಬ್ರಿಟಿಷ ರಾಜದಂಪತಿಗಳು ಕೆನಡಕ್ಕೆ ಹೋಗಿ ಮುಟ್ಟಿರುವರು. ಅವರಿಗೆ ಅಲ್ಲಿ ಈ ಹಿಂದೆ ಯಾವ ಬ್ರಿಟಿಷ ದಂಪತಿಗಳಿಗೂ ದೊರೆಯದ ಉಪಚಾರಗಳು ಆಗಿರುವ್ವವು ಅವರು ಕೆನಡದಿಂದ ಅಮೇರಿಕಕ್ಕೂ ಹೋಗಿರುವರು. ಬ್ರಿಟಿಷ ರಾಜದಂಪತಿಗಳ ಅಮೇರಿಕ ಪ್ರಯಾಣದಿಂದ ಬ್ರಿಟಿಷ ಅಮೇರಿಕ ಸ್ನೇಹ ಸಂಬಂಧವು ಇನ್ನಷ್ಟು ಬಲಗೊಳ್ಳುವುದು ಬ್ರಿಟಿಷ ರಾಜದಂಪತಿಗಳ ಕೆನಡಾ-ಅಮೇರಿಕಾ ಪ್ರಯಾಣಕ್ಕೆ ತಕ್ಕ ಪ್ರತಿಕೃತ್ಯವೆಂಬಂತೆ ಇಟಾಲಿಯ ಅರಸನ ಜರ್ಮಾನಿ ಪ್ರಯಾಣವನ್ನು ಹಿಟ್ಲರ ಮುಸಲೋನಿಯರು ಏರ್ಪಡಿಸಿದ್ದಾರೆ.

ನಮಗೆ ನಿಮ್ಮ ಭರವಸೆ ಬೇಡ

ನಿಮಗೆ ನಮ್ಮ ಆಕ್ರಮಣದ ಭಯವಿದ್ದರೆ ನಾವು ನಿಮಗೆ ಭರವಸೆ ಕೊಡುವೆವು ಎಂದು ಹಿಟ್ಲರ ತಿಳಿಸಿರುವುದಕ್ಕೆ ಡೆನ್ಮಾರ್ಕ ಒಂದು ದೇಶವು ಮಾತ್ರ ಹಿಟ್ಲರನು ಕೊಟ್ಟ ಭರವಸೆಗಳನ್ನು ಒಪ್ಪಿ ಸ್ವೀಕರಿಸಿದೆ ಸ್ವೀಡನ್, ಫಿನ್ಲೆಂಡ, ನೊರ್ವೆಗಳು ಆತನ ಭರವಸೆಗಳನ್ನು ತಿರಸ್ಕರಿಸಿ ತಮ್ಮ ರಕ್ಷಣೋಪಾಯಗಳನ್ನು ತಾವೇ ಮಾಡಿಕೊಂಡಿರುವೆವು. ಅವುಗಳಿಗೆ ಹಿಟ್ಲರನ ಮಾತುಗಳ ನಂಬಿಗೆಯಾಗುವುದಿಲ್ಲ. ಕಾರಣ-ಜರ್ಮನ ಪ್ರಜೆಗಳಿಗೇ ನ್ಯಾಯವನ್ನು ಕೊಡಲಾರದ ಹಿಟ್ಲರ್ ಇತರ ರಾಷ್ಟ್ರಗಳಿಗೆ ಯಾವ ನ್ಯಾಯಗಳನು ಕೊಟ್ಟಾನು? ಜರ್ಮನಿಯಲ್ಲಿ ಪ್ರತಿನಿತ್ಯ ಯೆಹೂದಿ ಮಕ್ಕಳನ್ನು ಹಾಲು ಕಟ್ಟಿ ನಿಲ್ಲಿಸಿ, ಅವುಗಳು ಹಾಲು ಬೇಡುವಂತೆ ನಾಝಿಗಳ ಅತ್ಯಾಚಾರದಾಗುತ್ತದಂತೆ ಅಂದರೆ ಯೆಹೂದಿ ಮಕ್ಕಳಿಗೆ ಮಾತ್ರ ಹಾಲು ದೊರೆಯುವುದಿಲ್ಲ. ಇತರರಿಗೆ ಹಾಲಿನ ಸೌಕರ್ಯವಿದೆ. ಎಂದು ತೋರಿಸಿ ಕೊಡುವುದೇ ಈ ಪಾಶವಿಕ ಅತ್ಯಾಚಾರದ ರಹಸ್ಯ. ಇಂಥ ಅತ್ಯಾಚಾರಗಳು ಯಾವ ದೇಶದಲ್ಲಿ ನಡೆಯುತ್ತಿರುವುವೋ ಆ ದೇಶದ ಶಾಸಕರೇ—ಲೋಕಶಾಂತಿಯನ್ನು ಸ್ಥಾಪಿಸುವುದು ತಮ್ಮ ಉದ್ದೇಶವೆಂದಿದ್ದಾರೆ! ಲೋಕಶಾಂತಿಯ ಎಂಥ ಅಪಾರ್ಥವನ್ನು ಇವರು ಮಾಡಿರುವರೋ! ಪ್ರಪಂಚದ ನಾಗರಿಕತೆಗೆ ಜರ್ಮನ ನಾಝಿಗಳಿಂದ ಬಂದಿರುವ ಭಂಗವನ್ನು ಆ ನಾಝಿಗಳು ತಮ್ಮ ದೇಶದ

ಜರ್ಮನಿಯಲ್ಲಿ ನಾಝಿಗಳ ಪಾಶವಿಕ ಅತ್ಯಾಚಾರ—

ಯುದ್ಧಸಂಭವದಲ್ಲಿ ಸಿಂಗಾಪುರವನ್ನು ಅಮೇರಿಕ ಕೊಂಡುಕೊಳ್ಳುವುದು

ಯೆಹೂದಿ ಮಕ್ಕಳೊಡನೆಸಿಟ್ಟ ವ್ಯವಹಾರದಿಂದಲೇ ತಿಳಕೊಳ್ಳಬಹುದು ಆದ್ದರಿಂದ ನಾಝಿಗಳ ಅತ್ಯಾಚಾರಕ್ಕೆ ತಡೆಹಾಕುವ ಸಮಯವು ಈಗ ಬಂದಿದೆ ಯೂರೋಪದ ರಾಷ್ಟ್ರಗಳು ಇದನ್ನರಿತು ಕಾರ್ಯ ಪ್ರವೃತ್ತವಾಗಿವೆ. ಆದಕಾರಣ ಹಿಟ್ಲರ ಮುಸಲೋನಿಯರ ಮಾರಣ ಮಂತ್ರದ ಫಲವು ಸೊನ್ನೆಯಾಗ ತೊಡಗಿದೆ

ಯುದ್ಧವೇ ಶಾಂತಿಯೇ?

ಎಂಬುದಕ್ಕೆ ಮುಸಲೋನಿಯು ಕಳೆದ ವಾರ ಕೊಟ್ಟ ಉತ್ತರವು ಸ್ವಾರಸ್ಯದ್ದಾಗಿದೆ 'ಬಗೆಹರಿಸಬೇಕಾದ ನಮ್ಮ ಸಮಸ್ಯೆಗಳು ಎಷ್ಟೋ ಇವೆ. ಫ್ರಾನ್ಸಿನಿಂದಾದ ಅನ್ಯಾಯವು ದೂರವಾಗಬೇಕು ಫ್ರಾನ್ಸು ನಮ್ಮ ಹಕ್ಕಿನ ಪ್ರದೇಶಗಳನ್ನು ನಮಗೆ ಬಿಟ್ಟುಕೊಡಬೇಕು ಇಲ್ಲವಾದರೆ ನಾವು ಅವನ್ನು ಬಲಾತ್ಕಾರದಿಂದ ಕಿತ್ತುಕೊಳ್ಳುವೆವು' ಎಂದು ಗರ್ಜಿಸಿದ ಮುಸಲೋನಿ ಬ್ರಿಟನ ಟರ್ಕಿ ಒಡಂಬಡಿಕೆಯಾದ ಬಳಿಕ ಬಹಳ ಮೆತ್ತಗಾಗಿರುವನು ಫ್ರಾನ್ಸು ಗರ್ಜಿಸಿ ಮಾತನಾಡುವುದನ್ನು ನೋಡಿ ಅವನ ಸ್ವರವು ಬಿದ್ದುಹೋಗಿದೆ ಸ್ಪೈನಿನಿಂದ ಅವನ ಸೇನೆಯು ಹಿಂತಿರುಗಲೇ ಬೇಕಾಗಿದೆ ಹಿಟ್ಲರನಾದರೂ ಕಳೆದ ಎರಡು ವಾರಗಳಲ್ಲಿ ಬಾಯಿಗೊಂದು ಕೊಂಡೆಗೊಂದು ಕೈ ಇಟ್ಟು ಪಿಳಿಪಿಳಿ ನೋಡುತಿದ್ದಾನೆ ಈಗ ಈ ಸರ್ವಾಧಿಕಾರಿಗಳು ಸ್ವಲ್ಪ ಮಾತ್ರ ದುಡುಕಿದರೂ ಯುಗ್ಮವಾಗ ವುದೆಂಬದನ್ನು ಅವರು ಬಲ್ಲರು ಯುದ್ಧದ ಅನರ್ಥಗಳನ್ನೂ ಬಲ್ಲರು ಆದ್ದರಿಂದಲೇ ಮೊನ್ನೆ ಮುಸಲೋನಿ ತನ್ನ ಭಾಷಣದಲ್ಲಿ—ನಮಗೆ ಯುದ್ಧ ಬೇಡ, ನಾವು ಶಾಂತಿಯನ್ನೆ ಇಚ್ಛಿಸುತ್ತೇವೆ ಆದರೂ ನಮ್ಮ ಸಮಸ್ಯೆಗಳನ್ನು ನಾವು ಬಿಡಿಸಬೇಕು! ಎಂದಿರುವನು ಸರ್ವಾಧಿಕಾರಿಗಳಲ್ಲಿ ಇಷ್ಟರ ಪರಿವರ್ತನವು ಯಾಕಾಗಿರುವುದೆಂದರೆ, ಪ್ರಜಾಸತ್ತಾತ್ಮಕ ರಾಜ್ಯಗಳು ಈಗ ವ್ಯರ್ಥದ ಮಾತುಗಳಿಂದ ಕಾಲಹರಣಮಾಡುತ್ತಿಲ್ಲ ಅವು ತಮ್ಮ ವಿರುದ್ಧ ಸಂಘಟಿತವಾಗುತ್ತಾ ಇವೆ ಎಂಬುದನ್ನು ಈ ಸರ್ವಾಧಿಕಾರಿಗಳು ಕಂಡುಕೊಂಡಿದ್ದಾರೆ

ಪ್ರಜಾಸತ್ತಾತ್ಮಕ ರಾಜ್ಯಗಳ ಸಂಘಟನೆ

ಪ್ರಜಾಸತ್ತಾತ್ಮಕ ರಾಜ್ಯಗಳು ಹೇಗೆ ಸಂಘಟಿತವಾಗುತ್ತಿವೆ ಎಂಬುದನ್ನು ಬ್ರಿಟನು ಮಾಡಿಕೊಂಡ ಬ್ರಿಟನ ಟರ್ಕಿ ಒಡಂಬಡಿಕೆಯಿಂದ ತಿಳಿಯುತ್ತದೆ ಯುದ್ಧ ಸಂಭವದಲ್ಲಿ ಟರ್ಕಿಯ ಸ್ಥಾನವು ವಿಶೇಷ ಮಹತ್ವದ್ದಿರುವುದು ಟರ್ಕಿಯು ಬ್ರಿಟನು ಫ್ರಾನ್ಸುಗಳ ಸ್ನೇಹದಲ್ಲಿರುವುದರಿಂದ ಭೂಮಧ್ಯ ಕಪ್ಪು ಸಮುದ್ರಗಳ ಮೇಲೆ ಬ್ರಿಟನ ಫ್ರಾನ್ಸುಗಳ ಅಧಿಕಾರಕ್ಕೆ ಸ್ವಲ್ಪವಾದರೂ ಚ್ಯುತಿಬಾರದಂತಾಗುವುದು. ಬ್ರಿಟನ ಫ್ರಾನ್ಸುಗಳ ಸಮ್ಮಿಳಿತ ಜಲಸೈನ್ಯದ ಶಕ್ತಿಯು ಇಟಲಿಯ ಜಲಸೈನ್ಯದ ಶಕ್ತಿಗಿಂತ ಬಹಳ ಹೆಚ್ಚಿರುತ್ತದೆ ಟರ್ಕಿಯು ಈ ಎರಡು ರಾಜ್ಯಗಳ ಪಕ್ಷದಲ್ಲಿ ಸೇರುವುದರಿಂದ ಭೂಮಧ್ಯ ಕಪ್ಪು ಸಮುದ್ರಗಳಲ್ಲಿ ಈ ರಾಜ್ಯಗಳು ಸರ್ವತಂತ್ರ ಸ್ವತಂತ್ರವಾಗುವುವು ಪರಂತು ಒಡಂಬಡಿಕೆಯ ಮೂಲಕ ಟರ್ಕಿಯ ರಾಜಕೀಯ ಸ್ವಾತಂತ್ರ್ಯಕ್ಕೇನೂ ಭಂಗಬಂದಿರುವುದಿಲ್ಲ ಮಾತ್ರವಲ್ಲ ಅದರ ಆ ಸ್ವಾತಂತ್ರ್ಯಕ್ಕೆ ಬ್ರಿಟನ ಫ್ರಾನ್ಸುಗಳ ರಕ್ಷಣೆಯೂ ದೊರೆತಂತಾಗಿದೆ ಆದ್ದರಿಂದ ಇಟಲಿಯು ಈ ಒಡಂಬಡಿಕೆಯಾದುದನ್ನು ಕಂಡು ಕಂಗೆಟ್ಟಿವೆ ಇಟಾಲಿಯ ಆಹಾರ ಸಾಮಾಗ್ರಿಗಳ ಪೂರೈಕೆ, ವ್ಯಾಪಾರ ಸಾಮಾರಗಳ ಹೆಚ್ಚಿನ ಅಂಶವು ಜಿಬ್ರಾಲ್ಟರ ಸುಯೇಜುಗಳ ಮೂಲಕ ನಡೆಯುತ್ತದೆ. ಯುದ್ಧಕಾಲದಲ್ಲಿ ಈ ಮಾರ್ಗಗಳನ್ನು ಕಡಿಯುವುದು ಬ್ರಿಟನ ಫ್ರಾನ್ಸುಗಳಿಗೆ ಈಗ ಬಹಳ ಸುಲಭವಾಗಿದೆ ಆದ್ದರಿಂದ ದೀರ್ಘಕಾಲ ಯುದ್ಧ ನಡೆದರೆ ಇಟಲಿಯು ಉಪವಾಸದಿಂದಲೇ ಸಾಯಬೇಕಾಗುವುದು

ಇಷ್ಟಕ್ಕೇ ಸಮಾಧಾನವಿಲ್ಲ

ಫ್ರಾನ್ಸಿಗೆ ಬ್ರಿಟನ ಟರ್ಕ ಒಡಂಬಡಿಕೆಯಾದ ಮಾತ್ರಕ್ಕೇ ಸಮಾಧಾನವಿಲ್ಲ. ಬ್ರಿಟನ ರಸ್ಯ ಒಡಂಬಡಿಕೆಯೂ ಆಗಬೇಕೆಂದು ಅದು ಭಗೀರಥ ಪ್ರಯತ್ನಗಳನ್ನು ಮಾಡಿದೆ, ಯಾಕಂದರೆ ಲೋಕಶಾಂತಿಯನ್ನು ಕಾಪಾಡುವ ಮಹಾಶಕ್ತಿಯು ರಸ್ಯಕ್ಕೊಂದಕ್ಕೇ ಇರುವುದು ಆ ಮಹಾರಾಷ್ಟ್ರವೂ ಬ್ರಿಟನ ಫ್ರಾನ್ಸುಗಳ ಕಡೆಗೆ ಸೇರಿ ಬಿಟ್ಟರೆ, ಮತ್ತೆ ಹತ್ತು ಹಿಟ್ಲರ ಮುಸಲೋನಿಯರು ಬಂದರೂ ಏನೂ ಮಾಡದವರಾಗುವರು. ರಸ್ಯದ ಆಕಾಶ ಸೇನೆ ಜಗತ್ತಿನಲ್ಲಿ ಅಜೇಯವಾದ್ದು ಅದರ ಭೂಸೇನೆ ಅನುಪಮವಾದ್ದು, ಜಲಸೇನೆಯು ಕೂಡ ಮಿಕ್ಕ ರಾಷ್ಟ್ರಗಳಿಗಿಂತ ಕಡಿಮೆತರದ್ದಾಗಿಲ್ಲ. ಗಣದಲ್ಲಿಯೂ ಪರಿಮಾಣದಲ್ಲಿಯೂ ಈ ಸೇನೆಗಳು ಜಗತ್ತಿನ ಸೇನೆಗಳಲ್ಲಿ ಪ್ರಥಮಸ್ಥಾನದಲ್ಲಿ ಒರುತ್ತವೆ ಆದ್ದರಿಂದ ಯೂರೋಪದ ಭವಿಷ್ಯವು ರಸ್ಯದ ಕೈಯಲ್ಲಿದೆ ಅದನ್ನು ಬಿಟ್ಟು ಲೋಕಶಾಂತಿಯನ್ನು ಸ್ಥಾಪಿಸುವುದು ಯಾವ ರಾಷ್ಟ್ರಕ್ಕೂ ಸಾಧ್ಯವಲ್ಲ. ಇದನ್ನು ಎಲ್ಲಾ ರಾಷ್ಟ್ರಗಳ ಯುದ್ಧ ವಿಶಾರದರೂ ಏನೊಂದು ಸಂಕೋಚಪಡದೆ ಒಪ್ಪಿದ್ದಾರೆ ಹೀಗಿದ್ದು ಇಷ್ಟರ ತನಕ ಬ್ರಿಟನ ರಸ್ಯ ಒಡಂಬಡಿಕೆಯಾಗದಿರುವುದನ್ನು ಕಂಡು ಫ್ರಾನ್ಸಿಗೆ ವ್ಯಥೆಯಾಗಿರುವುದು ಮಿತ್ರರಾಷ್ಟ್ರಗಳಲ್ಲಿ ಯಾರ ಮೇಲೆ ಆಕ್ರಮಣವಾದರೂ ಒಬ್ಬರೊಬ್ಬರು ಸಹಾಯಕ್ಕೆ ಬರಬೇಕೆಂದು ರಸ್ಯ ಹೇಳುತ್ತದೆ ಹಾಗಲ್ಲ, ಪೂರ್ವ ಕಡೆಯ ಬಾಲ್ಟಿಕ ಸಮುದ್ರ ಬಳಿಯ ರಾಷ್ಟ್ರಗಳ ಮೇಲೆ ಆಕ್ರಮಣವಾದರೆ ಸಹಾಯಕ್ಕೆ ಬರುವುದಾಗಿ ರಸ್ಯವು ಭರವಸೆ ಕೊಟ್ಟರೆ ಸಾಕೆಂದ ಬ್ರಿಟನ ಹೇಳುತ್ತದೆ ರಸ್ಯದ ಮಾತಿನಲ್ಲಿ ನ್ಯಾಯವಿದೆ ಬ್ರಿಟನು ಇನ್ನೂ ತನ್ನ ಕುಟಿಲತೆಯನ್ನು ಬಿಟ್ಟಿಲ್ಲ ಹಾವು ಸಾಯಬಾರದು ಕೋಲು ಮುರಿಯಬಾರದು ಎಂಬುದು ಬ್ರಿಟನಿನ ಧೋರಣೆಯಾಗಿದೆ ಆದ್ದರಿಂದ ಒಡಂಬಡಿಕೆಯ ಮಾತು ಬಂದು ತಿಂಗಳ ಮೇಲೆ ತಿಂಗಳು ಕಳೆದರೂ ಒಡಂಬಡಿಯಾಗುವ ಚಿಹ್ನೆಗಳು ಕಾಣುವುದಿಲ್ಲ ಜಪಾನ್ಯಸ್ಯರ ಬ್ರಿಟನ ರಸ್ಯ ಒಡಂಬಡಿಕೆಯಲ್ಲಿ ತಾನು ಮಧ್ಯಸ್ಥಿಕೆ ಮಾಡುವುದಾಗಿ ಫ್ರಾನ್ಸು ಸಾರಿದೆ. ಬ್ರಿಟನು ಮತ್ತೆ ಪುನಃ ಕೆಲವು ರಾಜಿಯ ಶರತ್ತುಗಳನ್ನು ರಸ್ಯಕ್ಕೆ ಕಳುಹಿಸಿಕೊಟ್ಟಿದೆ ಬ್ರಿಟನ ರಸ್ಯ ಒಪ್ಪಂದವಾಗುವುದರಲ್ಲಿ ಅಮೇರಿಯವು ಆಸಕ್ತಿಯನ್ನು ತೋರಿಸಿದೆ

ಯುದ್ಧಕ್ಕೆ ಅಮೇರಿಕದ ಸಹಾಯ

ಯುದ್ಧವಾದರೆ ಅಮೇರಿಕವು ಯುದ್ಧರಂಗವನ್ನು ಪ್ರವೇಶಿಸಿಯೇ ಪ್ರವೇಶಿಸುವುದೆಂದು ರಾಜನೀತಿಜ್ಞರ ಅಂಬೋಣವಿದೆ ಯುದ್ಧವಾದರೆ ಬ್ರಿಟಿಷರ ಸಿಂಗಾಪುರ ನೌಕಾಠಾಣೆಯನ್ನು ಅಮೇರಿಕವು ಕೊಂಡುಕೊಳ್ಳುವುದಾಗಿ ನ್ಯೂಯೋರ್ಕದ ಜರ್ನಲ್ ಆಫ್ ಕಾಮರ್ಸ ಎಂಬ ಪತ್ರಿಕೆ ಹೇಳುತ್ತದೆ ಯುದ್ಧಕ್ಕೆ ಬೇಕಾದ ರಬ್ಬರು, ತವರ ಮೊದಲಾದ ಕಚ್ಚಾ ಪದಾರ್ಥಗಳು ಮಿತ್ರರಾಷ್ಟ್ರಗಳಿಗೆ ದೊರೆಯಲಿಕ್ಕೆ ಯಾವ ಅಭ್ಯಂತರವೂ ಉಂಟಾಗಬಾರದೆಂಬುದಕ್ಕೋಸ್ಕರ ಅಮೇರಿಕವು ಈ ವ್ಯವಸ್ಥೆ ಮಾಡುವುದು. ಪೂರ್ವದೇಶಗಳಿಂದ ಅಮೇರಿಕಕ್ಕೆ ಈ ಪದಾರ್ಥಗಳ ಸಾಗಣಿಕೆಗೆ ತಡೆಯಾಗಬಾರದೆಂದೇ ಅಮೇರಿಕವು ಅತ್ಲಾಂಟಿಕ ಸಾಗರದಲ್ಲಿದ್ದ ತನ್ನ ಯುದ್ಧನಾವೆಗಳನ್ನು ಶಾಂತಸಾಗರದಲ್ಲಿ ತಂದಿಟ್ಟಿದ್ದಾಗಿ ಕೆಲವರು ಹೇಳುವರು.

ಬ್ರಿಟನಿನ ಕೌಟಿಲ್ಯ

ಬ್ರಿಟನು ತನ್ನ ಕೌಟಿಲ್ಯವನ್ನೂ ಬಿಟ್ಟಿರುವುದಿಲ್ಲ ಅದರ ಧೋರಣೆಯಲ್ಲಿ ಸತ್ಯನಿಷ್ಠೆಯು ಕಂಡುಬರುವುದಿಲ್ಲ. ಒಂದು ಕಡೆಯಿಂದ ಅದು ಸರ್ವಾಧಿಕಾರಿಗಳನ್ನು ವಿರೋಧಿಸಲಿಕ್ಕೆ ಪ್ರಯತ್ನಿಸುತ್ತಿರುವಾಗ ಇನ್ನೊಂದು ಕಡೆಯಿಂದ ಅವರನ್ನು ಒಲಿಸಲಿಕ್ಕೂ ನೋಡುತ್ತದೆ. ಮೇ ೧೯ರ ದಿನ ನಡೆಯುವ ಮೆದ್ರಿದ್ ವಿಜಯೋತ್ಸವದಲ್ಲಿ ಭಾಗಿಯಾಗಲಿಕ್ಕೆ ಬ್ರಿಟನ್ನು ರಾಜಪ್ರತಿನಿಧಿಯನ್ನು ಕಳುಹಿಸಿಕೊಡುವ ನಿರ್ಧಾರಮಾಡಿದೆ. ಇದರಿಂದ ಸತ್ಯಪ್ರಿಯರಿಗೆ ತುಂಬಾ ಕಳವಳವುಂಟಾಗಿದೆ. ಮೆದ್ರಿದಿನ ವಿಜಯೋತ್ಸವದಲ್ಲಿ ಬ್ರಿಟನು ಭಾಗ ತೆಗೆದುಕೊಳ್ಳುವುದರಿಂದ, ಸ್ಪೈನಿನಲ್ಲಿ ಫ್ರಾಂಕೊ, ಹಿಟ್ಲರ ಮತ್ತು ಮುಸಲೋನಿ ಮಾಡಿದ್ದೇನಿದೆಯೋ ಅದಕ್ಕೆಲ್ಲ ಪರೋಕ್ಷದಲ್ಲಿ ಬ್ರಿಟನು ತನ್ನ ಸಮ್ಮತಿಯನ್ನು ಕೊಟ್ಟಂತಾಗುವುದು ಈ ತೆರದ ಧೋರಣೆ ಬ್ರಿಟನು ತಿಲಾಂಜಲಿ ಕೊಟ್ಟ ಹೊರತು ಯುರೋಪದ ರಾಜಕೀಯ ಸ್ಥಿತಿಯು ಎಂದೂ ಸುಧಾರಿಸದು. ಯಾಕೆಂದರೆ ಬ್ರಿಟನಿನ ಇಂಗಿತವನ್ನು ತಿಳಕೊಳ್ಳುವುದು ಫ್ರಾನ್ಸಿನಂಥ ಅತ್ಯಂತ ಸಮೀಪದ ಮಿತ್ರರಾಷ್ಟ್ರಕ್ಕೂ ಅಸಾಧ್ಯವಾಗುವುದು ಬ್ರಿಟನು ಇನ್ನಾದರೂ ತನ್ನ ಧೋರಣೆಯ ನಿಷ್ಪ್ರಯೋಜಕತೆ ಮತ್ತು ಹಾನಿಗಳನ್ನು ತಿಳಿದು ಅದರಲ್ಲಿ ಪರಿವರ್ತನಮಾಡುವುದೆಂದು ಶಾಂತಿಪಕ್ಷದ ರಾಷ್ಟ್ರಗಳು ಊಹಿಸಿವೆ

DIAMONDS! DIAMONDS!

BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡ್ಯಾಮಿನಿಂದ ಬರುವ ವಜ್ರಗಳು ಪೇಟೆ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಬಂದು ಸ್ವತಾ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವು

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಜಂಕ್ಷನದಲ್ಲಿಯಲ್ಲಿ ತೆರಯಲಾಗಿದೆ.

ಕೆ ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು

ಶ್ರೇಷ್ಠ ತರದ

ದೃಷ್ಟಿಚಕ್ರಗಳಿಗೆ



ರಬ್ಬರು ಮೊಹರುಗಳಿಗೆ

ನಾಯಕ್ ಸ್ಟೋರ್ಸ್

ರಥಬೀದಿ, ಮಂಗಳೂರು,

★ ಚೀಫ್ ಜಸ್ಟೀಸರ ಎವಾರ್ಡಿಗೆ ಮಹಾತ್ಮರ ತಿಲಾಂಜಲಿ ★

ಮಹಾತ್ಮರು ರಾಜಕೋಟಕ್ಕೆ ಹೋದರು. ಹೇಗೆ ದಿವ್ಯ ಪ್ರೇರಣೆಯಾಗುವುದೋ ಹಾಗೆ ಸಂಸ್ಥಾನದ ರಾಜಕೀಯ ಸುಧಾರಣೆಗಳ ಸಂಬಂಧ ಕೆಲಸ ಮಾಡುವೆನೆಂದು ಹೇಳಿದರು. ಪರಂತು ಅಲ್ಲಿಗೆ ಹೋಗಿ ಉದಾರ, ಅನುದಾರ, ಪ್ರಜಾಪಕ್ಷದ ಇತ್ಯಾದಿ ಮುಖಂಡರನ್ನೂ ಕೆಲಸಗಾರರನ್ನೂ ಕಂಡು ಅವರು ಮಾಡಿದ ಕೆಲಸವೆಂದರೆ, ಫೆಡರಲ್ ಕೋರ್ಟಿನ ಚೀಫ ಜಸ್ಟೀಸರ ಎವಾರ್ಡಿಗೆ ತಿಲಾಂಜಲಿಯನ್ನು ಕೊಟ್ಟು, ಆ ಎವಾರ್ಡ ಪ್ರಕಾರ ತಮಗೆ ಪ್ರಾಪ್ತವಾಗಿದ್ದ ಹಕ್ಕು ಅಧಿಕಾರಗಳನ್ನು ತಾವಾಗಿ ಕಳಕೊಂಡುದು ಆಗಿದೆ. ರಾಜಕೋಟದ ಠಾಕೋರರು ಜವಾಬುದಾರಿ ಸರಕಾರವನ್ನು ಕೊಡುವುದಾಗಿ ಮಾತುಕೊಟ್ಟು ಮತ್ತೆ ಅದನ್ನು ತಪ್ಪಿದ ಕಾರಣದಿಂದ, ಅವರನ್ನು ಸನ್ಮಾರ್ಗಕ್ಕೆ ತರಲಿಕ್ಕೆ ಸಾರ್ವಭೌಮ ಸರಕಾರವು ಮಧ್ಯ ಪ್ರವೇಶ ಮಾಡಬೇಕೆಂದು ಮರಣಾಂತ ಉಪವಾಸ ದೀಕ್ಷೆಯನ್ನು ಕೈಕೊಂಡುದು ಒಂದು ಪ್ರಕಾರದ ಹಿಂಸೆಯಾಯಿತೆಂದು ಮಹಾತ್ಮರು ಎವಾರ್ಡಿಗೆ ತಿಲಾಂಜಲಿ ಕೊಟ್ಟು ಶಸ್ತ್ರಸನ್ಯಾಸವನ್ನು ಸ್ವೀಕರಿಸಿದರು. ಕಮತಪ್ಪಿ ಹೋದ ಠಾಕೋರ ಸಾಹೇಬ್ ಮತ್ತು ದರಬಾರ ವೀರಾವಲ್ಲಭರ ಹೃದಯ ಪರಿವರ್ತನೆಗಾಗಿ ತಾನು ಸತ್ಯಾಗ್ರಹ ಅಥವಾ ಉಪವಾಸ ಮಾಡಬೇಕಾಗಿತ್ತಲ್ಲದೆ, ಸಾರ್ವಭೌಮ ಸರಕಾರದ ಸಹಾಯವನ್ನು ಕೇಳಲ್ಲವೆಂದು ಹೇಳಿ ಅವರು "ನಾನೀಗ ಠಾಕೋರ ಸಾಹೇಬ ಮತ್ತು ವೀರವಲ್ಲಭರ ಹೃದಯಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಅವರು ಎವಾರ್ಡಿನ ಪ್ರಕಾರ ಕೆಲಸ ಮಾಡಬಿಡಲಿಕ್ಕೆ ಸ್ವತಂತ್ರರಾಗಿದಾರೆ. ರಾಜಕೋಟಕ್ಕೆ ಸುಧಾರಣೆಗಳನ್ನು ಕೊಡದಿದ್ದರೆ ಸಾರ್ವಭೌಮ ಸರಕಾರವು ಮಧ್ಯ ಪ್ರವೇಶ ಮಾಡುವುದೆಂಬ ಹೆದರಿಕೆ ಅವರಿಗಿಲ್ಲ. ಆದರೂ ಕೂಡ ತಮ್ಮ ಪ್ರಜೆಗಳಿಗೆ ಜವಾಬುದಾರಿ ಸರಕಾರವನ್ನು ಕೊಡುವ ದಾರಿಯನ್ನು ಅವರು ಕಂಡಾರೆಂದು ನಂಬಿದ್ದೇನೆ" ಎಂದಿದ್ದಾರೆ.

ಪೂರ್ವಾಪರ ಎಲ್ಲ ಸಂಗತಿಗಳನ್ನು ಆಲೋಚಿಸುವಾಗ ಮಹಾತ್ಮರು ಗೆದ್ದರೂ ಸೋತಹಾಗೆ ಸರ್ವಸಾಧಾರಣ ದೃಷ್ಟಿಗೆ ಕಾಣುತ್ತಾರೆ. ಮಹಾತ್ಮರು ಕರ್ಮಯೋಗಿಗಳು. ಅವರಿಗೆ ಸುಖದುಃಖ ಸೋಲುಗೆಲವು ಎಲ್ಲಾ ಸಮಾನ. ಪರಂತು ಜನಸಾಧಾರಣರು ಆ ಪರಿ ಇರುವುದಿಲ್ಲ. ಎವಾರ್ಡಿನ ಮೂಲಕ ಪ್ರಾಪ್ತವಾದ ಅಧಿಕಾರಗಳನ್ನು ಮಹಾತ್ಮರು ಬಿಟ್ಟುಕೊಡಬಾರದಾಗಿತ್ತೆಂದೂ, ತಮಗೆ ಪ್ರಾಪ್ತವಾದ ಆ ಅಧಿಕಾರಗಳ ಉಪಯೋಗ ಮಾಡಿ ಅವರ ಠಾಕೋರರಿಂದ ಬಲಾತ್ಕಾರದಿಂದಲಾದರೂ ಪ್ರಜೆಗಳಿಗೆ ರಾಜಕೀಯ ಸುಧಾರಣೆಗಳನ್ನು ಕೊಡಿಸಬೇಕಾಗಿತ್ತೆಂದೂ ಸರ್ವಸಾಧಾರಣ ಜನರಿಗೆ ಅನ್ನಿಸುತ್ತದೆ. ಎವಾರ್ಡಿನ ಮೂಲಕ ಪ್ರಾಪ್ತವಾದ ಅಧಿಕಾರಗಳನ್ನು ಬಿಟ್ಟುಕೊಟ್ಟಿರುವುದಕ್ಕಾಗಿ ಮಹಾತ್ಮರ ಉದಾರಭಾವ, ಅಹಿಂಸಾಬುದ್ಧಿ, ಸತ್ಯನಿಷ್ಠೆಗಳನ್ನು ಶ್ಲಾಘಿಸಿ ಠಾಕೋರರು ಒಂದು ಪ್ರಕಟಣೆ ಹೊರಡಿಸಿದ್ದಾರೆಯೇ ಹೊರತು ತಮ್ಮ ಪ್ರಜೆಗಳ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸಿ ಅವರು ಏನೂ ಮಾಡಿರುವುದಿಲ್ಲ. ಬದಲಿಗೆ ರಾಜಕೋಟದಲ್ಲಿ ದಬ್ಬಾಳಿಕೆ ನಡೆದೇ ಇದೆ. ಅದು ದಿನನಿತ್ಯ ಹೊಸ ಹೊಸ ರೂಪುಗಳನ್ನು ತಾಳಿಕೊಳ್ಳುತ್ತದೆ. ಕಳೆದ ಸತ್ಯಾಗ್ರಹದಲ್ಲಿ ಭಾಗವಹಿಸಿದ ವಕೀಲರು ವಕಾಲತು ಮಾಡತಕ್ಕದ್ದಲ್ಲವೆಂದು ಆಜ್ಞೆಯಾಗಿದೆ. 'ರಾಜಕೋಟ ಸತ್ಯಾಗ್ರಹ' ಎಂದು ಬರೆದು ಪ್ರಕಟಿಸಿದ ಪುಸ್ತಕಕ್ಕೆ ಮುಟ್ಟುಗೋಲು ಆಗಿದೆ. ಮಹಾತ್ಮರು ರಾಜಕೋಟದ ಕೆಲಸಗಾರರನ್ನು ದರ್ಬಾರ ವೀರವಲ್ಲಭರ ಧೂರ್ತತನದ ವೇದಿಯ ಮೇಲೆ ಬಲಿಕೊಡುವರೋ ಎಂಬ ಸಂದೇಹವು ಆಗಾಗ ಉತ್ಪನ್ನವಾಗುತ್ತದೆ. ಆದರೆ ಮಹಾತ್ಮರು ಅಲೌಕಿಕ ಪುರುಷರು. ಅವರ ಕಾರ್ಯವಿಧಾನಗಳೂ ಅಲೌಕಿಕವಾಗಿರುತ್ತವೆ. ಅವುಗಳ ಅರ್ಥವನ್ನು ಸರ್ವಸಾಧಾರಣರಿಗೆ ಆಗುವುದು ಕಷ್ಟ. ತಾನು ರಾಜಕೋಟದ ಕೆಲಸಗಾರರ ಕೈಬಿಟ್ಟಿಲ್ಲ. 'ಸತ್ಯಾಗ್ರಹ ಪ್ರಚಾರದಲ್ಲಿ ಅಧಿಕಾರಯುಕ್ತವಾಗಿ ಮಾತಾಡಬಲ್ಲವನು ನಾನೊಬ್ಬನೇ ಎಂಬ ವಿಶ್ವಾಸವು ಕೆಲಸಗಾರರಿಗೆ ಇರುವುದಾದರೆ, ಅವರು ನನ್ನನ್ನು ತಮ್ಮ ಅಧಿನಾಯಕನೆಂದು ಒಪ್ಪಿ ನನ್ನ ಮೇಲೆ ಸಂಪೂರ್ಣ ಶ್ರದ್ಧೆಯನ್ನಿಟ್ಟಿರುವುದಾದರೆ, ತಮ್ಮ ಭವಿಷ್ಯದ ಕುರಿತ ಅವರು ಚಿಂತಿಸಬೇಕಾಗಿಲ್ಲ. ಸತ್ಯವಿದ್ದರೆ ಜಯವಿದೆ. ಅದ್ದರಿಂದ ಪರಿಷತ್ತಿನ ಕೆಲಸಗಾರರಿಗೆ ಜಯವು ದೊರೆಯುವುದು' ಎಂದು ಭರವಸೆ ಕೊಟ್ಟಿದ್ದಾರೆ.

ದೇಶೀ ರಾಜರಿಗೆ ಸರದಾರ ಪಟೇಲರ ಎಚ್ಚರಿಕೆ

ಗಂಗಾಪುರದ ಗೋಳೀಬಾರು — ಶ್ರೀ. ಮೋಹತಾಬರ ಪ್ರಕಟಣೆ

ಸರದಾರ ಪಟೇಲರ ಎಚ್ಚರಿಕೆ

ಸರದಾರ ಪಟೇಲರು ಸಂಸ್ಥಾನಾಧಿಕಾರಿಗಳಿಗೆ ಸಾಮಯಿಕ ಎಚ್ಚರಿಕೆಯನ್ನು ಕೊಟ್ಟಿರುವರು. ಭಾವನಗರ ಪ್ರಜಾಪರಿಷತ್ತಿನ ಅಧ್ಯಕ್ಷರಾಗಿ ಅವರು ಹೃದಯಸ್ಪರ್ಶವಾದ ಒಂದು ಭಾಷಣವನ್ನು ಕೊಟ್ಟು, ತಮ್ಮ ಹಿತರಕ್ಷಣೆಗಾಗಿಯಾದರೂ ಸಂಸ್ಥಾನಾಧೀಶರು ಪ್ರಜೆಗಳ ಬೇಡಿಕೆಗಳನ್ನು ಮನ್ನಿಸುವುದು ಅಗತ್ಯವೆಂದಿದ್ದಾರೆ. 'ಪ್ರಜಾವರ್ಗದಲ್ಲಿ ಅತೃಪ್ತಿ, ಅಶಾಂತಿಯುಂಟಾಗುವುದನ್ನು ಸಂಸ್ಥಾನಾಧೀಶರು ಲಕ್ಷಿಸಲಿ. ಪ್ರಜೆಗಳನ್ನು ಪ್ರೀತಿಸಲಿಕ್ಕೆ ಅವರ ಹೃದಯವು ಕಾತ್ರರವಾಗಲಿ; ತತ್ಪರರಾಗಲಿ. ಅವರು ಹಾಗೆ ಮಾಡದಿದ್ದರೆ ತಮ್ಮ ನಾಶಕ್ಕೆ ತಾವೇ ಕಾರಣರಾದಂತಾದೀತು. ಈಗ ಕೆಲ ಸಂಸ್ಥಾನಾಧೀಶರಿಗೆ ವಿರೋಧವಾಗಿರುವರು. ಸಂಸ್ಥಾನಾಧೀಶರ ಮೇಲೆ ಕಾಂಗ್ರೆಸಿಗೆ ದ್ವೇಷಭಾವನೆಯಿರುವುದೆಂಬ ಈ ಸಂಸ್ಥಾನಾಧೀಶರ ನಂಬಿಕೆಯು ಸತ್ಯವಲ್ಲ. ಆದರೆ ಕಾಂಗ್ರೆಸ ಸಂಪೂರ್ಣ ಸ್ವಾತಂತ್ರ್ಯ ಸಂಪಾದನೆಗೆ ಸೊಂಟಕಟ್ಟಿರುವುದರಿಂದ ದೇಶೀ ಸಂಸ್ಥಾನಗಳ ದುಃಸ್ಥಿತ ಪರಿಸ್ಥಿತಿಯ ಕಡೆಗೆ ಅದು ಕಣ್ಣುಮುಚ್ಚಿಕೊಳ್ಳಲಾರದು. ಸಂಸ್ಥಾನಾಧೀಶರು ಪ್ರಜೆಗಳನ್ನು ದಬ್ಬಾಳಿಕೆಯಿಂದ ಆಳಲಿಕ್ಕೆ ಎಷ್ಟು ಪ್ರಯತ್ನಪಟ್ಟರೂ, ಸಮಗ್ರ ಭಾರತವು ಪೂರ್ಣ ಸ್ವತಂತ್ರವಾಗುವ ದಿನವು ದೂರವಲ್ಲವೆಂಬುದನ್ನು ಅವರು ಚೆನ್ನಾಗಿ ಧ್ಯಾನದಲ್ಲಿಟ್ಟುಕೊಳ್ಳಲಿ' ಎಂದು ಸರದಾರ ಪಟೇಲರು ತಮ್ಮ ಭಾಷಣದಲ್ಲಿ ನುಡಿದಿರುವರು.

ಗಂಗಾಪುರದಲ್ಲಿ ವಿಚಾರಣಾ ಸಮಿತಿಯಾಗಬೇಕು

ಗಂಗಾಪುರ ಸಂಸ್ಥಾನದಲ್ಲಿ ಪೋಲೀಸರು ಮತ್ತು ಮಿಲಿಟರಿಯವರು ಗುಂಡು ಹಾರಿಸಿ ೩೦ ಬಡ ಪ್ರಜೆಗಳ ಕೊಲೆಯಾಯಿತು. ಅನೇಕ ಮಂದಿ ಗಾಯಗೊಂಡರು. ಆದ್ದರಿಂದ ಈ ಗೋಳೀಬಾರಿನ ಕುರಿತು ನಿಷ್ಪಕ್ಷಪಾತ ಸಾರ್ವಜನಿಕ ವಿಚಾರಣೆಯಾಗಬೇಕೆಂದು ಒರಿಸ್ಸಾ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಹರೇಕೃಷ್ಣ ಮೋಹತಾಬರವರು ಪ್ರಕಟಿಸಿದ್ದಾರೆ. ಸಂಸ್ಥಾನದಲ್ಲಿ ಕಂದಾಯ ಹಾಕುವಾಗ ಲೂಥರನ್ ಕ್ರಿಶ್ಚನರಿಗೆ ಸಂಸ್ಥಾನ ಅಧಿಕಾರಿಗಳು ಪಕ್ಷಪಾತ ಮಾಡಿದ್ದಾರೋ, ಅಲ್ಲಿಯ ಮಿಶನರಿ ಉಪದೇಶಿ ಸಂಸ್ಥೆಗಳೊಳಗೆ ಹಲವು ವರ್ಷಗಳಿಂದ ಮನಸ್ತಾಪ ಮತ್ತು ಸ್ಫೋಟ ಇದ್ದೀತೋ ಎಂಬುದರ ವಿಚಾರಣೆಯೂ ಆಗಬೇಕೆಂದು ಅವರು ಹೇಳಿರುವರು. ಜನರ ಕಷ್ಟಗಳೇನೆಂದು ತಿಳಿಯಲಿಕ್ಕೆ ಸಂಸ್ಥಾನದ ಮಹಾರಾಜರು ಪ್ರಜೆಗಳ ವಿಶ್ವಾಸ ಪಾತ್ರವಾದ ಒಂದು ಕಮಿಟಿಯನ್ನು ರಚಿಸುವುದಾಗಿ ಶ್ರೀ ... ಕರ ಅರಿಕೆ.

ಮಧ್ಯ ಭಾರತ ಸಂಸ್ಥಾನಗಳು

ಮಧ್ಯ ಭಾರತ ಸಂಸ್ಥಾನ ಪ್ರಜಾಪರಿಷತ್ತು ಆಚಾರ್ಯ ನರೇಂದ್ರ ದೇವರ ಅಧ್ಯಕ್ಷತೆಯಲ್ಲಿ ಕೂಡಿತು. ಪ್ರೊ| ರಂಗ ಪಾಟಸ್ಕರರವರು ಪರಿಷತ್ತಿನ ಉದ್ಘಾಟನ ಸಮಾರಂಭವನ್ನು ನಡೆಸಿದರು. ಶ್ರೀ ರಾವ ರಾಜಾ ಮನ್ಸಿಯವರು ಧ್ವಜಾರೋಹಣ ಮಾಡಿದರು. ಶ್ರೀ ಕಮಲಾಕಾಂತ ಪಾಂಡ್ಯರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ಪ್ರತಿನಿಧಿಗಳಿಗೆ ಸ್ವಾಗತವನ್ನು ಕೊಟ್ಟರು. ಅಧ್ಯಕ್ಷರು ಭಾಷಣ ಮಾಡುತ್ತ ಸಂಸ್ಥಾನಗಳ ಪ್ರಜಾಪರಿಷತ್ತುಗಳ ಆದ್ಯಂತ ಇತಿಹಾಸವನ್ನು ಹೇಳಿ ಈ ಪರಿಷತ್ತುಗಳೆಲ್ಲವೂ ಕಾಂಗ್ರೆಸಿನಿಂದ ಸ್ಫೂರ್ತಿ ಉತ್ಸಾಹಗಳನ್ನು ಪಡೆದುವೆಂದೂ ಕಾಂಗ್ರೆಸಿನ ಮಾರ್ಗದರ್ಶನದಿಂದ ಅವುಗಳಿಗೆ ಸಫಲತೆ ದೊರೆಯುವುದೆಂದೂ ಹೇಳಿ ಸಂಸ್ಥಾನ ಪ್ರಜೆಗಳು ಪರಸ್ಪರ ದ್ವೇಷಭಾವನೆಯನ್ನು ಎಡೆಗೊಡದೆ ಒಮ್ಮನಸ್ಸಿನಿಂದ ನಿಶ್ಚಿತ ಧ್ಯೇಯವನ್ನು ಸಾಧಿಸಬೇಕೆಂದು ಸೂಚಿಸಿ ಒಂದೂವರೆ ತಾಸಿನ ತನಕ ಮಾತನಾಡಿದರು.

ಮಧ್ಯ ಭಾರತ ಸಂಸ್ಥಾನಗಳ ನ್ಯಾಯಖಾತೆಯನ್ನು ಬ್ರಿಟಿಷ್ ಇಂಡಿಯಾದ ನ್ಯಾಯಖಾತೆಗಳ ಉಚ್ಚ ಮಟ್ಟಕ್ಕೆ ತರುವ ಪ್ರಯತ್ನಗಳಾಗಿವೆ. ಈ ಸಂಬಂಧ ಈ ಸಂಸ್ಥಾನಗಳ ನ್ಯಾಯಖಾತೆಯ ಅಧಿಕಾರಿಗಳ ಒಂದು ಪರಿಷತ್ತು ಕೂಡಿತ್ತು. ಶ್ರೀ ಬಿ ಎಚ್ ಜೈದಿಯವರು ಈ ಖಾತೆಯಲ್ಲಾಗಬೇಕಾದ ಸುಧಾರಣೆಗಳ ಕುರಿತು ಒಂದು ಮಹತ್ವಪೂರ್ಣ ಭಾಷಣವನ್ನು ಕೊಟ್ಟರು.

ರಾಮದುರ್ಗದಲ್ಲಿ ಪೋಲೀಸ್ ತನಿಖೆ

ಮೇ ೨೦ರ ದಿನ ರಾಮದುರ್ಗ ಸಂಸ್ಥಾನಾಧಿಕಾರಿಗಳು ಪ್ರಕಟಿಸಿದಂತೆ, ಅದಕ್ಕೆ ಸ್ವಲ್ಪ ಕಾಲದ ಮೊದಲು ರಾಮದುರ್ಗ ಜೈಲಿನ ಬಳಿ ಆದ ದೊಂಬಿಯ ಕುರಿತು ಪೋಲೀಸ ತನಿಖೆ ಆರಂಭವಾಗಿದೆ. ಸಂಸ್ಥಾನವನ್ನು ಬಿಟ್ಟು ಬ್ರಿಟಿಷ್ ಇಂಡಿಯದ ಜಿಲ್ಲೆಗಳಿಗೆ ಹೆದರಿ ಪಲಾಯನ ಮಾಡಿದ ನಿರಪರಾಧಿಗಳು ಈಗಲಾದರೂ ನಿರ್ಭಯರಾಗಿ ರಾಜ್ಯಕ್ಕೆ ಮರಳಬಹುದು. ಸಂಸ್ಥಾನ ಪ್ರಜೆಗಳಿಗೆ ನ್ಯಾಯ ದಾನಮಾಡುವುದು ಈ ತನಿಖೆಯ ಮುಖ್ಯ ಉದ್ದೇಶವಾಗಿರುವುದು ಎಂದು ದಿವಾನರು ಪ್ರಕಟಣೆ ಕೊಟ್ಟಿದ್ದಾರೆ.

ಪಾಟಿಯಾಲದಲ್ಲಿ

ಪಾಟಿಯಾಲದ ನಿವೃತ್ತ ಮಿಲಿಟರಿ ಪೆನ್ಶನದಾರರು, ಸರಕಾರ ವಿರುದ್ಧ ಯಾವ ಆಂದೋಲನದಲ್ಲಿಯೂ ಭಾಗವಹಿಸಬಾರದೆಂದು ಆಜ್ಞೆಯಾಗಿದೆ. ಮಹಾರಾಜರ ಮೇಲೆ ಹಾರ್ದಿಕ ಭಕ್ತಿ ಶ್ರದ್ಧೆ ವಿಶ್ವಾಸವನ್ನು ತೋರಿಸುವಂಥ ಪೆನ್ಶನದಾರರು ಮಾತ್ರ ಪೆನ್ಶನ ಪಡೆಯಲಿಕ್ಕೆ ಯೋಗ್ಯರೆಂದೂ, ಸರಕಾರ ವಿರುದ್ಧ ಆಂದೋಲನಗಳಲ್ಲಿ ಭಾಗವಹಿಸುವ ಪೆನ್ಶನದಾರರಿಗೆ ಪೆನ್ಶನ ಕೊಡಲಿಕ್ಕಾಗುವುದಿಲ್ಲವೆಂದೂ ಸರಕಾರ ಆಜ್ಞಾಪತ್ರವು ಹೇಳಿದೆ.

ತಿರುವಾಂಕೂರು

ತಿರುವಾಂಕೂರು ಸ್ಟೇಟ್ ನೇಶನಲ್ ಕಾಂಗ್ರೆಸ್ ಮತ್ತು ತಿರುವಾಂಕೂರು ಸ್ಟೇಟ್ ಕಾಂಗ್ರೆಸು ಈ ಎರಡು ಸಂಸ್ಥೆಗಳ ಎರಡು ಶಿಷ್ಟ ಮಂಡಲಗಳು ಪ್ರತ್ಯಪ್ರತ್ಯೇಕವಾಗಿ ಮಹಾತ್ಮರ ದರ್ಶನ ತೆಗೆದುಕೊಂಡವು. ತಾವು ತಮಗೆ ತಿಳಿದ ತಿರುವಾಂಕೂರು ರಾಜಕೀಯ ಪರಿಸ್ಥಿತಿಯನ್ನು ಅವರಲ್ಲಿ ಭಿನ್ನವಿಸಿ ಮುಂದಿನ ಕಾರ್ಯಕ್ರಮದ ಕುರಿತು ಅವರ ಸಲಹೆಗಳನ್ನು ಕೇಳಿದವು.

ಭಾವಲಪುರ

ಭಾವಲಪುರ ಸಂಸ್ಥಾನದಲ್ಲಿ ಅಧಿಕಾರಿಗಳ ದಬ್ಬಾಳಿಕೆಯು ವಿಶೇಷವಾಗಿರುವುದು. ಪ್ರಜೆಗಳ ಸ್ವಾತಂತ್ರ್ಯ ಆಂದೋಲನದಲ್ಲಿ ಸಹಾನುಭೂತಿಯನ್ನು ಸೂಚಿಸಿ, ಕೈದಾದ ಪ್ರಜಾಪ್ರಮುಖರನ್ನು ಅಭಿನಂದಿಸಿ, ಸರಕಾರ ದಬ್ಬಾಳಿಕೆಯನ್ನು ನಿಲ್ಲಿಸಬೇಕೆಂದು ವಿನಂತಿಸಿ ಮತ್ತು ರಾಜಕೀಯ ಸುಧಾರಣಾ ಸಮಿತಿಯ ರಚನೆಯಾಗಬೇಕೆಂದು ಪ್ರಾರ್ಥಿಸಿ ಮೇ ೨೬ ದಿನವನ್ನು ಭಾವಲಪುರ ದಿನವನ್ನಾಗಿ ಆಚರಿಸಬೇಕೆಂದು ಅಹರಾರ್ ಮುಸಲ್ಮಾನರು ಕೇಳಿದ್ದಾರೆ.

[೧೬ನೇ ಪುಟಕ್ಕೆ ಮುಂದುವರಿಯುವುದು]

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI. (S. India)

Season Deposits are accepted at 3½ % per annum.

For Further particulars apply to the Car-Street Branch, angalore

ಮಹಾತ್ಮರ ತಪೋಬಲದ ಪ್ರಭಾವ

ರಾಜಕೋಟದಲ್ಲಿ ಸುಧಾರಣಾ ಸಮಿತಿಯ ರಚನೆ

ಯೂರೋಪದ ರಾಜಕೀಯ ವಾತಾವರಣ

ಫೆಡರಲ್ ಕೋರ್ಟಿನ ಛೀಫ್ ಜಸ್ಟೀಸರ ಐವಾರ್ಡಿಗೆ ಮಹಾತ್ಮರು ಎಲ್ಲವನ್ನು ಬಿಟ್ಟು ಪ್ರಜೆಗಳಿಗೆ ಅನ್ಯಾಯವಾದ ಬೇಡಿಕೆಗಳನ್ನು ಮನ್ನಿಸುವಂತೆ ಠಾಕೋರರನ್ನು ವಿನಂತಿಸಿಕೊಂಡಂದಿನಿಂದ ರಾಜಕೋಟೆ ಪರಿಸ್ಥಿತಿಯು ಸಂಪೂರ್ಣ ಬದಲಾಗಿರುವುದು. ಇದು ಮಹಾತ್ಮರ ಅಹಿಂಸಾಭಾವ, ಸತ್ಯನಿಷ್ಠೆ ಮತ್ತು ತಪೋಬಲದ ಪುಣ್ಯಪ್ರಭಾವವೆಂದು ಖಂಡಿತವಾಗಿ ಹೇಳಬಹುದು. ಮೇ ೨೦ರ ದಿನ ಸಾಯಂಕಾಲ ಠಾಕೋರರ ದರ್ಬಾರು ನಡೆದು, ಅದರಲ್ಲಿ ರಾಜಕೀಯ ಸುಧಾರಣಾಸಮಿತಿಯ ರಚನೆಮಾಡಿರುವುದನ್ನು ಅವರು ಘೋಷಿಸಿದರು. ಈ ಸುಧಾರಣಾಸಮಿತಿಯಲ್ಲಿ ೧೦ ಮಂದಿ ಸದಸ್ಯರಿರುವರು; ದರ್ಬಾರ ಶ್ರೀ ವೀರವಲ್ಲರು ಅಧ್ಯಕ್ಷರು. ಭಾಯಾತರಿಗೂ ಮುಸಲ್ಮಾನರಿಗೂ ಪ್ರಾತಿನಿಧ್ಯವನ್ನು ಕೊಡಲಾಗಿದೆ. ಪರಂತು ಇದರಲ್ಲಿ ಪ್ರಜಾಪರಿಷತ್ತಿನವರು ಪ್ರಾತಿನಿಧ್ಯವನ್ನು ತೆಗೆದುಕೊಂಡಿರುವುದಿಲ್ಲ. ದರ್ಬಾರಿಗೆ ಮಹಾತ್ಮರೂ ಚಿತ್ತೈಸಿದ್ದರು. ಸಭಾಭವನದಲ್ಲಿ ಮಹಾತ್ಮರಿಗೆ ಠಾಕೋರರೇ ಸಂಭ್ರಮದ ಸುಸ್ವಾಗತವನ್ನು ಕೊಟ್ಟು ಅವರಿಗೆ ತಮ್ಮ ಬಲಗಡೆಯಲ್ಲಿ ಆಸನವನ್ನು ಕೊಟ್ಟಿದ್ದರು. ಮಹಾತ್ಮರು ಸಭಾಭವನವನ್ನು ಪ್ರವೇಶಿಸುವಾಗ ಎಲ್ಲರೂ ಎದ್ದು ನಿಂತು ಅಭಿವಾದನ ಮಾಡಿದರು. ಮಹಾತ್ಮರು ತಮ್ಮ ಸಹಜ ಮುಗುಳ್ನಗೆಯಿಂದ ಎರಡೂ ಕೈಜೋಡಿಸಿ ಎಲ್ಲರನ್ನು ನಮಸ್ಕರಿಸಿದರು. ಮಹಾತ್ಮರ ಸತ್ಯನಿಷ್ಠೆ ಅಹಿಂಸಾಭಾವ, ಇತ್ಯಾದಿಗಳನ್ನು ಶ್ಲಾಘಿಸಿ ಎಲ್ಲಾ ಪಂಗಡಗಳ ಪ್ರಮುಖರು ದರ್ಬಾರಿನಲ್ಲಿ ಭಾಷಣ ಮಾಡಿದರು. ಅನಂತರ ಠಾಕೋರರೂ ಮಹಾತ್ಮರೂ ಕೂಡಿ ಮೋಟಾರಿನಲ್ಲಿ ಮೆರವಣಿಗೆಯಾಯಿತು. ಪುರಜನರು ಹೂಮಾಲೆಗಳಿಂದ ಅವರನ್ನು ಸತ್ಕರಿಸಿದರು. ಮೆರವಣಿಗೆ ಮುಗಿದ ತರುವಾಯ ಠಾಕೋರರು ಮಹಾತ್ಮರನ್ನು ಅವರ ಬಿಡಾರದಲ್ಲಿ ಬಿಟ್ಟು ತಾವು ಅರಮನೆಗೆ ತೆರಳಿದರು.

ರಾಜಕೋಟೆ ಸುಧಾರಣಾಸಮಿತಿ

ರಾಜಕೋಟೆ ಸುಧಾರಣಾಸಮಿತಿಯಲ್ಲಿ ದರ್ಬಾರ ಶ್ರೀ ವೀರವಲ್ಲ (ಅಧ್ಯಕ್ಷ) ಶ್ರೀಗಳಾದ ಜಮುನಾಶಂಕರ ಪುರಾರಜೀ ಪಾಂಡ್ಯ, ದೌಲತ್‌ರಾಯ ವಕೀಲ, ಜಾದೇಜಾ ಜೀವನ ಸಿಂಘ, ಕಾಲಿದಾಸ ಮೋತೀಚಂದ ಪರೀಖ, ಖಾಜಿ ದಾದಾ ಹಾಜಿವಾಲಿ ಮಹ್ಮದ, ಮೋಹನಲಾಲ ಶಾಹ, ಛಪ್ಪಭಾಯಿ ಅಬ್ದುಲಾಲಿ, ಹಕ್ಮಿಚಂದ ಲಕ್ಷ್ಮೀಚಂದ ದೋಶಿ, ಮತ್ತು ಗೋಕುಲದಾಸ ದಾಯಾಭಾಯಿಯವರು ಸದಸ್ಯರಾಗಿದ್ದಾರೆ.

ಠಾಕೋರ ಸಾಹೇಬರು ಸಮಿತಿಯ ರಚನೆಯನ್ನು ಮಾಡಿದ ಬಳಿಕ ಒಂದು ಪ್ರಕಟನೆಯನ್ನು ಕೊಟ್ಟು, ರಾಜಕೋಟದ ಪರಿಸ್ಥಿತಿಯು ಸುಧಾರಿಸಿರುವುದರಿಂದ ಎಲ್ಲ ದಬ್ಬಾಳಿಕೆಯ ಕಾನೂನು ಮತ್ತು ಹುಕುಮುಗಳನ್ನು ರದ್ದುಮಾಡಿರುವುದಾಗಿಯೂ, ವಸೂಲಾದ ಜುಲುಮಾನೆಯನ್ನು ಹಿಂದಕ್ಕೆ ಕೊಡುವದಾಗಿಯೂ, ವಸೂಲಾಗದ ಜುಲುಮಾನೆ ಹಣವನ್ನು ವಸೂಲುಮಾಡುವುದಿಲ್ಲವಾಗಿಯೂ, ಮುಟ್ಟುಗೋಲು ಹಾಕಿದ ಆಸ್ತಿಯನ್ನು ಹಿಂದಕ್ಕೆ ಕೊಡುವುದಾಗಿಯೂ ಹೇಳಿರುವರು. ಇನ್ನು ಮುಂದೆ ರಾಜಕೋಟದ ಪ್ರಜೆಗಳು, ಸರ್ವಸಾಧಾರಣ ನಾಗರಿಕ ಹಕ್ಕು ಸ್ವಾತಂತ್ರ್ಯಗಳನ್ನು ಉಪಯೋಗಿಸಲಿಕ್ಕೆ ಯಾವ ಅಭ್ಯಂತರವೂ ಇರುವುದಿಲ್ಲ.

ಸಿಲೋನಿನ ಭಾರತೀಯರ ದುರ್ಭಾಗ್ಯ

ಐದು ವರ್ಷಗಳಿಂದ ಈಚೆಗೆ ದಿನಕೂಲಿ ಪಡೆದು ಸರಕಾರದ ನೌಕರಿಚಾಕರಿಯನ್ನು ಮಾಡಿ ಜೀವನ ನಡೆಸುವ ಭಾರತೀಯರನ್ನು ಸಿಲೋನಿನಿಂದ ಹಿಂದಕ್ಕೆ ಭಾರತಕ್ಕೇನೇ ಕಳುಹಿಸಿಕೊಡುವುದೆಂದು ಸಿಲೋನ ಸರಕಾರದ ನಿರ್ಧಾರವಾಗಿ ಪ್ರಧಾನರಾದ ಸರ್ ಬ್ಯಾರನ ಜಯತಿಲಕರವರು ಸಿಲೋನ ಸ್ಟೇಟ ಕೌನ್ಸಿಲಿನಿಂದ ಪ್ರಥಮ ಕಂತಾಗಿ ೫ ಲಕ್ಷರೂಪಾಯಿಗಳ ಖರ್ಚಿಗೆ ಮಂಜೂರಾತಿ ಕೇಳಿರುವರು. ಸದ್ಯ ೮೦೦೦ ಭಾರತೀಯರನ್ನು ಸಿಲೋನ ಸರಕಾರವು ಹಿಂದಕ್ಕೆ ಕಳುಹಿಸಲಿದೆ. ಸಿಲೋನಿನಲ್ಲಿ ಸರಕಾರಿ ನೌಕರಿಯಲ್ಲಿರುವ ಎಲ್ಲ ಭಾರತೀಯರನ್ನು ಹಿಂದಕ್ಕೆ ಕಳುಹಿಸಲಿಕ್ಕೆ ಸರಕಾರವು ೨೫ ಲಕ್ಷರೂಪಾಯಿಗಳ ತನಕ ಖರ್ಚು ಮಾಡಲಿದೆ. ಇಷ್ಟು ಹಣವು ಕೆಲಸ ಬಿಟ್ಟು ಹೋಗುವವರ ಪ್ರಯಾಣಕ್ಕೆ, ಪರಿಹಾರಕ್ಕೆ ಇತ್ಯಾದಿ ಖರ್ಚಾಗುವುದು. ಸಿಲೋನಿನಲ್ಲಿ ಅಲ್ಲಿನ ಜನರು ಉದ್ಯೋಗವಿಲ್ಲದವರಾಗಿರುವುದರಿಂದ ಅವರಿಗೆ ಉದ್ಯೋಗವನ್ನು ಕೊಡಿಸಲಿಕ್ಕೆ ಈ ಉಪಾಯ ಮಾಡಿದ್ದೆಂದು ಸಿಲೋನ ಸರಕಾರವು ಹೇಳುವುದಾದರೂ, ಸರಕಾರದ ಈ ಕಾರ್ಯದಲ್ಲಿ ಜಾತೀಯ ದ್ವೇಷವೇ ಒಡೆದು ಕಾಣುತ್ತದೆ. ಸಿಲೋನಿನಿಂದ ಭಾರತಕ್ಕೆ ಮರಳಿ ಬರುವ ಭಾರತೀಯರಿಗೆ ಇಲ್ಲಿ ಉದ್ಯೋಗವೃತ್ತಿಗಳನ್ನು ಕಲ್ಪಿಸಿಕೊಟ್ಟು ಅವರನ್ನು ಸುಧಾರಿಸುವುದು ಸರಕಾರಕ್ಕೆ ಒಂದು ದೊಡ್ಡ ಸಮಸ್ಯೆಯಾಗುವುದು. ಸಿಲೋನು ಭಾರತಕ್ಕೆ ಬಹಳ ಋಣಿಯಾಗಿರುವುದಾದರೂ, ಅದು ಉಪಕಾರದ ಪ್ರತ್ಯುಪಕಾರವನ್ನು ಹೀಗೆ ಸಂದಾಯ ಮಾಡಿದೆ. ಭಾರತಸರಕಾರವು ಸಿಲೋನಿನ ಈ ಅನ್ಯಾಯ ಮತ್ತು ಅಧರ್ಮಾಚರಣೆಗೆ ತಕ್ಕಪ್ರತಿಕಾರಮಾಡದಿದ್ದರೆ ಅನ್ಯಾಯ ಮತ್ತು ಅಧರ್ಮಕ್ಕೆ ಬಗ್ಗಿ ಸೋಲನ್ನು ಒಪ್ಪಿಕೊಂಡಂತಾಗುವುದು. ಆದ್ದರಿಂದ ಭಾರತಸರಕಾರವು ಪರಿಸ್ಥಿತಿಯ ವಿಷಮತೆಗೆ ಮುಟ್ಟಿರುವುದನ್ನು ಆಲೋಚಿಸಿ ಕೂಡಲೇ ಕಾರ್ಯಪ್ರವೃತ್ತವಾಗುವುದೆಂದು ನಂಬಲಾಗಿದೆ.

ಯೂರೋಪದ ರಾಜಕಾರಣ

ಬ್ರಿಟಿಷ ರಶ್ಯ ಒಡಂಬಡಿಕೆಯಾಗಲಿಕ್ಕೆ ಈ ವಾರದಲ್ಲಿ ಪರಿಸ್ಥಿತಿಯು ಮೆಲ್ಲಮೆಲ್ಲಗೆ ಅನುಕೂಲವಾಗುತ್ತಾ ಬಂದಿದೆ. ರಶ್ಯ, ಫ್ರಾನ್ಸ್, ಮತ್ತು ಬ್ರಿಟಿಷ ರಾಜನೀತಿಜ್ಞರು ಪರಸ್ಪರ ಕಂಡು ಮಾತನಾಡಿದುದರಿಂದ, ಒಬ್ಬರಿಬ್ಬರ ಕುರಿತು ಇದ್ದ ಎಷ್ಟೋ ತಪ್ಪಭಿಪ್ರಾಯಗಳು ದೂರವಾಗಿರುವವು. ಬ್ರಿಟನ ರಶ್ಯ ಒಡಂಬಡಿಕೆಯ ಸಂಬಂಧ ಬ್ರಿಟನ ಫ್ರಾನ್ಸುಗಳೊಳಗೆ ಯಾವ ವಿವಾದವೂ ಇರುವುದಿಲ್ಲ. ಬ್ರಿಟನಿನ ಧೋರಣೆ ಕಾರ್ಯಕ್ರಮಗಳು ಫ್ರಾನ್ಸಿಗೆ ಒಪ್ಪಿಗೆಯಾಗಿರುತ್ತವೆ. ಆದ್ದರಿಂದ ಶೀಘ್ರದಲ್ಲಿ ಒಡಂಬಡಿಕೆಯಾಗಬಹುದೆಂದು ಆಶಿಸಲಾಗಿದೆ.

ವರ್ಸೆಸ್ಟರ ಎಂಬಲ್ಲಿ ಭಾಷಣಮಾಡುತ್ತಾ ಲಾರ್ಡ ಬಾಲ್ಡ್ವಿನ್ನರು (ಮಾಜಿ ಪ್ರಧಾನ ಮಂತ್ರಿ) ರು:— ಬ್ರಿಟಿಷ ಮಂತ್ರಿಮಂಡಲದ ಧೋರಣೆಯು ನನಗೆ ಪೂರ್ಣ ಸಮ್ಮತವಾಗಿದೆ. ಯುದ್ಧವು ಯಾರಿಗೂ ಬೇಡ. ಆದರೆ ಒತ್ತಾಯಮಾಡಿದ್ದಾದರೆ ಬ್ರಿಟನು ಯುದ್ಧಕ್ಕೆ ಹೋಗಲು ಸಿದ್ಧವಾಗಿಯೇ ಇದೆ. ಹಿಟ್ಲರ ಮುಸಲೋನಿಯರು ಅನ್ಯಾಯವಾಗಿ ಯುದ್ಧವನ್ನಾರಂಭಿಸುವುದಾದರೆ, ಇಡೀ ಜಗತ್ತು ಅವರ ವಿರುದ್ಧ ಯಾವ ರೀತಿಯಲ್ಲಿ ಕತ್ತಿ ಹಿಡಿದು ನಿಲ್ಲುವುದೆಂಬ ಚಂದವನ್ನು ಅವರು ಕಾಣಬಹುದು. ಆದರೆ ಅವರು ಅಂಥ ಮೂರ್ಖತನದ ಸಾಹಸಕ್ಕೆ ಕೈಹಾಕುವರೆಂದು ನಾನು ನಂಬುವುದಿಲ್ಲ. ನೆಪೋಲಿಯನನಿಗೆ ಅಸಾಧ್ಯವಾದ ಪಂಥವು ಹಿಟ್ಲರ ಮುಸಲೋನಿಯರಿಗೆ ಹೇಗೆ ಸಾಧ್ಯವಾದೀತು ?' ಎಂದರು.

ಸರ್ವಾಧಿಕಾರಿ ಮುಸಲೋನಿ ಕೂನಿಯೋ ಎಂಬಲ್ಲಿ ಇನ್ನೊಂದು ಭಾಷಣ ಮಾಡಿ, 'ಇಟಲಿಗೂ ಜರ್ಮನಿಗೂ ಸೈನಿಕ ಒಪ್ಪಂದವಾಗಿದೆ. ಈ ಎರಡು ಪ್ರಬಲರಾಷ್ಟ್ರಗಳ ಸಮ್ಮಿಳಿತ ಶಕ್ತಿಯನ್ನು ವಿರೋಧಿಸುವ ಸಾಹಸವನ್ನು ಕನಸಿನಲ್ಲಿ ಕೂಡ ಯಾರೂ ಮಾಡಲಾರರು. ನಮಗೂ ಶಾಂತಿಬೇಕು. ಆದರೆ ಅದು ತಾನಾಗಿ ಉಂಟಾಗುವುದಿಲ್ಲವಾದರೆ, ನಾವಾಗಿ ಅದನ್ನು ಉಂಟುಮಾಡಿಸುವೆವು. ನಾನೀಗ ಹೆಚ್ಚು ಮಾತನಾಡುವುದಿಲ್ಲ. ಸಮಯ ಬಂದಾಗ ಸಮಸ್ತ ಇಟಾಲಿಯ ಜನಾಂಗವು ಒಂದೇ ಸ್ವರದಿಂದ ಮಾತನಾಡುವುದನ್ನು ಜಗತ್ತು ಕಾಣುವುದು' ಎಂದು ಆರ್ಭಟಿಸಿದ್ದಾನೆ.

ರಾಜದಂಪತಿಗಳ ಕೆನಡಾ ಪ್ರಯಾಣ

ಬ್ರಿಟಿಷ ಸಾರ್ವಭೌಮರು ಸಪತ್ನೀಕರಾಗಿ ಕೆನಡಾವನ್ನು ಮುಟ್ಟಿದರು. ಅವರಿಗೆ ಅಲ್ಲಿ ದೊರೆತ ಸ್ವಾಗತೋಪಚಾರಗಳು ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆದಿಡಲು ಯೋಗ್ಯವಾಗಿವೆ. ಲಕ್ಷಾಂತರ ಜನರ ಸಮಕ್ಷಮದಲ್ಲಿ ಮಹಾರಾಣಿಯವರು ಒಟ್ಟಾವಾದಲ್ಲಿ ಕೆನಡದ ಸುಪ್ರೀಮ ಕೋರ್ಟಿನ ಹೊಸ ಕಟ್ಟಡದ ಅಸ್ತಿವಾರ ಶಿಲೆಯನ್ನು ಇಟ್ಟರು. ಈ ಕಟ್ಟಡವನ್ನು ಕಟ್ಟಿಸಲಿಕ್ಕೆ [illegible] ಲಕ್ಷ ಪವನುಗಳು ಖರ್ಚಾಗುವುವು. ಮಹಾರಾಣಿಯವರು ತಮ್ಮ ಭಾಷಣವನ್ನು ಫ್ರೆಂಚ್ ಭಾಷೆಯಲ್ಲಿ ಕೊಟ್ಟರು. ಕೆನಡದಲ್ಲಿ ರಾಜರ ಜನ್ಮದಿನವು ಕೂಡ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ಹಿಂದೂ ಮುಸಲ್ಮಾನ ಐಕ್ಯಸಾಧನೆ

ಮಹಮ್ಮದ ಪೈಗಂಬರ ದಿನಾಚರಣೆ ಸಂಬಂಧ ಮುಸಲ್ಮಾನ ಸರಕಾರಿ ನೌಕರ ಸಂಘದವರು ಮದ್ರಾಸಿನ ಗವರ್ನಮೆಂಟ ಮಹಮ್ಮದನ ಕಾಲೇಜದಲ್ಲಿ ಏರ್ಪಡಿಸಿದ ಉತ್ಸವ ಸಮಾರಂಭದಲ್ಲಿ ಭಾಷಣಮಾಡುತ್ತಾ ನಮ್ಮ ಪ್ರಧಾನ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಮೇ ೨೧ರ ದಿನ ಒಂದು ದಿವ್ಯವಾದ ಭಾಷಣವನ್ನು ಕೊಟ್ಟರು. ಹಿಂದು ಮುಸಲ್ಮಾನ ಐಕ್ಯಸಾಧನೆಯ ಕುರಿತು ಮಾತನಾಡುತ್ತಾ— 'ಭಾರತದ ಇತಿಹಾಸದಲ್ಲಿ ನಾವು ಹಿಂದೂಸ್ಥಾನದ ಜನರು ಪರಸ್ಪರ ಒಗ್ಗಟ್ಟಿನಿಂದಲೂ ಸ್ನೇಹದಿಂದಲೂ ಇರಬಹುದಾದ ಅನೇಕ ಸಂದರ್ಭಗಳನ್ನು ಕಳೆದುಕೊಂಡಿರುವೆವು. ಆದರೂ ಕೂಡ ಈಗ ಕಂಡುಬರುತ್ತಿರುವ ಜಾತಿ ಜಾತಿಗಳೊಳಗಿನ ಪರಸ್ಪರ ಮನೋಮಾಲಿನ್ಯ, ದ್ವೇಷಾಸೂಯೆ, ಕಲಹ ಹೊಡೆದಾಟಗಳನ್ನು ಪೂರ್ಣ ಮರೆಯುವಂಥ ಒಂದು ಸಮಯವು ಬರಲೂ ಬಹುದು. ನಮಗೆ ನಮ್ಮ ಮೇಲೆ ಆತ್ಮವಿಶ್ವಾಸವಿದ್ದರೆ, ಅಂಥ ದಿನವು ಬರುವಂತೆ ಪ್ರಯತ್ನಮಾಡಿ ಖಂಡಿತಕ್ಕೂ ಸಫಲರಾಗಬಹುದು' ಎಂದು ಅವರೆಂದರು.

ದಕ್ಷಿಣ ಆಫ್ರಿಕದಲ್ಲಿ ಭಾರತೀಯರು

ದಕ್ಷಿಣ ಆಫ್ರಿಕದ ಭಾರತೀಯರನ್ನು ಅಲ್ಲಿಂದ ಹೊರಗಟ್ಟುವ ದಕ್ಷಿಣ ಆಫ್ರಿಕ ಸರಕಾರದ ವಿಚಾರವನ್ನು ಖಂಡಿಸುತ್ತ ಸ್ಟೇಟ್ಸ್‌ಮೇನ ಪತ್ರಿಕೆಯ 'ನಿರೀಕ್ಷಕ'ರು ಹೀಗೆ ಬರೆಯುತ್ತಾರೆ:—'ದಕ್ಷಿಣ ಆಫ್ರಿಕ ಎಸೆಂಬ್ಲಿಯಲ್ಲಿ ಯೂರೋಪಿಯನ ಸದಸ್ಯರು ಮುಚ್ಚುಮರೆಯಿಲ್ಲದೆ ಸ್ಪಷ್ಟ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಅಲ್ಲಿ ಭಾರತೀಯರ ಸ್ಥಾನಮಾನಗಳು ಯಾವುವೆಂದು ಚೆನ್ನಾಗಿ ತಿಳಿಯುವಂತಾಯಿತು. ದಕ್ಷಿಣ ಆಫ್ರಿಕದ ಭಾರತೀಯರನ್ನೆಲ್ಲ ಬೋರ್ನಿಯೋ, ನ್ಯೂಗಿನಿಯ ಅಥವಾ ಬ್ರೇಜಿಲಿಗೆ ಸಾಗಿಸಿದಂತಾಗುತ್ತಿತ್ತೆಂದು ಕೆಲವು ಸದಸ್ಯರು ಆಡಿದರು. ಆದರೆ ಸರಕಾರವು ಭಾರತೀಯರನ್ನು ದಕ್ಷಿಣ ಆಫ್ರಿಕದಲ್ಲಿ ಇರಗೊಡಿಸುವದಕ್ಕಿಂತ ಅಲ್ಲಿಗಾದರೂ ಸಾಗಿಸಿದ್ದರು ಭಾರತೀಯರು ಹೆಚ್ಚು ಸುಖಿಗಳಾಗಿ ಇರುತ್ತಿದ್ದರು! ಅವರನ್ನು ಭಾರತಕ್ಕೆ ಮರಳಿ ಕಳುಹಿಸುವ ಸರಕಾರದ ಪ್ರಯತ್ನಗಳೆಲ್ಲ ವ್ಯರ್ಥವಾಗಿರುವವು. ಭಾರತ ಸರಕಾರದೊಡನೆ ವಿಚಾರ ಪರಾಮರ್ಶೆ ಮಾಡುವದರ ಪರಿಣಾಮ—ಭಾರತೀಯರನ್ನು ಯೂರೋಪಿಯನ ಜಾತಿಗಳಿಂದ ಬೇರೆ ಮಾಡುವದಲ್ಲದೆ ಇನ್ನೇನೂ ಆಗಲಾರದು.' ಆದ್ದರಿಂದ ಭಾರತ ಸರಕಾರವು ದಕ್ಷಿಣ ಆಫ್ರಿಕ ಸರಕಾರದ ಹಂಗು ದಾಕ್ಷಿಣ್ಯಗಳಿಗೆ ಬಲಿಯಾಗದೆ ಭಾರತೀಯರ ಹಿತರಕ್ಷಣೆ ಮಾಡಬೇಕೆಂದು ಮುಖಂಡರು ಸರಕಾರವನ್ನು ಎಚ್ಚರಿಸುತ್ತಾ ಇದ್ದಾರೆ.

ಮದ್ರಾಸ ಕೌನ್ಸಿಲಿನಲ್ಲಿ ವಸ್ತು ಮಾರಾಟ ಮತ್ತು ಹೊಗೆಸೊಪ್ಪಿನ ಮಸೂದೆಗಳು

ಇವೆರಡೂ ಕಳೆದ ವಾರ ಮದ್ರಾಸ ಕೌನ್ಸಿಲಿನಲ್ಲಿ ಚರ್ಚೆಗೆ ಬಂದು ಬಹುಮತದಿಂದ ಕೌನ್ಸಿಲಿನ ಮಂಜೂರಾತಿಯನ್ನು ಪಡೆದುವು. ಇನ್ನು ಗವರ್ನರರ ಸಮ್ಮತಿ ಪಡೆದು ಅವು ಕಾನೂನುಗಳಾಗಿ ಜಾರಿಗೆ ಬರುವವು.

ಸಂಯುಕ್ತ ಪ್ರಾಂತ್ಯದ ಸಂಯುಕ್ತ ಸಭೆ

ಸಂಯುಕ್ತ ಪ್ರಾಂತ್ಯದ ಎಸೆಂಬ್ಲಿಯು ಮಂಜೂರಾದ ಪೆಟ್ರೋಲು ಟೆಕ್ಸಿನ ದರಗಳನ್ನು ಅಲ್ಲಿಯ ಕೌನ್ಸಿಲು ಸಭೆ ಕಡಿಮೆ ಮಾಡಿತ್ತು. ಸರಕಾರವು ಕೌನ್ಸಿಲಿನ ಈ ಕಡಿತವನ್ನು ಒಪ್ಪಲಿಲ್ಲ. ಆದ್ದರಿಂದ ಕಾನೂನು ಮೇರೆಗೆ ಗವರ್ನರರು ಈ ಟೆಕ್ಸಿನ ವಿಚಾರವನ್ನು ಎಸೆಂಬ್ಲಿ ಮತ್ತು ಕೌನ್ಸಿಲಿನ ಸಂಯುಕ್ತ ಸಭೆಯ ಆಲೋಚನೆಗೆ ಇಟ್ಟರು. ಸಂಯುಕ್ತ ಸಭೆಯು ಕಳೆದ ವಾರ ಕೂಡಿ ಎಸೆಂಬ್ಲಿ ಸಿಫಾರಸು ಮಾಡಿದ ದರಗಳನ್ನೇ ಮಂಜೂರುಮಾಡಿತು.

ಆಸ್ಸಾಮದ ಚಾ ತೋಟಗಳು

ಆಸ್ಸಾಮದ ಚಾ ತೋಟಗಳಲ್ಲಿ ಕೆಲಸ ಮಾಡುವ ಕೂಲಿಕಾರರೊಳಗೆ ಬಹಳ ಅಶಾಂತಿಯು ಕಂಡುಬರುವುದರಿಂದ, ತಕ್ಕ ವಿಚಾರಣೆ ನಡೆಸಿ, ಅವರ ಸ್ಥಿತಿಗತಿಗಳ ಸುಧಾರಣೆಯ ಬಗ್ಗೆ ಸೂಚನೆಗಳನ್ನು ಕೊಡಲು ಒಂದು ವಿಚಾರಣಾ ಸಮಿತಿಯನ್ನು ರಚಿಸುವುದಾಗಿ ಆಸ್ಸಾಂ ಸರಕಾರವು ನಿರ್ಧರಿಸಿದೆ.



ಮಂಗಳೂರು ಸಮಾಚಾರ

ವರ್ಗ

ಜನಪ್ರೀತರಾಗಿ ಕೆಲಸಮಾಡುತ್ತಿದ್ದ, ಇಲ್ಲಿನ ಸೈಂಟ್ ಆಗ್ನೆಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿಯಾಗಿದ್ದ ಸಿಸ್ಟರ್ ಕ್ಲೆರಿಸಾರವರು ಕಲ್ಲಿಕೋಟೆ ಪ್ರೊವಿಡೆಂಟ್ ಹೈಸ್ಕೂಲಿಗೆ ವರ್ಗಾಯಿಸಲ್ಪಟ್ಟರು.

ತೇರ್ಗಡೆ

ಇಲ್ಲಿನ ಗವರ್ನಮೆಂಟ್ ಹೆಂಗಸರ ಟ್ರೈನಿಂಗ್ ಶಾಲಾ ಹಿಂದೀ ಅಧ್ಯಾಪಿಕೆಯಾದ ಶ್ರೀಮತಿ ಬಿ ಪದ್ಮಾವತಿದೇವಿ ವಿಟ್ಠಲರಾವ್ ರವರು ಮದ್ರಾಸ್ ವಿಶ್ವವಿದ್ಯಾನಿಲಯದ ಹಿಂದೀ ವಿದ್ವಾನ್ ಮತ್ತು ಪಿ ಓ ಯಲ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಈ ಪರೀಕ್ಷೆ ಪಾಸಾದ ಸ್ತ್ರೀಯರಲ್ಲಿ ನಮ್ಮ ಜಿಲ್ಲೆಯಲ್ಲಿ ಇವರೇ ಮೊದಲಿನವರು

ರಾಜಕೀಯ ಕೈದಿಗಳ ದಿನಾಚರಣೆ

ಅಖಿಲ ಭಾರತ ರಾಜಕೀಯ ಕೈದಿಗಳ ದಿನಾಚರಣೆಯು, ಶ್ರೀ ಬಿ ವೆಂಕಟ್ರಾಯ ಬಾಳಿಗಾ, ಬಿ ಎ ಬಿ ಯಲ್, ಯುನಿಯಲ್ ಎ, ಮುನ್ಸಿಪಲ್ ಚೆಯರ್‌ಮ್ಯಾನ್ ಇವರ ಅಧ್ಯಕ್ಷತೆಯಲ್ಲಿ ಕಳೆದ ಆದಿತ್ಯವಾರ ಸ್ಥಳೀಯ ಮೈದಾನದಲ್ಲಿ ಆಚರಿಸಲ್ಪಟ್ಟಿತು ಶ್ರೀಗಳಾದ ಯುಸ್ ಯುಸ್ ಶೊಳ್ಳೆ, ಜನಾರ್ದನ ಪೈ ಮತ್ತು ಎ ಎನ್ ಬಿಜೂರು ಕೈದಿಗಳ ಹಾಗೂ ದಿನಾಚರಣೆಯ ಉದ್ದೇಶದ ಕುರಿತಾಗಿ ಮಾತನಾಡಿದರು

ಮುಂಬಾಯಿಯ ಮಂತ್ರಿಗಳು

ಮುಂಬಾಯಿಯ ಫೈನಾನ್ಸ್ ಮಿನಿಸ್ಟರರಾದ ಮಾನ್ಯ ಎ ಬಿ ಲಟ್ಟೆಯವರು ಖಾಸಗಿ ಕೆಲಸದ ನಿಮಿತ್ತ, ಕಳೆದ ವಾರ ಮಂಗಳೂರಿಗೆ ಬಂದಿದ್ದು ೬ ತೆರಳಿದರು

ಮೋಟರಡಿಗೆ ಮಗು

ಕಳೆದ ಆದಿತ್ಯವಾರ ರಾತ್ರಿಯಲ್ಲಿ, ಮೋಟರ್ ನಿಂದಿಳಿದ ಪ್ರಯಾಣಿಕರೊಬ್ಬರ ಮಗು, ಅಡ್ಡಾಡುತ್ತ ಬಸ್ಸಿನ ಬಳಿ ನಿಂತಿದ್ದಾಗ, ಫಕ್ಕನೆ ಮೋಟರು ಬಿಡಲ್ಪಟ್ಟುದರಿಂದ, ಬಸ್ಸಿನ ಮಡ್‌ಗಾರ್ಡ್ ತಾಗಿ ಕೆಳಕ್ಕುರುಳಿ, ವಿಪರೀತ ಗಾಯಗೊಂಡಿತು

ಕಚೇರಿಯಲ್ಲೇ ಸತ್ತರು

ಕನ್ನಿ ಮಾರ್ಕೆಟಿನಲ್ಲಿ ಕಳೆದ ವಾರ ಒಬ್ಬ ಮುದುಕರು ಕುಳಿತಿದ್ದಂತೆಯೇ ಮೃತರಾದರು ಹೃದಯ ಸ್ತಂಭನವೇ ಕಾರಣವೆಂದು ತಿಳಿದು ಬರುತ್ತದೆ

ರೆಡಿಕಲ್ ಲೀಗ್ ಅಂದರೇನು?

—ಎಂಬ ವಿಚಾರದಲ್ಲಿ ಹಾಗೂ ಅದರ ಮುಂದಿಯ ಕರ್ತವ್ಯ ಮತ್ತು ಕಾಂಗ್ರೆಸಿನಲ್ಲಿ ಕಾಣುವ ಕ್ರಾಂತಿ ವಿಚಾರಗಳ ಕುರಿತಾಗಿ, ಶ್ರೀ ಎ. ಕೆ ಪಿಳ್ಳೈ, ಬಿ ಎ ಬಾರ್-ಎಟ್-ಲಾರವರು, ಶ್ರೀ. ಕೆ ಸರ್ವೋತ್ತಮ ಶೆಟ್ಟರ ಅಧ್ಯಕ್ಷತೆಯಲ್ಲಿ, ಸೋಮವಾರ ಸಂಜೆ ಸ್ಥಳೀಯ ಮೈದಾನದಲ್ಲಿ ಭಾಷಣವಿತ್ತರು

ಸುಲಿಗೆ

ಕಳೆದ ಆದಿತ್ಯವಾರ ರಾತ್ರಿ ಸುಮಾರು ೮ ಗಂಟೆಗೆ ಕುರುಬನೊಬ್ಬನು ಕದ್ರಿ ಗುಡ್ಡೆಯಲ್ಲಿನ ಪದವಿನ ದಾರಿಹಿಡಿದು ಬಜ್ಜೆಯಿಂದ ಹೋಗುತ್ತಿದ್ದನು ಆಗ ಯಾರೋ ಸಿಳ್ಳು ಹೊಡೆಯಲು ಮೂವರು ಓಡಿಬಂದು ಕುರುಬನನ್ನು ಹಿಡಿದು ನಿಲ್ಲಿಸಿ ಬೆನ್ನಿಗೆ ಗುದ್ದಿ "ನಿನ್ನೊಡನಿದ್ದುದನ್ನೆಲ್ಲಾ ಕೊಡು, ಇಲ್ಲವಾದರೆ ಸಾಯುವಿ" ಎಂದು ಗದರಿಸಿದರಂತೆ. ಒಬ್ಬನು ಅವನ ಕಿಸೆ ಖಾಲಿಮಾಡಿ ಕೆಲವು ಕುಂ ಮಾರಿ ಇದ್ದ ೪೦ ರೂಪಾಯಿಯನ್ನು ಸುಲಿಮಕೊಂಡು ಪಲಾಯನ ಮಾಡಿರುವರೆಂದು ತಿಳಿದುಬರುತ್ತದೆ.

ಮಂಗಳೂರಲ್ಲಿ ದೊಂಬಿ

ಕಳೆದ ತಾ ೨೧-೫-೩೯ನೇ ಆದಿತ್ಯವಾರ ಸಂಜೆ ಇಲ್ಲಿಯ ಜೋಡುಮಾರ್ಗದ ಬಳಿ ಗಟ್ಟಿ ಜಾತಿಯವರ ಮದುವೆ ಸಮಾರಂಭದಲ್ಲಿ ಚಪ್ಪರದೊಳಗೇ ಕಲಹಕ್ಕೆ ಆರಂಭವಾಗಿ ದೊಂಬಿಯು ನಡೆದಿರುವುದು ವಿಳಂಬ. ಮುಂದಿಯರಿಗೆ ಜಖಂ ಆಗಿದೆ ಮೂವರು ಮರಣಹೊಂದಿದರಾಗಿ ತಿಳಿದುಬರುತ್ತದೆ

ದಿವಂಗತ ಕಾಗಲ ವಾಮನ ಪೈಗಳ ತೈಲಚಿತ್ರ ಅನಾವರಣ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಈ ಸಂಸ್ಥೆಯ ಡೈರೆಕ್ಟರರಾಗಿದ್ದ ದಿವಂಗತ ಕಾಗಲ ವಾಮನ ಪೈಗಳ ತೈಲಚಿತ್ರ ಅನಾವರಣ ಸಮಾರಂಭವು ಸದ್ರಿ ಸಂಸ್ಥೆಯ ರಥಬೀದಿ ಶಾಖೆಯಲ್ಲಿ ನಮ್ಮ ನಗರಾಧ್ಯಕ್ಷರಾದ ಶ್ರೀ. ಬಿ ವೆಂಕಟ್ರಾಯ ಬಾಳಿಗ, ಬಿ ಎ. ಬಿ ಎಲ್ ಎಮ್ ಎಲ್ ಎ ರವರಿಂದ ನೆರವೇರಿಸಲ್ಪಟ್ಟಿತು

ಯುನಿವರ್ಸಿಟಿ ಪರೀಕ್ಷೆಯ ಫಲಿತಾಂಶ

ಸೈಂಟ್ ಎಲೋಸಿಯಸ್ ಕಾಲೇಜು

ಬಿ ಎ

	ಪರೀಕ್ಷೆ ಕೊಟ್ಟವರು	ಪಾಸಾದ ಸಂಖ್ಯೆ	ನೀಕಡಾ ಸಂಖ್ಯೆ	ಕ್ಲಾಸ್ 1	2	3
ಎಲ್ಲಾ ಭಾಗ	60	84	56 7			
ಇಂಗ್ಲಿಷ್	62	50	74 2	–	2	49
ಎರಡನೇ ಭಾಷೆ	68	50	78 5	3	5	42
ಲೆಕ್ಕ	5	5	100	1	2	2
ಫಿಸಿಕ್ಸ್	14	12	85 7	2	8	7
ಕೆಮಿಸ್ಟ್ರಿ	13	9	69 2	1	1	5
ಇತಿಹಾಸ	33	30	90 9	–	9	21

ಗಾಡಿಯಲ್ಲಿ ಕಳವು

ಕಳೆದ ಆದಿತ್ಯವಾರ ರಾತ್ರಿ ಸುಮಾರು ೯ ಗಂಟೆಗೆ ಒಬ್ಬ ಕ್ರೈಸ್ತ ಜಟಕಾವಾಲನು ಗಾಡಿ ಹೊಡೆದುಕೊಂಡು ಹೋಗುತ್ತಿದ್ದರು. ಪದವಿನ ಇಳಿಜಾರಿನಲ್ಲಿ ಹೋಗುತ್ತಿದ್ದಾಗ ಫಕ್ಕನೆ ಗಾಡಿಯ ಹಿಂದಿನಿಂದ ಒಬ್ಬನು ಮುಂದಕ್ಕೆ ಹಾರಿ ಬಂದು ಗಾಡಿಯನ್ನು ನಿಲ್ಲಿಸಲು ಗಾಡಿಯವನು ಬೊಬ್ಬೆ ಹಾಕಲಾಗಿ ದರೋಡೆಗಾರರು ಓಡಿ ಹೋದರೆಂದೂ ಬೆಳಗ್ಗೆ ನೋಡುವಾಗ ಗಾಡಿಯೊಳಗಿದ್ದ ಎರಡು ಗೋಣಿ ಸಿಮೆಂಟು ಕದ್ದು ಹೋಗಿತ್ತೆಂದು ತಿಳಿದುಬರುತ್ತದೆ

ಗವರ್ನ್‌ಮೆಂಟ್ ಟ್ರೇಡ್ ಸ್ಕೂಲ್ ಮಂಗಳೂರು

ಇಲ್ಲಿಯ ಗವರ್ನಮೆಂಟ್ ಟ್ರೇಡ್ಸ್ ಸ್ಕೂಲಿನಲ್ಲಿ ೨ ವರ್ಷಗಳ ತನಕ ಕೆಲಸವನ್ನೂ ೩ ವರ್ಷಗಳ ತನಕ ಮೆಕೇನಿಕ್ಸ್ ವಿಷಯವನ್ನೂ ಕಲಿಯಲು ಇಚ್ಛೆಯುಳ್ಳ ಉಮೇದ್ವಾರರು ನಿಯಮಿತ ಅರ್ಜಿ ಫಾರ್ಮುಗಳಲ್ಲಿ ಬರೆದು ಇದೇ ಜೂನ್ ೧ನೇ ತಾರೀಖಿನೊಳಗೆ ಸುಪರಿಂಟೆಂಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. ಶಾಲೆಯು ಜೂನ್ ತಾ ೧೨ಕ್ಕೆ ಆರಂಭವಾಗುವುದು. ಅರ್ಜಿ ಫಾರ್ಮ್ ಮತ್ತು ಪ್ರೊಸ್ಪೆಕ್ಟಸ್ ಇವನ್ನು ಸುಪರಿಂಟೆಂಡೆಂಟರಿಂದ ಪಡೆಯಬಹುದೆಂದು ಈ ಶಾಲೆಯ ಸುಪರಿಂಟೆಂಡೆಂಟರು ತಿಳಿಸುತ್ತಾರೆ

ಜಿಲ್ಲಾ ರೆಡ್‌ಕ್ರಾಸ್ ಸೊಸಾಯಿಟಿ

ಡಾ. ಕೆ. ಆರ್. ಶಿನಗಳು ಪ್ರತಿ ಮಂಗಳವಾರ, ಶುಕ್ರವಾರಗಳಲ್ಲಿ ಕೆನರಾ ಹೈಸ್ಕೂಲಿನ ಸುಬ್ಬರಾವ್ ಸ್ಮಾರಕ ಮಂದಿರದಲ್ಲಿ ಮಹಿಳೆಯರಿಗೆ ಪ್ರಥಮ ಚಿಕಿತ್ಸೆ ಪಾಠಗಳನ್ನು ಕೊಡಲಿದ್ದಾರೆ, ಜೂನು ತಿಂಗಳು ಅಂತ್ಯದೊಳಗೆ ಸಂಘಕ್ಕೆ ೨೦೦ ಸದಸ್ಯರನ್ನು ಸೇರಿಸಬೇಕು, ಮೂಡಬಿದ್ರೆಯಲ್ಲಿರುವ ಸೊಸಾಯಿಟಿ ಶಾಖೆಯನ್ನು ಜಿಲ್ಲಾ ಸಂಘದ ಅಂಗವಾಗಿ ಅಂಗೀಕರಿಸುವುದು—ಎಂಬ ನಿರ್ಧಾರಗಳು ಇತ್ತೀಚೆಗೆ ನಡೆದ ಸೊಸಾಯಿಟಿ ಸಭೆಯೊಂದರಲ್ಲಿ ಮಾಡಲಾದುವೆಂದು ತಿಳಿದು ಬಂದಿದೆ.

ತಾಲೂಕು ಸಮಾಚಾರ

ಕಾರ್ಕಳ

ತಾಲೂಕು ಕಾಂಗ್ರೆಸ ಕಮಿಟಿಯ ಸಾಮಾನ್ಯ ಸಭೆಯು ತಾ ೨೧-೫-೩೯ರ ದಿನ ಶ್ರೀ ಕೆ ಎಸ್ ಹೆಗ್ಡೆರ ಅಧ್ಯಕ್ಷತೆಯಲ್ಲಿ ಕೂಡಿ ಹಿಂದಿನ ವರ್ಷದ ಲೆಕ್ಕ ಪತ್ರ, ವರದಿ ಮೊದಲಾದುವನ್ನು ಓದಿ ಅಂಗೀಕಾರ ಮಾಡಲಾಯಿತಲ್ಲದೆ ಬರುವ ವರ್ಷಕ್ಕೆ ನೇಮಿಸಿದನ್ನು ಕಮಿಟಿಯ ಪಟ್ಟಿಯನ್ನು ಆಲೋಚನೆ ಬಗ್ಗೆ ಮುಂದಿನ ಸಭೆಗೆ ಇಡಲಾಯಿತು

ಸಮಗ್ರಭಾರತ ಹೈದರಾಬಾದ ಮುಕ್ತಿ ಧರ್ಮವೀರ ಮೃತ್ಯು ದಿನಾಚರಣೆಯು ತಾ ೨೧-೫-೩೯ರ ದಿನ ಇಲ್ಲಿ ವಿಜೃಂಭಣೆಯಿಂದ ಆಯಿತು ಬೆಳಗ್ಗೆ ಪ್ರಭಾತಭೇರಿ, ಅರ್ಯಸಮಾಜ ಮಂದಿರದಲ್ಲಿ ಸತ್ಸಂಗ ಕಾಲಕ್ಷೇಪ, ಸಾಯಂಕಾಲ ಬೋರ್ಡ್ ಹೈಸ್ಕೂಲ ಎಲಿಮೆಂಟರಿ ಶಾಲೆಯ ಅಂಗಳದಲ್ಲಿ ಶ್ರೀ ಯುಸ್. ಸದಾನಂದ ಹುಕ್ಕೇರಿ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಭಾಷಣಾದಿಗಳು ಇದ್ದುವು

ಉಡುಪಿ

ತಾ ೧೬ ರಿಂದ ೨೯ ಮೇ ವರೆಗೆ ಕನ್ನಡ ಸಾಹಿತ್ಯ ವಸಂತೋತ್ಸವವು ಶ್ರೀ ಕೃಷ್ಣ ದೇವಳದ ವಸಂತ ಮಹಾಲಿನಲ್ಲಿ ಪರ್ಯಾಯ ಸ್ವಾಮಿಯವರಾದ ಶ್ರೀ ರಘುಮಾನ್ಯ ತೀರ್ಥರವರ ಉದಾರಾಶ್ರಯದಿಂದ ದಕ್ಷಿಣ ಕನ್ನಡ ಸಾಹಿತ್ಯ ಪ್ರತಿನಿಧಿ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ತುಗಳ ನೇತೃತ್ವದಲ್ಲಿ ಜರಗಿಸಲ್ಪಟ್ಟಿತು. ಪ್ರಾರಂಭೋತ್ಸವವು ಮಾನ್ಯ ಡಾ ಟಿ ಮಾಧವ ಪೈ, ಎಮ್ ಬಿ, ಬಿ ಎಸ್ ಇವರಿಂದ ನಡೆಸಲಾಯಿತು ಶ್ರೀಗಳಾದ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ, ರಂಗನಾಥ ದಿವಾಕರ, ಉಳ್ಳಾಲ ಮಂಗೇಶರಾವ್ ಮುಂತಾದ ಕೆಲವು ಪ್ರಭುಗಳು ಸ್ವಾಗತ ಹಾರೈಸಿದ್ದರು ಅವರ ಕಾರ್ಯಕ್ರಮವು ಸುಗಮವಾಗಿ ನಡೆದು ಜರಗಿಸಲ್ಪಟ್ಟಿತು. ಸಾಹಿತ್ಯೋತ್ಸವವು ಉತ್ಸಾಹ ಜನಕವಾಗಿತ್ತು

ತಾ ೨೨ಕ್ಕೆ ಸ್ಥಳೀಯ ಮುನಿಸಿಪಾಲಿಟಿಯು ಪುಸ್ತಕಭಂಡಾರ, ಸಾರ್ವಜನಿಕ ವಾಚನಾಲಯಕ್ಕಾಗಿ ನವೀನವಾಗಿ ಕಟ್ಟಿಸಲಾದ ಭವ್ಯಕಟ್ಟಡದ ಪ್ರವೇಶ ಸಮಾರಂಭವು ಆರೋಗ್ಯಮಂತ್ರಿ ಮಾನ್ಯ ಡಾ ಸುಬ್ಬರಾಯನ್‌ರವರ ಅನುಪಸ್ಥಿತಿಯಲ್ಲಿ ಶ್ರೀ ... ಬಿ ಸೆಟ್ಟಿ ಎಮ್ ಎಲ್ ಎ ಇವರಿಂದ ನಿರ್ವಹಿಸಲಾಯಿತು ಮಾನ್ಯ ಅತಿಥಿಗಳಿಗೆ ಅವರ ಚಿತ್ರ ಹುಲಿವರಿಗೆ ಉಪಹಾರ ಸತ್ಕಾರವಾಗಿ, ಮಾನಪತ್ರ ಅರ್ಪಣ ಭಾಷಣಗಳು ಆದುವು ಅದೇ ಕಟ್ಟಡ ಮುನಿಸಿಪಾಲಿಟಿಯ ವಸ್ತು ಪ್ರದರ್ಶನಾಲಯದ ಉದ್ಘಾಟನೆಯೂ ಜರಗಿಸಲ್ಪಟ್ಟಿತು

ತಾ ೨೩ಕ್ಕೆ ಬ್ಯಾರಿಸ್ಟರ ಎ ಕೆ ಪಿಳ್ಳೆಯವರಾದ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾಯಂಕಾಲ ಉಡುಪಿ ರೆಡಿಕಲ್ ಕಾಂಗ್ರೆಸ್ ಮೆನ್ಸ್ ಲೀಗ್ (?) ನವರ ಆಶ್ರಯದಲ್ಲಿ ಸಾರ್ವಜನಿಕ ಸಭೆ ಸೇರಿಸಲ್ಪಟ್ಟು ರೆಡಿಕಲ್ ಕಾಂಗ್ರೆಸ್ ಮೆನ್ಸ್ ಲೀಗಿನ ಉದ್ದೇಶಗಳ ವಿಷಯ ಭಾಷಣವೀಯಲಾಯಿತು

ಕನ್ನಡ ವಸಂತ ಸಾಹಿತ್ಯ ಉತ್ಸವ, ಬಾರಕೂರು

ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ ವಸಂತ ಸಾಹಿತ್ಯ ಉತ್ಸವವು ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನಲ್ಲಿ ತಾ ೨೧-೫-೩೯ಕ್ಕೆ ಜರುಗಿತು

ಈ ಉತ್ಸವಕ್ಕಾಗಿ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕಲಿಭೂಷಣ ಬೆಟಗೇರಿ ಕೃಷ್ಣಶರ್ಮಾ, ಶ್ರೀ. ವಿ. ಸೀತಾರಾಮಯ್ಯ ಮತ್ತು ಶ್ರೀ. ಕೋಟ ಶಿವರಾಮ ಕಾರಂತರು ಆಗಮಿಸಿದ್ದರು.

ತಾ. ೨೧-೫-೩೯ನೆಯ ಆದಿತ್ಯವಾರ ಸಾಯಂ ೫ ಗಂಟೆಗೆ ಸರಿಯಾಗಿ ಉತ್ಸವದ ಸಲುವಾಗಿ ಏರ್ಪಡಿಸಿದ ವಸಂತ ಮಂಟಪದಲ್ಲಿ ವಸಂತ ಸಾಹಿತ್ಯ ಉಪನ್ಯಾಸಗಳು ಪ್ರಾರಂಭವಾದುವು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಎ. ಶ್ರೀನಿವಾಸ ಹೆಬ್ಬಾರ ಅವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕಾರಂತರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಬೆಟಗೇರಿಯವರ "ಹೊಸಗನ್ನಡ ಕಲಿಕೆಯ ಮೇಲೆ ಉಪನ್ಯಾಸ ಭಾಷಣ ಮಾಡಿದರು. ಕಲಿಕೆಯು ಬದಲಾವಣೆಯನ್ನು ಕವಿ ಪ್ರಕಾರ ಸೂಚಿಸಿ ಅದರ ಕಾಲ, ಅದರ ಆವಶ್ಯಕತೆಯನ್ನು ವಿವರಿಸಿ ಹೊಸಗನ್ನಡ ಪದ್ಯಗಳನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು.

ಶ್ರೀ ಕಾರಂತರು "ಯಕ್ಷಗಾನ"ವೆಂಬ ವಿಷಯದ ಮೇಲೆ ಮಾತನಾಡುತ್ತ ನಮ್ಮ ಜನಜೀವನದಲ್ಲಿ ಅದರ ಸ್ಥಾನ ಉಪಯುಕ್ತತೆಯನ್ನು ವಿವರಿಸಿ ಕಲಾದೃಷ್ಟಿಯಿಂದ ಅದನ್ನು ವಿಮರ್ಶೆ ಮಾಡಿ ಅದರ ಸುಧಾರಣೆಯು ಅವಶ್ಯವೆಂದು ಸಮರ್ಥಿಸಿದರು

ಶ್ರೀ ವಿ ಸೀತಾರಾಮಯ್ಯನವರು ತಮ್ಮ ಸಹಜ ಗಂಭೀರವಾಣಿಯಿಂದ "ಮತ ಮತ್ತು ಸಾಹಿತ್ಯ"ವೆಂಬ ಕುರಿತು ಭಾಷಣ ಮಾಡಿದರು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳನ್ನು ವಿವರಿಸಿ ಪರಿಷತ್ತಿನ ಪರವಾಗಿ ಸ್ವಾಗತ ಸಮಿತಿಗೆ ಧನ್ಯವಾದ ಅರ್ಪಣೆ ಮಾಡಿದರು ಧನ್ಯವಾದ ಅರ್ಪಣೆಯಾದ ಬಳಿಕ ಉತ್ಸವ ಮುಕ್ತಾಯವಾಯಿತು

ಕುಂದಾಪುರ

ಇಲ್ಲಿಯ ಶಾಂತಿನಿಕೇತನ ಜೂನಿಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವ ಮತ್ತು ಬಾಲಾ ಪಾಠಕರ ಮೇಳಗಳಿಗಾಗಿ ಕಟ್ಟಿದ ಪ್ರವೇಶೋತ್ಸವವು ಇದೇ ತಾ ೩೦ನೇ ತಾರೀಖುಗಳಾದ ಶ್ರೀ ಸಿ ಪಿ ರಾಜಗೋಪಾಲಾಚಾರಿ ಬಿ ಎ ಬಿ ಎಲ್, ದ ಕ ಜಿಲ್ಲಾ ಬೋರ್ಡ ಅಧ್ಯಕ್ಷತೆಯಲ್ಲಿ ಜರಗಲಿರುವುದು ಸರ್ವರೂ ಸುಸ್ವಾಗತ ಇದೇ ಸವಿನಯ ಆಮಂತ್ರಣವೆಂದು ಸರ್ವರ ಸಾರಿ ಸಂಸ್ಥೆಯನ್ನು ಹಾರೈಸಬೇಕಾಗಿ ಮನೇಜರರು ತಿಳಿಸುತ್ತಾರೆ

ಕೆನರಾ ಬೇಂಕ್, ಲಿಮಿಟೆಡ್, ಸಿಟಿ ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನ ಋಣಪತ್ರಗಳ ಆಧಾರದ ಮೇಲೆ ಪಡೆದ ಸಾಲದ ... ಬಡ್ಡಿಯನ್ನು ಗಡುವಿನಲ್ಲಿ ಕೊಡದೆ ಇದ್ದುದರಿಂದ ಅವರಿಗೆ ನೋಟೀಸು ಕಳುಹಿಸಲಾಗಿ ತಪ್ಪಿಸಿಕೊಂಡು ಹೋಗಿರುವುದರಿಂದ ... ಈ ಸಾಲ, ಬೇಂಕಿಗೆ ಬರತಕ್ಕ ಅಸಲು ಬಡ್ಡಿ ಹಣಗಳನ್ನು ಇದೇ ತಾರೀಖು ೬-೬-೧೯೩೯ರ ಒಳಗೆ ಬೇಂಕಿಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳಬೇಕು. ಹೋಗದೆ ತಪ್ಪಿದಲ್ಲಿ ಸದ್ರಿ ನಗಗಳನ್ನು ಇದೇ ಬರುವ ತಾ. ೧೩-೬-೧೯೩೯ನೇ ಮಂಗಳವಾರ ಪ್ರಾತಃ ೯ ಘಂಟೆಗೆ ಅಥವಾ ಆ ತರುವಾಯ ಬೇಂಕಿನವರಿಗೆ ಅನುಕೂಲವಿರುವ ಇತರ ದಿನ ಆ ಹೊತ್ತಿನಲ್ಲಿ ತಿರಿಗಿ ನೋಟೀಸು ಕೊಡದೇನೇ ಬೇಂಕಿನ ಕ್ಲೋಂಗ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ

ಬೋರ್ಡ ನಂಬ್ರ L 438/37.

ಸಾಲಗಾರರ ಹೆಸರು ಮತ್ತು ವಿಳಾಸ:—

ಮಣ್ಣಪ್ಪ ಪೂಜಾರಿ, ತಂದೆ ..., ಕುಂದಾಪುರ ತಾಲೂಕು ... ಗ್ರಾಮ ದಲ್ಲಿರುವ ... ಕೂಲಿ ... ವಾಸ.

ಸಾಲದ ಅಸಲು ರೂ. 25-0-0.

ಬಾಕಿಯಾಗುವ ಬಡ್ಡಿ ವಗೈರೆ ,, 2-11-7.

ಮತ್ತು ಈ ನೋಟೀಸಿನ ಖರ್ಚು ಸಹಾ.

Office of the Bank, City Mangalore. 25 5-1939. | P Krishna Kamath, Agent.

ಮಹಾತ್ಮರ ತಪೋಬಲದ ಪ್ರಭಾವ

ರಾಜಕೋಟದಲ್ಲಿ ಸುಧಾರಣಾ ಸಮಿತಿಯ ರಚನೆ

ಯೂರೋಪದ ರಾಜಕೀಯ ವಾತಾವರಣ

ವೈಸರಾಯ್ ಕೋರ್ಟಿನ ಚೀಫ್ ಜಸ್ಟೀಸರ ಎವಾರ್ಡಿಗೆ ಮಹಾತ್ಮರು ಎಳ್ಳುನೀರು ಬಿಟ್ಟು ಪ್ರಜೆಗಳ ನ್ಯಾಯವಾದ ಬೇಡಿಕೆಗಳನ್ನು ಮನ್ನಿಸುವಂತೆ ಠಾಕೋರರನ್ನು ವಿನಂತಿಸಿಕೊಂಡಂದಿನಿಂದ ರಾಜಕೋಟ ಪರಿಸ್ಥಿತಿಯು ಸಂಪೂರ್ಣ ಬದಲಾಗಿರುವುದು. ಇದು ಮಹಾತ್ಮರ ಅಹಿಂಸಾಭಾವ, ಸತ್ಯನಿಷ್ಠೆ ಮತ್ತು ತಪೋಬಲದ ಪುಣ್ಯಪ್ರಭಾವವೆಂದು ಖಂಡಿತವಾಗಿ ಹೇಳಬಹುದು. ಮೇ ೨೦ರ ದಿನ ಸಾಯಂಕಾಲ ಠಾಕೋರರ ದರ್ಬಾರು ನಡೆದು, ಅದರಲ್ಲಿ ರಾಜಕೀಯ ಸುಧಾರಣಾಸಮಿತಿಯ ರಚನೆಮಾಡಿರುವುದನ್ನು ಅವರು ಘೋಷಿಸಿದರು. ಈ ಸುಧಾರಣಾಸಮಿತಿಯಲ್ಲಿ ೧೦ ಮಂದಿ ಸದಸ್ಯರಿರುವರು. ದರ್ಬಾರ ಶ್ರೀ ವೀರವಲ್ಲರು ಅಧ್ಯಕ್ಷರು. ಭಾಯಾತರಿಗೂ ಮುಸಲ್ಮಾನರಿಗೂ ಪ್ರಾತಿನಿಧ್ಯವನ್ನು ಕೊಡಲಾಗಿದೆ. ಪರಂತು ಇದರಲ್ಲಿ ಪ್ರಜಾಪರಿಷತ್ತಿನವರು ಪ್ರಾತಿನಿಧ್ಯವನ್ನು ತೆಗೆದುಕೊಂಡಿರುವುದಿಲ್ಲ. ದರ್ಬಾರಿಗೆ ಮಹಾತ್ಮರೂ ಚಿತ್ತೈಸಿದ್ದರು. ಸಭಾಭವನದಲ್ಲಿ ಮಹಾತ್ಮರಿಗೆ ಠಾಕೋರರೇ ಸಂಭ್ರಮದ ಸುಸ್ವಾಗತವನ್ನು ಕೊಟ್ಟು ಅವರಿಗೆ ತನ್ನ ಬಲಗಡೆಯಲ್ಲಿ ಆಸನವನ್ನು ಕೊಟ್ಟಿದ್ದರು. ಮಹಾತ್ಮರು ಸಭಾಭವನವನ್ನು ಪ್ರವೇಶಿಸುವಾಗ ಎಲ್ಲರೂ ಎದ್ದು ನಿಂತು ಅಭಿವಾದನ ಮಾಡಿದರು. ಮಹಾತ್ಮರು ತಮ್ಮ ಸಹಜ ಮುಗುಳ್ನಗೆಯಿಂದ ಎರಡೂ ಕೈಜೋಡಿಸಿ ಎಲ್ಲರನ್ನು ನಮಸ್ಕರಿಸಿದರು. ಮಹಾತ್ಮರ ಸತ್ಯನಿಷ್ಠೆ ಅಹಿಂಸಾಭಾವ, ಇತ್ಯಾದಿಗಳನ್ನು ಶ್ಲಾಘಿಸಿ ಎಲ್ಲಾ ತಂಡಗಳ ಪ್ರಮುಖರು ದರ್ಬಾರಿನಲ್ಲಿ ಭಾಷಣ ಮಾಡಿದರು. ಅನಂತರ ಠಾಕೋರರೂ ಮಹಾತ್ಮರೂ ಕೂಡಿ ಮೋಟರಿನಲ್ಲಿ ಮೆರವಣಿಗೆಯೂ ಆಯಿತು. ಪುರಜನರು ಹೂಮಾಲೆಗಳಿಂದ ಅವರನ್ನು ಸತ್ಕರಿಸಿದರು. ಮೆರವಣಿಗೆ ಮುಗಿದ ತರುವಾಯ ಠಾಕೋರರು ಮಹಾತ್ಮರನ್ನು ಅವರ ಬಿಡಾರದಲ್ಲಿ ಬಿಟ್ಟು ತಾವು ಅರಮನೆಗೆ ತೆರಳಿದರು.

ರಾಜಕೋಟ ಸುಧಾರಣಾಸಮಿತಿ

ರಾಜಕೋಟ ಸುಧಾರಣಾಸಮಿತಿಯಲ್ಲಿ ದರ್ಬಾರ ಶ್ರೀ ವೀರವಲ್ಲ (ಅಧ್ಯಕ್ಷ) ಶ್ರೀ ಗಳಾದ ಜಮುನಾಶಂಕರ ಮುರಾರಜೀ ಪಾಂಡ್ಯ, ಡಾ॥ ಲಕ್ಷ್ಮೀರಾಯ ಪರೀಖ, ಜಾದೇಜ ಜೀವನ ಸಿಂಘ, ಕಾಳಿದಾಸ ಮೋತಿಚಂದ ಪರೀಖ, ಜಾಜದಾದಾ ಹಾಜಿವಾಲಿ ಮಹ್ಮದ, ಮೋಹನಲಾಲ ಶಾಂತಿ, ಹುಸ್ಸೇಬಾಯಿ ಅಬ್ದುಲಾಲಿ, ಹಕ್ಮಿಚಂದ ಲಕ್ಷ್ಮೀಚಂದದೋಶಿ, ಮತ್ತು ಗೋಕುಲದಾಸ ದಾಯಾಭಾಯಿಯವರು ಸದಸ್ಯರಾಗಿದ್ದಾರೆ.

ಠಾಕೋರ ಸಾಹೇಬರು ಸಮಿತಿಯ ರಚನೆಯನ್ನು ಮಾಡಿದ ಬಳಿಕ ಒಂದು ಪ್ರಕಟನೆಯನ್ನು ಕೊಟ್ಟು, ರಾಜಕೋಟದ ಪರಿಸ್ಥಿತಿಯು ಸುಧಾರಿಸಿರುವುದರಿಂದ ಎಲ್ಲ ದಬ್ಬಾಳಿಕೆಯ ಕಾನೂನು ಮತ್ತು ಹುಕುಮಗಳನ್ನು ರದ್ದು ಮಾಡಿರುವುದಾಗಿಯೂ, ವಸೂಲಾದ ಜುಲ್ಮಾನೆಯನ್ನು ಹಿಂದಕ್ಕೆ ಕೊಡುವದಾಗಿಯೂ, ವಸೂಲಾಗದ ಜುಲ್ಮಾನಾ ಹಣವನ್ನು ವಸೂಲುಮಾಡುವುದಿಲ್ಲವಾಗಿಯೂ, ಮುಟ್ಟುಗೋಲು ಹಾಕಿದ ಆಸ್ತಿಯನ್ನು ಹಿಂದಕ್ಕೆ ಕೊಡುವುದಾಗಿಯೂ ಹೇಳಿರುವರು. ಇನ್ನು ಮುಂದೆ ರಾಜಕೋಟದ ಪ್ರಜೆಗಳ, ಸರ್ವಸಾಧಾರಣ ನಾಗರಿಕ ಹಕ್ಕು ಸ್ವಾತಂತ್ರ್ಯಗಳನ್ನು ಉಪಯೋಗಿಸಲಿಕ್ಕೆ ಯಾವ ಅಭ್ಯಂತರವೂ ಇರುವುದಿಲ್ಲ.

ಸಿಲೋನಿನ ಭಾರತೀಯರ ದುರ್ಭಾಗ್ಯ

ಐದು ವರ್ಷಗಳಿಂದ ಈಚೆಗೆ ದಿನಕೂಲಿ ಪಡೆದು ಸರಕಾರದ ನೌಕರಿಚಾಕರಿಯನ್ನು ಮಾಡಿ ಜೀವನ ನಡೆಸುತ ಭಾರತೀಯರನ್ನು ಸಿಲೋನಿನಿಂದ ಹಿಂದಕ್ಕೆ ಭಾರತಕ್ಕೇನೇ ಕಳುಹಿಸಿಕೊಡುವುದೆಂದು ಸಿಲೋನ ಸರಕಾರದ ನಿರ್ಧಾರವಾಗಿ ಪ್ರಧಾನರಾದ ಸರ್ ಬೇರನ ಜಯತಿಲಕರವರು ಸಿಲೋನ ಸ್ಟೇಟ ಕೌನ್ಸಿಲಿನಿಂದ ಪ್ರಥಮ ಕಂತಾಗಿ ೩ ಲಕ್ಷರೂಪಾಯಿಗಳ ಖರ್ಚಿಗೆ ಮಂಜೂರಾತಿ ಕೇಳಿರುವರು. ಸದ್ಯ ೮೦೦೦ ಭಾರತೀಯರನ್ನು ಸಿಲೋನ ಸರಕಾರವು ಹಿಂದಕ್ಕೆ ಕಳುಹಿಸಲಿದೆ. ಸಿಲೋನಿನಲ್ಲಿ ಸರಕಾರಿ ನೌಕರಿಯಲ್ಲಿರುವ ಎಲ್ಲ ಭಾರತೀಯರನ್ನು ಹಿಂದಕ್ಕೆ ಕಳುಹಿಸಲಿಕ್ಕೆ ಸರಕಾರವು ೨೫ ಲಕ್ಷರೂಪಾಯಿಗಳ ತನಕ ಖರ್ಚು ಮಾಡಲಿದೆ. ಇಷ್ಟು ಹಣವು ಕೆಲಸ ಬಿಟ್ಟು ಹೋಗುವವರ ಪ್ರಯಾಣಕ್ಕೆ, ಪರಿಹಾರಕ್ಕೆ ಇತ್ಯಾದಿ ಖರ್ಚಾಗುವುದು. ಸಿಲೋನಿನಲ್ಲಿ ಅಲ್ಲಿನ ಜನರು ಉದ್ಯೋಗವಿಲ್ಲದವರಾಗಿರುವುದರಿಂದ ಅವರಿಗೆ ಉದ್ಯೋಗವನ್ನು ಕೊಡಿಸಲಿಕ್ಕೆ ಈ ಉಪಾಯ ಮಾಡಿದ್ದೆಂದು ಸಿಲೋನ ಸರಕಾರವು ಹೇಳುವುದಾದರೂ, ಸರಕಾರದ ಈ ಕಾರ್ಯದಲ್ಲಿ ಜಾತೀಯ ದ್ವೇಷವೇ ಒಡೆದು ಕಾಣುತ್ತಿದೆ. ಸಿಲೋನಿನಿಂದ ಭಾರತಕ್ಕೆ ಮರಳಿ ಬರುವ ಭಾರತೀಯರಿಗೆ ಇಲ್ಲಿ ಉದ್ಯೋಗ ವೃತ್ತಿಗಳನ್ನು ಕಲ್ಪಿಸಿಕೊಟ್ಟು ಅವರನ್ನು ಸುಧಾರಿಸುವುದು ಸರಕಾರಕ್ಕೆ ಒಂದು ದೊಡ್ಡ ಸಮಸ್ಯೆಯಾಗುವುದು. ಸಿಲೋನು ಭಾರತಕ್ಕೆ ಬಹಳ ಋಣಿಯಾಗಿರುವುದಾದರೂ, ಅದು ಉಪಕಾರದ ಪ್ರತ್ಯುಪಕಾರವನ್ನು ಹೀಗೆ ಸಂದಾಯ ಮಾಡಿದೆ. ಭಾರತಸರಕಾರವು ಸಿಲೋನಿನ ಈ ಅನ್ಯಾಯ ಮತ್ತು ಅಧರ್ಮಾಚರಣೆಗೆ ತಕ್ಕ ಪ್ರತೀಕಾರಮಾಡದಿದ್ದರೆ ಅನ್ಯಾಯ ಮತ್ತು ಅಧರ್ಮಕ್ಕೆ ಬಗ್ಗಿ ಸೋಲನ್ನು ಒಪ್ಪಿಕೊಂಡಂತಾಗುವುದು. ಆದ್ದರಿಂದ ಭಾರತಸರಕಾರವು ಪರಿಸ್ಥಿತಿಯ ವಿಷಮತೆಗೆ ಮುಟ್ಟಿರುವುದನ್ನು ಆಲೋಚಿಸಿ ಕೂಡಲೇ ಕಾರ್ಯಪ್ರವೃತ್ತವಾಗುವುದೆಂದು ನಂಬಲಾಗಿದೆ.

ಯೂರೋಪದ ರಾಜಕಾರಣ

ಬ್ರಿಟಿಷ ರಶ್ಯ ಒಡಂಬಡಿಕೆಯಾಗಲಿಕ್ಕೆ ಈ ವಾರದಲ್ಲಿ ಪರಿಸ್ಥಿತಿಯು ಮೊದಲಿಗಿಂತ ಅನುಕೂಲವಾಗ ತೊಡಗಿದೆ. ರಶ್ಯ, ಫ್ರಾನ್ಸ ಮತ್ತು ಬ್ರಿಟಿಷ ರಾಜನೀತಿಜ್ಞರ ಪರಸ್ಪರ ಕಲ್ಪನಾ ವಿನಿಮಯದ ಫಲವಾಗಿ ... ಇವು ಮೂರು ರಾಷ್ಟ್ರಗಳ ಸಹಕಾರವು ... ಬ್ರಿಟನ ರಶ್ಯ ಒಡಂಬಡಿಕೆಯ ಸಂಬಂಧ ಬ್ರಿಟನ ಫ್ರಾನ್ಸುಗಳೊಳಗೆ ಯಾವ ವಿವಾದವೂ ಇರುವುದಿಲ್ಲ. ಬ್ರಿಟನಿನ ಧೋರಣೆ ಕಾರ್ಯಕ್ರಮಗಳು ಫ್ರಾನ್ಸಿಗೆ ಒಪ್ಪಿಗೆಯಾಗಿರುವವು. ಆದ್ದರಿಂದ ಶೀಘ್ರದಲ್ಲಿ ಒಡಂಬಡಿಕೆ ಜರುಗಬಹುದೆಂದು ಆಶಿಸಲಾಗಿದೆ.

ವರ್ಸೆಸ್ಟರ ಎಂಬಲ್ಲಿ ಭಾಷಣಮಾಡುತ್ತಾ ಲಾರ್ಡ ಚಾಲ್ಫೀಲ್ಡ (ಮಾಜಿ ಪ್ರಧಾನ ಮಂತ್ರಿ) ರು—ಬ್ರಿಟಿಷ ಮಂತ್ರಿಮಂಡಲದ ಧೋರಣೆಯು ನನಗೆ ಪೂರ್ಣ ಸಮ್ಮತವಾಗಿದೆ. ಯುದ್ಧವು ಯಾರಿಗೂ ಬೇಡ. ಆದರೆ ಒತ್ತಾಯಮಾಡಿದ್ದಾದರೆ ಬ್ರಿಟನು ಯುದ್ಧಕ್ಕೆ ಹೋಗಲು ಸಿದ್ಧವಾಗಿಯೇ ಇದೆ. ಹಿಟ್ಲರ ಮುಸಲೋನಿಯವರು ಅನ್ಯಾಯವಾಗಿ ಯುದ್ಧವನ್ನಾರಂಭಿಸುವುದಾದರೆ, ಇಡೀ ಜಗತ್ತು ಅವರ ವಿರುದ್ಧ ಯಾವ ರೀತಿಯಲ್ಲಿ ಶಕ್ತಿ ಹಿಡಿದು ನಿಲ್ಲುವುದೆಂಬ ಚಂದವನ್ನು ಅವರು ಕಾಣಬಹುದು. ಆದರೆ ಅವರು ಅಂಥ ಮೂರ್ಖತನದ ಸಾಹಸಕ್ಕೆ ಕೈಹಾಕುವರೆಂದು ನಾನು ನಂಬುವುದಿಲ್ಲ. ನೆಪೋಲಿಯನನಿಗೆ ಅಸಾಧ್ಯವಾದ ಪಂಥವು ಹಿಟ್ಲರ ಮುಸಲೋನಿಯರಿಗೆ ಹೇಗೆ ಸಾಧ್ಯವಾದೀತು? ಎಂದರು.

ಸರ್ವಾಧಿಕಾರಿ ಮುಸಲೋನಿ ಕೂನಿಯೋ ಎಂಬಲ್ಲಿ ಇನ್ನೊಂದು ಭಾಷಣಮಾಡಿ, ಇಟಲಿಗೂ ಜರ್ಮನಿಗೂ ಸೈನಿಕ ಒಪ್ಪಂದವಾಗಿದೆ. ಈ ಎರಡು ಪ್ರಬಲರಾಷ್ಟ್ರಗಳ ಸಮ್ಮಿಳಿತ ಶಕ್ತಿಯನ್ನು ವಿರೋಧಿಸುವ ಸಾಹಸವನ್ನು ಕನಸಿನಲ್ಲಿ ಕೂಡ ಯಾರೂ ಮಾಡಲಾರರು ... ಆದರೆ ಅದು ... ನಾವಾಗಿ ಅದನ್ನು ... ಮಾಡಿಸುವೆವು ... ಎಂದು ಘರ್ಜಿಸಿದ್ದಾರೆ.

ರಾಜದಂಪತಿಗಳ ಕೆನಡಾ ಪ್ರಯಾಣ

ಬ್ರಿಟಿಷ ಸಾರ್ವಭೌಮರು ಸಪತ್ನೀಕರಾಗಿ ಕೆನಡಾವನ್ನು ಮುಟ್ಟಿದರು. ಅವರಿಗೆ ಅಲ್ಲಿ ದೊರೆತ ಸ್ವಾಗತೋಪಚಾರಗಳು ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಬರೆಯಲು ಯೋಗ್ಯವಾಗಿವೆ. ಲಕ್ಷಾಂತರ ಜನರ ಸಮಕ್ಷಮದಲ್ಲಿ ಮಹಾರಾಜರವರ ಒಟ್ಟಾವಾದಲ್ಲಿ ಕೆನಡದ ಸುಪ್ರೀಮಕೋರ್ಟಿನ ಹೊಸ ಕಟ್ಟಡದ ಅಸ್ತಿವಾರ ಕಲ್ಲನ್ನು ಇಟ್ಟರು. ಈ ಕಟ್ಟಡವನ್ನು ಕಟ್ಟಿಸಲಿಕ್ಕೆ ೫೦ ಲಕ್ಷ ಡಾಲರುಗಳು ಖರ್ಚಾಗುವುವು. ಮಹಾರಾಣಿಯವರ ಕಿರು ಭಾಷಣವನ್ನು ಫ್ರೆಂಚ್ ಭಾಷೆಯಲ್ಲಿ ... ಕೆನಡದಲ್ಲಿ ರಾಜರ ಜನ್ಮದಿನವು ಕೂಡ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ಹಿಂದೂ ಮುಸಲ್ಮಾನ ಐಕ್ಯಸಾಧನೆ

ಮಹಮ್ಮದನ್ ಎಜ್ಯುಕೇಶನ ದಿನಾಚರಣೆ ಸಂಬಂಧ ಮುಸಲ್ಮಾನ ಸರಕಾರಿ ನೌಕರ ಸಂಘದವರು ಮುದ್ರಾಸಿನ ಗವರ್ನಮೆಂಟ ಮಹಮ್ಮದನ ಕಾಲೇಜದಲ್ಲಿ ಏರ್ಪಡಿಸಿದ ಉತ್ಸವ ಸಮಾರಂಭದಲ್ಲಿ ಭಾಷಣಮಾಡುತ್ತಾ ನಮ್ಮ ಪ್ರಧಾನ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಮೇ ೨೧ರ ದಿನ ಒಂದು ದಿವ್ಯವಾದ ಭಾಷಣವನ್ನು ಕೊಟ್ಟರು. ಹಿಂದು ಮುಸಲ್ಮಾನ ಐಕ್ಯಸಾಧನೆಯ ಕುರಿತು ಮಾತನಾಡುತ್ತಾ—ಭಾರತದ ಇತಿಹಾಸದಲ್ಲಿ ನಾವು ಹಿಂದೂಸ್ತಾನದ ಜನರು ಪರಸ್ಪರ ಒಗ್ಗಟ್ಟಿನಿಂದಲೂ ಸ್ನೇಹದಿಂದಲೂ ಇರಬಹುದಾದ ಅನೇಕ ಸಂದರ್ಭಗಳನ್ನು ಕಳೆಕೊಂಡಿರುವೆವು. ಆದರೂ ಕೂಡ ಈಗ ಕಂಡು ಬರುತ್ತಿರುವ ಜಾತಿ ಜಾತಿಗಳೊಳಗಿನ ಪರಸ್ಪರ ಮನೋಮಾಲಿನ್ಯ, ದ್ವೇಷಾಸೂಯೆ, ಕಲಹ ಹೊಡೆದಾಟಗಳನ್ನು ಪೂರ್ಣ ಮರೆಯುವಂಥ ಒಂದು ಸಮಯವು ಬರಲೂಬಹುದು. ನಮಗೆ ನಮ್ಮ ಮೇಲೆ ಆತ್ಮವಿಶ್ವಾಸವಿದ್ದರೆ, ಅಂಥ ದಿನವು ಬರುವಂತೆ ಪ್ರಯತ್ನಮಾಡಿ ಖಂಡಿತಕ್ಕೂ ಸಫಲರಾಗಬಹುದು' ಎಂದು ಅವರೆಂದರು.

ದಕ್ಷಿಣ ಆಫ್ರಿಕದಲ್ಲಿ ಭಾರತೀಯರು

ದಕ್ಷಿಣ ಆಫ್ರಿಕದ ಭಾರತೀಯರನ್ನು ಅಲ್ಲಿಂದ ಹೊರಗಟ್ಟುವ ದಕ್ಷಿಣ ಆಫ್ರಿಕ ಸರಕಾರದ ವಿಚಾರವನ್ನು ಖಂಡಿಸುತ್ತ ಸ್ಟೇಟ್ಸಮೇನ ಪತ್ರಿಕೆಯ 'ನಿರೀಕ್ಷಕ'ರು ಹೀಗೆ ಬರೆಯುತ್ತಾರೆ—'ದಕ್ಷಿಣ ಆಫ್ರಿಕ ಎಸೆಂಬ್ಲಿಯಲ್ಲಿ ಯೂರೋಪಿಯನ ಸದಸ್ಯರು ಮುಚ್ಚುಮರೆಯಿಲ್ಲದೆ ಸ್ಪಷ್ಟ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಅಲ್ಲಿ ಭಾರತೀಯರ ಸ್ಥಾನಮಾನಗಳು ಯಾವುವೆಂದು ಚೆನ್ನಾಗಿ ತಿಳಿಯಬರುತ್ತಾಯಿತು. ದಕ್ಷಿಣ ಆಫ್ರಿಕದ ಭಾರತೀಯರನ್ನೆಲ್ಲ ಬೋರ್ನಿಯೋ, ನ್ಯೂಗಿನಿಯ ಅಥವಾ ಬ್ರೇಜಿಲಿಗೆ ಸಾಗಿಸಿದರಾಗುತ್ತಿತ್ತೆಂದು ಕೆಲವು ಸದಸ್ಯರು ಅಂದಿವರು. ಆದರೆ ಸರಕಾರವು ಭಾರತೀಯರನ್ನು ದಕ್ಷಿಣ ಆಫ್ರಿಕದಲ್ಲಿ ಇರಗೊಡಿಸುವದಕ್ಕಿಂತ ಅಲ್ಲಿಗಾದರೂ ಸಾಗಿಸಿದ್ದರೆ ಭಾರತೀಯರು ಹೆಚ್ಚು ಸುಖಿಗಳಾಗಿ ಇರುತ್ತಿದ್ದರು! ಅವರನ್ನು ಭಾರತಕ್ಕೆ ಮರಳಿ ಕಳುಹಿಸುವ ಸರಕಾರದ ಪ್ರಯತ್ನಗಳೆಲ್ಲ ವ್ಯರ್ಥವಾಗಿರುವವು. ಭಾರತ ಸರಕಾರದೊಡನೆ ವಿಚಾರ ಪರಾಮರ್ಶೆಯಾದ ಬಳಿಕ ಪರಿಣಾಮ—ಭಾರತೀಯರನ್ನು ಯೂರೋಪಿಯನ ವಸತಿಗಳಿಂದ ಬೇರೆ ಮಾಡುವದಲ್ಲದೆ ಇನ್ನೇನೂ ಆಗಲಾರದು.' ಆದ್ದರಿಂದ ಭಾರತ ಸರಕಾರವು ದಕ್ಷಿಣ ಆಫ್ರಿಕ ಸರಕಾರದ ಹಂಗು ದಾಕ್ಷಿಣ್ಯಗಳಿಗೆ ಬಲಿಯಾಗದೆ ಭಾರತೀಯರ ಹಿತರಕ್ಷಣೆ ಮಾಡಬೇಕೆಂದು ಮುಖಂಡರು ಸರಕಾರವನ್ನು ಎಚ್ಚರಿಸುತ್ತಾ ಇದ್ದಾರೆ.

ಮುದ್ರಾಸ ಕೌನ್ಸಿಲಿನಲ್ಲಿ ವಸ್ತು ಮಾರಾಟ ಮತ್ತು ಹೊಗೆಸೊಪ್ಪಿನ ಮಸೂದೆಗಳು

ಇವೆರಡೂ ಕಳೆದ ವಾರ ಮುದ್ರಾಸ ಕೌನ್ಸಿಲಿನಲ್ಲಿ ಚರ್ಚೆಗೆ ಬಂದು ಬಹುಮತದಿಂದ ಕೌನ್ಸಿಲಿನ ಮಂಜೂರಾತಿಯನ್ನು ಪಡೆದುವು. ಇನ್ನು ಗವರ್ನರರ ಸಮ್ಮತಿ ಪಡೆದು ಅವು ಕಾನೂನುಗಳಾಗಿ ಜಾರಿಗೆ ಬರುವವು.

ಸಂಯುಕ್ತ ಪ್ರಾಂತ್ಯದ ಸಂಯುಕ್ತ ಸಭೆ

ಸಂಯುಕ್ತ ಪ್ರಾಂತ್ಯದ ಎಸೆಂಬ್ಲಿಯು ಮಂಜೂರಾದ ಪೆಟ್ರೋಲು ಟೆಕ್ಸಿನ ದರಗಳನ್ನು ಅಲ್ಲಿಯ ಕೌನ್ಸಿಲು ಸಭೆ ಕಡಿಮೆ ಮಾಡಿತ್ತು. ಸರಕಾರವು ಕೌನ್ಸಿಲಿನ ಈ ಕಡಿತವನ್ನು ಒಪ್ಪಲಿಲ್ಲ. ಆದ್ದರಿಂದ ಕಾನೂನು ಮೇರೆಗೆ ಗವರ್ನರರು ಈ ಟೆಕ್ಸಿನ ವಿಚಾರವನ್ನು ಎಸೆಂಬ್ಲಿ ಮತ್ತು ಕೌನ್ಸಿಲಿನ ಸಂಯುಕ್ತ ಸಭೆಯ ಆಲೋಚನೆಗೆ ಇಟ್ಟರು. ಸಂಯುಕ್ತ ಸಭೆಯು ಕಳೆದ ವಾರ ಕೂಡಿ ಎಸೆಂಬ್ಲಿ ಶಿಫಾರಸು ಮಾಡಿದ ದರಗಳನ್ನೇ ಮಂಜೂರುಮಾಡಿತು.

ಅಸ್ಸಾಮದ ಚಾ ತೋಟಗಳು

ಅಸ್ಸಾಮದ ಚಾ ತೋಟಗಳಲ್ಲಿ ಕೆಲಸ ಮಾಡುವ ಕೂಲಿಕಾರರೊಳಗೆ ಬಹಳ ಅಶಾಂತಿಯು ಕಂಡುಬರುವುದರಿಂದ ತಕ್ಕ ವಿಚಾರಣೆ ನಡೆಸಿ, ಅವರ ಸ್ಥಿತಿಗತಿಗಳ ಸುಧಾರಣೆಯ ಬಗ್ಗೆ ಸೂಚನೆಗಳನ್ನು ಕೊಡಲು ಒಂದು ವಿಚಾರಣಾ ಸಮಿತಿಯನ್ನು ರಚಿಸುವುದಾಗಿ ಅಸ್ಸಾಂ ಸರಕಾರವು ನಿರ್ಧರಿಸಿದೆ.

ಮಂಗಳೂರು ಸಮಾಚಾರ

ವರ್ಗ

ಜನಪ್ರೀತರಾಗಿ-ಕೆಲಸನಡಾಸುತ್ತಿದ್ದ, ಇಲ್ಲಿನ ಸೈಂಟ್ ಅಗ್ನೆಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿಯಾಗಿದ್ದ ಸಿಸ್ಟರ್ ಕ್ಲೆಮೆಂಟೀನರವರು ಕಲ್ಲಿಕೋಟೆ ಪ್ರಾವಿಡೆಂಟ್ ಹೈಸ್ಕೂಲಿಗೆ ವರ್ಗಾಯಿಸಲ್ಪಟ್ಟರು.

ತೇರ್ಗಡೆ

ಇಲ್ಲಿನ ಗವರ್ನಮೆಂಟ್ ಹೆಂಗಸರ ಟ್ರೈನಿಂಗ್ ಶಾಲಾ ಹಿಂದೀ ಅಧ್ಯಾಪಿಕೆಯಾಗಿದ್ದ ಶ್ರೀಮತಿ ಬಿ ಪದ್ಮಾವತಿದೇವಿ ವಿಟ್ಠಲರಾವ್ ರವರು ಮದ್ರಾಸ್ ವಿಶ್ವವಿದ್ಯಾನಿಲಯದ ಹಿಂದೀ ವಿದ್ವಾನ್ ಮತ್ತು ಬಿ ಓ ಯಲ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಈ ಪರೀಕ್ಷೆ ಪಾಸಾದ ಸ್ತ್ರೀಯರಲ್ಲಿ ನಮ್ಮ ಜಿಲ್ಲೆಯಲ್ಲಿ ಇವರೇ ಮೊದಲಿನವರು

ರಾಜಕೀಯ ಕೈದಿಗಳ ದಿನಾಚರಣೆ

ಅಖಿಲ ಭಾರತ ರಾಜಕೀಯ ಕೈದಿಗಳ ದಿನಾಚರಣೆಯು, ಶ್ರೀ ಬಿ ವೆಂಕಟ್ರಾಯ ಬಾಳಿಗಾ, ಬಿ ಎ ಬಿ ಯಲ್ ಯಂ ಯಲ್ ಎ, ಮ್ಯುನಿಸಿಪಲ್ ಚೆಯರ್‌ಮ್ಯಾನ್ ಇವರ ಅಧ್ಯಕ್ಷತೆಯಲ್ಲಿ ಕಳೆದ ಆದಿತ್ಯವಾರ ಸ್ವತೀಯ ಮೈದಾನಿನಲ್ಲಿ ಆಚರಿಸಲ್ಪಟ್ಟಿತು. ಶ್ರೀಗಳಾದ ಯಸ್ ಯನ್ ಜೋಶಿ ಜನಾರ್ಧನ ಪೈ ಮತ್ತು ಎ ಎನ್ ಬಿಜೂರು ಕೈದಿಗಳ ಹಾಗೂ ದಿನಾಚರಣೆಯ ಉದ್ದೇಶದ ಕುರಿತಾಗಿ ಮಾತನಾಡಿದರು

ಮುಂಬಾಯಿಯ ಮಂತ್ರಿಗಳು

ಮುಂಬಾಯಿಯ ಫೈನಾನ್ಸ್ ಮಿನಿಸ್ಟರಾದ ಮಾನ್ಯ ಎ ಬಿ ಲಠ್ಠೆಯವರು, ಖಾಸಗಿ ಕೆಲಸದ ನಿಮಿತ್ತ, ಕಳೆದ ವಾರ ಮಂಗಳೂರಿಗೆ ಬಂದಿದ್ದು ಹಿಂತೆರಳಿದರು

ಮೋಟರಡಿಗೆ ಮಗು

ಕಳೆದ ಆದಿತ್ಯವಾರ ರಾತ್ರಿಯಲ್ಲಿ, ಮೋಟರಿನಿಂದಿಳಿದ ಪ್ರಯಾಣಿಕರೊಬ್ಬರ ಮಗು, ಅದ್ದಾದುತ್ತ ಬಸ್ಸಿನ ಬಳಿ ಓಡಿದ್ದಾಗ, ಥಕ್ಕನೆ ಮೋಟರು ಬಿಡಲ್ಪಡುವುದರಿಂದ, ಬಸ್ಸಿನ ಮಡ್‌ಗಾರ್ಡ್ ತಾಗಿ ಕೆಳಕ್ಕುರುಳಿ, ವಿಪರೀತ ಗಾಯಗೊಂಡಿತು

ಕೂತಲ್ಲೇ ಸತ್ತರು

ಕದ್ರಿ ಮಾರ್ಕೆಟಿನಲ್ಲಿ ಕಳೆದ ವಾರ ಒಬ್ಬ ಮುದುಕರು ಕುಳಿತಲ್ಲಿಯೇ ಮೃತರಾದರು. ಹೃದಯ ಸ್ತಂಭನವೇ ಕಾರಣವೆಂದು ತಿಳಿದು ಬರುತ್ತದೆ

ರೆಡಿಕಲ್ ಲೀಗ್ ಅಂದರೇನು?

—ಎಂಬ ವಿಚಾರದಲ್ಲಿ ಹಾಗೂ ಅದರ ಮುಂದಿಯ ಕರ್ತವ್ಯ ಮತ್ತು ಕಾಂಗ್ರೆಸಿನಲ್ಲಿ ಕಾಣುವ ಕ್ರಾಂತಿ ವಿಚಾರಗಳ ಕುರಿತಾಗಿ, ಶ್ರೀ ಎ. ಕೆ. ಪಿಳ್ಳೆ, ಬಿ ಎ ಬಾರ್-ಎಟ್-ಲಾರವರು, ಶ್ರೀ ಕೆ ಸರ್ವೋತ್ತಮ ಶೆಟ್ಟರ ಅಧ್ಯಕ್ಷತೆಯಲ್ಲಿ, ಸೋಮವಾರ ಸಂಜೆ ಸ್ವತೀಯ ಮೈದಾನಿನಲ್ಲಿ ಭಾಷಣವಿತ್ತರು

ಸುಲಿಗೆ

ಕಳೆದ ಆದಿತ್ಯವಾರ ರಾತ್ರಿ ಸುಮಾರು ೮॥ ಗಂಟೆಗೆ ಕುರುಬನೊಬ್ಬನು ಕದ್ರಿ ಗುಡ್ಡೆಯಲ್ಲಿನ ಪದವಿನ ದಾರಿಹಿಡಿದು ಬಜೈಯಿಂದ ಹೋಗುತ್ತಿದ್ದನು ಆಗ ಯಾರೋ ಸಿಳ್ಳು ಹೊಡೆಯಲು ಮೂವರು ಓಡಿಬಂದು ಕುರುಬನನ್ನು ಹಿಡಿದು ನಿಲ್ಲಿಸಿ ಬೆನ್ನಿಗೆ ಗುದ್ದಿ "ನಿನ್ನೊಡನೆ ಇದ್ದದನ್ನೆಲ್ಲಾ ಕೊಡು, ಇಲ್ಲವಾದರೆ ಸಾಯುವಿ" ಎಂದು ಗದರಿಸಿದರಂತೆ ಒಬ್ಬನು ಆತನ ಕಿಸೆ ಪತ್ತೆಮಾಡಿ ಕೆಲವು ಕಾಸು ಮಾತ್ರ ಇದ್ದ ೪೦ ರೂಪಾಯಿಯನ್ನು ಸುಲಿದುಕೊಂಡು ಪಲಾಯನ ಮಾಡಿರುವರೆಂದು ತಿಳಿದುಬರುತ್ತದೆ.

ಮಂಗಳೂರಲ್ಲಿ ದೊಂಬಿ

ಕಳೆದ ತಾ ೨೧-೫-೩೯ನೇ ಆದಿತ್ಯವಾರ ಸಂಜೆ ಇಲ್ಲಿಯ ಬೋಳೂರು ಬಳಿ ಗಟ್ಟಿ ಜಾತಿಯವರ ಮದುವೆ ಸಮಾರಂಭದಲ್ಲಿ ಚಪ್ಪರದೊಳಗೇ ಕಲಹಕ್ಕೆ ಆರಂಭವಾಗಿ ದೊಂಬಿಯು ನಡೆದಿರುವುದು ಎಳೆಂಟು ಮಂದಿಯರಿಗೆ ಜಖಂ ಆಗಿದೆ ಮೂವರು ಮರಣಹೊಂದಿದರಾಗಿ ತಿಳಿದುಬರುತ್ತದೆ

ದಿವಂಗತ ಕಾಗಲ ವಾಮನ ಪೈಗಳ ತೈಲಚಿತ್ರ ಅನಾವರಣ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಈ ಸಂಸ್ಥೆಯ ಡೈರೆಕ್ಟರಾಗಿದ್ದ ದಿವಂಗತ ಕಾಗಲ ವಾಮನ ಪೈಗಳ ತೈಲಚಿತ್ರ ಅನಾವರಣ ಸಮಾರಂಭವು ಸದ್ರಿ ಸಂಸ್ಥೆಯ ರಥಬೀದಿ ಶಾಖೆಯಲ್ಲಿ ನಮ್ಮ ನಗರಾಧ್ಯಕ್ಷರಾದ ಶ್ರೀ ಬಿ ವೆಂಕಟ್ರಾಯ ಬಾಳಿಗಾ, ಬಿ ಎ ಬಿ ಎಲ್ ಎಮ್ ಎಲ್ ಎ ರವರಿಂದ ನೆರವೇರಿಸಲ್ಪಟ್ಟಿತು

ಯುನಿವರ್ಸಿಟಿ ಪರೀಕ್ಷೆಯ ಫಲಿತಾಂಶ

ಸೈಂಟ ಎಲೋಸಿಯಸ್ ಕಾಲೇಜು

ಬಿ ಎ

	ಪರೀಕ್ಷೆ ಕೊಟ್ಟವರು	ಪಾಸಾದ ಸಂಖ್ಯೆ	ಶೇಕಡಾ ಸಂಖ್ಯೆ	ಕ್ಲಾಸ್ 1	2	3
ಎಲ್ಲಾ ಭಾಗ	60	34	56.7			
ಇಂಗ್ಲಿಷ್	62	50	74.2	–	2	49
ಎರಡನೇ ಭಾಷೆ	68	50	78.5	3	5	42
ಲಾಜಿಕ್	5	5	100	1	2	2
ಫಿಸಿಕ್ಸ್	14	12	85.7	2	3	7
ಕೆಮಿಸ್ಟ್ರಿ	15	9	60.2	1	3	5
ಇತರ ಗಣಿತ	33	30	90.9	–	9	21

ಗಾಡಿಯಲ್ಲಿ ಕಳವು

ಕಳೆದ ಆದಿತ್ಯವಾರ ರಾತ್ರಿ ಸುಮಾರು ೧೦ ಗಂಟೆಗೆ ಒಬ್ಬ ಕ್ರೈಸ್ತ ವ್ಯಾಪಾರಿಯು ಗಾಡಿ ಹೊಡೆದುಕೊಂಡು ಪಾಂಡೇಶ್ವರ ಪದವಿನ ದಾರಿಯಾಗಿ ಹೋಗುತ್ತಿದ್ದಾಗ ಥಕ್ಕನೇ ಗಾಡಿಯ ಹಿಂದಿನಿಂದ ಒಬ್ಬನು ಹತ್ತಿಕೊಂಡು ಬ್ಬನು ಬಿಡದ ಗಾಡಿಯನ್ನು ನಿಲ್ಲಿಸಲು ಗಾಡಿಯವನು ಒಪ್ಪದೆ ಕಾಲ್ಕಳಾಗಿ ದರೋಡೆಗಾರರು ಓಡಿ ಹೋದರಂತೆ ಒಳ್ಳೆ ಸೀರೆ ಮಾಗ ಗಾಡಿಯಿಂದ ಎರಡು ಗೋಣಿ ಸಿಮೆಂಟು ಕದ್ದು ಹೋಗಿತ್ತೆಂದು ತಿಳಿದುಬರುತ್ತದೆ

ಗವರ್ನಮೆಂಟ್ ಟ್ರೇಡ್ ಸ್ಕೂಲ್ ಮಂಗಳೂರು

ಇಲ್ಲಿಯ ಗವರ್ನಮೆಂಟ್ ಟ್ರೇಡ್ಸ್ ಸ್ಕೂಲಿನಲ್ಲಿ ೩ ವರ್ಷಗಳ ತನಕ ಕೆಲಸವನ್ನೂ ೪ ವರ್ಷಗಳ ತನಕ ಮೆಕೇನಿಕ್ಸ್ ವಿಷಯ ವನ್ನೂ ಕಲಿಯ ಬೇಕಾಗುವ ಉಮೇದ್ವಾರರು ನಿಯಮಿತ ಅರ್ಜಿ ಫಾರ್ಮುಗಳಲ್ಲಿ ಒಂದಾಯಿ ಇದೇ ಜೂನ್ ೧೦ರೊಳಗೆ ಸುಪರಿಂಟೆಂಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. ಶಾಲೆಯು ಜೂನ್ ೧೫ ರಿಂದ ಆರಂಭವಾಗುವುದು. ಅರ್ಜಿ ಫಾರ್ಮು ಮತ್ತು ಪ್ರಾಸ್ಪೆಕ್ಟಸ್ ಇವನ್ನು ಸುಪರಿಂಟೆಂಡೆಂಟರಿಂದ ಪಡೆಯಬಹುದೆಂದು ಈ ಶಾಲೆಯ ಸುಪರಿಂಟೆಂಡೆಂಟರು ತಿಳಿಸುತ್ತಾರೆ

ಜಿಲ್ಲಾ ರೆಡ್‌ಕ್ರಾಸ್ ಸೊಸಾಯಿಟಿ

ತಾ. ೮ ಆರ್. ತಿಂಗಳು ಪ್ರತಿ ಮಂಗಳವಾರ, ಶುಕ್ರವಾರಗಳಲ್ಲಿ ಕೆನರಾ ಹೈಸ್ಕೂಲಿನ ಸುಬ್ಬರಾವ್ ಸ್ಮಾರಕ ಮಂದಿರದಲ್ಲಿ ಮಹಿಳೆಯರಿಗೆ ಪ್ರಥಮ ಚಿಕಿತ್ಸೆ ಪಾಠಗಳನ್ನು ಕೊಡಬೇಕು; ಜೂನ ತಿಂಗಳು ಮುಗಿಯುವುದರೊಳಗೆ ಸಂಖ್ಯೆ ೭೦೦ ಸದಸ್ಯರನ್ನು ಸೇರಿಸಬೇಕು, ಮೂಡಬಿದ್ರೆಯಲ್ಲಿರುವ ಸೊಸಾಯಿಟಿ ಶಾಖೆಯನ್ನು ಜಿಲ್ಲಾ ಸಂಘದ ಅಂಗವಾಗಿ ಅಂಗೀಕರಿಸುವುದು—ಎಂಬ ನಿರ್ಧಾರಗಳು ಇತ್ತೀಚೆಗೆ ನಡೆದ ಸೊಸಾಯಿಟಿ ಸಭೆಯೊಂದರಲ್ಲಿ ಮಾಡಲಾದುವೆಂದು ತಿಳಿದು ಬಂದಿದೆ.

ತಾಲೂಕು ಸಮಾಚಾರ

ಕಾರ್ಕಳ

ತಾಲೂಕು ಕಾಂಗ್ರೆಸ ಕಮಿಟಿಯ ಒಂದು ಸಭೆಯು ತಾ. ೨೧-೫-೩೯ರ ದಿನ ಶ್ರೀ ಕೆ ಎಚ್ ಶೆಟ್ಟರ ಅಧ್ಯಕ್ಷತೆಯಲ್ಲಿ ಕೂಡಿ ಹಿಂದಿನ ವರ್ಷದ ಲೆಕ್ಕ ಪತ್ರ ಮೊದಲಾದುದನ್ನು ಓದಿ ಅಂಗೀಕಾರ ಮಾಡಲಾಯಿತಲ್ಲದೆ ಬರುವ ವರ್ಷಕ್ಕೆ ತಯಾರಿಸಿದನ್ನು ಕಮಿಟಿಯು ಸಹಕಾರ ಸಮಾಲೋಚನೆ ಬಗ್ಗೆ ಮುಂದಿನ ಸಭೆಗೆ ಇಡಲಾಯಿತು

ಸಮಗ್ರಭಾರತ ಹೈದರಾಬಾದ ಮತ್ತು ಧರ್ಮವೀರ ಮೃತ್ಯು ದಿನಾಚರಣೆಯು ತಾ ೨೧-೫-೩೯ರ ದಿನ ಇಲ್ಲಿ ವಿಜೃಂಭಣೆಯಿಂದ ಆಯಿತು ಬೆಳಗ್ಗೆ ಪ್ರಭಾತಫೇರಿ, ಆರ್ಯಸಮಾಜ ಮಂದಿರದಲ್ಲಿ ಸತ್ಸಂಗ ಕಾಲಕ್ಷೇಪ, ಸಾಯಂಕಾಲ ಬೋರ್ಡ ಮ್ಯಾನ ಎಲಿಮೆಂಟರಿ ಶಾಲೆಯ ಅಂಗಳದಲ್ಲಿ ಶ್ರೀ ಯಸ್. ಸದಾನಂದ ಕುಡ್ವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಭಾಷಣಾದಿಗಳ ಇದ್ದವು

ಉಡುಪಿ

ತಾ ೧೬ ೧೯ ಮೇ ತಾರೀಖಿನಲ್ಲಿ ಕನ್ನಡ ಸಾಹಿತ್ಯ ವಸಂತೋತ್ಸವವು ಶ್ರೀ ಕೃಷ್ಣ ದೇವಳದ ವಸಂತ ಮಹಾಲಿನಲ್ಲಿ ಪರ್ಯಾಯ ಸ್ವಾಮಿಯವರಾದ ಶ್ರೀ ಲಕ್ಷ್ಮೀವರ ತೀರ್ಥರವರ ಉದಾರಾಶ್ರಯದಿಂದ ದಕ್ಷಿಣ ಕನ್ನಡ ಸಾಹಿತ್ಯ ಪ್ರತಿನಿಧಿ ಮಂಡಲಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತುಗಳ ನೇತೃತ್ವದಲ್ಲಿ ಒದಗಿಸಲ್ಪಟ್ಟಿತು ನಾಲ್ಕು ದಿವಸ ಉತ್ಸವವು ಮಾನ್ಯ ಡಾ॥ ವಾಸುದೇವ ಪೈ ಎಮ್ ಬಿ, ಬಿ ಎಸ್ ಇವರಿಂದ ನಡೆಸಲಾಯಿತು ಶ್ರೀಗಳಾದ ಧರಣಿಧರ ಮಂಜಯ್ಯ ಹೆಗ್ಡೆ, ರಂಗನಾಥ ದಿವಾಕರ, ಉಳ್ಳಾಲ ಮಂಗೇಶರಾವ್ ಮುಂತಾದ ಕೆಲವು ಪ್ರಭೃತಿಗಳು ಸೈರ. ಪ್ರಾಚೀನ ದೃಷ್ಟಿ ಅವರ ಕಾರ್ಯಕ್ರಮವು ಸಾಗಿತು ಗಮಾಕ ವಾದ್ಯ ಗಾನ ಜರಗಿಸಲ್ಪಟ್ಟಿತು. ಸಾಹಿತ್ಯೋತ್ಸವವು ಉತ್ಸಾಹ ಜನಕವಾಗಿತ್ತು

ತಾ ೨೨ಕ್ಕೆ ಸ್ಥಳೀಯ ಮ್ಯುನಿಸಿಪಾಲಿಟಿಯು ಪ್ರಸ್ತುತ ಸಾರ್ವಜನಿಕ ವಾಚನಾಲಯಕ್ಕಾಗಿ ನೂತನವಾಗಿ ಕಟ್ಟಿಸಲಾದ ಭವ್ಯಕಟ್ಟಡ ಪ್ರವೇಶ ಸಮಾರಂಭವು ಚೇರ್‌ಮ್ಯಾನರ ಪಾಲಿಸಿ ಟಿಂ ಸೇಕೆಟರಿಯವರಿಂದ ಮಾನ್ಯ ಶ್ರೀ ಎ ಬಿ ಶೆಟ್ಟಿ ಎಮ್ ಎಲ್ ಎ ಇವರಿಂದ ನಿರ್ವಹಿಸಲಾಯಿತು ಮಾನ್ಯ ಅತಿಥಿಗಳಿಗೆ ಆದ ಕೃತಜ್ಞತೆ ಬಳವರಿಗೆ ಉಪಹಾರ ಸತ್ಕಾರವಾಗಿ, ಮಾನಪತ್ರ ಅರ್ಪಣೆ ಭಾಷಣಗಳು ಆದುವು ಅದೇ ಕಟ್ಟಡದ ಮ್ಯುನಿಸಿಪಾಲಿಟಿಯ ವಸ್ತು ಪ್ರದರ್ಶನಾಲಯದ ಉದ್ಘಾಟನೆಯು ಜರಗಿಸಲ್ಪಟ್ಟಿತು

ತಾ ೨೩ಕ್ಕೆ ಬ್ಯಾರಿಸ್ಟರ ಎ ಕೆ ಪಿಳ್ಳೆಯವರಾದ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಸಾಯಂ ಕಾಲ ಬಾ ಪಿ ರೆಡಿಕಲ್ ಕಾಂಗ್ರೆಸ್ ಲೀಗ (?) ನವರ ಆಶ್ರಯದಲ್ಲಿ ಸಾರ್ವಜನಿಕ ಸಭೆ ಸೇರಿಸಲ್ಪಟ್ಟು ರೆಡಿಕಲ್ ಕಾಂಗ್ರೆಸ್‌ಮೆನ್ ಮತ್ತು ಅವರ ಉದ್ದೇಶಗಳ ಎಂಬ ಭಾಷಣವೀಯಲಾಯಿತು.

ಕನ್ನಡ ವಸಂತ ಸಾಹಿತ್ಯ ಉತ್ಸವ, ಬಾರಕೂರು

ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ ವಸಂತ ಸಾಹಿತ್ಯ ಉತ್ಸವವು ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನಲ್ಲಿ ತಾ ೨೧-೫-೩೯ಕ್ಕೆ ಜರುಗಿತು.

ಈ ಉತ್ಸವಕ್ಕಾಗಿ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕಲಿಭೂಷಣ ಬೆಟಗೇರಿ ಕೃಷ್ಣಶರ್ಮಾ, ಶ್ರೀ. ಎ. ಸೀತಾರಾಮಯ್ಯ ಮತ್ತು ಶ್ರೀ. ಕೋಟ ಶಿವರಾಮ ಕಾರಂತರು ಆಗಮಿಸಿದ್ದರು.

ತಾ. ೨೧-೫-೩೯ನೆಯ ಆದಿತ್ಯವಾರ ಸಾಯಂ ೫ ಗಂಟೆಗೆ ಸರಿಯಾಗಿ ಉತ್ಸವದ ಸಲುವಾಗಿ ಏರ್ಪಡಿಸಿದ ವಸಂತ ಮಂಟಪದಲ್ಲಿ ವಸಂತ ಸಾಹಿತ್ಯ ಉಪನ್ಯಾಸಗಳು ಪ್ರಾರಂಭವಾದುವು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ. ಎ ಶ್ರೀನಿವಾಸ ಹೆಬ್ಬಾರ ಅವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕಾರಂತರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ. ಬೆಟಗೇರಿಯವರು ಹೊಸಗನ್ನಡ ಕಲಿಕೆಯ ಮೇಲೆ ಉಪನ್ಯಾಸ ಭಾಷಣ ಮಾಡಿದರು. ಕಲಿಕೆಯು ಬದಲಾವಣೆಯನ್ನು ಕ್ರಮ ಪ್ರಕಾರ ಸೂಚಿಸಿ ಅದರ ಕೆಲವು ಅವಶ್ಯಕತೆಯನ್ನು ವಿವರಿಸಿ ಹೊಸಗನ್ನಡ ಪದ್ಯಗಳನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು.

ಶ್ರೀ. ಕಾರಂತರು "ಯಕ್ಷಗಾನ"ವೆಂಬ ವಿಷಯದ ಮೇಲೆ ಮಾತನಾಡುತ್ತ ನಮ್ಮ ಜನ ಜೀವನದಲ್ಲಿ ಅದರ ಸ್ಥಾನ ಉಪಯುಕ್ತತೆಯನ್ನು ವಿವರಿಸಿ ಕಲಾದೃಷ್ಟಿಯಿಂದ ಅದನ್ನು ವಿಮರ್ಶೆ ಮಾಡಿ ಅದರ ಸುಧಾರಣೆಯು ಅವಶ್ಯಕವೆಂದು ಸಮರ್ಥಿಸಿದರು

ಶ್ರೀ ಎ ಸೀತಾರಾಮಯ್ಯನವರು ತಮ್ಮ ಸಹಜ ಗಂಭೀರವಾಣಿಯಿಂದ "ಮತ ಮತ್ತು ಸಾಹಿತ್ಯ"ವೆಂಬ ಕುರಿತು ಭಾಷಣ ಮಾಡಿದರು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳನ್ನು ವಿವರಿಸಿ ಪರಿಷತ್ತಿನ ಪರವಾಗಿ ಸ್ವಾಗತ ಸಮಿತಿಗೆ ಧನ್ಯವಾದ ಅರ್ಪಿಸಿ ಮಾಡಿದರು ಧನ್ಯವಾದ ಅರ್ಪಣೆಯಾದ ಬಳಿಕ ಉತ್ಸವ ಮುಕ್ತಾಯವಾಯಿತು

ಕುಂದಾಪುರ

ಇಲ್ಲಿಯ ಶಾಂತಿನಿಕೇತನ ಹಿಂದೂ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವ ಮತ್ತು ಬಾಲಾ ಮಕ್ಕಳ ಮೇಳೆ ಆಗ ಕಟ್ಟಡದ ಪ್ರವೇಶೋತ್ಸವವು ಇದೇ ತಾ ೩೧ನೇ ಮಂಗಳವಾರ ಶ್ರೀ ಕೆ ಪಿ ರಾಜಗೋಪಾಲ ಆಚಾರಿ ಬಿ ಎ ಎಲ್ ಟಿ, ದ ಕ್ಯಾಬಿನೆಟ್ ಬಿಷ್ಟರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸರ್ವರಿಗೂ ಸುಸ್ವಾಗತ ಇದೇ ಸಮಯ ಆಮಂತ್ರಣವೆಂದು, ಸರ್ವರೂ ಈ ಸಂಸ್ಥೆಯನ್ನು ಹುರಿದುಂಬಿಸಬೇಕಾಗಿ ಮೇನೇಜರು ತಿಳಿಸುತ್ತಾರೆ

ಕೆನರಾ ಬೇಂಕ್, ಲಿಮಿಟೆಡ್, ಸಿಟಿ ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನ ಋಣ್ಣ ಕ್ರಮಗಳ ಕುರಿತ ಮೇಲೆ ಪಡೆದ ಸಾಲ ನಗದು ಅಸಲು ತೆರವಾದ ಸಾಲದ ಹುದ್ದೆಯನ್ನು ನೋಟೀಸು ಅವರು ತೀರಿಸದೆ ಇದ್ದ ಕಾರಣ ನೋಟೀಸು ಕೊಟ್ಟದ್ದು ಹಿಂದಿರುಗಿ ಬಂದಿರುವುದರಿಂದ ಸಾಲ ಸಂಬಂಧ ತೀರಿಸದೆ ಹೋದರೆ ಸದ್ರಿ ನಗ ಬೇಂಕಿಗೆ ಬರತಕ್ಕ ಅಸಲು ಬಡ್ಡಿ ಹಣಗಳನ್ನು ಇದೇ ತಾರೀಕು ೨-೬-೧೯೩೯ ರ ಒಳಗೆ ಬೇಂಕಿಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದಲ್ಲಿ ಸದ್ರಿ ನಗಗಳನ್ನು ಇದೇ ಬರುವ ತಾ. ೧೯-೬-೧೯೩೯ನೇ ಸೋಮವಾರ ದ ಮಧ್ಯಾಹ್ನ ೩ ಘಂಟೆಗೆ ಅಥವಾ ಬೇರೆ ಕರೆಯಲ್ಪಡುವ ತಾರೀಕಿನಂದು ಅನುಕೂಲವಿರುವ ಇತರ ದಿನ ಮ ಹೊತ್ತಿನಲ್ಲಿ ಈ ನೋಟೀಸು ಕೊಡದೆಯೇ ಬೇಂಕಿನ ಮಂಗಳೂರು ಆಫೀಸಿನಲ್ಲಿ ಬಹಿರಂಗ ಲಿಲಾವು ಮೂಲಕ ಮಾರಲಾಗುವುದಾಗಿ ಈ ಮೂಲಕ ತಿಳಿಯಪಡಿಸಲಾಗುತ್ತದೆ

ಲೋನ ನಂಬ್ರ L 483/37.

ಸಾಲಗಾರರ ಹೆಸರು ಮತ್ತು ವಿಳಾಸ.—

ಪಣಂಬೂರು ಪೋಸ್ಟು, ತೋಕೂರು, ಕುಂಜತ್ತಬೈಲು ಗ್ರಾಮದಲ್ಲಿರುವ ಕೊರಗ ಶಾಪಾರ ಅಳಿಯ ನಾರಾಯಣ ಶಾಪಾ

ಸಾಲದ ಮೊಬಲಗು ರೂ 25-0-0

ಬಾಕಿಯಾಗುವ ಬಡ್ಡಿ ವಗೈರೆ ,, 2-11-7.

ಮತ್ತು ಈ ನೋಟೀಸು ಖರ್ಚು ಕೂಡಾ.

Office of the Bank, City, Mangalore 25-5-1939.

P. Krishna Kamath,
Agent.

ಸೂರೆ ಸುಲಿಗೆಯ ದಿನಗಳು ಕಳೆದುಹೋದುವು

ವಿದೇಶೀ ವ್ಯಾಪಾರಿಗಳಿಗೆ ಸರದಾರ ಪಟೇಲರ ಬೋಧನೆ

ಬೊಂಬಾಯಿಯಲ್ಲಿ ಭಾರತೀಯ ವಾಣಿಜ್ಯ ಸಂಘದ ಸೇಠ ಲಾಲಜೀ ನಾರಾಯಣಜೀ ಸ್ಮಾರಕ ಮಂದಿರದ ಅನಾವರಣ ಸಮಾರಂಭ

ಬೊಂಬಾಯಿಯಲ್ಲಿ ಭಾರತೀಯ ವಾಣಿಜ್ಯ ಸಂಘದ ಕಡೆಯಿಂದ ಕಟ್ಟಿಸಿದ ಸೇಠ ಲಾಲಜೀ ನಾರಾಯಣಜೀ ಸ್ಮಾರಕ ಮಂದಿರದ ಅನಾವರಣ ಸಮಾರಂಭವನ್ನು ನಡೆಯಿಸುತ್ತ ಸರದಾರ ವಲ್ಲಭಭಾಯಿ ಪಟೇಲರವರು—'ಭಾರತೀಯರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿ, ಅವರ ಇಚ್ಛೆಯ ವಿರುದ್ಧ ವ್ಯಾಪಾರ ಮಾಡಿ ಭಾರತದ ಸಂಪತ್ತನ್ನು ಸುಲಿಯುವ ದಿನಗಳು ಕಳೆದು ಹೋದುವು. ಭಾರತಕ್ಕೆ ವಿರೋಧವಾದ ಭಾರತ ಬ್ರಿಟನ ವ್ಯಾಪಾರ ಒಡಂಬಡಿಕೆಯು ಎಂದೂ ಸಫಲವಾಗತಕ್ಕದ್ದಲ್ಲ. ಇಂಥ ಏಕಪಕ್ಷೀಯವಾದ ಒಡಂಬಡಿಕೆಗಳಿಂದ ವಿದೇಶಿಯರ ವ್ಯಾಪಾರವು ಭಾರತದಲ್ಲಿ ಉನ್ನತಿಗೆ ಬರಲಾರದು. ಪರಸ್ಪರ ಸ್ನೇಹ ಸೌಹಾರ್ದದಿಂದ ಮಾತ್ರ ವಿದೇಶಿಯರು ಇಲ್ಲಿ ವ್ಯಾಪಾರ ಮಾಡಬಹುದು' ಎಂದು ಭಾಷಣ ಮಾಡಿದರು. ಸಮಾರಂಭಕ್ಕೆ ಬಂದಿದ್ದ ವ್ಯಾಪಾರಿಗಳನ್ನುದ್ದೇಶಿಸಿ ಮಾತನಾಡುತ್ತಾ—'ದೇಶದ ವ್ಯಾಪಾರ ಕೈಗಾರಿಕೆಗಳ ಉನ್ನತಿಗೂ ರಾಜಕೀಯ ಸ್ವಾತಂತ್ರ್ಯಕ್ಕೂ ಬಹಳ ಸಂಬಂಧವಿದೆ. ಸ್ವಾತಂತ್ರ್ಯ ಸಂಪಾದನೆಯಾಗದೆ ವ್ಯಾಪಾರ ಕೈಗಾರಿಕೆಗಳ ಅಭಿವೃದ್ಧಿಯು ಅಸಂಭವ. ಆದ್ದರಿಂದ ಭಾರತೀಯ ವ್ಯಾಪಾರಿಗಳು ಕಾಂಗ್ರೆಸಿಗೆ ಸಹಾಯ ಪ್ರೋತ್ಸಾಹಗಳನ್ನು ಕೊಟ್ಟು ಸಹಕರಿಸುವದು ಅವರ ಕರ್ತವ್ಯವಾಗಿದೆ' ಎಂದರು.

ಶ್ರೀ. ಭೂಲಾಭಾಯಿ ದೇಸಾಯಿಯವರು ದಿವಂಗತ ಶ್ರೀ. ಲಾಲಜೀ ನಾರಾಯಣಜೀಯವರ ಪ್ರತಿಮೆಯ ಪ್ರತಿಷ್ಠೆ ಮಾಡಿ, ಶ್ರೀ. ಲಾಲಜೀಯವರಿಂದ ವ್ಯಾಪಾರಿ ಸಮಾಜಕ್ಕೂ ದೇಶಕ್ಕೂ ಆದ ಉಪಕಾರಗಳನ್ನು ಸ್ಮರಿಸಿ ಭಾಷಣ ಮಾಡಿದರು. ಮಹಾತ್ಮಾ ಗಾಂಧಿ ಮೊದಲಾದವರು ಸಮಾರಂಭದ ಸಫಲತೆಯನ್ನು ಕೋರಿ ಸಂದೇಶಗಳನ್ನು ಕಳುಹಿಸಿದ್ದರು.

ಗಾಂಧಿ ಭೋಸ ಪತ್ರವ್ಯವಹಾರ

ತ್ರಿಪುರಿ ಕಾಂಗ್ರೆಸು ಆದ ತರುವಾಯ ವರ್ಕಿಂಗ ಕಮಿಟಿಯ ನಿರ್ಮಾಣ ವಿಷಯದಲ್ಲಿ ನಡೆದ ಗಾಂಧಿ ಭೋಸ ಪತ್ರವ್ಯವಹಾರವು ಈಗ ಪ್ರಕಟವಾಗಿದೆ. ಶ್ರೀ. ಭೋಸರ ಒಪ್ಪಿಗೆಯಿಂದ ಈ ಪತ್ರವ್ಯವಹಾರವು ಪ್ರಕಟವಾದ್ದಾದರೂ, ಅದರ ಸೂಕ್ಷ್ಮ ಪರಿಶೀಲನೆ ಮಾಡುವಾಗ ಶ್ರೀ. ಭೋಸರು ಪೂರ್ಣ ನ್ಯಾಯವಾದಿಗಳಾಗಿದ್ದರೆಂದು ಹೇಳಲು ಬರುವದಿಲ್ಲ. ಈ ಪತ್ರವ್ಯವಹಾರದಿಂದ ಅವರ ಮೇಲೆ ಜನರಿಗಿದ್ದ ಗೌರವವು ಸ್ವಲ್ಪ ಕಡಿಮೆಯಾಯಿತೆನ್ನಬಹುದು. ಯಾಕೆಂದರೆ ವ್ಯಕ್ತಿಗತ ಪ್ರತಿಷ್ಠೆಯ ರಕ್ಷಣೆಗಾಗಿಯೇ ಅವರು ಹಠಹಿಡಿದಿದ್ದರೆಂದು ಗೊತ್ತಾಗುತ್ತದೆ. 'ತ್ರಿಪುರಿ ಕಾಂಗ್ರೆಸಿನ ವಿಷಯ ನಿರ್ಮಾಣ ಸಮಿತಿಯಲ್ಲಿ ೧೩೫ ಮಂದಿ ಶ್ರೀ. ಪಂತರ ಠರಾವಿಗೆ ವಿರೋಧ ಮತಗಳನ್ನು ಕೊಟ್ಟಿದ್ದರು. ಬಹಿರಂಗ ಸಭೆಯಲ್ಲಿ ಕಾಂಗ್ರೆಸ ಸೋಶಿಯಲಿಸ್ಟ ಪಾರ್ಟಿಯು ಯಾವ ಕಡೆಗೂ ಮತದಾನ ಮಾಡಿರದೆ ಇದ್ದಿತಾದರೂ ೨೨,೦೦ ಮತಗಳಲ್ಲಿ ನನಗೆ ೮೦೦ ಮತಗಳು ಸಿಕ್ಕಿದುವು' ಎಂದು ಒಂದು ಪತ್ರದಲ್ಲಿ ಶ್ರೀ. ಭೋಸರು ಹೇಳಿರುವದು. ಅಂದರೆ ಮಹಾತ್ಮರು ದೇಶದ ಏಕಮಾತ್ರ ಅಧಿನಾಯಕರು ಎಂದು ಹೇಳುವ ವಿಷಯದಲ್ಲಿ ಭೋಸರಿಗೆ ಒಪ್ಪಿಗೆ ಇದ್ದಿಲ್ಲವೆಂದೂ, ಗಾಂಧಿಯವರ ವಿರೋಧಿಗಳು ಕಾಂಗ್ರೆಸಿನೊಳಗೂ ಇದ್ದಾರೆಂದೂ, ಸೋಶಿಯಲಿಸ್ಟಪಾರ್ಟಿಯವರು ಮತದಾನ ಮಾಡಿದ್ದರೆ ಭೋಸರೇ ಗೆಲ್ಲುತ್ತಿದ್ದರೆಂದೂ ಅವರು ಹೇಳುವ ಅಭಿಪ್ರಾಯವಾಗಿದೆ. ಹಾಗಿದ್ದರೆ ಅವರು ಸ್ವತಂತ್ರರಾಗಿ ಯಾಕೆ ವ್ಯವಹರಿಸಲಿಲ್ಲ. ತ್ರಿಪುರಿ ಕಾಂಗ್ರೆಸ ನಡೆದ ಮೇಲೆ ವರ್ಕಿಂಗ ಕಮಿಟಿಯ ರಚನೆಗೆ ತಿಂಗಳುಗಟ್ಟಲೆ ಯಾಕೆ ಕಳೆದರು? ಕಾಂಗ್ರೆಸಿನಲ್ಲಿ ಶ್ರೀ. ಭೋಸರಿಗೆ ಬಹುಮತವಿರುತಿದ್ದಿತಾದರೆ ಎ. ಐ. ಸಿ. ಸಿ.ಯಲ್ಲಿ ಯಾಕೆ ಅವರು ರಾಜಿನಾಮೆ ಕೊಡಬೇಕಾಯಿತು? ಈ ಎಲ್ಲ ಸಂಗತಿಗಳನ್ನು ಪರ್ಯಾಲೋಚಿಸುವಾಗ ಶ್ರೀ. ಭೋಸರು ಊಹಿಸಿದಂತೆ ಅವರಿಗೆ ಜನರ ಬೆಂಬಲವಿರುವದಿಲ್ಲವೆಂಬುದು ಸ್ಪಷ್ಟ. ಇನ್ನು ಬ್ರಿಟಿಷ ಸರಕಾರಕ್ಕೆ ಅಲ್ಟಿಮೇಟಮ್ ಕೊಡುವ ವಿಚಾರ 'ನೀವು ಆರಿಸಿದ ವರ್ಕಿಂಗ ಕಮಿಟಿಯು ಅಲ್ಟಿಮೇಟಮ್ ಕೊಟ್ಟು ಕಾರ್ಯಪ್ರವೃತ್ತವಾಗಲು ಸಮರ್ಥವೆನ್ನುವಿರಾದರೆ ನಾನು ನಿಮ್ಮ ಆರಿಕೆಯನ್ನು ಒಪ್ಪಿಕೊಳ್ಳುವೆನು' ಎಂದು ಶ್ರೀ. ಭೋಸರು ಇನ್ನೊಂದು ಕಾಗದದಲ್ಲಿ ಬರೆದಿದ್ದಾರೆ. ಬ್ರಿಟಿಷ ಸರಕಾರಕ್ಕೆ ಅಲ್ಟಿಮೇಟಮ ಕೊಡಲು ದೇಶವು ಈಗ ಸಿದ್ಧವಿಲ್ಲ ಎಂಬ ಖಂಡಿತ ಅಭಿಪ್ರಾಯವು ಮಹಾತ್ಮರಿಗೆ. ಆದ್ದದರಿಂದ ಮಹಾತ್ಮರು ಶ್ರೀ. ಭೋಸರ ಈ ಶರತ್ತನ್ನು ಒಪ್ಪಲಿಲ್ಲ. ಶ್ರೀ. ಭೋಸರು ಸ್ವತಂತ್ರರಾಗಿ ರಚಿಸುವ ವರ್ಕಿಂಗ ಕಮಿಟಿಯಲ್ಲಿ ವಿಶ್ವಾಸವನ್ನು ಸೂಚಿಸಲಿಕ್ಕೂ ಅವರು ಒಪ್ಪಲಿಲ್ಲ. ಮನಸ್ಸಿಗೆ ಒಪ್ಪದ ಕಾರ್ಯವನ್ನು ಮಹಾತ್ಮರು ಹೇಗೆ ಮಾಡಿಯಾರು? ಆದ್ದರಿಂದ ನಿರುಪಾಯರಾಗಿ ಶ್ರೀ. ಭೋಸರು ತನ್ನ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಡಬೇಕಾಯಿತು.

ಬ್ರಿಟನ್ನಿನ ಮೇಲೆ ಗಾಂಧಿ ವಿಜಯದ ಪರಿಣಾಮ

ಕಾಂಗ್ರೆಸಿನಲ್ಲಿ ಮಹಾತ್ಮರು ಜಯಶೀಲರಾಗಿ ಪುನಃ ತಮ್ಮ ಅಧಿನಾಯಕತ್ವವನ್ನು ಸ್ಥಾಪಿಸಿದುದರಿಂದ ಬ್ರಿಟನ್ನಿನ ಮೇಲೆ ಹಿಂದುಸ್ಥಾನದ ಕುರಿತು ಸತ್ಪರಿಣಾಮವುಂಟಾಗಿರುವದು. ಹಿಂದುಸ್ಥಾನದ ಸಮಾಚಾರಗಳಿಗೆ ಕಾಲಂಗಳಷ್ಟು ಸಹ ಸ್ಥಳ ಕೊಡದಿದ್ದ ಬ್ರಿಟನ್ನಿನ ವೃತ್ತಪತ್ರಿಕೆಗಳು ಕಲ್ಕತ್ತಾ ಎ. ಐ. ಸಿ. ಸಿ. ಸಮಾಚಾರಗಳನ್ನು ಕಾಲಮ್ಮು ಕಟ್ಟಲೆ ಪ್ರಾಮುಖ್ಯಸ್ಥಾನದಲ್ಲಿ ಪ್ರಕಟಿಸಿದುವು. ಮುಂಬರುವ ಲೋಕಯುದ್ಧವನ್ನು ಸಂಪೂರ್ಣ ಬಹಿಷ್ಕರಿಸಬೇಕೆಂಬುದು ಶ್ರೀ. ಭೋಸರ ಅಭಿಪ್ರಾಯವಾಗಿದ್ದಿತು. ಆದರೆ ಹಿಂದುಸ್ಥಾನ-ಬ್ರಿಟನಗಳ ವಿವಾದಗಳನ್ನು ತೀರ್ಮಾನಿಸಲಿಕ್ಕೆ ಲೋಕಯುದ್ಧವನ್ನು ಒಂದು ಸಾಧನವನ್ನಾಗಿ ಉಪಯೋಗಿಸಬೇಕೆಂದು ಮಹಾತ್ಮರ ಅಭಿಪ್ರಾಯ. ಕಾಂಗ್ರೆಸಿನಲ್ಲಿ ಮಹಾತ್ಮರಿಗೆ ವಿಜಯವಾಗಿ ಶ್ರೀ. ಭೋಸರು ಸೋತುದುದರಿಂದ ಬ್ರಿಟನ್ನಿನಲ್ಲಿ ವಿಚಾರವಂತರಿಗೆ ಸಂತೋಷವಾಗಿದೆ. ಯುದ್ಧಕಾರಣದಿಂದಾದರೂ ಬ್ರಿಟನಿಗೂ ಹಿಂದುಸ್ಥಾನಕ್ಕೂ ಶಾಶ್ವತವಾದ ಗೌರವಪೂರ್ಣ ಒಡಂಬಡಿಕೆಯಾಗಿ ಚಿರಶಾಂತಿಯು ಸ್ಥಾಪಿತವಾಗುವದೆಂದೂ, ಮಹಾತ್ಮರು ಇಂಥ ಒಡಂಬಡಿಕೆಗೆ ಪ್ರಯತ್ನಿಸುವರೆಂದೂ ಇಂಗ್ಲೆಂಡಿನ ಸಾಮ್ರಾಜ್ಯಶಾಹಿ ಪತ್ರಿಕೆಗಳು ಕೂಡ ಅನ್ನತೊಡಗಿವೆ.

ಹಿಟ್ಲರನನ್ನು ತಡೆಯುವ ಸುಲಭೋಪಾಯ

'ಹಿಟ್ಲರನು ಯಾವ ಯಾವ ಭಾವನೆಗಳಿಂದ ಪ್ರೇರಿತನಾಗಿ ಯುರೋಪಿನ ಆಸ್ಟ್ರಿಯ ಜೆಕೊಸ್ಲೊವೆಕಿಯಾ, ಮೊದಲಾದ ಸಣ್ಣ ರಾಷ್ಟ್ರಗಳ ರಾಜಕೀಯ, ಆರ್ಥಿಕ ಸ್ವಾತಂತ್ರ್ಯವನ್ನು ಮುರಿದು ಆ ದೇಶಗಳ ೩೦೦ ಮಿಲಿಯ ಪ್ರಜೆಗಳನ್ನು ಗುಲಾಮರನ್ನಾಗಿ ಮಾಡಿದ್ದಾನೋ ಅದೇ ಭಾವನೆಗಳಿಂದ ಪ್ರೇರಿತರಾಗಿ ಬ್ರಿಟಿಷರು ಏಷ್ಯಾ, ಆಫ್ರಿಕದ ೪೦೦ ಮಿಲಿಯ ಪ್ರಜೆಗಳನ್ನು ಪರತಂತ್ರರನ್ನಾಗಿ ಮಾಡಿದ್ದಾರೆ. ಹಿಂದುಸ್ಥಾನ, ಆಫ್ರಿಕದಂಥ ರಾಷ್ಟ್ರಗಳು ದಾಸ್ಯಶೃಂಖಲೆಗಳಿಂದ ಬಿಗಿಯಲ್ಪಟ್ಟಿರುವವರೆಗೂ ಕಾಲ—ಯುರೋಪದಲ್ಲಿ ನಿಜವಾದ ಶಾಂತಿಯು ಉಂಟಾಗಲಾರದು. ಬ್ರಿಟನ್ನಿನಲ್ಲಿ ಕಮ್ಯುನಿಜಮಿನ ಪ್ರಚಾರವಾಗುವದು ಮತ್ತು ಅದರ ಮೂಲಕ ಸಾಮ್ರಾಜ್ಯವು ನಷ್ಟ ಭ್ರಷ್ಟವಾಗುವದು ಎಂಬ ಹೆದರಿಕೆ ಬ್ರಿಟಿಷರು ಹಿಟ್ಲರನನ್ನು ತ್ರಿಕರಣಗಳಿಂದ ವಿರೋಧಿಸದೆ ಇದ್ದಾರೆ. ಆದ್ದರಿಂದ ಹಿಟ್ಲರನನ್ನು ತಡೆಯಬೇಕೆನ್ನುವಿರಾದರೆ, ಹಿಂದುಸ್ಥಾನ, ಆಫ್ರಿಕದಂಥ ಪರತಂತ್ರ ಮತ್ತು ಗುಲಾಮ ರಾಷ್ಟ್ರಗಳನ್ನು ಸ್ವತಂತ್ರ ಮಾಡಿ ಸುಧಾರಿಸುವದೊಂದೇ ಅದಕ್ಕೆ ಇರುವ ಉಪಾಯವಾಗಿದೆ. ಆಗ ಹಿಟ್ಲರನು ವಸಾಹತುಗಳನ್ನು ಕೇಳುವದು ನಿಲ್ಲುತ್ತದೆ. ಸ್ವತಂತ್ರ ರಾಷ್ಟ್ರಗಳ ಸಮ್ಮಿಳಿತ ಶಕ್ತಿಯನ್ನು ಎದುರಿಸುವ ಸಾಮರ್ಥ್ಯವು ಹಿಟ್ಲರನಿಗೆ ಬರುವದಿಲ್ಲ' ಎಂದು ಲಿಯೊನಾರ್ಡ ಬಾರ್ನ್ಸ್ ಎಂಬ ಆಂಗ್ಲೇಯ ಲೇಖಕರು ಹೇಳಿ, ಸ್ಥೂಲದಲ್ಲಿ ಕಾಂಗ್ರೆಸಿನ ಬೇಡಿಕೆಗಳನ್ನು ಪುರಸ್ಕರಿಸಿರುವರು.

ಇಂಡಿಯಾ ಸರಕಾರದ ಯುದ್ಧ ಸಿದ್ಧತೆ

ಲೋಕಯುದ್ಧವು ಆಗಲಿ, ಆಗದಿರಲಿ; ಇಂಡಿಯವು ಅದರಲ್ಲಿ ಭಾಗವಹಿಸುವಂತಾಗಲಿ, ಆಗದಿರಲಿ, ಇಂಡಿಯಾ ಸರಕಾರವು ಮಾತ್ರ ಸಂಪೂರ್ಣ ಯುದ್ಧಸಿದ್ಧತೆಯಲ್ಲಿ ತೊಡಗಿರುವದು. ಯಾಕೆಂದರೆ ಈಗ ಹಿಂದುಸ್ಥಾನದ ರಾಜಕೀಯ ಸ್ಥಿತಿಯು ಎಂತಹದಿದ್ದರೂ, ಯುದ್ಧವಾರಂಭವಾಗುವ ಕೊನೆಯ ಪಳದವರೆಗೆ ಯುದ್ಧಸಿದ್ಧತೆ ಮಾಡುವದನ್ನು ಮುಂದುವರಿಸಲಾಗುವದಿಲ್ಲ; ಯುದ್ಧಸಿದ್ಧತೆಗೆ ಮೊದಲಿಂದಲೂ ಬಹಳ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಹಿಂದುಸ್ಥಾನದಲ್ಲಿ ಶತ್ರುಪಕ್ಷದ ಅನೇಕ ರಾಷ್ಟ್ರಗಳ ಜನರು ವಾಸವಾಗಿರುವದರಿಂದ, ಇಲ್ಲಿ ನಡೆದಿರುವ ಸಿದ್ಧತೆಗಳು ಎಂಥವೆಂಬುದನ್ನು ಪ್ರಕಟಿಸಿ, ಅದರಿಂದ ಶತ್ರುರಾಷ್ಟ್ರಗಳ ಆ ಜನರು ಪ್ರಯೋಜನ ಪಡೆಯುವಂತೆ ಇಂಡಿಯಾ ಸರಕಾರವು ಮಾಡಿರುವದಿಲ್ಲ. ಅದು ಅಷ್ಟು ಮೂರ್ಖವಾಗಿರುವದಿಲ್ಲ. ಆದರೂ ಒಳಗಿಂದೊಳಗೆ ಬಹಳ ಸಿದ್ಧತೆಗಳು ಆಗಿರುವವು. ಯುದ್ಧ ಸಾಮುಗ್ರಿ ಮತ್ತು ಸಾಂಘಿಕ ಉಪಕರಣಗಳು ಬಹಳ ಸಂಗ್ರಹವಾಗಿವೆ; ಈ ಸಂಗ್ರಹಕಾರ್ಯಕ್ಕೆ ವಾಯ್ಸರಾಯರ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರ ಅನೇಕ ಗುಪ್ತಸಮಿತಿಗಳು ಕೆಲಸಮಾಡುತ್ತಲಿವೆ. ದೀರ್ಘಕಾಲ ಯುದ್ಧವು ನಡೆದರೆ ತನ್ನ ಆವಶ್ಯಕತೆಗಳಿಗೆ ಇಂಡಿಯವು ತನ್ನನ್ನೆ ಅವಲಂಬಿಸಿರುವಂತೆ ಆಗತಕ್ಕವುಳ್ಳ ಕೈಗಾರಿಕೆ ಮತ್ತು ಇತರ ಕಾರ್ಯಾಲಯಗಳು ಇಲ್ಲೇ ಸ್ಥಾಪಿತವಾಗಿವೆ. ವ್ಯಾಪಾರ ಪೇಟೆಗಳಲ್ಲಿ ಯಾರೂ ಅಕ್ರಮ ಮತ್ತು ವಿಪರೀತ ಲಾಭ ಸಂಪಾದಿಸದ ಹಾಗೆ ಜಾಗ್ರತೆ ತೆಗೆದುಕೊಳ್ಳಲಾಗಿದೆ. ಸೈನ್ಯಭರ್ತಿಗೂ, ತರಬೇತಿಗೂ ತೊಂದರೆಯಾಗದ ಹಾಗೆ ಕಾನೂನುಕಾಯಿದೆಗಳಾಗಿವೆ. ಇಂಡಿಯಾ ಸರಕಾರದ ಕೆಲವು ಸೈನಿಕ ದಳಗಳನ್ನು ಬ್ರಿಟಿಷ ಸರಕಾರವು ಕೇಳಿಕೊಂಡಿದೆ. ಆ ಬಾಬತು ಉಳಿಯುವ ವರ್ಷಾವಧಿ ೧॥ ಕೋಟಿ ರೂಪಾಯಿಗಳನ್ನು ಸರಕಾರವು ಸೈನ್ಯವನ್ನು ಆಧುನಿಕ ಕ್ರಮಗಳಿಗೆ ಅನುಸಾರ ರೂಪುಗೊಳಿಸಲಿಕ್ಕೆ ಖರ್ಚುಮಾಡುವದು. ಶತ್ರುಪಕ್ಷದ ಆಕ್ರಮಣಗಳಿಂದ ಹಿಂದುಸ್ಥಾನದ ರಕ್ಷಣೆಗೆ ಈಜಿಪ್ತ ಸರಕಾರದೊಂದಿಗೆ ಮಾತುಕತೆಗಳಾಗಿವೆ. ಕರಾಚಿ, ಕಲ್ಕತ್ತಾ, ಬೊಂಬಾಯಿಗಳಂಥ ನಗರಗಳಿಗೆ ಶತ್ರುಪಕ್ಷದ ವಿಮಾನಧಾಳಿಯ ಭಯವಿರುವದರಿಂದ ಅಲ್ಲಿಯ ಜನರಿಗೆ ಅಂಥ ಧಾಳಿಗಳಿಂದ ಆತ್ಮರಕ್ಷಣೆಯ ಉಪಾಯಗಳನ್ನು ಕಲಿಸಕೊಡಲಾಗಿದೆ. ಈ ನಗರಗಳ ರಕ್ಷಣೆಗೆ ೪೦ ಯುದ್ಧವಿಮಾನಗಳನ್ನು ಸರಕಾರವು ಕಳಿಸಿದೆ. ರಾಜಿಯಿಂದಲೇ ಅಂತರ್ರಾಷ್ಟ್ರೀಯ ಜಗಳಗಳನ್ನು ತೀರ್ಮಾನಿಸಬೇಕೆಂಬ ಜನಾಂಗ ಸಂಘದ ನಿಯಮದಿಂದ ಯುದ್ಧಕಾಲದಲ್ಲಿ ತನಗೆ ವಿನಾಯತಿ ದೊರೆಯಬೇಕೆಂದು ಇಂಡಿಯಾ ಸರಕಾರವು ಜನಾಂಗಸಂಘಕ್ಕೆ ತಿಳಿಸಿಯೂ ಇರುವದು. ಶತ್ರುಪಕ್ಷದ ಗೂಢಚಾರರು ಭಾರತದಲ್ಲಿ ಸಫಲರಾಗದಂತೆ ಸರಕಾರವು ಎಚ್ಚರಿಕೆ ತೆಗೆದುಕೊಂಡಿದೆ. ರೈಲ್ವೆ, ಟಪ್ಪಾಲು ಇತ್ಯಾದಿ ಖಾತೆಗಳ ಕೆಳತರಗತಿಯ ನೌಕರರಲ್ಲಿ ಯಾರ್ಯಾರು ಯುದ್ಧಕ್ಷೇತ್ರಗಳಿಗೆ ಹೋಗಲು ಸಿದ್ಧರಿದ್ದಾರೆಂಬ ವಿವರಗಳನ್ನು ಸರಕಾರವು ಕೇಳಿರುವ ಹಾಗೆ ಸುದ್ದಿ ಉಂಟಾಗಿದೆ.

ಸ್ವರಾಜ್ಯಕ್ಕೆ ಭಾರತೀಯರ ಯೋಗ್ಯತೆ, ಜನಸಂಖ್ಯೆಯ ಸಮಸ್ಯೆಯು ಭಾರತದಲ್ಲಿ ವಿಷಮವಾಗಿರುವಷ್ಟು ಬೇರಾವ ದೇಶದಲ್ಲೂ ಇರುವದಿಲ್ಲ. ಕಳೆದ ಖಾನೇಸುಮಾರಿಯಲ್ಲಿ ಭಾರತದ ಜನಸಂಖ್ಯೆ ೩೫೩ ಮಿಲಿಯವಾಗಿದ್ದಿತು. ಈಗ ವರ್ಷ ವರ್ಷ ಅದು ೩॥ ಮಿಲಿಯದಷ್ಟು ಹೆಚ್ಚುತ್ತಿದೆ. ಈಗಿನ ಜನಸಂಖ್ಯೆ ೩೭೭ ಮಿಲಿಯವೆಂದು ಹೇಳಲಾಗುತ್ತದೆ. ಸದ್ಯದಲ್ಲಿ ಅದು ೪೦೦ ಮಿಲಿಯದಾಗುವದು. ಹೀಗಿದ್ದರೂ ಭಾರತೀಯರ ಜೀವಮಾನವು ೧೮೮೧ರಲ್ಲಿ ೩೦ ವರ್ಷವಾಗಿದ್ದುದು ೧೯೩೧ರಲ್ಲಿ ೨೩ಕ್ಕೆ ಇಳಿದಿದೆ. ಮರಣಸಂಖ್ಯೆಯು ಇಂಗ್ಲಂಡಿನಲ್ಲಿ ೧೦೦೦ಕ್ಕೆ ೧೧.೭ ಇರುವಾಗ ಭಾರತದಲ್ಲಿ ೨೬.೮ ಆಗಿದೆ. ಆದ್ದರಿಂದ ಭಾರತೀಯರ ಸ್ಥಿತಿಗತಿಗಳು ಸುಧಾರಿಸಬೇಕಾದ್ದು ಅಗತ್ಯವೆಂಬುದು ಸ್ಪಷ್ಟ. ಸುಧಾರಿತ ಕೃಷಿ ಪದ್ಧತಿ, ಕೈಗಾರಿಕೆಗಳ ಉನ್ನತಿಯಿಂದ ಭಾರತೀಯರ ಸ್ವಲ್ಪ ಮಾತ್ರ ಉನ್ನತಿಯಾಗಬಹುದು. ಆದರೆ ಭಾರತದ ಸಂಪತ್ತು ಅದರ ಜನಸಮುದಾಯಕ್ಕೆ ಪೂರ್ಣ ಸಾಕಾಗುವದೆಂದು ಹೇಳಲಾಗುವದಿಲ್ಲ. ಸಂಪತ್ತು ಬೆಳೆಯಬೇಕು. ಭಾರತದ ನೇಕಡಾ ೩೦ ರಷ್ಟು ಭೂಪ್ರದೇಶವು ಮಾತ್ರ ಕೃಷಿಗೆ ಯೋಗ್ಯವಾಗಿದೆ. ಮಳೆನೀರನ್ನು ಹೊಂದಿಕೊಂಡಿರುವ ಬೇಸಾಯ ಭೂಮಿಗಳು ಬಹಳ ಕಡಿಮೆ. ಶ್ರಮಜೀವಿಗಳಿಗೆ ಅನುಭವವಿಲ್ಲ, ತರಬೇತಿಯಿಲ್ಲ. ಅವರು ಸಂಘಟಿತರಾಗಿರುವದೂ ಇಲ್ಲ. ಈ ಎಲ್ಲ ದೋಷ ದೌರ್ಬಲ್ಯ, ಕುಂದುಕೊರತೆಗಳು ದೂರವಾಗಬೇಕು.. ಭಾರತೀಯರು ಶರೀರ ಮನಸ್ಸುಗಳಿಂದ ಆರೋಗ್ಯವಂತರೂ ದೃಢಕಾಯರೂ, ಉತ್ಸಾಹಿಗಳೂ ಸ್ಫೂರ್ತಿವಂತರೂ ಆದ ಹೊರತು ಅವರು ಸ್ವರಾಜ್ಯವನ್ನು ಸಂಪಾದಿಸುವದು ಸಾಧ್ಯವಲ್ಲ. ಭಾರತೀಯರಿಗೆ ಯೋಗ್ಯತೆಯನ್ನು ತಂದುಕೊಡುವದೇ ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಬೊಂಬಾಯಿಯ ಪ್ರಧಾನ ಮಂತ್ರಿ ಬಿ. ಜಿ. ಖೇರರು ಲೇಖನ ಬರೆದಿದ್ದಾರೆ.

ಭಾರತದ ಸಾಮ್ರಾಜ್ಯವಾದಿ ಯೆಹೂದಿಯರು.

ನಿರಾಶ್ರಿತರಾದ ಯಹೂದಿಯರಿಗೆ ಭಾರತದಲ್ಲೂ ಸ್ವಲ್ಪ ಮಟ್ಟಿನ ಆಶ್ರಯ ಕೊಡಬಹುದೆಂದು ಕೆಲವು ಭಾರತೀಯ ಪ್ರಮುಖರು ಆಲೋಚಿಸಿದ್ದಾರೆ. ಒರಿಸ್ಸಾದಲ್ಲಿಯೋ ಬಿಹಾರದಲ್ಲಿಯೋ ಅಂಥ ಕೆಲವರಿಗೆ ಕಾಂಗ್ರೆಸ ಸರಕಾರಗಳು ಕೆಲವು ನೌಕರಿ ಹುದ್ದೆಗಳನ್ನು ಕೊಟ್ಟು ಪ್ರೋತ್ಸಾಹಿಸಿವೆ. ಪರಂತು ಯಹೂದಿಯರು ಭಾರತದಲ್ಲಿ ಎಂದೂ ಭಾರತೀಯರಾಗಿ ಇರಲೊಲ್ಲರಾದ್ದರಿಂದ ಭಾರತದ ಹಿತದೃಷ್ಟಿಯಿಂದ ಅವರಿಗೆ ಆಶ್ರಯಕೊಡಲಿಕ್ಕಾಗದೆಂದು ಡಾಕ್ಟರ ಸುಧೀಂದ್ರ ಬೋಸರು ಮೋಡರ್ನ ರಿವ್ಯೂ ಪತ್ರಿಕೆಗೆ ಒಂದು ಲೇಖನವನ್ನು ಕಳುಹಿಸಿದ್ದಾರೆ. ಯಹೂದಿಯರು ಕೇವಲ ಸ್ವಾರ್ಥಸಾಧಕರೆಂದು ಇತಿಹಾಸದಲ್ಲಿ ಪ್ರಸಿದ್ಧರಾಗಿದ್ದಾರೆ. ಅವರ ಹುಟ್ಟುಗುಣವು ಗಟ್ಟಕ್ಕೆ ಹೋದರೂ ಬಿಡದು ಮಾತ್ರವಲ್ಲ ಅವರ ಒಲವು ಯಾವಾಗಲೂ ಸಾಮ್ರಾಜ್ಯವಾದಿಗಳ ಕಡೆಗೆ ಇರುವದು. ಆದ್ದರಿಂದ ಸಂಧರ್ಭಬಂದಾಗ ಉಂಡಮನೆಗೆ ಎರಡು ಬಗೆಯದೆ ಇರಲಾರರು. ಆದ್ದರಿಂದ ಭಾರತದಲ್ಲಿ ಯಹೂದಿಯರು ಯಾವಾಗಲೂ ಭಾರತೀಯರ ಹಿತಶತ್ರುಗಳಾಗಿರುವರು. ಭಾರತೀಯರು ಸ್ವಾತಂತ್ರ್ಯವನ್ನು ಇಚ್ಛಿಸುವರಾದರೆ ಅವರು ಎಷ್ಟು ಮಾತ್ರಕ್ಕೂ ಭಾರತದಲ್ಲಿ ಯಹೂದಿಯರಿಗೆ ಇಂಬುಕೊಡಬಾರದು ಎಂದಿದ್ದಾರೆ.

ಸ್ವರಾಜ್ಯ ಹೋರಾಟದಲ್ಲಿ ಫೋರ್ವರ್ಡ್ ಬ್ಲೋಕಿನವರಷ್ಟೇ ಗಾಂಧಿವಾದಿಗಳು ಸಿದ್ಧರಿರುವರು

ಮೋಹನಲಾಲ ಸೆಕ್ಸಾನರ ಪ್ರಕಟಣೆ

ಕಾಂಗ್ರೆಸ್ ಮಂತ್ರಿಗಳು ಸುಧಾರಣಾವಾದಿಗಳಾಗುತಿದ್ದಾರೆಂದೂ ತಮ್ಮ ಕರ್ತವ್ಯವಾದ ಸ್ವರಾಜ್ಯ ಹೋರಾಟವನ್ನು ಮರೆಯುತ್ತಲಿದ್ದಾರೆಂದೂ ಕಾಂಗ್ರೆಸಿನ ಮಾಜಿ ಅಧ್ಯಕ್ಷರಾದ ಶ್ರೀ ಸುಭಾಷ ಬಾಬುಗಳು ಹೇಳಿದ್ದನ್ನು ಅಲ್ಲಗಳೆದು ಅದು ಅತ್ಯಂತ ನಿರಾಧಾರವಾದ ಆರೋಪವಾಗಿದೆ ಎಂದು ಶ್ರೀ ಸೆಕ್ಸಾನರು ಒಂದು ಪ್ರಕಟಣೆಯನ್ನು ಪ್ರಕಟಿಸಿರುವರು.

ಸುಭಾಷರು ಅಧ್ಯಕ್ಷರಾಗಿದ್ದ ಸಮಯದಲ್ಲಿ ತಮ್ಮ ಕಾರ್ಯವನ್ನು ಮುಂದಿಟ್ಟ ವರ್ಕಿಂಗ್ ಕಮಿಟಿಯು ಇದುವರೆಗೆ ಸಮ್ಮಿಶ್ರ ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಸ್ಥಾಪಿಸಲು ತಾವೇ ಮುಂದಾಗಿದ್ದರು. ಕಾಂಗ್ರೆಸ್ ಮಂತ್ರಿಗಳ ವಿರುದ್ಧ ಅವರು ಏನನ್ನು ಹೇಳಿದರೂ ಅವರ ಮೇಲೆ ಅಪರಾಧ ಹೊರಿಸುವದು ಯೋಗ್ಯವಾಗಲಾರದು. ಬ್ರಿಟಿಷ್ ಸಾಮ್ರಾಜ್ಯಶಾಹಿಯೊಡನೆ ಹೋರಾಡಲು ಸಜ್ಜಾಗಿರಲಿಕ್ಕೆ ಫಾರ್ವರ್ಡ ಬ್ಲಾಕಿನವರಷ್ಟೇ ಗಾಂಧಿ ಅನುಯಾಯಿಗಳು ಸಿದ್ಧರಿರುವರೆಂದು ನಾನು ಅವರಿಗೆ ಆಶ್ವಾಸನೆಯನ್ನೀಯುತ್ತೇನೆ. ಪ್ರತ್ಯೇಕ ಪಕ್ಷಗಳ ನಿರ್ಮಾಣ ಮಾಡುವುದರಿಂದ ನಮ್ಮ ಹೋರಾಟವು ಮುಂದಕ್ಕೆ ಹೋಗುವದಕ್ಕಾಗುವುದು ನ ಹಾತ್ಮರ ಮುಖಂಡತ್ವದಲ್ಲಿ ಯೋಜನೆಗಳು ಹುಟ್ಟುತ್ತಿರುವಾಗ ಇದೀ ಭಾರತವು ಒಂದಾಗಿರುವದು. ಕಾಂಗ್ರೆಸಿನಲ್ಲಿ ಕೆಲವು ಹೆಚ್ಚಾಗಿ, ತ್ಯಾಗ ಸೇವಾ ಬುದ್ಧಿಗಳು ಕಡಿಮೆಯಾದ್ದರಿಂದ ಹೋರಾಟವನ್ನು ಕೈಕೊಳ್ಳಲು ಗಾಂಧೀಜಿಯವರು ಈಗ ಬೆದರುತ್ತಿರುವರು. ಆದುದರಿಂದ ಮಹಾತ್ಮರಿಗೆ ಅನುಕೂಲ ವಾತಾವರಣವನ್ನು ಮಾಡಿಕೊಟ್ಟು ಅವರು ಬಂದು ಕಾಂಗ್ರೆಸ ಮುಖಂಡತ್ವದ ಸೂತ್ರವನ್ನು ವಹಿಸುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಆದಕಾರಣ ಈಗಿನ ಪರಿಸ್ಥಿತಿಯಲ್ಲಿ ನಾವು ಮುಂದಕ್ಕೆ ಒಂದ ಸ್ವರಾಜ್ಯ ಹೋರಾಟಕ್ಕೆ ನಾವು ಸಿದ್ಧರಾಗಿರಬೇಕೆಂದೂ ಸಿದ್ಧಗೊಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ.

ಪತಿಯು ಮತ್ತು ಮಗನ ಕೆಲಸ ಹೋದುದಕ್ಕೆ ಹೆಂಗಸಿನ ಆತ್ಮಹತ್ಯೆ!

ಮುಂಬಯಿಯಲ್ಲಿ ಮದ್ಯಪಾನ ನಿರ್ಬಂಧವು ಬೇಗನೇ ಬರಲಿರುವುದರಿಂದ ಒಂದ ಹೆಂಡದಂಗಡಿಯಲ್ಲಿ ಮನೇಜರನ ಕೆಲಸ ಮಾಡುವ [illegible] ಪಾರ್ಸಿ ಗೃಹಸ್ಥನು ಅವನ ಮಗನೂ ಕೆಲಸ ಕಳಕೊಳ್ಳುವ ಪ್ರಸಂಗವು ಬಂದೊದಗಿದುದರಿಂದ ಆ ಪಾರ್ಸಿಯ ೫೫ ವರ್ಷ ಪ್ರಾಯದ ಹೆಂಡತಿಯು ಮನೆಯ ಅಂತಸ್ತಿನ ಮಾಳಿಗೆಯ ಮೇಲಿಂದ ಹಾರಿ ಪ್ರಾಣವನ್ನು ಕಳಕೊಂಡಳು.

ಬೆನಾರಿಸ್ ವಿಶ್ವವಿದ್ಯಾಲಯದ ವ್ಹಾಯಿಸ್ ಛಾನ್ಸಲರ್ ಪದವಿ

ಮಹಾತ್ಮರ ಸೂಚನೆ

ಮಹಾತ್ಮಾ ಗಾಂಧಿಯವರು ಮೊನ್ನೆ ಪಂಡಿತ್ ಮದನ ಮೋಹನ ಮಾಲವೀಯರೊಡನೆ ಬೆನಾರಿಸ್ ಹಿಂದೂ ವಿಶ್ವವಿದ್ಯಾಲಯದ ವಿಷಯವಾಗಿ ಮಾತುಕತೆ ನಡೆಸಿದಾಗ ಅವರಿಗೆ ನಿಮ್ಮ ನಂತರ ಶ್ರೀ ಶಿವರಾಮಾಯರ್ ಅವರನ್ನು ವ್ಹಾಯಿಸ್ ಛಾನ್ಸಲರ್ ಪದವಿಗೆ ನಿಯಮಿಸಲು ಸೂಚಿಸಿರುವರೆಂದು ತಿಳಿದುಬರುತ್ತದೆ.

ಇಟಲಿ-ಜರ್ಮನಾ ಮಿಲಿಟರಿ ಒಪ್ಪಂದ ಸಹಿಮಾಡಲ್ಪಟ್ಟಿತು

ಇಟಲಿಯ ಪರರಾಷ್ಟ್ರ ಸಚಿವರಾದ ಕೌಂಟ್ ಸಿಯಾನೋರವರು ಕಳೆದ ಆದಿತ್ಯವಾರ ಬರ್ಲಿನಿಗೆ ಬಂದು ಇಟಲಿ ಜರ್ಮನಾ ಮಿಲಿಟರಿ ಒಪ್ಪಂದಕ್ಕೆ ಉಭಯ ರಾಷ್ಟ್ರಗಳ ಪ್ರತಿನಿಧಿಗಳು ಸಹಿ ಹಾಕಿರುವರ. ಈ ಒಪ್ಪಂದವು ೧೦ ವರ್ಷಗಳ ತನಕ ಇರುವುದು.

ಮದ್ಯಪಾನ ನಿರ್ಬಂಧಕ್ಕೆ ಗವರ್ನರರ ಸಹಾಯ

ಮುಂಬಯಿ ನಗರದಲ್ಲಿ ಆಗಸ್ಟ ಒಂದರಿಂದ ಮದ್ಯಪಾನ ನಿರ್ಬಂಧ ಮಾಡುವ ಯೋಜನೆಯನ್ನು ಮುಂಬಯಿ ಸರಕಾರವು ಕೈಕೊಂಡಿದೆ. ಇದನ್ನು ಯಶಸ್ವಿಗೊಳಿಸಲು ಎಲ್ಲಾ ತರದ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಈ ಕಾರ್ಯದಲ್ಲಿ ಮುಂಬಯಿಯ ಗವರ್ನರರಾದ ಸರ್ ರೋಜರ್ ಲಮ್ಲಿಯವರು ಸಹಾಯ ಮಾಡಲು ಮುಂದೆ ಬಂದಿರುವರು.

ಸರಕಾರಿ ಭವನಗಳಲ್ಲಿ ಏರ್ಪಡಿಸಲಾಗುವ ಭೋಜನ ಸಮಾರಂಭದಲ್ಲಿ ಅತಿಥಿಗಳಿಗೆ ೧ನೇ ಆಗೋಸ್ಟದಿಂದ ಮಾದಕ ಪದಾರ್ಥಗಳನ್ನು ಸರಕಾರದ ಮದ್ಯಪಾನ ನಿರ್ಬಂಧದ ಧೋರಣೆಯನುಗುಣವಾಗಿ ನಿಲ್ಲಿಸಲಾಗುವುದೆಂದು ಮಂತ್ರಿಗಳಿಗೆ ಗವರ್ನರರು ತಿಳಿಸಿರುವರು.

ಅಲ್ಲಿಯ ಅಸೆಂಬ್ಲಿಯಲ್ಲಿ ಮದ್ಯಪಾನ ನಿರ್ಬಂಧದ ವಿಷಯ ಚರ್ಚೆ ನಡೆದಾಗ ಯುರೋಪಿಯನ್ ಸದಸ್ಯರು ಮುಂಬಯಿ ಪ್ರಾಂತ್ಯದ ಕಾನೂನಿಗನುಗುಣವಾಗಿ ತಾವು ನಡೆಸುವೆವೆಂಬ ಆಶ್ವಾಸನೆಯನ್ನಿತ್ತಿರುವರು. ಯುರೋಪಿಯನರು ಕೂಡ ಈ ವಿಷಯ ಒಪ್ಪಿಕೊಂಡು ಮುಂದೊತ್ತಿ ಬರಲು ಇತರ ಕೆಲವರು ವಿರೋಧವಾಗಿರುವುದು ಆಶ್ಚರ್ಯದ ಸಂಗತಿಯಾಗಿರುತ್ತದೆ.

ಪೋಲಿಸರಿಗೆ ಖಾದಿ ಪೋಷಾಕು

ಬಿಹಾರ ಸರಕಾರವು, ಪೋಲಿಸರಿಗೆ ಪೋಷಾಕನ್ನು ತಯಾರಿಸಲು ೬೦,೦೦೦ ರೂಪಾಯಿಯ ಖಾದಿಯನ್ನು ಕೊಂಡುಕೊಳ್ಳಲು ನಿಶ್ಚಯಿಸಿದೆ. ಕಾಂಗ್ರೆಸ್ ಸರಕಾರಗಳಲ್ಲಿ ಖಾದಿಗೆ ಈ ತರದ ಪ್ರೋತ್ಸಾಹನವನ್ನು ಕೊಟ್ಟ ಪ್ರಥಮ ಬಿಹಾರ ಸರಕಾರವೇ [illegible] ಬಿಹಾರ ಸರಕಾರದ ಈ ಆದರ್ಶವನ್ನು ಇತರ ಕಾಂಗ್ರೆಸ್ ಸರಕಾರಗಳು ಅನುಸರಿಸುವವೆಂದು ನಂಬುತ್ತೇವೆ.

ಬಾಟ್ಲಿವಾಲರ ದಸ್ತಗಿರಿ

ಕಲ್ಕತ್ತದ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ವಾರಂಟಿನ ಮೇರೆಗೆ [illegible] ಬಾಟ್ಲಿವಾಲರು ದಸ್ತಗಿರಿ ಮಾಡಲ್ಪಟ್ಟಿರುವರು. ಕಳೆದ ಏಪ್ರಿಲ ತಿಂಗಳಲ್ಲಿ ಸ್ಟ್ರೀಟ ಬಹಿರಂಗ ಉಪನ್ಯಾಸವನ್ನು ಕಲ್ಕತ್ತದಲ್ಲಿ ಕೊಟ್ಟಿರುವುದೇ ಕಾರಣ, ಈಗ ಅವರನ್ನು ೨೦೦೦ ರೂಪಾಯಿಯ ಜಾಮೀನಿನ ಮೇಲೆ ಬಿಟ್ಟಿರುವರು. ಜೂನ್ ೩ನೇ ತಾರೀಕಿನಂದು ಕಲ್ಕತ್ತದ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಮುಂದೆ ಹಾಜರಾಗಬೇಕಾಗುವುದು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮತಾವಾದಿಗಳ ಸಭೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮತಾವಾದಿಗಳ ಸಭೆಯು ಕಳೆದ ತಾ [illegible] ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಶ್ರೀಮತಿ ಕಮಲಾದೇವಿಯವರ ಅಧ್ಯಕ್ಷತೆಯಲ್ಲಿ ನೆರೆ ಮುಂದಿನ ವರ್ಷದ ಅಧಿಕಾರಿಗಳ ಆಯ್ಕೆಯು ನಡೆಯಿತು.

ಶ್ರೀಮತಿ ಕಮಲಾದೇವಿಯವರು ಅಧ್ಯಕ್ಷರಾಗಿಯೂ, ಶ್ರೀ. ಕರ್ಮಕರರವರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಶ್ರೀ ಕೆ. ಬಿ [illegible] ಜಾಯಿಂಟ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು. ಶ್ರೀ. ಎನ್. ಬಿ ಶಂಕರರು ಪ್ರಚಾರ ಕೆಲಸವಮಾಡಬೇಕೆಂದು ಯೋಜಿಸಲ್ಪಟ್ಟು ಪ್ರತಿ ಒಂದು ಜಿಲ್ಲೆಯಲ್ಲಿ ಸಮತಾವಾದಿ ಪಕ್ಷವನ್ನು ಸ್ಥಾಪಿಸಬೇಕೆಂದೂ ಸದ್ಯಕ್ಕೆ ಬೆಳಗಾಂವ್, ವಿಜಾಪುರ, ಬಳ್ಳಾರಿ ಜಿಲ್ಲೆಗಳಲ್ಲಿ ಸಂಘಟಿಸಬೇಕೆಂದು [illegible] ಪ್ರಾಂತಿಕ ಕಮೀಟಿಯು [illegible] ತಮ್ಮ ಪಕ್ಷದ ಪತ್ರಿಕೆಯು ಹೊರಡುವವರೆಗೆ ಮಂಗಳೂರಿನ ಸ್ವದೇಶಾಭಿಮಾನಿ ಪತ್ರಿಕೆಯನ್ನೇ ಪಕ್ಷದ ಪತ್ರಿಕೆಯೆಂದು ಗಣಿಸತಕ್ಕದ್ದು [illegible]

ಯುಗೋಸ್ಲಾವಿಯವು ಇಟಲಿ ಜರ್ಮನಿಯನ್ನು ಸೇರುವುದು

ಯುಗೋಸ್ಲಾವಿಯದ ಪ್ರಿನ್ಸ ಪಾಲರು ಇಟಲಿಯ ಪರದೇಶಾಂಗ ಮಂತ್ರಿಗಳೊಡನೆ ಮಾತುಕತೆ ನಡೆಸಿ ಯುಗೋಸ್ಲಾವಿಯವು ರೋಮ್ ಬರ್ಲಿನಿನೊಡನೆ ಸೇರಲು ಸಿದ್ಧವಿರುವುದೆಂದು ತಿಳಿಸಿರುವರೆಂದು ತಿಳಿದುಬರುತ್ತದೆ. ಆಂಗ್ಲೋ ಟರ್ಕಿಷ್ ಒಪ್ಪಂದದಿಂದ ಬಾಲ್ಕನ್ ರಾಷ್ಟ್ರಗಳಿಗೆ ತೊಡಕು ಸಂಭವಿಸಬಹುದಾದ್ದರಿಂದ ಯುಗೋಸ್ಲಾವಿಯವು ಇಟಲಿ ಜರ್ಮನಿಯನ್ನು ಸೇರಬೇಕಾಗಿರುವುದೆಂದು ಯುಗೋಸ್ಲಾವಿಯದ ಅಧಿಕಾರಿಗಳು ಅಭಿಪ್ರಾಯಪಡುತ್ತಿರುವರು.

ಆಗ್ರಾದಲ್ಲಿ ಗಳಲನೇ ಸೆಕ್ಷನಿನ ಪ್ರಯೋಗ

ಇಲ್ಲಿಯ ಜುಮ್ಮಾ ಮಸೀದಿಯ ಸಮೀಪದಲ್ಲಿ ಒಂದು ಸಣ್ಣ ಹಿಂದೂ ಮುಸಲ್ಮಾನ ಕಲಹವಾಗಿ ೮ ಮಂದಿಗೆ ಗಾಯವಾಯಿತು. ಒಂದು ಹಿಂದೂ ಮದುವೆ ಮೆರವಣಿಗೆಯೂ ವಾದ್ಯದಿಂದ ಹೋಗುತಿದ್ದಾಗ ಮಸೀದಿಯ ಮುಂದೆ ವಾದ್ಯವನ್ನು ನಿಲ್ಲಿಸಲಿಲ್ಲವೆಂದು ಹೇಳಲಾಗುತ್ತದೆ. ಅದು ಪ್ರಾರ್ಥನೆಯ ಸಮಯವಾದುದರಿಂದ ಕೆಲವು ಮುಸಲ್ಮಾನ ಸ್ವಯಂಸೇವಕರು ವಾದ್ಯವನ್ನು ಆಕ್ಷೇಪಿಸಿದರು. ಇದರಲ್ಲಿ ಕಲಹವಾಗಿ ೮ ಮಂದಿ ಗಾಯಗೊಂಡರು. [illegible] ಪೋಲೀಸ ಸುಪರಿಂಟೆಂಡೆಂಟರು ಕೂಡಲೇ ಪೋಲೀಸ ಪಡೆಯೊಡನೆ ಬಂದು ಶಾಂತಿಯನ್ನು ಕಾಪಾಡಿದರು. ಕ್ರಿಮಿನಲ್ ಪ್ರೊಸೀಜರ ಕೋಡಿನ ೧೪೪ನೇ ಸೆಕ್ಷನ ಪ್ರಕಾರ ಆಗ್ರಾದಲ್ಲಿ ನಿರ್ಬಂಧಾಜ್ಞೆಗಳ ಹೊರಟಿವೆ. ಈಗ ಎಲ್ಲವೂ ಸ್ವಲ್ಪ ಶಾಂತವಾಗಿದೆ.

ಲಾಹೋರಿನಲ್ಲಿ ಧಾನ್ಯದ ಮಾಲಿಗಳ ಮುಷ್ಕರ

[illegible] ಧಾನ್ಯದ ಮಾಲಿಗಳ [illegible] ದಿವಸದ ಮುಷ್ಕರವನ್ನು [illegible] ಕಸರತ್ತು ಕಸರ [illegible] ರಿಂದ ಎಷ್ಟು [illegible] ದಿನಗಳ [illegible] ಬಹಳ ದಿನ ನಡೆದರೆ ರೋಗಗಳ [illegible] ಕೊಳ್ಳುವ ಭಯ ಇದೆ. ಧಾನ್ಯದ ಮಾಲಿಗಳ ನ್ಯಾಯವಾದ ಬೇಡಿಕೆಗಳನ್ನು [illegible] ಅನೇಕ ಸಾರ್ವಜನಿಕ ಸಂಸ್ಥೆಗಳು ಮುನ್ಸಿಪಾಲಿಟಿಯನ್ನು ವಿನಂತಿಮಾಡಿಕೊಂಡಿರುವವು. ಧಾನ್ಯದ ಮಾಲಿಗಳ ಹಿತಕ್ಕೆ ಭಂಗಬಾರದ ರೀತಿಯಲ್ಲಿ [illegible] ಸಿದ್ಧರಾಗಿದ್ದಾರೆ.

ಯುರೋಪದಲ್ಲಿ ಯುದ್ಧ ಭಯ

ಡಾಂಜಿಗದಲ್ಲಿ ಮೊನ್ನೆ ದಿನ ಕೆಲವು ನಾಜಿಗಳು ಪೋಲಿಶ್ ಒಂದು ಕಸ್ಟಂ ಕಾರ್ಯಾಲಯವನ್ನು ಮುತ್ತಿ ನಾಶಮಾಡಿದರು. [illegible] ಒಬ್ಬ ನಾಜಿ ಗುಂಡು ತಿಂದು [illegible] ವಾತಾವರಣವು [illegible] ಪೂರ್ಣವಾಗಿರುವುದು. ಡಾಂಜಿಗ ಸರಕಾರವು ಅಲ್ಲಿ ಕೂಡಲೇ ಶಾಂತಿಯನ್ನು ಕಾಪಾಡಿ ಪೋಲಿಶ ಹಿತರಕ್ಷಣೆ ಮಾಡದಿದ್ದರೆ, ತಕ್ಕ ಪ್ರತೀಕಾರ ಉಪಾಯಗಳನ್ನು ಕೈಕೊಳ್ಳಬೇಕಾದೀತೆಂದು ಪೋಲಾಂಡಿನ ಸರಕಾರವು ಎಚ್ಚರಿಸಿದೆ. ಹಾಗೆಯೇ ನಾಜಿ ಮುಖಂಡರು [illegible] ಒತ್ತಿ, ನಾಜಿಯು ಒಳ್ಳೆ ಪರಿಹಾರ ಕೊಡಬೇಕೆಂದು ತಿಳಿಸಿರುವರು. ಈ ಕಾರಣದಿಂದಲೇ ಯುದ್ಧವಾರಂಭವಾಗುವುದೋ ಎಂಬ ಹೆದರಿಕೆಯು ಉಂಟಾಗಿದೆ.

ಸಾರ್ವಭೌಮರ ಭಾಷಣ

ಕೆನಡಾ [illegible] ನಗರದಲ್ಲಿ ಯುದ್ಧ ಸ್ಮಾರಕದ ಅನಾವರಣ ಸಮಾರಂಭ [illegible] ಶಾಂತಿಯಿಲ್ಲದೆ ಸ್ವಾತಂತ್ರ್ಯವಿಲ್ಲ ಎಂದ ಒಂದು ಆಸಕ್ತಿಯಾದ ಭಾಷಣವನ್ನು ಕೊಟ್ಟರು.

ಕೊಲ್ಹಾಪುರದಲ್ಲಿ ಹಿಂದೂ ಮುಸಲ್ಮಾನ ಮಾರಾಮಾರಿ

ಇಬ್ಬರು ಸತ್ತರು; ಹಲವು ಮಂದಿ ಗಾಯಗೊಂಡರು

ಹೈದರಾಬಾದಿನಲ್ಲಿ ಸತ್ಯಾಗ್ರಹ ಮಾಡುವ ದಕ್ಕೋಸ್ಕರ ಮೇ ೨೧ರ ದಿನ ಆರು ಮಂದಿ ಆರ್ಯ ಸತ್ಯಾಗ್ರಹಿಗಳು ಹೊರಗಿನಿಂದ ಕೊಲ್ಹಾಪುರಕ್ಕೆ ಬಂದಿದ್ದರು. ಎಷ್ಟೋ ದಿನಗಳಿಂದ ನಡೆದುಬಂದ ಪದ್ಧತಿಯಂತೆ ಅವರು ಪ್ರಾರ್ಥನೆ [illegible] ಹಾಡುತ್ತಾ ಬರುತ್ತಿರುವಾಗ ಭಾರತ [illegible] ಪಕ್ಕದಲ್ಲಿದ್ದ ಒಂದು ಮಸೀದಿಯ ಕೆಲವು ಜನ ಮುಸಲ್ಮಾನರು ಹಾಡುಗಳನ್ನು ಹಾಡಬಾರದೆಂದು ತಡೆದರು. ಆದರೆ ಸತ್ಯಾಗ್ರಹಿಗಳು ಒಪ್ಪಲಿಲ್ಲ. ಪಟ್ಟಣದಲ್ಲೆಲ್ಲ ಕೆಟ್ಟ ಸುದ್ದಿಯುಂಟಾಗಿ ಅಂಗಡಿ ಬಾಗಿಲುಗಳು ಮುಚ್ಚಲ್ಪಟ್ಟವು. ಪೋಲೀಸರು ಆ ಕೂಡಲೆ ಗಸ್ತು ಹೊಡೆಯಲಿಕ್ಕೆ ಬಂದರು. ತಾತ್ಕಾಲಿಕ ಶಾಂತಿಯು ಕಾಪಾಡಲ್ಪಟ್ಟಿತು. ಮರಳಿ ರಾತ್ರಿಯಾರಂಭವಾದೊಡನೆ ಅಲ್ಲಲ್ಲಿ ಹೊಡೆದಾಟ ಪ್ರಾರಂಭವಾಯಿತು. ಮಧ್ಯರಾತ್ರಿ ಕಳೆಯುವುದರೊಳಗೆ ೩೦ ಮಂದಿ ಗಾಯಗೊಂಡು ಬಿದ್ದರು. ಅವರೊಳಗೆ ಒಬ್ಬನು ಆಸ್ಪತ್ರೆಗೆ ಸಾಗಿಸಲ್ಪಡಬೇಕಾದರೆ ಸತ್ತನು. ಇನ್ನೊಬ್ಬನು ಆಸ್ಪತ್ರೆಯನ್ನು ಮುಟ್ಟಿದ ತರುವಾಯ ಸತ್ತನು. ಮಾರನೇ ಒಂದು ದಿನ [illegible] ರಕ್ತ, [illegible] ಶಸ್ತ್ರಾಸ್ತ್ರಗಳನ್ನು ಹಿಡಿದು [illegible] ಸರಕಾರ [illegible] ಅಂಗಡಿ ಬಾಗಿಲುಗಳು ತೆರೆಯಲ್ಪಟ್ಟವು. ಆದರೆ ಪುನಃ ಅಲ್ಲಲ್ಲಿ ಹೊಡೆದಾಟಗಳಾದ ಸುದ್ದಿ ಹರಡುವದರಿಂದ ಪುನಃ ಅವು ಮುಚ್ಚಲ್ಪಟ್ಟವು. ಪೋಲೀಸ್ ಕಾವಲು ಇದೆ. ಜನರು ಬಹಳ ಭಯಪಟ್ಟಿರುವರು. ಗಾಯಪಟ್ಟವರು ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾರೆ. ಅವರಲ್ಲಿ ಒಬ್ಬ ಹೆಂಗಸು ಕೂಡ ಇದ್ದಾಳೆ. ಗಂಡಸರ ಸ್ಥಿತಿಯು ಚಿಂತಾಜನಕವಾಗಿರುವುದು.

ಸ್ವರ್ಗಾರೋಹಿಗಳ ಆಗಮನ

ಹಿಮಾಲಯದ ನಂದಾದೇವಿ ಪರ್ವತ ಶಿಖರಗಳ ಆರೋಹಣ ಮಾಡುವುದಕ್ಕೋಸ್ಕರ ಸ್ವಿಜರ್ಲೆಂಡ್ ದೇಶದ ಪರ್ವತಾರೋಹಿಗಳ ಒಂದು ದಳವು ಮೇ ೨೭ರ ದಿನ [illegible] ಒಂದು [illegible] ಇಂಥ ಸಾಹಸಿಗಳ [illegible] ಈ ವರ್ಷ ಇದಕ್ಕೆ ನೋಡಲು ಬಂದಿದ್ದು ಹಿಮಾಲಯದ ಬೇರೆ ಬೇರೆ ಶಿಖರಗಳನ್ನು ಹತ್ತುವ ಪ್ರಯತ್ನವನ್ನು ಆರಂಭಿಸುವುದು. ಈ ವಿಳಂಬವು ದಳವೂ ಕೂಡಲೇ ತನ್ನ ಕಾರ್ಯವನ್ನಾರಂಭಿಸುವುದು.

ಡಾಂಜಿಗಿನಲ್ಲಿ ತೊಡಕಿಗೆ ಆರಂಭ

ಕಸ್ಟಮ್ ಹೌಸಿನ ಮೇಲೆ ಧಾಳಿ

ನಾಜಿಗಳ ಕಾರ್ಯರಂಗ

ಡಾಂಜಿಗ್ಗಿನಲ್ಲಿ [illegible] ಪ್ರಾರಂಭಿಸಿದೆ. ಪೋಲೆಂಡಿನ ಗಡಿಯ ಕಾಲೆಕ್ಸ್ರಾ ಎಂಬಲ್ಲಿನ ಕಸ್ಟಮ್ ಹೌಸಿನ ಮೇಲೆ ಜರ್ಮನರು ಧಾಳಿಯಿಟ್ಟು ಕಟ್ಟಡಗಳನ್ನು ಧ್ವಂಸಪಡಿಸಿದರು. ಕಸ್ಟಮ್ ಇನ್ಸ್‌ಪೆಕ್ಟರರು, ಪೋಲೀಸರ ಸಹಾಯ ಪಡೆದು ಅಲ್ಲಿಂದ ಪಲಾಯನಗೈದಿದ್ದರು. [illegible] ಅವರಿಗೆ ಬಸ್ [illegible] ನಡೆದರು. ಜಿಲ್ಲೆಗೆ [illegible] ಜನರ ಒಂದು [illegible] ಗುಂಡು ಹಾರಿಸಿ [illegible] ಕೊಂದಿರುವನೆಂದು ತಿಳಿದುಬರುತ್ತದೆ.

ಟ್ರಾನ್ಸ ಜೋರ್ಡನ ಅಮೀರರಿಗೆ ಜಾಸ್ತಿ ಅಧಿಕಾರ

ಬ್ರಿಟಿಷ ಸಾರ್ವಭೌಮ ಸರಕಾರವು ಟ್ರಾನ್ಸ ಜೋರ್ಡನ [illegible] ಕೆಲವು ಜಾಸ್ತಿ ಅಧಿಕಾರಗಳನ್ನು ಕೊಟ್ಟು ಅಲ್ಲಿ ಶಾಸನಸಭೆಯನ್ನು [illegible] ತನ್ನ ಹೇಳಿಕೆಯನ್ನು ಪ್ರಕಟಿಸಿದೆ.

ಸ್ವದೇಶಾಭಿಮಾನಿ

ತಾರೀಕು ೨೬—೫—೧೯೩೯

ಪೆಲೆಸ್ಟೈನ್ ಶ್ವೇತ ಪತ್ರ

ಪೆಲೆಸ್ಟೈನ್ ಬಿಕ್ಕಟ್ಟಿನ ಪರಿಹಾರದ ಕುರಿತು ಬ್ರಿಟಿಷ್ ಸರಕಾರವು ಒಂದು ಶ್ವೇತ ಪತ್ರವನ್ನು ಹೊರಡಿಸಿದೆ. ಇದರ ಪ್ರಕಾರ ಹತ್ತು ವರ್ಷದೊಳಗೆ ಪೆಲೆಸ್ಟೈನ್ ಸ್ವತಂತ್ರವಾಗುವುದು. ಐದು ವರ್ಷಗಳ ಅವಧಿಯ ನಂತರ ಯಹೂದ್ಯರಿಗೆ ಪೆಲೆಸ್ಟೈನಿನಲ್ಲಿ ಪ್ರವೇಶ ಸಿಗಲಾರದು. ಒಟ್ಟು ೭೫,೦೦೦ ಯಹೂದಿಯರಿಗಿಂತ ಹೆಚ್ಚಾಗಿ ಪೆಲೆಸ್ಟೈನಿನಲ್ಲಿ ಪ್ರವೇಶ ಸಿಗಲಾರದು. ಅರಬ ಮತ್ತು ಯೆಹೂದ್ಯ ಜನರ ಪರಸ್ಪರ ಸ್ನೇಹ ಮತ್ತು ಸಹಕಾರಗಳನ್ನು ನೋಡಿ ಪೆಲೆಸ್ಟೈನ್ ಸ್ವತಂತ್ರ ರಾಷ್ಟ್ರದ ನಿರ್ಮಾಣವಾಗುವುದು. ಸ್ವತಂತ್ರ ರಾಷ್ಟ್ರವಾಗುವ ತನಕ ಬ್ರಿಟಿಷ್ ಸರಕಾರದವರೇ ಎಲ್ಲಾ ಜವಾಬುದಾರಿಯನ್ನು ವಹಿಸುವರು. ಅಂದರೆ ಈ ಅವಧಿಯಲ್ಲಿ ಒಂದು ರೀತಿಯ ಜವಾಬುದಾರಿ ಸರಕಾರದೇ ಸ್ಥಾಪಿತವಾದಂತಾಗುವುದು. ಐದು ವರ್ಷಗಳ ಅವಧಿಯು ಕಳೆದ ನಂತರ ಮುಂದಿನ ಸರಕಾರಿ ಧೋರಣೆಯನ್ನು ನಿಶ್ಚಯಿಸಲು ಒಂದು ದುಂಡು ಮೇಜಿನ ಪರಿಷತ್ತು ಜರಗುವುದು. ಹೊಸದಾಗಿ ನಿರ್ಮಾಣವಾಗುವ ಪೆಲೆಸ್ಟೈನ್ ರಾಜ್ಯವು ವಾಣಿಜ್ಯ ಸಂಬಂಧ, ಸೈನಿಕ ಸಂಬಂಧ, ವ್ಯವಹಾರ ಸಂಬಂಧಗಳಲ್ಲಿಯೂ ಬ್ರಿಟನದೊಡನೆ ಮೈತ್ರಿಯಿಂದಿರಬೇಕು. ಯಹೂದಿಯರಿಗೆ ಮಾರಾಟವಾಗುವ ಆಸ್ತಿಪಾಸ್ತಿಗಳ ವಿಷಯವು ಪೆಲೆಸ್ಟೈನಿನ ಹೈಕಮಿಷನರರು ನಿರ್ಧರಿಸಲ್ಪಟ್ಟಿರುವುದು.

ಇವಿಷ್ಟು ಶ್ವೇತಪತ್ರದಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳ ಸಾರಾಂಶ. ಈ ಶ್ವೇತಪತ್ರವು ಎರಡು ಜನಾಂಗಕ್ಕೂ ಒಪ್ಪಂದಕ್ಕೆ ಯೋಗ್ಯವಾಗಿರಬಹುದು. ಆದರೆ ಒಬ್ಬರನ್ನು ಕಂಡರೆ ಇನ್ನೊಬ್ಬರು ಉರಿದೇಳುವ ಈ ಎರಡು ಮತೀಯರೊಳಗೆ ಬ್ರಿಟಿಷ್ ಸರಕಾರದ ಈ ಶ್ವೇತಪತ್ರವು ಫಲದಾಯಕವಾಗಲಿಕ್ಕಿಲ್ಲ. ಇಬ್ಬರ ನ್ಯಾಯ ಮೂರನೆಯವನಿಗೆ ಆಯಿತೆಂಬ ನಾಣ್ನುಡಿಯಂತೆ ಪೆಲೆಸ್ಟೈನಿನೊಳಗುಂಟಾಗಿರುವ ಈ ಅಂತಃಕಲಹದ ನಿಮಿತ್ತ ಬ್ರಿಟನು ಲಾಭ ಹೊಂದಿದೆ. ಅರಬರು ಹಿಂಸಾತ್ಮಕ ಧೋರಣೆಯನ್ನು ಕೈಕೊಂಡಲ್ಲಿ ಪೆಲೆಸ್ಟೈನಿನಲ್ಲಿ ಶಾಂತಿಸ್ಥಾಪನೆಯಾಗದೆಂದು ಬ್ರಿಟಿಷ ಸರಕಾರವು ಮನಗಂಡಿರುವಂತೆ ಕಾಣುತ್ತದೆ. ಹಿಂಸಾತ್ಮಕ ರೀತಿಯಿಂದ ವರ್ತಿಸಿದಲ್ಲಿ ಅಲ್ಲಿ ಬ್ರಿಟಿಷ್ ಸರಕಾರದ ಬಲವು ಕುಂಠಿತವಾಗಿಯೂ ಕಗ್ಗುವುದೆಂದು ಬ್ರಿಟಿಷ್ ಮುತ್ಸದ್ದಿಗಳು ತಿಳಿದಿರುವರು. ಈ ಶ್ವೇತಪತ್ರಕ್ಕೆ ಅರಬರೂ ಯಹೂದಿಯರೂ ಅಪ್ರಸನ್ನತೆ ಸೂಚಿಸುತ್ತಿರುವರು.

ಮೊದಲನೇಯದಾಗಿ ಹತ್ತು ವರ್ಷಗಳ ಅವಧಿಯ ನಂತರ ಪೆಲೆಸ್ಟೈನ್ ಸ್ವತಂತ್ರ ರಾಷ್ಟ್ರವಾಗುವುದೆಂಬ ವಿಷಯವು ಅರಬರಿಗೆ ಸಂತೋಷಗಿರುವುದಿಲ್ಲ. ಈ ಹತ್ತು ವರ್ಷ ಕಾಲವು ಬಹಳ ದೀರ್ಘವಾಯಿತೆಂದು ಅರಬರ ಆಕ್ಷೇಪಣೆ. ಎರಡನೇಯದಾಗಿ ಐದು ವರ್ಷಗಳ ನಂತರ ಒಂದು ದುಂಡು ಮೇಜಿನ ಪರಿಷತ್ತು ಸೇರಿ ಪೆಲೆಸ್ಟೈನ್ ಸರಕಾರದ ನಿಶ್ಚಯವಾಗುವ ಕುರಿತು ಅರಬರಿಗೆ ಸಮಾಧಾನವಿಲ್ಲ. ಯಾಕಂದರೆ ಈ ಮೊದಲು ಸುಮಾರು ೨೦ ವರ್ಷಗಳಿಂದ ಪೆಲೆಸ್ಟೈನಿನ ಕುರಿತು ಬ್ರಿಟಿಷ ಸರಕಾರವು ವಹಿಸಿದ ನಿಷ್ಫಲ ಧೋರಣೆಯ ಪುನರಾವರ್ತನೆಯಾಗುವುದೆಂದು ಅರಬರ ನಂಬುಗೆ. ಮೂರನೆಯದಾಗಿ ಪೆಲೆಸ್ಟೈನಿನ ಭವಿಷ್ಯವು ಅರಬ ಮತ್ತು ಯಹೂದಿ ಜನಾಂಗದ ಪರಸ್ಪರ ಸ್ನೇಹ ಮತ್ತು ಸೌಹಾರ್ದಗಳ ಮೇಲೆ ಹೊಂದಿಕೊಂಡಿದೆ ಎಂಬ ಭಾಗವು ಅರಬರಲ್ಲಿ ಬಹಳ ಸಂಶಯಾಸ್ಪದವನ್ನುಂಟುಮಾಡಿದೆ. ಈ ಭಾಗವು ಬಹಳ ಭಯಾನಕವಾಗಿರುವುದು ಯಾಕಂದರೆ ಅಲ್ಪಸಂಖ್ಯಾಕರು ಕ್ರೂರಾತ್ಮಕ ರೀತಿಗಳಿಂದ ವರ್ತಿಸಿ ಸ್ವತಂತ್ರ ರಾಷ್ಟ್ರ ನಿರ್ಮಾಣಕ್ಕೆ ಅಡ್ಡಿಯನ್ನು ತಂದೊಡ್ಡಲೂಬಹುದು. ಆದಕಾರಣ ಪೆಲೆಸ್ಟೈನಲ್ಲಿ ಶಾಂತಿ ಸ್ಥಾಪಿಸಬೇಕೆಂದು ಬ್ರಿಟನ್ನಿಗೆ ನಿಜವಾದ ಮನಸ್ಸಿದ್ದಲ್ಲಿ ಬ್ರಿಟಿಷ್ ಸರಕಾರವು ಇನ್ನಷ್ಟು ಉದಾರ ಮತ್ತು ನ್ಯಾಯ ರೀತಿಯಲ್ಲಿ ವರ್ತಿಸುವುದು ಮೇಲು. ಈ ಮೇಲಿನ ಬದಲಾವಣೆಗಳು ಮಾಡಲ್ಪಟ್ಟಲ್ಲಿ ಖಂಡಿತವಾಗಿಯೂ ಅರಬರು ಶ್ವೇತಪತ್ರಕ್ಕೆ ಒಪ್ಪಿಗೆಯನ್ನೀಯುವುದರಲ್ಲಿ ಯಾವ ಸಂಶಯವೂ ಇಲ್ಲ. ಅರಬರು ಬಹುಸಂಖ್ಯಾಕರಾಗಿ ತಮಗೆ ತೊಂದರೆಯನ್ನುಂಟುಮಾಡಬಹುದೆಂದು ಯಹೂದಿಯರು ಬೆದರಿರುವರು. ಆದರೆ ಅವರು ಅರಬರೊಂದಿಗೆ ಪೆಲೆಸ್ಟೈನಿನಲ್ಲಿಯೇ ವಾಸಿಸಬೇಕಾದುದರಿಂದ ಬ್ರಿಟಿಷ್ ಸಹಾಯಕ್ಕೆ ಹಾತೊರೆಯುವ ಬದಲು ಅರಬರೊಡನೆ ಸ್ನೇಹಪೂರ್ವಕವಾಗಿ ವರ್ತಿಸುವುದು ಮೇಲು.

ಗಡಿನಾಡಿನ ರಾಜಕೀಯ ಪರಿಷತ್ತು

ಬರುವ ನವಂಬರ ತಿಂಗಳಲ್ಲಿ ನಡೆಯುವ ಗಡಿನಾಡಿನ ಪ್ರಥಮ ರಾಜಕೀಯ ಪರಿಷತ್ತು ಮೌಲಾನ ಅಬುಲ್ ಕಲಮ್ ಆಜಾದರ ಅಧ್ಯಕ್ಷತೆಯಲ್ಲಿ ಜರಗುವುದು. ಆ ಸಮಯ ಬಾಬುರಾಜೇಂದ್ರ ಪ್ರಸಾದ, ಪಂಡಿತ ಜವಹರಲಾಲ ನೆಹರೂ ಮುಂತಾದ ಮುಖಂಡರು ಗಡಿನಾಡನ್ನು ಸಂದರ್ಶಿಸಲಿರುವರು.

ರಷ್ಯಕ್ಕೆ ತೆರಳಲು ಪಾಸುಪೋರ್ಟು ದೊರೆಯಿತು

ಸಂಯುಕ್ತ ಪ್ರಾಂತ್ಯದ ಮಂತ್ರಿಗಳಾದ ಮಾನ್ಯ ರಾಫಿ ಅಹಮ್ಮದ್ ಕಿದ್ವಾಯಿಯವರ ಸೆಕ್ರೆಟರಿಗಳಾದ ಶ್ರೀ. ಗೋವಿಂದ ಸಾಹಿಯವರಿಗೆ ಪ್ರಥಮದಲ್ಲಿ ರಷ್ಯಕ್ಕೆ ಪಾಸುಪೋರ್ಟನ್ನು ಕೊಡಲು ಸರಕಾರವು ಅಸಮ್ಮತಿಯನ್ನು ಸೂಚಿಸಿತ್ತು. ಆದರೆ ಈಗ ಒಪ್ಪಿಗೆಯನ್ನಿತ್ತಿದೆ ಎಂದು ತಿಳಿದುಬರುತ್ತದೆ.

ಕೀರ್ತನ ಮಂಡಳಿಯ ಮೇಲೆ ಮುಸಲ್ಮಾನರ ಹಲ್ಲೆ

ಮುಜಡಿಯಾ ಬಳಿಯಲ್ಲಿ ಒಂದು ಸಂಕೀರ್ತನಾ ಮಂಡಳಿಯು ಸಾಗುತ್ತಿರುವಾಗ ಮುಸಲ್ಮಾನರು ಅದರ ಮೇಲೆ ಹಲ್ಲೆಗೈದುದರ ಫಲವಾಗಿ ೧೫ ಮಂದಿ ಹಿಂದುಗಳು ಏಟುಗೊಂಡಿರುವರು. ಇವರ ಪೈಕಿ ಇಬ್ಬರ ಸ್ಥಿತಿಯು ಚಿಂತಾಜನಕವಾಗಿದೆ.

ಭಾರತದ ಇಬ್ಬರು ಸೈನಿಕರ ವಿವಾಹಕ್ಕೆ ೧೫೦ ತರುಣಿಯರ ಪತ್ರ!

ಭಾರತದ ಎರಡನೇ ಸೌಥ್ ಸ್ಟಾಫ್ ದಳದಲ್ಲಿರುವ ಸೈನಿಕರಿಬ್ಬರು ತಮಗೆ ವಿವಾಹವಾಗಲು ಯುವತಿಯರನ್ನು ಆರಿಸಿಕೊಡಬೇಕೆಂದು ವಾಲ್‌ಸಾಲ್‌ದ ನಗರಾಧ್ಯಕ್ಷರಿಗೆ ಪತ್ರ ಬರೆದಿರುವರು. ನಗರಾಧ್ಯಕ್ಷರು ಅದೇ ರೀತಿ ಪ್ರಕಟಿಸಿದರು. ಅಂದಿನಿಂದ ಇಂದಿನವರೆಗೆ ೧೫೦ ಪತ್ರಗಳು ಬಂದಿವೆ. ಎಲ್ಲಾ ಪತ್ರಗಳಲ್ಲಿಯೂ ಫೋಟೋಗಳಿವೆ. ಅನೇಕ ತರುಣಿಯರು ತಮ್ಮ ತಮ್ಮ ಹೆಸರುಗಳನ್ನು ಬರೆದಿರುವರು. ಒಬ್ಬಳು ಸ್ನಾನಗೃಹದ ನಗ್ನ ಚಿತ್ರವನ್ನು ಕಳುಹಿಸಿ, 'ಮೋಹಿತರೇ! ಈ ಚಿತ್ರವನ್ನು ನೋಡಿ ಅಸಹ್ಯಪಡಬೇಡಿರಿ! ನನ್ನಲ್ಲಿ ಇದೊಂದೇ ಚಿತ್ರವಿರುವುದು' ಎಂದು ಬರೆದಿರುವಳಂತೆ! ಹೀಗೆಂದು ಇಂಗ್ಲೆಂಡಿನ ನ್ಯೂಸ್ ಕ್ರಾನಿಕಲ್ ಪತ್ರಿಕೆ ಪ್ರಕಟಿಸುತ್ತಿದೆ.

ಮುಂಬಯಿ ಉಪಕ್ಲಿನಿಕಿನ ಹೊಸ ಶಾಖೆ

ಡಾ. ಎನ್. ಬಿ. ಕಾಂಚನರವರು, ೮೮ ರಿವರ್‌ಸೈಡ್, ಜೇಕಬ್ ಸರ್ಕಲ್, ಮುಂಬಯಿ ನಂಬ್ರ ೧೧ರಲ್ಲಿ ಅಲ್ಲಿಯ ಕನ್ನಡ ದೇಶಬಾಂಧವರ ಅನುಕೂಲತೆಗಾಗಿ ಒಂದು ಶಾಖೆಯನ್ನು ಜೂನ್ ೧ನೇ ತಾರೀಕಿಗೆ ತೆರೆಯಲಿರುವರು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಮಂಗಳೂರು ಶಾಖೆಯ ಕಾರ್ಯಾಲಯದಲ್ಲಿ

ತಾ 20-5-'39ರಂದು ದಿವಂಗತ ಕಾಗಲ ವಾಮನ ವೆಂಕಟೇಶ ಪೈಗಳವರ ಭಾವಚಿತ್ರ ಅನಾವರಣ ಸಮಾರಂಭದಲ್ಲಿ ಸಿಂಡಿಕೇಟಿನ ಚೇರ್ಮ್ಯಾನ್ ಡಾ| ಟಿ. ಮಾಧವ ಪೈಗಳವರು ಮಾಡಿದ ಉಪಕ್ರಮಣ ಭಾಷಣ.

ಮಾನ್ಯ ಅಧ್ಯಕ್ಷರೆ ಮತ್ತು ಮಿತ್ರರೆ,

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್‌ನ ಈ ಶಾಖೆಯ ಕಾರ್ಯಾಲಯದಲ್ಲಿ ದಿವಂಗತ ಕಾಗಲ ವಾಮನ ವೆಂಕಟೇಶ ಪೈಗಳವರ ಭಾವಚಿತ್ರ ಅನಾವರಣಗೊಳಿಸುವ ಇಂದಿನ ಸಮಾರಂಭದಲ್ಲಿ ತಾವೆಲ್ಲ ಸಹಭಾಗಿಗಳಾಗಲು ಚಿತ್ತೈಸಿದುದು ನನಗೆ ಮಹದಾನಂದದ ವಿಷಯ. ಇಲ್ಲಿಯ ಮುನ್ಸಿಪಲ್ ಚೇರ್ಮ್ಯಾನರೂ ದಿವಂಗತರ ಪರಮ ಮಿತ್ರರಲ್ಲೊಬ್ಬರೂ ಆಗಿರುವ ಶ್ರೀ| ವೆಂಕಟ್ರಾಯ ಬಾಳಿಗರ ಕೈಯಿಂದ ಈ ಅನಾವರಣ ಕಾರ್ಯವು ನೆರವೇರುವಂತಾದುದೂ ವಿಶೇಷ ಸಂತೋಷವೇ.

ಈ ಸಿಂಡಿಕೇಟಿನ ಕಾರ್ಯಭಾರದಲ್ಲಿ ದಿವಂಗತ ಪೈಗಳವರು ಕೈಗೊಡುವಂತಾದುದು ಇದರ ಸುದೈವವೆನ್ನಲೇಬೇಕು. ಇದರ ಬಾಲ್ಯದಶೆಯಲ್ಲೇ—ಅಂದರೆ 1929ರಲ್ಲೇ—ಅವರು ಕೆಲವು ತಿಂಗಳುಗಳನ್ನಿಟ್ಟು ಇದರ ಕಾರ್ಯಕಲಾಪಗಳನ್ನು ಮುತುವರ್ಜಿಯಿಂದ ಪರಿಶೀಲನೆಮಾಡುತ್ತಿದ್ದರು. ತಾನು ಮೈಗೊಟ್ಟು ಹೆಚ್ಚಿನ ಸಹಾಯ ಪ್ರೋತ್ಸಾಹಗಳನ್ನೀಯಲು ಇದು ಅರ್ಹವಾದುದೆಂದು ಅವರು ಮನಗಂಡ ಮೇಲಂತೂ ಇದರೊಡನೆ ತಾನು ಕಲೆತು ತನ್ನ ಉಳಿತಾಯವನ್ನೆಲ್ಲ ಇದರಲ್ಲೇ ನಿಕ್ಷೇಪಿಸಿದರು. ಈ ಸಂಸ್ಥೆಯ ಒಳಹೊರಗಿನ ಯಾವತ್ತು ವಿಷಯಗಳ ಸಂಪೂರ್ಣ ಮಾಹಿತಿಯುಳ್ಳವರನ್ನು ಡೈರೆಕ್ಟರುಗಳಲ್ಲೊಬ್ಬರನ್ನಾಗಿ ಮಾಡಿಕೊಳ್ಳಬೇಕೆಂದು ಬೋರ್ಡಿನವರಿಗೆ ಪ್ರಬಲಾಪೇಕ್ಷೆಯಿತ್ತು. ಆದರೆ ಪೈಗಳವರು ತಾನೆಂತೂ ಈ ಬ್ಯಾಂಕಿನ ನಿಕಟಸಂಬಂಧವುಳ್ಳವನಾಗಿದ್ದು ಇದಕ್ಕೆ ತನ್ನ ಬೆಂಬಲ ಸಹಕಾರಗಳೆಂತೂ ಇದ್ದೇ ಇರುವಾಗ ತಾನಿನ್ನು ಡೈರೆಕ್ಟರನಾಗಿ ವಿಶೇಷ ನೂತನತಕ್ಕಾಗಿಲ್ಲವೆಂದೂ ಬಹಳಾಗಿ ಕೋರಿದ್ದು ಪ್ರತಿಷ್ಠಾಪಂಕರವನ್ನು ಡೈರೆಕ್ಟರ್ ಬೋರ್ಡಿಗೆ ಸೇರಿಸಿಕೊಂಡರೆ ಹೆಚ್ಚಿನ ಪ್ರಯೋಜನ ಶಕ್ತಿಯು ಬೇಂಕಿಗೆ ಲಭಿಸುವ ಅಧಿಕ ಪ್ರಯೋಜನವಾದೀತೆಂದೂ ಅಭಿಪ್ರಾಯದಿಂದ ಮೊದಮೊದಲು ಬೋರ್ಡಿನ ಅಪೇಕ್ಷೆಯನ್ನು ಉಪೇಕ್ಷಿಸುತ್ತಿದ್ದರೂ ಕೊನೆಗೆ 1930ರಲ್ಲಿ ಡೈರೆಕ್ಟರರು ತಮ್ಮೊಂದಿಗೆ ಅವರೂ ಇರಲೇಬೇಕೆಂದು ಒತ್ತಾಯಿಸಿ ಕೃತಾರ್ಥರಾದರು. ಅಂದಿನಿಂದ 1937ನೇ ಎಪ್ರೀಲಲ್ಲಿ ಅವರು ತೀರಿಕೊಳ್ಳುವವರೆಗೂ ಈ ಸಂಸ್ಥೆಯ ಡೈರೆಕ್ಟರರಲ್ಲೊಬ್ಬರಾಗಿದ್ದರು.

ಅವರು ಈ ಸಂಸ್ಥೆಯಲ್ಲಿ ಆಸಕ್ತಿ ತೋರಿ ಕೈಹಾಕತೊಡಗಿದ ಆ 1929ನೇ ಇಸವಿಯಾರಭ್ಯ ಇದು ವಿಶೇಷ ಅಭ್ಯುದಯವನ್ನು ಹೊಂದುತ್ತ ಬಂದಿದೆ. ಅವರು ಈ ಸಂಸ್ಥೆಯ ಕಾರ್ಯಕಲಾಪಗಳ ಕುರಿತು ಹಾಕಿಕೊಟ್ಟ ಹಾದಿ ತೋರಿಕೊಟ್ಟ ನೀತಿ ಇವು ಇದರ ಏಳಿಗೆಗೆ ಮೂಲ ನಿಮಿತ್ತಗಳು. ವಿಷಯದಲ್ಲಿ ಹಿತವೂ ಭದ್ರವೂ ಆದ ಧೋರಣೆಯನ್ನು ಕಲ್ಪಿಸಿಕೊಳ್ಳಲಿಕ್ಕೆ ವಿಶೇಷ ಸಹಕಾರಿಯಾಗಿ ಈ ಬೇಂಕು ಅಭಿವೃದ್ಧಿಯ ಹಾದಿ ಹಿಡಿದು ನಿರಾತಂಕವಾಗಿ ಇಂದಿನ ಉಚ್ಛ್ರಾಯಸ್ಥಿತಿಯನ್ನು ಮುಟ್ಟಲು ವಿಶೇಷ ಕಾರಣಗಳಾಗಿವೆ.

ದಿವಂಗತ ಪೈಗಳವರು ಬದುಕಿದ್ದಾಗ ಅವರನ್ನು ನೋಡಿ ಮಾತನಾಡಿ ಸಂಸರ್ಗದಲ್ಲಿದ್ದು ಅವರ ಬುದ್ಧಿ ಹೃದಯಗಳ ಅಸಾಧಾರಣ ಗುಣವಿಶೇಷಗಳನ್ನು ಮನಗಾಣುವ ಎಷ್ಟೋ ಅವಕಾಶಗಳು ನಾವು ಸ್ಥಳೀಯರಿಗೆಲ್ಲ ದೊರಕಿದ್ದು ಅವನ್ನೆಲ್ಲ ತಾವು ಚೆನ್ನಾಗಿ ತಿಳಿದಿದ್ದರೂ ಅವುಗಳಲ್ಲಿ ಕೆಲವನ್ನಾದರೂ ಇಂದು ಸ್ಮರಣೆಗೆ ತಂದುಕೊಳ್ಳುವುದು ಸಂದರ್ಭೋಚಿತವಿದೆ.

ಮೇಧಾವಿ, ನಿಷ್ಕಪಟಿ, ಸತ್ಯಪ್ರಿಯ, ಉದಾತ್ತ ವಿಚಾರಿ, ಆಸ್ತಿಕ ಹೃದಯಿ, ಸರಳ ಜೀವನಪ್ರೇಮಿ, ಹೀಗೆ ಅವರು ಸಾಸವನ ಸದ್ಗುಣನಿಧಿಯೇ ಆಗಿದ್ದರೆನ್ನಬಹುದು. ಅನಾದಿನದ ಅಂತ್ಯದಲ್ಲಿ ತನ್ನ ಕೃತ್ಯಗಳ ಪರಿಶೀಲನೆಯನ್ನು ತಾನೇ ಮಾಡಿ ಅಂದು ಪರಿಸ್ಥಿತಿಯ ಆವೇಶದಿಂದ ತನ್ನ ಕೈಬಾಯಿಗಳಿಂದೇನಾದರೂ ಪ್ರಮಾದವಾಗಿತ್ತೆಂದು ತೋರಿದರೆ—ಅಂತಹ ಸಂದರ್ಭಗಳು ತೀರ ವಿರಳ—ಅದಕ್ಕಾಗಿ ಪಶ್ಚಾತ್ತಾಪಪಡುತ್ತಿದ್ದರಲ್ಲದೆ ಅದರಿಂದಾಗಿ ನೊಂದವರನ್ನಾಗಲೀ ಪರಿಸ್ಥಿತಿಯನ್ನಾಗಲೀ ಸುಸ್ಥಿತಿಗೆ ತರಲು ಸೌಹಾರ್ದವು ಮುರಿಯದಂತೆ ಸಂಗೊಳಿಸಿ ಸುಧಾರಿಸಿಕೊಳ್ಳಲಿಕ್ಕೆ ಸಿದ್ಧರಾಗಿ ತನ್ನ ಕೈಲಾದ ಪ್ರಯತ್ನ ಮಾಡಲು ಕಾತರಿಸುತ್ತಿದ್ದರು. ಮಾನವ ವ್ಯವಹಾರದ ಅನುಭವ ನಿಧಿಯಂತಿದ್ದ ಅವರ ಹಿತಬೋಧೆ ಸಲಹೆ ಸೂಚನೆಗಳು ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಎಲ್ಲರಿಗೂ ಅವಶ್ಯವೆನಿಸುತ್ತಿದ್ದವು. ಭಿನ್ನಾಭಿಪ್ರಾಯಗಳು ಬಂದಲ್ಲಿ ತನ್ನ ಅಭಿಮತವನ್ನು ಬೈಪ್ಪು ಮುಟ್ಟುವಂತೆ ಹೇಳಿ ಅದು ಮಾನ್ಯವಾಗುವಂತೆ ಮಾಡುವ ಶಕ್ತಿವಿಶೇಷವು ಅವರಲ್ಲಿತ್ತು. ಆದರೆ ಬಹುವ ಶಕ್ತೆ ಬಾಗುವ ಬುದ್ಧಿವೈಶಾಲ್ಯವೂ ಇಲ್ಲದಿರಲಿಲ್ಲ. ಸುಖವೆಂಬುದು ಹೊರಗಿಂದ ಬರುವುದಿಲ್ಲವೆಂದೂ ತನ್ನ ಪರಿಸ್ಥಿತಿಯಲ್ಲಿ ಸಂತೃಪ್ತನಾಗಿದ್ದುಕೊಂಡು ಇತರರ ಹಿತಕ್ಕಾಗಿ ಪ್ರಯತ್ನಿಸುವುದರಲ್ಲೇ ಅದು ಇದೆಯೆಂದೂ ಸಾರುತ್ತಿದ್ದವರು ಅವರು. ತನ್ನ ಮಿತ್ರರು ಧನಿಕರಿರಲಿ ಬಡವರಿರಲಿ ಏಕಪ್ರೀತಿಯಾಗಿ ಅದರಿಸುತ್ತಿದ್ದರು. ಬಡವರ ಕಡೆಗೇ ತುಸು ಒಲವು ಹೆಚ್ಚೆನ್ನಬಹುದು. ಅವರೊಡನೆ ಸಮಾನಸ್ಕಂಧರಂತೆ ಸಕಲ ವಿಷಯಗಳ ಕುರಿತು ಮಾತುಕತೆ ನಡೆಯಿಸುತ್ತಿದ್ದರು. ಪತ್ರಿಕೆಗಳಲ್ಲಿ ಸಿಗದ ಹಲವು ದೈನಿಕ ಸುದ್ದಿ ಸಮಾಚಾರಗಳು ಆ ಮೂಲಕ ಅವರಿಗೆ ದೊರೆಯುತ್ತಿದ್ದಿತಲ್ಲದೆ ಜನಜೀವನದ ನಿಜಸ್ವರೂಪದ ಪರಿಚಯವೂ ಆಗುತ್ತಿತ್ತು. ತನ್ನ ಸಂಸರ್ಗಕ್ಕೆ ಬಂದ ಜನರ ಗುಣಶೀಲಗಳ ಸೂಕ್ಷ್ಮ ಪರಿಶೀಲನೆಯನ್ನು ಮಾಡಿ, ಹಾಗೆ ಮಾಡಿಕೊಂಡ ಜನರಲ್ಲಿ ವ್ಯವಹಾರಿಕ ಶಿಕ್ಷಣ ಮತ್ತು ಬುದ್ಧಿ ಇದ್ದು ಆರ್ಥಿಕ ಸಹಾಯದ ಅವಶ್ಯಕತೆ ಇದ್ದಂತಹರಿಗೆ ತನ್ನ ಶಕ್ತ್ಯನುಸಾರ ಸಹಾಯ ಮಾಡುತ್ತಿದ್ದರು. ಅವರಿಂದಾದ ದಾನಧರ್ಮಗಳಲ್ಲಿ ಹೆಚ್ಚಿನವೇ ವೈಯಕ್ತಿಕವಾಗಿದ್ದು ಬಹಿರಂಗವಾಗುತ್ತಿದ್ದಿಲ್ಲ. ನೂರಾರ ಮಂದಿ ಒಂದಲ್ಲದಿದ್ದರೆ ಇನ್ನೊಂದು ರೀತಿಯಲ್ಲಿ ಅವರಿಂದ ಸಹಾಯ ಹೊಂದಿದ್ದರು. ಸಾರ್ವಜನಿಕ ಧರ್ಮಕಾರ್ಯಗಳ ಕರೆ ಬಂದಾಗಲೂ ಅವರು ಉದಾರಹಸ್ತರಾಗಿ ಮುಂದಾಗುತ್ತಿದ್ದರು. ನೆರೆಹಾವಳಿಗಳಿಂದ ಪೀಡಿತರಾದ ಬಡಬಗ್ಗರಿಗೆ ಅವರಿತ್ತ ಅನ್ನವಸ್ತ್ರ ದಾನಗಳು ಎಲ್ಲರಿಗೂ ಗೊತ್ತಿದ್ದುದೇ. ಈ ಜಿಲ್ಲೆಯಲ್ಲೊಂದು ಹಿಂದೂ ಅನಾಥ ಮಕ್ಕಳ ಪಾಲನಾಗೃಹ ಸ್ಥಾಪನೆಗಾಗಿ ರೂ ೧೦,೦೦೦ವನ್ನು ತನ್ನ ಮೃತ್ಯುಪೂರ್ವ ಪತ್ರದಲ್ಲಿ ದಾನವಾಗಿ ಬರೆದಿಟ್ಟುದು ಅವರ ದಾನಶೀಲತೆಯ ಔಚಿತ್ಯವನ್ನು ಪ್ರದರ್ಶಿಸುತ್ತದೆ. ಅವರ ಐಶ್ವರ್ಯವು ಪಿತ್ರಾರ್ಜಿತವಾಗಿರದೆ ತಾನೇ ದುಡಿದ ಕೂಡಹಾಕಿದುದಾಗಿದ್ದುದರಿಂದ ಅವರ ಈ ಔದಾರ್ಯ ಹಾಗೂ ಧರ್ಮಬುದ್ಧಿಯು ಇನ್ನಷ್ಟು ಉಜ್ವಲವಾಗಿ ಶೋಭಿಸುತ್ತವೆ.

ಈ ತರದ ಮಹಾವ್ಯಕ್ತಿಗಳು ಅಧಿಕಾಧಿಕವಾಗಿ ಇದ್ದಷ್ಟು ಸಮಾಜಕಲ್ಯಾಣಕಾರಕ ಸಂಸ್ಥೆಗಳಿಗೆ ಶ್ರೇಯಸ್ಸೆಂದರೆ ಅದರಲ್ಲೇನೂ ಅತಿಶಯೋಕ್ತಿ ಇರಲಾರದು. ಈಗ ಅನಾವರಣವಾಗಲಿರುವ ಅವರ ಭಾವಚಿತ್ರವು ಸಿಂಡಿಕೇಟಿಗೆ ಅವರಿತ್ತ ಸೇವೆಯ ಸ್ಮಾರಕ ಮಾತ್ರವಾಗಿರದೆ, ವೈಯಕ್ತಿಕ ಜೀವನದಲ್ಲಿಯೂ ಸಾರ್ವಜನಿಕ ಸೇವೆಯಲ್ಲಿಯೂ ಸಾಮಾನ್ಯ ಸರ್ವರಿಗೂ ವಿಶೇಷತಃ ಈ ಬ್ಯಾಂಕಿನ ನೌಕರವರ್ಗಕ್ಕೂ ಸ್ಫೂರ್ತಿದಾಯಕವಾಗಿ ಈ ಭವನದಲ್ಲಿ ಶೋಭಿಸುತ್ತಿರಲೆಂದು ನನ್ನ ಆಕಾಂಕ್ಷೆ. ಶ್ರೀ ವೆಂಕಟ್ರಾಯ ಬಾಳಿಗರವರು ಅದನ್ನು ಅನಾವರಣಗೊಳಿಸಬೇಕಾಗಿ ನನ್ನ ಸವಿನಯ ವಿನಂತಿ.

ತಲಚೇರವು ರಾಜಕೋಟೆಗಿಂತಲೂ ಬಿಕ್ಕಟ್ಟಿನದು

ಸಾರ್ವಭೌಮ ಸರಕಾರವು ಕೊಟ್ಟ ಮಾತನ್ನು ಮುರಿಯಿತು

'ಹರಿಜನ'ದಲ್ಲಿ ಗಾಂಧೀಜೀಯವರ ಲೇಖ

ಮಹಾತ್ಮಾ ಗಾಂಧಿಜಿಯವರು ಕಳೆದ ೨೦-೫-೩೯ನೇ 'ಹರಿಜನ'ದಲ್ಲಿ ಈ ರೀತಿಯಾಗಿ ಬರೆಯುತ್ತಾರೆ:-

ರಾಜಕೋಟೆಗಿಂತಲೂ ತಲಚೇರ ಸಂಸ್ಥಾನದ ಪ್ರಕರಣವು ಬಿಕ್ಕಟ್ಟಿನದಂತೆ ತೋರುತ್ತದೆ. ರಾಜಕೋಟೆಯಲ್ಲಿ ರಾಜನು ಕೊಟ್ಟ ಮಾತಿನಂತೆ ನಡೆಯಲಿಲ್ಲ. ತಲಚೇರದಲ್ಲಿ ಬ್ರಿಟಿಷ್ ಸರಕಾರವು ಕೊಟ್ಟ ಮಾತನ್ನು ತಪ್ಪಿತು. ತಲಚೇರದಲ್ಲಿ ಅವರ್ಣನೀಯ ಕಷ್ಟಪರಂಪರೆಗೆ ಸಿಲುಕಿ ನಿರಾಶ್ರಿತರಾಗಿರುವವರ ಗೋಳು ಬಹು ತಾಪಜನಕವಾಗಿದೆ. ಈ ಸಮಯದಲ್ಲಿ ಕಾಲಹರಣ ಮಾಡುವುದು ಮಹಾಪರಾಧವು. ಕಾಲಹರಣ ಮಾಡಿದರೆ ಅಲ್ಲಿನ ಪ್ರಜೆಗಳು ಈ ವರ್ಷದ ಬೆಳೆಯನ್ನೇ ಕಳೆದುಕೊಳ್ಳುವ ದುಸ್ಥಿತಿಯು ಬಂದೊದಗಬಹುದು. ಒರಿಸಾ ಸಂಸ್ಥಾನದ ಪೊಲಿಟಿಕಲ್ ಏಜಂಟರಾದ ಮೇಜರ್ ಹೆನ್ನಿಸಿಯವರು ಪ್ರಜೆಗಳಿಗೆ ಕೆಲವು ಆಶ್ವಾಸನೆಗಳನ್ನಿತ್ತಿದ್ದರು. ಇವು ನೋಡಲಿಕ್ಕೆ ಸಾಮಾನ್ಯವಾಗಿದ್ದರೂ ಪ್ರಜೆಗಳಿಗೆ ಮಹತ್ವದ್ದಾಗಿರುತ್ತದೆ.

ಮೇಜರ್ ಹೆನ್ನಿಸಿಯರ ಮೇಲೆ ಮಾತ್ರ, ಅವರ ಮುಖಾಂತರ ಬ್ರಿಟಿಷ್ ಸರ್ಕಾರದ ಮೇಲೆ ವಚನ ಭಂಗದ ಆರೋಪವನ್ನು ಹೊರಿಸಿದ್ದು ನನ್ನ ಅನ್ಯಾಯವೆಂದು ಕೆಲವರು ನನ್ನನ್ನು ದೂರುತ್ತಿರುವರು. ಮೇಜರ್ ಹೆನ್ನಿಸಿಯವರು ಪ್ರಜೆಗಳ ಮನೋಭಿಪ್ರಾಯವನ್ನು ರಾಜನಿಗೆ ತಿಳಿಸುವುದಾಗಿ ಅವರು ಅಂದಿರುವರಲ್ಲದೇ ಬೇರಾವ ಅಂಥ ವಚನವನ್ನು ಅವರೀಯಲಿಲ್ಲವೆಂದು ಕೆಲವರ ಅಂಬೋಣ. ಅದಲ್ಲದೆ ಅಂಥ ಆಶ್ವಾಸನೆಗಳನ್ನೀಯಲು ಅವರಿಗೆ ಅಧಿಕಾರವಾದರೂ ಇಲ್ಲವೆಂದು ಕೆಲವರು ನುಡಿಯುತ್ತಿರುವರು.

ಈ ಮಾತುಗಳನ್ನು ನಾನೆಂದೂ ಒಪ್ಪಲಾರೆ. ಸ್ವಲ್ಪವೂ ಸಂಕೋಚವಿಲ್ಲದೆ ಸಂಬಂಧಪಟ್ಟ ಪತ್ರಕ್ಕೆ ಮೇಜರ್ ಹೆನ್ನಿಸಿಯವರು ಸಹಿ ಹಾಕಿರುವರು. ಈ ದುರಂತದ ಸವಿಸ್ತರ ಸಂಗತಿಗಳನ್ನೆಲ್ಲಾ ಶ್ರೀ. ಹರಿಕೃಷ್ಣ ಮೆಹತಾಬರವರು ವಿವರಿಸಿರುವರು. ಆ ವಿವರಗಳನ್ನೆಲ್ಲಾ ಓದಿದರೆ ನನಗೆ ಅವೆಲ್ಲಾ ನಿಜವೆಂದೇ ಭಾಸವಾಗುತ್ತದೆ. ಮೇಜರ್ ಹೆನ್ನಿಸಿಯವರ ಮೇಲೆ ಹೊರಿಸಲಾದ ಅಪರಾಧವನ್ನು ಅವರು ಇನ್ನೂ ಅಲ್ಲಗಳೆದಿಲ್ಲ. ಅಲ್ಲದೆ ಅಲ್ಲಗಳೆಯುವ ಅವಕಾಶವು ಇಲ್ಲ.

ತನ್ನ ಪ್ರಜೆಗಳಿಗೆ ನ್ಯಾಯದಾನ ಮಾಡಲು ತಲಚೇರ ಸಂಸ್ಥಾನಾಧಿಪತಿಗಳಿಗೆ ಮನಸಿದ್ದಂತೆ ತೋರುವುದಿಲ್ಲ. ಸನದಿನ ಪ್ರಕಾರವೇ ಅವರಿಂದ ನ್ಯಾಯದಾನ ಮಾಡಿಸಬೇಕಾಗುವುದು. ತನ್ನ ಪ್ರಜೆಗಳ ಹಿತಸಾಧನೆಗಾಗಿ ನ್ಯಾಯದಾನ ಮಾಡಲು ಈಗಲಾದರೂ ಬ್ರಿಟಿಷ ಸರಕಾರದ ಪ್ರತಿನಿಧಿಗಳಾದ ಪೊಲಿಟಿಕಲ್ ಏಜಂಟರು ಒರಿಸ್ಸಾ ಸಂಸ್ಥಾನಿಕರಿಗೆ ಹೇಳಬಹುದು. ಮೇಜರ್ ಹೆನ್ನಿಸಿಯರು ಸಹಿ ಹಾಕಿದ ಪತ್ರದಲ್ಲಿ ನಮೂದಿಸಲ್ಪಟ್ಟಿರುವ ಅನ್ಯಾಯವನ್ನು ಬೇಗನೇ ದೂರ ಮಾಡುವುದು ಅತ್ಯಗತ್ಯವಾಗಿದೆ ಎಂದು ಬೇರೆ ಹೇಳಬೇಕೆ? ಈ ಕಲಹವು ಬಹಳ ದಿನಗಳಿಂದ ಹಾಗೆಯೇ ಉಳಿದಿದೆ. ರಾಜನ ಈ ಘೋರತೆಯು ಅಕ್ಷಮ್ಯವಾಗಿರುವಾಗ ಪೊಲಿಟಿಕಲ್ ಏಜಂಟರವರೂ ಮೌನದಿಂದಿರುವುದೇಕೆ? ಸಾವಿರಾರು ನಿರಾಶ್ರಿತ ಪ್ರಜೆಗಳ ಈ ಕಷ್ಟವನ್ನು ಅಲಕ್ಷಿಸುವ ಕಾರಣವಾದರೂ ಏನು? ಆದಕಾರಣ ಈ ತೊಡಕುಗಳೆಲ್ಲವನ್ನು ಬಗೆಹರಿಸುವುದು ಸಾರ್ವಭೌಮ ಸರಕಾರದ ಕಾರ್ಯವಾಗಿರುವುದಲ್ಲವೆ? ಖಂಡಿತವಾಗಿಯೂ. ಇದರಲ್ಲಿ ಘೋರವಾದ ಒಂದು ತಪ್ಪು ಇದ್ದಿರಬಹುದು.

ಕಾಂಗ್ರೆಸು ಸರಕಾರದ ನಿಷ್ಪಕ್ಷಪಾತ ಆಳ್ವಿಕೆ

ಮಗನನ್ನು ಕೈದುಮಾಡಲು ಸರಹದ್ದಿನ ಪ್ರಧಾನರ ಆಜ್ಞೆ

ಹಲವು ಕೆಂಪಂಗಿಗಳ ದಸ್ತಗಿರಿ

ಸರಹದ್ದಿನ ಚಾರಸದ್ದ ಎಂಬ ಹಳ್ಳಿಯಲ್ಲಿ ಕೆಂಪಂಗಿಗಳ ದಳದ ಕೆಲ ಒಕ್ಕಲಿಗರು ಬಲಾತ್ಕಾರ ಪೂರ್ವಕವಾಗಿ ತಮ್ಮ ಧನಿಗಳಿಂದ ಆಸ್ತಿಗಳನ್ನು ದೋಚಿಕೊಂಡು ವಾಸಿಸಲು ಪ್ರಾರಂಭಿಸಿದರು. ಈ ವಿಷಯವಾಗಿ ವಿಚಾರ ನಡೆಸಲು

ಅಧಿಕಾರಿಗಳು ತೆರಳಿದಾಗ ಮುಖ್ಯ ಮಂತ್ರಿಗಳ ೩೨ ವರ್ಷದ ಪುತ್ರ ಒಬೆದುಲ್ಲಾ ಎಂಬವನು ಬಹಳ ತೊಡಕುಗಳನ್ನುಂಟುಮಾಡಿ ಸತ್ಯಾಗ್ರಹವನ್ನು ಕೈಕೊಳ್ಳಲು ಕೆಂಪಂಗಿಗಳಿಗೆ ಪ್ರೋತ್ಸಾಹಿಸಿದನು. ಸಂಬಂಧಪಟ್ಟ ಅಧಿಕಾರಿಗಳು ಈ ಸಂಗತಿಯನ್ನು ಮುಖ್ಯಮಂತ್ರಿಗಳಾದ ಡಾಕ್ಟರ್ ಖಾನ್ ಸಾಹೇಬರಿಗೆ ತಿಳಿಸಲು, ಅವರು ತನ್ನ ಮಗನನ್ನು ಕೈದುಮಾಡಲು ಆಜ್ಞೆಯನ್ನಿತ್ತರು. ಅವರ ಆಜ್ಞೆಯ ಪ್ರಕಾರ ಒಬೆದುಲ್ಲನ ದಸ್ತಗಿರಿಯಾಗಿ ಈಗ ಕಾರಾಗೃಹದಲ್ಲಿರುವನು. ಕಳೆದ ಆದಿತ್ಯವಾರ ಈ ವಿಷಯ ಭಾಷಣಮಾಡುತ್ತಾ ಕಾಂಗ್ರೆಸು ಸರಕಾರವು ಎಂದೂ ಪಕ್ಷಪಾತ ತೋರಣೆಯನ್ನು ವಹಿಸದೆಂದು ಮುಖ್ಯ ಮಂತ್ರಿಗಳು ಒಂದು ಸಭೆಯಲ್ಲಿ ಸ್ಪಷ್ಟೀಕರಿಸಿದರು.

ಇಂಡಿಯಾ ಮ್ಯೂಜಿಯಮಿನಲ್ಲಿ ಬುದ್ಧರ ಘಂಟೆ

ಟಿಬೆಟ ಕಣಿವೆಯು ಸ್ಪಾಟಿ ಎಂಬ ಪ್ರದೇಶದಲ್ಲಿ ಹಬ್ಬಿದೆ. ಶತಮಾನಗಳ ಮೊದಲು ಬೌದ್ಧ ಭಿಕ್ಷುಗಳು ಉಪಯೋಗಿಸಿದ್ದ ಒಂದು ದೊಡ್ಡ ಘಂಟೆಯು ಈಗ ದಕ್ಷಿಣ ಕೆನ್ಸಿಂಗ್ಟನ್ನಿನ ಇಂಡಿಯಾ ಮ್ಯೂಜಿಯಮನ್ನು ಸೇರಿದೆ. ಸ್ವಲ್ಪ ಸಮಯದ ಹಿಂದೆ ಈ ಮ್ಯೂಜಿಯಮಿನ ಫಿಲಿಫ್ ರ್‍ಯಾಟ ಎಂಬ ಅಧಿಕಾರಿಗಳು ತಮ್ಮ ಇಬ್ಬರು ಸಂಗಾತಿಗಳೊಂದಿಗೆ ಸ್ಪಾಟಿ ಪ್ರದೇಶಕ್ಕೆ ಬಂದು ಹಲವು ಶೋಧನೆಗಳನ್ನು ಮಾಡಿ ಈ ಘಂಟೆಯನ್ನು ಬೇರೆ ಅನೇಕ ಪ್ರಾಚೀನ ವಸ್ತು ವಿಶೇಷಗಳನ್ನು ಸಂಗ್ರಹಿಸಿ ಮರಳಿದ್ದರು. ಅವರಿಗೆ ಅನೇಕ ಪುರಾತನ ವಾದ್ಯಗಳೂ, ಬಣ್ಣಹಾಕಿದ ಮಣ್ಣಿನ ಪಾತ್ರೆಗಳೂ, ಲೋಹದ ಹತ್ಯಾರುಗಳೂ, ಆಭರಣಗಳೂ ದೊರೆತಿರುವವು.

ಕಂತುಗಳಿಂದ ಹೆಮ್ಮಕ್ಕಳ ಮಾರಾಟ

ಪಾಪುವಾದ್ವೀಪದ ವಿಚಿತ್ರ ವಿವಾಹಪದ್ಧತಿ

ಧರ್ಮ ಪ್ರಚಾರಕ್ಕಾಗಿ ಪಾಪುವಾ ದ್ವೀಪಕ್ಕೆ ಹೋದ ರೆವರೆಂಡ್ ಹೆರೊಲ್ಡ್ ಶೋರ್ಟರು ಕೆಲವು ದಿನಗಳ ಹಿಂದೆ ಲಂಡನಿಗೆ ಬಂದಿದ್ದರು. ಅವರು ಅಲ್ಲಿ ತಮ್ಮ ಕೆಲವು ವಿಚಿತ್ರ ಅನುಭವಗಳನ್ನು ಹೇಳಿರುವರು. ಅವುಗಳಲ್ಲಿ ಕಂತುಗಳಿಂದ ಹೆಮ್ಮಕ್ಕಳ ಮಾರಾಟವು ಒಂದಾಗಿದೆ.

ಪಾಪುವದ ಮೂಲ ನಿವಾಸಿಗಳು ನಾಗರಿಕತೆಯಲ್ಲಿ ಬಹಳ ಹಿಂದುಳಿದ ಜನರು. ಕ್ರೈಸ್ತ ಧರ್ಮೋಪದೇಶಿಗಳು ಅಲ್ಲಿಗೆ ಹೋದ ಮೇಲೆ ಅವರು ಹೊಸ ಬೆಳಕನ್ನು ಕಾಣುತಿದ್ದಾರಂತೆ. ಈಗೀಗ ಅವರು ತಮ್ಮ ಹಿಂದಿನ ಎಷ್ಟೋ ಪದ್ಧತಿಗಳನ್ನು ಬಿಡುತ್ತ ಬಂದಿರುವರು.

ಮೊದಲು ಹೆಣ್ಣು ಗಂಡುಗಳ ವಿವಾಹವನ್ನು ಹಿರಿಯರೇ ನಿಶ್ಚಯಿಸುತ್ತಿದ್ದರು. ಆದರೆ ತಮ್ಮ ಜೀವನದ ಸಂಗಾತಿಯನ್ನು ಆರಿಸುವ ಸ್ವಾತಂತ್ರ್ಯವು ತಮಗೇ ಇರತಕ್ಕದೆಂದು ಈಗ ತರುಣ ತರುಣಿಯರು ಹೇಳಲಾರಂಭಿಸಿದ್ದಾರೆ. ಅಲ್ಲಿ ವಿವಾಹವಾಗಬೇಕೆನ್ನುವ ತರುಣನು ತನ್ನ ಪ್ರೇಯಸಿಯನ್ನು ಅವಳ ರಕ್ಷಕರಿಂದ ಕ್ರಯ ಕೊಟ್ಟು ಕೊಂಡುಕೊಳ್ಳಬೇಕು. ಆದರೆ ಅನೇಕ ಬಾರಿ ಹಣಕೊಟ್ಟು ಕೊಂಡುಕೊಳ್ಳಲಿಕ್ಕೆ ತರುಣನ ಹತ್ತಿರ ಹಣವಿರುವದಿಲ್ಲ. ಆಗ ಏನು ಬೇಕು? ತರುಣನು ಕಂತುಗಳಿಂದ ಹಣ ಕೊಡಲಿಕ್ಕೆ ಒಪ್ಪಿ ಆಕೆಯನ್ನು ವಿವಾಹವಾಗುವನು. ಅಲ್ಲಿ ನಾಣ್ಯ ಅಥವಾ ನೋಟುಗಳ ಚಲಾವಣೆ ಇರುವದಿಲ್ಲ. ಕ್ರಯವನ್ನು ಹಂದಿ ಅಥವಾ ತೆಂಗಿನ ಕಾಯಿಗಳ ರೂಪದಲ್ಲಿ ಕೊಡಬೇಕು. ತರುಣನು ತನ್ನ ಪ್ರೇಯಸಿಯ ರಕ್ಷಕರಿಗೆ ಇಷ್ಟಿಷ್ಟು ಹಂದಿ ಅಥವಾ ತೆಂಗಿನ ಕಾಯಿಗಳನ್ನು ಕೊಟ್ಟು, ಮತ್ತೆ ಪೂರ್ಣಕ್ರಯದ ಸಂದಾಯವಾಗುವ ತನಕ ಪ್ರತಿವಾರ ಇಂತಿಷ್ಟೇ ಕೊಡಲು ಒಪ್ಪುತ್ತಾನೆ.

ಇಂಗ್ಲಾಂಡಿನ ಮನೆಯಲ್ಲಿ ಭೂತದ ಉಪದ್ರ

ಬೊರ್ಲಿ ರೆಕ್ಟರಿ ಎಂಬುದು ಈಗ ಅನೇಕ ವರ್ಷಗಳಿಂದ "ಭೂತದ ಮನೆ"ಯೆಂದು ಪ್ರಸಿದ್ಧವಾಗಿರುವದು. ಅದರಲ್ಲಿ ಕೆಲವು ದಿನಗಳ ಹಿಂದೆ ಪ್ಲೆಂಚೆಟ್ಟಿನ ಉಪಯೋಗ ಆ ಮನೆಗೆ ಶೀಘ್ರದಲ್ಲಿ ಬೆಂಕಿ ಹತ್ತಿಕೊಳ್ಳುವದೆಂದು ಪ್ಲೆಂಚೆಟ್ಟು ಭವಿಷ್ಯ ನುಡಿದಿತ್ತು. ಕಾಲಕ್ರಮದಲ್ಲಿ ಅದು ಹೇಳಿದಂತೆಯೇ ಆಯಿತು. ಒಂದು ದಿನ ಆ ಮನೆಯ ಯಜಮಾನ ರಾತ್ರಿ ಹೊತ್ತು ಮೇಣದ ಬತ್ತಿ ಉರಿಸಿ ಬಿಡುತಿದ್ದಾಗ ಪಕ್ಕನೆ ದೀಪವು ಮಗುಚಿ ಬಿದ್ದಿತು. ಕೂಡಲೇ ಇಡೀ ಮನೆಗೆ ಬೆಂಕಿ ಹತ್ತಿಕೊಂಡಿತು. ಅಗ್ನಿ ಸೇನೆಯವರು ಬಂದು ಭಗೀರಥ ಪ್ರಯತ್ನ ಮಾಡಿದರೂ ಬೆಂಕಿಯನ್ನು ನಂದಿಸಲಿಕ್ಕಾಗಲಿಲ್ಲ. ಈ ಆಶ್ಚರ್ಯವನ್ನು ನೋಡಲಿಕ್ಕೆ ಊರ ಸಾವಿರಾರು ಮಂದಿ ಅಲ್ಲಿ ಕೂಡಿದರು. ಬೆಂಕಿಯು ಎಲ್ಲಾ ನಾಲಿಗೆಗಳನ್ನು ಚಾಚಿ ಉರಿಯುತಿದ್ದಾಗ ಜನರು ಒಂದು ಅದ್ಭುತವನ್ನು ಕಂಡರು. ಬೆಂಕಿಯ ಒಳಗೇ ವಿಚಿತ್ರ ಜನರ ನಡೆಯುವದೂ ಓಡುವದೂ ಕಾಣಬಂತು. ಬೆಂಕಿಯಿಂದ ಮನೆಯು ಸುಟ್ಟುಹೋದ ಎರಡು ದಿನಗಳ ತರುವಾಯ, ಆ ಮಾರ್ಗವಾಗಿ ಹೋಗುತಿದ್ದ ಒಬ್ಬಳು ಮನೆಯ ಉರಿದ ಕಂಬದ ಬಳಿ ಒಬ್ಬ ಹೆಂಗಸು ನಿಂತಿರುವದನ್ನು ಕಂಡು ಬೆಚ್ಚಿಬಿದ್ದಳು. ಒರಗಿಕೊಂಡಿದ್ದ ಹೆಂಗಸು ಮುಖಮುಚ್ಚಿಕೊಂಡು ನಿಂತುಕೊಂಡಿತ್ತು. ಇದು ಇತ್ತೀಚೆಗಿನ ಅತ್ಯಾಶ್ಚರ್ಯಕರ ಘಟನೆ ಎಂದು ಪರಲೋಕ ವಿದ್ಯಾಸಂಘದವರು ಹೇಳಿದ್ದಾರೆ.

ಮಧ್ಯಪ್ರಾಂತ ವಿಚಾರಣಾ ಸಮಿತಿ

ಮಧ್ಯಪ್ರಾಂತದಲ್ಲಿ ಗ್ರಾಮೋದ್ಯೋಗ ಕಾರ್ಯವು ಹೇಗೆ ನಡೆಯುತ್ತಿದೆಯೆಂಬುದನ್ನು ತಿಳಿಯುವುದಕ್ಕೋಸ್ಕರ ಸರಕಾರವು ಒಂದು ವಿಚಾರಣಾ ಸಮಿತಿಯನ್ನು ನಿರ್ಮಿಸಿದೆ.

ಶಾಲೆ ಹುಡುಗಿಯನ್ನು ವರಿಸಿದ ಪಾದ್ರಿ

೫೬ ವರ್ಷ ಪ್ರಾಯದ ಅಮೇರಿಕದ ಒಬ್ಬ ಪಾದ್ರಿ ಹೈಸ್ಕೂಲಿನಲ್ಲಿ ಓದುತ್ತಿದ್ದ ಒಬ್ಬ ಬಾಲೆಯನ್ನು ಮದುವೆಯಾಗುವ ತನ್ನ ಇಚ್ಛೆಯನ್ನು ಪ್ರಕಟಪಡಿಸಿದ. ಈ ವಿಷಯ ವಿವಾಹಕ್ಕೆ ಜನರ ವಿರೋಧವು ಎಷ್ಟು ಪ್ರಬಲವಾಯಿತೆಂದರೆ ಪಾದ್ರಿಯ ಮದುವೆಯ ಇಚ್ಛೆ ಅವನ ಮನಸ್ಸಿನಲ್ಲೇ ಉಳಿಯಿತು. ಕಡೆಗೆ ಜೀವನದಲ್ಲಿ ಬೇಸರಗೊಂಡು ಅವನು ವಿಷವಾಯು ಸೇವಿಸಿ ತನ್ನ ಪ್ರಾಣವನ್ನು ಕೊಡಬೇಕಾಯಿತು. ಇತ್ತೀಚೆಗೆ ನವಸುಧಾರಿತ ಅಮೇರಿಕದಲ್ಲಿ ನಡೆದ ಘಟನೆಯಿದು.

ಹೊಸ ಇಕೊನೊಮಿ ಟಿನ್ನುಗಳಲ್ಲಿರುವ ಎಂಡ್ರೂಸ್ ಲವಣವು ನಿಮ್ಮ ದೇಹದ ಅಂತರೇಂದ್ರಿಯಗಳನ್ನು ಶುಚಿಗೊಳಿಸಿ ಉತ್ತಮವಾದ ಆರೋಗ್ಯವನ್ನುಂಟುಮಾಡುತ್ತದೆ.

ನಿತ್ಯ ಅಭ್ಯಾಸದಿಂದ ಒಂದೆರಡು ವಾರದ ವರೆಗೂ ಒಂದು ಗ್ಲಾಸು ಎಂಡ್ರೂಸ್ ಲವಣವನ್ನು ಸೇವಿಸಿದಲ್ಲಿ ಅದು ನಿಮ್ಮ ಅಂತರೇಂದ್ರಿಯಗಳನ್ನು ಶುಚಿಗೊಳಿಸಿ ನಿಮಗೆ ಆರೋಗ್ಯವನ್ನೂ ಚೈತನ್ಯವನ್ನೂ ಉಂಟುಮಾಡುತ್ತದೆ. ನಿಮ್ಮ ಆರೋಗ್ಯವು ಒಳ್ಳೆದಾಗಿರುವುದಾದರೆ ಉತ್ತಮವಾದ ಗುಣವುಳ್ಳ ಈ ಎಂಡ್ರೂಸ್ ಲವಣವನ್ನು ಸೇವಿಸಿ ಅದನ್ನು ಕಾಪಾಡಿರಿ.

ಎಂಡ್ರೂಸ್ ಲವಣವು ಈಗ ಇಕೊನೊಮಿ ಟಿನ್ನುಗಳಲ್ಲಿ ದೊರೆಯುತ್ತದೆ (ದೊಡ್ಡದು ರೂ 1-1-0 ಸಾಧಾರಣದ್ದು ಆಣೆ 11) ಹಳೆಯ ಬಾಟ್ಲಿಗಳಿಗಿಂತಲೂ, ಬೆಲೆಯಲ್ಲಿ ಕಡಿಮೆ. ಎಂಡ್ರೂಸ್ ಟಿನ್ನುಗಳಲ್ಲಿ ಉಳಿದ ಅದೇ ಗುಣ ಹಳೆಯ ಬಾಟ್ಲಿಗಳಲ್ಲಿಯೂ ದೊರೆಯುತ್ತದೆ.

ಕೊಂಡುಕೊಳ್ಳಿರಿ.

7೮೩

ANDREWS LIVER SALT

ಚೀಫ್ ಜಸ್ಟಿಸರ ಏವಾರ್ಡಿಗೆ ಮಹಾತ್ಮರ ತಿಲಾಂಜಲಿ

[೬ನೇ ಪುಟದಿಂದ ಮುಂದುವರಿದುದು]

ಸ್ಥಳದಲ್ಲಿ ಉಪವಾಸ ಮಾಡುತ್ತಿರುವ ಕೈದಿಗಳೊಡನೆ ಸಹಾನುಭೂತಿಯನ್ನು ತೋರಿಸಿ ಮೇ ೬ರ ದಿನ ಭಾವಲಪುರದಲ್ಲಿ ಹರತಾಳವಾಯಿತು. ಭಾವಲಪುರದ ಜವಾಬುದಾರಿ ಕಾರ್ಯಕರ್ತರುಗಳು ಮಹಾತ್ಮಾ ಗಾಂಧಿ, ಪಂಡಿತ ನೆಹರು, ಅಬ್ದುಲ್ ಗಪರ್ ಖಾನ ಮೊದಲಾದವರಿಗೆ ತಂತಿ ಬಿಟ್ಟು, ಸಂಸ್ಥಾನ ಪರಿಸ್ಥಿತಿಯನ್ನು ತಿಳಿಸಿ ಮಧ್ಯಸ್ಥಿಕೆ ಮಾಡಬೇಕೆಂದು ಅವರನ್ನು ಪ್ರಾರ್ಥಿಸಿದ್ದಾರೆ. ಉಪವಾಸೀ ಕೈದಿಗಳು ಈಗ ಉಪವಾಸವನ್ನು ಬಿಟ್ಟಿದ್ದಾರೆ.

ಒರಿಸ್ಸಾ ಸಂಸ್ಥಾನಗಳಿಗೆ ಹೆಚ್ಚಿಗೆ ಪೋಲೀಸರು

೧೦೦ ಮಂದಿ ಜವಾನರು ಮತ್ತು ಮೂವರು ಸಬ್ ಇನ್ಸ್‌ಪೆಕ್ಟರರೊಂದಿಗೆ ಸಾರ್ಜೆಂಟ್ ವಿಲ್ಸನ ಎಂಬ ಪೋಲೀಸ್ ಅಧಿಕಾರಿಗಳು ನಿಜಾಮ ಹೈದರಾಬಾದದಿಂದ ಒರಿಸ್ಸಾ ಸಂಸ್ಥಾನಗಳಿಗೆ ತೆರಳಿರುವರು. ಅವರೆಲ್ಲರೂ ತಲಚೇರಕ್ಕೆ ಹೋಗಿರುವುದಾಗಿ ತಿಳಿದುಬರುತ್ತದೆ. ಆ ಸಂಸ್ಥಾನದಲ್ಲಿ ರಾಜಪ್ರಜೆಗಳ ವಿವಾದವು ವಿಷಮಾವಸ್ಥೆಗೆ ಮುಟ್ಟಿರುತ್ತದೆ. ತಲಚೇರದ ಸ್ಥಿತಿಗತಿಗಳು ರಾಜಕೋಟಕ್ಕಿಂತಲೂ ಭಯಂಕರವಾಗಿರುವುವೆಂದು ಮಹಾತ್ಮರು ಪ್ರಕಟನೆ ಕೊಟ್ಟಿರುವರು.

ಕಾಶ್ಮೀರ

ಸಂಸ್ಥಾನಗಳ ಸಂಬಂಧ ಮುಸ್ಲಿಂ ಲೀಗ್ ಮತ್ತು ಅದರ ಸೂತ್ರಧಾರರಾದ ಮಿ ಜಿನ್ನಾ, ಮೌಲನಾ ಜಫರಾಲಿ ಖಾನ ಮೊದಲಾದವರ ಕಾರ್ಯಧೋರಣೆಯನ್ನು ಟೀಕಿಸಿ ಅವರ ನೀತಿಯು ಸಂಸ್ಥಾನ ಪ್ರಜೆಗಳ ಹಿತಕ್ಕೆ ವಿಘಾತುಕವಾಗಿರುವುದೆಂಬುದನ್ನು ಕಾಶ್ಮೀರದ ಪ್ರಜಾಮುಖಂಡರಾದ ಶ್ರೀ ಎಸ್ ಎಮ್ ಅಬ್ದುಲ್ಲಾರವರು ಒಂದು ಪ್ರಕಟಣೆಯ ಮೂಲಕ ಸ್ಪಷ್ಟ ಮಾಡಿರುವರು. ಆದ್ದರಿಂದ ಕಾಶ್ಮೀರದ ಮುಸಲ್ಮಾನರು ಕಾಂಗ್ರೆಸಿನ ನೇತೃತ್ವದಲ್ಲಿ ಕೆಲಸಮಾಡಲು ಸಿದ್ಧರಾಗಿದ್ದಾರೆ ಮತ್ತು ಕಾಂಗ್ರೆಸಿನ ತತ್ವಗಳನ್ನನುಸರಿಸಿ ಕಾಶ್ಮೀರದ ಶಾಸನಕ್ರಮದ ಸುಧಾರಣೆಗೆ ಪ್ರಯತ್ನಿಸಿಯೂ ಇದ್ದಾರೆ ಎಂದೂ ಅವರು ಹೇಳಿದ್ದಾರೆ. ರಾಜಕೀಯ ಸುಧಾರಣೆಯ ಉದ್ದೇಶವನ್ನಿಟ್ಟುಕೊಂಡು ಸ್ಥಾಪಿತವಾದ ಕಾಶ್ಮೀರದ ಮಸ್ಲಿಮ ಕಾನ್‌ಫರೆನ್ಸ್ ಶ್ರೀ ಅಬ್ದುಲ್ಲರ ವಿಚಾರ ಸರಣಿಯನ್ನು ಮನ್ನಿಸಿ, ಈ ಕಾನ್‌ಫರೆನ್ಸಿನಲ್ಲಿ ಮುಸಲ್ಮಾನರು ಮಾತ್ರವಲ್ಲದೆ ಇತರ ಮತಸಂಪ್ರದಾಯಗಳ ಜನರೂ ಸೇರಲನುಕೂಲವಾಗಿ ತನ್ನ ಹೆಸರನ್ನು ಬದಲಾಯಿಸಿ ನೇಶನಲ್ ಕಾನ್‌ಫರೆನ್ಸ್ ಎಂದು ಹೊಸ ಹೆಸರನ್ನು ತಾಳುವುದು. ಮಿ ಜಿನ್ನಾರಂತಹ ಶ್ರೀ ಅಬ್ದುಲ್ಲರನ್ನೂ ಅವರ ಧೋರಣೆಯನ್ನು ಮುಸ್ಲಿಮ ಜನತೆಗೆ ಅಹಿತಕರವೆಂದು ಕಟೂಕ್ತಿಗಳಿಂದ ಟೀಕಿಸಿದ್ದರೆ ಆ ಸರಂತು ಮಿ ಜಿನ್ನರಿಗೆ ಕಾಶ್ಮೀರ ಮುಸಲ್ಮಾನರ ಬೆಂಬಲವು ಏನೇನೂ ಇರುವುದಿಲ್ಲ ಎಂಬ ಹಾಗೆ ಕಾಣುತ್ತದೆ. ಅಲ್ಲಿ ಕಾಂಗ್ರೆಸ್ ಅನುಯಾಯಿಗಳಾದ ಮಿ. ಅಬ್ದುಲ್ಲರನ್ನೇ ಜನತೆಯು ತನ್ನ ಮುಖಂಡನನ್ನಾಗಿ ಮನ್ನಿಸಿದೆ.

ಸಂಡೂರು

ರಾಜ್ಯದಲ್ಲಿ ಉತ್ತು ಬಿತ್ತಿ ಬೆಳೆ ಮಾಡುವ ಒಕ್ಕಲಿಗರ ಹಿತಸಾಧನೆಯು ಕೂಡ ತಮ್ಮ ಪ್ರಧಾನ ಧ್ಯೇಯವಾಗಿರುವುದೆಂದು ಹೇಳಿ, ಸಂಡೂರಿನ ರಾಜರು ಈಗ ರಾಜ್ಯದಲ್ಲಿ ಬೇಸಾಯ ಮಾಡುವ ಒಕ್ಕಲಿಗರಿಗೆ ಅವರವರ ಭೂಮಿಯ ಮಟ್ಟಿಗೆ ಕಾಯಂ ಒಕ್ಕಲುತನದ ಅಧಿಕಾರಗಳನ್ನು ಕೊಟ್ಟಿದ್ದಾರೆ. ಅವರಿಗೆ ಆಸ್ತಿ ಸಂಬಂಧಿಸುವ ಅಧಿಕಾರವೂ ಈಗ ಪ್ರಾಪ್ತವಾಗಿರುವುದು. ಹಾಗೂ ನ್ಯಾಯಶಾಖೆಯನ್ನು ಕಾರ್ಯನಿರ್ವಾಹಕ ಶಾಖೆಯಿಂದ ಬೇರ್ಪಡಿಸಿ, ಕಾರ್ಯನಿರ್ವಾಹಕ ಶಾಖೆಯಿಂದ ಸ್ವತಂತ್ರರಾದ ಒಬ್ಬ ಮುನ್ಸಫ್ ಮೆಜಿಸ್ಟ್ರೇಟರನ್ನು ನೇಮಿಸುವರು. ಇವರು ನ್ಯಾಯಾಧೀಶರರ ಕೈಕೆಳಗೆ ಕೆಲಸಮಾಡುವರು. ಬಳ್ಳಾರಿಯ ಜಿಲ್ಲಾ ಜಡ್ಜರು ಸಂಡೂರು ಚೀಫ್ ಕೋರ್ಟಿನ ನ್ಯಾಯಾಧೀಶರಾಗಿ ಕೆಲಸ ಮಾಡುವರು.

ಮೈಸೂರು ರಾಜಕೀಯ ಸುಧಾರಣಾ ಸಮಿತಿ

ಮೈಸೂರು ರಾಜಕೀಯ ಸುಧಾರಣಾ ಸಮಿತಿಯು ಈಗ ವರದಿ ಬರೆಯಲಿಕ್ಕಾರಂಭಿಸಿದೆ. ಒಂದು ತಿಂಗಳ ಅವಧಿಯಲ್ಲಿ ಅದು ಸರಕಾರದ ಕೈ ಸೇರಬಹುದು. ಮಹಾರಾಜರ ಛತ್ರಛಾಯೆಯಲ್ಲಿ ಸಂಪೂರ್ಣ ಜವಾಬುದಾರಿ ಸರಕಾರ ಸ್ಥಾಪನೆ ಮಾಡುವುದೇ ಅಂತಿಮ ಗುರಿಯಾಗಿರಬೇಕೆಂದು ಸಮಿತಿಯು ಮಹಾರಾಜರಿಗೆ ಶಿಫಾರಸು ಮಾಡುವುದಾಗಿ ವಿಶ್ವಸನೀಯ ಸೂತ್ರಗಳಿಂದ ತಿಳಿದುಬರುತ್ತದೆ. ಈಗ ದಿವಾನರು ಮತ್ತು ಕನಿಷ್ಠ ಇಬ್ಬರಾದರೂ ಎಸೆಂಬ್ಲಿ ಕೌನ್ಸಿಲುಗಳಿಗೆ ಜವಾಬುದಾರರಾಗಿರುವ ನಾಲ್ವರು ಮಂತ್ರಿಗಳಿರುವ ಕಾರ್ಯನಿರ್ವಾಹಕ ಮಂಡಲಿಯ ನಿರ್ಮಾಣವಾಗಬೇಕು, ಸ್ಥಾನೀಯ ಸಂಸ್ಥೆಗಳ ಮೇಲು ವಿಚಾರಕ್ಕೆ ಪ್ರತ್ಯೇಕ ಆಫೀಸರರ ನೇಮಕವಾಗಬೇಕು, ಪಬ್ಲಿಕ್ ಸರ್ವಿಸ್ ಕಮೀಶನು ಏರ್ಪಡಬೇಕು, ನಾಗರಿಕ ಹಕ್ಕು ಅಧಿಕಾರಗಳ ಘೋಷಣೆಯಾಗಬೇಕು ಎಂದು ಮೊದಲಾಗಿ ಸಮಿತಿಯು ಶಿಫಾರಸು ಮಾಡಿತೆಂದು ವಿಶ್ವಾಸವುಂಟಾಗಿದೆ.

ಇಂದೂರು

ಸರಕಾರವು ವಿಧಿಸಿದ ಒಕ್ಟ್ರಾಯ ಡ್ಯೂಟಿಗಳ ವಿರುದ್ಧ ಜನರು ಹರತಾಳವನ್ನಾರಂಭಿಸಿದ್ದಾರೆ. ಆ ದಿನ ಪೆಟ್ರೋಲು ಸಿಕ್ಕುವುದು ಕೂಡ ಕಷ್ಟವಾದುದರಿಂದ ವಾಹನಾದಿಗಳ ಸಂಚಾರಕ್ಕೆ ತುಂಬ ಕಷ್ಟವಾಗಿದೆ. ಹರತಾಳವನ್ನು ನಿಲ್ಲಿಸಬೇಕೆಂದು ಪ್ರಜಾಮಂಡಲದ ಕಡೆಯಿಂದ ಬಂದ ಸಲಹೆಗೆ ಸಾರ್ವಜನಿಕ ಸಭೆಯಲ್ಲಿ ಬೆಂಬಲವು ದೊರೆಯಲಿಲ್ಲ. ಪ್ರಜಾಮಂಡಲ ಪರಿಷತ್ತು ಶ್ರೀ ಬೈಜನಾಥ ಮಹಾದೇವರ ಅಧ್ಯಕ್ಷತೆಯಲ್ಲಿ ಕೂಡಿ ಜವಾಬುದಾರಿ ಸರಕಾರ ಸ್ಥಾಪನೆ, ಕರ ಕಂದಾಯಗಳಲ್ಲಿ ಕಡಿತ ಇತ್ಯಾದಿಗಳ ಉಚಿತ ನಿರ್ಣಯಗಳಾದುವು. ಒಕ್ಟ್ರಾಯ ಡ್ಯೂಟಿ ವಿಧಿಸುವ ತಾರೀಕನ್ನು ಸರಕಾರವು ಮುಂದರಿಸಿ ಹಾಕಿತು.

ಮೈಸೂರು ಕಾಂಗ್ರೆಸ್ ಪ್ರಚಾರ

ಮೈಸೂರ ಕಾಂಗ್ರೆಸಿನ ನೇತೃತ್ವದಲ್ಲಿ ಮೈಸೂರು ಕಾಂಗ್ರೆಸ ಸಪ್ತಾಹವು ಮೈಸೂರು, ಬೆಂಗಳೂರು, ಕೋಲಾರ ಮೊದಲಾದ ಕಡೆಗಳಲ್ಲಿ ಆಚರಿಸಲ್ಪಟ್ಟಿತು. ಆ ವಾರದಲ್ಲಿ ಪ್ರತಿದಿನ ಬೆಳಗ್ಗೆ ಪ್ರಭಾತ ಫೇರಿ, ಧ್ವಜಾರೋಹಣ, ಸಾಯಂಕಾಲ ಸಭೆ, ಭಾಷಣಗಳಾಗಿ ಕಾಂಗ್ರೆಸು ಪ್ರಚಾರವಾಯಿತು.

ಜಯಪುರದಲ್ಲಿ ಕೈದಿಗಳ ಬಿಡುಗಡೆ

ಶಿಕ್ಷೆಯ ಸಂಪೂರ್ಣ ಅವಧಿಯು ಮುಗಿಯುವ ಮೊದಲೇ ಜಯಪುರದಧಿಕಾರಿಗಳು ಜೈಲಿನಲ್ಲಿನ ಸತ್ಯಾಗ್ರಹಿ ಕೈದಿಗಳನ್ನು ನಿಶ್ಶರ್ತವಾಗಿ ಬಿಡುಗಡೆ ಮಾಡಿದ್ದಾರೆ. ಶ್ರೀ ಜಮನಾಲಾಲ ಬಜಾಜರು ಬೇರೊಂದು ಕಡೆಗೆ ವರ್ಗಾಯಿಸಲ್ಪಟ್ಟಿರುವರು.

ಶೆಡ್ಯೂಲು ಬೇಂಕುಗಳಿಗೆ ವಿನಾಯಿತಿ

ಲೇವಾದೇವಿ ಮತ್ತು ಬೇಂಕಿಂಗ ವ್ಯವಹಾರಗಳನ್ನು ನಡೆಸುವ ಸಾಹುಕಾರೀ ಜನರ ಕಾರ್ಯಕಲಾಪಗಳ ಮೇಲೆ ನಿಯಂತ್ರಣವನ್ನಿಡುವ ಬಂಗಾಳ ಮನಿಲೆಂಡರ್ಸ ಬಿಲ್ಲಿನಿಂದ ಬಂಗಾಳ ಸರಕಾರವು ಶೆಡ್ಯೂಲು ಬೇಂಕುಗಳಿಗೆ ವಿನಾಯಿತಿ ಕೊಟ್ಟಿದೆ. ಸರಕಾರದ ಈ ಪಕ್ಷಪಾತವನ್ನು ಬಂಗಾಳ ಎಸೆಂಬ್ಲಿಯ ಕಾಂಗ್ರೆಸಪಾರ್ಟಿ ಮತ್ತು ಸ್ವತಂತ್ರ ಹರಿಜನ ಪಾರ್ಟಿಯವರು ಖಂಡಿಸಿರುವರು.

ವಿಷಪ್ರಾಯವಾದ ಕಡಿತಗಳ ವಿಷಯ ಜಾಗರೂಕರಾಗಿರಿ.

ಜಾಂಬಕನ್ನು ಸವರಿಸಿ ತೊಡಕನ್ನು ನಿವಾರಿಸಿರಿ

ಕ್ರಿಮಿಕೀಟಗಳಿಂದ ಕಡಿಯಲ್ಪಟ್ಟ ಗಾಯಗಳು, ಕಡಿತಗಳು ಭಯಂಕರವಾಗಿ ಬಾತು ವಿಷಪ್ರಾಯವಾಗಿ ಹಾನಿಯಾಗಬಹುದು. ಆದುದರಿಂದ ಆ ತೊಡಕುಗಳನ್ನು ನಿವಾರಿಸುವ ವಿಷಹಾರಿ ಜಾಂಬಕನ್ನು ಸವರಿಸಿರಿ. ಜಾಂಬಕಿನಲ್ಲಿರುವ ಅಮೂಲ್ಯ ಔಷಧೀಯ ಗಿಡಮೂಲಿಕೆಗಳ ಎಣ್ಣೆಯು ನಿಮ್ಮ ನರನಾಡಿಗಳನ್ನು ಪ್ರವೇಶಿಸಿ ನೋವನ್ನು ನಿವಾರಿಸುತ್ತದೆ. ಬಾತುವಿಕೆಯನ್ನು ಗುಣಮಾಡುತ್ತದೆ. ಜಾಂಬಕು ಒಂದೂ ಕಲೆಯನ್ನುಂಟುಮಾಡದೇ ಗುಣಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳು ಜಾಂಬಕನ್ನು ರೂ 1 ಮತ್ತು ರೂ 2-4-0ರಂತೆ ಮಾರುತ್ತಾರೆ.

ಏಜಂಟ್ಸ್:—

ಡಾಧಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದ್ರಾಸು.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ



ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store.
28 Merchua Bazar St CALCUTTA

ಜಪಾನಿನ ತೇಜೋವಧ

ಚಲಾಂಗ್ಸ ಎಂಬಲ್ಲಿ ಜಪಾನು ತನ್ನ ಸೇನೆಯನ್ನು ಇಳಿಸಿತ್ತು. ಆದ್ದರಿಂದ ಚೀನದಲ್ಲಿ ತಮಗೆ ನ್ಯಾಯವಾದ ಹಕ್ಕು ಅಧಿಕಾರಗಳ ಹಿತಾಸಕ್ತಿಗಳಿಗೆ ಭಂಗಬರುವುದೆಂದು ಬ್ರಿಟನ ಹಾಗೂ ಅಮೇರಿಕಾ ದೇಶಗಳು ಪ್ರತಿಭಟಿಸಿ ಅಲ್ಲಿಗೆ ತಮ್ಮ ಯುದ್ಧ ನಾವೆಗಳನ್ನು ಕಳುಹಿಸಿದುವು. ಈಗ ಜಪಾನ ಸಂಚಾರದ ದಿಕ್ಕನ್ನು ಬಿಟ್ಟು ಉಳಿದ ಎಲ್ಲಾ ಸೈನಿಕರನ್ನು ಹಿಂದಕ್ಕೆ ಕರೆಸಿ, ಯುದ್ಧ ನಾವೆಗಳನ್ನು ಕಳುಹಿಸಿದ್ದನ್ನು, ಬ್ರಿಟಿಶ ಅಮೇರಿಕಗಳ ಹಿತಾಸಕ್ತಿಗಳಿಗೆ ಭಂಗಬರುವಂತ ಅಭಿಪ್ರಾಯ ತನಗಿರುವುದಿಲ್ಲವೆಂದು ಆ ಸರಕಾರಗಳಿಗೆ ತಿಳಿಸಿದೆ. ಹಾಗೆಯಲ್ಲ ಚೀನಿಯರು ಜಪಾನಿಯರ ಮೇಲೆ ಬಿದ್ದು ೧೨೦೦೦ ಮಂದಿಯ ಜಪಾನೀ ಸೇನೆಯನ್ನು ಪೂರ್ಣ ಸೋಲಿಸಿದೆ.

ಸನಾತನಿಗಳಿಗೆ ಡಾ. ಮುಂಜೆಯವರ ಬೋಧನೆ

ಇಂದೋರು ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಹರಿಜನರ ಉದ್ಧಾರಕ್ಕಾಗಿ ಕೈಕೊಂಡಿರುವ ಕಾರ್ಯಗಳನ್ನು ವಿರೋಧಿಸಿ ಅಲ್ಲಿಯ ಸನಾತನಿಗಳು ಚಳವಳಿಸುವುದನ್ನು ಕೇಳಿ ಡಾಕ್ಟರ ಮುಂಜೆಯವರು ಬಹಳ ಆಶ್ಚರ್ಯಪಟ್ಟಿರುವರು. ಹಿಂದೂ ಸ್ಥಾನದಲ್ಲಿ ಬಹುಮತವನ್ನು ಪಡೆಯುವ ಅಭಿಲಾಷೆಯಿಂದ ಎರಡು ಮತಸಂಸ್ಥೆಗಳು ಹಿಂದೂಗಳನ್ನು ಮತಾಂತರಗೊಳಿಸುವ ಪ್ರಚಂಡ ಆಂದೋಲನವನ್ನು ಹೂಡಿರುವುದನ್ನು ಸನಾತನಿಗಳು ಲಕ್ಷ್ಯದಲ್ಲಿಡಬೇಕೆಂದೂ, ಸನಾತನಿಗಳ ಹರಿಜನರ ವಿಷಯದಲ್ಲಿ ಇನ್ನೂ ಇನ್ನೂ ಉದ್ಧಟತನವನ್ನು ತೋರಿಸುವರಾದರೆ, ಹಿಂದೂ ಧರ್ಮ ರಕ್ಷಣೆಯು ಅಸಾಧ್ಯವಾಗುವುದೆಂದೂ ಡಾಕ್ಟರ ಮುಂಜೆಯವರು ಹೇಳಿದರು. ಮುಸ್ಲಿಮ ಧರ್ಮದ ಶ್ರದ್ಧೆ ಮತ್ತು ಕ್ರೈಸ್ತ ಮತದ ತ್ಯಾಗಭಾವಗಳು ಹಿಂದೂಗಳಿಗೆ ಅನುಕರಣೀಯ ವಾಗಿರುವುವೆಂದು ಅವರೆಂದರು.

ಓಂ ಮಂಡಲಿಯ ಮೇಲೆ ನಿರ್ಬಂಧ

ಕರಾಚಿಯ ಓಂ ಮಂಡಲಿಯನ್ನು ಸಿಂಧ ಸರಕಾರವು ನಿಷೇಧಿಸಿದೆ. ಮಂಡಲಿಯ ಕಾರ್ಯಕಲಾಪಗಳು ಅಸಭ್ಯತೆಯನ್ನು ಹರಡಿಸುವವು ಮತ್ತು ಶಾಂತಿಯನ್ನು ಕೆಡಿಸುವಂಥವು ಎಂದು ಸತ್ಯಾಗ್ರಹವಾಗಿತ್ತು. ಸತ್ಯಾಗ್ರಹದೊಂದಿಗೆ ಸಹಾನುಭೂತಿಯನ್ನು ತೋರಿಸಿ ಸಿಂಧದ ಹಿಂದೂ ಮಂತ್ರಿಗಳು ರಾಜಿನಾಮೆಯನ್ನು ಕೊಟ್ಟಿದ್ದರು. ಸರಕಾರದ ಈ ನಿರ್ಧಾರದಿಂದ ಜನರಲ್ಲಿ ತೃಪ್ತಿ ಉಂಟಾಗಿದೆ.

ಪೆಲೆಸ್ತೀನ ಕುರಿತು ಬ್ರಿಟಿಷ ಸರಕಾರದ ನಿರ್ಧಾರ

ಇದು ಈಗ ತಾನೇ ಪ್ರಕಟವಾಗಿರುವುದು. ಈ ನಿರ್ಧಾರದಿಂದ ಅರಬರ ಅಥವಾ ಯಹೂದಿಯರು—ಯಾರೂ ತೃಪ್ತರಾಗಿರುವುದಿಲ್ಲ. ಇತ್ತಂಡದವರೂ ವಿರುದ್ಧ ಆಂದೋಲನವನ್ನಾರಂಭಿಸಿದ್ದಾರೆ. ಪೆಲೆಸ್ತೀನಿನಲ್ಲಿ ೧೦ ವರ್ಷಗಳ ಅನಂತರವೇ ರಾಷ್ಟ್ರೀಯ ಸರಕಾರ ಸ್ಥಾಪನೆಯಾಗುವುದೆಂಬುದು, ಅರಬರು ಮತ್ತು ಯಹೂದಿಯರು ಪರಸ್ಪರ ಸ್ನೇಹದಿಂದಿರಬಲ್ಲರೆಂದು ಗೊತ್ತಾದ ಅನಂತರವೇ ರಾಷ್ಟ್ರೀಯ ಸರಕಾರದ ಸ್ವರೂಪ ನಿರ್ಣಯವಾಗುವುದು—ಎಂದಿತ್ಯಾದಿ ಶರತ್ತುಗಳನ್ನು ಹಾಕಿರುವುದು ಅರಬರ ಅಸಂತೋಷಕ್ಕೆ ಕಾರಣವಾಗಿದೆ. ತಾವು ಪೆಲೆಸ್ತೀನಿನಲ್ಲಿ ಸರ್ವತಂತ್ರ ಸ್ವತಂತ್ರರಾಗಿ ಇರಲಾರೆವೆಂಬುದರಿಂದ ಯಹೂದಿಯರು ಅತೃಪ್ತರಾಗಿರುವರ. ಆದ್ದರಿಂದ ಪೆಲೆಸ್ತೀನಿನಲ್ಲಿ ಶಾಂತಿಯು ನೆಲೆಗೊಳ್ಳಬಹುದೆಂದು ಹಲವರು ಇಟ್ಟುಕೊಂಡಿದ್ದ ಆಶೆ ಈಗ ನುಚ್ಚುನೂರಾಗಿ ಮುಗಿದೆ. ಯಹೂದಿಯರು ಪೆಲೆಸ್ತೀನಿನಲ್ಲಿ ಕರನಿರಾಕರಣ ಚಳವಳವನ್ನಾರಂಭಿಸುವರೆಂದು ತಿಳಿದು ಬರುತ್ತದೆ.

ಮದ್ರಾಸಿನಲ್ಲಿ ಶಿಕ್ಷಣ ಸುಧಾರಣಾ ಸಮಿತಿಯ ರಚನೆ

ಮದ್ರಾಸ ಪ್ರಾಂತ್ಯದಲ್ಲಿ ಶಿಕ್ಷಣ ಸುಧಾರಣೆಗಾಗಿ ಸರಕಾರವು ಒಂದು ಸಮಿತಿಯು ರಚನೆ ಮಾಡುವ ತನ್ನ ನಿರ್ಧಾರವನ್ನು ಪ್ರಕಟ ಮಾಡಿದೆ. ಇದು ಉಪಾಧ್ಯಾಯ ಜನಸಮುದಾಯಕ್ಕೆ ಹರ್ಷವನ್ನುಂಟುಮಾಡುವ ಸಂಗತಿಯಾಗಿರುವದು. ವಾರ್ಧಾ ಶಿಕ್ಷಣ ಪದ್ಧತಿ, ಆರ್ಥಿಕ ವಿಚಾರ, ಶಾಲಾ ವ್ಯವಸ್ಥೆ, ಆಡಳಿತ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಕ್ರಮಗಳಿಗಿರಬೇಕಾದ ಹೊಂದಿಕೆ ಇವುಗಳ ಕುರಿತು ನಮ್ಮ ಪ್ರಾಂತದ ವಿಶೇಷ ಪರಿಸ್ಥಿತಿಗೆ ಅನುಕೂಲವಾಗಿ ಆಲೋಚನೆಯಾಗಬೇಕಾದ್ದು ಅಗತ್ಯವಾಗಿದೆ. ಯಾವ ಬಗೆಯ ಶಿಕ್ಷಣ ಪದ್ಧತಿಯಾದರೂ, ಅದು ಫಲವಾಗಲಿಕ್ಕೆ ಉಪಾಧ್ಯಾಯರ ಹಾರ್ದಿಕ ಸಹಕಾರವು ಅತ್ಯಂತ ಆವಶ್ಯಕವು. ಉಪಾಧ್ಯಾಯರ ಈಗಿನ ಸ್ಥಿತಿಗತಿಗಳ ಸುಧಾರಣೆಯಾಗಿ ಅವರಿಗೆ ಸಮಾಜದಲ್ಲಿ ಉಚ್ಚ ಸ್ಥಾನಮಾನಗಳು ಪ್ರಾಪ್ತವಾಗದಿದ್ದರೆ, ಅವರಿಂಥ ಸಹಕಾರವು ಪ್ರಾಪ್ತವಾಗುವದು ದುಸ್ತರವಾಗಿದೆ. ಆದ್ದರಿಂದ ಉಪಾಧ್ಯಾಯ ಸಂಘಗಳು ಬಲಗೊಂಡು ಅವುಗಳಿಗೂ ಸರಕಾರಕ್ಕೂ ಸ್ನೇಹ ಸಂಬಂಧವುಂಟಾಗಬೇಕು. ಅಂಥ ಸ್ನೇಹ ಸಂಬಂಧವು ಈಗ ಇಲ್ಲದೆ ಮಂತ್ರಿಗಳಿಂದಾರಂಭಿಸಿ ಕಲೆಕ್ಟರ ತಹಶೀಲ್ದಾರರ ತನಕ ಸರಕಾರದಧಿಕಾರಿಗಳು ಉಪಾಧ್ಯಾಯರನ್ನು ಕಡೆಗಣ್ಣಿನಿಂದ ನೋಡುತ್ತಿರುವದರಿಂದ, ಸರಕಾರದ ಆಂತರಿಕ ಉದ್ದೇಶಗಳಲ್ಲಿ ಉಪಾಧ್ಯಾಯ ವರ್ಗಕ್ಕೆ ಸಂದೇಹವುಂಟಾಗುವದು ಸಹಜ. ಇಂಥಾದ್ದು ಆಗಲಾರದು. ಉಪಾಧ್ಯಾಯರ ಸ್ಥಿತಿಗತಿಗಳು ಸುಧಾರಣೆಯಾಗಬೇಕಾದ್ದರೆ ಅವರ ಸ್ಥಾನಮಾನ, ಹಕ್ಕು, ಅಧಿಕಾರ ಕಲಬು ವೇತನ ಇತ್ಯಾದಿಗಳ ರಕ್ಷಣೆ ಬಗ್ಗೆ ಬರೇ ಬಾಯಮಾತಿನ ಮಾತುಗಳು ಅಥವಾ ಆಶ್ವಾಸನ ದೊರೆತರೆ ಸಾಲದು. ಅದಕ್ಕೆ ಉಪಾಧ್ಯಾಯರ ಹಿತವೃಷ್ಟಿಯಿಂದ ಶಾಸನವಾಗಬೇಕು. ಮದ್ರಾಸಿನಲ್ಲಿ ಮೊನ್ನೆ ಕೂಡಿದ ಪ್ರಾಂತಿಕ ವಿದ್ಯಾಸಮ್ಮೇಳನದಲ್ಲಿ ಅನುಭವಕ್ಕೆ ಬಂದ ಹಾಗೆ ಸರಕಾರವು ಉಪಾಧ್ಯಾಯರ ಕೆಲಸವನ್ನು ನಡೆಸುತ್ತಿರುವ ಕಾರ್ಯಕರ್ತರನ್ನು ಸಂದೇಹದಿಂದ ಕಂಡು, ಅವರನ್ನು ಹಕ್ಕು ಸ್ವಾತಂತ್ರ್ಯಗಳನ್ನು ಕಿತ್ತುಕೊಳ್ಳಲು ಸರಕಾರವು ಪ್ರಯತ್ನಿಸುವದರಿಂದ ಪ್ರಯೋಜನವಿಲ್ಲ. ಉಪಾಧ್ಯಾಯರಿಗೂ ಸಮಾಜದಲ್ಲಿ ಉಪಯುಕ್ತವಾದ ಒಂದು ಸ್ಥಾನವಿದೆ ಎಂಬುದನ್ನು ತಿಳಕೊಂಡು ಸರಕಾರವು ವರ್ತಿಸದೇನೇ ಪ್ರಯೋಜನವಿದೆ. ಅಧಿಕಾರದಲ್ಲಿರುವವರಂತೆ ಉಪಾಧ್ಯಾಯರೂ ಸಮಾಜದ ಸೇವಕರಾಗಿದ್ದಾರೆ ಎಂಬುದನ್ನು ಸರಕಾರವು ಒಪ್ಪಬೇಕು. ಸದ್ಯ ರಚನೆಯಾಗುವ ಮದ್ರಾಸಿನ ಶಿಕ್ಷಣ ಸುಧಾರಣಾ ಸಮಿತಿಯು ಈ ಎಲ್ಲಾ ಸಂಗತಿಗಳನ್ನು ಆಲೋಚಿಸಿ, ದೇಶ, ಕಾಲ, ಪರಿಸ್ಥಿತಿಗೆ ಅನುಕೂಲ ಮತ್ತು ಅಗತ್ಯವಾದ್ದನ್ನು ಅದು ಸರಕಾರಕ್ಕೆ ಶಿಫಾರಸು ಮಾಡುವದಾಗಿ ನಂಬಲಾಗುತ್ತದೆ.

ಬಿಹಾರದಲ್ಲಿ ಸಾಕ್ಷರತೆಯ ಪ್ರಚಾರದ ಪರಿಣಾಮ

ಮೈಸೂರಿನಲ್ಲಿ ಶಿಕ್ಷಣಕ್ಕೆ ಒಂದು ಲಕ್ಷ ಹೆಚ್ಚು

ಬೀಹಾರದಲ್ಲಿ ಸಾಕ್ಷರತೆಯ ಪ್ರಚಾರ

ಬಿಹಾರದಲ್ಲಿ ಸಾಕ್ಷರತೆಯ ಪ್ರಚಾರವು ಸ್ವಂತಶಕ್ತಿಯಿಂದ ನಡೆದಿರುವದು. ಕಳೆದ ವರ್ಷದ ಎಪ್ರಿಲ್ ತಿಂಗಳಲ್ಲಿ ಈ ಆಂದೋಲನವು ಆರಂಭವಾಯಿತು. ಮೊದಲಿನ ಕೆಲವು ತಿಂಗಳುಗಳಲ್ಲಿ ನಿರಕ್ಷರ ವ್ಯಕ್ತಿಗಳು ಅಕ್ಷರ ಜ್ಞಾನವನ್ನು ಪಡೆಯುತ್ತಿದ್ದರು. ಆಗ ಆಂದೋಲನವನ್ನು ಸರಕಾರದ ಮಾರ್ಗದರ್ಶನದಲ್ಲಿ ಸ್ವಯಂಸೇವಕರೇ ನಡೆಸಿದ್ದರಿಂದ ಸರಕಾರಕ್ಕೆ ಯಾವ ಒಂದು ಚಿಕ್ಕಾಸು ಖರ್ಚಾಗಿರಲಿಲ್ಲ. ಮುಂದಿನ ೬ ತಿಂಗಳಲ್ಲಿ ಸರಕಾರವು ಅಲ್ಪಸ್ವಲ್ಪ ದ್ರವ್ಯ ಸಹಾಯವನ್ನಿತ್ತಿತು. ಆದರೂ ಕೆಲಸಗಾರರಿಗೆ ದೊರೆಯುವ ಸಂಭಾವನೆಯು ಅತ್ಯಲ್ಪವಾಗಿತ್ತು. ಬಹಳ ಮಂದಿ ಕೆಲಸಗಾರರು ಗೌರವಾರ್ಥವಾಗಿಯೇ ಕೆಲಸ ಮಾಡಿದ್ದರು. ಬೀಹಾರದ ಗಿರಣಿ ಕಾರ್ಖಾನೆಗಳು ಸಾಕ್ಷರತೆಯ ಕೇಂದ್ರಗಳನ್ನು ತೆರೆದು ಸರಕಾರದೊಡನೆ ಸಹಕರಿಸಿವೆ. ಇದರಿಂದ ಸಾವಿರಾರು ನಿರಕ್ಷರ ಶ್ರಮಜೀವಿಗಳು ಸಾಕ್ಷರರಾಗಿರುವರು. ಬೀಹಾರದಲ್ಲಿ ಈ ನೆಲದಲ್ಲೇ ಸರಕಾರದಿಂದ ರಚಿತವಾದ ಶಿಕ್ಷಣ ಸುಧಾರಣಾ ಸಮಿತಿಯು ಇನ್ನು ಕೆಲವೇ ದಿನಗಳಲ್ಲಿ ತನ್ನ ವರದಿಯನ್ನು ಒಪ್ಪಿಸಲಿದೆ. ಬೀಹಾರದ ಈ ಆಂದೋಲನದ ಪರಿಣಾಮವಾಗಿ ಗ್ರಾಮಾಂತರಗಳ ಜನರೂ, ಶ್ರಮಜೀವಿಗಳೂ ಜೀವನದಲ್ಲಿ ಹೊಸ ಬೆಳಕನ್ನು ಕಂಡಿರುವರೆಂದೂ, ಅವರು ನವಸ್ಫೂರ್ತಿ ಉತ್ಸಾಹಗಳಿಂದ ತಮ್ಮ ಭಾವೀ ಜೀವನದ ಕುರಿತು ಆಶಾಪೂರ್ಣರಾಗಿರುವರೆಂದೂ ವಿದ್ಯಾಖಾತೆಯ ಮಂತ್ರಿ ಡಾಕ್ಟರ ಸಯ್ಯದ ಮಹ್ಮದರು ಹೇಳಿದ್ದಾರೆ. ನಿರಕ್ಷರ ವ್ಯಕ್ತಿಗಳು ಸಾಕ್ಷರರಾದದರಿಂದ ಈ ವರ್ಷ ಶಾಲೆಗಳಲ್ಲಿ ಓದುತ್ತಿರುವ ಬಾಲಕ ಬಾಲಿಕೆಯರ ಸಂಖ್ಯೆ ಹೆಚ್ಚಿದೆ. ಸಾಕ್ಷರರ ಕಲಿತುದನ್ನು ಮರೆಯದಂತೆ ಉಪಾಯಗಳೂ ಕೈಕೊಳ್ಳಲ್ಪಟ್ಟಿವೆ. ಈಗ ೫ ಲಕ್ಷ ಜನರು ಕ್ಲಾಸುಗಳಲ್ಲಿ ಓದುತ್ತಿರುವರು. ಪ್ರಾಂತದಲ್ಲಿ ಒಟ್ಟು ೧೦,೦೦೦ ಸಾಕ್ಷರತೆ ಪ್ರಚಾರದ ಕೇಂದ್ರಗಳಲ್ಲಿ ಕೆಲಸ ನಡೆಯುತ್ತಿದೆ.

ಸಿಂಧದಲ್ಲಿ ಸಾಕ್ಷರತೆಯ ಪ್ರಚಾರ

ಸಿಂಧ ಪ್ರಾಂತವು ಕೂಡ ಸಾಕ್ಷರತೆಯ ಪ್ರಚಾರ ಕಾರ್ಯದಲ್ಲಿ ಬಹಳ ಉತ್ಸಾಹ ಆಸಕ್ತಿಯನ್ನು ತೋರಿಸಿರುವದು. ಆಗ ಮೇ ೧೭ ಒಂದೇ ದಿನ ಇಡೀ ಪ್ರಾಂತದ ಪೇಟೆಪೇಟೆಗಳಲ್ಲಿ ೧೫೦೦ ಶಾಲೆಗಳು ನಿರಕ್ಷರ ವ್ಯಕ್ತಿಗಳಿಗೆ ಅಕ್ಷರ ಜ್ಞಾನವನ್ನು ಕಲಿಸಲಿಕ್ಕೆ ತೆರೆಯಲ್ಪಟ್ಟಿವೆ. ಇವುಗಳಲ್ಲಿ ಒಂದು ಸಾವಿರ ಗೌರವಾರ್ಥ ಕೆಲಸಗಾರರು, ಉಪಾಧ್ಯಾಯರಾಗಿರುವರು. ೫೦,೦೦೦ ವಿದ್ಯಾರ್ಥಿಗಳ ಓದುತ್ತಿರುವರು. ೬ ತಿಂಗಳ ಅವಧಿಯಲ್ಲಿ ಇಷ್ಟು ಜನರು ಸಾಕ್ಷರರಾಗಲು ನಿರಕ್ಷರ ವ್ಯಕ್ತಿಗಳಿಗಾಗಿಯೇ ಬರೆದ ೨೦ ಸಾವಿರ ಪುಸ್ತಕಗಳು, ೧೦,೦೦೦ ಸ್ಲೇಟುಗಳು ಸರಕಾರದಿಂದ ಈ ವಿದ್ಯಾರ್ಥಿಗಳಿಗೆ ಹಂಚಲ್ಪಟ್ಟಿವೆ. ರಾತ್ರಿ ಶಾಲೆಗಳ ಉಪಯೋಗಕ್ಕಾಗಿ ೩,೦೦೦ ಲಾಟೀನುಗಳು ಕೊಂಡು ಕೊಳ್ಳಲ್ಪಟ್ಟಿವೆ. ಸರಕಾರದ ನಿರಕ್ಷರ ಕೆಲಸಗಾರರು ಕಾರ್ಖಾನೆ ಗಿರಣಿ ಈ ತರಗತಿಗಳಿಗೆ ಸೇರಿ ಸಾಕ್ಷರರಾಗುತ್ತಿರುವರು. ಸರಕಾರವು ಸೆರೆಮನೆ ಜೈಲುಗಳಲ್ಲಿಯೂ ಕ್ಲಾಸುಗಳು ತೆರೆಯಲ್ಪಟ್ಟಿವೆ.

ಮುಂಬಯಿಯಲ್ಲಿ ಪ್ರಚಾರ

ಮುಂಬಯಿಯಲ್ಲಿ ಈ ವರೆಗಿನ ಪ್ರಚಾರ ಕಾರ್ಯದಿಂದ ದೊರೆತ ಸಫಲತೆಯಿಂದ ಸರಕಾರದ ಉತ್ಸಾಹವು ದ್ವಿಗುಣಿತವಾಗಿರುವದು. ಆದ್ದರಿಂದ ಈ ಕಾರ್ಯವನ್ನು ಮುಂದರಿಸಲಿಕ್ಕೆ ಸರಕಾರವು ಗೃಹಸ್ಥರ ಒಂದು ಕಮಿಟಿಯನ್ನು ಮಾಡುವದು. ಮುಂಬಯಿ ನಗರಕ್ಕಾಗಿ ಸರಕಾರವು ಈಗಾಗಲೇ ಒಬ್ಬ ಪ್ರತ್ಯೇಕ ಸಾಕ್ಷರತೆಯ ಇನ್ಸಪೆಕ್ಟರರನ್ನು ನೇಮಿಸಿದೆ. ೧೬ ದಿನಗಳ ಪರಿಶ್ರಮದಿಂದ ೧೦,೦೦೦ ಮುಂಬಯಿ ನಿವಾಸಿಗಳು ಸಾಕ್ಷರರಾಗಿದ್ದಾರೆ. ೩ ತಿಂಗಳ ಅವಧಿಯಲ್ಲಿ ಇವರಿಗೆ ಪೂರ್ಣ ಓದು ಬರಹವು ಬರುವದು. ಕೆಲವರ ಹೆಚ್ಚಿನವರು ೧೫ರಿಂದ ೩೦ ವರ್ಷದೊಳಗಿನವರಾಗಿದ್ದಾರೆ. ಅವರೊಳು ಕೆಲವು ಮಂದಿ ವೃದ್ಧರೂ ಇದ್ದಾರೆ. ಒಂದು ಸ್ತ್ರೀ ಕ್ಲಾಸುಗಳು ಬಹಳ ಉತ್ಸಾಹದಿಂದ ನಡೆಯುತ್ತಿರುವವು. ಸದ್ಯದಲ್ಲಿ ಈ ಕ್ಲಾಸಿನವರು ತಮ್ಮ ರಾಮಾಯಣವನ್ನು ಓದಲು ಸಮರ್ಥರಾಗುವರು.

ಮದ್ರಾಸಿನಲ್ಲಿ ಪ್ರಚಾರ

ಸಾಕ್ಷರತೆಯ ಪ್ರಚಾರದಲ್ಲಿ ಮದ್ರಾಸು ಇತರ ಪ್ರಾಂತಗಳಷ್ಟು ಮುಂದಾಗಿಲ್ಲ. ಆದರೆ ಇತರ ಚಟುವಟಿಕೆಗಳಲ್ಲಿ ಅದು ಸಾಕಷ್ಟು ಆಸಕ್ತಿಯನ್ನು ತೋರಿಸಿದೆ. ವಾರ್ಧಾ ಶಿಕ್ಷಣ ಕ್ರಮದ ಬೇಸಿಕ್ ಟ್ರೇನಿಂಗ ಕ್ಲಾಸ ಕೋಯಮುತ್ತೂರಿನ ಶ್ರೀ ರಾಮಕೃಷ್ಣ ವಿದ್ಯಾಲಯದಲ್ಲಿ ತೆರೆಯಲ್ಪಟ್ಟಿತು. ನಮ್ಮ ಪ್ರಾಂತದಲ್ಲಿ ಸುಮಾರು ೬,೬೦೦ ಶಾಲೆಗೆ ಹೋಗುವ ಪ್ರಾಯದ ಮಕ್ಕಳಿದ್ದಾರೆ. ಅವರಲ್ಲಿ ಎರಡು ಲಕ್ಷ ಮಕ್ಕಳು ಮಾತ್ರ ಶಾಲೆಗೆ ಹೋಗುತ್ತಾರೆ. ಶಾಲೆಗೆ ಹೋಗುವವರಲ್ಲಿಯೂ ೪ನೆಯ ತರಗತಿಗಳ ತನಕ ಓದುವವರು ಬಹಳ ಕಡಿಮೆ ಇರುವರು. ಅದ್ದರಿಂದ ಈ ಮಕ್ಕಳಿಗೆ ಓದು ಬರಹ ಜ್ಞಾನವನ್ನು ಕೊಡುವ ಕಡೆಗೆ ಸರಕಾರದ ಅಧಿಕ ಧ್ಯಾನವಿದೆ. ಮಕ್ಕಳನ್ನು ಶಾಲೆಗೆ ಕಳುಹಿಸುವ ಬಗ್ಗೆ ಹೆತ್ತವರೊಳಗೆ ಪ್ರಚಾರ ಕಾರ್ಯ ನಡೆಯುತ್ತದೆ. ವಾರ್ಧಾ ಶಿಕ್ಷಣ ಕ್ರಮವು ಸದ್ಯಕ್ಕೆ ಆರಿಗೆ ಬರವಣೆ ಮಾಡಲಾಗುತ್ತದೆ. ಅದಕ್ಕೋಸ್ಕರ ನೂರು ಮಂದಿ ವಿದೇಶದ ಉಪಾಧ್ಯಾಯರು, ವಾರ್ಧಾಕ್ಕೆ ಹೋಗಿ ತರಬೇತಿಯನ್ನು ಪಡೆದು ಬಂದಿದ್ದಾರೆ. ಅವರಿಂದ ಕೋಯಮುತ್ತೂರಿನಲ್ಲಿ ೯ ತಿಂಗಳ ತನಕ ೩೦ ಮಂದಿ ಸೆಕೆಂಡರಿ ಗ್ರೇಡ ಉಪಾಧ್ಯಾಯರಿಗೆ ವಾರ್ಧಾ ಶಿಕ್ಷಣ ಕ್ರಮದಲ್ಲಿ ತರಬೇತಿಯನ್ನು ಕೊಡಲಾಗುತ್ತದೆ. ಈ ಕ್ರಮದಲ್ಲಿ ತರಬೇತಿ ಹೊಂದಿದ ಉಪಾಧ್ಯಾಯರ ಸಂಖ್ಯೆಯು ಹೆಚ್ಚಿದ ಹಾಗೆ ಪ್ರಾಂತದಲ್ಲಿ ವಾರ್ಧಾ ಶಿಕ್ಷಣ ಕ್ರಮದ ಶಾಲೆಗಳು ಸ್ಥಾಪಿತವಾಗುವವು. ಅಷ್ಟರ ತನಕ ಈಗಿನ ಪ್ರಾಥಮಿಕ ಶಾಲೆಗಳಲ್ಲಿ ವಾರ್ಧಾ ಶಿಕ್ಷಣ ಕ್ರಮದ ಕೆಲವು ವೈಶಿಷ್ಟ್ಯಗಳನ್ನು ಸರಿದ ಪಂಚವಾರ್ಷಿಕ ಪಟ್ಟಿಯಂತೆ ಪಾಠಗಳು ನಡೆಯುವವು. ಮತ್ತು ಸರಕಾರವು ಇದ್ದ ಶಾಲೆಗಳಲ್ಲಿಯೇ ಹೆಚ್ಚು ಮಕ್ಕಳು ಬಂದು ಸೇರಿ ಶಿಕ್ಷಣ ಪಡೆಯುವದರ ಕಡೆಗೆ ಹೆಚ್ಚು ಪ್ರಯತ್ನ ಮಾಡುವದು.

ಮೈಸೂರಿನಲ್ಲಿ

ಮೈಸೂರಿನಲ್ಲಿ ಸರಕಾರವು ಕಳೆದ ವರ್ಷಕ್ಕಿಂತಲೂ ಈ ವರ್ಷ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಬಗ್ಗೆ ಹೆಚ್ಚಿಗೆ ಖರ್ಚು ಮಾಡುವದು.

S. U. N. & Co.,

Silk Merchants,

Chaukhamba, BENARES CITY

ಈಗಿನ ತರಹ(ಆರ್ಟ) ಬನಾರಸ್ ಶೀರೆ ಶಲ್ಲೆಗೆ ಬೇಕಾದರೆ ನಮ್ಮಲ್ಲಿ ಮಾರಿಯು ಬಂದಿ ಈಗ ಕೈಯು ಕಂಟಾ ಸುಲಭ ಬೆಲೆಗೆ ಮಾರುವ. 18 ಮೊಳದ 2¼ ಅಗಲದ ಸಣ್ಣ ಬುಟ್ಟಿ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 16 ಮೊಳ ಸಣ್ಣ ಬುಟ್ಟಿ ಶೀರೆಗಳು ರೂ 35ರಿಂದ ರೂ 55 ವರೆಗೂ ಸಾದಾ ಶೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2¼ ರೂ 20 ರಿಂದ 75ರ ವರೆಗೆ. ಬೇರೆ ಮಾಲುಗಳ ಪಟ್ಟಿ ಬೇಗನೆ ಉಚಿತವಾಗಿ ಕಳುಹಿಸಲಾಗುವದು.

ವಿಳಾಸ –

ತಿರೋಮಣಿ ನಾರಾಯಣಾಚಾರ್ಯರು,
ಚೌಕಂಬಾ, ಬನಾರಸ್ ಸಿಟಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ

ಆಶ್ಚರ್ಯಕರವಾದ ಔಷಧಿ.

ಡಾ॥ ಜಸಾನಿಯವರ
ಜಗತ್ಪ್ರಸಿದ್ಧ

ಗೊನೋಕಿಲರ್ (ರಜಿಸ್ಟರ್ಡ್).

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧಿ

ನಕಲಿ ಮದ್ದುಗಳ ಮೋಸಕ್ಕೆ ತುತ್ತಾಗಬೇಡಿರಿ. ಕೊಂಡುಕೊಳ್ಳುವದಕ್ಕೆ ಮೊದಲು ಕೋಳಿ ಗುರುತಿನ ಲೇಬಲು ಮತ್ತು ಗೊನೋಕಿಲರ್ ಎಂಬ ಹೆಸರು ಇರುವುದನ್ನು ನೋಡಿರಿ

ಇಂದಿನ ಅಪ್ರತಿಮ ಔಷಧ ... ಗೊನೋಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ ... ಮೂತ್ರವ್ಯಾಧಿಗಳಿಗೆ ... ವ್ಯಾಧಿಗಳಿಗೆ ಮಾತ್ರ ಗುಣಕಾರಿ.

50 ಮಾತ್ರೆಗಳ ಬುದ್ದಿಯೊಂದಕ್ಕೆ ರೂ 1-0-0 (ಪ ಶಿ) ... ಬೇರೆ

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾ ಪಟೇಲ್ ರೋಡ್, ಮುಂಬಯಿ 4.

Sole Manufacturer: Dr D N JASANI, Vithalbhai Patel Road, BOMBAY

ಎಲ್ಲಾ ಪತ್ರವ್ಯವಹಾರಗಳು ಇಂಗ್ಲಿಷಿನಲ್ಲಿ

ಸ್ಟಾಕಿಸ್ಟ — ಮೆಸರ್ಸ ಎ. ಫೆರ್ನಾಂಡಿಸ್ ... ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ಮಂಗಳೂರು

ಪಾನ ನಿಷೇಧವು ಮೈಸೂರಿನಲ್ಲೂ ಆಗುವುದು

೧೩೨ ಗ್ರಾಮಗಳಲ್ಲಿ ಮದ್ಯ ವ್ಯಾಪಾರಕ್ಕೆ ನಿರ್ಬಂಧ

ನೂರ ಹದಿಮೂರು ಚೌರಸ ಮೈಲುಗಳಷ್ಟು ವಿಸ್ತಾರವಾದ ಮೈಸೂರಿನ ೧೩೨ ಗ್ರಾಮಗಳಲ್ಲಿ ಈ ವರ್ಷದಿಂದ ಮದ್ಯನಿಷೇಧ ಮಾಡಬೇಕೆಂದು ಮೈಸೂರು ಸರಕಾರವು ನಿರ್ಧರಿಸಿದೆ. ಕ್ಲೋಸಪೇಟೆಯ, ಗ್ರಾಮೋದ್ಧಾರ ಕೇಂದ್ರಕ್ಕೆ ಸಂಬಂಧಿಸಿದ ಚೆನ್ನಪಟ್ಟಣ ಮತ್ತು ಕ್ಲೋಸಪೇಟೆ ತಾಲೂಕುಗಳ ಕೆಲವು ಗ್ರಾಮಗಳಲ್ಲಿ ಇದೇ ಜುಲೈ ತಿಂಗಳಿಂದ ಆರಂಭಿಸಿ ಮದ್ಯ ವ್ಯಾಪಾರವು ಪೂರ್ಣ ನಿಲ್ಲುವುದು. ಕಳೆದ ವರ್ಷ ಇದೇ ಕ್ಷೇತ್ರದ ಸಣ್ಣ ಪ್ರದೇಶದಲ್ಲಿ ಮದ್ಯನಿಷೇಧವಾಗಿತ್ತು. ಸರಕಾರದ ಆ ಕಾರ್ಯದಿಂದ ಸರಕಾರಕ್ಕೆ ಈ ವರ್ಷ ೧೪,೦೦೦ ರೂಪಾಯಿಗಳ ಮದ್ಯ ಉತ್ಪತ್ತಿ ಕಡಿಮೆಯಾಗಿತ್ತು. ಈ ವರ್ಷ ಕ್ಷೇತ್ರವನ್ನು ವಿಸ್ತರಿಸಿರುವುದರಿಂದ ೫೪,೦೦೦ ರೂಪಾಯಿಗಳ ವಾರ್ಷಿಕ ಉತ್ಪತ್ತಿಯು ಕಡಿಮೆಯಾಗುವುದು.

ಈಗ್ಗೆ ಅನೇಕ ವರ್ಷಗಳಿಂದ ಮೈಸೂರು ಸಂಸ್ಥಾನದಲ್ಲಿ ಪೂರ್ಣ ಮದ್ಯನಿಷೇಧವಾಗಬೇಕೆಂದು ಪ್ರಜಾಪ್ರತಿನಿಧಿಗಳು ಸರಕಾರವನ್ನು ವಿನಂತಿಸುತ್ತ ಬಂದಿದ್ದರಾದರೂ ರಾಜ್ಯದ ಉತ್ಪತ್ತಿಯು ತಗ್ಗುವದೆಂಬ ಕಾರಣದಿಂದ ಸರಕಾರವು ಆ ವಿನಂತಿಯನ್ನು ಸ್ವೀಕರಿಸದೆ ಇತ್ತು. ಆದರೂ ಕೆಲ ಚಿಕ್ಕ ಚಿಕ್ಕ ಪ್ರದೇಶಗಳಲ್ಲಿ ಮದ್ಯನಿಷೇಧದ ಪರೀಕ್ಷೆಗಳನ್ನು ಮಾಡಿ ಅದರ ಸಫಲತೆಯನ್ನು ನಿರೀಕ್ಷಿಸುವುದೆಂದು ಸರಕಾರವು ಆಶ್ವಾಸನ ಕೊಟ್ಟಂತೆ ಕಳೆದ ವರ್ಷ ಈ ಪರೀಕ್ಷೆಯು ಚೆನ್ನಪಟ್ಟಣ ಮತ್ತು ಕ್ಲೋಸಪೇಟೆ ತಾಲೂಕುಗಳ ಕೆಲವು ಗ್ರಾಮಗಳಲ್ಲಿ ನಡೆಯಿತು. ಅದರಲ್ಲಿ ಸಾಕಷ್ಟು ಸಫಲತೆಯು ದೊರಕಿದುದರಿಂದ ಈಗ ಮದ್ಯನಿಷೇಧದ ಕ್ಷೇತ್ರವನ್ನು ಮೊದಲಿಗಿಂತ ವಿಸ್ತರಿಸುವ ನಿರ್ಧಾರವನ್ನು ಮೈಸೂರು ಸರಕಾರವು ಮಾಡಿದೆ. ಅಲ್ಲದೆ ಮೈಸೂರು ಕೋಲಾರ ದಾವಣಗೆರೆ ಮತ್ತು ಭದ್ರಾವತಿಗಳಲ್ಲಿ ಕೆಲಸಗಾರರಿಗೆ ವೇತನ ಸಿಕ್ಕುವಂದು ಗುತ್ತಿಗೆಗಳನ್ನು ಮುಚ್ಚಬೇಕಾಗಿಯೂ ಅಪ್ಪಣೆ ಕೊಟ್ಟಿದೆ.

ಮದ್ರಾಸ ಸರಕಾರದ ಮದ್ಯನಿಷೇಧ ಕಾರ್ಯಕ್ರಮವು ಸಫಲವಾಗುವಂತೆಯೂ ಮೈಸೂರು ಸರಕಾರವು ಮದ್ರಾಸ ಸರಕಾರದೊಂದಿಗೆ ಸಹಕರಿಸಿದೆ. ಸೇಲಂ ಮತ್ತು ಚಿತ್ತೂರು ಜಿಲ್ಲೆಗಳಿಗೆ ಹತ್ತಿರುವ ಮೈಸೂರು ಗಡಿಯ ಪ್ರದೇಶದಲ್ಲಿ ಅಕ್ರಮ ಗಾಂಜಾ ವ್ಯಾಪಾರವಾಗುತ್ತದೆಂದೂ ಅದರಿಂದ ಮದ್ರಾಸ ಸರಕಾರವು ಆ ಜಿಲ್ಲೆಗಳಲ್ಲಿ ಆರಂಭಿಸಿದ ಮದ್ಯನಿಷೇಧ ಕಾರ್ಯಕ್ಕೆ ಭಂಗ ಬರುತ್ತದೆಂದೂ ಮೈಸೂರು ಸರಕಾರಕ್ಕೆ ತಿಳಿದುಬಂದುದರಿಂದ ಅದು ಆನೆಕಲ್ಲು ತಾಲೂಕು ಮತ್ತು ಬೆಂಗಳೂರು ಜಿಲ್ಲೆಯ ಗಾಂಜಾ ಅಂಗಡಿಗಳಿಗೆ ಗಾಂಜಾ ಒದಗಿಸುವದನ್ನು ಸೇಕಡಾ ೪೦ರಷ್ಟು ಕಡಿಮೆ ಮಾಡಿದೆ.

ಮದ್ಯನಿಷೇಧದ ಪ್ರಧಾನ ಪುರುಷ

ಸಮಗ್ರ ಭಾರತದ ಮದ್ಯನಿಷೇಧ ಕಾರ್ಯಕ್ರಮದ ಸಫಲತೆಗೆ ಮದ್ರಾಸ ಸರಕಾರವು ಮಾಡಿದ ಪ್ರಯತ್ನಗಳೆಷ್ಟು ಎಂದು ಬರೆಯುತ್ತಾ ಡಾಕ್ಟರ ಯಚ್. ಸಿ. ಮುಖರ್ಜಿ ಎಂಬ ಪ್ರಸಿದ್ಧ ಕ್ರೈಸ್ತ ಮುಖಂಡರು ನಮ್ಮ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರನ್ನು ಮದ್ಯನಿಷೇಧದ ಪ್ರಧಾನ ಪುರುಷರೆಂದು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಶ್ರೀಮಾನ ರಾಜಗೋಪಾಲಾಚಾರಿಯವರ ಮಂತ್ರಿ ಮಂಡಲವು ಈ ಕಾರ್ಯಕ್ಕೆ ಉಪಯುಕ್ತರಾದ ಯೋಗ್ಯ ಕೆಲಸಗಾರರನ್ನು ಆರಿಸಿ, ಅವರ ಮೂಲಕ ಈ ಕಾರ್ಯವನ್ನು ಸಾಧ್ಯಮಾಡುತಿದ್ದಾರೆ. ಸರಕಾರದ ಬೊಕ್ಕಸವನ್ನು ಮದ್ಯ ಉತ್ಪತ್ತಿಯಿಂದ ತುಂಬುವದಕ್ಕಿಂತ ಬಡ ಮದ್ಯಪಾಯಿಗಳ ಉದ್ಧಾರವು ಈ ಮಂತ್ರಿಮಂಡಲಕ್ಕೆ ಹೆಚ್ಚು ಮಹತ್ವದ್ದಾಗಿರುವುದು. ಅದ್ದರಿಂದ ಅದು ಈ ಕಾರ್ಯಕ್ರಮವನ್ನು ಸಫಲಮಾಡಲು ಸಮರ್ಥವಾಗಿದೆ. ಆದಕಾರಣ ಮದ್ಯನಿಷೇಧವೆಂದೊಡನೆ ರಾಜಾಯವು ಕಡಿಮೆಯಾಗುವುದೆಂದು ಮೈತೆಗೆಯುವ ನಮ್ಮ ದೇಶದ ಇತರ ಪ್ರಾಂತೀಯ ಮತ್ತು ಸಾಂಸ್ಥಾನಿಕ ಸರಕಾರಗಳು ಮದ್ರಾಸ ಮಂತ್ರಿಮಂಡಲದ ಅನುಕರಣ ಮಾಡಿ ದೇಶಕ್ಕೆ ಉಪಕಾರ ಮಾಡುವವರೊಂದಿಗೆ ತಮ್ಮ ಘನತೆಯನ್ನು ಬೆಳೆಸಿಕೊಳ್ಳಬಹುದೆಂಬುದು ಶ್ರೀ ಮುಖರ್ಜಿಯವರ ಅಭಿಪ್ರಾಯವಾಗಿದೆ.

ಪಾರಸಿಗಳ ಶಿಷ್ಟಮಂಡಲಿ

ಸರ್ ಕವಾಸಜೀ ಜಹಾಂಗೀರ, ಸರದಾರ ದಸಪ್ಪರ ಸೋಹರಾಬು ಕೈಕೊಬಾದ, ಸರ್ ಯಚ್ ಪಿ ಮೋದಿ, ಸರ್ ಜೆ ಸಿ ಕೊಯಾಜೀ, ಮತ್ತು ಪ್ರೊಫೆಸರ ಯಸ್ ಆರ್ ದಾವಾರ ಇವರಿಂದ ಕೂಡಿದ ಒಂದು ಶಿಷ್ಟಮಂಡಲವು ಬೊಂಬಾಯಿ ಪ್ರಧಾನರಾದ ಶ್ರೀ ಬಿ ಜಿ ಖೇರರಲ್ಲಿಗೆ ಹೋಗಿ ಬೊಂಬಾಯಿ ನಗರದಲ್ಲಿ ಪಾನ ನಿಷೇಧವಾಗುವದರಿಂದ ಪಾರ್ಸಿಯರಿಗಾಗುವ ಕೆಲವು ಕಷ್ಟಗಳನ್ನು ಹೇಳಿಕೊಂಡಿತು. ಶಿಷ್ಟಮಂಡಲವು ಹೇಳಿದ ಸಂಗತಿಗಳನ್ನು ಸರಕಾರವು ಸಹಾನುಭೂತಿಯಿಂದ ಆಲೋಚಿಸುವುದಾಗಿ ಪ್ರಧಾನರು ಆಶ್ವಾಸನ ಕೊಟ್ಟು ಶಿಷ್ಟಮಂಡಲವನ್ನು ಬೀಳ್ಕೊಟ್ಟರು.

ಬೊಂಬಾಯಿಯಲ್ಲಿ ಮದ್ಯನಿಷೇಧ ಪ್ರಚಾರ ಕಾರ್ಯವು ಭರದಿಂದ ಸಾಗುತ್ತಿದೆ. ಎಲ್ಲಿ ನೋಡಿದ್ದರಲ್ಲಿ ಮದ್ಯಪಾನ ಮತ್ತು ಅಮಲು ಸೇವನೆಯಿಂದಾಗುವ ಹಾನಿ ಅನರ್ಥಗಳನ್ನು ಸೂಚಿಸುವ ದೊಡ್ಡ ದೊಡ್ಡ ಬಣ್ಣದ ಚಿತ್ರಪಟಗಳು ಗೋಡೆಗಳನ್ನು ಶೋಭಿಸಿರುವದನ್ನು ಕಾಣಬಹುದು. ಏನೂ ತಿಳಿಯದ ನಿರಕ್ಷರ ಬಡಪಾಯಿ ಕೂಡ ಈ ಚಿತ್ರಗಳನ್ನು ಕಂಡೊಡನೆ ಮದ್ಯಪಾನದ ಹಾನಿಗಳನ್ನು ತಿಳಿದು ಅದನ್ನು ಬಿಡುವ ಪ್ರತಿಜ್ಞೆ ತೆಗೆದುಕೊಳ್ಳುವಷ್ಟು ಅವು ಪರಿಣಾಮಕಾರಿಯಾಗಿ ಚಿತ್ರಿಸಲ್ಪಟ್ಟಿರುವವು.

ಪಾನನಿಷೇಧವು ಯಾಕಾಗಬೇಕು?

ಇದೀ ಜಗತ್ತಿನಲ್ಲಿ ಆದ ಸುಧಾರಣೆಗಳಲ್ಲಿ ಜರ್ಮನಿಯ ಪಾನ ನಿಷೇಧವು ಅತ್ಯಂತ ಮಹತ್ವದ್ದಾಗಿರುವುದೆಂದು ಹೇಳುತ್ತಾ ಆರ್ಥರ ಮೀಯವರು ತಮ್ಮ ಮಕ್ಕಳ ಪತ್ರಿಕೆ (ಚಿಲ್ಡ್ರನ್ ನ್ಯೂಸ್ ಪೇಪರ್) ಯಲ್ಲಿ ಬರೆದ ಈ ಅಂಶವು ಎಲ್ಲರ ಗಮನಕ್ಕೆ ಬರುವಂಥಾದ್ದಾಗಿದೆ. ಹಿಟ್ಲರನ ನೇತೃತ್ವದಲ್ಲಿ ಸ್ಥಾಪಿತವಾದ ಮಕ್ಕಳ ಕೂಟದಲ್ಲಿ ೧೪ರಿಂದ ೨೧ ವರ್ಷ ಪ್ರಾಯದ ಎಂಟು ಮಿಲಿಯ ಮಕ್ಕಳು ಸದಸ್ಯರಾಗಿದ್ದಾರೆ. ಈ ಮಕ್ಕಳ ಕೂಟದ ಸದಸ್ಯರು ಯಾರೂ ಮದ್ಯಪಾನ ಮಾಡಕೂಡದು. ಅದ್ದರಿಂದ ಈ ಮಕ್ಕಳು ಆರೋಗ್ಯಸಂಪನ್ನರೂ ದೃಢಕಾಯರೂ ತೇಜೋವಂತರೂ ಆಗಿ ಬೆಳೆಯುತ್ತಿದ್ದಾರೆ. ಮದ್ಯಪಾನ ಮತ್ತು ಅಮಲು ಸೇವನೆಯು ಮನಸ್ಸಿನ ಶರೀರದ ಶಕ್ತಿಗಳನ್ನು ಗೆದ್ದಳಿಯುತ್ತಿರುವ [illegible] ಮನುಷ್ಯ ಸಮಾಜವನ್ನು ನಾಶಮಾಡುವ ಭಯಂಕರ ವಿಷಪದಾರ್ಥ. ಅದ್ದರಿಂದ ಮದ್ಯಪಾನದ ಭವಿಷ್ಯ ಜನಾಂಗವನ್ನು ಜರ್ಮನಿಯು ಕಟ್ಟಿ ಬೆಳೆಸುವದಾದರೆ, ಮದ್ಯಪಾಯಿಗಳಾದ ಎಲ್ಲಾ ಜನಾಂಗಗಳಿಗಿಂತ ಅದು ಹೆಚ್ಚು ಬಲಿಷ್ಠವಾಗುವುದು. ಅದನ್ನು ಸೋಲಿಸುವ ಸಾಮರ್ಥ್ಯವು ಮದ್ಯಪಾಯಿ ಯಾವ ಜನಾಂಗಕ್ಕೂ ಬರಲಾರದು. ಅದ್ದರಿಂದ ಜರ್ಮನ ಮಕ್ಕಳು ಮದ್ಯಪಾನ ಮಾಡಲೇಬಾರದೆಂದು ಹಿಟ್ಲರ ಕಟ್ಟಪ್ಪಣೆ ಕೊಟ್ಟಿದ್ದಾನೆ. ಬಾಲ್ಯದಲ್ಲಿ ಮಕ್ಕಳಿಗೆ ಮದ್ಯಪಾನದ ದುರ್ವ್ಯಸನವು ಹತ್ತದಿರುವುದಾದರೆ, ಅವರು ದೊಡ್ಡವರಾಗಿ ಬೆಳೆದಾಗ ಈ ದುರ್ವ್ಯಸನದಿಂದ ತಾವಾಗಿ ದೂರ ಸರಿದು ನಿಲ್ಲುವರೆಂಬುದು ಹಿಟ್ಲರನ ವಿಶ್ವಾಸವಾಗಿದೆ. ಯಾವ ಸಮಾಜದಲ್ಲಿ ಮದ್ಯಪಾನವು ಸಭ್ಯತನದ ಲಕ್ಷಣವೆಂದು ತಿಳಿಯಲ್ಪಡುತ್ತದೋ ಅಂಥ ಜರ್ಮನ ಮೊದಲಾದ ಪಾಶ್ಚಾತ್ಯ ರಾಷ್ಟ್ರಗಳಿಗೆ ಪಾನನಿಷೇಧವು ಅಗತ್ಯವೆಂದು ಕಂಡು ಬಂದಿರುವಾಗ ಮದ್ಯಪಾನವನ್ನು ಅಧರ್ಮ ಪಾಪಕರ ಮತ್ತು ವರ್ಜ್ಯವೆಂದು ತಿಳಿಯುವ ಭಾರತಕ್ಕೆ ಅದು ಎಷ್ಟು ಅಗತ್ಯವಾಗಬೇಡ?

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (ರಿಜಿ)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.



ಜಯಪುರದಲ್ಲಿ ಹರಿಜನರ ಮೇಲೆ ಅತ್ಯಾಚಾರ

ಈ ಸಂಸ್ಥಾನಕ್ಕೆ ಸಂಬಂಧಪಟ್ಟ ವನಕುಂಡ ಜಮೀನ್ದಾರಿಯ ಠಾಕೋರರು ತಮ್ಮ ಜಮೀನಿಯಲ್ಲಿದ್ದ ಎಲ್ಲಾ ಹರಿಜನರನ್ನು ಹೊರದೊಬ್ಬಿರುವರು. ಹರಿಜನರ ಮುಖಂಡ ಶಂಕರಲಾಲನ ಗುಡಿಸಲನ್ನು ಸುಟ್ಟುಹಾಕಿದ್ದಾರೆ. ಪಾಪದ ನಿರಾಶ್ರಿತರು ಜಮೀನದಾರಿಯ ಹೊರಗೆ ಮೈದಾನಿನಲ್ಲಿ ಅನ್ನ ಮನೆಗಳಿಲ್ಲದೆ ದಿನಕಳೆಯುತ್ತಿದ್ದಾರೆ. ಪೋಲೀಸರಿಗೆ ಈ ಸಂಗತಿಯನ್ನು ತಿಳಿಸಿದ್ದಾದರೂ ಅವರು ಇದವರೆಗೆ ಏನೂ ಮಾಡಿಲ್ಲ.

ಲಾಹೋರು ಕಿಸಾನ ಸತ್ಯಾಗ್ರಹ

ಮೇ ೧೬ರ ದಿನ ಆರಂಭವಾಗಿದ್ದ ೧೪೪ನೆ ಸೆಕ್ಷನಿನ ವಿರೋಧದ ಸತ್ಯಾಗ್ರಹದಲ್ಲಿ ಲಾಹೋರು ಜಿಲ್ಲೆ ಮೆಜಿಸ್ಟ್ರೇಟರು ಇನ್ನೂ ನಿಷೇಧಿಸಿದ್ದಾರೆ. ಸತ್ಯಾಗ್ರಹವು ನಡೆಯುತ್ತಾ ಇದೆ.

ಕಲ್ಲಿದ್ದಲು ಗನಿಯ ಅಪಘಾತ

ಅಸನ್ಸೋಲದ ಸಮೀಪ ಕಲಿದ್ದಲ ಉಗ್ರಾಣದ ಒಂದು ಭಾಗವು ಜರಿದ ವಿದ್ದು ಒಬ್ಬನು ಕೊಲ್ಲಲ್ಪಟ್ಟನು. ನಾಲ್ವರು ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟರು. ರಾಣಿಗಂಜದ ಸಮೀಪದ ಕಲ್ಲಿದ್ದಲ ಗನಿಯಲ್ಲಿಯೂ ಒಂದು ಅಪಘಾತವಾಗಿ ಮೂವರು ಕೊಲ್ಲಲ್ಪಟ್ಟರು.

ಲಾಹೋರಿನಲ್ಲಿ ಸಿಡಿತ

ಲಾಹೋರಿನ ಸೈನ್ಯ ಕಾರ್ಯಾಲಯದಲ್ಲಿ ಮೇ ೧೯ರ ದಿನ ಬಾಂಬ್ ಸಿಡಿತವಾಗಿ ಇಬ್ಬರು ಕೊಲ್ಲಲ್ಪಟ್ಟರು.

ಸಂಯುಕ್ತ ಪ್ರಾಂತ ಎಸೆಂಬ್ಲಿಯಲ್ಲಿ ಲೀಗ ಸದಸ್ಯರ ದೃಷ್ಟತನ

ಕಾನಪುರದಲ್ಲಿ ಒಬ್ಬ ಹಿಂದೂ ಹುಡುಗನು ಕಾಣೆಯಾದುದರಿಂದ ಪೋಲೀಸರು ಕಾನಪುರದ ಮುಸ್ಲಿಂ ಲೀಗ ಕಾರ್ಯಾಲಯವನ್ನು ಝಡತಿ ಮಾಡಿದ್ದರು. ಆ ವಿಚಾರ ಚರ್ಚೆಯಾಗಬೇಕೆಂದು, ಸಂಯುಕ್ತ ಪ್ರಾಂತ ಎಸೆಂಬ್ಲಿಯ ಲೀಗ ಸದಸ್ಯರು ಎಸೆಂಬ್ಲಿ ಸಭೆಯನ್ನು ಮುಂದರಿಸಿ ಹಾಕುವ ಸೂಚನೆಯನ್ನು ತರಲು, ಅಗ ಅಧ್ಯಕ್ಷರಾಗಿದ್ದ ಮಿ ಅಬ್ದುಲ್ ಹಕೀಮರು ಅದನ್ನು ಚರ್ಚಿಸಲಿಕ್ಕೆ ಬಿಡಲಿಲ್ಲ. ಪೋಲೀಸ ಝಡತಿಯ ಕುರಿತು ಚರ್ಚಿಸಬೇಕಾದ ಅಷ್ಟು ತುರಾತುರಿ ಇರುವದಿಲ್ಲವೆಂದು ಸೂಚನೆಯನ್ನು ತೆಗೆದುಹಾಕಿದರು. ಪೋಲೀಸ ಝಡತಿಯ ಕುರಿತು ಲೀಗ ಸದಸ್ಯರ ಕೇಳಿದ ಪ್ರಶ್ನೆಗಳಿಗೆ ಪ್ರಧಾನರು ತೃಪ್ತಿಕರ ಉತ್ತರಗಳನ್ನು ಕೊಡಲಿಲ್ಲವೆಂದು ಅದರ ನಿಷೇಧಾರ್ಥ ಸಭೆಯನ್ನು ಮುಂದರಿಸಬೇಕಾಗಿ ಲೀಗ ಸದಸ್ಯರು ತಂದ ಸೂಚನೆಯನ್ನು ಅಧ್ಯಕ್ಷರು ಚರ್ಚಿಸ ಬಿಡಲಿಲ್ಲ. ಅಧ್ಯಕ್ಷರ ವರ್ತನವು ನ್ಯಾಯಯುಕ್ತವಾಗಿದ್ದರೂ, ಲೀಗ ಸದಸ್ಯರು ತಮ್ಮ ಸ್ವಾರ್ಥಸಾಧನೆಯಾಗಲಿಲ್ಲವೆಂದು ಸಭೆಬಿಟ್ಟು ಹೋದರು.

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ಜ್ಯೇಷ್ಠ ಶು ೯ ಶನಿವಾರದಿಂದ ಜ್ಯೇಷ್ಠ ಶು ೧೫ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ವೃಷಭ ಬೇಶ)

27	ಶನಿ	೭	೨೬	ಪುಬ್ಬಾ	೧೦॥	೧೩	
28	ರವಿ	೮	೨೧	ಉತ್ತರಾ	೭	೧೪	
29	ಸೋಮ	೯	೧೬।	ಹಸ್ತ	೩।	೧೫	
30	ಮಂಗ	೧೦	೧೩	ಚಿತ್ರಾ	೨॥	೧೬	
31	ಬುಧ	೧೧	೧೦॥	ಸ್ವಾತಿ	೧॥	೧೭	
1	ಗುರು	೧೨	೯	ವಿಶಾಖಾ	೨	೧೮	
2	ಶುಕ್ರ	೧೩	೯	ಅನುರಾಧಾ	೩।	೧೯	

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 6% 1 Year 4½% For 6 months 4% 3 months 3½%

Auction [illegible] ranging from Rs 100/ to Rs 5000/ run regularly on systematic lines Unique Banking Facilities to Businessmen and interested Public

Apply for particulars -K R. GURU, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ . ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, (S M. C.)

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಫ್ರೀ ಬಹುಮಾನಗಳು

[illegible]

The American Commercial Store Post Box No 1221 Calcutta

THE Bank of Mangalore Ltd.,

MANGALORE

ESTD 19..

Branches

Panemangalore Mudabidri & Padubidri.

Fixed Deposits will be received at following rates of interest

For	3 months	3½%
„	6	4%
„	12	5%
	24 & upwards	5½%

Interest Payable Quarterly

Savings Bank deposit 3½% on daily balances.

All kinds of banking business transacted

THE Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4%p. a

in denominations of

RS. 50/-,100/-,500/-,1,000/-, & 5,000/

are now issued at all our Branches

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

[illegible]

ದಿ ಸಿ. ಎ. ಆರ್. ಕೊ.,

[illegible]

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಿಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

[illegible]

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

[illegible]

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕಳದ ಗುದ್ದು ಮುಡಿಗೆ	1—11—0	—
„ ದುಯ್ಯಂ „ „	1—10—0	1—10—0
„ ಅವ್ವಲ್ ಸುಗ್ಗಿ „	1—10—0	—
„ ದುಯ್ಯಂ „ „	1—0 0	—
ಅಕ್ಕಿ ಅವ್ವಲ್ ಗುದ್ದು „	4—2 0	4—2—0
„ ದುಯ್ಯಂ „ „	3—14—0	3—14—0
„ ಅವ್ವಲ್ ಸುಗ್ಗಿ „	4—4—0	—
„ ದುಯ್ಯಂ „ „	3—8—0	3—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದದು „	37—8—0	47—8—0
ಕೊಬ್ಬರಿ ಆಫೀಸು ಖಂಡಿಗೆ	45—0—0	—
„ ದಿಲ್‌ಪಸಂದ „	47—8—0	—
ತೆಂಗಿನ ಎಣ್ಣೆ ಮುಡಿಕೆ	3—5—0	3—5—0
ಸಿಪ್ಪೆ ಮಡ್ಲು ಅಡಿಕೆ 1000ಕ್ಕೆ	3—4—0	3—12—0
ಗೇರುಬೀಜ ಮುಡಿಗೆ	3—12—0	3—12—0
ಕಪ್ಪಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೇ ಮೆಣಸು ಹಂಡ್ರೆಡ್ವೆಟಿಗೆ	15—8—0	16—8—0

ಮುಸ್ಲಿಮ್ ಲೀಗಿಗೆ ಮುಸಲ್ಮಾನರ ನಮೋ ನಮಃ

ಪಂಜಾಬು, ಗಡಿನಾಡು ಮೊದಲಾದ ಕೆಲ ಕಡೆಗಳಲ್ಲಿ ಸಂಚಾರ ಮಾಡುತ್ತಿರುವ ಮುಸ್ಲಿಂ ಲೀಗ ಶಿಷ್ಟ ಮಂಡಳಿಕ್ಕೆ ಹೋದ ಹೋದಲ್ಲಿ ಜನರು ಸಂಗಳಾರತಿ ಮಾಡಿದ್ದಾರೆ. ಅಲ್ಲಿ ಮುಸ್ಲಿಂ ಜನತೆಯ ಸಹಾಯ ಪ್ರೋತ್ಸಾಹಗಳು ದೊರೆಯದಿರುವುದು ಮಾತ್ರವಲ್ಲ, ವಿರೋಧ ಪ್ರದರ್ಶನವೂ ಆಗಿದೆ. ಯಾಕೆಂದರೆ ಈ ಶಿಷ್ಟ ಮಂಡಳಿವು ಹೋದಹೋದಲ್ಲಿ ಜಾತಿಕಲಹದ ಕಿಚ್ಚನ್ನು ಪ್ರಜ್ವಲಿಸಿದೆ. ಪ್ರಾಂತದ ಶಾಂತಿ ಭಂಗವನ್ನು ಮಾಡಿದೆ. ಆದರೂ ಕೂಡ ಶಿಷ್ಟ ಮಂಡಲವು ಅಪಪ್ರಚಾರ ಮಾಡುವುದನ್ನು ಬಿಟ್ಟಿರುವುದಿಲ್ಲ. ಕಾಂಗ್ರೆಸಿನ ಮೇಲೆ ಅದು ವಿಷ ಕಾರುತ್ತಾ ಇದೆ. ಮುಸ್ಲಿಂ ಲೀಗಿಗೆ ಕಾಂಗ್ರೆಸಿನ ಮೇಲೆ ಇಷ್ಟು ಸಿಟ್ಟು ದ್ವೇಷವಾದರೆ ಯಾಕೆ? ಲೀಗಿನ ಹಾಗೆ ಕಾಂಗ್ರೆಸು ಜಾತೀಯ ಸ್ವಾರ್ಥದಿಂದ ಬಂಧನಾಗಿರುವುದಿಲ್ಲವೆಂದೆ?—ಲೀಗು ಕಾಂಗ್ರೆಸು ಅನೇಕ ಆರೋಪಣೆಗಳನ್ನು ಹೊರಿಸಿದೆ. ಕಾಂಗ್ರೆಸು ಮಂತ್ರಿ ಮಂಡಳಗಳಲ್ಲಿ ಮುಸಲ್ಮಾನರಿಗೆ ಪ್ರಾತಿನಿಧ್ಯವನ್ನು ಕೊಡಲಿಲ್ಲವೆಂದಾಗ್ಯೂ ಮುಸಲ್ಮಾನ ಮಂತ್ರಿಗಳೇ ಲೀಗಿನ ಬಾಯಿ ಮುಚ್ಚಿದರು. ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಮುಸಲ್ಮಾನರ ಮೇಲೆ ದಬ್ಬಾಳಿಕೆಯಾಗುತ್ತಿದೆಯೆಂದಾಗ, ಕಾಂಗ್ರೆಸ್ ಮಂತ್ರಿಗಳು ಅಂಕೆಸಂಖ್ಯೆಗಳ ಪ್ರಮಾಣ ಕೊಟ್ಟು ಅದನ್ನು ಸುಳ್ಳಾಗಿ ತೋರಿಸಿದರು. ಮುಸಲ್ಮಾನರಿಗೆ ಸರಕಾರದಲ್ಲಿ ನೌಕರಿ ಚಾಕರಿಗಳು ತಕ್ಕಷ್ಟು ದೊರೆಯುವುದಿಲ್ಲವೆಂದಾಗ ಕಾಂಗ್ರೆಸ್ ಸರಕಾರಗಳು ಮುಸಲ್ಮಾನರಿಗೆ ನ್ಯಾಯವಾಗಿ ದೊರೆಯಬೇಕಾಗಿರುವದಕ್ಕಿಂತಲೂ ಹೆಚ್ಚಿಗೆ ನೌಕರಿ ಚಾಕರಿಗಳನ್ನು ಕೊಟ್ಟಿರುವದನ್ನು ಸಿದ್ಧ ಮಾಡಿದರು.

ಆ ಮೇಲೆ ಮುಸ್ಲಿಂ ಲೀಗು ಸಂಸ್ಥಾನಗಳ ರಾಜಕಾರಣದಲ್ಲಿ ಅನಾವಶ್ಯಕ ಕೈ ಹಾಕಿತು. ಅಲ್ಲಿಯೂ ಕಾಂಗ್ರೆಸು ಜವಾಬುದಾರ ಸರಕಾರ ಸ್ಥಾಪನೆಗೆ ಮಾಡಿದ ಪ್ರಯತ್ನಗಳಿಗೆ ಅಡ್ಡಗಾಲು ಕೊಟ್ಟು ಲೀಗು ಪ್ರಜೆಗಳ ಸ್ವಾತಂತ್ರ್ಯ ಚಳವಳಿಯ ವಿರೋಧ ಮಾಡಿತು. ಜಯಪುರದಲ್ಲಿ ಹಿಂದೂ ಸರದಾರರ ಮುಸಲ್ಮಾನರ ಮೇಲೆ ದಬ್ಬಾಳಿಕೆ ನಡೆಸಿದಾಗ ಕಾಂಗ್ರೆಸು ಅದನ್ನು ವಿರೋಧಿಸಲಿಲ್ಲವೆಂದು ಸುಳ್ಳನ್ನು ಹೇಳಿ ಹುಯಿಲೆಬ್ಬಿಸಿತು. ಆದರೆ ಜಯಪುರದ ಮುಸಲ್ಮಾನರೇ ಹಿಂದುಗಳೊಂದಿಗೆ ಕೂಡಿ ಲೀಗಿನ ಈ ಅಪಪ್ರಚಾರವನ್ನು ಖಂಡಿಸಿ ನಿಷೇಧಿಸಿದಾಗ ಲೀಗು ತಲೆತಗ್ಗಿಸ ಬೇಕಾಯಿತು. ಆ ಮೇಲೆ ಕಾಂಗ್ರೆಸಿನ ಚಳವಳಿಗೆ ಕಪ್ಪುಕಲೆಯನ್ನು ಹಚ್ಚಲಿಕ್ಕೆ ಲೀಗಿಗೆ ಬೇರೆ ಯಾವ ಉಪಾಯವೂ ಕಾಣದಿದ್ದಾಗ, ಕಾಂಗ್ರೆಸು ಸರ್ವಸಾಧಾರಣ ಮುಸ್ಲಿಂ ಜನತೆಗಾಗಿ ಏನೂ ಮಾಡಲಿಲ್ಲವೆಂದು ಲೀಗು ಅನ್ನತೊಡಗಿತು. ಆದರೆ ಕಾಂಗ್ರೆಸ್ ಸರಕಾರಗಳ ಮದ್ಯನಿಷೇಧ ಸಾಕ್ಷರತೆಯ ಪ್ರಚಾರ, ರೈತಾಪಿಗಳ ಉನ್ನತಿ ಮೊದಲಾದ ಕಾರ್ಯಕ್ರಮಗಳಿಂದ ಯಾರಿಗೆ ಲಾಭ? ಎಂಬ ಪ್ರಶ್ನೆಯನ್ನು ಕೇಳಿದಾಗ ಲೀಗು ಉತ್ತರವನ್ನು ಕೊಡಲಿಲ್ಲ.

ಜಾತಿದಂಗೆಗಳ ಕಾರಣ

ಈಗೀಗ ಎಲ್ಲಾ ಕಾಂಗ್ರೆಸ ಪ್ರಾಂತ್ಯಗಳಲ್ಲಿ ಜಾತಿದಂಗೆಗಳಾಗುತ್ತಿವೆ. ಇದಕ್ಕೆ ಕಾಂಗ್ರೆಸ್ ಸರಕಾರಗಳ ಜಾತೀಯ ಸ್ವಾರ್ಥವೇ ಕಾರಣವೆಂದು ಲೀಗು ಹೇಳುತ್ತಿದೆ. ಪಂಜಾಬು, ಬಂಗಾಳಗಳಲ್ಲಿ ಜಾತಿದಂಗೆಗಳಾಗುವದಿಲ್ಲ. ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಮಾತ್ರ ಯಾಕಾಗಬೇಕು? ಆದರೆ ಏನಾದರೂ ಲೀಗಿನ ಅಪಪ್ರಚಾರವು ಪಂಜಾಬ ಬಂಗಾಳಗಳಲ್ಲಿ ನಡೆಯುವುದಿಲ್ಲ. ಆದರೆ ಉಳಿದ ಪ್ರಾಂತ್ಯಗಳಲ್ಲಿ ದ್ವೇಷ ಅಸೂಯೆಗಳ ಕಿಚ್ಚನ್ನು ಪ್ರಜ್ವಲಿಸಿದಾಗ ಜಾತಿದಂಗೆಗಳಾಗುತ್ತವೆ. ಹಿಂದುಗಳು ಇಂಥ ಅತ್ಯಕ್ಕೆ ಹೋಗುವುದಿಲ್ಲ. ಬಂಗಾಳ, ಪಂಜಾಬಗಳಲ್ಲಿ ಲೀಗ ಸರಕಾರಗಳೇ ಇರುವುದರಿಂದ ಅಲ್ಲಿ ಲೀಗ್ ದ್ವೇಷ ಅಸೂಯೆಗಳ ಕಿಚ್ಚನ್ನು ಪ್ರಜ್ವಲಿಸಿ ತಮ್ಮದೇ ಆದ ಸರಕಾರಕ್ಕೆ ವಿರೋಧ ಮಾಡುವುದಿಲ್ಲ. ಪರಂತು ಉಳಿದ ಪ್ರಾಂತ್ಯಗಳ ಮಾತು ಹಾಗಲ್ಲ. ಬಂಗಾಳ ಪಂಜಾಬುಗಳ ಹಿಂದುಗಳಂತೆ ಆ ಪ್ರಾಂತಗಳ ಹಿಂದುಗಳೂ ಶಾಂತರಾಗಿದ್ದಾರಾದರೂ, ಲೀಗಿನ ಕಲಹಪ್ರಿಯ ಕೆಲಸಗಾರರು ಸ್ವತಂತ್ರರಾಗಿ ಅಲೆದಾಡಿ ಜಾತೀಯ ದ್ವೇಷವನ್ನು ಕೆರಳಿಸುವ ಭಾಷಣಾದಿಗಳ ಮೂಲಕ ಹರಡಿಸುತ್ತಾರೆ. ಆದುದರಿಂದ ಉದ್ರೇಕಗೊಂಡ ಜನತೆಯಿಂದ ದಂಗೆಗಳಾಗುತ್ತವೆ. ವಾಸ್ತವವನ್ನು ತಿಳಿಯುವುದಾದರೆ, ಜಾತಿದಂಗೆಗಳ ಕಾರಣ ಪುರುಷರು ಲೀಗಿನ ಕೆಲಸಗಾರರಲ್ಲದೆ ಕಾಂಗ್ರೆಸು ಅಲ್ಲವೆಂಬುದು ಸ್ಪಷ್ಟವಾಗುತ್ತದೆ.

ಲೀಗು ಮುಸ್ಲಿಂ ಜನತೆಗಾಗಿ ಏನು ಮಾಡಿದೆ? ಕಾಂಗ್ರೆಸಿಗೆ ಜಾತಿಭೇದವಿಲ್ಲ. ಅದರ ಕಾರ್ಯಕ್ರಮಗಳು ಎಲ್ಲರ ಉಪಕಾರಕ್ಕಾಗಿವೆ. ಆದರೆ ಮುಸ್ಲಿಂ ಲೀಗು ಇರುವುದು ಕೇವಲ ಮುಸ್ಲಿಮರಿಗಾಗಿ. ಹಾಗಿದ್ದರೂ ಕೂಡ ಅದು ಮುಸಲ್ಮಾನರಿಗೆ ಏನು ಉಪಕಾರ ಮಾಡಿರುವುದಿಲ್ಲ. ಕಷ್ಟ ಸಂಕುಚಿತ ಹೃದಯ ಮನಸ್ಸು ಮತ್ತು ವಿನಾಶಾತ್ಮಕ ಕಾರ್ಯಕ್ರಮದಿಂದ ಲೀಗು ಮುಸ್ಲಿಂ ಜನತೆಗೆ ಅಪಕಾರವನ್ನೆ ಮಾಡಿದೆ. ಉದ್ಧಾಹರಣಾರ್ಥ—ಸಂಯುಕ್ತ ಪ್ರಾಂತದಲ್ಲಿ ಮುಸ್ಲಿಮ ನೇಕಾರರು ನೇದ ಬಟ್ಟೆಗಳನ್ನೇ ಮುಸ್ಲಿಮರು ಉಪಯೋಗಿಸಿರೆಂದು ಲೀಗ ಹೇಳಿದೆ. ... ಹಿಂದುಗಳು ಬಹಿಷ್ಕರಿಸಿದರೆ ಲೀಗಿನ ಈ ರೀತಿ ಯಿಂದ ನೇಕಾರರಿಗೆ ಏನಾಗುವದು? ಸಂಯುಕ್ತ ಪ್ರಾಂತದ ನೇಕಾರರಲ್ಲಿ ... ನಗರಗಳಲ್ಲಿ ಹಿಂದುಗಳು ... ಸಬ್ಬನರು ಇದ್ದಾರೆ. ಇವರು ... ಕೆಲಸವು ಹಿಂದುಗಳಿದ್ದುದರಿಂದ ಕಾರಣದಿಂದ ಲೀಗ್ ... ಕೆಲಸಕ್ಕೆ ಪ್ರೋತ್ಸಾಹ ಕೊಡದೆ, ... ನೇಕಾರರಿಗೆ ಬೇರೆ ... ಗಳನ್ನು ತಪ್ಪಿಸುವ ... ಕಾಗುವುದು. ಆಗ ನೇಕಾರರಿಗಿಂತ ಅಧಿಕರಾಗಿರುವ ಮುಸ್ಲಿಂ ನೂಲುವವರು ತಮ್ಮ ಉಪವೃತ್ತಿಯಿಂದ ಜೀವನವಾಗದೆ ಕಷ್ಟಪಡಬೇಕಾಗುವುದು. ಬಟ್ಟೆಯ ಸಹಾಯಕ್ಕೆ ಹೋಗಿ 50 ಮಂದಿಯ ಅನ್ನ ಕೆಡಿಸುವ ನೀತಿಯು ಲೀಗಿನದ್ದಾಗಿದೆ. ಇದನ್ನು ಜನಸೇವೆ ಎಂದು ಹೇಗೆ ಹೇಳಬಹುದು? ಆದುದರಿಂದಲೇ ಲೀಗಿನ ಪ್ರತಾಪವು ಬಹಳ ಕಾಣಿಸಿಕೊಳ್ಳುವ ಪ್ರಾಂತಗಳಲ್ಲಿ ಲೀಗು ಜಾತಿದಂಗೆಗಳನ್ನು ಎಬ್ಬಿಸಲಿಕ್ಕೆ ಸಮರ್ಥವಾಗಿದೆಯೇ ಹೊರತು ಮುಸ್ಲಿಂ ಜನತೆಗೆ ಏನಾದರೂ ಉಪಕಾರ ಮಾಡಲಿಕ್ಕೆ ಸಮರ್ಥವಾಗಿರುವುದಿಲ್ಲ.

ಲೀಗಿನಲ್ಲಿ ಮಿ| ಜಿನ್ನರ ಸ್ಥಾನ

ಬಂಗಾಳ ಪಂಜಾಬುಗಳಲ್ಲಿ ಲೀಗ ಸರಕಾರಗಳಿವೆ ಎನ್ನುವುದಾದರೂ, ಆ ಸರಕಾರಗಳು ತಮ್ಮ ಧೋರಣೆಗಳನ್ನು ರೂಪಿಸಿಕೊಳ್ಳುವಾಗ ಲೀಗನ್ನು ಕೇಳುವುದಿಲ್ಲ. ಸ್ವತಂತ್ರವಾಗಿಯೇ ನಡೆಯುತ್ತವೆ. ಲೀಗಿಗೆ ಬಂಗಾಳ ಪಂಜಾಬು ಮಂತ್ರಿಮಂಡಲಗಳ ಮೇಲೆ ಯಾವ ಅಧಿಕಾರವೂ ಇರುವುದಿಲ್ಲ. ಈ ಮಂತ್ರಿಮಂಡಲಗಳು ಲೀಗನ್ನು ಲೆಕ್ಕಕ್ಕೆ ಕಟ್ಟಿಕೊಳ್ಳದೇನೇ ಸರ್ವತಂತ್ರ ಸ್ವತಂತ್ರವಾಗಿ ವ್ಯವಹರಿಸುತ್ತವೆ. ... ಈ ಮಂತ್ರಿಮಂಡಲಗಳಿಗೂ ... ಇಷ್ಟನ್ನು ಹೇಳಬೇಕಾಯಿತು. ... ಈಗ ಸ್ಥಾನಮಾನ ಅಧಿಕಾರ ... ಒಂದು ... ಕ ಸ್ವಭಾವ ... ತಮ್ಮ ಸರ್ವಸ್ವ ... ನಿರಾತಂಕವಾಗಿ ... ಆದುದರಿಂದ ಲೀಗಿನ ಅಧ್ಯಕ್ಷರಾಗಿ ಮಿ| ಜಿನ್ನರ ಸ್ಥಾನವು ಕಲಾಪಕ್ಷದ ... ಅವರು ನಿಜವಾಗಿ ಮುಸ್ಲಿಮರ ಮತ್ತು ದೇಶದ ಹಿತವನ್ನು ಸಾಧಿಸುವುದಾದರೆ ... ಲೀಗನ್ನು ಬಿಟ್ಟು ಹೊರಗೆ ಬಂದರೇ ಉತ್ತಮವಾಗುವುದು.

ಲೀಗಿಗೆ ಮುಸಲ್ಮಾನರ ನಮೋನಮಃ

ಮಿ| ಜಿನ್ನರು ಏನು ಮಾತಲಿ, ವಿಚಾರವಂತ ಮುಸಲ್ಮಾನರು ಲೀಗಿನ ನಿಷ್ಪ್ರಯೋಜಕತೆಯನ್ನು ತಿಳಿದು ಅದಕ್ಕೆ ನಮೋನಮಃ ಅನ್ನುತ್ತಿರುವುದನ್ನು ಕಂಡು ಮುಸ್ಲಿಂ ಜನತೆಯು ಸಂತೋಷಪಡಬಹುದು. ವಿವೇಕಿಗಳಾದ ಮುಖಂಡರು ಮುಸ್ಲಿಂ ಸಮಾಜದಲ್ಲಿಯೂ ಇದ್ದಾರೆಂಬ ದಕ್ಕೋಸ್ಕರ ದೇಶವೂ ಸಂತೋಷಪಡಬಹುದು. ಲಖ್ನೋವಿನ ಹಲವು ಮಂದಿ ಲೀಗ್ ಮುಖಂಡರ, ಅಲ್ಲಿಯ ಸೀಯಾ ಸುನ್ನಿ ಅಂತಃಕಲಹದಲ್ಲಿ ಲೀಗು ಏನೂ ಮಾಡಲು ಅಸಮರ್ಥವಾದುದರಿಂದಾಗಿಯೂ, ಮಿ| ಜಿನ್ನರು ಮೌನತಾಳಿರುವುದರಿಂದಾಗಿಯೂ ಲೀಗಿನ ತಮ್ಮ ಸದಸ್ಯಸ್ಥಾನಕ್ಕೆ ರಾಜಿನಾಮೆ ಕೊಟ್ಟು ಲೀಗಿನೊಡನಿದ್ದ ತಮ್ಮ ಸಂಬಂಧವನ್ನು ಕಡಿದುಕೊಂಡಿದ್ದಾರೆ. ಗಡಿನಾಡಿನಲ್ಲಿಯೂ ಹಲವು ಮಂದಿ ಲೀಗ್ ಎಸೆಂಬ್ಲಿ ಸದಸ್ಯರು ರಾಜಿನಾಮೆ ಕೊಟ್ಟು ಕಾಂಗ್ರೆಸಿಗೆ ಸೇರಿರುವರು. ಪೇಶಾವರದ ಸಮೀಪವಿರುವ ... ಲೀಗಿನ ಸಭೆ ಕೂಡಿದಾಗ ಕಾಂಗ್ರೆಸನ್ನು ಟೀಕಿಸಿ ಒಬ್ಬರು ಭಾಷಣ ಮಾಡಿದರು. ಆಗ ಸಭೆಗೆ ಇಡೀ ಸಭೆಯೇ ಆ ಭಾಷಣವನ್ನು ನಿಷೇಧಿಸಿ ಅಲ್ಲಿಂದ ಎದ್ದು ಹೋಯಿತು. ಕೇವಲ ಲೀಗ ಅಧ್ಯಕ್ಷ ಮತ್ತು ಭಾಷಣಕರ್ತರು ಮಾತ್ರ ಉಳಿದಿದ್ದರು. ಅವರ ತಮ್ಮ ಯಾವ ಆಟವೂ ನಡೆಯಲಿಲ್ಲವೆಂದು ನಿರಾಶರಾಗಿ ಹಿಂದಿರುಗಬೇಕಾಯಿತು.

ಲಖ್ನೋದಲ್ಲಿ ಶೀಯಾಸುನ್ನಿ ಕಲಹ

ಜಾತೀಯ ದ್ವೇಷಾಸೂಯೆಗಳನ್ನು ಹರಡಿಸಿ ಕಲಹವನ್ನು ಪ್ರಜ್ವಲಿಸ ಬಲ್ಲವೆಂಬುದರಿಂದ ... ಸರಕಾರವು ... ಧರ್ಮನಿಂದಾಕರ ... ಪತ್ರಿಕೆಗಳ ಮೇಲೆ ನಿರ್ಬಂಧ ಹಾಕಿದೆ. ಈ ಪತ್ರಿಕೆಗಳು ಶೀಯಾ ಸುನ್ನಿ ಕಲಹ ಸಂಬಂಧ ಉದ್ರೇಕಕಾರಿ ಲೇಖನಗಳನ್ನು ಬರೆಯುತ್ತಿದ್ದವು. ... ಸಂಯುಕ್ತ ಪ್ರಾಂತದ ಮಂತ್ರಿಗಳು ಪ್ರಕಾಶಕರ ... ನಿದ್ದಾಗ ... ಪತ್ರಿಕೆಗಳನ್ನು ಕಳುಹಿಸಿದ್ದರೆ. ಈ ಸಂಬಂಧ ... ಇದೆ. ಶೀಯಾ ಸುನ್ನಿ ಕಲಹವು ನಡೆಯುತ್ತಾ ಇದೆ. ... ಶೀಯಾ ಸುನ್ನಿ ... ಸಂಖ್ಯೆ ೨೨೦೦ಕ್ಕೂ ಮಿಕ್ಕಿರುವುದು. ಈ ಎರಡು ... ತಂಡಗಳು ಕೆಟ್ಟಿಳಿದ ವಿವಾದಗಳನ್ನು ... ತೀರ್ಮಾನಿಸಿಕೊಳ್ಳದಿದ್ದರೆ, ಸರಕಾರವು ... ತನ್ನ ತೀರ್ಮಾನವನ್ನು ಕೊಡಬೇಕಾಗುವುದಾಗಿ ಇತ್ತಂಡಗಳಿಗೆ ತಿಳಿಸಿದೆ.

ಕಲ್ಕತ್ತ ಮುನಿಸಿಪಲ ಮಸೂದೆ

ಬಂಗಾಳದ ... ಮಂತ್ರಿಮಂಡಲವು ... ಕಲ್ಕತ್ತಾ ಮುನಿಸಿಪಲ್ ಮಸೂದೆಗೆ ... ಬಂಗಾಳದ ಸರಕಾರಿ ನೌಕರಿ ಚಾಕರಿಗಳಲ್ಲಿ ... ಪ್ರಮಾಣವನ್ನು ನಿರ್ಧರಿಸುವ ... ವಿಚಾರಕ್ಕೂ ಕಲ್ಕತ್ತ ಕಾರ್ಪೊರೇಶನ್ ಮತ್ತು ಬಂಗಾಳ ಹಿಂದುಗಳ ವಿರೋಧವು ... ಈ ಸಂಬಂಧ ಪ್ರತಿನಿತ್ಯ ಎಂಬಂತೆ ಸಭೆ ಭಾಷಣಾದಿಗಳು ಆಗ ... ಈ ಕಾರ್ಯಕ್ರಮವನ್ನು ... ಯಾವ ಉಪಾಯಗಳನ್ನು ಕೈಕೊಳ್ಳಬಹುದೆಂದು ಕುರಿತು ಆಲೋಚನೆಯಾಗುತ್ತಲಿದೆ. ಈ ಸಂಬಂಧ ಬಂಗಾಳ ಹಿಂದೂಗಳ ... ಕೇಳಲಿಕ್ಕೆ ... ಬಂಗಾಳ ಗವರ್ನರರು ಒಪ್ಪಿರುವರು.

ಜಾತಿದಂಗೆಗಳಿಗೆ ಕಾರಣರಾರು?

ಕಲ್ಕತ್ತಾ ಮುನಿಸಿಪಲ್ ಮಸೂದೆಗೆ ವಿರೋಧ



ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST PAULS CHURCH,
Bolkunje Post, S K
Dated 4th Jan 1939

To
THE JOINT MANAGERS,
The C P C Co Ltd Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights [illegible] which I hear were done voluntarily

May the blessings of the almighty fall on you all and may you be able to do much good to the Publ[illegible]

Renewing my thanks [illegible]
Yours sincerely
(Sd) **P W Farias**

Sri Parshwanathaswami,
PANCHAKALYANA POOJA MAHOSTHAM
Venoor S Kanara 1939

To
THE JOINT MANAGERS
The Combind Booking Agency Mangalore

Dear Sirs

Please permit us to express [illegible] thanks [illegible] the above committee [illegible] the efficient Service rendered [illegible] your [illegible] Booking Agency Staff at Venoor [illegible] Panchakalyana Pooja Mahosthamam celebrated held this year

Our thanks are [illegible] Mr [illegible] Booking Clerk Mr [illegible] Krishnanayya and also his other mates and Mr [illegible] Indra Bhar[illegible] [illegible] the travelling Public [illegible] Thanking [illegible]

We remain Yours faithfully

Venoor (Sd) B Chandappa Indra (Secretary [illegible] Committee) (Sd) M Jagathpal (Sd) M Pachappa Shetty
Dated 6-2-39 (Sd) Anantharaj Shetty (Member Panchakalyana Mahosthamam Committee)

JOINT MANAGERS.

The Combined Booking Agency, **The Joint Booking Office,**
MANGALORE **KODIALBAIL.**

CONSTRUCTIVE BANKING

An understanding of how a modern Bank can operate to make itself useful to the individual to business and to the public has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER
A CRORE.

ESTD 1906
CANARA BANK.
LIMITED.

(Regd)

ಅಮೃತಾಂಜನ

ಕಲಿವೇದನೆ, ಶಿರೋವೇದನೆ, ಕುಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾಕುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಬೊಡಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ತಲ್ಲ, ತುರಿಕೆ, ಕುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲಿಯುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಹೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಶ್ರೀ ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY MADRAS CALCUTTA

ಸ್ವದೇಶಾಭಿಮಾನಿ

[Est]ablished 1906 Regd. No. M. 3[...]

[ಸಂ]ಪುಟ ೩೪] ತಾರೀಖು ೨೬–೫–೧೯೩೯ (26–5–1939) [ಸಂಚಿ...

THE

BOMBAY LIFE ASSURANCE COMPANY, LTD

(ESTD: 1908.)

THE OFFICE

Which has proved its popularity by its progress,

Record of New Bussiness.

Proposed.	Year.	Completed.
1,25,50,250	1934	1,04,88,750
1,50,48,915	1935	1,28,28,665
1,68,88,200	1936	1,36,01,500
1,72,579,75	1937	1,40,08,725
176,63,250	**1938**	**144,91,000**

1939 - VALUATION YEAR.

Please take up a Policy Now and participate in Bonus

To Assure or to Represent it pays you to consult us:—

Apply to **KOCHIKAR BROTHERS, LIMITED,**

Madras Branch Secretaries,

The Bombay Life Assurance Co., Ltd.,

The Bombay Life Building Gandhinagar, UDIPI

or any of our following offices:

Post Box No. 337,
Mount Road,
Madras.

Visweshwarapuram Circle
Bangalore City.

Charni Road,
Girgaum.
BOMBAY 4.

Car Street,
Mangalore

Puthiyara,
Calicut.

Central Station Road,
Trivandrum.

MAKE LIFE WORTH-LIVING!

Indigestion - Insomnia - Dry Cough - Nervousness - Weak Heart &c

these make you wiery of Life!

CONSULT US AND BUY YOUR LIFE'S HAPPINESS!

Oils – that cool the brain and induce sleep.
Lehas – that build-up your wasted system.
Asavas – that regenerate your jaded nerves.

All Genuine Ayurvedic Preparations-

from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆಕೊಡುವ – ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಸ್ವದೇಶಾಭಿಮಾನಿ

Swadeshabhimani. Estd 1906

Date 2–6–1939

ನಟರಾಜನ ವಿಗ್ರಹವು
(ಮಧುರಾ ದೇವಸ್ಥಾನದ ಕಂಭದಲ್ಲಿ)

ಸಚಿತ್ರ
ವಾರಪತ್ರಿಕೆ

ಸ್ವದೇಶಾಭಿಮಾನಿ

Established 1906 — Regd. No M 340[illegible]

THE

BOMBAY LIFE ASSURANCE COMPANY, LTD.,

Estd. 1908.

THE OFFICE

[illegible]

Record of New Bussiness

[illegible]	Year	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
176,83,250	1938	[illegible]

1938 VALUATION YEAR

Please take up a Policy Now and [illegible]

KOCHIKAR BROTHERS, LIMTED,

[illegible]

UDIPI

on any of the following offices:

[illegible]

YOUR LIFE'S [illegible]

All Genuine Ayurvedic Preparations

[illegible] Products, Ltd.,

[illegible]

స్వదేశాభిమాని

Swadeshabhimani. Estd 1906

Date 2–6 1939

సచిత్ర

వారపత్రిక

ಸ್ವದೇಶಾಭಿಮಾನಿ

Established 1906 • Regd. No. M 340[illegible]

ಸಂಪುಟ ೩೩] ತಾರೀಕು ೨೬-೫-೧೯೩೯ (26-5-1939) [ಸಂಚಿಕೆ ೨೦

THE

BOMBAY LIFE ASSURANCE COMPANY, LTD.,

(ESTD: 1908.)

THE OFFICE

Which has proved its popularity by its progress.

Record of New Bussiness.

Proposed.	Year.	Completed.
1,35,50,250	1934	1,04,83,750
1,50,48,915	1935	1,28,28,665
1,68,88,200	1936	1,36,01,500
1,72,579,75	1937	1,40,08,725
176,83,250	1938	144,91,000

1939 VALUATION YEAR.

Please take up a Policy Now and participate in Bonus.

To Insure or to Represent it pays you to consult us:—

Apply to — **KOCHIKAR BROTHERS, LIIMTED,**

Madras Branch, Secretaries,

The Bombay Life Assurance Co., Ltd.,

The Bombay Life Building Gandhinagar, UDIPI.

or any of our following offices:

Post Box No. 337, Mount Road, Madras.

Visweshwarapuram Circle Bangalore City.

Charni Road, Girgaum, BOMBAY 4

Car Street, Mangalore.

Puthiyara, Calicut.

Central Station Road, Trivandrum.

MAKE LIFE WORTH-LIVING!

Indigestion – Insomnia – Dry Cough—
Nervousness – Weak Heart &c.,
these make you wiery of Life!

GONSULT US AND BUY

YOUR LIFE'S HAPPINESS!

Oils – that cool the brain and induce sleep.
Lehas – that build-up your wasted system.
Asavas – that regenerate your jaded nerves.

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, – ದ. ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಸ್ವದೇಶಾಭಿಮಾನಿ

Swadeshabhimani. Estd 1906

Date 2-6-1939

ತಾರೀಕು ೨-೬-೧೯೩೯

ನಟರಾಜನ ವಿಗ್ರಹವು
(ಮಧುರಾ ದೇವಸ್ಥಾನದ ಕಂಭದಲ್ಲಿ)

ಸಚಿತ್ರ

ವಾರಪತ್ರಿಕೆ

ಹಲ್ಲುರೋಗಗಳಿಗೆ ಕಾರಣ

[illegible] ಮಕ್ಕಳನ್ನು ಸರಿಯಾಗಿ [illegible] ಕಾಯುತ್ತಾರೆ. ಅವರಲ್ಲಿ ಸಣ್ಣ ಸಣ್ಣ ತಪ್ಪುಗಳಿಗೆ ಕಠಿನವಾಗಿ ದಂಡಿಸುತ್ತಾರೆ. ಮಕ್ಕಳ ಕೈ, ಬಾಯಿಗಳಿಂದ ವಸ್ತು ಒಳಗೆ ಹಾಕುವ [illegible] ತಪ್ಪಿಸಿಕೊಳ್ಳುವುದು, ಅವುಗಳನ್ನು [illegible] ಇವುಗಳಿಂದ ಮಕ್ಕಳಲ್ಲಿ ಹಲ್ಲುರೋಗಗಳು ಹುಟ್ಟುತ್ತವೆಂದು ಡಾಕ್ಟರ್ [illegible] ಎಂಬವರು ಹೇಳುತ್ತಾರೆ. ಸಣ್ಣ ಮಕ್ಕಳ ಲಘು ಪ್ರತ್ಯಾಸೆಗಳು ಬಹುತೇಕ ಬಾಯಿ ಮತ್ತು ಕೈಗಳಲ್ಲಿ ಕೇಂದ್ರೀಕೃತವಾಗಿ ಇರುತ್ತವೆ. ಅವುಗಳ ಅಂಥ ಲಘು ಪ್ರತ್ಯಾಸೆಗಳನ್ನು ಭಂಗಗೊಳಿಸುವುದರಿಂದ ಮಕ್ಕಳ ಬಾಯಿ ಮತ್ತು ಹಲ್ಲುರೋಗಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಮಕ್ಕಳ ಆಚಾರ ವಿಚಾರ, ನಡೆನುಡಿ, ಚಲನವಲನಗಳ ಪ್ರಭಾವವು ಮಕ್ಕಳು ತಾಯ ಗರ್ಭದಲ್ಲಿರುವಾಗಲೂ ಅವುಗಳ ಹಲ್ಲುಗಳ ಮೇಲೆ ಬೀಳುತ್ತದೆ. ಮಕ್ಕಳನ್ನು ಬಿರುಸು ನುಡಿಗಳಿಂದ ಮಾತಾಡಿಸುವುದರಿಂದ ಅವುಗಳ ಬಾಯಿಯ ನರಗಳಲ್ಲಿ ಸೆಳೆತವುಂಟಾಗಿ ಅವು ಹಲ್ಲು ಕಡಿಯುತ್ತವೆ. ಜೀವನವು ನೀರಸವಾಗುವುದರಿಂದ ಸಿಹಿ ಪದಾರ್ಥಗಳಲ್ಲಿ ಜೀವನದ ರಸವನ್ನು ಕಂಡು ಅವನ್ನು ಬಹಳ ಆಶಿಸುತ್ತವೆ. ಆದ್ದರಿಂದ ಹಲ್ಲುಗಳು ಕೆಡುತ್ತವೆ ಎಂಬುದು ಅವರ ಅಭಿಪ್ರಾಯವಾಗಿದೆ.

ಕೂದಲು ಬೆಳೆಸುವ ಪರಮೌಷಧಿ

ಅನೇಕ ಹೆಂಗಸರಿಗೆ ಉದ್ದುದ್ದ ಕೂದಲು ಬೇಕು. ಅನೇಕ ಗಂಡಸರಿಗೆ ಕೂದಲು ಉದುರಿ ತಲೆ ಬೋಳಾಗುತ್ತದೆ. ಅಂಥವರು ತಮ್ಮ ಕೂದಲನ್ನು ಬೆಳೆಸುವ ಲವಲವಿಕೆಯಿಂದ ಅನೇಕ ಬಗೆಯ ಬಾಜಾರಿ ಎಣ್ಣೆದ್ರವ್ಯಗಳನ್ನು ಉಪಯೋಗಿಸಿ ಹಣ ಹಾಳುಮಾಡುತ್ತಾರೆ; ನಿರಾಶರಾಗುತ್ತಾರೆ. ಅಂಥವರು ಏನುಮಾಡಬೇಕು. ನ್ಯೂಯೋರ್ಕ ನಗರದ ಕೊಲಂಬಿಯಾ ಕಾಲೇಜಿನ ಪ್ರೊಫೆಸರ ಬುಚ್ಚರ್ ಎಂಬ ವಿಜ್ಞಾನಿಗಳು ತಮ್ಮ ಅನುಭವದ ಒಂದು ಸುಲಭ, ಆದರೂ ಪರಿಣಾಮಕಾರಿಯಾದ ಔಷಧಿಯನ್ನು ಸೂಚಿಸಿದ್ದಾರೆ. ಈ ಔಷಧಿಗೆ ಕ್ರಯ ಕೊಡಬೇಕಾಗಿಲ್ಲ. ಅದರನ್ನುವುದೇನೆಂದರೆ — ನಿಶ್ಚಿಂತರಾಗಿರಿ; ಬೇಕಾದಷ್ಟು ಉಣ್ಣಿರಿ, ಮತ್ತು ಕಾರ್ಯಶಕ್ತಿಯು ಅವನ್ನು ಮಾಡುವ ಕೆಲಸ ಕಾರ್ಯಗಳನ್ನು ಕಡಿಮೆ ಮಾಡಿರಿ. ಶರೀರ ಮತ್ತು ನರನಾಡಿಗಳ ಪೋಷಣೆಗೆ ಬೇಕಾದಷ್ಟು ಪೋಷಕ ಪದಾರ್ಥಗಳು ದೊರೆತ ಅನಂತರವೇ, ಉಳಿದ ಪೋಷಕ ಪದಾರ್ಥಗಳು ಕೂದಲ ಬೆಳವಣಿಗೆಯ ಕಾರ್ಯಕ್ಕೆ ಬರುವುವು. ತುಂಬಾ ಆಹಾರವನ್ನು ತಿಂದು ಪುಷ್ಟಿಯಾಗಿ ಬೆಳೆದ ಇಲಿಗಳು ಸುಮಾರು ೩೫ ದಿನಗಳಿಗೊಮ್ಮೆ ತಮ್ಮ ಮೈಕೂದಗಳನ್ನು ಪೂರ್ಣ ಬೆಳೆಸಿ ಉದುರಿಸುತ್ತವೆ. ಆದರೆ ಸರಿಯಾಗಿ ಆಹಾರ ದೊರೆಯದ ಇಲಿಗಳಲ್ಲಿ ಮೈ ಕೂದಲು ಬೆಳೆಯುವುದು ಬಹಳ ನಿಧಾನ. ಅವುಗಳಲ್ಲಿ ಕೂದಲು ಪೂರ್ಣ ಬೆಳೆದು ಉದುರುವುದಾದರೂ ಎರಡು ಮೂರು ತಿಂಗಳುಗಳು ಕಳೆಯುತ್ತವೆ. ಆದ್ದರಿಂದ ಹೆಚ್ಚು ಉಂಡುತಿಂದು ಆರಾಮವಾಗಿರುವುದೇ ಕೂದಲು ಬೆಳೆಸುವ ಉಪಾಯವೆಂದು ಪ್ರೊ. ಬುಚ್ಚರರು ಹೇಳುವರು.

ಪಕ್ಷಿಗಳ ಪರಿಶೆ

ಕೆಲವು ಜಾತಿಯ ಪಕ್ಷಿಗಳು ಋತು ಬದಲಾವಣೆಯಾದಂತೆ ಪರಿಶೆ ಕಟ್ಟಿಕೊಂಡು ಉತ್ತರದಿಂದ ದಕ್ಷಿಣಕ್ಕೂ ದಕ್ಷಿಣದಿಂದ ಉತ್ತರಕ್ಕೂ ಹೋಗುತ್ತಿರುತ್ತವೆ. ಕೆಲವು ಜಾತಿಯವು ಧ್ರುವದಿಂದ ಧ್ರುವಕ್ಕೆ ಹೋಗಿ ಬರುವುದು ಕೂಡ ಇದೆ. ಋತು ಬದಲಾವಣೆಯಾಗುವುದು ಈ ಪಕ್ಷಿಗಳಿಗೆ ಹೇಗೆ ತಿಳಿಯುತ್ತದೆ? ಒಂದು ಸ್ಥಳದಲ್ಲಿನ ಸೂರ್ಯನ ಉಷ್ಣತೆಯನ್ನು ಅಳೆಯುವ ಅಪೂರ್ವಶಕ್ತಿಯು ಪಕ್ಷಿಗಳಿಗಿದೆ. ಸೂರ್ಯನು ಉತ್ತರದಿಂದ ದಕ್ಷಿಣಕ್ಕೂ ದಕ್ಷಿಣದಿಂದ ಉತ್ತರಕ್ಕೂ ಹೋಗುತ್ತಿದ್ದ ಹಾಗೆ ಅವೂ ಪರಿಶೆ ಕಟ್ಟಿಕೊಂಡು ಹೋಗುತ್ತಿರುತ್ತವೆ, ಎಂದು ಒಬ್ಬ ವಿಜ್ಞಾನಿ ಹೇಳಿದ್ದಾನೆ.

ಆರೋಗ್ಯವಂತ ಮಕ್ಕಳೇ

ಸುಖಿಗಳಾದ ಮಕ್ಕಳು

[illegible]

ಓವಲ್‌ಟೀನ್ ಪುಷ್ಟಿದಾಯಕ ಆಹಾರ ಪಾನೀಯ.

'OVALTINE'

ದೇಹವನ್ನು ಬೆಳೆಯಿಸುತ್ತದೆ, ಮನಸ್ಸನ್ನು [illegible]

ಎಲ್ಲಾ ಅಂಗಡಿಗಳಲ್ಲೂ, ದವಾಖಾನೆಗಳಲ್ಲಿ ದೊರಕುತ್ತದೆ.

ಏಜಂಟರು:—ಜೇಮ್ಸ್ ರ್‍ಯಾಟ್, ಲಿಮಿಟೆಡ್, 8ರ್‍ಬ ರಿಪ್ಪನ್ ಸ್ಟ್ರೀಟ್,

ಕಲ್ಕತ್ತಾ, ಅಲ್ಲದೆ ಬೊಂಬಾಯಿ, ಮದ್ರಾಸು ಮತ್ತು ಕರಾಚಿ.



OV/301

ಅಪಘಾತಗಳಾಗುವ ಕಾರಣ

ಎಷ್ಟೋ ಮಂದಿ ಅಪಘಾತಗಳಾಗಿ ನೋವಿನಿಂದ ನರಳುತ್ತಾರೆ; ಅನೇಕರು ಅಪಘಾತಗಳಿಗೆ ಬಲಿಯಾಗುವುದೂ ಇದೆ. ಪರಂತು ಇಂಥ ಅಪಘಾತಗಳು ಯಾಕಾಗುತ್ತವೆ? ಪ್ರಶ್ನೆಯ ಉತ್ತರವನ್ನು ಆರ್. ಜೆ. ಸ್ಮಿತ್ ಎಂಬ ಒಬ್ಬ ವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಸಂಸಾರ ತಾಪತ್ರಯ, ಹವಾಮಾನ ಮತ್ತು ಉಷ್ಣತೆಯ ಹೆಚ್ಚು ಕಡಿಮೆ, ಭಯ, ಲಜ್ಜೆ, ಶೋಕ ಇವೇ ಮೊದಲಾದುವು ಅಪಘಾತಗಳ ಕಾರಣಗಳೆಂದು ಅವರು ಹೇಳುತ್ತಾರೆ. ಕೆಲಕೆಲವು ಬಾರಿ ಕೀರ್ತಿ ಪಡೆಯಬೇಕೆಂಬ ಲಾಲಸೆಯಿಂದ ಜನರು ಮಾಡಬಾರದ ಕೆಲಸಗಳಿಗೆ ಕೈಹಾಕಿ ಅಪಘಾತಗಳಿಗೆ ತುತ್ತಾಗುವರು, ಎಂಬುದೂ ಅವರ ಅಭಿಪ್ರಾಯವಾಗಿದೆ.

ಕಲಿಯುಗದ ಬಂಡಭೀಮ

ಇವನ ಅವತಾರವು ಈಗ ತಾನೇ ಒಂದು ವರ್ಷದ ಹಿಂದೆ ಅಮೆರಿಕದಲ್ಲಾಗಿದೆ. ಅವನ ಹೆತ್ತವರು ಇತರರಂತೆ ಸಾಮಾನ್ಯರು. ಆ ಹೆತ್ತವರಿಗೆ ಹುಟ್ಟಿದ ಆ ಒಂದು ಮಗುವು ಮಾತ್ರ ಹುಟ್ಟುವಾಗ ೧೦॥ ರಾತಲು ಭಾರದಾಗಿದ್ದಿತು. ಈಗ ೫॥ ಮಣ ಭಾರ ೩ ಅಡಿ ಎತ್ತರವಾಗಿದೆ. ಇವನು ಕಲಿಯುಗದ ಬಂಡಭೀಮನಾಗುವನೆಂದು ಡಾಕ್ಟರರು ಹೇಳಿದ್ದಾರೆ.

ಹೊಯಿಗೆಯಿಂದ ವಿದ್ಯುತ್ತು

ಸರ್ ಎಂಬ್ರೋಸ ಫ್ಲೆಮಿಂಗ ಎಂಬ ೮೮ ವರ್ಷದ ವೃದ್ಧ ಶೋಧಕರು ಹೊಯಿಗೆಯಿಂದ ವಿದ್ಯುತ್ತನ್ನು ಕಂಡು ಹಿಡಿದಿದ್ದಾರೆ. ಹೊಯಿಗೆಯ ಸೂಕ್ಷ್ಮವಾದ ಕಣಗಳನ್ನು ಎತ್ತರವಾದ ಒಂದು ನಳಿಗೆಯಿಂದ ಕೆಳಗಿರುವ ಒಂದು ಸತುವಿನ ತಗಡಿನ ಮೇಲೆ ಬೀಳಿಸುವಾಗ ಅಲ್ಲಿ ವಿದ್ಯುತ್ತು ಉಂಟಾಗುತ್ತದೆ ಎಂಬುದನ್ನು ಅವರು ಉಪಕರಣಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಆದರೆ ಈ ಬಗೆಯ ವಿದ್ಯುತ್ತಿನಿಂದ ಸದ್ಯ ವ್ಯಾಪಾರ ಪ್ರಪಂಚಕ್ಕೆ ಲಾಭವಾಗುವಂತಿರುವುದಿಲ್ಲ. ಯಾಕೆಂದರೆ ಉಪಕರಣಗಳನ್ನು ತಯ್ಯಾರಿಸಿ ಅದರಿಂದ ಪಡೆಯುವ ವಿದ್ಯುತ್ತಿನ ಬೆಲೆಗಿಂತ ಉಪಕರಣಗಳ ಬೆಲೆಯೂ ತಯ್ಯಾರಿಸುವ ಖರ್ಚೂ ಸಾವಿರ್ವಾರು ಪಾಲು ಹೆಚ್ಚಾಗಿರುತ್ತದೆ. ಪರಂತು ಹೊಯಿಗೆಯಿಂದ ವಿದ್ಯುತ್ತು ಉಂಟಾಗುತ್ತದೆಂದು ಹೇಳಿದುದರಿಂದ ಭವಿಷ್ಯದಲ್ಲಿ ಯಾರಾದರೊಬ್ಬ ವಿಜ್ಞಾನಿಯು ಅದನ್ನು ತಯಾರಿಸುವ ಸುಲಭ ಉಪಾಯವನ್ನು ಕಂಡುಹಿಡಿಯಲಿಕ್ಕೆ ಅನುಕೂಲ ಮಾಡಿಕೊಟ್ಟಂತಾಯಿತಷ್ಟೆ!

ಲೀಗಿಗೆ ಇಲಿಸರ್ಪಗಳ ವಿರೋಧ

ಲಾಹೋರಿನಲ್ಲಿ ಮುಸ್ಲಿಂಲೀಗ ಶಿಷ್ಟಮಂಡಲದ ಪ್ರಥಮ ಸಭೆ ಕೂಡಿತ್ತು. ಆಗಲೇ ಎಷ್ಟೋ ಅಪಶಕುನಗಳಾಗಿ ಸಭೆ ಗಲಭೆಗಲಾಟೆಯಲ್ಲಿ ಮುಗಿಯಿತು. ಇಲಿಸರ್ಪಗಳು ಕೂಡ ಲೀಗಿಗೆ ವಿರೋಧ ಮಾಡಲಿಕ್ಕೆ ಬಂದುವು. ಸಭೆ ನಡೆಯುತ್ತಿದ್ದಾಗ ಒಮ್ಮಿಂದೊಮ್ಮೆಗೆ ಸಭೆಯಲ್ಲಿದ್ದ ಜನರು ಎದ್ದು ನಿಂತರು; ನಿಂತವರೇ ಓಡಲಾರಂಭಿಸಿದರು. ಯಾರೋ ಲೀಗ ವಿರೋಧಿಗಳು ಏನೋ ಗಲಾಟೆಯನ್ನೆಬ್ಬಿಸಿದ್ದಾರೆಂದು ಮೊದಲು ಊಹಿಸಲಾಯಿತು. ಪರಂತು ತನಿಖೆಮಾಡಿ ನೋಡುವಾಗ ಅಲ್ಲೇ ಇದ್ದ ಬಿಲದೊಳಗಿಂದ ಒಂದು ಸರ್ಪವು ಹೊರಗೆ ಬುಸುಗುಟ್ಟುತ್ತ ಬಂದಿತ್ತು. ಸರ್ಪವನ್ನು ಅಲ್ಲಿಯೇ ಕೊಂದುಹಾಕಲಾಯಿತು. ಆದರೆ ಲೀಗಿಗೆ ವಿರೋಧವು ಅಷ್ಟರಲ್ಲೇ ಮುಗಿಯಲಿಲ್ಲ. ಸ್ವಲ್ಪ ಸಮಯದಲ್ಲೇ ಜನರು ಪುನಃ ಚೀರಿಟ್ಟರು. ಅವರು ಅತ್ತಿತ್ತ ಓಡಾಡಲಾರಂಭಿಸಿದರು. ನೋಡುವಾಗ ಈಗ ಗಲಾಟೆ ಮಾಡಲಿಕ್ಕೆ ಬಂದದ್ದು ಸರ್ಪವಲ್ಲ; ಮೂರು ದೊಡ್ಡ ಇಲಿಗಳು! ಜನಸಂದಣಿಯಿಂದ ದಾರಿ ಮಾಡಿ ಹೋಗಲಿಕ್ಕೆ ಅವುಗಳಿಗೆ ಸ್ಥಳವೇ ದೊರೆತಿರಲಿಲ್ಲ. ಪರಂತು ಸರ್ಪವನ್ನು ಕೊಂದಂತೆ ಇಲಿಗಳನ್ನು ಕೊಲ್ಲುವುದು ಲೀಗಿಗೆ ಸಾಧ್ಯವಾಗಲಿಲ್ಲ. ಇಲಿಗಳು ಲೀಗ ಸಭೆಯನ್ನು ಮುರಿದೇ ಹೊರಟು ಹೋದವು.

卐 ದೊರೆಯಬಿನ ನವಗೀಸು ರಕ್ಷಣೆಗಳು ...

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ತಾರೀಕು ೨—೬—೧೯೪೧ | ಮಂಗಳೂರಿನ ಶಾರದಾಭಾಷಾಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 2-6-1941

ಭಾರತದಲ್ಲಿ ಲೋಕಯುದ್ಧದ ಪೂರ್ವಸಿದ್ಧತೆ

ಮಹಿಳಾವರ್ಗದ ಸಹಾಯಕ ದಳಗಳ ನಿರ್ಮಾಣ

ಬೊಂಬಾಯಿ ಗವರ್ನರರ ಭಾಷಣ

ಯುದ್ಧಕಾಲದಲ್ಲಿ ಸ್ತ್ರೀಯರು ಮಾಡಬಹುದಾದ ಅನೇಕ ಮಹತ್ವದ ಕಾರ್ಯಗಳಿರುವುದು ಯುದ್ಧದ ... ಅವಕಾಶವನ್ನು ಮುಟ್ಟಿಕೊಂಡಿರವಾಗ ಸ್ತ್ರೀಯರು ಯುದ್ಧಕಾಲದ ತಮ್ಮ ಕಾರ್ಯಗಳನ್ನು ... ಸಹಜವಾಗಿದೆ. ಬೊಂಬಾಯಿಯಲ್ಲಿ ಇಂಥ ಕೆಲಸಗಳನ್ನು ... ಸ್ತ್ರೀಯರ ... ದಳದ ನಿರ್ಮಾಣವಾಗಿದೆ. ಅದರಲ್ಲಿ ... ಸದಸ್ಯೆಯರಾಗಿ ಸೇರಿರುವುದು ಸಂತೋಷದ ವಿಷಯವಾಗಿದೆ. ಇದರಿಂದ ಸ್ತ್ರೀಯರು ... ಅವಕಾಶಗಳು ಬಂದಾಗ ತಮ್ಮ ಸೇವೆಯನ್ನು ಸಲ್ಲಿಸಲಿಕ್ಕೆ ... ಸಿದ್ಧರೆಂದು ... ಎಂದು ... ಗವರ್ನರು ... ಸ್ತ್ರೀ ದಳದ ಮುಂದೆ ಭಾಷಣ ಮಾಡಿದರು ... ಸ್ತ್ರೀಯರ ... ಸಿದ್ಧವಾದರೆ ... ಕೆಲಸ ಮಾಡುವುದನ್ನು ... ರಿಂದ ಅವರು ತಮ್ಮ ಕೆಲಸವನ್ನು ... ವನ್ನೂ ತರಬೇತಿಯನ್ನೂ ಪಡೆಯಬೇಕು. ದೇಶಭಕ್ತಿಯುಳ್ಳವರೂ ಸೇವಾಭಾವನೆಯುಳ್ಳವರೂ ಆಗಿ ಸ್ತ್ರೀಯರು ಇಂಥ ಕೆಲಸಗಳನ್ನು ಮಾಡುತ್ತಿರುವವರಿಂದ ... ದೇಶದ ... ಬೀರಬಲ್ಲರು. ... ಸ್ತ್ರೀಯರ ... ಅನುಸರಿಸಿ ... ಇತರ ಕಡೆಗಳ ಸ್ತ್ರೀಯರೂ ತಮ್ಮ ದಳಗಳನ್ನು ಸ್ಥಾಪಿಸಿದ್ದಾರೆ. ಇದು ... ಉದಾಹರಣೆಯಾಗಿದೆ.

ಆದರ್ಶಪರ ಕೆಲಸ

ಸಭೆಯಲ್ಲಿ ಇನ್ನೂ ಕೆಲವರು ಭಾಷಣಗಳನ್ನು ಕೊಟ್ಟಿದ್ದರು. ಬೊಂಬಾಯಿಯಲ್ಲಿ ... ಭಾರತ ... ಅಧಿಕಾರಿಗಳ ... ಇತರ ... ಈ ದಳದಲ್ಲಿ ಸೇರಿರುವುದು ಅವರ ಭಾಷಣಗಳಿಂದ ವ್ಯಕ್ತವಾಯಿತು. ಬೊಂಬಾಯಿ ... ಸೇನಾಧಿಕಾರಿಗಳು ಭಾಷಣ ಕೊಡುತ್ತ ಯುದ್ಧಕಾಲದಲ್ಲಿ ಸ್ತ್ರೀಯರು ಕೆಮನಿಸಬೇಕಾದ ಅಂದರೆ—ಪ್ರಥಮ ಚಿಕಿತ್ಸೆ, ಪಟ್ಟಿ ಕಟ್ಟುವುದು, ಉಗ್ರಾಣದಲ್ಲಿ ಕೆಲಸ, ಪತ್ರವ್ಯವಹಾರ, ಸಂಕೇತ ಸುದ್ದಿಗಳಲ್ಲಿ ತಂತಿ ಬರೆಯುವುದು, ಇಂಥ ತಂತಿಗಳನ್ನು ಸಾದಾಭಾಷೆ ನುಡಿಯಲ್ಲಿ ಬರೆಯುವುದು ಇತ್ಯಾದಿ ಆದರ್ಶಪರ ಕೆಲಸಗಳನ್ನು ವಹಿಸಿಕೊಂಡಿರುವರೆಂದು ನನ್ನ ಆಸೆ ಎಂದರು. ಯುದ್ಧಭಯವು ಹೇಗೆ ಹಿಂದುಸ್ಥಾನಕ್ಕೆ ಬಾಧಿಸಿದೆ, ಯುದ್ಧಕ್ಕಾಗಿ ಹಿಂದುಸ್ಥಾನವು ಹೇಗೆ ಸಿದ್ಧವಾಗುತ್ತ ಬರುತ್ತದೆ ಎಂಬುದಕ್ಕೆ ಈ ಸಭೆಯು ಒಂದು ದೃಷ್ಟಾಂತವಾಗಿದೆ.

ಅಸ್ಸಾಮದ ಎಣ್ಣೆ ಕೆಲಸಗಾರರ ಮುಷ್ಕರ

ಸರಕಾರದ ಸಂಧಾನ ಪ್ರಯತ್ನವು ನಿಷ್ಫಲವಾಯಿತು

ಅಸ್ಸಾಮಿನ ... ಎಣ್ಣೆ ... ಕೆಲಸಗಾರರ ... ಸರಕಾರದ ... ಪ್ರಯತ್ನಗಳು ನಿಷ್ಫಲವಾಗಿವೆ ... ಸಂಧಾನಕ್ಕೆ ... ಸರಕಾರದ ... ಅಸ್ಸಾಮಿನ ... ಸರಕಾರದ ... ಕಾಂಗ್ರೆಸ ... ನಾಯಕರು ... ಪತ್ರಿಕೆಗಳ ... ಸರಕಾರವು ... ಕೆಲಸಗಾರರ ... ಸರಕಾರ ...

ಅಸ್ಸಾಮದ ... ಕೆಲಸಗಾರರಲ್ಲಿ ... ಸಮಾಧಾನ ...

ಓಂ ಮಂಡಲಿಯ ವಿಸರ್ಜನೆಯಾಯಿತು

ಓಂ ಮಂಡಲಿಯ ... ಸಂಸ್ಥೆಯು ... ಸರಕಾರವು ... ಹಿಂತೆಗೆದುಕೊಂಡರೂ ... ಸರಕಾರವು ... ಕೋರ್ಟಿನ ... ಆದೇಶದಂತೆ ... ಸಂಸ್ಥೆಯ ...

ಲಾಹೋರಿನ ಕಿಸಾನ ಸತ್ಯಾಗ್ರಹ

ಇತ್ತೀಚೆಗೆ ಲಾಹೋರಿನಲ್ಲಿ ... ಕಿಸಾನ ... ಸತ್ಯಾಗ್ರಹ ... ಸತ್ಯಾಗ್ರಹವು ... ಕಾಂಗ್ರೆಸ ... ಸತ್ಯಾಗ್ರಹಿಗಳ ... ಸತ್ಯಾಗ್ರಹಿಗಳನ್ನು ...

ನವೀನ ಶೋಧನ

ಹೇನುಗಳನ್ನು ನಾಶಮಾಡುವ 'ಬಾಬಾ' ಉಪಯೋಗಿಸಿರಿ!



ಸ್ತ್ರೀ ಜಾತಿಗೆ 'ಬಾಬಾ' ಎಂಬುದು ವರಪ್ರಸಾದ

ತಲೆಯಲ್ಲಿ ಹೇನು ಆಗುವುದು ... ಇದರ ... ಹೇನುಗಳನ್ನು ನಾಶಗೊಳಿಸುವುದು. 'ಬಾಬಾ' ಇದರಿಂದ ... 'ಬಾಬಾ' ಎಲ್ಲಾ ಪಟ್ಟಣಗಳಲ್ಲಿ ಸಿಗುತ್ತದೆ ...

ಕಿಮ್ಮತ್ತು ಡಬ್ಬಿ 1ಕ್ಕೆ 0—2—6

ಹಿಂದುಸ್ಥಾನ ಏಕಮಾತ್ರ ಸೋಲ್ ಡಿಸ್ಟ್ರಿಬ್ಯೂಟರ್ಸ್ — ಸಾಯಿ ಬ್ರದರ್ಸ್, ... ಕಾಳಬಾದೇವಿ ರೋಡ, ಬೊಂಬಾಯಿ 2

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ಜಿ. ವೆಂಕಟಸುಬ್ರಮಣ್ಯ

ವಿಲಕ್ಷಣ ತಯಾರಿ — ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಫಿಕ್ಸ್, ಮೈಲಾಪೂರ, ಮದ್ರಾಸು.

ಅಮೇರಿಕಾ ಸರಕಾರದ ಘೋಷಣೆ

ಸಾಮೋಪಾಯದಿಂದ ಲೋಕಶಾಂತಿಯ ಸ್ಥಾಪನೆ

ಹೆರ್ ಹಿಟ್ಲರ್ ಅಮೇರಿಕದ ಪ್ರೆಸಿಡೆಂಟ್ ... ಶಾಂತಿ ಸಂದೇಶವನ್ನು ... ಅಮೇರಿಕಾ ಸರಕಾರದ ಸ್ಟೇಟ್ ಸೆಕ್ರೆಟರಿ ಮಿ. ಕೊರ್ಡೆಲ ಹಲ್ಲಿ ... ಭಾಷಣವನ್ನು ... ಅಮೇರಿಕಾ ... ಶಾಂತಿಗೆ ... ರಾಷ್ಟ್ರಗಳ ... ಜರ್ಮನಿ ... ಈ ಪ್ರೆಸಿಡೆಂಟ್ ... ಸರಕಾರದ ...

ಹಿಟ್ಲರ ವಿರೋಧಿ ಲೇಖಕರ ದುರ್ಮರಣ!

... ಜರ್ಮನಿಯ ... ಹಿಟ್ಲರನ ... ಲೇಖಕರು ... ಹಿಟ್ಲರನ ... ಗ್ರಂಥಗಳನ್ನು ... ಜೀವನವನ್ನು ...

ಸ್ವದೇಶಾಭಿಮಾನಿಗೆ

ಚಂದಾದಾರರಾಗಿರಿ

'ನನ್ನ ಮೇಲೆ ವಿಶ್ವಾಸವನ್ನಿಡಿರಿ - ಅಪಜಯವು ವಿಜಯವಾಗುವುದು'

★ ರಾಜಕೋಟೆಯಲ್ಲಿ ಮಹಾತ್ಮಾಜಿಯವರ ಸ್ಫೂರ್ತಿದಾಯಕ ಭಾಷಣ ★

ಮೈಸೂರು ಸುಧಾರಣೆಗಳಿಂದ ಜನರ ಅತೃಪ್ತಿ ★ ★ ★ ★ ತಲ್ಚಾರಿಗೆ ಕಾಂಗ್ರೆಸ ಮಂತ್ರಿಗಳ ಆಗಮನ

ಸಂಸ್ಥಾನಗಳೊಂದಿಗೆ ಪ್ರಾಂತೀಯ ಸರಕಾರಗಳ ಅಸಹಕಾರ

'ನನ್ನ ಪಶ್ಚಾತ್ತಾಪ ಮತ್ತು ಸ್ಪಷ್ಟ ಮಾತುಗಳ ಅಪಜಯದ ಒಪ್ಪಿಗೆಯಿಂದ ರಾಜಕೋಟೆಯ ಇತಿಹಾಸದಲ್ಲಿ ನಾನು ಹೊಸ ಪುಟವನ್ನು ತೆರೆದಿರುವೆನಾಗಿ ನನ್ನ ಭಾವನೆ. ಆದರೆ ನಿಮ್ಮೆಲ್ಲರ ಬೆಂಬಲವಿರುವುದಿಲ್ಲವಾದರೆ ನಾನು ಏನನ್ನೂ ಮಾಡಲಾರೆನು. ರಾಜರೂ ಪ್ರಜೆಗಳೂ ಜತೆಗೂಡಿ ತಮ್ಮ ಕರ್ತವ್ಯಗಳನ್ನು ಮಾಡುವರಾದರೆ ನನ್ನ ಕೋರಿಕೆಯ ಅಪಜಯವು ವಿಜಯವಾಗಿ ಮಾರ್ಪಡುವುದು ಇದಕ್ಕೆ ಜನಗಳೆಲ್ಲ ಒಂದಾಗಬೇಕು' ಎಂದು ಮಹಾತ್ಮಾ ಗಾಂಧಿಯವರು ರಾಜಕೋಟೆಯಲ್ಲಿ, ಅಲ್ಲಿಯ ಸುಧಾರಣಾ ಸಮಿತಿಯೊಂದಿಗೆ ಜನರು ಸಹಕರಿಸಬೇಕೆಂದು ವಿನಂತಿ ಮಾಡುತ್ತ ಒಂದು ಸ್ಫೂರ್ತಿದಾಯಕ ಭಾಷಣವನ್ನು ಕೊಟ್ಟರು. ಭಾಷಣ ಆರಂಭವಾಗುವ ಮೊದಲು ಜನಸಂದಣಿ ಸಣ್ಣದಾಗಿತ್ತಾದರೂ, ಮಹಾತ್ಮರು ಸಭಾಂಗಣವನ್ನು ಸೇರಿದಂತೆ, ವಿಶಾಲವಾದ ಮೈದಾನು ಸಾವಿರಾರು ಜನರ ಸ್ತೋಮದಿಂದ ಕಿಕ್ಕಿರಿದಿದ್ದಿತು. ಗಲಭೆ ಗಲಾಟೆಗಳಾಗದ ಹಾಗೆ ಎತ್ತರವಾದ ವ್ಯಾಸಪೀಠವನ್ನು ರಚಿಸಿದ್ದರು. ಅದ್ದರಿಂದ ಭಾಷಣ ಕೊಡುವ ಮಹಾತ್ಮರ ದರ್ಶನ ತೆಗೆದುಕೊಳ್ಳುವುದು ಎಲ್ಲರಿಗೆ ಸಾಧ್ಯವಾಯಿತು. ಪ್ರಜಾ ಪರಿಷತ್ತಿನವರು ಸುಧಾರಣಾ ಸಮಿತಿಯೊಂದಿಗೆ ಸಹಕರಿಸಬೇಕೆಂದೂ, ರಾಜ ಪ್ರಜೆಗಳು ಪರಸ್ಪರ ಸಂದೇಹವನ್ನು ಬಿಟ್ಟು ರಾಜ್ಯದ ಉನ್ನತಿಗೆ ಪ್ರಯತ್ನಿಸಬೇಕೆಂದು ಮಹಾತ್ಮರು ಹೇಳಿ-ದಶಂಬರ ತಿಂಗಳ ಠಾಕೋರರ ಪ್ರಕಟನೆಯಂತೆ ಜವಾಬುದಾರಿ ಸರಕಾರ ಸ್ಥಾಪನೆಯ ಉದ್ದೇಶವಿಟ್ಟುಕೊಂಡು ಸಮಿತಿಯು ಕಾರ್ಯಾರಂಭ ಮಾಡುವ ತಮ್ಮ ಇಚ್ಛೆಯನ್ನು ವ್ಯಕ್ತ ಮಾಡಿದರು

ಮಹಾತ್ಮರಿಗೆ ಠಾಕೋರರ ಭೋಜನ ಸತ್ಕಾರ

ರಾಜಕೋಟೆಯ ಠಾಕೋರರು ಮಹಾತ್ಮರನ್ನು ಕಳೆದ ವಾರ ಮಧ್ಯಾಹ್ನ ಭೋಜನದಿಂದ ಸತ್ಕರಿಸಿದರು. ಅನೇಕ ಮಂದಿ ಇತರ ಅಧಿಕ ಗೃಹಸ್ಥರೂ ಈ ಭೋಜನ ಸಮಾರಂಭಕ್ಕೆ ಆಮಂತ್ರಿತರಾಗಿದ್ದರು ಮಹಾತ್ಮರು ಪರಿಷತ್ತಿನ ಕೆಲಸಗಾರರನ್ನು ಕಂಡು-ಸುಧಾರಣಾ ಸಮಿತಿಯ ಸಂಬಂಧ ಪರಿಷತ್ತಿನ ಧೋರಣೆ ಎಂಥಹದ್ದಿರಬೇಕೆಂಬ ದನ್ನು ಚರ್ಚಿಸಿದರು. ಪರಿಷತ್ತು ಜನರ ಆಸಿಪ್ಪ ಬೇಡಿಕೆಗಳನ್ನು ಸಮಿತಿಯ ಅವಗಾಹನೆಗೆ ತಂದು ಸಾಕ್ಷ್ಯ ಕೊಡಬೇಕೆಂಬುದು ಮಹಾತ್ಮರ ಅಭಿಪ್ರಾಯವಾಗಿದೆ ಪರಿಷತ್ತು ಮಹಾತ್ಮರ ಸೂಚನೆಯಂತೆ ಸಮಿತಿಯೊಂದಿಗೆ ಸಹಕರಿಸುವುದು

ವಿಲಾಯತಿಯಲ್ಲಿ ಸಮಾಧಾನ

ಮಹಾತ್ಮರು ಚೀಫ ಜಸ್ಟೀಸರ ಎವಾರ್ಡಿಗೆ ತಿಲಾಂಜಲಿ ಕೊಟ್ಟು ರಾಜಕೋಟೆ ಠಾಕೋರರನ್ನು ಪ್ರೇಮದಿಂದ ಒಲಿಸಿಕೊಂಡು ಕಾರ್ಯ ಸಾಧಿಸುವ ನಿರ್ಧಾರಕ್ಕೆ ಬಂದುದರಿಂದ ವಿಲಾಯತಿಯಲ್ಲಿ ತುಂಬಾ ಸಮಾಧಾನವಾಗಿದೆ ಯಾಕೆಂದರೆ ಪ್ರೇಮದಿಂದಾಗದ ಕಾರ್ಯವು ಒತ್ತಾಯದಿಂದ ಎಂದೂ ಸಾಧ್ಯವಾಗುವುದಿಲ್ಲ ಎವಾರ್ಡಿಗೆ ತಿಲಾಂಜಲಿ ಕೊಟ್ಟೊಡನೆಯೇ ಠಾಕೋರರು ಸುಧಾರಣಾ ಸಮಿತಿಯನ್ನು ರಚಿಸಿರುವುದೂ, ಮಹಾತ್ಮರನ್ನು ಅದರ ಭಕ್ತಿ ವಿಶ್ವಾಸಗಳಿಂದ ಕಂಡು ಸತ್ಕರಿಸಿರುವುದೂ ಪ್ರೇಮದ ಮಹತ್ವವನ್ನು ಸೂಚಿಸುತ್ತದೆ. ಪ್ರೇಮ ವ್ಯವಹಾರದಿಂದ ಶ್ರೀ. ವೀರವಲ್ಲರ ಹೃದಯ ಪರಿವರ್ತನೆಯೂ ಆಗಿರುವುದು. ಅವರೂ ಮಹಾತ್ಮರೂ ಈಗ ಜೀವದ ಗೆಳೆಯರಂತಿದ್ದಾರೆ ಎಂಬ ಅಭಿಪ್ರಾಯವು ವಿಲಾಯತಿಯಲ್ಲಿ ಉಂಟಾಗಿದೆ.

ದರ್ಬಾರಿನ ಕರ್ತವ್ಯ

ಗಾಂಧಿಯವರು ಪರಿಷತ್ತಿನ ಕೆಲಸಗಾರರಿಗೆ ಸುಧಾರಣಾ ಸಮಿತಿಯೊಂದಿಗೆ ಸಹಕರಿಸುವ ಸೂಚನೆ ಕೊಟ್ಟು ರಾಜಕೋಟೆ ದರ್ಬಾರಿನೊಂದಿಗೆ ಸಹಕಾರದ ಕೈಯ್ಯನ್ನು ನೀಡಿದ್ದಾರೆ ದರ್ಬಾರು ಮಾತ್ರ ತನ್ನ ಕರ್ತವ್ಯಗಳನ್ನು ಪೂರ್ಣ ರೀತಿಯಿಂದ ಮಾಡಿರುವುದಿಲ್ಲ ಅದರ ಇತ್ತೀಚಿನ ವರ್ತನವು ಸಮಾಧಾನಕರವಾಗಿದೆಯಾದರೂ ಜನರನ್ನು ಪೂರ್ಣ ತೃಪ್ತರನ್ನಾಗಿ ಮಾಡಲಿಕ್ಕೆ ಅದು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬಹುದು. ರಾಜಕೋಟೆಯಲ್ಲಿ ಪತ್ರಿಕೆಗಳ ಮೇಲಿನ ನಿರ್ಬಂಧವು ಹಾಗೆಯೇ ಇದೆ ಅದನ್ನು ತೆಗೆದುಹಾಕುವುದು ಅಗತ್ಯವಾಗಿದೆ

ಸಂಸ್ಥಾನಗಳೊಂದಿಗೆ ಕಾಂಗ್ರೆಸ ಪ್ರಾಂತ್ಯಗಳ ಅಸಹಕಾರ

ಒರಿಸ್ಸಾ ಸಂಸ್ಥಾನಗಳಿಗೆ ಕಾಂಗ್ರೆಸ ಪ್ರಾಂತೀಯ ಸರಕಾರಗಳು ಪೋಲೀಸ ಸಹಾಯವನ್ನು ಕೊಡಲು ನಿರಾಕರಿಸಿದುದರಿಂದ, ಮಧ್ಯವರ್ತಿ ಸರಕಾರವು ಹೈದರಾಬಾದ ಸಂಸ್ಥಾನದಿಂದ ಪೋಲೀಸರನ್ನು ಒರಿಸ್ಸಾ ಸಂಸ್ಥಾನಗಳಿಗೆ ಕಳುಹಿಸಿಕೊಟ್ಟಿತೆಂದು ಹಿಂದುಸ್ಥಾನ ಟೈಮ್ಸ ಪತ್ರಿಕೆ ಹೇಳುತ್ತದೆ. ಸಿಕಂದರಾಬಾದಿನಿಂದ ನಿವೃತ್ತ ಮಿಲಿಟರಿ ಜನರಿಗೆ ತರಬೇತಿ ಕೊಟ್ಟು ಸಂಸ್ಥಾನಗಳಿಗೆ ಕಳುಹಿಸಿಕೊಡುವ ಜಾಲೀ [illegible] ಕಾಂಗ್ರೆಸ ಪ್ರಾಂತೀಯ ಸರಕಾರಗಳು ದಬ್ಬಾಳಿಕೆ ಆಳುವ ಸಂಸ್ಥಾನ ಸರಕಾರಗಳಿಗೆ ಸಹಾಯ ಕೊಡಲು ಒಪ್ಪದ್ದರಿಂದ ಹೀಗೆ ಮಾಡಲಾಯಿತು. ವಂದೇ ಮಾತರಂ ಹಾಡನ್ನು ಹಾಡಿದ ಅಪರಾಧದ ಮೇಲೆ ಹೈದರಾಬಾದದ ಉಸ್ಮಾನಿಯಾ ಯುನಿವರ್ಸಿಟಿಯಿಂದ ಹೊರದೆಬ್ಬಲ್ಪಟ್ಟ ವಿದ್ಯಾರ್ಥಿಗಳು ತಮ್ಮ ಮುಂದಿನ ಕಾರ್ಯಕ್ರಮವೇನಿರಬೇಕೆಂಬ ಕುರಿತು ರಾಜಕೋಟೆಯಲ್ಲಿ ಮಹಾತ್ಮರ ದರ್ಶನ ತೆಗೆದುಕೊಂಡು ಸಲಹೆ ಪಡೆದರು

ಕಚ್ ಸಂಸ್ಥಾನದಲ್ಲಿ ನಿರ್ಬಂಧ

ಕಚ್ ಸಂಸ್ಥಾನದ ಸ್ಥಿತಿಗತಿಗಳು ವಿಪರೀತಕ್ಕೆ ಮುಟ್ಟಲಾರಂಭಿಸಿವೆ ಹಳ್ಳಿಹಳ್ಳಿಗಳಲ್ಲಿ ಸಭೆ ಭಾಷಣಾದಿಗಳು ನಡೆಯಕೂಡದೆಂದು ಸರಕಾರ ನಿರ್ಬಂಧವಾಗಿದೆ ಭಾಯಿ ಶರು ಮು. ಸಲ್ಮಾನರು ಮೊದಲಾದವರು ಕೂಡ ರಾಜಕೋಟೆಯಲ್ಲಿಯಂತೆ ಪ್ರಜಾ ಪರಿಷತ್ತಿನ ವಿರೋಧ ಮಾಡ[ಹ]ತ್ತಿದ್ದಾರೆ. ಅದ್ದರಿಂದ ಶಾಂತಿಭಂಗವಾಗುವ ಸಂಭವವಿದೆ ಶ್ರೀ ಯುಸೂಫ ಮೇಹರಾಲಿಯವರ ಅಧ್ಯಕ್ಷತೆಯಲ್ಲಿ ಪ್ರಜಾ ಪರಿಷತ್ತಿನ ಕೆಲಸಗಾರರು ಸಭೆ ಕೂಡಿಸಿ ಸರಕಾರ ನಿರ್ಬಂಧಗಳನ್ನು ಮುರಿಯಬೇಕೆಂದು [illegible]ವರು ಸರಕಾರವು ಶಾಂತಿರಕ್ಷಣೆಯ ನೆವನದಿಂದ ಪೋಲೀಸ ಫೌಜನ್ನು ಹಳ್ಳಿಹಳ್ಳಿಗಳಿಗೆ ಕಳುಹಿಸಿ ಕೊಟ್ಟಿದೆ ದಬ್ಬಾಳಿಕೆಯೇ ಇದರ ಉದ್ದೇಶವಾಗಿದೆ ಮಹಾತ್ಮರ ಸಂದೇಶದಂತೆ ಜನರು ಸತ್ಯಾಗ್ರಹವನ್ನು ನಿಲ್ಲಿಸಿದ್ದಾದರೂ ಸಂಸ್ಥಾನ ಸರಕಾರವು ದಬ್ಬಾಳಿಕೆಯನ್ನು ನಡೆಸುತ್ತಾ ಇದೆ ಅದರ ಧೋರಣೆಯಲ್ಲಿ ಪರಿವರ್ತನೆಯಾಗುವುದಿಲ್ಲವಾದರೆ ಪರಿಸ್ಥಿತಿಯು ಕೈಮೀರಿ ಹೋಗಬಹುದೆಂದು ಪರಿಷತ್ತು ಸರಕಾರಕ್ಕೆ ಸೂಚಿಸಿದೆ

ತಲ್ಚಾರಿಗೆ ಕಾಂಗ್ರೆಸ ಮಂತ್ರಿಗಳ ಆಗಮನ

ತಲ್ಚಾರಿನ ಅರಸರು ಕೊಡುವ ಪೀಡೆಯನ್ನು ಸಹಿಸಲಾರದೆ ಸಾವಿರಾರು ಮಂದಿ ಪ್ರಜೆಗಳು ತಮ್ಮ ಆಸ್ತಿಪಾಸ್ತಿ ಮನೆಮಠಗಳನ್ನು ಅಲ್ಲಿಯೇ ಬಿಟ್ಟು ಒರಿಸ್ಸದ ಅಂಗುಲ ಜಿಲ್ಲೆಯಲ್ಲಿ ಆಶ್ರಯ ಪಡೆದಿರುವರು. ಅಲ್ಲಿ ಅವರು ಹೊಟ್ಟೆ ಬಟ್ಟೆ ಗಿಲ್ಲದೆ ಪಡುತ್ತಿರುವ ಕಷ್ಟಗಳ ವರ್ಣನೆ ಮಾಡಲಿಕ್ಕಾಗುವುದಿಲ್ಲ ರಾಜ ಪ್ರಜೆಗಳೊಳಗೆ ಸಂಧಾನ ಪ್ರಯತ್ನಗಳು ವಿಫಲವಾಗಿರುವುವು. ಸರಹದ್ದಿನೊಳಗೆ ಸಾರ್ವಭೌಮ ಸರಕಾರ ಪ್ರತಿನಿಧಿಗಳು ಸೂತ್ರಚಾಲನೆ ಮಾಡುತ್ತಿರುವರೋ ಎಂಬ ಸಂದೇಹ ಪ್ರತ್ಯೇಕ ಇದೆ ಒರಿಸ್ಸದ ಕಾಂಗ್ರೆಸ ಮಂತ್ರಿ ಶ್ರೀ ನಿತ್ಯಾನಂದ ಕಾನುಗೋರವರು ಕಳೆದ ವಾರ ಈ ನಿರಾಶ್ರಿತರ ಠಾಣ್ಯಗಳನ್ನು ಸಂದರ್ಶಿಸಿ, ಮಳೆಗಾಲಪ್ರಾರಂಭವಾಗಬೇಕಾದರೆ ಅವರಿಗೆ ಅಂಗುಲದಲ್ಲೇ ಬೇಸಾಯ ಮಾಡಲಿಕ್ಕೆ ಭೂಮಿ ಕೊಟ್ಟು ಅವರ ಕಷ್ಟಗಳನ್ನು ಸ್ವಲ್ಪ ಕಡಿಮೆಮಾಡುವ ವಿಚಾರ ನಡೆಸಿದರು

ಪಂಜಾಬ ಸಂಸ್ಥಾನಗಳ ಪ್ರಜಾಪರಿಷತ್ತು

ಇದು ಕಳೆದ ವಾರ ಹಿಸ್ಸಾರಿನಲ್ಲಿ ಶ್ರೀ ರಾಮೇಶ್ವರ ದತ್ತರ ಅಧ್ಯಕ್ಷತೆಯಲ್ಲಿ ಕೂಡಿತು ಪಾಟಿಯಾಲಾ ನಾಭಾ, ಫರೀದಕೋಟ, ಜಿಂದ ಲೋಹಾರು, ಪಟೌಡಿ, ಕಪುರ್ತಲ, ಮಲೇರ ಕೋಟೆ, ಬಿಕಾನೇರ, ಜಯಪುರ ಮತ್ತು ಅನೇಕ ಸಣ್ಣ ಸಂಸ್ಥಾನಗಳ ಪ್ರತಿನಿಧಿಗಳು ಈ ಪರಿಷತ್ತಿಗೆ ಬಂದಿದ್ದರು. ಸಂಸ್ಥಾನ ಪ್ರಜೆಗಳು ಸಂಘಟಿತರಾಗಿ, ತಮ್ಮ ಹಕ್ಕು ಅಧಿಕಾರ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಂಗ್ರಾಮವನ್ನು ಕೊಡಲಿಕ್ಕೆ ಸಿದ್ಧರಾಗಬೇಕ ಎಂದು ಇತ್ಯಾದಿ ಅಧ್ಯಕ್ಷರು ಭಾಷಣ ಮಾಡಿದರು ನಾಗರಿಕ ಹಕ್ಕು ಸ್ವಾತಂತ್ರ್ಯಗಳನ್ನು ಕೊಡಬೇಕೆಂದೂ, ಆಡಳಿತದಲ್ಲಿ ಪ್ರಜೆಗಳಿಗೆ ಜವಾಬುದಾರಿ ದೊರೆಯಬೇಕೆಂದೂ ಠರಾವುಗಳಾದುವು.

ಭೋಪಾಲ ಪರಿಷತ್ತನ್ನು ಮುಂದರಿಸಿ ಹಾಕಲಾಯಿತು

ಪ್ರಿನ್ಸ ಇಂಡಿಯಾದಲ್ಲಿ ಭೋಪಾಲದ ರಾಜಕೀಯ [illegible] ಸರಕಾರ ನಿರ್ಬಂಧವನ್ನು ಹಾಕಿದ ದರಿಂದ ಸದ್ಯಕ್ಕೆ ಅಲ್ಲಿ ಪರಿಷತ [illegible] ಮಾಡಲಾಗಿ[illegible]

ಮೈಸೂರು ಸುಧಾರಣೆಗಳು

ಈ ಮೊದಲು ಪ್ರಕಟವಾಗಿರುವ ಮೈಸೂರು ರಾಜಕೀಯ ಸುಧಾರಣಾ ಸಮಿತಿಯು ಮಹಾರಾಜ ಸರಕಾರಕ್ಕೆ ಶಿಫಾರಸು ಮಾಡಿದ ಸುಧಾರಣೆಗಳು ಪತ್ರಿಕೆಗಳಲ್ಲಿ ಪ್ರಕಟವಾದಷ್ಟೇ ಇರುವುದಾದರೆ ಅವುಗಳಿಂದ ಮೈಸೂರು ಜನತೆಯು ಎಷ್ಟು ಮಾತ್ರಕ್ಕೂ ತೃಪ್ತಿಪಡುವಂತಿಲ್ಲ ಮಂತ್ರಿಮಂಡಲದ ಐವರಲ್ಲಿ ಕೇವಲ ಇಬ್ಬರು ಮಾತ್ರ ಶಾಸನ ಕೌನ್ಸಿಲುಗಳಿಗೆ ಜವಾಬುದಾರರಿನ್ನುವುದರಿಂದ ಪ್ರಜೆಗಳಿಗೆ ನಿಜವಾದ ಜವಾಬುದಾರಿಯನ್ನು ಕೊಟ್ಟಂತಾಗುವುದಿಲ್ಲ ದಿವಾನರೂ ಉಳಿದ ಇಬ್ಬರು ಮಂತ್ರಿಗಳೂ ನಿರಂಕುಶ ಅಧಿಕಾರಿಗಳಾಗಿ ಇರುವುದು ಪ್ರಜಾಸತ್ತೆಯ ಲಕ್ಷಣವಲ್ಲ ಮಹಾರಾಜರಿಗೆ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲಿಕ್ಕೆ ಕೆಲವು ವಿಶೇಷಾಧಿಕಾರಗಳನ್ನು ಕೊಡುವುದು ತಪ್ಪಲ್ಲ ಪರಂತು ಅವರ ಮಂತ್ರಿಮಂಡಲವು ಪೂರ್ಣರೂಪದಿಂದ ಪ್ರಜಾಪ್ರತಿನಿಧಿ ಸಭೆಗಳಿಗೆ ಜವಾಬುದಾರರಾಗಿರಬೇಕು, ಮತ್ತು ಅವರು ಪ್ರತಿನಿಧಿ ಸಭೆಗಳ ಅವಿಶ್ವಾಸಕ್ಕೆ ಪಾತ್ರರಾದಾಗ ತಮ್ಮ ಪದವಿಗೆ ರಾಜೀನಾಮೆ ಕೊಟ್ಟು ಹೊರಬರುವಂತಾಗಬೇಕು ಈ ಶಿಫಾರಸು ಮಾಡಿದ ಸುಧಾರಣೆಗಳಲ್ಲಿ ಜವಾಬುದಾರ ಸರಕಾರದ ಯಾವ ಲಕ್ಷಣಗಳೂ ಇರುವುದಿಲ್ಲ' ಎಂಬಿತ್ಯಾದಿ ಮಾತುಗಳಿಂದ ಮೈಸೂರು ಸಿವಿಲ್ ಲಿಬರ್ಟೀಸ ಯೂನಿಯನಿನ ಅಧ್ಯಕ್ಷ ಶ್ರೀ ಯಲ್ ಯಸ್ ರಾಜು ಅವರು ಕಮಿಟಿಯ ಶಿಫಾರಸುಗಳನ್ನು ಟೀಕಿಸಿದ್ದಾರೆ. ಮೈಸೂರು ಕಾಂಗ್ರೆಸ್ಸಿನ ಇತರ ಮುಖಂಡರೂ ಹೀಗೆಯೇ ಶಿಫಾರಸುಗಳನ್ನು ವಿಮರ್ಶಿಸಿದ್ದಾರೆ.'

ಮೈಸೂರು ಪೋಲೀಸ ಎಕ್ಸಿನ ಪ್ರಕಾರ ಸಭೆಮಾಡಿ ಭಾಷಣಾದಿಗಳನ್ನು ಕೊಡಬಾರದೆಂದು ಕೊಟ್ಟ ನಿರ್ಬಂಧಾಜ್ಞೆಗಳನ್ನು ಮುರಿದಿರುವುದಕ್ಕಾಗಿ, ಅವರ ಮೇಲೆ ಯಾಕೆ ಕೇಸು ಮಾಡಬಾರದು ಎಂಬುದಕ್ಕೋಸ್ಕರ ಕೋರ್ಟಿಗೆ ಬಂದು ಉದಾಹರಣೆ ಕೊಡಬೇಕೆಂದು ಶ್ರೀಗಳಾದ ಗಣಪತಿ ಶಾಸ್ತ್ರಿ, ಎಸ್. ಗುರುಸ್ವಾಮಿಯರ ಮೇಲೆ ನೋಟೀಸು ಹೊರಟಿದೆ

ಮಂದಸರಾಜರ ಉದಾರತೆ

ರೈತರು ಬಹಳ ಕಷ್ಟದಲ್ಲಿರುವುದರಿಂದ ಕರಕಂದಾಯಗಳಲ್ಲಿ ಕಡಿಮೆಯಾಗಬೇಕೆಂದು ಪ್ರಜಾಪರಿಷತ್ತಿನಲ್ಲಿ ಠರಾವಾಗಿ, ಈ ವಿಚಾರ[illegible] ಮಾತನಾಡಲು ಒಂದು ಶಿಷ್ಟಮಂಡಲವು ರಾಜರ ಭೇಟಿಗೆ ತೆಗೆದುಕೊಂಡಿತು ರಾಜರು ಶಿಷ್ಟ ಮಂಡಲದ ಅರಿಕೆಗಳನ್ನು ಲಕ್ಷಕೊಟ್ಟು ಕೇಳ

[ಆನೇ ಪುಟಕ್ಕೆ ಮುಂದುವರಿದಿದೆ]

೩೬ ತಾಸುಗಳೊಳಗೆ ನಿಃಶಕ್ತಿಯು ಮಾಯವಾಯಿತು!

ಹೆಂಗಸಿನ ಪಿತ್ಥ ಬಾಧೆಯು ದೀರ್ಘ ಕಾಲ ಸಂಭವಿಸಿತು

ಕ್ರುಶನ್ ಲವಣವು ಅವಳನ್ನು ಸಂಪೂರ್ಣ ತೊಂದರೆಗಳಿಂದ ಪಾರುಮಾಡಿತು

ಓರ್ವ ಮಹಿಳೆಯು ಹೀಗೆ ಬರೆಯುತ್ತಾಳೆ

'ನಾನ ನನ್ನ ಜೀವನಮಾನವೆಲ್ಲ ಪಿತ್ತಬಾಧೆಯಿಂದ ನರಳುತ್ತಿದ್ದೆನು. ಇದರಿಂದ ನಾನು [illegible] ಗಂಟೆಯಿಂದ ೪೮ ಗಂಟೆಗಳ ತನಕ ಸಂಪೂರ್ಣ ಕಳೆಗುಂದುತ್ತಿದ್ದೆನ ಕಳೆದ ವರ್ಷ ಒಂದು ದಿವಸದಲ್ಲಿ ಎರಡು ಸಲ ಇದಕ್ಕೆ ತುತ್ತಾದೆನು ನನ್ನ ಪತಿಯು ನನಗಾಗಿ ಒಂದು ಬಾಟ್ಲಿ ಕ್ರುಶನ್ ಲವಣವನ್ನು ತಂದನು ಅದನ್ನು ಸ್ವಲ್ಪ ಸ್ವಲ್ಪ ಬೆಳಗ್ಗಿನ ಕಾಫಿಯಲ್ಲಿ ಮಿಶ್ರಮಾಡಿ ಸೇವಿಸಲು ಪ್ರಾರಂಭಿಸಿದಂದಿನಿಂದ ನನಗೆ ಅಂಥಾ ತೊಂದರೆಗಳೇ ಇರದ್ದನ್ನು ನೋಡಿ ತುಂಬಾ ಆಶ್ಚರ್ಯವೂ ಸಂತೋಷವೂ ಆಗುತ್ತದೆ'

ವಿ. ಇ. ಡಿ

ಪಿತ್ತಬಾಧೆಯು ಅಜೀರ್ಣದಿಂದ ಉಂಟಾಗುತ್ತದೆ ಇದಕ್ಕೆ ನಾವು ಕ್ರಮತಪ್ಪಿ ತೆಗೆದುಕೊಳ್ಳುವ ಆಹಾರವೇ ಕಾರಣ ಈ ಆಹಾರವು ಅನ್ನಕೋಶದಲ್ಲಿ ಜಮೆಯಾಗಿ, ಕೆಟ್ಟ ವಾಯುವನ್ನು ಉಂಟುಮಾಡುತ್ತದೆ. ಇದನ್ನು ನಾಶಮಾಡಲು ಸ್ವಾಭಾವಿಕ ಔಷಧಿಗಳಾಗಲಿ ಆರು ಲವಣಗಳಾಗಲೀ ಬೇಕಾಗುತ್ತದೆ. ಆರು ಲವಣಗಳು ಈ ಕ್ರುಶನ್ ಲವಣದಲ್ಲಿ ಕಾಣಬಹುದು ಈ ಪ್ರತಿಯೊಂದು ಲವಣವು ನಮ್ಮ ಆರೋಗ್ಯಕ್ಕೆ ಬೇಕಾಗುವುದು.

ಅವು ರುಚಿಯನ್ನು ಕೊಡುವುದಲ್ಲದೆ ಅಜೀರ್ಣದ ಅಪಾಯವನ್ನು ಹೋಗಲಾಡಿಸುವುವು.

ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರರಲ್ಲಿಯೂ ಅಂಗಡಿಗಳಲ್ಲಿಯೂ ದೊರೆಯುವುದು.

ಹೈದರಾಬಾದದಲ್ಲಿ ಹಿಂದೂಗಳ ಕರುಣ ಕತೆ!

ಶೋಲಾಪುರದ ಮಾರಾಮಾರಿಯ ಅನಂತರ ಬೊಂಬಾಯಿ ಸರಕಾರದ ನಿರ್ಬಂಧ

ಪಂಡಿತ ಜವಹರಲಾಲರ ಪತ್ರ ★ ◆ ★ ಸೇನಾಪತಿ ಬಾಪಟರ ನಿರ್ಧಾರ

ಜೈಲುಗಳಲ್ಲಿ ಸತ್ಯಾಗ್ರಹಿಗಳ ದುರ್ದಶೆ

ವಾಯಗಾಡು ರಾಜೇಶ್ವರದಲ್ಲಿ ಪದ್ಧತಿಯಂತೆ ವರ್ಷಂಪ್ರತಿ ಗಣಪತಿ ಉತ್ಸವವಾಗುತಿತ್ತು. ಉತ್ಸವವು ಅಲ್ಲಿಯ ಮಸೀದಿಯ ಮುಂದಿನಿಂದಲೇ ಹೋಗುವ ಪದ್ಧತಿಯಿತ್ತು. ಆ ವೇಳೆ ವಾಯಗಾಡದಲ್ಲಿ ಒಬ್ಬ ಮುಸಲ್ಮಾನ ಅಧಿಕಾರಿ ಬಂದನು. ಅವನು ರಾಜೇಶ್ವರದ ಮುಸಲ್ಮಾನರಿಂದ ಒಂದು ಅರ್ಜಿಯನ್ನು ಬರವಮಾಡಿಸಿ ಈಗ ಗಣಪತಿ ಉತ್ಸವ ಮೆರವಣಿಗೆಯನ್ನು ಪೂರ್ಣ ನಿಲ್ಲಿಸಿಬಿಟ್ಟಿರುವನು. ಹಾಗೆಯೇ ರಾಜೇಶ್ವರದಲ್ಲಿ ಹಿಂದೆ ಎರಡು ಬಾರಿ ದಸರೆ ಮತ್ತು ಮೊಹರಂ ಎರಡೂ ಹಬ್ಬಗಳು ಒಂದೇ ಕಾಲಕ್ಕೆ ಬಂದುವು. ರಾಜೇಶ್ವರದ ತಹಸೀಲ್ದಾರನೂ ಪೋಲೀಸ ಇನ್ಸ್‌ಪೆಕ್ಟರನೂ ಕೂಡಿ ಪೇಟೆಯ ಒಂದೊಂದು ಕಡೆಯಲ್ಲಿ ಇಬ್ಬರಿಬ್ಬರು ಪೋಲೀಸರನ್ನು ನಿಲ್ಲಿಸಿದರು. ಹಿಂದುಗಳು ಯಾರೂ ದಸರೆಯ ಕಾಲದಲ್ಲಿ ದೇವದರ್ಶನಕ್ಕೆ ಹೋಗಬಾರದೆಂದು ತಡೆಯುವುದೇ ಇದರ ಉದ್ದೇಶವಾಗಿತ್ತು. ದುರ್ಭಾಗ್ಯದಿಂದ ಇಬ್ಬರು ರಸ್ತೆಗೆ ಇಳಿದಾಗ ಪೋಲೀಸರು ಅವರಿಗೆ ಛಡಿ ಹೊಡೆಸಿದರು. ಆ ವೇಳೆ ರಾಜೇಶ್ವರದಲ್ಲಿ ದಸರೆಯನ್ನೇ ಆಚರಿಸಬಾರದೆಂದ ಹಿಂದುಗಳ ಮೇಲೆ ಮುಸಲ್ಮಾನ ಅಧಿಕಾರಿಗಳು ನಿರ್ಬಂಧ ಹಾಕಿದರು. ಆಗ ಹಿಂದುಗಳು ಮೊಹರಮ ಹಬ್ಬದಲ್ಲಿ ಯಾವ ಭಾಗವನ್ನೂ ತೆಗೆದುಕೊಳ್ಳಲಿಲ್ಲ. ಇದರಿಂದ ಮುಸಲ್ಮಾನರು ಕೆರಳಿ ಹಿಂದುಗಳ ಲೂಟಿ ಮಾಡಿದರು. ಸಿಕ್ಕಸಿಕ್ಕಲ್ಲಿ ಅವರನ್ನು ಹೊಡೆದು ಬಡೆದರು. ರಾಜೇಶ್ವರದಲ್ಲಿ ಹಿಂದುಗಳ ವಿಟ್ಠಲ ರುಕ್ಮಿಣಿಯ ದೇವರ ಮಂದಿರವಿದೆ. ಮುಸಲ್ಮಾನ ಪುಂಡರು ವಿಠ್ಠಲ ರುಕ್ಮಿಣಿಯರ ಮೂರ್ತಿಯನ್ನು ಕಿತ್ತು ನೆಲಕ್ಕೆ ಅಪ್ಪಳಿಸಿದರು. ಮೂರ್ತಿ ಕೊರಳಿಗೆ ಪಾದರಕ್ಷೆಯ ಮಾಲೆ ಮಾಡಿ ಹಾಕಿದರು. ದೇವಸ್ಥಾನದ ಎದುರು ಇದ್ದ ಕಟ್ಟೆಯನ್ನು ಈಗಲೂ ಮುಸಲ್ಮಾನರು ತಮ್ಮ ಸ್ವಾಧೀನ ಮಾಡಿಕೊಂಡಿದ್ದಾರೆ. ರಾಜೇಶ್ವರದ ಅಶ್ವತ್ಥನಾರಾಯಣ ವೃಕ್ಷದ ಮೇಲೆ ಹಿಂದೂಗಳು ಪ್ರತಿವರ್ಷ ದಸರೆಯ ಕಾಲದಲ್ಲಿ ಧ್ವಜಾರೋಹಣ ಮಾಡುವ ಮಾಮೂಲಿ ಪದ್ಧತಿ ಇದ್ದಿತು. ಆದರೆ ಈ ವರ್ಷ ಧ್ವಜಾರೋಹಣ ಮಾಡಿದಾಗ ಮುಸಲ್ಮಾನರು ಧ್ವಜವನ್ನು ಬಲಾತ್ಕಾರ ಮಾಡಿ ಕಿತ್ತು ಹರಿದು ಹಾಕಿದರು. ಪೋಲೀಸರು ಈ ಕಡೆ ಇದರ ಮೇಲೆ ಯಾವ ಕಾರ್ಯಕ್ರಮವನ್ನು ಕೈಕೊಂಡಿರುವುದಿಲ್ಲ.

ಮುಸಲ್ಮಾನ ಅಥವಾ ಶೈತಾನ?

ಮುಸಲ್ಮಾನ ಧರ್ಮವು ಬಹಳ ಉದಾರವಾಗಿದೆ. ಮುಸಲ್ಮಾನರು ಸಹಿಷ್ಣುಗಳೂ ನ್ಯಾಯಪ್ರಿಯರೂ ಆಗಿದ್ದಾರೆ ಎಂದು ಅನೇಕ ಕಡೆಗಳಲ್ಲಿ ಹೇಳಲ್ಪಡುತ್ತದೆ. ಆದರೆ ಮುಸಲ್ಮಾನರ ಉದಾರತ್ವ ಸಹಿಷ್ಣುತೆ ಮತ್ತು ನ್ಯಾಯಪ್ರಿಯತೆಯ ಪರೀಕ್ಷೆಯು ಹೈದರಾಬಾದಿನಲ್ಲಿ ಆಗುತ್ತಾ ಇರುವುದೆಂದು ಶ್ರೀ ಬಿಹಾರಿಲಾಲಜೀ ಶಾಸ್ತ್ರಿ, ಕಾವ್ಯತೀರ್ಥರವರು ಆರ್ಯಮಿತ್ರದಲ್ಲಿ ಬರೆಯುತ್ತಾರೆ. ಹೈದರಾಬಾದಿನಲ್ಲಿ ಬಂಧಿತ ಆರ್ಯವೀರರ ಮೇಲೆ ಮುಸಲ್ಮಾನರು ಆಕ್ರಮಣ ಮಾಡುತ್ತಾರೆ. ಆದರೆ ಈ ಕುತ್ಸಿತ ಕಾರ್ಯವನ್ನು ಯಾವ ಧನವಂತ ಮುಸಲ್ಮಾನನೂ ನಿಂದಿಸಿರುವುದಿಲ್ಲ. ಕುರಾನು ಏಕೇಶ್ವರವಾದ ಮತ್ತು ಭಕ್ತಿಯ ಉಪದೇಶಕೊಡುತ್ತದೆಂದು ಹೇಳಲಾಗುತ್ತದೆ. ಎಲ್ಲಿ ಈಶ್ವರನ ಜಪವಾಗುತ್ತದೋ ಅಲ್ಲಿ ಮುಸಲ್ಮಾನರು ಭಕ್ತಿಯಿಂದ ತಲೆತಗ್ಗಿಸುವರಂತೆ. ಆದರೆ ಈ ಮಾತುಗಳಲ್ಲಿ ಸತ್ಯವು ತೋರುವುದಿಲ್ಲ. ಈಶ್ವರ, ಗೋಡ್ (God), ಅಲ್ಲಾ, ಖುದಾ, ಓಮ್ ಇತ್ಯಾದಿ ಒಬ್ಬ ಈಶ್ವರನ ಬೇರೆ ಬೇರೆ ಭಾಷೆಯ ಹೆಸರು ಮಾತ್ರ ಆಗಿರುವಾಗ, ಕಡು ಮುಸಲ್ಮಾನರ ಹೈದರಾಬಾದ ಸರಕಾರವು ಓಮ್ ಎಂದೊಡನೆ ಮೂಗು ಮುರಿಯುತ್ತದೆ, ಹುಬ್ಬು ಗಂಟುಹಾಕಿಕೊಳ್ಳುತ್ತದೆ. ಹೈದರಾಬಾದ ಪೋಲೀಸರು ಓಮ್ ಧ್ವಜಗಳಿಂದ ಬಾವುಟಗಳನ್ನು ಹರಿಸಿ ಬೇಕುಬೇಕೆಂದೇ ಹಿಂದುಗಳನ್ನು ಕೆಣಕಿಸುವ ಪ್ರಯತ್ನ ಮಾಡುತ್ತಾರೆ. ಇವರು ವಾಸ್ತವಾರ್ಥದಲ್ಲಿ ಮುಸಲ್ಮಾನರೆ, ಶೈತಾನರೆ? ಪೋಲೀಸರ ಈ ನೀಚಕಾರ್ಯದ ಕುರಿತು ಮುಸಲ್ಮಾನ ಮುಖಂಡರು ಅವರನ್ನು ಖಂಡಿಸಿದ್ದಿಲ್ಲ. ಹೈದರಾಬಾದಿನ ಮುಸಲ್ಮಾನ ಸರಕಾರವು ಇಂಥ ಪೋಲೀಸರನ್ನು ದಂಡಿಸದಿರುವುದನ್ನು ಕಾಣುವಾಗ, ಮುಸಲ್ಮಾನ ಧರ್ಮದಷ್ಟು ಸಂಕುಚಿತ ಧರ್ಮವು ಪ್ರಪಂಚದಲ್ಲೇ ಇರುವುದಿಲ್ಲವೆಂದ ಅರ್ಥವಾಗುತ್ತದೆ. ಅರಬಿ ಭಾಷೆಯ ಈಶ್ವರ ಅರ್ಥ ಕೊಡುವ 'ಅಲ್ಲಾ' ಶಬ್ದವು ಮುಸಲ್ಮಾನರ ಗೌರವಕ್ಕೆ ಪಾತ್ರವಾಗಿದೆ. ಸಂಸ್ಕೃತ ಭಾಷೆಯ ಅದೇ ಈಶ್ವರ ಅರ್ಥಕೊಡುವ 'ಓಮ್' ಶಬ್ದವು ಅವರ ಅಗೌರವಕ್ಕೆ ಪಾತ್ರವಾಗುತ್ತದೆ. ಇದರಂಥ ಮತಾಂಧತನ ಬೇರೆ ಯಾವುದಿದೆ?

ಮುಸಲ್ಮಾನ ಸೂಫಿಗಳ ಅಭಿಮತ

ದಾರ್... ಎಂದ ಹೇಳ ಅಥವಾ ರಹೀಮ್ ಎಂದ ಹೇಳ ಅಲ್ಲಾನನ್ನು ಕರೆದ ಹಾಗೇ ಆಯಿತು. ... ಎಂದು ಹೇಳ ಅಥವಾ ಈಶ್ವರ ಎಂದ ಹೇಳ ಅಲ್ಲಾನ ಇಚ್ಛೆಯನ್ನು ಹೇಳದ ಹಾಗೇ ಆಯಿತು ಎಂದ ಮುಸಲ್ಮಾನ ಸೂಫಿಗಳ ಸಿದ್ಧಾಂತ ತತ್ವವನ್ನು ಬಹಳ ಮನೋಗ ... ಹೇಳಿದ್ದಾರೆ. ... ಈ ಕಾಲದ ಮುಸಲ್ಮಾನರು ಮಾತ್ರ ಇದಕ್ಕೆ ಸರಿ ವಿರೋಧವಾಗಿ ನಡೆಯುತ್ತಾರೆ. ಕುರಾನಿನ ... ನ ಹೇಳಿದ ಇಸ್ಲಾಮ ಮತದ ಉಪದೇಶ ಕೊಡುತ್ತಿರುವ ಸೂಫಿಗಳ ಅಭಿಮತವೇನೆಂಬುದನ್ನು ಮುಸಲ್ಮಾನರು ತಿಳಿಯಬೇಕು. ಇನ್ನು ಅವರಿಗೆ ರಾಜಕೀಯ ಸ್ವಾರ್ಥದ ಸಾಧನೆಯು ದಳೀತ್ಯ ... ಮುಸಲ್ಮಾನರಿಗೆ ಮುಸಲ್ಮಾನ ಧರ್ಮವು ಬೇಡ, ಮುಸಲ್ಮಾನ ಸ್ವಾರ್ಥವು ಬೇಕು. ಇದರಿಂದ ಮುಸಲ್ಮಾನರ ಉದಾರತೆ ಎಲ್ಲಿದೆ ಎಂದು ನೋಡಿರಿ? ಇಂಥ ಉದಾರತೆಯು ಎಲ್ಲಿಯೂ ಕಾಣಸಿಗುವುದಿಲ್ಲ.

ಜೈಲಧಿಕಾರಿಗಳ ಪಾಶವಿಕ ವ್ಯವಹಾರ

ಜೈಲಿನಿಂದ ಮುಕ್ತರಾದ ಶ್ರೀ ರಾಮಚಂದ್ರ ಎಂಬ ಸತ್ಯಾಗ್ರಹೀ ವೀರರು "ನನಗೆ ೪॥ ತಿಂಗಳ ಶಿಕ್ಷೆಯಾಗಿತ್ತು. ನನ್ನನ್ನು ನಿಜಾಮಾಬಾದ ಜೈಲಿಗೆ ಕಳುಹಿಸಿಕೊಟ್ಟರು. ಒಂದು ದಿನ ನನಗೆ ೨೪ ಘಂಟೆಗಳ ತನಕವೂ ಕುಡಿಯಲಿಕ್ಕೆ ನೀರು ದೊರೆಯಲಿಲ್ಲ. ನೀರನ್ನು ಕೇಳಿದಾಗ ಜೈಲಿನ ಅಧಿಕಾರಿಗಳು ಹೊಡೆಯಲಿಕ್ಕೆ ಬಂದರು. ನಾನು ಅವಧಿ ಮುಗಿದು ಜೈಲಿನ ಹೊರಗೆ ಬಂದ ದಿನ ಕೂಡ ಒಬ್ಬ ಜೈಲು ಅಧಿಕಾರಿಯು ಸತ್ಯಾಗ್ರಹಿಯನ್ನು ವಿನಾಕಾರಣ ಹೊಡೆಯುತ್ತಿರುವುದನ್ನು ಕಂಡೆ. ಆವನ ಮೂಗಿನಿಂದ ರಕ್ತವು ಹರಿದು ಬರುತಿತ್ತು. ಕಾಹರ ಎಂಬ ಹೆಸರಿನ ಒಬ್ಬ ಮುಸಲ್ಮಾನ ವಾರ್ಡರನು ಖರೆ ಎಂಬ ಚಿಕ್ಕ ಪ್ರಾಯದ ಒಬ್ಬ ಹಿಂದೂ ಸತ್ಯಾಗ್ರಹಿಯ ಮೇಲೆ ಅಮಾನುಷಿಕ ವ್ಯವಹಾರ ಮಾಡಲು ಒಂದು ಕೋಣೆಗೆ ಕೊಂಡುಹೋಗುವನಿದ್ದನು. ಆ ಹುಡುಗನು ಬೊಬ್ಬಿಟ್ಟುದರಿಂದ ಕಾಹರನು ಅವನನ್ನು ಬಿಟ್ಟುಬಿಟ್ಟನು. ಆದರೂ ಕಾಹರನ ಪಶುತುಲ್ಯ ವ್ಯವಹಾರಕ್ಕೆ ಅವನಿಗೆ ಯಾವ ದಂಡನೆಯೂ ಆಗಲಿಲ್ಲ" ಎಂದಿದ್ದಾರೆ.

ಶ್ರೀ ನೆಹರೂರವರ ಪತ್ರ

ಈ ಪ್ರಕಾರ ಹೈದರಾಬಾದ ಸಂಸ್ಥಾನದಲ್ಲೂ ಅದರ ಜೈಲುಗಳಲ್ಲಿ ಸರಕಾರದ ಪಕ್ಷಪಾತಪೂರ್ಣ ವ್ಯವಹಾರ ಮತ್ತು ಮುಸಲ್ಮಾನರ ಬಹು ಭಯಾನಕ ಹಾಗೂ ಹೃದಯವಿದ್ರಾವಕ ಅತ್ಯಾಚಾರ ದಿನಾಚರಣೆಗಳಿಗೆ ಹಿಂದುಗಳು ಬಲಿಯಾಗಿರುವುದಕ್ಕೆ ಮಿತಿ ಇರುವುದಿಲ್ಲ. ಆದಕಾರಣ ಕೇವಲ ಈ ಅತ್ಯಾಚಾರಗಳು ನಿಂತು ಹಿಂದುಗಳಿಗೂ ಧಾರ್ಮಿಕ ಸ್ವಾತಂತ್ರ್ಯ ದೊರೆಯಬೇಕೆಂಬುದಕ್ಕೋಸ್ಕರ ಉಂಟಾದ ಹೈದರಾಬಾದದ ಆರ್ಯ ಮತ್ತು ಹಿಂದೂ ಸತ್ಯಾಗ್ರಹ ಆಂದೋಲನದೊಡನೆ ವಿಚಾರವಂತ ಮತ್ತು ತಮ್ಮ ಜವಾಬ್ದಾರಿ ತಿಳಿದ ಪ್ರತಿಯೊಬ್ಬ ಮುಖಂಡರು ಸಹಾನುಭೂತಿಯನ್ನು ತೋರಿಸುತಿದ್ದಾರೆ. ಶ್ರೀ ಪಂಡಿತ ಜವಾಹರಲಾಲರು ಈ ಆಂದೋಲನದ ಸಂಬಂಧ ತಮ್ಮ ಅಭಿಪ್ರಾಯಗಳನ್ನು ಈ ಮೊದಲೇ ವ್ಯಕ್ತಮಾಡಿರುವರಾದರೂ ಅದನ್ನು ಇನ್ನೂ ಸ್ಪಷ್ಟಪಡುವುದಕ್ಕೋಸ್ಕರ ಶ್ರೀ ಕೇಶವ ಶರಣ ಎಂಬವರಿಗೆ ಇತ್ತೀಚೆಗೆ ಬರೆದ ಪತ್ರದಲ್ಲಿ, ಸತ್ಯಾಗ್ರಹ ಆಂದೋಲನದ ಕುರಿತು ಕಾಂಗ್ರೆಸಿನ ಧೋರಣೆಯನ್ನು ಸ್ಪಷ್ಟಪಡಿಸುತ್ತ, "ಹೈದರಾಬಾದ ಸರಕಾರವು ಅಲ್ಲಿಯ ಜನರ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ಅಪಮಾನಜನಕ ಪ್ರತಿಬಂಧಗಳನ್ನು ಹಾಕಿದೆ. ಈ ಪ್ರತಿಬಂಧಗಳನ್ನು ದೂರ ಮಾಡಲಿಕ್ಕೆ ಉಂಟಾದ ಸತ್ಯಾಗ್ರಹ ಆಂದೋಲನದಲ್ಲಿ ನನ್ನ ಪೂರ್ಣ ಸಹಾನುಭೂತಿ ಇದೆ. ಆದರೆ ಆ ಪವಿತ್ರ ಯುದ್ಧ ಇಡು ಕಾಂಟಾದುದರಿಂದ ಇದನ್ನು ಹೈದರಾಬಾದ ಸರಕಾರವು ... ಹಿಂದೂ ಮುಸಲ್ಮಾನ ಝಗಡೆಯ ರೂಪ ಕೊಡಲಿಕ್ಕೆ ಆದರೂ ತಮ್ಮ ಧಾರ್ಮಿಕ ಸ್ವಾತಂತ್ರ್ಯ ರಕ್ಷಣೆಗೋಸ್ಕರ ಆರ್ಯ ಸಮಾಜ ಮುಖಂಡರು ಹೈದರಾಬಾದಿನಲ್ಲಿ ಹೇರಳ ಕಷ್ಟಗಳನ್ನು ಅನುಭವಿಸುತಿದ್ದಾರೆಂಬ ವಿಷಯದಲ್ಲಿ ಸಂದೇಹವಿಲ್ಲ" ಎಂದು ಬರೆದಿರುವರು.

ಸತ್ಯಾಗ್ರಹಿಗಳ ದುರ್ದಶೆ

ಜೈಲುಗಳಲ್ಲಿ ಸತ್ಯಾಗ್ರಹಿಗಳ ಬಹಳ ದುರ್ದಶೆಯಲ್ಲಿದ್ದಾರೆ. ಜೈಲುಗಳ ವಾತಾವರಣವು ಹೊಲಸು ಕಸಗಸ್ತಿಗಳ ನಾರಿ ಕಲುಷಿತವಾಗಿರುವುದರಿಂದ ಅನೇಕ ಮಂದಿ ಸತ್ಯಾಗ್ರಹಿಗಳು ರೋಗಪೀಡಿತರಾಗುತ್ತಾರೆ. ಚೇಳು ಸರ್ಪ ಮೊದಲಾದ ವಿಷ ಜಂತುಗಳ ಕೂಡ ಈ ಜೈಲುಗಳ ಸರಾಗದಲಿ ತಮ್ಮ ಮನೆಮಾಡಿಕೊಂಡಿರುತ್ತವೆ. ಸರಕಾರದ ಅಲಕ್ಷ ಅಸಡ್ಡೆ ಮತ್ತು ಅಕ್ರಮ ನ್ಯಾಯದಿಂದಲೇ ಸತ್ಯಾಗ್ರಹಿಗಳು ರೋಗಪೀಡಿತರಾಗಿದ್ದರಾದರೂ ಅವರ ಯೋಗ್ಯ ಚಿಕಿತ್ಸೆಯ ವಿಚಾರವನ್ನು ಸರಕಾರವು ಮಾಡಿರುವುದಿಲ್ಲ. ಇತರ ಸತ್ಯಾಗ್ರಹಿಗಳು ರೋಗಪೀಡಿತರ ಸೇವೆಗೂ ಸುಶ್ರೂಷೆ ಮಾಡುವೆವೆಂದರೆ ಜೈಲಧಿಕಾರಿಗಳು ಅದಕ್ಕೂ ಬಿಡುವುದಿಲ್ಲ. ಅದ್ದರಿಂದ ಸತ್ಯಾಗ್ರಹಿಗಳೆ ಜೈಲುಗಳಲ್ಲಿ ಬಹಳ ಯಾತನೆಗಳನ್ನು ಅನುಭವಿಸುತ್ತಲಿದ್ದಾರೆ.

ಮಾರಾಮಾರಿಯ ಅನಂತರ—

ಹೈದರಾಬಾದದಲ್ಲಿ ಹಿಂದುಗಳೂ ಆರ್ಯಸಮಾಜಿಗಳೂ ಇಷ್ಟು ಕಷ್ಟಪಟ್ಟು ತಮ್ಮ ಬಲಿಯನ್ನು ಕೊಡುತಿದ್ದಾರಾದರೂ ಮುಸಲ್ಮಾನರ ಹೃದಯ ಪರಿವರ್ತನೆಯಾಗಿರುವುದಿಲ್ಲ. ಶೋಲಾಪುರದಲ್ಲಿ ಹೊರಗಿನಿಂದ ಬಂದ ಕೆಲವರು ಸತ್ಯಾಗ್ರಹಿಗಳು ತಮ್ಮ ಮಾರ್ಗದಲ್ಲಿದ್ದ ಒಂದು ಮಸೀದಿಯ ಮುಂದಿನಿಂದ ಭಜನೆ ಮಾಡುತ್ತ ಹೋಗಿ ತಮ್ಮ ಪ್ರಾರ್ಥನೆಗೆ ಭಂಗ ತಂದರೆಂದು ಅವರನ್ನು ತಡೆದರು. ಈ ಅಲ್ಪ ಕಾರಣವು ಮಹತ್ತಾಗಿ ಮಾರಾಮಾರಿಯಲ್ಲಿ ೬ ಸತ್ತರು. ೫೦ ಮಂದಿ ಗಾಯವಟ್ಟರು. ಸರಕಾರದಧಿಕಾರಿಗಳು ಸತ್ಯಾಗ್ರಹ ಶಿಬಿರವನ್ನು ಬೇರೆ ಕಡೆಗೆ ಸಾಗಿಸಬೇಕೆಂದೂ, ಹೈದರಾಬಾದ ಸತ್ಯಾಗ್ರಹಿಗಳು ೨೪ ಘಂಟೆಯೊಳಗೆ ಶೋಲಾಪುರ ಜಿಲ್ಲೆ ಬಿಟ್ಟು ಹೊರಗೆ ಹೋಗಬೇಕೆಂದೂ ನಿರ್ಬಂಧವನ್ನು ಹಾಕಬೇಕಾಯಿತು. ೧೦ ದಿನಗಳ ಅವಧಿಗೆ ಅವರು ಕರ್ಫ್ಯೂ ಆರ್ಡರನ್ನು ಜಾರಿಗೆ ತಂದರು. ಪೂನೆಯಿಂದ ಮಿಲಿಟರಿಯನ್ನೂ ತಂದಿಟ್ಟರು. ಹಲವು ಮಂದಿ ಗುಂಡರನ್ನು ಹಿಡಿದು ವಿಚಾರಿಸಿ ದಂಡಿಸಿದರು. ಇಷ್ಟು ವ್ಯವಸ್ಥೆ ಮಾಡಿ ಅಲ್ಲಿ ಶಾಂತಿಯನ್ನೂ ವ್ಯವಸ್ಥೆಯನ್ನೂ ಕಾಪಾಡಬೇಕಾಗಿ ಬಂದಿತು. ಹೀಗೆ ಮಾರಾಮಾರಿಗಳಾಗುವದಾದರೂ ಯಾಕೆ? ಜನರಲ್ಲಿ ಧಾರ್ಮಿಕ ಭಾವನೆಯು ಲೋಪವಾಗಿದೆ. ತಾವು ಧರ್ಮವಂತರೆಂದು ಹೇಳಿಕೊಂಡರೂ ಅವರಲ್ಲಿ ಧರ್ಮಬುದ್ಧಿ ಇರುವುದಿಲ್ಲ. ಅವರು ಸ್ವಾರ್ಥ, ದ್ವೇಷ, ಮತ್ಸರಗಳಿಂದ ಪ್ರೇರಿತರಾಗಿ ಅಧರ್ಮಾಚರಣೆಯನ್ನೇ ಮಾಡುತಿದ್ದಾರೆ.

(೬ನೇ ಪುಟಕ್ಕೆ ಮುಂದುವರಿದಿದೆ)

ನೂರು ವರ್ಷಕಾಲ ಹೊಟ್ಟೆಯ ಹುಣ್ಣಿನ ಕಷ್ಟಾನುಭವ.

ಆಲೋಚಿಸಿರಿ ಮೂರು ವರ್ಷಕಾಲ ದಿನ ನಿತ್ಯ ಪೀಡೆ! "ನನ್ನ ನರಳುವಿಕೆಯು ದೇವರಿಗೆ ಗೊತ್ತು" ಎಂದು ಏ. ಎ. ಎಸ್. ... ಬರೆಯುತ್ತಾರೆ. ಇವ ಹೊಟ್ಟೆಯ ವ್ರಣದಿಂದ ನರಳುವವರಿಗೆ ... ಅದರ ಸಹನೆ ... ಕಾಗದವಿದೆ.

"ನಾನು ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರಿನಿಂದ ... ಗುಣಹೊಂದಿದವನು ... ನನ್ನ ಕರ್ತವ್ಯವೆಂದೆಣಿಸುತ್ತೇನೆ. ನಾನು ... ವರ್ಷಗಳಿಂದ ಹೊಟ್ಟೆಯ ಹುಣ್ಣಿನ ... ಆದರೆ ವೇದನೆಯು ... ಗೊತ್ತು. ನಾನು ನಾಲ್ಕು ಸಲ ಎಕ್ಸರೆ ಚಿಕಿತ್ಸೆಯನ್ನು ಹೊಂದಿದೆನು ಮತ್ತು ಇದೀ ಎರಡು ವರ್ಷಗಳಲ್ಲಿ ಕೇವಲ ಇದೀ ... ಕೆಲಸವನ್ನು ಮಾಡಲಿಲ್ಲವೆಂದೆನಿಸುತ್ತೇನೆ. ಈವತ್ತಿಗೆ ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರಿನಿಂದಾಗಿ ... ಸುಖವಾಗಿರುತ್ತೇನೆ."

ಇದರಿಂದ ವಿಷಕ್ಷಣ ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರ್ ... ಎಷ್ಟು ಜನರನ್ನು ಎಲ್ಲಾ ಕಡೆಗಳಲ್ಲಿ ... ಗುಣಪಡಿಸಿದೆ ... ಹೊಟ್ಟೆಯ ಸಂಕಟ ... ಗುಣಪಡಿಸಿದೆ. ... ಭಯಂಕರವಾದ ಅಜೀರ್ಣ ... ಹೊಟ್ಟೆನೋವು ... ಚಿಹ್ನೆಗಳನ್ನು ಗುಣಪಡಿಸದೆ? ... ಒಂದು ಬಾಟ್ಲಿ ... ದಸ್ಕತನ್ನು ನೋಡಿರಿ.

Alex C. Maclean

ಬಾಟ್ಲಿಯ ಮೇಲೆ ಮತ್ತು ಪೆಟ್ಟಿಗೆಯ ಮೇಲೆ ಈ ದಸ್ಕತು ಇದ್ದರೆ ಮಾತ್ರ ಅದು ನಿಜವಾಗಿ ಉತ್ತಮವಾದ ಮೆಕ್ಲೀನ್ ಬ್ರಾಂಡ್ ಸ್ಟೋಮಕ್ ಪೌಡರು. ಪೆಟ್ಟಿಗೆಯ ಮೇಲಿರುವ ಕೆಂಪು ಸೀಲನ್ನು ನೋಡಿರಿ. ಮಾತ್ರೆಯಾಗಿಯಾಗಲೀ ಹುಡಿಯಾಗಿಯಾಗಲಿ ... ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ. ... ನಕಲಿ ... ಸಂಕಟವನ್ನು ಇನ್ನೂ ವೃದ್ಧಿಸುತ್ತದೆ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

35

ಹೈದರಾಬಾದದ ಹಿಂದೂಗಳ ಕರುಣ ಕಥೆ

[೫ನೇ ಪುಟದಿಂದ ಮುಂದುವರಿದುದು]

ಸತ್ಯಾಗ್ರಹ ಶಿಬಿರದ ಪ್ರಕಟಣೆ

ಶೋಲಾಪುರದಲ್ಲಿ ನಡೆದ ಮಾರಾಮಾರಿಯ ಘಟನೆಗಳಿಂದ ಈಗ ಎಲ್ಲರಿಗೆ ಪಶ್ಚಾತ್ತಾಪವಾಗಿರುವುದು. ಶಾಂತಿಯನ್ನು ಕಾಪಾಡಬೇಕೆಂದು ಸ್ಥಳೀಯ ಮುಖಂಡರು ಜನತೆಯಲ್ಲಿ ಭಿನ್ನವಿಸಿಕೊಂಡಿದ್ದಾರೆ. ಸತ್ಯಾಗ್ರಹ ಆಂದೋಲನವು ಸತ್ಯ ಮತ್ತು ಅಹಿಂಸೆಯಿಂದಲೇ ನಡೆಯುತ್ತಿರುವುದಾಗಿ ಸತ್ಯಾಗ್ರಹ ಶಿಬಿರವು ಪ್ರಕಟಿಸಿ, ಮೊದಲಿನಂತೆ ಇನ್ನು ಮುಂದಕ್ಕಾದರೂ ಶಾಂತವಾತಾವರಣವು ಇರಬೇಕೆಂದೂ, ಅದಿರುವುದರಿಂದಲೇ ಸತ್ಯ ಪಕ್ಷದ ಜಯವಾಗುವುದೆಂದೂ ಅಂದಿದೆ. ಶಿಬಿರವು ಮಾರಾಮಾರಿಯಲ್ಲಿ ಸತ್ತವರ ಕುಟುಂಬಗಳೊಡನೆ ಸಹಾನುಭೂತಿಯನ್ನು ಸೂಚಿಸಿದೆ.

ಹೈದರಾಬಾದಿಗೆ ರವಾನೆ

ರೋಹತ ಗುರುಕುಲದ ಶ್ರೀ ಸ್ವಾಮಿ ಬ್ರಹ್ಮಾನಂದರ ೧೨೬ ಸತ್ಯಾಗ್ರಹಿಗಳ ದಳವು ಮೇ ೨೨ರ ದಿನ ಗುಲ್ಬರ್ಗಕ್ಕೆ ಹೊರಟುಹೋಯಿತು. ಪಂಜಾಬದ ಪ್ರಸಿದ್ಧ ಸೀಖ ಮುಖಂಡರಾದ ಬಾಬಾ ಘುದನಸಿಂಗ ಗಾಗಾರರವರು ೫೦೦ ಮಂದಿ ಸತ್ಯಾಗ್ರಹಿಗಳೊಂದಿಗೆ ಹೈದರಾಬಾದಿನಲ್ಲಿ ಸತ್ಯಾಗ್ರಹ ಮಾಡುವದಕ್ಕೋಸ್ಕರ ಹೊರಟಿರುವರು. ಅಮರಾವತಿಯ ವಕೀಲರಾದ ಶ್ರೀ ಗಣೇಶರಾವ ಭಟ್ಟರು ೩೦೦ ಸತ್ಯಾಗ್ರಹಿಗಳೊಂದಿಗೆ ಉಮೇರಖೇಡದಲ್ಲಿ ಸತ್ಯಾಗ್ರಹ ಮಾಡಿ ಸೈದಾದರು. ಹೈದರಾಬಾದಿನ ವಿಖ್ಯಾತ ವಕೀಲ ಶ್ರೀ ಭಾಸ್ಕರ ಗೋಪಾಲ ಕಾಯಸ್ಥರರಿಗೆ ಒಂದು ವರ್ಷದ ಕಠಿಣ ಶಿಕ್ಷೆ ಮತ್ತು ೫೦೦ ರೂಪಾಯಿಗಳ ಜುರುಮಾನೆ ಆಗಿದೆ.

ಮಿರಜಿನಲ್ಲಿ ಹೈದರಾಬಾದ ದಿನಾಚರಣೆ

ಮೇ ೨೧ರ ದಿನ ಮಿರಜಿನಲ್ಲಿ ಹೈದರಾಬಾದ ದಿನಾಚರಣೆ ಸಂಬಂಧ ಆರ್ಯ ಸಮಾಜಗಳ ಸಭೆ ಕೂಡಿತು. ಭಾಷಣಕರ್ತರು ಹೈದರಾಬಾದ ಆಡಳಿತವನ್ನು ಟೀಕಿಸಿದಕ್ಕಾಗಿ ಸಭೆಯಲ್ಲಿದ್ದರೆ ಕೆಲವು ಮುಸಲ್ಮಾನರು ಸಿಟ್ಟಾಗಿ ಗಲಭೆ ಮಾಡಿದರು. ಇದು ಆರ್ಯಸಮಾಜಗಳ ಸಭೆಯೆಂದೂ, ಭಾಷಣಗಳನ್ನು ಕೇಳುವ ಮನಸ್ಸಿಲ್ಲದವರು ಹೊರಟು ಹೋಗಬಹುದೆಂದೂ ವಿನಯದಿಂದ ಹೇಳಿದರಾದರೂ, ಮುಸಲ್ಮಾನರು ಸಭೆ ಬಿಟ್ಟು ಹೋಗದೆ ಕಲಹವನ್ನೆಬ್ಬಿಸುವವರಾದರು. ಮತ್ತೆ ಪೋಲೀಸರು ಒಂದು ಶಾಂತಿಯನ್ನು ಕಾಪಾಡಬೇಕಾಯಿತು. ಹಾಗೆ ಪಾಟಿಯಾಲದಲ್ಲಿಯೂ ಗಲಾಟೆಯಾಗಿ ಕೆಲವರಿಗೆ ಗಾಯಗಳಾಗಿವೆ.

ಪುಸದದಲ್ಲಿ ಸತ್ಯಾಗ್ರಹ ಶಿಬಿರ

ಶೋಲಾಪುರದಲ್ಲಿ ಮಾರಾಮಾರಿ ಸಂಬಂಧ ಸರಕಾರ ನಿರ್ಬಂಧ ಹಾಕಿರುವದರಿಂದ ಶೋಲಾಪುರದ ಬದಲಿಗೆ ಪುಸದದಲ್ಲಿ ಸತ್ಯಾಗ್ರಹ ಶಿಬಿರವನ್ನು ತೆರೆಯಲಾಗಿದೆಯೆಂದೂ ಸತ್ಯಾಗ್ರಹಿಗಳು ಅಲ್ಲಿಗೆ ಬರಬೇಕೆಂದೂ ಅಂತರಾಷ್ಟ್ರೀಯ ಆರ್ಯನ ಲೀಗಿನ ಕಾರ್ಯದರ್ಶಿ ಪ್ರೊಫೆಸರ ಸುಧಾಕರರವರ ಪ್ರಕಟಿಸಿದ್ದಾರೆ. ಸತ್ಯಾಗ್ರಹಿಗಳು ಸತ್ಯನಿಷ್ಠರೂ ಅಹಿಂಸಕರೂ ಆಗಿರಬೇಕೆಂದು ಪ್ರತ್ಯೇಕ ಬೋಧಿಸಿದ್ದಾರೆ. ಸತ್ಯಾಗ್ರಹವನ್ನು ಮೊದಲಿಗಿಂತಲೂ ಇಮ್ಮಡಿ ನಾಲ್ಮಡಿ ಸ್ಫೂರ್ತಿ ಉತ್ಸಾಹಗಳಿಂದ ನಡೆಸುವ ವ್ಯವಸ್ಥೆ ಆಗಿದೆ. ಶಿಬಿರವನ್ನು ಶೋಲಾಪುರದಿಂದ ಪುಸದಕ್ಕೆ ಒಯ್ದಿರುವುದರಿಂದ ಶೋಲಾಪುರದ ಶಿಬಿರ ಸ್ಥಾನವು ನಿರ್ಜನವಾಗಿ ಹಾಳುಬಿದ್ದಂತೆ ಕಾಣುತ್ತದೆ. ಸತ್ಯಾಗ್ರಹಿಗಳೆಲ್ಲರು ಶೋಲಾಪುರ ಬಿಟ್ಟು ಹೊರಗೆ ಹೋಗಿರುವರು.

ಬೊಂಬಾಯಿ ಸರಕಾರದೊಡನೆ ವಿನಂತಿ

ಹೈದರಾಬಾದ ಸತ್ಯಾಗ್ರಹವು ಅಹಿಂಸೆಯಿಂದಲೇ ನಡೆಯುತ್ತಿರುವುದು. ಸತ್ಯಾಗ್ರಹಿಗಳು ಸತ್ಯ ಮತ್ತು ಅಹಿಂಸೆಯ ಪ್ರತಿಜ್ಞಾಬದ್ಧರಾಗಿದ್ದಾರೆ. ಕಳೆದ ಆರು ತಿಂಗಳುಗಳಿಂದ ಶೋಲಾಪುರದ ವಾತಾವರಣವು ಶಾಂತವಾಗಿಯೇ ಇತ್ತು. ಶಾಂತಿಯನ್ನು ಕಾಪಾಡಲಿಕ್ಕೆ ಸರಕಾರದೊಂದಿಗೆ ಸತ್ಯಾಗ್ರಹ ಸಮಿತಿಯು ಸಹಕರಿಸಲು ಹಿಂದಿನಂತೆ ಮುಂದೂ ಸಿದ್ಧವಾಗಿರುವುದು. ಆದ್ದರಿಂದ ಸತ್ಯಾಗ್ರಹ ಶಿಬಿರದ ಮೇಲೆ ಶೋಲಾಪುರ ಜಿಲ್ಲಾಧಿಕಾರಿಗಳು ಹಾಕಿದ ನಿರ್ಬಂಧ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ದಿಲ್ಲಿಯಿಂದ ಅಂತರಾಷ್ಟ್ರೀಯ ಆರ್ಯ ಮಹಾಸಭೆಯು ಬೊಂಬಾಯಿ ಸರಕಾರಕ್ಕೆ ಪ್ರಾರ್ಥನಾ ಪತ್ರವನ್ನು ಕಳುಹಿಸಿರುವುದು.

ಸೇನಾಪತಿ ಬಾಪಟರ ಆತ್ಮಬಲಿಯ ನಿರ್ಧಾರ

ರಾಷ್ಟ್ರೀಯ ಐಕ್ಯ ಮತ್ತು ಸ್ವಾತಂತ್ರ್ಯದ ಸಂಪಾದನೆಯ ಉದ್ದೇಶದಿಂದ ಸೇನಾಪತಿ ಬಾಪಟರು ಪೂನೆಯ ಸಂಗಮ ನದಿಯಲ್ಲಿ ಬಿದ್ದು ಆತ್ಮ ಬಲಿಕೊಡುವ ತಮ್ಮ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಉತ್ತಮ ಧ್ಯೇಯ ಸಾಧನೆಗೆ ಇಂಥ ಬಲಿಗಳಾಗುವುದು ತಪ್ಪಿಲ್ಲ. ಬಲಿದಾನಗಳಾದಾಗಲೇ ಮಹತ್ವದ ಕಾರ್ಯಗಳು ಪೂರ್ಣವಾಗುತ್ತವೆ. ನನ್ನ ಬಲಿಯಿಂದ ರಾಷ್ಟ್ರೀಯ ಐಕ್ಯ ಮತ್ತು ಸ್ವಾತಂತ್ರ್ಯ ಪ್ರಾಪ್ತಿಯಾಗುವದೆಂದು ನನ್ನ ವಿಶ್ವಾಸ. ಈ ನಿರ್ಧಾರವನ್ನು ಮಹಾತ್ಮರಿಗೂ ತಿಳಿಸಿದ್ದೇನೆ. ಸರಕಾರವು ನನಗೆ ಬಲಿಯಾಗಲಿಕ್ಕೆ ಬಿಡದಿದ್ದರೆ ಜೈಲಿನಲ್ಲಿ ಸಾಯುವೆನು ಎಂದು ಪ್ರಕಟಿಸಿದ್ದಾರೆ.

ಬೊಂಬಾಯಿ ಸರಕಾರದ ಪ್ರಕಟಣೆ

ಶೋಲಾಪುರದಲ್ಲಿ ಆರ್ಯ ಸತ್ಯಾಗ್ರಹಿಗಳ ಮೇಲೆ ನಿರ್ಬಂಧ ಹಾಕಿರುವುದನ್ನು ಕೆಲವು ಪತ್ರಕಗಳು ಟೀಕಿಸಿವೆ. ಪರಂತು ಜಿಲ್ಲಾಧಿಕಾರಿಗಳು ಸರಕಾರದ ಪೂರ್ಣ ಸಮ್ಮತಿ ಪಡೆದೇ ಈ ನಿರ್ಬಂಧವನ್ನು ಹಾಕಿದವರು. ಪ್ರಥಮ ಉದ್ದೇಶವು ಸತ್ಯಾಗ್ರಹಿಗಳ ಕಡೆಯಿಂದ ಬಂದಿದೆ. ಆದರೆ ನಂತರ ಮಾರಾಮಾರಿಯ ಅನಂತರ ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಸತ್ಯಾಗ್ರಹ ಶಿಬಿರವು ಸರಕಾರದೊಂದಿಗೆ ಸಹಕರಿಸಿ ಸರಕಾರಿ ಆಜ್ಞೆಗಳನ್ನು ಪಾಲಿಸಿದ ಬಗ್ಗೆ ಸರಕಾರಕ್ಕೆ ಬಹಳ ಸಂತೋಷವಾಗಿದೆ. ಸತ್ಯಾಗ್ರಹಿಗಳು ಅಹಿಂಸಕರೂ, ಶಾಂತಿಪ್ರಿಯರೂ ಇದ್ದದ್ದು ಸರಕಾರದ ಲಕ್ಷ್ಯಕ್ಕೆ ಬಂದಿರಲಿಲ್ಲ. ಈ ನಿರುಪಾಯವಾಗಿ ನಿರ್ಬಂಧವನ್ನು ಹಾಕಬೇಕಾಯಿತು. ಆದರೂ ಈ ನಿರ್ಬಂಧವು ಶೋಲಾಪುರ ಜಿಲ್ಲೆಯ ಹೊರಗಿನಿಂದ ಬರುವ ಸತ್ಯಾಗ್ರಹಿಗಳ ಮೇಲೆ ಮಾತ್ರ ಇರುತ್ತದೆ. ಶೋಲಾಪುರದಲ್ಲಿ ಶಾಂತತೆ ನೆಲೆಸುವ ತನಕ ಸ್ವಲ್ಪ ಸಮಯದವರೆಗೆ ಮಾತ್ರ ಈ ನಿರ್ಬಂಧವಿರುವುದು ಎಂದು ಬೊಂಬಾಯಿ ಸರಕಾರದ ಪ್ರಕಟಣಾ ಖಾತೆಯ ಅಧಿಕಾರಿಗಳ ಪ್ರಕಟಣೆ ಕೊಟ್ಟಿದ್ದಾರೆ. ಈ ಪ್ರಕಟಣೆಯಿಂದ ಎಷ್ಟೋ ತಪ್ಪಭಿಪ್ರಾಯಗಳು ದೂರವಾಗಬಹುದಾಗಿದೆ.

ಕೆನಡದಲ್ಲಿ ಬ್ರಿಟಿಷ ರಾಜದಂಪತಿಗಳು

ರಾಜದಂಪತಿಗಳ ಒಟ್ಟಾವಾದಿಂದ ಒಂಟೇರಿಯೊಕ್ಕೆ ಬಂದು ಅಲ್ಲಿಯ ಪ್ರಾಂತಿಕ ಸರಕಾರದ ಆದರ ಸತ್ಕಾರಗಳನ್ನು ಪಡೆದರು. ಡಿಯೋನೆಕ್ವಿನ್ಸ್ ಎಂದು ಪ್ರಸಿದ್ಧವಾದ ಒಬ್ಬ ತಾಯಿಗೆ ಒಂದೇ ಗರ್ಭದಲ್ಲಿ ಹುಟ್ಟಿದ ಐವರು ಮಕ್ಕಳಿಗೆ ಭೇಟಿಕೊಟ್ಟರು. ಮಹಾರಾಣಿಯವರು ಆ ಮಕ್ಕಳಿಗೆ ಅಂಗಿಗಳನ್ನು ಕೊಟ್ಟು ಬಹುಮಾನಿಸಿದರು. ಒಂಟೇರಿಯೋದ ಇನ್ನೂ ಅನೇಕ ಅದ್ಭುತಗಳನ್ನು ನೋಡಲಿಕ್ಕಾಗದುದಕ್ಕಾಗಿ ಮಹಾರಾಜರು ದುಃಖ ಪ್ರದರ್ಶನ ಮಾಡಿದರು. ಅಲ್ಲಿಂದ ಮುಂದೆ ರಾಜದಂಪತಿಗಳು ಕೆನಡದ ಬೇರೆ ಬೇರೆ ಪ್ರಾಂತಗಳನ್ನು ಸಂಚರಿಸಿದರು. ಜೀವನ ಸಾಫಲ್ಯದ ಅನೇಕ ವಿಷಯಗಳ ಕುರಿತು ಅವರು ಕೊಟ್ಟ ಭಾಷಣಗಳು ಜನರಲ್ಲಿ ನವೀನ ಆಸೆ ಭರವಸೆಗಳನ್ನು ತುಂಬಿಸಿವೆ.

ಥಟ್ಟನೇ ಬರುವ ಶೀತವು ನಿಮೋನಿಯಾವಾಗಿ ಪರಿಣಮಿಸಬಹುದು

ಥಟ್ಟನೇ ಬರುವ ಶೀತವು ಬ್ರೊಂಕೈಟಿಸ್, ನಿಮೋನಿಯಾ ಅಥವಾ ಶ್ವಾಸಕೋಶಗಳನ್ನು ದುರ್ಬಲಗೊಳಿಸುವ ಇತರ ರೋಗಗಳನ್ನುಂಟುಮಾಡಬಹುದು. ಆದುದರಿಂದ ಶೀತದ ಲಕ್ಷಣಗಳಾದ ಚಳಿ ಅಥವಾ ಸೀನುವಿಕೆ ಬಂದೊಡನೆ ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ ನಿಮ್ಮ ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಆಳವಾಗಿ ಪ್ರವೇಶಿಸುತ್ತವೆ. ಈ ಪ್ರಕಾರವಾಗಿ ನಿಮ್ಮ ಶ್ವಾಸಕೋಶಗಳನ್ನು ಬೆಚ್ಚಗೆ ಮಾಡಿ ಬಲಗೊಳಿಸುತ್ತದೆ. ವಿಷ ಕ್ರಿಮಿಗಳನ್ನು ನಾಶಮಾಡುತ್ತವೆ. ಕಂಠನಾಳವನ್ನು ಗುಣಪಡಿಸುತ್ತದೆ, ವಾಯು ಚೀಲಗಳನ್ನು ಗುಣಪಡಿಸಿ ಎದೆಯನ್ನೂ ಶ್ವಾಸಕೋಶಗಳನ್ನೂ ಬಲಪಡಿಸುತ್ತದೆ.



ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ 1—0—0ರಂತೆ ಮಾರುತ್ತಾರೆ.

ಏಜಂಟ್ಸ್—
ಮೆಸರ್ಸ ಬಾಥಾ ಮತ್ತು ಕಂಪೆನಿ,
ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಪೆಪ್ಸನ್ನೇ ಸೇವಿಸಿರಿ

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ (೧) ಉತ್ತಮ ಬಣ್ಣದ ಸಾಮ್ಪಲ್ಸಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು (೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವದು (೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ತೋರಿಕಾರ್ಡುಗಳ ಕೊಡಲಾಗುವದು (೪) ಸ್ಪೇಷಲ್ ಡಲಿವರಿ ರೋಜು ... ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು ... ಭಾಷೆಗಳಲ್ಲಿ ...

ವಿವರಕ್ಕಾಗಿ ಈ ಕೆಳಗಿನವರಿಗೆ ಬರೆಯಿರಿ

ಎಸ್. ಎಮ್. ನಾಫ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ.

ಕೆಸ್ನವರ ಏಜಂಟ—ಪಿ. ಡಿಸೋಜ್, ಬಸ್ರೂರು   ಗದಗ—ಮಿ. ಎಸ್. ನಾಯ್ಕ
ಮೈಸೂರು ಕೊಡಗು ದಕ್ಷಿಣ ಕನ್ನಡ ಏಜಂಟ—ಡಾ ಕೆ ಭಾಸ್ಕರ ಶೈ.
ಸ್ಪೆಶಲ್ ಏಜಂಟ—ಬಿ ಶೆಣೈ, ಹೊನ್ನಾವರ

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್.

ಜವುಳಿ ದಲಾಲ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ... ಉತ್ತೇಜನಗೊಳಿಸುತ್ತದೆ. ಎಲ್ಲರ ... ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ವೀಸಕ್ಕೆ ರೂ 3-೬-0 ನಡಿನ ಮಾರ್ಕ ಸಾರಥಿ ನಸ್ಯ 1 ವೀಸಕ್ಕೆ ರೂ ೩ 0 0
(ವಿ ಪಿ ಮತ್ತು ರೈಲ್ವೆ ಚಾರ್ಜ ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ—
ಎ ಪಿ ಸಾರಥಿ
ಮೆನ್ಯುಫೆಕ್ಚರರ್ಸ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ ನಂಬ್ರ ೩೭ ಮದ್ರಾಸು

★ ಹಳ್ಳಿಯ ಹತ್ತುಸಮಸ್ತರು ★

ಪ್ರಸ್ತಾವನೆ ಅಥವಾ ಕಾಂಗ್ರೆಸು ಚುನಾವಣೆ.

[ಲೇಖಕ ಶಿವರಾಮ ಕಾರಂತ]

ಉಡುಪಿಯ ವೈಕುಂಠರ ಕಾಂಗ್ರೆಸು ಲಿಸ್ಟಿನಾಗಿ ಆರು ತಿಂಗಳು ಸೆರೆಯಾಯಿತು. ನಾಗಯ್ಯ ಸೆಟ್ಟರವರು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದಾರೆ. ನಮ್ಮೂರ ಕಮಿಟಿ ಚುನಾವಣೆ ತುಸು ಮೊದಲು ಆಗಿದ್ದರೆ ತಾಲೂಕು, ಜಿಲ್ಲಾ ಕಮಿಟಿಯ ತನಕ ಏರಿ ಮೆರೆಯುವ ಸುಯೋಗ ನಾಗಯ್ಯ ಸೆಟ್ಟರರಿಗಿತ್ತು. ಆದರೆ ಮುಂದಿನ ವರ್ಷವಾದರೂ ಅವರಿಗೆ ಆ ಆಸೆಯಿದೆ. ಈ ಬಾರಿ ರಾಮರಾಯರ ಉಪದೇಶದಂತೆ ಚನ್ನಪ್ಪಮಯ್ಯರು ಸುಮ್ಮನಾಗಿದ್ದಾರೆ. ಮನಸ್ಸಿನಲ್ಲಿ ತಟಸ್ಥರಾಗಿದ್ದಾರೆ. "ನೋಡುವ, ಮುಂದಿನ ವರ್ಷ, ಅಗಲೂ ಹೀಗೇ ಆದರೆ ನಮ್ಮ ಗ್ರಾಮ ಬೇರೆಯೇ ಎಂದು ಹೇಳಿ ಇನ್ನೊಂದು ಕಮಿಟಿಯನ್ನು ಮಾಡಿ, ರಸ್ತೆಯ ಮೂಡುಗ್ರಾಮ ಬೇರೆ, ಪಡುಗ್ರಾಮ ಬೇರೆಯೇ ಮಾಡಿಬಿಡಬೇಕು. ಪಡುಗ್ರಾಮದಲ್ಲಿ ನಾಗಯ್ಯ ಕಾಲಿರಿಸುವ ಹಾಗಿಲ್ಲವಷ್ಟೆ"—ಎಂದು ಸಮಾಧಾನ ತಂದುಕೊಂಡಿದ್ದರು.

ಇತ್ತ ಮುದರನ ಬಿಡುಗಡೆಯಾಯಿತು. ಸಾಕಷ್ಟು ಹಣವನ್ನಾಯಿಸಿ ಮೂಸೆಬ್ಯಾರಿಗಳೂ ರಿಮಾಂಡಿನಿಂದ ಬಂದರು. ಪೋಲೀಸಿನವರಿಗೆ ಸಾಕಷ್ಟು ಫಾಯಿದೆ ಆಯಿತು ಎಂದು ಜನರು ಆಡಿಕೊಳ್ಳುತ್ತಾರೆ. ಅಂತು ಕಂಬಳಿ ವ್ಯಾಪಾರಿ ಯಾರಿಗೆ ಮೇಲಾಗಿಯೋ ಏನೋ—ಕಗ್ಗಂಟೇ ಬೇಧವಾಗಿ ತೀರಿಕೊಂಡನು. ಮೂಸೆಬ್ಯಾರಿಗಳ ಮನಸ್ಸಿನಲ್ಲಿ 'ನನ್ನನ್ನು ಪಜೀತಿಗೆ ಇಳಿಸಿದ ನಾಗಯ್ಯನನ್ನು ಹಗಲು ಸೀಳುತ್ತೇನೆ'' ಎಂಬ ಒದ್ದ ದ್ವೇಷಕ್ಕೆ ಕಾರಣವಾಯಿತು. ಆದರೆ ತತ್ಕಾಲಕ್ಕೆ ಯಾವ ವಿಷಯವೂ ಹೆಚ್ಚಾಗಿ ಕಾಣುವುದಿಲ್ಲ. ಅಂತೂ—ಇಲ್ಲ ಎನ್ನುವ ಹಾಗಿಲ್ಲ. ಪುಟ್ಟರಂಗಿಯ ವಿಚಾರದಲ್ಲಿ ಚನ್ನಪ್ಪಯ್ಯನ ದೀಪಾವಳಿಯಾಗಲ್ ಎಷ್ಟು ದಿವಸ ಎಂದು ಬಾಯಿ ತೆರೆದವರ ಹಲ್ಲನ್ನೊಂದಿದ್ದಾರೆ. ಗಂಗೊಳ್ಳಿಯವರು ಅಕ್ಷಣ … ನಾತ ಕೇಳಿ ೧೦೦೦ ದ … ತೆರೆದುಕೊ ತರ. ಈಗ ನಮ್ಮೂರಿಗೆ ಆಗಾಗ ಬಂದು ಹೋಗುತ್ತಿದ್ದಾರೆ. ಅವರ ಹಣ ಮತ್ತೇನಿಲ್ಲ. ಚನ್ನಮಯ್ಯರು ಬಂಗಲೆ ಕಟ್ಟಿಸಲ್ಲಿ ಎದುರಿಗೆ ಒಂದು ತುಂಡು ಜಾಗವನ್ನು ತೆಗೆದುಕೊಂಡ ಅವರು ಕುಳಿತಿದ್ದಾರೆ— ಅಲ್ಲಿ ಪುಟ್ಟರಂಗಿಯನ್ನು ಚಿನ್ನದಲ್ಲಿ ಸುಂಗಮ … ತಂದು ಸ್ಥಾಪಿಸಿ ಅವಳ ಮುಖ ಮೋಟತ್ತದ ಹಾಗೆ ಮಾಡಿಸುತ್ತೇನೆ'' ಎಂಬ ಚಟ ತೀರ್ಮಾನಮಾಡಿದ್ದಾರೆ. ನಮ್ಮ ಕೆರೆಕಟ್ಟೆ ನರಸಿಂಹನ ಯತ್ನಗಳು ಹಣವಿಲ್ಲದೆ ಮುಂದರಿದು … "…ಲ'' ಲಸೆ ಬಿಟ್ಟ ಹಾಗೆಯೇ ಎಂದು … ಸ್ಸು ಹೇಳತೊಡಗಿದೆ. ಅದರ ಬೆನ್ನಿಗೇ ಡಿಸ್ಟ್ರಿಕ್ಟ್ ಬೋರ್ಡು ಶಾಲೆ. ಇವನು ತತ್ಕಾಲದ ಮಟ್ಟಿಗೆ ತರವನ್ನು ಕೆಳಗೆ ಇಳಿಸಿದ ಹಾಗೆ.

ಇದೇ ಸಮಯದಲ್ಲಿ ನಮ್ಮ ಜಿಲ್ಲಾ ಬೋರ್ಡಿನ ಹೊಸ ಚುನಾವಣೆ ಬಂದಿತು. ಇದರ ಗಾಳಿ ಮಂಗಳೂರಿನಲ್ಲಿ ಬಲವಾಗಿ ಬೀಸತೊಡಗಿತು. ದೇ| ಭ| ವೈಕುಂಠ ನಾಯ್ಕರು ಇನ್ನೊಮ್ಮೆ ನಮ್ಮೂರಿಗೆ ಬಂದರು. ಅವರು ಜನ್ನಪ್ಪಗಳಲ್ಲಿ ಕುಳಿತು ಮಾತನಾಡುತ್ತಿರುವುದನ್ನು ನಾಗಯ್ಯನವರು ಕಂಡಿದ್ದಾರೆ. "ನಾಯ್ಕರ ಸವಾರಿ ಯಾವಾಗ ಬಂದಿತು? ಈ ಸಾರಿ ಒಂದು ಲೆಕ್ಚರು ಹೇಳಿದರೆ ಚೆನ್ನಾಗಿತ್ತು.'' ಎಂದು ಕೇಳಿದರು. "ಬ್ಯಾಡಯ್ಯ— ಒಂದು ಲೆಕ್ಚರು ಹೇಳಿಯೇ ಆ ದಿವಸ ನಿಮ್ಮ ಊರಿನಲ್ಲಿ ಆದ ಗದ್ದಲ ಸಾಕು. ಕಾಂಗ್ರೆಸು ಸತ್ಯ, ಅಹಿಂಸೆಯಿಂದ ಸಾಗಬೇಕಾದ್ದು, ನಿಮ್ಮಲ್ಲಿ ಗುಲ್ಲು ಗದ್ದಲವಿಲ್ಲದೆ ನಡೆಯುವ ವ್ಯಾಪಾರವಲ್ಲ'' ಎಂದರು.

ನಾಯ್ಕರು ಬಂದವರು ಉಡುಪಿಗೆ ಹೋದರು. ಅವರು ಹೋದ ಮರುದಿವಸ ಡಾಕ್ಟರರಿಗೆ ಸಂಗತಿ ತಿಳಿಯಿತು. ಅವರು ಚನ್ನಪ್ಪಯ್ಯನನ್ನು ಕರೆದು "ನಿನ್ನೆ ನಾಯ್ಕರು ಬಂದಿದ್ದರು, ಡಿಸ್ಟ್ರಿಕ್ಟ್ ಬೋರ್ಡಿಗೆ ನಾಮಿನೇಶನು ಹಾಕಲು ಎಂದು ಕಾಣುತ್ತದೆ. ಯಾರನ್ನೂ ಕರೆಯದೆ ಅವರವರಷ್ಟಕ್ಕೆ ಬಂದು ಹೋದುದನ್ನು ಕಂಡರೆ ಒಳಗಿನ ಏರ್ಪಾಡು ಏನೋ ಆಗಿಯದೆ ಎಂದು ಕಾಣುತ್ತದೆ. ಏನೂ ಇರಲಿ—ನೀವು ಒಂದು ನಾಮಿನೇಶನು ಪೇಪರು ಕಾಂಗ್ರೆಸ್ಸಿಗೆ ಹಾಕಿರಿ''— ಎಂದು ಸೂಚಿಸಿದರು.

ಎರಡು ದಿವಸದಲ್ಲಿ ಉಡುಪಿಗೆ ಹೋಗಿ ಬಂದ ನಾಗಯ್ಯ ಸೆಟ್ಟರು "ಹು ವೈಕುಂಠನಾಯ್ಕರು ನಮಗೆ ಟೊಪ್ಪಿ ಹಾಕಲು ಬಂದದ್ದು. ಜನ್ನಪ್ಪಗಳಿಂದ ನಾಮಿನೇಶನು ಬರೆಯಿಸಿಕೊಂಡು ಹೋದರಂತೆ''—ಎಂದು ಕೆರೆಕಟ್ಟೆ ನರಸಿಂಹಯ್ಯನನ್ನು ಕರೆದು ಮಾತನಾಡಿದರು. "ನೀವು ಹಾಕಿರಿ'' ಎಂದು ಉಪದೇಶವಾಯಿತು. ನಾಗಯ್ಯ ಜನ್ನಪ್ಪಗಳಲ್ಲಿಗೆ ಹೋಗಿ "ಸಾಹುಕಾರರೇ—ಒಳ್ಳೇ ನಂಬಿಕೆಯಿದೆ. ಕಾಂಗ್ರೆಸು ಅಧ್ಯಕ್ಷ ನಾನು—ಒಂದು ಸುದ್ದಿ ತಿಳಿಸದೆ ಬಂತಿ, ಜಾತಿ ಒಂದಾಗಿ ನಾಮಿನೇಶನ ಹಾಕಿದ್ದೇನು? ನಾನು ನಂದ ಕಳಿಸಿದ್ದೇನೆ. ನೀವು ನಿಮ್ಮದು ಹಿಂದೆಗೆಯಿರಿ. ಇಲ್ಲವಾದರೆ ನಾಗಯ್ಯನ ಸ್ನೇಹ ತಪ್ಪಿತು ಎಂದು ತಿಳಿಯಿರಿ'' ಎಂದು ನೋಟೀಸ ಕೊಟ್ಟು ಹೋದರು. ಜನ್ನಪ್ಪಗಳಿಗೆ ಮಾರ್ಗವಿಲ್ಲ. "ನನ್ನದ ಹಿಂದೆಗೆಯಿರಿ'' ಎಂದು ಕಾಗದ ಬರೆದರು. ಅದೇ ದಿವಸ ನುಮರ, ಮೂಸೆಬ್ಯಾರಿ, ಕನ್ನಪ ಪೈರ ನಾಗಯ್ಯ ಸೆಟ್ಟರು—ಇಷ್ಟು ಜನ ಒಂದು ಸೀಟಿಗೆ ನಾಮಿನೇಶನ ಹಾಕಿ ಕುಳಿತರು. ಎರಡು ದಿವಸದ ಒಳಗೆ ನಮ್ಮ ಊರಿಗೆ ದಿಕ್ಕೆ ಮೀರಿ ಮಂದಿ ದೇಶಭಕ್ತರು, ಮಂಗಳೂರು, ಉಡುಪಿ, ಕುಂದಾಪುರದಿಂದ ಬಂದ ನೆರೆಯ ಬಾರಂಭಿಸಿದರು. ಜನ್ನಪ್ಪಗಳಿಗೆ ತಿರುಗಿ "ನೀವು ಹಿಂದೆಗೆಯಬಾರದು'' ಎಂದು ಹೇಳಲು ಕೆಲವು ದೇಶಭಕ್ತರು—ಗಂಗೊಳ್ಳಿ ಸಾಹುಕಾರರಿಗೇ ಬೆಂಬಲಕೊಡಿ ಎನ್ನಲು ಕೆಲವು ದೇಶಭಕ್ತರು. ಇನ್ನು ನಾಗಯ್ಯ ಸೆಟ್ಟರೇ ಈ ಸಾರಿ ನೀವು ಈ ಇಲೆಕ್ಷನಿನಲ್ಲಿ ತಂಟೆಮಾಡಕೂಡದಂತೆ ಎಂದ ಇಬ್ಬರೂ—ಹೀಗೆ ದೇಶಸೇವೆ… ತೆರೆಗಳ ಮೇಲೆ ತೆರೆಗಳ ಬೀಸತೊಡಗಿದುವು.

ಜನ್ನರಲ್ಲಿ ಉಡುಪಿ ನಗರ ಬಲರಾಮರಾಯರು ಕಾಂಗ್ರೆಸು ಪಾರ್ಟಿಗೆ ಸೇರಿ ನಾಮಿನೇಶನ ಕೊಟ್ಟಿದ್ದಾರೆಂದು ಸುದ್ದಿ ಬಂತು.

ನಾಲ್ಕು ದಿವಸದ ಬಳಿಕ ನಾಗಯ್ಯ ಸೆಟ್ಟರ ಮತ್ತು ಚನ್ನಮಯ್ಯರ ನಾಮಿನೇಶನ ಸರಕಾರಿ ಆಫೀಸಿಗೆ ಬರಲೇ ಇಲ್ಲವೆಂದು ಸುದ್ದಿಯಾಯಿತು. ಉಳಿದವರಲ್ಲಿ ಕಾಂಗ್ರೆಸು ಟಿಕೆಟ್ ಪಡೆದವರು ಒಬ್ಬರನ್ನು ನಮ್ಮೂರ ಸಲುವಾಗಿ ಆರಿಸುವುದಾಗಿ ತೀರ್ಮಾನಿಸಿದರು. ನಮ್ಮ ಊರವರ ಪೈಕಿ ಉಳಿದವರು ಮೂರು: ಮೂಸೆಬ್ಯಾರಿ, ಹೊರಗಿನವರ ಪೈಕಿ ಉಡುಪಿ ಬಲರಾಮರಾಯರು, ಗಂಗೊಳ್ಳಿ ಸಾಹುಕಾರರು.

ರಾಮನಾಯ್ಕರು ಬಹಳ ಪ್ರಯತ್ನ… ನಮ್ಮೂರಿನ ಉಮೇದುವಾರರಲ್ಲಿ ಒಂದು ಅವರನ್ನು ಹಿಂದೆಗೆಯಿಸುವ ಪ್ರಯತ್ನಗಳನ್ನೆಲ್ಲಾ ನಡೆಸಿದರು. ಯಾವುದೂ ನಡೆಯಲಿಲ್ಲ. ಎಲ್ಲರೂ ಗಟ್ಟಿಯಾಗಿ ಕುಳಿತರು. ಅಂತು ನಮ್ಮೂರಿನವರನ್ನು ಕೇಳದೇ ನಾಮಿನೇಶನ್ ತೊಡಗಿಸಿದ ಪಕ್ಕೆ ನಾಗಯ್ಯ ಸೆಟ್ಟರೂ ಚೆನ್ನಪ್ಪಯ್ಯರೂ ಡಾಕ್ಟರರೂ ಕಡಿಕಡಿಯಾದರು. ಆ ದ್ವೇಷಿ ಇವರ ನಾಮಿನೇಶನ. ತಡವಾಗಿ ಬಂದಿದೆ ಬಲ್ಳಿ ಸುಳ್ಳಾಯಿತೋ ಏನೋ!

ಡಾಕ್ಟರರು ಬಹಳ ನೊಂದು ನಾಗಯ್ಯ ಸೆಟ್ಟರಿಗೂ, ಚನ್ನಪ್ಪಯ್ಯಗೂ ರಾಜಿಮಾಡಿಸಿ— ನಮ್ಮ ಊರಿನ ಕಡೆಯಿಂದ ನಾಗಯ್ಯ ಸೆಟ್ಟರನ್ನಾರಿಸಿದರೂ ಚಿಂತೆಯಿಲ್ಲ, ಮಯ್ಯರಾದರೂ ಚಿಂತೆಯಿಲ್ಲ ಪಾಸಗಿಯಿಂದ ನಿಲ್ಲಬೇಕು. ಮದಾರ, ಮೂಸೆಗಳ ಹೆಸರು ಮುಂದೆ ಬರುವುದಲ್ಲ. ಅದರೆ ಎಂದೂ ಊರಿನ ಹೊರಗಿನವರು ನಮ್ಮೂರಿನ ಪ್ರತಿನಿಧಿಗಳಾಗುವುದು ಬೇಡ ಎಂದು ಸಾರತೊಡಗಿದರು. ಆದರೆ ಇಬ್ಬರಲ್ಲಿ ಯಾರೂ ಎಂಥ ವಿಚಾರ ತೀರ್ಮಾನವಾಗುವುದು ತುಸ ಕಷ್ಟವಾಯಿತು.

ಕಿರಗೂಡ್ನ್ ವೈಕುಂಠನಾಯ್ಕರು ನಮ್ಮೂರಿಗೆ ಬಂದರು— ಹೋಗಲಿ ನೀವು ನೀವು ಜಗಳ ಮಾಡಬಾರದು. ನಿಮ್ಮ ಊರಿನ ಗಂಗೊಳ್ಳಿ ರಾಮನಾಯ್ಕರನ್ನು ಆರಿಸುವ— ರಾಜಿಯಾದ ಎಂದು ಸೂಚಿಸಿದರ. ವೈಕುಂಠನಾಯ್ಕರಿಗೆ ಮರ್ಯಾದೆಯಿದ್ದ ಊರಿಗೆ ಹೋಗಲು ಸಾಧ್ಯವಾಗಲಿಲ್ಲ. ಪ್ರಶ್ನೆಯ ತೀರ್ಮಾನವು ಆಗಲಿಲ್ಲ. ಅಂತು ನಮ್ಮವರು ಕಣ್ಣಿಗೆ ಕಾಣಿಸುವ ನಾಳಿನ ಹಾದಿಯೋಚಿಸಿದರು. ನಾಗಯ್ಯ ಸೆಟ್ಟರಿಂದ ಕಾಂಗ್ರೆಸ್ಸು ಅಧ್ಯಕ್ಷತನಕ್ಕೆ ರಾಜಿನಾಮೆ ಹೋಯಿತು.

ಮೇಲಿನ ಕಮಿಟಿಯವರು ಬಲರಾಮರಾಯರನ್ನು ಡಿಸ್ಟ್ರಿಕ್ಟ ಸದಸ್ಯತ್ವಕ್ಕೆ ಸೂಚಿಸಿದರೆ. ಬಲರಾಮರಾಯರು ತಾನು ಯಾರೆಂದು ವಿವರವಾಗಿ ನಮ್ಮೂರವರಿಗೆ ತಿಳಿಯಪಡಿಸಿ ಕರಪತ್ರ ಹಂಚಿ ನಮ್ಮ ಜನರ ಬೆಂಬಲವನ್ನು ಕೇಳಿದರು.

ಮುದರನ ಹೆಸರನ್ನು ಕೇಳದ ಕುಮುಲಿ… ಪಾತ್ರಿಗಳು. ಮುದರನ ನಮ್ಮ ಗ್ರಾಮದಿಂದ ಬೋರ್ಡಿಗೆ ಹೋಗುವ ಮಾರ್ಗ ಬಂತೆಂದ … ನಾನು ನಿಲ್ಲಿಸುತ್ತೇನೆ— ಎಂದು ನೇರವಾಗಿ ಸ್ವತಂತ್ರ ನಿರ್ಣಯ ಹಾಕಿದರು. ಅವರ ಕೇಳಿಯು ನಾಲಗಾರರ ಮುಖಾಂತರ ಬಿಗಿಯಾಗ ತೊಡಗಿತು.

ಹದಿನೈದು ದಿವಸಗಳಲ್ಲಿ ಚುನಾವಣೆಗೆ ನಿಲ್ಲುವ ಸ್ಪರ್ಧಿಗಳ ಪಟ್ಟಿ ಹೊರಬಿದ್ದಿತ. ಕಾಂಗ್ರೆಸಿನ ಪರವಾಗಿ ಬಲರಾಮರಾಯರು. ಸ್ವತಂತ್ರವಾಗಿ ಜುವಾಂಸೋಜರು. ಬೇರೆ ಸ್ವತಂತ್ರ ಮುಂದಾಳುಗಳೆಂದರೆ ನಾಗಯ್ಯ ಸೆಟ್ಟರು, ಚನ್ನಪ್ಪಮಯ್ಯರು, ಚನ್ನಪ್ಪ ಶೇರಿಗಾರರು. ಹೀಗಿದ್ದ ಮೇಲೆ ಕೇಳಬೇಕಾಗಿಯೇ ಇಲ್ಲ— ಅವರವರ ಪಂಗಡಗಳು ಚುರುಕಿನಿಂದ ಕೆಲಸತೊಡಗಿದರು. ಸುಬ್ಬ ಪೂಜಾರಿಯೂ ಚೆನ್ನಯ ಸೇರಿಗಾರ ಎಜಂಟರಲ್ಲಿ ಒಬ್ಬ. ಇನ್ನೊಬ್ಬರು ಶ್ಯಾನುಭಾಗರು ಒಳಗಿಂದ ಜುವಾಂ ಸೋಜರಿಗೆ ನೆರವು. ನಾಗಯ್ಯ ಸೆಟ್ಟರಿಗೆ ಅವರ ಜನವಿದೆ— ಜನ್ನಪ್ಪಗಳು ಏನು ಮಾಡುತ್ತಾರೆಂಬ ನಿರ್ಣಯವಿಲ್ಲ. ಆದರೆ ಸೀತಕ್ಕೆಯವರು ಬೆಂಬಲಕ್ಕಿದ್ದಾರೆ. ಅವತ್ತಿಗಲ್ಲಿ ನರಸಿಂಹಯ್ಯನೂ ಬಂದಾನು.

ಕೊನೆಯ ಗಳಿಗೆಯಲ್ಲಿ ರಾಮನಾಯ್ಕರು ಕಾಂಗ್ರೆಸು ಬಿಟ್ಟು ಸ್ವತಂತ್ರರಾಗಿ ನಮ್ಮ ಊರಿನ ಪರವಾಗಿಯೇ ನಿಲ್ಲುವರೆಂಬುದು ಖಾತ್ರಿಯಾಯಿತು. ಅವರ ಪರವಾಗಿ ಅಕ್ಕಣ ಬಿರುಸಾಗಿ ಕ್ಯಾನವಾಸಿಂಗ್ ತೊಡಗಿದ್ದಾಳೆ. ನಾಯ್ಕರಿಗೆ ಓಟು ಕೊಡದೆ ಇದ್ದವರನ್ನು ನಾನು ಮರ್ಯಾದೆ ಉಳಿಸುವಂತಿಲ್ಲ ಎಂಬ ನಡರಿಕೆಯೂ ಅವಳದ್ದು ಬೇರೆ.

ತಾಯಿ ಸಂಗಸ್ಥಳಕ್ಕೆ ಇಳಿದಳು ಎಂದ ಮೇಲೆ ಪುಟ್ಟರಂಗಿ ಬಿಟ್ಟಾಳೇ! ಅವಳು ಯಾರಾರನ್ನು ಕಾಣಲು ತೊಡಗಿದಳು. ಚೆನ್ನಮಯ್ಯರ ಕಡೆ ಪಾರ್ಟಿಗಳು ಒಳ್ಳೆಯಾಗಿ ನಡೆಯುತೊಡಗಿದುವು. ಒಳ್ಳೆ ಸಂಕಲ್ಪ, ಅಣ್ಣ ತಮ್ಮಂದಿರು ಬಂದವರನ್ನು ಪೈಯುತ್ತ … ಗಾಡತೊಡಗಿದರು. ಇಲೆಕ್ಷನಿಗೆ ಇನ್ನು ಒಂದು ತಿಂಗಳಿದೆ. ಆದರೆ ನಿದೆ ಪಸಾಗ್ ಇಲ್ಲ.

ಹಳೆಯ ನೆನಪುಗಳು ಹಳೆಯ ಕಲಹಗಳು … ಮೇಲೆ ಬಂದಿದ್ದಾವೆ. ಅನುಕೂಲವಾದಲ್ಲೆಲ್ಲ ಜಾತಿ ಅಭಿಮಾನ, ಸಂದರ್ಭ ಸಿಕ್ಕಿದಲ್ಲೆಲ್ಲ ಮತ್ತಿನ ತಿಳುವಳಿಕೆ—ಪಿರಾಕಿಕಂಪಾಗಲಿತ್ತು … ರಾಜಿಯ ಸ್ವಾಪಗಳ ನಡೆಯುತೊಡಗಿದುವು.

ಡಾಕ್ಟರರು ಬಹುಚಿಂತೆಗೆ ಒಳಗಾದರು. ಆಯಿತು ಗ್ರಾಮ ಒಂದಾದರೆ ಸಾಕಾಗಿತ್ತು ಎಂದು ಕಸಿವಿಸಿ ಪಟ್ಟರು. ಕೆರೆಕಟ್ಟೆ ನರಸಿಂಹಯ್ಯ ಅವರಲ್ಲಿ ಬಂದು— ಓಟಿನ ಮೆರೆಯಾದರೆ ಶಾಲೆ ಹೋಯಿತೆಂದು ಲೆಕ್ಕ, ಎಂದು ತನ್ನಿಂದಾದ ಮನಸ್ಸು ಮಾತುತ್ತಿದ್ದನು. ಹೇಗಾದರೂ ಚೆನ್ನಮಯ್ಯರಿಗೂ, ನಾಗಯ್ಯನಿಗೂ ರಾಜಿಯಾಗಿ ಶಾಲೆ ಉಳಿದರೆ ಸಾಕು— ಎಂದು. ಈಗಿನ ಅವನ ಕನಸು ಅವನ ತಮ್ಮ ಉಪಾಧ್ಯಾಯನಾಗಿ ಆ ಊರಿನ ಶಾಲೆ ಉಳಿಸುವವರಿಗೆ ಅವನ ಓಟು.

ಸಾಕಿನ ಇಲೆಕ್ಷನ ಓಟಿನ ರಂಗದ ಅತ್ಯುತ್ಸಾಹ … ಹಣ, ಸೇಡು, ದ್ವೇಷ ಅಭಿಮಾನ ದೇಶಭಕ್ತಿ ಇವುಗಳೆ ವಿಚಿತ್ರ ಅಲೆ … ಯಾವ ದಿಕ್ಕಿನಲ್ಲಿ ಬರುತ್ತದೋ ಉಮ್ಮೇದವಾರಿಕೆ ಹೇಗೋ ಕಾದು ನೋಡಬೇಕಾಯಿತು.

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Season Deposits are accepted at 3½ % per annum.

For Further particulars apply to the Car-Street Branch, Mangalore.

★ ವಸಾಹತುಗಳ ಭಾರತೀಯರ ಮೇಲೆ ಬಿಳಿಯರ ದ್ವೇಶಸಾಧನೆ ★

ಇಂಡಿಯಾ ಸರಕಾರದ ದಮನೀಯ ಅಸಹಾಯ ಸ್ಥಿತಿ

ಬ್ರಿಟಿಷ ಸಾಮ್ರಾಜ್ಯಾಂತರ್ಗತ ವಸಾಹತುಗಳಲ್ಲೆಲ್ಲ ಭಾರತೀಯರ ಮೇಲೆ ಬಿಳಿಯರು ದ್ವೇಶ ಕಾರುತ್ತಿರುವಾಗ ಇಂಡಿಯಾ ಸರಕಾರದ ದಮನೀಯ ಅಸಹಾಯ ಸ್ಥಿತಿಯನ್ನು ಕಂಡು ಖೇದವೂ ಮರುಕವೂ ಉಂಟಾಗುತ್ತದೆ. ಸಕ್ಕರೆಗೆ ಪ್ರಸಿದ್ಧವಾದ ಮಲಯ, ರಬ್ಬರಿಗೆ ಪ್ರಸಿದ್ಧವಾದ ಸಿಲೋನು, ಚಿನ್ನಕ್ಕೆ ಪ್ರಸಿದ್ಧವಾದ ದಕ್ಷಿಣ ಆಫ್ರಿಕ—ಎಲ್ಲಿ ಹೋದರೂ ಭಾರತೀಯರ ಗತಿ ಒಂದೇ ಆಗಿದೆ. ಈ ಎಲ್ಲಾ ವಸಾಹತುಗಳನ್ನು ಉತ್ತಮ ಸ್ಥಿತಿಗೆ ತರಲಿಕ್ಕೆ ಭಾರತೀಯರು ಪಟ್ಟ ಪ್ರಯತ್ನಗಳು, ಯೂರೋಪಿಯನರ ಪ್ರಯತ್ನಗಳಿಗಿಂತ ಕಡಿಮೆ ತರವಾಗಿರ ವುದಿಲ್ಲವಾದರೂ ಭಾರತೀಯರಿಂದ ಬಹಳ ಮಟ್ಟಿಗೆ ಉಪಕೃತರಾದ ಯೂರೋಪಿಯನರೇ ಇಂದು ಆ ಭಾರತೀಯರನ್ನು ತಮ್ಮ ವಸಾಹತುಗಳಿಂದ ಹೊರಗಟ್ಟುವ ಮಹಾ ಸಾಹಸವನ್ನು ತೋರಿಸಿದ್ದಾರೆ. ಈ ವಸಾಹತುಗಳಲ್ಲಿ ಇನ್ನು ಸದ್ಯದಲ್ಲೇ ಜಾರಿಯಾಗುವ ಕಾಯಿದೆ ಕಾನೂನುಗಳು ಭಾರತೀಯರು ಆ ವಸಾಹತುಗಳಲ್ಲಿ ಸುಖದಿಂದಲೂ ಸ್ವತಂತ್ರವಾಗಿಯೂ ವಾಸ ಮಾಡಲಿಕ್ಕೆ ಅಸಾಧ್ಯವಲ್ಲದಿದ್ದರೂ ಮಹಾ ಕಠಿಣವನ್ನಾಗಿ ಮಾಡುವವು. ಭಾರತೀಯರು ಈ ವಸಾಹತುಗಳಿಗೆ ಹೋದರು, ಹೋಗಿ ಅಲ್ಲಿ ದೀರ್ಘಕಾಲದ ಪರಿಶ್ರಮದಿಂದ ಅವುಗಳನ್ನು ರೂಪುಗೊಳಿಸಿದರು. ಅವರ ಪ್ರಯತ್ನಗಳು ಸಫಲವಾದ ಕೂಡಲೆ ಯೂರೋಪಿಯನರು ಅವರನ್ನು ಆ ವಸಾಹತುಗಳಿಂದಲೇ ಹೊರಗಟ್ಟಲಿಕ್ಕೆ ಸಿದ್ಧರಾಗಿ ಬಂದರು. ಯೂರೋಪಿಯನರಿಗೆ ಕೊಟ್ಟ ಮಾತೆಲ್ಲ, ವಚನಭಂಗ ಮಾಡಿದ ಪಾಪವು ಅವರಿಗೆ ತಟ್ಟುವದಿಲ್ಲ. ಹಾಗಿದ್ದರೂ ಇಷ್ಟು ದೊಡ್ಡ ಭಾರತ ಸರಕಾರವು ವಸಾಹತುಗಳ ಭಾರತೀಯರ ಈ ಜೀವನ ಮರಣದ ಸಂದಿಗ್ಧ ಕಾಲದಲ್ಲಿ ಅವರ ಸಹಾಯಕ್ಕೆ ಬಾರದಾಗಿ ಕೇವಲ ಸಾರ್ವಭೌಮ ಸರಕಾರಕ್ಕೆ ತನ್ನ ನಿವೇಧನೆಗಳನ್ನು ಕಳುಹಿಸಿಕೊಡುವುದರಲ್ಲಿ ಅದರ ಕರ್ತವ್ಯವು ಮುಗಿಯುತ್ತದೆ. ಇದಕ್ಕೆ ಇಂಡಿಯಾ ಸರಕಾರವನ್ನು ದೂರಿ ಫಲವಿಲ್ಲ. ಯಾಕೆಂದರೆ ನಿವೇಧನೆಯನ್ನು ಕಳುಹಿಸಿ ಅಲ್ಲದೆ ಬೇರೆ ಉಪಾಯಗಳಿಂದ ವಿದೇಶಗಳಲ್ಲಿ ಅನ್ಯಾಯ ಹೊಂದಿದ ಭಾರತೀಯರಿಗೆ ನ್ಯಾಯವನ್ನು ದೊರಕಿಸುವ ಅಧಿಕಾರವು ಅದಕ್ಕಿರುವುದಿಲ್ಲ.

ಭಾರತದಲ್ಲಿ ಮಿ ಇಸ್ಮಾಯಿಲರು

ಬ್ರಿಟಿಷ ವಸಾಹತುಗಳಲ್ಲಿ ಮಾತ್ರ ಭಾರತೀಯರು ದುರ್ದಶೆಯಲ್ಲಿರುವುದಿಲ್ಲ. ಇತರ ಕಡೆಗಳಲ್ಲಿಯೂ ಅವರ ಹಾಗೆಯೇ ಇದ್ದಾರೆ. ಬೆಲ್ಜಿಯನ್ ಕೊಂಗೋದಲ್ಲಿ ವಾಸವಾಗಿರುವ ಭಾರತೀಯರಲ್ಲಿ ಸುಮಾರು [illegible] ಮಂದಿ ಅಕ್ರಮ ವ್ಯಾಪಾರ ಮಾಡಿದರೆಂಬ ಸುಳ್ಳು ಆರೋಪವನ್ನು ಹೊರಿಸಿ ಕೊಂಗೋ ಸರಕಾರವು ಅವರನ್ನು ಕೈದು ಮಾಡಿದೆ. ಬೆಲ್ಜಿಯನರಿಗಿಂತ ಭಾರತೀಯರು ವ್ಯಾಪಾರದಲ್ಲಿ ಹೆಚ್ಚು ಸಮರ್ಥರಾಗಿ ಕಂಡು ಬಂದುದರಿಂದ, ಅವರ ಮೇಲೆ ಸರಕಾರವು ಸುಳ್ಳು ಆರೋಪವನ್ನು ಹೊರಿಸಿದ ಕಾರಣವೆಂದು ಹೇಳಲಾಗುತ್ತದೆ. ಭಾರತ ಸರಕಾರದ ಮುಖಾಂತರ ಅನ್ಯಾಯ ಹೊಂದಿದ ವ್ಯಾಪಾರಿಗಳಿಗೆ ನ್ಯಾಯ ದೊರಕಿಸುವುದಕ್ಕೋಸ್ಕರ ಬೆಲ್ಜಿಯನ ಕೊಂಗೋದಲ್ಲಿ ಭಾರತೀಯ ವಕೀಲರಾದ ಶ್ರೀ ಎಮ್ ಸಿ ಇಸ್ಮಾಯಿಲರು ಈಗ ಭಾರತಕ್ಕೆ ಬಂದು ಕೇಂದ್ರ ಸರಕಾರದ ಅಧಿಕಾರಿಗಳನ್ನು ಕಂಡು ಮಾತನಾಡಿದರು. ಕೇಂದ್ರ ಸರಕಾರವು ಬ್ರಿಟಿಷ ಸರಕಾರಕ್ಕೆ ಈ ಅನ್ಯಾಯವನ್ನು ತಿಳಿಸಿ, ನ್ಯಾಯ ದೊರಕಿಸಬೇಕೆಂದು ಕೇಳಿಕೊಂಡಿದೆ.

ಅಬಿಸೀನಿಯದ ಭಾರತೀಯರು

ಹಾಗೆ ಅಬಿಸೀನಿಯದಲ್ಲಿ ವ್ಯಾಪಾರ ಮಾಡಿಕೊಂಡಿದ್ದ ಭಾರತೀಯರ ಮೇಲೂ ಇಟಲಿಯ ವಕ್ರದೃಷ್ಟಿ ಬಿದ್ದಿರುವುದನ್ನು ಅವರು ಭಾರತ ಸರಕಾರದ ಗಮನಕ್ಕೆ ತಂದಿದ್ದಾರೆ. ಭಾರತ

ಮಹಾತ್ಮರ ಬೋಧನೆ — ಸಕ್ಸೇನರ ಸೂಚನೆ

ದಕ್ಷಿಣ ಆಫ್ರಿಕದಲ್ಲಿ ಕಾಯದೆಭಂಗ

ಸರಕಾರವು ಈ ವಿಷಯವನ್ನು ಬ್ರಿಟಿಷ ಸರಕಾರಕ್ಕೆ ತಿಳಿಸಿತು. ಈಗ ಆ ಸಂಬಂಧ ಬ್ರಿಟಿಷ ಸರಕಾರ ಮತ್ತು ಇಟಲಿ ಸರಕಾರಗಳೊಳಗೆ ಪತ್ರವ್ಯವಹಾರ ನಡೆಯುತ್ತಾ ಇದೆಯಾಗಿ ತಿಳಿದು ಬರುತ್ತದೆ. ವರ್ಷಗಳ ಮೇಲೆ ವರ್ಷಗಳು ಕಳೆದುಹೋದರೂ ಭಾರತೀಯರಿಗಾದ ಅನ್ಯಾಯದ ತೀರ್ಮಾನವಾಗುವುದಿಲ್ಲ. ಅದೇ ಸ್ವತಂತ್ರ ದೇಶದಲ್ಲಾಗಿದ್ದರೆ ಇವರ ತೀರ್ಮಾನವು ಎಂದೋ ಆಗಿಹೋಗುತ್ತಿತ್ತು. ಅದ್ದರಿಂದ ಸ್ವದೇಶ ಅಥವಾ ವಿದೇಶಗಳೊಳಗಿನ ಭಾರತೀಯರ ಸ್ಥಿತಿಗತಿಗಳ ಸುಧಾರಣೆಯಾಗಲಿಕ್ಕೆ ಭಾರತವು ಸ್ವತಂತ್ರವಾಗುವ ಒಂದೇ ಒಂದು ಉಪಾಯವಿರುತ್ತದೆ.

ಮಹಾತ್ಮರ ಬೋಧನೆ

ದೇಶವು ಸ್ವತಂತ್ರವಾಗುವ ತನಕ ಭಾರತೀಯರು ಅನ್ಯಾಯಗಳನ್ನೆಲ್ಲ ಹೊಂ [illegible] ಎನ್ನದೆ ಸುಮ್ಮಗೆ ಅನುಭವಿಸಿಕೊಂಡು ಇರಬೇಕೆ? ಭಾರತೀಯರ [illegible] ಕರ್ತವ್ಯಗಳಲ್ಲಿರುವುದಿಲ್ಲ. ಅವರು ವಿದೇಶಗಳಿಗೆ ಹೋಗಲಾರಂಭಿಸಿದಂದಿನಿಂದ ಅವರ ಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಾ ಇದೆ. ವಸಾಹತು ಭಾರತೀಯರಿಗೆ ಸ್ಥಾನಮಾನ ಹಕ್ಕು ಅಧಿಕಾರಗಳಿವೆ. ಅವುಗಳ ರಕ್ಷಣೆಗೆ ಆಗಾಗ ಭಾರತ ಮತ್ತು ವಸಾಹತು ಸರಕಾರಗಳೊಳಗೆ ಸಂಧಿಪತ್ರ [illegible] ದರೆ ವಸಾಹತುಗಳ ಸರಕಾರಗಳು ಈ [illegible] ಪತ್ರಿಕೆಗಳಿಗೆ [illegible] ರುವುದಿಲ್ಲ. ಅವುಗಳನ್ನು ಆ ಸರಕಾರಗಳು ಕೇವಲ ತಮ್ಮ ಸ್ವಾರ್ಥದ ಸಾಧನಗಳನ್ನಾಗಿ ಪರಿಗಣಿಸಿವೆ. ಆದ್ದರಿಂದ ವಿದೇಶಗಳಲ್ಲಿರುವ ಭಾರತೀಯರು ತಮ್ಮ ತಮ್ಮೊಳಗಿನ ಭೇದಭಾವಗಳಿಗೆ ತಿಲಾಂಜಲಿ ಕೊಟ್ಟು ಸಂಘಟಿತರಾಗಿ ತಮ್ಮ ಸ್ಥಾನಮಾನ ಹಕ್ಕು ಅಧಿಕಾರಗಳ ರಕ್ಷಣೆಗೆ ಅಸಹಕಾರ ಮತ್ತು ಕಾನೂನು [illegible] ಭಂಗವನ್ನಾರಂಭಿಸಬೇಕೆಂದು ಮಹಾತ್ಮರು ಬೋಧಿಸಿದ್ದರು. ಭಾರತವು ಸ್ವತಂತ್ರವಾದ ಹೊರತು ಭಾರತೀಯ ಕಷ್ಟಗಳು ಸಂಪೂರ್ಣವಾಗಿ ದೂರವಾಗುವುದಿಲ್ಲ. ಆದರೆ ಅಷ್ಟರ ತನಕ [illegible] ಯವು ಮಹಾತ್ಮರ ಮತ [illegible] ರುವುದು.

ಶ್ರೀ ಮೋಹನಲಾಲ ಸಕ್ಸೇನರ ಸೂಚನೆ

ದಕ್ಷಿಣ ಆಫ್ರಿಕ ಸರಕಾರವು ಭಾರತೀಯರನ್ನು ಯೂರೋಪಿಯನ ವಸತಿಗಳಿಂದ ಬೇರೆ ಇಡುವ ಕಾನೂನನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲವಾದರೆ, ಅದರ ಪ್ರತಿಕಾರಾರ್ಥ ಭಾರತ ಸರಕಾರವು ದಕ್ಷಿಣ ಆಫ್ರಿಕದ ತನ್ನ ಏಜಂಟರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು, ಜನಾಂಗ ಸಂಘಕ್ಕೆ ಅರ್ಜಿ ಬರೆಯಬೇಕು ಮತ್ತು ದಕ್ಷಿಣ ಆಫ್ರಿಕದ ವಿರುದ್ಧ ಸಾಧ್ಯವಿದ್ದ ಎಲ್ಲಾ ಪ್ರತೀಕಾರೋಪಾಯಗಳನ್ನು ಕೈಕೊಳ್ಳಬೇಕು ಎಂದು ಶ್ರೀ ಮೋಹನಲಾಲ ಸಕ್ಸೇನರೂ ಶ್ರೀ [illegible] ಮುಂತಾದವರೂ [illegible] ದರು. ಈ ವಿಷಯವನ್ನು ಆಲೋಚಿಸಲಿಕ್ಕೆ ಭಾರತ ಸರಕಾರವು ತನ್ನ ಎಮಿಗ್ರೇಶನ ಕಮಿಟಿಯ ಸಭೆಯನ್ನು ಕರೆದಿದೆ.

ಎಮಿಗ್ರೇಶನ ಕಮಿಟಿಯ ಸಭೆ

[illegible] ಕಳೆದ ವಾರ ಸಭೆ ಕೂಡಿ ವಸಾಹತುಗಳ ಭಾರತೀಯ ಪರಿಸ್ಥಿತಿಯ ಸವಿಸ್ತಾರವಾಗಿ [illegible] ಭಾರತೀಯರನ್ನು ದ್ವೇಷಿಸುವ ವಸಾಹತು ಸರಕಾರಗಳ ವಿರುದ್ಧ [illegible] ಅವರ [illegible] ನಡೆಸುವುದ [illegible] ಸರಕಾರವು ಬೇರೆ ಉಪಾಯಗಳನ್ನು ಕೈಕೊಳ್ಳ [illegible] ಸ್ಥಿತಿಯಲ್ಲಿರುವದರಿಂದ [illegible] ಸರಕಾರ [illegible]

ದಕ್ಷಿಣ ಆಫ್ರಿಕದಲ್ಲಿ ಕಾಯದೆಭಂಗ

ದಕ್ಷಿಣ ಆಫ್ರಿಕದ [illegible] ವಸತಿಗಳಿಂದ ಪ್ರತ್ಯೇಕಿಸಿಡುವ [illegible] ಭಾರತೀಯರನ್ನು [illegible], ಪಕ್ಷಪಾತ ಪೂರ್ಣ [illegible] ಬಂದುದಾದರೆ ಅದನ್ನು ವಿರೋಧಿಸಿ ದಕ್ಷಿಣ ಆಫ್ರಿಕದ ಭಾರತೀಯರು ಕಾಯದೆಭಂಗವನ್ನು ಪ್ರಾರಂಭಿಸುವರು. ಇದನ್ನು ಕೇಳಿ ಜನರಲ್ ಸ್ಮಟ್ಸರು—'ಸರಿ, ಸರಿ ಅವರು ಹಾಗೇ ಮಾಡಲಿ' ಎಂದು ನಂಜಿನ ಮಾತನ್ನಾಡಿದ್ದಾರೆ. ಅದಕ್ಕೆ ಜೋಹಾನಸಬರ್ಗದಲ್ಲಿ ಮಾತನಾಡುತ್ತ ಭಾರತೀಯರ ಮುಖಂಡ ಡಾಕ್ಟರ ದಾದೂ [illegible] ಕಾಯದೆಭಂಗವನ್ನು ನಾವು ಮಾಡಿಯೇ ಮಾಡುವೆವು. ಆಗ ನಮ್ಮ ಆಂದೋಲನವು ಎಷ್ಟು ನ್ಯಾಯಪೂರ್ಣವಾಗಿದೆ ಎಂಬುದು ಜಗತ್ತಿಗೇ ಗೊತ್ತಾಗುವುದು' ಎಂದಿದ್ದಾರೆ. ಸತ್ಯಾಗ್ರಹವನ್ನು ಹೂಡುವುದಕ್ಕೋಸ್ಕರ ಅಲ್ಲಿ ಶ್ರೀ [illegible] ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯಾಗಿದೆ. ಗಾಂಧಿಯವರು ದಕ್ಷಿಣ ಆಫ್ರಿಕದಲ್ಲಿದ್ದಾಗ ಅವರೊಂದಿಗೆ ಸತ್ಯಾಗ್ರಹ ಮಾಡಿ [illegible] ಜೈಲಿಗೆ ಹೋದ [illegible] ವರ್ಷದ ವಯೋವೃದ್ಧರು ಶ್ರೀ [illegible] ದ್ದಾರೆ. ಈ ಆಂದೋಲನದಲ್ಲಿ ಸ್ತ್ರೀಯರು ಕೂಡ ಬಹಳ [illegible] ಚಿನ್ನ [illegible] ದಲ್ಲಿ [illegible] ಇದ್ದಾರೆ. ಶ್ರೀ ದಾದೂರವರು ಈ ಆಂದೋಲನದ [illegible] ಸರಕಾರವು [illegible] ಕೊಡಿಸಿದರೂ [illegible] ವರ್ಷಗಳ ಹಿಂದೆ ದಕ್ಷಿಣ ಆಫ್ರಿಕದಲ್ಲಿ [illegible] ಭಾರತೀಯ ಸತ್ಯಾಗ್ರಹ ಆಂದೋಲನವು ಈಗ ಭಾರತೀಯರ ಮೊದಲಿಗಿಂತ [illegible] ಸಂಘಟಿತರು [illegible] ವಾಗಬಹುದೆಂದು [illegible] ಮಹಾತ್ಮಾ ಗಾಂಧಿ [illegible] ಹೊಂದಿದ್ದಾರೆ.

[illegible] ಹಿಂದೂ ಮಹಾಸಭೆ

[illegible] ಬಂಗಾಳ [illegible] ಬದಲಾವಣೆಗಳನ್ನು [illegible], ಹಿಂದೂ [illegible] ಸಂಗತಿಗಳನ್ನು [illegible] ಬಂಗಾಳ ಹಿಂದೂಗಳನ್ನು [illegible] ಉದ್ದೇಶದಿಂದ [illegible] ಹೊಸದಾದ ಒಂದು ಸಂಸ್ಥೆ [illegible] ಕಲ್ಕತ್ತದಲ್ಲಿ [illegible] ಲಾಗಿದೆ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ

ಆಶ್ಚರ್ಯಕರವಾದ ಔಷಧಿ.

ಡಾ ಜಸಾನಿಯವರ

ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

GONO KILLER

ನಕಲಿ ಮದ್ದುಗಳ ವಿಷಯ ಜಾಗ್ರತೆ ತೆಗೆದುಕೊಳ್ಳಿರಿ. ಕೊಡುಕೊಳ್ಳುವದರ ಮೊದಲು ಕೋಳಿ ಗುರುತಿನ ಚಿಹ್ನೆ ಸೀಲು ಮತ್ತು ಗೊನೊಕಿಲರ್ ಇರುತ್ತದೋ ಎಂಬುದನ್ನು ನೋಡಿರಿ

ಇಂದಿನ ಆಶ್ಚರ್ಯ ಔಷಧ [illegible] ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾದ್ದರೆ ಕೂಡಲೆ [illegible] ಈ ನಮ್ಮ ಗೊನೊಕಿಲರ್ ಎಂಬ ಔಷಧವನ್ನು ಉಪಯೋಗಿಸಿ ನೋಡಿರಿ [illegible] ಗೊನೊಕಿಲರ್ [illegible]

30 ಮಾತ್ರೆಗಳ ಬುದ್ದಿಗೊಂದಕ್ಕೆ ರೂ 8-0-0 [illegible]

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ ಎನ್ ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್ ಮುಂಬಯಿ 4

Sole Manufacturer Dr D N JASANI, Vithalbhai Patel Road, BOMBAY

ಎಲ್ಲಾ ಪತ್ರ ವ್ಯವಹಾರಗಳು ಇಂಗ್ಲಿಷಿನಲ್ಲಿ

ಸ್ಟಾಕಿಸ್ಟ—ಮೆಸರ್ಸ ಎ ಫೆರ್ನಾಂಡಿಸ್ ಮತ್ತು ಕಂಪೆನಿ, ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ, ಮಂಗಳೂರು.

ಜಾತಿಸ್ವಾರ್ಥದಿಂದ ಕುರುಡರಾದ ಮಿ. ಹಕ್ ಸಾಹೇಬರು

ರಜಾ ಅಲಿಯವರಿಗೆ ಉಸ್ಮಾನರು ಕಲಿಸಿದ ಪಾಠ

ಲೀಗಿನ ದೋಷಾರೋಪಣೆಗೆ ಕಾಂಗ್ರೆಸಿನ ಸಮಾಧಾನ

ಬಂಗಾಳದ ಮುಖ್ಯ ಮಂತ್ರಿ, ಮಿ. ಹಕ್ ಸಾಹೇಬರು ಮುಸಲ್ಮಾನ ಜಾತಿ ಸ್ವಾರ್ಥದಿಂದ ಕುರುಡರಾಗಿಬಿಟ್ಟಿದ್ದಾರೆ. ಆದ್ದರಿಂದ ಬಂಗಾಳದ ಪರಿಸ್ಥಿತಿಯು ಹೇಗೆ ದಿನದಿಂದ ದಿನಕ್ಕೆ ಕೆಡುತ್ತಾ ಬರುತ್ತಲಿದೆ ಎಂಬುದು ಅವರಿಗೆ ತಿಳಿಯುವುದಿಲ್ಲ. ಕಾಂಗ್ರೆಸು ಮತ್ತು ಹಿಂದು ಸಮಾಜವನ್ನು ಟೀಕಿಸಿ ಮಾತನಾಡುವುದರಲ್ಲಿ ಮಿ. ಹಕ್ಕರು ಮರ್ಯಾದೆಯ ಮೇರೆಯನ್ನು ಮೀರಿರುವರು. ಸಾಮಾನ್ಯವಾಗಿ ಮಿ. ಹಕ್ಕರ ಧೋರಣೆಯನ್ನು ಪುಷ್ಟೀಕರಿಸುವ ಆಂಗ್ಲೋ ಇಂಡಿಯಾನ ಪತ್ರಿಕೆಗಳು ಕೂಡ ಅವರಲ್ಲಿ ತಪ್ಪುಗಳನ್ನು ಕಾಣಲಾರಂಭಿಸಿವೆ. 'ಬಂಗಾಳದ ಪರಿಸ್ಥಿತಿಯು ಇಷ್ಟು ಕೆಡಲಿಕ್ಕೆ ಮಿ. ಹಕ್ಕರ ವಿಚಾರ ಮತ್ತು ಅವಿವೇಕ ಪರಮಾತುಗಳೇ ಕಾರಣ. ಹಿಂದುಗಳಿಗೆ ಅವರ ಇಂಗಿತದ ಕುರಿತು ಸಂದೇಹವುಂಟಾಗುವುದು ಸಹಜ. ಅವರ ಭಾಷಣಗಳಿಂದಲೂ ಲೇಖನಗಳಿಂದಲೂ ಹಿಂದೂ ಸಮಾಜದ ನ್ಯಾಯವಾದ ಹಕ್ಕು ಬಾಧ್ಯತೆಗಳನ್ನು ಬಲಿಕೊಟ್ಟು ಮಿ. ಹಕ್ಕರು ಮುಸಲ್ಮಾನರ ಹಿತರಕ್ಷಣೆ ಮಾಡುತ್ತಿರುವರೆಂದು ಊಹಿಸಲಿಕ್ಕೆ ಬರುತ್ತದೆ' ಎಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಬರೆದಿದೆ.

ಹಿಂದೂಗಳೂ ಮುಸಲ್ಮಾನರೂ ಹಿಂದುಸ್ಥಾನದಲ್ಲಿ ಪರಸ್ಪರ ಬಂಧುಬಾಂಧವರಂತೆಯೇ ಬದುಕಿ ಬಾಳಬೇಕು. ಹಿಂದುಗಳಂತೆ ಮುಸಲ್ಮಾನರೂ ಭಾರತೀಯರಾಗಿದ್ದಾರೆ. ಆದರೆ ಈ ಭಾವನೆ ಹಿಂದುಗಳಲ್ಲಿರುವಂತೆ ಮಿ. ಹಕ್ಕರಂಥ ಮುಸಲ್ಮಾನ ಮುಖಂಡರಲ್ಲಿ ಇರುವುದಿಲ್ಲ. ಅವರು ಯಾವಾಗಲೂ ಹಿಂದುಸ್ಥಾನದಲ್ಲಿ ತಮ್ಮ ಬಿಡಾರ ಬೇರೆ ಕಟ್ಟಿಕೊಳ್ಳುವ ಕನಸು ಕಾಣುತ್ತಿದ್ದಾರೆ. ಮುಸಲ್ಮಾನರಿಗೆ ಅವರ ಸಂಖ್ಯಾಮಾನದಿಂದ ದೊರೆಯಬೇಕಾದ್ದಕ್ಕಿಂತಲೂ ಕೆಲವು ಹೆಚ್ಚಿಗೆ ಹಕ್ಕು ಅಧಿಕಾರಗಳನ್ನು ಕೊಡಲಿಕ್ಕೆ ಹಿಂದೂ ಸಮಾಜವು ಆಕ್ಷೇಪಿಸುವುದಿಲ್ಲ. ದೇಶಹಿತ ಮತ್ತು ಜಾತಿಜಾತಿಗಳೊಳಗೆ ಇರಬೇಕಾದ ಐಕ್ಯತೆಯ ದೃಷ್ಟಿಯಿಂದ ಅಷ್ಟನ್ನು ನ್ಯೂನದ ಉದಾರಭಾವವು ಹಿಂದೂ ಸಮಾಜದಲ್ಲಿದೆ. ಆದರೆ ಮಿ. ಹಕ್ಕರಂಥವರು ಇದೇ ಉದಾರಭಾವನೆ ಉಳ್ಳವರಾಗಿಲ್ಲ. ಅವರು ಯಾವಾಗಲೂ ತಾವು ಪ್ರತ್ಯೇಕವಾಗಿ ಇತರ ಸಮಾಜಗಳ ಮೇಲೆ ಅಧಿಕಾರ ನಡೆಸುವ ಪ್ರಯತ್ನದಲ್ಲಿದ್ದಾರೆ. ಎಲ್ಲಿ ಅವರು ಬಹು ಸಂಖ್ಯಾಕರಾಗಿದ್ದಾರೋ, ಅಲ್ಲಿ ಅವರಿಗೆ ಬಹು ಸಂಖ್ಯಾಕರ ಹಕ್ಕು ಅಧಿಕಾರಗಳು ಬೇಕು, ಎಲ್ಲಿ ಅವರು ಅಲ್ಪ ಸಂಖ್ಯಾಕರಾಗಿದ್ದಾರೋ ಅಲ್ಲಿಯೂ ಅವರಿಗೆ ಬಹು ಸಂಖ್ಯಾಕರಿಗಿರಬಹುದಾದಂಥ ಹಕ್ಕು ಅಧಿಕಾರಗಳಿರಬೇಕು. ಹೈದರಾಬಾದು, ಕಾಶ್ಮೀರ ಸಂಸ್ಥಾನಗಳಲ್ಲಿ ನಡೆಯುವ ಆಂದೋಲನಗಳು ನಮ್ಮ ಮಾತಿಗೆ ಸಾಕ್ಷಿಯಾಗಿವೆ. ಮಿ. ಹಕ್ಕರು ಬಂಗಾಳದಲ್ಲಿ—ಮುಂತೆಂದ ಕಲ್ಕತ್ತ ಮುನ್ಸಿಪಲ್ ತಿದ್ದುಪಡಿ ಮಸೂದೆ, ನೌಕರಿ ಚಾಕರಿಗಳಲ್ಲಿ ಹಿಂದ ಮುಸಲ್ಮಾನರಿಗೆ ಮಿ. ಹಕ್ಕರು ಕೊಡಲಿರುವ ಸ್ಥಾನ ಪ್ರಮಾಣ—ಇವುಗಳೂ ನಮ್ಮ ಮಾತಿನ ಉತ್ಕೃಷ್ಟ ನಮೂನೆಗಳಾಗಿರುವುವು.

ಕಾಂಗ್ರೆಸಿನ ಮೇಲಿನ ಮಿ. ಹಕ್ಕರ ದ್ವೇಷ

ಮಿ. ಹಕ್ಕರು ಒಂದಾನೊಂದು ಕಾಲದಲ್ಲಿ ಕಾಂಗ್ರೆಸಿನಲ್ಲಿದ್ದರು. ಅವರ ಈಗೀಗ ಸ್ಥಾನಮಾನಗಳನ್ನು ಒಂದು ವಿಧದಿಂದ ಕಾಂಗ್ರೆಸೇ ಅವರಿಗೆ ತಂದುಕೊಟ್ಟಿತು. ಆದರೆ ಕೆಟುಗೆ ಉಚ್ಚತೆಯನ್ನು ಕೊಟ್ಟ ಕಾಂಗ್ರೆಸಿನ ಮೇಲೆಯೇ ಮಿ. ಹಕ್ಕರು ದ್ವೇಷ ಕಾರುತಿದ್ದಾರೆ. ಜಾತೀಯ ಸ್ವಾರ್ಥದಿಂದ ಕುರುಡಾಗಿಲ್ಲದವರು ಇಂಥ ಕಾರ್ಯಕ್ಕೆ ಎಂದೂ ಪ್ರವೃತ್ತರಾಗರು. ಕಲ್ಕತ್ತ ಕಾರ್ಪೋರೇಶನಿನಲ್ಲಿ ಕಾಂಗ್ರೆಸು ಬಹುಮತ ಸಂಪಾದಿಸದಂತೆ ತಾನು ಮುನ್ಸಿಪಲ್ ಮಸೂದೆಯ ತಿದ್ದುಪಡಿ ಸೂಚನೆ ತಂದುದಾಗಿ ಮಿ. ಹಕ್ಕರು ಹೇಳಿರುವರು. ಅದಕ್ಕೋಸ್ಕರವೇ ಅವರು ಕಲ್ಕತ್ತ ಕಾರ್ಪೋರೇಶನಿನಲ್ಲಿ ಈಗಿರುವ ಜಂಟಿ ಪ್ರಾತಿನಿಧ್ಯ ಕ್ರಮವನ್ನು ಬದಲಾಯಿಸಿ ಜಾತಿ ಜಾತಿಗಳಿಗೆ ಪ್ರತ್ಯೇಕ ಪ್ರಾತಿನಿಧ್ಯವನ್ನು, ಇಂತಿಂಥ ಜಾತಿಯವರು ಇಂತಿಷ್ಟೇ ಮಂದಿ ಇರಬೇಕೆಂಬುದನ್ನೂ ಆಲೋಚಿಸಿರುವರು. ಹೀಗಾದರೆ ಕಲ್ಕತ್ತ ಕಾರ್ಪೋರೇಶನು ಮಾತ್ರವಲ್ಲ, ಆ ಸಂಬಂಧದಿಂದ ಇಡೀ ಬಂಗಾಳವು ಜಾತಿ ಜಾತಿಗಳೊಳಗಿನ ಕಲಹ ಕ್ಷೇತ್ರವಾಗಿ ಪರಿಣಮಿಸುವುದು. ನೌಕರಿ ಚಾಕರಿಗಳಲ್ಲಿ ಬೇರೆ ಬೇರೆ ಜಾತಿಗಳಿಗೆ ಮಿ. ಹಕ್ಕರು ಕೊಡಲಿರುವ ಸ್ಥಾನ ಪ್ರಮಾಣವು ಈ ಕಲಹಾಗ್ನಿಗೆ ಗಾಳಿಹಾಕಿ ಅದನ್ನು ಪ್ರಜ್ವಲಿಸುವುದು.

ಹಿಂದುಗಳು ಮೋಸಹೋಗುವುದಿಲ್ಲ

ಕಲ್ಕತ್ತಾ ಕಾರ್ಪೋರೇಶನಿನಲ್ಲಿ ಹಿಂದುಗಳಿಗೆ ನಾವು ಬಹುಮತ ಕೊಟ್ಟಿದ್ದೇವೆ. ಸರಕಾರದ ವಿರೋಧಿಯಾದ ಕಾಂಗ್ರೆಸು ಮಾತ್ರ ಬಹುಮತ ಪಡೆಯದಂತೆ ಮಾಡಿದ್ದೇವೆ ಎಂದು ಮಿ. ಹಕ್ಕರು ಬಂಗಾಳ ಕೌನ್ಸಿಲಿನಲ್ಲಿ ಹೇಳಿದರು. ಅದಕ್ಕೆ ಕಾಂಗ್ರೆಸು ಪಾರ್ಟಿಯ ಮುಖಂಡರಾದ ಶ್ರೀ ಕಾಮಿನಿ ಕುಮಾರದತ್ತರು ಅವರಿಗೆ ಅಲ್ಲಿಯೇ ಚೆನ್ನಾದ ಉತ್ತರ ಕೊಟ್ಟಿರುವರು. ಹಿಂದುಗಳನ್ನು ಕಾಂಗ್ರೆಸಿನ ವಿರುದ್ಧ ಎತ್ತಿ ಕಟ್ಟುವ ಮಿ. ಹಕ್ಕರ ಕುಹಕೋಪಾಯವನ್ನು ಹಿಂದುಗಳು ಚೆನ್ನಾಗಿ ತಿಳಿದಿದ್ದಾರೆ. ಮಿ. ಹಕ್ಕರ ಮಾತುಗಳಿಂದ ಹಿಂದುಗಳು ಎಂದೂ ಮೋಸಹೋಗುವವರಲ್ಲ. ಎಂಟು ಪ್ರಾಂತ್ಯಗಳಲ್ಲಿ ಶಾಸನಾಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡಿದ್ದ ಕಾಂಗ್ರೆಸು ಸರಕಾರಕ್ಕೆ ವಿರೋಧವಾಗುವುದು ಹೇಗೆ? ಹಿಂದುಗಳು ಜಂಟಿ ಪ್ರಾತಿನಿಧ್ಯ ಬೇಕೆಂದೇ ಸಭೆ ಲೇಖನ ಗವರ್ನರರ ಬಳಿ ಶಿಷ್ಟಮಂಡಲ ಇತ್ಯಾದಿಗಳ ಮೂಲಕ ಆಂದೋಲನವನ್ನು ಹೂಡಿರುವಾಗ, ಮಿ. ಹಕ್ಕರು ಅವರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡುವ ಹಟದಲ್ಲಿರುವುದನ್ನು ಕಂಡರೆ, ಅವರು ಜಾತೀಯ ಸ್ವಾರ್ಥದಿಂದ ಕುರುಡರಾಗಿದ್ದಾರೆಂಬುದು ಚೆನ್ನಾಗಿ ಸ್ಪಷ್ಟವಾಗುತ್ತದೆ.

ಹಾಸ್ಯಾಸ್ಪದ ವರ್ತನೆ

ಜಾತೀಯ ಸ್ವಾರ್ಥದಿಂದ ಅಂಧರಾದ ಮಿ. ಹಕ್ಕರು ಕೇವಲ ರಾಷ್ಟ್ರೀಯ ಭಾವನೆಗಳಿಂದ ಪ್ರೇರಿತವಾಗಿರುವ ಕಾಂಗ್ರೆಸಿನ ಮೇಲೆ ಕೆಸರೆರಚಲಿಕ್ಕೆ ಪ್ರಯತ್ನಿಸುವುದನ್ನು ಕಂಡು ಖೇದವಾಗುವುದು ಮಾತ್ರವಲ್ಲ ನಗುವೂ ಬರುತ್ತದೆ. ಒಂದು ಹಳ್ಳಿಗೆ ಒಂದು ಆನೆ ಬಂದಿತ್ತಂತೆ. ಹಳ್ಳಿಗರಿಗೆ ಆ ಆನೆ ಉಪಕಾರಿ ಪ್ರಾಣಿಯೋ ಅಪಕಾರಿ ಪ್ರಾಣಿಯೋ ಎಂದು ತಿಳಿಯಲಾರದಷ್ಟು ಮೂರ್ಖರಾಗಿದ್ದರು. ಮೊದಲು ಅವರು ಆನೆಯನ್ನು ಹೆದರಿಸಿ ಓಡಿಸುವ ಆಲೋಚನೆ ಮಾಡಿದರು. ಆದರೆ ಆನೆ ಅವರ ಹೆದರಿಕೆಗಳಿಗೆ ಹೆದರುವಂತಿರಲಿಲ್ಲ. ಅದು ಸ್ವಸ್ಥಚಿತ್ತದಿಂದ ತನ್ನ ಮಾರ್ಗವನ್ನನುಸರಿಸಿ ಹೋಗುತ್ತಾ ಇತ್ತು. ಹಳ್ಳಿಗರ ನಾಯಿಗಳು ಎಷ್ಟು ಬೊಗಳಿದರೂ ಅದು ಆ ಕಡೆಗೆ ಕಿವಿ ಕೊಡಲೇ ಇಲ್ಲ. ಆಗ ಹಳ್ಳಿಗರು ತಮ್ಮ ಉಪಾಯ ನಡೆಯಲಿಲ್ಲವೆಂದು ಸಿಟ್ಟಾಗಿ ಆನೆಯನ್ನು ಕಟ್ಟಿಹಾಕುವ ಆಲೋಚನೆ ಮಾಡಿದರು. ಯಾವುದರಿಂದ ಕಟ್ಟಿಹಾಕುವುದು? ಒಬ್ಬೊಬ್ಬ ಹಳ್ಳಿಗನು ಒಂದೊಂದು ಹುಲ್ಲುಕಡ್ಡಿ ಹಿಡಿದು ಆನೆಯ ದಾರಿಯಲ್ಲಿ ಒಟ್ಟತ್ತ ಬಂದ ಹುಲ್ಲುಕಡ್ಡಿಯ ರಾಶಿಯಲ್ಲಿ ಆನೆ ಸಿಕ್ಕಿಬೀಳುವುದೆಂದು ಅವರು ಭಾವಿಸಿದ್ದರು. ಪರಂತು ಆನೆ ಹುಲ್ಲುಕಡ್ಡಿಗಳನ್ನು ಏನೂ ಪ್ರಯಾಸವಿಲ್ಲದೆ ಮೆಟ್ಟುತ್ತಾ ತುಳಿಯುತ್ತಾ, ನಿಶ್ಚಿಂತವಾಗಿ ತನ್ನ ನಿಶ್ಚಿತಸ್ಥಾನವನ್ನು ಹೋಗಿ ಮುಟ್ಟಿತಂತೆ. ಹಾಗೆ ಮಿ. ಹಕ್ಕರಂಥವರು ಕಾಂಗ್ರೆಸ್ ಎಂಬ ಆನೆಯನ್ನು ಹೆದರಿಸುವ ಮತ್ತು ಕಟ್ಟಿಹಾಕುವ ಮಹತ್ವದ ಕಾರ್ಯಕ್ಕೆ ಇಳಿದಿದ್ದಾರೆ. ಕಾಂಗ್ರೆಸನ್ನು ಕಟ್ಟಿಹಾಕುವ ಸಾಮರ್ಥ್ಯ ಇವರಲ್ಲಿ ಎಷ್ಟು ಇದೆ?

ರಜಾ ಅಲಿಯವರಿಗೆ ಉಸ್ಮಾನರ ಪಾಠ

ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ ಎಂದು ಹೇಳುವ ಹಾಗೆ ಮಿ. ಹಕ್ಕರು ಮತ್ತು ಅವರಂಥ ಜಾತಿವಾದಿಗಳಿಗೆ ಸಾಧು—ಅಸಾಧು ನ್ಯಾಯಾನ್ಯಾಯ, ಏನಾದರೊಂದು ಉಪಾಯದಿಂದ ಪ್ರಸಿದ್ಧಿಯನ್ನು ಪಡೆಯಬೇಕೆಂದಾಗಿದೆ. ಒಳ್ಳೇತನದಿಂದ ಪ್ರಸಿದ್ಧಿಗೆ ಬರುವುದು ಸ್ವಲ್ಪ ಪ್ರಯಾಸದ ಕೆಲಸ. ಅದಕ್ಕೆ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡಿರಬೇಕು. ಆದರೆ ಕೆಟ್ಟತನದಿಂದ ಹೆಸರು ಬರಲಿಕ್ಕೆ ಕಷ್ಟಪಡಬೇಕಾಗಿಲ್ಲ. ಅಷ್ಟರಿಂದ ಮಿ. ಹಕ್ಕರ ಗುಂಪಿಗೆ ಸೇರಿದರು. ಸುಲಭದಲ್ಲಿ ಹೆಸರು ಬರುವುದಕ್ಕೋಸ್ಕರ ಸಮಯಾಸಮಯ, ನ್ಯಾಯಾನ್ಯಾಯ ಯಾವುದೂ ನೋಡದೆ ಕಾಂಗ್ರೆಸನ್ನು ದೂರುವರು. ಮಿ. ಹಕ್ಕರ ಗುಂಪಿಗೆ ಸೇರಿದವರಲ್ಲಿ ಸರ್ ಸಯ್ಯದ ರಜಾ ಅಲಿಯವರು ಈಗ ತುಂಬಾ ಪ್ರಕಾಶಕ್ಕೆ ಬಂದಿದ್ದಾರೆ. ಪಾನ ನಿಷೇಧದಂಥ ಸ್ವಾರ್ಥ ಮತ್ತು ನಿಷ್ಪ್ರಯೋಜಕ ಕಾರ್ಯಗಳಿಗೆ ಕಾಂಗ್ರೆಸಿಗೆ ಕಾಂಗ್ರೆಸ ಸರಕಾರಗಳು ಹಣದ ವ್ಯಯ ಮತ್ತು ಮಾರಿ ನಯೋ.. ಮಾಡಿದವೆಂದು ಎತ್ತಿಬಿಟ್ಟಿದ್ದಾರೆ. ಕಾಂಗ್ರೆಸ ಸರಕಾರಗಳಲ್ಲಿ ಯಾವ ದೋಷವೂ ಕಂಡ ಬರದಿರುವಾಗ ಈ ಮುಸಲ್ಮಾನ ಗೃಹಸ್ಥರು ಮತ್ತೆ ಹೇಗೆ ತಾನೆ ಕಾಂಗ್ರೆಸನ್ನು ದೂರಬಹುದು? ಅದಕ್ಕೋಸ್ಕರ ಈ ಸರಕಾರಗಳ ಪಾನನಿಷೇಧ ಕಾರ್ಯದಲ್ಲಿ ಅನೇಕ ದೋಷವನ್ನು ಕಂಡಿದ್ದಾರೆ. ಕಾಂಗ್ರೆಸ ಮಂತ್ರಿಮಂಡಲಗಳಿಗಿಂತ ಮಿ. ಹಕ್ ಸಿಕಂದರ ಹಯಾತಖಾನರಂಥವರ ಮಂತ್ರಿಮಂಡಲಗಳು ನಾಲ್ಕು ಪಟ್ಟಿನಷ್ಟು ಪಾಲಿನಷ್ಟು ಹೆಚ್ಚು ಖರ್ಚಿಗೆ ತೆಗೆದ, ಅದರ ಮಂದ ಎಕ್ಕೋಗವ ದುಂದು ರಜಾ ಅಲಿಯವರಂಥವರ ಪಕ್ಷಪಾತಪೂರ್ಣ ಕಣ್ಣುಗಳಿಗೆ ದೋಷವಾಗಿ ಕಾಣ ಬರುವುದಿಲ್ಲ. ಬದಲಿಗೆ ನಿಜವಾಗಿ ಜನಹಿತಕ್ಕಾಗಿರುವ ಪಾನನಿಷೇಧಕಾರ್ಯದಲ್ಲಿ ಅವರಿಗೆ ದೋಷ ಕಾಣುತ್ತದೆ. ಮಿ. ಹಕ್ಕರ ಗುಂಪಿನ ಜಾತೀಯ ಸ್ವಾರ್ಥವು, ಹೀಗೆ ಮಿತಿಮೀರಿ ಹೋಗಿರುವದನ್ನು ಕಂಡು ಅವರದೇ ಜಾತಿಯ ಇತರ ಮುಸಲ್ಮಾನರಿಗೆ ಪಶ್ಚಾತ್ತಾಪವೂ ಖೇದವೂ ಆಗಿದೆ. ಸರ್ ಮಹಮ್ಮದ ಉಸ್ಮಾನರು ಕಾಂಗ್ರೆಸ ಪಕ್ಷೀಯರಲ್ಲ. ಆದರೂ ಅವರು ಜಾತಿಸ್ವಾರ್ಥಕ್ಕೆ ಬಲಿಯಾಗದೆ, ಮದ್ರಾಸ ಕಾಂಗ್ರೆಸ ಸರಕಾರದ ಜನಹಿತಕಾರಿ ಕಾರ್ಯಕ್ರಮಗಳನ್ನು ಮುಕ್ತಕಂಠದಿಂದ ಶ್ಲಾಘಿಸಿ ಸಮರ್ಥಿಸಿದ್ದಾರೆ. ಅವರು ಒಂದು ಭಾಷಣದಲ್ಲಿ 'ಮದ್ರಾಸ ಸರಕಾರದ ಮದ್ಯನಿಷೇಧ ಕಾನೂನನ್ನು ಕೌನ್ಸಿಲಿನಲ್ಲಿ ಸಮರ್ಥಿಸಿ ವೋಟುಕೊಟ್ಟವರಲ್ಲಿ ನಾನೂ ಒಬ್ಬನಾಗಿದ್ದೇನೆ. ಯಾಕೆಂದರೆ ಆ ಕಾನೂನು ಮದ್ಯಪಾಯಿಗಳಾದ ಬಡವರ ಹಿತಕ್ಕಿರುವದೆಂದು ನನ್ನ ವಿಶ್ವಾಸ ಮಾತ್ರವಲ್ಲ ಮುಸಲ್ಮಾನ ಧರ್ಮವು ಮದ್ಯಪಾನವನ್ನು ಹರಾಮ್ ಎನ್ನುತ್ತದೆ. ಹರಾಮ್ ಎಂದರೆ ತ್ಯಾಜ್ಯವೆಂದರ್ಥ. ಮದ್ಯನಿಷೇಧ ಕಾನೂನು ಮುಸಲ್ಮಾನ ಧರ್ಮಕ್ಕನುಗುಣವಾಗಿಯೂ ಇರುವದು' ಎಂದು ಹೇಳಿ ಸರ್ ರಜಾ ಅಲಿಯವರಂಥ ಸ್ವಾರ್ಥಾಂಧರಿಗೆ ಒಂದು ಒಳ್ಳೆಯ ಪಾಠವನ್ನು ಕಲಿಸಿದ್ದಾರೆ. ಪರಂತು ಸ್ವಾರ್ಥಪರರಾಗಿ ಧರ್ಮಕ್ಕೆ ವಿರುದ್ಧವಾದ ಕಾರ್ಯಗಳನ್ನು ಮಾಡಲಿಕ್ಕೆ ಹೇಸದ ಮಿ. ಹಕ್, ಅಲಿಯಂಥವರಿಗೆ ಈ ಪಾಠವು ಬೇಗನೇ ರುಚಿಸುವ ಹಾಗೆ ಕಾಣುವದಿಲ್ಲ. ಆದರೂ ಎಷ್ಟರ ತನಕ ಅವರು ಜಾತೀಯ ಸ್ವಾರ್ಥದಿಂದ ಮುಕ್ತರಾಗುವದಿಲ್ಲವೋ ಅಷ್ಟರ ತನಕ ಮುಸಲ್ಮಾನ ಸಮಾಜಕ್ಕಾಗಲೀ ದೇಶಕ್ಕಾಗಲೀ ಹಿತವಾಗಲಾರದು. ಆದ್ದರಿಂದ ಮುಸಲ್ಮಾನ ಸಮಾಜವೂ ದೇಶವೂ ಇಂಥವರಿಂದ ಬಹಳ ಎಚ್ಚರದಲ್ಲಿರಬೇಕು.

ದೋಷಾರೋಪಣೆಯ ಸಮಾಧಾನ

ಮುಸ್ಲಿಮ್ ಲೀಗ್ ಶಿಷ್ಟಮಂಡಲವೊಂದು ಪಂಜಾಬು, ಗಡಿನಾಡು ಮೊದಲಾದ ಕೆಲವು ಪ್ರಾಂತ್ಯಗಳಲ್ಲಿ ಸಂಚಾರಮಾಡುತ್ತ ಭಾಷಣಾದಿಗಳನ್ನು ಕೊಟ್ಟು ಕಾಂಗ್ರೆಸ ಮತ್ತು ಅದರ ಮಂತ್ರಿಮಂಡಲಗಳ ಮೇಲೆ ದೋಷಗಳನ್ನು ಆರೋಪಿಸುತ್ತ ಬಂದಿರುವದು. ಪಂಜಾಬ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಈ ಆರೋಪಣೆಗಳನ್ನು ಸಂಬಂಧಪಟ್ಟ ಮಂತ್ರಿಮಂಡಲಗಳಿಗೆ ಕಳುಹಿಸಿ ಅವುಗಳಿಂದ ತೃಪ್ತಿಕರವಾದ ಉತ್ತರಗಳನ್ನು ಸಂಗ್ರಹಿಸಿದೆ. ಈ ಉತ್ತರಗಳನ್ನೆಲ್ಲಾ ಪಂಜಾಬ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಒಂದ ಪುಸ್ತಕರೂಪದಲ್ಲಿ ಪ್ರಕಟಿಸುವದು. ಮುಸ್ಲಿಮ ಲೀಗ ಶಿಷ್ಟಮಂಡಲವು ಮುದ್ದೇಶದಿಂದ ಹಾಕಿದ ಮಿಥ್ಯಾಪವಾದಗಳ ನಿರಸನ ಮಾಡುವದಕ್ಕೋಸ್ಕರ ಒಂದು ಕಾಂಗ್ರೆಸ ಶಿಷ್ಟಮಂಡಲವನ್ನು ಪಂಜಾಬು, ಗಡಿನಾಡುಗಳಿಗೆ ಕಳುಹಿಸುವ ಆಲೋಚನೆಯನ್ನು ಅದು ಮಾಡಿದೆ.

ಬಂಗಾಳದ ಹಿಂದೂ ಆಂದೋಲನ.

ಹೋಳಿಯ ತನಕ ಟಟ, ದೊರೆಯ ತನಕ ದೂರು ಅನ್ನುವ ಹಾಗೆ ಅಲ್ಲಿಯ ಮಂತ್ರಿ ಮಂಡಲದ ಧೋರಣೆಯಿಂದಾಗಿ ಬಂಗಾಳದ ಹಿಂದೂ ಸಮಾಜಕ್ಕೆ ತಪ್ಪಿರುವ ಹಾನಿಗಳನ್ನು ದೂರಮಾಡದಕ್ಕೋಸ್ಕರ ಬಂಗಾಳದ ಹಿಂದುಗಳು ಸಂಘಟಿತರಾಗಿ, ಗವರ್ನರರತನಕವು ದೂರು ತೆಗೆದುಕೊಂಡು ಹೋಗಿದ್ದಾರೆ. ನೌಕರಿಗಳಲ್ಲಿ ಜಾತಿ ಪ್ರಮಾಣ ಮತ್ತು ಕಲ್ಕತ್ತ ಮುನ್ಸಿಪಲ್ ತಿದ್ದುಪಡಿ ಮಸೂದೆಗೆ ಗವರ್ನರರು ತಮ್ಮ ಸಮ್ಮತಿಯನ್ನು ಕೊಡಬಾರದೆಂದು ವಿನಂತಿಮಾಡಿಕೊಂಡಿದ್ದಾರೆ. ಈ ಎರಡು ವಿಚಾರಗಳ ಮೂಲಕ ಅಲ್ಲಿ ಸ್ಥಾನಿಕ ಆಂದೋಲನವುಂಟಾಗಿದೆ. ಮಂತ್ರಿಮಂಡಲವು ಯಾವ ಪಕ್ಷದವರಾಗಿದ್ದರೂ ಅದು ಒಂದು ಜಾತಿಗೆ ಬೆಣ್ಣೆ ಇನ್ನೊಂದು ಜಾತಿಗೆ ಸುಣ್ಣ ಕೊಡಬಾರದು. ಆದರೆ ಹಕ್ ಮಂತ್ರಿಮಂಡಲ ಬೆಣ್ಣೆ ಸುಣ್ಣದ ನೀತಿಯನ್ನು ಖಂಡಿಸಿ, ಆದ್ದರಿಂದ ಬಂಗಾಳದಲ್ಲಿ ಅಶಾಂತಿ ಹುಟ್ಟಿದ್ದನ್ನು ಹಿಂದುಗಳು ಗವರ್ನರರ ಗಮನಕ್ಕೆ ತಂದಿದ್ದಾರೆ. ಹಿಂದುಗಳ ಈ ಆಂದೋಲನದ ಪರಿಣಾಮವನ್ನು ಸದ್ಯದಲ್ಲೇ ತಿಳಿಯಬಹುದು.

ಗೃಹಮಂತ್ರಿಗಳ ಪರಿಷತ್ತು.

ಸಮಗ್ರ ಭಾರತದ ಪ್ರಾಂತೀಯ ಗೃಹಮಂತ್ರಿಗಳ ಪರಿಷತ್ತು ಕಳೆದವಾರ ದಿಲ್ಲಿಯಲ್ಲಿ ಕೂಡಿ ಚರ್ಚಿಸಿದ ವಿಷಯಗಳಲ್ಲಿ ಜಾತಿಕಲಹಗಳನ್ನು ನಿಲ್ಲಿಸುವದು ಹೇಗೆ ಎಂಬ ಒಂದು ವಿಷಯವೂ ಇದ್ದಿತು. ಈಗೀಗ ಈ ಕಲಹವಾದಿಗಳು ನಿರಂಕುಶರಾಗಿ ಲೇಖನ ಭಾಷಣಾದಿಗಳ ಮೂಲಕ ಜಾತಿಕಲಹದ ಕಿಚ್ಚನ್ನು ಊರಿಂದೂರಿಗೆ, ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಹರಡಿಸುತ್ತಿದ್ದಾರೆ. ಆದ್ದರಿಂದ ಅವರ ಮೇಲೆ ನಿರ್ಬಂಧವನ್ನು ಹಾಕಿ, ಕಿಚ್ಚನ್ನು ಆರಿಸುವದಕ್ಕೋಸ್ಕರ ಪ್ರಾಂತೀಯ ಗೃಹಮಂತ್ರಿಗಳು ಹೇಗೆ ಪರಸ್ಪರ ಸಹಕರಿಸಬಹುದು ಮತ್ತು ಕೇಂದ್ರ ಸರಕಾರದ ಸಹಾನುಭೂತಿ ಪಡೆದು ಪ್ರಾಂತೀಯ ಸರಕಾರಗಳು ಈ ಸಂಬಂಧ ಯಾವ ಸಾಮಾನ್ಯ ಧೋರಣೆಯ ಸ್ವೀಕರಿಸಬಹುದು ಎಂಬ ಬಗ್ಗೆ ಚರ್ಚೆಯಾಯಿತು. ಅನೇಕ ಸಂಗತಿಗಳು ಸರ್ವಾನುಮತಿಯಿಂದ ನಿರ್ಧರಿಸಲ್ಪಟ್ಟಿವೆ. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ನವೀನ ಧೋರಣೆಯಿಂದಾದರೂ ಜಾತೀಯ ಸ್ವಾರ್ಥವು ಅಡಗಿ ಎಲ್ಲಾ ಜಾತಿಗಳಿಗೆ ನ್ಯಾಯದೊರೆಯ ಬಹುದೆಂದು ಆಶಿಸುತ್ತೇವೆ.

ಬ್ರಿಟನ್ - ಫ್ರಾನ್ಸ್ - ರಷ್ಯ - ತ್ರಿರಾಷ್ಟ್ರಗಳ ಒಪ್ಪಂದ

ಜರ್ಮನಿಯ ಕಷ್ಟಪರಂಪರೆ —— ಅಮೆರಿಕದ ತಾಟಸ್ಥ್ಯಧೋರಣೆ

ಬ್ರಿಟನು ಫ್ರಾನ್ಸು ರಷ್ಯಗಳೊಳಗಿನ ಪರಸ್ಪರ ಸಹಾಯದ ಸೈನಿಕ ಒಡಂಬಡಿಕೆಗೆ ಬ್ರಿಟನು ಕಳುಹಿಸಿದ ತಿದ್ದುಪಡಿ ಸೂಚನೆಗಳು ರಷ್ಯದ ಪ್ರಧಾನ ಮಂತ್ರಿ, ಮತ್ತು ವಿದೇಶಾಂಗ ಸಚಿವ ಯಂ. ಮೊಲೊಟೊವರ ಹಸ್ತಗತವಾಗಿವೆ. ಬ್ರಿಟಿಷ ರಾಯಭಾರಿ ಸರ್ [illegible] ವಿಲಿಯಮ್ ಸೀಡ್ಸರು ಈ ಸೂಚನೆಗಳನ್ನು ವಿವರಿಸಿ ಎರಡು ತಾಸುಗಳ ತನಕ ಮೊಲೊಟೊವರ ಕೂಡೆ ಸಂಭಾಷಣೆ ಮಾಡಿದರು. ರಷ್ಯವು ಬರುವ ವಾರದಲ್ಲಿ ಒಂದು ದಿನ ಈ ಸೂಚನೆಗಳ ಕುರಿತು ತನ್ನ ಅಭಿಪ್ರಾಯಗಳನ್ನು ಬ್ರಿಟನ್ನಿಗೆ ಕಳುಹಿಸಿಕೊಡಬಹುದು. ಈ ಮೂರು ರಾಷ್ಟ್ರಗಳ ಪೈಕಿ ಯಾವ ರಾಷ್ಟ್ರದ ಮೇಲೆಯಾದರೂ ಶತ್ರುಪಕ್ಷದ ಆಕ್ರಮಣವಾದರೆ, ಅಥವಾ ಈ ಮೂರು ರಾಷ್ಟ್ರಗಳು ಯುರೋಪದ ಇತರ ಚಿಕ್ಕ ರಾಷ್ಟ್ರಗಳು ಕೊಟ್ಟ ಪರಸ್ಪರ ಸಹಾಯದ ಭರವಸೆಯಿಂದಾಗಿ ಯುದ್ಧದಲ್ಲಿ ಭಾಗವಹಿಸಿದರೆ, ಅಥವಾ ಯುದ್ಧಕ್ಕೆ ಹೋಗಬೇಕಾಗಿ ಬಂದರೆ, ಈ ಮೂರರಲ್ಲಿ ಉಳಿದವುಗಳು ಆ ರಾಷ್ಟ್ರಗಳ ಸೈನಿಕ ಸಹಾಯಕ್ಕೆ ಬರಬೇಕೆಂದು ಬ್ರಿಟನಿನ ತಿದ್ದುಪಡಿ ಸೂಚನೆಯಾಗಿರುವಂತೆ ಊಹಿಸಲಾಗಿದೆ. ರಷ್ಯವು [illegible] ಈ ಬಗೆಯ ಒಡಂಬಡಿಕೆಯೇ [illegible] ಹೇಳಬಂದಿತ್ತು. ಆದ್ದರಿಂದ ಬ್ರಿಟನ ಕಳುಹಿಸಿದ ಒಡಂಬಡಿಕೆಯ ಶರತ್ತುಗಳನ್ನು ಒಪ್ಪಲಿಕ್ಕೆ ರಷ್ಯದ ಆಕ್ಷೇಪವು [illegible] ಫ್ರಾನ್ಸು ರಷ್ಯದೊಡನೆ [illegible] ಒಡಂಬಡಿಕೆಯನ್ನು ಮಾಡಿಕೊ[illegible] ಒಡಂಬಡಿಕೆಯು ಬ್ರಿಟನ್, ರಷ್ಯ ಫ್ರಾನ್ಸು [illegible] ಸ್ನೇಹ [illegible] ಇನ್ನೂ ದೃಢವಾಗುವುದೆಂದು [illegible] ವಿದೇಶಾಂಗ ಮಂತ್ರಿಗಳು [illegible] ತಮ್ಮ ಒಂದು ಭಾಷಣದಲ್ಲಿ ಹೇಳಿ[illegible] ರಷ್ಯಕ್ಕೆ ಮೇಲೆ ಹೇಳಿದ [illegible] ವಿರುವದಿಲ್ಲವಾದರೆ ಬರ[illegible] ವಲ್ಲಿ ಬ್ರಿಟನ ರಷ್ಯ ಒಡಂಬಡಿಕೆಗೆ [illegible] ಬಹುದು. ಆ ವೇಳೆ ಬ್ರಿಟನ [illegible] ರಾಷ್ಟ್ರಗಳ ಒಂದು ಶಾಂತಿ [illegible] ಪತ್ರವನ್ನು [illegible] ಲಿದೆ.

ಸೀನಿಯರ ಗ್ರಾಂಡಿಯ ಭಾಷಣ

ಯಾವದೇ ರಾಷ್ಟ್ರದ [illegible] ರಾಜನೀತಿಯನ್ನು ಕುರಿತು [illegible] ಗಳನ್ನು ಕೊಡುವುದು ಸಭ್ಯತನವೆನ್ನಿಸುವುದಿಲ್ಲವಾದರೂ ಬ್ರಿಟನಿನಲ್ಲಿ ಇಟಲಿಯ ರಾಯಭಾರಿಯಾಗಿರುವ [illegible]ಯರ ಗ್ರಾಂಡಿ ಕಳೆದ ವಾರ ಇಟಾಲಿಯನ್ ಜರ್ಮನ ಸೈನಿಕ ಒಡಂಬಡಿಕೆಯ ಸ್ಮಾರಕೋತ್ಸವ ನಡೆದ ಸಂದರ್ಭದಲ್ಲಿ ಒಂದು ಭಾಷಣವನ್ನು ಕೊಟ್ಟು ಫ್ರಾನ್ಸಿನ ಮೇಲೆ ತುಂಬಾ ವಿಷಕಾರಿರುವರು. ಫ್ರಾನ್ಸು ಪ್ರತ್ಯಕ್ಷದಲ್ಲಿಯೂ ಪರೋಕ್ಷದಲ್ಲಿಯೂ ನಮ್ಮ ಶತ್ರುವಾಗಿದೆ. ಫ್ರಾನ್ಸಿನ ವೃತ್ತ ಪತ್ರಿಕೆಗಳು ಇಟಾಲಿಯ ವಿರುದ್ಧ [illegible] ಪ್ರಚಾರ ಮಾಡುತ್ತಲಿದ್ದವು. ಅವುಗಳ ಆ ಪ್ರಚಾರದಿಂದ [illegible] ಎಂದು [illegible] ಮಾತುಗಳನ್ನಾಡಿದಾನೆ. ಬ್ರಿಟನ ರಷ್ಯ ಒಡಂಬಡಿಕೆಯಾಗಲಿಕ್ಕೆ ಫ್ರಾನ್ಸು ಬಹಳ ಕೆಲಸ ಮಾಡಿದೆ. ಫ್ರಾನ್ಸಿನ ಈ ಪ್ರಯತ್ನಗಳು ಕೈಗೂಡಿ ಬಂದುದರಿಂದ ಹಿಟ್ಲರ ಮುಸೋಲಿನಿಯರು ಕೈಕಟ್ಟಿ ಸುಮ್ಮನೆ ಕೂತುಕೊಂಡಿರಬೇಕಾಗಿ ಬಂದಿದೆ. ಅದ್ದರಿಂದಲೇ ಸೀನಿಯರ ಗ್ರಾಂಡಿ ತನ್ನ [illegible] ಮರ್ಯಾದೆಯು ಕಡೆಗೆ ಕೂಡ ಲಕ್ಷ್ಯಕೊಡದೆ ಹೀಗೆ ಮಾತನಾಡಿದ್ದಾನೆ.

ಜರ್ಮನಿಯ ಕಷ್ಟಪರಂಪರೆ

ಹಿಟ್ಲರನ ರಾಕ್ಷಸೀ [illegible] ಯಿಂದ ಇಡೀ ಜಗತ್ತು ಅವನ [illegible] ರುದ್ಧವಾಗಿದೆ. ಅವನ ಏಕಮೇವ ಕಾರ್ಯಾಧಿಕಾರಶಾಹಿಯಿಂದ ಜರ್ಮನ ಜನತೆಯು ಕಷ್ಟಪರಂಪರೆಗಳು ದಿನದಿಂದ ದಿನಕ್ಕೆ ಬೆಳೆಯುತ್ತಲಿರುವುವು. ಜೆಕೊಸ್ಲೋವೇಕಿಯ, ಆಸ್ಟ್ರಿಯ ಮೊದಲಾದ ದೇಶಗಳನ್ನು ಜರ್ಮನಿಗೆ ಸೇರಿಸಿಕೊಂಡದ್ದಾದರೂ ಜೀವನ ಸುಖವೆಂಬುದು ಜರ್ಮನರಿಗೆ ಕನಸಿನ ಗಂಟಾಗಿದೆ. ಈಗ ತಾನೇ ಜರ್ಮನಿಯಲ್ಲಿ ಆದ ಒಂದು ವಿಚಾರಣೆಯಿಂದ ತಿಳಿದುಬರುವದೇನೆಂದರೆ—ಜರ್ಮನಿಯ ಆರ್ಥಿಕ ಸ್ಥಿತಿಯು ಬಹಳ ಕೆಟ್ಟಿರುತ್ತದೆ. ಕೈಗಾರಿಕೆಗಳು ಬಹಳ ಅವನತ ಸ್ಥಿತಿಯಲ್ಲಿವೆ. ಶ್ರಮಜೀವಿಗಳ ಎನ ಮಾಡಿದಲ್ಲಿ [illegible] ದುಡಿಯುತ್ತಲಿರುವ ರಾದರೂ ಆ ಕೈಗಾರಿಕೆಗಳ ಉದ್ಧಾರವಾರ್ಗವು [illegible] ದ ಬರ ವುದಿಲ್ಲ.

ಅಮೆರಿಕದ ತಾಟಸ್ಥ್ಯ ಧೋರಣೆ

[illegible] ಯುರೋಪದ ಯುದ್ಧೋನ್ಮುಖಯುದ್ಧಗಳಲ್ಲಿ ಅಮೇರಿಕಕ್ಕೆ ಅನಿವಾರ್ಯವಾಗಿ ಮಾತ್ರ ಸೇ[illegible] [illegible] ವಾದ್ಯವಿದ್ದರೆ [illegible] ಯುದ್ಧದ ಬಗ್ಗೆ ಯುರೋಪದ ಜನಾಂಗಗಳಿಗೆ [illegible] ಯುದ್ಧದಲ್ಲಿ ನಾವು [illegible] ಗಳನ್ನು ಕೊಟ್ಟು [illegible] ವಕ್ಕ ಪಡೆದವು. ಅದ್ದರಿಂದ ನಾವು [illegible] ಪದ ಜನಾಂಗಗಳಿಗೆ ಸಾಲಕೊಡವುದಿಲ್ಲ. [illegible] ಯುರೋಪದ ಯುದ್ಧಗಳಲ್ಲಿ [illegible] [illegible] ತಾಟಸ್ಥ್ಯಧೋರಣೆ [illegible] ಸ್ಪಷ್ಟವಾಗಿದೆ. ಯುರೋಪದ ಯುದ್ಧಕ್ಷೇತ್ರಗಳಿಗೆ [illegible] ಪಡೆಗಳಿಗೆ [illegible] [illegible] ಅಮೇರಿಕದ [illegible] ಯುರೋಪದ [illegible] ಪಕ್ಷಗಳ [illegible] ದೂರದಲ್ಲೇ ಇರುವುದು ಎಂದು [illegible] ಹೇಳಿದನು.

ಬರ್ಮದಲ್ಲಿ ಮಂತ್ರಿಮಂಡಲದ ಬಿಕ್ಕಟ್ಟು

ಬರ್ಮ ಮಂತ್ರಿಮಂಡಲದ [illegible] ಪಕ್ಷಗಳ ರಾಜೀನಾಮೆ [illegible] ಅವರು ಮಾಡಿದ ಪ್ರಯತ್ನಗಳು ವಿಫಲವಾಗಿರುವುದರಿಂದ [illegible] ಮಂತ್ರಿಮಂಡಲವೇ ರಾಜೀನಾಮೆ ಕೊಡಬೇಕಾಗಿ ಬಂದಿದೆ. ಈ ಕಾರಣದಿಂದ ಮುಖ್ಯ ಮಂತ್ರಿಗಳು ಬರ್ಮಾ ಗವರ್ನರರ ಭೇಟಿ ತೆಗೆದುಕೊಂಡಿದ್ದಾರೆ. ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿದ್ದಾದರೆ ಯು. ಟಿನ್ [illegible] ಅವರ ಅನುಯಾಯಿಗಳು ವಿರೋಧ ಪಕ್ಷವನ್ನು ಸೇರುವರು. ಅದರಿಂದ ಅಲ್ಲಿ [illegible] ಬದಲಾವಣೆಗಳಾಗಲಿವೆ.

ಅಸ್ಸಾಮಿನ ಎಣ್ಣೆ ಕೆಲಸಗಾರರ ಮುಷ್ಕರ

ದಿಗ್ಬೋಯಿಯ ಎಣ್ಣೆ ಕೆಲಸಗಾರರ ಮುಷ್ಕರವು ನಡೆದೇ ಇದೆ. ಅದನ್ನ ಮುಗಿಯುವುದ ಕ್ಕೋಸ್ಕರ ಎಣ್ಣೆಗ [illegible] ಪ್ರಯತ್ನ ಮಾಡಿದವರು ಮುಷ್ಕರ ಹೂಡಿದ ಕೆಲಸಗಾರರ ಸ್ಥಾನದಲ್ಲಿ [illegible] ಇತರ ಕೆಲಸಗಾರರನ್ನು [illegible] ಕೊಳ್ಳಲು ಪ್ರಯತ್ನಗಳನ್ನು ಮಾಡಿದ್ದಾರೆ. ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ಸಂಧಾನವಾಗಬೇಕೆಂದು ಕೆಲಸಗಾರರು ಅವರನ್ನು ಕೇಳಿಕೊಂಡಿರುವುದು [illegible] ವರು ಈ ಸಂಬಂಧ ಅಸ್ಸಾಮಿನ ಪ್ರಧಾನ ಮಂತ್ರಿ ಶ್ರೀ [illegible] ಯೂ, ಕಾಂಗ್ರೆಸ ವರ್ಕಿಂಗ ಕಮಿಟಿಯ ಸದಸ್ಯರಾದ ಬಿದಾನ ಚಂದ್ರರೊಯಿಯವರೊಡನೆಯೂ ಪತ್ರವ್ಯವಹಾರವನ್ನಾರಂಭಿಸಿದ್ದಾರೆ.

ಸಿಲೋನ ಗವರ್ನರರ ಬಳಿಗೆ ಹಿಂದೀಯರ ಶಿಷ್ಟಮಂಡಲ

ಸರಕಾರ ನೌಕರಿಯಲ್ಲಿರುವ ಭಾರತೀಯರನ್ನು ಕೆಲಸದಿಂದ ತೆಗೆದುಹಾಕಿ ಪುನಃ ಭಾರತಕ್ಕೆ ಕಳುಹಿಸುವ ಸಿಲೋನ ಸರಕಾರದ ನೀತಿಯಿಂದ ಭಾರತೀಯರಿಗಾಗುವ ಕಷ್ಟನಷ್ಟಗಳನ್ನು [illegible] ಸಿಲೋನದ ಭಾರತೀಯರ ಒಂದು ಶಿಷ್ಟಮಂಡಲವು ಅಲ್ಲಿನ ಗವರ್ನರರ ಭೇಟಿ ತೆಗೆದು [illegible] ಗವರ್ನರರು [illegible] ಭರವಸೆಯನ್ನು [illegible] ಕೊಡಲಿಲ್ಲ.

ದೇಶೀಸಂಸ್ಥಾನಗಳ ಪರಿಸ್ಥಿತಿ

[illegible] ಅಪ ಕಳೆದ [illegible] ಗಲ್ಲಿ [illegible] ಅಲ್ಲಿಯ [illegible] ಸಂಬಂಧವೂ [illegible] ಕಾಂಗ್ರೆಸ ಕಮಿಟಿಯ [illegible] ಒಳಗೆ [illegible] [illegible]

[illegible] ಹಿಂದೆ ತೆಗೆದ [illegible]

[illegible] ನಡೆಯು [illegible] [illegible] ಕೂಡದೆಂದೂ [illegible] ಅವರ [illegible] ಜನಕ್ಕೆ [illegible]

[illegible] ಅಸ್ತಿಗಳ [illegible] ರದು ಕೊಟ್ಟ ಪ್ರಕಟನೆಯು [illegible] ಈ ಆಸ್ತಿಗಳಿಗೆ [illegible]

ಹೈದರಾಬಾದ ಸತ್ಯಾಗ್ರಹ

ಕೊಲ್ಹಾಪುರದಲ್ಲಿ ಸಾಯಂಕಾಲ [illegible] ಬೆಳಗ್ಗಿನ [illegible] ತನಕ ಯಾರೂ ರಸ್ತೆಗಳಲ್ಲಿ ಸಂಚರಿಸಬಾರದೆಂದಿದ್ದ ಕರ್ಫ್ಯೂ ಆರ್ಡರಿನಲ್ಲಿ ಕೆಲವು ಬದಲಾವಣೆಗಳಾಗಿ ರಾತ್ರಿ ೧೦ ಗಂಟೆಯ ತನಕ ಸಂಚರಿಸಬಹುದೆಂದಾಗಿದೆ. ಕೊಲ್ಹಾಪುರಕ್ಕೆ ಬಂದ ಎಂದು [illegible] ಗಳಲ್ಲಿ ಒಂದು ಪೂಜೆಗೆ [illegible] ಕೊಲ್ಹಾಪುರದ ಪರಿಸ್ಥಿತಿ ಸುಧಾರಿಸಿದೆ ಎನ್ನಬಹುದು. ಒಂದು ಸಾವಿರ ಸತ್ಯಾಗ್ರಹಿಗಳೊಂದಿಗೆ ಹೈದರಾಬಾದಿನಲ್ಲಿ ಸತ್ಯಾಗ್ರಹ ಮಾಡುವುದಕ್ಕೋಸ್ಕರ ಆರನೇ ಸರ್ವಾಧಿಕಾರಿ ಮಹಾಶಯ ಕೃಷ್ಣರು ಲಾಹೋರಿನಿಂದ ಹೊರಟಿರುವರು. [illegible] ಅಮೃತಸರದ ಕೆಲಸಗಾರರ ಸಭೆಯಲ್ಲಿ ಶ್ರೀ ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿಯ, ಅಧ್ಯಕ್ಷ ಮಾಸ್ಟರ ತಾರಾಸಿಂಗರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಮಹಾಶಯ ಕೃಷ್ಣರಿಗೆ ಅಭಿನಂದನ ಪತ್ರವೂ ೧೧೦೦ ರೂಪಾಯಿಗಳ ಥೈಲಿಯ ಸಮರ್ಪಿಸಲ್ಪಟ್ಟವು. ಅವರು ಭಾಷಣಮಾಡುತ್ತಾ—ಹೈದರಾಬಾದಿನಲ್ಲಿ ಆರ್ಯಸಮಾಜಿಗಳು ಕೇಳುವ ಅನುಕೂಲತೆಗಳು ಎರಡೇ ಎರಡಾಗಿವೆ. ಮೊದಲನೆಯದಾಗಿ ವೈದಿಕ ಧರ್ಮ ಮತ್ತು ಸಂಸ್ಕೃತಿಯ ಪ್ರಚಾರಕ್ಕೆ ಅವರಿಗೆ ಹೈದರಾಬಾದಿನಲ್ಲಿ ಪೂರ್ಣ ಸ್ವಾತಂತ್ರ್ಯವಿರಬೇಕು. ಎರಡನೆಯದಾಗಿ [illegible] ಅಪ್ಪಣೆಪಡೆಯದೆ ಸಮಾಜ ಮಂದಿರ, ಯಜ್ಞಶಾಲೆ ಹವನಕುಂಡ ಇತ್ಯಾದಿಗಳನ್ನು ಕಟ್ಟಿಸಲಿಕ್ಕೂ, ಜೀರ್ಣೋದ್ಧಾರಮಾಡಲಿಕ್ಕೂ ಆರ್ಯಸಮಾಜಗಳಿಗೆ ಅಧಿಕಾರವಿರಬೇಕು. ಇವೆರಡು ಅನುಕೂಲತೆಗಳು ದೊರೆತಾಗ ಸತ್ಯಾಗ್ರಹ ನಿಲ್ಲುವುದೆಂದರು. ಈ ಎರಡು ಶರತ್ತುಗಳ ಆಧಾರದ ಮೇಲೆ ಹೈದರಾಬಾದ ಸರಕಾರಕ್ಕೂ ಅಂತರಾಷ್ಟ್ರೀಯ ಆರ್ಯ ಮಹಾಸಭೆಗೂ ಸಂಧಾನ ಪ್ರಸ್ತಾಪ ನಡೆದಿರುವುದಾಗಿ ತಿಳಿದು ಬರುತ್ತದೆ.

ಹಿಂದೀ ವಿರೋಧಕರ ಬಿಡುಗಡೆ

[illegible] ಗಳ ಮೊದಲ [illegible] ಹಿಂದಿ [illegible] ಕಲಿಸ [illegible] ಸರಕಾರದ ಧೋರಣೆಯ ವಿರುದ್ಧ [illegible] ಸತ್ಯಾಗ್ರಹ [illegible] ಶ್ರೀ ರಾಮಸ್ವಾಮಿ ನಾಯ[illegible] ಅನಾರೋಗ್ಯದ ನಿಮಿತ್ತ ಮದ್ರಾಸು ಸರಕಾರವು ಬಿಡುಗಡೆ ಮಾಡಿದೆ. ಹಿಂದೀ ವಿರೋಧಕರ ವಿರೋಧವು ಈಗೀಗ [illegible] ಸರಕಾರವು ಜೈಲಿನಲ್ಲಿರುವ ಇತರ ಹಿಂದೀ ವಿರೋಧಕರನ್ನು [illegible] ಬಿಡುಗಡೆ ಮಾಡುವುದ [illegible]

ಶ್ರೀ ಸುಭಾಷ ಬೋಸರ ಸ್ಪರ್ಧೆ

[illegible] ತಮ್ಮ ಕಳೆದ ಹೋದ ಸ್ಥಾನಮಾನಗಳನ್ನು ಪಡೆಯಲಿಕ್ಕೆ ಪ್ರಯತ್ನಿಸುವುದು ಸಹಜವಾಗಿದೆ. [illegible] ಸುಭಾಷಬೋಸರು [illegible] ಗಳಲ್ಲಿ [illegible] [illegible] ದೃಷ್ಟಿಯ [illegible] ಪದವಿ ಅವರು ಕಳೆದು [illegible] ಸ್ಥಾನಮಾನಗಳನ್ನು [illegible] ಸ್ಪರ್ಧೆ [illegible] ವಿಚಾರ [illegible] ಒಂದು [illegible] ಕಟ್ಟಿ [illegible] ತಮ್ಮ [illegible] [illegible] ವಾಗ [illegible] ಸಂಸ್ಥೆಯ [illegible] ಜಾಗೃತಿಯನ್ನುಂಟು ಮಾಡಿದ [illegible] ಪರಿಣಾಮ [illegible] ಯೂ ಸ್ವರಾಜ್ಯ [illegible] ಬರದ [illegible] ಮುಖಂಡರಾಗಲಿಕ್ಕೆ ಯೋಗ್ಯರೇ ಅಲ್ಲ. [illegible] ಉಂಟುಮಾಡಿದ ಜಾಗೃತಿಯು ಯಾವ ವ್ಯಕ್ತಿಯದ್ದೆಂದು ತಿಳಿದೂ ಸುಭಾಷರು ಅದಕ್ಕೆ ಸಂಬಂಧದ ಸೈನಿಕರೆನು[illegible] ಅಗ [illegible] ಅವರನ್ನು ಅಧ್ಯಕ್ಷ ಪದವಿಗೆ [illegible] ಉತ್ತ[illegible] ಜಯಿಸಿದ [illegible] ಮಹಾತ್ಮ [illegible] ಮುಂದುವರಿಯಿತು

ಸ್ವದೇಶಾಭಿಮಾನಿ

ತಾರೀಕು ೨—೬—೧೯೩೯

ರಾಜಕೋಟೆಯೂ ತಲಚೇರವೂ

ರಾಜಕೋಟೆಯಲ್ಲಿ ಕಾಂಗ್ರೆಸು ಮತ್ತು ಸಂಸ್ಥಾನಾಧಿಕಾರಿಗಳಲ್ಲಿ ಕಳೆದ ಹತ್ತು ತಿಂಗಳಿಂದ ಉಂಟಾದ ಪ್ರಕರಣವು ಠಾಕೂರ ಸಾಹೇಬರ ಉಪಘೋಷಣೆಯಿಂದಾಗಿ ಸಮಾಧಾನವಾಯಿತು. ರಾಜಕೋಟೆ ವಾತಾವರಣವು ಈಗ ಶಾಂತವಾಗಿದೆ. ಠಾಕೋರ ಸಾಹೇಬರ ಉಪಘೋಷಣೆಯಂತೆ ೧೯೩೮ನೇ ಆಗೋಸ್ತು ತಿಂಗಳಿಂದ ಜಾರಿಯಾದ ಎಲ್ಲಾ ಪ್ರತಿಬಂಧಕಾಜ್ಞೆಗಳು ಹಿಂದೆಗೆಯಲ್ಪಟ್ಟವೆ. ವಸೂಲಾದ ಎಲ್ಲಾ ಜುರುಮಾನೆ ಮುಟ್ಟುಗೋಲು ಹಾಕಲಾದ ಆಸ್ತಿಗಳನ್ನೂ ಹಿಂದಿರುಗಿ ಕೊಡಲ್ಪಟ್ಟಿದೆ ಠಾಕೋರ ಸಾಹೇಬರ ಈ ಉಪಘೋಷಣೆಯಿಂದ ಎಲ್ಲರೂ ಸಮಾಧಾನ ತಾಳಿರುವರು ಆದರೆ ರಾಜಕೋಟೆ ಪ್ರಕರಣದ ಪ್ರಾರಂಭದಲ್ಲಿಯೇ ಠಾಕೋರ ಸಾಹೇಬರು ಈಗ ವರ್ತಿಸಿದ ರೀತಿಯಲ್ಲಿಯೇ ವರ್ತಿಸುತ್ತಿದ್ದರೆ ಇಷ್ಟು ಕಷ್ಟಗಳೇ ಬಂದೊದಗುತ್ತಿದ್ದಿಲ್ಲ. ದಬಾರ್ ದ ವೀರವಾಲರ ಅಧ್ಯಕ್ಷತೆಯಲ್ಲಿ ಸುಧಾರಣಾ ಕಮಿಟಿಯು ಕಾರ್ಯವನ್ನು ಪ್ರಾರಂಭಿಸಿದೆ ಒಂದು ತಿಂಗಳೊಳಗಾಗಿ ಅದು ತನ್ನ ವರದಿಯನ್ನೊಪ್ಪಿಸುವುದು ಆದರೆ ಠಾಕೋರ ಸಾಹೇಬರು ಪತ್ರಿಕೆಗಳ ಮೇಲಿನ ಪ್ರತಿಬಂಧಕವನ್ನು ಇನ್ನೂ ಹಿಂತೆಗೆಯದರಿಂದ ಸ್ವಲ್ಪ ಅಸಂತುಷ್ಟಿಯು ಕಂಡುಬರುವುದು ಆದುದರಿಂದ ಬಹು ಬೇಗನೇ ಈ ಪ್ರತಿಬಂಧಕದ ನಿವಾರಣೆಯಾಗುವಂತೆ ಠಾಕೋರ ಸಾಹೇಬರು ವರ್ತಿಸುವರೆಂದು ಆಶಿಸುತ್ತೇವೆ

ಬಾಹ್ಯದೃಷ್ಟಿಯಿಂದ ವೀರವಾಲರು ವಿಜಯಿಯಾದರೂ ನಿಜವಾದ ವಿಜಯವು ಮಹಾತ್ಮರದ್ದಾಗಿರುತ್ತದೆ. ಕಳೆದ ಮೇ ತಿಂಗಳ ೧೭ನೇ ತಾರೀಕಿನ ಮಹಾತ್ಮರ ಉದಾರ ಚರಿತ ಪ್ರಕಟಣೆಯು ಅವರಿಗೆ ವಿಜಯವನ್ನುಂಟುಮಾಡಿತು. ಮಹಾತ್ಮಾಜಿಯವರು ವೈಸರಾಯ್, ಚೀಫ್ ಜಸ್ಟಿಸ್, ಠಾಕೂರ್ ಸಾಹೇಬ ಮತ್ತು ವೀರವಾಲರಿಗೆ ಕೊಟ್ಟ ಕಷ್ಟಕ್ಕಾಗಿ ಕ್ಷಮೆಯಾಚಿಸಿದರು ಇದರಿಂದಾಗಿ ಉಪವಾಸದಿಂದಲೂ ಸಾಧ್ಯವಾಗದ ವಿಜಯವನ್ನು ಗಾಂಧಿಜಿಯವರು ಸಂಪಾದಿಸಿದರು. ಪ್ರಜೆಗಳಿಗೆ ಸುಖವನ್ನುಂಟುಮಾಡಿದರು. ಸುಧಾರಣಾ ಕಮಿಟಿಯು ಕಾರ್ಯವನ್ನು ಪ್ರಾರಂಭಿಸಿರುವುದು ಅದಾದರೂ ತನ್ನ ಮೇಲೆ ರಾಜಕೋಟೆಯ ೭೫,೦೦೦ ಪ್ರಜೆಗಳ ಜವಾಬ್ದಾರಿ ಇರುವುದೆಂದು ಭಾವಿಸಿ ನ್ಯಾಯ ರೀತಿಯಲ್ಲಿ ಮುಂದೊತ್ತುವುದೆಂದು ನಾವು ನಂಬುತ್ತೇವೆ ಠಾಕೋರರಾದರೂ ತಮ್ಮ ಭಾವನೆಗಳನ್ನು ಸಲ್ಲಿಸದರೆಂದು ನಂಬುತ್ತೇವೆ

ರಾಜಕೋಟೆಯ ಪರಿಸ್ಥಿತಿಯು ಸುಧಾರಣೆಯಾಗುವಾಗ ತಲಚೇರ ಸಂಸ್ಥಾನದ ಪರಿಸ್ಥಿತಿಯು ಚಿಂತಾಜನಕವಾಗಿರುವುದು 'ರಾಜಕೋಟೆಗಿಂತಲೂ ತಲಚೇರದ ಸಮಸ್ಯೆಯು ಬಿಕ್ಕಟ್ಟಿನದಿರುವುದು' ಎಂದು ಮಹಾತ್ಮಾಜಿಯವರು ಹರಿಜನದಲ್ಲಿ ಉಲ್ಲೇಖಿಸಿರುವರು. ರಾಜಕೋಟೆಯಲ್ಲಿ ಪ್ರಜೆಗಳು ಕೇವಲ ಸಂಸ್ಥಾನಾಧೀಶರೊಡನೆ ಹೋರಾಡಬೇಕಿತ್ತು ಆದರೆ ತಲಚೇರದಲ್ಲಿ ಸಾರ್ವಭೌಮ ಸರಕಾರವೇ ಕೊಟ್ಟ ಭಾಷೆಯನ್ನು ತಪ್ಪಿರುವುದರಿಂದ ಅವರೊಡನೆ ಹೋರಾಡುವ ಪ್ರಸಂಗವು ಬಂದಿರುವುದು. ತಲಚೇರ ಸಂಸ್ಥಾನವನ್ನು ಬಿಟ್ಟು ಬಂದ ಪ್ರಜೆಗಳ ಪರಿಸ್ಥಿತಿಯಾದರೂ ಚಿಂತಾಜನಕವಾಗಿರುವುದು ಧರ್ಮನಿಯಿಂದ ಹೊರಹಾಕಲ್ಪಟ್ಟ ಮಹಮದಿಗೆ ಸಹಾಯವೀಯಲು ಅಂದಿನಲ್ಲಿ ಮಾತ್ರವಲ್ಲದೆ ಹಿಂದೂದೇಶದಲ್ಲಿ ಕೂಡ ೧೨ ಯನ್ನು ಸಂಗ್ರಹಿಸಲು ಸಂಘಗಳಿಸ್ಥಾಪನೆಯಾಗಿರುವಾಗ ೩೦೦೦೦ ನಮ್ಮ ತಲಚೇರದ ಬಂಧುಗಳ ವಿಚಾರವೇನು? ತಲಚೇರ ನಿವಾಸಿಗಳ ನ್ಯಾಯಪೂರ್ಣವಾದ ಕೇಳಿಕೆಗಳು ತಿರಸ್ಕರಿಸಲ್ಪಟ್ಟದ್ದರಿಂದ ತಾವು ಹುಟ್ಟಿ ಬೆಳೆದ ಊರನ್ನು ಬಿಟ್ಟು ಬ್ರಿಟಿಷ್ ಸಂಸ್ಥಾನವನ್ನು ಆಶ್ರಯಿಸಬೇಕಾದ ಕಾಲವು ಅವರಿಗೆ ಬಂದೊದಗಿತು ತಿಂಗಳುಗಟ್ಟಲೆ ಅವರು ಕಷ್ಟಗಳಿಂದ ಬಳಲುತಿದ್ದರೂ ಸಹಾಯವೀಯುವ ಯಾ ಅವರ ಪರಿಸ್ಥಿತಿಯನ್ನು ಸುಧಾರಿಸುವ ಯಾವ ಕಾರ್ಯಗಳೂ ನಡೆದಿರುವುದಿಲ್ಲ.

ಸ್ವಲ್ಪ ಸಮಯದ ಹಿಂದೆ ನಮ್ಮ ವೈಸರಾಯರು ದೇಶಿ ಸಂಸ್ಥಾನಗಳ ವಿಷಯ ಮಾತನಾಡುತ್ತ ಸಂಸ್ಥಾನಾಧೀಶರು ತಮ್ಮ ಪ್ರಜೆಗಳ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಬೇಕೆಂದು ಸೂಚಿಸಿರುವರು. ಆದರೆ ಇವರ ಈ ಸೂಚನೆಯು ಅಷ್ಟು ಫಲಕಾರಿಯಾಗಿರುವುದಿಲ್ಲ. ರಾಜಕೋಟೆಯ ಸಮಸ್ಯೆಯಲ್ಲಿ ಮಹಾತ್ಮಾಜಿಯವರು ಹೆಚ್ಚು ಆಸಕ್ತಿಯನ್ನು ತೋರಿಸಿದ್ದರಿಂದ ಅದು ಮಹತ್ವದ ಪ್ರಶ್ನೆಯಾಗಿ ತೋರಿತು. ಆದರೆ ತಲಚೇರದ ನಿರಾಶ್ರಿತ ಪ್ರಜೆಗಳ ಪರಿಸ್ಥಿತಿಯು ಅದಕ್ಕಿಂತಲೂ ಮಹತ್ವದ್ದಾಗಿರುವುದು ಆದುದರಿಂದ ಸಾರ್ವಭೌಮ ಸರಕಾರದ ಪ್ರತಿನಿಧಿಗಳಾದ ವೈಸರಾಯರಾದರೂ ತಲಚೇರದ ಬಿಕ್ಕಟ್ಟನ್ನು ಸುಧಾರಿಸಲು ತಕ್ಕ ಸಲಹೆಗಳನ್ನು ಕೈಕೊಳ್ಳುವರೆಂದು ನಾವು ಆಶಿಸುತ್ತೇವೆ

ಜಲಂಧರದಲ್ಲಿ ಕಾಂಗ್ರೆಸ ಪಕ್ಷದ ವಿಜಯ

ಜಲಂಧರ ಮುನ್ಸಿಪಲ್ ಕಮಿಟಿಯ ಅಧ್ಯಕ್ಷಸ್ಥಾನಕ್ಕೆ ಉಮೇದುವಾರರಾಗಿ ನಿಂತ ಕಾಂಗ್ರೆಸ ಪಕ್ಷದ ಶೇಕ ಗುಲಾಮ ದಸ್ತಗೀರರವರು ತಮ್ಮ ಎದುರಾಳಿಗಳಾದ ಲೀಗ ಪಕ್ಷದ ಖಾಜಿ ಬಾಶೀರ ಹುಸ್ಸೇನರನ್ನು ಸೋಲಿಸಿ ತಾವು ಅಧ್ಯಕ್ಷರಾದರು ಶ್ರೀ ದಸ್ತಗೀರರವರಿಗೆ ಅಹರಾರ ಮುಸಲ್ಮಾನರ ಬೆಂಬಲವೂ ಇದ್ದಿತ್ತು ಪಂಜಾಬಿನಲ್ಲಿ ಲೀಗಿಗೆ ಉಂಟಾದ ಈ ಸೋಲು ಬಹಳ ಪ್ರಾಮುಖ್ಯವಾಗಿದೆ

ತಿರುಪತಿಯ ಪ್ರಾಕ್ತನ ಸಂಶೋಧನಾಲಯ

ಹಿಂದೂ ಧರ್ಮ ಮತ್ತು ಸಂಸ್ಕೃತಿ ರಕ್ಷಣೆ ಹಾಗೂ ವಿಕಾಸದ ಉದ್ದೇಶವನ್ನಿಟ್ಟುಕೊಂಡು ವರ್ಷಾವಧಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ತಿರುಪತಿ ದೇವಾಲಯದ ಅಧಿಕಾರಿಗಳು ದೇವಾಲಯದ ಖಜಾನೆಯಿಂದ ಒಂದು ಪ್ರಾಕ್ತನ ಸಂಶೋಧನಾಲಯ ಮತ್ತು ಸಂಸ್ಕೃತ ಮಹಾ ವಿದ್ಯಾಲಯವನ್ನು ಸ್ಥಾಪಿಸಿರುವರು. ಈ ಸಂಸ್ಥೆಗಳೇ ಮುಂದೆ ತಿರುಪತಿ ವಿಶ್ವವಿದ್ಯಾಲಯದ ಪ್ರಧಾನ ಅಂಗಗಳಾಗುವುವು ಪ್ರಸಿದ್ಧ ವಿದ್ವಾಂಸರಾದ ರಾವ್ ಬಹದ್ದೂರ್ ಕೆ. ವಿ ರಂಗಸ್ವಾಮಿ ಅಯ್ಯಂಗಾರರು ಈ ಸಂಸ್ಥೆಯ ನಿರ್ದೇಶಕರಾಗಿ ನೇಮಿಸಲ್ಪಟ್ಟಿದ್ದಾರೆ

ಶೀಯಾ ಸುನ್ನಿ ಕಾಳಗ

ಇದನ್ನು ನಿಲ್ಲಿಸುವ ಮುಸಲ್ಮಾನ ಸಮಾಜ ಮುಖಂಡರ ಮತ್ತು ಸಂಯುಕ್ತಪ್ರಾಂತ ಸರಕಾರದ ಪ್ರಯತ್ನಗಳೆಲ್ಲ ವಿಫಲವಾದುದರಿಂದ ಒಂದು ಮುಸಲ್ಮಾನ ಶಿಷ್ಟಮಂಡಲವು ೧೬ರ ಕೋಟೆಯಲ್ಲಿ ಮಹಾತ್ಮರ ಭೇಟಿ ತೆಗೆದುಕೊಂಡಿತು. ಜೈಲಿನಲ್ಲಿರುವ ಸತ್ಯಾಗ್ರಹಿಗಳನ್ನು ಸಂಯುಕ್ತಪ್ರಾಂತ ಸರಕಾರವು ಪೀಡಿಸುತ್ತದೆಂದೂ, ಅದುವೇ ಈ ಜಾತಿ ಕಲಹದ ಕಿಚ್ಚನ್ನು ಹರಡಿಸುತ್ತದೆಂದೂ-ಪ್ರಕಟವಾದ ವಾರ್ತೆಗಳು ದ್ವೇಷಮೂಲಕವಾದುವುಗಳೆಂದು ಈಗ ಸಾಬೀತಾಗಿದೆ

ಗಯೆಯಲ್ಲಿ ಜಾಸ್ತಿ ಪೋಲೀಸರು

ಗಯೆಯಲ್ಲಿ ಹಿಂದೂ ಮುಸಲ್ಮಾನ ಕಲಹವು ಹೊಗೆಯಾಡುತ್ತಿರುವುದರಿಂದ ಗಯಾ ಮುನ್ಸಿಪಲ್ ಸರಹದ್ದಿನೊಳಗಿನ ಜನರ ಖರ್ಚಿನಿಂದ ಬಿಹಾರ ಸರಕಾರವು ಅಲ್ಲಿ ೫ ತಿಂಗಳ ತನಕ ೧೫೦ ಪೋಲೀಸರನ್ನು ಜಾಸ್ತಿಯಾಗಿಟ್ಟಿದೆ ಆ ಅವಧಿಯೊಳಗಾಗಿ ಕಲಹದ ಕಿಚ್ಚು ನೊಂದಿ ಹೋಗದಿದ್ದರೆ ಹೆಚ್ಚಿಗೆ ಅವಧಿಯ ತನಕ ಈ ಪೌಜನ್ನು ಇಡಲಾಗುವುದು

ಉದ್ಯೋಗ ವೃತ್ತಿಗಳ ತೆರಿಗೆ ಮಸೂದೆ

ಸಂಯುಕ್ತಪ್ರಾಂತ ಸರಕಾರವು ಮುಂತಂದ ಈ ಮಸೂದೆಯು ಕೌನ್ಸಿಲಿನಲ್ಲಿ ಮಂಜೂರಾಯಿತ ನಮ್ಮ ಪ್ರಾಂತದ ವಸ್ತುವಾರಾಟ ಮತ್ತು ಹೊಗೆಸೊಪ್ಪಿನ ಮಸೂದೆಗಳಂತೆ ಈ ಮಸೂದೆಗೂ ಸಂಯುಕ್ತ ಪ್ರಾಂತದಲ್ಲಿ ಮೊದಲು ಬಹಳ ವಿರೋಧವಿದ್ದಿತು ಮತ್ತೆ ಮಾತ್ರ ಮಸೂದೆಯು ಯಾವ ವಿರೋಧವೂ ಇಲ್ಲದೆ ಮಂಜೂರಾಯಿತ

ಸಾರನ ಜಿಲ್ಲೆಯಲ್ಲಿ ಸುಂಟರಗಾಳಿ

ಕಳೆದವಾರ ಬಿಹಾರದ ಸಾರನ ಜಿಲ್ಲೆಯ ಮಿರಿಯಾ ಬಂಗಾಳದ ರಾಜಶಾಹಿಯಲ್ಲಿಯೂ ಭಯಂಕರ ಸುಂಟರಗಾಳಿ ಎದ್ದು ಅನೇಕ ಮಾನವಾದಿಗಳು ಹಾರಿಹೋದವು, ಮರಗಳು ಬೇರ ಸಹಿತ ಕಿತ್ತುಬಿದ್ದುವು ಪ್ರಾಣಹಾನಿಯೇನೂ ಹೆಚ್ಚಿಗೆ ಆಗಲಿಲ್ಲ ಇದರಿಂದ ನಷ್ಟವಾಗಿ ತಿಳಿದುಬರುತ್ತದೆ. ಬಿಹಾರ ಸರಕಾರವು ತನ್ನ ಪ್ರಾಂತ್ಯದ ನಿರಾಶ್ರಿತರಿಗೆ ೧೨೦೦೦ ರೂಪಾಯಿಗಳ ಸಹಾಯಧನವನ್ನು ಕೊಟ್ಟಿದೆ

ಶ್ರೀ ರಾಮಮನೋಹರ ಲೋಹಿಯಾರವರ ಸೆರೆ

ಕಲ್ಕತ್ತದಲ್ಲಿ ರಾಜದ್ರೋಹಾತ್ಮಕ ಭಾಷಣ ಕೊಟ್ಟರೆಂಬ ಆರೋಪದ ಮೇಲೆ ಹೊರ ಕಾಂಗ್ರೆಸಿನ ದೇಶಾಂತರ ಶಾಖೆಯ ಕಾರ್ಯದರ್ಶಿಗಳಾಗಿದ್ದ ಶ್ರೀ ರಾಮಮನೋಹರ ಲೋಹಿಯಾರವರನ್ನು ಕಲ್ಕತ್ತಾ ಪೋಲೀಸರು ಕೈದುಮಾಡಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಮುಂದೆ ಹಾಜರುಪಡಿಸಲ್ಪಟ್ಟರು ಈಗ ಅವರನ್ನು ಜಾಮೀನಿನ ಮೇಲೆ ಬಿಟ್ಟಿದ್ದಾರೆ

[೧೧ನೇ ಪುಟದಿಂದ ಮುಂದುವರಿದುದು]

ದರೆ ರಾಷ್ಟ್ರಸಭೆಯಂಥ ಸಂಸ್ಥೆಯ ಅಧ್ಯಕ್ಷರಾಗಿರಲಿಕ್ಕೆ ಜಾತೀಯ ಸಂಸ್ಥೆಯ ಪ್ರೋತ್ಸಾಹಕರು ಯೋಗ್ಯರಲ್ಲ. ಲೀಗು ಮುಸ್ಲಿಂ ಜನತೆಯಲ್ಲಿ ಉಂಟುಮಾಡಿದ ಜಾಗೃತಿಯಿಂದ ಜಾತಿಕಲಹದ ಕಿಚ್ಚು ಪ್ರಜ್ವಲಿಸಿದೆ ಇದ್ದರಿಂದ ಲೀಗಿನ ಗುಣಸ್ವಭಾವವನ್ನು ತಿಳಿದು ಅಥವಾ ತಿಳಿಯದೆ ಬೋಸರು ಲೀಗನ್ನು ಬೆನ್ನುತಟ್ಟಿದ್ದು ಅವರ ಸ್ವಾರ್ಥದ ಪರಮಾವಧಿಯನ್ನು ತೋರಿಸುತ್ತದೆ ಎಂದು ಪತ್ರಿಕೆಗಳು ಅವರನ್ನು ಟೀಕಿಸಿವೆ.

ಕಾಂಗ್ರೆಸಿನಲ್ಲಿ ವಿಶ್ವಾಸವನ್ನಿಡಿರಿ

ಆಗ್ರಾದ ಜಮಾಯತ್ ಉಲ್ ಉಲೇಮಾದ ಪರಿಷತ್ತು ಮುಫ್ತಿ ಕಿಫಾಯತುಲ್ಲಾರ ಅಧ್ಯಕ್ಷತೆಯಲ್ಲಿ ಜರಗಿ ಹಾಫಿಜ ಅಹ್ಮದ ಸಯ್ಯದರವರು ಒಂದು ಭಾಷಣ ಕೊಡುತ್ತ ಭಾರತೀಯ ಮುಸಲ್ಮಾನರು ಕಾಂಗ್ರೆಸಿನೊಡನೆ ಸಹಕರಿಸಬೇಕೆಂದು ಹೇಳಿ ಮುಸ್ಲಿಂ ಲೀಗಿನ ಕಾರ್ಯಕಲಾಪಗಳನ್ನು ನಿಂದಿಸಿದರು ಮೌಲಾನಾ ಅಮೀನ ಇಶಾನ್ ಆಜಾಮಘರಿಯವರು ಲೀಗನ್ನು ಟೀಕಿಸಿ ಎಲ್ಲ ಮುಸಲ್ಮಾನರು ಜಮಾಯತ್ ಉಲ್ ಉಲೇಮಕ್ಕೆ ಸೇರಬೇಕೆಂದೂ, ಕಾಂಗ್ರೆಸಿನಲ್ಲಿ ವಿಶ್ವಾಸವನ್ನಿಡುವುದರಿಂದಲೇ ಮುಸಲ್ಮಾನರು ಉನ್ನತಿಯಾಗುವುದೆಂದೂ ಹೇಳಿ, ನಿಸ್ಸಂಕೋಚವಾಗಿ ಮುಸಲ್ಮಾನರು ಕಾಂಗ್ರೆಸಿಗೆ ಸೇರಬೇಕೆಂದರು.

ಔಂಧ ಸಂಸ್ಥಾನದಲ್ಲಿ ಸುಧಾರಣೆ

ಸಂಸ್ಥಾನ ಪ್ರಜೆಗಳಿಗೆ ತೃಪ್ತಿಕರವಾದ ರಾಜಕೀಯ ಸುಧಾರಣೆಗಳನ್ನು ಕೊಟ್ಟವರಲ್ಲಿ ಔಂಧ ಸಂಸ್ಥಾನಾಧೀಶರು ಅಗ್ರಗಣ್ಯರು. ಈಗ ಸುಧಾರಣೆಗಳು ಜಾರಿಗೆ ಬಂದಿವೆ ಪ್ರಜೆಗಳಿಂದ ಚುನಾಯಿತರಾದ ಶ್ರೀ ಜೋಶಿ ಸಾಹೇಬರು ಹೊಸ ಸರಕಾರದ ಪ್ರಧಾನರಾಗಿ ನೇಮಿಸಲ್ಪಟ್ಟಿದ್ದಾರೆ ಇವರು ಪ್ರಜೆಗಳಿಗೆ ಜವಾಬದಾರರಾಗಿ ಆಡಳಿತ ಕಾರ್ಯವನ್ನು ನಡೆಸುವರು ಹಿಂದಿನ ದಿವಾನರು ೩೦ ವರ್ಷಗಳ ಸರ್ವಿಸಿನ ಬಳಿಕ ಉದ್ಯೋಗ ನಿವೃತ್ತರಾಗಿದ್ದಾರೆ

ಮೈಸೂರು ಮಹಾರಾಜರ ವರ್ಧಂತ್ಯುತ್ಸವ

ಮೈಸೂರ ಶ್ರೀಮನ್ಮಹಾರಾಜರವರ ೫೬ನೇ ವರ್ಷ ವರ್ಧಂತ್ಯುತ್ಸವವು ಇದೇ ಮೇ ೨೯ರ ದಿನ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಕಾಂಗ್ರೆಸಿನೊಡನೆ ಜವಾಹರಲಾಲರ ಸಂಬಂಧ

ಶ್ರೀ ಪಂಡಿತ ಜವಾಹರಲಾಲ ನೇಹರು ಅವರು ಕಾಂಗ್ರೆಸ್ ವರ್ಕಿಂಗ ಕಮಿಟಿಯಿಂದ ಹೊರಗಿರುತ್ತ ಅವರು ಕಾಂಗ್ರೆಸ್ ಕಾರ್ಯಾಲಯದೊಂದಿಗೆ ಯಾವ ಸಂಬಂಧವನ್ನಿಟ್ಟುಕೊಳ್ಳುವರೆಂದು ಅನೇಕರಿಗೆ ತಿಳಕೊಳ್ಳುವ ಕುತೂಹಲವುಂಟಾಗಿದೆ ಪಂಡಿತ ನೇಹರೂರವರು ಈ ಸಂಬಂಧವನ್ನು ತಮ್ಮ ಒಂದು ಸಂಭಾಷಣದಲ್ಲಿ ಸ್ಪಷ್ಟಮಾಡಿದ್ದಾರೆ ಕಾಂಗ್ರೆಸಿನ ಕಾರ್ಯಾಲಯವೂ ಅವರ ವಾಸ್ತವ್ಯವೂ ವರ್ಷದ ಹೆಚ್ಚಿನ ಭಾಗದಲ್ಲಿ ಅಲಹಾಬಾದಿನಲ್ಲೇ ಇರುವದರಿಂದ ಕಾರ್ಯಾಲಯವು ಅವರಿಂದ ಕೇಳುವ ಅನುಭವವನ್ನು ಕೊಡಲಿಕ್ಕೆ-ಅವರು ಯಾವಾಗಲೂ ಸಿದ್ಧರಾಗಿಯೇ ಇರುವರು. ಕಾಂಗ್ರೆಸ್ ಕಾರ್ಯಾಲಯದೊಂದಿಗೆ ಪಂಡಿತರ ಸಂಬಂಧವು ೧೨-೧೫ ವರ್ಷಗಳ ದೀರ್ಘಕಾಲದ್ದಾಗಿರುವುದರಿಂದ ಅವರು ಕಾರ್ಯಾಲಯ ಕಾರ್ಯಕರ್ತರಿಗೆ ಕೊಡುವ ಅನುಭವವು ಅಮೂಲ್ಯವೂ ಆವಶ್ಯಕವೂ ಆಗಿರುತ್ತದೆ. ಕಾಂಗ್ರೆಸಿನ ಜನರಲ್ ಸೆಕ್ರೆಟರಿ ಆಚಾರ್ಯ ಕೃಪಲಾನಿಯವರು ಅವರಿಂದ ಆಗಾಗ ಅನುಭವ ಪಡೆಯುತ್ತಲೇ ಇದ್ದಾರೆ ಬೊಂಬಾಯಿಯಲ್ಲಿ ಈ ತಿಂಗಳ ಅಂತ್ಯಭಾಗದಲ್ಲಿ ಕೂಡುವ ಕಾಂಗ್ರೆಸ್ ವರ್ಕಿಂಗ ಕಮಿಟಿಯ ಸಭೆಗೆ ಪಂಡಿತರು ಹೋಗುವರೇ ಎಂದು ಪತ್ರಿಕಾಪ್ರತಿನಿಧಿಯು ಅವರನ್ನು ಪ್ರಶ್ನಿಸಿದಾಗ ತಾನು ಆ ಸಮಯ ಬೊಂಬಾಯಿಯಲ್ಲೇ ಇರುವುದಾಗಿ ಅವರು ಹೇಳಿದರು. ಇದರಿಂದಲ್ಲಾ ಕಾಂಗ್ರೆಸ್ ಕಾರ್ಯಾಲಯದೊಂದಿಗೆ ಪಂಡಿತರ ಸಂಬಂಧವು ನಿಕಟತರವಾಗಿಯೇ ಇದೆ ಎಂದು ತಿಳಿಯಬಹುದು

WATCH THE OPENING DATE

OF THE

CALTEX PETROL PUMP STATION

IN THE COMPOUND OF THE

MANGALORE AUTOMOBILES LTD.,

(CITY BUS SERVICE)

BALMATTA ROAD, : : : MANGALORE.

ಬ್ರಿಟನ್ನಿಗೆ ಮಿ. ಎಡ್ವರ್ಡ ಥೋಮ್ಸನ್ನರ ಎಚ್ಚರಿಕೆ

ಇಂಡಿಯವು ಸ್ವತಂತ್ರವಾದರೆ ಆಕಾಶ ಮಗುಚಿಬೀಳದು

ಸೈನಿಕ ತರಬೇತಿಯಿಲ್ಲದೆ ಸ್ವಾತಂತ್ರ್ಯವಿಲ್ಲ

ಬ್ರಿಟನ್ನಿಗೆ ಎಡ್ವರ್ಡ ಥೋಮ್ಸನರ ಎಚ್ಚರಿಕೆ

ಎಡ್ವರ್ಡ ಥೋಮ್ಸನ್ನರು ಲೋಕ ವಿಖ್ಯಾತ ಆಂಗ್ಲ ಲೇಖಕರೂ ಗ್ರಂಥಕರ್ತರೂ ಆಗಿದ್ದಾರೆ. ಅವರ ಮಾತುಗಳಿಗೆ ಪ್ರಪಂಚದಲ್ಲಿ ವಿಶೇಷ ಬೆಲೆ ಇದೆ, ಮನ್ನಣೆ ಇದೆ. ಆಂಗ್ಲರು ನಾಳಿನ ಯುದ್ಧದಲ್ಲಿ ಬ್ರಿಟನ್ನಿಗೆ ಭಾರತ ಸಹಾಯವು ಎಷ್ಟು ಸಿಕ್ಕಬಹುದೆಂಬುದರ ಕುರಿತು "ವರ್ಲ್ಡ ರಿವ್ಯು" ಎಂಬ ಪತ್ರಿಕೆಯಲ್ಲಿ ವಿಚಾರಗರ್ಭಿತ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಅವರು—'ಜೆಕೊಸ್ಲೊವೇಕಿಯದ ಸಂಬಂಧ ಜರ್ಮನಿಯ ವಿರುದ್ಧ ಬ್ರಿಟನು ಯುದ್ಧಕ್ಕೆ ಹೋಗಿದ್ದರೆ, ಇಂಡಿಯದ ತನುಮನ ಧನ ಸಹಾಯವನ್ನು ಬ್ರಿಟನು ನಿರೀಕ್ಷಿಸಬಹುದಾಗಿತ್ತು. ಆದರೆ ಈಗ ಜೆಕೊಸ್ಲೊವೇಕಿಯವನ್ನು ಅನ್ಯಾಯವಾಗಿ ಕೈಬಿಟ್ಟ ತರುವಾಯ ಇಂಡಿಯವು ಯುದ್ಧಕಾಲದಲ್ಲಿ ಬ್ರಿಟನ್ನಿನ ಕಡೆಗಿರುವುದು ಸಂದೇಹಕರ' ಎಂದಿದ್ದಾರೆ. "ಇನ್ನೊಂದು ಲೋಕಯುದ್ಧವು ಆಗುವುದಾದರೆ ಇಂಡಿಯವು ಬ್ರಿಟನ್ನಿನ ಬೆಂಬಲಕ್ಕೆ ಬರುವುದು ಕಠಿನವಾಗಿದೆ. ಸ್ಪೈನ ಮತ್ತು ಅಬಿಸೀನಿಯ ಯುದ್ಧಗಳಲ್ಲಿ ಬ್ರಿಟನು ಅನುಸರಿಸಿದ ಆತ್ಮಘಾತುಕ ಧೋರಣೆಯ ಸಲುವಾಗಿ ಈಗ ಸುಯೆಜ ಮತ್ತು ಜಿಬ್ರಾಲ್ಟರ ದಾರಿಗಳನ್ನು ಕಟ್ಟಿಹಾಕುವುದು ಇಟಲಿ-ಮತ್ತು ಜರ್ಮನಿಗಳಿಗೆ ಬಹಳ ಸುಲಭವಾಗಿದೆ. ಆದ್ದರಿಂದ ಇಂಡಿಯದ ಸೈನ್ಯಸಾಮಾನುಗಳು ಬ್ರಿಟನ್ನಿನ ರಕ್ಷಣೆಗೆ ಸುಲಭದಲ್ಲಿ ಒದಗಿ ಬರಲಾರವು. ಅಲ್ಲದೆ ಬ್ರಿಟನ್ನಿಗೆ ಇಂಡಿಯದ ಸಹಾಯವು ಅತ್ಯಾವಶ್ಯಕವಾಗಬಹುದು. ಬ್ರಿಟನ್ನು ಇಂಡಿಯವನ್ನು ಸಾಮ್ರಾಜ್ಯದ ರತ್ನವೆಂದು ಕರೆಯಬಹುದು. ಪರಂತು ಇಂಡಿಯವು ಬ್ರಿಟನ್ನಿಗೆ ಅದೇ ಗೌರವದ ಸ್ಥಾನವನ್ನು ಕೊಡುವುದಿಲ್ಲ. ಇಂಡಿಯಕ್ಕೆ ಬ್ರಿಟನ್ನಿನ ಕುರಿತು ತಿರಸ್ಕಾರವಿದೆ. [illegible] ಇಂಡಿಯವು [illegible] ಇಂಡಿಯನವಾಗಿಲ್ಲ. ಇಂಡಿಯದ [illegible]ಗಳ ಆಚಾರವಿಚಾರಗಳು ಹಿಂದಿನಂತೆ ಈಗ ಕೂಡ ಇದ್ದಿರಲಾರವು. ಪಲೆಸ್ಟೀನದಲ್ಲಿ ಬ್ರಿಟನ್ನಿನ ಧೋರಣೆಯು ಇಂಡಿಯಕ್ಕೆ ಸಮ್ಮತವಾಗಿಲ್ಲ. ಈ ವಿಷಯದಲ್ಲಿ ಬ್ರಿಟನ್ನು ಅರಬರಿಗೆ ಅನ್ಯಾಯ ಮಾಡಿದೆ ಎಂಬ ಅಭಿಪ್ರಾಯವು ಹಿಂದುಮುಸಲ್ಮಾನರಲ್ಲಿ ಏಕರೀತಿಯಾಗಿ ಇದೆ. ಆದ್ದರಿಂದ ಯುದ್ಧಕಾಲದಲ್ಲಿ ಇಂಡಿಯದ ಬೆಂಬಲವು ಬ್ರಿಟನ್ನಿಗೆ ಆಧಾರದಾಯಕವಾಗಿರುವುದಿಲ್ಲ. ಅಲ್ಲದೆ ಇಂಡಿಯದಲ್ಲಿ ಈಗ ಹೊಸದಾಗಿ ರಾಷ್ಟ್ರೀಯ ಅಭಿಮಾನ ಮತ್ತು ಸ್ವಾತಂತ್ರ್ಯ ಪಿಪಾಸೆಯು ವಿಶೇಷವಾಗಿದೆ. ಬ್ರಿಟನ್ನಿನ ಸಂಬಂಧವನ್ನು ಸಂಪೂರ್ಣ ಕಡಿದು ಬಿಡಬೇಕೆಂದು ಇಂಡಿಯವು ಪ್ರಯತ್ನಿಸುತ್ತಿದೆ. ಆದ್ದರಿಂದ ಇಂಡಿಯದ ಒಪ್ಪಿಗೆಯಿಲ್ಲದೆ ಬ್ರಿಟನು ಸೇರಿದ ಯುದ್ಧಗಳಲ್ಲಿ ಇಂಡಿಯವು ಭಾಗಿಯಾಗುವುದೆಂದು ಆಶಿಸುವುದು ಮೂರ್ಖತನವಾಗಿದೆ. ಇಂಡಿಯದ ಅಥವಾ ಅದರ ಯಾವುದೇ ಒಂದು ಜಾತಿಯ ಸಹಾನುಭೂತಿಯನ್ನು ಪಡೆಯಲಿಕ್ಕೆ ಕೂಡ ಬ್ರಿಟನು ಇಂಡಿಯ ಅಥವಾ ಇಂಡಿಯದ ಜಾತಿಗೆ ಮಾಡಿದ ಉಪಕಾರವು ಏನೂ ಇರುವುದಿಲ್ಲ'. ಆದ್ದರಿಂದ ಯುದ್ಧಕಾಲದಲ್ಲಿ ಇಂಡಿಯದ ಸಹಾಯ ಸಹಕಾರಗಳು ಬ್ರಿಟನ್ನಿಗೆ ಬೇಕೆಂದಾದರೆ ಇಂಡಿಯದ ರಾಷ್ಟ್ರೀಯ ಬೇಡಿಕೆಗಳನ್ನು ಮನ್ನಿಸುವುದು ಬ್ರಿಟನ್ನಿನ ಪ್ರಥಮ ಕರ್ತವ್ಯವಾಗಿದೆಯೆಂದು ಥೋಮ್ಸನ್ನರು ಬರೆದಿರುವರು.

ಇಂಡಿಯವು ಸ್ವತಂತ್ರವಾದರೆ ಆಕಾಶವು ಮಗುಚಿ ಬೀಳದು

ಬ್ರಿಟನು ಇಂಡಿಯಕ್ಕೆ ಸ್ವಾತಂತ್ರ್ಯವನ್ನು ಕೊಟ್ಟರೆ ಇಂಡಿಯವು ಇತರ ಬಲಿಷ್ಠ ರಾಷ್ಟ್ರಗಳ ಮಹತ್ವಾಕಾಂಕ್ಷೆಗೆ ಬಲಿಯಾಗದೆ? ಎಂದು ಸಂಶಯಪಡುವ ಸಂಶಯಪಿಶಾಚಿಗಳಿಗೂ ಮಿ. ಥೋಮ್ಸನ್ನರು ಉತ್ತರವನ್ನು ಕೊಟ್ಟಿದ್ದಾರೆ. 'ಇಂಡಿಯವು ಸ್ವತಂತ್ರವಾದಾಗ ಪ್ರಜಾಸತ್ತಾತ್ಮಕ ರಾಷ್ಟ್ರಗಳ ವಕ್ರದೃಷ್ಟಿಯು ಅದರ ಮೇಲೆ ಬೀಳುವುದಿಲ್ಲ. ಫೆಸಿಸ್ಟ ರಾಜ್ಯಾಧಿಕಾರಿಗಳು ಮಾತ್ರ ಅದರ ಮೇಲೆ ದಂಡೆತ್ತಿ ಬರಬಹುದು. ಯಾಕೆಂದರೆ ಇತರ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಜಗತ್ತಿನಲ್ಲಿ ತಾವೇ ಸರ್ವತಂತ್ರ ಸ್ವತಂತ್ರ ನಿರಂಕುಶ ಪ್ರಭುಗಳಾಗಿ ಮೆರೆಯುವ ರಾಕ್ಷಸೀ ಮಹತ್ವಾಕಾಂಕ್ಷೆಯು ಅವರಿಗೆ ಮಾತ್ರ ಇರುವುದು. ಅದ್ದರಿಂದ ಇಂಡಿಯಕ್ಕೆ ಇರುವುದಾದರೆ ಜಪಾನ, ಜರ್ಮನಿ, ಇಟಲಿಗಳು ದಂಡೆತ್ತಿ ಬರುವ ಭಯವಿದೆ. ಪರಂತು ಜಪಾನು ಚೀನದ ಜವುಗು ಭೂಮಿಯಲ್ಲಿ ಸಿಕ್ಕಿಹೋಗಿದೆ. ಅದು ಆ ಕೆಸರಿನಿಂದ ಎದ್ದು ಬಂದೀತೋ ಎಂಬ ಸಂದೇಹವುಂಟು. ಬರುವದಾಗಿದ್ದರೂ ಶೀಘ್ರದಲ್ಲಿ ಬರುವ ಹಾಗಿಲ್ಲ. ಹಾಗೆಯೇ ಯುರೋಪಿನ ಜರ್ಮನ್ನ ಇಟಾಲಿಯನ ಫೆಸಿಸ್ಟರಿಗೆ ತಲೆ ಕೆರೆದುಕೊಳ್ಳಲಿಕ್ಕೂ ಸಮಯ [illegible] ಗೊಂದಲದಲ್ಲಿ ಸಿಕ್ಕಿಬಿದ್ದಿದ್ದಾರೆ. ಯುರೋಪಿನಲ್ಲೇ ತಮ್ಮ ಆಶೆ ಮಹತ್ವಾಕಾಂಕ್ಷೆಗಳನ್ನು ಪೂರ್ತಿ ಮಾಡಿಕೊಳ್ಳಲು ಅಸಾಧ್ಯವೆಂಬಂತಾಗಿರುವಾಗ ಪಾಪದ ಅವರ ದೃಷ್ಟಿ ಇಂಡಿಯದ ಕಡೆಗೆ ಹೇಗೆ ಹೊರಳೀತು.' ಅದ್ದರಿಂದ ಫೆಸಿಸ್ಟ ರಾಷ್ಟ್ರಗಳ ವಕ್ರದೃಷ್ಟಿ ಇಂಡಿಯದ ಮೇಲೆ ಬೀಳಲಿಕ್ಕೆ ಇನ್ನೂ ಹಲವು ವರ್ಷಗಳು ಕಳೆಯಬೇಕಾಗುವುದು. ಬ್ರಿಟನ್ನು ಈ ಹೊತ್ತೇ ಇಂಡಿಯಕ್ಕೆ ಸ್ವಾತಂತ್ರ್ಯ ಕೊಟ್ಟು ಇಲ್ಲಿಂದ ಗಂಟುಮೂಟೆ ಕಟ್ಟಬೇಕೆಂದಿಲ್ಲ. ಅದು ಸದಾ [illegible] ಇಲ್ಲಿಂದ ಹೊರಟು ಹೋಗಬೇಕಾದರೆ [illegible] ಇಂಡಿಯವು ಸ್ವತಂತ್ರವಾಗಿ [illegible] ಭಾರತಕ್ಕೆ [illegible]. ಭಾರತವು ಸ್ವತಂತ್ರವಾದಾಗ ಅದರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಸಾಹಸವು ಜಗತ್ತಿನ ಯಾವ ರಾಷ್ಟ್ರಕ್ಕೂ ಬರಲಾರದು.' ಎಂದು ಅವರು ಉತ್ತರ ಕೊಟ್ಟಿರುವರು. ಅವರ ಮಾತಿನಲ್ಲಿ ಸ್ವಾರಸ್ಯವಿದೆ. ಇಂಡಿಯವನ್ನು ಅತಂತ್ರವಾಗಿ ಬ್ರಿಟನ್ನು ಅದನ್ನು ಬಿಟ್ಟು ಹೋಗುವುದಿಲ್ಲ. ತನ್ನನ್ನು ತಾನು ರಕ್ಷಿಸಿಕೊಳ್ಳುವ ಸಾಮರ್ಥ್ಯವು ಅದಕ್ಕೆ ಬಂದಾಗಲೇ ಬ್ರಿಟನ್ನು ಅದನ್ನು ಬಿಟ್ಟು ಹೋಗುವುದು. ಈಜಿಪ್ತಿನಲ್ಲಿ ಕೂಡ ಅದು ಹೀಗೆಯೇ ಮಾಡಿದೆ. ಅದ್ದರಿಂದ ಭಾರತೀಯರು ಸ್ವಾತಂತ್ರ್ಯವನ್ನು ಇಚ್ಛಿಸುವುದಾದರೆ, ಅವರು ಮೊದಲು ಮಾಡತಕ್ಕ ಒಂದು ಕರ್ತವ್ಯವಿದೆ. ಈಗಿನಿಂದಲೇ ಪರಕೀಯರ ಆಕ್ರಮಣಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೆ ಅವರು ಕಲಿತುಕೊಳ್ಳಬೇಕು. ಭಾರತದ ತರುಣರು—ಪ್ರತಿಯೊಬ್ಬರು ಸೈನಿಕ ತರಬೇತಿಯನ್ನು ಪಡೆದು ದೇಶದ ರಕ್ಷಣೆಗೆ ಸಿದ್ಧರಾಗಬೇಕು. ಅವರ ಸೈನಿಕ ತರಬೇತಿಯು ಪ್ರತಿಯೊಂದು ರೀತಿಯಿಂದ ಪೂರ್ಣವಾಗಿರಬೇಕು. ಆಗ ಮಾತ್ರ—ಇಂಡಿಯವು ಸ್ವತಂತ್ರವಾದರೆ ಆಕಾಶವು ಮಗುಚಿ ಬೀಳಲಾರದೆಂದು—ಸ್ವರಾಜ್ಯಕ್ಕೆ ನಮ್ಮ ಅಯೋಗ್ಯತೆಯನ್ನು ತೋರಿಸಿ ಕೊಡುವ ಟೀಕಾಕಾರರಿಗೆ ಉತ್ತರ ಕೊಡಲಿಕ್ಕೆ ಬರುತ್ತದೆ.

Mangalore Automobiles Ltd.

(City Bus Service)

WE are glad to announce that in addition to the Local Board of Directors, the following welknown business Magnates of India have not only agreed to advise us from time to time in the conduct of the business of the company, and are also financially interested in the company.

1. **Sir Homi Mehta**, KT., CENTRAL BOARD DIRECTOR OF THE RESERVE BANK OF INDIA, ETC. **BOMBAY.**
2. **Seth. Vithaldas Kanji**, DIRECTOR, CENTRAL BANK OF INDIA, LTD & THE UNION BANK OF INDIA LTD ETC **BOMBAY.**
3. **Seth. Karsondas Vissanji**, MILL OWNER ETC **BOMBAY.**

KERWAR & Co.,
Managing Agents.

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ ಇರುತ್ತದೆ.

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತವೆ

Allamgir Leather Store,
28 Meachua Bazar St CALCUTTA

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಇಂಗ್ಲೀಷರ ಆಡಳಿತದಿಂದ ಹಿಂದೂದೇಶಕ್ಕಾದ ಉಪಕಾರ

ಭಾರತ ಸಚಿವ ಲಾರ್ಡ್ ಜೆಟ್ಲೆಂಡರ ಭಾಷಣ

ಹಿಂದೂಸ್ಥಾನದ ಮೇಲೆ ಹಿಟ್ಲರನ ವಕ್ರದೃಷ್ಟಿ?

ಭಾರತ ಸಚಿವರಾದ ಲಾರ್ಡ್ ಜೆಟ್ಲೆಂಡರು

ಭಾರತದ ಸಚಿವ ಲಾರ್ಡ ಜೆಟ್ಲೆಂಡರು ಕಳೆದ ವಾರ—ಇಂಗ್ಲೀಷರ ಆಡಳಿತದಿಂದ ಹಿಂದೂದೇಶಕ್ಕಾದ ಉಪಕಾರಗಳ ಕುರಿತು ಒಂದು ಭಾಷಣವನ್ನು ಕೊಟ್ಟರು. ಅದನ್ನು ಕೇಳಿದೊಡನೆ ವಿಲಾಯತಿಯ ಪಕ್ಷಪಾತ ಪೂರ್ಣ ಇತಿಹಾಸಕಾರರು—ಇದೇ ವಿಷಯವನ್ನು ಭಾರತದ ಚರಿತ್ರೆಗಳಲ್ಲಿ ಓದಿದ ನೆನಪು ಆಗಿ ನಗು ಬಂದಿತು, ಖೇದವೂ ಆಯಿತು. ಕೆನಡ ಪ್ರವಾಸದಲ್ಲಿರುವ ಬ್ರಿಟಿಷ ಸಾರ್ವಭೌಮರು ಹಿಂದಾದ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಸಾಮ್ರಾಜ್ಯಕ್ಕೆ ಸಂದೇಶವನ್ನು ಕೊಟ್ಟಿರುವ ಸಮಯದಲ್ಲಿಯೇ ಲಾರ್ಡ ಜೆಟ್ಲೆಂಡರು ಹಿಂದುಸ್ಥಾನದ ಮಟ್ಟಿಗೆ ಆ ಅನ್ಯಾಯಗಳು ಇನ್ನೂ ಇರಲಿ ಎನ್ನುವ ಹಾಗೆ ಭಾಷಣಕೊಟ್ಟಿದ್ದಾರೆ. ಬ್ರಿಟಿಷರು ಹಿಂದುಸ್ಥಾನದಲ್ಲಿರುವದರ ಬದಲಿಗೆ ಇನ್ನಾವದಾದರೊಂದು ರಾಷ್ಟ್ರವು ಇಲ್ಲಿ ಆಡಳಿತ ಮಾಡುತ್ತಿದ್ದುದಾದರೆ ಹಿಂದುಸ್ಥಾನದ ಗತಿ ಏನಾಗುತ್ತಿತ್ತೋ ಎಂದು ಜೆಟ್ಲೆಂಡರು ಕೇಳುವರು. ಹಾಗೆ ಬೇರೆ ರಾಷ್ಟ್ರವು ಇಲ್ಲಿ ದಬ್ಬಾಳಿಕೆ ಆಳುತ್ತಿದ್ದುದಾದರೆ ಅದು ಬ್ರಿಟನಿನಷ್ಟು ದೀರ್ಘಕಾಲ ಇಲ್ಲಿ ಇರುತ್ತಿದ್ದಿಲ್ಲವೆಂದೇ ಹೇಳಬಹುದಲ್ಲವೆ? ಇಂಗ್ಲಿಷರ ಉದಾರಭಾವದಿಂದ, ಇಂಗ್ಲಿಷರನ್ನು ಕಠಿಣವಾಗಿ ಟೀಕಿಸುವ ಕಾಂಗ್ರೆಸು ಎಂಟು ಪ್ರಾಂತ್ಯಗಳಲ್ಲಿ ಅಧಿಕಾರ ನಡೆಸುವದು ಸಾಧ್ಯವಾಗಿದೆ ಎಂದು ಅವರನ್ನುವರು. ಆದರೆ ಅಷ್ಟು ಉದಾರ ಭಾವ ಇಂಗ್ಲಿಷರಲ್ಲಿ ಇರುತ್ತಿದ್ದಿಲ್ಲವಾದರೆ, ಈ ಪರೋಪದೇಶ ಪಾಂಡಿತ್ಯದ ಪ್ರದರ್ಶನಕ್ಕೆ ಅವರು ಬರುವದೂ ಅಸಾಧ್ಯವಾಗುತ್ತಿತ್ತೆಂಬುದನ್ನು ಜೆಟ್ಲೆಂಡರು ತಿಳಿಯದಿರುವದು ಆಶ್ಚರ್ಯಕರವಾಗಿದೆ. ಹಿಂದೂದೇಶದ ರಾಜಕೀಯ ಭವಿಷ್ಯದ ಕುರಿತು ಜೆಟ್ಲೆಂಡರು ಆಡಿದ ನುಡಿಗಳು ತೀರ ಅತೃಪ್ತಿಕರವಾಗಿದೆ. ಹಿಂದೂಸ್ಥಾನವು—ಸಂಪೂರ್ಣ ಸ್ವಾತಂತ್ರ್ಯವನ್ನಲ್ಲ—ಡೊಮಿನಿಯನ್ ಸ್ಟೇಟಸ ಎಂಬ ಆ ಪದವಿಯನ್ನು ಪಡೆಯುವದು ಕೂಡ ಎಂದೊ ಹೇಗೋ ಎಂಬಂತೆ ಅವರು ಹೇಳಿದ್ದಾರೆ. ಪ್ರಾಂತಿಕ ಸರಕಾರದ ಸ್ವಾತಂತ್ರ್ಯಾಧಿಕಾರಗಳನ್ನು ಭಾರತೀಯರು ಸದುಪಯೋಗಮಾಡಿಕೊಂಡಿದ್ದಾರೆ ಎಂದು ಹೊಗಳಿದ ಬಾಯಿಯಿಂದಲೇ ಕೇಂದ್ರ ಸರಕಾರದಲ್ಲಿ ಜವಾಬುದಾರಿ ಕೊಡುವುದು ಯಾವಾಗ ಎಂದು ಅವರು ಹೇಳಿದ್ದರೆ ಚೆನ್ನಾಗುತ್ತಿತ್ತು. ಯಾಕೆಂದರೆ ಕೇಂದ್ರದಲ್ಲಿ ಜವಾಬುದಾರಿ ದೊರೆಯದೆ ಪ್ರಾಂತ್ಯದಲ್ಲಿ ದೊರೆತ ಸ್ವಾತಂತ್ರ್ಯವು ಹೆಸರಿನ ಪೂರ್ತಿಗೆ, ಕೇವಲ ಭ್ರಮೋತ್ಪಾದಕವಾಗಿರುವದೆಂದು ಜೆಟ್ಲೆಂಡರಿಗೆ ಪ್ರತ್ಯೇಕ ತಿಳಿಸಬೇಕಾಗಿಲ್ಲ. ಜಾತೀಯ ಕಲಹ ಮೊದಲಾದ ನಮ್ಮ ಕೆಲವು ದೋಷಗಳನ್ನು ಮಹತ್ತಾಗಿ ಮಾಡಿ ಹೊಗಳಿದ ಬಾಯಿಯಿಂದಲೇ ಜೆಟ್ಲೆಂಡರು ಸ್ವರಾಜ್ಯದ ತನ್ನ ಅಯೋಗ್ಯತೆಯನ್ನು ತೋರಿಸಿ ಕೊಟ್ಟಿದ್ದಾರೆ! ಇಂಥ ದೋಷಗಳು ಪ್ರತಿಯೊಂದು ದೇಶದಲ್ಲೂ ಇರುವಂಥವುಗಳೇ! ಅವು ಇರುವ ಒಂದೇ ಕಾರಣದಿಂದ ಯಾವ ದೇಶವೂ ಸ್ವರಾಜ್ಯಕ್ಕೆ ಅಯೋಗ್ಯವೆಂದಾಗುವದಿಲ್ಲ. ಮಾತ್ರವಲ್ಲ, ಒಂದು ದೇಶವು ಸಂಪೂರ್ಣ ಸ್ವಾತಂತ್ರ್ಯವಾದಾಗಲೇ ಆ ದೋಷಗಳನ್ನು ದೂರಮಾಡುವ ಪರಿಣಾಮಕಾರಿ ಉಪಾಯಗಳನ್ನು ಕೈಗೊಳ್ಳಲಿಕ್ಕೆ ಬರುತ್ತದೆ. ಇದನ್ನು ಕೆನಡದ ಇತಿಹಾಸದಿಂದ ಜೆಟ್ಲೆಂಡರು ಸರಿಯಾಗಿ ತಿಳಕೊಳ್ಳಬಹುದು. ಜೆಟ್ಲೆಂಡರ ಭಾಷಣದಲ್ಲಿ ಪರಸ್ಪರ ವಿರೋಧಭಾವನೆಗಳು ಕಂಡುಬರುತ್ತವೆ. ಬ್ರಿಟಿಷ ಸಾರ್ವಭೌಮರು ಮೊನ್ನೆಯ ತಮ್ಮ ವಿನ್ನಿಪೆಗ್ ಭಾಷಣದಲ್ಲಿ ಹೇಳಿದ ಹಾಗೆ, ದೇಶವನ್ನು ಪಾರತಂತ್ರ್ಯದಲ್ಲಿಟ್ಟು ಜಾತೀಯ ಕಲಹ ಹಾನಿದೋಷಗಳನ್ನು ದೂರಮಾಡಲು ಬರುವದಿಲ್ಲ. ಕೆನಡಕ್ಕೆ ಪೂರ್ಣ ಸ್ವರಾಜ್ಯವು ದೊರೆತುದರಿಂದ ಜೆಟ್ಲೆಂಡರು ತೋರಿಸಿದ ದೋಷಗಳು ಅಲ್ಲಿ ನಿವಾರಿಸಲ್ಪಟ್ಟವು. ಆದ್ದರಿಂದ ಇಲ್ಲಿಯೂ ಆ ದೋಷಗಳು ಇರಬಾರದೆಂಬುದು ಜೆಟ್ಲೆಂಡರ ಹಾರ್ದಿಕ ಇಚ್ಛೆಯಾಗಿದ್ದರೆ ಈ ದೇಶಕ್ಕೂ ಸ್ವರಾಜ್ಯವನ್ನು ಕೊಟ್ಟು ನೋಡಲಿ! ಅಲ್ಲಿಯೇ ಜೆಟ್ಲೆಂಡರ ಮಾತಿನ ಪರೀಕ್ಷೆಯಾಗುವದು.

ಹಿಂದುಸ್ಥಾನದ ಮೇಲೆ ಹಿಟ್ಲರನ ವಕ್ರದೃಷ್ಟಿ.

ಹಿಂದುಸ್ಥಾನದ ವಿದೇಶ ವ್ಯಾಪಾರವನ್ನು ತನ್ನ ಕೈಗೆತೆಗೆದುಕೊಳ್ಳುವ ಸಾಧ್ಯಾಸಾಧ್ಯತೆಗಳನ್ನು ಪರೀಕ್ಷಿಸಲಿಕ್ಕಾಗಿಯೇ ಹಿಟ್ಲರನು ಈಗ ಭಾರತ ಸಂಚಾರಮಾಡುತ್ತಿರುವ ಡಾಕ್ಟರ ಶಾಟರನ್ನು ಕಳುಹಿಸಿಕೊಟ್ಟಿದೆಂದು ಊಹಿಸಲಿಕ್ಕೆ ಈಗ ಬಲವಾದ ಆಧಾರಗಳಿವೆ. ಕಳೆದ ವಾರ ಡಾಕ್ಟರ ಶಾಟರು ಮದ್ರಾಸಿನಲ್ಲಿ ಒಂದು ಭಾಷಣವನ್ನು ಕೊಟ್ಟು ತಮ್ಮ ಇಂಗಿತವನ್ನು ಸ್ವಲ್ಪಸ್ವಲ್ಪ ಹೊರಗೆ ಹಾಕಿದ್ದಾರೆ. ಜರ್ಮನ ಯಂತ್ರೋಪಕರಣಗಳನ್ನು ಭಾರತವು ತರಿಸಿ ತನ್ನ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತಂದ ಜೀವನವನ್ನು ಉತ್ತಮಗೊಳಿಸಬೇಕೆಂದು ಡಾಕ್ಟರ ಶಾಟರು ಸೂಚಿಸಿರುವರು. ಹಿಂದೂದೇಶದಲ್ಲಿ ರಾಜಕೀಯ ಕಾರಣಗಳಿಂದ ಬ್ರಿಟಿಷರ ಸಂಬಂಧ ಜನರ ವಿರೋಧಭಾವವು ಬೆಳೆಯುತ್ತ ಬರುತ್ತಿರುವದರಿಂದ, ತಮ್ಮ ಮಾತಿಗೆ ಬೆಂಬಲವು ದೊರೆಯಬಹುದೆಂದ ಡಾಕ್ಟರ ಶಾಟರು ತಿಳಕೊಂಡಿರಬಹುದು. ಆದರೆ ಹಿಂದುಸ್ಥಾನವು ಬ್ರಿಟಿಷರ ವಿರೋಧದಿಂದಾಗಿ ಜಗತ್ತಿನ ಶತ್ರು ಹಿಟ್ಲರನ ಸ್ನೇಹಕ್ಕೆ ಕೈಯೊಡ್ಡುವ ಆತ್ಮವಂಚನೆಯ ಕೃತ್ಯ ಸ್ವಘಾತದ ನೀತಿಯನ್ನು ಎಷ್ಟು ಮಾತ್ರಕ್ಕೂ ಅವಲಂಬಿಸಬಾರದೆಂಬುದನ್ನು ಡಾಕ್ಟರ ಶಾಟರು ತಿಳಕೊಂಡಿರಬೇಕು. ಯುದ್ಧ ಸಂಭವಿಸಲಾಗಲೀ ಶಾಂತಿಯ ಕಾಲದಲ್ಲಾಗಲೀ, ಜರ್ಮನಿಯಲ್ಲಿ ಹಿಟ್ಲರ ಶಾಸನಕ್ರಮವು ನಡೆಯುತ್ತಿರುವಷ್ಟು ಕಾಲ ಭಾರತವು ಜರ್ಮನಿಯನ್ನು ವಿರೋಧಿಸಿಯೇ ವಿರೋಧಿಸುವದು. ತನ್ನ ಆವಶ್ಯಕತೆಗಳ ಪಟಿಗೆ ಆದಷ್ಟು ಸ್ವಾವಲಂಬಿಯಾಗಿರ ಬಯಸುತ್ತದೆ. ಯುದ್ಧ ಕಾಲದಲ್ಲಿ ಇಂಗ್ಲೆಂಡಿನ ಪಕ್ಷ ಹಿಡಿಯಬೇಕೆ, ಹಿಟ್ಲರನ ಪಕ್ಷ ಹಿಡಿಯಬೇಕೆ ಎಂಬ ಪ್ರಶ್ನೆಯು ಉಪಸ್ಥಿತವಾದ ಸಂದರ್ಭದಲ್ಲಿ ಅದು ಇಂಗ್ಲೆಂಡಿನ ಪಕ್ಷವನ್ನೇ ಹಿಡಿದೀತು. ಆದರೆ ಇನ್ನೊಂದು ಇಂಗ್ಲೆಂಡಿಗೂ ಹಿಂದುಸ್ಥಾನಕ್ಕೂ ರಾಜಕೀಯ ಒಪ್ಪಂದವಾಗದ ಸಂದರ್ಭದಲ್ಲಿ—ಅದು ಯುದ್ಧದಲ್ಲಿ ಯಾವ ಪಕ್ಷವನ್ನೂ ಸೇರದೆ ಉದಾಸೀನವಾಗಿದ್ದರೂ ಇರಬಹುದು. ಹೊರತು, ಹಿಟ್ಲರನ ಪಕ್ಷವನ್ನು ಎಷ್ಟುಮಾತ್ರಕ್ಕೂ ಸೇರಲಿಕ್ಕಿಲ್ಲ.

ಲೇಬರಮಂತ್ರಿಗಳ ಪರಿಷತ್ತು

ಸಮಗ್ರಭಾರತದ ಪ್ರಾಂತೀಯ ಲೇಬರ ಮಂತ್ರಿಗಳ ಒಂದು ಪರಿಷತ್ತನ್ನು ಬರುವ ಆಗೋಸ್ಟು ತಿಂಗಳಲ್ಲಿ ಕೂಡಿಸುವ ಆಲೋಚನೆಯನ್ನು ಕೇಂದ್ರಸರಕಾರವು ಮಾಡಿದೆಯಾಗಿ ತಿಳಿದುಬರುತ್ತದೆ. ಬೇರೆ ಬೇರೆ ಪ್ರಾಂತಗಳ ಲೇಬರ ಅಂದರೆ ಶ್ರಮಜೀವಿಗಳ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಕಾನೂನುಗಳಲ್ಲಿ ಸಮಾನತೆಯನ್ನು ಸಾಧಿಸುವುದು ಸಮಗ್ರಭಾರತ ಶ್ರಮಜೀವಿಗಳ ಸಮಸ್ಯಾ ಪರಿಹಾರವನ್ನು ಆಲೋಚಿಸುವುದು ಈ ಪರಿಷತ್ತಿನ ಉದ್ದೇಶವಾಗಿರುವುದು.

ಪಂಜಾಬ ಸರಕಾರದ ಧೋರಣೆ

ಪಂಜಾಬ ಸರಕಾರದ ನೌಕರರು ಉದ್ಯೋಗಸ್ಥರು, ಚಾಕರರು ಯಾರೂ, ಸಭೆಯಲ್ಲಿ ಅಥವಾ ಎಲ್ಲಿಯಾದರೂ ಲೇಖನ ಭಾಷಣ ಅಥವಾ ಬೇರೆ ಯಾವದೇ ವಿಧದಿಂದ ಪಂಜಾಬು ಸರಕಾರದ ಧೋರಣೆಯನ್ನು ಟೀಕಿಸುವದು ಸಮಾಲೋಚಿಸುವದು, ಅಥವಾ ಚರ್ಚಿಸುವದು ಕೂಡ ಅಪರಾಧವಾಗುತ್ತದೆ ಮಾತ್ರವಲ್ಲ, ಅಂಥ ಟೀಕೆ, ಸಮಾಲೋಚನೆ ಅಥವಾ ಚರ್ಚೆ ನಡೆಯುವಲ್ಲಿ ಕೂಡಿ ಭಾಗತೆಗೆದುಕೊಳ್ಳುವದೂ ಅಪರಾಧವಾಗುವದೆಂದು ಸರಕಾರವು ಹೊಸ ನಿಯಮ ವನ್ನುಮಾಡಿದೆ.

ಪಲೆಸ್ತೀನ ಯೋಜನೆ

ಪಲೆಸ್ತೀನಿಗೆ ೧೦ ವರ್ಷಗಳೊಳಗಾಗಿ ಸ್ವಾತಂತ್ರ್ಯವನ್ನು ಕೊಡುವ ವಿಷಯವು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದ ಬ್ರಿಟಿಷ್ ಸರಕಾರದ ಧೋರಣೆಯು ಶಾಂತಿ ಸ್ಥಾಪಿಸಬಹುದೆಂದು ತೋರುವದಿಲ್ಲ ಬಾರದು. ಏಕೆಂದರೆ, ಆ ಧೋರಣೆಯಿಂದ ಅರಬರೂ ಯಹೂದಿಯರೂ ಒಂದೇ ಸಮನಾಗಿ ಅತೃಪ್ತರಾಗಿರುವರಂತೂ. ಅನೇಕ ಪಾರ್ಲಿಮೆಂಟ್ ಸದಸ್ಯರು ಅಭಿಪ್ರಾಯ ಪಟ್ಟು ಅದನ್ನು ಕಠಿಣವಾಗಿ ಖಂಡಿಸಿದರು. ಅನೇಕ ಮಂದಿ ಸರಕಾರ ಪಕ್ಷದ ಸದಸ್ಯರು ಕೂಡ ಸರಕಾರದ ವಿರುದ್ಧ ಮತದಾನ ಮಾಡಿದ್ದಾರೆ. ಇತ್ತ ಪಲೆಸ್ತೀನಿನಲ್ಲಿ ಅರಬರೂ ಯಹೂದಿಯರೂ ತಮ್ಮ ತಮ್ಮ ಹಕ್ಕು ಅಧಿಕಾರಗಳ ರಕ್ಷಣೆಗೆ ಪ್ರಬಂಧ ಆಂದೋಲನದ ಸಿದ್ಧತೆಗಳನ್ನು ನಡೆಸಿರುವರು. ಅಲ್ಲಲ್ಲಿ ಕೊಲೆ ಮಾರಾಮಾರಿಗಳು ಆರಂಭವಾಗಿದೆ.

ಜಾಹೀರಾತುಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು:
ಪ್ರತಿಫಲಬರುವಂತೆ ಸಾಧಿಸುವುದು

NOTICE

Mangalore Automobiles, Limited.

(CITY BUS SERVICE)

WE TAKE THIS OPPORTUNITY OF EXPRESSING OUR THANKS FOR THE PATRONAGE OF THE SYMPATHETIC PUBLIC IN THE PAST AND HOPE THEY WILL CONTINUE TO DO SO IN FUTURE ALSO, AND FOR THE PUBLIC CONVENIENCE WE HAVE ARRANGED TO INCREASE OUR FLEET OF BUSES

KERWAR & CO.,
MANAGING AGENTS

DIAMONDS! DIAMONDS!
BEST BRILLIANCY!

K. R. K. SHET,

MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರಡಮ್ಮಿನಿಂದ ಬರುವ ವಜ್ರಗಳ ಬಜಾರ ಧಾರಣೆಗಿಂತ ಎಡ. ಪರ್ಸೆಂಟು ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಪಣೆಯು ಸಲ್ಲಕ್ಷಣಗಳೂ ತಾನಾಗಿಯೆ ತಿಳಿದುಬರು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಪಾರಿಸನಲ್ಲಿಯು ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ತನ್ನ ಮೇಲೆ ವಿಶ್ವಾಸವನ್ನಿಡಿರಿ-ಪಡೆಯುವುವಿಜಯವಾಗುವದು

[೪ನೇ ಪುಟದಿಂದ ಮುಂದುವರಿದುದು]

೪೧ರಿಂದ ೧೯೪೫ರ ಫಸಲಿ ವರೆಗಿನ ಕಂದಾಯ ಬಾಕಿ ಸುಮಾರು ೨೬,೪೦೦೦ ರೂಪಾಯಿಗಳನ್ನು ಮಾಫಿಮಾಡಲಿಕ್ಕೂ, ೧೯೪೭ನೇ ಸಾಲಿನಲ್ಲಿ ಕೊಡಬೇಕಾಗಿದ್ದ ಕಂದಾಯದಲ್ಲಿ ರೂಪಾಯಿಗೆ ನಾಲ್ಕಾಣೆಯಂತೆ ರಿಯಾಯಿತಿ ಕೊಡಲಿಕ್ಕೂ ಹುಕುಂ ಕೊಡುವುದಾಗಿ ಅಪ್ಪಣೆಯನ್ನಿತ್ತರು. ಅರಸರ ಈ ಉದಾರತೆಯಿಂದ ರೈತರು ಆನಂದಸಾಗರದಲ್ಲಿ ಮುಳುಗಿದ್ದಾರೆ

ಜಿಂಡ

ಈ ಸಂಸ್ಥಾನದ ಕೆಲವು ಲೋಕಲ್ ಬೋರ್ಡುಗಳಲ್ಲಿ ಚುನಾವಣೆಗಳಾಗುವುದಿದ್ದು ಪ್ರಜಾಮಂಡಳವು ಅದಕ್ಕೆ ತನ್ನ ಹುರಿಯಾಳುಗಳನ್ನು ನಿಲ್ಲಿಸಬೇಕೆಂದು ಆಲೋಚಿಸಿಯದೆ. ಈ ರೀತಿ ಪ್ರಜಾಮಂಡಳವು ಚುನಾವಣೆಯಲ್ಲಿ ಭಾಗವಹಿಸುವುದು ಇದು ಮೊದಲನೆ ಸಾರಿ. ಸ್ಥಳೀಯ ಜಿಲ್ಲಾ ಬೋರ್ಡುಗಳಲ್ಲಿ, ಅಂತ ಸದಸ್ಯರು ಆರಿಸಿಬರುವರು. ಉಳಿದವರನ್ನು ಸರಕಾರವು ನೇಮಿಸುವುದು

ಕಳೆದ ಜನವರಿ ೨೬ ಮತ್ತು ಮುಂದಿನ ಎರಡು ದಿನಗಳಲ್ಲಿ ಸರದಾರ ಪಟೇಲರ ಅಧ್ಯಕ್ಷತೆಯಲ್ಲಿ ನಡೆದ ಪ್ರಜಾಮಂಡಳದ ಪರಿಷತ್ತಿನ ಕಾಲದಲ್ಲಿ ಉಂಟಾದ ಗಲಾಟೆಯ ವಿಚಾರಣಾ ಸಮಿತಿಯು ತನ್ನ ಕೆಲಸವನ್ನಾರಂಭಿಸಿದೆ. ಸರಕಾರದ ಕಡೆಯಿಂದಲೂ ಪ್ರಜಾಮಂಡಲದ ಕಡೆಯಿಂದಲೂ ಈ ಕಮಿಟಿಯಲ್ಲಿ ಪ್ರತಿನಿಧಿಗಳು ಕೆಲಸಮಾಡುವರು.

ಇಂದೋರಿನ ಹರತಾಳ

ಒಕ್ಕೊಯು ವಸ್ತುಗಳ ಮೇಲಿನ ಸಾದ ಕೆಲವು ತೆರಿಗೆಗಳ ವಿರುದ್ಧ ಘೋಷಿಸಿದ ಹರತಾಳವು ನಡೆದಿದೆ. ವ್ಯಾಪಾರ ವಹಿವಾಟುಗಳು ಬಂದಾಗಿರುವುದರಿಂದ ಇಂದೋರು ಸ್ಮಶಾನದಂತೆ ಕಾಣುತ್ತದೆ. ಈಗ ಊರಿನವರಿಗೆ ಮತ್ತು ಹಳ್ಳಿಗಳಿಂದ ದವಸಧಾನ್ಯಗಳನ್ನು ಮಾರಲಿಕ್ಕೆ ಬರುವ ಹಳ್ಳಿಗರ ಅನುಕೂಲಕ್ಕೆ ಸರಕಾರವೇ ಕೆಲವು ಅಂಗಡಿಗಳನ್ನು ತೆರೆದಿದೆ. ಹರತಾಳವನ್ನು ಪ್ರೋತ್ಸಾಹಿಸಿದ ಕೆಲವು ವ್ಯಾಪಾರಿ ಪ್ರಮುಖರ ದಸ್ತಗಿರಿಯಾಗಿದೆ. ಪರಿಷತ್ತಿನ ಕೆಲವು ಕೆಲಸಗಾರರು ಉಪವಾಸವನ್ನಾರಂಭಿಸಿರುವರು. ಜನರ ವಿರೋಧವು ಹೆಚ್ಚುತ್ತಾ ಬಂದಿದೆ. ಮಹಾರಾಜರು ಒಂದು ಭಾಷಣವನ್ನು ಕೊಟ್ಟು—ಪ್ರಜೆಗಳು ತನ್ನ ಮೇಲೆ ವಿಶ್ವಾಸವನ್ನಿಡಬೇಕೆಂದೂ, ಹರತಾಳವನ್ನು ನಿಲ್ಲಿಸಬೇಕೆಂದೂ ಹೇಳಿ ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರ್ಯಾಲೋಚಿಸಿ ಹುಕುಂ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಮಹಾರಾಜರು ಸುಮಾರು ೫ ಲಕ್ಷ ರೂಪಾಯಿಗಳ ಕಂದಾಯ ರಿಯಾಯಿತಿಯನ್ನು ತೋರಿಸಿದ್ದಾರೆ.

ಮಯೂರ ಭಂಜಕ್ಕೆ ಸುಧಾರಣೆ

ಬರಿಸ್ತದ ನವಾಬರು ಮಹಾರಾಜರು ತಮ್ಮ ಸಂಸ್ಥಾನ ಪ್ರಜೆಗಳಿಗೆ ಕೆಲವು ರಾಜಕೀಯ ಸುಧಾರಣೆಗಳನ್ನು ಘೋಷಿಸಿರುವರು. ಅಲ್ಲಿ ಗ್ರಾಮಗಳಿಗೂ ಊರುಗಳಿಗೂ ಪ್ರಜೆಗಳಿಂದ ಚುನಾಯಿತವಾದ ಪ್ರತಿನಿಧಿಸಭೆಗಳೆಂಬ ಸಂಸ್ಥೆಗಳು ಏರ್ಪಡುವುವು. ಈ ಸಂಸ್ಥೆಗಳಿಗೆ ಸಂಸ್ಥಾನ ಆಡಳಿತದಲ್ಲಿ ಸೂಚನೆ ಅನುಭವಗಳನ್ನು ಕೊಡುವ ಅಧಿಕಾರವಿದೆ. ಈ ರೀತಿ ಆಡಳಿತದಲ್ಲಿ ಪ್ರಜೆಗಳಿಗೆ ಅನುಭವವು ದೊರೆತ ಹಾಗೆ ಕೌನ್ಸಿಲು ಎಸೆಂಬ್ಲಿ ಸಭೆಗಳನ್ನು ಏರ್ಪಡಿಸಿ ಅವುಗಳಿಗೆ ಹೆಚ್ಚೆಚ್ಚು ಅಧಿಕಾರಗಳನ್ನು ಕೊಡುವ ಇಚ್ಛೆಯನ್ನು ಮಹಾರಾಜರು ತಮ್ಮ ಒಂದು ಘೋಷಣೆಯ ಮೂಲಕ ವ್ಯಕ್ತಪಡಿಸಿದ್ದಾರೆ

ತಲ್ಚಾರು

ಈ ಸಂಸ್ಥಾನದ ಮಹಾರಾಜರ ಜನ್ಮೋತ್ಸವದಂದು ಪ್ರಜಾಮಂಡಲದ ಅಧ್ಯಕ್ಷರು ಒಂದು ಶುಭಸಂದೇಶವನ್ನು ಕಳುಹಿಸಿ ಮಹಾರಾಜರಿಗೆ ದೀರ್ಘಾಯು ಆರೋಗ್ಯಗಳನ್ನು ಕೋರಿದ್ದರು. ಇದರ ಸತ್ಫಲವಾಗಿ ಮಹಾರಾಜರ ಹೃದಯ ಪರಿವರ್ತನೆ ಆಗಿದಂತೆ ಕಾಣುತ್ತದೆ. ಪ್ರಜೆಗಳ ನ್ಯಾಯವಾದ ಬೇಡಿಕೆಗಳನ್ನು ತಾವು ಮನ್ನಿಸಲು ಸಿದ್ಧರಿರುವದಾಗಿ ಮಹಾರಾಜರು ಸಂದೇಶಕ್ಕೆ ಉತ್ತರವನ್ನು ಕೊಡುತ್ತ ಪ್ರಜಾಮಂಡಲದ ಅಧ್ಯಕ್ಷರಿಗೆ ತಿಳಿಸಿದ್ದಾರೆ. ಅಧ್ಯಕ್ಷರು ಬಹುಕಾಲದಿಂದ ಸಂಸ್ಥಾನ ಸರಕಾರಕ್ಕೂ ಪ್ರಜಾವರ್ಗಕ್ಕೂ ನಡೆದು ಬಂದಿರುವ ವಿವಾದವನ್ನು ಮಹಾರಾಜರ ಗಮನಕ್ಕೆ ತಂದು ಪ್ರಜೆಗಳ ಕಷ್ಟ ನಿವಾರಣೆ ಮಾಡಬೇಕೆಂದು ಪುನಃ ಮಹಾರಾಜರಿಗೆ ಬರೆದರು. ಈಗ ಮಹಾರಾಜರ ಸರಕಾರ ಬಂದೊಂದು, ಪ್ರಜೆಗಳ ಬೇಡಿಕೆಗಳನ್ನು ಚರ್ಚಿಸಲಿಕ್ಕೆ ಪರಿಷತ್ತಿನ ಪ್ರತಿನಿಧಿಗಳು ಹೋಗಿದ್ದಾರೆ. ಅಷ್ಟರಿಂದ ಒಂದು ಒಡಂಬಡಿಕೆಯಾಗಿ ತಲ್ಚಾರಿನಿಂದ ಹೊರಸ್ಥಾನದಲ್ಲಿ ಆಶ್ರಯಪಡೆದಿರುವ ನಿರಾಶ್ರಿತರು ಸಧ್ಯದಲ್ಲಿಯೇ ತಮ್ಮ ಮನೆ ಠಾಣಗಳಿಗೆ ಹಿಂತಿರುಗುವಂತಾಗಬಹುದೆಂದು ಊಹಿಸಲಾಗಿದೆ.

ಕಪುರ್ತಲ

ಈ ಸಂಸ್ಥಾನದ ಪ್ರಜಾಮಂಡಲದ ಕಾರ್ಯನಿರ್ವಾಹಕ ಸಮಿತಿಯು ಒಂದು ಸಭೆ ಶ್ರೀ ಚೌಧರಿ ಮಿಹರಸಿಂಗರ ಅಧ್ಯಕ್ಷತೆಯಲ್ಲಿ ಕೂಡಿ—ಸಂಪೂರ್ಣ ಜವಾಬ್ದಾರಿ ಸರಕಾರದ ಸಿದ್ಧಾಂತವನ್ನು ಆಧರಿಸಿ ಇರದ ಸುಧಾರಣೆಗಳಿಂದ ಪ್ರಜಾಮಂಡಲಕ್ಕೆ ತೃಪ್ತಿ ಉಂಟಾಗದೆಂದೂ ಸಂಸ್ಥಾನ ಸರಕಾರವು ನೇಮಿಸುವ ಸುಧಾರಣಾ ಸಮಿತಿಯಲ್ಲಿ ಪ್ರಜಾಮಂಡಲದ ಸದಸ್ಯರಿಗೆ ಬಹುಮತ ಕೊಡಬೇಕೆಂದೂ ಠರಾವು ಮಾಡಿದೆ

ಉದಯಪುರ

ಉದಯಪುರದಲ್ಲಿ ಹೊಡೆದಾಟದ ಸ್ಥಿತಿ ಸರಕಾರದ ಪಕ್ಷದಷ್ಟು ಒಪ್ಪಲಾಗಿದೆ. ಅಲ್ಲಿ ರಾಜಕೀಯ ಕಾರ್ಯಕರ್ತರನ್ನು ಮಾತ್ರವಲ್ಲ, ಸಾಮಾಜಿಕ ಕೆಲಸಗಾರರನ್ನು ಕೂಡ ಸಭೆ ಭಾಷಣಾದಿಗಳನ್ನು ನಡೆಸಲಿಕ್ಕೆ ಬಿಡ ಪುದಿಲ್ಲ. ಕಳೆದ ಬಾರಿ ಪಕ್ಕದ ಊರಿನ ಸ್ಥಾನ ಸಂಸ್ಥಾನಗಳಲ್ಲಿ ಕೇಂದ್ರ ಹರಿಜನ ಸೇವಾ ಸಂಘದ ಕೆಲಸಗಾರರು ಸಮಾಜ ಕಾರ್ಯ ನಡೆಸುತ್ತಿದ್ದಂತೆ, ಉದಯಪುರದ ಸರಕಾರವು ಅವರನ್ನು ಸಂಸ್ಥಾನದ ಹೊರಗೆ ಕಳಿಸಿತೆಂದು ಹೇಳ, ಸಭೆ ಭಾಷಣಾದಿಗಳನ್ನು ಮಾಡಲಿಕ್ಕೆ ತಡೆಯಿತು. ಆದರೆ ಪ್ರಕಾರದ ಶ್ರೀ ರಾಮೇಶ್ವರ ನೆಹರು ಅವರು—ಸಮಗ್ರಸ್ಥಾನ ಸ್ಥಾಪನೆ ಮಾಡಿದೆ. ಅದನ್ನು ಬ್ರಿಟಿಷ ಇಂಡಿಯಾ ಸಂಸ್ಥಾನ ಇಂತಿಯಾದೆಂದು ವಿಂಗಡಿಸಲಿಕ್ಕೆ ಬರುವುದಿಲ್ಲ. ಹರಿಜನ ಸೇವೆಯು ನಾಲ್ಕು ಸಾವಿರ ಗ್ರಾಮಾಂತರದಲ್ಲಿ ಶಾಂತಿಯ ಸಂದೇಶವನ್ನು ಕಳುಹಿಸ ಬೇಕು. ನಮ್ಮ ಬಾಪೂಜಿ ನಾವು ಕೆಲಸಮಾಡಿರುವ ಈ ಹತ್ತು ವರ್ಷಗಳಿಂದ ಎಲ್ಲಿಯೂ ಅಶಾಂತಿ ಹುಟ್ಟಿದ್ದಿಲ್ಲ ಎಂದು ಸಂಸ್ಥಾನ ಸರಕಾರಕ್ಕೆ ಸ್ಪಷ್ಟಪಡಿಸಿದ್ದಾರೆ.

ಮಿತವ್ಯಯದ ಡಬ್ಬಿ.

ಎಷ್ಟು ಉಳಿತಾಯವಾಗುವುದೆಂದು ನೋಡಿರಿ!

ದೊಡ್ಡ ಸೈಜು (೮ ಔನ್ಸು) ರೂ. ೧—೪—೦
(ದೊಡ್ಡ ಬಾಟ್ಲಿಯ ಪರಿಮಾಣದಷ್ಟಿದೆ.

ಸಣ್ಣ ಸೈಜು (೪ ಔನ್ಸು) ಆಣೆ ೦—೧೧—೦

ಕೇವಲ ಕಳೆಯುವ ಲೆಕ್ಕವು ಎಂಡ್ರೂಸ್ ಮಿತವ್ಯಯದ ಡಬ್ಬಿಗಳನ್ನು ಕೊಂಡು ಕೊಂಡಲ್ಲಿ ದೊಡ್ಡ ಸೈಜಿನಲ್ಲಿ (8 ಔನ್ಸು) 6 ಆಣೆಯೂ, ಸಣ್ಣ ಸೈಜಿನಲ್ಲಿ (1 ಔನ್ಸು) 5 ಆಣೆಯೂ ಉಳಿತಾಯವಾಗುವುದು. ಆದರೆ ಎಂಡ್ರೂಸ್ ಲವಣವು ಎಂತಹ ಉತ್ತಮ ಆರೋಗ್ಯವರ್ಧಕ ಲವಣವಾಗಿರುವುದೆಂಬುದು ಇದನ್ನು ಸೇವಿಸಿದಲ್ಲಿ ಖಚಿತವಾಗುವುದು

ಎಂಡ್ರೂಸ್ ಅಜೀರ್ಣವನ್ನು ನಿವಾರಿಸುತ್ತದೆ. ಜೀರ್ಣೇಂದ್ರಿಯಗಳನ್ನು ಆರೋಗ್ಯವಾಗಿರಿಸುತ್ತದೆ ಮತ್ತು ಆಮ್ಲವನ್ನು ನಾಶಮಾಡುತ್ತದೆ

ಇಂದೇ ಪ್ರಾರಂಭಿಸಿರಿ—ಒಂದು ವಾರದ ತನಕ ಪ್ರತಿ ದಿನ ಎಂಡ್ರೂಸ್ ಲವಣವನ್ನು ಸೇವಿಸಿರಿ-ಆರೋಗ್ಯವಾಗಿರಿ. ಎಂಡ್ರೂಸ್ ಲವಣವು ... ಸೇವಿಸಿರಿ

ಎಂಡ್ರೂಸ್ ಲವಣಕ್ಕೆ ಇತರ ಲವಣಕ್ಕಿಂತ ವಿಶೇಷವಾಗಿ ಉಕ್ಕುವ ಒಂದು ವಿಶಿಷ್ಟದ ಗುಣವಿರುವುದು. ಈ ಗುಣದಿಂದಾಗಿ ಹೊಟ್ಟೆಯೊಳಗೆ ಆ ಗಾಳಿಯನ್ನು ... ಇದು ಹೊಟ್ಟೆಯ ಪರಿಯನ್ನು ಆರೋಗ್ಯವಲ್ಲಿರಿಸುತ್ತದೆ.

ಎಂಡ್ರೂಸ್ ಲವಣದಿಂದ ಉತ್ತಮ ಪರಿಣಾಮವನ್ನು ಪಡೆಯಲು ಒಂದು ಅಥವಾ ಎರಡು ಚಮಚೆಯಷ್ಟು ಎಂಡ್ರೂಸ್ ಲವಣವನ್ನು ಒಂದು ಗ್ಲಾಸು ನೀರಿನಲ್ಲಿ ಹಾಕಿ ... ಕದಡಿಸಿ—ಅದು ಉಕ್ಕಿ ಬರುತ್ತಿರುವ ಸಮಯ ಕುಡಿಯಿರಿ.

ಡಬ್ಬಿಗಳಲ್ಲಿ ಮೊದಲು ಬಾಟ್ಲಿಗಳಲ್ಲಿದಷ್ಟು ... ಲವಣವಿರುವುದು. ಆದರೆ ಬೆಲೆಯು ಕಡಿಮೆ!

ಎಂಡ್ರೂಸ್ ಲವಣವು ಲೋಕದ ಎಲ್ಲಾ ಲವಣಗಳಿಗಿಂತಲೂ ಹೆಚ್ಚಾಗಿ ಮಾರಾಟವಾಗುತ್ತದೆ ... ಇದನ್ನು ... ಕೊಳ್ಳುವಾಗ ... ನೋಡಿ.

ಎಂಡ್ರೂಸ್ ಲಿವರ್ ಸೋಲ್ಟ್

ಅಂತರೇಂದ್ರಿಯ ಶುದ್ಧಿಗೆ ಉತ್ತಮ!

ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಮಾರಲ್ಪಡುತ್ತದೆ.

Take
ANDREWS LIVER SALT
LARGEST SALE OF ANY EFFERVESCING SALT IN THE WORLD

ಕೆಲವೆ ವರ್ಷಗಳಲ್ಲಿ ಚೀನವು ಅಜೇಯವಾಗುವದು

ಜನರಲ್ ಚೆನ್‌ಚನ್ನರ ಸ್ಪಷ್ಟೋಕ್ತಿ

ಚೀನದಲ್ಲಿ ಜಪಾನಿನ ಅನ್ಯಾಯ ಕರ್ಮ

ಜಪಾನಿನ ಮೇಲೆ ಮೂರು ರಾಷ್ಟ್ರಗಳ ವಕ್ರದೃಷ್ಟಿ

ಹೂನಾನ್ ಕಿಯಾಂಗ್ಸಿ ರಣಾಂಗಣದಲ್ಲಿ ಸೇನಾ ಸಂಚಾಲನ ಮಾಡುತ್ತಿರುವ ಜನರಲ್ ಚೆನ್‌ಚನ್ನರು—'ಚೀನವು ಗಂಡಾಂತರದಿಂದ ಪಾರಾಯಿತು. ಅದಕ್ಕಿನ್ನು ಶತ್ರುಪಕ್ಷದ ಯಾವ ಭಯವೂ ಇಲ್ಲ. ಕೆಲವೇ ವರ್ಷಗಳಲ್ಲಿ ಚೀನವು ಅಜೇಯವಾಗುವುದು' ಎಂದು ಚೀನ ಜಪಾನ ಸಂಗ್ರಾಮದ ಕುರಿತು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಚೆನ್‌ಚನ್ನರು 'ಚೀನೀ ಮರ್ಕಟ ಸೇನೆಯನ್ನು ಮಾತ್ರವಲ್ಲ, ಇದರ ಸೇನೆಗಳನ್ನು ಎದುರಿಸುವುದು ಕೂಡ ಜಪಾನಿಯರಿಗೆ ಕಠಿನ ಸಮಸ್ಯೆಯಾಗಿದೆ' ಎಂದು ಅವರು ಪತ್ರಿಕಾ ಪ್ರತಿನಿಧಿಯೊಡನೆ ಹೇಳಿದರು

ಚೀನೀ ಮಂಚುಕುವೋ ಯುದ್ಧ

ಮಂಚುಕುವೋದಲ್ಲಿ ಚೀನಿಯರು ನುಗ್ಗಿ ಅಲ್ಲಿ ಜಪಾನಿ ಸೇನೆಗಳೊಂದಿಗೆ ಖಡಾಖಡಿ ಯುದ್ಧ ಮಾಡಿದರು ಆದರೆ ಜಪಾನಿಯರು ಅವರನ್ನು ಹಿಮ್ಮೆಟ್ಟಿಸಿದರೆಂದು ಟೋಕಿಯೋದ ವರ್ತಮಾನ ಹೇಳುತ್ತದೆ ಚೀನಿಯರ ಕೆಲವು ವಿಮಾನಗಳನ್ನು ಜಪಾನಿಯರು ನೆಲಕ್ಕೆ ಕೆಡಹಿದರಾಗಿಯೂ ಸುದ್ದಿ ಪರಂತು ಈ ವಾರ್ತೆ ಎಷ್ಟರ ಮಟ್ಟಿಗೆ ಸತ್ಯವೆಂದು ಹೇಳಲಾಗುವುದಿಲ್ಲ

ಹಾನವೆಲಿಯಲ್ಲಿ ಚೀನಿಯರ ವಿಜಯ

ಹೆಂಕೋದಿಂದ ನೈಋತ್ಯದಲ್ಲಿ ಹಾನಕೋಳಿಯ ಪ್ರದೇಶಗಳಲ್ಲಿ ಚೀನಿಯರು ಜಪಾನಿಗಳ ಮೇಲೆ ಬಿದ್ದು ಅವರನ್ನು ಬಹುದೂರ ಹಿಮ್ಮೆಟ್ಟಿಸಿದರು ಶಾಯಾಂಗ, ಚಾಂಗ್ಚೋ, ಚಿಂಗ್‌ಪೇ ಇವುಗಳೆಲ್ಲ ಚೀನಿಯರ ಅಧೀನವಾಗಿರುವುವು ಜನರಲ್ ಲಿಚ್‌ಸಂಗ್ ಚೆನ್ ಎಂಬ ಸಮರ್ಥ ಸೇನಾಪತಿಗಳು ಈ ಭಾಗದಲ್ಲಿ ಸೇನಾಸಂಚಾಲನ ಮಾಡುತ್ತಿದ್ದಾರೆ ತಾಯರ ಚ್ಯಾಂಗನ್ನು ಜಪಾನಿಯರಿಂದ ಕಿತ್ತುಕೊಳ್ಳಲಿಕ್ಕೆ ಈ ಸೇನಾಪತಿಗಳೇ ಕಾರಣಪುರುಷರಾಗಿದ್ದರು

ಜಪಾನಿನ ಅನ್ಯಾಯ ಕರ್ಮ

ಚೀನದಲ್ಲಿ ವಿದೇಶಿಯರ ಕೆಲವು ಅಂತರ್ರಾಷ್ಟ್ರೀಯ ವಸತಿಗಳಿವೆ ಅವುಗಳಲ್ಲಿ ನಾನ್‌ಕಿಂಗ್, ಶಾಂಗ್ಹಾಯಿ ಮತ್ತು ಕೇಂಟನ ಮುಖ್ಯವಾದುವು ಚೀನಿಯರು ಈ ವಸತಿಗಳಲ್ಲಿ ಆಶ್ರಯ ಪಡೆದು ತನ್ನ ವಿರೋಧ ಮಾಡುತ್ತಿರುವರೆಂದು ಜಪಾನು ಆಗಾಗ ಹೇಳಿ, ಚೀನದಲ್ಲಿ ಈ ವಸತಿಗಳ ಮೇಲೆ ಬ್ರಿಟನ್, ಫ್ರಾನ್ಸ್ ಅಮೇರಿಕಗಳಿಗೆ ಪ್ರಾಪ್ತವಾದ ಅಧಿಕಾರಗಳನ್ನು ಕಿತ್ತುಕೊಳ್ಳಲಿಕ್ಕೆ ಸಮಯ ಸಾಧಿಸುತ್ತಾ ಇತ್ತು ಜಪಾನು ಚೀನದಲ್ಲಿ ಸರ್ವತಂತ್ರ ಸ್ವತಂತ್ರವಾಗಲಿಕ್ಕೆ ಈ ವಸತಿಗಳು ತಡೆಯಾಗಿದ್ದುವು ಅವು ಜಪಾನಿನ ಕಣ್ಣುಗಳಿಗೆ ಮುಳ್ಳಿನಂತೆ ಚುಚ್ಚುತ್ತಿದ್ದುವು. ಆದರೆ ಥಟ್ಟನೆ ಆ ವಸತಿಗಳ ಮೇಲೆ ಹರಿಹೋದರೆ ಪರಿಣಾಮವೇನಾದೀತೆಂದು ತಿಳಿಯುವುದು ಕಷ್ಟವಾಗಿತ್ತು. ಕೆಲವು ದಿನಗಳ ಹಿಂದೆ ಶಾಂಗ್ಹಾಯಿಯ ಕುಲಾಂಗಸೂ ಎಂಬ ಉಪನಗರದಲ್ಲಿ ಒಬ್ಬ ಜಪಾನಿ ಅಧಿಕಾರಿಯ ಕೊಲೆಯಾಯಿತು. ಜಪಾನು ಅದೇ ಅನುಕೂಲ ಸಮಯವೆಂದು ತಿಳಿದು, ವಿದೇಶಿಯರ ಅಧಿಕಾರಗಳನ್ನು ಕಿತ್ತುಕೊಳ್ಳುವ ಅನೇಕ ಶರತ್ತುಗಳನ್ನು ಶಾಂಗ್ಹಾಯಿ ಮುನಿಸಿಪಾಲಿಟಿಗೆ ಕಳುಹಿಸಿಕೊಟ್ಟು ಕೆಲವು ಯುದ್ಧನಾವೆಗಳನ್ನು ಕುಲಾಂಗಸೂವಿಗೆ ಕಳುಹಿಸಿತು. ಪರಂತು ಈ ಬಾರಿ ಬ್ರಿಟನ್ ಫ್ರಾನ್ಸ್ ಅಮೇರಿಕ ಮೂರು ರಾಷ್ಟ್ರಗಳು ಸಮಜಾಹಿಸಿ ಪ್ರಯೋಜನವಿಲ್ಲವೆಂದು ಅವೂ ಯುದ್ಧ ಹಡಗಗಳನ್ನು ಕಳುಹಿಸಿಕೊಟ್ಟವು. ಈಗ ಮೂರು ರಾಷ್ಟ್ರಗಳ ಮತ್ತು ಜಪಾನದ ಸಂಧಾನ ಪ್ರಯತ್ನಗಳೆಲ್ಲ ವಿಫಲವಾಗಿವೆ ಜಪಾನು ತನ್ನ ಹಟಸಾಧನೆಯಲ್ಲಿದೆ. ಸ್ವತಂತ್ರ ಚೀನದಲ್ಲಿ ವಿದೇಶಿಯರಿಗೆ ಯಾವುದೇ ತರಹದ ವಿಶೇಷಾಧಿಕಾರಗಳು ಇರಕೂಡದು. ಆದರೆ ಈಗ ಚೀನದಲ್ಲಿ ವಿದೇಶೀಯರಿಗೆ ಪ್ರಾಪ್ತವಾದ ಅಧಿಕಾರಗಳನ್ನು ಚೀನದ ಪರವಾಗಿ ಜಪಾನು ಕಿತ್ತುಕೊಳ್ಳಲು ಹವಣಿಸುವುದು ಪರಮ ಅನ್ಯಾಯವಾಗಿದೆ ಚೀನದ ಪರವಾಗಿ ಮಾತನಾಡುವ ಅಧಿಕಾರ ಜಪಾನಿಗೆ ಇರುವುದಿಲ್ಲ ಆದರೂ ಕೂಡ ಅದು ಈ ಅನ್ಯಾಯ ಕೃತ್ಯಕ್ಕೆ ಪ್ರವೃತ್ತವಾಗಿ, ಬ್ರಿಟನ್, ಫ್ರಾನ್ಸ್, ಅಮೇರಿಕಗಳ ಸ್ವಾತ್ಸ್ಯಗಳ ಮೇಲೆ ಬೀಳಲು ಸೇನೆಯನ್ನೂ ಯುದ್ಧೋಪಕರಣಗಳನ್ನೂ ಕಳುಹಿಸಿಕೊಟ್ಟಿದೆ ತಮ್ಮ ಹಕ್ಕು ಅಧಿಕಾರಗಳನ್ನು ರಕ್ಷಿಸಿಕೊಳ್ಳಲಿಕ್ಕೆ ಈ ಮೂರು ರಾಷ್ಟ್ರಗಳು ಸಿದ್ಧವಾಗಿವೆ ಪರಂತು ಚೀನವನ್ನು ಗೆಲ್ಲುವುದೇ ಜಪಾನಿಗೆ ಮಹಾ ಪ್ರಯಾಸದ ಕೆಲಸವಾಗಿರುವಾಗ, ಅದು ಈ ಮೂರು ರಾಷ್ಟ್ರಗಳ ತೇಜೋವಧೆ ಹೇಗೆ ಮಾಡುವುದೋ ಸೋಜಿಗದ ವಿಷಯವಾಗಿದೆ

ಜಪಾನೀ ವಸ್ತುಗಳನ್ನು ಬಹಿಷ್ಕರಿಸಿರಿ

ಚೀನದಲ್ಲಿ ಜಪಾನು ಅನ್ಯಾಯ ಕರ್ಮವನ್ನು ಮಾಡುತ್ತಿದೆ ಎಂಬುದಕ್ಕೋಸ್ಕರ ಮಾತ್ರವಲ್ಲ ಅದು ಹಿಂದುಸ್ಥಾನಕ್ಕೆ ಕಳುಹಿಸುವ ವಸ್ತು ಒಡವೆಗಳು ನಿಕೃಷ್ಟ ತರಗತಿಯವು ಎಂಬುದಕ್ಕಾಗಿಯೂ ಅವುಗಳ ಬಹಿಷ್ಕಾರ ಮಾಡಬೇಕಾಗಿದೆ ಡಾಕ್ಟರ್ ಎಸ್. ಗೋಡಬೋಲೆಯವರು ಮೋಡರ್ನ್ ರಿವ್ಯುದಲ್ಲಿ ಒಂದು ಲೇಖನ ಬರೆದು ಜಪಾನು ಭಾರತಕ್ಕೆ ಕಳುಹಿಸುವ ವಸ್ತುಗಳ ನಿಕೃಷ್ಟತೆಯ ಕಡೆಗೆ ಭಾರತೀಯರ ಲಕ್ಷ್ಯವನ್ನು ಎಳೆದಿದ್ದಾರೆ ಜಪಾನು ತಯಾರಿಸುವ ವಸ್ತುಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು ಮೊದಲನೆ ವರ್ಗಕ್ಕೆ ಸೇರುವ ಉತ್ತಮ ಸಾಮಾನುಗಳನ್ನು ಅದು ಅಮೇರಿಕಕ್ಕೂ ಎರಡನೆ ತರಗತಿಗೆ ಸೇರಿದ ಮಧ್ಯಮ ಸಾಮಾನುಗಳನ್ನು ಯುರೋಪಿಗೂ ಕಳುಹಿಸುತ್ತದೆ ವ್ಯಾಪಾರದಲ್ಲಿ ದೊರೆಯಬೇಕಾದ ಲಾಭವೆಲ್ಲ ಅಮೇರಿಕ ಯುರೋಪಗಳಿಗೆ ಮಾರುವ ಈ ಸಾಮಾನುಗಳಿಂದಲೇ ಜಪಾನಿಗೆ ದೊರೆಯುತ್ತದೆ ಇದು ನಿಕೃಷ್ಟ ಮತ್ತು ಹಾಳು ಎಂದು ಬಿಸಾಡಿದ ಸಾಮಾನುಗಳಿಗೆ ಹೊಸತನದ ಒಪ್ಪಕೊಟ್ಟು ಭಾರತದ ತಲೆಯ ಮೇಲೆ ಹೇರುತ್ತದೆ ಆದ್ದರಿಂದಲೇ ಭಾರತದಲ್ಲಿ ಜಪಾನಿ ಸಾಮಾನುಗಳು ಅಗ್ಗವಾಗಿ ಮಾರುವುವು ಜಪಾನೀ ಸಾಮಾನುಗಳ ಅಗ್ಗತನದ ಮುಂದೆ ಭಾರತೀಯ ಸಾಮಾನುಗಳು ಕ್ರಯದಲ್ಲಿ ತಲೆ ಎತ್ತಿ ನಿಲ್ಲಲಾರದೆ ನಮ್ಮ ಕೈಗಾರಿಕೆಗಳೆಲ್ಲ ಮೂಲೆ ಗುಂಪಾಗುತ್ತವೆ ಆದಕಾರಣ ಚೀನದಲ್ಲಿ ಜಪಾನಿನ ಅನ್ಯಾಯವನ್ನು ತಡೆಯಲಿಕ್ಕೂ ನಮ್ಮ ಕೈಗಾರಿಕೆ ವ್ಯಾಪಾರಗಳ ಉನ್ನತಿಗಾಗಿಯೂ ನಾವು ಜಪಾನೀ ವಸ್ತುಗಳನ್ನು ಸಂಪೂರ್ಣ ಬಹಿಷ್ಕರಿಸಬೇಕು.

ಸಬ್‌ಮೆರೀನು ಮುಳುಗಿತು

ಕಳೆದ ವಾರ ಸ್ಕ್ವಾಲಿಸ ಎಂಬ ಒಂದು ಅಮೇರಿಕನ್ ಸಬ್‌ಮೆರೀನು ಯಂತ್ರ ಸಾಮಾಗ್ರಿಗಳಲ್ಲಿ ಏನೋ ದೋಷ ಬಂದುದರಿಂದ ಆಳವಾದ ಸಮುದ್ರದಲ್ಲಿ ಮುಳುಗಿತು ಅದರೊಳಗಿದ್ದ ೩೩ ಮಂದಿ ಪ್ರಾಣರಕ್ಷಣೆ ಮಾಡುವುದೇ ಬಹಳ ಕಠಿನವಾಯಿತು ೨೬ ಮಂದಿ ಉಸಿರುಕಟ್ಟಿ ಸತ್ತರು

ಮಹಾರಾಣಿ ಮೇರಿ

ಬ್ರಿಟಿಷ್ ಬಾದಶಹರ ಮಾತೃಶ್ರೀಯವರಾದ ಮಹಾರಾಣಿ ಮೇರಿಯವರು ಲಂಡನಿನಲ್ಲಿ ಮೋಟರಕಾರಿನಲ್ಲಿ ಕೂತು ವಿಹರಿಸುತ್ತಿದ್ದಾಗ, ಕಾರು ಒಂದು ಲಾರಿಯೊಡನೆ ಡಿಕ್ಕಿ ಹೊಡೆದು ತಲೆ ಕೆಳಗಾಗಿ ಬಿದ್ದಿತು ಜದರಿಂದ ಮಹಾರಾಣಿಯವರಿಗೇನೂ ಗಾಯ ವಾಗದೆ ಅವರು ಸ್ವಸ್ಥಚಿತ್ತರಾಗಿದ್ದಾರೆ

ಅಸಹ್ಯವಾದ ಕಜ್ಜಿಯ ವ್ರಣಗಳನ್ನು ನಾಶಪಡಿಸಿರಿ.

ಜ್ಯಾಂಬಕಿನಿಂದ ನಿಮ್ಮ ಚರ್ಮವನ್ನು ಆರೋಗ್ಯದಲ್ಲಿಡಿರಿ.

ಎಷ್ಟು ಸಣ್ಣ ಕಜ್ಜಿಯೂ ಗಾಯವಾದ ಭಾಗವನ್ನಾದರೂ ಅಲಕ್ಷಿಸದೆ ಕೂಡಲೆ ಜ್ಯಾಂಬಕನ್ನು ಸವರಿರಿ ಈ ಪ್ರಕಾರವಾಗಿ ಆಚರಿಸಿದರೆ ಇದರಿಂದ ಪರಿಣಮಿಸಬಹುದಾದ ವ್ರಣ, ಕಾಲುಕುಂಟು, ಅಥವಾ ಇನ್ನಿತರ ಚರ್ಮವ್ಯಾಧಿಗಳಿಂದ ಸುರಕ್ಷಿತರಾಗುವಿರಿ ಜ್ಯಾಂಬಕಿನಲ್ಲಿರುವ ಅತ್ಯಮೂಲ್ಯವಾದ ಗಿಡಮೂಲಿಕೆಗಳ ಎಣ್ಣೆಯು ನಿಮ್ಮ ನರನಾಡಿಗಳನ್ನು ಪ್ರವೇಶಿಸಿ ನೋವನ್ನು ಗುಣಪಡಿಸುತ್ತದೆ, ಮತ್ತು ಅವುಗಳಿಂದ ಬರುವ ಕೆಟ್ಟ ನೀರನ್ನು ಒಣಗಿಸುತ್ತದೆ ಜ್ಯಾಂಬಕು ಒಂದೂ ಕಲೆಯನ್ನುಂಟುಮಾಡದೆ ಗುಣಪಡಿಸುವುದು ಆದುದರಿಂದ ಯಾವಾಗಲೂ ಜ್ಯಾಂಬಕನ್ನು ಉಪಯೋಗಿಸುವಂತೆ ಎಚ್ಚರದಿಂದಿರಿ. ಎಲ್ಲಾ ಔಷಧಿ ವ್ಯಾಪಾರಿಗಳು ರೂಪಾಯಿ 1 0 0 ಮತ್ತೂ 2-4-0ರಂತೆ ಮಾರುತ್ತಾರೆ.

ಏಜಂಟ್ಸ್

ಮೆಸರ್ಸ್ ರಾಧಾ ಮತ್ತು ಕಂಪೆನಿ,
ಪಾರ್ಕ್ ಟೌನ್, ಮದ್ರಾಸು.

ಯಾವಾಗಲೂ ಜ್ಯಾಂಬಕನ್ನೆ ಉಪಯೋಗಿಸಿ

ZAM-BUK

ಪ್ರಾಣಿಕೊಬ್ಬುಗಳಿಂದ ವಿರಹಿತವಾದದ್ದು

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು
ಆಯುರ್ವೇದಾಶ್ರಮ
ಮದರಾಸು

ಸ್ಟಾಕಿಸ್ಟರ
ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಬೊಸ್ಕಾ
ಟೀ ರೋಸ್

ಸಾಮಾನ್ಯ ಬೆಲೆಗೆ ಮಾರಲ್ಪಡುವ
ಅತ್ಯಂತ ಸುಗಂಧಪೂರಿತ ಸಾಬೂನು!

ಬಹಳ ದೊಡ್ಡದಾದ ಸೈಜು! ನವೀನವಾದ ಆಕಾರ!

ಆಹ್ಲಾದವನ್ನೀಯುವ ಪರಿಮಳ!

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ

ತಯಾರಿಸುವವರು ಬೊಂಬೆ ಸೋಪ್ ಫೆಕ್ಟರಿ, ಬಿ. ಜಿ. ೬.

ವಿತರಣಾಕಾರರು ವಿ. ಅಹಮ್ಮದ್ ಹುಸ್ಸೇನ್, ಗೋಳಿಕಟ್ಟಾ ಬಜಾರ್, ಮಂಗಳೂರು.

ಸರದಾರ ಭವನ **Sirdar Bhavan**

ಫೆಲಿಕ್ಸ್‌ಪೈ ಬಜಾರ್-ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೋಣೆಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ವಾಸಗೃಹ ಎಲ್ಲಾ ಮೇಲ್ಪಿಚಾರಗಳೂ ನಿಮ್ಮನ್ನು ತೃಪ್ತಿಗೊಳಿಸುವ ಥರಗಳು

Proprtler— H R Rao,
Bangalore Guit Emporuim Madras

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ಜ್ಯೇಷ್ಠ ಬ॥ ೧ ಶನಿವಾರದಿಂದ ಜ್ಯೇಷ್ಠ ಬ॥ ೭ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ವೃಷಭ ಬೇಶ)

ದಿ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ		
3	ಶನಿ	೧೪	೧೧	ಜ್ಯೇಷ್ಠಾ	೬।	೨೦	
4	ರವಿ	೧೫	೧೩॥	ಮೂಲಾ	೧೧।	೨೧	
5	ಸೋಮ	೧೬	೧೬	ಪೂ. ಷಾಢಾ	೧೩॥	೨೨	
6	ಮಂಗಳ	೧೭	೨೦।	ಉ. ಷಾಢಾ	೨೧।	೨೩	
7	ಬುಧ	೧೮	೨೫	ಶ್ರವಣಾ	೨೭॥	೨೪	
8	ಗುರು	೧೯	೩೦	ಧನಿಷ್ಠಾ	೩೪	೨೫	
9	ಶುಕ್ರ	೨೦	೩೪॥	ಶತಭಿಷಾ	೪೦।	೨೬	

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 1½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs 5000/ run regularly on systematic lines. Unique Banking facilities to Businessmen and interested Public.

Apply for particulars—K. R. GURU, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ... ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

[illegible]

ವಿಳಾಸ. ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, (S. M. C.)

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಫ್ರೀ ಬಹುಮಾನಗಳು

[illegible]

The American Commercial Stores, Post Box No. 12215, Calcutta, S. A.

THE

Bank of Mangalore Ltd.,

MANGALORE

ESTD 1931

Branches

Panemangalore, Mudabidri & Padubidri.

Fixed Deposits will be received at following rates of interest.

For 3 months	3½%
„ 6 „	4%
„ 12 „	5%
„ 24 „ & upwards	5½%

Interest Payable Quarterly

Savings Bank deposit 3½% on daily balances.

All kinds of banking business transacted.

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a

in denominations of

RS. 50/-, 100/-, 500/-, 1,000/-, & 5,000/

are now issued at all our Branches

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

- ಅತ್ಯಂತ ಬಲಕಾರಿ

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಪುನಃ ಶಕ್ತಿಯನ್ನು ಕೊಡುವುದರಲ್ಲಿ ಅದ್ವಿತೀಯವಾದದ್ದು. ನಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡುತ್ತದೆ. ನಾಲ್ಕು ತುಂಡುಗಳುಳ್ಳ ಒಂದು ಪೆಟ್ಟಿಗೆ ಮತ್ತು 20 ತೊಲೆಗಳುಳ್ಳ ಡಬ್ಬಿ ರೂ. 1-1-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

[illegible] (ಸೌ. ಇಂ.)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗಾ,

[illegible], ಮಂಗಳೂರು.

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

[illegible]

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ ಅವ್ವಲ್ ಕರದ ಗುಡ್ಡ್ಯ ಮುಡಿಗೆ	1—11—0	—
„ ದುಯಂ „ „	1—10—0	1—10—0
„ ಅವ್ವಲ್ ಸುಗ್ಗಿ „	1—10—0	—
„ ದುಯಂ „ „	1—9—0	—
ಅಕ್ಕಿ ಅವ್ವಲ್ ಗಡ್ಡೆ „	1—2—0	4—2—0
„ ದುಯಂ „	3—14—0	3—14—0
„ ಅವ್ವಲ್ ಸುಗ್ಗಿ „	4—4—0	—
„ ದುಯಂ „ „	3—8—0	3—8—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದದ್ದು „	37—8—0	47—8—0
ಕೊಬ್ಬರಿ ಆಫೀಸು ಖಂಡಿಗೆ	45—0—0	—
„ ಏರ್ ಡಸ್ಟು „	47—8—0	—
ತೆಂಗಿನ ಎಣ್ಣೆ ಮಣಕ್ಕೆ	3—5—0	3—5—0
ಸಿಪ್ಪೆಮಿದ್ದ ಅಡಿಕೆ 1000ಕ್ಕೆ	3—1—0	3—12—0
ಗೇರುಬೀಜ ಮುಡಿಗೆ	3—12—	3—12—0
ಕಲ್ಲಿನ ಬೆಲ್ಲ ಖಂಡಿಗೆ	42—8—0	60—0—0
ಒಳ್ಳೆಮೆಣಸು ಹಂಡ್ರೆಡ್‌ವೇಟಿಗೆ	15—8—0	16—8—0

ಹಿಟ್ಲರ ಭೂತದ ಉಚ್ಚಾಟನೆಗೆ ಬ್ರಿಟನ ಫ್ರಾನ್ಸುಗಳ ಹೋಮ

ಹಿಟ್ಲರಭೂತದ ವಕ್ರದೃಷ್ಟಿಯು ಕಳೆದವಾರ ಡಾಂಜಿಂಗಿನ ಮೇಲೆ ಬಿದ್ದಿತ್ತು. ಆತನ ನಾಝಿ ಪಂಗಡಿಗರು ಪೋಲಾಂಡಿನ ಕಸ್ಟಮ್ಸ ಕಟ್ಟಡದ ಮೇಲೆ ಬಿದ್ದು ಅದನ್ನು ಪೂರ್ಣ ಕೆಡವಿ ಹಾಕಿದರು. ಒಬ್ಬ ಕಸ್ಟಮ್ಸ ಅಧಿಕಾರಿಯು ಕೊಲ್ಲಲ್ಪಟ್ಟನು. ಹಿಟ್ಲರ ಮತ್ತು ಪೋಲರ ಈ ಸಂಘರ್ಷದಿಂದ ಇತರ ಸಮಯಗಳಲ್ಲಾದರೆ ಒಂದು ದೊಡ್ಡ ಭಯಂಕರ ಯುದ್ಧವೇ ಆಗುತ್ತಿತ್ತು. ಮಾರ್ಚ ತಿಂಗಳೊಳಗಾಗಿಯೇ ಪೋಲಾಂಡನ್ನು ಜರ್ಮನ ಸಾಮ್ರಾಜ್ಯಕ್ಕೆ ಸೇರಿಸಿಬಿಡಬೇಕೆಂಬ ಅವನ ಕಾರ್ಯಕ್ರಮವಿತ್ತು. ಪರಿಸ್ಥಿತಿಯು ಪ್ರತಿಕೂಲವಾಗಿದ್ದುದರಿಂದ ಮಾರ್ಚ ಬಿಟ್ಟು ಎಪ್ರಿಲ್ ಮೇ ತಿಂಗಳುಗಳು ಕಳೆಯುತ್ತ ಬಂದರೂ ಅವನ ಆಶೆ ಪೂರ್ಣವಾಗಿರಲಿಲ್ಲ. ಪರಂತು ಈಗಲಾದರೂ ಪರಿಸ್ಥಿತಿ ಹಿಟ್ಲರನಿಗೆ ಅನುಕೂಲವಾಗಿರುವದಿಲ್ಲ. ಆದ್ದರಿಂದ ಅವನು ಸಿಂಹಶನಾಗಿ ಚಂಗೆಟ್ಟಿದ್ದಾನೆ.

ಜರ್ಮನರು ತನ್ನ ತೀಟೋವಧೆಯಾಯಿತೆಂದು ತಿಳಿಕೊಳ್ಳಬಾರದು. ಹಾಗೆ ಅವರು ತಿಳಿಕೊಂಡು ಬಿಟ್ಟರೆ ತನ್ನ ಸ್ಥಾನಮಾನ ಎರಡಕ್ಕೂ ಭಂಗಬರುವದು ಎಂದು ಹಿಟ್ಲರನು ಯೋಚಿಸಿದ್ದಾನೆ. ಆದ್ದರಿಂದ ಡಾಂಜಿಂಗ ಮತ್ತು ಪೋಲಾಂಡನ್ನು ಜರ್ಮನಿಗೆ ಸೇರಿಸುವ ವಿಚಾರದಲ್ಲಿ ಹಿಟ್ಲರನು ವಿಫಲನಾಗಿರುವ ಸಂಗತಿ ಜರ್ಮನರಿಗೆ ತಿಳಿಯಬಾರದೆಂದು ಅವನು ಬಹಳ ಪ್ರಯತ್ನಪಟ್ಟಿರುವನು. ಮಾರ್ಚ ತಿಂಗಳಲ್ಲಿ ಡಾಂಜಿಂಗ ಮತ್ತು ಪೋಲಾಂಡನ್ನು ಜರ್ಮನಿಗೆ ಸೇರಿಸುವದಾಗಿ ಹಿಟ್ಲರ ಪ್ರಕಟಿಸಿದ ಒಂದು ಸಚಿತ್ರದ ಪ್ರತಿಗಳು ಜರ್ಮನ ಜನತೆಯ ಕೈಸೇರದಂತೆ, ಅವುಗಳನ್ನೆಲ್ಲಾ ಸುಟ್ಟುಹಾಕಲು ಹಿಟ್ಲರನು ತನ್ನ ಗುಪ್ತ ಪೋಲೀಸರಿಗೆ ಆಜ್ಞಾಪಿಸಿದ್ದಾನೆ. ಅವರು ಈ ಸಚಿತ್ರದ ಪ್ರತಿಗಳನ್ನು ಹುಡುಕುವ ಭಗೀರಥ ಪ್ರಯತ್ನ ಮಾಡುತ್ತಿರುವರು. ಈ ಪ್ರತಿಗಳು ಜರ್ಮನ ಜನತೆಯ ಕೈಸೇರಿದರೆ, ಹಿಟ್ಲರನ ಮಾರ್ಚ ತಿಂಗಳ ಕಾರ್ಯಕ್ರಮವು ಯಾಕೆ ಪೂರ್ಣವಾಗಲಿಲ್ಲವೆಂದು ಜನರು ಆಲೋಚಿಸುವರು. ಆದ್ದರಿಂದಲೇ ಈ ಸಚಿತ್ರದ ಪ್ರತಿಗಳು ಜನರ ಕೈಸೇರದಂತೆ ಪ್ರಚಂಡ ಪ್ರಯತ್ನಗಳಾಗಿರುವವು.

ಹಿಟ್ಲರನ ಪಣ—ಅವನ ಸೋಲು

ಯಾವ ಹಿಟ್ಲರನು—ಸಮಸ್ತ ಜಗತ್ತೇ ಜರ್ಮನಿಯ ಅಧೀನವಾಗುವದಾಗಲಿ ತನ್ನ ತೃಪ್ತಿ ಎಂದು ಸಿಂಹಗರ್ಜನೆ ಮಾಡಿದ್ದನೋ, ಅವನೇ ಈಗ ಕಣ್ಣುಮುಚ್ಚಾಲೆಯ ಆಟಕ್ಕೆ ಆರಂಭಿಸಿದ್ದಾನೆ. ಅವನಿಗೆ ಹೊರಗಿನ ಶತ್ರುಗಳ ಭಯವಷ್ಟೇ ಇಲ್ಲ, ಒಳಗಿನ ಶತ್ರುಗಳ ಭಯವೂ ಅಪಾರವಾಗಿದೆ. ಅವನೀಗ ನಾವು ಊಹಿಸುವಷ್ಟು ಸಮರ್ಥನೂ ಬಲಿಷ್ಠನೂ ಆಗಿರುವದಿಲ್ಲ. ಜರ್ಮನಿಯಲ್ಲಿ ತನ್ನ ಸ್ಥಾನಮಾನಗಳನ್ನು ಕಾಯಲಿಕ್ಕೆ ಅವನು ಮಾಡುವ ಪ್ರಯತ್ನಗಳು ಅವನ ಹಿತಶತ್ರುಗಳಿಂದ ವಿಫಲವಾಗುತ್ತಿವೆ. ಜರ್ಮನ ಕೂಲಿಕಾರರು ಒಳಗಿಂದೊಳಗೇ ಅವನ ವಿರುದ್ಧ ಬುಸುಗುಟ್ಟುತ್ತಿರುವರು. ಕೆಲಸಗಾರರ ಮೇಲೆ [illegible] ದಬ್ಬಾಳಿಕೆ ನಡೆಯುತ್ತಿದೆಯಾದರೂ ಜರ್ಮನಿಯ ಉತ್ಪತ್ತಿ ನಿರೀಕ್ಷಿಸಿದಷ್ಟು ಇರುವದಿಲ್ಲ. ದಬ್ಬಾಳಿಕೆಯು ಭಯ ತೋರಿಸಿದರೂ ಕೆಲಸಗಾರರು ಹಿಟ್ಲರನ ಆಡಳಿತವನು ಒಪ್ಪಿ ಮನಸ್ಸಿಟ್ಟು ಕೆಲಸಮಾಡುವದಿಲ್ಲವೆಂಬುದು ಇದರ ಅರ್ಥ. ಇದರಿಂದ ಜರ್ಮನ ಸರಕಾರವು ಬಹಳ ಯೋಚನೆಗೀಡಾಗಿದೆ. ಕೆಲಸದ ಅವಧಿಯನ್ನು ಹೆಚ್ಚಿಸಿದ್ದಾಗ ಜರ್ಮನ ಕೆಲಸಗಾರರು ಕೆಲಸಮಾಡಲಿಕ್ಕೇ ಒಪ್ಪಿರುವದಿಲ್ಲ. ಅನೇಕರು ಬಿಟ್ಟಿ ಕೆಲಸಮಾಡುತ್ತಿದ್ದಾರೆ. ಸಿಟ್ಟಿಗೆದ್ದ ನಾಝಿ ಅಧಿಕಾರಿಗಳು ಕೆಲಸದಲ್ಲಿ ಸ್ವಲ್ಪವಾದರೂ ವಂಚನೆಮಾಡುವ ಕೆಲಸಗಾರರನ್ನು ಗುಂಡಿಟ್ಟು ಕೊಲ್ಲುವರು.

ರಸ್ಯದ ಪೌರೋಹಿತ್ಯಕ್ಕೆ ರುಮೇನಿಯದ ಒಪ್ಪಿಗೆ.

ಜರ್ಮನ ಜಪಾನ ಒಡಂಬಡಿಕೆಯಾದರೆ—ಬ್ರಿಟನ ಫ್ರಾನ್ಸುಗಳು ಹೆದರಬೇಕಾಗಿಲ್ಲ

ಸೇಕಡಾ ೩೫ರಿಂದ ೪೦ರ ತನಕ ಸೈನಿಕರನ್ನು ಕೂಡ ನಂಬಲಾಗುವದಿಲ್ಲವೆಂದು ಸೇನೆಯ ಮೇಲಧಿಕಾರಿಗಳು ಹಿಟ್ಲರನಿಗೆ ತಿಳಿಸಿದ್ದಾರೆ. ಸೈನಿಕರು ಇಷ್ಟು ದೊಡ್ಡ ಪ್ರಮಾಣದಲ್ಲಿ ಅವಿಶ್ವಾಸಿಗಳಾಗಿರುವದು ಸಂಭವನೀಯವಾದರೂ, ಹಿಟ್ಲರನ ಕಾರ್ಯನೀತಿಯಿಂದ ಜರ್ಮನ ಸೇನೆಯಲ್ಲಿ ತುಂಬ ಅಸಂತೋಷ ಹರಡಿದೆಯೆಂಬುದು ಖಂಡಿತ. ಹಿಟ್ಲರನ ಆಪ್ತೇಷ್ಟರು ಕೂಡ ಸಂಪೂರ್ಣ ಅವನಿಗೆ ಅನುಕೂಲರಾಗಿ ಇರುವದಿಲ್ಲ. ಎಷ್ಟೋ ಜರ್ಮನರು ಬ್ರಿಟನ, ಫ್ರಾನ್ಸ ರಸ್ಯಗಳೊಡನೆ ಒಪ್ಪಂದವನ್ನು ಇಚ್ಛಿಸುತ್ತಾರೆ. ಯಾಕೆಂದರೆ ಆಗ ಲೋಕಯುದ್ಧವು ಆಗುವದಿಲ್ಲ. ಹಿಟ್ಲರನ ಕೈಕಟ್ಟುವದು ಎಂದು ಅವರು ನಂಬಿದ್ದಾರೆ. ಜರ್ಮನ ಜನರಿಗೆ ಯುದ್ಧವು ಬೇಕಾಗಿರುವದಿಲ್ಲ. ಅವರು ಶಾಂತಿಯನ್ನಿಚ್ಛಿಸುತ್ತಾರೆ. ಆದ್ದರಿಂದ ಹಿಟ್ಲರನು ಯುದ್ಧಕ್ಕೆ ಹೋಗಲು ಸಿದ್ಧನಿಲ್ಲ.

ಬ್ರಿಟನ, ಫ್ರಾನ್ಸ ಅಧೀರವಾಗಬಾರದು

ಆದ್ದರಿಂದ ಹಿಟ್ಲರನ ಬೆದರಿಕೆಯ ಮಾತುಗಳಿಗೆ ಬ್ರಿಟನ ಫ್ರಾನ್ಸ ಅಧೀರವಾಗಬಾರದೆಂದು ಪತ್ರಿಕೆಗಳು ಹೇಳುತ್ತವೆ. ಅವು ಧೈರ್ಯದಿಂದ ಮುಂದ ನಡೆದುವಾದರೆ ಅವುಗಳಿಗೆ ರಸ್ಯದಂಥ ಹೊರಗಿನ ಸ್ವತಂತ್ರ ರಾಜ್ಯಗಳ ಬೆಂಬಲವು ಇರುವದು. ಮಾತ್ರವಲ್ಲದೆ, ಜರ್ಮನಿಯಲ್ಲಿ ಜರ್ಮನ ಜನತೆಯ ಗುಪ್ತ ಸಹಾಯವು ದೊರೆಯುವದು. ಹಿಟ್ಲರನು [illegible] ಯಾವ ರಾಜ್ಯಗಳ ಸ್ವಾತಂತ್ರ್ಯವನ್ನಪಹರಿಸಿದ್ದಾನೋ ಅವುಗಳು ಪೂರ್ಣರೀತಿಯಿಂದ ಹಿಟ್ಲರನ ಸ್ವಾಮಿತ್ವವನ್ನು ಒಪ್ಪಿಕೊಂಡಿರದೆ [illegible] ಬೆಕೋಸ್ಲೋವೇಕಿಯದಲ್ಲಿ [illegible] ವಿರುದ್ಧ [illegible] ದಲ್ಲಿ [illegible] ಈ ವಿರುದ್ಧ [illegible] ದಲ್ಲಿ [illegible] ಜೆಕೋಸ್ಲೋವೇಕಿಯದ ನಾಝಿ ಪ್ರೆಸಿಡೆಂಟ [illegible] ತ್ರಲಿಸುವ [illegible] ಗಳು ಹಿಂದಾಗುವವು.

ಜರ್ಮನಿಯು ಯುದ್ಧ ಸಿದ್ಧತೆ ಕೂಡ ಬ್ರಿಟನ ಫ್ರಾನ್ಸುಗಳಿಗೆ ಸರಿಗಟ್ಟುವಂತಿಲ್ಲ. ಜರ್ಮನ ಬ್ರಿಟನ ನೌಕಾ ಒಪ್ಪಂದವನ್ನು ಹಿಟ್ಲರನು ಮುರಿದುದರ ಆಶಯವು ಜರ್ಮನ ನೌಕಾಬಲವನ್ನು ಬ್ರಿಟನ ನೌಕಾಬಲದ ಮುಟ್ಟಿಗೆ ತರಬೇಕೆಂಬುದಾಗಿತ್ತು. ಆದರೆ ಸದ್ಯ ಜರ್ಮನಿಯ ನೌಕಾಬಲದ ಮಟ್ಟವು ಬ್ರಿಟನ ಮಟ್ಟಕ್ಕೆ ಏರುವಂತೇ ಇಲ್ಲ. ಯಾಕೆಂದರೆ ಆ ಮಟ್ಟಕ್ಕೆ ಬರಬೇಕಾದರೆ ಹಿಟ್ಲರನು ೬ ವರ್ಷ, ಎರಡು [illegible] ಹೊಸ ಯುದ್ಧ ಹಡಗುಗಳನ್ನು ಕಟ್ಟಬೇಕಾಗುವದು. ಇದಕ್ಕೆ ಕನಿಷ್ಠ ವರ್ಷ ೪೦೦ ಮಿಲಿಯ ಪವನುಗಳು ಬೇಕಾಗುವವು. ಎಲ್ಲಾ ಸ್ಥಿತಿ ಅನುಕೂಲವಾಗಿದ್ದರೂ ಎಂಟು ವರ್ಷಗಳ ಸಮಯ ಬೇಕಾಗುವದು. ಜರ್ಮನಿಯ ಹತ್ತಿರ ಇದಕ್ಕೆ ಬೇಕಾದಷ್ಟು ಹಣ, ಶಕ್ತಿ, ಸಾಹಿತ್ಯ ಸಂಗ್ರಹವು ಇರುವದಿಲ್ಲ. ಇನ್ನು ಯುದ್ಧವಿಮಾನಗಳ ಕುರಿತಾದರೂ ಇದೇ ಮಾತನ್ನು ಹೇಳಬಹುದು. ಬ್ರಿಟನಿಗಿಂತ ಜರ್ಮನಿಯ ಹತ್ತಿರ ಹೆಚ್ಚು ಯುದ್ಧವಿಮಾನಗಳಿದ್ದರೂ ಬ್ರಿಟನ, ಫ್ರಾನ್ಸ ರಸ್ಯಗಳ ಸಮ್ಮಿಳಿತ ವಿಮಾನ ಶಕ್ತಿಯನ್ನು [illegible] ಸಾಧ್ಯವಿಲ್ಲ.

ಹಿಟ್ಲರನು ವಿಜಯಿಯಾಗುವ ಒಂದೇ ಉಪಾಯ.

ಪ್ರಕೃತದ ಪರಿಸ್ಥಿತಿಯಲ್ಲಿ ಹಿಟ್ಲರನು ವಿಜಯಿಯಾಗುವ ಒಂದೇ ಉಪಾಯ ವಿದೆ. ಮಿಂಚಿನಂತೆ ಮಿಂಚಿ ಆಡಗುವ ಒಂದು ಯುದ್ಧವಾದರೆ ಮಾತ್ರ ಹಿಟ್ಲರನು ತನ್ನ ಪ್ರತಿಪಕ್ಷಿಗಳನ್ನು ಗೆಲ್ಲಬಹುದು. ಈ ಅಭಿಪ್ರಾಯವನ್ನು ಜರ್ಮನಿಯ ಪ್ರಸಿದ್ಧ ಮಿಲಿಟರೀ ಅಧಿಕಾರಿಗಳೇ ಕೊಟ್ಟಿದ್ದಾರೆ. ಅವರ ಹೆಸರು ಲೆಫ್ಟಿನೆಂಟ್ ಜನರಲ್ ಹೋರ್ಸ್ಟ್‌ವೊನ್ ಮೋಶ್ಚ ಎಂದು. ಆದರೆ ಆಷ್ಟು ಶೀಘ್ರದಲ್ಲಿ ಲೋಕಯುದ್ಧವು ಮುಗಿಯುವದು ಅಸಂಭವ. ಆದ್ದರಿಂದ ಮುಂದಿನ ಯುದ್ಧವು ದೀರ್ಘಕಾಲ ನಡೆದರೆ ಜರ್ಮನಿಯು ಸೋಲುವದು ಖಂಡಿತವೆಂದು ಅವನು ನುಡಿದಿರುವನು. ಈ ಜರ್ಮನ ಸೇನಾಪತಿಯು ಮಿಲಿಟರಿ ವಿಷಯದಲ್ಲಿ ಅಧಿಕಾರಿಕ ವಾಣಿಯುಳ್ಳ ಮಾತನಾಡಬಲ್ಲನೆಂದು ಪ್ರಸಿದ್ಧನಾಗಿದ್ದಾನೆ. ಅವನ ಅಭಿಪ್ರಾಯಗಳಿಗೆ ಯುರೋಪಿಯನ ರಾಷ್ಟ್ರಗಳಲ್ಲಿ ಬಹಳ ಮನ್ನಣೆ ದೊರೆತಿದೆ. ಆದಕಾರಣ ಬ್ರಿಟನು ಫ್ರಾನ್ಸುಗಳು ಹಿಟ್ಲರನ ಬೆದರಿಕೆಗೆ ಹೆದರಬೇಕಾಗಿಲ್ಲ.

ಬ್ರಿಟನ, ಫ್ರಾನ್ಸ ರಸ್ಯ ಒಡಂಬಡಿಕೆಯಾದರೆ ಈ ರಾಷ್ಟ್ರಗಳು [illegible]

[illegible]

ಇನ್ನು ಆಕಸ್ಮಿಕ ಪ್ರಯೋಗದಿಂದ ರಸ್ಯಜಪಾನ ಸಂಗ್ರಾಮವಾದರೂ ಅದರಲ್ಲಿ ರಸ್ಯವೇ ಗೆದ್ದು ಬರುವ ಸಂಭವವಿದೆ. ರಸ್ಯದ ಸೇನಾಶಕ್ತಿಯ ದೊಡ್ಡ ಅಂಶವು ಅದರ ಪೂರ್ವಗಡಿಯ ಕಡೆ ಕೇಂದ್ರೀಕೃತವಾಗಿದೆ. ಯಾವದಾದರೂ ಕಾರಣದಿಂದ ತನಗೂ ಜಪಾನಿಗೂ ಹತ್ತಿಬರುವ ಯೋಗವಿರುವುದರಿಂದ ರಸ್ಯವು ಮೊದಲಿಂದಲೂ ತಿಳಿಕೊಂಡಿರುವದರಿಂದ, ಅದು ಜಪಾನಿನ ಶಕ್ತಿಯನ್ನು ಮೀರಿಸುವ ಎಲ್ಲಾ ಸೈನಿಕ ಸಿದ್ಧತೆಗಳನ್ನು ತನ್ನ ಪೂರ್ವದ ಗಡಿನಾಡಿನಲ್ಲಿ ಮಾಡಿಟ್ಟಿದೆ. ಈ ಗಡಿನಾಡಿನಲ್ಲಿ ರಸ್ಯದ ೩೦೦೦ ಯುದ್ಧವಿಮಾನಗಳು, ಸೇಕಡಾ ೩೦ರಷ್ಟು ಯುದ್ಧನಾವೆಗಳು ಇವೆ. ಭೇದಿಸಲಸಾಧ್ಯವಾದ ಕೋಟೆಕೊತ್ತಲಗಳು ಕಟ್ಟಲ್ಪಟ್ಟಿವೆ. ಮದ್ದುಗುಂಡುಗಳ ದೊಡ್ಡ ದೊಡ್ಡ ಉಗ್ರಾಣಗಳು ಇಲ್ಲಿವೆ.

ಹಿಟ್ಲರ ಮುಸಲೋನಿಯರ ಉಚ್ಚಾಟನೆ

ಆದಕಾರಣ ಹಿಟ್ಲರ ಮುಸಲೋನಿಯರ ಉಚ್ಚಾಟನೆಗೆ ಬ್ರಿಟನ, ಫ್ರಾನ್ಸುಗಳು ಆರಂಭಿಸಿದ ಹೋಮ ನನ್ನು ಪೂರ್ಣಫಲ ದೊರೆಯ [illegible] ಹೋಮದ [illegible] ಈ ರಾಷ್ಟ್ರಗಳು ರಸ್ಯವನ್ನು ಆಮಂತ್ರಿಸಲೇ ಬೇಕು. ರಸ್ಯದ ಪೌರೋಹಿತ್ಯಕ್ಕೆ ಮೊದಲು ಇದ್ದ ಪೋಲಂಡು ರುಮೇನಿಯಗಳ ಆಕ್ಷೇಪಗಳು ಈಗ ಉಳಿದಿರುವದಿಲ್ಲ. "ಹಿಟ್ಲರ ಮುಸಲೋನಿಯರನ್ನು ಕಡೆಗಟ್ಟುವ ಉದ್ದೇಶದಿಂದ ರಸ್ಯದ ಸೇನೆಯನ್ನು ತನ್ನ ರಾಜ್ಯದ ಮೇಲಿಂದ ಹೋಗಬಿಡಲು ರುಮೇನಿಯ ಸರಕಾರವು ಒಪ್ಪಿದೆ". ಸಂದರ್ಭ ಬಂದಾಗ ಪೋಲಾಂಡೂ ಒಪ್ಪುವದು. ಬ್ರಿಟನ, ರಸ್ಯ ಸೈನಿಕ ಒಡಂಬಡಿಕೆಯ ತತ್ವವನ್ನು ಎರಡೂ ರಾಷ್ಟ್ರಗಳು ಒಪ್ಪಿರುವ ವರ್ತಮಾನ ಬಂದಿರುವದು ಲೋಕಶಾಂತಿಯನ್ನು ಇಚ್ಛಿಸುವವರಿಗೆ ಸಂತೋಷ ಸಮಾಚಾರವಾಗಿದೆ. ಫ್ರಾನ್ಸ, ರಸ್ಯಗಳೊಳಗೆ ಯಾವ ಪ್ರಕಾರ ಸೈನಿಕಸಹಾಯದ ಒಪ್ಪಂದವಾಗಿರುತ್ತದೋ, ಅದೇ ಪ್ರಕಾರ ಬ್ರಿಟನ ರಸ್ಯಗಳೊಳಗೆ ಒಪ್ಪಂದವಾಗುವ ತತ್ವವು ಈಗ ಒಪ್ಪಿತವಾಗಿದೆ. ಹೀಗೆ ಬ್ರಿಟನ, ಫ್ರಾನ್ಸ, ರಸ್ಯ ಒಡಂಬಡಿಕೆಯಾಗುವದರಿಂದ ಒಂದು ಹೊಸ ಯುಗದ ಆರಂಭವಾಗುವದು. ಈ ಮೂರು ರಾಷ್ಟ್ರಗಳ ಸಮ್ಮಿಳಿತ ಶಕ್ತಿಯನ್ನು ವಿರೋಧಿಸಿ ಲೋಕಶಾಂತಿಯನ್ನು ಕೆಡಿಸುವದು ಯಾವ ರಾಷ್ಟ್ರಕ್ಕೂ ಸಾಧ್ಯವಿಲ್ಲ. ಯಾವ ರಾಷ್ಟ್ರವು ಈ ಸಮ್ಮಿಳಿತ ಶಕ್ತಿಯನ್ನು ವಿರೋಧಿಸುತ್ತದೋ ಅದು ಧೂಳೀಪಟವಾಗುವದು.

ಈಗ ಬ್ರಿಟನ ಕೈಕಟ್ಟಿ ನಿಂತಾಗಿದೆ. ಬ್ರಿಟನ ರಸ್ಯ ಒಡಂಬಡಿಕೆಯ ತತ್ವವು ಒಪ್ಪಲ್ಪಟ್ಟಿದೆ ಎಂದಾಕ್ಷಣವೇ ಅವನ ಕರ್ತವ್ಯಮೂಢನಾಗಿ [illegible] ಸಂಪೂರ್ಣ ಒಡಂಬಡಿಕೆಯಾದಾಗ ಸರ್ವಾಧಿಕಾರಿಗಳ [illegible] ಅವರ [illegible] ರಾಷ್ಟ್ರಗಳ [illegible]

[illegible]

S. U. N. & Co.,

Silk Merchants,
Chowkhamba BENARES CITY

ಕಾಶಿಯ (ಕಾಶಿ) ಬನಾರಸ [illegible]
[illegible]
[illegible]

18 [illegible] 2½ [illegible]
[illegible] 1½ ರೂ 45ರಿಂದ 150 ಸಾಧಾರಣ [illegible] 18 [illegible] ರೂ 35ರಿಂದ ರೂ 55 ವರೆಗು ಸಾದಾ [illegible] 18 [illegible] 32ರಿಂದ ರೂ 65 ಉದ್ದ [illegible] 2½ ರೂ 20ರಿಂದ 50ರ ವರೆಗೆ [illegible] ಕಳುಹಿಸಲಾದೀತು.

ಶಿರೋಮಣಿ ನಾರಾಯಣಾಚಾರ್ಯ, [illegible] ಬನಾರಸ ಸಿಟಿ

'DILROZ' Regd

Dil Roz' is a sure cure for Oriental sores local sores all kinds of deep rooted sores skin eruptions Pimples, Eczema Ringworm, Sinus Fistula auxiliary-Ass [illegible]

There is no need of dressing the wounds nor are baths prohibited. Price Rs. 2 Postage extra.

TAHIR DIN
[illegible], LAHORE.

ಧಿ·ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿಮತ್ತುಧಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST PAULS CHURCH,
Bolkunje Post, S. K
Dated 4 h Jan 1939

To
THE JOINT MANAGERS,
The C. P C Co. Ltd, Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Public

Renewing my thanks, I remain,
Yours Sincerely,
(Sd) **P W Farias.**

Sri Parshwanathaswami,
PANCHAKALYANA POOJA MAHOSTHAM.
Venoor, S Kanara, 1939

To,
THE JOINT MANAGERS,
The Combind Booking Agency, Mangalore

Dear Sirs,

Please permit us to express our thanks on behalt of the above committee for the efficient Service rendered by your combined Booking Agency Staff at Venoor to the visitors of the Panchakalyana Pooja Mahosthami in celebration held this year

Our thanks are also due to Moodubidri Booking Clerk Mr B Krishnayya and also his other mates and Mr Raghavendra Bhandary who had specially come down from Mangalore to see to the needs of and comforts of the travelling Public Thanking you once again,

We remain, Yours faithfully

Venoor, (Sd) B. Chandappa Indra (*Secretary, P M Council*) (Sd) M Jagathpal, (Sd) M Pachappa Shetty
Dated 6-1-'39 (Sd) Anantharaj Shetty (*Members, Panchakalyana Mahosthamam Committee*)

JOINT MANAGERS.

The Combined Booking Agency,
MANGALORE

The Joint Booking Office,
KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business, and to the public, has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER A CRORE.

ESTD 1906
CANARA BANK, LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ವಕ್ರವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲಿ ಈ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY MADRAS CALCUTTA

ಬಿಡಿ ಸಂಚಿಕೆ ಒಂದಾಣೆ
ವಾರ್ಷಿಕ ಚಂದಾ ರೂ 2-0-0

ಸ್ವದೇಶಾಭಿಮಾನಿ

ಟಪಾಲು ಹಾಸಲು ಸೇರಿ
ರೂ 2-13-0

Established 1906 • Regd. No M 340

ಸಂಪುಟ ೩೩] ತಾರೀಕು ೨-೬-೧೯೩೯ (2-6-1939) [ಸಂಚಿಕೆ ೨೨

THE

BOMBAY LIFE ASSURANCE COMPANY, LTD.,

(ESTD 1908)

THE OFFICE
Which has proved its popularity by its progress

Record of New Bussiness

Proposed	Year	Completed
1 25 50 250	1934	1 01 83 750
1 50 48 915	1935	1 23 98 665
1 68 88 200	1936	1 3[illegible] 1 500
1 72 579 75	1937	1 40 08 725
176 83 250	**1938**	**144.91 000**

1939 - VALUATION YEAR.

Please take up a Policy Now and participate in Bonus

To [illegible] Represent [illegible]

— Apply to

KOCHIKAR BROTHERS, LIIMTED,
Madras Branch Secretaries
The Bombay Life Assurance Co Ltd
The Bombay Life Building Gandhinagar UDIPI

or any of our following offices:

Post Box No 337
Mount Road
Madras

Car Street
Mangalore

Visweshwarapuram Circle
Bangalore City

Puthiyara
Calicut

Charni Road
Girgaum
BOMBAY 4

Central Station Road
Trivandrum

MAKE LIFE WORTH-LIVING!

Indigestion Insomnia - Dry Cough
Nervousness Weak Heart &c
these make you weary of Life!

CONSULT US AND BUY
YOUR LIFE'S HAPPINESS!

Oils – that cool the brain and induce sleep
Lehas – that build up your wasted system
Asavas – that regenerate your [illegible] nerves

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara.
(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ ನಿದ್ರಾವಿಹೀನತೆ ಒಣ ಕೆಮ್ಮು
ನರಗಳ ಅಬಲತೆ ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನಿರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ರೆ ಕೊಡುವ – ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಶಕ್ತಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, – ದ ಕನ್ನಡ
(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

Edited Printed & Published by A. S Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 9-6 1939 ತಾರೀಖು ೯-೬-೧೯೩೯

ಸಿನೇಮಾವೃತ್ತಿಯಿಂದ ನಿವೃತ್ತಿಹೊಂದಿದ ಉಮಾಶಶಿ
(ನ್ಯೂಥಿಯೇಟರ್ಸ್ ಕಲ್ಕತ್ತಾ.)

ಸಚಿತ್ರ

ವಾರಪತ್ರಿಕೆ

ಸ್ವೀಕಾರ

ವಿಮಾವಾಣಿಜ್ಯ (ಕಾಲ್ಪನಿಯ ಹಿನ್ನ ದಿನೋತ್ಸವದ ಸಂಚಿಕೆ). ವ್ಯವಸ್ಥಾಪಕ ಸಂಪಾದಕ ಶ್ರೀ ಜೆ. ವಿ. ದೊಡ್ಡವೀರಪ್ಪ, ಬೆಂಗಳೂರು. ಕ್ರೌನ್ ⅛ ರ 182 ಪುಟಗಳುಳ್ಳ ವಿಶೇಷ ಸಂಚಿಕೆಯು ವಿವಿಧ ಚಿತ್ರಗಳಿಂದಲೂ, ಕನ್ನಡದ ಅನೇಕ ಲೇಖಕರ ಬರಹಗಳಿಂದಲೂ ಸರ್ವಾಂಗ ಸುಂದರವಾಗಿದೆ.

ವಿಮೆ, ವಾಣಿಜ್ಯ, ಕುಸೀದ ಮೊದಲಾದ ವಿಷಯಗಳ ಕುರಿತು ಕನ್ನಡದಲ್ಲಿ ಪ್ರಚಾರದಲ್ಲಿರುವ ಪತ್ರಿಕೆಗಳು ವಿರಳ. ಆ ಕುರಿತು ಇರುವ ಕೊರತೆಯನ್ನು ಈ ಪತ್ರಿಕೆಯು ನೀಗಲಾಡಿಸಿದೆ. ಆಗಾಗ ಆಕರ್ಷಣೀಯ ಹಾಗೂ ಉಪಯುಕ್ತ ಲೇಖನಗಳಿಂದ ಕೂಡಿದ ವಿಶೇಷ ಸಂಚಿಕೆಗಳನ್ನೂ ಪ್ರಕಟಿಸುವುದರ ಮೂಲಕ ಪತ್ರಿಕೆಯನ್ನು ಸರ್ವಾದರಣೀಯವಾಗಿ ಮಾಡುವ ಸಾಹಸವು ಸ್ತುತ್ಯವಾಗಿದೆ.

ಮೈಸೂರಿನ ರಾಜಸಂತಾನದ ಸುಂದರ ಮುಖಚಿತ್ರಗಳಿಂದ ಪತ್ರಿಕೆಗೆ ಕಳೆಯೇರಿದೆ. ಭಾರತದ ಕೀರ್ತಿವಂತ ಮೇಧಾವಿಗಳಾದ ಶ್ರೀ ಎಂ. ವಿಶ್ವೇಶ್ವರಯ್ಯ, ಎನ್. ಆರ್ ಸರ್ಕಾರ್, ಸತ್ಯಮೂರ್ತಿ ಡಾ. ಪಿ. ಸಿ. ರೇ ಮೊದಲಾದವರ ಲೇಖನಾನುವಾದಗಳೂ, ಕನ್ನಡದ ಅನೇಕ ಲೇಖಕರ, ಕವಿಗಳ, ಕತೆಗಾರರ ಲೇಖನ ಕವನ ಕತೆಗಳೂ ಇವೆ. ಕಡೆಗೆ ಕೆಲವು ಇನ್ಶೂರೆನ್ಸ್ ಸಂಸ್ಥೆಗಳ ಪರಿಚಯವು ಸಚಿತ್ರವಾಗಿ ಕೊಡಲ್ಪಟ್ಟಿದೆ. ವಿಮಾವಾಣಿಜ್ಯದಲ್ಲಿ ಅನುಭವ ಪಡೆಯುವವರಿಗೆ ಇದು ಅತ್ಯಂತ ಸಹಕಾರಿಯಾಗುವುದು.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯ ಒಂಭತ್ತನೆ ವರ್ಷದ ವರದಿ.

1938ನೇ ಇಸವಿ ದಶಂಬರ 31ಕ್ಕೆ ಅಂತ್ಯವಾಗುವ ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯ ಒಂಭತ್ತನೆಯ ವರ್ಷದ ವರದಿಯು ನಮ್ಮ ಹಸ್ತಗತವಾಗಿದೆ. ನಮ್ಮ ಜಿಲ್ಲೆಯಲ್ಲಿ ಹುಟ್ಟಿದ ಈ ಕಂಪೆನಿಯು ದಿನದಿಂದ ದಿನಕ್ಕೆ ಯೋಗ್ಯ ಅಭಿವೃದ್ಧಿಯನ್ನು ಹೊಂದುತ್ತಾ ಹೋಗುವುದು ಸಂತೋಷಕರವಾದ ವಿಷಯವಾಗಿದೆ.

ಕಂಪೆನಿಯು ಈ ಅವಧಿಯಲ್ಲಿ ರೂಪಾಯಿ 7,47,981 ಗಳಷ್ಟು ಮೊಬಲಗಿನ 625 ಹೊಸ ಪಾಲಿಸಿಗಳನ್ನು ಕೊಟ್ಟಿರುವುದೂ, ರೂ. 20,000 ರದ ಫೇಸ್ ವ್ಯಾಲ್ಯು ಇರುವ ಗವರ್ನಮೆಂಟ್ ಸೆಕ್ಯುರಿಟಿಗಳನ್ನು ಹೊಸದಾಗಿ ಪಡೆದಿರುವುದೂ, ರೂ. 1,40,000 ಮೊತ್ತದ ಸರಕಾರೀ ಭದ್ರತಾ ಪತ್ರಗಳನ್ನು ಈ ಸಂಸ್ಥೆಯು ಹೊಂದಿರುವುದೂ ನೋಡಿದಲ್ಲಿ ಈ ಸಂಸ್ಥೆಯು ಪ್ರಗತಿಪರವಾದ ಎಲ್ಲಾ ವ್ಯವಹಾರಗಳಲ್ಲಿ ಮುಂದುವರಿಯುತ್ತಿರುವುದು ಕಾಣದಿರದು. ಈ ಸಂಸ್ಥೆಯು ತನ್ನ ಕಾರ್ಯಚಟುವಟಿಕೆಯನ್ನು ವಿಸ್ತರಿಸುವಂತೆ ಬೊಂಬಾಯಿ, ಮದ್ರಾಸು ಮೊದಲಾದ ಭಾರತದ ಪ್ರಮುಖ ನಗರಗಳಲ್ಲಿ ಬ್ರಾಂಚ್ ಆಫೀಸುಗಳನ್ನು ತೆರೆದಿರುವುದು ಮಾತ್ರವಲ್ಲದೆ ಆಂಧ್ರ ದೇಶ, ಮಲಬಾರ್, ಉತ್ತರ ಕರ್ನಾಟಕಗಳಲ್ಲಿಯೂ ಕೂಡ ಅನೇಕ ಉಪಶಾಖೆಗಳನ್ನು ತೆರೆದು ಕಾರ್ಯಕ್ಷೇತ್ರವನ್ನು ವಿಸ್ತರಿಸಿದೆ. ಈ ಸಂಸ್ಥೆಯು ಮಹಾಜನರ ಆದರಕ್ಕೆ ಪಾತ್ರವಾಗಿ ತನ್ನ ವ್ಯವಹಾರದಲ್ಲಿ ಮುಂದುವರಿದು ಜಯಶಾಲಿಯಾಗಲೆಂದು ನಾವು ಹಾರೈಸುತ್ತೇವೆ.

ದ. ಕ. ಜಿಲ್ಲಾ ಸಿವಿಲ್ಸ ಭಾರತೀಯ ಆಯುರ್ವೇದ ಸಂಘದ ವಾರ್ಷಿಕ ವರದಿ ಮತ್ತು ಲೆಕ್ಕದ ಪಟ್ಟಿಯು ನಮ್ಮ ಹಸ್ತಗತವಾಗಿದೆ.

ರಾಜಭಕ್ತಿ (ವಾರಪತ್ರಿಕೆ). ಸಂಪಾದಕ ಶ್ರೀ ಎನ್. ಶರ್ಮಾ. ಕ್ರೌನ್ ¼ ಆಕಾರದ 20 ಪುಟಗಳ ಕನ್ನಡ ವಾರಪತ್ರಿಕೆ. ವಾರ್ಷಿಕ ಚಂದಾ ರೂ. 3.

ಮೈಸೂರು ರಾಜರಲ್ಲಿ ರಾಜಭಕ್ತಿಯನ್ನು ಪ್ರದರ್ಶಿಸುವ ಉದ್ದೇಶದಿಂದ ಮಂಗಳೂರಿಂದ ಹೊರಡುವ 'ಹೊಸ ಪತ್ರಿಕೆ' ಮೊದಲನೆಯ ಸಂಪುಟದ ಎರಡು ಸಂಚಿಕೆಗಳು ಹಸ್ತಗತವಾಗಿವೆ. ಪ್ರತಿ ಬುಧವಾರ ಪ್ರಕಟವಾಗುವುದು.

ಶುದ್ಧೀಕರಣ ದೃಷ್ಟಿಯಿಂದ ಕಾಂಗ್ರೆಸ್ ನಿಬಂಧನೆಯಲ್ಲಿ ಬದಲಾವಣೆ

ಕಾಂಗ್ರೆಸಿನಲ್ಲಿ ಅನೇಕ ತರದ ಅಕ್ರಮ ಕಾರ್ಯಗಳು ನಡೆದುಬರುವುದರಿಂದ, ಕಾಂಗ್ರೆಸು ಶುದ್ಧೀಕರಣ ದೃಷ್ಟಿಯಿಂದಲೂ ಕಾಂಗ್ರೆಸು ಸಂಸ್ಥೆಯಲ್ಲಿ ಪಾವಿತ್ರ್ಯವನ್ನು ಕಾಪಾಡುವ ದೃಷ್ಟಿಯಿಂದಲೂ ಬದಲಾವಣೆಗಳಾಗಬೇಕೆಂದು ಎ. ಐ. ಸಿ. ಸಿ. ಸಭೆಯು ಬೊಂಬಾಯಿಯಲ್ಲಿ ತಾ. ೩ರಂದು ಸಭೆ ಸೇರುವುದು. ೧೯೩೫–೩೬ರಿಂದ ೧೯೩೮–೩೯ರ ವರೆಗಿನ ಅಭಿವೃದ್ಧಿಯನ್ನು ವಿಚಾರಿಸಿದರೆ ಕಾಂಗ್ರೆಸು ಅಧಿಕಾರವನ್ನು ತೆಕ್ಕೊಂಡ ಕೂಡಲೆ ಕಾಂಗ್ರೆಸು ಸದಸ್ಯರ ಸಂಖ್ಯೆಯು ಅತ್ಯಧಿಕವಾಗಿ ಆಗಿದೆ. ಹಿಂದಿಗಿಂತ ಇದಷ್ಟು ವಿಶೇಷವಾಗಿದೆ. ಇದಕ್ಕೆ ಕಾಂಗ್ರೆಸಿನ ಪ್ರೀತಿ ಮಾತ್ರವೇ ಅಲ್ಲ ಕೆಲವು ಸ್ವಾರ್ಥಸಾಧಕ ಜನರ ಕೈವಾಡವೂ ಕಾರಣವಾಗಿರುವುದೆಂದು ಕಾರ್ಯದರ್ಶಿಗಳು ಅಭಿಪ್ರಾಯ ಪಡುತ್ತಾರೆ. ಕಾಂಗ್ರೆಸು ಘಟನಾವಳಿಯಲ್ಲಿ ಆಗುವ ಬದಲಾವಣೆಯು ಮಹಾತ್ಮಾಜಿಯವರ ಸೂಚನೆಯಂತೆ ಆಗಬಹುದಾಗಿ ತಿಳಿಯುತ್ತದೆ.

ಮಹಾತ್ಮಾಜಿಯವರು ಹರಿಜನ ಪತ್ರಿಕೆಯಲ್ಲಿ ಬರೆಯುತ್ತಾ ಕಾಂಗ್ರೆಸಿನಲ್ಲಿ ಇಂದು ವಂಚನೆ ಅಡಕ್ಕ ಹಿಂಸೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುತ್ತಿರುವ ಬಗ್ಗೆ ತಮ್ಮ ತೀವ್ರ ಸಂತಾಪವನ್ನು ಪ್ರಕಟಿಸಿದ್ದಾರೆ.

ಕಳೆದ ಹರಿಪುರ ಕಾಂಗ್ರೆಸಿನಲ್ಲಿ ಒಂದು ಸಮಿತಿಯು ಏರ್ಪಟ್ಟು ಅದು ಕಾಂಗ್ರೆಸು ಸಂಸ್ಥೆಯ ರಚನೆಯ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ನಿರ್ಣಯಿಸಿ ಪ್ರಕಟಿಸಬೇಕಾಗಿ ನಿಶ್ಚಯಿಸಲ್ಪಟ್ಟಿತ್ತು. ಆ ಸಮಿತಿಯು ತನ್ನ ವರದಿಯನ್ನು ಕಳೆದ ಸಪ್ಟಂಬರದಲ್ಲಿ ಡಿಲ್ಲಿಯಲ್ಲಿ ಸೇರಿದ ಕಾಂಗ್ರೆಸು ಕಾರ್ಯಕಾರೀ ಮಂಡಳಿಯ ಮುಂದೆ ಇಟ್ಟಿತ್ತು. ಕಾಂಗ್ರೆಸು ಕಾರ್ಯಕಾರೀ ಮಂಡಳಿಯು ಆ ವರದಿಯನ್ನು ಒಪ್ಪಿದ್ದರು ಕೆಲವು ಕಾರಣಗಳಿಗಾಗಿ ತ್ರಿಪುರಿ ಅಧಿವೇಶನದಲ್ಲಿ ಆ ವರದಿಯನ್ನು ಮುಂದಿಡಲಿಲ್ಲ.

ತ್ರಿಪುರಿ ಅಧಿವೇಶನಕ್ಕಿಂತ ಮೊದಲು ವಾರ್ಧಾದಲ್ಲಿ ಸೇರಿದ ಕಾಂಗ್ರೆಸು ಕಾರ್ಯಕಾರೀ ಮಂಡಳಿಯು ಆ ವರದಿಯನ್ನು ಪುನರಾಲೋಚಿಸಿ, ಕಾಂಗ್ರೆಸು ನಿಯಮಕ್ಕೆ ಸರಿಯಾಗಿ ಎಲ್ಲಾ ಕಾಂಗ್ರೆಸು ಸದಸ್ಯರ ಸದಸ್ಯತ್ವದ ಯೋಗ್ಯತೆ ಹಾಗೂ ನ್ಯಾಯಗಳನ್ನು ನಿರ್ಣಯಿಸುವರೆ ಕೂಡಲೇ ತೀವ್ರ ಕಾರ್ಯವನ್ನು ಕೈಕೊಳ್ಳಬೇಕಾಗಿ ನಿರ್ಣಯವನ್ನು ಮಾಡಿದೆ.

ಕಳೆದ ವರ್ಷ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಆಫೀಸಿನಿಂದ ಆ ವಿಷಯವಾಗಿ ನ್ಯಾಯವಾದ ವಿಷಯಗಳನ್ನು ಸಮರ್ಪಕವಾಗಿ ತಿಳಿಯುವರೆ ಕೆಲವು ಪರೀಕ್ಷಕರನ್ನು ಹಲವು ಪ್ರಾಂತಗಳಿಗೆ ಕಳುಹಿಸಿಕೊಡಲಾಗಿತ್ತು. ಅವರ ವರದಿಯಿಂದ ಕಾಂಗ್ರೆಸಿನಲ್ಲಿ ಇಂದು ವಂಚನೆ ಮುಂತಾದ ಅವ್ಯವಸ್ಥೆಗಳು ಕಂಡುಬರುವುದಾಗಿ ತಿಳಿಯುತ್ತದೆ.

ಕಾಂಗ್ರೆಸಿನೊಳಗೆ ಇರುವ ಅನೇಕ ಪಕ್ಷಗಳನ್ನು ಅಕ್ರಮಗಳೆಂದು ಮಾಡದಂತೆ ಕಾಂಗ್ರೆಸಿನಲ್ಲಿ ಶಿಸ್ತು ನ್ಯಾಯಗಳು ಉಳಿಯುವಂತೆ ಕಾಂಗ್ರೆಸು ರಚನೆಯನ್ನು ಮಾರ್ಪಡಿಸುವ ಸಲುವಾಗಿ ಬೊಂಬಾಯಿಯಲಿ ಮಹಾತ್ಮಾಜಿಯವರೇ ಮೊದಲಾದವರ ಸನ್ನಿಧಿಯಲ್ಲಿ ಸಮಿತಿಯ ಸಭೆ ಸೇರುವುದು.

ಕಾಂಗ್ರೆಸಿನ ಶುದ್ಧೀಕರಣ ದೃಷ್ಟಿಯಿಂದ ಕಾಂಗ್ರೆಸ್ ನಿಬಂಧನೆಯಲ್ಲಿ ಬದಲಾವಣೆ ಮಾಡುವ ಸಲುವಾಗಿ ಈ ಕೆಳಗೆ ಕಾಣಿಸಿದ ಮಹನೀಯರ ಒಂದು ಸಮಿತಿಯು ರಚಿಸಲಾಗಿದೆ. ಬಾಬೂ ರಾಜೇಂದ್ರ ಪ್ರಸಾದರು (ಅಧ್ಯಕ್ಷರು) ಶ್ರೀ ಜೆ. ಬಿ. ಕೃಪಾಲಿನಿ (ಜನರಲ್ ಸಕ್ರೆಟರಿ) ಶ್ರೀ ಜವಾಹರ್‌ಲಾಲ ನೆಹರು, ಡಾ| ಪಟ್ಟಾಭಿ ಸೀತಾರಾಮಯ್ಯ ಮತ್ತು ಆಚಾರ್ಯ ನರೇಂದ್ರ ದೇವ್.

ಈ ಕುರಿತು ಉಪಯುಕ್ತವಾದ ಸಲಹೆಗಳನ್ನು ಕೊಡುವ ಸಲುವಾಗಿಯೂ, ಬದಲಾವಣೆಗಳನ್ನು ಸೂಚಿಸಲಿಕ್ಕಾಗಿ ಮಹಾತ್ಮಾಜಿಯವರು ಬೊಂಬಾಯಿಗೆ ಬಂದಿರುತ್ತಾರೆ.

ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಬರುವ ತಾ. ೨೯ರಂದು ಬೊಂಬಾಯಿಯಲ್ಲಿ ಸೇರುವುದು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ತಾ. ೨೪ರಂದು ಸೇರುವುದು.

ಶಾಂತಿನಿಕೇತನ ಶಾಲೆ, ಕೂರಾಡಿ.

ಇದರ 1939ನೇ ಇಸವಿಯ ಸುಂದರ ಹಾಗೂ ಸಚಿತ್ರವಾದ ಕೆಲೆಂಡರ್ ನಮ್ಮ ಹಸ್ತಗತವಾಗಿದೆ. ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಅನೇಕ ವಿಷಯಗಳನ್ನು ಒಳಗೊಂಡಿದೆ.



ನೋಟೀಸು.
ಮಂಗಳೂರು ಮುನಿಸಿಪಾಲಿಟಿ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ:- ಇದಕ್ಕೆ ಲಕ್ಷ್ಯಪಡಿಸಿದ ಇಂಗ್ಲೀಷು ಮತ್ತು ಕನ್ನಡದಲ್ಲಿರುವ ನೋಟೀಸಿನ ಪ್ರತಿಗಳನ್ನು ಮುನಿಸಿಪಾಲ್ ಆಫೀಸು, ಹೆಲ್ತ್ ಆಫೀಸು, ಮುನಿಸಿಪಲ್ ಆಸ್ಪತ್ರೆಗಳು ಮತ್ತು ಮಾರ್ಕೆಟುಗಳಲ್ಲಿ ಪ್ರಕಟಿಸಲ್ಪಟ್ಟಿದೆ. ಸದ್ರಿ ನೋಟೀಸಿನ ಮೂಲಪ್ರತಿಯು ಮುನಿಸಿಪಲ್ ಆಫೀಸಿನಲ್ಲಿ ನೋಡಲು ಸಿಗುವುದು.

ನೋಟೀಸು.
ಮಂಗಳೂರು ಮುನಿಸಿಪಾಲಿಟಿ

1 ತಿದ್ದುಪಡಿ ಹೊಂದಿದ ೧೯೨೦ನೇ ಮದ್ರಾಸು ಜಿಲ್ಲಾ ಮುನಿಸಿಪಾಲಿಟೀಸ್ ಆಕ್ಟಿನ ೨೦೫(೪)ನೇ ಪ್ರಕರಣದ ಮೇರೆಗೆ ಮಂಗಳೂರು ಮುನಿಸಿಪಾಲಿಟಿಯ ಎಕ್ಸಿಕ್ಯೂಟಿವ್ ಅಥೋರಿಟಿಯು, ೩೦–೯–೩೯ಕ್ಕೆ ಅಂತ್ಯವಾಗುವ ಅರ್ಧ ವರ್ಷದಲ್ಲಿ ಮುನಿಸಿಪಲ್ ವಿಸ್ತೀರ್ಣದೊಳಗಣ ಎಲ್ಲಾ ಗಾಡಿಗಳ ತೆರಿಗೆ ಕಟ್ಟುವುದು, ದಾಖಲು ಮಾಡಿಸುವುದು ಮತ್ತು ನಂಬ್ರ ಹಾಕಿಸುವ ಬಗ್ಗೆ ಈ ಕೆಳಗಣ ದಿನಗಳನ್ನು ಜಾಹೀರುಪಡಿಸಿರುತ್ತಾರೆ:—

ತಾ. ೪–೬–೧೯೩೯ರಿಂದ ೧೯–೬–೧೯೩೯ರ ವರೇಗೆ ಆಫೀಸು ಇರುವ ದಿನಗಳಲ್ಲಿ ಬೆಳಿಗ್ಗೆ ಘಂಟೆ ೧೧ರಿಂದ ಸಂಜೆ ಘಂಟೆ ೪ರ ವರೆಗೆ.

2. ತಕ್ಕದಾದ ಲೈಸನ್ಸು ಮತ್ತು ನಂಬ್ರ ಹಾಕಿಸುವ ಫೀಸನ್ನು ತೆತ್ತು ತಾ. ೧೯–೬–೩೯ರಲ್ಲಿ ಯಾ ಆ ತಾರೀಕಿನ ಒಳಗೆ ಗಾಡಿಗಳನ್ನು ರಿಜಿಸ್ಟ್ರಿ ಮಾಡಿಸಿ ಮುನಿಸಿಪಲ್ ನಂಬ್ರ ಹಾಕಿಸದಿದ್ದಲ್ಲಿ, ತಾರೀಕು ೧೯–೬–೩೯ರ ನಂತರ ಸದ್ರಿ ಗಾಡಿಗಳು ಮತ್ತು ಅವುಗಳನ್ನು ಎಳೆಯುತ್ತಿರುವ ಪ್ರಾಣಿಗಳು ಎಕ್ಸಿಕ್ಯೂಟಿವ್ ಅಥೋರಿಟಿಯಿಂದ ಅಧಿಕಾರಹೊಂದಲ್ಪಟ್ಟ ಆಫೀಸರರಿಂದ ಯಾವ ಸಮಯದಲ್ಲಿಯೂ ಹಿಡಿಯಲ್ಪಡುವುವು. ಸದ್ರಿ ಗಾಡಿಗಳ ಮತ್ತು ಪ್ರಾಣಿಗಳ ಮಾಲಿಕರು ಅವುಗಳನ್ನು ಹಿಡಿಯಲ್ಪಟ್ಟ ದಿನದಿಂದ ಹತ್ತು ದಿನಗಳೊಳಗೆ ಯಾ ವಿಲಮಿನ ಮುಂಚಿತವಾಗಲೀ ಹಿಂತಿರುಗಿ ಕೊಡಬೇಕಾಗಿ ಅಪೇಕ್ಷಿಸಿದ್ದಲ್ಲಿ ಹಾಗೆ ಹಿಡಿಯಲ್ಪಟ್ಟ ಗಾಡಿ ಯಾ ಪ್ರಾಣಿಯನ್ನು ಈ ಕೆಳಗೆ ನಮೂದಿಸಿದ ಹಣವನ್ನು ತೆತ್ತಲ್ಲಿ ಬಿಟ್ಟುಕೊಡಲ್ಪಡುವುದು.

1. ತಕ್ಕದಾದ್ದ ತೆರಿಗೆ,
2. ಎಕ್ಸಿಕ್ಯೂಟಿವ್ ಅಥೋರಿಟಿಯು ವಿಧಿಸಬಹುದಾದ ಜುಲುಮಾನೆ.
3. ಸೆಳೆದು ಇಟ್ಟುಕೊಂಡುದರ ಫೀಸು— ಅಣೆ ಹನ್ನೆರಡು.

ರಕ್ಷ್ಯಂ ನ ರ್ಮಹಾಹ್ಯರ್ಗಸ್ತು ಕುರ್ಯಾನ
ದೇವಾ । ನ ಭೀಷರೇ ಭೀಮ
ವಿಶೀಣ ಭೀತಿಃ ॥ ಸುಧಾಂ
ವಿನಾ ನ ಪ ಯಯು ವಿರಾಮಂ
ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI
ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ದೊರೆಯಲು ನಮವು ರತ್ನಗಳ
ನಾ । ಗರನ ಮಥಿಸಲು ಸುರರಿ
ಗದರಿಂ । ಹರುವಾದಾತುಕೆ! ಮತೆ
ವಿಶ್ವದ ಸುಧ ದ ಬರ ತಿರುವ ।
ಗರಲು ವರಂಜಿಡೆರೆ! ಸುಧೆಯನು
ಪ ಡೆತ. ಕ್ಷುದ್ರರ
ತೆರದ ಕೊರತೆ । ತೆರಳ ಬಲ್ಲರೆ
ತೊರೆದು ಧೀರರು
ನಿಶ್ಚಿತಾರ್ಥ – ನ.

ತಾರೀಖು ೯—೬ ೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಖು 9—6—1939

ರಾಜಕೋಟೆಯ ಜನತೆಗೆ ಮಹಾತ್ಮರು ಪಿತೃಸಮಾನರು

'ರಾಜಕೋಟೆಯ ಜನತೆಗೆ ಮಹಾತ್ಮರು ಪಿತೃ ಸಮಾನರು'

ದರ್ಬಾರ ವೀರವಲ್ಲರ ಸ್ವಪ್ರಶಂಸೆ'
ಮಹಾದೇವ ದೇಸಾಯಿಗಳ ಹೇಳಿಕೆ

ದರ್ಬಾರ ವೀರವಲ್ಲರೊಡನೆ ಸಂಭಾಷಣೆ ನಡೆಸಿದ ಮೇಲೆ ಶ್ರೀ ಮಹಾದೇವ ದೇಸಾಯಿಗಳು ಪ್ರಜಾಪ್ರತಿನಿಧಿಗಳ ಆಶ್ರಯದಲ್ಲಿ ಸೇರಿದ ಮಹಾಸಭೆಯೊಂದರಲ್ಲಿ ಈ ರೀತಿಯಾಗಿ ಹೇಳಿದರು:

'ಮಹಾತ್ಮಾಜಿಯವರ ಅಹಿಂಸೆಯ ಬಗ್ಗೆ ವಾದ ಒಳಗಟ್ಟು ಅವಸರವಸರವಾಗಿ ಅರ್ಥಮಾಡಲು ಸಾಧ್ಯವಿಲ್ಲ. ಅವರು ಗಾಂಧೀಜೀಯವರನ್ನು ತಿರಸ್ಕರಿಸ ಪಡಿಸಿಕೊಂಡ ಮೇಲೆ ಸ್ಥಳೀಕ ಕೆಲಸಗಾರರೊಡನೆ ಸಂಭಾಷಿಸಿದರು. ಆ ಕೀರ್ತನ್ನು ಬಿಟ್ಟುಬಿಡುವ ವಿಷಯವಾಗಿ ಪಿಕ್ಷ ಯ ಹಿಡ ವೇಳೆ ವೀರವಲ್ಲರೇ ಅವನೆ ಕೇಳಿದಾಗ ಅವರು ತಮ್ಮ ವೇಳೆ ಪೂರ್ಣ ವಿಶ್ವಾಸದೊಡನೆ ಜನಾಂಗದ ಸ್ಥಿರಸಿದ ಹಾಗಾದ ಕೆಂದು ಹೇಳಿದರು. ಅಷ್ಟು ರಸಾತವಲ್ಲದೆ ಗಾಂಧೀಜಿಯವರನ್ನು ಬಿಡದೇ ತಾವು (ವೀರವಲ್ಲರು) ತಪ್ಪಾಗಿ ನಮ್ಮ ದೃಷ್ಟಿಗಳಿಂದ ತಿಳಿಕೊಂಡ ಒಗ್ಗೆ ಪಶ್ಚಾತ್ತಾಪವನ್ನು ಸೂಚಿಸಿ ಈಗ ಹೊಣೆತವಾಗಿ ಅವರ ಹೇಳಿದಂತೆ ರಾಜಕೋಟದ ಜನರ ಪಿತೃಸಮಾನರು ಮಾತ್ರವಲ್ಲ ಇಡೀ ರಾಜಕೋಟದ ಪ್ರಜಾಸಂತತಿಯ ಪಿತೃ ಸಮಾನರೆಂದೂ ಹೇಳಿದರು.

'ಗಾಂಧೀಜೀ ಮತ್ತು ಠಾಕೂರ ಮಧ್ಯೆ ಒಂದು ಗೋಡೆಯಂತೆ ಇತ್ತು. ಇಂದು ಆ ತಡೆಯನ್ನು ಕಿತ್ತಿದುದರ ಫಲವಾಗಿ ಇಬ್ಬರ ಹೃದಯಗಳೂ ಅನ್ಯೋನ್ಯ ಪ್ರೇಮ ಸೌಹಾರ್ದಗಳಿಂದ ಹತ್ತಿರ ಬರಲು ಸಾಧ್ಯವಿರುವುದಾಗಿಯೂ ಅದರ ಫಲವು ಮುಂದಕ್ಕೆ ತಿಳಿಯುವುದಾಗಿಯೂ ಹೇಳಿದರು.

'ಗಾಂಧಿಜಿಯವರು ಸೋತುಹೋದರೆಂದು ತೀವ್ರವಾದ ವಿಮರ್ಶೆಗಳಿವೆ. ಗಾಂಧಿಜಿಯವರನ್ನು ಸಮೀಪಿಸಿ ತಿಳಿಕೊಳ್ಳದವರಿಗೆ ಹಾಗೆಯೇ ತೋರಬಹುದು. ಅವರು ಹಿಂದೆ ಚೌರಿಚೌರಾದಲ್ಲಿ ಉಂಟಾದ ಹಿಂಸೆಯ ನಿಮಿತ್ತವಾಗಿ ಬಾರ್ಡೋಲಿ ಸತ್ಯಾಗ್ರಹವನ್ನು ನಿಲ್ಲಿಸಿದಾಗಲೂ, ಇನ್ನು ಅನೇಕ ಸಂದರ್ಭಗಳಲ್ಲಿ ಅವರ ವಿಷಯವಾಗಿ ವಿಮರ್ಶೆ ಬಂದಿತ್ತಾದರೂ ಕಡೆಗೆ ಅದರಿಂದ ಲೋಕದ ಕಲ್ಯಾಣವೇ ಸಾಧಿಸಿದಂತಾಗಿದೆ.

'ಇಂದಿನ ಮಹಾತ್ಮಾಜಿಯವರ ನಡತೆಯಿಂದ ಪ್ರಜೆಗಳು ಯಾವ ರೀತಿಯಿಂದಲೂ ನಷ್ಟವನ್ನು ಹೊಂದಲಾರರು. ಸಂಪೂರ್ಣ ಸಿದ್ಧತೆಯಿಂದ ಮುಂದುವರಿದು ಖಂಡಿತವಾಗಿಯೂ ಮುಂದಕ್ಕೆ ಇಂದಿಗಿಂತ ಹೆಚ್ಚಿನ ಸ್ವಾರ್ಥತ್ಯಾಗಕ್ಕೆ ಸಿದ್ಧರಾಗುವುದರಲ್ಲಿ ಸಂಶಯವಿಲ್ಲ. ಇಂದು ರಾಜಕೋಟೆಯ ವಾತಾವರಣ ಸಂಪೂರ್ಣ

ಹೈದರಾಬಾದಿನಿಂದ ಬಹಿಷ್ಕೃತರಾದ ವಿದ್ಯಾರ್ಥಿಗಳ ದೂರು
ಕಾಂಗ್ರೆಸ್ಸನ್ನು ಬಿಟ್ಟು ಮುಸ್ಲಿಮರಿಗೆ ಗತ್ಯಂತರವಿಲ್ಲ

ವಾಗಿ ನಿರ್ಮಲವಾಗಿದೆ. ರಚನಾತ್ಮಕ ಕಾರ್ಯಗಳನ್ನು ನಡೆಸಿ ಸಂಪೂರ್ಣ ಶಕ್ತಿಮಂತರಾಗಿ ಮುಂದೆ ವರಿಯುವುದೇ ರಾಜಕೋಟದ ಜನರ ಕರ್ತವ್ಯವಾಗಿರುತ್ತದೆ'

ಹೈದರಾಬಾದಿನಲ್ಲಿ ಬಹಿಷ್ಕರಿಸಲ್ಪಟ್ಟ ವಿದ್ಯಾರ್ಥಿಗಳ ದೂರು
'ವಂದೇ ಮಾತರಂ ಹಾಡಿಗಾಗಿ ಶಿಕ್ಷೆ'

ಹೈದರಾಬಾದು ಸರಕಾರವು ವಂದೇ ಮಾತರಂ ಹಾಡನ್ನು ನಿಷೇಧಿಸಿದ ಉಸ್ಮಾನಿಯಾ ಯುನಿವರ್ಸಿಟಿಯ ಕೆಲವು ವಿದ್ಯಾರ್ಥಿಗಳು ಅದನ್ನು ಹಾಡಿದುದಕ್ಕಾಗಿ ಅವರನ್ನು ಕಾಲೇಜಿನಿಂದ ಹೊರಹಾಕಲ್ಪಟ್ಟಿದೆ. ವಿದ್ಯಾರ್ಥಿಗಳ ತಮ್ಮ ಸ್ವತಂತ್ರಕ್ಕೆ ಸರಕಾರವು ಒಪ್ಪದಿದ್ದಲ್ಲಿ ಕ್ಷಮಾಯಾಚನೆ ಮಾಡಲು ಸಿದ್ಧರಿರುವುದಾಗಿ ತಿಳಿಸುತ್ತಾರೆ. ಆ ಹಾಡಿನ ಮೇಲಿರುವ ನಿಷೇಧಾಜ್ಞೆಯನ್ನು ಹಿಂತೆಗೆದುಕೊಂಡೇ [illegible] ಹೊಂದಗಳು ವಾಸಕ್ಕೆ ಅವಕಾಶವನ್ನು ಹೊಂದಿ ಅನುಮತಿಸಬೇಕು. ಅದಿಲ್ಲವಾದರೆ ಪ್ರತ್ಯೇಕ ಪ್ರತ್ಯೇಕವಾದ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಬೇಕು. ಅಥವಾ ಮುಸಲ್ಮಾನರಿಗೆ ಇರುವಂತೆ ಹಿಂದುಗಳಿಗೆ ಪ್ರತ್ಯೇಕ ಮಂದಿರಗಳನ್ನು ಕಟ್ಟಿಸಬೇಕು. ಹೀಗಾದರೆ ತಾವು ಆಜ್ಞೆಯನ್ನು ಉಲ್ಲಂಘಿಸಿದುದಕ್ಕಾಗಿ ಕ್ಷಮೆ ಕೇಳುವುದಾಗಿಯೂ, ಪರೀಕ್ಷೆಗಳಲ್ಲಿ ಸಂಪೂರ್ಣ ನಿಯಮ ಪಾಲನೆಯನ್ನು ತೋರಿಸಬೇಕಾಗಿಯೂ ತಿಳಿಸುತ್ತಾರೆ.

ಮಹಾತ್ಮಾಜಿಯವರಲ್ಲಿ ಈ ದೂರಿನ ಕುರಿತು ವಿದ್ಯಾರ್ಥಿಗಳು ಹೋಗಿದ್ದಾಗ ಅವರು ಆ ವಿಷಯದಲ್ಲಿ ತನ್ನ ಸಂಪೂರ್ಣ ಸಹಾನುಭೂತಿಯನ್ನು ಪ್ರದರ್ಶಿಸಿ ಇಂದು ಅತ್ಯಂತ ಅಗತ್ಯವಾದ ಅಖಿಲ ಭಾರತ ಸಮಸ್ಯೆಯಲ್ಲಿ ಕಾಲ ನಿರತನಾಗಿರುವುದಾಗಿಯೂ ಮಂದೇ ಮಾತರಂ ಹಾಡಿನ ವಿಷಯ ಹೈದರಾಬಾದಿನ ಧರ್ಮದ ಕತ್ಯರ್ಥ [illegible] ಬಹಳ ವಾಗಿಯೂ ತಿಳಿಸಿದರೆಂದು ಗೊತ್ತಾಗಿದೆ.

ಹೈದರಾಬಾದು ಸತ್ಯಾಗ್ರಹ
ಸ್ವಯಂಸೇವಕರ ಬಂಧನ

ಸ್ವಾಮಿ [illegible] ನಾಯಕತ್ವದಲ್ಲಿ [illegible] ಸ್ವಯಂಸೇವಕರ ದಳವು ಸತ್ಯಾಗ್ರಹ ನಡೆಸಿದರು. ಅದರಲ್ಲಿ [illegible] ಸ್ವಯಂಸೇವಕರನ್ನು [illegible] ಹಿಡಿದು [illegible] ವರ್ಷಗಳ ಸಜೆ ವಿಧಿಸಲಾಯಿತು.

[illegible] ವಿಶೇಷ ದಳ ಬಂಧನ [illegible] ಅವರ ಸ್ವಯಂಸೇವಕ ದಳ ಸಹಿತ ಸೆರೆಹಿಡಿಯಲ್ಪಟ್ಟರು. [illegible] ಸ್ವಯಂಸೇವಕರಿಗೆ [illegible] ವರ್ಷ ಸಜೆಯಾಗಿ'

ಹೈದರಾಬಾದು ಜೈಲಿನಲ್ಲಿ [illegible] ಸತ್ಯಾಗ್ರಹಿಗಳು ಮರಣಹೊಂದಿದರು.

ನ್ಯಾಯವಿಧಾಯಕ ಸಭೆಗಳಿಗೆ ರಾಷ್ಟ್ರೀಯ ಸ್ವರೂಪ ಬರಬೇಕು
ಮಹಾತ್ಮಾಜಿಯವರಲ್ಲಿ ತಿರುವಾಂಕೂರು ನೇಶನಲ್ ಕಾಂಗ್ರೆಸಿನ ನಿಷ್ಠಮಂಡಳ

ತಿರುವಾಂಕೂರು ನೇಶನಲ್ ಕಾಂಗ್ರೆಸಿನ ಪ್ರತಿನಿಧಿಗಳು ಮಹಾತ್ಮಾಜಿಯವರನ್ನು ಸಂದರ್ಶಿಸಿ ತಿರುವಾಂಕೂರಿನ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಸ್ಟೇಟ್ ಕಾಂಗ್ರೆಸ್ ಮತ್ತು ನ್ಯಾಶನಲ್ ಕಾಂಗ್ರೆಸ್ಸಿಗೆ ಇರುವ ವ್ಯತ್ಯಾಸಗಳ ವಿಷಯವಾಗಿ ತಿಳಿಸಿದರು. ಮೂರು ತಾಸುಗಳ ತನಕ ಸಂಭಾಷಣೆ ನಡೆಸಿದ ವಿಷಯವಾಗಿ ದೀರ್ಘ ಪತ್ರಿಕಾಹೇಳಿಕೆಯೊಂದನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಅವರ ಸಂಭಾಷಣೆಯ ವಿಷಯದಲ್ಲಿ ಮಾತನಾಡಿದ ವ್ಯಕ್ತಿಗಳು ನೇಶನಲ್

ಕಾಂಗ್ರೆಸು ಸಂಸ್ಥೆಯು ಮೇಲಿರುವ ಆಪಾದನೆಗಳ ಕುರಿತ ಮಹಾತ್ಮಾಜಿಯವರಿಗೆ ಕೊಟ್ಟ ಸಮಾಧಾನ ಹಾಗೂ ಸ್ಟೇಟ್ ಕಾಂಗ್ರೆಸು ಸಂಸ್ಥೆಯ ಮೇಲೆ ಅವರು ಕೊಡ ದೂರು ಮತ್ತು ಅವರ ಕೆಲವು ಹೇಳಿಕೆಗಳ ಕುರಿತು ವಿವರವಾಗಿ ಬರೆದಿರುತ್ತಾರೆ. ತಿರುವಾಂಕೂರಿನಲ್ಲಿ ಜವಾಬ್ದಾರೀ ಸರಕಾರದ ಸ್ಥಾಪನೆಯು ತಮ್ಮ ಉದ್ದೇಶವೆಂದೂ, ನ್ಯಾಯವಿಧಾಯಕ ಸಭೆಗಳಿಗೆ ಸಂಪೂರ್ಣ ರಾಷ್ಟ್ರೀಯ ತೆಯ ಸ್ವರೂಪವನ್ನು ಕೊಡುವುದು ತಮ್ಮ ಗುರಿಯೆಂದೂ ಒಪ್ಪಿಕೊಂಡಿದ್ದಾರೆ.

ಕಾಂಗ್ರೆಸನ್ನು ಬಿಟ್ಟು ಮುಸ್ಲಿಮರಿಗೆ ಸ್ವಾತಂತ್ರ್ಯವು ಸಾಧ್ಯವಿಲ್ಲ!
ಮುಸ್ಲಿಂ ಮುಖಂಡರ ಅಭಿಮತ

ಹಿಂದೂದೇಶದ ಸಂಪೂರ್ಣ ಸ್ವಾತಂತ್ರ್ಯ ಸಾಧನೆಗಾಗಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯೊಡನೆ ಹೋರಾಡುವಲ್ಲಿ ಇಸ್ಲಾಂ ಮತದ ಯಾವ ಜಾತಿಯೇ ಆಗಲಿ ಯಾವ ಸಂಘವೇ ಆಗಲಿ ಸಹಾಯವನ್ನು ನೀಡುವುದು ಸಾಧ್ಯವಿಲ್ಲ. ಆದರೆ ಇಸ್ಲಾಂ ಧರ್ಮವು ಕಾಂಗ್ರೆಸಿನ ಹಿಂದೂಗಳಿಂದ ಅಪಾಯ ಸ್ಥಿತಿಯಲ್ಲಿದೆಯೆಂದು ಮುಸ್ಲಿಂ ಲೀಗು ಹೇಳುವುದು ಅಸತ್ಯವಾದುದು. ಹಿಂದೂ ಮುಸಲ್ಮಾನರ ಐಕ್ಯದಿಂದ ಕಾಂಗ್ರೆಸಿನ ಪೂರ್ಣ ಸಹಕಾರದಿಂದ ಹಿಂದೂದೇಶದ ಸಂಪೂರ್ಣ ಸ್ವಾತಂತ್ರ್ಯ ಪಡೆಯುವುದು ಯೋಗ್ಯವೂ ವಿವೇಕವೂ ಆದ ಮಾರ್ಗವಾಗಿದೆ' ಯೆಂದು ಮಜಲಿಸ್ ಇತಿಹಾದಿನ ಅಧ್ಯಕ್ಷರಾದ ಮೌಲಾನಾ ಹಬಿಬ ರಹಿಮ ಹಸನಾನರು ಮೊರಾದಾಬಾದಿನಲ್ಲಿ ಸಭೆಯೊಂದರಲ್ಲಿ ಹೇಳಿದರು.

Mangalore Automobiles, Limited.
(CITY BUS SERVICE)

THIS IS YOUR OWN COMPANY. JUST TWO YEARS OLD. IT IS JUST ONE YEAR NOW SINCE YOU ASKED US TO NURSE IT CAREFULLY AND BRING IT UP. WE HAVE DONE OUR DUTY AT CONSIDERABLE SACRIFICE. PATRONIZE US AND HELP IN BUILDING UP THIS PUBLIC COMPANY.

KERWAR & CO.,
MANAGING AGENTS

ಶ್ರೇಷ್ಠ ತರದ
ದೃಷ್ಟಿಚಿತ್ರಗಳಿಗೆ



ರಬ್ಬರು ಮೊಹರುಗಳಿಗೆ
ನಾಯಕ್ ಸ್ಟೋರ್ಸ್
ರಥಬೀದಿ, ಮಂಗಳೂರು.

ಇಂಡಿಯದೊಡನೆ ಶೀಘ್ರದಲ್ಲಿ ಒಡಂಬಡಿಕೆಯಾಗಬೇಕು

ಬ್ರಿಟನಿಗೆ ಶ್ರೀಮತಿ ಅಗಥಾ ಹೆರಿಸನ್ನರ ಸೂಚನೆ

ಕಳೆದ ಆರು ತಿಂಗಳು ಕಾಲ ಭಾರತದಲ್ಲಿ ಸಂಚಾರಮಾಡಿಕೊಂಡಿದ್ದ ಶ್ರೀಮತಿ ಅಗಾಥಾ ಹೆರಿಸನ್ನರು ಲಂಡನಿಗೆ ಮರಳಿದರು. ರಾಜಕೋಟದಲ್ಲಿ ಮಹಾತ್ಮರು ಉಪವಾಸ ತೆಗೆದ ಕಾಲಕ್ಕೆ ಅವರು ಅಲ್ಲಿ ಮಹಾತ್ಮರೊಂದಿಗಿದ್ದರು. ರಾಜಕೋಟದ ಪರಿಸ್ಥಿತಿಯು ವಿಚಿತ್ರವೂ ಅದ್ಭುತವೂ ಆಗಿರುವುದೆಂದು ಅವರು ಹೇಳಿದ್ದಾರೆ. ಮಹಾತ್ಮರು ಸಕಾಲದಲ್ಲಿ ಉಪವಾಸವನ್ನು ನಿಲ್ಲಿಸುವದರಲ್ಲಿ ಶ್ರೀಮತಿಯವರು ಮಹತ್ವದ ಕಾರ್ಯಗಳನ್ನು ಮಾಡಿರುವರು, ಅವರು ಲಂಡನಿಗೆ ಹೋಗಿ ಮಾಡಿದ ಪ್ರಥಮ ಭಾಷಣದಲ್ಲಿ—"ನಮ್ಮ (ಬ್ರಿಟಿಷರ) ಸಮಸ್ಯೆಗಳು ಅನೇಕ ಇರಬಹುದಾಗಿದ್ದರೂ, ಇಂಡಿಯದ ಸ್ಥಿತಿಯು ಎಷ್ಟು ವಿಷಮವಾಗಿರುವದೆಂದರೆ, ಇಂಡಿಯದೊಂದಿಗೆ ನಾವು ಶೀಘ್ರದಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡ ಹೊರತು ನಿರ್ವಾಹವಿಲ್ಲವಾಗಿದೆ. ಬ್ರಿಟನ ಭಾರತಗಳೊಳಗೆ ಒಂದು ಗೌರವಪೂರ್ಣ ಒಡಂಬಡಿಕೆಯಾಗುವದರಿಂದಲೇ ಬ್ರಿಟನು ಲೋಕಶಾಂತಿಯನ್ನು ಉಂಟುಮಾಡಲಿಕ್ಕೆ ಸಮರ್ಥವಾಗುವುದು. ಭಾರತದ ದೇಶೀ ಸಂಸ್ಥಾನಗಳ ಪರಿಸ್ಥಿತಿಯ ಸೂಕ್ಷ್ಮ ಅಧ್ಯಯನ ಮಾಡುವ ಸಂದರ್ಭವು ನನಗೆ ಒದಗಿಬಂದಿತ್ತು. ಅಲ್ಲಿಯ ಸ್ಥಿತಿಯು ಭಯಂಕರವಾಗಿರುವುದು. ಬ್ರಿಟನು ಆ ಕುರಿತು ಗಂಭೀರವಾಗಿ ಚಿಂತಿಸಿದ ಹೊರತು ಗತ್ಯಂತರವಿಲ್ಲ" ಎಂದು ಹೇಳಿದ್ದಾರೆ.

ಶ್ರೀ ಸುಭಾಷರ ರಾಜೀನಾಮೆ

ಇದರ ಕುರಿತು ಶ್ರೀಮತಿಯವರು ಕೊಟ್ಟ ಅಭಿಪ್ರಾಯಗಳು ವಿಚಾರಣೀಯವಾಗಿವೆ. 'ಕಾಂಗ್ರೆಸಿನಂಥ ಬಹು ದೊಡ್ಡ ಸಂಸ್ಥೆಗಳಲ್ಲಿ ಇಂಥ ಪರಿವರ್ತನೆಗಳಾಗುವದು ಆಶ್ಚರ್ಯಕರವಾಗಿಲ್ಲ. ಆದ್ದರಿಂದ ಶ್ರೀ ಸುಭಾಷರು ರಾಜನಾಮೆಯನ್ನಿತ್ತಾಗ ನನ್ನ ಮನಸ್ಸು ಗೊಂದಲದಲ್ಲಿ ಬೀಳಲಿಲ್ಲ. ಪಂಡಿತ ನೆಹರು ಅಥವಾ ಸುಭಾಷರು ಕಾಂಗ್ರೆಸ ವರ್ಕಿಂಗ ಕಮಿಟಿಯಲ್ಲಿ ಇರುವುದಿಲ್ಲವೆಂಬುದರಿಂದ ಅವರು ಕಾಂಗ್ರೆಸಿನಿಂದ ಬೇರೆಯಾಗಿದ್ದಾರೆಂದು ತಿಳಿಯಕೂಡದು. ಕಾಂಗ್ರೆಸಿನ ಹೊರಗಿದ್ದು ಅವರು ಕಾಂಗ್ರೆಸಿನ ಹೆಚ್ಚಿಗೆ ಸೇವೆಯನ್ನು ಸಲ್ಲಿಸಬಲ್ಲರೆಂಬುದರಿಂದಲೇ ಅವರು ವರ್ಕಿಂಗ್ ಕಮಿಟಿಯಲ್ಲಿ ಸದಸ್ಯರಾಗಿ ಇರುವುದಿಲ್ಲ' ಎಂದಿರುವರು.

ಇಂಡಿಯದ ವಿರುದ್ಧ ಅಪಪ್ರಚಾರ

ವಿಲಾಯತಿಯಲ್ಲಿ ಇಂಡಿಯದ ವಿರುದ್ಧ ತುಂಬಾ ಅಪಪ್ರಚಾರವಾಗುತ್ತಲಿದೆ. ಅಂಥವುಗಳಲ್ಲಿ ಕೆಲವುಗಳಿಗೆ ವಿಲಾಯತಿಯಲ್ಲಿರುವ ಭಾರತೀಯರು ಉತ್ತರಗಳನ್ನು ಕೊಟ್ಟಿದ್ದಾರೆ. ವಿ. ಆರ್. ಬೆಂಗೇರಿ ಎಂಬವರು ಈ ಅಪಪ್ರಚಾರದ ಕುರಿತು ಹೀಗೆ ಹೇಳಿರುವರು:— ಭಾರತದಂಥ ವಿಶಾಲದೇಶದಲ್ಲಿ ಒಂದು ಸಂಸ್ಕೃತಿ, ಉಡುಗೆ, ಭಾಷೆಗಳಿರುವದು ಸಾಧ್ಯವಲ್ಲ. ಅಲ್ಲಿ ಸಂಸ್ಕೃತಿ ಭಾಷೆ ಉಡುಗೆಗಳು ಭಿನ್ನವಾಗಿರುವುದರಿಂದ ಐಕ್ಯತೆಯಿಲ್ಲವೆಂದು ತಿಳಿಯಕೂಡದು. ಭಿನ್ನತೆಯಲ್ಲಿಯೇ ಐಕ್ಯತೆಯಿರುವದು ಭಾರತದ ವೈಶಿಷ್ಟ್ಯವಾಗಿದೆ. ಇಂಥ ಒಂದು ವಿಶಿಷ್ಟತರದ ಐಕ್ಯತೆಯು ಭಾರತದಲ್ಲಿರುವುದರಿಂದ ಭಾರತವು ಸಾವಿರಾರು ವರ್ಷಗಳು ಕಳೆದರೂ ಬದುಕಿ ಇದೆ. ಇತರ ರಾಷ್ಟ್ರಗಳಂತೆ ಅದರ ನಷ್ಟವಾಗಿಲ್ಲ. ಕೆಲವು ಮುಸಲ್ಮಾನ ಜಾತಿವಾದಿಗಳ ರಾಕ್ಷಸೀ ಮಹತ್ವಾಕಾಂಕ್ಷೆಯ ಪರಿಣಾಮವಾಗಿ ಆಗಾಗ್ಗೆ ಭಾರತದಲ್ಲಿ ಹಿಂದು ಮುಸಲ್ಮಾನ ಕಲಹಗಳ ಸುದ್ದಿಗಳನ್ನು ಕೇಳುತ್ತಿದ್ದೇವಾದರೂ, ಒಟ್ಟಾರೆ ಹಿಂದು ಮುಸಲ್ಮಾನರು ಸ್ನೇಹದಿಂದಲೇ ಇರುವದನ್ನು ಕಾಣಬಹುದು. ಆದ್ದರಿಂದ ಭಾರತವು ಎರಡು ಜನಾಂಗವಲ್ಲ, ಒಂದೇ ಜನಾಂಗವಾಗಿರುವದೆಂಬುದನ್ನು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಆದ್ದರಿಂದ ಕೆಲವು ಮುಸಲ್ಮಾನರು ಹೇಳುವ ಪ್ರಕಾರ ಭಾರತವನ್ನು ಹಿಂದೂ ಭಾರತ ಮತ್ತು ಮುಸಲ್ಮಾನರ ಭಾರತವೆಂದು ವಿಂಗಡಿಸುವದು ಮೂರ್ಖತನ. ಹತ್ತು ಶತಮಾನಗಳ ತನಕ ಮುಸಲ್ಮಾನರು ಭಾರತದಲ್ಲಿ ಶಾಸನ ಮಾಡಿಕೊಂಡಿದ್ದರಾದ್ದರಿಂದ, ಹಿಂದುಗಳು ಮುಸಲ್ಮಾನ ಭಾರತದಲ್ಲಿ ಕೇವಲ ಪಹರೆಕಾರರು ಎನ್ನುವುದೂ ಹಾಸ್ಯಾಸ್ಪದ. ಹಿಂದೂ ಬಹುಸಂಖ್ಯಾಕರು ಮುಸಲ್ಮಾನ ಕ್ರಿಸ್ತ ಮೊದಲಾದ ಅಲ್ಪಸಂಖ್ಯಾಕರನ್ನು ಪೀಡಿಸುವರೆಂದು ಮುಸಲ್ಮಾನ ಆಗಿರುವ ಭಯಕ್ಕೆ ಆಧಾರವಿಲ್ಲ. ಹಿಂದು ಬಹು ಸಂಖ್ಯಾಕರಾಗಿರುವ ಕಾಂಗ್ರೆಸ ಸರಕಾರಗಳು ಆಡಳಿತವು ಇದಕ್ಕೆ ಸಾಕ್ಷಿಯಾಗಿದೆ. ಅಲ್ಪ ಸಂಖ್ಯಾಕರನ್ನು ಸಂತೈಸುವುದಕ್ಕೋಸ್ಕರ ಈ ಕಾಂಗ್ರೆಸ ಸರಕಾರಗಳು ಅಗತ್ಯವಿಲ್ಲದಕ್ಕಿಂತಲೂ ಹೆಚ್ಚು ಉದಾರತೆಯನ್ನು ತೋರಿಸಿವೆ.

ಬ್ರಿಟಿಷರ ಮೇಲೆ ಭಾರತೀಯರ ಸಹಾನುಭೂತಿ

ಅಂತರಾಷ್ಟ್ರೀಯ ರಾಜಕೀಯಗಳಲ್ಲಿ ಬ್ರಿಟಿಷರು ಬಹಳ ಗೊಂದಲದಲ್ಲಿ ಸಿಕ್ಕಿಬಿದ್ದಿದ್ದಾರೆ. ಆದರೂ ಅವರ ಮೇಲೆ ಭಾರತೀಯರಿಗೆ ಸಹಾನುಭೂತಿ ಇರುವುದಿಲ್ಲ. ಯಾಕಂದರೆ ದಕ್ಷಿಣಆಫ್ರಿಕ ಮೊದಲಾದ ವಸಾಹತುಗಳಲ್ಲಿ ಬ್ರಿಟಿಷರು ಮಾಡಿದ, ಮಾಡುತ್ತಿರುವ ಅನ್ಯಾಯಗಳನ್ನು ಅವರು ಇನ್ನೂ ಮರೆಯದೆ ಇದ್ದಾರೆ ಎಂದು ಡಿ. ವಿ. ದಾಮಲೆಕರರು ಬರೆದಿರುವರು. ಆದರೆ ಯುದ್ಧ ಪ್ರಸಂಗದಲ್ಲಿ ಭಾರತವು ಬ್ರಿಟನಿನ ಪರವಾಗಿಯೇ ಹೋರಾಡುವುದು. ಈ ಹೋರಾಟದಲ್ಲಿ ಮಾತ್ರ ಅದು ಒಂದು ವಿಷಯವನ್ನು ಸ್ಪಷ್ಟಮಾಡಲಿದೆ. ಪ್ರಜಾಸತ್ತೆಯ ರಕ್ಷಣ ವಸಾಹತುಗಳಲ್ಲಿ ಹಿಂದೀಯರಿಗಾಗುವ ಅನ್ಯಾಯಗಳನ್ನು ದೂರಮಾಡುವುದು. ಜರ್ಮನಿಯಲ್ಲಿ ಯಹೂದಿಯರ ಪೀಡೆಯನ್ನು ಕಡಿಮೆ ಮಾಡುವುದು. ಇವೇ ಮೊದಲಾದ ಲೋಕೋಪಕಾರ ವಿಷಯಗಳಿಗಾಗಿಯೇ ಅದು ಬ್ರಿಟನಿನೊಂದಿಗೆ ಲೋಕಯುದ್ಧದಲ್ಲಿ ಭಾಗಿಯಾಗುವುದು.

ಫೆಡರೇಶನಿಗೆ ಭಾರತದ ವಿರೋಧ.

ಮೌಲಾನಾ ಹಜರತ್ ಮೋಹಾನಿಯವರು ಈಗ ಇಂಗ್ಲಂಡಿನಲ್ಲಿ ಭಾರತದ ಪರವಾಗಿ ಲೇಖನ ಭಾಷಣಾದಿಗಳ ಮೂಲಕ ಪ್ರಚಾರಕಾರ್ಯ ಮಾಡುತ್ತಾರೆ. ಫೆಡರೇಶನನ್ನು ಶೀಘ್ರದಲ್ಲಿ ಜಾರಿಗೆ ತರುವ ಕುರಿತು ಭಾರತ ವಾಯ್ಸರಾಯರುಗಳಾದ ಲಾರ್ಡ ಲಿನ್ಲಿತಗೋರವರು ಮಾಡುವ ಪ್ರಯತ್ನಗಳು ಸೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗಲಿದೆ ಎಂಬುದನ್ನು ಭಾರತ ಸಚಿವರಿಗೆ ಮನಗಾಣಿಸಲಿರುವರು.

ಭಾರತದ ಸಂಸ್ಥಾನಗಳಲ್ಲಿ ರಾಜಕೀಯ ಸುಧಾರಣೆ

ಲಾರ್ಡ್ ಸಾಮುವೇಲರ ಭಾಷಣ

ಭಾರತದ ಸಂಸ್ಥಾನಗಳಲ್ಲಿ ರಾಜಕೀಯ ಸುಧಾರಣೆ ✓

ಲಾರ್ಡ್ ಸಾಮುವೇಲರ ವಿಚಾರಪರ ಭಾಷಣ

ಲಂಡನಿನಲ್ಲಿ ಮೈಸೂರು ಮಹಾರಾಜರ ಜನ್ಮದಿನೋತ್ಸವದ ಸಲುವಾಗಿ ಲಾರ್ಡ್ ಮತ್ತು ಲೇಡಿ ಸಾಮುವೆಲ್ ಮತ್ತು ಅನೇಕ ಸನ್ಮಾನ್ಯ ಅತಿಥಿಗಳು ಕೂಡಿದ ಔತಣ ಸಮಾರಂಭವು ನೆರವೇರಿಸಲ್ಪಟ್ಟಿತು.

ಅತಿಥಿಗಳನ್ನು ಸ್ವಾಗತೀಕರಿಸಿ ಮೈಸೂರಿನ ಟ್ರೇಡ್ ಕಮಿಶನರಾದ ಶ್ರೀ ಟಿ. ಎ. ಎ. ಈಶ್ವರನ್ನರವರು 'ಮೈಸೂರು ಸಂಸ್ಥಾನದ ಪ್ರಗತಿಯ ಕುರಿತು ವಿವರಿಸಿ ಮಾತನಾಡಿದರು.

ಆ ಮೇಲೆ ಅತಿಥಿಗಳ ಪರವಾಗಿ ಮಾತನಾಡುತ್ತಾ, ಲಾರ್ಡ್ ಸಾಮುವೇಲರು ಹೀಗೆಂದು ಹೇಳಿದರು.

"ಯುದ್ಧ ಮತ್ತು ಬಲಾತ್ಕಾರಗಳನ್ನು ಇದಿರಿಸುವ ಮತ್ತು ದ್ವೇಷಿಸುವ ಜನಾಂಗಗಳು ತಮ್ಮ ಆತ್ಮರಕ್ಷಣೆಗಾಗಿ ಒಂದಾಗುತ್ತವೆ. ಈ ವಿಷಯವನ್ನು ಹಿಂದೂದೇಶದ ರಾಜಕೀಯ ನಿಪುಣರು ಮರೆಯಬಾರದು. ಹೊಸ ರಾಜ್ಯಾಂಗಘಟನೆಯೂ ಈಗ ಪ್ರಾಂತಗಳಲ್ಲಿ ಸುಸೂತ್ರವಾಗಿ ನಡೆಯುತ್ತಿದೆ. ಆದರೆ ಇನ್ನು ಮುಂದಕ್ಕೆ ಸರಕಾರದೊಡನೆ ಇನ್ನಷ್ಟು ಸಾಮೀಪ್ಯ ಸಂಬಂಧವನ್ನು ಬೆಳಸುವುದು ಅತ್ಯಾವಶ್ಯಕವಾಗಿದೆ. ಆಶ್ರಿತರಾಜ್ಯಗಳೂ ಈ ವಿಷಯದಲ್ಲಿ ಸುಮ್ಮಗಿರಲು ಸಾಧ್ಯವಿಲ್ಲ. ಮೈಸೂರು ಮತ್ತು ಬರೋಡಾ ಸಂಸ್ಥಾನಗಳು ಈ ದೃಷ್ಟಿಯಲ್ಲಿ ಹೊಸ ಮಾದರಿಯನ್ನೇ ಹಾಕಿವೆ."

ಭಾಷಣವನ್ನು ಮುಂದುವರಿಸುತ್ತಾ ಅವರು ಹೀಗೆಂದರು:—

"ನಿಶ್ಚಿತವಾದೊಂದು ಕಾರ್ಯಸೂತ್ರವನ್ನು ಕೈಕೊಂಡು ಸಂಯುಕ್ತ ರಾಜ್ಯಘಟನೆಯು ಹಿಂದೂದೇಶದಲ್ಲಿ ಜಾರಿಗೆ ಈಗಾಗಲೇ ಬರದಿರುವುದು ನಿರಾಶಾಜನಕವಾಗಿದೆ. ಜಗತ್ತಿನಲ್ಲಿ ಹಿಂದೂದೇಶವು ಯೋಗ್ಯವಾದೊಂದು ಸ್ಥಾನವನ್ನು ಪಡೆಯುವ ಸಲುವಾಗಿ ವಿಶಾಲವಾದ ಕಾರ್ಯಕ್ಷೇತ್ರವನ್ನಿಟ್ಟುಕೊಂಡು ಪ್ರಜಾಸಮುದಾಯದ ಸಂಪೂರ್ಣ ಸಹಾನುಭೂತಿಯನ್ನು ಪಡೆದಿರುವ ಸಂಯುಕ್ತ ರಾಜ್ಯಪದ್ಧತಿಯು ಹಿಂದೂದೇಶಕ್ಕೆ ಅವಶ್ಯವಿರುವಾಗ ಅಲ್ಪಸ್ವಲ್ಪ ತೊಂದರೆ ಕಷ್ಟಗಳನ್ನು ಪರಿಹರಿಸುವ ವಿಷಯದಿಂದಲಾಗಿ ಅದನ್ನು ಮುಂದುವರಿಸುವುದು ಯೋಗ್ಯವಾಗಿರುವುದಿಲ್ಲ. ಬ್ರಿಟಿಷರು ಹಿಂದೂದೇಶದಲ್ಲಿ ಯೋಗ್ಯವಾದ, ನ್ಯಾಯವಾದ ಮತ್ತು ಹಿತವಾದ ಸಂಪೂರ್ಣ ಸ್ವಾತಂತ್ರ್ಯವನ್ನು ಸ್ಥಾಪಿಸಲು ಸಂಪೂರ್ಣ ಹೃದಯದಿಂದ ಬಯಸುತ್ತಾರೆ. ಹಿಂದೂದೇಶದಲ್ಲಿರುವ ಅಸ್ಪೃಶ್ಯತೆ ಕಳಂಕವು ಅತ್ಯಂತ ವಿಷಾದಕರವಾದುದು. ಒಂದು ಜನ ಸಮುದಾಯವು ಪರಂಪರೆಯಿಂದ ದುಷ್ಟವಾಗಿ ದೂರವಾಗಿ ಇಡಲ್ಪಡುವುದು ಹಾಗೂ ನ್ಯಾಯದಿಂದ ತಿರಸ್ಕರಿಸಲ್ಪಡುವುದು ಸರ್ವಥಾ ಯೋಗ್ಯವಲ್ಲ; ಈ ವಿಷಯದಲ್ಲಿ ಗಾಂಧಿಜಿಯವರ ಕಾರ್ಯವು ಸಂಪೂರ್ಣ ಸ್ವಾಗತೀಕರಿಸಲು ಅರ್ಹವಾದುದಾಗಿದೆ." ಎಂದರು.

ಚುನಾವಣೆಯ ಗಲಭೆಯಲ್ಲಿ ಮಾಜಿ ಮಂತ್ರಿಗಳಿಗೆ ಗಾಯ!

ಮಾಜಿ ಮಂತ್ರಿಗಳು ಮತ್ತು ಬಂಗಾಳ ಅಸೆಂಬ್ಲಿಯ ಕೃಷಿಕ ಪ್ರಜಾಪಕ್ಷದ ಮುಖಂಡರಾದ ಮಿ|| ಸಮಸುದ್ದೀನ ಅಹಮ್ಮದರವರಿಗೆ ಕೆಲವು ಪುಂಡರು ಕಲ್ಲೆಸೆದು ಗಾಯಗೊಳಿಸಿದರು. ತಮ್ಮ ಪಕ್ಷದ ಪ್ರತಿನಿಧಿಯ ಪರವಾಗಿ ಒಂದು ಸಭೆಯಲ್ಲಿ ಭಾಷಣ ಮಾಡಿ ಹಿಂತಿರುಗಿದಾಗ ಸುಮಾರು ೫೦ ಮಂದಿ ಅವರಿದ್ದ ರೈಲ್ವೆ ಕಂಪಾರ್ಟಮೆಂಟಿಗೆ ನುಗ್ಗಿ ಅವರಿಗೆ ಗಾಯಗೊಳಿಸಿದರು. ಪೋಲೀಸರ ಸಹಾಯದಿಂದ ಅವರು ಸುರಕ್ಷಿತವಾಗಿ ತಮ್ಮ ಮಿತ್ರರ ಮನೆಗೆ ಸಾಗಿಸಲ್ಪಟ್ಟರು.

ಜನರು ಸ್ವಸ್ತಿಕಾ "ಕಾಂತಿ" ಟಾಯ್ಲೆಟ್ ಸೋಪನ್ನೇ ಯಾಕೆ ಆರಿಸುತ್ತಾರೆ?

ಯಾಕಂದರೆ ಪ್ರತಿನಿತ್ಯದ ಸ್ನಾನಕ್ಕೆ ಇದು ಬಹಳ ಉತ್ತಮವಾದದ್ದು ಮತ್ತು ಬಹಳ ಕಡಿಮೆ ಬೆಲೆಯ ಸಾಬೂನಾಗಿರುತ್ತದೆ.

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.

ಬ್ರಿಟಿಷ್ ಫ್ರೆಂಚ್ ಶರತ್ತುಗಳಿಗೆ ರಶ್ಯದ ಖಂಡತುಂಡ ಉತ್ತರ

★ ಬ್ರಿಟನ್, ಫ್ರಾನ್ಸು ಶರ್ತಗಳು ಸಂಪೂರ್ಣ ತೃಪ್ತಿಕರವಲ್ಲ
★ ತಟಸ್ಥ ಧೋರಣೆಯ ರಾಷ್ಟ್ರಗಳ ಮೇಲೆ ನಮ್ಮ ಭರವಸೆಯಿಲ್ಲ !
★ ಶಕ್ತಿವಂತ ರಾಷ್ಟ್ರಗಳಲ್ಲಿ ನಾವೂ ಗಣನೀಯರು

ರಶ್ಯದ ಪ್ರಧಾನ ಸಚಿವರೂ ವಿದೇಶಾಂಗ ಮಂತ್ರಿಗಳೂ ಆದ ಮಿ। ಮೊಲೊಟೋವರವರು ಪಾರ್ಲಿಮೆಂಟಿನ ಮುಂದೆ ಮಾತನಾಡುತ್ತಾ ಬ್ರಿಟಿಷ್ ಫ್ರಾನ್ಸುಗಳ ಶರತ್ತುಗಳು ಸಂಪೂರ್ಣ ತೃಪ್ತಿಕರವಾಗಿಲ್ಲವೆಂದು ಹೇಳಿದರು

ರಶ್ಯವು ಇಂದು ಅಪೇಕ್ಷಿಸುವುದು ದುಷ್ಟ ಪ್ರಭುತ್ವ ಪ್ರವೃತ್ತಿಯನ್ನು ಎದುರಿಸಲು ಶಾಂತಿಯನ್ನು ಬಯಸುವ ಎಲ್ಲಾ ರಾಷ್ಟ್ರಗಳ ಐಕ್ಯವನ್ನು ಆದರೆ ಯೂರೋಪಿನ ಇನ್ನಿತರ ರಾಷ್ಟ್ರಗಳು ಸರ್ವಾಧಿಕಾರಿಗಳ ವರ್ತನೆಯ ಬಗ್ಗೆ ವಹಿಸಿರುವ ತಟಸ್ಥ ಧೋರಣೆಯು ರಶ್ಯದ ಸಹನೆಗೆ ಸಾಧ್ಯವಿಲ್ಲದಾಗಿದೆ ಮಿ। ಮೊಲೊಟೋವರವರು ತಮ್ಮ ಭಾಷಣದಲ್ಲಿ ಕಳೆದ ಜೆಕೊಸ್ಲೊವೇಕಿಯದ ದುರಂತದ ಘಟನೆಯ ಕುರಿತು ಹೇಳಿ, ಜೆಕೊಸ್ಲೊವೇಕಿಯವನ್ನು ಬಲಾತ್ಕಾರಿಗಳ ದವಡೆಯಿಂದ ಬಿಡಿಸಲು ಯೂರೋಪದ ಸಂಯುಕ್ತ ರಾಜ್ಯ ಶಕ್ತಿಗೆ ಅಸಾಧ್ಯವಾದ ಬಗ್ಗೆ ವಿಷಾದಿಸಿ ಇಂದು ಯೂರೋಪಿನ ಆ ರೀತಿಯ ತಾಟಸ್ಥ್ಯ ಧೋರಣೆಯು ಸರ್ವಥಾ ಪರಿಣಾಮಕಾರಿಯೂ, ಪ್ರಯೋಜನಕಾರಿಯೂ ಆಗಲಾರದೆಂದು ಸ್ಪಷ್ಟಗೊಳಿಸಿದರು

ಮೊಲೊಟೋವರವರು ತಮ್ಮ ಭಾಷಣದಲ್ಲಿ ರಶ್ಯವು ಸಂಪೂರ್ಣ ಸಮಾನತೆಯನ್ನು ಬಯಸುತ್ತದೆಂದೂ, ರಶ್ಯದ ಸ್ಥಾನವು ಬಲಿಷ್ಠ ಶಕ್ತಿಗಳಲ್ಲಿ ಮೊದಲನೆಯ ಸ್ಥಾನದಲ್ಲಿದೆಯೆಂದೂ ಹೇಳಿದರು.

"ಈ ನಮ್ಮ ಕಾರ್ಯ ಧೋರಣೆಯಲ್ಲಿ ನಾವು ಯಾರ ಕೂಡೆಯೂ ವಿಚಾರಿಸುವ ಅವಶ್ಯಕತೆಯಿಲ್ಲ ಸರ್ವಾಧಿಕಾರಿಗಳು ಬಹುಕಾಲಕ್ಕಿಂತ ಹಿಂದೆಯೇ ರಶ್ಯವನ್ನು ಅವರ ನಿರಂಕುಶ ವರ್ತನೆಯ ವೈರಿಯನ್ನಾಗಿ ತಿಳಿದುಕೊಂಡಿರುತ್ತಾರೆ. ಆದರೆ ಈ ರೀತಿಯ ನಿಶ್ಚಿತ ಧೋರಣೆಯು ಅವಶ್ಯವೆಂಬುದನ್ನು ಇಂದು ಮಾತ್ರ ಯೂರೋಪಿನ ಪ್ರಜಾಸತ್ತಾತ್ಮಕ ರಾಜ್ಯಗಳು ತಿಳಿದುಕೊಂಡಿವೆ. ಬ್ರಿಟನ ಕಾರ್ಯ ಧೋರಣೆಯು ಇತ್ತೀಚೆಗೆ ವ್ಯತ್ಯಾಸವಾಗುವುದು ಕಂಡುಬಂದುದರಿಂದ ನಾವು ಅವರೊಡನೆ ವಿಚಾರವಿನಿಮಯ ಮಾಡಲು ಒಪ್ಪಿದುದಾಗಿದೆ"ಯೆಂದು ಅವರು ಹೇಳಿದರು.

ಮ್ಯುನಿಕಿನಲ್ಲಿ ತುಟ್ಟ ತುದಿಗೇರಿದ ಯೂರೋಪಿನ ರಾಷ್ಟ್ರಗಳ ತಾಟಸ್ಥ್ಯ ಧೋರಣೆಯು ಎಷ್ಟು ಪರಿಣಾಮಕಾರಿಯಾಗಿದೆಯೆಂಬುದನ್ನು ಪ್ರಪಂಚವು ಪ್ರತ್ಯಕ್ಷವಾಗಿ ಪರೀಕ್ಷಿಸಿದೆ ಅದರ ಪರಿಣಾಮದಿಂದಲಾಗಿ ಇಂದು ರಾಷ್ಟ್ರಗಳು ಕಣ್ತೆರೆದು ಅನ್ಯೋನ್ಯಾಯಗಳನ್ನು ಹುಡುಕಲು ಹೋಗಿವೆ. ಹೀಗೆಂದು ಹೇಳುತ್ತಾ ಮೊಲೊಟೋವರು ಆ ಸಂದರ್ಭದಲ್ಲಿ ಆಂಗ್ಲ—ಪೋಲಿಷ್ ಮತ್ತು ಆಂಗ್ಲ—ಟರ್ಕಿಷ್ ಒಪ್ಪಂದಗಳ ಕುರಿತು ವಿವರಿಸಿ, ಸರ್ವಾಧಿಕಾರಿಗಳ ಎದುರಾಗಿ ಮುಂದೆ ಹೋಗಲು ಇಂದು ರಶ್ಯಕ್ಕೆ ಬಂದಿರುವ ಆಮಂತ್ರಣದ ಕುರಿತು ವಿವರಿಸಿದರು.

ರಶ್ಯದ ಶರತ್ತುಗಳು

ರಶ್ಯದ ಶರತ್ತುಗಳ ಕುರಿತು ಮಾತನಾಡುತ್ತ ಅವರು ಕಳೆದ ಎಪ್ರಿಲ್ ತಿಂಗಳಿಂದ ಆಂಗ್ಲ-ಫ್ರೆಂಚ್-ರಶ್ಯಾ ವ್ಯವಹಾರದ ಆರಂಭದಿಂದಿಂದಲೇ ರಶ್ಯಾ ಸರಕಾರವು ಈ ಕೆಳಗಿನ ಶರತ್ತುಗಳನ್ನು ನಿರ್ಧರಿಸುವುದಾಗಿ ಹೇಳಿದರು. ಅವುಗಳು ಯಾವುವೆಂದರೆ—೧) ಬಲಾತ್ಕಾರದಿಂದ ನಡೆಯುವ ಎಲ್ಲಾ ರಾಷ್ಟ್ರಗಳನ್ನು ಎದುರಿಸಲು ಬ್ರಿಟಿಷ್—ಫ್ರಾನ್ಸು—ರಶ್ಯಾಗಳು ಒಂದು ರಕ್ಷಣಾ ಯೋಜನೆಯನ್ನು ಸಿದ್ಧಪಡಿಸಬೇಕು ೨) ಮಧ್ಯ ಮತ್ತು ಪೂರ್ವ ಯೂರೋಪಿನ ಹಾಗೂ ಎಲ್ಲಾ ಯೂರೋಪಿನ ರಾಷ್ಟ್ರಗಳಿಗೆ ಬಲಾತ್ಕಾರ ಮಾಡುವ ರಾಷ್ಟ್ರಗಳಿಂದ ಯಾವ ತರದ ಅನ್ಯಾಯವು ಆಗದಂತೆಯೂ ೩) ರಶ್ಯಾ, ಫ್ರಾನ್ಸ್, ಬ್ರಿಟನುಗಳೊಳಗೆ ಸರ್ವಾಧಿಕಾರಿಗಳನ್ನು ಎದುರಿಸುವಲ್ಲಿ ಯುದ್ಧವು ಸಂಭವಿಸುವ ಪಕ್ಷ ಅನ್ಯೋನ್ಯ ಸಹಾಯವನ್ನು ಕೊಡುವ ವಿಷಯವಾಗಿ ಒಂದು ಒಪ್ಪಿಗೆಯನ್ನು ಮಾಡುವಂತೆಯೂ ರಶ್ಯವು ಶರತ್ತನ್ನು ಮಾಡುವುದಾಗಿ ಹೇಳಿದರು.

ಹೀಗೆ ಸರ್ವಾಧಿಕಾರಿಗಳ ವಿರುದ್ಧ ಮಾತನಾಡಿದರೂ ಇಟಲಿ ಜರ್ಮನಿಗಳೊಳಗೆ ರಶ್ಯದ ವ್ಯಾಪಾರ ವಹಿವಾಟಿನ ಕುರಿತು ಸಮಾಧಾನಕರವಾದ ಮಾತನ್ನೇ ಹೇಳಿದರು

ರಶ್ಯಾ ಪೋಲೆಂಡುಗಳ ಸಂಬಂಧದ ಕುರಿತೂ ಸಮಾಧಾನಕರವಾದ ಮಾತನ್ನು ಆಡಿದರು

ಮೊಲೊಟೋವರವರ ಭಾಷಣವು ಪರಿಣಾಮಕಾರಿಯೂ, ತಾಟಸ್ಥ್ಯ ಧೋರಣೆಯ ಖಂಡನಾತ್ಮಕವಾಗಿದ್ದರೂ ಸಂಪೂರ್ಣವಾಗಿ ಸ್ಪಷ್ಟರೀತಿಯದಾಗಿರುವುದಿಲ್ಲ

ಯೂರೋಪಿನಲ್ಲಿ ಹಾಗೂ ಇಡೀ ಜಗತ್ತಿನಲ್ಲಿ ರಶ್ಯದ ಪ್ರಧಾನ ಮಂತ್ರಿಗಳ ಭಾಷಣವು ತೀವ್ರ ಜಾಗೃತಿಯನ್ನು ಹುಟ್ಟಿಸಿದೆ

ಮದ್ಯಪಾನವನ್ನು ನಿಷೇಧಿಸಿ ರಾಷ್ಟ್ರದ ಗೌರವವನ್ನು ಉಳಿಸಬೇಕು

★ ಪಾರ್ಸಿಗಳಲ್ಲಿ ಮಹಾತ್ಮರ ಬೋಧನೆ
★ ಕುಡುಕತನದ ದುರಂತ ಪರಿಣಾಮ
★ ತನ್ನ ಹಿರಿಯ ಮಗನ ಮೂರ್ಖ ಜೀವನ

ಮುಂಬಯಿ ಸರಕಾರವು ಪ್ರಯೋಗಿಸಿದ ಮದ್ಯಪಾನ ನಿರೋಧ ಕಾರ್ಯದ ಕುರಿತು ಆಕ್ಷೇಪವೆತ್ತಿ ಪಾರ್ಸಿಯವರ ಶಿಷ್ಟಮಂಡಳವೊಂದು ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಸಭೆಗೆ ಸಂಬಂಧಿಸಿ ಮುಂಬಯಿಗೆ ಬಂದಿರುವ ಮಹಾತ್ಮ ಗಾಂಧಿಯವರೊಡನೆ ದೂರು ಕೊಟ್ಟಿರುವುದು ಅವರ ಆಕ್ಷೇಪಗಳಿಗೆ ಉತ್ತರವಾಗಿ ಮಹಾತ್ಮಾಜಿಯವರು ಹರಿಜನ ಪತ್ರಿಕೆಯಲ್ಲಿ ಈ ಕೆಳಗಿನ ಸಾರಾಂಶದ ಲೇಖನವೊಂದನ್ನು ಬರೆದಿರುತ್ತಾರೆ

"ಪಾರ್ಸಿಯವರು ಹೇಳುವ ಎಲ್ಲಾ ಆಕ್ಷೇಪಗಳಿಗೂ ಯೋಗ್ಯ ಸಮಾಧಾನವನ್ನು ಮೊದಲೇ ಕೊಡಲಾಗಿದೆ ಅವರಿಗೆ ಸಾಮಾಜಿಕ ಆಚಾರಗಳಿಗೆ ಬೇಕಾದಲ್ಲಿ ಮದ್ಯವನ್ನು ಉಪಯೋಗಿಸುವಂತೆ ಮಾಡಿದೆ ಮದ್ಯವಿಲ್ಲದೆ ಆರೋಗ್ಯವು ಕೆಡುವಲ್ಲಿ ಅದಕ್ಕೂ ಆಸ್ಪದವಿತ್ತಿದೆ ಮದ್ಯದ ವ್ಯಾಪಾರದಿಂದಲಾಗಿ ಜೀವಿಸುತ್ತಿದ್ದ ಹಲವರು ನಿರುದ್ಯೋಗಿಗಳಾಗಿರಬೇಕಾದ ವಿಷಯದಲ್ಲಿ ಮಂತ್ರಿಗಳು ನ್ಯಾಯವಾದ ಹಂಚಿಕೆಯನ್ನು ಮಾಡುವುದರಲ್ಲಿ ನಿರತರಾಗಿದ್ದಾರೆ ಹೀಗೆ ಅವರು ನಿರ್ಮಲ ಹೃದಯದಿಂದ ಕೆಲಸ ಮಾಡುತ್ತಿರುವಾಗ ಹಿಂಸಾತ್ಮಕವಾದ ಕಾರ್ಯವನ್ನು ಮಾಡುತ್ತಿದ್ದರೆ ನಿಜವಾಗಿಯೂ ಅವರಿಗೆ ಕೆಲಸವನ್ನು ಮುಂದುವರಿಸುವುದು ಕಷ್ಟವಾದೀತು ಇದಕ್ಕೆ ಬದಲಾಗಿ ಪಾರ್ಸೀ ಮುಖಂಡರೇ ಮುಂದಾಗಿ ಬಂದು ಸರಕಾರದ ಮಂತ್ರಿಗಳೊಡನೆ ವಿಚಾರ ವಿನಿಮಯ ಮಾಡಿಕೊಂಡು ಸ್ವಲ್ಪವೂ ಸಂಕಷ್ಟಗಳು ಬರದಂತೆ ಸಾಧ್ಯವಾದ ರೀತಿಯಲ್ಲಿ ಮದ್ಯಪಾನ ನಿಷೇಧ ಚಳವಳವನ್ನು ಯಶಸ್ವಿಯಾಗುವಂತೆ ಮಾಡುವುದು ಯೋಗ್ಯವು ಮದ್ಯಪಾನ ನಿಷೇಧವು ಖಂಡಿತವಾಗಿಯೂ ಆಗಬೇಕೆಂಬ ಶುದ್ಧ ಬುದ್ಧಿಯು ಎಲ್ಲರಲ್ಲಿಯೂ ಇದರೆ ಇದು ಸಾಧ್ಯವಾದೀತು.

ಕುಡಿಕತನದ ಘೋರ ಪರಿಣಾಮ

ಹಲವು ಮಂದಿ ಪಾರ್ಸಿಯವರು ಮಿತಿ ಮೀರದಂತೆ ಕುಡಿಯುತ್ತಿರುವರೆಂದೂ, ವಿಶೇಷವಾದ ದುಷ್ಪರಿಣಾಮವು ಇದರಿಂದಲಾಗಿ ಆಗುವುದಿಲ್ಲವೆಂದೂ ನಾನು ಒಪ್ಪುತ್ತೇನೆ. ಇದು ಮದ್ಯಪಾನ ನಿಷೇಧ ಚಳವಳವನ್ನು ತಡೆಗಟ್ಟಲು ತಕ್ಕುದಾದ ಅಭಿಪ್ರಾಯವಲ್ಲ, ಇಡೀ ಜಗತ್ತಿನಲ್ಲಿ ಮದ್ಯಪಾನದ ವಿಷಯವಾಗಿ ಸ್ಥಿರವಾಗಿ ಅನುಭವದಿಂದ ಖಚಿತವಾಗಿರುವ ಘೋರ ಪರಿಣಾಮದ ವಿಷಯವಾಗಿರುವ ಅಭಿಪ್ರಾಯವನ್ನು ಅವರ ಸಂಕುಚಿತ ಹಾಗೂ ಸ್ವಾರ್ಥದ ಅನುಭವಕ್ಕೆ ಹೋಲಿಸುವಲ್ಲಿ ಅವರು ದೇಶದ ಗೌರವವನ್ನು ಮರೆಯಬಾರದು.

...ದಿಸುವುದು ನ್ಯಾಯವಾದ ತರ್ಕ ಸರಣಿಯಲ್ಲ. ಯಾರಿಗೆ ಮದ್ಯಪಾನದಲ್ಲಿ ನಿರ್ಮಲ ಅಭಿಪ್ರಾಯವುಂಟೋ ಅವರು ಆ ಕುರಿತು ನಿರ್ಮಲವಾದ ಅಹಿಂಸಾತ್ಮಕವಾದ ಯೋಗ್ಯವಾದ ಚಳವಳವನ್ನು ನಡೆಸಬಹುದು ಆದರೆ ಪಾರ್ಸೀ ಚಳವಳಗಾರರು ಹಿಂಸಾತ್ಮಕವಾದ ನಿಂದನೀಯವಾದ ಹಾಗೂ ಅಸತ್ಯಾತ್ಮಕವಾದ ದೃಷ್ಟಿಯಲ್ಲಿ ಈ ಚಳವಳಕ್ಕೆ ಜಾತೀಯತೆಯ ಸ್ವರೂಪವನ್ನು ಕೊಟ್ಟು ಅಪಪ್ರಚಾರ ಮಾಡುವುದು ಯೋಗ್ಯವಲ್ಲ.

ಮದ್ಯಪಾನ ನಿಷೇಧದ ಕುರಿತು ಬಹುಶಃ ನನ್ನಷ್ಟು ತೀವ್ರವಾಗಿ ಯಾರೂ ಹಿಂದೂದೇಶದಲ್ಲಿ ಅಭಿಪ್ರಾಯ ಪಡುವುದಿಲ್ಲವೆಂದು ತಿಳಿಯುತ್ತಿದೆ ಈ ವಿಷಯದಲ್ಲಿ ಕೆಲಸವನ್ನು ಮಾಡುತ್ತಿರುವುದರಿಂದ ನನಗೆ ಮದ್ಯಪಾನವು ನಮ್ಮ ದೇಶದ ಶ್ರಮಜೀವಿಗಳಾದ ಕೆಲಸಗಾರರಲ್ಲಿ ಯಾವ ರೀತಿ ದುಷ್ಪರಿಣಾಮವನ್ನು ಹುಟ್ಟಿಸಿ ಅವರ ಜೀವಿತವನ್ನು ಹಾಳುಮಾಡಿದೆಯೆಂಬುದು ಪ್ರತ್ಯಕ್ಷವಾಗಿ ಕಂಡು ಗೊತ್ತಿದೆ ರಿಗೆ ಮದ್ಯವು ಸಿಗಲಾರದ ಪಕ್ಷಕ್ಕೆ ಅವರು ಅದನ್ನು ಖಂಡಿತವಾಗಿಯೂ ಮುಟ್ಟಲಾರರು ಅನೇಕ ಕುಡುಕರೇ ಮದ್ಯಪಾನ ನಿಷೇಧಕ್ಕಾಗಿ ಆಸಕ್ತರಾಗಿರುವರು.

ತನ್ನ ಹಿರಿಮಗನ ಜೀವನ

"ನನ್ನ ಹಿರಿಯ ಮಗನು ಬುದ್ಧಿವಂತನಾಗಿಯೂ, ದೇಶಾಭಿಮಾನಿಯಾಗಿಯೂ ಧೈರ್ಯಶಾಲಿಯಾಗಿಯೂ, ಸ್ವಾರ್ಥತ್ಯಾಗಿಯೂ ಇದ್ದನು ಆದರೆ ಇಂದು ಆತನು ತನ್ನ ಕುಡಿತದಿಂದಲಾಗಿ ತನ್ನ ಹೆತ್ತವರನ್ನೂ, ಸಮಾಜವನ್ನೂ ಕೂಡಾ ಕಳೆದುಕೊಂಡಿದ್ದಾನೆ ಇದು ಹೆಚ್ಚಾಗಿ ಎಲ್ಲಾ ಕಡೆಯಲ್ಲಿಯೂ ವಾಸ್ತವವಾಗಿರುವ ಸ್ಥಿತಿಯಾಗಿದೆ ಇದನ್ನು ಬರೆಯುತ್ತಿರುವಂತೆ ನನಗೆ ಸಾವಿರಾರು ಅನುಭವಗಳು ಸ್ಮರಣೆಗೆ ಬರುತ್ತವೆ.

"ಆದ್ದರಿಂದ ನಾನು ನನ್ನ ಪಾರ್ಸೀ ಗೆಳೆಯರೊಡನೆ ಇಂತಹ ಪರಿಶುದ್ಧವಾದ ಕಾರ್ಯದಲ್ಲಿ ಮಂತ್ರಿಗಳಿಗೆ ನೆರವಾಗಬೇಕಾಗಿ ಬೇಡಿಕೊಳ್ಳುತ್ತೇನೆ. ಇದು ಅವರು ಮಾಡತಕ್ಕ ಎಲ್ಲಾ ಕೆಲಸಗಳಿಗಿಂತಲೂ ಪುನೀತವಾದುದು ರಾಷ್ಟ್ರದ ಆತ್ಮಸ್ವರ್ಯಾಲ್ಯದ ಕುರಿತು ಪಾನನಿಷೇಧವು ಪ್ರಮುಖ ವಿಷಯವಾಗಿದೆ. ಈ ಬಗೆಗಾಗಿ ಪಾರ್ಸೀ ಕುಟುಂಬದ ಸ್ತ್ರೀಪುರುಷರು ಕಾಂಗ್ರೆಸು ಸರಕಾರಕ್ಕೆ ನೆರವಾಗಿ ಹಿಂದೂದೇಶದ ಗೌರವವನ್ನು ಕಾಪಾಡಲು ಸಹಾಯ ಮಾಡಬೇಕು.

ಕೃತಾರ್ಥರಾದವರಿಗೆ

ಗೇಟವೇ ಪ್ರೊಡಕ್ಟ್ಸನವರ ಅಮೂಲ್ಯ ಬಹುಮಾನ

ನಮ್ಮ ಭರವಸೆಯ ಇನಾಮು | Rs. 42,000 | ನಂಬ್ರ 7

ಸರಿಯಾದ ಉತ್ತರ ಕಳುಹಿಸ್ಪಿದ ಇಪ್ಪತ್ತು ಮಂದಿಗಳೊಳಗೆ ಹಂಚಲ್ಪಡುವುದು!

ಬೊಂಬಾಯಿಯ ಪ್ರಸಿದ್ಧ ವಕೀಲರೊಂದರಲ್ಲಿಟ್ಟ ಉತ್ತರಕ್ಕೆ ಸರಿಹೋಲುವ ಉತ್ತರಕ್ಕೆ ಕಮಿಮೊಯ್ದರೆ ರೂ 2100 ದೊರಕುವುದೆಂದು ಭರವಸೆಯನ್ನೀಯುತ್ತೇವೆ.

ಹೆಚ್ಚು ಸಂಖ್ಯೆಯ ಉತ್ತರ ಕಳುಹಿಸಿದ ಇಬ್ಬರಿಗೆ ಕ್ರಮವಾಗಿ ರೂ 200 ಮತ್ತು 100ರ ಎರಡು ಬಹುಮಾನಗಳು ಕೊಡಲಾಗುತ್ತದೆ ಯಾವುದಾದರೂ ಎರಡು ಸಾಲನ್ನು ಸರಿಹೋಲುವ ಉತ್ತರಕ್ಕೆ ರೂ 10ರ 10 ಬಹುಮಾನಗಳನ್ನು ಕೊಡಲಾಗುತ್ತವೆ ಮೇಲಿನ ಅರ್ಧ ಸಾಲಿನ ಮೂರು ಅಂಕೆಗಳಿಗೆ ಸರಿಯಾದವುಗಳಿಗೆ 5 ರೂ ಯ 20 ಬಹುಮಾನಗಳನ್ನು ಕೊಡಲಾಗುವುದು ಮೇಲಿನ ಸಾಲಿನ (ಅರ್ಧ) ಮೊದಲನೇ ಮತ್ತು ಎರಡನೇ ಸಂಖ್ಯೆಗಳನ್ನು ಸರಿಹೋಲುವ ಸಂಖ್ಯೆಗಳನ್ನು ಕಳುಹಿಸಿದ ಉತ್ತರಕ್ಕೆ 2 ರೂ ಯ. 30 ಬಹುಮಾನಗಳನ್ನು ಕೊಡಲಾಗುವುದು

ಮೇಲೆ ಕಾಣುವ ಸಣ್ಣ ಸಣ್ಣ ಚಚ್ಚೌಕಗಳಲ್ಲಿ 7ರಿಂದ 22ರ ವರೆಗೆ ಅಂಕೆಯನ್ನು ಬರೆಯಿರಿ ಯಾವ ಸಾಲನ್ನೂ ಯಾ ಒಂದು ಮೂಲೆಯಿಂದ ಇನ್ನೊಂದು ಮೂಲೆ ವರೆಗೆ ಕೂಡಿಸಿದರೂ 58 ಬರಬೇಕು ಒಂದು ಬಾರಿ ಉಪಯೋಗಿಸಿದ ಸಂಖ್ಯೆಯನ್ನು ಇನ್ನೊಂದು ಬಾರಿ ಉಪಯೋಗಿಸಬಾರದು

ಉತ್ತರಗಳನ್ನು ಕಳುಹಿಸುವ ಕಡೇ ತಾ 14-6-1939 ಫಲಿತಾಂಶ 21-6-1939

ಪ್ರವೇಶಧನ 1 ಉತ್ತರಕ್ಕೆ ರೂ 1, 3 ಉತ್ತರಗಳಿಗೆ ರೂ. 2, 8 ಉತ್ತರಗಳಿಗೆ ರೂ 5, 16 ಉತ್ತರದ ಸೆಟ್ಟಿಗೆ ರೂ 8

ಮೇಲೆ ಕಾಣಿಸಿದ ಪ್ರವೇಶಧನದೊಂದಿಗೆ ಖಾಲಿ ಕಾಗದದಲ್ಲಿ ಎಷ್ಟೂ ಉತ್ತರಗಳನ್ನೂ ಕಳುಹಿಸಬಹುದು ಪ್ರವೇಶಧನವನ್ನು ಮನಿ ಆರ್ಡರು ಯಾ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಬೇಕು ಮನಿಯಾರ್ಡರಿನ ಕೂಪನಿನ ಮೇಲೆ ಇಂಗ್ಲಿಷಿನಲ್ಲಿ ನಿಮ್ಮ ಪೂರ್ಣ ಹೆಸರನ್ನು ಬರೆಯಿರಿ ನಿಮ್ಮ ಎಡ್ರೆಸು ಬರೆದ ಅಂಚೆ ಕವರೊಂದನ್ನು ಫಲಿತಾಂಶಕ್ಕಾಗಿ ಉತ್ತರದೊಂದಿಗೆ ಕಳುಹಿಸಿರಿ ಮೆನೇಜರರ ತೀರ್ಮಾನವೇ ನ್ಯಾಯಬದ್ಧವೂ ಕಡೇದೂ ಆಗಿರುತ್ತದೆ

ಮೂರು ಉತ್ತರವನ್ನು ಕಳುಹಿಸುವವರಿಗೆ ನಮ್ಮ ಸ್ಪೆಶಲ್ ಕೆಮಿಕಲ್ ಭಂಗಾರದ ಉಂಗುರ ಮತ್ತು 8 ಉತ್ತರ ಕಳುಹುವವರಿಗೆ 1 ಸೆಟ್ಟು ಶರ್ಟಿನ ಗುಂಡಿಗಳು ಯಾ 4 ಬಳೆಗಳು ಯಾ ಸುಗಂಧ ದ್ರವ್ಯ. 16 ಯಾ ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ನೆಕ್‌ಲೇಸು ಯಾ 4 ಬಳೆಗಳು ಮತ್ತು 1 ಉಂಗುರವನ್ನು ಕೊಡುವೆವು.

ಕಳೆದ ಬಾರಿಯ 54 ಸಂಖ್ಯೆಯ ಉತ್ತರ.

1ನೇ ಸಾಲು	10,	15,	21,	8
2ನೇ ,,	20,	0,	11,	14
3ನೇ ,,	7,	18,	16,	13
4ನೇ ,,	17,	12,	6,	19

ಎಲ್ಲಾ ಹಣ ಮತ್ತು ಉತ್ತರಗಳನ್ನು ಈ ಕೆಳಗಿನವರಿಗೆ ಕಳುಹಿಸಬೇಕು.

The Manager,
Gateway Products
Zaveri Bazar BOMBAY, 2.

ನಗರದ ನವ ನಾಯಕರು

ಮೊದಲ ಮಾತು

ಒಂದು ಲೇಖನಮಾಲೆ ಮುಗಿದು ಇನ್ನೊಂದು ತೊಡಗುತ್ತಿದೆ. ಈ ತನಕ ಹಳ್ಳಿಯ ಜೀವನದಲ್ಲಿ ಮುಖ್ಯಶಕ್ತಿಗಳೆನಿಸಿದ ಹಲವು ಅಧಿಕಾರಿಗಳ ವಿಚಾರ ತಿಳಿದುದಾಯಿತು. ಹಳ್ಳಿಯಲ್ಲಿ ಒಬ್ಬರನ್ನು ಇನ್ನೊಬ್ಬರು ತಿಳಿಯದವರಲ್ಲ. ಇನ್ನೊಬ್ಬರ ವಿಷಯ ಅವರು ಅತಿಯಾಗಿ ತಿಳಿಯಲು ಆಸೆಪಡುವುದರಿಂದಲೇ ಗ್ರಾಮಜೀವನದ ವಿಪ್ಲವಗಳಿಗೆ ಒಂದು ಕಾರಣ. ನಗರವು ಮಾತ್ರ ಇದರ ಜೀವನದ ಚಿತ್ರ. ಇಲ್ಲಿ ಒಬ್ಬರನ್ನು ಇನ್ನೊಬ್ಬರು ತಿಳಿಯದಿರುವುದೇ ಅಧಿಕ. ನಗರ ದೊಡ್ಡದಾದಂತೆ ಈ ತಿಳಿಗೇಡಿತನವೂ ಅಪಾರವಾಗುವುದು—ಇದರಲ್ಲೇ ಅನೇಕರ ಸಂಪತ್ತು ನೆಲಸಿದೆ. ತಮ್ಮನ್ನು ನೆರೆಕರೆಯವರು ಚೆನ್ನಾಗಿ ತಿಳಿದಿದ್ದರೆ ತಮಗೆ ಯಾವ ಸ್ಥಾನವು ಸಿಗಬಹುದೋ, ಅದನ್ನು ಮೀರಿ ಜನ ಏರುವುದಾದರೂ ಸರಿಯೆ, ಇಳಿಯುವುದಾದರೂ ಸರಿಯೆ. ಕಾರಣವೆಂದರೆ ಒಬ್ಬರಿಗೆ ಇನ್ನೊಬ್ಬರ ಅಪರಿಚಯ.

ಇಂಥ ರಾಜ್ಯದಲ್ಲಿ ಎಲ್ಲರಿಗೂ ಮುಂದೆ ಬರಲು ಆಸೆಯಾಗುವುದು. ಪೇಟೆಯ ಪ್ರತಿಯೊಬ್ಬನೂ ತಾನು ನಾಯಕನೆಂದು ತಿಳಿಯುವನು. ಇಂಥ ನವನಾಯಕರು ಬೆಳೆದಂತೆ ಅಲ್ಲಿನ ಜೀವನದಲ್ಲಿ ಪಿಕಲಾಟಗಳು ತಲೆದೋರುವುವು. ಒಬ್ಬನು ತುತ್ತ ತುದಿಯನ್ನು ಏರುವ ತನಕ ಆತನಿಗೆ ಊರವರ ಸಂಪರ್ಕ ಕಡಿಮೆ. ಏರಿದ ಮೇಲೆ ಅವನ ಪರಿಚಯ ಜನರಿಗಾಗಲು ತೊಡಗುವುದು. 'ಓ ಹೋ—ಅವನು ಹೀಗೋ. ನಾನೂ ನಾಯಕನಾಗಬಾರದೇಕೆ' ಎಂದು ಅಲ್ಲೊಬ್ಬ ಉದ್ಗಾರ ತೊಡಗುವುದು. ಹಳ್ಳಿಯು ನಾಯಕರಿಲ್ಲದೆ ಕೆಟ್ಟರೆ ಪೇಟೆ ನಾಯಕರ ಆಧಿಕ್ಯದಿಂದ ಕೆಡುವುದು. ನಗರ ಗ್ರಾಮ ಜೀವನದ ಎರಡು ಭಿನ್ನ ಚಿತ್ರಗಳಾದರೂ ಜೀವನದ ಡೊಂಕು ಪೊಳ್ಳುಗಳನ್ನು ತೋರಿಸುವ ವಿಷಯವಾಗಿ ಸಮಾನ ದರ್ಪಣಗಳು.

ಲೇಖಕ: ಶಿವರಾಮ ಕಾರಂತ.

ದಿ. ಬ. ದಿಗಂಬರರಾಯರು

ಮುದಿಗಳೊಳಗಿನ ಘಟಾ ಪ್ರವೃತ್ತಿಗಳಲ್ಲಿ ಮೊದಲನೆಯ ಮರ್ಯಾದೆಯನ್ನು ದಿಗಂಬರರಾಯರಿಗೇ ಸಲ್ಲಿಸಬೇಕು. ಅವರ ವಿಷಯವಾಗಿ ಅಂತರಂಗದಲ್ಲಿ ನೀವೇನೂ ತಿಳಿಯಿರಿ; ಬಹಿರಂಗದಲ್ಲಿ ಮಾತ್ರ ದಿವಾನಬಹದ್ದೂರ್ ದಿಗಂಬರರಾಯರೆಂದು ಕರೆದೇ ಕರೆಯುವರು. 'ದಿ ದಿ' ಎಂದರೂ ತಿಳಿಯುವಷ್ಟು ಪ್ರಖ್ಯಾತಿ ಅವರಿಗೆ ನಮ್ಮ ಊರಲ್ಲಿದೆ. ಅವರು ಯಾವ ಊರಲ್ಲಿ ಹುಟ್ಟಿದರೋ, ಎಲ್ಲಿ ಬೆಳೆದರೋ, ಎಲ್ಲಿ ಉದ್ಯೋಗದಲ್ಲಿದ್ದರೋ ಅದು ತಿಳಿಯದಾದರೂ ಈಗ ಅವರು ತಮ್ಮ ಪೆನ್ಶನಿನ ಹಣ ವ್ಯಯಿಸುತ್ತಿರುವುದು ನಮ್ಮ ಊರಲ್ಲಿ. ಮಂಗಳೂರಿನ ಪೆಂಟಲೆಂಡ್ ಪೇಟೆ ಪೆನ್ಶನರರ ಸ್ವರ್ಗ ಎಂಬ ವಾಡಿಕೆಯಂತೆ, ಅವರಾದರೂ ಒಂದು ಮನೆ ಕಟ್ಟಿಸಿ ಅಲ್ಲಿ ನೆಲಸಿದ್ದಾರೆ. ಮನೆಯಲ್ಲಿ ತಮ್ಮ ಗೋರಿಯನ್ನು ಕಾಣುವುದು ಅವರ ಹವ್ಯಾಸವಲ್ಲ. ಆದುದರಿಂದ ಬೆಳಿಗ್ಗೆ ಕಾಫಿ ಮುಗಿಸಿ ಹೊರಬಿದ್ದರೆ ಮಧ್ಯಾಹ್ನ ಊಟಕ್ಕೆ ಬರುತ್ತಾರೆ; ತಿರುಗಿ ಮಧ್ಯಾಹ್ನ ಕಾಫಿ ಮುಗಿಸಿ ಹೊರಬಿದ್ದರೆ ಸಂಜೆ ಎಂಟು ಘಂಟೆಯ ಮೊದಲು ಬರುತ್ತಾರೆ. ಇಷ್ಟು ಬಿಡುವಿಲ್ಲದ ದಿನಚರಿ ಅವರದು. ಹೀಗಿರುವರು ತಮ್ಮ ಸರಕಾರಿ ಶಿರಸ್ತೇದಾರಿಕೆಯನ್ನು ಕಳೆದವರಾದರೂ ಅವರ ಚಟುವಟಿಕೆಗೆ ನಿವೃತ್ತಿ ಬಂದಿಲ್ಲ. ಅವರು ಶಿರಸ್ತೇದಾರರಾಗಿದ್ದಾಗ ಸಲಾಂ ಹಾಕಿ ಗೋಣು ಮುರಿದುಕೊಂಡ ಪೇದೆಗಳು ಉಸ್ಸೆಂದರೂ, ಬಿಲ್ಲೆ ತೊಟ್ಟ ನೂರಾರು ಪೇದೆಗಳು ಇಂದಿಗೂ ದಿಗಂಬರರಾಯರ ಕಾರಿನ ಹಾರ್ನ್ ಕೇಳಿದೊಡನೆಯೇ ಜಗಿದು ನಿಲ್ಲುತ್ತಾರೆ.

ಮಂಗಳೂರಿಗೆ ಬರುವ ಮುಂಚೆ ಶಿರಸ್ತೇದಾರರ ಹೆಸರು ನನಗಂತೂ ತಿಳಿದಿರಲಿಲ್ಲ. ಅವರು ನಿವೃತ್ತಿಹೊಂದುವ ಎಂದು ವರ್ಷದ ಮೊದಲೇ ಪೆಂಟಲೆಂಡಿನಲ್ಲಿ ಒಂದು 'ಸಂಧಿ'ಯಲ್ಲಿ ಬೆಲೆಗೆ ಕೊಂಡು, ಅಲ್ಲಿಗೆ ಕಲ್ಲುಗಾಡಿಗಳು ಬರುತ್ತಿರುವಾಗಲೂ ನನಗೆ ಅವರ ಪರಿಚಯವಿರಲಿಲ್ಲ. ಆದರೆ ಅವರ ನಿವೃತ್ತಿಗೆ ಮೊದಲು ದೀರ್ಘ ರಜೆ ಪಡೆದು, ಸರಕಾರಕ್ಕೆ ತಮ್ಮ ಮೇಲಿನ ಋಣ ಕಳೆಯಲಿ ಎಂದು ಹಟಮಾಡಿ ಇಲ್ಲಿಗೆ ಬಂದ ದಿವಸ ನಮ್ಮ ಪೆಂಟ್‌ಲೆಂಡಿನ ಕಳೆ ಬದಲಿಸಿತು. ಮುನ್ಸಿಪಲ್ ಮಕ್ಕಳ ಎದೆಗೆ ಗುರಿಹಿಡಿಯುವ ಒಂದು ಮೋಟರು ವಾಹನ ಹೆಚ್ಚಿತು. ಬಂದವರೇ ಊರಿನ ಪ್ರಮುಖರನ್ನು ತಾವೇ ಕರೆಯಿಸಿಕೊಂಡು ಒಂದು ಭರ್ಜರಿ ಟೀಪಾರ್ಟಿ ಕೊಟ್ಟರು. ಇನ್‌ಕಮ್ ಟ್ಯಾಕ್ಸಿನ ಗಿರಾಕಿಗಳಲ್ಲದೆ ಇತರೆ ಅಸಾಮಿಗಳನ್ನು ಕಾಣುವ ಪರಿಪಾಠ ಅವರಿಗಿರಲಿಲ್ಲ. ಅಂಥವರೇ ಟೀಪಾರ್ಟಿಗೆ ಬಂದವರು ಇವರು. ಕೂಡಿ ನಡೆದ ಸಂತೋಷದ ಕೂಟವೆಂದರೆ ಪೆಂಟಲೆಂಡಿಗೇ 'ಕೆಂಪಕ್ಷರದ ದಿನ' ಎನ್ನುವಂತಾಯಿತು.

ಈಗ ದಿಗಂಬರರಾಯರು ನಮ್ಮ ಊರಲ್ಲಿ ಪ್ರತಿಷ್ಠೆಯಾಗಿ ಬರಿಯ ಹತ್ತು ವರ್ಷಗಳಾದರೂ ಅವರ ಸ್ಥಾನ ಬಲವಾಗಿಬಿಟ್ಟಿದೆ. ಯಾವ ಒಬ್ಬ ನಿವೃತ್ತ ಜಡ್ಜಿ, ಕಲೆಕ್ಟರ್ ಇತ್ಯಾದಿ ಮಹಾನುಭಾವರಿಗೂ ಸಿಗದ ಗೌರವ ಅವರಿಗಿದೆ. ಮಂಗಳೂರಿನ ಸಾರ್ವಜನಿಕ ಸಭೆಗಳಲ್ಲಿ, ಅಂದರೆ ಸುಮ್ಮನೆ ಕಾಕಪೋಕರ ಸಭೆಯಲ್ಲ, ವಜನದಾರರ ಸಭೆಯಲ್ಲಿ — ದಿಗಂಬರರಾಯರಿಗೇ ಅಗ್ರಪೂಜೆ. ಅವರು ಬಂದು ಸೇರಿದ ಮೂರು ವರ್ಷದಲ್ಲಿ ದಿವಾನಬಹದ್ದೂರರಾದರೆಂದರೆ— ಇವರ ಮೇಲ್ಮೆ ಎಷ್ಟಿರಬೇಕು?

ದಿಗಂಬರರಾಯರು ಬಂದು ವರ್ಷ ಆರೆಂಟು ಶಾಲಾ, ಕಾಲೇಜು ವರ್ಧಂತಿಗಳಲ್ಲಿ ಬರಿಯ ಮಂಗಳೂರೊಂದರಲ್ಲೇ ತಮ್ಮ ಅಧ್ಯಕ್ಷತೆಯಿಂದ ವಿರಂಜಿಸಿದರು. ಆರ್ಯಸಮಾಜದ ಅಧ್ಯಕ್ಷರಾದರು; ಬ್ರಹ್ಮಮಂದಿರದಲ್ಲಿ ಆದಿತ್ಯವಾರ ಉಪನ್ಯಾಸವಿತ್ತರು, ಗೌಡಸಾರಸ್ವತ ದೇವಳದ ಟ್ರಸ್ಟಿಯಾದರು, ಥಿಯಾಸೊಫಿ ಕಾನ್ಫರೆನ್ಸಿನಲ್ಲಿ ಪ್ರಾರಂಭದ ಭಾಷಣ ಮಾಡಿದರು; ವಿಶ್ವವಿದ್ಯಾಲಯದ ವೆಲಿಡಿಕ್ಟರಿ ಎಡ್ರೆಸು ಕೊಟ್ಟರು. ಅವರು 'ಮಾತನಾಡಬೇಕೆಂದಿರುವ ಉಪನ್ಯಾಸಗಳು ಸಮಯ ಕಡಿಮೆಯಾಗಿ ಕೊಡದೆ ಹೋದರೂ ಅವುಗಳ 'ಅಪೂರ್ವ ವಿವರ' ಮದ್ರಾಸಿನ ಪತ್ರಿಕೆಗಳಲ್ಲಿ ಪ್ರಕಟವಾದುವು.

ಈಗ ಹತ್ತು ವರ್ಷದ ಮೇಲೆ ಕೇಳುತ್ತೀರಾ? ಊರಿನ ಯಾವುದೇ ಸಭೆ, ಮದುವೆ, ಮತ್ತೊಂದು — ಅವರಿಗೆ ಆಮಂತ್ರಣವಿಲ್ಲದೆ ನಡೆಯುತ್ತಿಲ್ಲ. ಅವರ ಬಿಡುವೆಲ್ಲ ಸಾರ್ವಜನಿಕ ಸೇವೆಗಾಗಿಯೇ ವ್ಯಯವಾಗುತ್ತಿದೆ. ದಿವಾನಬಹದ್ದೂರರ ಮುದ್ರಿಕೆಯಿಲ್ಲದ ಯಾವ ಪಂಕ್ತಿಗೆ ಪಟ್ಟಿಯೂ ಪ್ರಾರಂಭವಾಗುವುದಿಲ್ಲ. ರಾಯರ ಉಡುಗೆ ತೊಡುಗೆ, ರೀತಿ, ಮಾತು ಮರ್ಜಿ— ಎಲ್ಲ ಪ್ರೇಕ್ಷಣೀಯ ವಿಷಯಗಳು.

ವಯಸ್ಸು [illegible] ಈಗ ನಡೆಯುತ್ತಿದೆ—ಆದರೂ ಸೊಂಪಾಗಿ ಬೆಳೆದ ಶರೀರ. ತಲೆಗೂದಲು ನೆರೆತರೂ ಮೀಸೆ ನೆರೆಯುವುದಿಲ್ಲವೆಂಬ ಹಟತೊಟ್ಟು ಕುಳಿತಿತ್ತು. ಮೊನ್ನೆಮೊನ್ನೆಯ ವರೆಗೆ ಕರಿಯ 'ತೆಲುಗ' ಮೀಸೆಯಿತ್ತು. ಎರಡು ವರ್ಷದ ಹಿಂದೆ ಅದು ಚಾಪ್ಲೀನ್ ಮೀಸೆಯಾಗಿ ಈ 'ಮಿಲಿಟರಿ ಕಟ್' ಮಾಡಿಕೊಂಡಿದ್ದಾರೆ. ಅದರಿಂದಾಗಿ ಅಚ್ಚುಕಟ್ಟಾಗಿದ್ದ ಎರಡು ನಿರಿಗೆಗಳು ಈಗ ಮುಖದಲ್ಲಿ ಕಾಣಿಸುತ್ತಿವೆ. ಅವರು ತುಂಬಿದ ಆಳು. ದಪ್ಪನೆ ಮುಖ, ಅದರಲ್ಲಿ ಕಿವಿಯ ಪಾವಲಿ ಗಾತ್ರದ ವಜ್ರದ ಹರಳು ಅವರನ್ನು ಸಂಚಾರಿ ದೀಪಸ್ತಂಭದ ಹಾಗೆ ಪ್ರಜ್ವಲಿಸುತ್ತಿದೆ.

ಅವರ ನಿತ್ಯವೂ ರೇಶ್ಮೆ ಪಂಚೆಯುಡುವ ಅಭ್ಯಾಸ. ಅದರ ಮೇಲೆ ಥಿಯಾಸಫಿಕಲ್ ಸಿಲ್ಕು ಶರ್ಟು, ಮಧುರೆಯ ಶಾಲು, ತಲೆಗೆ ಬೆಳಿಗ್ಗೆ ಗಾಂಧಿಟೊಪ್ಪಿ, ಸಂಜೆ ಫೆಲ್ಟ್ ಕ್ಯಾಪ್. ಮೋಟರಿನಲ್ಲಿ ನಡೆಯುವ ಸ್ವಭಾವವಾದರೂ ವಾಕಿಂಗ್ ಸ್ಟಿಕ್ ಬಿಟ್ಟವರಲ್ಲ. ಅವರು ಯಾವ ಸಭೆಗೇನೆ ಹೋಗಲಿ ಅವರ ಕುರಿತು ಬಿಟ್ಟರೆಂದರೆ, ಸುತ್ತಲಿನವರ ಖುರ್ಚಿಯು [illegible] ಅವರ ಕಡೆಗೆ ತಿರುಗುವುದೆಂಬುದು ನಿಶ್ಚಯ. ಯಾರೂ ಅವರನ್ನು ಪ್ರಥಮದಲ್ಲಿ ಗೌರವಿಸದೆ ಇಲ್ಲ.

ಒಂದು ದಿವಸ ಮಾತ್ರ ಈ ಮರ್ಯಾದೆಗೆ ನಮ್ಮ ಊರಲ್ಲಿ ಲೋಪ ಬಂದಿತು — ಕಾರಣವೇನೋ ತಿಳಿಯೆ. ಜವಾಹರಲಾಲರು ಬರುವರೆಂದೂ [illegible] ಏರ್ಪಾಟಾಗಿತ್ತು. ದಿಗಂಬರರಾಯರು ಹೋಗಿದ್ದರು. ಅವರಿಗೆ ಆಮಂತ್ರಣವಿರಲಿಲ್ಲ — ಎನ್ನುವವರೂ ಇದ್ದಾರೆ. ಆಮಂತ್ರಣವಿತ್ತು, ಆದರೆ ಅವರನ್ನು ಕರೆದು ಕುಳ್ಳಿರಿಸಿದವರಿಲ್ಲ ಎನ್ನುವವರೂ ಇದ್ದಾರೆ. ಹೇಗೇ ಇರಲಿ, ಸಂಗತಿ ಹೇಳುತ್ತೇನೆ. [illegible] ಸಾಮಾನ್ಯವಾಗಿ ಎಲ್ಲ ಸಭೆಗಳಲ್ಲೂ ನಿಯಮಿತ ವೇಳೆ ಕಳೆದ ಮೇಲೆ [illegible] ಸಭೆ [illegible] ಬರುವ ಕಾಲವಿಲ್ಲ. ಅವರಿಗಾಗಿ ಎಲ್ಲರೂ [illegible] ಹಾಗೆ [illegible] ಹಾಕಿ [illegible] ಕೊಳ್ಳುತ್ತ [illegible] ಆ ಸಭೆ [illegible] 'ಇಕ್ಕ' ಎಂದು [illegible] ಹೇಳಿ [illegible] ಬಳಿಕ ಸ್ವಾಗತವನ್ನು ವಹಿಸುವವರು ಅವರು. ಈ ಹೊತ್ತು [illegible] ದರು.

ಜವಾಹರ್ [illegible] ಗೆ ದಿಗಂಬರರಾಯರು [illegible] ಬಂದರು. ಅವರು ಬಂದುದನ್ನು ಯಾರೂ ಗಮನಿಸಲಿಲ್ಲ. ಬದಲು ಉದಾಸೀನರಾದರೆಂದೂ ಅನ್ನುತ್ತಾರೆ. ದಿಗಂಬರರಾಯರ ಕಾರಿನ ಹಾರ್ನು ಯಾ[illegible] ಬಹಳ ವಿಚಿತ್ರವಾದುದು. ಅದು ಪೆಂಟಲೆಂಡಿನಲ್ಲಿ ಕಿರುಚಿದರೆ ಧ್ವನಿ ಕದ್ರಿಗೆ ಕೇಳಿಸಬೇಕು. ಅದನ್ನು ಕಿರುಚಿಸಿಕೊಂಡೇ ಡ್ರೈವರ ಕಾರನ್ನು ಅಲ್ಲಿಂದಿಲ್ಲಿಗೆ ತಂದನು. ಜವಾಹರಲಾಲರಿಗೆ ಕಾದವರ ಕಾರಿನ ಹಾರ್ನು ಕೇಳಿ ಅವರೇ ಬಂದರು ಎಂದು ಜಯಘೋಷವೆಬ್ಬಿಸಿದರು. ಇಳಿದವರು ದಿಗಂಬರರಾಯರು. ಅಲ್ಲಿ ಸೇರಿದ ಅತ್ಯುತ್ಸಾಹಕ ವಾಲೆಂಟಿಯರು 'ಛೀ . .' ಎಂದು ನಕ್ಕರು. ನಗು ಪ್ರತಿಧ್ವನಿಸಿತು. ದಿಗಂಬರರಾಯರು ಕಣ್ಣು ಕೆರಳಿಸಿದರು. ನಗು ಇಮ್ಮಡಿಯಾಯಿತು. ತೀಕ್ಷ್ಣವಾಗಿ ಏನೋ ಗುಣುಗುಟ್ಟುತ್ತಾ ಪ್ಲಾಟ್‌ಫಾರ್ಮ್ ಸರಿಯುವಲ್ಲಿಗೆ ಬಂದರು. ಯಾರೂ ಅವರನ್ನು ಬರಮಾಡಿಕೊಂಡವರಿಲ್ಲ. ಎಲ್ಲರೂ ಗೇಟಿನ ಬಳಿ ಮುಖ್ಯ ಅತಿಥಿಗಾಗಿ ಕಾದಿದ್ದರು. ದಿಗಂಬರರಾಯರು ತಾವಾಗಿ ಮುಂದಿನ ಸಾಲು ಖುರ್ಚಿಗಳನ್ನು ನಿರೀಕ್ಷಿಸಲು ಹೋದರು, ಎಲ್ಲವುಗಳಿಗೂ ಹೆಸರು ಹಾಕಿತ್ತು. ಹೆಸರುಗಳಲ್ಲಿ ರಾಯರದ್ದಿರಲಿಲ್ಲ. ಎರಡನೆಯ ಸಾಲೂ ಹಾಗೆ ರಿಸರ್ವ್ಡ್—ಮೂರನೆಯದ ನಂತರ ಹೆಸರಿರಲಿಲ್ಲ. ಅಲ್ಲಿಗೆ ಹೋಗಿ ರೌದ್ರಾವತಾರವಾಗಿ ನಿಂತರು. 'ಡ್ಯಾಮ್ ಶೇಮ್' ಎಂದು ಗದರಿಸಿದರು. ಯಾರೂ ನೋಡಲಿಲ್ಲ. 'ನನ್ನ ಸೇವೆಗೆ ಇದು ಪ್ರತಿಫಲವೇ!' ಎಂದು [illegible]. ಕೊನೆಗೆ ತಮ್ಮ ಗಾಂಧಿಟೋಪಿಯನ್ನು ಸಿಟ್ಟಿಂದ ನೆಲಕ್ಕೆ ಎಸೆದು, ಮರಳಿ ಹೊರಟರು. ಅದನ್ನು ಯಾರಾದರೂ ನೋಡಿ [illegible]? ಅವರ ಪರಿಚಿತ ಮೂರು ನಾಲ್ಕು ಮುದುಕರು ಬಂದು ಅವರನ್ನು ಸಮಾಧಾನಪಡಿಸಲು ನಿಂತರು. 'ಎಲ್ಲ ಮರೆವಿಂದಾಯಿತು, ತಿಳಿಯದ ಜನಗಳು' ಎಂದು ಏನು ಹೇಳಿದರೂ ಅವರ ರೋಷ ಒಂದಕ್ಕೆ ನಾಲ್ಕು ಮಡಿಯಾಯಿತು. ಅದೇ ಹೊತ್ತಿಗೆ ಜವಾಹರರು ಬಂದರೆ ಅವರ ಆಗಮನದ ಗದ್ದಲದಲ್ಲಿ ದಿಗಂಬರರಾಯರು ಕಣ್ಮರೆಯಾದರು.

'ಜವಾಹರಲಾಲರು ಒಂದು ದಿನಕ್ಕೆ ಬಂದು ಹೋದವರು. ನಾಳೆ ಊರಿನ ನಾವು ಇವರಿಗೆ ಬೇಡವೇ ನೋಡುತ್ತೇನೆ'—ಎಂದು ಪಣತೊಟ್ಟರು ದಿಗಂಬರರಾಯರು. ಅವರ ನೋಡಿ ಯಾರೋ ಒಬ್ಬಿಬ್ಬರು [illegible] ಹೇಳುತ್ತಾರೆ.

ದಿವಾನಬಹದ್ದೂರರ ಸಂಸಾರ ನೋಡಿ [illegible] ಮಧ್ಯದ [illegible] ಮನೆಯ [illegible] ಮಾಡಿ [illegible] ಅವರ ಇದ್ದಾಗ [illegible] ಗಟ್ಟಿಯಾಗಿ [illegible] ಯಲಿ [illegible] ಗಳನ್ನು ಸಹ [illegible]

★ ಬೊಂಬಾಯಿ ಸರಕಾರದ ಪಾನನಿಷೇಧ ಕಾರ್ಯಕ್ರಮಕ್ಕೆ ★
ಬರೋಡ ಸರಕಾರದ ಸಹಾಯ

ಮುಟ್ಟುಗೋಲು ಹಾಕಿದ ಆಸ್ತಿಗಳು ಹಿಂದಕ್ಕೆ ಕೊಡಲ್ಪಟ್ಟವು

ಬೊಂಬಾಯಿ ಸರಕಾರವು ಕೈಕೊಂಡಿರುವ ಪಾನನಿಷೇಧ ಕಾರ್ಯಕ್ರಮವು ಸಫಲವಾಗುವಂತೆ ಬರೋಡ ಸರಕಾರವು ಸಂಪೂರ್ಣ ಸಹಾಯ ಸಹಕಾರಗಳನ್ನು ಕೊಡಬೇಕೆಂದು ನಿರ್ಧರಿಸಿದೆ. ಆದ್ದರಿಂದ ಬೊಂಬಾಯಿಯ ಸರಕಾರವು ಬರೋಡ ಸಂಸ್ಥಾನದ ಗಡಿಗೆ ಹೊಂದಿರುವ ಯಾವ ಯಾವ ಜಿಲ್ಲೆಗಳಲ್ಲಿ ಮದ್ಯಪಾನ ನಿಷೇಧವನ್ನು ಜಾರಿಗೆ ತಂದಿದೆಯೋ, ಆ ಗಡಿಪ್ರದೇಶದಲ್ಲಿ ಮುಖ್ಯವಾಗಿ ಮಾಹುವಾ ಮತ್ತು ವ್ಯಾರಾ ತಾಲೂಕುಗಳಲ್ಲಿರುವ ಶೇಂದಿ, ಶರಾಬು ಗುತ್ತಿಗೆಗಳನ್ನು ಮುಚ್ಚಿಬಿಡುವದು. ಆದ್ದರಿಂದ ಬೊಂಬಾಯಿ ಗಡಿಯೊಳಗಿನ ಮದ್ಯಪಾಯಿಗಳು ಬರೋಡ ಗಡಿದಾಟಿ ಅಲ್ಲಿ ಮದ್ಯಪಾನ ಮಾಡುವದು ಅಸಾಧ್ಯವಾಗುವದು. ಬರೋಡ ಸಂಸ್ಥಾನದಿಂದ ಯಾರಾದರೂ ಶೇಂದಿ ಶರಾಬು ತಂದು ಕಳ್ಳತನದಿಂದ ಬೊಂಬಾಯಿ ಪ್ರಾಂತ್ಯದಲ್ಲಿ ಮಾರಿದ ಸಂಗತಿ ಋಜುವಾದರೆ ಬರೋಡ ಸರಕಾರವು ಅಂಥ ಕಳ್ಳತನಕ್ಕೆ ಸಂಬಂಧಪಟ್ಟವರನ್ನೆಲ್ಲ ವಿಚಾರಿಸಿ ದಂಡಿಸುವದು; ಮತ್ತು ಗುತ್ತಿಗೆಯವರ ಲೈಸೆನ್ಸುಗಳನ್ನು ರದ್ದುಮಾಡುವದು. ಗಡಿಯೊಳಗಿನ ಶರಾಬು ಅಂಗಡಿಗಳು ಎಪ್ರಿಲ್ ೧೧ಂದ ಮುಚ್ಚಲ್ಪಟ್ಟಿರುವವು. ಶೇಂದಿ ಅಂಗಡಿಗಳು ಬರುವ ಆಗೋಸ್ತರಿಂದ ಮುಚ್ಚಲ್ಪಡುವವು.

ಬೊಂಬಾಯಿಯಲ್ಲಿ ಸಿದ್ಧತೆ.

ಆಗೋಸ್ತು ೧ರಿಂದ ಬೊಂಬಾಯಿ ನಗರದಲ್ಲಿ ಪಾನನಿಷೇಧವಾಗುವ ಸರ್ವಸಿದ್ಧತೆಗಳಾಗಿರುವವು. ಅಬಕಾರಿ ತಿದ್ದುಪಡಿ ಕಾನೂನು ಮೇ ೧೯ರಿಂದ ಜಾರಿಗೆ ಬಂದಿರುವದು. ಆ ಕಾನೂನಿನ ಪ್ರಕಾರ ಪಾನಸಂಬಂಧವಾದ ಯಾವದೇ ಜಾಹೀರಾತನ್ನು ಪ್ರಕಟಿಸುವದೂ ಅಚ್ಚುಹಾಕುವದೂ, ಹಂಚುವದೂ ಅಪರಾಧವಾಗಿದೆ. ಈ ಅಪರಾಧವನ್ನು ಮಾಡಿದವರಿಗೆ ೧೦೦೦ ರೂಪಾಯಿಗಳ ತನಕ ಜುರುಮಾನೆ ಆಗುತ್ತದೆ. ಪ್ರಾಂತ್ಯದ ಹೊರಗಿನ ಪತ್ರಿಕೆಗಳಲ್ಲಿ ಪ್ರಕಟವಾಗುವ ಪಾನಸಂಬಂಧ ಜಾಹೀರಾತುಗಳಿಗೆ ಈ ಕಾನೂನು ನಿರ್ಬಂಧವು ಉಪಯೋಗವಿಲ್ಲ. ಆದರೆ ಅಂಥ ಜಾಹೀರಾತುಗಳನ್ನು ಪ್ರಕಟಿಸುವ ಪತ್ರಿಕೆಗಳನ್ನು ಪ್ರಾಂತ್ಯದೊಳಗೆ ಬಾರದಂತೆ ತಡೆಯುವ ಅಧಿಕಾರವು ಈ ಕಾನೂನಿನ ಮೂಲಕ ಸರಕಾರಕ್ಕೆ ಪ್ರಾಪ್ತವಾಗಿದೆ

ಗಡಿನಾಡಿನಲ್ಲಿ

ಐದು ವರ್ಷದೊಳಗಾಗಿ ಗಡಿನಾಡಿನಲ್ಲೆಲ್ಲ ಮದ್ಯನಿಷೇಧಮಾಡುವ ಕಾರ್ಯಕ್ರಮವನ್ನು ವಾಯುವ್ಯ ಸರಹದ್ದಿನ ಕಾಂಗ್ರೆಸ ಸರಕಾರವು ತಯಾರಿಸಿದೆ. ಸರಕಾರದ ಮದ್ಯನಿಷೇಧ ಕಾರ್ಯಕ್ರಮಕ್ಕೆ ವಿರೋಧಿಗಳಿದ್ದಾರೆಯೋ ಎಂದು ಪತ್ರಿಕಾ ಪ್ರತಿನಿಧಿಯು ಅಲ್ಲಿಯ ಪ್ರಧಾನ ಮಂತ್ರಿ ಡಾಕ್ಟರ ಖಾನಸಾಹೇಬರನ್ನು ಕೇಳಿದಾಗ— "ಪಾಶ್ಚಾತ್ಯ ನಾಗರಿಕತೆಯ ಮೋಹಜಾಲದಲ್ಲಿ ಬಿದ್ದು ಮದ್ಯನಿಷೇಧವನ್ನು ವಿರೋಧಿಸುವ ಜಾತಿ ಗಡಿನಾಡಿನಲ್ಲಿ ಇರುವದಿಲ್ಲ. ಒಂದು ವೇಳೆ ಅಂಥ ಜಾತಿಯು ಇರುವದೆಂದು ನನಗೆ ಗೊತ್ತಾದರೆ ಅದು ಪರದೇಶಿ ಜಾತಿ ಎಂದು ಸಾರಿ ಅದನ್ನು ಮನಸ್ಸಿಗೆ ನಡೆಯಲು ಬಿಟ್ಟುಬಿಡುವೆನು. ಗಡಿನಾಡಿನ ಜನರು ಮದ್ಯನಿಷೇಧಕ್ಕೆ ಪೂರ್ಣ ಅನುಕೂಲರಾಗಿದ್ದಾರೆ ಎಂದರು.

ಮದ್ರಾಸ ಸರಕಾರದ ಶ್ಲಾಘನೆ

ನಮ್ಮ ದೇಶದಲ್ಲಿ ಮದ್ಯನಿಷೇಧವನ್ನು ಸಫಲವಾಗಿರುವ ಪ್ರಾಂತ್ಯಗಳಲ್ಲಿ ಮದ್ರಾಸು ಅಗ್ರಗಣ್ಯವಾಗಿದೆ. ಅದರ ಸಫಲತೆಯನ್ನು ದೇಶವಿದೇಶಗಳ ಎಲ್ಲ ಪಾನವಿರೋಧಕರು ಮುಕ್ತಕಂಠದಿಂದ ಶ್ಲಾಘಿಸಿರುವರು. ಮೊನ್ನೆ ಮೈಸೂರು ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲರವರು ಸೇಲಂ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತ ಅಲ್ಲಿ ಮದ್ಯನಿಷೇಧದಿಂದ ಜನತೆಗುಂಟಾದ ಲಾಭಗಳನ್ನು ಪ್ರತ್ಯಕ್ಷ ಕಂಡು, ಒಂದು ಭಾಷಣದಲ್ಲಿ ತಮ್ಮ ಹಾರ್ದಿಕ ಸಂತೋಷವನ್ನೂ ತೃಪ್ತಿಯನ್ನೂ ವ್ಯಕ್ತಪಡಿಸಿದ್ದಾರೆ. ಮೈಸೂರಿನಲ್ಲಿ ಕೂಡ ಕಾನೂನು ಮೂಲಕ ಒತ್ತಾಯದ ನಿಷೇಧಮಾಡಿ, ಅಲ್ಲವಾದರೆ, ಜನರಿಗೆ ಮದ್ಯಪಾನದಿಂದಾಗುವ ಕಷ್ಟ, ನಷ್ಟ, ನೋವು ನರಳಿಕೆಗಳನ್ನು ತೋರಿಸಿ ಸಮಝಾಯಿಸಿ ಪಾನನಿಷೇಧವು ಕಾಂಗ್ರೆಸ್ ಸರಕಾರಗಳು ಹಾಕಿಕೊಂಡ ಮಾರ್ಗದಲ್ಲಿ ಅಲ್ಲವಾದರೆ, ಬೇರೊಂದು ಮಾರ್ಗದಲ್ಲಿ—ಹೇಗೂ ಮೈಸೂರಿನಲ್ಲಿ ಆಗಬೇಕೆಂದು ಮೈಸೂರು ದಿವಾನರು ನುಡಿದಿರುವದು ಪಾನನಿಷೇಧ ಚಳವಳಿಕ್ಕೆ ದೊಡ್ಡ ಪ್ರೋತ್ಸಾಹದೊರೆತಂತಾಗಿದೆ

ಮುಟ್ಟುಗೋಲು ಹಾಕಿದ ಆಸ್ತಿಗಳು ಹಿಂದಕ್ಕೆ ಕೊಡಲ್ಪಟ್ಟವು

೧೯೩೦-೩೨ನೇ ಇಸವಿಯ ಕರನಿರಾಕರಣ ಚಳವಳಿ ಕಾಲದಲ್ಲಿ ಬೊಂಬಾಯಿ ಸರಕಾರದಿಂದ ಜಪ್ತಾಗಿ ಮಾರಲ್ಪಟ್ಟ ಆಸ್ತಿಗಳನ್ನು ಬೊಂಬಾಯಿ ಸರಕಾರವು ಕ್ರಯಕ್ಕೆ ಪಡೆಕೊಂಡು ಅವುಗಳನ್ನು ಮೊದಲಿನ ಭೂಮಾಲಿಕರಿಗೆ ಹಿಂದಕ್ಕೆ ಕೊಟ್ಟಿದೆ. ಮಹಾತ್ಮರ ಅಹಿಂಸಾತ್ಮಕ ಯುದ್ಧಕ್ರಮದ ಸತ್ಫಲವಿದು!

ಗೃಹಮಂತ್ರಿಗಳ ಮಹಾಸಭೆ.

ಭಾರತದ ಪ್ರಾಂತೀಯ ಸರಕಾರಗಳ ಗೃಹಮಂತ್ರಿಗಳ ಮಹಾಸಭೆಯು ಸಿಮ್ಲಾದಲ್ಲಿ ಕೇಂದ್ರ ಸರಕಾರ ಗೃಹಮಂತ್ರಿ ಸರ್. ರೆಜಿನಾಲ್ಡ ಮೆಕ್ಸ್‌ವೆಲ್ಲರ ಅಧ್ಯಕ್ಷತೆಯಲ್ಲಿ ಕೂಡಿತು. ಶಾಂತಿ ಮತ್ತ ವ್ಯವಸ್ಥೆಯನ್ನು ಕಾಪಾಡುವದರಲ್ಲಿ ಪ್ರಾಂತಿಕ ಸರಕಾರಗಳು ತಮ್ಮ ತಮ್ಮ ಪ್ರತ್ಯೇಕ ಧೋರಣೆಯನ್ನು ಅನುಸರಿಸಲಿಕ್ಕೆ ಸ್ವತಂತ್ರವಾಗಿವೆಯಾದರೂ ಸಮಗ್ರಭಾರತದ ದೃಷ್ಟಿಯಿಂದ ಅವುಗಳಿಗೆ ಒಂದೇ ಧೋರಣೆಯಿರುವದು ಹಿತಕರವಾಗಿದೆ ಎಂದು ಅವರೆಂದರು. ಆದರೆ ಇದೇ ಭಾವನೆಯು ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳೊಳಗೆ ಇಲ್ಲದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಪತ್ರಿಕೆಗಳು ಹೇಳುತ್ತವೆ

ಬಿಹಾರಿನಲ್ಲಿ ಸೈನಿಕ ಶಿಕ್ಷಣಾಲಯ

ಬಿಹಾರದಲ್ಲಿ ಸೈನಿಕ ಶಿಕ್ಷಣದ ಪ್ರಚಾರ ಮಾಡುವ ಉದ್ದೇಶದಿಂದ ಅಲ್ಲಿಯ ಕಾಂಗ್ರೆಸ ಸರಕಾರವು ರಾಂಚಿಯಲ್ಲಿ ಒಂದು ಸೈನಿಕ ಶಿಕ್ಷಣಾಲಯವನ್ನು ತೆರೆಯುವ ನಿರ್ಧಾರಕ್ಕೆ ಬಂದಿದೆ ... ಇದೇ ವರ್ಷದಿಂದ ಕಾರ್ಯಾರಂಭ ಮಾಡುವದು

Mangalore Automobiles Ltd.
(City Bus Service)

In reply to numerous enquiries we are receiving daily from the public, we beg to state that on the 8th February 1939 we applied to the Road Traffic Board for two 23 seater Buses

Again on the 29th April 1939 we applied for two 20 seater Buses which are already registered and G Permits are awaited.

We have further applied for four twentytwo seater Buses on the 6th May 1939

KERWAR & Co.,
Managing Agents

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡ ಕೂಡಲೆ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದ ಚಿಟಿಕಿ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ ಎಲ್ಲ ರುಚಿಗೆ ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರದಲ್ಲಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ ೧ ಸಾರಥಿ ನಸ್ಯ 1 ಪೌಂಡಿಕ್ಕೆ ರೂ 3 ೪—0 ನವಿಲಿನ ಮಾರ್ಕು ಸಾರಥಿ ನಸ್ಯ 1 ಪೌಂಡಿಕ್ಕೆ ರೂ 3 0 0

(ವಿ ಪಿ ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ಎಡ್ರೆಸು —
ಎ ಪಿ ಸಾರಥಿ
ಮೆನ್ಯುಫೆಕ್ಚುರರ್ಸ್ ಒಫ್ ಮದ್ರಾಸ್ ಸ್ನಫ್, ಪಿ. ಬಿ ನಂಬ್ರ 47 ಮದ್ರಾಸು

U. K. BHUJANGA NAYAK
CLOTH COMMISSION AGENT
SHEVAPET, SALEM
ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಹೊಟ್ಟೆಯೊಳಗೆ ದುಸ್ಸಹವಾದ ವೇದನೆ

ಹೊಟ್ಟೆನೋವಿನ ಯಾತನೆಯನ್ನು ಯಾರು ಸಹಿಸಿಕೊಂಡಿದ್ದಾರೋ ಅವರಲ್ಲಿ ಪ್ರತಿಯೊಬ್ಬ ವಿ. ಪಿ ಯವರ ವಿಷಯ ಕನಿಕರ ಪಡದೆ ಇರಲಾರರು. ಈಗಲೂ ಹೊಟ್ಟೆನೋವಿನಿಂದ ನರಳುವವರ ... ಅವರ ... ಭಯದಿಂದ ... ಉಪಕಾರವಾ... ... ಎಚ್ಚರಿಕೆಯನ್ನು ಅಲ್ಲಗಳೆದರೆ ಭಯಂಕರವಾದ ಗಂಡಾಂತರವನ್ನು ಎದುರಿಸಬೇಕಾಗ ಬಹುದು. ವಿ. ಪಿ. ಯವರ ... ಹಾಗೆ ನೀವು ಮಾಡಿದರೆ—ಈಗ ನೂ... ... ಜನರು ಮಾಡುತ್ತಿರುವಂತೆ ಅಗ... ... ಅವರು ಬರೆಯುತ್ತಾರೆ —

ನಾನೆ ಹೊಟ್ಟೆ ನೋವಿನ ಯಾತನೆಯಿಂದ ... ... ರುಚಿ ... ... ನಾನು ಅನೇಕ ... ... ನನ್ನ ಕೆಲವು ಮದ್ದುಗಳನ್ನು ಉಪಯೋಗಿಸಿ ... ಅದರ ಗುಣವಾಗುವುದರ ... ನನ್ನ ಸ್ಥಿತಿ ಕೆಟ್ಟದೇ ಆಯಿತು

ಒಬ್ಬ ಸ್ನೇಹಿತನ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ಶಿಫಾರಸು ಮಾಡಿದನು ಆಗಲೇ ಒಂದು ಬಾಟ್ಲಿಯನ್ನು ನಾನು ಪಡಕೊಂಡೆನು ... ನನ್ನ ವೇದನೆಯು ... ವಾಗ ... ಈಗ ಸುಖಿಯಾಗಿ ... ಎಲ್ಲಾ ನೋವು ಮಾಯವಾಗಿವೆ ...

... ಈಗ ನಿಮಗೆ ... ಹೊಟ್ಟೆನೋವಿನ ಚಿಹ್ನೆಯು ಕಂಡು ಬಂದ ಕೂಡಲೇ—ಅದು ಎಷ್ಟು ಅಲ್ಪವಾಗಿರಲಿ—ಕೂಡಲೆ ಒಂದು ಬಾಟ್ಲಿ ಖಾತ್ರಿಯಾದ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರನ್ನು ಕೊಂಡು ಕೊಳ್ಳಿರಿ ಕೊಂಡುಕೊಳ್ಳುವ ಮೊದಲು ಬಾಟ್ಲಿಯ ಮೇಲಿನ ಪೆಟ್ಟಿಗೆಯ ಮೇಲೂ ಎಲೆಕ್ಸ್ ಸಿ. ಮೆಕ್ಲೀನ್ಸ್ ಎಂಬ ದಸ್ಕತ

ಮತ್ತು ಪೆಟ್ಟಿಗೆಯ ಮೇಲೆ ಕೆಂಪು ಸೀಲ ಇರುವುದೋ ಎಂದು ದೃಢಪಡಿಸಿಕೊಳ್ಳಿರಿ. ಆಗ ನೀವು ಹೊಟ್ಟೆಯ ಅನಾರೋಗ್ಯದಿಂದ ಸಿದ್ಧವಾಗಿ ಗುಣಹೊಂದಿ ಎಲ್ಲಾ ತರದ ಭಯಂಕರದ ನರಳುವಿಕೆಯಿಂದ ಕಾಪಾಡಲ್ಪಡುವಿರಿ. ಖಾತ್ರಿಯಾದ ಮೆಕ್ಲೀನ್ ಬ್ರಾಂಡ್ ಸ್ಟೊಮಕ್ ಪೌಡರ್ ಪೆಟ್ಟಿಯೊಳಗಿದ್ದ ಬಾಟ್ಲಿಯಲ್ಲಿ ಮಾರಲ್ಪಡುವುದು ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ. ಪೌಡರ್ ಅಥವಾ ಮಾತ್ರೆ ರೂಪದಲ್ಲಿದೆ. ಕಮ್ಮಿ ಕ್ರಯದ ಫಕಲಿ ಮಾಲುಗಳು ನಿಷ್ಪ್ರಯೋಜನ ಮತ್ತು ನಿಮ್ಮ ವೇದನೆಯನ್ನು ಇನ್ನೂ ವೃದ್ಧಿಸುವುದು. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ



ಮಂಗಳೂರು ಸಮಾಚಾರ

ಸಭೆ:—ಟೌನ್ ಕಾಂಗ್ರೆಸ್ ಕಮಿಟಿಯ ಸಾಮುದಾಯಿಕ ವಿದ್ಯಾ ಪ್ರಸಾರ ಮತ್ತು ಮಜೂರರ ಉಪಸಮಿತಿಗಳ ಸಭೆಯು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಕಳೆದ ಆದಿತ್ಯವಾರ ಸೇರಿ ಸಾಕ್ಷರತಾ ಪ್ರಚಾರಕ್ಕಾಗಿ ಕೆಲವು ರಾತ್ರಿ ಶಾಲೆಗಳಿಗೆ ಧನಸಹಾಯ ಮಾಡುವುದಾಗಿ ನಿರ್ಧಾರಗಳಾಗಿವೆ

ಅಳಿಯ ಸಂತಾನ ಸುಧಾರಣಾ ಮಸೂದೆ:—ಅಳಿಯ ಸಂತಾನ ಸುಧಾರಣಾ ಪರಿಷತ್ತಿನಲ್ಲಿ ನೇಮಿಸಲ್ಪಟ್ಟ ಸಮಿತಿಯವರು ಶ್ರೀ ಜಿನರಾಜ ಹೆಗ್ಡೆಯವರು ಅಧ್ಯಕ್ಷತೆಯಲ್ಲಿ ತಾ. ೩೦ರಂದು ಸಭೆ ಸೇರಿ ಸೂಚಿತ ಮಸೂದೆಯನ್ನು ಪರಿಶೀಲಿಸಿ ಚರ್ಚೆಯಾದ ಮೇಲೆ ಬರುವ ತಾ. ೧೮ರಂದು ಪುನಃ ಸಮಿತಿಯು ಸೇರಬೇಕಾಗಿ ನಿರ್ಣಯವಾಯಿತು

ಕೆರಿಗೆ ತೆರುವವರ ಸಂಘದ ಸ್ಥಾಪನೆ:—ಮಂಗಳೂರು ನಗರದ ಕೆರಿಗೆ ತೆರುವವರ ಸಂಘದ ಸ್ಥಾಪನೆಯ ಬಗ್ಗೆ ಮೊದಲೇ ನಿಶ್ಚಯಿಸಲ್ಪಟ್ಟಂತೆ ನಿಯಮಿತವಾದ ಸಮಿತಿಯು ಅದರ ನಿಯಮಾವಳಿಗಳನ್ನು ತಯಾರಿಸಿ, ಸಂಘದ ನಿಬಂಧನೆಗಳನ್ನು ಸಿದ್ಧಪಡಿಸಿದುದರ ಪರಿಶೀಲನೆಗಾಗಿ ತಾ. ೩೧ರಂದು ಸಾಯಂಕಾಲ ಮೈದಾನಿನಲ್ಲಿ ಶ್ರೀ ಜೆರೋಮ್ ಸಾಲ್ಡಾನರ ಅಧ್ಯಕ್ಷತೆಯಿಂದ ಸಭೆ ಸೇರಿತು. ನಿಯಮಾವಳಿಗಳು ಓದಿ ಸ್ವೀಕೃತವಾದುವು ಸಂಘದ ನಿಬಂಧನೆಗಳು ಸಮಿತಿಯು ಒಪ್ಪಿಸಲ್ಪಟ್ಟಂತೆ ಮಂಜೂರಾಯಿತು. ತಾ. ೧೫ರಂದು ಪುನಃ ಸಭೆ ಸೇರಲಿರುವ ಕಮಿಟಿಗೆ ಸದಸ್ಯರನ್ನು ಚುನಾಯಿಸುವರೆ ನಿರ್ಣಯಿಸಲ್ಪಟ್ಟಿತು

ಕಾಫಿ ತೋಟಗಾರರ ಸಭೆ:—ಪೆಟ್ಲಂಡ್ ಪೇಟೆ ಇಗರ್ಜಿಯಲ್ಲಿ ಕಾಫಿ, ತೋಟಗಾರರ ಸಭೆಯು ಶ್ರೀ ಜೆರೋಮ್ ಸಾಲ್ಡಾನಾರ ಅಧ್ಯಕ್ಷತೆಯಿಂದ ಜರಗಿ ಸಂಘಟನೆಯಿಂದ ಸಂಕಷ್ಟಗಳನ್ನು ಪರಿಹರಿಸುವ ಅನೇಕ ವಿಷಯಗಳು ಚರ್ಚಿಸಲ್ಪಟ್ಟವು

ಬಿರುದು ದಾನ:—ತಾ. ೧ರಂದು ಸಂಜೆ ಗವರ್ನಮೆಂಟ್ ಕಾಲೇಜಿನಲ್ಲಿ ಜಿಲ್ಲಾ ಕಲೆಕ್ಟರರ ದರ್ಬಾರು ನಡೆದು ನಿವೃತ್ತಿ ಜಡ್ಜರಾದ ಶ್ರೀ ಉಳ್ಳಾಲ ವಾಮನ ನಾಯ್ಕರಿಗೆ ರಾವ್ ಬಹದ್ದೂರ್ ಬಿರುದು ಕೊಡಲಾಯಿತು

ಅದ್ವೈತ ಸಮಿತಿ:—ದಕ್ಷಿಣ ಕರ್ನಾಟಕ ಅದ್ವೈತ ಸಮಿತಿಯ ೨೩ನೇ ಮಹಾಸಭೆಯು ಕದಿರೆ ಗೋಪಾಲ ಭೇಷಜಾಶ್ರಮದಲ್ಲಿ ಕಳೆದ ತಾ ೨೬ರಂದು ಸೇರಿತು

ಆಕಸ್ಮಿತ ಮರಣ:—ಬೊಕ್ಕಪಟ್ಣದಲ್ಲಿ ಸ್ಮಶಾನ ಮುಂದುಗಡೆ ತಾ ೨ರಂದು ರಾತ್ರಿ ಒಬ್ಬ ಕುಂಬ್ಳೆಯ ಬಿಲ್ಲವ ಯುವಕನು ಅಕಸ್ಮಾತ್ತಾಗಿ ರಕ್ತಕಾರಿ ನಿಧನ ಹೊಂದಿರುವುದಾಗಿ ತಿಳಿಯುತ್ತದೆ.

ಕಾಗದ ತಯಾರಿಸುವ ಶಿಕ್ಷಣ:—ಮಂಗಳೂರು ದಿಪ್ರೆಸ್ಡ್ ಕ್ಲಾಸಿಸ್ ಮಿಶನ್ ಶಾಲೆಯಲ್ಲಿ ಕಾಗದ ತಯಾರಿಸಲು ಕಲಿಸುವ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ಜೂನ್ ತಾ. ೧೫ರಿಂದ ಎರಡು ತಿಂಗಳ ವರೆಗೆ ಕ್ಲಾಸುಗಳು ತೆರೆಯಲ್ಪಡುವವು ಉಪಾಧ್ಯಾಯರಿಗೂ ಅವರ ದೈನಿಕ ಕೆಲಸಗಳನ್ನು ವಹಿಸಿ ಕಾಸಿಗೆ ಬರಬಲ್ಲ ಅನುಕೂಲ ಮಾಡಲಾಗುವುದು

ಶ್ರೀಮತಿ ಕಮಲಾದೇವಿಯವರು:—ಜೂನ್ ತಾ ೨ರಂದು ಯೂರೋಪ್ಪ ಯಾತ್ರೆಗಾಗಿ ತೆರಳಿರುವರು.

ಸತ್ಕಾರ ಕೂಟ:—ಶ್ರೀ ಸುಜೀರ್ ಪುಂಡಲೀಕ ನಾಯ್ಕರಿಗೆ ಅವರನ್ನು ಬೊಂಬಾಯಿ ಲ್ಯಾಫ್ ಇನ್ಷುರೆನ್ಸ್ ಕಂಪೆನಿಯ ಡೈರೆಕ್ಟರರನ್ನಾಗಿ ಚುನಾವಣೆ ಮಾಡಿದ ಪರವಾಗಿ ಅವರ ಮಿತ್ರರು ಒಂದು ಸತ್ಕಾರಕೂಟವನ್ನು ಬ್ಯಾಂಕ್ ಒಫ್ ಹಿಂದೂಸ್ಥಾನ ಕಟ್ಟಡದಲ್ಲಿ ಕೊಟ್ಟರು. ಈ ಸತ್ಕಾರಕೂಟಕ್ಕೆ ಜಿ ಕಾಂ. ಕಮಿಟಿಯ ಅಧ್ಯಕ್ಷರಾದ ಶ್ರೀ ಯು. ಶ್ರೀನಿವಾಸ ಮಲ್ಯರು, ಡಿ ಬೋ ಅಧ್ಯಕ್ಷರಾದ ಡಾ ಕೆ ವಿಟ್ಠಲ ಶೆಟ್ಟರೂ ಮೊದಲಾದ ಅತಿಥಿಗಳೂ ಹಾಜರಿದ್ದರು.

ಕಾರು ಡಿಕ್ಕಿ ಹೊಡೆದುವು:—ಉದ್ಯಾವರ ದೇವಸ್ಥಾನದ ಬಳಿ ಎರಡು ಕಾರುಗಳು ಕಳೆದ ಶುಕ್ರವಾರ ಡಿಕ್ಕಿ ಹೊಡೆದು ಅಲ್ಪಸ್ವಲ್ಪ ಗಾಯಗಳಾಗಿವೆ

ಮುನ್ಸಿಪಲ್ ಕೌನ್ಸಿಲ್ ಮೀಟಿಂಗ್:—ತಾ ೫ರಂದು ಸಂಜೆ ೫ಕ್ಕೆ ಮುನ್ಸಿಪಲ್ ಕೌನ್ಸಿಲಿನ ಮೀಟಿಂಗು ಚ್ಯಾರ್‌ಮೇನರಾದ ಶ್ರೀ ಬಿ ವೆಂಕಟ್ರಾಯ ಬಾಳಿಗರ ಅಧ್ಯಕ್ಷತೆಯಿಂದ ಸೇರಿತು. ವೆಬ್‌ಸ್ಟರ್ ಮಾರ್ಕೆಟಿನ ವಿಚಾರವನ್ನು ಕೌನ್ಸಿಲು ಬದಲಿಸಬೇಕೆಂಬ ಸರಕಾರದ ಅಪ್ಪಣೆಯನ್ನು ವಿರೋಧಿಸುವ ಠರಾವನ್ನು ಶ್ರೀ ಅಂದ್ರಾದೆಯವರು ತಂದರು ಶ್ರೀ ರಂ. ೮ ತಲಚೇರಕರರು ಠರಾವನ್ನು ವಿರೋಧಿಸಿ ಕೌನ್ಸಿಲು ತನ್ನ ವರ್ತನೆಯಿಂದ ನಗೆಗೀಡಾಗಿದೆಯೆಂದು ಟೀಕಿಸಿದರು. ಶ್ರೀ ಅಂದ್ರಾದೆಯವರ ಠರಾವು ಬಹುಮತದಿಂದ ಮಂಜೂರಾಯಿತು.

ತಾ ೮ನೇ ಸಂಜೆ ಸ್ಥಳೀಕ ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಕರ್ನಾಟಕ ಸುಪ್ರಸಿದ್ಧ ಹರಿದಾಸರಾದ ಶ್ರೀ ಬೇಲೂರು ಕೇಶವದಾಸರ ಹರಿಕತೆಯು ನಡೆಯಿತು

ಕಳೆದ ಮಂಗಳವಾರದಿಂದ ಇಲ್ಲಿ ಮಳೆಯು ಪ್ರಾರಂಭವಾಗಿದೆ

ಕಾಂಗ್ರೆಸ್ ಕಮಿಟಿಯ ಸಭೆ

ತಾ ೩—೬—೧೯೩೯ರಲ್ಲು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಯು ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಅಪರಾಹ್ನ ಘಂಟೆ ೩ಕ್ಕೆ ಕೂಡಿದ ದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯ ವರದಿ-

ಹಿಂದಿನ ಸಭೆಯ ವರದಿಯನ್ನು ಓದಿ ಮಂಜೂರು ಮಾಡಲಾಯಿತು

ಈ ಕಮಿಟಿಯ ಮೆಂಬರರಾಗಿದ್ದ ಶ್ರೀಮತಿ ಕಮಲಾದೇವಿಯವರು ಪ್ರಪಂಚದ ಮಹಿಳಾ ಪರಿಷತ್ತಿಗೆ ಹಿಂದೂಸ್ಥಾನದ ಒಬ್ಬ ಪ್ರಮುಖ ಪ್ರತಿನಿಧಿಗಳಾಗಿ ಆರಿಸಲ್ಪಟ್ಟುದಕ್ಕಾಗಿಯೂ ಅಂತರರಾಷ್ಟ್ರೀಯ ಶಾಂತಿ ಪರಿಷತ್ತಿಗೆ ಹಿಂದೂಸ್ಥಾನದಿಂದ ಆರಿಸಲ್ಪಟ್ಟ ಮೂರು ಮಂದಿಯಲ್ಲಿ ಒಬ್ಬರಾಗಿಯೂ ಮತ್ತು ಈಜಿಪ್ತಿನ ವಾಫ್ಡ ಪಾರ್ಟಿಯ ಪರವಾಗಿ ನಾಹಸ್‌ಪಾಶಾರವರು ಈಜಿಪ್ತಿಗೆ ಇವರನ್ನು ಆಮಂತ್ರಿಸಿದುದಕ್ಕಾಗಿಯೂ ಈ ಕಮಿಟಿಯು ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತದೆ. ಅವರು ಇಡೀ ದೇಶಕ್ಕಾಗಿ ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ರಾಷ್ಟ್ರಕ್ಕಾಗಿ ಮಾಡಿದ ಸ್ವಾರ್ಥತ್ಯಾಗ, ದೇಶ ಸೇವೆಗಳನ್ನೂ, ಕೃಷಿಕ ಮತ್ತು ಕೂಲಿಕಾರರ ಏಳಿಗೆಗಾಗಿ ಕೈಕೊಂಡ ಕಾರ್ಯಗಳಿಗೂ ಈ ಕಮಿಟಿಯು ತನ್ನ ಹಾರ್ದಿಕ ಸಂತೋಷವನ್ನು ವ್ಯಕ್ತಪಡಿಸುತ್ತದೆ. ಅವರ ಈ ಸಂಚಾರವು ಅದು ಪಡೆಯತಕ್ಕ ಯಶಸ್ಸನ್ನು ಪಡೆಯುವುದಲ್ಲದೆ ಅವರು ಈ ಯುರೋಪು, ಅಮೇರಿಕಾ ಮತ್ತು ಇಜಿಪ್ತುಗಳ ಸಂಚಾರದಿಂದ ಈ ರಾಷ್ಟ್ರಗಳಿಗೂ ಹಿಂದೂಸ್ಥಾನಕ್ಕೂ ಇರುವ ಸೌಹಾರ್ದ ಮತ್ತು ಸ್ನೇಹವು ವೃದ್ಧಿಗೊಳ್ಳುವದೆಂಬುದಾಗಲಿ ಸಹಕಾರಿಯಾಗುತ್ತದೆ ಮತ್ತು ಶ್ರೀಮತಿ ಕಮಲಾದೇವಿಯವರು ತಮ್ಮ ಸಂಚಾರವನ್ನು ಸಾಂಘವಾಗಿ ಆದಷ್ಟು ಬೇಗ ಪೂರೈಸಿ, ನಮ್ಮ ಜಿಲ್ಲೆಗೆ ಹಿಂತಿರುಗಿ ಅವರು ಈ ವರೆಗೂ ಮಾಡಿಕೊಂಡು ಬಂದಿರುವಂತೆ ಇನ್ನು ಮುಂದೆಯೂ ರಾಜಕೀಯ ಮತ್ತು ಇನ್ನಿತರ ರಂಗಗಳಲ್ಲಿ ನಮ್ಮೆಲ್ಲರಿಗೆ ಮಾರ್ಗದರ್ಶಿಗಳಾಗಿ ಕೆಲಸಮಾಡುವರೆಂದು ಆಶಿಸುತ್ತೇವೆ. ಈ ಠರಾವು ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟಿತು.

ಜಿಲ್ಲಾ ಕಮಿಟಿಯ ಚುನಾವಣೆ ವಿಷಯ ಬಂದ ತಕರಾರುಗಳ ವಿಚಾರಿಸುವರೆ ನಿಯಮಿಸಿದ ಪಂಚರುಗಳಿಂದ ಕಳುಹಿಸಲ್ಪಟ್ಟ ವರದಿಯನ್ನು ಓದಿ ಕಮಿಟಿ ಖಾಲಿ ಇದ್ದ ಸ್ಥಾನಗಳನ್ನು ಈ ತಿಂಗಳ ಅಖೈರಿಯೊಳಗೆ ನಡಿಸತಕ್ಕದ್ದೆಂದು ನಿರ್ಣಯಿಸಲ್ಪಟ್ಟಿತು.

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಲೆಕ್ಕಪತ್ರಗಳನ್ನು ನೋಡಿ ಅದರ ವಿಷಯ ವಿಚಾರಣೆ ನಡೆಸಿ, ಈ ತಿಂಗಳ ಅಖೈರಿಯೊಳಗೆ ಒಂದು ವರದಿಯನ್ನು ಕೊಡುವಂತೆ ಜಿಲ್ಲಾ ಕಮಿಟಿಯ ಜತೆಕಾರ್ಯದರ್ಶಿ ಶ್ರೀ. ಬೆಳ್ತಂಗಡಿ ನಾರಾಯಣರಾಯರನ್ನು ಕೇಳಿಕೊಳ್ಳಲಾಯಿತು.

ಉಡುಪಿ ಟೌನ್ ಕಾಂಗ್ರೆಸ್ ಕಮಿಟಿಯ ತಕರಾರಿಗಳನ್ನು ವಿಚಾರಿಸಿ, ಇತ್ಯರ್ಥಿಸುವರೆ ಜಿಲ್ಲಾ ಕಮಿಟಿ ಅಧ್ಯಕ್ಷ ಶ್ರೀನಿವಾಸ ಮಲ್ಯರಿಗೆ ಅಧಿಕಾರ ಕೊಡಲಾಯಿತು

ತಾಲೂಕು ಸಮಾಚಾರ

ಕಾರ್ಕಳ

ಸ್ಥಳೀಯ ಬೋರ್ಡ ಹೈಸ್ಕೂಲಿನಿಂದ ಯಸ್ ಯಸ್ ಯಲ್ ಸಿ ಪರೀಕ್ಷೆಗೆ ಕೂತ ೩೩ ವಿದ್ಯಾರ್ಥಿಗಳಲ್ಲಿ ೧೯ ಮಂದಿಯೂ ಶ್ರೀ ವೆಂಕಟ್ರಮಣ ಪಾಯರ ಎಲಿಮೆಂಟರಿ ಶಾಲೆಯಿಂದ ಯ ಯಸ್ ಯಲ್ ಸಿ ಪರೀಕ್ಷೆಗೆ ಕೂತ ೩೧ ಮಂದಿಯಲ್ಲಿ ೧೭ ಮಂದಿಯೂ ಉತ್ತೀರ್ಣರಾಗಿದ್ದಾರೆ.

ಇಲ್ಲಿಯ ಶ್ರೀಮಂತ ಉದಾರಿಗಳಾದ ಶ್ರೀ ಕೆ ಸಿ. ಶೇಷಗಿರಿ ಪ್ರಭುಗಳ ಧರ್ಮಸಹಾಯವಾಗಿರುವ ಲೋಕಲ್ ಫಂಡ್ ಆಸ್ಪತ್ರೆಯ ಪರಿಗೆ ಮನೆ ಕಟ್ಟಡವು ಪೂರ್ಣವಾಗುತ್ತ ಬರುತ್ತಲಿದೆ ಇದರ ಅನಾವರಣ ಸಮಾರಂಭವನ್ನು ಮಾನ್ಯ ವಿ ಗೋಪಾಲ ರೆಡ್ಡಿಯವರ ಹಸ್ತದಿಂದ ನಡೆಸಬೇಕಾಗಿ ಆಲೋಚನೆಯಾಗಿದೆಯೆಂದು ವರ್ತಮಾನವಿದೆ

ಮೂಡಬಿದ್ರೆ

ಹಿರಿಯಡ್ಕ ಶ್ರೀ ಕೆ ಅನಂತಯ್ಯನವರು ತಾ ೧—೬—೩೯ರ ದಿನ ಮೂಡಬಿದ್ರೆ ಶ್ರೀ ಶ್ರೀನಿವಾಸ ನಾಯ್ಕರ ತಂಗಿ ಶ್ರೀಮತಿ ವಾರಿಜಾಕ್ಷಿಯನ್ನು ವೈದಿಕ ರೀತಿಯಿಂದ ವಿವಾಹ ಮಾಡಿಕೊಂಡರು ಶ್ರೀ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರು ಪೌರೋಹಿತ್ಯ ಮಾಡಿದ್ದರು ಅದೇ ದಿನ ಸಾಯಂಕಾಲ ಶ್ರೀ ಕೇಶವ ರಾಮಚಂದ್ರ ಶೆಣೈಯವರ ಅಧ್ಯಕ್ಷತೆಯಲ್ಲಿ ಹಿಂದೂ ಧರ್ಮಾಭಿಮಾನಿಗಳ ಸಾರ್ವಜನಿಕ ಸಭೆ ಸೇರಿ-ಶ್ರೀ ಪಂಡಿತ ಧರ್ಮ ದೇವರು ಹೈದರಾಬಾದ ಸತ್ಯಾಗ್ರಹದ ಕುರಿತು ಭಾಷಣ ಮಾಡಿದರು. ಸತ್ಯಾಗ್ರಹ ನಿಧಿಗೆ ಸುಮಾರು ೧೫ ರೂಪಾಯಿಗಳ ದ್ರವ್ಯಸಹಾಯವು ಸಿಕ್ಕಿತು

ಪಣಂಬೂರು—ಬೈಕಂಪಾಡಿ ಪಟ್ಟಣದ ನೊಗವೀರ ಸಂಘದ ಆಶ್ರಯದಲ್ಲಿ ಶ್ರೀ. ಬಿ ಮಹದೇವನವರ ಹರಿಕಥಾ ಕಾಲಕ್ಷೇಪವು ನಡೆಯುತ್ತಿದ್ದು ಕಳೆದ ತಾ ೩೧ರಂದು ಪೂರ್ತಿಯಾಗಿದೆ. ಸಂಘದಿಂದ ಅವರಿಗೆ ಒಂದು ಬಂಗಾರದ ಪದಕವು ಪಾರಿತೋಷಕವಾಗಿ ಕೊಡಲ್ಪಟ್ಟಿದೆ

ಕೂರಾಡಿ—ಶಾಂತಿನಿಕೇತನ ಹಾ ಎ. ಶಾಲೆಯ ವರ್ಧಂತ್ಯುತ್ಸವ ದ. ಕ ಜಿಲ್ಲಾ ಜಡ್ಜ ಶ್ರೀ ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಿಂದ ಕಳೆದ ತಾ. ೩೦ರಂದು ನಡೆಯಿತು. ಅನೇಕ ಊರಪರವೂರ ಮಹನೀಯರು ಬಂದಿದ್ದರು.

ಶ್ರೀ ಜೆರೋಮ್ ಸಾಲ್ಡಾನ್, ಶ್ರೀಮತಿ ೧೮ ಪಾರ್ವತಿ ಬಾಯಿ—ಇವರು ಶಾಲೆಯ ಹಿತವನ್ನು ಹಾರೈಸಿ ಭಾಷಣ ಮಾಡಿದರು

ಅಧ್ಯಕ್ಷರ ಭಾಷಣದಿಂದ ಸಭೆಯು ಕೊನೆಗೊಂಡಿತು

ರಾತ್ರಿ ವಿವಿಧ ವಿನೋದಾವಳಿಗಳಿದ್ದವು

ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಗೆ ಬಾಳದಿಂದ ನಡೆದ ಚುನಾವಣೆಯ ವಿಷಯ ಇದ್ದ ತಕರಾರು ವಿಚಾರ, ವಿಚಾರಣೆ ನಡೆಸುವರೆ ನಿಯಮಿಸಲ್ಪಟ್ಟ ಶ್ರೀ. ಎಲ್ ಎಸ್ ನ್ಯಾಕರು ಕಳುಹಿಸಿದ ವರದಿಯನ್ನು ಓದಲಾಯಿತ ಶ್ರೀ ಎನ್ ಪಿ ಸುಬ್ಬಣ್ಣ ಭಟ್ಟರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಕಾರಣದಿಂದಲೂ ಬಾಳದಿಂದ ಕಾರ್ಕಳ ತಾಲೂಕು ಕಮಿಟಿಗೆ ಚುನಾವಣೆಯು ನಡೆದುದು ಸಿಂಧುವೆಂದು ಕಂಡು ಬಂದುದರಿಂದಲೂ ಅಲ್ಲಿಂದ ಶ್ರೀ ಎಮ್ ರಾಮಕೃಷ್ಣ ನ್ಯಾಕರು ಕಾರ್ಕಳ ತಾಲೂಕು ಕಮಿಟಿಗೆ ಚುನಾಯಿತರಾದ ಸದಸ್ಯರೆಂದು ತಿಳಿಯತಕ್ಕದೆಂದು ಕಾರ್ಕಳ ತಾಲೂಕು ಕಮಿಟಿಗೆ ತಿಳಿಸತಕ್ಕದ್ದೆಂದ ನಿರ್ಣಯಿಸಲ್ಪಟ್ಟಿತು

ಶ್ರೀ ಎಮ್ ಶಿವರಾಯರು ಕಳುಹಿಸಿದ ಪತ್ರವನ್ನು ಓದಿ ಈ ವಿಷಯ ಆಲೋಚಿಸ ಎರಿ ಶ್ರೀ ಎಸ್ ಶಿವರಾವ್, ಶ್ರೀ ಬಿ ನಾರಾಯಣರಾವ್, ಶ್ರೀ ಕೆ ಕೆ ಪಿ ರಾವ್ ಪ್ರಭು ವಕೀಲ, ಶ್ರೀ ಎನ್ ಪಿ ಸುಬ್ಬಣ್ಣ ಶೆಟ್ಟಿ ಮತ್ತು ಶ್ರೀ ಎಸ್ ಶೇಷಗಿರಿರಾವ್ ಇವರುಗಳ ಒಂದು ಕಮಿಟಿಯನ್ನು ನಿಯಮಿಸಲಾಯಿತು

ಮಂಗಳೂರು ಒಟೋಮೊಬೈಲ್ಸ್, ಲಿಮಿಟೆಡ್
(ಸಿಟಿ ಬಸ್ ಸರ್ವಿಸ್)

ಈ ಸಂಸ್ಥೆಯ ೧೯೩೯ನೇ ಮಾರ್ಚ ತಿಂಗಳಿಗೆ ಅಂತ್ಯವಾಗುವ ಆಯವ್ಯಯ ಮತ್ತು ಜಮಾಖರ್ಚಿನ ಪಟ್ಟಿಗಳು ಹಸ್ತಗತವಾಗಿವೆ. ಈ ಸಂಸ್ಥೆಯು ಈಗ ಪ್ರವೇಶ ವ್ಯಾಪಾರಿಕ ... [illegible]

... ನಡೆವ ಶಕ್ತಿಯ ಈ ಸಂಸ್ಥೆಯು ಇನ್ನಷ್ಟು ಪ್ರಗತಿಯನ್ನು ಹೊಂದಲೆಂದು ನಾವು ಹಾರೈಸುತ್ತೇವೆ.

ಬ್ರಿಟಿಷ್ ಸಬ್‌ಮೇರಿನೊಂದು ಜಲಾಹುತಿಯಾಯಿತು!

ರಶ್ಯಾ ಜಪಾನುಗಳ ವೈಷಮ್ಯ! — ಪೆಲಸ್ಟೈನಿನ ಗೊಂದಲ! — ಜರ್ಮನ್ ವಸಾಹತ್ತುಗಳ ಸ್ವಾಧೀನತೆ! — ಆಶ್ರಿತ ರಾಜ್ಯಗಳ ಸಮಸ್ಯೆ! — ಬೆಜವಾಡದಲ್ಲಿ ರೈತರ ಚಳವಳಿ!

ಸಬ್‌ಮೇರಿನ್ ಜಲಾಹುತಿ!

ತೆಟಿಸ್ ಎಂಬ ಬ್ರಿಟಿಷರ ದೊಡ್ಡದೊಂದು ಜಲಾಂತರ್ಯಾಮಿ ನೌಕೆಯೊಂದು ಮುಳುಗಿ ಅನೇಕ ಜನರು ಜಲಾಹುತಿಯಾಗಿದ್ದಾರೆ. ನಾಕೆಯು ಮುಳುಗುತ್ತಿದ್ದಂತೆ ಟಾರ್ಪೆಡೊ ಟ್ಯೂಬುಗಳು ತೊತಾದ ನಿಮಿತ್ತ ಈ ಅನಾಹುತ ಉಂಟಾದುದಾಗಿ ಮಿ। ಚೆಂಬರ್ಲೇನರು ಹೌಸ್ ಆಫ್ ಕಾಮನ್ಸಿನಲ್ಲಿ ಹೇಳಿದರು.

★

ಪೆಲೆಸ್ಟೈನಿನಲ್ಲಿ ಗೊಂದಲ

ಪೆಲೆಸ್ಟೈನಿನಲ್ಲಿ ಸರಕಾರವು ಹೂಡಿದ ಹಂಚಿಕೆಯ ಫಲಿತಾಂಶವಾಗಿ ವಿಪರೀತ ಗೊಂದಲವೆದ್ದಿರುವುದಾಗಿ ತಿಳಿಯುತ್ತದೆ

ಅರಬರು ದಂಗೆಯೆದ್ದಿರುವುದಾಗಿಯೂ ಯೆಹೂದ್ಯರು ಅಕ್ರಮವಾಗಿ ಸಾಮೂಹಿಕವಾಗಿ ಪ್ರವೇಶಿಸಿರುವುದಾಗಿಯೂ ವಾರ್ತೆ ಈ ಸಂದರ್ಭದಲ್ಲಿ ಪೋಲೀಸು ಸಹಾಯದಿಂದ ಹಾಗೂ ಮಿಲಿಟರಿ ಸಹಾಯದಿಂದ ಸರಕಾರವು ಹೇಗಾದರೂ ಗಲಭೆಯನ್ನು ತಡೆಯುತ್ತಿದೆ

★

ಸಾರ್ವಭೌಮರ ಅಮೇರಿಕಾ ಸಂದರ್ಶನ

ಈ ಬಗ್ಗೆ ಅಮೇರಿಕದಲ್ಲಿ ಪ್ರಚಂಡ ಸ್ವಾಗತವು ನಡೆವುದು. ಅಲ್ಲಿನ ಪತ್ರಿಕೆಗಳು ಈ ಕುರಿತು ವಿವರವಾಗಿ ಪ್ರಕಟಿಸುತ್ತವೆ

★

ಪ್ರಿನ್ಸ್‌ಪಾಲರ ಜರ್ಮನಿ ಸಂದರ್ಶನ

ಯುಗೊಸ್ಲೇವಿಯದ ಪ್ರಿನ್ಸ್‌ಪಾಲರವರು ಜರ್ಮನಿಯನ್ನು ಸಂದರ್ಶಿಸಿ ತೆರಳಿದರು ಹರ್ ಹಿಟ್ಲರರೇ ಮೊದಲಾದವರು ಅವರನ್ನು ಸ್ಟೇಷನಿನಲ್ಲಿ ಬೀಳ್ಕೊಟ್ಟರು ಯುಗೊಸ್ಲೋವಿಯ ಮತ್ತು ಜರ್ಮನುಗಳೊಳಗೆ ಅನ್ಯೋನ್ಯ ಸೌಹಾರ್ದ ಸಂಬಂಧವು ಬೆಳೆಯಬಹುದೇ ಎಂದು ಶಂಕಿಸಲಾಗಿದೆ

★

ರಶ್ಯಾ-ಜಪಾನುಗಳ ವೈಷಮ್ಯ

ಮಂಚುಕೋ ಗಡಿಯಲ್ಲಿ ರಶ್ಯಾ ಮತ್ತು ಜಪಾನು ಸೈನ್ಯಗಳೊಳಗೆ ಅನ್ಯೋನ್ಯ ಕಾದಾಟವು ನಡೆದಿರುವುದಾಗಿ ವಾರ್ತೆ ಅದು ರಶ್ಯಾ ಸಿಪಾಯಿಗಳು ಹತರಾಗಿ ಹತ್ತು ಮಂದಿಗೆ ಗಾಯವಾಗಿರುವುದೆಂದೂ, ಐದು ಜಪಾನಿಯರು ಗಾಯಗೊಂಡಿರುವರೆಂದೂ ಸುದ್ದಿ.

★

ಜರ್ಮನ್ ವಸಾಹತುಗಳು

ಕೊಲಂಬೊದಲ್ಲಿ ಜರ್ಮನಿಯ ಅರ್ಥಶಾಸ್ತ್ರಜ್ಞರಾದ ಡಾ। ಶಾಟರವರು ಬಹು ಬೇಗನೇ ಜರ್ಮನಿಯು ತನ್ನ ಹಿಂದಿನ ಎಲ್ಲಾ ವಸಾಹತುಗಳನ್ನು ಸ್ವಾಧೀನಪಡಿಸುವುದಾಗಿಯೂ, ಅದು ಜರ್ಮನಿಯ ಹಕ್ಕಿರುವುದಾಗಿಯೂ ಅಭಿಪ್ರಾಯಪಟ್ಟಿರುವರು

★

ರೈತರ ಚಳವಳ

ಬೆಜವಾಡದ ನುನಗಾಲಾ ಕಂಬಲ್ಲಿ ಜಮೀನ್ದಾರರಿಗೂ ರೈತರಿಗೂ ಆದ ಚಳವಳದ ನಿಮಿತ್ತ ಗಲಭೆಯುಂಟಾಗಿ ೧೧೩ ಮಂದಿಯನ್ನು ಸೆರೆಹಿಡಿದಿರುವರು ರೈತರು ಸತ್ಯಾಗ್ರಹವನ್ನು ಮುಂದುವರಿಸುತ್ತಿದ್ದಾರೆ.

★

ಮಹಾತ್ಮಾಜಿಯವರು

ಮಹಾತ್ಮಾ ಗಾಂಧಿಯವರು ತಿರುವಾಂಕೂರು ಸಂಸ್ಥಾನದ ಪ್ರಜೆಗಳಿಗೆ ಹಿತವಚನ ಕೊಡುತ್ತಾ ಅಹಿಂಸೆಯನ್ನು ಪಾಲಿಸುವುದರ ಮೂಲಕವಾಗಿ ಕಾಂಗ್ರೆಸನ್ನು ಬಲಪಡಿಸುವಂತೆ ತಮ್ಮ ಹೊಸ ಕಾರ್ಯ ಧೋರಣೆಯನ್ನು ಸೂಚಿಸುತ್ತಾರೆ.

ಮೈಸೂರಿನ ಸ್ಟೇಟ್ ಕಾಂಗ್ರೆಸಿನ ಮುಖಂಡರು ತಮ್ಮ ಮುಂದಿನ ಧೋರಣೆಯ ಕುರಿತು ಗಾಂಧಿಜಿಯವರ ಹಿತವಚನವನ್ನು ಕೇಳುವ ಅಭಿಪ್ರಾಯ ಮಾಡಿದ್ದಾರೆ.

★

ಫಾರ್‌ವರ್ಡ್ ಬ್ಲೋಕಿನ ಕುರಿತು ಸುಭಾಷರ ಭಾಷಣ

ಡೆಕ್ಕಾದ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತ ಸುಭಾಷರು ಫಾರ್‌ವರ್ಡ್ ಬ್ಲೋಕು ಕಾಂಗ್ರೆಸನ್ನು ದುರ್ಬಲಗೊಳಿಸುವುದೆಂಬುದು ಮಿಥ್ಯಾಪವಾದವೆಂದೂ ಎಲ್ಲಾ ಪ್ರಾಗತಿಕ ಕಾಂಗ್ರೆಸಿನ ಪಕ್ಷಗಳು ಫಾರ್ವರ್ಡ್ ಬ್ಲೋಕಿನ ಕಾರ್ಯಕ್ರಮವನ್ನನುಸರಿಸಿದಲ್ಲಿ ಸ್ವಾತಂತ್ರ್ಯವು ಸಮೀಪಸ್ಥವಾಗ್ಗಿದೆಯೆಂದೂ ಹೇಳಿದರು

ಆ ವೇಳೆ ಮುಸ್ಲಿಮರೂ ಕಾಂಗ್ರೆಸಿಗೆ ಸೇರಿ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಕಾದಾಡುವುದು ಅವರ ಕರ್ತವ್ಯವೆಂದು ಸಾರಿದರು

★

ಫೆಡರೇಶನಿನ ಕುರಿತು ಜವಾಹಿರಲಾಲರು

ಫೆಡರೇಶನಿನ ಕುರಿತು ಮಾತನಾಡುತ್ತಾ ಜವಾಹಿರಲಾಲರು ಬ್ರಿಟಿಷ್ ಸಾಮ್ರಾಜ್ಯಶಾಹಿಯು ಆಲೋಚಿಸುವ ಫೆಡರೇಶನ್ನು ಹಿಂದೂದೇಶವು ಒಪ್ಪಲಾರದೆಂಬುದು ನಿಶ್ಚಯವೆಂದು ಪ್ರಪಂಚದ ಪರಿಸ್ಥಿತಿಯನ್ನನುಸರಿಸಿ ಹಿಂದೂದೇಶವು ತನ್ನ ಸ್ಥಿತಿಯನ್ನು ನಿಶ್ಚಯಿಸಬೇಕಾಗಿದೆಯೆಂದೂ ಲಾರ್ಡ ಜೆಟ್ಲೆಂಡರವರ ಆಲೋಚನೆಯು ತಲೆಕೆಳಗಾಗಲಿದೆಯೆಂದೂ ಹೇಳಿದರು. ಹಿಂದೂದೇಶದ ಪ್ರಜಾಪ್ರಭುತ್ವತತ್ವಕ್ಕೊಪ್ಪುವ ಆಡಳಿತೆಯಲ್ಲದೆ ಬೇರೆ ಸಾಧ್ಯವಿಲ್ಲವೆಂದು ಅವರ ಅಭಿಮತ

★

ರಾಷ್ಟ್ರೀಯ ಯೋಜನಾ ಸಮಿತಿ

ಬೊಂಬಯಿಯಲ್ಲಿ ರಾಷ್ಟ್ರೀಯ ಯೋಜನಾ ಸಮಿತಿಯ ಸಭೆ ಸೇರಿ ನಿರ್ಣಯಗಳನ್ನು ನಿಶ್ಚಯಿಸುತ್ತಾರೆ

★

ಕಲ್ಕತ್ತಾ ಸರಕಾರದಲ್ಲಿ ಹರಿಜನರ ದುರವಸ್ಥೆ

ಮದ್ರಾಸು ಬೊಂಬಯಿ ಮೊದಲಾದವುಗಳಲ್ಲಿಯೂ ಇನ್ನಿತರ ಸಣ್ಣ ಸಣ್ಣ ಪ್ರಾಂತಿಕ ಸರಕಾರಗಳಲ್ಲಿಯೂ ಹರಿಜನ ಸೇವಕರ ಕುರಿತು ಸರಕಾರವು ಉತ್ತಮ ವ್ಯವಸ್ಥೆಯನು ಮಾಡಿದೆಯೆಂದೂ ಕಲ್ಕತ್ತದ ಹಕ್ ಮಂತ್ರಿಮಂಡಲವು ಈ ಕಡೆಗೆ ವಿಚಾರವೇ ನಡೆಸಿಲ್ಲವಾಗಿಯೂ ಹರಿಜನ ಸೇವಾಸಂಘದ ಕಾರ್ಯದರ್ಶಿಗಳಾದ ಶ್ರೀ ಥಕ್ಕರರವರು ಪ್ರಕಟಿಸುತ್ತಾರೆ

❖

ಆಂಗ್ಲ – ಜರ್ಮನ್ ನೌಕಾ ಒಪ್ಪಂದ

ಆಂಗ್ಲ-ಜರ್ಮನ್ ನೌಕಾ ಒಪ್ಪಂದದ ಕುರಿತು ಪ್ರಶ್ನೆ ಮಾಡಲಾಗಿ ವಿದೇಶಾಂಗ ಕಾರ್ಯದರ್ಶಿಗಳಾದ ಮಿ। ಬಟ್ಲರವರು ಈ ಕುರಿತು ಶೀಘ್ರವಾಗಿ ಒಂದು ಪ್ರಕಟಣೆಯು ಹೊರಡುವುದೆಂದು ಹೇಳಿದರು

❖

ಬ್ರಿಟನಿನಲ್ಲಿ ನಿರುದ್ಯೋಗ ನಿವಾರಣೆ

ಕಳೆದ ವರ್ಷದಿಂದ ಈ ವರ್ಷಕ್ಕೆ ಅಧಿಕ ಸಂಖ್ಯೆಯಿಂದ ನಿರುದ್ಯೋಗಿಗಳನ್ನು ಕೆಲಸಕ್ಕೆ ಸೇರಿಸಲ್ಪಡುತ್ತಿದೆಯೆಂದೂ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಸರಕಾರವು ಯೋಜನೆಯನ್ನು ತಯಾರಿಸುವುದಾಗಿಯೂ ತಿಳಿಯುತ್ತದೆ.

ಮೊಸ್ಕೋಗೆ ಮಿ। ಚೇಂಬರ್ಲೇನರ ಸಂದರ್ಶನವು ಪ್ರಯೋಜನಕಾರಿಯಾಗುವುದೇ ಎಂದು ಪ್ರಶ್ನಿಸಲ್ಪಟ್ಟಾಗ ಮಿ। ಚೇಂಬರ್ಲೆನರು ರಶ್ಯ-ಬ್ರಿಟನುಗಳೊಳಗಿರುವ ಅಭಿಪ್ರಾಯದ ವಿಷಯದಲ್ಲಿ ರಶ್ಯವು ಕೊಟ್ಟಂತಹ ಉತ್ತರವು ಸರಕಾರಕ್ಕೆ ಸಿಕ್ಕಿ ಆ ಕುರಿತು ಸರಕಾರವು ವಿಚಾರಮಾಡಲಿದೆಯೆಂದು ಹೇಳಿದರು

ರಶ್ಯದ ಉತ್ತರದ ಕುರಿತು ಪ್ರಧಾನರು ಒಂದು ಪ್ರಕಟಣೆಯನ್ನು ಹೊರಡಿಸುವುದಾಗಿ ತಿಳಿಯುತ್ತದೆ

❖

ಸುಯೆಜ್ ಕೆನಲಿನ ಕುರಿತು ಇಟೆಲಿಯ ವರ್ತನೆ

ಇಟೆಲಿಯು ಸುಯೇಜ್ ಕೆನಲಿನಲ್ಲಿ ಅಧಿಕವಾಗಿ ತನ್ನ ಹಕ್ಕು ಸ್ಥಾಪನೆಯನ್ನು ಮಾಡುವ ಅಭಿಪ್ರಾಯದ ಕುರಿತು ಟೀಕಿಸುತ್ತಾ ಸುಯೇಜ್ ಕೆನಾಲ್ ಕಂಪೆನಿಯ ಸೆಕ್ರೆಟರಿಗಳಾದ ಮಾರ್ಕಿಸ್ ಡಿ ವೇಗರವರು ಹೀಗೆಂದು ಹೇಳಿದರು

"ಬ್ರಿಟನು ಈ ಕಂಪೆನಿಯ ಅಧಿಕವಾಗಿ ಪಾಲನ್ನು ತೆಕ್ಕೊಂಡಿರುತ್ತದೆ ಫ್ರೆಂಚ್ ಸರಕಾರವು ಹೆಚ್ಚು ಮೂಲಧನವನ್ನಿಟ್ಟಿರುತ್ತದೆ ಆ ರಾಷ್ಟ್ರಗಳಿಗಿರುವ ಅಧಿಕಾರವು ಜನಾಂಗದ ಹಿತದೃಷ್ಟಿಯಿಂದ ನ್ಯಾಯವಾದದ್ದು ಇಟಲಿಯ ಅಭಿಮತವು ಸಂಪೂರ್ಣ ಅಜ್ಞಾನ ಪ್ರದರ್ಶನವಾಗಿದೆ"

❖

ಮಹಾಕೋಸಲ ಹಿಂದೂ ಮಹಾಸಭೆಯ ಪರಿಷತ್ತು

ಮಹಾಕೋಸಲ ಪ್ರಾಂತಿಕ ಹಿಂದೂ ಮಹಾಸಭೆಯ ಅಧಿವೇಶನವು ಶ್ರೀ ವಿ ಡಿ ಸಾವರ್ಕರರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಸಾವರ್ಕರರು ಹಿಂದೂ ಜನತೆಯಲ್ಲಿ ಹುಟ್ಟಿದ ರಾಷ್ಟ್ರೀಯತೆಯ ಕುರಿತು ಹೇಳುತ್ತಾ ಎರಡು ತಾಸುಗಳ ಉಜ್ವಲ ಭಾಷಣವಿತ್ತರು

❖

ಮಹಾರಾಜರು ದಾವಾಗ್ನಿಯನ್ನು ನಂದಿಸಿದರು

ಪಾಟಿಯಾಲದ ಮಹಾರಾಜರು ಕಾಡಿನಲ್ಲಿ ಉಂಟಾದ ದೊಡ್ಡ ಕಾಡ್ಗಿಚ್ಚನ್ನು ನಂದಿಸುವಲ್ಲಿ ಸ್ವತಃ ಪ್ರಯತ್ನಿಸಿ, ಅರಮನೆ ಮತ್ತು ಇಡೀ ಪಟ್ಟಣವನ್ನೇ ಬೆಂಕಿಯ ಅನಾಹುತದಿಂದ ತಪ್ಪಿಸಿದರು ಅರಸರಲ್ಲಿಗೆ ಅತಿಥಿಗಳಾಗಿ ಬಂದಿದ್ದ ವೈಸರಾಯರೂ ತಮ್ಮ ಪರಿವಾರದ ಸಹಾಯವನ್ನಿತ್ತರಾಗಿ ಕೇಳಿಬರುತ್ತದೆ

★

ಪಾಟ್ನಾದ ಗಿರಣೀ ಮುಷ್ಕರವು ನಿಂತಿತು.

400 ಮಂದಿ ಕೆಲಸಗಾರರಿಂದ ನಡೆಸಲ್ಪಟ್ಟ ಪಾಟ್ನಾದ ಗಿರಣಿಯೊಂದರ ಮುಷ್ಕರವು ಮಾಲಿಕರ ಹಾಗೂ ಕೆಲಸಗಾರರ ಪ್ರತಿನಿಧಿಗಳೊಳಗೆ ಒಪ್ಪಂದವಾಗಿ ನಿಲ್ಲಿಸಲ್ಪಟ್ಟಿದೆ ಈ ಸಂಬಂಧವಾಗಿ ಕೈದು ಮಾಡಲ್ಪಟ್ಟ ಕೂಲಿಕಾರರ ಮುಖಂಡರೂ ಸೆರೆಯಿಂದ ಬಿಡುಗಡೆಹೊಂದಿರುವರು

❖

ತಲ್ಚೇರದ ಪರಿಸ್ಥಿತಿ

ಮಹಾತ್ಮಾ ಗಾಂಧಿಯವರ ಅನುಮತಿಯಿಂದ ಶ್ರೀ ಹರಿಕೃಷ್ಣ ಮೆಹತಾಬರವರು ಒರಿಸ್ಸಾ ಮತ್ತು ತಲ್ಚೇರ ಸಂಸ್ಥಾನಗಳ ಪರಿಸ್ಥಿತಿಯ ಸಮಾಲೋಚನೆಗಾಗಿ ತೆರಳಿರುವರು

★

ಶೀಯಾ ಸುನ್ನೀ ಜಗಳ

ಲಕ್ನೋದಲ್ಲಿ ಉಂಟಾದ ಶೀಯಾ ಸುನ್ನೀ ಜಗಳದ ಸಂಬಂಧವಾಗಿ ಶೀಯಾ ಪಂಗಡದವರು ಶಾಂತಿಗಾಗಿ ಪ್ರಯತ್ನಿಸುತ್ತಿರುವರಾದರೂ ಯಾವ ರೀತಿಯ ಕೊನೆಯ ತೀರ್ಮಾನವು ಆಗಿರುವುದಿಲ್ಲ

❖

ರಾಷ್ಟ್ರೀಯ ಯೋಜನಾ ಸಮಿತಿ

ರಾಷ್ಟ್ರೀಯ ಯೋಜನಾ ಸಮಿತಿಯವರು ನೇಮಿಸಿದ ಸಬ್ ಕಮಿಟಿಯವರು ತಮ್ಮ ವರದಿಯನ್ನು ಬೊಂಬಾಯಿಯಲ್ಲಿ ಸೇರಿದ ಸಭೆಯ ಮುಂದೆ ಇರಿಸಿದರು ಆ ವರದಿಯು ಅಂಗೀಕರಿಸಲಾಯಿತು

ಈ ಕಮಿಟಿಯು 14 ಪ್ರತ್ಯೇಕ ಕಮಿಟಿಗಳನ್ನು ಈ ಕೆಳಗೆ ಕಾಣಿಸಿದಂತೆ ಯೋಜಿಸಬೇಕಾಗಿ ಸೂಚಿಸಿದೆ (1) ಕೃಷಿ ಮತ್ತು ಗ್ರಾಮ ಸುಧಾರಣಾ ಸಮಿತಿ (2) ಪದಾರ್ಥ ಮತ್ತು ವಸ್ತು ಶೋಧನಾ ಸಮಿತಿ (8) ರಸಾಯನ ಸಮಿತಿ (4) ಖನಿಜ ಪದಾರ್ಥ ಶೋಧನಾ ವ್ಯವಸ್ಥೆಯ ಸಮಿತಿ (5) ಯಂತ್ರ ಮತ್ತು ಯಂತ್ರ ಸಾಮಗ್ರಿಯ ಸಮಿತಿ (6) ಇತರ ಔದ್ಯೋಗಿಕ ಸಾಮಗ್ರಿಗಳನ್ನು ತಯಾರಿಸುವ ಸಮಿತಿ (7) ಶ್ರಮಜೀವನ ಮತ್ತು ಇತರ ನಿರುದ್ಯೋಗ ನಿವಾರಣಾ ಸಮಿತಿ (8) ದೇಶವಿದೇಶೀಯ ವ್ಯಾಪಾರದ (9) ಔದ್ಯೋಗಿಕ ಚಲಾವಣೆಯ (10) ಜೀವವಿಮೆಯ (11) ರೈಲ್ವೇ, ಹಡಗು, ವಿಮಾನ ಖಾತೆಗಳ (12) ಆಪದುರವ್ಯಗಳ (18) ಟೆಲಿಗ್ರಾಫ್ ಟಪ್ಪಾಲು ಮೊದಲಾದ ಪತ್ರವ್ಯವಹಾರಗಳ, ಕಡೆಯದಾಗಿ (14) ಸಾರ್ವಜನಿಕ ಆರೋಗ್ಯದ ಕುರಿತು ಹೀಗೆ ಹದಿನಾಲ್ಕು ಸಮಿತಿಗಳನ್ನು ಏರ್ಪಡಿಸುವುದಾಗಿ ನಿಶ್ಚಯಿಸಲ್ಪಟ್ಟಿದೆ

ಗ್ರಾಮೋದ್ಯೋಗದ ಅಭಿವೃದ್ಧಿಯ ಕುರಿತು ಡಾ ಜೆ ಸಿ ಕುಮಾರಪ್ಪನವರು ಒಂದು ಯೋಜನೆಯನ್ನೂ ಒಪ್ಪಿಸಿರುವರು

❖

ಬಡಗಡೆ

ಹಿಂದೂಸ್ಥಾನ ವಿರೋಧ ಚಳವಳಗಾರರನ್ನು ಬೇಗನೇ ಮದ್ರಾಸು ಸರಕಾರವು ಬಿಡಲಿರುವರಾಗಿ ತಿಳಿಯುತ್ತದೆ

❖

ಕೊಲಂಬೊದಲ್ಲಿ ಬಾಂಬು

ಕೊಲಂಬೊ ಮೆಜಿಸ್ಟ್ರೇಟ ಕಟ್ಟೋಣದಲ್ಲಿ ಒಂದು ಬಾಂಬು ಸ್ಫೋಟನವಾಯಿತು ಇಬ್ಬರಿಗೆ ಗಾಯಗಳಾಗಿವೆ ರಹಸ್ಯವು ತಿಳಿಯಲಿಲ್ಲ ಪೋಲೀಸರ ಅಧಿಕಾರಿಗಳ ಪತ್ತೆಗಾರಂಭಿಸಿದ್ದಾರೆ

❖

ಬರ್ಮ ಮಂತ್ರಿಮಂಡಲ

ಬರ್ಮಾ ಸರಕಾರದಲ್ಲಿ ಮಂತ್ರಿಗಳಾಗಿದ್ದ ಯು. ತುನ್‌ರವರು ರಾಜೀನಾಮೆ ಕೊಡಲಿಕ್ಕೆ ನಿರಾಕರಿಸಿದ್ದರಿಂದ ಯು ಪು ಮಂತ್ರಿಮಂಡಲವು ಇಡಿಯಾಗಿ ರಾಜೀನಾಮೆ ಕೊಟ್ಟಿತು ಅನಂತರ ಯು. ತುನ್‌ರವರನ್ನು ಹೊರ ಮಾಡಿ ಯು ಪು.ರವರು ಹಳೆ ಮಂತ್ರಿಮಂಡಲವನ್ನೇ ಹೊಸದಾಗಿ ರಚಿಸಿದರು

❖

ಬೆಲ್ಜಿಯಮ್ ಕೊಂಗೊ

ಕೊಂಗೊದಲ್ಲಿರುವ ಭಾರತೀಯರನ್ನು ಸರಕಾರವು ಪೀಡಿಸಿ ಭಾರತೀಯರ ವ್ಯಾಪಾರ ವಹಿವಾಟುಗಳಿಗೆ ಭಂಗತರುವುದನ್ನು ಕೊಂಗೋದ ಭಾರತೀಯರ ಶಿಷ್ಟಮಂಡಲವು ಇಲ್ಲಿ ಜನರ ಲಕ್ಷ್ಯಕ್ಕೆ ತಂದಿದೆ ಈ ಶಿಷ್ಟಮಂಡಲವು ಸರದಾರ ಪಟೇಲರನ್ನೂ ಮಹಾತ್ಮಾಜೀಯವರನ್ನೂ ಕಂಡು ಮಾತನಾಡಿ, ಕೊಂಗೋ ಭಾರತೀಯರ ಕಷ್ಟಗಳನ್ನು ದೂರಮಾಡುವ ಕುರಿತು ಅವರ ಸಲಹೆ ಪಡೆದಿದ್ದಾರೆ

ಕಾಂಗ್ರೆಸಿನ ಭವಿತವ್ಯತೆಯು ನೆಹರುಗಳ ದೃಷ್ಟಿಪಥದಲ್ಲಿದೆ

ಸಿವಿಲ್ ಸರ್ವಿಸಿನ ನೇಮಕ—ಆಶ್ರಿತ ಪ್ರಜೆಗಳ ದೌರ್ಬಲ್ಯ

ಕಾಂಗ್ರೆಸೂ ಯುದ್ಧನೀತಿಯೂ—ಆತ್ಮರಕ್ಷಣೆಯು ಹಿಂಸೆಯಲ್ಲ

ಬೊಂಬಾಯಿಯಲಿ ಸೇರಿದ ಪತ್ರಿಕಾವರಿಷತ್ತೊಂದರಲ್ಲಿ ಪಂಡಿತ ಜವಾಹಿರಲಾಲ ನೆಹರುಗಳು ಭಾಷಣ ಮಾಡುತ್ತಾ ಕಾಂಗ್ರೆಸಿನಲ್ಲಿ ಆಗಾಗ ಉಂಟಾಗುವ ಚುನಾವಣೆಯೋ ಮೊದಲಾದ ನಿಮಿತ್ತ ಆಗುವ ಬದಲಾವಣೆಗಳನ್ನು ತಡೆಗಟ್ಟಲು ಒಂದು ಸಿವಿಲ್ ಸರ್ವಿಸ್ ರಚನೆಯಾಗುವ ಕುರಿತು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ ಅವರು ಈ ಕೆಳಗಿನ ಸಾರಾಂಶದ ಭಾಷಣವನ್ನಿತ್ತಿರುವರು

ಕಾಂಗ್ರೆಸಿನ ಅಧಿಕಾಂಶ ಸಮಯವು ಅಲ್ಲಲ್ಲಿ ನಡೆಯುತ್ತಿರುವ ಚುನಾವಣಾ ಇತ್ಯರ್ಥಗಳಲ್ಲಿಯೇ ವ್ಯಯವಾಗುತ್ತಿದೆ ಏಕೆಂದರೆ ಇಂದು ಜನರು ಹೆಚ್ಚಾಗಿ ಕಾಂಗ್ರೆಸಿನ ಅಧಿಕಾರ ಮತ್ತು ಚುನಾವಣೆಗಳಲ್ಲಿ ಅಧಿಕ ಲಾಲಸೆಯುಳ್ಳವರಾಗಿ ಕಂಡುಬರುತ್ತಾರೆ- ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿಯೂ ಈ ರೀತಿಯ ಗಲಭೆಗಳ ಇತ್ಯರ್ಥ ವಿಷಯದಲ್ಲಿ ನಿರರ್ಥಕವಾಗಿ ಅಮೂಲ್ಯ ಸಮಯವು ವ್ಯಯವಾಗುತ್ತದೆ

ಕಳೆದ ನಾಲ್ಕು ತಿಂಗಳಿಂದ ಸಂಯುಕ್ತಪ್ರಾಂತದಲ್ಲಿ ಕಾರ್ಯನಿರ್ವಾಹಕ ಸಮಿತಿಯೊಂದು ಪ್ರತ್ಯೇಕ ಏರ್ಪಟ್ಟು ಅದಕ್ಕೆ ಸಂಬಂಧಿಸಿದ ಯೋಗ್ಯ ಗೃಹಸ್ಥರು. ಅಂತಹ ವಿಷಯಗಳನ್ನು ಪ್ರತ್ಯೇಕ ಇತ್ಯರ್ಥಿಸಿದರು ಹಿಂದೂದೇಶದ ಪ್ರಕೃತ ರಾಜಕೀಯದಿಂದ ನಿವೃತ್ತರಾಗಿರುವ ಸರ್ವಮಾನ್ಯರಾದ ಸದ್ಗೃಹಸ್ಥರು ಇಂತಹ ಸಮಿತಿಯಲ್ಲಿ ನಿಯುಕ್ತರಾಗಿರಬೇಕು ಅವರ ಚುನಾವಣೆಯಲ್ಲಿ ೩೪ ಮಂದಿ ಮತದಾರರಲ್ಲಿ ಮೂವರ ಆಕ್ಷೇಪಿಸಿದಲ್ಲಿಯೂ ಕೂಡಾ ಅವರನ್ನು ಸದಸ್ಯರಾಗಿ ಚುನಾಯಿಸಬಾರದು ಕೇಂದ್ರ ಕಾಂಗ್ರೆಸು ಕಮಿಟಿಗಳು ಅಂತಹ ಸಮಿತಿಯನ್ನು ಏರ್ಪಡಿಸುವವೋ ಎಂಬ ವಿಷಯ ತನಗೆ ನಿಶ್ಚಯವಿಲ್ಲದಿದ್ದರೂ, ಪ್ರತ್ಯೇಕ ಪ್ರಾಂತ್ಯವೊಂದಕ್ಕೆ ಪ್ರತ್ಯೇಕವಾಗಿ ಒಂದು ಆ ರೀತಿಯ ಕಮಿಟಿಯು ನೇಮಕವಾಗಬೇಕೆಂದು ನನ್ನ ಅಭಿಮತ

ಸಂಯುಕ್ತಪ್ರಾಂತದ ಈ ಕಾಂಗ್ರೆಸು ಕಮಿಟಿಯು ಒಂದು ರೀತಿಯ ಸಿವಿಲ್ ಸರ್ವಿಸನ್ನು ಮಾಡಲು ಯತ್ನಿಸುತ್ತದೆ ಇದರಲ್ಲಿ ಸಂಬಳಕೊಟ್ಟು ಕೆಲಸಮಾಡುವ ಕಾರ್ಯದರ್ಶಿಗಳು, ಗುಮಾಸ್ತರು, ಲೆಕ್ಕಪರಿಶೋಧಕರು, ಪರೀಕ್ಷಕರಾದಿಯಾಗಿ ಇರುವರು ಅವರು ನಿಜವಾದ ಕಾಂಗ್ರೆಸ್ ಕೆಲಸಗಾರರಾದರೂ ಯಾವುದೋ ಒಂದು ಪಕ್ಷದ ರಾಜಕೀಯಕ್ಕೆ ಸಂಬಂಧಿಸಿ ಕೆಲಸಮಾಡುವವರಾಗಿರಕೂಡದು. ಅವರ ಸಂಬಳವು ರೂ. ೬೦ಕ್ಕೆ ಮಿಕ್ಕಿರಕೂಡದು.

ಆಶ್ರಿತ ಪ್ರಜೆಗಳ ದೌರ್ಬಲ್ಯ

ಆಶ್ರಿತ ರಾಜ್ಯಗಳ ಸಮಸ್ಯೆಯ ಕುರಿತು ಮಾತನಾಡುತ್ತಾ ನೆಹರುಗಳು ಹೀಗೆಂದರು – 'ಮಹಾತ್ಮಾಜಿಯವರು ರಾಜಕೋಟೆಯಲ್ಲಿ ಮಾಡಿರುವ ವ್ಯವಹಾರವು ಅತ್ಯಂತ ಆಶ್ಚರ್ಯವಾಗಿರುವುದೇನೂ ಅಲ್ಲ ಗಾಂಧಿಜಿಯವರು ಪ್ರಜೆಗಳ ಮೇಲೆ ಹೊಸ ನೀತಿಯನ್ನು ಹೊರಿಸಿದಂತೆಯೂ ಆಗಲಿಲ್ಲ ಗಾಂಧಿಜಿಯವರ ಧೋರಣೆಯಂತೆ ಇದು ಅಧಿಕಾರೀ ವರ್ಗದವರನ್ನು ನ್ಯಾಯವಾದ ಅಭಿಪ್ರಾಯಕ್ಕೆ ಸಮ್ಮತಿಸುವಂತೆ ಮಾಡುವ ಧೋರಣೆಯೆಂದು ನಾನು ತಿಳಿಯುತ್ತೇನೆ

ಆಶ್ರಿತ ರಾಜ್ಯಗಳ ವಿಷಯವಾಗಿ ಸ್ಪಷ್ಟ ಧೋರಣೆಯಿಂದ ಹೇಳುವುದು ಕಠಿಣವಾಗಿದೆ. ಏಕೆಂದರೆ ಪ್ರತಿಯೊಂದು ಆಶ್ರಿತ ರಾಜ್ಯದ ಸಮಸ್ಯೆಯೂ ಅಖಿಲಭಾರತದ ಸಮಸ್ಯೆಯಾಗಿದೆ ಅಖಿಲಭಾರತದ ಸಮಸ್ಯೆ ಭಾರತದ ಬಹಿರ್ದೇಶಗಳೊಡನೆ ಸಂಬಂಧಿಸಿದ ವಿಚಾರವಾಗಿದೆ. ಹೀಗೆ ಈ ವಿಷಯಗಳು ವಿಶಾಲದಲ್ಲಿ ಅನ್ಯೋನ್ಯ ಶೃಂಖಲಾಬದ್ಧವಾಗಿವೆ. ಆಶ್ರಿತರಾಜ್ಯಗಳ ಚಳವಳಿವು ಪರಿಷತ್ತುಗಳಲ್ಲಿ ಮಂಜೂರುಮಾಡುವ ನಿರ್ಣಯಗಳ ಮೇಲೆ ಆಧರಿಸಿರುವುದಿಲ್ಲ ಅಲ್ಲಿನ ಪ್ರಜೆಗಳು ಕರ್ತವ್ಯವನ್ನು ಮಾಡುತ್ತಿರುವಾಗ ಅನುಸರಿಸುವ ದಕ್ಷತೆಯನ್ನೂ ಅಧರಿಸಿರುತ್ತದೆ ಅಲ್ಲಿನ ಪ್ರಜೆಗಳು ನಮ್ಮಲ್ಲಿ ಬಂದು ನನ್ನ ಸಹಾಯದಿಂದ ಶಾಸನಭಂಗ ಚಳವಳವನ್ನು ಮಾಡಲು ಅಭಿಲಾಷೆಪಡುತ್ತಾರೆ ನಿಜವಾಗಿಯೂ ಅವರೊಡನೆ ತರ್ಕಿಸಿನೋಡಿದಲ್ಲಿ ಜವಾಬ್ದಾರಿಯನ್ನು ತಮ್ಮ ತಲೆಯ ಮೇಲೆ ಹೊತ್ತುಕೊಳ್ಳುವಷ್ಟು ಎದೆಗಾರಿಕೆಯು ಅವರಲ್ಲಿ ಕಂಡುಬರುವುದಿಲ್ಲ ಅನ್ಯ ಸಹಾಯದಿಂದ, ದೌರ್ಬಲ್ಯದಿಂದ ಹೇಗೆ ಚಳವಳವನ್ನು ಯಶಸ್ವಿಯಾಗಿ ಮಾಡಬಹುದು?

ಯುದ್ಧನೀತಿಯ ಕುರಿತು

ಕಾಂಗ್ರೆಸು ಮಹಾಧಿವೇಶನದಲ್ಲಿ ಮಂಜೂರಾದ ಯುದ್ಧನೀತಿಯ ಠರಾವಿನ ಕುರಿತು ನಾವು ಪ್ರಯೋಗಾತ್ಮಕವಾಗಿ ಕಾರ್ಯಧೋರಣೆಯನ್ನು ಮಾಡುವುದಾದಲ್ಲಿ ಮೊದಲಾಗಿ ಸರ್ವಸಾಮಾನ್ಯವಾದ ಪ್ರಚಾರವೂ, ಅದರಿಂದ ಜನತೆಯ ಅಭಿಪ್ರಾಯವನ್ನು ಕಾಂಗ್ರೆಸಿನ ತಕ್ಕದ ರೀತಿಯಲ್ಲಿ ತಿದ್ದುವ ಕೆಲಸವನ್ನು ಮಾಡುವುದಲ್ಲದೆ, ಎರಡನೆಯದಾಗಿ ಪಾರ್ಲಿಮೆಂಟಿನ ಮುಂದಿರುವ ಇಂಡಿಯಾ ಎಕ್ಟಿನ ತಿದ್ದುಪಡಿಯ ಕುರಿತು ಪ್ರಾಂತಿಕ ಸರಕಾರಗಳು ಅನುಸರಿಸುವ ಕಾರ್ಯಧೋರಣೆಯ ಕುರಿತು ಸಾಧ್ಯವಾದ ಪ್ರತಿಕ್ರಿಯೆಗಳನ್ನು ನಿಶ್ಚಯಿಸುವುದು ಮತ್ತು ಮೂರನೆಯದಾಗಿ ಕಾಂಗ್ರೆಸು ಕಾರ್ಯಕಾರಿ ಮಂಡಳಿಯು ಯುದ್ಧದ ಕುರಿತು ಸ್ಪಷ್ಟ ಧೋರಣೆಯನ್ನು ಮುಂದಿಡತಕ್ಕದ್ದು ಅವರು ಯುದ್ಧದ ಸಂಭವಾಸಂಭವಗಳ ಕುರಿತು ಹಾಗೂ ಸಾಧ್ಯಾಸಾಧ್ಯತೆಗಳ ಕುರಿತು ಬೇರೆ ಬೇರೆ ವಿಷಯಗಳ ಅವಗಾಹನೆಯಿಂದ ಅರಿತ ಕೊಳ್ಳಬೇಕು ಹಾಗಾದರೆ ಮಾತ್ರ ಸಮಯ ಬಂದಾಗ ತೀವ್ರ ನಿಶ್ಚಯದಿಂದ ಯೋಗ್ಯ ಕಾರ್ಯವನ್ನು ನಾವು ಕೈಕೊಳ್ಳಬಹುದಾಗಿದೆ. ಇಂದಿನ ವಾತಾವರಣವು ವ್ಯತ್ಯಾಸಗೊಳ್ಳುವ ನಿಮಿತ್ತ ಈ ವಿಷಯದಲ್ಲಿ ತೀಕ್ಷ್ಣಪರೀಕ್ಷಣವು ಅತ್ಯಾವಶ್ಯಕವಾಗಿದೆ

ಪ್ರಜಾಪ್ರಭುತ್ವವು ಎಲ್ಲಿದೆ?

ಕಾಂಗ್ರೆಸು ಯುದ್ಧದ ಕುರಿತು ಮಂಜೂರು ಮಾಡಿದ ಠರಾವು ಅಷ್ಟು ಸಾಮಾನ್ಯ ವಿಷಯವಲ್ಲ ಮಹಾಯುದ್ಧದಲ್ಲಿ ಪ್ರಜಾಪ್ರಭುತ್ವಕ್ಕೆ ಮತ್ತು ಫೆಸಿಸ್ಟ್ ತತ್ವಕ್ಕೆ ಅನ್ಯೋನ್ಯ ಎದುರಾಟವು ನಡೆಯುವ ಪಕ್ಷದಲ್ಲಿ ಹಿಂದೂದೇಶವು ಖಂಡಿತವಾಗಿಯೂ ಪ್ರಜಾಪ್ರಭುತ್ವವನ್ನೇ ಆಧರಿಸುವುದು. ಆದರೆ ಅದು ಕೇವಲ ವಿಚಾರ ಧೋರಣೆ ಮಾತ್ರ. ಸದ್ಯಾಂಶದಿಂದ ಈಗ ಶುದ್ಧ ಪ್ರಜಾಸತ್ತತೆಗೂ ಫಾಸಿಸ್ಟ್ ತತ್ವಕ್ಕೂ ಅನ್ಯೋನ್ಯ ಎದುರಾಟವಾಗುವ ಸಂಭವವು ಇರುವುದಿಲ್ಲ ಇಂದು ಯುದ್ಧವಾಗುವುದಿದ್ದರೆ ಅದು ಒಂದು ಸಾಮ್ರಾಜ್ಯಶಾಹೀ ಶಕ್ತಿಗೆ ಎದುರಾಗಿ ಇನ್ನೊಂದು ಸಾಮ್ರಾಜ್ಯಶಾಹೀ ಶಕ್ತಿಯು ಸೆಣಸಾಡಬೇಕಾಗುವುದು ವಿಚಾರಧೋರಣೆಯಂತೆ ಹಿಂದೂದೇಶವು ಫ್ಯಾಸಿಸ್ಟ್ ರಾಜನೀತಿಗೆ ವಿರುದ್ಧವಾಗಿ ಪ್ರಜಾಸತ್ತಾತ್ಮಕ ಪಕ್ಷವನ್ನು ವಹಿಸುವುದರಲ್ಲಿ ಅನ್ಯಾಯವಿಲ್ಲದಿದ್ದರೂ ಹಿಂದೂದೇಶವು ಸ್ವತಂತ್ರವಾಗಿ ಪ್ರಜಾಸತ್ತಾತ್ಮಕ ದೇಶವಾಗಿರುವುದಿಲ್ಲವಾದ್ದರಿಂದ ಈ ಕುರಿತು ಸಂಪೂರ್ಣ ವಿಚಾರಮಾಡತಕ್ಕದು ಅವಶ್ಯವಿದೆ.

ಪಂಡಿತ ನೆಹರುಗಳು ಯುದ್ಧನೀತಿಯನ್ನು ಖಂಡಿಸಿದರು. ಆದರೂ ಥಕಾಯುಕರೇ ಮೊದಲಾದವರ ಮೇಲೆ ನ್ಯಾಯವಾದ ಕಾರ್ಯವನ್ನು ಕೈಕೊಳ್ಳುವಲ್ಲಿ ಪೋಲೀಸರನ್ನು ಹೇಗೆ ಬಿಡಲು ಬರುವುದಿಲ್ಲವೋ ಹಾಗೇ ಯುದ್ಧಗಳನ್ನು ತಪ್ಪಿಸುವುದು ಹೇಗೆ ಸಾಧ್ಯವೆಂಬುದು ಮಾತ್ರ ತನಗೆ ನಿಶ್ಚಯವಿಲ್ಲವೆಂದು ಹೇಳಿದರು ಸಾಮಾಜಿಕ ಸೌಹಾರ್ದವಿಲ್ಲದ ರಾಷ್ಟ್ರಗಳಲ್ಲಿ ಯುದ್ಧವು ಖಂಡಿತವಾಗಿಯೂ ಬೇಕಾಗಿದೆಯೆಂದು ಅವರ ಅಭಿಮತ

ಯುದ್ಧಧೋರಣೆಯಲ್ಲಿ ಕಾಂಗ್ರೆಸ ವಹಿಸುವ ಕಾರ್ಯಭಾಗದಿಂದ ಅಹಿಂಸಾ ತತ್ವಕ್ಕೆ ಸಮ್ಮತವಾಗುವುದೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಪಂಡಿತರು, ಪರರಾಜ್ಯದ ಆಕ್ರಮಣವನ್ನು ನಿಲ್ಲಿಸಿ, ಸ್ವದೇಶರಕ್ಷಣೆ ಮಾಡುವಲ್ಲಿ ಅಹಿಂಸೆಯ ತತ್ವಕ್ಕೆ ವಿರುದ್ಧವಾಗುವುದಿಲ್ಲವೆಂದರು

ವರ್ಕಿಂಗ್ ಕಮಿಟಿಯ ಚುನಾವಣೆ

ಕಾಂಗ್ರೆಸ್ ವರ್ಕಿಂಗ ಕಮಿಟಿಯ ಚುನಾವಣೆಯ ಕುರಿತು ಪ್ರಶ್ನೆಮಾಡಿದಾಗ ಆ ಕಮಿಟಿಯ ಚುನಾವಣೆಗೆ ಉಪಯೋಗಿಸಿದ ತತ್ವಗಳನ್ನು ಅವರು ಸಮ್ಮತಿಸುವುದಿಲ್ಲವೆಂದರು. ಅವರ ಅಪೇಕ್ಷೆಯಂತೆ ಅಧ್ಯಕ್ಷರು ಅವರ ಕಮಿಟಿಯನ್ನು ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆಗಿಂತ ಮೊದಲೇ ಆರಿಸಬೇಕೆಂದಿತ್ತೆಂದು ಹೇಳಿದರು.

ಶೀಯಾ-ಸುನ್ನೀ ಜಗಳ.

ಲಕ್ನೋದಲ್ಲಿ ನಡೆದ ಶೀಯಾ-ಸುನ್ನೀ ಜಗಳದ ಕುರಿತ. ಪ್ರಶ್ನೆ ಕೇಳಿದ ವಿಷಯವಾಗಿ ಅದು ಕೇವಲ ಪಕ್ಷಗಳಿಗೆ ಸಂಬಂಧಿಸಿದ ವಿಷಯವೆಂದೂ ಸಂಯುಕ್ತಪ್ರಾಂತ ಸರಕಾರವು ಅದನ್ನು ವ್ಯವಸ್ಥೆಗೊಳಿಸಲು ಸಾಧ್ಯ ಯತ್ನವನ್ನು ಮಾಡುವುದೆಂದೂ, ಆ ಚಳವಳವು ಮುಂದುವರಿಯಲು ಕಾಂಗ್ರೆಸು ಪ್ರೋತ್ಸಾಹಿಸುತ್ತಿದೆಯೆಂಬುದು ದುರಭಿಪ್ರಾಯವೆಂದೂ, ಆ ಆಂದೋಲನದಿಂದ ಕಾಂಗ್ರೆಸಿನ ಗೌರವವು ಕಡಿಮೆಯಾಗಿ ಕಾಂಗ್ರೆಸೇ ದುಃಖಕ್ಕೀಡಾಗುವುದೆಂದೂ ಹೇಳಿದರು.

ಬ್ರಿಟಿಷ ವಸಾಹತುಗಳಲ್ಲಿಯೇ ಭಾರತೀಯರಿಗೆ ಸ್ಥಾನಮಾನಗಳಿಲ್ಲ!

— ಬರ್ಮ-ಸಿಲೋನುಗಳ ಭಾರತೀಯರ ಗೋಳು! —

— ದಕ್ಷಿಣ ಆಫ್ರಿಕದ ಭಾರತೀಯರ ಕರುಣಕಥೆ! —

ಬ್ರಿಟಿಷ ವಸಾಹತುಗಳಲ್ಲಿಯೇ ಭಾರತೀಯರಿಗೆ ಸ್ಥಾನಮಾನಗಳಿಲ್ಲ ನ್ಯಾಯವಾದ ಹಕ್ಕು ಅಧಿಕಾರಗಳಿಲ್ಲ, ಪ್ರತಿಯೊಂದು ವಸಾಹತಿನಿಂದ ಅವರನ್ನು ಹೊರದಬ್ಬುವ ಕಾರಸ್ಥಾನವು ನಡೆದಿದೆಯೆಂದ ಬಳಿಕ, ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಲ್ಲದ ಇತರ ಸ್ವತಂತ್ರ ರಾಷ್ಟ್ರಗಳಲ್ಲಿ ಭಾರತೀಯರು ಯಾವ ಸ್ಥಿತಿಗತಿಯಲ್ಲಿ ಕಾಲಯಾಪನೆ ಮಾಡಬಹುದಾಗಿದೆಯೇ ಎಂಬುದನ್ನು ವಾಚಕರೇ ತಿಳಿದುಕೊಳ್ಳಬಹುದು. ಬರ್ಮದಲ್ಲಿ ದಂಗೆಯಾಗಿ ಅಲ್ಲಿ ವಾಸವಾಗಿದ್ದ ಭಾರತೀಯರ ಧನಹಾನಿ, ಪ್ರಾಣಹಾನಿಯಾದುದಾದರೂ, ಬರ್ಮ ಸರಕಾರವು ಇನ್ನೂ ಭಾರತೀಯರಿಗೆ ಪರಿಹಾರ ದ್ರವ್ಯವನ್ನು ಕೊಟ್ಟಿಲ್ಲ ಭಾರತೀಯರ ಪ್ರಾಣ ಮತ್ತು ಸಂಪತ್ತು ಎಂದರೆ ಬರ್ಮಕ್ಕೆ ಅಷ್ಟು ಅಗ್ಗವಾಗಿರುವದು ಬರ್ಮಾ ಸರಕಾರವು ದಂಗೆಯ ಕಾಲದಲ್ಲಿ ಪ್ರಜಾರಕ್ಷಣೆಯ ಕಾರ್ಯದಲ್ಲಿ ಭಾರತೀಯರಿಗೆ ಯಾವ ಸಹಾಯ ಅನುಕೂಲತೆಗಳನ್ನು ಒದಗಿಸಿಕೊಡಬೇಕಾಗಿದ್ದಿತೋ ಅದನ್ನು ಮಾಡದೆ ಕರ್ತವ್ಯಚ್ಯುತವಾಗಿರುವಾಗ, ನಷ್ಟಹೊಂದಿದ ಭಾರತೀಯರಿಗೆ ಪರಿಹಾರವನ್ನು ಕೊಡುವ ಅದರ ಜವಾಬುದಾರಿಯು ಮತ್ತಷ್ಟು ಹೆಚ್ಚುತ್ತದೆ ಬರ್ಮಾ ದಂಗೆಯಿಂದ ಅಲ್ಲಿದ್ದ ಭಾರತೀಯರಿಗೆ ೫೪ ಲಕ್ಷರೂಪಾಯಿಗಳ ನಷ್ಟವಾಯಿತೆಂದು ಭಾರತೀಯರು ಹೇಳುತ್ತಿರುವಾಗ, ೧೮ ಲಕ್ಷ ರೂಪಾಯಿಗಳ ನಷ್ಟವೆಂದು ಬರ್ಮಾ ಸರಕಾರವು ಹೇಳಿದೆ ನಷ್ಟದ ಪರಿಮಾಣವು ಇಷ್ಟು ದೊಡ್ಡದಾಗಿರುವಾಗಲೂ, ಬರ್ಮಾ ಮಂತ್ರಿ ಮಂಡಲದ ದುರ್ಬಲ ಧೋರಣೆಯೇ ದಂಗೆಯ ವಿಚಾರಣೆಗೆ ಕೂತ ಬ್ರೌಂಡ ಕಮಿಟಿಯ ವರದಿಯನ್ನು ಬರೆದಿದೆ ಬರ್ಮಾ ಸರಕಾರವು ಪರಿಹಾರ ದ್ರವ್ಯವನ್ನು ಕೊಡುವಲ್ಲಿ ಮತ್ತು ಭಾರತ ಸರಕಾರವು ಸ್ಟೇಟ್ ಸೆಕ್ರಿಟರಿಗಳ ಮೂಲಕ ಅದನ್ನು ಕೊಡಿಸುವಲ್ಲಿ ತಿಂಗಳ ಗಟ್ಟಲೆ ವರ್ಷಗಟ್ಟಲೆ ಜ್ಞಾಪಿಸಿ ಒಪ್ಪಿ ಆಗುವದನ್ನು ನೋಡಿದಾಗ ಭಾರತೀಯರು ಅಸಹಾಯ ಸ್ಥಿತಿಯಲ್ಲಿದ್ದಾರೆಂಬುದು ತಿಳಿಯುತ್ತದೆ ಹೇಗೆ ದಿನಗಳು ಕಳೆಯುತ್ತವೋ ಹಾಗೆ ಪರಿಹಾರ ದ್ರವ್ಯದ ಮೊತ್ತವನ್ನು ಕಂಡುಹಿಡಿಯುವದೂ, ಬರ್ಮದಲ್ಲಿ ಭಾರತೀಯರ ಸ್ಥಿತಿಗತಿಗಳನು ಸುಧಾರಿಸುವದೂ ಕಷ್ಟವಾಗುತ್ತದೆ ಅದಕ್ಕೋಸ್ಕರ ಅಲ್ಲಿ ನಮ್ಮವರ ಹಿತರಕ್ಷಣೆಗೆ ಒಬ್ಬ ಏಜಂಟರನ್ನು ಖಾಲಿಬಿದ್ದ ಸ್ಥಾನದಲ್ಲಿ ಕೂಡಲೇ ಕಳುಹಿಸಿದ್ದರೆ, ತಕ್ಕಷ್ಟು ಕೆಲಸವಾಗುತಿತ್ತು. ಆದರೆ ದುರ್ಭಾಗ್ಯದಿಂದ ಅದಕ್ಕೂ ಸಮಾಪದಲ್ಲಿ ಕಾಲವು ಬಂದೊದಗಿದಂತೆ ಕಾಣುವದಿಲ್ಲ. ಭಾರತ ಸರಕಾರವು ತನ್ನ ಕೈಲಿದ್ದ ಕೆಲಸವನ್ನು ಮಾಡಲಿಕ್ಕೂ ಕಾಲಹರಣ ಮಾಡುತ್ತದೆ.

ಸಿಲೋನಿನಲ್ಲಿ

ಸಿಲೋನಿನ ಸರಕಾರದಲ್ಲಿ ನೌಕರಿ ಮಾಡಿಕೊಂಡಿರುವ ಭಾರತೀಯರನ್ನೆಲ್ಲ ಹಿಂದಕ್ಕೆ ಓಡಿಸಿಬಿಡಬೇಕೆಂದು ಸಿಲೋನ ಸರಕಾರವು ದೃಢನಿಶ್ಚಯಮಾಡಿ ಅದಕ್ಕೆ ತಕ್ಕಷ್ಟು ಹಣವನ್ನೂ ಮಂಜೂರುಮಾಡಿದೆ ಐದು ವರ್ಷಕ್ಕಿಂತ ಕಡಿಮೆ ಕಾಲದಿಂದ ಕೆಲಸದಲ್ಲಿರುವವರನ್ನು ಸರಕಾರವು ತನ್ನ ಸ್ವಂತ ಖರ್ಚಿನಿಂದ ಭಾರತಕ್ಕೆ ಕಳುಹಿಸುವುದು. ಆದರೆ ಅದಕ್ಕಿಂತ ಹೆಚ್ಚು ಕಾಲ ಕೆಲಸದಲ್ಲಿದ್ದವರಿಗೆ ಕೆಲಸದಿಂದ ತಳ್ಳಿಹಾಕುವಾಗ ಅದು ಯಾವದೇ ತರಹದ ಪರಿಹಾರ ದ್ರವ್ಯವನ್ನು ಕೊಡುವುದು ಕೂಡ ಇಲ್ಲ ಕೆಲಸದಿಂದ ತಳ್ಳಿಹಾಕಲ್ಪಟ್ಟ ಭಾರತೀಯರು ಖಾಸಗಿಯಾಗಿ ಕೂಡ ಕೆಲಸ ಮಾಡಿಕೊಂಡಿರದಂತೆ ಸರಕಾರವು ವ್ಯವಸ್ಥೆ ಮಾಡಲಿದೆ ಸಿಲೋನಿನಲ್ಲಿ ಭಾರತೀಯರ ಜೀವನವು ಅಸಹನೀಯವಾಗುವದು ಸಿಲೋನಿನಲ್ಲಿರುವ ಭಾರತೀಯರಲ್ಲಿ ಹೆಚ್ಚಿನವರು ಸಿಲೋನಿನಲ್ಲೇ ಹುಟ್ಟಿ ಬೆಳೆದು ಅಲ್ಲಿಯೇ ಸಿಲೋನ ಹೆಂಗಸರನ್ನು ಮದುವೆಯಾಗಿ ಮಕ್ಕಳುಮರಿಗಳೊಂದಿಗೆ ಸಂಸಾರಮಾಡಿಕೊಂಡಿದ್ದವರಾಗಿದ್ದಾರೆ. ಅವರೀಗ ಹೆಸರಿನ ಪೂರ್ತಿಗಷ್ಟೇ ಭಾರತೀಯರಾಗಿರುವರು. ಅಂಥವರನ್ನು ಭಾರತಕ್ಕೆ ಮರಳಿಸುವದು ಪರಮ ಅನ್ಯಾಯವೂ ಅಧರ್ಮವೂ ಆಗಿದೆ ಅಲ್ಲದೆ ಭಾರತೀಯರ ಸಂಸ್ಕೃತಿ ನಾಗರಿಕತೆಗಳಿಂದ ಸಿಲೋನಿನವರು ಸಂಸ್ಕೃತಿನಾಗರಿಗಳಲಿ ಬಹಳ ಅಂತರವಿರುವದಿಲ್ಲ ಅವುಗಳೊಳಗೆ ನಿಕಟ ಸಂಬಂಧವಿದೆ ಶತಮಾನಗಳಿಂದ ಭಾರತೀಯರು ಒಪ್ಪಂದ್ದಲ್ಲಿಯಂತೆ ಸಿಲೋನಿನಲ್ಲಿ ಸಂಪಾದಿಸಿಕೊಂಡು ಬಂದಿದ್ದಾರೆ ಸಿಲೋನಿಗೆ ಭಾರತದಿಂದಾದ ಅಗುವ ಉಪಕಾರಗಳು ಭಾರತಕ್ಕೆ ಸಿಲೋನಿನಿಂದಾಗುವ ಉಪಕಾರಗಳಿಂದ ಹೆಚ್ಚಾಗಿವೆ ರಾಜಕೀಯ, ಆರ್ಥಿಕ, ಸಾಮಾಜಿಕ ನೈತಿಕ, ಯಾವ ದೃಷ್ಟಿಯಿಂದ ನೋಡಿದರೂ ಸಿಲೋನು ಭಾರತೀಯರನ್ನು ಹೊರಗಟ್ಟಲಿಕ್ಕೆ ಇಟ್ಟುಕೊಂಡ ಧೋರಣೆಯು ಆತ್ಮಘಾತಕತನದ್ದಾಗಿ ಕಂಡುಬರುವದು ಆದರೂ ಕೂಡ ಅದು ತನ್ನ ಧೋರಣೆಯಲ್ಲಿ ಪರಿವರ್ತನೆಗಳನ್ನು ಮಾಡುವಂತೆ ಕಾಣುವದಿಲ್ಲ ಪರಾಧೀನವಾಗಿರುವ ಭಾರತವು ಸಿಲೋನಿನ ಈ ಅನ್ಯಾಯಕ್ಕೆ ಯಾವ ಪ್ರತೀಕಾರವನ್ನು ಹೂಡಬಹುದು? ಭಾರತ ಸರಕಾರಕ್ಕೆ ಭಾರತೀಯರ ಸ್ಥಾನಮಾನ ಅಥವಾ ಹಕ್ಕು ಅಧಿಕಾರಗಳ ರಕ್ಷಣೆಮಾಡುವ ಯೋಚನೆಯಿಲ್ಲ ಬ್ರಿಟಿಷ ಸ್ವಾರ್ಥಕ್ಕೆ ಭಂಗಬಾರದಂತೆ ನೋಡಿದರೆಂದರೆ ಕೆಲಸ ತೀರಿತು ಹಾಗಿರುವಾಗ ಭಾರತೀಯರ ಕೈಯಲ್ಲಿ ಒಂದೇ ಒಂದು ಉಪಾಯವಿದೆ ಅದು ಸಿಲೋನಿನೊಡನೆ ಪೂರ್ಣ ಸಂಬಂಧವನ್ನು ಕಡಿದು ಹಾಕಬೇಕು. ಸಿಲೋನಿನ ವಸ್ತು ಒಡವೆಗಳಿಗೆ ಪೂರ್ಣ ಬಹಿಷ್ಕಾರ ಹಾಕಿದಾಗ ಸಿಲೋನು ತನ್ನಂತೆ ಎಚ್ಚರವಾಗಿ ಸರಿದಾರಿಗೆ ಬರುವದು–ಹೀಗೆಂದು ಕಾಂಗ್ರೆಸಿನ ವಿದೇಶಾಂಗ ಖಾತೆಯು ಪ್ರಕಟನೆಕೊಟ್ಟಿದೆ. ಸಿಲೋನಿನ ನಿರ್ಬಂಧವು ಆಗೊಸ್ಟು ೧ರಿಂದ ಜಾರಿಗೆ ಬರುವದು

ಸ್ವದೇಶಾಭಿಮಾನಿ

ತಾರೀಕು ೯—೬—೧೯೩೯

ಕಾಂಗ್ರೆಸ್ ಶುದ್ಧೀಕರಣ

ಮುಂಬಾಯಿಯ ಬಿರ್ಲಾ ಭವನದಲ್ಲಿ ಸೇರಿದ ಕಾಂಗ್ರೆಸ್ ಕಾನ್‌ಸ್ಟಿಟ್ಯೂಷನ್ ಸಬ್‌ಕಮಿಟಿಯು ಇಂಡಿಯನ್ ನೆಶನಲ್ ಕಾಂಗ್ರೆಸಿನ ಘಟನೆಗಳಲ್ಲಿ ಕೆಲವು ಪ್ರಾಮುಖ್ಯ ತಿದ್ದುಪಡಿಗಳನ್ನು ಮಾಡಲಿದೆ. ವಿಶೇಷ ಆಮಂತ್ರಣದ ಮೂಲಕ ಮಹಾತ್ಮರೂ, ವಲ್ಲಭಭಾಯಿ ಪಟೇಲರೂ ಆಹ್ವಾನಿತರಾಗಿರುವರು. ಕಾಂಗ್ರೆಸಿನಲ್ಲಿ ಈಗ ತಲೆದೋರಿದ ಅನಾಚಾರಗಳನ್ನು ನಿರ್ಮೂಲ ಮಾಡಲು ತಕ್ಕ ಹಂತಿಕೆಗಳನ್ನು ಈ ಸಬ್ ಕಮಿಟಿಯು ಮಾಡಲಿದೆ. ಕಾಂಗ್ರೆಸಿನ ಹೆಸರಲ್ಲಿ ಈಗ ನಡೆಯುತ್ತಿರುವ ಕಪಟ ವ್ಯಾಪಾರಗಳಿಂದ ಮಹಾತ್ಮರು ಬಹಳವಾಗಿ ನೊಂದಿರುವರು. ಈ ವಿಷಯವನ್ನು ಸುಭಾಸರೊಡನೆ ನಡೆಸಿದ ಪತ್ರ ವ್ಯವಹಾರದಲ್ಲಿ ಕೂಡ ಅವರು ಸೂಚಿಸಿರುವರು. ಸುಭಾಸರು ಪಾಶ್ಚಾತ್ಯ ಯಾ ಇತರ ಯಾವದೇ ದೇಶದ ರಾಜಕೀಯ ಪಕ್ಷಗಳಲ್ಲಿ ಕೂಡಾ ಈ ರೀತಿಯ ಘಟನೆಗಳು ಉಂಟಾಗುತ್ತಿರುವುದರಿಂದ ಕಾಂಗ್ರೆಸಿನಲ್ಲಿ ಈಗ ನಡೆಯುತ್ತಿರುವ ಘಟನೆಗಳು ಅನಾಚಾರವೆಂದು ಹೇಳಲು ಬರುವುದಿಲ್ಲವೆಂಬು ಪ್ರತಿಪಾದಿಸಿರುವರು. ಗಾಂಧೀಜಿಯವರು ಇತ್ತೀಚಿಗೆ ಹರಿಜನದಲ್ಲಿ ಬರೆದ ಲೇಖನವೊಂದರಲ್ಲಿ, 'ಕಾಂಗ್ರೆಸಿಗೆ ಅಧಿಕಾಧಿಕವಾಗಿ ಜನರು ಸೇರಿ ತಮ್ಮ ಸ್ವಾರ್ಥದ ಬೇಳೆಯನ್ನು ಬೇಯಿಸಲು ಸಾಧಿಸುತ್ತಿರುವರು ಎಂದು ಬರೆದಿರುವರು. ಕಾಂಗ್ರೆಸು ಪ್ರಾಂತೀಕ ಸರಕಾರದ ಅಧಿಕಾರವನ್ನು ಕೈಕೊಂಡ ಮೇಲಂತೂ ಕಾಂಗ್ರೆಸಿಗೆ ಜನರು ತಂಡೋಪತಂಡವಾಗಿ ಸೇರಿ ಸ್ವಪ್ರತಿಷ್ಠೆಗಾಗಿ ಅಲ್ಲಸಲ್ಲದ ಕುಯುಕ್ತಿಗಳನ್ನು ಮಾಡುತ್ತಿರುವ ವಾರ್ತೆಗಳು ಅಲ್ಲಲ್ಲಿ ಕೇಳಿಬರುತ್ತವೆ. ಪ್ರತಿ ಒಂದು ಕಾಂಗ್ರೆಸು ಕಮಿಟಿಗಳಲ್ಲಿ ಯೂ ಮುಖಂಡರು ತಮ್ಮ ತಮ್ಮ ಪಕ್ಷಗಳನ್ನು ಕಟ್ಟಿಕೊಂಡು ಅವರವರ ಸ್ವಾರ್ಥವನ್ನು ಸಾಧಿಸಲು ಹವಣಿಸುತ್ತಿರುವರು. ಸುಶಿಕ್ಷಿತ ಕೆಲವೇ ಜನ ಕೆಲಸಗಾರರ ಬೆಂಬಲಕ್ಕಿಂತಲೂ ಅಶಿಕ್ಷಿತ ಅವಿಧೇಯ ಸಾವಿರಾರು ಮಂದಿ ಕೆಲಸಗಾರರ ಬೆಂಬಲವು ನಮ್ಮ ಮುಂದಿನ ಹೋರಾಟಕ್ಕೆ ಬಹಳವಾದ ಹಾನಿಯುಂಟಾಗುವುದೆಂದು ಗಾಂಧಿಜಿಯವರು ಪ್ರಾರಂಭದಿಂದಲೇ ಸಾರುತ್ತಿದ್ದರು. ಆದಕಾರಣ ಕಾಂಗ್ರೆಸಿನಲ್ಲುಂಟಾದ ಈ ಅನಾಚಾರಗಳನ್ನು ನಿವಾರಿಸಲು ಗಾಂಧೀಜಿಯವರು ತಮ್ಮ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿ ಅಂಥಾ ಕೃತ್ಯಗಳನ್ನು ಖಂಡಿಸುತ್ತಿರುವರು.

ಈಗ ಅಲ್ಲಲ್ಲಿ ಕೇಳಿ ಬರುತ್ತಿರುವ ವಾರ್ತೆಯ ಮೇರೆಗೆ ಕಾಂಗ್ರೆಸ್ ಘಟನೆಗಳನ್ನು ಶುದ್ಧೀಕರಿಸುವ ವಿಷಯ ಸಬ್ ಕಮಿಟಿಯಲ್ಲಿ ಪ್ರಾಮುಖ್ಯ ಎರಡು ಪ್ರಶ್ನೆಗಳ ಮೇಲೆ ಭಿನ್ನಾಭಿಪ್ರಾಯಗಳು ತಲೆದೋರಿರುವುದೆಂದು ತಿಳಿದುಬರುತ್ತದೆ. ಮೊದಲನೆಯದಾಗಿ ಕಾಂಗ್ರೆಸಿನಲ್ಲಿ ಈಗ ಉಂಟಾದ ಸೋಶಿಯಲಿಸ್ಟ, ಫೋರ್ವರ್ಡ್ ಬ್ಲೊಕ್ ಅಥವಾ ಇನ್ನಿತರ ಹೆಸರಿನ ಬೇರೆಬೇರೆ ಉಗ್ರಗಾಮಿ ಪಕ್ಷಗಳಿಗೆತಡೆಯನ್ನು ಹಾಕುವದು. ಇದಕ್ಕೆ ಸಬ್ ಕಮಿಟಿ ಮೆಂಬರರಾದ ಜವಾಹರಲಾಲ ಮತ್ತು ಆಚಾರ್ಯ ನರೇಂದ್ರ ದೇವರು ಒಪ್ಪಿಗೆಯನ್ನಿತ್ತಿರುವುದಿಲ್ಲ. ಉಳಿದ ಸದಸ್ಯರು ಅಂದರೆ ರಾಜೇಂದ್ರ ಬಾಬು, ಆಚಾರ್ಯ ಕೃಪಾಲಾನಿ ಮತ್ತು ಡಾಕ್ಟರ್ ಪಟ್ಟಾಭಿಯವರು ಸಮ್ಮತಿಯನ್ನಿತ್ತಿರುವರು. ಉಗ್ರಗಾಮಿ ಪಕ್ಷಗಳನ್ನು ಕಾಂಗ್ರೆಸಿನಿಂದ ಹೊರದಬ್ಬಲು ಜವಾಹರಲಾಲರೂ, ನರೇಂದ್ರ ದೇವರೂ ಸಿದ್ಧರಿರುವುದಿಲ್ಲ. ಹಲವು ಪ್ರಾಂತೀಕ ಕಮಿಟಿಗಳಿಂದ ಕಳುಹಿಸಲ್ಪಟ್ಟ ಸುಮಾರು ೩೦೦ ಸಲಹೆಗಳಲ್ಲಿ ಕಾಂಗ್ರೆಸಿನ ಅಭಿಪ್ರಾಯಗಳಿಗೆ ತಲೆದೂಗದವರನ್ನು ಕೂಡಲೇ ಕಾಂಗ್ರೆಸಿನಿಂದಹೊರತಳ್ಳಬೇಕೆಂಬುದೇ ಪ್ರಾಮುಖ್ಯ ಸಲಹೆಯಾಗಿರುತ್ತದೆ. ಕಾಂಗ್ರೆಸಿನಿಂದ ಕೊಂಚ ಭಿನ್ನಾಭಿಪ್ರಾಯಗಳುಳ್ಳ ಜಂಗಡಗಳನ್ನು ಹೊರತಳ್ಳುವುದೆಂದಾದರೆ ಅವರೊಡನೆ ವೈಷಮ್ಯವನ್ನು ಕಟ್ಟಿಕೊಂಡಂತಾಗಿ ಕಾಂಗ್ರೆಸ್ ಸಂಸ್ಥೆಯು ಬಲಗುಂದಬಹುದು. ಭಿನ್ನಾಭಿಪ್ರಾಯವೆದ್ದ ಪ್ರಾಮುಖ್ಯ ಎರಡನೇ ಪ್ರಶ್ನೆಯೆಂದರೆ ಪ್ರತಿನಿಧಿಗಳ ಪ್ರತ್ಯಕ್ಷ ಮತ್ತು ಪರೋಕ್ಷ ಚುನಾವಣೆಯ ಮೇಲೆ. ಇಲ್ಲಿ ಕೂಡಾ ಜವಾಹರಲಾಲರೂ, ಆಚಾರ್ಯ ನರೇಂದ್ರದೇವರೂ ಪರೋಕ್ಷ ಚುನಾವಣೆಯನ್ನು ವಿರೋಧಿಸಿದರು. ಈ ರೀತಿಯಂತೆಲ್ಲ ಮಂದಗಾಮಿ ಪಕ್ಷೀಯರು ವಿರ್ತಿಸಿ ಉಗ್ರಗಾಮಿ ಪಕ್ಷೀಯರನ್ನು ಹೊರದೂಡುವುದೆಂದರೆ ಜನಾಂಗದ ಸ್ವಾತಂತ್ರ್ಯ ಚಳವಳಿಗೆ ಹಾನಿಯನ್ನು ತಂದೊಡ್ಡಿದಂತೆಯೇ ಸರಿ.

ನಾಲ್ಕಾಣೆ ತೆತ್ತು ಕಾಂಗ್ರೆಸ್ ಸದಸ್ಯನಾಗಿ ಎಷ್ಟರತನಕ ಅತನು ಕಾಂಗ್ರೆಸ್ ನಿಬಂಧನೆ ವಿಧೇಯನಾಗಿ ನಡೆವನೋ ಅಷ್ಟರತನಕ ಆತನು ಕಾಂಗ್ರೆಸಿನ ಯಾವ ಹುದ್ದೆಗೂ ಆರಿಸಲ್ಪಡಲು ಯೋಗ್ಯನಿರುವನು. ಆದುದರಿಂದ ಅಂಥಾ ಸದಸ್ಯನೊಬ್ಬನು ಯಾ ಅಂಥಾ ಪಕ್ಷವೊಂದು, ಅಧಿಕಾರ ಸ್ವೀಕಾರ, ತೆರಿಗೆಗಳ ವಿಷಯ ಅಥವಾ ಹಿಂದುಸ್ಥಾನದ ಕೈಗಾರಿಕೆಗಳ ವಿಷಯವಾಗಿಯಾಗಲೀ ಯಾ ಇನ್ನಿತರ ವಿಷಯವಾಗಿಯಾಗಲೀ ಭಿನ್ನಾಭಿಪ್ರಾಯವನ್ನು ತೋರ್ಪಡಿಸಿದರೆ ಅಂಥಾ ಸದಸ್ಯನನ್ನು ಯಾ ಅಂಥಾ ಪಕ್ಷವನ್ನು ಹೊರದೂಡುವುದು ಸಮಂಜಸವಲ್ಲ. ಅನೇಕಾನೇಕ ನಾನಾಮತೀಯ ಮುತ್ಸದ್ದಿಗಳಿರುವ ಈ ವಿಶಾಲವಾದ ಕಾಂಗ್ರೆಸು ಸಂಸ್ಥೆಯಲ್ಲಿ ಅಭಿಪ್ರಾಯ ಭೇದವು ಕಂಡುಬರುವುದೊಂದು ವಿಶೇಷವಲ್ಲ. ಆದರೆ ಅಂಥಾ ಸದಸ್ಯನ ಯಾ ಪಕ್ಷದ ಗುರಿಯಾದರೂ "ಸಂಪೂರ್ಣ ಸ್ವಾತಂತ್ರ್ಯ"ವಾಗಿರುವುದೆಂಬುದು ನಿರ್ವಿವಾದ.

ಯಾವನಾದರೂ ಗಾಂಧಿಜಿಯರ ಅಭಿಪ್ರಾಯಗಳಿಗೆ ವಿರೋಧನಾಗನು. ಇದೀ ಜನಾಂಗವು ಮಹಾತ್ಮರನ್ನು ದೇಶದ ಏಕಮಾತ್ರ ಮುಖಂಡರೆಂದು ಕೊಂಡಾಡುತ್ತಿರುವದು. ಅವರ ಮಾತುಗಳೇ ವೇದವಾಕ್ಯವೆಂದು ಅನುಸರಿಸುತ್ತಿರುವದು. ಆದಕಾರಣ ಅವರು ಕಾಂಗ್ರೆಸಿನಲ್ಲಿ ಒಡಕು ತಲೆದೋರದಂತೆ ಎಲ್ಲಾ ಪಕ್ಷೀಯರಿಗೂ ಹಿತಕರವಾಗುವ ರೀತಿಯಲ್ಲಿ ತಕ್ಕ ಸಲಹೆಗಳನ್ನಿತ್ತು ಕಾಂಗ್ರೆಸು ಘಟನೆಗಳ ತಿದ್ದುಪಡಿಯನ್ನು ಮಾಡುವರೆಂದು ನಂಬುತ್ತೇವೆ.

ಸ್ವರಾಜ್ಯ ಸಾಧನೆಗಾಗಿ ರಾಷ್ಟ್ರವು ಭರದಿಂದ ಮುಂದೊತ್ತಬೇಕು

ಸತ್ಯ ಮತ್ತು ಅಹಿಂಸೆಗಳು ಕಾಂಗ್ರೆಸಿನ ಎರಡು ತತ್ವಗಳು

ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಭಾಷಣ



ಕಾಂಗ್ರೆಸು ಸಂಸ್ಥೆಯಲ್ಲಿ ಕಾನೂನುಗಳನ್ನು ನಿಬಂಧನೆಗಳನ್ನು ಉಪ ನಿಬಂಧನೆಗಳನ್ನು ಸೇರಿಸುವುದರ ಮೂಲಕ ಸಂಘವನ್ನು ಬಲಪಡಿಸುವುದು ಸಾಧ್ಯವಿಲ್ಲ. ಇದನ್ನು ಬಲಪಡಿಸುವವರು ಇದಕ್ಕಾಗಿ ಕೆಲಸ ಮಾಡುವ ಜನರು "ಹೀಗೆಂದು ಬೊಂಬಾಯಿ ಅಜಾದ್ ಮೈದಾನಿನಲ್ಲಿ ನೆರೆದ ಸಾರ್ವಜನಿಕ ಸಭೆಯೊಂದರಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಭಾಷಣ ವಿತ್ತರು.

ಅವರು ಭಾಷಣಮಾಡುತ್ತ ಕಾಂಗ್ರೆಸಿನ ಮೆಂಬರರ ಸಂಖ್ಯೆಯು ಹೆಚ್ಚಾಗುವುದಕ್ಕಿಂತ ಆದಷ್ಟು ಮೆಂಬರರು ಯೋಗ್ಯರಾಗಿರುವುದಾದರೆ ಅದೇ ಒಳ್ಳೆಯದೆಂದರು. ಇಂದು ಕಾಂಗ್ರೆಸಿನಲ್ಲಿ ಜನಸಂಖ್ಯೆಯು ಹೆಚ್ಚಾಗಿರುವುದು ಸಂತೋಷದ ಸಂಗತಿಯಾದರೂ ಕಾಂಗ್ರೆಸಿನಿಂದ ಹೊರಗಿದ್ದ ಮಿಲಿಯಾಂತರ ಜನರಿದ್ದು ಇಂದು ಕಾಂಗ್ರೆಸಿಗೆ ಜೀವಾರ್ಪಣೆ ಮಾಡಲು ಸಿದ್ಧರಿರುವರು ಎಂದು ಹೇಳಿದರು.

ಇಂದಿನ ಕಾಂಗ್ರೆಸಿನೊಳಗಿನ ಅಭಿಪ್ರಾಯ ವ್ಯತ್ಯಾಸದ ಕುರಿತು ಪ್ರಸ್ತಾಪಿಸುತ್ತ ಹಿಂದೂದೇಶದಂತಹ ದೊಡ್ಡ ರಾಷ್ಟ್ರದಲ್ಲಿ ಹಾಗೂ ಕಾಂಗ್ರೆಸಿನಂತಹ ದೊಡ್ಡ ಸಂಸ್ಥೆಯಲ್ಲಿ ಅಭಿಪ್ರಾಯ ವ್ಯತ್ಯಾಸವಿರುವುದು ಸಹಜವೆಂದರು. ಆದರೆ ಅಂತಹ ಅಭಿಪ್ರಾಯ ವ್ಯತ್ಯಾಸವಿದ್ದವರೆಲ್ಲರೂ ದೇಶದ ಪೂರ್ಣ ಸ್ವರಾಜ್ಯ ಸಂಪಾದನೆಯ ವಿಷಯದಲ್ಲಿ ಏಕಾಭಿಪ್ರಾಯವುಳ್ಳವರೆಂದೂ ಅದ್ದರಿಂದ ನಮ್ಮಲ್ಲಿ ಒಳ್ಳೆಯ ಉದ್ದೇಶವಿರುವುದು ಅವಶ್ಯಕವೆಂದೂ ತಿಳಿಸಿದರು.

ಕಾಂಗ್ರೆಸನ್ನು ಬಲಪಡಿಸುವ ದೃಷ್ಟಿಯಿಂದ ಬೊಂಬಾಯಿಯನ್ನು ಸೇರಿದ ಕಾನ್‌ಸ್ಟಿಟ್ಯೂಶನ್ ಸಬ್ ಕಮಿಟಿಯ ಸಭೆಯ ಕಾರ್ಯದ ಕುರಿತು ಹೇಳುತ್ತಾ ಜನರು ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಆಸಕ್ತರಾಗದಿದ್ದರೆ ಏನೂ ಪ್ರಯೋಜನವಿಲ್ಲವೆಂದೂ, ಸತ್ಯ ಅಹಿಂಸೆಗಳನ್ನು ಪಾಲಿಸುವುದರ ಮೂಲಕ ಕಾಂಗ್ರೆಸಿನ ತತ್ವವನ್ನು ವಿಶಾಲವೂ ದೃಢವೂ ಆಗಿ ಮಾಡಬೇಕೆಂದು ಸಾರಿದರು.

ಹಿಂದೂದೇಶದಿಂದ ಹೊರಗಿರುವ ಹಿಂದೀಯರ ಸಂಕಷ್ಟದ ಕುರಿತು ಮಾತನಾಡುತ್ತ, ಹಿಂದೂದೇಶವು ಅಸ್ವತಂತ್ರವಾಗಿರುವಾಗ ಈ ಕುರಿತು ಏನು ಮಾಡಲೂ ನಿಸ್ಸಹಾಯಕವಾಗಿರುವುದೆಂದೂ, ದಕ್ಷಿಣ ಆಫ್ರಿಕ, ಬರ್ಮಾ, ಸಿಲೋನಿನಲ್ಲಿರುವ ಹಿಂದೀಯರ ಅವಸ್ಥೆಯನ್ನು ವಿವರಿಸಿದರು. ಅವರೆಲ್ಲರ ಅವಸ್ಥೆಯೂ ಭಾರತವು ಸ್ವರಾಜ್ಯವನ್ನು ಪಡೆದಾಗ ಒಳ್ಳೆಯದಾಗುವುದೆಂದೂ, ಅಶ್ರಿತ ರಾಜ್ಯಗಳ ಅರಸರು ಇಂದಿನ ಸಮಯದ ಅವಕಾಶವನ್ನು ಸದುಪಯೋಗ ಮಾಡಿಕೊಂಡು ತಮ್ಮ ಪ್ರಜೆಗಳಿಗೆ ಜವಾಬ್ದಾರಿ ಸರಕಾರವನ್ನು ಕೊಡುವ ಕರ್ತವ್ಯ ಜಾಗರೂಕರಾಗಬೇಕೆಂದೂ, ಇಲ್ಲದಲ್ಲಿ ಕಾಂಗ್ರೆಸಿನ ತಟಸ್ಥ ಧೋರಣೆಯು ಹೀಗೆ ಸ್ಥಿರವಾಗಿ ನಿಲ್ಲಲಾರದೆಂದೂ ಅಭಿಪ್ರಾಯಪಿತ್ತರು. ಶ್ರೀ ಭೂಲಾಭಾಯಿ ದೇಸಾಯಿಯವರು ಕಾಂಗ್ರೆಸಿನಲ್ಲಿ ಐಕ್ಯತೆಯಿರಬೇಕೆಂದು ಹಾರೈಸಿ ಭಾಷಣ ವಿತ್ತರು.

ನಾನು ಮಾಡಿದ ತಪ್ಪಿಗೆ ದೇವರು ನನ್ನನ್ನು ದಂಡಿಸುತ್ತಾನೆ

- ★ ತಪ್ಪನ್ನು ಒಪ್ಪಿಕೊಳ್ಳುವುದೇ ವಿಜಯ
- ★ ರಾಜಕೋಟೆಯ ಕುರಿತು ಮಹಾತ್ಮರ ಅಭಿಪ್ರಾಯ
- ★ ಕಸ್ತೂರಿಬಾಯಿಯವರೊಡನೆ ಸ್ಪಷ್ಟವಾಣಿ

ಗಾಂಧಿಜಿಯವರು ಗ್ವಾಲಿಯರ್ ತೀರ್ಪನ್ನು ಬಿಟ್ಟುಕೊಟ್ಟ ವಿಷಯವನ್ನೂ, ರಾಜಕೋಟೆದ ಸಂಬಂಧದಲ್ಲಿ ಗಾಂಧಿಜಿಯವರು ಸೋತು ಹೋದರು ಎಂದು ಯಾರೋ ಹೇಳುವ ಮಾತನ್ನು ಕೇಳಿ ಗಾಂಧಿಜಿಯವರ ಸೋದರಿಯು ಅತ್ಯಂತ ಕಳವಳಗೊಂಡರು. ರಾಜಕೀಯ ವಿಷಯಗಳನ್ನು ತಿಳಿದುಕೊಳ್ಳುವಷ್ಟು ವಿದ್ಯಾವತಿಯರವರಲ್ಲವಾದರೆ ಗಾಂಧಿಜಿಯವರಲ್ಲಿ ಭಕ್ತಿವಿಶ್ವಾಸವುಳ್ಳ ಅವರಿಗೆ ಈ ವಾರ್ತೆಯಿಂದ ನೋವನ್ನೊಂದಿತು. ಅವರ ಕಳವಳವನ್ನು ಪರಿಹರಿಸಲು ಕಸ್ತೂರಿಬಾಯಿಯವರು ಗಾಂಧಿಜಿಯವರೊಡನೆ ಕೇಳಿಕೊಂಡಾಗ ಅವರು ಹೀಗೆಂದರು:

"ನೀನು ದಕ್ಷಿಣ ಆಫ್ರಿಕದಲ್ಲಿ ಅಸ್ವಸ್ಥಳಾಗಿದ್ದಾಗ ಕೋಳಿಮರಿಯ ಕಷಾಯವನ್ನು ಕುಡಿಯದಿದ್ದರೆ ಬದುಕಲು ಸಾಧ್ಯವಿಲ್ಲವೆಂದು ಡಾಕ್ಟರು ಹೇಳಿದರೂ ನೀನು ದೇವರು ಹಾಗೆ ಇಷ್ಟಪಟ್ಟಲ್ಲಿ ಬದುಕುವುದು ಬೇಡವೆಂದೂ ನಿನ್ನ ಮಾಂಸಾಹಾರ ನಿಷೇಧದ ಪ್ರತಿಜ್ಞೆಯನ್ನು ಬಿಟ್ಟುಬಿಡಲಿಲ್ಲವಷ್ಟೆ! ಹಾಗೆಯೇ ನಾನೂ ಕೂಡ ನನ್ನ ಪ್ರತಿಜ್ಞೆಗೆ ಸರಿಯಾಗಿ ರಾಜಕೋಟೆದ ಅರಸನು ಮತ್ತು ದರ್ಬಾರ ವೀರವಲ್ಲ ಇವರು ನನ್ನಲ್ಲಿ ಬೇಕಾದುದನ್ನು ಮಾಡಬಹುದೆಂದು ಪಶ್ಚಾತ್ತಾಪಗೊಂಡು ಭಿನ್ನವಿಸುವವರೆಗೆ ಉಪವಾಸವನ್ನು ಮುಂದುವರಿಸಬೇಕಿತ್ತಲ್ಲದ ನನ್ನ ಪ್ರಾಣಭೀತಿಯಿಂದ ಈ ವಿಷಯದಲ್ಲಿ ಸಾರ್ವಭೌಮ ಸರಕಾರವು ಮಧ್ಯಸ್ಥಿಕೆಗೆ ಬರುವಂತೆ ಅಪೇಕ್ಷಿಸುವ ನಾನು ಮಾಡಿದ ಪಾಪವಾಯಿತು! ಹೀಗೆ ಪಾಪ ಮಾಡಿ ನಾನು ಗ್ವಾಯರ್ ತೀರ್ಪನ್ನು ಪಡೆದುದರಿಂದ ಅದನ್ನು ಬಿಟ್ಟುಕೊಡುವುದು ಸರ್ವಥಾ ಯೋಗ್ಯವಾಗಿದೆ.

"ಗ್ವಾಯರ್ ತೀರ್ಪಿನ ವಿಷಯದಲ್ಲಿಯಾದಕ್ಕೂ ದರ್ಬಾರ ವೀರವಲ್ಲ ಹಾಗೂ ರಾಜಕೋಟೆದ ಅರಸರು ಆತುರವನ್ನು ತರುವುದು ನಾನು ಅದಿಯಲ್ಲಿ ಮಾಡಿದ ತಪ್ಪಿನಿಂದಲಾಗಿ. ಅವರು ತಪ್ಪು ಮಾಡುವುದಲ್ಲ; ಇದು ದೇವರು ಅವರ ಮೂಲಕ ಕೆಲಸ ಮಾಡಿಸಿ ಆತಂಕವನ್ನು ತಂದೊಡ್ಡುವುದು. ಹೀಗಾಗಿ ದೇವರೇ ನನ್ನ ದೃಷ್ಟಿಯನ್ನು ತೆರೆದಿರುವನು. ನಾನು ಪಾಪದಿಂದ ಈಗ ನನ್ನ ಕೈಗಳನ್ನು ತೊಳೆದುಕೊಳ್ಳುವುದು ಸರಿಯೆಂದು ನನಗೆ ತೋರುವುದಿಲ್ಲವೇ? ಎಂದರು.

ಅದಕ್ಕೆ ಕಸ್ತೂರಿಬಾಯಿಯವರು ಇದೆಲ್ಲ ಸರಿಯಾದರೂ ಇಂದು ನಾವು ಸರ್ವಸ್ವವನ್ನೂ ಬಿಟ್ಟುಕೊಟ್ಟು ತಟಸ್ಥರಾಗಿದ್ದರೂ ಸಂಸ್ಥಾನದವರು ಶಿಕ್ಷೆ ಜುಲುಮಾನೆ ದಂಡನೆಗಳನ್ನು ವಿಧಿಸುತ್ತಿರುವರಲ್ಲಾ" ಎಂದರು. ಅದಕ್ಕೆ ಗಾಂಧಿಜಿಯವರು "ಅದರಿಂದ ಏನಾಯಿತು? ನಾವು ದೇವರಲ್ಲಿ ಭಕ್ತಿ ಇಟ್ಟು ನಮ್ಮ ಕರ್ತವ್ಯವನ್ನು ಮಾಡಬೇಕು. ನಾನು ನನ್ನ ಕೆಲಸದಲ್ಲಿ ಅಶಾಂತನಾಗಿ ವರ್ತಿಸಿ ಸೋತುಹೋದ ವಿಷಯವಾಗಿ ದೇವರು ನನಗೆ ಈ ದಂಡನೆಯನ್ನು ವಿಧಿಸಿರುತ್ತಾನೆ. ಆದರೆ ನಾನು ಪರಾಜಿತನಾಗಲಿಲ್ಲ. ಆದ್ದರಿಂದ ಸೋದರಿಗೆ ನಾನು ನನ್ನ ತಪ್ಪನ್ನು ಒಪ್ಪಿಕೊಂಡದ್ದು ಅಪಜಯವಲ್ಲವೆಂದು ಹೇಳು. ತಪ್ಪನ್ನು ಒಪ್ಪಿಕೊಳ್ಳುವುದೇ ನಿಜವಾದ ವಿಜಯ.

ಪೂರ್ವಜನ್ಮದ ವಿಚಿತ್ರ ಸ್ಮರಣೆ

ಕೊಳ್ಳಿರಾಜ್ಯದ ಚಿತ್ತೂರಿನಲ್ಲಿ ಅತಿಕೋಡು ಗ್ರಾಮದ ೫ ವರ್ಷದ ಒಬ್ಬ ಹುಡುಗಿ ತನ್ನ ಪೂರ್ವಜನ್ಮದ ವಿಚಿತ್ರ ವೃತ್ತಾಂತಗಳನ್ನು ಹೇಳುವುದನ್ನು ಕೇಳಿ ಸುತ್ತಮುತ್ತಲಿನ ಜನರು ಬಹಳ ಆಶ್ಚರ್ಯಪಟ್ಟಿರುವರು. ಹುಡುಗಿ ಎಜುವಾ ಜಾತಿಯವಳು. ತನ್ನ ಈ ಜನ್ಮದ ಹೆತ್ತವರನ್ನು ನಿರಾಕರಿಸಿ ತನ್ನ ತಾಯಿತಂದೆಗಳು ಕೊಂಫೊಟಿನ ಕೃಷ್ಣ ಮತ್ತು ಕುಂಜಿ ಎಂಬವರೆಂದೂ, ತನ್ನನ್ನು ಅವರಿದ್ದಲ್ಲಿಗೆ ಕರಕೊಂಡು ಹೋಗಬೇಕೆಂದೂ ಬಹಳ ದಿನಗಳಿಂದ ಒತ್ತಾಯ ಮಾಡುತ್ತಿದ್ದಳು. ಆದರೆ ಈಗಿನ ತಾಯಿತಂದೆಗಳು ಅದೇನೋ ಹರಟೆಯಾಗಿರಬಹುದೆಂದು ಊಹಿಸಿ ಆ ಮಾತುಗಳ ಕಡೆಗೆ ಲಕ್ಷ್ಯ ಕೊಡದೆ ಇದ್ದರು. ಆದರೆ ಮೊನ್ನೆ ಹುಡುಗಿ ಅನ್ನನೀರು ಕೂಡ ತೆಗೆದುಕೊಳ್ಳದೆ ಹಟ ಹಿಡಿದುದರಿಂದ ನಿರುಪಾಯರಾಗಿ ಅವಳನ್ನು ಕೊಂಫೊಟಿಗೆ ಕರಕೊಂಡು ಹೋದರು. ಅಲ್ಲಿ ವಿಚಾರಣೆ ಮಾಡಿ ನೋಡುವಾಗ ಕೃಷ್ಣ ಮತ್ತು ಕುಂಜಿ ಎಂಬ ಹೆಸರಿನ ಇಬ್ಬರು ವೃದ್ಧದಂಪತಿಗಳು ಒಂದು ಗುಡಿಸಲಿನಲ್ಲಿ ಬಹಳ ಕಂಗಾಲು ಸ್ಥಿತಿಯಲ್ಲಿರುವುದನ್ನು ತಿಳಕೊಂಡರು. ಅವರನ್ನು ಪ್ರಶ್ನಿಸಿದಾಗ ಹುಡುಗಿ ತನ್ನ ಪೂರ್ವಜನ್ಮದ ವೃತ್ತಾಂತವನ್ನು ಹೇಳಿದ್ದು ಅಕ್ಷರಶಃ ಸತ್ಯವೆಂದು ಸಿದ್ಧಾಂತವಾಯಿತು. ಕೃಷ್ಣ ಮತ್ತು ಕುಂಜಿಯರಿಗೆ ೫-೬ ವರ್ಷಗಳ ಮೊದಲು ೧೨ ವರ್ಷ ಪ್ರಾಯದ ಒಬ್ಬ ಹುಡುಗಿ ಇದ್ದಳು. ಆ ಹುಡುಗಿಯು ಕಾಲಿನಲ್ಲಿ ಆದ ಒಂದು ದೊಡ್ಡ ಗಾಯದಿಂದ ಅವಳು ತೀರಿಕೊಂಡಳು ಎಂದು ಕೃಷ್ಣ ಕುಂಜಿಯರೇ ಹೇಳಿದರು. ಹುಡುಗಿ ಕೃಷ್ಣ ಕುಂಜಿಯರನ್ನು ಬಿಟ್ಟು ಬರಲಿಕ್ಕೆ ಕೇಳುವುದಿಲ್ಲ. ಪರಂತು ಕೃಷ್ಣ ಕುಂಜಿಯರ ಸ್ಥಿತಿಯು ಈ ಹೆಚ್ಚಿನ ಒಂದು ಜೀವವನ್ನು ಕಾಪಾಡುವಷ್ಟು ಉತ್ತಮವಾಗಿರುವುದಿಲ್ಲ. ಹೀಗೆ ಹುಡುಗಿಯ ಈಗಿನ ಮತ್ತು ಹಿಂದಿನ ಹೆತ್ತವರು ಏನು ಮಾಡಬೇಕೆಂದು ತಿಳಿಯದವರಾಗಿ ಗೊಂದಲದಲ್ಲಿ ಬಿದ್ದಿರುವರು.

ಅಪ್ರತಿಮ ಸುಳ್ಳುಗಾರ

ಅಮೇರಿಕದ ಅಪ್ರತಿಮ ಸುಳ್ಳುಗಾರರ ಒಂದು ಸ್ಪರ್ಧೆಯು ನಡೆದು ಪ್ರಥಮ ಬಹುಮಾನವನ್ನು ೭೯ ವರ್ಷ ಪ್ರಾಯದ ಅಲಿನ್ ಬಾರ್ನೆಟ ಎಂಬವನು ಸಂಪಾದಿಸಿರುವನು. ಅವನ ಕತೆ ಹೀಗೆ ಇದೆ —ಒಂದು ದಿನ ನಾನು ಕರುಣಾಸಿದ್ದಾಗ ಊಟಕ್ಕೆ ಏನೂ ಇರಲಿಲ್ಲ. ಆದ್ದರಿಂದ ಬಂದೂಕು ತೆಗೆದುಕೊಂಡು ಬೇಟೆಗೆ ಹೋದೆ. ನನ್ನ ಹತ್ತಿರ ಒಂದು ಬಾರಿಗೆ ಸಾಕಾಗುವಷ್ಟು ಮದ್ದು, ಆದರೆ ಎರಡು ಗುಂಡುಗಳು ಇದ್ದುವು. ಒಂದು ಮರದ ಮೇಲೆ ಒಂದು ಟರ್ಕಿ ಕೋಳಿ, ಕೆಳಗೆ ಒಂದು ಜಿಂಕೆ ಕೂತಿರುವುದನ್ನು ಕಂಡೆ. ಆಗ ಮದ್ದನ್ನೂ ಗುಂಡನ್ನೂ ಹಾಕಿ ಕೋವಿಯನ್ನು ಬಿಟ್ಟೆ. ಮೊದಲನೆ ಗುಂಡು ಕೋಳಿಗೆ ಹೋಗಿ ತಾಗಿದೊಡನೆಯೇ ಕೋವಿಯನ್ನು ಜಿಂಕೆಯ ಕಡೆಗೆ ಹಿಡಿದೆ. ಎರಡನೆ ಗುಂಡು ಅದಕ್ಕೆ ಹೋಗಿ ತಾಗಿತು. ಕೋಳಿಗೆ ತಾಗಿದ ಗುಂಡು ಆಚೆಗೆ ಹಾರಿ ಒಂದು ಬಕಕ್ಕೆ ನಾಟಿತು. ಬಕವು ಒಂದು ದೊಡ್ಡ ಮೀನನ್ನು ಹಿಡಿದಿತ್ತು. ನಾನು ಓಡಿ ಬಕವನ್ನೂ ಮೀನನ್ನೂ ಹಿಡಿಯುವಾಗ ಒಂದು ದೊಡ್ಡ ಮೊಲ ಕಾಲಿನಡಿಗೆ ಬಿದ್ದು ಸತ್ತಿತು. ಇವಿಷ್ಟನ್ನು ತೆಗೆದುಕೊಂಡು ಜಿಂಕೆಯಿದ್ದಲ್ಲಿಗೆ ಬಂದಾಗ ಏನನ್ನು ನೋಡುವುದು! ಜಿಂಕೆಗೆ ತಾಗಿದ ಗುಂಡು ಆಚೆಗೆ ಹಾರಿ ಒಂದು ದೊಡ್ಡ ಮರವನ್ನು ಎರಡು ಭಾಗವಾಗಿ ಸೀಳಿದ್ದಿತು. ಅದರೊಳಗೆ ೫೦ ಮಣ ಜೇನು ಇದ್ದ ಒಂದು ಗೂಡು ದೊರೆಯಿತು. ಇವನ್ನೆಲ್ಲಾ ತೆಗೆದುಕೊಂಡು ನಾನು ಮನೆಗೆ ಬಂದೆ'

ಹೇಗಿದೆ ಸುಳ್ಳಿನ ಮೇಲೆ ಸುಳ್ಳು! ಅಲಿನ ಬಾರ್ನೆಟ್ಟನು ಕತೆ ಹೇಳಿ ಮುಗಿಸಿದಾಕ್ಷಣವೇ ಜಡ್ಜರು ಅವನನ್ನೇ ಜಗತ್ತಿನ ಅಪ್ರತಿಮ ಸುಳ್ಳುಗಾರನೆಂದು ಸಾರಿ ಬಹುಮಾನವನ್ನು ಅವನಿಗೆ ಕೊಟ್ಟರು!!

ಕೃತಕ ವಿಟಮಿನ್ಸ್‌ಗಳನ್ನು ಉಪಯೋಗಿಸುವದು ಅಪಾಯಕರವೆ?

★ ಅಮೇರಿಕದಲ್ಲಿ ಸೇರಿದ ವೈಜ್ಞಾನಿಕ ಪರಿಷತ್ತಿನ ನಿರ್ಣಯ

★ ಪ್ರಾಂತಿಕ ಆಹಾರದಲ್ಲಿ ಬೇಕಾದಷ್ಟು ಜೀವಸತ್ವಗಳಿವೆ

ಇಂದು ಆಹಾರವನ್ನು ಶರೀರದ ಪುಷ್ಟಿಗೆ ಸಾಕಷ್ಟು ಉಪಯೋಗಿಸಿಕೊಂಡು ದೇಹದಾರ್ಢ್ಯವನ್ನು ಸಂಪಾದಿಸುವ ವಿಷಯದಲ್ಲಿ ಜನರು ವಿಶೇಷ ಲಕ್ಷ್ಯವನ್ನು ಕೊಡುತ್ತಿದ್ದಾರೆ. ಆ ಬಗ್ಗೆ ಮಿಲಿಯಾಂತರ ದ್ರವ್ಯಗಳನ್ನು ವ್ಯಯಿಸಿ ಪಾಶ್ಚಾತ್ಯ ದೇಶಗಳಲ್ಲಿ ನವೀನ ಶೋಧನೆಗಳು ನಡೆಯುತ್ತಿವೆ.

ಈ ವಿಷಯದಲ್ಲಿ ಬಹಳವಾಗಿ ಶೋಧನೆಗಳನ್ನು ನಡೆಸಿ ಹೆಚ್ಚು ಹಣವನ್ನು ವ್ಯಯಮಾಡಿದ ರಾಷ್ಟ್ರವು ಅಮೇರಿಕವು. ಅಮೇರಿಕವು ಹೀಗೆ ಪೌಷ್ಟಿಕ ಆಹಾರದ ಸಂಶೋಧನೆಯಲ್ಲಿ ಮಿಲಿಯಾಂತರ ಹಣವನ್ನು ವ್ಯಯಿಸಿದ್ದು ಬಡಜನರ ಉಪಯೋಗಕ್ಕಾಗಿ ಅಲ್ಲ, ಇಡೀ ಜನಾಂಗದ ಆಹಾರವು ಸಮಾನವಾದರೆ ಒಳ್ಳೆಯದು ಎಂಬ ಪ್ರಯೋಗಕ್ಕಾಗಿ. ಇಂತಹ ಸಂಶೋಧನೆಗಳಿಂದ ಕೃತಕ ಆಹಾರಗಳನ್ನು ಕಂಡುಹಿಡಿದಲ್ಲಿ ಅವುಗಳನ್ನು ಕೊಂಡುಕೊಂಡು ಒಡನೆ ಉಪಯೋಗಿಸಿ ಸುಖಾನುಭವಹೊಂದುವುದು ಬಡವರಿಗೆ ಸಾಧ್ಯವಿಲ್ಲ.

ಹೀಗಾಗಿ ಕೆಲವು ವೈಜ್ಞಾನಿಕರೂ ಅಮೇರಿಕವು ಈ ಸಂಶೋಧನೆಗಾಗಿ ಖರ್ಚುಮಾಡುವುದು ಕೇವಲ ದುರ್ವ್ಯಯವೆಂದೂ ಕೂಗೆಬ್ಬಿಸಿರುತ್ತಾರೆ. ಪ್ರತ್ಯಕ್ಷವಾಗಿ ವಿರೋಧಿಸಿದ್ದಾರೆ.

ಹೀಗಾಗಿ ಇದರಿಂದ ಎಚ್ಚರಗೊಂಡ ಅಮೇರಿಕದ ವೈಜ್ಞಾನಿಕರು ಇತ್ತೀಚೆಗೆ ಮೊನ್ನೆ ಒಂದು ವೈಜ್ಞಾನಿಕರ ಸಮ್ಮೇಳನವನ್ನು ಕರೆದು ಈ ಕುರಿತು ಚರ್ಚಿಸಿದರು.

ಡಾ|| ಎಗ್ಗಿಸ್ ಮೋರ್ಗನ್ನರವರು ರೋಗಾಣುಗಳಲ್ಲಿಯೆ ಹಾಗೂ ಕೆಲವು ರೋಗಗಳನ್ನು ತಡೆಯುವ ಶಕ್ತಿಯುಳ್ಳ ಆಹಾರಗಳನ್ನು ಕಂಡು ಹಿಡಿದು ಪ್ರಚಾರ ಮಾಡಬೇಕೆಂದು ಅಭಿಮತ ವಿತ್ತರು.

ಸಂಯುಕ್ತ ಅಮೇರಿಕದ ಆರೋಗ್ಯಖಾತೆಯ ಅಧಿಕಾರದಲ್ಲಿರುವ ಡಾ|| ಸೆಬ್ರೆಲ್ಲರು ಜನರು ಉಪಯೋಗಿಸುವ ಆಹಾರಕ್ಕೆ ಹೊಸ ವಿಟಮಿನ್ನುಗಳನ್ನು ಹೊಸ ಲವಣಗಳನ್ನು ಸೇರಿಸಿ ದಿನದಿಂದ ದಿನಕ್ಕೆ ಕ್ಷೀಣವಾಗುವ ಜನಾಂಗವನ್ನು ಪುಷ್ಟಿಗೊಳಿಸಬೇಕೆಂದು ಅಭಿಪ್ರಾಯ ಹೇಳಿದರು. ಕಡೆಗೆ ಸಭೆಯಲ್ಲಿ ಈ ನಿರ್ಣಯಗಳು ಅಂಗೀಕರಿಸಲ್ಪಟ್ಟವು.

(೧) ವಿಟಮಿನ್ 'ಬಿ' ಮತ್ತು ನಿಕೊಟಿಯನ್ ಎಸಿಡುಗಳನ್ನು ಜನಾಂಗದ ಆಹಾರದಿಂದ ಸಂಪೂರ್ಣವಾಗಿ ವರ್ಜ್ಯಮಾಡಬೇಕು. (೨) ವಿಟಮಿನ್ 'ಡಿ'ಯನ್ನು ಮುಖ್ಯಕ ರಿಕೆಟ್ಸ್ ರೋಗಗಳಿಗೆ ಹಾಲಿನಲ್ಲಿ ಬೆರಕೆಮಾಡಿ ಕೊಡಬಹುದು. (೩) ಇತರ ವಿಟಮಿನುಗಳನ್ನು ಮಿತಿಮೀರಿ ಉಪಯೋಗಿಸುವುದರಿಂದ ಕೆಡುಕಾಗುತ್ತದು.

ಹೀಗೆಂದು ಈಗೀಗ ಕೃತಕ ವಿಟಮಿನುಗಳ ಉಪಯೋಗದ ವಿಷಯದಲ್ಲಿ ವೈಜ್ಞಾನಿಕರು ಕಣ್ತೆರೆದಿದ್ದಾರೆ.

ಪಾಶ್ಚಾತ್ಯ ರಾಷ್ಟ್ರಗಳನ್ನು ವಿಟಮಿನ್ಸ್‌ಗಳನ್ನು ತುಂಬಿಸಿದ ಕೃತಕಾಹಾರಗಳನ್ನು ಜನರು ಉಪಯೋಗಿಸುತ್ತಾರೆ. ಆದರೆ ಹಿಂದೂ ದೇಶದ ಜನರಿಗೆ ಇದು ಜ್ಞಾನಕ್ಕಾಗಿ ಮಾತ್ರವಲ್ಲದೆ ಪ್ರಯೋಗ ಪರಿಣಾಮವು ಈಗ ಏನೂ ಇರುವುದಿಲ್ಲ.

ಅಂತು ರೋಗವನ್ನು ತಡೆಯುವುದಕ್ಕಾಗಲಿ, ಬಲವನ್ನು ಹೆಚ್ಚಿಸುವುದಕ್ಕಾಗಲಿ, ಕೃತಕ ಜೀವಾತು (ವಿಟಮಿನ್ಸ್)ಗಳನ್ನು ಉಪಯೋಗಿಸುವುದಕ್ಕಿಂತ ಪ್ರಕೃತಿಯಲ್ಲಿರುವ ಆಹಾರವನ್ನು ಉಪಯೋಗಿಸುವುದು ಎಷ್ಟೋ ಒಳ್ಳೆಯದು.

ಸಾಮಾನ್ಯ ಖನಿಜಗಳಲ್ಲಿಯೂ ಒಳ್ಳೆಯ ತರಕಾರಿಗಳಲ್ಲಿಯೂ ಬೇಕಾದಷ್ಟು ವಿಟಮಿನ್ನುಗಳಿವೆ. ಹಾಗಾಗಿ ಕೃತಕ ವಿಟಮಿನ್ನುಗಳನ್ನು ಸ್ಪಷ್ಟಮಾಡಿ ಉಪಯೋಗಿಸುವುದು ಅವಶ್ಯವಿಲ್ಲ!

ಇಕೊನೊಮಿ ಟಿನ್ನುಗಳಿಂದ ಉಳಿಯುವ ಹಣವನ್ನು ಗಮನಿಸಿರಿ

ದೊಡ್ಡ ಸೈಜು (8 ಔ.) ರೂ. 1-4-0
ಸಣ್ಣ ಸೈಜು (4 ಔ.) ಆ 11

ಹಿಂದೆ ಬಾಟ್ಲಿಗಳಲ್ಲಿದ್ದಷ್ಟೆ ಪರಿಮಾಣದಲ್ಲಿದ್ದು ಕಡಿಮೆ ಕ್ರಯಕ್ಕೆ ಮಾರಲ್ಪಡುವ ಎಂಡ್ರೂಸ್ ಲವಣದ ಹೊಸ ಇಕೊನೊಮಿ ಟಿನ್ನುಗಳನ್ನೇ ಕೇಳಿರಿ

ಅನೇಕ ವರ್ಷಗಳ ಅನ್ವೇಷಣದ ಫಲವಾಗಿ ಎಂಡ್ರೂಸ್ ಲವಣವು ಬಾಟ್ಲಿಗಳಿಂತಲೂ ಟಿನ್ನುಗಳಲ್ಲಿ ಉತ್ತಮವಾಗಿರುತ್ತದೆಂದು ಕಂಡುಹಿಡಿಯಲ್ಪಟ್ಟಿತು. ಇದರಿಂದ ನೀವು ಎಂಡ್ರೂಸ ಲವಣವನ್ನು ಟಿನ್ನುಗಳಲ್ಲಿಯೇ ಕೊಂಡುಕೊಳ್ಳುವುದುತ್ತಮ. ಇಡೀ ಜಗತ್ತಿನಲ್ಲಿ ಎಂಡ್ರೂಸ್ ಲವಣವು ಉತ್ತಮಗಿರುತ್ತದೆ 50 ವರ್ಷಗಳಿಂದಲೂ ಗ್ರೇಟ ಬ್ರಿಟನ್ನು ಮತ್ತು ಇತರ ಡೊಮಿನಿಯನುಗಳಲ್ಲಿ ಇತರ ಎಲ್ಲಾ ಲವಣಗಳಿಗಿಂತಲೂ ಹೆಚ್ಚಾಗಿ ಮಾರಲ್ಪಟ್ಟ ಅದೇ ಎಂಡ್ರೂಸ್ ಲವಣವು ಈಗ ಟಿನ್ನುಗಳಲ್ಲಿ ಸಿಕ್ಕುತ್ತದೆ.

ಈ ಲವಣದಲ್ಲಿ ಉತ್ತೇಜನವನ್ನೀಯುವ ಒಂದು ಶಕ್ತಿಯಿರುವುದಲ್ಲದೆ ಅದರ ರುಚಿಗೆ ಉತ್ತಮವಾದ ಭೇದಿಯ ಔಷಧವಾಗಿರುತ್ತದೆ. ಇದರ ಸಹಾಯವಾದ ಮತ್ತು ಸಂತವಾದ ಉಕ್ಕೇರುವ ಗುಣದಿಂದಾಗಿ ಇದರಿಂದುಂಟಾದ ಕಾರ್ಬನ್ ಡೈ ಆಕ್ಸೈಡ್ ಹೊಟ್ಟೆಯೊಳಗಿನ ತಿಳುವಾದ ಪರೆಯನ್ನು ಆರೋಗ್ಯದಲ್ಲಿರಿಸುತ್ತದೆ

ಈ ಲವಣವನ್ನು ತಯಾರಿಸುತ್ತಿರುವಾಗ ಕೈಸೋಂಕಿರುವುದಿಲ್ಲ!

ಎಂಡ್ರೂಸ್ ಲಿವರ್ ಲವಣವು ನಾಲ್ಕು ತರದಲ್ಲಿ ಉಪಯೋಗವನ್ನೀಯುವುದು -

1 ಅಂತರೇಂದ್ರಿಯಗಳನ್ನು ಸ್ವಚ್ಛಗೊಳಿಸಿ ಕೆಟ್ಟ ಪದಾರ್ಥಗಳನ್ನು ತೆಗೆದಿರುವುದು.
2 ಯಕೃತ್ತಿನ ಮೇಲೆ ಒತ್ತಿ ಕೆಲಸಮಾಡುವ ಸ್ವಂತಮಾಡಿ ಪಿತ್ತವು ಸರಿಯಾಗಿ ಹರಿಯುವಂತೆ ಮಾಡುವುದು.
3 ರಕ್ತಕ್ಕೆ ಹಿತವಾದ ಉತ್ತೇಜನ ನೀಡುವುದು.
4 ಹೊಟ್ಟೆಯೊಳಗಿರುವ ಆಮ್ಲವನ್ನು ಹೋಗಲಾಡಿಸುವುದು.

ಈ ಕೆಳಗಿನವುಗಳಿಂದ ನೀವು ನರಳುತ್ತಿರುವುದಾದರೆ ನೀವು ಎಂಡ್ರೂಸನ್ನು ಕೊಳ್ಳಲೇಬೇಕು.

ಪಿತ್ತವಿಕಾರ	ಎದೆಯುರಿ
ಮಲಬದ್ಧತೆ	ಬಳಲಿಕೆ
ವಾತ	ರುಚಿ ಇಲ್ಲದಿರುವುದು
ತಲೆಸುತ್ತುವುದು	ಅಜೀರ್ಣ
ತಲೆನೋವು	ಯಕೃತ್ತಿನ ರೋಗ

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

703



ANDREWS
LIVER SALT
for Inner Cleanliness

CANARA BANK LTD., BANTVAL.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಈಡಿನ ಮೇಲೆ ಸದ್ರಿ ಬೇಂಕಿನಿಂದ ಪಡೆದ ಸಾಲಗಳ ಬಡ್ಡಿ ವಗೈರೆ ಕೊಡದೆ ಉಚಿತ ರಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಸದ್ರಿ ಆಸಾಮಿಗಳ ಪೈಕಿ ಕೆಲವರು ನಿರಾಕರಿಸಿದ್ದಾಗಿಯೂ, ನೋಟೀಸು ವಾಪಾಸು ಬಂದಿರುವುದರಿಂದಲೂ, ಕೆಲವರು ನೋಟೀಸು ಪಡಕೊಂಡು ಬಡ್ಡಿ ಕೊಡದೆ ಇರುವುದರಿಂದಲೂ, ಸದ್ರಿ ಸಾಲಗಳಿಗೆ ಜವಾಬ್ದಾರಿಯಾಗಿರುವ ಭಾಗಿಗಳನ್ನು ಇದೇ ಬರುವ ಜುಲಾಯಿ ತಾ ೫ನೇ ಸೋಮವಾರ ಮಧ್ಯಾಹ್ನ ಗಂಟೆ 12ಕ್ಕೆ ಸದ್ರಿ ಬೇಂಕಿಗೆ ಯುಕ್ತವೆಂದು ತೋರಿದ ಯಾವುದಾದರೂ ಒಂದು ದಿವಸ, ಪುನಃ ನೋಟೀಸು ವಗೈರೆ ಕೊಡದೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ಎಂತ ಈ ಮೂಲಕ ತಿಳಿಯಪಡಿಸಲಾಗುತ್ತದೆ

(1) ಸಾಲದ ನಂಬ್ರ S. L. 555/37 ಕೋಟಿ ಪೂಜಾರಿ, ಕೊರಗ ಪೂಜಾರಿಯ ಅಳಿಯ, ಗಂಗಜೆ, ಕಜೆಕಾರು ಗ್ರಾಮ, ಬಂಟವಾಳ ಪೋಸ್ಟು. ಅಸಲು ರೂ. 8-0-0

(2) ಸಾಲದ ನಂಬ್ರ S. L. 20/36 ಕಾಂತಪ್ಪ ಭಾಗಾ, ಸೋಮಪ್ಪ ಪೂಂಜರ ಅಳಿಯ, ಪೊಯ್ಯೆ, ಅಜ್ಜಿಬೆಟ್ಟು ಗ್ರಾಮ ಬಂಟವಾಳ ಪೋಸ್ಟು ಅಸಲು ರೂ 7-0-0

(3) ಸಾಲದ ನಂಬ್ರ S. L 32/38 ಬಾಬು ಪೂಜಾರಿ, ಐತು ಪೂಜಾರಿಯ ಅಳಿಯ, ಗುತ್ತುದಾರ, ಬಡ್ಡಕಟ್ಟೆ, ಬಂಟವಾಳ ಪೋಸ್ಟು. ಅಸಲು ರೂ. 20-0-0

(4) ಸಾಲದ ನಂಬ್ರ L. 1834/36 ವೆಂಕಟ್ರಾಮ ಆಚಾರ್ಯ, ರಾಮಣ್ಣ ಆಚಾರ್ಯರ ಮಗ, ಕಾರಕೊಟ್ಟು, ಕಾವಳ ಪಡೂರು ಗ್ರಾಮ, ಪೊಳಲಿ ಪೋಸ್ಟು. ಅಸಲು ರೂ. 10-0-0

(5) ಸಾಲದ ನಂಬ್ರ L. 1028/36 ಐತಪ್ಪ ಪೂಜಾರಿ, ಜಾರಪ್ಪ ಪೂಜಾರಿಯ ಅಳಿಯ, ಒಕ್ಕಲಿಗ, ಕುಡಮಾನ, ಬಾಳ್ತಿಲ ಗ್ರಾಮ, ಬಂಟವಾಳ ಪೋಸ್ಟು. ಅಸಲು ರೂ. 18-0-0

Office of the Bank, Bantval 6-6-1939 — S. Damodar Baliga, Agent.

ಔದ್ಯೋಗಿಕ ಪ್ರಪಂಚದಲ್ಲಿ ಮೈಸೂರಿನ ಮುನ್ನಡೆ

ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರಾದ ಸರ್. ಮಿರ್ಜಾ ಇಸ್ಮಾಯಿಲ ಇವರ ಬಜೆಟ್ ಅಧಿವೇಶನದ ಭಾಷಣವು ವಿಚಾರಣೀಯವಾಗಿದೆ. ಪ್ರಗತಿಯ ದಾರಿಯಲ್ಲಿ ಮೈಸೂರು ಹೇಗೆ ಮುನ್ನಡೆದಿದೆ ಯೆಂಬುದನ್ನು ನಾನಾದಿಂದ ತಿಳಿದುಕೊಳ್ಳಬಹುದಾಗಿದೆ.

ತಮ್ಮ ಭಾಷಣದಲ್ಲಿ ಅವರು ಹೊಸ ರಾಜ್ಯ ರಚನೆಯು ಮೈಸೂರಿಗೆ ಬರುವ ಆಶ್ವಾಸನೆಯನ್ನು ಕೊಟ್ಟಿರುವರು. ಆ ಹೊಸ ಮಾರ್ಪಾಟ್ಟು ಮೈಸೂರಿನ ಪ್ರಜೆಗಳ ಹಾಗೂ ಪ್ರಭುತ್ವದವರ ಸಂಪೂರ್ಣ ಹಿತದೃಷ್ಟಿಯುಳ್ಳದ್ದೆಂದೂ ಹೇಳಿದ್ದರು.

ಅವರ ಭಾಷಣದಲ್ಲಿ ಮೈಸೂರಿನ ಆಯವ್ಯಯ ಸ್ಥಿತಿಗಳು ಈ ಕೆಳಗಿನಂತೆ ಕಾಣಿಸಲ್ಪಟ್ಟಿವೆ.

ಚಿನ್ನದ ಗಣಿ

ಕೋಲಾರದ ಚಿನ್ನದ ಗಣಿಯಿಂದ ೧೯೩೭-೩೮ರಲ್ಲಿ ೨೫.೫೭ ಲಕ್ಷ ರೂಪಾಯಿಗಳೂ ೧೯೩೬-೩೭ರಲ್ಲಿ ೨೮.೪೬ ಲಕ್ಷ ರೂಪಾಯಿಗಳೂ ಸಿಕ್ಕಿವೆ. ಈ ವರ್ಷದಲ್ಲಿಯೂ ಅದೇ ಪ್ರಕಾರ ಆದಾಯ ಬರಬಹುದಾಗಿ ತಿಳಿದಿದ್ದರೂ ನಂದಿದುರ್ಗ ಮತ್ತು ಚಾಂಪಿಯನ್ ರೀಫ್ ಚಿನ್ನದ ಗಣಿಗಳಿಗೆ ದೊರೆತ ಲಾಭದ ಮೊಬಲಗು ಕಡಿಯಾದುದರಿಂದ ಕೇವಲ ೨೩ ಲಕ್ಷ ರೂಪಾಯಿಗಳು ಮಾತ್ರ ಬಂದಿದೆ.

ವ್ಯಾಪಾರ ವಹಿವಾಟುಗಳು ಮತ್ತು ರೈಲ್ವೆಗಳು

೧೯೩೭-೩೮ರಂದು ರೈಲ್ವೆಗಳಿಂದ ಬಂದ ಹುಟ್ಟುವಳಿ ೧೮.೪೬ ಲಕ್ಷ ರೂಪಾಯಿಗಳು. ಈ ವರ್ಷದಲ್ಲಿ ೨೦.೬೪ ಲಕ್ಷ ರೂಪಾಯಿಗಳ ಹುಟ್ಟುವಳಿ ಬರಬಹುದಾಗಿ ಅಂದಾಜು ಮಾಡಲಾಗಿದೆ. ೧೯೩೭-೩೮ರಲ್ಲಿ ಇದ್ದ ಒಟ್ಟು ಹುಟ್ಟುವಳಿ ೬೧.೯೩ ಲಕ್ಷ ರೂಪಾಯಿಗಳಿದ್ದು ಈ ವರ್ಷ ೬೭.೧೦ ಲಕ್ಷ ರೂಪಾಯಿಗಳಿಗೆ ಏರಿದೆ.

ವಿದ್ಯುಚ್ಛಕ್ತಿ

ಕೃಷ್ಣರಾಜ ಸಾಗರದ ವಿದ್ಯುಚ್ಛಕ್ತಿಯಿಂದ ೧೯೩೭-೩೮ರಲ್ಲಿ ೪೨.೨೭ ಲಕ್ಷ ರೂಪಾಯಿಗಳ ಹುಟ್ಟುವಳಿ ಬರಬಹುದೆಂದು ಅಂದಾಜು ಮಾಡಿದ್ದರೂ ೪೨.೯೫ ಲಕ್ಷ ರೂಪಾಯಿ ಮಾತ್ರ ಬಂದಿದೆ. ಈ ವರ್ಷದಲ್ಲಿ ೪೪.೬೬ ಲಕ್ಷ ರೂಪಾಯಿಗಳ ಹುಟ್ಟುವಳಿ ಅಂದಾಜು ಮಾಡಿದ್ದರೂ ೪೬.೬೦ ಲಕ್ಷ ರೂಪಾಯಿಗಳ ಹುಟ್ಟುವಳಿಯಾಗುವ ಸಂಭವವಿದೆ. ಮುಂದಿನ ವರ್ಷಕ್ಕೆ ೪೮ ಲಕ್ಷ ರೂಪಾಯಿಗಳ ಹುಟ್ಟುವಳಿಯ ಅಂದಾಜು ಮಾಡಲ್ಪಟ್ಟಿದೆ.

ನೀರಾವರಿ

ಕೃಷ್ಣರಾಜ ಸಾಗರದ ನೀರಾವರಿಯಿಂದ ೧೯೪೭-೩೮ರಲ್ಲಿ ೧,೯೭,೦೦೦ ರೂಪಾಯಿಗಳು ಹುಟ್ಟುವಳಿಯಾಗಿದೆ. ಈ ವರ್ಷದಲ್ಲಿ ೨.೬೪ ಲಕ್ಷ ರೂಪಾಯಿಗಳ ಹುಟ್ಟುವಳಿ ಅಂದಾಜು ಮಾಡಿದ್ದರೂ ೨.೦೧ ಲಕ್ಷ ರೂಪಾಯಿಗಳು ಮಾತ್ರ ದೊರಕಿವೆ. ಮುಂದಿನ ವರ್ಷಕ್ಕೆ ೨.೨೧ ಲಕ್ಷ ರೂಪಾಯಿಗಳು ದೊರಕಬಹುದಾಗಿ ಅಂದಾಜು ಮಾಡಲಾಗಿದೆ. ೨೦ ಲಕ್ಷ ರೂಪಾಯಿಗಳಷ್ಟು ಹಣ ರೈತರಿಂದ ವಸೂಲಾಗಲಿಲ್ಲ.

ಸಾಬೂನು

ಸರಕಾರೀ ಸಾಬೂನು ಕಾರ್ಖಾನೆಯಿಂದ ೭೦,೦೦೦ ರೂಪಾಯಿಗಳ ಲಾಭ ಬಂದಿದೆ.

ಕಬ್ಬಿಣದ ಕಾರ್ಖಾನೆ

ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ೫ ಲಕ್ಷ ರೂಪಾಯಿಗಳಿಗಿಂತಲೂ ಮಿಕ್ಕಿದ ಲಾಭ ಬರಬಹುದಾಗಿ ನಿರೀಕ್ಷಿಸಲಾಗಿದೆ.

ಸಿಮೆಂಟ್ ಕಾರ್ಖಾನೆ

ಇದರಿಂದ ೭೦,೦೦೦ ರೂಪಾಯಿಗಳ ಹುಟ್ಟುವಳಿ ಬಂದಿದೆ. ಅದರಿಂದಲೇ ಮುಂದಕ್ಕೆ ಮುಂದಕ್ಕೆ ೯೦,೦೦೦ ರೂಪಾಯಿಗಳ ಹುಟ್ಟುವಳಿಯು ಅಂದಾಜು ಮಾಡಲ್ಪಟ್ಟಿದೆ.

ಗಿರಣಿ ಕಾರ್ಖಾನೆ

ಶ್ರೀ ಕೃಷ್ಣರಾಜೇಂದ್ರ ಗಿರಣಿ ಕಾರ್ಖಾನೆಯಿಂದ ೧೯೩೭-೩೮ರಲ್ಲಿ ೯೫,೦೦೦ ರೂಪಾಯಿಗಳ ಲಾಭ ಬಂದಿದೆ.

ಸಕ್ಕರೆ ಕಾರ್ಖಾನೆ

ಸಕ್ಕರೆ ತಯಾರಿಯಾಗಿ ಕ್ರಯವೂ ಹೆಚ್ಚಿದ್ದರಿಂದ ಸರಕಾರಕ್ಕೆ ಹೆಚ್ಚು ಲಾಭಬಂದಿದೆ. ಕಂಪೆನಿಯಿಂದ ಷೇರುದಾರರು ಷೇರಿನ ಐವಜಿನ ಮೇಲೆ ಶೇಕಡಾ ೧೫ರ ಡಿವಿಡೆಂಡು ಹಂಚಿರುವರು.

ಕಾಗದ ಕಾರ್ಖಾನೆ

ಈಗಲೇ ಅದು ತೀವ್ರವಾಗಿ ಕೆಲಸ ನಡೆಸಿ ಕೇವಲ ಮೈಸೂರು ಸರಕಾರಕ್ಕೆ ಮಾತ್ರವಲ್ಲದೆ ಮಾರಾಟಕ್ಕೂ ಕಾಗದವನ್ನಿಟ್ಟಿದೆ. ಅದರ ಅಭಿವೃದ್ಧಿಗಾಗಿ ಸರಕಾರವು ಸಾಲವನ್ನು ಕೊಡಲು ನಿಶ್ಚಯಿಸಿದೆ.

ಖಾದಿ ಕೆಲಸ

ಬದನವಾಲ ಖಾದಿ ಕಾರ್ಯದಿಂದ ಇದುವರೆಗೆ ೩೦,೦೦೦ ಬೆಳೆಬಾಳುವ ನೂಲು ಖಾದೀ ಸೆಂಟರಿನಲ್ಲಿ ತಯಾರಾಯಿತು. ೧೯೩೭-೩೮ರಲಿ ತಯಾರಾದುದಕ್ಕಿಂತ ಒಂದೂವರೆಯಷ್ಟು ನೂಲು ತಯಾರಾಗಿದೆ. ಈ ವರ್ಷದಲ್ಲಿ ೪೨,೦೦೦ ರೂಪಾಯಿಗಳ ನೂಲು ತಯಾರಾಗಿದೆ. ೧೯೩೭-೩೮ರಲ್ಲಿ ೬೫,೦೦೦ ರೂಪಾಯಿಗಳ ಖಾದಿ ತಯಾರಾಗಿದೆ.

ಗ್ರಾಮ ಕೈಗಾರಿಕೆಯ ಪುನರಭಿವೃದ್ಧಿಯೂ ಮುಂದುವರಿಯುತ್ತಿದೆ. ಚರ್ಮ ಹದಮಾಡುವುದು, ಹಂಚು ಮಾಡುವುದು, ಚಾಪೆ ಮಾಡುವುದು ಇವುಗಳೇ ಮೊದಲಾದವುಗಳ ಪುನರುದ್ಧಾರ ಕೆಲಸವೂ ನಡೆಯುತ್ತಿವೆ. ಇದಕ್ಕಾಗಿ ಈಗ ೧ ಲಕ್ಷ ರೂಪಾಯಿಗಳಷ್ಟು ವೆಚ್ಚವಾಗುತ್ತಿದೆ.

ಭೂಕಂದಾಯ

ಭೂಕಂದಾಯದಿಂದ ಬರುವ ಆದಾಯವು ಕಡಿಮೆಯಾಗಿದೆ. ೧೯೩೬-೩೭ರಲ್ಲಿ ೧೩೦.೯೬ ಲಕ್ಷ ಇದ್ದದ್ದು ೧೯೩೭-೩೮ರಲ್ಲಿ ೧೧೯.೨೬ ಲಕ್ಷಕ್ಕೆ ಇಳಿದಿದೆ. ಈ ವರ್ಷದಲ್ಲಿ ೧೨೨.೨೨ ಲಕ್ಷ ರೂಪಾಯಿಗಳಷ್ಟಾಗಬಹುದು. ಮುಂದಿನ ವರ್ಷದಲ್ಲಿ ೧೨೨ ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಲಾರದೆಂಬ ಎಣಿಕೆಯಿದೆ.

ಮಾದಕ ಪದಾರ್ಥಗಳು

ಮಾದಕ ಪದಾರ್ಥಗಳ ಸೇವನೆಯನ್ನು ಕಡಿಮೆ ಮಾಡುವುದು ಸರಕಾರದವರ ಗುರಿಯಾಗಿರುವುದರಿಂದ ಆದಷ್ಟು ಅದನ್ನು ಹತೋಟಿಯಲ್ಲಿಟ್ಟಿರುತ್ತದೆ.

ಈಗಾಗಲೇ ೧೩ ಅಂಗಡಿಗಳನ್ನು ಪ್ರಯೋಗಾರ್ಥವಾಗಿ ಮುಚ್ಚಿದೆ. ಅದರಿಂದ ಸರಕಾರಕ್ಕೆ ೨೫,೦೦೦ ರೂಪಾಯಿಗಳ ನಷ್ಟವಾಗಿದೆ. ಬೇಗನೇ ಮಾದಕ ವಸ್ತುಗಳನ್ನು ನಿಷೇಧಿಸುವ ಕೆಲಸವು ಜ್ಯಾರಿಗೆ ತರುವುದಾಗಿ ನಿಶ್ಚಯಿಸಿದೆ. ಇದರಿಂದ ವರ್ಷಕ್ಕೆ ತುಂಬಾ ನಷ್ಟವಾದರೂ ಒಳ್ಳೆಯ ಪರಿಣಾಮಕಾರಿಯಾಗಿ ಪ್ರಜಾಹಿತವಾಗುವುದೆಂದು ಸರಕಾರವು ತಿಳಿಯುತ್ತದೆ.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟ್ಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನಿಮಾದಲ್ಲಿ ತೋರಿಸುವರು. ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಪೇಷಲ್ ಡಿಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮಾಲು ಪರದೇಶದಿಂದ ಬರುವಂತೆ ಉಂಟು. ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎನ್. ಎಮ್. ವಾಘ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜಂಟ್ — ಪಿ. ಎಚ್. ಭಕ್ತಾ   ಗದಗ - ವಿ. ಎಸ್. ನಿಟ್ಟೆ
ಮೈಸೂರು, ಕೊಡಗು, ದಕ್ಷಿಣ ಕನ್ನಡ ಏಜಂಟ್ ಡಾ. ಕೆ. ಭಾಸ್ಕರ ಪೈ
ಸ್ಪೆಶಲ್ ಏಜಂಟ್ — ಬಿ. ವ್ಹಿ. ಹೊನ್ನಾವರ

ಸರದಾರ ಭವನ Sirdar Bhavan

ಫೆಲಿಕ್ಸ್ ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ ವಿಶ್ರಾಂತಿಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಉತ್ತಮವಾದ ನಿವಾಸ ಗೃಹ. ಎಲ್ಲಾ ಹೋಟೆಲ್ಲುದಾರರ ನಮ್ಮನ್ನು ಕೃಪೆ ಗೋರಿಕೆ ವಂದನೆಗಳು.

Proprietor — H R Rao,
Bangalore Gun Emporium Madras

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ
ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store,
28 Meachua Bazar St CALCUTTA

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೊಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ನಗರದ ನವ ನಾಯಕರು

[೭ನೇ ಪುಟದಿಂದ ಮುಂದುವರಿದುದು]

ವವರಿಲ್ಲ. ದಿಗಂಬರರಾಯರಿಗೆ ಗಂಡು ಮಕ್ಕಳಿಲ್ಲ. ಅವರ ಹಿರಿಯ ಹೆಂಡತಿಯ ಮಗಳಲ್ಲಿ ಆರು ಮಕ್ಕಳಿದ್ದಾರೆ. ಅವರೆಲ್ಲ ಇರುವುದು ಜತೆಗೇನೆ. ಸಂಜೆ ಅವರನ್ನು ಕೂಡಿ ರಾಯರು ಭಜನೆಗೆ ಕುಳಿತರೆಂದರೆ ಅವರ ಮನೆಯೇ ಪಂಢರಾಪುರವಾಗುವುದು ಪ್ರತಿನಿತ್ಯ ಪೂಜೆಗೆ ಆರತಿ, ಶನಿವಾರಗಳು ತಪ್ಪದೆ ಇಲ್ಲ. ಅದಕ್ಕೆ ಬಾರದವನೆಂದರೆ 'ನಾಚಿಕೆಯಿಲ್ಲದ ನಾಣಿ'. ನಾಣಿ ಅವರ ಡ್ರೈವರು ಅವನೊಬ್ಬನಿಗೆ ಮಾತ್ರ ರಾಯರ ವಿಷಯದಲ್ಲಿ ಭೀತಿಯೇ ಇಲ್ಲ. ಪ್ರೀತಿ ತುಂಬಾ ಇದೆ ಅವನನ್ನು ಕರೆದು ದಿಗಂಬರರಾಯರು ನೂರು ಸಾರಿ ಹೇಳಿದ್ದುಂಟು 'ನಾಣಿ—ಇದು ಯಾವುದೂ ಶಾಶ್ವತವಲ್ಲ ವಿಠಲನೊಬ್ಬನೇ ಸತ್ಯ ವಿಠೋಬನ ಪೂಜೆಯನ್ನಾದರೂ ನೋಡಬಾರದೇ? ಕೊನೆಗೆ ಆರತಿ ನೋಡುವುದಕ್ಕಾದರೂ ನಿಲ್ಲು' ಎನ್ನುವುದುಂಟು ನಾಣಿಯೋ—ಕದಿಮರಲ್ಲಿ ಕದಿಮ ಪೂಜೆ ಮುಗಿದು ಶನಿವಾರ ಬಟ್ವಾಡೆಯ ಸಮಯ ಅವನಿಗೆ ವಿಠೋಬನ ನೆನಪು ಅಲ್ಲಿಯ ತನಕ ಹೊರಗೆ ಹೊರಟೋಟದಲ್ಲೋ, ಪೋರ್ಟಿಕೋದಲ್ಲೋ ಅವನು ಮನೆಯ ಚಿಕ್ಕ ಯಜಮಾನಿಯರ ಹತ್ತಿರ ಮಾತನಾಡುತ್ತಿರುತ್ತಾನೆ ರಾಯರಲ್ಲಿನ ಭಕ್ತಿಗಿಂತ ಯಜಮಾನಿಯರ ಮೇಲಿನ ಭಕ್ತಿ ಅಧಿಕ ರಾಯರು ಆರು ಸಾರಿ 'ನಾಣಿ, ನಾಣೀ—ಎಲ್ಲಿ ಸತ್ತೆಯೋ' ಎಂದು ಹೇಳಿದರೂ ಅವನ ಕಿವಿಗೆ ನಾಟದು ಬದಲು ಚಿಕ್ಕ ಯಜಮಾನಿಯರು 'ನಣ್ಣಿ'—ಎಂದರೆ ಜಿಗಿದು ಬರುತ್ತಾನೆ ಹೀಗಾಗಿ ರಾಯರು ಸಹ, ಹೊರಡಲಾರದ ಸಮಯದಲ್ಲಿ ನಾಣಿಯನ್ನು ಹೊರಡಿಸಬೇಕಾದರೆ, ಚಿಕ್ಕ ಯಜಮಾನಿಯರ ಮೂಲಕವೇ ತಮ್ಮ ಆರ್ಡರನ್ನು ಕಳುಹುತ್ತಾರೆ

ಚಿಕ್ಕ ಯಜಮಾನಿಯರೆಂದರೆ ಅವರ ಮೂರನೆ ಹೆಂಡತಿ ಮೊದಲನೆಯವಳು ತೀರಿಕೊಂಡಕೂಡಲೆ ಅವರ ನೆಲ್ವತ್ತರಲ್ಲಿ ಎರಡನೆಯ ಲಗ್ನವಾಯಿತು ಆಕೆ ನಿಸ್ಸಂತತಿಯಾಗಿಯೇ ತೀರಿದಳು ಈಗ ಪೆನ್ಶನು ದೊರೆತ ಬಳಿಕ ಮೂರನೆ ಲಗ್ನವಾಗಿದೆ ಮೂರನೆಯವಳೆಂದರೆ ಅವರಿಗೆ ಜೀವ ತಾರಾಮತಿ'ಯೆಂದರೆ ಅವರ ಪ್ರೇಮಕ್ಕೆ ಭಿತಿ ತಾರಾಮತಿಗೆ ಈಗ ಒಂದು ವರ್ಷದ ಗಂಡು ಕೂಸಿದೆ ಈ ಕುಲರತ್ನದೊಡನೆ ರಾಯರು ತಾಸು ತಾಸು ಚೆಕ್ಕಂದವಾಡುವುದುಂಟು ಅವನನ್ನು ಕರೆದು ಮೇಜಿನ ಮೇಲಿರಿಸಿ, ಅಲ್ಲಿರುವ ನೂರಾರು ಸಂಘ ಸಮಾಜಗಳ ವರದಿಯನ್ನು ತೋರಿಸುತ್ತ— ಅಲ್ಲಿನ ಮುಖಚಿತ್ರಗಳನ್ನು ತೆರೆದು 'ಇದು ಯಾರು' ಎಂದು ಮಾತನಾಡಿಸುವುದುಂಟು ಮಗು ಮಾತನಾಡದಿದ್ದರೆ ತಾರೆಯನ್ನು ಕರೆದು 'ತಾರಾ ಇದು ಯಾರ ಚಿತ್ರವೆಂದು ಮಗುವಿಗೆ ಹೇಳು' ಎನ್ನುವುದುಂಟು ಅವಳೇ? ಉರಿಮೊಗದು ಆ ವರದಿಯನ್ನು ಮುಚ್ಚಿಬಿಟ್ಟು 'ಅದು ನನ್ನದಲ್ಲ' ಎಂದುಬಿಡುವಳು 'ನನ್ನದೇನು ನಿನ್ನದೇನು' ಎಂದು ದಿಗಂಬರರಾಯರು ವೇದಾಂತ ಹೇಳುವರು

ಶನಿವಾರ ದಿವಸ ಎಂದರೆ ರಾಯರ ಮನೆ ಛತ್ರದಂತಾಗುವುದು ನೂರಾರು ಭಿಕ್ಷುಕರು ಬಂದು ಹೋಗುತ್ತಾರೆ ಅವರೆಲ್ಲರಿಗೂ ರಾಯರೇ ಖುದ್ದು ಕೈಯಿಂದ ಕಾಸು ಒಂದರಂತೆ ಹಂಚುವರು. ಈ ಹತ್ತು ವರ್ಷದಿಂದ ಆ ನಿಯಮ ಬಿಟ್ಟವರಲ್ಲ ವರ್ಷಕ್ಕೊಮ್ಮೆ ಮೂರು ಮೂರು ಕಾಸಿನ ದಾನಮಾಡುವುದುಂಟು. ಆ ದಿನ ತಪ್ಪದೆ 'ಇದು ಯಾರ ಮನೆ!' ಎಂದು ಅವರನ್ನು ಕೇಳಿ—'ದಿವಾನಬಹದ್ದೂರು ದಿಗಂಬರರಾಯರ ಮನೆ' ಎಂದು ಅವರಿಂದ ಅನ್ನಿಸಿ, ಅವರ ಬೆನ್ನುತಟ್ಟಿ ಕಳುಹಿಸುವುದುಂಟು

ದಿಗಂಬರರಾಯರಿಗೆ ಆಗದವರೂ ಉಂಟು. ಆಗಿ ಆಗದವರೂ ಉಂಟು. ಆಗದವರ ವಿಷಯ ಮುಂದೆ ಕ್ರಮೇಣ ತಿಳಿಯುತ್ತದೆ ನಮ್ಮ ನಗರದ ನವನಾಯಕರಿಗೆ ಎಷ್ಟೋ ಜನರಿಗೆ ಅವರನ್ನು ನೋಡಿದರೆ ಅಸೂಯೆ ಅವರು 'ಬೀಜದ ಹೋರಿ' ಕಂಡಾಗ ಅವರ ಗ್ರಾಮಸೇವಾ ಬುದ್ಧಿಯನ್ನು ನೋಡದೆ ಅವರನ್ನು ಪರ್ಯಾಯವಾಗಿ ನಿಂದಿಸಿದವರುಂಟು ಅವರು ಹರಿಜನ ಭೋಜನ ಮಾಡಿಸಿದಾಗ 'ಅವರ ಮನೆಯಲ್ಲಿ ಹರಿಜನರಿಗೆ ಹಿಂಬದಿ ಮನೆಗೆ ಪ್ರವೇಶ' ಅಂದವರುಂಟು ಅವೆಲ್ಲ ಚಿಲ್ಲರೆ ಜನರು; ಚಿಲ್ಲರೆ ಬುದ್ಧಿ ಎನ್ನುವ. ಆದರೆ ಅವರ ಆಪ್ತನೇ ಆಗಿ, ಅವರನ್ನು ಅಲಕ್ಷಿಸುವವನೆಂದರೆ 'ನಾಣಿ' ಹಾಗೆಂದು ನಾಣಿ 'ಬಿಕನಾಸಿ'ಯೆಂಬುದು ರಾಯರಿಗೆ ತಿಳಿದಿಲ್ಲವೆ? ಚೆನ್ನಾಗಿ ತಿಳಿದಿದೆ. ಇವರನ್ನು ಕುರಿತು ಇವರ ಮೊಮ್ಮಕ್ಕಳೊಡನೆಯೇ ಗೇಲಿಮಾಡುತ್ತಾನೆ—

'ನಿಮ್ಮ ಅಜ್ಜ ನಿನ್ನೆ ಬಾಲಾಜಿ ಫಿಲ್ಮು ನೋಡಲು ಎಂಟಾಣೆ ಕೊಟ್ಟರು. ನಾನು ಶೋಕಮಾಡಿ ಡಾಕೂಕಿ ಲಡಕಿ ನೋಡಿಬಂದೆ' ಅನ್ನುತ್ತಾನೆ ಅಲ್ಲವಾದರೆ ನಿಮ್ಮ ಅಜ್ಜನಿಗೆ 'ಬಾಲಾಜಿ' ಯಾಕೆ? ವೆಂಕಟರಮಣನ ದುಡ್ಡೆಲ್ಲ ಇವರ ಡಬ್ಬಿಯಲ್ಲಿದೆ—ಅದು ಬಿಡಿಸುವ ಯೋಚನೆ ಮುದುಕನಿಗಿಲ್ಲ' ಎಂದರೆ ಮಕ್ಕಳೂ ಅಜ್ಜನ ಕಸವಿಸಿಗೆ ಬೇಸರಗೊಂಡು 'ಅಜ್ಜ ಎಂದರೆ ಆಸೆ ಪಿರಾಂತ್' ಎನ್ನುತ್ತಾವೆ ಇನ್ನು ನಾಣಿಯ ಮಾತಿಗೆ ಪುಟಬರಬೇಕಾದರೆ ತಾರಾಮತಿಯಾದರೂ ದೂರದಲ್ಲಿ ನಿಂತಿರಬೇಕು ಅವರ ಎದುರಿಗೆ ನಾಣಿಯು ಸುಮ್ಮನಿರುತ್ತಾನೆ ಅವರು ದೂರಹೋಗಲು, ಕೇಳ ತ್ತಾರೆಂದೇ ತಿಳಿದು ಮುದುಕರನ್ನು ಕುರಿತೇ ತಾರೀಫುಮಾಡುತ್ತಾನೆ, ಕಾನಾಗಿ ನಾಣಿ ದಿಗಂಬರರಾಯರನ್ನು ಕರೆಯುವುದೇ 'ದಿವಾನ ಕೊರಡು' ಎಂದು ನಾಣಿ ತಾರಾಮತಿಯರು ಮಾತನಾಡುವಾಗ ಧನಿಯರು ಕರೆದರೆ 'ಕೊರಡ ಕರೆಯುತದೆ' ಎನ್ನುವುದೂ ಉಂಟು

ಕೆಲವು ಬಾರಿ ರಾಯರ ಮೊಮ್ಮಕ್ಕಳು ಅವರಲ್ಲಿ ೧೨ ವರ್ಷದ ಗೋಪು ನಾಣಿಯೊಡನೆ ಜಗಳವಾಡಿ ಅಜ್ಜನ ಬಳಿಗೆ ಹೋಗಿ 'ಅಜ್ಜಾ, ನಾಣಿ ಬರೀ ಸುಟ್ಟವ ನಿನ್ನನ್ನು 'ಕೊರಡು' ಎಂದು ಕರೆಯುತ್ತಾನೆ ಮೊನ್ನೆ ನೀನು ಕೊಟ್ಟ ದುಡ್ಡಿಗೆ ಬಾಲಾಜಿ ನೋಡದೆ ಡಾಕೂಕಿ ಲಡ್ಕೀ ನೋಡಿದನಂತೆ' ಎಂದು ದೂರಿಡುವುದುಂಟು. ದಿಗಂಬರರಾಯರು ಒಮ್ಮೆಗೆ ತಳಮಳಗೊಂಡರೂ ಕೊನೆಗೆ ನಗುತ್ತ 'ನಾಣಿಗೆ ಹುಚ್ಚು, ಅವನ ಹತ್ತಿರ ನೀವು ಯಾರೂ ಹೋಗಬೇಡಿ' ಎನ್ನುತ್ತಾರೆ 'ಹಾಗಿದ್ದರೆ ನಾಣಿ ಬೇಡ ನಮಗೆ, ಬೇರೆ ಡ್ರೈವರನ್ನು ತರಬಾರದೇ' ಎಂದು ಮೊಮ್ಮಗ ಪ್ರತಿ ಸವಾಲುಮಾಡುವುದುಂಟು ಆ ಸವಾಲಿಗೆ ಏನು ಉತ್ತರ ಕೊಟ್ಟರೂ ಗೋಪು ವಾದ ಮುಗಿಯುವುದಿಲ್ಲ ಆಗ ದಿವಾನಬಹದ್ದೂರರು ಕಠಿಣರಾಗಿ 'ನಿನಗೆ ಓದಲಿಕ್ಕಿಲ್ಲವೇ' ಎಂದು ಸಿಟ್ಟು ತಾಳುವರು. ಸರಿ, ಯಾವುದಕ್ಕೂ ಬಾರದ ಮರ್ಯಾದೆ ಅವರ ಸಿಟ್ಟಿಗೆ ಬಂದೇ ಬರುವುದು

ಭಾರವಿದ್ದಷ್ಟು ಹುಡುಗಿಯರಿಗೆ ಬೆಲೆ!

ಮಾಂಡೀ ಸಂಸ್ಥಾನದಲ್ಲಿ ಹೀಗೊಂದು ವಿಚಿತ್ರ ವ್ಯಾಪಾರ ನಡೆಯುತ್ತದೆ! ಗಯುನ್ನಿಸ್ ಎಂಬ ಜಾತಿಯಲ್ಲಿ ಹುಡುಗಿಯರು ಮದುವೆಯಾಗುವ ಪ್ರಾಯಕ್ಕೆ ಬಂದೊಡನೆ ಅವರನ್ನು ತೂಗಿನೋಡಿ ತೂಕಕ್ಕೆ ಸರಿಯಾಗಿ ಬಂಗಾರ ಬೆಳ್ಳಿಯೊ ಪಡೆದು ಮಾರಾಟ ಮಾಡಿಬಿಡುವರು ಹೆಚ್ಚಾಗಿ ಈ ಕೆಲಸವನ್ನು ಹುಡುಗಿಯ ತಂದೆಯೇ ಮಾಡುವನು ಕೆಲವು ಸಲ ಹಾಗೆ ಮದುವೆಯಾದ ಗಂಡನೂ ಕೂಡ ತಿರಿಗಿ ಮಾರಾಟ ಮಾಡುವುದೂ ಉಂಟು!

ಒಂದು ತೊಲೆ ಭಾರಕ್ಕೆ ರೂಪಾಯಿ ಎರಡರಿಂದ ಮೂರರ ತನಕ ಬೆಲೆ ಬರುವುದು ಸಾಧಾರಣ ದರವಾಗಿದೆ'

ಇದನ್ನು ಸಂಪೂರ್ಣ ನಿಲ್ಲಿಸಲು ಸಂಸ್ಥಾನದ ಪ್ರಾಗತಿಕ ಪಕ್ಷದವರು ಚಳವಳ ನಡೆಸುತ್ತಿದ್ದಾರೆ ಸರಕಾರವು ಇಂತಹ ಪದ್ಧತಿಯಿಂದ ತೆರಿಗೆಯ ಮೂಲಕ ಲಾಭ ಪಡೆಯುತ್ತದೆ!

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಟಾಗುವ ಒಳಲಿಕೆ ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ನಿದ್ರಾಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನು, ವಿರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ ಬಲವರ್ಧಕ ಔಷಧವೆಂದರೆ

ಪಂಡಿತ ಡಿ ಗೋಪಾಲಾಚಾರ್ಯರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು.

ಆಯುರ್ವೇದಾಶ್ರಮ . . ಮದರಾಸು



ಸ್ಟಾಕಿಸ್ಟರು:

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು

ನವೀನ ಶೋಧನೆ

ಹೇನುಗಳನ್ನು ನಾಶಮಾಡುವ 'ಬಾಬಾ' ಉಪಯೋಗಿಸಿರಿ!

ಸ್ತ್ರೀ ಜಾತಿಗೆ 'ಬಾಬಾ' ಎಂಬುದು ವರಪ್ರಸಾದ

ತಲೆಯಲಿ ಹೇನು ಆಗುವುದು ಇದರ ... ದೇಸಿಗೆಯಾದುದರಿಂದ ಪ್ರತ್ಯೇಕಿಯು ... 'ಬಾಬಾ' ... ಹಚ್ಚಿದರೆ ಖಾತ್ರಿಯಾಗಿ ಹೇನುಗಳನ್ನು ... 'ಬಾಬಾ' ಇದರಿಂದ ಅಪಾಯಕರವಿಲ್ಲ 'ಬಾಬಾ' ಎಲ್ಲಾ ಪಟ್ಟಣಗಳಲ್ಲಿ ... ದಲ್ಲಾಳಿ ... ಸಿಕ್ಕುತ್ತದೆ

ಕಿಮ್ಮತ್ತು ಡಬ್ಬಿ 1ಕ್ಕೆ 0-2-6

ಸಾಯಿ ಬ್ರದರ್ಸ್

... ಕಾಳಬಾದೇವಿ ರೋಡ್, ಬೊಂಬಾಯಿ 2

ಬೊಸ್ಕೊ ಟೀ ರೋಸ್

ಸಾಮಾನ್ಯ ಬೆಲೆಗೆ ಮಾರಲ್ಪಡುವ

ಅತ್ಯಂತ ಸುಗಂಧಪೂರಿತ ಸಾಬೂನು!

ಬಹಳ ದೊಡ್ಡದಾದ ಸೈಜು! ◈ ನವೀನವಾದ ಆಕಾರ!

ಆಹ್ಲಾದವನ್ನೀಯುವ ಪರಿಮಳ!

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ

ತಯಾರಿಸುವವರು — ಬೊಂಬೆ ಸೋಪ್ ಫೆಕ್ಟರಿ, ಬಿ. ಜಿ 3.

ವಿತರಣಾಕಾರರು — ವಿ ಅಹಮ್ಮದ ಹುಸ್ಸೇನ್, ಗೋಟಿಪ್ಪಾ ಬಜಾರ್, ಮಂಗಳೂರು.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ ವಿಶೇಷ ಮಾಹಿತಿಗೆ ಬರೆಯಿರಿ

ಜವಿ ವೆಂಕಟಸುಬ್ಬಯ್ಯ ಲಿವರ್ ಮತ್ತು ಪ್ಲೀಹ ಸ್ಪೆಷಿಯಲಿಸ್ಟ್, ಮೈಲಾಪುರ, ಮದ್ರಾಸು.

ಗಂಗಾಜಲದಲ್ಲಿರುವ ಔಷಧ ರಹಸ್ಯ!

ಧಾರ್ಮಿಕ ಕ್ರಿಯೆಯಲ್ಲಿ ವಿಜ್ಞಾನದ ಪ್ರಯೋಗ!

...ದೇವರ ಧ್ಯಾನಸ್ಮರಣೆಯನ್ನು ಮಾಡಿಕೊಂಡು, ಗಂಗಾಜಲವನ್ನು ಸೇವಿಸಿದರೆ ಮನುಷ್ಯನು ನಿರೋಗಿಯಾಗುತ್ತಾನೆಂದು ಆಯುರ್ವೇದ ಶಾಸ್ತ್ರವು ಸಾರುತ್ತಿದೆಯಷ್ಟೇ? ಇದರಲ್ಲಿ ಅಡಕವಾಗಿರುವ ತತ್ವವೇನು? ಗಂಗಾಜಲವು ಔಷಧಿಯಾಗಿ ಉಪಯೋಗಿಸಲ್ಪಡತಕ್ಕದ್ದಾದರೆ ಅದರ ರಹಸ್ಯವೇನು?

ಧಾರ್ಮಿಕ ಮನೋಭಾವವುಳ್ಳ ಹಿಂದೀಯರು ಗಂಗಾನದಿಯ ನೀರಿಗೆ ಒಂದು ರೀತಿಯ ದೈವಿಕತೆಯನ್ನು ಹೇಳುತ್ತಾರೆ. ಅಂದು ಹೇಗಿದ್ದರೂ ಪೂಜಾಗೃಹದಲ್ಲಿ ಗಾಳಿ ಸಂಚಾರವಾಗದ ಭದ್ರವಾದ ಪಾತ್ರೆಯಲ್ಲಿ ಇದನ್ನು ತುಂಬಿಟ್ಟಿರುತ್ತಾರೆ. ಎಷ್ಟು ಸಮಯಗಳು ಕಳೆದರೂ ಹಾಗೆ ಇಟ್ಟಿದ್ದರೆ ಖಂಡಿತವಾಗಿಯೂ ಕೆಟ್ಟು ಹೋಗದು. ಹೀಗಾಗಬೇಕಾದರೆ ಗಂಗಾಜಲದಲ್ಲಿ ವೈಶಿಷ್ಟ್ಯತೆಯೇನು?

ಧಾರ್ಮಿಕ ವಿಶ್ವಾಸವನ್ನು ಬಿಟ್ಟು ನಾವು ವೈಜ್ಞಾನಿಕ ಶೋಧನೆಯ ಕಡೆಗೆ ಗಮನ ಕೊಡುವ. ಕಲ್ಕತ್ತೆಯ ಬಂದರದಿಂದ ನಾವು ಹುಗ್ಲಿ ನದಿಯಿಂದ ತುಂಬಿಸಿದ ನೀರು ಲಂಡನನ್ನು ಮುಟ್ಟುವ ವರೆಗೆ ಸರಿಯಾಗಿ ಕೆಡದೇ ಉಳಿಯುತ್ತದೆ. ಇನ್ನು ಯಾವ ನೀರಾದರೂ ಕೂಡಾ ಉಪಯೋಗಿಸಲು ಅಸಹ್ಯವಾಗಿ ಹೋಗುವುದರಿಂದ ನಾವು ಏಡನನ್ನು ಮುಟ್ಟುವುದರಲ್ಲಿಯೇ ಅದನ್ನು ಬದಲಾಯಿಸಬೇಕಾಗುತ್ತದೆ. ವಿಜ್ಞಾನವು ಇದು ವರೆಗೆ ಇದಕ್ಕೆ ಉಚಿತವಾದ ಉತ್ತರವನ್ನು ಕೊಟ್ಟಿಲ್ಲ.

ಗಂಗಾನದಿಯ ನೀರಿಗೆ ಕೊಲರಾ ಕ್ರಿಮಿಗಳನ್ನು ಹಾಕಿದ್ದಲ್ಲಿ ಅವುಗಳು ಕೆಲ ತಾಸುಗಳೊಳಗೆ ಸತ್ತುಹೋಗುತ್ತವೆ. ತದ್ವಿರುದ್ಧವಾಗಿ ಇನ್ನಿತರ ನೀರುಗಳಲ್ಲಿ ಅವುಗಳು ಹಾಕಲ್ಪಟ್ಟಲ್ಲಿ ಅಧಿಕಾಧಿಕವಾಗಿ ಬೆಳೆಯುತ್ತವೆ. ಇದರ ರಹಸ್ಯವು ಇನ್ನೂ ಕೂಡಾ ಅಗೋಚರವಾಗಿದೆ.

ಕಾಶಿಗೆ ಯಾತ್ರೆ ಮಾಡಿದ ಯಾವ ಗೃಹಸ್ಥನಿಗೇ ಆಗಲಿ ಅಲ್ಲಿನ ಸ್ನಾನಮಾಡುವ ಘಾಟಿನಲ್ಲಿರುವ ನೀರು ವಿಶುದ್ಧವಿಲ್ಲದ ಸ್ಥಿತಿಯಲ್ಲಿ ಹಾಳಾಗಿರುವುದು ಕಂಡುಬಾರದಿರದು. ಇಡೀ ಕಾಶೀ ಪಟ್ಟಣದ ಕೊಳಕುಗಳೆಲ್ಲಾ ಗಂಗಾನದಿಗೆ ಬರುವುದು ಮಾತ್ರವಲ್ಲದೆ ಅಸಂಖ್ಯಾತವಾಗಿ ಅರ್ಧಮರ್ಧ ಸುಟ್ಟ ಶವಗಳು ನೀರಿಗೆ ಎಳೆದುಹಾಕಲ್ಪಡುವುದು ಕಾಣದಿರದು. ಆರೋಗ್ಯಸೂತ್ರಕ್ಕೆ ವಿರುದ್ಧವಾಗಿರುವ ಈ ಸ್ನಾನಪದ್ಧತಿಯು ನಿರಂತರವಾಗಿ ನಡೆಯುತ್ತಿರುವುದಾದರೂ ಇದು ವರೆಗೆ ಇದರಿಂದ ಯಾವುದೊಂದು ಹಾನಿಯಾಗಲಿ ಕಂಡುಬಂದಿಲ್ಲ. ಹೀಗಿದ್ದರೂ ಗಂಗಾಜಲದಲ್ಲಿ ಪರಿಶುದ್ಧತೆಯನ್ನು ಕಾಯುವ ಶಕ್ತಿಯಿರುವುದಾದರೆ ಅದು ಯಾವ ಗುಣದಿಂದ ಎಂಬುದು ವಿಚಾರಿಸಲ್ಪಡತಕ್ಕ ವಿಷಯವಾಗಿದೆ.

ವರ್ಷದ ಯಾವುದೇ ಸಮಯದಲ್ಲಾದ ಗಂಗಾನದಿಯ ನೀರಿನಲ್ಲಿ ಸ್ನಾನ ಮಾಡಿದ ಮೇಲೆ ಇಡೀ ಶರೀರದಲ್ಲಿ ನವೋತ್ಸಾಹವು ನವಶಕ್ತಿಯು ಬಂದ ಅನುಭವವು ಆಗುವುದು. ಹಾಗಿದ್ದ ಅನುಭವವು ಇತರ ನದಿಗಳ ವಿಷಯದಲ್ಲಿ ಕೇವಲ ಕೆಲ ಸಮಯಗಳಲ್ಲಿ ಮಾತ್ರ ಇರುತ್ತದೆ. ಇದಕ್ಕಾದರೂ ಕಾರಣವೇನು?

ವಿದ್ಯುತ್ ಸಂಸ್ಕೃತಿಯ ಪ್ರಯೋಗವು ಇದರ ರಹಸ್ಯವನ್ನು ಹೊರಗೆಡವಿದೆ. ದ್ರವವಸ್ತುವು ವಿದ್ಯುತ್ ಸಂಚಾರದಿಂದ ಬದಲಾವಣೆಯನ್ನು ಹೊಂದುತ್ತದೆಯೆಂಬ ಶೋಧನೆಯನ್ನು ಮೊದಲಾಗಿ ಕಂಡು ಹಿಡಿದವರು ಮಿ| ಅಗಾಸ್ಕಾರ್ ಎಂಬ ಪ್ರಸಿದ್ಧ ವಿದ್ಯುತ್ ವೈಜ್ಞಾನಿಕರು. ಡಾ| ನೆಹರುಗಳು ಇದನ್ನು ಸಂಪೂರ್ಣವಾಗಿ ಪ್ರಯೋಗಕ್ಕೆ ತಂದುಕೊಂಡು ಸಸ್ಯ, ಜಂತು, ಮಾನವ ರಚನಾ ವಿಧಾನದಲ್ಲಿ ಈ ಪ್ರಯೋಗದ ಮೂಲಕ ಹಾಳಾದುದನ್ನು ಒಳ್ಳೆಯದನ್ನಾಗಿಯೂ, ಒಳ್ಳೆಯದಾಗಿರುವುದನ್ನು ಇನ್ನಷ್ಟು ಒಳ್ಳೆಯದಾಗಿಯೂ ಮಾಡಿ ತೋರಿಸಿದ್ದಾರೆ. ವಿದ್ಯುತ್ತಿನ ತೀಕ್ಷ್ಣ ಕಿರಣವು ನೀರಿನಲ್ಲಿ ಪ್ರಯೋಗಿಸಲ್ಪಟ್ಟರೆ ಇಡೀ ಜಲಮಯವೇ ಒಂದು ಬದಲಾವಣೆಯನ್ನು ಹೊಂದುತ್ತದೆ. ನೀರಿನಲ್ಲಿ ಈ ವಿದ್ಯುತ್‌ಸಂಚಾರವು ಬಹು ತೀಕ್ಷ್ಣವಾಗಿ ಆಗುತ್ತಿದೆ. ಹೀಗೆ ಆಗುವಾಗ ಸುತ್ತು ಬಳಸಿರುವ ಅಂಗಾರಾಮ್ಲವು ದೂರವಾಗಿ ನ್ಯೂಟ್ರನ್ಸ್ ಎಂಬ ಪದಾರ್ಥವು ಅಸಂಖ್ಯವಾಗಿ ಅಪರಿಮಿತವಾಗಿ ಉಂಟಾಗುತ್ತದೆ. ಈ ವಿಷಯದಲ್ಲಿ ಸಂಪೂರ್ಣವಾದ ಹಾಗೂ ನಿಶ್ಚಿತವಾದೊಂದು ಪ್ರಯೋಗದ ಸಿದ್ಧಾಂತವನ್ನು ಮಾಡಬೇಕಾದರೆ ಇನ್ನೂ ಹಲವಾರು ವರ್ಷಗಳ ಪ್ರಯೋಗ ಪರೀಕ್ಷೆಯು ಮುಂದುವರಿಯಬೇಕು. ಹೇಗಿದ್ದರೂ ಹೀಗೆ ವಿದ್ಯುತ್‌ಸಂಚಾರ ಮಾಡಲಾದ ನೀರಿನಲ್ಲಿ ಪ್ರಥಮವಾಗಿ ನಾವು ತಿಳಿಯಬಹುದಾದ ವಿಷಯವೇನೆಂದರೆ ನೀರು ಮೊದಲಿಗಿಂತ ರುಚಿಕರವಾಗುವುದು.

ವಿದ್ಯುತ್ ಕಿರಣವನ್ನು ನೀರಿನಲ್ಲಿ ಪ್ರಯೋಗಿಸುವುದರಿಂದ ಇನ್ನೊಂದು ಪ್ರಾಮುಖ್ಯ ವಿಷಯವು ಆಗುವುದೆಂದರೆ ನೀರಿನಲ್ಲಿರುವ ಸಾಂಕ್ರಾಮಿಕ ರೋಗಗಳನ್ನು ಹುಟ್ಟಿಸುವ ಅನೇಕ ವಿಷಕ್ರಿಮಿಗಳು ಅದರಿಂದ ತೀವ್ರವಾಗಿ ನಾಶವಾಗುತ್ತವೆ. ನೀರನ್ನು ಬೇರೆ ಬೇರೆ ಕಡೆಗೆ ಕಳುಹಿಸುವ ಮೂಲಸ್ಥಾನದಲ್ಲಿ ಈ ರೀತಿಯ ವಿದ್ಯುತ್ ಪ್ರಯೋಗದಿಂದ ಅನೇಕ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬಹುದಾಗಿದೆ. ಸಾರ್ವಜನಿಕ ಸಂಸ್ಥೆಗಳು ಈ ಪ್ರಯೋಗವನ್ನು ಪ್ರಸಿದ್ಧಿಗೆ ತಂದಲ್ಲಿ ಹಳ್ಳಿಹಳ್ಳಿಗಳಲ್ಲಿಯೂ ಕೂಡಾ ಆ ಮಾದರಿಯು ಅನುಸರಿಸಲ್ಪಟ್ಟು ಅದು ಸಾಮಾನ್ಯವಾಗಿ ಪ್ರಯೋಜನಕ್ಕೆ ಬಂದು ಸರ್ವರೂ ಅದರಿಂದ ಸಂಪೂರ್ಣ ಪ್ರಯೋಜನವನ್ನು ಪಡೆಯಬಹುದಾಗಿದೆ.

ಈ ರೀತಿಯ ಪ್ರಯೋಗ ಶುದ್ಧವಾದ ನೀರು ನಮ್ಮ ಜೀವಂತ ಅಣುವಿನೊಡನೆ ಸಂಪರ್ಕಗೊಂಡಾಗ ಅದು ಶಕ್ತಿಗೊಂಡು ಅದರಲ್ಲಿರುವ ಸಂಪೂರ್ಣ ಒಳ್ಳೆಯ ಅಂಶವನ್ನು ತೋರಿಸುತ್ತದೆ. ಅದರ ಪ್ರಯೋಗದ ಪ್ರಯೋಜನವು ಎಷ್ಟರ ಮಟ್ಟಿಗೆ ಮಾನವಜನಾಂಗದ ಆರೋಗ್ಯ ಐಶ್ವರ್ಯಗಳ ಅಭಿವೃದ್ಧಿಗೆ ಸಹಕಾರಿಯಾದೀತೆಂಬುದು ಊಹನಾತೀತವಾಗಿದೆ. ಇಂತಹ ನೀರಿನಲ್ಲಿ ಬೀಜಗಳನ್ನು ನೆನೆಯಹಾಕುವುದರಿಂದ ಬೀಜಗಳು ಬಲಗೊಂಡು ಮೊಳಕೆಯು ಪುಷ್ಟಿಕರವಾಗಿ ಆಗುತ್ತದೆ. ಬೆಳಗ್ಗೆ ಇಂತಹ ನೀರನ್ನು ಒದಗಿಸುವುದರಿಂದ ಫಲವು ಬಹು ಮಟ್ಟಿಗೆ ಹೆಚ್ಚುತ್ತದೆ. ರೋಗಕ್ರಿಮಿಗಳಿಂದ ಹಾವಳಿಗೊಂಡ ಸಸ್ಯಗಳಿಗೆ ಇಂತಹ ನೀರನ್ನು ಚಿಮುಕಿಸುವುದರಿಂದ ಆ ಸಸ್ಯಗಳು ರೋಗಮುಕ್ತವಾಗುತ್ತವೆ. ಪ್ರಾಣಿಗಳ ಹಾಗೂ ಮಾನವಜೀವಿಗಳ ವಿಷಯವಾಗಿಯೂ ಈ ರೀತಿಯಿಂದ ಪ್ರಯೋಗಶುದ್ಧವಾದ ನೀರನ್ನು ಎಡೆಬಿಡದೆ ಉಪಯೋಗಿಸುವುದರಿಂದಲಾಗಿ ರಕ್ತವು ಶುದ್ಧವಾಗಿ ಶರೀರವು ಪುಷ್ಟವಾಗಿ ಅನೇಕ ದುಷ್ಟಪದಾರ್ಥಗಳು ದೇಹದಿಂದ ದೂರವಾಗುವುದರ ಮೂಲಕ ಶರೀರವು ನವಶಕ್ತಿಯನ್ನು ಪಡೆಯುತ್ತದೆ. ಹೀಗೆ ಶರೀರವು ಈ ರೀತಿಯ ನೀರಿನ ಸ್ನಾನದಿಂದಲಾದರೂ ನವೋತ್ಸಾಹವನ್ನು ಪಡೆಯುವಾಗ ಇಡೀ ಶರೀರವೇ ಹೊಸ ಚೈತನ್ಯವನ್ನು ಪಡೆದು ನಿಜವಾದ ಸತ್ವಪೂರ್ಣವಾದ ಜೀವನದ ಸುಖವನ್ನು ಪಡೆಯುತ್ತದೆ.

ವಿದ್ಯುತ್ಕಿರಣಗಳ ಸಂಚಾರಪ್ರಯೋಗದಿಂದ ನೀರಿನ ದುಷ್ಟಪದಾರ್ಥಗಳು ನಾಶವಾಗುವುದು ಮಾತ್ರವಲ್ಲ ಶುದ್ಧಪದಾರ್ಥಗಳೂ ಹೆಚ್ಚಾಗುತ್ತವೆ. ಇದರಿಂದ ವಿಷವಿನಾಶಕ ಗುಣವೂ ನೀರಿಗೆ ಬರುತ್ತದೆ. ನ್ಯೂಯೋರ್ಕಿನ ಪ್ರಸಿದ್ಧ ಚಿಕಿತ್ಸಕರಾದ ಡಾ| ಹೊನಾರ್ರವರು ಲೋಕದ ಹಿತಪರವಾಗಿ ಇದನ್ನು ಉಪಯೋಗಿಸುವುದು ಮಾತ್ರವಲ್ಲದೆ ಗಾಯಗಳಿಗೆ ಪರಿಣಾಮಕಾರಿಯಾದ ಔಷಧಿಯನ್ನಾಗಿ ಇದನ್ನು ಪ್ರಯೋಗಿಸುತ್ತಾರೆ. ನೀರಿಗೆ ವಿದ್ಯುತ್ ಕಿರಣವನ್ನು ಪ್ರಯೋಗಿಸಿ ಆ ನೀರನ್ನು ರೋಗಿಗೆ ಕೊಟ್ಟರೆ ವಾಂತಿಭೇದಿಯು ಖಂಡಿತವಾಗಿಯೂ ಸಂಪೂರ್ಣವಾಗಿ ಗುಣವಾಗುತ್ತದೆ. ಏಕೆಂದರೆ ಕೊಲೆರಾ ಕ್ರಿಮಿಗಳ ಅದರಿಂದ ನಾಶವಾಗುತ್ತವೆ. ಹೀಗೆ ನೀರಿಗೆ ವಿದ್ಯುತ್‌ಪ್ರಯೋಗ ಮಾಡುವ ಸ್ಥಳಗಳಲ್ಲಿ ಸಾಂಕ್ರಾಮಿಕ ರೋಗಗಳು ಬಹುಮಟ್ಟಿಗೆ ಕಡಿಮೆಯಾಗಿವೆ. ಬಡತನದಿಂದ ಬಳಲುವ ನಮ್ಮ ಭಾರತದೇಶಕ್ಕೆ ಇದು ಆರೋಗ್ಯಜೀವನದ ಅಮೃತಸಿದ್ಧಿಯಲ್ಲವೇ?



ಕಾಶಿಕ್ಷೇತ್ರದ ಒಂದು ರಮಣೀಯ ದೃಶ್ಯ

ಇದರಿಂದ ಹುಟ್ಟಿಬರುವ ಅನೇಕ ರಸಾಯನಗಳ ಕ್ರಯವು ತಗ್ಗುವುದು ಮಾತ್ರವಲ್ಲದೆ ನ್ಯಾಯವು ಅತ್ಯಂತ ಸಾಧಾಸ್ಥಿತಿಗೆ ಒಂದು ಜೀವನವು ಸುಧಾರಣೆಯಾಗುವುದು. ಇದರಿಂದ ಕೆಲವು ಸ್ವಾರ್ಥರಿಗೆ ನಷ್ಟವಾಗಬಹುದಾದರೂ ಜನಾಂಗದ ಹಿತಚಿಂತಕನಾದವನು ಈ ಪ್ರಯೋಗವನ್ನು ಸಾಧಿಸುವುದು ಮಾತ್ರವಲ್ಲದೆ ಇದರ ತೀವ್ರ ಪ್ರಚಾರವನ್ನು ಕೈಕೊಳ್ಳಬೇಕು.

ಈ ತತ್ವವು ಗಂಗಾನದಿಯ ನೀರಿನಲ್ಲಿ ಎಷ್ಟರ ಮಟ್ಟಿಗೆ ಇದೆಯೆಂಬುದನ್ನು ಪರೀಕ್ಷಿಸುವ! ಅಖಿಲ ಪ್ರಪಂಚದಲ್ಲಿ ಅತ್ಯುನ್ನತ ಪರ್ವತವಾಗಿರುವ ಹಿಮಾಲಯವು ಗಂಗಾನದಿಯ ಮೂಲವಾಗಿದೆ. ವರ್ಷದ ಎಲ್ಲಾ ಸಮಯಗಳಲ್ಲಿಯೂ ಕೂಡಾ ಅಲ್ಲಿ ಗುಡುಗು ಮಿಂಚುಗಳು ಇವೆ. ಹೀಗಾಗಿ ಪ್ರಕೃತಿಯ ಸಹಜವಾದ ಶಕ್ತಿಯಿಂದಲೇ ಗಂಗಾನದಿಯ ನೀರಿಗೆ ನಿರಂತರ ವಿದ್ಯುತ್ ಸಂಚಾರವು ಒದಗಿಸುತ್ತದೆ. ಅದು ಮಾತ್ರವಲ್ಲದೆ ಗಂಗಾನದಿಯು ಹಿಮಾಲಯದಿಂದ ಮುಂದೆ ಸಾಗುತ್ತಿರುವಲ್ಲಿ ಅನೇಕ ಖನಿಜ ಸಂಪತ್ತುಳ್ಳ ಶಿಲೆಗಳನ್ನು ಹೊಡೆದು ಹಾದುಹೋಗಬೇಕಾಗಿರುವುದರಿಂದಲೂ ನೀರು ಮೇಲೆ ಹೇಳಿದ ಬದಲಾವಣೆಯನ್ನು ಹೊಂದಲು ಸಾಧ್ಯವಿದೆ. ಇಂತಹ ಅದ್ಭುತ ಗುಣಗಳಿರುವುದರಿಂದಲೇ ಹಿಂದಿನ ನಮ್ಮ ಋಷಿಗಳು ಗಂಗಾನದಿಯ ನೀರನ್ನು ಔಷಧಿಯಾಗಿ ಆಯುರ್ವೇದ ಶಾಸ್ತ್ರದಲ್ಲಿ ಘಂಟಾಘೋಷವಾಗಿ ನೀಡಿರುವುದಾಗಿ ತಿಳಿಯಬೇಕು.

ಅಗಸ್ತ್ಯಋಷಿಯು ಕಾರ್ತಿಕಮಾಸದ ನೀರನ್ನು ಹಂಸೋದಕವೆಂದು ಪ್ರಶಂಸಿಸಿರುವನು. ಹಗಲಿನಲ್ಲಿ ಸೂರ್ಯನ ಕಿರಣಗಳಿಂದ ಬಿಸಿಯಾಗಿ, ರಾತ್ರಿಕಾಲದಲ್ಲಿ ಚಂದ್ರನ ಹಿಮಕಿರಣಗಳಿಂದ ತಣ್ಣಗಾಗಿ ಋತುವಿನ ಶುದ್ಧತೆಯಿಂದ ಪ್ರಕೃತಿಯು ಪ್ರಸನ್ನವಾಗಿರುವ ಕಾರ್ತಿಕಮಾಸದ ಸ್ನಾನವು, ಪಾನೀಯವು ಬಹು ಪ್ರಶಂಸನೀಯವಾಗಿರುವುದು ಮಾತ್ರವಲ್ಲ ಹಿಂದುಗಳು ಅದನ್ನು ದೇವಲೋಕದ ಅಮೃತವೆಂದು ತಿಳಿಯುತ್ತಾರೆ.

ಕಾರ್ತಿಕಮಾಸದಲ್ಲಿ ಯಾತಕ್ಕೆ ಸ್ನಾನ ಮಾಡಬೇಕು ಎಂಬ ಪ್ರಶ್ನೆಗೆ ಆ ಮಾಸದ ವೈಶಿಷ್ಟ್ಯತೆಯೇ ಅದಕ್ಕೆ ಉತ್ತರವಾಗಿದೆ. ಹಿಂದೆ ಹೇಳಿದ ರೀತಿಯಲ್ಲಿ ವಿದ್ಯುತ್‌ಪ್ರಯೋಗದಿಂದ ಪರಿಶುದ್ಧವಾದ ನೀರು ಆಗ ಮೋಡಗಳಿಂದ ಕೆಳಗೆ ಸುರಿಯುತ್ತದೆ. ಇಂತಹ ನೀರೇ ಆಕಾಶದ ಅಮೃತವೆಂದೂ ಹೇಳಬಹುದಾಗಿದೆ. ಹೀಗಾಗಿ ವಿದ್ಯುತ್‌ಸಂಸ್ಕೃತಿಯು ಅನೇಕ ಗೂಢ ಹಾಗೂ ವಿಶೇಷವಾದ ತತ್ವಗಳುಳ್ಳದ್ದಾಗಿದೆ.

ವಿದ್ಯುತ್‌ಸಂಸ್ಕೃತಿಯ ವಿಷಯಕವಾಗಿ ಮಹತ್ವವಾದ ಶೋಧವು ಅದರ ಅತ್ಯಂತ ಉಪಯುಕ್ತತೆಯನ್ನು ಜಗತ್ತಿಗೆ ಸಾರುವುದು. ಇದಕ್ಕೆ ಈ ಬಗೆಯ ಯೋಗ್ಯ ಹಾಗೂ ಉತ್ಸಾಹಮೂಲಕವಾದ ಪ್ರಯೋಗವಿಧಾನಗಳು ನಡೆಯುವುದು ಅತ್ಯವಶ್ಯಕವಾಗಿದೆ.

S. U. N. & Co.,

Silk Merchants,
Chauk ... BENARES CITY

ಅಗಿನ ಜರತಾ (ಕಾಶಿ) ಬನಾರಸ್ ...

18 ...
... 1 ... 45ರಿಂದ 150 ಸಾಧಾರಣತರದ 18 ಮೊಳ ಸಣ್ಣ ... 35ರಿಂದ ರೂ 55 ... 18 ಮೊಳ ... ರಿಂದ ರೂ 65 ... 2½ ರೂ 20 ರಿಂದ 35ರ ವರೆಗೆ ... ಲಾಗಿ ಉಚಿತವಾಗಿ ಕಳುಹಿಸಲಾದೀತು.

ವಿಳಾಸ:
ಶಿರೋಮಣಿ ನಾರಾಯಣಾಚಾರ್ಯರ್,
ಚೌಕಂಬ, ಬನಾರಸ್ ಸಿಟಿ

DIAMONDS! DIAMONDS!
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಂಟ್ವರ್ಪದಿಂದ ಬರುವ ವಜ್ರಗಳ ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು

ಶಾಲಿವಾಹನ ಶಕ ೧೮೬೦ನೆಯ ಪ್ರಮಾಥಿ ಸಂವತ್ಸರದ ಜ್ಯೇಷ್ಠ ಬ ೮ ಶನಿವಾರದಿಂದ ಜ್ಯೇಷ್ಠ ಬ ೧೪ ಶುಕ್ರವಾರದ ವರೇಗಿನ ಪಂಚಾಂಗ. (೧೯೩೮ನೇಯ ಮಿಥುನ-ಜಾತೆರ್)

10	ಶನಿ	೨೧	೩೮॥	ಪೂ ಭಾದ್ರಾ	೪೫॥	೨೭
11	ರವಿ	೨೨	೪೧॥	ಉ ಭಾದ್ರಾ	೫೦।	೨೮
12	ಸೋಮ.	೨೩	೪೩॥	ರೇವತಿ	೫೩॥	೨೯
13	ಮಂಗ	೨೪	೪೪॥	ಅಶ್ವಿನಿ	೫೬	೩೦
14	ಬುಧ	೨೫	೪೪	ಭರಣಿ	೫೭	೩೧
15	ಗುರು	೨೬	೪೩।	ಕೃತಿಕಾ	೫೬॥	೧
16	ಶುಕ್ರ	೨೭	೩೯।	ರೋಹಿಣಿ	೫೫॥	೨

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars-K R. GURU, *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲಿ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇರವಾಗಿ ನಡೆಯುವುದು. ಕಲ್ಪ ಇಲ್ಲ ಅಪಾಯವಾಗಲಿ ಸಂಸಾರ ಸುಖ ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ಇದರಿಂದ ಏನು ಮಾಡಿದರೂ ಕಾಡುವಾಗುವದಿಲ್ಲ ... ಮತ್ತು ... ವೈದ್ಯ ಎಲ್ ... ಈ ಚೂರ್ಣದಿಂದ ... ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪-೦-೦ ...

ವಿಳಾಸ. ಸಂಜೀವಿನೀ ಔಷಧಾಲಯ, ಪೋ. ಮಿರಜಿ, (S. M. C.

ಬರೀ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1285 ಫೆನ್ಸಿ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೇಸೆ ... ಅಥವಾ 8 ಸೇಸೆ ... ಯ ಮದ್ದನ್ನು ಪಡಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ರಿಸ್ಟವಾಚುಗಳೂ ಒಂದು ಕಟ್ಟುವ ಪಟ್ಟಿ ಸಹಿತ

1 ಪೋಕೆಟು ವಾಚು ಒಂದು ಜಿಲ್ಲೆಟ್ ರೇಜರೂ, ಒಂದು ಶೇವಿಂಗ್ ಬ್ರಶೂ, ಒಂದು ಶೇವಿಂಗ್ ಸಾಬೂನು, ಒಂದು ... ಒಂದು ಬಾಚಣಿಗೆ, 14 ಕೆರೆಟ್ ರೋಲ್ಡ್ ಗೋಲ್ಡ ಗಿಲ್ಟಿನ ಬಟನ್ ಪಿನ್ನು, ಒಂದು ಸೆಟ್ಟು ರೋಲ್ಡ್ ಗೋಲ್ಡ್ ಗುಂಡಿಗಳು, ಒಂದು ಪೆಕೆಟ್ ಪೌಡರು, ಒಂದು ... ಒಂದು ಪೇರ್ ಕನ್ನಡಕ ಒಂದು ಬಂಗಾರದ ಗಿಲ್ಟಿನ ಉಂಗುರ, 300 ಫೀಟ್ ... ಒಂದು ... ಅಥವಾ 10 ವರ್ಷ ಗ್ಯಾರಂಟಿ ... ಗಟ್ಟಿಯಾದ ಮೆಶಿನರಿಯಿಂದ ಮಾಡಲ್ಪಟ್ಟ ಒಂದು ... ಇವುಗಳನ್ನು ಉಚಿತವಾಗಿ ಕೊಡುವೆವು ಪೆಕಿಂಗ್ ಮತ್ತು ಟಪ್ಪಾಲು ಖರ್ಚು 0-14-0 ಪ್ರತ್ಯೇಕ

The American Commercial Stores, Post Box No 12213 Calcutta (S. A.

THE

Bank of Mangalore Ltd.,

MANGALORE

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly

Savings Bank deposit* 3½% *on daily balances.

All kinds of banking business transacted

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-,100/-,500/-,1,000/-, & 5,000/

are now issued at all our Branches

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ಸಿಮ್ಮರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲಿಗಳ ಡಬ್ಬಿ ರೂ. 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,

ಆಯುರ್ವೇದೀಯ ಸಮಾಜ ಪೆರಡೆಪಿ,

P O Peridepi (ನೆಲ್ಲೂರು ಡಿ.)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲೆಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಕರ್ಣಕಟ್ಟಾ ಬಜಾರ್, ಮಂಗಳೂರು.

ಡೋಂಗರೆ ಇವರ ಬಾಲಾಮೃತವು

ಮಕ್ಕಳ ಹಲವು ವಿಧ ಅಸಹ್ಯವಾದ ರೋಗಗಳನ್ನು, ಮತ್ತು ಒಳಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುದ್ದು ಮುಡಿಗೆ	1—14—0	—
„ ದುಯಂ „ „	1—12—0	1—12—0
„ ಅವ್ವಲ್ ಸುಗ್ಗಿ „	1—12—0	—
„ ದುಯಂ „ „	1—10—0	—
ಅಕ್ಕಿ ಅವ್ವಲ್ ಗುದ್ದು „	4—10—0	4—12—0
„ ದುಯಂ „ „	4—6—0	4—8—0
„ ಅವ್ವಲ್ ಸುಗ್ಗಿ „	4—6—0	4—7—0
„ ದುಯಂ „ „	4—3—0	4—5—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದದು „	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
„ ದಿಲ್‌ಪಸಂದ „	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯುದ್ದ ಅಡಿಕೆ 1000ಕ್ಕೆ	3—8—0	4—0—0
ಗೇರುಬೀಜ ಮುಡಿಗೆ	8—12—	8—13—0
ಕಳ್ಳಿನ ಬೆಲ್ಲ ಖಂಡಿಗೆ	47—8—0	55—0—0
ಒಳ್ಳೇಮೆಣಸು ಹಂಡ್ರವೈಟಿಗೆ	14—8—0	15—8—0

ಭಾರತವು ಪ್ರಗತಿಪಥದಲ್ಲಿ ಮುಂದುವರಿಯುತ್ತದೆ

ಭಾರತವು ಪ್ರಗತಿಪಥದಲ್ಲಿ ಮುಂದುವರಿಯುತ್ತಿದೆ

ಜರ್ಮನಿಯ ಅರ್ಥಶಾಸ್ತ್ರಜ್ಞರ ಅಭಿಮತ

ಡಾ. ಶಾಟ್‌ರವರ ಹೇಳಿಕೆ

ಜರ್ಮನ್ ಸರಕಾರದ ಆರ್ಥಿಕ ಸಚಿವರೂ, ಜರ್ಮನ್ ಸರಕಾರೀ ಬ್ಯಾಂಕಿನ ಮಾಜಿ ಅಧ್ಯಕ್ಷರೂ ಆದ ಡಾ. ಶಾಟ್‌ರವರು ಕೆಲ ಸಮಯದಿಂದ ಹಿಂದೂದೇಶದಲ್ಲಿ ಸಂಚರಿಸುತ್ತಿದ್ದಾರೆ. ಹಿಟ್ಲರರ ಪುರೋಭಿವೃದ್ಧಿಗೆ ಮೂಲ ಕಾರಣರೆಂದೂ, ಅತ್ಯಂತ ಧಾಜಕಾರಣಪಟು ವೆಂದೂ ಇವರು ಪ್ರಸಿದ್ಧರಾದವರು. ಅವರು ಹಿಂದೂದೇಶದಲ್ಲಿ ಸಂಚಾರ ಮಾಡುತ್ತಿರುವ ವಿಷಯವಾಗಿ ಪತ್ರಿಕೆಗಳಲ್ಲಿ ನಾನಾ ತರದ ವಿಮರ್ಶೆಗಳು ಬಂದಿವೆ. ಆ ಬಗ್ಗೆ ಅಸೋಸಿಯೇಟೆಡ್ ಪ್ರೆಸ್ಸಿನ ಪ್ರತಿನಿಧಿಗಳಿಗೆ ಅವರು ಹೀಗೆಂದು ಹೇಳಿದರು.

"ನಾನು ಹಿಂದೂದೇಶದ ಭವಿಷ್ಯತ್ತನ್ನು ನಿರ್ಣಯಿಸುವರೆ ಬಂದಿರುವಾಗಿ ಹೇಳಲಿಲ್ಲ. ನಾನು ಈ ಸುಂದರ ದೇಶದ ದರ್ಶನಕ್ಕಾಗಿಯೂ, ಅರ್ಥಶಾಸ್ತ್ರಜ್ಞನಾದುದರಿಂದ ಇಲ್ಲಿನ ಆರ್ಥಿಕ ಸ್ಥಿತಿಯ ಪರಿಜ್ಞಾನಕ್ಕಾಗಿಯೂ ಬಂದಿರುತ್ತೇನೆ. ಜರ್ಮನಿಯೊಡನೆ ಹಿಂದೂದೇಶದ ಬಾಂಧವ್ಯವನ್ನು ಬೆಳೆಸುವುದಾಗಲಿ ಬ್ರಿಟನ್ ವಿರುದ್ಧ ದಂಗೆಯೆಬ್ಬಿಸುವುದಾಗಲಿ ನನ್ನ ಉದ್ದೇಶವಲ್ಲ. ಪ್ರಪಂಚದ ಮಹಾ ಸಮರವಾಗುವ ಪಕ್ಷದಲ್ಲಿ ಹಿಂದೂದೇಶವು ಏನು ಮಾಡಲಿದೆಯೆಂದು ತಿಳಿಯಲು ಬಂದುದಾಗಿ ನನ್ನ ವಿಷಯ ಪ್ರಕಟವಾದದ್ದು ತೀರಾ ತಪ್ಪು. ನಾನು ಖಂಡಿತವಾಗಿಯೂ ಯುರೋಪಿನಲ್ಲಿ ಮಹಾಯುದ್ಧವು ಆಗುವುದಿಲ್ಲವೆಂದು ಹೇಳಿದ್ದೇನೆ.

"ನಾನು ಹಿಂದೂದೇಶದ ಉದ್ದಗಲದಲ್ಲಿ ಸಂಚರಿಸಿದೆ. ಬಹುಶಃ ನನ್ನಷ್ಟು ಇಲ್ಲಿನ ಹಿಂದೀಯನೇ ಇಷ್ಟಲ್ಪ ಸಮಯದಲ್ಲಿ ಸಂಚರಿಸಿರಲಿಕ್ಕಿಲ್ಲವೆಂದು ತಿಳಿಯುತ್ತೇನೆ. ಒಬ್ಬ ಯೂರೋಪೀಯನಿಗೆ ಸಹಜವಾಗಿಯೂ ಈ ದೇಶದಲ್ಲಿ ದೃಷ್ಟಿಪಥಕ್ಕೆ ಬೀಳುವುದೆಂದರೆ ಇಲ್ಲಿನ ಬಗೆಹರಿಸಲಾರದ ಅನೇಕ ದುರಂತ ಸಮಸ್ಯೆಗಳು; ಹಲವಾರು ಜಾತಿ, ಅನೇಕ ಧರ್ಮ ಅನೇಕ ಆಚಾರ ಇವುಗಳಿಂದಲಾಗಿ ಜೀವನದಲ್ಲಿ ಏಕತಾನವಿಲ್ಲದಾಗಿದೆ. ಇದೆಲ್ಲವನ್ನೂ ಮೀರಿ ಇಲ್ಲಿ ನನ್ನ ದೃಷ್ಟಿಗೆ ಗೋಚರವಾಗುವುದೇನೆಂದರೆ ಭಾರತವು ಇಂದು ಜಾಗೃತವಾಗಿ ಪ್ರಗತಿಪಥದಲ್ಲಿ ಮುಂದುವರಿಯುತ್ತಿದೆ. ಇನ್ನು ಮುಂದೆ ಯಾವ ದಾರಿಯಲ್ಲಿ ಭಾರತವು ಮುಂದುವರಿಯುವುದೆಂದು ಯಾರಿಗೂ ಹೇಳಬರುವುದಿಲ್ಲ. ಹೇಗಿದ್ದರೂ ಭಾರತವು ಅಭಿವೃದ್ಧಿಯಾಗುವುದರಿಂದ ಭಾರತೀಯರು ಮಾತ್ರವಲ್ಲ ಅಖಿಲ ಜಗತ್ತಿನ ಜನರೂ ಅಭಿವೃದ್ಧಿ ಹೊಂದಿದಂತಾಗುವುದು".

"ಶೀಯಾ-ಸುನ್ನೀಗಳಲ್ಲಿ ಮಧುರ ಬಾಂಧವ್ಯ ಬೆಳೆಯಬೇಕು"

ಶಾಸನಭಂಗ ಚಳವಳವನ್ನು ನಿಲ್ಲಿಸಲು ಅಜಾದರವರ ಬೇಡಿಕೆ

ಲಕ್ನೋದಲ್ಲಿ ದಿನದಿಂದ ದಿನಕ್ಕೆ ತೀವ್ರವಾಗಿ ಪರಿಣಮಿಸುತ್ತಿರುವ ಶೀಯಾ-ಸುನ್ನೀ ಜನರ ಜಾತೀಯ ಕಲಹದ ಕುರಿತು ಮೌಲಾನಾ ಅಜಾದರವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಅದರಲ್ಲಿ ಅವರು ಎರಡು ಭಾಗದ ತಮ್ಮ ಸಹೋದರ ಮುಸ್ಲಿಮರಲ್ಲಿ ಈ ರೀತಿಯಿಂದ ಬಿನ್ನವಿಸಿಕೊಂಡಿದ್ದಾರೆ.

'ಈ ಜಾತೀಯ ಜಗಳವು ಮುಸ್ಲಿಮರಲ್ಲಿರುವ ಎರಡು ಪಂಗಡಗಳ ಅನ್ಯೋನ್ಯ ಅಭಿಪ್ರಾಯ ವ್ಯತ್ಯಾಸದಿಂದಲಾಗಿ ಹುಟ್ಟಿರುತ್ತದೆ. ಇಂತಹ ಸಂದರ್ಭದಲ್ಲಿ ಈ ರೀತಿಯ ಕೇವಲ

ಶೀಯಾ-ಸುನ್ನಿಗಳಲ್ಲಿ ಬಾಂಧವ್ಯ ಬೆಳೆಯಬೇಕು

ಮದ್ರಾಸು ಅಧಿಪತ್ಯದಲ್ಲಿ ವಿದ್ಯಾ ಪ್ರಚಾರ

ಕಲ್ಪಿತ ಭೇದಭಾವನೆಯ ಜಗಳವನ್ನು ಸರಕಾರದ ಮಧ್ಯಸ್ಥಿಕೆಯಿಲ್ಲದೆ ನಿಲ್ಲಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿರುತ್ತದೆ. ನಮ್ಮಲ್ಲಿ ಇಂದು ನೆಲೆಸಿರುವ ಸಮಸ್ಯೆಗಳನ್ನು ಪರಿಹರಿಸಲು ನಾವೇ ನಮ್ಮ ಜವಾಬ್ದಾರಿಕೆಯ ಸಂಪೂರ್ಣ ಅರಿವಿನಿಂದ ಕೆಲಸ ಮಾಡುವುದು ನಮ್ಮ ಕರ್ತವ್ಯವೆಂದು ತಿಳಿದಿದ್ದರೆ ಇಂತಹ ಸಂದರ್ಭದಲ್ಲಿ ಜನತೆಯ ಶಾಂತಿರಕ್ಷಣೆಗಾಗಿ ಏನು ಮಾಡತಕ್ಕದ್ದಿದೆಯೋ ಅದನ್ನು ಮಾಡುವಲ್ಲಿ ನನಗೆ ಅತ್ಯಂತ ಆಕಾಂಕ್ಷೆಯಿದೆ. ಆದರೆ ಈ ಸಂದರ್ಭದಲ್ಲಿ ಎಲ್ಲಾ ಜವಾಬ್ದಾರರಾದ ಸದಸ್ಯರು ನನ್ನೊಡನೆ ಸಹಕರಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ಆದ್ದರಿಂದ ಈ ಸಮಯದಲ್ಲಿ ಎಲ್ಲಾ ಶೀಯಾ ಚಳವಳಗಾರರು ಶಾಸನಭಂಗ ಚಳವಳವನ್ನು ನಿಲ್ಲಿಸಬೇಕು. ತಮ್ಮಲ್ಲಿ ಶಾಂತಿಯ ವಾತಾವರಣವನ್ನು ಉಂಟುಮಾಡದ ವಿನಹ ಯಾವ ರೀತಿಯ ಒಪ್ಪಂದವು ಆಗಲೂ ಸಾಧ್ಯವಿರುವುದಿಲ್ಲ.

"ಹೀಗೆ ಶಾಸನಭಂಗ ಚಳವಳವನ್ನು ನಿಲ್ಲಿಸಿದ ಕೂಡಲೇ ನಾನು ಶೀಯಾ ಮತ್ತು ಸುನ್ನೀ ಪಂಗಡಗಳ ಪ್ರಮುಖ ಪ್ರತಿನಿಧಿಗಳ ಸಭೆಯೊಂದನ್ನು ಕರೆಯಬೇಕೆಂದಿದ್ದೇನೆ. ಅನ್ಯೋನ್ಯ ಮಧುರ ಬಾಂಧವ್ಯವು ಶೀಯಾ ಸುನ್ನಿಗಳಲ್ಲಿ ಬೆಳೆಯುವಂತೆ ನಾನು ನನ್ನ ಸಾಧ್ಯ ಸಾಹಸವನ್ನು ಮಾಡುವೆನು. ಇದು ಖಂಡಿತವಾಗಿಯೂ ಜಯಶೀಲವಾಗುವುದೆಂದು ನನ್ನ ಮನವರಿಕೆಯಾಗಿದೆ. ಇದರಲ್ಲಿಯೂ ಸರಿಯಾದ ಒಪ್ಪಂದವು ಆಗದಿದ್ದರೆ ಅಖಿಲ ಭಾರತ ಕಾಂಗ್ರೆಸಿನ ಪರವಾಗಿ ನನ್ನಿಂದ ಸಾಧ್ಯವಾದ ಹಿತಸೂಚನೆಗಳನ್ನು ಕೊಟ್ಟು ಸರಕಾರದ ಮೂಲಕವಾಗಲಿ ಯೋಗ್ಯ ಒಪ್ಪಂದವಾಗುವಂತೆ ನಡೆಸಲು ಪ್ರಯತ್ನಿಸುವೆನು".

ಮೌಲಾನಾ ಅಜಾದರು ಈ ಹೇಳಿಕೆಯನ್ನು ತಮ್ಮ ಅನಾರೋಗ್ಯ ಸ್ಥಿತಿಯಲ್ಲಿ ಹೊರಡಿಸಿದ್ದಾರೆ. ಜನತೆಯ ಶಾಂತಿಗಾಗಿ ತನಗೆ ಬೇಗನೇ ಆರೋಗ್ಯವು ತುಂಬಿ ತಾನು ಈ ಪ್ರಮುಖ ಸಮಸ್ಯೆಯನ್ನು ಪರಿಹರಿಸುವಲ್ಲಿ ದೇವರು ತನಗೆ ನೆರವಾದಾನೆಂದು ಅವರ ಸಂಕಲ್ಪ.

ಮೌಲಾನಾರವರ ಈ ಪ್ರಕಟಣೆಯನ್ನನುಸರಿಸಿ ಇಕ್ಕಡೆಯ ಮುಖಂಡರೂ ಶಾಸನಭಂಗ ಚಳವಳವನ್ನು ನಿಲ್ಲಿಸುವ ಬಿನ್ನಹಗಳನ್ನು ಪ್ರಕಟಿಸಿರುತ್ತಾರೆ.

ಮದ್ರಾಸು ಅಧಿಪತ್ಯದಲ್ಲಿ ವಿದ್ಯಾಪ್ರಚಾರ

ಮಾನ್ಯ ಮಂತ್ರಿ ವಾರ್ಕಿಯವರ ಅಭಿಮತ

ತಾಲೂಕು ಕಮಿಟಿಗಳ ಕರ್ತವ್ಯ

"ಜೂನ್ ಒಂದರಿಂದ ಇಡೀ ಅಧಿಪತ್ಯದಲ್ಲಿ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲುಗಳು ಮಾಯವಾಗಿ ಅವುಗಳ ಸ್ಥಾನದಲ್ಲಿ ಎಡ್ವೈಸರಿ ಕಮಿಟಿಗಳು ರಚನೆಯಾಗಲಿವೆ ಹಾಗೂ ಕಾರ್ಯವನ್ನು ನಡೆಸಲಿವೆ. ಇದರಿಂದ ಇಡೀ ಅಧಿಪತ್ಯದಲ್ಲಿ ವಿದ್ಯಾಪ್ರಚಾರವು ಅತ್ಯಂತ ಉತ್ಸಾಹದಿಂದಲೂ ಪರಿಣಾಮ ರೂಪದಿಂದಲೂ ಆಗುವುದೆಂದು ಸರಕಾರದ ಅಭಿಪ್ರಾಯ ಇರುವುದಾಗಿ ಮಾನ್ಯ ಮಂತ್ರಿಯವರು ಪ್ರಕಟಿಸುತ್ತಾರೆ.

೧೯೩೦ರಿಂದ ಮಾಡಿದ ನಿಬಂಧನೆಯಂತೆ ಡಿ. ಎ. ಕೌನ್ಸಿಲುಗಳು ಸ್ಥಾಪಿತವಾಗಿ ೯ ವರ್ಷಗಳ ಕಾಲ ಕೆಲಸ ಮಾಡಿದೆವು. ೧೯೩೯ನೇ ಜನವರಿಯಲ್ಲಿ ಪಾಸುಮಾಡಿದ ಉಪನಿಬಂಧನೆಗಳನ್ವಯವಾಗಿ ತಾಲೂಕು ಕಮಿಟಿಗಳು ಸ್ಥಾಪಿತವಾಗಿವೆ. ಸರಕಾರವು ತಾ. ಕಮಿಟಿಗಳನ್ನು ಸ್ಥಾಪಿಸುವ ಉದ್ದೇಶವೇನೆಂದರೆ ಅದಷ್ಟು ಪ್ರಾಥಮಿಕ ವಿದ್ಯಾಭ್ಯಾಸವನ್ನು ಇಡೀ ಅಧಿಪತ್ಯದಲ್ಲಿ ಹರಡಿಸುವದಕ್ಕಾಗಿ ಆಗಿದೆ. ಕಳೆದ ಡಿ. ಎ. ಕೌನ್ಸಿಲಿರುವಾಗ ವಿದ್ಯೆಗಾಗಿ ವರ್ಷವರ್ಷ ಅಧಿಕಾಧಿಕ ಹಣವು ವ್ಯಯವಾಗಿ, ಅನೇಕ ಹೊಸ ಶಾಲೆಗಳು ತೆರೆಯಲ್ಪಡುತ್ತಿದ್ದರೂ ವಿದ್ಯಾವಂತರ ಸಂಖ್ಯೆಯು ಏರಿದ್ದಿಲ್ಲ. ಇದಕ್ಕಾಗಿ ಪರಿಣಾಮ ಕಾರಿಯಾದ ರೀತಿಯಲ್ಲಿ ಕೆಲಸ ಮಾಡಲು ಈ ಹೊಸ ಸಂಸ್ಥೆಗಳು ಸ್ಥಾಪಿಸಲಾಗಿವೆ.

ಇತರ ಶಾಲೆಗಳ ವಿಷಯವಾಗಿ ತಿಳಿಯದೆ ತಮ್ಮ ಹತ್ತಿರದ ಶಾಲೆಗಳಿಗೆ ಪ್ರಯೋಜನವಡಿ ಸುವ ಕೌನ್ಸಿಲಿನವರ ಪದ್ಧತಿಯು ಇದರಿಂದ ನಿಲ್ಲಿಸಲ್ಪಡುವುದು.

"ಸಹಕಾರ, ರೆವೆನ್ಯೂ, ಕೃಷಿ ಇಲಾಖೆಗಳ ಪ್ರತಿನಿಧಿಗಳೂ ವಿದ್ಯಾ ಇಲಾಖೆಯ ಪ್ರಮುಖರೂ ಈ ಕಮಿಟಿಯ ಸದಸ್ಯರಾಗಿ ಚುನಾಯಿಸಲ್ಪಡುವರು. ಶಾಲಾ ಇನ್ಸ್‌ಪೆಕ್ಟರರು ಇದರ ಸದಸ್ಯರು ಹಾಗೂ ಕಾರ್ಯದರ್ಶಿಯರಾಗಿರುವುದರಿಂದ ಸರಕಾರದ ಪರವಾಗಿಯೂ ಜನರ ಪರವಾಗಿಯೂ ಸೌಹಾರ್ದದಿಂದ ಕೆಲಸ ನಡೆಸಲು ಅನುಕೂಲವಾಗುವುದು.

ಈ ಕಮಿಟಿಗಳು ಕೆಳಗೆ ಕಾಣಿಸಿದ ಕೆಲಸಗಳನ್ನು ಮಾಡಲು ಅಧಿಕೃತವಾಗಿದೆ.

೧) ತಮಗೆ ಸಂಬಂಧಿಸಿದ ಸ್ಥಳಗಳಲ್ಲಿರುವ ಶಾಲೆಗಳಲ್ಲಿ ಅವ್ಯವಸ್ಥೆಗಳಿರುವುದಾದರೆ ಅವುಗಳನ್ನು ಸಂಬಂಧಿಸಿದ ಅಧಿಕಾರಿಗಳ ಅವಗಾಹನೆಗೆ ತರುವುದು.

೨) ಶಾಲೆಗಳಲ್ಲಿ ಹುಡುಗರ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಶಾಲೆಯ ಸಮಯವನ್ನು ಹೆಚ್ಚಿಸುವುದು ಮತ್ತು ಬಡವಿದ್ಯಾರ್ಥಿಗಳಿಗೆ ಅಲ್ಲಲ್ಲಿನ ಮಹಾಜನರ ಸಹಾಯದಿಂದಲೂ ಬೇಕಾದ ಸಹಾಯಗಳನ್ನು, ಊಟ ಪುಸ್ತಕಾದಿಗಳನ್ನು ಒದಗಿಸುವಂತೆ ಸಹಾಯಮಾಡುವುದು, ಬಾಡಿಗೆ [illegible] ಕಟ್ಟೋಣಗಳನ್ನು ಒದಗಿಸುವುದು ಹಾಗೂ ಹಳ್ಳಿಗಳಲ್ಲಿ ವಿದ್ಯೆಯ ಪ್ರಚಾರವನ್ನು ನಡೆಸುವುದು.

'DILROZ' Regd

'Dil Roz' is a sure cure for Oriental sores, local sores, all kinds of deep-rooted sores, skin eruptions Pimples, Eczema, Ringworm, Sinus Fistula axillary Abscess.

There is no need of dressing the wounds, nor are baths prohibited

Price Rs. 2. Postage extra.

TAHIR DIN,
Anarkali, LAHORE.

ಭಯಂಕರವಾದ ಮೂತ್ರವ್ಯಾಧಿಗಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಬೀಳುವುದಿಲ್ಲ.

ಎಲ್ಲ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರಮಾರ್ಗದ ಒಸಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಾರಿ ಜಂತುಗಳು. ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗವು ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು. ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

ಎಲ್ಲಾ ಪತ್ರ ವ್ಯವಹಾರಗಳು ಇಂಗ್ಲಿಷಿನಲ್ಲಿ *Sole Manufacturer:* **Dr. D. N. JASANI,** Vithalbhai Putal Road, BOMBAY.

ಸ್ಟಾಕಿಸ್ಟ: ಮೆಸಸ್ ಎ. ಫೆರ್ನಾಂಡಿಸ್ ಮತ್ತು ಕಂಪನಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್, ಮಂಗಳೂರು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST. PAULS CHURCH,
Bolkunje Post, S K
Dated 4 h Jan. 1939

To

THE JOINT MANAGERS,
The C. P C Co Ltd; Mangalore.

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress.

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Public.

Renewing my thanks, I remain,
Yours Sincerely,
(Sd) **P W Farias**

Sri Parshwanathaswami,
PANCHAKALYANA POOJA MAHOSTHAM.
Venoor, S Kanara, 1939

To,

THE JOINT MANAGERS,
The Combind Booking Agency, Mangalore

Dear Sirs,

Please permit us to express our thanks on behalf of the above committee for the efficient service rendered by your combind Booking Agency Staff at Venoor to the visitors of the Panchakalyana Pooja Mahosthamam celebration held this year.

Our thanks are also due to Moodabidri Booking Clerk Mr B Krishnayya and also his other mates and Mr Raghavendra Bhendary who had specially come down from Mangalore to see to the needs of and comforts of the travelling Public. Thanking you once again,

We remain Yours faithfully

Venoor, Dated 6-3-'39 } (Sd) B Chandappa Indra (*Secretary, P M Council*) (Sd) M. Jagathpal, (Sd) M Pachappa Shetty, (Sd) Anantharaj Shetty (*Members, Panchakalyana Mahosthamam Committee*)

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTD 1906
CANARA BANK, LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಛಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೂಡಿರು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕ, ತುರಿಕಜ್ಜಿ, ಹುಳುಕಡ್ಡಿ, ಚಿಕ್ಕ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು

ಸ್ವದೇಶಾಭಿಮಾನಿ

Established 1906 • Regd. No. M 3408

ಸಂಪುಟ ೩೪] ತಾರೀಕು ೯-೬-೧೯೩೯ (9-6-1939) [ಸಂಚಿಕೆ ೨೩

THE

BOMBAY LIFE ASSURANCE COMPANY, LTD.,

(ESTD: 1908.)

THE OFFICE

Which has proved its popularity by its progress.

Record of New Bussiness

Proposed.	Year.	Completed.
1,25,50,250	1934	1,04,38,750
1,50,48,915	1935	1,23,28,665
1,68,88,200	1936	1,36,01,500
1,72,579,75	1937	1,40,08,725
176,63,250	**1938**	**144,91,000**

1939- VALUATION YEAR.

Please take up a Policy Now and participate in Bonus.

To Insure or to Represent it pays you to consult us:

Apply to – **KOCHIKAR BROTHERS, LIIMTED,**

Madras Branch Secretaries,

The Bombay Life Assurance Co., Ltd.,

The Bombay Life Building : Gandhinagar, UDIPI.

or any of our following offices:

Post Box No. 337.
Mount Road,
Madras.

Visweshwarapuram Circle,
Bangalore City.

Charni Road,
Girgaum,
BOMBAY 4

Car Street,
Mangalore

Puthiyara,
Calicut.

Central Station Road,
Trivandrum.

MAKE LIFE WORTH-LIVING!

Indigestion – Insomnia – Dry Cough–
Nervousness – Weak Heart &c.
these make you wiery of Life!

GONSULT US AND BUY
YOUR LIFE'S HAPPINESS!

Oils – that cool the brain and induce sleep.
Lehas – that build-up your wasted system.
Asavas – that regenerate your jaded nerves.

All Genuine Ayurvedic Preparations-
-from this huge Ayurvedic Concern of a Century Standing–

Bhuvanendra Products, Ltd.,
Katapady, S. Kanara.

(BRANCH–KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ– ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ – ತೈಲಗಳು
ಕೃಷವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಶೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ,– ದ. ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ
Swadeshabhimani. Estd 1906

Date 16-6-1939 ತಾರೀಖು ೧೬-೬-೧೯೩೯

ಪ್ರಸಿದ್ಧ ಸಿನೆಮಾ ನಟಿಯಾದ ಸುಲೋಚನಾ

ಸಚಿತ್ರ
ವಾರಪತ್ರಿಕೆ

ಬಿಡಿಸಂಚಿಕೆ ಒಂದಾಣೆ
ವಾರ್ಷಿಕ ಚಂದಾ ರೂ. 2—0—0

ಸ್ವದೇಶಾಭಿಮಾನಿ

ಷಣ್ಮಾಸ ಚಂದಾ
ರೂ. 1-13-0

Established 1906 Regd. No. M 3408

ಸಂಪುಟ ೩೩] ತಾರೀಕು ೯-೬-೧೯೩೯ (9-6-1939) [ಸಂಚಿಕೆ ೨೩

THE

BOMBAY LIFE ASSURANCE COMPANY, LTD.,

(ESTD 1908.)

THE OFFICE

Which has proved its popularity by its progress

Record of New Bussiness

Proposed	Year	Completed
1,25,50,250	1934	1 01,38,750
1 50,48,915	1935	1 28 28 665
1,68,88 200	1936	1 36 01 500
1,72,579,75	1937	1 40 08 725
176.83,250	**1938**	**144 91 000**

1939- VALUATION YEAR

Please take up a Policy Now and participate in Bonus.

To Insure or to Represent it pays you to consult us

— *Apply to* — **KOCHIKAR BROTHERS, LIIMTED,**

Madras Branch Secretaries,

The Bombay Life Assurance Co., Ltd

The Bombay Life Building Gandhinagar UDIPI

or any of our following offices:

Post Box No 337
Mount Road,
Madras

Visweshwarapuram Circle,
Bangalore City

Charai Road
Girgaum
BOMBAY 4

Car Street,
Mangalore

Puthiyara,
Calicut.

Central Station Road,
Trivandrum

MAKE LIFE WORTH-LIVING!

Indigestion Insomnia – Dry Cough–
Nervousness Weak Heart &c
these make you wiery of Life!

GONSULT US AND BUY
YOUR LIFE'S HAPPINESS!

Oils – that cool the brain and induce sleep
Lehas – that build-up your wasted system
Asavas – that regenerate your jaded nerves.

All Genuine Ayurvedic Preparations-
-from this huge Ayurvedic Concern of a Century Standing—

Bhuvanendra Products, Ltd.,
Katapady, S. Kanara.

(BRANCH—KUMTA, N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕೋಶ ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ – ನಿಮ್ಮ ಜೀವಮಾನದ ಆನಂದ ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ರೆಕೊಡುವ – ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ – ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ – ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ,– ದ ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

ಸ್ವದೇಶಾಭಿಮಾನಿ

Swadeshabhimani. Estd 1906

Date 16-6-1939

ತಾರೀಖು ೧೬-೬-೧೯೩೯

ಪ್ರಸಿದ್ಧ ಸಿನೆಮಾ ನಟಿಯಾದ ಸುಲೋಚನಾ

ಸಚಿತ್ರ

ವಾರಪತ್ರಿಕೆ

...ರರ ಪುತ್ರಿಯ ಪ್ರೇಮಸಾಹಸ!

...ಫೋನಿನ ಬಂಡು ಪ್ರಣಯಿಯೊಂದಿಗೆ!

ಟೆಲಿಫೋನ್ ಯೂನಿವರ್ಸಿಟಿಯ ಪ್ರೊಫೆಸರ್ ಸಿ. ಎ. ಎಂ. ಜೋಡನ ಮಗಳು ಅಮೇರಿಕದ ವಿಶ್ವವಿದ್ಯಾಲಯದ ವಿದ್ಯಾರ್ಥಿಯು ಹದಿನೆಂಟು ವರ್ಷದ ಯುಗಳ ... ಪ್ರಣಯಿಗೆ ಪರಾರಿಯಾಗಿದ್ದಾಳೆ!

ಅವರ ಪರಾರಿಯ ವಾರ್ತೆಯು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅವರು ಪಟ್ಟಣದಲ್ಲಿ ತಿರುಗಾಡುತ್ತಾ ಆ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದುತ್ತಾ ಆನಂದದಿಂದ ದಿನಗಳೆಯುತ್ತಿದ್ದಾರೆ.

ಅವನ ಹೆಸರು ಸ್ಯಾಮುವೇಲ್. ಆತನ ಸಹೋದರಿಯು ಈ ಕ್ರಿಶ್ಚಿಯನ್ ವ್ಯಕ್ತಿಯನ್ನು ಹೊರಡಿಸಿ ಅದರಲ್ಲಿ ಅವರಿಬ್ಬರ ಮದುವೆಗೆ ತಾಯಿಯು ಆಕ್ಷೇಪಿಸಲಿಲ್ಲವೆಂದೂ, ಆದರೆ ಆತನ ವಿದ್ಯಾಭ್ಯಾಸವು ಮುಂದುವರಿಯಲೆಂದು ತಾಯಿಯ ಅಭಿಪ್ರಾಯವಿತ್ತೆಂದೂ ಹೇಳಿ, ಅವರ ಇಂದಿನ ಈ ಹುಚ್ಚು ಪ್ರಣಯಲೀಲೆಗಾಗಿ ತಾಯಿಯು ಆತನಿಗೆ ಚಿಕ್ಕಾಸು ಕೊಡದೆ ಅವನನ್ನು ಬಿಟ್ಟುಕೊಟ್ಟಂತಾಗಿ ತಿಳಿಸುತ್ತಾಳೆ.

ಆದರೂ ಆ ದಂಪತಿಗಳು ಸಂತೋಷದಲ್ಲಿಯೇ ಇರುವರು! ಈ ಜನಸಂದಣಿಯಿಂದ ತಪ್ಪಿಸಿ, ಟೆಲಿಫೋನ್ ಮೊದಲಾದ ಗಲಾಟೆಯಿಲ್ಲದ ಹಳ್ಳಿಯೊಂದರಲ್ಲಿ ಉಳಕೊಂಡು ನವಜೀವನವನ್ನು ಆರಂಭಿಸುವರಂತೆ!

ಅದ್ಭುತ ಪ್ರೇಮಲೀಲೆ! ತಾಯಿ ಬೇಡ, ಐಶ್ವರ್ಯ ಬೇಡ, ದೇಶ ಬೇಡ. ಆತನಿಗೆ ಆ ಸವಿನೋಟದ ಸುಂದರ ಪ್ರಣಯಿನಿಯೇ ಬೇಕಾಗಿದ್ದಾಳೆ.

ಬುದ್ಧನ ಬೋಧನೆಯಲ್ಲಿರುವ ಮಾಂತ್ರಿಕ ಶಕ್ತಿ!

ಭಿಕ್ಷುಣಿಯರ ಪಾವನ ಜೀವನ!

"ಬಡವರು ಬಲ್ಲಿದರೆನ್ನದೆ ಭಗವಾನ್ ಬುದ್ಧನ ಶಿಷ್ಯಕೋಟಿಯಲ್ಲಿ ಸರ್ವರೂ ಸಮಾನಾಗಿ ಸೇರಿದ್ದರು. ಜೀವನದ ದುರಂತ ಯಾತನೆಯಿಂದ ಮುಕ್ತಿಹೊಂದಲು ಸ್ತ್ರೀಯರೂ ಭಿಕ್ಷುಣಿಯರಾಗಿ ಪವಿತ್ರ ಮತದ ಮಹಾ ಸಂದೇಶವನ್ನು ಸಾರಿದರು. ಸ್ತ್ರೀಯರಲ್ಲಿಯೂ ಆಧ್ಯಾತ್ಮಿಕ ತಕ್ಕದ ನೆಲೆಯನ್ನು ಸ್ಥಾಪಿಸಬೇಕಾದರೆ ಬುದ್ಧನ ಬೋಧನಾವ್ಯಕ್ತವು ಎಷ್ಟು ಅಗಾಧವಿತ್ತೆಂದು ನಾವು ಊಹಿಸಬಹುದು.

"ಕರುಣೆಯ ಕೂಗಿನಿಂದ, ದಯೆಯ ದಾನದಿಂದ ಅಹಿಂಸೆಯ ಪರಮೋಚ್ಚ ತತ್ವದಿಂದ ಮಾನವ ಹೃದಯಗಳನ್ನು ಸ್ಪರ್ಶಿಸುತ್ತಾ ಭಗವಾನ್ ಬುದ್ಧನು ಪ್ರಪಂಚದ ಉದ್ದಗಲದಲ್ಲಿ ತನ್ನ ದಿವ್ಯ ಸಂದೇಶವನ್ನು ಸಾರುತ್ತಾ ಹೋಗುವಾಗ, ಎಷ್ಟೋ ಮಂದಿ ಐಶ್ವರ್ಯ ಸೌಭಾಗ್ಯಶಾಲಿನಿಯರಾದ ಮಹಿಳೆಯರೂ, ಜೀವನದ ಯಾತನೆಗೆ ಹೇಸಿ ಭಿಕ್ಷುಣಿಯರಾಗಿ ಧರ್ಮ ಪ್ರಸಾರದ ಪಾವನ ಕಾರ್ಯದಲ್ಲಿ ಪ್ರವೃತ್ತರಾದರು. ಹಾಗೆಯೇ ಎಷ್ಟೋ ಮಂದಿ ನಿರ್ಭಾಗ್ಯದ ದರಿದ್ರ ವನಿತೆಯರೂ ಕೂಡ ಜೀವನದ ಅಪಾರ ಸಂಕಷ್ಟಗಳ ಪರಿಹಾರಕ್ಕಾಗಿ ಬುದ್ಧನ ಬೋಧನಾವ್ಯಕ್ತವನ್ನು ಹೊಂದಿ ಸಂತುಷ್ಟರಾಗಿ, ನಿಸ್ಸಾರವೆಂದು ಸಂಸಾರವನ್ನು ತ್ಯಾಗಮಾಡಿ ಚಿರಂತನ ಸುಖದ ಹಾದಿಯನ್ನು ಹಿಡಿದರು. ವೈದಿಕದಲ್ಲಿನ ಅವರ ಜೀವನ ಸಂಸ್ಕಾರಗಳು ಹೇಗಿದ್ದರೂ ಈ ಎಲ್ಲಾ ತರದ ಭಿಕ್ಷುಣಿಯರೂ ಜೀವನದ ಯಮಯಾತನೆಯ ವಿಮೋಚನೆಯಾಗಿ ಪರಮ ಶಾಶ್ವತ ಪದವನ್ನು ಪಡೆಯುವ ಒಂದೇ ಅಭಿಲಾಷೆಯಿಂದ ಬುದ್ಧನ ಶಿಷ್ಯೆಯರಾಗಿ ಸೇರಿದ್ದರು. ಜೀವನದಲ್ಲಿ ನೈರ್ಮಲ್ಯವನ್ನು ಮನಸಾ-ವಾಚಾ-ಕಾಯಾ ಪಾಲನೆ ಮಾಡಿ ಲೋಕಕ್ಕೆ ಆದರ್ಶರಾಗಿದ್ದರು.

"ಹೀಗೆ ಸ್ತ್ರೀ ಹೃದಯಗಳನ್ನು ನಾಟಿ, ಅವರಲ್ಲಿಯೂ ಪರಮ ಜಾಗ್ರತಿಯನ್ನು ಕೆರಳಿಸಬೇಕಾಗಿದ್ದರೆ ಭಗವಾನ್ ಬುದ್ಧನ ಬೋಧನೆಯಲ್ಲಿರುವ ಮಾಂತ್ರಿಕ ಶಕ್ತಿಯು ಅದ್ಭುತವಾಗಿರಬೇಕು" ಹೀಗೆಂದು ಮಹಾ ಬೋಧಿಯೆಂಬ ಪುಸ್ತಕದಲ್ಲಿ ಡಾ: ಲಾರವರು ಬರೆಯುತ್ತಾರೆ.

ಶಕ್ತಿ ಮತ್ತು ಚೈತನ್ಯಕ್ಕಾಗಿ

ಓವಲ್ಟಿನ್ ಕುಡಿಯಿರಿ

ಶಕ್ತಿಹೀನತೆಯಿಂದ ನಿಮ್ಮದ ಕೆಲಸದಲ್ಲಿ ಮತ್ತು ಆಟಗಳಲ್ಲಿ ನಿಮಗೆ ಸಂತೋಷವಿಲ್ಲದಾಗಿದೆಯಾದರೆ, ನಿಮಗೆ ವಿಶ್ರಾಂತಿಯುಳ್ಳ ನಿದ್ರೆಯು ಬಾರದಿದ್ದರೆ, ಬೆಳಿಗ್ಗೆ ಎದ್ದಾಗ ನೀವು ಶುಭ್ರವಾಗಿಯೂ ಉತ್ಸಾಹವಂತರೂ ಆಗಿರದಿದ್ದರೆ, ಆಗ ನಿಮ್ಮ ನರ, ಮೆದುಳು ಮತ್ತು ದೇಹ ಸರಿಯಾಗಿ ಉಣಿಸಲ್ಪಡುವುದಿಲ್ಲವೆಂದು ನೀವು ಖಚಿತ ಮಾಡಿಕೊಳ್ಳಬಹುದು.

ಸರಿಯಾದ ಪೌಷ್ಟಿಕದಿಂದ ಕೂಡಿದ ಆಹಾರವೇ ಆರೋಗ್ಯ, ಶಕ್ತಿ ಮತ್ತು ಚೈತನ್ಯದ ಪ್ರಧಾನವಾದ ಆಧಿಕಟ್ಟು. ಜಗತ್ ವಿಖ್ಯಾತವಾದ ಟಾನಿಕ್ ಆದ ಓವಲ್ಟಿನ್ನಿನಿಂದ ಪೌಷ್ಟಿಕವು ಸರಿಯಾದ ರೀತಿಯಲ್ಲಿ ದೊರಕುವುದಲ್ಲದೆ, ಆರೋಗ್ಯದಾಯಕ ದೇಹ, ಪರಿಶ್ರಮವಾದ ಮನಸ್ಸು, ರಾತ್ರಿ ಸುಖಮಯ ನಿದ್ರೆ, ಅದರಿಂದ ಲಭಿಸುವುದು ಖಂಡಿತ.

ಓವಲ್ಟಿನ್ ಪರಿಪೂರ್ಣವಾದ ಮತ್ತು ಸಂಪೂರ್ಣವಾದ ಆಹಾರ. ಪುಷ್ಟಿದಾಯಕ ವಸ್ತುಗಳಾದ, ನೈಸರ್ಗಿಕ ಆಹಾರ ಒಡವೆಗಳಾದ ಬಾರ್ಲಿಯ ಮಾಲ್ಟು ಮತ್ತು ಪರಿಶುದ್ಧವಾದ ಕೆನೆ ತುಂಬಿದ ದನದ ಹಾಲು ಮತ್ತು ಇತರ ಆರೋಗ್ಯದಾಯಕ ವಸ್ತುಗಳು ಅದರಲ್ಲಿ ಕೂಡಿವೆ. ಓವಲ್ಟಿನ್ನ ತಯಾರಿಯಲ್ಲಿ ಹಸ್ತಸ್ಪರ್ಶವಾಗುವುದಿಲ್ಲ.

ನಕಲಿ ವಸ್ತುವಿನ ಕುರಿತು ಜಾಗರೂಕರಾಗಿರಿ. ಓವಲ್ಟಿನ್‌ನಲ್ಲಿ ಗುಣವಿಶೇಷ, ಪರಿಮಾಣ ಹೆಚ್ಚು, ಹೆಚ್ಚು ಪರಿಣಾಮಕಾರಿಯು, ಬೇರಾವ ಓವಲ್ಟಿನ್ನಿಗೆ ಸರಿದೊರೆಯುವಂಥಾದ್ದು ಇನ್ನೊಂದಿಲ್ಲ.

ಓವಲ್‌ಟಿನ್

ಟಾನಿಕ್ ಆಹಾರ ಪಾನೀಯ

ಆರೋಗ್ಯ, ಬಲ ಮತ್ತು ಚೈತನ್ಯಕ್ಕಾಗಿ.

OVALTINE

ಎಲ್ಲಾ ದವಾಖಾನೆಗಳಲ್ಲೂ, ಅಂಗಡಿಗಳಲ್ಲೂ ದೊರಕುತ್ತದೆ.
ಏಜಂಟರು: ಜೇಮ್ಸ್ ರೈಟ್ ಲಿಮಿಟೆಡ್,
85ಃ, ರಿಪನ್ ಸ್ಟ್ರೀಟ್, ಕಲ್ಕತ್ತಾ.
ಮುಂಬಯಿಯಲ್ಲೂ, ಮದ್ರಾಸು, ಕರಾಚಿಗಳಲ್ಲೂ ಇದರ ಶಾಖೆಗಳಿವೆ.

OV/349

ಹಿಂದೂ ಮುಸಲ್ಮಾನ ಐಕ್ಯತೆಗೆ ಆಗಾಖಾನರ ಉಪಾಯ

ಇಂದೂರು ಸರಕಾರದ ಸ್ತುತ್ಯ ಪ್ರಯತ್ನ

ಎಂಪಾಯರ್ ಡೇ ದಿನ ಭಾರತ ಕಾರ್ಯದರ್ಶಿಗಳಾದ ಲಾರ್ಡ ಜೆಟ್ಲಾಂಡರು ವಿಲಾಯತಿಯಲ್ಲಿ ಕೊಟ್ಟ ಭಾಷಣವು ಭಾರತದ ಅನೇಕ ಮುಖಂಡರನ್ನು ಯೋಚನೆಗೀಡುಮಾಡಿದೆ. ಭಾರತದಲ್ಲಿ ಜಾತೀಯ ಐಕ್ಯವಿಲ್ಲದಿರುವುದರಿಂದ ಭಾರತೀಯರು ಸ್ವರಾಜ್ಯಕ್ಕೆ ಅಯೋಗ್ಯರೆನ್ನುವ ಮಾತು ಈ ಮುಖಂಡರ ಹೃದಯ ಮನಸ್ಸುಗಳನ್ನು ಚುಚ್ಚಿದೆ. ಆದ್ದರಿಂದ ಹೇಗಾದರೂ ಮಾಡಿ ಜಾತೀಯ ಐಕ್ಯವನ್ನು ಸ್ಥಾಪಿಸಿಯೇ ತೀರಬೇಕೆಂದು ಆ ಮುಖಂಡರು ಕಂಕಣಬದ್ಧರಾಗಿರುವರು. ಹಿಂದುಸ್ಥಾನದಲ್ಲಿ ಹಿಂದೂಮುಸಲ್ಮಾನ ಐಕ್ಯಟ್ಟು ಸ್ಥಾಪಿತವಾದರೆ ಕುಂಟು ನೆವನಗಳನ್ನೊಡ್ಡಿ ಭಾರತ ಸ್ವಾತಂತ್ರ್ಯ ದಿನವನ್ನು ಮುಂದೂಡ್ಡುವ ವಿಲಾಯತಿಯ ಶತ್ರುಗಳು ನಿರುತ್ತರಾಗಿ ಮೂಲೆಸೇರಬೇಕಾಗುತ್ತದೆ.

ಆಗಾಖಾನರ ಉಪಾಯ.

ಹಿಂದುಮುಸಲ್ಮಾನ ಐಕ್ಯಸ್ಥಾಪನೆಗೆ ಕಾಂಗ್ರೆಸು ಭಗೀರಥ ಪ್ರಯತ್ನಗಳನ್ನು ಮಾಡಿದರೂ ಮುಸ್ಲಿಂ ಲೀಗಿನ ಧೋರಣೆಯಿಂದ ಅದಿನ್ನೂ ಸಾಧ್ಯವಾಗಿರುವುದಿಲ್ಲ. ಅದಕ್ಕೋಸ್ಕರ ಮಾನ್ಯ ಆಗಾಖಾನರು ಪ್ರಮುಖರಾಗಿ ಜಾತೀಯ ಐಕ್ಯಸ್ಥಾಪನೆಗೆ ಒಂದು ಹೊಸ ಉಪಾಯವನ್ನು ಹುಡುಕಿದ್ದಾರೆ. ಲೀಗಿಗೂ ಕಾಂಗ್ರೆಸಿಗೂ ಸೇರಿರದ ಮುಸಲ್ಮಾನರೊಳಗಿಂದ ನಾಲ್ವರು ಮತ್ತು ಹಿಂದೂಗಳಿಂದ ನಾಲ್ವರು ಹೀಗೆ ಎಂಟು ಮಂದಿಯನ್ನು ಆರಿಸುವರು. ಈ ಎಂಟು ಮಂದಿ ಒಂದು ಒಡಂಬಡಿಕೆಯನ್ನು ತಯಾರಿಸುವರು. ಈ ಒಡಂಬಡಿಕೆಯು ಸಮಗ್ರಭಾರತದ ಹಿಂದೂ ಮುಸಲ್ಮಾನರ ಮೇಲೆ ಜಾರಿಗೆ ಬರುವಂಥದಾಗಿದೆ. ಒಡಂಬಡಿಕೆಯ ಶರತುಗಳನ್ನು ಪ್ರಾಂತಿಕ ಮತ್ತು ಕೇಂದ್ರ ಸರಕಾರಗಳೂ ಮನ್ನಿಸಬೇಕಾಗುವುದು. ಈ ಸಂಬಂಧ ವಿವಾದಗಳುಂಟಾದರೆ ಅದನ್ನು ಫೆಡರಲ್ ಕೋರ್ಟು ತೀರ್ಮಾನಿಸಬೇಕು. ಅದರ ತೀರ್ಮಾನವು ಎಲ್ಲರಮೇಲೆ ಆಗುವಂಥದ್ದಾಗಿದೆ. ಈ ಒಡಂಬಡಿಕೆಯ ಶರತುಗಳಿಗೆ ವಿರೋಧವಾಗಿ ಪ್ರಾಂತಿಕ ಅಥವಾ ಕೇಂದ್ರ ಸರಕಾರಗಳು ಕಾನೂನು ಕಾಯಿದೆಗಳನ್ನು ಮಾಡಿದರೂ, ಅವುಗಳ ವಿರುದ್ಧ ಫೆಡರಲ್ ಕೋರ್ಟಿನಲ್ಲಿ ವ್ಯಾಜ್ಯಮಾಡುವ ಅಧಿಕಾರವು ಸಮಾಜಗಳಿಗಿರುತ್ತದೆ.

ಕಮಿಟಿಯ ಸದಸ್ಯರು.

ಈ ಕಮಿಟಿಯಲ್ಲಿ ಪ್ರಾಯಶಃ ಸರ್ ಜಗದೀಶ ಪ್ರಸಾದ, ಸರ್ ಯನ್. ಯನ್. ಸರ್ಕಾರ್, ಸರ್ ವಜೀರ ಹಸ್ಸನ್, ಸರ್ ಸುಲ್ತಾನ ಅಹ್ಮದ್, ಸರ್ ಅಕ್ಬರ್ ಹೈದಾರಿ ಮೊದಲಾದವರು ಕೆಲಸಮಾಡಬಹುದು. ಈ ರೀತಿ ಕಾರ್ಯವನ್ನು ಮುಂದರಿಸುವುದಕ್ಕೋಸ್ಕರ ಮಾನ್ಯ ಆಗಾಖಾನರ ಉಪಸ್ಥಿತಿಯು ಅಗತ್ಯವೆಂದು ಕಂಡುಬಂದರೆ, ಅವರು ಕೂಡಲೇ ವಿಲಾಯತಿಯಿಂದ ಇಲ್ಲಿಗೆ ಬರಲಿಕ್ಕೆ ಸಿದ್ಧರಿದ್ದಾರೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

ದೊರೆಯಲಮೂಲ್ಯ ರತ್ನಗಳು ಸಾಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತೆ ವಿಶ್ವವ ಸುಡುವ ಬರುತಿರುವ ॥ ಗರಲಕವರಂಜಿದರೆ! ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳಿ ಬಳಲಿ! ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಕು ೧೬—೬—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 16—6—1939

ಗಾಂಧಿಜಿಯವರ ನಂತರ ಭಾರತದ ಮುಖಂಡನಾರು?

ಉತ್ತರವು ಭವಿಷ್ಯತ್ತಿನ ಗರ್ಭದಲ್ಲಿದೆ

ರಾಜಕೀಯದ ಭವಿಷ್ಯವನ್ನು ಯಾರು ಹೇಳಬಲ್ಲರು? ಎಲ್ಲಿ ಎಂತಹ ಉಜ್ವಲ ಜ್ವಾಲಾಮುಖಿಯು ಹೊರಡುವುದೋ ಯಾರಿಗೆ ಗೊತ್ತು. ಗಾಂಧಿಜಿಯವರ ನಂತರ ಯಾರು ಕ್ರಾಂತಿ ಸಂದೇಶವನ್ನು ಸಾರಿ ಭಾರತವನ್ನು ಮುನ್ನಡೆಸುತ್ತಾರೋ ಎಂಬ ಕುರಿತು ಇದಮಿತ್ಥವೆಂದು ಈಗ ಹೇಳಬರುವುದಿಲ್ಲ.

ಇಂದಿನ ಹಿಂದೂದೇಶದ ಏಕೈಕ ಮುಖಂಡರು ಮಹಾತ್ಮಾ ಗಾಂಧಿಗಳು. ಇಂದಿನ ಹಿಂದೂದೇಶದ ರಾಜಕೀಯವನ್ನು ಗಾಂಧಿಜಿಯವರನ್ನು ಬಿಟ್ಟು ವಿಚಾರಿಸುವುದು ಅಸಾಧ್ಯವೇ ಆಗಿದೆ. ಅವರ ಕಿರಿ ಬೆರಳ ಚಲನದತ್ತ ಭಾರತೀಯರು ಕಣ್ಣಿಡುತ್ತಿದ್ದಾರೆ. ಮುಂದಕ್ಕೆ ಇವರನ್ನು ಯಾರು ಅನುಸರಿಸುವರೋ ಅದು ಸಹಜವಾಗಿ ಒಬ್ಬ ರಾಜಕೀಯ ಜಿಜ್ಞಾಸುವಿಗೆ ಬರತಕ್ಕ ಪ್ರಶ್ನೆ.

ಇಂದಿನ ದಿನಗಳಲ್ಲಿ ರಾಜಕೀಯದ ಕುರಿತು ನಾಳೆಯ ಸ್ಥಿತಿಯೇನೆಂದು ಇಂದು ಹೇಳಲು ಬರುವಂತಿಲ್ಲ. ಜೀವನ ಹೋರಾಟವು ಭರದಿಂದ ನಡೆಯುತ್ತಿದೆ.

ಮದ್ರಾಸು, ಬೊಂಬಾಯಿ, ಸಂಯುಕ್ತಪ್ರಾಂತ್ಯ—ಇವುಗಳಲ್ಲೆಲ್ಲಾ ಇಂದು ರಾಜಕೀಯ ವಿಚಾರದಲ್ಲಿ ಮೇಲ್ಪಟ್ಟಕ್ಕೆ ಒಂದು ಸಿಂಹವರು ಸ್ಥಾನಚ್ಯುತರಾಗಿದ್ದಾರೆ. ರಾಜಕೀಯದ ಆಟದಲ್ಲಿ ಒಂದಿಷ್ಟು ತಪ್ಪಿಬಿದ್ದರೆ ಸಾಕು. ಬಿದ್ದವನು ಆ ಮೇಲೆ ತಲೆಯೆತ್ತಿ ನಿಲ್ಲುವ ಹಾಗಿಲ್ಲ.

ಕಾಂಗ್ರೆಸಿನಲ್ಲಿ ಗಾಂಧಿಜಿಯವರ ಹೆಜ್ಜೆಯನ್ನು ಹಿಂಬಾಲಿಸಿ ಯಾರು ಬಂದಾರು? ಭವಿಷ್ಯವಾದವು ಸರಿಯಲ್ಲನಾದರೂ ನಾವು ಅಭಿಪ್ರಾಯ ಪಡಬಹುದು. ಆಗುವುದು ಆಗದಿರುವುದು ವಿಧಿಯ ಲೀಲೆ.

ಮೊದಲಾಗಿ ನಮ್ಮ ವಿಚಾರಕ್ಕೆ ಬರುವುದು ಪಂಡಿತ ಜವಾಹಿರಲಾಲರ ಅಸದೃಶ ವ್ಯಕ್ತಿತ್ವ ಮತ್ತು ಸುಭಾಷಚಂದ್ರ ಬೋಸರ ಕ್ರಾಂತಿಕಾರಕ ಮೂರ್ತಿತ್ವ. ಕಾಂಗ್ರೆಸಿನಲ್ಲಿ ಅವರು ಎಳೆ ಪ್ರಾಯದವರು. ಪ್ರಾಯದಲ್ಲಿ ಇಬ್ಬರೂ ನಲ್ವತ್ತರ ಗಡಿ ದಾಟಿದವರೇ ಇದ್ದಾರೆ.

ಪಂಡಿತ ಜವಾಹಿರಲಾಲರು ತಮ್ಮ ಅನುಯಾಯಿಗಳಲ್ಲಿ ವಿಶ್ವಾಸವನ್ನು ಸ್ಥಾಪಿಸಿ ಅವರನ್ನು ಆವೇಶಗೊಳಿಸುವ ಮಹಾ ಶಕ್ತಿವಂತ ಮೂರ್ತಿ. ಆರಂಭದಲ್ಲಿ ತೀವ್ರ ಸಮತಾವಾದಿ. ಆದರೆ ಈಗೀಗ ಕಾಂಗ್ರೆಸಿನ ಬಲಪಕ್ಷದವರೇ ಆಗಿರುತ್ತಾರೆ. ಆರಂಭದಲ್ಲಿ ಹಿಂದೂದೇಶಕ್ಕೆ ಸಮತಾವಾದವನ್ನು ಸಾರಿದ ಧುರೀಣರೇ ಇಂದು ಸಮತಾವಾದಿಗಳಿಂದ ಬೇರೆ ನಿಂತಿರುವ ವಿಷಯ ಇದೊಂದು ಕುತೂಹಲಜನಕವಾದದ್ದು. ಬಹುಶಃ ರಾಜಕೀಯ ಕ್ಷೇತ್ರದಲ್ಲಿ ಇಂತಹುದು ಏನೂ ಆಶ್ಚರ್ಯಕರವಲ್ಲ. ಜವಾಹಿರಲಾಲರ ದೂರದೃಷ್ಟಿತ್ವ ವಿಶಾಲ ವಿಶ್ವವಿಚಾರಗಳು ಭಾರತದ ಕುರಿತು ಅವರ ಪುರೋದೃಷ್ಟಿ ಇವುಗಳು ಇನ್ನೊಬ್ಬ ಧುರೀಣನಲ್ಲಿ ಪ್ರತ್ಯಕ್ಷ ಕಾಣಲು ಸಾಧ್ಯವಿಲ್ಲದಂತಹುವುಗಳಾಗಿವೆ.

ಜವಾಹಿರಲಾಲರಿಗೆ ಇಂದು ಕಾಂಗ್ರೆಸಿನ ಬಲಪಕ್ಷ ಹಾಗೂ ಕಾಂಗ್ರೆಸು ಸೋಶಿಯಲಿಸ್ಟ್ ಪಕ್ಷದವರ ಬೆಂಬಲವಿದೆ. ಕಳೆದ ಕಾಂಗ್ರೆಸು ಅಧ್ಯಕ್ಷರ ಚುನಾವಣೆಯಲ್ಲಿ ಅವರು ವಹಿಸಿದ ಭಾಗವು ತೀವ್ರಗಾಮಿ ಬಲಪಕ್ಷೀಯರಿಂದ ಬಹಳ ವಿಮರ್ಶೆಗೆ ಗುರಿಯಾಗಿದೆ. ಏಕೆಂದರೆ ಅವರು ಆದರ್ಶ ಬಲಪಕ್ಷೀಯರನ್ನು ಆಧರಿಸಿದ್ದಾರೆ. ಆದರೆ ಹೊಸ ವರ್ಕಿಂಗ್ ಕಮಿಟಿಯಲ್ಲಿ ತಾನು ಸೇರದೇ ಇರುವುದರಿಂದ ಎಷ್ಟೋ ಇಂದು ಪಂಡಿತರು ತಮ್ಮ ಸೋಶಿಯಲಿಸ್ಟ್ ಅಭಿಪ್ರಾಯವನ್ನು ಬಿಟ್ಟುಕೊಟ್ಟಲ್ಲಿ ಕಾಂಗ್ರೆಸಿನಲ್ಲಿ ಅತ್ಯುಚ್ಚ ಸ್ಥಾನದಲ್ಲಿ ಮೆರೆಯಬಹುದು. ಆದರೆ ಅವರು ತಮ್ಮ ಅಭಿಪ್ರಾಯದಲ್ಲಿ ಯಾವುದೇ ರೀತಿಯ ವ್ಯತ್ಯಾಸವನ್ನು ಮಾಡಿದರೂ, ಇಂದಿನ ತರುಣ ಭಾರತೀಯರ ವಿಶ್ವಾಸವನ್ನು ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಬಹುಶಃ ಇಂದು ಮಹಾತ್ಮಾ ಗಾಂಧಿಯವರ ನಂತರ ಪಂಡಿತ ಜವಾಹಿರಲಾಲರ ಕಿಮರುಗಳೇ ಬಹಳ

ರೀತಿಯಲ್ಲಿ ಅವರು ತನ್ನ ಮೇಲೆ ಆರೋಪಗಳನ್ನು ಕಡಿಮೆಮಾಡಿಕೊಂಡು ಪುನಃ ಸಮತುಲನೆಗೆ ಬಂದಿದ್ದಾರೆ. ಕಾಂಗ್ರೆಸಿನಲ್ಲಿರುವ ಮುಂದಪಕ್ಷೀಯರು ಪಂಡಿತರ ರಾಜಕೀಯ ತತ್ವವನ್ನು ಒಪ್ಪುವುದಿಲ್ಲ; ಆದರೆ ತಮ್ಮ ಡೇರೆಯಿಂದ ಅವರು ಬಿಟ್ಟುಹೋಗಬಾರದಾಗಿ ಸದಾ ಅಂಜಿಕೆಯಲ್ಲಿದ್ದಂತೆ ತೋರುತ್ತದೆ.

ಜವಾಹಿರಲಾಲರು ಕ್ರಾಂತಿಕಾರ ಮನೋವೃತ್ತಿಯವರಾದರೂ ಅವರ ಹೃದಯವಲ್ಲಿ ಗಾಂಧಿಜಿಯವರ ಆಜ್ಞೆಗೆ ಅನುಪಮ ವಿಧೇಯತೆಯಿದೆ. ಇತರರೊಡನೆ ಅವರು ಯಾವುದನ್ನು ಒಪ್ಪುವುದಿಲ್ಲವೋ ಅದನ್ನು ಅವರು ಗಾಂಧಿಜಿಯವರೊಡನೆ ಒಪ್ಪುತ್ತಾರೆ. ಬಹುಶಃ ಇದೂ ಒಂದು ರೀತಿಯಲ್ಲಿ ರಾಜಕೀಯ ಕ್ಷೇತ್ರದಲ್ಲಿ ನಡೆಸುವ ಕುಶಲ ಕಲೆಯಾಗಿರಬೇಕು. ಪಂಡಿತರು ಇದೇ ದೇಶದಲ್ಲಿ ಗಾಂಧಿಜಿಯವರು ಇಂದು ಪಡೆದಿರುವ ಸ್ಥಾನಮಾನಗಳನ್ನೂ ಅದರ ಕಾರಣಗಳನ್ನೂ ಸರಿಯಾಗಿ ತಿಳಕೊಂಡಿದ್ದಾರೆ.

ಜನಪ್ರಿಯರಾದ ಮುಖಂಡರಾಗಿದ್ದಾರೆ. ಶುದ್ಧ ಹೃದಯ, ನಿರ್ಮಲ ನಡತೆ, ಸದಾ ಪ್ರಸನ್ನತೆ ಇವುಗಳಿಂದ ಅವರು ಜನರ ಹೃದಯಗಳನ್ನು ಆಳುತ್ತಿದ್ದಾರೆ. ಸಾಮಾನ್ಯ ರಾಜಕೀಯ ನೀತಿಜ್ಞನು ಇಡೀ ಜೀವಮಾನದಲ್ಲಿ ಸಂಗ್ರಹಿಸುವಷ್ಟು ಅನುಭವವು ಇಂದು ಅವರ ಕಿರಿಬೆರಳ ತುದಿಯಲ್ಲಿದೆ.

ದಿವಂಗತ ದೇಶಬಂಧು ಚಿತ್ತರಂಜನದಾಸರ ಗುಣಗಳನ್ನು ಮೂರ್ತೀಕರಿಸಿಕೊಂಡು ಶ್ರೀ. ಸುಭಾಷಚಂದ್ರ ಬೋಸರು ಇಂದು ತೀವ್ರಗಾಮಿ ಜನರಿಗೆ ಆರಾಧ್ಯಮೂರ್ತಿಯಾಗಿದ್ದಾರೆ. ಅವರು ತೀರಾ ತರುಣರೂ, ಮುಂದಿನ ರಾಜಕೀಯದಲ್ಲಿ ಬಹಳವಾಗಿ ಪ್ರವೇಶವಾಗತಕ್ಕವರೂ ಆಗಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಗಾಂಧೀ ಪಕ್ಷೀಯರಿಂದ ಕೊಡಲ್ಪಡುವ ಪ್ರತಿಷ್ಠೆಯನ್ನು ಅವರು ಕಡೆಗಣಿಸುವ ಕ್ರಾಂತಿಪುರುಷರಾಗಿದ್ದಾರೆ.

ಇಂದು ಇವರಿಬ್ಬರು ಗಾಂಧಿಜಿಯವರ ಹೆಜ್ಜೆಯನ್ನು ಅನುಸರಿಸುವ ವ್ಯಕ್ತಿಗಳು ಮುಂದೆ ಬಂದಿದ್ದಾರೆ.

ಯಾರ ಸಂದೇಶವು ಎಷ್ಟು ಜನಪ್ರಿಯವಾಗಿ ಪರಿಣಮಿಸುವುದೋ, ಯಾರು ಮುಂದಕ್ಕೆ ಭಾರತದ ಜನಪ್ರಿಯ ಧುರೀಣರಾಗುವರೋ. ಉತ್ತರವು ಭವಿಷ್ಯತ್ತಿನ ಕರಾಳ ಗರ್ಭದಲ್ಲಿದೆ. ರಾಜಕೀಯ ಜಗತ್ತಿನಲ್ಲಿ ಎಲ್ಲಿ ಯಾವಾಗ ಉಜ್ವಲ ಜ್ವಾಲಾಮುಖಿ ಹೊರಡುವುದೆಂಬುದನ್ನು ಯಾರು ಬಲ್ಲರು?

(ಭಾಷಾ ಅನುವಾದ)

ಮದ್ರಾಸ ಸರಕಾರದ ಕಂದಾಯನೀತಿ

ಮದ್ರಾಸು ಸರಕಾರವು ಕಾಯಂ ಕಂದಾಯ ದರಗಳನ್ನು ನಿಶ್ಚಯಿಸುವ ಕುರಿತು ಆಲೋಚಿಸುತ್ತಿದೆ ಎಂದು ಕಂದಾಯ ಮಂತ್ರಿ ಶ್ರೀ ಟಿ. ಪ್ರಕಾಶಮ್‌ರವರ ಒಂದು ಭಾಷಣದಿಂದ ವ್ಯಕ್ತವಾಗುತ್ತದೆ. ಪ್ರಾಯಶಃ ಈಗಾಗಲೇ ಇಳಿಸಿಗಿದ್ದ ದರದ ಮಟ್ಟಕ್ಕೆ ಕಂದಾಯದಲ್ಲಿ ಕಡಿತವಾಗಬಹುದು. ಈ ಮೇಲೆ ಆಗಾಗ ಸೆಟ್ಲ್‌ಮೆಂಟುಗಳಾಗುವುದಿಲ್ಲ. ಕಂದಾಯ ದರದಲ್ಲಿ ಬದಲಾವಣೆಗಳಾಗಬೇಕಾದರೆ ಸರಕಾರವು ಅಸೆಂಬ್ಲಿ ಕೌನ್ಸಿಲುಗಳ ಮಂಜೂರಾತಿಯನ್ನು ಪಡೆಯುವುದು ಅವಶ್ಯವಾಗುವುದು. ಇವಲ್ಲದೆ ಸೀರಾವರಿ ದರ, ಇನಾಮು ಪ್ರದೇಶಗಳು, ಜಮೀನ್ದಾರಿಗಳು ಮೊದಲಾದವುಗಳ ಕುರಿತು ಮದ್ರಾಸು ಸರಕಾರವು ಕಡ್ಡಾಯವಾದ ನ್ಯಾಯ ನಿರ್ಣಯಗಳನ್ನು ತಯಾರಿಸಿ ಅಸೆಂಬ್ಲಿ ಕೌನ್ಸಿಲುಗಳ ಮಂಜೂರಾತಿಗೆ ತರುವುದು.

DIAMONDS! DIAMONDS

BEST BRILLIANCY!

K. R. K. SHET,

MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್‌ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯ ಸಲ್ಲಕ್ಷಣಗಳು ತಾನಾಗಿಯೇ ತಿಳಿದುಬರುವುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.

ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಬ್ರಾಂಚು ಬಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,

ಮಂಗಳೂರು.

ಗ್ರೀಸ್ ಟರ್ಕಿಗಳ ಮೇಲೆ ಹಿಟ್ಲರ ಮುಸಲೋನಿಯರ ಬ್ರಹ್ಮಾಸ್ತ್ರ

ಇದೇ ಜೂನ್ ತಿಂಗಳಿಂದಾರಂಭಿಸಿ ಇಟಲಿಯಲ್ಲಿ ಜರ್ಮನಿಯು ಸೇನಾಸಂಚಾಲನ ಮತ್ತು ನಿರ್ದೇಶನವನ್ನಾರಂಭಿಸುವರು. ಅದಕ್ಕೋಸ್ಕರ ಅನೇಕ ಮಂದಿ ಜರ್ಮನ್ ಯುದ್ಧ ಶಾಸ್ತ್ರಜ್ಞರನ್ನು ಹಿಟ್ಲರನು ಇಟಲಿಗೆ ಕಳುಹಿಸಿದ್ದಾನೆ. ಸಂದಿಗ್ಧ ಸ್ಥಾನಗಳಲ್ಲಿ ೧೦-೧೫ ಜರ್ಮನ ಸೇನಾಪಡೆಗಳು ಇಟಲಿಯಲ್ಲಿ ತಮ್ಮ ಠಾಣ್ಯವನ್ನಿರುವುವು. ಪ್ರಾಯಶಃ ಇವುಗಳೆಲ್ಲ ಇಟಲಿಯ ಉತ್ತರವಿಭಾಗಗಳಲ್ಲಿ ನೆಲೆಯಾಗುವವು. ಜರ್ಮನ ಸೇನೆಗಳು ಇಟಲಿಯಲ್ಲಿ ಪಾದವನ್ನೂರುವುದು ಇಟಲಿಗೆ ಅಪೇಕ್ಷಣೀಯವಾಗಿಲ್ಲವಾದರೂ ಮುಸಲೋನಿಯ ಮಹತ್ವಾಕಾಂಕ್ಷೆಯು ಇದಕ್ಕೆ ಆಸ್ಪದ ಮಾಡಿಕೊಟ್ಟಿದೆ.

ಜರ್ಮನ ಸೇನೆಗಳು ಇಟಲಿಯಲ್ಲಿ ತಳವೂರಿರುವುದು ಮಾತ್ರವಲ್ಲ, ಜರ್ಮನ ತಜ್ಞರು ಇಟಾಲಿಯನ ಸೇನೆಗಳಿಗೆ ಆಧುನಿಕ ಯುದ್ಧಕ್ರಮಗಳಲ್ಲಿ ಶಿಕ್ಷಣವನ್ನು ಕೊಡುವರು ಇಟಲಿಯ ಸೇನಾಧಿಕಾರಿಗಳಲ್ಲಿ ಹಲವರು ಜರ್ಮನಿಯ ಸೈನಿಕ ಶಿಕ್ಷಣಾಲಯಗಳಲ್ಲಿ ಶಿಕ್ಷಣವನ್ನು ಪಡೆಯುವರು. ಇಟಲಿಯ ಸರ್ವಸೇನಾಧಿಕಾರವನ್ನು ಮಾರ್ಶಲ್ ಬೊಡೊಗ್ಲಿಯೊನಿಂದ ಮುಸಲೋನಿ ತಾನೇ ತೆಗೆದುಕೊಳ್ಳುವನು ಇದಕ್ಕೆಲ್ಲ ಒಂದು ಮಹತ್ವದ ಕಾರಣವು ಊಹಿಸಲ್ಪಟ್ಟಿದೆ. ಗ್ರೀಸ ಟರ್ಕಿಗಳಂಥ ಸಣ್ಣ ರಾಷ್ಟ್ರಗಳಮೇಲೆ ಹಿಟ್ಲರ ಮುಸಲೋನಿಯರು ಬ್ರಹ್ಮಾಸ್ತ್ರವನ್ನು ಬಿಟ್ಟು ರಾಕ್ಷಸೀ ಮಹತ್ವಾಕಾಂಕ್ಷೆಯನ್ನು ತೀರಿಸುವ ಮಹತ್ಕಾರ್ಯ.ಕ್ಷಣದಲ್ಲಿ ಆ ಸರ್ವಾಧಿಕಾರಿಗಳು ಇದ್ದಿರುವರು ಇನ್ನು ಮುಂದೆ ಸ್ಪೇನು ಮುಸಲೋನಿಯ ಆಳಿಕೆಗೆ ಒಳಪಡಲಿಕ್ಕೆ ಹಿಟ್ಲರ್ ಆಕ್ಷೇಪಿಸುವುದಿಲ್ಲ. ಸೆವ್ಹೊಪ್ರಾಂತ್ಯವು ಇಟಲಿಯ ಅಧೀನವಾದೊಡನೆ ಈಗ ಇಟಲಿಯ ಅಧಿಕಾರದಲ್ಲಿರುವ ಟಿರೋಲನ್ನು ಮುಸಲೋನಿ ಹಿಟ್ಲರನಿಗೆ ಕೊಡುವನು ಮಧ್ಯಯೂರೋಪದಲ್ಲಿ ಹಿಟ್ಲರನ ರಾಜಸತ್ತೆಯೂ ಭೂಮಧ್ಯಪ್ರದೇಶಗಳಲ್ಲಿ ಮುಸಲೋನಿಯ ರಾಜಸತ್ತೆಯೂ ನಡೆಯಲಿಕ್ಕೆ ಅವರು ಒಬ್ಬರಿಗೊಬ್ಬರು ಅಡ್ಡಬರುವುದಿಲ್ಲ ಹೀಗೆಂದು ಅವರೊಳಗೆ ಗುಪ್ತ ಒಡಂಬಡಿಕೆ ಆಗಿದೆ.

ಜುಗೋಸ್ಲೇವಿಯವನ್ನೂ ಹಿಟ್ಲರ ಮುಸಲೋನಿಯರು ಹಂಚಿಕೊಳ್ಳುವರು. ಮೊದಲು ಅವರದನ್ನು ಅಧೀನರಾಷ್ಟ್ರವನ್ನಾಗಿ ಮಾಡಿ ಮತ್ತೆ ಪರಸ್ಪರ ಹಂಚಿಕೊಂಡು ತಮ್ಮ ಸಾಮ್ರಾಜ್ಯ ವಿಸ್ತಾರ ಮಾಡುವರು ಇಷ್ಟಾದಾಗ ಗ್ರೀಸನ್ನು ತಮ್ಮ ಆಳಿಕೆಗೆ ತರುವದು ಹಿಟ್ಲರ ಮುಸಲೋನಿಯರಿಗೆ ಬಹು ಸುಲಭ ಕೆಲಸವಾಗುತ್ತದೆ. ಆ ಮೇಲೆ ಅವರ ದೃಷ್ಟಿ ಅರಬ ರಾಷ್ಟ್ರಗಳ ಕಡೆಗೆ ಹರಿಯುವದು. ಇವರ ಹಂಚಿಕೆ ಸಫಲವಾದರೆ ಇಟಲಿಯ ಅಧೀನದಲ್ಲಿ ಅರಬ ರಾಜ್ಯಗಳ ಒಂದು ಸಂಯುಕ್ತ ರಾಷ್ಟ್ರವು ಏರ್ಪಡುವುದು. ಈ ಸಂಯುಕ್ತ ರಾಷ್ಟ್ರದಲ್ಲಿ ಫ್ರಾನ್ಸಿನ ಅಧೀನವಾಗಿರುವ ಸಿರಿಯವೂ ಬ್ರಿಟನಿನ ಅಧೀನದಲ್ಲಿರುವ ಪೆಲೆಸ್ಟೀನೂ ಸೇರಿಕೊಳ್ಳುವವು. ಇದಕ್ಕೆ ಪೂರ್ವಭಾವಿಯಾಗಿ ಈ ರಾಜ್ಯ-ಗಳಲ್ಲಿ ಇಟಲಿಯ ಪರವಾದ ತುಂಬಾ ಪ್ರಚಾರಕಾರ್ಯವು ನಡೆಯುತ್ತಲಿರುವುದು. ಆ ಮೇಲೆ ಟರ್ಕಿಯು ಹಿಟ್ಲರ ಮುಸಲೋನಿಯರ ಪಕ್ಷಕ್ಕೆ ಸೇರುವಂತೆ ಬಹಳ ಬಲಾತ್ಕಾರವಾಗುವುದು. ಆಗ ಬ್ರಿಟನ ಫ್ರಾನ್ಸರಷ್ಯಗಳ ಸಂಘಟನೆಯನ್ನು ಮುರಿಯುವುದು ಸರ್ವಾಧಿಕಾರಿಗಳಿಗೆ ಪ್ರಯಾಸದ ಕೆಲಸವೇ ಅಲ್ಲ ಈ ಉದ್ದೇಶದಿಂದಲೇ ಜರ್ಮನ ಇಟಾಲಿಯಾನ ಸೈನಿಕ ಒಡಂಬಡಿಕೆಯು ಆಗಿರುತ್ತದಾಗಿ ಹೇಳುತ್ತಾರೆ.

ಯುದ್ಧಕಾಲದ ಜಪಾನಿನ ವಿದೇಶಾಂಗ ಧೋರಣೆ

ಭಾರತದಲ್ಲಿ ಯುದ್ಧಸಿದ್ಧತೆ

ಸರ್ವಾಧಿಕಾರಿಗಳ ಸಿಂಹನಾದ

ಶಾಂತಿಪ್ರಿಯ ರಾಷ್ಟ್ರಗಳಿಗೆ ಸರ್ವಾಧಿಕಾರಿಗಳು ಇನ್ನೊಂದು ರೀತಿಯಿಂದಲೂ ಬೆದರಿಕೆ ಹಾಕುತಿದ್ದಾರೆ. ಮೇಲೆ ಹೇಳಿದ ಪ್ರಕಾರ ಜರ್ಮನಿಯ ಸೇನೆಗಳಿಗೆ ಇಟಲಿಯಲ್ಲಿ ಸ್ಥಾನ ದೊರೆತಿರುವುದು ಮಾತ್ರವಲ್ಲದೆ ಜರ್ಮನ ಇಟಾಲಿಯನ್ ವಿಮಾನಪಡೆಯು ಸಂಯುಕ್ತವಾಗುವುದಕ್ಕೂ ಹಿಟ್ಲರ ಮುಸಲೋನಿಯರೊಳಗೆ ಒಡಂಬಡಿಕೆಯಾಗಲಿರುವುದಂತೆ. ಹೀಗಾಗುವದರ ಪರಿಣಾಮವನ್ನು ಊಹಿಸಲಿಕ್ಕೂ ಬರುವುದಿಲ್ಲ ಯಾಕೆಂದರೆ ಆಗ ಭೂಮಧ್ಯ ಸಮುದ್ರಮಾರ್ಗವಾಗಿ ಫ್ರಾನ್ಸ ಬ್ರಿಟನುಗಳ ಬಂದರುಗಳಿಗೆ ಒಂದು ಹೋಗುವ ಸೇನೆ ಸರಂಜಾಮುಗಳ ನಾಶಮಾಡುವದು ಸುಲಭದ ಕೆಲಸ. ಯುದ್ಧಾರಂಭದಲ್ಲೇ ವಿಜಯಮಾಲೆಯು ಸರ್ವಾಧಿಕಾರಿಗಳ ಕೊರಳಿಗೆ ಬೀಳುವದು

ಸರ್ವಾಧಿಕಾರಿಗಳ ಆಲೋಚನೆಯು ಇಷ್ಟಕ್ಕೇ ಮುಗಿದಿರುವುದಿಲ್ಲ ಹಿಟ್ಲರನು ವಸಾಹತುಗಳ ಪ್ರಾಪ್ತಿಗೆ ತನ್ನ ಪ್ರಯತ್ನಗಳನ್ನ ನಡೆಸಿಯೇ ಇದ್ದಾನೆ. ತನ್ನ ಸಿಂಹನಾದವು ಇಡೀ ಪ್ರಪಂಚದಲ್ಲಿ ಪ್ರತಿಧ್ವನಿಸುವಂತೆ ಅವನು ಪ್ರಪಂಚದ ಎಲ್ಲಾ ಭಾಗಗಳಿಗೆ ಧ್ವನಿಯಂತ್ರಗಳನ್ನು ಕಳುಹಿಸಿಕೊಟ್ಟಿದ್ದಾನೆ ತನ್ನನ್ನು ಎದುರಿಸುವವರು ಈ ಪ್ರಪಂಚದಲ್ಲೇ ಇರುವುದಿಲ್ಲ. ತನ್ನ ಸೇನಾಬಲವನ್ನು ನೋಡಿಯೇ ಬ್ರಿಟನು ಫ್ರಾನ್ಸುಗಳು ಜರ್ಮನಿಯ ವಸಾಹತುಗಳನ್ನು ಜರ್ಮನಿಗೆ ಕೊಟ್ಟುಬಿಡಬೇಕು ಒಂದೇ ಹನಿ ರಕ್ತವನ್ನು ಚೆಲ್ಲದೆ ತಾನು ವಸಾಹತುಗಳನ್ನು ಸಂಪಾದಿಸುವೆನು ಎಂದು ಅವನು ಗರ್ಜಿಸುತ್ತಾ ಇದ್ದಾನೆ ಡಾಕ್ಟರ ಶಕ್ಟ್ ಕೂಡ ಸಿಲೋನಿನಲ್ಲಿ ಇದೇ ಅರ್ಥ ಬರುವ ಭಾಷಣ ಮಾಡಿರುವನು.

ಗಾಳಿ ಗೋಪುರ

ಆದರೆ ಸರ್ವಾಧಿಕಾರಿಗಳು ಗಾಳಿಗೋಪುರ ಕಟ್ಟುತ್ತಿರುವರು ಅವರು ಊಹಿಸುವ ಪ್ರಕಾರ ಪ್ರಪಂಚದಲ್ಲಿ ತಾವೇ ತಾವಾಗಿ ಮೆರೆಯುವದು ಎಣಿಸಿದಷ್ಟು ಸುಲಭವಲ್ಲ. ಕೇಳಿದ ಮಾತ್ರಕ್ಕೆ ಜರ್ಮನಿಗೆ ವಸಾಹತುಗಳನ್ನು ಕೊಟ್ಟು ಬಿಡಲಿಕ್ಕೆ ಬ್ರಿಟನು ಸಿದ್ಧವಿಲ್ಲ ಜರ್ಮನಿ ಇಟಲಿಗಳ ವಿಷಯದಲ್ಲಿ ಬ್ರಿಟನಿನ ಧೋರಣೆಯು ದಿನ ಹೋದಂತೆ ಕಠಿಣವಾಗುತ್ತ ಬರುತ್ತಲಿದೆ ಬ್ರಿಟನ-ಫ್ರಾನ್ಸ-ರಷ್ಯ ತ್ರಿರಾಷ್ಟ್ರಗಳ ಒಡಂಬಡಿಕೆಯಾದಾಗ ಸರ್ವಾಧಿಕಾರಿಗಳ ಪ್ರಪಂಚದ ಮೇಲೆ ಸರ್ವಾಧಿಕಾರವನ್ನು ಸ್ಥಾಪಿಸುವ ಯೋಜನೆಗಳು ತಮ್ಮಷ್ಟಕ್ಕೆ ಮಣ್ಣುಪಾಲಾಗುವುವು. ಅದನ್ನು ಸರ್ವಾಧಿಕಾರಿಗಳೂ ತಿಳಿದಿದ್ದಾರೆ. ಆದ್ದರಿಂದ ತ್ರಿರಾಷ್ಟ್ರಗಳ ಒಪ್ಪಂದವು ಆಗದಂತೆ ಅವರು ಕುಹಕೋಪಾಯಗಳನ್ನು ಮಾಡಿರುವರು. ಬಾಲ್ಟಿಕ ರಾಷ್ಟ್ರಗಳಿಗೆ ಸೈನಿಕ ಸಹಾಯದ ಭರವಸೆಯು ದೊರೆತ ಹೊರತು ರಷ್ಯವು ಒಡಂಬಡಿಕೆಗೆ ಒಪ್ಪುವದಿಲ್ಲ. ಯಾಕೆಂದರೆ ಬಾಲ್ಟಿಕ ರಾಷ್ಟ್ರಗಳ ಭರವಸೆ ಇರುವುದಿಲ್ಲವಾದರೆ ರಷ್ಯಕ್ಕೆ ಹಿಟ್ಲರನ ಆಕ್ರಮಣ ಭಯವು ಯಾವಾಗಲೂ ಇರುವುದು. ಪರಂತು ಬಾಲ್ಟಿಕ ರಾಷ್ಟ್ರಗಳು ಭರವಸೆಗೆ ಒಪ್ಪದ ಹಾಗೆ ಹಿಟ್ಲರ ತನ್ನ ರಾಜನೀತಿ ನೈಪುಣ್ಯವನ್ನು ತೋರಿಸಿದ್ದಾನೆ. ತಮಗೆ ಶಾಂತಿಪ್ರಿಯ ರಾಷ್ಟ್ರಗಳ ಭರವಸೆಯು ಬೇಕಾಗಿಲ್ಲ ಎಂದು ಬಾಲ್ಟಿಕ ರಾಷ್ಟ್ರಗಳು ಹೇಳಿವೆ ಆದರೆ ಬಾಲ್ಟಿಕ ರಾಷ್ಟ್ರಗಳ ಈ ಸಮಸ್ಯೆಯನ್ನು ಹೇಗಾದರೂ ಮಾಡಿ ತೀರಿಸಲಿಕ್ಕೆ ಬರುತ್ತದೆಂಬುದನ್ನು ಬ್ರಿಟನು ತಿಳಿದಿದೆ. ಆದಕಾರಣ ತ್ರಿರಾಷ್ಟ್ರಗಳ ಒಡಂಬಡಿಕೆಯ ಪ್ರಯತ್ನಗಳು ಮುರಿದುಹೋಗಿರುವುದಿಲ್ಲ ಅವು ಈಗಲೂ ನಡೆಯುತ್ತಾ ಇವೆ ಈ ಒಡಂಬಡಿಕೆಯೊಂದು ಆಗಲೇಬೇಕೆಂಬ ಹಂಬಲ ಮೂರೂ ರಾಷ್ಟ್ರಗಳಲ್ಲಿ ಬಲವಾಗಿದೆ. ಒಡಂಬಡಿಕೆಯು ಸದ್ಯವೇ ಆಗುವುದು ಒಡಂಬಡಿಕೆಯು ಶೀಘ್ರದಲ್ಲಿ ಸಾಧ್ಯವಾಗಬೇಕೆಂಬುದಕ್ಕೋಸ್ಕರ ಬ್ರಿಟಿಷ ವಿದೇಶಾಂಗ ಕಾರ್ಯಾಲಯದ ಒಬ್ಬ ಉಚ್ಚಾಧಿಕಾರಿ ಮಿ. ವಿಲಿಯಮ್ ಸ್ಟ್ರೇಂಗ ಎಂಬವರು ಮೊಸ್ಕೋವಿಗೆ ತೆರಳಿದ್ದಾರೆ

ಸರ್ವಾಧಿಕಾರಿಗಳು ಗಾಳಿಗೋಪುರವನ್ನೇ ಕಟ್ಟುತಿದ್ದಾರೆಂಬುದಕ್ಕೆ ಈ ಒಂದು ದೃಷ್ಟಾಂತವನ್ನು ಕೊಡಬಹುದು. ಹಿಟ್ಲರನು ಎಣಿಸಿದ ಪ್ರಕಾರ ಎಲ್ಲ ಸಂಗತಿಗಳು ನಡೆಯುವುದಾಗಿದ್ದರೆ ಡಾಂಜಿಗು ಮಾರ್ಚ ತಿಂಗಳಲ್ಲಿಯೇ ಜರ್ಮನಿಯ ಹಸ್ತಗತವಾಗಬೇಕಾಗಿತ್ತು ಆದರೆ ಅದು ಜೂನ್ ತಿಂಗಳಲ್ಲಿ ಸಹ ಹಸ್ತಗತವಾಗಿರುವುದಿಲ್ಲ. ಆ ಬಗ್ಗೆ ಬರುವ ಶರತ್ಕಾಲದವರೆಗೆ ಕಾದಿರಬೇಕು ಎಂದು ಡಾಂಜಿಗಿನ ನಾಝಿಗಳು ಹೇಳಲಾರಂಭಿಸಿದ್ದಾರೆ. ತನ್ಮಧ್ಯ ಅವರು ಪೋಲರೊಳಗೆ ಸಣ್ಣ ಕೆಲವು ತಿರಾಳಗಳನ್ನು ಎಬ್ಬಿಸುವುದರಲ್ಲೇ ತೃಪ್ತರಾಗಿದ್ದಾರೆ ಡಾಂಜಿಗಿನ ಬಹು ಸಂಖ್ಯಾತ ನಾಝಿಗಳಿಂದ ಕೂಡಿದ ಸೆನೇಟು-ತನಗೂ ಪೋಲಾಂಡಿಗೂ ಆದ ಒಡಂಬಡಿಕೆಯನ್ನು ಮುರಿಯುವದು ಡಾಂಜಿಗಿನ ನಾಝಿಗಳು ಪೋಲರನ್ನು ಬಹಿಷ್ಕರಿಸುವರು ಡಾಂಜಿಗಿನಲ್ಲಿ ಪೋಲರು ಜರ್ಮನಿಯಲ್ಲಿ ಯಹೂದಿಯರಂತೆಯೇ ಇರುವರು. ಆದರೆ ಈ ತರದ ಬೆದರಿಕೆಗಳಿಗೆ ಪೋಲರು ಹೆದರುವವರು ಅಲ್ಲ. ಅವರು ಡಾಂಜಿಗಿನಲ್ಲಿ ತಮಗೆ ನ್ಯಾಯವಾಗಿ ಪ್ರಾಪ್ತವಾದ ಹಕ್ಕು ಅಧಿಕಾರಗಳನ್ನು ಸುಮ್ಮನೆ ಬಿಟ್ಟುಕೊಡುವುದಿಲ್ಲ

ಯುದ್ಧಕಾಲದ ಜಪಾನಿನ ಧೋರಣೆ

ಜರ್ಮನಿ ಇಟಲಿಗಳ ಕಡೆಗೆ ಜಪಾನಿನ ಸಹಾನುಭೂತಿ ಇರುವುದಾದರೂ, ಯೂರೋಪಿನ ಯುದ್ಧದಲ್ಲಿ ಜಪಾನು ಸರ್ವಾಧಿಕಾರಿಗಳ ಪರವಾಗಿ ಪ್ರತ್ಯಕ್ಷಭಾಗವನ್ನು ತೆಗೆದುಕೊಳ್ಳುವುದಿಲ್ಲ. ರಷ್ಯವು ಅಂಥ ಲೋಕಯುದ್ಧದಲ್ಲಿ ಸೇರಿದ್ದಾದರೆ ಮಾತ್ರ ಅದನ್ನು ವಿರೋಧಿಸಿ ಜಪಾನವು ಯುದ್ಧದಲ್ಲಿ ಭಾಗ ತೆಗೆದುಕೊಳ್ಳುವುದು ಎಂದು ಅದರ ಧೋರಣೆಯಾಗಿದೆ

ಆದರೂ ಬಾಲ್ಟಿಕ ರಾಷ್ಟ್ರಗಳಂತೆ ಸ್ಪೇನು ಜಪಾನುಗಳೊಡನೆಯೂ ಒಡಂಬಡಿಕೆಯನ್ನು ಮಾಡಿಕೊಳ್ಳಲಿಕ್ಕೆ ಸರ್ವಾಧಿಕಾರಿಗಳ ಪ್ರಯತ್ನಗಳು ನಡೆದೇ ಇವೆ

ಭಾರತದಲ್ಲಿ ಯುದ್ಧಸಿದ್ಧತೆ

ಕರಾಚಿ, ಕಲ್ಕತ್ತಾ, ಬೊಂಬಾಯಿ ಇತ್ಯಾದಿ ಬಂದರುಗಳಲ್ಲಿ ವಿಮಾನದಾಳಿಯಿಂದ ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೆ ಶಿಕ್ಷಣಕೊಡಲಾಗುತ್ತಿದೆಯಲ್ಲದೆ ಗಾಯಗೊಂಡವರಿಗೆ ಪ್ರಥಮ ಚಿಕಿತ್ಸೆಯನ್ನು ಕೊಡಲಿಕ್ಕೂ ಅನುಭವವುಳ್ಳ ಸ್ವಯಂಸೇವಕರ ದಳಗಳನ್ನು ಏರ್ಪಡಿಸುವುದಕ್ಕೋಸ್ಕರ ರೆಡಕ್ರಾಸ ಜನಸೇವಾ ಸಂಘದ ಎಲ್ಲಾ ಶಾಖೆಗಳಿಗೆ ಸೂಚನೆಗಳು ಹೋಗಿವೆ.

ವಿಮಾಡರಗಳಲ್ಲಿ ಕಡಿತ

ಅಂತರ್ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯು ಕೊಂಚ ಸುಧಾರಿಸಿ, ಯೂರೋಪದ ರಾಜಕೀಯ ಆಕಾಶದಲ್ಲಿ ಹರಡಿದ್ದ ಯುದ್ಧದ ಕಾರ್ಮುಗಿಲುಗಳು ಮೆಲ್ಲಮೆಲ್ಲಗೆ ಚೆದರಿಹೋಗುತ್ತಿರುವುದರಿಂದ ಯುದ್ಧಭಯದಿಂದ ಏರಿದ ವಿಮಾದರಗಳು ಇಳಿದಿವೆ

ಸದಾಕಾಲ ರೈಲ್ವೆ ಪ್ರಯಾಣದಿಂದ ಆತನಲ್ಲಿ ಮಲಬದ್ಧತೆ ಉಂಟಾಗುತಿತ್ತು

ತನ್ನ ಆರೋಗ್ಯವನ್ನು ನೆಟ್ಟಗಿಡುವುದು ಕ್ರುಶನ್ ಲವಣಗಳೊಂದೆ ಎಂದು ಓರ್ವ ಪ್ರಯಾಣಿಕ ಮಾರಾಟಗಾರನ ಅಭಿಪ್ರಾಯ

"ನಾನೊಬ್ಬ ವ್ಯಾಪಾರಿ ಪ್ರಯಾಣಿಕ, ಸದಾಕಾಲ ರೈಲ್ವೆ ಸಂಚಾರ ಮಾಡಲಿಕ್ಕಿರುವುದರಿಂದ ಕ್ರುಶನ್ ಲವಣಗಳ ಸೇವನೆ ಅಲ್ಲದಿದ್ದರೆ ಮಲಬದ್ಧತೆಯ ಪರಿಣಮಿಸುತ್ತಿತ್ತು ನನ್ನ ಉದರವನ್ನು ನಿರ್ಮಲವಾಗಿಡಲು, ಅದು ಒಂದೇ ಒಂದಾದ ಉಪಾಯವಾಗಿರುತ್ತದೆ ಅದರಿಂದ ನನ್ನ ಕೆಲಸಕ್ಕೆ ಅಡಚಣೆಗಳು ಉಂಟಾಗುವುದಿಲ್ಲ ಉಚಿತ ಸಮಯ ಪ್ರತಿಸಿನ ದೊಡ್ಡ ಡೋಸನ್ನು, ಇತರ ಸಮಯ ಒಂದು ದಿವಸ ಬಿಟ್ಟು ಒಂದು ದಿವಸ ಸಣ್ಣ ಡೋಸುಗಳನ್ನೂ ಪ್ರಾತಃಕಾಲ ಸೇವಿಸುವುದು ನನ್ನ ಕ್ರಮ ದಿನ ಪೂರ್ತಿ ಚಟುವಟಿಕೆಗಳನ್ನು ನಡೆಸಲು ಉಲ್ಲಾಸವನ್ನು ಶಕ್ತಿಯನ್ನೂ ಪಡೆಯಲು ಒಂದೇ ಒಂದಾದ ಉಪಾಯವೆಂದರೆ ಇದೇ. ಬೇರೆ ಯಾವತರ ಜಾಡಿನ ಮದ್ದುಗಳಿಗೆ ಈ ತರದ ಪರಿಣಾಮವಿರುವದಿಲ್ಲ ಹೀಗೆಂದು ಆತನ ಅಭಿಪ್ರಾಯ

ಪಿ ಯಲ್

ನಿಮ್ಮ ಉದರವನ್ನು ಶುಚಿಯಾಗಿಡಲು ಕ್ರುಶನ್ ಲವಣಗಳ ನೈಸರ್ಗಿಕ ವಿಧಾನವು ಅದರಲ್ಲಿರುವ ಆರು ಲವಣಗಳಿಂದ ನಿಮ್ಮ ಅಂಗಾಂಗಗಳು ಸರಿಯಾದ ರೀತಿಯಲ್ಲಿ ಕಾರ್ಯಸುತ್ತವೆ. ನಿಮ್ಮ ಉದರದಿಂದ ಎಲ್ಲಾ ಕಶ್ಮಲಗಳು ಹೊರದೂಡಲಾಗುವುವು ಈ ಕಶ್ಮಲಗಳನ್ನು ಹೊರದೂಡದಿದ್ದರೆ ನಿಮ್ಮ ಆರೋಗ್ಯವು ಕೆಡುವುದು ಕ್ರುಶನ್ ಲವಣಗಳಿಂದ ನಿಮ್ಮ ರಕ್ತವು ಪರಿಶುದ್ಧವಾಗಿ ನಿಮ್ಮಲ್ಲಿ ನವಚೇತನವೂ ಉಲ್ಲಾಸವೂ ಉಂಟಾಗುವುದು

ಕ್ರುಶನ್ ಲವಣಗಳು ಎಲ್ಲಾ ದವಾಖಾನೆಗಳಲ್ಲೂ, ಸ್ಟೋರುಗಳಲ್ಲೂ, ಬಜಾರುಗಳಲ್ಲೂ ದೊರಕುತ್ತವೆ.

ನಗರದ ನವ ನಾಯಕರು

ಲೇಖಕ: ಶಿವರಾಮ ಕಾರಂತ.

ಮಿ| ಮತ್ತು ಮಿಸೆಸ್ ರಾಮಚಂದ್ರಯ್ಯನವರು

೨. ರಾವ್ ಸಾಹೇಬ್ ರಾಮಚಂದ್ರಯ್ಯ, ಬಿ. ಎ., ಬಿ. ಎಲ್.

ದೇವರ ದಯೆಯಿಂದ ರಾಮಚಂದ್ರಯ್ಯನವರಿಗೆ ಮನೆಯಲ್ಲೆಲ್ಲ ಅನುಕೂಲವಾಗಿದೆ. ಮೊನ್ನೆ ಮೊನ್ನೆಯ ವರೆಗೆ ಅವರ ತಂದೆಯವರು, ಅಂದರೆ ಲೇಟ್ ರಾವ್ ಬಹದ್ದೂರು ಸುಬ್ಬಚಂದ್ರಯ್ಯನವರು ಜೀವಂತವಾಗಿದ್ದರು. ಆದರೂ ಮುಪ್ಪು ಅಗಲೇ ಬಂದಿತ್ತು. ಹೀಗಾಗಿ ಮನೆಯ ಯಜಮಾನಿಕೆಯನ್ನು ರಾಮಚಂದ್ರಯ್ಯನವರೇ ನೋಡುತ್ತಿದ್ದರು. ಈಗಂತೂ ಹೇಗೂ ಅವರು ಯಜಮಾನರು. ಅವರು ವೃತ್ತಿಶಃ ವಕೀಲರು. ಅಂತು ವಕೀಲರಾಗಬೇಕೆಂದು ಬಿರುದು ಗಳಿಸಿದವರು. ಆ ಮೇಲೆ ವಕಾಲತು ಅವರಿಗೆ ಸರಿಹೋಗಲಿಲ್ಲವೋ, ಅವರು ವಕಾಲತಿಗೆ ಸರಿಹೋಗಲಿಲ್ಲವೋ ತಿಳಿಯೆ—ಅಂತು ಈಗ ಅವರ ಕೋರ್ಟು ರಸ್ತೆ ಆಫೀಸಿನ ಎದುರು ಸ್ಯಾನಬೋರ್ಡಿನಲ್ಲಿ ಬರಿಯ ರಾವಸಾಹೇಬ್ ರಾಮಚಂದ್ರಯ್ಯ ಬಿ. ಎ., ಬಿ. ಎಲ್. ಎಂದು ಕಾಣುತ್ತದೆಯೇ ವಿನಹ-ಅಡ್ವಕೇಟ್ ಎಂದು ಬರಹ ಕಾಣಿಸುವುದಿಲ್ಲ. ಅಲ್ಲದೆ ವಕೀಲಿ ತೆಗೆದುಕೊಂಡು ಮಾಡುವುದೇನು? ಮಂಗಳೂರಿನ ಹತ್ತೆಂಟು ವಕೀಲರ ಆಫೀಸು ಅವರಿಂದ ಬಾಡಿಗೆ ಪಡೆದುದು, ಅದರ ಇಮ್ಮಡಿ ಸಂಖ್ಯೆಯಲ್ಲಿ ವಕೀಲರು ಅವರಿಗೆ ಋಣಿಗಳು, ಅವರೆಲ್ಲ ತಮ್ಮ ಆಸ್ತಿಯನ್ನು ಇವರಿಗೆ ಅಡವು ಮಾಡಿಕೊಟ್ಟು ನಿಶ್ಚಿಂತರಾಗಿದ್ದಾರೆ. ಹೇಗೆಂದರೂ ಬಾಡಿಗೆ ಬಡ್ಡಿಗಳೆಂದೇ ವರ್ಷಕ್ಕೆ ನಾಲ್ಕಾರು ಸಾವಿರವಾದರೂ ಇರಬಹುದು ಎನ್ನುತ್ತಾರೆ.

ಮನೆಯಲ್ಲೋ? ಬರಿಯ ಇಬ್ಬರು ಮನೆಯವರೆಂಬವರ ನಾಸ್ತಿತ್ವದ. ವಯಸ್ಸಿನ ಅವರು; ಅದಕ್ಕಿಂತ ನಾಲ್ಕು ವರ್ಷ ಕಡಿಮೆಯ ಅವರ ಹೆಂಡತಿ—ಶ್ರೀಮತಿ ಜಾನಕಿ ರಾಮಚಂದ್ರಯ್ಯ, ಅವರ ಪಂಗಡ ಜಸ್ಟಿಸ್ ರಾಮೋಹನರ ಪಂಗಡ—ಅಂದರೆ 'ಬರ್ತ್ ಕಂಟ್ರೋಲ್' ಬಾಪಟ್ರಿನದು. ಗಂಡಹೆಂಡಿರಿಬ್ಬರೂ ಅದರ ಬಹಿರಂಗದ ಪ್ರಚಾರಕರು. ಅದರ ನಿದರ್ಶನವೋ ಎಂಬಂತೆ ಅವರಿಗೆ ಸಂತತಿಯೇ ಇಲ್ಲ. ಜಾನಕಿ ರಾಮಚಂದ್ರಯ್ಯನವರ ಪ್ರೀತಿಯೆಲ್ಲ 'ಕುಂಜುನಾಥ' ಎಂಬ ಸಾಕು ಹುಡುಗನ ಮೇಲೆ. ಜಾನಕಿ ರಾಮಚಂದ್ರಯ್ಯ ಮಹಿಳಾ ಸಭೆಯ ಅಧ್ಯಕ್ಷರು, ಲೇಡಿಸ್ ಕ್ಲಬ್ಬಿನ ಮಾಜಿ ಅಧ್ಯಕ್ಷರು, ಸ್ತ್ರೀ ಸಮಾಜದ ಕಾರ್ಯದರ್ಶಿಯರು, ಭಗಿನೀ ಸೇವಾಮಂಡಲದ ಕಾರ್ಯದರ್ಶಿಯರು, ಹೆರಿಗೆ ಆಸ್ಪತ್ರೆಯ ಆನರರಿ ಟ್ರಸ್ಟಿ, ಶಿಶುಸಂಗೋಪನಾಲಯದ ಆಶ್ರಯದಾತರು. ಈ ಯಾವ ಕಡೆಗಳಿಗೆ ಹೋದರೂ ಅವರ ಉಪನ್ಯಾಸದ ವಿಷಯ ಒಂದೇ. ಹೆರಿಗೆಗೆ ಬಂದ ತಾಯಂದಿರಿಗೆ ಮಿತಸಂತತಿಯನ್ನು ಕುರಿತು ಮಾತನಾಡುತ್ತಾರೆ, ಶಿಶುವಿಹಾರದ ದಾದಿಯರಿಗೂ ಅದನ್ನೇ ಹೇಳುತ್ತಾರೆ; ಹೆರಿಗೆ ಆಸ್ಪತ್ರೆಯ ಮಧ್ಯವಕ್ಷಿಯರಿಗೂ ಅದನ್ನೆ ಹೇಳುತ್ತಾರೆ, ಉಳಿದ ಸಭಾ ಸಮಾಜಗಳಲ್ಲೂ ಅದೇ ಸಂದೇಶ ಕೊಡುತ್ತಾರೆ. ಇವು ಪತ್ರಿಕೆಯಲ್ಲಿ ಬಂದಿವೆಯೋ ಇಲ್ಲವೋ ಎಂದು ನೋಡಿಕೊಳ್ಳುತ್ತಾರೆ. ಸ್ಥಳಿಕ ಪತ್ರಿಕೆಗಳು ಅವನ್ನು ಪ್ರಕಟಿಸುವ ತನಕ ಅವುಗಳ ಸಂಪಾದಕರ ಮನೆಗೆ ಕಾರಿನಲ್ಲಿ ಹೋಗಿ ಸತಾಯಿಸುತ್ತಾರೆ.

ಇವನ್ನು ಓದುವ, ಅವರ ಸಾಕುಮಗನೆಂಬಂಥ ಕುಂಜುನಾಥನು ಕೆಲವು ಬಾರಿ ವಿಸ್ಮಯಗೊಂಡು ಪ್ರತಿ ಸಂಕ್ರಾಂತಿಯ ದಿವಸಕ್ಕೂ—ನೆನಪುಮಾಡಿ 'ಅಮ್ಮ—ಗುಡ್ಡೆ ಗಂಗೆಗೆ ಕಾಯಿ ಕಳುಹಿಸಲಿಲ್ಲ' ಎನ್ನುತ್ತಾನೆ. ಕುಂಜುನಾಥನಿಗೆ ಗುಡ್ಡೆ ಗಂಗೆಯ ವಿಚಾರ ಗೊತ್ತು. ಅವಳಿಗೆ ಹರಕೆ ಹೊತ್ತವರು ಖಂಡಿತವಾಗಿ ತಾಯಂದಿರಾಗುತ್ತಾರಂತೆ. ಆದರೆ ಜಾನಕಿರಾಮಚಂದ್ರಯ್ಯನ ಉಪನ್ಯಾಸ ಬಲದಿಂದಲೋ ಏನೋ—ಅವಳು ಅವರಿಗೆ ಮಾತ್ರ 'ನಿಸ್ಸಂತಾನ' ಅನುಗ್ರಹಿಸಿದ್ದಾಳೆ.

ಹೆಂಡತಿ ಅಷ್ಟು ಉಗ್ರ ಮಿತಸಂತತಿಯ ಪ್ರಚಾರಕಳಾದರೆ, ಗಂಡ ಕಡಿಮೆಯವರಲ್ಲ-ಬಹಿರಂಗ ಭಾಷಣಗಳಲ್ಲಿ ದಿ. ದಿಗಂಬರರಾಯರ ವಿಚಾರ ಬಂದಾಗಲೆಲ್ಲ 'ಕೆಲವರು ಮುದಿ ವಯಸ್ಸಿನಲ್ಲಿ ತಂದೆಗಳಾಗುವುದುಂಟು. ಇದರಿಂದ ಪ್ರಪಂಚಕ್ಕೆ ಡನ್ಸ್‌ಸ್ ಅಲ್ಲದೆ ಬೇರೆ ಯಾರೂ ಹುಟ್ಟಲಾರರು.' ಎನ್ನುತ್ತಾರೆ. ಇದರಿಂದ ದಿಗಂಬರರಾಯರ ಮೇಲೆ ಅವರಿಗಿರುವ ಪ್ರೀತಿಯೂ, ಮಿತಸಂತತಿಯ ಮೇಲೆ ಅವರಿಗಿರುವ ವಿಶ್ವಾಸವೂ ಏಕಕಾಲದಲ್ಲಿ ವ್ಯಕ್ತವಾಗುತ್ತದೆ.

ಸಾರ್ವಜನಿಕ ಕಾರ್ಯ ಯಾವುದೇ ಇರಲಿ ಗಂಡಹೆಂಡಿರಿಬ್ಬರೂ ಅನ್ನ ನೀರು ಬಿಟ್ಟು ದುಡಿಯುತ್ತಾರೆ. ಬಿಸಿಲಿನ ಮಳೆಯನ್ನೆ ಸಹಿಸಿಕೊಂಡು, ಇಬ್ಬರೂ ಹಿಡಿಸಲಾರದ ಬೇಬಿ ಕಾರಿನಲ್ಲಿ ಕುಳಿತು, ಸಭೆಗಳಿಗೆ ಹೋಗಿ, ಅರ್ಧ ಸೆಂಟಿ ತಡವಾದರೂ ಲೋಪವಾಗದಂತೆ, ಹಾಜರಿ ಕೊಟ್ಟು ಬರುತ್ತಾರೆ. ಈಗಂತೂ ಅವರು ಇಲ್ಲದೆ ಯಾವ ಸಭೆಯೂ ಪೂರ್ಣವಾಗುವಂತಿಲ್ಲ.

ಇದನ್ನು ತಿಳಿದೋ ಏನೋ—ಮೊನ್ನೆ ಹೊಸತಾಗಿ ಬಂದ ಮಾನ್ಯ ಕಲೆಕ್ಟರರು (ಹಿಂದಿನವರು ಅವಮಾನ್ಯರೆಂದು ತಿಳಿಯಬಾರದು). ಮೈಸೂರಾಯರ 'ಬೀಜದ ಹೋರಿ ಸಂಸ್ಥೆಗೆ-ನೀವು ಧನಸಹಾಯ ಮಾಡಬೇಕೆಂದು' ವಂತಿಗೆ ಪಟ್ಟಿಯನ್ನು ಕಳುಹಿಸಿದರು. ಅವರ ಪೇದೆ ಸಯ್ಯದು ರಾಯರಿರುವ ವೇಳೆ ನೋಡಿ ಮನೆಗೆ ಹೋದನು. ಬಂದೊಡನೆಯೇ ರಾಮಚಂದ್ರಯ್ಯ 'ಏನೋ—ಸಯ್ಯದು, ಈಗಿನ ದೊರೆಗಳು ಹೇಗೆ?' ಎಂದು ಕೇಳಿದರು. 'ಅವರು ಯಾವಾಗಲೂ ನಿಮ್ಮ ವಿಚಾರವನ್ನು ಕೇಳುತ್ತಿದ್ದಾರೆ, ತಾವಾದರೂ ನೋಡಲಿಕ್ಕೆ ಬರಬೇಕು ಅನ್ನುತ್ತಿದ್ದರು'—ಎಂದು ಸಯ್ಯದು ವಂತಿಗೆ ಪಟ್ಟಿಯನ್ನು ಅವರ ಮುಂದಿರಿಸಿದನು. ಬೀಜದ ಹೋರಿಗಳನ್ನು ಮಂಗಳೂರಿನ ಪ್ರತಿ ವಾರ್ಡಿನಲ್ಲಿರಿಸುವರೇ ಹಿಂದೆ ಒಂದು ಸಂಘವಾಗಿದೆಯೆಂದು ಅವರಿಗೆ ತಿಳಿಯಿತು. ಆ ಪಟ್ಟಿ ನೋಡಿ ರಾಮಚಂದ್ರಯ್ಯನವರು ಉಗ್ರ ನರಸಿಂಹಾವತಾರವಾದರು.

'ನನ್ನ ಹತ್ತಿರ ಬರುವುದೇತಕ್ಕೆ? ಕಮಿಟಿ ಗಿಮಿಟಿಯೆಲ್ಲ ಮುಗಿದುಬಿಟ್ಟಿದೆ. ಕಮಿಟಿಯಾಗುವಾಗ ನಾವು ಸತ್ತಿರಲಿಲ್ಲ. ಯಾವಾಗ ಆಯಿತಂತೆ ಈ ಕಮಿಟಿ...? ಪೇಪರಿನಲ್ಲಿ ಬೀಳುವಾಗಲೇ ಇದು ಖಾಸಗಿ ವ್ಯಾಪಾರ ಅಂದಿದ್ದೆ. ಇಷ್ಟು ಇದು ಎಲ್ಲ ಆ ಮುದಿ ದಿವಾನನ ಕಾರುಭಾರ.'

ನೋಡು—ನಿಮ್ಮ ದೊರೆಗಳಿಗೆ ಹೇಳು. ಕಾಸು ಬಿಡಿಸದ ದಿಗಂಬರರಾಯ ಆ ಸಮಿತಿಗೆ ಅಧ್ಯಕ್ಷನಾದರೆ ಅವನು ನಮ್ಮ ಮನೆಗೆ ಬೇಡಲಿಕ್ಕೆ ಬರಬೇಕು. ಕಲೆಕ್ಟರರು ಈ ಪಟ್ಟಿ ಕಳುಹಿಸುವ ಅವಶ್ಯವಿಲ್ಲ. ಅವನಿದ್ದ ಕಮಿಟಿಗೆ ಕಾಸೊಂದನ್ನು ಕೊಡುವ ಹಾಗಿಲ್ಲವೆಂದು ನಾನು ಯಾವತ್ತೋ ಪ್ರತಿಜ್ಞೆ ಮಾಡಿದ್ದೆ'—ಎಂದುಬಿಟ್ಟರು.

ಇವರ ಉಗ್ರವನ್ನು ನೋಡಿ ಸಯ್ಯದು ಏನು ಸಮಾಧಾನಪಡಿಸಿದರೂ ವ್ಯರ್ಥ. 'ಖಾವಂದರು ತಿಳಿಯದೆ ಮಾಡಿದರೆಂದು ಕಾಣುತ್ತದೆ; ಸ್ವಾಮಿ ಇದು ಕ್ಲಾರ್ಕರ ಪಹಿವಾಟು. ಅವರಿಗೆ ನಾಲ್ಕು ಸಿಂಗಲ್ ಕೊಟ್ಟರೆ ಯಾರ ಕಡೆಗೂ ತಿರುಗುತ್ತಾರೆ. ಅಲ್ಲವಾದರೆ ಹೊಸಬರಿಗೆ ಈ ಊರಲ್ಲಿ ಸಾಚಾ ಜನ ಯಾರು, ಪಡಪೋಶಿ ಯಾರು ಎಂದು ಹೇಳುವುದು ಯಾರ ಕೆಲಸ?' ಎಂದು ಕ್ಲಾರ್ಕರನ್ನು ದೂರಿ, ಇವರನ್ನು ಬಲುವಾಗಿ ಉಪಚರಿಸಿದನು. ಆದರೂ ಬಂದ ಕೆಲಸ ವ್ಯರ್ಥವಾಯಿತು.

ಅದೇ ಸಂಜೆ ರಾಮಚಂದ್ರಯ್ಯನವರ ಮುಖ್ಯಾಗಿ 'ಗ್ರಾಮ ಸಂಜೀವಿನಿ ಸಂಸ್ಥೆ—ಯಾನೆ ರೂರಲ್ ಡೆವಲಪ್‌ಮೆಂಟ್ ಸ್ಕೀಮ್'—ಎಂಬ ಸಭೆ ನಿರ್ಮಾಣವಾಯಿತು. ಅವಾಗಲೇ ಆಮಂತ್ರಣ ಮುದ್ರಿಸಿ, ಪುರ ಪ್ರಮುಖರನ್ನು ಬರಮಾಡಿಕೊಂಡು ಕಾಫಿ ಕೊಟ್ಟು, ಈ ಸಂಸ್ಥೆ ಸ್ಥಾಪನೆಯಾಯಿತು. ಈ ಸಂಘಕ್ಕೆ ರಾಮಚಂದ್ರಯ್ಯನವರೇ ಅಧ್ಯಕ್ಷರು. ವಕೀಲ ಶ್ಯಾಮಸುಂದರರಾಯರೇ ಕಾರ್ಯದರ್ಶಿಯರು. ಸ್ವತಃ ಅಧ್ಯಕ್ಷರು ಆ ದಿನ ಮಂಗಳೂರು ಗ್ರಾಮ ಒಂದಕ್ಕೇನೆ ಏಳು ಬೀಜದ ಹೋರಿಗಳನ್ನು ತನ್ನ ಸ್ವಂತ ಖರ್ಚಿನಿಂದ ದಾನಮಾಡಲು ವಾಗ್ದಾನವಿತ್ತರು. ಗ್ರಾಮ ಸಂಜೀವಿನಿ ಸಭೆಯವರು ಅವುಗಳ ಸಾಕುವಿಕೆಗೂ, ನಿರ್ವಹಣೆಕ್ಕೂ ಲಾಯವಂತಿಗೆ ಹೊರಡಿಸಬೇಕೆಂದು ನಿಶ್ಚಯವಾಯಿತು. ಈ ವಾರ್ತೆ ಎರಡನೆಯ ದಿನದ ಮೆಯಿಲ್‌ನಲ್ಲಿ ಬಂದೊಡನೆ ನೋಡಿ ಕಲೆಕ್ಟರರು 'Who is this Ramachandrayya? Mr Digamber Rao never told me anything of him' ಎಂದರಂತೆ. ಆಗ ಅಲ್ಲಿ ಸಯ್ಯದು ಇದ್ದನಂತೆ. ಸಂಜೆ ಹೀಗೀಗಾಯಿತು ಎಂದು ಅವನೇ ರಾಮಚಂದ್ರಯ್ಯನಿಗೆ ವಾರ್ತೆ ಕೊಟ್ಟ. ಅತ್ತ ಕ್ಲಾರ್ಕರು ಅದೇ ವಾರ್ತೆಗೆ ಬಣ್ಣ ಸವರಿ, ರೂಪ ಅಳಿಸಿ ದಿಗಂಬರರಾಯರಿಗೂ ತಿಳಿಸಿದರು.

ದಿಗಂಬರರಾಯರಿಗೆ ಸಿಟ್ಟು ಬಂದರೆ ಜನರನ್ನು ಕರೆದು ಕರೆದು ಮಾತನಾಡುವ ಶೀಲ. ಹಾಗಾಗಿ ಅವರು ಆ ದಿನ ಬಡ ವಿದ್ಯಾರ್ಥಿ ವಾಚನಾಲಯವನ್ನು ತೆರೆಯಲು ಹೋದವರು 'ನಮ್ಮ ಊರಿನ ಜನರನ್ನು ಬಹಳ ನಂಬಬೇಡಿ. ಅವರು ಜನರಿಗೆ ಸಂತತಿ ಬೇಡ, ಜಾನುವಾರುಗಳಿಗೆ ಸಂತತಿ ಬೇಕು ಎನ್ನುವವರು. ಮಂಗಳೂರು ಜನರಿಂದ ತುಂಬುವುದರ ಬದಲು ಜಾನುವಾರುಗಳಿಂದ ತುಂಬಬೇಕೆಂದು ಅವರ ಹಟ'—ಎಂದು ಹೇಳಿದರು. ಈ ವಾರ್ತೆಯು ಕೂಲಂಕಷವಾಗಿ, ಸ್ಥಳಿಕ ಉಜ್ವಲ ವಾರಪತ್ರಿಕೆಯಾದ 'ದೇಶವೀರ'ದಲ್ಲಿ ಪ್ರಕಟವಾಯಿತು.

ರಾಮಚಂದ್ರಯ್ಯನವರು ಬಲು ಹಟವಾದಿಗಳು. ಕಲೆಕ್ಟರರು ತಮ್ಮ ಮನೆಗೆ ಬರುವ ತನಕ ತಾನು ಅವರನ್ನು ಕಾಣುವುದಿಲ್ಲವೆಂದು ಕುಳಿತುಬಿಟ್ಟರು. ಹಾಗೆಯೇ ಕೆಲವು ದಿವಸಗಳ ಪತ್ರಿಕೆಗಳಲ್ಲಿ ಮಿ| ಮತ್ತು ಮಿಸೆಸ್ ರಾಮಚಂದ್ರಯ್ಯರುಗಳ ವಿಚಾರ ಓದಿ ಓದಿ, ಇವರು ಗಣ್ಯರಾದ ವ್ಯಕ್ತಿಗಳೆಂದು ಕಲೆಕ್ಟರರಿಗೆ ತಿಳಿಯಿತು. ಅಲ್ಲದೆ ಮೂರು ತಿಂಗಳಾದರೂ ಅವರ ಬೀಜದ ಹೋರಿ ಸಂಘ ಮಾತನಾಡಿರಲಿಲ್ಲ. ಆ ಸಂಘ ಬಹಳ ಹಿಂದೆಯೇ ಜನ್ಮತಾಳಿತ್ತು. ಈಗ ಅದರ ವಾರ್ಷಿಕ ಉತ್ಸವ ನಡೆಯಬೇಕು. ಸಂಘದ ಸದಸ್ಯರು ಒಂದೊಂದು ಹೋರಿಯನ್ನು ಕ್ರಯಕ್ಕೆ ಕೊಂಡಾಯಿತು. ಅವುಗಳ ಸಾಕಣೆಗೆ ಸಾಕಷ್ಟು ಬಂಜರು ಭೂಮಿ ಪಡೆದಾಯಿತು. ಒಬ್ಬಿಬ್ಬರು ಹೋರಿಗಳನ್ನು ಸಾಕುವವರಿಲ್ಲದೆ ಮಾರಿಯೂ ಆಯಿತಂತೆ. ಆದರೂ ವಾರ್ಷಿಕೋತ್ಸವಮಾಡುವವರಿಲ್ಲ. ದಿಗಂಬರರಾಯರಿಗೆ ಒಂದು ಭೀತಿ—ಅವರು ಯಾವ ಸಭೆಯ ವಾರ್ಷಿಕೋತ್ಸವ ಮಾಡುವುದಕ್ಕೂ ಮೊದಲು, ಅದರಲ್ಲಿ ತಮ್ಮ ಸ್ಥಾನ ಉಳಿಯುವುದೆಂದು ಖಾತ್ರಿಪಡಿಸಿಕೊಳ್ಳದೆ ಸುಮ್ಮನೆ ಯಾರ್ಯಾರು ದುಡಿಯುವುದು; ಯಾರ್ಯಾರಿಗೆ ಹೆಸರು ಆಗಲು ಬಿಡುವವರಲ್ಲ. ಆದುದರಿಂದ ತರುಣ ಬೀಜದ ಹೋರಿ ಸಂಘ ಕೂಡ ಇಲ್ಲ. ಕಲೆಕ್ಟರರು ಅದನ್ನು ಕರೆಯಿಸುವ ಸಾಧನೆಯನ್ನೂ ಮಾಡಲಿಲ್ಲ.

ನಡುವೆ ಮೇಲಿನಿಂದ 'ಗ್ರಾಮ ಕೈಗಾರಿಕೆ'ಗಳ ಅಭಿವೃದ್ಧಿಯನ್ನು ಏಕ್‌ದಂ—ಸಾಧಿಸಬೇಕೆಂದು ಸರಕಾರಿ ಸರ್ಕ್ಯುಲರ್ ಬಂದಿತು. ಯಥಾಪ್ರಕಾರವಾಗಿ ಇದಕ್ಕೊಂದು ಕಮಿಟಿ ಬೇಡವೇ? ಮಾನ್ಯ ಕಲೆಕ್ಟರರು ಸಭೆ ಕರೆದರು. ಕಲೆಕ್ಟರರಿಗೆ ದಿಗಂಬರರಾಯರ ಮೇಲೆ ಬೇಸರ ಬಂದಿದೆ ಎಂದು ಕ್ಲಾರ್ಕರಿಗೆ ತಿಳಿದಿತ್ತು. ಆದುದರಿಂದ ಅವರು ದಿನ ನಿಶ್ಚಯಿಸುವಾಗಲೇ, ದಿಗಂಬರರಾಯರು ಅಧ್ಯಕ್ಷರಾಗಿರುವ ಒಂದು ಬ್ಯಾಂಕಿನ ಡೈರೆಕ್ಟರ ಚುನಾವಣೆ ನಡೆಯುವ ದಿನ ತಿಳಿದು, ಅದೇ ದಿನ—ಅದೇ ಘಂಟೆಗೆ ಈ ಸಭೆಯನ್ನೂ ಇರಿಸಿದರು. ಇವೆರಡೂ ಸಭೆಗಳು ಒಂದೇ ಕಾಲಕ್ಕೆ ಬಂದಿವೆಯೆಂದು ದಿಗಂಬರರಾಯರಿಗೆ ತಿಳಿದುದು ತಡವಾಯಿತು. ಅವರು ತೂಕ ಹಾಕಿ ಯೋಚಿಸಿ ಯೋಚಿಸಿ—ಬ್ಯಾಂಕು ಮೀಟಿಂಗಿಗೇನೆ ಹೋಗಲು ನಿರ್ಣಯಿಸಿದರು.

ರಾಮಚಂದ್ರಯ್ಯನವರಿಗೂ ಉಭಯಸಂಕಟದ ದಿನವದು. ಅವರೂ ಅದೇ ಬ್ಯಾಂಕಿನ ಡೈರೆಕ್ಟರರು. ಅದರ ಅಧ್ಯಕ್ಷರಾಗಬೇಕೆಂದು ಅವರೂ ಯತ್ನಿಸುತ್ತಿದ್ದರು. ಹಾಗಾಗಿ ಅವರು ಬಿಡದೆ ಬ್ಯಾಂಕಿಗೆ ಬಂದರು. ಆದರೆ ತಾವು ಬಾರದೆ ಹೋದರೂ ತಮ್ಮ ಸ್ಥಾನ ಲೋಪವಾಗಬಾರದೆಂದು ಮಿಸೆಸ್ ಜಾನಕಿರಾಮಚಂದ್ರಯ್ಯನವರನ್ನು ಕಲೆಕ್ಟರರು ಕರೆಯಿಸಿದ 'ಗ್ರಾಮ ಕೈಗಾರಿಕೆ' ಸಭೆಗೆ ಕಳುಹಿಸಿದರು. ಅಂದೇ ಪ್ರಥಮ ಬಾರಿಗೆ ಮಿಸೆಸ್। ಜಾನಕಿ ರಾಮಚಂದ್ರಯ್ಯನವರಿಗೂ ಮಾನ್ಯ ಕಲೆಕ್ಟರ್ ಗಿಲ್ಬರ್ಟರಿಗೂ ಭೇಟಿಯಾಯಿತು. ಗುಮಾಸ್ತರು ಜಾನಕಿಯಮ್ಮನವರ ವಿಚಾರವಾಗಿ ಅವರೊಡನೆ ಹೊಗಳಿ ಹೇಳಿದರು, ಅವರ ಯಜಮಾನರ ಪ್ರಶಂಸೆ ಬಹಳವಾಗಿ ನಡೆಯಿತು. ಜಾನಕಿಯಮ್ಮನವರು ತಮ್ಮ ಪತಿಯ ಪರವಾಗಿ ಕ್ಷಮಾಪಣೆ ಕೇಳಿದರು. ಆ ಬಳಿಕ, ಉಳಿದ ಸದಸ್ಯರು ತುಸು ತಡವಾಗಿ ಬಂದ ಕಾರಣದಿಂದ, ಸಮಯವನ್ನು ಮಿ| ಗಿಲ್ಬರ್ಟರೊಂದಿಗೆ ಹರಟೆಯಲ್ಲಿ ಕಳೆದರು. ಹರಟೆಯೆನ್ನಬಹುದಾದರೂ ಮುಖ್ಯ ವಿಷಯ—'ಬರ್ತ್ ಕಂಟ್ರೋಲ್' ಆಗಿತ್ತು. ಪ್ರಾಯಶಃ ಮಿ| ಗಿಲ್ಬರ್ಟರು ಮಾಸ್ಟರ್ ಗಿಲ್ಬರ್ಟರೆಂದು ಮಿಸೆಸ್। ಜಾನಕಿ ರಾಮಚಂದ್ರಯ್ಯನವರಿಗೆ ತಿಳಿದಿರಲಿಲ್ಲವೆಂದು ಕಾಣುತ್ತದೆ. ಅಂತು ಇಂಥ ಮಾಡರ್ನ್ ಮೈಂಡೆಡ್ ಮಹಿಳೆಯ ಸಲುವಾಗಿ ಗಿಲ್ಬರ್ಟರು ಹರ್ಷಪಟ್ಟರು.

ಆ ದಿನ ಆರು ಘಂಟೆಗೆ ಇರಿಸಿದ ಸಭೆಯು ಆರೂವರೆಗೆ ಕ್ಲಪ್ತವಾಗಿ ತೊಡಗಿತು. ಬಲು ಮಂದಿ ಧುರೀಣರು ಬಂದಿದ್ದರು. 'ಗ್ರಾಮ ಕೈಗಾರಿಕೆ ಸಂಘ' ಅಂದೇ ಸ್ಥಾಪನೆಯಾಯಿತು. ಬಾರದೆ ಹೋದರೂ, ಸರ್ವಾನುಮತದಿಂದ, ರಾಮಚಂದ್ರಯ್ಯನವರನ್ನೆ ಉಪಾಧ್ಯಕ್ಷರನ್ನಾಗಿ ಆರಿಸಿದರು. ಅಧ್ಯಕ್ಷರು ಕಲೆಕ್ಟರರೇ ಆಗಬೇಕೆಂಬ ಸೂಚನೆ ಸರಕಾರದಿಂದಿತ್ತು. ಮಿಸೆಸ್ ಜಾನಕಿ ರಾಮಚಂದ್ರಯ್ಯನವರು—ಜೊಯಿಂಟ್ ಕಾರ್ಯದರ್ಶಿಯರಾಗಿದ್ದರು. ಅಂತು ಆ ದಿನದ ಸಭೆಯಲ್ಲಿ ಏನಾಗದಿದ್ದರೂ, ದಿಗಂಬರ ರಾಯರ ಹೆಸರು ದೂರವಾಯಿತು.

ಇತ್ತ 'ಶ್ರೀವನಿತಾ ಬ್ಯಾಂಕು' ಸಭೆಯು ದಿಗಂಬರರಾಯರಿಗೆ ಪ್ರತಿಕೂಲವಾಗಿ ಪರಿಣಮಿಸಿತು. ಅವರು ಡೈರೆಕ್ಟರರಾಗಿ ಆರಿಸಿ ಬಂದರು; ಆದರೆ ಬ್ಯಾಂಕು ಅಧ್ಯಕ್ಷತನ ರಾಮ

[೧೫ನೇ ಪುಟವನ್ನು ನೋಡಿರಿ],

ಜಪಾನಿನ ಮರ್ದನದಿಂದ ★ ಚೈನವು ಕಿಡಿ ಕಾರುತಿದೆ!

ದರ್ಪದಿಂದ ರಾಷ್ಟ್ರವನ್ನು ಆಳುವುದು ಸಾಧ್ಯವೆ?

ಚೈನದ ಒಂದು ಕರುಣಾಪೂರ್ಣ ಚಿತ್ರ!

ಬಲಾತ್ಕಾರದಿಂದ, ದರ್ಪದಿಂದ, ಪಶುಶಕ್ತಿಯಿಂದ ರಾಷ್ಟ್ರಗಳನ್ನು ತುಳಿದು ಹಿಡಮಾಡುವ ಕೆಲಸವನ್ನು ಇಂದು ಜರ್ಮನ್, ಇಟಲಿ, ಜಪಾನು ಮೊದಲಾದ ರಾಷ್ಟ್ರಗಳು ಕೈಕೊಂಡಿವೆ ಆದರೆ ಆದರಿಂತ ರಾಷ್ಟ್ರಗಳ ಜನರಲ್ಲಿರುವ ರಾಷ್ಟ್ರೀಯತೆಯ ಉಜ್ವಲ ಅಭಿಮಾನವನ್ನು ಯಾರಿಗಾದರೂ ಕೊಂದುಬಿಡಲು ಸಾಧ್ಯವೇ? ಇದಕ್ಕೆ ಚರಿತ್ರೆಯೇ ನಮಗೆ ಉತ್ತರವನ್ನು ಕೊಡುತ್ತಿದೆ.

ರಾಷ್ಟ್ರದ ಪ್ರಜೆಗಳ ಹೃದಯವನ್ನು ಪ್ರೇಮದಿಂದ ಮತ್ತು ನ್ಯಾಯದಿಂದ ಸ್ವಾಧೀನಪಡಿಸದ ವಿನಹ ಅಲ್ಲಿ ಶಾಂತಿಯು ನೆಲೆಗೊಳ್ಳಲಾರದು. ಇಟಲಿಯು ಅಬಿಸೀನಿಯವನ್ನು ಕ್ರೂರ ನೀತಿಯಿಂದ ಗೆದ್ದು ವಿಜೃಂಭಿಸುತ್ತಿದೆ ಆದರೆ ಅಲ್ಲಿ ಇಟಲಿಯು ಅಬಿಸೀನಿಯದ ಸ್ವಾತಂತ್ರ್ಯ ವೀರರಿಂದ ಪಡುತ್ತಿರುವ ಬವಣೆಯನ್ನು ಗ್ರಹಿಸಿದರೆ ಎಷ್ಟರ ತನಕ ಈ ರೀತಿ ನಡೆದೀತೆಂದು ಸಂಶಯವಾಗುತ್ತದೆ. ಇದೇ ಅವಸ್ಥೆಯನ್ನು ನಾವು ಜೆಕೊಸ್ಲೊವೇಕಿಯಾ, ಚೈನಾ, ಸ್ಪೈನುಗಳಲ್ಲಿಯೂ ಕೇಳುತ್ತೇವೆ

ಜಪಾನು ಬಲಪ್ರದರ್ಶನದಿಂದ ಸ್ವಾಧೀನಪಡಿಸಿದ ಸ್ಥಳಗಳಲ್ಲಿ ಚೈನಿಯರು ಯಾವ ರೀತಿಯಿಂದ ವರ್ತಿಸುತ್ತಿರುವರೆಂಬ ವಿಚಾರವಾಗಿ ಎಗ್ನೆಸ್ ಸ್ಮೆಡ್ಲಿ ಎಂಬಾಕೆಯು ಕರುಣಾಪೂರ್ಣವಾದ ವರ್ಣನೆಯೊಂದನ್ನು ಕೊಡುತ್ತಾಳೆ ಈ ಲೇಖಕಿಯು ಯುದ್ಧರಂಗದಲ್ಲಿ ನಿಂತು—ಹಲವೊಮ್ಮೆ ತನ್ನ ಜೀವನವನ್ನೂ ಕೂಡ ಮೃತ್ಯುವಿನ ಬಾಯಿಯಿಂದ ತಪ್ಪಿಸಿಕೊಂಡು ಬರಬೇಕಾದರೆ ಸಂಕಷ್ಟಗಳನ್ನು ಅನುಭವಿಸಿ—ಈ ಸಂಗತಿಗಳನ್ನು ಅರಿಸಿರುತ್ತಾಳೆ

ವುಹು ನಗರದ ಪಶ್ಚಿಮದಲ್ಲಿ ಯಾಂಗ್ಸಿ ನದಿಯ ದಡದಲ್ಲಿರುವ ನಾಂಚಾಂಗ್ ಎಂಬ ಜಿಲ್ಲೆಯನ್ನು ಜಪಾನೀಯರು ಆಕ್ರಮಿಸಿದ್ದಾರೆ ಅಲ್ಲಿನ ಚೈನಿಯರು ಸ್ವಾತಂತ್ರ್ಯವೀರರು—ಅದನ್ನು ತಮ್ಮ ಕೈಬಿಟ್ಟ ಹೊರಪ್ರದೇಶವೆಂದು ದುಃಖಪೂರ್ಣ ದೃಷ್ಟಿಯಿಂದ ನೋಡುತ್ತಾರೆ ಕಳೆದ ಡಿಶಂಬರದಲ್ಲಿ ಇದು ಚೈನೀಯರ ಕೈಬಿಟ್ಟು ಹೋಗಿತ್ತು. ಜಪಾನೀಯರು ನಗರವನ್ನು ಪ್ರವೇಶಿಸಿದಂತೆ ಭಯಂಕರ ಮಾನುಷವಧೆಯನ್ನೇ ಆರಂಭಿಸಿದರು ಹೆಂಗಸರನ್ನು ನಿರ್ದಯರಾಗಿ ಕೊಂದರು ಜಪಾನೀಯರು ಮುಂದುವರಿಯುವ ದಾರಿಯಲ್ಲಿರುವ ಹಳ್ಳಿಗಳಲ್ಲಿರುವ ಅನೇಕ ಮನೆಗಳು ಸುಡಲ್ಪಟ್ಟವು. ಲಕ್ಷಾಂತರ ಜನರು ಹಳ್ಳಿಗಳಿಂದ ತಮ್ಮ ವಸತಿಯನ್ನೇ ಬಿಟ್ಟು ಓಡಿಹೋದರು

ಈಗ ಜಪಾನು ಸೈನ್ಯವು ಐದು ಕಡೆಗಳಲ್ಲಿ ತಳವೂರಿದೆ ಆದರೆ ಇದರ ಸುತ್ತಾಗಿ ಚೈನಾದ ಗೋರಿಲ್ಲಾ ಸೈನಿಕರು ಹೊರಬಂದು ಜಪಾನೀಯರ ತಲೆಯನ್ನು ಕತ್ತರಿಸುವ ಸಲುವಾಗಿ ಸಿದ್ಧರಾಗಿ ನಿಂತಿದ್ದಾರೆ. ಚೈನೀಯರು ಸಂಪೂರ್ಣವಾಗಿ ಯುದ್ಧ ಸಾಮಾಗ್ರಿಗಳಿಂದ ಸನ್ನದ್ಧರಾಗಿದ್ದಾರೆ—ಅದರಲ್ಲಿ ಕೆಲವು ಯುದ್ಧ ಸಾಮಾಗ್ರಿಗಳು ಜಪಾನೀಯರಿಂದಲೇ ಕಸಿದಂತವುಗಳು. ಚೈನೀಯರ ಸೈನ್ಯವೆಂದರೆ ಸಂಪೂರ್ಣ ಚೈನದ ದೇಶೀಯರೆಲ್ಲರೂ ಅದರಲ್ಲಿದ್ದಾರೆ. ಹಾಗೆ ಇಂದು ಚೈನದ ಪ್ರತಿಯೊಬ್ಬನೂ ರಾಷ್ಟ್ರಕ್ಕಾಗಿ ಸಿಪಾಯಿಯಾಗಿ ಹೆಗಲಲ್ಲಿ ಬಂದೂಕುಗಳನ್ನು ಹೊತ್ತು ತಿರುಗಾಡುತ್ತಾ ಅನ್ಯಾಯದಿಂದ ಆಕ್ರಮಿಸಿದ ಜಪಾನೀಯರನ್ನು ಹೊಡೆದಟ್ಟುವ ಕೆಲಸದಲ್ಲಿ ಹೆಮ್ಮೆಪಡುತ್ತಾನೆ. ಮೈಲೊಂದರ ದಾರಿಯಲ್ಲಿ ಒಬ್ಬ ಚೈನದ ಯೋಧನನ್ನು ಕಾಣದೆ ಇರಲು ಸಾಧ್ಯವಿಲ್ಲ. ಒಮ್ಮೆ ಒಬ್ಬ ೫೦ ವರ್ಷ ಪ್ರಾಯದ ರೈತನು ಹೀಗೆಂದು ಪ್ರಶ್ನಿಸಲ್ಪಟ್ಟನು. "ಈ ಸಿಪಾಯಿ ಜೀವನವು ಹೇಗೆ ಒಗ್ಗುತ್ತದೆಯೆ?" ಅದಕ್ಕೆ ಅವನು ಈ ರೀತಿಯಿಂದ ಉತ್ತರ ಕೊಟ್ಟನು—"ಈ ಜೀವನವು ನನಗೆ ಆನಂದ ಯಾ ಉದ್ವೇಗಕರವೂ ಆಗಿದೆ. ನಾನು ದಿನನಿತ್ಯವೂ ನನ್ನ ಹೊಲದ ಕೆಲಸವನ್ನೂ ಈ ಸಿಪಾಯಿಯ ಜೀವನವನ್ನೂ ಮಾಡುತ್ತಿದ್ದೇನೆ. ನನ್ನ ಜೀವನದಲ್ಲಿ ಇಷ್ಟು ಸಂತೋಷಕರವಾದ ದಿನಗಳು ನನಗೆ ಒದಗಲೇ ಇಲ್ಲ" ಹೀಗೆಂದು ಆತನು ಆನಂದದಿಂದ ಉಬ್ಬುತ್ತಾ ಹೇಳಿದನೆಂದು ಆ ಲೇಖಕಿಯು ಬರೆಯುತ್ತಾಳೆ

"ಜಪಾನೀಯರು ಆಕ್ರಮಿಸಿ ಬಂದಂತೆ ಚೈನದ ಅನೇಕರು ತಮ್ಮ ತಲೆಯಲ್ಲಿ ಸಾಧ್ಯವಿದ್ದ ಸಾಮಾಗ್ರಿಗಳನ್ನು ಹೊತ್ತುಕೊಂಡು ದೂರದ ಸ್ಥಳಗಳಿಗೆ ಹೋದರು ಪ್ರಾಚೀನ ಪ್ರಾರ್ಥನಾಲಯಗಳಲ್ಲಿ ಒಂದೊಂದರಲ್ಲಿ ನೂರಕ್ಕೆ ಮಿಕ್ಕಿ ಜನರು ಒಟ್ಟಾಗಿ ವಾಸಮಾಡುತ್ತಾರೆ. ಅವರು ಮನೆಯಿಂದ ಮನೆಗೆ ಹೋಗಿ ಭಿಕ್ಷೆಬೇಡಿ ಜೀವನ ನಡೆಸುತ್ತಾರೆ ಆದರೆ ತಮ್ಮ ಕಳೆದು ಹೋದ ಪ್ರದೇಶಗಳ ಸಲುವಾಗಿ ವೀರೋದಾರವೆತ್ತುತ್ತಾರೆ ಮುಂದೊಂದು ದಿನ ಜಪಾನಿಯರ ಬೆನ್ನು ಮುರಿದು, ತಮ್ಮ ನ್ಯಾಯವಾದ ಮನೆಗಳನ್ನು ಹೊಕ್ಕು ಸುಖವಾಗಿ ವಾಸಿಸಿ ತಮ್ಮ ಹೊಲಗದ್ದೆಗಳಲ್ಲಿ ಪುನಃ ಕೆಲಸವನ್ನು ಆರಂಭಿಸುವ ಆಶೆಯನ್ನು ಅವರು ಕಟ್ಟಿಕೊಂಡಿದ್ದಾರೆ ಇಂದಿಗೆ ನಾಲ್ಕು ತಿಂಗಳಿಂದ ಹೊರಗಟ್ಟಲ್ಪಟ್ಟ ಅವರು ತಿರಿಗಿ ಆ ಸ್ಥಳಗಳಿಗೆ ಬರಲು ಸಾಧ್ಯವಿಲ್ಲದಂತೆ ಅವರ ನೊಡಲಿನ ಮನೆಗಳನ್ನು ಸುಟ್ಟು, ಅವರ ಕೃಷಿಗೆ ಸಾಧನವಾದ ಸಕಲ ಉಪಕರಣಗಳನ್ನು ಸುಟ್ಟು ಜಪಾನೀಯರು ಹೇಳಲು ಅಸಾಧ್ಯವಾದಷ್ಟು ಉಪದ್ರವಪಡಿಸಿದ್ದಾರೆ - ಇಂದು ಅವರು ತಮ್ಮ ಕೈಬೆರಳುಗಳಲ್ಲಿ ರಕ್ತ ಸುರಿಸಿ ಹೊಲವನ್ನು ಕೆದರಿ ಬೀಜಬಿತ್ತಿ ಉಣ್ಣಬೇಕಾಗಿದೆ ಒಂದು ಜನವಾಗಲಿ, ಬೆಳೆಯಾಗಲಿ, ಹಣವಾಗಲಿ, ಮನೆಯಾಗಲಿ ಅವರ ಪಾಲಿಗೆ ಇಲ್ಲವಾಗಿದೆ.

ರಸ್ಯ ಜಪಾನ ಸಂಘರ್ಷ ★ ಜಪಾನಿಗೆ ಬ್ರಿಟನಿನ ನೋಟು

ಕುಮಿಟಾಂಗ ಉಪಾಧ್ಯಕ್ಷರ ಕೈದಿನ ವಾರಾಂಟು

ಮಂಚುಕುವೋ ಮತ್ತು ಮಂಗೋಲಿಯ ಗಡಿಗಳಲ್ಲಿ ರಸ್ಯ ಜಪಾನ ಸಂಘರ್ಷ ಎಂದಿನಂತೆ ನಡೆದು ಇದೆ ಆಗಾಗ ಆಕ್ರಮಣ ಪ್ರತಿ ಆಕ್ರಮಣಗಳಾಗುತ್ತಿರುವುವು ಕಳೆದ ವಾರ ನಡೆದ ಇಂಥ ಒಂದು ಆಕ್ರಮಣದಲ್ಲಿ ಅನೇಕ ಮಂದಿ ಗಾಯಪಟ್ಟರು; ಕೆಲವರು ಮೃತರಾದರು

ಜಪಾನಿನ ದೋಷಾರೋಪಣೆ

ಚೀನಸಮುದ್ರದಲ್ಲಿ ಹಾರಾಡುತಿದ್ದ ಜಪಾನಿನ ಒಂದು ಯುದ್ಧವಿಮಾನವನ್ನು ಬ್ರಿಟಿಷ ಯುದ್ಧನಾವೆಯೊಂದು ಗುಂಡು ಹೊಡೆಯಿತೆಂದು ಜಪಾನು ಆಕ್ಷೇಪಿಸಿದೆ ಆದರೆ ಬ್ರಿಟನು ಇದನ್ನು ಅಲ್ಲಗಳೆದು ಜಪಾನಿನ ವಶವಾದ ಚೀನೀ ಪ್ರದೇಶದಲ್ಲಿ ಬ್ರಿಟಿಷ ಆಸ್ತಿಪಾಸ್ತಿಗಳಿಗೆ ರಕ್ಷಣೆ ದೊರೆಯಬೇಕೆಂದೂ, ಬ್ರಿಟಿಷರ ವಿರುದ್ಧ ಅಪಪ್ರಚಾರವು ನಿಲ್ಲಬೇಕೆಂದೂ, ಬ್ರಿಟಿಷರ ಗಿರಣಿಗಳಲ್ಲಿ ಕೆಲಸಮಾಡುವ ಚೀನಿಯರ ಮೇಲೆ ಕೈಮಾಡಕೂಡದೆಂದೂ ಜಪಾನಿಗೆ ಒಂದು ನೋಟನ್ನು ಕೊಟ್ಟಿದೆ ಜಪಾನು ಕೈದುಮಾಡಿದ ಇಬ್ಬರು ಮೂವರು ಬ್ರಿಟಿಷರ ಆಸ್ಪತ್ರೆಯಲ್ಲಿ ಮೃತರಾಗಿರುವರ ಅದರ ವಿಚಾರಣೆಯಾಗಬೇಕೆಂದೂ ಬ್ರಿಟನು ತಿಳಿಸಿದೆ ಚೀನದಲ್ಲಿ ಬ್ರಿಟನ ಜಪಾನ ದ್ವೇಷವು ಹೆಚ್ಚುತ್ತಲಿರುವುದು

ಅವರು ಪಲವಾರು ಕರಕು ಬಟ್ಟೆಗಳಿಂದ ತಮ್ಮ ಮೈಯನ್ನು ಬತ್ತಲೆಯ ನಾಚಿಕೆಯಿಂದ ಮುಚ್ಚಿಕೊಳ್ಳುತ್ತಾರೆ ಕೆಲವರು ಆರೋಗ್ಯವು ಕೆಟ್ಟು ನಿರಂತರ ರೋಗಿಗಳಾಗಿ ಹಾಸಿಗೆಹಿಡಿದು ಮೃತ್ಯುಮುಖದಲ್ಲಿ ಹೊರಳಾಡುತ್ತಿದ್ದಾರೆ ಮಕ್ಕಳು, ಹೆತ್ತ ತಾಯಂದಿರೂ ಅವ್ಯವಸ್ಥೆಯಲ್ಲಿ ಕಂಬನಿ ಸುರಿಸುತ್ತಿದ್ದಾರೆ ಎಷ್ಟೋ ಕುಟುಂಬ ಕುಟುಂಬಗಳೇ—ಮೊದಲು ಸುಖ ಭಾಗ್ಯದಲ್ಲಿ ಮೆರೆದವರು—ಇಂದು ನಿತ್ಯಭಿಕ್ಷೆಯನ್ನು ಬೇಡುತ್ತಿವೆ

ಅವರ ಹೃದಯದಲ್ಲಿ ಸ್ವಾತಂತ್ರ್ಯದ ಶಕ್ತಿಯು ಕಡಿಮೆಯಾಗಿಲ್ಲ ಇಂತಹ ಜನರನ್ನು ಆಳುವುದು ಸರ್ವದಾ ಮೂರ್ಖತನದಿಂದ ತುಳಿದು ಮೆರೆಯುವುದು ಜಪಾನಿಗೆ ಸಾಧ್ಯವೇ?

ಉಪಾಧ್ಯಕ್ಷರ ಮೇಲೆ ವಾರಾಂಟು

ಹಿಂದೆ ಕುಮಿಟಾಂಗ ಎಂಬ ಚೀನೀ ರಾಷ್ಟ್ರೀಯ ಮಹಾಸಭೆಯ ಉಪಾಧ್ಯಕ್ಷರಾಗಿದ್ದು ಚೀನೀಯರ ಹಿತಕ್ಕೆ ವಿರೋಧವಾಗಿ ಜಪಾನಿನೊಡನೆ ಒಡಂಬಡಿಕೆ ಮಾಡಿಕೊಳ್ಳಲಿಕ್ಕೆ ತಂತ್ರ ಮಾಡಿದರೆಂಬ ಆರೋಪಕ್ಕೆ ಗುರಿಯಾಗಿದ್ದ ವಾಂಗ್ ಚಾಂಗವೀ ಎಂಬವರನ್ನು ಕೈದುಮಾಡಲಿಕ್ಕೆ ಚೀನೀ ರಾಷ್ಟ್ರೀಯ ಸರಕಾರವು ವಾರಾಂಟು ಕೊಟ್ಟಿದೆ ವಾಂಗ್ ಚಾಂಗವೀಯವರನ್ನು ಸರಕಾರವು ಮೊದಲೇ ಪದಚ್ಯುತಮಾಡಿದೆ ಅವರು ಈಗ ಎಲ್ಲಿದ್ದಾರೆಂಬುದು ತಿಳಿದಿರುವುದಿಲ್ಲ

ಯುದ್ಧವಾರ್ತೆ

ಚೀನ ಜಪಾನ ಸಂಗ್ರಾಮದಲ್ಲಿ ಇತ್ತೀಚೆಗೆ ಚೀನಿಯರೇ ಗೆದ್ದ ಸಮಾಚಾರಗಳು ಒದಗಿವೆ ಜಪಾನಿಯರು ಕರ್ಕಶರೂಪರಾಗಿ ಅತ್ಯಾಚಾರಕ್ಕಾರಂಭಿಸಿರುವರು ಜೂನ್ ೯ರ ದಿನ ರಾತ್ರಿ ನಾಲ್ಕು ಸುತ್ತಲೂ ಕಗತಲೆಯು ಹರಡಿದ್ದಾಗ ೨೭ ಜಪಾನಿ ಯುದ್ಧವಿಮಾನಗಳು ಚುಂಗ್ ಕಿಂಗನ್ನು ಬಾಂಬು ಹಾಕಿ ಸುಟ್ಟುಬಿಟ್ಟವು ಚುಂಗ್ ಕಿಂಗ್ ವ್ಯಾಪಾರಿ ವಹಿವಾಟುಗಳಿಗೆ ಪ್ರಸಿದ್ಧವಾದ ಜಿಲ್ಲೆ ದೊಡ್ಡ ದೊಡ್ಡ ಅನೇಕ ವ್ಯಾಪಾರ ಮಳಿಗೆಗಳು ಭಸ್ಮೀಭೂತವಾದವು ಆದರೆ ಚೀನೀ ವಿಮಾನಗಳು ಈ ಕಾಳಗದಲ್ಲಿ ೨ ಜಪಾನೀ ವಿಮಾನಗಳನ್ನು ಹಾರಿ ಬೀಳಿಸಿದುವು ಫಿರಂಗಿಗಳು ಎರಡು ಜಪಾನೀ ವಿಮಾನಗಳನ್ನು ಹೊಡೆದು ನೆಲಕ್ಕೆ ಉರುಳಿಸಿದುವು ಸ್ವಲ್ಪ ಸಮಯದೊಳಗಾಗಿಯೇ ... ವಿಮಾನಗಳು ಪಲಾಯನಮಾಡಿದುವು

ವ್ಯಾಪಾರಸ್ಥರುಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು:
ಪ್ರತಿಫಲಬರುವಂತೆ ಸಾಧಿಸುವುದು.

ಜನರು ಸ್ವಸ್ತಿಕಾ "ಕಾಂತಿ"
ಟ್ವೊಲೆಟ್ ಸೋಪನ್ನೇ
ಯಾಕೆ ಆರಿಸುತ್ತಾರೆ?

ಯಾಕಂದರೆ ಪ್ರತಿನಿತ್ಯದ ಸ್ನಾನಕ್ಕೆ ಇದು ಬಹಳ ಉತ್ತಮವಾದದ್ದು ಮತ್ತು ಬಹಳ ಕಡಿಮೆ ಬೆಲೆಯ ಸಾಬೂನಾಗಿರುತ್ತದೆ

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ.

'ಶತ್ರುಗಳನ್ನು ನಾವು ಪ್ರೇಮದಿಂದ ಗೆಲ್ಲಬೇಕು'

ಮಹಾತ್ಮಾಜಿಯವರ ಬೋಧನೆ

(ಹರಿಜನದಿಂದ)

ರಾಜಕೋಟದ ಕಾಂಗ್ರೆಸು ಕೆಲಸಗಾರರು ಗಾಂಧೀಜಿಯವರ ಅಭಿಪ್ರಾಯವನ್ನು ಇನ್ನೂ ಕೂಡಾ ಸ್ಪಷ್ಟವಾಗಿ ತಿಳಿದಿಲ್ಲವೆಂಬುದಾಗಿ ಶ್ರೀ ಮಹಾದೇವ ದೇಸಾಯಿಯವರು ಆ ಕುರಿತು 'ಹರಿಜನ' ಪತ್ರಿಕೆಯಲ್ಲಿ ಹೀಗೆಂದು ಬರೆಯುತ್ತಾರೆ.

"ಗಾಂಧೀಜಿಯವರು ತೀರ್ಪನ್ನು ಬಿಟ್ಟುಕೊಟ್ಟು ಈಗ ವಿಶ್ವವಿಹಾರಿಯಾದ ಸ್ವತಂತ್ರನಂತೆ ಇರುವುದಾಗಿ ತಿಳಿಯುತ್ತಾರಾದರೆ ರಾಜಕೋಟೆಯ ಜನರು ಹಾಗೆ ಅಭಿಪ್ರಾಯ ಪಡುವುದಿಲ್ಲ. ಗಾಂಧೀಜಿಯವರು ಅನೇಕ ದಿವಸಗಳಿಂದ ಅವರಿಗೆ ಸಮಾಧಾನವನ್ನು ಹೇಳುತ್ತಿದ್ದಾರೆ. ಆದರೂ ಅವರು ಬಹು ಸಮಯಗಳಿಂದ ಕಷ್ಟದಿಂದ ಗಳಿಸಿದ ಸೊತ್ತನ್ನು ಬಿಟ್ಟುಕೊಟ್ಟವರ ಹಾಗೆ ಪೂರ್ಣರಾಗಿ ನಷ್ಟ ಹೊಂದಿದವರಂತೆ ಇದ್ದಾರೆ.

ವಿಷದ ಬಟ್ಟಲು

ನಿಜವಾಗಿ ವಿಚಾರಿಸಿದ್ದೇ ಆದರೆ ರಾಜಕೋಟದ ಪ್ರಜೆಗಳು ಇಂದು ಗಾಂಧೀಜಿಯವರು ಸತ್ಯಾಗ್ರಹವನ್ನು ನಿಲ್ಲಿಸಿದ ಬಳಿಕ ಇದ್ದ ಪರಿಸ್ಥಿತಿಯಲ್ಲಿ ಇದ್ದಾರೆಯೆ? ನೂತನ ಚಾರಿತ್ರಿಕ ಘಟನೆಗಾಗಿ ಸಂಕಷ್ಟಕ್ಕೆ ಒಳಗಾದ ಅವರು, ತಾವು ಹೂಡಿದ ಸಮರವು ಯಶಸ್ವಿಯಾಯಿತೆಂದು ಬಾಯಿಗೆ ಬಟ್ಟಲನ್ನು ತಾಗಿಸಲು ಹತ್ತಿರವಾಯಿತೆಂದು ನೆನೆಸುತ್ತಿದ್ದಂತೆಯೇ ಪಾತ್ರವು ಪುಡಿ ಪುಡಿ ಮಾಡಲ್ಪಟ್ಟಿತು. ಸಹಜವಾಗಿಯೂ ಈಗ ಅವರಲ್ಲಿ ನಿರಾಶೆಯೂ, ಕೆರಳಲು ಅವಕಾಶವಿತ್ತು. ಆದರೆ ಇಲ್ಲಿ ಯಾವುದಾದರೂ ಅಂಕಿತ ಕಾರಣಗಳಿವೆಯೆ? ಇಲ್ಲಿ ಏನು ಪುಡಿ ಪುಡಿಯಾದದ್ದು, ಜೀವ ದಾನಮಾಡುವ ಅಮೃತ ಕಲಶವಲ್ಲ, ಜೀವಹರಣ ಮಾಡುವ ವಿಷಪಾತ್ರ, ಇದರಿಂದ ರಾಜಕೋಟದ ಪ್ರಜೆಗಳು ಸುರಕ್ಷಿತರಾಗಿದ್ದಾರೆ. ಅದೂ ಕೂಡಾ ಗಾಂಧಿಜಿಯವರು ತಮ್ಮ ಆತ್ಮ ಸಂಕಷ್ಟದಿಂದ ಪಡೆದದ್ದು, ಉಪವಾಸದಿಂದ ದೊರಕಿಸಿಕೊಂಡದ್ದು ನ್ಯಾಯ್ಯರೀತಿಯಿಂದ ಪರಿಣಾಮಕಾರಿಯಾಗಲಿಲ್ಲವೆಂದು ತಿಳಿದ ಅವರೇ ಅವರು ಸಂಪಾದಿಸಿದುದನ್ನು ಬಿಟ್ಟುಕೊಟ್ಟಿದ್ದಾರೆ. ಪ್ರಜೆಗಳು ಪಡೆದದ್ದು ಮೊದಲಿನಂತೆ ಇಂದೂ ಇಲ್ಲಿ ಇದೆ. ದಶಂಬರ ೨೬ರ ಪ್ರಕಟಣೆಯು ಇಂದೂ ಕೂಡಾ ಅವರ ಮುಂದಿದೆ. ಏನಾದರೂ ಈಗ ಅವರು ಹೆಚ್ಚು ಪಡೆದಿದ್ದರೆ ಆ ಪ್ರಕಟಣೆಯನ್ನು ಈಗ ಕಾರ್ಯರೂಪಕ್ಕೆ ತರುವ ಮನೋಬಲ

"ಕಳೆದ ಸರ್ತಿ ಗಾಂಧೀಜಿಯವರು ಕಸ್ತೂರಿಬಾಯಿಯವರೊಡನೆ ಸಂಭಾಷಿಸಿದಂತೆ ಒಂದು ಬಾಲಕನೊಡನೆ ಈ ಕುರಿತು ಮಾತನಾಡಿದರು. ಬಾಲಕನೊಡನೆ ಗಾಂಧಿಜಿಯವರು "ಆತ್ಮರ್ಪಣವೆಂಬುದು ಒಂದು ಸರ್ಪದಂತಿತ್ತು. ಸರ್ಪವು ನಮ್ಮಲ್ಲಿ ಇದ್ದಾಗ ನಾವು ಹೇಗೆ ಅನುಭವಿಸುತ್ತೇವೆ'' ಹೀಗೆಂದು ಹೇಳಿದರು

'ನಾನು ಭಯಗೊಳ್ಳುತ್ತೇನೆ'' ಎಂದು ಬಾಲಕನೆಂದನು. ಹಾಗೆಯೇ ಆ ತಿಮಾಗೆನ ವಿದ್ದಾಗ ನಾನೂ ದರ್ಬಾರ ವೀರವಲ್ಲರು ಹಾವನ್ನು ಮನೆಯಲ್ಲಿ ಇಟ್ಟುಕೊಂಡವರಂತೆ ಭೀತರಾಗಿದ್ದೆವು ಈಗ ಹಾವು ಮನೆಯಿಂದ ಹೊರ ಹಾಕಲ್ಪಟ್ಟಿದೆ ಈಗ ಒಂದೇ ಕುಟುಂಬದವರಂತೆ ನಾವು ಅನ್ಯೋನ್ಯದಿಂದ ಇರಲೂ ಸಾಧ್ಯವಾಗಿದೆ'' ಎಂದರು

ತಿರುವಾಂಕೂರಿನ ಪ್ರಜೆಗಳಿಗೆ ಮಹಾತ್ಮರು ಏನೆಂದು ಬೋಧಿಸಿದರು

- ★ ಸತ್ಯಾಗ್ರಹವನ್ನು ನಿಲ್ಲಿಸಬೇಕು
- ★ ಇಂದಿನ ಕೇಳಿಕೆಗಳನ್ನು ಕಡಿಮೆಮಾಡಬೇಕು
- ★ ರಚನಾತ್ಮಕ ಕಾರ್ಯವನ್ನು ಕೈಕೊಳ್ಳಬೇಕು
- ★ ಜನಜಾಗೃತಿಯು ಸಾಲದು

ಮಹಾತ್ಮಾಗಾಂಧಿಯವರು ಇದೀ ಭಾರತದ ಆಶ್ರಿತರಾಜ್ಯದ ಪ್ರಜೆಗಳೆಲ್ಲರಿಗೂ ಹಿತವಚನವನ್ನು ಹೇಳುವ ರೀತಿಯಲ್ಲಿ ತಿರುವಾಂಕೂರನ್ನು ಕುರಿತು ಮಹತ್ವವಾದೊಂದು ಲೇಖನವನ್ನು ಹೊರಡಿಸಿದ್ದಾರೆ. ಅದರಲ್ಲಿ ಅವರು ಹೇಳಿದ ಹೊಸ ನೀತಿಯ ಸಾರಾಂಶವು ಹೀಗಿದೆ

"ತಿರುವಾಂಕೂರಿನ ಕುರಿತು ಸುದೀರ್ಘ ವಿಚಾರ ಮಾಡಿದೆ. ರಾಜಕೋಟದ ಅನುಭವದಿಂದ ಶಾಸನ ಭಂಗ ಚಳವಳವನ್ನು ನಿಲ್ಲಿಸಲು ನಾನು ಬೋಧಿಸುತ್ತೇನೆ. ನಮ್ಮಲ್ಲಿ ಯಾವಾಗ ಅಹಿಂಸೆಗೆ ಸಂಕಷ್ಟ ಆತ್ಮಬಲವಿಲ್ಲವೋ ಆಗ ನಾವು ಚಳವಳಕ್ಕೆ ಕೈಹಾಕಬಾರದ. ಇದು ಮಾತ್ರವಲ್ಲದೆ ಹೀಗೆ ಸಮರವನ್ನು ನಿಲ್ಲಿಸುವುದರಿಂದ ಸರಕಾರಕ್ಕೂ ಪ್ರಜೆಗಳಿಗೂ ಪರಸ್ಪರ ಯೋಗ್ಯ ಒಪ್ಪಂದ ಮಾಡಿಕೊಳ್ಳಲೂ ಕಾರ್ಯಘಟನೆಯನ್ನು ನಿಶ್ಚಯಿಸಿಕೊಳ್ಳಲೂ ಸಂಕಷ್ಟ ಅನುವು ದೊರೆಯುತ್ತದೆ

"ಸತ್ಯಾಗ್ರಹವನ್ನು ಬಿಟ್ಟು, ಹೊಸ ಹಾದಿಯನ್ನು ಹಿಡಿಯಬೇಕು. ಗೌರವ ಪೂರ್ಣವಾದೊಂದು ಸಂಧಿಯಾಗಲು ಸ್ಟೇಟ್ ಕಾಂಗ್ರೆಸಿನವರೇ ಅಧಿಕಾರಗಳ ಕಡೆಗೆ ಒಪ್ಪಂದಕ್ಕೆ ಹೋಗಬೇಕು. ನೀವು ನಿಮ್ಮ ಗುರಿಯನ್ನು ಹೊಂದುವ ಸಲುವಾಗಿ ನಿಮ್ಮ ಕೇಳಿಕೆಗಳನ್ನು ಕಡಿಮೆ ಮಾಡಿದರೂ ಆಗಬಹುದು. ಇದು ಹಲವರಿಗೆ ಈಗ ಪ್ರಿಯವಾಗಿ ತೋರದಿದ್ದರೂ ಮುಂದಕ್ಕೆ ಇದರಿಂದ ಅಪಾರವಾದ ಲಾಭವುಂಟು

"ವ್ಯಕ್ತಿಗಳು ಆಳುವುದಕ್ಕಿಂತ ಶಾಸನ ಸಮ್ಮತವಾದ ಅಧಿಕಾರವೇ ಹಿತವಾದದ್ದು. ಆ ರೀತಿಯ ಪ್ರಜಾಸತ್ತೆಯು ಶಾಸನ ಬದ್ಧವಾದ ಆಳ್ವಿಕೆಗೆ ಸಂಸ್ಥಾನದ ಪ್ರಜೆಗಳು ಕೆಲಸಮಾಡಬೇಕು

"ಇಂದು ಆಶ್ರಿತರಾಜ್ಯದ ಪ್ರಜೆಗಳು ಸಾಕಷ್ಟು ಕವಾಯಿತಿಗಳಿಲ್ಲ. ಬಂಧದಂತೆ ಯಾವ ಸಂಸ್ಥಾನವು ಜಾಗೃತಿ ಹೊಂದಿದೆ? ಆದ್ದರಿಂದ ಪ್ರಜೆಗಳು ರಚನಾತ್ಮಕ ಕಾರ್ಯಗಳಿಗೆ ಕೈಹಚ್ಚಿ ತಮ್ಮ ಶಕ್ತಿಯನ್ನು ಬಲಪಡಿಸಿಕೊಳ್ಳಬೇಕು

ಹೀಗೆಂದ ಅವರು ಈ ಸಾರಾಂಶದ ಸೂಚನೆ ಕೊಟ್ಟಿದ್ದಾರೆ (೧) ಶಾಸನಭಂಗ ಚಳವಳವನ್ನು ನಿಲ್ಲಿಸಬೇಕು (೨) ಅಧಿಕಾರಗಳೊಡನೆ ಗೌರವದ ಒಪ್ಪಂದವಾಗಲು ಸಿದ್ಧರಿರಬೇಕು (೩) ಜೈಲಲ್ಲಿರುವ ಸತ್ಯಾಗ್ರಹಿಗಳ ಕುರಿತು ತಾಳ್ಮೆಕೆಡಬಾರದ (೪) ಗುರಿಯನ್ನು ಮುಟ್ಟುವ ಸಲುವಾಗಿ ಕೇಳಿಕೆಗಳನ್ನು ಕಡಿಮೆ ಮಾಡಬೇಕು (೫) ರಚನಾತ್ಮಕ ಕಾರ್ಯವನ್ನು ಕೈಕೊಂಡ ಶಿಸ್ತು ಪಾಲಿಸಲು ತಯಾರಾಗಬೇಕು.

ಮಹಾತ್ಮಾಜಿಯವರ ಅನುಭವಪೂರ್ಣ ಸತ್ಪರಿಣಾಮವು ಆಶ್ರಿತರಾಜ್ಯಗಳ ಪ್ರಜೆಗಳಲ್ಲಿ ಆಗುವುದೆಂದು ಹಾರೈಸಬಹುದೇ?

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Season Deposits are accepted at $3\frac{1}{2}$ % per annum.

For Further particulars apply to the Car-Street Branch, Mangalore

ಶ್ರೇಷ್ಠ ತರದ
ದೃಷ್ಟಿಚಕ್ರಗಳಿಗೆ



ರಬ್ಬರು ಮೊಹರುಗಳಿಗೆ
ನಾಯಕ್ ಸ್ಟೋರ್ಸ್
ರಥಬೀದಿ, ಮಂಗಳೂರು.

'ದೇಶಕ್ಕಾಗಿ ಪ್ರಾಣತೆತ್ತ ... ' ಮಂದಿಯ ಪ್ರಾತಃಸ್ಮರಣೀಯರಲ್ಲಿ ಒಬ್ಬರು ವೀ. ಡಿ. ಸಾವರ್ಕರರು. ಹಿಂದೊಮ್ಮೆ ತೀವ್ರಗಾಮಿಗಳಲ್ಲಿಯೂ ತೀವ್ರಗಾಮಿಗಳು. ಕರಿಮನೆಯನ್ನು ಹೊಕ್ಕು ಬಂದ ಉಜ್ವಲ ದೇಶಭಕ್ತರು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬಿಡಿತನವನ್ನು ಸಹಿಸದನ್ನು ಸ್ವಾತಂತ್ರ್ಯಪ್ರಿಯರು ಇಂದು ಹೇಳುತ್ತಾರೆ. "ಕಾಂಗ್ರೆಸೆಂಬುದು ಜಾತೀಯ ಸಂಸ್ಥೆ, ಹಿಂದೂ ಮಹಾಸಭೆಯು ಶುದ್ಧ ರಾಷ್ಟ್ರೀಯಸಂಸ್ಥೆ" ಎಂದು ಅವರು ಹೇಳುತ್ತಾರೆ. ಹಿಂದೊಮ್ಮೆ ಹಿಟ್ಲರನು ಹೇಳಿದ್ದಾನೆ. 'ನಮ್ಮದು ಪ್ರಪಂಚದಲ್ಲಿ ಸರ್ವೋತ್ಕೃಷ್ಟವಾದ ಡೆಮಾಕ್ರಸಿ. ಬ್ರಿಟನು ಫ್ರಾನ್ಸುಗಳದ್ದು ಹಾಳಾದ ಡಿಕ್ಟೇಟರ್ ಶಿಪ್' ಎಂದು—ಹಿಟ್ಲರ ರಾಜ್ಯದಲ್ಲಿ ಸಾವರ್ಕಾರರು ಒಂದು ಕೈ ನೋಡಬಹುದು!

❖

ದೇಶಕ್ಕಾಗಿ ಹಲವೊಂದು ಸಂಕಷ್ಟಗಳನ್ನು ಅನುಭವಿಸಿದ ಇವರು ಅಂದಿನ ತನ್ನ ಉಜ್ವಲ ತೀವ್ರಗಾಮಿ ರಾಷ್ಟ್ರೀಯತೆಯಿಂದ—ಇಂದಿನ ಈ ಸಂಕೋಚದ ಜಾತೀಯತೆಗೆ ಹಾರಿದ್ದು—ಇದೊಂದು ಅವರ ಜೀವನದಲ್ಲಿ ಅದ್ಭುತ ಹಾರಾಟ! ಕ್ರಾಂತಿಕಾರೀ ಸಾವರ್ಕಾರರು ಸನಾತನಿಗಳಾಗಿ ಹಿಂದೂ ಮಹಾಸಭೆಯ ಅಧ್ಯಕ್ಷಪೀಠದಲ್ಲಿ ರಾರಾಜಿಸುತ್ತಾರೆ. ಹೀಗೆ ಅವರು ಬಹುಕಾಲ ತನ್ನ ಸ್ವಾತಂತ್ರ್ಯ ದಾಹವನ್ನು ಅಡಗಿಸಿಕೊಂಡು ಜಾತೀಯ ಸಂಸ್ಥೆಯಲ್ಲಿ ಉಳಿದಾರೆಂದು ಯಾರೂ ಗ್ರಹಿಸಿರಲಿಲ್ಲ. ಆದರೆ 'ಬಾಯಿ ಬಿಟ್ಟರೆ ಕೆಟ್ಟ' ಒಳಗಿನ ಗುಟ್ಟು ಈಗ ಹೊರಬಿದ್ದಿದೆ

❖

ಕಾಂಗ್ರೆಸಿಗೆ ವಿರುದ್ಧವಾಗಿ ಯುದ್ಧವನ್ನೇ ಹೂಡುತ್ತಿರುವುದನ್ನು ನೋಡಿ ಅವರ ಮಿತ್ರರನೇಕರು ದಿಗಿಲುಗೊಂಡಿದ್ದಾರೆ ಕೆಲವರು ಪ್ರಶ್ನಿಸುವಷ್ಟು ಧೈರ್ಯಮಾಡಿದರು. 'ಸ್ವಾಮೀ ನೀವು ಯಾಕೆ ಕಾಂಗ್ರೆಸಿಗೆ ಸೇರಬಾರದು?' ಮುಹೂರ್ತವೂ ವಿಚಾರಮಾಡದೆ ಅವರು ಹೀಗೆ ಉತ್ತರ ಕೊಟ್ಟರು. 'ಕಾಂಗ್ರೆಸಿನಲ್ಲಿ ನಾನು ಇಂದಿನ ಮುಖಂಡರ ಅಧೀನನಾಗಿ ಇರಬೇಕು ಅಲ್ಲಿ ಈಗ ಇನ್ನೊಂದು ಮುಖಂಡತನಕ್ಕೆ ಏನೂ ಎಡೆಯಿಲ್ಲ ನಾನು ಯಾರ ಅನುಯಾಯಿಯಾಗಿಯೂ ಇರಲಾರೆ' ಸ್ಪಷ್ಟವಾದ ಹೇಳಿಕೆ'

❖

ಮಿ ಜಿನ್ನಾರವರಿಗೂ ಇದೇ ಮನೋರೋಗ. ಕಾಂಗ್ರೆಸಿನಲ್ಲಿ ತನ್ನ ಧುರೀಣತೆಗೆ ಅವಕಾಶವಿಲ್ಲವಲ್ಲಾ ಎಂದು ಇವರಿಬ್ಬರಿಗೂ ಧುರೀಣತೆಯ ರೋಗ ಹಿಡಿದಂತಿದೆ ಕಾಂಗ್ರೆಸಿಗೆ ಸೇರಿದರೆ ತಮ್ಮ ಧುರೀಣತೆಗೆ ಎಡೆಯಿಲ್ಲವೆಂಬುದೇ ಕಾಂಗ್ರೆಸನ್ನು ಬಿಟ್ಟಿರಲು ಕಾರಣ ಇವರಿಬ್ಬರಿಗೂ ವೈರಿಯೊಂದೇ—ಹಾಗಾಗಿ ಇಬ್ಬರೂ ಈಗ ಅನ್ಯೋನ್ಯ ಗೆಳೆಯರಾಗಬಹುದು ಕಾಂಗ್ರೆಸಿನ ದ್ವೇಷಕ್ಕಾದರೂ ಹಿಂದೂ ಮುಸ್ಲಿಮ್ ಒಗ್ಗಟ್ಟು ಆಗಲು ಕಾರ್ಯಸಾಧಿಸುವರೆ? ಅಥವಾ ಕಡೆಗೆ ಇವರೇ ಅನ್ಯೋನ್ಯ ತಲೆ ಬಡಿದುಕೊಂಡು ರಣರಂಗ ಹೂಡುವರೇ?

❖

ಕಾಂಗ್ರೆಸಿನೊಳಗೂ ಪ್ರತ್ಯೇಕ ಪಕ್ಷಗಳನ್ನು ಸ್ಥಾಪಿಸಿಕೊಂಡ ಸುಭಾಷಚಂದ್ರ ಬೋಸ್, ಎಂ. ಎನ್. ರಾಯ್ ಈ ಎಲ್ಲಾ ಮುಖಂಡರ ಗುರಿಯೇನು? ಹಿಂದೂದೇಶದ ಸ್ವಾತಂತ್ರ್ಯವೆ? ರಾಜಕೀಯ ಮುಖಂಡರೆಂದು ಅವರು ಅನ್ನಿಸಿಕೊಳ್ಳಬೇಕಾದರೆ ಅದೇ ಅವರ ಗುರಿಯಾಗಿರಬೇಕು. ಹಿಂದೂದೇಶದಂತಹ ರಾಷ್ಟ್ರಗಳಲ್ಲಿ ಪಕ್ಷ ಪ್ರತಿ ಪಕ್ಷಗಳೆದ್ದು ಅನ್ಯೋನ್ಯ ಕಾದಾಡುವುದರಿಂದ ಅವರ ಉದ್ದೇಶವು ಸಾಧಿಸೀತೆಂದು ತಲೆಯಲ್ಲಿ ಮಿದುಳಿದ್ದವನು ಒಪ್ಪಲಾರನು. ಹಾಗಾದರೆ ಇವರ ಪಕ್ಷಗಳ ಉದ್ದೇಶವೇನು? ಮುಂದಾಳುತನವೆ?

❖

ಈ ಎಲ್ಲಾ ಮುಂದಾಳುಗಳ ಕಣ್ಣಿಗೆ ಕುಕ್ಕಿದಂತಾಗುವುದು ಕಾಂಗ್ರೆಸಿನಲ್ಲಿ ಗಾಂಧೀಜೀಯವರ ಮುಂದಾಳುತನ. ಗಾಂಧಿಜಿಯವರ ಹೆಸರೆತ್ತಿದರೆ ಇವರು ಕಿಡಿಯಾಗುತ್ತಾರೆ. ಸಾವರ್ಕಾರರು ಜಿನ್ನಾರವರು ಇವರೆಲ್ಲರೂ ಹೀಗೆಂದೇ ಮಹಾಸಭೆ ನಮ್ಮದು 'ಲೀಗು ನಮ್ಮದು' ಎಂದು ಅವುಗಳನ್ನು ಅಪ್ಪಿ ಹಿಡಕೊಂಡಿದ್ದಾರೆ. ಇನ್ನು ಕಾಂಗ್ರೆಸಿನೊಳಗೇ ಫಾರ್ವರ್ಡ್ ಬ್ಲಾಕ್ ನನ್ನದು ರ್‍ಯಾಡಿಕಲ್ ನನ್ನದು ಎಂದು ಸುಭಾಷ ಚಂದ್ರ ಬೋಸರೂ, ಎಂ. ಎನ್. ರಾಯರೂ ಕೂಗೆಬ್ಬಿಸುತ್ತಾರೆ. ಈ ಮುಂದಾಳುತನದ ರೋಗಕ್ಕೆ ಏನು ಮದ್ದು? ಗಾಂಧಿಜಿಯವರು ಕಾಂಗ್ರೆಸಿನಿಂದ ಹೊರಬಿದ್ದರೂ ಅವರೇ ಕಾಂಗ್ರೆಸಿನ ಮುಂದಾಳುಗಳಂತೆ! ಕಾಂಗ್ರೆಸಿನ ಒಳಗಿದ್ದವರೇ ಮುಂದಾಳುತನವಿಲ್ಲದೆ ಹೊರಟು ಬರಬೇಕಂತೆ! ಇದು ಅದ್ಭುತ ವಿಚಾರ ಇಲ್ಲಿ ದೂರುವುದಾದರೂ ಯಾರನ್ನ? ಇಂದಿನ ಮುಂದಾಳುಗಳಾದ ಗಾಂಧಿಜಿಯವರನ್ನೋ—ಅವರನ್ನು ದೊಡ್ಡದು ಮಾಡಿದ ಜನತೆಯನ್ನೋ?

❖

ಹಿಂದೂ ಮಹಾಸಭಾಪತಿ ಸಾವರ್ಕಾರರು ಅಮೇರಿಕದ ಪ್ರೆಸಿಡೆಂಟರು ಶಾಂತಿಸ್ಥಾಪನೆಗಾಗಿ ಯತ್ನಿಸುತ್ತಾರೆಂದು ವಾರ್ತೆ ತಿಳಿದು ದಿಗಿಲುಗೊಂಡಿದ್ದಾರೆ ಲೋಕದ ಶಾಂತಿಯು ಹಿಂದೂಗಳಿಗೆ ಸ್ವಾತಂತ್ರ್ಯ ಸಿಗದೆ ಸಾಧ್ಯವಿಲ್ಲವೆಂದು ಅಲ್ಲಿಗೆ ತಂತಿ ಬಿಟ್ಟಿದ್ದಾರೆ. ನೀವು ಪಂಚಾಯಿತಿ ಮಾಡುವುದು ಸರಿ, ನನ್ನೊಡನೆ ವಿಚಾರಿಸದಿದ್ದರೆ ಕೇಳುವ ಹಾಗಿಲ್ಲ ಎಂದು ಅದರ ಸಾರಾಂಶ! ಅಮೇರಿಕದ ಪತ್ರಿಕೆಗಳು ಸಾವರ್ಕಾರರೆಂದರೆ ಏನೋ ಎಂದು ತಿಳಕೊಂಡಿದ್ದಾರೆ ಹೇಗೋ ಹೇಗೋ ಹೆಸರೆತ್ತಿ ಸಂಬೋಧಿಸುತ್ತವೆ ಪಾಪ! ಸಾವರ್ಕಾರರಿಗೆ ಹಾಗಾದರೂ ಒಂದು ಮುಂದಾಳುತನ ಬರಬಾರದೇ?

❖

ಆಶ್ರಿತ ರಾಜ್ಯಗಳ ಕುರಿತು ದೊಡ್ಡ ಸಮಸ್ಯೆಯಾಗಿದೆ' ಮಹಾತ್ಮಾಜಿಯವರು ಸತ್ಯಾಗ್ರಹವನ್ನು ನಿಲ್ಲಿಸಲು ಆಜ್ಞೆಯೀಯದಿದ್ದಲ್ಲಿ ಇಷ್ಟರಲ್ಲಿಯೇ ನಾವು ಜವಾಬ್ದಾರಿಕೆಯ ಸರಕಾರವನ್ನು ಪಡೆಯಬಹುದಿತ್ತೆಂದು ಸಂಸ್ಥಾನದ ಮುಖಂಡರೊಬ್ಬರು ಪೌರುಷ 'ಕೊಚ್ಚಿ'ಯೇ ಬಿಟ್ಟರು. ಮಹಾತ್ಮಾಜಿಯವರು ಅದಕ್ಕೆ ಹೀಗೆಂದು ಹೇಳುತ್ತಾರೆ "ನಾನು ನನ್ನ ಅಭಿಪ್ರಾಯವನ್ನು ಮಾತ್ರ ಜನತೆಯ ಮುಂದಿಟ್ಟಿದ್ದೇನೆ ಸ್ಥಳೀಯ ಪರಿಸ್ಥಿತಿಯನ್ನು ಆಲೋಚಿಸಿಕೊಂಡು ಜವಾಬ್ದಾರಿಯನ್ನು ತಮ್ಮ ಮೇಲೆ ವಹಿಸಿಕೊಂಡು—ಅಲ್ಲಿನ ಮುಂದಾಳುಗಳು ಸತ್ಯಾಗ್ರಹವನ್ನು ಆರಂಭಿಸಬಹುದು" ಜವಾಬ್ದಾರಿಯನ್ನು ವಹಿಸಿಕೊಂಡು ಸತ್ಯಾಗ್ರಹ ಆರಂಭಿಸಬೇಕೆಂದು ಮಹಾತ್ಮಾಜಿಯವರ ಕಂಟು ಸಂತಿ! ಹಾಗಾದರೆ ಸಂಸ್ಥಾನದ ಮುಖಂಡರು ಜವಾಬ್ದಾರಿ ವಹಿಸಿ ಕೆಲಸ ಮಾಡಲು ಎದೆಗಾರಿಕೆಯುಳ್ಳವರಾಗಿಲ್ಲವೆಂದು ಮಹಾತ್ಮಾಜಿಯವರ ಮಾತಿನ ಧ್ವನಿಯೊ?

❖

ದುರ್ಬಲರೊಡನೆ ನಾವಿದ್ದೇವೆ. ಹೀಗೆಂದು ಬ್ರಿಟಿಷ್ ಡಿಫೆನ್ಸ್ ಓಫ್ ಕೋರ್ಡಿನೇಶನ್ ಮಂತ್ರಿಗಳಾದ ಲಾರ್ಡ್ ಚೇಟಫೀಲ್ಡರು ಸಾರುತ್ತಾರೆ ನಮ್ಮ ಯುದ್ಧವು ನಮ್ಮ ಗೌರವ ಮತ್ತು ದುರ್ಬಲ ರಾಷ್ಟ್ರಗಳ ಸಹಾಯಕ್ಕಾಗಿ ಆಗುವುದೆಂದು ಅವರ ಅಭಿಮತ. ಇಂದಿನ ಒಪ್ಪಂದಗಳೂ ಆ ರೂಪದಿಂದಲೇ ನಡೆಯುತ್ತಿರುವುದಾಗಿ ಅವರ ಹೇಳಿಕೆ ದುರ್ಬಲ ರಾಷ್ಟ್ರಗಳಿಗೆ ಇನ್ನೇನು ಬೇಕು? ಬ್ರಿಟಿಷ್ ಪ್ರಬಲ ಸಾಮ್ರಾಜ್ಯಶಕ್ತಿಯೇ ದುರ್ಬಲರಿಗಾಗಿ ಇದ್ದರೆ? ಅಬಿಸೀನಿಯಾ—ಜೆಕೊಸ್ಲೊವಾಕಿಯ—ಹಿಂದೆ ಆದದ್ದೆಲ್ಲಾ ಆಯಿತು Forget and forgive! ಇನ್ನು ಮುಂದೆ ಬ್ರಿಟನು ದುರ್ಬಲರ ಸಹಾಯಕ್ಕಾಗಿ' ದುರ್ಬಲ ರಾಷ್ಟ್ರಗಳ ಭಯವಡದಿರಲಿ'

ನೋಟಿಸು

The Canara Banking Corporation Ltd., Mangalore.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇದ್ದುದರಿಂದಲೂ, ಸದ್ರಿಯವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸು ಅವರಿಗೆ ಪಾವತಿಯಾಗದೆ ಇರುವ ಕಾರಣದಿಂದಲೂ, ಈಗ ಈ ಮೂಲಕ ತಿಳಿಯಪಡಿಸುವುದೇನೆಂದರೆ —ಸದ್ರಿಯವರಿಂದ ಬೇಂಕಿಗೆ ಸಲ್ಲತಕ್ಕ ಸಾಲದ ಅಸ್ಲು ಬಡ್ಡಿ ಖಾವೇಜು, ರಿಜಿಸ್ತ್ರಿ ನೋಟೀಸು ಖರ್ಚು, ಮತ್ತು ಈ ನೋಟೀಸು ಖರ್ಚು, ಆ ಬಡ್ಡಿಗೆ ಬಡ್ಡಿ ಕೂಡಿಸಿ, ಇದೇ ಸನ್ ೧೯೩೯ನೇ ಇಸವಿ ಜೂನ್ ತಿಂಗಳ ತಾರೀಕು ೨೭ನೇ ಮಂಗಳವಾರದ ಒಳಗೆ ತಂದುಕೊಟ್ಟು ಅಡವಿಟ್ಟ ನಗಗಳನ್ನು ಸದ್ರಿಯವರು ಬಿಡಿಸಿಕೊಂಡು ಹೋಗದೆ ಇದ್ದರೆ ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ ಸನ್ ೧೯೩೯ನೇ ಇಸವಿ ಜೂನ್ ತಿಂಗಳ ತಾರೀಕು ೨೯ನೇ ಗುರುವಾರ ಗಂಟೆ ೩ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು

ಲೋನ ನಂಬ್ರ	ಹೆಸರ	ನಗಗಳ ವಿವರ	ಮೊಬಲಗು
676/85	D Poovappa Shetty, S/o Kinnaya Shetty Bolar Tile Works Mangalore	ಗೋಲು ಜತೆ 1, ಪಾಟ್ಲಿ ಜತೆ 1, ತುಂಡಾದ ಎರಡೆಳೆಯ ಗೊಪ್ಪು 1, (ಕೈಗೋಲು ಮತ್ತು ಪಾಟ್ಲಿ ಕೂಡ ತುಂಡಾಗಿರುತ್ತದೆ	110-0-0
675/86	Aithappa Shenava, S/o Naruna Shenava, Kulusmogru Murikadu Grama, Panambur Post	ಮುರ್ಗ ಬಳೆ ಜತೆ 1.	85-0-0
898/87	Dogra Nephew of Ugganna Poojary, Kudrolly Mangalore	ಉಂಗ್ರಗಳು 8	12-0-0

Office of the Corporation,
Mangalore, 10—6—'39

K. Vittal Bhandary,
Agent

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಸರದಾರ ಭವನ- Sirdar Bhavan

ಫೆಲಿಕ್ಸ್‌ಪೈ ಬಜಾರ್—ಮಂಗಳೂರು.

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳುಳ್ಳ ಚೊಕ್ಕಟವಾದ ಕೊಠಡಿಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳೇ

Proprieter— **H R. Rao,**
Bangalore Guit Emporuim Madras



ಮಂಗಳೂರು ಸಮಾಚಾರ

ಕೋರ್ಟುಗಳು

ಜಿಲ್ಲಾ ಜಡ್ಜರ ಹಾಗೂ ಸಬ್ ಜಡ್ಜರ ಕೋರ್ಟುಗಳು ತಾ ೧೨ಕ್ಕೆ ತೆರೆಯಲ್ಪಟ್ಟಿವೆ ಎಡಿಶನಲ್ ಸಬ್ ಕೋರ್ಟು ಅದಿನವೇ ತೆರೆಯಲಾಗಿದೆ

ಶ್ರೀ. ಎ. ವಿಠಲಶೆಟ್ಟಿಗಳಿಗೆ ಬಿರುದು

ಸಿಲೋನಿನಲ್ಲಿ ಇಂಡಿಯಾ ಗವರ್ನಮೆಂಟಿನ ಏಜಂಟರಾದ ನಮ್ಮ ಜಿಲ್ಲೆಯವರಾದ ಶ್ರೀ ಎ ವಿಠಲಶೆಟ್ಟಿಗಳವರಿಗೆ ಒ ಬಿ ಇ. ಬಿರುದು ಸಿಕ್ಕಿದೆ ಇವರಿಗೆ ಅಭಿನಂದನೆಗಳು

ಭಾಷಣ

ತಾ ೧೧ರಂದು ಶ್ರೀ ಗೋಕರ್ಣನಾಥ ದೇವಾಲಯದಲ್ಲಿ ಶ್ರೀ ಎಂ ಸುಬ್ರಾಯನ್ ಶಿರೋಮಣಿ ಮತ್ತು ವಿದ್ವಾನ್ ಇವರು 'ದ್ರಾವಿಡಸಂಸ್ಕೃತಿ'ಯೆಂಬ ವಿಷಯ ಭಾಷಣವಿತ್ತರು. ತಾ ೧೮ನೇ ರವಿವಾರ ಶ್ರೀ ಕೆ ಕೆ ಶೆಟ್ಟರು ಭಾಷಣಮಾಡಲಿರುವರು ಎಲ್ಲರಿಗೂ ಸ್ವಾಗತವಿದೆ

ಬಂಟರ ಯಾನೆ ನಾಡವರ ಸಂಘ

ದ ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಮಹಾಸಭೆಯು ಜೂನ್ ೨೫ನೇ ಆದಿತ್ಯವಾರ ಸಂಜೆ ಘಂಟೆ ೪ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸೇರಲಿರುವುದು ಸಂಬಂಧಪಟ್ಟವರು ತಪ್ಪದೆ ಬರಬೇಕಾಗಿ ವಿನಂತಿ

ಒಟೋಮೊಬೈಲ್ಸ್ ಲಿಮಿಟೆಡ್

ಮಂಗಳೂರು ಸಿಟಿಬಸ್ ಸರ್ವಿಸಿನವರ ಮಹಾಸಭೆಯು ಕಳೆದ ಆದಿತ್ಯವಾರ ಜರಗಿತು ಕಳೆದ ವರ್ಷದಲ್ಲಿ ಉಂಟಾದ ನಷ್ಟದಲ್ಲಿ ಅರೆವಾಸಿಯನ್ನು ಭರ್ತಿಮಾಡಿ ವರದಿಯ ವರ್ಷದಲ್ಲಿ ಆಡಳಿತದ ಜವಾಬ್ದಾರಿ ವಹಿಸಿದ ಶ್ರೀ ಕೆರವಾರ್ ಎಂಡ್ ಕೋರವರು ತಮ್ಮ ಮೆಹನತಿಗಾಗಿ ಪ್ರತಿಫಲ ಪಡೆಯದೆ ಪಾಲು ಭಾಗದಾರರಿಗೆ ನೀಕಡಾ ೨ರಂತೆ ಮುನಾಫೆ ಹಂಚಿದ್ದಾರಾಗಿ ತಿಳಿದು ಬರುತ್ತದೆ

ಸಭೆ

ಕಿಡಿಯಾಂಡಿನ ರಿಟೈರ್ ಪೇಯರ್ಸ್ ಮಹಾಸಭೆಯು ತಾ ೧೮ರಂದು ಆರ್ಯಸಮಾಜ ಮಂದಿರದಲ್ಲಿ ಸೇರುವುದು

ಕಾಂಗ್ರೆಸ್ ಸದಸ್ಯತನ

ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಮಂಡಳಿಯು ತಾರೀಕು ೬—೬—೩೯ರಂದು ಅಧ್ಯಕ್ಷರಾದ ಶ್ರೀ ಬಿ. ವೆಂಕಟರಾವ್ ಬಾಳಿಗಾ ಎಂ ಎಲ್ ಎ ಇವರ ಅಧ್ಯಕ್ಷತೆಯಲ್ಲಿ ಸೇರಿ ಕಾಂಗ್ರೆಸ ಸದಸ್ಯತನದ ಕುರಿತು ಈ ರೀತಿಯ ನಿರ್ಣಯಮಾಡಿರುತ್ತದೆ

ಪ್ರತಿ ದಿನ ಕಮಿಟಿಯ ಆಫೀಸಿನಲ್ಲಿ ಬೆಳಗ್ಗೆ ೯ರಿಂದ ೧೨ರ ವರೆಗೂ ಮಧ್ಯಾಹ್ನ ೩ರಿಂದ ೬ರ ವರೆಗೂ ಮೆಂಬರರಾಗುವವರು ಬಂದಲ್ಲಿ ದಾಖಲುಮಾಡತಕ್ಕದ್ದು ಶ್ರೀ ಪಿ ರಾಮದಾಸ ನಾಯ್ಕರು ಹಾಗೆ ದಾಖಲಾದ ಮೆಂಬರರಿಗೆ, ಅವರು ದಾಖಲುಮಾಡಿದ ಅರ್ಜಿ ನಂಬ್ರ ತನ್ನ ಸಹಿ ಮತ್ತು ಆ ಮೆಂಬರನ ದಸ್ಕತು ಯಾ ಹೆಬ್ಬೆಟ್ಟಿನ ಗುರ್ತು ಹಾಕಿಸಿ ಒಂದು ಸರ್ಟಿಫಿಕೇಟನ್ನು ಕೊಡತಕ್ಕದ್ದು. ಆ ಮೇಲೆ ಕೆಲವು ನಿಬಂಧನೆಗಳಿಗನುಸಾರವಾಗಿ ಕಾರ್ಯಕಾರೀ ಮಂಡಳಿದ ಸದಸ್ಯರು ಮಾತ್ರ ಮೆಂಬರರನ್ನು ಮಾಡಲು ಅರ್ಹರಿರುವಂತೆಯೂ ಠರಾವುಗಳಾದುವು

ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿ ಚುನಾವಣಾ ಪ್ರಕಟಣೆ

ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಬಾರಕೂರು ಮತದಾರ ಕ್ಷೇತ್ರದಿಂದ ಚುನಾವಣೆಯು ನಡೆಯಬೇಕಾಗಿದೆ ಈ ಬಗ್ಗೆ ಚುನಾವಣೆಗೆ ನಿಲ್ಲಬಯಸುವ ಹುರಿಯಾಳುಗಳು ಉಡುಪಿ ತಾಲೂಕಿನಲ್ಲಿ ಕಳೆದ ವರ್ಷ ಕಾಂಗ್ರೆಸ್ ಪ್ರಾಥಮಿಕ ಸದಸ್ಯರಾಗಿದ್ದು ಅವರ ಹೆಸರು ಉಡುಪಿ ತಾಲೂಕು ಕಮಿಟಿಯಲ್ಲಿರುವ ಪ್ರಾಥಮಿಕ ಸದಸ್ಯರ ಪಟ್ಟಿಯಲ್ಲಿರತಕ್ಕದ್ದು

ಈ ಕ್ಷೇತ್ರದ ಮತದಾರರಾದ ಯಾದಿಯು ಜಿಲ್ಲಾ ಕಾಂಗ್ರೆಸ್ ಆಫೀಸಿನಲ್ಲಿಯೂ ಬಾರಕೂರ ಕೇಂದ್ರ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿಯೂ ಇರುತ್ತದೆ ಜಿಲ್ಲಾ ಕಮಿಟಿಯ ಸೀಲುಳ್ಳ ಯಾದಿಯೇ ನಿಜವಾದ ಯಾದಿಯಾಗಿರುತ್ತದೆ

ಚುನಾವಣೆಗೆ ನಿಲ್ಲಬಯಸುವ ಹುರಿಯಾಳು ಜಿಲ್ಲಾ ಕಮಿಟಿಯಿಂದಲಾಗಲೀ ಯಾ ಬಾರಕೂರ ಕೇಂದ್ರ ಕಾಂಗ್ರೆಸ್ ಕಮಿಟಿಯಿಂದಲಾಗಲೀ ಜಿಲ್ಲಾ ಕಮಿಟಿಯ ಸೀಲುಳ್ಳ ನಾಮಪತ್ರಗಳನ್ನು ಪಡೆದು ಅವುಗಳನ್ನು ಸರಿಯಾಗಿ ತುಂಬಿ, ಬಾರಕೂರ ಮತದಾರ ಕ್ಷೇತ್ರದಿಂದ ಓಟುಕೊಡಲು ಹಕ್ಕುಳ್ಳ ಯಾರಾದರೂ ಇಬ್ಬರು ಸದಸ್ಯರಿಂದ ಸೂಚನೆ ಮತ್ತು ಅನುಮೋದನೆಗಳನ್ನು ಪಡೆದು, ನಾಮಪತ್ರಗಳಲ್ಲಿ ಅವರ ದಸ್ಕತನ್ನು ಹಾಕಿಸಿ, ತಾ ೧೭—೬—೩೯ರ ಸಂಜೆ ಘಂಟೆ ೬ರ ಒಳಗೆ ನಾಮಪತ್ರದ ಬಾಬ್ತು ಡಿಪೊಜಿಟ್ಟಾಗಿ ೨ ರೂಪಾಯಿ ಸಮೇತ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಕಳುಹಿಸತಕ್ಕದ್ದು ಇದರ ನಂತರ ಬಂದ ನಾಮ ಪತ್ರಗಳು ಅಂಗೀಕೃತವಾಗಲಾರವು

ಈ ನಾಮಪತ್ರಗಳು ತಾ ೧೮—೬—೩೯ರಂದು ಅಪರಾಹ್ನ ಘಂಟೆ ೨ಕ್ಕೆ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಆಫೀಸು ಉಡುಪಿ, ಇಲ್ಲಿ ಪರಿಶೋಧಿಸಲ್ಪಡುವವು ಮತ್ತು ಸರಿಯಾಗಿ ಬಂದ ನಾಮಪತ್ರಗಳ ಹುರಿಯಾಳುಗಳ ಹೆಸರುಗಳ ಕೂಡಲೇ ಪ್ರಸಿದ್ಧಿಸಲ್ಪಡುವವು

ಚುನಾವಣೆಗೆ ನಿಲ್ಲಬಯಸಿದ ಹುರಿಯಾಳುಗಳ ತಮ್ಮ ನಾಮಪತ್ರಗಳನ್ನು ತಾರೀಕು ೧೯—೬—೩೯ರ ಸಂಜೆ ಘಂಟೆ ೬ರ ಒಳಗೆ ಟಪಾಲ ಮೂಲಕ ಜಿಲ್ಲಾ ಕಮಿಟಿಗೆ ಕೊಟ್ಟು ತನ್ನ ನಾಮಪತ್ರವನ್ನು ಹಿಂದೆಗೆಯಬಹುದು.

ಹೀಗೆ ಕಟ್ಟಿದ ಹಣದಲ್ಲಿ ನಾಮಪತ್ರಗಳು ತಿರಸ್ಕರಿಸಲ್ಪಟ್ಟಲ್ಲಿ ನಾಮಪತ್ರಗಳನ್ನು ಮೋಲ್ಯಾಗಿಸಿದ್ದರೆ ತಾ ೧೯—೬—೩೯ರಸಂಜೆ ಘಂಟೆ ೬ರ ಒಳಗೆ ಹಿಂತೆಗೆದರೆ ಮಾತ್ರ ರೂಪಾಯಿ ಒಂದು ಹಿಂದೆ ಕೊಡಲ್ಪಡುವುದು ಇನ್ನಾವ ಸಂಧರ್ಭದಲ್ಲಿಯೂ ಈ ಹಣವು ಹಿಂದೆ ಕೊಡಲ್ಪಡಲಾರದು

ಚುನಾವಣೆಯ ಅಗತ್ಯಬಿದ್ದಲ್ಲಿ ತಾರೀಕು ೨೫—೬—೩೯ರಂದು ಬೆಳಗ್ಗೆ ಘಂಟೆ ೧೦ರಿಂದ ೧೨ರ ವರೆಗೂ ಅಪರಾಹ್ನ ಘಂಟೆ ೨ರಿಂದ ೬ರ ವರೆಗೂ ನಡೆಸಲ್ಪಡುವುದು ಮತಗಳು ಗುಪ್ತಮತದಾನ ಪದ್ಧತಿಯಿಂದ ತೆಗೆದ ಕೊಳ್ಳಲ್ಪಡುವುದಾದರೂ ಮತದಾರನು ಅಪೇಕ್ಷಿಸಿದಲ್ಲಿ ಅವನು ಬಾಯ್ಮಾತಿನಿಂದ ತನ್ನಮತವನ್ನು ಕೊಡಲೂ ಅರ್ಹನಿರುವನ ಚುನಾವಣೆಯು ನಡೆಯಲಿರುವ ಸ್ಥಳ ಮತ್ತು ಪ್ರೋಲಿಂಗ್ ಆಫೀಸರರುಗಳ ಹೆಸರುಗಳು ಹಿಂದಿನಿಂದ ಪ್ರಕಟಿಸಲ್ಪಡುವವು

ಚುನಾವಣೆಯು ಮುಗಿದನಂತರ ಅದರ ಮತಗಣನೆಯು ತಾ ೨೬—೬—೩೯ರಂದು ಬೆಳಗ್ಗೆ ಘಂಟೆ ೯ಕ್ಕೆ ಉಡುಪಿ ತಾಲೂಕ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ನಡೆಯುವುದು ಆ ಸಂದರ್ಭದಲ್ಲಿ ಹುರಿಯಾಳುಗಳಾಗಲೀ ಅಥವಾ ಅವರ ಏಜಂಟರಾಗಲೀ ಅಲ್ಲಿ ಬರತಕ್ಕದ್ದು — ಮತ್ತು ಈ ಮತಗಣನೆಯು ನಡೆದನಂತರ ಇದರ ಫಲಿತಾಂಶವನ್ನು ಕೂಡಲೇ ಜಿಲ್ಲಾ ಕಮಿಟಿಗೆ ತಿಳಿಸತಕ್ಕದ್ದು

ಜಿಲ್ಲಾ ಕಮಿಟಿಯು ಇದರ ಫಲಿತಾಂಶವನ್ನು ತಾ ೨೮—೬—೩೯ರಂದು ಪ್ರಕಟಿಸುವುದು

ಈ ಚುನಾವಣೆಯ ವಿಷಯ ಯಾರಿಗಾದರೂ ತಕರಾರುಗಳಿದ್ದಲ್ಲಿ ಅವರು ೪—೭—೩೯ರ ಸಂಜೆ ಘಂಟೆ ೬ರ ಒಳಗಾಗಿ ಟಪಾಲಮೂಲಕ ಜಿಲ್ಲಾ ಕಮಿಟಿಗೆ ಕೊಡತಕ್ಕದ್ದು ಈ ವಿಷಯ ಜಿಲ್ಲಾ ಕಮಿಟಿಯ ಕಾರ್ಯಕಾರಿ ಮಂಡಳಿಯು ಸೂಚಿಸುವ ನಿರ್ಣಯವೇ ಕೊನೆಯದಾಗಿರುವುದು.

ತಾಲೂಕು ಸಮಾಚಾರ

ಕಾರ್ಕಳ

ಕಾರ್ಕಳ ಹರಿಜನ ಸೇವಾ ಸಂಘದ ಕಳೆದ ವರ್ಷದ ವರದಿಯು ಪ್ರಕಟವಾಗಿದೆ ಮಂದ ವರ್ಷದಲ್ಲಿಯೂ ಸಂಘವು ಹರಿಜನ ಸೇವೆಯ ಉಪಯುಕ್ತ ಕಾರ್ಯಗಳನ್ನು ಮಾಡಿ ತನ್ನ ಅಸ್ತಿತ್ವವನ್ನು ಸಾರ್ಥಕಗೊಳಿಸಿದೆ ಸಂಘಕ್ಕೆ ಸರಕಾರದಿಂದಲೂ ಇತರ ಸಾರ್ವಜನಿಕ ಸಂಸ್ಥೆಗಳಿಂದಲೂ ಸಹಾಯವು ದೊರೆತಿರುವದು. ಆದರೂ ಮಹಾಜನ ಪ್ರೋತ್ಸಾಹವು ಸಾಕಷ್ಟು ಇಲ್ಲದಿರುವ ಕಾರಣ ಸಂಘವು ಅನೇಕ ಕಾರ್ಯಗಳನ್ನು ಮಾಡಲು ಅಸಮರ್ಥವಾಗಿದೆ ಮುಂದಿನ ವರ್ಷವಾದರೂ ಮಹಾಜನ ಪ್ರೋತ್ಸಾಹವು ಸಿಕ್ಕಿ ತನ್ನ ಧ್ಯೇಯ ಸಾಧನೆಯಾದೀತೆಂದು ಸಂಘವು ಆಶಿಸಿದೆ

ಶ್ರೀ ಪಿ ವೆಂಕಟರಮಣ ಬಿ ಎ ಯಲ್ ಟಿ ಯವರು ಕಾರ್ಕಳ ರೇಂಜಿನ ಡಿಪ್ಯುಟಿ ಇನ್ಸಪೆಕ್ಟರಾಗಿ ಚಾರ್ಜು ತೆಗೆದುಕೊಂಡಿರುವರು ಇವರ ತರುಣರೂ ಉತ್ಸಾಹಿಗಳೂ ಅನುಭವಿಗಳೂ ಆಗಿರುವದರಿಂದ ತಾಲೂಕು ಶಿಕ್ಷಣ ಸಮಿತಿಯ ಸಹಕಾರದಿಂದ, ಈ ತಾಲೂಕಿನ ಶಿಕ್ಷಣ ಪ್ರಚಾರ ಪ್ರಸಂಗಗಳನ್ನು ಬಹಳ ಮಾಡುವರೆಂದು ಜನರು ಆಶಿಸುತ್ತಾರೆ

ಮಾಳದಲ್ಲಿ ಚುನಾವಣಾಸಂಬಂಧವಾಗಿ ಉಂಟಾದ ವಿವಾದ ವಿಚಾರಣೆಯಾಗಿ ಶ್ರೀ ಯಂ ರಾಮಕೃಷ್ಣ ನಾಯಕರೇ ಆ ಮತದಾರ ಸಂಘದ ಕಡೆಯಿಂದ ತಾಲೂಕು ಕಾಂಗ್ರೆಸ್ ಕಮಿಟಿಗೆ ಆರಿಸಲ್ಪಟ್ಟ ಸದಸ್ಯರೆಂದು ಜಿಲ್ಲಾ ಕಾಂಗ್ರೆಸು ಕಮಿಟಿಯು ತನ್ನ ಇತ್ಯರ್ಥವನ್ನು ಕೊಟ್ಟಿರುತ್ತದೆ

ಬಾರಕೂರು

ತಾರೀಕು ೧೧—೬—೩೯ನೇ ಆದಿತ್ಯವಾರ ಹಾಲಿಕೋಡಿ ಏಡೆಡ್ ಎಲಿಮೆಂಟ್ರೀ ಶಾಲಾ ಹೊಸ ಕಟ್ಟೋಣ ಪ್ರವೇಶೋತ್ಸವವು ಉಡುಪಿ ತಾಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀಮಾನ್ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕುಕ್ಕಿಲ ಗಣಪಯ್ಯ ಸೆಟ್ರು ಶಾಲೆಯ ವಿಷಯದಲ್ಲಿ ಗ್ರಾಮಸ್ಥರ ಮತ್ತು ಉಪಾಧ್ಯಾಯರ ಕರ್ತವ್ಯದ ಕುರಿತು ಭಾಷಣವಿತ್ತರು. ಅಲ್ಲದೆ ಕ್ರೈಸ್ತರು ಮತ್ತು ಹಿಂದುಗಳು ಸಹೋದರರಂತೆ ಬಹು ಪ್ರೀತಿಯಿಂದ ಒಟ್ಟಿಗೆ ನಡಿಸಿಕೊಂಡು ಹೋಗುವ ಶಾಲೆ ಇದೇ ನಮ್ಮ ಜಿಲ್ಲೆಯಲ್ಲಿ ಇದೊಂದೇ ಎಂದೂ ಈ ಬಗ್ಗೆ ಇಲ್ಲಿಯ ಗ್ರಾಮಸ್ಥರನ್ನೂ, ಬಾರಕೂರು ಇಗರ್ಜಿಯ ಪಾದ್ರಿ ಸಾಹೇಬರನ್ನೂ, ಮೆನೇಜರ್ ಬಿ ಹೂವಪ್ಪನವರನ್ನೂ ಬಹಳವಾಗಿ ಪ್ರಶಂಸಿಸಿದರು ಎಮ್ ಸುಬ್ಬಣ್ಣಯ್ಯನವರೂ ಡಾಕ್ಟರ್ ಶ್ರೀನಿವಾಸ ಹೆಬ್ಬಾರರವರೂ ಶಾಲಾಭ್ಯುದಯವನ್ನು ಕೋರಿ ಭಾಷಣವಿತ್ತರು ಅಧ್ಯಕ್ಷರ ಯಥೋಚಿತ ಭಾಷಣದ ಮೇಲೆ ಫಲಾಹಾರದೊಡನೆ ಸಭಾಂತ್ಯವಾಯಿತು

ಉಡುಪಿ

ಶುದ್ಧೀಕರಣ:—ತಾ ೭ಕ್ಕೆ ಉಡುಪಿ ತಾಲೂಕು ಕಚೇರಿಯ ಬಳಿ ಜಯಲಕ್ಷ್ಮೀ ಸಿನೆಮಾ ಥಿಯೇಟರಿದ್ದ ಸ್ಥಳದಲ್ಲಿ ಉಡುಪಿ ಆರ್ಯ ಸಮಾಜದವರ ಶ್ರದ್ಧಾನಂದ ಭವನದ ಪ್ರವೇಶೋತ್ಸವವು ಶ್ರೀ ಧರ್ಮದೇವರಿಂದ ಜರಗಿಸಲ್ಪಟ್ಟಿತು ಅಂದೇ ಒಂದು ರೋಮನ್ ಕೆಥೊಲಿಕ್ ಕುಟುಂಬವನ್ನು ಶುದ್ಧೀಕರಿಸಲ್ಪಟ್ಟಿತು

ಬ್ರಹ್ಮಾವರ

ಹರಿಜನ ಶಿಕ್ಷಣ ಸಂಘ:—ತಾ ೮ರಲ್ಲಿ ಸೇರಿದ ಮಹಾಸಭೆಯಲ್ಲಿ ಶ್ರೀ ಪಿ ಸ್ಯ ರಾಮ ಗುರುಕಳ್ (ಅಧ್ಯಕ್ಷ) ಬಿ ಅಂತಯ್ಯ ಸೆಟ್ಟಿ (ಕಾರ್ಯದರ್ಶಿ) ಬಿ ವಿ ಮಾಧವ ರಾವ್, ಬಿ ಎಂ ಶೇಷಗಿರಿ, ಎಮ್ ಶ್ರೀನಿವಾಸಾಚಾರ್ಯರು ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರಾಗಿ ಚುನಾಯಿತರಾದರ ಚಾಲ್ತಿ ವರ್ಷದಲ್ಲಿ ಇವರು ಹರಿಜನೋದ್ಧಾರ ಕಾರ್ಯವನ್ನು ಭರದಿಂದ ಮುಂದೊತ್ತಬೇಕಾಗಿ ಠರಾವು ಪಾಸಾಯಿತು.

ಸೊಸೈಟಿನ ಸಭೆ. ಬ್ರಹ್ಮಾವರ ಕೋಆಪರೇಟಿವ್ ಸೊಸೈಟಿಯ ವಾರ್ಷಿಕ ಸಭೆಯು ಶ್ರೀ ವಾರಂಬಳ್ಳಿ ಮಾಧವರಾಯರ ಅಧ್ಯಕ್ಷತೆಯಿಂದ ಸೇರಿತು ಸಭೆಯಲ್ಲಿ ಸಾಲಗಳಿಗೆ ಮೊದಲಿಗಿಂತ ಬಡ್ಡಿಯನ್ನು ಕಡಿಮೆ ಮಾಡುವುದಾಗಿಯೂ ರಜತದ ಮಹೋತ್ಸವವನ್ನು ಆಚರಿಸುವುದಾಗಿಯೂ ನಿಶ್ಚಯವಾಯಿತು. ಸೊಸೈಟಿಯ ಅಭಿವೃದ್ಧಿಗೆ ಕಾರಣರಾದ ದಿವಂಗತ ವಾರಂಬಳ್ಳಿ ಸುಬ್ರಾಯರ ಚಿತ್ರ ಚಿತ್ರವನು ಸೊಸೈಟಿಯಲ್ಲಿ ಇಡುವುದಾಗಿ ತೀರ್ಮಾನವಾಯಿತು

ಹೈದರಾಬಾದ ಫಂಡ್:—ಶ್ರೀ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರೂ ಶ್ರೀ ಕಡೆಕಾರು ಶ್ರೀನಿವಾಸರಾಯರೂ ತಾ ೪ರಲ್ಲಿ ಬಂದಿದ್ದು ಹೈದರಾಬಾದ್ ಸತ್ಯಾಗ್ರಹನಿಧಿಗೆ ದ್ರವ್ಯ ಕೂಡಿಸಿ ಉಡುಪಿಗೆ ಹಿಂತಿರಳಿರುವರು

ಪೆರ್ಮದೆ:—ಇಲ್ಲಿಯ ಸೈಂಟ್ ಫ್ರಾಂಸಿಸ್ ಕ್ಸೇವಿಯರ್ ಎಲಿಮೆಂಟರಿ ಶಾಲೆಯಲ್ಲಿ ತಾ ೪ರಂದು ಹೆತ್ತವರ ದಿನಾಚರಣೆಯು ನಡೆಯಿತು ಮಿ ಗ್ರಿಗೋರಿ ಫೆರ್ನಾಂಡಿಸರು ಅಧ್ಯಕ್ಷರಾಗಿದ್ದರು ರಾಜಭಕ್ತಿಯ ಒಂದು ನಾಟಕವೂ ವಿವಿಧ ವಿನೋದಾವಳಿಗಳೂ ಇದ್ದುವು

ಸುಬ್ರಮಣ್ಯ: ಇಲ್ಲಿನ ಅರಣ್ಯ ಸಂಕಷ್ಟಗಳ ಕುರಿತು ವಿಚಾರಿಸುವರೆ ಶ್ರೀ ಕೆ ಆರ್ ಕಾರಂತ, ಎಂ ಎಲ್ ಎ ಇವರು ಫಾರೆಸ್ಟು ಆಫೀಸರರೊಡನೆ ತಾ ೬ರಂದು ಹೋಗಿರುವರಾಗಿ ತಿಳಿಯುತ್ತದೆ

ಪೆರಂಜೆ:—ಇಲ್ಲಿಯ ಬಡಕೋಡಿ ಬೋರ್ಡ ಎಲಿಮೆಂಟರಿ ಶಾಲೆಯನ್ನು ಪೆರಂಜೆಯ ನೂತನ ಕಟ್ಟೋಣಕ್ಕೆ ವರ್ಗಾಯಿಸುವ ಸಮಾರಂಭವು ತಾ ೧—೬—೩೯ರಲ್ಲು ವೇಣೂರು ಸರ್ಕಲಿನ ಮೆಂಬರರಾದ ಶ್ರೀ ಟಿ ಕುಮಾರಯ್ಯ ಜೈನಿಯವರ ಅಧ್ಯಕ್ಷತೆಯಲ್ಲಿ ಜರಗಿತು ಸದ್ರಿ ಪ್ರವೇಶೋತ್ಸವಕ್ಕೆ ಗ್ರಾಮದ ಅನೇಕ ಮಹನೀಯರು ಹಾಜರಿದ್ದು, ಶಾಲೆಯು ಧ್ವಜಪತಾಕೆಗಳಿಂದ ಅಲಂಕರಿಸಿ ತಿಕ್ಕಿರಿದಿತ್ತು ಅಧ್ಯಕ್ಷರ ಪ್ರಾರಂಭದ ಭಾಷಣವಾದ ಕೂಡಲೇ-ಸಭೆಕರಲ್ಲಿ ಕೆಲವರ ಭಾಷಣವಾಯಿತು ತರುವಾಯ ಶಾಲೆಯ ಮುಖ್ಯ ಉಪಾಧ್ಯಾಯರಾದ ಕೆ ಸುಂದರ ಶೆಟ್ರು ಸುಮಾರು ೬೦ ಮಂದಿ ಮಕ್ಕಳನ್ನು ದಾಖಲು ಮಾಡಿದರು

ತರುವಾಯ ಅಧ್ಯಕ್ಷರು ಸುರಸವಾದ ಭಾಷಣವಾದೊಡನೆ ಸಿಹಿ ಫಲಾಹಾರವಾಗಿ ಸಭೆಯು ಮುಕ್ತಾಯವಾಯಿತು

A GOLDEN OPPORTUNITY
FOR
Failed and Neglected Students
The Canara Tutorial College,
Sharada Press Bldgs. : : Car Street MANGALORE.

Students coached up by efficient M. A's.

FOR THE

1. S. S. L. C. 2. Intermediate 3. B. A. Degree Exams.

Seats Limited! Fees Moderate!

Apply sharp to the - **Principal.**

ಯುರೋಪಿನ ಶಾಂತಿಗಾಗಿ ರೂಸ್‌ವೆಲ್ಟರ ಪ್ರಯತ್ನ

'ನಾವು ದುರ್ಬಲರೊಡನೆ ಇರುವೆವು'
ಬಂಗಾಳದ ಮಂತ್ರಿಮಂಡಲದ ಮೇಲೆ ಟೀಕೆ

ಕಾಂಗ್ರೆಸ್ ಶುದ್ಧೀಕರಣ

ಕಾಂಗ್ರೆಸ್ ಸಂಸ್ಥೆಯನ್ನು ಪವಿತ್ರಸಂಸ್ಥೆಯನ್ನಾಗಿ ಮಾಡುವ ಉದ್ದೇಶದಿಂದ ಅದರಲ್ಲಿ ಆಗುವ ಅನ್ಯಾಯಗಳನ್ನು ತಡೆಗಟ್ಟುವಂತೆ ಕಾಂಗ್ರೆಸ್ ನಿಬಂಧನೆಯನ್ನು ಬಲಪಡಿಸುವ ಸಲುವಾಗಿ ಮಹಾತ್ಮರ ಸನ್ನಿಧಿಯಲ್ಲಿ ಬೊಂಬಯಿಯಲ್ಲಿ ಸಭೆಸೇರಿರುವುದಷ್ಟೆ?—ಅದರಲ್ಲಿ ಕಾಂಗ್ರೆಸ್ ಘಟನೆಗಳಲ್ಲಿ ಅನೇಕ ತಿದ್ದುಪಡಿಗಳು ಆಗಿವೆ. ಕಾಂಗ್ರೆಸ್ ಸದಸ್ಯರ ರಿಜಿಸ್ಟರ್ ಪುಸ್ತಕವನ್ನು ಶಾಶ್ವತವಾಗಿ ಇಡುವುದು ಮತದಾನ ಪದ್ಧತಿಯಲ್ಲಿ ಆಗುವ ಸುಧಾರಣೆ ಪ್ರತಿನಿಧಿಯಾಗಬೇಕಾದರೆ ಮೂರು ವರ್ಷಗಳಿಂದ ಸದಸ್ಯನಾಗಿರಬೇಕಾದ ವಿಷಯ ಮುಖ್ಯವಾಗಿ ಸೂಚನೆಗಳಾಗಿವೆ ಕಾಂಗ್ರೆಸಿನಲ್ಲಿದ್ದು ಪ್ರತ್ಯೇಕ ಪಕ್ಷಗಳನ್ನು ಸಾಧಿಸುವವರನ್ನು ಶಿಸ್ತಿಗಾಗಿ ಕಾಂಗ್ರೆಸಿನಿಂದ ಹೊರ ಹಾಕಬೇಕೆಂದೂ, ಅದು ಸಮ್ಮತವಲ್ಲವೆಂದೂ ಚರ್ಚೆಯಾಯಿತು ಕಾಂಗ್ರೆಸಿನ ಉದ್ದೇಶಕ್ಕೆ ಘಾತಕವಲ್ಲದ ರೀತಿ ಸ್ವಪಕ್ಷಗಳನ್ನು ಸಾಧಿಸುವ ಮೈನಾರಿಟಿಗಳಿಗೆ ಆಶ್ರಯ ಕೊಡಬೇಕೆಂದು ಪಂಡಿತ ಜವಾಹಿರಲಾಲರ ಆಚಾರ್ಯ ನರೇಂದ್ರದೇವರೂ ಹೇಳಿದರು.

ಹಿಂದೀ ವಿರೋಧಿಗಳ ಬಿಡುಗಡೆ

ಮದ್ರಾಸುಪ್ರಾಂತ್ಯದಲ್ಲಿ ಹಿಂದೀ ವಿರೋಧವಾಗಿ ಚಳವಳಿ ನಡೆಸಿ ಸೆರೆಮನೆಗೆ ಹೋದವರನ್ನು ಸರಕಾರವು ಬಿಡುಗಡೆ ಮಾಡುತ್ತದೆ ಪ್ರಾಂತದಲ್ಲಿ ಬಿಟ್ಟ ೧೩೮ ಮಂದಿಯನ್ನು ಸೆರೆಯಿಂದ ಬಿಟ್ಟಿರುತ್ತಾರೆ

ಒರಿಸ್ಸಾದಲ್ಲಿ ಚಳವಳ

ಒರಿಸ್ಸಾದ ಆಶ್ರಿತರಾಜ್ಯಗಳಲ್ಲಿ ಚಳವಳವು ಮಹಾತ್ಮರ ಮತ್ತು ಶ್ರೀ ಎಫ್ ಅಂಡ್ರೂಸರವರ ಮಧ್ಯಸ್ಥಿಕೆಯಿಂದ ನಿಲ್ಲಿಸಲ್ಪಡುವುದೆಂದು ತಿಳಿಯುತ್ತ ವೈಸರಾಯರಿಗೆ ಈ ಕುರಿತು ಅವರು ತಂತಿಬಿಟ್ಟಿರುವರು

ಹೈದರಾಬಾದು

ಹೈದರಾಬಾದಿನಲ್ಲಿ ಸತ್ಯಾಗ್ರಹವು ಭರದಿಂದ ಸಾಗುತ್ತಿದೆ ಶ್ರೀ ಮಹಾಶಯ ಕೃಷ್ಣರನ್ನು ಸೆರೆ ಹಿಡಿದಿದ್ದಾರೆ ಅನೇಕ ಆರ್ಯಸಮಾಜದ ಸತ್ಯಾಗ್ರಹಿಗಳೂ ಬಂಧಿಸಲ್ಪಡುತ್ತಿದ್ದಾರೆ

ವ್ಯಾಪಾರ ಮತ್ತು ಹೊಗೆಸೊಪ್ಪಿನ ತೆರಿಗೆ

ಮದ್ರಾಸು ಎಸೆಂಬ್ಲಿಯವರು ಮಂಜೂರು ಮಾಡಿದ ವ್ಯಾಪಾರ ಮತ್ತು ಹೊಗೆಸೊಪ್ಪಿನ ತೆರಿಗೆಯ ಮಸೂದೆಗೆ ಗವರ್ನರರು ತಮ್ಮ ಮಂಜೂರಾತಿಯನ್ನು ಕೊಟ್ಟಿರುತ್ತಾರೆ

ಶ್ರೀ ಜಮನಾಲಾಲ್ ಬಜಾಜ್

ಶ್ರೀ. ಜಮನಾಲಾಲ್ ಬಜಾಜರವರು ಜಯಪುರದ ಸಂಸ್ಥಾನದ ಚಳವಳದ ಕುರಿತು ಒಂದು ಇತ್ಯರ್ಥವಾಗುವಂತೆ ಅಧಿಕಾರಿಗಳು ಮತ್ತು ಕಾಂಗ್ರೆಸು ಕೆಲಸಗಾರರಲ್ಲಿ ಒಪ್ಪಂದವಾಗುವ ಸಾಧ್ಯತೆ ಬೆಳೆಸುವರೆಂದು ತಿಳಿಯುತ್ತದೆ

ಬಂಗಾಳದ ಮಂತ್ರಿಮಂಡಳ

ಬಂಗಾಳದ ಮಂತ್ರಿಮಂಡಲದ ವರ್ತನೆಯು ತೀವ್ರ ವಿಮರ್ಶೆಗೆ ಗುರಿಯಾಗಿದೆ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಅಲ್ಲಿನ ಕೂಲೀಕಾರ ಮುಖಂಡರನ್ನು ಬಂಧಿಸಿದ ವಿಷಯದಲ್ಲಿ ಮಂತ್ರಿಮಂಡಳವು ನಾಗರೀಕ ಸ್ವಾತಂತ್ರ್ಯವನ್ನು ತಡೆಗಟ್ಟುತ್ತಿರವುದಾಗಿ ಖಂಡಿಸಿ ಠರಾವು ಮಂಜೂರಾಯಿತು

ಕೂಲಿಗಾರರ ಚಳವಳ

ಡಿಗ್ ಬೋಯಿ ಯಂಟಲ್ಲಿ ಕೂಲಿಗಾರರ ಚಳವಳವು ನಡೆಯುತ್ತಲೇ ಇದೆ ಇದರ ಕುರಿತು ಯೋಗ್ಯ ತೀರ್ಮಾನವಾಗಬೇಕೆಂದು ಅಸ್ಸಾಮದ ಮಂತ್ರಿಗಳೂ ಕಾಂಗ್ರೆಸು ಮುಖಂಡರು ಯತ್ನಿಸಿದಲ್ಲಿ ಯಾವ ಒಪ್ಪಂದವೂ ಆಗಲಿಲ್ಲ. ಈ ಕುರಿತು ಆಗತ್ಯವಿದ್ದರೆ ರಾಷ್ಟ್ರಪತಿಗಳೇ ಬರಲಿರುವರಾಗಿ ತಿಳಿಯುತ್ತದೆ.

ರಾಷ್ಟ್ರೀಯ ಯೋಜನಾಸಮಿತಿ

ರಾಷ್ಟ್ರೀಯ ಯೋಜನಾಸಮಿತಿ (ನೇಶನಲ್ ಪ್ಲೇನಿಂಗ್ ಕಮಿಟಿ)ಗೆ ಪಂಡಿತ ಜವಾಹಿರಲಾಲ ನೆಹರುಗಳು ಈ ರೀತಿಯಾಗಿ ಒಂದು ಸೂಚನೆ ಇತ್ತಿದ್ದಾರೆ. ಈ ಸಮಿತಿಯ ಸದಸ್ಯರು ಇನ್ನು ಮುಂದೆ ಸ್ವತಂತ್ರವಾಗುವ ಭಾರತವರ್ಷಕ್ಕೆ ಯಾವ ರೀತಿಯ ಯೋಜನೆಯು ಫಲಿಸೀತು ಎಂಬ ಹಾಗೆ ವಿಚಾರ ಮಾಡಿ ತಮ್ಮ ಕೆಲಸಗಳನ್ನು ಆರಂಭಿಸಬೇಕು, ಮತ್ತು ಪ್ರಕೃತಪರಿಸ್ಥಿತಿಯಲ್ಲಿ ಇತರ ಅನೇಕ ಇಲಾಖೆಗಳಲ್ಲಿ ಹೇಗೆ ಹೇಗೆ ಕಾರ್ಯಗಳನ್ನು ಮಾಡಬಹುದೆಂದೂ ಆಲೋಚಿಸಬೇಕು ಪಂಡಿತರು ಈ ಕಾರ್ಯದಲ್ಲಿ ಪ್ರಾಂತಿಕಸರಕಾರ ಆಶ್ರಿತರಾಜ್ಯಗಳೇ ಮೊದಲಾಗಿ ಸಹಕರಿಸಬೇಕಾಗಿಯೂ ಬಿನ್ನವಿಸಿಕೊಂಡಿದ್ದಾರೆ

ಕೆಲಸ ಮಾಡದೆ ವೇತನ

ಲಾಹೋರಿನಲ್ಲಿ ಜಾಡಮಾಲಿಗಳು ಮುಷ್ಕರ ಹಿಡಿದು ಕೆಲಸ ಮಾಡದಿರುವ ದಿನಗಳಲ್ಲಿ ಅವರಿಗೆ ಸಂಬಳ ಕೊಡಲು ಸರಕಾರದವರು ಅಪ್ಪಣೆ ಮಾಡಿದ್ದಾರೆ

ಗಣೇಶಶಂಕರ ವಿದ್ಯಾರ್ಥಿ ಸ್ಮಾರಕ

ಗತಿಸಿದ ಕಾಂಗ್ರೆಸ್ ಮುಂದಾಳುಗಳಾಗಿದ್ದ ಶ್ರೀ. ಗಣೇಶಶಂಕರ ವಿದ್ಯಾರ್ಥಿ ಇವರ ಸ್ಮಾರಕವಾಗಿ ಕಾನ್‌ಪುರ ಮುನ್ಸಿಪಾಲಿಟಿಯವರು ಸಾಂಕ್ರಾಮಿಕ ರೋಗ ನಿವಾರಣೆಯ ಆಸ್ಪತ್ರೆಯನ್ನು ಕಟ್ಟಿರುವರು

ಖಾದೀ ಪ್ರೋತ್ಸಾಹ

ಬಂಗಾಳದಲ್ಲಿ ಖಾದಿ ಪ್ರೋತ್ಸಾಹಕ್ಕಾಗಿ ಅಲ್ಲಿನ ಹರಿಜನ ಸೇವಾ ಸಂಘದಿಂದ ೫೫ ಸಾವಿರ ರೂಪಾಯಿ ಸಾಲ ತೆಗೆಯಲ್ಪಟ್ಟಿದೆ

ತೆಟಿಸ್ ಜಲಾಂತರ್ಯಾಮಿ ನಾವೆ

ಕಳೆದ ವಾರ ಮುಳುಗಿ ಹೋದ ಬ್ರಿಟಿಷ್ ಜಲಾಂತರ್ಯಾಮಿ ನಾವೆಯಾದ ತೆಟಿಸನ್ನು ನೀರಿನಿಂದ ತೆಗೆಯುವ ಕುರಿತು ಬರ್ಕೆನ್ ಹೆಡ್ಡಿನಲ್ಲಿ ಒಂದು ಸಭೆ ಸೇರಿ ತರ್ಕಿಸಲು, ಇನ್ನು ಮೂರು ವಾರಗಳ ತನಕ ಅದನ್ನು ತೆಗೆಯುವ ಯತ್ನಮಾಡುವದಿಲ್ಲವಾಗಿಯೂ, ಅದನ್ನು ತೆಗೆಯುವುದು ಬಹಳ ಕಷ್ಟದ ಕೆಲಸವೆಂದೂ ನಿರ್ಣಯಿಸಲ್ಪಟ್ಟಿತು

ಜರ್ಮನಿಯ ಹೊಸ ಉಪಾಯ

ಅಟ್ಲಾಂಟಿಕ್ ಸಮುದ್ರದ ಮೇಲೆ ಹೋಗುವ ಜರ್ಮನ್ ಹಡಗಗಳ ಪ್ರಯಾಣದ ದರವು ಇಳಿಸಲಾಗಿರುವುದರಿಂದ, ಬ್ರಿಟಿಷ್ ಫ್ರೆಂಚ್ ಹಡಗುಗಳ ವ್ಯಾಪಾರವು ಕಡಿಮೆಯಾಗಿದೆ ವ್ಯಾಪಾರವನ್ನು ಹೆಚ್ಚುಮಾಡಲು ಇದು ಜರ್ಮನರ ಹೊಸ ಉಪಾಯ.

ಶಾಂತಿಗಾಗಿ ರೂಜವೆಲ್ಟರು

ಯುರೋಪಿನ ಶಾಂತಿಗಾಗಿ ಅಮೇರಿಕದ ಅಧ್ಯಕ್ಷರಾದ ರೂಜವೆಲ್ಟರು ಇನ್ನೊಮ್ಮೆ ಸಾಧ್ಯವಾದ ಯತ್ನಮಾಡಿ ನೋಡುವರಾಗಿ ಸುದ್ದಿ ತಿಳಿದಿದೆ ಇದಕ್ಕಾಗಿ ಅಖಿಲ ಪ್ರಪಂಚದ ಒಂದು ಸಮ್ಮೇಳನವನ್ನು ಕರೆದು ಅದರಲ್ಲಿ ತಮ್ಮ ಅಭಿಪ್ರಾಯವನ್ನು ಮುಂದಿಸಲಿರುವರಂತೆ.

ಸರ್ವಾಧಿಕಾರಿಗಳು ಒಂದಾಗುತ್ತಾರೆ

ಇತ್ತ ಬ್ರಿಟನ್ ಫ್ರಾನ್ಸು ರಶ್ಯಾ ರಾಷ್ಟ್ರಗಳು ಸರ್ವಾಧಿಕಾರಿಗಳನ್ನು ಎದುರಿಸಲು ಒಂದಾಗುವುದಿದ್ದರೆ ಅತ್ತ ಇಟಲಿ, ಜರ್ಮನಿ ಜಪಾನುಗಳು ಒಂದಾಗುತ್ತವೆ ರಕ್ಷಣೆ ಒಪ್ಪಂದವು ಸ್ಪಷ್ಟವಾದಲ್ಲಿ ಇಟಲಿ ಜರ್ಮನಿಗಳು ತಮ್ಮ ಅಭಿಮತವನ್ನು ಸ್ಪಷ್ಟಗೊಳಿಸುವುವಾಗಿ ತಿಳಿದು ಬರುತ್ತದೆ. ಜಪಾನಿನೊಡನೆ ತೀವ್ರವಾದ ಪತ್ರವ್ಯವಹಾರಗಳು ನಡೆಯುತ್ತಿವೆ. ಸ್ಪೈಯಿನ ಸರ್ವಾಧಿಕಾರಿಗಳ ಹಂಗಿನಲ್ಲಿಯೇ ಇದೆ

ಕೆಂಟ್ ರಾಜಕುಮಾರಿಯವರೆಡೆಗೆ ಗುಂಡುಹಾರಿಸಿದರು

ಕೆಂಟ್ ರಾಜಕುಮಾರಿಯು ಕಡೆಗೆ ಲೇಡಿ ಪೋರ್ಟಲಿಂಗ್ಟನ್‌ಳೊಡನೆ ಸಿನೇಮಾ ನೋಡಲು ಹೋಗುವ ಸಂದರ್ಭದಲ್ಲಿ ಗುಂಡು ಹಾರಿಸಲ್ಪಟ್ಟಿತು. ಅದೃಷ್ಟವಶಾತ್ ಅದರಿಂದ ಏನು ಅಪಾಯವಾಗಿರುವುದಿಲ್ಲ ಪೋಲಿಸರು ಗುಂಡಿನ ಶಬ್ದವನ್ನು ಕೇಳಿ ಆ ಕಡೆಗೆ ಧಾವಿಸಿ ಒಬ್ಬನನ್ನು ಹಿಡಿದು ಬಂಧಿಸಿರುವರು ಕೆಳಗಡೆ ಬಿದ್ದಿರುವ ಕೋವಿಯನ್ನು ಕೂಡಾ ಹಿಡಿದಿದ್ದಾರೆ

ಲಂಡನಿನಲ್ಲಿ ಬೊಂಬುಗಳು

ಲಂಡನಿನಲ್ಲಿ ಕಳೆದ ವಾರದಿಂದ ಅಲ್ಲಲ್ಲಿ ಗುಪ್ತವಾಗಿ ಬೊಂಬುಗಳ ಅನಾಹುತಗಳು ಆರಂಭವಾಗಿವೆ. ಲಂಡನಿನ ನೋರ್ತರ್ನ್ ಡಿಸ್ಟ್ರಿಕ್ಟ್ ಆಫೀಸ್ ವೆಸ್ಟ್ ಸೆಂಟ್ರಲ್ ಆಫೀಸುಗಳಲ್ಲಿ ಬಾಂಬುಗಳ ಸಿಡಿತ ಬುದ್ಧಿ ಕೇಳುತ್ತದೆ ಹೀಗಾಗಿ ಲಂಡನಿನಲ್ಲಿ ಎಲ್ಲಾ ಕಡೆಗಳಲ್ಲಿಯೂ ಈ ಬಗ್ಗೆ ವಿಶೇಷವಾಗಿ ಎಚ್ಚರಿಕೆಯು ತೆಗೊಳ್ಳಲ್ಪಡುತ್ತಿದೆ. ಆಫೀಸರರು ಈ ವಿಷಯದಲ್ಲಿ ಪ್ರತ್ಯೇಕವಾದ ಪರಿಶ್ರಮ ತೆಗೊಳ್ಳುತ್ತಿದ್ದಾರೆ

ಬ್ರಿಟಿಷರೂ ಜಪಾನರೂ

ಬ್ರಿಟಿಷರಿಗೂ ಜಪಾನರಿಗೂ ಹಿಡಿದ ಬಂದಿದೆ ಜಪಾನಿನವರು ಶಾಂಘಾಯಿ ಬ್ರಿಟಿಷ್ ಕಾನ್ಸೆಸನೆಯಲ್ಲಿದ್ದ ಬ್ರಿಟಿಷನೊಬ್ಬನನ್ನು ಕೈದು ಮಾಡಲಾಗಿ ಆತನು ಮರುದಿನ ಮರಣಹೊಂದಿದನು. ಆತನ ಮೈಮೇಲೆ ಗಾಯ ಗಳಿದ್ದುವಂತೆ ಹೀಗಾಗಿ ಬ್ರಿಟಿಷರು ಜಪಾನಿಗೆ ತಮ್ಮ ಆಕ್ಷೇಪವನ್ನು ಕಳುಹಿಸಿದ್ದಾರೆ

ಐ. ಸಿ. ಎಸ್. ಪರೀಕ್ಷೆ

ಲಂಡನಿನ ಈ ವರ್ಷದ ಐ ಸಿ ಎಸ್ ಪರೀಕ್ಷೆಯಲ್ಲಿ ೭ ಮಂದಿ ಹಿಂದೀಯರು ಆಯ್ಕೆಯಾಗಿರುವರು

ನಾವು ದುರ್ಬಲರೊಡನೆ ಇರುವೆವು

ಲಾರ್ಡ್ ಹೆಲಿಫೆಕ್ಸರವರು ತಮ್ಮ ಭಾಷಣದಲ್ಲಿ ನಾವು ದುರ್ಬಲ ರಾಷ್ಟ್ರಗಳ ಸಹಾಯಕ್ಕೆ ನಿಲ್ಲುವೆವು ಎಂದು ಹೇಳಿರುತ್ತಾರೆ ಇದೇ ಸಮಯದಲ್ಲಿ ಮಿ. ಏಡನರವರೂ ಬ್ರಿಟನಿನ ಸರ್ವಾಧಿಕಾರೀ ವಿರುದ್ಧ ಪ್ರತಿಕ್ರಿಯೆಯೆಂಬ ಎಲ್ಲಾ ಶಾಂತಿಪ್ರಿಯ ರಾಷ್ಟ್ರಗಳ ಐಕ್ಯದಿಂದ ಸಾಧ್ಯವಾಗಿದೆಯೆಂದು ಹೇಳುತ್ತಾರೆ

ಐರಿಷ ರಿಪಬ್ಲಿಕನ ಸೈನ್ಯ

ಇದರ ಬಾಂಬ ಹಾಕುವ, ಗುಂಡು ಹೊಡೆಯುವ ಅನಾಹುತಕಾರಿ ಕೃತ್ಯಗಳು ಇಂಗ್ಲಾಂಡಿನಲ್ಲಿ ನಿಂತಿರುವದಿಲ್ಲ ಈ ಸೈನ್ಯವನ್ನು ಕಾನೂನು ಬಾಹಿರ ಸಂಸ್ಥೆ ಎಂದು ಬ್ರಿಟನ ಸರಕಾರವು ಸಾರಲೂಬಹುದು. ಸರಕಾರಕ್ಕೆ ಈ ಅಧಿಕಾರವನ್ನು ಕೊಡುವ ಹೊಸ ಕಾನೂನು ಅಯರ್‌ಲೆಂಡಿನ ಸೆನೇಟಿನಲ್ಲಿ ಮಂಜೂರಾಗಿದೆ ಐರಿಷ ಸರಕಾರವು ವಿವಿಧ ಉಪಾಯಗಳಿಂದ ತನ್ನ ಧ್ಯೇಯವನ್ನು ಸಾಧಿಸಬೇಕೆಂದಿದೆ ಅದಕ್ಕೆ ಅಮೇರಿಕದ ತುಂಬಾ ಸಹಾನುಭೂತಿ ಬೆಂಬಲಗಳು ಇರುವವೆಂದು ಪ್ರವಾಸಿಗಳು ಹೇಳುವರು

ರಾಜದಂಪತಿಗಳ ಅಮೆರಿಕ ಸಂಚಾರ

ಬ್ರಿಟಿಷ ರಾಜದಂಪತಿಗಳು ತಮ್ಮ ಕೆನಡಾ ಪ್ರವಾಸವನ್ನು ಮುಗಿಸಿ ಸಂಯುಕ್ತ ಪ್ರಾಂತಗಳಿಗೆ ತೆರಳಿದ್ದಾರೆ ಬ್ರಿಟನ ಬಾದಶಹರು ಅಮೆರಿಕಕ್ಕೆ ಹೋಗಿರುವುದು ಇದೇ ಮೊದಲನೆ ಬಾರಿ ಅಲ್ಲಿ ಅವರಿಗೆ ರಾಜಯೋಗ್ಯ ಸಂಭ್ರಮದ ಸ್ವಾಗತೋಪಚಾರಗಳು ಆಗಿವೆ

ಪಾವಲ್ ಹಿಟ್ಲರ ಭೇಟಿ

ಯುಗೊಸ್ಲೋವದ ಪ್ರಿನ್ಸ ಪಾವಲ್ ಬರ್ಲಿನಿನಲ್ಲಿ ಹಿಟ್ಲರನ ಭೇಟಿಯಾದರು. ಅವರಿಗೆ ಅಲ್ಲಿ ಸಂಭ್ರಮದ ಸ್ವಾಗತವು ಕೊಡಲ್ಪಟ್ಟಿತು. ಈ ಭೇಟಿಯ ಪರಿಣಾಮದಿಂದ ಯುಗೊಸ್ಲೇವಿಯ ಜರ್ಮನ ರಾಜ್ಯಗಳ ರಾಜಕೀಯ ಆರ್ಥಿಕ ಮತ್ತು ಸಾಂಸ್ಕೃತಿಕ ಸ್ನೇಹಸಂಬಂಧಗಳು ಇನ್ನಷ್ಟು ಕೂಡಿ ಬರುವಂತಾಯಿತೆಂದು ಅಲ್ಲಿ ಅಭಿಪ್ರಾಯವಾಗಿದೆ

ಮುಳುಗಿದ ಥೀಟಿಸ ಸಬ್‌ಮೆರೀನು

ಈ ಸಬ್‌ ಮೆರೀನಿನೊಳಗಿದ್ದ ಸುಮಾರು ೯೦ ಮಂದಿ ಅಪಮೃತ್ಯುವಿಗೆ ಗುರಿಯಾದವರು ಅವರನ್ನು ಜೀವಸಹಿತ ಕಾಪಾಡಲಿಕ್ಕೆ ಮಾಡಿದ ಭಗೀರಥ ಪ್ರಯತ್ನಗಳು ವ್ಯರ್ಥವಾದುವು ಈಗ ಸಬ್‌ಮೆರೀನನ್ನು ಮೇಲಕ್ಕೆತ್ತಲಿಕೆ ಪ್ರಯತ್ನಗಳಾಗಿವೆ ಇದಕ್ಕೆ ಒಂದೆರಡು ತಿಂಗಳು ಬೇಕಾಗಬಹುದು ಸಬ್‌ಮೆರೀನು ಮುಳುಗಿದ ಕಾರಣ ವಿಚಾರಣೆ ಬಗ್ಗೆ ಲಾರ್ಡ ಬಕ್ನಿಲ್ಲರ ಅಧ್ಯಕ್ಷತೆಯಲ್ಲಿ ಒಂದ ವಿಚಾರಣೆ ಸಮಿತಿಯು ಆಗುತ್ತದೆ

ನಾಝೀ ಜರ್ಮನಿಯ ಕೂಲಿಗಳ ಅವಸ್ಥೆ

ನಾಝೀ ಜರ್ಮನಿಯ ಕೂಲಿಗಳ ಅವಸ್ಥೆಯು ಹೃದಯ ವಿದ್ರಾವಕವಾಗಿರುವುದು ಅವರನ್ನು ನಾಝಿಗಳು ವಿಶ್ರಮಿಸದೆ ದುಡಿಸುತ್ತಾರಾದರೂ ಅವರಿಗೆ ಬೇಕಾದಷ್ಟು ಹಣ ಅಥವಾ ಅನ್ನಬಟ್ಟೆಗಳು ಕೊಡಲ್ಪಡುವುದಿಲ್ಲ ಅರೆಹೊಟ್ಟೆ ಉಂಡು, ಬರಿನೆಲದಮೇಲೆ ಮಲಗಿ ಅರ್ಧನಗ್ನರಾಗಿದ್ದು ಅವರು ಕಾಲಯಾಪನೆ ಮಾಡಬೇಕು. ಜೀವನದಲ್ಲಿ ಬೇರೆ ಯಾವ ಸುಖವನ್ನು ಕಾಣಲಾರದವರಾಗಿರುವುದರಿಂದ ಮದ್ಯಪಾನ, ಗಾಂಜಾ ಅಫೀಮುಗಳ ಸೇವನೆ ಮಾಡಿ ಅವರು ನಾರಕೀಯ ಜೀವನವನ್ನು ಮಾಡುತ್ತಿರುವರು

ಸಂಯುಕ್ತ ಪ್ರಾಂತ್ಯದಲ್ಲಿ ಶಿಕ್ಷಣ ಸಮಿತಿ

ಸಂಯುಕ್ತ ಪ್ರಾಂತ ಸರಕಾರವು ಮೂಲೋದ್ಯೋಗ ಶಿಕ್ಷಣ ಕ್ರಮ ತತ್ವಗಳನ್ನು ಒಪ್ಪಿ ಅದನ್ನು ತನ್ನ ಪ್ರಾಂತದ ಶಾಲೆಗಳಲ್ಲಿ ಜಾರಿಗೆ ತರಲಿಕ್ಕೆ ಬಹುವಿಧ ಪ್ರಯತ್ನಗಳನ್ನು ಮಾಡಿರುವುದರಿಂದ ವಾರ್ಧಾ ಶಿಕ್ಷಣ ಕ್ರಮದ ಶಾಲೆಗಳ ಇಲ್ಲಿ ಒಂದೆರಡು ವರ್ಷಗಳಲ್ಲಿಯೇ ಸರ್ವತ್ರ ಸ್ಥಾಪಿತವಾಗಿ ಅವುಗಳ ಮೂಲಕವೇ ಪ್ರಾಥಮಿಕ ಶಿಕ್ಷಣ ಪ್ರಚಾರವಾಗತೊಡಗುವದು ಇದರಿಂದ ವಾರ್ಧಾ ಕ್ರಮದ ಪ್ರಾಥಮಿಕ ಶಿಕ್ಷಣಕ್ಕೆ ಹೈಸ್ಕೂಲ ಮತ್ತು ಕಾಲೇಜು ಶಿಕ್ಷಣಗಳನ್ನು ಹೇಗೆ ಹೊಂದಿಸಬಹುದೆಂಬುದನ್ನು ಆಲೋಚಿಸಿ ವರದಿ ಬರೆಯಲಿಕ್ಕೆ ಸಂಯುಕ್ತ ಪ್ರಾಂತ ಸರಕಾರವು ಒಂದು ಸಮಿತಿಯನ್ನು ನಿರ್ಮಿಸಿದೆ

ಎರಡು ಸ್ತುತ್ಯ ದಾನಗಳು

ಎಲ್ಲಾ ದಾನಗಳಿಗಿಂತ ವಿದ್ಯಾದಾನ ಮತ್ತು ಜೀವದಾನಗಳು ಉತ್ಕೃಷ್ಟವೆನ್ನಿಸಿವೆ ಕಳೆದ ವಾರ ಇಬ್ಬರು ಪುಣ್ಯಪುರುಷರು ಇಂಥ ಮಹಾದಾನಗಳನ್ನು ಮಾಡಿ ಚಿರಕೀರ್ತಿಯನ್ನು ಸಂಪಾದಿಸಿರುವರು ಬೆಂಗಳೂರಿನ ಶ್ರೀ ರಾಣೋಜಿ ರಾವ್‌ಗಳವರು ೧೫೦೦೦ ರೂ ಖರ್ಚು ಮಾಡಿ ತಮ್ಮ ಜಾತಿಯ ವಿದ್ಯಾರ್ಥಿಗಳ ಉಪಯೋಗಕ್ಕೆ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಿ ಕೊಟ್ಟಿರುವರು ಮದುರೆಯಲ್ಲಿ ಶ್ರೀ ಯಂ ಯಸ್ ಮಾಮ್ ಸುಬ್ಬಯ್ಯರು ಒಂದು ಲಕ್ಷ ರೂಪಾಯಿ ಕೊಟ್ಟು ತಮ್ಮ ಸಮಾಜದವರಿಗಾಗಿ ಒಂದು ದೀನ ಸಂರಕ್ಷಣ ಶಾಲೆಯನ್ನು ಕಟ್ಟಿಸಿದ್ದಾರೆ ಈ ಶಾಲೆಯಲ್ಲಿ ಅನಾಥರೂ ಕೈಲಾಗದ ಮುದುಕರೂ ಆಗಿರುವ ದೀನರನ್ನು ಅನ್ನಬಟ್ಟೆ ಕೊಟ್ಟು ಸಾಕಲಾಗುತ್ತದೆ ಇಂಥ ಧರ್ಮಕಾರ್ಯಗಳು ಎಷ್ಟು ಹೆಚ್ಚುವವೋ ಅಷ್ಟಕ್ಕೆ ಭಾರತವು ಸುಭಿಕ್ಷವಾಗುವದು

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಗಾಂಧಿ ತತ್ವ ಪ್ರಚಾರ

ಏಕಾಂಗಿಯಾದ ನಾಗಾರಾಣಿಯ ಕರುಣ ಕಥೆ!

ಸಿಲೋನಿನಲ್ಲಿ ಹಿಂದೀಯರು

ಪ್ರೆಸಿಡೆಂಟ್ ರೂಸವೆಲ್ಟರಿಗೆ ಸಾವರ್ಕರರ ಸಂದೇಶದ ಮಾರ್ದನಿ.

ಜಗತ್ತಿನ ಶಾಂತಿಯ ಕುರಿತು ಸಾಧಿಸುವ ಯಾವುದೇ ಪ್ರಯತ್ನಗಳಿಗಿಂತ ಮೊದಲಾಗಿ ಹಿಂದೂದೇಶದ ಸ್ವಾತಂತ್ರ್ಯದ ಕುರಿತು ಕೂಡ ನಿರ್ಣಯವಾಗಬೇಕೆಂದು ಶ್ರೀ. ಸಾವರ್ಕರರು ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರಿಗೆ ಬಿಟ್ಟ ತಂತಿಯ ಕುರಿತು ಅಮೇರಿಕದ ಪತ್ರಗಳಲ್ಲಿ ಅನೇಕ ವಿಚಾರಗಳು ಬಂದಿವೆ.

ಅಮೇರಿಕದ ಪತ್ರಗಳಲ್ಲಿ ಶ್ರೀ. ಸಾವರ್ಕರರನ್ನು ಓನರೇಬಲ್ ಸಾವರ್ಕರರೆಂದೂ ಹಿಂದೂ ಮಹಾಸಭೆಯನ್ನು ಹಿಂದುಗಳ ಹಕ್ಕುಸ್ಥಾಪನೆಗಾಗಿ ಹೋರಾಡುವ ಅಖಿಲಭಾರತ ರಾಷ್ಟ್ರೀಯ ಸಂಸ್ಥೆಯೆಂದೂ ವರ್ಣಿಸಲಾಗಿದೆ. ಮಿ| ಎಂ. ಎಂ. ಗ್ರೋಸ್ ಎಂಬವರು ಈ ರೀತಿಯಾಗಿ ಬರೆಯುತ್ತಾರೆ.

"ನಿಮ್ಮ ಹಾಗೆ ವಿಚಾರಿಸುವವರು ಇನ್ನೂ ಕೆಲವರಿರುತ್ತಾರೆ. ನಮ್ಮ ದೇಶಕ್ಕೆ ನಿಮ್ಮ ಸಂದೇಶವು ಬಹಳ ಸರಿಯಾಗಿ ಕಳುಹಿಸಲ್ಪಟ್ಟಿದೆ. ನಿಮ್ಮಂತೆ ಆಲೋಚಿಸುವವರು ಹಲವರಿದ್ದರೂ, ನಿಮ್ಮ ಹಾಗೆ ಅದನ್ನು ಎತ್ತಿ ಹೇಳುವ ಎದೆಗಾರಿಕೆ ಕೆಲವರಿಗೆ ಮಾತ್ರ ಇದೆ. ನಿಮ್ಮ ಕಾರ್ಯಗಳನ್ನು ಮುಂದುವರಿಸಿ; ಅಂತರಾಷ್ಟ್ರೀಯ ಶಾಂತಿ ಕಾರ್ಯವು ಬೇಗನೇ ಆಗದಿರದು, ಆ ದಿನವು ಬಲು ದೂರದಲ್ಲಿಲ್ಲ"—ಹೀಗೆಂದು ಸಾವರ್ಕರರನ್ನು ಅಮೇರಿಕದ ಲೇಖಕರು ಕೊಂಡಾಡುತ್ತಾರೆ!

ಏಕಾಂಗಿನಿಯಾದ ನಾಗಾರಾಣಿಯು ಬಿಡುಗಡೆಯನ್ನು ಹಾರೈಸುತ್ತಾಳೆ!

ಜೈಲಿನ ಕಗ್ಗವಿಯಲ್ಲಿ ರಾಣಿಯ ಸಂಕಷ್ಟ

ಅಸ್ಸಾಮದ ಅನ್ಯತಮ ದೇಶಭಕ್ತಳಾದ ನಾಗಾರಾಣಿಯು, ಇಂದು ತಾನು ಬಿಡುಗಡೆ ಹೊಂದಿದರೆ ಮಹಿಳಾಸಂಘದ ಸದಸ್ಯೆಯಾಗಿ ಇರುವೆನೆಂದು ಭರವಸೆಯುತ್ತಿರುವಳು. ಆಕೆಯ ಬಿಡುಗಡೆಗಾಗಿ, ಅಸ್ಸಾಮ್ ಪ್ರಾಂತ ಸಂಚಾರದಂದು ಶ್ರೀ. ಪಂಡಿತ ಜವಾಹಿರಲಾಲರು ಸರಕಾರದೊಡನೆ ಬಿನ್ನಹಮಾಡಿಕೊಂಡಿದ್ದರು.

ಶ್ರೀಮತಿ ಸರಳಾಬಾಲಾ ದೇವಿ, ಕಾಂಗ್ರೆಸು ಕೆಲಸಗಾರರು ಆಕೆಯ ಬಿಡುಗಡೆಗಾಗಿ ಪ್ರಯತ್ನಿಸುತ್ತಿದ್ದಾರೆ. ಪ್ರಾಂತಿಕ ಮಂತ್ರಿಗಳೊಡನೆ ಬಿಡುಗಡೆಯ ವಿಷಯವಾಗಿ ಚರ್ಚಿಸಲು, ಆಕೆಯ ಬಿಡುಗಡೆಯು ಹಿಂದೂದೇಶದ ಸರಕಾರದ ಸ್ವಾಧೀನವಾಗಿದೆಯೆಂದು ಅವರು ಹೇಳಿದರು. ಹಾಗಾಗಿ ರಾಜಕೀಯ ಕೈದಿಗಳ ಬಿಡುಗಡೆಯ ಸಮಯದಲ್ಲಿ ಆಕೆಯು ಬಂಧಮುಕ್ತಳಾಗಲಿಲ್ಲ. ಹೀಗಾಗಿ ಮಹಿಳಾ ಸಂಘದವರು ಮಾಡಿದ ಠರಾವನ್ನು ಅನುಸರಿಸಿ ಹಿಂದೀ ಸರಕಾರಕ್ಕೆ ಪ್ರಾಂತಿಕ ಸರಕಾರದ ಮೂಲಕವಾಗಿ ಅವರು ಬಿನ್ನಹಮಾಡಿಕೊಂಡಿದ್ದಾರೆ.

ಆಕೆಯನ್ನು ನಿರ್ಜನವಾದೊಂದು ಕೋಣೆಯಲ್ಲಿ ಇಟ್ಟಿದ್ದಾರೆ. ಆಕೆಯ ಜೀವನವು ಅಲ್ಲಿ ಸಂಕಷ್ಟಪೂರ್ಣವಾಗಿದೆ. ರಾಜಕೀಯ ಕೈದಿಗಳಿಗೆ ಕೊಡುವ ಸೌಕರ್ಯವೂ ಆಕೆಗೆ ಕೊಡಲ್ಪಡುವುದಿಲ್ಲ. ಒಂದೇ ಬರಿದು ದಿನಗಳೆಯಲು ಆಕೆ ಹಾರೈಸುತ್ತಿದ್ದಾಳೆ. ಇಂತಹ ಸ್ಥಿತಿಯಲ್ಲಿ ಆಕೆಯನ್ನು ಇನ್ನು ಕೆಲಕಾಲದವರೆಗೆ ಇಟ್ಟಲ್ಲಿ ಆಕೆಯ ಜೀವನವು ಉಳಿಯಲಾರದೆಂದು ಶ್ರೀಮತಿ ಸರಳಾಬಾಲಾ ದೇವಿಯವರು ಅಭಿಪ್ರಾಯಪಡುತ್ತಾರೆ.

ಹಿಂದೂ-ಮುಸ್ಲಿಂ ಐಕ್ಯವೂ ಆಗಖಾನರೂ.

ಲೋರ್ಡ್ ಜೆಟ್ಲೆಂಡರು ಮೊನ್ನೆ ಸಮ್ರಾಜ್ಯ ದಿನಾಚರಣೆಯೆಂದು ಮಾಡಿದ ಭಾಷಣದಲ್ಲಿ ಹಿಂದೂದೇಶದಲ್ಲಿರುವ ಹಿಂದೂ ಮುಸ್ಲಿಂ ಜಾತೀಯ ಅನೈಕ್ಯದ ಕುರಿತು ಮಾಡಿದ ಟೀಕೆಯನ್ನು ಎರಡು ಪಂಗಡದ ಮುಖಂಡರೂ ಖಂಡಿಸಿದ್ದಾರೆ. ಹೀಗಾಗಿ ಹಿಂದೂ ಮುಸ್ಲಿಂ ಐಕ್ಯಸಾಧನೆಗಾಗಿ ಕಾಂಗ್ರೆಸು ಮತ್ತು ಮುಸ್ಲಿಂ ಲೀಗುಗಳನ್ನು ಬಿಟ್ಟೇ ಒಂದು ಹೊಸ ಕಮಿಟಿಯು ಎರಡು ಪಕ್ಷಗಳ ನಾಲ್ಕು ನಾಲ್ಕು ಮುಖಂಡರಿಂದ ಸೇರಿ ಒಂದು ಕಾರ್ಯಕ್ರಮವನ್ನು ರಚಿಸುವುದು. ಸರ್ ಜಗದೀಶ ಪ್ರಸಾದ, ಎನ್. ಎನ್. ಸರ್ಕಾರ್, ಸರ್ ವಜೀರ್ ಹಸನ್, ಸರ್ ಸುಲ್ತಾನ ಮಹಮ್ಮದ್ ಸರ್ ಅಕ್ಬರ್ ಹೈದರಿ ಮೊದಲಾದವರ ಹೆಸರುಗಳು ಈ ಕಮಿಟಿಯಲ್ಲಿ ಸೂಚಿತವಾಗಿವೆ.

ಆಗಾಖಾನರು ಈ ಕಮಿಟಿಯ ಕೆಲಸಕ್ಕಾಗಿ ಬೇಗನೇ ಹಿಂದೂದೇಶಕ್ಕೆ ತೆರಳಲಿರುವರಂತೆ.

ಫೆಡರೇಶನಿನ ಕುರಿತು ಶ್ವೇತಪತ್ರ

ಆಸ್ಥಿಕ ರಾಜರಿಗೆ ಕಳೆದ ಜನವರಿಯಲ್ಲಿಯೇ ಮುಂಬರಲಿರುವ ಫೆಡರೇಶನಿಗೆ ಸೇರುವ ವಿಷಯದಲ್ಲಿ ಅವರ ಸಮ್ಮತಿ ಕೇಳಲಾಗಿದೆ. ಬರುವ ಜುಲ್ಯಾ ತಿಂಗಳ ಒಳಗೆ ಅವರು ಉತ್ತರ ಕೊಡಬೇಕಾಗಿದೆ, ಅವರ ಉತ್ತರವನ್ನು ನೋಡಿ ಬ್ರಿಟಿಷ್ ಸರಕಾರವು ಒಂದು ಶ್ವೇತಪತ್ರವನ್ನು ಹೊರಡಿಸುವುದೆಂದು ಹಿಂದೂದೇಶದ ಅಂಡರ್ ಸೆಕ್ರೆಟರಿಯವರಾದ ಕರ್ನಲ್ ಮೇಓರ್ಹೆಡ್ಡರು ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿದರು.

ಶ್ರೀಮತಿ ರಮೇಶ್ವರಿ ನೆಹರು

ಅಖಿಲಭಾರತ ಹರಿಜನ ಸೇವಾ ಸಂಘದ ಉಪಾಧ್ಯಕ್ಷೆಯರಾದ ಶ್ರೀಮತಿ ರಮೇಶ್ವರಿ ನೆಹರು ಇವರು ಮದ್ರಾಸಿಗೆ ಬಂದಿರುವರು. ಇಲ್ಲಿನ ಕೋಡಂಬಾಕ್ಕಂ ಹರಿಜನ ಔದ್ಯೋಗಿಕ ಶಾಲೆಯನ್ನು ಸಂದರ್ಶಿಸಿದರು.

ಶ್ರೀಮತಿಯವರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಂಘದ ಭವನವನ್ನು ಸಂದರ್ಶಿಸಿದರು. ಅವರು ತಮಿಳು ನಾಡಿನ ಪ್ರಧಾನ ಕೇಂದ್ರಗಳನ್ನು ಸಂಚಾರಮಾಡಲಿರುವರು.

'ನೀರಾ'ವು ಆರೋಗ್ಯಕರ ಪಾನೀಯ

ಮದ್ಯಪಾನ ನಿಷೇಧವನ್ನು ಮುಂಬಾಯಿಯಲ್ಲಿ ಜಾರಿಗೆ ತಂದಾಗ 'ನೀರಾ' ಕುಡಿಯುವುದನ್ನು ಆಕ್ಷೇಪಿಸಿರುವ ನಿಮಿತ್ತವಾಗಿ ಅದು ಕೇವಲ ಅಜ್ಞಾನವೆಂದೂ, ನೀರಾವೂ ಉನ್ಮಾದಕವೆಂದೂ 'ಟೈಮ್ಸ್' ಪತ್ರಿಕೆಯಲ್ಲಿ ಒಂದು ಲೇಖನ ಬಂದಿತ್ತು. ಅದನ್ನು ಅಲ್ಲಗಳೆದು ಮಹಾತ್ಮಾಜಿಯವರು ಹರಿಜನದಲ್ಲಿ ಲೇಖನವನ್ನು ಪ್ರಕಟಿಸಿರುತ್ತಾರೆ. ಈಗ ಶ್ರೀ ಕಾಕಾಸಾಹೇಬ್ ಕಾಲೇಲಕರರೆಂಬವರು ಈ ವಿಷಯದಲ್ಲಿ ಹೀಗೆಂದು ಪ್ರಕಟಿಸುತ್ತಾರೆ. 'ನೀರಾವು ರುಚಿಕರವೂ, ಮಾದಕವಿಲ್ಲದ ಪಾನೀಯವೂ ಆಗಿರುವುದಲ್ಲದೆ ಆರೋಗ್ಯಕರವೂ ಆಗಿರುತ್ತದೆ. ಇದನ್ನು ಪ್ರತಿನಿತ್ಯ ಸೇವಿಸುವುದರಿಂದ ಮನುಷ್ಯನು ಆರೋಗ್ಯವಂತನಾಗಿ ಮೈಯ ಭಾರವನ್ನು ಹೆಚ್ಚಿಸಿಕೊಳ್ಳುತ್ತಾನೆ'—ಇದರ ಕುರಿತು ಶ್ರೀ. ಕಾಲೇಲಕರರು ತಮ್ಮ ಪ್ರಯೋಗ ಪರೀಕ್ಷೆಗಳಿಂದ ಉದಾಹರಿಸುತ್ತಾರೆ.

ಗಾಂಧಿಜಿಯವರ ಉಪದೇಶವು ಅಂಗೀಕರಿಸಲ್ಪಟ್ಟಿತು

ತಿರುವಾಂಕೂರು ಸ್ಟೇಟ್ ಕಾಂಗ್ರೆಸಿಗೆ ಗಾಂಧಿಜಿಯವರು ಕೊಟ್ಟ ಉಪದೇಶವನ್ನು ಅವರು ಅನುಸರಿಸುವುದಾಗಿ, ಅದರ ವರ್ಕಿಂಗ್ ಕಮಿಟಿಯಲ್ಲಿ ನಿರ್ಣಯಿಸಿರುವಂತಾಗಿ ತಿಳಿಯುತ್ತದೆ. ಆದಕಾರಣ ಸತ್ಯಾಗ್ರಹವನ್ನು ನಿಲ್ಲಿಸುವುದು ಮಾತ್ರವಲ್ಲದೆ ಅಧಿಕಾರಿಗಳೊಡನೆ ನ್ಯಾಯವಾದ ಮತ್ತು ಗೌರವಪೂರ್ಣವಾದ ಒಪ್ಪಂದವನ್ನು ಮಾಡುವ ಸಲುವಾಗಿ ಒಂದು ಸಮಿತಿಯನ್ನು ರಚಿಸಿದೆ.

ಸಿಲೋನಿನ ಹಿಂದೀಯರ ಕುರಿತು ವೈಸರಾಯರಿಗೆ ದೂರು

ಸಿಲೋನಿನಲ್ಲಿ ಇತ್ತೀಚೆಗೆ ಅಲ್ಲಿರುವ ಹಿಂದೀಯರನ್ನು ಕೆಲಸದಿಂದ ತೆಗೆದು ಹಾಕುವುದೇ ಮೊದಲಾಗಿ ತೀವ್ರವಾದ ಅನ್ಯಾಯಗಳು ನಡೆಯುತ್ತಿವೆಯಷ್ಟೆ? ಅದನ್ನು ನಿಲ್ಲಿಸುವ ಯತ್ನಕ್ಕಾಗಿ ಸಿಲೋನ್ ನುವೆರಾಳೀ ಮಹಾಜನ ಸಭೆಯ ಪ್ರೆಸಿಡೆಂಟರಾದ ಶ್ರೀ ಸಿ. ಕೆ. ಕುಂಜರಾಮನವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಅದರಲ್ಲಿ ಅವರು ಅಲ್ಲಿ ಸಿಲೋನಿನ ಸರಕಾರದ ವರ್ತನೆಯನ್ನು ತೀವ್ರವಾಗಿ ಖಂಡಿಸುತ್ತಾ ದೇಶದ ನಾನಾ ಭಾಗಗಳಲ್ಲಿಯೂ ಹಿಂದೀಯರು ಸಿಲೋನಿನ ವಸ್ತುಗಳನ್ನು ಬಹಿಷ್ಕರಿಸುವ ಮೂಲಕ ಪರಿಣಾಮಕಾರಿಯಾಗಿ ತಮ್ಮ ನಿಷೇಧವನ್ನು ವ್ಯಕ್ತಪಡಿಸಬೇಕೆಂದು ಹೇಳಿರುವರು. ಅದು ಮಾತ್ರವಲ್ಲದೆ ಈ ಕುರಿತು ಬೇಗನೇ ವಿಚಾರಮಾಡುವ ಸಲುವಾಗಿ ವೈಸರಾಯರಲ್ಲಿ ಒಂದು ಶಿಷ್ಟಮಂಡಲವನ್ನು ಕಳುಹಿಸಬೇಕೆಂದೂ ಪ್ರಕಟಿಸುತ್ತಾರೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಗಾಂಧೀ ತತ್ವ ಪ್ರಚಾರ

ಹಿಂಸೆಯೇ ಮೂಲವಾಗಿರುವ ನಾಝೀ ಮತ್ತು ಫಾಸಿಸ್ಟ್ ತತ್ವಗಳು ಒಂದು ಕಡೆಯಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಳಯಕಾರರ ರೀತಿಯಿಂದ ಕೂಡಿ ಪ್ರಚಾರಕ್ಕೆ ಬರುತ್ತಿರುವಂತೆ, ಇನ್ನೊಂದು ಕಡೆಯಿಂದ ಮಹಾತ್ಮಾಜಿಯವರ ವಿಶ್ವಶಾಂತಿಯ ಸಂದೇಶವೂ ಯುರೋಪಿನ ನಾಡಿಯನ್ನು ಅಲುಗಾಡಿಸಿಬಿಟ್ಟಿದೆ. ಹಿಟ್ಲರ ಮುಸಲೋನಿಯಂತಹವರ ಪಶುಬಲದ ಮೇಲಿನ ಕಾರ್ಯಗಳನ್ನು ತಡೆಯಲಾರದೆ ತತ್ತರಿಸುವ ಜೆಕೊಸ್ಲೊವೇಕಿಯಾ ಹಾಗಿದ್ದ ರಾಷ್ಟ್ರಗಳಾದರೂ ಜಗತ್ತಿನಲ್ಲಿ ತಮ್ಮ ಅಸ್ತಿತ್ವವು ಇದೆಯೆಂದು ಮನಗಂಡು ಮಹಾತ್ಮರ ಬೋಧನಾಮೃತದಿಂದ ಶಾಂತಪರ ಸತ್ಯಾಗ್ರಹವನ್ನು ಹೂಡಲಾರಂಭಿಸಿವೆ.

ಹಿಟ್ಲರರ ಜನ್ಮ ದಿನಾಚರಣೆಯು ಜೆಕೊಸ್ಲೊವೇಕಿಯದಲ್ಲಿ ಆಚರಿಸುವ ಶಾಸನವಾಯಿತು. ತಮ್ಮ ಎದೆಯ ಮೇಲೆ ಕುಣಿಯುತ್ತಿರುವ ಹಿಟ್ಲರ ಭೂತದ ರುದ್ರಲೀಲೆಯು ವೃಕ್ಷ ಜೆಕೊಸ್ಲೋವೇಕಿಯದ ಸ್ವಾತಂತ್ರ್ಯ ಶಕ್ತಿಗೆ ಸಹಿಸಲಾರದೆ ವಿಷಯ ಜೆಕೊಸ್ಲೋವೇಕಿಯದ ಜನರು ಈ ದೇಶದಿಂದ ಆ ದಿನಾಚರಣೆಯಲ್ಲಿ ಭಾಗವಹಿಸದೆ ಮೌನವಾಗಿ ಸತ್ಯಾಗ್ರಹವನ್ನು ಆಚರಿಸಿದರು. ಪ್ರೇಗಿನಂತ ಮುಖ್ಯ ಪಟ್ಟಣಗಳಲ್ಲಿ ಕೆಲವರು ಅದನ್ನು ನಿಷೇಧಿಸುವ ಕೆಲಸವನ್ನೇ ಮಾಡಿದರು.

ಪೆಲೆಸ್ತೀನದಲ್ಲಿಯೂ ಕೂಡ ಯೆಹೂದ್ಯರೂ ಸತ್ಯಾಗ್ರಹವನ್ನು ಆಚರಿಸುತ್ತಿದ್ದಾರೆ. ಯೂರೋಪಿನ ರಾಷ್ಟ್ರಗಳು ಹೀಗೆ ಮೆಲ್ಲಮೆಲ್ಲನೆ ಸತ್ಯ ಮತ್ತು ಅಹಿಂಸೆಯ ಬೆಳಕನ್ನು ನೋಡುತ್ತಿವೆ. ಇದರ ಪ್ರಭೆಯು ಸರ್ವಾಧಿಕಾರಿಗಳ ಮೇಲೆಯೂ ಬೀಳುವುದೆ?

ಎಂಟು ಚದುರ ಮೈಲುಗಳಲ್ಲಿ ೧೦೦,೦೦೦,೦೦೦ ಪವನುಗಳ ವಾರ್ಷಿಕ ಉತ್ಪತ್ತಿ!

ಜರ್ಮನಿಯು ಕಳಕೊಂಡ ವಸಾಹತ್ತು!

ಮಹಾಯುದ್ಧಕ್ಕಿಂತ ಮೊದಲೇ ಜರ್ಮನಿಯದ್ದಾಗಿ—ಜರ್ಮನಿಗೆ ತಿಳಿಯದೇ ಹೋದ 'ನೋರು' ಎಂಬ ದ್ವೀಪವು ಇಂದು ಬ್ರಿಟಿಷರ ಅಧೀನದಲ್ಲಿದ್ದು ಸಂಪೂರ್ಣ ಜರ್ಮನಿಯ ಕೈ ತಪ್ಪಿಹೋಗಿದೆ.

ಈ ದ್ವೀಪವನ್ನು ೧೮೮೮ರಲ್ಲಿ ಒಬ್ಬ ಜರ್ಮನ್ ನಾವಿಕನು ಕಂಡು ಹಿಡಿದು ಜರ್ಮನಿಗೆ ತಿಳಿಸಿದನು. ಆದರೆ ಆ ಕುರಿತು ಏನೂ ಉತ್ಸಾಹ ತೆಗೆದುಕೊಳ್ಳದಿರಲು ಹನ್ನೆರಡು ವರ್ಷಗಳ ಮೇಲೆ ಇನ್ನೊಬ್ಬ ಜರ್ಮನ್ ನಾವಿಕನು ಅಲ್ಲಿ ಅಪಾರ ಸಂಪತ್ತಿದೆಯೆಂದು ಜರ್ಮನ್ ಸರಕಾರಕ್ಕೆ ತಿಳಿಸಿದನು. ಹಾಗೆ ಅವನನ್ನು ಅಲ್ಲಿ ಕೆಲಸ ಮಾಡುವ ಸಲುವಾಗಿಯೂ ಯತ್ಕಿಂಚಿತ್ ಪ್ರೋತ್ಸಾಹ ನೀಡಲು ಆತನು ಅದನ್ನು ಕಟ್ಟಕಡೆಗೆ ಆ ತನ್ನ ಹಕ್ಕನ್ನು ಒಂದು ಇಂಗ್ಲಿಷ್ ಕಂಪೆನಿಗೆ ಬಿಟ್ಟುಕೊಟ್ಟನು.

ಅವರು ಸಾಧಿಸಿದ ನಿರಂತರ ಶೋಧನೆಯ ಫಲವಾಗಿ ಅಲ್ಲಿ ಅಪಾರವಾದ ಫೋಸ್ಫೇಟ್ಸಿನ ಖನಿಯನ್ನು ಕಂಡು ಹಿಡಿದರು. ದಿನೇ ದಿನೇ ಅಲ್ಲಿ ಅದು ವಿಶೇಷವಾಗಿ ಸಿಗತೊಡಗಿತು. ಹಾಗಾಗಿ ಅಲ್ಲಲ್ಲಿ ನೂರಾರು ಜನ ಆಂಗ್ಲೇಯರು ವಾಸಮಾಡಿ ಅನೇಕ ನಿರುದ್ಯೋಗಿಗಳಿಗೆ ಕೆಲಸ ಕೊಟ್ಟು ಅಧಿಕ ಲಾಭವನ್ನು ಪಡೆದರು. ೧೯೧೪ರಂದು ಮಹಾಯುದ್ಧದ ಆರಂಭವಾಗುವಾಗ ಬ್ರಿಟನು ೧೦೦,೦೦೦ ಟನ್ ಫೋಸ್ಫೇಟ್ಸನ್ನು ಪಡೆದಿದೆ.

೧೯೧೯ರಲ್ಲಿ ಒಪ್ಪಂದವಾಗುವಾಗ ಅದರ ಕುರಿತು ಅನೇಕ ರಾಷ್ಟ್ರಗಳಿಗೆ ಸ್ಪರ್ಧೆಯು ನಡೆಯಿತು. ಕಡೆಗೆ ಸಂಧಾನ ಮಾಡುವವರು ಅದನ್ನು ಬ್ರಿಟನಿನ ಅಧಿಕಾರದಲ್ಲಿಟ್ಟು ಅದರ ಆಡಳಿತೆಯು ಬ್ರಿಟನ್, ಆಸ್ಟ್ರೇಲಿಯಾ ಮತ್ತು ನ್ಯೂಜೀಲಾಂಡಿನ ಸರಕಾರಗಳ ಸ್ವಾಧೀನದಲ್ಲಿ ಐವತ್ತು ವರ್ಷಗಳ ಕ್ರಮಶಃ ನಡೆಯುವಂತೆ ತೀರಿಸಿದರು. ಅಂತೂ ಜರ್ಮನಿಯು ತನ್ನದೇ ಆದ ಕೊಲೊನಿಯನ್ನು ಇಂದು ಕಳಕೊಂಡ ಸ್ಥಿತಿಗೀಡಾಗಿದೆ. ಇಂದು ಅದರ ವಾರ್ಷಿಕ ಉತ್ಪತ್ತಿ ೧೦೦,೦೦೦,೦೦೦ ಪವನುಗಳು. ಈಗೀಗ ಅಲ್ಲಿನ ಫೋಸ್ಫೇಟ್ಸು ಇನ್ನಷ್ಟು ವಿಶೇಷ ಗುಣ ಪ್ರಳಯದ್ದಾಗಿ ಸಮೃದ್ಧವಾಗಿ ಸಿಕ್ಕುತ್ತಿದೆಯೆಂದೂ ಅದು ಅವಿನಾಶಿಯಾದ ಒಂದು ಸಂಪತ್ತಿನ ನಿಧಿಯೆಂದೂ ತಿಳಿಯುತ್ತದೆ.

ಪ್ರಧಾನರ ಮಕ್ಕಳಿಗೆ ಶಿಕ್ಷೆ

ಗಡಿನಾಡಿನ ಪ್ರಧಾನರಾದ ಡಾಕ್ಟರ ಖಾನ ಸಾಹೇಬರ ಮಕ್ಕಳಾದ ಖಾನ ಒಬೇದುಲ್ಲಾ ಖಾನರು ಚರ್ಸಾದದಲ್ಲಿ ಸತ್ಯಾಗ್ರಹ ಮಾಡಿದ್ದಕ್ಕಾಗಿ ಬಂಧಿತರಾದರು. ಚರ್ಸಾದದ ದಿವಾನರನ್ನು ಕಾನೂನು ಮುರಿಯುತ್ತಿಕ್ಕೆ ಪ್ರೇರೇಪಿಸಿದರೆಂದು ಅವರ ಮೇಲಿನ ಆರೋಪಣೆಯಾಗಿದೆ. ಒಬೇದುಲ್ಲಾ ಖಾನರು ಹೀಗ ಡಾಕ್ಟರ ತಂದೆಗಳ ಹೀಗೆ ಪುತ್ರರು, ಇವರು ಖಿಲವಾಡಿಗಳು. ತಮಗೆ ಸಹ್ಯವೆಂದು ತೋರಿದುದನ್ನು ಯಾರು ಎಷ್ಟು ಹೇಳಿದರೂ ಬಿಟ್ಟುಬಿಡುವವರಲ್ಲ. ಈ ಭಿಲಿಂಗಿರಾದ ಹಿಂದೆ ಅವರ ಕೆಲವು ಬಾರಿ ಜೈಲಿಗೆ ಹೋಗಿರುವರು. ಅಲ್ಲಿ ಒಂದು ಬಾರಿ-ಒಂದು ತಿಂಗಳು, ಇನ್ನೊಂದು ಬಾರಿ ೨೮ ದಿನ ಉಪವಾಸ ಮಾಡಿದ ಪ್ರಬಲ ಕಾರ್ಯಸಾಧಕರು. ಹೀಗೆಲ್ಲ ಕೂಡ ಅವರ ತಮ್ಮ ತತ್ವ ಪರಿಪಾಲನೆಗಾಗಿ, ಹೆತ್ತವರ ಮಾತು ಸ್ನೇಹಿತರ ಮಾತು ಕೇಳದೆ ಪರಸಾಧಿಸಿ ಜೈಲಿಗೆ ಹೋಗಿದ್ದಾರೆ.

ಸ್ವದೇಶಾಭಿಮಾನಿ

ತಾರೀಖು ೧೬-೯-೧೯೩೯

ನಿರಕ್ಷರತೆಯ ಬಗೆಹರಣೆ

ಬಾಂಬಾಯಿ ಸಾರ್ವಜನಿಕ ಶಿಕ್ಷಣ ಸಮಿತಿಯು ಪುನಃ ಇನ್ನೊಂದು ಬಾರಿ ಸಿಮ್ಲಾದಲ್ಲಿ ಸೇರಿ ನಿರಕ್ಷರತೆಯನ್ನು ಬಗೆಹರಿಸಲು ತಕ್ಕ ಹಂಚಿಕೆಯನ್ನು ಯೋಚಿಸುತ್ತಿರುವುದು. ಒಂದು ದೇಶದ ಉನ್ನತಿಯನ್ನು ಯಾವದೇ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ಅದರ ಉನ್ನತಿಯು ಆ ದೇಶದ ಶಿಕ್ಷಣದ ಮೇಲೆ ಹೊಂದಿಕೊಂಡಿದೆಯೆಂದು ಮಂದಟ್ಟಾಗದಿರದು ನಮ್ಮ ದೇಶವಾದರೂ ತಕ್ಕ ಉನ್ನತಿಯನ್ನು ಪಡೆಯಬೇಕಾದರೆ ಭಾರತಾಂಬೆಯ ಪ್ರತಿಪುತ್ರ ಪುತ್ರಿಯರು ಸ್ವಲ್ಪ ಮಟ್ಟಿಗಾದರೂ ವಿದ್ಯಾವಂತರಾಗಿರಬೇಕು "ಅವಿದ್ಯಾವಂತ ಮನುಷ್ಯನು ಕುರುಡನಿಗೆ ಸಮಾನ" ಎಂದು ಹಿಂದೆ ರಷ್ಯದ ಸರ್ವಾಧಿಕಾರಿಯಾಗಿದ್ದ ಲೆನಿನನೆಂದಿರುವನು ಇಂದು ಎಲ್ಲಾ ದೃಷ್ಟಿಯಲ್ಲಿಯೂ ಇತರ ರಾಷ್ಟ್ರಗಳಿಗೆ ಮಾರ್ಗದರ್ಶಿಯಾದ ರಷ್ಯವು ವಿದ್ಯಾಯೋಜನೆಯಲ್ಲಿಯೂ ಮುಂದಾಗಿರುವುದು ಝಾರನ ಆಳ್ವಿಕೆಯಲ್ಲಿ ಶೇಕಡಾ ೭೮ರಂತೆ ನಿರಕ್ಷರತೆಯಿಂದ ತೊಳಲುತ್ತಿದ್ದ ರಷ್ಯವು ಇಂದು ಶಿಕ್ಷಣಕ್ಷೇತ್ರದಲ್ಲಿ ಅತ್ಯಂತ ಮುಂದರಿದು ೧೯೩೪ರಲ್ಲಿ ಶೇಕಡಾ ಬರೀ ೧೦ ಜನರು ಅಲ್ಲಿ ನಿರಕ್ಷರತೆಯುಳ್ಳವರಾಗಿದ್ದರು ೧೯೪೨ರಲ್ಲಿ ಸರ್ವರು ಸಾಕ್ಷರತೆಯುಳ್ಳವರಾಗುವಂತೆ ರಷ್ಯವು ಇಂದು ಎಲ್ಲ ಪ್ರಕಾರದಿಂದಲೂ ಯತ್ನಿಸುತ್ತಿದೆ ರಷ್ಯದಲ್ಲಿ ಉಂಟಾದ ಮಹಾಕ್ರಾಂತಿಯ ನಂತರ ದೊಡ್ಡ ದೊಡ್ಡ ಮನೆಗಳೂ, ದೇವಾಲಯಗಳೂ, ವಿದ್ಯಾಮಂದಿರಗಳಾಗಿ ಮಾರ್ಪಟ್ಟವು ಟರ್ಕಿಯ ದಿವಂಗತ ಸರ್ವಾಧಿಕಾರಿಯಾದ ಮುಸ್ತಾಫಾ ಕೆಮಾಲಪಾಶನಾದರೂ ತನ್ನ ರಾಜ್ಯದಲ್ಲಿ ಕಡ್ಡಾಯವಾಗಿ ರೋಮನ್ ಲಿಪಿಗಳನ್ನು ಕಲಿಯುವಂತೆ ಮಾಡಿದನು

ನಮ್ಮ ದೇಶದ ಕೆಲವು ಪ್ರಾಂತಿಕ ಸರಕಾರಗಳಾದರೂ ಶಿಕ್ಷಣದ ವಿಷಯವಾಗಿ ತಕ್ಕಷ್ಟು ಯೋಜನೆಯನ್ನು ಕೈಕೊಂಡಿರುವರು ಬೊಂಬಾಯಿ ಸರಕಾರವು ನಿರಕ್ಷರತೆಯು ಬಗೆಹರಿಸಲು ಅನೇಕ ರೀತಿಯ ಹಂಚಿಕೆಗಳನ್ನು ಕೈಕೊಂಡಿದೆ ಅಲ್ಲಿ ಸಾಕ್ಷರತೆಯ ಪ್ರಚಾರ ಮಾಡಲು ಕೆಲಸಗಾರರ ಒಂದು ತಂಡವು ಸ್ಥಾಪಿತವಾಗಿ ಪ್ರತೀ ಜಿಲ್ಲೆಗೆ ೨,೦೦೦ ರೂಪಾಯಿಯಂತೆ ೪೦,೦೦೦ ರೂಪಾಯಿಯ ಗ್ರೆಂಟನ್ನು ಕಳೆದ ವರ್ಷ ಕೊಟ್ಟಿರುತ್ತದೆ ಸಾಕ್ಷರತೆಯ ಪ್ರಚಾರಕನಿಗೆ ತಿಂಗಳೊಂದರ ೫ ರೂಪಾಯಿಯಂತೆ ಖರ್ಚಿಗೆ ಕೊಡಲ್ಪಡುವುದು ಮತ್ತು ಒಬ್ಬ ವಿದ್ಯಾರ್ಥಿಯು ಸಾಕಷ್ಟು ಓದುಬರಹವನ್ನು ಕಲಿತೊಡನೆ ಪ್ರಚಾರಕನಿಗೆ ೪ ರೂಪಾಯಿಯಂತೆ ಕೊಡಲ್ಪಡುವುದು. ೧ ವಿದ್ಯಾ ಪ್ರಚಾರ ಕಾರ್ಯದ ಪ್ರಥಮ ಖರ್ಚಿಗೆ ನ್ಯಾಯವಾದ ಗ್ರೇಂಟು ಕೊಡಲ್ಪಡುವುದು. ಅಲ್ಲಿ ಕಳೆದ ಮಾರ್ಚ ತಿಂಗಳಲ್ಲಿ ೫೦೦ ಕ್ಲಾಸುಗಳು ನಡೆಯಲ್ಪಟ್ಟು ೧೫,೦೦೦ ಜನರು ವಿದ್ಯೆಯನ್ನು ಪಡೆದರು ಅದಲ್ಲದೆ ಒಂದು ಸಾಕ್ಷರತಾ ಕಮಿಟಿಯು ನಿರ್ಮಾಣವಾಗಿ ಜನರ ಬೆಂಬಲವು ದೊರಕುವಂತೆ ಸಾಕಷ್ಟು ಪ್ರಚಾರ ಕಾರ್ಯವನ್ನು ನಡೆಸುತ್ತಿದೆ. ಅದಲ್ಲದೆ ಅವರು ಬೇರೆ ತರದ ಯೋಜನೆಗಳನ್ನು ಕೈಕೊಂಡು ಅದರಲ್ಲಿ ಅವರಿಗೆ ಸಾಕಷ್ಟು ಜಯವು ಲಭಿಸಿರುವುದು ಸತಾರ ಜಿಲ್ಲೆಯ ಪ್ರಾಥಮಿಕ ಶಾಲೆಯಿಂದ ಆರಿಸಲ್ಪಟ್ಟ ೪೦ ಮಂದಿ ವಿದ್ಯಾರ್ಥಿಗಳು ತಮ್ಮ ಸುತ್ತುಮುತ್ತಲಿನ ಗಂಡಸರಿಗೂ, ಹೆಂಗಸರಿಗೂ ಯಶಸ್ವಿಯಾಗಿ ಓದುಬರಹವನ್ನು ಕಲಿಸುತ್ತಿರುವರು. ಪೂನಾದಲ್ಲಿಯೂ ಸಾಕ್ಷರತೆಯ ಪ್ರಚಾರವು ರಭಸದಿಂದ ಸಾಗುತ್ತಿದೆ. ಸಾಧಾರಣ ೪೦೦ ನೆಕೆಂಡರಿ ಶಾಲೆಯ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಅವರ ಮೂಲಕವಾಗಿ ಪ್ರಚಾರ ಕಾರ್ಯವು ನಡೆಯುತ್ತಿದೆ. ಬೊಂಬಾಯಿಯ ಪಟ್ಟಣದಲ್ಲಿ ಸಾಕ್ಷರತೆಯ ಪ್ರಚಾರಕ್ಕಾಗಿ ೫೦೦ ಕ್ಲಾಸುಗಳು ತೆರೆದಿರುತ್ತವೆ ಈ ಎಲ್ಲಾ ಕಾರ್ಯಗಳು ಸರಕಾರಿ ಮತ್ತು ಖಾಸಗಿ ಸಂಸ್ಥೆಗಳಿಂದ ನಡೆಸಲ್ಪಡುತ್ತವೆ ಸರಕಾರವಾದರೂ ಪ್ರಾಥಮಿಕ ಶಿಕ್ಷಣ ಕಾರ್ಯವನ್ನು ಇನ್ನಷ್ಟು ಮುಂದರಿಸುತ್ತಿದೆ ಬೊಂಬಾಯಿ ಪ್ರಾಂತ್ಯದಲ್ಲಿ ನಡೆಯುತ್ತಿರುವ ಈ ಪ್ರಚಾರ ಕಾರ್ಯವನ್ನು ಇತರ ಪ್ರಾಂತ್ಯಗಳು ಕುತೂಹಲತೆಯಿಂದ ನಿರೀಕ್ಷಿಸತಕ್ಕದ್ದಿರುತ್ತವೆ

ನಮ್ಮ ಪ್ರಾಂತ್ಯದಲ್ಲಿ ನಿರಕ್ಷರತೆಯನ್ನು ಬಗೆಹರಿಸುವ ಪ್ರಚಾರಕಾರ್ಯವನ್ನು ಅಲ್ಲಲ್ಲಿ ಒಂದೊಂದು ಜಿಲ್ಲೆಗಳ ಖಾಸಗಿ ಸಂಸ್ಥೆಗಳು ಪ್ರಯತ್ನಿಸುತ್ತಿವೆ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲು ರದ್ದಾಗಿ ಅವುಗಳ ಸ್ಥಾನದಲ್ಲಿ ತಾಲೂಕು ಎಡ್ವೈಸರಿ ಕಮಿಟಿಗಳ ಸ್ಥಾಪನೆಯಾಗಿವೆ ಈ ಕಮಿಟಿಗಳು ಪ್ರಾಥಮಿಕ ಶಿಕ್ಷಣವನ್ನು ಊರ್ಜಿತಗೊಳಿಸಲು ಯತ್ನಿಸುತ್ತಿವೆ "ಈ ಹೊಸ ಯೋಜನೆಯ ಸಫಲತೆಯು ಕಮಿಟಿಗಳ ಮೆಂಬರರ ಮೇಲೆ ಹೊಂದಿಕೊಂಡಿದೆ" ಎಂದು ನಮ್ಮ ವಿದ್ಯಾಮಂತ್ರಿಗಳಾದ ಮಾನ್ಯ ಸಿ. ಜೆ. ವಾರ್ಕಿಯವರು ಅಭಿಪ್ರಾಯಪಟ್ಟಿರುವರು ಈ ಒವರಿ ಮೆಂಬರರು ವಿದ್ಯಾ ಪ್ರಸಾರತೆಗೆ ತಕ್ಕಷ್ಟು ತ್ಯಾಗಬುದ್ಧಿಯಿಂದ ಕೆಲಸಮಾಡುವರೆಂದು ಮಾನ್ಯ ಮಂತ್ರಿಗಳ ಅಭಿಪ್ರಾಯ ನಿರಕ್ಷರತೆಯನ್ನು ತೊಲಗಿಸುವುದು ಪ್ರತಿ ಒಂದು ಸರಕಾರದ ಆದ್ಯಕರ್ತವ್ಯವಾಗಿರುತ್ತದೆ ಆದರೆ ಹಣದ ಅಭಾವದಲ್ಲಿರುವ ಈಗಿನ ಪ್ರಾಂತಿಕ ಸರಕಾರಗಳಿಂದ ಹೆಚ್ಚಿನ ಕಾರ್ಯವನ್ನು ನಿರೀಕ್ಷಿಸುವುದು ಕಷ್ಟ ಆದ್ದರಿಂದ ಈ ನಿರಕ್ಷರತೆಯನ್ನು ಬಗೆಹರಿಸಲು ಭಾರತಾಂಬೆಯ ಪ್ರತೀ ಒಬ್ಬ ಪುತ್ರನು ಯತ್ನಿಸಿ ನಿರಕ್ಷರತೆಯಿಂದ ಬಳಲುತಿದ್ದ ನಮ್ಮ ನಾಡನ್ನು ಉದ್ಧರಿಸುವುದು ಅವಶ್ಯವಾಗಿರುತ್ತದೆ

ಮದ್ರಾಸ್ ಸರಕಾರದ ಪ್ರಾಯಸ್ಥ ನಿರಕ್ಷರರ ಶಿಕ್ಷಣಯೋಜನೆ
ಮುಸ್ಲಿಮರಿಗೆ ಶಿಕ್ಷಣದ ಸೌಲಭ್ಯ!

ಪ್ರಾಯಸ್ಥ ನಿರಕ್ಷರರಿಗೆ ಶಿಕ್ಷಣವನ್ನು ಕೊಡುವ ಒಂದು ಯೋಜನೆಯನ್ನು ಮದ್ರಾಸು ಸರಕಾರವು ತಯಾರಿಸುತ್ತಾ ಇದೆ ಅದನ್ನು ಶಿಕ್ಷಣ ಮಂತ್ರಿಗಳಾದ ಮಾನ್ಯ ಶ್ರೀ ಜೆ ವಾರ್ಕಿಯವರು ತಮ್ಮ ಒಂದು ಭಾಷಣದಲ್ಲಿ ಸ್ವಲ್ಪ ವಿವರಿಸಿರುವರು. ೫ ಮಂದಿ ಬಿ ಎ ಮತ್ತು ೪೫ ಮಂದಿ ಇಂಟರ ನಿರದ್ಯೋಗಿಗಳನ್ನು ಈ ಕೆಲಸಕ್ಕೆ ನೇಮಿಸುವರು ಅವರಿಗೆ ಸ್ವಲ್ಪ ಜೀವನಾಂಶವನ್ನು ಕೊಡಲಾಗುತ್ತದೆ ಅವರು ಕೆಲವು ತಿಂಗಳು ಒಂದೊಂದು ಕೇಂದ್ರದಲ್ಲಿ ಉಳಕೊಂಡು ಸುತ್ತಮುತ್ತಲಿನ ನಿರಕ್ಷರ ಹಳ್ಳಿಗಳನ್ನು ಸಾಕ್ಷರರನ್ನಾಗಿ ಮಾಡುವರು ಹೀಗೆ ೫-೬ ವರ್ಷಗಳಲ್ಲಿ ಎಲ್ಲ ಪ್ರಾಯಸ್ಥ ನಿರಕ್ಷರರು ಸಾಕ್ಷರರಾಗುವರೆಂದು ಸರಕಾರವು ನಂಬಿದೆ

ಮುಸ್ಲಿಮ ಶಿಕ್ಷಣ

ಹಿಂದುಳಿದ ಮಲಬಾರು ತಮಿಳು ನಾಡು ಮುಸ್ಲಿಮರ ಉಚ್ಚ ಶಿಕ್ಷಣಕ್ಕೆ ಸರಕಾರವು ಕೆಲವು ಸೌಲಭ್ಯಗಳನ್ನು ಮಾಡಿಕೊಟ್ಟಿದೆ ಈ ಮುಸಲ್ಮಾನರಿಗೆ ಅವರ ಮಾತೃಭಾಷೆಯಾದ ಮಲಯಾಳ ತಮಿಳುಗಳಲ್ಲಿಯೇ ಶಿಕ್ಷಣವನ್ನು ಕೊಡುವದಕ್ಕೋಸ್ಕರ ಮದ್ರಾಸಿನ ಗವರ್ನಮೆಂಟ ಮುಹಮ್ಮಡನ ಕಾಲೇಜಿನಲ್ಲಿ ಈ ವರ್ಷದಿಂದ ಹೊಸ ಏರ್ಪಾಡುಗಳಾಗಿವೆ ಅಲ್ಲಿ ಅವರಿಗೆ ಧಾರ್ಮಿಕ ಶಿಕ್ಷಣದ ವ್ಯವಸ್ಥೆಯೂ ಆಗಿರುವದು

ಉಪಾಧ್ಯಾಯರಿಗೆ ತರಬೇತಿ

ಪ್ರಾಯಶಃ ಬರುವ ವರ್ಷದಿಂದ ಜಾರಿಗೆ ಬರತಕ್ಕದಾಗಿರುವ ಪ್ರಾಥಮಿಕ ಶಾಲೆಗಳ ಹೊಸ ಪಾಠಪಟ್ಟಿಯ ಪ್ರಕಾರ ಕಲಿಸಲಿಕ್ಕೆ ಸಂಭವವಾಗುವಂತೆ ಉಪಾಧ್ಯಾಯರಿಗೆ ವೃತ್ತಿಶಿಕ್ಷಣವನ್ನು ಕೊಡಲಿಕ್ಕೆ ಗ್ರಾಮೋನ್ನತಿ ಕೇಂದ್ರಗಳಲ್ಲಿ ಮದ್ರಾಸು ಸರಕಾರವು ವೃತ್ತಿ ಶಿಕ್ಷಣದ ಕ್ಲಾಸುಗಳನ್ನು ತೆರೆಯುವದಾಗಿ ತಿಳಿದುಬರುತ್ತದೆ

ಜರ್ಮನ್ ಸೈನ್ಯದಲ್ಲಿ ಬ್ರಿಟಿಷರ ಒಳಸಂಚು!
ಲಾರ್ಡ್ ಹೆಲಿಫೆಕ್ಸರ ಕುಟಿಲ ನೀತಿ
ಜರ್ಮನ್ ವೀರರು ತಣ್ಣಗಾಗುವರೆ?
ರಿಬನ್ ಟ್ರೊಪನು ಹಿಟ್ಲರನನ್ನು ಹುರಿದುಂಬಿಸುತ್ತಾನೆ!

ಬ್ರಿಟನರು ಇದೀ ಜಗತ್ತಿನಲ್ಲಿ ಪ್ರಬಲಶಕ್ತಿಶಾಲಿಗಳೆಂದೂ, ಈಗಲೂ ಕೂಡ ಜನ, ನೆಲ, ಆಕಾಶ ಯುದ್ಧೋಪಕರಣಗಳಿಂದ ಬ್ರಿಟನರ ಶಕ್ತಿಯು ಅಪಾರವಾಗಿದೆಯೆಂದೂ ಪ್ರಬಲವಾದ ಪ್ರಚಾರವನ್ನು ಬ್ರಿಟಿಷ ವಿದೇಶಾಂಗ ಸಚಿವರಾದ ಲಾರ್ಡ್ ಹೆಲಿಫಾಕ್ಸರು ಕೆಲವು ಗುಪ್ತಚಾರರ ಮುಖಾಂತರ ಜರ್ಮನ್ ಸೈನ್ಯದಲ್ಲಿ ಹರಡಿಸಿ ಬ್ರಿಟಿಷರ ಬೇಳೆ ಬೇಯಿಸುವ ಕೆಲಸ ಮಾಡುತ್ತಿರುವರಾಗಿ ತಿಳಿದುಬಂದಿದೆ

"ಜರ್ಮನಿಯು ಡಾನ್ಜಿಂಗನ್ನು ವಶಪಡಿಸಿದರೆ ಖಂಡಿತವಾಗಿಯೂ ಬ್ರಿಟನು ಮಹಾಯುದ್ಧಕ್ಕೆ ಸಿದ್ಧವಾಗುವುದೆಂದೂ, ಮೊದಲಿನಂತೆ ಮಹಾಯುದ್ಧವು ಆಗುವ ಪಕ್ಷದಲ್ಲಿ ಜರ್ಮನಿಗೆ ಅಪಜಯವು ಖಂಡಿತವಾಗಿ ಆಗಬಹುದೆಂದೂ ವಾರ್ತೆ ಹರಡುತ್ತಿದೆ

ಈ ಪ್ರಚಾರದ ಧ್ಯೇಯವೇನೆಂದರೆ ಜರ್ಮನ್ ಸೈನಿಕರಿಗೆ ತಮ್ಮ ಆತ್ಮಶಕ್ತಿಯಲ್ಲಿ ಭರವಸೆಯು ಕಡಿಮೆಯಾದಲ್ಲಿ ಹಿಟಲರು ಕರೆದರೂ ಸೈನಿಕರು ಮೂಕರಾಗಿ ಮುಂಬರದಿರಬೇಕೆಂಬುದಲ್ಲದೆ ಮತ್ತೇನು?

ಆದರೆ ಇದಕ್ಕೆ ವಿರುದ್ಧವಾಗಿ ಬ್ರಿಟನು ಹೇಡಿರಾಜ್ಯವೆಂದೂ, ಮಹಾಯುದ್ಧದಲ್ಲಿ ಬ್ರಿಟನ ಮುಂಬಂದ ಯುದ್ಧಸಾಲದಿಂದ ಬ್ರಿಟನ ಇಂದು ದುರ್ಬಲವಾದ ರಾಷ್ಟ್ರವೆಂದೂ ಜರ್ಮನ್ ಮಂತ್ರಿ ರಿಬನ್ ಟ್ರೋಪನು ಹಿಟ್ಲರನ ಕಿವಿಯಲ್ಲಿ ಮಂತ್ರಿಸುತ್ತಿದ್ದಾನೆ

ಹಾಗೂ ಬ್ರಿಟನರ ಪ್ರಚಾರವು ಅಲ್ಲಿ ಅಲ್ಪಸ್ವಲ್ಪ ಪರಿಣಾಮವನ್ನು ಹುಟ್ಟಿಸಿರುವುದಾಗಿಯೂ, ಜರ್ಮನ್ ಸೈನಿಕರ ಯುದ್ಧದಲ್ಲಿ ಮೊದಲಿನಂತೆ ಉತ್ಸಾಹ ಅಷ್ಟು ಭರದಿಂದ ಇರುವುದಿಲ್ಲವಾಗಿಯೂ ತಿಳಿಯುತ್ತದೆ

ಪಾಶ್ಚಿಮಾತ್ಯ ರಾಷ್ಟ್ರಗಳು ಅನ್ಯೋನ್ಯ ಒಳಸಂಚಿನಿಂದ ತಮ್ಮ ಅವಿಶ್ವಾಸದ ಎಷ್ಟು ಕುರುಹುಗಳ ವರೆಗೆ ಕಾಲಿಡಲಿದಾವು?

ಹೊಸ ವಾರ್ತೆಗಳು

ರಾಷ್ಟ್ರಪತಿ ಬಾಬುರಾಜೇಂದ್ರ ಪ್ರಸಾದರು ಬರುವ ಕಾಂಗ್ರೆಸು ಅಧಿವೇಶನದ ಬಗ್ಗೆ ದ್ರವ್ಯ ಸಂಗ್ರಹಕ್ಕಾಗಿ ಬೀಹಾರದಲ್ಲಿ ಪ್ರಯಾಣ ಮಾಡುತ್ತಿದ್ದಾರೆ ತುಂಬಾ ಹಣ ಸಂಗ್ರಹವಾಗುತ್ತದೆ

卐

ಗುಜರಾಥದ ವಿದ್ಯಾಪೀಠದಲ್ಲಿ ಅಲ್ಲಿನ ಉಪಾಧ್ಯಾಯರ ತರಬೇತಿ ಶಿಕ್ಷಣದ ಆರಂಭೋತ್ಸವದಂದು ಮಾತನಾಡುತ್ತಾ ಶ್ರೀ ವಲ್ಲಭಭಾಯಿ ಪಟೇಲರು ವಾರ್ಧಾ ಶಿಕ್ಷಣವು ವಿದ್ಯಾರ್ಥಿಗಳ ಜೀವನದಲ್ಲಿ ಹೊಸ ಬೆಳಕನ್ನೂ ಮತ್ತು ನಾಗರಿಕತೆಯ ಲಕ್ಷಣವನ್ನು ತುಂಬಿಸುವುದೆಂದು ಹೇಳಿದರು

卐

ಬೊಂಬಾಯಿಯಲ್ಲಿ ಸೇರಿದ ಆಶ್ರಿತರಾಜ್ಯಗಳು ಮತ್ತು ಆಶ್ರಿತರಾಜ್ಯದ ಮಂತ್ರಿಗಳ ಸಂಯುಕ್ತ ಸಮ್ಮೇಳನದ ಮೂರು ದಿನ ಕಾರ್ಯ ಕಾರ್ಯಕ್ರಮವು ಕೊನೆಗೊಂಡಿತು ಅದರಲ್ಲಿ ಕೆಲವು ಸಮಯಕ್ಕೆ ಹಿಂದೆ ಆಶ್ರಿತರಾಜರಿಗೆ ಕಳುಹಿಸಲ್ಪಟ್ಟಂತೆ ಸೂಚಿತವಾದ ಸಂಕುಚಿತ ಅಧಿಕಾರದ ಪ್ರಕೃತದ ಫೆಡರಲ್ ಯೋಜನೆಗೆ ಅಸಮ್ಮತಿ ಸೂಚಕವಾಗಿ ಠರಾವು ಮಂಜೂರಾಯಿತು ಹೈದರಾಬಾದ್ ಪ್ರಧಾನರಾದ ಸರ್ ಅಕಬರ್ ಹೈದರಿಯವರ ಸೂಚನೆಯು ಅಂಗೀಕೃತವಾಯಿತು

卐

ಜಪಾನೀಯರು ಎಸೆದ ಬೊಂಬಿನಿಂದ ಲಾಂಗ ಚುಂಕಿಂಗಿನ ಹತ್ತಿರ ಒಬ್ಬ ಅಮೇರಿಕದ ಸ್ತ್ರೀಯೂ ಎಂಟು ಮಂದಿ ಚೈನೀಯರೂ ಹತರಾಗಿದ್ದಾರೆ ಬೊಂಬು ಯುನಿವರ್ಸಿಟಿಗೂ ಬಿದ್ದಿತು.

卐

ಕಾಮನ್ಸ್ ಸಭೆಯಲ್ಲಿ ಪ್ರಶ್ನೆಮಾಡಿದಾಗ ಪಲೆಸ್ಟೈನದ ವೈಟ್ ಪೇಪರಿನ ಸಂಶೋಧನೆಯು ಇನ್ನೂ ಎರಡು ಮೂರು ವಾರಗಳ ಮೇಲೆ ಮಾಡಲಾಗುವುದೆಂದು ಮಿ. ಚೆಂಬರ್ಲೇನರು ಹೇಳಿದರು

卐

ಡಾನ್ಜಿಂಗಿನಲ್ಲಿ ಜರ್ಮನಿಯ ಮತ್ತು ಪೋಲೆಂಡಿನ ಜನಗಿರೊಳಗೆ ಗಲಾಟೆಯು ಸುರುವಾಗಿದೆ

卐

ರಾಜದಂಪತಿಗಳ ಫ್ರೆಂಚ್ ಕೆನಡಾ ಯಾತ್ರೆಯು ಮುಗಿಯುತ್ತಾ ಬರುತ್ತದೆ ಇಂಲ್ಲಿಂದ ಅವರು ಪ್ರಿನ್ಸ್ ಎಡ್ವಾರ್ಡ್ ದ್ವೀಪಕ್ಕೆ ತೆರಳುವರು

卐

ಹೈಫದಲ್ಲಿ ಐದುಮಂದಿ ಅರಬರನ್ನು ಕೊಂದಿಕ್ಕಿದರು ಕೊಲೆಘಾತುಕರು ಯುರೋಪಿಯನ್ ವೇಷಧಾರಿಗಳಾಗಿದ್ದರು

卐

ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳ ಸಭೆಯೊಂದು ಎ. ಐ ಸಿ ಸಿ ಸಭೆ ಮುಗಿದ ಕೂಡಲೇ ಮುಂಬಾಯಿಯಲ್ಲಿ ಸೇರುದವು

卐

ಮೈಸೂರು ಕಾಂಗ್ರೆಸಿನ ಶಿಷ್ಟಮಂಡಳದವರು ಮಹಾತ್ಮಾಜಿಯವರ ಹಿತಸೂಚನೆ ಕೇಳಲು ವಾರ್ಧಗೆ ಬಂದು ತಲಪಿರುವರು.

卐

ಕೋಕನಾಡದಲ್ಲಿ ಒಬ್ಬ ಇಂಪೀರಿಯಲ್ ಬೇಂಕಿನ ಕ್ಲಾರ್ಕನನ್ನು ಕೊಂದನಿಮಿತ್ತವಾಗಿ ಆರೋಪಣೆಯಿಂದ ಎಗ್ರಿಕಲ್ಚರಲ್ ಕಾಲೇಜಿನ ವಿದ್ಯಾರ್ಥಿಯನ್ನು ಸೆರೆಹಿಡಿದಿದ್ದಾರೆ

卐

೬೦,೦೦೦ ಮಂದಿ ಕ್ರಿಸ್ತನರು ಯುದ್ಧಬೇಡವೆಂದು ಮೊರೆಯಿಟ್ಟರು!

ಮೇಲ್ಬೋರ್ನನಲ್ಲಿ ೬೦,೦೦೦ ಮಂದಿ ಕ್ರಿಶ್ಚನರು ಚರ್ಚಿನಲ್ಲಿ ಸೇರಿ ಜಗತ್ತಿನ ಶಾಂತಿಗಾಗಿ ಎಲ್ಲಾ ಜನಾಂಗಗಳ ವಿನಾಶಪ್ರಾಪಕದ ಯುದ್ಧವನ್ನು ನಿಲ್ಲಿಸಬೇಕೆಂದು ದೇವರೊಡನೆ ಮೊರೆಯಿಟ್ಟರು ಈ ಪ್ರಾರ್ಥನೆಯ ವಿಷಯವನ್ನು ಬ್ರಿಟನು ಫ್ರಾನ್ಸ ಅಮೇರಿಕಾ ಮೊದಲಾದ ರಾಷ್ಟ್ರಗಳಿಗೆ ತಿಳಿಸಿದೆ ಜಗತ್ತಿನ ಶಾಂತಿಗಾಗಿ ಬೇರೆ ಬೇರೆ ರಾಷ್ಟ್ರಗಳೊಡನೆ ತಾನು ಮಿತ್ರ ಸಂಬಂಧದಿಂದ ಅವುಗಳು ಅದಕ್ಕೆ ಸಮ್ಮತಿಸುವುದಾಗಿ ಪೋಪರು ರೋಮಿನಲ್ಲಿ ತಾವು ಮಾಡಿದ ಭಾಷಣವೊಂದರಲ್ಲಿ ವ್ಯಕ್ತಮಾಡಿದರು

ಸಿಲೋನಿನಲ್ಲಿ ರಾಜಕೀಯ ಮುಂದಾಳುಗಳಾಗಿ ಕೆಲಸಮಾಡ ತ್ತಿರುವ ಶ್ರೀಗಳಾದ ನಟೇಶ ಅಯ್ಯರ್ ಮತ್ತು ಅಬ್ದುಲ್ ಅಜೀಜ್ ಇವರ ಮೇಲೆ ಸಭೆಗೆ ಹೋಗುತ್ತಿದ್ದಾಗ ಯಾರೋ ಪುಂಡರು ಕಲ್ಲೆಸೆದಿರುವರಾಗಿ ತಿಳಿದುಬರುತ್ತದೆ

卐

ಜಗತ್ತಿನ ಆರ್ಥಿಕ ಉನ್ನತಿಗಾಗಿ ಮಿ॥ ಚೆಂಬರ್ಲೇನರು ಜರ್ಮನಿಯೊಡನೆ ಬಾಂಧವ್ಯ ಬೆಳಸುವ ಮನಸ್ಸುಮಾಡುವುದು ಯೋಗ್ಯವಾಗಿದೆಯೆಂದು ಆಸ್ಟ್ರೇಲಿಯಾದ ಪ್ರಧಾನರು ಹೇಳುತ್ತಾರೆ

ಅದ್ಭುತ ಯಂತ್ರ ನಿರ್ಮಾಣ

ದಕ್ಷಿಣ ಕೆಲಿಫೋರ್ನಿಯದ ಪಲಮೋರ್ ಎಂಬಲ್ಲಿ ಈಗ ಹೊಸತೊಂದು ಯಂತ್ರದ ನಿರ್ಮಾಣವಾಗಿದೆ. ಅಖಿಲ ಬ್ರಹ್ಮಾಂಡದ ಗುಟ್ಟೇ ರಟ್ಟಾಗಬಹುದೆಂಬಷ್ಟು ಆಶೆ ಅದರ ನಿರ್ಮಾಣಕರಲ್ಲಿ ದೃಢವಾಗಿದೆ. ಡಾ| ಜಾರ್ಜ್ ಎಲ್ಲೇರಿ ಹೇಲ್ ಎಂಬವರು ತೆತ್ತ ಆರು ಮಿಲಿಯ ಡಾಲರುಗಳ ಉದಾರದಾನದಿಂದ ಈ ಯಂತ್ರದ ನಿರ್ಮಾಣವು ಸಾಧ್ಯವಾಯಿತು. ಇಷ್ಟು ದ್ರವ್ಯಗಳನ್ನು ಈ ಯಂತ್ರಕ್ಕಾಗಿ ಖರ್ಚು ಮಾಡಿದುದರ ಪ್ರತಿಫಲವು ಈಗಾಗಲೇ ತಮ್ಮ ಹಸ್ತಗತವಾಯಿತೆಂದು ಅದನ್ನು ನಿರ್ಮಾಣ ಮಾಡಿದವರು ಆನಂದಪರವಶರಾಗಿದ್ದಾರೆ! ಇದುವರೆಗೆ ಕಾಣಸಿಗದ ಪ್ರಪಂಚದ ಮಾಯೆಯು ಈಗ ಭೇದಿಸಲ್ಪಡುವುದೆಂಬ ದೃಢವಾದ ನಂಬಿಕೆ ಅವರದು!

ಆಕಾಶದ ಅದ್ಭುತಗಳು

ಈಗೀಗ ಜಗತ್ತಿನ ಹಾಗೂ ಆಕಾಶದ ವೈಚಿತ್ರ್ಯಗಳ ಕುರಿತು ಶೋಧನೆ ಮಾಡುವವರಿಗೆ ಅನೇಕ ಬಗೆಹರಿಸಲಾಗದ ಸಮಸ್ಯೆಗಳು. ಇವೆ ಅವು ಒಂದಕ್ಕೊಂದು ಯಾತಕ್ಕಾಗಿ ಆಗಬೇಕು ಅವು ಶಾಶ್ವತವಾಗಿ ಆದೀತೆ? ಎಂಬೀ ಪ್ರಶ್ನೆಗೆ ಸಕಾರಣವಾದ ಉತ್ತರ ಕೊಡಲು ಆಗಲಿಲ್ಲ

ಆಕಾಶದ ಅಂತರಾಳದಲ್ಲಿ ಹೊಸ ಸೃಷ್ಟಿಯಿದೆಯೆಂದೂ ಅಲ್ಲಿಯೂ ಜೀವಜಾಲಗಳು ಅಲ್ಲಿನ ನಕ್ಷತ್ರಲೋಕವೂ ಮಾನವ ಸಂತತಿಯಿಂದ ಕೂಡಿದೆಯೆಂದೂ ಅಭಿಪ್ರಾಯವಿದೆ ಆದರೆ ಈ ಕುರಿತು ಯಾವ ಶೋಧನೆಯೂ ಆಗಲಿಲ್ಲ ಆ ಮೇಲೆ ಈ ಜಗತ್ತಿನ ವಾತಾವರಣದ ಪ್ರಕೃತಿ ನಿಯಮದ ಕುರಿತು ಆಧಾರಪೂರ್ವಕವಾದ ನಿರ್ಧಾರವೂ ಆಗಲಿಲ್ಲ—ಇವುಗಳು ಈ ಯಂತ್ರದಿಂದ ಬಗೆಹರಿಸಲಾದೀತೆ ಎಂಬ ಯೋಚನೆಯಿದೆ.

ಗ್ಯಾಸುಗಳಿಂದ ಕೈಗಾರಿಕೆಗೆ ಸಹಾಯವಾದೀತೆ?

ಆಕಾಶಮಂಡಳದಲ್ಲಿ ಸೂರ್ಯನೇ ಮೊದಲಾದ ಉರಿಯುವ ಕಾಯದ ರಾಶಿಗಳಿಂದ ಗ್ಯಾಸುಗಳು ಹುಟ್ಟುತ್ತವೆ ಆದರೆ ಈ ಅಭಿಪ್ರಾಯವು ಸತ್ಯವೇ? ಸೂರ್ಯನ ಉರಿಯುವಿಕೆಯು ಶಾಶ್ವತವಾಗಿ ನಿಂತೀತೆ? ಮತ್ತೂ ಅವುಗಳು ಯಾತಕ್ಕಾಗಿ ಉರಿಯುತ್ತವೆ ಎಂದು ತಿಳಿಯುವುದು ಅವಶ್ಯವಾಗಿದೆ

ಆ ಗ್ಯಾಸುಗಳನ್ನು ಹಿಡಿದುಕೊಂಡು, ಆ ಉರಿಯಿಂದ ಈ ಲೋಕದಲ್ಲಿ ಅನೇಕ ಕೈಗಾರಿಕೆ ವಾಣಿಜ್ಯಗಳನ್ನು ಅಭಿವೃದ್ಧಿಗೊಳಿಸಲು ಸಾಧ್ಯವಾದೀತೆ ಎಂಬ ವಿಷಯದಲ್ಲಿ ಖಗೋಳಜ್ಞರ ಕುತೂಹಲವು ಹೆಚ್ಚಿದೆ ಅಷ್ಟು ಮಾತ್ರವಲ್ಲದೆ ಈಗ ಈ ಹವೆ ಬದಲಾವಣೆಗಳು ಯಾತಕ್ಕೆ ಆಗುತ್ತವೆಯೆಂಬುದನ್ನು ತಿಳಿಯುವ ಜಿಜ್ಞಾಸೆಯೂ ಉಂಟಾಗಿದೆ ಅದರ ರಹಸ್ಯವು ತಿಳಿದಲ್ಲಿ ಕಾಲಗತಿಗಳನ್ನು ತಮ್ಮ ಉಪಯೋಗಕ್ಕೆ ಸಂಪಾದಿಸಿಕೊಳ್ಳಬಹುದೇ ಎಂಬ ವಿಚಾರದಲ್ಲಿ ವೈಜ್ಞಾನಿಕರು ಕುತೂಹಲಗೊಂಡಿದ್ದಾರೆ.

ಭವಿಷ್ಯತ್ತಿನ ನಿರ್ಣಯ

ಹತ್ತು ವರ್ಷಗಳ ಮೇಲೆ ಜೂನ್ ೧೬ರಲ್ಲಿ ಮಳೆ ಬಂದೀತೆ? ಬಂದರೆ ಎಷ್ಟೆಂಚು ಬಂದೀತು! ಎಲ್ಲಿ ಹೇಗೆ ಬಂದೀತು ಅದಕ್ಕೆ ಸಕಾರಣಗಳೇನು? ಎಂಬ ವಿಷಯಗಳೂ ಇದರಿಂದ ತಿಳಿಯಲಾಗುವವು

ಯಂತ್ರದ ಅದ್ಭುತ ಶಕ್ತಿ

ಈ ಯಂತ್ರದಿಂದ ಚಂದ್ರನನ್ನು ನಮ್ಮಿಂದ ೨೫ ಮೈಲು ಸಮೀಪಕ್ಕೆ ಎಳೆದು ನೋಡಬಹುದಾಗಿದೆ! ಅಥವಾ ನಮ್ಮ ಭೂಮಿಯನ್ನು ಚಂದ್ರಲೋಕದ ಇಪ್ಪತ್ತೈದು ಮೈಲುಗಳಲ್ಲಿ ಸಾಗಿಸಬಹುದಾಗಿದೆ ಇದೇ ಅಂಶದಲ್ಲಿ ಪ್ರತಿಯೊಂದು ಗ್ರಹಗಳನ್ನೂ ಕಂಡು ಅವುಗಳ ಗುಟ್ಟನ್ನು ಕಂಡುಹಿಡಿಯಬಹುದು ಹೀಗಾದಲ್ಲಿ ಇದರಿಂದ ಜಗತ್ತಿನ ಅತ್ಯಂತ ಸೂಕ್ಷ್ಮವಾದ ಶೋಧನೆಯು ಕಂಡುಹಿಡಿದಂತಾಗುವುದು

ನಕ್ಷತ್ರ ಲೋಕದ ಅಭೇದ್ಯ ರಹಸ್ಯವು ಶೀಘ್ರದಲ್ಲಿಯೇ ಹೊರಬೀಳುವುದು

★ ಅದ್ಭುತವಾದ ದೂರದರ್ಶಿ ಯಂತ್ರದ ರಚನೆ
★ ಅಖಿಲ ಸೃಷ್ಟಿಯ 'ವಿಶ್ವರೂಪ' ದರ್ಶನ
★ ಪಲಮೋರ್ ಶೋಧನಾಲಯದ ಲೋಕವಿಖ್ಯಾತ ಸಾಹಸ

ಮಾರ್ಸ್ ಗ್ರಹದಲ್ಲಿ ಮನುಷ್ಯರ ವಸತಿಯಿದೆಯೆಂದು ಊಹಿಸಲಾಗಿದೆ ಮಾರ್ಸ್ ಗ್ರಹದಲ್ಲಿ ನೀಳವಾಗಿ ಕಾಣುವ ರೇಖೆಗಳನ್ನು ಕಂಡು ಅವುಗಳಲ್ಲಿ ಕಾಲುವೆಗಳುಂಟೆಂದು ಅಭಿಪ್ರಾಯಪಟ್ಟಿರುತ್ತಾರೆ ಅದು ಸತ್ಯವೇ? ಅದು ಸತ್ಯವಾದಲ್ಲಿ ಅಂತಹ ಕಾಲುವೆಗಳನ್ನು ಕಡಿಯಲು ಮನುಷ್ಯರ ಕೈ ಚಳಕ ನಡೆದಿದೆಯೋ ಎಂದೂ ತಿಳಿಯಬಹುದು. ಹೀಗೆ ತಿಳಿದಲ್ಲಿ ಸೃಷ್ಟಿಯ ಅದ್ಭುತವೇ ಭೇದಿಸಿದಂತಾಯಿತು ಅಥವಾ ಅದು ಕೇವಲ ಗ್ರಹದಲ್ಲಿರುವ ಬಿರುಕೇ ಎಂಬ ಸಂಶಯವೂ ಬಗೆಹರಿಸಬಹುದು. ಈ ಗ್ರಹವು ಕೆಂಪಾಗಿ ಉರಿಯುವುದು ಅಲ್ಲಿನ ವನಸ್ಪತಿಗಳಿಂದಲೇ ಎಂಬ ಅಭಿಪ್ರಾಯವನ್ನು ಸ್ಥಿರಗೊಳಿಸಬಹುದು

ಹಿಂದಿನ ಯಂತ್ರವೂ ಹೊಸ ಯಂತ್ರವೂ

ಈ ಯಂತ್ರವು ಈಗ ಇರುವ ಅತೀ ದೊಡ್ಡ ದೂರದರ್ಶಿಯಂತ್ರಕ್ಕಿಂತ ೪೦೦ ಪಾಲು ಶಕ್ತಿಯುಳ್ಳದ್ದು ಈಗ ಇರುವ ಅತೀ ದೊಡ್ಡ ಯಂತ್ರವು ಪಲಮೋರದಿಂದ ಸ್ವಲ್ಪ ದೂರದಲ್ಲಿರುವ ಮೌಂಟ್ ವಿಲ್ಸನಿನಲ್ಲಿದೆ ಅದು ೧೦೦ ಇಂಚಿನ ಅಳತೆಯದ್ದು ಇದು ಇದರ ಇಮ್ಮಡಿಯಿದೆ ಆ ಯಂತ್ರವೇ ೬೦ ಟ್ರಿಲಿಯನ್ ಮೈಲುಗಳ ಮೇಲಿನ ವಸ್ತುಗಳನ್ನು ಸಮೀಪಕ್ಕೆ ಸೆಳೆದು ತೋರಿಸುವ ಶಕ್ತಿಯುಳ್ಳದ್ದು ಅದೂ ವಿಜ್ಞಾನದ ಅಭಿವೃದ್ಧಿಯ ಒಂದು ಮೆಟ್ಟಿಲಾಗಿ ಪರಿಣಮಿಸಿದೆ. ಅದರಲ್ಲಿ ನೋಡಿ ಕಳೆದ ೬೦ ವರ್ಷಗಳಿಂದ ಕಂಡ ಗ್ರಹಗಳನ್ನೇ ಕಂಡದ್ದಲ್ಲದೆ ಹೊಸತೇನನ್ನೂ ಕಾಣಲಾಗಲಿಲ್ಲ ದೂರದೂರದಲ್ಲಿ ಒಮ್ಮೆ ಅಸ್ಪಷ್ಟವಾಗಿ ಕಾಣುವ ಮಸಕು-ಗಳಂತೆ ಕೆಲವು ಗ್ರಹಗಳು ಚಲಿಸುತ್ತಿದ್ದರೂ ಆ ಗ್ರಹಗಳ ಸ್ಥಿತಿಯು ವ್ಯಕ್ತವಾಗಿ ತಿಳಿಯಲಿಲ್ಲ ಅದರ ರಹಸ್ಯವು ಇದರಿಂದ ತಿಳಿಯುತ್ತದೆ.

ಮೌಂಟ್ ವಿಲ್ಸನಿನಲ್ಲಿರುವ ಯಂತ್ರದಿಂದ ಚಂದ್ರಮಂಡಳದ ೧೮ ಫೀಟು ಎತ್ತರದ ಪರ್ವತಶಿಖರಗಳ ಫೋಟೋವನ್ನು ತೆಗೆದಿರುತ್ತಾರೆ. ಹೊಸ ಯಂತ್ರದಲ್ಲಿ ಅಲ್ಲಿ ಮನೆಗಳಿದ್ದರೆ ಅವುಗಳ ಶಿಖರಗಳನ್ನೂ ಕಾಣಬಹುದಾಗಿದೆ ನ್ಯೂಯೋರ್ಕನಿಂದ ಕಾಲಿಫೋರ್ನಿಯಾದಲ್ಲಿ ನಡೆಯುವ ಗೆಳತಿಯ ಮುಖವನ್ನು ಅವಳ ಗವನಿನ ಬಣ್ಣವನ್ನೂ ಗುರುತಿಸಬಹುದಾಗಿದೆ!

ಅಂತೂ ಬೇಗನೇ ಬ್ರಹ್ಮಾಂಡದ, ನಕ್ಷತ್ರಲೋಕದ ರಹಸ್ಯವು ಭೇದಿಸಲಾಗುವುದು. ಶೋಧನಾ ಪ್ರಪಂಚದಲ್ಲಿ ವಿಜ್ಞಾನದ ಬೆಳವಣಿಗೆಯಲ್ಲಿ ಇದು ಅದ್ಭುತವಾದ ಸಾಧನೆ!

ಮಂಗಳೂರು ಓಟೋಮೊಬೈಲ್ಸ್ ಲಿಮಿಟೆಡ್

(ಸಿಟಿಬಸ್ ಸರ್ವಿಸ್)

ದೊಡ್ಡ ಉದ್ಯಮವನ್ನು ಮಾಡಿ ಸಾರ್ವಜನಿಕರ ಕೋಟಿ ಕೋಟಿ ರೂಪಾಯಿಗಳನ್ನು ಸುಲಿಗೆಮಾಡಬೇಕೆಂಬ ಧನದ ದುರಾಶೆ ನಮಗಿಲ್ಲ. ನಿಮ್ಮ ಸೌಕರ್ಯವು ನಮ್ಮ ಉದ್ಯಮದ ಲಾಭ! ದಿನವೊಂದಕ್ಕೆ ಕೇವಲ 0-4 0 ತೆತ್ತು ಇಷ್ಟಬಂದಲ್ಲಿ ಪ್ರಯಾಣಮಾಡಿ 36 ಅರ್ಧಾಣೆಗಳ ಟಿಕೆಟುಗಳುಳ್ಳ ಪುಸ್ತಕವನ್ನು ನಿಮಗೆ ಕೇವಲ ಒಂದೇ ರೂಪಾಯಿಗೆ ಕೊಡುತ್ತೇವೆ ಅವನ್ನು ಪಡೆದು ಇಷ್ಟವಿದ್ದಂತೆ ಪ್ರಯಾಣ ಮಾಡಬಹುದು ಮಳೆಗಾಲಗಳ ತೊಂದರೆಯಿಲ್ಲ ಪಟ್ಟಣಗಳಲ್ಲಿ ಎಲ್ಲಿಂದ ಎಲ್ಲಿಗೆ ಹೋಗಬೇಕಾದರೂ ಅತ್ಯಂತ ಕಡಿಮೆದರದಲ್ಲಿ ಹೋಗುವಂತೆ ನಾವು ಬಸ್ಸುಗಳನ್ನು ಏರ್ಪಡಿಸಿದ್ದೇವೆ

ಕೆವಾರ್ಡ್ ಮತ್ತು ಕಂಪೆನಿ,
ಮೇನೇಜಿಂಗ್ ಏಜಂಟರು

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ

ಮೆಟ್ಟು ಬೂಟ್ಸುಗಳಿಗೆ ಅಗತ್ಯವಿರುವ ಎಲ್ಲಾ ಸಾಮಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store.
28 Meachua Bazar St, CALCUTTA

NACET

ವಿಶಿಷ್ಟತೆ ಮತ್ತು ಬೆಲೆಗೆ ನೆಸೆಟ್ ಕ್ಷೌರದ ಸೆಟ್ಟನ್ನು ಸರಿಗಟ್ಟುವವುಗಳಿಲ್ಲ. ಈ ಸೆಟ್ಟಿನಲ್ಲಿ ಒಂದು ನೆಸೆಟ್ ರೇಜರ್ ಎರಡು ನೆಸೆಟ್ ಬ್ಲೇಡುಗಳು ಒಂದು ಅಚ್ಚುಕಟ್ಟಾದ ಪೆಟ್ಟಿಗೆಯಲ್ಲಿರುತ್ತವೆ. ಇಷ್ಟು ಕಡಿಮೆ ಕ್ರಯದಲ್ಲಿ ಅನೇಕ ಬಾರಿ ಸರಿಯಾಗಿ ಕ್ಷೌರಮಾಡುವಂಥ ಗುಣವುಳ್ಳ ಈ ಬ್ಲೇಡುಗಳನ್ನು ಮೀರುವವುಗಳಿಲ್ಲ



ನೆಸೆಟ್ ಬ್ಲೇಡುಗಳು 7 ಆಣೆಗೆ 10
ಒಂದು ಸೆಟ್ಟಿಗೆ ಆಣೆ 10

ಉದರವೇದನೆಯ ಪೀಡಿತರ ಹಾದಿಕಾಯುವ ವೇದನೆಗಳು.

ಕೇವಲ ಒಂದೊಂದು ಸಲ ವಾಯು ಅಥವಾ ಎದೆಯುರಿಯುಂಟಾಗಿ ಕಾಣಿಸಿಕೊಳ್ಳುವ ಅಜೀರ್ಣವನ್ನು ತಿರಸ್ಕರಿಸಬೇಡಿ ಅಲಕ್ಷಿಸಲ್ಪಟ್ಟ ಅಜೀರ್ಣವು ಕಡೆಗೆ ಭಯಂಕರ ಬಾಧೆಯನ್ನುಂಟುಮಾಡುವುದೆಂದು ಬಹಳ ಕಡಿದಾಗಿ ನೋಡಲಾಗುವುದು—ಊಟದ ನಂತರ ದೇಹಾಲಸ್ಯ, ತಲೆಬೇನೆ—ಉದರಶೂಲೆ—ಕೊನೆಗೆ ಇನ್ನೂ ಭಯಂಕರವಾದ ಹೊಟ್ಟೆನೋವು ಅಥವಾ ಭಯಂಕರ ಉದರದೊಳಗಿನ ವ್ರಣಗಳು.

ಸಕಾಲದಲ್ಲಿ ಈ ಬಾಧೆಗಳಿಂದ ಬಿಡುಗಡೆ ಹೊಂದಿರಿ ಇದೇ ಒಂದು ಬಾಟ್ಲಿ ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಕೊಂಡುಕೊಳ್ಳಿರಿ ಊಟವಾದ ಕೂಡಲೆ ಒಂದು ಗುಟುಕು ಔಷಧಿಯನ್ನು ಸೇವಿಸಿರಿ ಪತ್ಯವನ್ನು ಅಜೀರ್ಣವು ಹೇಗೆ ಮಾಯವಾಗುತ್ತದೆಂಬುದನ್ನು ಗಮನಿಸಿರಿ. ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಬಾಧೆಯ ಮೂಲವನ್ನೇ ಕಿತ್ತೊಗೆಯುತ್ತದೆ—ನಿಜವಾಗಿ ಶಾಸ್ತ್ರೀಯವಾದ ಔಷಧಿ ಒಂದು ವೇದನೆಯನ್ನುಂಟುಮಾಡುವ ಹೆಚ್ಚಾದ ಆಮ್ಲವನ್ನು ದೂರೀಕರಿಸುತ್ತದೆ ಮತ್ತು ಜಾಡ್ಯಗ್ರಸ್ತವಾದ ಉದರದಲ್ಲಿ ನಯವಾದ ಹೊದಿಕೆಯನ್ನು ಹಾಕಿ ಪರಿಹಾರವನ್ನುಂಟುಮಾಡಿ ಅದರ ಮೂಲಕವಾಗಿ ನಿಮ್ಮ ವೇದನೆಯು ನಾಶವಾಗಿ ಜೀವವು ಸುಖದ ಕ್ಷೀರದ ಇದ ನಿಮ್ಮ ಅಜೀರ್ಣತೆಯನ್ನು ಹೋಗಲಾಡಿಸುವುದರಲ್ಲಿ ಹೀಗಿರುವುದು—ನಿಮ್ಮ ವರ್ಷಗಳಿಂದ ನರಳಿ ಕ್ಷೀಣವಾದರೂ ಚಿಂತಿಲ್ಲ

ಒಂದು ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರಿನ ಒಂದು ಬಾಟ್ಲಿಯನ್ನು ಕೆಮಿಸ್ಟರಿಂದಾಗಲಿ ಸ್ಟೋರಿನಿಂದಾಗಲಿ ಈಗಲೇ ಕೊಂಡುಕೊಳ್ಳಿರಿ ಆದರೆ ನಿಮಗೆ ವಾಸ್ತವಿಕವಾದ ಮೆಕ್ಲೀನ್ ಬ್ರೇಂಡ್ ಸಿಕ್ಕಿದೆಯೋ ಎಂದು ಖಚಿತಪಡಿಸಿಕೊಳ್ಳಿರಿ ಎಲೆಕ್ಸ್ ಸಿ ಮೆಕ್ಲೀನ್ ಎಂಬ ದಸ್ಕತು ಬಾಟ್ಲಿಯ ಮೇಲೂ ಪೆಟ್ಟಿಗೆಯ ಮೇಲೂ

ಪೆಟ್ಟಿಗೆಯ ಮೇಲೆ ಕೆಂಪು ಸೀಲು ಇರುವುದೋ ಎಂದೂ ನೋಡಿರಿ ಇದಿಲ್ಲದಿದ್ದರೆ ಅದು ವಾಸ್ತವಿಕವಾದ ಮೆಕ್ಲೀನ್ ಬ್ರೇಂಡಲ್ಲ ಹುಡಿ ಅಥವಾ ಮಾತ್ರೆ ರೂಪದಲ್ಲಿದೆ ಚಿಲ್ಲರೆಯಾಗಿ ಮಾರಲ್ಪಡುವುದಿಲ್ಲ ಕಮ್ಮಿ ಕ್ರಯದ ನಕಲಿನವುಗಳು ನಿಮ್ಮ ಬಾಧೆಯನ್ನು ಇನ್ನೂ ಹೆಚ್ಚಿಸಬಹುದು ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ಪೆಲೆಸ್ಟೈನ ವಿವಾದದ ತೀರ್ಮಾನ

ಮಿ. ಬರ್ನಾರ್ಡ ಶಾರ ಅಭಿಪ್ರಾಯ

ಮೆಂಡೇಟ್ ಕಮಿಶನು ವಿಚಾರಣೆಮಾಡುವುದು

ಪೆಲೆಸ್ಟೈನ ವಿವಾದದ ತೀರ್ಮಾನವು ಬ್ರಿಟಿಶರಿಂದ ಸಾಧ್ಯವಲ್ಲ. ಅವರು ಈ ವಿಚಾರದಲ್ಲಿ ಮಹತ್ವದ ಯಾವ ಕಾರ್ಯವನ್ನೂ ಮಾಡಲಾರರು. ಅತ್ತ ಹೋದರೆ ನದಿ-ಇತ್ತ ಹೋದರೆ ಹಳ್ಳ ಎಂಬಂತೆ ಅವರ ಸ್ಥಿತಿ ಆಗಿರುವುದು. ಆದ್ದರಿಂದ ಈ ವಿವಾದ ತೀರ್ಮಾನವನ್ನು ಅವರವರಿಗೇ ಅಂದರೆ ಯಹೂದಿಯರು ಮತ್ತು ಅರಬರಿಗೆ ಬಿಟ್ಟುಕೊಡಬೇಕು. ಈ ವಿವಾದ ತೀರ್ಮಾನವನ್ನು ತಾವೇ ಮಾಡಬೇಕಾಗುವುದೆಂದು ಅರಬರೂ ಯಹೂದಿಯರೂ ತಿಳಿದರಾದರೆ ಅವರು ಯಾವದಾದರೂ ಒಂದು ತೀರ್ಮಾನಕ್ಕೆ ಬಾರದೇ ಇರುವರು. ಅವರು ತೀರ್ಮಾನಕ್ಕೆ ಬರಲಿಕ್ಕೆ ಅವರಿಗೆ ಅನುಕೂಲಗಳೂ ಅವಕಾಶವೂ ಇರುತ್ತದೆ' ಎಂದು ಸುಪ್ರಸಿದ್ಧ ಸಾಹಿತಿಗಳಾದ ಮಿ. ಬರ್ನಾರ್ಡ ಶಾರವರು ಹೇಳಿದ್ದಾರೆ.

ವಿವಾದದ ಕಾರಣ:

ವಿವಾದದ ಕಾರಣವನ್ನು ಕುರಿತು ಮಿ. ಬರ್ನಾರ್ಡ ಶಾರು ಹೀಗನ್ನುತ್ತಾರೆ:—ಯಹೂದಿಯರದ್ದಲ್ಲದ್ದನ್ನು ಬ್ರಿಟಿಷರು ಯಹೂದಿಯರಿಗೆ ಕೊಟ್ಟುಬಿಟ್ಟರು. ಪೆಲೆಸ್ಟೈನನ್ನು ಯಹೂದಿಯರಿಗೆ ವಾಗ್ದಾನಮಾಡುವ ಅಧಿಕಾರ ಬ್ರಿಟಿಷರಿಗಿರಲಿಲ್ಲ. ಅತ್ತ ಕರ್ನಲ್ ಲಾರೆನ್ಸನ ಮೂಲಕ ಬ್ರಿಟಿಷರು ಅರಬರಿಗೂ ಕೆಲವು ಆಶ್ವಾಸನೆಗಳನ್ನಿತ್ತರು. ಈಗೇನು ಮಾಡಬಹುದು? ಪೆಲೆಸ್ಟೈನನ್ನು ಯಹೂದಿಯರಿಗೆ ಕೊಟ್ಟರೆ ಅರಬರಿಗೆ ಪ್ರತಿಜ್ಞಾಭಂಗ ಮಾಡಿದಂತಾಗುತ್ತದೆ. ಅರಬರಿಗೆ ಕೊಟ್ಟರೆ ಯಹೂದಿಯರನ್ನು ಮೋಸಮಾಡಿದಂತಾಗುತ್ತದೆ. ಆದ್ದರಿಂದ ಬ್ರಿಟಿಷರು ಬಹಳ ಕರುಣಾಸ್ಪದ ಸ್ಥಿತಿಯಲ್ಲಿರುತ್ತಾರೆ. ಬ್ರಿಟಿಷರು ಇಬ್ಬರಿಗೂ ಕೊಟ್ಟ ಮಾತುಗಳನ್ನು ಮುರಿಯುವ ಪ್ರಸಂಗ ಬಂದಿದೆ.

ಉಪಾಯ.

ಪೆಲೆಸ್ಟೈನನ್ನು ಈಜಿಪ್ತಿನ ಅರಸನು; ಅದಕ್ಕೆ ಪ್ರಾಂತಿಕ ಸ್ವರಾಜ್ಯ ಕೊಟ್ಟು ಆಳಬೇಕೆಂದು ಸೂಚನೆಯಾಗಿದೆ. ಹೀಗಾದದ್ದಾದರೆ ಸಮಸ್ಯೆಯ ತೀರ್ಮಾನವು ಸುಲಭದಲ್ಲಾಗುವುದು. ಯಾಕೆಂದರೆ ಅರಬರ ಪೆಲೆಸ್ಟೈನನ್ನು ಮುಸಲ್ಮಾನ ಬಾದಶಹನು ಆಳುವುದರಿಂದ ಅರಬರಿಗೆ ತೃಪ್ತಿಯಾಗಬಹುದು; ಶಾಸನ ಸೂತ್ರವು ಬ್ರಿಟಿಷರ ಕೈಯಲ್ಲೇ ಇರುವುದರಿಂದ ಯಹೂದಿಯರಿಗೂ ತೃಪ್ತಿಯಾಗಬಹುದು. ಪರಂತು ಈ ಪರಿವರ್ತನೆಗೆ ಅರಬಿ ಪ್ರಮುಖರು ಒಪ್ಪುವದಿಲ್ಲ. ಯಹೂದಿಯರೂ ಇದಕ್ಕೆ ಒಪ್ಪುವದಿಲ್ಲ.

ವಿಚಿತ್ರ ಪರಿಸ್ಥಿತಿ.

ಪೆಲೆಸ್ಟೈನಿನ ಪಟ್ಟಣಿಗರಾದ ಅರಬರು ಯಹೂದಿಯರನ್ನು ವಿರೋಧಿಸುವುದಿಲ್ಲ. ಯಾಕೆಂದರೆ ಅಲ್ಲಿ ಯಹೂದಿಯರು ಪಟ್ಟಣಗಳಲ್ಲಿ ಬಹುಸಂಖ್ಯಾಕರಾಗಿರುವರು. ಅರಬ ಕೂಲಿಗಳಿಗೆ ತುಂಬಾ ಕೂಲಿ ಕೊಡುವರು. ಅವರ ಜೀವನವು ಕೃಷಿಯಿಂದ ನಡೆಯಬೇಕು. ಪರಂತು ಯಹೂದಿಯರು ತುಂಬಾ ಹಣ ಕೊಟ್ಟು ಖರೀದಿಮಾಡುತ್ತಾರೆ. ಅವರೊಡನೆ ಸ್ಪರ್ಧೆಗೆ ನಿಂತು ಖರೀದಿ ಕ್ರಯಕೊಟ್ಟು ಆಸ್ತಿ ಕೊಂಡುಕೊಳ್ಳುವದು ಅರಬೀ ಹಳ್ಳಿಗರಿಗೆ ಅಸಾಧ್ಯವಾಗಿರುವುದು. ಆದ್ದರಿಂದ ಪೆಲೆಸ್ಟೈನ ಹಳ್ಳಿಹಳ್ಳಿಗಳಲ್ಲಿ ಯಹೂದಿಯರಿಗೆ ಅರಬರ ವಿರೋಧವು ಹೆಚ್ಚಾಗಿದೆ. ಹೀಗೆ ಅರಬ ಯಹೂದಿ ಜಗಳವು ಜಾತೀಯವಾಗಿರುವುದು ಮಾತ್ರವಲ್ಲ, ಆರ್ಥಿಕವಾಗಿಯೂ ಇರುತ್ತದೆ. ಎರಡೂ ಕಡೆಯವರು ಈ ವಿಚಿತ್ರ ಪರಿಸ್ಥಿತಿಯಿಂದ ಪಾರುಗಾಣಿಸಲಿಕ್ಕೆ ಬ್ರಿಟಿಷರ ಕಡೆಗೆ ನೋಡುತ್ತಾರೆ; ಮತ್ತು ತಮಗೆ ಕೊಟ್ಟ ಭಾಷೆಗಳನ್ನು ಪೂರ್ಣಗೊಳಿಸಿಕೊಡಬೇಕೆಂದು ಬ್ರಿಟಿಷರನ್ನು ಒತ್ತಾಯಿಸುತ್ತಾರೆ.

ಮೆಂಡೇಟ್ ಕಮಿಶನಿನ ವಿಚಾರಣೆ.

ಆದ್ದರಿಂದ ಈ ಪೆಲೆಸ್ಟೈನ ಸಮಸ್ಯೆಯ ತೀರ್ಮಾನಕ್ಕೆ ತುಂಬಾ ರಾಜನೀತಿ ನೈಪುಣ್ಯವು ಬೇಕಾಗಿರುವುದು. ಅದನ್ನು ಹೇಗೆ ತೀರ್ಮಾನಿಸಬಹುದೆಂಬುದನ್ನು ಮೆಂಡೇಟ ಕಮಿಶನು ಆಲೋಚಿಸುತ್ತದೆ. ತನ್ಮಧ್ಯೆ ಅರಬರೂ ಯಹೂದಿಯರೂ ಕಾಯಿದೆಗಳನ್ನು ತಮ್ಮ ಕೈಗೇ ತೆಗೆದುಕೊಂಡು ಒಬ್ಬರೊಬ್ಬರ ಮೇಲೆ ಅತ್ಯಾಚಾರವನ್ನು ಮಾಡುವುದೂ, ಕಳ್ಳತನದಿಂದ ಯಹೂದಿಯರು ದೊಡ್ಡ ಸಂಖ್ಯೆಯಿಂದ ಬಂದು ಪೆಲೆಸ್ಟೈನವನ್ನು ನುಗ್ಗುವುದೂ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸಿರುವುದು. ಆಗಾಗ ಬಾಂಬು ಹಾಕುವುದು, ಗುಂಡು ಹೊಡೆಯುವುದು ಇತ್ಯಾದಿ ಅತ್ಯಾಚಾರಗಳಾಗುವುದು ಅಲ್ಲಿ ನಡೆದೇ ಇವೆ. ಕಳೆದವಾರ ವಿದ್ಯುಚ್ಛಕ್ತಿಯ ಸ್ಟೇಶನಿಗೆ ಬಾಂಬು ಹಾಕಿದುದರಿಂದ, ಜೆರುಸಲೇಮು ಪಟ್ಟಣವು ಒಂದು ಇಡೀ ರಾತ್ರಿಯನ್ನು ಕತ್ತಲೆಯಲ್ಲಿ ಕಳೆಯಬೇಕಾಯಿತು.

ರುಮೇನಿಯದ ಮೇಲೆ ಹಿಟ್ಲರನಿಗೆ ದೃಷ್ಟಿಯೇನು?

ಯೂರೋಪಿನ ರಾಜಕೀಯದಲ್ಲಿ ಇಂದು ರುಮೇನಿಯವು ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ರುಮೇನಿಯದ ಅರಸನಾದ ಕಾರೊಲನ ವಿಲಾಸಮಯ ಜೀವನವೂ ಇಂದಿನ ಅದರ ವೈಶಿಷ್ಟ್ಯಕ್ಕೆ ಮತ್ತಷ್ಟು ಕುತೂಹಲವನ್ನು ಹೆಚ್ಚಿಸಿದೆ. ಈಗ ಮೊದಲಾಗಿ ರುಮೇನಿಯದ ರಾಜಕೀಯವನ್ನು ಕುರಿತು ಆಲೋಚಿಸುವ.

ಯೂರೋಪಿನ ಶಾಂತಿಗೆ ಬಾಲ್ಕನ್ ರಾಷ್ಟ್ರಗಳ ಬಲಗಡೆಯು ಒಂದು ಪ್ರಧಾನವಾಗಿದೆ. ಹಾಗಾಗಿ ಬ್ರಿಟನು ಮತ್ತು ಫ್ರಾನ್ಸುಗಳು ಇಂದು ೧೮,೦೦೦,೦೦೦ ಮಂದಿ ಬಾಲ್ಕನ್-ಪ್ರಜೆಗಳ ಸ್ವಾತಂತ್ರ್ಯ ರಕ್ಷಣೆಯ ಪ್ರತಿಜ್ಞೆ ತೊಟ್ಟಿದ್ದಾರೆ.

ರುಮೇನಿಯದ ಸ್ಥಾನವೂ, ಅದರ ಐಶ್ವರ್ಯವೂ, ಗೋದಿ ಮತ್ತು ಎಣ್ಣೆಗಳ ಅಧಿಕವಾದ ಅದರ ಉತ್ಪತ್ತಿಯೂ ಇಂದು ಯೂರೋಪಿನ ಕಣ್ಣನ್ನು ಅದರ ಕಡೆಗೆ ತಿರುಗುವಂತೆ ಮಾಡಿದೆ. ಯೂರೋಪಿನ ಮಹಾಯುದ್ಧದ ಸಂದರ್ಭದಲ್ಲಿ ರುಮೇನಿಯದ ಕಣಜ ಮತ್ತು ತೈಲಬಾವಿಗಳ ಸ್ವಾಧೀನತೆಯು ಸ್ವಾಧೀನವಿದ್ದವರಿಗೆ ಖಂಡಿತವಾಗಿಯೂ ವಿಜಯಹೇತುವಾಗುವುದರಲ್ಲಿ ಸಂಶಯವಿಲ್ಲ. ಹೀಗಾಗಿ ಎಣ್ಣೆಯ ಅತುಲ ಸಂಗ್ರಹಕ್ಕಾಗಿ ಜರ್ಮನಿಯು ಇಂದು ರುಮೇನಿಯದ ಮೇಲೆ ಕಣ್ಣಿಟ್ಟಿದೆ. ೧೯೩೮ರಲ್ಲಿ ಜರ್ಮನಿಯು ೪,೦೦೦,೦೦೦ ಟನ್ ಎಣ್ಣೆಯನ್ನು ಹೊರಗೆ ಕಳುಹಿಸಿದೆ. ಯುದ್ಧವಾದಲ್ಲಿ ಬೇರೆ ದೇಶದಿಂದ ಎಣ್ಣೆ ಅಲ್ಲಿಗೆ ಬರುವಂತಿಲ್ಲ. ಕೇವಲ ೩,೦೦೦,೦೦೦ ಟನ್ ಎಣ್ಣೆಗಳನ್ನು ಆಧರಿಸಿ ಜರ್ಮನಿಯು ಯುದ್ಧರಂಗಕ್ಕಿಳಿಯಲು ಸಾಧ್ಯವಿಲ್ಲ. ಸಂಕಷ್ಟದ ಸಮಯದಲ್ಲಿ ರುಮೇನಿಯದ ಎಣ್ಣೆಯು ಸಹಕಾರಿಯಾದೀತೆಂದು ಜರ್ಮನಿಯು ಆ ಕಡೆಗೆ ತನ್ನ ದೃಷ್ಟಿಯನ್ನು ಇಟ್ಟಿರುತ್ತದೆ.

ಇಂದು ಹಾಗಾಗಿ ಜರ್ಮನಿಯು ರುಮೇನಿಯದ ಪ್ರಾಧಾನ್ಯತೆಯನ್ನು ಅರಿತಿದೆ. ೧೯೩೮ರಲ್ಲಿ ರುಮೇನಿಯದಲ್ಲಿ ೮,೨೦೦,೦೦೦ ಟನ್ ಎಣ್ಣೆಯು ಉತ್ಪತ್ತಿಯಾಗಿದೆ. ಅದಕ್ಕಿಂತ ಹೆಚ್ಚು ಇಂದು ಅಲ್ಲಿ ಸಿಗಬಹುದು. ಜರ್ಮನಿಯು ರುಮೇನಿಯದೊಡನೆ ಮಾಡಿದ ಒಪ್ಪಂದದಂತೆ ಎಣ್ಣೆ ಮತ್ತು ಕೃಷಿಯು ಜರ್ಮನಿಯ ಅಧೀನದಲ್ಲಿ ಬರಬೇಕಾಗಿದೆ. ಆದರೆ ರುಮೇನಿಯವು ಒಪ್ಪಂದವನ್ನು ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸಿ ಜರ್ಮನಿಗೆ ವ್ಯಾಪಾರದ ಅಧಿಕಾರವನ್ನು ಕೊಡಲು ತಿರಸ್ಕರಿಸಿತು. ಯುದ್ಧದ ಸಂದರ್ಭದಲ್ಲಿ ಅನ್ನ ಮತ್ತು ಎಣ್ಣೆಗಳಿಗಾಗಿ ಜರ್ಮನಿಯು ಇಷ್ಟೊಂದು ರುಮೇನಿಯವನ್ನು ಹಾರೈಸುತ್ತದೆ.

ಇನ್ನೂ ಕೆಲವು ಕಾರಣಗಳೂ ಇವೆ. ಒಂದು ಜರ್ಮನಿಯು ರುಮೇನಿಯದಲ್ಲಿ ಹುಟ್ಟುವ ಡೆನ್ಯೂಬ್ ನದಿಯನ್ನು ಜರ್ಮನ್ ನದಿಯಾಗಿ ಮಾಡಲು ಅಪೇಕ್ಷಿಸದಿರುವುದೇ! ರುಮೇನಿಯದ ಬ್ಲೇಕ್ ಸೀಯು ಸಮುದ್ರ ಕರಾವಳಿಯು ಟರ್ಕಿಗೆ ತಡೆಯನ್ನು ಮಾಡುವುದರಿಂದ ಅದು ಭದ್ರವಾದ ಸ್ಥಳವಾಗಿದೆ.

ಇನ್ನೊಂದು ಕಾರಣವೆಂದರೆ ಹಿಟ್ಲರನು ರುಮೇನಿಯದ ಉತ್ತರ ಪೂರ್ವದಲ್ಲಿರುವ ಉಕ್ರೇನಿನಲ್ಲಿ ತನ್ನ ವಸಾಹತನ್ನು ಸ್ಥಾಪಿಸಲು ಯತ್ನಿಸುತ್ತಿದ್ದಾನೆ. ಇದರಿಂದ ರಶ್ಯವು ಜಾಗ್ರತವಾಗಿ ತನ್ನ ಪ್ರಾಂತದ ಅಕ್ಕಪಕ್ಕ ಕೋಟೆಗಳ ಕಡೆಯನ್ನು ಕಟ್ಟಿಸುತ್ತದೆ. ಹೀಗಾಗಿ ಹಿಟ್ಲರನು ಸರ್ವಥಾ ರುಮೇನಿಯವನ್ನು ಸ್ವಾಧೀನಮಾಡುವ ಹವ್ಯಾಸಕ್ಕೆ ಇಳಿದಿರುತ್ತಾನೆ.

ರುಮೇನಿಯದ ಆಂತರಿಕ ಪರಿಸ್ಥಿತಿಯೂ ಚನ್ನಾಗಿಲ್ಲ. ಅಲ್ಲಿರುವ ಅನೇಕಾನೇಕ ವಿವಿಧ ಪೈಸಾಂಟಿಗಳಿಂದಲಾಗಿ ಅನ್ಯೋನ್ಯ ಮತಭೇದವು ಇರುತ್ತದೆ. ಈಗಿನ ರಾಜನಾದ ಕಾರೊಲನು ಒಂದು ವಿಧದಲ್ಲಿ ಅಲ್ಲಿ ಪ್ರಧಾನ ಮಂತ್ರಿಯೂ ಆಗಿದ್ದಾನೆ. ಅಲ್ಲಿನ ಜನರು ಅವನ ಬಗ್ಗೆ ಅನುನಯ ವಿಧೇಯತೆಯುಳ್ಳವರಲ್ಲವಾದರೂ ಅತ್ಯಂತ ವಾತ್ಸಲ್ಯವುಳ್ಳವರಾಗಿದ್ದಾರೆ.

ಆದರೂ ಅಲ್ಲಿನ ಪರಿಸ್ಥಿತಿಯು ಸಾಕಷ್ಟು ತೃಪ್ತಿಕರವಾಗಿರುವುದಿಲ್ಲ. ಅಲ್ಲಿನ ಜನರು ಸಾಕಷ್ಟು ಆಹಾರವನ್ನು ಪಡೆಯುತ್ತಲಿಲ್ಲ. ಯೂರೋಪಿನ ಸ್ಥಿತಿಯಿಂದಾಗಿ ರಾಜನಾದ ಕಾರೊಲನು ಅಲ್ಲಿನ ದುಸ್ಥಿತಿಗಳನ್ನು ಹೋಗಲಾಡಿಸಲು ಯತ್ನಿಸುತ್ತಿದ್ದಾನೆ. ಮುಂದಿನ ಅವಸ್ಥೆಯು ಹೀಗೆಂದು ಹೇಳಬರುವುದಿಲ್ಲ.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.
ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ.

ಒಂದು ಬಾರಿ ಪರೀಕ್ಷಿಸಿರಿ!
ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟುಕು ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲವರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.
ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.
ನಂ. ೧. ಸಾರಥಿ ನಸ್ಯ 1 ವೀಸಕ್ಕೆ ರೂ. 3-8-0 ನವಿಲಿನ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ. 3-0-0
(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)
ಏಜೆಂಟರು ಬೇಕಾಗಿದ್ದಾರೆ.
ವಿಳಾಸ:—
ಎ. ಪಿ. ಸಾರಥಿ
ಮೆನ್ಯುಫೆಕ್ಚರರ್ಸ್ ಒಫ್ ಮದ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು.



ಜೊಸ್ಕೊ ಟೀ ರೋಸ್
ಸಾಮಾನ್ಯ ಬೆಲೆಗೆ ಮಾರಲ್ಪಡುವ
ಅತ್ಯಂತ ಸುಗಂಧಪೂರಿತ ಸಾಬೂನು!
ಬಹಳ ದೊಡ್ಡದಾದ ಸೈಜು! ◆ ನವೀನವಾದ ಆಕಾರ!
ಆಹ್ಲಾದವನ್ನೀಯುವ ಪರಿಮಳ!
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.
ತಯಾರಿಸುವವರು:— ಬೊಂಬೆ ಸೋಪ್ ಫೆಕ್ಟರಿ, ಬಿ. ಜೆ. 3.
ವಿತರಣಾಕಾರರು:— ಎ. ಅಹಮ್ಮದ್ ಹುಸ್ಸೇನ್, ಗೋಳಿಕಟ್ಟಾ ಬಜಾರ್, ಮಂಗಳೂರು.

'DILROZ' Regd
'Dil Roz' is a sure cure for Oriental sores, local sores, all kinds of deep-rooted sores, skin eruptions, Pimples, Eczema, Ringworm, Sinus Fistula auxillary-Abscess.
There is no need of dressing the wounds, nor are baths prohibited.
Price Rs. 2. Postage extra.
TAHIR DIN,
Anarkali, LAHORE.

ಹುಲ್ಲು ತಿಂದು ಬದುಕಿರುವ ಬೆರಿಸ್ಟರ್ ಮಹಾಶಯ!

ಬ್ರಿಟನಿನ ಅವಿವಾಹಿತ ತಾಯಂದಿರು!

ವಿಲಾಯತಿಯ ವಿಚಿತ್ರ ದಾಂಪತ್ಯ

ಲಂಡನ್ನಿನಲ್ಲಿ ಒಬ್ಬ ಅದ್ಭುತ ಮನುಷ್ಯನಿದ್ದಾನೆ. ಮಿ. ಜೆ. ಆರ್. ಬ್ರಿಸ್ಟನ ಎಂಬುದು ಆತನ ಹೆಸರು. ಮಿ. ಜಸ್ಟೀಸ ಬ್ರಿಸ್ಟನರ ಸಹೋದರನಾಗಿದ್ದಾನೆ. ಅವನು ಮೂರು ದಿನಗಳಿಗೊಮ್ಮೆ ಲಂಡನ್ನಿನಿಂದ ದೂರ ಒಂದು ಹಳ್ಳಿಗೆ ಹೋಗಿ ಒಂದು ಚೀಲ ತುಂಬಾ ಹಸಿಹುಲ್ಲನ್ನು ತರುವನು. [illegible] ನಿಬಿಡಸ್ಥಾನಗಳಲ್ಲಿ ಹುಲ್ಲುಗಾವಲುಗಳು ಇರುವದಿಲ್ಲ. ಅದ್ದರಿಂದ ಅವನು ಹಳ್ಳಿಗೆ ಹೋಗಿ ಅದನ್ನು ತರಬೇಕಾಗುತ್ತದೆ. ಹುಲ್ಲು ಸಿಕ್ಕದ ದಿನ ಬ್ರಿಸ್ಟನ್ನನು ಬಹಳ ಪೇಚಾಟದಲ್ಲಿರುತ್ತಾನೆ. ಯಾಕೆಂದರೆ ಆಗ ಅವನು ಉಪವಾಸದಿಂದ ಇರಬೇಕಾಗುತ್ತದೆ. ಬ್ರಿಸ್ಟನ್ನನು ಕೇವಲ ಹುಲ್ಲು ತಿಂದು ಬದುಕುವನು. ಅವನಿಗೆ ಈಗ [illegible] ವರ್ಷ ವಯಸ್ಸಾದರೂ ಹುಲ್ಲಿನ ಆಹಾರದಿಂದ ಅವನ ವಯಸ್ಸಿನ ಇತರರಿಗಿಂತ ಹೆಚ್ಚು ಆರೋಗ್ಯಸಂಪನ್ನನೂ ದೃಢಕಾಯನೂ ಆಗಿರುವನು.

[illegible]

ಬ್ರಿಟನಿನ ಅವಿವಾಹಿತ ತಾಯಂದಿರು

[illegible]

ವಿಚಿತ್ರ ದಾಂಪತ್ಯ ವಿಚ್ಛೇದ

[illegible]

ಕತ್ತಲೆಯಲ್ಲಿ ಮೋಟಾರನ್ನು ಓಡಿಸುವವರಿಗೆ ಒಳ್ಳೆಯ ಉಪಾಯ

ಪೆಟ್ರೋಲಿನ ಬದಲಿಗೆ ಅಮ್ಮೋನಿಯದ ಉಪಯೋಗ

ಸೊಳ್ಳೆಗಳ ಕಡಿತಕ್ಕೆ ಉತ್ತಮ ಔಷಧಿ

[illegible]

ಪೆಟ್ರೋಲಿನ ಬದಲಿಗೆ ಅಮ್ಮೋನಿಯ

[illegible]

ಸೊಳ್ಳೆಗಳ ಕಡಿತಕ್ಕೆ ಔಷಧಿ

[illegible]

ಹಣ್ಣುರಸಗಳ ಉಪಯೋಗ

[illegible]

ಪೆಲೆಸ್ತೀನ ವಿವಾದದ ತೀರ್ಮಾನ

ಮಿ. ಬರ್ನಾರ್ಡ ಶಾರ ಅಭಿಪ್ರಾಯ

ಮೆಂಡೇಟ್ ಕಮೀಶನು ವಿಚಾರಣೆಮಾಡುವುದು

'ಪೆಲೆಸ್ತೀನ ವಿವಾದದ ತೀರ್ಮಾನವು ಬ್ರಿಟಿಷರಿಂದ ಸಾಧ್ಯವಲ್ಲ. ಅವರು ಈ ವಿಚಾರದಲ್ಲಿ ಮಹತ್ವದ ಯಾವ ಕಾರ್ಯವನ್ನೂ ಮಾಡಲಾರರು. ಅತ್ತ ಹೋದರೆ ನದಿ—ಇತ್ತ ಹೋದರೆ ಹಳ್ಳ ಎಂಬಂತೆ ಅವರ ಸ್ಥಿತಿ ಆಗಿರುವುದು. ಆದ್ದರಿಂದ ಈ ವಿವಾದ ತೀರ್ಮಾನವನ್ನು ಅವರವರಿಗೇ, ಅಂದರೆ ಯಹೂದಿಯರು ಮತ್ತು ಅರಬರಿಗೆ ಬಿಟ್ಟುಕೊಡಬೇಕು. ಈ ವಿವಾದ ತೀರ್ಮಾನವನ್ನು ತಾವೇ ಮಾಡಬೇಕಾಗುವುದೆಂದು ಅರಬರೂ ಯಹೂದಿಯರೂ ತಿಳಿದರಾದರೆ ಅವರು ಯಾವದಾದರೂ ಒಂದು ತೀರ್ಮಾನಕ್ಕೆ ಬಂದೇ ಬರುವರು. ಅವರು ತೀರ್ಮಾನಕ್ಕೆ ಬರಲಿಕ್ಕೆ ಅವರಿಗೆ ಅನುಕೂಲಗಳೂ ಅವಕಾಶವೂ ಇರುತ್ತದೆ' ಎಂದು ಸುಪ್ರಸಿದ್ಧ ಸಾಹಿತಿಗಳಾದ ಮಿ. ಬರ್ನಾರ್ಡ ಶಾರವರು ಹೇಳಿದ್ದಾರೆ.

ವಿವಾದದ ಕಾರಣ

ವಿವಾದದ ಕಾರಣವನ್ನು ಕುರಿತು ಮಿ. ಬರ್ನಾರ್ಡ ಶಾರು ಹೀಗನ್ನುತ್ತಾರೆ.—'ಯಹೂದಿಯರದ್ದಲ್ಲದ್ದನ್ನು ಬ್ರಿಟಿಷರು ಯಹೂದಿಯರಿಗೆ ಕೊಟ್ಟುಕಟ್ಟರು. ಪೆಲೆಸ್ತೀನನ್ನು ಯಹೂದಿಯರಿಗೆ ವಾಗ್ದಾನಮಾಡುವ ಅಧಿಕಾರ ಬ್ರಿಟಿಷರಿಗಿರಲಿಲ್ಲ. ಅತ್ತ ಕರ್ನಲ್ ಲಾರೆನ್ಸನ ಮೂಲಕ ಬ್ರಿಟಿಷರು ಅರಬರಿಗೂ ಕೆಲವು ಆಶ್ವಾಸನೆಗಳನ್ನಿತ್ತರು. ಈಗೇನು ಮಾಡಬಹುದು? ಪೆಲೆಸ್ತೀನನ್ನು ಯಹೂದಿಯರಿಗೆ ಕೊಟ್ಟರೆ ಅರಬರಿಗೆ ಪ್ರತಿಜ್ಞಾಭಂಗ ಮಾಡಿದಂತಾಗುತ್ತದೆ. ಅರಬರಿಗೆ ಕೊಟ್ಟರೆ ಯಹೂದಿಯರನ್ನು ಮೋಸಮಾಡಿದಂತಾಗುತ್ತದೆ. ಆದ್ದರಿಂದ ಬ್ರಿಟಿಷರು ಬಹಳ ಕರುಣಾಸ್ಪದ ಸ್ಥಿತಿಯಲ್ಲಿರುತ್ತಾರೆ. ಬ್ರಿಟಿಷರು ಇಕ್ಕಡೆಯವರಿಗೂ ಕೊಟ್ಟ ಮಾತುಗಳನ್ನು ಮುರಿಯುವ ಪ್ರಸಂಗ ಬಂದಿದೆ.

ಉಪಾಯ

ಪೆಲೆಸ್ತೀನನ್ನು ಈಜಿಪ್ತಿನ ಅರಸನು, ಅದಕ್ಕೆ ಪ್ರಾಂತಿಕ ಸ್ವರಾಜ್ಯ ಕೊಟ್ಟು ಆಳಬೇಕೆಂದು ಸೂಚನೆಯಾಗಿದೆ. ಹೀಗಾದದ್ದಾದರೆ ಸಮಸ್ಯೆಯ ತೀರ್ಮಾನವು ಸುಲಭದಲ್ಲಾಗುವುದು. ಯಾಕೆಂದರೆ ಅರಬರ ಪೆಲೆಸ್ತೀನನ್ನು ಮುಸಲ್ಮಾನ ಬಾದಶಹನು ಆಳುವುದರಿಂದ ಅರಬರಿಗೆ ತೃಪ್ತಿಯಾಗಬಹುದು, ಶಾಸನ ಸೂತ್ರವು ಬ್ರಿಟಿಷರ ಕೈಯಲ್ಲೇ ಇರುವುದರಿಂದ ಯಹೂದಿಯರಿಗೂ ತೃಪ್ತಿಯಾಗಬಹುದು. ಪರಂತು ಈ ಪರಿವರ್ತನೆಗೆ ಅರಬಿ ಪ್ರಮುಖರು ಒಪ್ಪುವುದಿಲ್ಲ. ಯಹೂದಿಯರೂ ಇದಕ್ಕೆ ಒಪ್ಪುವುದಿಲ್ಲ.

ವಿಚಿತ್ರ ಪರಿಸ್ಥಿತಿ

ಪೆಲೆಸ್ತೀನಿನ ಪಟ್ಟಣಿಗರಾದ ಅರಬರು ಯಹೂದಿಯರನ್ನು ವಿರೋಧಿಸುವುದಿಲ್ಲ. ಯಾಕೆಂದರೆ ಅಲ್ಲಿ ಯಹೂದಿಯರು ಪಟ್ಟಣಗಳಲ್ಲಿ ಬಹುಸಂಖ್ಯಾಕರಾಗಿರುವರು. ಅರಬ ಕೂಲಿಗಳಿಗೆ ತುಂಬಾ ಕೂಲಿ ಕೊಡುವರು. ಅವರ ಜೀವನವು ಕೃಷಿಯಿಂದ ನಡೆಯಬೇಕು. ಪರಂತು ಯಹೂದಿಯರು ತುಂಬಾ ಹಣ ಕೊಟ್ಟು ಆಸ್ತಿ ಮಾಡುತ್ತಾರೆ. ಅವರೊಡನೆ ಸ್ಪರ್ಧೆಗೆ ನಿಂತು ವಿಕ್ರಿವಾರಿ ಕ್ರಯಕೊಟ್ಟು ಆಸ್ತಿ ಕೊಂಡುಕೊಳ್ಳುವದು ಅರಬೀ ಹಳ್ಳಿಗರಿಗೆ ಅಸಾಧ್ಯವಾಗಿರುವುದು. ಆದ್ದರಿಂದ ಪೆಲೆಸ್ತೀನ ಹಳ್ಳಿಪಳ್ಳಿಗಳಲ್ಲಿ ಯಹೂದಿಯರಿಗೆ ಅರಬರ ವಿರೋಧವು ಹೆಚ್ಚಾಗಿದೆ. ಹೀಗೆ ಅರಬ ಯಹೂದಿ ಜಗಳವು ಜಾತೀಯವಾಗಿರುವುದು ಮಾತ್ರವಲ್ಲ, ಆರ್ಥಿಕವಾಗಿಯೂ ಇರುತ್ತದೆ. ಎರಡೂ ಕಡೆಯವರು ಈ ವಿಚಿತ್ರ ಪರಿಸ್ಥಿತಿಯಿಂದ ಪಾರುಗಾಣಿಸಲಿಕ್ಕೆ ಬ್ರಿಟಿಷರ ಕಡೆಗೆ ನೋಡುತ್ತಾರೆ; ಮತ್ತು ತಮಗೆ ಕೊಟ್ಟ ಭಾಷೆಗಳನ್ನು ಪೂರ್ಣಮಾಡಿಕೊಡಬೇಕೆಂದು ಬ್ರಿಟಿಷರನ್ನು ಒತ್ತಾಯಿಸುತ್ತಾರೆ.

ಮೆಂಡೇಟ್ ಕಮಿಶನಿನ ವಿಚಾರಣೆ.

ಆದ್ದರಿಂದ ಈ ಪೆಲೆಸ್ತೀನ ಸಮಸ್ಯೆಯ ತೀರ್ಮಾನಕ್ಕೆ ತುಂಬಾ ರಾಜನೀತಿ ನೈಪುಣ್ಯವು ಬೇಕಾಗಿರುವುದು. ಅದನ್ನು ಹೇಗೆ ತೀರ್ಮಾನಿಸಬಹುದೆಂಬುದನ್ನು ಮೆಂಡೇಟ ಕಮಿಶನು ಆಲೋಚಿಸುತ್ತದೆ. ತನ್ಮಧ್ಯೆ ಅರಬರೂ ಯಹೂದಿಯರೂ ಕಾಯಿದೆಗಳನ್ನು ತಮ್ಮ ಕೈಗೇ ತೆಗೆದುಕೊಂಡು ಒಬ್ಬರೊಬ್ಬರ ಮೇಲೆ ಅತ್ಯಾಚಾರವನ್ನು ಮಾಡುವುದೂ, ಕಳ್ಳತನದಿಂದ ಯಹೂದಿಯರು ದೊಡ್ಡ ಸಂಖ್ಯೆಯಿಂದ ಬಂದು ಪೆಲೆಸ್ತೀನವನ್ನು ನುಗ್ಗುವುದೂ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸಿಯದೆ. ಆಗಾಗ ಬಾಂಬು ಹಾಕುವುದು, ಗುಂಡು ಹೊಡೆಯುವುದು ಇತ್ಯಾದಿ ಅಕೃತ್ಯಗಳಾಗುವುದು ಅಲ್ಲಿ ನಡೆದೇ ಇವೆ. ಕಳೆದವಾರ ವಿದ್ಯುಚ್ಛಕ್ತಿಯ ಸ್ಟೇಶನಿಗೆ ಬಾಂಬು ಹಾಕಿದುದರಿಂದ ಜೆರುಸಲೇಮು ಪಟ್ಟಣವು ಒಂದು ಇಡೀ ರಾತ್ರಿಯನ್ನು ಕತ್ತಲೆಯಲ್ಲಿ ಕಳೆಯಬೇಕಾಯಿತು.

ರುಮೇನಿಯದ ಮೇಲೆ ಹಿಟ್ಲರನಿಗೆ ದೃಷ್ಟಿಯೇನು?

ಯೂರೋಪಿನ ರಾಜಕೀಯದಲ್ಲಿ ಇಂದು ರುಮೇನಿಯವು ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ರುಮೇನಿಯದ ಅರಸನಾದ ಕಾರೊಲನ ವಿಲಾಸಮಯ ಜೀವನವೂ ಇಂದಿನ ಅದರ ವೈಶಿಷ್ಟ್ಯಕೆಗೆ ಮತ್ತಷ್ಟು ಕುತೂಹಲವನ್ನು ಹೆಚ್ಚಿಸಿದೆ. ಈಗ ಮೊದಲಾಗಿ ರುಮೇನಿಯದ ರಾಜಕೀಯವನ್ನು ಕುರಿತು ಆಲೋಚಿಸುವ.

ಯೂರೋಪಿನ ಶಾಂತಿಗೆ ಬಾಲ್ಕನ್ ರಾಷ್ಟ್ರಗಳ ಬಲಗಡೆಯು ಒಂದು ಪ್ರಧಾನವಾಗಿದೆ. ಹಾಗಾಗಿ ಬ್ರಿಟನು ಮತ್ತು ಫ್ರಾನ್ಸುಗಳು ಇಂದು ೧೮,೦೦೦,೦೦೦ ಮಂದಿ ಬಾಲ್ಕನ್ ಪ್ರಜೆಗಳ ಸ್ವಾತಂತ್ರ್ಯ ರಕ್ಷಣೆಯ ಪ್ರತಿಜ್ಞೆ ತೊಟ್ಟಿದ್ದಾರೆ.

ರುಮೇನಿಯದ ಸ್ಥಾನವೂ, ಅದರ ಐಶ್ವರ್ಯವೂ, ಗೋದಿ ಮತ್ತು ಎಣ್ಣೆಗಳ ಅಧಿಕವಾದ ಅದರ ಉತ್ಪತ್ತಿಯೂ ಇಂದು ಯೂರೋಪಿನ ಕಣ್ಣನ್ನು ಅದರ ಕಡೆಗೆ ತಿರುಗುವಂತೆ ಮಾಡಿದೆ. ಯೂರೋಪಿನ ಮಹಾಯುದ್ಧದ ಸಂದರ್ಭದಲ್ಲಿ ರುಮೇನಿಯದ ಕಣಜ ಮತ್ತು ತೈಲಬಾವಿಗಳ ಸ್ವಾಧೀನತೆಯು ಸ್ವಾಧೀನವಿದ್ದವರಿಗೆ ಖಂಡಿತವಾಗಿಯೂ ವಿಜಯಹೇತುವಾಗವುದರಲ್ಲಿ ಸಂಶಯವಿಲ್ಲ. ಹೀಗಾಗಿ ಎಣ್ಣೆಯ ಅತುಲ ಸಂಗ್ರಹಕ್ಕಾಗಿ ಜರ್ಮನಿಯು ಇಂದು ರುಮೇನಿಯದ ಮೇಲೆ ಕಣ್ಣಿಟ್ಟಿದೆ. ೧೯೩೮ರಲ್ಲಿ ಜರ್ಮನಿಯು ೪,೦೦೦,೦೦೦ ಟನ್ ಎಣ್ಣೆಯನ್ನು ಹೊರಗೆ ಕಳುಹಿಸಿದೆ. ಯುದ್ಧವಾದಲ್ಲಿ ಬೇರೆ ದೇಶದಿಂದ ಎಣ್ಣೆ ಅಲ್ಲಿಗೆ ಬರುವಂತಿಲ್ಲ. ಕೇವಲ ೩,೦೦೦,೦೦೦ ಟನ್ ಎಣ್ಣೆಗಳನ್ನು ಆಧರಿಸಿ ಜರ್ಮನಿಯು ಯುದ್ಧರಂಗಕ್ಕಿಳಿಯಲು ಸಾಧ್ಯವಿಲ್ಲ. ಸಂಕಷ್ಟದ ಸಮಯದಲ್ಲಿ ರುಮೇನಿಯದ ಎಣ್ಣೆಯು ಸಹಕಾರಿಯಾದೀತೆಂದು ಜರ್ಮನಿಯು ಆ ಕಡೆಗೆ ತನ್ನ ದೃಷ್ಟಿಯನ್ನು ಇಟ್ಟಿರುತ್ತದೆ.

ಇಂದು ಹಾಗಾಗಿ ಜರ್ಮನಿಯು ರುಮೇನಿಯದ ಪ್ರಾಧಾನ್ಯತೆಯನ್ನು ಅರಿತಿದೆ. ೧೯೩೭ರಲ್ಲಿ ರುಮೇನಿಯದಲ್ಲಿ ೪೨೦೦,೦೦೦ ಟನ್ ಎಣ್ಣೆಯು ಉತ್ಪತ್ತಿಯಾಗಿದೆ. ಅದಕ್ಕಿಂತ ಹೆಚ್ಚು ಇಂದು ಅಲ್ಲಿ ಸಿಗಬಹುದು. ಜರ್ಮನಿಯು ರುಮೇನಿಯದೊಡನೆ ಮಾಡಿದ ಒಪ್ಪಂದದಂತೆ ಎಣ್ಣೆ ಮತ್ತು ಕೃಷಿಯ ಜರ್ಮನಿಯ ಅಧೀನದಲ್ಲಿ ಬರಬೇಕಾಗಿದೆ. ಆದರೆ ರುಮೇನಿಯವು ಒಪ್ಪಂದವನ್ನು ಇನ್ನೊಂದ ರೀತಿಯಲ್ಲಿ ವ್ಯಾಖ್ಯಾನಿಸಿ ಜರ್ಮನಿಗೆ ವ್ಯಾಪಾರದ ಅಧಿಕಾರವನ್ನು ಕೊಡಲು ತಿರಸ್ಕರಿಸಿತ್ತು. ಯುದ್ಧದ ಸಂದರ್ಭದಲ್ಲಿ ಅನ್ನ ಮತ್ತು ಎಣ್ಣೆಗಳಿಗಾಗಿ ಜರ್ಮನಿಯ ಇಷ್ಟರಿಂದ ರುಮೇನಿಯವನ್ನು ಹಾರೈಸುತ್ತದೆ.

ಇನ್ನು ಕೆಲವು ಕಾರಣಗಳೂ ಇವೆ. ಒಂದು ಜರ್ಮನಿಯು ರುಮೇನಿಯದಲ್ಲಿ ಹುಟ್ಟುವ ಡೆನ್ಯೂಬ್ ನದಿಯನ್ನು ಜರ್ಮನ್ ನದಿಯಾಗಿ ಮಾಡಲು ಅಪೇಕ್ಷಿಸುವುದು. ರುಮೇನಿಯದ ಬ್ಲೇಕ್ ಸೀಯ ಸಮುದ್ರ ಕರಾವಳಿಯು ಟರ್ಕಿಗೆ ತಡೆಯನ್ನು ಮಾಡುವುದರಿಂದ ಅದು ಭದ್ರವಾದ ಸ್ಥಳವಾಗಿದೆ.

ಇನ್ನೊಂದು ಕಾರಣವೆಂದರೆ ಹಿಟ್ಲರನು ಯೂರೋಪಿನ ಉತ್ತರ ಪೂರ್ವದಲ್ಲಿರುವ ಉಕ್ರೇನಿನಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಯತ್ನಿಸುತ್ತಿದ್ದಾನೆ. ಇದರಿಂದ ರಷ್ಯವು ಜಾಗ್ರತವಾಗಿ ತನ್ನ ಪ್ರಾಂತವ ರಕ್ಷಣೆಗಾಗಿ ಸಂಪೂರ್ಣ ದಳಗಳ ತಡೆಯನ್ನು ಕಟ್ಟುತ್ತದೆ. ಹೀಗಾಗಿ ಹಿಟ್ಲರನ ಸರ್ವಥಾ ರುಮೇನಿಯವನ್ನು ಸ್ವಾಧೀನಮಾಡುವ ಹವ್ಯಾಸಕ್ಕೆ ಇಳಿದಿರುತ್ತಾನೆ.

ರುಮೇನಿಯದ ಆಂತರಿಕ ಪರಿಸ್ಥಿತಿಯೂ ಚೆನ್ನಾಗಿಲ್ಲ. ಅಲ್ಲಿರುವ ಅನೇಕಾನೇಕ ವಿವಿಧ ಪೈಸಾರಟಿಗಳಿಂದಲಾಗಿ ಅನೈಕ್ಯತೆಯ ವಾತಾವರಣವು ಇರುತ್ತದೆ. ಈಗಿನ ರಾಜನಾದ ಕಾರೊಲನು ಒಂದು ವಿಧದಲ್ಲಿ ಅಲ್ಲಿ ಪ್ರಧಾನ ಮಂತ್ರಿಯೂ ಆಗಿದ್ದಾನೆ. ಅಲ್ಲಿನ ಜನರು ಅವನ ಬಗ್ಗೆ ಅನುಮಾನ ವಿಧೇಯತೆಯುಳ್ಳವರಲ್ಲವಾದರೂ ಅತ್ಯಂತ ವಾತ್ಸಲ್ಯವುಳ್ಳವರಾಗಿದ್ದಾರೆ.

ಆದರೂ ಅಲ್ಲಿನ ಪರಿಸ್ಥಿತಿಯು ಸಾಕಷ್ಟು ತೃಪ್ತಿಕರವಾಗಿರುವುದಿಲ್ಲ. ಅಲ್ಲಿನ ಜನರು ಸಾಕಷ್ಟು ಆಹಾರವನ್ನು ಪಡೆಯುತ್ತಿಲ್ಲ. ಯೂರೋಪಿನ ಪರಿಸ್ಥಿತಿಯಿಂದಾಗಿ ರಾಜನಾದ ಕಾರೊಲನು ಅಲ್ಲಿನ ದುಸ್ಥಿತಿಗಳನ್ನು ಹೋಗಲಾಡಿಸಲು ಯತ್ನಿಸುತ್ತಿದ್ದಾನೆ. ಮುಂದಿನ ಅವಸ್ಥೆಯು ಹೀಗೆಂದು ಹೇಳಬರುವುದಿಲ್ಲ.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್,
ಜವುಳಿ ದಲಾಳಿ, ಶಿವಪೇಟೆ, ಸೇಲಂ

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರೆಯಿರಿ

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡ ಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲರ ರುಚಿಗೆ ತಕ್ಕುದಾಗಿಯೂ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧ ಸಾರಥಿ ನಸ್ಯ 1 ವೀಸಕ್ಕೆ ರೂ. 3 8—0 ಸಪಿರಿಸ್ ಮಾರ್ಕು ಸಾರಥಿ ನಸ್ಯ 1 ವೀಸಕ್ಕೆ ರೂ. 3 0.0
(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ

ವಿಳಾಸ —
ಎ. ಪಿ. ಸಾರಥಿ
ಮೆನ್ಯುಫೆಕ್ಚರರ್ಸ್ ಒಫ್ ಮದ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸ್.



ಜೊಸ್ಕೊ ಟೀ ರೋಸ್

ಸಾಮಾನ್ಯ ಬೆಲೆಗೆ ಮಾರಲ್ಪಡುವ
ಅತ್ಯಂತ ಸುಗಂಧಪೂರಿತ ಸಾಬೂನು!
ಬಹಳ ದೊಡ್ಡದಾದ ಸೈಜು! ◆ ನವೀನವಾದ ಆಕಾರ!
ಆಹ್ಲಾದವನ್ನೀಯುವ ಪರಿಮಳ!
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.
ತಯಾರಿಸುವವರು:— ಬೊಂಬೆ ಸೋಪ್ ಫೆಕ್ಟರಿ, ಬಿ. ಜಿ. 3.
ವಿತರಣಾಕಾರರು:— ಪಿ. ಅಹಮ್ಮದ್ ಹುಸ್ಸೇನ್, ಗೋಳಿಕಟ್ಟಾ ಬಜಾರ್, ಮಂಗಳೂರು.

'DILROZ' Regd

'Dil Roz' is a sure cure for Oriental sores local sores, all kinds of deep-rooted sores, skin eruptions Pimples, Eczema, Ringworm, Sinus Fistula auxillary-Abceses

There is no need of dressing the wounds, nor are baths prohibited
Price Rs. 2. Postage extra.
TAHIR DIN,
Anarkali, LAHORE.

ಹುಲ್ಲು ತಿಂದು ಬದುಕಿರುವ ಬೆರಿಸ್ಟರ್ ಮಹಾಶಯ!

ಬ್ರಿಟನಿನ ಅವಿವಾಹಿತ ತಾಯಂದಿರು!

ವಿಲಾಯತಿಯ ವಿಚಿತ್ರ ದಾಂಪತ್ಯ

ಲಂಡನಿನಲ್ಲಿ ಒಬ್ಬ ಅದ್ಭುತ ಮನುಷ್ಯನಿದ್ದಾನೆ. ಮಿ. ಜೆ. ಆರ್. ಬ್ರೈಸ್ಸನ ಎಂಬುದು ಆತನ ಹೆಸರು. ಮಿ. ಜಸ್ಟಿಸ ಬ್ರೈಸ್ಸನರ ಸಹೋದರನಾಗಿದ್ದಾನೆ. ಅವನು ಮೂರು ದಿನಗಳಿಗೊಮ್ಮೆ ಲಂಡನಿನಿಂದ ದೂರ ಒಂದು ಹಳ್ಳಿಗೆ ಹೋಗಿ ಒಂದು ಚೀಲ ತುಂಬಾ ಹಸಿಹುಲ್ಲನ್ನು ತರುವನು. ಲಂಡನಿನಂಥ ಜನನಿಬಿಡಸ್ಥಾನಗಳಲ್ಲಿ ಹುಲ್ಲುಗಾವಲುಗಳು ಇರುವದಿಲ್ಲ. ಆದ್ದರಿಂದ ಅವನು ಹಳ್ಳಿಗೆ ಹೋಗಿ ಅದನ್ನು ತರಬೇಕಾಗುತ್ತದೆ. ಹುಲ್ಲು ಸಿಕ್ಕದ ದಿನ ಬ್ರೈಸ್ಸನ್ನನು ಬಹಳ ಬೇಸರದಲ್ಲಿರುತ್ತಾನೆ. ಯಾಕೆಂದರೆ ಆಗ ಅವನು ಉಪವಾಸದಿಂದ ಇರಬೇಕಾಗುತ್ತದೆ. ಬ್ರೈಸ್ಸನ್ನನು ಕೇವಲ ಹುಲ್ಲು ತಿಂದು ಬದುಕುವನು. ಅವನಿಗೆ ಈಗ ೬೭ ವರ್ಷ ವಯಸ್ಸಾದರೂ ಹುಲ್ಲಿನ ಆಹಾರ ತಿಂದು, ಅವನ ಪ್ರಾಯದ ಇತರರಿಗಿಂತ ಹೆಚ್ಚು ಆರೋಗ್ಯವಂತನೂ ದೃಢಕಾಯನೂ ಆಗಿರುವನು.

ಬ್ರೈಸ್ಸನ ಯಾವಾಗಲೂ ಹಸಿಹುಲ್ಲನ್ನೇ ತಿಂದು ಇರುವದಿಲ್ಲ. ಅವನಿಗೂ ಬಾಯಿ ರುಚಿ ಇದೆ. ಅದಕ್ಕೋಸ್ಕರ ಕೆಲವು ವಾರ ಅವನು ಹುಲ್ಲನ್ನು ಒಣಗಿಸಿ ತಿನ್ನುವನು. ಕೆಲವು ವೇಳೆ, ಹಸಿ ಹುಲ್ಲು, ಸಕ್ಕರೆ ಗಜ್ಜರಿಗಳೊಂದಿಗೆ ಬೆರಸಿ ತಿನ್ನುವನು. 'ನೋಡಿ! ನನ್ನ ಕುದುರೆಗಳು ಎಷ್ಟು ಗಟ್ಟಿ ಮುಟ್ಟಾಗಿವೆ! ಅವು ಯಾವಾಗಲೂ ಹುಲ್ಲು ತಿಂದೇ ಇರುವವು. ಆದ್ದರಿಂದಲೇ ಅವು ಕೆಂಪು ರಕ್ತ ಕಣಗಳನ್ನು ಸಂಪಾದಿಸಿ, ಸ್ಫೂರ್ತಿ ಉತ್ಸಾಹಗಳಿಂದ ಕೂಡಿ ಕೆಲಸಮಾಡುತ್ತವೆ. ಯಾಕೆಂದರೆ ಹುಲ್ಲಿನಂಥ ಹಸುರು ಪದಾರ್ಥಗಳಲ್ಲಿ ಸೂರ್ಯ ಪ್ರದತ್ತ ವಿಪುಲ ಜೀವನಶಕ್ತಿ ಇರುತ್ತದೆ' ಎಂದು ಬ್ರೈಸ್ಸನ್ನ ಹೇಳುತ್ತಾನೆ.

ಬ್ರಿಟನಿನ ಅವಿವಾಹಿತ ತಾಯಂದಿರು

ಬ್ರಿಟನಿನಲ್ಲಿ—ಇತರ ಯುರೋಪ ದೇಶಗಳಲ್ಲಿಯಂತೆ—ಬಹಳ ಮಂದಿ ಅವಿವಾಹಿತ ತಾಯಂದಿರು ಇರುತ್ತಾರೆ. ಇವರೆಲ್ಲರು ಮದುವೆಯಾಗುವ ಮೊದಲು ಪರಪುರುಷರೊಡನೆ ಶರೀರ ಸಂಬಂಧವನ್ನು ಇಟ್ಟುಕೊಂಡು ಮಕ್ಕಳನ್ನು ಹೆತ್ತವರಾಗಿರುತ್ತಾರೆ. ಇಂಥ ಅವಿವಾಹಿತ ತಾಯಂದಿರನ್ನು ಸಮಾಜವು ಮರ್ಯಾದೆಯ ದೃಷ್ಟಿಯಿಂದ ಕಾಣುವದಿಲ್ಲ. ಅದಕ್ಕೋಸ್ಕರ ಅವರು ಗುಟ್ಟಾಗಿ ಹಡೆದು, ತಮ್ಮ ಮಕ್ಕಳನ್ನು ಎಲ್ಲಿಯಾದರೂ ಅನಾಥಾಲಯಗಳಲ್ಲಿ ಬಿಟ್ಟು ತಮ್ಮ ಮರ್ಯಾದೆಯನ್ನು ಕಾಪಾಡಿಕೊಳ್ಳಬೇಕಾಗುವದು. ಆದರೆ ಅವರು ಹೆತ್ತ ಮಕ್ಕಳ ಮೇಲಿನ ಮೋಹವನ್ನು ಎಷ್ಟು ದಿನ ಬಿಟ್ಟು ಇರಬಹುದು? ಇದು ಅಸ್ವಾಭಾವಿಕ. ಅದಕ್ಕೋಸ್ಕರ ಈ ಅವಿವಾಹಿತ ತಾಯಂದಿರು ತಾವು ಹೆತ್ತ ಮಕ್ಕಳನ್ನು ಪುನಃ ದತ್ತ ತೆಗೆದುಕೊಳ್ಳುವ ಒಂದು ಹೊಸ ಉಪಾಯವನ್ನು ಕಂಡುಹಿಡಿದಿದ್ದಾರೆ. ಅವಿವಾಹಿತ ಹೆಣ್ಣುಗಳು ಗರ್ಭ ತಾಳಿ ಹೊಟ್ಟೆ ಬರುವ ತನಕ ತಾವು ಗರ್ಭವತಿಯರಾಗಿರುವದನ್ನು ಗುಟ್ಟಾಗಿ ಇಡುವರು. ಅನಂತರ ಕೂಡಲೆ ದೂರದ ಒಂದು ಊರಿಗೆ ಹೋಗಿ, ತಮ್ಮ ಜನರಿಗೆ ತಿಳಿಯದ ಹಾಗೆ ಎಲ್ಲಿಯಾದರೂ ಹೆತ್ತು, ಮಗುವನ್ನು ಯಾರಾದರೊಬ್ಬರ ವಶಕ್ಕೆ ಕೊಟ್ಟು ಹಿಂತಿರುಗುವರು. ಪುನಃ ಊರಿಗೆ ಮರಳಿ ಸೊಬಗಿನ ತರುಣಿಯರಂತೆ ನಟಿಸುವರು. ಆ ಮೇಲೆ ಅವರು ತಮಗೆ ಮಕ್ಕಳನ್ನು ಕಂಡರೆ ಆಸೆಯಾಗುತ್ತದೆ, ಮನೆಯಲ್ಲಿ ಮಕ್ಕಳು ಇದ್ದರೆ ಎಷ್ಟು ಸುಖ ಎಂದು ಹೇಳುತ್ತಾ ಇರುವರು. ಮತ್ತೆ ಒಂದು ದಿನ ಒಂದು ಮಗುವನ್ನು ದತ್ತ ತೆಗೆದುಕೊಳ್ಳುವರು. ಅನಾಥ ಮಕ್ಕಳನ್ನು ದತ್ತ ತೆಗೆದುಕೊಂಡ ಇವರ ಪರೋಪಕಾರ ಬುದ್ಧಿಯನ್ನು ಎಲ್ಲರೂ ಮೆಚ್ಚುವರು. ಪರಂತು ಅವರು ದತ್ತ ತೆಗೆದುಕೊಂಡ ಮಕ್ಕಳು ಅವರು ಹೆತ್ತ ಮಕ್ಕಳೇ ಆಗಿರುವರೆಂಬುದು ಮಾತ್ರ ಇತರರಿಗೆ ತಿಳಿಯುವದೇ ಇಲ್ಲ. ಹೀಗೆ ಮಾಡಿ ಪ್ರಾಯಕ್ಕೆ ಬಂದ ತರುಣಿಯರು ತಾರುಣ್ಯದ ಸುಖ, ತಾಯ್ತನದ ಸುಖ ಎಲ್ಲವನ್ನು ಅವಿವಾಹಿತರಾಗಿ ಅನುಭವಿಸುತ್ತಿರುವರಾಗಲಿ, ಲೋಕ ಲಜ್ಜೆಯಿಂದ ಕಾಪಾಡಿಕೊಳ್ಳುವ ಉಪಾಯವನ್ನು ಮಾಡಿಕೊಂಡಿದ್ದರೆ ಅಂಥವರಿಗೆ ಸಹಾಯ ಮಾಡಲಿಕ್ಕೆ ಲಂಡನಿನಲ್ಲಿ ಎಡೊಪ್ಶನ್ ಸೊಸೈಟಿ ಅಂದರೆ ದತ್ತ ತೆಗೆದುಕೊಳ್ಳುವವರ ಸಂಘ ಎಂಬುದೂ ಉಂಟಾಗಿದೆ. ಈ ಸಂಘವು ಅವಿವಾಹಿತ ತರುಣಿಯರು ಗರ್ಭವತಿಯರಾದರೆ, ಗುಟ್ಟಿನಲ್ಲಿ ಅವರ ಹೆರಿಗೆ, ಹುಟ್ಟಿದ ಮಗುವಿನ ಕೆಲವು ದಿನಗಳ ತನಕದ ರಕ್ಷಣೆ, ಮತ್ತೆ ದತ್ತ ತೆಗೆದುಕೊಳ್ಳುವ ವಿಧಿ ಇದಕ್ಕೆಲ್ಲ ಅಲ್ಲಲ್ಲಿ ಸಹಾಯಕರನ್ನು ನೇಮಿಸಿ, ಅಂಥ ಅವಿವಾಹಿತ ತಾಯಂದಿರಿಗೆ ಸಹಾಯ ಮಾಡುವದು. ಅಲ್ಪಸ್ವಲ್ಪ ಫೀಸು ಕೊಟ್ಟರಾಯಿತು. "ಎಲ್ಲಾ ಕೆಲಸ ಸಂಪೂರ್ಣವಾಗುತ್ತದೆ!" ರೆವರೆಂಡ ಮಿ. ಡಬ್ಲ್ಯು. ಒಹ್ಸ್ ಎಂಬ ಪಾದ್ರಿ ಈ ಸಂಘದ ಮಾರ್ಗದರ್ಶಕನಾಗಿದ್ದಾನೆ!

ವಿಚಿತ್ರ ದಾಂಪತ್ಯ ವಿಚ್ಛೇದ

ಡಿಸೆಂಬರ ಒಂದು ರಾತ್ರಿ—ಬಹಳ ಚಳಿ ಬಿದ್ದಾಗ ಗಂಡ, ತನ್ನನ್ನು ಬೆತ್ತಲೆಯಾಗಿ ಮನೆಯಿಂದ ಹೊರಗೆ ಹಾಕಿದ ಎಂದು ಶ್ರೀಮತಿ ಡೋರಿ ಸ್ಮಿತ್ ಎಂಬಾಕೆ ದಾಂಪತ್ಯ ವಿಚ್ಛೇದಕ್ಕಾಗಿ ಕೋರ್ಟಿನಲ್ಲಿ ದಾವೆ ಹಾಕಿದಳು. ಗಂಡನು ತನ್ನ ಮೇಲೆ ಹೊರಿಸಿದ ಆರೋಪವನ್ನು ಒಪ್ಪಲಿಲ್ಲವಾದರೂ, ಕೋರ್ಟಿನವರು ಅದನ್ನು ನಂಬಿ, ದಾಂಪತ್ಯ ವಿಚ್ಛೇದಕ್ಕೆ ಡಿಕ್ರಿ ಕೊಟ್ಟರು.

ಕತ್ತಲೆಯಲ್ಲಿ ಮೋಟಾರನ್ನು ಓಡಿಸುವವರಿಗೆ ಒಳ್ಳೆಯ ಉಪಾಯ

ಪೆಟ್ರೋಲಿನ ಬದಲಿಗೆ ಅಮ್ಮೋನಿಯದ ಉಪಯೋಗ

ಸೊಳ್ಳೆಗಳ ಕಡಿತಕ್ಕೆ ಉತ್ತಮ ಔಷಧಿ

ಶೀಘ್ರದಲ್ಲಿಯೇ ಲೋಕಯುದ್ಧವೊಂದು ಆರಂಭವಾಗುವುದೆಂಬ ಭಯವು ಮೋಟರನ್ನು ಓಡಿಸುವವರಿಗೂ ಹಿಡಿದಿದೆ. ಯುದ್ಧಕಾಲದಲ್ಲಿ ಶತ್ರುಪಕ್ಷದವರ ವಿಮಾನದಾಳಿಗಳು ರಾತ್ರಿ ಕಾಲದಲ್ಲಿ ಆಗುವವು. ಯಾಕೆಂದರೆ ಹಗಲಿನಲ್ಲಿ ಶತ್ರುಪಕ್ಷದ ವಿಮಾನಗಳನ್ನು ಗುರಿ ಇಟ್ಟು ಹೊಡೆದು ಕೆಡವಿಹಾಕುವುದು ಮಿತ್ರಪಕ್ಷದವರಿಗೆ ಸುಲಭ. ವಿಮಾನದಾಳಿಯಿಂದ ಆಗುವ ಅನಾಹುತಗಳು ಆದಷ್ಟು ಕಡಿಮೆಯಾಗಲಿ ಎಂಬುದಕ್ಕೋಸ್ಕರ ವಿಮಾನದಾಳಿಯ ಸೂಚನೆ ಬಂದಾಗ ಸಣ್ಣ ದೊಡ್ಡ ಊರುಗಳ ಜನರು ರಾತ್ರಿಕಾಲದಲ್ಲಿ ಎಲ್ಲವನ್ನು ಕತ್ತಲು ಮಾಡಿಬಿಡುವರು. ಎಲ್ಲಿಯೂ ದೀಪಗಳನ್ನು ಉರಿಸುವದಿಲ್ಲ. ಪ್ರಕಾಶವನ್ನು ಬಿಡುವುದಿಲ್ಲ. ಹೀಗೆ ಕತ್ತಲಾದಾಗ ವಿಮಾನಗಳಿಗೆ ತಮ್ಮ ಗುರಿಯನ್ನು ಗುರುತಿಸಿ ಹೊಡೆಯುವುದು ಕಷ್ಟವಾಗುತ್ತದೆ. ಪರಂತು ವಿಮಾನದಾಳಿಯ ಕಾಲದಲ್ಲಿ ಎಲ್ಲವನ್ನು ಕತ್ತಲಿನಿಂದ ತುಂಬಿಸುವುದರಿಂದ ಒಂದು ತೊಂದರೆಯಿದೆ. ಅಪಾಯದ ಸಂದರ್ಭಗಳಲ್ಲಿ ಆಗ ಮೋಟರುಗಳನ್ನು ಓಡಿಸುವುದು ಅಸಾಧ್ಯವಾಗುತ್ತದೆ. ರಾತ್ರಿಕಾಲದಲ್ಲಿ ದಾರಿಯ ಮೇಲೆ ಬೆಳಕು ಇಲ್ಲದೆ ಮೋಟರುಗಳು ಓಡಲಾರವು. ಆದರೆ ಅವು ಬೆಳಕು ಬಿಟ್ಟು ಓಡಿದರೆ ವಿಮಾನಗಳು ಅವುಗಳ ಮೇಲೆ ಬಾಂಬು ಹಾಕಿ ನಾಶ ಮಾಡುವವು, ಮಾತ್ರವಲ್ಲ ಆ ಪ್ರದೇಶವನ್ನು ಗುರುತಿಸಿ, ಅಲ್ಲಿಯ ಅಮೂಲ್ಯ ವಸ್ತು ಒಡವೆಗಳನ್ನು ನಾಶಮಾಡುವುದೂ ವಿಮಾನಗಳಿಗೆ ಸುಲಭವಾಗುತ್ತದೆ. ಅದಕ್ಕೋಸ್ಕರ ರಾತ್ರಿ—ವಿಮಾನದಾಳಿಗಳಾಗುವಾಗ ಮೋಟರುಗಳನ್ನು ಓಡಿಸಲಿಕ್ಕೆ ಇರುವ ಕಷ್ಟವನ್ನು ದೂರಮಾಡಲಿಕ್ಕೆ ವಿಜ್ಞಾನಿಗಳು ಒಂದು ಉಪಾಯವನ್ನು ಕಂಡುಹಿಡಿದಿದ್ದಾರೆ. ವೈಜ್ಞಾನಿಕರು ಮೋಟರು ದಾರಿಗಳನ್ನು ಒಂದು ರಾಸಾಯನಿಕ ದ್ರಾವಣದಿಂದ ಲೇಪಿಸಿದರು. ಮೋಟರು ಓಡುತ್ತಿರುವಾಗ ಒಂದು ವಿಚಿತ್ರ ಪ್ರಕಾಶ ಕಿರಣಗಳನ್ನು ಮುಂದಕ್ಕೆ ಚೆಲ್ಲುವ ಯಂತ್ರ ಸಾಧನವನ್ನು ಮೋಟರಿನೊಳಗೆ ಇಟ್ಟಿರುತ್ತಾರೆ. ಈ ಕಿರಣಗಳು ಕಣ್ಣಿಗೆ ತೋರುವಂಥವುಗಳಾಗಿರುವುದಿಲ್ಲ. ಪರಂತು ಕಿರಣಗಳು ದ್ರಾವಕದಿಂದ ಮಿಂಚಿಸಲ್ಪಟ್ಟು ಮಾರ್ಗದ ಮೇಲೆ ನಸು ಬೆಳಕು ಉಂಟಾಗುವುದು. ವೈರಿ ವಿಮಾನಗಳು ಆಕಾಶದ ಮೇಲಿಂದ ಈ ಬೆಳಕನ್ನು ಕಾಣಲಾರವಾದರೂ, ಮೋಟರುಗಳನ್ನು ಸಾಕಷ್ಟು ವೇಗದಿಂದ ಓಡಿಸಲಿಕ್ಕೆ ಈ ಬೆಳಕು ಸಾಕಾಗುತ್ತದೆ. ರಸ್ತೆಯ ಮೇಲೆ ಮಿನುಗಿಸುವ ದ್ರಾವಕವನ್ನು ತಯಾರಿಸಲಿಕ್ಕೆ ಹೆಚ್ಚಿಗೆ ಖರ್ಚು ಇರುವುದಿಲ್ಲ. ಆದ್ದರಿಂದ ಯುದ್ಧಕಾಲದಲ್ಲಿ ವಿಜ್ಞಾನಿಗಳ ಈ ಶೋಧನೆಯು ಬಹಳ ಉಪಯೋಗಕ್ಕೆ ಬರುವದು.

ಪೆಟ್ರೋಲಿನ ಬದಲಿಗೆ ಅಮ್ಮೋನಿಯ

ಎಂಜಿನುಗಳನ್ನು ಉಗಿ, ಪೆಟ್ರೋಲು, ಎಣ್ಣೆ ಇತ್ಯಾದಿ ನಾನಾ ಉಪಾಯಗಳಿಂದ ನಡೆಸುವರು. ಈಗ ಅವುಗಳನ್ನು ಅಮೋನಿಯಾದಿಂದಲೂ ನಡೆಸುವ ಉಪಾಯವನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಅಮೋನಿಯವನ್ನು ಗಾಳಿಯಿಂದ ಸುಡುವುದರಿಂದ ಆಗುವ ಸಾರಜನಕ ಅನಿಲದ ಒತ್ತಡದಿಂದ ಎಂಜಿನುಗಳ ಪಿಸ್ಟನುಗಳು ಚಲಿಸುವವು. ಇದರಿಂದ ನಾನಾ ಪ್ರಯೋಜನಗಳಿವೆ. ಪೆಟ್ರೋಲನ್ನು ಉಪಯೋಗಿಸಿದ್ದಾದರೆ ಎಂಜಿನು ಹೊಗೆಯಿಂದ ಬೇಗ ಕೆಟ್ಟುಹೋಗುವುದು. ಅಮೋನಿಯದಿಂದ ಹೊಗೆಯು ಬರುವದಿಲ್ಲ. ಅಲ್ಲದೆ ಅಮೋನಿಯವನ್ನು ಸಾರಜನಕ ನೀರು ದ್ರಾವಣಗಳ ಸಂಯೋಗದಿಂದ ಎಲ್ಲಿ ಬೇಕಾದರೂ ತಯಾರಿಸಬಹುದು. ಅನಲದ ಕಾವಿನಲ್ಲಿ ಆದ ಅಮೋನಿಯದ ಸ್ಫೋಟನವು ಪೆಟ್ರೋಲಿನ ಸ್ಫೋಟದಂತೆ ಅಪಾಯಕಾರಿಯಾಗಿ ಇರುವುದಿಲ್ಲ. ಎಂಜಿನಿನಲ್ಲಿ ಅಂಗಾರಾಮ್ಲ ಅನಿಲವು ಸಹ ತಯಾರಾಗದಿರುವುದರಿಂದ ಅಮೋನಿಯವು ಪೆಟ್ರೋಲಿಗಿಂತ ಶ್ರೇಷ್ಠ ಇಂಧನವಾಗಬಹುದು. ಆದ್ದರಿಂದ ಶೀಘ್ರದಲ್ಲಿಯೇ ಅಮೋನಿಯದಿಂದ ಓಡುವ ಗಾಡಿಗಳು ಪ್ರಪಂಚದಲ್ಲಿ ಪ್ರಚಾರಕ್ಕೆ ಬರುವವು.

ಸೊಳ್ಳೆಗಳ ಕಡಿತಕ್ಕೆ ಔಷಧಿ

ಕಳಿತ ನಿಂಬೆಹಣ್ಣಿನ ರಸ ಅಥವಾ ಸತ್ವ ಕಡಿಮೆ ಮಾಡಿದ ಅಮೋನಿಯಾ ನೀರನ್ನು ಮೈಗೆ ಹಚ್ಚಿಕೊಳ್ಳುವುದರಿಂದ ಸೊಳ್ಳೆಗಳ ಕಡಿತದಿಂದುಂಟಾದ ತುರಿಕೆಗಳು ಕಡಿಮೆಯಾಗುತ್ತವೆ.

ಹಣ್ಣುರಸಗಳ ಉಪಯೋಗ

ರೋಗ ಚಿಕಿತ್ಸೆಯ ಕಾಲದಲ್ಲಿ ಕಿತ್ತಳೆ ಹಣ್ಣಿನ ರಸವು ಎಷ್ಟು ಉಪಯೋಗಕಾರಿಯಾಗಿದೆ ಎಂಬುದು ಎಲ್ಲರಿಗೆ ತಿಳಿದ ಸಂಗತಿ. ಇದು ಉತ್ತಮ ಪಥ್ಯ ಪದಾರ್ಥವಾಗಿರುವುದು. ಆದರೆ ಕಿತ್ತಳೆ ಹಣ್ಣು ಎಲ್ಲ ಕಾಲಗಳಲ್ಲಿ ಸಿಕ್ಕುವದಿಲ್ಲ. ಆದ್ದರಿಂದ ಆಹಾರ ತಜ್ಞರು ಅದರ ಬದಲಿಗೆ ಅಷ್ಟೇ ಉಪಯುಕ್ತವಾದ ರಸಗಳನ್ನು ಕಂಡುಹಿಡಿದಿದ್ದಾರೆ. ಟೊಮೆಟೊ, ಚಕೋತ, ಮುಂತಾದ ಹಣ್ಣುಗಳ ರಸದಲ್ಲಿ ಸಿ, ಜೀವಸತ್ವ ವಿಶೇಷವಾಗಿ ಇದೆ. ದ್ರಾಕ್ಷಿ, ಮೋಸಂಬಿ, ಅನನಾಸ್, ಇತ್ಯಾದಿ ಇವುಗಳಲ್ಲಿ ಕೂಡ ಶಕ್ತಿವರ್ಧಕ ಸತ್ವಗಳು ದೊಡ್ಡ ಪರಿಮಾಣದಲ್ಲಿ ಇರುತ್ತವೆ. ಆದ್ದರಿಂದ ಕಿತ್ತಳೆ ಹಣ್ಣು ದೊರೆಯದ ಸಂದರ್ಭದಲ್ಲಿ, ಅದರ ಬದಲಿಗೆ ಈ ಹಣ್ಣುಗಳ ರಸವನ್ನು ಉಪಯೋಗಿಸಬಹುದು. ಪರಂತು ಇವುಗಳನ್ನು ಉಪಯೋಗಿಸುವುದಕ್ಕಿಂತ ಮೊದಲು ಅವುಗಳನ್ನು ತೊಳೆಯುವುದು ಅಗತ್ಯ.

ಹೈದರಾಬಾದಿಗೆ ಸನಾತನಿ ಸನ್ಯಾಸಿಗಳ ರವಾನೆ!

ಮಹಾಶಯ ಕೃಷ್ಣರೊಂದಿಗೆ ಸಾವಿರ ಮಂದಿಯ ಕೈದು

ಒಂದೇ ದಿನ ೧೧೪೫ ಮಂದಿಯ ಸತ್ಯಾಗ್ರಹ

ಹೈದರಾಬಾದಿನಲ್ಲಿ ಆರ್ಯ ಸತ್ಯಾಗ್ರಹವು ಆರಂಭವಾದ ಈ ಕೆಲವು ತಿಂಗಳುಗಳಲ್ಲಿ ಇದೇ ಮೊದಲನೆ ಬಾರಿಗೆ ರಾವಲ ಪಿಂಡಿಯಿಂದ ೧೫ ಮಂದಿ ಸನಾತನಿ ಸನ್ಯಾಸಿ ಸಾಧುಗಳ ಒಂದು ದಳವು ಸತ್ಯಾಗ್ರಹ ಮಾಡುವುದಕ್ಕೋಸ್ಕರ ಜೂನ್ ೫ರ ದಿನ ಹೈದರಾಬಾದಿಗೆ ಹೊರಟಿದೆ, ಆ ದಳವು ಹೊರಡುವ ದಿನ ರಾವಲ್ಪಿಂಡಿಯ ಜನರು ಅವರನ್ನು ಸಂಭ್ರಮದ ವಿದಾಯ ಸತ್ಕಾರವನ್ನು ಕೊಟ್ಟು ಕಳುಹಿಸಿಕೊಟ್ಟಿತು

ಮಹಾಶಯ ಕೃಷ್ಣರ ಕೈದು

ಮಹಾಶಯ ಕೃಷ್ಣರು ಜೂನ್ ೫ರ ದಿನ ಮನ್ಮಾಡಿನಿಂದ ಅವರಂಗಾಬಾದಿಗೆ ಹೊರಟರು ಅವರೊಂದಿಗೆ ೫೦೦ ಮಂದಿ ಇತರ ಸತ್ಯಾಗ್ರಹಿಗಳಿದ್ದರು. ಮನ್ಮಾಡಿಯಿಂದ ಹೊರಡುತ್ತಾ ಮಹಾಶಯ ಕೃಷ್ಣರು–ನೆರೆದ ಹಿಂದೂ ಧರ್ಮಾಭಿಮಾನಿಗಳನ್ನು ಉದ್ದೇಶಿಸಿ 'ನಾವು ಆರ್ಯರು ಸೋಲೆಂಬುದನ್ನು ತಿಳಿದಿರುವುದೇ ಇಲ್ಲ ನಾವು ಖಂಡಿತವಾಗಿಯೂ ವಿಜಯಿಗಳಾಗುವೆವು' ಎಂದು ಭಾಷಣಕೊಟ್ಟು, ಎಂಥ ಉದ್ರೇಕವುಂಟಾದರೂ ಸ್ವಯಂಸೇವಕರು ಕೇವಲ ಅಹಿಂಸಕರಾಗಿರಬೇಕೆಂದೂ, ಸತ್ಯ ಮತ್ತು ಅಹಿಂಸೆಯ ಬಲದಿಂದಲೇ ಹೈದರಾಬಾದಿನ ಆರ್ಯ ಸತ್ಯಾಗ್ರಹವು ತಿಂಗಳಿಂದ ತಿಂಗಳಿಗೆ ಸಫಲವಾಗುತ್ತ ಬಂದಿರುವುದೆಂದೂ ಹೇಳಿದರು. ಅಲ್ಲಿಂದ ಅವರು ತಮ್ಮ ಸ್ವಯಂಸೇವಕರಿಂದೊಡಗೂಡಿ ಸ್ಪೆಶಲ್ ಟ್ರೈನಿನಲ್ಲಿ ಜೂನ್ ೬ರ ದಿನ ಅವರಂಗಾಬಾದನ್ನು ಬಂದು ಮುಟ್ಟಿದರು ದಾರಿಯಲಿ ಅವರನ್ನು ಕೂಡಿದ ಇತರ ಸ್ವಯಂಸೇವಕರು ಸೇರಿ ಅವರೊಂದಿಗೆ ೬೬೩ ಮಂದಿ ಸತ್ಯಾಗ್ರಹೀ ವೀರರಿದ್ದರು. ಹೈದರಾಬಾದಿನ ಡಿಪ್ಯುಟಿ ಡ್ಯಾರಿಕ್ಟರ ಜನರಲ್ ಆಫ ಪೋಲೀಸ–ಶ್ರೀ ಆರ್ ಸಿ ಅಯ್ಯಂಗಾರರು ರೈಲ್ವೆ ಪೋಲೀಸ ಆಫೀಸರರೊಂದಿಗೆ ಕೂಡಿ ಮಹಾಶಯ ಕೃಷ್ಣರನ್ನು ಕಂಡು, ಹೈದರಾಬಾದ ಪರಿಸ್ಥಿತಿಯು ಕುರಿತು ಮಾತನಾಡಿದರು ಪೋಲೀಸರು ಅವರನ್ನು ಕೈದಿನಲ್ಲಿಟ್ಟಿದ್ದಾರೆ. ಆದರೆ ಅವರೊಂದಿಗಿದ್ದ ಇತರ ಸತ್ಯಾಗ್ರಹಿಗಳನ್ನು ಕೈದುಮಾಡದೆ ಅವರಂಗಾಬಾದನ್ನು ಸೇರಲಿಕ್ಕೆ ಬಿಟ್ಟಿದ್ದಾರೆ

ವಿಚಾರಣೆಯಾಗಬೇಕು.

ಜೈಲುಗಳಲ್ಲಿ ಮೃತರಾದ ಸತ್ಯಾಗ್ರಹಿ ಕೈದಿಗಳ ಮರಣ ಕಾರಣವನ್ನು ಕುರಿತು ನಿಷ್ಪಕ್ಷಪಾತ ಪೂರ್ಣ ಸಾರ್ವಜನಿಕ ವಿಚಾರಣೆಯಾಗಬೇಕೆಂದು ಹೈದರಾಬಾದಿನ ಹಿಂದೂ ಪ್ರಮುಖರಾದ ಶ್ರೀ ಪಾಂಡುರಂಗ ವಿ ಜೋಶಿ, ಎಲ್ ಜಿ ಠಾನು, ಎಮ್ ಹನುಮಂತರಾವ್, ಮತ್ತು ದಿಗಂಬರ ರಾವ್ ಬಿಂದು–ಇವರೂ ಒಂದು ಪ್ರಕಟನೆಯನ್ನು ಕೊಟ್ಟಿದ್ದಾರೆ

೧ ಹೈದರಾಬಾದ ಶಹರದಲ್ಲಿ ಸತ್ಯಾಗ್ರಹವು ಧೂಲ ಪೇಟೆ, ಲಾಲ್ ದರ್ ವಾಜಾ, ಉಸ್ಮಾನ ಗಂಜ ಗೌಳಿಗಡ, ಸುಲ್ತಾನ ಬಜಾರ ಮೊದಲಾದ ಹೈದರಾಬಾದ ಶಹರಿನ ಬೇರೆ ಬೇರೆ ಪೇಟೆಗಳಲ್ಲಿ ಜೂನ್ ೬ರ ದಿನ ಆರ್ಯಸಮಾಜ ದಿನವನ್ನು ಆಚರಿಸುತ್ತಾ ೩೦ ಮಂದಿ ಹಿಂದೂ ಆರ್ಯ ಸಮಾಜಿಗಳು ಕೈದಾಗಿದ್ದಾರೆ.

೧೧೪೭ ಮಂದಿಯ ಕೈದು

ಜೂನ್ ೬ರ ದಿನ ಮಹಾಶಯ ಕೃಷ್ಣರೊಂದಿಗಿದ್ದ ೬೬೩ ಮಂದಿ ಅವರಂಗಾಬಾದಿನಲ್ಲಿ ಸತ್ಯಾಗ್ರಹಮಾಡಿ ಕೈದಾದರು ಇವರಲ್ಲದೆ ಪುಸದ ಕೇಂದ್ರದಿಂದ ಹೋದ ಬೇರೆ ೧೫೦ ಮಂದಿ ಮತ್ತು ಕೊಪ್ಪಳದಿಂದ ಹೋದ ೨೫ ಮಂದಿ, ಮನ್ಮಾಡಿಯಿಂದ ಹೋದ ೫೦ ಮಂದಿ ಸತ್ಯಾಗ್ರಹಿಗಳು ಕೂಡ ಹೈದರಾಬಾದ ಸಂಸ್ಥಾನದ ಬೇರೆ ಬೇರೆ ಕೇಂದ್ರಗಳಲ್ಲಿ ಸತ್ಯಾಗ್ರಹ ಮಾಡಿ ಕೈದಾಗಿರುವರು. ಇವರಲ್ಲದೆ ಬೀಜಾಪುರದಿಂದ ೩೭, ಪೈಠಣದಿಂದ ೬೦, ಚಾಂದದಿಂದ ೬೩, ಉಮೇರಖೇಡದಿಂದ ೧೭೦, ಹೈದರಾಬಾದಶಹರದಿಂದ ೩೦ ಹೀಗೆ ಜೂನ್ ೬ರ ಒಂದು ದಿನವೇ ಒಟ್ಟು ೧೧೪೭ ಮಂದಿ ಕೈದಾಗಿರುವರೆಂದು ಶೋಲಾಪುರದಿಂದ ಆರ್ಯ ಸತ್ಯಾಗ್ರಹ ಸಮಿತಿಯು ತಿಳಿಸುತ್ತದೆ

ಸರ್ವಾಧಿಕಾರಿ – ಪಂಡಿತ ಜ್ಞಾನೇಂದ್ರ ಸಿದ್ಧಾಂತ ಭೂಷಣರು

ಮಹಾಶಯ ಕೃಷ್ಣರು ಕೈದಾಗಿರುವುದರಿಂದ ಪಂಡಿತ ಜ್ಞಾನೇಂದ್ರ ಸಿದ್ಧಾಂತ ಭೂಷಣರು ಹೈದರಾಬಾದ ಸತ್ಯಾಗ್ರಹದ ಸಪ್ತಮಸರ್ವಾಧಿಕಾರಿ ಕೆಲಸದ ಚಾರ್ಜು ತೆಗೆದುಕೊಂಡಿರುವರು. ಇವರೀಗ ಅಜಮೀರ ಕಡೆ ಪ್ರಚಾರಕಾರ್ಯವನ್ನಾರಂಭಿಸಿದ್ದಾರೆ ಅವರು ಕೈದಾದ ಮೇಲೆ ಹೈದರಾಬಾದಿನ ಬೆರಿಸ್ಟರರಾದ ಶ್ರೀ ವಿನಾಯಕರಾಯರು ಅಷ್ಟಮಸರ್ವಾಧಿಕಾರಿಗಳಾಗುವರು.

ಲಾಹೋರು ಸನ್ಯಾಸಿಗಳು– ಹೈದರಾಬಾದಿಗೆ

ಸ್ವಾಮಿ ಜ್ಞಾನಾನಂದರು ದಳನಾಯಕರಾಗಿ ೧೮ ಮಂದಿ ಸನ್ಯಾಸಿಗಳ ಒಂದು ದಳವು ಜೂನ್ ೬ರ ದಿನ ಲಾಹೋರಿನಿಂದ ಶೋಲಾಪುರಕ್ಕೆ ಹೊರಟಿದೆ ಅಲ್ಲಿಂದ ಈ ದಳವು ಸತ್ಯಾಗ್ರಹ ಮಾಡುವುದಕ್ಕೋಸ್ಕರ ಹೈದರಾಬಾದಿಗೆ ಬರುವುದು

ಬೊಂಬಾಯಿಯ ಎ. ಐ. ಸಿ. ಸಿ. ಸಭೆ

ಇದೇ ತಿಂಗಳ ಕೊನೆಯ ವಾರದಲ್ಲಿ ಬೊಂಬಾಯಿಯಲ್ಲಿ ಕೂಡುವ ಎ. ಐ. ಸಿ. ಸಿ. ಸಭೆಯಲ್ಲಿ ಕಾಂಗ್ರೆಸ್ ಶುದ್ಧೀಕರಣ ಸಮಿತಿಯ ವರದಿ, ಸಂಸ್ಥಾನ ಪರಿಸ್ಥಿತಿ ಇತ್ಯಾದಿ ಮಹತ್ವದ ವಿಷಯಗಳ ಚರ್ಚೆಯಾಗಿ ತೀರ್ಮಾನವಾಗಲಿರುವುದರಿಂದ ೧೦೦೦೦ಕ್ಕೂ ಮೀರಿ ಜನಸ್ತೋಮವು ಕೂಡಬಹುದಾಗಿ ಅಂದಾಜಾಗಿದೆ ಅದಕ್ಕನುಸಾರ ಸ್ವಾಗತ ಸಮಿತಿಯ ಕೆಲಸ ಕಾರ್ಯಗಳು ನಡೆದಿವೆ ಆ ವಾರದಲ್ಲಿ ಕಾಂಗ್ರೆಸ್ ಮಂತ್ರಿಮಂಡಳಗಳ ಮಹಾಸಭೆಯೂ ಜರಗುವುದು ಪ್ರೇಕ್ಷಕರಿಗೆ ೩ ರೂಪಾಯಿಯಿಂದಾರಂಭಿಸಿ ೧೦೦೦ ರೂಪಾಯಿ ತನಕ ಪ್ರವೇಶ ಶುಲ್ಕವನ್ನಿಟ್ಟಿದ್ದಾರೆ

ಸಿಂಧದ ವರದಕ್ಷಿಣೆಯ ನಿಷೇಧ ಮಸೂದೆ.

ವಿವಾಹ ನಿಶ್ಚಯವಾದ ೬ ತಿಂಗಳು ಅಥವಾ ಮದುವೆಯಾದ ಎರಡು ವರ್ಷಗಳತನಕ ವಧೂವರ ಪಕ್ಷದವರು ವರದಕ್ಷಿಣೆ ಅಥವಾ ಕನ್ಯಾಶುಲ್ಕದ ರೂಪದಲ್ಲಿ ನಗದು ಹಣ, ಚಿನ್ನಾಭರಣ ಅಥವಾ ಉಡುಗೊರೆ ಉಚಿತ ಯಾವುವೂ ೫೦೦ ರೂ ಗಳಿಗೆ ಮೀರಿ ತೆಗೆದುಕೊಳ್ಳದ ಹಾಗೆ ನಿರ್ಬಂಧಿಸುವ ಒಂದು ಮಸೂದೆ ಸಿಂಧ ಎಸೆಂಬ್ಲಿಯಲ್ಲಿ ಮಂಜೂರಾಗಿದೆ

ಭಾರತದ ಹೊಸ ವಾಯ್ಸರಾಯರು

ಈಗ ಕೆನಡದ ವಾಯ್ಸರಾಯರಾಗಿರುವ ಟ್ವೀಡ್ಸ ಮುಯುರರವರು ಭಾರತದ ಮುಂದಿನ ವಾಯ್ಸರಾಯರಾಗುವರೆಂದು ದಟ್ಟವಾದ ಸುದ್ದಿ ಹರಡಿದೆ. ಬ್ರಿಟಿಷ ರಾಜದಂಪತಿಗಳ ಕೆನಡ ಪ್ರವಾಸವು ಅತ್ಯಂತ ತೃಪ್ತಿಕರವಾಗಿ ಮುಗಿದಿರುವುದಕ್ಕೆ ಅವರೂ ಬಹಳ ಮಟ್ಟಿಗೆ ಕಾರಣರಾಗಿದ್ದಾರೆ. ಆದ್ದರಿಂದ ಭಾರತದ ವಾಯ್ಸರಾಯರಾಗಲು ಅವರಲ್ಲಿ ತುಂಬಾ ಯೋಗ್ಯತೆ ಇರುವುದೆಂದು ಒಬ್ಬ ಲೇಖಕನು ಬರೆದಿದ್ದಾನೆ.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೂತ್ಪೇಸ್ಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲ್ಯಾಯಿಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವದು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹಿರಾತು ಕೊಡುವುದು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳು ಮತ್ತು ಶೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡೆಲಿವರಿ ಕೊಡುವರು ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ ಮಾಲು ಪರದೇಶದಿಂದ ಬರುವಂತೆ ಉಂಟು ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು.

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎನ್. ಎಮ್. ವಾಘ್ ಮತ್ತು ಕಂಪೆನಿ,

ವಿಲೆ ಪಾರ್ಲೆ ಮುಂಬಯಿ

ಹೊನ್ನಾವರ ಏಜಂಟ್ — ಪಿ. ಎಚ್. ಭಕ್ತಾ   ಗದಗ — ವಿ. ಎಸ್. ಶೆಟ್ಟಿ.

ಮೈಸೂರು, ಕೂರ್ಗ, ದಕ್ಷಿಣ ಕನ್ನಡಾ ಏಜಂಟ್ — ಡಾ. ಕೆ ಭಾಸ್ಕರ ಪೈ.

ಸ್ಪೆಶಲ್ ಏಜಂಟ್ — ಬಿ ವ್ಹಿ. ಹೊನ್ನಾವರ

ನವೀನ ಶೋಧನೆ

ಹೇನುಗಳನ್ನು ನಾಶಮಾಡುವ 'ಬಾಬಾ' ಉಪಯೋಗಿಸಿರಿ!

ಸ್ತ್ರೀ ಜಾತಿಗೆ 'ಬಾಬಾ' ಎಂಬುದು ವರಪ್ರಸಾದ

ತಲೆಯಲ್ಲಿ ಹೇನು ಆಗುವುದು ಇದರ ಸ್ಥಿತಿಯು ಹೇಸಿಗೆಯಾದುದರಿಂದ ಪ್ರಕೃತಿಯು ಕೆಡುತ್ತದೆ 'ಬಾಬಾ' ಈ ಎಣ್ಣೆಯು ತಲೆಗೆ ಆತಾನಾ ಕಿಡದಲಿಗೆ ಹಚ್ಚಿದರೆ ಖಾತ್ರಿಯಾಗಿ ಹೇನುಗಳನ್ನು ನಾಶಮಾಡಬಲ್ಲುದು. 'ಬಾಬಾ' ಇದರಿಂದ ಅಪಾಯಕರವಿಲ್ಲ 'ಬಾಬಾ' ಎಲ್ಲಾ ಪಟ್ಟಣಗಳಲ್ಲಿ ಸಣ್ಣ ಸೀಲು ಒಂದು ಡಬ್ಬಿಯ ೨ ಮಾದಲು ಸಿಕ್ಕುತ್ತದೆ

ಕಿಮ್ಮತ್ತು ಡಬ್ಬಿ 1ಕ್ಕೆ 0–2–6

ಹಿಂದುಸ್ಥಾನ ಕರ್ನಾಟಕದ ಸೋಲ್ ಡಿಸ್ಟ್ರಿಬ್ಯೂಟರ್ಸ್ — ಪಾಯ ಬ್ರದರ್ಸ್

ಮೋತಿಶಾ ಎಡ್ವರ್ಡ ಸಿನೆಮಾದ ಎದುರು ಪಾಠಶಾಲವಾಡಿ ಕಾಳಬಾದೇವಿ ರೋಡ ಬೊಂಬಾಯಿ 2

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು

ಆಯುರ್ವೇದಾಶ್ರಮ :. ಮದರಾಸು.

ಸ್ಟಾಕಿಸ್ಟರು

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ — ಜಮ್ಮಿ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ — ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸು.

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ಜ್ಯೇಷ್ಠ ಬ॥ ೩೦ ಶನಿವಾರದಿಂದ ಆಷಾಢ ಶು॥ ೬ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ಮಿಥುನ-ಆರ್ದ್ರಾ ...)

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
17	ಶನಿ	೨೮	೩೫॥	ಮೃಗಶಿರಾ	೫೩।	೩	
18	ರವಿ	೨೯	೩೦॥।	ಆರ್ದ್ರಾ	೫೦॥	೪	
19	ಸೋಮ	೧	೨೫॥	ಪುನರ್ವಸು	೪೬॥।	೫	
20	ಮಂಗಳ	೨	೧೯॥।	ಪುಷ್ಯಾ	೪೩	೬	
21	ಬುಧ	೩	೧೩॥।	ಆಶ್ಲೇಷಾ	೩೯	೭	
22	ಗುರು	೪	೭॥	ಮಘಾ	೩೪॥	೮	
23	ಶುಕ್ರ	೫	೧॥ ಉತ್ತರ ಹುಬ್ಬಾ		೩೧	೯	

THE PIE-MONEY BANK LTD.,

Maidan Road, MANGALORE

Undertakes all kinds of Banking Business Current account at 3½% per annum Savings Bank Deposits at 4½% per annum

FIXED DEPOSITS -

For 2 Years 5% 1 Year 4½% For 6 months 4% 3 months 3½%

Auction ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars-**K R. GURU**, *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯವು ಆಕ್ಷೇಪಕವಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೋ ಅಥವಾ ಬೇರೆ ಕಾರಣದಿಂದಲೋ ಮಕ್ಕಳನ್ನು ಹಡಿಯುವುದು ಬಂದುಮಾಡಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂತಾನ ... ಕೂಡಲೇ ಗರ್ಭಧಾರಣ ಬಂದಾಗುವುದು ... ಮಾಡಿದರೆ ... ಆಗುವುದಿಲ್ಲ ... ಸರ್ಟಿಫಿಕೇಟು ... ವೈದ್ಯ ... ಎಲ್. ಸಿ. ಪಿ. ಎಸ್. ಹೇಳುವವರು ... ಈ ಚೂರ್ಣದಿಂದ ... ಗರ್ಭಧಾರಣವೂ ಆಗುವುದಿಲ್ಲ. ಚೂರ್ಣದ ಡಬ್ಬಿಯ ಕ್ರಯ ರೂ ೪-೦-೦ ವಿ. ಪಿ.

ವಿಳಾಸ ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ್, (S. M. C.

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಫ್ರೀ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೀಸೆ ಪರಿಮಳದ ಸೆಂಟನ್ನು ಅಥವಾ 8 ಸೀಸೆ ಹುಳುಕರಿಯ ಮದ್ದನ್ನು ಪಡಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ಡಮ್ಮಿ ರಿಸ್ಟವಾಚುಗಳೂ ಒಂದು ಕಟ್ಟುವ ಪಟ್ಟಿ ಸಹಿತ

1 ಫೌಂಟೇನ್ ಪೆನ್ನು, ಒಂದು ಜಿಲೆಟ್ ಬ್ಲೇಡು, ಒಂದು ಶೇವಿಂಗ್ ಬ್ರಶು, ಒಂದು ಶೇವಿಂಗ್ ಸಾಬೂನು, ಒಂದು ಕನ್ನಡಿ ಒಂದು ಬಾಚಣಿಗೆ 1¼ ಕೆರೆಟ್ ರೋಲ್ಡ್ ಗೋಲ್ಡ್ ನಿಬ್ಬಿನ ಪಾಕೆಟ್ ಪೆನ್ನು, ಒಂದು ಸೆಟ್ಟು ರೋಲ್ಡ್ ಗೋಲ್ಡ್ ಗುಂಡಿಗಳು, ಒಂದು ಪೌಡರು, ಒಂದು ಚೂರಿ ಒಂದು ಪೇಪರ್ ಕತ್ತರಿ, ಒಂದು ಬಂಗಾರದ ಗಿಲ್ಟಿನ ಉಂಗುರ, 300 ಫೀಟ್ ಫೋಕಸ್ ಬೀಳುವ ಒಂದು ಟಾರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ಸ್ಟೀಲಿನಿಂದ ಮಾಡಲ್ಪಟ್ಟ ಒಂದು ಟೈಮ್‌ಪೀಸೂ ಇವುಗಳನ್ನು ಉಚಿತವಾಗಿ ಕೊಡುವೆವು. ಪೇಕಿಂಗ್ ಮತ್ತು ಟಪ್ಪಾಲು ಖರ್ಚು 0-14-0 ಪ್ರತ್ಯೇಕ.

The American Commercial Stores, Post Box No 12213 Calcutta (S. A

THE

Bank of Mangalore Ltd.,

MANGALORE

ESTD 1931

Branches -

Panemangalore, Mudabidri & Padubidri.

Fixed Deposits will be received at following rates of interest.

For	3 months		3½%
„	6	„	4%
„	12	„	5%
„	24	„ & upwards	5½%

Interest Payable Quarterly

Savings Bank deposit* 3½% *on daily balances.

All kinds of banking business transacted

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-,100/-,500/-,1,000/-, & 5,000/

are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು. ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ. ಪಿ. ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದ ಸಮಾಜ ಪೆರಿಯೇಟಿ
P. O. Periapt (ಬೇಕಲ)

HOUNSA

ಹಂಸಾ ಸ್ನೋ ಮತ್ತು ಬ್ರಿಲ್ಲಿಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಕರ್ಣ ಬಜಾರ್, ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ ಹಲ್ಲು ಬರುವಾಗ ಉಂಟಾಗುವ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಸ್ತುಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡ ಮುಡಿಗೆ	1—14—0	—
„ ದುಯಂ „ „	1—12—0	1—12—0
„ ಅವ್ವಲ್ ಸುಗ್ಗಿ „	1—12—0	—
„ ದುಯಂ „ „	1—10—0	—
ಅಕ್ಕಿ ಅವ್ವಲ್ ಗುಡ್ಡ „	4—10—0	4—12—0
„ ದುಯಂ „ „	4—6—0	4—8—0
„ ಅವ್ವಲ್ ಸುಗ್ಗಿ „	4—6—0	4—7—0
„ ದುಯಂ „ „	4—3—0	4—5—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದದು „	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
„ ದಿಲ್‌ಪಸಂದ „	52—8—0	—
ತೆಂಗಿನ ಎಣ್ಣೆ ಮಣಕ್ಕೆ	3—6—0	3—6—0
ಸಿಪ್ಪೆಯಿದ್ದ ಅಡಿಕೆ 1000ಕ್ಕೆ	3—8—0	4—0—0
ಗೇರುಬೀಜ ಮುಡಿಗೆ	3—12—	3—13—0
ಕಬ್ಬಿನ ಬೆಲ್ಲ ಖಂಡಿಗೆ	47—8—0	55—0—0
ಒಳ್ಳೆಮೆಣಸು ಹಂಡ್ರಡ್ವೇಟಿಗೆ	14—8—0	15—8—0

ಚಂದ್ರಯ್ಯನವರಿಗೆ ಹೋಯಿತು. ರಾಮಚಂದ್ರಯ್ಯನವರು ಹಿಗ್ಗಿನಿಂದ 'ಏನೂ ಇರಲಿ— ನಿಮ್ಮ ಬೇಂಕು ಇತರ ಬ್ಯಾಂಕಿನಂತಿರಬಾರದು. ಎಲ್ಲ ಡೈರೆಕ್ಟರರ ಮನೆವಾರ್ತೆ ಎಂಬ ಅಪವಾದ ಬರಕೂಡದು ಇನ್ನು ಮುಂದಾದರು'—ಎಂದು ಮುಗಿಸಿದರು

ಕೊನೆಯ ಮಾತು ದಿಗಂಬರರಾಯರಿಗೆ ಉದ್ದೇಶಿಸಿದ್ದೆಂದು ಕಾಣುತ್ತದೆ. ಅವರು ತಮ್ಮ ಈ ಬೇಂಕಿನಲ್ಲಿ ೩೦,೦೦೦ ರೂಪಾಯಿಯ ಸಾಲ ಪಡೆದಿದ್ದಾರೆಂದು ಊರಲ್ಲಿ ಸುದ್ದಿಯಿತ್ತು. ಹೇಗೂ ಇರಲಿ—ಈ ಚುನಾವಣೆಯಿಂದ ದಿಗಂಬರರಾಯರ ಒಂದು ತಿಂಗಳ ಮುಪ್ಪಿನ ನಿದ್ರೆಗೆ ಸಂಚುಕಾರವಾಯಿತು ಅತ್ತ ಮನೆಗೆ ಹೋದೊಡನೆ ನಾಣಿಯನ್ನು ಗುಮಾಸ್ತರ ಮನೆಗೆ ಕಳುಹಿಸಿ 'ಕಲೆಕ್ಟರ ಬಂಗ್ಲೆ' ಸುದ್ದಿ ತರಿಸಲು ವ್ಯವಸ್ಥೆ ಮಾಡಿದರು ಹತ್ತು ಘಂಟೆ ರಾತ್ರಿಗೆ ಆ ವಜ್ರಘಾತವೂ ಬಂದಿತು. 'ನಾಣಿ—ಇದೆಲ್ಲ ಆ ಘಟಿಂಗ ಮಿತಸಂತತಿ ದಂಪತಿಗಳ ಕೆಲಸ'—ಎಂದು ರೇಗಿಬಿಟ್ಟರು. ಆ ದಿನ ಹಾಸುಗೆಯಲ್ಲಿ ಪಿಸುಪಿಸು. ಮಾತ್ರನಾದಿಧ ಮಕ್ಕಳಿಗೆಲ್ಲಾ ಅರ್ಧ ಅರ್ಧ ಪಟನು ರಾಯರ ಸ್ವಹಸ್ತ ಸಂಭಾವನೆಗಳಾದುವು ಯಜಮಾನಿಯವರು ಬಂದು ಅವರನ್ನು ಸಮಾಧಾನಗೊಳಿಸದಿದ್ದರೆ, ಅವರಿಗೆ 'ಫಿಟ್ಸ್' ಬರುತ್ತಿತ್ತೇನೋ. ಏಳೆ, ಮರುದಿನ ಡಾ। ನರಹರಿರಾಯರಿಗೆ ಸ್ಪೆಶಲ್ ಬಿನ ಹೋಯಿತು ಅವರು ಅವಸರದಿಂದ ಬಂದು ಹಾಸುಗೆ ಹಿಡಿದ ದಿಗಂಬರರಾಯರ ನಾಡಿಯನ್ನು ಪರೀಕ್ಷಿಸಿ 'ಇನ್ನು ಹತ್ತು ವರ್ಷ ಹಾರ್ಟಿನ ಹೆದರಿಕೆಯಿಲ್ಲ' ಎಂದರು ನಾಣಿ ಕೇಳಿದವನು 'ಹಾಂ' ಎಂದು ಕಣ್ಣವ್ವಕ್ಕೆ ವಿಸ್ಮಯಗೊಂಡನು

ಮಿ। ರಾಮಚಂದ್ರರಾಯರ ಅದೃಷ್ಟ ಒದಗಿಸಿತು ಗ್ರಾಮ ಕೈಗಾರಿಕೆ ಸಂಘದ ಉಪಾಧ್ಯಕ್ಷರಾದ ತಾವು ಸಂಘಕ್ಕೆ ಹತ್ತು ಹೊಸ 'ಹೊಸಿಯರಿ' ಮೆಶೀನುಗಳನ್ನು ತರಿಸಿಕೊಟ್ಟರು ಮಿಸೆಸ್ ಜಾನಕಿ ರಾಮಚಂದ್ರಯ್ಯನವರು ತಮ್ಮ ಮಿತಸಂತತಿ ಉಪನ್ಯಾಸಗಳ ಜತೆಗೆ 'ಹೊಸಿಯರಿ' ಪ್ರಚಾರ ಕಾರ್ಯ ತೊಡಗಿದರು 'ಹೊಸಿಯರಿ'ಯಿಂದ ಲಾಭವಿದೆ ಅಲ್ಲದೆ ಮಳೆಗಾಲದಲ್ಲಿ ಚಿಕ್ಕ ಮಕ್ಕಳು ಕಾಲುಚೀಲವಿಲ್ಲದೆ ತಿರುಗುವುದರಿಂದಲೇ 'ಫ್ಲೂ' ಮೊದಲಾದುವು ತೊಡಗಿ ಶಿಶುಗಳ ಮರಣಸಂಖ್ಯೆಗೆ ಕಾರಣವಾಗುತ್ತದೆ ಪ್ರತಿ ಮನೆಯಲ್ಲೂ ಒಂದು ಹೊಸಿಯರಿ ಮೆಶೀನು ಇದ್ದರೆ ಈ ಭೀತಿಯಿಲ್ಲ ಎಂದು ಸಾರತೊಡಗಿದರು

ಅಂತು ಹತ್ತು ಹೊಸಿಯರಿ ಮೆಶೀನುಗಳು ನಮ್ಮ ಊರಿಗೆ ಹೊಸತಾಗಿ ಬಂದುವು ಮಿಸೆಸ್ ಜಾನಕಿ ರಾಮಚಂದ್ರಯ್ಯನವರೀಗ ಬಿದ್ದಾಗಿ ಕಲಿತು, ತಮ್ಮ ಮನೆಗೆ ಬರುವ ಬಡ ಶ್ರೀಮಂತ ನಾರಿಯರಿಗೆಲ್ಲಾ ಅದರ ಉಪಯೋಗ ಹೇಳಿಕೊಟ್ಟರು ಮಿಸೆಸ್। ಪಟ್ವಾರ್ಡೋರನ್ನು ಕರೆದು ನೀವು ನಿಮ್ಮ ಇನಕಮಿನಲ್ಲಿ ಕನಿಷ್ಠ ತಿಂಗಳೊಂದರ ಐದು ರೂಪಾಯಿ ಹೆಚ್ಚಿಸಬಹುದು— ಎಂದರು. ಮಿಸೆಸ್ ಪಟ್ವಾರ್ಡೋ ಅವರ ಉಪನ್ಯಾಸದಿಂದ 'ಇಂಪ್ರೆಸ್' ಆಗಿ ಒಂದು ಮೆಶೀನನ್ನು ಮನೆಗೆ ಮರಳುವಾಗ ತಮ್ಮ ಕಾರಿನಲ್ಲಿ ತುಂಬಿಸಿಕೊಂಡು ಹೋದರು ಈ ಪ್ರಥಮ ಪ್ರಚಾರವು ಯಶಸ್ವಿಯಾದುದನ್ನು ಕಂಡು ಅವರು ಹಿಗ್ಗಿ 'ಈ ತಿಂಗಳ ಅಂತ್ಯದಲ್ಲಿ ೧೦೦ ಹೊಸಿಯರಿ ಮೆಶೀನುಗಳನ್ನು ಪ್ರಚಾರಮಾಡಬೇಕೆಂದೂ, ವರ್ಷಾಂತ್ಯಕ್ಕೆ ಸಾವಿರ ಆಗಲೇಬೇಕೆಂದೂ ನಿರ್ಧರಿಸಿದರು' ವರ್ಷದ ಕೊನೆಗೆ ಎಷ್ಟು ಚಲಾವಣೆಗೆ ಬಂದುವೋ ತಿಳಿಯದು. ಮಾನ್ಯ ಗಿಲ್ಬರ್ಟರು ಹೊರಟು ಹೋದರು ಅವರ ಬದಲಿಗೆ ಬೇರೊಬ್ಬರು ಬಂದರು. ಬಂದವರೇ ಮಿ। ಮಿಸೆಸ್ ರಾಮಚಂದ್ರಯ್ಯನವರನ್ನು ಹುಡುಕಿ ಬರಬೇಕಾದರೆ—ಅವರಿಗೆ ಮಾಜಿ ಕಲೆಕ್ಟರರು ಎಷ್ಟು ಉಪದೇಶಿಸಿರಬೇಡ!

ಇಂಗ್ಲಿಷ್ ಯುಗಾದಿಗೆ ಮಂಗಳೂರಿಂದ ಆನರ್ಸ್ ಪಟ್ಟಿಗೆ ದಾಖಲಾದವರಲ್ಲಿ ಮಿ। ರಾಮಚಂದ್ರಯ್ಯನವರು ಒಬ್ಬರೇ ಒಬ್ಬರು ಅವರು ರಾವಸಾಹೇಬರಾದರು; ಮಿಸೆಸ್ ಜಾನಕಿಯಮ್ಮನವರಿಗೆ ಕೈಸರ್ ಇ ಹಿಂದ್ ಪದಕ ದೊರೆಯಿತು.

ನಗರದ ನವ ನಾಯಕರು

[೬ನೇ ಪುಟದಿಂದ ಮುಂದುವರಿದುದು]

ಈ ಘಟನೆಯಾದ ವರ್ಷವೇ ಮಂಗಳೂರಿನ ಮುನ್ಸಿಪಲ್ ಚುನಾವಣೆಯಿತ್ತು. ಅದಕ್ಕೆ ಸ್ತ್ರೀಯರ ಪರವಾಗಿ ಮಿಸೆಸ್ ಜಾನಕಿರಾಮಚಂದ್ರಯ್ಯನವರು ನಿಂತರು. ಅವರ ಪ್ರತಿಸ್ಪರ್ಧಿಯಾಗಿ ಮಿಸೆಸ್ ದಿಗಂಬರರಾಯರು ನಿಲ್ಲಲು ಯತ್ನಿಸಿದರು ಏಕೋ ಸಾಧ್ಯವಾಗದೆ ಮಿಸೆಸ್ ಲುಸಿ ಪೆರ್ನಾಂಡಿಸರನ್ನು ನಿಲ್ಲಿಸಲು ಯತ್ನಿಸಿದರು ಆದರೆ ಹೊಸತಾಗಿ ಬಂದ ಕಲೆಕ್ಟರರ ಮಿಸೆಸ್‌ರವರು ಮಿಸೆಸ್ ಲುಸಿಯವರಿಗೆ ಹೇಳಿದುದರಿಂದ—ಮಿಸೆಸ್ ಜಾನಕಿರಾಮಚಂದ್ರಯ್ಯನವರಿಗೆ ಚುನಾವಣೆಯಿಲ್ಲದೆ ಸೀಟು ದೊರೆಯಿತು

'ಅವಳೇ ನಿಲ್ಲಬಹುದಿತ್ತಲ್ಲ—ಅದಕ್ಕೆ ಗಂಡನ ಇಂಡಸ್ಟ್ರಿಯೇ ಕಾರಣ. ಅವಳಿಗೆ ತಿಂಗಳಾದುದರಿಂದ ಕೆಪವಾಸಿಂಗಿಗೆ ಹೊರಡಲು ಸಾಧ್ಯವೇ ಇಲ್ಲ . There again birth control has its positive advantages' ಎಂದು ಮಿಸೆಸ್ ದಿಗಂಬರರಾಯರನ್ನು ಮೂದಲಿಸಿ ಶ್ರೀಮತಿ ಜಾನಕಿರಾಮಚಂದ್ರಯ್ಯನವರು ಮಾತನಾಡಿದರು

ಸ್ತ್ರೀಯರ ಸೀಟಿನ ವಿಚಾರ ಕಾಳಗವಾಗದೆ ಹೋದರೂ ಆ ವರ್ಷದ ಗಂಡಸರ ಸೀಟಿಗೆ ಇರುವೆ ಮುತ್ತಿದಂತೆ ಉಮೇದುವಾರರು ಸಾಹುಕಾರರು, ದೇಶಭಕ್ತರುಗಳ , ಸೊಶಿಯಲಿಸ್ಟರು, ಸ್ವತಂತ್ರರು—ಎಲ್ಲರದೂ ಧಕ್ಕಾಮುಕ್ಕಿ ರಾಮಚಂದ್ರಯ್ಯನವರ ಎದುರಿಗೆ ದಿಗಂಬರರಾಯರು ಮೂವರನ್ನು ನಿಲ್ಲಿಸಿದರು ದಿಗಂಬರರಾಯರ ಎದುರಿಗೆ ಇಬ್ಬರು ನಿಂತಿದ್ದರು ಇಲೆಕ್ಶನ್ ದಿವಸ ಎಲ್ಲ ವೋಟು ರಾಮಚಂದ್ರರಾಯರಿಗೆ ದಿಗಂಬರರಾಯರು ಪೋಲಿಂಗ್ ಸ್ಟೇಶನಿಗೇ ಹೋಗಲಿಲ್ಲವಂತೆ ಅವರ ಸ್ನೇಹಿತರೇ 'ಗಳ ಚರಿದಿದರಂತೆ' ಇಲೆಕ್ಶನ್ ಮುಗಿಯಿತ ದಿಗಂಬರರಾಯರ ಆಪ್ತಶಿಷ್ಯರಾದ ಮಿ। ಮನೋಹರರಾಯರು ಅಧ್ಯಕ್ಷರಾದರು ಚುನಾವಣೆಯ ಕಾಲದ ಸಂಚೆಲ್ಲಾ ಸಭೆಗಳಲ್ಲಿ ವ್ಯಕ್ತವಾಯಿತು ಪ್ರತಿಯೊಂದಕ್ಕೂ ಯುದ್ಧಗಳೇ ಆರಂಭ ಜಾತಿವಾದು ಭೂತ ಪ್ರತಿಯೊಂದರ ಮರೆಯಿಂದಲೂ ಇಣುಕುತ್ತಿತ್ತು ಆ ವರ್ಷದ ಒಂದೇ ಒಂದು ನಿರ್ಣಯ ಮಾತ್ರ 'ಜಾತೀಯತೆ ಕಾಣದ' ನಿರ್ಣಯವಾಯಿತ ಅದು ನಮ್ಮ ಊರಿನ ಇತಿಹಾಸಕ್ಕೇನೆ ಮುಖ್ಯವಾದುದು ಅದು 'ದೇಜಾಸ್ಸೆಲನ್ನು' ಮುನ್ಸಿಪಾಲಿಟಿಯವರು ಅಕ್ವಯರ್ ಮಾಡುವ ವಿಚಾರ ಬೈಲಿನ ಯಜಮಾನರು ಮಿ। ಲಾರೆನ್ಸ್ ಬ್ರಗಾಂಜರು. ಆದರೆ ಅದನ್ನು ಎಕ್ವಯರ್ ಮಾಡುವ ವಿಚಾರದಲ್ಲಿ ಎಲ್ಲ ಕ್ರಿಶ್ಚನರೂ ವಿರೋಧ ಎಲ್ಲ ಕ್ರಿಸ್ತೇತರರೂ ಅನುಕೂಲ ಅಧ್ಯಕ್ಷರು ನಪುಂಸಕ ವಂಗದ—ಯಾ—ನಡ್ಮಟ್ರಲ್ ದೇಜುಬೈಲಿನಲ್ಲಿ ಕನಿಷ್ಠ ಎಪ್ಪತ್ತು ಮನೆಗಳಿವೆ ಈ ಮನೆಯವರಿಲ್ಲ, ಮುನ್ಸಿಪಾಲಿಟಿಯವರು ತಮಗೆ ಹೊಸ ಮನೆಯನ್ನು ಕಟ್ಟಿಕೊಡತಕ್ಕದ್ದು . ಇಲ್ಲಿ ಬಡವರ ಕಾಲನಿ 'colony' ಮಾಡಬೇಕ.—ಈ ಭರವಸೆ ಕೊಡದೆಹೋದರೆ ತಾವು ಇಲ್ಲಿಂದ ಕದಲಲಾರೆವು—ಎಂದು ವಿವಾದ ನಿರ್ಣಯಕ್ಕೂ ಮೊದಲೇ ಅಂದಿದ್ದರು ಕೊನೆಗೆ ಅದನ್ನು ಅಕ್ವಯರ್ ಮಾಡುವುದೆಂದು ನಿರ್ಣಯವಾಯಿತು ರಾಮಚಂದ್ರಯ್ಯನವರು ವಿರೋಧವಾಗಿ ಓಟುಮಾಡಿದರೂ ಸಾರ್ಥಕವಾಗಲಿಲ್ಲ ಈಗ ಸೋಶಿಯಲಿಸ್ಟರು ಮನೆಯವರನ್ನು ಜಾಗ ಬಿಡಬೇಡಿ ಅನ್ನುತಿದ್ದಾರೆ ಜಾಗದವರು ಹೊಸ ಮನೆ ಬೇಡುತ್ತಿದ್ದಾರೆ ಈ ಸ್ಥಳವು ಬ್ರಗಾಂಜರಿಂದ ಪ್ರಥಮ ಈಧಾಗಿ ರಾಮಚಂದ್ರಯ್ಯನವರಿಗೆ ೮೧ ಸಾವಿರಕ್ಕಿದೆ—ಎಂದು ಮೆಲ್ಲಗೆ ಸುದ್ದಿ ಹೊರಟಿದೆ ಒಟ್ಟಾರೆ ಲೇವಾದೇವಿಯಲ್ಲಿ ರಾಮಚಂದ್ರಯ್ಯನವರ ಹಣಕ್ಕೊಂದು ವ್ಯವಸ್ಥೆಯಾಯಿತೆಂದೂ, ಮುನ್ಸಿಪಾಲಿಟಿಗೆ ಲಾಭವಾಗಲಿಲ್ಲವೆಂದೂ ಸೋಶಿಯಲಿಸ್ಟರು ಅನ್ನುತ್ತಾರೆ ಮುನ್ಸಿಪಾಲಿಟಿಯ ಹೌಸಿಂಗ್ ಸ್ಕೀಮು ಅಲ್ಲೇ ಉಳಿದಿದೆಯಂತೆ

ರಾವಸಾಹೇಬರು ಮುನ್ಸಿಪಾಲಿಟಿಯೊಡನೆ ಈ ರೀತಿಯ ಸಂಧಾನ ನಡೆಯಿಸುತ್ತಿದ್ದಾರೆ. ಮುನ್ಸಿಪಾಲಿಟಿಯು ಈ ಆಸ್ತಿಯ ಹಕ್ಕನ್ನು ಬಿಟ್ಟಲ್ಲಿ, ಅದರ ನಡುವೆ ಎರಡು ವಿಶಾಲ ರಸ್ತೆಗಳನ್ನು ತಾನೇ ಮಾಡಿಸುವೆನೆಂದೂ, ಆ ಮೇಲೆ ಸುಂದರವಾದ ಮಾಡೆಲ್ ಸಬರ್ಬ ತಾನೇ ರಚಿಸುವೆನೆಂದೂ, ಮುನ್ಸಿಪಲ್ ಮೆಂಬರರಿಗೆ ಇದೇ ತೊಡಕಿನಿಂದ ದೊರೆಯಾಗುವ ಉಪಾಯವೆಂದೂ ಹೇಳುತ್ತಿದ್ದಾರೆ ಅಲ್ಲದೆ—ಸಬರ್ಬ ನಿರ್ಮಾಣಮಾಡುವ ವಿಷಯದಲ್ಲಿ ಹಣ ಉಳಿತಾಯವಾಯಿತೆಂದ ಮುನ್ಸಿಪಲ್ ಸದಸ್ಯರ ಯೋಚನೆ ಆದರೆ ಒಳಗಿಂದ ದಿಗಂಬರರಾಯರು ಕಾಮ್ರೇಡುಗಳಿಗೆ ಕಾನ್ ಊದಿಸಿಯೋ 'ಇದು ಕೆಪಿಟಲಿಸ್ಟ ರಾಮಚಂದ್ರಯ್ಯನ ಕುತಂತ್ರಗಳು. ತಮ್ಮ ಸಾಲದ ಹಣವನ್ನು ಏಕಕಾಲಕ್ಕೆ ಪಡೆಯಲು ಮಾಡಿದ ಉಪಾಯವಿದು. ಏನೇ ಆದರೂ—ಮುನ್ಸಿಪಾಲಿಟಿಯವರು ತಮ್ಮ ಮಾಡೆಲ್ ಸಬರ್ಬ ಮಾಡಿಯೇ ತೀರಬೇಕು'—ಎಂದು ಬಳವಳ ಹೂಡಿದ್ದಾರೆ

ಅಧ್ಯಕ್ಷ ಮನೋಹರರಾಯರು 'ಮುನ್ಸಿಪಾಲಿಟಿ ಬೇರೆಯಲ್ಲ ಅದರ ಮೆಂಬರರು ಬೇರೆಯಲ್ಲ. ರಾಮಚಂದ್ರರಾಯರು ಮಾಡಿದರೆ ತಾವು ಮಾಡಿದ ಹಾಗೇನೆ ಸರಿ ನಗರಸಭೆಯಲ್ಲಿ ಅವರ ಚಿತ್ರ ತೂಗಹಾಕಬೇಕಾದ ನಾವು ಇಷ್ಟು ಚಿಲ್ಲರೆ ವಿಷಯದಲ್ಲಿ ಜಗಳಾಡುವುದು ಸಮನಲ್ಲ' ಎಂದು ಹೇಳುತಿದ್ದಾರೆ.

ಮುಂದಿನ ಸಭೆಯಲ್ಲಿ ದೀಪ ಕಾರ್ನಾಡು ಸದಾಶಿವರಾಯರ ಚಿತ್ರದ ಬದಲು ರಾವಸಾಹೇಬ ರಾಮಚಂದ್ರರಾಯರ ಚಿತ್ರವಿರಿಸಬೇಕೆಂದು ಒಂದು ಸೂಚನೆಯೂ,

'ಬದಲು' ಎಂಬುದರ ಬದಲು 'ಬಳಿ' ಎಂಬ ಅಮೆಂಡ ಮೆಂಟೂ, 'ರಾಮಚಂದ್ರರಾಯರ' ಎಂಬುದರ ಬದಲು 'ದಿ ದಿಗಂಬರರಾಯರ' ಎಂಬ ತಿದ್ದುಪಡಿಯೂ ಬರಲಿವೆಯಂತೆ

ಅಂತು ವಾರಕ್ಕೆ ಮುಂಚಿತವಾಗಿಯೇ ದಿಗಂಬರರಾಯರ ಹಳೇ ವೋಟರು ವಾಗಿನವರಲ್ಲಿ ಕಾಮ್ರೇಡುಗಳು ತಿರುಗಾಡುತ್ತಿದ್ದಾರೆ ರಾಮಚಂದ್ರರಾಯರ 'ಬೇಬಿ'ಯಲ್ಲಿ ಜಾನಕಿಯಮ್ಮ ಮನೆಮನೆ ತಿರುಗುತ್ತಿದ್ದಾರೆ ಈ ತಿರುಗಾಟದಿಂದ ಮುನ್ಸಿಪಾಲಿಟಿಗೆ ಕನಿಷ್ಠ ೯-೬-೦ ಯಾದರೂ ಲಾಭವಿದೆಯೆಂದು 'ದೇಶವೀರ' ಪತ್ರಿಕೆಯು ಹೇಳುತ್ತದೆ ತಲಾ ಒಂದರ ಒಂದು ಕಪ್ಪನಹತ್ತಕ್ಕೆ ೦-೩-೨ ಹಿಡಿದರೂ ಇಷ್ಟು ಉಳಿತಾಯವಾಗಬಹುದೆಂದು ಅಗ್ರಲೇಖನವನ್ನು ಆ ಪತ್ರಿಕೆಯಲ್ಲಿ ಬರೆದಿದ್ದಾರೆ

S. U. N. & Co.,

Silk Merchants,
Chaukhamba BENARES CITY

ಈಗಿನ ತರಹ (ಕಾಶಿ) ಬನಾರೆಸ್ ಸೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿ ಈಗ ೯೦ ತುಂಬಾ ಸಿಲ್ಕ್ ಜಾತಿ ನೂಲು 18 ಮೊಳದ 2¼ ಅಗಲದ ಸಣ್ಣ ಬುಟ್ಟ ಸೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ ಸೀರೆಗಳು ರೂ 35ರಿಂದ ರೂ 55 ವರೆಗೂ ಸಾದಾ ಸೀರೆ 18 ಮೊಳ ರೂ 32ರಿಂದ ರೂ 55 ಉದ್ದ ಮೊಳ 1½, ಅಗಲ 2¼ ರೂ 20 ರಿಂದ 85ರ ವರೆಗೆ ಬೇರೆ ಮಾಲುಗಳ ಕೆಟಲಾಗು ಉಚಿತವಾಗಿ ಕಳುಹಿಸಲಾದೀತು

ವಿಳಾಸ
ಶಿರೋಮಣಿ ನಾರಾಯಣಾಚಾರ್ಯರ್,
ಚೌಕಂಬಾ, ಬೆನರೆಸ್ ಸಿಟಿ

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ
ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ

ಎಲ್ಲ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಬೀಳುವುದಿಲ್ಲ

ಎಲ್ಲ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು. ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರಮಾರ್ಗದ ಒಸಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ—ಕೊಕಸ' ಎಂಬ ವಿಷಾರಿ ಜಂತುಗಳು. ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗವು ಮತ್ತು ಕತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4.

ಎಲ್ಲಾ ಪತ್ರ ವ್ಯವಹಾರಗಳು ಇಂಗ್ಲಿಷಿನಲ್ಲಿ *Sole Manufacturer:* **Dr. D. N. JASANI,** Vithalbhai Patal Road, BOMBAY.

ಸ್ಟಾಕಿಸ್ಟ: ಮೆಸಸ್ ಎ ಫೆರ್ನಾಂಡಿಸ್ ಮತ್ತು ಕಂಪನಿ, ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ, ಮಂಗಳೂರು.

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST PAULS CHURCH,
Bolkonje Post, S K
Dated 4th Jan 1939

To
THE JOINT MANAGERS,
The C P C. Co Ltd, Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Public

Renewing my thanks, I remain,
Yours Sincerely,
(Sd) **P W Farias**

Sri Parshwanathaswami,
PANCHAKALYANA POOJA MAHOSTHAM
Venoor, 8 March 1939

To,
THE JOINT MANAGERS,
The Combind Booking Agency, Mangalore

Dear Sirs,

Please permit us to express our thanks on behalf of the above committee for the efficient Service rendered by your combined Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodabidri Booking Clerk Mr B Krishnnayya and also his other mates and Mr Raghavendra Bhandary who had specially come down from Mangalore to see to the needs of and comforts of the travelling Public Thanking you once again

We remain Yours faithfully

Venoor, Dated 8-3-'39 (Sd) B Chandappa Indra (*Secretary, P M Council*) (Sd) M. Jagathpal, (Sd) M Pachappa Shetty (Sd) Anantharaj Shetty (*Members, Panchakalyana Mahosthamam Committee*)

JOINT MANAGERS,

The Combined Booking Agency, MANGALORE · **The Joint Booking Office,** KODIALBAIL,

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore

And this is but the beginning We are a progressive Bank, with plenty of enthusiasm for our work, plus plenty of solid experience with which to tackle the work successfully

RESOURCES OVER A CRORE.

ESTD 1906
CANARA BANK, LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುಂಡಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

(ಶ್ರೀ)ಮಂಗಳೂರಲ್ಲಿ ಕಾ ಕಂಪೆನಿಯಲ್ಲಿ ದೊರೆಯುವುದು.

AMRUTANJAN DEPOTS BOMBAY MADRAS CALCUTTA

ಸ್ವದೇಶಾಭಿಮಾನಿ

Established 1906 — *Regd. No. M 34*

ಸಂಪುಟ ೩೩] ತಾರೀಕು ೧೬-೬-೧೯೩೯. (16—6—1939) [ಸಂಚಿಕೆ ೨

THE

BOMBAY LIFE ASSURANCE COMPANY, LTD.,

(Estd: 1908.)

THE OFFICE

Which has proved its popularity by its progress.

Record of New Bussiness

Proposed.	Year.	Completed.
1,25,50,250	1934	1,04,83,750
1,50,48,915	1935	1,23,28,666
1,68,88,200	1936	1,36,01,500
1,72,579,75	1937	1,40,08,725
176,83,250	1938	144,91,000

1939- VALUATION YEAR.

Please take up a Policy Now and participate in Bonus.

To Insure or to Represent it pays you to consult us: —

— *Apply to* — **KOCHIKAR BROTHERS, LIMITED,**

Madras Branch Secretaries,

The Bombay Life Assurance Co., Ltd.,

The Bombay Life Building : : : : Gandhinagar, UDIPI.

or any of our following offices:

Post Box No. 337, Mount Road, Madras.

Visweshwarapuram Circle, Bangalore City.

Charni Road, Girgaum, BOMBAY 4.

Car Street, Mangalore.

Puthiyara, Calicut.

Central Station Road, Trivandrum.

MAKE LIFE WORTH-LIVING!

Indigestion — Insomnia — Dry Cough—
Nervousness — Weak Heart &c.,
these make you wiery of Life!

CONSULT US AND BUY YOUR LIFE'S HAPPINESS!

Oils — that cool the brain and induce sleep.
Lehas — that build-up your wasted system.
Asavas = that regenerate your jaded nerves.

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S. Kanara.

(BRANCH—KUMTA, N. KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕ್ಲೇಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ — ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಚೇಷ್ಟಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್

ಕಟಪಾಡಿ, — ದ. ಕನ್ನಡ

(ಬ್ರಾಂಚ್: ಕುಮಟೆ, ಉತ್ತರ ಕನ್ನಡ.)

ಸ್ವದೇಶಾಭಿಮಾನಿ

Swadeshabhimani. Estd 1906

Date 23-6 1939

ತಾರೀಖು ೨೩-೬-೧೯೩೯

ಗಯಾ ದೇವಸ್ಥಾನ.

ಸಚಿತ್ರ

ವಾರಪತ್ರಿಕೆ

ನೋಟಗಳು

ಸ್ಪೇನಿನಲ್ಲಿ [illegible] ವಿವಾದದಲ್ಲಿ ಬ್ರಿಟಿಷರನ್ನು [illegible] ಜಪಾನೀಯರು ಅರ್ಧಬೆತ್ತಲೆ ಮಾಡಿ ಹೊಡೆದು [illegible] ದಾರ ಸುದ್ದಿ!

◆

ಚೈನಾದಲ್ಲಿ ಜಪಾನೀಯರಿಂದಾಗಿ ಬ್ರಿಟಿಷರು ಬಂದ ಬವಣೆಯು ನಿಜವಾಗಿಯೂ 'ಕರ್ಮ' ಸಂಬಂಧವನ್ನು ರುಜುಗೊಳಿಸುತ್ತದೆ!

◆

ಮಾಡಿದ್ದುಣ್ಣೋ ಮಾರಾಯಾ!

◆

ಹಿಂದೂದೇಶದಲ್ಲಿ ಬ್ರಿಟಿಷರು ಮಾಡಿದ್ದನ್ನು ಚೈನದಲ್ಲಿ ಉಣ್ಣುವುದೇ?

◆

ಜಪಾನು ಬ್ರಿಟಿಷರಿಗೆ ಇಂದು ಯೋಗ್ಯ ಪ್ರತಿಭಟನೆಯನ್ನು ಕೊಟ್ಟಿದೆ. ಆದರೆ ಜಪಾನನ್ನು ಹದಕ್ಕೆ ತರಲು ಬ್ರಿಟಿಷರ ತಂತ್ರವು ನಡೆಯಲಿಲ್ಲವೆಂಬುದು ನಿಜವಾಗಿಯೂ ಬ್ರಿಟಿಷ್ ರಾಜನೀತಿಯ ದುರಾದೃಷ್ಟ! ಯಾವಾಗ ಜಪಾನು ಚೈನದಿಂದ ಬ್ರಿಟಿಷರನ್ನು ತುಳಿದು ಹೊರ ಹಾಕುವುದೋ, ಅದನ್ನು ಮಾತ್ರ ನೋಡಲು ಬಾಕಿಯುಳಿದಿದೆ! ಪಾಪ! ಸಾಮ್ರಾಜ್ಯಶಾಹಿಯ ಶಿಖರವು ಉರುಳದಿದ್ದರೆ ಸಾಕು!

◆

ಸ್ಪೈನಿನ ರಾಷ್ಟ್ರೀಯ ಸಂಗ್ರಾಮದಿಂದು ಬ್ರಿಟಿಷ್ ರಾಜ್ಯತಂತ್ರವು ಬಹಳ ಬುದ್ಧಿವಂತಿಕೆಯನ್ನು ಖರ್ಚುಮಾಡಿತು. 'ಜಗತ್ತಿನ ಶಾಂತಿಗಾಗಿ ಬ್ರಿಟನು ತಟಸ್ಥ ಧೋರಣೆಯನ್ನು ಕೈಕೊಂಡಂತೆ ಹಿಟ್ಲರ್ ಮುಸಲೋನಿಗಳು ಸ್ಪೈನಿನ ಹತ್ಯಾಕಾಂಡಕ್ಕಾಗಿ ಜನರಲ್ ಫ್ರಾಂಕೋಗೆ ಸಂಪೂರ್ಣ ನೆರವಾದರು. ಸ್ಪೈನಿನ ವಧೆ ಮಾಡುವಲ್ಲಿ ಸರ್ವಾಧಿಕಾರಿಗಳೆಲ್ಲರೂ ಸೋತು ಹೋದಾಗ ಒಂದು ಕೈ ಬ್ರಿಟಿಷರಿಗೆ ನೋಡಬಹುದಿತ್ತು! ಆದರೆ ಫ್ರಾಂಕೋಗೆ ಇಂದು ಇಂಗ್ಲಂಡಿನ ಸಾಲ ಬೇಡವಂತೆ. ಇನ್ನೇನು ಇಂಗ್ಲಂಡಿನ ಹಂಗು?

◆

ಬ್ರಿಟಿಷರ 'ತಟಸ್ಥ' ಧೋರಣೆಯು ಚೈನದಲ್ಲಿಯೂ ನಡೆಯಿತು. ಚಿಯಾಂಗ್ ಕೈಶೇಕನಿಗೆ ಚೈನದಿಂದ ಜಪಾನೀಯರನ್ನು ಹೊಡೆದಟ್ಟಲು ಸಾಕಷ್ಟು ಸಹಾಯವು ದೊರೆಯಿತು.

◆

ಆದ್ದರೆ ಈ ರಾಜನೀತಿಯ ಆಟವು ಜಪಾನಿನೊಡನೆ ನಡೆಯಲಿಲ್ಲ!

◆

ಜಪಾನೀಯರು ಪಾಶ್ಚಿಮಾತ್ಯ ನಾಗರಿಕತೆಯನ್ನು ಅನುಸರಿಸಿದವರು. ಅನುಸರಣೆಯಲ್ಲಿ ಅಂಧಾನುಯಾಯಿಗಳೂ ಇದ್ದಾರೆ. ಆದರೆ ಹಿಂದೆ ಹೋಗುವವರು ಮುಂದೆ ಹೋಗುವವರ ಚಲನವಲನಗಳನ್ನು ಪರೀಕ್ಷಿಸಿ ನೋಡುತ್ತಿರುವುದು ತಪ್ಪಾಗಲಾರದಷ್ಟೆ?

◆

ಬ್ರಿಟಿಷ್ ತಂತ್ರನೀತಿಯ ಆಳವನ್ನು ಜಪಾನೀಯರು ಅಳೆದುಬಿಟ್ಟಿದ್ದಾರೆ! ಚೆಂಬರ್ಲೇನರ ಶಾಂತಿ ಯಜ್ಞಕ್ಕೆ ಸ್ಪೈನು ಆಹುತಿಯಾದದ್ದನ್ನು ಅವರು ಕಣ್ಣಾರೆ ಕಂಡಿದ್ದಾರೆ! ಹೀಗಾಗಿ ತಮ್ಮ ನೆಲೆಯನ್ನು ಗಟ್ಟಿಮಾಡಲು ಜಪಾನೀಯರು ಆಲೋಚಿಸುತ್ತಾರೆ ಮಾತ್ರ!

◆

ಬ್ರಿಟಿಷರ ಅಭಿಮಾನ ಗೌರವಗಳ ಗುಡ್ಡೆಯು ಇಂದು ಚೈನಾದಲ್ಲಿ ಅಲ್ಲಾಡತೊಡಗಿದೆ. ಅವರಿಗೆ ಆದ ಅಪಮಾನ ಸಹಿಸಲಾರದಷ್ಟು!

◆

ಇಂದು ಯೂರೋಪಿನ ಗೊಂದಲದಲ್ಲಿ ಸಿಕ್ಕಿ ಪೇಚಾಡುವ ಚೆಂಬರ್ಲೇನರು, ಪಾಪ! ಈ ಅಪಮಾನವನ್ನು ಹೇಗೆ ಹೊತ್ತಾರು?

◆

ಈಗಾಗಲೇ ಅವರ ರಾಯಭಾರಿಗಳು ಇದಕ್ಕಾಗಿ ವಿಷಾದವನ್ನು ಸೂಚಿಸಿದ್ದಾರೆ! ಆದರೆ ಕುಳ್ಳ ಜಪಾನಿಗಳಿಗೆ ಇದು ಕೇಳಬೇಕೇ?

◆

ಚೆಂಬರ್ಲೇನರ ಶಾಂತಿ ಧೋರಣೆಯು ಮೆಲ್ಲನೇ ಚೈನಾದ ಕಡೆಗೆ ಹರಿದುಹೋಗಲೂ ಬಹುದು. ಆದರೆ ಈ ಸಲ ಅವರು ಹೋಗುವುದು ಕೈಯಲ್ಲಿ ಕೊಡೆ ಹಿಡಕೊಂಡಲ್ಲವಂತೆ! ಹೆಗಲಲ್ಲಿ ಡೇರೆ ಹೊತ್ತುಕೊಂಡು! ಅಯ್ಯೋ! ಅಷ್ಟರಲ್ಲಿಯೇ ಚೈನದಲ್ಲಿರುವ ಬ್ರಿಟಿಷರ ಜಾಗಗಳನ್ನು ಜಪಾನೀಯರು ವಶಪಡಿಸಿಯಾರೆ?

◆

ಬ್ರಿಟಿಷ್ ಸರಕಾರವು ಹೀಗೆ ಜಪಾನಿಯರ ವರ್ತನೆಗಾಗಿ ದುಃಖ ಸೂಚಿಸುತ್ತಿದ್ದರೂ, ಸರ್ವಾಧಿಕಾರಿಗಳು ಕೇಳಿದ್ದನ್ನು ಬಿಟ್ಟುಕೊಡುತ್ತಿದ್ದರೂ ಹಿಂದೀಯರ ಕೇಳಿಕೆಗೆ ಒಂದಿಷ್ಟು ಗಮನಕೊಡಲು ಬ್ರಿಟಿಷರಿಗೆ ಸಾಧ್ಯವೇ ಇಲ್ಲ!

◆

ಫೆಡರೇಶನನ್ನು ಹಿಂತೆಗೆಯಲು ಕಾಂಗ್ರೆಸು ಮತ್ತು ಹಿಂದೀಯರೆಲ್ಲರೂ ಕೇಳಿಕೊಂಡರೂ ಬ್ರಿಟಿಷ ಸರಕಾರವು ಹಿಂದೆಗೆಯದೆ ತನ್ನ ಗೌರವವನ್ನು ಕಾಪಾಡಿಕೊಳ್ಳುತ್ತದೆ! ಆಶ್ರಿತರಾಜರು ಇದನ್ನು ಅಂಗೀಕರಿಸಬೇಕೆಂದು ದೊಡ್ಡದೊಂದು ರಾಜತಂತ್ರದ 'ಯಂತ್ರ'ವೇ ರಚನೆಯಾಯಿತು.

◆

ಫೆಡರೇಶನನ್ನು ಮುರಿಯುವಲ್ಲಿ ಆಶ್ರಿತರಾಜರ ನಿರ್ಣಯವು ಕಾಂಗ್ರೆಸಿನ ಜವಾಬ್ದಾರಿಯನ್ನು ಸೇಕಡಾ ೫೦ರಷ್ಟು ಕಡಿಮೆಮಾಡಿದೆ.

◆

ಆದರೆ ಬಾಕಿಯುಳಿದ ೫೦% ವಿಷಯವೇನು? ಆ ವಿಷಯವಾಗಿ ಕಾಂಗ್ರೆಸು ಯುದ್ಧ ಹೂಡಬೇಕಾದುದು ಬಾಕಿಯದೆಯಷ್ಟೆ?

◆

ಈಗ ಅದಕ್ಕಾಗಿ ಕಾಂಗ್ರೆಸಿನ ಒಳಗೆಯೇ ಯುದ್ಧ ಸುರುವಾಗಿದೆ. ಸುಭಾಷರು ಈ ವಿಷಯವನ್ನು ತಮ್ಮ ಭಾಷಣಗಳ ಮೂಲಕ ತನ್ನ ಇಂದಿನ ಪಕ್ಷದ ಕಾದಾಟವು ಕೇವಲ ವೈಯುಕ್ತಿಕವೆಂದು ಸ್ಪಷ್ಟಪಡಿಸಿದ್ದಾರೆ!

◆

ಅವರು ಕಾಂಗ್ರೆಸಿನೊಳಗೇ ಇದ್ದು ಗಾಂಧಿಜಿಯವರ ಅನುಯಾಯಿಯೇ ಇರುತ್ತೇನೆಂದು ಒಪ್ಪಿಕೊಳ್ಳುತ್ತಾರೆ! ಆದರೆ ಅವರ ಕಾದಾಟವು– ಅವರಿಗೆ ವೈಯುಕ್ತಿಕ ದ್ವೇಷವುಳ್ಳ ಗಾಂಧಿಜಿಯವರ ಅನುಯಾಯಿಗಳೊಡನೆ ಮಾತ್ರ!

◆

ಈಗ ಸುಭಾಷರ ಒಂದೇ ಒಂದು ಚಿಂತೆ. ತನ್ನದು ಪಕ್ಷವು ಹೊಸಪಕ್ಷವಾದ್ದರಿಂದ ಅದಕ್ಕೆ ಬೇಕಾದ ಉದ್ದೇಶಗಳು ಸ್ಥಿರವಾಗಿ ಸ್ಥಾಪಿತವಾಗಲಿಲ್ಲವೆಂದು. ಆದರೆ ವಿರೋಧ ಪಕ್ಷದವರ ಉದ್ದೇಶವು ದೇಶದಲ್ಲಿ ಸ್ಥಿರವಾಗಿದೆಯಂತೆ!

◆

ಗಾಂಧಿಜಿಯವರ ಉದ್ದೇಶವು ಚರಿತ್ರೆಯಲ್ಲಿ ಶಾಶ್ವತವಾಗಿ ನಿಲ್ಲುವುದು ಎಂಬುದನ್ನು ಸುಭಾಷರು ತನ್ನ ಹೊಸ ಪಕ್ಷದ ಆವೇಶದಲ್ಲಿ ಮರೆತುಬಿಟ್ಟಾರೆ?

ಹೊಸ ಮಿತವ್ಯಯದ ಟಿನ್ನುಗಳು
ಪ್ರಮಾಣದಲ್ಲಿ ಬಾಟ್ಲಿಯಷ್ಟೆ ಇರುತ್ತವೆ
ಆದರೆ ಕ್ರಯವು ಕಡಮೆ



754

ಎಂಡ್ರೂಸ್ ಲಿವರ್ ಸೋಲ್ಟ್
ದೊಡ್ಡ ಬಾಟ್ಲಿಯ ಪ್ರಮಾಣದಲ್ಲಿರುವ ಹೊಸ ಮಿತವ್ಯಯದ ಟಿನ್ನುಗಳನ್ನು ತಯಾರಿಸಿದ್ದಾರೆ
ಈ ಟಿನ್ನಿನ ಬೆಲೆಯು ಕಡಿಮೆ—ಯಾಕೆಂದರೆ
ಇದು ಕಡಿಮೆ ವ್ಯಯದಲ್ಲಿ ತುಂಬಿಸಲಿಕ್ಕೂ ಊರಿಂದೂರಿಗೆ ಕಳುಹಿಸಲಿಕ್ಕೂ ಆಗುತ್ತದೆ.

ಈ ಕೆಳಗಿನವುಗಳಿಗೆ ಎಂಡ್ರೂಸನ್ನು ಕೊಂಡುಕೊಳ್ಳಿರಿ.

ಪಿತ್ತವಿಕಾರ, ಮಲಬದ್ಧತೆ, ಅಜೀರ್ಣ, ತಲೆಸುತ್ತು, ಎದೆಯುರಿ. ಹಸಿವಿಲ್ಲದಿರುವುದು, ನರಗಳ ಅಗ್ನಿಮಾಂದ್ಯ, ಯಕೃತ್ತಿನ ಅಸ್ವಸ್ಥೆ, ಬಳಲಿಕೆ,

ಎಂಡ್ರೂಸ್ ಲಿವರ್ ಸೋಲ್ಟ್
ನಾಲ್ಕು ವಿಧದಲ್ಲಿ ಉಪಕಾರಿ.

(1) ಕಶ್ಮಲವನ್ನು ಹೊರಗೆಹಾಕಿ ಸಂಪೂರ್ಣವಾಗಿ ಶುದ್ಧಿಗೊಳಿಸುವುದು,
(2) ಯಕೃತ್ತಿನ ಮೇಲೆ ಕೆಲಸಮಾಡಿ ಪಿತ್ತಸ್ರಾವಕವನ್ನು ಉದ್ರೇಕಿಸುವುದು.
(3) ಹೊಟ್ಟೆಯನ್ನು ಸೌಮ್ಯರೀತಿಯಿಂದ ಸ್ಫುರಣಗೊಳಿಸುವುದು.
(4) ಹೊಟ್ಟೆಯೊಳಗಿನ ಕಲ್ಮಶವನ್ನು (ಎಸಿಡ್) ಶಕ್ತಿಹೀನಗೊಳಿಸುವುದು.

ಎಲ್ಲಾ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ದೊಡ್ಡ ಟಿನ್ನು (8 ಔನ್ಸ್) (ದೊಡ್ಡ ಬಾಟ್ಲಿಗಳಲ್ಲಿದ್ದಷ್ಟೆ ಇರುವುದು.)	ರೂ. 1—4—0.
ಸಣ್ಣ ಟಿನ್ನು	ರೂ. 0-11—0.
ಹಿಂದಿನ ಬಾಟ್ಲಿ ಕ್ರಯ.	
8 ಔನ್ಸ್	ರೂ. 1—10—0.
4 ಔನ್ಸ್	ರೂ. 1—0—0.

ಅಂತರ್ ಶುದ್ಧಿಗೆ
ಎಂಡ್ರೂಸ್ ಲಿವರ್ ಸೋಲ್ಟ್

ANDREWS
LIVER SALT
for Inner Cleanliness

ರಕ್ಷ್ಯೋ ಧರ್ಮಾರ್ಥಕಾಮಾನಾಂ ಸ್ವಧರ್ಮೋ ನ ದೇವಾ ನ ಭೇದರೇ ಭೀತು ವಿಶೀಣ ಭೀತಿವ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ।

ಸ್ವದೇಶಾಭಿಮಾನಿ
SWADESHABHIMANI

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

ದೊರೆಯಲಿಲ್ಲವೆನೆ ರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತೆ ವಿಶ್ವವ ಸುಡುವ ಬರುತಿರುವ ॥ ಗರಲಕವರಂಜಿದರೆ! ಸುಧೆಯನು ಮಾರಿತು ಕಿನ್ನದ್ಯರ ತೆರದಿ ಕುಳಿತರೆ । ತೆರಳಿ ಬಲದಿ! ತೊರೆದು ಧೀರರು ನಿಶ್ಚಿತಾರ್ಥವನು ॥

ತಾರೀಕು ೨೩—೬—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 23—6—1939

ಹರಿಜನರಿಗೆ ದೇವಾಲಯ ಪ್ರವೇಶವನ್ನು ಸನಾತನ ಧರ್ಮವು ಬಹಿಷ್ಕರಿಸಲಿಲ್ಲ

ರಾಜಾಜಿಯವರ ಒತ್ತೋಕ್ತಿಗಳು

ಧರ್ಮದಿಂದಲೂ ದೇವರಿಂದಲೂ ಬಹಿಷ್ಕೃತರಾಗಿ ಅನ್ಯಾಯದಿಂದ ತುಳಿಯಲ್ಪಡುತ್ತಿರುವ ಹರಿಜನರಿಗೆ ದೇವಸ್ಥಾನ ಪ್ರವೇಶವೇ ಮೊದಲಾದ ಸಾಮಾಜಿಕ ಸೌಕರ್ಯಗಳನ್ನು ಒದಗಿಸಬೇಕೆಂದೂ, ಮಾನವಜನಾಂಗದಲ್ಲಿ ಅವರಿಗೂ ನಾಗರಿಕ ಹಕ್ಕುಸ್ವಾತಂತ್ರ್ಯಗಳು ಬರುವಂತೆ ಸವರ್ಣ ಹಿಂದೀಯರು ಪ್ರಯತ್ನಿಸಬೇಕೆಂದೂ ಮಹಾತ್ಮಾ ಗಾಂಧಿಯವರು ಇಡೀ ಸದೇಶದಲ್ಲಿ ಪ್ರಬಲವಾದ ಆಂದೋಲನವನ್ನೇ ಆರಂಭಿಸಿದ್ದಾರೆ. ಅವರಿಂದ ಸ್ಥಾಪಿಸಲ್ಪಟ್ಟ ಹರಿಜನ ಸೇವಾಸಂಘವು ಅಖಿಲಭಾರತ ಸಂಸ್ಥೆಯಾಗಿ ಆ ದೃಷ್ಟಿಯಿಂದ ಸರ್ವತೋಮುಖವಾದ ಕಾರ್ಯಗಳನ್ನು ಕೈಕೊಳ್ಳುತ್ತಿದೆ. ಮಹಾತ್ಮಜಿಯವರು "ಹರಿಜನ" ಪತ್ರಿಕೆಯ ಮೂಲಕ ಪ್ರತಿ ವಾರವೂ ಇಡೀ ವಿಶಾಲ ರಾಷ್ಟ್ರದಲ್ಲಿ ತಮ್ಮ ಸಂದೇಶವಾಣಿಯನ್ನು ಸಾರುತಿದ್ದಾರೆ. ಆದರೆ ಹರಿಜನ ಸಮಸ್ಯೆಯು ಬಗೆಹರಿಯದಿರಲು ಕಾರಣವೇನು ?

ಮಧುರೆಯಲ್ಲಿ ನಡೆದ ದೇವಸ್ಥಾನ ಪ್ರವೇಶ ಚಳವಳಿ ಯಶಸ್ವಿಯಾದ ವರದಿ ಮಾತನಾಡುತ್ತಾ ಮದ್ರಾಸಿನ ಶ್ರೀ ರಾಜಾಜಿಯವರು ಇಡೀ ತಮಿಳುನಾಡಿನಲ್ಲಿ ಇತಿಹಾಸ ಪ್ರಸಿದ್ಧ ಪುಣ್ಯಕ್ಷೇತ್ರವಾದ ಮಧುರೆಯೇ ಮೊಟ್ಟಮೊದಲು ಹರಿಜನರಿಗೆ ತೆರೆಯಲ್ಪಡಬೇಕೆಂದು ಹೇಳಿದರು. ಶ್ರೀಮತಿ ರಮೇಶ್ವರೀ ನೆಹರೂಗಳು ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದರು.

"ಹರಿಜನರಿಗೆ ಸಂಸ್ಥಾನದ ದೇವಾಲಯಗಳಲ್ಲಿ ಪ್ರವೇಶಕೊಡುವ ವಿಷಯದಲ್ಲಿ ತಮಿಳುನಾಡು ಹರಿಜನ ಸೇವಸಂಘದ ಅಧ್ಯಕ್ಷರು ನನ್ನ ಆ ಕಡೆಗೆ ಗಮನಕೊಡಬೇಕೆಂದು ನನ್ನೊಡನೆ ಹೇಳಿದ್ದಾರೆ. ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶಕೊಡುವದು ನನ್ನ ಗಮನಕೊಡುವ ವಿಷಯ ಮಾತ್ರ ಆಗಿದ್ದರೆ ಇಡೀ ಸಂಸ್ಥಾನದಲ್ಲಿ ಯಾವಾಗಲೇ ಅದು ನಡೆದು ಹೋಗುತ್ತಿತ್ತು. ಆದರೆ ಈ ಕೆಲಸವು ನನ್ನೊಬ್ಬನ ವೈಯಕ್ತಿಕ ಪ್ರಯತ್ನದಿಂದ ಕೊನೆಗಾಣುವಂತಹುದಲ್ಲ. ಈ ವಿಷಯದಲ್ಲಿ ಯಾವುದೇ ಒಬ್ಬ ವ್ಯಕ್ತಿಯಾಗಲಿ, ಅಥವಾ ನ್ಯಾಯವಿಧಾಯಕ ಸಭೆಯ ಮೂಲಕವಾಗಲಿ ಎಷ್ಟರ ಮಟ್ಟಿಗೆ ಕೆಲಸವನ್ನು ಕೊನೆಗಾಣಿಸಬಹುದೆಂಬ ವಿಷಯವು ಸಮಸ್ಯಾತ್ಮಕವಾಗಿದೆ. ನಾನೊಂದು ಪಕ್ಷ ವಿಷಯವನ್ನು ಮರೆತರೂ ಗಾಢನಿದ್ರೆ ಮಾಡಿದರೂ ನನ್ನ ಬುದ್ಧಿಯು ನಿದ್ರೆಯಲ್ಲಿಯೂ ಇದನ್ನೇ ಚಿಂತಿಸುತ್ತಾ ಇದ್ದೀತೆಂದು ನೀವು ಭರವಸೆಯಿಟ್ಟಿರಬೇಕು.

ಶ್ರೀಮತಿ ರಮೇಶ್ವರೀ ನೆಹರುಗಳು ಉತ್ತರ ಹಿಂದೂಸ್ಥಾನದಿಂದ ದಕ್ಷಿಣಕ್ಕೆ ದೀರ್ಘವಾದ ಪ್ರಯಾಣದ ಆಯಾಸವನ್ನೂ ಲೆಕ್ಕಿಸದೆ ಬಂದದ್ದು ನೋಡಿದರೆ ಇಡೀ ದೇಶವು ಅಖಂಡವಾದ ಒಂದೇ ಭರತಭೂಮಿಯೆಂದೂ ಅದಕ್ಕಾಗಿ ಸೇವೆ ಸಲ್ಲಿಸುವುದು ಸರ್ವ ಕರ್ತವ್ಯವೆಂದೂ ಪಾಠ ಕಲಿಸಿದ್ದಾರೆ. ಶ್ರೀಮತಿಯವರು ತಿರುವಾಂಕೂರಿನಲ್ಲಿ ಪ್ರಯಾಣ ನಡೆಸಿದ ಮೇಲೆ ಇಡೀ ಸಂಸ್ಥಾನದ ಮಹಾರಾಜರು ಆದೇಶ



ದಂತೆ ಎಲ್ಲಾ ದೇವಾಲಯಗಳೂ ಹರಿಜನರಿಗೆ ಮುಕ್ತದ್ವಾರವಾಗಿ ತೆರೆಯಲ್ಪಟ್ಟಿತೆಂದೂ, ಮಹಾರಾಜರ ಈ ಆದೇಶವನ್ನು ಅಲ್ಲಿನ ಪ್ರಜೆಗಳು ಯಾವ ಸಂಕೋಚವಿಲ್ಲದೆ ಅನುಸರಿಸಿ ತಮ್ಮ ಕರ್ತವ್ಯವನ್ನು ಮಾಡಿದರೆಂದೂ ನಾವು ತಿಳಿದಿದ್ದೇವೆ. ಆದರೆ ಜ್ಞಾನದಲ್ಲಿ ತಿಳುವಳಿಕೆಯಲ್ಲಿ, ಸಂಸ್ಕೃತಿಯಲ್ಲಿ ತಿರುವಾಂಕೂರಿಗಿಂತ ಕಡಿಮೆಯಿಲ್ಲದ ತಮಿಳುನಾಡೂ ಕೂಡಾ ಅವರಿಗೆ ಅದಕ್ಕೆ ಸಮಾನಾದ ಸತ್ಕಾರವನ್ನು ಮಾಡಿ, ಅವರು ಹೋದ ಎಲ್ಲಾ ಕಡೆಯಲ್ಲಿಯೂ, ಎಲ್ಲಾ ದೇವಸ್ಥಾನಗಳೂ ಹರಿಜನರಿಗೆ ತೆರೆಯಲ್ಪಡುವವೆಂದು ನಾನು ದೃಢವಾಗಿ ನಂಬುತ್ತೇನೆ. ತಮಿಳುನಾಡಿನಿಂದ ಸ್ವಯಂಸೇವಕ ದಳದೊಡನೆ ಹೋದ ಹರಿಜನ ಕೆಲಸಗಾರರೂ ತಿರುವಾಂಕೂರಿನಲ್ಲಿ ಎಷ್ಟು ಪರಿಣಾಮಕಾರಿಯಾಗಿ ದೇವಾಲಯ ಪ್ರವೇಶವು ಸುಗಮವಾಗಿ ಸಾಗುತ್ತಿದೆಯೆಂಬುದನ್ನು ಪ್ರತ್ಯಕ್ಷ ಕಂಡಿದ್ದಾರೆ. ಶ್ರೀಮತಿಯವರು ಅಪೇಕ್ಷಿಸಿದ ಕಾರ್ಯವು ಸಂಪೂರ್ಣ ಜಯಶಾಲಿಯಾಗುವಂತೆ ತಮಿಳುನಾಡಿನ ಜನರೂ ತಮ್ಮ ಕರ್ತವ್ಯವನ್ನು ಕೈಗೊಳಿಸಲು ಮರೆಯರು.

"ಕೆಲವು ವಿಮರ್ಶಕರು ನನ್ನನ್ನು ಮಲಬಾರ ದೇವಸ್ಥಾನ ಪ್ರವೇಶ ಮಸೂದೆಯನ್ನು ನಮ್ಮ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರು ಮಾಡಿದ ಬಗ್ಗೆ ನಾನು ಇಡೀ ಸಂಸ್ಥಾನದಲ್ಲಿ ಹರಿಜನರಿಗೆ ದೇವಾಲಯ ಪ್ರವೇಶವಾಗಬೇಕೆಂಬ ಬಗ್ಗೆ ಆಗ್ರಹವುಳ್ಳವನಲ್ಲವೆಂದು ಕಟುವಾಗಿ ಟೀಕಿಸಿದ್ದಾರೆ. ಆದರೆ ವಿಮರ್ಶಕರು ತಾವು ಮಾಡತಕ್ಕ ಕೆಲಸವನ್ನು ಮಾಡಿದರಾದರೆ ಶಾಸನವನ್ನು ನಾವು ಮಾಡುವುದು ಕೇವಲ ಎಂಟೇ ದಿನಗಳ ಕೆಲಸ. ಮಲಬಾರಿನಲ್ಲಿ ಮೊದಲಾಗಿ ಆರಂಭಿಸಿದ ಕಾರಣ, ತಿರುವಾಂಕೂರಿಗೂ ಮಲಬಾರಿಗೂ ಅಭಿನ್ನವಾದ ಐಕ್ಯತೆಯಿರುವುದರಿಂದ ತಿರುವಾಂಕೂರಿನಲ್ಲಿ ಯಾವ ಪ್ರಯೋಗವು ಜಯಶೀಲವಾಯಿತು ಅದು ಇಡೀ ಮಲಬಾರಿನಲ್ಲಿಯೂ ಜಯಶೀಲವಾಗದಿರದು ಎಂಬುದಕ್ಕಾಗಿ, ಅಲ್ಲದೆ ನೆರೆಯ ಪ್ರಾಂತ್ಯದಲ್ಲಿ ಆಗುತ್ತಿರುವ ಸುಧಾರಣೆಯಿಂದ ತಮಿಳುನಾಡಿನವರು ತಾವು ಆ ಸುಧಾರಣೆಗೆ ಬೇಕಾದಷ್ಟು ಸಿದ್ಧತೆ ಮಾಡಿಕೊಳ್ಳಲು ಸಾಕಾದಷ್ಟು ಸಮಯವು ಸಿಕ್ಕಿದಂತಾಯಿತು. ಶಾಸನದ ಮೂಲಕ ನಾವು ಸಂಸ್ಥಾನದಲ್ಲಿ ಈ ಸುಧಾರಣೆಯನ್ನು ಆರಂಭಿಸಿದ್ದರೆ ಹರಿಜನ ಕೆಲಸಗಾರರು ಇದಕ್ಕಾಗಿ ಕೆಲಸಮಾಡದೆ ಉದಾಸೀನರಾಗಿ ಇರುತ್ತಿದ್ದರು. ಜನರು ಸಂಪೂರ್ಣ ಸಿದ್ಧತೆಗಳನ್ನು ಹೊಂದದೆ ಶಾಸನದ ಮೂಲಕ ಒತ್ತಾಯಿಸುವುದರಿಂದ ಈ ಸುಧಾರಣೆಯು ಸ್ಥಿರವಾಗ ಬಲ್ಲುದೋ ಏನೋ? ಆದರೆ ಇಂದು ನಮ್ಮ ಪೂರ್ವ ಸಿದ್ಧತೆಯಿಂದ ಮುಂದಕ್ಕೆ ಸುಧಾರಣೆಯು ಖಂಡಿತವಾಗಿಯೂ ಜಯಶೀಲವಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

"ತಮಿಳುನಾಡಿನಲ್ಲಿ ಹರಿಜನರಿಗೆ ದೇವಾಲಯ ಪ್ರವೇಶವಾಗಲಿಲ್ಲವೆಂದು ಇಲ್ಲಿನವರು ಕಳವಳಗೊಳ್ಳುವ ಅವಶ್ಯವಿಲ್ಲ. ಉತ್ತರಹಿಂದುಸ್ಥಾನದ ಕಾಶಿಯಂತಹ ಕಡೆಗಳಲ್ಲಿಯೇ ಅದು ಆಗಿರುವುದಿಲ್ಲ. ಆದರೆ ನಿಜವಾಗಿಯೂ ಇಷ್ಟರಲ್ಲಿಯೇ ಈ ಚಳವಳಿವು ಜಯಶೀಲವಾಗದಿರುವುದಕ್ಕೆ ಮುಖ್ಯ ಕಾರಣವೆಂದರೆ ಹರಿಜನ ಕೆಲಸಗಾರರಿಗೆ ನಿಜವಾಗಿಯೂ ದೇವಸ್ಥಾನ ಮತ್ತು ಪೂಜೆಗಳಲ್ಲಿ ಭಕ್ತಿಯಿರುವುದಿಲ್ಲ. ಕೇವಲ ತೋರಿಕೆಗೆ ಮಾತ್ರ ಅವರು ಅದರಲ್ಲಿ ವಿಶ್ವಾಸವುಂಟೆಂದು ತೋರ್ಪಡಿಸುತ್ತಾರೆ. ನಿಜವಾದ ದೈವಭಕ್ತಿಯು ಹರಿಜನ ಕೆಲಸಗಾರರಲ್ಲಿ ಲೋಪವಾಗಿರುವ ಕಾರಣದಿಂದಲೇ ಅವರು ಮಾಡುವ ಚಳವಳಿವು ಸಾರ್ವತ್ರಿಕವಾದ ಪರಿಣಾಮವನ್ನು ಪಡೆಯದಿರಲು ಕಾರಣವಾಗಿದೆ. ವಿಷಯದ ಅನುಭವವೂ, ಆ ಕುರಿತು ಸಾಧನೆಯೂ, ನಿರ್ಮಲವಾದ ಭಕ್ತಿಯೂ ಬೇರೆ ಬೇರೆ, ಇವೆಲ್ಲವೂ ಮೈಗೂಡದಿದ್ದಲ್ಲಿ ಕೆಲಸವಾಗಲಿಕ್ಕಿಲ್ಲ. ನನ್ನ ಹಾಗಿದ್ದವರೇ ಈ ಕೆಲಸವನ್ನು ಮಾಡಿದರೆ ಕೆಲಸವು ದೀರ್ಘವಾದೀತಲ್ಲದೆ, ಕೆಲಸದಲ್ಲಿಯೂ ನಿಜವಾದ ಪರಿಣಾಮವಾಗಲಿಕ್ಕಿಲ್ಲ. ಆದ್ದರಿಂದ ಶ್ರದ್ಧೆಯುಳ್ಳ ಜನರು ನಿಜವಾದ ಶ್ರದ್ಧಾವಂತರೇ ಕೆಲಸವನ್ನು ಮಾಡುವಂತೆ ತಾವು ಅವರಿಗೆ ಆಸ್ಪದಕೊಟ್ಟು ಸಹಾಯಮಾಡಲಿ.

"ಧರ್ಮವು ಇಂದು ಅಪಾಯಸ್ಥಿತಿಯಲ್ಲಿದೆ. ಮಗುವು ರೋಗಗ್ರಸ್ತವಾದರೆ ಎಷ್ಟು ಆರೈಕೆ ಮಾಡಬೇಕೋ ಅಷ್ಟೇ ಆರೈಕೆಯನ್ನು ಧರ್ಮಾಭಿಮಾನಿಗಳೂ ಕೈಕೊಳ್ಳಬೇಕು. ಎಲ್ಲಾ ಧರ್ಮವೂ ಒಂದೇ. ಇಡೀ ವಿಶಾಲವಿಶ್ವದಲ್ಲಿ ಹಬ್ಬಿದ ಧರ್ಮ ವೃಕ್ಷದ ಶಾಖೆಯೊಂದು ನಮ್ಮ ಸನಾತನ ಧರ್ಮವೂ ಆಗಿದೆ. ಎಲ್ಲಾ ಧರ್ಮಗಳೂ ತಮ್ಮಲ್ಲಿ ಸಮಾನತೆಯನ್ನು ಸಾರಿವೆ. ಆದರೆ ಸನಾತನ ಧರ್ಮವು ಆ ಬಗ್ಗೆ ಹಿಂದೆ ಬಿದ್ದಿರುತ್ತದೆ. ನಿಜವಾಗಿಯೂ ಹರಿಜನ ಹೃದಯವನ್ನು ಈ ಸನಾತನಿಗಳು ತೆರೆದ ದೃಷ್ಟಿಯಿಂದ ಪರೀಕ್ಷಿಸಿದ್ದಾದರೆ, ಎಷ್ಟೊಂದು ಗುಣವಂತರು ನಿರ್ಮಲ ಹೃದಯರು ಅವರೆಂದು ತಿಳಿದೀತು."

ಮಧುರೆಯು ಜನರೊಡನೆ ನನ್ನ ಬಿನ್ನಹ ಇದು ಚರಿತ್ರೆಯಲಿ, ಸಂಸ್ಕೃತಿಯಲ್ಲಿ ಪ್ರಸಿದ್ಧವಾದ ಪುಣ್ಯಕ್ಷೇತ್ರ. ಇಲ್ಲಿ ದೇವರು ಕಾರ್ಯಗದ ಮಹತ್ವವನ್ನು ಜಗತ್ತಿಗೆ ಸಾರಲೆಂದೇ ಕ್ರಮಜೀವಿಯಾಗಿ ಅವತರಿಸಿದ್ದು ತಿಂದ ಇತಿಹಾಸವಿದೆ.

ಇದರ ಅಧಿಕಾರದಲ್ಲಿದ್ದವರೆ ಇದನ್ನು ಹತ್ತು ಸಮಸ್ತರಿಗೂ ಮುಕ್ತದ್ವಾರವಾಗಬೇಕು. ಶಾಸನದ ಅಧಿಕಾರದಿಂದ ಹಿಂಸಾಮಯವಾಗಿ ತೆರೆಯುವುದರಲ್ಲಿ ಪ್ರಯೋಜನವಿಲ್ಲ. ನನ್ನ ಜೀವಮಾನದಲ್ಲಿಯೇ ಹರಿಜನರಿಗೆ ದೇವಾಲಯ ಪ್ರವೇಶ ಸಿಗುವಂತಾಗಲಿ ಎಂದು ನಾನು ಆಶೆಯುಳ್ಳವನಾಗಿದ್ದೇನೆ."

ರಾಜಾಜಿಯವರ ಈ ಮಾತು ತಮಿಳುನಾಡಿಗೆ ಮಾತ್ರವಲ್ಲ, ಇಡೀ ಸಂಸ್ಥಾನಕ್ಕೆ ಇಡೀ ಭರತಖಂಡಕ್ಕೆ. ಆದರೆ ಈ ದೃಷ್ಟಿಯಲ್ಲಿ ನಮ್ಮ ದಕ್ಷಿಣ ಕನ್ನಡದ ಹರಿಜನ ಸೇವಕರು ಕಾಂಗ್ರೆಸು ಮುಂದಾಳುಗಳು, ಹಾಗೂ ಮಹಾಜನರು ಯಾವ ಪೂರ್ವ ಸಿದ್ಧತೆ ಮಾಡುತ್ತಿದ್ದಾರೆಂಬುದು ತಿಳಿಯತಕ್ಕ ವಿಷಯ.

ದಕ್ಷಿಣ ಕನ್ನಡದಲ್ಲಿ ಇದುವರೆಗೆ ಹರಿಜನರಿಗೆ ದೇವಸ್ಥಾನ ಪ್ರವೇಶಕೊಡುವ ವಿಷಯದಲ್ಲಿ ಯಾವ ಚಳವಳಿಯೂ ನಡೆದಂತೆ ಕಂಡುಬರುವುದಿಲ್ಲ. ಜನಜಾಗೃತಿಯು ಉಂಟಾಗುವಂತೆ ಇಡೀ ಜಿಲ್ಲೆಯಲ್ಲಿ ಚಳವಳಿವನ್ನು ನಡೆಸುವುದು ಹರಿಜನ ಸೇವಕರ, ಕಾಂಗ್ರೆಸ್ ಕೆಲಸಗಾರರ ಹಾಗೂ ಮಹಾಜನರ ಕರ್ತವ್ಯವಾಗಿರುತ್ತದೆ.

DIAMONDS! DIAMONDS
BEST BRILLIANCY!

K. R. K. SHET,
MANGALORE

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು!

ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳ ಬಜಾರ ಧಾರಣೆಗಿಂತ ಐದು ಪರ್ಸೆಂಟು ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ.

ನಮ್ಮಲ್ಲಿ ಒಂದು ಸ್ವತಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಮಾನ ಮತ್ತು ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೆಟ್, ಜುವೆಲ್ಲರ್,
ಮಂಗಳೂರು.

'ಸಾವಿರ ವರ್ಷಗಳ ತನಕವೂ ಯುದ್ಧಮಾಡಲು ಸಿದ್ಧರಿರಬೇಕು'

★ ರಾಜಕೋಟೆಯ ಕಾಂಗ್ರೆಸ್ ಕೆಲಸಗಾರರಿಗೆ ಮಹಾತ್ಮರ ಬೋಧನೆ
★ ರಚನಾತ್ಮಕ ಕಾರ್ಯವೇ ಪೂರ್ಣ ಸ್ವರಾಜ್ಯದ ಹೆದ್ದಾರಿ
★ ಅಹಿಂಸೆಯೇ ಜಗತ್ತಿನ ಜೀವಾಳ

ಮಹಾತ್ಮಾಜಿಯವರು ಇಂದು ಎಲ್ಲಾ ಆಶ್ರಿತ ರಾಜ್ಯಗಳ ಮುಂದಾಳುಗಳಿಗೂ ತಮ್ಮ ಗಮನವನ್ನು ಕಾಂಗ್ರೆಸಿನ ರಚನಾತ್ಮಕ ಕಾರ್ಯಗಳಲ್ಲಿ ಇರಿಸಬೇಕಾಗಿ ಹೇಳುತ್ತಿದ್ದಾರೆ. ರಾಜಕೋಟೆಯ ಕಾಂಗ್ರೆಸು ಕೆಲಸಗಾರರನ್ನುದ್ದೇಶಿಸಿ ಮಹಾತ್ಮಾ ಗಾಂಧಿಯವರು ಹೀಗೆಂದು ಹೇಳಿದರು. "ಕಾಂಗ್ರೆಸಿನ ರಚನಾತ್ಮಕವಾದ ಕಾರ್ಯವನ್ನು ಒಮ್ಮೆ ಸುರು ಹಚ್ಚಿದರೆ ಅದು ಎಂದೆಂದೂ ಕೊನೆಗಾಣದೆ 'ನಿರಂತರವಾಗಿ' ಸಾಗುವುದು. ನೀವು ಅದಕ್ಕಾಗಿ ಅಷ್ಟೊಂದು ಗೊಂದಲವೆಬ್ಬಿಸುವುದೇಕೆ? ಇಂಗ್ಲೆಂಡಿನಲ್ಲಿ ಆದ ನೂರು ವರ್ಷಗಳ ಯುದ್ಧದ ಕುರಿತು ನೀವು ಕೇಳಿದ್ದೀರಾ? ಅವರು ನೂರು ವರ್ಷಗಳ ತನಕ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಕಾದಾಡಿದ್ದರೆ ನಾವು ಸಾವಿರ ವರ್ಷಗಳ ತನಕ ಕಾದಾಡಲು ಸಿದ್ಧರಿದ್ದೇವೆ. ದೇಶದ ಸ್ವಾತಂತ್ರ್ಯವನ್ನು ಸಾಧಿಸುವಲ್ಲಿ ನಾವು ಮಾಡುವ ಸೇವೆಯೇ ನಮಗೆ ಬಹಳ ಅಮೂಲ್ಯವಾದ ಉಡುಗೊರೆಯಾಗಿರುತ್ತದೆ."

ಹೀಗೆಂದು ಹೇಳಿ ಮಹಾತ್ಮಾಜಿಯವರು ರಚನಾತ್ಮಕ ಕಾರ್ಯದ ವಿವರವನ್ನು ಅಲ್ಲಿನ ಕಾಂಗ್ರೆಸು ಕೆಲಸಗಾರರಿಗೆ ಬಿಡಿಸಿ ಹೇಳಿದರು. ರಚನಾತ್ಮಕ ಕಾರ್ಯಗಳನ್ನು ಬಲಪಡಿಸುವುದರ ಮೂಲಕ ಅಧಿಕಾರಿಗಳೊಡನೆ ಶಾಂತ ವ್ಯವಹಾರಗಳನ್ನೂ ನಡೆಸಬೇಕಾಗಿ ಅವರು ಬೋಧಿಸಿದ್ದಾರೆ.

"ಸಾಧ್ಯವಿದ್ದಷ್ಟು ಹೆಚ್ಚು ಕೆಲಸ, ಸಾಧ್ಯವಾದಷ್ಟು ಕಡಿಮೆ ಮಾತು ಇವುಗಳು ನಿಮ್ಮ ಧ್ಯೇಯವಾಗಿರಲಿ. ಈ ಎಲ್ಲಾ ರಚನಾತ್ಮಕ ಕೆಲಸಗಳ ಕೇಂದ್ರ ಸ್ಥಾನದಲ್ಲಿ ಚರಕವು ಇದೆ. ಇದರ ಸುತ್ತುಮುತ್ತಾಗಿ ಅದಕ್ಕೆ ಬೇಕಾದ ಯಾವ ಯಾವ ಉಪಕರಣಗಳಿವೆಯೋ ಅವುಗಳನ್ನು ಪ್ರತ್ಯೇಕ ಪ್ರತ್ಯೇಕ ಕಲಿತು ಪ್ರಯೋಗಕ್ಕೆ ತಂದುಕೊಳ್ಳಿರಿ."

ಸಾಕ್ಷರ ಪ್ರಚಾರ

"ಹಿಂದೂದೇಶದಂತಹ ಅವಿದ್ಯೆಯಿಂದ ನರಳುವ ದೇಶದಲ್ಲಿ ಸಾಕ್ಷರ ಪ್ರಚಾರದ ಅವಶ್ಯಕತೆಯು ಇರುವುದು ಅಸ್ಪಷ್ಟವಲ್ಲ. ನೀವೆಲ್ಲರೂ ಆ ಕುರಿತು ತೀವ್ರ ಗಮನಕೊಡಬೇಕು. ಬೇರೆ ವಿಷಯಗಳ ಕುರಿತು ಮಾತನಾಡುವುದೇ ಬೇಡ. ಆ ಕೆಲಸವು ನಾಜೂಕಾಗಿಯೂ, ಕ್ರಮಬದ್ಧವಾಗಿಯೂ ನಡೆಸಬೇಕು. ರಾಜಕೀಯದ ಕುರಿತು ಮಾತನಾಡಬೇಡಿ; ಅಹಿಂಸೆಯ ಕುರಿತೂ ಮಾತೆತ್ತಬೇಡಿ; ನೀವು ಸಾಕ್ಷರ ಪ್ರಚಾರದ ಅವಶ್ಯಕತೆಯ ಕುರಿತು ಈಗ ನಿಮ್ಮ ಗಮನವನ್ನು ಕೊಟ್ಟರೆ ಸಾಕು."

"ಮದ್ಯಪಾನ, ಮಾದಕ ವಸ್ತುಗಳ ಸೇವನೆ, ಆ ಮೇಲೆ ಜೂಜಾಟವೇ ಮೊದಲಾದ ದುಷ್ಟ ಪದ್ಧತಿಗಳು ಇನ್ನೂ ನಮ್ಮಲ್ಲಿ ಇವೆ. ಆರೋಗ್ಯದ ವಿಷಯದಲ್ಲಿ ಏನೇನೂ ತಿಳಿಯದೆ ರೋಗಗಳಿಗೆ ಬಲಿಯಾಗುತ್ತಿರುವ ಸಾವಿರಾರು ಮಂದಿ ಹಳ್ಳಿಯ ಜನರಿಗೆ ಸಾಮಾನ್ಯ ಆರೋಗ್ಯ ಸೂತ್ರಗಳನ್ನು ವಿವರಿಸಿ ಹೇಳಿ. ಕಡಿಮೆ ಕ್ರಯದ ಮದ್ದುಗಳನ್ನು ಅವರಿಗೆ ಒದಗಿಸುವಂತೆ ಮಾಡಿ."

"ಇದೇ ರಾಜಕೋಟೆಯಲ್ಲಿ ಸೇವೆಯ ಬುದ್ಧಿಯಿಂದ ನೀವು ಕೆಲಸಮಾಡಿ ಸಂಬಂಧವನ್ನು ಇಟ್ಟುಕೊಳ್ಳದ ಒಂದೇ ಒಂದು ಮನೆಯೂ ಕೂಡಾ ಉಳಿಯಬಾರದು. ನೀವು ಮುಸಲ್ಮಾನರನ್ನೂ ತಿದ್ದಬೇಕು. ಅವರಿಗೂ ಕೂಡಾ ನಿಮ್ಮ ನಿಸ್ಸ್ವಾರ್ಥಸೇವೆಯನ್ನು ಒಪ್ಪಿಸಬೇಕು. ಆ ಮೇಲೆ ನಿಮ್ಮ ಸಹೋದರರಾದ ಹರಿಜನರ ಕುರಿತು ನೀವು ಮನಸ್ಸು ಕೊಟ್ಟು ಅವರನ್ನು ನಾಗರಿಕರನ್ನಾಗಿ ಮಾಡುವ ಪುಣ್ಯ ಕಾರ್ಯವನ್ನು ಕೈಕೊಳ್ಳಬೇಕು. ಅವರೊಡನೆಯೂ ಪ್ರೀತಿಯ ಸಂಬಂಧವನ್ನು ಇಟ್ಟುಕೊಳ್ಳಿ.

ಶಿಕ್ಷಣ ಪದ್ಧತಿ

ಪ್ರತಿಯೊಂದು ರಚನಾತ್ಮಕ ಕಾರ್ಯವೂ ಆಯಾಯ ಕೆಲಸವನ್ನು ಸಂಪೂರ್ಣ ಮಾಡುವ ದೃಷ್ಟಿಯಿಂದ ಕೈಕೊಂಡು ನೆರವೇರಿಸಬೇಕು. ಈ ನಿಮ್ಮ ನಿರ್ಮಲವಾದ ಕಾರ್ಯಸಾಧನೆಯೇ ನಿಮ್ಮಲ್ಲಿ ಸತ್ಯ ಮತ್ತು ಅಹಿಂಸೆಯ ಶಕ್ತಿಯನ್ನು ತುಂಬಿಸಿ ಸಂಪೂರ್ಣ ಹೊಣೆಗಾರಿಕೆಯ ಸರಕಾರಕ್ಕೆ ನಿಮ್ಮನ್ನು ಸಿದ್ಧಗೊಳಿಸುವುದು—ಈ ಕ್ರಮದಲ್ಲಿಯೇ ನಾನು ದಕ್ಷಿಣ ಆಫ್ರಿಕದಲ್ಲಿ ಮೊದಲಾಗಿ ಕೆಲಸವನ್ನು ಆರಂಭಿಸಿದ್ದು. ನಾನು ಕೆಲಸವನ್ನು ಆರಂಭಿಸಿದ್ದು ಅಲ್ಲಿನ ಜನರ ಸೇವೆಯೊಡನೆ. ನಾನು ಮೊಟ್ಟಮೊದಲು ಅವರನ್ನು ಶಾಸನಭಂಗ ಚಳವಳಕ್ಕಾಗಿ ಸಿದ್ಧರನ್ನಾಗಿ ಮಾಡುತ್ತಿರುವೆನೆಂಬ ವಿಷಯವನ್ನು ತಿಳಿಯಲೇ ಇಲ್ಲ. ನಾನು ನನ್ನನ್ನೇ ತರಬೇತಿಗೊಳಿಸುತ್ತಿರುವೆನೆಂಬ ವಿಷಯವನ್ನು ನಾನು ತಿಳಿದಿರಲಿಲ್ಲ. ಆದರೆ ನಿಮಗೆಲ್ಲರಿಗೂ ಕಡೆಗೆ ಏನು ಆಗಿಹೋಯಿತು ಎಂಬ ವಿಷಯ ಗೊತ್ತೇ ಇದೆಯಷ್ಟೆ?

"ಅಂತಹ ನಮ್ಮನ್ನು ಧೀರರನ್ನಾಗಿ ಮಾಡುವ ಅಹಿಂಸಾ ಮೂಲಕವಾದ ರಚನಾತ್ಮಕ ಕಾರ್ಯವನ್ನು ನೀವು ಮಾಡತಕ್ಕದ್ದೆಂದು ನಾನು ಅಪೇಕ್ಷಿಸುತ್ತೇನೆ. ಇದು ಸಂಪೂರ್ಣವಾದ ಕೆಲಸ, ಸಂತುಷ್ಟವಾದ ಕೆಲಸ. ಆದರೆ ಯಾರಿಗೆ ಇದರಲ್ಲಿ ಹೃತ್ಪೂರ್ವಕವಾಗಿ ಮನಸ್ಸಿಲ್ಲವೋ ಅವರು ನನ್ನಿಂದ ದೂರವಾಗಿದ್ದು ಅವರು ಕಂಡ ಸತ್ಯದಂತೆ ಕೆಲಸಮಾಡಬೇಕು."

ಈ ಕಾರ್ಯಕ್ರಮವು ಗಾಂಧಿಜಿಯವರು ಇಂದು ಆಶ್ರಿತ ರಾಜ್ಯಗಳು ಅನುಸರಿಸಬೇಕಾದ ಅವಶ್ಯ ಕರ್ತವ್ಯವೆಂದು ತಿಳಿದಿದ್ದಾರೆ. ಅವರು ತಿಳಿದಂತೆ ಪ್ರಕೃತಕ್ಕೆ ಅಲ್ಲಿ ಇದಕ್ಕಿಂತ ಭಿನ್ನವಾದ ಕಾರ್ಯಕ್ರಮವು ಯೋಗ್ಯವಾಗಲಾರದು. ಇಂದಿನ ಪರಿಸ್ಥಿತಿಯು ಬದಲಾವಣೆಯಾದರೆ ಅಲ್ಲಿ ಬೇರೆ ಬೇರೆ ಕಾರ್ಯಕ್ರಮವು ಅಗತ್ಯವೆಂದು ಕಂಡುಬಂದಲ್ಲಿ ಖಂಡಿತವಾಗಿಯೂ ಹಾಗೆ ಮಾಡಬಹುದಾಗಿದೆ.

ಮಹಾತ್ಮಾಜಿಯವರು ಕೆಲಸಗಾರರಿಗೆ ತಮ್ಮ ಬೋಧನೆಯನ್ನು ಮುಂದುವರಿಸುತ್ತಾ ಹೀಗೆಂದರು.—ಇಂದಿನ ನಿಮ್ಮ ಉದ್ವೇಗಗಳನ್ನು ತಡೆದು ನಿಲ್ಲಿಸಬೇಕು. ಬ್ರಿಟಿಷ್ ಸಾರ್ವಭೌಮ ಸರಕಾರ ಮತ್ತು ಆಶ್ರಿತ ಅಳರಸರ ಸರಕಾರಗಳೊಳಗೆ ಕಾದಾಡುವುದು ಯೋಗ್ಯ ಮತ್ತು ಉಚಿತವಾದುದಾದರೆ ಆ ಸಂದರ್ಭದಲ್ಲಿ ನೀವು ಒಬ್ಬೊಬ್ಬರೇ ಆಗಿದ್ದರೂ ನಿಮ್ಮ ಪ್ರತಿಭಟನೆಯನ್ನು ಕೊಡದೆ ಸುಮ್ಮಗಿರಬಾರದು.

'ಈ ಕೆಲಸವನ್ನು ಕೇವಲ ಕಾಂಗ್ರೆಸು ಕೆಲಸಗಾರರು ಮಾತ್ರ ಮಾಡಿದರೆ ಪ್ರಯೋಜನವಿಲ್ಲ. ಇಲ್ಲಿನವರೆಲ್ಲರೂ ಇದನ್ನು ಸಂಪೂರ್ಣ ಹೃದಯದಿಂದ ಒಪ್ಪಿಕೊಳ್ಳಬೇಕು. ಕೇವಲ ಕಾಂಗ್ರೆಸು ಕೆಲಸಗಾರರಿಗೆ ಮಾತ್ರ ಜವಾಬ್ದಾರೀ ಸರಕಾರದಲ್ಲಿ ಪಾಲಿರುವುದಲ್ಲ. ಜವಾಬ್ದಾರೀ ಸರಕಾರವು ಇಡೀ ದೇಶಕ್ಕೇ ದೊರೆತಕ್ಕುದಾಗಿದೆ.

ಎರಡು ಉದಾಹರಣೆಗಳು

ಗಾಂಧಿಜಿಯವರು ಈ ಸಂದರ್ಭದಲ್ಲಿ ಎರಡು ಉದಾಹರಣೆಗಳನ್ನಿತ್ತರು. ಒಂದು ೧೯೩೦ರಲ್ಲಿ ಅವರನ್ನು ಜೈಲಿಗೆ ಹಾಕಿದ ಸಮಯ. ಅವರು ಆಗ ಇಡೀ ದೇಶದಲ್ಲಿ ಹರತಾಳವಾಗಲೀ ಯಾವ ನಿಷೇಧ ಪ್ರದರ್ಶನವಾಗಲೀ ನಡೆಯಬಾರದಾಗಿ ತಿಳಿಸಿದ್ದರು. ಈ ಸಂಗತಿಯ ಕುರಿತು ಒಬ್ಬ ಸ್ಟೇಟ್ ಸೆಕ್ರೆಟರಿಯು ಹೀಗೆಂದು ಹೇಳಿದನು 'ಗಾಂಧಿಜಿಯವರು ಜೈಲಿಗೆ ಹೋದಾಗ ಹಿಂದೂದೇಶದಲ್ಲಿ ಒಂದು ನಾಯಿಯೂ ಬೊಗಳಲಿಲ್ಲ'ವೆಂದು. ಆದರೆ ಅಂತಹ ಶಾಂತತೆಗೆ ಗಾಂಧಿಜಿಯವರ ಆಜ್ಞೆಯೇ ಕಾರಣವಾದ್ದರಿಂದ ಅವನ ಮಾತು ಗಾಂಧಿಜಿಯವರಿಗೆ ಗೌರವ ಕೊಡುವಂತಹದ್ದೇ ಆಯಿತು. ಏಕೆಂದರೆ ಅವರ ಸೂಚನೆಯನ್ನು ಜನತೆಯು ಶಬ್ದಶಃ ಅನುಸರಿಸಿದ್ದರಿಂದ ಮಾತ್ರ ಹಾಗೆ ಆಗಲು ಕಾರಣವಾಯಿತು.

'ಇನ್ನೊಂದು ೧೯೨೧ರಲ್ಲಿ ಬೊಂಬಾಯಿಯಲ್ಲಿ ಆದ ಹಿಂದೂ-ಮುಸ್ಲಿಂ ಗಲಾಟೆಯ ಸಮಯ. ಗಾಂಧಿಜಿಯವರು ದಂಗೆಯೆದ್ದವರು ಶಾಂತರಾಗುವ ವರೆಗೆ ಉಪವಾಸವಿರುವುದಾಗಿ ಪ್ರಕಟಿಸಿದರು. ಮುಖ್ಯ ಮಹಮ್ಮದ್ ಹಾಜಿಗಳಾದ ಜಾನ್ ಮಹಮ್ಮದ್ ಚೋತ್ಹಾನಿಯವರು ಮುಸ್ಲಿಮ್ ದಂಗೆಗಾರರ ಮುಂದಾಳುವಾಗಿದ್ದರು. ಅವರೇ ಗಾಂಧಿಜಿಯವರೊಡನೆ, ದಯಮಾಡಿ ನಿಮ್ಮ ಉಪವಾಸವನ್ನು ನಿಲ್ಲಿಸಿ, ಈ ಜನರು ನನ್ನ ಸ್ವಾಧೀನದಲ್ಲಿದ್ದಾರೆ, ಅವರನ್ನು ನಾನು ದಂಗೆಯೆಬ್ಬಿಸದಂತೆ ತಡೆಯಬಲ್ಲೆ ಎಂದರು.

ಚರಕಾದಿಂದ ಏನಾದೀತು?

ನೀವು ಪ್ರತಿಯೊಂದು ಕೆಲಸವನ್ನು ಆರಂಭಿಸುವಾಗಲೂ ಅದು ಎಲ್ಲರಿಗೂ ಅನ್ವಯಿಸುವಂತಹುದಾಗಿ ಇರಬೇಕು. ಅದರಲ್ಲಿ ಕೆಲವರು ನಿಮ್ಮ ಪಕ್ಷದವರಲ್ಲದಿರಬಹುದು. ಆದರೆ ಎಲ್ಲರಿಗೂ ಒಂದೇ ಹಿಡಿತವು ಸಿಕ್ಕಬೇಕಾದರೆ ದೇಶಕ್ಕೆ ಒಂದೇ ರೀತಿಯ ರಚನಾತ್ಮಕ ಕಾರ್ಯವು ಪ್ರಯೋಗಕ್ಕೆ ಬರದೇ ಇರುವ ನಿಮಿತ್ತ ಅಹಿಂಸೆಯು ಪರಿಣಾಮಕಾರಿಯಾಗಲಿಲ್ಲ. ಇದಲ್ಲದೆ ನಿಜವಾದ ಕೆಲಸಗಾರರಿಗೆ ಮದ್ಯಪಾನ ನಿಷೇಧ, ಹಿಂದೂ-ಮುಸ್ಲಿಂ ಐಕ್ಯ, ಅಸ್ಪೃಶ್ಯತಾ ನಿವಾರಣೆ ಮೊದಲಾದ ಹಲವು ಕಾರ್ಯಕ್ಷೇತ್ರಗಳಿರುತ್ತವೆ. ಆಯಾಯ ಕೆಲಸದಲ್ಲಿ ಚೆನ್ನಾಗಿ ಕೆಲಸ ಮಾಡಬಲ್ಲ ವ್ಯಕ್ತಿಗಳನ್ನು ಹೆಕ್ಕಿ ತೆಗೆಯುವುದು ಕಷ್ಟ. ಆದರೆ ಚರಕಾದ ವಿಷಯದಲ್ಲಿ ಹಾಗಲ್ಲ. ದಿನದಿಂದ ದಿನಕ್ಕೆ ಆ ಕೆಲಸದಲ್ಲಿ ಒಬ್ಬನು ಮಾಡುವ ಅಭಿವೃದ್ಧಿಯನ್ನು ನಾವು ಅಳೆದು ನೋಡಬಹುದು.

'ಈ ಕಾರ್ಯಕ್ರಮವನ್ನು ನೀವು ನಿಮ್ಮ ಜೀವನ ಧ್ಯೇಯವೆಂಬ ದೃಷ್ಟಿಯಿಂದ ಕೈಕೊಂಡು ಸಾಧಿಸಬೇಕು. ಇದಕ್ಕಿಂತ ಯೋಗ್ಯವಾದ ಇನ್ನೊಂದು ಕಾರ್ಯಕ್ರಮವನ್ನು ನಾನು ನಿಮಗೆ ಬೇರೆ ಏನನ್ನು ತೋರಿಸಲಿ?

'ನಿಮ್ಮ ಹೃದಯದಿಂದ ಎಲ್ಲಾ ಬಾಹ್ಯ ವಿಚಾರಗಳನ್ನು ಕಿತ್ತೊಗೆಯಿರಿ! ನೀವು ಕೈಕೊಳ್ಳಬೇಕಾದ ಕಾರ್ಯಗಳಲ್ಲಿ ನಿಮ್ಮ ವಿಚಾರವನ್ನು ನೆಲೆಗೊಳಿಸಿರಿ. ಇದರಿಂದ ನೀವು ನಿಮ್ಮ ಮೇಲೆಯೂ ಇನ್ನಿತರರ ಮೇಲೆಯೂ ಅದ್ಭುತವಾದ ಸ್ವಾಧೀನತೆಯನ್ನು ಪಡೆಯುವಿರಿ. ಒಬ್ಬ ಶುದ್ಧ ಮನಸ್ಸಿನ ಮನುಷ್ಯನು ಮಾಡುವ ಕೆಲಸವು ಎಂದೆಂದೂ ನಿಷ್ಪ್ರಯೋಜಕವಾಗುವುದಿಲ್ಲ. ವಿಚಾರದ ಸ್ವಾಧೀನತೆಯು ಮನುಷ್ಯನಿಗೆ ಮೊದಲಾಗಿ ಬೇಕು. ಇದಕ್ಕೆ ಆತನು ಸಾಧ್ಯವಿದ್ದಷ್ಟು ಕೆಲಸವನ್ನು ಮಾಡಬೇಕು. ಸಾಧ್ಯವಿದ್ದಷ್ಟು ಮಾತನ್ನು ಕಡಿಮೆಮಾಡಬೇಕು. ನಮ್ಮಲ್ಲಿ ಆ ಬಗೆಯ ಆತ್ಮಸಂಯಮವಿದ್ದರೆ ನಮ್ಮ ಕೆಲಸದಲ್ಲಿ ಹೆಚ್ಚು ಆಯಾಸ ಪಡಬೇಕಾದುದಿಲ್ಲ. ಇದು ಒಬ್ಬ ಮನುಷ್ಯನು ಅಗತ್ಯವಾಗಿ ಮಾಡತಕ್ಕ ವಿಷಯ. ಏಕೆಂದರೆ ವಿಚಾರವನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು ಅಷ್ಟು ಸುಲಭವಾದ ಕೆಲಸವಲ್ಲ. ಅಹಿಂಸೆಯ ಶುದ್ಧರೀತಿಯಿಂದ ನಾವು ನಮ್ಮ ಸಂಸ್ಥಾನಗಳಲ್ಲಿ ಹೊಣೆಗಾರಿಕೆಯ ಸರಕಾರ ಬೇಕೆಂದು ಅಪೇಕ್ಷಿಸುವುದಿದ್ದರೆ, ಅಹಿಂಸೆಯು ಇಡೀ ಜಗತ್ತಿನಲ್ಲಿ ವಿಶೇಷ ಮಹತ್ವವಾದ ಅಧಿಕಾರವನ್ನು ಸ್ಥಾಪಿಸಬೇಕೆಂದು ಬಯಸುವುದಿದ್ದರೆ ನಮ್ಮ ಬುದ್ಧಿಯನ್ನು ಏಕಾಗ್ರತೆಗೆ ತರುವುದು ಅತ್ಯವಶ್ಯವಾದ ಕರ್ತವ್ಯವಾಗಿರುತ್ತದೆ.

'DILROZ' Regd

'Dil Roz' is a sure cure for Oriental sores local sores, all-kinds of deep-rooted sores, skin eruptions Pimples, Eczema, Ringworm, Sinus, Fistula auxillary-Abscess.

There is no need of dressing the wounds, nor are baths prohibited

Price Rs. 2. Postage extra.

TAHIR DIN,
Anarkali, LAHORE.

ಜೆಕ್ಕರ ಹಣ ಕಣ್ಮರೆಯಾಯಿತು

ಮ್ಯೂನಿಚ್ ಒಪ್ಪಂದದಂತೆ ಜೆಕೊಸ್ಲೊವಾಕಿಯಕ್ಕೆ ಬ್ರಿಟನು ಸಾಲಕೊಡುತ್ತದು ಎಲ್ಲರಿಗೂ ತಿಳಿದ ವಿಷಯ. ಹಿಟ್ಲರನು ಆ ರಾಷ್ಟ್ರವನ್ನು ಸ್ವಾಧೀನ ಪಡಿಸಿಕೊಂಡುದರಿಂದ ಈ ಸಾಲವು ಹಿಂದೆ ಬಾರದಂತಾಯಿತು ಆಗ ಬ್ರಿಟನಿಗೊಂದು ಸಮಾಧಾನವಿತ್ತು. ಜೆಕೊಸ್ಲೊವಾಕಿಯದ ಹಣ ೫,೦೦೦,೦೦೦ ಪವನಿನಷ್ಟು ಇಂಗ್ಲೆಂಡಿನ ಬ್ಯಾಂಕಿನಲ್ಲಿ ಚಿನ್ನದ ರೂಪದಿಂದ ಭದ್ರತೆಯಾಗಿತ್ತು. ಚೆಂಬರ್ಲೇನ್ ಸರಕಾರವು ಈ ಹಣವನ್ನು ತಿರುಗಿಕೊಡುವುದು ಸಾಧ್ಯವಿಲ್ಲೆಂದು ಸೂಚಿಸಿದ್ದರು. ಅಂದರೆ ಜೆಕೊಸ್ಲೊವಾಕಿಯದಿಂದ ಪ್ರತ್ಯಕ್ಷ ಪರೋಕ್ಷಗಳಾಗಿ ತನ್ನ ನಾಡಿಗೆ ಬರುವ ಹಣವನ್ನು ವಜಾಕಳೆಯುವ ಉದ್ದೇಶ ಅವರದಿತ್ತು. ಕೆಲವು ತಿಂಗಳುಗಳ ಅವಧಿಯಲ್ಲಿ ಇಂಗ್ಲೆಂಡಿನ ಕೆಲವರಿಗೆ ಈ ಹಣ, ಜೆಕೊಸ್ಲೊವಾಕಿಯದ ಈಗಿನ ದಾತರಾದ ಜರ್ಮನಿಗೆ ಸಂದಿತೇ ಎಂಬ ಸಂಶಯ ಬಂದಿತು. ಆ ವಿಷಯ ಪಾರ್ಲಿಮೆಂಟಿನಲ್ಲಿ ಚರ್ಚೆಗಳು ಆದುವು. ಈ ಸುದ್ದಿಯನ್ನು ಚೆಂಬರ್ಲೇನ್ ದೊರೆಗಳು "ಕುದುರೆಮೊಟ್ಟೆ" ಯ ಕಥೆಯೆಂದು ಪೂರಾಡಿದರು. ಆದರೆ ಅನೇಕರಿಗೆ ಈ ಸಿಂಗಾರಣೆಯಿಂದ ಸಮಾಧಾನವಾಗಲಿಲ್ಲ.

ಈಗ ಜಬಾಬ ಸ್ಥಿತಿಯು ಬಹಿರಂಗವಾಗಿದೆ. ಬ್ರಿಟನಿನ ಕೋಶಾಧಿಕಾರಿಗಳಾದ ಸರ್ ಜನ್ ಸೈಮನರಿಗೂ, ಚೆಂಬರ್ಲೇನರಿಗೂ ತಿಳಿಯದಂತೆ ಹಣ ಇಂಗ್ಲೆಂಡಿನಿಂದ ತಪ್ಪಿಬಿಟ್ಟಿದ್ದೊಂದು ಬೆಲೆಯ ಚಿನ್ನ ಎಲ್ಲಿದೆಯೆಂದು ತಿಳಿಯದು. ಕಾರಣವಿಷ್ಟೆ. ಹಣವು ಬ್ಯಾಂಕ್ ಒಫ್ ಇಂಗ್ಲೆಂಡಿನಲ್ಲಿರುವುದು. ಅದರಿಂದ ಅಂತರಾಷ್ಟ್ರೀಯ ಬ್ಯಾಂಕು ಅದನ್ನು ಪಡೆದಿರಬೇಕು. ಜರ್ಮನಿಯು ಜೆಕೊಸ್ಲೊವಾಕಿಯ ತನ್ನದಾದುದರಿಂದ ಅದನ್ನು ತರಿಸಿಕೊಂಡಿರಬೇಕು. ಇತ್ತ ಹಣವೇನಾಯಿತೆಂದು ಬ್ಯಾಂಕ್ ಆಫ್ ಇಂಗ್ಲೆಂಡನ್ನು ಕೇಳುವ, ತಡೆಯುವ ಅಧಿಕಾರ ಬ್ರಿಟಿಷ ಸರಕಾರಕ್ಕಿಲ್ಲ. ಅಂತರಾಷ್ಟ್ರೀಯ ಬ್ಯಾಂಕು ಅದನ್ನು ಕೇಳಿದರೆ ಕೊಡಲಾರೆನೆನ್ನಲು ಅದರ ಸದಸ್ಯನಾದ ಬ್ಯಾಂಕ್ ಒಫ್ ಇಂಗ್ಲೆಂಡಿಗೆ ಅಧಿಕಾರವಿಲ್ಲ. ಅಂತು ಅದು ಮೆನೇಜರರೂ, ಗವರ್ನರರೂ ಸೇರಿ ಆಕ್ಷೇಪಣೆಯೆತ್ತುವುದಾದರೆ ಎತ್ತಬಹುದಿತ್ತು. ಆದರೆ ಅವರ ಬುದ್ಧಿಯಿಲ್ಲದೆ ಅದನ್ನು ಅಂತರಾಷ್ಟ್ರೀಯ ಬ್ಯಾಂಕಿಗೆ ಸಲ್ಲಿಸಿದರು. ಕಾಯಿದೆಯಿಂದ ಹೀಗಾಗುವುದನ್ನು ತಡೆಯುವ ಅಧಿಕಾರ ಇಂಗ್ಲೆಂಡ ಸರಕಾರಕ್ಕೆ ಇಲ್ಲ. ಹೀಗಿರಲು ಬ್ಯಾಂಕ್ ಒಫ್ ಇಂಗ್ಲೆಂಡು ಇಷ್ಟಬಂದಾಗ, ಸರಕಾರದಿಂದ ಎಷ್ಟು ಸ್ವತಂತ್ರವಾಗಿ ವರ್ತಿಸಬಹುದೆಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಇದರಲ್ಲಿ ತೀರ ಸ್ವಾರಸ್ಯದ ಸಂಗತಿಯೆಂದರೆ, ಹಣವನ್ನು ಕಳೆದುಕೊಂಡ ಬಳಿಕವೂ ನೆವಿಲ್ ಚೆಂಬರಲೇನರಿಗೆ ತಿಳಿಯದಿದ್ದುದು. ಪರರ ಸಂಶಯವು ಕುದುರೆಮೊಟ್ಟೆಯಾಗುವ ಬದಲು ಅವರ ತಿಳಿವು ಕುದುರೆಮೊಟ್ಟೆಯಾಯಿತು. ಇತ್ತೀಚೆಗಿನ ಹಲವು ಪ್ರಸಂಗಗಳಲ್ಲಿ ಇಂಗ್ಲೆಂಡಿನ ಮುಖ್ಯಮಂತ್ರಿಗಳ ಬೊದ್ದುತನ ಇದೇ ರೀತಿ ವ್ಯಕ್ತವಾಗಿದೆ. ಇದೊಂದು ಹೊಸತಲ್ಲ.

★

ಜೆಕೊಸ್ಲೊವಾಕಿಯದ ಲಾಭ ಹಾನಿಗಳು

ಮೊರೇವಿಯಾ ಮತ್ತು ಬೊಹೇಮಿಯಾ ಪ್ರಾಂತಗಳು ಜರ್ಮನಿಗೆ ಸೇರಿದ್ದುದರಿಂದ ಜರ್ಮನಿಗೆ ಯಾವ ತೆರನ ಲಾಭಗಳಾದುವು ಎಂಬುದು ವಿಚಾರಿಸುವುದು ಯೋಗ್ಯವಾದ ಸಂಗತಿಗಳು. ಅಲ್ಲಿನ ಸ್ಕೋಡಾ ಮೊದಲಾದ ಶಸ್ತ್ರಗಳ ಕಾರ್ಖಾನೆಯ ಯಾವತ್ತು ಸಂಪತ್ತು ಅವರ ಕೈಸೇರಿದೆ. ಮುಖ್ಯ ಐದು ಕಾರ್ಖಾನೆಗಳಿಂದ ಅದಕ್ಕೆ ೩,೭೫೦,೦೦೦,೦೦೦ ಕ್ರೌನ್ (ಜೆಕ್ ನಾಣ್ಯ) ಪಾಲು ಭಂಡವಾಳದ ಕಾರ್ಖಾನೆಗಳು ಒಳಗಾದುವು. ಇನ್ನು ಮದ್ದುಗುಂಡು ತಯಾರಿಯ ಮೂರು ಕಾರ್ಖಾನೆಗಳಿಂದ ೧೯೬,೦೦೦,೦೦೦ ಕ್ರೌನ್ ಪಾಲುಗಳು ದೊರೆತುವು. ಇವು ಎಂಟು ಯುದ್ಧ ಸಂಬಂಧವಾದ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಜನರೇ ೬೫,೦೦೦ ಜನ. ಶಸ್ತ್ರನಿರ್ಮಾಣದಲ್ಲಿ ನುರಿತ ಕೆಲಸಗಾರರು ದೊರೆತಂತಾಯಿತು. ಹೊರಗಿನಿಂದ ವಿಮಾನಯಕ್ಕೆ ಅವಕಾಶವಿಲ್ಲದ, ಚಿನ್ನ ಕಬ್ಬಿಣಯಿದ್ದ, ವ್ಯಾಪಾರಕ್ಕೆ ತೊಡಕಿಗೊಂಡು ಜರ್ಮನಿಗೆ ಇದೊಂದು ಅಪಾರ ಲಾಭವೇ ಸರಿ. ಮೇಲಿನ ಉದ್ಯೋಗಗಳಲ್ಲದೆ ವಿಮಾನ ನಿರ್ಮಾಣಕ್ಕೆ ಸಂಬಂಧಿಸಿದ ಕಾರ್ಖಾನೆಗಳ ಮೌಲ್ಯವೇ ೧೭೦,೦೯೦,೦೦೦ ಕ್ರೌನುಗಳಷ್ಟಿತ್ತು. ಈ ಯುದ್ಧ ಸಾಮಗ್ರಿಗಳೇ ಅದರ ಹೆಚ್ಚಿನ ಲಾಭ.

ಉಳಿದ ದೃಷ್ಟಿಯಿಂದ ಜರ್ಮನ ವಿಜಯದ ಬೆಲೆಯೇನು? ಭಾವೀ ಯುದ್ಧ ಪ್ರಸಕ್ತಿಗಳನ್ನು ಜೆಕೊಸ್ಲೊವಾಕಿಯದ ಸೇನೆಯನ್ನು ಅವರು ನಂಬಬಹುದೇ ಎಂದರೆ ಇಲ್ಲ. ಜನರಿಗೆ ಅವರ ಮೇಲೆ ವಿಶ್ವಾಸ ಬಂದಿಲ್ಲ. ಜರ್ಮನ್ ಗುಪ್ತಚಾರರ ಕಣ್ಣಿಗೆ ದೊರೆಯದಂತೆ ಹಲವೊಂದು ಗುಪ್ತ ಸ್ವಾತಂತ್ರ್ಯಸಂಘಗಳು ಏರ್ಪಟ್ಟಿವೆ. ಪ್ರತ್ಯಕ್ಷ ಕಾದಾಟಕ್ಕೆ ಈ ದೇಶದವರನ್ನು ನಂಬಿದರೆ ಸಾಗದು. ಆದರೆ ಜನರನ್ನು ತಮ್ಮ ಕಾರ್ಖಾನೆಗಳಲ್ಲಿ ದುಡಿಸುವುದು ಜರ್ಮನಿಗೆ ಒಬ್ಬು. ಅದರಿಂದ ಬಲವಂತದ ಬೇಸಾಯವುಮಾಡಿಸಲಿಕ್ಕೂ ಅನುಕೂಲವಾಗಿದೆ. ಈ ಕೆಲಸವನ್ನು ಹಿಟ್ಲರನು ಈಗಾಗಲೇ ತೊಡಗಿದ್ದಾನೆ. ಸಾವಿರಾರು ರೈತಾಪಿ ಜನರನ್ನು ಜರ್ಮನ್ ಹೊಲಗಳಲ್ಲಿ, ಜರ್ಮನ್ ಕೋಟೆ, ಸರಹದ್ದುಗಳಲ್ಲಿ ದುಡಿಕ್ಕೆ ಹಾಕಿದ್ದಾನೆ. ಆದರಿಂದಲೇ ಈಗಾಗಲೇ ಜನರು ತಪ್ಪಿ ಪೋಲೆಂಡಿಗೆ ಓಡತೊಡಗಿದ್ದಾರೆ. ಅಲ್ಲಿನ ಹಿಂದಿನ ಸೇನಾನಾಯಕರಾಗಿದ್ದವರು ಬ್ರಿಟಿಷ್ ಕಾವಲಿನ ಕಣ್ಣುತಪ್ಪಿಸಿ ತಮ್ಮ ವಿಮಾನಸಹಿತವಾಗಿ ಪೋಲೆಂಡಿಗೆ ಹಾರಿ, ಯಂತ್ರಗಳನ್ನು ಪೋಲೆಂಡಿಗೆ ಒಪ್ಪಿಸುತ್ತಿದ್ದಾರೆ. ಅಲ್ಲಲ್ಲಿ ದಂಗೆಯ ಗುರುಹುಗಳು ಬಲವಾಗುತ್ತಿವೆ. ಆದರೆ ಜರ್ಮನಿಯ ಗುಪ್ತ ಪೋಲೀಸರ/ಕಣ್ಣು ಸೂಕ್ಷ್ಮವಾದಂತೆ ದಂಗೆಕೋರರ ಕಾರ್ಯಕಲಾಪಗಳು ಸಹ ಮರೆಯಿಂದಲೇ ನಡೆಯುತ್ತಿವೆ.

ಜನಬಲದ ವಿಚಾರ ಜರ್ಮನಿಗೆ ಸಹಜ ರೀತಿಯಿಂದ ಸಹಾಯವಿಲ್ಲ ಎಂದ ಹಾಗೇ ಸರಿ. ಬಲವಂತದಿಂದ ದುಡಿಮೆ ಮಾಡಿಸಿದರೆ ಯುದ್ಧಕಾಲದಲ್ಲಿ ತಿರುಗಿ ಅದೂ ಹೊಡೆತಕ್ಕೆ ಗುರಿಯಾದೀತು. ಇತ್ತ ಕಚ್ಚಾಸಾಮಾಲುಗಳ ವಿಚಾರದಲ್ಲಿ ಮುಖ್ಯತಃ ಆಹಾರಸಾಮಗ್ರಿ, ಕಬ್ಬಿಣದ ಅದುರು, ಎಣ್ಣೆ—ಈ ಮೂರಕ್ಕೆ ಜರ್ಮನಿಯು ಪರರ ಆಶ್ರಯವನ್ನು ಹೊಂದಬೇಕಾಗಿತ್ತು. ಹಿಂದಕ್ಕೂ ಹಾಗಿತ್ತು, ಈಗಲೂ ಹಾಗೆಯೇ ಸರಿ. ಆಹಾರಸಾಮಗ್ರಿಗಳ ದೃಷ್ಟಿಯಿಂದ ಜೆಕೊಸ್ಲೊವಾಕಿಯದ ಹೊರೆಯು ಪರಾಶ್ರಯವನ್ನು ಮತ್ತಷ್ಟು ಹೆಚ್ಚಿಸಿದೆ.

★

ಸ್ಲೊವಾಕಿಯಕ್ಕೆ ಸೇನೆಯೇಕೆ?

ಈ ಎಡೆಯಲ್ಲಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು, ಜರ್ಮನ್ ಸೇನೆಗಳ ಒಹಳವಾಗಿ ಸ್ಲೊವಾಕಿಯಾ ಪ್ರಾಂತಕ್ಕೆ ಸಾಗುತ್ತಿದೆಯೆಂದು ಹೇಳುತ್ತಿದೆ. ಈ ಪತ್ರಿಕೆಯ ಸುದ್ದಿಗಾರರು ತೀರ ವಿಚಕ್ಷಣರು. ಜೆಕೊಸ್ಲೊವಾಕಿಯಾ ಭಕ್ಷಣದ ಸೂಚನೆಯನ್ನು ೧೫ ದಿನ ಮುಂಚಿತವಾಗಿಯೇ ಆ ಪತ್ರಿಕೆ ಸೂಚಿಸಿತ್ತು. ಅವರ ಈ ಸೂಚನೆಯನ್ನು ನೋಡುವಾಗ—ಅದರಿಂದ ಸ್ಲೋವಾಕರನ್ನು ಪೂರ್ಣ ಸದೆಬಡಿಯುವುದೂ, ಅಥವಾ ಇನ್ನೊಂದು ದಂಡಯಾತ್ರೆಯು ಇರಬೇಕೆಂದೂ ಊಹೆಯಾಗುವುದು.

★

ಡಾಂಜಿಗ್ ವಿಪ್ಲವ

ಇತ್ತ ಹಿಟ್ಲರನು ಡಾಂಜಿಗ್ ನಾಡಿನಲ್ಲಿ ತಿರುಗಿತಿರುಗಿ ಅಶಾಂತಿಯನ್ನು ಹುಟ್ಟಿಸಲು ಯತ್ನಿಸುತ್ತಿದ್ದಾನೆ. 'ಡಾಂಜಿಗ್ ಸ್ವತಂತ್ರವಾದ ಮೆಂಡೇಟ್'; ಆದರೆ ಅದರ ಹೊರನಾಡು ಪೋಲೆಂಡಿನದು, ಪೋಲೆಂಡಿನ ಸುಂಕದ ಕಟ್ಟೆಯನ್ನು ದಾಟಿ ಅಲ್ಲಿಗೆ ಬರಬೇಕು. ಇತ್ತೀಚೆಗೆ ಎರಡು ಮೂರು ಘಟನೆಗಳು ನೆನವಲ್ಲದ ನೆಪ್ಪದಿಂದ ಪೋಲೆಂಡ್ ಸುಂಕದ ಅಧಿಕಾರಿಗಳನ್ನು ಕರಿತಾದ ಹಿಂಸೆ, ಕೊಲೆಗಳೇ ಆಗಿವೆ. ಈ ಕೊಲೆಗಳ ಸಮಯ ಡಾಂಜಿಗ್ ತಡೆಗಟ್ಟಲಿಲ್ಲ. ಇವುಗಳನ್ನು ತಿಳಿಯುವಾಗಲೂ, ಹೊರಸುದ್ದಿಗಳನ್ನು ವಿಚಾರಿಸುವಾಗಲೂ, ಡಾಂಜಿಗ್‌ನಲ್ಲಿ ಹಿಟ್ಲರನ ಹೊಸ ಘೋಷಣೆ ಕಾಣುವುದು. ಡಾಂಜಿಗ್ ಒಂದು ರೀತಿಯಿಂದ ಸ್ವತಂತ್ರವಾಗಿದ್ದರೂ ಶಸ್ತ್ರಧಾರಿಗಳಾಗಿರಲು ಅವರಿಗೆ ಅನುಕೂಲತೆಯಿಲ್ಲ. ಅಪ್ಪಣೆಯು ಇಲ್ಲ. ಅಲ್ಲಿನ ನಾಜಿ ಸಂಗಡದ ಬಾಯಿಗೆ ಬೆಂಬಲವಾಗಲು ಶಸ್ತ್ರಗಳು ಬೇಕಷ್ಟೆ. ಇವನ್ನು ಒದಗಿಸಲು ಏರ್ಪಾಡು ನಡೆಯುತ್ತಿವೆ. ಇವರು ಪೋಲೆಂಡಿನ ಸುಂಕದ ಕಟ್ಟೆಗಳನ್ನು ದಾಟಿಯೇ ಬರಬೇಕು. ಈ ಪ್ರಯತ್ನಗಳಲ್ಲಿ ಪೋಲೆಂಡಿನ ಸುಂಕದ ಅಧಿಕಾರಿಗಳು ಮಾಡಿದ ತಡೆ ಪ್ರತಿಭಟನೆಗಳೇ—ಮೊನ್ನೆಯಿಂದ ನಡೆದುಬಂದ ಘಟನೆಗಳಿಗೆ ಕಾರಣವಾಗಿದೆ.

ಇದರ ಪರಿಣಾಮವನ್ನು ನೋಡುವಾಗ ಡಾಂಜಿಗ್ ವಿಷಯವಾಗಿ ಈ ಭವಿಷ್ಯ ಹೇಳಬಹುದಂತೆ. ಡಾಂಜಿಗ್ ನಾಜಿ ಸಂಗಡಕ್ಕೆ ಬೇಕಷ್ಟು ಶಸ್ತ್ರಗಳನ್ನು ಗುಪ್ತವಾಗಿಯೇ ಜರ್ಮನಿನ ಕಣ್ಮರೆಯಿಂದಲೋ ಒದಗಿಸಿ ಕೊಟ್ಟು, ಕೊನೆಗೆ ಅವರಿಂದ ಡಾಂಜಿಗ್ ಸರಕಾರವನ್ನು ಸ್ವತಂತ್ರಗೊಳಿಸಿಕೊಳ್ಳುವುದು. ಅನಂತರ ಡಾಂಜಿಗ್ ನಾಜಿ ಸಂಗಡದವರು ರೀಚ್‌ನ ರಕ್ಷಣೆಯನ್ನು ಕೇಳುವುದು. ಅದರ ಸಹಜ ಪರಿಣಾಮವಾಗಿ ಹಿಟ್ಲರನು ಅದನ್ನು ಸ್ವಾಧೀನ ಪಡೆದುಕೊಳ್ಳುವುದು.

★

ಜಪಾನಿನ ನಿಜವೇಷ

ಟೈಂಟ್ಸಿನ್ ನಗರವು ಇಂದು ಅಂತರಾಷ್ಟ್ರೀಯ ವಸಾಹತು ಎನಿಸಿದರೂ ಜಪಾನ ಬ್ರಿಟನುಗಳ ಮಧ್ಯೆ ಯುದ್ಧರಂಗವಾಗಿದೆ. ಜಪಾನೀ ಅಧಿಕಾರಿಗಳನ್ನು ಕೊಂದ ನಾಲ್ವರು ಅಪರಾಧಿಗಳು ಅಲ್ಲಿ ಅಡಗಿರುವರೆಂದು ಅವರನ್ನು ತಮ್ಮ ವಶಕೊಡುವರೆ, ಈ ವಸಾಹತಿನ ಅಧಿಕಾರಿಗಳನ್ನು ಜಪಾನಿನ ಸೇನಾನಾಯಕರು ಕೇಳಿದರು. ಆರೋಪಿಗಳೆಂದು ಊಹೆಗೆ ಗುರಿಯಾದವರನ್ನು ತಾತ್ಕಾಲಿಕವಾಗಿ ಒಪ್ಪಿಸಿದಾಗ, ಅವರು ತುಂಬ ಚಿತ್ರಹಿಂಸೆಗೆ ಜಪಾನಿಯರಿಂದ ಗುರಿಯಾದರು. ಆದುದರಿಂದ ಅವರನ್ನು ಬಿಟ್ಟುಕೊಡಲು ಬ್ರಿಟಿಷ ಅಧಿಕಾರಿಗಳು ಆಗದೆಂದರು. ಈ ವಿಷಯದಲ್ಲಿ ಆರೋಪಿಗಳ ವಿಚಾರಣೆಯು ನಿಷ್ಪಕ್ಷಪಾತಿಗಳಾದ ಕೆರವರಿಂದ ನಡೆಯಲೆಂದೂ, ಅಲ್ಲಿ ಅವರು ಆರೋಪಿಗಳೆಂದು ತೀರ್ಮಾನವಾದರೆ ತಾವು ಬಿಡುವೆವೆಂದೂ ಹೇಳಿದರು. ಜಪಾನು ಅದಕ್ಕೆ ಒಪ್ಪಲಿಲ್ಲ. ಮಾತ್ರವಲ್ಲ ಈಗ ಟಿಂಟ್ಸಿನ್ ವಸಾಹತನ್ನು ಸುತ್ತುವರಿದ, ಒಳಗೆ ಯಾವ ಎಡದಿಂದ ಹೊರಗಿನವರು ಹೋಗದಂತೆ ಮಾಡಿರುವರು. ಆಹಾರ ಸಾಮಗ್ರಿಗಳಾಗಲಿ, ಸೇನೆಯಾಗಲಿ ಹೋಗದೆ, ಟೈನ್‌ಟ್ಸಿನ್ ಜನರು ಮುತ್ತಿಗೆ ಗುರಿಯಾಗಿದ್ದಾರೆ. ಮೇಲೆ—ಜಪಾನಿನ ಬೇಡಿಕೆಯು ಬೇರೆಯೇ ರೂಪ ತಾಳಿದೆ.

ಬ್ರಿಟನು ಜಪಾನಿನ ವಿಷಯದಲ್ಲಿ ತನ್ನ ಧೋರಣೆಯನ್ನು ಬದಲಿಸಬೇಕೆಂದೂ, ಚೆಂಗಕೈಶೇಕ್ ಸರಕಾರಕ್ಕೆ ಸಾಲಕೊಟ್ಟಿದಾಗಲಿ ಇತರೀತಿಯಿಂದ ಸಹಕರಿಸಿದುದಾಗಲಿ ತಪ್ಪೆಂದು ಸಾರಿದೆ. ಅಲ್ಲದೆ ಆ ಧೋರಣೆಯನ್ನು ಬದಲಿಸುವ ತನಕ ಬ್ರಿಟನಿಗೆ ಮಾನ ಸಿಕ್ಕದೆಂದು ಉತ್ತರವಿತ್ತಿದೆ. ಈ ಕೆಲಸ ನಡೆಸಿದ ಸೇನಾನಾಯಕರ ವಾಣಿಯನ್ನು ಟೋಕಿಯೋ ಸರಕಾರವು ಒಪ್ಪಿರುತ್ತದೆ. ಪರಿಸ್ಥಿತಿಯನ್ನು ನೋಡುವಾಗ ಜಪಾನು ತನ್ನ ಶಕ್ತಿಯನ್ನು ವಿದೇಶೀಯರೊಡನೆ ತೋರುವುದರಲ್ಲಿದೆ. ಚೀನದ ಮೇಲೆ ಏರಿಗಿದ್ದ ಕೈ 'ಸಾಮರ್ಥ್ಯವೇ ಬೇಕೆಂದು ಹಿಂದಾದ ಒಂಬತ್ತು ರಾಷ್ಟ್ರಗಳ ಸಂಧಿಯನ್ನು ಅದು ಮುರಿದಿದೆ. ಅದರ ವರ್ತನೆಯನ್ನು ಇಟಲಿ—ಜರ್ಮನಿಗಳು ಬೆಂಬಲಿಸಿವೆಂದು ಸಾರಿದೆ.

ಇಷ್ಟು ವಿಷಮ ಸಂಗತಿ ಹೋಗಲು 'ಪಾನೆ'ಯನ್ನು ಮುಳುಗಿಸಿದುದು, ಹೈನಾನ್‌ನ್ನು ಆವರಿಸಿದ್ದು ಇವೇ ಮೊದಲಾದ ಹಲವು ಜಪಾನೀ ಉದ್ಧಟತನಕ್ಕೆ ಬ್ರಿಟನು ಸುಮ್ಮನೆ ಇದ್ದುದು ಕಾರಣ. ಹಿಟ್ಲರ್ ಜರ್ಮನಿಯಂತೆ ಜಪಾನು ಉತ್ತೇಜಿತವಾಗಿದೆ. ಈಗ ಬ್ರಿಟಿಷ್ ಕೆಬಿನೆಟ್—ರ್ನಿನರಲ್ಲಿ ಜಪಾನು—ಜರ್ಮನಿಗಳೊಳಗಾದ ಸಂಧಾನ ಮುರಿಯುವೆನೆಂದು ಬೆದರಿಕೆ ಹಾಕುವುದರಲ್ಲಿದ್ದಾರೆಂದು ಕೇಳುತ್ತೇವೆ. ರೀತಿಯಿಂದ ಬ್ರಿಟನು ಸಂಧಾನ ಮುರಿದರೆ, ಅದರನ್ನು ಫ್ರಾನ್ಸು ಪುಷ್ಟೀಕರಿಸಿದರೆ ಜಪಾನಿನ ಕೊರವೂ ವ್ಯಕ್ತವಾಗುವ ಕಾಲ ಬರುವುದು. ಮೊದಲೇ ಚೀನಾ ಯುದ್ಧದಿಂದ ಬಳಲಿದೆ. ಅತ್ತ ಅದೊಂದರಿಂದಲೇ ಜಪಾನಿನ ಆಮದುರಫ್ತುಗಳೆರಡೂ ತಗ್ಗಿವೆ. ಇಂಡಿಯ, ಆಸ್ಟ್ರೇಲಿಕ ಮೊದಲಾದ ಬ್ರಿಟಿಷ ವಸಾಹತುಗಳು, ಹಾಗೇ ಫ್ರೆಂಚ್ ವಸಾಹತುಗಳು ವ್ಯಾಪಾರದಿಂದ ತಪ್ಪಿದರೆ ಜಪಾನಿನ ನಿತ್ಯ ಜೀವನ ಯಾರೊಡನೆ ನಡೆಯಬೇಕು. ಬ್ರಿಟನ್—ಫ್ರಾನ್ಸುಗಳೊಡನೆ ಸಂಯುಕ್ತ ಅಮೇರಿಕವೂ ಸಹಕರಿಸಿದರೆ ಆಗ ಜಪಾನನ್ನು ಸಮನಾಗಿ ಒರೆಗಲ್ಲಿಗೆ ಹಚ್ಚಿದಂತಾಗುವುದು.

ಜಪಾನು ಹಡಗುಗಳು, ವ್ಯಾಪಾರದ ದೃಷ್ಟಿಯಿಂದಲೂ ಸಹ ಅಲೆದಾಡುವ ನಾಡುಗಳಿಗೆ ಮಿತಿಬರುವುದು. ಅಲ್ಲದೆ ಎಂಟಿಕಾಮಿಂಟರ್ನ್ ಸಂಗಡಕ್ಕೆ ಸೇರಿದ ಜಪಾನಿಗೆ, ಜರ್ಮನಿ ಇಟಲಿಗಳು ಯಾವ ರೀತಿಯ ಪ್ರತ್ಯಕ್ಷ ಸಹಾಯ ಕೊಡುವುವೆಂದು ನೋಡಬಲಿದೆ. ಮೊದಲಿಗೆ ಕೊಡುವ ಶಕ್ತಿಯುಂಟೆಯೇ? ಜಪಾನಿನ ಸಿದ್ಧವಸ್ತುಗಳು, ತಾವೇ ಗಿರಾಕಿ ಹುಡುಕುತ್ತಿರುವ ಇಟಲಿ—ಜರ್ಮನಿಗಳಿಗೆ ಬೇಕೇನು? ಇತ್ತ ಯುದ್ಧವೇ ಪ್ರಾಪ್ತಿಸಿದ ಕಾಲಕ್ಕೆ—ಜರ್ಮನ್ ಸಹಾಯವು ಜಪಾನಿಗೆ ಯಾವ ಹಾದಿಯಿಂದ ಸಿಗಬೇಕು. ಶಾಂಗಹಾಯಿ, ಟೈನ್‌ಟ್ಸಿನ್ ವಸಾಹತುಗಳ ಈ ಉಪವಾಸ ಕೆಡವಿ ಸ್ವಾಧೀನ ಪಡೆದುಕೊಂಡಲ್ಲಿ ಬ್ರಿಟನಾಗಲಿ, ಫ್ರಾನ್ಸ್ ಸಂಯುಕ್ತ ಅಮೇರಿಕಗಳಾಗಲಿ ಸುಮ್ಮನಿರುವುದು ಶಕ್ಯವೇ? ಸುಮ್ಮನಿದ್ದರೂ ಮತ್ತೂ ಹೆಚ್ಚಿನ ಬೆಂಬಲವನ್ನು ಚೀನಕ್ಕೆ ಕೊಟ್ಟರೆ ಜಪಾನಿಗೆ ಅನುಕೂಲವೇ.

ಇಲ್ಲವೇ ಜಪಾನಿಗೆ ಕಾದಾಡಲು ಪ್ರೇರಿಸುವುದು, ಜರ್ಮನಿಯ ರಾಜನೀತಿಯೇ ಯುರೋಪಿನಲ್ಲಿ ಕಲಹಕೊಡಗಲು ಅವಕಾಶ ಪಡೆದು ತನ್ನ ವೈರಿಗಳನ್ನು ಈ ರೀತಿಯಿಂದ ಕುಂದಿಸಬಹುದೆಂದು ಇಂಗ್ಲೆಂಡ್ ಫ್ರಾನ್ಸುಗಳ ವಿಷಯ. ಅದು ತಿಳಿಯುವುದೇ?

S. U. N. & Co.,

Silk Merchants,
Chaukhamba BENARES CITY

ಈಗಿನ ತರಹ(ಕಾಶಿ) ಬೆನಾರಿಸ್ ಶೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ. ಈಗ ಕ್ರಯ ತುಂಬಾ ಸುಲಭ. ಖಾತ್ರಿ ಮಾಲು. 18 ಮೊಳದ 2¼ ಅಗಲದ ಸಣ್ಣ ಬುಟ್ಟ ಶೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18ಮೊಳ ಸಣ್ಣ ಬುಟ ಶೀರೆಗಳು ರೂ 35ರಿಂದ ರೂ 55 ಪಡಲು ಸಾದಾ ಶೀರೆ 18 ಮೊಳ ರೂ 32ರಿಂದ ರೂ 65. ಉದ್ದ ಮೊಳ 16, ಅಗಲ 2¼ ರೂ. 20ರಿಂದ 35ರ ವರೆಗೆ ಬೇರೆ ಮಾಲುಗಳ ಕ್ಯಾಟ್ಲಾಗು ಉಚಿತವಾಗಿ ಕಳುಹಿಸಲಾದೀತು.

ವಿಳಾಸ —
ಶಿರೋಮಣಿ ನಾರಾಯಣಾಚಾರ್ಯ,
ಚೌಕಂಬಾ, ಬೆನರಿಸ್ ಸಿಟಿ

ಗಾಂಧಿಜಿಯವರು ದೇವಸಮಾನರು

ಇವರ ಅಮೋಘ ತತ್ವಗಳನ್ನು ಜಗತ್ತಿಗೆ ಇದುವರೆಗೆ ಯಾವ ಧರ್ಮಸಂಸ್ಥಾಪಕನೂ ಬೋಧಿಸಲಿಲ್ಲ!

ಲಂಡನ್ನಿನಲ್ಲಿ ಸೇರಿದ ಮಹಾಸಭೆಯೊಂದರಲ್ಲಿ ಭಾರತದ ಸುಪ್ರಸಿದ್ಧ ಮೇಧಾವಿಗಳಾದ ಸರ್. ಎಸ್. ರಾಧಾಕೃಷ್ಣನವರು ಭಾಷಣ ಮಾಡುತ್ತಾ ಗಾಂಧೀಜಿ ಮತ್ತು ಅವರ ತತ್ವಗಳ ಕುರಿತು ಜಗತ್ತಿನಲ್ಲಿ ಇದಕ್ಕಿಂತ ಉತ್ಕೃಷ್ಟವಾದ ತತ್ವವನ್ನು ಪ್ರಚಾರ ಮಾಡಿದವರು ಬೇರಿಲ್ಲವೆಂದು ಹೇಳಿದರು.

ಅಂದಿನ ಸಭೆಯ ಅಧ್ಯಕ್ಷರಾದ ಶ್ರೀ ಕೆ. ಎಂ. ಪಾಂಡೆಯವರು ಗಾಂಧಿಜಿಯವರನ್ನು ಕೊಂಡಾಡುತ್ತಾ ಅವರ ಘನತ್ವಿಕೆಯೂ, ನಿರ್ಮಲವಿಚಾರವೂ ಬಹಳ ಮಹತ್ವವಾದುದೆಂದು ಇತರ ದೇಶಗಳ ಧುರೀಣರಿಗಿಂತ ತೀರಾ ಭಿನ್ನವಾಗಿ, ಮಹಾತ್ಮಾ ಗಾಂಧಿಜಿಯವರು ಧಾರ್ಮಿಕವಲ್ಲದ ರೀತಿಯಲ್ಲಿ ತನ್ನ ದೇಶವು ಉನ್ನತಿಯನ್ನು ಹೊಂದುವುದಕ್ಕಿಂತ ಹಾಳಾಗಿ ಹೋದರೂ ಒಳ್ಳೆಯದು ಎಂಬಷ್ಟು ದೃಢಸಂಕಲ್ಪದವರಾಗಿರುತ್ತಾರೆ ಎಂದರು.

ಸರ್ ರಾಧಾಕೃಷ್ಣನವರ ಭಾಷಣದ ಸಾರಾಂಶವು ಹೀಗಿತ್ತು—ನಾನು ಮಹಾತ್ಮಾಜಿಯವರ ಕುರಿತು ಮಾತನಾಡಲು ಅಭಿಲಾಷೆ ಪಡುವುದು ಏಕೆಂದರೆ, ಆ ಮಹಾಯುಗಪುರುಷರು ಈಗಾಗಲೇ ತನ್ನ ಉದಾತ್ತವಾದ ಬಾಳುವೆಯಲ್ಲಿ ಎಪ್ಪತ್ತು ವರ್ಷಗಳ ಗಡಿಗೆ ಬಂದು ಮುಟ್ಟಿದ ಚಿರಾಯುಗಳಾಗಿದ್ದಾರೆ. ಇದೇ ಜಗತ್ತಿಗೇ ಮಹಾತ್ಮಾ ಗಾಂಧಿಯವರ ಪರಿಚಯವಿದೆ ಆದರೆ ಜಗತ್ತು ಅವರನ್ನು ಅರಿತದ್ದು ಹಿಂದುದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ರಾಜಕೀಯ ಧುರೀಣನೆಂದು, ಆದರೆ ಆ ವ್ಯಕ್ತಿಯೇ ತನ್ನ ಕುರಿತು ನಾನು ರಾಜಕೀಯದಲ್ಲಿ ಕೈಹಾಕುತ್ತಿರುವೆನಾದರೂ ನಾನು ಸದಾ ಧರ್ಮದಲ್ಲಿ ಅತ್ಯಾಸಕ್ತನಾದ ಧಾರ್ಮಿಕನಾಗಿರುತ್ತೇನೆ' ಎಂದು ಹೇಳಿಕೊಂಡಿರುತ್ತಾರೆ.

"ಜಗತ್ತಿನಲ್ಲಿ ಸಾಮಾನ್ಯವಾಗಿ ಎಲ್ಲರೂ ರಾಜಕೀಯವನ್ನೂ ಧಾರ್ಮಿಕವನ್ನೂ ಭಿನ್ನಭಿನ್ನ ಕಾರ್ಯಸ್ಥಳಗಳನ್ನಾಗಿ ವಿಂಗಡಿಸಿದ್ದಾರೆ ಹಾಗೆ ವಿಂಗಡಿಸಿರುವುದಕ್ಕೆ ಆ ಎರಡು ಕಾರ್ಯಗಳ ನಿಜವಾದ ಅರಿವು ಅವರಿಗೆ ಆಗದಿರುವುದೇ ಕಾರಣವಲ್ಲದೆ ಬೇರಲ್ಲ. ಹೆಚ್ಚಾಗಿ ರಾಜನೀತಿಜ್ಞರೆಂದು ಪ್ರಸಿದ್ಧರಾದವರ ತತ್ವಗಳು ಧಾರ್ಮಿಕತತ್ವಕ್ಕೆ ಅಬದ್ಧವಾಗಿರುತ್ತವೆ. ಆದರೆ ಇದು ಗಾಂಧಿಜಿಯವರ ವಿಷಯದಲ್ಲಿ ಒಂದು ನಿರ್ಣಯಕ್ಕೆ ಬಂದಂತಾಗಿದೆ. ಅವರು ತನ್ನ ಜೀವಮಾನದಲ್ಲಿ ತನ್ನ ಆದರ್ಶನೀತಿಯಿಂದ ಪ್ರಯೋಗವನ್ನು ಕಡಿಮೆಯಾಗಿ ಭಾವಿಸದೆ, ಆದರ್ಶಕ್ಕೂ ಪ್ರಯೋಗಕ್ಕೂ ಒಂದೇ ಮಟ್ಟವನ್ನು ತರಲು ಪ್ರಯತ್ನ ಮಾಡಿದ ಸಾಹಸಿಗಳಾಗಿರುತ್ತಾರೆ. ಆ ತಮ್ಮ ಸಾಹಸದಲ್ಲಿ ಅವರು ವಿಜಯವನ್ನು ಕೂಡಾ ಹೊಂದಿರುತ್ತಾರೆ.

"ಇಂದು ಇದೀ ಪ್ರಪಂಚದ ಅರೆವಾಸಿ ಜನತೆಯೇ ನಾಸ್ತಿಕ ಮನೋವೃತ್ತಿಯುದಾಗಿದೆ. ಧರ್ಮವೆಂದಾಗ ಉರಿದುಬೀಳುತ್ತಾರೆ ದೇವಾಲಯ, ಪೂಜೆ, ಪುರೋಹಿತರನ್ನು ನಿರ್ನಾಮ ಮಾಡಿಸುವುದರಲ್ಲಿ ರಾಷ್ಟ್ರದ ನಾಗರೀಕತೆಯಿದೆಯೆಂದು ತಿಳಿಯುವ ಕಾಲವಿದು. ಅಸ್ತಿಕರನ್ನು ಕಂಡರೆ ಪಾಪಿಗಳನ್ನು ಕಂಡಂತೆ ಬಹಿಷ್ಕರಿಸುವ ಮಂದಿ ಹೆಚ್ಚುತ್ತಿದ್ದಾರೆ ಆದರೆ ಈ ಯಾವ ಅಜ್ಞಾನದ, ಅಪಪ್ರಚಾರವೇ ಆದರೂ ಮಾನವ ಹೃದಯದಿಂದ ದೈವಭಕ್ತಿಯನ್ನು ಇಲ್ಲದೆ ಮಾಡಲು ಸಾಧ್ಯವಿಲ್ಲ. ಮಾನವನು ಜಗತ್ತಿನ ಇತರ ಜೀವಕೋಟಿಗಳಿಂದ ಭಿನ್ನನಾಗಿದ್ದು, ಆತನಲ್ಲಿ ವಿಚಾರಶಕ್ತಿಯು ಹೆಚ್ಚಿರುವ ಕಾರಣ ಆತನು ವಿಶ್ವದ ಸತ್ಯವನ್ನು ಕಂಡು ಹುಡುಕಲು ಸಹಜವಾಗಿಯೇ ಆಸಕ್ತನಾಗಿ, ಕಟ್ಟಕಡೆಗೆ ಸಮಸ್ಯೆಯ ಪರಿಹಾರಕ್ಕಾಗಿ ದೈವಶಕ್ತಿಯಲ್ಲಿ ಶರಣಾಗುತ್ತಾನೆ. ಮಾನವನು ಇತರ ಪ್ರಾಣಿಜಾಲಗಳಿಗಿಂತ ಭಿನ್ನನಾದ ಕಾರಣವೇ, ಇತರ ಪ್ರಾಣಿಗಳ ವಿಚಾರಕ್ಕೆ ಬರದೇ ಇರುವ ಬುದ್ಧನ ವಿಚಾರದಂತಹ, ರೋಗ, ಮರಣ, ಮುದಿತನ, ಸಂಕಷ್ಟಗಳು ಯಾವಾಗ ಕೊನೆಗಾಣುವುವು ಎಂಬ ವಿಚಾರವು ಆತನಲ್ಲಿ ಸಹಜವಾಗಿಯೂ ಹುಟ್ಟುತ್ತದೆ ಈ ಬೋಧೆಯೇ ಅವನನ್ನು ಪ್ರತ್ಯೇಕವಾಗಿರಿಸಿ, ಆತನಲ್ಲಿ ಮರಣಭೀತಿ



ಯನ್ನು ಹುಟ್ಟಿಸುತ್ತದೆ. ಹಾಗಾಗಿ ಆತನು ತನ್ನ ಆತ್ಮವಿಚಾರದಿಂದ ಗೊಂದಲಗೊಳ್ಳುತ್ತಾನೆ, ತನ್ನ ವಿಚಾರಸಾಮರ್ಥ್ಯದಿಂದ ನೆಲೆಯಿಲ್ಲದವನಾಗುತ್ತಾನೆ ಹೀಗಾಗಿ ಆತನು ಈ ತನ್ನ ಉನ್ನತದ ನೆಲೆಯಲ್ಲಿ ಒಂದು ರೀತಿಯ ನಿಶ್ಚಿತವಾದ ನಿರ್ಣಯಕ್ಕೆ ಬರದೆ ನಿರ್ವಾಹವಿರುವುದಿಲ್ಲ.

ಎಲ್ಲಾ ಧಾರ್ಮಿಕ ಗ್ರಂಥಗಳೂ ಹೇಳುವುದೇನೆಂದರೆ ನಿಜವಾದ ಧರ್ಮಬುದ್ಧಿಯುಳ್ಳ ಮಾನವನು ಸಂಪೂರ್ಣ ನಿರ್ಭೀತನಾಗಿರುತ್ತಾನೆಯೆಂದು ಗಾಂಧಿಜಿಯವರಲ್ಲಿ ಮೊದಲನೆಯದಾಗಿ ನಮಗೆ ಎದ್ದುಕಾಣುವ ಗುಣವೆಂದರೆ ಈ ರೀತಿಯ ವಿಶ್ವವಿಶಾಲವಾದ ಸ್ಥೈರ್ಯ ಯಾವ ದುರಂತ ಸಂಕಷ್ಟಗಳಿಗೂ ಅವರಲ್ಲಿ ಸತ್ಯಕ್ಕಾಗಿ ಧರ್ಮಕ್ಕಾಗಿ ಜಗ್ಗದ ಧೈರ್ಯವಿರುತ್ತದೆ. ಹೀಗಾಗಿ ಅವರು ಸರ್ವಮತಗಳಲ್ಲಿಯೂ ಏಕಸತ್ಯವನ್ನೇ ಕಂಡುಕೊಂಡಿದ್ದಾರೆ. ಅವರೇ ಒಮ್ಮೆ ಹೇಳಿದ್ದಾರೆ "ಇನ್ನೊಂದು ಧರ್ಮದ ಕುರಿತು ಅಸಹನೆಯನ್ನು ತಾಳುವುದು ಧರ್ಮಕ್ಕೆ ವಿರುದ್ಧವಾದದ್ದು ಎಂದು ಯಾವನು ಯಾವುದೇ ಧರ್ಮವನ್ನು ದೂಷಿಸುತ್ತಾನೋ ಆತನು ಅಧಾರ್ಮಿಕನಾಗಿರುವನು. ಗಾಂಧಿಜಿಯವರು ಹಿಂದೂಧರ್ಮದಲ್ಲಿ ಜನ್ಮತಾಳಿದರೂ ಅವರ ಬೋಧನೆಯು ಇಂದಿನ ಧಾರ್ಮಿಕ ತತ್ವವು ಅತ್ಯುತ್ಕರ್ಷವಾದ ಒಂದು ಪರಮೋನ್ನತ ಸ್ಥಾನಕ್ಕೆ ಏರುತ್ತದೆ. ಹಾಗಾಗಿ ಇದೀ ವಿಶ್ವದಲ್ಲಿ ನೂತನವಾಗಿ ಕಾಣುವಂತಹ ಅದ್ಭುತ ತತ್ವಗಳು ಅವರಲ್ಲಿ ಹಲವಿವೆ.

"ನಾವು ನಮ್ಮ ಜೀವನದಲ್ಲಿ ನಮ್ಮ ಬಾಳುವೆಯ ಅಂತಿಮಧ್ಯೇಯವನ್ನು ಹೇಗೆ ಹೊಂದಬಹುದು? ಇದಕ್ಕೆ ಗಾಂಧಿಜಿಯವರು ಸ್ಪಷ್ಟವಾದ ಉತ್ತರಕೊಟ್ಟಿದ್ದಾರೆ — ಸ್ವಾರ್ಥವನ್ನು ಸಂಪೂರ್ಣಬಿಟ್ಟು, ಹಿಂಸೆಯನ್ನು ಮಾಡದೆ, ಸತ್ಯದ ದಾರಿಯಲ್ಲಿ ಮುಂದುವರಿದರೆ ನಾವು ಖಂಡಿತವಾಗಿಯೂ ನಮ್ಮ ಜೀವನದ ಧ್ಯೇಯವನ್ನು ಮುಟ್ಟುವೆವು ಆದರೆ ಹಿಂದೂಧರ್ಮವೇ ಇದನ್ನು ಈ ರೀತಿ ಹೇಳಿದೆ "ಪ್ರತಿಯೊಬ್ಬನೂ ಸನ್ಯಾಸಿಯಾಗಿಯೇ ಜೀವನ್ಮುಕ್ತನಾಗಬೇಕೆಂದಿರುವುದಿಲ್ಲ. ನಿನ್ನ ಕಾಶಿಯು ವಿಶಾಲವಿಶ್ವದಲ್ಲಿ ಎಲ್ಲಿಯೂ ಇದೆ" ಎಂದ. ಗಾಂಧಿಜಿಯವರು ಇದೇ ತತ್ವದ ಸತ್ಯವನ್ನು ಆಚರಣೆಯ ಮೂಲಕ ಮಾಡಿ ತೋರಿಸಿ ಜಗತ್ತಿಗೆ ಸ್ಪಷ್ಟಗೊಳಿಸಿದರು.

"ಗಾಂಧಿಜಿಯವರು ತನ್ನ ಜೀವಮಾನದಲ್ಲಿ ಮಾಡಿದ ಪ್ರತಿಯೊಂದು ಕೆಲಸವೂ, ಭೂಮಿಯಲ್ಲಿ ದೇವಾಂಶದಿಂದ ಬಂದು ನೆಲಸಿರುವ ಮಿಲಿಯಾಂತರ ಮಾನವಜೀವಿಗಳ ಸಂಕಷ್ಟಗಳನ್ನು ಪರಿಹರಿಸುವ ಪವಿತ್ರಕಾರ್ಯವಲ್ಲದೆ ಬೇರೇನೂ ಇರುವುದಿಲ್ಲ ಆಫ್ರಿಕದಲ್ಲಿಯೂ ಕೂಡಾ ಅವರು ದೇವಾಲಯ ಮತ್ತು ಸರಕಾರವು ಜನಸಮ್ಮತವಲ್ಲದ ರೀತಿಯಲ್ಲಿ ಜನರನ್ನು ನೋಡುತ್ತಿರುವುದನ್ನು ತಡೆಯಲು ಆಂದೋಲನವನ್ನು ಆರಂಭಿಸಿದರು ಹಿಂದೂ ದೇಶದಲ್ಲಿಯೂ ಕೂಡಾ ಅವರು ಅಸ್ಪೃಶ್ಯತೆಯ ಕಳಂಕವನ್ನು ಹೋಗಲಾಡಿಸುವ ಶುದ್ಧ ಧರ್ಮತತ್ವವನ್ನು ಜನತೆಯ ಮುಂದಿಟ್ಟು ಕೆಲಸಮಾಡಿದರು. ಮಿಲಿಯಾಂತರ ಮಂದಿ ಭಾರತೀಯರ ದಾಸ್ಯಜೀವನಕ್ಕೂ ದಾರಿದ್ರ್ಯಕ್ಕೂ ಕಾರಣವನ್ನು ಮಾಡಿದ ಬ್ರಿಟಿಷ್ ಸರಕಾರವನ್ನು ಅವರು ಇದಿರಿಸಿದರು, ಆದರೆ ಇವರು ತಮ್ಮ ಪ್ರತಿಯೊಂದು ಪ್ರತಿಭಟನೆಯಲ್ಲಿಯೂ ತಮ್ಮ ಇದಿರಾಳಿಗಳನ್ನು ದ್ವೇಷಿಸಲಿಲ್ಲ, ಅವರು ಆ ಉದ್ದೇಶಕ್ಕಾಗಿ ಅವರನ್ನು ಎದುರಿಸುವುದು ತಮ್ಮ ಕರ್ತವ್ಯವೆಂದು ತಿಳಿದು ಕೆಲಸಮಾಡಿದರು.

"ತಮ್ಮ ಎದುರಾಳಿಗಳು ಸಂಕಷ್ಟದಲ್ಲಿದ್ದಾಗ ಆ ಸಮಯವನ್ನು ತಮ್ಮ ಕಾರ್ಯಸಾಧನೆಗಾಗಿ ಉಪಯೋಗಿಸಲು ಅವರು ಸನ್ನದ್ಧರಾಗಲಿಲ್ಲ. ಮಹಾಯುದ್ಧವು ಆರಂಭವಾದಾಗ ಅವರು ಆಂದೋಲನವನ್ನು ನಿಲ್ಲಿಸಿದರು. ಅಮೃತಸರದ ದುರಂತಘೋರಕೃತ್ಯ ನಡೆದಾಗಲೂ ಕೂಡಾ ಅವರು ಅಲ್ಲಿ ಅದನ್ನು ತಗ್ಗಿಸಿ ಜನತೆಯ ಉದ್ರೇಕವನ್ನು ಶಾಂತಗೊಳಿಸಿದರು ಅವರು ಒಮ್ಮೆ ಬ್ರಿಟಿಷರೊಡನೆ ಸಮಾನತೆಯಿಂದ ಇರುವವನಲ್ಲದೆ, ಅವರ ಅಧೀನತೆಯಿಂದ ಇರಲಾರೆನೆಂದು ಹೇಳಿರುವರು ಇಂದು ಸ್ವಾತಂತ್ರ್ಯದಾಹದಿಂದ ಸಹನೆಯಿಲ್ಲದ ಭಾರತದ ಹಾಗೂ ಬ್ರಿಟನ ಮಧ್ಯದಲ್ಲಿ ನಿಂತಿರುವ ಶಾಂತ ಹಾಗೂ ಧಾರ್ಮಿಕ ಮೂರ್ತಿ ಅವರು.

ಅವರ ಆ ಮಹಾವ್ಯಕ್ತಿತ್ವದ ತಡೆಯಿಲ್ಲದಿದ್ದರೆ ಯಾವ ಕ್ರಾಂತಿಯು ಎಂತಹ ಜ್ವಾಲಾಮುಖಿಯು ಹುಟ್ಟಿ ಏನು ಅನಾಹುತವಾಗುತ್ತಿತ್ತೋ ಯಾರು ಬಲ್ಲರು?

"ಈಗ ಗಾಂಧಿಜಿಯವರ ತತ್ವಗಳನ್ನು ಜನತೆಯು ತಿಳಿದು ನಾವು ಪ್ರಯೋಗಕ್ಕೆ ತರಲಿಲ್ಲವೆಂಬ ವಿಷಯದಲ್ಲಿ ನಾನು ಬಹಳವಾಗಿ ವಿಷಾದಗೊಂಡಿದ್ದೇನೆ ಅವರನ್ನು ಅವರ ಸತ್ಯ, ಅಹಿಂಸಾತತ್ವಗಳಿಗಾಗಿ ಟೀಕಿಸುವರಿದ್ದಾರೆ ಆದರೆ ಈ ಸತ್ಯಅಹಿಂಸೆಗಳೇ ಎಲ್ಲಾ ರೀತಿಯ ಆಂದೋಲನಕ್ಕಿಂತಲೂ ಭಯಂಕರ ಪರಿಣಾಮವನ್ನು ಹುಟ್ಟಿಸಿರುವುದು ಪ್ರತ್ಯಕ್ಷವಾಗಿರುತ್ತದೆ ಗಾಂಧಿಜಿಯವರೇ 'ಒಮ್ಮೆ ಹೇಡಿತನಕ್ಕಿಂತ ಹಿಂಸೆಯು ಚಳವಳವೂ ಲೇಸು, ಆದರೆ ಹಿಂಸೆಗಿಂತ ಅಹಿಂಸೆಯೇ ನ್ಯಾಯವಾದ ರೀತಿಯಾಗಿರುತ್ತದೆ ಎಂದಿರುವರು. ೧೯೧೪ರಂತೆ, ಮಹಾಯುದ್ಧವು ಕಳೆದು ೨೦ ವರ್ಷಗಳ ಮೇಲೆ ಇಂದು ಕ್ರೈಸ್ತರು ಇಲ್ಲಿ ಅಂತಹದೇ ಸಮಸ್ಯೆಯನ್ನು ಇದಿರಿಸಬೇಕಾಗಿ ಬಂದಿದೆ ನಾಜಿಗಳು ತರಬೇಕೆ ಹೊಂದಿದಂತೆ ಇವರೆಲ್ಲರೂ ರಾಷ್ಟ್ರಕ್ಕಾಗಿ ಪಿಸುಗಟ್ಟದೆ ಜೀವಧಾರಿಯೋಧರಿಯಲು ಸಿದ್ಧರಾಗಿರುವರೇ? ಅಥವಾ ಸಶಸ್ತ್ರಹಿಂಸೆಯನ್ನು ಅವರು ತಿರಸ್ಕರಿಸುವರೇ? ಗಾಂಧಿಜಿಯವರ ಅಭಿಮತದಿಂದ ಮಾನವಕೋಟಿಯು ತನ್ನ ಹೃದಯದ ಬೆಲೆಯನ್ನು ನೀಗಾಡಿಕೊಂಡು ನಾಗರಿಕತೆಯನ್ನು ಹೊಂದುವುದರಲ್ಲಿ ಏನೇನೂ ಬೆಲೆಯಿಲ್ಲವೆಂದು ಅಭಿಪ್ರಾಯವಿದೆ. ಬಲಾತ್ಕಾರಶಕ್ತಿಯಿಂದ ಉನ್ನತಿಗೇರಿದ ಅನೇಕ ರಾಜ್ಯಸಾಮ್ರಾಜ್ಯಗಳು ತಲೆಕೆಳಗಾದುದನ್ನು ಭಾರತವು ಕಣ್ಣಾರೆ ಕಂಡಿದೆ ಸತ್ಯ ಮತ್ತು ಅಹಿಂಸೆಗಾಗಿ ಆತ್ಮಾರ್ಪಣೆ ಮಾಡಿದ ಮಹಾತ್ಮಾಜಿಯವರ ಜೀವವು ಸ್ಥಿರವಾದ ನೆಲೆಗೆ ಮುಟ್ಟಿದುದರ ಕಾರಣವೇನೆಂದರೆ ಅವರು ಕರ್ಮಯೋಗಿಯಾಗಿರುವರು. ಜಗತ್ತು ಆರಂಭವಾದಂದಿನಿಂದ ಯಾವ ಪುರುಷನೂ ಗಾಂಧಿಜಿಯವರ ತತ್ವಗಳಿಗಿಂತ ಉತ್ಕೃಷ್ಟ ತತ್ವಗಳನ್ನು ಜಗತ್ತಿಗೆ ಸಾರಿರುವುದಿಲ್ಲ."

ಹೊಟ್ಟೆ ವ್ರಣ.

ಬಹಳ ಸಮಯವು ಈಗ ಯಾವುದನ್ನೂ ತಿನ್ನುತ್ತಿದ್ದಾಳೆ.

ಮೆಕ್ಲಿನ್‌ನವರಿಗೆ ಬರುತ್ತಿರುವ ಶಿಫಾರಸು ಪತ್ರಗಳೇನು ಅರೆಮನಸ್ಸಿನಿಂದ ಬರೆದವುಗಳಲ್ಲ. ಈ ಪತ್ರಗಳು ಬಹಳ ಸಮಯಹೊಟ್ಟೆಪೀಡೆಯನ್ನನುಭವಿಸಿದವುಗಳನ್ನು ಗುಣಪಡಿಸಿದ ಒಂದೇ ಒಂದು ಉಪಾಯದ ಕುರಿತು ಜನರು ಈ ಪತ್ರಗಳನ್ನು ಬರೆದಿರುವರು ಕೆಳಗೆ ಒಂದು ದೃಷ್ಟಾಂತ ಕೊಡಲಾಗಿದೆ

ಪ್ರತಿ ಔಷಧಿಯನ್ನು ಪ್ರಯೋಗಿಸಿದ್ದಾಯಿತು

'ಹೊಟ್ಟೆ ವ್ರಣದ ವೇದನೆಯಿಂದ ನಾನು ಅನೇಕ ವರ್ಷಗಳ ಸಮಯ ಸಂಕಟವನ್ನನುಭವಿಸಿದೆನು. ಒಂದಾನೊಂದು ಸಮಯ ನಾನು ಆಸ್ಪತ್ರೆಯಲ್ಲಿದ್ದೆನು. ಕೆಲಸಮಯ ಮಟ್ಟಿಗೆ ನನಗೆ ಗುಣವಾಯಿತು. ಆದರೆ ಸ್ವಲ್ಪ ಸಮಯದ ನಂತರ ನೋವು ಮತ್ತೊಮ್ಮೆ ಕಾಣಿಸಿಕೊಂಡಿತು. ಉತ್ತಮ ತರದ ಊಟವನ್ನುಣ್ಣಲು ನನಗೆ ಅಸಾಧ್ಯವಾಯಿತು ಹಾಲು ಕೂಡ ನನಗೆ ಜೀರ್ಣವಾಗುತ್ತಿರಲಿಲ್ಲ. ಮೆಕ್ಲಿನ್ ಬ್ರಾಂಡ್-ಸ್ಟಮಕ್ ಪೌಡರನ್ನು ಉಪಯೋಗಿಸುವ ತನಕ ನಾನು ಪ್ರತಿಯೊಂದು ಔಷಧಿಯನ್ನು ಪ್ರಯೋಗಿಸಿದೆನು ಒಂದೇ ಒಂದು ಬಾಟಲಿಯ ಉಪಯೋಗದ ನಂತರ ನಾನು ಸಂಪೂರ್ಣ ವಾಸಿಯಾದೆನು. ಈಗ ಏನನ್ನಾದರೂ ತಿನ್ನಲು ನನಗೆ ಸಾಧ್ಯವಾಗುತ್ತದೆ. ಎಲ್ಲರೂ ಅದನ್ನು ಉಪಯೋಗಿಸುವಂತೆ ನಾನು ಈ ಮೂಲಕ ಶಿಫಾರಸನ್ನು ಮಾಡುತ್ತೇನೆ.'—ಮಿಸೆಸ್ M. W.

ನಿಮ್ಮ ಹೊಟ್ಟೆನೋವು ಕೂಡ ಮಾಯವಾಗುವುದು

ಅಷ್ಟು ತ್ವರೆಯಾಗಿ ಖಾತ್ರಿಯಾದ ಮೆಕ್ಲಿನ್ ಬ್ರಾಂಡ್ ಸ್ಟಮಕ್ ಪೌಡರನ್ನು ಉಪಯೋಗಿಸಿದರೆ, ಅದು ಖಾತ್ರಿಯಾಗಿರುವಂತೆ ಖಂಡಿತ ಮಾಡಿಕೊಳ್ಳಿರಿ

ಅನೇಕ ನಕಲಿ ಮಾಲುಗಳು ಇರುವವು ಎಲೆಕ್ಸ್. ಸಿ. ಮೆಕ್ಲಿನ್ ಎಂಬ ಸಹಿಯು ಇರುವಂತೆ ನೀವು ನೋಡದೆ ಕೊಂಡರೆ ನಿಮಗೆ ಖಾತ್ರಿ ಮಾಲು ದೊರಕುವುದು

ಕೆಂಪು ಮುದ್ರೆಯ ಪೆಟ್ಟಿಗೆಯನ್ನು ಪಡೆಕೊಳ್ಳಲು ಮರೆಯದಿರಿ!

ಮೆಕ್ಲಿನ್ ಬ್ರಾಂಡ್ ಸ್ಟಮಕ್ ಪೌಡರ್

ಈ ಸಹಿಗಾಗಿ ನೋಡಿರಿ

Alex. C. Maclean

ಎಲ್ಲಾ ದವಾಖಾನೆಗಳಲ್ಲಿ ಮತ್ತು ಸ್ಟೋರ್ಸುಗಳಲ್ಲಿ ಮಾತ್ರ ಈ ಪುಡಿ ರೂಪದಲ್ಲಿ ಮಾರಾಟವಾಗುತ್ತೆ. ಟಿಕ್ಕಿಯಾಗಿ ಮಾರಾಟವಾಗುವುದಿಲ್ಲ.

779

7 O'CLOCK

ಲೋಹದ ರೇಜರಿಗೆ ಆಣೆ 12

ಖಾಲಿ ರೇಜರಿಗೆ ರೂ 10

ಸೆವೆನ್ ಓಕ್ಲೋಕ್ ಸೆಟ್ಟಿನ ಈ ಮಾರಾಟವನ್ನು ಸಂಗಟ್ಟಿದ ಸೆಟ್ಟುಗಳು ಬಹಳ ಕಡಿಮೆ. ಇದರಲ್ಲಿ ಒಂದು ಸೆವೆನ್ ಓ ಕ್ಲೋಕ್ ಲೋಹದ ರೇಜರು ಮತ್ತು ಎರಡು ಸೆವೆನ್ ಓ ಕ್ಲೋಕ್ ಬ್ಲೇಡುಗಳು ಒಂದು ಅಚ್ಚುಕಟ್ಟಾದ ಪೆಟ್ಟಿಗೆಯಲ್ಲಿದ್ದು ಆಶ್ಚರ್ಯಕರವಾದ ಬರೇ 12 ಆಣೆಗೆ ಮಾರಲ್ಪಡುತ್ತದೆ

10 ಸೆವೆನ್ ಓಕ್ಲೋಕ್ ಬ್ಲೇಡುಗಳಿಗೆ ರೂ. 8

ನಗರದ ನವ ನಾಯಕರು

ಲೇಖಕರ್: ಶಿವರಾಮ ಕಾರಂತ

೩. ಮಿಸೆಸ್ ಗ್ರೇಸಿ ಫರ್ಟಾಡೊ

ಜಾನಕಿ ರಾಮಚಂದ್ರಯ್ಯನವರಿಗೂ, ಮಿಸೆಸ್ ಗ್ರೇಸಿ ಫರ್ಟಾಡೋರವರಿಗೂ ಜೀವಕ್ಕೆ ಜೀವ ಎಂದು ಊರವರು ಹೇಳುತ್ತಾರೆ. ನೀವು ಜಾನಕಿರಾಮಚಂದ್ರಯ್ಯನವರನ್ನು ಕೇಳಿದರೆ ಅವರ ಗೆಳತಿಯ ವಿಚಾರದಲ್ಲಿ 'ಅಬ್ಬಾ, She is a public nuisance no 1' ಎನ್ನುತ್ತಾರೆ. ಹಾಗಿದ್ದರೂ ಅವರು ಇವರು ಜತೆಯಲ್ಲಿ ಓಡಾಡುತ್ತಲೇ ಇರುತ್ತಾರೆ. ಮಿಸೆಸ್ ಫರ್ಟಾಡೋ ನಾರ್ದರ್ನ ಲೇಡಿಸ್ ಕ್ಲಬ್ಬಿನ ಕಾರ್ಯದರ್ಶಿ. ಅವಳಂಥ 'ಬಿಸ್ಸಿ ಬಾಡಿ' ಯಾರೂ ಇಲ್ಲವಂತೆ. ಇದು ಅವರೇ ತಮ್ಮ ವಿಷಯದಲ್ಲಿ ಪಡುತ್ತಿರುವ ಅಭಿಪ್ರಾಯ. ಒಂದು ಗಳಿಗೆಯೂ ಅವರು ಮನೆಯಲ್ಲಿದ್ದು ಗೊತ್ತಿಲ್ಲ. ಅವರಿಗೀಗ ಐವತ್ತೈದರ ಒಳಗೆ ವಯಸ್ಸಿರಬಹುದು. ಆದರೆ ನೋಟಕ್ಕೆ ಇಪ್ಪತ್ತು ವಯಸ್ಸಿಗೆ ಎಂದೂ ಮೀರಿರಲಾರದ. ಈ ಹೊತ್ತು ಮಂಗಳೂರಿನ ಮಹಿಳೆಯರಲ್ಲಿ ಅವರಷ್ಟು ಮುಂದುವರಿದವರು ಯಾರೂ ಇಲ್ಲ ವೆಂದು—ಜಾನಕಿರಾಮಚಂದ್ರಯ್ಯನವರು ಅವರೆದುರಿಗೆ ಹೇಳುತ್ತಾರೆ. ಅದು ತೀರ ನಿಜ. [illegible]ರು ಹೋಗುವ ಹಾದಿಯಲ್ಲಿ ಗಂಡಸರು (ಮಂಗಳೂರಿನ) ಹೋಗುವುದಕ್ಕೂ ಹಿಂಜರಿಯುತ್ತಾರೆ. [illegible] ತೊಡುಗೆಯಲ್ಲೋ—ದಿನಕ್ಕೆ ಎಂಟು ಬದಲಾವಣೆಯಾದರೂ ತೃಪ್ತಿಯಿಲ್ಲ. ಸಿಂಗರಿಸುವಿಕೆಯಲ್ಲೋ—ಗಳಿಗೆಗೆ ಒಂದೊಂದು [illegible] ಕಿವಿಗೆ ಸ್ವಾಕಲು [illegible] ಬಿಟ್ಟು ಒಂಟಿ [illegible], ಇನ್ನೊಂದು ಗಳಿಗೆಗೆ ತೊಂಬಳಕಾಯಿ ಗಾತ್ರದ ಹರಳು ತೂಗುತ್ತಾರೆ. ಮಗದೊಂದು ಗಳಿಗೆಗೆ—ಗಿಳಿ ಪಂಜರದಂತ ಚಿನ್ನದ ಗಂಟನ್ನು ತೊಗಸಿಕೊಂಡು ಬರುತ್ತಾರೆ. ಅವರ ಕಿವಿಗೆ ಏನು [illegible] ನೋಡಿದವರು [illegible]

[illegible]

ಅವರ ಹಿಂದೊಂದರ ಬೆಸಗಳಿಗೆ ಹೋಗುವಾಗ ಸೀರೆಯ ನೆರಿ, ಸೃಜಾತಿಯನೆ [illegible] ದಾದಿಯನ್ನಾಗಲೀ [illegible] ನೋಡುತ್ತಾರೆ. ಇಪ್ಪತ್ತ [illegible] ಮಹಿಳೆಯರಲ್ಲಿ ನಾಚಿ [illegible] ಮಾಡುವರು. ಅವರದ್ದೊಂದು 'If you go to Rome ಎಂಬಂತೆ ಅನ್ನೋಕ್ಕೊಂದ When Rome goes to you' ಎಂದರೂ ಸರಿ—ಅವರ ಹಾಗೆ.

ಬೀದಿಯ ಮನೆ ಮಿಸೆಸ್ ಗ್ರೇಸಿಯವರಿಗೆ (ಗ್ರೇಸಿಯವರ ಕನ್ನಡದಲ್ಲಿ) ಸಂಪತ್ತು ವಿಕ್ತು ವಿಲಂದು ಎರಡೂ ಇಲ್ಲದೆ. ಅವರ ಯಜಮಾನರು ಪೇಟೆಯ ಹತ್ತಿರ ಕಾಫಿಯ ಪೇಟೆಯ ಕೆಲಸ ನೋಡುತ್ತಾರೆ. ಅಲ್ಲಿನ [illegible] ಗ್ರೇಸಿ ಫರ್ಟಾಡರಿಗೆ ಒಡಿಯುವುದಿಲ್ಲ. ಹೀಗಾಗಿ ಅವರು ಆರು ವರ್ಷಕ್ಕೊಮ್ಮೆ ತಮ್ಮ ಗಂಡನಮನೆ ಇಪ್ಪತ್ತನ್ನು ಕಾಣುವುದಿಲ್ಲ. ಹಾಗೆ ಮಿ| ಫರ್ಟಾಡರೇ ಆರು ತಿಂಗಳಿಗೋ, ಮೂರು ತಿಂಗಳಿಗೋ ಮಂಗಳೂರಿಗೆ ಬರುತ್ತಾರೆ. ಮಂಗಳೂರಿನಲ್ಲಿ ಕಾಫಿ ವಹಿವಾಟಿನ ಕಾರ್ಖಾನೆಗಳಲ್ಲಿ ಅವರ ಇಲಾಖೆಯಿದೆ. ಅದರ ಗಂಡ ಒರು ಪತ್ತೆ ರೆಂಬ ಕಾಗದದಿಂದ ಹೆಂಗಸು ಫರ್ಟಾಡೋ ಅಲ್ಲ. ಅವರ ಸಾರ್ವಜನಿಕ ಕೆಲಸಗಳು [illegible] ಒಬ್ಬರ ಗಂಡನೂ ಪಕ್ಷದ ವಾರಕ್ಕೆ ಮೊದಲೇ ನೀಲಗಿರಿಗೆ ಹೊರಟರು. ಅಲ್ಲಿಂದ ತಮ್ಮ ಸ್ನೇಹಿತರನ್ನು ಕಾಡಿ ಹೂವಿನ ಬಾಣಗಳನ್ನು ಸಜೀವ ಮಂಗಳೂರಿಗೆ ಕಳಿಸುತ್ತಾರೆ. ಕೆಲವು ಬಾರಿ ಅವರ ಹೆಸರಿನ ಪುಂಡ್ರಿಕೆ ಧರಿಸಿ, ಥೈಸ್ಟ್ ಕ್ಲಬ್ಬಿನಿಂದ ನೇರಾಗಿ ಗವರ್ನರ ಎಂಟು ಕಾಲೇಜು ಗೇಟ—ಅವುಗಳ ಸ್ಪರ್ಧೆಗೆ ಬರಲೂ ಬಹುದು.

ಯೂನ ಪ್ಲವರ್ ಶೋವಿನಲ್ಲೂ ಅವರಿಗೆ ಬಹುಮಾನ ತಪ್ಪಿದ್ದಿಲ್ಲ. ಒಂದು ವರ್ಷ ತಮ್ಮ ಮನೆಯಲ್ಲಿ ಮೊಹನತ್ತಿನಿಂದ ಕೆಲವು ಗಿಡ ಬೆಳೆಯಿಸಿ ಸ್ಪರ್ಧೆಗೆ ತಂದರು. ಅದು ಪ್ರಥಮ ವರ್ಷ. ಆ ವರ್ಷ ಅವರ ಜಿಡ್ಡಿಗಳು ಇನಾಮು ಕೊಡಲೇ ಇಲ್ಲ. ಪ್ಲವರ್ ಶೋವಿನ ಮೂರು ದಿನಗಳಲ್ಲಿ ಪ್ರತಿ ನಂಬಿಕ ಸ್ನೇಹಿತರನ್ನು ತಂದು ತಮ್ಮ ಗಿಡಕ್ಕೆ ಮೂರು ಸುತ್ತು ತಿರುಗಿಸಿ 'ಈ ಜಡ್ಜಿಗಳ ಪಕ್ಷಪಾತ ನೋಡಿ' ಎಂದು ಸಾರಿದರು. ಮರುವರ್ಷದಿಂದ ಅವರ ಗಿಡಗಳೂ ಸುಧಾರಿಸಿದ್ದು ಇನಾಮು ತಪ್ಪದೆ ಬರತೊಡಗಿತು. ಜಾನಕಿರಾಮಚಂದ್ರಯ್ಯನವರೂ ಹೂವಿನ ಸ್ಪರ್ಧೆಗೆ ಮುಂದಾಗಿ ಅವರಿಗೆ ಅಲ್ಲಿ ಇನಾಮು ಸಿಕ್ಕಿದುದೂ ಇಲ್ಲ. ಜಡ್ಜಿಗಳ ಕಮಿಟಿಯಲ್ಲಿ ತಮ್ಮ ಕುಲಸ್ಥರು ದಿಗಂಬರಯ್ಯನಿರುವುದೇ ಅದಕ್ಕೆ ಕಾರಣವೆಂದು ಅವರು ಹೇಳುತ್ತಾರೆ. ದಿಗಂಬರರಾಯರಿಲ್ಲದ ಪ್ಲವರ್ ಶೋವೂ ಇಲ್ಲ. ನನ್ನನ್ನು ಕೇಳಿದರೆ ಗಿಡಗಳು ಅವರಿಲ್ಲದೆ ಹೂಬಿಡುವುದೇ ಸಂಶಯ. [illegible]

[illegible]

ಜಾನಕಿರಾಮಚಂದ್ರಯ್ಯನವರ [illegible] ವರ ಪೀಟಿ ಅಂತರಂಗದಲ್ಲಿ ತಮ್ಮ ಅಸ್ಪಷ್ಟವೆ ಅದರ ಒಳಗೆ [illegible] ಕಾಲಜಿ—ಗ್ರೇಸಿಯ ಮನೆಯಲ್ಲಿ [illegible] ಆದರೆ ರಾಮಚಂದ್ರಯ್ಯನವರ [illegible]

ಕಿಗೂ ಹೋಗಬೇಕು, ಮಹಿಳಾಸಭೆಗೂ ಹೋಗಬೇಕು—ಎಂದರೆ ತೊಡಕೆ. ಅದಕ್ಕಾಗಿ ಅವರು ನಿತ್ಯವೂ ಎಂಬಂತೆ ಗ್ರೇಸಿಯವರಿಗೆ ಹೇಳಿಕಳುಹಿಸುತ್ತಾರೆ: 'ನೀವು ಕ್ಲಬ್ಬಿಗೆ ಹೋಗುವಾಗ ಕರೆದುಬಿಡಿ' ಎಂದು. ಗ್ರೇಸಿಯವರು ಕ್ಲಬ್ಬಿಗೆ ಹೋಗುವುದಾದರೆ ಸರಿಯೇ. ಇಬ್ಬರೂ ನಾರ್ದರ್ನ ಲೇಡಿಸ್ ಕ್ಲಬ್ಬಿನ ಎದುರು ನಿಂತು, ಒಂದು ಕ್ಷಣ ಸಣ್ಣನೆ ಹೋಗಿ ಹೊರಗೆ ಬರುವರು. ಆ ಬಳಿಕ ಜಾನಕಿರಾಮಚಂದ್ರಯ್ಯನವರ ಮುಗಿಯದಂಥ 'ಪರ್ಚೇಸು'ಗಳಿಗೆ ಪೇಟೆಗೆ ಹೋಗುವುದು. ಅನಂತರ ಅವರ ಗೆಳತಿಯರನ್ನು ಕಂಡು ಬರುವುದಕ್ಕೆ ಹೀಗೆ ಎಂಟು ಘಂಟೆಯ ತನಕ 'ಫರ್ಟಾಡೋ ಹೇಳಿ, ಜಾನಕಿ ಬೇಗ' ಗ್ರೇಸಿಯವರು ಬಾರದ ವಿನಾ ಕಾರನ್ನಾದರೂ ಕಳುಹುತ್ತಾರೆ. ಹೀಗಾಗಿ ಮಂಗಳೂರಿನ ಇಬ್ಬರು ಪ್ರಮುಖ ಮಹಿಳೆಯರ ಅನ್ಯೋನ್ಯತೆಗೆ 'ಮೋಟರು' ಮುಖ್ಯ ಸಂಬಂಧ.

ಗ್ರೇಸಿಯವರಿಗೆ ಮೋಟರಿನಲ್ಲಿ ತಿರುಗಿ ಬೇಸರ ಬರುವುದೂ ಇಲ್ಲ. ಬೆಳಗಿನ ಪ್ರಥಮ ಎಣಿಕೆ ಅವರ ಕಾರ್ ಹೊರಡುವುದು. ದಿನಾ ದಿನವೂ ಅವರು ಚರ್ಚಿಗೆ ತಪ್ಪದವರಲ್ಲ. ಚರ್ಚಿನಲ್ಲಿ ಹೊರಟು ಅಲ್ಲಿ ಇಲ್ಲಿ ತಿರುಗಿಯೂ ನೀರಿ ಏಳಕ್ಕೆ ಕ್ರಮವಾಗ ಮನೆಗೆ ಬರುತ್ತಾರೆ. ಮನೆಯಲ್ಲಿ ಕಲವು ನಿಮಿಷ ಕಾಲ ತಿರುಗಿ ಹೊರಟಿರಿ. ಆದರೆ—ಅವರಿಗೆ ಮಕ್ಕಳು ಬರಿದಲ್ಲವೇ ಎಂದು ನಿಮಗೆ ಅನಿಸಬಹುದು. [illegible] ಒಂದು ಎರಡು [illegible] ಅವರನ್ನೆಲ್ಲಾ ಊರಿನಲ್ಲಿ, ಪಟ್ಟಣದಲ್ಲಿ [illegible] ಹಾಸ್ಟೆಲ್ [illegible] ಆದರೆ ಬಿಡುವಿಲ್ಲ [illegible] ರೀತಿಯ ಸಾರ್ಥಕ [illegible] ಗ್ರೇಸಿ ಫರ್ಟಾಡೋರಿಗೆ ನಿರಾಶೆ ಇರುವುದಿಲ್ಲ.

ಈ ವರ್ಷದವನ್ನೆ ಕಲೆಕ್ಟರರು ಇಲ್ಲದಾಗ ಮುನ್ಸಿಪಲ್ ಸ್ತ್ರೀ ಸದಸ್ಯರ ಸ್ಥಾನ ಜಾನಕಿ ರಾಮಚಂದ್ರಯ್ಯನವರಿಗೆ ದೊರೆಯಿತು. ಆಗ ಅವರು [illegible] ದೂರಗಳನ್ನು ತನ್ನ ಮನೆಗೆ [illegible] ಕರೆದುದೇ ತಪ್ಪಾಯಿತು. ಅವರಿಗೆ 'ನಾನು ಒಂದು ಹೊಸಯಿಡೀ ಮೋಟೀನು ತಂದಿದ್ದೇನೆ. ನಿಮ್ಮ ಗ್ರಾಮ ಸೇವಾ ಸಂಘಕ್ಕೆ ನನ್ನಿಂದಾದ ಸೇವೆ ಮಾಡುತ್ತೇನೆ'—ಎಂದು ಹೇಳಲು ಕರೆಯುತ್ತಿದ್ದರು. ಅದಕ್ಕೇನೆ ಮುಂಚಿನ ದಿವಸ ಜಾನಕಿರಾಮಚಂದ್ರಯ್ಯನವರ ಮನೆಯಿಂದ ಅದನ್ನು ತಂದು ಗ್ರೇಸಿ ಟೀಪಾಯಿಗೆ ಕರೆದ ಉದ್ದೇಶ ಒಂದಾದರೆ ಅದು ಬೇರೊಂದಾಯಿತು. ತನ್ನನ್ನು ಗ್ರಾಮ ಸೇವಾ ಸಂಘಕ್ಕೆ ಜತೆಕಾರ್ಯದರ್ಶಿ ಮಾಡಬೇಕೆಂದು ನೀರಿಕೆ ಹಾಕುವುದು ಅವರ ಉದ್ದೇಶವಿತ್ತು. ಆದರೆ ಅವರು ಇದರಿಂದ ಮಾತನಾಡಲು, ಅವಕಾಶ ಕೊಡದೆ, 'ಮಿಸೆಸ್ ಜಾನಕಿರಾಮಚಂದ್ರಯ್ಯನವರಂಥವರಿಗೆ ನಿಮ್ಮ ಬೆಂಬಲ ಬೇಕು. ಅವರ ಎದುರಿಗೆ ಮುನ್ಸಿಪಾಲಿಟಿಗೆ ಬೇರೆ ಸ್ತ್ರೀಯರು ನಿಲ್ಲುವುದು ಸರಿಯಲ್ಲ. ಸ್ತ್ರೀಯರೆಲ್ಲಾ ದರೂ ಒಕ್ಕಟ್ಟು ಬೇಕು'—ಎಂದರು. ಅದರಿಂದ ಅವರ ಮುನ್ಸಿಪಲ್ ಸದಸ್ಯತನದ ಸಂದರ್ಭವೂ ತಪ್ಪಿತು. ಆದರೆ ಮುಂದಿನ ವರ್ಷ ಕೈಸರ್-ಇ-ಹಿಂದ್ ಫಸ್ಟ್ ಕ್ಲಾಸ್ ಪದಕ ಸಿಗಲೇಬೇಕು ಎಂದು ಅವರು ಸ್ಪಷ್ಟಪಡಿಸುತ್ತಾರೆ.

ನಾರ್ದರ್ನ ಲೇಡೀಸ್ ಕ್ಲಬ್ಬಿನ ಸೆಕ್ರೆಟರಿ ಯಾದರೂ ಅವರು ಹಿಂದೂ ಮಹಿಳೆಯರ 'ವನಿತಾ ಸಮಾಜ'ಕ್ಕೆ ಆಗಾಗ ಹೋಗಿಬರುತ್ತಾರೆ. ಅಲ್ಲಿ ಏನಾದರೂ ಪಾರ್ಟಿ ಮಾಡುತ್ತಿದ್ದರೆ ತಪ್ಪದೆ ಹಾಜರಿರುತ್ತಾರೆ. ಒಂದು ಗ್ರೂಪ್ ಫೋಟೋ ತೆಗೆಯುವುದಾದರೂ ಸರಿಯೇ—ಅಲ್ಲಿಯೂ ಸೇರುತ್ತಾರೆ. 'ನಾವು ಸ್ತ್ರೀಯರು, ಒಂದೇ ಜಾತಿ ನಮ್ಮದು' ಎನ್ನುವರು. ಅಂತು ವರ್ಗದ ಕಟ್ಟು ಸಡಿಲಾಗುವುದೊಂದನ್ನು ಬಿಟ್ಟು ಗ್ರೇಸಿಯವರು ಇನ್ನೆಲ್ಲ ವಿಧದಲ್ಲೂ ಮಾತಾ ಸಮಾಜದ ಸಹಾಯ ಕರಾಗಿದ್ದಾರೆ.

ಗ್ರೇಸಿಯವರಿಂದ ಹೊರಟಂಥ ನವೀನ ಸಂಸ್ಥೆಗಳಿಲ್ಲ. ಪ್ರತಿ ವರ್ಷಕ್ಕೆ ನಾಲ್ಕು ಸಂಘಗಳು ಆಗುತ್ತಲೇ ಇರುತ್ತವೆ. ಅಲ್ಲದೆ ನಗರಗಳಿಗೆ ದೊಡ್ಡ ಅಧಿಕಾರಿಗಳು ಬಂದರೆ ಅವರನ್ನು ತಮ್ಮ ಕ್ಲಬ್ಬಿಗೆ ಆಮಂತ್ರಿಸಿ ಕರೆದೊಯ್ದು ಸತ್ಕರಿಸದರೆ [illegible] ಅಲ್ಲ. [illegible] ಸಾರ್ವಜನಿಕ ಕೆಲಸಗಳು [illegible] ಆದರೆ ಒಂದು ನಪ್ಪಿಗೆ ಕಥೆ ಜಾನಕಿರಾಮ ಚಂದ್ರಯ್ಯ ಹೇಳುತ್ತಾರೆ. ಜಾನಕಿಯವರು ಸ್ವದೇಶಿಗಳಲ್ಲಿ ಮಂಗಳೂರಿನ ಬ್ರಾಹ್ಮಣರಾಗಿಗಳ ಸಂಘದ [illegible] ಉತ್ಸವಕ್ಕೆ ಹೋಗಿದ್ದರು. ಸಂಗೀತ ಸನ್ಯಾಸ [illegible] ಜಾನಕಿರಾಮಚಂದ್ರಯ್ಯನವರಿಗೆ ಹಾರ ಹಾಕಿ ಗ್ರೂಪ್ ಫೋಟೊ ತೆಗೆಯಲು ಸಿದ್ಧತೆ ಮಾಡಿದರು. ಸ್ವದೇಶವಲ್ಲದೇ [illegible] ಗ್ರೇಸಿಯವರ ಹಿಂದೆ ನಿಂತರು. ಜಾನಕಿಯವರು ಕುಳಿತು ದನ್ನು ಕಂಡು [illegible] ಗ್ರೇಸಿ ಫರ್ಟಾಡೋ [illegible]

The Canara Industrial & Banking Syndicate Ltd.

(INCORPORATED IN BRITISH INDIA—LIABILITY OF SHAREHOLDERS LIMITED)

Head Office: UDIPI (S. India)

Season Deposits are accepted at 3½ % per annum.

For Further particulars apply to the Car-Street Branch, Mangalore

ಹಿಟ್ಲರರ ಜರ್ಮನಿಯಲ್ಲಿ ಕೃತ್ರಿಮ ಜೀವನೋಪಾಯ!

ನಾಜಿಗಳ ಸ್ವಾತಂತ್ರ್ಯ ಪ್ರೀತಿ!—ನಾಲ್ಕು ವರ್ಷಗಳ ಯೋಜನೆ

ಗೋರಿಂಗನ ಬದಲು ಗೋರಿಂಗನಾಗುವನೇ?

೧೯೩೬ರಂದು ನುರೆಂಬರ್ಗ್ ಕಾಂಗ್ರೆಸಿನಲ್ಲಿ ಹಿಟ್ಲರರು ಹೀಗೆಂದು ಅರ್ಭಟಿಸಿದರು:—

"ಹೊರದೇಶದಿಂದ ನಮ್ಮ ರಾಷ್ಟ್ರದ ಉಪಯೋಗಕ್ಕಾಗಿ ತರಿಸುವ ಎಲ್ಲಾ ವಸ್ತುಗಳು ಬರುವ ನಾಲ್ಕೇ ವರ್ಷಗಳಲ್ಲಿ ಸಂಪೂರ್ಣ ನಿಂತುಹೋಗಬೇಕು."

ಹೀಗೆ ಹೇಳುವಾಗ ಇದು ಪ್ರಯೋಗಕ್ಕೆ ಬಾರದೀತೆಂಬ ಅಭಿಪ್ರಾಯವು ಹಿಟ್ಲರರಲ್ಲಿ ಇರಲಿಲ್ಲ. ಅದಕ್ಕೆ ಜರ್ಮನಿಯ ವೈಜ್ಞಾನಿಕರಿಗೆ ಹಾಗೂ ಜರ್ಮನ್ ಉದ್ಯೋಗಿಕ ವಿಚಕ್ಷಣರಿಗೆ ಅದು ಒಂದು ರೀತಿಯಿಂದ ದೇಶದ ಅಭ್ಯುದಯಕ್ಕಾಗಿ ಕೊಟ್ಟ ಆಜ್ಞೆಯೇ ಆಗಿತ್ತು.

ಇಂದು ಇಡೀ ಜರ್ಮನಿಯಲ್ಲಿ ಎಲ್ಲಿ ತಿರುಗಾಡಿದರೂ ಈ ಕುರಿತು ಕೆಲಸಗಳು ಸಾಗುತ್ತಿರುವುದನ್ನು ಕಾಣಬಹುದು. ಪರದೇಶದಿಂದ ತರಿಸುತ್ತಿದ್ದ ವಸ್ತುಗಳಿಗೆ ಬದಲಾಗಿ ಯಾವುಗಳನ್ನು ಉಪಯೋಗಿಸಬಹುದೆಂದು ಪ್ರತಿಯೊಂದು ಮನೆಯಲ್ಲಿಯೂ ಕೂಡಾ ವಿಚಾರ ಆಂದೋಲನವು ಸುರುವಾಗಿದೆ. ನಾಲ್ಕು ವರ್ಷಗಳ ಯೋಜನೆಯೊಂದು ಆರಂಭವಾಗಿದೆ.

ಈ ಪ್ರಚಾರದಿಂದ ಜರ್ಮನಿಯು ಕೇವಲ ನಾಲ್ಕೇ ವರ್ಷಗಳಲ್ಲಿ ತನಗೆ ಬೇಕಾದ ವಸ್ತುಗಳ ಬಗ್ಗೆ ಪರದೇಶವನ್ನು ಹೊಂದಿರಬೇಕಾದ ಅವಶ್ಯವಿಲ್ಲ. ಈ ನಾಲ್ಕು ವರ್ಷಗಳ ಯೋಜನೆಯನ್ನು ಆರಂಭಿಸಿ, ಇಡೀ ದೇಶದಲ್ಲಿ ಬೇಕಾದಷ್ಟು ಪ್ರಚಾರವನ್ನೂ ಕೂಡ ಮಾಡಿದ ಕೀರ್ತಿಯು ಜನರಲ್ ಗೋರಿಂಗನದಾಗಿರುತ್ತದೆ.

ಜರ್ಮನಿಯ ಪ್ರತಿಯೊಬ್ಬ ನಾಗರಿಕನೂ ಕೂಡಾ ಈ ನಾಲ್ಕು ವರ್ಷಗಳ ಯೋಜನೆಯನ್ನು ಸಂಪೂರ್ಣ ಜಯಶಾಲಿಯಾಗುವಂತೆ ಮಾಡುವುದು ತನ್ನ ಕರ್ತವ್ಯವೆಂದು ತಿಳಿದು ಕೆಲಸ ಮಾಡುತ್ತಾನೆ. ಈಗ ಮಾಡಿದ ಪ್ರಚಾರದಂತೆ ಈ ಯೋಜನೆಯು ಜಯಶೀಲವಾಗದಿದ್ದಲ್ಲಿ ಇಡೀ ಜರ್ಮನಿಯೇ ಅವನತಿಯನ್ನು ಹೊಂದುವುದೆಂದು ನಾಜಿಗಳು ಭಯಗ್ರಸ್ತರಾಗಿದ್ದಾರೆ.

ಇಂದು ಜರ್ಮನಿಯಲ್ಲಿ ಮನೆಗಳಿಗೆ ಬೇಕಾದ ಯಾವುದೇ ಸಾಮಾನುಗಳನ್ನು ಮಾಡುವುದಿದ್ದರೂ ಕೂಡಾ ಅವೆಲ್ಲವೂ ಗೋರಿಂಗನ 'ಡಿಪಾರ್ಟುಮೆಂಟಿ'ನಿಂದ ಸೂಚಿತವಾಗದೆ ಸಾಧ್ಯವಿಲ್ಲ. ಮರಗಳ ತುಂಡು ಇಟ್ಟಿಗೆ ಯಾವುದೇ ಆಗಲಿ ಲೈಸನ್ಸುಗಳನ್ನು ಪಡೆದುಕೊಂಡ ವರಿಗೆ ಮಾತ್ರ ಪಡೆಯಲು ಸಾಧ್ಯವಿದೆ.

ಒಂದು ಜರ್ಮನ್ ಮನೆಯನ್ನು ನಾವು ಒಮ್ಮೆ ಹೊಕ್ಕು ನೋಡಿದಲ್ಲಿ ಆ ಮನೆಯಲ್ಲಿ ಪ್ರತಿಯೊಂದು ಅಂಶದಲ್ಲಿಯೂ ಕೂಡಾ ಈ ನಾಲ್ಕು ವರ್ಷಗಳ ಯೋಜನೆಯು ನೆರಳು ಬಿದ್ದಂತೆ ತೋರದಿರದು.

ಮುಂಜಾನೆ ಎದ್ದು ಬಚ್ಚಲು ಮನೆಗೆ ಹೋದಾಗ ಅದರ ಬಾಗಿಲು ಮರದ ತುಂಡುಗಳಿಂದ ಮಾಡಲ್ಪಟ್ಟುದಾಗಿ ಕಾಣಬಹುದು. ಅಲ್ಲಿ ಸಾಬೂನಿಗೆ ಕೈಯಿಕ್ಕಿದರೆ ಅದು ಕಲ್ಲಿದ್ದಲಿನಿಂದ ಮಾಡಿದ್ದಾಗಿ ತಿಳಿಯಬಹುದು. ಕೊಬ್ಬಿನಿಂದ ಸಂಪೂರ್ಣ ವರ್ಜ್ಯವಾದ ಸಾಬೂನನ್ನೇ ಇಂದು ಇಡೀ ಜರ್ಮನರು ಉಪಯೋಗಿಸುತ್ತಿದ್ದಾರೆ. ಇಂಗ್ಲೆಂಡಿನಲ್ಲಿ ಆಗುವ ಅತ್ಯಂತ ಕೆಳತರಗತಿಯ ಸಾಬೂನುಗಳಿಗಿಂತ ಕೆಳತರಗತಿಯವುಗಳಲ್ಲಿಯೇ ಕೆಲವು ವರ್ಷಗಳ ವರೆಗೆ ಜರ್ಮನರು ತೃಪ್ತಿಪಟ್ಟಿರಬೇಕಾಗುತ್ತದೆ.

ಯಾವ ಉಪಯೋಗಕರವಾದ ಸಾಮಾನುಗಳನ್ನೇ ನಾವು ಪಡಕೊಂಡರೂ ಕ್ರೀಮು, ಟೂತ್ ಪೇಸ್ಟು, ಇಂತಹಗಳಲ್ಲಿಯೂ ಕೂಡಾ ಅವುಗಳನ್ನು ಉಪಯೋಗಿಸಿದ ಮೇಲೆ ಡಬ್ಬಿಗಳನ್ನು ಬಿಸಾಡಬಾರದಾಗಿ ಅದರಲ್ಲಿಯೇ ಅಚ್ಚಾದ ಕರಪತ್ರಗಳು ಇರುತ್ತವೆ. ನಾವು ಉಪಯೋಗಿಸತಕ್ಕ ವಸ್ತುವು ಮುಗಿದ ಮೇಲೆ ಆ ಸಾಮಾನು ಇದ್ದ ಪೆಟ್ಟಿಗೆಯು ಯಾವ ಲೋಹದಿಂದಲೇ ಮಾಡಿದ್ದಿರಲಿ ಅದನ್ನು ಅಲ್ಲಲ್ಲಿ ಸರಕಾರದಿಂದ ಸ್ಥಾಪಿಸಲ್ಪಟ್ಟ ಸ್ಟೇಶನುಗಳಲ್ಲಿ ಕೊಟ್ಟೇ ತೀರಬೇಕು.

ಪ್ರತಿಯೊಂದು 'ಕೆಮಿಸ್ಟರ' ಅಂಗಡಿಗಳಲ್ಲಿಯೂ ಕೂಡಾ ಇಂತಹ ಉಪಯೋಗಿಸಲ್ಪಟ್ಟ ಸಾಮಗ್ರಿಗಳನ್ನು ಇಡಲು ಪ್ರತ್ಯೇಕ ಸ್ಥಳಗಳು ಏರ್ಪಟ್ಟು ಆ ಕುರಿತು ಹೆಚ್ಚಾದ ಗಮನವನ್ನು ಕೊಡುವಂತೆ ಎಚ್ಚರದಿಂದಿದ್ದಾರೆ. ಹೊಸ ಸಾಮಾನನ್ನು ಪಡಕೊಳ್ಳಲು ಬಂದವನು ಎಲ್ಲದಕ್ಕಿಂತಲೂ ಮೊದಲು ತಾನು ತೆಕ್ಕೊಂಡುಹೋದ ವಸ್ತುವನ್ನು ಉಪಯೋಗಿಸಿ ಹಿಂದೆಕೊಂದಿದ್ದಾನೋ ಎಂದು ವಿಚಾರಿಸಿಕೊಳ್ಳುತ್ತಾರೆ.

ಜರ್ಮನರ ಶರ್ಟು ಇಂದು ಎರಡಿಂಚು ಉದ್ದ ಕಡಿಮೆಯಾಗಿದೆ. ಕಾಲಿನಲ್ಲಿ ಹಾಕಿರುವ ಜೋಡಿನ ರಬ್ಬರಿನ ಹಿಂಬದಿಯು ಅತ್ಯಂತ ಕೆಳತರಗತಿಯದ್ದಾಗಿದೆ. ಹೆಚ್ಚು ಜೋಡುಗಳನ್ನು ಈಗ ಕಾಗದಗಳಿಂದಲೇ ಮಾಡುತ್ತಾರೆ.

ಪ್ರತಿಯೊಬ್ಬ ನಾಜಿಯೂ ಇಂದು ತನ್ನ ಕಾರಿನ ಟಯರು ರಬ್ಬರಿನ ಟಯರಿನ ಬದಲು ರಬ್ಬರಿಗಿಂತ ನೇಕಡಾ ೩೦ರಷ್ಟು ಅಧಿಕವಾಗಿ ಬೆಲೆಬಾಳುವ ಬೇರೊಂದು ಪದಾರ್ಥದಿಂದ ಮಾಡಿದ ಟಯರಿಗಾಗಿ ಅಭಿಮಾನ ಪಡುತ್ತಾನೆ. ಅದರೆ ಅದರಿಂದ ರಬ್ಬರಿಗಿಂತ ಕೇವಲ ನೇಕಡಾ ೩೦ರಷ್ಟು ಹೆಚ್ಚು ಮೈಲುಗಳನ್ನು ಸಂಚಾರ ಮಾಡಲು ಅನುಕೂಲವಾಗುವುದು!

ಪೆಟ್ರೋಲೂ ಕೂಡಾ ಈಗ ಹೀಗೆಯೇ ಬೇರೆ ಕೃತ್ರಿಮ ದ್ರವಗಳ ಬೆರಸುವಿಕೆಯಿಂದ ಮಾಡಲಾಗಿದೆ. ಅದರೆ ಈ ಎಣ್ಣೆಗೆ ಮೊದಲಿನ ಪೆಟ್ರೋಲಿನ ವಾಸನೆಯು ಉಳಿಯುವಂತೆ ಉಪಾಯ ಮಾಡಿದ್ದಾರೆ.

ಇಂತಹ ಕೆಲವು ಸಮಯದಲ್ಲಿ ತಾವು ಹೊಸತಾಗಿ ಮಾಡುವ ವಸ್ತುಗಳಿಗೆ ಹೊರಗಿನಿಂದ ತರಿಸುವ ವಸ್ತುಗಳಿಗಿಂತ ಮೌಲ್ಯವು ಹೆಚ್ಚಾಗಿ ಬೀಳುವುದಿದ್ದರೂ ಸ್ವತಂತ್ರ ಜರ್ಮನಿಯು ಸರ್ವ ವಿಧದ ಸಾಮಗ್ರಿಗಳನ್ನೂ ಸ್ವತಂತ್ರವಾಗಿಯೇ ತಯಾರಿಸುವ ಹಟದಲ್ಲಿ ಮುಂದುವರಿಯುತ್ತದೆ.

ರೊಟ್ಟಿ ಮಾರಾಟ ಮಾಡುವವರು ೨೪ ತಾಸುಗಳ ಹಿಂದಿನ ರೊಟ್ಟಿಗಳನ್ನು ಮಾರಾಟ ಮಾಡಕೂಡದಾಗಿ ಆಜ್ಞೆಯಿದೆ. ಹಳತು ವಸ್ತುಗಳನ್ನು ಜನರು ಹೊಸತಿನಷ್ಟು ತಿನ್ನಲಾರರೆಂದು ಈ ಕ್ರಮವು ಮಾಡಲಾಗಿದೆಯಂತೆ! ಹೇಗಿದ್ದರೂ ಉಳಿದ ಹಳೇ ರೊಟ್ಟಿಗಳಿಂದ ಬೇರೇನಾದರೂ ಹೊಸ ವಸ್ತುಗಳನ್ನು ಮಾಡಬಹುದೇ ಎಂದು ಗೋರಿಂಗನ ವಿಚಾರ!

ಕಬ್ಬಿಣ ಮತ್ತು ಉಕ್ಕುಗಳ ಉದ್ಯೋಗದ ವಿಷಯದಲ್ಲಿ ಅವುಗಳಿಗೆ 'ತುಕ್ಕು' ಹಿಡಿಯದಂತೆ ಬಹು ಪ್ರಚಾರವೂ ಜಾಗ್ರತೆಯೂ ಮಾಡಲಾಗಿದೆ. ವರ್ಷವೊಂದಕ್ಕೆ ಬಹಳ ಕಬ್ಬಿಣವು 'ತುಕ್ಕು' ಹಿಡಿದು ಹಾಳಾಗಿ ಹೋದರೆ ಜರ್ಮನಿಯು ಬಹಳ ನಷ್ಟಹೊಂದುವುದಲ್ಲವೇ?

ಮರದ ಪದಾರ್ಥಗಳಿಂದ ರುಚಿಕರವಾದ ಆಹಾರಗಳನ್ನು ಮಾಡುತ್ತಾರೆ. ಈ ಪ್ರಯೋಗವನ್ನು ಮೊದಲಾಗಿ ಮಹಾ ಯುದ್ಧದ ಸಮಯದಲ್ಲಿ ಕಂಡುಹಿಡಿದವರು ಡಾ। ಪೆಡ್ರಿಕ್ ಬರ್ಗಿಸ್ ಎಂಬವರು. ಚಾಕ್ಲೇಟ್, ಸ್ವೀಟ್ ಮೊದಲಾದುವುಗಳು ಈ ರೀತಿಯಲ್ಲಿ ತುಂಬಾ ಮಾಡಲಾಗುತ್ತವೆ.

ಈಗ ಇಡೀ ಬರ್ಲಿನಿನಲ್ಲಿ ಒಂದು ತಮಾಷೆಯ ಮಾತಿದೆ. ಒಂದಾನೊಂದು ದಿನ ಗೋರಿಂಗನಿಗೆ ಬದಲಾಗಿ ಇನ್ನೊಂದು ಅದೇ ತರದ ಗೋರಿಂಗನು ಆಗಲಿರುವನು ಎಂದು!

ಹಿಟ್ಲರರಿಗೆ ಬದಲಾಗಿ ಹಿಟ್ಲರರು ಇದ್ದಾರಂತೆ! ಮುಂದಕ್ಕೆ ಗೋರಿಂಗನಿಗೆ ಬದಲು ಗೋರಿಂಗರು ಯಾಕೆ ಆಗಬಾರದು?

ನವೀನ ಶೋಧನೆ

ಹೇನುಗಳನ್ನು ನಾಶಮಾಡುವ 'ಬಾಬಾ' ಉಪಯೋಗಿಸಿರಿ.

ಸ್ತ್ರೀ ಜಾತಿಗೆ 'ಬಾಬಾ' ಎಂಬುದು ವರಪ್ರಸಾದ

ತಲೆಯಲ್ಲಿ ಹೇನು ಆಗುವುದು ಇದರ ಸ್ಥಿತಿಯು ಹೇಸಿಗೆಯಾದುದರಿಂದ ಪ್ರಕೃತಿಯು ಕೆಡುತ್ತದೆ. 'ಬಾಬಾ' ಈ ಎಣ್ಣೆಯು ತಲೆಗೆ ಅತಾನಾ ಕೂದಲಿಗೆ ಹಚ್ಚಿದರೆ ಖಾತ್ರಿಯಾಗಿ ಹೇನುಗಳನ್ನು ನಾಶಮಾಡಬಲ್ಲುದು. 'ಬಾಬಾ' ಇದರಿಂದ ಅಪಾಯಕರವಿಲ್ಲ 'ಬಾಬಾ' ಎಲ್ಲಾ ಪಟ್ಟಣಗಳಲ್ಲಿ ಸಣ್ಣ ಸೀಲು ಒಂದು ಡಬ್ಬಿಯು ಮಾರಲು ಸಿಕ್ಕುತ್ತದೆ.

ಕಿಮ್ಮತ್ತು ಡಬ್ಬಿ 1ಕ್ಕೆ 0—2—6

ಹಿಂದುಸ್ಥಾನ ಬರ್ಮಾದ ಸೋಲ್ ಡಿಸ್ಟ್ರಿಬ್ಯೂಟರ್ಸ್ — ಪಾಯ ಬ್ರದರ್ಸ್

ಮೋಟಕಲನ, ಎಡ್‌ವರ್ಡ್ ಸಿನೆಮಾದ ಎದುರು ಜಂಬುಲವಾಡಿ ಕಾಳಬಾದೇವಿ ರೋಡು, ಬೊಂಬಾಯಿ 2.

U. K. BHUJANGA NAYAK

CLOTH COMMISSION AGENT

SHEVAPET, SALEM

ಯು. ಕೆ. ಭುಜಂಗ ನಾಯಕ್,

ಜವುಳಿ ದಲಾಲು, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ದೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕೆ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲವರ ರುಚಿಗೆ ತಕ್ಕದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧. ಸಾರಥಿ ನಸ್ಯ 1 ಸೇರಿಗೆ ರೂ. 3-8-0 ನವೀನ ಮಾರ್ಕು ಸಾರಥಿ ನಸ್ಯ 1 ಸೇರಿಗೆ ರೂ. 3-0-0

(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ಎಡ್ರೆಸು:—

ಎ. ಪಿ ಸಾರಥಿ

ಮೆನ್ಯುಫೆಕ್ಚರರ್ಸ್ ಒಫ್ ಮೆಡ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು.

ಜೀವನದಲ್ಲಿ ನೂತನ ಆಸಕ್ತಿ ಸುಖಾನಂದಗಳು

ರಕ್ತ ಕ್ಷೀಣತೆಯಿಂದುಂಟಾಗುವ ಬಳಲಿಕೆ, ನರಗಳ ದುರ್ಬಲತೆ, ಹಸಿವಿಲ್ಲದಿರುವಿಕೆ, ಸದಾ ಹೀನತೆ, ನಿಶ್ಶಕ್ತಿ ಮುಂತಾದ ವ್ಯಾಧಿಗಳಿಂದ ಪೀಡಿಸಲ್ಪಟ್ಟು, ಜೀವನವನ್ನೇ ಒಂದು ಹೊರೆಯಾಗಿ ಎಣಿಸಿ ಕಾಲವನ್ನು ನೂಕುತ್ತಿರುವವರಿಗೆ ಶುದ್ಧ ರಕ್ತಾಭಿವೃದ್ಧಿಯನ್ನೂ, ವೀರ್ಯೋತ್ಸಾಹಗಳನ್ನೂ ಜೀವನದಲ್ಲಿ ಸುಖಾನಂದಗಳನ್ನೂ ಉಂಟುಮಾಡುವ ಅದ್ಭುತವಾದ, ಬಲಪೂರ್ಣಕ ಔಷಧವೆಂದರೆ

ಪಂಡಿತ ಡಿ. ಗೋಪಾಲಾಚಾರ್ಲುರವರ

ಜೀವಾಮೃತ

ಸ್ತ್ರೀಪುರುಷರು ವಯೋಭೇದವಿಲ್ಲದೆ ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು:

ಆಯುರ್ವೇದಾಶ್ರಮ :: ಮದರಾಸು

ಸ್ಟಾಕಿಸ್ಟರು:

ಪೊಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

ಮಂಗಳೂರು

ಭಾಷಣ–ಮದ್ರಾಸು ಸೀನಿಯರ್ ಫಿಸಿಕಲ್ ಡೈರೆಕ್ಟರರಾದ ಮಿ. ಜಿ. ಎಫ್ ಅಂಡ್ರೂಸರವರು ಸೆಂಟ್ರಲ್ ವಾರ್ಡ್ ಮುನ್ಸಿಪಲ್ ಶಾಲೆಯಲ್ಲಿ ಸೇರಿದ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಕೂಟದಲ್ಲಿ 'ಶಾಲಿ ಮಕ್ಕಳಿಗಾಗಿ ಶಾರೀರಿಕ ಚಟುವಟಿಕೆ' ಎಂಬ ಕುರಿತು ಉಪನ್ಯಾಸವಿತ್ತರು.

ಶೋಚನೀಯ ನಿಧನ–ಹಿಂದೆ ಬಂಟ್ವಾಳ ವೆಂಕಟ್ರಮಣ ದೇವಸ್ಥಾನದ ಮನೇಜರರಾಗಿದ್ದು, ಕೆಲವರ್ಷಗಳಿಂದ ಕಾಶೀಮಠದ ವಾರು ಪತ್ಯಗಾರರಾಗಿದ್ದ ಶ್ರೀ ಬಿ. ಕೃಷ್ಣಭಂಡಾರಿ ಇವರು ತಾ. ೧೧ರಂದು ಬೊಂಬಯಿಯಲ್ಲಿ ಹೃದ್ರೋಗದಿಂದ ಕಾಲವಶರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಇವರು ಅನೇಕ ಸಾಮಾಜಿಕ, ಧಾರ್ಮಿಕ ವಿಷಯಗಳಲ್ಲಿ ಅತ್ಯಂತ ಆಸಕ್ತಿಯಿಂದ ಕೆಲಸಮಾಡಿದ ಮಹನೀಯರು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸುತ್ತೇವೆ.

ಆಗಮನ–ತಾ. ೧೭ರಂದು ಇಲ್ಲಿಗೆ ಪೋಲೀಸ್ ಶಾಖೆಯ ಇನ್ಸ್ಪೆಕ್ಟರ್ ಜನರಲರು ದಯಮಾಡಿಸಿರುವರೆಂದು ತಿಳಿದುಬಂದಿದೆ

ಮುನ್ಸಿಪಲ್ ಸಭೆ–ಮುನ್ಸಿಪಲ್ ಸಭೆಯು ತಾ ೧೯ರಂದು ಸಂಜೆ ೫ ಗಂಟೆಗೆ ಚೆಯರ್‌ಮ್ಯಾನರಾದ ಶ್ರೀ. ವೆಂಕಟ್ರಾಯ ಬಾಳಿಗಾ ಎಂ. ಎಲ್ ಎ ಯವರ ಅಧ್ಯಕ್ಷತೆಯಲ್ಲಿ ಸೇರಿತು ಮಾರ್ಕೆಟುಗಳ ದುರುಸ್ತಿಯ ಹಣವನ್ನು ಸರಿಯಾಗಿ ಹಂಚಬೇಕೆಂದೂ, ಜನನ ಮರಣ ರಿಜಿಸ್ಟ್ರಾರ್, ಸ್ತ್ರೀ ಮೆಡಿಕಲ್ ಆಫೀಸರ್ ಮತ್ತು ವೆಕ್ಸಿನೇಟರ್ ಇವರನ್ನು ಅವರ ವಾಹನ ಪ್ರಾಣಿ, ಹಾಗೂ ಉದ್ಯೋಗಗಳ ತೆರಿಗೆಗಳಿಂದ ವಿಮೋಚನೆಗೊಳಿಸುವುದು ಸಾಧ್ಯವಿಲ್ಲವೆಂದೂ, ಕೌನ್ಸಿಲಿಗೆ ಕೆತ್ತ ಮಿ ಫೆಲಿಕ್ಸ್ ಪೈಗಳ ಛಾಯಾಚಿತ್ರವನ್ನು ಸ್ಥಳೀಯ "ಸಂಸ್ಥೆಯ ಮಂತ್ರಿಗಳ ಕೈಯಿಂದ ಅನಾವರಣ ಮಾಡಿಸುವುದೆಂದೂ, ಉರ್ವದ ಗುಡಿಗಳನ್ನು ಕೊರಗಕೋಟೆಗಳಿಗೆ ಅಕ್ಟೋಬರ್ ತಿಂಗಳ ತನಕ ಬಾಡಿಗೆ ಇಲ್ಲದೆ ಕೊಡುವುದೆಂದೂ ನಿರ್ಣಯಿಸಲಾಯಿತು ವೆಬ್‌ಸ್ಟರ್ ಮಾರ್ಕೆಟಿನ ಬಗ್ಗೆ ತಿರಿಗಿ ಯೋಜನೆ ಕರೆಯಲು ಪ್ರಕಟಣೆ ಕೊಡುವುದಾಗಿಯೂ, ಉತ್ತಮ ಯೋಜನೆ (plan) ಬರುವಂತೆ ಅದಕ್ಕೆ ಸ್ಪರ್ಧೆಯನ್ನು ಏರ್ಪಡಿಸುವಂತೆಯೂ ನಿರ್ಣಯಿಸಲಾಯಿತು.

ಎಗ್ರಿಕಲ್ಚರಲ್ ಡೆಮೊನ್ಸ್ಟ್ರೇಟರ ಪರಿಷತ್ತು–ಇವರ ಪರಿಷತ್ತೊಂದು ಕಳೆದ ಗುರು ಮತ್ತು ಶುಕ್ರವಾರಗಳಂದು ಜರಗಿತು ಅಸಿಸ್ಟೆಂಟ್ ಡೈರೆಕ್ಟರ್ ಓಫ್ ಎಗ್ರಿಕಲ್ಚರ್ ಶ್ರೀ. ಎಂ. ಪಿ ವೆಲ್ಲೋಡಿ ಇವರು ಅಗ್ರಾಸನ ವಹಿಸಿದ್ದರು

ತೆರಿಗೆದಾರರ ಸಂಘ— ಬೆಂದೂರು ವಾರ್ಡಿನ ತೆರಿಗೆದಾರರ ಸಂಘದ ಸ್ಥಾಪನೆಯ ಬಗ್ಗೆ ಸಭೆಯೊಂದು ಕಳೆದ ಆದಿತ್ಯವಾರ ಆರ್ಯಸಮಾಜ ಮಂದಿರದಲ್ಲಿ ಶ್ರೀ. ಎಸ್. ರಾಮಚಂದ್ರ ಅಯ್ಯರರ ಅಧ್ಯಕ್ಷತೆಯಲ್ಲಿ ಜರಗಿತು.

ಮಂಗಳೂರು ಕೋ ಒಪರೇಟಿವ್ ಯೂನಿಯನ್–ಇದರ ಮಹಾಸಭೆಯೊಂದು ಯೂನಿಯನ್ನಿನ ಅಧ್ಯಕ್ಷರಾದ ಶ್ರೀ. ಯು. ರಾಮಕೃಷ್ಣನವರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಬೇಂಕ್ ಕಟ್ಟಡದಲ್ಲಿ ಸೇರಿತು. ವಾರ್ಷಿಕ ವರದಿ ಲೆಕ್ಕ ಪತ್ರಗಳು ಅಂಗೀಕೃತವಾಗಿ ಹೊಸ ವರ್ಷದ ಅಧಿಕಾರಿಗಳ ಚುನಾವಣೆಯಾಯಿತು

ಸ್ತುತ್ಯದಾನ–ಮಂಗಳೂರು ದೀನಬಂಧು ಅನಾಥಾಶ್ರಮ ಸಹಾಯಾರ್ಥವಾಗಿ ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಗಳ ಹರಿಕಥೆಯ ಮೂಲಕ ಇಲ್ಲಿನ ಶ್ರೀ. ದತ್ತಾತ್ರೇಯ ಕಾಪಿ ಕ್ಲಬ್ ಮತ್ತು ಶ್ರೀ. ಕೃಷ್ಣಾಲೋಚನ ಮಾಲಿಕ ಶ್ರೀ. ಕೆ. ಶ್ರೀಪತಿರಾಯರು ೧೦ ರೂಪಾಯಿ ಕೊಟ್ಟಿರುವುದಾಗಿ ಕೇಳುತ್ತೇವೆ. ಸ್ತುತ್ಯದಾನ!

ತಿದ್ದುಪಡಿ–ಕಳೆದ ಸಂಚಿಕೆಯ ದಿ ಕೆನರಾ ಬೆಂಕಿಂಗ್ ಕೋರ್ಪರೇಶನ್ ಲಿಮಿಟೆಡ್, ಮಂಗಳೂರು ಇದರ ನೋಟೀಸಿನ ಲೋನ್ ನಂಬ್ರವನ್ನು 676/85ರ ಬದಲು 675/85 ಎಂದೂ 675/86ರ ಬದಲು 674/86 ಎಂದೂ ಓದುವುದು

ತಾಲೂಕುಗಳಿಂದ

ಧರ್ಮಸ್ಥಳ

ವಿಚಿತ್ರವಾರ್ತೆ–ಮೈಸೂರು ರಾಜ್ಯದಿಂದ ಬಂದ ತಿಪಟೂರು ಪಟ್ಟಣ ವಾಸಿಗಳಾದ ಬಿ. ಸುಬ್ರಾಯರ ಪತ್ನಿ ಬಂಧುಬಾಂಧವರೆಲ್ಲ ಅವರಲ್ಲಿ ನಡೆಯುತ್ತಿದ್ದ ಪಿಶಾಚಿಯ ಬಾಧೆಗಾಗಿ ಧರ್ಮಸ್ಥಳಕ್ಕೆ ಬಂದು ನಿವೃತ್ತಿಮಾಡಿಕೊಂಡರೆಂದು ವಾರ್ತೆಬಂದಿದೆ. ಪಿಶಾಚಿಯ ಕಥೆಯು ಬಹಳ ಸೋಜಿಗವಾಗಿದೆ ಬಿ. ಸುಬ್ರಾಯರೆಂಬವರ ಮಗ ಸನ್ನಿಪಾತ ಜ್ವರದಿಂದ ೮ ವರ್ಷಗಳ ಹಿಂದೆ ತನ್ನ ೧೯ನೇ ವಯಸ್ಸಿನಲ್ಲಿ ಮೃತನಾದ. ಅತನು ೩ನೇ ಫಾರ್ಮಿನ ವರೆಗೆ ಕಲಿತಿದ್ದ. ಕೆಲವು ಸಮಯದ ಹಿಂದೆ ಮನೆಯ ಗೋಡೆಯಲ್ಲಿ ಬಿಳೀ ಇಲಿಯೊಂದು ಓಡಿತಂತೆ ಅದನ್ನುಹಿಡಿಯಹೋಗಲು ಮಾಯವಾಯಿತಂತೆ ಮೇಲಿ ಮನೆಯವರಿಗೆ ಆಗಾಗ ಅನೇಕ ತರದ ಉಪದ್ರವ ಕೊಡುತ್ತಿದ್ದದ್ದು ಮಾತ್ರವಲ್ಲ, ಎಲ್ಲರೂ ಇದ್ದಂತೆಯೇ ಕಾಗದದಲ್ಲಿ ತನಗೆ ಗತಿಯಾಗಲಿಲ್ಲವೆಂದೂ, ಧರ್ಮಸ್ಥಳಕ್ಕೆ ಹೋಗಬೇಕೆಂದೂ ಅಲ್ಲಿ ಬ್ರಾಹ್ಮಣಸಂತರ್ಪಣೆ ಮಾಡಬೇಕೆಂದೂ ಹಲವು ಸಲ ಕಾಗದದಲ್ಲಿ ಬರೆದುಕೊಟ್ಟಿತಂತೆ ಹಾಗೆಯೇ ಅದರ ಬಾಧೆಯು ನಿರಂತರವಾಗಲು ಅವರು ಧರ್ಮಸ್ಥಳಕ್ಕೆ ಬಂದು ಅಲ್ಲಿ ನಿವೃತ್ತಿ ಮಾಡಿಸಿದರಂತೆ

ಉಡುಪಿ

ಪಲಿಮಾರು ಸ್ವಾಮಿಗಳ ದಾನ–ಉಡುಪಿ ಮುನ್ಸಿಪಾಲಿಟಿಗೆ ಶ್ರೀ ಪಲಿಮಾರು ಸ್ವಾಮಿಗಳ ಸ್ವಲ್ಪ ಸ್ಥಳವನ್ನು ದಾನವಾಗಿ ಕೊಡುತ್ತೇನೆಂದು ಒಪ್ಪಿರುವರಾಗಿ ತಿಳಿಯುತ್ತದೆ

ಮಿ. ಜಿ. ಎಫ್. ಅಂಡ್ರೂಸರು–ಮದ್ರಾಸಿನ ಸೀನಿಯರ್ ಫಿಸಿಕಲ್ ಡೈರೆಕ್ಟರರಾದ ಮಿ ಜೆ ಎಫ್ ಅಂಡ್ರೂಸರವರು ಉಡುಪಿಗೆ ಬಂದು ಕೆಲವು ಶಾಲೆಗಳನ್ನು ಸಂದರ್ಶಿಸಿದರು

ಕಳವು–ವೆಬ್‌ಸ್ಟರ್ ಮಾರ್ಕೆಟ್ ಬಳಿಯ ಒಂದು ಜಿನಸಿನ ಅಂಗಡಿಯಲ್ಲಿ ಮೊನ್ನೆ ರಾತ್ರಿ ಕಳ್ಳರು ಬೀಗ ಮುರಿದು ಸಾಧಾರಣ ೫೦ ರೂಪಾಯಿ ನಗದು ಹಣ ಮತ್ತು ಸುಮಾರು ೫೦ ರೂಪಾಯಿ (ಸಾಬೂನು ಪೆಟ್ಟಿಗೆ ಮೊದಲಾದವುಗಳು) ಸಾಮಾನನ್ನು ಕಳವು ಮಾಡಿರುವರೆಂದು ತಿಳಿದು ಬರುತ್ತದೆ

ಶ್ರೀ ರಾಮಕೃಷ್ಣ ಯುವಕ ಸಂಘ–ಸ್ಥಳೀಯ ಬಂಟರ ಯೂನಿಯನ್ನಾದವರ ಶ್ರೀ ರಾಮಕೃಷ್ಣ ಯುವಕ ಸಂಘದ ಮೂರನೇ ವರ್ಷದ ಮಹಾಸಭೆಯು ಇದೇ ಕಳೆದ ತಾ. ೧೮–೬–೩೯ನೇ ಆದಿತ್ಯವಾರ ಸಂಜೆ ಗಂಟೆ ೬ಕ್ಕೆ ಸರಿಯಾಗಿ ಮಣ್ಣಗುಡ್ಡೆ ಕಂಬಳದಲ್ಲಿರುವ ಅದರ ಆಫೀಸಿನಲ್ಲಿ ಜರಗಿತು. ಸಂಘದ ಕಾರ್ಯದರ್ಶಿಗಳು ವರ್ಷದ ವರದಿಯನ್ನು ಓದಿದ ನಂತರ ಅಧ್ಯಕ್ಷರ ಕಾರ್ಯದರ್ಶಿಗಳ ಮತ್ತು ಕೋಶಾಧಿಕಾರಿಗಳ ಚುನಾವಣೆಯು ನಡೆಯಿತು. ಈ ಕೆಳಗಿನ ಮಹನೀಯರುಗಳು ಬಹುಮತದಿಂದ ಚುನಾಯಿಸಲ್ಪಟ್ಟರು. ಅಧ್ಯಕ್ಷ ಶ್ರೀ ಪಿ. ಶಿವಣ್ಣ ಹೆಗ್ಡೆ, ಉಪಾಧ್ಯಕ್ಷ ಶ್ರೀ ಕೆ ಪಕಪ್ಪ ಶೆಟ್ಟಿ, ಜತೆಕಾರ್ಯದರ್ಶಿಗಳು ಶ್ರೀ. ಸಂಜೀವ ಭಂಡಾರಿ ಮತ್ತು ಶ್ರೀ. ಕೆ ಶ್ರೀನಶೆಟ್ಟಿ, ಕೋಶಾಧಿಕಾರಿ ಕಡಿಯಾಲಬೈಲು ಶ್ರೀ ಗಣಪ ಶೆಟ್ಟಿ. ಬಳಿಕ ಮಾಜಿ ಅಧ್ಯಕ್ಷರಾದ ಶ್ರೀ. ಸಿ. ಯಸ್. ಶತ್ತಕಣ್ಣರ್ ಮತ್ತು ಈಗಿನ ಅಧ್ಯಕ್ಷರ ಸುರಸ ಭಾಷಣಗಳಾದ ಬಳಿಕ ಲಘುಫಲಾಹಾರವಾಗಿ ಕಾರ್ಯದರ್ಶಿಗಳ ವಂದನಾರ್ಪಣೆಯೊಡನೆ ಸಭಾಂತ್ಯವಾಯಿತು.

ರಸ್ತೆ ಮುಚ್ಚಲಾಗಿದೆ–ಮಾರ್ಗ ನಂ. ೧೧೮ ೮/೬ ೧೦/೭ ಮೈಲುಗಳಲ್ಲಿನ ಸಂಕಗಳ ದುರುಸ್ತಿಯ ಬಗ್ಗೆ ಆ ಮಾರ್ಗವು ಮುಚ್ಚಲ್ಪಟ್ಟಿರುತ್ತದೆ. ಮುಂದಿನ ಪ್ರಕಟಣೆಯವರೆಗೆ ಯಾವ ತರದ ವಾಹನಗಳ ಸಂಚಾರವೂ ನಿಲ್ಲಿಸಲ್ಪಡಬೇಕಾಗಿ ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಾರೆ.

ಕಾಂಗ್ರೆಸ್ ಕಮಿಟಿ

ತಾ. ೧೮ಕ್ಕೆ ಉಡುಪಿ ತಾಲೂಕು ಕೊಂಗ್ರೆಸು ಕಮಿಟಿಯ ಮಹಾಸಭೆಯು ಉಡುಪಿಯಲ್ಲಿ ಸೇರಿ, ಹಾಲಿ ವರ್ಷಕ್ಕೆ ಶ್ರೀ.ಗಳಾದ ಜೋನ್ ಪಿ. ಸಿಕೇರ (ಅಧ್ಯಕ್ಷರು), ಬಿ ಗೋಪಾಲಕೃಷ್ಣ ಕಮ್ತಿ (ಕಾರ್ಯದರ್ಶಿ), ಬಿ ಪದ್ಮನಾಭ ಪೈ (ಕೋಶಾಧಿಕಾರಿ), ಪಿ. ಲಕ್ಷ್ಮೀನಾರಾಯಣ ನಾಯಕ್, ಕೆ ಗಣಪಯ್ಯ ಸೆಟ್ಟಿ, ಕೆ ಆರ್. ಗುರುರಾವ್, ಎಚ್ ರಾಮಚಂದ್ರ ಪಾಟೀಲ್ (ಕಾರ್ಯಕಾರಿ ಮಂಡಳಿಯ ಸದಸ್ಯರು) ರವರನ್ನು ಆರಿಸಲಾಯಿತು, ತಾಲೂಕು ಕೊಂಗ್ರೆಸು ಕಮಿಟಿಯ ಕಚೇರಿಯನ್ನು ಹಾಲಿ ವರ್ಷಕ್ಕೆ ಬಾರಕೂರಿನಲ್ಲಿ ಇರಿಸಬೇಕೆಂದಾಯಿತು

ಚುನಾವಣೆ

ಜಿಲ್ಲಾ ಕೊಂಗ್ರೆಸು ಕಮಿಟಿ ಸದಸ್ಯತನವು ಬಾರಕೂರು ಸರ್ಕಲ್ ತಿರಿಗಿ ಚುನಾವಣೆಯಾಗತಕ್ಕದ್ದಾಗಿದ್ದು, ನಾಮಪತ್ರಗಳೆರಡು ಸ್ವೀಕೃತವಾಗಿರುತ್ತ, ಶ್ರೀ ಬಿ ಗೋಪಾಲಕೃಷ್ಣ ಕಮ್ತಿ ಮತ್ತು ಶ್ರೀ ಗೋಪಾಲರಾವ್ ಬಿ. ಇವರೊಳಗೆ ತಾ. ೨೫ಕ್ಕೆ ಬಾರಕೂರಿನಲ್ಲಿ ಚುನಾವಣೆಯಾಗತಕ್ಕದ್ದಿದೆ

ಬ್ರಹ್ಮಾವರ

ಉಡುಪಿ ತಾಲೂಕಿನಲ್ಲಿ ಹರಿಜನೋದ್ಧಾರ ಕಾರ್ಯ— ಉಡುಪಿ ತಾಲೂಕಿನ ಬ್ರಹ್ಮಾವರದಲ್ಲಿ ಕಳೆದ ಒಂದೂವರೆ ವರ್ಷದಿಂದ ಹರಿಜನ ಬಾಲಕರ ಶಿಕ್ಷಣಕ್ಕೆ ದುಡಿಯುತ್ತಿದ್ದ ನಾವು ಇದೇ ತಾ ೮–೬–೩೯ರಿಂದ ತಾಲೂಕು ಹರಿಜನ ಸೇವಕ ಸಂಘವನ್ನಾಗಿ ಮಾಡಿ ಇಡೀ ತಾಲೂಕಿನಲ್ಲಿ ಹರಿಜನೋದ್ಧಾರದ ಎಲ್ಲಾ ಕಾರ್ಯಕ್ರಮಗಳನ್ನು ಮುಂದೆಸತ್ತಲು, ಬಹುಕಾಲದಿಂದ ಹರಿಜನೋದ್ಧಾರದಲ್ಲಿ ನುರಿತ ಅನುಭವಸ್ಥರಾದ ಈ ಸಂಘದ ಕಾರ್ಯದರ್ಶಿ ಶ್ರೀ ಬಿ. ಅಂತಯ್ಯ ಸೆಟ್ಟಿಯವರು ತಾರೀಕು ೨೯–೬–೩೯ರಿಂದ ಉಡುಪಿ, ಮಲ್ಪೆ, ಕೆಮ್ಮಣ್ಣು, ಉದ್ಯಾವರ, ಕಟಪಾಡಿ, ಕಾಪು, ಪಡುಬಿದ್ರೆ ದಗ್ಗೆರೆ ಸ್ಥಳಗಳಲ್ಲಿ ಕೆಲಸಮಾಡಲಿರುವರು ಅಸ್ಪೃಶ್ಯತೆಯ ವಿಷಯ ಜನರು ಹೇಳುವ ಆಕ್ಷೇಪಗಳಿಗೆ ಹುರುಳಿಲ್ಲವೆಂಬುದನ್ನು ಸ್ಪಷ್ಟಪಡಿಸುವರೆ ಶಾಸ್ತ್ರಾಧಾರಯುಕ್ತವಾಗಿ ಬರೆದ "ಅಜ್ಞಾನತಿಮಿರಮಾರ್ತಾಂಡ" ಎಂಬ ಪುಸ್ತಕಗಳನ್ನು ಪ್ರಚಾರ ಮಾಡುವರು, ಸವರ್ಣ ಹಿಂದುಗಳು ಎಲ್ಲಾ ವಿಧದಿಂದಲೂ ಪ್ರೋತ್ಸಾಹಿಸಿ ಸಹಾಯ ಮಾಡಬೇಕಾಗಿ ಸಂಘದ ಅಧ್ಯಕ್ಷರಾದ ಶ್ರೀ ರಾಮನಾಗ ರುಕಳ್ ಇವರು ವಿನಂತಿಸಿಕೊಳ್ಳುತ್ತಾರೆ.

ಕಾಸರಗೋಡು

ಶ್ರೀಮತಿ ಸೀತಮ್ಮನವರು, ವಿದ್ವಾನ್–ಇಲ್ಲಿಯ ಎಲಿಮೆಂಟರಿ ಶಾಲಾ ಉಪಾಧ್ಯಾಯಿನಿಯರಲ್ಲೊಬ್ಬರಾಗಿರುವ ಶ್ರೀಮತಿ ಸೀತಮ್ಮನವರು ಕನ್ನಡ ವಿದ್ವಾನ್ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು. ಇದು ತುಂಬಾ ಸಂತೋಷಕರವಾಗಿದೆ.

ವರ್ಗಾ–ಇಲ್ಲಿನ ಬೋ ಹೈ ಹೆಡ್ ಮಾಸ್ತರರಾದ ಶ್ರೀ ರಾಮನ್ ನಂಬಿಯಾರರು ಪುತ್ತೂರಿಗೆ ವರ್ಗಾಯಿಸಲ್ಪಟ್ಟು ಅವರ ಸ್ಥಾನಕ್ಕೆ ಪುತ್ತೂರಿನಿಂದ ಶ್ರೀ ಕೃಷ್ಣರಾಯರು ಬರಲಿರುವರು.

ರಾಷ್ಟ್ರೀಯ ಸಮ್ಮೇಳನ–ನೀಲೇಶ್ವರದಲ್ಲಿ ಸಂಯುಕ್ತ ರಾಷ್ಟ್ರೀಯ ಸಮ್ಮೇಳನವು ತಾ ೧೧ರಂದು ಶ್ರೀ ಎ ಸಿ ಕಣ್ಣನ್ ನಾಯರರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ವಿಠಲ ಶೆಟ್ರು ಉದ್ಘಾಟನಾ ಸಮಾರಂಭವನ್ನು ಮಾಡಿದರು ಕೇರಳದ ಲೇಬರ್ ಮುಖಂಡರಲ್ಲೊಬ್ಬರಾದ ಶ್ರೀ ಗೋಪಾಲನವರು ರಾಷ್ಟ್ರಧ್ವಜವನ್ನೇರಿಸಿದರು

ಪುತ್ತೂರು

ಸಹಕಾರಿ ಭೂಮಿ ಅಡವಿನ ಬೇಂಕು–ಪುತ್ತೂರು ಡಿವಿಜನ್ ಸಹಕಾರಿ ಭೂಮಿ ಅಡವಿನ ಬೇಂಕಿನ ವಹಿವಾಟುಗಳ ವಿಸ್ತಾರ ವರದಿಯೊಂದು ನಮ್ಮ ಕಡೆಗೆ ಬಂದಿದೆ. ತಾ. ೨೧–೭–೩೮ರಂದು ಆರಂಭವಾದ ಈ ಬೇಂಕಿನ ಹತ್ತು ತಿಂಗಳ ಕಾರ್ಯಗಳ ವಿವರಗಳು ಇದರಲ್ಲಿ ಕೊಡಲ್ಪಟ್ಟಿದೆ ಈ ಬೇಂಕಿನ ವ್ಯವಹಾರ ಕ್ಷೇತ್ರದಲ್ಲಿ ಪುತ್ತೂರು ಮತ್ತು ಕಾಸರಗೋಡ ತಾಲೂಕಿನ ೨೯೯ ಗ್ರಾಮಗಳು ಸೇರಿವೆ ಒಟ್ಟು ೧೧೮ ಮೆಂಬರರಿದ್ದ ೨೬೯೫ ರೂಪಾಯಿ ಪಾಲು ಬಂಡವಾಳ ತೆತ್ತಿರುವರು, ಆದರೆ ಈ ಎರಡು ತಾಲೂಕುಗಳ ಜನಸಂಖ್ಯೆಯ ಲೆಕ್ಕದಲ್ಲಿ ಈ ಸದಸ್ಯತನವು ಅತ್ಯಲ್ಪವಾಗಿದೆ. ಈ ಸಂಸ್ಥೆಯು ಕೆಲಸವನ್ನು ವಿಸ್ತರಿಸುತ್ತಾ ಪ್ರಚಾರ ಸಹಕಾರತತ್ವದಿಂದ ಒಕ್ಕಲಿಗರ ಏಳಿಗೆಗೆ ಸಹಕಾರಿಯಾಗಲೆಂದು ಹಾರೈಸುತ್ತೇವೆ.

ಕುಂದಾಪುರ

ನೇಮಕ–ಈಚೆಗೆ ಸ್ವಂತ ಆಸ್ಪತ್ರೆಯನ್ನು ತೆರೆದಿರುವ ಡಾ ವೈ. ಆರ್ ಶೆಟ್ಟಿ ಎಂ ಬಿ. ಬಿ. ಎಸ್, ಇವರು ಸ್ಥಳೀಯ ಗವರ್ನಮೆಂಟ್ ಆಸ್ಪತ್ರೆಯ ಗೌರವ ಡಾಕ್ಟರರಾಗಿ ನೇಮಕವಾಗಿರುವರೆಂದು ತಿಳಿಯುತ್ತದೆ

ಕರ್ನಾಟಕ

ಬೆಳಗಾವಿ–ಕನ್ನಡ ಸಾಹಿತ್ಯ ಸಮ್ಮೇಳನದ ಅಧಿವೇಶನವು ಈ ವರ್ಷ ಬೆಳಗಾವಿಯಲ್ಲಿ ಕೂಡುವುದಾಗಿ ನಿರ್ಣಯವಾಗಿದೆ ಕಾಂಗ್ರೆಸು ಅಧಿವೇಶನವು ದಶಂಬರದಲ್ಲಿ ಈ ಸಲ ನೆರವೇರುವುದರಿಂದ ಪರಿಷತ್ತು ಅಕ್ಟೋಬರಿನಲ್ಲಿ ಸೇರುವುದು ಶ್ರೀಗಳಾದ ನರಸಿಂಗ ರಾವ್ ಜೋಶಿ, ಪಿ ಪಿ. ಕಿತ್ತೂರ ಶ್ರೀ. ನಂದೀಮಠ ಇವರು ಕಾರ್ಯಗಳನ್ನು ಚಟುವಟಿಕೆಯಿಂದ ನಡೆಸುತ್ತಿದ್ದಾರೆ

ವಿಜಾಪುರ–ಮುಂಬಯಿ ಪ್ರಧಾನರಾದ ಮಾನ್ಯ ಬಿ ಜಿ. ಖೇರರು ಜುಲಾಯಿ ಪ್ರಥಮ ವಾರದಲ್ಲಿ ಆಗಮಿಸಲಿರುವರು, ಅನೇಕ ಪ್ರಾಯೋಗ್ಯ, ವಿದ್ಯಾಭ್ಯಾಸದ ಕೇಂದ್ರಗಳನ್ನು ತೆರೆಯಲಿರುವರು

ಬೆಂಗಳೂರು–ಆಸ್ಪತ್ರೆಯ ಶಿಲಾ ಪ್ರತಿಷ್ಠೆ–ನೂಂಡ್ಯದ ಜನರಲ್ ಆಸ್ಪತ್ರೆಯ ಶಿಲಾಪ್ರತಿಷ್ಠೆಯನ್ನು ದಿವಾನರಾದ ಸರ್ ಮಿರ್ಜಾರವರು ತಾ ೧೧ರಂದು ನೆರವೇರಿಸಿದರು,

ಜಿಲ್ಲಾ ಸಮ್ಮೇಳನ–ಬೆಂಗಳೂರು ಜಿಲ್ಲಾ ಸಮ್ಮೇಳನವು ಕಳೆದ ವಾರ ಸರ್ ಪುಟ್ಟಣ್ಣ ಶೆಟ್ಟಿ ನಗರ ಭವನದಲ್ಲಿ ಮಿ ಎಸ್. ಅಬ್ದುಲ್ ವಾಜಿದರ ಅಧ್ಯಕ್ಷತೆಯಿಂದ ನಡೆಯಿತು

ದಿವಂಗತ ಡಾ। ಜವ್ವಿ ವೆಂಕಟರಮಣಯ್ಯ

ಈ ಮಹನೀಯರು ತಮ್ಮ ಅಮೂಲ್ಯ ಔಷಧಗಳಿಂದಲಾಗಿ ಬಹಳವಾಗಿ ಪ್ರಸಿದ್ಧರಾದವರು ಮಕ್ಕಳ ಯಕೃತ್ ಮತ್ತು ಪ್ಲೀಹ ರೋಗಗಳಿಗೆ ಇವರ ಔಷಧವು ರಾಮಬಾಣದಂತಿದ್ದು ಪ್ರತಿಯೊಂದು ಮನೆಯಲ್ಲಿ ಡಾ ವೆಂಕಟರಮಣಯ್ಯನವರ ಹೆಸರು ಮನೆಮಾತಾಗಿದೆ ಇಂತಹ ಡಾಕ್ಟರರು ಕಳೆದ ಒಂದು ತಿಂಗಳಿಂದ ಬಹುಮೂತ್ರಸಂಬಂಧವಾಗಿ ರಾಜಕುರುವಿನಿಂದ ಸಂಕಷ್ಟ ಪಡುತ್ತಿದ್ದು ತಾ ೧೪ರಂದು ದೈವಾಧೀನರಾದರೆಂದು ತಿಳಿದು ತುಂಬಾ ವಿಷಾದಿಸುತ್ತೇವೆ

ಇವರು ೧೮೭೭ರಲ್ಲಿ ಜನ್ಮವೆತ್ತಿದರು ವಿಜಯನಗರದ ಸುಪ್ರಸಿದ್ಧ ಮಾಧ್ವ ಮನೆತನವೊಂದಕ್ಕೆ ಸೇರಿದವರು, ಕೀರ್ತಿಶಾಲಿಗಳಾದ ಕವಿರಾಜ ವೇದಲಮಣಿ ಸೂರ್ಯನಾರಾಯಣ ಶಾಸ್ತ್ರಿಗಳ ಶಿಷ್ಯರು, ವಿದ್ಯಾಭ್ಯಾಸಾಂಗ ಮುಗಿಸಿ ೧೯೨೯ರಲ್ಲಿ ಮದ್ರಾಸಿನಲ್ಲಿ ಉದ್ಯೋಗವನ್ನು ಆರಂಭಿಸಿ ಕಳೆದ ೧೦ ವರ್ಷಗಳಲ್ಲಿ ಅವರು ಬಹಳಜನಪ್ರಿಯರಾಗಿಮೆರೆದರು. ದಯಾಪರರು ಮತ್ತು ವಿನಯಶೀಲರು ಮಕ್ಕಳ ಹಿತಚಿಂತನೆಯುಳ್ಳವರಾದ್ದು ತಮ್ಮ ಅಮೂಲ್ಯವಾದ ಔಷಧದಿಂದ ಸಾವಿರಾರು ಮಕ್ಕಳಿಗೆ ಜೀವದಾನ ಮಾಡಿದ ಪುಣ್ಯಾತ್ಮರು ಇವರ ಮರಣದಿಂದ ವೈದ್ಯಕೀಯ ಪ್ರಪಂಚಕ್ಕೆ ತುಂಬಾ ನಷ್ಟವಾಗಿದೆ

ಇವರ ಪತ್ನಿ, ಮೂರು ಮಂದಿ ಗಂಡುಮಕ್ಕಳು, ಒಬ್ಬ ಪುತ್ರಿ ಇತರ ಅನೇಕ ಬಳಗದವರೊಡನೆ ನಾವು ಸಹ ಸಂತಾಪವನ್ನು ಸೂಚಿಸುವುದು ಮಾತ್ರವಲ್ಲದೆ ಅವರ ಆತ್ಮಕ್ಕೆ ಶಾಂತಿಯನ್ನೂ ಹಾರೈಸುತ್ತೇವೆ

ಗೋಲಿವರ್ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆ!

ಪಕ್ಷಗಳ ಕಾದಾಟದಿಂದ ಮುಸ್ಲಿಮನ ಮರಣ!

ಪೇಶಾವರದಲ್ಲಿ ಸುಭಾಷರಿಗೆ ಸತ್ಕಾರವಿಲ್ಲ

೬೦೦ ಮಂದಿ ನಿರಾಶ್ರಿತರಾದರು!

ಗಾಂಧಿಜಿಯವರ ಅನುಯಾಯಿಗೆ ವಿದ್ಯೆಯಿಲ್ಲ

ಗೋಲಿವರ್ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆ

ರಾಜಕೀಯ ಸುಧಾರಣೆಯ ಯೋಜನೆಯನ್ನು ಪ್ರಕಟಿಸಿ ಗೋಲಿವರ್ ಸಂಸ್ಥಾನದ ಮಹಾರಾಜರು ತಮ್ಮ ಪ್ರಜೆಗಳ ಹಿತಸಾಧನೆಗಾಗಿ ತಾನು ವರ್ತಿಸುವೆನೆಂದೂ, ಇಂದು ಜಾಗೃತಿಯನ್ನು ಹೊಂದಿದ ಪ್ರಪಂಚದ ರಾಜಕೀಯ ಸ್ಥಿತಿಯಲ್ಲಿ ತನ್ನ ಪ್ರಜೆಗಳೂ ಕೂಡಾ ಯೋಗ್ಯರೀತಿಯಲ್ಲಿ ಸುಧಾರಣೆ ಹೊಂದುವುದು ನ್ಯಾಯವೆಂದೂ ಅಭಿಪ್ರಾಯ ಪಡುತ್ತಾರೆ

"ಪಕ್ಷ"ಗಳ ಕಾದಾಟದಲ್ಲಿ ಮುಸ್ಲಿಮನೊಬ್ಬನನ್ನು ಕೊಂದರು

ಬಂಗಾಳ ಎಸೆಂಬ್ಲಿಯ ಚುನಾವಣೆಯಲ್ಲಿ ತಾ. ೭ರಂದು ಮುಸ್ಲಿಂಲೀಗು ಮತ್ತು ಸ್ವತಂತ್ರ ಪಕ್ಷದ ಉಮೇದ್ವಾರರು ಸ್ಪರ್ಧಿಸಿರಲು ಚುನಾವಣೆಯು ಮುಗಿದು ಹಿಂತೆರಳುವಾಗ ಪಕ್ಷದ ಪರವಾಗಿ ಮಾತನಾಡುತ್ತಾ ಜಗಳವು ಬೆಳೆದು ಒಬ್ಬ ಮುಸ್ಲಿಮನನ್ನು ಗುಂಡಿಕ್ಕಿ ಕೊಂದಿರುವರಾಗಿ ತಿಳಿಯುತ್ತದೆ.

ಪಾರ್ಸಿಗಳಿಗೆ ಮಂತ್ರಿಗಳ ಎಚ್ಚರಿಕೆ

ಮದ್ಯಪಾನ ನಿಷೇಧದ ಕುರಿತು ವಿರೋಧವನ್ನು ತೋರ್ಪಡಿಸುವ ಪಾರ್ಸಿಗಳನ್ನು ಸಂಬೋಧಿಸಿ ಬೊಂಬಾಯಿ ಸರಕಾರ ಗೃಹಮಂತ್ರಿಗಳಾದ ಶ್ರೀ. ಕೆ ಎಮ್. ಮುನ್ಷಿಯವರು ಹೀಗೆನ್ನುತ್ತಾರೆ ಇಂದು ಮದ್ಯಪಾನ ನಿಷೇಧಕ್ಕೆ ವಿರುದ್ಧ ಪ್ರಚಾರ ಮಾಡಿ ಸರಕಾರವನ್ನು ಅಂದರೆ ಕಾಂಗ್ರೆಸು ಮಂತ್ರಿಮಂಡಳವನ್ನು ಹದಗೊಳಿಸುವ ಅಭಿಲಾಷೆಯ. ಜನರು ತಮ್ಮ ಜಾತಿಯಲ್ಲಿ ಜಗಳವನ್ನು ಹುಟ್ಟಿಸುವರೆಂದು ತಿಳಿದಿರಲಿ. ನೀವಿಂದು ಕಾಂಗ್ರೆಸು ಸರಕಾರವನ್ನು ಬಹು ಲಘುವಾಗಿ ತಿಳಿದರಬೇಕು ಆದರೆ ನೀವು ತಿಳಿದಂತೆ ಇಂತಹ ನ್ಯಾಯವಾದ ಸುಧಾರಣೆಯನ್ನು ಕೈಕೊಂಡದ್ದರಿಂದ ಬೊಂಬಾಯಿಯಂತಹ ಸ್ಥಾನದಲ್ಲಿ ಯಾವ 'ಜನಪ್ರಿಯವಾದ ಆಡಳಿತೆಯೂ ಜನರಲ್ಲಿ ಅಪ್ರಿಯವಾಗಿ ಆಗಲಿಕ್ಕಿಲ್ಲ."

ಅಖಿಲಭಾರತ ಹೊಮ್ಯೊಪೆಥಿಕ್ ಸಮ್ಮೇಳನ

ಅಖಿಲಭಾರತ ಹೊಮ್ಯೊಪೆಥಿಕ್ ಸಮ್ಮೇಳನವು ಅಕ್ಟೋಬರ ತಿಂಗಳಲ್ಲಿ ಡಾ. ವಿಶ್ವನಾಥ ಮುಖರ್ಜಿ ಎಮ್ ಎಲ್. ಎ ಇವರ ಅಧ್ಯಕ್ಷತೆಯಿಂದ ಆಗ್ರಾದಲ್ಲಿ ಸೇರುವುದು

ಶೀಯಾ-ಸುನ್ನೀ ಜಗಳ

ಲಕ್ನೋದಲ್ಲಿ ಸುರುವಾದ ಶೀಯಾ ಸುನ್ನಿಗಳ ಜಗಳವು ನಿಲ್ಲಲಿಲ್ಲ. ಪಂಜಾಬಿನಿಂದ ೬೦೦ ಮಂದಿ ಶೀಯಾ ಸ್ವಯಂಸೇವಕರು ಆಂದೋಲನದಲ್ಲಿ ಭಾಗವಹಿಸಲು ಬಂದಿರುವರು. ಶೀಯಾ ಮುಖಂಡರಾದ ಸೈಯ್ಯದ್ ಅಸಾಗಾರ್ ಹಸನರವರು ಮೌಲಾನಾ ಅಜಾದರನ್ನು ಕಂಡು ಈ ಜಗಳದ ಇತ್ಯರ್ಥದ ಕುರಿತು ಸಂಭಾಷಣೆ ನಡೆಸಿರುವರು

ಮಂತ್ರಿಗಳಲ್ಲಿ ಜಮೀನ್ದಾರರ ದೂರು!

ಮುನಾಗಲವೆಂಬಲ್ಲಿ ಕಿಸಾನ್ ಸಂಘದವರು ನಡೆಸುತ್ತಿರುವ ಚಳವಳಿವು ವ್ಯರ್ಥವಾಗಿ ಉಪದ್ರವಕಾರಿಯಾದುದೆಂದು ಅಲ್ಲಿನ ಜಮೀನ್ದಾರರು ಪ್ರಧಾನ ಮಂತ್ರಿಗಳಿಗೂ ದೂರು ಕಳುಹಿಸಿರುವರಾಗಿ ತಿಳಿಯುತ್ತದೆ.

ಮದ್ರಾಸು ಯುನಿವರ್ಸಿಟಿಯ ಪದವೀದಾನ ಸಮಾರಂಭ

ಮದ್ರಾಸು ಯುನಿವರ್ಸಿಟಿಯ ಪದವೀದಾನ ಸಮಾರಂಭವು ಬರುವ ಆಗಸ್ಟ ೪ರಂದು ಜರಗುವುದು. ವಿದ್ಯಾಮಂತ್ರಿಗಳಾದ ಮಾನ್ಯ ಸಿ. ಜೆ ವಾರ್ಕಿಯವರು ಸ್ನಾತಕರಿಗೆ ಉಪದೇಶ ಭಾಷಣಮಾಡುವರು.

ಶೋರ್ಟ್ ಹೇಂಡ್ ಪರೀಕ್ಷೆ

ಲೋವರ್ ಮತ್ತು ಹೈಯರ್ ಗ್ರೇಡುಗಳಿಗೆ ಶೋರ್ಟ್ ಹೇಂಡಿನಲ್ಲಿ ಗವರ್ನಮೆಂಟ್ ಟೆಕ್ನಿಕಲ್ ಪರೀಕ್ಷೆಯು ಆರು ತಿಂಗಳಿಗೊಮ್ಮೆ ವರ್ಷಕ್ಕೆ ಎರಡು ಸಲ ಆಗುವುದು. ಒಂದು ಎಪ್ರಿಲಿನಲ್ಲಿಯೂ ಇನ್ನೊಂದು ಅಕ್ಟೋಬರದಲ್ಲಿಯೂ ಆಗುವುದು. ಈ ಕ್ರಮದಂತೆ ಮೊದಲನೆಯ ಪರೀಕ್ಷೆಯು ಬರುವ ಅಕ್ಟೋಬರದಲ್ಲಿ ಆಗುತ್ತದೆ.

ಹಿಂದೂಸ್ಥಾನೀ ವಿರುದ್ಧ ಚಳವಳ

ಶ್ರೀಮತಿ ಜಿ. ಎಮ್ ತ್ರಿಪುರಮ್ಮಾಳ್ ಪ್ರಧಾನ ಮಂತ್ರಿಗಳಾದ ಸಿ ರಾಜಗೋಪಾಲಾಚಾರ್ಯರಿಗೆ ಬರುವ ತಾ ೧೯ರಂದು ತಿಂಗಿ ಹಿಂದೂಸ್ಥಾನೀ ವಿರುದ್ಧ ಚಳವಳವನ್ನು ಹೂಡುವುದಾಗಿ ತಿಳಿಸಿರುತ್ತಾರೆ

ಹಿಂದೂದೇಶಕ್ಕೆ ಓಡಿಬಂದ ಯೆಹೂದ್ಯರು

ಕಳೆದ ಆರು ತಿಂಗಳಿಂದ ೫೦೦ ಮಂದಿ ಯೆಹೂದ್ಯರು ಹಿಂದೂದೇಶಕ್ಕೆ ಬಂದು ನೆಲಸಿರುವರು. ಇವರು ಇಲ್ಲಿನ ಸಂಪ್ರದಾಯ ಪರಿಸ್ಥಿತಿಗಳನ್ನು ಕಲಿತುಕೊಂಡು ಇಲ್ಲಿಯೇ ನೆಲೆನಿಲ್ಲುವ ಆಲೋಚನೆಯುಳ್ಳವರಾಗಿದ್ದಾರೆ

ಇವರಲ್ಲಿ ಅನೇಕರು ಬಟ್ಟೆಯ ಉದ್ಯೋಗದಲ್ಲಿ ನಿರತರಾಗಿದ್ದಾರೆ ಕೆಲವರು ಎಣ್ಣೆ ಮತ್ತು ತರಕಾರೀ ತೈಲಗಳ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿದ್ದಾರೆ ಇನ್ನು ಕೆಲವು ಹುಡುಗಿಯರು ದಾದಿಯರಾಗಿ ಉದ್ಯೋಗ ಮಾಡುತ್ತಿದ್ದಾರೆ ಅವರಲ್ಲಿ ಹಲವರು ನಿಷ್ಣಾತರಾದ ಡಾಕ್ಟರರೂ ಇದ್ದಾರೆ. ಕೆಲವು ಕಲಾವಂತರು ಸಂಗೀತ ಕುಶಲರು ಅಖಿಲಭಾರತ ರೇಡಿಯೋದಲ್ಲಿ ತಮ್ಮ ಕಲಾಪ್ರದರ್ಶನವನ್ನು ಮಾಡಿರುತ್ತಾರೆ.

ಅವರಲ್ಲಿ ಯಾರು ಸಾಕಷ್ಟು ಮೂಲ ಧನವುಳ್ಳವರಾಗಿದ್ದಾರೆಯೋ, ಅಥವಾ ಯಾರು ಈ ದೇಶದಲ್ಲಿ ಸುಲಭವಾಗಿ ಉದ್ಯೋಗ ಮಾಡಬಲ್ಲರೋ ಅಂತಹವರನ್ನೇ ಹಿಂದೂದೇಶಕ್ಕೆ ಬರುವಂತೆ ಸಮ್ಮತಿ ಕೊಡಲಾಗಿದೆ ಹಾಗಲ್ಲದೆ ಬಂದ ಯೆಹೂದ್ಯರು ಈ ದೇಶಕ್ಕೆ ಉಪದ್ರವಕಾರಿಗಳಾಗಿ ಆಗದಂತೆ ಸರಕಾರವು ನೋಡುತ್ತದೆ

ಬೊಂಬಾಯಿಯಲ್ಲಿ ಸ್ಥಾಪಿತವಾದ ಯೆಹೂದ್ಯ ಸಹಾಯಕ ಸಂಘವು ಬೊಂಬಾಯಿ, ಕಲ್ಕತ್ತ ಪೂನಾ ಮೊದಲಾದೆಡೆಗಳಲ್ಲಿ ಕೋಸ್ಟಂಟುಗಳನ್ನು ಸ್ಥಾಪಿಸಿರುತ್ತದೆ ಲುದಿಯಾನಾದ ಸಿಲ್ಕು ಫರ್ಮಿನಲ್ಲಿ ಕೆಲವರು ಉದ್ಯೋಗಕ್ಕೆ ಸೇರಿರುತ್ತಾರೆ. ಈ ಸಂಘವು ಇಂಗ್ಲಿಷು ಗೊತ್ತಿಲ್ಲದ ಯೆಹೂದ್ಯರಿಗೆ ಆ ಭಾಷೆಯನ್ನು ಕಲಿಸುತ್ತಾ ಉದ್ಯೋಗವನ್ನು ಒದಗಿಸಿಕೊಡುತ್ತಾ ಬಹಳವಾಗಿ ಸಹಾಯ ಮಾಡುತ್ತಿದೆ

ರಾಷ್ಟ್ರೀಯ ಯೋಜನಾ ಸಮಿತಿ.

ಬೊಂಬಾಯಿಯಲ್ಲಿ ಸೇರಿದ ರಾಷ್ಟ್ರೀಯ ಯೋಜನಾಸಮಿತಿಯು, ಬೇರೆ ಬೇರೆ ಉದ್ಯೋಗಗಳ ಅಭಿವೃದ್ಧಿ, ಗ್ರಾಮ ಉದ್ಯೋಗದ ಪುನರುದ್ಧಾರ, ಇವೇ ಮೂಲಸೂತ್ರವಾಗಿ ಎಲ್ಲಾ ಸಮಿತಿಗಳೂ ಅನುಸರಿಸಬಹುದಾದಂತೆ ಒಂದು ಹೇಳಿಕೆಯನ್ನು ತಯಾರಿಸಿರುತ್ತದೆ.

"ಬೇರೆ ಬೇರೆ ಉಪಸಮಿತಿಗಳ ಕಾರ್ಯಗಳ ಕುರಿತು ಪಂಡಿತ ನೆಹರುಗಳ ಅಧ್ಯಕ್ಷತೆಯಿಂದ ಸೇರಿದ ಸಭೆಯು ವಿಚಾರಮಾಡಿತು ಸಾರ್ವಜನಿಕ ಆರೋಗ್ಯ, ಜೀವವಿಮಾ ಮೊದಲಾದ ಗ್ರಾಮದ ಜನರ ಉದ್ಧಾರದ ಕೆಲಸವು ಮಾಡಲ್ಪಡಬೇಕಾಗಿ ನಿಶ್ಚಯಿಸಲಾಗಿದೆ

ಶ್ರೀ ಬೋಸರನ್ನು ಪೇಶಾವರ ಕಾಂಗ್ರೆಸಿನವರು ಸತ್ಕರಿಸಲಿಲ್ಲ.

ಶ್ರೀ ಸುಭಾಷಚಂದ್ರ ಬೋಸರು ಪೇಶಾವರದಲ್ಲಿ ಪ್ರಯಾಣಮಾಡುತಿದ್ದಾರೆ. ಆ ಬಗ್ಗೆ ಸಾರ್ವಜನಿಕ ಸಭೆಯೊಂದನ್ನು ಕರೆಯಲು ಕಂಟೋನ್ಮೆಂಟ್ ಬೋರ್ಡಿನ ಕಾಂಗ್ರೆಸ್ ಪ್ರೆಸಿಡೆಂಟರು ಸಮ್ಮತಿ ಕೊಡಲಿಲ್ಲವೆಂದು ತಿಳಿಯುತ್ತದೆ. ಪೇಶಾವರ ನಗರ ಕಾಂಗ್ರೆಸು ಸುಭಾಷಚಂದ್ರಬೋಸರಿಗೆ ಯಾವ ತರದ ಸ್ವಾಗತಸತ್ಕಾರವನ್ನು ಕೊಡುವುದಿಲ್ಲವಾಗಿಯೂ ತಿಳಿದಿದೆ

ಗಡಿನಾಡಿನಿಂದ ಮಿಸ್ ರಾಬಿನ್ಸ್ ಹಿಂತೆರಳಿದರು

ಗಡಿನಾಡಿನಲ್ಲಿ ಚರಕಾ ಮತ್ತು ಖಾದಿ ಪ್ರಚಾರದಲ್ಲಿ ನಿರತರಾಗಿದ್ದ ಶ್ರೀಮತಿ ಮಿಸ್ ರಾಬಿನ್ಸಳು ಅಲ್ಲಿನ ಹವೆಯು ಆರೋಗ್ಯಕ್ಕೆ ಸರಿಬೀಳುವುದಿಲ್ಲವಾಗಿ ಅಲ್ಲಿಂದ ನವ ದೆಹಲಿಗೆ ತೆರಳಿರುವಳು

ಹೊಸ ಉದ್ಯೋಗಗಳನ್ನು ಸುರುಮಾಡಲು ಸರಕಾರದ ಸಹಾಯ

ಸಂಯುಕ್ತ ಪ್ರಾಂತ ಸರಕಾರವು ಹದಿನಾರು ಜನ ಯುವಕರಿಗೆ ಹೊಸ ಉದ್ಯಮಗಳನ್ನು ಆರಂಭಿಸಲು ೯,೩೩೫ ರೂಪಾಯಿಗಳ ಸಹಾಯದ್ರವ್ಯವನ್ನು ಕೊಟ್ಟಿರುವುದಾಗಿ ತಿಳಿದು ಬರುತ್ತದೆ. ಆ ಉದ್ಯೋಗಗಳೆಂದರೆ ಮಂದ ಹೈಗಾರಿಕೆ, ಬಣ್ಣ ಹಾಕುವಿಕೆ, ಪ್ರಿಂಟಿಂಗ್, ಚಳವಳದ ಕೆಲಸ, ಇವೇ ಮೊದಲಾದವು

ಸೇನಾಪತಿ ಬಾಪಟರವರ 'ಜಲಸಮಾಧಿ'

ಮರಾಠದ ಮುಖಂಡರುಗಳಿಂದ ಸೇನಾಪತಿ ಬಾಪಟರವರು ಸ್ವರಾಜ್ಯಸಂಪಾದನೆಗಾಗಿ ಹೊಸತೊಂದು ಉಪಾಯವನ್ನು ಕೈಕೊಳ್ಳುವರಾಗಿ ತಿಳಿಯುತ್ತದೆ ಸ್ವರಾಜ್ಯಕ್ಕಾಗಿ ತನ್ನ ಜೀವನವನ್ನು ಜಲಸಮಾಧಿಯಲ್ಲಿ ಅರ್ಪಿಸುವೆನೆಂದೇ ಅವರ ಹೇಳಿಕೆ ಇದಕ್ಕೆ ಮಹಾತ್ಮಾ ಗಾಂಧಿಯವರು ಅನಾವ ತಿಸಿರುವರಂತೆ ಸೇನಾಪತಿ ಬಾಪಟರು ಈ ಕುರಿತು ಟೀಕೆ ಮಾಡಿದವರಿಗೆ ಹೀಗೆಂದು ಉದಾಹರಣೆ ಕೊಡುತ್ತಾರೆ ೧೯೩೭ನೇ ಆಗೋಸ್ತು ೭ರಂದು ನಾನು ಮಹಾತ್ಮಾಜಿಯವರನ್ನು ಸಂದರ್ಶಿಸಿದಂದು ನಾವು ಈ ವಿಷಯದಲ್ಲಿ ಅನ್ಯೋನ್ಯ ಸಂಭಾಷಣೆ ನಡೆಸಿದೆವು ಅವರು ಕೂಡಾ ದೇಶದ ಐಕ್ಯಸಾಧನೆಗಾಗಿ ತಾನು ನಿಷ್ಪ್ರಯೋಜನವಾಗಿ ಭಾಷಣಗಳನ್ನು ಲೇಖನಗಳನ್ನು ಬರೆದರೂ ಅದರಿಂದ ಏನೂ ಪರಿಣಾಮವಾಗಲಿಲ್ಲವೆಂದೂ, ಇದರಿಂದಾಗಿ ತಾನು ತನ್ನ ಜೀವಾರ್ಪಣ ಮಾಡುವ ಬಗ್ಗೆ ನಿಶ್ಚಯಿಸಿರುವುದಾಗಿಯೂ ಹೇಳಿದರಂತೆ! -ಅಂತೂ ದೇಶಕ್ಕಾಗಿ ಜೀವಾರ್ಪಣೆ ಮಾಡುವ ಬಾಪಟರವರ ಕಾರ್ಯವು ನೀರಲ್ಲಿ ಹೋಗಿ ಮುಳುಗಿ ಸಾಯುವುದು

ಗಾಂಧಿಜಿಯವರ ಅನುಯಾಯಿಗೆ ಶಾಲೆಗೆ ಪ್ರವೇಶವಿಲ್ಲ

ಪೆರೋಜ್‌ಪುರ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರು ಒಬ್ಬ ವಿದ್ಯಾರ್ಥಿಗೆ ಶಾಲೆಗೆ ಪ್ರವೇಶ ಕೊಡಲಿಲ್ಲ. ಆತನ ಮೇಲಿನ ತಪ್ಪೆಯೇನೆಂದರೆ-ಸ್ವಾತಂತ್ರ್ಯ ದಿನದಂದು ಅವನು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದುದು. ಮುಖ್ಯೋಪಾಧ್ಯಾಯರು ಅವನನ್ನು ಕುರಿತು "ನೀನು ಗಾಂಧಿಜಿಯವರ ಅನುಯಾಯಿ, ನಿನಗೆ ನಾನು ಶಾಲೆಯಲ್ಲಿ ಪ್ರವೇಶ ಕೊಡಲಾರೆ" ಎಂದು ಸ್ಪಷ್ಟ ಹೇಳಿದರಂತೆ! ಮುಖ್ಯೋಪಾಧ್ಯಾಯರು ಮನಶ್ಶಾಸ್ತ್ರವನ್ನು ಇನ್ನು ಸ್ವಲ್ಪ ಕಲಿತರೆ ಚೆನ್ನಾಗಿತ್ತು.

೬೦೦ ಮಂದಿ ಮನೆಯಿಲ್ಲದವರಾದರು

ಕುಡಪ್ಪದಲ್ಲಿ ಪ್ರೊದ್ದತ್ತೂರು ತಾಲೂಕಿನಲ್ಲಿ ಹಲವು ಮನೆಗಳು ಬೆಂಕಿಗೆ ಆಹುತಿಯಾಗಿ ೬೦೦ ಮಂದಿ ಹಳ್ಳಿಗರು ಮನೆಗಳಿಲ್ಲದೆ ಅನಾಥರಾಗಿದ್ದಾರೆ ಇವರು ೫ ಮೈಲುಗಳ ದೂರದಿಂದ ಕಲೆಕ್ಟರರಲ್ಲಿ ಬಂದು ತಮ್ಮ ಸಂಕಷ್ಟವನ್ನು ಬಿನ್ನಯಿಸಿಕೊಂಡರು ಬೆಂಕಿಯು ಮೊದಲು ಬಂದು ಹರಿಜನರ ಮನೆಯಲ್ಲಿ ಎದ್ದು ಹಲವು ಮನೆಗಳನ್ನು ಸುಟ್ಟು ಭಸ್ಮ ಮಾಡಿತು. ರೂ ೩೦,೦೦೦ಗಳ ಮಟ್ಟಿಗೆ ನಷ್ಟವಾದೀತೆಂದು ತಿಳಿದಿದೆ. ೧೦೦ ಕುಟುಂಬಗಳಿಗಿಂತ ಹೆಚ್ಚಿನವರು ನಿರಾಶ್ರಿತರಾಗಿದ್ದಾರೆ.

ಹರಿಜನೋದ್ಧಾರಕ್ಕೆ ಮಹಿಳೆಯವರ ಸೇವೆ

ದಕ್ಷಿಣ ಹಿಂದೂಸ್ಥಾನದಲ್ಲಿ ಹರಿಜನರನ್ನು ದೇವಾಲಯ ಪ್ರವೇಶ ಮಾಡಿಸುವ ಪುಣ್ಯಕಾರ್ಯದ ಸಲುವಾಗಿ ತಿರುಗಾಟ ಮಾಡುತ್ತಿರುವ ಅಖಿಲಭಾರತ ಹರಿಜನ ಸೇವಾಸಂಘದ ಉಪಾಧ್ಯಕ್ಷೆಯರಾದ ಶ್ರೀಮತಿ ರಮೇಶ್ವರಿ ನೆಹರೂಗಳವರು ಮಧುರೆಯಲ್ಲಿ ಒಂದು ಸಭೆಯಲ್ಲಿ ಮಾತನಾಡುತ್ತಾ ಯಾವುದೇ ಚಳವಳವಾದರೂ ಅದಕ್ಕೆ ಸ್ತ್ರೀಯರು ತಮ್ಮ ಸಂಪೂರ್ಣ ಸಹಾನುಭೂತಿಯನ್ನು ಕೊಡದಿದ್ದಲ್ಲಿ ಜಯಶೀಲವಾಗಲು ಸಾಧ್ಯವಿಲ್ಲವೆಂದು ಹೇಳಿದರು ಕಾಂಗ್ರೆಸಿನ ಎಲ್ಲಾ ಕೆಲಸಗಳೂ ಇಷ್ಟು ಪರಿಣಾಮಕಾರಿಯಾದ ರೂಪದಲ್ಲಿ ಹರಡಿದ್ದು ಅವರ ಸಹಾನುಭೂತಿಯಿಂದ ಹರಿಜನೋದ್ಧಾರ ಕೆಲಸಗಳಲ್ಲಿಯೂ ಅವರು ತಮ್ಮ ಸಂಪೂರ್ಣ ಬೆಂಬಲವನ್ನು ಕೊಡಬೇಕು ಹೀಗೆ ಮಾಡುವದರಿಂದ ಸ್ತ್ರೀಯರು ತಮ್ಮ ಧರ್ಮವನ್ನೇ ಪಾಲನೆ ಮಾಡಿದಂತಾಗುತ್ತದೆ" ಎಂದು ಹೇಳಿದರು

ಪೊಲಿಟಿಕಲ್ ಏಜೆಂಟರ ಮರಣ

ಗಿಲಜಿಟಿಯ ಪೊಲಿಟಿಕಲ್ ಏಜೆಂಟರಾದ ಮೇಜರ್ ಗಾಲ್‌ಬ್ರೈತರೆಂಬವರು ತಮ್ಮ ಸಹಧರ್ಮಿಣಿಯರ ಸಹಿತವಾಗಿ ಹೊಳೆಯೊಂದನ್ನು ದಾಟುವಾಗ ಮುಳುಗಿ ಸತ್ತುಹೋದರೆಂದು ತಿಳಿಯುತ್ತದೆ

ಪಾಸೋ ಫೈಲೋ?

ಮುಂಬಯಿಯಲ್ಲಿ ಎರಡು ವಿದ್ಯಾರ್ಥಿಗಳ ಕುರಿತು ಯುನಿವರ್ಸಿಟಿಯೇ ಸಂಶಯಪಟ್ಟಿರುತ್ತದೆ ಮೆಟ್ರಿಕ್ ಪರೀಕ್ಷೆಯಲ್ಲಿ ಫೈಲಾದ ಇಬ್ಬರು ಹುಡುಗರ ಹೆಸರು ಪಾಸು ಲಿಸ್ಟಿನಲ್ಲಿ ಬಂತು ಅದರಂತೆ ಅವರಿಬ್ಬರೂ ಕಾಲೇಜಿಗೆ ಸೇರಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು ಕಾಲೇಜಿನ ಅಧಿಕಾರಿಗಳಿಗೆ ಆ ವಿಷಯವು ತಿಳಿದುಬಂತು ಅಷ್ಟರಲ್ಲಿ ಅವರಲಿಬ್ಬನು ಪ್ರೈವೇಟಾಗಿ ಕುಳಿತು ಪಾಸಾದುದರಿಂದ ಆತನನ್ನು ಮುಂದುವರಿಸಲು ಬಿಟ್ಟಿರುವರಾಗಿಯೂ, ಇನ್ನೊಬ್ಬನನ್ನು ಮನೆಗೆ ಹೋಗಲು ಬಿಟ್ಟಿರುವರಾಗಿಯೂ ತಿಳಿಯುತ್ತದೆ.

ಲೇಬರ್ ಮುಖಂಡರಿಗೆ ಶಿಕ್ಷೆ

ಲಿಟಾಘರದ ಮಿಲ್ಲಿನ ಮುಷ್ಕರದಲ್ಲಿ ೧೪೪ನೇ ಸೆಕ್ಷನನ್ನು ಉಲ್ಲಂಘಿಸಿದ ಬಗ್ಗೆ ಬಂಗಾಳದ ಲೇಬರ್ ಮುಖಂಡರಾದ ಶ್ರೀ. ನೀಹಾರೆಂದು ದತ್ತ ಮುಜುಮುದಾರರು ೩ ತಿಂಗಳ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದಾರೆ.

ಮದ್ರಾಸು ಸರಕಾರದ ಸಾಲ

ಮದ್ರಾಸು ಸರಕಾರವು ೧೫೦ ಲಕ್ಷ ರೂಪಾಯಿಗಳ ಸಾಲವೆತ್ತುವುದು. ಇದರ ಅವಧಿ ೨೦ ವರ್ಷ. ನೇಕಡಾ ಮೂರರ ಸಲಿಯಲ್ಲಿ ಬಡ್ಡಿ ಇದನ್ನು ವಿದ್ಯುಚ್ಛಕ್ತಿ, ನೀರಾವರಿ, ಸ್ಥಳೀಯ ಸಂಸ್ಥೆ, ಕೃಷಿಕರ ಸಹಾಯಗಳ ಬಗ್ಗೆ ಹಂಚಲಾಗುವುದು. ತಾ ೨೧ರಂದು ಕೇವಲ ಒಂದೇ ದಿನ ಈ ಸಾಲ ಸಂಗ್ರಹದ ಕೆಲಸ ನಡೆಯುವುದು.

ಜಪಾನು ಬ್ರಿಟನುಗಳೊಳಗೆ ಬಿಕ್ಕಟ್ಟವು ಹೆಚ್ಚುತ್ತಿದೆ

ಜಪಾನು—ಬ್ರಿಟನುಗಳ ಘರ್ಷಣೆ

ಕಳೆದ ಎಪ್ರಿಲ್ ೯ರಂದು ಜಪಾನಿನ ಫೆಡರಲ್ ರಿಸರ್ವ್ ಬೇಂಕಿನ ಮೆನೇಜರನೂ ಹೊಸತಾಗಿ ಕಸ್ಟಮ್ಸಿನ ಸುಪರಿಂಟೆಂಡೆಂಟ್ ಆಗಿ ನಿಯುಕ್ತನಾದವನೂ ಆಗಿದ್ದ ಚೆಂಗ್ ಎಂಬವನನ್ನು ಟಿನಿಸ್ಟಿನನಲ್ಲಿರುವ ಬ್ರಿಟಿಷರ ಪ್ರಾಂತದಲ್ಲಿ ಗುಪ್ತವಧೆ ಮಾಡಿದರು. ಇದರಿಂದ ಉದ್ರೇಕಗೊಂಡ ಜಪಾನೀಯರು ಅನೇಕ ಚೈನೀಯರ ಮನೆಗಳನ್ನು ಬ್ರಿಟಿಷರ ಗೃಹಗಳನ್ನು ಹೊಕ್ಕು ಶೋಧನೆ ನಡೆಸಿದರು. ಆ ಮೇಲೆ ಜಪಾನೀಯರು ಆಂಗ್ಲೇಯರ ವಿರುದ್ಧವಾಗಿ ಒಂದೊಂದೇ ಕಾರ್ಯಕಲಾಪಗಳನ್ನು ಮಾಡುತಿದ್ದಾರೆ ಚೈನಾ ನದಿಯ ಮೂಲಕ ಬ್ರಿಟಿಷ್ ಫ್ರೆಂಚ್ ನಾವೆಗಳು ಮುಂದಕ್ಕೆ ಟಿನಿಸ್ಟಿನ್ನಿಗೆ ಬರದಂತೆ ಜಪಾನರು ಆಡ್ಡಕಟ್ಟಿದ್ದಾರೆ ಮೇಲಿನ ಕಾರಣವು ನೆವ ಮಾತ್ರವಾಗಿದ್ದರೂ ಇಂದು ಜಪಾನಿಯರು ಇಂಗ್ಲೆಂಡನ್ನು ತೀವ್ರ ವಿರೋಧಿಸುತ್ತಿದ್ದಾರೆ ಅಷ್ಟರಲ್ಲಿ ಬ್ರಿಟಿಷ್ ಸರಕಾರವು ಮೇಲಿನ ವಿಷಯದಲ್ಲಿ ಇತ್ಯರ್ಥಮಾಡಲು ಜಪಾನನೊಬ್ಬ, ಬ್ರಿಟಿಷನೊಬ್ಬ, ಮೂರನೆಯವನೊಬ್ಬ ಹೀಗೆ ತ್ರಿಮೂರ್ತಿಗಳಿಂದ ಸೇರಿದ ಕಮಿಶನೊಂದನ್ನು ಕೂಡಿಸಿ ನ್ಯಾಯಾನ್ಯಾಯಾ ವಿಚಾರಿಸಬೇಕಾಗಿ ಸೂಚನೆಮಾಡಿತು.

ಆಗ ಜಪಾನು ಈ ರೀತಿಯಲ್ಲಿ ಬ್ರಿಟಿಷ್ ಹಡಗುಗಳು ಬರದಂತೆ ಮಾಡಿದ ತಡೆಯು ಚೈನಾ ಮೊದಲಾದೆಡೆಗಳಲ್ಲಿ ಬ್ರಿಟಿಷರು ಮಾಡುತ್ತಿರುವ ಜಪಾನು ವಿರುದ್ಧ ಚಳವಳವನ್ನು ನಿಲ್ಲಿಸುವ ಸಲುವಾಗಿಯೂ, ಬ್ರಿಟನು ಚೈನಕ್ಕೆ ಕೊಡುವ ಸಹಾಯವನ್ನು ನಿಲ್ಲಿಸುವ ಸಲುವಾಗಿಯೂ ಎಂದು ಉತ್ತರ ಕೊಟ್ಟಿರುತ್ತದೆ ಚೈನಾ ನದಿಯ ಸಮೀಪದಲ್ಲಿ ಮಾರ್ಶಲ್ ಲೊ ಜಾರಿಯಾಗಿದೆ ಯಾವನನ್ನೂ ಈಚೆಗೆ ಟಿನಿಸ್ಟಿನ್ನಿಗೆ ಬರಲು ಬಿಡುವುದಿಲ್ಲವಾದುದರಿಂದ ಇಲ್ಲಿರುವ ಬ್ರಿಟಿಷರು ಆಹಾರವಿಲ್ಲದೆ ಬೀಳಬೇಕಾಗಿದೆ

ಅಲ್ಲಲ್ಲಿ ಒಬ್ಬೊಬ್ಬರನ್ನೇ ಹಿಡಿದು ಹುಡುಕುವ ಕೆಲಸವು ನಡೆಯುತ್ತ ಇದೆ ಇದರೊಡನೆ ಸುಮಾರು ೫೦,೦೦೦ ಜಪಾನಿಯರು ಟಿನಿಸ್ಟಿನಿನಲ್ಲಿರುವ ಬ್ರಿಟಿಷರ ಪ್ರಾಂತವನ್ನು ಆಕ್ರಮಣ ಮಾಡಲೂ ಆಲೋಚನೆ ಮಾಡುತಿದ್ದಾರಂತೆ

ಬ್ರಿಟಿಷ್ ಮಂತ್ರಿಮಂಡಲದಲ್ಲಿ ಈ ವಾರ್ತೆಯು ಬಹು ಕಳವಳವನ್ನು ಹುಟ್ಟಿಸಿದೆ

ಜಪಾನೀಯರ ಉದ್ರೇಕ ಇನ್ನೂ ಇಳಿದಿಲ್ಲ ಬ್ರಿಟನು—ಫ್ರಾನ್ಸುಗಳು ಚೈನಾ-ಜಪಾನಿನ ನೀತಿಯನ್ನು ಒಪ್ಪಿಕೊಳ್ಳಬೇಕೆಂತಲೂ ಚಿಯಾಂಗ್ ಕೈಶೇಕರಿಗೆ ನೈತಿಕ ಸಹಾಯವನ್ನಾದರೂ ಕೊಡಬಾರದೆಂದೂ ಜಪಾನಿನ ಹೇಳಿಕೆ,

ಬ್ರಿಟಿಷ್ ವ್ಯಾಪಾರಗಳನ್ನು ದೂರುವ ಕರಪತ್ರಗಳು ಪ್ರಕಟವಾಗುತ್ತಿವೆ

ಚಿಯಾಂಗ್ ಕೈಶೇಕರಿಗೆ ಬ್ರಿಟನು ಸಹಾಯಮಾಡುವುದನ್ನು ಬಿಡದಿದ್ದರೆ ಜಪಾನು ತನ್ನ ವರ್ತನೆಯನ್ನು ನಿಲ್ಲಿಸುವುದಿಲ್ಲವಂತೆ ಆಂಗ್ಲೋ ಜಪಾನರ ಒಪ್ಪಂದವನ್ನು ಬ್ರಿಟನು ಮುರಿದರೆ ಜಪಾನು ಮೊದಲೇ ಅದಕ್ಕೆ ಸಿದ್ಧವಾಗಿರುವುದಂತೆ

ಬ್ರಿಟಿಷರ ಹಡಗುಗಳನ್ನು ಬರಗೊಡದೆ ಇರುವದರಿಂದಾಗಿ ಅಲ್ಲಿನ ಬ್ರಿಟಿಷ್ ಪ್ರಾಂತದಲ್ಲಿ ಬಹಳ ಗೊಂದಲವೆದ್ದಿದೆ ಜಪಾನೀಯರು ತಮ್ಮ ತಡೆಯನ್ನು ಬಹಳ ಭದ್ರಮಾಡುತ್ತಿದ್ದಾರೆ.

ಪ್ರಚಾರ ಮಂತ್ರಿಗಳು

ಪಾರ್ಲಿಮೆಂಟಿನಲ್ಲಿ ಬ್ರಿಟನಿನ ಪರದೇಶದ ವಿಷಯದಲ್ಲಿ ಪ್ರಚಾರಕಾರಿಯಾಗುವಂತೆ ಪ್ರಚಾರವನ್ನು ನಡೆಸುವುದಕ್ಕಾಗಿ ಒಂದು ಮಂತ್ರಿಮಂಡಲವನ್ನು ಮಾಡುವರೆ ಆಲೋಚಿಸಲಾಗಿದೆ.

ಈ ಸಂಸ್ಥೆಯಲ್ಲಿ ಬ್ರಿಟಿಷ್ ರಾಯಭಾರಿಯಾಗಿ ರೋಮಿನಲ್ಲಿರುವ ಲೋರ್ಡ್ ಪೆರ್ತರವರು ಪ್ರಧಾನ ಸೂತ್ರಧಾರಿಗಳಾಗಿರುವರು. ಈ

ಸ್ಲೋವೇಕಿಯದ ಸಮಾಧಿಯೆ?

ಫ್ರೆಂಚ್ ಸಬ್ ಮೆರಿನ್ ಅಪಘಾತ!

ಮಂತ್ರಿಮಂಡಲವು ಯುದ್ಧದ ಸ್ಥಿತಿಗತಿಯ ಬಗ್ಗೆ ಸಂಪೂರ್ಣವಾಗಿ ತನ್ನ ವಿಚಾರವನ್ನು ಸಂಗ್ರಹಿಸುವುದಾಗಿ ತಿಳಿಯುತ್ತದೆ ಜರ್ಮನ್ ಪತ್ರಿಕೆಯು ಬ್ರಿಟನಿನ ಈ ಧೋರಣೆಯನ್ನು ಖಂಡಿಸುತ್ತದೆ

ಜರ್ಮನಿಯ ತೆರಿಗೆಯ ಹೊರೆ

ಜರ್ಮನಿಯ ಸರಕಾರವು ತೆರಿಗೆಯ ಹೊರೆಯನ್ನು ದಿನದಿಂದ ದಿನಕ್ಕೆ ಹೆಚ್ಚು ಮಾಡುವ ವಿಷಯದಲ್ಲಿ ಅಲ್ಲಿನ ವ್ಯಾಪಾರಿಗಳು ಮತ್ತು ಉದ್ಯೋಗಿಕ ಸಂಘದವರು ದೂರಿದಲು ಆರ್ಥಿಕ ಸಚಿವರಾದ ಹೆರ್ ಫೈನ್‌ಹಾರ್ಡರು ಪ್ರಕೃತ ಪರಿಸ್ಥಿತಿಯಲ್ಲಿ ಜರ್ಮನಿಯ ರಾಷ್ಟ್ರದ ರಕ್ಷಣೆಯ ದೃಷ್ಟಿಯಿಂದ ತನ್ನ ಸೈನ್ಯಶಕ್ತಿಯನ್ನು ಹೆಚ್ಚಿಸುವ ಬಗ್ಗೆ ಹಣಗೆ ಮಾಡದೆ ಸಾಧ್ಯವಿಲವೆಂದು ಉತ್ತರವಿತ್ತಿರುವರು

ಹಿಟ್ಲರನ ಕಣ್ಣು ಸ್ಲೋವೇಕಿಯದ ಮೇಲೆ!

ಜರ್ಮನಿಯ ಸರ್ವಾಧಿಕಾರಿ ಹಿಟ್ಲರನ ದೃಷ್ಟಿಯು ಸ್ಲೋವೇಕಿಯದ ಮೇಲಿದೆಯೆಂದು ಡೈಲಿ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ಈಗಾಗಲೇ ಸ್ಲೋವೇಕಿಯದಲ್ಲಿ ಜರ್ಮನ್ ಸೈನ್ಯಗಳು ಇವೆ ಹಂಗೇರಿ ಸರಕಾರಕ್ಕೆ ಈಗಾಗಲೇ ಸ್ಲೋವೇಕಿಯಾದ ಕೆಲವಂಶವನ್ನು ಜರ್ಮನಿಗೆ ಬಿಟ್ಟುಕೊಡುವ ವಿಷಯದಲ್ಲಿ ಜರ್ಮನಿಯು ಒಂದು ಸೂಚನೆ ಕೊಟ್ಟಿರುವುದಾಗಿಯೂ, ಹಂಗೇರಿ ಸರಕಾರವು ಅದನ್ನು ಸ್ಪಷ್ಟವಾಗಿ ತಿರಸ್ಕರಿಸುವುದಾಗಿಯೂ ವಾರ್ತೆ

ಯೂರೋಪಿನ ಪ್ರಬಲ ರಾಷ್ಟ್ರಶಕ್ತಿಗಳ ಸಮ್ಮೇಳನ

ಯೂರೋಪಿನ ಇಂದಿನ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ವೋನ್ ಸಾಹೇಬರೇ ಯೂರೋಪಿನಲ್ಲಿ ಪ್ರಬಲ ರಾಷ್ಟ್ರಶಕ್ತಿಗಳ ಒಂದು ಸಮ್ಮೇಳನವನ್ನು ಕರೆಯ ಬೇಕೆಂದು ಒಂದಾ ವೆಸ್ಟಿನಲ್ಲಿ ಹೊಸ ಪಾರ್ಲಿಮೆಂಟಿನ ಉದ್ಘಾಟನೆ ಸಮಾರಂಭದಲ್ಲಿ ಎಡ್ಮಿರಲ್ ಹೋರ್ತಿಯವರು ಒಂದು ಸೂಚನೆಯಿತ್ತಿರುವರು

ಸ್ಲೋವೇಕಿಯದ ಸಮಾಧಿಯೆ?

ಉತ್ತರ ಸ್ಲೋವೇಕಿಯದಲ್ಲಿ ಜರ್ಮನಿಯು ೨೫೦ ಸಾವಿರ ಜರ್ಮನ್ ಸೈನ್ಯವನ್ನಿಟ್ಟಿರುವುದಾಗಿ ತಿಳಿಯುತ್ತದೆ ಇಷ್ಟರಲ್ಲಿ ಅನೇಕ ಸ್ಲೋವೇಕಿಯದ ಸೊತ್ತನ್ನ, ಸ್ವಾಧೀನಪಡಿಸಿರುವುದಾಗಿಯೂ ತಿಳಿಯುತ್ತದೆ.

ಮಾಸ್ಕೋದಲ್ಲಿ ರಾಜನೀತಿ ಕುಶಲರ ತಂತ್ರಗಳು

ಬ್ರಿಟಿಷ್ ಮತ್ತು ಫ್ರೆಂಚ್ ರಾಯಭಾರಿಗಳೊಡನೆ ರಷ್ಯದ ಪ್ರಧಾನ ಮಂತ್ರಿಗಳಾದ ಮೊಲೊಟೋವರವರು ಸಂಭಾಷಣೆ ನಡೆಸಿದರು. ರಷ್ಯದ ಅಧಿಕಾರಿಗಳ ಗೋಷ್ಠಿಯಲ್ಲಿ ಈ ಸಂಭಾಷಣೆಯು ನಿಷ್ಪ್ರಯೋಜಕವಾಗಲಾರದೆಂಬ ಹಾಗೆ ಸಂಕಲ್ಪವಿದೆ ಅಂತೂ ಸಂಪೂರ್ಣ ವಾರ್ತೆಯು ಹೊರಬಿದ್ದಿರುವುದಿಲ್ಲ

ಫ್ರೆಂಚ್ ಸಬ್ ಮೇರಿನ್ ಅಪಘಾತ!

ಫ್ರೆಂಚ್ ಜಲಾಂತರ್ಗಾಮಿನಾವೆ 'ಫೆನಿಕ್ಸ್' ಎಂಬುದು ಜಲಸಮಾಧಿಯನ್ನು ಹೊಂದಿದೆ! ಇದು ೩೦೦ ಅಡಿ ಆಳದ ನೀರಿನಲ್ಲಿ ಮುಳುಗಿ ಹೋಗಿರುವುದಾಗಿ ತಿಳಿಯುತ್ತದೆ. ಈ ಜಲಾಂತರ್ಗಾಮಿ ನಾವೆಯೊಡನೆ ಉಸ್ಸೋಯರೆಂಬ ಇನ್ನೊಂದು ಹಡಗೆಯೂ ಹೊರಟಿತ್ತು ಆದರೆ ಅವುಗಳು ವಿಂಗಡವಾಗಿ ಕೆಲಹೊತ್ತಿನಲ್ಲಿಯೇ ಈ ಅಪಘಾತವು ಆಗಿದೆ, ಹಡಗದಲ್ಲಿ ತುಂಬಿಸಿರುವ ವಾಯು ಸಂಗ್ರಹವು ಕಡಿಮೆಯಾಗಿ, ಹೆಚ್ಚು ಆಳಕ್ಕೆ ಇಳಿದ ಕಾರಣ ಹೊಸ ಗಾಳಿಯನ್ನು ಒದಗಿಸಲು ಅಸಾಧ್ಯವಾದದುದರಿಂದ ಈ ಅಪಘಾತವು ಆಯಿತೆಂದು ತಿಳಿಯುತ್ತದೆ ಬ್ರಿಟಿಷ್ ಜರ್ಮನ್ ರಾಷ್ಟ್ರಗಳು ತಮ್ಮ ಸಹಸಂತಾಪವನ್ನು ವ್ಯಕ್ತಪಡಿಸಿವೆ!

ತ್ರಿರಾಷ್ಟ್ರಗಳ ಒಪ್ಪಂದದ ಮೇಲೆ?

"ಬ್ರಿಟನು—ರಶ್ಯಾ ಫ್ರಾನ್ಸುಗಳ ಒಪ್ಪಂದವಾದರೆ ಯೂರೋಪಿಯನ್ ಯುದ್ಧವು ಬಗೆಹರಿಯುವುದೇ? ಎಂಬುದು ಲಂಡನಿನಲ್ಲಿ ಕುತೂಹಲವನ್ನುಂಟು ಮಾಡಿದೆ ಹೆಚ್ಚಿನವರು ಯೂರೋಪಿನ ಯುದ್ಧವು ಅನಿವಾರ್ಯವೆಂದೇ ಹೇಳುತ್ತಿದ್ದಾರೆ ಬ್ರಿಟನಿನಲ್ಲಿ ಯುದ್ಧಮಾಡುವುದು ಬೇಡವೆಂದೇ ಜನರಿಗೆ ಅಭಿಲಾಷೆಯೇನೋ ಇದೆ. ಆದರೆ ಅದನ್ನು ತಪ್ಪಿಸಲು ಸಾಧ್ಯವಿಲ್ಲವೆಂಬ ಹೆದರಿಕೆ ಮಾತ್ರ ಇದೆ ಅಂತೂ ತ್ರಿರಾಷ್ಟ್ರಗಳ ಒಪ್ಪಂದ ಶರ್ತವನ್ನು ಕಿಸೆಯಲ್ಲಿ ಮಾಡಿಕೊಂಡ ಚೆಂಬರ್ಲೇನರು ತಮ್ಮ ರಾಜನೀತಿಯಲ್ಲಿ ಇನ್ನಷ್ಟು ಹುಷಾರಾಗಿ ಸಾಧಿಸುವರೆಂಬ ಆಸೆಯೂ ಇದೆ" ಹೀಗೆಂದು ಇಟಲಿಯ ಪತ್ರಿಕೆಯೊಂದು ಅಭಿಪ್ರಾಯಪಡುತ್ತದೆ.

ಸ್ಪೈನಿನಿಂದ ಕೆಥೋಲಿಕರನ್ನು ಹೊರಗಟ್ಟುವರೇ?

ಜನರಲ್ ಫ್ರಾಂಕೋವು ಕೂಡಲೇ ನಾಜಿಗಳ ಪತನದ್ಧತಿಯನ್ನು ಅನುಸರಿಸಿ ಧರ್ಮದೇವರನ್ನೆಲ್ಲಾ ರಾಷ್ಟ್ರದಿಂದ ಓಡಿಸಬೇಕೆಂದು ಆತನ ಸಹಾಯಿಗಳಾದ ಡಿಕ್ಟೇಟರರು ಹೇಳುತ್ತಿರುವರೆಂದೂ ಮುಂದಕ್ಕೆ ಸ್ಪೈನಿನಲ್ಲಿ ಒಂದೊಂದೇ ಕೆಥೊಲಿಕ್ ದೇವಾಲಯಗಳನ್ನು ಬೇರೆ ಉದ್ಯೋಗಗಳಿಗಾಗಿ ಉಪಯೋಗಿಸಲ್ಪಡುವುದೆಂದೂ ಒಂದು ವಾರ್ತೆ

ಹೊಸ ವಾರ್ತೆಗಳು

ಮೈಸೂರು ಸ್ಟೇಟ್ ಕಾಂಗ್ರೆಸಿನ ಶಿಷ್ಟಮಂಡಲದವರು ಮುಂದಕ್ಕೆ ಕೈಕೊಳ್ಳತಕ್ಕ ಕಾರ್ಯಗಳ ಕುರಿತು ಅಭಿಪ್ರಾಯ ಕೇಳಲು ಸರ್ದಾರ ವಲ್ಲಭಬಾಯಿ ಪಟೇಲರೊಡನೆಯೂ ಪಂಡಿತ ನೆಹರೂಗಳೊಡನೆಯೂ ಬೊಂಬಾಯಿಯಲ್ಲಿ ಕಂಡು ಮಾತನಾಡಿದರು ನೆಹರೂಗಳು ಮೈಸೂರಿನವರು ಸತ್ಯಾಗ್ರಹದ ವಿಷಯದಲ್ಲಿ ಮಹಾತ್ಮಾಜಿಯವರ ಅಭಿಪ್ರಾಯದಂತೆ ನಡೆಯುವುದು ಯೋಗ್ಯವೆಂದೂ, ಪ್ರಾಂತಿಕ ರಾಜ್ಯನೀತಿಗೆ ಸರಿಯಾಗುವಂತಾದಿದ್ದರೆ ಈಗಿನ ಸುಧಾರಣೆಗಳನ್ನು ಒಪ್ಪಬಹುದೆಂದು ಹೇಳಿದರು. ಸರ್ದಾರ ಪಟೇಲರು ಮೈಸೂರಿನವರು ಸತ್ಯಾಗ್ರಹ ಆಂದೋಲನವನ್ನು ಶುರುಮಾಡುವುದಿದ್ದರೂ ತಮ್ಮ ಕೇಳಿಕೆಗಳೊಡನೆ ಇನ್ನೊಮ್ಮೆ ಅಧಿಕಾರಿಗಳನ್ನು ಕಂಡು ಮಾತನಾಡುವುದು ಯೋಗ್ಯವೆಂದು ಹೇಳಿದರು

★

ರಾಜಕೋಟದ ಪ್ರಜಾಪರಿಷದದ ಅಧ್ಯಕ್ಷರಾದ ಶ್ರೀ ಢೇಬರರವರ ೫೦೦ ಎಕರೆಯ ಭೂಮಿಯನ್ನು ಸರಕಾರವು ಸ್ವಾಧೀನಮಾಡಿಕೊಳ್ಳುವ ಬಗ್ಗೆ ಆಜ್ಞೆ ಹೊರಡಿಸಿದೆ

★

ಮಾನ್ಯ ಮಂತ್ರಿ ಶ್ರೀ ಪ್ರಕಾಶಂರವರ ಉಪದೇಶದಂತೆ ಮುನಗಾಲಾದ ರೈತರ ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿದೆ

★

ಮದ್ರಾಸು ಕಾಂಗ್ರೆಸು ಸರಕಾರವು ಹೈದರಾಬಾದು ದಸಾಚರಣೆ ಮಾಡಲು ಬಿಡಲಿಲ್ಲವಾಗಿ ಆಖಿಲಭಾರತದಲ್ಲಿ ಗೊಂದಲವೆದ್ದಿದೆ. ಶ್ರೀ ಎಂ. ಎನ್. ರಾಯಿಗಳು "ಮಂತ್ರಿಮಂಡಲವು ಕೊಳೆತುಹೋಗಿದೆ" ಎಂದು ಬೊಬ್ಬಿಡುತ್ತಾರೆ. ಈ ಕುರಿತು ರಾಷ್ಟ್ರಪತಿಗಳಿಗೇ ದೂರು ಹೋಗಿದೆ.

★

ಬಂಗಾಳದ ಹುಕ್ಕ ಮಂತ್ರಿಮಂಡಲದಿಂದ ಅಭಿಪ್ರಾಯ ಭೇದ ಸಲುವಾಗಿ ಲೀಗ್ ಪಕ್ಷದವರಾದ ಮಿ. ಹಸನ್ ಸಾಹೇಬ್ ಸುಹ್ರಾವರ್ದಿಯವರು ರಾಜೀನಾಮೆಯಿತ್ತಿರುವರು

★

ರಾಷ್ಟ್ರೀಯ ಯೋಜನಾ ಸಮಿತಿಯ ಬೊಂಬಾಯಿಯ ಸಭೆಯು ಕೊನೆಗೊಂಡಿತು. ಮುಂದಿನ ಕಾರ್ಯಕ್ಕೆ ಸಹಕಾರಿಯಾಗುವಂತೆ ದೇಶದ ಜಾನೆಸುಮಾರಿ ತೆಗೆಯುವುದಾಗಿ ನಿಶ್ಚಯವಾಗಿದೆ

★

ಲಖ್ನೋದಲ್ಲಿ ಶಿಯಾಸುನ್ನಿಗಳು ಚಳವಳವನ್ನು ನಿಲ್ಲಿಸಬೇಕಾಗಿ ಅಬ್ದುಲ್ ಕಲಾಮ್ ಆಜಾದರವರು ಒಂದು ಬಿನ್ನಹವನ್ನು ಹೊರಡಿಸಿದ್ದಾರೆ

★

ಕಾನಪುರದಲ್ಲಿ ಹಿಂದೂ—ಮುಸ್ಲಿಮ್ ದಂಗೆಯು ಶುರುವಾಗಿ ಪೋಲೀಸರಿಂದ ಗುಂಡು ಹಾರಲ್ಪಟ್ಟು ನಾಲ್ಕು ಜನರು ಸತ್ತು ಅನೇಕರು ಗಾಯಗೊಂಡಿರುವರ.

★

ಟಿನ್‌ಸ್ಟಿನಿನಲ್ಲಿ ಜಪಾನು ಬ್ರಿಟನನ್ನು ಸಂಪೂರ್ಣವಾಗಿ ಆಡ್ಡಿಮಾಡಿದೆ. ಬ್ರಿಟನನ್ನು ತಡೆ ಹಾಕಿದ ಸ್ಥಳಗಳಿಂದ ಆಗಕ್ಕೆಬೀಳದೆ ಹಿಂದೆ ಹೋಗುವುದಿಲ್ಲವಾಗಿ ಬ್ರಿಟಿಷ್ ಕೊನ್ಸಲ್ ಜನರನು ಪ್ರಕಟಿಸಿರುತ್ತಾನೆ. ಬ್ರಿಟಿಷರ ಪ್ರತಿನಿಧಿಯೊಬ್ಬನು ಟಿನಿಸ್ಟಿನ ಕಮಿಶನರೊಡನೆ ಭೇಟಿ ಕೇಳಿದಾಗ ಆತನು ಇಂತಹ ಸಂದರ್ಭದಲ್ಲಿ ಭೇಟಿ ಕೊಡುವುದರಿಂದ ಏನೂ ಪ್ರಯೋಜನವಿಲ್ಲವೆಂದಿರುವನು ಜಪಾನು ಇನ್ನೂ ಹೊಸ ರೀತಿಯ ಸಾಧನೆಗಳನ್ನೂ—ಹೂಡಿ ಬ್ರಿಟನನ್ನು ಹೊರತಳ್ಳುವುದೆಂದು ತಿಳಿಯುತ್ತದೆ. ಜರ್ಮನಿಯ ಸಂಪೂರ್ಣ ಬೆಂಬಲವು ಜಪಾನಿಗೆ ಇದೆಯೆಂದು ಸುದ್ದಿ

★

ತಾ ೨೦ರಂದು ಇಟಲಿ ಜರ್ಮನಿಗಳ ನೌಕಾಮಂತ್ರಿಗಳು ಭೇಟಿಯಾದ ಪರಸ್ಪರ ಉಭಯ ರಾಷ್ಟ್ರಗಳ ನೌಕಾಬಲದ ಒಪ್ಪಂದಮಾಡಿಕೊಳ್ಳುವ ಕುರಿತು ಮಾತುಕತೆ ನಡೆಸಿರುವರು

★

ಸ್ಲೋವೇಕಿಯಾದ ಪ್ರಾಂತದಲ್ಲಿ ಜರ್ಮನ್ ಸೈನ್ಯವು ಚಲಿಸುತ್ತಿದೆಯೆಂದು ವಾರ್ತೆ. ಶಸ್ತ್ರವಾಹನಗಳು ಬೇರೆ ಬೇರೆ ಯುದ್ಧ ಸಾಮಾಗ್ರಿಗಳೂ ಸಾಗುತ್ತಿರುವುದಂತೆ.

★

ತ್ರಿರಾಷ್ಟ್ರಗಳ ಒಪ್ಪಂದದ ಕುರಿತು ಮಾತುಕತೆ ನಡೆಯುತ್ತಿದೆ ರಶ್ಯಾ, ಫ್ರಾನ್ಸ ಬ್ರಿಟನಿನ ರಾಯಭಾರಿಗಳು ಅನ್ಯೋನ್ಯ ವಿಚಾರ ವಿನಿಮಯ ಮಾಡಿಕೊಂಡಿದ್ದಾರೆ. ಮೊಲೊಟೋವರವರನ್ನು ಬೇಗನೇ ಸಂದರ್ಶಿಸಲಿರುವರು

★

ಟಿನಿಸ್ಟಿನಿನ ಪ್ರಕರಣದ ಕುರಿತು ಪಾರ್ಲಿಮೆಂಟಿನಲ್ಲಿ ಚೆಂಬರ್ಲೇನರು ಮಾತನಾಡುತ್ತ ಟೋಕಿಯೋದಲ್ಲಿರುವ ಬ್ರಿಟಿಷ್ ರಾಯಭಾರಿಯು ಜಪಾನೀ ಸರಕಾರದೊಡನೆ ವ್ಯವಹಾರ ನಡೆಸಬೇಕಾಗಿ ಆಜ್ಞೆ ಮಾಡಲ್ಪಟ್ಟಿರುವುದಾಗಿ ಹೇಳಿದರು. ಅಲ್ಲಿನ ಆಹಾರ ಸಂಕಷ್ಟವು ವಿಪರೀತವಾಗಿದೆ.

★

ಪ್ರೇಗಿನಲ್ಲಿ ಬ್ರಿಟಿಷ್ ಕೋನ್ಸಲನೊಬ್ಬನನ್ನು ನೇಮಕಮಾಡಬೇಕಾಗಿ ಬ್ರಿಟಿಷ್ ಸರಕಾರವು ಜರ್ಮನಿಯೊಡನೆ ಕೇಳಿಕೊಂಡಿದೆ

★

ಸ್ಲೋವೇಕಿಯಾಕ್ಕೆ ಜರ್ಮನು ಸೈನ್ಯದಳವನ್ನು ಕಳುಹಿಸುತ್ತಿದೆಯೆಂಬ ವಾರ್ತೆ ಅಬದ್ಧವೆಂದು ಜರ್ಮನ್ ಪತ್ರಿಕೆಯು ಹೇಳುತ್ತದೆ

ಸ್ವದೇಶಾಭಿಮಾನಿ

ತಾರೀಖು ೨೬—೬—೧೯೩೯

ಟೈನ್‌ಸ್ಟಿನ್ ಪ್ರಕರಣ

ಜಪಾನಿನ ಕೆಣಕಿಸುವ ಅತ್ಯಾಚಾರಗಳಿಂದ ಚೀನಾದಲ್ಲಿನ ವಾತಾವರಣವು ಅತ್ಯಂತ ಭೀಕರ ಸ್ಥಿತಿಗೆ ಬಂದಿರುವುದು. ಇವುಗಳಲ್ಲಿ ಟೈನ್‌ಸ್ಟಿನ್ ಪ್ರತಿಬಂಧಕವು ಇತ್ತೀಚೆಗಿನ ಅತ್ಯಾಚಾರಗಳಲ್ಲಿ ಪ್ರಾಮುಖ್ಯವಾಗಿರುವುದು. ಇದರಿಂದಾಗಿ ಎಲ್ಲರ ದೃಷ್ಟಿಗಳು ಟೈನ್‌ಸ್ಟಿನಿನ ಮೇಲೆ ನಟ್ಟಿವೆ. ಜಪಾನಿನ ಈ ಕೃತ್ಯವು ಯುರೋಪ ರಾಷ್ಟ್ರಗಳಿಗೆ ಯುದ್ಧಕ್ಕಾಹ್ವಾನವೆಂದು ಹೇಳಬಹುದು. ಕಳೆದ ಮೂರು ತಿಂಗಳಾರಭ್ಯ ಬ್ರಿಟಿಷ ಮತ್ತು ಫ್ರೆಂಚರ ಅನೇಕ ನಾವೆಗಳು ತಡೆಯಲ್ಪಟ್ಟಿದ್ದುವು. ಇಬ್ಬರು ಬ್ರಿಟಿಷರ ಹತ್ಯೆಯು ನಡೆದಿದೆ. ಮತ್ತು ಕುಲಿಂಗ್ ದ್ವೀಪದ ಎಮೊಯ್ ಎಂಬಲ್ಲಿ ಇತರ ದೇಶಗಳ ವಸತಿ ಮೇಲೆ ಪ್ರತಿಬಂಧಕಗಳನ್ನು ಹಾಕಿದೆ. ವಿದೇಶೀಯರ ಮೇಲೆ ಅಲ್ಲಸಲ್ಲದ ಆರೋಪಣೆಗಳನ್ನು ಹೊರಿಸಿವೆ. ಹಿಂದೆಯಾದರೆ ಇದನ್ನು ಯಾವ ರಾಷ್ಟ್ರವಾದರೂ ಸಹಿಸುತ್ತಿದ್ದಿಲ್ಲ.

ಹಿಂದೆ ಟ್ರಿಬ್ಯುನಲ್‌ದಲ್ಲಿ ನಡೆದ ಚೀನಿ ಗುಪ್ತ ಘಾತಕರ ವಿಮೋಚನೆಯ ಪ್ರಕರಣಕ್ಕೂ ಈಗಿನ ಟೈನ್‌ಸ್ಟಿನ್ ಪ್ರಕರಣಕ್ಕೂ ಏನೊಂದೂ ಸಂಬಂಧವಿರುವುದಿಲ್ಲ. ಜಪಾನಿನ ಧೋರಣೆಯು ದೊಡ್ಡ ರಾಷ್ಟ್ರ ನಿರ್ಮಾಣವಾಗಿರುತ್ತದೆ. ಅದರ ಉದ್ದೇಶವು ಚೀನದ ಸಂಪೂರ್ಣ ವಶೀಕರಣವಾಗಿರುವುದು ಅವರ ಈ ಉದ್ದೇಶವು ಈಡೇರಲು ಬ್ರಿಟಿಷರ ಜಪಾನಿ ವಿರುದ್ಧ ಧೋರಣೆಯೇ ಕಾರಣವಾಗಿರುವುದೆಂದು ಜಪಾನಿಯರ ಭಾವನೆ. ಬ್ರಿಟಿಷರು ಚೀನಾ ಸರಕಾರಕ್ಕೆ ಧನ ಮತ್ತು ಯುದ್ಧ ಸಾಮಾಗ್ರಿಗಳ ಸಹಾಯವನ್ನು ಮಾಡುತ್ತಿದೆ ಎಂದು ಜಪಾನು ಕಂಡು ಹಿಡಿದಿದೆ. ಬ್ರಿಟಿಷರ ಈ ಸಹಾಯದಿಂದಲೇ ಚೀನದ ಮೇಲಿನ ಜಪಾನಿ ವಿಜಯಕ್ಕೆ ಪ್ರತಿಬಂಧಕವಾಗಿರುವುದು. ಆದಕಾರಣ ಜಪಾನು ಬ್ರಿಟಿಷರನ್ನು ಚೈನದಿಂದ ಹೊಡೆದೋಡಿಸಲು ಪ್ರಯತ್ನಿಸುವುದು ಯಾ ಬ್ರಿಟಿಷರು ಚೈನದ ಕುರಿತು ತಾಟಸ್ಥ್ಯ ಧೋರಣೆಯನ್ನು ವಹಿಸುವಂತೆ ಮಾಡಬಹುದು. ಈ ಉದ್ದೇಶಗಳಿಂದ ಕೂಡಿದ ಜಪಾನು ಬ್ರಿಟಿಷರೊಡನೆ ಟೈನ್‌ಸ್ಟಿನ್ ಪ್ರಕರಣವನ್ನು ಹೂಡಿ ಸೆಣಸಾಟಕ್ಕೆ ಟೊಂಕಕಟ್ಟಿರುವುದು.

ಈಗಿನ ಯುರೋಪಿನ ವಾತಾವರಣವು ಬ್ರಿಟಿಷರ ಮೇಲೆ ಸೊಂಟಕಟ್ಟಲು ಜಪಾನಿಗೆ ಅನುಕೂಲವಾಗಿರುವುದು. ಇಂದು ಬ್ರಿಟಿಷರು ಯುರೋಪಿನ ಪ್ರಮುಖ ರಾಷ್ಟ್ರಗಳಲ್ಲೊಂದಲ್ಲವೆಂದು ಜಪಾನಿನ ಭಾವನೆ ಇರುವುದು. ಅದಲ್ಲದೆ ಯುರೋಪ ಸಮಸ್ಯೆಗಳಿಂದಲೇ ಬ್ರಿಟನ್ನು ತಳಮಳಗೊಳ್ಳುತ್ತಿರುವುದೆಂದೂ ಆದಕಾರಣ ಅತ್ಯಂತ ದೂರವಿರುವ ಚೀನಾದಲ್ಲಿ ಬ್ರಿಟನು ಯುದ್ಧಮಾಡುವ ಮಾತೇ ಸುಳ್ಳೆಂದೂ ಜಪಾನಿಗೆ ಚೆನ್ನಾಗಿ ಮನವರಿಕೆಯಾಗಿರುವುದು. ಒಂದು ಪಕ್ಷದಲ್ಲಿ ಯುದ್ಧ ಸಂಭವಿಸಿದರೂ ಯಾವ ಜನಾಂಗಕ್ಕಾದರೂ ಜಪಾನಿ ಸಮುದ್ರದ ತನಕ ಹೋಗಿ ಅವರೊಡನೆ ಯುದ್ಧ ಹೂಡುವುದೆಂದರೆ ಅಸಾಧ್ಯದ ಮಾತೇ ಸರಿ. ಜಪಾನಿನ ಕೂಡ ಅತ್ಯಂತ ಬಲಶಾಲಿಯಾದ ನೌಕಾಬಲವಿರುವುದು. ಜಪಾನಿನ ನೌಕಾ ನಿಲ್ದಾಣವಾದರೂ ಬಹಳ ಉತ್ತಮತರದದ್ದು ಬ್ರಿಟಿಷರ ಸಿಂಗಾಪುರದಂತ ಹೀನಾವಸ್ಥೆಯಲ್ಲಿರುವ ನೌಕಾನಿಲ್ದಾಣಗಳ ಒತ್ತಿನಲ್ಲಿಯೇ ಇರುವುದು. ಪರಸ್ಪರ ಜನಾಂಗಗಳ ಈಗಿನ ಯುದ್ಧದ ಧೋರಣೆಯಂತೆ ಒಂದು ಜನಾಂಗವು ಇನ್ನೊಂದು ಜನಾಂಗವನ್ನು ವಶಪಡಿಸಿಕೊಳ್ಳಬೇಕಾದರೆ ಯುದ್ಧವನ್ನು ಘಂಟಾಘೋಷವಾಗಿ ಪ್ರಕಟಿಸಬೇಕೆಂದಿಲ್ಲ. ಚೀನಾದಲ್ಲಿ ಈಗುಂಟಾಗಿರುವ ಯುದ್ಧವು ಕೇವಲ 'ಚೈನಾ ಘಟನೆ' ಎಂದು ಜಪಾನಿಯರ ಗಣನೆ. 'ಇಂಥಾ ಸಂದಿಗ್ಧ ಸಮಯದಲ್ಲಿ ನಿಮ್ಮ ಅಲ್ಲಸಲ್ಲದ ಮಾತುಗಳಿಗೆ ಜಪಾನು ಮರುಳಾಗದು ಜಪಾನಿಗೆ ಚೈನಾದಲ್ಲಿ ಬೇಕಾದುದು ಸಂಪೂರ್ಣ ವಿಜಯ' ಎಂದು ಅದು ಬ್ರಿಟಿಷರಿಗೆ ತಿಳಿಸಿದೆ.

ಜಪಾನಿನ ಈ ಪ್ರತಿಬಂಧಕವು ಬ್ರಿಟಿಷರಿಗೆ ಒಂದು ಬೆದರಿಕೆಯಾಗಿರುವುದು. ಇದರಿಂದಾಗಿ ಏಶ್ಯಾದಲ್ಲಿ ಬ್ರಿಟಿಷ್ ರಾಜಸತ್ತೆಗೆ ಒಂದು ಧಕ್ಕೆ ಬಡಿದಂತೆಯೇ ಸರಿ. ಬ್ರಿಟಿಷ್ ಮಂತ್ರಿಮಂಡಲವು ಟೈನ್‌ಸ್ಟಿನ್ ಪ್ರಕರಣದ ವಿಷಯ ಅಗಾಧ ಆಲೋಚನೆಯನ್ನು ಮಾಡುತ್ತಿದೆ ಬ್ರಿಟನು ತನ್ನ ಎಲ್ಲಾ ವಸಾಹತುಗಳಲ್ಲಿ ಜಪಾನಿ ವ್ಯಾಪಾರಕ್ಕೆ ಪ್ರತಿಬಂಧವನ್ನೊಡ್ಡಿ ಅದರ ಮೇಲೆ ಸ್ಯಾಂಕ್ಷನುಗಳನ್ನು ಜಾರಿಮಾಡಲಿರುವುದೆಂದು ತಿಳಿದುಬರುತ್ತದೆ. ಬ್ರಿಟಿಷರ ಈ ಧೋರಣೆಯು ಖಂಡಿತವಾಗಿಯೂ ಫಲಕಾರಿಯಾಗದು. ಯಾಕೆಂದರೆ ಸ್ಪೈನ್, ಎಬಿಸೀನಿಯ ಪ್ರಕರಣಗಳಲ್ಲಿ ಸೆಂಕ್ಷನುಗಳು ಫಲಕಾರಿಯಾಗಲಿಲ್ಲವೆಂದು ಸರ್ವರಿಗೂ ವಿದಿತವಾದ ವಿಷಯ. ಜಪಾನು ಜರ್ಮನ್ ಇಟಲಿಗಳ ಕೂಟದಲ್ಲಿ ಇರುವವರೆಗೆ ಕಾಲ ಜಪಾನಿನ ವಿರುದ್ಧ ಸೆಂಕ್ಷನು ಎಂದೂ ಸಾಗದು ಅದರ ವಿರುದ್ಧವಾಗಿ ಜಪಾನು ಭಾರತದ ಹತ್ತಿ ಮತ್ತು ಆಸ್ಟ್ರೇಲಿಯ ಉಣ್ಣೆಗಳ ಮೇಲೆ ಬಹಿಷ್ಕಾರವನ್ನು ಹಾಕಿದಲ್ಲಿ ಬ್ರಿಟಿಷ್ ಡೊಮಿನಿಯನ್ನುಗಳ ವ್ಯಾಪಾರವು ಬಹಳ ಚಿಂತಾಜನಕ ಸ್ಥಿತಿಗೆ ಬರಬಹುದು. ಇಂಗಿನ ಇಂಥಾ ಪರಿಸ್ಥಿತಿಯಲ್ಲಿ ಯಾರಿಂದಲೂ ಭವಿಷತ್ತನ್ನು ನುಡಿಯುವುದು ಕಷ್ಟ

ಜಪಾನಿನ ಸಾಂಪತ್ತಿಕ ಸ್ಥಿತಿಯುಯಾದರೋ ಬಹಳ ಹೀನಾವಸ್ಥೆಗೆ ಬಂದಿರುವುದು ಇದರಿಂದಾಗಿಯೇ ಜಪಾನು ಈ ತರದ ಬೆದರಿಸುವ ಧೋರಣೆಯನ್ನು ಕೈಕೊಂಡಿದೆ. ಚೀನಾದಲ್ಲಿ ಇಂದು ನಡೆಯುತ್ತಿರುವ ಯುದ್ಧವು ಬ್ರಿಟಿಷರ ಸಹಾಯದಿಂದ ಇನ್ನು ಸ್ವಲ್ಪ ಕಾಲ ಮುಂದರಿಯಲ್ಪಟ್ಟರೆ ಜಪಾನಿನ ಸಾಂಪತ್ತಿಕ ಪರಿಸ್ಥಿತಿಯು ಇನ್ನಷ್ಟು ಹೀನಾವಸ್ಥೆಗೆ ಬರುವುದೆಂದು ಜಪಾನಿಗೆ ಮುಂದಟ್ಟಿಗಿರುವುದು. ಆದಕಾರಣವೇ ಚೈನಾಯುದ್ಧವನ್ನು ಬೇಗನೇ ಅಂತ್ಯಗೊಳಿಸಬೇಕೆಂದು ಜಪಾನಿನ ಕಾಂಕ್ಷೆಯಾಗಿರುವುದು. ಈ ಕಾಂಕ್ಷೆಯು ನೆರವೇರಲು ಚೀನಿಯರನ್ನು ಸಂಪೂರ್ಣ ನಿಸ್ಸಹಾಯಕರನ್ನಾಗಿ ಮಾಡಬೇಕಾಗುವುದು. ಜಪಾನಿನ ಈಗಿನ ಧೋರಣೆ ಬ್ರಿಟಿಷರು ತಿಳಿದೂಗಿ ಚೀನಿಯರಿಗೆ ಸಾಕಷ್ಟು ಸಹಾಯಮಾಡದಿದ್ದಲ್ಲಿ ಚೀನಾಯುದ್ಧದ ಅಂತ್ಯವಾಗಿ ಜಪಾನಿಯರು ವಿಜಯಿಯಾಗುವುದರಲ್ಲಿ ಸಂದೇಹವಿಲ್ಲ.

ರಾಷ್ಟ್ರೀಯ ಯೋಜನಾ ಸಮಿತಿ

ರಾಷ್ಟ್ರೀಯ ಯೋಜನಾ ಸಮಿತಿಯ ರಚನೆಯಾಗಿ ಒಂದೂವರೆ ವರ್ಷಗಳ ಸಮಯ ದಾಟಿತು. ಇಷ್ಟು ಸಮಯಗಳ ಕಾರ್ಯಕಲಾಪಗಳೆಂದರೆ ಇನ್ನೂರು ಮಂದಿ ಭಾರತದ ಔದ್ಯೋಗಿಕ ವಿಚಾರದಲ್ಲಿ ನಿಷ್ಣಾತರಾದ ಮೇಧಾವಿಗಳಿಂದ ಕೂಡಿದ ಇಪ್ಪತ್ತೇಳು ಉಪಸಮಿತಿಗಳ ರಚನೆಯಾದುದು, ಈ ಉಪಸಮಿತಿಗಳು ತಮ್ಮ ವರದಿಯನ್ನು ಆದಷ್ಟು ಬೇಗನೇ ಸಂಗ್ರಹಿಸಿ ಪ್ರಾಂತಿಕ ಸರಕಾರದ ಮೂಲಕವಾಗಿಯೂ ಕಾಂಗ್ರೆಸಿನ ಮೂಲಕವಾಗಿಯೂ ದೇಶದಲ್ಲಿ ಸರ್ವತ್ರ ಅದರ ಕಾರ್ಯಕಲಾಪಗಳನ್ನು ಜಾರಿಗೆ ತರುವ ಏರ್ಪಾಡು ಇನ್ನು ಮುಂದಕ್ಕೆ ಮಾಡಲಾಗುವುದು.

ರಾಷ್ಟ್ರೀಯ ಯೋಜನಾಸಮಿತಿಯ ಕಾರ್ಯವು ಇಷ್ಟು ನಿಧಾನವಾಗಿ ಸಾಗುವುದಕ್ಕೆ ಸರಕಾರದ ಸಾಕಷ್ಟು ಬೆಂಬಲವಿಲ್ಲದಿರುವುದೇ ಕಾರಣ. ಇತರ ದೇಶದಲ್ಲಿ ಔದ್ಯೋಗಿಕ ಉನ್ನತಿಯು ಭರದಿಂದ ಆಗಬೇಕಾಗಿದ್ದರೆ ಇಂತಹ ಸಮಿತಿಗಳು ಸೂಚಿಸಿದ ಕಾರ್ಯಗಳನ್ನು ಸರಕಾರವು ಪ್ರಯೋಗಕ್ಕೆ ತಂದು ಸಹಾಯ ಮಾಡಿದೆ. ಆದರೆ ಇಂದು ಹಿಂದೂದೇಶದಲ್ಲಿ ಕೇವಲ ಪ್ರಾಂತಿಕ ಸರಕಾರಗಳು ಮಾತ್ರ ಕಾಂಗ್ರೆಸಿನ ಹೇಳಿಕೆಯಂತೆ ಇರುವುದಲ್ಲದೆ, ಸರಕಾರದ ಯಂತ್ರವು ನಡೆಯುವ ಸಂಪೂರ್ಣ ಅಧಿಕಾರವುಳ್ಳ ಕೇಂದ್ರ ಸರಕಾರವು ಈ ರಾಷ್ಟ್ರೀಯ ಯೋಜನೆಯ ಕೆಲಸದಲ್ಲಿ ಯಾವ ಉತ್ಸಾಹವನ್ನೂ ತೋರಿಸುವುದಿಲ್ಲ. (ಪ್ರಾಂತಿಕ ಸರಕಾರಗಳಲ್ಲಿಯೂ ಕೂಡಾ ಬಂಗಾಳ ಸರಕಾರವು ಸಹಕರಿಸದೇ ಇರುವದು ಅದು ಇದುವರೆಗೆ ಅನುಸರಿಸಿದ ಧೋರಣೆಗೆ ಸರಿಯಾದುದೇ ಎನ್ನಬೇಕು) ಇಂತಹ ಸಂದರ್ಭದಲ್ಲಿ ಈ ಸಮಿತಿಯು ಕೈಕೊಳ್ಳುವ ಸಾರ್ವತ್ರಿಕವಾದ ರಾಷ್ಟ್ರೀಯ ಔದ್ಯೋಗಿಕ ಆಂದೋಲನದ ಕಾರ್ಯವು ಬಹಳ ಮಂಗಟ್ಟಿನದ್ದಾಗಿರುತ್ತದೆ.

ಇದರಿಂದ ಈ ಸಮಿತಿಯು ಯಾವ ಪರಿಣಾಮಕಾರಿಯಾದ ಕಾರ್ಯವನ್ನು ಮಾಡಲು ಸಾಧ್ಯವಿಲ್ಲವಾಗಿದೆಯೆಂಬ ನಿರಾಶೆಗೊಳ್ಳಬೇಕಾಗಿಲ್ಲ. ಈಗಾಗಲೆ ಕೆಲವು ಪ್ರಾಂತಿಕ ಸರಕಾರಗಳು ಅವುಗಳು ಕಂಡ ರೀತಿಯಲ್ಲಿ ದೇಶದ ಉದ್ಯೋಗದ ಅಭಿವೃದ್ಧಿಯ ಕಡೆಗೆ ಕೆಲಸಗಳನ್ನು ಆರಂಭಿಸಿವೆ. ಬೊಂಬಾಯಿ ಮತ್ತು ಬೀಹಾರ್ ಸರಕಾರಗಳು ಯೋಜನೆಯ ಕಾರ್ಯಗಳ ಸಫಲತೆಯನ್ನು ಸ್ವತಃ ಕ್ರಿಯೆಯನ್ನು ಮಾಡಿ ತೋರಿಸಿವೆ. ಕಾಂಗ್ರೆಸು ಇಂದು ಹಿಂದೂಸ್ಥಾನದ ಹಲವು ಪ್ರಾಂತಗಳಲ್ಲಿ ಅಧಿಕಾರವನ್ನು ಪಡೆದಿರುವುದರಿಂದ ಪ್ರಾಂತೀಯ ಸರಕಾರದ ಮೂಲಕ ಮಾಡತಕ್ಕ ಕೆಲಸವನ್ನು ಬಹಳ ತೀವ್ರವಾಗಿ ಮಾಡತಕ್ಕದ್ದು ಅವಶ್ಯವಿದೆ.

ಈ ಇಪ್ಪತ್ತೇಳು ಸಮಿತಿಗಳ ವರದಿಯು ಹೊರಬಿದ್ದು ಅವುಗಳಂತೆ ಪ್ರಾಂತಿಕ ಸರಕಾರವು ಕಾರ್ಯಗಳನ್ನು ಕೈಗೊಳ್ಳಬೇಕಾದರೆ, ಅದರಲ್ಲಿಯೂ ಇನ್ನೂರು ಮಂದಿ ನಿಶ್ಚಿತರಾದ ಪ್ರತಿಭಶಾಲಿಗಳ ಪ್ರತಿಯೊಬ್ಬರ ವಿಚಾರವೂ ಒಂದು ನಿರ್ಧಾರಕ್ಕೆ ಬಂದು ಹೊರಡಬೇಕಾದರೆ, ಬಹು ಸಮಯವು ಹಿಡಿದೀತು. ಅಷ್ಟರಲ್ಲಿ ಪ್ರಾಂತಿಕ ಸರಕಾರಗಳು, ನಿಶ್ಚಿತವಾದ ಕಾರ್ಯಕ್ರಮವಿಲ್ಲದೆ ಅವುಗಳಿಗೆ ತಂದಂತೆ ಕಾರ್ಯಗಳನ್ನು ಮಾಡುತಿದ್ದು ಮುಂದಕ್ಕೆ ಇವುಗಳೆರಡರ ಶ್ರಮವೂ ಅನ್ಯೋನ್ಯ ಸಂಘರ್ಷಣೆಯಾಗುವ ಸಂಭವವಿರುತ್ತದೆ ಇದನ್ನು ಬಗೆಹರಿಸುವ ಸಲುವಾಗಿ ರಾಷ್ಟ್ರೀಯ ಯೋಜನಾಸಮಿತಿಯು ಅನುಕಯಾರಿಸಲಿರುವ ವರದಿಯು ಕೆಲಸವೊಡನೆ, ಅದಕ್ಕೆ ಸಹಾಯವಾಗುವಂತೆ ಆಯಾಯ ಪ್ರಾಂತಕ್ಕೆ ಅನುಗುಣವಾಗಿ, ಪ್ರಾಂತೀಯ ಸರಕಾರಗಳು ಮಾಡತಕ್ಕ ಕಾರ್ಯಗಳನ್ನು ಸೂಚಿಸುವ ಒಂದು ಯೋಜನೆಯನ್ನು ನಿದರ್ಶಿಸಬೇಕಾದುದು ಅವಶ್ಯವಾಗಿದೆ.

ರಾಷ್ಟ್ರೀಯ ಯೋಜನಾಸಮಿತಿಯ ಕಾರ್ಯಗಳನ್ನು ಪ್ರಯೋಗಕ್ಕೆ ತಂದು ಪ್ರಯೋಜನವನ್ನು ಪಡೆಯುವ ಜವಾಬ್ದಾರಿಯು ಇಂದು ಜನತೆಯದೇ ಇದೆ ಕೇಂದ್ರ ಸರಕಾರದ ಗಮನವು ಈ ಕಡೆಗೆ ಸಾಂಪ್ರತ ಇಲ್ಲದಿರುವುದರಿಂದ ಯೋಜನೆಯನ್ನು ಯಶಸ್ವಿಯಾಗಿ ಮಾಡಬೇಕಾದದ್ದು ಬಲು ದೊಡ್ಡ ಹೊಣೆಗಾರಿಕೆ. ಅಂತೂ ಹಿಂದೂದೇಶದ ಔದ್ಯೋಗಿಕ ಅಭಿವೃದ್ಧಿಯಲ್ಲಿ ಈ ಸಮಿತಿಯು ಹೊಸ ಇತಿಹಾಸವನ್ನು ನಿರ್ಮಿಸುವುದೆಂದು ನಿರೀಕ್ಷಿಸಬೇಕಾಗಿದೆ.

ಸಕ್ಕರೆಯ ಹೊಸ ಉಪಯೋಗ

ಈಗೀಗ ಕೃತ್ರಿಮ ಸಾಧನೆಗಳು ಬಹಳವಾಗಿ ಆಗುತ್ತದೆ ಕೃತ್ರಿಮ ರಬ್ಬರನ್ನು ಬೇರೆ ಬೇರೆ ವಸ್ತುಗಳಿಂದ ಮಾಡುತ್ತಾರೆ. ನವೀನ ಶೋಧನೆಯದಾದರೆ ಸಕ್ಕರೆ. ಸಕ್ಕರೆಯ ಮದ್ದಿನಿಂದಾಗಲಿ, ಕಬ್ಬಿನಿಂದಾಗಲಿ ರಬ್ಬರನ್ನು ಮಾಡುವುದು ಸಾಧ್ಯವೆಂದು ಒಬ್ಬ ಸಿಯುಲೋನಿನ ಸಂಶೋಧಕನು ಕಂಡು ಹಿಡಿದಿದ್ದಾನೆ.

ಸಕ್ಕರೆಗೆ ಒಂದು ಏಸಿಡ್ ಮತ್ತು ಟರ್ಪೆಂಟೈನನ್ನು ಸೇರಿಸಬೇಕು ಹೆಚ್ಚು ಅಲುಗಾಡಿಸುವಾಗ ಅದರಲ್ಲಿ ರಬ್ಬರಿನಂತಹ ವಸ್ತುವು ಆಗುತ್ತದೆ ಏಸಿಡು ಮುಗಿದಾಗ ನಿಜವಾದ ರಬ್ಬರಿನ ಹಾಗೆಯೇ ಇರುವ ಪದಾರ್ಥವು ಉಳಿಯುತ್ತದೆ.

ಸ್ವೀಕಾರ ವಿಮರ್ಶೆ

ಶರಣ ಸಾಹಿತ್ಯ (ಬಸವಜಯಂತಿ ವಿಶೇಷ ಸಂಚಿಕೆ) ಸಂಪಾದಕ. ಶ್ರೀ ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರಿ—ಬೆಂಗಳೂರು. ಕ್ರೌನ್ ¼ ಆಕಾರದ ೧೬೩+೧೧೬ ಪುಟಗಳು. ಬೆಲೆ. ರೂಪಾಯಿ ಒಂದು.

ಕನ್ನಡ ಪತ್ರಿಕಾ ಲೋಕದಲ್ಲಿ ಇದು ಒಂದು ಹೊಸ ರೀತಿಯ ವಿಶೇಷ ಸಂಚಿಕೆ. ಕರ್ನಾಟಕದಲ್ಲಿ ವಿಭೂತಿ ಪುರುಷ ಕಲ್ಯಾಣದ ಮಂತ್ರಿಶ್ರೇಷ್ಠನಾದ ಬಸವೇಶ್ವರನ ಜಯಂತಿ ಸ್ಮಾರಕವಾಗಿ ಈ ಬೃಹತ್ ಸಂಚಿಕೆಯು ಹೊರಟಿದೆ. ಹೆಚ್ಚಾಗಿ ನಾಡಹಬ್ಬಗಳ ಕುರಿತು ನಮ್ಮಲ್ಲಿ ವಿಶೇಷ ಸಂಚಿಕೆಗಳನ್ನು ಹೊರಡಿಸುವುದು ಕನ್ನಡ ಪತ್ರಿಕೆಗಳ ಕ್ರಮವಾಗಿದೆ. ಆದರೆ ಕನ್ನಡದ ಪ್ರಸಿದ್ಧ ಪುರುಷನೊಬ್ಬನ ಅದರಲ್ಲಿಯೂ ಕನ್ನಡದಲ್ಲಿ ಅಪೂರ್ವ ಸಾಹಿತ್ಯ ಸಂಪತ್ತೊಂದನ್ನು ಪ್ರಚಾರಕ್ಕೆ ತಂದ ವೀರಶೈವ ಮಹಾತ್ಮನ ಕುರಿತು ಹಿಂದೂಧರ್ಮ, ವೀರಶೈವ ಸಾಹಿತ್ಯ ಹಾಗೂ ಕನ್ನಡದೇಳಿಗೆಯ ಉದ್ದೇಶದಿಂದ ಶರಣ ಸಾಹಿತ್ಯವು ಈ ಸಂಚಿಕೆಯನ್ನು ಪ್ರಕಟಿಸಿದ್ದು ಶಕ್ಯವೇ ಆಗಿದೆ.

ಸಂಚಿಕೆಯು ವಿಪುಲ ಚಿತ್ರಗಳಿಂದಲೂ ಮನೋಹರವಾಗಿದೆ. ಬಹಿರಾವರಣದಲ್ಲಿಯೇ ಶಾಂತವರ್ಣ ಚಿತ್ರವನ್ನು ಕೊಟ್ಟಿದ್ದು ಸಂಚಿಕೆಗೆ ಕಲಾಶೋಭೆಯನ್ನು ತಂದು ಕಳೆಯೇರಿಸಿದೆ. ಶ್ರೀ ಬಸವೇಶ್ವರ, ಅಶ್ವರೂಢ ಬಸವೇಶ್ವರ, ಅಲ್ಲಮ ಪ್ರಭುವಿನಬೋಧೆ, ಅಕ್ಕಮಹಾದೇವಿ ಎಂಬ ನಾಲ್ಕು ತ್ರಿವರ್ಣ ಚಿತ್ರಗಳಿವೆ. ಇನ್ನೂ ಅನೇಕ ಸುಂದರ ಚಿತ್ರಗಳಿವೆ. ಯಥಾಕ್ರಮದಂತೆ ಮೈಸೂರು ಅರಸರ ಹಾಗೂ ದಿವಾನರ ಭಾವಚಿತ್ರಗಳೂ ಇವೆ.

ಇದೀ ಸಂಚಿಕೆಯನ್ನು ಎರಡು ಭಾಗವಾಗಿ ವಿಂಗಡಿಸಿದ್ದಾರೆ. ಮೊದಲನೆಯ ಭಾಗದಲ್ಲಿ ಹಿಂದೂ ಧರ್ಮ ಮತ್ತು ಅದರ ವಿವಿಧ ದರ್ಶನಗಳ ಕುರಿತು ಲೇಖನಗಳಿವೆ ಎರಡನೆಯ ಭಾಗದಲ್ಲಿ ಬಸವೇಶ್ವರ ಮತ್ತು ಆತನ ಮತಪ್ರಪಂಚದ ಕುರಿತು ಬರೆಹಗಳಿವೆ. ಕಡೆಗೆ ಬರೆಹಗಾರರ ಪರಿಚಯದ ಪಟ್ಟಿಯೂ ಕೊಡಲ್ಪಟ್ಟಿದೆ.

ಮೊದಲನೆಯ ಭಾಗದಲ್ಲಿ ಧರ್ಮವೆಂದರೇನು, ಹಿಂದೂಧರ್ಮದ ಸ್ವರೂಪ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳ ಪ್ರಕ್ರಿಯೆ, ವೀರಶೈವ ಮತಸ್ವರೂಪ, ಧರ್ಮದಲ್ಲಿ ಬಸವೇಶ್ವರನ ಸ್ಥಾನ, ಜೈನಧರ್ಮ, ಬೌದ್ಧ ಧರ್ಮ, ಚಾರ್ವಾಕದರ್ಶನ (ನಾಸ್ತಿಕಮತ) ಈ ಕುರಿತು ಕನ್ನಡದ ಸುಪ್ರಸಿದ್ಧ ಬರೆಹಗಾರರ ವಿಚಾರಪ್ರಚೋದಕ ಲೇಖನಗಳಿವೆ ಎರಡನೆಯ ಭಾಗದಲ್ಲಿ ಬಸವಣ್ಣನ ಚರಿತ್ರೆ, ವೀರಶೈವ ಸಾಹಿತ್ಯ, ಅಲ್ಲಮಪ್ರಭು, ಶಿವಶರಣೆಯರು ಮೊದಲಾಗಿ ವೀರಶೈವ ಧಾರ್ಮಿಕ ವಿಚಾರಗಳಿವೆ. ಸಂಕ್ಷೇಪವಾಗಿ ಕನ್ನಡದ ಎಲ್ಲಾ ಹೆಸರಾಂತ ಲೇಖಕರ ಧಾರ್ಮಿಕ ಲೇಖನಗಳ ಸಂಗ್ರಹವನ್ನು ಇದರಲ್ಲಿ ಕಾಣಬಹುದಾಗಿದೆ. ಮಾತ್ರವಲ್ಲದೆ ಸೌ॥ ಗಳಾದ ಎಚ್. ಎಂ. ಪಾರ್ವತಮ್ಮ ಬಿ. ಎ., ಕುಮಾರಿ ಸುಶೀಲಮ್ಮ ಎಂ. ಎಸ್. ಸಿ. ಈ ಸ್ತ್ರೀ ಲೇಖಕಿಯರೂ ಈ ಸಂಚಿಕೆಯ ಅಂದವನ್ನು ಹೆಚ್ಚಿಸಿ ಕನ್ನಡ ತಾಯಿ ಸೇವೆಯನ್ನು ಸಲ್ಲಿಸಿದ್ದಾರೆ.

ಶ್ರೀಗಳಾದ ಎಂ. ಗೋವಿಂದ ಪೈ, ಬಿ. ಎಂ. ಶ್ರೀಕಂಠಯ್ಯ ಇವರೇ ಮೊದಲಾದ ಹಿರಿಯ ಕನ್ನಡ ಬರೆಹಗಾರರ ಲೇಖನಗಳನ್ನು ಈ ಸಂಚಿಕೆಯಲ್ಲಿ ಸೇರಿಸಲಾಗದಿರುವ ಸಂಪಾದಕರ ಅಸಾಮರ್ಥ್ಯತೆಯು ಕೊರತೆಯಾಗಿಯೇ ಉಳಿದಿದೆ. ಆದರೆ ಅನಿವಾರ್ಯದಿಂದುದರಿಂದ ಸಮಾಧಾನಪಡತಕ್ಕದ್ದೂ ಆಗಿದೆ. ಸಂಪಾದಕರೇ ಅನ್ನುವಂತೆ ಕೇವಲ ೪೦-೫೦ ದಿವಸಗಳ ಪ್ರಯತ್ನದಿಂದ ಇಂತಹ ಅಪೂರ್ವ ಸಂಚಿಕೆಯೊಂದನ್ನು ಹೊರಡಿಸಿದ್ದು ಪತ್ರಿಕೋದ್ಯೋಗದಲ್ಲಿ ಒಂದು ಅದ್ಭುತವಾದ ಸಾಧನೆಯಾಗಿದೆ.

ಮತ, ಧರ್ಮಗಳ ಕುರಿತು ಪ್ರತಿಪಾದಿಸುವ ವಿಚಾರಗಳು ವಿವಾದಾಸ್ಪದವಾದವುಗಳು. ಆದರೆ ವಿಶಾಲ ಬುದ್ಧಿಯಿಂದ ಎಲ್ಲಾ ಮತಧರ್ಮಗಳು ಒಂದೇ ಸತ್ಯದಿಂದ ಹೊರಟುವುಗಳೆಂದು ಭಾವಿಸುವ ಧಾರ್ಮಿಕ ಪುರುಷರಿಗೆ ಈ ಸಂಚಿಕೆಯ ಲೇಖನಗಳು ಸಾಕಷ್ಟು ಸಂತೃಪ್ತಿಯನ್ನು ಕೊಡದಿರವು. ಒಂದೊಂದೇ ಮತಗಳ ಮೂಲವಿವೇಚನೆ ಮಾಡುವ ಸಂದರ್ಭಗಳಲ್ಲಿ ಅನ್ಯಮತಸಹಿಷ್ಣುತೆಯನ್ನು ಕಾಪಾಡಿಕೊಂಡದ್ದು ಲೇಖಕರ ಸ್ತುತ್ಯಪ್ರಯತ್ನವಾಗಿದೆ.

ಪ್ರತಿಯೊಬ್ಬ ಕನ್ನಡಿಗನೂ ಓದತಕ್ಕದಾದ ಸಂಚಿಕೆ ಧಾರ್ಮಿಕ ದೃಷ್ಟಿಯಿಂದಲೂ, ಕನ್ನಡನಾಡಿನ ವಿಶಿಷ್ಟತೆಯ ದೃಷ್ಟಿಯಿಂದಲೂ ಇದು ಚಿರಂತನವಾಗಿ ಉಳಿಯತಕ್ಕ ಗ್ರಂಥವೇ ಆಗಿದೆ.

ಸಂಚಿಕೆಯ ಮುದ್ರಣವೂ ಚೆನ್ನಾಗಿಯೇ ಇದೆ. ಶ್ರೀ ಶಾಸ್ತ್ರಿಗಳು ತಮ್ಮ ಶರಣಸಾಹಿತ್ಯದ ಮೂಲಕ ಈ ರೂಪದಲ್ಲಿ ಕನ್ನಡ ತಾಯಿಗೆ ಇನ್ನು ಮುಂದೆಯೂ ಸೇವೆಸಲ್ಲಿಸಲಿ ಎಂದು ಹಾರೈಸುತ್ತೇವೆ.

—ಕಯ್ಯಾರ.

ಧೀರ ಪಠಾಣ ಒಬಿದುಲ್ಲಾಖಾನ್

[ಗಡಿನಾಡಿನ ಒಂದು ಉಜ್ವಲ ಜೀವನ ಚಿತ್ರ]

ಗಡಿನಾಡಿನಲ್ಲಿ ಆದ ಆಂದೋಲನವೊಂದರಲ್ಲಿ ಅಲ್ಲಿನ ಪ್ರಧಾನ ಮಂತ್ರಿಯಾಗಿದ್ದ ಡಾ| ಖಾನ್‌ಸಾಹೇಬರ ಪುತ್ರನೇ ಮುಂದಾಳುವಾಗಿ ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯದೆ ಸನ್ಮತಿ ಸದೆ ಸೆರೆಮನೆಗೆ ತುತ್ತಾದ ವಿಷಯವು ಪತ್ರಿಕೆಗಳಲ್ಲಿ ಪ್ರಕಟವಾಗಿದೆಯಷ್ಟೆ? ಆ ಧೀರ ಪಠಾಣನ ಈ ವಿಚಿತ್ರ ಧೋರಣೆಯು ಆತನ ಬಾಳುವೆಯಲ್ಲಿ ಒಂದು ವಿಶಿಷ್ಟತೆಯಾಗಿ ಆದಿಯಿಂದಲೇ ನಡೆದು ಬಂದಿರುತ್ತದೆ!

ತನ್ನ ಮಗನ ಕುರಿತು ಡಾ| ಖಾನ್‌ಸಾಹೇಬರೇ ಒಮ್ಮೆ ಹೀಗೆಂದು ಹೇಳಿದರು "ಆ ಹುಡುಗನಲ್ಲಿ—ಸಾಮಾನ್ಯ ಜನರಲ್ಲಿ ಇಲ್ಲದಿರುವಂತಹ—ಧೈರ್ಯ ಹಾಗೂ ಧಾರ್ಷ್ಟ್ಯತೆಗಳಿವೆ" ಎಂದು. ಮುಲ್ತಾನ ಜೈಲಿನಲ್ಲಿ ಗಲಭೆಯಿಂದು ಆತನು ಆಚರಿಸಿದ ಭಯಂಕರ ಉಪವಾಸದ ಕುರಿತು ಮಾತನಾಡುವಾಗ ತಂದೆಯೇ ಪುತ್ರನ ಧಾರ್ಷ್ಟ್ಯಕ್ಕಾಗಿ ಬೆರಗಾಗಿಹೋದಂತೆ ಮೇಲಿನ ಮಾತನ್ನು ಹೇಳಿದ್ದಾರೆ.

ಒಬಿದುಲ್ಲಾಖಾನರು ತನ್ನ ವ್ಯಕ್ತಿತ್ವವನ್ನು ಬಹಳ ಎಳೆತನದಲ್ಲಿಯೇ ತೋರಿಸಿದರು. ಅವರ ಹೆಸರಿನಲ್ಲಿರುವ ಆಸ್ತಿಯ ವಿಷಯದಲ್ಲಿ ಸರಕಾರಕ್ಕೆ ಅವರಿಂದ ಸ್ವಲ್ಪ ಹಣ ಸಲ್ಲಬೇಕಾಗಿತ್ತು. ಅವರು ಅದನ್ನು ಸಲ್ಲಿಸಿದರು. ಆದರೂ ಕಡೆಗೆ ಮುನ್ನೂರು ರೂಪಾಯಿಗಳು ಬಾಕಿಯುಳಿದುವು. ಅವರನ್ನು ಸರಕಾರವು ಈ ಕಾರಣಕ್ಕಾಗಿ ಚರಸಾದಾ ಎಂಬಲ್ಲಿ ಕೊಳಕು ಸೆರೆಮನೆಗೆ ದೂಡಿತು. ಅಂತಹ ಅವಸ್ಥೆಯಲ್ಲಿ ಜೀವಧಾರಣೆ ಮಾಡುವುದಕ್ಕಿಂತ ಜೈಲಿನವರು ಕೊಟ್ಟ ಆಹಾರವನ್ನು ತಿರಸ್ಕರಿಸುವುದು ಯೋಗ್ಯವೆಂದು ಅವರಿಗೆ ತೋರಿತು. ಅವರ ಸೆರೆಮನೆಯ ಅವಧಿ ಕೇವಲ ಒಂದೂವರೆ ತಿಂಗಳು ಮಾತ್ರವಿತ್ತು. ಅವರು ಹಿಡಿದ ಪಂಥಕ್ಕಾಗಿ ೩೮ ದಿನಗಳ ಉಪವಾಸವನ್ನು ಕೈಗೊಂಡ ಮೇಲೆ ೪೦ನೇ ದಿನ ಅವರನ್ನು ಬಿಡುಗಡೆ ಮಾಡಿದರು.

ಹಾಗೆ ಬಿಡುಗಡೆಯಾದ ಮೇಲೆ ಸ್ವಲ್ಪ ಆರೋಗ್ಯವನ್ನು ಹೊಂದಿ ತನ್ನ ಹಳ್ಳಿಗೆ ಹೋದರು. ತಿರುಗಿ ಅಲ್ಲಿಯೂ ಅವರು ಕರಾಬಾಕಾನೂನಿನ ಹಿಡಿತಕ್ಕೆ ಸಿಕ್ಕಿ ಬಂಧಿತರಾದರು.

ಆ ಸಮಯದಲ್ಲಿ ಇಡೀ ಅವರ ಕುಟುಂಬವೇ ಸೆರೆಮನೆಯೊಳಗೆ ಇತ್ತು. ಆದರೂ ಸರಕಾರವು ಒಬಿದುಲ್ಲಾಖಾನರನ್ನು—ಅನೇಕ ಸಮಯಗಳಿಂದೀಚೆ ಅನೇಕ—ಹದೆ ಬದಲಾವಣೆಗೆ ಬೇರೆ ಬೇರೆ ಜೈಲುಗಳಿಗೆ ಕಳುಹಿಸುತ್ತಾ ಆರೋಗ್ಯವು ಕೆಡದಂತೆ ನೋಡುತ್ತಿದ್ದರು. ಕಡೆಗೆ ಸ್ಯಾಲ್‌ಕೋಟ್ ಜೈಲಿನಲ್ಲಿರಿಸಲು ಅವರು ಒಳ್ಳೆಯ ಆರೋಗ್ಯದಿಂದ ಇದ್ದರು.

ಆದರೆ ಕೆಲವೇ ದಿನಗಳ ಮೇಲೆ ಅವರನ್ನು ಮುಲ್ತಾನವೆಂಬ ಕೊಳಕು ಸೆರೆಮನೆಗೆ ಅವರು ನಿಷೇಧಿಸಿದರೂ ಸರಕಾರವು ಒಯ್ದಿತು. ಹಾಗಾಗಿ ೧೯೪೮ನೇ ಇಸವಿ—ಫೆಬ್ರವರಿ ಒಂದನೇ ತಾರೀಕಿನ ದಿನ ಅವರು ತನ್ನ ಚಾರಿತ್ರಿಕ ಉಪವಾಸವನ್ನು ಆರಂಭಿಸುವುದಾಗಿ ಪ್ರಕಟಿಸಿದರು.

ಅವರ ಕಠಿಣ ಉಪವಾಸವು ೭೮ ದಿನಗಳವರೆಗೆ ಸಾಗಿತ್ತು. ಅವರನ್ನು ಬಲಾತ್ಕಾರದಿಂದ ಉಳಿಸುವ ಸಲುವಾಗಿ ಸರಕಾರವು ಸಾಧ್ಯ ಸಾಹಸಗಳನ್ನು ಮಾಡಿತು. ಅವರು ಮೂರ್ಛಿತರಾಗಿದ್ದಾಗ ಮಾತ್ರ ಸರಕಾರದವರು ಆಹಾರವನ್ನು ಕೊಟ್ಟುಬಿಟ್ಟಿದ್ದರಲ್ಲದೆ, ಎಚ್ಚರಗೊಂಡಾಗ ಅವರ ಭೀಷ್ಮ ನಿರ್ಣಯವನ್ನು ಯಾರಿಗೂ ಮುರಿಯಲಾಗಲಿಲ್ಲ. ಹೀಗಾಗಿ ಕಡೆಗೆ ಆ ಧೀರ ಪಠಾಣನ ದೃಢನಿರ್ಣಯಕ್ಕೆ ಸರಕಾರವು ಶರಣುಹೊಡೆಯಿತು. ೭೮ ದಿನಗಳ ನಿರಶನ ವ್ರತವನ್ನು ಮಾಡಿದರೂ ಆ ವೀರನು ತನ್ನ ಆತ್ಮಶಕ್ತಿಯ ಬಲದಿಂದ ಬದುಕಿದನು.

ಹೀಗೆ ಇಷ್ಟು ಕಠಿಣವಾಗಿ ನಿಶ್ಚಯವನ್ನು ಕೊನೆಗಾಣಿಸಿದ ಒಬಿದುಲ್ಲಾಖಾನರ ಸಾಹಸವು ನಿಜವಾಗಿಯೂ ಆದರ್ಶವಾಗಿದೆ. ಇದು ಸತ್ಯಾಗ್ರಹವೆಂದು ಹೇಳಬರುವುದಿಲ್ಲ. ಸತ್ಯಾಗ್ರಹ ತತ್ವದ ಅನೇಕ ಮಾತಿಯನ್ನು ಉಪವಾಸದ ಮೊದಲು ಅವರು ಪಡೆಯಲು ಶಕ್ಯವಾಗುತ್ತಿದ್ದರೆ ಬಹುಶಃ ಅವರಿಗೆ ಅನುಮತಿ ದೊರಕುತ್ತಿರಲಿಲ್ಲ. ಆದರೆ ಅವರದು ಅನಶನ ಕಂಡ ರೀತಿಯು ಸತ್ಯವೇ ಆಗಿತ್ತಲ್ಲದೆ ಪ್ರಪಂಚದ ಸತ್ಯವನ್ನು ಕಾಯುವ ಕೇಳುವ ಹವ್ಯಾಸ ಅವರಿಗೆ ಇರಲಿಲ್ಲ. ತನ್ನ ನಿರ್ಣಯವನ್ನು ಕೊನೆಗಾಣಿಸುವಲ್ಲಿ ಜೀವಾರ್ಪಣೆ ಮಾಡುವ ದೃಢತೆಯು ನಿಜವಾಗಿಯೂ ಕೊಂಡಾಡತಕ್ಕದ್ದು.

ಈ ಸಂದರ್ಭದಲ್ಲಿ ಅವರ ತಂದೆ ಡಾ| ಖಾನ್‌ಸಾಹೇಬ್ ಅವರ ಚಿಕ್ಕತಂದೆ ಗಡಿನಾಡಿನ ಗಾಂಧಿ ಅಬ್ದುಲ್‌ಗಫರ್‌ಖಾನ್ ಇವರ ಧೈರ್ಯ ಮತ್ತು ದೃಢನಿರ್ಣಯಗಳ ಕುರಿತೂ ನಾವು ಕಿಂಚಿತ್ ವಿಚಾರಿಸಬೇಕು. ಸರಕಾರವು ತೀವ್ರವಾದ ಉಪವಾಸವನ್ನು ಕೈಕೊಂಡ ಒಬಿದುಲ್ಲಾಖಾನರ ವಾರ್ತೆಯನ್ನು ಇಷ್ಟವಿದ್ದಾಗ ಒಮ್ಮೊಮ್ಮೆ ಪ್ರಕಟಿಸುತ್ತಿತ್ತು. ಇದನ್ನು ಜೈಲಿನಲ್ಲಿದ್ದ ಅವರು ಒಮ್ಮೊಮ್ಮೆ ಓದುತ್ತಿದ್ದರು. ಅವರಿಬ್ಬರೂ ಆಗ ಹಜಾರಿಬಾಗ್ ಎಂಬ ಜೈಲಿನಲ್ಲಿದ್ದರು. ಒಬಿದುಲ್ಲಾರವರ ಭಯಂಕರ ಉಪವಾಸವು ತಿಂಗಳು ಗಟ್ಟಲೆಯಲ್ಲಿ ಮುಂದುವರಿದು, ಅವರು ಪ್ರಾಣಾರ್ಪಣೆಗಾಗಿ ಬಿದ್ದಿರುವ ವಾರ್ತೆಯು ಬರಲಾರಂಭಿಸಿತು. ಬಾಲಕನ ಮರಣವು ಸಮೀಪಿಸಿತೆಂದು ಅವರು ತಿಳಿದರು. ಆಗ ಆ ಇಬ್ಬರು ಸಹೋದರರೂ ತಮ್ಮ ಪ್ರೇಮಾಳು ಹೃದಯಗಳನ್ನು ಪ್ರರುಷ ಪಾಷಾಣದಂತೆ ಮಾಡಿಕೊಂಡು, ಆತನು ಸತ್ತಲ್ಲಿ ಅಂತ್ಯಕ್ರಿಯೆಯ ಬಗೆಗೆ ಗಡಿಸ್ವಬೇಕೆಂದು ತಮ್ಮ ಅಭಿಪ್ರಾಯವನ್ನು ಜೈಲಿನ ಅಧಿಕಾರಿಗಳಿಗೆ ಬರೆದು ತಿಳಿಸಿದರು. ಈ ಪತ್ರವನ್ನು ಕಳುಹಿಸಿದ ಮರುದಿನವೇ ೭೮ ದಿನ ಉಪವಾಸದ ಮೇಲೆ ಒಬಿದುಲ್ಲಾಖಾನರು ಜಯಶಾಲಿಯಾದರೆಂಬ ವಾರ್ತೆಯು ಬಂತು. ಆತನ ಉಪವಾಸವು ಸರ್ಕಾರ್ ಕೋರ್ಟ್ ಜೈಲಿನಲ್ಲಿ ಬಿಡಲ್ಪಟ್ಟಿತು. ಈ ಕುರಿತು ಆತನ ಚಿಕ್ಕ ತಂದೆಯಾಗಲಿ ಚಿಕ್ಕಪ್ಪನಾಗಲಿ ಸರಕಾರವನ್ನು ದೂರಿ ಧಿಂಗಿಸಲಿಲ್ಲ. ಆತನ ತಂದೆ ಡಾ| ಖಾನ್‌ಸಾಹೇಬರೇ ಹೀಗೆಂದರು "ಹೇಗಿದ್ದರೂ ಸರಕಾರದವರು ಅವನು ಉಪವಾಸವನ್ನು ತೀರಿಸಿದ ಮೇಲೆ ಆತನನ್ನು ಬಹಳ ಜಾಗ್ರತೆಯಿಂದ ಆರೈಕೆ ನೋಡಿದರು, ಎಂದರೂ ಅವರು ತೆರೆಸ್ಸಿಂದ ನೀಡಿಯನ್ನು ನಾನು ಗ್ರಹಿಸುವುದಿಲ್ಲ. ಆದರೆ ಆ ಮೇಲೆ ಅವರು ಆತನ ಬಗ್ಗೆ ಮಾಡಿದ ಶುಶ್ರೂಷೆಗಾಗಿ ನಾನೆಂದೂ ಸರಕಾರಕ್ಕೆ ಋಣಿಯಾಗಿದ್ದೇನೆ!"

ಡಾ| ಖಾನ್‌ಸಾಹೇಬರು, ಈವಾಗಲೂ ಪೋಲೀಸರು ಆತನ ವಿಷಯದಲ್ಲಿ ಅಪರಾಧಿಯಾಗಿ ವ್ಯವಹರಣೆಯನ್ನು ತಂದಾಗ ಅದೇ ಧೈರ್ಯವನ್ನು ತೋರ್ಪಡಿಸಿದ್ದಾರೆ! ತನ್ನ ಮಗನನ್ನೇ ಪ್ರಧಾನ ಮಂತ್ರಿಗಳು ಸೆರೆಮನೆಯಲ್ಲಿಟ್ಟಿದ್ದಾರೆ.

ಎಂತಹ ಧೀರ ಪಠಾಣರಿವರು!

(ಶ್ರೀ ಮಹದೇವ ದೇಸಾಯಿ "ರ ಲೇಖನದ ಆಧಾರದಿಂದ)

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಪೋಲಪಾದರಿಯ ಪೋಪಲೀಲೆ

ಪೋಲೀಸರ ಭಗೀರಥ ಪ್ರಯತ್ನಗಳಿಂದ ಪೋಲಾಂಡಿನ ಒಬ್ಬ ಪಾದರಿಯ ಪೋಪಲೀಲೆಯು ಈಗ ಪ್ರಕಾಶಕ್ಕೆ ಬಂದಿದೆ! ಇವರು ತನ್ನ ಅನುಯಾಯಿಗಳಿಗೆ ಹಣ ಪಡೆದು ಸ್ವರ್ಗದ ಸ್ಥಾನಮಾನಗಳನ್ನು ಮಾರುತಿದ್ದನು. ಪೋಲೀಸರು ಅವನನ್ನು ಕೈಸೆರೆ ಹಿಡಿದಿದ್ದಾರೆ.

ಪಾದರಿಯ ಅನುಯಾಯಿಗಳು ಬಡಕಲು ಸ್ವಭಾವದವರಾಗಿದ್ದರು. ಪಾದರಿ ಅವರಿಗೆ ಸ್ವರ್ಗದ ಆಸೆಯನ್ನು ತೋರಿಸಿದ. ಅಜ್ಞಾನಿಗಳೂ ಅಂಧವಿಶ್ವಾಸಿಗಳೂ ಆದ ಜನರು—ಮುಖ್ಯವಾಗಿ ಹಳ್ಳಿಯ ಹೆಂಗಸರ—ಇವನು ಬಿದ್ದಿದ ಮೋಸದ ಬಲೆಯಲ್ಲಿ ಬಿದ್ದರು. ಸ್ವರ್ಗದ ಒಂದು ನಕಾಶವನ್ನು ತಯಾರಿಸಿ ಅದರಲ್ಲಿ ದೇವರಿಗೆ ಒಂದು ಸ್ಥಾನವನ್ನು ಕೊಟ್ಟು, ಅದಕ್ಕೆ ಸಮೀಪದ ಸ್ಥಾನಗಳನ್ನು ಕೇಳಿ ಬಂದವರಿಂದ ಹೆಚ್ಚು ಹಣ, ಅದರಿಂದ ದೂರದೂರದ ಸ್ಥಾನಗಳಿಂದ ಕೃಸ್ತರಾಗುವುದರಿಂದ ಕಡಿಮೆ ಹಣ. ಹೀಗೆ ಹಣ ತೆಗೆದುಕೊಂಡು ಪಾದರಿ ಅವರಿಗೆ ಸ್ವರ್ಗದ ಸ್ಥಾನಮಾನಗಳನ್ನು ಮಾರುವ ವ್ಯಾಪಾರವಾಡಿದ. ಜನರ ಅಂಧಶ್ರದ್ಧೆಯ ದುರುಪಯೋಗ ಮಾಡಿಕೊಂಡು ಅವನು ಸಾಕಷ್ಟು ಹಣ ಗಳಿಸಿದ್ದನು. ಬಹಳ ಕಡಿಮೆ ಬೆಲೆಯು ಸ್ವರ್ಗದ ಸ್ಥಾನಕ್ಕೆ ಪಾದರಿ ೨ ಪವನ ಗಳಂತೆ ಕ್ರಯ ತೆಗೆದುಕೊಂಡಿದ್ದ! ಜನರಿಗೆ ವಿಶ್ವಾಸವಾಗುವುದಕ್ಕೋಸ್ಕರ ಅವನು ತಯಾರಿಸಿದ ಸ್ವರ್ಗದ ನಕಾಶದಲ್ಲಿ ಅವನು ಬೇರೆ ಬೇರೆಯವರಿಗೆ ಕೊಟ್ಟ ಸ್ಥಳಗಳನ್ನು ಗುರುತಿಸಿ ನಂಬರು ಇಟ್ಟಿದ್ದ.

ಪೋಲೀಸರು ಬಂದು ಪಾದರಿಯ ಈ ಪೋಪಲೀಲೆಯನ್ನು ಕಂಡು ಹಿಡಿಯುವಾಗ ಅವನು ಇನ್ನೂರು ಜನರಿಗೆ ಸ್ವರ್ಗದ ಸ್ಥಾನಗಳನ್ನು ಮಾರಿದ್ದು ಗೊತ್ತಾಯಿತು. ಕೆಲವರು ಈ ಸ್ವರ್ಗದ ಸ್ಥಾನಗಳಿಗಾಗಿ ತಮ್ಮ ಮನೆ ತೋಟಗಳನ್ನು ಒತ್ತೆ ಇಟ್ಟಿದ್ದರು.

A GOLDEN OPPORTUNITY
FOR
Failed and Neglected Students
The Canara Tutorial College,
Sharada Press Bldgs. : Car Street MANGALORE.
Students coached up by efficient M. A's.
FOR THE
1. S. S. L. C. 2. Intermediate 3. B. A. Degree Exams.
Seats-Limited! Fees Moderate!
Apply to the **Principal.**

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು
ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ.
ಮೆಟ್ಟು ಬೂಟ್ಸುಗಳಿಗೆ ಆಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ
Allamgir Leather Store,
28 Meachua Bazar St, CALCUTTA

ಸರದಾರ ಭವನ **Sirdar Bhavan**
ಫಳ್ನೀರ್‌ಕಟ್ಟೆ ಬಜಾರ್—ಮಂಗಳೂರು
ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯ ತಯಾರಿಸಲ್ಪಟ್ಟ ತಿಂಡಿಗಳು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ವಿದ್ಯುದ್ದೀಪಗಳಿಂದ ಬೆಳಗುವ ಕೋಣೆಗಳು ಸರ್ವರ ಹಿತಕ್ಕೆ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೆ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸ ಮಂಟಪಗಳು.
Proprietor — H R Rao,
Bangalore Gift Emporium Madras

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ
ನಂಜನಗೂಡು ಟೂತ್ ಪೌಡರ್ (೧೫)
ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ನಗರದ ನವ ನಾಯಕರು

[೯ನೇ ಪುಟದಿಂದ ಮುಂದುವರಿದುದು]

ತ್ವಂಥಿಲ್ಲ ಎಂದು ಕಾಣುತ್ತದೆ. ಜತೆಯಲ್ಲಿ ಹೋಗುವ ಎಂದರು. ಜಾನಕಿಯವರು 'ಇದೊಂದು ಗ್ರೂಪ್ ಆಗಲಿ'—ಎಂದರು. 'ಹೋ ಹಿಡಿಯೆಂದು' ಗ್ರೇಸಿಯವರು, ಜಾಡಮಾಲಿಗಳ ಕಾರ್ಯದರ್ಶಿಗಳಿಸಿದ ಆಸನದಲ್ಲಿ ಕುಳಿತರು ಫೋಟೋ ತೆಗೆಯಲ್ಪಟ್ಟಿತು. ಮೂರನೆಯ ದಿನ ಮೆಯಿಲಿನಲ್ಲಿ ಮಿಸೆಸ್ ಫರ್ಟಾಡೋರವರ ಚಿತ್ರ, ಅವರ ಕೆಳಗೊಂದು ಕಸಬರಿಕೆ ಸಹಿತವಾಗಿ ಪ್ರಕಟವಾಗಿತ್ತು. ಅದೇ ಒಂದು ವಾರದಲ್ಲಿ ಅವರು ಮದ್ರಾಸಿಗೆ ಹೋದಾಗ ಅಲ್ಲಿನ ಜಾಡಮಾಲಿಗಳು ಅವರನ್ನು 'ಒಂದು ಸ್ಟ್ರೈಕುಲೀಡ್ ಮಾಡಲು' ಕರೆದದ್ದರಂತೆ 'ನಾನು ಇಲ್ಲಿ ಮೆಡಿಕಲ್ ಕನ್ಸಲ್ಟೇಶನಿಗೆ ಬಂದವಳು' ಎಂದು ಹೇಳಿ ಸೋಶಿಯಲಿಸ್ಟ್ ವಿಪತ್ತನ್ನು ಕಳೆದುಕೊಂಡರು.

ವೈಥಾಸಿನ ಫೋಟೋ ಘಟನೆಯಲ್ಲಿ ಮಿಸೆಸ್ ಜಾನಕಿರಾಮಚಂದ್ರಯ್ಯನವರಿಗೆ ತುಸು ನೋವಾಯಿತು ಅಷ್ಟೊಂದು ದೊಡ್ಡ ಜಾಡಮಾಲಿ ಸಭೆಯಲ್ಲಿ ತಾನೊಬ್ಬಳೇ ಧುರೀಣೆ ಕುಳಿತಿರಬೇಕೆಂದು ಅವರ ಆಸೆಯಿತ್ತು ಗ್ರೇಸಿಯವರು ನೆವನಿಲ್ಲದ ನೆವದಿಂದ ಬಂದುದು ಅವರಿಗೆ ಇಷ್ಟವಾಗಲಿಲ್ಲ ಅದರ ನಂಬನ್ನು ಸಲಿಸಲು ಅವರ ಕಾರಿನಲ್ಲಿ ಹೋಗುವಾಗ 'ಗ್ರೇಸಿಯವರೇ, ನಮ್ಮ ಗ್ರ್ಯಾಜು ಸೇವಾ ಸಂಘಕ್ಕೆ ನಿಮ್ಮಿಂದ ಇನ್ನೂ ೮೫ ರೂಪಾಯಿ ಬಾಕಿಯಿದೆ' ಎಂದರು ಗ್ರೇಸಿಯವರಿಗೆ ಗಾಬರಿಯಾಯಿತು 'ಏನದು'—ಎಂದರು 'ಹೊಸೆಯುವ ಯಂತ್ರದ ಮೌಲ್ಯ' ಎಂದುತ್ತರ ಬಂದಿತು ಗ್ರೇಸಿಯವರು 'ನೆವರ್‌ಮೈಂಡ್' ಎಂದು ಸುಮ್ಮನಾದರು ಈ ಘಟನೆಯಾಗುವಾಗ ಗ್ರೇಸಿಯವರ ಇನ್ನೊಬ್ಬಳು ಗೆಳತಿಯೂ ಕಾರಿನಲ್ಲಿ ಇದ್ದಳು ಅದರಿಂದ ಅವರ ಗೌರವಕ್ಕೆ ಕುಂದು ಕೊರತೆಯಾಯಿತು ಮರುದಿನವೇ ಸಿಟ್ಟಿನಿಂದ ಅವರು ತನ್ನ ಚಾಕರನೊಡನೆ 'ನಾನು ಅದನ್ನು ಉಪಯೋಗಿಸಿಲ್ಲ, ಹಿಂದಕ್ಕೆ ಕಳುಹಿಸಿದ್ದೇನೆ' ಎಂದು ಜಾನಕಿಯವರ ಮನೆಗೆ ಕಳುಹಿಸಿದರು. ಜಾನಕಿಯವರು ಅದರ ಬೆಲೆಯನ್ನು ಸಂಘಕ್ಕೆ ಕೈಯಿಂದ ಕೊಟ್ಟಾಗಿತ್ತು 'ಅಲ್ಲದೆ ಈಗ ಅದನ್ನು ತಿರುಗಿ ಮಾರುವ ಎಂದರೆ ನಮ್ಮ ಊರವರ ಹಣೆಬರಹ, ಆರಂಭಶೂರರು ಈಗ ಯಾರಿಗೂ ಹೊಸೆಯುವ ಬೇಡವಾಗಿದೆ'ಯಂತೆ ಅಂತು ಜೀವದ ಗೆಳತಿಯರಲ್ಲಿ ಒಡಕಿಗೆ ಹೊಸೆಯುವ ಮಶೀನು ಕಾರಣವಾಗಬೇಕೇ?

ಒಂದು ವರ್ಷ ಕಾಲ ಜಾನಕಿರಾಮಚಂದ್ರಯ್ಯನವರು ಗ್ರೇಸಿಯವರ ಕಾರ್ ಇಲ್ಲದೇನೇ ಕಳೆದರು. ಹಾಗೆಂದು ಅವರ ಪೆಟ್ರೋಲು ಅಕೌಂಟು ಒಂದೇ ಸಮನಾಗಿ ನಡೆಯುತ್ತಿತ್ತು ಮುಂದಿನ ವರ್ಷ ಬೋರ್ಡು ಚುನಾವಣೆ ಬಂದಿತು. ಜಾನಕಿರಾಮಚಂದ್ರಯ್ಯನವರು ನಿಲ್ಲುವುದೆಂದು ನಿರ್ಧಾರವಾಯಿತು ಆ ವಾರ್ತೆ ಕೇಳಿದುದೇ ತಡ—ಗ್ರೇಸಿಯವರು ದಿವಾನಬಹದ್ದೂರ್ ದಿಗಂಬರರಾಯರ ಮನೆಗೆ ಓಡಿದರು. ಅವರನ್ನು ಕೂಡಿಕೊಂಡೇ ಗ್ರೇಸಿಯವರು ನೇರಾಗಿ ಗೌಡನಮನೆ ಎಸ್ಟೇಟ ಕಡೆ ಪ್ರಯಾಣ ಬೆಳೆಸಿದರು

ಮಿ॥ ಫರ್ಟಾಡೋರವರಿಗೆ ಇಬ್ಬರೂ ಹಾಗೆ ಧಾವಿಸಿ ಬಂದುದು ನೋಡಿ ಆಶ್ಚರ್ಯವಾಯಿತು ಅವರಬ್ಬೂ ತನ್ನ ಮಿಸೆಸ್ ತಾನಾಗಿ ಮಲೇರಿಯದ ಬೀಡಾದ ಗೌಡನಮನೆಗೆ ಬಂದುದು. ಬಂದವರೇ 'ನೀವು ಇದ್ದು ಫಲವಿಲ್ಲ ರಾಮಚಂದ್ರಯ್ಯನ ಎದುರಿಗೆ ನೀವೇ ನಿಲ್ಲಬೇಕು' ಎಂದು ಪ್ರಸ್ತಾಪ ತೊಡಗಿದರು. ಗ್ರೇಸಿಯು ಅರ್ಧ ಘಂಟೆಯ ತನಕ ಜಾನಕಿರಾಮಚಂದ್ರಯ್ಯನನ್ನು ತೆಗಳಿದರು. ಅವರ ಗಂಡನನ್ನು ತೆಗಳುವ ಕೆಲಸ ದಿಗಂಬರ ರಾಯರು ಮಾಡಿದರು. ಅಂತು ಮೂರು ತಾಸಿನ ಉಪನ್ಯಾಸ ಕೇಳಿ ಕೇಳಿ ಬೇಸತ್ತ ಫರ್ಟಾಡೋರವರು ನಾಮಿನೇಶನು ಕಾಗದ ಕಳುಹಲು ನಿಶ್ಚಯಿಸಿದರು. ಆ ವಾರ್ತೆಯನ್ನು ಹಿಡಿದುಕೊಂಡು ಹೊರಟಿದ್ದರೂ ಮಂಗಳೂರಿಗೆ ಇಳಿದುದೆಂದರೆ ದಿಗ್ವಿಜಯವನ್ನು ಮಾಡಿ ಬಂದವರ ಹಾಗೇ.

ಗ್ರೇಸಿಯವರು ಊರಿನ ಎಲ್ಲ ಪತ್ರಿಕೆಗಳಿಗೂ 'ಗೌಡನಮನೆ ಕಾಫಿಯನ್ನು ಕೊಳ್ಳಿರಿ— ಉತ್ತಮ ಸ್ವದೇಶಿ ಕಾಫಿ' ಎಂದು ಇಡಿ ಪುಟದ ಜಾಹೀರಾತನ್ನು ಕೊಟ್ಟರು. ಮಂಗಳೂರಿನ 'Ideal Coffee House'ನಲ್ಲಿ ಪ್ರತಿ ದಿನ ಬೆಳಿಗ್ಗೆ ೭—೮ರ ತನಕ Ideal Goudanmane ಕಾಫಿಯನ್ನು ಧರ್ಮಾರ್ಥವಾಗಿ ಕೊಡುವ ವ್ಯವಸ್ಥೆಯಾಯಿತು ಪತ್ರಿಕೆಗಳಲ್ಲಿ ಮಿ॥ ಫರ್ಟಾಡೋರವರ 'ವ್ಯಾಪಾರ ವಿಚಕ್ಷಣತೆ,' 'ಧಾರ್ಮಿಕ ಬುದ್ಧಿ' ಇತ್ಯಾದಿಗಳನ್ನು ಕುರಿತು ಪ್ರಶಂಸೆಯು ತೊಡಗಿತು ಇತ್ತ ದಿಗಂಬರರಾಯರು 'ಶ್ರೀ ವನಿತಾ ಬ್ಯಾಂಕು' ದಿವಾಳಿಗೆ ಸಿದ್ಧವಾಗಿದೆಯೆಂಬ ವಾರ್ತೆಯನ್ನು ಹೊರಗೆ ಬಿಟ್ಟರು. ಇದರಿಂದ ಬ್ಯಾಂಕು ಅಧ್ಯಕ್ಷರಾದ ರಾಮಚಂದ್ರಯ್ಯನವರ ಪ್ರಾಮಾಣಿಕತೆಯ ವಿಚಾರದಲ್ಲಿ ಜನರಿಗೆ ಸಂಶಯ ಹುಟ್ಟಲಾಯಿತು ಮಿಸೆಸ್ ಫರ್ಟಾಡೋರವರು ದಿಗಂಬರರಾಯರನ್ನು ತಮ್ಮ ಮುಗ್ಗುಲಿಗೇ ಕುಳ್ಳಿರಿಸಿ ಮೋಟರ ಮನೆಗಳನ್ನೆಲ್ಲಾ ಸುತ್ತಿದರು ಗ್ರೇಸಿಯವರು ಪ್ರತಿ ಓಟರನೊಡನೆಯೂ ಶೇಕ್ ಹ್ಯಾಂಡ್ ಮಾಡಿ, ಅವರಿಂದ ಓಟಿನ ಭರವಸೆ ತೆಗೆದುಕೊಂಡರು. ಇಷ್ಟೆಲ್ಲರ ಪ್ರತಿಫಲವಾಗಿಯೆಂಬಂತೆ ಮಿ॥ ಫರ್ಟಾಡೋರವರು ಬಹುಮತದಿಂದ ಚುನಾಯಿತರಾದರು.

ಇದರಿಂದ ದಿಗಂಬರರಾಯರಿಗೆ ಒಳ್ಳೆಗೆ ತಾನು ಗೆದ್ದೆನಲ್ಲಾ ಎಂದು ಹಿಗ್ಗು ಉಂಟಾಯಿತು ಬಹಿರಂಗದ ಈ ವಿಜಯವು ಅಂತರಂಗದಲ್ಲಿ ಅವರಿಗೆ ಇರಲಿಲ್ಲ ಅವರು ಮಿಸೆಸ್ ಗ್ರೇಸಿಯವರೊಡನೆ ಹಗಲು ರಾತ್ರಿಯ ವ್ಯವಹಾರದಲ್ಲಿ ಅಲೆದಾಡಿದ [illegible] ಅವರ ಕಾರಣವಾಗಿ [illegible] ಬಹಿರಂಗ [illegible] ವತಿಯನ್ನು ಮೂದಲಿಸತೊಡಗಿದ [illegible] ಈಗೀಗ [illegible] ಹೊರಕ್ಕೆ ಹೋಗುವಾಗ, ಎಂದಿನಂತೆ ಹಿಂದಿನ ಸೀಟಿನಲ್ಲಿ [illegible] ರವುದನ್ನು ಬಿಟ್ಟು [illegible] ನಾಳೆಗೆ [illegible] ತೊಡಗಿದ್ದಾರೆ

ದಿಗಂಬರರ [illegible] ಸಿಗದೆಯೂ ಇಲ್ಲ ಅವರ [illegible] ವಾದರೂ, ನೆಪವಿಲ್ಲದ [illegible] ನನ್ನ ಕಿವಿ [illegible] ಜಾರಿಸಿದ್ದ [illegible] ಅವರ [illegible] ನನ್ನ [illegible] ಕಾರಿನಲ್ಲಿ [illegible]' ಎಂದು ಆರ್ಡರು ಮಾಡಿದರು [illegible] 'ನಿಮ್ಮ—ಅದನ್ನು [illegible]' ಎಂದು [illegible] ಇದೇ ರೀತಿ ಅವರ ಹಲವು ಯತ್ನಗಳು [illegible] ಮೂಲೆಗೆ [illegible]

ಇತ್ತ ಗ್ರೇಸಿಯವರ ಸಂತೋಷ ಚಿರಕಾಲ ಉಳಿಯಲಿಲ್ಲ ಒಂದು ದಿನದ ಪತ್ರಿಕೆಯಲ್ಲಿ 'ಫರ್ಟಾಡೋರವರ ಖಾಲಿಬಿದ್ದ ಸ್ಥಾನಕ್ಕೆ ವಿರೋಧಿಗಳಿಲ್ಲದೆ ರಾವ್‌ಸಾಹೇಬ್ ರಾಮಚಂದ್ರರಾಯರು ಚುನಾಯಿತರಾದರು'—ಎಂದಿತ್ತು ಕಾರಣವನ್ನು ವಿಚಾರಿಸಿದರೆ ಫರ್ಟಾಡೋರವರು ಮೊದಲಿನ ಮೀಟಿಂಗಿಗೆ ಹೋದ್ದಲ್ಲದೆ ಆ ಬಳಿಕ ಹೋಗಲೇ ಇಲ್ಲ. ಮೂರು ಬಾರಿ ಮೀಟಿಂಗಿಗೆ ಹೋಗದೆ ಅವರ ಸೀಟು ರದ್ದಾಯಿತಂತೆ. ದಿಗಂಬರರಾಯರಿಗೂ ಆ ವಾರ್ತೆ ಬಲು ಕೆಟ್ಟದ್ದೆನಿಸಿತು—'ಈಗ ನಾನಿಲ್ಲವೇ ಲೇಂಡ್ ಮಾರ್ಗೇಜ ಬ್ಯಾಂಕಿನ ಸದಸ್ಯ ಪ್ರತಿ ಮೀಟಿಂಗಿಗೂ ಹೋಗಲಿಕ್ಕೆ ಯಾರಿಗೆ ಸಾಧ್ಯ? ಆದರೆ ಪ್ರತಿ ಮೂರನೆ ಮೀಟಿಂಗಿಗೆ ಐದು ಮಿನಿಟಿಗಾದರೂ ಹೋಗಿ ಬರುತ್ತೇನೆ. ಮೂರು ಬಾರಿ ಕೆಡಬಾರದಲ್ಲವೆ' ಎಂದರು. ಆದರೆ ಗ್ರೇಸಿಯವರ 'ಹುಚ್ಚು ಗಂಡನಲ್ಲ'ವೇ?

ಶ್ವಾಸಕೋಶಗಳ ಬಾಧೆಯನ್ನು ದೂರಕರಿಸಿರಿ!

ನೀವು ಕೆಮ್ಮು, ಗಂಟಲು ಬೇನೆ, ಶ್ವಾಸಕೋಶಗಳನ್ನು ಅಶಕ್ತಗೊಳಿಸುವ ಶೀತ ಮುಂತಾದ ಬಾಧೆಗಳಿಂದ ನರಳುವಿರಾದರೆ ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ. ಹೀಗೆ ಪೆಪ್ಸನ್ನು ಆದಿಯಲ್ಲಿಯೇ ಸೇವಿಸಿದರೆ ನ್ಯುಮೋನಿಯಾ ಮೊದಲಾದ ಭಯಂಕರ ಶ್ವಾಸಕೋಶದ ಬಾಧೆಗಳು ಬಂದೊದಗುವ ಸಂಭವ ವಿರುವುದಿಲ್ಲ.

ಪೆಪ್ಸು ಬಾಯೊಳಗೆ ಕರಗುತ್ತಿರುವಾಗ ಅದರಿಂದ ಹೊರಟ ಔಷಧೀಯ ಧೂಮವು ನಿಮ್ಮ ಶ್ವಾಸಕೋಶಗಳನ್ನು ಪ್ರವೇಶಿಸುತ್ತವೆ. ಈ ರೀತಿಯಾಗಿ ನಿಮ್ಮ ಗಂಟಲು ಮತ್ತು ಶ್ವಾಸೇಂದ್ರಿಯಗಳು ಗುಣವಾಗುವುವು ಕೆಮ್ಮು ಶೀತಗಳು ಮಾಯವಾಗುವುವು. ಕಫದಲ್ಲಿರುವ ಕ್ರಿಮಿಗಳು ಸಂಪೂರ್ಣವಾಗಿ ನಾಶವಾಗುವುವು ಪೆಪ್ಸನ್ನು ಪ್ರಾರಂಭದಲ್ಲಿಯೇ ಸೇವಿಸಿದರೆ ಭಯಂಕರವಾಗಿ ಪರಿಣಮಿಸಬಹುದಾದ ಚಳಿಜ್ವರ ಶೀತಗಳು ಮಾಯವಾಗುವುವು

ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸನ್ನು ರೂ 1ರಂತೆ ಮಾರುತ್ತಾರೆ

ಏಜಂಟ್ಸ್

ಮೆಸರ್ಸ್ ದಾಧಾ ಮತ್ತು ಕಂಪೆನಿ, ಪಾರ್ಕ್‌ಟೌನ್ ಮದ್ರಾಸು

ಯಾವಾಗಲೂ ಪೆಪ್ಸನ್ನು ಪಯೋಗಿಸಿರಿ.

PEPS

ವಿಷಹಾರಿ ಶ್ವಾಸನೀಯ ಗುಳಿಗೆಗಳು.

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿನಾ' ಟೊಯ್ಲೆಟಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ 1) ಉತ್ತಮ ಬಣ್ಣದ ಸಾಕ್ರಪ್ಲುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು. 2) ಆ ಸ್ಥಳದ ಪತ್ರಿಕೆ [illegible] ಏಜಂಟರ ಹೆಸರಿನ ಜಾಹಿರಾತು [illegible] 3) ಏಜಂಟರ ಹೆಸರಿನ ಹಸ್ತ [illegible] 4) ಸೇಮ್ಪಲ್ [illegible] ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ [illegible] ಏಜಂಟರಿಗೆ ತುಂಬಾ ಕಮಿಷನ್ ಕೊಡಬಹುದು [illegible] ಭಾಷೆಗಳಲ್ಲಿ [illegible]

ವಿಚಾರಿಸಿಗೆ ಈ ಕೆಳಗಿನವರಿಗೆ ಬರೆಯಿರಿ

ಎನ್ [illegible]

ವಿಲ ಪಾರ್ಲೆ ಮುಂಬಯಿ

[illegible] ಬಿ. ಎಸ್ ನಿಟ್ಟೆ

[illegible] ಡಾ ಕೆ ಭಾಸ್ಕರ ಶೈ

ಸ್ಪೆಶಲ್ ಏಜಂಟ— [illegible]



ಬೆಂಬಿಸ್ಕ್ರಿ

ಟೀ ರೋಸ್

ಸಾಮಾನ್ಯ ಬೆಲೆಗೆ ಮಾರಲ್ಪಡುವ

ಅತ್ಯಂತ ಸುಗಂಧಪೂರಿತ ಸಾಬೂನು!

ಬಹಳ ದೊಡ್ಡದಾದ ಸೈಜು! ◇ ನವೀನವಾದ ಆಕಾರ'

ಆಹ್ಲಾದವನ್ನೀಯುವ ಪರಿಮಳ'

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ

ತಯಾರಿಸುವವರು — ಬೊಂಬೈ ಸೋಪ್ ಫೆಕ್ಟರಿ, ಬಿ. ಜಿ 3.

ವಿತರಣಾಕಾರರು — ವಿ ಅಹಮ್ಮದ್ ಹುಸ್ಸೇನ್, ಗೋಳಿಕಟ್ಟಾ ಬಜಾರ್, ಮಂಗಳೂರು.

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ — ಜವಿಮ್ಮ ವೆಂಕಟ್ರಮಣಯ್ಯ

ವಿಶೇಷ ಮಾಹಿತಿಗೆ ಬರೆಯಿರಿ — ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪೂರ್, ಮದ್ರಾಸು.

ಹಣ್ಣುಹಂಪಲುಗಳ ಸಮೃದ್ಧಿಯಿಂದ ರಾಷ್ಟ್ರದ ಆರೋಗ್ಯವೂ ಸಂಪತ್ತೂ ಹೆಚ್ಚುವುದು

ಕೆಲಿಫೋರ್ನಿಯಾದ ಉದಾಹರಣೆ ★ ಹಿಂದೂದೇಶದ ಪರಿಸ್ಥಿತಿ

ಸಂಘಟಿತವಾದ ಸಹಕಾರ ಪದ್ಧತಿಯು ಅವಶ್ಯ ★ ದಕ್ಷಿಣ ಕನ್ನಡವೂ ಹಣ್ಣುಗಳ ಬೆಳೆಯೂ

[ಲೇಖಕ — ಕೃಷಿಕ.]

ಹಿಂದೂದೇಶವು ಕೃಷಿ ಪ್ರಧಾನವಾದ ದೇಶ ಆದರೂ ಇಲ್ಲಿ ಕೃಷಿಯ ಕಡೆಗೆ ಸಾಕಷ್ಟು ಗಮನ ಕೊಡಲಿಲ್ಲ. ಅದಕ್ಕೆ ಯಾರು ಕಾರಣರೆಂದು ನಾವೀಗ ವಿಚಾರಿಸುವುದು ಅಗತ್ಯವಿಲ್ಲ. ಆದರೆ ನಮ್ಮಲ್ಲಿ ಪ್ರಾಮುಖ್ಯವಾಗಿ ಆಗುವ ಫಲವತ್ತಾದ, ಲಾಭದಾಯಕವಾದ ಬೆಳೆಗಳನ್ನು ನಾವು ಲಕ್ಷ್ಯಕ್ಕೆ ತರದೇ ಇರುವುದು ತುಂಬಾ ವಿಷಾದಕರವಾದ ಸಂಗತಿಯಾಗಿದೆ.

ಪ್ರಾಚೀನ ಕಾಲದಿಂದಲೇ ಹಣ್ಣು ಹಂಪಲುಗಳಿಗೆ ಭರತಖಂಡದಲ್ಲಿ ತುಂಬಾ ಪ್ರಶಸ್ತಿಯಿದೆ. ಪ್ರಾಚೀನ ಋಷಿಗಳು, ಸಂತರು ಮಹಾತ್ಮರಾದವರು ಹಾಲು ಮತ್ತು ಹಣ್ಣುಗಳಿಂದ ಜೀವನ ಮಾಡುತ್ತಿದ್ದ ವಿಷಯ ನಾವು ಚರಿತ್ರೆಯಲ್ಲಿ ಕೇಳಬಹುದು. ಇಂದೂ ಕೂಡಾ ಹಾಲು ಹಣ್ಣುಗಳಿಂದಲೇ ಜೀವಧಾರಣೆ ಮಾಡುವಂತಹ ಮಹಾತ್ಮಗಾಂಧಿಯಂತವರು ಹಿಂದೂದೇಶದಲ್ಲಿ ಜೀವಿಸಿದ್ದಾರೆ. ಉಷ್ಣ ದೇಶವಾದ ನಮ್ಮ ದೇಶದಲ್ಲಿ ಹಣ್ಣಿನ ರಸವು ಅತ್ಯಂತ್ಯ ಪ್ರಯೋಜನವುಳ್ಳ ಪಾನೀಯವಾಗಿದೆ. ಬಡವರು ಸಾಮಾನ್ಯರಿಗೂ ಈ ರೀತಿಯಲ್ಲಿ ರಸವಾದ ಪಾನೀಯವನ್ನು ದೊರಕುವ ಹಾಗೆ ಮಾಡುವುದು ದೇಶದ ಆರೋಗ್ಯದ ದೃಷ್ಟಿಯಿಂದಲೂ, ಸಾಂಪತ್ತಿಕ ದೃಷ್ಟಿಯಿಂದಲೂ ಅವಶ್ಯವಾಗಿದೆ.

ಹಣ್ಣುಗಳು ಹಿಂದೂದೇಶದಲ್ಲಿ ಪ್ರಕೃತಿ ಸಹಜವಾಗಿಯೇ ಬೆಳೆಯುತ್ತವೆ. ಮಾವು, ಬಾಳೆ, ಅನನಾಸು ಗೇರು ಮೊದಲಾದವು ಇಲ್ಲಿ ಹೇರಳವಾಗಿವೆ. ಈ ಕೃಷಿಗೆ ಒಂದು ಸಂಘದ ರೂಪವನ್ನು ಕೊಟ್ಟು ಅದನ್ನು ಯೋಗ್ಯ ರೀತಿಯಲ್ಲಿ ಪ್ರಸಾರಪಡಿಸಿ ರಾಷ್ಟ್ರೀಯ ಸಾಂಪತ್ತಿಕ ಅಭಿವೃದ್ಧಿಯ ದೃಷ್ಟಿಯಲ್ಲಿ ಕೆಲಸ ಮಾಡಿದವರು ತುಂಬಾ ಕಡಿಮೆ. ಹೀಗೆ ಸಂಘ ರೂಪದಿಂದ ಇದನ್ನು ಬೆಳಸಿ ಯೋಗ್ಯ ರೀತಿಯಲ್ಲಿ ಉದ್ಯೋಗವನ್ನು ಮಾಡಿ ಪ್ರಯೋಜನವನ್ನು ಪಡೆದವರಲ್ಲಿ ಕೆಲಿಫೋರ್ನಿಯಾದವರೇ ಮೊದಲಿಗರು. ಅಲ್ಲಿ ಇಡೀ ಪ್ರಪಂಚದಲ್ಲಿ ಅತ್ಯಂತ ದೊಡ್ಡದಾದ ಹಣ್ಣುಗಳ ವಿಕ್ರಯದ ಸಂಘವಿದೆ. ಆದರೆ ಹಿಂದೂದೇಶವು ತನ್ನಲ್ಲಿ ಸಾಕಷ್ಟು ಹಣ್ಣುಗಳನ್ನು ಬೆಳಸಿ ಉದ್ಯೋಗವನ್ನು ಸಾಧಿಸಲು ಸಾಧ್ಯವಿದ್ದಾಗ, ಇಲ್ಲಿಗೆ ಬೇರೆ ದೇಶದಿಂದ ಹಣ್ಣುಗಳು ಬರುತ್ತಿರುವುದು ಆಶ್ಚರ್ಯವಾದುದಾಗಿದೆ.

೧೯೩೫–೩೬ರಂದು ೧೯ ೨೬ ಲಕ್ಷರೂಪಾಯಿ ಬೆಲೆ ಬಾಳುವ ಹಣ್ಣುಗಳನ್ನು ಪರದೇಶದಿಂದ ಇಲ್ಲಿ ತರಿಸಿದೆ. ಮದ್ರಾಸು ಪ್ರಾಂತ್ಯ ಒಂದೇ ೮೬,೦೦೦ ರೂಪಾಯಿಗಳಷ್ಟು ಬೆಲೆ ಬಾಳುವ ಹಣ್ಣನ್ನು ತರಿಸಿದೆ. ಇಲ್ಲಿಗೆ ಜಪಾನು ಅಮೆರಿಕಾ ಅಸ್ಟ್ರೇಲಿಯಾ ಮೊದಲಾದ ಕ್ಷೇತ್ರಗಳಿಂದ ಹಣ್ಣುಗಳು ಬರುತ್ತವೆ. ಈಗೀಗ ನಮ್ಮ ದೇಶದಲ್ಲಿಯೂ ವಿಜಾಗಪಟ್ಟಣ, ಬಂಗನಪಳ್ಳಿ, ಚಿತ್ತೂರು, ಮುಸಲಿಪಟ್ಟಣಗಳಲ್ಲಿ ಈ ಕೃಷಿಯು ಉತ್ತಮ ಸ್ಥಿತಿಯಲ್ಲಿದೆ. ಯೂರೋಪಿನಲ್ಲಿ ಪ್ರಯೋಗಕ್ಕೆ ತಂದ ಅನೇಕ ನವೀನ ಶೋಧನೆಗಳನ್ನು ಇಲ್ಲಿಯೂ ಆರಂಭಿಸಿದ್ದಾರೆ.

ಮಾವು, ಕಿತ್ತಳೆ, ಅನನಾಸು, ಸಪೋಟಾ, ಬಾಳೆ, ತೆಂಗು, ಗೇರು ಹಣ್ಣುಗಳು ನಮ್ಮಲ್ಲಿ ಸಮೃದ್ಧಿಯಾಗಿ ಬೆಳೆಯುತ್ತವೆ. ಸೇಲಂ ಮತ್ತು ಉತ್ತರ ಆರ್ಕಾಟಿನ ಹಣ್ಣುಗಳು ಬಹಳ ಪ್ರಸಿದ್ಧಿಯನ್ನು ಪಡೆದವುಗಳಾಗಿರುತ್ತವೆ. ಸೇಲಂ, ಮಧುರಾ, ಅನಂತಪುರ ಜಿಲ್ಲೆಗಳಲ್ಲಿ ದ್ರಾಕ್ಷೆಯೂ ಬೆಳೆಯುತ್ತದೆ.

ಹಣ್ಣಿನ ಉದ್ಯೋಗವನ್ನು ಆರಂಭಿಸುವುದರಲ್ಲಿ ಬಹು ಬಗೆಯ ಕೆಲಸಗಳನ್ನು ಅರಿತುಕೊಳ್ಳಬೇಕಾಗಿದೆ. ಅದರ ಕೆಲಸವನ್ನು ಸುರು ಹಚ್ಚುವವರಿಗೆ ಇಡೀ ರಾಷ್ಟ್ರೀಯ ಸಂಪತ್ತಿನ ಅಭಿವೃದ್ಧಿಯ ದೃಷ್ಟಿಯು ಇರಬೇಕು. ಅವುಗಳಿಗೆ ತಕ್ಕುದಾದ ಮಣ್ಣು ಗೊಬ್ಬರ, ಕೃಷಿ ಮೊದಲಾದ ವಿಷಯಗಳು ಅವರಿಗೆ ತಿಳಿದಿರಬೇಕು. ಸಂಘರೂಪವಾಗಿ ಅದು ಇಡೀ ದೇಶದಲ್ಲಿ ಪ್ರಚಾರವಾಗಬೇಕು. ಹಣ್ಣನ್ನು ಬೆಳೆಸುವ ಕೃಷಿಯನ್ನು ಚೆನ್ನಾಗಿ ಪ್ರಚಾರ ಮಾಡಿದ ಮೇಲೆ ಹಣ್ಣಿನಿಂದ ಇತರ ನಾನಾ ತರದ ಆಹಾರ ಪದಾರ್ಥಗಳೇ ಮೊದಲಾದವುಗಳನ್ನು ಮಾಡುವುದೂ ಗೊತ್ತಿರಬೇಕು. ಮಾತ್ರವಲ್ಲದೆ ಅವುಗಳನ್ನು ವ್ಯಾಪಾರದ ದೃಷ್ಟಿಯಿಂದ ಫಿರ್ಯಾದು ಮಾಡಿ ಲಾಭ ಹೊಂದುವ ಯೋಜನೆಯೂ ಸಿದ್ಧವಾಗಬೇಕು. ಹೀಗೆ ಮಾಡಿದಲ್ಲಿ ಹಿಂದೂದೇಶವು ತನ್ನಲ್ಲಿ ಹಣ್ಣು ಹಂಪಲುಗಳನ್ನು ಬೆಳಸಿ ರಾಷ್ಟ್ರದ ಆರೋಗ್ಯ ಮತ್ತು ಸಂಪತ್ತುಗಳನ್ನು ಅಲ್ಪ ಕಾಲದಲ್ಲಿ ಕಾಪಾಡಿಕೊಳ್ಳಬಹುದು. ಇಲ್ಲಿಗೆ ಬರುವ ಹಣ್ಣುಗಳನ್ನು ನಿಲ್ಲಿಸುವುದು ಮಾತ್ರವೇ ಅಲ್ಲದೆ ಪರದೇಶಕ್ಕೆ ಇಲ್ಲಿಂದ ತುಂಬಾ ಹಣ್ಣುಗಳನ್ನು ಕಳುಹಿಸಬಹುದಾಗಿದೆ.

ಆಂಧ್ರದೇಶದಲ್ಲಿ ಫಲಗಳ ಬೆಳೆಯು ಬಹಳವಾಗಿ ಆಗುತ್ತದೆ. ಪೂರ್ವ ಗೋದಾವರಿ, ಕೃಷ್ಣಾ ಕಡಪಾ ಜಿಲ್ಲೆಗಳಲ್ಲಿ ಬಹಳವಾಗಿ ಮಾವನ್ನು ಬೆಳೆಸುತ್ತಾರೆ. ಪೂರ್ವ ಗೋದಾವರಿ ಒಂದರಿಂದಲೇ ಸಾವಿರ ಟನ್ನು ಗೇರು ಬೀಜವು ಕಳುಹಿಸಲ್ಪಟ್ಟು ೯೦ ೦೦೦೦ ರೂಪಾಯಿಗಳ ಉತ್ಪತ್ತಿಯು ಆಗುತ್ತದೆ. ಗೇರು ಬೀಜಕ್ಕೆ ಇಡೀ ಹಿಂದೂಸ್ಥಾನದಲ್ಲಿ ಮಾತ್ರವಲ್ಲದೆ ಪರದೇಶದಲ್ಲಿಯೂ ತುಂಬಾ ಗಿರಾಕಿ ಇದೆ.

ಇಲ್ಲಿನ ಹಣ್ಣುಗಳಿಗೆ ಬನಾರ್ಸ ಸಿಲೋನ್ ಮೊದಲಾದವು ಬಹಳ ಯೋಗ್ಯ ಸ್ಥ[illegible]ಗಳಾಗಿವೆ. ದಕ್ಷಿಣ ಹಿಂದೂದೇಶದಲ್ಲಿ ಬೆಳೆಯುವ ಹಣ್ಣುಗಳಿಗೆ ಉತ್ತರ ಹಿಂದೂಸ್ಥಾನದಲ್ಲಿ ಹೆಚ್ಚಿನ ಗಿರಾಕಿಯಿರುತ್ತದೆ. ಹೀಗಾಗಿ ಸಂಘಟಿತ ರೀತಿಯಿಂದ ಹಣ್ಣುಗಳನ್ನು ನಾವು ತಯಾರಿಸ ಬಲ್ಲೆವಾದರೆ ಇಡೀ ಹಿಂದೂದೇಶದಲ್ಲಿಯೂ ಪರದೇಶದಲ್ಲಿಯೂ ನಾವು ಸಾಕಷ್ಟು ಗಿರಾಕಿಗಳನ್ನು ಪಡೆಯಬಹುದು.

ಕಾಂಗ್ರೆಸು ಸರಕಾರವೂ ಹಣ್ಣುಗಳ ಉದ್ಯೋಗವನ್ನು ಅಭಿವೃದ್ಧಿ ಮಾಡುವ ಸಲುವಾಗಿ ತನ್ನ ಸಹಾಯವನ್ನು ಕೊಡುತ್ತದೆ. ಕೊಡೂರ, ಅನಕಾಪಳ್ಳಿ, ಸಾಮಲ್ಕೋಟೆಗಳಲ್ಲಿ ಪ್ರಯೋಗ ಸ್ಥಳಗಳನ್ನು ಏರ್ಪಡಿಸಿದೆ. ಅಲ್ಲಿ ನುರಿತ ಕೆಲಸಗಾರರು ಹೊಸ ಹೊಸ ಶೋಧನೆಗಳನ್ನು ಕಂಡು ಹಿಡಿಯುವುದರಲ್ಲಿ ನಿರತರಾಗಿದ್ದಾರೆ.

ಆಂತೂ ನಮ್ಮ ಪ್ರಾಂತ್ಯದವರು ಈ ಕಡೆಗೆ ಗಮನ ಕೊಡದೆ ನಿರ್ವಾಹವಿಲ್ಲ. ಈ ಕುರಿತು ಅನುಭವವನ್ನು ನಾವು ಸಂಘರೂಪದಿಂದ ಕೆಲಸ ಮಾಡಿ ಕಾಲಿಫೋರ್ನಿಯದವರಿಂದ ಕಲಿಯಬಹುದಾಗಿದೆ. ಆ ಸಂಘದಲ್ಲಿ ೨೦,೦೦೦ ಸದಸ್ಯರಿದ್ದು ೨೩೦ ಶಾಖೆಗಳು ತೆರೆಯಲ್ಪಟ್ಟಿವೆ. ಹೀಗೆಯೇ ಆಯಾಯ ಪ್ರಾಂತ್ಯದಲ್ಲಿ ಸಹಕಾರೀ ಪದ್ಧತಿಯಿಂದ ಕಾರ್ಯವನ್ನು ಸಾಧಿಸುವುದು ನಿಜವಾಗಿಯೂ ಪ್ರಯೋಜನಕಾರಿಯಾದುದಾಗಿರುತ್ತದೆ.

ದಕ್ಷಿಣ ಕನ್ನಡದವರು ಈ ಕುರಿತು ಗಮನ ಕೊಡುವರೇ? ಇಲ್ಲಿ ಮಾವು, ಗೇರು, ಬಾಳೆ ಅನನಾಸು ಮೊದಲಾದವುಗಳು ವಿಪುಲವಾಗಿ ಬೆಳೆಯುತ್ತವೆ. ಇದರ ಉತ್ತಮ ಫಲವನ್ನು ಪಡೆದು ರಾಷ್ಟ್ರ ಸಂಪತ್ತನ್ನು ದೇಶದ ಆರೋಗ್ಯವನ್ನು ಹೆಚ್ಚಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ನೋಟೀಸು

ಕಾಸರಗೋಡು ಡಿ. ಮುನ್ಸೀಫ್ ಕೋರ್ಟಿನಲ್ಲಿ

O. S. 583/37 R. E. P. 1204/38

ಅಮದ ಬ್ಯಾರಿ–ಕೋಳಬ್ಯಾರಿಗಳ ಮಗ. ಪಳ್ಳಿಕೆರೆ ಗ್ರಾಮದ ಚೇಕ್ಷದಲ್ಲಿರುವವ —ಅರ್ಜಿದಾರ

ಮತ್ತು

ಅಬ್ದುಲ್ ರಹಿಮಾನ್ ಬ್ಯಾರಿ. ಅಬ್ದುಲ್ಲ ಪಟ್ರಿ ಬ್ಯಾರಿಗಳ ಮಗ, ಪಳ್ಳಿಕೆರೆ ಗ್ರಾಮದ ಚೇಕ್ಷದಲ್ಲಿರುವವ — ಕ್ರಿಪೋಂಡೆಂಟರು

ಇವರೊಳಗೆ

ಮೇಲ್ಕಂಡ ಅಮ್ಲುಜಾರಿಯಲ್ಲಿ ಕ್ರಿಪೋಂಡೆಂಟನ ಬಾಬ್ತು ಹಾಜರುಪಡಿಸಿದ ಖಲಂ ಇಸ್ತಿಹಾರು ಮಂಜೂರಾತಿ ಬಗ್ಗೆ ಮತ್ತು ಅರ್ಜಿದಾರಗೆ ಫರ್ಮಾಶನ್ ಬಗ್ಗೆ ನೋಟಿಸಿಗೆ ತಾರೀಕು 27–6–1939ಕ್ಕೆ ಇಟ್ಟಿದೆ. ಆ ಕುರಿತು ಯಾರಿಗೆ ಏನಾದರು ಆಕ್ಷೇಪವಿದ್ದರೆ, ಆ ಪ್ಯಾದಿಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂತ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗಿದೆ.

ಕಾಸರಗೋಡು 16–6–39 K. DAVDAS SHENOY, Vakil for Petitioner

ಶ್ರೇಷ್ಠ ತರದ ದೃಷ್ಟಿಚಕ್ರಗಳಿಗೆ



ರಬ್ಬರು ಮೊಹರುಗಳಿಗೆ ನಾಯಕ್ ಸ್ಟೋರ್ಸ್ ರಥಬೀದಿ, ಮಂಗಳೂರು

ಜಾಹೀರಾತುಗಳಿಗೆ ಸ್ವದೇಶಾಭಿಮಾನಿ ಅತ್ಯುತ್ತಮ ಸೌಕರ್ಯಕೊಡುವುದು: ಪ್ರತಿಫಲಬರುವಂತೆ ಸಾಧಿಸುವುದು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ। ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಜಿಸ್ಟರ್ಡ್)

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಅನುಭವವನ್ನು ತೋರಿಸುತ್ತದೆ. ಸಾವಿರಾರು ರೋಗಿಗಳು ಇದರ ಲಾಭವನ್ನು ಪಡೆದು ಮುಕ್ತ ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು. ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಬೀಳುವುದಿಲ್ಲ.

ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವುಹೋಗುವುದು. ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರಿಯು ಬೀಳುವುದು, ಮೂತ್ರನಾಳದ ಒಳಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ–ಕೊಕಸ' ಎಂಬ ವಿಷಾರಿ ಜಂತುಗಳು. ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗಗಳು ಮತ್ತು ತತ್ಸಂಬಂಧವಾದ ಅನೇಕ ದುಃಖದಾಯಕ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುತ್ತವೆ. ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 2–0–0 (ವ್ಹಿ. ಪಿ. ಚಾರ್ಜು 8 ಆಣೆ ಬೇರೆ)

ಎಲ್ಲಾ ಪತ್ರವ್ಯವಹಾರ ತಯಾರಿಸುವ ಏಕಮಾತ್ರರಾದ ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ 4. ಇವರಿಗೆ ಇಂಗ್ಲಿಷಿನಲ್ಲಿ ಬರೆಯಿರಿ. Sole Manufacturer: Dr. D. N. JASANI, Vithalbhai Patel Road, BOMBAY.

ಸ್ಥಳೀಕ ಏಜೆಂಟರು: ಮೆಸರ್ಸ್ ಇಲೆಕ್ಟ್ರೊ ಹೋಮಿಯೋಪತ್ ಡಿಸ್ಪೆನ್ಸರಿ, ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್, ಹಂಪನಕಟ್ಟಾ, ಮಂಗಳೂರು.

ಹೊಗೆಸೊಪ್ಪಿನ ತೆರಿಗೆಯ ಕಾನೂನು

—ಅದರ ನಿಬಂಧನೆಗಳು—

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಹೊಸತಾಗಿ ಮಂಜೂರಾದ ಹೊಗೆಸೊಪ್ಪಿನ ಮಾರಾಟ ಹಾಗೂ ಲೈಸನ್ಸು ಕಾನೂನಿನ ಮುಖ್ಯ ವಿವರಗಳು ಹೀಗಿವೆ.

"೧೯೩೯ನೇ ಇಸವಿಯ ಮದ್ರಾಸು ಹೊಗೆಸೊಪ್ಪಿನ ಕಾನೂನಿನಂತೆ ಕಲೆಕ್ಟರರಿಂದ ಒಂದು ಲೈಸನ್ಸನ್ನು ಪಡೆಯದೆ ಚಿಲ್ಲರೆಯಾಗಿಯಾಗಲಿ, ಹೆಚ್ಚು ಸಂಖ್ಯೆಯಿಂದಾಗಲಿ, ಏಜನ್ಸಿಯ ರೂಪದಿಂದಾಗಲಿ, ತಯಾರುಮಾಡುವ ರೀತಿಯಿಂದಾಗಲಿ, ಕಮಿಶನ ಏಜಂಟರಾಗಿಯಾಗಲಿ ಯಾರೂ ವ್ಯಾಪಾರ ಮಾಡಕೂಡದು. ಈ ಕಾನೂನಿನಂತೆ ಒಂದು ಕ್ಲಬ್ಬಿನಲ್ಲಿ ಅದರ ಮೆಂಬರರಿಗೆ ಹೊಗೆಸೊಪ್ಪನ್ನು ಒದಗಿಸಿಕೊಡುವುದೂ, ಒಂದು ಹೋಟೇಲಿನಲ್ಲಿ ಬಂದವರಿಗೆ ಹೊಗೆಸೊಪ್ಪು ತಯಾರಿಸಿಕೊಡುವುದೂ, ಹೊಗೆಸೊಪ್ಪು ಬೆಳೆಸುವವನು ಅದನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ ಕೊಡುವುದೂ 'ವ್ಯಾಪಾರ'ವೆಂದು ಗಣಿಸಲ್ಪಡುವುದು.

ಹೊಗೆಸೊಪ್ಪನ್ನು ನೆಟ್ಟು ಬೆಳೆಸುವವನು ಅದನ್ನು ಏಕಿಯಾಗಿ ವ್ಯಾಪಾರಮಾಡುವ ಸಲುವಾಗಿ ಲೈಸನ್ಸಿಲ್ಲದೆ ಆತನು ಬೆಳೆಸಿದ ಹೊಗೆಸೊಪ್ಪನ್ನು ಬೀಡಿಯೆಲೆಯ ರೂಪದಿಂದ ಮಾರಾಟ ಮಾಡಬಹುದು.

ಈ ಕಾನೂನಿನಂತೆ 'ಹೊಗೆಸೊಪ್ಪು' ಎಂದರೆ ದೋಷವಿಲ್ಲದ ಮತ್ತು ದೋಷ ತೆಗೆಯದ ಹೊಗೆಸೊಪ್ಪು. ಹೊಗೆಸೊಪ್ಪಿನ ಯಾವುದೇ ಮಿಶ್ರಣ ಮತ್ತು ಹೊಗೆಸೊಪ್ಪಿನ ಸಸಿಯ ಎಲೆ ಇವೆಲ್ಲವೊಂದು ತಿಳಿದಿರಬೇಕು.

"ತಯಾರಿಸಿದ ಹೊಗೆಸೊಪ್ಪು" ಎಂದರೆ ಸಿಗಾರುಗಳು, ಚಿರೂಟುಗಳು, ಸಿಗರೇಟುಗಳು, ಸಿಗರೇಟು ಹೊಗೆಸೊಪ್ಪು, ಪೈಪು ಹೊಗೆಸೊಪ್ಪು, ಬೀಡಿಗಳು ಮತ್ತು ಪುಡಿಗಳೂ ಆಗುತ್ತವೆ. ಇದರಲ್ಲಿ ಎಲೆಯಡಿಕೆ ತಿನ್ನಲು ಉಪಯೋಗಿಸುವ ಹೊಗೆಸೊಪ್ಪು ಇನ್ನು ಮುಂದೆ ತಯಾರಿ ಮಾಡಲು ನಿಶ್ಚಯಿಸಿದ ಯಾವುದೇ ಹೊಗೆಸೊಪ್ಪಿನ ಮಿಶ್ರಣವೇ ಆಗಲಿ ಸೇರುವುದಿಲ್ಲ.

ಲೈಸನ್ಸುಗಳು

ಈ ಕೆಳಗಿನಂತೆ ಬೇರೆ ಬೇರೆ ಲೈಸನ್ಸುಗಳು ಆಯಾಯ ವ್ಯಾಪಾರದವರಿಗೆ ಕೊಡಲ್ಪಡುವವು.

೧. ತಯಾರಿ ಮಾಡದ ಹೊಗೆಸೊಪ್ಪನ್ನು ಅಧಿಕ ಸಂಖ್ಯೆಯಲ್ಲಿ ಮಾರುವವರಿಗೆ.

೨. ತಯಾರಿ ಮಾಡಿದ ಹೊಗೆಸೊಪ್ಪನ್ನು ಅಧಿಕ ಸಂಖ್ಯೆಯಲ್ಲಿ ಮಾರುವವರಿಗೆ

೩. ತಯಾರಿಮಾಡುವವರಿಗೆ

೪. ಚಿಲ್ಲರೆ ಮಾರಾಟ ಮಾಡುವವರಿಗೆ ಮತ್ತು ಏಜನ್ಸಿಯವರಿಗೆ ಹಾಗೂ ಕಮಿಶನ್ ಏಜಂಟರಿಗೆ.

ಯಾವುದೇ ಒಂದು ಫರ್ಮು, ಕಂಪೆನಿ, ಅಥವಾ ಮನುಷ್ಯನೇ ಆಗಲಿ ಮೇಲೆ ಕಾಣಿಸಿದ ಎರಡು ಮೂರು ವ್ಯಾಪಾರಗಳನ್ನು ಒಟ್ಟಾಗಿ ನಡೆಸುವುದಿದ್ದರೆ ಅದಕ್ಕೆ ಪ್ರತಿಯೊಂದಕ್ಕೂ ಪ್ರತ್ಯೇಕಪ್ರತ್ಯೇಕ ಲೈಸನ್ಸು ಪಡಕೊಳ್ಳಬೇಕು. ಆದರೆ ತಯಾರಿಮಾಡುವ ಲೈಸನ್ಸಿನಲ್ಲಿ ತಯಾರಿ ಮಾಡಿದ ಹೊಗೆಸೊಪ್ಪನ್ನು ಮಾರಾಟ ಮಾಡುವ ಹಕ್ಕು ಇದೆ.

ಚಿಲ್ಲರೆ ವ್ಯಾಪಾರ ಮಾಡುವವನು ಪಡಕೊಳ್ಳುವ ಲೈಸನ್ಸಿಗೆ ಹಣ ತೆರಬೇಕಾಗಿಲ್ಲ; ಆದರೆ ಪ್ರತಿಯೊಬ್ಬ ಚಿಲ್ಲರೆ ವ್ಯಾಪಾರಿಯೂ ತಯಾರಿ ಮಾಡಿದ ಹೊಗೆಸೊಪ್ಪನ್ನು ಮಾರಾಟ ಮಾಡಿದ ನಿಶ್ಚಿತ ಅವಧಿಯಂತೆ ನ್ಯಾಯವಾದ ರೀತಿಯಲ್ಲಿ ತೆರಿಗೆ ಹೊರಿಸಲ್ಪಡುವನು.

'ಪ್ರತಿಯೊಬ್ಬ ಅಧಿಕ ಸಂಖ್ಯೆಯ ವ್ಯಾಪಾರಸ್ಥನು, ತಯಾರಿಸಿದ ಹೊಗೆಸೊಪ್ಪಿನ ಮಾರಾಟದ ಅವಧಿಯಲ್ಲಿ ಶೇಕಡಾ ೨ರಂತೆ ತೆರಿಗೆ ಹೊರಿಸಲ್ಪಡುವನು. ಆದರೆ ಅಧಿಕ ಸಂಖ್ಯೆಯ ವ್ಯಾಪಾರಸ್ಥರಿಗೆ ೧,೦೦೦ ರೂಪಾಯಿಗಳಿಗಿಂತ ಮಿಕ್ಕಿದ ತಯಾರಿಸಿದ ಹೊಗೆಸೊಪ್ಪನ್ನು ಮಾರಾಟಮಾಡಿದವನು ಈ ತೆರಿಗೆಯನ್ನು ತೆರುವ ಅವಶ್ಯಕತೆಯಿರುವುದಿಲ್ಲ. ತಯಾರಿಸಿದ ಹೊಗೆಸೊಪ್ಪನ್ನು ಚಿಲ್ಲರೆಯಾಗಲಿ, ಅಧಿಕ ಸಂಖ್ಯೆಯಿಂದಲಾಗಲಿ ಮಾರಾಟ ಮಾಡುವವನು ಅವಧಿಯ ತೆರಿಗೆಯನ್ನು ತೆರಬೇಕಾದುದಿಲ್ಲ.

ಅಧಿಕ ಸಂಖ್ಯೆಯ ಮಾರಾಟಮಾಡುವವರು, ತಯಾರಿಮಾಡುವವರು, ಏಜನ್ಸಿ ತೆಕ್ಕೊಳ್ಳುವವರು, ಮತ್ತು ಕಮಿಶನು ಏಜಂಟರು ತಮ್ಮ ವಾರ್ಷಿಕ ತೆರಿಗೆಯನ್ನು ತೆತ್ತು ಲೈಸನ್ಸು ಪಡಕೊಳ್ಳಬೇಕು.

ಯಾರು ತಮ್ಮ ಅಧಿಕ ಸಂಖ್ಯೆಯ ವ್ಯಾಪಾರದ ಅವಧಿಯಲ್ಲಿ ತೆರಿಗೆ ತೆರುತ್ತಾರೋ ಅಂಥವರು ಲೈಸನ್ಸಿಗೆ ಕೇವಲ ಹತ್ತು ರೂಪಾಯಿ ಮಾತ್ರ ಕೊಟ್ಟರೆ ಸಾಕಾಗುತ್ತದೆ. ಇಲ್ಲವಾದಲ್ಲಿ ಅನಿಶ್ಚಿತವಾದ ತೆರಿಗೆಯು ಬೀಳುವುದು.

ಈ ಕಾನೂನಿನಿಂದ ಸರಕಾರವು ಹೊಗೆಸೊಪ್ಪನ್ನು ಉಪಯೋಗಿಸುವುದನ್ನು ತಡೆಯುವುದಿಲ್ಲ, ಆದರೆ ಒಬ್ಬ ಮನುಷ್ಯನು ತನ್ನ ಸ್ವಂತಕ್ಕೆ ಉಪಯೋಗಿಸುವ ಹೊಗೆಸೊಪ್ಪು ಒಂದು ಕ್ರಮವಾಗಿ ಮಿತಿಮೀರದಂತೆ ಆಗುವುದು.

ಒಂದು ಲೈಸನ್ಸು ಪಡಕೊಂಡವನನ್ನು ಬೇರೆ ಬೇರೆ ಕಡೆಗಳಲ್ಲಿ ಅಂಗಡಿ ಮತ್ತು ವ್ಯಾಪಾರ ಮಾಡುವುದಿದ್ದರೆ ಅವನು ಆ ಬಗ್ಗೆ ಪ್ರತ್ಯೇಕ ಪ್ರತ್ಯೇಕ ಲೈಸನ್ಸು ಪಡಕೊಳ್ಳಬೇಕು.

ಪ್ರತಿಯೊಬ್ಬ ಲೈಸನ್ಸುದಾರನೂ ತನ್ನ ಲೆಕ್ಕಪತ್ರವನ್ನು ಸರಿಯಾಗಿ ಇಟ್ಟುಕೊಂಡು ನಿಶ್ಚಿತ ಅವಧಿಯಲ್ಲಿ ಅದಕ್ಕಾಗಿ ಮಾಡಲ್ಪಡುವ ಫೋರ್ಮುಗಳಲ್ಲಿ ಆ ಲೆಕ್ಕವನ್ನು ಬರೆದು ಒಪ್ಪಿಸತಕ್ಕದ್ದು.

ಈ ಕಾನೂನಿಗೆ ವಿರುದ್ಧವಾಗಿ ನಡೆಯುವವನು ೧,೦೦೦ ರೂಪಾಯಿಗಳ ವರೆಗೂ ಆ ಮೇಲೆ ಪ್ರತಿಯೊಂದು ತಪ್ಪಿಗೆ ೫೦ ರೂಪಾಯಿಗಳಂತೆಯೂ ಜುಲುಮಾನೆ ವಿಧಿಸಲ್ಪಡುವನು. ಹೊಗೆಸೊಪ್ಪಿನ ಆಫೀಸರರನ್ನು ಅವರ ಕರ್ತವ್ಯದಲ್ಲಿ ಉಪದ್ರವ ಮಾಡುವ ಯಾವನೇ ಆಗಲಿ ಮೂರು ತಿಂಗಳ ಶಿಕ್ಷೆ ಅಥವಾ ೫೦೦ ರೂ ದಂಡ ಇಲ್ಲವೇ ಅವೆರಡರಿಂದಲೂ ದಂಡಿಸಲ್ಪಡುವನು. ಈ ಕಾನೂನಿನಲ್ಲಿ ನಮೂದಿಸಿದ್ದಕ್ಕಿಂತ ವಿರೋಧವಾಗಿರುವ ಪ್ರತಿಯೊಂದು ಕೆಲಸಕ್ಕೂ ಶಿಕ್ಷೆ ವಿಧಿಸಲಾಗುವುದು.

ತೆರಿಗೆಯನ್ನು ವಿಧಿಸುವದೇ ಮೊದಲಾದ ಕುರಿತು ಮುಂದಕ್ಕೆ ಈ ನಿಯಮಗಳು ಪ್ರಕಟಿಸಲ್ಪಡುವುವು. ಈ ಕಾನೂನಿನಂತೆ ಕಲೆಕ್ಟರರು ಮತ್ತು ಹೊಗೆಸೊಪ್ಪಿನ ಆಫೀಸರರು ಇದನ್ನು ಜಾರಿಗೆ ತರುವಲ್ಲಿ ಅಧಿಕೃತರಾಗಿದ್ದಾರೆ.

ಲೈಸನ್ಸುಗಳನ್ನು ಪಡೆಯುವ ವಿಷಯವೂ ಪ್ರಕಟಣೆ ಮುಂದಕ್ಕೆ ಪ್ರಕಟಿಸಲಾಗುವುದು.

ಕೈಮಗ್ಗದ ಅಭಿವೃದ್ಧಿಗಾಗಿ ಮದ್ರಾಸು ಸರಕಾರದ ಸೂಚನೆ

★ ನೇಯ್ಗೆಯವರ ಜೀವನ ಸುಧಾರಣೆಯಾಗಬೇಕು

★ ಅತ್ಯಲ್ಪ ಮೂಲಧನದಿಂದ ಅಮೂಲ್ಯ ಉದ್ಯೋಗ

★ ಮಿಲ್ಲು ಬಟ್ಟೆಗಳಿಗೆ ಸುಂಕ ಹಾಕಬೇಕು

[ಗ್ರಾಮೋದ್ಧಾರ ಸಂಘದಿಂದ]

ಮದ್ರಾಸು ಸರಕಾರವು ಹಿಂದೂದೇಶದ ಬೇರೆ ಕಡೆಯ ಪ್ರಾಂತೀಯ ಸರಕಾರಗಳಿಗೂ, ಅಲ್ಲದೆ ಇಂಡಿಯಾ ಸರಕಾರಕ್ಕೂ ಅಖಿಲ ಹಿಂದುಸ್ಥಾನದಲ್ಲಿ ಕೈಮಗ್ಗದ ಉದ್ಯೋಗವನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಒಂದು ಯೋಜನೆಯನ್ನು ಮಾಡುವ ಸಲುವಾಗಿ ತಿಳಿಸಿರುತ್ತದೆಯೆಂದು ತಿಳಿಯುತ್ತವೆ. ಕೈಮಗ್ಗದ ಕೆಲಸದವರಿಗೆ ಸರಕಾರವು ಇನ್ನಷ್ಟು ದ್ರವ್ಯ ಸಹಾಯವನ್ನು ಕೊಡುವಂತೆಯೂ ಮದ್ರಾಸು ಸರಕಾರವು ಕೇಂದ್ರ ಸರಕಾರವನ್ನು ಕೇಳಿಕೊಂಡಿದೆ. ಕೃಷಿಯನ್ನು ಬಿಟ್ಟರೆ ಎರಡನೇ ಪ್ರಾಮುಖ್ಯವಾದ ಉದ್ಯೋಗವು ಇಡೀ ಪ್ರಾಂತದಮಟ್ಟಿಗೆ ಮಗ್ಗದ್ದೇ ಆಗಿರುವುದು ೧೦ ಮಿಲಿಯ ಮಂದಿಯು ಈ ಉದ್ಯೋಗದಲ್ಲಿ ನಿರತರಾಗಿದ್ದಾರೆ. ಇದು ಇಡೀ ಹಿಂದೂದೇಶದ ಬಟ್ಟೆಯ ವ್ಯಾಪಾರ ಹಾಗೂ ಉದ್ಯೋಗದಲ್ಲಿ ಬಹಳ ಮುಖ್ಯವಾದ ವಿಷಯವಾಗಿದೆ. ಸೇಕಡಾ ೩೦ರಷ್ಟು ಇಡೀ ದೇಶದಲ್ಲಿ ವ್ಯಾಪಾರವಾಗುವ ಬಟ್ಟೆಯು ಕೈಮಗ್ಗದ ಬಟ್ಟೆಯೆಂದು ತಿಳಿದುಬಂದಿದೆ. ಹಿಂದೂದೇಶದಲ್ಲಿ ಪರದೇಶದ ೬,೮೦೬ ಮಿಲ್ಲಿಯ ಯಾರ್ಡ್ ವಿದೇಶಿ ಮಿಲ್ಲು ಬಟ್ಟೆಗಳೂ, ೩,೨೬೨ ಮಿಲ್ಲಿಯ ಯಾರ್ಡ್ ಹಿಂದೀ ಮಿಲ್ಲು ಬಟ್ಟೆಗಳೂ ೧೫೦೦ ಮಿಲ್ಲಿಯ ಯಾರ್ಡ್ ಕೈಮಗ್ಗದ ಬಟ್ಟೆಗಳೂ ಖರ್ಚಾಗುತ್ತವೆ. ಮಿಲ್ಲು ಬಟ್ಟೆಗಳ ಪ್ರಾಬಲ್ಯದಿಂದಲಾಗಿ ಅದೇ ಮಾರ್ಕೆಟಿನಲ್ಲಿ ಮಾರಾಟವಾಗಬೇಕಾದ ಕೈಮಗ್ಗದ ಬಟ್ಟೆಯೂ ಸ್ಪರ್ಧೆ ಮಾಡಬೇಕಾಗಿ ಬಂದುದರಿಂದ ಕೈಮಗ್ಗದ ಕೆಲಸಗಾರರ ದುಡಿತವು ದಿನದಿಂದ ದಿನಕ್ಕೆ ಕಡಿಮೆಯಾಗುವುದನ್ನು ಸರಕಾರವು ಇದುವರೆಗೆ ಗಮನಕ್ಕೆ ತರದಿರುವುದು ಆಶ್ಚರ್ಯಕರ.

ಹೀಗಿದ್ದರೂ ಯಂತ್ರದಿಂದ ಮಾಡಿದ ಬಟ್ಟೆಗಳನ್ನೂ ಮತ್ತು ಕೈಮಗ್ಗದ ಬಟ್ಟೆಗಳನ್ನೂ ಹೋಲಿಸಿದರೆ ಮಗ್ಗದ ಬಟ್ಟೆಗಳೇ ಹೆಚ್ಚು ಬಾಳುವಿಕೆಯವುಗಳಾಗಿ ಕಂಡು ಬರದಿರವು. ಯಂತ್ರದಿಂದಲಾಗುವ ಮಿಲ್ಲು ಬಟ್ಟೆಗಳನ್ನು ಪಡೆದುಕೊಳ್ಳುವುದ ಬಡತನದಿಂದ ಸರಳವಾದ ದೃಷ್ಟಿಯಲ್ಲಿ ಒಮ್ಮೆಗೆ ಸಹೋಪಕಾರದಂತೆ ಆಗುತ್ತದೆ. ಆದರೆ ತಮ್ಮ ಪರಂಪರೆಯ ಜೀವನೋಪಾಯವು ದಿನೇ ದಿನೇ ಕ್ಷೀಣಸ್ಥಿತಿಗೆ ಬಂದು ಅನ್ನವಿಲ್ಲದೆ ನರಳಬೇಕಾಗುವ ಭಾರತದ ಮಿಲಿಯಾಂತರ ಜನರ ಉದ್ಯೋಗದ ಕಡೆಗೆ ಲಕ್ಷ್ಯವೀಯುವುದು ಅದಕ್ಕಿಂತಲೂ ಜಗತ್ತಿನ ವಿಷಯವಾಗಿದೆ. ಇಂದು ಮಿಲ್ಲು ಬಟ್ಟೆಗಳು ನಮ್ಮಲ್ಲಿ ಇಂತಹ ಕಡಿಮೆ ಕ್ರಯದಲ್ಲಿ ಮಾರಾಟವಾಗಿ ನಮ್ಮ ಕೈಗಾರಿಕೆಗಳನ್ನು ನಾಶಗೊಳಿಸಿದ್ದು ಅವುಗಳನ್ನು ಸುಂಕವಿಲ್ಲದೆ ದೇಶಕ್ಕೆ ಬರಲು ಬಿಟ್ಟ ಕಾರಣದಿಂದ. ಸುಂಕಹಾಕುವುದರ ಮೂಲಕ ಸರಕಾರವು ನ್ಯಾಯವಾದ ಲಾಭವನ್ನು ಪಡೆಯುವುದು ಮಾತ್ರವಲ್ಲದೆ ದೇಶೀಯ ಕೈಗಾರಿಕೆಯನ್ನೂ ಅಭಿವೃದ್ಧಿಗೊಳಿಸಿದಂತಾಗುವುದು.

ಈ ಸಂದರ್ಭದಲ್ಲಿ ಕೇವಲ ೩೦ ರೂಪಾಯಿಗಳ ಮೂಲಧನದಿಂದ ಕೈಮಗ್ಗದ ಉದ್ಯೋಗ ನಡೆಸುವವನು ತಿಂಗಳಿಗೆ ೧೫ ೨೦ ರೂಪಾಯಿಗಳಷ್ಟು ಸಂಪಾದನೆ ಮಾಡುವ ವಿಷಯವನ್ನು ಗಮನಕ್ಕೆ ತರಬೇಕಾದುದು ಅತ್ಯವಶ್ಯವಾಗಿದೆ. ಇಷ್ಟೊಂದು ಕಡಿಮೆ ಮೂಲಧನದಿಂದ ಈ ರೀತಿಯ ಜೀವನೋಪಾಯವನ್ನು ಸಾಗಿಸುವ ಸ್ವತಂತ್ರ ಉದ್ಯೋಗವನ್ನು ಸರ್ವಥಾ ಪ್ರೋತ್ಸಾಹಿಸುವುದು ಸರಕಾರದ ಕರ್ತವ್ಯವಾಗಿರುತ್ತದೆ.

ಹೀಗಾಗಿ ಮಿಲ್ಲಿನಿಂದ ಮಾಡಿದ ಬಟ್ಟೆಗಳ ಮೇಲೆ ಯೋಗ್ಯ ಸುಂಕವನ್ನು ಹೊರಿಸುವ ಮೂಲಕ ದೇಶೀಯ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕಾಗಿ ಮದ್ರಾಸು ಪ್ರಾಂತೀಯ ಸರಕಾರವು ಯೋಚಿಸಿದ ಈ ಸಮಸ್ಯೆಯು ಅಖಿಲ ಭಾರತದ ಸಮಸ್ಯೆಯಾಗಿರುವುದರಿಂದ ಇದನ್ನು ಅಖಿಲಭಾರತದ ದೃಷ್ಟಿಯಿಂದ ವಿಚಾರಿಸಬೇಕಾಗಿರುತ್ತದೆ. ಹೀಗಾಗಿ ಸರಕಾರವು ಈ ಕಡೆಗೆ ಸಾಕಷ್ಟು ಗಮನ ಕೊಡದಿದ್ದಲ್ಲಿ ಕೈಮಗ್ಗದ ಉದ್ಯೋಗದ ಅಭಿವೃದ್ಧಿ ಹೊಂದುವುದು ಅಸಾಧ್ಯವಿರುವುದು.

ನಮ್ಮ ಜಿಲ್ಲೆಯ ಜನರೂ ಈ ಕಡೆಗೆ ಗಮನ ಕೊಡುವರೇ ಜಿಲ್ಲೆಯಲ್ಲಿಯೂ ಕೂಡಾ ಅಲ್ಲಲ್ಲಿ ಹಳ್ಳಿಹಳ್ಳಿಗಳಲ್ಲಿಯೂ ಕೈಮಗ್ಗಗಳನ್ನಿಟ್ಟುಕೊಂಡು ಅಲ್ಪ ಮೂಲಧನದಿಂದ ಜೀವನೋಪಾಯವನ್ನು ಮಾಡುವವರ ಅನೇಕ ಮಂದಿ ಇರುತ್ತಾರೆ. ಇವರ ಅವಸ್ಥೆಯು ದಿನದಿಂದ ದಿನ ಕ್ಷೀಣವಾಗುತ್ತಾ ಇದೆ. ಇವರ ಜೀವನವನ್ನು ಸುಧಾರಿಸುವುದರ ಜೊತೆಗೆ ಅಲ್ಲದೆ ದೇಶೀಯ ವ್ಯಾಪಾರವೂ ಕೂಡಾ ತುಂಬಾ ಅಭಿವೃದ್ಧಿಯಾಗುವ ಸಂದರ್ಭವು ಇದಾಗಿರುತ್ತದೆ.

ಶಾಲಿವಾಹನ ಶಕೆ ೧೮೬೧ನೆಯ ಪ್ರಮಾಥಿ ಸಂವತ್ಸರದ ಆಷಾಢ ಶು|| ೭ ಶನಿವಾರದಿಂದ ಆಷಾಢ ಶು|| ೧೩ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ಮಿಥುನ ಶಾಕೆಗಲ್)

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರ ದಿನ	ವಿಶೇಷ
24	ಶನಿ	೭	೫೦॥	ಉತ್ತರಾ	೨೭,	೧೦	
25	ರವಿ	೮	೪೭।	ಹಸ್ತಾ	೨೪॥	೧೧	
26	ಸೋ.	೯	೪೨॥	ಚಿತ್ರಾ	೨೨॥	೧೨	
27	ಮಂಗ	೧೦	೪೦	ಸ್ವಾತಿ	೨೧॥	೧೩	
28	ಬುಧ	೧೧	೩೮॥	ವಿಶಾಖಾ	೨೧॥	೧೪	
29	ಗುರು	೧೨	೩೭।	ಅನುರಾಧಾ	೨೨।	೧೫	
30	ಶುಕ್ರ	೧೩	೩೯।	ಜ್ಯೇಷ್ಠ	೨೫॥	೧೬	

THE PIE-MONEY BANK LTD.,

Maidan Road, MANGALORE

Undertakes all kinds of Banking Business. Current account at 2½% per annum. Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs. 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—**K. R. GURU**, *Managing Director*

ಗುಣಬಾರದಿದ್ದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಕೆಟ್ಟು ಹೋಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೋ ಮಕ್ಕಳನ್ನು ಹಡಿಯುವುದು ಬೇಡಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುತ್ತದೆ. ಶರೀರಕ್ಕೆ ಏನೂ ಅಪಾಯವಾಗದು. ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಇದರಿಂದ ಏನು ಮಾಡಿದರೂ ತೊಂದರೆಯಾಗುವುದಿಲ್ಲ. [illegible] ಸರ್ಟಿಫಿಕೇಟು [illegible] ವೈದ್ಯ ಎಲ್. ಸಿ. ಪಿ. ಎಸ್. [illegible] ಉಪಯೋಗದಿಂದ [illegible] ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕ್ಕಾಗಿ ಡಬ್ಬಿಗಳು ಕ್ರಯ ರೂ ೪-೦-೦ ವಿ. ಪಿ.

ವಿಳಾಸ ಸಂಜೀವಿನೀ ಔಷಧಾಲಯ, ಪೋ. ಮಿರಜ, (S. M. C.

ಬರೇ ರೂ 1-4-0ಕ್ಕೆ 8 ಗಡಿಯಾರಗಳು ಮತ್ತು 1295 ಫ್ರೀ ಬಹುಮಾನಗಳು.

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೀಸೆ ಪರಿಮಳದ ಸೆಂಟನ್ನೂ ಅಥವಾ 8 ಸೇಸೆ ಕೂದಲೆಣ್ಣೆಯನ್ನು ತರಿಸಿಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ಕಫ್ ಲಿಂಕ್ಸ್ ಗಳೂ ಒಂದು ಕಟ್ಟುವ ಪಟ್ಟಿ ಸಹಿತ

1 ಪಾಕೆಟು ವಾಚು, ಒಂದು ಟೈಮ್ ಪೀಸು, ಒಂದು ಶೇವಿಂಗ್ ಬ್ರಶೂ, ಒಂದು ಶೇವಿಂಗ್ ಸಾಬೂನು, ಒಂದು ಕನ್ನಡಿ, ಒಂದು ಬಾಚಣಿಗೆ, 14 ಕೆರಟ್ ರೋಲ್ಡ ಗೋಲ್ಡ ನಿಬ್ಬಿನ ಫೌಂಟನ್ ಪೆನ್ನೂ, ಒಂದು ಜೊತೆ ರೋಲ್ಡ ಗೋಲ್ಡ ಗುಂಡಿಗಳು, ಒಂದು ಪಾಕೆಟ್ ಪೌಚರು, ಒಂದು ಚೂರಿ, ಒಂದು ಪೇರ್ ಕನ್ನಡಕ, ಒಂದು ಬಂಗಾರದ ಗಿಲ್ಟಿನ ಉಂಗುರ, 300 ಫೀಟ್ ದೂರಕ್ಕೆ ಬೆಳಕು ಬೀರುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ಮೆಶಿನರಿಯಿಂದ ಮಾಡಲ್ಪಟ್ಟ ಒಂದು ಜರ್ಮನ್ ರಿಸ್ಟ್ ವಾಚ್ ಇವುಗಳನ್ನು ಉಚಿತವಾಗಿ ಕೊಡುವೆವು ಪೇಕಿಂಗ್ ಮತ್ತು ಟಪ್ಪಾಲು ಖರ್ಚು 0—14—0 ಪ್ರತ್ಯೇಕ

The American Commercial Stores, Post Box No 12218 Calcutta (S A

THE

Bank of Mangalore Ltd.,

MANGALORE

ESTD 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
"	6 "	4%
"	12 "	5%
"	24 " & upwards	5½%

Interest Payable Quarterly.

Savings Bank deposit 3½% on daily balances.

All kinds of banking business transacted.

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.

in denominations of

RS. 50/-, 100/-, 500/-, 1,000/-, & 5,000/

are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಮೇಹರೋಗ, ಶರೀರದುರ್ಬಲತೆ, ನಿಶ್ಯಕ್ತ್ಯ, ವೀರ್ಯನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,

ಆಯುರ್ವೇದಿಕ ಸಮಾಜ ಪೆಂಡೇಪಿ.

P O Peridepi (ನೆಲ್ಲೂರು ಡಿ.)

HOUNSA

ಹಂಸಾ ಸ್ನೋ

ಮತ್ತು

ಬ್ರಿಲ್ಲಿಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,

ಗೋಡೆಕಟ್ಟಾ ಬಜಾರ್, ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

ಹಳದಿ ಪಿತ್ತ, ಅಜೀರ್ಣವಾದ ಕೆಮ್ಮು, ಮತ್ತು ಒಳಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡ ಮುಡಿಗೆ	1—14—0	—
" ದುಯಂ " "	1—12—0	1—12—0
" ಅವ್ವಲ್ ಸುಗ್ಗಿ "	1—12—0	—
" ದುಯಂ " "	1—10—0	—
ಅಕ್ಕಿ ಅವ್ವಲ್ ಗುಡ್ಡ "	4—10—0	4—12—0
" ದುಯಂ " "	4—6—0	4—8—0
" ಅವ್ವಲ್ ಸುಗ್ಗಿ "	4—6—0	4—7—0
" ದುಯಂ " "	4—3—0	4—5—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
" ಸಿಪ್ಪೆ ಇದ್ದದು "	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
" ದಿಲ್ ಪಸಂದ "	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯಿದ್ದ ಅಡಕೆ 1000ಕ್ಕೆ	3—8—0	4—0—0
ಗೇರುಬೀಜ ಮುಡಿಗೆ	8—12—	8—13—0
ಕಬ್ಬಿನ ಬೆಲ್ಲ ಖಂಡಿಗೆ	47—8—0	55—0—0
ಒಳ್ಳೇಮೆಣಸು ಹಂಡ್ರೆಡ್ವೇಟಿಗೆ	14—8—0	15—8—0

ಹೊಗೆಸೊಪ್ಪಿನ ತೆರಿಗೆಯ ಕಾನೂನು

—ಅದರ ನಿಬಂಧನೆಗಳು—

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಹೊಸತಾಗಿ ಮಂಜೂರಾದ ಹೊಗೆಸೊಪ್ಪಿನ ಮಾರಾಟ ಹಾಗೂ ಲೈಸನ್ಸು ಕಾನೂನಿನ ಮುಖ್ಯ ವಿವರಗಳು ಹೀಗಿವೆ.

"೧೯೪೯ನೇ ಇಸವಿಯ ಮದ್ರಾಸು ಹೊಗೆಸೊಪ್ಪಿನ ಕಾನೂನಿನಂತೆ ಕಲೆಕ್ಟರರಿಂದ ಒಂದು ಲೈಸನ್ಸನ್ನು ಪಡೆಯದೆ ಚಿಲ್ಲರೆಯಾಗಿಯಾಗಲಿ, ಹೆಚ್ಚು ಸಂಖ್ಯೆಯಿಂದಾಗಲಿ, ಏಜನ್ಸಿಯ ರೂಪದಿಂದಾಗಲಿ ತಯಾರುಮಾಡುವ ರೀತಿಯಿಂದಾಗಲಿ, ಕಮಿಶನ ಏಜಂಟರಾಗಿಯಾಗಲಿ ಯಾರೂ ವ್ಯಾಪಾರ ಮಾಡಕೂಡದು. ಈ ಕಾನೂನಿನಂತೆ ಒಂದು ಕ್ಲಬ್ಬಿನಲ್ಲಿ ಅದರ ಮೆಂಬರರಿಗೆ ಹೊಗೆಸೊಪ್ಪನ್ನು ಒದಗಿಸಿಕೊಡುವುದೂ, ಒಂದು ಹೋಟೇಲಿನಲ್ಲಿ ಬಂದವರಿಗೆ ಹೊಗೆಸೊಪ್ಪು ತಯಾರಿಸಿಕೊಡುವುದೂ, ಒಬ್ಬ ಹೊಗೆಸೊಪ್ಪು ಬೆಳೆಸುವವನು ಅದನ್ನು ಕ್ರಯಕ್ಕೆ ಪಡಕೊಳ್ಳುವವರಿಗೆ ಕೊಡುವುದೂ 'ವ್ಯಾಪಾರ'ವೆಂದು ಗಣಿಸಲ್ಪಡುವುದು.

ಹೊಗೆಸೊಪ್ಪನ್ನು ನೆಟ್ಟು ಬೆಳೆಸುವವನು ಅದನ್ನು ಪಾಲಿಯಾಗಿ ವ್ಯಾಪಾರಮಾಡುವ ಸಲುವಾಗಿ ಲೈಸನ್ಸಿಲ್ಲದೆ ಆತನು ಬೆಳೆಸಿದ ಹೊಗೆಸೊಪ್ಪನ್ನು ಬೀದಿಯಲೆಯ ರೂಪದಿಂದ ಮಾರಾಟಮಾಡಬಹುದು.

ಈ ಕಾನೂನಿನಂತೆ 'ಹೊಗೆಸೊಪ್ಪು' ಎಂದರೆ ಸೋಸಲಿಲ್ಲದ ಮತ್ತು ದೋಸ ತೆಗೆಯದ ಹೊಗೆಸೊಪ್ಪು, ಹೊಗೆಸೊಪ್ಪಿನ ಯಾವುದೇ ಮಿಶ್ರಣ ಮತ್ತು ಹೊಗೆಸೊಪ್ಪಿನ ಸಸಿಯ ಎಲೆ ಇವೆಲ್ಲವೊಂದು ತಿಳಿದಿರಬೇಕು.

"ತಯಾರಿಸಿದ ಹೊಗೆಸೊಪ್ಪು" ಎಂದರೆ ಸಿಗಾರುಗಳು, ಚಿರೂಟುಗಳು, ಸಿಗರೇಟುಗಳು, ಸಿಗರೇಟು ಹೊಗೆಸೊಪ್ಪು, ನಶ್ಯ ಹೊಗೆಸೊಪ್ಪು, ಬೀಡಿಗಳು ಮತ್ತು ಪುಡಿಗಳೂ ಆಗಿರುತ್ತವೆ. ಇದರಲ್ಲಿ ಎಲೆಯಡಿಕೆ ತಿನ್ನಲು ಉಪಯೋಗಿಸುವ ಹೊಗೆಸೊಪ್ಪು ಇನ್ನು ಮುಂದೆ ತಯಾರಿ ಮಾಡಲು ನಿಶ್ಚಯಿಸಿದ ಯಾವುದೇ ಹೊಗೆಸೊಪ್ಪಿನ ಮಿಶ್ರಣವೇ ಆಗಲಿ ಸೇರುವುದಿಲ್ಲ

ಲೈಸನ್ಸುಗಳು

ಈ ಕೆಳಗಿನಂತೆ ಬೇರೆ ಬೇರೆ ಲೈಸನ್ಸುಗಳು ಆಯಾಯ ವ್ಯಾಪಾರದವರಿಗೆ ಕೊಡಲ್ಪಡುವವು.

೧ ತಯಾರಿ ಮಾಡದ ಹೊಗೆಸೊಪ್ಪನ್ನು ಅಧಿಕ ಸಂಖ್ಯೆಯಲ್ಲಿ ಮಾರುವವರಿಗೆ.

೨. ತಯಾರಿ ಮಾಡಿದ ಹೊಗೆಸೊಪ್ಪನ್ನು ಅಧಿಕ ಸಂಖ್ಯೆಯಲ್ಲಿ ಮಾರುವವರಿಗೆ

೩ ತಯಾರಿಮಾಡುವವರಿಗೆ

೪. ಚಿಲ್ಲರೆ ಮಾರಾಟಮಾಡುವವರಿಗೆ ಮತ್ತು ಏಜನ್ಸಿಯವರಿಗೆ ಹಾಗೂ ಕಮಿಶನ್ ಏಜಂಟರಿಗೆ.

ಯಾವುದೇ ಒಂದು ಫರ್ಮು, ಕಂಪೆನಿ, ಅಥವಾ ಮನುಷ್ಯನೇ ಆಗಲಿ ಮೇಲೆ ಕಾಣಿಸಿದ ಎರಡು ಮೂರು ವ್ಯಾಪಾರಗಳನ್ನು ಒಟ್ಟಾಗಿ ನಡೆಸುವುದಿದ್ದರೆ ಅದಕ್ಕೆ ಪ್ರತಿಯೊಂದಕ್ಕೂ ಪ್ರತ್ಯೇಕಪ್ರತ್ಯೇಕ ಲೈಸನ್ಸು ಪಡಕೊಳ್ಳಬೇಕು ಆದರೆ ತಯಾರಿಮಾಡುವ ಲೈಸನ್ಸಿನಲ್ಲಿ ತಯಾರಿ ಮಾಡಿದ ಹೊಗೆಸೊಪ್ಪನ್ನು ಮಾರಾಟ ಮಾಡುವ ಹಕ್ಕು ಇದೆ

ಚಿಲ್ಲರೆ ವ್ಯಾಪಾರ ಮಾಡುವವನು ಪಡಕೊಳ್ಳುವ ಲೈಸನ್ಸಿಗೆ ಹಣ ತೆರಬೇಕಾಗಿಲ್ಲ; ಆದರೆ ಪ್ರತಿಯೊಬ್ಬ ಚಿಲ್ಲರೆ ವ್ಯಾಪಾರಿಯೂ ತಯಾರಿ ಮಾಡಿದ ಹೊಗೆಸೊಪ್ಪನ್ನು ಮಾರಾಟ ಮಾಡಿದ ನಿಶ್ಚಿತ ಅವಧಿಯಂತೆ ನ್ಯಾಯವಾದ ರೀತಿಯಲ್ಲಿ ತೆರಿಗೆ ಹೊರಿಸಲ್ಪಡುವನು.

ಪ್ರತಿಯೊಬ್ಬ ಅಧಿಕ ಸಂಖ್ಯೆಯ ವ್ಯಾಪಾರಸ್ಥನು ತಯಾರಿಸಿದ ಹೊಗೆಸೊಪ್ಪಿನ ಮಾರಾಟದ ಅವಧಿಯಲ್ಲಿ ಶೇಕಡಾ ೨೦ರಂತೆ ತೆರಿಗೆ ಹೊರಿಸಲ್ಪಡುವನು ಆದರೆ ಅಧಿಕ ಸಂಖ್ಯೆಯ ವ್ಯಾಪಾರಸ್ಥರಿಗೆ ೧,೦೦೦ ರೂಪಾಯಿಗಳಿಗಿಂತ ಮಿಕ್ಕದೆ ತಯಾರಿಸಿದ ಹೊಗೆಸೊಪ್ಪನ್ನು ಮಾರಾಟಮಾಡಿದವನು ಈ ತೆರಿಗೆಯನ್ನು ತೆರುವ ಅವಶ್ಯಕತೆಯಿರುವುದಿಲ್ಲ. ತಯಾರಿಸಲಾದ ಹೊಗೆಸೊಪ್ಪನ್ನು ಚಿಲ್ಲರೆಯಾಗಲಿ, ಅಧಿಕ ಸಂಖ್ಯೆಯಿಂದಲಾಗಲಿ ಮಾರಾಟ ಮಾಡುವವನು ಅವಧಿಯ ತೆರಿಗೆಯನ್ನು ತೆರಬೇಕಾದುದಿಲ್ಲ.

ಅಧಿಕ ಸಂಖ್ಯೆಯ ಮಾರಾಟಮಾಡುವವರು, ತಯಾರಿಮಾಡುವವರು, ಏಜನ್ಸಿ ತೆಕ್ಕೊಳ್ಳುವವರು, ಮತ್ತು ಕಮಿಶನ್ ಏಜಂಟರು ತಮ್ಮ ವಾರ್ಷಿಕ ತೆರಿಗೆಯನ್ನು ತೆತ್ತು ಲೈಸನ್ಸು ಪಡಕೊಳ್ಳಬೇಕು.

ಯಾರು ತಮ್ಮ ಅಧಿಕ ಸಂಖ್ಯೆಯ ವ್ಯಾಪಾರದ ಅವಧಿಯಲ್ಲಿ ತೆರಿಗೆ ತೆರುತ್ತಾರೋ ಅಂಥವರು ಲೈಸನ್ಸಿಗೆ ಕೇವಲ ಹತ್ತು ರೂಪಾಯಿ ಮಾತ್ರ ಕೊಟ್ಟರೆ ಸಾಕಾಗುತ್ತದೆ. ಇಲ್ಲವಾದಲ್ಲಿ ಅನಿಶ್ಚಿತವಾದ ತೆರಿಗೆಯು ಬೀಳುವುದು

ಈ ಕಾನೂನಿನಿಂದ ಸರಕಾರವು ಹೊಗೆಸೊಪ್ಪನ್ನು ಉಪಯೋಗಿಸುವುದನ್ನು ತಡೆಯುವುದಿಲ್ಲ; ಆದರೆ ಒಬ್ಬ ಮನುಷ್ಯನು ತನ್ನ ಸ್ವಂತಕ್ಕೆ ಉಪಯೋಗಿಸುವ ಹೊಗೆಸೊಪ್ಪು ಒಂದು ಕ್ರಮವಾಗಿ ಮಿತಿಮೀರದಂತೆ ಆಗುವುದು

ಒಂದು ಲೈಸನ್ಸು ಪಡಕೊಂಡವನನ್ನು ಬೇರೆ ಬೇರೆ ಕಡೆಗಳಲ್ಲಿ ಅಂಗಡಿ ಮತ್ತು ವ್ಯಾಪಾರ ಮಾಡುವುದಿದ್ದರೆ ಅವನು ಆ ಬಗ್ಗೆ ಪ್ರತ್ಯೇಕ ಪ್ರತ್ಯೇಕ ಲೈಸನ್ಸು ಪಡಕೊಳ್ಳಬೇಕು

ಪ್ರತಿಯೊಬ್ಬ ಲೈಸನ್ಸುದಾರನೂ ತನ್ನ ಲೆಕ್ಕಪತ್ರವನ್ನು ಸರಿಯಾಗಿ ಇಟ್ಟುಕೊಂಡು ನಿಶ್ಚಿತ ಅವಧಿಯಲ್ಲಿ ಅದಕ್ಕಾಗಿ ಮಾಡಲ್ಪಡುವ ಫೋರ್ಮುಗಳಲ್ಲಿ ಆ ಲೆಕ್ಕವನ್ನು ಬರೆದು ಒಪ್ಪಿಸತಕ್ಕದ್ದು

ಈ ಕಾನೂನಿಗೆ ವಿರುದ್ಧವಾಗಿ ನಡೆಯುವವನು ೧,೦೦೦ ರೂಪಾಯಿಗಳ ವರೆಗೂ ಆ ಮೇಲೆ ಪ್ರತಿಯೊಂದು ತಪ್ಪಿಗೆ ೫೦ ರೂಪಾಯಿಗಳಂತೆಯೂ ಜುರ್ಮಾನೆ ವಿಧಿಸಲ್ಪಡುವನು ಹೊಗೆಸೊಪ್ಪಿನ ಆಫೀಸರರನ್ನು ಅವರ ಕರ್ತವ್ಯದಲ್ಲಿ ಉಪದ್ರವ ಮಾಡುವ ಯಾವನೇ ಆಗಲಿ ಮೂರು ತಿಂಗಳ ಶಿಕ್ಷೆ ಅಥವಾ ೫೦೦ ರೂ ದಂಡ ಇಲ್ಲವೇ ಎರಡರಿಂದಲೂ ದಂಡಿಸಲ್ಪಡುವನು ಈ ಕಾನೂನಿನಲ್ಲಿ ನಮೂದಿಸಿದುದಕ್ಕಿಂತ ವಿರೋಧವಾಗಿರುವ ಪ್ರತಿಯೊಂದು ಕೆಲಸಕ್ಕೂ ಶಿಕ್ಷೆ ವಿಧಿಸಲಾಗುವುದು

ತೆರಿಗೆಯನ್ನು ನಿಧಿಸುವದೇ ಮೊದಲಾದ ಕುರಿತು ಮುಂದಕ್ಕೆ ಈ ನಿಯಮಗಳು ಪ್ರಕಟಿಸಲ್ಪಡುವುವು ಈ ಕಾನೂನಿನಂತೆ ಕಲೆಕ್ಟರರು ಮತ್ತು ಹೊಗೆಸೊಪ್ಪಿನ ಆಫೀಸರರು ಇದನ್ನು ಜಾರಿಗೆ ತರುವಲ್ಲಿ ಅಧಿಕೃತರಾಗಿದ್ದಾರೆ

ಲೈಸನ್ಸುಗಳನ್ನು ಪಡೆಯುವ ವಿಷಯವೂ ಪ್ರಕಟಣೆ ಮುಂದಕ್ಕೆ ಪ್ರಕಟಿಸಲಾಗುವುದು.

ಕೈಮಗ್ಗದ ಅಭಿವೃದ್ಧಿಗಾಗಿ ಮದ್ರಾಸು ಸರಕಾರದ ಸೂಚನೆ

★ ನೇಯ್ಗೆಯವರ ಜೀವನ ಸುಧಾರಣೆಯಾಗಬೇಕು

★ ಅತ್ಯಲ್ಪ ಮೂಲಧನದಿಂದ ಅಮೂಲ್ಯ ಉದ್ಯೋಗ

★ ಮಿಲ್ಲು ಬಟ್ಟೆಗಳಿಗೆ ಸುಂಕ ಹಾಕಬೇಕು

[ಗ್ರಾಮೋದ್ಧಾರ ಸಂಘದಿಂದ]

ಮದ್ರಾಸು ಸರಕಾರವು ಹಿಂದೂದೇಶದ ಬೇರೆ ಕಡೆಯ ಪ್ರಾಂತೀಯ ಸರಕಾರಗಳಿಗೂ, ಅಲ್ಲದೆ ಇಂಡಿಯಾ ಸರಕಾರಕ್ಕೂ ಅಖಿಲ ಹಿಂದುಸ್ಥಾನದಲ್ಲಿ ಕೈಮಗ್ಗದ ಉದ್ಯೋಗವನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಒಂದು ಯೋಜನೆಯನ್ನು ಮಾಡುವ ಸಲುವಾಗಿ ತಿಳಿಸಿರುತ್ತದೆಯೆಂದು ತಿಳಿಯುತ್ತದೆ ಕೈಮಗ್ಗದ ಕೆಲಸದವರಿಗೆ ಸರಕಾರವು ಇನ್ನಷ್ಟು ದ್ರವ್ಯ ಸಹಾಯವನ್ನು ಕೊಡುವಂತೆಯೂ ಮದ್ರಾಸು ಸರಕಾರವು ಕೇಂದ್ರ ಸರಕಾರವನ್ನು ಕೇಳಿಕೊಂಡಿದೆ. ಕೃಷಿಯನ್ನು ಬಿಟ್ಟರೆ ಎರಡನೇ ಪ್ರಾಮುಖ್ಯವಾದ ಉದ್ಯೋಗವು ಇಡೀ ಪ್ರಾಂತದಮಟ್ಟಿಗೆ ಮಗ್ಗದ್ದೇ ಆಗಿರುವುದು ೧೦ ಮಿಲಿಯ ಮಂದಿಯು ಈ ಉದ್ಯೋಗದಲ್ಲಿ ನಿರತರಾಗಿದ್ದಾರೆ ಇದು ಇಡೀ ಹಿಂದೂದೇಶದ ಬಟ್ಟೆಯ ವ್ಯಾಪಾರ ಹಾಗೂ ಉದ್ಯೋಗದಲ್ಲಿ ಬಹಳ ಮುಖ್ಯವಾದ ವಿಷಯವಾಗಿದೆ. ನೇಕಡಾ ೩೦ರಷ್ಟು ಇಡೀ ದೇಶದಲ್ಲಿ ವ್ಯಾಪಾರವಾಗುವ ಬಟ್ಟೆಯು ಕೈಮಗ್ಗದ ಬಟ್ಟೆಯೆಂದು ತಿಳಿದುಬಂದಿದೆ ಹಿಂದೂದೇಶದಲ್ಲಿ ಪರದೇಶದ ೯,೮೦೬ ಮಿಲ್ಲಿಯ ಯಾರ್ಡ್ ವಿದೇಶಿ ಮಿಲ್ಲು ಬಟ್ಟೆಗಳೂ, ೩,೨೬೨ ಮಿಲ್ಲಿಯ ಯಾರ್ಡ್ ಹಿಂದೀ ಮಿಲ್ಲು ಬಟ್ಟೆಗಳೂ ೧,೫೦೦ ಮಿಲ್ಲಿಯ ಯಾರ್ಡ್ ಕೈಮಗ್ಗದ ಬಟ್ಟೆಗಳೂ ಖರ್ಚಾಗುತ್ತವೆ ಮಿಲ್ಲು ಬಟ್ಟೆಗಳ ಪ್ರಾಬಲ್ಯದಿಂದಲಾಗಿ ಅದೇ ಮಾರ್ಕೆಟಿನಲ್ಲಿ ಮಾರಾಟವಾಗಬೇಕಾದ ಕೈಮಗ್ಗದ ಬಟ್ಟೆಯೂ ಸ್ಪರ್ಧೆಮಾಡಬೇಕಾಗಿ ಬಂದುದರಿಂದ ಕೈಮಗ್ಗದ ಕೆಲಸಗಾರರ ದುಡಿತವು ದಿನದಿಂದ ದಿನಕ್ಕೆ ಕಡಿಮೆಯಾಗುವುದನ್ನು ಸರಕಾರವು ಇದುವರೆಗೆ ಗಮನಕ್ಕೆ ತರದಿರುವುದು ಆಶ್ಚರ್ಯಕರ

ಹೀಗಿದ್ದರೂ ಯಂತ್ರದಿಂದ ಮಾಡಿದ ಬಟ್ಟೆಗಳನ್ನೂ ಮತ್ತು ಕೈಮಗ್ಗದ ಬಟ್ಟೆಗಳನ್ನೂ ಹೋಲಿಸಿದರೆ ಮಗ್ಗದ ಬಟ್ಟೆಗಳೇ ಹೆಚ್ಚು ಬಾಳುವಿಕೆಯವುಗಳಾಗಿ ಕಂಡು ಬರದಿರವು ಯಂತ್ರದಿಂದಲಾಗುವ ಮಿಲ್ಲು ಬಟ್ಟೆಗಳನ್ನು ಪಡೆದುಕೊಳ್ಳುವುದು ಒಡತನದಿಂದ ನರಳುವವರ ದೃಷ್ಟಿಯಲ್ಲಿ ಒಮ್ಮೆಗೆ ಮಹೋಪಕಾರದಂತೆ ಆಗುತ್ತದೆ ಆದರೆ ತಮ್ಮ ಪರಂಪರೆಯ ಜೀವನೋಪಾಯವು ದಿನೇ ದಿನೇ ಕ್ಷೀಣಸ್ಥಿತಿಗೆ ಬಂದು ಅನ್ನವಿಲ್ಲದೆ ನರಳಬೇಕಾಗುವ ಭಾರತದ ಮಿಲಿಯಾಂತರ ಜನರ ಉದ್ಯೋಗದ ಕತೆಗೆ ಒಳಪಡಿಯುವುದು. ಅದಕ್ಕಿಂತಲೂ ಆಗತ್ಯದ ವಿಷಯವಾಗಿದೆ ಇಂದು ಮಿಲ್ಲು ಬಟ್ಟೆಗಳು ನಮ್ಮಲ್ಲಿ ಇಂತಹ ಕಡಿಮೆ ಕ್ರಯದಲ್ಲಿ ಮಾರಾಟವಾಗಿ ನಮ್ಮ ಕೈಗಾರಿಕೆಗಳನ್ನು ನಾಶಗೊಳಿಸಿದ್ದು ಅವುಗಳನ್ನು ಸುಂಕವಿಲ್ಲದೆ ದೇಶಕ್ಕೆ ಬರಲು ಬಿಟ್ಟ ಕಾರಣದಿಂದ ಸುಂಕಹಾಕುವುದರ ಮೂಲಕ ಸರಕಾರವು ನ್ಯಾಯವಾದ ಲಾಭವನ್ನು ಪಡೆಯುವುದು ಮಾತ್ರವಲ್ಲದೆ ದೇಶೀಯ ಕೈಗಾರಿಕೆಯನ್ನೂ ಅಭಿವೃದ್ಧಿಗೊಳಿಸಿದಂತಾಗುವುದು

ಈ ಸಂದರ್ಭದಲ್ಲಿ ಕೇವಲ ೩೦ ರೂಪಾಯಿಗಳ ಮೂಲಧನದಿಂದ ಕೈಮಗ್ಗದ ಉದ್ಯೋಗ [illegible] ರೂಪಾಯಿಗಳಷ್ಟು [illegible] ವಿಷಯವನ್ನು ಗಮನಕ್ಕೆ ತರಬೇಕಾದುದು ಅತ್ಯವಶ್ಯವಾಗಿದ್ದೆ ಇಷ್ಟೊಂದ ಕಡಿಮೆ ಮೂಲಧನದಿಂದ ಈ ರೀತಿಯ ಜೀವನೋಪಾಯವನ್ನು ಸಾಗಿಸುವ ಸ್ವತಂತ್ರ ಉದ್ಯೋಗವನ್ನು ಸರ್ವಥಾ ಪ್ರೋತ್ಸಾಹಿಸುವುದು ಸರಕಾರದ ಕರ್ತವ್ಯವಾಗಿರುತ್ತದೆ

ಹೀಗಾಗಿ ಮಿಲ್ಲಿನಿಂದ ಮಾಡಿದ ಬಟ್ಟೆಗಳ ಮೇಲೆ ಯೋಗ್ಯ ಸುಂಕವನ್ನು ಹೊರಿಸುವ ಮೂಲಕ ದೇಶೀಯ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಬೇಕಾಗಿ ಮದ್ರಾಸು ಪ್ರಾಂತೀಯ ಸರಕಾರವು ಯೋಚಿಸಿದೆ ಈ [illegible] ಅಖಿಲ ಭಾರತದ [illegible] ಇದನ್ನು ಅಖಿಲಭಾರತದ ದೃಷ್ಟಿಯಿಂದ ವಿಚಾರಿಸಬೇಕಾಗಿರುತ್ತದೆ ಹೀಗಾಗಿ ಸರಕಾರವು ಈ ಕಡೆಗೆ ಸಾಕಷ್ಟು ಗಮನ ಕೊಡದಿದ್ದಲ್ಲಿ ಕೈಮಗ್ಗದ [illegible] ಹೇಳದವುದು [illegible]

ನಮ್ಮ [illegible] ಈ ಕಡೆಗೆ [illegible] ಅಲ್ಲಲ್ಲಿ ಹಳ್ಳಿಹಳ್ಳಿಗಳಲ್ಲಿಯೂ ಕೈಮಗ್ಗಗಳನ್ನಿಟ್ಟುಕೊಂಡು ಅತ್ಯಲ್ಪ ಮೂಲಧನದಿಂದ ಜೀವನೋಪಾಯವನ್ನು ಮಾಡುವವರ ಅನೇಕವುಂಟು ಇರುತ್ತಾರೆ ಇವರ ಜೀವನ [illegible] ದಿನದಿಂದ ದಿನ ಕ್ಷೀಣವಾಗುತ್ತಿದೆ ಇವರ ಜೀವನವನ್ನು ಸುಧಾರಿಸುವುದು [illegible] ದೇಶೀಯ ವ್ಯಾಪಾರವೂ ಕೂಡಾ ತುಂಬಾ ಅಭಿವೃದ್ಧಿಯಾಗುವ ಸಂದರ್ಭವು ಇದಾಗಿರುತ್ತದೆ

ಕೇಶರಾಶಿಯೇ ಹೆಂಗಸಿನ ಸೌಂದರ್ಯ

ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿ

ಪರ್ಫ್ಯೂಮ್ಡ್ ಕೇಸ್ಟರ್ ಆಯಿಲ್

ಇದನ್ನು ಉಪಯೋಗಿಸಿದಲ್ಲಿ ಶುಭ್ರವಾದ ಮತ್ತು ನಯವಾದ ಕೂದಲು ಕೂಡಲೆ ಬೆಳೆಯುವುದೆಂದು ನಿಮಗೆ ಮನದಟ್ಟಾಗುವುದು.

ಅಹ್ಲಾದಕರವಾದ ಪರಿಮಳ

ಕೂದಲಿನಲ್ಲಿರುವ ಕಶ್ಮಲಗಳನ್ನು ಹೋಗಲಾಡಿಸುವುದಕ್ಕೆ ಬಹಳ ಪ್ರಯೋಜನಕಾರಿ

ಎಲ್ಲೆಲ್ಲೂ ಮಾರಲ್ಪಡುತ್ತದೆ

ಶಾಲಿವಾಹನ ಶಕ ೧೮೬೧ನೆಯ ಪ್ರಮಾಥಿ ಸಂವತ್ಸರದ ಆಷಾಢ ಶು| ೮ ಶನಿವಾರದಿಂದ ಆಷಾಢ ಶು| ೧೫ ಶುಕ್ರವಾರದ ವರೆಗಿನ ಪಂಚಾಂಗ. (೧೯೩೯ನೇಯ ಮಿಥುನ ತಾರೀಖು)

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	
24	ಶನಿ	೬	೫೦॥	ಉತ್ತರಾ	೨೬	೧೦	
25	ರವಿ	೭	೪೬।	ಹಸ್ತಾ	೨೪॥	೧೧	
26	ಸೋ.	೯	೪೨॥	ಚಿತ್ರಾ	೨೨॥	೧೨	
27	ಕುಜ	೧೦	೪೦	ಸ್ವಾತಿ	೨೧॥	೧೩	
28	ಬುಧ	೧೧	೨೮॥	ವಿಶಾಖಾ	೨೧॥	೧೪	
29	ಗುರು	೧೨	೩೮।	ಅನುರಾಧಾ	೨೨।	೧೫	
30	ಶುಕ್ರ	೧೩	೩೯।	ಜ್ಯೇಷ್ಠ	೨೫॥	೧೬	

THE PIE-MONEY BANK LTD,

Maidan Road, MANGALORE

Undertakes all kinds of Banking Business Current account at 2½% per annum Savings Bank Deposits at 4½% per annum

FIXED DEPOSITS

For 2 Years 5% 1 Year 4½% For 6 months 4% 3 months 3½%

Auction [illegible] ranging from Rs 100/ to Rs 5000/ run regularly on systematic lines Unique Banking facilities to Businessmen and interested Public

Apply for particulars-**K R. GURU,** *Managing Director*

ಗುಣಬಾರದಿದರೆ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತವಾಗುತ್ತದೆ ಬಡವ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಅದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ಕಡಸಂದ ಏನು ಮಾಡಿದರೂ ನಾದುರುಸ್ತಾಗುವುದಿಲ್ಲ ವೊದಲೇ ಪೂರಾ ಗ್ಯಾರಂಟಿ [illegible] ವೈದ್ಯ ಎಲ್ ಸಿ ಪಿ ಎಸ್ [illegible] ಈ ಚೂರ್ಣದಿಂದ [illegible] ಅಪಾಯವೂ ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿಯ ಕ್ರಯ ರೂ ೪ ೦-೦ ವಿ ಪಿ

ವಿಳಾಸ ಸಂಜೀವಿನೀ ಔಷಧಾಲಯ, ಮು ಪೋ ಮಿರಜ, (S M. C

ಬರೀ ರೂ 1 4 0ಕ್ಕೆ 3 ಗಡಿಯಾರಗಳು ಮತ್ತು 1295 ಫೆನ್ಸಿ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೇಸೆ ಪರಿಮಳದ ಸೆಂಟನ್ನೂ ಅಥವಾ 8 ಸೇಸೆ ಹುಳುಕಡ್ಡಿಯ ಮದ್ದನ್ನು ಪಡಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ಡಮ್ಮಿ ರಿಸ್ಟುವಾಚುಗಳೂ ಒಂದು ಕಟ್ಟುವ ಪಟ್ಟಿ ಸಹಿತ



1 ಪೋಕೆಟು ವಾಚು, ಒಂದು ಜಿಲ್ಲೆಟ್ ರೇಜರೂ ಒಂದು ಶೇವಿಂಗ್ ಬ್ರಶೂ, ಒಂದು ಶೇವಿಂಗ್ ಸಾಬೂನು, ಒಂದು ಕನಡಿ ಒಂದು ಬಾಚಣಿಗೆ, 14 ಕೆರೆಟ್ ರೋಲ್ಡ್ ಗೋಲ್ಡ ನಿಬ್ಬಿನ ಫೌಂಟೆನ್ ಪೆನ್ನೂ, ಒಂದು ಜೊತೆ ರೋಲ್ಡ ಗೋಲ್ಡ ಗುಂಡಿಗಳು, ಒಂದು ಪಕೆಟ್ ಪೌಡರು ಒಂದು ಚೂರಿ, ಒಂದು ಜೋಡು ಕನ್ನಡಕ, ಒಂದು ಬಂಗಾರದ ಗಿಲ್ಟಿನ ಉಂಗುರ, ೨೫೦ ಫೀಟ್ ಫೋಕಸ್ ಬೀಳುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ಮಶಿನರಿಯಿಂದ ಮಾಡಲ್ಪಟ್ಟ ಒಂದು ಜರ್ಮನ್ ಟೈಮ್ ಪೀಸೂ ಇವುಗಳನ್ನು ಉಚಿತವಾಗಿ ಕೊಡುವೆವು ಪೆಕಿಂಗ್ ಮತ್ತು ಟಪ್ಪಾಲು ಖರ್ಚು 0—14—0 ಪ್ರತ್ಯೇಕ

The American Commercial Stores, Post Box No 12218 Calcutta (S A

THE

Bank of Mangalore Ltd.,

MANGALORE

ESTD. 1931

Branches-

Panemangalore, Mudabidri & Padubidri.

Fixed Deposits will be received at following rates of interest.

For	3 months	3½%
"	6 "	4%
"	12 "	5%
"	24 " & upwards	5½%

Interest Payable Quarterly

Savings Bank deposit* 3½% *on daily balances.

All kinds of banking business transacted

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p a.
in denominations of

RS. 50/-, 100/-, 500/-, 1,000/-, & 5,000/
are now issued at all our Branches

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ

ಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ ವೀರ್ಯವೃದ್ಧಿಗೊಳಿಸಿ ಬಲವನ್ನುಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ನಿಮ್ಮ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟುಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ. ಸಿ. ಎ. ಅಂಡ್ ಕೋ,
ಆಯುರ್ವೇದಿಕ ಸಮಾಜ ಪೆರಡೇಪಿ
P O Peridepi (ನೆಲ್ಲೂರು ಡಿ.)

HOUNSA

ಹಂಸಾಸ್ನೋ

ಮತ್ತು

ಬ್ರಿಲ್ಲೆಂಟೈನ್

ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋಕರ್ಣಕಟ್ಟಾ ಬಜಾರ್, ಮಂಗಳೂರು.

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ

ಹಳದ ವರ್ಣ, ಅಸಹ್ಯವಾದ ಕೆಮ್ಮು, ಮತ್ತು ಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯನ್ನೂ ಬಲವನ್ನೂ ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೊಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ಕರದ ಗುಡ್ಡು ಮುಡಿಗೆ	1—14—0	—
„ ದುಯಂ „ „	1—12—0	1—12—0
„ ಅವ್ವಲ್ ಸುಗ್ಗಿ „	1—12—0	—
„ ದುಯಂ „ „	1—10—0	—
ಅಕ್ಕಿ ಅವ್ವಲ್ ಗುಡ್ಡು „	4—10—0	4—13—0
„ ದುಯಂ „ „	4—6—0	4—8—0
„ ಅವ್ವಲ್ ಸುಗಿ „	4—6—0	4—7—0
„ ದುಯಂ „ „	4—8—0	4—5—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	35—0—0	45—0—0
„ ಸಿಪ್ಪೆ ಇದ್ದವು „	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
„ ದಿಲ್‌ಪಸಂದಿ „	52—8—0	—
ತೆಂಗಿನ ಎಣ್ಣೆ ಮಣಕ್ಕೆ	3—6—0	3—6—0
ಸಿಪ್ಪೆಯುದ್ದ ಅಡಕೆ 1000ಕ್ಕೆ	3—8—0	4—0—0
ಗೇರುಬೀಜ ಮುಡಿಗೆ	3—12—	3—13—0
ಕಬ್ಬಿನ ಬೆಲ್ಲ ಖಂಡಿಗೆ	47—8—0	55—0—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	14—8—0	15—8—0

ಪಂಜಾಬಿನ ಎಮರ್ಸನ್ ಆಣೆಕಟ್ಟಿನ ಮಹಾ ನಿರ್ಮಾಣ!

ಇಡೀ ಪಂಜಾಬದಲ್ಲಿ ಮಹಾದ್ಭುತವಾದ ರಚನೆ
ರಾವ್‌ಸಾಹೇಬ್ ಎ. ಎನ್. ಕೋಸಲಾರವರ ಅದ್ಭುತ ಪ್ರತಿಭಾಶಕ್ತಿ
ಪಾಶ್ಚಾತ್ಯ ಇಂಜನಿಯರರೇ ಮುಕ್ತಕಂಠದಿಂದ ಹೊಗಳಿದರು

ಶತಮಾನಗಳ ಹಿಂದೆ ಭಾರತಕ್ಕೆ ಧಾಳಿಯಿಟ್ಟ ಅಲೆಕ್ಸಾಂಡರನ ಯುದ್ಧ ನೌಕೆಯು ಯಾವ ಸ್ಥಳದಲ್ಲಿ ಅಪಜಯ ಹೊಂದಿ ಹಿಂತಿರುಗಿತೋ, ಅದೇ ಇತಿಹಾಸ ಪ್ರಸಿದ್ಧವಾದ ಪಂಜಾಬಿನ ಚೆನಾಬ್ ಜೀಹ್ಲಂ ನದಿಗಳ ಪ್ರವಾಹವು ಹರಿಯುವ ತ್ರಿಮು ಎಂಬ ಸ್ಥಳದಲ್ಲಿ ಇಂದು ಮಹತ್ತಾದ ಆಣೆಕಟ್ಟಿನ ರಚನೆಯಾಗಿ ಇನ್ನೊಮ್ಮೆ ಆ ಸ್ಥಳದ ಐತಿಹಾಸಿಕ ಮಹತ್ವವು ಪ್ರಪಂಚದ ದೃಷ್ಟಿಗೆ ಬೀಳಲು ಕಾರಣವಾಗಿದೆ.

ಈ ಅದ್ಭುತ ರಚನೆಯನ್ನು ಮಾಡಿದ ಮಹಾ ಪ್ರತಿಭಾಶಾಲಿಯು ರಾವ್‌ಸಾಹೇಬ್ ಎ. ಎನ್. ಕೋಸಲಾ ಎಂಬವರು. ಇಡೀ ರಚನೆಯನ್ನು ಇವರು ಸೂಚಿಸಿದ್ದು ಮಾತ್ರವಲ್ಲ. ಅಲ್ಲಿ ಸ್ವತಃ ನಿಂತು ಅದನ್ನು ಮೊದಲಿಂದ ಅಂತ್ಯದ ವರೆಗೆ ಮಾಡಿ ಕೊನೆಗಾಣಿಸಿದರು. ನದಿಯ ಬುಡದಿಂದಲೇ ಮರುಳಿನ ಅಡಿಕಟ್ಟಿನಲ್ಲಿ ನಯದಿನ ಮೇಲೆ ಉಕ್ಕು ಸಿಮೆಂಟು, ಕಲ್ಲುಗಳ ಪುಡಿಗಳಿಂದ ಮಾಡಿದ ಭಾರವಾದ ಈ ತಡೆಯು ನೀರಿನ ಹೊಡೆತಕ್ಕೆ ಅಚಲವಾಗಿ ನಿಂತು ಅತ್ಯಂತ ಕಡಿಮೆ ಖರ್ಚಿನಲ್ಲಿಯೂ, ಅಲ್ಪ ಸಮಯದಲ್ಲಿಯೂ ಮಾಡಿ ಮುಗಿದಿದೆ. ನೀರು ಹರಿದು ಹೋಗುವಂತೆ ಮಾಡಿ ನದಿಯನ್ನು ಒಣಗಿಸಿ ಎಷ್ಟೋ ಸಮಯಗಳ ತನಕ ಮಾಡಿ ಮುಗಿಸತಕ್ಕ ಕೆಲಸವನ್ನು ಇವರು ತಮ್ಮ ಕೌಶಲದಿಂದ ಜಗತ್ತು ಬೆರಗಾಗುವಂತೆ ಮಾಡಿ ಮುಗಿಸಿದ್ದಾರೆ.

ಇಡೀ ಪಂಜಾಬದಲ್ಲಿಯೇ ಇದು ಬಹಳ ದೊಡ್ಡದಾದ ಮತ್ತು ಮಹತ್ವವಾದ ರಚನೆಯಾಗಿದೆ.

ಇದರ ಹಾವೇಲಿಯೆಂಬ ಕಾಲುವೆಯು ಬಹಳ ನಾಜೂಕಾಗಿಯೂ ಬಹಳ ದೀರ್ಘವಾಗಿಯೂ ಪ್ರಪಂಚದಲ್ಲಿ ಈ ಆಕಾರದ ಕಾಲುವೆಯು ಇದೇ ಮೊದಲನೆಯದಾಗಿರುತ್ತದೆ. ಇದರಿಂದ ಸಿದ್ಧನಯಿಯ ಕಣಿವೆಯಲ್ಲಿ ನಿರಾವರಿಯ ಕೆಲಸವು ಜಯಶೀಲವಾಗುವುದು. ಪಂಜಾಬದಲ್ಲಿ ಫಲವತ್ತಾಗದೇ ಇರುವ ಬಹು ಭಾಗವು ಇಂದು ಜಲಸಮೃದ್ಧಿಯಿಂದ ಉತ್ತಮ ಫಲ ಭೂಮಿಯಾಗುವುದು. ಅಣೆಕಟ್ಟು ಕಾಲುವೆಗಳ ರಚನೆ ಮೊದಲಾದ ವಿಷಯಗಳಲ್ಲಿ ಶ್ರೀಯುತ ಕೋಸಲಾರವರು ತೋರಿಸಿದ ನೂತನ ಯೋಜನೆಯಿಂದ ಇನ್ನು ಮುಂದಕ್ಕೆ ಇಂತಹ ಸಾಹಸಮಾಡುವವರಿಗೆ ಹೊಸ ಹಾದಿಯನ್ನು ಹಾಕಿಕೊಟ್ಟಂತೆ ಆಗಿದೆ.

೮೮॥ ಮೈಲುಗಳ ವಿಸ್ತಾರವುಳ್ಳ 'ಬಲಪಡ'ದ ಕಾಲುವೆಯೊಂದು ಚೆನಾಬ್ ಮತ್ತು ರಾವಿ ನದಿಗಳ ಮಧ್ಯಭೂಮಿಯನ್ನು ಫಲವತ್ತಾಗಿ ಮಾಡುವುದು. ಕಾಲುವೆಯು ಇನ್ನು ಮುಂದಕ್ಕೆ ಹೊಯಿಗೆ ಮಣ್ಣುಗಳಿಂದ ಮುಚ್ಚಿಹೋಗದಂತೆ ಅದಕ್ಕೆ ತಕ್ಕುದಾದ ಭದ್ರತೆಯನ್ನು ಈಗಲೇ ಕೈಕೊಂಡಿದ್ದಾರೆ. ಒಮ್ಮೆ ಚರಿತ್ರೆಯಲ್ಲಿ ಅತ್ಯಂತ ಕುಶಲತೆಯಿಂದಲೂ ಸೌಭಾಗ್ಯದಿಂದಲೂ ಮೆರೆದ ನಾಡು, ಈಗ ತಿರುಗಿ ಹಿಂದಿನ ತನ್ನ ಅದೇ ಸೊಬಗನ್ನು ಪಡೆದು ಮೆರೆಯುವುದರಲ್ಲಿ ಸಂಶಯವಿಲ್ಲ.

ಹಿಂದೆ ಕೇವಲ ೫೫,೦೦೦ ಎಕ್ರೆಗಳ ಸ್ಥಳ ಮಾತ್ರ ಕೃಷಿಮಾಡಲು ತಕ್ಕುದಾಗಿತ್ತು. ಇನ್ನು ಮುಂದೆ ಒಂದು ಮಿಲಿಯ ಎಕ್ರೆಯ ಸ್ಥಳದಷ್ಟು ಫಲವತ್ತಾಗುವುದು.

ಈ ಆಣೆಕಟ್ಟನ್ನು ಕಟ್ಟಲು ೨.೩ ಕೋಟಿ ರೂಪಾಯಿಗಳ ಅಂದಾಜು ವೆಚ್ಚವು ಮಾಡಲಾಗಿದೆ. ಈ ಇಂಜನೀಯರ ಬುದ್ಧಿಮಂತಿಕೆಯಿಂದ ಕೇವಲ ೧೬ ಕೋಟಿ ರೂಪಾಯಿಗಳ ವೆಚ್ಚದೊಳಗೆ ಅದು ಪೂರ್ಣವಾಗಿದೆ; ಮತ್ತು ಅದಕ್ಕೆ ಬೇಕೆಂದು ಅಂದಾಜು ಮಾಡಿದ ಸಮಯದ ಅರ್ಧ ಮಾತ್ರ ಸಮಯದಲ್ಲಿ ಇದು ಪೂರ್ತಿಯಾಗಿದೆ. ಹಿಂದಿನ ಅನುಭವದಂತೆ ಯಾವುದೇ ಅಣೆಕಟ್ಟಿನ ಅಂದಾಜು ಪಟ್ಟಿಯಾದರೂ ಅದನ್ನು ಕಟ್ಟಿ ಮುಗಿಸುವಲ್ಲಿ ಖರ್ಚು ಮಿಕ್ಕಿ ಹೋಗಿರುವಾಗ ಆ ಅನುಭವಕ್ಕೆ ವ್ಯತ್ಯಯವಾಗಿ ಉಳಿತಾಯವೇ ಆಗ ಬೇಕಿದ್ದರೆ ನಿರ್ಮಾಣ ಮಾಡಿದವರ ಚಾತುರ್ಯವು ಎಷ್ಟಿರಬೇಕೆಂದು ಸ್ಪಷ್ಟವಾಗುತ್ತದೆ. ಹೀಗೆ ಅತ್ಯಲ್ಪ ಸಮಯದಲ್ಲಿ ಮುಗಿಸಿದ ಕಾರಣದಿಂದಲೇ ಸರಕಾರವು ಬಹಳ ದ್ರವ್ಯವನ್ನು ಉಳಿಸಿದಂತೆ ಆಯಿತು ಮಾತ್ರವಲ್ಲ ಭೂಕಂದಾಯದ ರೂಪದಲ್ಲಿ ಹೆಚ್ಚನ್ನು ಬೇಗನೇ ಹೊಂದಲೂ ಸಾಧ್ಯವಿರುತ್ತದೆ.

ಇದರ ರಚನೆಯಿಂದ ಆ ಸ್ಥಳಕ್ಕೆ ಹೊಸ ಜೀವಕಳೆಯು ಬಂದಿದೆ. ಮೊದಲು ಜೀರ್ಣಾವಸ್ಥೆಗೆ ಹೊಂದಿದ ಆ ಪಟ್ಟಣವು ಇಂದು ದಿನೇ ದಿನೇ ಅಭಿವೃದ್ಧಿ ಹೊಂದುತ್ತದೆ. ಶಾಲೆಗಳು, ಸಿನೆಮಾ ಮಂದಿರಗಳು, ವಾಚನಾಲಯಗಳೇ ಮೊದಲಾದವುಗಳು ಅದರ ಸಮೀಪದಲ್ಲಿ ಸ್ಥಾಪಿತವಾಗಿವೆ.

ಪ್ರಧಾನ ಇಂಜನೀಯರರಾದ ಮಿ. ಜೆ. ಡಿ. ಎಚ್. ಬೆಡ್‌ಫೋರ್ಡರು ಒಂದು ಭಾಷಣದಲ್ಲಿ ಶ್ರೀ ಕೋಸಲಾರವರ ಸಾಮರ್ಥ್ಯವನ್ನು ಬಹಳವಾಗಿ ಪ್ರಶಂಸಿದರು. ಇಡೀ ಜಗತ್ತಿನ ದೃಷ್ಟಿಪಥಕ್ಕೆ ಭಾರತೀಯ ಇಂಜಿನೀಯರರೊಬ್ಬನು ಎಷ್ಟು ಸಾಮರ್ಥ್ಯಶಾಲಿಯಾಗಿರುವನೆಂಬ ವಿಷಯವು ಇಂದಿಗೆ ಇದರಿಂದ ಗೋಚರವಾದಂತಾಗಿದೆ.

ಲೋಕ ಪರಲೋಕಗಳನ್ನು ನೋಡುವ ಮಾಯದ ಕಣ್ಣು

ಉಬ್ಬಸ ರೋಗಕ್ಕೆ ಜೇನಿನ ಚಿಕಿತ್ಸೋಪಾಯ
ಸಮುದ್ರ ನೀರಿನಲ್ಲಿರುವ ಚಿನ್ನ!

ಅಲ್ಲಾವುದ್ದೀನನ ವಿಚಿತ್ರ ದೀಪವೆಂದು ನೀವು ಹಳೆಯ ಕಥೆಗಳಲ್ಲಿ ಓದಿರಬಹುದು. ಆದರೆ ಅದಕ್ಕೂ ಅದ್ಭುತವಾದ ಒಂದು ದೀಪವನ್ನು ಗ್ಲಾಸ್ಗೋನಗರದ ಒಬ್ಬ ವಿಜ್ಞಾನಿಯು ಕಂಡು ಹಿಡಿದಿರುವನು. ಮಿ. ಜೆ. ಮುಯಿರ್ ಎಂಬುದು ಆ ವಿಜ್ಞಾನಿಯ ಹೆಸರು. ಅವನು ಕಂಡು ಹಿಡಿದ ಆ ವಿಚಿತ್ರ ದೀಪದಲ್ಲಿ ಲೋಕ ಪರಲೋಕಗಳನ್ನೂ ಕಾಣುವ ಅದ್ಭುತ ಶಕ್ತಿ ಇರುವುದಾಗಿ ಮೊನ್ನೆಯ ಒಂದು ಪ್ರದರ್ಶನ ಕಾಲದಲ್ಲಿ ತಿಳಿದು ಬಂದಿತು.

ರೋಗಗಳ ಚಿಕಿತ್ಸೆಗಾಗಿಯೂ ಈ ಮಾಯದ ಕಣ್ಣನ್ನು ಉಪಯೋಗಿಸಲಿಕ್ಕಾಗುತ್ತದೆ. ಕಳ್ಳಕಾಕರ ರಹಸ್ಯ ಭೇದಗಳನ್ನು ಕಂಡುಹಿಡಿಯಲಿಕ್ಕಾಗಿಯೂ ಈ ಕಣ್ಣನ್ನು ಉಪಯೋಗಿಸಲಿಕ್ಕಾಗುತ್ತದೆ. ಈ ವಿಚಿತ್ರ ದೀಪದ ಪ್ರಕಾಶಕ್ಕೆ ಕರೆನ್ಸಿ ನೋಟುಗಳನ್ನು ಹಿಡಿದರೆ ಅವುಗಳಲ್ಲಿ ಸುಳ್ಳು ನೋಟುಗಳು ಯಾವುವು ಎಂಬುದನ್ನು ತಿಳಿಯಬಹುದು. ನೂರಾರು ನಿಜ ನೋಟುಗಳ ಕಟ್ಟಿನ ನಡುವಿರುವ ಸುಳ್ಳು ನೋಟನ್ನು ಈ ದೀಪದ ಪ್ರಕಾಶದಲ್ಲಿ ಸುಲಭದಲ್ಲಿ ಕಂಡು ಹಿಡಿಯಬಹುದು. ಹಾಗೆಯೇ ಈ ದೀಪಪ್ರಕಾಶವು ಪ್ರತಿಯೊಂದು ವಸ್ತುವಿನ ಶುದ್ಧಾಶುದ್ಧತೆಯನ್ನು ತಿಳಿಸಬಲ್ಲುದು.

ಬ್ರಿಟನಿನ ಗಸ್ತುಪೋಲೀಸ ಅಪರಾಧಿಗಳ ಪತ್ತೆಹಚ್ಚಲಿಕ್ಕೆ ಈಗ ಇದೇ ದೀಪಪ್ರಕಾಶವನ್ನು ಉಪಯೋಗಿಸುತ್ತಿದ್ದಾರೆ. ಸಾಮಾನ್ಯ ಕಣ್ಣಿನಿಂದ ಪರೀಕ್ಷಿಸಲಿಕ್ಕಾಗದ ಕಳ್ಳಕಾಕರ ಕೈಕಾಲುಗಳ ಚಿಹ್ನೆ, ಕೂದಲು, ಇತ್ಯಾದಿಯ ಪರೀಕ್ಷೆಯನ್ನು ಈ ದೀಪ ಪ್ರಕಾಶವು ಮಾಡಿ ಕಳ್ಳರ ಪತ್ತೆಹಚ್ಚಿ ಕೊಡುತ್ತದೆ.

ಈ ವಿಚಿತ್ರ ದೀಪದ ಪ್ರಕಾಶಕ್ಕೆ ಹಿಡಿದಾಗ ಒಂದೊಂದು ವಸ್ತುವು ಒಂದೊಂದು ಬಣ್ಣದ್ದಾಗಿ ಹೊಳೆಯುತ್ತವೆ. ವಸ್ತುಗಳಲ್ಲಿ ಕಲ್ಮಲಗಳು ಅಥವಾ ಬೇರೆ ಪದಾರ್ಥಗಳು ಸೇರಿಕೊಂಡಾಗ ಅವುಗಳ ಬಣ್ಣವೇ ಬೇರೆಯಾಗುತ್ತದೆ. ಹೀಗೆ ಮಾಡಿ ವಸ್ತುಗಳ ನಿಜತ್ವವನ್ನು ಕಂಡು ಹಿಡಿಯುವರು. ಪ್ರತಿಯೊಂದು ವೃತ್ತಿ ಉದ್ಯೋಗದಲ್ಲಿಯೂ ಈ ದೀಪವು ಉಪಯೋಗಕ್ಕೆ ಬರುವುದು. ಮಾತ್ರವಲ್ಲ ಈ ದೀಪ ಪ್ರಕಾಶದಿಂದ ಲೋಕ ಪರಲೋಕಗಳನ್ನು ಕಾಣಲಿಕ್ಕಾಗುವ ಒಂದು ಸಮಯ ಬರಬಹುದು.

ಉಬ್ಬಸಕ್ಕೆ ಜೇನಿನ ಚಿಕಿತ್ಸೆ

ಉಬ್ಬಸ ರೋಗಿಗಳಿಗೆ ಜರ್ಮನಿಯ ಒಬ್ಬ ವೈದ್ಯನು ಒಂದು ಹೊಸ ಚಿಕಿತ್ಸೋಪಾಯವನ್ನು ಕಂಡು ಹಿಡಿದಿದ್ದಾನೆ. ಇದು ಬಹಳ ಸುಲಭವಾದ ಒಂದು ಚಿಕಿತ್ಸೆಯಲ್ಲಿ ... ಈ ಉಪಾಯವನ್ನು ಅನುಸರಿಸಿದರೆ ರೋಗ ... ಬಹಳ ಕಡಿಮೆಯಾಗುವುದೆಂದು ಹೇಳಲಾಗಿದೆ. ಉಬ್ಬಸ ರೋಗಿಯು ಒಂದು ಬಟ್ಟಲು ತುಂಬ ಜೇನನ್ನು ... ಹಿಡಿದು ಅದನ್ನು ... ಇರಬೇಕು. ಆಗ ಶ್ವಾಸೋಚ್ಛ್ವಾಸದ ಪ್ರಕ್ರಿಯೆಯು ಕಡಿಮೆಯಾಗುತ್ತ ಬಂದು ಉಬ್ಬಸದ ... ಕಡಿಮೆಯಾಗುತ್ತದೆ. ಒಂದೊಂದು ಬಾರಿಗೆ ಸುಮಾರು ಒಂದು ಗಂಟೆಯ ತನಕ ಇದರಿಂದ ರೋಗಿಗೆ ಲಾಭವಾಗುತ್ತದೆ. ಈ ಚಿಕಿತ್ಸೆಗೆ ಹಳೆಯ ಜೇನಿಗಿಂತ ಹೊಸ ಜೇನು ಉತ್ತಮವಾಗಿರುವುದು.

ಸಮುದ್ರ ನೀರಿನಲ್ಲಿ ಚಿನ್ನವಿದೆ!

ಒಂದು ಟನ್ ಸಮುದ್ರ ನೀರಿನಲ್ಲಿ ಒಂದು ಶಿಲ್ಲಿಂಗ ಬೆಲೆಯ ಧಾತುಗಳು ಇರುವುವಾಗಿ ಜರ್ಮನಿಯ ಒಂದು ಪತ್ರಿಕೆ ಹೇಳಿದೆ. ಸಮುದ್ರ ನೀರಿನಲ್ಲಿರುವ ಮುಖ್ಯ ಧಾತು ಉಪ್ಪು. ಇದಲ್ಲದೆ ಅದರಲ್ಲಿ ಬ್ರೋಮಾಯಿಡ್, ಅಯೋಡಿನ್, ತಾಮ್ರ, ಸತು, ಬೆಳ್ಳಿ, ನಿಕ್ಕಲ್, ರೇಡಿಯಮ್, ಚಿನ್ನ ಇತ್ಯಾದಿಗಳೂ ಇರುವುವು. ಆದರೆ ಸಮುದ್ರ ನೀರಿನಿಂದ ಚಿನ್ನವನ್ನು ತೆಗೆದು ಯಾರೂ ಥಟ್ಟನೆ ಶ್ರೀಮಂತರಾಗುವ ಹಾಗಿಲ್ಲ. ಯಾಕೆಂದರೆ ಈ ನೀರಿನಲ್ಲಿರುವ ಚಿನ್ನವು ಬಹಳ ಸ್ವಲ್ಪ. ಒಂದು ಟನ್ ಸಮುದ್ರ ನೀರಿನಲ್ಲಿ ಒಂದು ಗ್ರಾಮಿನ ನಾಲ್ಕು ಮಿಲಿಯದ ಒಂದು ಪಾಲಿನಷ್ಟು ಚಿನ್ನವು ಇರುತ್ತದೆ. ಹೀಗೆ ಈ ನೀರಿನಲ್ಲಿರುವ ಚಿನ್ನದ ಅಂಶವು ಬಹಳ ಕಡಿಮೆಯಾಗಿರುವುದು ಮಾತ್ರವಲ್ಲದೆ ಅದನ್ನು ತೆಗೆಯಲಿಕ್ಕಾಗುವ ಖರ್ಚು, ಆ ಚಿನ್ನದ ಬೆಲೆಗಿಂತ ಸಾವಿರಾರು ಪಾಲು ಹೆಚ್ಚಾಗಿರುವುದು. ಬ್ರೋಮ್ಯಾಡ ಎಂಬ ಧಾತುವನ್ನು ತೆಗೆಯಲಿಕ್ಕಾಗಿಯೇ ಈ ವಿಜ್ಞಾನಿಗಳು ಸಮುದ್ರ ನೀರನ್ನು ಉಪಯೋಗಿಸುತ್ತಾರೆ. ಅಮೇರಿಕದ ಒಂದು ಕಾರ್ಖಾನೆಯು ಪ್ರತಿ ವರ್ಷ ೭॥ ಮಿಲಿಯ ಟನ್ ಸಮುದ್ರ ನೀರಿನಿಂದ ೧೨೦ ಸಾವಿರ ಕಿಲೊ ಗ್ರಾಮುಗಳಷ್ಟು ಬ್ರೋಮ್ಯಾಡನ್ನು ವ್ಯಾಪಾರಕ್ಕೆ ತಯ್ಯಾರಿಸುತ್ತದೆ.

ಅದೃಶ್ಯ ಶಾಯಿ

ಬಹು ಪುರಾತನ ಕಾಲದಿಂದಲೂ ಜನರು ಗುಪ್ತ ಪತ್ರಗಳನ್ನು ಬರೆಯಲಿಕ್ಕೆ ಅದೃಶ್ಯಶಾಯಿಯನ್ನು ಉಪಯೋಗಿಸುತ್ತಿದ್ದುದು ಕಂಡು ಬಂದಿದೆ. ಇದರಲ್ಲಿ ಬಹು ಸುಲಭವಾದ ಶಾಯಿಯೆಂದರೆ ಹಾಲು. ಹಾಲಿನಿಂದ ಬರೆದಾಗ ಬರೆ ಕಣ್ಣಿಗೆ ತೋರುವುದಿಲ್ಲ. ಆದರೆ ಹಾಲಿನಿಂದ ಬರೆದ ಕಾಗದವನ್ನು ಬಿಸಿಮಾಡಿದಾಗ ಅದರಲ್ಲಿ ಅಕ್ಷರಗಳು ಕಾಣಿಸಿಕೊಳ್ಳುತ್ತವೆ. ಹಾಗೆ—ಲಿಂಬೆ ಹಣ್ಣಿನ ರಸದಿಂದ ಕೂಡ ಗುಪ್ತ ಪತ್ರಗಳನ್ನು ಬರೆಯಬಹುದು.



ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST PAULS CHURCH,
Bolkonje Post, S K
Dated 4th Jan 1939

To
THE JOINT MANAGERS,
The C. P. C. Co. Ltd, Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress.

The glorious success of our congress is also due to your exertion in putting up the various lights some of which I hear were done voluntarily.

May the blessings of the almighty fall on you all and may you be able to do much good to the Public

Renewing my thanks, I remain,
Yours Sincerely,
(Sd) P W Farias

Sri Parshwanathaswami,
PANCHAKALYANA POOJA MAHOSTHAM,
Venoor, S Kanara, 1939

To,
THE JOINT MANAGERS,
The Combind Booking Agency, Mangalore.

Dear Sirs,

Please permit us to express our thanks on behalf of the above committee for the efficient Service rendered by your combind Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodabidri Booking Clerk Mr. B Krishnaiyya and also his other mates and Mr Raghavendra Bhandary who had specially come down from Mangalore to see to the needs of and comforts of the travelling Public. Thanking you once again,

We remain, Yours faithfully,

Venoor, Dated 6-3-'39 (Sd) B Chandappa Indra (*Secretary, P M Council*) (Sd) M. Jagathpal, (Sd) M Pachappa Shetty, (Sd) Anantharaj Shetty (*Members, Panchakalyana Maaosthamam Committee*)

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTD 1906.
CANARA BANK, LIMITED.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಗಜ್ಜಿ, ತುರಿ, ಕುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಹಾ ಕಂಪೆನಿಯಲ್ಲಿ ದೊರೆಯುವುದು

ಸ್ವದೇಶಾಭಿಮಾನಿ

Established 1906 — Regd. No. M 3406

ಸಂಪುಟ ೩೩] ತಾರೀಕು ೨೮-೬-೧೯೩೯, (28-6-1939) [ಸಂಚಿಕೆ ೨೫

THE

BOMBAY LIFE ASSURANCE COMPANY, LTD.,

(ESTD 1908.)

THE OFFICE

Which has proved its popularity by its progress

Record of New Bussiness

Proposed	Year	Completed
1,25,50,250	1934	1,04,83,750
1,50,48,915	1935	1,23 28,665
1,68,88,200	1936	1 36 01 500
1,72,579,75	1937	1 49 08,725
176,83,250	**1938**	**144 91 000**

1939- VALUATION YEAR

Please take up a Policy New and participate in Bonus.

To Insure or to Represent it pays you to consult us —

Apply to **KOCHIKAR BROTHERS, LIMITED,**

Madras Branch Secretaries,

The Bombay Life Assurance Co., Ltd.,

The Bombay Life Building, Gandhinagar, UDIPI

or any of our following offices:

Post Box No 337, Mount Road, Madras

Visweshwarapuram Circle, Bangalore City

Charni Road, Girgaum, BOMBAY 4

Car Street, Mangalore

Puthiyara, Calicut.

Central Station Road, Trivandrum

MAKE LIFE WORTH-LIVING!

Indigestion – Insomnia – Dry Cough—
Nervousness – Weak Heart &c ,
these make you wiery of Life!

GONSULT US AND BUY
YOUR LIFE'S HAPPINESS!

Oils – that cool the brain and induce sleep
Lehas – that build-up your wasted system
Asavas – that regenerate your jaded nerves

All Genuine Ayurvedic Preparations-
-from this huge Ayurvedic Concern of a Century Standing–

Bhuvanendra Products, Ltd.,
Katapady, S. Kanara.
(BRANCH—KUMTA N KANARA)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕ್ಲೇಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ—ನಿಮ್ಮ ಜೀವಮಾನದ ಆನಂದ
ವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆಕೊಡುವ — ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ — ಲೇಹಗಳು
ನಿಶ್ಶಕ್ತಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ — ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್
ಕಟಪಾಡಿ, — ದ. ಕನ್ನಡ
(ಬ್ರಾಂಚ್: ಕುಮಟೆ, ಉತ್ತರ ಕನ್ನಡ)

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

Swadeshabhimani. Estd 1906

Date 30-6 1939 ತಾರೀಖು ೩೦—೬—೧೯೩೯

ಸಚಿತ್ರ

ವಾರಪತ್ರಿಕೆ

ನೋಟಗಳು

[illegible] ಗಡ್ಡಗಳನ್ನು ಬೆಳೆಸಿ [illegible] ಗಾಂಧಿ [illegible] ಶಸ್ತ್ರ [illegible] ಮುಂದಿನ [illegible] ಸುಭಾಷ ಬೋಸರು, ಗಡ್ಡಗಿ [illegible] ಕೇಶಾಂದ್ರ (ಶಾರಿವ್ಲಿ) ಕಡ, ಶಸ್ತ್ರ [illegible] ಜಪಾನಿನ [illegible] ಮತ್ತು [illegible] ಗಳನ್ನು [illegible] ಬಿಟ್ಟರು!

◆

ಧರ್ಮ ಮತ್ತು ರಾಜಕೀಯಗಳನ್ನು ಒಟ್ಟು ಸೇರಿಸಿ ಕಲಸುವ ಗಾಂಧಿಜಯವರೊಡನೆ ಅವರಿಗೆ ಸರಿ ಹೋಗುವುದಿಲ್ಲವಂತೆ!

◆

ರಷ್ಯದಲ್ಲಿರುವ ಕಮ್ಯುನಿಸ್ಟ ಪಕ್ಷದವರು ರಾಜಕೀಯವನ್ನು ಧರ್ಮದೊಡನೆ ಬೆರೆಗೊಳಿಸುವುದರ ಬದ್ಧ ವಿರೋಧಿಗಳು. ಶುದ್ಧ ರಾಜಕೀಯ! ಶುದ್ಧ ಆರ್ಥಿಕ ವಿಚಾರ! ಶುದ್ಧ ವಿಜ್ಞಾನ! ಇವುಗಳನ್ನು ವಿಚಾರಿಸುತ್ತಾ, ರಷ್ಯವು ಅದಕ್ಕೆ ಸಂಬಂಧಿಸಿದ ಧರ್ಮವನ್ನು ಧ್ವಂಸ ಮಾಡಿಬಿಟ್ಟಿದೆ!

◆

ಸುಭಾಷರು ಇದೇ ರೀತಿಯ ಕಮ್ಯುನಿಸ್ಟ್ ಕ್ರಮವನ್ನು ಭಾರತದಲ್ಲಿಯೂ ತರಲು ಪ್ರಯತ್ನ ಮಾಡುವರು!

◆

ಕಾಂಗ್ರೆಸ್ ಮಂತ್ರಿಗಳ ಕಾರ್ಯಗಳನ್ನು ಬಹಿರಂಗವಾಗಿ ಟೀಕಿಸಬೇಕೆಂದು, ಸುಭಾಷರ ವಾದ!

◆

ರಷ್ಯದಲ್ಲಿಯೂ ಸ್ಟಲಿನನು ಕೆಲವು ಉಚ್ಚ ಮುಖಂಡರನ್ನು ಸಾರ್ವಜನಿಕರು ಬಹಿರಂಗವಾಗಿ ಟೀಕಿಸಲು ಅನುಮತಿ ಕೊಟ್ಟಿದ್ದನು!

◆

ಹೀಗಿದ್ದ ಬಹಿರಂಗ ಟೀಕೆಯ ಫಲವಾಗಿಯೇ, ಸ್ಟಲಿನನಿಗೆ ಸಂಬಂಧಿಸಿದ ಕೆಲವು ಮುಖಂಡರೂ—ಆರೋಪಕ್ಕೊಳಗಾಗಿ ಗಲ್ಲಿಗೇರಿಸಲ್ಪಟ್ಟಿದ್ದರು.

◆

ನಮ್ಮ ಮಂತ್ರಿಗಳನ್ನು ಬಹಿರಂಗವಾಗಿ ಟೀಕಿಸುವುದು ಮಾತ್ರವಲ್ಲ. ಅವರ ಎಲ್ಲಾ ಚಟುವಟಿಕೆಗಳಲ್ಲಿಯೂ ಕ್ರಾಂತಿಕಾರಕ ಪ್ರೇರಣೆ (Revolutionary Urge)ಯು ಇರುವಂತೆ, ಅವರನ್ನು ತಯಾರು ಮಾಡಬೇಕೆಂದೂ ಸುಭಾಷರ ಹೇಳಿಕೆ!

◆

ಸರಿ! ತಮ್ಮಲ್ಲಿ ಆವೇಶವನ್ನು ತುಂಬಿಸುವ ಸಲುವಾಗಿ "ಕ್ರಾಂತಿಕಾರಕ ಪ್ರೇರಣೆ"ಯನ್ನು ಅಭ್ಯಾಸಿಸಿಕೊಂಡ ಧರ್ಮಹೀನರಾದ ಧುರೀಣರಿಂದ ಏನಾಗುವುದೋ ಊಹಿಸಬಹುದಾಗಿದೆ!

◆

ಈ 'ಕ್ರಾಂತಿಕಾರಕ ಪ್ರೇರಣೆ'ಗೆ ತನಗೆ ಎದುರಾದ ಇನ್ನೊಬ್ಬನನ್ನು ನುಂಗಿಬಿಡುವ ಅಭ್ಯಾಸವೂ ಉಂಟು! ನಮ್ಮ ನಮ್ಮಲ್ಲಿಯೇ ಈ 'ಪ್ರೇರಣೆ' ಬೆಳೆದು ಹೋದರೆ ಮುಂದಕ್ಕೆ ಗೊಂದಲವೇ ಗೊಂದಲ!

ಸುಭಾಷರು ತನ್ನ ಕ್ರಾಂತಿಕಾರಕ ಪ್ರೇರಣೆಯನ್ನು ಈಗೀಗಲೇ ಗಾಂಧಿಜಿ, ಸರ್ದಾರ ಪಟೇಲ ಇತ್ಯಾದಿಗಳ ಮೇಲೆ ಬಿಡಲು ಸುರು ಮಾಡಿದ್ದಾರೆ!

◆

ಈ ಕ್ರಾಂತಿಕಾರಿಗಳಿಂದ ಗಾಂಧಿಜಿಯವರನ್ನು ದೇವರೇ ಕಾಪಾಡಬೇಕು!

◆

ಏಷ್ಯ ಮತ್ತು ಯೂರೋಪ್ಗಳ ಅಂತರ್ರಾಷ್ಟ್ರೀಯ ಪರಿಸ್ಥಿತಿಯು ಒಂದಕ್ಕೊಂದು ಹೆಣೆದುಕೊಂಡಿದೆ! ರಾಜಕೀಯ ಧುರೀಣರ ಇಂದಿನ ಈ ಅಂತರ್ರಾಷ್ಟ್ರೀಯ ಪಗಡೆಯಾಟವು ಬಹಳ ಚಮತ್ಕಾರದ್ದು!

◆

ಪಗಡೆಯಾಟದಲ್ಲಿ ಎಲ್ಲಾ ಆಟಗಾರರ ಕಾಯಿಗಳನ್ನು [illegible] ಆಟಗಾರನೂ [illegible] ಕಾಯಿಗಳನ್ನು [illegible] ಜಯ [illegible] ಸಾಧ್ಯವಾದೀತು!

◆

ಕಳೆದ ಮ್ಯೂನಿಕ್ ಒಪ್ಪಂದದಲ್ಲಿ ಶಾಂತಿಗಾಗಿ ಹೋರಟ ಚೇಂಬರ್ಲೇನರು ರಷ್ಯವನ್ನು ಮರೆತೇ ಬಿಟ್ಟಿದ್ದರು.

◆

ಆಟದಲ್ಲಿ ಹೀಗೆ ತಪ್ಪಿಬಿದ್ದ ಕಾರಣ ಯುದ್ಧ ಹೂಡದೆಯೇ ಹಿಟ್ಲರನ ಬಗಲೊಳಗೆ ಹೊಸ ರಾಜ್ಯಗಳು ಬಿದ್ದುವು.

◆

ಇಂದಿನ ಜಪಾನಿನ ಘರ್ಷಣೆಯಲ್ಲಿ ರಷ್ಯದೊಡನೆ ಚೇಂಬರ್ಲೇನರು ಆಲೋಚನೆ ಮಾಡಲು ಮಾತ್ರ ಮೈಮರೆತೇ ಬಿಟ್ಟಿದ್ದಾರೆ!

◆

ಚೇಂಬರ್ಲೇನರು ಆಲೋಚನೆ ನಡೆಸಿದ ರಾಷ್ಟ್ರಗಳು ಫ್ರಾನ್ಸು, ಅಮೆರಿಕಾ ಇವುಗಳು. ಕಳೆದ ಸರ್ತಿ ಹಿಟ್ಲರನಿಗೆ ಆಟದಲ್ಲಿ ಜಯದಾದಂತೆ! ಈ ಸರ್ತಿ ಜಪಾನಿಗೆ ಆಗಿಬಿಡುವುದೇ?

◆

ಮ್ಯೂನಿಕ್ ಒಪ್ಪಂದವಾದ ವೇಳೆ ರಷ್ಯವು ಬ್ರಿಟನನ್ನು ನಂಬುವುದಿಲ್ಲ. ಅಂತೂ ಈಗಿನ ಧೋರಣೆಯಿಂದ ರಷ್ಯವು ಯೋಗ್ಯ ನಿರ್ಧಾರ ಮಾಡಿರಬೇಕು.

◆

ಜಪಾನು, ಇಂದು ಬ್ರಿಟನಿನ ಬುದ್ಧಿವಂತಿಕೆಯನ್ನು ತಿಳಿದು ಜರ್ಮನಿಯೊಡನೆ ಸ್ನೇಹ ಬೆಳೆಸುತ್ತಿರುವುದೇ?

◆

ಹಿಟ್ಲರನು ಈಗಾಗಲೇ ರಷ್ಯದೊಡನೆ ಸಂಬಂಧ ಬೆಳೆಸುತಿದ್ದಾನೆ! ಬಹಳ ಹತ್ತಿರದ ನೆರೆಕೆರೆಯ ರಷ್ಯ ಜರ್ಮನಿಗಳೊಳಗೆ ಪ್ರೇಮಸಂಬಂಧಗಳು ಆಗಿಹೋದಾವು!

ಲಕ್ಷಣಗಳಂತೂ ಹಾಗೆಯೇ ಇವೆ. ಹಾಗಾದರೆ ಬ್ರಿಟನಿನ ಅವಸ್ಥೆ!

ಪ್ರಪಂಚದಲ್ಲಿ ರಷ್ಯಾದಷ್ಟು ಮುಂದುವರಿದ ರಾಷ್ಟ್ರವಿಲ್ಲವೆಂದು, ಕೊಂಡಾಡುವ ನಮ್ಮ ಜನರಿಗೆ ಈಗೊಂದು ಹೊಸ ವಿಷಯವು ಸಿಕ್ಕಿದೆ! ರಷ್ಯದ ಒಬ್ಬ ದಂತಜ್ಞನು ದನಗಳಿಗೂ ಕೃತಕ ಹಲ್ಲುಗಳನ್ನಿಟ್ಟು ಪ್ರದರ್ಶಿಸಲಿದ್ದಾನೆ! ಈ ದಂತಜ್ಞನ ನೂತನ ಶೋಧನೆಯನ್ನು ರಷ್ಯಾ ಸರಕಾರವು ರಾಷ್ಟ್ರದ ಭಾಗ್ಯೋದಯವೆಂದು ಕೊಂಡಾಡುತ್ತದೆ!

◆

ಪಶುಗಳಿಗೆ ಹಲ್ಲಿಡಬೇಕಾದರೆ ಅಲ್ಲಿನ ಆಹಾರವು ಅಷ್ಟುಗಟ್ಟಿಯಿರಬೇಕು!

◆

ಹಿಂದೂದೇಶದ ಪಶುಗಳಂತೆ ಅವುಗಳು ಹುಲ್ಲು ತಿನ್ನುವುದಿಲ್ಲವೆಂದು ಕಾಣುತ್ತದೆ!

◆

ಹುಲ್ಲು ತಿಂಬ ಪಶುಗಳಿಂದ ಮತ್ತು ಸಸ್ಯಾಹಾರಿಗಳಾದ ಜನರಿಂದ ಆಗುವುದೂ ಅಷ್ಟೆ!

◆

ರಷ್ಯದ ಪಶುಗಳು ಇನ್ನು ಮುಂದೆ ಎಲುಬುಗಳನ್ನೂ ಜಗಿದು ನುಂಗಬಹುದು! ರಷ್ಯದ ಜನರೂ ಹಾಗೆಯೇ ಮಾಡಲು ತಯಾರಿದ್ದಾರೆ!

◆

ರಷ್ಯವನ್ನು ಕೊಂಡಾಡುವ ನಮ್ಮ ಜನರು ಇಲ್ಲಿಯೂ ಅದೇ ಪ್ರಯೋಗವನ್ನು ಸುರುಮಾಡಬೇಕು. ಹಿಡಿದು ಕಚ್ಚಿದರೆ ಎರಡು ತುಂಡಾಗುವಂತಿರಬೇಕು.

◆

ಆದರೆ ಮಹಾತ್ಮಾ ಗಾಂಧಿಗಳ ಸತ್ಯ-ಅಹಿಂಸೆ! ಇದಕ್ಕೇನು ಹಾದಿ?

◆

ಇಕೊನೊಮಿ ಟಿನ್ನುಗಳನ್ನು ಕೊಂಡು ಹಣ ಉಳಿಸಿರಿ.

ದೊಡ್ಡ ಸೈಜು (8 ಔನ್ಸ್) ರೂ. 1–4–0.
(ದೊಡ್ಡ ಬಾಟ್ಲಗಳಲ್ಲಿದ್ದಷ್ಟೇ ಇರುತ್ತದೆ.)
ಸಣ್ಣ ಸೈಜು (4 ಔನ್ಸ್) ಆಣೆ 11.

ಎಂಡ್ರೂಸ್ ಲವಣದ ಇಕೊನೊಮಿ ಟಿನ್ನುಗಳನ್ನು ನೀವು ಕೊಂಡುಕೊಂಡಲ್ಲಿ, ನಡುಗೆ ಮೊದಲು ಬಾಟ್ಲಗಳಲ್ಲಿ ದೊರಕುವಷ್ಟು ಲವಣವು ಕಡಿಮೆ ಕ್ರಯಕ್ಕೆ ದೊರಕುವುದು. ಎಂಡ್ರೂಸ್ ಟಿನ್ನುಗಳಲ್ಲಿ ಉತ್ತಮವಾದದ್ದು. ಈ ಹೊಸ ಟಿನ್ನುಗಳನ್ನು ನೀವು ಕೊಂಡುಕೊಳ್ಳುವುದರಿಂದ ಹಣದ ಉಳಿತಾಯವಾಗುವುದಲ್ಲದೆ ಉತ್ತಮವಾದ ಲವಣವು ದೊರಕುವುದು.

ಈ ಬೇರೆ ತರದ ಮತ್ತು ಉತ್ತಮ ಲವಣವು—50 ವರ್ಷಗಳಿಂದ ಬ್ರಿಟಿಷ್ ದ್ವೀಪಗಳಲ್ಲಿ ಹೆಸರುವಾಸಿಯಾಗಿದ್ದು, ಸವಿಚೈತನ್ಯವನ್ನುಂಟುಮಾಡುವ ಕ್ಷಾರವಾಗಿದ್ದು, ಉತ್ತಮವಾದ ಭೇದಿಯ ಗುಣಗಳಿಂದ ಕೂಡಿರುತ್ತದೆ. ಇದರ ನಿಧಾನ ಮತ್ತು ಆನಂತವಾದ ಉಕ್ಕಿಬರುವ ಗುಣವು ಇದರಲ್ಲಿ ಆರೋಗ್ಯವನ್ನುಂಟುಮಾಡುವ ಲವಣಗಳಿರುತ್ತವೆಂಬುದು ಅನೇಕ ಶೋಧಗಳಿಂದ ರುಜುವಾಗಿದೆ. ಎಂಡ್ರೂಸ್ ಲವಣವನ್ನು ತಯಾರಿಸುವಾಗ ಕೈ ಸೋಂಕಿರುವುದಿಲ್ಲ.

ಎಂಡ್ರೂಸ್ ಲಿವರ್ ಸೋಲ್ಟ್ ನಾಲ್ಕು ವಿಧಾನಗಳಲ್ಲಿ ಉಪಕಾರವನ್ನೀಯುವುದು:

1) ಕಶ್ಮಲವನ್ನು ಹೊರಗೆಳೆದು ಸಂಪೂರ್ಣ ಶುದ್ಧಿಗೊಳಿಸುವುದು.
2) ಯಕೃತ್ತಿನ ಮೇಲೆ ಕೆಲಸಮಾಡಿ ಪಿತ್ತಸ್ರಾವಕವನ್ನು ಉದ್ರೇಕಿಸುವುದು.
3) ಹೊಟ್ಟೆಯನ್ನು ಸೌಮ್ಯರೀತಿಯಿಂದ ಸ್ವಚ್ಛಗೊಳಿಸುವುದು.
4) ಹೊಟ್ಟೆಯೊಳಗಿನ ಕಶ್ಮಲವನ್ನು (ಎಸಿಡ್) ಶಕ್ತಿಹೀನಗೊಳಿಸುವುದು.

ಈ ಕೆಳಗಿನವುಗಳಿಂದ ನರಳುವಿರಾದರೆ ನಿಮಗೆ ಎಂಡ್ರೂಸ್ ಲವಣವು ಅಗತ್ಯ. ಪಿತ್ತವಿಕಾರ, ಮಲಬದ್ಧತೆ, ಅಜೀರ್ಣ, ತಲೆಸುತ್ತು, ಯಕೃತ್ತಿನ ಅವ್ಯವಸ್ಥೆ, ಪಿಡಿಯುರಿ, ಬಳಲಿಕೆ.

ಆಂತರ್ ಶುದ್ಧಿಗೆ ಎಂಡ್ರೂಸ್ ಲಿವರ್ ಸೋಲ್ಟ್

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರಕಲ್ಪಡುತ್ತದೆ.



ANDREWS
LIVER SALT
for Inner Cleanliness

ಮಕ್ಕಳ ಎಲ್ಲಾ ಪ್ಲೀಹ ಮತ್ತು ಯಕೃತ್ತುಗಳ ಬಾಧೆಗೆ

"ಲಿವರ್ ಕ್ಯೂರ್"

ಉತ್ತಮವಾದುದು ಮತ್ತು ಗುಣದಲ್ಲಿ ಶಾಶ್ವತವಾದುದು

ವಿಲಕ್ಷಣ ತಯಾರಿ: ಜವ್ವಾಜಿ ವೆಂಕಟಪ್ರಮಣಯ್ಯ
ವಿಶೇಷ ಮಾಹಿತಿಗೆ ಬರೆಯಿರಿ: ಲಿವರ್ ಮತ್ತು ಸ್ಪ್ಲೀನ್ ಸ್ಪೆಸಿಯಲಿಸ್ಟ್, ಮೈಲಾಪುರ, ಮದ್ರಾಸು.

ಒಂದು ಬಾರಿ ಪರೀಕ್ಷಿಸಿರಿ!

ಮಹಾಜನರಿಗೆ, ನಮ್ಮ "ಸಾರಥಿ ನಸ್ಯ"ವನ್ನು ಕೊಂಡುಕೊಳ್ಳಿರಿ ಎಂದು ತಿಳಿಸಲು ನಮಗೆ ಬಹಳ ಸಂತೋಷವಾಗುತ್ತದೆ. ಒಂದು ಚಿಟಿಕಿ ನಸ್ಯವು ಮನುಷ್ಯನನ್ನು ಉತ್ತೇಜನಗೊಳಿಸುತ್ತದೆ. ಎಲ್ಲವರ ರುಚಿಗೆ ತಕ್ಕುದಾಗಿದೆ ಮತ್ತು ಎಲ್ಲರಿಗೂ ಅನುಕೂಲವಾದ ದರವನ್ನಿಡಲಾಗಿದೆ.

ಸಾರಥಿ ನಸ್ಯವು ಖಾರದಲ್ಲಿಯೂ, ರುಚಿಯಲ್ಲಿಯೂ, ಬಣ್ಣದಲ್ಲಿಯೂ ಸುವಾಸನೆಯಲ್ಲಿಯೂ ಉತ್ತಮವಾದದ್ದು.

ನಂ. ೧. ಸಾರಥಿ ನಸ್ಯ 1 ವೀಸಕ್ಕೆ ರೂ. 3–8–0 ನವಿಲಿನ ಮಾರ್ಕ ಸಾರಥಿ ನಸ್ಯ 1 ವೀಸಕ್ಕೆ ರೂ. 3-0
(ವಿ. ಪಿ. ಮತ್ತು ರೈಲ್ವೆ ಚಾರ್ಜು ಇತ್ಯಾದಿ)

ಏಜೆಂಟರು ಬೇಕಾಗಿದ್ದಾರೆ.

ಬರೆಯಿರಿ—
ಎ. ಪಿ. ಸಾರಥಿ
ಮೆನ್ಯುಫೆಕ್ಚರರ್ಸ್ ಆಫ್ ಮದ್ರಾಸ್ ಸ್ನಫ್, ಪಿ. ಬಿ. ನಂಬ್ರ 47 ಮದ್ರಾಸು

卐

ರಕ್ಷೈರ್ನುರ್ವಾತ್ಮೈರ್ನಸ್ತ್ವ ತ್ವಾರ್ಮನ
ದೇವಾ । ನ ಭೇಜಿರೇ ಭೀಮ
ವಿಶೇಣ ಭೀತಿವರ್ ॥ ಸುಧಾಂ
ವಿನಸ್ಸ್ಯ ನ ಪ್ರಯಯುರ್ವಿರಾಮಂ
ನನಿಶ್ಚಿತಾರ್ಥಾದ್ವಿರಮಂತಿ ಧೀರಾ ।

卐

ಸ್ವದೇಶಾಭಿಮಾನಿ

SWADESHABHIMANI

ಕೀರ್ತಿಶೇಷ ವಿ ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು

卐

ದೊರೆಯಲನುಪಮ ರತ್ನಗಳು
ಸಾ । ಗರವ ಮಥಿಸಲು ಸುರರಿ
ಗದರಿಂ । ಹರುಷವಾಯಿತೆ' ಮತೆ
ವಿಶ್ವವ ಸುಡುವ ಬರುತಿರ್ದ ॥
ಗರಳಕವರಂಜಿದರೆ! ಮಿಗೆಯುವ
ಮರೆತು ಕ್ಷುದ್ರಾರ
ತೆರದಿ ಕುಳಿತರೆ । ತರಳ ಬಿಡರೆ
ತೊರೆದು ಧೀರರಾ
ರ್ಜಿತಾರ್ಥದ ನೆ ।

卐

ತಾರೀಕು ೩೦—೬—೧೯೩೯ | ಮಂಗಳೂರಿನ ಶಾರದಾಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ | ತಾರೀಕು 30—6—1939

ಬಿನ್ನ ಭೇದಗಳಿಂದ ಕಾಂಗ್ರೆಸಿನ ಶಕ್ತಿಯನ್ನು ಕುಗ್ಗಿಸಬೇಡಿ!

ರಾಷ್ಟ್ರಪತಿಗಳ ಹೃದಯಸ್ಪರ್ಶಿಯಾದ ಬಿನ್ನಹ!

ಇಂದಿನ ವಿಷಮ ಪರಿಸ್ಥಿತಿ! ನಾವು ಎದುರಿಸುವ ಸಮಸ್ಯೆ!

ಆಶ್ರಿತ ರಾಜ್ಯಗಳ ಆಂದೋಲನ—ವಿದೇಶಪ ಹಿಂದೀಯರ ಗೋಳು!

ಅಖಿಲ ಭಾರತ ಕಾಂಗ್ರೆಸು ಕಮಿಟಿಯು ಸಾಹಾಸಭೆಯು ಜೂನ್ ತಿಂಗಳಂದು ಬೊಂಬಾಯಿಯಲ್ಲಿ ಎಬಳ ವಿಜೃಂಭಣೆಯಿಂದ ನೆರೆತು. ವಿಶಾಲ ಭಾರತದ ಅನೇಕ ಮಂದಿ ಪ್ರತಿನಿಧಿಗಳು ಪ್ರೇಕ್ಷಕರೂ ಬಂದಿದ್ದು ಸಭಾ ಭವನವು ಕಿಕ್ಕಿರಿದ ಹೋಗಿತ್ತು. ಮಂಗಳವಾದ್ಯ ಘೋಷವು, ದೇಶಸೇವಕರು ಸುಂದರ ಸ್ವಾಗತ ಸಂಗೀತವು, ಸ್ವಯಂ ಸೇವಕರ ಜಯ ಘೋಷವು ಮುಗಿಲನ್ನು ಮುಟ್ಟುತ್ತ ಪ್ರತಿಧ್ವನಿಸುತ್ತಿತ್ತು. ಆ ಸಭಾಭವನದ ಸಭಾವೇದಿಕೆಯಲ್ಲಿ ರಾಷ್ಟ್ರಪತಿ ಶ್ರೀ ರಾಜೇಂದ್ರ ಪ್ರಸಾದರು ಬಂದು ಕುಳಿತು ಗಂಭೀರ ವಾಣಿಯಿಂದ ಕಳೆದ ... ಅಧಿವೇಶನದ ಬಳಿಕ ಇಂದಿನ ವರೆಗಿನ ಪರಿಸ್ಥಿತಿಯನ್ನು ವಿವರವಾಗಿ ವರ್ಣಿಸುವ ಭಾಷಣ ಮಾಡಿದರು. ಅದರ ಸಾರಾಂಶ ಹೀಗಿತ್ತು:

ದೇಶದ ಮುಂದಿರುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕಾಂಗ್ರೆಸ್ಸಿನಲ್ಲಿ ಬಿನ್ನಮತೀಯರು ಮುಗಳೂ ನ್ಯಾಯರೀತಿಯ ಅನುಸರಣೆಯೂ ಬೇಕು! ಲೋಕದ ಪರಿಸ್ಥಿತಿಯು ಇಂದು ವಿಷಮವಾಗಿದೆ. ಈ ವಿಷಮತೆಯನ್ನು ... ಎದುರಿಸಬೇಕಾದರೆ ಕಾಂಗ್ರೆಸಿನಲ್ಲಿ ಐಕ್ಯಮತ ಬೇಕು. ಲೋಕದ ಪರಿಸ್ಥಿತಿಯು ಕೆಟ್ಟದಾಗಿರಲಿ, ಎಂತಹ ವಿಷಮ ಸ್ಥಿತಿಯನ್ನಾದರೂ ಕಾಂಗ್ರೆಸು ಎದುರಿಸಬೇಕಾಗಿ ಬಂದಾಗ ಕಾಂಗ್ರೆಸಿನ ಒಳಗಿರುವ ಯಾರೇ ಆಗಲಿ ತಮ್ಮೊಳಗಿನ ಬಿನ್ನ ಭೇದಗಳನ್ನು ಮರೆತು ದೇಶದ ಮೇಲ್ಮೆಯ ದೃಷ್ಟಿಯಿಂದ ಒಮ್ಮನದಿಂದ ಕಾಂಗ್ರೆಸಿನ ... ನಮಗೆ ನೆರವಾಗಬೇಕು. ಹಾಗಾಗಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಎಲ್ಲಾ ಸದಸ್ಯರು ವರ್ಕಿಂಗ್ ಕಮಿಟಿಯ ಮೇಲೆ ತಮ್ಮ ಪೂರ್ಣ ವಿಶ್ವಾಸವಿರಿಸಿ ಅವರು ಹೊತ್ತಿರುವ ದೊಡ್ಡ ಜವಾಬ್ದಾರಿಯಲ್ಲಿ ನೆರವಾದಾರೆಂದು ನಾನು ನಂಬುತ್ತೇನೆ."

"ನಾವು ಒಕ್ಕಟ್ಟಾಗಿ ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಲು ಬದ್ಧಕಂಕಣರಾಗಿರುವಾಗ, ನಮ್ಮ ಸಂಗಡದಲ್ಲಿಯೇ ಇಕ್ಕಟ್ಟಾಗಿರುವುದು ಅತ್ಯಂತ ವಿಷಾದದ ಸಂಗತಿಯಾಗಿದೆ. ಇದರಿಂದ ಕಾಂಗ್ರೆಸಿನ ಶಕ್ತಿಯು ಕುಗ್ಗಿಹೋಗುವುದು. ಆಂತರಿಕ ವಿಷ್ಟುರಗಳನ್ನು ಮರೆತು, ಎಲ್ಲರೂ ಒಟ್ಟಾಗಿ ಒಂದಡಿ ಮುಂದಿಟ್ಟು ಸ್ವಾತಂತ್ರ್ಯವನ್ನು ಪಡೆಯಲು ಯತ್ನಿಸಬೇಕಾಗಿ ವರ್ಕಿಂಗ್ ಕಮಿಟಿಯು ಯತ್ನವಮಾಡುತ್ತಿದೆ."

"ದೇಶೀಯ ಸಂಸ್ಥಾನಗಳಲ್ಲಿ ಇಂದು ನಡೆಯುವ ದುರಂತ ಕೃತ್ಯಗಳು ಸಹಸೀಮವಾಗಿಲ್ಲ. ಅದು ಅಖಿಲ ಭಾರತ ಸಮಸ್ಯೆಯೇ ಆಗಿದೆ. ತ್ರಿಪುರಿ ಕಾಂಗ್ರೆಸಿನ ಠರಾವಿನಂತೆ ಇಂದು ಆಶ್ರಿತರಾಜ್ಯದ ಪ್ರಜೆಗಳೇ ತಮ್ಮ ಚಳವಳವನ್ನು ತಮ್ಮ ಬಲಾಬಲ್ಯದಿಂದ ಮುಂದುವರಿಸಿ ಸ್ವಾತಂತ್ರ್ಯಕ್ಕಾಗಿ ಸಂಪೂರ್ಣ ಸಿದ್ಧತೆಯನ್ನು ... ವಲಿ ಎಂದು ವರ್ಕಿಂಗ್ ಕಮಿಟಿಯ ಅಭಿಪ್ರಾಯವಾಗಿದೆ. ದೇಶೀಯ ಸಂಸ್ಥಾನದ ಪ್ರಜೆಗಳ ... ಬ್ರಿಟಿಷ್ ಸರಕಾರವು ಸಹಾಯ ಮಾಡುತ್ತಿದೆ ಎಂದು ನನಗೆ ತಿಳಿದಿದೆ."

ನನಗೆ ... ಸರ್ವ ತಿರಸ್ಕರಣಾ ... ಫೆಡರೇಶನನ್ನು ಕೂಡಾ ಬ್ರಿಟಿಷ್ ಸರಕಾರವು ನಮ್ಮ ಮೇಲೆ ಹೊರಿಸುವುದಾಗಿ ... ದಿದೆ. ಆ ಬ್ರಿಟಿಷ್ ಸರಕಾರದ ಮುಟಿಸಾವನ್ನು ... ಸರ್ವದಾ ... ಪಕ್ಷವಾಗಿದೆ. ಜನರು ಅದಕ್ಕೆ ಸಿದ್ಧರಾಗಿರಬೇಕು. ... ಬ್ರಿಟಿಷ್ ಸಾಮ್ರಾಜ್ಯದ ... ವ್ಯಕ್ತಪಡಿಸುತ್ತದೆ."

... ಯುದ್ಧ ಸಂಭವಿಸಿದಲ್ಲಿ ... ಯುದ್ಧವಾದರೆ ಭಾರತವನ್ನು ಅದರಲ್ಲಿ ... ಬ್ರಿಟಿಷ್ ತಂತ್ರವು ... ಪ್ರಾಂತಿಕ ಸರಕಾರದಿಂದ, ತನ್ನ ಕೈಗೊಂಬೆಯಾಗಿರುವ ಕೇಂದ್ರ ಸರಕಾರ ಸಂಪೂರ್ಣ ಅಧಿಕಾರವು ಕೊಡಲಾಗಿದೆ. ಹೊಣೆಗಾರಿಕೆಯಿಲ್ಲದ ಈ ಕೇಂದ್ರ ಸರಕಾರವು ನಮ್ಮನ್ನು ಬ್ರಿಟಿಷ್ ಹಿತಕ್ಕಾಗಿ ಯುದ್ಧದಲ್ಲಿ ಅಪ್ಪುತಮಾಡಬಹುದು. ಈ ಗಂಡಾಂತರವನ್ನು ವಿರೋಧಿಸಲು ಸಿದ್ಧರಿರಬೇಕು."

"ವಿದೇಶದಲ್ಲಿರುವ ಹಿಂದೀಯರ ಪರಿಸ್ಥಿತಿಯು ಅತ್ಯಂತ ಕಳವಳಜನಕವಾಗಿದೆ. ಬರ್ಮಾದಲ್ಲಿ, ಸಿಲೋನಿನಲ್ಲಿ, ದಕ್ಷಿಣ ಆಫ್ರಿಕವೇ ಮೊದಲಾದೆಡೆಗಳಲ್ಲಿ ನಮ್ಮ ದೇಶಬಾಂಧವರು ಹೇಳಬಾರದ ಸಂಕಷ್ಟಗಳನ್ನು ಅನುಭವಿಸುತ್ತಾರೆ. ದಕ್ಷಿಣ ಆಫ್ರಿಕದ ಸರಕಾರವು ಹಿಂದಿನ ಎಲ್ಲಾ ಒಪ್ಪಂದಗಳನ್ನು ಮೀರಿದು ಇಂದು ಹಿಂದೀಯರನ್ನು ಅಗೌರವವಾಗಿ ನೋಡುತ್ತದೆ. ಆ ನಮ್ಮ ಬಾಂಧವರಿಗೆ ನಮ್ಮ ಸಂಪೂರ್ಣ ಸಹಾಯವನ್ನು ಕೊಡಬೇಕು. ನಾವು ಇನ್ನೂ ಸ್ವತಂತ್ರರಾಗಿಲ್ಲವಾದರೂ, ನಮ್ಮ ಸಾಧ್ಯ ಸಹಾಯದಿಂದ ಅವರ ನೆರವಾಗದೆ ನಿರ್ವಾಹವಿಲ್ಲ."

ಈ ರೀತಿಯಾಗಿ ರಾಷ್ಟ್ರಪತಿಗಳು ತಮ್ಮ ವಿಚಾರಪೂರ್ಣವಾದ ಹಾಗೂ ಅಸ್ಖಲಿತವಾದ ಹೃದಯ ಸ್ಪರ್ಶಿಯಾದ ವಾಕ್ಸರಣಿಯಿಂದ ಸಭಿಕರನ್ನು ಪರವಶರನ್ನಾಗಿ ಮಾಡಿದರು.

ಕೆಲಸಗಾರರು ಮತ್ತು ಮಾಲಿಕರೊಳಗೆ ಶಾಂತಿಸ್ಥಾಪನೆಗಾಗಿ ಶಾಸನ!

ಮದ್ರಾಸು-ಸರಕಾರದ ಸ್ತುತ್ಯ ಪ್ರಯತ್ನ!

★ ಕೈಗಾರಿಕೆ ಕೋರ್ಟುಗಳ ಸ್ಥಾಪನ ★ ನ್ಯಾಯ ರೀತಿಯ ತೀರ್ಮಾನ
★ ಕೆಲಸಗಾರರಿಗೆ ಸಹಾಯ ★ ಶಾಂತಿಸ್ಥಾಪನೆಯ ಸಾಧನ

ಮದ್ರಾಸು ಪ್ರಾಂತದಲ್ಲಿ ಮಾಲಿಕರಿಗೂ ಕೆಲಸಗಾರರಿಗೂ ಆಗಾಗ ಕಚ್ಚಾಟವಾಗುತ್ತಿದ್ದು, ಸಂಸ್ಥಾನದ ಕೈಗಾರಿಕೆಯು ಅಭಿವೃದ್ಧಿಯಾಗುವ ಬದಲು ಹೀನದೆಶೆಯನ್ನು ಹೊಂದುವ ಸಂದರ್ಭವಿರುತ್ತದೆ. ... ಮುಷ್ಕರಗಳಾಗುವುದರಿಂದ ಒಮ್ಮೊಮ್ಮೆ ಕೈಗಾರಿಕೆಗಳ ಬಾಗಿಲನ್ನೇ ಹಾಕಬೇಕಾಗುತ್ತದೆ. ಇದನ್ನು ನ್ಯಾಯವಾದ ರೀತಿಯಲ್ಲಿ ಬಗೆಹರಿಸುವ ಸಲುವಾಗಿ ಮದ್ರಾಸ ಸರಕಾರವು ಒಂದು ಶಾಸನವನ್ನು ಮಾಡಿದೆ. ಈ ಮಸೂದೆಯು ಇಂಗ್ಲೆಂಡಿನ ಟ್ರೇಡ್ ಡಿಸ್‌ಪ್ಯೂಟ್ಸ್ ಆಕ್ಟಿನಂತೆ, ... ಟ್ರೇಡ್ ಯೂನಿಯನ್ಸ್ ಆಕ್ಟಿಗೂ ಸಹಾಯಕವಾಗುತ್ತದೆ.

... ಅಭಿಪ್ರಾಯದಂತೆ, ಕೆಲಸಗಾರರು ಮತ್ತು ಮಾಲಿಕರು ತಮ್ಮೊಳಗಿನ ಜಗಳಗಳನ್ನು ತಮ್ಮೊಳಗೆ ತೀರಿಸಿಕೊಳ್ಳುವುದು ಉತ್ತಮವೆಂದೂ, ಹಾಗೆ ಮಾಡಲು ಸಾಧ್ಯವಿಲ್ಲವಾಗ ಸರಕಾರವು ಯೋಗ್ಯ ಸಹಾಯ ನೀಡಬೇಕೆಂದೂ, ಇದಕ್ಕಾಗಿ ... ಒಬ್ಬ ... ಸಂಧಾನಾಧಿಕಾರಿಯನ್ನಾಗಿ ನೇಮಿಸಿರುವುದು. ಇವರಿಗೆ ... ಅಧಿಕಾರ ಮತ್ತು ಅನುಭವಿಗಳಿಂದ ಕೂಡಿಸಬಹುದಾದ ಅಧಿಕಾರವಿದೆ. ಹೀಗೆ ಪ್ರಧಾನ ಪಂಚಾಯತೆದಾರರು ವಿವಾದವಿರುವ ಪಕ್ಷಗಳನ್ನು ಒಪ್ಪ ದವಾಡಲು ಯತ್ನಿಸುವರು.

ಪ್ರಧಾನ ಪಂಚಾಯತೆದಾರರ ಸೂಚನೆಯನ್ನನುಸರಿಸಿ ಎರಡು ಪಂಗಡಗಳೂ ತಮ್ಮ ವಿವಾದಗಳನ್ನು ನಿಲ್ಲಿಸಬೇಕು. ಅದರಲ್ಲಿ ಯಾವುದಾದರೂ ಒಂದು ಪಕ್ಷವು ಒಪ್ಪದೆ ಹೋದಲ್ಲಿ, ಆ ಪಕ್ಷದವರು ಸರಕಾರಕ್ಕೆ ಬರೆದು ವಿವಾದವನ್ನು ನ್ಯಾಯರೀತಿಯಾಗಿ ತೀರ್ಮಾನಿಸುವಂತೆ ಬಿನ್ನಯಿಸಕೊಳ್ಳಬಹುದು. ಹಾಗೆ ಕೇಳಿದಲ್ಲಿ ಮಸೂದೆಯಿಂದ ಘಟಿತವಾದ ಕೋರ್ಟಿನವರು ಅದನ್ನು ತೀರಿಸುವರು.

ಕೈಗಾರಿಕೆ ಕೋರ್ಟು

ಈ ಕೋರ್ಟಿಗೆ ಜಿಲ್ಲಾ ಕೋರ್ಟಿನ ಜಡ್ಜರೂ, ಮದ್ರಾಸಿನ ಸಿಟಿ ಸಿವಿಲ್ ಕೋರ್ಟಿನ ಜಡ್ಜರೂ ನೇಮಿಸಲ್ಪಡುವರು. ಮಾಲಿಕರ ಕಡೆಯಿಂದ ಒಬ್ಬರು, ಕೆಲಸಗಾರರ ಕಡೆಯಿಂದ ಒಬ್ಬರು, ಹೀಗೆ ಇಬ್ಬರು ನೇಮಿಸಲ್ಪಡುವರು. ಪಂಚಾಯತೆದಾರರಿಂದ ನ್ಯಾಯವಾಗಲಿಲ್ಲವೆನ್ನುವವರು ಈ ಕೋರ್ಟಿಗೆ ನ್ಯಾಯ ತರಬೇಕು. ಈ ಕೋರ್ಟಿನಿಂದಲೂ ಸಮಾಧಾನ ಹೊಂದದವರು ಪ್ರತ್ಯಕ್ಷ ಚಳವಳವನ್ನು ಕೈಕೊಳ್ಳಬಹುದು. ಆದರೆ ಅವರು ಹಾಗೆ ಮಾಡುವಾಗ ಸರಕಾರಕ್ಕೆ ತಿಳಿಸಬೇಕು.

ಸರಕಾರದ ... ಮಧ್ಯಸ್ಥಿಕೆಯಿಂದ ತೀರಿಸಲು ಸಾಧ್ಯವಾಗದಿದ್ದರೆ ಆದರೆ ಸರಕಾರವು ಮಧ್ಯಸ್ಥಿಕೆಗೆ ಒಪ್ಪಿಸಿದರೆ ಎರಡು ಕಡೆಯವರೂ ಬರಹ ಮೂಲಕ ಪ್ರಾರ್ಥಿಸಿಕೊಳ್ಳಬೇಕು. ಹೀಗೆ ಪ್ರಾರ್ಥಿಸಲ್ಪಟ್ಟ ಸರಕಾರದ ಮಧ್ಯಸ್ಥಿಕೆಯಿಂದ ಆದ ತೀರ್ಮಾನವನ್ನು ಇಬ್ಬರೂ ಅಂಗೀಕರಿಸಲೇಬೇಕು. ಸರಕಾರದವರು ಇಂತಹ ಒಂದು ಸ್ಥಿರವಾದ ಕೋರ್ಟನ್ನು ಮಾಡುವುದು—ಸರಕಾರವು ಜನರಿಯ ಮತ್ತು ಕೈಗಾರಿಕೆಯ ಹಿತಪ್ರಾಪ್ತಿಯಿಂದ ಮಧ್ಯಸ್ಥಿಕೆಯ ತೀರ್ಮಾನವನ್ನು ... ಹೇಳಬಹುದು.

ಯೂನಿಯನ್ನುಗಳು

ಕೆಲಸಗಾರರು ಸಂಘಗಳನ್ನು ಸ್ಥಾಪಿಸುವಂತೆ ಸರಕಾರವು ಉತ್ತೇಜನ ಕೊಡುವುದು. ... ಕೈಗಾರಿಕೆ ... ನಿಶ್ಚಿತ ... ಕೆಲಸಗಾರರ ಸಂಘಗಳಲ್ಲಿ ... ರಿದರೆ, ಆ ತರ ಸಂಘಗಳನ್ನು ಒಪ್ಪಿಸಬೇಕೆಂದು ... ವರ್ಕರ್ಸ ಕಮಿಟಿಗಳು ... ಬೇಕೆಂದು ಸರಕಾರದ ಅಭಿಪ್ರಾಯವಾಗಿದೆ.

ನಿರುದ್ಯೋಗ ಜೀವವಿಮೆ

ನಿರುದ್ಯೋಗ ಜೀವವಿಮೆ ... ಸರಕಾರವು ... ಪ್ರೋತ್ಸಾಹಿಸುವುದು. ... ಕೆಲಸಗಾರರಿಗೆ ... ಜರಿಗೆ ತರುವುದಾಗಿ ತಿಳಿಸಿದೆ.

ಜೀವವಿಮಾ ನಿಧಿ

ಈ ನಿಧಿಯಿಂದ ಹಣಪಡೆಯಬೇಕಾದರೆ ಒಬ್ಬನು ಒಂದು ವರ್ಷದ ತನಕ ಒಂದು ಕಾರ್ಖಾನೆಯಲ್ಲಿ ಕೆಲಸಗಾರನಾಗಿದ್ದು ನಿರುದ್ಯೋಗ ಜೀವವಿಮೆಗೆ ಹಣಕಟ್ಟುವವನಾಗಿರಬೇಕು. ಹಾಗಿಲ್ಲದಲ್ಲಿ ಅವನಿಗೆ ಹಣ ಪಡೆಯಲು ಅರ್ಹತೆಯಿಲ್ಲ.

ಕೆಲಸಗಾರರ ತಪ್ಪಿಲ್ಲದೆ ಅವರಿಗೆ ಕೆಲಸವು ಹೋದಲ್ಲಿ ಅವರಿಗೆ ಸಹಾಯ ದೊರಕುವುದು. ಕೆಟ್ಟನಡತೆಯಿಂದ ಕೆಲಸ ಹೋದಲ್ಲಿ ಅವರಿಗೆ ಸಹಾಯವಿಲ್ಲ.

ಈ ನಿಧಿಗೆ ಮಾಲಿಕರಿಂದಲೂ ಚಂದಾ ತೆರುವಂತೆ ಮಾಡಲಾಗುವುದು.

ವಿವಿಧ ವಿಷಯಗಳನ್ನರಿಯಲು
ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ

ಗಾಂಧಿಜಿಯವರ ಸಂದೇಶಗಳು

ಸತ್ಯಶೋಧನೆಯೇ ದೈವ ಸಾಕ್ಷಾತ್ಕಾರ

★ ಕುರುಡು ಭಕ್ತಿಯಿಂದ ಅಹಿಂಸೆಯನ್ನು ಆಚರಿಸುವುದು ಬೇಡ

★ ಹಿಂದೂ-ಮುಸ್ಲಿಮ್ ಐಕ್ಯವು ಯಾಕಾಗಲಿಲ್ಲ?

★ ಆತ್ಮಶಕ್ತಿಯ ಅರಿವೇ ಸತ್ಯಾಗ್ರಹದ ತತ್ವ

['ಹರಿಜನ'ದಿಂದ]

"ಮಹಾತ್ಮಾಜಿಯವರು ಅಹಿಂಸಾವೀರನು, ಏಕಾಂಗಿಯಾಗಿ ಯುದ್ಧ ಮಾಡಬಲ್ಲನು ಎಂದು ಹೇಳುವುದರ ಅರ್ಥವೇನೆಂದು ಅವರ ಪಟ್ಟ ಶಿಷ್ಯರಾದ ಶ್ರೀ ಮಹಾದೇವ ದೇಸಾಯಿಗಳು 'ಹರಿಜನ' ಪತ್ರಿಕೆಯಲ್ಲಿ ಹೀಗೆಂದು ವಿವರಿಸುತ್ತಾರೆ.

ಗಾಂಧಿಜಿಯವರ ಮತವೇನೆಂದರೆ ಸಂಪೂರ್ಣವಾದ ಅಹಿಂಸೆಯು ಎಲ್ಲರನ್ನೂ ತನ್ನ ಕಡೆಗೆ ಶರಣಾಗುವಂತೆ ಮಾಡುತ್ತದೆ, ಹಾಗಾಗಿ ಅಹಿಂಸೆಯು ಶ್ರದ್ಧಾಪೂರ್ವವಾದ ಆಚರಣೆಯೇ ಎಲ್ಲಾ ಕೆಲಸಗಳನ್ನು ಮಾಡಿಬಿಡುವಾಗ ಶಾಸನ ಭಂಗ ಚಳವಳದಂತಹ ಸಮರಗಳು ಜಯಶೀಲವಾಗಲು ಅಹಿಂಸೆಯೊಂದೇ ಸಾಕು, ಆದ್ದರಿಂದ ಅಹಿಂಸಾವೀರನೊಬ್ಬನೇ ಅಗಣಿತವಾದ ಸಮಸ್ಯೆಗಳನ್ನು ಎದುರಿಸಿ ಜಯವನ್ನು ಸ್ವಾಧೀನ ಮಾಡಿಕೊಳ್ಳಬಲ್ಲನು ಎಂದು ಇದೇ ಅಭಿಪ್ರಾಯವನ್ನು ಮಹರ್ಷಿ ಪತಂಜಲಿಯೂ "ಅಹಿಂಸೆಯಿಂದ ಪೂರ್ಣವಾಗಿ ಸುತ್ತಲಿನ ವಿರೋಧಗಳು ಕೊನೆಗೊಳ್ಳುತ್ತವೆ" ಎಂದು ಹೇಳಿರುವನು ಈ ಮಹಾಯೋಗಿಯೂ ಈ ಮಾತನ್ನು ತಾನು ಸಂಪೂರ್ಣ ತಿಳಿದು ಅನುಭವಿಸಿದ ಮೇಲೆ ಜಗತ್ತಿಗೆ ಸಾರಿರಬೇಕು. ಮಹಾತ್ಮಾಜಿಯವರು ಅದೇ ಕಾರ್ಯವನ್ನು ಕೈಕೊಂಡಿದ್ದಾರೆ

ಇಂತಹ ತತ್ವವನ್ನು ಗಾಂಧಿಜಿಯವರು ಬೋಧಿಸಬೇಕಾದರೆ ದೇವರು ಅವರಲ್ಲಿ ಅಂತಹ ಶಕ್ತಿಯನ್ನು ಕೊಟ್ಟಿರಬೇಕು. ಗಾಂಧಿಜಿಯವರು ಹೀಗೆನ್ನುತ್ತಾರೆ–

ಅಂಧಾನುಸರಣ ಬೇಡ. "ಅಹಿಂಸೆಯಲ್ಲಿ ಸಂಪೂರ್ಣವಾದ ವಿಶ್ವಾಸವು ಒಬ್ಬನಿಗ ಇರಬೇಕು ' ವಿ ಲಿಪಕಾಂತರ ಜನರಲ್ಲಿ ಆ ಭಕ್ತಿಯನ್ನು ಹುಟ್ಟಿಸಲು ನನಗೆ ಆಗುವುದಿಲ್ಲ, ಹಾಗೆ ಮಾಡಬೇಕಾದರೆ ದೇವರ ಮತ್ತು ಅಹಿಂಸೆಗಳಲ್ಲಿ ಅತ್ಯಂತ ಶ್ರದ್ಧೆಯ ವಿಶ್ವಾಸವಿರಬೇಕು ಇಂತಹ ವಿಶ್ವಾಸವೇ ಮಾನವನನ್ನು ದಿನದಿಂದ ದಿನಕ್ಕೆ ಪೂರ್ಣತೆಗೆ ತಂದು ಸ್ವತಃ ಕಾರ್ಯಗಳನ್ನು ನಡೆಸಬಲ್ಲದು ನನ್ನ ಕಾರ್ಯಗಳನ್ನು ನಂಬದೆ ಪ್ರತಿಯೊಬ್ಬರೂ ನನ್ನನ್ನು ಬಿಟ್ಟುಹೋದರೂ ನನಗೆ ಬೇಸರವಿಲ್ಲ ಅಂಧ ವಿಶ್ವಾಸದಿಂದ ನನ್ನನ್ನು ಅನುಸರಿಸುವುದು ಬೇಡ, ದೈವಭಕ್ತಿ ಮತ್ತು ಅಹಿಂಸೆಗಳು ಅವರ ಹೃದಯದಲ್ಲಿ ಹುಟ್ಟಿಬರಬೇಕು"

ಸಮಸ್ಯಾಪರಿಹಾರ ಹಿಂದೂ ಮುಸ್ಲಿಮ್ ಸಮಸ್ಯೆಯ ಕುರಿತು ಮಾತನಾಡುತ್ತ ಒಮ್ಮೆ ಗಾಂಧಿಜಿಯವರು ಹೀಗೆಂದರು –"ಕಳೆದ ಇಪ್ಪತ್ತು ವರ್ಷಗಳಿಂದ ನಾನು ಅಹಿಂಸೆಯ ಕುರಿತು ಮಾತನಾಡುತ್ತಿದ್ದೇನೆ. ಆದರೆ ನನ್ನಲ್ಲಿಯೇ ನಾನು ನ್ಯಾಯಬದ್ಧವಲ್ಲದ ಸಂಧಾನವನ್ನು ಮಾಡಿಕೊಂಡಿರುತ್ತೇನೆ ನನ್ನ ಕಾರ್ಯವನ್ನು ನಾನು ಮನಸಂಪೂರ್ಣ ಮಾಡಿಲ್ಲ ಖಿಲಾಫತ್ ಸಮಯದಲ್ಲಿ ನನ್ನೊಡನೆ ಸಾವಿರಾರು ಮಂದಿ ಮುಸ್ಲಿಮರು ಅಹಿಂಸಾತ್ಮಕ ಚಳವಳದಲ್ಲಿ ಸೇರಿದರು ಆಗಲೇ ನನಗೆ ಶಾರೀರಿಕ ಹಿಂಸೆಗಿಂತ ನಿರ್ಮಲ ಅಹಿಂಸೆಯೇ ಒಳ್ಳೆಯದೆಂದು ನಿಶ್ಚಯವಾಗಿದೆ

"ಆದರೆ ನನ್ನ ತಪ್ಪೇನೆಂದರೆ ನಾನು ಅಹಿಂಸೆಯ ಸ್ವರೂಪವನ್ನು ಜನಕ್ಕೆ ಸಾಕಷ್ಟು ವಿವರಿಸಿ ಹೇಳಲಿಲ್ಲ. ನಾನು ಹಾಗೆ ಮಾಡಿದ್ದರೆ ದೇಶದಲ್ಲಿ ಸಂಪೂರ್ಣ ಹಿಂದೂಮುಸ್ಲಿಮ್ ಐಕ್ಯವಾಗುತ್ತಿತ್ತು ಜನರೂ ಅಹಿಂಸೆಯನ್ನು ಮನೋವಾಕ್ಕಾಯಗಳಿಂದ ನಡೆಸುತ್ತಿದ್ದಲ್ಲಿ ಹಿಂದೂ-ಮುಸ್ಲಿಮ್ ಐಕ್ಯಕ್ಕೆ ಇಷ್ಟು ದೀರ್ಘ ಹೋಗುತ್ತಿರಲಿಲ್ಲ ಆದರೆ ಹೀಗನ್ನುವುದು ಹಲವರಿಗೆ ಸಮಸ್ಯೆಯಾಗಿ ಕಾಣಬಹುದು. ಆದರೆ ನಾನು ಮಾಡುವುದು ಸರಿಯಾಗಿದ್ದರೆ ಸಮಸ್ಯೆಯು ಖಂಡಿತವಾಗಿಯೂ ಪರಿಹಾರವಾದೀತು

ದೈವಜ್ಞಾನ. ಅಹಿಂಸೆಯ ವಿಷಯದಲ್ಲಿ ಹಾಗೂ ದೈವಭಕ್ತಿಯ ವಿಷಯದಲ್ಲಿ ಜನರು ಮಹಾತ್ಮಾ ಗಾಂಧಿಯವರ ಅಭಿಪ್ರಾಯವನ್ನು ಸಂದಿಗ್ಧರಾಗಿ ವಿಚಾರಿಸುತ್ತಾರೆ ಆ ಕುರಿತು ಗಾಂಧಿ ಸೇವಾಸಂಘದ ಅಧ್ಯಕ್ಷರಾದ ಶ್ರೀ ಕಿಶೋರಿಲಾಲ ಮಶ್ರುವಾಲರವರು ಹೀಗೆಂದು 'ಹರಿಜನ'ದಲ್ಲಿ ಬರೆಯುತ್ತಾರೆ

"ದೇವರ ಕುರಿತು ನಾವು ತಾರ್ಕಿಕವಾಗಿ ಚರ್ಚಿಸುವುದು ಅಶಕ್ಯವಿದೆ. ಅಹಿಂಸೆಯ ವಿಷಯ ತಿಳಿಯುವರೆ ತರ್ಕಸರಣಿಯೂ ಬೇಕಾಗಿಲ್ಲ ಹೀಗೆ ತರ್ಕಮಾಡುತ್ತಿದ್ದರೆ ನಿಜವಾದ ಜ್ಞಾನಕ್ಕಿಂತ ಸಂದೇಹವೇ ಹೆಚ್ಚಾಗುತ್ತದೆ ವಿದ್ಯುಚ್ಛಕ್ತಿಯೇನೆಂಬ ವಿಷಯವಾಗಿ ನೀವು ಕೂಗಿ ಅಥವಾ ವಯರನ್ನು ತುಂಡು ಮಾಡಿ ತಿಳಿಯಲಾರಿರಿ. ಅಥವಾ 'ಗಾಲ್ವನೋಮಿಟರ್' ಯಂತ್ರವು ಏನೆಂಬ ಕುರಿತು ತಿಳಿಯಬೇಕಾದರೆ ಒಂದೋ ಅದನ್ನು ಹಿಡಿದು ನೋಡಬೇಕು, ಇಲ್ಲವಾದರೆ ಅದನ್ನು ಇದ್ದಕ್ಕಿದ್ದಂತೆ ನಂಬಬೇಕು

ಆತ್ಮಶಕ್ತಿ. "ಹಿಂದಿನ ಚರಿತ್ರೆ ಪುರಾಣಗಳನ್ನು ನಾವು ನೋಡಿದರೆ ಅವುಗಳಲ್ಲಿ ಕೆಲವು ವ್ಯಕ್ತಿಗಳು ಯಾಕೆ ಪ್ರಹ್ಲಾದ ಧ್ರುವನಂತಹ ಕೆಲವು ಹುಡುಗರೂ ತಾವು ವಿಶ್ವಾಸವಾಗಿ ನಂಬಿರುವ ವಿಷಯಗಳಲ್ಲಿ ದೃಢ ಸಂಕಲ್ಪದಿಂದ, ಎಷ್ಟೇ ಸಂಕಷ್ಟಗಳು ಬಂದರೂ ಇದಿರಿಸಿ ಜಯಶೀಲರಾದುದನ್ನು ತಿಳಿಯುತ್ತೇವೆ. ಅಂತಹ ದೃಢಸಂಕಲ್ಪ ಮಾಡಲು ಅವರಿಗೆ ಯಾವುದು ಸಹಕಾರಿಯಾಗಿದೆ? ಕ್ರಿಸ್ತಿಯನರು ನಂಬುವಂತೆ ತಮ್ಮದೇ ಮರಣ ಸೂಚಕವೆಂಬಂತಿರುವ ಕ್ರೋಸನ್ನು ಕೊರಳಲ್ಲಿ ಯಾಕಾಗಿ ಅವರು ಧರಿಸುತ್ತಾರೆ? ಅಂತರಂಗವನ್ನು ಬಿಚ್ಚಿ ಹೇಳದ ಸಲುವಾಗಿ, ಸುಡುವ ಬೆಂಕಿಗೆ ಕೈಹಾಕಿದರೂ, ಹೆದರಿಕೆಗೆ ಭಯಪಡದೆ ಇದ್ದ ರೋಮನ್ ಸಿಪಾಯಿಯ ಧೈರ್ಯದಲ್ಲಿ ಹಿಂಸೆಯಾವುದಿತ್ತು?

ಒಬ್ಬ ಮನುಷ್ಯನು ತನ್ನ ಅಂತರಂಗದಲ್ಲಿ ಅಪೂರ್ವವಾದ ಶಕ್ತಿಯನ್ನು ಕಾಣದೆ, ಆ ಶಕ್ತಿಯೊಡನೆ ಸಮೀಪಸಂಬಂಧವನ್ನು ಮಾಡದೆ, ಇಂತಹ ಸಾಹಸಗಳನ್ನು ಮಾಡುವುದು ಸಾಧ್ಯವೇ? ಇಂತಹ ಸಾಹಸಮಾಡುವ ಶಕ್ತಿಯು ಕೇವಲ ತಾತ್ಕಾಲಿಕವಲ್ಲ, ಅದು ಅಗಾಧವಾದ ಹೃದಯದ ಶಕ್ತಿ.

"ಗಾಂಧಿಯವರು ಸತ್ಯಾಗ್ರಹಿಗೆ ಬೋಧಿಸುವ ಅಹಿಂಸೆಯೆಂದರೆ ಅಂತಹುದೇ ಬಗೆ. ನಿಮ್ಮ ಹೃದಯದಲ್ಲಿ ನಿಜವಾಗಿಯೂ ಮಹತ್ವವಾದ ಶಕ್ತಿಯು ಇದೆಯೆಂದು ನಿಮಗೆ ತಿಳಿದಿದೆಯೇ? ಹಾಗಾದರೆ 'ಸತ್ಯಾಗ್ರಹಿ'ಯ ಹೃದಯದಲ್ಲಿಯೂ ಅದೇ ಇದೆ ಆತನು ಸತ್ಯಸಂಧನು; ನಿರ್ಭೀತನು.

ತತ್ವವು ಹೆಚ್ಚಿನದು. ಇಂತಹ ಸಂದರ್ಭದಲ್ಲಿ ಸಾಮಾನ್ಯವಾದ ಮನುಷ್ಯನೊಬ್ಬನ ಧೈರ್ಯಕ್ಕಿಂತ ಒಂದು ನಿಶ್ಚಿತ ಉದ್ದೇಶದ ಧೈರ್ಯವು ಅಧಿಕ ಶಕ್ತಿಯುಳ್ಳದ್ದು. ದೇಶಪ್ರೇಮ, ಸಾಹಸಪ್ರೇಮ, ಆಸೆ ಇವುಗಳಲ್ಲಿ ಮಾನವನು ಅಧಿಕ ಧೈರ್ಯಶಾಲಿಯಾಗುತ್ತಾನೆ. ಹಾಗೆ ಧೈರ್ಯಗೊಳ್ಳುವಾಗ ಆತನ ತತ್ವಕ್ಕನುಸಾರವಾಗಿ ವಿಜಯದ ಪಾವಿತ್ರ್ಯವು ಇರುತ್ತದೆ. "ಗಾಂಧಿಜಿಯವರು ಈ ಮಹಾಶಕ್ತಿಯನ್ನು ದೇವರೆಂದೂ ಅಥವಾ ಸತ್ಯವೆಂದೂ ತಿಳಿದಿದ್ದಾರೆ. ಬೇರೆಬೇರೆ ಮತದವರು ಇದಕ್ಕೆ ಬೇರೆಬೇರೆ ಹೆಸರು ಕೊಡಬಹುದು. ಆದರೆ, ಎಲ್ಲರ ಸತ್ಯವೂ ಒಂದೇ ಹಲವರಿಗೆ ಅವರು ಅನುಭವಿಸುವ ಸತ್ಯವನ್ನು ಸ್ಪಷ್ಟವಾಗಿ ಹೇಳಬರುವುದಿಲ್ಲ ಆದರೂ ಎಲ್ಲರಿಗೂ ಅಂತಹ 'ಶಕ್ತಿ'ಯ ಅನುಭವವು ಆತ್ಮಧೈರ್ಯವನ್ನು ಹೆಚ್ಚಿಸುವುದೆಂದು ತಿಳಿದೇ ಇದೆ.

"ಇದೇ ಅಹಿಂಸೆಯ ಸತ್ಯಾಗ್ರಹದ, ದೈವಭಕ್ತಿಯ ಅರ್ಥವಾಗಿದೆ"

ಇಂದು ಮಿಲಿಯಗಟ್ಟಲೆ ಜನರ ಪ್ರತಿದಿನದ ಉಪಯೋಗದಲ್ಲಿರುವ ವಸ್ತುವೆಂದರೆ

ನಂಜನಗೂಡು ಟೂತ್ ಪೌಡರ್ (ರಿಜಿ)

ಸದ್ವೈದ್ಯಶಾಲಾ ಬ್ರಾಂಚ್ ರಥಬೀದಿ ಮಂಗಳೂರು.

ಹೆಂಗಸರ ಆರೋಗ್ಯಕ್ಕೆ

ಲೋಧ್ರವನ್ನು ಉಪಯೋಗಿಸಿರಿ.

LODHRA

ಲೋಧ್ರ

ಬಹಿಷ್ಠೆಯಾಗುವಾಗ ಉಂಟಾಗುವ ಯಾವತ್ತೂ ಬಾಧೆಗಳನ್ನು ಗುಣಪಡಿಸುತ್ತದೆ.

ಹೆಂಗಸರಿಗೆ ಬಲವನ್ನೂ ಆರೋಗ್ಯವನ್ನೂ ಉಂಟುಮಾಡುವ ಉತ್ತಮ ಟಾನಿಕ್ಕು

ಪ್ರೊಪ್ರೈಟರ್ಸ್ ಮತ್ತು ತಯಾರಿಸುವವರು

ಕೇಸರಿ ಕುಟೀರಂ, :: :: :: ಮದ್ರಾಸು.

ಎಲ್ಲಾ ಕೆಮಿಸ್ಟರಲ್ಲಿಯೂ ಶಾಪಿನಲ್ಲಿಯೂ ದೊರೆವುದು

ಸ್ಟಾಕಿಸ್ಟರು. ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು

ಅವಳ ಅತಿಯಾದ ರಕ್ತ ದಬತ್ತಾಟವು ಕಡಿಮೆಯಾಯಿತು—

ಮತ್ತು ಜೊಜ್ಜಾಗಿ ಬಲತ ದೇಹವು ಸ್ವಲ್ಪ ಕೃಶವಾಯಿತು—ಕ್ರುಶನ್ ಲವಣಕ್ಕೆ ವಂದನೆಗಳು

ರಕ್ತದ ಅತಿಯಾದ ಒತ್ತಾಟಕ್ಕೆ ಒಂದು ಕಾರಣವು ಅತಿಯಾದ ಕೊಬ್ಬು ದೇಹದಲ್ಲಿರುವುದು. ಸಾವಿರಾರು ಡಾಕ್ಟರರು ಹೇಳುತ್ತಾರೆ ಹೆಚ್ಚಾದ ಕೊಬ್ಬನ್ನು ದೇಹದಿಂದ ನಾಶಮಾಡಿದರೆ ಬೊಜ್ಜಾಗಿ ಬೆಳೆದ ದೇಹದವರು ರಕ್ತದ ಒತ್ತಾಟದಿಂದ ನಿವೃತ್ತರಾಗಬಹುದು ಈ ಹೆಂಗಸು ಕ್ರುಶೆನ್ ಲವಣವನ್ನು ಸೇವಿಸಿದರಿಂದ ಅವುಗಳಿಂದ ನಿವೃತ್ತಳಾದಳು. ಅವಳ ಪತ್ರವನ್ನು ಓದಿರಿ —

ನನಗೆ ರಕ್ತದ ಒತ್ತಾಟವಿಕೆ ಮತ್ತು ನನ್ನ ಮೇಲೆ ಬೊಜ್ಜು ಇದ್ದಿತು. ಅದಲ್ಲದೆ ಯಾವಾಗಲೂ ನನಗೆ ಬಿಚ್ಚುತಿತ್ತು ಮತ್ತು ನಾನ ಭಾರದಲ್ಲಿ 20 ರಾತ್ಲ ಹೆಚ್ಚಾಗಿದೆ ಎಂದು ನೀನೆ 'ಕ್ರುಶನ್ ಲವಣ'ವನ್ನು ನಾನು ಸೇವಿಸಿದೊಡನೆ ಒಂದು ವಾರದಲ್ಲಿಯೇ ಏಳು ರಾತ್ಲ ಭಾರವು ಕಡಮೆಯಾಯಿತು ಬೆನ್ನಿನ ಬೇನೆಯು ನಿಂತಿತು ರಕ್ತದ ಒತ್ತಾಟವಿಕೆ ಕಡಿಮೆಯಾಯಿತು ಈಗ ನಾನು ಅತ್ಯಂತ ಸುಖಿಯಾಗಿದ್ದೇನೆ ಮತ್ತು ಒಳ್ಳೆಯ ಆರೋಗ್ಯದಲ್ಲಿದ್ದೇನೆ. ಕ್ರುಶನ್ ಲವಣಕ್ಕೆ ವಂದನೆಗಳು ನಾನು ಅದನ್ನು ಯಾವಾಗಲೂ ಹೊಗಳುತ್ತೇನೆ'

(ಮಿಸೆಸ್ ಡಿ ಡಬ್ಲ್ಯು)

ನಿಮ್ಮ ದೇಹದ ಅವಯವಗಳು ಯಾವಾಗ ಚೈತನ್ಯಯುಕ್ತವಾಗಿಲ್ಲವೋ ಆಗ ದೇಹದಲ್ಲಿದ ಕಶ್ಮಲವು ಹೊರಗೆ ಕಳಲ್ಪಡುವುದಿಲ್ಲ ಆ ಕಶ್ಮಲವು ದೇಹವನ್ನು ಸೇರುತ್ತದೆ ಈ ಕಶ್ಮಲವು ರಕ್ತದ ಹರಿಯುವಿಕೆಯನ್ನು ತಡೆಯುತ್ತದೆ ಮತ್ತು ರಕ್ತನಾಳಗಳನ್ನು ಒತ್ತುತ್ತದೆ ಕ್ರುಶನ್ ಕ್ಷಾರಗಳ ಮತ್ತು ಲವಣಗಳ ಸಮ್ಮೇಳನವಾಗಿರುತ್ತದೆ ಮತ್ತು ದೇಹದ ಎಲ್ಲಾ ಅವಯವಗಳನ್ನು ಶುಚಿಗೊಳಿಸುತ್ತದೆ ರಕ್ತವನ್ನು ಶುದ್ಧವಾಗಿರಿಸುತ್ತದೆ, ಇದರಿಂದ ಶುಚಿಯಾದ ರಕ್ತವು ನಿಮ್ಮ ದೇಹದ ವಿವಿಧ ಅಂಗಾಂಗಗಳನ್ನು ಪ್ರವೇಶಿಸುತ್ತದೆ. ಕ್ರುಶನ್ ಲವಣವು ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರಗಳಲ್ಲಿಯೂ, ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ



No. I. V.

ಈ ವಾರದಲ್ಲಿ ಮದ್ರಾಸಿನ ಮಂತ್ರಿಗಳು ★ ಏನು ಹೇಳುತ್ತಾರೆ? ★

ಕೂಲಿಗಾರರಿಗೆ ಮಾನ್ಯ ವಿ. ವಿ. ಗಿರಿಯವರ ಬೋಧನೆ!
ಹರಿಜನೋದ್ಧಾರಕ್ಕಾಗಿ ಮಾನ್ಯ ರಾಜಾಜಿಯವರ ಸಾಧನೆ
ಕಾಂಗ್ರೆಸು ಅಧಿಕಾರ ಸ್ವೀಕರಿಸಿದ್ದೇಕೆ?—ಮಾನ್ಯ ಶ್ರೀ| ರೆಡ್ಡಿ
ಮದ್ಯಪಾನ ನಿಷೇಧದಿಂದ ಲಾಭವೇ ನಷ್ಟವೇ?—ಮಾನ್ಯ ಡಾ| ರಾಜನ್



ಮಾನ್ಯ ವಿ. ವಿ. ಗಿರಿ
(ಕೆಲಸಗಾರರಿಗೆ ಉಪದೇಶ)

"ಕೆಲಸಗಾರರು ಯೋಗ್ಯವಾದ ರೀತಿಯಲ್ಲಿ ಯೂನಿಯನ್ನುಗಳನ್ನು ಸ್ಥಾಪಿಸುವುದಿಲ್ಲ ಕೆಲಸಗಾರರೆಂಬವರ ಮುಖಂಡರು ಕಾಂಗ್ರೆಸು ಸರಕಾರವು ಕೊಟ್ಟಿರುವ ಸ್ವಾತಂತ್ರ್ಯವನ್ನು ಬೈಗಳಿಗಾಗಿ ಉಪಯೋಗಿಸುತ್ತಿದ್ದಾರೆ. ಮುಖಂಡರಾದವರು ಯೂನಿಯನುಗಳನ್ನು ಸಹಾನುಭೂತಿ ತೋರಿಸದವರನ್ನು ದೂಷಿಸುವ ಬದಲು, ಒಳ್ಳೇ ಸಾಹಸಗಳಿಂದ ಯೂನಿಯನುಗಳನ್ನು ಸ್ಥಾಪಿಸಿ ತಮ್ಮ ಶಕ್ತಿಯನ್ನು ರಚನಾತ್ಮಕ ಕಾರ್ಯಗಳಿಗಾಗಿ ಉಪಯೋಗಿಸಲಿ. ಇಂದ ಕಾಂಗ್ರೆಸು ಸರಕಾರವು ಕೆಲಸಗಾರರ ಉದ್ಧಾರಕ್ಕಾಗಿ ಪ್ರತಿಜ್ಞೆ ತೊಟ್ಟಿರುತ್ತದೆ. ಇಂತಹ ಅಪೂರ್ವ ಸಂದರ್ಭದಲ್ಲಿ ಅವರ ತಮ್ಮ ನ್ಯಾಯವನ್ನು ಪಡೆಯದಿದ್ದರೆ ನಾನ ಕೆಲಸಗಾರರನ್ನೂ ಅವರ ಮುಖಂಡರನ್ನೂ ಬಹಳವಾಗಿ ದೂಷಿಸುತ್ತೇನೆ.

'ಮದ್ರಾಸು ಸರಕಾರವು ಪ್ರಯೋಗಿಸತಕ್ಕ ರುವ ಲೇಬರ್ ಲೆಜಿಸ್ಲೇಶನಿಂದ ಕೆಲಸಗಾರರಿಗೆ ಮತ್ತು ಕೆಲಸ ಮಾಡಿಸುವವರಿಗೂ ಸಮವಾದ ನ್ಯಾಯವು ದೊರೆಯುವಂತಾಗುವುದು. ಹೀಗಾದರೆ ಮಾತ್ರ ದೇಶದ ಉದ್ಯೋಗ ಜೀವನದಲ್ಲಿ ಶಾಂತಿಯು ಉಳಿದು ರಾಷ್ಟ್ರದ ಏಳಿಗೆಯಾಗುವುದು' ಹೀಗೆಂದ ಕೊಯಂಬತ್ತೂರಿನ ಪೌಷತ್ತಿನ ಉದ್ಘಾಟನಾ ಸಮಾರಂಭದಲ್ಲಿ ಭಾಷಣವಿತ್ತರು.

ಮಾನ್ಯ ರಾಜಾಜಿಯವರು
(ದೇವಸ್ಥಾನ ಪ್ರವೇಶದ ಕುರಿತು)

'ಹಿಂದೂದೇಶವು ಒಂದಾಗದೇ ಇರುವುದು ಇಲ್ಲಿರುವ ಅನೇಕ ಜಾತಿಮತಗಳ ಕಾರಣದಿಂದ, ಒಂದಾಗದ ರಾಷ್ಟ್ರವು ಸ್ವರಾಜ್ಯವನ್ನು ಪಡೆಯಲಾರದು. ಹೀಗೆ ಮತಜಾತಿಗಳ ಭಿನ್ನತೆಯಿಂದಿರುವುದು ಹಿಂದೀಯರಿಗೆ ನಾಚಿಕೆಯ ವಿಷಯ. ತವಿ ಉಗಾದು ಇವಕೆ ಯೋಗ್ಯ ಉತ್ತರವನ್ನು ಕೊಡಬೇಕು. ಪರಸ್ಪರ ಭಿನ್ನಭಾವವನ್ನು ಪಡುವುದೇ ಪಾಪ,

'ಸಾಲ ಮಾಡುವ ವಿಷಯದಲ್ಲಿ ನನ್ನನ್ನು ಸಂಪೂರ್ಣರಾಗಿಲ್ಲವೆಂದು ವಿಮರ್ಶಿಸುವವರಿದ್ದಾರೆ. ಆದರೆ ನಾವು ಮಾಡಿದ್ದು ಸರಿಯಲ್ಲವೆಂದು ಹೇಳುವುದು ಸರಿಯಲ್ಲ. ಕೃಷಿಕರ ಸಾಲ ನಿವಾರಣೆಯ ಕಾನೂನು, ಆ ಮೇಲೆ ಮದ್ಯಪಾನ ನಿಷೇಧ ಇವುಗಳಲ್ಲಿ ಜನರಿಗೆ ಏನು ನ್ಯಾಯವಾಯಿತು? ಸಾಲ ನಿವಾರಣೆ ಮಸೂದೆಯಿಂದ ಮೂರು ನಾಲ್ಕು ಕೋಟಿ ಕೃಷಿಕರು ಭೂಮಾಲೀಕರು ಬದುಕುವಂತಾದರು. ಮದ್ಯಪಾನ ನಿಷೇಧದಂತಹ ಪವಿತ್ರ ಕೆಲಸದಿಂದ ಸರಕಾರಕ್ಕೆ ಎಷ್ಟು ಆದಾಯ ಕಡಿಮೆಯಾದರೂ ಜನತೆಗೆ ಎಷ್ಟು ಪ್ರಯೋಜನವಿದೆಯೆಂದು ವಿವರಿಸುವ ಅವಶ್ಯಕತೆಯಿಲ್ಲ.

ಶ್ರೀರಂಗ ದೇವಾಲಯವು ಹರಿಜನರಿಗೆ ತೆರೆಯಲ್ಪಡಬೇಕು. ಇಡೀ ದೇಶಕ್ಕೆ ದೊಡ್ಡ ದೇವಸ್ಥಾನವೇ ಹರಿಜನರಿಗೆ ಮುಕ್ತದ್ವಾರ ತೆರೆಯಲ್ಪಟ್ಟು ಪ್ರಾಂತಕ್ಕೆ ಆದರ್ಶವಾಗಬೇಕು. ದೇವರಿಲ್ಲದಿದ್ದರೆ ಜೀವನವೇ ಇಲ್ಲ. ದೇವಸ್ಥಾನವು ಎಲ್ಲರಿಗೂ ತೆರೆಯಲ್ಪಡದಿದ್ದಲ್ಲಿ ದೇಶದಲ್ಲಿ ಐಕ್ಯತೆ ಉಳಿಯಲಾರದು. ಶ್ರೀರಂಗವೇ ಮೊದಲಾಗಿ ಹರಿಜನರಿಗೆ ತೆರೆಯಲ್ಪಟ್ಟಲ್ಲಿ ಎಲ್ಲಾ ಭಿನ್ನತೆಯನ್ನು ಶ್ರೀರಂಗದಂತಹ ದೇವಾಲಯದಿಂದ ಆರಂಭಿಸಿ ಇಡೀ ದೇಶದಲ್ಲಿಯೇ ಮಾಯವಾಗುವುದು" ಹೀಗೆಂದು ತಿರುಚಿನಾಪಳ್ಳಿಯಲ್ಲಿ ರಾಜಾಜಿಯವರ ಭಾಷಣವಿತ್ತರು.

ಡಾ| ಟಿ. ಎಸ್. ಎಸ್. ರಾಜನ್
(ಮದ್ಯಪಾನ ನಿಷೇಧದ ಕುರಿತು)

"ಶಾಸಕ ತನದಿಂದ ಸರಕಾರವು ಆದಾಯ ಪಡೆಯುವುದು ಬಹಳ ಸುಲಭವಾದ ಕೆಲಸ, ಯಾಕೆಂದರೆ ಕುಡುಕರು ಕುಡಿದ ಬುದ್ಧಿ ಸಮಯಲ್ಲದವರಾದಾಗ ದುಡ್ಡು ಕೊಡುತ್ತಾರೆ. ಆ ಅಗಾಲೇ ಅವರನ್ನು ಮತ್ತಷ್ಟು ಕುಡಿಸುತ್ತದೆ. ಆದರೆ ಕಾಂಗ್ರೆಸಿನ ಕಾರ್ಯವು ನೀತಿಯ ನೆಲೆಯಲ್ಲಿ ನಿಂತಿದೆ. ಹೀಗೆ ಕಡಿಮೆ ತನದ ಆದಾಯವು ನ್ಯಾಯವಲ್ಲವೆಂದೂ, ಬಹಾರಿಗೆ ನಿಜವಾಗಿ ತೆರಿಗೆ ಕೊಟ್ಟು ಸರಕಾರದೊಡನೆ ಸಹಕರಿಸಲು ಸಾಧ್ಯವಿದೆಯೋ ಅಂತಹವರಿಗೆ ಮಾತ್ರ ತೆರಿಗೆ ಹೊರಿಸಲಾಗಿದೆ' ಹೀಗೆಂದು ಡಾ| ರಾಜನ್ನರವರು ತಿರುಚಿನಾಪಳ್ಳಿಯಲ್ಲಿ ಭಾಷಣ ಮಾಡಿದರು.

ಮಾನ್ಯ ಶ್ರೀ| ಗೋಪಾಲ ರೆಡ್ಡಿ
(ಕಾಂಗ್ರೆಸು ಅಧಿಕಾರ ಸ್ವೀಕಾರದ ಕುರಿತು)

"ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡಿ ಚುನಾವಣೆಗೆ ನಿಂತಿದ್ದು, ಈ ದೇಶದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಹೊಡೆದಟ್ಟುವ ಉದ್ದೇಶದಿಂದ ಮಾತ್ರವಲ್ಲ, ಅದು ಮಾಡತಕ್ಕ ಕೆಲಸಗಳು ಇನ್ನೂ ಅನೇಕ ಇವೆ. ಮೊದಲನೆಯದಾಗಿ ನಮ್ಮ ರಾಷ್ಟ್ರದ ಬಡತನವನ್ನು ನೀಗಲಾಡಿಸಬೇಕು, ಇಲ್ಲಿನ ನಿರಕ್ಷರತೆಯನ್ನು ಸಂಪೂರ್ಣ ಹೊಡೆದೋಡಿಸಬೇಕು, ಇಲ್ಲಿನ ಜನರ ಅನಾರೋಗ್ಯ ಜೀವನವನ್ನು ಸುಧಾರಿಸಬೇಕು. ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕು. ಹೀಗೆ ಇಡೀ ದೇಶದಲ್ಲಿ ಹೊಸ ಜೀವನವನ್ನು ತುಂಬಿಸುವ ಸಲುವಾಗಿ ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡಿದೆ' ಹೀಗೆಂದು ಗುಂಟೂರಿನಲ್ಲಿ ಜವಾಹಿರಲಾಲ ನೆಹರು ಪಾರ್ಕನ್ನು ಉದ್ಘಾಟನೆ ಮಾಡುವ ಸಂದರ್ಭದಲ್ಲಿ ಮಾನ್ಯ ಶ್ರೀ ಗೋಪಾಲ ರೆಡ್ಡಿಯವರು ಭಾಷಣವಿತ್ತರು.

ಶ್ರೀ ಗೋಪಾಲ ರೆಡ್ಡಿಯವರು ಕರ್ನೂಲಿನಲ್ಲಿ ಭಾರತ ಸೇವಾಸಂಘವನ್ನು ಉದ್ಘಾಟನೆ ಮಾಡಿ ಹರಿತ ಲಲಿತಕಲಾ ಸಂಪದವನ್ನು ಸಂದರ್ಶಿಸಿ ಭಾರತದ ಲಲಿತಕಲೆಯ ಅಭಿವೃದ್ಧಿಯ ಕುರಿತು ಉಪನ್ಯಾಸವಿತ್ತರು. ಶ್ರೀ ರೆಡ್ಡಿಯವರು ಸುದ್ದಾಲಿನ ವಿದ್ಯಾರ್ಥಿಗಳಿಗೆ ಭಾಷಣವಾಡುತ್ತಾ "ಮುಂದಿನ ದೇಶದ ಸಂಗ್ರಾಮದಲ್ಲಿ ಇಂತಹ ಸಿದ್ಧಸಿಪಾಯಿಗಳ ಅಗ್ರಸ್ಥಾನವನ್ನು ಪಡೆಯಬೇಕೆಂದೂ ಮಹಾತ್ಮಾ ಗಾಂಧಿಯರ ಧುರೀಣತೆಯಲ್ಲಿ ವಿಶ್ವಾಸವಿಡಬೇಕೆಂದೂ ಹೇಳಿದರು.

ಡಾ| ಸುಬ್ಬರಾಯನ್
(ಪೆಡರೇಶನಿನ ಕುರಿತು)

'ಕಾಂಗ್ರೆಸು ಅಧಿಕಾರ ಸ್ವೀಕಾರ ಮಾಡಿದೊಡನೆ ಸ್ವರಾಜ್ಯ ಬರಲಿಲ್ಲ. ನಮ್ಮ ಯುದ್ಧವು ಪೆಡರೇಶನಿನ ಸಂದರ್ಭದಲ್ಲಿ ತಿರುಗಿ ಆರಂಭಿಸಬೇಕಾಗಿರುತ್ತದೆ. ನಮ್ಮ ಸಮರವು ಯಾವ ರೀತಿಯಲ್ಲಿ ನಡೆಯಬೇಕೆಂಬುದನ್ನು ನಾವು ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ವಿಚಾರಿಸಿ ಆಲೋಚಿಸಬೇಕು. ಸಂಸ್ಥಾನದಲ್ಲಿ ಕಾಂಗ್ರೆಸು ಮಂತ್ರಿಮಂಡಲವು ಇದೀ ಮದ್ಯಪಾನ ನಿಷೇಧವನ್ನು ಮಾಡಲಿದೆ, ಆದರೆ ಎಲ್ಲರೂ ಸಾವಧಾನದಿಂದಲೂ ಜಾಗ್ರತೆಯಿಂದಲೂ ಸಿದ್ಧತೆ ಮಾಡುತ್ತಿರಬೇಕು" ಹೀಗೆಂದು ಮಾನ್ಯಮಂತ್ರಿ ಡಾ| ಸುಬ್ಬರಾಯನರವರು ತ್ಯಾಗದುರ್ಗಾ ರಾಜಕೀಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಹೇಳಿದರು.



ಮಾನ್ಯ ಯಾಕೂಬ್ ಹಸನ್
(ತುಂಗಭದ್ರಾ ಅಣೆಕಟ್ಟಿನ ಕುರಿತು)

ತುಂಗಭದ್ರಾ ಅಣೆಕಟ್ಟಿನ ಕುರಿತು ಮಾನ್ಯ ಮಂತ್ರಿ ಯಾಕೂಬ್ ಹಸನರಿಗೆ ಬಳ್ಳಾರಿಯ ಸಭೆಯಲ್ಲಿ ಅನೇಕ ಪ್ರಶ್ನೆಗಳು ಕೇಳಲಾಯಿತು. ರಾಯಲಸೀಮೆಯ ವರ್ಷಂಪ್ರತಿಯ ಕ್ಷಾಮಕ್ಕೆ ಏಕಮಾತ್ರ ಪರಿಹಾರ ಉಪಾಯವಾಗಿರುವ ಈ ಅಣೆಕಟ್ಟಿನ ವಿಷಯದಲ್ಲಿ, ರಾಯಲಸೀಮೆಯಲ್ಲಿ ನಿವಾಸಿಗಳೇ ಆಗಿದ್ದ ಮಾನ್ಯ ಯಾಕೂಬ್ ಹಸನ್‌ರವರು ಬಹಳ ಮನಸ್ಸು ಮಾಡುವರಾಗಿ ಜನತೆಯು ಆಶಾಜನಕವಾಗಿತ್ತು. ಅವರಿಗೆ ಮಂತ್ರಿಗಳು ಈ ರೀತಿಯಲ್ಲಿ ಸಮಾಧಾನವಿತ್ತರು.

"ಹೈದರಾಬಾದು ಸರಕಾರವು ಮದ್ರಾಸು ಸರಕಾರದೊಡನೆ ಈ ಅಣೆಕಟ್ಟಿನ ವಿಷಯದಲ್ಲಿ ನೆರವಾಗುತ್ತದೆ. ಆ ವಿಷಯ ಮಾಗಿ ಸಂಪೂರ್ಣ ಇತ್ಯರ್ಥವಾಗಿಲ್ಲವಾದರೂ ನಿಜಾಮ ಸರಕಾರವು ೪೦ ಲಕ್ಷ ರೂಪಾಯಿ ಸಂಕ್ಷನ್ ಮಾಡಿದೆಯೆಂದು ತಿಳಿಯುತ್ತದೆ. ಮದ್ರಾಸು ಸರಕಾರವೂ ರೂಪಾಯಿ ೫೦ ಲಕ್ಷವನ್ನು ಸಂಕ್ಷನು ಮಾಡಿದೆ. ಆದರೆ ಇಲ್ಲಿ ಕೇವಲ ಹಣದ್ದೇ ವಿಷಯವಲ್ಲ. ಇಲ್ಲಿನ ಕೆಲಸದ ಅಭಿವೃದ್ಧಿಯ ಕುರಿತು ಸರಕಾರವು ತೀವ್ರ ವಿಚಾರದಲ್ಲಿದೆ. ನಾನೂ ನನ್ನ ಅಧಿಕಾರದಲ್ಲಿ ಈ ಅಣೆಕಟ್ಟನ್ನು ಕೊನೆಗಾಣಿಸಲು ಆಗ್ರಹವುಳ್ಳವನಾಗಿದ್ದೇನೆ. ಬರುವ ಹದಿನೆಂಟು ತಿಂಗಳೊಳಗೆ ಖಂಡಿತವಾಗಿಯೂ ಈ ಅಣೆಕಟ್ಟು ಪೂರ್ಣವಾಗುವುದು."

ಕಾಂಗ್ರೆಸು ಪ್ರಧಾನಮಂತ್ರಿಗಳ ಸಮ್ಮೇಳನ

ಮೊಂಬಾಯಿಯಲ್ಲಿ ಶ್ರೀ ಭೂಲಾಭಾಯಿ ದೇಸಾಯಿಯವರ ಭವನದಲ್ಲಿ ಏಳು ಪ್ರಾಂತಗಳ ಕಾಂಗ್ರೆಸು ಪ್ರಧಾನ ಮಂತ್ರಿಗಳು ಸರದಾರ ಪಟೇಲರ ಅಧ್ಯಕ್ಷತೆಯಿಂದ ಸಭೆ ಸೇರಿದರು. ಆ ಸಭೆಯಲ್ಲಿ ಕಾಂಗ್ರೆಸಿನ ಹಿತದೃಷ್ಟಿಯಿಂದ ಎಲ್ಲಾ ಪ್ರಾಂತಗಳ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಚರ್ಚೆ ನಡೆಯಿತು.

ಆ ದಿನದ ಸಭೆಗೆ ರಾಷ್ಟ್ರಪತಿಗಳೂ, ಶ್ರೀ. ಕೃಪಾಲಾನಿಯವರೂ, ಪಂಡಿತ ನೆಹರುಗಳೂ ಅಲ್ಲದೆ ಕೆಲವು ಕಾಂಗ್ರೆಸು ವರ್ಕಿಂಗ್ ಕಮಿಟಿಯ ಸದಸ್ಯರೂ ಆಹ್ವಾನಿತರಾಗಿದ್ದರು.

ಹಿಚ್ಚಿನ ಸಮಯವು ಆಯಾಯ ಪ್ರಾಂತಗಳಲ್ಲಿ ಆಗುವ ಜಾತೀಯ ಜಗಳದ ಸಮಸ್ಯೆಯ ಪರಿಹಾರದ ವಿಚಾರ ಚರ್ಚೆಯಲ್ಲಿಯೇ ಕಳೆಯಿತು. ಅಲ್ಲಲ್ಲಿ ಆಗುತ್ತಿರುವ ಜಾತೀಯ ಸಂಘರ್ಷಣೆಗಳನ್ನು ತಡೆಯುವುದಕ್ಕೆ ತಾವು ಕೈಕೊಂಡ ಧೋರಣೆಗಳನ್ನು ಪ್ರಧಾನ ಮಂತ್ರಿಗಳು ವಿವರಿಸಿದರು.

ಸರದಾರ ಪಟೇಲರು ಎಲ್ಲಾ ಪ್ರಾಂತಗಳಲ್ಲಿ ಕಾಂಗ್ರೆಸು ಮಂತ್ರಿಮಂಡಲವು ಮಾಡಿದ ಕಾರ್ಯ ಹಾಗೂ ಅವರು ಇದಿರಿಸಿದ ಸಂಕಷ್ಟಗಳ ಕುರಿತು ಮಾತನಾಡಿದರಾಗಿ ತಿಳಿಯುತ್ತದೆ.

ಕಾಂಗ್ರೆಸು ಮಂತ್ರಿಮಂಡಲದ ವಿರೋಧಿಗಳು ಕಾಂಗ್ರೆಸಿಗೆ ಕೆಟ್ಟ ಹೆಸರು ತರಲು ಯತ್ನ ಮಾಡುತ್ತಿರುವಾಗ ಹೆಚ್ಚು ಪರಿಣಾಮಕಾರಿಯಾದ ಕಾರ್ಯಗಳನ್ನು ಕಾಂಗ್ರೆಸು ಮಂತ್ರಿಮಂಡಲವು ಕೈಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ಮುಸಲೋನಿಯನ್ನು ಕುಣಿಸುವ ಇಂದ್ರಜಾಲಿಕರಾರು?

ಇಟಲಿಯ ಸರ್ವಾಧಿಕಾರಿಯ ಆಂತರ್ಯ ಜೀವನ

ಎದುರಿನ್ನು ಎದುರಿಸಿದ್ದ, ಬಾಸಿಗೆ ಬಾಯ್ಬುಟ್ಟು ಅರ್ಭಟಿಸುವ ಬಲಭೀಮ ಮುಸಲೋನಿಯ ಜೀವನದ ಬಾಹ್ಯ ಜಗತ್ತಿಗೆ ಎಷ್ಟು ಭಯಂಕರವೋ ಅಂತರ್ಯದಲ್ಲಿ ಅಷ್ಟೇ ಸೌಮ್ಯನಾಗಿರುವುದೆಂದು ಇಟಲಿಯ ಪತ್ರಿಕಾ ಪ್ರತಿನಿಧಿಗಳು ಬರೆಯುತ್ತಾರೆ. ಮುಸಲೋನಿಯು ಮೊದಲು ಪತ್ರಿಕೋದ್ಯೋಗಿಯಾಗಿದ್ದ; ಹಾಗಾಗಿ ತಾನು ಎಷ್ಟೇ ರಾಜಕೀಯ ಗುಪ್ತ ತಂತ್ರಗಳ ಗೊಂದಲದಲ್ಲಿರಲಿ, ತಾನು ಎಷ್ಟೇ ಕಠಿಣನಾಗಿರಲಿ, ತನ್ನ ಸಹೋದ್ಯೋಗಿಗಳಾದ ಪತ್ರಿಕಾ ಪ್ರತಿನಿಧಿಗಳ ಬಗ್ಗೆ ಆತನಿಗೆ ಆದರ ಬಹಳವಿರುತ್ತದೆ. ಅವರನ್ನು ಕರೆದು ಆತನ ನಯ ನುಡಿಗಳಿಂದ ಮಾತನಾಡುತ್ತಾನೆ. ತನ್ನ ರಾಜಕೀಯ ಆಟದ ವೇಷವನ್ನು ಬಿಚ್ಚಿದ ಅವನು ಸಾಧಾ ಮನುಷ್ಯನಂತೆ ಬಂದು ಪತ್ರಿಕಾ ಪ್ರತಿನಿಧಿಗಳೊಡನೆ ಅನೇಕ ವಿಷಯಗಳನ್ನು ಚರ್ಚಿಸುತ್ತಾನೆ. ರಾಜಕೀಯ ವಿನಯದ ಕುತೂಹಲದಿಂದ ಅವರೊಡನೆ ಅನೇಕ ವಿಷಯಗಳ ಅನುಭವವನ್ನು ಪಡೆಯುತ್ತಾನೆ. ಎಲ್ಲಿಯಾದರೂ ತನ್ನ ಕಾರ್ಯಧೋರಣೆಯ ಕುರಿತು ಮಾತುಬಂದರೆ ಅವನು ಬಗ್ಗೆ ಮಾತನಾಡುತ್ತಿದ್ದರೂ ಎದೆಯು ಮುಂದೆ ಬಂದು ಬಾಸಿಗೆ ಬಾಯಿ ತಿರುಗುವುದು. ಈ ನಟನೆ ಆತನ ಜೀವನದಲ್ಲಿ ಬೆರೆತುಹೋಗಿದೆ. ರಾಜಕೀಯದ ಆಟದಲ್ಲಿ ಇಂತಹ ಮಹಾವ್ಯಕ್ತಿತ್ವ, ಇಂತಹ ಅಭಿನಯಗಳು ಆತನು ಕಲಿತ ವಿದ್ಯೆಯಾಗಿವೆ. ಇಂದು ಮುಸಲೋನಿಯು ಪ್ರಾಯದಲ್ಲಿ ಶಿಖರ ಗಡಿ ದಾಟಿದ್ದಾನೆ. ಈ ವಿಷಯ ಆತನ ಗಮನಕ್ಕೆ ಬಂದಾಗ ಬಹಳ ಗೊಂದಲದಲ್ಲಿ ಬೀಳುತ್ತಾನೆ. ಯಾರಾದರೂ ಆತನನ್ನು ಪ್ರಾಯಕೇಳಿದರಾದರೆ ಆತನು ಸಿಟ್ಟುಗೊಂಡಂತೆ ಉತ್ತರ ಕೊಡುತ್ತಾನೆ. ಹಾಗಾಗಿ ಅವನೆದುರು ಆ ವಿಷಯ ಮಾತನಾಡುವ ಧೈರ್ಯಶಾಲಿಗಳೇ ಕಡಿಮೆ. ತನ್ನ ಇಂದಿನ ಉಗ್ರಧೋರಣೆ, ತಾನು ಸರ್ವಾಧಿಕಾರವನ್ನು ಪಡೆದ ಸಾಹಸ ಜೀವನ ಅದನ್ನು ಇನ್ನೂ ಮುಂದುವರಿಸಿ ಜೀವನವನ್ನು ನಿರಂತರ ಅದೇ ಮಟ್ಟದಲ್ಲಿ ಇಡಬೇಕೆಂದು ಆತನೇನೋ ಕನಸು ಕಾಣುತ್ತಿದ್ದಾನೆ! ಆದರೆ ಇತ್ತೀಚೆಗೆ ಪ್ರಾಯವು ಹೆಚ್ಚಿದ್ದರಿಂದಲೋ ಏನೋ ಆತನ ವ್ಯಕ್ತಿತ್ವದಲ್ಲಿ ಬಹುಬದಲಾವಣೆಗಳಾಗಿವೆ. ಆತನಲ್ಲಿ ಹಲವರಿಗೆ ಈಗೀಗ ವಿಶ್ವಾಸವೂ ಕಡಿಮೆಯಾಗಿವೆ. ಮತ್ತು ಆತನನ್ನು ದ್ವೇಷಿಸುವವರೂ ಬೆಳೆದಿದ್ದಾರೆ. ಹೀಗಾಗಿ ಇಂದು ಅವನು ಹಿಂದಿನಂತೆ ಜನರನ್ನು ತನ್ನ ಹಿಂದೆ ಎಳೆದುಕೊಂಡು ಹೋಗುವುದನ್ನು ಬಿಟ್ಟು ಜನಸಂಪರ್ಕದಿಂದ ದೂರವಾಗಿ, ಏನೋ ಬೇರೆ ವಿಧದ ಜೀವನದಲ್ಲಿ ಇದ್ದಂತೆ ಕಾಣುತ್ತಾನೆ.

ಮುಸಲೋನಿಯ ಆಂತರ್ಯ

"ಮುಸಲೋನಿಯ ಪತ್ನಿಯು ಆತನ ಈ ಭಯಂಕರ ರಾಜಕೀಯದಿಂದ ಎಂದೆಂದೂ ಬಹಳ ದೂರವಾಗಿರುವುದು ಜಗತ್ತಿಗೇ ಗೊತ್ತಿದೆ. ಆದರೆ ಆತನ ಸೆಕ್ರೆಟರಿ ಮತ್ತು ಆತ್ಮಚರಿತ್ರಕಾರನು ಹೇಳುವಂತೆ ಮುಸಲೋನಿಯು ಜೀವನದಲ್ಲಿ ಸಹೋದ್ಯೋಗಿಯಾಗಿ ಸಹಾಯ ಮಾಡಬಲ್ಲ ಹೆಂಗುಸನ್ನು ಧರ್ಮಪತ್ನಿಯಾಗಿ ಮಾಡಿಕೊಳ್ಳುವ ವಿಷಯದಲ್ಲಿ ಭಿನ್ನಾಭಿಪ್ರಾಯದವನಾಗಿಲ್ಲ; ಆತನ ಮಗಳಾದ ಎಡ್ಡಾಳು ಆತನಿಗೆ ರಾಜಕೀಯ ವಿಷಯಗಳಲ್ಲಿ ಸದಾ ಸಹಾಯಕಳಾಗಿದ್ದಾಳೆ. ಆಕೆಯ ಹಿತಬೋಧನೆಯಲ್ಲಿ ಆತನು ಅನೇಕ ಸಂಕಟಗಳಿಗೆ ಪರಿಹಾರೋಪಾಯವನ್ನು ಕಂಡುಕೊಳ್ಳುತ್ತಾನೆಂದು ಅನೇಕರು ಹೇಳುತ್ತಾರೆ. ಆಕೆಯು ಮುಸಲೋನಿಗೆ ಹಿತಸೂಚನೆ ಕೊಡುವುದು ಮಾತ್ರವೇ ಅಲ್ಲ, ತನ್ನ ಅಭಿಪ್ರಾಯವನ್ನು ಆತನಲ್ಲಿ ನಡೆಸಿಯೂ ಬಿಡುತ್ತಾಳೆ; ತಾನು ಹೇಳಿದಂತೆ ಆತನನ್ನು ಕೇಳಿಸುತ್ತಾಳೆ.

ಸುತ್ತಲೂ ಶತ್ರುಗಳು

ಇಂದು ಮುಸಲೋನಿಯು ಆತನ ಹಿಂದಿನ ಅನೇಕ ಗೆಳೆಯರನ್ನು ಬಿಟ್ಟು ಏಕಾಂಗಿಯಾಗಿ ಕೆಲಸಮಾಡುತ್ತಿದ್ದಾನೆ. ಯಾರು ಆತನನ್ನು ಈ ಉನ್ನತ ಸ್ಥಾನಕ್ಕೆ ಏರಿಸುವ ಸಲುವಾಗಿ ಹಗಲಿರುಳು ದುಡಿದರೋ, ಅಂತಹ ಜೀವದ ಗೆಳೆಯರೊಡನೆಯೂ ಆತನು ಕೂಡಿ ನಡೆಯುವುದಿಲ್ಲವೆಂದರೇನು? ಇಂದು ಎಲ್ಲಾ ಕಡೆಗಳಲ್ಲಿಯೂ ಆತನಿಗೆ ವೈರಿಗಳು ಹೆಚ್ಚಿದ್ದಾರೆ. ಆ ಸ್ಥಾನದಲ್ಲಿ, ದೇವಾಲಯದಲ್ಲಿ, ಪರದೇಶದಲ್ಲಿ, ಸಂಪೂರ್ಣ ಜಗತ್ತಿನಲ್ಲಿಯೇ ಆತನ ವೈರಿಗಳು ತುಂಬಿರುತ್ತಾರೆ.

ಆದರೂ ಇಂದು ಆತನು ಬಲಕುಂದಲಿಲ್ಲ. ಪ್ರಸಿದ್ಧರಾದ ಬಹಳ ವೀರರು, ಪ್ರಧಾನ ರಾಜಕಾರಣಸಮರ್ಥರು ಆತನ ಅಂಕೆಯಲ್ಲಿದ್ದಾರೆ; ಆತನಿಗೆ ಸಹಾಯಕರಾಗಿದ್ದಾರೆ. ಆದರೂ ಆತನು ಇಂದು ಬೇಸರಗೊಂಡಂತಿದ್ದಾನೆ.

ಮುಸಲೋನಿಯ ಮೇಲೆ ಅಧಿಕಾರ

"ಮುಸಲೋನಿಯ ಮಗಳು ಮಾತ್ರ ಆತನನ್ನು ಬೇಕಾದಂತೆ ಕುಣಿಸುವುದಲ್ಲ; ಆತನ ಮಗಳ ಗಂಡ ಕೌಂಟ್ ಸಿಯಾನೋ ಕೂಡಾ ಮುಸಲೋನಿಯಲ್ಲಿ ಬಹಳವಾಗಿ ತನ್ನ ವ್ಯಕ್ತಿತ್ವವನ್ನು ನಡೆಸುತ್ತಾನೆ. ಮುಸಲೋನಿಯ ಅನಂತರ ಆತನೇ ಇಟಲಿಯ ಸರ್ವಾಧಿಕಾರಿಯಾಗಬಹುದೆಂದು ಜನರು ಅಭಿಪ್ರಾಯ ಪಡುತ್ತಾರೆ. ಮುಸಲೋನಿಯ ಮಗಳು ಜರ್ಮನಿಯೊಡನೆ ಬಹಳ ಸಂಬಂಧವನ್ನು ಇಟ್ಟುಕೊಂಡಿದ್ದಾಳೆ. ಇಟಲಿಯು ಜನಾಂಗಸಂಘದಿಂದ ಬೇರಾಗುವ ಸಲುವಾಗಿಯೂ, ಜರ್ಮನಿ ಮತ್ತು ಇಟಲಿಗಳ ಬಾಂಧವ್ಯ ಬಲಗೊಳ್ಳುವ ಸಲುವಾಗಿಯೂ ಆಕೆ ಬಹಳ ಯತ್ನಿಸಿದ್ದಾಳೆ. ಆಕೆ ಹಿಟ್ಲರನನ್ನು ಬಹಳವಾಗಿ ಪ್ರಶಂಸಿಸುತ್ತಾಳೆ. ಜನರಲ್ ಗೋರಿಂಗನನ್ನು ಕಂಡರೆ ಆಕೆಗೆ ಅತ್ಯಂತ ಅಭಿಮಾನ. ಮುಸಲೋನಿಯು ಈ ಪ್ರೇರಣೆಯಿಲ್ಲದೆ ತನ್ನ ವಿದೇಶಧೋರಣೆಯನ್ನು ಇಷ್ಟು ಜೋರಾಗಿ ಜರ್ಮನಿಯೊಡನೆ ಏಕತೆಯಾಗಿ ಮಾಡುತ್ತಿರಲಿಲ್ಲ; ಅಂತೂ ದಿನದಿಂದ ದಿನಕ್ಕೆ ಮುಸಲೋನಿಯ ಮನಸ್ಸಿನಲ್ಲಿ ಬಹಳ ಬದಲಾವಣೆಗಳಾಗುತ್ತಿವೆಯೆಂದು ತಿಳಿಯುತ್ತದೆ.

ಈಜಿಪ್ತಿನ ಅರಸ ಫರೂಕರು ಮುಸ್ಲಿಮರ 'ಜಗದ್ಗುರು'ವಾಗುವರೇ?

'ಖಲೀಫ್' ಬಿರುದಿನ ಇತಿಹಾಸ

★ ಪೋಪ್ ಪದವಿಯೂ ಖಲೀಫ ಪದವಿಯೂ ಸಮಾನವೇ?

★ ಮುಂದಿನ ಖಲೀಫಗಿರಿಯ ಸಿದ್ಧತೆ

ಕೈರೋದಲ್ಲಿರುವ ಮಸೀದಿಯಲ್ಲಿ ಈಜಿಪ್ತಿನ ಅರಸರಾದ ಫರೂಕರವರು ಪ್ರಾರ್ಥನೆಯನ್ನು ನಡೆಸಿದ ಅನಂತರ, ಅವರು "ಖಲೀಫ" ಸ್ಥಾನವನ್ನು ಪಡೆಯುವರೆಂಬ ಮಾತು ಜನಜನಿತವಾಗಿದೆ. 'ಖಲೀಫ'ನೆಂದರೆ ಮುಸಲ್ಮಾನರ ಪ್ರಧಾನ ಧಾರ್ಮಿಕ ಪುರುಷನೆಂದರ್ಥ. ಕ್ರಿಶ್ಚಿಯನ್ನರಿಗೆ ಪೋಪರಿದ್ದಂತೆ.

ಟರ್ಕಿ ೧೯೨೪ರಿಂದ ಖಲೀಫನೆಂಬ ಹೆಸರನ್ನ ಪ್ರಪಂಚದ ದಾಖಲೆಯಿಂದ ತೆಗೆದುಹಾಕಿದೆ. ೨೫೦,೦೦೦,೦೦೦ ಮಂದಿ ಮಹಮ್ಮದೀಯರಿಗೆ ಪ್ರಸಿದ್ಧನಾದ ಒಬ್ಬ ಪ್ರಧಾನ ಧಾರ್ಮಿಕ ಪುರುಷನೆಂಬವನು ಈಗ ಯಾರೂ ಇಲ್ಲ.

ಒಮ್ಮೆ ಮಹಮ್ಮದ ಪೈಗಂಬರರ ಸಂತತಿಯವರಿಂದು ಆಗಾಖಾನರನ್ನು ಆ ಸ್ಥಾನಕ್ಕೆ ಏರಿಸುವ ಆಲೋಚನೆಯಿತ್ತು. ಅಷ್ಟರಲ್ಲಿ ಇಟಲಿಯ ಸರ್ವಾಧಿಕಾರಿ ಮುಸಲೋನಿಯು ತಾನೆ "ಇಸ್ಲಾಂ ರಕ್ಷಕ"ನೆಂದು ಹೇಳತೊಡಗಿದನು.

ಈಜಿಪ್ತು ಇಂದು ಸಾಮ್ರಾಜ್ಯ ಪದವಿಯನ್ನು ಪಡೆದಿರುವ ಕಾರಣ, ಅದರ ಅರಸರು 'ಖಲೀಫ' ಬಿರುದನ್ನು ಪಡೆಯಬೇಕಾಗಿ ಪ್ರಚಾರವು ಆಗಿದೆ.

ಈ 'ಖಲೀಫ' ಬಿರುದಿನ ಇತಿಹಾಸವನ್ನು ಚರಿತ್ರೆಯಲ್ಲಿ ೧೩೧೦ ವರ್ಷಗಳ ಹಿಂದಿನದ್ದಾಗಿ ಕಾಣಬಹುದು. ಅಬ್ದುಲ್ಲನ ಮಗನಾದ ಪೈಗಂಬರನೆಂಬವನು ಮೊದಲು ಮರುಭೂ ಪ್ರದೇಶದಲ್ಲಿ ವ್ಯಾಪಾರ ಮಾಡುತ್ತಿದ್ದವನು, ಮಕ್ಕಾದಲ್ಲಿ ಒಂದು ಅಂಗಡಿಯ ಸಾಹುಕಾರನಾಗಿದ್ದವನು; ಕಟ್ಟಕಡೆಗೆ ಒಂದು ದಿನ ಎಲ್ಲರೂ ಆಶ್ಚರ್ಯಗೊಳ್ಳುವಂತೆ ತಾನೇ ದೇವದೂತನೆಂದು ಸಾರಿದನು. ಈ ಹೊಸ ಧರ್ಮ ಯೆಹೂದ್ಯ ಮತ್ತು ಕ್ರಿಶ್ಚಿಯನ್ ಧರ್ಮಗಳನ್ನು ಪರಾಜಯಗೊಳಿಸಿ, ಏಶ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ಪ್ರಬಲವಾಗಿ ಪ್ರಚಾರವಾಯಿತು. ತಾವು ಬರೆದ ಖುರಾನಿನ ಪವಿತ್ರ ಬೋಧನೆಯನ್ನು ಜಗತ್ತಿಗೆ ಬೋಧಿಸುತ್ತ ಮಹಮ್ಮದ್ ಪೈಗಂಬರರು ಧಾರ್ಮಿಕ ಗುರುಗಳಾದರು.

ಮಹಮ್ಮದ ಪೈಗಂಬರರು ತಾವಾಗಿಯೇ ತನಗೆ ಇಸ್ಲಾಮಾ ಎಂಬ ಹೆಸರನ್ನು ಇಟ್ಟುಕೊಂಡರು. ಆದರೆ ಆ ನೋಲಿನ ಅವರ ಅನುಯಾಯಿಗಳಾದ ಮುಖಂಡರು 'ಖಲೀಫ' ಎಂಬ ಹೆಸರನ್ನು ಇಟ್ಟುಕೊಂಡರು. 'ಖಲೀಫ'ನೆಂದರೆ ಆತನ ಹಿಂಬಾಲಕನೆಂಬರ್ಥ.

ಖಲೀಫನನ್ನು ಆರಿಸುವ ವಿಷಯದಲ್ಲಿ ಅನ್ಯೋನ್ಯ ಪಂಗಡಪಂಗಡಗಳೊಳಗೆ ರಕ್ತಗಳನ್ನು ಚೆಲ್ಲುವ ನಿರ್ದಯ ಹತ್ಯಾಕಾಂಡವೇ ನಡೆದದ್ದನ್ನು ನಾವು ಚರಿತ್ರೆಯಿಂದ ತಿಳಿಯಬಹುದು.

ಬಗ್ದಾದಿನಿಂದ, ಈಜಿಪ್ತಿನಿಂದ, ಕೈರೋದಿನಿಂದ ಹೀಗೆ ಖಲೀಫಸ್ಥಾನವು ಆಗಾಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಿತ್ತು. ತನ್ನ ವಂಶಪರಂಪರೆಯವನೇ ಖಲೀಫನಾಗಬೇಕೆಂದು ಶಾಸನ ಮಾಡಿಟ್ಟ ಮಹಮ್ಮದ ಪೈಗಂಬರರಿಗೇ ಈ ವಿಷಯವು ನಿಜವಾಗಿಯೂ ಹೃದಯದ್ರಾವಕವಾಗದಿರದು.

ಹೀಗೆ ಪೈಗಂಬರರ ವಂಶಸ್ಥರೇ ಆಗಿರಬೇಕಲ್ಲದೆ ಖಲೀಫರಾಗತಕ್ಕವರು ಇನ್ನೂ ಬೇರೆ ಆರು ಉತ್ತಮಗುಣಗಳುಳ್ಳವರಾಗಿರಬೇಕು. ಚೆನ್ನಾಗಿ ತಿಳಿದವನೂ ಆಳುವ ಸಮರ್ಥನೂ, ನ್ಯಾಯಶೀಲನೂ, ಪ್ರಾಯಸ್ಥನೂ ಮತ್ತು ಸ್ವತಂತ್ರನಾದವನೂ ಖಲೀಫನಾಗಲು ಯೋಗ್ಯನಾಗುವನು.

ಮೊದಲಿನ ಆರು ಮಂದಿ ಖಲೀಫರನ್ನು ಬಿಟ್ಟರೆ ಬಾಕಿಯವರಲ್ಲಿ ಯಾರಿಗೂ ಈ ಗುಣಗಳು ಇರಲಿಲ್ಲ. ಒಬ್ಬೊಬ್ಬ ಖಲೀಫರು ಯುದ್ಧಸಂದರ್ಭದಲ್ಲಿ ಸೈನ್ಯವನ್ನು ಮುನ್ನಡೆಸುತ್ತಲೂ ಇದ್ದರು.

ಖಲೀಫರಾದವರು ಪ್ರತಿ ಶುಕ್ರವಾರ ಸಾರ್ವಜನಿಕ ಪ್ರಾರ್ಥನೆಗಳನ್ನು ಮಾಡಬೇಕು. ಆ ಮೇಲೆ ವರ್ಷಕ್ಕೊಮ್ಮೆ ಮಕ್ಕಾಕ್ಕೆ ಯಾತ್ರೆ ಮಾಡಬೇಕು. ಮಹಮ್ಮದ ಪೈಗಂಬರರು ಹೇಳಿದಂತೆ ಪ್ರತಿಯೊಂದು ಧಾರ್ಮಿಕ ಕೆಲಸಗಳನ್ನೂ ಚಾಚೂತಪ್ಪದೆ ಮಾಡಬೇಕು.

ಈ ಖಲೀಫ ಪದವಿಯು ಟರ್ಕಿಯ ಸುಲ್ತಾನರಿಗೆ ಹೋದ ಮೇಲೆ ತನ್ನ ಖಲೀಫ ಬಿರುದಿನಿಂದ ಬಹಳವಾಗಿ ಲಾಭವನ್ನು ಪಡೆದರು. ಅವರು ಧಾರ್ಮಿಕ ದೃಷ್ಟಿಯಿಂದ ಪೋಪರಿಗೆ ಸಮಾನವಾದ ಅಧಿಕಾರವು ತನಗೂ ಬರಬೇಕೆಂದು ವಾದಿಸಿದರು. ಹೀಗಾಗಿ ತಾನು ನಿಜವಾಗಿ ಅರಸನಲ್ಲದಿರುವ ರಾಷ್ಟ್ರಗಳಲ್ಲಿಯೂ ಧರ್ಮದ ಹಿಡಿತದಿಂದ ಎಲ್ಲರನ್ನೂ ಅಂಕೆಗೆ ಒಳಗುಮಾಡುವ ಮನಸ್ಸು ಅವರದಾಗಿತ್ತು.

೧೯೧೪ರ ಮಹಾಯುದ್ಧದಲ್ಲಿ ಈ ವಿಷಯವಾಗಿ ಒದಗಿಬಂತು. ಟರ್ಕಿ ಮತ್ತು ಖಲೀಫರಿಗಾಗಿ ಇಡೀ ಪ್ರಪಂಚದ ಮುಸ್ಲಿಮರು ಹೋರಾಡಬೇಕಾಗಿ ಆಜ್ಞೆಯಿತ್ತರು. ಅದು ಬಹಳ ಮುಖ್ಯವಾದ ಆಜ್ಞೆಯಾಗಿದ್ದರೂ ಅವರ ಬೇಳೆಯು ಬೇಯಲಿಲ್ಲ. ಖಲೀಫರು ಕೇವಲ ಧಾರ್ಮಿಕ ಮುಖ್ಯರೆಂದೂ, ಪ್ರಜೆಗಳ ರಾಜನೀತಿಯಲ್ಲಿ ಅವರು ಕೈಹಾಕಬಾರದೆಂದೂ ಮುಸ್ಲಿಮರು ಹೇಳಿದರು.

ಮಹಾಯುದ್ಧದ ಅನಂತರ ಖಲೀಫ ಪದವಿಯೇ ಇಲ್ಲವಾಯಿತು. ಇಡೀ ಪ್ರಪಂಚದಲ್ಲಿ ತನ್ನ ಏಕಮಾತ್ರ ಪ್ರಧಾನ ಧಾರ್ಮಿಕ ಪುರುಷರು ಮುಸ್ಲಿಮರಿಗೆ ಆ ಮೇಲೆ ಇಲ್ಲ.

ಖಲೀಫ ಸ್ಥಾನಕ್ಕೆ ಸೂಚಿಸಿದ ಹಲವು ಹೆಸರುಗಳಲ್ಲಿ ಈಜಿಪ್ತಿನ ರಾಜ ಫರೂಕರ ಹೆಸರೇ ಬಹುಮತವಾಗಿ ಬಂದಿದೆ. ಅವರನ್ನು ಈ ಸ್ಥಾನಕ್ಕೆ ಆರಿಸುವುದರಲ್ಲಿ ಬ್ರಿಟನಿಗೂ ಇಷ್ಟವಿದೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಕ್ರಿಶ್ಚಿಯರಿಗಿಂತ ೨೦,೦೦,೦೦೦ಮಂದಿ ಮುಸ್ಲಿಮರು ಹೆಚ್ಚಿದ್ದಾರೆ.

ಬೇಕಾಗಿದ್ದಾರೆ ಏಜಂಟರು ಮತ್ತು ಗಿರಾಕಿಗಳು

ನಮ್ಮಲ್ಲಿ ಎಲ್ಲಾ ತರದ ಚರ್ಮದ ಸಾಮಾನುಗಳು ಯಾವಾಗಲೂ ಸ್ಟೋಕ್ ಇರುತ್ತದೆ.

ಮೆಟ್ಟು ಬೂಟ್ಸುಗಳಿಗೆ ಆಗತ್ಯವಿರುವ ಎಲ್ಲಾ ಸಾಮಾಗ್ರಿಗಳು ನಮ್ಮಲ್ಲಿ ದೊರಕುತ್ತದೆ

Allamgir Leather Store.
28 Meachua Bazar St., CALCUTTA

7 O'CLOCK
8 ಆಣೆಗೆ ಬ್ಲೇಡು 10
7 o'clock
SLOTTED BLADE

'ಕನ್ನಡಕೇಸರಿ' ಕುಂಜಾಲು ಕುಮಾರಯ್ಯ

ನಮ್ಮ ಊರಿನ ಉಗ್ರ ವ ಅತಿ ಉಗ್ರ ರಾಷ್ಟ್ರೀಯ ವಾರ ಪತ್ರಿಕೆಗಳಲ್ಲಿ ಕನ್ನಡ ಕೇಸರಿಯ ಹೆಸರರಿಯದವರಿಲ್ಲ. ಹಿಂದೂ ಮಹಾಸಭೆ, ರಾಷ್ಟ್ರೀಯ ಸಂಗ್ರಾಮ, ಸೋಶಿಯಲಿಸಮ್—ಮೊದಲಾದ ಯಾವತ್ತು ಚಳವಳಿಗಳಲ್ಲೂ ಸಮ ವಿಶ್ವಾಸದಿಂದ ಮುಂದುವರಿಯುತ್ತಿರುವುದು ಅವರ ಧೋರಣೆ. ರಾಷ್ಟ್ರೀಯ ಮಂಗಡದ ಮುಖಂಡರಲ್ಲೇ ವ್ಯತ್ಯಾಸ ಬಂದಾಗ, ಕಾಂಗ್ರೆಸ್ಸನ್ನೇ ದ್ವೇಷಿಸುವುದೂ, ತಮಗೆ ಸಮ ಕಂಡ ಮುಖಂಡರ ಸಮರ್ಥನೆಯನ್ನೆ ಮಾಡುವಾಗ "ಇವರಂಥ ಮುಖಂಡರು ಗೌಡ ಸಮಾಜದಲ್ಲೇ ಕಡಿಮೆ; ಇಷ್ಟು ತನಕ ನಮ್ಮ ಮಂಗಳೂರು ಮುನಿಸಿಪಾಲಿಟಿಯಲ್ಲಿ ಯಾರೂ ಗೌಡ ಜಾತಿಯವರಲ್ಲಿ ಚೆಯರ್‌ಮೇನ್ ಆದುದಿಲ್ಲ" ಎಂದು ಚಳವಳಿ ಹೂಡುವುದೂ ಅದರ ಕರ್ತೃತ್ವದ ನೀತಿ

ಮುಖ್ಯ ಮಂಗಳೂರಿನ ಯಶಸ್ವಿಯಾದ ಪತ್ರಿಕೆಗಳಲ್ಲಿ ಕನ್ನಡ ಕೇಸರಿ ಮೊದಲನೆಯದು ಮಂಗಳೂರಿನ ಬೀದಿಗಳಲ್ಲಿ ನೀವದನ್ನು ಕಾಣಲಾರಿರಾದರೂ, ಪ್ರತಿ ಮನೆಯಲ್ಲೂ ಅದು ವಾಸವಾಗಿದೆ. ಗಂಡಸರು ಅಧಿಕವಾಗಿ, ಅದರಲ್ಲೂ ಮನೆ ಮಡದಿಯರು ದೂರನಾಗಿರುವಾಗ, ಓದತಕ್ಕಂತಹ ಹಲವು ಸ್ವಾರಸ್ಯದ ವಿಷಯಗಳು ಅದರಲ್ಲಿರುವುದರಿಂದ ಆ ಪತ್ರಿಕೆಯು ಒಂದು ರೀತಿಯಿಂದ ಸಾಹಿತ್ಯ ಶರೀರಿಯಾದ ಉಪಪತ್ನಿಯೆಂದರೂ ಸರಿಯೇ ಇಂಥ ಅಮೂಲ್ಯ ವಾರ ಪತ್ರಿಕೆಯ ಸಂಪಾದಕರು ಶ್ರೀ| ಕುಮಾರಯ್ಯನವರು ಪತ್ರಿಕೆಯ ಮೂರ್ತಿಮತ್ ರೂಪವೇ ಅವರು ಅವರೇ ಪತ್ರಿಕೆಯೆಂದರೂ ಸಲ್ಲುವುದು ಶ್ರೀಯುತರು ಪತ್ರಿಕೆಯ ಮುದ್ರಕರ ಕೆಲಸವನ್ನು ಉಳಿದು, ಉಳಿದ ಎಲ್ಲ ವಿಭಾಗಗಳಲ್ಲೂ ನುರಿತವರು ಆದರೆ ಮುದ್ರಕರ ಗೋಳು ಅವರಿಗೆ ತಿಳಿಯದೆ ಇಲ್ಲ ಪ್ರತಿ ತಿಂಗಳಿಗೊಂದರಂತೆ ಅವರು ಒಂದೊಂದು ಛಾಪಖಾನೆಯವರೊಡನೆ ಕರಾರು ಮಾಡುವುದರಿಂದ ಅವರೇ ಅದರ ಮುದ್ರಕರೂ ಎನ್ನಬಹುದು

ಕುಮಾರಯ್ಯನ ರೂಪ, ಮಾತು, ವೇಷ ಎಲ್ಲವೂ ನೋಡುವಂಥವು ಮುಂಬಯಿಗೆ ಅವರು ಆಗಾಗ ಜಾಹೀರಾತಿನ ಸಂಗ್ರಹಕ್ಕಾಗಿ ಹೋಗುವುದುಂಟು. ಅಂಥ ಸಮಯಗಳಲ್ಲಿ ಬಂದರದಲ್ಲಿ ಲಾಂಚು ಏರುವಾಗಲೇ ದುಸ್ತು ಬದಲಾಯಿಸಿ ದಕ್ಷಿಣ ಆಫ್ರಿಕಕ್ಕೆ ಹೋಗುವಾಗ ಮಿ| ಪಾಸ್ಕಲ್ ಅಲ್ಬುಕರ್ಕರು ಉಡುವಂತೆ ವೇಷ ಧರಿಸುತ್ತಾರೆ ನಮ್ಮ ಊರಿನ ನುರಿತ ಉಪನ್ಯಾಸಕರಲ್ಲಿ ಅವರೊಬ್ಬರು (ಅವರಿಂಗ ನುರಿದು ನುಚ್ಚಾದವರೂ ಕಡಿಮೆಯಿಲ್ಲ) ಹಾಗಾಗಿ ಮೈದಾನುಗಳಲ್ಲಿ ಸೋಶಿಯಲಿಸಂ ಉಪನ್ಯಾಸಗಳನ್ನು ಮಾಡುವಾಗ ಖಾದಿ ಅಂಗಿ, ಮಲ್ ಇಜಾರ, ಕೆಂಪು ಟೋಪಿ ಧರಿಸುತ್ತಾರೆ ಕೆ. ಪಿ. ಸಿ. ಸಿ ಯೂ ಜಿಲ್ಲಾ ಕಾಂಗ್ರೆಸು ಕಮಿಟಿ ಮೀಟಿಂಗುಗಳಲ್ಲಿ ಶುದ್ಧ ಚೀನಾ ಸ್ವದೇಶೀ ರೇಶ್ಮೆ ಶರ್ಟನ್ನೂ, ಮಲ್ ಟೋಪಿಯೂ ತೊಡುತ್ತಾರೆ. ಹಾಗಾಗಿ ಈಗಿನ ಪುಸ್ತಕಗಳ ವಿಮರ್ಶೆಗಳಲ್ಲಿ ಸಮೀಕ್ಷಕರು ಹೇಳುವಂತೆ "ದಪ್ಪ ಕಾಗದ, ಮುದ್ದಾದ ಮುದ್ರಣ, ಒಪ್ಪುವ ಬೈಂಡ್" ಎನ್ನುವ ರೀತಿಯಲ್ಲಿದ್ದಾರೆ.

ಕುಮಾರಯ್ಯನವರಿಗೆ ತಮ್ಮ ವಿಷಯದಲ್ಲೇ ನವಶೋಧನೆಗಳು ಅಂದಿನಿಂದ ಇಂದಿಗೂ ಆಗುತ್ತ ಬಂದಿವೆ ಅದು ತಮ್ಮ ಯೋಗ್ಯತೆಯ ಮಟ್ಟಿನ ವಿಷಯ—ಪ್ರತಿಕ್ಷಣವೂ ತನ್ನ ಮೇಧಸ್ಸು, ವಿಚಾರಶಕ್ತಿ, ಕ್ರಾಂತಿಶಕ್ತಿ—ಇವುಗಳು ಹೇಗೆ ಅಪಾರವಾಗಿ ಬೆಳೆಯುತ್ತಿವೆ ಎಂಬುದರ ವಿಷಯದಲ್ಲಿ ಅವರೇ ಹೇಳಬಲ್ಲರು. ಅವರ ಪ್ರಶಂಸೆಯನ್ನೊ ದಿವಾನ್ ಬಹದೂರರವರ ಬಾಯಿಂದಲೇ ಕೇಳಬೇಕು. ಅದು ಜಾನಕಿ ರಾಮಚಂದ್ರಯ್ಯರು ಚುನಾವಣೆಯಲ್ಲಿ ನಿಂತು, ಸೋತು ಮಿ| ಪಟ್ಟಾಡರು ಮೇಲೆ ಬಂದ ಸಮಯದಲ್ಲಿ ಕುಮಾರಯ್ಯನವರು "ಆನಂದರಾಯರೇ, ಆ ದಿವಸ ನನ್ನೊಂದು ಉಪನ್ಯಾಸ

ನಗರದ ನವ ನಾಯಕರು

ಲೇಖಕ: ಶಿವರಾಮ ಕಾರಂತ.

ದಿಂದ ಸಾವಿರ ಓಟರರು ಕನಿಷ್ಠ (ಪಕ್ಷಕ್ಕೆ) ತಿರುಗಿದ್ದಾರೆ. ಅಲ್ಲದೆ ಮುಂಚಿನ ದಿವಸ ನನ್ನ ಅಗ್ರಲೇಖನ ನೋಡಿಕೊಂಡು ರಾಮಚಂದ್ರಯ್ಯ ಜೂರಿ ಹಾಕಿಕೊಳ್ಳಬೇಕಿತ್ತು" ಎಂದರೆ ದಿವಾನ ಬಹದೂರರು "ಕುಮಾರಯ್ಯ, ನಿಮ್ಮ ವಿಷಯ ನನಗೆ ತಿಳಿಯದೇ? ನಮ್ಮ ಸ್ವಗಳೇ ಗಾಂವದಲ್ಲಿ ದಿ ಓನ್ಲಿ ನ್ಯೂಸ್ ಪೇಪರ್ ವರ್ತ್ ದಿ ನೇಮ್ ಈಸ್ ನಿಮ್ಮದು" ಎನ್ನುತ್ತಾರೆ

ದಿಗಂಬರರಾಯರ ಅಭಿಮತವನ್ನು ನಾನು ಅನುಮೋದಿಸಬೇಕೆಂದಿಲ್ಲ. ಕಾರಣ—ಯಾರ ಪ್ರೀತಿ ನಮ್ಮ ಕನ್ನಡ ಕೇಸರಿಯ ಮೇಲಿದ್ದರೂ ನಾಣಿಯ ಒಲವು ಚೆನ್ನಾಗಿಲ್ಲ ಕಾರಾಮತಿಯವರೂ ಅವನೂ ಜತೆಯಲ್ಲಿ ಹರಟುತ್ತ ಕುಳಿತಿದ್ದರು ಆಗ ಬಂದಿತು ಇವರ ಸವಾರಿ—"ಮಿ| ನಾಣಿ, ಕಾರ್ ಒಂದು ಸಾರಿ ಹೊರಡಲಿ ಕಂಕನಾಡಿ ಆಸ್ಪತ್ರೆಯ ತನಕ ಹೋಗಬೇಕಿತ್ತು" ಅನ್ನುತ್ತಾನೆ. ನಾಣಿಗೆ ಈ ಬಿಟ್ಟಿ ಸವಾರಿನ ಮಾತು ಉದ್ರೇಕಿಸುತ್ತದೆ ಅವನು "ಇಲ್ಲ—ಅಮ್ಮ ಈಗ ಕದ್ರಿಗೆ ಹೊರಡುತ್ತಾರೆ ಕಂಕನಾಡಿಗೆ ನಾನು ಬರುವುದು ಹೇಗೆ? ಎಂದು ಗುಂಡು ಹಾರಿಸುತ್ತಾನೆ. ಅಷ್ಟೆಂದರೆ "ಅಮ್ಮ, ಈಗ ಕಳುಹಿಸಿ ಕೊಡುತ್ತೇನೆ ಬರುವಾಗ ನಾನು ಜಟ್ಕದಲ್ಲಿ ಬರುತ್ತೇನೆ ನಾಣಿ, ಹೊರಡು ಅಲ್ಲಿ ಒಂದು ಲೆಕ್ಚರು ನನ್ನದು ಇರಿಸಿದ್ದಾರೆ ಪೇಪರು ಪ್ರೂಫು ತಿದ್ದುವುದರಲ್ಲಿ ಆಯುಷ್ಯವೆಲ್ಲಾ ಹಾಳಾಯಿತು"—ಎಂದು ಸಲಾಮು ಮಾಡಿಯಾದರೂ ಕಾರ್ಯಸಾಧನೆ ಮಾಡಿಕೊಳ್ಳುತ್ತಾನೆ ಅಷ್ಟೆಲ್ಲ ಹೇಳುವಾಗ ಹಂಗರುಗಳಲ್ಲವೆ "ಮೋಸ್ಟ್ ರೀಮರೋ," ಎಂದು ಹುಕುಂ ಆಗುತ್ತದೆ ಆ ಬಳಿಕ ನಾಣಿಗೆ ಬಿಟ್ಟಿ ಕೊಡಗಿತು ಆದರೆ ದಿಗಂಬರರಾಯರ ಹತ್ತಿರ ಕಾರ್ ಕೇಳಿದುದೆಂಬ ದೇ ಇಲ್ಲ ಕನ್ನಡ ಕೇಸರಿಯಲ್ಲಿ ದಿಗಂಬರರಾಯರ "ತುಂಡು ಬಾಯಿ"ಯೇ ಕುಮಾರಯ್ಯ.

ಕುಮಾರಯ್ಯನ ಊರು ಕುಂಜಾಲು ಕುಂಜಾಲಿನಲ್ಲಿ ಹುಟ್ಟಿದರೂ ಹಿರಿಯರು ಬಡವರಾದುದರಿಂದ ವಿದ್ಯೆಗೆ ಊರಲ್ಲಿ ನಿಲ್ಲಲಿಲ್ಲ ಪೇಟೆಗೆ ಬಂದು—ಜಾತಿಯವರಲ್ಲಿ ಉಂಡು, ಎಲಿಮೆಂಟರಿ ಮುಗಿಸಿ, ಬಂಟ್ವಾಳದಲ್ಲಿ ಹಾಯರ್ ಎಲಿಮೆಂಟರಿ ಸಾಗಿಸಿ, ಆ ಬಳಿಕ ಮಂಗಳೂರಲ್ಲಿ ಫೋರ್ತ್ ಫಾರಂ—ಎರಡಾವರ್ತಿ ಬಟ್ಟಿ ಇಳಿಸಿದರು.

ಫೋರ್ತ್ ಫಾರ್ಮಿಗೆ ಬಂದಾಗಲೇ ತನ್ನ 'ಕನ್ನಡ ಕೈ' ಅವರಿಗೆ ಹೊಳೆವಿತ್ತು ಅವರ ಕನ್ನಡ ಪಂಡಿತರೇ ಖುದ್ದು ಇನ್ನೊಬ್ಬರು ಮಾಸ್ತರರ ಹತ್ತಿರ ಮಾತನಾಡುವಾಗ—ಈ ಕುಮಾರಯ್ಯ ಮಾತ್ರ ಬಹಳ ಚೆನ್ನಾಗಿ ಬರೆಯುತ್ತಾನೆ ಅಂದಿದ್ದರು. ಆದರಿಂದ ಉತ್ತೇಜಕನಾದ ಕುಮಾರಯ್ಯ ಪ್ರತಿ ವಾರಪತ್ರಿಕೆಗೆ ವಾರಕ್ಕೊಂದು ಬಾರಿಯಂತೆ ಒಂದೊಂದು "ಕಂದೊಡಿ ಭಾಷೆಯ ಲೇಖನ" ಕಳುಹಿಸತೊಡಗಿದನು ಹೋ—ಮೂರು ವಾರದಿಂದಲೇ ಬರಗಾಲ ಪೀಡಿತ ಕನ್ನಡ ಪತ್ರಿಕಾ ಮರುಭೂಮಿಯಲ್ಲಿ ಸುರಿಮಳೆಯಾಯಿತೆಂದು ಅನುಭವ ಶ್ರೀ| ನಾಗನಾಥ ಪ್ರಭು, ಶ್ರೀ| ಈಶ್ವರ ಶಾಸ್ತ್ರಿ ಮೊದಲಾದವರಂತೆ ಜಾಹೀರಾತಿನಷ್ಟು ನಿಯಮಿತತೆಯಿಂದ ಕುಮಾರಯ್ಯನ ಕಥೆಗಳೂ ಲೇಖಗಳೂ ಬರತೊಡಗಿದುವು

ಕಥೆ ಬರೆಯುವುದರಲ್ಲಿ ಕುಮಾರಯ್ಯನ ಕೈ ಮುಸೆಯುತ್ತಾ ನಡೆಯಿತು—"ಏನು ಪ್ರೇಮ, ಏನು ದಿವ್ಯ ಅನುರಾಗ, ಏನು ಆತ್ಮಹತ್ಯೆ ಎಂತಹ ಅದ್ಭುತ ತ್ಯಾಗ"—ಇವೇ ಅಪೂರ್ವ ಪ್ರತಿಭಗಳು ಅವನ ೧೬ ವರ್ಷದ ಮಿದುಳಿನಲ್ಲಿ ಸುರಿಯತೊಡಗಿದುವು ತನ್ನ ಕ್ಲಾಸಿನ ಹುಡುಗಿಯರ ಮೇಲೆ ಈ ಔದಾರ್ಯದ ಪ್ರತಿಭೆಯನ್ನು ತೋರತೊಡಗಿದನು ಆದರೆ ಇವನ ಸಾಹಿತ್ಯ ನವರಸಭರಿತ ಪ್ರಣಯ ಪತ್ರಗಳಿಗೆ ಉತ್ತರ ಬರಲಾರದಿದ್ದರೆ—ಮರುವಾದದ ಪತ್ರಿಕಾ ಬಾಣಗಳಲ್ಲಿ ಇವನ ನಂಜು ನಾಟಿಯೇ ಬಿಡುವುದು ಪುಣ್ಯಕ್ಕೆ ಆ ಶಾಲೆ ಹುಡುಗಿಯರು ಕನ್ನಡಕ್ಕೆ ಕೈಯಿಕ್ಕದೆ ಫ್ರೆಂಚೋ, ಗೀರ್ವಾಣವೋ—ಇವುಗಳಲ್ಲಿ ತೃಪ್ತರಾದುದರಿಂದ ಇವನ ಲೇಖಗಳು ಅವರಿಗೆ ಗೋಚರವಾಗಲಿಲ್ಲ ಆದರೇನು? ಸಾವಿರಾರು ನವಯುವತಿಯರು, ಅದನ್ನು ಓದಿ ಮೂರ್ಛೆಗೊಂಡಿರಲೂ ಬಹುದು

ಕುಮಾರಯ್ಯನ ಕನ್ನಡ ವಾರಪತ್ರಿಕೆಗಳ ಗಂಡನೇ ಆನಿಸಿದನು ಈ ಗಲಭೆಯಲ್ಲಿ ಅವನ ಕ್ಲಾಸುಟೀಚರು ಅವನನ್ನು ಪ್ರವೇಶಿಸಿಸಲು ಮರೆತರು. ಎರಡನೇ ವರ್ಷ ಅದೇ ಕ್ಲಾಸಿನಲ್ಲಿರಬೇಕಾಯಿತು ಒಂದೆರಡು ವೇತನಗಳು ತಪ್ಪಿದುವು ಆದರೂ ಹೊಟೇಲುಗಳನ್ನೂ ಬದಲಿಸುವುದರಿಂದ ಬಚಾಯಿಸಿಕೊಂಡನು ಕೊನೆಗೆ ಈ ಶಾಲಾ ಕಾಲೇಜುಗಳ ವಿದ್ಯೆಯಿಂದ "ನಿರುದ್ಯೋಗ" ಹೆಚ್ಚುವುದೇ ವಿನಹ, ದೇಶೋದ್ಧಾರವಾಗಲಾರದೆಂದು ವ್ಯಾಸಂಗವನ್ನು ಬಿಟ್ಟನು.

ಅಲ್ಲಿಂದ ಸಾರ್ವಜನಿಕ ಜೀವನವೂ, ಅದರ ಸುಖದುಃಖಗಳೂ ಕುಮಾರಯ್ಯನ ಪಾಲಿಗೆ ಗಂಟುಬಿದ್ದುವು. ದುರ್ದೈವದಿಂದ ಕುಮಾರಯ್ಯನ ಜನನಕಾಲವು ತುಸು ತಡವಾಗಿದ್ದು ೧೯೩೦ರ ರಾಷ್ಟ್ರೀಯ ಚಳವಳದಲ್ಲಿ ಜೈಲಿಗೆ ಹೋಗಿ 'ದೇಶಭಾಗ'ನಾಗುವ ಸುಯೋಗವು ತಪ್ಪಿಹೋಯಿತು. ಆದರೆ ಈಗಿನ ಕುಮಾರಯ್ಯನ ಕಲ್ಪನೆಯಂತೆ 'ದೇಶಭಕ್ತ'ರೆಲ್ಲರೂ ಕಳ್ಳರು 'ಕಾಮ್ರೇಡು'ಗಳಾಗುವುದೇ ಸನುನಾದ ತತ್ವ' ಎಂಬುದು ಖಾತ್ರಿಯಾಗಿದೆ.

ಕುಮಾರಯ್ಯ ಸಾರ್ವಜನಿಕ ಸೇವೆಗೆ ತೊಡಗುವ ಮೊದಲು ಊಟದ ಸ್ವತಂತ್ರ ಏರ್ಪಾಟಿಗೇನೆ ಒದ್ದಾಡಬೇಕಾಯಿತು ಈ ತನಕ 'ಬಡ ವಿದ್ಯಾರ್ಥಿ'ಯೆಂದು ಸಹಾಯ ಪಡೆಯುತ್ತಿದ್ದುದು ಇನ್ನು ಬಾರದಾಯಿತು ಆದುದರಿಂದಲೇ ಆತನು ತಾನು ಲೇಖನ ಕೊಡುತ್ತಿದ್ದ ಪತ್ರಿಕೆಗಳ ಆಫೀಸಿಗೆ ಹೋಗಿ—"ಮಿ| ಇನ್ನು ನಾನು ಪುಕಸಟ್ಟೆ ಲೇಖನ ಬರೆಯಲಿಕ್ಕಿಲ್ಲ, You have to pay me"—ಎಂದು ಪ್ರಸ್ತಾಪಿಸಿದನು. ಏನು ಪ್ರಸ್ತಾವ ಮಾಡಿದರೂ ಉತ್ತರ ಬರಲಿಲ್ಲದು ಅದರಲ್ಲೂ ನುರಿತ ಸಂಪಾದಕರಾದ ಶ್ರೀ| ಚನ್ನ ಕೇಶವರಾಯರು "ನೀವು ತರುಣರು, ಪ್ರೋತ್ಸಾಹ ಕೊಡುವ ಎಂದು ನಾಲ್ಕು ಲೇಖನ ಹಾಕಿತು ಹಣಗಿಣ ಎಂದರೆ—ಲೇಖನವೇ ಬೇಡ ನಮ್ಮಲ್ಲಿ ಎರವ ಲೇಖನಗಳೇ ತಿಕಾಣಿಲ್ಲ" ಎಂದರು

ಕುಮಾರಯ್ಯನಿಗೆ ಕೋಪೋದ್ರೇಕವಾಯಿತು. ಪತ್ರಿಕೆಗಳ ವಿಷಯ ಅವನು ಸ್ವಂತ ಆರಂಭ ಮಾಡಿದನು ಸ್ವಂತ ಯಶಸ್ವಿಯಾಯಿತು. 'ನಾಡದ ಭವಿಷ್ಯ ಎಲ್ಲಿ? ಎಂದು ನೋಡುವಂತೆ ಕುಮಾರಯ್ಯನ ಲೇಖನವಲ್ಲಿ ಎಂದು ಸೋಡ ಪವರು ಹೇಳಬಾಗಲಿಲ್ಲ ಆದರೆ ಅದರಿಂದ ಕುಮಾರಯ್ಯನಿಗೆ ತುಸು ನಿರಾಶೆ ಉಂಟಿತ ಅವನ ಈಗಾಗಲೇ ಹಿಂದೂ ಮಹಾಸಭೆಯ ಸದಸ್ಯನಾಗಿ ಆರೆಂಟು ಸಾರ್ವಜನಿಕ ಭಾಷಣವೆಸಗಿದನು 'ಕಾಂಗ್ರೆಸ್ಸು ಜಿಲ್ಲಾ ಬೋರ್ಡ್' ಎಂದು ವೈದಾನು ಭಾಷಣ ಮಾಡಿದನು, ಉಪನ್ಯಾಸಕರ ಹೆಸರಿನಲ್ಲಿ ಅವನ ಸುದ್ದಿ ಬರಬೇಕೇ?

[೧೪ನೇ ಪುಟವನ್ನು ನೋಡಿರಿ]

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧಿ.

ಡಾ| ಜಸಾನಿಯವರ ಜಗತ್ಪ್ರಸಿದ್ಧ

ಗೊನೊಕಿಲರ್ (ರಿಜಿಸ್ಟರ್ಡ್)

GONO KILLER ORIGINAL

ನಕಲಿ ಮದ್ದುಗಳಿಗೆ ಮರುಳಾಗಿ ಮೋಸಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಮತ್ತು 'ಗೊನೊಕಿಲರ್' ಎಂಬ ಹೆಸರನ್ನು ಗಮನಿಸಿರಿ.

ಎಲ್ಲಾ ಪ್ರಕಾರದ ಮೂತ್ರರೋಗಗಳ ಮೇಲೆ ಮತ್ತು ಧಾತು ಸಂಬಂಧದ ರೋಗಗಳ ಮೇಲೆ 'ಗೊನೊಕಿಲರ್' ಇದು ಅತ್ಯಂತ ಆಶ್ಚರ್ಯಕರವಾದ ಮತ್ತು ರಾಮಬಾಣ ಔಷಧಿಯಾಗಿರುವುದು. ಈ ಔಷಧವು ಪ್ರಾರಂಭಿಸಿದ ಮೂರು ದಿವಸಗಳಲ್ಲಿಯೇ ತನ್ನ ಆಶ್ಚರ್ಯಕರವಾದ ಗುಣದ ಚಮತ್ಕಾರವನ್ನು ತೋರಿಸುತ್ತದೆ, ಸಾವಿರಾರು ರೋಗಿಗಳು ಇದರಲಾಭವನ್ನು ಪಡೆದು ಮತ್ತು ಸಂಪೂರ್ಣವಾಗಿ ಗುಣಹೊಂದಿ ಇದನ್ನು ಹೊಗಳುತ್ತಿರುವರು ಇದರಿಂದ ಇಂಜೆಕ್ಷನ್ ಹಾಗೂ ಇತರ ಚಿಕಿತ್ಸೆಗಳ ಅವಶ್ಯಕತೆಯೇ ಬೀಳುವುದಿಲ್ಲ. ಎಲ್ಲಾ ಪ್ರಕಾರದ ಹೊಸ ಹಾಗು ಹಳೆಯ ಪ್ರಮೇಹ, ಪರಮಾ, ಮೂತ್ರದ್ವಾರದಿಂದ ಕೀವು ಹೋಗುವುದು. ವೀರ್ಯಸ್ರಾವ, ಮೂತ್ರವು ಹನಿಹನಿಯಾಗಿ ಹೋಗುವುದು ಮತ್ತು ಉರುವು ಬೀಳುವುದು, ಮೂತ್ರವಾಗಿಸದ ಒಸಗೆ ಆಗಿರುವ ಬಾವು ಅಥವಾ ಗಾಯ, ಸ್ವಪ್ನಾವಸ್ಥೆಯಲ್ಲಿ ಆಗುವ ವೀರ್ಯಸ್ರಾವ, 'ಗೊನೊ—ಕೊಕಸ' ಎಂಬ ವಿಷಾರಿ ಜಂತುಗಳು, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಪ್ರದರರೋಗವು ಮತ್ತು ತತ್ಸಂಬಂಧವಾದ ಅನೇಕ ದುಃಸಹವಾದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿನಾಶವಾಗುವುವು. ಬೆಲೆ: 50 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 3-0-0 (ವ್ಹಿ. ಪಿ. ಚಾರ್ಜು 8 ಆಣೆ ಜೀರೆ) ಎಲ್ಲಾ ಪತ್ರವ್ಯವಹಾರ ತಯಾರಿಸುವ ಏಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ವಿಠಲ್‌ಭಾಯಿ ಪಟೇಲ್ ರೋಡ್, ಮುಂಬಯಿ 4 ಗಳು ಇಂಗ್ಲಿಷಿನಲ್ಲಿ ಬರೆಯಿರಿ. Sole Manufacturer: Dr. D. N. JASANI, Vithalbhai Patel Road, BOMBAY

ಸ್ಟಾಕಿಸ್ಟ: ಮೆಸರ್ಸ್ ಇಲೆಕ್ಟ್ರೊ ಹೋಮಿಯೊಪತಿಕ್ ಡಿಸ್‌ಪೆನ್ಸರಿ, ಕೆಮಿಸ್ಟ್ಸು ಮತ್ತು ಡ್ರಗ್ಗಿಸ್ಟ್ಸು ಹಂಪನಕಟ್ಟಾ ಮಂಗಳೂರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಧಿವೇಶನ

★ ಕಾಂಗ್ರೆಸಿನ ತತ್ವದಲ್ಲಿ ಭಿನ್ನಾಭಿಪ್ರಾಯದವರಿಗೆ ಅಧಿಕಾರವಿಲ್ಲ
★ ಸಿಲೋನ್ ಸರಕಾರದೊಡನೆ ನೆಹರುಗಳ ಸಂಧಾನ
★ ಆಶ್ರಿತ ರಾಜ್ಯಗಳಿಗೆ ಮಹಾತ್ಮರ ನೀತಿಯೇ ಸರಿ
★ ವಿದೇಶದ ಭಾರತೀಯರೊಡನೆ ಸಹಸಂತಾಪ

ಕಾಂಗ್ರೆಸ್ ಕಾರ್ಯಕಾರೀ ಮಂಡಳಿಯು ಬೊಂಬಾಯಿಯ 'ಬಿರ್ಲಾ ಭವನ'ದಲ್ಲಿ ತಾ. ೧೯ರಂದು ಸೇರಿತು. ಮಹಾತ್ಮಾ ಗಾಂಧಿ ಮತ್ತು ಜವಾಹರಲಾಲ ನೆಹರುಗಳು ಪ್ರತ್ಯೇಕ ಆಮಂತ್ರಣದಿಂದ ಸಭೆಗೆ ಆಹ್ವಾನಿತರಾಗಿದ್ದರು. ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಮೇಲೆ ವರ್ಕಿಂಗ್ ಕಮಿಟಿಯು ಇದೇ ಮೊದಲನೆಯದಾಗಿ ಸೇರುವುದಾಗಿದೆ.

ದಿಗ್ವಾಯಿ ಎಣ್ಣೆಯ ಕಾರ್ಖಾನೆಯಲ್ಲಿ ಆದ ಮುಷ್ಕರದ ಕುರಿತು ಸ್ವತಃ ರಾಷ್ಟ್ರಪತಿ ರಾಜೇಂದ್ರ ಪ್ರಸಾದರೇ ನಡೆಸಿದ ಕಾರ್ಯಗಳ ಕುರಿತು ಚರ್ಚೆಯಾಯಿತು. ಮುಷ್ಕರವು, ೬೩ ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕಿದ ಹೇತುವಾಗಿ ಆರಂಭಿಸಿದ್ದು, ಕಡೆಗೆ ಮಾಲಿಕರೊಡನೆ ವ್ಯವಹಾರ ನಡೆಸಿದಲ್ಲಿ ತೆಗೆದುಹಾಕಿದ ೬೩ ಮಂದಿಗೆ ತಿರುಗಿ ಕೆಲಸ ಕೊಡಲು ತಿರಸ್ಕರಿಸಿದ್ದು ಮಾತ್ರವಲ್ಲದೆ, ಇನ್ನೂ ಕೂಡಾ ಮಿಲ್ಲಿನಲ್ಲಿ ಬೇಕಾದಷ್ಟೇ ಕೆಲಸಗಾರರನ್ನಿಟ್ಟು, ಬಾಕಿಯುವರನ್ನು ತೆಗೆದು ಹಾಕುವುದೆಂದು ಹೇಳಿದ ನಿಮಿತ್ತ, ಮುಷ್ಕರವು ಮುಂದುವರಿಯುತ್ತಿರುವುದಾಗಿಯೂ ರಾಷ್ಟ್ರಪತಿಗಳು ತಿಳಿಸಿದ್ದರು. ಆ ಕುರಿತು ಇತ್ಯರ್ಥ ಮಾಡಲು ಅಸ್ಸಾಮ ಸರಕಾರವು ಯತ್ನಿಸಬೇಕಾಗಿ ನಿರ್ಣಯವಾಯಿತು.

ಆ ಮೇಲೆ ಕಾಂಗ್ರೆಸು ಘಟನಾ ಸಮಿತಿಯ ಕಾರ್ಯದ ಕುರಿತು ನಿಷ್ಕರ್ಷೆಯಾಯಿತು.

ಕಾಂಗ್ರೆಸು ಘಟನಾ ಸಮಿತಿಯ ಸೂಚನೆಗೆ ಬಂಗಾಳದವರ ತಿದ್ದುಪಡಿಯು ಇತ್ತು. ಬಂಗಾಳದವರು ಕಾಂಗ್ರೆಸಿನ ಕಾಯಂ ಚುನಾವಣಾ ಮಂಡಳಿಯ ಸ್ಥಾಪನೆಯಿಂದ ಅವರಿಗೆ ಅನ್ಯಾಯವಾಗುವುದೆಂದು, ಅಂತಹ ಕಾಯಂ ಚುನಾವಣಾ ಮಂಡಳಿಯಲ್ಲಿ ಪ್ರಾಂತಿಕ ಕಾಂಗ್ರೆಸು ಕಮಿಟಿಯು ಐದನೇ ಒಂದಂಶ ಸದಸ್ಯರು ಯಾರ ಹೆಸರನ್ನು ಒಪ್ಪುದಿಲ್ಲವೋ ಅಂತಹವರು ಇರಬಾರದಾಗಿಯೂ ಸೂಚಿಸಿದರು.

ಕಾಂಗ್ರೆಸು ಘಟನಾ ಸಂಘದ ತಿದ್ದುಪಡಿ ಸೂಚನೆಯ ಕುರಿತು ಯಾರೂ ತೃಪ್ತಿಪಟ್ಟಂತೆ ಇಲ್ಲ. ತೀವ್ರ ಗಾಂಧೀ ಪಕ್ಷದವರು ಎ. ಐ. ಸಿ. ಸಿ. ಚುನಾವಣೆಯ ವಿಷಯದಲ್ಲಿ ಕಾಂಗ್ರೆಸಿನಲ್ಲಿ ಮೋಸ ವಂಚನೆಯನ್ನು ನಿಲ್ಲಿಸಲು, ಭದ್ರವಾದ ನಿಯಮಗಳನ್ನು ಮಾಡಬೇಕೆಂದು ಅಭಿಪ್ರಾಯಪಡುತ್ತಾರೆ. ಇಂದು ಮಾಡುವ ಸದಸ್ಯತನದ ಕ್ರಮವೇ ತಪ್ಪೆಂದು ಅವರ ಅಭಿಪ್ರಾಯ.

ಎ. ಐ. ಸಿ. ಸಿ. ಚುನಾವಣೆಯ ಕುರಿತು ಕಮಿಟಿಯ ಸೂಚನೆಯು ಬಹಳ ಚರ್ಚೆಗೆ ಗುರಿಯಾಯಿತು.

ಕಾಯಂ ಆಗಿ ಕಾಂಗ್ರೆಸು ಸದಸ್ಯರ ದಾಖಲೆಯನ್ನಿಡುವ ವಿಷಯವಾಗಿ ಎಲ್ಲರೂ ಒಮ್ಮತದವರಾಗಿದ್ದರು. ಕೆಲವರ ಅಭಿಪ್ರಾಯದಂತೆ ಕಾಂಗ್ರೆಸಿನ ಸದಸ್ಯರನ್ನು ಹೆಚ್ಚು ಮಾಡುವುದಕ್ಕಿಂತ ಕಾಂಗ್ರೆಸು ತತ್ವಕ್ಕೆ ಸರಿಯಾಗಿ ನಡೆಯುವಂತಹ ಸದಸ್ಯರನ್ನೇ ಕಾಂಗ್ರೆಸಿನಲ್ಲಿ ಸೇರಿಸುವಂತಹ ರೀತಿಯಲ್ಲಿ ನಿರ್ಣಯ ಮಾಡಬೇಕೆಂದೂ ಇತ್ತು.

ಕಾಂಗ್ರೆಸ್ ಘಟನಾವಳಿಯ ಸೂಚನೆಯ ವಿಷಯದಲ್ಲಿ ಗಾಂಧಿಜಿಯವರ ಅಭಿಪ್ರಾಯವು ಕೇಳಲಾಗಿ ಅವರು ಸಂಪೂರ್ಣ ಅಹಿಂಸೆಯನ್ನು ಪಾಲಿಸುವ ರೀತಿಯಲ್ಲಿ ಸದಸ್ಯರನ್ನು ಸೇರಿಸಬೇಕೆಂದೂ, ಹಿಂಸಾತ್ಮಕವನ್ನು ಕಾಂಗ್ರೆಸಿನಿಂದ ತಳ್ಳಿಹಾಕಬೇಕೆಂದೂ ಹೇಳಿದರು. ಕಾಂಗ್ರೆಸಿನಲ್ಲಿ ಕಿಸಾನ್ ಸಭಾ, ಸೋಶಿಯಲಿಸ್ಟ್ ಪಾರ್ಟಿ ಮೊದಲಾದುವುಗಳನ್ನು ಇದರಿಂದ ಹೊರಗೆ ಹಾಕುವುದು ಉದ್ದೇಶವಲ್ಲವೆಂದೂ, ಕಾಂಗ್ರೆಸಿನ ತತ್ವವಾದ ಅಹಿಂಸೆಯನ್ನು ಅವುಗಳು ಪಾಲಿಸಿಕೊಂಡು ಬರುವವರೆಗೆ ಕಾಂಗ್ರೆಸಿನೊಳಗೆ ಅಂತಹ ಸಂಸ್ಥೆಗಳಿರಲು ಸಾಧ್ಯವುಂಟೆಂದೂ ಹೇಳಿದರು. ಆ ಮೇಲೆ ಕಾಂಗ್ರೆಸಿನೊಳಗೆ ಪಕ್ಷಮಾಡುವುದು ತಪ್ಪಲ್ಲವೆಂದೂ, ತಾನೂ ಒಮ್ಮೆ ಅಸಹಕಾರಿ ಪಕ್ಷವನ್ನು ಸ್ಥಾಪಿಸಿ, ಬಹುಮತವನ್ನು ಪಡೆದಿರುವುದಾಗಿಯೂ ಆದರೆ ಕಾಂಗ್ರೆಸಿನ ನೀತಿಗೆ ಸರಿಯಾಗಿ ಅವರು ಶಿಸ್ತನ್ನು ಪಾಲಿಸುವುದು ಆ ಪಕ್ಷಗಳ ಕರ್ತವ್ಯವೆಂದೂ ಹೇಳಿದರು.

ಕಾಂಗ್ರೆಸ್ ತಿದ್ದುಪಡಿ ಸೂಚನೆಯಂತೆ ಯಾರು ಕಾಂಗ್ರೆಸಿನ ತತ್ವಕ್ಕೆ ನಿಜವಾಗಿಯೂ ವಿರುದ್ಧವಾದ್ದಾರೋ ಅಂತಹವರನ್ನು ಕಾಂಗ್ರೆಸಿನಲ್ಲಿ ಜವಾಬ್ದಾರೀ ಕೆಲಸದಿಂದ ತಡೆಯುವಂತೆ ಮಾಡುವುದು ಮಾತ್ರ ಉದ್ದೇಶವಲ್ಲದೆ, ಅವರನ್ನು ಕಾಂಗ್ರೆಸು ಸಂಸ್ಥೆಯಿಂದ ಹೊರಹಾಕುವುದು ಉದ್ದೇಶವಲ್ಲ. ಹಾಗೆ ಕಾಂಗ್ರೆಸಿನೊಳಗಿದ್ದ ತಮ್ಮ ಪಕ್ಷವನ್ನು ಬೇಕಾದರೆ ಬಹುಮತವಾಗಿ ಮಾಡಲು ಅವರು ಸಾಧಿಸಬಹುದಾಗಿದೆ. ತಿದ್ದುಪಡಿ ಬಂಗಾಳದವರ ಚುನಾವಣಾ ಮಂಡಳಿಯ ಸೂಚನೆಯು ಅಂಗೀಕೃತವಾಗಲಿಲ್ಲ.

ಕಾಂಗ್ರೆಸು ಘಟನೆಯ ನಿಬಂಧನೆ ೫

ಕಾಂಗ್ರೆಸ್ಸಿನ ತತ್ವ ಮತ್ತು ಕಾರ್ಯಕ್ರಮಗಳಿಗೆ ವಿರೋಧವಾದ ಅಭಿಪ್ರಾಯವುಳ್ಳ ಮತ್ತು ಇತರ ರಾಜಕೀಯ ಸಂಘಗಳ ಹಾಗೂ ಕೋಮುವಾರು ಸಂಸ್ಥೆಗಳ ಸದಸ್ಯರಾಗಿದ್ದು ಅಧಿಕಾರ ಸ್ಥಾನದಲ್ಲಿರುವವರನ್ನು ಕಾಂಗ್ರೆಸ್ ಸಂಸ್ಥೆಯ ಅಧಿಕಾರಕ್ಕೆ ಬರಲು ಬಿಡಕೂಡದು. ಹಾಗಲ್ಲದೆ ಇತರ ಕಾಂಗ್ರೆಸಿನಲ್ಲಿರುವ ಪಕ್ಷದವರಿಗೆ ಕಾಂಗ್ರೆಸಿನಲ್ಲಿ ಇರಲು ಎಡೆಸಿಗಲಾರದೆಂಬ ಹಲವರ ಸಂಶಯವನ್ನು ತೆಗೆದುಹಾಕಲಾಗಿದೆ.

ಕಾಂಗ್ರೆಸು ಘಟನೆಯ ನಿಬಂಧನೆ ೬

ಇದರ ತಿದ್ದುಪಡಿಯು ಮಂಜೂರಾಯಿತು. ಇದು ಹೇಗೆಂದರೆ ಇನ್ನು ಮುಂದೆ ಮತದಾರ ಕ್ಷೇತ್ರಗಳನ್ನು ಪ್ರಾದೇಶಿಕ ಕ್ಷೇತ್ರಗಳಾಗಿ ವಿಂಗಡಿಸುವುದು. ಪ್ರತಿ ವರ್ಷ ಅದರಲ್ಲಿ ಬದಲಾವಣೆಯಿಲ್ಲ. ಆದರೆ ಆಯಾಯ ಪ್ರದೇಶಕ್ಕೆ ಆಯಾಯ ಸ್ಥಾನಗಳನ್ನು ನಿಶ್ಚಯಿಸಲಾಗುವುದು. ಇದುವರೆಗೆ ಒಂದು ಕ್ಷೇತ್ರದಿಂದ ಚುನಾವಣೆಗೆ ನಿಲ್ಲುವ ಉಮೇದ್ವಾರರ ಸಂಖ್ಯೆಯಷ್ಟು ಓಟುಗಳನ್ನು ಒಬ್ಬ ಮತದಾರನು ಕೊಡಬಹುದಿತ್ತು. ಇನ್ನು ಹಾಗಲ್ಲ. ಉಮೇದ್ವಾರನೊಬ್ಬನಿಗೆ ಒಂದೇ ಓಟು ಕೊಡಬಹುದು. ಉಳಿದವರಿಗೆ ಓಟು ಕೊಡಲು ಇಷ್ಟವಿಲ್ಲದಿದ್ದಲ್ಲಿ ಹಾಗೆಯೇ ಬಿಡಬಹುದು.

ಇತರ ಸೂಚನೆಗಳನ್ನು ಹಾಗೆಯೇ ಅಂಗೀಕರಿಸಲಾಯಿತು.

ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮತ್ತು ಮಂತ್ರಿಮಂಡಳಿಗಳ ಕುರಿತು ಚರ್ಚಿಸಲಾಯಿತು. ಅದರ ಇತ್ಯರ್ಥವು ಎಲ್ಲಾ ಪ್ರಾಂತಗಳ ಮಂತ್ರಿಗಳ ಸಭೆಗೆ ಮುಂದುವರಿಸಿದೆ.

ಸಿಲೋನಿನ ವಿಚಾರ

ಸಿಲೋನ್ ಸರಕಾರವು ಹಿಂದೀಯರನ್ನು ದೇಶದಿಂದ ಹೊರಗೆ ಹಾಕುವ ಧೋರಣೆಯನ್ನು ಕೈಕೊಂಡ ವಿಚಾರದಲ್ಲಿ ಅಸಂತೃಪ್ತಿಯನ್ನು ಸೂಚಿಸಿ, ಆ ಬಗ್ಗೆ ಅಲ್ಲಿನ ಸ್ಥಿತಿಗತಿಗಳನ್ನು ಚೆನ್ನಾಗಿ ವಿಚಾರಿಸಿ ಸರಕಾರದೊಡನೆ ವ್ಯವಹಾರ ನಡೆಸಲು ಪಂಡಿತ ಜವಾಹರಲಾಲರನ್ನು ಕೇಳಿಕೊಂಡಿತು.

ದಕ್ಷಿಣ ಆಫ್ರಿಕ ಮತ್ತು ಬೆಲ್ಜಿಯನ್ ಕೊಂಗೋದ ಹಿಂದೀಯರು

ಸರಕಾರದಿಂದ ಕಷ್ಟಕ್ಕೊಳಗಾದ ವಿದೇಶದಲ್ಲಿರುವ ಹಿಂದೀಯರ ಕುರಿತು ಕಾಂಗ್ರೆಸಿನ ಧೋರಣೆಯೇನೆಂದು ಠರಾವು ಮಾಡುವುದು. ಅದರ ಮೂಲ ಪ್ರತಿಯನ್ನು ಮಹಾತ್ಮರು ಮಾಡಲಿರುವರು.

ದೇಶೀಯ ಸಂಸ್ಥಾನ

ದೇಶೀಯ ಸಂಸ್ಥಾನಗಳ ವಿಷಯ ಮಹಾತ್ಮಾಜಿಯವರು ಬೋಧಿಸಿದ ನೀತಿಯನ್ನು ಅಂಗೀಕರಿಸಲಾಯಿತು. ಮುಂದೆ ಹೇಗೆ ದೇಶೀಯ ರಾಜ್ಯಗಳಲ್ಲಿ ಚಳವಳಿ ನಡೆಯತಕ್ಕದ್ದೆಂದು ಮಹಾತ್ಮರ ಅನುಮತಿಯಿಂದ ಪಂಡಿತ ನೆಹರುಗಳು ಒಂದು ಪ್ರಕಟಣೆಯನ್ನು ಹೊರಡಿಸುವರು.



NOTICE.

Canara Bank Ltd., Kasaragod.

ಕೆನರಾ ಬ್ಯಾಂಕ್ ಲಿಮಿಟೆಡ್., ಕಾಸರಗೋಡು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಮೇಲಿನ ಬಡ್ಡಿಯನ್ನಾಗಲಿ, ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಲ್ಲಿ ಒಂದನೆಯವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸು ಜ್ಯಾರಿ ಆಗಿ ಬಂದಿರುವುದರಿಂದಲೂ, ಉಳಿದವರಿಗೆ ಬಿಟ್ಟ ರಿಜಿಸ್ಟ್ರಿ ನೋಟಿಸುಗಳು ಜ್ಯಾರಿ ಆಗದೆ ಬಂದಿರುವುದರಿಂದಲೂ ಸದರಿ ಸಾಲಗಾರರು ಬ್ಯಾಂಕಿಗೆ ಸಲತಕ್ಕ ಅಸಲು, ಬಡ್ಡಿ, ನೋಟಿಸು ಖರ್ಚು, ಇತ್ಯಾದಿ ಐವೇಜುಗಳನ್ನು ಇದೇ ೧೯೩೯ನೇ ಇಸವಿ ಜುಲ್ಯಾ ತಿಂಗಳ ತಾ. ೨೪ನೇ ಸೋಮವಾರದೊಳಗೆ ಪಾವತಿ ಮಾಡಿ, ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದರೆ ಇದೇ ೧೯೩೯ನೇ ಇಸವಿ, ಜುಲ್ಯಾ ತಿಂಗಳ ತಾ. ೨೬ನೇ ಬುಧವಾರ ದಿವಸ ಯಾ ಅದರ ನಂತರ ಸಾಧ್ಯವಾದಷ್ಟು ಬೇಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಃ ಯಾವ ತರದ ನೋಟೀಸು ಕೊಡದೆ ಮಧ್ಯಾಹ್ನ ಘಂಟೆ ೧೨ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಕ್ರ. ನಂ.	ಲೋನ್ ನಂಬ್ರ.	ಹೆಸರು ಮತ್ತು ವಿಳಾಸ.	ಮೊಬಲಗು ರೂ.
1.	L 1241-'37	Vishnu Kakkothaya, S/o Vishnu kakkothaya, Land holder, Vorvil, Madkai, kanhangad.	28
2.	L 1726-'34	Abdul Khader, S/o Hamad Kunhi, Cultivator, Arikadi, Kanchikatte, Kumbla	45
3.	L 961-'35	Mallaya S/o Rukmaya, Pensioner, Pallikere, Bekal.	75
4.	L 1491-'35	Mallaya S/o Rukmaya, Pensioner, Pallikere, Mundyakal, Bekal.	25
5.	L 875-'36	Chandu Nair, N/o Chandu Nair, Cultivator, Perumble, Bekal.	45
6.	L 225-'36	Abdulla, S/o Beera Moidin Land holder, Kudlu, Kollame Kasaragod.	90
7.	L 42-'38	Mammunhi S/o Abboker Cultivator, Mogral, Kumbla.	25
8.	L 401-'38	Andunhi alias Abdulla, S/o Mahamad, Merchant, Thurthi, Kasaragod.	25
9.	S. L. 1121-'37	Kunhalli, S/o Andunhi, Merchant, Paika, Kunhipare Nekraje, Kasaragod.	12
10.	S. L. 1479-'36	Raman Nair, N/o Chindan Nair, Cultivator, Kolrangodu Bedadka, Bekal.	8
11.	S. L. 1671-'37	Andunhi S/o Mahamad, Cultivator, Madoor, Nirchal, Kasaragod.	15
12.	L 2405-'36	Kunhambu Nair N/o Raman Nair, Land holder, Kuttikole, Bekal.	95
13.	L 1108-'36	Katamballi Raman N/o Karymabadi. Belchapada Cultivator, Chervathur, Cheetil, Maicha Nileshwar.	190
14.	S. L. 28-'38	Govinda Achary, S/o Komau Achary, Carpenter, Bare, Naganthkal, Bekal	10

Office of the Bank, Kasaragod 19—6—1939

A Gopalakrishna Pai
Agent.

ಮಂಗಳೂರು ಸಮಾಚಾರ

ಮಂಗಳೂರು ಹೆಡ್ ಪೋಸ್ಟು ಆಫೀಸಿನಲ್ಲಿ ಹೆಡ್ ಪೋಸ್ಟು ಮೇನ್ ಆಗಿರುವ ಶ್ರೀಯುತ ಜೆ. ಬಿ. ಗೋವಿಯಸ್ ಇವರು ಸಂ೧೮೯೬ನೇ ಇಸವಿಯಲ್ಲಿ ಪೋಸ್ಟಲ್ ಡಿಪಾರ್ಟುಮೆಂಟಿಗೆ ರೂಪಾಯಿ ೭ ಸಂಬಳಕ್ಕೆ ಸೇರಿ ಈಗ ಸಂ೧೯೩೯ನೇ ಇಸವಿ ಜೂನ್ ತಾ. ೨೨ರ ತನಕ ರೂಪಾಯಿ ೭೫ ಸಂಬಳಕ್ಕೆ ಬರ್ತಿಯಾಗಿ ೬೦ ವರ್ಷ ಪ್ರಾಯದ ವರೆಗೆ ೪೩ ವರ್ಷ ಆಫೀಸಿನ ಕೆಲಸವನ್ನು ನ್ಯಾಯದಿಂದ ಮಾಡಿಕೊಂಡು ಬಂದುದಲ್ಲದೆ ಸರ್ವರ ಪ್ರೀತಿಗೆ ಪಾತ್ರರಾಗಿದ್ದು, ತಾ. ೨೧-೬-೩೯ಕ್ಕೆ ಮಂಗಳೂರು ಹೆಡ್ ಪೋಸ್ಟು ಆಫೀಸಿನವರಿಂದ ಒಂದು ಪದಕವನ್ನು ವಿಜೃಂಭಣೆಯಿಂದ ಬಹುಮಾನವಾಗಿ ಪಡೆದು "ಪೆನ್‌ಶನ್" ಪಡೆದಿರುತ್ತಾರೆ.

ಪ್ರಾಥಮಿಕ ವಿದ್ಯಾಭ್ಯಾಸದ ತೆರಿಗೆ

ಮಂಗಳೂರು ಮುನ್ಸಿಪಾಲಿಟಿಯ ಕಮಿಶನರು ಈ ಸಾರಾಂಶದ ಪ್ರಕಟನೆಯೊಂದನು ಕಳುಹಿಸುತ್ತಾರೆ —

"ಮುನ್ಸಿಪಾಲಿಟಿಯ ಒಳಗಣ ಎಲ್ಲಾ ಭೂಮಿಗಳ ಮತ್ತು ಕಟ್ಟಡಗಳ ವಾರ್ಷಿಕ ಉತ್ಪತ್ತಿಯ ಮೇಲೆ ಅರ್ಧ ವರ್ಷಕ್ಕೆ ನೇಕಡಾ ಅರ್ಧರಂತೆ ಪ್ರಾಥಮಿಕ ವಿದ್ಯಾಭ್ಯಾಸದ ತೆರಿಗೆಯನ್ನು ಹಾಕುವರೆ ಕೌನ್ಸಿಲು ಆಲೋಚಿಸಿದೆ. ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಕೌನ್ಸಿಲಿನ ನಿಧಿಯಿಂದ ವರ್ಷಂಪ್ರತಿ ಹೋಗುವ ಹಣವನ್ನು ವಿಚಾರಿಸಿದಲ್ಲಿ ಕೌನ್ಸಿಲು ಮಾಡತಕ್ಕ ಇತರ ನಗರಾಭಿವೃದ್ಧಿಯ ಕೆಲಸಗಳು ಸಮರ್ಪಕವಾಗಿ ನಡೆಯಲಾರವು. ಆದಾಗಿ ಹೊಸ ತೆರಿಗೆಯ ರೀತಿಯಿಂದ ಕೌನ್ಸಿಲು ಹಣವನ್ನು ಪಡೆಯದಲ್ಲಿ ೧೯೩೯-೪೦ರ ಬಜೆಟ್ ಖರ್ಚು ಸರಿಯಾಗಲಿಕ್ಕಿಲ್ಲ.

"ಇದು ಮಾತ್ರವಲ್ಲದೆ ನಗರದೊಳಗೆ ಇರುವ ಶಾಲೆಯ ಕಟ್ಟಡಗಳನ್ನು ವಿಸ್ತರಿಸಬೇಕೆಂದೂ, ಉಪಾಧ್ಯಾಯರನ್ನು ಹೆಚ್ಚಿಸಬೇಕೆಂದೂ ಕೇಳಿಕೆ ಬಂದಿದೆ. ಹೀಗಾಗಿ ಸಾರ್ವಜನಿಕ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ರೂ [illegible] ಕಟ್ಟಡಕ್ಕಾಗಿ ರೂ ೧೧,೨೦೦ನ್ನು ಕೌನ್ಸಿಲು ಕೊಡಬೇಕಾಗಿದೆ. ಉಪಾಧ್ಯಾಯರ ಸಂಬಳದ ಕಡಿತದಿಂದ ಹೆಚ್ಚಿನ ಆದಾಯ ಆಗಲಾರದು. ಆದಾಗಿ ಇಂದು ಸೂಚಿಸಿದ ಈ ಪ್ರಾಥಮಿಕ ವಿದ್ಯಾಭ್ಯಾಸದ ತೆರಿಗೆಯಿಂದಾಗಿ ಕೌನ್ಸಿಲು ಅದಕ್ಕಾಗಿ ಖರ್ಚು ಮಾಡುತ್ತಿದ್ದ ಆರ್ಥಿಕ ಸಂಖ್ಯೆಯ ಹಣವನ್ನು ನಗರಾಭಿವೃದ್ಧಿಯ ಇತರ ಕಾರ್ಯಗಳ ವ್ಯಯ ಮಾಡುವುದು ಮಾತ್ರವಲ್ಲದೆ, ಈಗಿನ ಅಂದಾಜಿನಂತೆ ಈ ತೆರಿಗೆಯಿಂದ ಬರುವ ಸಾಧಾರಣ ೧೩,೫೦೦ ರೂಪಾಯಿಗಳಿಗೆ ಮದ್ರಾಸು ವಿದ್ಯಾಭ್ಯಾಸದ ಕಾನೂನಿನಂತೆ ಸರಕಾರವು ಕೊಡುವ [illegible] ಪ್ರೋತ್ಸಾಹ ಪರಿಹಾರದಿಂದ ಹೊಂದಿಕೆ ಸಿಗದೆ ಇದ್ದ ಒಂದು ಹೊಸ ಸರಕಾರದ ಸಹಾಯವು ಇಂದೆ ಸಿಕ್ಕಿದಂತಾಗುವುದು. ಅದೂ ಅಲ್ಲದೆ ಈ ನಿಧಿಗೆ ಕೌನ್ಸಿಲಿನ ನಿರ್ಣಯದ ರೂಪಾಯಿ ೨೨,೦೦೦ ಸಾವಿರವೂ, ಸರಕಾರದ ಹೆಚ್ಚಿನ ೧೪,೦೦೦ ರೂಪಾಯಿಗಳು ಸೇರಿ ವಿದ್ಯಾಭ್ಯಾಸದ ನಿಧಿಯು ಅಧಿಕವಾಗಿ ನಗರದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ಬಹಳ ಅಭಿವೃದ್ಧಿಯನ್ನು ಹೊಂದುವುದು.

"ಮಂಗಳೂರಿನಲ್ಲಿ ಮುನ್ಸಿಪಲ್ ತೆರಿಗೆಯು ಹೆಚ್ಚಾಗಿದೆಯೆಂಬುದು ಸತ್ಯವಾದ ವಿಷಯವಲ್ಲ, ಅದುವಲ್ಲದೆ ಪಶ್ಚಿಮ ಕರಾವಳಿಯ ಮುನ್ಸಿಪಾಲಿಟಿಗಳಲ್ಲಿ ಇದು ವರೆಗೆ ಈ ವಿದ್ಯಾಭ್ಯಾಸದ ತೆರಿಗೆ ಹಾಕದಿರುವುದು ಮಂಗಳೂರು ಮುನ್ಸಿಪಾಲಿಟಿಯೊಂದೇ. ಹಿಂದೂಪರೆಕ್ಕದ ಇತರ ಮುನ್ಸಿಪಾಲಿಟಿಗಳಲ್ಲಿ ನೇಕಡಾ [illegible], ೧೭, ೧೮, ೧೯, ೨೨ರ ತೆರಿಗೆಯಿರುವಾಗ ಮಂಗಳೂರಲ್ಲಿ ಕೇವಲ ನೇಕಡಾ ೧೨ರ ತೆರಿಗೆಯು ಮಾತ್ರ ಇದೆಯೆಂಬುದನ್ನು ಮಹಾಜನರು ತಿಳಿದಿರತಕ್ಕದ್ದು".

ಗೌರವ ಸರ್ಜನರ ನೇಮಕ

ಮಂಗಳೂರು ಸರಕಾರೀ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ವಿಭಾಗದ ಗೌರವ ಸರ್ಜನರಾಗಿ ಡಾ। ಎನ್. ಎಸ್. ಪ್ರಭು ಎಮ್. ಬಿ. ಬಿ. ಎಸ್. ಇವರೂ, ಸ್ತ್ರೀ ರೋಗ ಚಿಕಿತ್ಸಾ ವಿಭಾಗದ ಗೌರವ ಮೆಡಿಕಲ್ ಆಫೀಸರರಾಗಿ ಡಾ। ಮು. ಸಿ ನಾಯ್ಕ ಎಲ್. ಎಮ್. ಎಂಡ್ ಎಸ್. ಇವರೂ ಕಾರ್ಕಳ ಸರಕಾರೀ ಆಸ್ಪತ್ರೆಯ ಗೌರವ ಸರ್ಜನರಾಗಿ ಡಾ। ಕೆ. ಕೃಷ್ಣ ಭಟ್ಟ ಎಮ್. ಬಿ. ಬಿ. ಎಸ್. ಇವರೂ, ಮದ್ರಾಸು ಸರಕಾರದಿಂದ ನೇಮಿಸಲ್ಪಟ್ಟಿದ್ದಾರೆ.

ಸ್ತುತ್ಯ ದಾನ

ಸ್ಥಳೀಯ ದೀನ ಬಂಧು ಅನಾಥಾಶ್ರಮಕ್ಕೆ ಶ್ರೀ ಗಳಾದ ಜಿ. ಸೋಮಶೇಖರರಾಯರು ರೂ. ೫, ಬಿ ವೈಕುಂಠ ಬಾಳಿಗರು ಒಂದು ಮುಡಿ ಅಕ್ಕಿ, ಎಲ್. ಸಿ. ಪಾಯ್ಸರು ರೂ ೩, ಅಬ್ದುಲ್ಲಾ ಇದಿನಬ್ಬರು ರೂ ೧, ಮತ್ತು ಬಿ ಎನ್. ಆರ್. ಇವರು ರೂ. ೪, ಮುದುಂಗಾರು ದಾಸಪ್ಪಾಳ್ವರು ರೂ. ೨೫ ಉದಾರ ದಾನ ಮಾಡಿರುವುದಾಗಿ ತಿಳಿಯುತ್ತದೆ.

ಪ್ರಾಣ ಉಳಿಯಿತು

ಕೂಳೂರು ಕಡವಿನಲ್ಲಿ ದಾಟುತ್ತಿದ್ದಾಗ ದೋಣಿಯೊಂದು ಮುಗುಚಿ ಹೋಗಿ ೭ ಮಂದಿ ಪ್ರಾಣಾಪಾಯದಲ್ಲಿರಲು ಅದರಲ್ಲಿ ಐದು ಮಂದಿ ಈಜು ಬಲ್ಲವರು ದಡ ಸೇರಲು, ಉಳಿದ ಎರಡು ಮಂದಿ ಪ್ರಾಣಾಪಾಯ ಸ್ಥಿತಿಯಲ್ಲಿದ್ದರು. ದಡ ಸೇರಿದ್ದ ಶ್ರೀ ಎಚ್ ಟಿ ಭಂಡಾರಿ, ಮೆಟಲರ್ಜಿಸ್ಟ್, ಇವರು ಕೂಡಲೇ ನೀರಿಗೆ ಹಾರಿ ಬಹು ಪ್ರಯಾಸದಿಂದ ನದಿಯ ನಡುವಿಗೆ ಈಜಾಡಿ, ಇಬ್ಬರನ್ನು ಮೃತ್ಯುವಿನ ತುತ್ತಿನಿಂದ ಕಾಪಾಡಿದರು. ಸ್ತುತ್ಯ ಸಾಹಸ!

ಎಡ್ವಾನ್ಸ್‌ಮೆಂಟ್ ಕೋಪರೇಟಿವ್ ಸೊಸೈಟಿ

ದ. ಕ. ಜಿಲ್ಲಾ ಎಡ್ವಾನ್ಸ್‌ಮೆಂಟ ಸಹಕಾರ ಸಂಘದ ಪ್ರಥಮ ಮಹಾಸಭೆಯು ಕಳೆದ ಆದಿತ್ಯವಾರ ಸಂಜೆ ಸಹಕಾರೀ ಸಂಘದ ಡೆಪ್ಯುಟಿ ರಿಜಿಸ್ಟ್ರಾರರ ಆಫೀಸಿನಲ್ಲಿ ಶ್ರೀ ಎಮ್ ಶಿವರಾಮರ ಅಧ್ಯಕ್ಷತೆಯಲ್ಲಿ ಸೇರಿತು. ಸಂಘದ ನಿಯಮ ನಿಬಂಧನೆಗಳು ಅಂಗೀಕೃತವಾದವು. ೧೯೩೯-೪೦ರ ಬಜೆಟ್ ಅಂದಾಜು ಪಾಸಾಯಿತು. ಈ ಕೆಳಗಿನವರು ಹೊಸ ವರ್ಷದ ಡೈರೆಕ್ಟರರಾಗಿ ಚುನಾಯಿತರಾದರು. ಶ್ರೀಗಳಾದ—ಕೆ ಈಶ್ವರ ಎಂ ಎಲ್ ಎ, ಖಾನ್ ಬಹದ್ದೂರ್ ಮಹಮ್ಮದ್ ಜಮಾದಾರ್, ಉಳ್ಳಾಲ ಮಂಗೇಶರಾವ್, ಎಂ ಶಿವರಾವ್, ಕೆ ದೇವದಾಸ ಶೆಣೈ, ಅನಂತರಾವ್, ಎಂ ಎಸ್ ಮಾಧವ ರಾವ್, [illegible] ಕುದ್ಮುಲ್ [illegible] ಭಂಡಾರಿ ಮತ್ತು ಉಡುಪಿ ಗೋವಿಂದರಾವ್.

ಜಿಲ್ಲಾ ಸ್ಕೌಟು ಕೌನ್ಸಿಲು

ತಾ ೨೩ನೇ ಸಂಜೆ ಫಿಲಾಸಫಿಕಲ್ ಸೊಸೈಟಿಯಲ್ಲಿ ಶ್ರೀ ಕೆ ಸದಾಶಿವರಾಯರ ಅಧ್ಯಕ್ಷತೆಯಿಂದ ಸ್ಕೌಟ್ ಸಭೆಯೊಂದು ಜರಗಿತು. ಜಿಲ್ಲಾ ಹಿಂದೂಸ್ಥಾನ್ ಸ್ಕೌಟ್ ಸಂಘದ ಉದ್ಘಾಟನೆ ನಡೆದು ಕೌನ್ಸಿಲಿನ ರಚನೆಯಾಯಿತು.

ಶ್ರೀ। ರತ್ನ ಸಭಾಪತಿ

ಹಿಂದೂಸ್ಥಾನ ಸ್ಕೌಟ್ ಸಂಘದ ಆರ್ಗನೈಸಿಂಗ್ ಕಮಿಶನರಾದ ಶ್ರೀ ವಿ ಎಸ್. ರತ್ನ ಸಭಾಪತಿಯವರು ತಾ. ೨೨ರಂದು ಮಂಗಳೂರಿಗೆ ಬಂದಿದ್ದು, ಸ್ವಾಸ್ಥ್ಯಸಂಘ, ದೀನಬಂಧು ಅನಾಥಾಶ್ರಮ ಇವುಗಳನ್ನು ಸಂದರ್ಶಿಸಿ ಗಣಪತಿ ಹೈಸ್ಕೂಲಿನಲ್ಲಿ ಒಂದು ಭಾಷಣವಿತ್ತರು.

ಪಂಚಾಯತ ಬೋರ್ಡುಗಳು

ನೀಲೇಶ್ವರ, ಉದ್ಯಾವರ, ಚರ್ವತ್ತೂರು, [illegible] ಈ ಸ್ಥಳಗಳಲ್ಲಿ ಪಂಚಾಯತು ಬೋರ್ಡು ಸ್ಥಾಪಿಸಲು ಸರಕಾರವು ಸಮ್ಮತಿಕೊಟ್ಟಿದೆ.

ಸಾರಸ್ವತ ಸಭೆ

ಸಾರಸ್ವತ ಬ್ರಾಹ್ಮಣರ ಸಾರ್ವಜನಿಕ ಸಭೆಯೊಂದು ಕಳೆದ ಆದಿತ್ಯವಾರ ಸ್ಥಳೀಯ ಉಮಾಮಹೇಶ್ವರಿ ದೇವಸ್ಥಾನದಲ್ಲಿ ರಾ। ಬ। ದಸ್ತೂರ್ ಯು ಆನಂದರಾಯರ ಅಧ್ಯಕ್ಷತೆಯಿಂದ ಜರಗಿತು. ದೇವಸ್ಥಾನಕ್ಕೆ ಹರಿಜನರ ಪ್ರವೇಶದ ಕುರಿತು ಚರ್ಚೆ ಬಂದು ಎಂಡೋಮೆಂಟ್ ಬೋರ್ಡಿನ ಪತ್ರವನ್ನು ಓದಲಾಯಿತು. ದೇವಳವು ಖಾಸಗಿ ದೇವಳದಂತೆ ಇದ್ದು ಹರಿಜನ ಪ್ರವೇಶದಲ್ಲಿ ದೇವಳಕ್ಕೆ ಹಿಂದಿದ್ದ ಅಧಿಕಾರವೇ ಮುಂದೆಯೂ ಇರಬೇಕಾಗಿ ಕೇಳಿಕೊಳ್ಳಬೇಕೆಂದಾಯಿತು.

ಶ್ರೀ। ಗೋಪಾಲ ರೆಡ್ಡಿ

ಮದ್ರಾಸಿನ ಲೋಕಲ್ ಸೆಲ್ಫ್ ಗವರ್ನಮೆಂಟಿನ ಮಂತ್ರಿಗಳಾದ ಶ್ರೀ ಗೋಪಾಲರೆಡ್ಡಿಯವರು ಜುಲಾಯಿ ಪ್ರಥಮವಾರದಲ್ಲಿ ದ. ಕ. ವನ್ನು ಸಂದರ್ಶಿಸಲಿರುವರೆಂದು ತಿಳಿಯುತ್ತದೆ.

ತಾಲೂಕು ಸಮಾಚಾರ

ಕಲ್ಲೂರು

ಕಲ್ಲೂರಿನಲ್ಲಿ ಮೀನುಹಿಡಿಯಲಿಕ್ಕೆ ಹೋದ ಒಬ್ಬ ಕಳ್ಳೆಪಲಿಕ್ ಯುವಕನು ಮುಳುಗಿ ಕೋಡಿನ ಬಂಡೆಯೆಡೆಯಲ್ಲಿ ಸಿಕ್ಕಿಹೋಗಿ ಮೇಲೆ ಬರಲು ಸಾಧ್ಯವಾಗದೆ ಮೃತಪಟ್ಟಿರುವುದಾಗಿ ತಿಳಿಯುತ್ತದೆ.

ಶಿರ್ವ

ಶಿರ್ವ ಪಟ್ಟಣದ ಕೋಳಿ ಅಂಕದಲ್ಲಿ ಪೋಲೀಸರು ಬಂದರೆಂಬ ವಾರ್ತೆ ಕೇಳಿ ಓಡಿಹೋದ ಜುಗಾರಿಯವರ ಕಾಲಿಗೆ ಚೆನ್ನಾಗಿ ಪೆಟ್ಟಾಗಿರುವುದಾಗಿ ತಿಳಿದಿದೆ.

ಉಡುಪಿ

ಉಡುಪಿ ತಾಲೂಕು ವಿದ್ಯಾಸಮಿತಿಯು ತಾ ೧೭ರಲ್ಲು ಡಿಪ್ಯುಟಿ ಇನ್ಸ್‌ಪೆಕ್ಟರರ ಆಫೀಸಿನಲ್ಲಿ ಅಧ್ಯಕ್ಷರಾದ ಶ್ರೀ। ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಿಂದ ಸೇರಿತು. ಎಯಿಡೆಡ್ ಶಾಲಾ ಮೆನೇಜರುಗಳ ಪರಿಷತ್ತನ್ನು ಬರುವ ಆಗೋಸ್ತು ತಿಂಗಳಲ್ಲಿ ಕರೆಯುವುದಾಗಿ ನಿರ್ಣಯವಾಯಿತು.

ಹಿಂದೂ ಮುಸ್ಲಿಮ್ ಎಮೆಚ್ಯುರ್ಸ್

ಉಡುಪಿಯ ಹಿಂದೂ ಮುಸ್ಲಿಮ್ ಎಮೆಚ್ಯುರ್ಸ್ ಎಂಬ ಶಿಕ್ಷಿತ ತರುಣರ ಸಂಘವು ಕ್ರಿಕೆಟ್ ಮತ್ತು ಯಂಗ್ ಮೆನ್ಸ್ ಕ್ಲಬ್ಬಿನ ಸಹಾಯಾರ್ಥವಾಗಿ ಶ್ರೀ। ವಿ ಶೀನ ಶೆಟ್ಟರಿಂದ ರಚಿತವಾದ 'ಸಂಸಾರ ಸಂಭ್ರಮ'ವೆಂಬ ನಾಟಕವನ್ನು ಅಭಿನಯಿಸಿದರು.

ಸಾರ್ವಜನಿಕ ಆರೋಗ್ಯ ಮಸೂದೆಯ ಪ್ರಚಾರದ ಉದ್ದೇಶದಿಂದ ಮುನಿಸಿಪಲ್ ಎಲಿಮೆಂಟರಿ ಶಾಲೆಯಲ್ಲಿ (ಬೈನ್) ಮುನಿಸಿಪಲ್ ಕಮಿಶನರರಾದ ಶ್ರೀ। ಬಿ ಸೂರ್ಯನಾರಾಯಣರಾಯರು ಉಡುಪಿ ವಿದ್ಯಾರ್ಥಿವರ್ಗಕ್ಕೆ ಸಾರ್ವಜನಿಕ ಆರೋಗ್ಯದ ಕುರಿತು ಭಾಷಣವನ್ನು ಶಿಕ್ಷೆ ಮಾಡಿದರು.

ಬರುವ ವಾರ ನಮ್ಮ ಜಿಲ್ಲೆಗೆ ಆಗಮಿಸಲಿರುವ ಮಾನ್ಯ ಮಂತ್ರಿಗಳಾದ ಶ್ರೀ ಬಿ ಗೋಪಾಲರೆಡ್ಡಿಯವರನ್ನು ಮುನ್ಸಿಪಲ್ ಕೌನ್ಸಿಲಿನವರು ಉಪಹಾರಕೂಟದಿಂದ ಸತ್ಕರಿಸಿ ಒಂದು ಭಿನ್ನವತ್ತಳೆಯನ್ನು ಅರ್ಪಿಸಲಿರುವರೆಂದು ತಿಳಿದು ಬರುತ್ತದೆ.

ಪೆರಡಾಲ

ಇಲ್ಲಿನ ನವಜೀವನ ಸಂಸ್ಕೃತ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಮಹಾಸಭೆಯು ತಾ ೧೮ರಲ್ಲಿ ಕಾಲೇಜಿನಲ್ಲಿ ಸೇರಿತು. ಹಲವು ಮಂದಿ ಹಳೇ ವಿದ್ಯಾರ್ಥಿಗಳು ಹಾಜರಿದ್ದರು.

(೪ನೇ ಕಲಮನ್ನು ನೋಡಿರಿ)

ನಿಷೇಧ ಸಭೆ

ಸಮ್ಮದಲ್ಲಿಯೇ ಮಂಗಳೂರಿಗೆ ಬರಲಿರುವ ಮಾನ್ಯ ಮಂತ್ರಿ ಗೋಪಾಲರೆಡ್ಡಿಯವರ ಕೈಯಿಂದ ಶ್ರೀ। ಪೆಲಿಕ್ಸ್ ಅಲ್ಬುಕರ್ಕರ ತೈಲಚಿತ್ರವನ್ನು ಕೌನ್ಸಿಲು ಅನಾವರಣ ಮಾಡಿಸಲು ನಿಶ್ಚಯಿಸಿರುವ ಕುರಿತು ನಿಷೇಧವನ್ನು ವ್ಯಕ್ತಪಡಿಸುವರೆ, ಕಳೆದ ಆದಿತ್ಯವಾರ ಸಂಜೆ ೬-೩೦ಕ್ಕೆ ಶ್ರೀ ಗೋವಿಂದರಾವ್ ಇವರ ಅಧ್ಯಕ್ಷತೆಯಿಂದ ಸಭೆ ಜರಗಿತು. "ವೆಬ್‌ಸ್ಟರ್ ಮಾರ್ಕೆಟಿನ ಕಾಯಿಪಲ್ಯಗಳ ವಿಭಾಗವನ್ನು ಪೆಲಿಕ್ಸ್ ಅಲ್ಬುಕರ್ಕರ ಕಟ್ಟಡಕ್ಕೆ ಒಯ್ಯುವ ಕೌನ್ಸಿಲಿನ ವರ್ತನೆಯನ್ನು ಇತ್ಯರ್ಥಿಸದೆ ಬಾಕಿ ಇರುವಾಗ, ಅದಕ್ಕೆ ಕಾರಣಭೂತರಾದ ವ್ಯಕ್ತಿಗಳನ್ನು ಗೌರವಿಸುವುದು ಮುನ್ಸಿಪಾಲಿಟಿಗಾಗಲಿ, ಮಂತ್ರಿಗಳಿಗಾಗಲಿ ಉಚಿತವಲ್ಲ"ವೆಂಬರ್ಥದ ಠರಾವು ಮಂಜೂರಾಯಿತು.

ವೈದ್ಯ ಸಂಘ

ದ. ಕ. ಜಿಲ್ಲಾ ನಿಖಿಲ ಭಾರತೀಯ ವೈದ್ಯಸಂಘದ ಮಹಾಸಭೆಯು ಬುಧವಾರ ಸಂಜೆ ಜರಗಿತು. ಶ್ರೀ ಎಂ ಆರ್. ಭಟ್ಟರು ಸದಸ್ಯರನ್ನು ಫಲಹಾರಾದಿಗಳಿಂದ ಸತ್ಕರಿಸಿದರು. ವರ್ಷಾವಧಿ ಲೆಖ್ಖ ಪಾಸುಮಾಡಲಾಗಿ ಸಂಘದ ಕೆಲವು ನಿಬಂಧನೆಗಳ ತಿದ್ದುಪಡಿ ಸ್ವೀಕರಿಸಲ್ಪಟ್ಟವು. ಬರುವ ವರ್ಷಕ್ಕೆ ಕೆಳಗಿನ ಸದಸ್ಯರನ್ನು ಕಾರ್ಯಕಾರಿ ಸಮಿತಿಗೆ ಆರಿಸಲಾಯಿತು. ಅಧ್ಯಕ್ಷ ಬಿ ಆರ್. ಹರಿದಾಸ್ ಉಪಾಧ್ಯಕ್ಷ ವಿ. ಕೆ. ವಿ. ಶರ್ಮಾ ಕೋಶಾಧ್ಯಕ್ಷ ಎಂ. ಆರ್ ಭಟ್ ಕಾರ್ಯದರ್ಶಿ ಎ. ಎ. ವೆಂಕಪ್ಪಯ್ಯ ಎಂ. ವಿ. ಶಾಸ್ತ್ರಿ, ಎಚ್. ತಿಮ್ಮಪ್ಪ ಪಂಡಿತ, ಎಂ. ಕೆ. ವೈದ್ಯರ್, ಪಿ. ಐ. ಕೆ. ನಂಬಿಯಾರ್, ಕೆ ಗೋಪಾಲಾಚಾರ್, ವಿ. ವೆಂಕಟ್ರಮಣ ಭಟ್, ಕೆ. ಅನಂತ ರಾವ್

ಕರ್ನಾಟಕ

ಮೈಸೂರು—ತಾ. ೧೯ರಿಂದ ರಾಜಧಾನಿಯಲ್ಲಿ ನಡೆಯಬೇಕಾಗಿದ್ದ ಮದ್ಯಪಾನ ನಿಷೇಧ ಕಾರ್ಯವು ಮುಂದೆ ಹಾಕಿದೆ. ಮಹಾತ್ಮರಲ್ಲಿಗೆ ಹೋದ ನಿಷ್ಪಮಂಡಲವು ಬರಿಗೆ ಬಂದ ಮೇಲೆ ಪಿಕೆಟಿಂಗ್ ಆರಂಭವಾಗಬಹುದು.

ಮದ್ರಾಸಿನ ರೈಲ್ವೆ ಕೆಲಸಗಾರರ ಮುಖಂಡರಾದ ಶ್ರೀ ಗುರುಸ್ವಾಮಿಯವರು ಬೆಂಗಳೂರಲ್ಲಿ ದಿವಾನರೊಡನೆ ಭೇಟಿಮಾಡಿ ಮೈಸೂರು ರೈಲ್ವೆ ಕೆಲಸಗಾರರ ಸಂಘವನ್ನು ಸ್ಥಾಪಿಸುವ ವಿಷಯವಾಗಿ ಸಮಾಲೋಚಿಸಿದರು. ತೃಪ್ತಿಕರವಾಗಿ ಫಲಿತಾಂಶವು ಆಗಲಿಲ್ಲವೆಂದು ತಿಳಿಯುತ್ತದೆ.

ಬಳ್ಳಾರಿ—ಬಳ್ಳಾರಿಯಲ್ಲಿ ವೇಶ್ಯೆಯರ ವ್ಯವಸಾಯ ಹೆಚ್ಚಾಗಿದ್ದು ಅದನ್ನು ಶಾಸನ ಮೂಲಕ ತಡೆಯುವಂತೆ ಮಾಡಬೇಕೆಂದು ಇಲ್ಲಿನ ನಾಗರಿಕರು ಸರಕಾರಕ್ಕೆ ಬಿನ್ನಹ ಕೊಟ್ಟಿದ್ದಾಗಿ ತಿಳಿದುಬರುತ್ತದೆ. ಬಡತನದಿಂದ ವೇಶ್ಯಾವೃತ್ತಿಗಿಳಿದ್ದ ಹೆಂಗುಸರನ್ನು ಕಾಪಾಡಲು ಅನಾಥಾಲಯಗಳನ್ನು ಮಾಡುವ ವ್ಯವಸ್ಥೆಯೂ ಆಗುತ್ತಿದೆ.

ಕೊಡಗು—ಡಿಸ್ಟ್ರಿಕ್ಟ್ ಬೋರ್ಡ್ ಸಭೆಯು ತಾ ೧೯ರಂದು ಜರಗಿತು.

ಮಳೆಗಾಲದ ರಜೆಗೆ ಮಡಿಕೇರಿ ಶಾಲೆಗಳು ಜುಲಾಯಿ ೧೫ರಿಂದ ಮುಚ್ಚಲ್ಪಡುವವು.

ಮಡಿಕೇರಿ ಟ್ರಾಫಿಕ್ ಬೋರ್ಡಿನ ಮೀಟಿಂಗು ಜುಲಾಯಿ ೩ಕ್ಕೆ ಇರಿಸಿದೆ.

ಕೊಡಗಿನ ಜೇನು ಸಂಘವು ಈ ವರ್ಷ ಪ್ರತಿ ಸೇರಿಗೂ ನಾಲ್ಕಾಣೆ ಡಿವಿಡೆಂಡು ಕೊಡುವುದಾಗಿ ಪ್ರಕಟಿಸಿದೆ.

ಕುಮಟಾ— ಕಡದಿಯ ಶ್ರೀ. ಮಾಧವ ಮುಕುಂದ ಶ್ಯಾನುಭಾಗರು ಎಡಿನ್‌ಬರ್ಗಿನ ಎಮ್. ಆರ್ ಸಿ ಪಿ. ಹಾಗೂ ಡಿಪ್ಲೊಮಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು. ಪುರುಷೋತ್ತಮ ವಾಡಪ್ಪಯ್ಯ ಶೇಟ್ ಇವರು ಬಡ ಪ್ರಯಾಣಿಕರಿಗೆ ಇಳಕೊಳ್ಳಲು ಒಂದು ಧರ್ಮಶಾಲೆ ಕಟ್ಟಿಸಿದ್ದಾರೆ.

ಕೊಲ್ಲಾಪುರ

ವಂದೇ ಮಾತರಂ ಹೈಸ್ಕೂಲು—ಹೈದರಾಬಾದು ಉಸ್ಮಾನಿಯ ಕಾಲೇಜಿನಿಂದ ವಂದೇ ಮಾತರಂ ಹಾಡಿದ ವಿದ್ಯಾರ್ಥಿಗಳನ್ನು ಹೊರ ಹಾಕಿದ್ದರಿಂದ, ಅವರಿಗೆ ವಿದ್ಯೆ ಕೊಡುವ ಸಲುವಾಗಿ ವಂದೇ ಮಾತರಂ ಹೆಸರಿನ ಹೈಸ್ಕೂಲೊಂದು ತೆರೆಯಲಾಗಿದೆ.

ಶಿರಸಿ—ಶ್ರೀ। ಅಕ್ಕಲಾಸ ಗಣಪತಿಭಟ್ಟರ ಮನೆಯಲ್ಲಿ ಎರಡು ಪುನರ್ವಿವಾಹಗಳು ಜರಗಿದುವು. ಅನೇಕ ಮಂದಿ ನೆರೆದಿದ್ದರು.

ಧಾರವಾಡ—ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ. ಬಿ ಎಂ ಶ್ರೀಕಂಠಯ್ಯನವರು ಧಾರವಾಡ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಕನ್ನಡಿಗರು ಒಗ್ಗಟ್ಟಿನಿಂದಿದ್ದು, ಕಾಂಗ್ರೆಸಿನ ಮೂಲಕ ಏಕೀಕರಣವನ್ನು ಸಾಧಿಸಬೇಕೆಂದು ಆವೇಶವಾಗಿ ಭಾಷಣವಿತ್ತರು.

ಬೆಂಗಳೂರು – ಮೈಸೂರು ಸಂಸ್ಥಾನದ ಪಂಡಿತರ ಐದನೇ ಸಮ್ಮೇಳನವು ಸಂಸ್ಥಾನದ ಸಚಿವರಾದ ಶ್ರೀ ಕೆ. ವಿ. ಅನಂತರಾಮನವರ ಅಧ್ಯಕ್ಷತೆಯಿಂದ ನೆರವೇರಿತು.

[೩ನೇ ಕಲಮಿನಿಂದ ಮುಂದುವರಿದಿದೆ]

ಸಂಘದ ಏಳಿಗೆಯ ಕುರಿತು ಹಲವು ಸೂಚನೆಗಳು ಮಾಡಲ್ಪಟ್ಟವು. ಸಂಘದ ಸದಸ್ಯರಿಂದ ವಂತಿಗೆಯಾಗಿ ಒಂದು ಹಣವನ್ನು ಮೂಲಧನವನ್ನಾಗಿಡುವಂತೆ ನಿರ್ಣಯವಾಯಿತು. ಶಾಲೆಯ ವಿದ್ಯಾರ್ಥಿಗಳಿಗೆ ಸಹಾಯಕವಾಗುವಂತೆ ಏರ್ಪಡಿಸಿದ ಉಚಿತ ವಾಚನಾಲಯದ ಅಭಿವೃದ್ಧಿಯ ಕುರಿತು ಆಲೋಚಿಸಲ್ಪಟ್ಟಿತು. ಸಂಘದ ಕಾರ್ಯಗಳನ್ನು ಪ್ರಚಲಿತ ವರ್ಷದಲ್ಲಿ ಇನ್ನಷ್ಟು ಪ್ರೋತ್ಸಾಹಿಸುವ ಮಾಡಬೇಕಾಗಿ ನಿರ್ಣಯಿಸಲಾಯಿತು. ಈ ಕೆಳಗಿನವರನ್ನು ಸಂಘದ ಅಧಿಕಾರಿಮಂಡಳಿಯನ್ನಾಗಿ ಆರಿಸಲಾಯಿತು. ಶ್ರೀಗಳಾದ ಪಿ. ವೆಂಕಟರಮಣ ಭಟ್ಟ (ಅಧ್ಯಕ್ಷರು) ಕಯ್ಯಾರ ಕಿಞ್ಞಣ್ಣ ರೈ ವಿದ್ವಾನ್ ಮತ್ತು ಡಾ। ಕೆ. ಸಿ. ಆಳ್ವ (ಉಪಾಧ್ಯಕ್ಷರು) ಎಸ್. ವೆಂಕಪ್ಪ ಶರ್ಮಾ ವಿದ್ವಾನ್ ಮತ್ತು ಕೆ. ಕೃಷ್ಣಭಟ್ಟ, ಶಿರೋಮಣಿ, (ಕಾರ್ಯದರ್ಶಿಗಳು) ಕಾರ್ಯಕಾರೀ ಮಂಡಳಿಯ ಸಭೆಯು ತಾ. ೨-೭-೩೯ರಂದು ಸೇರುವುದಾಗಿ [illegible]

ಸರ್ವಾಧಿಕಾರಿಗಳನ್ನು ಎದುರಿಸಲು ಬ್ರಿಟನು ಸಿದ್ಧವಿದೆಯೇ?

ಗ್ವಾಳಿಗರಲ್ಲಿ ಫೆಡರೇಶನು ಬರುವುದೇ?

ಗ್ವಾಳಿಗರಲ್ಲಿ ಫೆಡರೇಶನು ಬರುವುದೇ? ಜವಹರಲಾಲರ ಭರವಸೆ

ಸೋಶಿಯಲಿಸ್ಟ್ ಪಕ್ಷದಲ್ಲಿ ಒಡಕು



'ಚೇಂಬರ್ಲೆನರ ಹಂಬಲ'

ಮಿ. ಚೇಂಬರ್ಲೆನರು ಕನ್ಸರ್ವೇಟಿವ್ ಸಭೆಯೊಂದರಲ್ಲಿ ಮಾತನಾಡುತ್ತಾ, ಬ್ರಿಟನು ದೇಶಶಾಂತಿಗಾಗಿ ಸಾಧಿಸುವುದೆಂದೂ, ನಶು ಶಕ್ತಿಯನ್ನು ತೋರಿಸುವ ರಾಷ್ಟ್ರಗಳನ್ನು ಎದುರಿಸಲು ಎಂದೆಂದೂ ಹೇಡಿಯಾಗಿಲ್ಲವೆಂದೂ, ಅಖಿಲ ಜಗತ್ತಿನ ಯಾವದೇ ರಾಷ್ಟ್ರಕ್ಕಿಂತಲೂ ಬ್ರಿಟನು ತನ್ನ ಸೈನ್ಯಬಲ್ಲಿ ಹೆಮ್ಮೆ ಪಡಬಹುದೆಂದೂ ಹೇಳಿದ್ದಾರೆ. ಆಮೇಲೆ ತಮ್ಮ ಸ್ವಾಧೀನದಲ್ಲಿರುವ ಇತರ ಆಶ್ರಿತ ರಾಷ್ಟ್ರಗಳನ್ನು ನಾವು ಅಭಿವೃದ್ಧಿಗೊಳಿಸಲು ಇಚ್ಛಪಡುತ್ತಿರುವೆವಲ್ಲದೆ, ಬ್ರಿಟನಿನ ಉಪಯೋಗಕ್ಕಾಗಿ ಆಶ್ರಿತ ರಾಷ್ಟ್ರಗಳನ್ನು ಬಲಿ ಮಾಡುವುದು ಸರ್ವಥಾ ನಮ್ಮ ಇಷ್ಟವಲ್ಲವೆಂದೂ ತಿಳಿಸಿದರು. ಹೀಗಾಗಿ ಬ್ರಿಟನಿನ ಇಂದಿನ ಧೋರಣೆಯು ಅನ್ಯರಾಷ್ಟ್ರಗಳಿಂದ ಅನ್ಯಾಯಗೊಳ್ಳುವ ರಾಷ್ಟ್ರಗಳನ್ನು ದೇಶಶಾಂತಿಗಾಗಿ ಒಂದುಗೂಡಿಸುವುದಾಗಿದೆಯೆಂದು ಚೇಂಬರ್ಲೆನರ ಹೇಳಿಕೆ.

ಗ್ವಾಳಿಗರಲ್ಲಿ ಫೆಡರೇಶನು ಬರುವುದು

ಆಶ್ರಿತ ರಾಜರು ಫೆಡರೇಶನಿನ ವಿಷಯವಾಗಿ ಕೊಟ್ಟ ಅಸಂತೃಪ್ತಿಯ ಉತ್ತರವನ್ನು ವೈಸರಾಯರಿಗೆ ಕಳುಹಿಸಿರುವುದಾಗಿಯೂ, ಬರುವ ವಸಂತ ಕಾಲದಲ್ಲಿ ಅದರ ನಿರ್ಣಯವಾಗಿ ಲಂಡನಿನಿಂದ ಕಡೆಯ ತೀರ್ಮಾನವಾದ ಶ್ವೇತಪತ್ರವು ಹೊರಡುವುದೆಂದೂ ತಿಳಿದು ಬರುತ್ತದೆ. ಗ್ವಾಳಿಗರಲ್ಲಿ ಫೆಡರೇಶನನ್ನು ಜಾರಿಗೆ ತರುವ ಸರಕಾರದ ಅಭಿಪ್ರಾಯ ತಂತ್ರಗಳು ನಡೆಯುತ್ತಿವೆ.

'ನಾವು ನಿಮ್ಮೊಡನಿದ್ದೇವೆ'

ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರು ಪಡುತ್ತಿರುವ ಸಂಕಷ್ಟದ ಕುರಿತು ತಮ್ಮ ಸಂದೇಶವನ್ನು ಪಂಡಿತ ನೆಹರುಗಳು ಕಳುಹಿಸುತ್ತಾ ಅದರಲ್ಲಿ ಹೀಗೆಂದು ಹೇಳುತ್ತಾರೆ. "ದಕ್ಷಿಣ ಆಫ್ರಿಕದಲ್ಲಿರುವ ನಮ್ಮ ದೇಶಬಾಂಧವರೊಡನೆ ನಾವು ಸರ್ವದಾ ಇರುವೆವೆಂದೇ ತಿಳಿಸುತ್ತೇನೆ. ನೀವು ಮಾಡುವ ಪ್ರತಿಯೊಂದು ಕೆಲಸವು ಹಿಂದೂದೇಶದ ಗೌರವವನ್ನು ಕಾಪಾಡುವಂತಹುದಾಗಿದೆ. ದುಷ್ಟವಾದ ಮತ್ತು ರಾಷ್ಟ್ರೀಯ ಘಾತುಕವಾದ ಶಕ್ತಿಗೆ ನಾವು ಎಂದೆಂದೂ ಮಣಿಯಬಾರದು. ಅದನ್ನು ತಡೆಯುವಲ್ಲಿ ನಮ್ಮಿಂದ ಸಾಧ್ಯವಾದ ಸಾಮರ್ಥ್ಯವನ್ನು ಮುಂದೊಡ್ಡಬೇಕು. ಸಕ್ತ ರಾಷ್ಟ್ರಗಳು ಮಾತ್ರ ದುಷ್ಟ ಶಕ್ತಿಗೆ ಶರಣಾಗುತ್ತವೆ. ಆದರೆ ನಾವು ಎಂದೆಂದೂ ಜೀವಂತವಾಗಿರುವ ಜನಾಂಗದವರು. ಈ ಸಾಮ್ರಾಜ್ಯದ ಕೈಕೆಳಗೆ ನಾವಿರಬೇಕಾದುದು ನಮ್ಮ ದೌರ್ಭಾಗ್ಯ. ಈ ಸಾಮ್ರಾಜ್ಯವು ಆದಷ್ಟು ಬೇಗನೇ ಕೊನೆಗೊಂಡಷ್ಟು ನಮಗೆಲ್ಲರಿಗೂ ಸುಖವಾದೀತು" ಎಂದು ತಿಳಿಸಿದ್ದಾರೆ.

ಭಾರತದಲ್ಲಿ ನಾಝೀ ಕುತಂತ್ರಗಳೇ?

ಜರ್ಮನ್ ರಾಷ್ಟ್ರೀಯ ಬೇಂಕಿನ ಮಾಜಿ ಅಧ್ಯಕ್ಷನೂ ಹಿಟ್ಲರನ ಬಲಗೈಯೂ ಆಗಿದ್ದ ಡಾ. ಶಾಚರವರು ಹಿಂದೂದೇಶದಲ್ಲಿ ಪ್ರಯಾಣ ಮಾಡಿದರಷ್ಟೆ. ಅವರು ತನ್ನ ಪ್ರಯಾಣದಲ್ಲಿ ರಾಜಕೀಯ ವಿಷಯವೇನೂ ಸಂಬಂಧಿಸಿಲ್ಲವೆಂದು ಹೇಳಿದರೂ ಅದರೊಡನೆ ಅವರ ನಾಜಿ ರಾಜನೀತಿ ಪ್ರಚಾರಕರೆಂಬ ವಾರ್ತೆಯೂ ಹರಡಿದೆ. ಇಂದು ಜರ್ಮನಿಯಲ್ಲಿ ಕೆಲವೇ ಸಮಯಗಳ ಒಳಗೆ ಕೆಲವು ಭಾರತೀಯ ಮುಖಂಡರನ್ನು ಅಲ್ಲಿಗೆ ಆಮಂತ್ರಿಸಿರುವರಾಗಿ ವಾರ್ತೆಯಿದೆ. ಅದು ಮಾತ್ರವಲ್ಲದೆ ಅಲ್ಲಿನ ಲೇಬರ್ ಮಂತ್ರಿಯು ಜರ್ಮನಿಯಲ್ಲಿ ಕಲಿಯುತ್ತಿರುವ ಹಿಂದೀಯ ವಿದ್ಯಾರ್ಥಿಗಳನ್ನು ಅಲ್ಲಿನ ಲೇಬರ್ ಚಳವಳಿಯನ್ನು ಹಿಟ್ಲರನು ಬಗೆಹರಿಸಿದ ರೀತಿಯನ್ನು ಕಲಿಯುವರೆ ಆಮಂತ್ರಿಸಿರುವನು.

ಫಾರ್‌ವರ್ಡ್ ಬ್ಲೋಕಿನ ತ್ರಿಮುಖ ಧ್ಯೇಯ.

ಸುಭಾಷರು ತಮ್ಮ ಹೊಸಪಕ್ಷವಾದ ಫಾರ್‌ವರ್ಡ್ ಬ್ಲಾಕಿನ ತ್ರಿಮುಖ ಧ್ಯೇಯದ ಕುರಿತು ಹೀಗೆಂದು ಬರೆಯುತ್ತ ವಿವರಿಸುತ್ತಾರೆ.

(೧) ಎಡಪಕ್ಷಗಳನ್ನು ಒಂದು ಮಾಡುವುದು (೨) ಹಾಗೆ ಮಾಡುವುದರಿಂದ ಕಾಂಗ್ರೆಸಿನಲ್ಲಿ ಐಕ್ಯತೆ ತರುವುದು (೩) ಹಾಗೆ ಐಕ್ಯತೆಯಾಗಿ ಸಮಯವು ಸನ್ನಿಹಿತವೆಂದು ತಿಳಿದಾಗ ಪೂರ್ಣ ಸ್ವರಾಜ್ಯಕ್ಕಾಗಿ ತೀವ್ರ ಹೋರಾಟವಮಾಡುವುದು.

ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದಲ್ಲಿ ಒಡಕು

ಸೋಶಿಯಲಿಸ್ಟ್ ಮತ್ತು ಕಮ್ಯುನಿಸ್ಟ್ ಐಕ್ಯದ ವಿಷಯವಾಗಿ, ಇಂದಿನ ಹಿಂದೂದೇಶದ ಸಮಸ್ಯೆಯನ್ನು ಎದುರಿಸುವ ಧೋರಣೆಯ ವಿಷಯವಾಗಿಯೂ ಸೋಶಿಯಲಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಜಯಪ್ರಕಾಶ ನಾರಾಯಣರೊಡನೆ ಅಭಿಪ್ರಾಯಭೇದವುಂಟಾಗಿ, ಶ್ರೀಗಳಾದ ಎಂ. ಆರ್. ಮಸಾನಿ, ಡಾ. ರಾಮಮೋಹನ ಲೋಹಿಯೋ, ಅಶೋಕ ಮೆಹ್ತಾ, ಯುಸಫ್ ಮೆಹರಾಲಿ, ಅಚ್ಯುತ ಪಟವರ್ಧನ ಇವರು ಅಖಿಲ ಭಾರತ ಕಾಂಗ್ರೆಸು ಸೋಶಿಯಲಿಸ್ಟ್ ಪಕ್ಷದ ಎಕ್ಸಿಕ್ಯುಟಿವ್ ಕೌನ್ಸಿಲಿನಿಂದ ರಾಜೀನಾಮೆಯಿತ್ತು ಹೊರಬಂದಿರುವುದಾಗ ತಿಳಿಯಬರುತ್ತದೆ. ಆಚಾರ್ಯ ನರೇಂದ್ರ ದೇವರು ಪಕ್ಷದಲ್ಲಿ ಐಕ್ಯತೆ ಮಾಡಲು ಯತ್ನಿಸುವರೆಂದೂ ತಿಳಿಯುತ್ತದೆ.

ಬದರೀಶ್ವರದಲ್ಲಿ ವಿದ್ಯಾಮಂದಿರ.

ನರ್ಮದಾ ನದಿಯ ದಡದಲ್ಲಿರುವ ಹರ್ದ್ವಾರ್ ಎಂಬ ನಗರದ ೧೪ ಮೈಲುಗಳ ದೂರದಲ್ಲಿರುವ ಬದರೀಶ್ವರದಲ್ಲಿ ಒಂದು ವಿದ್ಯಾಮಂದಿರ ಶಾಲೆ ತೆರೆಯಲ್ಪಟ್ಟಿದೆ. ಅನೇಕ ಸರಕಾರೀ ಉದ್ಯೋಗಸ್ಥರೂ ಆದರ ಸಮಾರಂಭದಲ್ಲಿ ಭಾಗವಹಿಸಿದ್ದರು.

ಬರುವ ಕಾಂಗ್ರೆಸ್ ನಗರ

ರಾಮಘರ ಎಂಬ ಗ್ರಾಮದಲ್ಲಿ ಮುಂದಿನ ಕಾಂಗ್ರೆಸ್ ಸಭಾಧಿವೇಶನವು ಜರಗುವುದು. ಸುತ್ತಲೂ ಕೂಡಾ ತುಂಬಾ ಹೂದೋಟಗಳನ್ನು ಮಾಡುವ ಏರ್ಪಾಟು ಮಾಡಿ ಇಡೀ ನಗರವೇ ಸುಂದರ ಉದ್ಯಾನದಂತೆ ಕಂಗೊಳಿಸುವುದು. ಸ್ವಾಗತ ಸಮಿತಿಯ ಅಧಿಕಾರದಲ್ಲಿರುವ ಶ್ರೀ ಅಂಬಿಕಾಕಾಂತ ಸಿಂಹರವರು ಆ ಬಗ್ಗೆ ಬಹಳ ಯತ್ನಮಾಡಿ ನಗರವನ್ನು ಅಪೂರ್ವ ಶೋಭೆಯಿಂದ ಕೂಡಿದನ್ನಾಗಿ ಮಾಡಲು ಯತ್ನಿಸುತ್ತಿದ್ದಾರೆ.

ಫಾರ್‌ವರ್ಡ್ ಬ್ಲಾಕ್ ಕಾನ್ಫರೆನ್ಸು

ಬೊಂಬಾಯಿಯಲ್ಲಿ ಸೇರಿದ ಅಖಿಲಭಾರತ ಫಾರ್ವರ್ಡ್ ಬ್ಲೋಕಿನ ಸಮ್ಮೇಳನದಲ್ಲಿ ಮಾತನಾಡುತ್ತಾ ಸುಭಾಷಬೋಸರು ಕಾಂಗ್ರೆಸಿನಲ್ಲಿ ಪಕ್ಷಭೇದಗಳಿರುವುದು ನ್ಯಾಯವೆಂದೂ, ಕಾಂಗ್ರೆಸಿನಲ್ಲಿ ಇಂದು ರಾಜಕೀಯದಲ್ಲಿ ಧಾರ್ಮಿಕತೆಯನ್ನು ಬೆರಸುವುದು ಶುದ್ಧ ರಾಜಕೀಯವಲ್ಲವೆಂದೂ, ತಾನು ಈ ಪಕ್ಷವನ್ನು ಈಗ ಸ್ಥಾಪಿಸುವುದು ರೋಮ್, ಬರ್ಲಿನುಗಳಿಂದ ಬರುವ ಹಣದಿಂದಲೆಂದು ವಿರೋಧಿಗಳು ಮಾಡುವ ಅಪಪ್ರಚಾರವು ಲಜ್ಜಾಸ್ಪದವೆಂದೂ ಹೇಳಿದರು. ಕಟ್ಟಕಡೆಗೆ ಕಾಂಗ್ರೆಸು ಮಂತ್ರಿಮಂಡಲಗಳು ಮಾಡುತ್ತಿರುವ ಕೆಲಸಗಳು ಉಚಿತವಾಗಿಲ್ಲದಿದ್ದರೆ ಅವುಗಳನ್ನು ಜನರು ನಿರ್ಭಯವಾಗಿ ವಿಮರ್ಶಿಸಬೇಕೆಂದೂ ಹೇಳಿದರು. ಆ ಮೇಲೆ ಮಹಾತ್ಮರು ಸ್ವಾರ್ಥರಾಗಿಯೂ ಕ್ರಾಂತಿಕಾರಕ ಪ್ರೇರಣೆಯಿಂದ ಸಿದ್ಧರಾಗಿ ಕಾಂಗ್ರೆಸು ಕೆಲಸಗಳನ್ನು ಚಟುವಟಿಕೆಯಿಂದ ಮಾಡಬೇಕಾಗಿಯೂ ಸಾರಿದರು.

ಹರಿಜನರಿಗೆ ದೇವಸ್ಥಾನ ಪ್ರವೇಶ ಚಳವಳಿ.

ದಕ್ಷಿಣ ಹಿಂದೂಸ್ಥಾನದಲ್ಲಿ ಹರಿಜನರಿಗೆ ದೇವಸ್ಥಾನ ಪ್ರವೇಶ ಚಳವಳಿಯು ಭರದಿಂದ ಸಾಗುತ್ತದೆ. ಶ್ರೀ ವಿ. ತಿರವೇಂಕಟೇ ನಾಯಕರುಗಳು ತಿರುವಾಂಕೂರು, ತಮಿಳು ನಾಡು ಮೊದಲಾದೆಡೆಗಳಲ್ಲಿ ಸಂಚರಿಸಿ ಆ ಕುರಿತು ಜನರನ್ನು ಎಚ್ಚರಿಸುತಿದ್ದಾರೆ. ಮಾನ್ಯ ಮಂತ್ರಿ ರಾಜಾಜಿಯವರು ಎಲ್ಲೆಲ್ಲೂ ತಮ್ಮ ಅಮೂಲ್ಯ ಉಪದೇಶವೀಯುತ್ತಿದ್ದಾರೆ. ತನ್ನವೆಲ್ಲಿ ಮೊದಲಾದ ಕಡೆಗಳಲ್ಲಿ ಸಾರ್ವತ್ರಿಕವಾದ ಪ್ರಚಾರ ಚಳವಳಿಯೇ ಸಾಗುತ್ತಿದೆ.

ಕೈರೋದಲ್ಲಿ ಕಮಲಾದೇವಿಯವರು

ಯುರೋಪು ಯಾತ್ರೆಗಾಗಿ ಹೋದ ಶ್ರೀಮತಿ ಕಮಲಾದೇವಿಯವರು ಕೈರೋದಲ್ಲಿ ವಾಫ್ದ್ ಪಕ್ಷದ ಧುರೀಣರಿಂದ ಸಂಭ್ರಮಪೂರ್ವಕವಾಗಿ ಸತ್ಕರಿಸಲ್ಪಟ್ಟರು. ಮಿ. ಎ. ಅಬ್ದುಲ್ ಸಾಹೇಬರೊಡನೆ ಅವರು ಅನೇಕ ಸ್ಥಳಗಳನ್ನು ಸಂದರ್ಶಿಸಿದರು.



ಗಡಿನಾಡಿನ ಪ್ರಧಾನರ ಪುತ್ರ ಶೋಕ!

ಗಡಿನಾಡಿನ ಪ್ರಧಾನರಾದ ಡಾ। ಖಾನ್ ಸಾಹೇಬರ ಪುತ್ರ ೨೩ ವರ್ಷ ಪ್ರಾಯದ ಶ್ರೀ ಜೋನ್ ಖಾನ್ ಸಾಹೇಬರು ತಾ ೧೯ರಂದು ಪ್ರಾತಃ ೧೦ ಗಂಟೆಗೆ ತೀರಿಹೋದ್ದರಿಂದ ಇಡೀ ಗಡಿನಾಡೇ ದುಃಖಸಾಗರದಲ್ಲಿ ಮುಳುಗಿದೆ. ಕಳೆದ ೨೦ ದಿವಸಗಳಿಂದ ಅವರು ಸನ್ನಿಪಾತ ಜ್ವರದಿಂದ ಹಾಸಿಗೆ ಹಿಡಿದಿದ್ದರು.

ಸುಭಾಷಚಂದ್ರ ಬೋಸರು ಮೊದಲಾಗಿ ಪೇಶಾವರಕ್ಕೆ ಬಂದವರು ಡಾ। ಖಾನ್ ಸಾಹೇಬರ ಮನೆಗೆ ತೆರಳಿದರು. ಅವರ ದುಃಖದಲ್ಲಿ ತಾವೂ ಸಹಸಂತಾಪವನ್ನು ವ್ಯಕ್ತಪಡಿಸಿದರು. ಡಾ। ಖಾನಸಾಹೇಬರು ಬಹುವಾಗಿ ಪಶ್ಚಾತ್ತಾಪದವರಾದರೂ ಧೈರ್ಯಗೊಂಡಿದ್ದರು.

ಡಾ। ಖಾನ್ ಸಾಹೇಬರಿಗೆ ಮೃತರಾದ ಈ ಜೋನ್ ಖಾನರು ಇಂಗ್ಲಿಷು ಪತ್ನಿಯಲ್ಲಿ ಹುಟ್ಟಿದವರಾಗಿ ಬಹಳ ಚುರುಕಾಗಿಯೂ ಸಂಪನ್ನರಾಗಿಯೂ ಇದ್ದರು. ಅವರ ವಿದ್ಯಾಭ್ಯಾಸವು ಇಂಗ್ಲೆಂಡಿನಲ್ಲಿ ನಡೆದಿತ್ತು. ಅವರು ಬಿ. ಎ. (ಓನರ್ಸ್) ಇಂಗ್ಲೆಂಡಿನಲ್ಲಿ ಕಲಿತು ಎಮ್ಮಾರ್ ಸ್ಕೂಲಿನಲ್ಲಿ ಕಳೆದ ೧೦ ವರ್ಷಗಳನ್ನು ಸಿದೇಶದಲ್ಲಿ ಕಳೆದು ಹಿಂತಿರುಗಿದರು. ಅವರು ಕಳೆದ ನಪ್ಪಂಬರಿಗೆ ಪೇಶಾವರಕ್ಕೆ ಬಂದು ಪ್ರಾಕ್ಟೀಸ್ ಸುರುಮಾಡಿ ಬಹು ಜನಪ್ರಿಯರಾಗಿದ್ದರು.

ಹೊಗೆಸೊಪ್ಪಿನ ಕಾನೂನು ಲೈಸೆನ್ಸಿಗೆ ಸೂಚನೆಗಳು

ಮದ್ರಾಸು ಸರಕಾರವು ೧೯೩೯ನೇ ಆಗಸ್ಟ ೧ರಿಂದ ಜಾರಿಗೆ ಬರಲಿರುವ ಹೊಗೆಸೊಪ್ಪಿನ ಕಾನೂನಿನ ಕುರಿತು ಈ ಸಾರಾಂಶದ ಸೂಚನೆಗಳನ್ನು ಕೊಟ್ಟಿದೆ.

"ಲೈಸನ್ಸು ಕೊಡಲು ನಿಶ್ಚಿತರಾದ ಆಫೀಸರರಿಂದ ಲೈಸನ್ಸು ಪಡಕೊಳ್ಳದ ಯಾವನೂ ಕೂಡಾ ೧೯೩೯ನೇ ಆಗಸ್ಟ ೧ರ ಬಳಿಕ ಹೊಗೆಸೊಪ್ಪನ್ನು ಮಾರುವುದಾಗಲಿ, ಸಿದ್ಧಮಾಡುವುದಾಗಲಿ, ಏಜೆನ್ಸಿ ಮಾಡುವುದಾಗಲಿ ಕೂಡದು. ಸಿಗರೇಟು, ಬೀಡಿ, ಹುಡಿ ಮೊದಲಾದವುಗಳಿಗೂ ಲೈಸನ್ಸು ಆಗಕ್ಕ. ಎಲೆಯೊಡನೆ ಜಗಿಯುವ ಹೊಗೆಸೊಪ್ಪಿಗೆ ಲೈಸನ್ಸು ಬೇಡ. ಕಾನೂನಿನಂತೆ ಲೈಸನ್ಸು ಪಡೆಯದೆ ಇರುವವನು ಶಿಕ್ಷೆಗೆ ಗುರಿಯಾದಲ್ಪಡುವನು. ಹೀಗೆ ಲೈಸನ್ಸು ಪಡೆಯಲು ಇಷ್ಟಪಡುವವರು ಅದಕ್ಕಾಗಿ ತಯಾರಿಸಿದ ಫೋರ್ಮಿನಲ್ಲಿ ಬರೆದು ತಿಳಿಸಬೇಕು. ತಾಲೂಕ್ ತಹಶಿಲ್ದಾರರ ಕೈಕೆಳಗಿನ ಅಸಿಸ್ಟೆಂಟ್ ಸರ್ಕಲ್ ಟೇಕ್ಸ್ ಆಫೀಸರರಿಗೆ ಅರ್ಜಿ ಕಳುಹಿಸಬೇಕು. ಅಂತಹ ಫೋರ್ಮುಗಳನ್ನು ಅಗತ್ಯವಿದ್ದವರಿಗೆ ಕಳುಹಿಸಲಾಗುವುದು. ಅರ್ಜಿಯನ್ನು ಹಣದೊಡನೆ ಕಳುಹಿಸಿ ಕಲ್ಪಿಸಿದ ಹದಿನೈದು ದಿನಗಳೊಳಗೆ ಲೈಸನ್ಸು ಕೊಡಲಾಗುವುದು.

ಮುಸ್ಲಿಂ ಲೀಗಿಗೆ ಮುಸ್ಲಿಂ ರಾಜ್ಯದ ಎಚ್ಚರಿಕೆ!

ಜಪಾನ್ಯ ಸ್ವಾತೋವನ್ನು ಆಕ್ರಮಿಸಿತು

ನರೇಂದ್ರರು ಮಹಾತ್ಮರಿಗೆ ಶರಣಾಗುವರೆ!

ಜರ್ಮನ್ ರಶ್ಯಾಗಳ ಸಂಧಾನ!

ಮುಸ್ಲಿಂ ಲೀಗಿಗೆ ಮುಸ್ಲಿಂ ರಾಜ್ಯದ ಎಚ್ಚರಿಕೆ.

ಟರ್ಕಿಯ ವಿದೇಶೀಯ ಆಫೀಸಿನ ಪತ್ರಿಕಾ ಇಲಾಖೆಯ ಡೈರೆಕ್ಟರಾದ ಮಿ। ಬೇಯವರು ಒಂದು ಪ್ರಕಟಣೆಯಲ್ಲಿ ಹೀಗೆಂದು ಎಚ್ಚರವಿತ್ತಿರುವರು "ನಾವು ಹಿಂದೂದೇಶದಲ್ಲಿ ಅಖಂಡ ಜನಾಂಗದ ಕಡೆಗೆ ಸಹ ಸಂತಾಪಗೊಂಡಿದ್ದೇವೆ ಆದರೆ ನಾವು ಮುಸ್ಲಿಂ ರಾಜ್ಯದವರಾದುದರಿಂದ ಮುಸ್ಲಿಂ ಜನರ ಕುರಿತು ಪ್ರತ್ಯೇಕ ರಿಯಾಯಿತಿಯುಳ್ಳವರಾಗಬೇಕೆಂದು ಹಾರೈಸುವುದು ತಪ್ಪು, ಹಿಂದೂದೇಶದಲ್ಲಿ ಮುಸ್ಲಿಮರು ತಮ್ಮ ಮಸೀದಿಗಳ ಮುಂದೆ ಸಂಗೀತದ ವಾದನದಿಂದ ತೊಡಕಾಗುವುದೆಂದು ಗೊಂದಲವೆಬ್ಬಿಸುತ್ತಾರೆ ಇದಕ್ಕೆ ಅರ್ಥವಿಲ್ಲ ನಿಜವಾಗಿ ದೇವರನ್ನು ಧ್ಯಾನಪೂರ್ಣ ಆರಾಧಿಸುವವನಿಗೆ ಹೊರಗಿನ ಸಂಗೀತದಿಂದ ಉಪದ್ರವವೆಂದರೆ ಹೇಗೆ?

ಜಪಾನು ಸ್ವಾತೋವನ್ನು ಆಕ್ರಮಿಸಿತು

ದಕ್ಷಿಣ ಚೈನದ ಮುಖ್ಯ ಬಂದರವಾದ ಸ್ವಾತೋವನ್ನು ಜಪಾನು ಆಕ್ರಮಿಸಿಕೊಂಡಿರುವುದಾಗಿ ತಿಳಿಯುತ್ತದೆ

ಚೈನೀಯರು ಸ್ವಾತೋವಿನ ಮೂಲಕ ಪರದೇಶದಿಂದ ಸೈನ್ಯವನ್ನು ತರಿಸುತ್ತಿದ್ದರೆಂದೂ, ಅಲ್ಲಿ ಜಪಾನೀಯರು ಬಂದಿಳಿಯಬೇಕಾದರೆ ಬಹಳ ಸಾಹಸಪಟ್ಟಿರುವರಾಗಿಯೂ ತಿಳಿದಿದೆ ಕೇಂಟನನ್ನು ಚೈನವು ಕಳಕೊಂಡ ಮೇಲೆ ಈ ಬಂದರವೇ ಬಹಳ ಪ್ರಾಮುಖ್ಯ ಬಂದರವಾಗಿದ್ದುದರಿಂದ ಇದನ್ನು ಕಳಕೊಂಡುದರಿಂದ ಚೈನವು ಬಹು ನಷ್ಟಹೊಂದಿದಂತಾಗಿದೆ

ಸ್ವಾತೋವಿನಲ್ಲಿರುವ ವಿದೇಶೀಯ ಯುದ್ಧನೌಕೆಗಳು ಜೂನ್ ೨೨ನೇ ಮಧ್ಯಾಹ್ನ ಒಂದು ಗಂಟೆಗೆ ಬಂದರವನ್ನು ಬಿಟ್ಟುಬಿಡಬೇಕೆಂದು ಜಪಾನು ಆಜ್ಞೆ ಇತ್ತಿರುವುದು ಚೈನದ ಸ್ವಾಧೀನ ... ... ಮತ್ತು ... ಎಂಬೆರಡೇ ಬಂದರಗಳಿವೆ

ನರೇಂದ್ರರು ಮಹಾತ್ಮರನ್ನು ಸಂದರ್ಶಿಸುವರು

ಆಶ್ರಿತ ರಾಜ್ಯಗಳ ನರೇಂದ್ರರು ಮಹಾತ್ಮಜಿಯವರನ್ನು ಸಂದರ್ಶಿಸುವರೆಂದು ತಿಳಿದು ಬಂದಿದೆ ಹಾಗಾದರೆ ಅವರ ಭೇಟಿಯು ಆಶ್ರಿತ ರಾಜ್ಯಗಳಲ್ಲಿ ನಡಾಹಲಿರುವ ರಾಜಕೀಯ ಸುಧಾರಣೆಯ ವಿಷಯವಾಗಿಯೂ, ಫೆಡರೇಶನಿನಲ್ಲಿ ಆಶ್ರಿತ ರಾಜ್ಯಗಳೂ ಸೇರಲಿರುವ ವಿಷಯವೂ ಆಗಿರಬಹುದು ಇದು ಮಹಾತ್ಮಜಿಯವರು ಆಶ್ರಿತ ರಾಜ್ಯದ ಜನಗಳದ ಕುರಿತು ಕಾಂಗ್ರೆಸಿಗೆ ಉಪದೇಶದ 'ಹೊಸ ರೀತಿ'ಯಿಂದಾಗಿ ನರೇಂದ್ರರು ಮಹಾತ್ಮರಲ್ಲಿ ಕೋರಿಸುವ ವಿಶ್ವಾಸದ ಫಲವಾಗಿರುತ್ತದೆ ಈ ತಿಂಗಳ ಅಂತ್ಯದೊಳಗೆ ಅವರ ಭೇಟಿಯಾಗುವುದೋ ಎಂದು ನಿರೀಕ್ಷಿಸಲಾಗಿದೆ

ಒಪ್ಪಂದವು ಹಿತವಲ್ಲವೇ?

ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನದಲ್ಲಿ ಪ್ರಶ್ನಿಸುವ ಸಂದರ್ಭದಲ್ಲಿ ದಿವಾನರಾದ ಮಿರ್ಜಾ ಸಾಹೇಬರು ಸರ್ದಾರ ಪಟೇಲರೊಡನೆ ನಾನು ಒಪ್ಪಂದ ಮಾಡಿರುವುದಿಲ್ಲವೆಂದೂ, ಒಪ್ಪಂದವೆಂಬ ತಪ್ಪು ವೇ ತನಗೆ ಆಗುವುದಿಲ್ಲವೆಂದೂ, ಸರ್ದಾರರು ಕಾಂಗ್ರೆಸಿನ ಪರವಾಗಿ ಕೆಲವು ಸೂಚನೆಗಳನ್ನು ಮುಂದಿಡಿಸಲು ನಾನು ಕೆಲವು ಸೂಚನೆಗಳಿಗೆ ಸಮ್ಮತಿಯಿತ್ತಿರುವುದಾಗಿಯೂ ಹೇಳಿದರು ಸರ್ದಾರರು ಒಂದದ್ದು ನನ್ನೊಡನೆ ಒಪ್ಪಂದ ಮಾಡುವ ಸಲುವಾಗಿ ಅಲ್ಲ, ಇಲ್ಲಿನ ಕೆಲವು ಗೃಹಸ್ಥರು ಜೈಲಿನಲ್ಲಿರಲು ಅವರ ಬಿಡುಗಡೆಗಾಗಿ ಅವರು ಬಂದಿದ್ದರು. ಹಾಗೆ ಮಾಡಿ ಅವರು ಹೋಗಿದ್ದಾರೆಂದೂ ಹೇಳಿದರು

ಆಶ್ರಿತ ರಾಜ್ಯದ ಪ್ರಜಾಪರಿಷತ್ತು

ಬೊಂಬಾಯಿಯಲ್ಲಿ ಅಖಿಲ ಭಾರತ ಆಶ್ರಿತ ರಾಜ್ಯಗಳ ಪ್ರಜಾಪರಿಷತ್ತಿನ ಸ್ಟೇಂಡಿಂಗ್ ಕಮಿಟಿಯ ಸಭೆಯು ಜವಾಹರಲಾಲ ನೆಹರುಗಳ ಅಧ್ಯಕ್ಷತೆಯಿಂದ ಸೇರಿತು ಮಹಾತ್ಮಜಿಯವರ ಬೋಧನೆಯಿಂದ ಮುಂದೆ ಆಶ್ರಿತ ರಾಜ್ಯದ ಪ್ರಜೆಗಳು ಕಾರ್ಯ ಕೈಕೊಳ್ಳಬೇಕಾಗಿ ನಿರ್ಣಯವಾಯಿತು. ಆಶ್ರಿತ ರಾಜ್ಯಗಳ ಕುರಿತು ಒಂದು ವಿಸ್ತಾರವಾದ ಪುಸ್ತಕವನ್ನು ಬರೆದು ಪ್ರಕಟಿಸುವುದಾಗಿಯೂ ನಿರ್ಣಯವಾಯಿತು.

ಜರ್ಮನ್ ಸೋವಿಯಟುಗಳ ಸಂಧಾನ

ಜರ್ಮನಿಯ ಕೈಗಾರಿಕೆಯ ಪ್ರತಿನಿಧಿಗಳು ರಷ್ಯಕ್ಕೆ ತೆರಳಿರುವರು ಎರಡು ದೇಶಗಳ ವ್ಯಾಪಾರಸಂಬಂಧವು ಪರಸ್ಪರ ಯೋಗ್ಯ ರೀತಿಯಲಿ ನಡೆಯುವಂತೆ ಯತ್ನಿಸುವುದೇ ಅವರ ಕೆಲಸವಾಗಿದೆಯೆಂದು ತಿಳಿದಿದೆ

ಬ್ರಿಟಿಷ್ ಪ್ರತಿನಿಧಿಯು ಜರ್ಮನಿಯಿಂದ ಹೊರಗೆ

ಜರ್ಮನಿಯಲ್ಲಿರುವ ಬ್ರಿಟಿಷ್ ಪ್ರತಿನಿಧಿಯನ್ನು ಹೊರಗೆ ಹೋಗಬೇಕಾಗಿ ಜರ್ಮನಿ ಸರಕಾರವು ಆಜ್ಞಾಪಿಸಿದೆ ಲಿವರ್‌ಪೂಲಿನಲ್ಲಿದ್ದ ಜರ್ಮನಿಯ ಪ್ರತಿನಿಧಿಯನ್ನು ಅಲ್ಲಿಂದ ಬ್ರಿಟಿಷರು ಹೋಗಲು ಹೇಳಿದ್ದಕ್ಕೆ ಇದು ಪ್ರತಿಯಾಗಿ ಮಾಡಿದ್ದಾಗಿರುತ್ತದೆ ಆದರೆ ಜರ್ಮನಿ ಸರಕಾರವು ಆತನನ್ನು ಹೊರಗೆ ಹಾಕುವುದಕ್ಕೆ ಆತನು ನಿಷೇಧಾತ್ಮಕ ಕೆಲಸಮಾಡುತ್ತಿರುವುದೇ ಕಾರಣವೆಂದು ಹೇಳುತ್ತದೆ. ಆದರೆ ಬ್ರಿಟಿಷ್ ಮಂಡಳದಲ್ಲಿ ಜರ್ಮನಿಯ ಹೇಳಿಕೆಯು ನ್ಯಾಯಸಮ್ಮತವಲ್ಲವೆಂಬ ಅಭಿಪ್ರಾಯವಿರುತ್ತದೆ

ಹಿಟ್ಲರನು ಗರ್ಜಿಸುತ್ತಾನೆ!

ಹಿಂಡೆನ್‌ಬರ್ಗಿನ ಯುದ್ಧದಲ್ಲಿ ಜರ್ಮನ್ ಸೈನ್ಯವು ರಶ್ಯಾ ಸೈನ್ಯವನ್ನು ಸೋಲಿಸಿದ ೨೫ನೇ ಸ್ಮಾರಕ ವರ್ಷದ ಉತ್ಸವ ದಿನ ತಾ ೨೭ರಂದು ಹಿಟ್ಲರನು ಜರ್ಮನ್ ರಾಷ್ಟ್ರ ಶಕ್ತಿಯ ಕುರಿತು ಆವೇಶಪೂರ್ಣವಾದ ಭಾಷಣವೊಂದನ್ನು ಮಾಡಿರುವನು.

ವಲ್ಲಭಭಾಯಿ ಸೇತು

ಅಹಮ್ಮದಾಬಾದಿನ ಮುನ್ಸಿಪಾಲಿಟಿಯವರು ೧೨ ಲಕ್ಷ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿದ ಮಹಾಸೇತುವೆಯೊಂದಕ್ಕೆ ಸರ್ದಾರ್ ವಲ್ಲಭಭಾಯಿಯವರ ಹೆಸರಿಟ್ಟಿರುವರು

ಅನುಮತಿಯಿಲ್ಲದೆ ಸತ್ಯಾಗ್ರಹ ಹೂಡಿದಕ್ಕೆ ಶಿಸ್ತು!

ಕಾಳೀಪಟ್ಟದ ಸತ್ಯಾಗ್ರಹವನ್ನು ಪ್ರಾಂತಿಕ ಕಾಂಗ್ರೆಸು ಕಮಿಟಿಯು ... ಕಾಂಗ್ರೆಸ್ ಕೆಲಸಗಾರರ ಮೇಲೆ ಶಿಸ್ತು ... ಲಾಗುವುದೆಂದು ತಿಳಿಯುತ್ತದೆ

ವಿಧವಾ ವಿವಾಹಕ್ಕೆ ಪ್ರೋತ್ಸಾಹ!

ಮಂಡಿಯ ಅರಸರು ಅಲ್ಲಿನ ಕೆಲವು ಕುಂಟುಂಬಿ ವಿಧವೆಯರನ್ನು ಮರುಳು ಮಾಡಿ ... ಇಂಡಿಯಾಕ್ಕೆ ತಂದು ಮಾರಾಟಮಾಡುತ್ತಿರುವರೆಂದೂ, ಇದನ್ನು ಸಂಪೂರ್ಣ ನಿಲ್ಲಿಸುವ ಸಲುವಾಗಿ ಇಡೀ ಸಂಸ್ಥಾನದಲ್ಲಿ ಸರ್ವ ಜಾತಿಯವರಲ್ಲಿಯೂ ವಿಧವಾ ವಿವಾಹವು ನಡೆಯಲ್ಲಿ ತಾವು ಪ್ರೋತ್ಸಾಹಿಸುವುದಾಗಿ ಹೇಳಿರುವರು

ಪಂಡಿತ ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

ಎಳೆ ಮಕ್ಕಳ ಲಿವರ್ ಮತ್ತು ಸ್ಪ್ಲೀನ್ ವ್ಯಾಧಿಗಳನ್ನು ಅತಿ ಶೀಘ್ರದಲ್ಲಿ ಗುಣ ಪಡಿಸಿ ಮಕ್ಕಳು ಆರೋಗ್ಯದಿಂದ ನಲಿದಾಡುವಂತೆ ಮಾಡುವುದು.

ಎಲ್ಲಾ ಔಷಧ ಅಂಗಡಿಗಳಲ್ಲಿಯೂ ಸಿಗುವುದು

ತಯಾರಿಸುವವರು

ಆಯುರ್ವೇದಾಶ್ರಮ :: ಮದರಾಸು

ಸ್ಟಾಕಿಸ್ಟರು

ಪೋಪ್ಯುಲರ್ ಸ್ಟೋರ್ಸ್, ರಥಬೀದಿ, ಮಂಗಳೂರು.

A GOLDEN OPPORTUNITY

FOR

Failed and Neglected Students

The Canara Tutorial College,

Sharada Press Bldgs. : : Car Street MANGALORE.

Students coached up by efficient M.A's.

FOR THE

1. S. S. L. C. 2. Intermediate 3. B. A. Degree Exams.

Seats Limited! Fees Moderate!

Apply sharp to the Principal.

ಸಾದರ—ಸ್ವೀಕಾರ

ಭೌಗೋಲಿಕ ವ್ಯವಸಾಯ ಲೇಖಕ ಮತ್ತು ಪ್ರಕಾಶಕ ಶ್ರೀ ಶಿವರಾಯ ಬೋಡಪ್ರಭು, ಮಾಸ್ತರ, ಹಿರೇ ಬಾಗೇವಾಡಿ, ಬೆಳಗಾಂವ ಕ್ರೌನ್ ೧/೮ 80 ಪುಟಗಳು. ಬೆಲೆ ಎರಡಾಣೆ.

ಈ ಪುಸ್ತಕವು ಭೂಗೋಳದ ಕುರಿತು ಬರೆದುಬಲ್ಪಟ್ಟ ಪ್ರಶ್ನೆಗಳ ಸಂಗ್ರಹ. ಲೇಖಕರೇ ಇದಕ್ಕೆ ಹೆಸರಿಟ್ಟಂತೆ, ಇದು 'ತೀರ ಹೊಸ ಮಾದರಿಯ' ಭೌಗೋಲಿಕ ವ್ಯವಸಾಯ ಪುಸ್ತಕವಾಗಿರುತ್ತದೆ. ಮುಂಬಯಿ ಇಲಾಖೆಯ ಮತ್ತು ಹಿಂದೂಸ್ಥಾನದ ಸಾಮಾನ್ಯ 'ಮಾಹಿತಿಯ ಕುರಿತು ಭೂವಿಭಾಗ, ಪರ್ವತಾವಳಿ, ಹವೆ, ಬೆಳೆ, ಪ್ರಾಣಿಗಳು, ವ್ಯಾಪಾರ ಭಾಷೆ, ಧರ್ಮ, ರಾಜಕೀಯ. ಈ ವಿಷಯಗಳಲ್ಲಿ ಅನೇಕ ಪ್ರಶ್ನೆಗಳು ಇದರಲ್ಲಿ ಕೊಡಲ್ಪಟ್ಟಿವೆ ವಿದ್ಯಾರ್ಥಿಗಳಿಗೆ ಈ ಪ್ರಶ್ನೆಗಳು ಸಹಜವಾಗಿಯೂ ಉಪಕಾರವಾದೀತು

ಭೂಗೋಳವನ್ನು ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಇದರಲ್ಲಿ ಪ್ರಶ್ನೆಗಳೂ ಇರುವುದರಿಂದ ಪರೀಕ್ಷೆಗೆ ತಯಾರು ಮಾಡಲು ಉಪಕಾರಿಯಾದೀತು ಲೇಖಕರು ಸ್ವತಃ ಉಪಾಧ್ಯಾಯರಾಗಿರುವುದರಿಂದ ಪ್ರಶ್ನೆಗಳನ್ನು ಹೆಕ್ಕಿತೆಗಿಯುವುದರಲ್ಲಿ ತುಂಬಾ ಕುಶಲತೆಯನ್ನು ತೋರಿಸಿದ್ದಾರೆ ಈ ಲೇಖಕರು ಉಪಯುಕ್ತಗಳಾದ ಪುಸ್ತಕಗಳನ್ನು ಬರೆಯಲೆಂದು ಹಾರೈಸುತ್ತೇವೆ

ಈಶ್ವರಾನಂದ ಮಹಿಳಾ ಸೇವಾಶ್ರಮದ ಹತ್ತನೇ ವಾರ್ಷಿಕ ವರದಿ. ೧೯೨೮ರಲ್ಲಿ ಸ್ಥಾಪಿತವಾಗಿ ಸ್ತ್ರೀ ಸಮಾಜದ ಉದ್ಧಾರಕ್ಕಾಗಿ ನಿರಂತರ ಶ್ರಮವಹಿಸಿ ದುಡಿದು, ಯೋಗ್ಯ ಆದರ್ಶದಲ್ಲಿ ನಡೆದುಕೊಂಡ ಬಂದ ಈಶ್ವರಾನಂದ ಮಹಿಳಾ ಸೇವಾಶ್ರಮದ ಒಂದನೇ ದಶಂಬರಕ್ಕೆ ತುಂಬುವ ಹತ್ತನೇ ವರ್ಷದ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ

ಈ ದಕ್ಷಿಣ ಕನ್ನಡದ ಪ್ರಾಗತಿಕ ಸಂಸ್ಥೆಯು ತನ್ನ ಉಚ್ಚ ಧ್ಯೇಯದಿಂದ ಮಹಿಳಾಲೋಕಕ್ಕೆ ನಿರಂತರ ಸೇವೆಯನ್ನು ಸಲ್ಲಿಸಿಕೊಂಡು, ಅನಾಥರಾದ ... ಆಶ್ರಯವಿತ್ತು, ಶಿಕ್ಷಣವಿತ್ತು ... ಮಾತ್ರವಲ್ಲದೆ ಪರಸ್ಥಳದಿಂದ ಬರುವ ವಿದ್ಯಾರ್ಥಿನಿಯರಿಗೆ ಒಳ್ಳೇ ಶಿಸ್ತಿನಿಂದಲೂ, ಸೌಶೀಲ್ಯದಿಂದಲೂ, ಯೋಗ್ಯ ಭೋಜನ ವಸತಿಗಳ ಏರ್ಪಾಡು ಮಾಡಿ ಜಾತಿಮತಗಳ ಭೇದಭಾವವಿಲ್ಲದೆ ಸರ್ವಸಮತಾ ಬುದ್ಧಿಯಿಂದ ನಡಸಿಬಂದು, ಇಡೀ ಜಿಲ್ಲೆಗೆ ಒಂದು ಆದರ್ಶ ಸಂಸ್ಥೆಯಾಗಿರುತ್ತದೆ

ಆಶ್ರಮದಲ್ಲಿ ಸ್ಥಳಾಭಾವವಿರುವ ಮೂಲಕ ವಸತಿಗಾಗಿ ಅಪೇಕ್ಷಿಸಿದ ವಿದ್ಯಾರ್ಥಿನಿಯರನ್ನು ಪ್ರವೇಶಮಾಡಲಾಗಲಿಲ್ಲವೆಂದು ವರದಿಯಲ್ಲಿ ಸೂಚಿತವಾಗಿದೆ ಇಂತಹ ಸಂಸ್ಥೆಗೆ ಕೊಡುಗೆಯ್ಯು ಸಹಾಯವಿತ್ತು ಆಶ್ರಮಕ್ಕೆ ಭವ್ಯವಾದ ಕಟ್ಟಡವಿರುವಂತೆಯೂ, ಮಹಾಜನರು, ಉದಾರಿಗಳು ಮನಸ್ಸು ಮಾಡಬೇಕು.

ಈ ಆಶ್ರಮದ ನಿವಾಸಿಯರಾದವರಲ್ಲಿ ಹಲವರು ನಗರದ ಅನೇಕ ವಿದ್ಯಾಮಂದಿರಗಳಲ್ಲಿ ಕಲಿಯುತ್ತಿದ್ದು, ಇನ್ನು ಹಲವರು ಮಿಡ್‌ವೈಫ್, ಟ್ರೈನಿಂಗ್ ಮೊದಲಾದ ಸ್ವತಂತ್ರ ಉದ್ಯೋಗಗಳನ್ನು ಕಲಿಯುವವರೂ ಇದ್ದಾರೆ ಅನಾಥರಾದ ವಿಧವೆಯರೂ, ಸಮಾಜದಲ್ಲಿ ತಿರಸ್ಕೃತರಾದವರೂ, ಸ್ವತಂತ್ರವಾದ, ಗೌರವದ ಜೀವನವನ್ನು ನಡೆಸುವಂತೆ ಸಂಸ್ಥೆಯು ಸಕಲ ವ್ಯವಸ್ಥೆಯನ್ನು ಮಾಡುತ್ತಿರುವುದು ನಮ್ಮ ಜಿಲ್ಲೆಯ ಭಾಗ್ಯವೆನ್ನಬೇಕು. ಈ ಸಂಸ್ಥೆಯು ಸೇನಾಪತ್ನಿಯರಾಗಿ ದುಡಿಯುವ ಮಹನೀಯರ ಯೋಗ್ಯತೆಯಿಂದಾದಂತೆಯೇ, ಕೊಡಗೈಯ ಮಹನೀಯರ ಉದಾರತೆಯಿಂದ ಮಹಾಜನರ ಪ್ರೋತ್ಸಾಹದಿಂದ ಬಹುಕಾಲ ಉಳಿದು, ಮಹಿಳಾ ಸೇವೆಯಂತಹ ಪುಣ್ಯಕಾರ್ಯದಲ್ಲಿ ಇನ್ನೂ ಹೆಚ್ಚಾಗಿ ಸೇವೆಸಲ್ಲಿಸುವಂತಾಗಲೆಂದು ಹಾರೈಸುತ್ತೇವೆ.

ಸ್ವದೇಶಾಭಿಮಾನಿ

ತಾರೀಕು ೩೦—೬—೧೯೩೯

ರಾಷ್ಟ್ರಪತಿಗಳ ಸಂದೇಶ

ಬೊಂಬಾಯಿಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಸಭೆಯು ಚರಿತ್ರಾರ್ಹವಾದ ಮಹತ್ವವುಳ್ಳದ್ದಾಗಿದೆ. ತ್ರಿಪುರಿಯ ಮಹಾಧಿವೇಶನದಲ್ಲಿ ಗೊಂದಲಕ್ಕೆ ಕಾರಣವಾದ, ಕಾಂಗ್ರೆಸ್ಸಿನಲ್ಲಿ ಇಂದು ತಲೆಯೆತ್ತಿರುವ ಅನೇಕ ದೌರ್ಬಲ್ಯಗಳನ್ನು ಪರಿಹರಿಸುವ ಬಗೆಗಾಗಿ ಅಖಿಲ ಭಾರತದ ದೃಷ್ಟಿಯು ಆ ಕಡೆಗೆ ಸೆಳೆಯಲ್ಪಟ್ಟಿತು. ಗಾಂಧಿಜಿಯವರ ಶ್ರದ್ಧಾವಂತ ಅನುಯಾಯಿಗಳೂ, ದೇಶದಲ್ಲಿ ಪ್ರತಿಷ್ಠೆ ವಿಶ್ವಾಸಗಳನ್ನು ಪಡೆದ 'ಬಲಪಕ್ಷ'ದ ಪ್ರಭಾವಶಾಲೀ ಮುಖಂಡರೊಬ್ಬರೂ ಆದ ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದರ ವಿಚಾರಪೂರ್ಣವಾದ ಭಾಷಣವು, ಪ್ರಪಂಚದ ಪರಿಸ್ಥಿತಿಯಲ್ಲಿ ಭಾರತದ ಮುನ್ನಡೆಯನ್ನು ತಿಳಿಸುವುದಾಗಿಯೂ ಅಭಿನ್ನ ಐಕ್ಯತೆಗಾಗಿ ರಾಷ್ಟ್ರವನ್ನು ಎಚ್ಚರಗೊಳಿಸುವುದಾಗಿಯೂ, ಕಾಂಗ್ರೆಸಿನ ಅಂತರಂಗ ಶುದ್ಧಿಯ ಪವಿತ್ರ ಸಂದೇಶವನ್ನು ಸಾರುವುದಾಗಿಯೂ ಇದ್ದು ಅತ್ಯಂತ ಮನನೀಯವಾಗಿದೆ

ರಾಷ್ಟ್ರಪತಿಗಳು ಭಾಷಣದ ಆರಂಭದಲ್ಲಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾರ್ಯಭಾರವನ್ನು ವಹಿಸಿಕೊಳ್ಳುವಾಗ, ಅಂತರ್ರಾಷ್ಟ್ರೀಯ ಪರಿಸ್ಥಿತಿಯು ವಿಷಮತೆಯು ಸವಿಷಪಿಸಿದ್ದು, ಅದರೊಡನೆ ನಮ್ಮ ರಾಷ್ಟ್ರೀಯ ಸಮಸ್ಯೆಗಳೂ ಬೆರೆತುಹೋಗಿದ್ದ, ದುರ್ಘಟವಾದ ಸಂಧಿಕಾಲದ ಕುರಿತು ನೆನಪುಮಾಡಿದರು. ಪ್ರಪಂಚದ ಹಾಗೂ ಭಾರತದ ನೆತ್ತಿಯ ಮೇಲೆ ಸುತ್ತುತ್ತಿರುವ ಇಂದಿನ ಸಂಕಷ್ಟದ ಕಾರ್ಮೋಡಗಳನ್ನು ಧೈರ್ಯಪೂರ್ವಕವಾಗಿಯೂ, ಜಯಶಾಲಿಯಾಗಿಯೂ ಇದಿರಿಸಬೇಕಾದರೆ, ನಮ್ಮಲ್ಲಿ ನಿಶ್ಚಯವಾದ ಕಾರ್ಯಸ್ವರೂಪ ಜ್ಞಾನವೂ, ಒಡೆಯಲಾರದ ಒಗ್ಗಟ್ಟೂ ಇರುವುದು ಅತ್ಯವಶ್ಯವೆಂದು ಸಾರಿದರು. ಇಂತಹ ಸಂದರ್ಭದಲ್ಲಿ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಹಾಗೂ ರಾಷ್ಟ್ರದ ಜನತೆಯ ಸಂಪೂರ್ಣ ಸಹಾನುಭೂತಿಯೂ ಸಹಾಯವೂ ಕಾಂಗ್ರೆಸು ವರ್ಕಿಂಗ್ ಕಮಿಟಿಗೆ ಸಿಗುವುದು ಅತ್ಯವಶ್ಯವೆಂದೂ, ಹಾಗಾದರೆ ಮಾತ್ರ ನಮ್ಮ ಗುರಿಯಾದ ಸ್ವರಾಜ್ಯವನ್ನು ಸಂಪಾದಿಸಲು ನಾವು ಸಮರ್ಥರಾಗುವೆವೆಂದೂ ಅರುಹಿದರು. ನಮ್ಮ ಕಾರ್ಯಭಾರವು ಬಹಳ ಮಹತ್ವದ್ದಿರುವಾಗ, ಸ್ವಾತಂತ್ರ್ಯ ಸಾಧನೆಯ ಧ್ಯೇಯಕ್ಕಾಗಿ ಸಂಪೂರ್ಣ ಐಕ್ಯವು ಅಗತ್ಯವಾಗಿರುವಾಗ ಕಾಂಗ್ರೆಸಿನಲ್ಲಿಯೇ ಅಂತಃಕಲಹಗಳೆದ್ದು ಪಕ್ಷಗಳ ಕಾದಾಟವು ಬೆಳೆದುಬರುವುದರಿಂದ ಸಂಸ್ಥೆಯು ಶಕ್ತಿಹೀನವಾಗುವುದೆಂದು ಎಚ್ಚರಿಸಿದರು.

ಬ್ರಿಟಿಷ್ ಸಾಮ್ರಾಜ್ಯಶಾಹಿಯು, ಲೋಕಯುದ್ಧವು ಸಂಭವಿಸಬಹುದಾದ ಸಂದರ್ಭದಲ್ಲಿ, (ಹಾಗಾಗಲು ಸರ್ವ ಕಾರಣಗಳೂ ಇಂದು ಸಿದ್ಧವಾಗಿವೆ). ಈಗೀಗ ಮಾಡುತ್ತಿರುವ ಹೊಸ ಹೊಸ ಶಾಸನಗಳ ಮೂಲಕವೂ ಕೇಂದ್ರ ಸರಕಾರಕ್ಕೆ ಸಂಪೂರ್ಣ ಅಧಿಕಾರವನ್ನು ಕೊಡುವುದರ ಮೂಲಕವೂ, ಹಿಂದೂದೇಶದ ಇಚ್ಛೆಗೆ ವಿರುದ್ಧವಾಗಿ, ಕೇವಲ ಬ್ರಿಟಿಷ್ ಹಿತಕ್ಕಾಗಿ ಮಾತ್ರ ಭಾರತೀಯರನ್ನು ಯುದ್ಧರಂಗಕ್ಕೆಳೆಸುವ ಆಟ ಹೂಡಿದೆಯೆಂದೂ, ಇಂತಹ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅನ್ಯಾಯ ಘೋರಣೆಯನ್ನು ಎದುರಿಸಲೂ, ಕಾಂಗ್ರೆಸಿನ ಕಟ್ಟಳೆಯಂತೆ ನಾವು ನಡೆಯಲು ಸರ್ವಥಾ ಸಿದ್ಧರಾಗಿರಬೇಕೆಂದೂ ಬೋಧಿಸಿದರು.

ವಿದೇಶಗಳಲ್ಲಿ, ದಕ್ಷಿಣ ಆಫ್ರಿಕಾ, ಬೆಲ್ಜಿಯನ್ ಕಾಂಗೋ, ಸಿಲೋನ್ ಮೊದಲಾದೆಡೆಗಳಲ್ಲಿರುವ ಭಾರತೀಯರು ಅನ್ಯ ಸರಕಾರಗಳ ನಿರ್ದಯ ಪ್ರಭುತ್ವದಿಂದ ಸಂಕಷ್ಟ ಪಡುವುದರ ಕುರಿತು ಕರುಣಾಪೂರ್ಣವಾದ ಅವರ ಸ್ಥಿತಿಯನ್ನು ವಿವರಿಸಿ, ತಮ್ಮ ಸಹ ಸಂತಾಪವನ್ನು ಸೂಚಿಸಿದ್ದು ಮಾತ್ರವಲ್ಲದೆ, ಅವರನ್ನು ಸಂಕಷ್ಟಗಳಿಂದ ವಿಮೋಚನೆ ಮಾಡುವುದು ನಮ್ಮ ಕರ್ತವ್ಯವೆಂದೂ ಹೇಳಿದರು.

ಆಶ್ರಿತ ರಾಜ್ಯಗಳ ಆಡಳಿತದಲ್ಲಿರುವ ದುರ್ವ್ಯವಸ್ಥೆಯನ್ನು ವಿವರಿಸುತ್ತಾ, ಅಲ್ಲಿನ ಪ್ರಜೆಗಳು ತಮ್ಮ ನ್ಯಾಯಸಿದ್ಧವಾದ ಚಳವಳವನ್ನು ನಡೆಸುವಲ್ಲಿ, ಬ್ರಿಟಿಷ್ ಸರಕಾರವು ದುಷ್ಟ ಆಡಳಿತೆ ಮಾಡುವ ನರೇಂದ್ರ ಸರಕಾರಗಳಿಗೆ ತಮ್ಮ ನೆರವಿತ್ತು ಪ್ರಜೆಗಳನ್ನು ದಮನ ನೀತಿಯಿಂದ ದಂಡಿಸುವುದರ ಕುರಿತೂ, ಇದು ನಿರ್ಜೀವವಾದ ಫೆಡರೇಶನನ್ನು, ಭಾರತೀಯರ ಗಂಟಲೊಳಗೆ ತುರುಕಿಸಲು ಸಾರ್ವಭೌಮ ಸರಕಾರವು ಮಾಡುವ ಕುತಂತ್ರವೆಂದೂ, ಜನತೆಯ ಇಚ್ಛೆಗೆ ವಿರುದ್ಧವಾಗಿದ್ದ ಇಂಡೋ-ಯುರೋಪಿಯನ್ ಒಪ್ಪಂದದಂತಹ ಬ್ರಿಟಿಷ್ ಸರಕಾರದ ಕಾರ್ಯಗಳು ಇದರ ನಿದರ್ಶನಗಳೆಂದೂ ಟೀಕಿಸಿ, ಇದನ್ನು ಇದಿರಿಸುವುದು ಸರ್ವಥಾ ನಮ್ಮ ಜನ್ಮಸಿದ್ಧವಾದ ಹಕ್ಕೆಂದೂ ವ್ಯಕ್ತಗೊಳಿಸಿದರು

ಆವೇಳೆ ಹಲವು ಪ್ರಾಂತಗಳಲ್ಲಿ ಆಗುತ್ತಿರುವ ಜಾತೀಯ ಜಗಳದ ಕುರಿತು ತಮ್ಮ ವಿಷಾದವನ್ನು ವ್ಯಕ್ತಪಡಿಸಿ, ಅವುಗಳನ್ನು ಸಮೂಲವಾಗಿ ಇಲ್ಲದಂತೆ ಮಾಡಲು ಕಾಂಗ್ರೆಸು ಸಂಸ್ಥೆ ಮತ್ತು ಕಾಂಗ್ರೆಸು ಕೆಲಸಗಾರರೇ ಸಮರ್ಥರೆಂದೂ, ಆದರೆ ಕಾಂಗ್ರೆಸಿಗೆ ಕೆಡುಕನ್ನೇ ಮಾಡುವಂತಹ ಅವಿವೇಕಿಗಳಾದ ಜನರು ಕಾಂಗ್ರೆಸಿನಲ್ಲಿ ಪ್ರವೇಶಿಸಿ ಅದರ ಪಾವಿತ್ರ್ಯವನ್ನು ಕೆಡಿಸದಂತೆ ನೋಡಿಕೊಳ್ಳುವುದು ನಮ್ಮ ಧ್ಯೇಯವೆಂದೂ ಸ್ಪಷ್ಟಗೊಳಿಸಿದರು.

ಕಾಂಗ್ರೆಸು ಇಂದು ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಕಾದಾಡುವ ಸಂಸ್ಥೆಯಾಗಿದೆ, ಪವಿತ್ರ ಧ್ಯೇಯದಿಂದ – ನಿಸ್ವಾರ್ಥದಿಂದ ಸ್ವಾತಂತ್ರ್ಯಕ್ಕಾಗಿ ಕಾದಾಡುವ ಜನತೆ – ಕಾಂಗ್ರೆಸಿನಲ್ಲಿ ಪಾವಿತ್ರ್ಯವನ್ನು ಕಾಪಾಡಿಕೊಳ್ಳಬೇಕಾದುದು ಅತ್ಯವಶ್ಯ. ನಾವು ಇಂದು ವಿದೇಶೀಯರೊಡನೆ ಹೋರಾಡಿ ಸಂಪಾದಿಸುವ ಸ್ವಾತಂತ್ರ್ಯವು ದೋಷರಹಿತವೂ, ಪೂರ್ಣವೂ, ಅನ್ಯಾಯವೂ ಆಗಿರಬೇಕಾದದ್ದು ಅಗತ್ಯವಾದರೆ ಅಧಿಕಾರಲಾಲಸೆಯಿಂದಾಗಲಿ, ವ್ಯಕ್ತಿದ್ರೋಹ ದೃಷ್ಟಿಯಿಂದಾಗಲಿ, ಅವಿವೇಕದಿಂದಾಗಲಿ, ಕಾಂಗ್ರೆಸನು ಪ್ರವೇಶಿಸುವವರನ್ನು ತಡೆಯಬೇಕು. ಇದುವರೆಗೆ ನಿಸ್ವಾರ್ಥ ಸೇವೆ, ಸತ್ಯ ಅಹಿಂಸೆಗಳ ಭದ್ರ ತಳಹದಿಯ ಮೇಲೆ ರಚಿತವಾದ ಕಾಂಗ್ರೆಸು ಸಂಸ್ಥೆಯನ್ನು ಸರ್ವಥಾ ಶುದ್ಧೀಕರಿಸುವುದೂ, ಆ ಮೂಲಕ ಅದನ್ನು ಇನ್ನಷ್ಟು ಬಲಗೊಳಿಸುವುದೂ ಅತ್ಯಾವಶ್ಯಕವಾಗಿದೆ.

ಇಂದಿನ ಪ್ರಪಂಚದ ಸನ್ನಿಹಿತವಾದ ವಿಷಮತೆಯನ್ನು ಮನವರಿಕೆಗೆ ತಂದುಕೊಂಡು, ಹಿಂದೂದೇಶದ ಹೊಣೆಗಾರಿಕೆಯನ್ನು ಸಂಪೂರ್ಣ ಅರಿತು, ಕಾಂಗ್ರೆಸಿನ ಕಾರ್ಯಸೂತ್ರಗಳನ್ನು ಕಾರ್ಯರೂಪಕ್ಕೆ ತಂದು, ಅನುಭವಶಾಲಿಗಳಾದ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರ ಈ ಅಧ್ಯಕ್ಷ ಭಾಷಣವು ಬಹಳ ಚಾರಿತ್ರಿಕ ಮಹತ್ವದ್ದಾಗಿದೆ

ಕಳ್ಳನಾಣ್ಯಗಳನ್ನು ಮಾಡಿದವರನ್ನು ಹಿಡಿದರು

ಕಳ್ಳ ನಾಣ್ಯಗಳನ್ನು ಮಾಡುವವರ ಸಂಖ್ಯೆಯು ಮಿತಿಮೀರುತ್ತಿದೆ ಸೇಲಂ ಜಿಲ್ಲೆಯಲ್ಲಿ ಚಿನ್ನಸ್ವಾಮಿ ಪಂಡರಂ ಎಂಬವನನ್ನೂ ಮತ್ತೆ ಕೆಲವು ಅವನ ಸಂಗಡಿಗರನ್ನೂ ಅವರು ಕಳ್ಳ ನಾಣ್ಯಗಳನ್ನು ತಯಾರಿಸುವ ಸಾಧನಗಳು ಸಮೇತ ಸೆರೆಹಿಡಿದಿದ್ದಾರೆ ಅವರಲ್ಲಿ ೬೧ ಒಂದಾಣೆಯ ನಿಕ್ಕಲ್ ಕಳ್ಳನಾಣ್ಯಗಳೂ ಸಿಕ್ಕಿರುವವ.

ಬೇಂಕಿನ ಡೈರೆಕ್ಟರರ ಮೇಲಿನ ಆರೋಪಣೆಯು ದ್ವೇಷಾಸೂಯಾಪರವಾದದ್ದು

ದ. ಕ. ಜಿಲ್ಲಾ ಕಲೆಕ್ಟರರ ತೀರ್ಮಾನ

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್ ಎಂಬ ನಮ್ಮ ಜಿಲ್ಲೆಯ ಪ್ರಾಮುಖ್ಯ ಬೇಂಕಿಂಗ್ ಸಂಸ್ಥೆಯೊಂದರ ಮೇಲ್ರೆ ಸದ್ರಿ ಬೇಂಕಿನ ಪಾಲುಗಾರರಾದ ಶ್ರೀ ಮಾಧವ ರಾಮಚಂದ್ರ ಕಾಮತರು, ಸದರಿ ಬೇಂಕಿನ ಹಿಂದಣ ವರ್ಷಗಳಲ್ಲಿ ತಯಾರಿಸಿದ ಬೇಲನ್ಸ ಶೀಟುಗಳನ್ನು ಕಾನೂನಿಗೆ ವಿರುದ್ಧವಾಗಿ ತಯಾರಿಸಿರುವರೆಂದೂ ಸಂಬಂಧಪಟ್ಟ ಡೈರೆಕ್ಟರರನ್ನೂ ಮತ್ತು ಆಫೀಸು ಸಿಬಂಧಿಯನ್ನೂ ಆರೋಪಿಸಿ ತಕ್ಷೀರನ್ನು ಹೂಡಲು ತನಗೆ ಸೆಂಕ್ಷನ್ ಕೊಡಬೇಕೆಂದು, ಮಾನ್ಯ ಜಿಲ್ಲಾ ಕಲೆಕ್ಟರರಲ್ಲಿ ಮಾಡಿದ ಅರ್ಜಿಯನ್ನು ಕಳೆದ ತಾರೀಕು ೨೧–೬–'೩೯ರಂದು, ಮಾನ್ಯ ಕಲೆಕ್ಟರರು ಸರಿಯಾಗಿ ವಿಚಾರಣೆ ನಡೆಸಿದ ಮೇಲೆ ಅಸಿಸ್ಟಾಂಟ್ ರಜಿಸ್ಟ್ರಾರರ ಶಿಫಾರಸನ್ನು ಆಧರಿಸಿ ಸದ್ರಿ ಶ್ರೀ ಮಾಧವರಾಮಚಂದ್ರ ಕಾಮತರು ಕೇವಲ ದ್ವೇಷಾಸೂಯೆ ಮತ್ತು ದುರಭಿಪ್ರಾಯದಿಂದಲೇ ಈ ಅರ್ಜಿಯನ್ನು ಮಾಡಿರುವರೆಂದೂ ತಕ್ಷೀರಿಗೆ ಸೆಂಕ್ಷನ್ ಕೊಡಲು ಯಾವ ಕಾರಣವೂ ಕಂಡುಬರುವುದಿಲ್ಲವೆಂದೂ ತೀರ್ಮಾನಿಸಿ, ಬೇಂಕಿನ ಡೈರೆಕ್ಟರರು ಜಿಲ್ಲೆಯ ಪ್ರತಿಷ್ಠಿತ ಸದ್ಗೃಹಸ್ಥರಿರುವರೆಂದು ಅಭಿಪ್ರಾಯಪಟ್ಟು ಶ್ರೀ. ಕಾಮತರು ಮಾಡಿದ ಅರ್ಜಿಯನ್ನು ತೆಗೆದುಹಾಕಿರುವರು

★ ಹೊಸ ವಾರ್ತೆಗಳು ★

ಬ್ರಿಟಿಷ್ ಪ್ರಧಾನ ಚೆಂಬರ್ಲೇನರು ಕೊಟ್ಟ ಭಾಷಣದಿಂದ ಜರ್ಮನಿಯು ರೋಷಗೊಂಡಿದೆ ನಾಜೀ ಪಕ್ಷದ ಸಭೆಯಲ್ಲಿ ಡಾ। ಗೋಬೆಲ್ಸರವರು ಇಂಗ್ಲೆಂಡಿನ ಭಯ ಹುಟ್ಟಿಸುವ ಮಾತುಗಳು ಬರೀ ಟೊಳ್ಳು ಮಾತುಗಳೆಂದು ಅಲ್ಲಗಳೆಯುತ್ತಾರೆ

★

ಮಂಚೂಕುವೋ ಮಂಗೋಲಿಯಾ ಗಡಿಯಲ್ಲಿ ಕೆಲವು ಸಮಯಗಳಿಂದ ರಶ್ಯಾ ಮತ್ತು ಜಪಾನ್ ಸೈನ್ಯಗಳೊಳಗೆ ಯುದ್ಧ ನಡೆಯುತ್ತದೆ. ಉಭಯ ಪಕ್ಷಗಳಲ್ಲಿಯೂ ಅನೇಕ ಸಿಪಾಯಿಗಳು, ಯುದ್ಧನೌಕೆಗಳು, ವಿಮಾನಗಳು ನಾಶವಾಗಿವೆ

★

ತಂಜಾವೂರಿನ ಸೆಂಟ್ರಲ್ ಕೋಪರೇಟಿವ್ ಬೇಂಕಿನಿಂದ ೨೫೦೦೦ ರೂಪಾಯಿಗಳ ಕರೆನ್ಸಿ ನೋಟುಗಳು ಕಾಣೆಯಾಗಿವೆ ಆದರೆ ಈ ಹಣವೆಲ್ಲಾ ಪೋಲೀಸರ ಸಾಹಸದಿಂದ ಪತ್ತೆಯಾಗಿದೆ

★

ಟೈನ್‌ಟ್ಸಿನ್ನಿನಲ್ಲಿ ಬ್ರಿಟಿಷರನ್ನು ಜಪಾನೀಯರು ಬಹಳವಾಗಿ ಪೀಡಿಸುತ್ತಿದ್ದಾರೆ ಬ್ರಿಟನಿನ ಮಿ ಟೆ ಪಿಸ್ಲಿ ಮತ್ತು ಆತನ ಪತ್ನಿಯನ್ನು ಜಪಾನೀಯರು ಹಿಡಿದು ಅರೆಬತ್ತಲೆ ಮಾಡಿಬಿಟ್ಟರೆಂದು ವಾರ್ತೆ ಬ್ರಿಟಿಷರು ಇದರಿಂದ ಬಹಳ ನೊಂದಿರುತ್ತಾರೆ

★

ಜಪಾನೀಯರ ಈಗ ತಾನೇ ಹಿಡಿದಿರುವ ಸ್ವಾಂಕೋ ಬಂದರಕ್ಕೆ ಬ್ರಿಟಿಷ್ ಹಡಗನ್ನು ಬರಲು ಬಿಡುವುದಿಲ್ಲ. ಜಪಾನಿನ ಆಜ್ಞೆಗೆ ವಿರುದ್ಧವಾಗಿ ಪ್ರವೇಶಿಸಿದ ಬ್ರಿಟಿಷ್ ಹಡಗಗಳು ಸಂಕಷ್ಟಕ್ಕೆ ಸಿಕ್ಕಿವೆ.

★

ಜಪಾನಿನ ಮುಂದಿನ ಆಕ್ರಮಣವು ತಾ ೨೫ರಂದು ಫೂಚೊ ಮತ್ತು ವಿಂಚೂ ಬಂದರಗಳಿಗೆ ಚೈನದ ಸ್ವಾಧೀನವಿರುವವುಗಳು ಅವೆರಡೇ ಬಂದರಗಳು. ಆದ ಕಾರಣ ಆ ಬಂದರಗಳಿಂದ ವಿದೇಶದ ಹಡಗಗಳು ಸಂಚರಿಯಾಗಬೇಕೆಂದು ಜಪಾನು ಸರಕಾರವು ತಿಳಿಸುತ್ತದೆ ಬ್ರಿಟನು ಈ ಆಜ್ಞೆಯನ್ನು ಮಾನ್ಯ ಮಾಡುವುದಿಲ್ಲವಾಗಿ ತಿಳಿದಿದೆ.

★

ಲಕ್ನೋದಲ್ಲಿ ಷಿಯಾಸುನ್ನೀ ಜಗಳವು ಕೊನೆಗೊಂಡಿಲ್ಲ ತಾ. ೨೬ರಂದು ೯೦ ಜನರ ಶೀಯಾಸುನ್ನೀ ಚಳವಳಗಾರರನ್ನು ಸೆರೆಹಿಡಿದಿದೆ ಪಂಜಾಬ್‌ನ ಅನೇಕ ಮುಸ್ಲಿಂ ಮುಖಂಡರು ಶಾಂತಿಯನ್ನುಂಟುಮಾಡಲು ಯತ್ನಿಸುತ್ತಾರೆ.

★

ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆಯು ತಾ ೨೭ರಂದು ಕೊನೆಗೊಂಡಿತು ದಿ ಬನ್ನಿ ಮಿಲ್ಲಿನ ಮುಷ್ಕರಗಾರರು ಚಳವಳದಲ್ಲಿ ಸಹಾನುಭೂತಿಯನ್ನು ತೋರಿಸಿ, ಅಸಾಮಿನ ಸರಕಾರವು ಆ ಕುರಿತು ಸಾಧ್ಯವಾದಷ್ಟರಿಂದ ಅದನ್ನು ಕೊನೆಗಾಣಿಸುವ ಸಾಧನೆ ಮಾಡಬೇಕಾಗಿ ನಿರ್ಣಯವಾಯಿತ

★

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಪ್ರಾಂತಿಕ ಕಮಿಟಿಗಳು ಮಂತ್ರಿಗಳ ಕೆಲಸದಲ್ಲಿ ವಿಚಾರಿಸಿ ತೀರ್ಮಾನ ಮಾಡಿದ್ದಲ್ಲದೆ ಕಾಂಗ್ರೆಸಿನ ಅಂತರ್ಗತಗಳಾದ ಕಿಸಾನ್ ಸಭಾ ಮೊದಲಾದ ಸಂಸ್ಥೆಗಳು ಪ್ರಾಂತಿಕ ಮಂತ್ರಿಗಳ ಅಭಿಪ್ರಾಯವನ್ನು ಕೇಳದೆ ಸತ್ಯಾಗ್ರಹ ಮೊದಲಾದುವುಗಳನ್ನು ಆರಂಭಿಸಬಾರದಾಗಿಯೂ ನಿರ್ಣಯವಾಯಿತು

★

ಟೈನ್‌ಟ್ಸಿನಲ್ಲಿ ಜಪಾನು ಬ್ರಿಟಿಷ್ ಸಂಘರ್ಷಣೆಯ ಕುರಿತ ಬ್ರಿಟಿಷರನ್ನು ಅಲ್ಲಿಂದ ಹೊರಹಾಕವೇಕಾಗಿ ಜರ್ಮನಿಯ ಪತ್ರಿಕೆಗಳು ಪ್ರಬಲ ಪ್ರಚಾರ ನಡೆಸುತ್ತಿವೆ ಬ್ರಿಟಿಷ್ ವಿರುದ್ಧ ಪ್ರಚಾರವು ಜರ್ಮನಿಯಲ್ಲಿ ಬಹಳವಾಗಿ ನಡೆಯುತ್ತಿದೆ

★

ರಷ್ಯ ಬ್ರಿಟನು ಒಪ್ಪಂದವು ದೀರ್ಘ ಹೋಗುತ್ತಿರುವುದರ ಕುರಿತು ಜರ್ಮನು ಉತ್ಸಾಹಗೊಂಡಿದೆ ಬಾಲ್ಟಿಕ್ ರಾಷ್ಟ್ರಗಳು ಅವುಗಳ ಸ್ವಾತಂತ್ರ್ಯ ರಕ್ಷಣೆಯ ರಷ್ಯ ಜರ್ಮನ್ ಒಪ್ಪಂದಗಳನ್ನು ಒಪ್ಪುವವೇ ಎಂದು ಜರ್ಮನ್ ಸರಕಾರವು ರಾಷ್ಟ್ರಗಳೊಡನೆ ವಿಚಾರಿಸಿದೆ

★

ಬ್ರಿಟಿಷ್ ಪ್ರಧಾನ ಮಂತ್ರಿ ಚೆಂಬರ್ಲೇನರು ಬ್ರಿಟಿಷ್ ಜಪಾನು ರಾಷ್ಟ್ರಗಳೊಳಗೆ ರಾಜಿಯಾಗುವುದೆಂದು ಇನ್ನೂ ಆಶಾತರರಾಗಿದ್ದಾರೆ

ಕಲ್ಕತ್ತದ 'ಕಾಂಗ್ರೆಸು ಭವನ'ದ ತಳಹದಿ ಸ್ಥಾಪನೆಯನ್ನು ವಿಶ್ವಕವಿ ರವೀಂದ್ರನಾಥ ಠಾಗೋರರು ಮಾಡಲಿರುವರು

★

ಲಕ್ನೋ ಕಾಗದ ಗಿರಣಿಯಲ್ಲಿ ಜೂನ್ ೨೪ರಂದು ಆರಂಭವಾದ ಕೆಲಸಗಾರರ ಮುಷ್ಕರವು ದಿನದಿಂದ ದಿನಕ್ಕೆ ಉಗ್ರವಾಗುತ್ತದೆ

★

ಶ್ರೀಮತಿ ರಮೇಶ್ವರೀ ನೆಹರುಗಳು ಸ್ವಲ್ಪ ಸಮಯ ಜ್ವರಬಾಧಿತರಾಗಿದ್ದು, ಈಗ ಗುಣ ಹೊಂದಿ ಮುಂದಕ್ಕೆ ಒಂದು ವಾರದ ವಿಶ್ರಾಂತಿ ತೆಕ್ಕೊಂಡು ಆ ಮೇಲೆ ತಮಿಳು ನಾಡು ಪ್ರಯಾಣವನ್ನು ಸಂಪೂರ್ಣ ಮಾಡಲಿರುವರಾಗಿ ತಿಳಿಯುತ್ತದೆ.

★

ಪ್ರೇಮಿ ಜಹಾಂಗೀರನು ರಾಜನೀತಿಜ್ಞನೂ ಆಗಿದ್ದ!

[ಒಂದು ಮನೋರಂಜಕ ಐತಿಹಾಸಿಕ ಘಟನೆ]

ಮುಗಲರಾಯ ಚಕ್ರವರ್ತಿಯಾದ ಜಹಾಂಗೀರನನ್ನು ಕೆಲವು ಇತಿಹಾಸಕಾರರು ಪ್ರೇಮಿ ಎಂದೂ ಕುಡುಕನೆಂದೂ ಚಿತ್ರಿಸಿರುವರು. ಸ್ವಾರ್ಥದಿಂದ ಪ್ರೇರಿತರಾದ ವಿದೇಶಿ ಇತಿಹಾಸಕಾರರಿಂದ ಬರೆಯಲ್ಪಟ್ಟ ಚರಿತ್ರೆಗಳಲ್ಲಿ ಜಹಾಂಗೀರನು ಪ್ರೇಮಿ ಎಂದೇ ಚಿತ್ರಿಸಲ್ಪಟ್ಟಿದ್ದಾನೆ. ಅವರು ಅವನಲ್ಲಿರುವ ಗುಣಗಳಿಗಿಂತ ದೋಷಗಳನ್ನೇ ಹೆಚ್ಚಾಗಿ ಎತ್ತಿ ತೋರಿಸಿ ತಮ್ಮ ದುಸ್ವಾರ್ಥವನ್ನು ಸಾಧಿಸುವ ದುಷ್ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಜಹಾಂಗೀರನ ಗುಣದೋಷಗಳೆರಡನ್ನೂ ಚಿತ್ರಿಸಿದ ನಿಷ್ಪಕ್ಷಪಾತ ಇತಿಹಾಸಕಾರರಿಂದ ಅವರ ಪ್ರಯತ್ನಗಳು ಸಫಲವಾಗಿರುವುದಿಲ್ಲ. ಜಹಾಂಗೀರನು ಹೇಗೆ ಪ್ರೇಮಿ ಆಗಿದ್ದನೋ, ಹಾಗೆ ರಾಜನೀತಿ ವಿಶಾರದನೂ ಆಗಿದ್ದನೆಂಬುದು ಅವರ ಬರಹಗಳಿಂದ ಸ್ಪಷ್ಟವಾಗುತ್ತದೆ.

ಮೋಹರುನ್ನೀಸಳ ಮೇಲೆ ಪ್ರೇಮದೃಷ್ಟಿ

ಮೋಹರುನ್ನೀಸಳು ಪರ್ಶಿಯಾ ದೇಶದ ಒಬ್ಬ ಕುಲೀನ ಆದರೂ ಬಡ ಕುಟುಂಬದ ಹುಡುಗಿ. ರೂಪದಲ್ಲೂ ಚೆಲುವಿನಲ್ಲೂ ಅವಳನ್ನು ಮೀರಿಸಿದವರು ಆಗ ಇಡೀ ಹಿಂದುಸ್ಥಾನದಲ್ಲಿ ಯಾರೂ ಇರಲಿಲ್ಲ. ಅವಳು ಸಣ್ಣ ಪ್ರಾಯದವಳಾಗಿದ್ದಾಗಲೇ ಅವಳ ತಂದೆ ಕುಟುಂಬ ಸಮೇತ ಆಗ್ರಾದಲ್ಲಿ ಮನೆ ಮಾಡಿಕೊಂಡಿದ್ದ. ಮೋಹರುನ್ನೀಸಳು ಸಣ್ಣ ಪ್ರಾಯದಿಂದಲೂ ತನ್ನ ತಂದೆಯೊಡನೆ ಅಕ್ಬರನ ಅರಮನೆಗೆ ಬರುತ್ತಾ ಹೋಗುತ್ತಾ ಇರುತ್ತಿದ್ದಳು. ಆದ್ದರಿಂದ ಜಹಾಂಗೀರನಿಗೆ ಆಗಿನಿಂದಲೂ ಅವಳೊಡನೆ ಒಂದು ತರದ ಸ್ನೇಹವುಂಟಾಗಿತ್ತು.

ಜಹಾಂಗೀರನ ಆಗಿನ ಹೆಸರು ಸಲೀಮನೆಂದಾಗಿತ್ತು. ಸಲೀಮನಿಗೆ ಬಾಲ್ಯದಲ್ಲಿ ಪಾರಿವಾಳಗಳನ್ನು ಹಾರಿಸುವ ಆಟದಲ್ಲಿ ಬಹಳ ಪ್ರೇಮ. ಒಂದು ದಿನ ಅವನು ಎರಡು ಪಾರಿವಾಳಗಳೊಡನೆ ಆಡುತ್ತ ಇದ್ದಾಗ, ಅಕಸ್ಮಾತ್ತಾಗಿ ಅಂತಃಪುರಕ್ಕೆ ಹೋಗುವ ಒಂದು ಕಾರ್ಯವು ಒದಗಿ ಬಂದಿತು. ಹತ್ತಿರದಲ್ಲೇ ಮೋಹರುನ್ನೀಸಳು ಸಲೀಮನ ಆಟವನ್ನು ನೋಡುತ್ತ ನಿಂತಿದ್ದಳು. ಸಲೀಮನು ಆ ಎರಡು ಪಾರಿವಾಳಗಳನ್ನು ಅವಳ ಕೈಗೆ ಕೊಟ್ಟು—'ನಾನು ಹಿಂದಿರುಗಿ ಬರುವ ತನಕ ನೀನೇ ಈ ಪಾರಿವಾಳಗಳನ್ನು ನೋಡಿಕೊಂಡಿರು' ಎಂದು ಹೇಳಿ ಹೊರಟು ಹೋದ.

ಮೋಹರುನ್ನೀಸಳಿಗೆ ಆ ಎರಡು ಪಾರಿವಾಳಗಳ ಕಷ್ಟಸ್ಥಿತಿಯನ್ನು ನೋಡಿ ಬಹಳ ಕರುಣೆ ಹುಟ್ಟಿತು. ತಾನು ಹಾಗೆ ಮಾಡಿದರೆ ಸಲೀಮನು ಸಿಟ್ಟಾಗುವನೆಂಬುದನ್ನು ಅರಿಯದೆ ಅವಳು ಒಂದು ಪಾರಿವಾಳವನ್ನು ಬಿಟ್ಟು ಓಡಿಸಿಬಿಟ್ಟಳು. ಅದು ಎತ್ತಲೋ ಹಾರಿಹೋಯಿತು. ಕೈಯಲ್ಲಿ ಒಂದೇ ಪಾರಿವಾಳ ಉಳಿದಿದ್ದಿತು. ಅಷ್ಟರಲ್ಲಿ ಸಲೀಮನು ಮರಳಿ ಬಂದ. 'ಪಾರಿವಾಳವು ಏನಾಯಿತು' ಎಂದು ಮೋಹರುನ್ನೀಸಳನ್ನು ಕೇಳಿದ. 'ಅದನ್ನು ಬಿಟ್ಟುಬಿಟ್ಟೆ' ಎಂದಳು. 'ಹೇಗೆ ಬಿಟ್ಟುಬಿಟ್ಟೆ?' ಎಂದು ಪುನಃ ಕೇಳಿದಾಗ 'ಹೀಗೆ ಬಿಟ್ಟುಬಿಟ್ಟೆ' ಎಂದು ಹೇಳಿ ಅವಳು ಕೈಯಲ್ಲಿದ್ದ ಇನ್ನೊಂದು ಪಾರಿವಾಳವನ್ನೂ ಬಿಟ್ಟಳು. ಅವಳ ಆ ವರ್ತನವನ್ನೂ ಮಾತನ್ನೂ ಕೇಳಿ, ರಸಿಕನಾದ ಜಹಾಂಗೀರನು ಸಿಟ್ಟಾಗಲಿಲ್ಲ. ಅದರ ಬದಲಿಗೆ ಅವನು ಅವಳ ಮೇಲೆ ಮೋಹಿತನಾದ.

ವರ್ಷಗಳು ಕಳೆದ ಹಾಗೆ ಸಲೀಮನ ಪ್ರೇಮವು ಮೋಹರುನ್ನೀಸಳ ಮೇಲೆ ಬೆಳೆಯುತ್ತ ಬಂದಿತು. ಅವನು ತನ್ನ ಹೃದಯ ಮನಸ್ಸುಗಳನ್ನು ಕೂಡ ಆಕೆಗೆ ಮಾರಿದ. ಆದರೆ ಅಕ್ಬರನು ಮೋಹರುನ್ನೀಸ–ಸಲೀಮರ ವಿವಾಹಕ್ಕೆ ಸಮ್ಮತನಾಗಿರಲಿಲ್ಲ. ಅಕ್ಬರನು ಆಕೆಯ ವಿವಾಹವನ್ನು ಶೇರ ಅಫಘಾನನೊಂದಿಗೆ ಮಾಡಿಸಿ ಆಕೆಯನ್ನು ದೂರದ ಬಂಗಾಳಕ್ಕೆ ಕಳುಹಿಸಿಕೊಟ್ಟ. ಪರಂತು ಈ ಘಟನೆಯಿಂದಾಗಿ ಸಲೀಮನಿಗ್ಗೆ ಮೋಹರುನ್ನೀಸಳ ಮೇಲಿದ್ದ ಪ್ರೇಮವು ಎಳ್ಳಷ್ಟೂ ಕಡಿಮೆಯಾಗಲಿಲ್ಲ.

ಪ್ರೇಮ ವಿವಾಹ

ಮುಂದೆ ಅಕ್ಬರನು ಸ್ವರ್ಗಸ್ಥನಾಗಿ ಸಲೀಮನು ಜಹಾಂಗೀರ ಎಂಬ ಹೆಸರಿನಿಂದ ಬಾದಶಹನಾದನು. ಜಹಾಂಗೀರನು ತನ್ನ ಪ್ರಣಯಿಗಾಗಿ ಏನನ್ನು ಮಾಡಲಿಕ್ಕಾದರೂ ಸಿದ್ಧನಾಗಿದ್ದ. ಅವನು ಶೇರ ಅಫಘಾನನನ್ನು ಉಪಾಯಾಂತರದಿಂದ ಕೊಲ್ಲಿಸಿ ಮೋಹರುನ್ನೀಸಳನ್ನು ತನ್ನ ಅರಮನೆಗೆ ಕರೆತಂದನು. ಆದರೆ ಜಹಾಂಗೀರನ ಈ ಘೋರದ ವ್ಯಾಪಾರದಿಂದಾಗಿ ಮೋಹರುನ್ನೀಸಳು ಆರು ತಿಂಗಳ ತನಕ ಅವನ ಮುಖ ಕೂಡ ನೋಡಲಿಕ್ಕೆ ಇಷ್ಟಪಡಲಿಲ್ಲ. ಆದರೆ ಹೇಗೆ ಹೇಗೆ ಅವಳು ಅವನಿಂದ ದೂರ ಸರಿಯುವ ಪ್ರಯತ್ನ ಮಾಡುತ್ತಿದ್ದಳೋ ಹಾಗೆ ಹಾಗೆ ಅವನ ಹೃದಯದ ಪ್ರೇಮಾಗ್ನಿಯು ಪ್ರಜ್ವಲಿತವಾಗುತ್ತಿತ್ತು. ಅವನು ಮೋಹರುನ್ನಿಸಳಿಗೆ ನೂರ್‌ಮಹಾಲ್, ಅಂದರೆ ಅರಮನೆಯ ಬೆಳಕೆಂದೂ, ನೂರ್‌ಜಹಾನ ಎಂದರೆ ಪ್ರಪಂಚದ ಬೆಳಕೆಂದೂ ಮುದ್ದಿನ ಹೆಸರುಗಳನ್ನಿಟ್ಟು ಅವಳ ಚರಣಗಳಲ್ಲಿ ತನ್ನ ಸರ್ವಸ್ವವನ್ನೂ ಸಮರ್ಪಿಸಿದನು. ಕೊನೆಗೆ ಜಹಾಂಗೀರನ ಪ್ರೇಮವ್ಯವಹಾರದಿಂದ ಸಂತುಷ್ಟಳಾಗಿ ನೂರಜಹಾನಳು ಆತನಿಗೆ ಪ್ರೇಮಭಿಕ್ಷೆಯನ್ನು ಕೊಟ್ಟಳು. ಬಹಳ ಸಂಭ್ರಮದಿಂದ ಅವರಿಬ್ಬರ ವಿವಾಹವು ನಡೆಯಿತು.

ಜಹಾಂಗೀರನ ಪ್ರೇಮಕಥೆಯು ಇಲ್ಲಿಗೇ ಮುಗಿಯುವುದಿಲ್ಲ. ನೂರಜಹಾನಳು ಮಹತ್ವಾಕಾಂಕ್ಷಿ ಸ್ತ್ರೀಯಾಗಿದ್ದಳು. ಅವಳು ತನ್ನ ಪತಿಯ ಮೇಲೆ ಮಾತ್ರವಲ್ಲ, ಸಮಸ್ತ ಹಿಂದುಸ್ಥಾನದ ಮೇಲೆ ಅಧಿಕಾರ ನಡೆಸಲಿಕ್ಕೆ ಇಚ್ಛಿಸುತ್ತಿದ್ದಳು. ಪ್ರೇಮಿ ಜಹಾಂಗೀರನು ಅದಕ್ಕೆ ಆಕ್ಷೇಪಿಸಲಿಲ್ಲ. ಅವನು ಮುಗಲ್ ಸಾಮ್ರಾಜ್ಯದ ಶಾಸನ ಭಾರವನ್ನೆಲ್ಲ ಆಕೆಗೇ ಒಪ್ಪಿಸಿ ತಾನು ಕೇವಲ ಪ್ರೇಮವ್ಯವಹಾರಗಳಲ್ಲಿ ಜೀವನ ಸಫಲತೆಯ ಕನಸುಗಳನ್ನು ಕಾಣತೊಡಗಿದನು.

ಪರ್ಶಿಯಾ ಬಾದಶಹನ ಪರೀಕ್ಷೆ

ಪ್ರೇಮ ವ್ಯವಹಾರಗಳಲ್ಲಿಯೇ ಜಹಾಂಗೀರನ ಜೀವನದ ದಿನಗಳು ಕಳೆಯುತ್ತಿದ್ದುವು. ಜಹಾಂಗೀರನು ಶಾಸನಭಾರವನ್ನು ಒಬ್ಬ ಹೆಂಗಸಿನ ಕೈಗೆ ಒಪ್ಪಿಸಿ ತಾನು ಅವಳ ದಾಸಾನುದಾಸನಾಗಿ ಜೀವನ ಮಾಡುತ್ತಿರುವನೆಂದೂ, ಯಾವಾಗಲೂ ಮದ್ಯಪಾನದಿಂದ ಮತ್ತನಾಗಿ ದಿನ ಕಳೆಯುತ್ತಿರುವನೆಂದೂ, ರಾಜ್ಯಶಾಸನದ ಕಡೆಗೆ ಅವನ ಮನಸ್ಸೇ ಹೋಗುವುದಿಲ್ಲವೆಂದೂ ದೇಶವಿದೇಶಗಳಲ್ಲಿ ಸುದ್ದಿಯು ಹರಡತೊಡಗಿತು. ಆ ಕಾಲದಲ್ಲಿ ಹಿಂದುಸ್ಥಾನವು ಅದರ ಸಂಪತ್ತಿಗಾಗಿ ಸುಪ್ರಸಿದ್ಧವಾಗಿದ್ದಿತು. ಅದನ್ನು ಆಕ್ರಮಿಸಿ, ತಮ್ಮ ಸ್ವಾಧೀನಮಾಡಿಕೊಳ್ಳಬೇಕೆಂದು ಪ್ರತಿಯೊಂದು ಬಲಿಷ್ಠ ರಾಜ್ಯದ ಅರಸನೂ ಮನಸ್ಸಿನ ಮಂಡಿಗೆ ತಿನ್ನುತ್ತಿದ್ದನು. ಹಿಂದುಸ್ಥಾನದ ಸುದ್ದಿಯು ಪರ್ಶಿಯಾ ದೇಶದ ಬಾದಶಹನ ಕಿವಿಗಳ ತನಕವೂ ಮುಟ್ಟಿತು. ಅದನ್ನು ಕೇಳಿ ಅವನ ಬಾಯಲ್ಲಿ ನೀರೂರಿತು. ಹಿಂದುಸ್ಥಾನವನ್ನು ಗೆದ್ದು ಪರ್ಶಿಯಾ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಅವನ ಆಸೆಯು ಪುನಃ ಜಾಗೃತವಾಯಿತು. ಮುಗಲ್ ದರ್ಬಾರಿನ ಸ್ಥಿತಿಗತಿಗಳನ್ನು ಸ್ವತಃ ಕಂಡು ಪರಾಮರಿಸಿ ಆ ಮೇಲೆ ಅನುಕೂಲವೆಂದು ತೋರಿದರೆ ಹಿಂದುಸ್ಥಾನವನ್ನು ಆಕ್ರಮಿಸುವುದೆಂದು ಅವನು ೨೦೦ ಜನ ಅಂಗರಕ್ಷಕರೊಂದಿಗೆ ಆಗ್ರಾಕ್ಕೆ ಹೊರಟನು.

ದಾರಿಯಲ್ಲಿ ಬರುತ್ತಾ ಪರ್ಶಿಯದ ಬಾದಶಹನು ಪೇಶಾವರ, ಲಾಹೋರು, ಮುಲ್ತಾನ, ದಿಲ್ಲಿಗಾಗಿ ಆಗ್ರಾಕ್ಕೆ ಬರಬೇಕಾಗಿದ್ದಿತು. ಅವನು ತನ್ನ ಅಂಗರಕ್ಷಕರನ್ನು ಹಿಂದುಮುಂದಾಗಿ ಕಳುಹಿಸಿ ಒಂದು ದಿನ ಅಲ್ಲಿಗೆ ಬಂದು ಮುಟ್ಟಿದನು. ಅಲ್ಲಿ ಬಾದಶಹನು ಒಬ್ಬ ಮುಸಲ್ಮಾನ ಫಕೀರನ ವೇಷವನ್ನು ಹಾಕಿಕೊಂಡು ಒಂದು ತೋಟದಲ್ಲಿ ಬಿಡಾರ ಮಾಡಿಕೊಂಡನು. ಈ ಫಕೀರನು ದೊಡ್ಡ ಸಿದ್ಧನೆಂದೂ, ಅವನು ಹೇಳಿದಂತೆ ಆಗುವುದೆಂದೂ ಆಗ್ರಾದಲ್ಲೆಲ್ಲಾ ಪ್ರಸಿದ್ಧವಾಗುತ್ತ ಬಂದಿತು. ಅನೇಕ ಮಂದಿ ಅನೇಕ ಬಾರಿ ಹೋಗಿ, ಅವನನ್ನು ಪ್ರಾರ್ಥಿಸಿ ಇಷ್ಟಾರ್ಥಗಳನ್ನು ಪಡೆದು ಬರುತ್ತಿದ್ದರು. ಒಂದು ದಿನ ಒಬ್ಬ ಬಡ ಆಗ್ರಾ ನಿವಾಸಿ ಈ ಫಕೀರನ ಬಳಿಗೆ ಹೋಗಿ–ತನ್ನ ಕಷ್ಟ ದಾರಿದ್ರ್ಯಗಳನ್ನು ಅರುಹಿದನು. ಫಕೀರನು ನಸುನಗುತ್ತ ಒಂದು ಕಲ್ಲು ತಂದನು. ಆ ತೋಟದಲ್ಲಿ ಅಷ್ಟು ದೂರ ಬಿಸಾಡಿ 'ನೋಡು, ಕಲ್ಲು ಬಿದ್ದಲ್ಲಿ ನೆಲವನ್ನು ಅಗೆ. ನಿನ್ನ ಭಾಗ್ಯದಲ್ಲಿದ್ದುದು ದೊರೆಯುವುದು' ಎಂದನು. ಬಡವನು ಅಲ್ಲಿ ನೆಲವನ್ನು ಅಗೆಯಲು ಅವನಿಗೆ ಒಂದು ಚಿನ್ನದ ಗಟ್ಟಿ ದೊರೆಯಿತು. ಈ ಸಮಾಚಾರ ಊರಲ್ಲೆಲ್ಲಾ ಹರಡಿ ಫಕೀರನ ಪ್ರಸಿದ್ಧಿ ಮತ್ತಷ್ಟು ಬೆಳೆಯಿತು. ಇದು ನೂರಜಹಾನಳ ಕಿವಿಗೂ ಮುಟ್ಟಿ ಒಂದು ದಿನ ಅವಳೂ ಫಕೀರನನ್ನು ಕಾಣಲು ಹೋದಳು. ಫಕೀರನು ಅವಳನ್ನು ಸಂಭ್ರಮದಿಂದ ಸ್ವಾಗತಿಸಿದನು. ನೂರಜಹಾನಳು ಅವನ ಕಾಲುಗಳ ಮೇಲೆ ಬಿದ್ದು ತನಗೆ ಚಿರಸ್ಥಾಯಿಯಾದ ಕೀರ್ತಿಯನ್ನು ಕೊಡಿಸಬೇಕೆಂದು ಆತನನ್ನು ಬೇಡಿದಳು. ಅವನು 'ಹಾಗೆಯೇ ಆಗುವುದೆಂ'ದು ಆಶೀರ್ವದಿಸಿ ಒಮ್ಮೆ ಅರಮನೆಯನ್ನು ನೋಡಿ ಬರುವ ತನ್ನ ಇಚ್ಛೆಯನ್ನು ಪ್ರಕಟಿಸಿದನು. ನೂರಜಹಾನಳು ಸಂತೋಷದಿಂದ ಒಪ್ಪಿದಳು.

ಜಹಾಂಗೀರನ ರಾಜನೀತಿಜ್ಞತೆ

ಆಗ ರಾತ್ರಿ ಸಮಯವಾಗಿದ್ದಿತು. ಜಹಾಂಗೀರನು ಉಂಡು ತಿಂದು ಶಯನಾಗಾರದಲ್ಲಿ ಮಲಗಿದ್ದನು. ಪಲ್ಲಂಗದ ಬದಿಯಲ್ಲಿರುವ ಸಣ್ಣ ಮಂಚದ ಮೇಲೆ ಸುರಾಪಾತ್ರಗಳಿದ್ದುವು. ಜಹಾಂಗೀರನು ಅಮಲಿನಿಂದ ಮತ್ತನಾಗುತ್ತ ಇದ್ದನು. ಒಂದೊಂದೇ ಬಟ್ಟಲಾಗಿ ಸುರಾಪಾನ ಮಾಡುತ್ತ ಇದ್ದ. ಅದೇ ಹೊತ್ತಿಗೆ ನೂರಜಹಾನಳು ಫಕೀರನನ್ನು ಕರಕೊಂಡು ಅರಮನೆಗೆ ಬಂದಳು. ಜಹಾಂಗೀರನ ಶಯನಾಗಾರಕ್ಕೆ ಬಂದು ಫಕೀರನನ್ನು ಸಮ್ಮಾನದಿಂದ ಕೂತುಕೊಳ್ಳಿಸಿ ಪತಿಯ ಸಮೀಪಕ್ಕೆ ಬಂದು ನಿಂತುಕೊಂಡಳು. ಇಷ್ಟೆಲ್ಲ ಆಗುತ್ತಿರುವಾಗಲೂ ಜಹಾಂಗೀರನ ಲಕ್ಷ್ಯವು ಫಕೀರನ ಕಡೆಗೆ ಇರಲಿಲ್ಲ. ಅವನು ಮದ್ಯಪಾನ್ ಮಾಡುತ್ತಲೇ ಇದ್ದ. ಫಕೀರನು ಬಂದ ಸಮಾಚಾರವನ್ನೂ, ಆತನು ಸಿದ್ಧಿಯನ್ನು ಪಡೆದ ವಿಭೂತಿಪುರುಷನಾಗಿರುವುದನ್ನೂ ಆಕೆ ಜಹಾಂಗೀರನಿಗೆ ಹೇಳಿ, ಫಕೀರನ ಗುಣಗಾನ ಮಾಡಿದಳು. ಆದರೂ ಜಹಾಂಗೀರನು ಮೌನವಾಗಿದ್ದನು. ಅವನು ತನ್ನ ಹಾಸಿಗೆಯಿಂದ ಏಳಲಿಲ್ಲ. ಆಗ ನೂರಜಹಾನಳ ಕೈ ಹಿಡಿದು—'ಬಾದಶಹರೇ, ಲೋಕ ವಿಖ್ಯಾತರಾದ ಮಹಾಪುರುಷರನ್ನು ಕರೆತಂದಿರುವೆನು' ಎಂದಳು.

ಜಹಾಂಗೀರನು ಸುಮ್ಮನೆ ಕಣ್ಣು ಬಿಚ್ಚಿ ನೋಡಿದ. ಫಕೀರನು ನಸುನಗುತ್ತ ಇದ್ದ. ಜಹಾಂಗೀರನ ಪಾನಾಸಕ್ತಿಯನ್ನು ನೋಡಿ ಅವನು ನಗುತ್ತಿದ್ದಿರಬಹುದು. ಜಹಾಂಗೀರನು ಅವನನ್ನು ನೋಡಿ ಕಿಡಿಕಿಡಿಯಾದ—'ಪರ್ಶಿಯದ ಬಾದಶಹ! ಜಗತ್ತಿನಲ್ಲಿ ನೀನೇ ಮಹಾ ಬುದ್ಧಿವಂತನೆಂದು ತಿಳಿದಂತೆ ಕಾಣುತ್ತದೆ! ಆದರೆ ಮುಗಲ್ ಸಮ್ರಾಟ ಜಹಾಂಗೀರನು ಎಂಥವನೆಂದು ನೀನು ತಿಳಿಯಲಿಲ್ಲ. ಅದನ್ನು ಈಗ ತಿಳಿದುಕೋ. ನೀನು ಯಾವಾಗ ಪರ್ಶಿಯದಿಂದ ಹೊರಟು ಬಂದಿರುವಿ ಎಂಬುದು ನೀನು ಹೊರಟಾಗಲೇ ನನಗೆ ಗೂಢಚಾರರು ತಿಳಿಸಿದ್ದರು. ನನ್ನ ಗೂಢಚಾರರು ನಿನ್ನ ಆಗ್ರಾದ ತೋಟದಲ್ಲಿ ಮಾತ್ರವಲ್ಲ, ನಿನ್ನ ಪರ್ಶಿಯದ ರಾಜಮಹಲಿನ ತನಕವೂ ಜಾಲದಂತೆ ಹರಡಿದ್ದಾರೆ. ನೀನು ಹಿಂದುಮುಂದಾಗಿ ಕಳುಹಿಸಿಕೊಟ್ಟ ನಿನ್ನ ಅಂಗರಕ್ಷಕರೆಲ್ಲರೂ ಎಂದೋ ಕೊಲ್ಲಲ್ಪಟ್ಟಿದ್ದಾರೆ. ನೀನು ನನ್ನ ಪರೀಕ್ಷೆಯನ್ನು ಚೆನ್ನಾಗಿ ಮಾಡೆಂದೇ ನನ್ನವರು ನಿನ್ನನು ಕೊಲ್ಲದೆ ಬಿಟ್ಟರು! ಈಗ ನಿನ್ನ ತೋಟದಲ್ಲಿ ವೇಷ ಬದಲಿಸಿ ನಿನ್ನ ಅಂಗರಕ್ಷಕರಾಗಿರುವವರೆಲ್ಲರೂ ನನ್ನ ಗೂಢಚಾರರಾಗಿರುವರು! ನೋಡು, ನೀನು ಸಿದ್ಧಿಯ ಬಲದಿಂದ ಆಗ್ರಾ ನಿವಾಸಿಗಳಿಗೆ ಕೊಟ್ಟ ಚಿನ್ನದ ಗಟ್ಟಿ, ಇತರ ವಸ್ತು ಒಡವೆಗಳೆಲ್ಲ ಆ ಕೋಣೆಯಲ್ಲಿ ಸಂಗ್ರಹವಾಗಿರುವುವು. ಒಮ್ಮೆ ನೋಡಿಕೊಳ್ಳು. ನಿನ್ನ ಬಳಿಗೆ ಇಷ್ಟಾರ್ಥಿಗಳಾಗಿ ಬಂದವರೆಲ್ಲ ನನ್ನ ಗೂಢಚಾರರೇ ಆಗಿದ್ದರು. ನೋಡು, ನೂರಜಹಾನ–ಮಹತ್ವಾಕಾಂಕ್ಷಿಣಿ. ಅವಳ ಕೆಲಸ ಕಾರ್ಯಗಳು ದೇಶಕ್ಕೆ ಅಹಿತವನ್ನುಂಟುಮಾಡದಿರುವ ತನಕ ನಾನು ಅವಳ ಕೆಲಸ ಕಾರ್ಯಗಳಲ್ಲಿ ಕೈಹಾಕುವುದಿಲ್ಲ. ಆದರೆ ಅವಳಿಗೆ ತಾನು ಬುದ್ಧಿವಂತಳು ಎಂಬ ಗರ್ವವುಂಟಾಗಿದ್ದಿತು. ಅದು ಈಗ ಮಾಯಿತು. ಅವಳಿಗೆ ಬುದ್ಧಿ ಬಂದಿತು. 'ಭಾರತದ ರಾಜ್ಯಶಾಸನವನ್ನು ನೂರಜಹಾನ ಮಾಡುತ್ತಿರುವಳಾದರೂ ಅವಳ ಹಿಂದೆ ನನ್ನದೇ ಕೈ ಆಡುತ್ತಿದೆ ಎಂದು ಚೆನ್ನಾಗಿ ತಿಳಿಕೊಳ್ಳು. ಮತ್ತು ಈ ಕೈಯಲ್ಲಿ ಎಷ್ಟು ಬಲವಿದೆ ಎಂದು ತಿಳಕೊಳ್ಳಲಿಕ್ಕೆ ಬಂದಿಯಲ್ಲವೆ? ನೋಡು–ನನ್ನ ಈ ಎರಡು ಕೈ ಬೆರಳುಗಳನ್ನು ಮುರಿ. ಸಾಮರ್ಥ್ಯವಾದರೂ ನಿನ್ನಲ್ಲಿದೆಯೇ ಪರೀಕ್ಷಿಸು" ಎಂದು ಕೈ ಮುಂದೆ ಮಾಡಿದ. ಪರ್ಶಿಯದ ಬಾದಶಹನ ಕೈ ಸೊಂಟದಲ್ಲಿ ಅಡಗಿದ್ದ ಕತ್ತಿಯ ಕಡೆಗೆ ಹೋಯಿತಾದರೂ, ಅದರಿಂದ ಪ್ರಯೋಜನವಿಲ್ಲದಿರುವುದನ್ನು ಅವನು ನೋಡಿದ. ನಿರುಪಾಯನಾಗಿ ಅವನು ಜಹಾಂಗೀರನ ಎರಡು ಬೆರಳುಗಳನ್ನು ಬಗ್ಗಿಸಲಿಕ್ಕೆ ಪ್ರಯತ್ನಿಸಿದ. ಆದರೆ ಅವು ವಜ್ರದ ಹಿಡಿಯಂತೆ ಕಠಿಣವಾಗಿದ್ದುವು! ಬಾದಶಹನು ಸೋಲನ್ನು ಒಪ್ಪಿ ನತಮಸ್ತಕನಾಗಿ ನಿಂತುಕೊಂಡ. ನೂರಜಹಾನಳು ಕಬ್ಬಿಣ್ತಾದವಳಂತೆ ಒಮ್ಮೆ ಬಾದಶಹನನ್ನೂ ಇನ್ನೊಮ್ಮೆ ಜಹಾಂಗೀರನನ್ನೂ ನೋಡುತ್ತ ನಿಂತಳು. ಜಹಾಂಗೀರನು ಇನ್ನೊಂದು ಬಟ್ಟಲು ಮದ್ಯ ಕುಡಿದು ಮತ್ತನಾಗಿ ಹಾಸಿಗೆಯ ಮೇಲೆ ಬಿದ್ದುಬಿಟ್ಟ. ಫಕೀರ ವೇಷದಲ್ಲಿದ್ದ ಪರ್ಶಿಯದ ಬಾದಶಹನು ಅದೇ ಅನುಕೂಲ ಸಮಯವೆಂದು ಅಲ್ಲಿಂದ ಜಾರಿಬಿಟ್ಟ" ಮತ್ತೆ ಜಹಾಂಗೀರನ ಮುಗಲ್ ಸಾಮ್ರಾಜ್ಯದ ಮೇಲೆ ಅವನು ಜೀವಿಸಿರುವ ತನಕ ಯಾರೂ ಕಣ್ಣೆತ್ತಿ ನೋಡಲಿಲ್ಲ!! ಜಹಾಂಗೀರನ ರಾಜನೀತಿ ನೈಪುಣ್ಯವು ಹೀಗೆ ಅಸಾಧಾರಣವಾಗಿದ್ದಿತು.

U. K. BHUJANGA NAYAK
CLOTH COMMISSION AGENT
SHEVAPET, SALEM

ಯು. ಕೆ. ಭುಜಂಗ ನಾಯಕ್
ಜವುಳಿ ದಲಾಲ, ಶಿವಪೇಟೆ, ಸೇಲಂ.

ನಮ್ಮಲ್ಲಿ ಯಾವತ್ತೂ ಸೇಲಂನಲ್ಲಿ ತಯಾರಾಗುವ ಎಲ್ಲಾ ತರದ ಸೀರೆಗಳೂ, ಧೋತಿಗಳೂ, ಶಾಲುಗಳೂ ಸುಲಭ ದರದಲ್ಲಿ ಸಿಗುತ್ತವೆ.

ಹೆಚ್ಚಿನ ಮಾಹಿತಿಬಗ್ಗೆ ಮೇಲಿನ ವಿಳಾಸಕ್ಕೆ ಬರಕೊಳ್ಳಿರಿ.

ನಗರದ ನವ ನಾಯಕರು

[ಕಳೆದ ಸಂಚಿಕೆಯಿಂದ ಮುಂದುವರಿದುದು]

ಇಲ್ಲದೆ ಬಾಬು ರಾಜೇಂದ್ರರವರು ನಮ್ಮ ಊರಿಗೆ ಬಂದಾಗ, ವಾಲಿಂಟಿಯರರ ದಳಪ್ರಾಯಿಯಾಗಿ, ಮೈದಾನದಲ್ಲಿ—'ಮಹನೀಯರೇ, ದಯವಿಟ್ಟು ಶಾಂತರಾಗಿರಿ. ಶ್ರೀ ಬಾಬು ರಾಜೇಂದ್ರ ಪ್ರಸಾದರು ಈಗಲೇ ಬರುವ ವೇಳೆಯಾಯಿತು' ಎಂದು ನೂರು ಬಾರಿ ಕೂಗಿ ಅಷ್ಟೇ ಬಾರಿ ತನ್ನ ಧ್ವನಿಗೆ ಮೆಚ್ಚಿಹೋಗಿದ್ದನು. ಶ್ರೀ ಬಾಬುಗಳ ಉಪನ್ಯಾಸವನ್ನು ಕನ್ನಡದಲ್ಲಿ ತರ್ಜುಮಿಸಲು ಆತುರನಾಗಿದ್ದನು. ದುರ್ದೈವದಿಂದ ಇನ್ನೊಬ್ಬರು ಅದನ್ನು ತರ್ಜುಮಿಸಿ ಅವನ ಮುಖವು ಎದುರಿಗೆ ಬಾರದಂತೆ ಮಾಡಿದರು. ಹೇಗೂ ಇರಲಿ, ಈ ಎಲ್ಲ ಸಾರ್ವಜನಿಕ ಚಳವಳಿಗಳಲ್ಲಿ ಕುಮಾರಯ್ಯನು ಇದ್ದರೂ ಪತ್ರಿಕೆಗಳಲ್ಲಿ ಅವನ ಸುದ್ದಿ ಬರಲಿಲ್ಲ. ಆದರಿಂದಲೇ ಕುಮಾರಯ್ಯನಿಗೆ ವ್ಯಥೆಯಾಯಿತು.

'ಇಲ್ಲ ದೇಶಸೇವೆಗೆ ವಾರಪತ್ರಿಕೆಯೇ ಪ್ರಯುಧ' ಎಂಬ ತೀರ್ಮಾನಕ್ಕೆಬಂದುದಾಯಿತು ಆರೆಂಟು ಪ್ರೆಸ್ಸುಗಳಲ್ಲಿ ಧಾರಣೆ ಕೇಳಿದುದಾ 'ಕನ್ನಡ ಕೇಸರಿ'ಯೆಂದು ಹೆಸರನ್ನು ತಮ್ಮ ಭಾವೀ ಕೂಸಿಗೆಡಸಲಾಯಿತು. ಅದು ಹೊರಡುತ್ತದೆ ಎಂದು ವರ್ತಮಾನ ಪತ್ರಿಕೆಗಳಿಗೆ ತಿಳಿಸಿದ್ದು ಆಯಿತು ಅವರು ಆ ಸುದ್ದಿಯನ್ನು ಪ್ರಕಟಿಸದೆ ಅವನು ಸಿಟ್ಟುಗೊಂಡುದೂ ಆಯಿತು.

ಈ ಎಲ್ಲ ಕೆಲಸಗಳ ಅನಂತರ ಪತ್ರಿಕೆಗೆ ಹಣ ಹುಡುಕುವ ಏರ್ಪಾಡು ನಡೆಯಿತು ಪೇಪರು, ಪ್ರಿಂಟು ಹೇಗೂ ಆಗುತ್ತದೆ ಎಂಬುದನ್ನು ನಿರ್ಣಯಮಾಡಿ ಕೊಂಡು ಉಳಿದ ಆಫೀಸು ವೆಚ್ಚಕ್ಕೆ ಯಾರನ್ನಾದರೂ ಇಳಿಸಲು ಯುಕ್ತಿಸಿದನು! ಆದರೆ ಯಾರನ್ನೂ ಮೊರೆಹೊಗಲಿ? ಊರಿನ 'ಧೇಖ'ರುಗಳೆಲ್ಲ ದುಡ್ಡುಕೊಟ್ಟು ಹೊಗಳಿಸಿಕೊಂಡವರಲ್ಲ. ಅವರಿಗೆ ದುಡ್ಡು ಕೊಡುವೆನೆಂದು ಹೊಗಳಿಸಿಕೊಂಡು ಗೊತ್ತು ಅವರನ್ನು ಕುಮಾರಯ್ಯ ನಂಬಲಾರ ಇನ್ನಾರಿಗೆ ಶರಣು ಹೋಗಲಿ ಎಂದು ಯೋಚಿಸಿ ಯೋಚಿಸಿ ಗ್ರೀಸ್ ಫರ್ಟಾಡೋರವರಲ್ಲಿಗೇನೆ ಕಾಲಿರಿಸಿದನು ಆದರೆ 'ಕುಮಾರಯ್ಯ ಕೆಥೊಲಿಕನಲ್ಲ ಗೌಡನು' ಎಂದು ತಿಳಿದೊಡನೇ ನಿರುತ್ಸಾಹಿಯಾದಳು

ಕೊನೆಗೆ ಕುಮಾರಯ್ಯನು ಬಡ ಹರಿಜನರ ವಿದ್ಯಾರ್ಥಿ ವೇತನ ಫಂಡಿನ ಸಭೆಯೊಂದರಲ್ಲಿ ಶ್ರೀ ದಿಗಂಬರರಾಯರನ್ನು ಭೇಟಿಯಾದನು ದಿಗಂಬರರಾಯರು ಬಡ ಹರಿಜನರ ವೇತನ ಫಂಡಿಗೆ ಅಧ್ಯಕ್ಷರಾಗಿದ್ದರು ಅಲ್ಲಿ 'ಫಂಡು ಕೂಡಿಸುವ ವಿಷಯವಾಗಿ' ಕುಮಾರಯ್ಯನವರು ಉಜ್ವಲ ಭಾಷಣಮಾಡಿದರು ಆ ಉಪನ್ಯಾಸಕ್ಕೆ ಮರುಳಾದ ದಿಗಂಬರರಾಯರು ಕೂಡಲೆ (ಅಂದರೆ ಉಪನ್ಯಾಸ ಮುಗಿದು ಮನೆಗೆ ಹೋಗುವಾಗ) ಕುಮಾರಯ್ಯನವರನ್ನು ಕೊಂಡಾಡಿದರು

'Yours was an inspiring talk this evening' ಎಂದರು

ನಿಜಕ್ಕೂ ಕುಮಾರಯ್ಯನ ಕಪೋಲಗಳಿಂದ ಇನ್ಸ್ಪಿರೇಶನಿನ ಮಣಿಗಳೇ ಒಸರುತ್ತಿದ್ದುವು. ಕುಮಾರಯ್ಯನೊಡನೆ ದಿಗಂಬರರಾಯರು ಸಾರ್ವಜನಿಕ ಮುಖಂಡರ ವಿಷಯವನ್ನೂ, ತಮ್ಮ ಸೇವೆಯನ್ನೂ, ತಮಗೆ ಸಲಬೇಕಾದ ಗೌರವ ಬಾರದಿರುವ ವಿಷಯವನ್ನೂ ತಿಳಿಸಿದರು. ಕುಮಾರಯ್ಯನೂ ಅದೇ ರೀತಿ ನೊಂದವನು. 'ಆದುದರಿಂದಲೇ ಥಟ್ಟನೆ 'ಮಿ। ದಿಗಂಬರರಾವ್', ಪಬ್ಲಿಕ್ ವರ್ಕ್ ಆಗಬೇಕೇ? ನಮ್ಮದೇ ಪೇಪರು ಅವಶ್ಯ—ಎಂದು ಪೀಠಿಕೆ ಹಾಕಿದರು. ಕೆಲಸವಾಯಿತು. ಪತ್ರಿಕೆಯ ಪ್ರಾರಂಭೋತ್ಸವವನ್ನು ಶ್ರೀ ದಿಗಂಬರರಾಯರೇ ತಮ್ಮ ದಿವ್ಯ ಹಸ್ತದಿಂದ ನಡೆಯಿಸಿದರು.

ಅಲ್ಲಿಂದಲೇ ದಿಗಂಬರರಾಯರ ಕಾರಿನಲ್ಲಿ ಕುಮಾರಯ್ಯನ 'ವರ್ಸು (ನಾಣಿ ಎನ್ನುವಂತೆ)' [illegible]

ಪತ್ರಿಕೆಯ ವಿಷಯು ಬಲು ಕಷ್ಟವಾಗಲಿಲ್ಲ. ಅಮೇರಿಕದ ರೂಸವೆಲ್ಟರ ಕುರಿತೇ ಆಗಲಿ, ವಿನ್‌ಸ್ಟನ್ ಚರ್ಚಿಲ್‌ರ ಕುರಿತೇ ಆಗಲಿ ಮಂಗಳೂರಿಂದ ಮುಲಾಜಿಲ್ಲದೆ ಉಗ್ರಲೇಖನ ಬರೆಯುವವರಲ್ಲಿ ಕುಮಾರಯ್ಯನಿಗೆ ಸಮವಿಲ್ಲವಾಯಿತು. ಮುಂದೆ ರಾಜಕೀಯಕ್ಕೆ—'ವಾರದ ವ್ಯಥೆ'ಗಳು ಸೇರಿದುವು ಸೋಶಿಯಲಿಸ್ಟರ ತತ್ವದಂತೆ ಯಾರ ಸೊತ್ತಿಗೂ ಸ್ವಂತವೆಂಬ ಒಪ್ಪಿಗೆಯಿಲ್ಲ. ಆದುದರಿಂದಲೇ ಎಲ್ಲ ಪತ್ರಿಕೆಗಳಲ್ಲಿ ಬಂದ ವಾರ್ತೆ, ಲೇಖನ, ಚಿತ್ರ—ಇವೆಲ್ಲವನ್ನೂ ತನ್ನದೆಂದೇ ತಿಳಿದು ಬಳಸತೊಡಗಿದನು.

ಜಾಹೀರಾತುದಾರರಿಗೆ 'ಕನಿಷ್ಠ ೫೦,೦೦೦ ಜನ ಓದುವ ಪತ್ರಿಕೆ' ಎಂದು ತಿಳಿಸಿದನು. ಈಗ ಹಾರ್ಲಿಕ್ಸ್, ತಾಯಿತು, ಗೊನೊಕಿಲ್ಲರು, ಟಾಯರು, ಮಲೇರಿಯಾಹಾರಿ—ಎಲ್ಲವುಗಳಿಂದಲೂ ಅವರ ಕನ್ನಡ ಕೇಸರಿಯ ೧೮ ಪುಟಗಳು ತುಂಬಿವೆ.

ಲೇಖನಗಳ ವಿಷಯವಾಗಿ ಎಲ್ಲರಿಗೂ ಪ್ರೋತ್ಸಾಹ ಸಿಗಲೆಂದು ಮೇರಿಜಿಗೆ ಭೇಟಿಯಾದ ವಿದ್ಯಾರ್ಥಿಗಳ ಪ್ರಬಂಧ ಪುಸ್ತಕದ ಹಾಳೆಗಳೆಲ್ಲಾ ಅವಶ್ಯಕವಾಗಿವೆ

ಆದರೆ ನಿಜವಾಗಿ ಕನ್ನಡ ಕೇಸರಿ ಜನಾದರವಾದುದು—ಅವನು ಜಾನಕಿರಾಮಚಂದ್ರಯ್ಯನವರ ವಿಚಾರದಲ್ಲಿ 'ಅಡುಗೆಮನೆ ಪುರಾಣ' ಎಂದು ಮಿಸೆಸ್ ಜಾನಕಿರಾಮಚಂದ್ರಯ್ಯನವರಿಗೆ ತಂಗುಳು ಸಾಂಬಾರಿನ ಮೇಲಿನ ಮಮತೆಯನ್ನು ಸಾರ್ವಜನಿಕ ಸೇವೆಗಾಗಿ ಹೊರಗೆಡಹಿದ ಮೇಲೆ ಅವರನ್ನು ತೆಗಳಿದ ಮರುದಿನವೇ Congratulations ಗ್ರೇಸಿ ಫರ್ಟಾಡೋರಿಂದ' ಬಂದಿತು ಆಗ ಗ್ರೇಸಿ—ಜಾನಕಿ ಕಾಳಗ ಆರಂಭವಾಗಿರಲಿಲ್ಲ. ಈಗಂತೂ ಗ್ರೇಸಿಯವರು 'You are a brave warrior' ಎಂದು ಬೆನ್ನು ಚಪ್ಪರಿಸಿ ಹೇಳಿದ್ದಾರೆ ಆ ದಿನದಿಂದ ಕುಮಾರಯ್ಯನವರು ಪಾಂಡ್ಸ್ ಕ್ರೀಮ್ ಉಪಯೋಗಿಸತೊಡಗಿದ್ದಾರೆ ಅಲ್ಲದೆ ತಮ್ಮ ಕಡ್ಡಿ ಶರೀರವನ್ನು ಪುಷ್ಟಿಗೊಳಿಸಲು ಬೇಕಾದ ಟಾನಿಕ್‌ಗಳನ್ನೂ, ನೆರೆಯುತ್ತಿರುವ ಕೂದಲನ್ನು ಕಪ್ಪುಮಾಡಲು ಕೂದಲು ರಂಗನೂ ಉಪಯೋಗಿಸುತ್ತಿದ್ದಾರೆ. ಅಲ್ಲದೆ ನಾಣಿ ಅವರನ್ನು ಕಂಡಾಗಲೆಲ್ಲ 'ಮಂತಾರೊ' ಬಂದಿತು ಎಂದುದು ಕುಮಾರಯ್ಯನಿಗೆ ತಿಳಿಯದೆ ಇಲ್ಲ. ಶ್ರೀಮತಿ ತಾರಾಮತಿಯವರು ತಮ್ಮೊಡನೆ ವಿಶೇಷ ಮಾತನಾಡದಿರುವುದಕ್ಕೆ ಈ ಕಾಲಕ್ಕೆ ಮುಂದಾಗ ಬಂದ ಬಿಳಿ ಕೂದಲು ಕಾರಣ ಇರಬೇಕು ಎಂಬ ಸಂಶಯವೂ ಬಂದಿದೆ

ಇರಲಿ—ಕನ್ನಡ ಕೇಸರಿಯ ಮುನ್ನಡೆಯ ವಿಚಾರ ಜಾನಕಿರಾಮಚಂದ್ರಯ್ಯನ 'ಲೇಖನಿ ಇರಿತ'ಗಳ ಬಳಿಕ ಈಗ ಜನಜಾಗ್ರತಿಯ ಸಲುವಾಗಿ—'ಪರೋಪರ ರಾಣೀವಾಸಗಳು' ಎಂದು ಒಂದು ಲೇಖಮಾಲೆ ತೊಡಗಿದೆ. ಪ್ರಾಚೀನ ಈಜಿಪ್ಟಿನಲ್ಲಿ ಪರೋಪರು ಯಾವ ರೀತಿಯಲ್ಲಿ ಶೃಂಗಾರ ಜೀವನವನ್ನು ನಡೆಸುತ್ತಿದ್ದರೆಂದು ಸಚಿತ್ರವಾಗಿ ಕೊಡತೊಡಗಿದ್ದಾರೆ ಜನರನೇಕರು ಕುಮಾರಯ್ಯನ 'ಈಜಿಪ್ಟಾಲಜಿ' ಜ್ಞಾನದ ವಿಷಯದಲ್ಲಿ ಬಹಳ ಆದರ ತೋರತೊಡಗಿದ್ದಾರೆ ಅನೇಕರು ಇದನ್ನೆ ಬೇರೆ ಪುಸ್ತಕ ಮಾಡಿಡತಕ್ಕದು ಎಂದು ಬಿನಾಮಿ ಕಾಗದ ಕೂಡ ಬರೆದಿರುವರೆಂದ ಮೇಲೆ ಶ್ರೀ ಕುಮಾರಯ್ಯನವರ ಸಾರ್ವಜನಿಕ ಸೇವೆಯ ವಿಷಯ ಏನು ಬರೆದರೂ ಕಡಿಮೆಯೇ ಎನ್ನಬೇಕು

ಕುಮಾರಯ್ಯ ದುಡಿದು ದಣಿದ ಜೀವ ಈಗಿನ್ನೂ ವಯಸ್ಸು ೩೪ ಇಲ್ಲ. ಆದರೂ ಅತೀವ ಸೇವೆಯಿಂದ ಶರೀರ ಜರ್ಜರಿತವಾಗಿದೆ. ಪತ್ರಿಕೆಯ ಬಿಡಿ ಪ್ರತಿ ವಿಕ್ರಯ, ಜಾಹೀರಾತುಗಳಿಂದ ಈಗೇನೋ ಸಾಕಷ್ಟು ಅನುಕೂಲತೆಯಾದರೂ—ಹಳೆ ಪ್ರೆಸ್ಸುಗಳ ಕಾಟ ಸಹಿಸಲು [illegible]

ಬೇಕಾದರೆ ಅದನ್ನು ಒಯ್ದುಬಿಡಿ'—ಎಂದು ಅವರಿಗೆ ಉತ್ತರ ಹೇಳುತ್ತಿದ್ದಾನೆ.

[illegible] ಮುಂದೆ ಅನುಕೂಲವಾದರೆ ಮಂಗಳೂರಿನಲ್ಲಿ ಯಾವುದಾದರೂ ಒಂದು ಕ್ರಾಂತಿ ಏಳ್ಬಿಸಬೇಕು ಎಂದು ಅವನ ಆಸೆ. ಈ ವಿಷಯದಲ್ಲಿ ಆತ್ರ ಕೆಮ್ಮುತ್ತ, ಇತ್ತ ಸಿಗರೇಟು ಹೊಗೆ ಸುರುಳಿ ಬರುವುದನ್ನು ನೋಡುತ್ತ, ಯಾವಾಗಲೂ I have a vision before 'me' ಎನ್ನುತ್ತಾನೆ ಕುಮಾರಯ್ಯ.

ಕುಮಾರಯ್ಯನು ಯಶಸ್ವಿ ಸಂಪಾದಕನಾಗಿದ್ದಾನೆ ಆದುದರಿಂದ ಅವನು—ಎನ್ನುವ ಕಾಲ ತಪ್ಪಿ ಅವರು ಎನ್ನುವ ಕಾಲ ಬಂದಿತೆಂದೇ ಎಲ್ಲರೂ ತಿಳಿಯಬೇಕು.

ನೋಟೀಸು

ಕುಂದಾಪುರ ಡಿ। ಮು। ಕೋರ್ಟಿನಲ್ಲಿ

R E A. No. 41/1939
R E P No 778/1937
O S No 50/1936

ಕಮಲಾಕ್ಷಿ ಅಮ್ಮ, ನಾರಾಯಣ ಸೋಮಯಾಜರ ವಿಧವೆ, ಉಡುಪಿ ತಾಲೂಕು ಗಿಳಿಯಾರು ಗ್ರಾಮ — ಡಿಕ್ರೀದಾರರು

೩. ನಾಗಪ್ಪಯ್ಯ ೪. ನರಸಿಂಹಯ್ಯ ೬. ಸದಾಶಿವಯ್ಯ ೭. ಸುಬ್ಬಣ್ಣಯ್ಯ — ಶೇಷಮಯ್ಯನವರ ಮಗಂದಿರು — ಸದರಿ ಗಿಳಿಯಾರು ಗ್ರಾಮದಲ್ಲಿರುವವರು.

೯. ವೆಂಕಟಗಿರಿ ರಾವ್ ಚಂದ್ರರಾಯರ ಮಗ ೧೨ ವೆಂಕಟರಮಣ ಕಾಮತ್ ಪುಟ್ಟಣ್ಣ ಕಾಮತರ ಮಗ. — ಉಡುಪಿ ತಾಲೂಕು ಗುಂಡ್ಮಿ ಗ್ರಾಮದಲ್ಲಿರುವವರು — ಜಡ್ಜ್ಮೆಂಟು ಡೆಟರುಗಳು

ಸದ್ರಿ ಎದ್ರೀರಿಗೆ ತಿಳಿಯಪಡಿಸ ಪದೇನೆಂದರೆ —

ಮೇಲ್ಕಂಡ ಅಮಲಜಾರಿಯಲ್ಲಿ ಏಲಂ ಆದ ಲಸ್ತಿಯ ಪೈಕಿ ಕೆಲವು ಸ್ಥಳಗಳ ಸರ್ವೆ ನಂಬರುಗಳು ವಗೈರೆ ಸುರುಸ್ತು ಪಡಿಸಬೇಕೆಂತ ಅರ್ಜಿದಾರರು ಕೊಟ್ಟ ಅರ್ಜಿಯನ್ನು ತಾರೀಕು ೮—೭—೩೯ಕ್ಕೆ ತನಿಖೆಗೆ ಇಟ್ಟದೆ ಎಂಬ ಸಂಗತಿಯನ್ನು ವ ಅ ಕುರಿತು ನಿಮ್ಮ ಆಕ್ಷೇಪವಿದ್ದರೆ ತಕ್ಕ ಸಮಯದಲ್ಲಿ ಈ ಕೋರ್ಟು ಮುಂದೆ ಜಾಹೀರು ಮಾಡಬೇಕೆಂಬ ಸಂಗತಿಯನ್ನು ಕೂಡಾ ನಿಮಗೆ ತಿಳಿಸಿಯದೆ

Coondapur 19—6—39 — M. M. Ural, Advocate for Petitioner

ನೋಟೀಸು

ಕಾರ್ಕಳ ಡಿ। ಮು। ಕೋರ್ಟಿನಲ್ಲಿ

O. S. No. 668/1938

ನಾರಾಯಣ ದಾಮೋದರ ಹೆಗ್ಡೆ — ವಾದಿ.

ಮತ್ತು

ವೈಕುಂಠ ಶ್ಯಾನುಭಾಗ — ಪ್ರತಿವಾದಿ

ಮೂಡಬಿದ್ರಿ ಸಮುಗಾರಗುಂಡಿ ದಾಮು ಶೆಣೈರ ಮಗ. ಇವರ ಈಗಿನ ಸರಿಯಾದ ಎಡ್ರೆಸ್ಸು Vaikunta Shenoi, C/o N. V. Kamath Dada Building 2, Floor Room No. 37 Dadar Vincent Road, Bombay No. 4. ರಿಗೆ ಈ ಮೂಲಕ ತಿಳಿಸುವುದೇನೆಂದರೆ—

ಸದ್ರಿ ಪ್ರತಿವಾದಿಯು ವಾದಿಯಿಂದ ತಾ. ೧೨—೧—೧೯೩೪ರಲ್ಲು ಪ್ರತಿಫಲ ಪಡೆದು ರೂ. ೧೨೫ಕ್ಕೆ ಬರಕೊಟ್ಟ ದಿಮಾಂಡ ಪ್ರೋಮಿಸರಿ ನೋಟಿನ ಮೇರೆಗೆ ಬಹ ಅಸ್ಲು ಬಡ್ಡಿ ಖರ್ಚನ್ನು ಬರಮಾಡಿಕೊಳ್ಳುವರೆ ವಾದಿಯು ದಾಖಲ್ಲು ಮಾಡಿದ ಮೇಲ್ಕಂಡ ದಾವೆಯು ಈ ಕೋರ್ಟಿನಲ್ಲಿ ತಾರೀಕು ೧೦—೭—೧೯೩೯ಕ್ಕೆ ತನಿಖೆಗೆ ಇಟ್ಟಿರುತ್ತದೆ.

ಆದ್ದರಿಂದ ಸದ್ರಿ ತಾರೀಕಿಗೆ ಸದ್ರಿ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಃ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ನಿಮ್ಮ ಉದಾಹರಣೆಯನ್ನು ದಾಖಲ್ಲು ಮಾಡತಕ್ಕದ್ದು ತಪ್ಪಿದ್ರೆ ಸದ್ರಿ ದಾವೆಯು ನಿಮ್ಮ ಗೈರಹಾಜ್ರಿಯಲ್ಲಿ ತೀರ್ಮಾನವಾಗುವದು ಎಂಬ ಸಂಗ್ತಿ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ

By order of the Court

Karkal 22—6—'39 — K. Vasudeva Kamath, Advocate

NOTICE

Notice is hereby given to all whom it may concern that "Komala Vilas Coffee Hotel", Car Street, Mangalore—a partnership firm between (1) Innoli Raghavendra Hegde and (2) P Ganja alias Jogappa Prabhu has become dissolved as and from 1—2—1939 by the death of No (2) on the said date and that No (1) is now the sole proprietor of the assets and liabilities thereof by virtue of a registered release deed dated 12-6-1939 executed in his favour by the heirs of No (2)

Mangalore 26—6—1939 — ಇನ್ನೊಳಿ, ರಾಘವೇಂದ್ರ ಹೆಗ್ಡೆ ರುಜು. Partner

DIAMONDS! DIAMONDS!
BEST BRILLIANCY!
K. R. K. SHET,
MANGALORE
ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!
ವಜ್ರಗಳು!
ಎಮ್‌ಸ್ಟರ್‌ಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತದೆ
ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚಾಪಾವಣೆಯು. ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬಂದೀತು.
ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ.
ಆಗ ತಾನೇ ನಿಮಗೆ ಖಚಿತವಾಗುವುದು.
ನಮ್ಮ ಬ್ರಾಂಚು ಒಂದು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.
ಕೆ. ಆರ್. ಕೆ. ಶೆಟ್, ಜುವೆಲ್ಲರ್,

S. U. N. & Co.,
Silk Merchants,
Chaukhamba, BENARES CITY.
ಈಗಿನ ತರಹ(ಕಾಶಿ) ಬನಾರಿಸ್ ಸೀರೆ ತಮಗೆ ಬೇಕಾದರೆ ನಮ್ಮನ್ನು ಮರೆಯಬೇಡಿರಿ ಈಗ ಕ್ರಯ ತುಂಬಾ ಸುಲಭ ಮಾತ್ರ ಮಾಲು 18 ಮೊಳದ 2¼ ಅಗಲದ ಸಣ್ಣ ಬುಟ್ಟಿ ಸೀರೆಗಳು 1ಕ್ಕೆ ರೂ 45ರಿಂದ 150 ಸಾಧಾರಣತರದ್ದು 18 ಮೊಳ ಸಣ್ಣ ಬುಟ್ಟಿ ಸೀರೆಗಳು ರೂ. 35ರಿಂದ ರೂ. 55 ವರೆಗು ಸಾದಾ ಸೀರೆ 18 ಮೊಳ ರೂ 32ರಿಂದ ರೂ 65 ಉದ್ದ ಮೊಳ 16, ಅಗಲ 2¼ ರೂ. 20 ರಿಂದ 35ರ ವರೆಗೆ ಬೇರೆ ಮಾಲುಗಳ ಕಟಲಾಗು ಉಚಿತವಾಗಿ ಕಳುಹಿಸಲಾದೀತು.
ವಿಳಾಸ:—
ಶಿರೋಮಣಿ ನಾರಾಯಣಾಚಾರ್ಯರ್,

★ ವಾರದ ಭವಿಷ್ಯ ★

[ಲೇಖಕ:- ಪಿ. ಈಶ್ವರ ಶರ್ಮ, ಹಸ್ತರೇಖಾ ಗಣಿತ ಶಾಸ್ತ್ರಿ,
ಮುಖ್ಯಪ್ರಾಣ ದೇವಸ್ಥಾನದ ಬಳಿ, ಮಂಗಳೂರು

ಮೇಷ

ವಸಂತ ಕಾಲವು ಬಂತು. ಆಶಾವೃಕ್ಷವು ಚಿಗುರಲಾರಂಭಿಸಿತು ಎಂಬುದಕ್ಕನುಕೂಲವಾಗಿ ಹೃದಯದಲ್ಲಿ ಆನಂದ ತೆರೆಗಳು ಏಳತೊಡಗುವವು. ಈ ವಾರದಲ್ಲಿ ನಿಮ್ಮ ಜನ್ಮ ರಾಶ್ಯಾಧಿಪತಿ ಉಚ್ಛದಲ್ಲಿದ್ದು ತೃತೀಯಾಧಿಪತಿ ಚತುರ್ಥದಿಂದ ಕರ್ಮಸ್ಥಾನದಲ್ಲಿರುವ ಕುಜನಿಗೆ ನೋಡುವುದರಿಂದ ದ್ವಿತೀಯದ ಶುಕ್ರನಿಂದ ಮತ್ತು ಪಂಚಮಾಧಿಪತಿ ಸಹಾಯ ಸ್ಥಾನದಲ್ಲಿರುವುದರಿಂದ ಪ್ರಿಯ ಜನರ ದರ್ಶನವಾಗುವುದು. ಆರೋಗ್ಯವು ಚೆನ್ನಾಗಿ ಉಳಿಯುವುದು. ಸಾಂಪತ್ತಿಕ ಸ್ಥಿತಿಯು ಚೆನ್ನಾಗಿರುವುದು. ಕೋರ್ಟು ಕಚೇರಿ ವ್ಯವಹಾರಗಳಲ್ಲಿ ಜಯವೂ, ಸಮಾಜದಲ್ಲಿ ಮಾನ್ಯಪ್ರಾಪ್ತಿಯೂ, ಸರಕಾರೀ ಉದ್ಯೋಗಗಳಲ್ಲಿ ಸಮಾಧಾನಕರವಾಗಿ ನಡೆದೀತು. ಹಿತಶತ್ರುಗಳು ತಗ್ಗಿಹೋಗುವರು. ಮನಃಶಾಂತಿ ಉಂಟಾಗುವುದು. ಕಿಂಚಿತ್ತು ಧಾರ್ಮಿಕ ಕಾರ್ಯಗಳನ್ನು ನೆರವೇರಿಸುವಿರಿ.

ವೃಷಭ

ಈ ಜಗತ್ತಿನಲ್ಲಿ ಹುಟ್ಟಿದ್ದಕ್ಕೆ ಯಾವುದಾದರೂ ಒಂದು ಮಹತ್ಕಾರ್ಯವನ್ನು ಮಾಡಬೇಕೆಂದಿದ್ದ ನಿಮ್ಮ ಗ್ರಹ ಸ್ಥಿತಿಯು ಚೆನ್ನಾಗಿದೆ. ಆವಗಡ ತಪ್ಪುವಂತಿಲ್ಲವೆಂದು ನೀವು ಯೋಚನಾಪರರಾಗಿರಬೇಕಾಗಿಲ್ಲ. ಆರೋಗ್ಯವು ಚೆನ್ನಾಗಿರುವುದು. ಸಾಂಪತ್ತಿಕ ಸ್ಥಿತಿಯು ವೃದ್ಧಿಯನ್ನೈದುವುದು. ಇಷ್ಟ ಕಾರ್ಯಗಳನ್ನು ನೆರವೇರಿಸಲು ಪಡೆಗಿಬಂದು. ನಿಮ್ಮ ವಿರೋಧಿಗಳು ಮುಖಭಂಗವಾಗುವುದು. ಈ ವಾರದಲ್ಲಿ ನಿಮ್ಮ ಮಿತ್ರರು ನಿಮ್ಮ ಮೇಲೆ ಕೊಂಚ ಬೇಸರಗೊಳ್ಳಬಹುದು. ಆದರೆ ಆ ವಿಷಯವನ್ನು ಮನಸ್ಸಿಗೆ ತಂದುಕೊಳ್ಳಬೇಡಿರಿ. ಜಗತ್ತಿನಲ್ಲಿ ಎಲ್ಲರನ್ನು ಮೆಚ್ಚಿಸುವುದು ಯಾರಿಂದಲೂ ಸಾಧ್ಯವಿಲ್ಲ. ಜನ್ಮರಾಶಿಯ ಶುಕ್ರಲಾಭದ ಗುರುಗ್ರಹಾನುಕೂಲದಿಂದ ನಿಮ್ಮ ಇಷ್ಟಾರ್ಥ ಪೂರ್ತಿಯಾಗುವುದು. ತಾ. ೪ರಲ್ಲಿ ಧನ ಸಹಾಯಾನುಕೂಲ, ಮನಃಶಾಂತಿ ವೃದ್ಧಿ.

ಮಿಥುನ

ಈ ವಾರದಲ್ಲಿ ನಿಮಗೆ ಸಂಕಟ ಅಧಿಕ ... ಹೋಗಲೆಂದು ಹಾರೈಸುವುದು. ಇದಕ್ಕೆ ... ಧನಾಧಿಪತಿ ನೀಚಾಧೋಪನಾಗಿ ಶತ್ರುಕ್ಷೇತ್ರದಲ್ಲಿ ಕೇಂದ್ರ ಪಾಪ ಮಧ್ಯನಾಗಿರುವುದರಿಂದ ಪ್ರವೃತ್ತಿಗಳ ಅನುಕೂಲವಿಲ್ಲ. ಹಿಡಿತದಿಂದ ಖರ್ಚು ಮಾಡ...ನ್ನು ... ಪ್ರಯತ್ನ ... ಹೆಚ್ಚಿನ ಖರ್ಚಿನಲ್ಲಿ ದೂಡುವುದು. ಆರೋಗ್ಯವಿಷಯ ಚಿಂತಿಸಬೇಕಾಗಿಲ್ಲ. ಆದರೂ ಮನಸ್ಸಿನ ಅಸ್ವಸ್ಥತೆ ತುಂಬಾ ಖಾಸವಾಗುವುದು. ಎಡುರಾಗಳು ನೌಕರೀ ಉದ್ಯೋಗಗಳಲ್ಲಿ ಕಂಚಾ ತೊಂದರೆ... ವರು. ಹಿರಿಯರಿಂದ ... ಅನ್ಯೋನ್ಯ ವರವಾಗಿ ಚಿಂತೆ ಯುಂಟಾಗುವುದು. ತಾ. ೩, ೪ ಅಧಿಕ ಚಿಂತೆ ಆನಷ್ಟಯನಷ್ಟ.

ಕರ್ಕಾಟಕ

ಈ ವಾರದಲ್ಲಿ, ದುಡಿದದ್ದೆಲ್ಲಾ ಮಗನ ... ವಾರಕ್ಕೆ ಸಾಲದೆಂಬಂತೆ, ನಿಮ್ಮ ಉತ್ಪನ್ನಕ್ಕಿಂತಲೂ ಖರ್ಚು ಹೆಚ್ಚಾಗುವುದು. ಖರ್ಚು ಮಾಡಬಾರದೆಂದು ನೀವೆಷ್ಟು ಜಾಗ್ರತೆ ಮಾಡಿದರೂ ರಾಶ್ಯಾಧಿಪತಿ ನೀಚಾರೋಹನಾಗಿಯೂ ಧನಾಧಿಪತಿದ್ವಯದಲ್ಲೂ ವ್ಯಯಾಧಿಪತಿ ಜನ್ಮದಲ್ಲೂ, ಲಾಭಾಧಿಪತಿದ್ವಯದಲ್ಲೂ ಬರುವುದರಿಂದ ಎಂದೂ ಬಾರದ ಅನಿವಾರ್ಯ ಪ್ರಸಂಗ ಈ ವಾರ ನಿಮ್ಮ ಮನೆಗೆ ಎಷ್ಟು ತೋರುವುವು. ಆರೋಗ್ಯವು ಅಷ್ಟು ಚೆನ್ನಾಗಿರುವುದಿಲ್ಲ. ಕೈಕಾಲು ಮುರಿಯುವುದು ನಿದ್ದೆ ಬಾರದಿರುವುದು ಇತ್ಯಾದಿಗಳಿಂದ ಬೇಸರವಾದೀತು. ನೌಕರೀ ಉದ್ಯೋಗದಲ್ಲಿ ಮಾನ್ಯಕ ಸ್ಥಿತಿಗೆ ಕೊರತೆ ಇಲ್ಲ. ತಾ. ೧ರ ಮೇಲೆ ಸುವಾರ್ತ ಉತ್ತಮ ಕಾರ್ಯಾನುಕೂಲ ಸುಖಫಲ.

ಸಿಂಹ

ನಿಮ್ಮ ರಾಶ್ಯಾಧಿಪತಿ ಲಾಭದಲ್ಲಿದ್ದರೂ ದ್ವಿತೀಯಾಧಿಪತಿ ವ್ಯಯದಲ್ಲಿರುವುದರಿಂದ ವಾತನಿಂದ ಸರ್ವ ಆಯವ್ಯಯಕ್ಕೆ ಕಾರಣವೆಂಬಂತೆ ಪ್ರಕೃತ ಮಾತನ್ನು ನಿಮ್ಮ ಪಡೆಯುವಂತೆ ಮನಸ್ಸನ್ನು ... ಇಲ್ಲ ಹಾದಿ ... ತಮ ...

ವಿರೋಧ, ಧನದ ನಷ್ಟ, ಕುಟುಂಬ ವ್ಯಸನ, ನಾಲ್ಕು ದಿಕ್ಕಿನಿಂದ ಬೆಚ್ಚಿದ ಪ್ರಸಂಗವೇ ದೊರಕು. ಹಿತೈಷಿ ಯೋಚನಾ ಕಾರ್ಯಗಳು ಅಲ್ಲಲ್ಲಿಯೇ ಸ್ತಬ್ಧವಾಗುವಂತೆ ಕಂಡುಬರುವವು. ಆದರೂ ವಿಚಾರವಂತರಾದ ನಿಮಗೆ ಪ್ರಕೃತದ ಅಧಿಕಾರಕ್ಕೆ ಮುಂದಿನ ಯಶಸ್ಸಿಗೆ ಕೊರತೆ ಇಲ್ಲ.

ಕನ್ಯಾ

ಈ ವಾರದಲ್ಲಿ ಜನ್ಮ ಕರ್ಮಾಧಿಪತಿ ಲಾಭದಲ್ಲೂ ಧನಾಧಿಪತಿ ಮತ್ತು ಭಾಗ್ಯಾಧಿಪತಿಯಾದ ಶುಕ್ರನು ದಶಮಕ್ಕೆ ಬರುವುದರಿಂದಲೂ ಸುಖಾಧಿಪ ಸಪ್ತಮದ ಗುರುಗ್ರಹನ ಅನುಗ್ರಹದಿಂದ ಪ್ರಕೃತಕ್ಕೆ ಯಾವ ಬಾಧಕವಿಲ್ಲದೆ ಕಾರ್ಯಾನುಕೂಲ ಧನಸಂಗ್ರಹ ಕುಟುಂಬ ಸೌಖ್ಯಾದಿ ಉತ್ತಮ ಫಲಪ್ರಾಪ್ತಿಯೋಗಾನುಗ್ರಹವಿದೆ.

ತುಲಾ

ಧಾನಧರ್ಮ ಪರೋಪಕಾರ ಪ್ರಿಯರಾದ ನಿಮ್ಮ ಜನ್ಮರಾಶಿಯು ರಾಹುಸಪ್ತಮದ ರವಿಕೇತುಗಳಿಂದ ವ್ಯಸನ ನಷ್ಟ ಕಷ್ಟ ಫಲಾನುಭವಿಗಳಾದ ನಿಮಗೆ ರಾಶ್ಯಾಧಿಪತಿ ಭಾಗ್ಯಕ್ಕೆ ಬರುವುದರಿಂದ ಲಾಭಾಧಿಪತಿ ಭಾಗ್ಯದಲ್ಲಿದ್ದು ಭಾಗ್ಯಾಧಿಪತಿ ಕರ್ಮದಲ್ಲಿ ಕರ್ಮಾಧಿಪತಿ ದ್ವಿತೀಯದಲ್ಲಿ ಗುರುದೃಷ್ಟ ಕೇಂದ್ರ ಸ್ಥಿತಿಗೆ ಹೋಗುವುದರಿಂದ ಮನಶ್ಶಾಂತಿ ... ದ ಪರಿಸ್ಥಿತಿ ಬಾರೀ ನಿಮ್ಮ ಇಷ್ಟ ಕಾರ್ಯಾನುಕೂಲಾದಿ ಉತ್ತಮ ಫಲ ತಾ. ೧, ೩ ೪ಕ್ಕೆ ಯೋಗವಿದೆ.

ವೃಶ್ಚಿಕ

ಹಟ ಸಾಹಸ ... ಯೋಗ್ಯರಾದ ನಿಮ್ಮ ರಾಶ್ಯಾಧಿಪತಿ ಉಚ್ಚ ... ಸಹಾಯವಿದ್ದರೂ ಪ್ರಕೃತ ಭಾಗ್ಯಾಧಿಪತಿ ವ್ಯಯ ... ಕರ್ಮಾಧಿಪತಿ ಅಷ್ಟಮದಲ್ಲಿರುವುದರಿಂದ ಎಷ್ಟು ಧೈರ್ಯದಿಂದ ಮುಂದುವರಿದರೂ ಪ್ರಕೃತ ಉದ್ಯೋಗದಲ್ಲಿ ... ಫಲ ದೊರಕಾ ವಿಶೇಷ ... ಆದರೂ ತಾ. ೧ ರಕ್ಕೆ ... ಶಾಂತಿ ಉಂಟಾದೀತು.

ಧನು

ಪರೋಪಕಾರ ಬುದ್ಧಿ ತತ್ವಜ್ಞಾನ ... ನಿಮ್ಮ ಪಂಚಮದ ರವಿಕೇತುಗಳಿಂದಲೂ ಅಷ್ಟಮಾಧಿಪತಿ ... ಕರ್ಮಾಧಿಪತಿ ಅಷ್ಟಮಸ್ಥಿತನಾಗಿ ನೊಂದು ... ಮುತನಾಗಿರುವುದರಿಂದ ಉದ್ಯೋಗ ... ಮಿತ್ರರಿಂದ ... ಭಾಗವಾಗಿ ಅನುಭವಿಸಲಿರುವುದು ... ಗ್ರಹ ... ದ ನಿಮ್ಮ ಜನ್ಮ ರಾಶ್ಯಾಧಿಪತಿ ಸುಖಸ್ಥಾನದಲ್ಲಿ ಇರುವುದರಿಂದ ಧರ್ಮ ಬುದ್ಧಿ ... ನಿಮಗೆ ಈ ಗುರುವಿನಿಂದ ಉದ್ಯೋಗವೃದ್ಧಿಯೂ, ಮನಶ್ಶಾಂತಿಯೂ ... ತಾ. ೧, ೨ರಿಂದ ಪ್ರಾಪ್ತವಾದೀತು.

ಮಕರ

ದೊಡ್ಡವರ ದೋಸ್ತಿ, ಅಧಿಕಾರದಲ್ಲಿ ಮಹತ್ವಾಕಾಂಕ್ಷೆ ಸುಖಾಸಕ್ತಿ ಪ್ರಿಯರಾದ ನಿಮ್ಮ ಕರ್ಮದ ಹುಷ್ಟ ಚತುರ್ಥದ ಶನಿಕೇತುಗಳು ಪ್ರಕೃತ ನಿಮ್ಮ ಯೋಚನೆಯಂತೆ ಕಾರ್ಯಾನುಕೂಲಕ್ಕೆ ಎಡೆಯನ್ನೀಯಲಾರರು. ಆದ್ರೆ ಆಗ ಜಲಾಧಿಪತಿ ಶುಭಷುದ್ಧವಂತನಾಗಿ ಜನ್ಮರಾಶಿಯಲ್ಲಿ ಕುಜನು ಪಂಚಮ ಕರ್ಮಾಧಿಪತಿ ಶುಕ್ರ ಪ್ರಕೃತ ಸಹಾಯಗಳಿಂತಿರುವುದರಿಂದ ಮುಂದಿನ ವಾರದಲ್ಲಿ ಸಪ್ತಮಾಧಿಪತಿ ಜನ್ಮಾತ್ ಉಚ್ಚಾರೋಹನಾಗುವಾಗ ಇಷ್ಟಾರ್ಥ ಪೂರ್ತಿಯಾಗಲಿರುವುದು. ದೊರಕು ಪ್ರಕೃತ ತಾ. ೨, ... ಎಚ್ಚರದಿಂದ ವ್ಯವಹರಿಸತಕ್ಕದ್ದು.

ಕುಂಭ

ಸಹನಾಶೀಲತೆ ಶಾಸ್ತ್ರೀಯ ವಿಷಯ ಜಿಜ್ಞಾಸೆ ಪ್ರಿಯತೆಯುಳ್ಳ ನಿಮ್ಮ ದ್ವಿತೀಯದ ಗುರುವು ದೇವತಾರ್ಚನೆ ಕಥಾಶ್ರವಣ ಗುರುಹಿರಿಯರ ಅನುಗ್ರಹಪಾತ್ರರಾಗಿಯೂ ಭಾಗ್ಯ ಸುಖಾಧಿಪತಿ ಪಂಚಮಕ್ಕೆ ಹಾಕುವದರಿಂದ ಪುರಾತನ, ನೂತನ, ಗ್ರಹ ಅಧಿಕಾರ, ಪುತ್ರ ... ಸ್ಥಾನಫಲ ... ಸುಗುವಿರಿ. ದೊರಕು ...

ನೆಲವಿಲ್ಲದೆ ಬೆಳೆಯಾದೀತೇ?

ಕೃಷಿಕರ ಜೀವನದಲ್ಲಿ ಅದ್ಭುತ ಬದಲಾವಣೆಯಾಗುವುದು!

ಇಂದು ಆಹಾರ ವಸ್ತುಗಳನ್ನು ಸೃಷ್ಟಿ ಮಾಡುವ ರೈತನ ಕೃಷಿಯ ಕೆಲಸವು ಮುಂದಕ್ಕೆ ಸಂಪೂರ್ಣ ನಿಂತು ಹೋಗಿ ನಮಗೆ ಬೇಕಾದ ಸಕಲ ದವಸಧಾನ್ಯಗಳೂ, ಒಂದು ಸಣ್ಣ ಕೊಳದಲ್ಲಿ ಅಥವಾ ಚಿಕ್ಕದೊಂದು ಡಬ್ಬಿಯಲ್ಲಿ ಇಲ್ಲವೇ ಕಿರಿದಾದ ಗ್ಲಾಸುಗಳಲ್ಲಿ ಬೆಳೆಸಲು ಸಾಧ್ಯವಾಗುವಂತೆ ಅಮೇರಿಕವು ಸಂಶೋಧನೆ ನಡೆಸಿ ಜಯಶೀಲವಾಗಿದೆ. ಮನೆಯ ಹಿಂದುಗಡೆಯ ಒಂದು ಚಿಕ್ಕ ಕೆರೆಯ ಸುತ್ತಮುತ್ತ ಇಲ್ಲವೇ ಮನೆಯೊಳಗಡೆ ತೂಗಿಸುವ ಡಬ್ಬಿಗಳಲ್ಲಿಯೇ ನಾವು ನಮಗೆ ಬೇಕಾದ ಎಲ್ಲ ಆಹಾರ ಪದಾರ್ಥಗಳನ್ನೂ ಮಾಡಬಹುದಾದರೆ ಕೃಷಿಯ ಹೊಲದ, ಬೇಸಾಯದ ವ್ಯರ್ಥಶ್ರಮವೇಕೆ? ವಿಜ್ಞಾನದ ಬೆಳವಣಿಗೆಯು ಈ ರೀತಿಯ ಪ್ರಶ್ನಾರ್ಥಕ ಚಿಹ್ನೆಯನ್ನು ನಮ್ಮ ಮುಂದೆ ಇಟ್ಟಿದೆ.

ಇಂದು ಅಮೇರಿಕಾ ನಗರದಲ್ಲಿ ನೀವು ಇಂತಹ ಪರಿಸ್ಥಿತಿಯನ್ನು ಅವಲೋಕಿಸಬಹುದು. ಮನೆಯ ಹೂತೋಟದಲ್ಲಿ, ಅಥವಾ ಮನೆಯ ಹಿಂದುಗಡೆಯಲ್ಲಿ ಒಂದು ಕಿರಿದಾದ ಕೊಳವಿರುತ್ತದೆ. ಅದರ ಮೇಲೆ ಮರದ ... ಬಿಡಲ್ಪಟ್ಟಿದೆ. ಅದರಲ್ಲಿ ಕೆಳವಾಗಿ ಹಾಸಿದಂತೆ ಬೆಳೆಗಳು ಬೆಳೆದಿರುತ್ತವೆ. ನಾನಾ ತರದ ಆಹಾರ ಸಾಮಾಗ್ರಿಗಳು ನೆಲವಿಲ್ಲದೆ ನೀರಿನ ಮೇಲೆ ಬೆಳೆಸುತ್ತಿದ್ದಾರೆ. ಹೂ, ಹಣ್ಣು, ಹಂಬಲು, ಗಡ್ಡೆಗೆಣಸು ಯಾವುದು ಬೇಕೋ ಅದೆಲ್ಲವೂ ಅಲ್ಲಿ ಬೆಳೆಯುವ ದೃಶ್ಯವು ಕಣ್ಣಿಗೂ ಮನಸ್ಸಿಗೂ ಹೊಸ ಬಬ್ಬರವನ್ನು ಹುಟ್ಟಿಸುವುದು.

ಅವುಗಳೆಲ್ಲಾ ಮಣ್ಣಿಲ್ಲದೆ ನೆಲವಿಲ್ಲದೆ ಬೆಳೆಯುವವು. ಆ ಮರದ ಬಲೆಯ ತೂತಿನಿಂದ ಅವುಗಳ ಬೇರುಗಳು ಹುಷ್ಟ ನೀರಿನ ಕಡೆಗೆ ಇಳಿಯುವುವು. ನೀರಿಗೆ ಕೆಲವು ರಸಾಯನ ದ್ರವಗಳನ್ನು ಹಾಕುತ್ತಾರೆ. ಅವುಗಳಿಂದಾಗಿ ಬೆಳೆಗಳು ಆಹಾರ ಪದಾರ್ಥಗಳನ್ನು ಪಡೆಯುತ್ತವೆ. ಇಗೋ ನೆಲವಿಲ್ಲದೆ ಬೆಳೆಯನ್ನು ಮಾಡುವ ರೀತಿ ಪ್ರಯಾಸದವಿಲ್ಲದ, ನೆಲದ ... ದೀವಿಲ್ಲದೆ ಈ ರೀತಿ ಆಹಾರ ವಸ್ತುಗಳನ್ನು ಸಂಕಲ್ಪ ಸೃಷ್ಟಿಸಬಹುದಾದರೆ ಹೊಟ್ಟೆಗಾಗಿ ಮನುಷ್ಯನು ಇಷ್ಟೊಂದು ಕಷ್ಟಪಡಬೇಕಾದುದ್ದು ಇಲ್ಲ.

ಕಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಹತ್ತು ವರ್ಷಗಳ ಹಿಂದೆ ಡಾ॥ ವಿಲಿಯಮ್ ಎಫ್. ಗೆರಿಕ್ ಎಂಬವರು ನೀರಿನಲ್ಲಿ ಸಸಿಗಳನ್ನು ಬೆಳೆಸುತ್ತಿದ್ದಾರೆ ಎಂಬ ವಿಷಯವು ಇಡೀ ಪ್ರಪಂಚಕ್ಕೇ ಒಂದು ರೀತಿಯ ವಿಸ್ಮಯ ಜನಕವಾದ ವಾರ್ತೆಯಾಗಿ ಹಬ್ಬಿತು. ಅವರು ಸಸ್ಯಗಳು ಮಣ್ಣಿನಲ್ಲಿ ಬೆಳೆಯ ನೀರಾದರೆ ಮಣ್ಣು ಯಾವಯಾವ ಜೀವನಸತ್ವಗಳನ್ನು ಒದಗಿಸಿಕೊಡುತ್ತದೆ ಎಂಬ ಕುರಿತ ಶೋಧನೆ ನಡೆಸುತ್ತಿದ್ದರು. ಅವರು ತಮ್ಮ ಶೋಧನೆಯಿಂದ ಸಸ್ಯ ಬಾಲಗಳು ಮಣ್ಣಿನ ಗುಣದಿಂದ ಬೆಳೆಯುವವುಗಳಲ್ಲ, ಮಣ್ಣಿನಲ್ಲಿರುವ ರಸಾಯನಿಕ ದ್ರವ್ಯಗಳಿಂದಲೆಂದು ಕಂಡು ಹಿಡಿದರು.

ಅವರು ಇದಕ್ಕಾಗಿ ಸಸ್ಯಗಳನ್ನು ನಾನಾ ರೀತಿಯಲ್ಲಿ ಪರೀಕ್ಷಿಸಬೇಕಾಯಿತು. ಆ ಮೇಲೆ ಕಡೆಗೆ ಈ ರಸಾಯನಿಕ ದ್ರವ್ಯಗಳನ್ನು ಒಡೆದು ಯಲ್ಲಿ ಕಂಡಾಗ ಅವರು ಈ ದ್ರವ್ಯಗಳನ್ನು ಉಪಯೋಗಿಸಿ ನೋಡಿದಲ್ಲಿ ಅವುಗಳಿಂದಲಾಗಿ ಸಸ್ಯಗಳು ಬೆಳೆದುವು. ಹಾಗೆ ರಹಸ್ಯವು ಹೊರಬಿತ್ತು. ೧೯೪೨ರ ವರೆಗೆ ಇದರಿಂದ ಸಾಮಾಜಿಕವಾಗಿ ಹಾಗೂ ಪ್ರಪಂಚದ ಆರ್ಥಿಕವಾಗಿ ಆಗ ತಕ್ಕ ಪರಿಣಾಮದ ಕುರಿತು ವಿಚಾರ ಮಾಡಲಿಲ್ಲ.

೧೯೪೬ರಲ್ಲಿ ಅಮೇರಿಕದಲ್ಲಿ ಕೆಲಿಫೋರ್ನಿಯದ ಜನರು ನೀರಲ್ಲಿ ಬೆಳೆಸಿದ ಟೊಮೆಟೊಗಳನ್ನು ತಿನ್ನುತ್ತಿದ್ದಾರೆಂದು ಕೇಳಿ ಎಚ್ಚರಗೊಂಡರು. ಕೆಲವು ಸಂಶೋಧನಾ ಸಂಸ್ಥೆಗಳೂ ಈ ಜನತೆಯ ಎಚ್ಚರದೊಡನೆ ಎಚ್ಚತ್ತು ಈ ಕುರಿತು ಪ್ರಬಲವಾಗಿ ಪ್ರಚಾರಮಾಡಿದುವು. ಸಾಮಾನ್ಯ ಮನುಷ್ಯನಿಂದ ಹಿಡಿದು ಉತ್ತಮ ತರಗತಿಯ ಮನುಷ್ಯರ ವರೆಗೆ ಇಡೀ ರಾಜ್ಯದಲ್ಲಿ ಈ ನೂತನ ಪ್ರಯೋಗ ಪರೀಕ್ಷೆಗಾಗಿ ಬೇಕಾದ ರಸಾಯನಿಕ ದ್ರವ್ಯಗಳು ಒದಗುವಂತೆ ಮಾಡುವ ವ್ಯಾಪಾರಿಗಳಾದುವು. ಈಗೀಗ ನಗರಗಳಲ್ಲಿ ನೆಲಸಿರುವ ಜನರು ಅತೀ ಸಂಕೋಚದ ಸ್ಥಳಗಳಲ್ಲಿಯೂ ತಮಗೆ ಸಾಕಷ್ಟು ಆಹಾರ ವಸ್ತುಗಳನ್ನು ಅತ್ಯಲ್ಪ ಶ್ರಮದಿಂದ ಬೆಳೆಸುತ್ತಾರೆ.

ಅಲ್ಲಲ್ಲಿ ಅನೇಕ ಸಮರ್ಪಕ ಈ ಬಗ್ಗೆ ಬೇಕಾದ ರಾಸಾಯನಿಕ ದ್ರವ್ಯಗಳನ್ನು ಅತ್ಯಂತ್ಯ ಕಡಿಮೆ ... ಯದಲ್ಲಿ ಒದಗಿಸಿಕೊಡುತ್ತವೆ. ಇದರ ಬೆಲೆಯು ಇನ್ನೂ ಕೂಡಾ ಕಡಿಮೆಯಾಗುವ ಸಾಧ್ಯತೆ ಇದೆ. ಇದರಲ್ಲಿಯೂ ಈಗೀಗ ಹೊಸ ಹೊಸ ಶೋಧನೆಗಳು ಆಗುತ್ತವೆ. ಹೊಸ ಶೋಧನೆಯಾದಂತೆ ಮತ್ತಷ್ಟು ಸೌಲಭ್ಯವಾಗಿ ನಾವು ಬೆಳೆಗಳನ್ನು ಮಾಡಬಹುದಾಗಿದೆ. ಮನೆಯ ಒಳಗಡೆಯಲ್ಲಿಯೇ ಈ ಬೆಳೆಗಳನ್ನು ಬೆಳೆಸಬಹುದು.

ಈ ವಿಜ್ಞಾನ ಶೋಧನೆಯು ಬಹುಬೇಗನೇ ಅಖಿಲ ಜಗತ್ತಿನಲ್ಲಿ ಪ್ರಚಾರವಾಗುವುದು. ಜರ್ಮನಿ, ಜಪಾನ್, ಡೆನ್ಮಾರ್ಕ್, ರಷ್ಯಾ ದೇಶದಲ್ಲಾಡೆಗಳಲ್ಲಿ ಇದನ್ನು ಭರದಿಂದ ಪ್ರಯೋಗಕ್ಕೆ ತಿಸಿ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಸಂಪೂರ್ಣ ಜಗತ್ತಿನ ಆಹಾರವನು ನೆಲದ ಸಹಾಯವಿಲ್ಲದೆ ಬೆಳೆಸಲು ಸಾಧ್ಯವಾಗದ ಪ್ರಯೋಜನವಾಗಿ ಕಂಡು ಬಂದಲ್ಲಿ ಇದರಿಂದಲಾಗಿ ಬಹಳ ಪ್ರಯೋಜನವಾಗದರದು. ಬೆಳೆಗಳನ್ನು ಪಡೆಯಲು ಬೇಸಾಯಗಾರನು ಪಡಬೇಕಾದ ಸಂಕಷ್ಟಗಳ, ವ್ಯರ್ಥ ಪ್ರಯಾಸಗಳೆಲ್ಲಾ ಹಿಂತು ತನಗೆ ಬೇಕಾದಷ್ಟು ಆಹಾರ ವಸ್ತುಗಳನ್ನು ತಾನೇ ತನಗಿದ್ದ ಅತ್ಯಲ್ಪ ಸ್ಥಳದಲ್ಲಿಯೇ ಸಂಪಾದಿಸಿಕೊಳ್ಳಲು ಸಾಧ್ಯವಾಗುವುದು. ಇದು ವೈಜ್ಞಾನಿಕ ಸಾಧನೆಗಳಿಂದ ಸಾಧ್ಯವಾದರೆ ಖಂಡಿತವಾಗಿಯೂ ಭವಿಷ್ಯತ್ತಿನಲ್ಲಿ ಅಪೂರ್ವವಾದ ಆರ್ಥಿಕ ಬದಲಾವಣೆಯನ್ನು ಹಾಗೂ ಹೊಸ ಸಾಮಾಜಿಕ ಪದ್ಧತಿಯನ್ನು ನಾವು ಕಾಣಬಹುದಾಗಿದೆ.

ಪಾಪಗ್ರಹ ದೃಷ್ಟಿಯಾದ ಜನ್ಮಾಧಿಪತಿ ಶನಿಯಾದ್ದರಿಂದ ನೂತನಧಿಕಾರ ಸ್ವಪ್ರಯತ್ನವಾದ ಯಾವ ಕಾರ್ಯಗಳೂ ಪ್ರಕೃತ ಲಾಭದಾಯಕವಾಗಿ ನಡೆಯಲಾರವು.

ಮೀನ

ಕಲಾ ಶಾಸ್ತ್ರಗಳಲ್ಲಿ ಪ್ರೀತಿ, ದಾನಧರ್ಮ ಪರೋಪಕಾರ ತತ್ಪರರಾದ ನಿಮ್ಮ ಧನಸ್ಥಾನದಲ್ಲಿ ಪಾಪಗ್ರಹರು ಇರುವುದರಿಂದ, ಪಂಚಮಾಧಿಪತಿ ನೀಚಾರೋಹನಾಗಿ ಬರುವುದರಿಂದ ಚತುರ್ಥದಲ್ಲಿರುವ ರವಿ ಷಷ್ಠಾಧಿಪತಿಯಿಂದ ಪ್ರಕೃತ ಮುಂದಿನ ವೃದ್ಧಿ, ಧನದ ಸಂಗ್ರಹ, ಮಿತ್ರರ ಸಹಾಯ, ಪ್ರಕೃತ ತಾ. ೧, ೨ರ ವರೆಗೆ ನಡೆಯಲಾರದು. ಆದರೂ ಜನ್ಮ ಕರ್ಮಾಧಿಪತಿ ಸ್ವಕ್ಷೇತ್ರದಲ್ಲಿ ಪಂಚಮ ಸಪ್ತಮ, ಭಾಗ್ಯ ಸ್ಥಾನದೃಷ್ಟನಾಗಿ ಲಾಭದಲ್ಲಿ ಧನ ಭಾಗ್ಯಾಧಿಪತಿ ಇರುವುದರಿಂದ ಮುಂದೆ ಸರ್ವಾನುಕೂಲ.

NOTICE.

Whereas I have today dispensed with the services of and cancelled the general power of attorney granted to Sri Karkal Pandurang Nayak, who ceases thereby to have anything to do with my trade at Udipi running in the name and style of "N. Venkatesh Shenoy" it is hereby notified that any dealing with him hereafter will not be binding on me or my aforesaid business.

Udipi

ಚೀನ ಜಪಾನ ಸಂಘರ್ಷದಲ್ಲಿ ಅಪರಾಧಿ ಯಾರು?

ಎಲ್ಲ ಅಪರಾಧ ಚೀನದ್ದೆಂದು ಜಪಾನ ಹೇಳುತ್ತದೆ!

ಚೀನ ಜಪಾನ ಸಂಘರ್ಷವು ಆರಂಭವಾಗಿ ವರ್ಷಗಳು ಕಳೆದುಹೋದುವು. ಈ ಸಂಘರ್ಷದಲ್ಲಿ ಒಂದು ಬಾರಿಗೆ ಚೀನದ ಪಕ್ಷ ಮೇಲಾದಂತೆಯೂ, ಇನ್ನೊಂದು ಬಾರಿಗೆ ಜಪಾನಿನ ಪಕ್ಷ ಮೇಲಾದಂತೆಯೂ ಕೇಳುತ್ತ ಬಂದಿರುವೆವು. ಆದರೆ ಈ ಸಂಘರ್ಷದಲ್ಲಿ ಅನ್ಯಾಯವು ಯಾರದ್ದು, ಅಪರಾಧಿಗಳು ಯಾರು ಎಂದು ತಿಳಕೊಳ್ಳುವುದು ಹೆಚ್ಚಿನವರಿಗೆ ಕಷ್ಟದ ಪ್ರಸಂಗವಾಗಿರುತ್ತದೆ. ಯಾಕೆಂದರೆ ಹೆಚ್ಚಿನವರಿಗೆ ಚೀನ ಜಪಾನುಗಳ ರಾಜಕೀಯ ಇತಿಹಾಸ ಜ್ಞಾನವು ಇರುವುದಿಲ್ಲ; ಭೌಗೋಲಿಕ ಜ್ಞಾನವು ಕೂಡ ಬಹಳ ಕಡಿಮೆ ಇರುತ್ತದೆ. ಅದಲ್ಲದೆ; ಜಪಾನಿನ ಪತ್ರಿಕೆಗಳು ಮತ್ತು ಸುದ್ದಿಗಾರ ಸಂಘಗಳು ಭ್ರಮಾತ್ಮಕ ಲೇಖನಗಳನ್ನು ಬರೆದು ಪ್ರಕಟಿಸಿ, ಆದರ ಸತ್ಯವನ್ನು ತಿಳಕೊಳ್ಳಲಿಕ್ಕೆ ವಿಘ್ನ ವಿಡಂಬರಗಳನ್ನು ತಂದೊಡ್ಡುತ್ತವೆ. ಜಪಾನು ಹೇಳುವುದನ್ನೆಲ್ಲಾ ನಂಬಿದ್ದಾದರೆ, ಈ ಸಂಘರ್ಷದ ಅಪರಾಧವನ್ನೆಲ್ಲ ಚೀನದ ತಲೆಯ ಮೇಲೆಯೇ ಹೊರಿಸಬೇಕಾಗುವುದು!

ಚೀನ ಜಪಾನಗಳ ಹೋಲಿಕೆ

ಚೀನ ೧೮ ದೊಡ್ಡ ಪ್ರಾಂತ್ಯಗಳಾಗಿ ವಿಭಕ್ತವಾಗಿರುವುದು. ಈ ಪ್ರಾಂತ್ಯಗಳ ಕ್ಷೇತ್ರಫಲವು ೧೫,೩೩,೦೦೦ ಚದರ ಮೈಲುಗಳಾಗುತ್ತವೆ; ಅಂದರೆ ಆಸ್ಟ್ರೇಲಿಯಾ ಖಂಡಕ್ಕಿಂತ ಚೀನವು ವಿಸ್ತಾರದಲ್ಲಿ ಸ್ವಲ್ಪ ಮಾತ್ರ ಸಣ್ಣದಾಗಿರುತ್ತದೆ. ಮುಖ್ಯಚೀನಕ್ಕೆ ಅದರ ಹೊರಗಿರುವ ತುರ್ಕಿಸ್ಥಾನ, ಮಂಗೋಲಿಯ, ಟಿಬೇಟು ಮೊದಲಾದವುಗಳನ್ನೂ ಸೇರಿಸಿದ್ದಾದರೆ, ಅದರ ಕ್ಷೇತ್ರಫಲವು ೪೯,೧೪,೦೦೦ ಚದರ ಮೈಲುಗಳಾಗುವುವು! ಆದರೆ ಇಷ್ಟು ವಿಶಾಲವಾದ ದೇಶದಲ್ಲಿ ಸಂಚಾರದ ಅಥವಾ ವ್ಯಾಪಾರದ ಸೌಕರ್ಯಗಳು ಬಹಳ ಕಡಿಮೆಯಾಗಿರುವುವು. ಒಂದು ಪ್ರಾಂತ್ಯದ ಜನರು ಇನ್ನೊಂದು ಪ್ರಾಂತ್ಯಕ್ಕೆ ಹೋಗಿ ಬರುತ್ತಿರುವುದು ಬಹಳ ಕಷ್ಟದ ಸಂಗತಿಯಾಗಿರುತ್ತದೆ. ಮಾತ್ರವಲ್ಲ, ಸಮಸ್ತ ಚೀನದ ಬೇರೆ ಬೇರೆ ಭಾಗಗಳ ಜನರ ಜೀವನಕ್ರಮ ಉಡಿಗೆತೊಡಿಗೆ ರೀತಿ ನೀತಿಗಳು ಸಹ ಬೇರೆ ಬೇರೆಯಾಗಿರುವುವು. ಚೀನದಲ್ಲಿ ೨೦೦ಕ್ಕೆ ಕಡಿಮೆಯಾಗದಷ್ಟು ಭಾಷೆಗಳು ಆಡಲ್ಪಡುತ್ತವೆ. ಅಲ್ಲಿ ಪರಸ್ಪರ ಜನರ ಸಮಾಗಮದ ಮೂಲಕ ಸ್ನೇಹ ಸಂಪರ್ಕಗಳು ಬೆಳೆಯಲಿಕ್ಕೆ ಉತ್ತಮ ರೀತಿಯ ಹೆದ್ದಾರಿಗಳಾಗಲೀ ರೈಲ್ವೆಗಳಾಗಲೀ ಇರುವುದಿಲ್ಲ. ಚೀನದಲ್ಲಿರುವ ಒಟ್ಟು ರೈಲುಗಳ ಉದ್ದವು ಕೇವಲ ೫೮೦೦ ಮೈಲುಗಳಷ್ಟಾಗಿರುವುದು. ದೇಶದ ಜನಸಂಖ್ಯೆಯು ೪೦ ಕೋಟಿ ಅಂದರೆ ಯೂರೋಪದ ಜನಸಂಖ್ಯೆಗಿಂತ ಮೂರು ನಾಲ್ಕು ಪಾಲುಗಳಷ್ಟು ಹೆಚ್ಚಿಗೆ ಇರುವುದು.

ಜಪಾನು—ಶಾಂತಸಾಗರದಲ್ಲಿ ಚೀನದ ಕರಾವಳಿಗೆ ಹೊಂದಿಕೊಂಡು ಇರುವ ಕೆಲವು ದ್ವೀಪಗಳ ಒಂದು ಸಮುದಾಯವಾಗಿರುತ್ತದೆ. ಅದರ ಕ್ಷೇತ್ರ ಫಲವು ಚೀನದಕ್ಕಿಂತ ಬಹಳ ಕಡಿಮೆ ಅಂದರೆ, ೧೪೯,೦೦೦ ಚದರ ಮೈಲು ಆಗಿರುವುದು. ಆದರೆ ಪ್ರಯಾಣ ವ್ಯಾಪಾರಗಳ ಸೌಕರ್ಯವು ತುಂಬಾ ಇರುವುದು. ಒಳ್ಳೊಳ್ಳೆ ಹೆದ್ದಾರಿಗಳ ಜಾಲವೇ ಇಡೀ ದ್ವೀಪದ ಸಮುದಾಯದ ಮೇಲೆ ಹರಡಿ ಇರುವುದು ಮಾತ್ರವಲ್ಲದೆ, ಯೂರೋಪ ಅಮೇರಿಕಗಳ ಉತ್ಕೃಷ್ಟ ರೈಲ್ವೆಗಳಿಗೆ ಯಾವ ದೃಷ್ಟಿಯಿಂದಲೂ ಕಡಿಮೆಯಾಗಿಲ್ಲದ ರೈಲುಗಳು ಅಲ್ಲಿರುವುವು. ಅಂಥ ಜಪಾನೀ ರೈಲುಗಳ ಉದ್ದವು, ಅಷ್ಟು ಸಣ್ಣ ದ್ವೀಪದ ಸಮುದಾಯದಲ್ಲಿ ೧೭,೫೦೦ ಮೈಲುಗಳಷ್ಟಾಗುತ್ತದೆ! ಜಪಾನಿನ ಜನಸಂಖ್ಯೆ ೭ ಕೋಟಿ ಅಂದರೆ ಚೀನದಕ್ಕಿಂತ ಐದಾರು ಪಾಲು ಕಡಿಮೆ ಇರುತ್ತದೆ.

ಶಾಸನ ಪದ್ಧತಿ

ಯೂರೋಪ ಅಮೇರಿಕವು ಅಜ್ಞಾನ ಅಂಧಕಾರದಲ್ಲಿ ಮುಳುಗಿದ್ದ ಎರಡು ಮೂರು ಸಾವಿರ ವರ್ಷಗಳ ಹಿಂದೆ ಕೂಡ ಚೀನವು ನಾಗರೀಕತೆಯ ಉನ್ನತ ಶಿಖರವನ್ನು ಏರಿ ರಾಜಿಸುತ್ತಿದ್ದಿತು. ಚೀನವು ಜಗತ್ತಿನ ಎಷ್ಟೋ ರಾಷ್ಟ್ರಗಳ ಉತ್ಥಾನ ಪತನಗಳ ದೃಶ್ಯಗಳನ್ನು ಕಂಡ ಪುರಾತನ ರಾಜ್ಯವಾಗಿದೆ. ಹಿಂದುಸ್ಥಾನವನ್ನು ಬಿಟ್ಟರೆ ಅದರಷ್ಟು ಪುರಾತನ—ಆದರೆ ಈಗಲೂ ತನ್ನ ಅಸ್ತಿತ್ವ ವೈಶಿಷ್ಟ್ಯಗಳನ್ನು ಕಾದುಕೊಂಡಿರುವ ರಾಜ್ಯವು ಬೇರೊಂದಿರುವುದಿಲ್ಲ.

ಮಹಾ ಮಹಾತತ್ವಜ್ಞಾನಿಗಳು, ಕಲಾಕಾರರು, ರಾಜ ನೀತಿ ವಿಶಾರದರು, ವಿದ್ವಾಂಸರು ಚೀನದಲ್ಲಿ ಹಿಂದೆ ಆಗಿಹೋಗಿದ್ದಾರೆ. ಚೀನದ ದಾರ್ಶನಿಕರು ಅನ್ಯದೇಶಗಳ ರಾಜಮಹಾರಾಜರುಗಳಿಗೆ ಹಿತೋಪದೇಶ ಮಾಡಿದ ಉದಾಹರಣೆಗಳೂ ಇತಿಹಾಸದಲ್ಲಿ ದೊರೆಯುತ್ತವೆ. ಯಾಕೆ, ಫ್ರಾನ್ಸಿನಲ್ಲಿ ರಾಜ್ಯಕ್ರಾಂತಿಯಾಗಿ ಯೂರೋಪು ಅನೇಕ ತುಂಡು ತುಂಡುಗಳಾಗಿ ಒಡೆದುಹೋದ ೨೦೦-೩೦೦ ವರ್ಷಗಳ ಹಿಂದೆ ಕೂಡ ಚೀನವು ಉಚ್ಚ್ರಾಯಸ್ಥಿತಿಯಲ್ಲಿದ್ದಿತು. ೧೯೩೧ರಲ್ಲಿ ಚೀನದಲ್ಲಿ ಮಂಚೂ ವಂಶದ ರಾಜಕುಟುಂಬದ ಅಧಿಕಾರವು ನಷ್ಟವಾಗಿ ಅಲ್ಲಿ ಪ್ರಜಾಸತ್ತೆಯು ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಚೀನದ ಶಾಸನಾಧಿಕಾರವು ಕುಮಿಂಟಾಂಗ ಎಂದು ಕರೆಯಲ್ಪಡುವ ರಾಷ್ಟ್ರಸಂಘದ ಅಧೀನವಾಯಿತು. ಅಂದಿನಿಂದ ಚೀನವು ಆಧುನಿಕ ದೃಷ್ಟಿಯಿಂದಲೂ ಅಧಿಕಾಧಿಕ ಬಲವರ್ಧನ್ನಗಳನ್ನು ಪಡೆಯುತ್ತಾ ಬಂದಿದೆ. ಚೀನವು ರಷ್ಯದ ಸ್ನೇಹಸಂಪರ್ಕಗಳಲ್ಲಿರುವುದು ಅದಕ್ಕೆ ತನ್ನ ವ್ಯಕ್ತಿತ್ವವನ್ನು ಕಾದುಕೊಳ್ಳಲಿಕ್ಕೆ ಬಹಳ ಅನುಕೂಲವಾಗಿದೆ.

ಚೀನದಲ್ಲಿ ಅನೇಕ ರಾಜ ಕುಟುಂಬಗಳು ಅಧಿಕಾರ ಮಾಡಿವೆ. ಆದರೆ ಜಪಾನಿನಲ್ಲಿ ಕಳೆದ ೨೬೦೦ ವರ್ಷಗಳಿಂದ ಒಂದೇ ರಾಜಕುಟುಂಬವು ಜಪಾನಿನ ಶಾಸನವನ್ನು ಮಾಡುತ್ತ ಬಂದಿರುವುದು, ಅದರ ಒಂದು ವೈಶಿಷ್ಟ್ಯವಾಗಿದೆ. ಅಷ್ಟು ದೀರ್ಘಕಾಲದ ತನಕ ಬೇರೆ ಎಲ್ಲಿಯೂ ಒಂದು ರಾಜಕುಟುಂಬವು ಶಾಸನ ಮಾಡಿಕೊಳ್ಳುತ್ತ ಬಂದ ದೃಷ್ಟಾಂತವು ಇತಿಹಾಸದಲ್ಲಿ ದೊರೆಯುವುದಿಲ್ಲ. ಜಪಾನಿಯರು ತಮ್ಮ ಅರಸರನ್ನು ಪ್ರತ್ಯಕ್ಷ ದೇವರೆಂದು ಭಾವಿಸುವರು. ಅರಸರ ಆಜ್ಞೆಯು ಅವರಿಗೆ ಸರ್ವಪ್ರಕಾರದಿಂದಲೂ ಶಿರೋಧಾರ್ಯವಾಗಿದೆ. ೧೮೬೮ರಲ್ಲಾದ ಒಂದು ಘಟನೆಯ ಪ್ರಕಾರ ಈಗ ಜಪಾನಿನ ಶಾಸನವು ಆದರ ಅರಸನ ಮೂಲಕ ನಡೆಯುತ್ತದೆ.

ಸೈನಿಕ ಕ್ರಮ

ಚೀನದ ಸೇನೆಯು ಇಡೀ ಜಗತ್ತಿನಲ್ಲಿ ದೊಡ್ಡದಾಗಿರುವುದು. ಅಲ್ಲಿ ೨೩,೪೦,೦೦೦ ಜನರು ಯಾವಾಗ ಬೇಕಾದರೂ ಶಸ್ತ್ರಾಸ್ತ್ರ ಸನ್ನದ್ಧರಾಗಿ ಯುದ್ಧಕ್ಕೆ ಹೋಗ ಬಲ್ಲವರಾಗಿರುವರು. ಆದರೆ ಈ ಸೇನೆಯು ಮನುಷ್ಯ ಶಕ್ತಿಗಳೊಳಗೆ ನಡೆಯುವುದಿಲ್ಲ, ಯಂತ್ರೋಪಕರಣಗಳೊಂದಿಗೆ ನಡೆಯುತ್ತಿರುವುವು. ಅಂಥ ಆಧುನಿಕ ಸೈನಿಕ ಯಂತ್ರೋಪಕರಣಗಳು ಚೀನದೊಡನೆ ಬಹಳ ಕಡಿಮೆ ಇವೆ. ಚೀನದ ಸೇನೆಯು ಸರ್ವತಂತ್ರ ಸ್ವತಂತ್ರವೂ, ಪ್ರಾಯಶಃ ನಿರಂಕುಶವೂ ಆಗಿರುವ ಬೇರೆ ಬೇರೆ ಸೇನಾಧಿಕಾರಿಗಳ ಕೈಕೆಳಗೆ ವಿಭಕ್ತವಾಗಿರುವುದು. ಚೀನವು ಶತ್ರುವನ್ನು ಇದಿರಿಸಿ ಹೋರಾಡಬೇಕಾದರೆ, ಈ ಸೇನಾಧಿಪತಿಗಳೆಲ್ಲರೂ ಪರಸ್ಪರ ಸಹಕಾರ ಭಾವನೆಯಿಂದ ಪ್ರೇರಿತರಾಗಿ ಒಮ್ಮನಸ್ಸಿನಿಂದ ಒಂದಾಗ ಬೇಕಾಗುವುದು. ಚೀನದ ಮೇಲೆ ವಿದೇಶಿಯರ ವಕ್ರದೃಷ್ಟಿಯು ಬೀಳಲಿಕ್ಕೆ ಈ ಸೇನಾಧಿಕಾರಿಗಳ ಪರಸ್ಪರ ದ್ವೇಷಾಸೂಯೆ, ಅಂತಃಕಲಹಗಳೇ ಮುಖ್ಯಕಾರಣಗಳಾಗಿದ್ದುವು. ಆದರೆ ಈಗ ಅವರೆಲ್ಲರೂ ದೇಶದ ಪರವಾದ ತಮ್ಮ ಉತ್ತರದಾಯಿತ್ವವನ್ನು ಮನಗಂಡು ಚಾಂಗ ಕೇ ಶೇಕನ ನೇತೃತ್ವದಲ್ಲಿ ಒಂದಾಗಿರುವುದು ದೇಶದ ಭಾಗ್ಯೋದಯದ ಲಕ್ಷಣವಾಗಿದೆ.

ಆದರೆ ಜಪಾನಿನ ಸೇನೆ ೨,೫೦,೦೦೦ ಮಾತ್ರ ಆಗಿರುವುದು. ಅದು ಸಂಖ್ಯೆಯಲ್ಲಿ ಸಣ್ಣದಾಗಿರುವುದಾದರೂ, ಗುಣದಲ್ಲಿ ಉತ್ತಮವಾಗಿರುವುದು, ಮತ್ತು ಇಡೀ ಸೇನೆಯು ಒಬ್ಬ ಸೇನಾಧಿಕಾರಿಯ ಕೈಕೆಳಗಿರುವುದು. ಅದರ ಶಿಕ್ಷಣ ಕ್ರಮವು ಪಾಶ್ಚಾತ್ಯ ಪದ್ಧತಿಗಳನ್ನು ಅನುಸರಿಸಿದೆ. ಮತ್ತು ಅದು ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿ ಬಲಿಷ್ಠವಾಗಿರುವುದು.

ಚೀನದಲ್ಲಿ ವಿದೇಶಿಯರ ಪ್ರಾಬಲ್ಯ

ಕ್ರಿ. ಶ. ೧೮೫೮ರಲ್ಲಿ ಟೇಯನ್ ಸಿನ್ ಎಂಬಲ್ಲಿ ಚೀನಕ್ಕೂ ಕೆಲವು ವಿದೇಶೀ ರಾಷ್ಟ್ರಗಳಿಗೂ ಒಂದು ಸಂಧಿಯಾಯಿತು. ಈ ಸಂಧಿಯ ಶರ್ತಗಳಿಗನುಸಾರ ವಿದೇಶೀ ರಾಷ್ಟ್ರಗಳಿಗೆ ಚೀನದಲ್ಲಿ ತಮ್ಮವರ ಹಿತರಕ್ಷಣೆಗೆ ಸೈನ್ಯವನ್ನಿಡುವ ಅಧಿಕಾರವು ದೊರೆಯಿತು. ಮಾತ್ರವಲ್ಲ, ಆ ಬಗ್ಗೆ ಚೀನದ ನದಿಗಳಲ್ಲಿ ವಿದೇಶಿಯರಿಗೆ ಯುದ್ಧಹಡಗುಗಳನ್ನು ಕೊಂಡುಹೋಗುವ ಅಧಿಕಾರವೂ ದೊರೆಯಿತು. ಆದರೆ ಚೀನ ಸರಕಾರವು ವಿದೇಶಿರಾಷ್ಟ್ರಗಳೊಂದಿಗೆ ಮಾಡಿಕೊಂಡ ಈ ಸಂಧಿಗೆ ಚೀನೀ ಜನರ ಸಮ್ಮತಿ ಇರಲಿಲ್ಲ. ಅವರಲ್ಲಿ ಸ್ವಾತಂತ್ರ್ಯ ಪ್ರೇಮ ಮತ್ತು ರಾಷ್ಟ್ರಾಭಿಮಾನವು ಬೆಳೆಯುತ್ತ ಬಂದ ಹಾಗೆ, ಈ ಸಂಧಿಯ ಶರತ್ತುಗಳನ್ನು ಅಲ್ಲಗಳೆಯುವ ಮನೋಭಾವವೂ ಚೀನಿಯರಲ್ಲಿ ಬೆಳೆಯುತ್ತ ಬಂದಿತು. ವಿದೇಶಿಯರ ಪ್ರತಿ ಈ ವಿರೋಧ ಭಾವವು ಎಷ್ಟು ಹೆಚ್ಚಿತೆಂದರೆ ೧೯೦೦ರಲ್ಲಿ ವಿದೇಶಿಯರು ತಮ್ಮ ಅಧಿಕಾರ ಸ್ಥಾಪನೆಗೆ ಬಲಪ್ರಯೋಗ ಮಾಡಬೇಕಾಯಿತು. ಆ ವೇಳೆ ಅದೇ ಇಸವಿಯಲ್ಲಿ ಇನ್ನೊಂದು ಸಂಧಿಯಾಗಿ ವಿದೇಶಿಯರಿಗೆ ಪೇಕಿಂಗ ಮತ್ತು ಟೇನ್‌ಸ್ಟೀನಗಳಲ್ಲಿ ಮಾತ್ರ ಸೇನೆಯನ್ನಿಡುವ ಅಧಿಕಾರವುಳಿಯಿತು.

ಸ್ವಾತಂತ್ರ್ಯಪ್ರಿಯ ಮತ್ತು ಸ್ವಾಭಿಮಾನಿಯಾದ ಯಾವ ರಾಷ್ಟ್ರವೂ ವಿದೇಶಿರಾಷ್ಟ್ರವೊಂದು ತನ್ನ ದೇಶದಲ್ಲಿ ಒಂದು ಅಧಿಕಾರ ತೋರಿಸುವುದನ್ನು ಸಹಿಸಲಾರದು. ಆದ್ದರಿಂದ ವಿದೇಶಿಯರ ಹಿಡಿತದಿಂದ ತಪ್ಪಿಸಿಕೊಂಡು ಪೂರ್ಣ ಸ್ವತಂತ್ರವಾಗಲಿಕ್ಕೆ ಚೀನವು ಪ್ರಯತ್ನಿಸುವುದು ನ್ಯಾಯ ಸಂಗತವಾಗಿದೆ. ಪರಂತು ಅದನ್ನು ವಿದೇಶಿ ರಾಷ್ಟ್ರಗಳು ಅದರಲ್ಲೂ ಮುಖ್ಯವಾಗಿ ಜಪಾನ ಪರಮ ಅನ್ಯಾಯವೆನ್ನುತ್ತದೆ. ಚೀನಕ್ಕೆ ಅಪಮಾನಕರವಾದ ಹಕ್ಕು ಅಧಿಕಾರಗಳನ್ನು ಜಪಾನು ಚೀನದಲ್ಲಿ ಸಂಪಾದಿಸಿಯೂ ತೃಪ್ತವಾಗದೆ, ಅದು ಚೀನದ ಪೂರ್ಣ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಚೀನವನ್ನು ತನ್ನ ಅಧೀನ ರಾಜ್ಯವನ್ನಾಗಿ ಮಾಡಬೇಕೆಂದು ಹವಣಿಸಿದೆ. ಅದಕ್ಕಾಗಿ ಜಪಾನು ಎಂಥ ಅತ್ಯಾಚಾರವನ್ನು ಮಾಡಲಿಕ್ಕೂ ಹಿಂದೆ ಸರಿದಿಲ್ಲ.

ಸಂಘರ್ಷದ ರಹಸ್ಯ

ಚೀನದಿಂದ ಜಪಾನು ಕಚ್ಚಾಮಾಲನ್ನು ಕೊಂಡು, ತಾನು ಸಿದ್ಧಮಾಡಿದ ವಸ್ತು ಒಡವೆಗಳನ್ನು ಚೀನಕ್ಕೆ ಮಾರಲಿಚ್ಛಿಸುತ್ತದೆ. ಚೀನದ ವ್ಯಾಪಾರ ಕ್ಷೇತ್ರದಲ್ಲಿ ತನ್ನದೇ ನಿರಂಕುಶ ಅಧಿಕಾರವು ಇರಬೇಕೆಂಬುದು ಜಪಾನಿನ ಮಹತ್ವಾಕಾಂಕ್ಷೆ. ತನಗಾಗಿರುವ ಒಂದು ವ್ಯಾಪಾರ ಕ್ಷೇತ್ರವು ಜಪಾನಿಗೆ ಇರುವುದಿಲ್ಲವಾದರೆ, ಅದು ಬದುಕಿ ಬಾಳುವುದು ಕಷ್ಟ. ಅಲ್ಲದೆ ಬೆಳೆದು ಬರುತ್ತಿರುವ ಜಪಾನಿಯರ ಜನಸಂಖ್ಯೆಗೆ ಜೀವನ ಸೌಕರ್ಯವನ್ನು ಒದಗಿಸಿಕೊಡಲಿಕ್ಕೆ ಜಪಾನಿಗೆ ಸಾಮ್ರಾಜ್ಯ ವಿಸ್ತಾರಮಾಡುವ ಬೇರೆ ಯಾವ ಉಪಾಯವೂ ಜಪಾನಿಗೆ ಇರುವುದಿಲ್ಲ. ಆದ್ದರಿಂದ ಚತುರೋಪಾಯಗಳಿಂದ ಅದು ಚೀನದ ಸ್ವಾತಂತ್ರ್ಯ ಅಪಹಾರಮಾಡಲು ಸಿದ್ಧವಾಗಿದೆ. ಅದಕ್ಕೋಸ್ಕರ ಜಪಾನು ಕಣ್ಣು ಮುಚ್ಚಿ ಹಾಲು ಕುಡಿಯುವ ಬೆಕ್ಕಿನಂತೆ, ಅನ್ಯಾಯ ಅಪರಾಧಗಳನ್ನು ಮಾಡಿಯೂ, ಈ ಸಂಘರ್ಷಕ್ಕೆ ಚೀನವೇ ಕಾರಣವೆಂದು ಹೇಳಿ ಜಗತ್ತಿನ ಕಣ್ಣಿಗೆ ಮಣ್ಣು ಹಾಕುವ ಮಹಾಸಾಹಸವನ್ನು ತೋರಿಸಿದೆ. ಚೀನಿಯರು ವಿದೇಶಿಯರನ್ನು ದ್ವೇಷಿಸುತ್ತಾರೆ, ಅವರನ್ನು ತೆಗಳಿನಿಂದಿಸುತ್ತಾರೆ, ಕೊಲೆ ಸುಲಿಗೆಗಳನ್ನು ಮಾಡಿ ಅಸಹನೀಯ ಯಾತನೆಗಳನ್ನು ಕೊಡುತ್ತಾರೆ, ಚೀನಿಯರ ಈ ದುಷ್ಕೃತ್ಯಗಳ ಫಲವನ್ನು ಉಣ್ಣಿಸಲಿಕ್ಕಾಗಿಯೇ ತಾವು ಚೀನಿಯರ ವಿರುದ್ಧ ಯುದ್ಧರಂಗಕ್ಕೆ ಇಳಿದಿರುವುದಾಗಿ ಜಪಾನಿಯರು ಹೇಳುವರು. ಪರಂತು ಹೀಗೆ ಹೇಳುತ್ತಿರುವುದಕ್ಕೆ ಅವರು ಯಾವ ಆಧಾರಗಳನ್ನೂ ಕೊಟ್ಟಿರುವುದಿಲ್ಲ. ಚೀನಿಯರ ಮೇಲೆ ಜಪಾನಿಯರು ಹೊರಿಸುವ ಸುಳ್ಳು ಆರೋಪಗಳಿಗೆ ಆಧಾರಗಳು ಎಲ್ಲಿಂದ ದೊರೆಯಬೇಕು?

ಜಪಾನಿನ ಮಹತ್ವಾಕಾಂಕ್ಷೆ

ಕೆಲವರನ್ನು ಕೆಲವು ಕಾಲಕ್ಕೆ ಮೋಸಗೊಳಿಸಬಹುದು, ಕೆಲವರನ್ನು ಸದಾಕಾಲಕ್ಕೆ ಮೋಸಗೊಳಿಸಬಹುದು. ಆದರೆ ಎಲ್ಲರನ್ನು ಎಲ್ಲ ಕಾಲಕ್ಕೆ ಮೋಸಮಾಡುವುದು ಸಾಧ್ಯವಲ್ಲ. ಜಪಾನಿನ ಬರ್ಬರತೆಯು ಅದು ಚೀನದ ನಿರಪರಾಧಿಗಳಾದ ಸ್ತ್ರೀಪುರುಷ ಬಾಲಕ ಬಾಲಕಿಯರ ಮೇಲೆ ಮಾಡಿದ ಅತ್ಯಾಚಾರ ಅನಾಚಾರಗಳು ಈಗ ಲೋಕ ಪ್ರಸಿದ್ಧವಾಗಿವೆ. ಚೀನ ಜಪಾನ ಸಂಘರ್ಷದ ರಹಸ್ಯವೂ ಈಗ ಪ್ರಕಟವಾಗುತ್ತ ಬಂದಿದೆ. ಜಪಾನು ಚೀನದಲ್ಲಿ ಸರ್ವತಂತ್ರ ಸ್ವತಂತ್ರ ನಿರಂಕುಶ ಅಧಿಕಾರವನ್ನು ಇಚ್ಛಿಸುತ್ತದೆ. ತನ್ನ ಈ ಮಹತ್ವಾಕಾಂಕ್ಷೆಗೆ ಯಾರು ಯಾವ ಅಡ್ಡ ಬರುವರೋ ಅವರನ್ನೆಲ್ಲ ಅದು ವಿರೋಧಿಸುತ್ತದೆ. ತನ್ನ ಮಹತ್ವಾಕಾಂಕ್ಷೆಗೆ ಚೀನಿಯರು ವಿರೋಧವಾಗಿದ್ದಾರೆಂಬುದರಿಂದ ಅವರ ಮೇಲೆ ಜಪಾನು ತನ್ನ ಪಶುಬಲವನ್ನೆಲ್ಲ ತೋರಿಸ್ಸಿರುವುದು. ಮಾತ್ರವಲ್ಲದೆ ಚೀನಿಯರಿಗೆ ಸಹಾಯಕರಾಗಿದ್ದಾರೆಂದು ತೋರುವ ಆ ಬ್ರಿಟಿಷರ ಮೇಲೂ ಅದರ ವಕ್ರದೃಷ್ಟಿ ಇದೆ. ಆದ್ದರಿಂದ ಚೀನದಲ್ಲೂ ಬ್ರಿಟಿಷರಿಗೆ ಪ್ರಾಪ್ತವಾದ ಅಧಿಕಾರಗಳನ್ನು ಕಿತ್ತುಕೊಂಡು ಅವರ ತೇಜೋವಧೆ ಮಾಡಬೇಕೆಂದ ಜಪಾನು ಪ್ರಯತ್ನಿಸಿದೆ. ಅದಕ್ಕಾಗಿ ಅದು ಟೇನ್‌ಸ್ಟೀನದ ಬ್ರಿಟಿಷ ವಸಾಹತನ್ನು ಮುತ್ತಿ, ಅಲ್ಲಿಯ ನಿವಾಸಿಗಳಿಗೆ ಜೀವನವು ಅಸಾಧ್ಯವಾಗುವಂತೆ ಮಾಡಿದೆ. ಆದ್ದರಿಂದ ಚೀನ ಜಪಾನ ಸಂಘರ್ಷದಲ್ಲಿ ಅಪರಾಧಿ ಚೀನ ಆಗಿದೆ ಎಂದು ಜಪಾನು ಹೇಳುತ್ತಿದೆಯಾದರೂ, ಅದರ ಮಾತನ್ನು ನಂಬಲಿಕ್ಕಾಗುವುದಿಲ್ಲವೆಂಬುವನ್ನು ಈ ಪ್ರಕಟನೆಗಳಿಂದ ತಿಳಿದುಕೊಳ್ಳಬಹುದು.

ಜಾಹೀರಾತುಗಳಿಗೆ
ಸ್ವದೇಶಾಭಿಮಾನಿ
ಅತ್ಯುತ್ತಮ ಸೌಕರ್ಯಕೊಡುವುದು:
ಪ್ರತಿಫಲಬರುವಂತೆ ಸಾಧಿಸುವುದು

ಶ್ರೇಷ್ಠ ತರದ
ದೃಷ್ಟಿಚಕ್ರಗಳಿಗೆ

ಕಬ್ಬಿಣ ಪೆಟ್ಟಿಗೆಗಳಿಗೆ
ನಾಯಕ್ ಸ್ಟೋರ್ಸ್
ರಥಬೀದಿ, ಮಂಗಳೂರು.

ಶಾಲಿವಾಹನ ಶಕ ೧೮೬೦ನೆಯ ಪ್ರಮಾಥಿ ಸಂವತ್ಸರದ ಆಶಾಢ ಶು ೧೫ ಶನಿವಾರದಿಂದ ಆಶಾಢ ಬ ೫ ಶುಕ್ರವಾರದ ವರೇಗಿನ ಪಂಚಾಂಗ. (೧೯೩೯ನೇಯ ಮಿಥುನ ಆರ್ತೆಲ್)

1	ಶನಿ	೧೩	೪೧	ಮೂಲಾ	೨೯	೧೭	
2	ರವಿ	೧೪	೪೫	ಪೂ ಷಾಢ	೩೩	೧೮	
3	ಸೋ.	೧೫	೪೯	ಉ ಷಾಢ	೩೯	೧೯	
4	ಕುಜ	೧೬	೫೩	ಶ್ರವಣಾ	೪೫	೨೦	
5	ಬುಧ	೧೭	೩೮	ಧನಿಷ್ಠಾ	೫೨	೨೧	
6	ಗುರು	೧೮	೬೦	ಶತಭಿಷಾ	೫೮	೨೨	
7	ಶುಕ್ರ	೧೯	೩	ಪೂ. ಭಾದ್ರ	೬೦	೨೩	

THE PIE-MONEY BANK LTD,

Maidan Road, MANGALORE.

Undertakes all kinds of Banking Business Current account at 2½% per annum Savings Bank Deposits at 4½% per annum.

FIXED DEPOSITS

For 2 Years 5% 1 Year 4½% For 6 months 4% 3 months 3½%

Auction ... ranging from Rs. 100/ to Rs 5000/ run regularly on systematic lines Unique Banking facilities to Businessmen and interested Public

Apply for particulars—**K. R. GURU**, *Managing Director*

ಗುಣಬಾರದಿದರ ಹಣ ವಾಪಾಸು

ಸುಪ್ರಸಿದ್ಧ ವೈದ್ಯರಾದ ಎಂ ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕಾರವು ಅಶಕ್ತಿಯುಳ್ಳದ್ದಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸರಿ ಬರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣೆ ಬಂದಾಗುವುದು ಕಡಸಂಪರ ಏನು ಮಾಡಿದರೂ ... ಪೂರ್ಣ ... ವಿಧ ಬೇರಿರಿ ಮತ್ತು ಸರ್ಟಿಫಿಕೇಟು ... ವೈದ್ಯ ಎಲ್ ಸಿ ಪಿ ಎಸ್, ... ಈ ಚೂರ್ಣದಿಂದ ಯಾವ ಕರದ ... ಆಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣ... ಡಬ್ಬಿಯ ಕ್ರಯ ರೂ ೪-೦-೦ ವಿ ಪಿ

ವಿಳಾಸ ಸಂಜೀವಿನೀ ಔಷಧಾಲಯ, ಮು. ಪೋ. ಮಿರಜಿ, (S M C.

ಬರೇ ರೂ 1-4-0ಕ್ಕೆ 3 ಗಡಿಯಾರಗಳು ಮತ್ತು 1295 ಫೆನ್ಸಿ ಬಹುಮಾನಗಳು

ಒಂದೇ ಬಾರಿಗೆ ರೂ 1-4-0ಕ್ಕೆ ನಮ್ಮ 8 ಸೀಸೆ ಪರಿಮಳದ ಸೆಂಟನ್ನೂ ಅಥವಾ 8 ಸೀಸೆ ಹುಳುಕಡ್ಡಿಯ ಮುಲಾಮನ್ನು ಪಡಕೊಳ್ಳುವವರಿಗೆ 2 ಗೋಲ್ಡ ಗಿಲ್ಟಿನ ಡಮ್ಮಿ ರಿಸ್ಟುವಾಚುಗಳೂ ಒಂದು ಕಟ್ಟುವ ಪಟ್ಟಿ ಸಹಿತ



1 ಪೋಕೆಟು ವಾಚು ಒಂದು ಜಿಲ್ಲೆಟ್ ರೇಜರೂ, ಒಂದು ವಿಂಗ್ ಬ್ರಶೂ, ಒಂದು ಶೇವಿಂಗ್ ಸಾಬೂನು, ಒಂದು ಕನ್ನಡಿ ಒಂದು ವಾಚಚೆನ್, 1½ ಕೆರೆಟ್ ರೋಲ್ಡ್ ಗೋಲ್ಡ್ ಗಿಲ್ಟಿನ ಫೌಂಟನ್ ಪೆನ್ನೂ, ಒಂದು ಸೆಟ್ಟು ರೋಲ್ಡ್ ಗೋಲ್ಡ್ ಗುಂಡಿಗಳು, ಒಂದು ಸೆಂಟ್ ಪೌಡರು, ಒಂದು ಚಾಕು ಒಂದು ಪೇರ್ ಕನ್ನಡಕ ಒಂದು ಬಂಗಾರದ ಗಿಲ್ಟಿನ ಉಂಗುರ, 300 ಫೀಟ್ ಪ್ರಕಾಶ ಬೀರುವ ಒಂದು ಟೋರ್ಚ್ ಲೈಟು ಅಥವಾ 10 ವರ್ಷ ಗ್ಯಾರಂಟಿ ಇರುವ ಗಟ್ಟಿಯಾದ ಮೆಶಿನರಿಯಿಂದ ಮಾಡಲ್ಪಟ್ಟ ಒಂದು ಮೂನ್ ಟೈಮ್‌ಪೀಸೂ ಇವುಗಳನ್ನು ಉಚಿತವಾಗಿ ಕೊಡುವೆವು ಪೆಕಿಂಗ್ ಮತ್ತು ಟಪ್ಪಾಲು ಖರ್ಚು 0-14-0 ಪ್ರತ್ಯೇಕ

The American Commercial Stores, Post Box No 12218 Calcutta (S A)

THE

Bank of Mangalore Ltd.,

MANGALORE

ESTD 1931

Branches—

Panemangalore, Mudabidri & Padubidri.

Fixed Deposits will be received at following rates of interest.

For 3 months		3½%
„ 6 „		4%
„ 12 „		5%
„ 24 „	& upwards	5½%

Interest Payable Quarterly

Savings Bank deposit* 3½% *on daily balances.

All kinds of banking business transacted

THE

Canara Banking Corporation Ltd.,

(INCORPORATED IN BRITISH INDIA)

THREE YEARS' CASH CERTIFICATES

bearing interest at 4% p. a.
in denominations of

RS. 50/-, 100/-, 500/-, 1,000/-, & 5,000/
are now issued at all our Branches.

For particulars call at or write to any of our nearest Branches.

ಮದನಕಾಮೇಶ್ವರಿ ಲೇಹ

ಅತ್ಯಂತ ಬಲಕಾರಿ.

ಪ್ರಮೇಹರೋಗ, ಶರೀರದುರ್ಬಲತೆ, ನಿಸ್ಸತ್ವ, ವೀರ್ಯ ನಷ್ಟ ಮುಂತಾದ ಅನೇಕ ರೋಗಗಳನ್ನು ಗುಣಪಡಿಸಿ, ವೀರ್ಯವೃದ್ಧಿಗೊಳಿಸಿ ಬಲವನ್ನು ಉಂಟುಮಾಡಿ ಸಂಭೋಗ ಶಕ್ತಿಯನ್ನು ಕೊಡುವುದರಲ್ಲಿ ಅಮೋಘವಾದದ್ದು ಸ್ತ್ರೀಯರ ರೋಗಗಳನ್ನು ಗುಣಪಡಿಸಿ, ಶರೀರಶಕ್ತಿಯನ್ನುಂಟು ಮಾಡಲು 2 ಡಬ್ಬಿಗಳೇ ಸಾಕು 20 ತೊಲೆಗಳ ಡಬ್ಬಿ ರೂ 1-4-0 (ವಿ ಪಿ ಚಾರ್ಜು ಪ್ರತ್ಯೇಕ)

ಪಿ ಸಿ. ಎ. ಅಂಡ್ ಕೋ,
ಆಯುರ್ವೇದಿಕ್ ಸಮಾಜ, ಪೆರಿಡೇಪಿ
P O Peridepi (ನೆಲ್ಲೂರು ಜಿ)

HOUNSA

ಹಂಸಾಸ್ನೋ ಮತ್ತು ಬ್ರಿಲ್ಲೆಂಟೈನ್ ಉಪಯೋಗಿಸಿರಿ.

ಕೆ. ವೆಂಕಟೇಶ ಬಾಳಿಗ,
ಗೋರೆಕ್ಟ್ರಾ ಬಜಾರ್, ಮಂಗಳೂರು

ಡೋಂಗರೆ

ಇವರ

ಬಾಲಾಮೃತವು

ಮಕ್ಕಳ ಹಳೆಯ ಮತ್ತು ಅಸಹ್ಯವಾದ ಕೆಮ್ಮು ಮತ್ತು ಒಳಜ್ವರ ಇವುಗಳನ್ನು ಗುಣಪಡಿಸಿ ಮಕ್ಕಳಿಗೆ ಪುಷ್ಟಿಯ ಸ್ವಸ್ಥ ಬಲವನ್ನು ಕೊಡುತ್ತದೆ

ಮಂಗಳೂರು ಪೇಟೆಯ ದವಸಧಾನ್ಯ ವಗೈರೆಗಳ ಧಾರಣೆ

ಸಾಮುಗ್ರಿಗಳು	ಮೂಬಲಗು ರಿಂದ	ಮೊಬಲಗು ವರೆಗೆ
ಭತ್ತ—ಅವ್ವಲ್ ತರದ ಗುದ್ದು ಮುಡಿಗೆ	1—14—0	—
„ ದುಯಂ „ „	1—12—0	1—12—0
„ ಅವ್ವಲ್ ಸುಗ್ಗಿ „	1—12—0	—
„ ದುಯಂ „ „	1—10—0	—
ಅಕ್ಕಿ ಅವ್ವಲ್ ಗುದ್ದು „	4—10—0	4—12—0
„ ದುಯಂ „ „	4—6—0	4—8—0
„ ಅವ್ವಲ್ ಸುಗ್ಗಿ „	4—6—0	4—8—0
„ ದುಯಂ „ „	4—4—0	4—6—0
ತೆಂಗಿನ ಕಾಯಿ ಸುಲಿದದ್ದು 1000ಕ್ಕೆ	27—8—0	35—0—0
„ ಸಿಪ್ಪೆ ಇದ್ದದ್ದು „	30—0—0	40—0—0
ಕೊಬ್ಬರಿ ಆಫೀಸು ಖಂಡಿಗೆ	50—0—0	—
„ ದಿಲ್‌ಪಸಂದ „	52—8—0	—
ತೆಂಗಿನ ಎಣ್ಣೆ ಮಣಕ್ಕೆ	8—6—0	8—6—0
ಸಿಪ್ಪೆಯುಳ್ಳ ಅಡಕೆ 1000ಕ್ಕೆ	3—8—0	4—4—0
ಗೇರುಬೀಜ ಮುಡಿಗೆ	8—12—0	9—12—0
ಕಬ್ಬಿನ ಬೆಲ್ಲ ಖಂಡಿಗೆ	52—8—0	57—8—0
ಒಳ್ಳೆಮೆಣಸು ಹಂಡ್ರೆಡ್ವೇಟಿಗೆ	14—8—0	15—8—0

ವಿಜ್ಞಾನ ಯುಗ

ಮಂಗನ ಗ್ರಂಥಿಯಿಂದ ಮನುಷ್ಯನಿಗೆ ಪುನರ್ಜನ್ಮ

★ ನಪುಂಸಕತ್ವವನ್ನು ಗುಣಪಡಿಸಬಹುದು

★ ಫ್ರೆಂಚ್ ಮನುಷ್ಯನ ಪುನರ್ಜನ್ಮ

★ ಮಾನವನಿಗೂ ಮಂಗಗಳಿಗೂ ಸಂಬಂಧವುಂಟೆ?

ಡಾ। ವೊರೊನೋಫರ ಅಪೂರ್ವ ಶೋಧನೆ

ಲೋಕದಲ್ಲಿ ಪೂರ್ಣತೆಯನ್ನು ಪಡೆಯದ ಮಾನವರೂ ಜನ್ಮ ತಾಳುತ್ತಾರೆ. ಕುಂಟರಾಗಿಯೂ, ಕುರೂಪಿಗಳಾಗಿಯೂ, ನಿರ್ಬಲರಾಗಿಯೂ, ಬುದ್ಧಿಹೀನರಾಗಿಯೂ ಅವರು ಇರುತ್ತಾರೆ. ಎಷ್ಟೇ ಪ್ರಾಯನಾಗಲಿ ತಮ್ಮ ಕೈಗಳಲ್ಲಿ ಬೆರಳೆಷ್ಟು ಇವೆ ಎಂದು ಎಣಿಸುವ ಸಂಖ್ಯಾಜ್ಞಾನ ಅವರಿಗಿರುವುದಿಲ್ಲ, ಇದ್ದರೂ ಅದನ್ನು ಹೇಳುವ ಯೋಗ್ಯ ಮಾತು ಅವರಿಗೆ ಬರುವುದಿಲ್ಲ. ಆದರೆ ಇತ್ತೀಚೆಗೆ ಇಂತಹ ನ್ಯೂನತೆಗಳನ್ನು ಪರಿಹರಿಸಲು ವಿಜ್ಞಾನಶಾಸ್ತ್ರವು ಸಹಾಯ ಮಾಡಿದೆ. ಆ ಕುರಿತು ಅದ್ಭುತ ಶೋಧನೆಯನ್ನು ನಡೆಸಿ, ಪ್ರಯೋಗಮಾಡಿ ಪ್ರಯೋಜನವನ್ನು ಪಡೆದ ಮಹನೀಯರೊಬ್ಬರ ಕುರಿತು, ಅವರ ಪ್ರಯೋಗದ ಕುರಿತೂ ತಿಳಿಯುವುದು ಅತ್ಯಂತ ಮಹತ್ವದ ವಿಚಾರವಾಗಿದೆ.

ಡಾ। ವರನ್ಹೋಫ್ ಎಂಬವರು ಸುಪ್ರಸಿದ್ಧರಾದ ಒಬ್ಬ ಯುರೋಪಿಯನ್ ಡಾಕ್ಟರರು. ಅವರು ಅನೇಕ ಶೋಧನೆಗಳನ್ನು ಮಾಡಿ ಕಟ್ಟಕಡೆಗೆ ಮಂಗಗಳ ಮಾಂಸ ಗ್ರಂಥಿಯಿಂದ ಮನುಷ್ಯನ ಅಂಗವಿಕಲತೆಯನ್ನು ಗುಣಪಡಿಸುವ ಪ್ರಯೋಗದಲ್ಲಿ ಜಯಶಾಲಿಗಳಾಗಿ ಅಖಿಲ ಪ್ರಪಂಚದಲ್ಲಿಯೇ ಬಹಳ ಕೀರ್ತಿವಂತರಾಗಿದ್ದಾರೆ. ಅವರೇ ತಮ್ಮ ಪ್ರಯೋಗದ ಕುರಿತು ಹೀಗೆಂದು ಬರೆಯುತ್ತಾರೆ

"ಪೆರಿಸಿಸ್ ನಗರದಲ್ಲಿರುವ ಹಲವು ಮಂದಿಗೆ ಜೋರ್ಜ—ಈತನು ಅವರಂತೆಯೇ ಇರುವ ಒಬ್ಬ ಮಧ್ಯಪ್ರಾಯದ, ಉದ್ಯೋಗ ನಿರತನಾದ ಫ್ರೆಂಚನಾಗಿ ತೋರಬಹುದು, ಆದರೆ ನನಗೆ ಆತನು ಬಹಳ ವಿಶೇಷವಾಗಿ ಕಾಣುತ್ತಾನೆ. ನನ್ನ ಅದ್ಭುತ ಶೋಧನೆಯಿಂದ ಮೂರ್ತಿಗೊಂಡ ಪ್ರಥಮ ಮಾನವನನ್ನಾಗಿ ನಾನು ಆತನನ್ನು ಆತ್ಯಾಶ್ಚರ್ಯದಿಂದ ನೋಡುತ್ತೇನೆ. ಇಂದು ನಾನು ಆತನ ಹಿಂದಿನ ಫೊಟೋಗ್ರಾಫ್ ಚಿತ್ರವನ್ನು ಕಳಕೊಂಡಿದ್ದರೂ, ಆ ಮೊದಲನೆಯ ದಿನ ನನ್ನ ಪಾರಿಸ್ ಆಫೀಸಿನಲ್ಲಿ ಬಂದು ನಿಂತ ನಿಲುವಿಕೆಯನ್ನು ನಾನು ಮರೆಯುವ ಹಾಗಿಲ್ಲ.

"ಅಂದು ಆತನ ಕಣ್ಣಿನಲ್ಲಿ ನಿಜವಾಗಿಯೂ ಜೀವಕಳೆಯಿರಲಿಲ್ಲ. ಅದೆಂದು ವಿಚಿತ್ರವಾದ ನೋಟವಾಗಿತ್ತು. ಆತನ ದೃಷ್ಟಿಯಲ್ಲಿ ಒಬ್ಬ ಅಮಾನುಷನ ಸ್ವರೂಪವಿತ್ತು. ಆತನು ಕೊಬ್ಬಿದ್ದ, ದಪ್ಪಕೂದಲಿತ್ತು, ಬೋಜನ್ನವ ಪ...ಖವುಳ್ಳವನಾಗಿದ್ದ ಅಳತೆ ಮೀರಿದ ಕಿವಿಗಳಿದ್ದವನಾಗಿದ್ದ. ಕೊರಳು ಬಹಳ ಕು...ಾಗಿತ್ತು. ಇಪ್ಪತ್ತು ವರ್ಷದವನಾದರೂ ...ಳ ವರ್ಷದ ಹುಡುಗನ ಬೆಳವಣಿಗೆಯಿತ್ತು, ... ಕೇವಲ ಮೂರು ವರ್ಷದ ಹುಡುಗನಿಗೆ ಸರಿಯಿದ್ದ, ಆತನಲ್ಲಿ ಶಕ್ತಿಯ... ಏನೂ ಇರಲಿಲ್ಲ. ಯಾವುದೇ ಡಾಕ್ಟರನಾದರೂ ಅವನ್ನು ಥೈರೋಯಿಡ್ ಗ್ರಂಥಿಯ ರೋಗವೆಂದು ಹೇಳಬಹುದಿತ್ತು

"ಅದು ... ಇಷವಿಯಲ್ಲಿ ಆತನ ಥೈರೋಯಿಡ್ ಗ್ರಂಥಿಯನ್ನು ಶಸ್ತ್ರಚಿಕಿತ್ಸೆ ಮಾಡಿತು. ಆತನ ತಾಯಿಯೇ ತನ್ನ ಗ್ರಂಥಿಯನ್ನು ಅದಕ್ಕಾಗಿ ಒದಗಿಸಿದಳು. ಎರಡನೇಸಲ ಚಿಂಪೆನ್ಸಿ ಎಂಬ ಮಂಗಜಾತಿಯ ಗ್ರಂಥಿಯನ್ನು ಇಟ್ಟು ಒಪರೇಶನು ಮಾಡಿತು. ಕುತ್ತಿಗೆಯ ಗ್ರಂಥಿಯು ಸರಿಯಾಗಿಲ್ಲದಿರುವುದರಿಂದ, ಆ ಗ್ರಂಥಿಯು ಇಡೀ ಶರೀರದ ಬೆಳವಣಿಗೆಗೆ ಬೇಕಾದುದರಿಂದ, ಅದನ್ನು ಶಸ್ತ್ರಚಿಕಿತ್ಸೆಮಾಡಿ, ಅದರ ಸ್ಥಾನಕ್ಕೆ ಮಂಗನ ಮಾಂಸ ಗ್ರಂಥಿಯನ್ನು ಸೇರಿಸಲಾಯಿತು.

ಇಪ್ಪತ್ತು ವರ್ಷಗಳ ಮೇಲೆ

"ಇದಾಗಿ ಇಪ್ಪತ್ತು ವರ್ಷಗಳ ಮೇಲೆ ಜೋರ್ಜನು ಈಗ ಸಂಪೂರ್ಣ ಒಬ್ಬ ಮಾನವನ ಸಾಮರ್ಥ್ಯ, ಬೆಳವಣಿಗೆ, ಬುದ್ಧಿಶಕ್ತಿಯುಳ್ಳವನಾಗಿ, ಆತನ ತಂದೆಯ ಒಂದು ಬಿಸ್ಕಿಟು ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾನೆ. ಮೋಟಾರ್ ಕಾರು ಬಿಡುತ್ತಾನೆ. ಇಂದು ಐದು ಫೀಟು ಎಂಟು ಇಂಚುಗಳಷ್ಟು ಉದ್ದ ಬೆಳೆದಿದ್ದಾನೆ.

"ಈ ಸುವಾರ್ತೆಯನ್ನು ಕಳೆದ ನಾಲ್ವತ್ತು ವರ್ಷಗಳಿಂದ ಜಗತ್ತಿಗೆ ತಿಳಿಸಬೇಕೆಂದು ನಾನು ಆಗ್ರಹಪಟ್ಟಿದ್ದೆನು. ಅದನ್ನು ಇಂದು ಸಾರುತ್ತೇನೆ. ಈ ಪ್ರಯೋಗದಿಂದ ಆ ಜೋರ್ಜನು ಮಾತ್ರ ಗುಣಹೊಂದಿದ್ದಲ್ಲ, ಆ ಮೇಲೆ ಅನೇಕ ರೋಗಿಗಳನ್ನು ಅದೇ ರೀತಿಯಾಗಿ ಶಸ್ತ್ರಚಿಕಿತ್ಸೆ ಮಾಡಿ ಗುಣಪಡಿಸಿದ್ದೇನೆ.

"ಶಸ್ತ್ರಚಿಕಿತ್ಸೆ ಮಾಡಿದ ಸ್ವಲ್ಪ ದಿವಸಗಳಿಂದಲೇ ಶರೀರದ ಬೆಳವಣಿಗೆಯಲ್ಲಿ ಸಂಪೂರ್ಣ ಅಭಿವೃದ್ಧಿಯು ಕಾಣುತ್ತದೆ. ಆದರೆ ಒಬ್ಬ ವೈಜ್ಞಾನಿಕನು ಕೇವಲ ಕ್ಷಣಿಕವಾದ ಜಯದಲ್ಲಿ ವಿಜಯಿಯಾದನೆಂದು ತಿಳಿಯುವುದು ಸಾಧ್ಯವಿಲ್ಲ. ಆದರೆ ಇಂದು ಇಷ್ಟು ದೀರ್ಘ ಸಮಯದ ಶಸ್ತ್ರಚಿಕಿತ್ಸೆಯ ಅನುಭವದಿಂದ ನಾನು ಖಂಡಿತವಾಗಿಯೂ ಬುದ್ಧಿಜ್ಞಾನವಿಲ್ಲದ, ಶರೀರ ಬೆಳವಣಿಗೆಯಿಲ್ಲದ, ನಪುಂಸಕತ್ವವುಳ್ಳ ಜನರನ್ನು ಈ ಮಂಗನ ಗ್ರಂಥಿಯಿಂದ ಗುಣಪಡಿಸಬಹುದಾಗಿ ಜಗತ್ತಿಗೆ ಸಾರುತ್ತೇನೆ

"ಎಲ್ಲಾ ಮಂಗಗಳ ಗ್ರಂಥಿಗಳಿಗಿಂತಲೂ, ಚಿಂಪೆನ್ಸಿ ಎಂಬ ಪ್ರಾಣಿಯ ಗ್ರಂಥಿಯು ಹೆಚ್ಚು ಪ್ರಯೋಜನವನ್ನು ಕೊಡುತ್ತದೆ. ಏಕೆಂದರೆ ಮನುಷ್ಯನ ಮತ್ತು ಮಂಗಜಾತಿಯ ಪ್ರಾಣಿಗಳ ಗ್ರಂಥಿಗಳು ಅನ್ಯೋನ್ಯ ಬದಲಾಯಿಸಲು ಸಾಧ್ಯವಿರುವಂತವುಗಳಾಗಿವೆ

ಈ ರೋಗವು ಕತ್ತಿನ ಗ್ರಂಥಿಯಿಂದಾಗಿ ... ಗ್ರಂಥಿಯು ಸರಿಯಾಗಿಲ್ಲದಿರುವುದರಿಂದ, ರಕ್ತಚಲನೆಯು ಸರಿಯಾಗಿ ಆಗದೆ, ಮಿದುಳು ಗ್ರಂಥಿಗೆ ಯೋಗ್ಯ ಸಂಬಂಧವು ಇಲ್ಲದೆ, ಮನುಷ್ಯರು ವಿಕಲರಾಗುತ್ತಾರೆ ಹಾಗಾಗಿ ಅಂತವರು ಮಂಗಗಳಂತೆಯೇ ಇರುತ್ತಾರೆ ಈ ಮಂಗಚೇಷ್ಟೆಯ ರೋಗವು ಮಂಗಗಳ ಗ್ರಂಥಿಯಿಂದಲೇ ಗುಣವಾಗುವುದು

ವಿಷವಿಲ್ಲದೆ ಬದುಕಲು ಸಾಧ್ಯವಿಲ್ಲವೆ?

ಮನುಷ್ಯನ ಆಹಾರದಲ್ಲಿ ಸ್ವಲ್ಪ ವಿಷಪದಾರ್ಥವಿಲ್ಲದಿದ್ದರೆ ಆತನು ಬದುಕಲಿಕ್ಕೇ ಸಾಧ್ಯವಿಲ್ಲವೆಂದು ಅಮೇರಿಕದ ಒಬ್ಬ ವೈಜ್ಞಾನಿಕನು ಕಂಡುಹಿಡಿದ್ದಾನೆ. ಎಲ್ಲದಕ್ಕಿಂತಲೂ ಹೆಚ್ಚು ವಿಶೇಷವು ಆರ್ಸೆನಿಕ್ ಎಂಬ ವಿಷ, ಇದು ಬಹಳ ಭಯಂಕರವಾದ ವಿಷವಾದರೂ, ಬಹಳ ಕಡಿಮೆ ಅಂಶದಲ್ಲಿ ಇದು ಇರಲೇಬೇಕು, ನಾವು ತೆಗೆದುಕೊಳ್ಳುವ ಆಹಾರದಲ್ಲಿ ಪ್ರಕೃತಿಯೇ ಇದನ್ನು ಸೇರಿಸಿಬಿಟ್ಟಿರುವುದು. ಇನ್ನೆರಡು ಅಗತ್ಯವಾದ ಆಹಾರದಲ್ಲಿರಬೇಕಾದ ವಿಷಯಗಳೆಂದರೆ, ಒಂದು ಸೀಸ ಮತ್ತು ಮೆಂಗನೀಸ್ ಎಂಬುದು. ಇದು ಸಾಮಾನ್ಯ ಎಲ್ಲಾ ತರದ ಅನ್ನದಲ್ಲಿಯೂ ಇರುತ್ತದೆ.

ಗಡ್ಡಗಳಿಂದ ಆರೋಗ್ಯ!

ಹೆಚ್ಚಾಗಿ ಗಡ್ಡ ಬೆಳೆಸುವವನು ಅದರಿಂದ ವ್ಯಕ್ತಿತ್ವಕ್ಕೆ ಒಂದು ಗಂಭೀರತೆ ಬರುತ್ತದೆಯೆಂದೂ, ಏಸಿಲ್ಲದಿದ್ದರೆ ಕ್ಷೌರ ಮಾಡುವ ರಗಳೆ ಕಡಿಮೆಯಾಗುತ್ತದೆಂದೂ ಹೇಳುವುದುಂಟು — ಆದರೆ ಅದಕ್ಕೆ ಶಾಸ್ತ್ರೀಯವಾದ ಕಾರಣವೊಂದನ್ನೀಗ ಇನ್ನು ಹೇಳಬಹುದು

ಧೂಳಿಯಲ್ಲಿ ಕೆಲಸ ಮಾಡುವುದರಿಂದ ಚರ್ಮಕ್ಕೆ ರೋಗಾಣುಗಳು ಸೇರಿ ಅನೇಕ ರೋಗಗಳಾಗುವುದುಂಟು. ಆದ್ದರಿಂದ ಗಡ್ಡ ಮತ್ತು ಮೀಸೆ (ಹೆಚ್ಚಾಗಿ ಧೂಳಿದ್ದ ಸ್ಥಳದಲ್ಲಿರುವವರು) ಇವುಗಳನ್ನು ಧರಿಸುವುದರಿಂದ ಅಂತಹ ರೋಗಾಣುಗಳು ಚರ್ಮವನ್ನು ಹೋಗಲು ಸಾಧ್ಯವಿಲ್ಲ.

ಅಮೇರಿಕದಲ್ಲಿ ಮುಕ್ಕಾಲು-ಮಂದಿ ಜನರು ಕಿವುಡರು

ಸಂಯುಕ್ತ ಅಮೇರಿಕದ ಸಾರ್ವಜನಿಕ ಆರೋಗ್ಯಖಾತೆಯವರು ೯,೦೦೦ ಮಂದಿಯನ್ನು ಪರೀಕ್ಷಿಸಲಾಗಿ ಅದರಿಂದ ಕಂಡು ಬಂದ ಪರಿಣಾಮವೇನೆಂದರೆ ಇಡೀ ಜನಸಂಖ್ಯೆಯಲ್ಲಿ ಮುಕ್ಕಾಲು ಪಾಲು ಜನರು ಕಿವುಡರಾಗಿದ್ದಾರೆಂದು ಕೆಲವರು ಜಗತ್ಪ್ರಸಿದ್ಧರಾಗಿ ಕಿವುಡರಾಗಿರುತ್ತಾರೆ. ಹಲವರಿಗೆ ತಾವು ಕಿವುಡರಾಗಿರುವೆವೆಂಬ ವಿಷಯವೇ ತಿಳಿದಿರುವುದಿಲ್ಲ. ಇದು ಬಹು ಆಶ್ಚರ್ಯವಾಗಿ ತೋರಬಹುದು ಅಲ್ಲಿನ ಇಡೀ ಜನತೆಯು ಅರ್ಧವಾಸಿ ಜನರು ಸುಂದರವಾದ ಶಬ್ದಗಳ ಸ್ವರೂಪಗಳನ್ನು ಕೇಳಲು ಸಾಧ್ಯವಿಲ್ಲದವರೇ ಆಗಿದ್ದಾರೆ. ಇದರಲ್ಲಿಯೂ ಗಂಡಸರಲ್ಲಿ ಈ ಶ್ರವಣದೋಷವು ಹೆಂಗಸರಿಗಿಂತಲೂ ಹೆಚ್ಚಾಗಿರುವುದಾಗಿ ತಿಳಿಯುತ್ತದೆ.

'DILROZ' Regd

'Dil Roz' is a sure cure for Oriental sores, local sores, all kinds of deep-rooted sores, skin eruptions, Pimples, Eczema, Ringworm, Sinus, Fistula, auxillary-Abscess.

There is no need of dressing the wounds nor are baths prohibited.

Price Rs. 2. Postage extra.

TAHIR DIN
Anarkali, LAHORE

ಬೇಕಾಗಿದ್ದಾರೆ.

ಮುಂಬಯಿಯ ಪ್ರಸಿದ್ಧ 'ಬಿಸಾಪ್' ಟೊಪ್ಪಿಗೆ ಕನ್ನಡ ಮಾತಾಡುವ ಪ್ರತಿ ಸ್ಥಳದಲ್ಲಿ ಏಜಂಟರು ಬೇಕಾಗಿದ್ದಾರೆ.

ಏಜಂಟರ ಸಲುವಾಗಿ ಕಾರಖಾನೆದಾರರು ತಮ್ಮ ಸ್ವಂತ ಖರ್ಚಿನಿಂದ ೧) ಉತ್ತಮ ಬಣ್ಣದ ಸ್ಲೈಡ್ಸುಗಳನ್ನು ಏಜಂಟರ ಹೆಸರು ಹಾಕಿ ಸಿನೆಮಾದಲ್ಲಿ ತೋರಿಸುವರು ೨) ಆ ಸ್ಥಳದ ಪತ್ರಿಕೆಯಲ್ಲಿ ಏಜಂಟರ ಹೆಸರಿನ ಜಾಹೀರಾತು ಕೊಡುವರು ೩) ಏಜಂಟರ ಹೆಸರಿನ ಹಸ್ತಪತ್ರಿಕೆಗಳ ಮತ್ತು ಕೋಕಾರ್ಡುಗಳು ಕೊಡಲ್ಪಡುವವು ೪) ಸ್ಟೇಷನ್ ಡೆಲಿವರಿ ಕೊಡುವರು. ನಮ್ಮ ಕಿಮ್ಮತ್ತಿಗೆ ಸ್ಪರ್ಧೆಯಿಲ್ಲ. ಮಾಲು ಪರದೇಶದಿಂದ ಬರುವಂತೆ ಉಂಟು ಏಜಂಟರಿಗೆ ತುಂಬಾ ಕಮಿಷನ್ ಕೊಡಲಾಗುವುದು. ಕನ್ನಡ, ಮರಾಠಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರವ್ಯವಹಾರ ಮಾಡಬಹುದು

ಏಜನ್ಸಿಗೆ ಈ ಕೆಳಗಿನವರಿಗೆ ಬರೆಯಿರಿ.

ಎಸ್. ಎಮ್. ಶಾಫ್ ಮತ್ತು ಕಂಪೆನಿ,
ವಿಲೆ ಪಾರ್ಲೆ ಮುಂಬಯಿ.

ಹೊನ್ನಾವರ ಏಜೆಂಟ್ — ಪಿ. ಎಚ್. ಭಕ್ತಾ   ಗದಗ — ವಿ. ಎಸ್. ನಿಟ್ಟಿ

ಮೈಸೂರು, ಕೊಡಗು, ದಕ್ಷಿಣ ಕನ್ನಡಾ ಏಜೆಂಟ್ ಡಾ. ಕೆ ಭಾಸ್ಕರ ಪೈ.

ಸ್ಪೆಶಲ್ ಏಜಂಟ್.— ಬಿ. ವ್ಹಿ. ಹೊನ್ನಾವರ

ಸರದಾರ ಭವನ Sirdar Bhavan

ಫೆಲಿಕ್ಸ್‌ಪೈ ಬಜಾರ್—ಮಂಗಳೂರು

ಅನುಭವಸ್ಥ ಬ್ರಾಹ್ಮಣರಿಂದ ಶಾಸ್ತ್ರೋಕ್ತ ರೀತಿಯಿಂದ ತಯಾರಿಸಲ್ಪಟ್ಟ ತಿಂಡಿತಿನಸು ಮತ್ತು ಉತ್ತಮವಾದ ಭೋಜನ, ಮಿತವಾದ ದರ, ಬಿಚ್ಚುದ್ದೀಪಗಳುಳ್ಳ ಚೊಕ್ಕಟವಾದ ಕೋಣೆಗಳು ಸರ್ವರ ಹಿತಕ್ಕೂ ಯೋಗ್ಯ ವ್ಯವಸ್ಥೆಗಳು, ಯಾತ್ರಿಕರಿಗೂ, ವಿದ್ಯಾರ್ಥಿಗಳಿಗೂ ಉತ್ತಮವಾದ ನಿವಾಸ ಗೃಹ. ಎಲ್ಲಾ ಮೇಲ್ವಿಚಾರಗಳು ನಿಮ್ಮನ್ನು ತೃಪ್ತಿಗೊಳಿಸುವಂಥವುಗಳು.

Proprieter— H. R. Rao,
Bangalore Gurt Emporaum Madras.

ಪುರೋಹಿತ ಶ್ವಾಸಹಾರಿ
ದಮ್ಮಿಗೆ ಗುಣಕಾರಿ

ದಿ ಕಂಬ್ಯಾಂಡು ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು. ಕೊಡಿಯಾಲಬೈಲು.

REV. FR. P. W. FARIAS.

ST. PAULS CHURCH,
Bolkunje Post, S. K
Dated 4th Jan 1939

To
THE JOINT MANAGERS,
The C. P. C. Co. Ltd., Mangalore

Sirs,

I thank you most sincerely of the promptness with which you arranged to take us to Mangalore and back during the grand occasion of the diocesan Eucharistic Congress at Mangalore.

On this occasion let me express my feelings of gratitude to you for facilitating conveyance to all the Catholics bound to the Congress

The glorious success of our congress is also due to your exertion in putting up the various lights some of which I hear were done volunterily.

May the blessings of the almighty fall on you all and may you be able to do much good to the Public

Renewing my thanks, I remain,
Yours Sincerely,
(Sd) **P W. Farias**

Sri Parshwanathaswami,
PANCHAKALYANA POOJA MAHOSTHAM,
Venoor, S Kanara, 1939

To,
THE JOINT MANAGERS,
The Combind Booking Agency, Mangalore.

Dear Sirs

Please permit us to express our thanks on behalf of the above committee for the efficient Service rendered by your combind Booking Agency Staff at Venoor to the visitors of the Panchakalyana Pooja Mahosthamam celebration held this year

Our thanks are also due to Moodabidri Booking Clerk Mr B Krishnnayya and also his other mates and Mr Raghavendra Bhandary who had specially come down from Mangalore to see to the needs of and comforts of the travelling Public Thanking you once again,

We remain, Yours faithfully,

Venoor, Dated 6-2-'39 } (Sd) B Chandappa Indra, (*Secretary, P M. Council*) (Sd) M Jagathpal, (Sd) M Pachappa Shetty, (Sd) Anantharaj Shetty (*Members, Panchakalyana Maaosthamam Committee*)

JOINT MANAGERS,

The Combined Booking Agency,
MANGALORE.

The Joint Booking Office,
KODIALBAIL.

CONSTRUCTIVE BANKING

An understanding of how a modern Bank can operate to make itself useful to the individual, to business and to the public, has enabled the CANARA BANK to have thousands of depositors and to build resources exceeding a Crore.

And this is but the beginning. We are a progressive Bank, with plenty of enthusiasm for our work, plus plenty of solid experience with which to tackle the work successfully.

RESOURCES OVER A CRORE.

ESTD 1906
CANARA BANK,
LIMITED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ವಾಯುಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ಕಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧಿ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಸಾ ಕಂಪೆನಿಯಲ್ಲಿ ದೊರೆಯುವುದು.

ಸ್ವದೇಶಾಭಿಮಾನಿ

Established 1906 • Regd. No. M 340

ಸಂಪುಟ ೩೪] ತಾರೀಕು ೩೦-೬-೧೯೩೯ (30—6—1939) [ಸಂಚಿಕೆ ೨೬

THE

BOMBAY LIFE ASSURANCE COMPANY, LTD.,

(ESTD 1908.)

THE OFFICE

Which has proved its popularity by its progress

Record of New Bussiness

Proposed	Year	Completed
1,25 50,250	1934	1 01 38,750
1 50,48,915	1935	1 23 28 065
1 68,88 200	1936	1 30 01 500
1,72,579,75	1937	1 40,08 725
176,83 250	**1938**	**144 91 000**

1939-VALUATION YEAR

Please take up a Policy Now and participate in Bonus.

To Insure or to Represent it pays you to consult us

— *Apply to* — **KOCHIKAR BROTHERS, LIMITED,**

Madras Branch Secretaries,

The Bombay Life Assurance Co., Ltd.,

The Bombay Life Building Gandhinagar, UDIPI

or any of our following offices:

Post Box No 337
Mount Road,
Madras

Visweshwarapuram Circle
Bangalore City

Charni Road
Girgaum
BOMBAY 4

Car Street,
Mangalore

Puthiyara,
Calicut.

Central Station Road,
Trivandrum

MAKE LIFE WORTH-LIVING!

Indigestion — Insomnia — Dry Cough—
Nervousness — Weak Heart &c ,
these make you wiery of Life!

CONSULT US AND BUY
YOUR LIFE'S HAPPINESS!

Oils — that cool the brain and induce sleep
Lehas — that build-up your wasted system
Asavas — that regenerate your jaded nerves

All Genuine Ayurvedic Preparations-

-from this huge Ayurvedic Concern of a Century Standing—

Bhuvanendra Products, Ltd.,

Katapady, S, Kanara.

(BRANCH—KUMTA N KANARA.)

ಜೀವನದಲ್ಲಿ ನಿರಾಶರಾಗಬಾರದು!

ದೀರ್ಘಕಾಲದ ಅಜೀರ್ಣ - ನಿದ್ರಾವಿಹೀನತೆ - ಒಣ ಕೆಮ್ಮು -
ನರಗಳ ಅಬಲತೆ - ದುರ್ಬಲ ಹೃತ್ಕ್ಲೇಶ - ಇವುಗಳು
ಜೀವನದಲ್ಲಿ ನೈರಾಶೆಯನ್ನುಂಟುಮಾಡುವುವು!

ನಮ್ಮನ್ನು ವಿಚಾರಿಸಿರಿ - ನಿಮ್ಮ ಜೀವಮಾನದ ಆನಂದವನ್ನು ಕೊಂಡುಕೊಳ್ಳಿರಿ!

ಮಿದುಳನ್ನು ತಂಪಾಗಿರಿಸಿ, ಸುಖ ನಿದ್ದೆ ಕೊಡುವ - ತೈಲಗಳು
ಕೃಶವಾದ ಪ್ರಕೃತಿಯನ್ನು ಸುಪುಷ್ಟವಾಗಿ ಮಾಡುವ - ಲೇಹಗಳು
ನಿಶ್ಶಕ್ತಿತ ನರಗಳಲ್ಲಿ ಹೊಸ ನೆತ್ತರನ್ನು ಹರಿಸುವ - ಆಸವಗಳು

ಒಂದು ಶತಮಾನದ ಅನುಭವದ
ಈ ಆಯುರ್ವೇದ ಮಹಾಸಂಸ್ಥೆಯಾದ

ಭುವನೇಂದ್ರ ಪ್ರೋಡಕ್ಟ್ಸ್ ಲಿಮಿಟೆಡ್

ಕಟಪಾಡಿ, - ದ. ಕನ್ನಡ

(ಬ್ರ್ಯಾಂಚ್: ಕುಮಟೆ, ಉತ್ತರ ಕನ್ನಡ)

Edited, Printed & Published by A. S. Kamath at the Swadesh ... Car Street, Mangalore